ಶ್ರೀ

ಶ್ರೀ ರಾಮಚಂದ್ರ ಪರಬ್ರಹ್ಮಣೇನಮಃ

ಕರ್ಣಾಟಕ ಟೀಕಾ, ತಾತ್ಪರ್ಯ, ಸಮೇತವಾದ

ಶ್ರೀಮದ್ವಾಲ್ಮೀಕಿ ರಾಮಾಯಣ

ಅಯೋಧ್ಯಾಕಾಂಡ

ಪೂರ್ವಾರ್ಥ

ಗ್ರಂಥಕರ್ತರು

ಕೈಲಾಸವಾಸಿ, ವೇ|| ಬ್ರಂ|| ಪಟ್ಟಾಭಿರಾಮಶಾಸ್ತ್ರಿಗಳು.

ಪರಿಶೋಧಕರು ಮತ್ತು ಟಿಪ್ಪಣಿಕಾರರು

ಮೋಟಗಾನಹಳ್ಳಿ, ವೇ|| ಬ್ರಂ|| ಸುಬ್ರಹ್ಮಣ್ಯಶಾಸ್ತ್ರಿಗಳು.

ಮುದ್ರಾಪಕರು ಮತ್ತು ಪ್ರಕಾಶಕರು

ವಾಜಪೇಯಂ ಗೋವಿಂದಯ್ಯನವರು

ಶ್ರೀ ವೆಂಕಟಾದ್ರಿ ಮುದ್ರಾಕ್ಷರಶಾಲಾಧ್ಯಕ್ಷರು

ಬೆಂಗಳೂರು ಸಿಟಿ.

1931

१२

ಅಯೋಧ್ಯಾಕಾಂಡದ ಪ್ರಥಮ ಭಾಗದ ವಿಷಯಾನುಕ್ರಮಣಿ

ವಿ ಷ ಯ

ಅಯೋಧ್ಯಾಕಾಂಡದ ಪ್ರಥಮ ಭಾಗದಲ್ಲಿನ ಚಿತ್ರಗಳ ಅನುಕ್ರಮಣಿಕೆ.

ಸ್ತ್ರೇಚ ಪಿತುಶ್ಶ್ರೇಷ್ಠೋ ಬಭೂವ ಭರತಾಗ್ರಜಃ ॥ ೨೦ ॥ ಕಲ್ಯಾಣಾಭಿಜನ ಸ್ಸಾಧುರದೀನ ಸ್ಸತ್ಯವಾಗೃಜುಃ ॥ ವೃದ್ಧೈರಭಿವಿನೀತಶ್ಚ ದ್ವಿಜೈರ್ಧರ್ಮಾರ್ಥ ದರ್ಶಿಭಿಃ ॥ ೨೧ ॥ ಧರ್ಮ ಕಾಮಾರ್ಥ ತತ್ವಜ್ಞಃ ಸ್ಮೃತಿಮಾ೯ ಪ್ರತಿ

ವ್ರತೈಃ - ಪ್ರಾಜಾಪತ್ಯಾದಿ ವ್ರತಗಳಿಂದಲೂ, ಸ್ನಾತಃ - ಸ್ನಾತಕವ್ರತವನ್ನು ಮಾಡಿರುವ, ಯಥಾವತ್ - ಯಥಾರ್ಥವಾಗಿ, ಸಾಂಗವೇದವಿತ್, ಸಾಂಗ - ಶಿಕ್ಷಾದಿ ಷಡಂಗಯುಕ್ತವಾದ, ವೇದವಿತ್ - ವೇದಾರ್ಥವನ್ನು ತಿಳಿದವನಾದ, ಭರತಾಗ್ರಜಃ - ಭರತನಿಗಿಂತಲೂ ಜ್ಯೇಷ್ಠನಾದ ಶ್ರೀರಾಮನು, ಇಷ್ವಸ್ತ್ರೇಚ, ಇಷು - ಬಾಣಗಳಲ್ಲಿಯೂ, ಅಸ್ತ್ರೇಚ - ಮಂತ್ರಪ್ರಯೋಗ ಪುರಸ್ಸರವಾಗಿ ಬಿಡತಕ್ಕ ಅಸ್ತ್ರವಿದ್ಯೆಯಲ್ಲಿಯೂ, ಪಿತುಃ - ತಂದೆಯಾದ ದಶರಥನಿಗಿಂತಲೂ, ಶ್ರೇಷ್ಠಃ - ಹೆಚ್ಚಾದವನು, ಬಭೂವ - ಆದನು ॥ ೨೦ ॥ ಕಲ್ಯಾಣಾಭಿಜನಃ, ಕಲ್ಯಾಣ - ಶುಭಕರವಾದ, ಅಭಿಜನಃ - ಮಾತಾಪಿತೃವಂಶವುಳ್ಳ, ಸಾಧುಃ - ನಿರ್ದೋಷಪುರುಷನಾದ, ಅದೀನಃ - (ಗೋ) ದೈನ್ಯಹೇತುವಿದ್ದರೂ ಮನಸ್ಸಿಗೆ ಕ್ಷೋಭೆಯಿಲ್ಲದಿರುವ, ಸತ್ಯವಾಕ್ - ಯಥಾರ್ಥವಾದ ವಚನವುಳ್ಳ, ಋಜುಃ- (ಮ) ತ್ರಿಕರಣದಲ್ಲಿಯೂ ಕಪಟವಿಲ್ಲದಿರುವ (ಗೋ)ಸ್ವಾರಾಧ್ಯನಾಗಿರುವ, ಧರ್ಮಾರ್ಥದರ್ಶಿಭಿಃ-ಧರ್ಮವನ್ನೂ ಅರ್ಥವನ್ನೂ ಶಾಸ್ತ್ರದಿಂದ ತಿಳಿದಿರುವ, ವೃದ್ಧೈಃ-ಪೂರ್ವೋಕ್ತಜ್ಞಾನಾದಿ ವೃದ್ಧರಾದ,ದ್ವಿಜೈಃ-ಬ್ರಾಹ್ಮಣರಿಂದ, ಅಭಿವಿನೀತಃ-ಚೆನ್ನಾಗಿ ಶಿಕ್ಷೆಮಾಡಲ್ಪಟ್ಟವನು ॥ ೨೧ ॥ ಧರ್ಮಕಾಮಾರ್ಥತತ್ವಜ್ಞಃ- ಧರ್ಮಾರ್ಥಕಾಮಗಳಲ್ಲಿ ಯಥಾಕಾರ್ಯತ್ವವನ್ನು ತಿಳಿದಿರುವನು, ಸ್ಮೃತಿಮಾ೯- ಜ್ಞಾನಾರ್ಥವಿಷಯದಲ್ಲಿ ಮರೆಯದಿರುವವನು, ಪ್ರತಿಭಾನವಾ೯ - ಹೊಸಹೊಸದಾಗಿ ತೋರುತ್ತಿ

...ಗಳನ್ನು ನುಡಿವುದರಲ್ಲಿ ಸಾಕ್ಷಾದ್ಬೃಹಸ್ಪತಿಯಂತಿರುವವನೂ, ವ್ಯಾಧಿರಹಿತನೂ, ...ರಸ್ಥನೂ, ನುಡಿಚತುರನೂ, ವಾಚಾಳಿಯೂ, ಪ್ರಶಸ್ತವಾದ ದೇಹವುಳ್ಳವನೂ, ...ಚರಣೆಗೆ ತಕ್ಕ ದೇಶಕಾಲಗಳನ್ನರಿತವನೂ, ಸಕೃದ್ದರ್ಶನದಿಂದಲೇ ಇತರರ ಬಲ ...ತಿಳಿವವನೂ, ಒಂದಾವರ್ತಿ ನೋಡಿದಮಾತ್ರದಿಂದಲೇ ಅಭಿಪ್ರಾಯವನ್ನರಿತವನೂ ...ಲೋಕದಲ್ಲಿ ಅದ್ವಿತೀಯನಾದ ಸಾಧುವಾಗಿ ನಿರ್ಮಿತನಾದನು. ॥ ೧೮ ॥ ಇಂತು ...ಬಿತ್ತರಿಸಿದ ಗುಣಗಳಿಂದಲೂ, ಇತರ ಅನಂತಕಲ್ಯಾಣಗುಣಗಳಿಂದಲೂ ಯುಕ್ತನಾದ ಆ ದಶರಥರಾಜಕುವರನು, ಹೊರಗೆ ಸಂಚರಿಸುವ ಪ್ರಾಣದಂತೆ, ತನ್ನ ಗುಣಗಳಿಂದ ಪ್ರಜೆಗಳಿಗೆಲ್ಲ ಪ್ರೀತಿಪಾತ್ರನಾದನು. ವೇದಗಳಲ್ಲಿಯೂ, ಪ್ರಾಜಾಪತ್ಯಾದಿ ವ್ರತಗಳಲ್ಲಿ ಸ್ನಾತಕವನ್ನು ಮಾಡಿರುವವನೂ, ಶಾಸ್ತ್ರೋಕ್ತವಾಗಿ, ಶಿಕ್ಷಾ, ವ್ಯಾಕರಣ, ಛಂದಸ್ಸೇ ಮೊದಲಾದ ಆರು ಅಂಗಗಳಿಂದೊಡಗೂಡಿದ ವೇದಾರ್ಥಗಳನ್ನು ಚೆನ್ನಾಗಿ ತಿಳಿದವನೂ ಆದ ಆ ರಘುರಾಮನು, ಬಾಣವಿದ್ಯೆಯಲ್ಲಿಯೂ, ಮಂತ್ರೋಚ್ಚಾರಣಾಪೂರ್ವಕವಾಗಿ ಪ್ರಯೋಗಿಸುವ ಅಸ್ತ್ರವಿದ್ಯೆಯಲ್ಲಿಯೂ ಸಹ ತಂದೆಯಾದ ದಶರಥರಾಯನಿಗಿಂತಲೂ ಮಿಗಿಲೆನಿಸಿದನು. ॥೧೯-೨೦॥ ಇಷ್ಟೆಯಲ್ಲದೆ ಆ ರಾಮಚಂದ್ರನು ಶ್ರೇಷ್ಠವಾದ ಮಾತಾ ಪಿತೃ ವಂಶಗಳುಳ್ಳವನಾಗಿಯೂ, ನಿಷ್ಕಲ್ಮಷನಾಗಿಯೂ, ಯಥಾರ್ಥವಾದುದನ್ನೇ ನುಡಿವವನಾಗಿಯೂ, ಋಜುಮಾರ್ಗಾನು

ಭಾನರ್ವಾ ॥ ಲೌಕಿಕೇ ಸಮಯಾಚಾರೇ ಕೃತಕಲ್ಪೋ ವಿಶಾರದಃ ॥ ೨೨ ॥ ಅಪ್ರಧೃಷ್ಯಶ್ಚ ಸಂಗ್ರಾಮೇ ಕ್ರುದ್ಧೈರಪಿ ಸುರಾಸುರೈಃ ॥ ನಿಭೃತ ಸ್ಸಂವೃತಾಕಾರೋ ಗುಪ್ತಮಂತ್ರ ಸ್ಸಹಾಯವಾನ್ ॥೨೩॥ ಅಮೋಘ ಕ್ರೋಧಹರ್ಷಶ್ಚ ತ್ಯಾಗಸಂಯಮ ಕಾಲವಿತ್ ॥ ದೃಢಭಕ್ತಿ ಸ್ಸ್ಥಿರಪ್ರಜ್ಞೋ ನಾಸದ್ಗ್ರಾಹೀ ನದುರ್ವಚಾಃ ॥ ೨೪ ॥ ನಿಸ್ತಂದ್ರಿರಪ್ರಮತ್ತಶ್ಚ ಸ್ವದೋಷ ಪರದೋಷವಿತ್ ।

ರುವ ಬುದ್ಧಿಯುಳ್ಳವನು, ಲೌಕಿಕೇ - ಲೋಕವೇ ಪ್ರಮಾಣವಾಗುಳ್ಳ, ಸಮಯಾಚಾರೇ - ಸಾಂಕೇತಿಕ ಆಚಾರದಲ್ಲಿ, ಕೃತಕಲ್ಪಃ - ಮಾಡಲ್ಪಟ್ಟ ಸ್ಥಾಪನೆಯುಳ್ಳವನು, ವಿಶಾರದಃ - ಸಮಯಾಚಾರಾನುಷ್ಠಾನದಲ್ಲಿ ಸಮರ್ಥನು ॥ ೨೨ ॥ ನಿಭೃತಃ - ವಿನೀತನಾಗಿರುವನು, ಸಂವೃತಾಕಾರಃ - (ಗೋ) ಹೃದಯದಲ್ಲಿರುವ ಅಭಿಪ್ರಾಯವನ್ನು ಸೂಚಿಸದೇ ಇರುವ ಚೇಷ್ಟಾವಿಶೇಷವುಳ್ಳವನು, ಗುಪ್ತಮಂತ್ರಃ - (ಮ) ಗೂಢವಾಗಿ ಮಾಡಲ್ಪಟ್ಟ ಆಲೋಚನೆಯುಳ್ಳವನು, ಸಹಾಯವಾನ್ - ಪ್ರಶಸ್ತಮಂತ್ರಿಯುಕ್ತನಾದವನು, ಅಮೋಘಕ್ರೋಧಹರ್ಷಶ್ಚ - ವ್ಯರ್ಥವಾಗದ ಕೋಪ ಹರ್ಷಗಳುಳ್ಳವನು, ತ್ಯಾಗಸಂಯಮಕಾಲವಿತ್, ತ್ಯಾಗ - ವಸ್ತುತ್ಯಾಗದ, ಸಂಯಮ - ಸಂಗ್ರಹದ, ಕಾಲವಿತ್ - ಸಮಯವನ್ನರಿತಿರುವವನು ॥ ೨೩ ॥ ದೃಢಭಕ್ತಿಃ - ನಿಶ್ಚಲವಾದ ಭಕ್ತಿಯುಳ್ಳವನು, (ಗೋ) ದೇವಪಿತೃಗಳೇ ಮೊದಲಾದವರಲ್ಲಿ ಅನನ್ಯವಾದ ಭಕ್ತಿಯುಳ್ಳವನು, (ಮ) ಆಶ್ರಿತಜನರಲ್ಲಿ ವಿಶ್ವಾಸವುಳ್ಳವನು, ಸ್ಥಿರಪ್ರಜ್ಞಃ - ಅಪ್ರಕಂಪ್ಯವಾದ ತತ್ವಜ್ಞಾನವುಳ್ಳವನು, ನಾಸದ್ಗ್ರಾಹೀ - ಕೆಟ್ಟವರ ಸಹವಾಸವನ್ನು ಮಾಡದಿರುವನು, ನದುರ್ವಚಾಃ - ಕ್ರೂರೋಕ್ತಿಗಳಿಲ್ಲದಿರುವನು ॥ ೨೪ ॥ ನಿಸ್ತಂದ್ರಿಃ - ಆಲಸ್ಯರಹಿತನು, ಅಪ್ರಮತ್ತಃ - ಶಾಸ್ತ್ರಾರ್ಥಗಳಲ್ಲಿ ಮೋಹಿತನಲ್ಲದಿರುವನು, ಸ್ವದೋಷ ಪರದೋಷವಿತ್ - ತನ್ನ ದೋಷವನ್ನೂ ಪರದೋಷವನ್ನೂ ಸಹ ತಿಳಿದಿರುವನು, ಶಾಸ್ತ್ರಜ್ಞಶ್ಚ - ಶಾಸ್ತ್ರಗಳನ್ನೂ ತಿಳಿದಿರುವನು, ಕೃತಜ್ಞಃ - ಉಪಕಾರವನ್ನು ಎಣಿಸುವವನು, ಪುರುಷಾಂತರಕೋ

ವಿದಿಯೂ, ತ್ರಿಕರಣಶುದ್ಧಿಯುಳ್ಳವನಾಗಿಯೂ, ಧರ್ಮರಹಸ್ಯಗಳನ್ನು, ಶಾಸ್ತ್ರಗಳಿಂದರಿತಿರುವ ವೃದ್ಧರಿಂದ ಚೆನ್ನದಾಗಿ ಶಿಕ್ಷಿತನಾಗಿಯೂ, ಅವುಗಳ ತತ್ವವನ್ನು ಚೆನ್ನಾಗಿ ತಿಳಿದಿರುವವನಾಗಿಯೂ, ತಿಳಿದಿರುವ ವಿಷಯಗಳನ್ನೆಂದಿಗೇ ಆಗಲಿ ಮರೆಯದಿರುವವನಾಗಿಯೂ, ಹೊಸಹೊಸತಾಗಿ ಸ್ಫುರಿಸುತ್ತಿರುವ ಅಸಮಾನ ಪ್ರಜ್ಞೆಯುಳ್ಳವನಾಗಿಯೂ, ಲೋಕವೇ ಪ್ರಮಾಣವಾಗುಳ್ಳ ಸಾಂಕೇತಿಕಾಚಾರದಲ್ಲಿ ಸ್ಥಾಪನಾಶಕ್ತಿಯುಳ್ಳವನಾಗಿಯೂ, ಅವುಗಳ ಅನುಷ್ಠಾನದಲ್ಲಿ ಚತುರನಾಗಿಯೂ, ವಿನಯಾನ್ವಿತನಾಗಿಯೂ, ಮನೋಭಿಪ್ರಾಯಸೂಚಕಗಳಾದ ಚೇಷ್ಟೆಗಳನ್ನು ಗೋಪನಮಾಡುವುದರಲ್ಲಿ ಸಮರ್ಥನೂ, ಗುಪ್ತವಾದ ಆಲೋಚನೆಯುಳ್ಳವನಾಗಿಯೂ, ವ್ಯರ್ಥವಾಗದಿರುವ ಹರ್ಷ ಕೋಪಗಳುಳ್ಳವನಾಗಿಯೂ, ತ್ಯಾಗಮಾಡುವ ಕಾಲವಿಶೇಷಗಳನ್ನು ಬಲ್ಲವನಾಗಿಯೂ, ದೇವಬ್ರಾಹ್ಮಣರಲ್ಲಿ ದೃಢವಾದ ಭಕ್ತಿಯುಳ್ಳವನಾಗಿಯೂ, ನಿಶ್ಚಯವಾದ ತತ್ವಜ್ಞಾನವುಳ್ಳವನಾಗಿಯೂ, ದುರ್ಜನರ ಸಂಗವನ್ನು ಮಾಡದವನಾಗಿಯೂ, ಕ್ರೂರವಾದ ನುಡಿಗಳನ್ನಾಡದೆ ಸದಾಕಾಲದಲ್ಲಿಯೂ ಮೃದುವಾಗಿಯೇ ನುಡಿವವನಾಗಿಯೂ, ಆಲಸ್ಯವಿಲ್ಲದವನಾಗಿಯೂ, ಸ್ವದೋಷ, ಪರದೋಷಗಳನ್ನು ತಿಳಿವವನು

ಶಾಸ್ತ್ರಜ್ಞಶ್ಚ ಕೃತಜ್ಞಶ್ಚ ಪುರುಷಾಂತರ ಕೋವಿದಃ ॥ ೨೫ ॥ ಯಃ ಪ್ರಗ್ರಹಾನುಗ್ರಹಯೋ ರ್ಯಥಾನ್ಯಾಯಂ ವಿಚಕ್ಷಣಃ ॥ ಸತ್ಸಂಗ್ರಹ ಪ್ರಗ್ರಹಣೇ ಸ್ಥಾನವಿನ್ನಿಗ್ರಹಸ್ಯಚ ॥ ೨೬ ॥ ಆಯಕರ್ಮಣ್ಯುಪಾಯಜ್ಞ ಸ್ಸಂದೃಷ್ಟ ವ್ಯಯ ಕರ್ಮವಿತ್ ॥ ಶ್ರೈಷ್ಠ್ಯಂ ಶಾಸ್ತ್ರ ಸಮೂಹೇಷು ಪ್ರಾಪ್ತೋ ವ್ಯಾಮಿಶ್ರಕೇಷುಚ ॥ ೨೭ ॥ ಅರ್ಥ ಧರ್ಮೌಚ ಸಂಗೃಹ್ಯ ಸುಖ ತಂತ್ರೋ ನಚಾ

ವಿದಃ, ಪುರುಷ - ಮನುಷ್ಯರ, ಅಂತರ - ತಾರತಮ್ಯದಲ್ಲಿ, ಕೋವಿದಃ - ಪಂಡಿತನಾದವನು, (ಗೋ) ಜನರನ್ನು ನೋಡಿದ ಮಾತ್ರದಿಂದಲೇ ದುಷ್ಟತ್ವ ಶಿಷ್ಟತ್ವವನ್ನುಳ್ಳವನೆಂದರಿವವನು, (ಮ) ಜನರ ಗೂಢಾಭಿಪ್ರಾಯವನ್ನು ತಿಳಿವವನು ॥ ೨೫ ॥ ಯಃ - ಯಾವ ಶ್ರೀರಾಮನು, ಪ್ರಗ್ರಹಾನುಗ್ರಹಯೋಃ, ಪ್ರಗ್ರಹ - ಮಿತ್ರಸಂಗ್ರಹದಲ್ಲಿಯೂ, ಅನುಗ್ರಹಯೋ - ಸಂಗೃಹೀತರಾದ ಜನರ ಪರಿಪಾಲನದಲ್ಲಿಯೂ, ಯಥಾನ್ಯಾಯಂ - ಯಥಾಶಾಸ್ತ್ರವಾಗಿ, ಸತ್ಸಂಗ್ರಹಪ್ರಗ್ರಹಣೇ, ಸತ್ - ಸತ್ಪುರುಷರ, ಸಂಗ್ರಹ - ಸ್ವೀಕಾರದಲ್ಲಿಯೂ, ಪ್ರಗ್ರಹಣೇ - ಪರಿಪಾಲನೆಯಲ್ಲಿಯೂ, ವಿಚಕ್ಷಣಃ - ಪಂಡಿತನಾದವನು, ನಿಗ್ರಹಸ್ಯಚ - ದುಷ್ಟಜನ ನಿಗ್ರಹದ, ಸ್ಥಾನವಿತ್ - ಅವಕಾಶವನ್ನು ತಿಳಿದಿರುವನು ॥ ೨೬ ॥ ಆಯಕರ್ಮಣಿ - ಧನಸಂಪಾದನ ಕಾರ್ಯದಲ್ಲಿ, ಉಪಾಯಜ್ಞಃ - ಸಂಗ್ರಹಣೋಪಾಯವನ್ನು ತಿಳಿದಿರುವವನು, ಸಂದೃಷ್ಟವ್ಯಯಕರ್ಮವಿತ್, ಸಂದೃಷ್ಟ - ಚನ್ನಾಗಿ ನೋಡಲ್ಪಟ್ಟ, (೧) ವ್ಯಯಕರ್ಮವಿತ್ - ವ್ಯಯವ್ಯಾಪಾರವನ್ನು ತಿಳಿದಿರುವನು, ಶಾಸ್ತ್ರಸಮೂಹೇಷು - ವೇದವೇದಾಂಗಗಳಲ್ಲಿ, ವ್ಯಾಮಿಶ್ರಕೇಷುಚ - (ಗೋ) ಸಂಸ್ಕೃತ ಪ್ರಾಕೃತ ಭಾಷಾತ್ಮಕವಾದ ಕಾವ್ಯ, ನಾಟಕಾದಿಗಳಲ್ಲಿಯೂ ಸಹ, ಶ್ರೈಷ್ಠ್ಯಂ (ಗೋ) - ಪ್ರಾಶಸ್ತ್ಯವನ್ನು, (ಮ) ಮಹಾ ತಾತ್ಪರ್ಯಜ್ಞತ್ವವನ್ನು, ಪ್ರಾಪ್ತಃ - ಹೊಂದಿದವನು. ॥೨೭॥ ಅರ್ಥಧರ್ಮೌ - ಅರ್ಥ ಧರ್ಮಗಳೆಂಬ ಪುರುಷಾರ್ಥಗಳನ್ನು, ಸಂಗೃಹ್ಯ - ಅನುಸರಿಸಿ, ಸುಖತಂತ್ರಃ - ಕಾಮಸುಖದಲ್ಲಿ ಆಸಕ್ತನು, ಅಲಸಃ - ಮಾಡತಕ್ಕಕಾರ್ಯಗಳಲ್ಲಿ ಉತ್ಸಾಹಶಕ್ತಿರಹಿತನು, ನ - ಅಲ್ಲ, ವೈಹಾರಿಕಾಣಾಂ - ವಿನೋದಾರ್ಥವಾಗಿ

ಆಗಿದ್ದನು. ಇದಲ್ಲದೆ, ಶಾಸ್ತ್ರಜ್ಞಾನಿಯೂ, ಮಾಡಿದ ಉಪಕಾರವನ್ನು ಮರೆಯದವನೂ, ಮನುಷ್ಯರ ತಾರತಮ್ಯವನ್ನು ಬಲ್ಲವನೂ, ॥೨೧-೨೫॥ ನ್ಯಾಯಾನುಸಾರವಾದ ಹಿಡಿತ ಬಿಡಿತಗಳಲ್ಲಿ ಸಮರ್ಥನಾದವನೂ, ನಿಗ್ರಹಾನುಗ್ರಹದಕ್ಷನೂ, ಆದಾಯಬರುವ ಕಾರ್ಯಗಳ ಉಪಾಯವನ್ನು ತಿಳಿದವನೂ, ಆಯವ್ಯಯಗಳ ಹೆಚ್ಚು ಕಡಿಮೆಗಳನ್ನರಿತವನೂ. ಪರಸ್ಪರ ವಿರುದ್ಧಬರುವ ಶಾಸ್ತ್ರಗಳಲ್ಲಿ ವ್ಯವಸ್ಥಾಪರನಾದವನೂ, ಆಲಸ್ಯವಿಲ್ಲದೆ ಧರ್ಮಾರ್ಥಗಳನ್ನು ಸಂಪಾದಿಸಿರುವವನೂ, ಮನೋಹರವಾದ ಚಿತ್ರ, ಮತ್ತು ಶಿಲ್ಪಿಗಳ ವಿಭಾಗಗಳನ್ನರಿತವನೂ, ಅಶ್ವಾರೋಹಣ, ಗಜಾರೋಹಣಾದಿಗಳಲ್ಲಿಯೂ, ಅವುಗಳನ್ನು ತಿದ್ದುವುದ

ಟಿ. (೧) "ಕಚ್ಚಿದಾಯಸ್ಯಚಾರ್ಧೇನ ಚತುರ್ಭಾಗೇನ ವಾಪುನಃ ॥ ಪಾದಭಾಗೈಸ್ತ್ರಿಭಿರ್ವಾಪಿ ವ್ಯಯಸ್ಸಂಶೋಧ್ಯತೇ ಬುಧೈಃ" ॥ ಎಂಬ ವ್ಯಯಧರ್ಮವನ್ನು ಚನ್ನಾಗಿ ತಿಳಿದಿರುವವನೆಂದು ಅಭಿಪ್ರಾಯ.

ಲಸಃ || ವೈಹಾರಿಕಾಣಾಂ ಶಿಲ್ಪಾನಾಂ ವಿಜ್ಞಾತಾರ್ಥ ವಿಭಾಗವಿತ್ || ೨೮ ||
ಆರೋಹೇ ವಿನಯೇ ಚೈವ ಯುಕ್ತೋ ವಾರಣ ವಾಜಿನಾಂ||ಧನುರ್ವೇದ ವಿದಾಂ
ಶ್ರೇಷ್ಠೋ ಲೋಕೇಽತಿರಥ ಸಮ್ಮತಃ || ೨೯ || ಅಭಿಯಾತಾ ಪ್ರಹರ್ತಾಚ
ಸೇನಾನಯ ವಿಶಾರದಃ || ಅನಸೂಯೋ ಜಿತಕ್ರೋಧೋ ನದೃಪ್ತೋ
ನಚ ಮತ್ಸರೀ || ೩೦ || ನಚಾವಮಂತಾ ಭೂತಾನಾಂ ನಚ ಕಾಲ ವಶಾ

ನಿರ್ಮಿತವಾದ, ಶಿಲ್ಪಾನಾಂ - ಚಿತ್ರಕರ್ಮಾದಿಗಳನ್ನು, ವಿಜ್ಞಾತಾ - ತಿಳಿದಿರುವವನು, ಅರ್ಥವಿಭಾಗವಿತ್, ಅರ್ಥ - ಸಂಪಾದಿಸಿದ ದ್ರವ್ಯದ, ವಿಭಾಗವಿತ್ (೧) ವಿಭಾಗಕ್ರಮವನ್ನು ತಿಳಿದವನು, ||೨೮|| ವಾರಣವಾಜಿನಾಂ - ಗಜಾಶ್ವಗಳ, ಆರೋಹೇ - ಏರುವಿಕೆಯಲ್ಲಿಯೂ, ವಿನಯೇಚೈವ - ಶಿಕ್ಷಿಸುವದರಲ್ಲಿಯೂ, ಯುಕ್ತಃ - ಸಮರ್ಥನಾದವನು, ಧನುರ್ವೇದವಿದಾಂ - ಧನುರಾದಿ ಪ್ರಯೋಗಗಳನ್ನು ಹೇಳುತ್ತಿರುವ ವೇದವನ್ನು ಬಲ್ಲವರಲ್ಲಿ, ಶ್ರೇಷ್ಠಃ - ಉತ್ತಮನಾದವನು, ಲೋಕೇ - ಲೋಕದಲಿ, ಅತಿರಥಸಂಮತಃ - ಅಪ್ರತಿಹತವಾದ ರಥಗಮನವುಳ್ಳವರಿಗೆ ಪೂಜ್ಯನಾದವನು. || ೨೯ || ... ಯಾತಾ - ಶತ್ರುಗಳಿಗೆ ಅಭಿಮುಖವಾಗಿ ಹೋಗತಕ್ಕವನು, ಪ್ರಹರ್ತಾಚ - ಸ್ವಯಮೇವ ಪ್ರಹ... ತಕ್ಕವನು, ಸೇನಾನಯ - ತನ್ನ ಸೈನ್ಯದ ಚಕ್ರವ್ಯೂಹಾದಿ ರೂಪದಿಂದ ನಿಲ್ಲಿಸುವುದರಲ್ಲಿ, ವಿಶಾರದಃ - ಸಮರ್ಥನು, ಸಂಗ್ರಾಮೇ - ಯುದ್ಧದಲ್ಲಿ, ಕೃದ್ಧೈಃ - ಕುಪಿತರಾದ, ಸುರಾಸುರೈರಪಿ - ದೇವ... ರಾಕ್ಷಸರಿಂದಲೂ, ಅಪ್ರಧೃಷ್ಯಶ್ಚ - ತಿರಸ್ಕರಿಸಲಸದಳನೂ, ಅನಸೂಯಃ - ಅಸೂಯೆಯಿಲ್ಲದವನೂ, ಜಿತಕ್ರೋಧಃ - ಸ್ವಾಧೀನವಾದ ಕೋಪವುಳ್ಳವನೂ, ದೃಪ್ತಃ - ಗರ್ವಿತನೂ, ನ - ಅಲ್ಲ, ಮತ್ಸರೀ - ಇತರರಿಗೆ ಶುಭವನ್ನಿಚ್ಛಿಸದಿರುವವನು, ನ - ಅಲ್ಲವು. || ೩೦ || ಭೂತಾನಾಂ - ಪ್ರಾಣಿಗಳಿಗೆ, ಅವಮಂತಾ - ನಿಷ್ಕಾರಣವಾಗಿ ಅವಮಾನ ಮಾಡುವವನು, ನ - ಅಲ್ಲವು, ಕಾಲವಶಾನುಗಃ - ಸ...

ರಲ್ಲಿಯೂ ಬಹು ವಿಚಕ್ಷಣನೂ, ಧನುರ್ವೇದವನ್ನರಿತಿರುವವರಲ್ಲಿ ಶ್ರೇಷ್ಠನೂ, ಮಹಾರಥಿಕನೂ, ಹಗೆಗಳಿಗಭಿಮುಖನಾಗಿ ನಡೆವವನೂ, ತಾನಾಗಿಯೇ ಸೇನಾಮುಖದಲ್ಲಿ ನಿಂತು ಶತ್ರುಗಳನ್ನು ಪ್ರಹರಿಸುವವನೂ, ಶತ್ರುಗಳು ಪ್ರವೇಶಿಸಲಸದಳವಾದ ಚಕ್ರವ್ಯೂಹವೇ ಮೊದಲಾದ ವ್ಯೂಹಗಳನ್ನು ನಿಲ್ಲಿಸುವಿಕೆಯಲ್ಲಿ ಚತುರನೂ, ರಣಾಂಗಣದಲ್ಲಿ ಮಹಾಕೋಪಿಷ್ಠರಾದ ಸುರಾಸುರರಿಂದಲೂ ತಿರಸ್ಕರಿಸಲಸದಳನೂ, ಅಸೂಯಾರಹಿತನೂ, ಗೆಲ್ಲಲ್ಪಟ್ಟ ಕೋಪವುಳ್ಳವನೂ, ನಿಗರ್ವಿಯೂ, ಪರದ್ವೈಶ್ವರ್ಯದಲ್ಲಿ ದ್ವೇಷವಿಲ್ಲದವನೂ, ಯಾವ ಪ್ರಾಣಿಗೂ ಅವಮಾನಮಾಡದವನೂ, ತ್ರಿಗುಣಗಳ ಕಾಲಾನುಸಾರವಾಗಿ, ಆಯಾ ಗುಣಗಳಿಗೆ ವಶನಾಗದ ಸಾತ್ವಿಕಮೂರ್ತಿಯೂ ಆಗಿದ್ದನು. ||೨೬-೩೦|| ಈರೀತಿ ಆ ರಾಜಪುತ್ರನಾದ ರಾಮ...

ಟಿ. (೧) "ಅರ್ಥವಿಭಾಗವಿತ್" ಎಂಬಲ್ಲಿ "ಧರ್ಮಾಯ ಯಶಸೇರ್ಥಾಯ ಆತ್ಮನೇ ಸ್ವಜನಸ್ಯಚ || ಪಂಚಧಾ ವಿಭಜನ್ ವಿತ್ತಮಿಹಾ ಮುತ್ರಚ ಶೋಭತ || " ಎಂಬ ನೀತಿ ಶಾಸ್ತ್ರಾನುಸಾರವಾಗಿ

ನುಗಃ ॥ ಏವಂ ಶ್ರೇಷ್ಠಗುಣೈರ್ಯುಕ್ತಃ ಪ್ರಜಾನಾಂ ಪಾರ್ಥಿವಾತ್ಮಜಃ ॥೩೧॥ ಸಮ್ಮತಸ್ತ್ರಿಷು ಲೋಕೇಷು ವಸುಧಾಯಾಃ ಕ್ಷಮಾಗುಣೈಃ ॥ ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇಣಾಪಿ ಶಚೀಪತೇಃ ॥೩೨॥ ತಥಾ ಸರ್ವ ಪ್ರಜಾಕಾಂತೈಃ ಪ್ರೀತಿಸಂಜನನೈಃ ಪಿತುಃ ॥ ಗುಣೈರ್ವಿರುರುಚೇ ರಾಮೋ ದೀಪ್ತಸ್ಸೂರ್ಯ ಇವಾಂಶುಭಿಃ ॥ ೩೩ ॥ ತಮೇವಂ ವೃತ್ತಸಂಪನ್ನಮಪ್ರಧೃಷ್ಯಪರಾಕ್ರಮಂ ॥ ಲೋಕಪಾಲೋಪಮಂ ನಾಥಮಕಾಮಯತ ಮೇದಿನೀ ॥೩೪॥ ಏತೈಸ್ತು ಬಹುಭಿರ್ಯುಕ್ತಂ ಗುಣೈರನುಪಮೈಸ್ಸುತಂ ॥ ದೃಷ್ಟ್ವಾ ದಶ

ರಜಸ್ತಮೋಗಣಗಳಿಗೆ ಅಭಿವೃದ್ಧಿಕರವಾದ ಕಾಲಾನುಗುಣವಾಗಿ ಅವುಗಳಿಗೆ ಅಧೀನನಲ್ಲವು, ಏವಂ - ಈ ಪ್ರಕಾರವಾಗಿ,ಪಾರ್ಥಿವಾತ್ಮಜಃ - ರಾಜಪುತ್ರನಾದ ಶ್ರೀರಾಮನು, ಪ್ರಜಾನಾಂ - ಪ್ರಜೆಗಳಲ್ಲಿ, ಶ್ರೇಷ್ಠಗುಣೈಃ - ಲೋಕೋತ್ತರವಾದ ಗುಣಗಳಿಂದ, ಯುಕ್ತಃ - ಕೂಡಿರುವವನು. ॥ ೩೧ ॥ ತ್ರಿಷುಲೋಕೇಷು - ಮೂರುಲೋಕಗಳಲ್ಲಿಯೂ, ಸಮ್ಮತಃ - ಪೂಜಿಸಲ್ಪಟ್ಟವನು, ಕ್ಷಮಾಗುಣೈಃ - ಶಾಂತಿಗುಣಗಳಿಂದ, ವಸುಧಾಯಾಃ - ಭೂಮಿಗೂ, ಬುದ್ಧ್ಯಾ - ಮತಿಯಿಂದ, ಬೃಹಸ್ಪತೇಃ - ಬೃಹಸ್ಪತಿಗೂ, ವೀರ್ಯೇಣ - ಶೌರ್ಯದಿಂದ, ಶಚೀಪತೇರಪಿ - ಇಂದ್ರನಿಗೂ ಸಹ, ತುಲ್ಯಃ - ಸದೃಶನಾದವನು ॥ ೩೨ ॥ ತಥಾ - ಆ ಪ್ರಕಾರವಾಗಿ, ಸರ್ವ ಪ್ರಜಾಕಾಂತೈಃ - ಪ್ರಜೆಗಳೆಲ್ಲರಿಗೂ ಮನೋಹರವಾದ, ಪಿತುಃ - ತಂದೆಗೆ, ಪ್ರೀತಿಸಂಜನನೈಃ - ಪ್ರೀತಿಯನ್ನು ವೃದ್ಧಿಗೊಳಿಸುತ್ತಿರುವ, ಗುಣೈಃ - ಗುಣಗಳಿಂದ, ದೀಪ್ತಃ - ಹೊಳೆಯುತ್ತಿರುವ, ರಾಮಃ - ಶ್ರೀರಾಮನು, ಅಂಶುಭಿಃ - ಕಾಂತಿಗಳಿಂದ, ಸೂರ್ಯಇವ - ಸೂರ್ಯನಂತೆ, ವಿರುರುಚೇ- ಹೊಳೆಯುತ್ತಿದ್ದನು. ॥ ೩೩ ॥ ಏವಂ - ಈಪೂರ್ವೋಕ್ತರೀತಿಯಾಗಿ, ವೃತಸಂಪನ್ನಂ - ಆಶ್ರಿತಸಂರಕ್ಷಣ ರೂಪವೃತದಿಂದ ಕೂಡಿರುವ, ಅಪ್ರಧೃಷ್ಯಪರಾಕ್ರಮಂ - ತಿರಸ್ಕರಿಸಲಸಾಧ್ಯವಾದ ಶೌರ್ಯವುಳ್ಳ, ಲೋಕಪಾಲೋಪಮಂ - ಇಂದ್ರಾದಿ ಲೋಕಪಾಲಕರಿಗೆ ಸದೃಶನಾದ, ತಂ - ಆ ಶ್ರೀರಾಮನನ್ನು, ಮೇದಿನೀ - ಭೂಮಿಯು, ನಾಥಂ - ಸ್ವಾಮಿಯನ್ನಾಗಿ, ಅಕಾಮಯತ - ಅಪೇಕ್ಷಿಸಿದಳು. ॥ ೩೪ ॥ ಏತೈಃ - ಈ ಪೂರ್ವೋಕ್ತಗಳಾದ, ಅನುಪಮೈಃ - ಅಸದೃಶಗಳಾದ, ಗುಣೈಃ - ಗುಣಗಳಿಂದ, ಯುಕ್ತಂ - ಕೂಡಿರುವ, ಸುತಂ - ಕುಮಾರ

ಚಂದ್ರನು ಪ್ರಜೆಗಳಲ್ಲಿ ಸರ್ವೋತ್ಕೃಷ್ಟವಾದ ಗುಣಗಣವಿಭೂಷಿತನಾಗಿಯೂ, ಲೋಕತ್ರಯೈಕಪೂಜ್ಯನಾಗಿಯೂ, ಕ್ಷಮಾಗುಣದಿಂದ ಭೂಮಿಗೆ ಸಮಾನನಾಗಿಯೂ, ಬುದ್ಧಿಯಲ್ಲಿ ಬೃಹಸ್ಪತಿಗೆ ಸದೃಶನಾಗಿಯೂ, ಪರಾಕ್ರಮದಲ್ಲಿ - ದೇವೇಂದ್ರನಿಗೆ ಸಮಾನನಾಗಿಯೂ, ಪ್ರಜೆಗಳಿಗೆಲ್ಲ ಹಿತಕರವಾಗಿಯೂ, ತಂದೆಯಾದ ದಶರಥರಾಯನಿಗೆ ಸಂತೋಷಕರವಾಗಿಯೂ ಇರುವ ಗುಣಗಳಿಂದೊಡಗೂಡಿ, ಸಹಸ್ರಾರುಕಿರಣಗಳಿಂದ ಬೆಳಗುತ್ತಿರುವ ಸೂರ್ಯದೇವನಂತೆ ರಾರಾಜಿಸುತ್ತಿದ್ದನು. ॥೩೧-೩೩॥ ಈರೀತಿಯಾದ ವೃತ್ತಿಯುನ್ನುಳ್ಳವನೂ, ಸಹಿಸಲಸದಳವಾದ ಪರಾಕ್ರಮವುಳ್ಳವನೂ, ಅಷ್ಟದಿಕ್ಪಾಲಕರಿಗೆ ಸಮಾನನಾದವನೂ ಆದ ಶ್ರೀರಾಮಮೂರ್ತಿಯನ್ನು ಭೂದೇವಿಯು ತನಗೆ ಪತಿಯಾಗಬೇಕೆಂದು ಬಯಸುತ್ತಿದ್ದಳು. ॥ ೩೪ ॥ ಈ ಪ್ರಕಾರವಾಗಿ ಸದ್ಗುಣಸಂಪನ್ನನಾದ ಶ್ರೀರಾಮನನ್ನು ನೋಡಿ ವೃದ್ಧನಾದ

ರಥೋ ರಾಜಾ ಚಕ್ರೇ ಚಿಂತಾಂ ಪರಂತಪಃ ॥ ೩೫ ॥ ಅಥ ರಾಜ್ಞೋ ಬಭೂವೈವಂ ವೃದ್ಧಸ್ಯ ಚಿರಜೀವಿನಃ॥ಪ್ರೀತಿರೇಷಾ ಕಥಂ ರಾಮೋ ರಾಜಾ ಸ್ಯಾನ್ಮಯಿ ಜೀವತಿ ॥ ೩೬ ॥ ಏಷಾಹ್ಯಸ್ಯ ಪರಾಪ್ರೀತಿರ್ಹೃದಿ ಸಂಪರಿವರ್ತತೇ ॥ ಕದಾನಾಮ ಸುತಂ ದ್ರಕ್ಷ್ಯಾ ಮ್ಯಭಿಷಿಕ್ತ ಮಹಂ ಪ್ರಿಯಂ ॥ ೩೭ ॥ ವೃದ್ಧಿಕಾಮೋಹಿ ಲೋಕಸ್ಯ ಸರ್ವಭೂತಾನುಕಂಪನಃ ॥ ಮತ್ತಃ ಪ್ರಿಯತರೋ ಲೋಕೇ ಪರ್ಜನ್ಯಇವ ವೃಷ್ಟಿಮಾನ್ ॥ ೩೮ ॥ ಯಮ ಶಕ್ರ ಸಮೋ ವೀರ್ಯೇ ಬೃಹಸ್ಪತಿ ಸಮೋ ಮತೌ ॥ ಮಹೀಧರ ಸಮೋ ಧೃತ್ಯಾಂ ಮತ್ತಶ್ಚ ಗುಣವತ್ತರಃ ॥ ೩೯ ॥ ಮಹೀಮಹಮಿಮಾಂ ಕೃತ್ಸ್ನಾಮಧಿತಿಷ್ಠಂತಮಾತ್ಮಜಂ ॥

ನನ್ನು, ದೃಷ್ಟ್ವಾ - ಕಂಡು, ಪರಂತಪಃ - ಶತ್ರುಸಂಹಾರಕನಾದ, ದಶರಥೋರಾಜಾ - ದಶರಥರಾಜನು, ಚಿಂತಾಂ - ಆಲೋಚನೆಯನ್ನು, ಚಕ್ರೇ - ಮಾಡಿದನು. ॥ ೩೫ ॥ ಅಥ - ಬಳಿಕ, ಮಯಿ-ನಾನು, ಜೀವತಿಸತಿ - ಬದುಕಿರುವಾಗಲೇ, ರಾಮಃ - ಶ್ರೀರಾಮನು, ರಾಜಾ- ರಾಜನು, ಕಥಂಸ್ಯಾತ್-ಹೇಗಾಗುವನು, ಇತಿ - ಇಂತೆಂದು, ಚಿರಜೀವಿನಃ - ಬಹುಕಾಲ ಜೀವಿಯಾದ, ವೃದ್ಧಸ್ಯ - ವಯಸಿ ವೃದ್ಧನಾದ, ರಾಜ್ಞಃ - ದಶರಥರಾಜನಿಗೆ, ಪರಾ - ನಿರವಧೆಯಾದ, ಪ್ರೀತಿಃ - ವಿಶ್ವಾಸವು, ಬಭೂವ-ಆಯಿತು. ॥ ೩೬ ॥ ಅಹಂ - ನಾನು, ಪ್ರಿಯಂ - ಇಷ್ಟನಾದ, ಸುತಂ - ಕುಮಾರನನ್ನು, ಅಭಿಷಿಕ್ತಂ - ಪಟ್ಟಾಭಿಷಿಕ್ತನನ್ನಾಗಿ, ಕದಾ - ಯಾವಾಗ, ದ್ರಕ್ಷ್ಯಾಮಿ - ನಾನು ನೋಡುವೆನೋ, ಇತಿ-ಎಂದು, ಪರಾ - ಉತ್ಕೃಷ್ಟವಾದ, ಏಷಾಪ್ರೀತಿಃ - ಈ ವಿಶ್ವಾಸವು, ಅಸ್ಯ - ಈ ದಶರಥನ, ಹೃದಿ-ಮನದಲ್ಲಿ, ಸಂಪರಿವರ್ತತೇ - ಅವಿಚ್ಛಿನ್ನವಾಗಿದ್ದಿತು. ॥ ೩೭ ॥ (ಮಮಾತ್ಮಜಃ - ನನ್ನ ಕುಮಾರನು,) ಸರ್ವಸ್ಯ - ಸಮಸ್ತರಾದ, ಲೋಕಸ್ಯ - ಜನರಿಗೆ, ವೃದ್ಧಿಕಾಮೋಹಿ - ಅಭಿವೃದ್ಧಿಯನ್ನಪೇಕ್ಷಿಸುವವನಷ್ಟೆ, ಸರ್ವಭೂತಾನುಕಂಪನಃ - ಸರ್ವಪ್ರಾಣಿಗಳಲ್ಲಿಯೂ ದಯೆಯುಳ್ಳವನು, ವೃಷ್ಟಿಮಾನ್-ವರ್ಷಿಸುತ್ತಿರುವ, ಪರ್ಜನ್ಯಇವ - ಪರ್ಜನ್ಯನಂತೆ, ಲೋಕೇ - ಲೋಕದಲ್ಲಿ, ಮತ್ತಃ - ನನಿಗಿಂತಲು, ಪ್ರಿಯತರಃ - ಅತಿಶಯಮಾದ ಪ್ರೀತಿಯುಳ್ಳವನು. ॥ ೩೮ ॥ ವೀರ್ಯೇ - ಪರಾಕ್ರಮದಲ್ಲಿ, ಯಮಶಕ್ರಸಮಃ - ಯಮನಿಗೂ ಇಂದ್ರನಿಗೂ ಸದೃಶನಾಗಿರುವನು, ಮತೌ - ಬುದ್ಧಿಯಲ್ಲಿ, ಬೃಹಸ್ಪತಿಸಮಃ - ಸುರಗುರುವಿಗೆ ಸಾಟಿಯಾದವನು, ಧೃತ್ಯಾಂ - ಧೈರ್ಯದಲ್ಲಿ, ಮಹೀಧರಸಮಃ - ಹಿಮವತ್ಪರ್ವತಕ್ಕೆ ಸಮಾನನಾಗಿರುವನು, ಮತ್ತಶ್ಚ - ನನಿಗಿಂತಲೂ, ಗುಣಾತಿಶಯವುಳ್ಳವನು. ॥ ೩೯ ॥ ಅನೇನವಯಸಾ-ಈ ವಯಸ್ಸಿನಿಂದ, ಕೃತ್ಸ್ನಾಂ-ಸಮಸ್ತವಾದ, ಇಮಾಂಮಹೀಂ - ಈ ಭೂಮಿಯಲ್ಲಿ

ದಶರಥಭೂಪಾಲನು ತನ್ನ ಮನದಲ್ಲಿ "ನಾನು ಜೀವಿಸಿರುವಾಗಲೇ ಶ್ರೀರಾಮನು ಪಟ್ಟಾಭಿಷಿಕ್ತನಾಹುದನ್ನು ಯಾವಾಗ ನೋಡುವೆನೋ? ನನ್ನ ಮುದ್ದುಗುಮರನೂ, ಸರ್ವಭೂತಗಳಲ್ಲಿ ದಯೆಯುಳ್ಳವನೂ, ಮಳೆಗರೆಯುತ್ತಿರುವ ಪರ್ಜನ್ಯನಿಗೆ ಸಮಾನನಾದವನೂ, ಪರಾಕ್ರಮದಲ್ಲಿ ದೇವೇಂದ್ರನಿಗೂ, ಯಮನಿಗೂ, ಧೈರ್ಯದಲ್ಲಿ ಹಿಮವತ್ಪರ್ವತಕ್ಕೂ ಸದೃಶನಾದವನೂ, ಬುದ್ಧಿಯಲ್ಲಿ ಸಾಕ್ಷಾದ್ಬೃಹಸ್ಪತಿಗೆ ಸಮನಾದವನೂ, ನನಗಿಂತಲೂ ಜನಗಳಿಗೆ ಪ್ರಿಯಂಕರನಾಗಿಯೂ, ನನಗಿಂತಲೂ ಅಧಿಕ ಗುಣಸಂಪನ್ನನಾಗಿಯೂ, ಈ ವಯಸ್ಸಿನಲ್ಲಿ

ಅನೇನ ವಯಸಾ ದೃಷ್ಟ್ವಾ ಯಥಾ ಸ್ವರ್ಗಮವಾಪ್ನುಯಾಂ ॥ ೪೦ ॥ ಇತ್ಯೇತೈ ರ್ವಿವಿಧೈಸ್ತೈಸ್ತೈರನ್ಯಪಾರ್ಥಿವ ದುರ್ಲಭೈಃ ॥ ಶಿಷ್ಟೈರಪರಿಮೇಯೈಶ್ಚ ಲೋಕೇ ಲೋಕೋತ್ತರೈರ್ಗುಣೈಃ ॥ ೪೧ ॥ ತಂ ಸಮೀಕ್ಷ್ಯ ಮಹಾರಾಜೋ ಯುಕ್ತಂ ಸಮುದಿತೈಶ್ಶುಭೈಃ ॥ ನಿಶ್ಚಿತ್ಯ ಸಚಿವೈಸ್ಸಾರ್ಧಂ ಯುವರಾಜ ಮಮನ್ಯತ ॥ ೪೨ ॥ ದಿವ್ಯಂತರಿಕ್ಷೇ ಭೂಮೌಚ ಘೋರಮುತ್ಪಾತಜಂ ಭಯಂ ॥ ಸಂಚಚಕ್ಷೇಚ ಮೇಧಾವೀ ಶರೀರೇಚಾತ್ಮನೋಜರಾಂ ॥ ೪೩ ॥ ಪೂರ್ಣ

ಅಧಿತಿಷ್ಠಂತಂ - ಪಟ್ಟಾಭಿಷಿಕ್ತನಾದ, ಆತ್ಮಜಂ - ಕುಮಾರನನ್ನು, ಅಹಂ - ನಾನು, ದೃಷ್ಟ್ವಾ - ಕಂಡು, ಯಥಾ - ಹೇಗೆ, ಸ್ವರ್ಗಂ - ಸ್ವರ್ಗವನ್ನು, ಅವಾಪ್ನುಯಾಂ (ಮ) - ಹೊಂದುವೆನೋ, (ಗೋ) ಯಥಾಸ್ವರ್ಗಂ - ನನ್ನ ಪುಣ್ಯಕ್ಕನುಗುಣವಾಗಿರುವ ಸ್ವರ್ಗವನ್ನು, ಅಥವ ನಿನ್ನ ಸಹವಾಸ ರೂಪವಾದ ಸ್ವರ್ಗವಾವುದೋ ಎಂದರೆ ರಾಮ ಸೌಂದರ್ಯಾನುಭವ ಸ್ವರ್ಗವನ್ನು, ಆಪ್ನುಯಾಂ - ಹೊಂದುವೆನೋ, (ಇತಿ - ಇಂತೆಂದು, ಪ್ರೀತಿಃ - ವಿಶ್ವಾಸವು, ಹೃದಿ - ಮನದಲ್ಲಿ, ಸಂಪರಿವರ್ತತೇ - ಉನ್ನಾಗಿದ್ದಿತು) ॥ ೪೦ ॥ ಇತಿ - ಈ ಪೂರ್ವೋಕ್ತವಾಗಿ, ವಿವಿಧೈಃ - ಆಯಾ ಕಾರ್ಯ ಭೇದ ಗಳಿಂದ ಪ್ರಸಿದ್ಧವಾದ, ತೈಸ್ತೈಃ - ಅಂತಂತಹ, ಅನ್ಯಪಾರ್ಥಿವದುರ್ಲಭೈಃ - ಇತರ ರಾಜರಿಗೆ ದುರ್ಲಭವಾದ, ಏತೈಃಗುಣೈಃ - ಈ ಗುಣಗಳಿಂದಲೂ, ಶಿಷ್ಟೈಃ - ಅಪರಿಮಿತವಾದ, ಲೋಕೇ - ಲೋಕದಲ್ಲಿ, ಲೊಕೋತ್ತರೈಃ - ಸರ್ವೋತ್ತಮವಾದ, ಶುಭೈಃ - ಶುಭಕರವಾದ, ಮುದಿತೈಃ - ಸ್ವಾಭಾವಿಕವಾದ, ಗುಣೈಶ್ಚ - ಸೌಶೀಲ್ಯಾದಿ ಗುಣಗಳಿಂದಲೂ, ಯುಕ್ತಂ - ಕೂಡಿರುವ, ತಂ - ಆ ಶ್ರೀರಾಮನನ್ನು, ಸಮೀಕ್ಷ್ಯ - ಕಂಡು, ಮಹಾರಾಜಃ - ದಶರಥರಾಜನು, ಸಚಿವೈಸ್ಸಾರ್ಧಂ - ಮಂತ್ರಿಗಳೊಡನೆ, ನಿಶ್ಚಿತ್ಯ - ನಿಶ್ಚಯಿಸಿ, ಯುವರಾಜಂ - ಯೌವರಾಜ್ಯಪಟ್ಟಾಭಿಷಿಕ್ತನನ್ನಾಗಿ, ಅಮನ್ಯತ - ಭಾವಿಸಿದನು. ॥ ೪೨ ॥ ಮೇಧಾವೀ - ತಿಳಿವಳಿಕೆಯುಳ್ಳ ದಶರಥರಾಜನು, ದಿವಿ-ಸ್ವರ್ಗದಲ್ಲಿಯೂ, ಅಂತರಿಕ್ಷೇ - ಆಕಾಶದಲ್ಲಿಯೂ, ಭೂಮೌಚ - ಭೂಮಿಯಲ್ಲಿಯೂ ಸಹ, ಉತ್ಪಾತಜಂ - ಉತ್ಪಾತ ಗಳಿಂದ ಹುಟ್ಟಿದ, ಘೋರಂ - ಭಯಂಕರವಾದ, ಭಯಂ - ಭೀತಿಯನ್ನು, ಆತ್ಮನಃ - ತನ್ನ, ಶರೀರೇ- ದೇಹದಲ್ಲಿ, ಜರಾಂಚ - ವಾರ್ಧಿಕ್ಯಾವಸ್ಥೆಯನ್ನೂ ಸಹ, ಸಂಚಚಕ್ಷೇ - ಕಂಡನು, (ಗೋ) ಸಚಿವಾನಾಂ - ಮಂತ್ರಿಗಳಿಗೆ, ಆಚಚಕ್ಷೇ (೧) - ಹೇಳಿದನು. ॥ ೪೩ ॥ ಅಥ - ಅನಂತರದಲ್ಲಿ,

---

ಸಮಸ್ತ ಭೂಮಂಡಲವೆಲ್ಲವನ್ನೂ ಆಕ್ರಮಿಸಿಕೊಂಡಿರುವ ಶ್ರೀರಾಮನನ್ನು ನೋಡಿ ಸ್ವರ್ಗ ವನ್ನು ಹೇಗೆ ಸೇರುವೆನೋ ?" ಎಂದು ಚಿಂತಿಸಿದನು. ॥೩೫-೪೦॥ ಈ ಪ್ರಕಾರವಾದ ಬಹು ವಿಧಗಳೂ, ರಾಜರಿಗೆ ದುರ್ಲಭಗಳೂ ಆದ ಗುಣಗಳಿಂದಲೂ, ಅಸಂಖ್ಯಾತವೂ, ಏಕೋತ್ತ ರವೂ ಆದ ಸೌಶೀಲ್ಯಾದಿ ಇತರ ಗುಣಗಳಿಂದಲೂ ಸಹಿತನಾದ ಶ್ರೀರಾಮನನ್ನು ಕಂಡು, ದಶರಥರಾಯನು ರಘುನಂದನನಿಗೆ ಯೌವರಾಜ್ಯಾಭಿಷೇಚನೆಯನ್ನು ಮಾಡಬೇಕೆಂದು

॥ ಶ್ಲೋ ॥ ಸ್ವರ್ಭಾನು ಕೇತು ನಕ್ಷತ್ರ ಗ್ರಹ. ತಾರಾರ್ಕ ಚಂದ್ರಜಂ ॥ ದಿವಿಜೋತ್ಪದ್ಯತೇಯಚ್ಚ ತದ್ದಿವ್ಯ ಮಿತಿ ಕೀರ್ತಿತಂ ॥ ವಾಯ್ವಭ್ರ ಸಂಧ್ಯಾದಿ ಗ್ರಾಹ ಪರಿವೇಷ ತಮಾಂಸಿಚ ॥ ಖಪುರಂ ಚೇಂದ್ರಚಾಪಂ ಚ ತದ್ವಿದ್ಯಾದಂತರಿಕ್ಷಜಂ ॥ ಭೂಮಾವುತ್ಪದ್ಯತೇಯಚ್ಚ ಸ್ಥಾವರಂ ನಾಥ ಜಂಗಮಂ ॥ ತದ್ಯೈಕ ದೇಶಿಕಂ ಭೌಮ ಮುತ್ಪಾತಂ ಪರಿಚಕ್ಷತೇ ॥ ಎಂದು ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿರುವಂತೆ ಈ ಉತ್ಪಾತಗಳು ದಿವ್ಯೋತ್ಪಾತಗಳು, ಅಂತ ರಿಕ್ಷೋತ್ಪಾತಗಳು, ಭೌಮೋತ್ಪಾತಗಳು ಎಂದು ಮೂರು ಬಗೆಗಳಾಗಿರುವವು.

ಚಂದ್ರಾನನಸ್ಯಾಥ ಶೋಕಾಪನುದಮಾತ್ಮನಃ ॥ ಲೋಕೇ ರಾಮಸ್ಯ ಬುಬುಧೇ ಸಂಪ್ರಿಯತ್ವಂ ಮಹಾತ್ಮನಃ ॥ ೪೪ ॥ ಆತ್ಮನಶ್ಚ ಪ್ರಜಾನಾಂಚ ಶ್ರೇಯಸೇ ಚ ಪ್ರಿಯೇಣಚ ॥ ಪ್ರಾಪ್ತಕಾಲೇನ ಧರ್ಮಾತ್ಮಾ ಭಕ್ತ್ಯಾ ತ್ವರಿತವಾನ್ನೃಪಃ॥ ೪೫ ॥ ನಾನಾ ನಗರ ವಾಸ್ತವ್ಯಾನ್ ಪೃಥಗ್ಜಾನಪದಾನಪಿ ॥ ಸಮಾನಿನಾಯ ಮೇದಿನ್ಯಾಃ ಪ್ರಧಾನಾನ್ ಪೃಥಿವೀಪತೀನ್ ॥ ೪೬ ॥ ನತು ಕೇಕಯ ರಾಜಾನಂ.

ಆತ್ಮನಃ - ತನಗೆ, ಶೋಕಾಪನುದಂ - ಶೋಕನಿವರ್ತಕವಾದ, ಪೂರ್ಣಚಂದ್ರಾನನಸ್ಯ - ಪೂರ್ಣಿಮಾಚಂದ್ರನಂತೆ ಮುಖವುಳ್ಳ, ಮಹಾತ್ಮನಃ - ಮಹಾಬುದ್ಧಿಯುಳ್ಳ, ರಾಮಸ್ಯ - ಶ್ರೀರಾಮನ, ಲೋಕೇ - ಲೋಕದಲ್ಲಿ, ಸಂಪ್ರಿಯತ್ವಂ - ಆನಂದಕರತ್ವವನ್ನು, ಬುಬುಧೇವು - ತಿಳಿದವನಾದನು, (ಗೋ) ಅಂದರೆ ಅನುಸಂಧಾನ ಮಾಡಿದನು. ॥ ೪೪ ॥ (ಗೋ) ಆತ್ಮನಃ - ತನ್ನ ಶ್ರೇಯಸೇಚ - ಹಿತಕ್ಕೋಸ್ಕರವೂ, ಪ್ರಜಾನಾಂ - ಪ್ರಜೆಗಳ, ಶ್ರೇಯಸೇಚ - ಹಿತಾರ್ಥವಾಗಿಯೂ, ಪ್ರಿಯೇಣಚ - ಪ್ರಿಯಕ್ಕೋಸ್ಕರವೂ ಸಹ, ಧರ್ಮಾತ್ಮಾ - ಧರ್ಮಸ್ವಭಾವವುಳ್ಳ, ನೃಪಃ - ದಶರಥರಾಜನು, ಪ್ರಾಪ್ತಕಾಲೇನ - ವಯೋನುಗುಣ್ಯವಾಗಿ, ಭಕ್ತ್ಯಾ - ಪ್ರೀತಿಯಿಂದ, ತ್ವರಿತವಾನ್ - ತ್ವರೆಪಟ್ಟನು, (ಮ) ಪ್ರಿಯೇಣ - ಪ್ರೀತಿಯೆಂಬ ಹೇತುವಿನಿಂದ, ಭಕ್ತ್ಯಾ - ಶ್ರೀರಾಮಪರಿಪಾಲಕರಾದ ಜನರು ಧನ್ಯರಾಗುವರೆಂಬ ಪ್ರಜಾವಿಷಯಕವಾದ ಭಕ್ತಿಯಿಂದ, ಆತ್ಮನಃ ಪ್ರಜಾನಾಂಚಶ್ರೆಯಸೆ - ತನಗೂ ತನ್ನ ಪ್ರಜೆಗಳಿಗೂ ಶ್ರೇಯಸ್ಸಿಗೋಸ್ಕರ, ನೃಪಃ - ದಶರಥನು, ರಾಮಾಭಿಷೇಕಂ - ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಕುರಿತು, ತ್ವರಿತವಾನ್ - ಜಾಗ್ರತೆಗೊಂಡನು. ॥ ೪೫ ॥ ನಾನಾನಗರವಾಸ್ತವ್ಯಾನ್ - ಅನೇಕ ಪಟ್ಟಣಗಳಲ್ಲಿರುವ, ಪೃಥಗ್ಜಾನಪದಾನಪಿ - ಪ್ರತ್ಯೇಕ ಪ್ರತ್ಯೇಕ ದೇಶಗಳಲ್ಲಿರುವವರೂ ಆದ, ಮೇದಿನ್ಯಾಃ - ಭೂಮಿಗೆ, ಪ್ರಧಾನಾನ್ - ಮುಖ್ಯರಾದ, ಪೃಥಿವೀಪತೀನ್ - ರಾಜರನ್ನು, ಸಮಾನಿನಾಯ - ಕರೆಯಿಸಿದನು. ॥ ೪೬ ॥ ಪಶ್ಚಾತ್ ...,

---

ಮಂತ್ರಿಗಳೊಡನೆ ಆಲೋಚಿಸಿದನು. ಆ ಬಳಿಕ ದಶರಥಭೂಪಾಲನೀಗಲೇ ಶ್ರೀರಾಮನಿಗೆ ಯೌವರಾಜ್ಯಪಟ್ಟಾಭಿಷೇಕವನ್ನು ಮಾಡುವನೆಂಬುದಕ್ಕೆ ಕಾರಣವಾಗಿ, ಆ ರಾಯನಿಗೆ ವಿಪತ್ಸೂಚಕವಾದ ಉತ್ಪಾತಗಳನ್ನೂ, ಆತನಿಗೆ ಸಂಭವಿಸಿರುವ ಮುಪ್ಪನ್ನೂ ಸಹ ಆತನು "ರಾಹು, ಕೇತು, ಅಶ್ವಿನ್ಯಾದಿ ನಕ್ಷತ್ರ, ಇತರ ನಕ್ಷತ್ರ, ಗ್ರಹ, ಚಂದ್ರ, ಸೂರ್ಯರ ವೈರೂಪ್ಯದಿಂದ, ಆಕಾಶದಲ್ಲಿ ಹುಟ್ಟಿದ ದಿವ್ಯವೆಂದು ಪ್ರಸಿದ್ಧವಾದ ಉತ್ಪಾತಗಳೂ, ವಾಯು, ಮೇಘ, ಸಂಧ್ಯೆ, ದಿಕ್ಕು, ದಾಹ, ಸೂರ್ಯ, ಚಂದ್ರಾದಿಗಳ ಪರಿವೇಷ, ತಮಸ್ಸು, ಗಂಧರ್ವನಗರ, ಮುಂತಾದ ಆಕಾಶಜನ್ಯವಾದ ಉತ್ಪಾತಗಳೂ, ಸ್ಥಾವರ ಜಂಗಮಾತ್ಮಕವಾಗಿ ಭೂಮಿಯಲ್ಲಿ ಹುಟ್ಟುವ ಉತ್ಪಾತಗಳೂ, ನನ್ನ ಶರೀರದಲ್ಲಿ ವೃದ್ಧಾಪ್ಯವೂ ಸಹ ತಲದೋರಿರುವುದು" ಎಂದು ಚಿಂತಿಸಿ ತನ್ನ ಮಂತ್ರಿಗಳೊಡನೆ ಹೇಳಿದನು. ॥೪೧-೪೩॥ ಇಷ್ಟೆಯಲ್ಲದೆ ಪೂರ್ಣಿಮಾಚಂದ್ರನಂತೆ ತನ್ನ ಶೋಕಸಂತಾಪಗಳೆಲ್ಲವನ್ನೂ ಪರಿಹರಿಸುವವನೂ ಮಹಾತ್ಮನೂ ಆದ ಶ್ರೀರಾಮಚಂದ್ರನಿಗೆ ಲೋಕವಿಷಯದಲ್ಲುಂಟಾಗಿರುವ, ಸರ್ವಾನಂದಕರತ್ವವನ್ನು ಅನುಸಂಧಾನಮಾಡಿಕೊಂಡು, ತನಗೂ, ತನ್ನ ಪ್ರಜೆಗಳಿಗೂ, ಶ್ರೇಯಸ್ಸು ಮತ್ತು

ಜನಕಂ ವಾ ನರಾಧಿಪಃ ॥ ತ್ವರಯಾ ಚಾನಯಾಮಾಸ ಪಶ್ಚಾತ್ತೌ ಶ್ರೋಷ್ಯತಃ ಪ್ರಿಯಂ ॥ ೪೭ ॥ ತಾನ್ವೇಶ್ಮನಾನಾಭರಣೈರ್ಯಥಾರ್ಹಂ ಪ್ರತಿಪೂಜಿತಾನ್ ॥ ದದರ್ಶಾಲಂಕೃತೋ ರಾಜಾ ಪ್ರಜಾಪತಿರಿವ ಪ್ರಜಾಃ ॥ ೪೮ ॥ ಅಥೋಪವಿಷ್ಟೇ ನೃಪತೌ ತಸ್ಮಿನ್ ಪರಬಲಾರ್ದನೇ ॥ ತತಃ ಪ್ರವಿವಿಶುಶ್ಶೇಷಾ ರಾಜಾನೋ ಲೋಕಸಮ್ಮತಾಃ ॥ ೪೯ ॥ ಅಥ ರಾಜವಿತೀರ್ಣೇಷು ವಿವಿಧೇಷ್ವಾಸನೇಷು ಚ ॥ ರಾಜಾನಮೇವಾಭಿಮುಖಾ ನಿಷೇದುರ್ನಿಯತಾ ನೃಪಾಃ ॥ ೫೦ ॥

ಬಳಿಕ, ಪ್ರಿಯಂ - ಇಷ್ಟವಾದ ಶ್ರೀರಾಮನ ಯೌವರಾಜ್ಯಪಟ್ಟಾಭಿಷೇಕವನ್ನು, ಶ್ರೋಷ್ಯತಃ - ಕೇಳುವರು, (ಇತಿ - ಇಂತೆಂದು) ತ್ವರಯಾ - ತ್ವರೆಯಿಂದ, ಕೇಕಯರಾಜಾನಂ -ಕೇಕಯರಾಜನನ್ನೂ, ನರಾಧಿಪಃ - ದಶರಥರಾಜನು, ನತುಆನಯಾಮಾಸ - ಕರೆಯಿಸಲೇ ಇಲ್ಲವು. ॥ ೪೭ ॥ ಅಲಂಕೃತಃ - ಅಲಂಕರಿಸಲ್ಪಟ್ಟ, ರಾಜಾ - ದಶರಥರಾಜನು, ವೇಶ್ಮನಾನಾಭರಣೈಃ - ಮನೆಯಲ್ಲಿರುವ ಅನೇಕ ಒಡವೆಗಳಿಂದ, ಯಥಾರ್ಹಂ ಯಥಾಯೋಗ್ಯವಾಗಿ, ಪ್ರತಿಪೂಜಿತಾನ್ - ಪೂಜಿಸಲ್ಪಟ್ಟ, ತಾನ್ - ಆ ರಾಜರನ್ನೂ, ಪ್ರಜಾಃ - ಪ್ರಜೆಗಳನ್ನೂ, ಪ್ರಜಾಪತಿರಿವ-ಬ್ರಹ್ಮನಂತೆ, ದದರ್ಶ - ಕಂಡನು. ॥ ೪೮ ॥ ಅಥ - ಬಳಿಕ, ಪರಬಲಾರ್ದನೇ - ಶತ್ರುಬಲವಮಾರಕನಾದ, ತಸ್ಮಿನ್ನೃಪತೌ - ಆ ದಶರಥರಾಜನು, ಉಪವಿಷ್ಟೇ - ಕುಳಿತುಕೊಳ್ಳಲು, ತತಃ - ಆ ಬಳಿಕ, ಲೋಕಸಂಮತಾಃ - ಲೋಕದಲ್ಲಿ ಸಮ್ಮತರಾದ, ಶೇಷಾಃ - ಜನಕ ಕೇಕಯರಾಜವ್ಯತಿರಿಕ್ತರಾದ, ರಾಜಾನಃ - ಅರಸರು, ಪ್ರವಿವಿಶುಃ - ಪ್ರವೇಶಿಸಿದರು. ॥ ೪೯ ॥ ಅಥ-ಬಳಿಕ, ನಿಯತಾಃ - ನಿಶ್ಚಯವಾದ ದೇಶಾಧಿಪತ್ಯವುಳ್ಳ, ನೃಪಾಶ್ಚ - ರಾಜರೂ ಸಹ, ರಾಜವಿತೀರ್ಣೇಷು - ದಶರಥರಾಜನಿಂದ ಕೊಡಲ್ಪಟ್ಟ, ವಿವಿಧೇಷು - ನಾನಾ ವಿಧವಾದ, ಆಸನೇಷು - ಪೀಠಗಳಲ್ಲಿ ರಾಜಾನಂ - ದಶರಥರಾಜನಿಗೆ, ಅಭಿಮುಖಾಏವ - ಅಭಿಮುಖವಾಗಿಯೇ, ನಿಷೇದುಃ - ಕುಳಿತುಕೊಂಡರು. ॥ ೫೦ ॥ ಲಬ್ಧಮಾನ್ಯೈಃ - ಹೊಂದಲ್ಪಟ್ಟ ಬಹು

ಪ್ರೀತಿಗಳಿಗಾಗಿ, ಧರ್ಮಾತ್ಮನಾದ ದಶರಥರಾಯನು ತನ್ನ ಮುಪ್ಪನ್ನೂ, ಶ್ರೀರಾಮನ ಯೌವನದ ಪ್ರಾದುರ್ಭಾವವನ್ನು ಸಂಪ್ರಾಪ್ತವಾದ ವಸಂತಕಾಲವನ್ನೂ ಸಹ ಕಂಡವನಾಗಿ, ಶ್ರೀರಾಮನಿಂದ ಸಂರಕ್ಷಿಸಲ್ಪಡುವ ಪ್ರಜೆಗಳೆಲ್ಲರೂ ಧನ್ಯರಾಗುವರೆಂಬ ಪ್ರಜಾವಿಷಯಿಕವಾದ ಪ್ರೇಮದಿಂದ ಆತನಿಗೆ ಯೌವರಾಜ್ಯಾಭಿಷೇಕವನ್ನು ಮಾಡಲು ಜಾಗ್ರತೆಗೊಂಡನು. ಇಂತು ಶ್ರೀರಾಮಮೂರ್ತಿಯ ಯೌವರಾಜ್ಯಾಭಿಷೇಕದಲ್ಲಿ ತ್ವರಿತನಾದಾದಶರಥನು, ತನಗೆ ಮುಖ್ಯಬಂಧುಗಳಾದ ಕೇಕಯ ಜನಕರಾಜರು ದೂರದೇಶವಾಸಿಗಳಾದುದರಿಂದ ಪಟ್ಟಾಭಿಷೇಕ ಮಹೋತ್ಸವವಾದಬಳಿಕ, ಆ ಸಂತೋಷ ಸಮಾಚಾರವನ್ನು ಕೇಳುವರೆಂದು ಚಿಂತಿಸಿ, ಸಮೀಪವರ್ತಿಗಳಾದ ನಾನಾ ನಗರವಾಸಿಗಳಾದವರೂ, ಪ್ರತ್ಯೇಕಪ್ರತ್ಯೇಕ ದೇಶವಾಸಿಗಳೂ, ಮಾಂಡಳಿಕರೂ ಆದ ರಾಜರೆಲ್ಲರನ್ನೂ ಕರೆಯಿಸಿದವನಾದನು. ॥೪೪-೪೭॥ ಶತ್ರುಸಂಹಾರಕನಾದಾದಶರಥರಾಯನು, ತನ್ನಾಣತಿಯಿಂದ ಬಂದ ರಾಜರಿಗೆ ಬಹುಮಾನವಾಗಿ ಉತ್ತಮವಾದ ಬಿಡಾರಗಳನ್ನು ಹವಣಿಸಿಕೊಟ್ಟು, ಆಭರಣಾದಿಗಳಿಂದ ಸತ್ಕರಿಸಿದನು. ಆ ಬಳಿಕಲಾ

ಸಲಬ್ಧ ಮಾನ್ಯೈರ್ವಿನಯಾನ್ವಿತೈರ್ನೃಪೈಃ
ಪುರಾಲಯೈರ್ಜಾನಪದೈಶ್ಚ ಮಾನವೈಃ ॥
ಉಪೋಪವಿಷ್ಟೈರ್ನೃಪತಿರ್ವೃತೋ ಬಭೌ
ಸಹಸ್ರ ಚಕ್ಷುರ್ಭಗವಾನಿವಾಮರೈಃ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪ್ರಥಮಸ್ಸರ್ಗಃ

ಮತಿಗಳುಳ್ಳ, ವಿನಯಾನ್ವಿತೈಃ - ವಿನಯಯುಕ್ತರಾದ, ಪುರಾಲಯೈಃ - ನಾನಾನಗರವಾಸಿಗಳಾದ, ಉಪೋಪವಿಷ್ಟೈಃ - ಸಮೀಪಸಮೀಪವನ್ನು ಹೊಂದಿರುವ, ನೃಪೈಃ - ರಾಜರಿಂದಲೂ, ಜಾನಪದೈಃ - ದೇಶವಾಸಿಗಳಾದ, ಮಾನವೈಶ್ಚ - ಅಧಿಕಾರಿಗಳಿಂದಲೂ, ಸನ್ನೃಪತಿಃ - ಆ ದಶರಥರಾಜನು, ವೃತಃ - ಪರಿವೃತನಾಗಿ, ಅಮರೈಃ - ದೇವತೆಗಳಿಂದ, ವೃತಃ - ಸುತ್ತುವರೆಯಲ್ಪಟ್ಟ, ಭಗವಾನ್ - ಪೂಜ್ಯನಾದ, ಸಹಸ್ರಚಕ್ಷುರಿವ - ದೇವೇಂದ್ರನಂತೆ, ಆಬಭೌ - ಹೊಳೆಯುತ್ತಿದ್ದನು. ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪ್ರಥಮಸ್ಸರ್ಗಃ

ರಾಯನು ಚತುರ್ಮುಖಬ್ರಹ್ಮನು ಪ್ರಜೆಗಳನ್ನು ಕಾಣುವರೀತಿಯಿಂದಾರಾಜರನ್ನು ಕಾಣುತ್ತ ಸುಖವಾಗಿ ಕುಳಿತವನಾಗಲು, ಕೇಕಯ ಜನಕರಾಯರನ್ನುಳಿದು, ಮಿಕ್ಕ ರಾಜರೆಲ್ಲರೂ ಸಭಾ ಪ್ರವೇಶವಂಗೈದು, ದಶರಥರಾಯನಿಂದ ನಿರ್ದೇಶಿತವಾದ ಆಸನಗಳಲ್ಲಿ ಆತನಿಗಭಿಮುಖವಾಗಿ ಕುಳಿತುಕೊಂಡರು. ಈ ಪ್ರಕಾರವಾಗಿ ದಿವ್ಯಾಭರಣವಸ್ತ್ರಾದಿಗಳಿಂದ ಸತ್ಕರಿಸಲ್ಪಟ್ಟು ತನ್ನ ಓಲಗದ ಸಮೀಪದಲ್ಲಿ ಕುಳಿತು ದಶರಥರಾಜನ ನುಡಿಗಳನ್ನು ಕೇಳಬೇಕೆಂಬ ಕುತೂಹಲದಿಂದ ಮೆಲ್ಲನೆಮೆಲ್ಲನೆ ಬಳಿ ಸಾರುತ್ತಿರುವ ತನ್ನ ದೇಶದ ರಾಯರಿಂದಲೂ, ಅನೇಕ ವಿನಯಾದಿ ಗುಣ ಸಂಪನ್ನರಾದ ಪರರಾಯರಿಂದಲೂ, ತೇಜಸ್ವಿಗಳಾದ ಪುರಜನರಿಂದಲೂ ಸುತ್ತುವರೆಯಲ್ಪಟ್ಟ, ಆ ದಶರಥರಾಯನು, ಸಿಂಹಾಸನಾರೂಢನಾಗಿ ದೇವ ಸಭೆಯಲ್ಲಿ ಸಮಸ್ತ ದೇವತೆಗಳಿಂದ ಪರಿವೃತನಾದ ದೇವೇಂದ್ರನಂತೆ ಹೊಳೆಯುತ್ತಿದ್ದನು. ॥ ೪೮-೫೧ ॥

ಇಂತಿದು ದಶರಥರಾಜ ಕೃತ ಶ್ರೀರಾಮ ಯೌವರಾಜ್ಯ ಪಟ್ಟಾಭಿಷೇಕಾಲೋಚನ ಕಥಾಕಥನವೆಂಬ ಮೊದಲನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿತೀಯಸ್ಸರ್ಗಃ.

ತತಃ ಪರಿಷದಂ ಸರ್ವಾಮಾಮಂತ್ರ್ಯವಸುಧಾಧಿಪಃ ॥ ಹಿತಮುದ್ಧರ್ಷಣಂ ಚೈವಮುವಾಚ ಪ್ರಥಿತಂ ವಚಃ ॥ ೧ ॥ ದುಂದುಭಿ ಸ್ವನಕಲ್ಪೇನ ಗಂಭೀರೇಣಾನುನಾದಿನಾ ॥ ಸ್ವರೇಣ ಮಹತಾ ರಾಜಾ ಜೀಮೂತ ಇವ ನಾದಯನ್ ॥ ೨ ॥ ರಾಜಲಕ್ಷಣ ಯುಕ್ತೇನ ಕಾಂತೇನಾನುಪಮೇನಚ ॥ ಉವಾಚ ರಸಯುಕ್ತೇನ ಸ್ವರೇಣ ನೃಪತಿ ರ್ನೃಪಾನ್ ॥ ೩ ॥ ವಿದಿತಂ ಭವತಾ

ತತಃ - ರಾಜಾಧಿನಿವೇಶಾನಂತರದಲ್ಲಿ, ವಸುಧಾಧಿಪಃ - ಭೂನಾಯಕನಾದ ದಶರಥರಾಜನು, ಸರ್ವಾಂ - ಸಮಸ್ತವಾದ, ಪರಿಷದಂ - ಸಭೆಯನ್ನು, ಆ ಮಂತ್ರ್ಯ - ಅಭಿಮುಖವಾಗಿ ಮಾಡಿಕೊಂಡು, ಹಿತಂ - ಶ್ರೇಯಸ್ಕರವಾದ, ಉದ್ಧರ್ಷಣಂ - ಅತ್ಯಾನಂದಜನಕವಾದ, ಪ್ರಥಿತಂಚ - ಪ್ರಸಿದ್ಧವಾದ ಅರ್ಥವುಳ್ಳ, ವಚಃ - ಮಾತನ್ನು, ಏವಂ - ಈ ಮುಂದೆ ಹೇಳುವಂತೆ, ಉವಾಚ - ಹೇಳಿದನು. ॥ ೧ ॥ ದುಂದುಭಿಸ್ವನಕಲ್ಪೇನ - ಭೇರಿಯಧ್ವನಿಗೆ ಸ್ವಲ್ಪ ಕಡಮೆಯಾಗಿರುವ, ಗಂಭೀರೇಣ - ಗಂಭೀರಾರ್ಥವುಳ್ಳ, ಅನುನಾದಿನಾ - ದಿಕ್ಕುಗಳಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಿರುವ, ಮಹತಾ - ಮಹತ್ತರವಾದ, ಸ್ವರೇಣ - ಸ್ವರದಿಂದ, ನಾದಯನ್ - ಶಬ್ದವನ್ನು ಮಾಡುತ್ತಿರುವ, ಜೀಮೂತಇವಸ್ಥಿತಃ - ಮೇಘದಂತಿರುವ, ನೃಪತಿಃ - ನರನಾಥನಾದ, ರಾಜಾ - ದಶರಥರಾಜನು, ರಾಜಲಕ್ಷಣಯುಕ್ತೇನ - ರಾಜಲಕ್ಷಣಗಳಿಂದ ಕೂಡಿರುವ, ಕಾಂತೇನ - ಮನೋಹರವಾದ, ಅನುಪಮೇನಚ - ಅಸದೃಶವಾಗಿಯೂ ಇರುವ, ರಸಯುಕ್ತೇನ - ಮಾಧುರ್ಯವುಳ್ಳ, ಸ್ವರೇಣ - ಕಂಠಸ್ವರದಿಂದ, ನೃಪಾನ್ - ರಾಜರನ್ನು ಕುರಿತು, ಉವಾಚ - ಹೇಳಿದನು. ॥ ೩ ॥ ಉತ್ತಮಂ - ಉತ್ಕೃಷ್ಟವಾದ, ಮೇರಾಜ್ಯಂ - ನನ್ನ ರಾಜ್ಯವು, ಮಮ - ನನಿಗೆ ಪೂರ್ವಕೈಃ - ಪೂರ್ವಿಕರಾದ, ರಾಜೇಂದ್ರೈಃ - ಮನುವೇ ಮುಂತಾದ ರಾಜಶ್ರೇಷ್ಠರಿಂದ, ಯಥಾ - ಹೇಗೆ, ಸುತವತ್ - ಮಗನಂತೆ, ಪರಿಪಾಲಿತಂ -

---

ಆ ಬಳಿಕ ನರನಾಥನಾದ ದಶರಥರಾಯನು ಸಭಿಕರೆಲ್ಲರನ್ನೂ ಕರೆದು, ಶ್ರೇಯಸ್ಕರವಾದುದಾಗಿಯೂ, ಸಂತೋಷವನ್ನುಂಟುಮಾಡುವುದಾಗಿಯೂ, ಅರ್ಥಾತಿಶಯವುಳ್ಳದಾಗಿಯೂ, ಭೇರೀ ಧ್ವನಿಯಂತಿರುವುದೂ, ಗಂಭೀರಾರ್ಥವುಳ್ಳದೂ, ದಶದಿಶೆಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಿರುವುದೂ, ಆಗಿರುವ ಮಾತನ್ನು ರಾಜಲಕ್ಷಣಯುಕ್ತವಾಗಿ ಮನೋಹರವಾದ ಸ್ವರದಿಂದ ಹೀಗೆ ಹೇಳಿದನು: "ಎಲೈ ರಾಜರುಗಳಿರಾ ! ನನ್ನಿಂದ ಪರಿಪಾಲಿತವಾದೀ ರಾಜ್ಯವನ್ನು ನಮ್ಮ ವಂಶದ ಪೂರ್ವದ ರಾಜರಾದ ರಘುವೇ ಮುಂತಾದವರು, ಪುತ್ರನಂತೆ ಪರಿಪಾಲಿಸಿದರೆಂಬುದು ತಮ್ಮೆಲ್ಲರಿಗೂ ತಿಳಿದ ವಿಷಯವೇ ಆಗಿರುವುದು. ಆ ವಂಶದವನಾದ ನಾನೂ ಈ ರಾಜ್ಯಕ್ಕೆ ಶ್ರೇಯಸ್ಸುಂಟುಮಾಡುವುದಕ್ಕಾಗಿ ಇಕ್ಷ್ವಾಕು

ನೇತದ್ಯಥಾ ನೇ ರಾಜ್ಯಮುತ್ತಮಂ ‖ ಪೂರ್ವಕೈರ್ಮಮ ರಾಜೇಂದ್ರೈ ಸ್ಸುತವತ್ಪರಿಪಾಲಿತಂ ‖ ೪ ‖ ಸೋಽಹಮಿಕ್ಷ್ವಾಕುಭಿಸ್ಸರ್ವೈರ್ನರೇಂದ್ರೈಃ ಪರಿಪಾಲಿತಂ ‖ ಶ್ರೇಯಸಾ ಯೋಕ್ತುಕಾಮೋಸ್ಮಿ ಸುಖಾರ್ಹಮಖಿಲಂ ಜಗತ್ ‖ ೫ ‖ ಮಯಾಪ್ಯಾಚರಿತಂ ಪೂರ್ವೈಃ ಪಂಥಾನಮನುಗಚ್ಛತಾ ‖ ಪ್ರಜಾ ನಿತ್ಯಮನಿದ್ರೇಣ ಯಥಾ ಶಕ್ತ್ಯಭಿರಕ್ಷಿತಾಃ ‖ ೬ ‖ ಇದಂ ಶರೀರಂ ಕೃತ್ಸ್ನಸ್ಯ ಲೋಕಸ್ಯ ಚರತಾ ಹಿತಂ ‖ ಪಾಂಡುರಸ್ಯಾತಪತ್ರಸ್ಯ ಛಾಯಾಯಾಂ ಜರಿತಂ ಮಯಾ ‖ ೭ ‖ ಪ್ರಾಪ್ಯ ವರ್ಷಸಹಸ್ರಾಣಿ ಬಹೂನ್ಯಾಯೂಂಷಿ ಜೀವತಃ‖ಜೀರ್ಣಸ್ಯಾಸ್ಯ ಶರೀರಸ್ಯ ವಿಶ್ರಾಂತಿ ಮಭಿರೋಚಯೇ‖

ಸಂರಕ್ಷಿಸಲ್ಪಟ್ಟಿತೋ, ಏತತ್ - ಈ ಪರಿಪಾಲನವು, ಭವತಾಂ - ನಿಮ್ಮಿಂದ, ವಿದಿತಂ - ತಿಳಿಯಲ್ಪಟ್ಟಿರುವುದು. ‖೪‖ ಸಃ - ಆ ವಂಶಸ್ಥನಾದ, ಅಹಂ - ನಾನು, ಇಕ್ಷ್ವಾಕುಭಿಃ- ಇಕ್ಷ್ವಾಕು ವಂಶಸ್ಥರಾದ, ಸರ್ವೈಃ - ಸಮಸ್ತ, ನರೇಂದ್ರೈಃ - ರಾಜರಿಂದ, ಪರಿಪಾಲಿತಂ-ಪಾಲಿಸಲ್ಪಟ್ಟವನಾನಕಾರಣ, ಸುಖಾರ್ಹಂ - ಸುಖಕ್ಕೆ ಯೋಗ್ಯವಾದ, ಅಖಿಲಂ - ಸಮಸ್ತವಾದ, ಜಗತ್ - ರಾಜ್ಯವನ್ನು, ಶ್ರೇಯಸಾ - ಶ್ರೀರಾಮಾಭಿಷೇಕರೂಪವಾದ ಸುಖದಿಂದ, ಯೋಕ್ತುಕಾಮಃ - ಕೂಡಿಸಬೇಕೆಂಬ ಇಚ್ಛೆಯುಳ್ಳವನು, ಅಸ್ಮಿ - ಆಗಿರುವನು. ‖ ೫ ‖ ಪೂರ್ವೈಃ - ಪೂರ್ವೀಕರಾದ ಇಕ್ಷ್ವಾಕು ಪ್ರಭೃತಿಗಳಿಂದ, ಆಚರಿತಂ - ಆಚರಿಸಲ್ಪಟ್ಟ, ಪಂಥಾನಂ - ಸನ್ಮಾರ್ಗವನ್ನು, ಅನುಗಚ್ಛತಾ - ಅನುಸರಿಸುತ್ತಿರುವ, ನಿತ್ಯಂ - ಸದಾ ಕಾಲದಲ್ಲಿಯೂ, ಅನಿದ್ರೇಣ - ಜಾಗರೂಕನಾದ, ಮಯಾಪಿ - ನನ್ನಿಂದಲೂ, ಪ್ರಜಾಃ - ಪ್ರಜೆಗಳು, ಯಥಾಶಕ್ತಿ - ಶಕ್ತ್ಯನುಸಾರವಾಗಿ, ಅಭಿರಕ್ಷಿತಾಃ - ಸಂರಕ್ಷಿಸಲ್ಪಟ್ಟರು. ‖ ‖ ೬ ‖ ಕೃತ್ಸ್ನಸ್ಯ - ಸಮಸ್ತವಾದ, ಲೋಕಸ್ಯ - ಜನರ, ಹಿತಂ - ಶ್ರೇಯಸ್ಸನ್ನು, ಚರತಾ - ಮಾಡುತ್ತಿರುವ, ಮಯಾ - ನನ್ನಿಂದ, ಇದಂಶರೀರಂ - ಈ ದೇಹವು, ಪಾಂಡುರಸ್ಯ - ಬೆಳ್ಳಗಿರುವ, ಆತಪತ್ರಸ್ಯ - ಛತ್ರದ, ಛಾಯಾಯಾಂ - ನೆರಳಿನಲ್ಲಿ, ಜರಿತಂ - ವಾರ್ಧಿಕ್ಯಾವಸ್ಥೆಯುಳ್ಳದಾಗಿ ಮಾಡಲ್ಪಟ್ಟಿತು. ‖ ೭ ‖ ವರ್ಷಸಹಸ್ರಾಣಿ - ಸಂವತ್ಸರಸಹಸ್ರಪರಿಮಿತವಾದ, ಆಯೂಂಷಿ - ಆಯುಸ್ಸುಗಳನ್ನು, ಪ್ರಾಪ್ಯ - ಹೊಂದಿ, ಬಹೂನ್ಯಾಯೂಂಷಿ - ಸಂವತ್ಸರ ಶತಾತ್ಮಕವಾದ ಅನೇಕ ಪುರುಷಾಯುಸ್ಸುಗಳನ್ನು, ಪ್ರಾಪ್ಯ - ಹೊಂದಿ, ಜೀವತಃ - ಬದುಕುತ್ತಿರುವ, ಜೀರ್ಣಸ್ಯ - ಕ್ರಮವಾಗಿ ಮುದಿಯಾದ, ಅಸ್ಯಶರೀರಸ್ಯ - ಈ ದೇಹಕ್ಕೆ, ವಿಶ್ರಾಂತಿ - ರಾಜ್ಯಭಾರದಿಂದ ವಿರಾಮವನ್ನು,

---

ಮೊದಲಾದ ರಾಯರಿಗಿಂತಲೂ ಅಧಿಕವಾದ ಯತ್ನವನ್ನು ಮಾಡುತ್ತ ಸುಖವನ್ನುಂಟುಮಾಡಬೇಕೆಂದು ಬಯಸುತ್ತೇನೆ. ‖ ೫ ‖ ನನ್ನ ಪೂರ್ವೀಕರಿಂದ ಆಚರಿತವಾದ ಪ್ರಜಾಪರಿಪಾಲನೆ ರೂಪ ಸನ್ಮಾರ್ಗವನ್ನು ಅನುಸರಿಸುತ್ತಿರುವವನೂ, ಸದಾ ಜಾಗರೂಕನಾದವನೂ ಆದ ನನ್ನಿಂದಲೂ ಸಹ ಪ್ರಜೆಗಳೆಲ್ಲರೂ ಶಕ್ತ್ಯನುಸಾರವಾಗಿ ಪರಿಪಾಲಿತರಾದರು. ಪ್ರಜೆಗಳಿಗೆಲ್ಲರಿಗೂ ಹಿತವನ್ನು ಬಯಸುವ ಈ ನನ್ನ ಶರೀರವು ಬೆಳ್ಗೊಡೆಯ ನೆಳಲಂತೆ ಮುಪ್ಪನ್ನೈದಿತು. ಅರವತ್ತು ಸಾವಿರ ವರ್ಷಗಳನ್ನು ಹೊಂದಿ ನೂರು ಸಂವತ್ಸರ ಪರಿಮಿತವಾದ ಅನೇಕ ಪುರುಷಾಯುಸ್ಸುಗಳನ್ನು ಪಡೆದು ಕ್ರಮವಾಗಿ ಗಳಿತವಾದ ಈ ದೇಹಕ್ಕೆ

॥ ೮ ॥ ರಾಜಪ್ರಭಾವ ಜುಷ್ಟಾಂ ಹಿ ದುರ್ವಹಾಮಜಿತೇಂದ್ರಿಯೈಃ ॥ ಪರಿ ಶ್ರಾಂತೋಸ್ಮಿ ಲೋಕಸ್ಯ ಗುರ್ವೀಂ ಧರ್ಮಧುರಂ ವಹನ್ ॥ ೯ ॥ ಸೋಹಂ ವಿಶ್ರಮಮಿಚ್ಛಾಮಿ ಪುತ್ರಂ ಕೃತ್ವಾ ಪ್ರಜಾಹಿತೇ ॥ ಸನ್ನಿಕೃಷ್ಟಾನಿಮಾಂ ಸರ್ವಾನನುಮಾನ್ಯ ದ್ವಿಜರ್ಷಭಾನ್ ॥ ೧೦ ॥ ಅನುಜಾತೋಹಿ ಮಾಂ ಸ್ಸರ್ವೈರ್ಗುಣೈರ್ಜ್ಯೇಷ್ಠೋ ಮಮಾತ್ಮಜಃ ॥ ಪುರಂದರ ಸಮೋ ವೀರ್ಯೇ ರಾಮಃ ಪರಪುರಂಜಯಃ ॥೧೧॥ ತಂ ಚಂದ್ರಮಿವ ಪುಷ್ಯೇಣ ಯುಕ್ತಂ ಧರ್ಮ

ಅಭಿರೋಚಯೇ - ಇಚ್ಛಿಸುತ್ತೇನೆ ॥ ೮ ॥ ರಾಜಪ್ರಭಾವಜುಷ್ಟಾಂ, ರಾಜಪ್ರಭಾವ - ಶೌರ್ಯಾದಿ ಗಳಿಂದ, ಜುಷ್ಟಾಂ - ಸೇವಿಸಲು ಅರ್ಹವಾದ, ಅಜಿತೇಂದ್ರಿಯೈಃ - ವಿಷಯಾಸಕ್ತರಿಂದ, ದುರ್ವಹಾಂ - ವಹಿಸಲಸಾಧ್ಯವಾದ, ಗುರ್ವೀಂ - ಬಹುಸಾಧನಗಳಿಂದ ನೆರವೇರಿಸತಕ್ಕ, ಲೋಕಸ್ಯ - ಲೋಕದ, ಧರ್ಮಧುರಂ - ಧರ್ಮಸಂಸ್ಥಾಪನಾರೂಪವಾದ ಭಾರವನ್ನು, ವಹನ್-ವಹಿಸುತ್ತಿರುವ ನಾನು, ಪರಿಶ್ರಾಂತಃ - ಬಳಲಿದವನು, ಅಸ್ಮಿಹಿ - ಆಗಿರುವೆನಷ್ಟೆ ॥ ೯ ॥ ಸೋಹಂ - ಅಂತಹ ನಾನು, ಪ್ರಜಾಹಿತೇ - ಪ್ರಜಾಸಂರಕ್ಷಣ ವಿಷಯದಲ್ಲಿ, ಪುತ್ರಂ - ಮಗನಾದ ಶ್ರೀರಾಮನನ್ನು, ಕೃತ್ವಾ - ಯೌವ ರಾಜ್ಯಾಭಿಷಿಕ್ತನನ್ನಾಗಿ ಮಾಡಿ, ಸನ್ನಿಕೃಷ್ಟಾನ್ - ಅಂತರಂಗಭೂತರಾದ, ಇಮಾನ್ಸರ್ವಾನ್ - ಈ ಸಮಸ್ತರಾದ, ದ್ವಿಜರ್ಷಭಾನ್ - ಬ್ರಾಹ್ಮಣಶ್ರೇಷ್ಠರನ್ನು, ಅನುಮಾನ್ಯ - ಒಡಂಬಡಿಸಿ, ವಿಶ್ರಮಂ - ವಿಶ್ರಾಂತಿಯನ್ನು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೧೦ ॥ ವೀರ್ಯೇ - ಪರಾಕ್ರಮದಲ್ಲಿ, ಪುರಂದರಸಮಃ - ಇಂದ್ರಸದೃಶನಾದ, ಪರಪುರಂಜಯಃ - ಶತೃಗಳ ಪಟ್ಟಣಗಳನ್ನು ಸ್ವಾಧೀನವಾಗಿ ಮಾಡಿಕೊಳ್ಳುತ್ತಿರುವ, ರಾಮಃ - ರಾಮನಾಮಕನಾದ, ಮಮಜ್ಯೇಷ್ಠ ಆತ್ಮಜಃ - ನನ್ನ ಜ್ಯೇಷ್ಠಪುತ್ರನು, ಸರ್ವೈಃ - ಸಮಸ್ತವಾದ, ಗುಣೈಃ - ಶೌರ್ಯಾದಿಗುಣಗಳಿಂದ, ಮಾಂ - ನನ್ನನ್ನು, ಅನುಜಾತಃ - ಅನುಸರಿಸಿ ಹುಟ್ಟಿರುವನು ॥ ೧೧ ॥ ಪುಷ್ಯೇಣ - ಪುಷ್ಯನಕ್ಷತ್ರದಿಂದ, ಯುಕ್ತಂ - ಕೂಡಿರುವ, ಚಂದ್ರಮಿವ - ಚಂದ್ರನಂತೆ ಪ್ರಕಾಶಮಾನನಾದ, ಧರ್ಮಭೃತಾಂ - ಧರ್ಮಕಾರ್‍ಯಗಳೊಳಗೆ, ವರಂ - ಉತ್ತಮನಾದ, ಪುರುಷಪುಂಗವಂ - ಪುರುಷಶ್ರೇಷ್ಠನಾದ, ತಂ - ಆ ಶ್ರೀರಾ

ರಾಜ್ಯಭಾರದಿಂದ ವಿಶ್ರಾಂತಿಯನ್ನು ಹೊಂದಲಿಚ್ಛಿಸುವೆನು. ॥ ೮ ॥ ಶೌರ್ಯಾದಿ ಗುಣಗಳಿಂದ ಸಾಧಿಸಿ ಸೇವಿಸಲರ್ಹವಾದುದೂ, ವಿಷಯಲಂಪಟರಿಂದ ವಹಿಸಲಸದಳವಾದುದೂ, ಬಹು ಸಾಧನಗಳಿಂದ ಸಾಧಿಸತಕ್ಕುದೂ ಆಗಿರುವ ಈ ಭೂಲೋಕದ ಧರ್ಮಸ್ಥಾಪನಾ ರೂಪವಾದ ಭಾರವನ್ನಿದುವರೆವಿಗೂ ವಹಿಸಿ ಬಳಲಿರುವೆನಾದುದರಿಂದ, ಪ್ರಜಾ ಪರಿಪಾಲನೆ ವಿಷಯದಲ್ಲಿ ನನ್ನ ಕುವರನನ್ನು ನಿಯಮಿಸಿ, ಅಂತರಂಗವರ್ತಿಗಳಾದ ಈ ಬ್ರಾಹ್ಮಣೋತ್ತಮರೆಲ್ಲರನ್ನೂ ಸಮ್ಮತಗೊಳಿಸಿ ವಿಶ್ರಾಂತಿಯನ್ನು ಹೊಂದಲಪೇಕ್ಷಿಸುತ್ತೇನೆ. ॥೯-೧೦॥ ನನ್ನ ಜ್ಯೇಷ್ಠ ಕುವರನಾದ ಶ್ರೀರಾಮನು ಪರಾಕ್ರಮ ವಿಷಯದಲ್ಲಿ ದೇವೇಂದ್ರ ತುಲ್ಯನೂ, ಶತ್ರು ರಾಜ ನಗರಗಳನ್ನು ಸಾಧಿಸುವವನೂ, ನನ್ನಲ್ಲಿರುವ ಶೌರ್ಯಾದಿ ಗುಣಗಳನ್ನನುಸರಿಸಿ ಜನಿಸಿರುವನೂ ಆಗಿರುವನಷ್ಟೆ. ಇಂತು ಪುಷ್ಯ ನಕ್ಷತ್ರಯುಕ್ತನಾದ ಚಂದ್ರನಂತೆ ಕಂಗೊಳಿಸುವ

ಭೃತಾಂ ವರಂ ॥ ಯೌವ ರಾಜ್ಯೇನ ಯೋಕ್ತಾಸ್ಮಿ ಪ್ರೀತಃ ಪುರುಷ ಪುಂಗವಂ ॥ ॥ ೧೨ ॥ ಅನುರೂಪ ಸ್ಸವೈ ಸಾಥೋ ಲಕ್ಷ್ಮೀವಾರ್ ಲಕ್ಷ್ಮಣಾಗ್ರಜಃ ॥ ತ್ರೈಲೋಕ್ಯ ಮಪಿ ನಾಥೇನ ಯೇನ ಸ್ಯಾನ್ನಾಥವತ್ತರಂ ॥ ೧೩ ॥ ಅನೇನ ಶ್ರೇಯಸಾ ಸದ್ಯ ಸ್ಸಂಯೋಜ್ಯೈವಂ ಮಹೀ ಮಿಮಾಂ ॥ ಗತಕ್ಲೇಶೋ ಭವಿಷ್ಯಾಮಿ ಸುತೇ ತಸ್ಮಿನ್ನಿವೇಶ್ಯ ವೈ ॥ ೧೪ ॥ ಯದಿದಂ ಮೇಽನುರೂಪಾರ್ಥಂ

ಮನನ್ನು, ಯೌವರಾಜ್ಯೇ - ಯೌವರಾಜ್ಯಪಟ್ಟಾಭಿಷೇಕದಲ್ಲಿ, ನಿಯೋಕ್ತಾ - ನಿಯೋಗಿಸತಕ್ಕವನೂ, ಅಸ್ಮಿ - ಆಗಿರುವನು ॥ ೧೨ ॥ (೧) ಏನನಾಥೇನ - (ಮ) ಯಾವ ಪ್ರಭುವಿನಿಂದ, ತ್ರೈಲೋಕ್ಯ ಮಪಿ - ಲೋಕತ್ರಯವೂ, ನಾಥವತ್ತರಂ - ಉತ್ತಮವಾದ ಸ್ವಾಮಿಯುಳ್ಳದ್ದು, ಸ್ಯಾತ್ - ಆದೀತೋ, ಲಕ್ಷ್ಮಣಾಗ್ರಜಃ - ಲಕ್ಷ್ಮಣನಿಗೆ ಅಣ್ಣನಾದ, ಲಕ್ಷ್ಮೀವಾರ್ - ಅಪರಿಚ್ಛನ್ನತೇಜಸ್ಸುಳ್ಳವನಾದ, ಸಃ - ಆ ಶ್ರೀರಾಮನು, (ಯುಷ್ಮಾಕಂ - ನಿಮಗೆ;) ಅನುರೂಪಃ - ಅನುಗುಣವಾದ, ನಾಥಃ - ಧೊರೆಯು, ಸ್ಯಾದ್ವೈ - ಆಗುವನಷ್ಟೆ ॥ ೧೩ ॥ ಸದ್ಯಃ - ಈಗ, ಇಮಾಂಮಹೀಂ - ನನ್ನಿಂದ ಬಹುಕಾಲ್ದದಿಂದ ಧರಿಸಲ್ಪಟ್ಟ ಈ ಭೂಮಿಯನ್ನು, ತಸ್ಮಿಸುತೇ - ಆ ಜ್ಯೇಷ್ಠಪುತ್ರನಲ್ಲಿ, ನಿವೇಶ್ಯ - ಇರಿಸಿ, ಅನೇನ - ಈ ರಾಮಪಟ್ಟಾಭಿಷೇಕರೂಪನಾದ, ಶ್ರೇಯಸಾ - ಶ್ರೇಯಸ್ಸಿನಿಂದ, (ಮಹೀಂ - ಭೂಮಿಯನ್ನು,) ಸಂಯೋಜ್ಯ - ಸೇರಿಸಿ, ಗತಕ್ಲೇಶಃ - ಕಳೆದುಹೋದ ಖತಿಯುಳ್ಳವನು, ಭವಿಷ್ಯಾಮಿ - ಆಗುವೆನು ॥ ೧೪ ॥ ಇದಂ - ಈ ರಾಮಾಭಿಷೇಕ ಕಾರ್ಯವು, ಮೇ - ವೃದ್ಧನಾದ ನನಗೆ, ಅನುರೂಪಾರ್ಥಂ

ವನಾಗಿಯೂ, ಧರ್ಮಿಷ್ಠರಲ್ಲಿ ಶ್ರೇಷ್ಠನಾದವನಾಗಿಯೂ, ಪುರುಷ ಶ್ರೇಷ್ಠನಾಗಿಯೂ ಇರುವ ಆ ನನ್ನ ಜ್ಯೇಷ್ಠ ಕುವರನಾದ ಶ್ರೀರಾಮನಿಗೆ ಯೌವರಾಜ್ಯ ಪಟ್ಟಾಭಿಷೇಕವನ್ನು ಮಾಡುವವನಾಗಿರುವೆನು. ॥ ೧೧-೧೨ ॥ ಯಾವ ಸ್ವಾಮಿಯಿಂದ, ಕೃತಕ, ಅಕೃತಕ, ಕೃತಾಕೃತಕಗಳೆನಿಸಿರುವ ಈ ಜಗತ್ತು, ಇಂದ್ರಾದಿ ದೇವತೆಗಳಿಗಿಂತಲೂ ಅತಿಶಯವಾಗಿ ಪರಿಪಾಲಿತವಾಗಿ ನಾಥನುಳ್ಳದಾಗಿರುವುದೋ, ಅಂತಹ ಲಕ್ಷ್ಮಣಾಗ್ರಜನೂ, ಕುಂದದಿರುವ ತೇಜವುಳ್ಳವನೂ

ಟಿ. (೧) ಗೋವಿಂದ ರಾಜೀಯ ವ್ಯಾಖ್ಯಾನದಲ್ಲಿ ಈ ಶ್ಲೋಕಕ್ಕೆ ವಿಷ್ಣುಸರ್ವೋತ್ಕೃಷ್ಟತ್ವವನ್ನು ಪ್ರತಿಪಾದಿಸುವ ವಿಶೇಷಾರ್ಥಗಳನ್ನು ನಿರೂಪಿಸಿ ಭಗವಾನ್ವಾಲ್ಮೀಕಿಯಿಂದುಕ್ತವಾದ ದಶರಥರಾಜ ವಚನಕ್ಕೆ ಇದೇ ತಾತ್ಪರ್ಯವೆಂದು ಬರೆದಿರುತ್ತಾರೆ. ವಿಶೇಷಾರ್ಥಗಳ ವಕ್ಕಣೆ:—ಸಃ - ಆ ಶ್ರೀರಾಮನು, ಲೋಕಸ್ಯ - ಈ ಭೂಲೋಕಕ್ಕೆ, ಅನುರೂಪಃ - ಅನುಗುಣವನ್ನುಳ್ಳ, ನಾಥಃ - ಸ್ವಾಮಿಯು, (ಲಕ್ಷ್ಮೀವಾರ್ ಯೆಂದು ಹೇಳಿದುದು ಅನುರೂಪಕ್ಕೆ ಕಾರಣವಾದುದು) ಲಕ್ಷ್ಮೀವಾರ್-ಎಂದೆಂದಿಗೂ ಕುಂದದಿರುವ ತೇಜಸ್ಸುಳ್ಳವನು, (ಲಕ್ಷ್ಮಣಾಗ್ರಜಃ-ಎಂಬುದಕ್ಕೆ ಲಕ್ಷ್ಮೀವಾರ್ ಯೆಂಬುದು ಕಾರಣವು) "ಲಕ್ಷ್ಮಣೋಲಕ್ಷ್ಮಿವರ್ಧನಃ"ಎಂಬುದರಿಂದ ಸಂಪತ್ತನ್ನಭಿವೃದ್ಧಿಗೊಳಿಸುವ ಲಕ್ಷ್ಮಣಮೂರ್ತಿಯ ಅಣ್ಣನಾದ, ಅಥವ ಲಕ್ಷ್ಮಣನಂತೆ ತನ್ನನ್ನಾಶ್ರಯಿಸಿದ ಇತರರನ್ನು ಸಹ ಪ್ರೀತಿಸುವ, ಅನುರೂಪಃ - ನಿತ್ಯಾನಪಾಯಿನಿಯಾದ ಲಕ್ಷ್ಮಿಯಿಂದೊಡಗೂಡಿದವನು ಎಂದರ್ಥವಾಗುವುದು ಎಂದಮೇಲೆ, ರಾಮಚಂದ್ರನು ಸಕಲಕ್ಕೂ ನಿರುಪಾಧಿಕನಾದ ಶೇಷಿಯು. ದಶರಥನಾದರೋ ರಾಜ್ಯಪಾಲನೋಪಾಧಿಕ ಶೇಷಿಯು, ವೈ - ಎಂಬುದರಿಂದ ಶ್ರುತ್ಯಾದಿ ಪ್ರಸಿದ್ಧವಾದ ಅರ್ಥವನ್ನೂ ಪ್ರಕಾಶಗೊಳಿಸುತ್ತಾನೆ. ಆತ್ಮರೆಲ್ಲರೂ ಸ್ವತಸ್ಸಿದ್ಧವಾಗಿಯೇ ಪರಮಾತ್ಮನಿಗೆ ದಾಸಭೂತರು, ಆತನ ನಿರುಪಾಧಿಕ ಶೇಷಿತ್ವದಲ್ಲಿ ಕಾರಣವನ್ನೆಸಗಲು, ತ್ರೈಲೋಕ್ಯಮಪಿ-ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕ

ಮಯಾ ಸಾಧು ಸುಮಂತ್ರಿತಂ ॥ ಭವಂತೋ ಮೇಽನುಮನ್ಯಂತಾಂ ಕಥಂ ವಾ ಕರವಾಣ್ಯಹಂ ॥ ೧೫ ॥ ಯದ್ಯಪ್ಯೇಷಾ ಮಮಪ್ರೀತಿ ರ್ಹಿತಮನ್ಯ ದ್ವಿಚಿಂ

ಯದಿ - ಅನುರೂಪವಾಗಿದ್ದರೆ, ಅಥವಾ - ಹಾಗಲ್ಲದಿದ್ದರೆ, ಮಯಾ - ನನ್ನಿಂದ, ಸಾಧು - ಚನ್ನಾಗಿ, ಸುಮಂತ್ರಿತಂಯದಿ - ಚನ್ನಾಗಿ ಆಲೋಚಿಸಲ್ಪಟ್ಟದ್ದರೆ, ಭವಂತಃ - ನೀವು, ಮೇ - ನನಗೆ, ಅನು ಮನ್ಯಂತಾಂ - ಸಮ್ಮತಿಸಿರಿ, (ಭವತಾಮನುಮತಿಂವಿನಾ - ನಿಮ್ಮ ಅಪ್ಪಣೆಯಿಲ್ಲದಿದ್ದರೆ,) ಕಥಂವಾ - ಹೇಗೆತಾನೆ, ಕರವಾಣಿ - ಮಾಡಲಿ ॥ ೧೫ ॥ ಯದ್ಯಪಿ - ಹೇಗಾದರೂ, ಏಷಾ - ಈ ರಾಮಪಟ್ಟಾ ಭಿಷೇಕರೂಪವಾದ ಆಲೋಚನೆಯು, ಮಮ - ನನಗೆ, ಪ್ರೀತಿಃ - ಇಷ್ಟವಾದುದು, (ತಥಾಪಿ - ಹಾಗಾ ದರು,) ಅನ್ಯತ್ - ಮತ್ತೊಂದಾದ, ಹಿತಂ - ಹಿತವು, (ಅಸ್ತಿಚೇತ್ - ಇದ್ದುದಾದರೆ,) ವಿಚಿಂತ್ಯತಾಂ- ಆಲೋಚಿಸಲ್ಪಡಲಿ, ವಿಮರ್ದಾಭ್ಯಧಿಕೋದಯಾ, ವಿಮರ್ದ - ವಿಮರ್ಶೆಯಿಂದ, ಅಭ್ಯಧಿಕ - ಹೆಚ್ಚಾದ, ಉದಯಾ - ಫಲಪ್ರಾಪ್ತಿಯುಳ್ಳ, ಮಧ್ಯಸ್ಥಚಿಂತಾಂ - ರಾಗದ್ವೇಷರಹಿತರಾದವರ ಆಲೋ

ಆದ ಶ್ರೀರಾಮನು ಮೂರುಲೋಕಗಳಲ್ಲೊಂದಾದ ಭೂಲೋಕವಾಸಿಗಳಾದ ನಿಮ್ಮನ್ನು ಪರಿಪಾಲಿಸಲು ಸಮರ್ಥನಾಗಿರುವನು. ಆದುದರಿಂದ ಅಯೋಧ್ಯಾಪಟ್ಟಣಿಗರಾದ ನಿಮಗೆ ಲ್ಲರಿಗೂ ಶ್ರೇಯಸ್ಸಾಗಬೇಕೆಂದು ಬಯಸಿ, ಭೂಭಾರವೆಲ್ಲವನ್ನೂ ಶ್ರೀರಾಮನಲ್ಲಿರಿಸಿ, ನಾನು ಪ್ರಯಾಸವಿಲ್ಲದೆ ಸುಖದಿಂದಿರುತ್ತೇನೆ. ಶ್ರೀರಾಮನು ನಿಮ್ಮೆಲ್ಲರಿಗೂ ಅರಸನಾಗಿರಲಿ. ಇದು ನಿಮಗೆ ಸಮ್ಮತವಾಗಿದ್ದರೆ ನನ್ನ ಮನೋರಥವು ಸಿದ್ಧಿಸುವುದು. ನನಗಿದು ಸಮಂಜಸ ವೆಂದು ತೋರುವುದು. ನಿಮಗೂ ಸಾಧುವೆಂದು ತೋರಿದರೆ ಸಮ್ಮತಿಸಬಹುದು. ವಿಮರ್ಶೆ ಯಿಂದ ಬಹಳವಾದ ಫಲವುಳ್ಳ ಮಧ್ಯಸ್ಥವಾದ ಆಲೋಚನೆಯು, ತಾನು ಚಿಂತಿಸುವುದ ಕ್ಕಿಂತಲೂ ಬೇರೆಯಾಗಿರುವುದಾದುದರಿಂದ ಪರಸ್ಪರ ಆಲೋಚಿಸಿ ಕಾರ್ಯಾಂತರವನ್ನು ತಿಳಿ

ಗಳು, ಏನನಾಥೇನ - ಯಾವ ಸ್ವಾಮಿಯಿಂದ, ನಾಥವತ್ತರಂ - ಅತಿಶಯವಾದ ನಾಥನನ್ನುಳ್ಳದಾಗುವುದೋ (ರಾಮ ಚಂದ್ರನ ರಕ್ಷಣತ್ವದಲ್ಲಿ ತ್ರೈಲೋಕ್ಯವು ಎಷ್ಟರದೆಂದು ಭಾವ.)

ಅಥವ ಈ ಶ್ಲೋಕದಿಂದ ಶ್ರೀರಾಮಮೂರ್ತಿಯ ಪರತ್ವವು ಹೇಳಲಾಗುವುದು, ಸಃ - ಆ ಶ್ರೀರಾಮನು, ಅನು ರೂಪನಾಥಃ - ಪ್ರಪಂಚಕ್ಕೆ ಸಹಜವಾದ ಶೇಷಿಯು, (ಇತರರು ಕರ್ಮಾನುಗುಣದಿಂದ ಉಪಾಧಿಗಳನ್ನುಳ್ಳವರು, ಅನು ರೂಪಃ - "ಸಮಸ್ಸಮವಿಭಕ್ತಾಂಗಃ - ಚಂದ್ರಕಾಂತಾನನಂ" ಇತ್ಯಾದಿಗಳಿಂದ ಹೇಳಲ್ಪಟ್ಟ ಅಪಾರ ಸೌಂದರ್ಯಶಾಲಿತ್ವ ವನ್ನೊಳಗೊಂಡ ದಿವ್ಯಮಂಗಳವಿಗ್ರಹನೆಂದರ್ಥವು. ಇದರಿಂದ "ಆನಂದೋಬ್ರಹ್ಮ" ಎಂದು ಹೇಳಿದಂತಾಯಿತು. "ಅನುಗತಂರೂಪಂ ಯಸ್ಯಾಸೌ ಅನುರೂಪಃ" ಅನುಗತವಾದ ರೂಪವುಳ್ಳವನು. ಎಂದರೆ "ಸರ್ವವ್ಯಾಪೀ" ಎಂದರ್ಥ. "ಅನುಸ್ಯೂತರೂಪಃ - ಅನುರೂಪಃ" ಪೂಜಾಯೋಗ್ಯವಾದ ನಾನಾ ಅವತಾರಗಳನ್ನು ತಾಳಿದವನು. ವೈನಾಥಃ - "ಪಕ್ಷೀ ಣಾಂ ನಾಥೋ ವಿನಾಥಃ = ಹಂಸಃ. ತತ್ಸಂಬಂಧೀ ವೈನಾಥಃ, ಎಂದರೆ "ಹಂಸವಾಹನೋ ಚತುರ್ಮುಖಃ ತೇನಸಹಿತಃ ಸವೈನಾಥಃ" ನಾಭಿಪದ್ಮಸ್ಥಿತ ಚತುರ್ಮುಖನಿಂದೊಡಗೂಡಿದವನೆಂದರ್ಥ. "ವೈನಾಥಃ" ಎಂದರೆ ಗರುಡವಾಹನನು ಎಂದೂ ಅರ್ಥವಾಗುವುದು. ಲಕ್ಷ್ಮೀರ್ವಾ ಎಂಬುದು ನಾಥತ್ವದಲ್ಲಿ ಹೇತುವು. "ಹ್ರೀಶ್ಚತೇಲಕ್ಷ್ಮೀಶ್ಚಪತ್ನ್ಯೌ" ಎಂದು ಶೃತಿಯು. ಲಕ್ಷ್ಮಣಾಗ್ರಜಃ ಎಂಬ ಪದವು ಕೈಂಕರ್ಯಮಾತ್ರೋಪಲಕ್ಷಣಾರ್ಥಕ ವೆಂದು ತನಿ ಶ್ಲೋಕೀಕಾರರ ಅಭಿ ಪ್ರಾಯ.

ತ್ಯತಾಂ ‖ ಅನ್ಯಾ ಮಧ್ಯಸ್ಥ ಚಿಂತಾಹಿ ವಿಮರ್ದಾಭ್ಯಧಿಕೋದಯಾ ‖ ೧೬ ‖ ಇತಿಬ್ರುವಂತಂ ಮುದಿತಾಃ ಪ್ರತ್ಯನಂದ ನ್ನೃಪಾ ನೃಪಂ ‖ ವೃಷ್ಟಿಮಂತಂ ಮಹಾ ಮೇಘಂ ನರ್ದಂತ ಇವ ಬರ್ಹಿಣಃ ‖ ೧೭ ‖ ಸ್ನಿಗ್ಧೋನು ನಾದೀ ಸಂಜಜ್ಞೇ ತತ್ರ ಹರ್ಷ ಸಮೀರಿತಃ ‖ ಜನೌಘೋದ್ಘುಷ್ಟ ಸನ್ನಾದೋ ವಿಮಾನಂ ಕಂಪಯನ್ನಿವ ‖ ೧೮ ‖ ತಸ್ಯ ಧರ್ಮಾರ್ಥ ವಿದುಷೋ ಭಾವಮಾ ಜ್ಞಾಯ ಸರ್ವಶಃ ‖ ಬ್ರಾಹ್ಮಣಾ ಬಲಮುಖ್ಯಾಶ್ಚ ಪೌರ ಜಾನಪದೈ ಸ್ಸಹ ‖೧೯‖ ಸಮೇತ್ಯ ಮಂತ್ರಯಿತ್ವಾ ತು ಸಮತಾಗತಬುದ್ಧಯಃ ‖ ಊಚುಶ್ಚ ಮನಸಾ ಜ್ಞಾತ್ವಾ ವೃದ್ಧಂ ದಶರಥಂ ನೃಪಂ ‖ ೨೦ ‖ ಅನೇಕ ವರ್ಷಸಾಹಸ್ರೋ

ಚನೆಯು, ಅನ್ಯಾಹಿ - ಮತ್ತೊಂದುವಿಧವಾಗಿರುವದಷ್ಟೆ ‖ ೧೬ ‖ ಇತಿ - ಹೀಗೆ, ಬ್ರುವಂತಂ - ಹೇಳುತ್ತಿರುವ, ನೃಪಂ - ದಶರಥನನ್ನು ಕುರಿತು, ನೃಪಾಃ - ರಾಜರು, ವೃಷ್ಟಿಮಂತಂ - ವರ್ಷಿಸುತ್ತಿರುವ, ಮಹಾಮೇಘಂ - ಕಾಲಮೇಘವನ್ನು ಕುರಿತು, ನರ್ದಂತಃ - ಕೇಕಾಧ್ವನಿಯನ್ನು ಮಾಡುತ್ತಿರುವ, ಬರ್ಹಿಣಇವ - ನವಿಲುಗಳಂತೆ, ಮುದಿತಾಃ - ಸಂತೋಷಗೊಂಡವರಾಗಿ, ಪ್ರತ್ಯನಂದನ್ - ಶ್ಲಾಘಿಸಿದರು ‖ ೧೭ ‖ ತತ್ರ - ಆ ಸಭೆಯಲ್ಲಿ, ಸ್ನಿಗ್ಧಃ - ಸ್ನೇಹಪುರಸ್ಸರವಾದ, ಅನುನಾದಿ - ಪ್ರತಿಧ್ವನಿಗೈಯ್ಯುತ್ತಿರುವ, ಹರ್ಷಸಮೀರಿತಃ - ಸಂತೋಷದಿಂದ ಪ್ರೇರಿಸಲ್ಪಟ್ಟ, ಜನೌಘೋದ್ಘುಷ್ಟಸನ್ನಾದಃ - ಜನಸಮೂಹದಿಂದ ಹುಟ್ಟಿದ ಮಹಾಶಬ್ದವು, ವಿಮಾನಂ - ರಾಜಾಸ್ಥಾನ ಮಂಟಪವನ್ನು, ಕಂಪಯನ್ನಿವ - ನಡುಗಿಸುವಂತೆ, ಸಂಜಜ್ಞೇ - ಹುಟ್ಟಿತು ‖ ೧೮ ‖ ಬ್ರಾಹ್ಮಣಾಃ - ವಸಿಷ್ಠಾದಿ ಬ್ರಾಹ್ಮಣರು, ಜನಮುಖ್ಯಾಶ್ಚ - ರಾಜರೂ ಸಹಾ, ಪೌರಜಾನಪದೈಸ್ಸಹ - ಪಟ್ಟಣಸ್ಥರೊಡನೆಯೂ, ಅನ್ಯದೇಶವಾಸಿಗಳಾದ ಜನರಸಂಗಡಲೂ, ಸಮೇತ್ಯ - ಸೇರಿ, ಮಂತ್ರಯಿತ್ವಾತು - ಆಲೋಚನೆಯನ್ನು ಮಾಡಿ, ಧರ್ಮಾರ್ಥವಿದುಷಃ - ಧರ್ಮಾರ್ಥಗಳನ್ನು ತಿಳಿದಿರುವ, ತಸ್ಯ - ಆ ದಶರಥರಾಜನ, ಭಾವಂ - ವಚನ ತಾತ್ಪರ್ಯವನ್ನು, ಸರ್ವಶಃ - ಎಲ್ಲರೀತಿಯಿಂದಲೂ, ಆಜ್ಞಾಯ - ತಿಳಿದುಕೊಂಡು, ಸಮತಾಗತಬುದ್ಧಯಃ - ಐಕಮತ್ಯವನ್ನು ಹೊಂದಿ, ಮನಸಾಚ - ಮನದಿಂದಲೂ, ಜ್ಞಾತ್ವಾ-ಅರಿತು, ವೃದ್ಧಂ - ಮುದುಕನಾದ, ದಶರಥಂನೃಪಂ - ದಶರಥರಾಜನನ್ನು ಕುರಿತು, ಊಚುಃ - ಹೇಳಿದರು. ‖ ೨೦ ‖ ಹೇ ಪಾರ್ಥಿವ - ಎಲೈ ಅರಸನೇ, ತ್ವಂ - ನೀನು, ಅನೇಕ ವರ್ಷ ಸಾಹಸ್ರಸಃ - ಅನೇಕ

ಸುವವರಾಗಿರಿ ‖ ೧೬ ‖ ಇಂತು ನುಡಿದ ದಶರಥಮಹೀಪಾಲನ ನುಡಿಯನ್ನು ಕೇಳಿ, ಸಭಾಭವನದಲ್ಲಿದ್ದ ರಾಜರೆಲ್ಲರೂ, ಮಹಾಸಂತೋಷದಂತುರಿತಸ್ವಾಂತರಾಗಿ ಗುಡುಗುಗಳಿಂದ ಮಳೆಗರೆಯುತ್ತಿರಲು, ಗುಡುಗಿನ ಶಬ್ದವನ್ನು ಕೇಳಿ, ನವಿಲುಗಳು ಆನಂದದಿಂದ ಪ್ರತಿಧ್ವನಿಯನ್ನುಂಟುಮಾಡುವಂತೆ ಕೋಲಾಹಲಧ್ವನಿಯನ್ನುಂಟುಮಾಡಿದರು. ಆಗಲಾ ಸಭಾಮಂಟಪದಲ್ಲಿ ಸ್ನೇಹವನ್ನು ಹೊರಸೂಸುವುದಾಗಿಯೂ, ಪ್ರತಿಧ್ವನಿಗೊಳಿಸುತ್ತಿರುವುದಾಗಿಯೂ, ಸಂತಸದಿಂದ ನುಡಿಯಲ್ಪಟ್ಟುದಾಗಿಯೂ ಇರುವ ಜನನಿವಹದ ಕೋಲಾಹಲಧ್ವನಿಯು ಇಡೀ ಸಭಾಮಂದಿರವನ್ನೇ ಕಂಪಿಸುವದಾಗಿದ್ದಿತು. ಆ ಬಳಿಕ ದಶರಥಭೂಪಾಲನ ಅಭಿಪ್ರಾಯವನ್ನು ತಿಳಿದ ವಸಿಷ್ಠನೇ ಮೊದಲಾದ ವಿಪ್ರವರೇಣ್ಯರೂ, ಅವನೀಶರೂ, ಪುರಜನರೂ ಸಹ

ವೃದ್ಧ ಸ್ತ್ವಮಸಿ ಪಾರ್ಥಿವ ॥ ಸರಾಮಂ ಯುವರಾಜಾನ ಮಭಿಷಿಂಚಸ್ವ ಧಾರ್ಮಿಕಂ ॥ ೨೧ ॥ ಇಚ್ಛಾಮೋಹಿ ಮಹಾಬಾಹುಂ ರಘುವೀರಂ ಮಹಾಬಲಂ ॥ ಗಜೇನ ಮಹತಾ ಯಾಂತಂ ರಾಮಂ ಛತ್ರಾವೃತಾನನಂ ॥ ೨೨ ॥ ಇತಿ ತದ್ವಚನಂ ಶ್ರುತ್ವಾ ರಾಜಾ ತೇಷಾಂ ಮನಃ ಪ್ರಿಯಂ ॥ ಅಜಾನನ್ನಿವ ಜಿಜ್ಞಾಸುರಿದಂ ವಚನಮಬ್ರವೀತ್ ॥ ೨೩ ॥ ಶ್ರುತ್ವೈವ ವಚನಂ ಯನ್ಮೇ

ಸಾವಿರ ವರ್ಷಗಳವನಾದ, ವೃದ್ಧಃ - ಮುದುಕನು, ಅಸಿ - ಆಗಿರುವೆ, ರಾಮಂ - ಶ್ರೀರಾಮನನ್ನು, ಪಾರ್ಥಿವಂ - ಭೂಪರಿಪಾಲನೆಯನ್ನು ಮಾಡಲು ಅರ್ಹನಾದ, ಯುವರಾಜಾನಂ - ಯುವರಾಜನನ್ನಾಗಿ, ಅಭಿಷಿಂಚಸ್ವ - ಅಭಿಷೇಕ ಮಾಡು. ॥ ೨೧ ॥ ಮಹಾಬಾಹುಂ - ಮಹಾ ಭುಜಪರಾಕ್ರಮಿಯಾದ, ರಘುವೀರಂ - (ಗೋ + ಮ) ರಘುವಂಶಸ್ಥ ರಾಜರಲ್ಲಿ ವೀರನಾದ, (ತ) ರಘುವಂಶ ರಾಜರಲ್ಲಿ ಗಜಾರೋಹಣದಲ್ಲಿ ವಿಲಕ್ಷಣ ಶಕ್ತಿಯುಳ್ಳ, ಮಹಾಬಲಂ - ಮಹಾದೇಹತ್ರಾಣವುಳ್ಳ, (ಗೋ) ವ್ಯಾಹತ್ತರವಾದ ಮನೋಬಲವುಳ್ಳ, ಮಹತಾ - ದೊಡ್ಡದಾದ, ಗಜೇನ - (ಗೋ + ತ) ಶತ್ರುಂಜಯವೆಂಬ ನಿನ್ನ ಪಟ್ಟದಾನೆಯಿಂದ, ಆಯಾಂತಂ-ಬರುತ್ತಿರುವ, ರಾಮಂ-ಸಕಲಜನ ಮನೋರಂಜಕನಾದ ಶ್ರೀರಾಮನನ್ನು, ಛತ್ರಾವೃತಾನನಂ - ಶ್ವೇತಛತ್ರದಿಂದ ಆವೃತವಾದ ಮುಖವುಳ್ಳ, (ತ) ಅಂತರಂಗ ಛತ್ರದಿಂದ ಆಚ್ಛಾದಿತವಾದ ಮುಖವುಳ್ಳ, (ಗೋ) ಬಿಸಿಲಿನಿಂದಲೂ ಗಾಳಿಯಿಂದಲೂ, ಮುಖವು ಬಾಡಿಹೋಗದಂತೆ ಅಂತರಂಗ ಭಕ್ತರಿಂದ ಧರಿಸಲ್ಪಟ್ಟ ಭೂಚಕ್ರರೂಪವಾದ ಕೊಡೆಯಿಂದ ಆಚ್ಛಾದಿತವಾದ ಮುಖವುಳ್ಳವನನ್ನಾಗಿ, ಇಚ್ಛಾಮೋಹಿ - ಏಕಮತ್ಯದಿಂದ ಅಪೇಕ್ಷಿಸುವೆವಷ್ಟೆ ॥೨೨॥ ಇತಿ- ಈ ರೀತಿಯಾದ, ತದ್ವಚನಂ-(ಮ) ಆ ಪಟ್ಟಣಸ್ಥರ ವಾಕ್ಯವನ್ನು, (ಗೋ) ರಾಜರ ವಾಕ್ಯವನ್ನು, ಶ್ರುತ್ವಾ - ಕೇಳಿ, ರಾಜಾ - ದಶರಥರಾಜನು, ತೇಷಾಂ - ಅವರ, ಮನಃಪ್ರಿಯಂ - ಮನಸ್ಸಂತೋಷವನ್ನು, ಜಾನನ್ನಪಿ - ತಿಳಿದವನಾದರೂ, ಅಜಾನನ್ನಿವ - ಅರಿಯದವನಂತೆ, ಜಿಜ್ಞಾಸುಃ - ಅವರ ಮುಖದಿಂದಲೇ ತಿಳಿಯಲಿಚ್ಛೆಯುಳ್ಳವನಾಗಿ, ಇದಂ ವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೩ ॥ ಹೇ ರಾಜಾನಃ - ಎಲೈ ಅರಸರೇ, ಮೇ - ನನ್ನ, ವಚನಂ - ಮಾತನ್ನು,

---

ತಮ್ಮತಮ್ಮಲ್ಲಿಯೇ ಶ್ರೀರಾಮನ ಯೌವರಾಜ್ಯಾಭಿಷೇಕ ವಿಚಾರದಲ್ಲಿ ಯುಕ್ತಾಯುಕ್ತ ವಿಚಾರಗಳನ್ನು ವಿಮರ್ಶಿಸಿ ಏಕವಾಕ್ಯತೆಯಿಂದಾರಾಯನನ್ನು ಕುರಿತು, "ಎಲೈ ದಶರಥ ನರಪಾಲನೆ! ನೀನು ಅನೇಕ ಸಹಸ್ರವರ್ಷಗಳವರಿವಿಗೂ ಬದುಕಿ ವೃದ್ಧನಾಗಿರುವೆ. ನೀನು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವಂಗೈಯ್ಯುವವನಾಗು, ಕಾಲವಿಳಂಬವನ್ನು ಮಾಡಬೇಡ; ನಾವು ಮಹಾಪರಾಕ್ರಮಿಯೂ ಬಲಶಾಲಿಯೂ ಆದ ರಾಮನು ಪಟ್ಟಾಭಿಷಿಕ್ತನಾಗಿ ಗಜವನ್ನೇರಿ ಬಿಳಿಗೊಡೆಯ ನೆಳಲಿನಲ್ಲಿ ಬರುವುದನ್ನು ನೋಡಲಪೇಕ್ಷಿಸುವೆವು" ಎಂದು ಹೇಳಿದರು. ॥ ೨೨ ॥ ಸಭಾಸದರ ಈ ನುಡಿಗಳನ್ನು ಕೇಳಿದ ದಶರಥರಾಯನು, ಶ್ರೀರಾಮನ ಯುವರಾಜ ಪಟ್ಟಾಭಿಷೇಕವು ಅವರೆಲ್ಲರಿಗೂ ಅಭಿಮತವಾದುದೆಂದು ತಿಳಿದರೂ, ಅವರಿಂದಲೇ ಅದನ್ನು ಕೇಳಿ ತಿಳಿದುಕೊಳ್ಳಬೇಕೆಂಬಾಶೆಯಿಂದ ತಿಳಿಯದವನಂತೆ ಅವರನ್ನು ಕುರಿತು, "ಎಲೈ ನರಪತಿಗಳಿರಾ! ನಾನು ನನ್ನ ಕುವರನಾದ, ಅತಿ ಮುಗ್ಧನಾದ, ಶ್ರೀರಾಮನಿಗೆ ಯುವ

ರಾಘವಂ ಪತಿಮಿಚ್ಛಥ ॥ ರಾಜಾನಸ್ಸಂಶಯೋಽಯಂ ಮೇ ಕಿಮಿದಂ ಬ್ರೂತ ತತ್ವತಃ ॥ ೨೪ ॥ ಕಥಂನು ಮಯಿ ಧರ್ಮೇಣ ಪೃಥಿವೀಮನುಶಾಸತಿ ॥ ಭವಂತೋ ದ್ರಷ್ಟುಮಿಚ್ಛಂತಿ ಯುವರಾಜಂ ಮಮಾತ್ಮಜಂ ॥ ೨೫ ॥ ತೇ ತಮೂಚುರ್ಮಹಾತ್ಮಾನಂ ಪೌರ ಜಾನಪದೈಸ್ಸಹ ॥ ಬಹವೋ ನೃಪ ಕಲ್ಯಾಣ ಗುಣಾಃ ಪುತ್ರಸ್ಯ ಸಂತಿ ತೇ ॥ ೨೬ ॥ ಗುಣಾನ್ ಗುಣವತೋ ದೇವ ದೇವಕಲ್ಪಸ್ಯ ಧೀಮತಃ ॥ ಪ್ರಿಯಾನಾನಂದನಾನ್ ಕೃತ್ಸ್ನಾನ್ ಪ್ರವಕ್ಷ್ಯಾಮೋ

ಶೃಣ್ವೈವ - ಕೇಳುತ್ತಲೆ, ರಾಘವಂ - ಶ್ರೀರಾಮನನ್ನು, ಪತಿಂ - ರಾಜನನ್ನಾಗಿ, ಇಚ್ಛಥೇತಿಯತ್ - ಇಚ್ಛಿಸಿದಿರಿ ಎಂಬದಾವುದೋ, ಅಯಂ - ಇದು, ಮೇ - ನನಗೆ, ಸಂಶಯಃ - ಸಂದೇಹವು, ಇದಂ - ಶ್ರೀರಾಮನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂಬ ಈ ನುಡಿಯು, ಕಿಂ - ಯಾವ ಪ್ರಯೋಜನ ವುಳ್ಳದು, ತತ್ವತಃ - ಯಥಾರ್ಥವಾಗಿ, ಬ್ರೂತ - ಹೇಳಿರಿ. ॥ ೨೪ ॥ ಮಯಿ - ನಾನು, ಧರ್ಮೇಣ - ಧರ್ಮದಿಂದ, ಪೃಥಿವೀಂ - ಭೂಮಿಯನ್ನು, ಅನುಶಾಸತಿ - ಪರಿಪಾಲಿಸುತ್ತಿರಲು, ಮಮ - ನನ್ನ, ಆತ್ಮಜಂ - (ಗೋ) ಅತಿ ಮುಗ್ಧನಾದ ಕುಮಾರನನ್ನು, ಯುವರಾಜಂ-ಯೌವರಾಜ್ಯ ಪಟ್ಟಾಭಿಷಿಕ್ತನನ್ನಾಗಿ, ದ್ರಷ್ಟುಂ - ನೋಡಲು, ಕಥಂನು - ಹೇಗೆತಾನೆ, ಇಚ್ಛಂತಿ - ಅಪೇಕ್ಷಿಸುವಿರಿ. ॥ ೨೫ ॥ ತೇ - ಆ ರಾಮಗುಣಗಳನ್ನರಿತಿರುವ ರಾಜರು, ಪೌರಜಾನಪದೈಸ್ಸಹ - ಪಟ್ಟಣಸ್ಥರಿಂದಲೂ ದೇಶವಾಸಿಗಳಿಂದಲೂ ಸಹ, (ಗೋ) ಐಕಮತ್ಯಂ ಪ್ರಾಪ್ಯ-ಐಕಮತ್ಯವನ್ನು ಹೊಂದಿ, ಮಹಾತ್ಮಾನಂ - (ಮ) ಮಹಾಮತಿವಂತನಾದ, (ಗೋ) ಏತಾದೃಶ ಪುತ್ರನಿಗೆ ಪಿತೃತ್ವದಿಂದ ಮಹಾನುಭಾವನಾದ, ತಂದಶರಥಂ - ಗುಣಗ್ರಾಹಿಯಾದ ದಶರಥರಾಜನನ್ನು ಕುರಿತು, ಹೇ ನೃಪ - ಎಲೈ ಅರಸನೇ, ತೇ ಪುತ್ರಸ್ಯ - ನಿನ್ನ ಮಗನಿಗೆ, ಬಹವಃ - ಅನೇಕವಾದ, ಕಲ್ಯಾಣಗುಣಾಃ - ಶುಭಕರವಾದ ಗುಣಗಳು, ಸಂತಿ - ಇರುವುವು. ॥ ೨೬ ॥ ಹೇ ದೇವ - ಎಲೈ ರಾಜನೇ, ಗುಣವತಃ - ಪ್ರಶಸ್ತವಾದ ಗುಣಗಳುಳ್ಳ, ದೇವಕಲ್ಪಸ್ಯ - ದೇವತಾ ಸದೃಶನಾದ, ಧೀಮತಃ - ಮತಿವಂತನಾದ ಶ್ರೀರಾಮನ, ಪ್ರಿಯಾನ್ - ಇಷ್ಟ

ರಾಜಪಟ್ಟವನ್ನು ಕಟ್ಟುವೆನೆಂದೊಡನೆಯೆ, ಅವನನ್ನು ಪತಿಯನ್ನಾಗಿ ಬಯಸಿದಿರಿ. ನಾನು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿರುವಾಗಲೆ, ನೀವು ಶ್ರೀರಾಮನು ಅಭಿಷಿಕ್ತನಾಗಿ ಆನೆಯಮೇಲೆ ಬಿಳಿಗೊಡೆಯ ನೆಳಲಿನಲ್ಲಿ ಬರುವುದನ್ನು ನೋಡಬೇಕೆನ್ನುವಿರಿ. ನನ್ನ ಅಪರಾಧವು ತಾನೆ ಏನು? ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿರುವುದು, ಯಥಾರ್ಥವಾದ ನಿಮ್ಮ ಅಭಿಪ್ರಾಯವನ್ನು ತಿಳುಹಿರಿ" ಎಂದನು. ॥ ೨೫ ॥ ದಶರಥ ರಾಯನೀರೀತಿನುಡಿಯಲು ಆ ನರನಾಥರೂ, ಪಂಡಿತ ಪಾಮರರೇ ಮೊದಲಾದವರೂ ಏಕವಾಕ್ಯತೆಯಿಂದ, ಮಹಾತ್ಮನಾದಾತನನ್ನು ಕುರಿತು ಹೀಗೆಂದರು. "ಎಲೈ ರಾಜನೇ! ನಿನ್ನ ಕುವರನಾದ ಶ್ರೀರಾಮನಲ್ಲಿ ಸ್ವಾಭಾವಿಕವಾಗಿಯೇ ಅನೇಕ ಕಲ್ಯಾಣಗುಣಗಳಿರುವುವು. ಕೇಳೈ ಧೊರೆಯೆ! ಪ್ರಶಸ್ತವಾದ ಗುಣಗಣೋಪೇತನೂ, ದೇವತೆಗಳಿಗೆ ಸಮಾನನೂ, ಮಹಾಬುದ್ಧಿಶಾಲಿಯೂ, ಆಗಿರುವ ನಿನ್ನ ಕುವರನಾದ ಶ್ರೀರಾಮನಲ್ಲಿರುವ, ಪ್ರಿಯಂಕರಗಳಾದ ಆ ಗುಣಾವಳಿಯೆಲ್ಲವನ್ನೂ ಈಗ ಹೇಳುವೆವು. ॥ ೨೬ ॥ ಎಲೈ ರಾಜನೆ! ಶ್ರೀರಾಮನು ಅಮಾನು

ದ್ಯರ್ಥಾನ್ ಶೃಣು ॥ ೨೭ ॥ ದಿವ್ಯೈರ್ಗುಣೈಶ್ಶಕ್ರಸಮೋ ರಾಮಸ್ಸತ್ಯಪರಾಕ್ರಮಃ ॥ ಇಕ್ಷ್ವಾಕುಭ್ಯೋಽಪಿ ಸರ್ವೇಭ್ಯೋ ಹ್ಯತಿರಿಕ್ತೋ ವಿಶಾಂ ಪತೇ ॥೨೮॥ ರಾಮಃ ಸತ್ಪುರುಷೋ ಲೋಕೇ ಸತ್ಯ ಧರ್ಮ ಪರಾಯಣಃ ॥ ಸಾಕ್ಷಾದ್ರಾಮಾದ್ವಿನಿರ್ವೃತ್ತೋ ಧರ್ಮಶ್ಚಾಪಿ ಶ್ರಿಯಾ ಸಹ ॥ ೨೯ ॥ ಪ್ರಜಾಸುಖತ್ವೇ ಚಂದ್ರಸ್ಯ ವಸುಧಾಯಾಃ ಕ್ಷಮಾಗುಣೈಃ ॥ ಬುದ್ಧ್ಯಾ ಬೃಹಸ್ಪತೇಸ್ತುಲ್ಯೋ ವೀರ್ಯೇ ಸಾಕ್ಷಾಚ್ಛಚೀಪತೇಃ ॥ ೩೦ ॥ ಧರ್ಮಜ್ಞಸ್ಸತ್ಯ

ವಾದ, ಆನಂದನಾನ್ - ಪ್ರೀತಿಜನಕವಾದ, ತಾನ್ - ಆ ಪ್ರಸಿದ್ಧವಾದ, ಕೃತ್ಸ್ನಾನ್ - ಸಮಸ್ತವಾದ, ಗುಣಾನ್ - ಗುಣಗಳನ್ನು, ಅದ್ಯ - ಈಗ, ಶೃಣು - ಕೇಳು, ಪ್ರವಕ್ಷ್ಯಾಮಃ - ಹೇಳುವೆವು. ॥ ೨೭ ॥ ಹೇ ವಿಶಾಂಪತೇ - ಎಲೈ ಜನಪತಿಯೆ, ದಿವ್ಯೈಃ - ಅಮಾನುಷವಾದ, ಗುಣೈಃ - ಶೌರ್ಯಾದಿ ಗುಣಗಳಿಂದ, ಶಕ್ರಸಮಃ - ಇಂದ್ರ ಸದೃಶನಾದ, ಸತ್ಯಪರಾಕ್ರಮಃ - ಅಮೋಘವಾದ ಪರಾಕ್ರಮವುಳ್ಳ, ರಾಮಃ - ಶ್ರೀರಾಮನು, ಇಕ್ಷ್ವಾಕುಭ್ಯಃ - ಇಕ್ಷ್ವಾಕು ವಂಶಸ್ಥರಾದ, ಸರ್ವೇಭ್ಯೋಽಪಿ - ಎಲ್ಲರಿಗಿಂತಲೂ, ಅತಿರಿಕ್ತೋಹಿ - ಅಧಿಕನಾಗಿರುವನಷ್ಟೆ. ॥ ೨೮ ॥ ಲೋಕೇ - ಲೋಕದಲ್ಲಿ, ರಾಮಃ - ಶ್ರೀರಾಮನು, ಸತ್ಪುರುಷಃ - ಸತ್ಪುರುಷನು, ಸತ್ಯ ಧರ್ಮಪರಾಯಣಃ - ಸತ್ಯದಲ್ಲಿಯೂ ಧರ್ಮದಲ್ಲಿಯೂ ನಿರತನು, ಕಿಂಚ - ಇಷ್ಟುಮಾತ್ರವಲ್ಲದೆ, ಧರ್ಮೋಽಪಿ - ಧರ್ಮವೂ ಕೂಡ, ಶ್ರಿಯಾಸಹ - ಸಂಪತ್ತಿನೊಡನೆ, ರಾಮಾತ್ - ಶ್ರೀರಾಮನಿಂದ, ಸಾಕ್ಷಾತ್ - ಪ್ರತ್ಯಕ್ಷವಾಗಿ, ವಿನಿರ್ವೃತ್ತಃ - ಹುಟ್ಟಿರುವುದಾಗಿರುವುದು. ॥ ೨೯ ॥ ಪ್ರಜಾ ಸುಖತ್ವೇ - ಪ್ರಜೆಗಳಿಗೆ ಸುಖವನ್ನುಂಟುಮಾಡುವುದರಲ್ಲಿ, ಚಂದ್ರಸ್ಯ - ಚಂದ್ರನಿಗೆ, ತುಲ್ಯಃ - ಸಮಾನನು, ಕ್ಷಮಾಗುಣೈಃ - ಕ್ಷಮಾಗುಣಗಳಿಂದ, ವಸುಧಾಯಾಃ - ಭೂಮಿಗೆ, ತುಲ್ಯಃ - ಸದೃಶನಾದವನು, ಬುದ್ಧ್ಯಾ - ಮತಿಯಿಂದ, ಬೃಹಸ್ಪತೇಃ - ಸುರಗುರುವಿಗೆ, ತುಲ್ಯಃ - ಈಡಾದವನು, ವೀರ್ಯೇಣ - ವೀರ್ಯದಿಂದ, ಶಚೀಪತೇರಪಿ - ಇಂದ್ರನಿಗೂ ಸಹ, ತುಲ್ಯಃ - ಸಾಟಿಯಾಗಿರುವನು. ॥ ೩೦ ॥ ಧರ್ಮಜ್ಞಃ - ಸಾಮಾನ್ಯ ವಿಶೇಷ ರೂಪ

ಷವಾದ (ದಿವ್ಯವಾದ) ಗುಣಗಳಿಂದ ದೇವೇಂದ್ರನಿಗೆ ಸಮಾನನಾದವನು; ಅಮೋಘವಾದ ಶೌರ್ಯದಿಂದಲೂ, ಅತಿಶಯವಾದ ವಿನಯಾದಿ ಗುಣಗಳಿಂದಲೂ, ಇಕ್ಷ್ವಾಕುವಂಶದ ಅರಸರೆಲ್ಲರಿಗೂ ಅಧಿಕನಾದವನು; ॥ ೨೮ ॥ ಇಷ್ಟೆಯಲ್ಲದೆ ಪ್ರಪಂಚದಲ್ಲಿ ಆತನೇ ಸತ್ಪುರುಷನಾದವನು; ಸತ್ಯ ಮತ್ತು ಧರ್ಮಗಳಿಗೆ ಪರಾಯಣನಾದವನೂ ಆತನೇ; ಆತನಿಂದಲೇ ಧರ್ಮವೂ ಸಹ ಸಂಪತ್ತಿನಿಂದೊಡಗೂಡಿ ನಿಷ್ಪನ್ನವಾಗಿರುವುದು; ಆತನು ಪ್ರಜೆಗಳಿಗೆ ಸುಖವನ್ನುಂಟುಮಾಡುವುದರಲ್ಲಿ ಚಂದ್ರನಿಗೆ ಸದೃಶನಾಗಿಯೂ, ಸೈರಣೆಯಲ್ಲಿ ಭೂದೇವಿಗೆ ಸಮಾನನಾಗಿಯೂ, ಬುದ್ಧಿಯಲ್ಲಿ ಬೃಹಸ್ಪತಿಗೂ, ಪರಾಕ್ರಮದಲ್ಲಿ ಮಹೇಂದ್ರನಿಗೂ ಸಮಾನನಾಗಿಯೂ ಇರುವನು; ಇದಲ್ಲದೆ ನಿನ್ನ ಕುವರನಾದ ಶ್ರೀರಾಮಚಂದ್ರನು ಸಾಮಾನ್ಯ ವಿಶೇಷ ಧರ್ಮಗಳನ್ನು ಚೆನ್ನಾಗಿ ಬಲ್ಲವನು; ಅದ್ಭುತವಾದ ಪ್ರಜ್ಞೆಯುಳ್ಳವನು; ಒಳ್ಳೆಯ ಸ್ವಭಾವವುಳ್ಳವನು; ಗುಣಗಳಲ್ಲಿ ದೋಷಗಳನ್ನೆಣಿಸುವುದಿಲ್ಲವು; ಕ್ಷಮಾಗುಣವಿಶಿಷ್ಟನು; ಕುಪಿತರಾಗಿಯೂ, ದುಃಖಿತರಾಗಿಯೂ ಇರುವವರನ್ನು ಸಮಾಧಾನಗೊಳಿಸುವವನು; ಯಾವಾಗಲೂ

ಸಂಧಶ್ಚ ಶೀಲವಾನನಸೂಯಕಃ ॥ ಕ್ಷಾಂತಸ್ಸಾಂತ್ವಯಿತಾ ಶ್ಲಕ್ಷ್ಣಃ ಕೃತಜ್ಞೋ ವಿಜಿತೇಂದ್ರಿಯಃ ॥ ೩೧ ॥ ಮೃದುಶ್ಚ ಸ್ಥಿರಚಿತ್ತಶ್ಚ ಸದಾ ಭವ್ಯೋಽನಸೂಯಕಃ ॥ ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ ॥೩೨॥ ಬಹುಶ್ರುತಾನಾಂ ವೃದ್ಧಾನಾಂ ಬ್ರಾಹ್ಮಣಾನಾಮುಪಾಸಿತಾ ॥

ವಾದ ಧರ್ಮಗಳನ್ನು ತಿಳಿದಿರುವನು, ಸತ್ಯಸಂಧಃ - (ಗೋ) ವ್ಯರ್ಥವಾಗದಿರುವ ಪ್ರತಿಜ್ಞೆಯುಳ್ಳವನು, ಶೀಲವಾನ್ - ಸತ್ಸ್ವಭಾವವುಳ್ಳವನು, ಅನಸೂಯಕಃ - (ಗೋ) ಗುಣಗಳಲ್ಲಿ ದೋಷಾರೋಪಣೆಯಂಗೈಯ್ಯದಿರುವವನು, ಕ್ಷಾಂತಃ - ಕ್ಷಮಾಗುಣವುಳ್ಳವನು, ಸ್ಸಾಂತ್ವಯಿತಾ - ಸಮಾಧಾನವನ್ನು ಹೇಳುವವನು, ಶ್ಲಕ್ಷ್ಣಃ - ಪ್ರಿಯವನ್ನೇ ನುಡಿವವನು, ಕೃತಜ್ಞಃ - ಕೃತೋಪಕಾರವನ್ನರಿತಿರುವನು, ಜಿತೇಂದ್ರಿಯಃ - ವಿಷಯ ಚಾಪಲ್ಯವಿಲ್ಲದಿರುವನು. ॥ ೩೧ ॥ ಮೃದುಶ್ಚ - (ಮ) ಸುಲಭವಾಗಿ ಉಪಾಸಿಸಲು ಯೋಗ್ಯನೂ ಆದವನು, ಸ್ಥಿರಚಿತ್ತಶ್ಚ - ಮನಸ್ಥೈರ್ಯವುಳ್ಳವನು, ಸದಾ - ನಿರಂತರವು, ಭವ್ಯಃ - ಮಂಗಳಕರನು, ಅನಸೂಯಕಃ - (೧) ಅಸೂಯೆಯಿಲ್ಲದವನು. ॥ ೩೧ ॥ ಭೂತಾನಾಂ - (ಮ) ಮನೆಯಲ್ಲಿ ವಾಸವಾಗಿರುವ ಜನರಿಗೆ, (ಗೋ) ಸತ್ತಾಯೋಗಿಗಳಾದ ಸಕಲ ಪದಾರ್ಥಗಳಿಗೂ, ಪ್ರಿಯವಾದೀಚ - (೨) ಪ್ರಿಯವನ್ನೇ ನುಡಿಯುತ್ತಿರುವವನು, ಸತ್ಯವಾದೀಚ - ಸತ್ಯವನ್ನೇ ನುಡಿಯುತ್ತಿರುವ, ರಾಘವಃ - ರಘುವಂಶೋತ್ಪನ್ನನು, ಬಹು ಶೃತಾನಾಂ - ಅನೇಕ ಆಚಾರ್ಯರಿಂದ ಕೇಳಿರುವ, (ಗೋ) ಅನೇಕವಾದ ಶಾಸ್ತ್ರಗಳಿಂದ ಕೇಳಿರುವ (ಮ + ಗೋ) ಬಹು ಬಗೆಗಳಾಗಿ ಕೇಳಿರುವ, (೩) ವೃದ್ಧಾನಾಂ - ಶೀಲ ವಯೋವೃದ್ಧರಾದ, ಬ್ರಾಹ್ಮಣಾನಾಂ ಬ್ರಾಹ್ಮಣರನ್ನು, ಉಪಾಸಿತಾ-ಉಪಾಸಿಸುವನು. ॥ ೩೨ ॥ ತೇನ - ಆ ಉಪಾಸನಾ ಬಲದಿಂದ, ಅಸ್ಯ - ಈ ಶ್ರೀರಾಮನಿಗೆ, ಇಹ -

ಹಿತವನ್ನೇ ನುಡಿವವನು; ಮಾಡಿದ ಉಪಕಾರವನ್ನೆಂದಿಗೇ ಆಗಲಿ ಮರೆಯದವನು; ಜಿತೇಂದ್ರಿಯನು; ಸುಲಭವಾಗಿ ಉಪಾಸಿಸಲರ್ಹನಾದವನು; ಕಷ್ಟಕಾಲದಲ್ಲಿಯೂ ಸಹ ಚಲಿಸದಿರುವ ಚಿತ್ತವುಳ್ಳವನ ; ಸಮಸ್ತಪ್ರಾಣಿಗಳಲ್ಲಿಯೂ ಪ್ರೀತಿಯುಳ್ಳವನು; ಎಲ್ಲರಿಗೂ ಪ್ರಿಯವಾದುದನ್ನೇ ನುಡಿವವನು; ಸತ್ಯವಾದಿಯು; ಇದು ನಿಮ್ಮ ರಘುಕುಲಪ್ರಭಾವದಿಂದುಂಟಾಗಿರುವುದು; ಎಲೈ ರಾಜೇಂದ್ರನೆ! ಇಷ್ಟೆಯಲ್ಲದೆ ಶ್ರೀರಾಮಮೂರ್ತಿಯು ಇಂತಹ ಸದ್ಗುಣಗಳನ್ನುಳ್ಳವನಾದರೂ ಗರ್ವಿಸದಿರುವನು. ಆತನು ಜ್ಞಾನೋಪದೇಶಕ್ಕಾಗಿ ವೇದಶಾಸ್ತ್ರಸಂಪನ್ನರೂ, ಬಹುಶ್ರುತರೂ, ವೃದ್ಧರೂ ಆದ ಬ್ರಾಹ್ಮಣರನ್ನು ಸೇವಿಸುವನು; ಅಯ್ಯಾ ರಾಯನೆ !

ಟಿ. (೧) ಇಲ್ಲಿ ಪೌನರುಕ್ತಿಕ ದೋಷವಿರುವುದು. ಇದಕ್ಕಾಗಿಯೇ ಗೋವಿಂದರಾಜರು ಹಿಂದಿನ "ಅನಸೂಯಕಃ" ಎಂಬ ಪದಕ್ಕೆ ಬೇರೆ ವಿಧವಾದ ಅರ್ಥವನ್ನು ಬರೆದಿರುವರು.

(೨) "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾನ್ನಬ್ರೂಯಾತ್ಸತ್ಯಮಪ್ರಿಯಂ" ಎಂಬುದೇ ಇಲ್ಲಿನ ಪ್ರಿಯವಾದೀ ಶಬ್ದದ ತತ್ವವು.

(೩) ವೃದ್ಧಾನಾಂ:—"ಸರ್ವತಸ್ಸಾರಮಾದದ್ಯಾತ್ ಪುಷ್ಪೇಭ್ಯ ಇವಷಟ್ಪದಃ" ಎಂಬಂತೆ ಸಾರವಿತ್ತುಗಳಾದ ವೃದ್ಧರು ಎಂದೂ, ಬ್ರಾಹ್ಮಣಾನಾಂ - "ಸಾವಿದ್ಯಾಯಾ ವಿಮುಕ್ತಯಃ" ಎಂಬಂತೆ ಬ್ರಹ್ಮವಿದ್ಯೆಯನ್ನರಿತಿರುವ ಬ್ರಾಹ್ಮಣರನ್ನು, ಉಪಾಸಿತಾ - ತಾನಾಗಿಯೇ ಅವರ ಮನೆಗಳಿಗೆ ಹೋಗಿ ಸೇವಿಸುವವನೇ ಹೊರತು ಅವರನ್ನೇ ತನ್ನೆಡೆಗೆ ಕರೆಯಿಸಿ ಉಪಾಸಿಸುವನಲ್ಲವೆಂದೂ ತನಿ ಶ್ಲೋಕೀಕಾರರ ಅಭಿಮತ.

ತೇನಾಸ್ಯೇಹಾತುಲಾ ಕೀರ್ತಿರ್ಯಶಸ್ತೇಜಶ್ಚ ವರ್ಧತೇ ॥ ೩೩ ॥
ದೇವಾಸುರ ಮನುಷ್ಯಾಣಾಂ ಸರ್ವಾಸ್ತ್ರೇಷು ವಿಶಾರದಃ ॥ ಸಮ್ಯಗ್ವಿದ್ಯಾ
ವ್ರತಸ್ನಾತೋ ಯಥಾವತ್ಸಾಂಗ ವೇದವಿತ್ ॥ ೩೪ ॥ ಗಾಂಧರ್ವೇಚ
ಭುವಿಶ್ರೇಷ್ಠೋ ಬಭೂವ ಭರತಾಗ್ರಜಃ ॥ ಕಲ್ಯಾಣಾಭಿಜನಸ್ಸಾಧುರದೀ
ನಾತ್ಮಾ ಮಹಾಮತಿಃ ॥ ೩೫ ॥ ದ್ವಿಜೈರಭಿವಿನೀತಶ್ಚ ಶ್ರೇಷ್ಠೈರ್ಧರ್ಮಾರ್ಥ
ನೈಪುಣ್ಯೈಃ ॥ ಯದಾ ವ್ರಜತಿ ಸಂಗ್ರಾಮಂ ಗ್ರಾಮಾರ್ಥೇ ನಗರಸ್ಯ ವಾ ॥೩೬॥
ಗತ್ವಾ ಸೌಮಿತ್ರಿ ಸಹಿತೋ ನಾವಿಜಿತ್ಯ ನಿವರ್ತತೇ ॥ ಸಂಗ್ರಾಮಾತ್ಪುನರಾಗಮ್ಯ

ಈಗ, ಅತುಲಾ - ಅಸದೃಶವಾದ, ಕೀರ್ತಿಃ - ಔದಾರ್ಯಾದಿ ಗುಣ ನಿಮಿತ್ತವಾದ ಪ್ರಸಿದ್ಧಿಯು, ಯಶಃ - ಪರಾಕ್ರಮಾದಿ ವ್ಯಾಪಾರಗಳಿಂದುಂಟಾದ ಪ್ರಸಿದ್ಧಿಯು, (ಗೋ) ಕೀರ್ತಿಗೆ ಕಾರಣವಾದ ಪೂರ್ವ ಕಥೆಯೇ ಮುಂತಾದುದು, ತೇಜಶ್ಚ - (ಮ) ಪರಾಭಿಭವ ಸಾಮರ್ಥ್ಯವೂ ಸಹ, ವರ್ಧತೇ - ವೃದ್ಧಿ ಹೊಂದುವದು. ॥ ೩೩ ॥ ದೇವಾಸುರ ಮನುಷ್ಯಾಣಾಂ - ದೇವರಾಕ್ಷಸ ಮನುಷ್ಯರಲ್ಲಿ, ಸರ್ವಾಸ್ತ್ರೇಷು- ಸಮಸ್ತ ಅಸ್ತ್ರಗಳಲ್ಲಿ, ವಿಶಾರದಃ - ಸಮರ್ಥನು, ಸಮ್ಯಕ್ - ಚನ್ನಾಗಿ, ವಿದ್ಯಾ ವ್ರತ ಸ್ನಾತಃ - ವೇದಾಧ್ಯಯನ ವ್ರತಾಚರಣಾನಂತರದಲ್ಲಿ ಸ್ನಾತಕವೆಂಬ ವ್ರತವನ್ನು ಮಾಡಿ ಕೊಂಡವನು, ಯಥಾವತ್ - ಸಂಪ್ರದಾಯಾನುಸಾರವಾಗಿ, ಸಾಂಗವೇದವಿತ್ - ಶಿಕ್ಷಾದಿ ಷಡಂಗ ಯುಕ್ತವಾಗಿ ವೇದಗಳನ್ನು ತಿಳಿದಿರುವವನು. ॥ ೩೪ ॥ ಭುವಿ - ಭೂಮಿಯಲ್ಲಿ, ಭರತಾಗ್ರಜಃ - ಭರತನಿಗೆ ಅಣ್ಣನಾದ, ಕಲ್ಯಾಣಾಭಿಜನಃ - ಶುಭಕರವಾದ ಸತ್ಕುಲ ಪ್ರಸೂತಿಯುಳ್ಳ, ಸಾಧುಃ - ಸತ್ಪುರುಷನಾದ, ಅದೀನಾತ್ಮಾ - ವ್ಯಸನ ಮೂಲಗಳು ಸಹಸ್ರವಿದ್ದರೂ ಕ್ಷೋಭರಹಿತವಾದ ಮನ ವುಳ್ಳ, ಮಹಾಮತಿಃ - ಮಹಾ ಬುದ್ಧಿಶಾಲಿಯಾದ ಶ್ರೀರಾಮನು, ಗಾಂಧರ್ವೇಚ - ಸಂಗೀತ ಶಾಸ್ತ್ರದಲ್ಲಿ ಯೂ, ಶ್ರೇಷ್ಠಃ - ಉತ್ತಮನು, ಬಭೂವ-ಆದನು. ॥೩೫॥ ಧರ್ಮಾರ್ಥ ನೈಪುಣ್ಯೈಃ - ಧರ್ಮದಲ್ಲಿಯೂ ಅರ್ಥದಲ್ಲಿಯೂ ಕುಶಲರಾದ, ಶ್ರೇಷ್ಠೈಃ - ವಿದ್ಯಾಭಿಜನ ಪ್ರಯುಕ್ತವಾದ ಶ್ರೇಷ್ಠವುಳ್ಳ, ದ್ವಿಜೈಃ - ಬ್ರಾಹ್ಮಣರಿಂದ, ಅಭಿವಿನೀತಶ್ಚ - ಎಲ್ಲ ರೀತಿಯಲ್ಲಿಯೂ ಶಿಕ್ಷಿತನಾದವನು. ॥ ೩೬ ॥ ಗ್ರಾಮಾರ್ಥೇ - ಗ್ರಾಮದ ಪ್ರಯೋಜನಕ್ಕೋಸುಗವಾಗಲಿ, ನಗರಸ್ಯವಾ - ಪಟ್ಟಣಪ್ರಯೋಜನಕ್ಕೇ ಆಗಲಿ, ಸಂಗ್ರಾಮಂ - ಕಾಳಗವನ್ನು ಕುರಿತು, ಯದಾ - ಯಾವಾಗ, ವ್ರಜತಿ - ಹೋಗುವನೋ,

---

ಶ್ರೀರಾಮನ ಈ ಗುಣದಿಂದಾತನಿಗೆ, ಔದಾರ್ಯಾದಿ ಗುಣನಿಮಿತ್ತವಾದ ಪ್ರಸಿದ್ಧಿಯೂ, ಪರಾಕ್ರಮಾದಿಗಳಿಂದಾದ ಕೀರ್ತಿಯೂ, ಶತ್ರುಗಳನ್ನು ಸದೆಬಡಿವ ಸಾಮರ್ಥ್ಯವೂ ಸಹ ವೃದ್ಧಿಯನ್ನೈದುತ್ತಿರುವುದು. ॥ ೩೩ ॥ ಇದಲ್ಲದೆ ಆತನು ದೇವಾಸುರ ಮಾನವರಿಗಿಂ ತಲೂ ಶಸ್ತ್ರಾಸ್ತ್ರಗಳಲ್ಲಿ ಶ್ರೇಷ್ಠನಾದವನು; ಸಾಂಗವಾಗಿ ವೇದಾಧ್ಯಯನವಂಗೈದು, ಗುರುವಿ ನಾಣತಿಯಂತೆ ಸ್ನಾತಕವನ್ನು ಮಾಡಿದವನು; ಗಾಂಧರ್ವವಿದ್ಯೆಯಲ್ಲಿ ನಿಪುಣನು; ಮಾತಾ ಪಿತೃವಂಶಗಳ ಪರಿಶುದ್ಧಿಯುಳ್ಳವನಾಗಿಯೂ ಇರುವನು; ಸತ್ಪುರುಷನು; ದುಃಖಕ್ಕೆ ಕಾರಣ ಗಳನೇಕವಿಪ್ಪರೂ ಶೋಕಿಸದಿರುವವನು; ಮಹಾಬುದ್ಧಿಶಾಲಿಯು; ಧರ್ಮಾಧರ್ಮಗಳನ್ನು ಚೆನ್ನದಾಗರಿತಿರುವ ವಿಪ್ರವರೇಣ್ಯರಿಂದ ಶಿಕ್ಷಿಸಲ್ಪಟ್ಟು, ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದ

ಕುಂಜರೇಣ ರಥೇನ ವಾ ॥ ೩೭ ॥ ಪೌರಾನ್ ಸ್ವಜನವನ್ನಿತ್ಯಂ ಕುಶಲಂ ಪರಿಪೃಚ್ಛತಿ ॥ ಪುತ್ರೇಷ್ವಗ್ನಿಷು ದಾರೇಷು ಪ್ರೇಷ್ಯ ಶಿಷ್ಯ ಗಣೇಷುಚ ॥೩೮॥ ನಿಖಿಲೇನಾನುಪೂರ್ವ್ಯಾಚ್ಚ ಪಿತಾ ಪುತ್ರಾನಿವೌರಸಾನ್ ॥ ಶುಶ್ರೂಷಂತೇಚ ವಶ್ಶಿಷ್ಯಾಃ ಕಚ್ಚಿತ್ಕರ್ಮಸು ದಂಶಿತಾಃ ॥ ೩೯ ॥ ಇತಿ ನಃ ಪುರುಷವ್ಯಾಘ್ರಸ್ಸದಾ ರಾಮೋಭಿಭಾಷತೇ ॥ ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ ॥ ೪೦ ॥ ಉತ್ಸವೇಷುಚ ಸರ್ವೇಷು ಪಿತೇವ ಪರಿತುಷ್ಯತಿ ॥

ತದಾ - ಆಗ, ಸೌಮಿತ್ರಿಸಹಿತಃ - ಲಕ್ಷ್ಮಣನಿಂದೊಡಗೂಡಿ, ಗತ್ವಾ - ಹೋಗಿ, ಅವಿಜಿತ್ಯ - ಜಯಿಸದೆಯೇ, ನನಿವರ್ತತೇ - ಹಿಂತಿರುಗುವವನಲ್ಲ. ॥ ೩೭ ॥ ಸಂಗ್ರಾಮಾತ್ - ಯುದ್ಧರಂಗದಿಂದ, ಕುಂಜರೇಣ - ಆನೆಯಿಂದಲಾಗಲಿ, ರಥೇನವಾ - ರಥದಿಂದಲಾಗಲಿ, ಪುನಃ - ಮತ್ತು, ಆಗಮ್ಯ - ಬಂದು, ಪೌರಾನ್ - ಗ್ರಾಮಸ್ಥರನ್ನು ಕುರಿತು, ನಿತ್ಯಂ - ನಿರಂತರವು, ಸ್ವಜನವತ್ - ತನ್ನ ಬಂಧುಗಳಂತೆ, ಪುತ್ರೇಷು - ಮಕ್ಕಳ ವಿಷಯದಲ್ಲಿಯೂ, ಅಗ್ನಿಷು - ಅಗ್ನಿಹೋತ್ರವಿಷಯದಲ್ಲಿಯೂ, ದಾರೇಷು - ಪತ್ನೀ ವಿಷಯದಲ್ಲಿಯೂ, ಪ್ರೇಷ್ಯಶಿಷ್ಯಗಣೇಷುಚ - ಭೃತ್ಯರ ಶಿಷ್ಯರ ಸಮೂಹದ ವಿಷಯದಲ್ಲಿಯೂ, ನಿಖಿಲೇನ-ಸಮಗ್ರವಾಗಿಯೂ, ಆನುಪೂರ್ವ್ಯಾಚ್ಚ-ಕ್ರಮವಾಗಿಯೂ, ಪಿತಾ-ತಂದೆಯು, ಔರಸಾನ್ - ಹೊಟ್ಟೆಯಲ್ಲಿ ಹುಟ್ಟಿದ, ಪುತ್ರಾನಿವ - ಮಕ್ಕಳಂತೆ, ಕುಶಲಂ-ಕ್ಷೇಮವನ್ನು, ಪರಿಪೃಚ್ಛತಿ-ಕೇಳುತ್ತಾನೆ. ॥ ೩೮ ॥ ವಃ - ನಿಮ್ಮ, ಶಿಷ್ಯಾಃ - ಶಿಷ್ಯರು, ಶುಶ್ರೂಷಂತೀಚ - ಸೇವಿಸುತ್ತಾರೆಯೆ? ಕರ್ಮಸು - ಕರ್ಮಗಳಲ್ಲಿ, ದಂಶಿತಾಃಕಚ್ಚಿತ್ - ಸನ್ನದ್ಧರಾಗುವರೆ? ಇತಿ- ಹೀಗೆ, ಪುರುಷವ್ಯಾಘ್ರಃ-ಪುರುಷಶ್ರೇಷ್ಠನಾದ, ರಾಮಃ- ಶ್ರೀರಾಮನು, ಸದಾ - ನಿರಂತರವು, ನಃ-ನಮ್ಮನ್ನು, ಅಭಿಭಾಷತೇ-ಮಾತನಾಡಿಸುತ್ತಾನೆ. ॥ ೩೯ ॥ ಮನುಷ್ಯಾಣಾಂ - ಮನುಷ್ಯರಿಗೆ, ವ್ಯಸನೇಷು - ವ್ಯಸನ ಬಂದ ಕಾಲಗಳಲ್ಲಿ, ಭೃಶಂ - ಅತ್ಯಂತವಾಗಿ, ದುಃಖಿತಃ - ವ್ಯಸನವುಳ್ಳವನು, ಭವತಿ - ಆಗುತ್ತಾನೆ. ಸರ್ವೇಷು-ಸಮಸ್ತವಾದ, ಉತ್ಸವೇಷು - ಸಂತೋಷಕಾಲಗಳಲ್ಲಿ, ಪಿತೇವ-ತಂದೆಯಂತೆ, ಪರಿತುಷ್ಯತಿ-ಸಂತೋಷಿಸುತ್ತಾನೆ. ॥ ೪೦ ॥ ಸತ್ಯವಾದೀ - ಅತಿಸಂಕಟಾವಸ್ಥೆಯಲ್ಲಿಯೂ ಸತ್ಯವನ್ನೇ ಹೇಳುವವನು,

---

ವನು; ಗ್ರಾಮಪ್ರಯೋಜನಕ್ಕಾಗಲಿ, ಪುರಪ್ರಯೋಜನಕ್ಕಾಗಲಿ, ಲಕ್ಷ್ಮಣಸಹಿತನಾಗಿ ಹೊರಟರೆ ಶತ್ರುಗಳನ್ನು ಜಯಿಸದೆ ಹಿಂದಿರುಗುವವನಲ್ಲವು; ಶತ್ರುಸಂಹಾರವಾದಬಳಿಕ ರಣರಂಗದಿಂದ, ರಥವನ್ನೇರಿಯಾಗಲಿ, ಗಜಾರೂಢನಾಗಿಯಾಗಲಿ ರಾಜವೀಧಿಯಲ್ಲಿ ಬರುವಾಗ ಪಟ್ಟಣಿಗರಾದ ನಮ್ಮನ್ನು ಬಂಧುಗಳಂತೆ ಕಂಡು, ಪುತ್ರರ ವಿಷಯದಲ್ಲಿಯೂ, ಅಗ್ನಿಹೋತ್ರದ ವಿಷಯದಲ್ಲಿಯೂ, ಕಳತ್ರ ವಿಷಯದಲ್ಲಿಯೂ, ಚಾರರ ಮತ್ತು ಶಿಷ್ಯರ ವಿಷಯದಲ್ಲಿಯೂ ಕುಶಲಪ್ರಶ್ನೆಯಂ ಗೈವುದಲ್ಲದೆ, "ನಿಮ್ಮ ಶಿಷ್ಯರೆಲ್ಲರೂ ನಿಮ್ಮನ್ನು ಉಚಿತರೀತಿಯಿಂದ ಸೇವಿಸುತ್ತಿರುವರೆ? ಅವರು ಅವರವರ ಕಾರ್ಯಗಳಲ್ಲಿ ನಿರತರಾಗಿರುವರೆ?" ಎಂದು ಸದಾಕಾಲದಲ್ಲಿಯೂ ಮಾತನಾಡಿಸುವನು. ॥ ೩೯ ॥ ಪ್ರಜೆಗಳಿಗೆ ಸಂಕಟಬಂದ ಕಾಲದಲ್ಲಿ ತಾನು ಹಬಳವಾಗಿ ಖತಿಗೊಳ್ಳುವನು; ಅವರಿಗೆ ಮಹದಾನಂದವುಂಟಾದರೆ, ತಾನೂ ತಂದೆಯಂತೆ ಬಹಳ ಸಂತೋಷಪಡುವನು; ಸತ್ಯವಾದಿಯು; ಮಹಾಧನುರ್ಧಾರಿಯು; ಜ್ಞಾನದಲ್ಲಿಯೂ,

ಸತ್ಯವಾದೀ ಮಹೇಷ್ವಾಸೋ ವೃದ್ಧಸೇವೀ ಜಿತೇಂದ್ರಿಯಃ ॥ ೪೧ ॥ ಸ್ಮಿತ ಪೂರ್ವಾಭಿಭಾಷೀ ಚ ಧರ್ಮಂ ಸರ್ವಾತ್ಮನಾಶ್ರಿತಃ ॥ ಸಮ್ಯಗ್ಯೋಕ್ತಾ ಶ್ರೇಯ ಸಾಂಚ ನವಿಗೃಹ್ಯ ಕಥಾರುಚಿಃ ॥ ೪೨ ॥ ಉತ್ತರೋತ್ತರ ಯುಕ್ತೌಚ ವಕ್ತಾ ವಾಚಸ್ಪತಿ ರ್ಯಥಾ ॥ ಸುಭ್ರೂರಾಯತ ತಾಮ್ರಾಕ್ಷಸ್ಸಾಕ್ಷಾದ್ವಿಷ್ಣು ರಿವ ಸ್ವಯಂ ॥ ೪೩ ॥ ರಾಮೋ ಲೋಕಾಭಿರಾಮೋಽಯಂ ಶೌರ್ಯವೀರ್ಯ ಪರಾಕ್ರಮೈಃ ॥ ಪ್ರಜಾಪಾಲನ ತತ್ವಜ್ಞೋ ನರಾಗೋಪಹತೇಂದ್ರಿಯಃ ॥೪೪॥

ಮಹೇಷ್ವಾಸಃ - ಮಹಾ ಧನುರ್ಧಾರಿಯಾದವನು, ವೃದ್ಧಸೇವೀ - ಜ್ಞಾನ ವಯೋವೃದ್ಧರನ್ನು ಸೇವಿಸು ತ್ತಿರುವವನು, ಜಿತೇಂದ್ರಿಯಃ - ಜಯಿಸಲ್ಪಟ್ಟ ಇಂದ್ರಿಯಗಳುಳ್ಳವನು, ಸ್ಮಿತಪೂರ್ವಾಭಿಭಾಷೀಚ, ಸ್ಮಿತಪೂರ್ವ - ಮುಗುಳುನಗೆಯಿಂದ, ಅಭಿಭಾಷೀಚ- ಮಾತನಾಡುತ್ತಿರುವವನು, ಸರ್ವಾತ್ಮನಾ- ಅತಿ ದುರ್ಘಟಾವಸ್ಥೆಯೂ, ಧರ್ಮಂ - ಧರ್ಮವನ್ನೇ, ಶ್ರಿತಃ - ಆಶ್ರಯಿಸುವನು, ಶ್ರೇಯಸಾಂ - ಶ್ರೇಯ ಸ್ಸುಗಳಿಗೆ, ಸಮ್ಯಕ್ - ಚನ್ನಾಗಿ, ಯೋಕ್ತಾ - ಸಂಪಾದಕನು, ವಿಗೃಹ್ಯ - ಕಲಹಮಾಡಿ, ಕಥಾ ರುಚಿಃ, ಕಥಾ - ವಾದದಲ್ಲಿ, ರುಚಿಃ - ಅಭಿರುಚಿಯುಳ್ಳವನು, ನ - ಅಲ್ಲವು, ಉತ್ತರೋತ್ತರಯು ಕ್ತೌಚ - ಉತ್ತರೋತ್ತರ ಪ್ರತ್ಯುಕ್ತಿಗಳಲ್ಲಿಯೂ, ವಾಚಸ್ಪತಿರ್ಯಥಾ - ಬೃಹಸ್ಪತಿಯಂತೆ, ವಕ್ತಾ - ವಚನ ಸಮರ್ಥನು. ॥ ೪೧-೪೨ ॥ ಸುಭ್ರೂಃ - ಸಲ್ಲಕ್ಷಣಯುಕ್ತವಾದ ಕಣ್ಣು ಹುಬ್ಬುಗಳುಳ್ಳವನು, ಆಯತತಾಮ್ರಾಕ್ಷಃ - ವಿಸ್ತಾರವಾಗಿಯೂ ಕೆಂಪಾಗಿಯೂ ಇರುವ ಕಣ್ಣುಗಳುಳ್ಳವನು, ಸ್ವಯಂ - ತಾನೆ, ಸಾಕ್ಷಾತ್ - (ಗೋ) ಪ್ರತ್ಯಕ್ಷವಾಗಿ ಬಂದಿರುವ, ವಿಷ್ಣುರಿವಸ್ಥಿತಃ - ವಿಷ್ಣುವಿನಂತಿರುವನು, ಅಯಂರಾಮಃ - ಈ ಶ್ರೀರಾಮನು, ಶೌರ್ಯವೀರ್ಯಪರಾಕ್ರಮೈಃ, ಶೌರ್ಯ- ಯುದ್ಧದಲ್ಲಿ ನಿರ್ಭಯ ವಾಗಿ ಪ್ರವೇಶಿಸುವ ಸಾಮರ್ಥ್ಯದಿಂದಲೂ, ವೀರ್ಯ - (ಗೋ) ತಾನು ವಿಕಾರವನ್ನು ಹೊಂದದೆ ಪರರಿಗೆ ವಿಕಾರವನ್ನುಂಟುಮಾಡುವಿಕೆಯಿಂದಲೂ, ಪರಾಕ್ರಮೈಃ - ಕಾಳಗದಲ್ಲಿ ಲೀಲಾಜಾಲವಾಗಿ ಸಂಚರಿಸುವುದರಿಂದಲೂ, ಲೋಕಾಭಿರಾಮಃ - ಜನಗಳಿಗೆಲ್ಲ ಮನೋಹರನಾಗಿರುವನು. ॥ ೪೩ ॥ ಪ್ರಜಾಪಾಲನತತ್ವಜ್ಞಃ, ಪ್ರಜಾ - ಪ್ರಜೆಗಳ, ಪಾಲನ - ಪಾಲಿಸುವಿಕೆಯಲ್ಲಿ, ತತ್ವಜ್ಞಃ - ರಹಸ್ಯ ವನ್ನು ತಿಳಿದವನು, ರಾಗೋಪಹತೇಂದ್ರಿಯಃ, ರಾಗ - ಇಚ್ಛೆಯಿಂದ, ಉಪಹತ - ಹೊಡೆಯಲ್ಪಟ್ಟ,

---

ವಯಸ್ಸಿನಲ್ಲಿಯೂ, ವೃದ್ಧರಾದವರನ್ನು ಸೇವಿಸುವವನು; ವಿಷಯಲಾಂಪಟ್ಯರಹಿತನು; ಎಲ್ಲ ರಲ್ಲಿಯೂ, ಮುಗುಳ್ನಗೆಯಿಂದಲೇ ಮಾತನಾಡುವವನು; ಅತಿ ಕಷ್ಟಕಾಲದಲ್ಲಿಯೂ ಧರ್ಮ ವನ್ನೆಡಬಿಡದೆ ಹಿಂಬಾಲಿಸುವವನು; ಈ ಧರ್ಮಾವಲಂಬನದಿಂದಲೇ ಶ್ರೇಯಸ್ಸನ್ನು ಬಯಸು ವವನು; ಉತ್ತರ ಪ್ರತ್ಯುತ್ತರಗಳನ್ನೀವುದರಲ್ಲಿ ಸುರಗುರುವಿಗೆ ಸಾಟಿಯಾದವನು; ಸಲ್ಲಕ್ಷಣ ಯುಕ್ತವಾದ ಹುಬ್ಬುಗಳುಳ್ಳವನು; ಕಮಲದೆಸಳಿನಂತೆ ವಿಶಾಲವಾದುದೂ, ಕೆಂಪಾದುದೂ ಆದ ಕಂಗಳುಳ್ಳವನು; ಸಾಕ್ಷಾನ್ನಾರಾಯಣನಂತೆ ಶೌರ್ಯ ಸ್ಥೈರ್ಯ ಪರಾಕ್ರಮವುಳ್ಳವನು; ಎಲೈ ದಶರಥಮಹಾರಾಯನೇ! ನಿನ್ನ ಜ್ಯೇಷ್ಠಪುತ್ರನಾದ ಶ್ರೀರಾಮನು ಪ್ರಜೆಗಳನ್ನು ಸಂರ ಕ್ಷಿಸುವ ತತ್ವವನ್ನು ತಿಳಿದವನಾಗಿರುವನು. ವಿಷಯಚಪಲತೆಯನ್ನು ಹೊಂದದಿರುವ ಆತನು ಲೋಕತ್ರಯವನ್ನೇ ಸಂರಕ್ಷಿಸಲು ಶಕ್ತನಾಗಿರಲು, ಭೂಲೋಕವನ್ನು ಪರಿಪಾಲಿಸುವುದು

ಶಕ್ತಸ್ತ್ರೈಲೋಕ್ಯ ಮಪ್ಯೇಕೋ ಭೋಕ್ತುಂ ಕಿನ್ನುಮಹೀಮಿಮಾಂ ॥ ನಾಸ್ಯ ಕ್ರೋಧಃ ಪ್ರಸಾದಶ್ಚ ನಿರರ್ಥೋಽಸ್ತಿ ಕದಾಚನ ॥ ೪೫ ॥ ಹಂತ್ಯೇವ ನಿಯಮಾದ್ವಧ್ಯಾ ನವಧ್ಯೇ ನಚ ಕುಪ್ಯತಿ ॥ ಯುನಕ್ತ್ಯರ್ಥೈಃ ಪ್ರಹೃಷ್ಟಶ್ಚ ತಮಸೌ ಯತ್ರ ತುಷ್ಯತಿ ॥ ೪೬ ॥ ಶಾಂತೈಸ್ಸರ್ವ ಪ್ರಜಾಕಾಂತೈಃ ಪ್ರೀತಿಸಂಜನನೈರ್ನೃಣಾಂ ॥ ಗುಣೈರ್ವಿರುರುಚೇ ರಾಮೋ ದೀಪ್ತಸ್ಸೂರ್ಯ ಇವಾಂಶುಭಿಃ ॥ ೪೭ ॥ ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಂ ॥ ಲೋಕಪಾಲೋಪಮಂ ನಾಥ ಮಕಾಮಯತ

ಇಂದ್ರಿಯಃ - ಇಂದ್ರಿಯಗಳುಳ್ಳವನು, ನ - ಅಲ್ಲ, ಏಕಃ - ಒಬ್ಬನೇ, ತ್ರೈಲೋಕ್ಯಮಪಿ - ಲೋಕತ್ರಯವನ್ನೂ, ಭೋಕ್ತುಂ - ಅನುಭವಿಸಲು, ಶಕ್ತಃ - ಸಮರ್ಥನು, ಇಮಾಂಮಹೀಂ - ಈ ಭೂಮಿಯನ್ನು, ಭೋಕ್ತುಂ - ಅನುಭವಿಸಲು, ಕಿಂನು - ಎಷ್ಟರಕಾರ್ಯವು. ‖ ೪೪ ‖ ಅಸ್ಯ - ಈ ಶ್ರೀರಾಮನ, ಕ್ರೋಧಃ - ಕೋಪವು, ಪ್ರಸಾದಶ್ಚ - ಅನುಗ್ರಹವೂ, ಕದಾಚನ - ಎಂದಿಗಾದರೂ, ನಿರರ್ಥಕಃ - ವ್ಯರ್ಥವಾದುದು, ನಾಸ್ತಿ - ಆಗುವದಿಲ್ಲವು, ನಿಯಮಾತ್ - ಅವಶ್ಯವಾಗಿ, ವಧ್ಯಾ - ವಧಾರ್ಹರನ್ನು, ಹಂತ್ಯೇವ - ಹೊಡೆಯಲೇ ಹೊಡಿಯುತ್ತಾನೆ, ಅವಧ್ಯೇ - ವಧಾರ್ಹನಲ್ಲದಿರುವವರಲ್ಲಿ, ನಕುಪ್ಯತಿಚ - ಕೋಪಿಸತಕ್ಕವನೂ ಅಲ್ಲವು. ‖ ೪೫ ‖ ಅಸೌ - ಈ ಶ್ರೀರಾಮನು, ಯತ್ರ - ಯಾವ ಪುರುಷನ ವಿಷಯವಾಗಿ, ತುಷ್ಯತಿ - ಸಂತೋಷಿಸುವನೋ, ಪ್ರಹೃಷ್ಟಃ - ಸಂತುಷ್ಟನಾಗಿ, ತಂ - ಆ ಪುರುಷನನ್ನು, ಅರ್ಥೈಃ - ಅಭಿಲಕ್ಷಿತವಾದ ಪದಾರ್ಥಗಳಿಂದ, ಯುನಕ್ತಿ - ಕೂಡಿಸುವನು. ‖ ೪೬ ‖ ರಾಮಃ - ಶ್ರೀರಾಮನು, ಸರ್ವಪ್ರಜಾಕಾಂತೈಃ - ಪ್ರಜೆಗಳೆಲ್ಲರಿಗೂ ಮನೋಹರವಾದ, ನೃಣಾಂ - ಮನುಷ್ಯರಿಗೆ, ಪ್ರೀತಿಸಂಜನನೈಃ - ವಿಶ್ವಾಸವನ್ನು ಹುಟ್ಟಿಸುತ್ತಿರುವ, ಶಾಂತೈಃ - ಶಮಪ್ರಧಾನವಾದ, ಗುಣೈಃ - ಗುಣಗಳಿಂದ, ಅಂಶುಭಿಃ - ಕಾಂತಿಗಳಿಂದ, ದೀಪ್ತಃ - ಹೊಳೆಯುತ್ತಿರುವ, ಸೂರ್ಯಇವ - ಸೂರ್ಯನಂತೆ, ವಿರುರುಚೇ - ಹೊಳೆಯುತ್ತಿದ್ದನು. ‖ ೪೭ ‖ ಏವಂ - ಈಪರಿಯಾಗಿ, ಗುಣಸಂಪನ್ನಂ - ಗುಣಗಳಿಂದ ಯುಕ್ತನಾದ, ಸತ್ಯಪರಾಕ್ರಮಂ - ಅಮೋಘವಾದ ಪರಾಕ್ರಮವುಳ್ಳ, ಲೋಕಪಾಲೋಪಮಂ - ದಿಕ್ಪಾಲಕರಿಗೆ ಸಮಾನನಾದ, ತಂರಾಮಂ - ಆ ಶ್ರೀರಾಮನನ್ನು, ನಾಥಂ- ಸ್ವಾಮಿಯನ್ನಾಗಿ, ಮೇದಿನೀ - (ಮ) ಭೂಮಿಯು, (ಗೋ) ಭೂಮಂಡಲದಲ್ಲಿರುವ

ಒಂದು ಮಹತ್ಕಾರ್ಯವೇ ? ‖ ೪೪ ‖ ಇಷ್ಟೆಯಲ್ಲದೆ ಆತನ ಕ್ರೋಧ ಹರ್ಷಗಳು ಎಂದಿಗೇ ಆಗಲಿ ಫಲವಿಲ್ಲದವುಗಳಾಗುವದಿಲ್ಲ. ವಧಾರ್ಹರನ್ನತ್ಯವಶ್ಯಕವಾಗಿ ಸಂಹರಿಸುವನು; ವಧಾರ್ಹರಲ್ಲದವರೂ, ನಿರಪರಾಧಿಗಳೂ ಆದವರಲ್ಲಿ ಎಂದಿಗೂ ಕೋಪಗೊಳ್ಳುವದಿಲ್ಲ. ಯಾವಾತನಲ್ಲಿ ಆತನು ಸಂತಸಗೊಳ್ಳುವನೋ ಆತನನ್ನು ಐಶ್ವರ್ಯಸಂಪನ್ನನನ್ನಾಗಿ ಮಾಡುವನು. ಇದಲ್ಲದೆ ಪ್ರಜೆಗಳೆಲ್ಲರಿಗೂ ಮನೋಹರವಾಗಿಯೂ ಪ್ರೀತಿಯನ್ನುಂಟುಮಾಡುವುದಾಗಿಯೂ ಇರುವ ಗುಣಗಳಿಂದ ಕಿರಣಗಳೊಡಗೂಡಿ ಹೊಳೆಯುತ್ತಿರುವ ದಿನಮಣಿಯಂತೆ ಕಂಗೊಳಿಸುತ್ತಿರುವನು. ‖ ೪೫-೪೭ ‖ ಎಲೈ ರಾಜೇಂದ್ರನೇ! ಈ ಹಿಂದೆ ಹೇಳಿದ ಸಕಲ ಕಲ್ಯಾಣಗುಣಪರಿಪೂರ್ಣನೂ, ಅಸಮಾನಪರಾಕ್ರಮಿಯೂ, ಇಂದ್ರಾದಿಲೋಕಪಾಲಕರಿಗೆ

ಮೇದಿನೀ ॥೪೮॥ ವತ್ಸ ಶ್ರೇಯಸಿ ಜಾತಸ್ತೇ ದಿಷ್ಟ್ಯಾಸೌ ತವ ರಾಘವ ॥ ದಿಷ್ಟ್ಯಾ ಪುತ್ರಗುಣೈರ್ಯುಕ್ತೋ ಮಾರೀಚ ಇವ ಕಾಶ್ಯಪಃ ॥೪೯॥ ಬಲಮಾರೋಗ್ಯಮಾಯುಶ್ಚ ರಾಮಸ್ಯ ವಿದಿತಾತ್ಮನಃ ॥ ದೇವಾಸುರ ಮನುಷ್ಯೇಷು ಸಗಂಧರ್ವೋರಗೇಷುಚ ॥೫೦॥ ಆಶಂಸತೇ ಜನಸ್ಸರ್ವೋ ರಾಷ್ಟ್ರೇ ಪುರವರೇ ತಥಾ ॥ ಅಭ್ಯಂತರಶ್ಚ ಬಾಹ್ಯಶ್ಚ ಪೌರ ಜಾನಪದೋ ಜನಃ ॥೫೧॥ ಸ್ತ್ರಿಯೋ ವೃದ್ಧಾ ಸ್ತರುಣ್ಯಶ್ಚ ಸಾಯಂ ಪ್ರಾತ ಸ್ಸಮಾ

ಜನವು, ಅಕಾಮಯತ - ಅಪೇಕ್ಷಿಸಿತು. ॥೪೮॥ ಹೇರಾಘವ - ಎಲೈ ರಘುವಂಶೋತ್ಪನ್ನನಾದ ದಶರಥನೇ, ಅಸೌ - ಈ, ತವ - ನಿನ್ನ, ವತ್ಸಃ - ಮಗನು, ಶ್ರೇಯಸಿ - ಅಭಿವೃದ್ಧಿವಿಷಯವಾಗಿ, ದಿಷ್ಟ್ಯಾ - ಅದೃಷ್ಟವಶದಿಂದ, ಜಾತಃ - ಹುಟ್ಟಿದವನು, ದಿಷ್ಟ್ಯಾ - ಭಾಗ್ಯದಿಂದ, ಮಾರೀಚಃ- ಮರೀಚಿ ಬ್ರಹ್ಮಪುತ್ರನಾದ, ಕಾಶ್ಯಪಇವ - ಕಶ್ಯಪ ಬ್ರಹ್ಮನಂತೆ, ಪುತ್ರಗುಣೈಃ - ಪುನ್ನಾಮಕವಾದ ನರಕದಿಂದ ಉತ್ತಾರಕವಾದ ಗುಣಗಳಿಂದ, ಯುಕ್ತಃ - ಕೂಡಿರುವನು. ॥೪೯॥ ಸಗಂಧರ್ವೋರಗೇಷು - ಗಂಧರ್ವರಿಂದಲೂ ನಾಗಪುರುಷರಿಂದಲೂ ಒಡಗೂಡಿದ, ದೇವಾಸುರಮನುಷ್ಯೇಷು, ದೇವ - ದೇವತೆಗಳಲ್ಲಿಯೂ, ಅಸುರ - ರಾಕ್ಷಸರಲ್ಲಿಯೂ, ಮನುಷ್ಯೇಷು - ಮಾನವರಲ್ಲಿಯೂ, ರಾಷ್ಟ್ರೇ - ದೇಶದಲ್ಲಿಯೂ, ತಥಾ - ಹಾಗೆಯೇ, ಪುರವರೇ - ರಾಜಧಾನಿಯಲ್ಲಿಯೂ, ಸರ್ವಃ - ಸಮಸ್ತವಾದ, ಜನಃ - ಜನರೂ, ಅಭ್ಯಂತರಃ - ಗೂಢಚಾರಿಗಳಾದ ಜನರೂ, ಬಾಹ್ಯಶ್ಚ - ಬಹಿರಂಗವಾಗಿ ಬಂದಿರುವ, ಪೌರಜಾನಪದಃ - ಪಟ್ಟಣದಲ್ಲಿಯೂ ದೇಶದಲ್ಲಿಯೂ ಇರುವ, ಜನಶ್ಚ - ಜನವೂ ಸಹ, ವಿದಿತಾತ್ಮನಃ - (ಗೋ) ಪ್ರಸಿದ್ಧವಾದ ಸ್ವಭಾವವುಳ್ಳ, ರಾಮಸ್ಯ-ಶ್ರೀರಾಮನ, ಬಲಂ - ಬಲವನ್ನೂ, ಆರೋಗ್ಯಂ - ರೋಗರಾಹಿತ್ಯವನ್ನೂ, ಆಯುಶ್ಚ - ಆಯುಸ್ಸನ್ನೂ ಸಹಾ, ಆಶಂಸತೇ - ಪ್ರಾರ್ಥಿಸುತ್ತಾರೆ. ॥೫೦ ೫೧॥ ಸ್ತ್ರಿಯಃ - ವೃದ್ಧಸ್ತ್ರೀಯರೂ, ವೃದ್ಧಾಃ- ಮುದುಕರಾದ ಪುರುಷರೂ, ತರುಣ್ಯಶ್ಚ - ಯೌವನ ಸ್ತ್ರೀಯರೂ, ಸಾಯಂಪ್ರಾತಃ - ಸಾಯಂಕಾಲ ಪ್ರಾತಃಕಾಲಗಳಲ್ಲಿ, ಸಮಾಹಿತಾಃ - ಏಕಾಗ್ರಚಿತ್ತರಾಗಿ, ಯಶಸ್ವಿನಃ - ಕೀರ್ತಿವಂತನಾದ, ರಾಮಸ್ಯ - ಶ್ರೀರಾಮನ, ಅರ್ಥೇ - ನಿಮಿತ್ತವಾಗಿ, ಸರ್ವಾ - ಸಮಸ್ತರಾದ, ದೇವಾ - ದೇವತೆಗಳನ್ನು, ನಮಸ್ಯಂತಿ - ವಂದಿಸುತ್ತಾರೆ.

M.R

ಸದೃಶನೂ ಆದ ಶ್ರೀರಾಮನನ್ನು ಭೂದೇವಿಯು ನಾಥನನ್ನಾಗಿ ಬಯಸಿದಳು. ॥೪೮॥ ಎಲೈ ರಘುಕುಲಲಲಾಮನಾದ ದಶರಥಭೂಪಾಲನೇ! ನಿನ್ನ ಕುವರನಾದ ಈ ಶ್ರೀರಾಮನು ನಿನ್ನ ಭಾಗ್ಯೋದಯದಿಂದ, ಪುನ್ನಾಮ ನರಕದಿಂದ ಉದ್ಧರಿಸುವ ಪುತ್ರಗುಣಗಳನ್ನೊಳಗೊಂಡಿರುವ ಮರೀಚಿಬ್ರಹ್ಮನ ಕುಮಾರನಾದ ಕಶ್ಯಪಮುನಿಯಂತೆ ಜನಿಸಿರುವನು. ॥೪೯॥ ಎಲೈ ರಾಯನೇ! ದೇವ, ರಾಕ್ಷಸ, ಮನುಷ್ಯರೂ, ನಾಗ, ಗಂಧರ್ವರೂ, ಋಷಿಗಳೂ, ಸ್ವರಾಷ್ಟ್ರ ಪರರಾಷ್ಟ್ರದ ಸಮಸ್ತ ಪ್ರಜೆಗಳೂ, ಗೂಢವಾಗಿಯೂ, ಬಹಿರಂಗವಾಗಿಯೂ ಸಂಚರಿಸುವ ಜನರೂ ಸಹ ಪ್ರಸಿದ್ಧ ಗುಣಗಣ ಭೂಷಿತನಾದ ಶ್ರೀರಾಮನಿಗೆ ಆಯುರಾರೋಗ್ಯ ಬಲಗಳನ್ನು ಕೋರುತ್ತಲಿರುವರು. ॥೫೦-೫೧॥ ಇದಲ್ಲದೆ ವೃದ್ಧಸ್ತ್ರೀಯರೂ, ಯುವತಿಯರೂ ಎರಡುವೇಳೆಗಳಲ್ಲಿಯೂ ಮಹಾಕೀರ್ತಿದಾಯಕನಾದ ಶ್ರೀರಾಮನಿಗೆ ಮಂಗಳವುಂಟಾಗ

ಹಿತಾಃ ॥ ಸರ್ವಾನ್ ದೇವಾನ್ನಮಸ್ಯಂತಿ ರಾಮಸ್ಯಾರ್ಥೇ ಯಶಸ್ವಿನಃ ॥೫೨॥ ತೇಷಾಮಾಯಾಚಿತಂ ದೇವ ತ್ವತ್ಪ್ರಸಾದಾತ್ಸಮೃಧ್ಯತಾಂ ॥ ರಾಮಮಿಂದೀವರಶ್ಯಾಮಂ ಸರ್ವಶತ್ರುನಿಬರ್ಹಣಂ ॥೫೩॥ ಪಶ್ಯಾಮೋ ಯೌವರಾಜ್ಯಸ್ಥಂ ತವ ರಾಜೋತ್ತಮಾತ್ಮಜಂ ॥

ತಂದೇವ ದೇವೋಪಮಮಾತ್ಮಜಂ ತೇ
ಸರ್ವಸ್ಯ ಲೋಕಸ್ಯ ಹಿತೇ ನಿವಿಷ್ಟಂ ॥
ಹಿತಾಯ ನಃ ಕ್ಷಿಪ್ರಮುದಾರಜುಷ್ಟಂ
ಮುದಾಭಿಷೇಕ್ತುಂ ವರದ ತ್ವಮರ್ಹಸಿ ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸ್ಸರ್ಗಃ.

ಹೇ ದೇವ - ಎಲೈ ಸ್ವಾಮಿಯೇ, ತೇಷಾಂ - ಆ ಜನರ, ಆಯಾಚಿತಂ - ಪ್ರಾರ್ಥನೆಯು, ತ್ವತ್ಪ್ರಸಾದಾತ್ - ನಿನ್ನ ಅನುಗ್ರಹದಿಂದ, ಸಮೃದ್ಧ್ಯತಾಂ - ಸಫಲವಾಗಲಿ. ॥ ೫೨ ॥ ಹೇ ರಾಜೋತ್ತಮ - ಎಲೈ ರಾಜಶ್ರೇಷ್ಠನೇ! ಇಂದೀವರಶ್ಯಾಮಂ - ಕನ್ನೈದಿಲೆಯಂತೆ ಕಪ್ಪಾಗಿರುವ, ಸರ್ವಶತ್ರುನಿಬರ್ಹಣಂ - ಸಮಸ್ತ ಶತ್ರುಗಳನ್ನೂ ನಿಗ್ರಹಿಸುತ್ತಿರುವ, ತವ - ನಿನ್ನ, ಆತ್ಮಜಂ - ಕುಮಾರನಾದ, ರಾಮಂ - ಶ್ರೀರಾಮನನ್ನು, ಯೌವರಾಜ್ಯಸ್ಥಂ - ಯೌವರಾಜ್ಯ ಪಟ್ಟಾಭಿಷೇಕ ಯುಕ್ತನನ್ನಾಗಿ, ಪಶ್ಯಾಮಃ-ಕಾಣುವೆವು. ॥೫೩॥ ಹೇ ವರದ-ಎಲೈ ವರಪ್ರದಾಯಕನೇ! ದೇವದೇವೋಪಮಂ-(ಗೋ + ಮ) ಶ್ರೀ ಮಹಾ ವಿಷ್ಣುವಿಗೆ ಸಮಾನನಾದ, ಸರ್ವಸ್ಯ ಲೋಕಸ್ಯ - ಸಮಸ್ತ ಜನರ, ಹಿತೇ - ಇಷ್ಟದಲ್ಲಿ, ನಿವಿಷ್ಟಂ - ಅಭಿನಿವೇಶವುಳ್ಳ, ಉದಾರಜುಷ್ಟಂ - ಗಂಭೀರ ಗುಣಗಳಿಂದ ಕೂಡಿರುವ, ತೇ ಆತ್ಮಜಂ - ನಿನ್ನ ಕುಮಾರನಾದ, ತಂ - ಆ ಶ್ರೀರಾಮನನ್ನು, ನಃ - ನಮ್ಮ, ಹಿತಾಯ - ಹಿತಕ್ಕೋಸುಗ, ಮುದಾ - ಸಂತೋಷದಿಂದ, ತ್ವಂ - ನೀನು, ಅಭಿಷೇಕ್ತುಂ - ಪಟ್ಟಾಭಿಷೇಕ ಮಾಡಲು, ಕ್ಷಿಪ್ರಂ - ಜಾಗ್ರತೆಯಾಗಿ, ಅರ್ಹಸಿ - ಯೋಗ್ಯನಾಗು. ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸ್ಸರ್ಗಃ.

ಲೆಂದು ಸಮಸ್ತ ದೇವತೆಗಳನ್ನೂ ಏಕಾಗ್ರಚಿತ್ತರಾಗಿ ನಮಸ್ಕರಿಸುತ್ತಿರುವರು. ॥ ೫೨ ॥ ಪ್ರಭುವೇ! ಈರೀತಿಯಾದ ಅವರ ಪ್ರಾರ್ಥನೆಯು ನಿನ್ನ ಅನುಗ್ರಹದಿಂದ ಸಫಲವಾದುದಾಗಲಿ. ರಾಜೋತ್ತಮ! ಕನ್ನೈದಿಲೆಯಂತೆ ಶ್ಯಾಮಲವರ್ಣನಾಗಿಯೂ, ಶತ್ರುಗಳೆಲ್ಲರನ್ನೂ ಮೂಲೋತ್ಪಾಟನಮಾಡುವವನಾಗಿಯೂ, ನಿನ್ನ ಜ್ಯೇಷ್ಠಕುಮಾರನಾಗಿಯೂ ಇರುವ ಶ್ರೀರಾಮನನ್ನು ಯೌವರಾಜ್ಯಪಟ್ಟಾಭಿಷಿಕ್ತನನ್ನಾಗಿ ನೋಡಲಪೇಕ್ಷಿಸುವೆವು. ॥ ೫೩ ॥ ಎಲೈ ವರಪ್ರದಾತನಾದ ದಶರಥಮಹೀಪಾಲನೇ! ದೇವದೇವನಾದ ವಿಷ್ಣುವಿಗೆ ಸಮಾನನಾದವನೂ, ಪ್ರಜೆಗಳೆಲ್ಲರ ಹಿತಕಾಂಕ್ಷಿಯೂ, ಗಂಭೀರವಾದ ಗುಣಗಳಿಂದೊಡಗೂಡಿದವನೂ, ನಿನ್ನ ಕುಮಾರನೂ ಆದ ಶ್ರೀರಾಮನಿಗೆ ನಮ್ಮೆಲ್ಲರ ಹಿತಕ್ಕೋಸುಗ ಸಂತಸದಿಂದ ಅತಿ ಶೀಘ್ರವಾಗಿ ಯೌವರಾಜ್ಯಪಟ್ಟಾಭಿಷೇಕವನ್ನು ಮಾಡುವವನಾಗು. ॥ ೫೪ ॥

ಇಂತಿದು ಸಭಾಸದ ಪ್ರಕಟಿತ ಶ್ರೀರಾಮ ಯೌವರಾಜ್ಯಪಟ್ಟಾಭಿಷೇಕ ಸಮ್ಮತಿ ಪ್ರಕಾರವರ್ಣನವೆಂಬ ಎರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತೃತೀಯಸ್ಸರ್ಗಃ.

ತೇಷಾಮಂಜಲಿಪದ್ಮಾನಿ ಪ್ರಗೃಹೀತಾನಿ ಸರ್ವಶಃ ॥ ಪ್ರತಿಗೃಹ್ಯಾ ಬ್ರವೀದ್ರಾಜಾ ತೇಭ್ಯಃ ಪ್ರಿಯಹಿತಂ ವಚಃ ॥೧॥ ಅಹೋಸ್ಮಿ ಪರಮ ಪ್ರೀತಃ ಪ್ರಭಾವಶ್ಚಾತುಲೋ ಮಮ ॥ ಯನ್ಮೇ ಜ್ಯೇಷ್ಠಂ ಪ್ರಿಯಂ ಪುತ್ರಂ ಯೌವರಾಜ್ಯಸ್ಥಮಿಚ್ಛಥ ॥೨॥ ಇತಿಪ್ರತ್ಯರ್ಚ್ಯ ತಾ೯ ರಾಜಾ ಬ್ರಾಹ್ಮಣಾ ನಿದ ಮಬ್ರವೀತ್ ॥ ವಸಿಷ್ಠಂ ವಾಮದೇವಂಚ ತೇಷಾಮೇವೋಪ ಶೃಣ್ವತಾಂ

ತೇಷಾಂ - ಆ ಪಟ್ಟಣಿಗರ, ಪ್ರಗೃಹೀತಾನಿ - ಹಿಡಿದುಕೊಳ್ಳಲ್ಪಟ್ಟ, ಅಂಜಲಿ ಪದ್ಮಾನಿ-ಪದ್ಮಗಳ ಮೊಗ್ಗುಗಳಂತಿರುವ ಅಂಜಲಿಗಳನ್ನು, ಸರ್ವಶಃ - ಸರ್ವ ದಿಕ್ಕುಗಳಲ್ಲಿಯೂ, ರಾಜಾ - ದಶರಥರಾಜನು, ಪ್ರತಿಗೃಹ್ಯ - ಅಂಗೀಕರಿಸಿ, ತೇಭ್ಯಃ - ಆ ಜನರಿಗೋಸುಗ, ಪ್ರಿಯಹಿತಂ, ಪ್ರಿಯ - ಮನಸ್ಸಿಗಿಂಪಾಗಿರುವ, ಹಿತಂ - ಕರ್ಣಶ್ರಾವ್ಯವಾಗಿರುವ, ವಚಃ - ವಾಕ್ಯವನ್ನು, ಅಬ್ರವೀತ್ - ನುಡಿದನು. ॥೧॥ ಅಹೋ - ಆಶ್ಚರ್ಯವು, ಪರಮ ಪ್ರೀತಃ - ಬಹಳ ಸಂತುಷ್ಟನಾದವನು, ಅಸ್ಮಿ - ಆದೆನು. ಮಮ - ನನ್ನ, ಪ್ರಭಾವಶ್ಚ - ಪ್ರಭುತ್ವವು ಕೂಡ, ಅತುಲಃ - ಸಮಾನವಿಲ್ಲದ್ದು, ಯತ್ - ಯಾವ ಕಾರಣ, ಪ್ರಿಯಂ - ಪ್ರೀತಿ ಪಾತ್ರನಾದ, ಮೇ - ನನ್ನ, ಜ್ಯೇಷ್ಠಂ ಪುತ್ರಂ - ದೊಡ್ಡ ಮಗನಾದ ಶ್ರೀರಾಮನನ್ನು, ಯೌವರಾಜ್ಯಸ್ಥಂ - ಯೌವರಾಜ್ಯ ಪಟ್ಟಾಭಿಷೇಕ ಯುಕ್ತನನ್ನಾಗಿ, ಇಚ್ಛಥ - ಇಚ್ಛೈಸಿದಿರೋ. ॥೨॥ ಇತಿ - ಈ ಪರಿಯಾಗಿ, ರಾಜಾ - ದಶರಥ ರಾಯನು, ತಾ೯ - ಆ ಪ್ರಜೆಗಳನ್ನು, ಪ್ರತ್ಯರ್ಚ್ಯ - ಪ್ರತಿ ವಚನದಿಂದ ಪೂಜಿಸಿ, ವಸಿಷ್ಠಂ - ವಸಿಷ್ಠ ಋಷಿಯನ್ನೂ, ವಾಮದೇವಂಚ - ವಾಮದೇವನನ್ನೂ, ಬ್ರಾಹ್ಮಣಾಂಶ್ಚ - ಕೆಲ ಬ್ರಾಹ್ಮಣರನ್ನೂ ಕುರಿತು, ತೇಷಾಂ - ಆ ಪ್ರಜೆಗಳೆಲ್ಲರೂ, ಉಪಶೃಣ್ವತಾಮೇವ - ಕೇಳುತ್ತಿರಲು, ಇದಂ - ಈ ವಚನ

ಆ ಬಳಿಕ ದಶರಥರಾಯನು ಶ್ರೀರಾಮ ಮೂರ್ತಿಯ ಯೌವರಾಜ್ಯ ಪಟ್ಟಾಭಿಷೇಕಕ್ಕೆ ಒಪ್ಪಿಗೆಯನ್ನಿತ್ತು ಕೈ ಮುಗಿದು ತನ್ನ ವಚನವನ್ನು ಕೇಳಲಾತುರವುಳ್ಳ ಸಮಸ್ತ ದೊರೆಗಳನ್ನೂ, ಪ್ರಜೆಗಳನ್ನೂ ಕುರಿತು ಹೀಗೆಂದನು. "ಎಲೈ ಸಭಾಸದರಾದ ರಾಯರೇ ಮತ್ತು ಪ್ರಜೆಗಳೇ! ನಿಮ್ಮೆಲ್ಲರ ಶ್ರೇಯೋಭಿವೃದ್ಧಿಗಾಗಿ ನನ್ನ ಕುವರನಾದ ಶ್ರೀರಾಮನಿಗೆ ಯೌವರಾಜ್ಯ ಪಟ್ಟಾಭಿಷೇಕವಂಗೈಯಲು, ನೀವೆಲ್ಲರೂ ಒಪ್ಪಿಗೆಯನ್ನಿತ್ತುದರಿಂದ ನಾನು ಬಹು ಸಂತಸಗೊಂಡವನಾದೆನು. ಇದೀಗ ನಿಮ್ಮಿಂದ ನನ್ನ ಪ್ರಭಾವವು ಅಪಾರವಾದುದು" ॥೨॥ ಹೀಗೆ ಆ ದಶರಥ ಭೂಪಾಲನಾಸಭಿಕರನ್ನು, ಮೃದುಮಧುರವಾದ ವಚನ ರಚನೆಯಿಂದ, ಮರ್ಯಾದಿಸಿ ವಸಿಷ್ಠ ವಾಮದೇವರನ್ನು ಕುರಿತು, "ಗುರು ಶ್ರೇಷ್ಠರೇ! ಈಗ ಮಹಾ ಪುಣ್ಯಕರವಾದ ಚೈತ್ರ ಮಾಸವು ಒದಗಿ ಬಂದಿರುವುದು; ಈಗ ಸಮಸ್ತ

॥ ೩ ॥ ಚೈತ್ರ ಶ್ರೀಮಾನಯಂ ಮಾಸಃ ಪುಣ್ಯಃ ಪುಷ್ಪಿತ ಕಾನನಃ ॥ ಯೌವರಾಜ್ಯಾಯ ರಾಮಸ್ಯ ಸರ್ವಮೇವೋಪ ಕಲ್ಪ್ಯತಾಂ ॥ ೪ ॥ ರಾಜ್ಞ ಸ್ತೂಪರತೇ ವಾಕ್ಯೇ ಜನಘೋಷೋ ಮಹಾನಭೂತ್ ॥ ಶನೈಸ್ತಸ್ಮಿನ್ ಪ್ರಶಾಂತೇಚ ಜನಘೋಷೇ ಜನಾಧಿಪಃ ॥ ೫ ॥ ವಸಿಷ್ಠಂ ಮುನಿಶಾರ್ದೂಲಂ ರಾಜಾ ವಚನಮುಬ್ರವೀತ್ ॥ ಅಭಿಷೇಕಾಯ ರಾಮಸ್ಯ ಯತ್ಕರ್ಮ ಸಪರಿಚ್ಛದಂ ॥ ೬ ॥ ತದದ್ಯ ಭಗವನ್ ಸರ್ವಮಾಜ್ಞಾಪಯಿತು ಮರ್ಹಸಿ ॥ ತಚ್ಛ್ರುತ್ವಾ

ವನ್ನು, ಅಬ್ರವೀತ್ - ನುಡಿದನು. ॥ ೩ ॥ ಶ್ರೀಮಾನ್ - ಸಂಪದ್ಯುಕ್ತವಾದ, ಅಯಂಮಾಸಃ - ಈ ಮಾಸವು, ಚೈತ್ರಃ - ಚೈತ್ರವು, ಪುಣ್ಯಃ - ಪುಣ್ಯಕರವಾದುದು, ಪುಷ್ಪಿತ ಕಾನನಃ - ಸಂಜಾತ ಪುಷ್ಪಗಳುಳ್ಳ ವನಗಳುಳ್ಳುದು, ರಾಮಸ್ಯ - ಶ್ರೀರಾಮನ, ಯೌವರಾಜ್ಯಾಯ - ಯೌವರಾಜ್ಯ ಪಟ್ಟಾಭಿಷೇಕಕ್ಕೋಸುಗ, ಸರ್ವಮೇವ - ಸಮಸ್ತವೂ, ಉಪಕಲ್ಪ್ಯತಾಂ- ಸಿದ್ಧ ಮಾಡಲ್ಪಡಲಿ. ॥ ೪ ॥ ರಾಜ್ಞಃ - ದಶರಥರಾಜನ, ವಾಕ್ಯೇತು - ವಚನವು, ಉಪರತೇಸತಿ- ವಿರಾಮ ಹೊಂದಲು, ಜನಘೋಷಃ - ಜನರ ಶಬ್ದವು, ಮಹಾನ್ - ದೊಡ್ಡದಾಗಿ, ಅಭವತ್ - ಆಯಿತು, ತಸ್ಮಿನ್ - ಆ, ಜನಘೋಷೇ - ಜನರ ಕೋಲಾಹಲ ಶಬ್ದವು, ಶನೈಃ - ಮೆಲ್ಲನೆ, ಪ್ರಶಾಂತೇಸತಿ - ಉಪಶಾಂತವಾಗಲು, ಜನಾಧಿಪಃ - ನರಪತಿಯಾದ, ರಾಜಾ - ದಶರಥರಾಜನು, ಮುನಿಶಾರ್ದೂಲಂ - ಋಷಿ ಶ್ರೇಷ್ಠನಾದ, ವಸಿಷ್ಠಂ - ವಸಿಷ್ಠನನ್ನು ಕುರಿತು, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೫ ॥ ಹೇ ಭಗವನ್ - ಎಲೈ ಪೂಜ್ಯನೆ ! ರಾಮಸ್ಯ - ಶ್ರೀರಾಮನ, ಅಭಿಷೇಕಾಯ - ಅಭಿಷೇಕ ಕ್ಕೋಸ್ಕರ, ಸಪರಿಚ್ಛದಂ - ಉಪಕರಣ ಸಾಮಗ್ರಿಯಿಂದೊಡಗೂಡಿದ, ಯತ್ಕರ್ಮ - ಯಾವ ವ್ಯಾಪಾರವುಂಟೋ, ತತ್ಸರ್ವಂ - ಆ ಕರ್ಮವನ್ನೆಲ್ಲ, ಆಜ್ಞಾಪಯಿತುಂ - ಆಜ್ಞಾಪಿಸಲು, ಅರ್ಹಸಿ- ಯೋಗ್ಯನಾಗು. ॥ ೬ ॥ ದ್ವಿಜಸತ್ತಮಃ - ಬ್ರಾಹ್ಮಣ ಶ್ರೇಷ್ಠನಾದ, ವಸಿಷ್ಠಃ - ವಸಿಷ್ಠ ಋಷಿಯು,

---

ವೃಕ್ಷಗಳೂ ಎಳೆದಳಿರುಗಳುಳ್ಳುವಾಗಿಯೂ, ಹೂಗಳಿಂದ ಕಂಗೊಳಿಸುವುವಾಗಿಯೂ, ಫಲಭರಿತವಾದುವುಗಳಾಗಿಯೂ ಇರುವುವು; ಇಂತಹ ಸಮಯವು ಶ್ರೀರಾಮನ ಯುವರಾಜ ಪಟ್ಟಾಭಿಷೇಕಕ್ಕನುಕೂಲವಾಗಿರುವುದರಿಂದ ಈಗಲೇ ಅದಕ್ಕೆ ಬೇಕಾದ ಸಲಕರಣೆಗಳೆಲ್ಲವನ್ನೂ ಅಣಿ ಮಾಡಿರಿ" ಎಂದು ಅಯೋಧ್ಯಾವಾಸಿಗಳಿಗೂ, ದೇಶದೇಶಗಳಿಂದ ಬಂದಿದ್ದ ರಾಯರಿಗೂ ಕೇಳಿಸುವಂತೆ ನುಡಿದವನಾದನು. ಹೀಗೆ ದಶರಥರಾಜನು ನುಡಿದು ಸುಮ್ಮನಾಗಲು ಜನರ ಕೋಲಾಹಲ ಧ್ವನಿಯು ಬಹಳವಾಗಾಯಿತು. ಮೆಲ್ಲಮೆಲ್ಲನೆ ಜನಸಂದಣಿಯ ಸಂತೋಷನಾದವು ಶಾಂತವಾಗಲು, ದಶರಥರಾಯನು ವಸಿಷ್ಠ ವಾಮದೇವರನ್ನು ಕುರಿತು, "ಪೂಜ್ಯರೆ! ಶ್ರೀರಾಮ ಮೂರ್ತಿಯ ಅಭಿಷೇಕಕ್ಕೋಸುಗವಾಗಿ, ಉಪಕರಣ ಸಮೇತವಾದ ಯಾವ ಯಾವ ಕಾರ್ಯಗಳು ನಡೆಯಬೇಕೋ, ಅವನ್ನು ಆಜ್ಞಾಪಿಸಬೇಕು." ಎಂದನು. ॥ ೬ ॥ ಆಗಲಾ ವಿಪ್ರಶ್ರೇಷ್ಠನಾದ ವಸಿಷ್ಠ ಮುನಿಯು, ಭೂಪತಿಯಾದ ದಶರಥನ ನುಡಿಗಳನ್ನಾಲಿಸಿ, ಆತನ ಬಳಿಯಲ್ಲಿಯೇ ತನ್ನಾಣತಿಯನ್ನು ನಿರೀಕ್ಷಿಸಿ ಕೈ

ಭೂಮಿಪಾಲಸ್ಯ ವಸಿಷ್ಠೋ ದ್ವಿಜಸತ್ತಮಃ ॥ ೭ ॥ ಆದಿದೇಶಾಗ್ರತೋ ರಾಜ್ಞಃ ಸ್ಥಿತಾನ್ ಯುಕ್ತಾನ್ ಕೃತಾಂಜಲೀನ್ ॥ ಸುವರ್ಣಾದೀನಿ ರತ್ನಾನಿ ಬಲೀನ್ ಸರ್ವೌಷಧೀರಪಿ ॥ ೮ ॥ ಶುಕ್ಲಮಾಲ್ಯಾನಿ ಲಾಜಾಂಶ್ಚ ಪೃಥಕ್ಚ ಮಧು ಸರ್ಪಿಷೀ ॥ ಅಹತಾನಿ ಚ ವಾಸಾಂಸಿ ರಥಂ ಸರ್ವಾಯುಧಾನ್ಯಪಿ ॥ ೯ ॥ ಚತುರಂಗಬಲಂ ಚೈವ ಗಜಂಚ ಶುಭಲಕ್ಷಣಂ ॥ ಚಾಮರ ವ್ಯಜನೇ ಶ್ವೇತೇ ಧ್ವಜಂ ಛತ್ರಂ ಚ ಪಾಂಡುರಂ ॥ ೧೦ ॥ ಶತಂಚ ಶಾತಕುಂಭಾನಾಂ ಕುಂಭಾನಾಮಗ್ನಿವರ್ಚಸಾಂ ॥ ಹಿರಣ್ಯ ಶೃಂಗಮೃಷಭಂ ಸಮಗ್ರಂ ವ್ಯಾಘ್ರ ಚರ್ಮಚ ॥ ೧೧ ॥ ಉಪಸ್ಥಾಪಯತ ಪ್ರಾತ ರಗ್ನ್ಯಗಾರಂ ಮಹೀಪತೇಃ ॥ ಯಚ್ಚಾನ್ಯ

ಭೂಮಿಪಾಲಸ್ಯ - ಭೂಪಾಲನಾದ ದಶರಥರಾಯನ, ತತ್ - ಆ ಮಾತನ್ನು, ಶ್ರುತ್ವಾ - ಕೇಳಿ, ಅಗ್ರತಃ - ಮುಂಗಡೆ, ಸ್ಥಿತಾನ್ - ನಿಂತಿರುವ, ಕೃತಾಂಜಲೀನ್ - ಅಂಜಲಿಬದ್ಧರಾದ, ಯುಕ್ತಾನ್ - ರಾಜ ಕಾರ್ಯದಲ್ಲಿ ನಿಯುಕ್ತರಾದ ಸುಮಂತ್ರಾದಿ ಅಧಿಕಾರಿಗಳನ್ನು ಕುರಿತು, ಆದಿದೇಶ - ಆಜ್ಞಾಪಿಸಿದನು, ಸುವರ್ಣಾದೀನಿ - ಬಂಗಾರವೇ ಮುಂತಾದ, ರತ್ನಾನಿ - ರತ್ನಗಳನ್ನು, ಬಲೀನ್ - ಪೂಜಾದ್ರವ್ಯಗಳನ್ನು ಸರ್ವೌಷಧೀರಪಿ - ಸಮಸ್ತವಾದ ಮೂಲಿಕೆಗಳನ್ನೂ, ॥ ೭-೮ ॥ ಶುಕ್ಲಮಾಲ್ಯಾಂಶ್ಚ - ಬೆಳ್ಳಗಿರುವ ಪುಷ್ಪ ಮಾಲಿಕೆಗಳನ್ನೂ, ಲಾಜಾಂಶ್ಚ - ಅರಳುಗಳನ್ನೂ, ಪೃಥಕ್ - ಪ್ರತ್ಯೇಕವಾಗಿ, ಮಧುಸರ್ಪಿಷೀ, ಮಧು - ಜೇನುಗಳನ್ನೂ, ಸರ್ಪಿಷೀ - ತುಪ್ಪ ಮೊಸರು ಬೆರಸಿದ ದ್ರವ್ಯವನ್ನೂ, ಅಹತಾನಿ ನೂತನವಾದ, ವಾಸಾಂಸಿ- ವಸ್ತ್ರಗಳನ್ನೂ, ರಥಂ- ರಥವನ್ನು, ಸರ್ವಾಯುಧಾನ್ಯಪಿ- ಸಮಸ್ತಾಯುಧಗಳನ್ನು, ॥೯॥ ಚತುರಂಗಬಲಂಚೈವ- ಗಜ, ರಥ ಅಶ್ವಸಾದಿಗಳೆಂಬ ನಾಲ್ಕು ಅಂಗಗಳುಳ್ಳ, ಸೈನ್ಯವನ್ನು, ಶುಭ ಲಕ್ಷಣಂ - ಶುಭಕರವಾದ ಲಕ್ಷಣಗಳುಳ್ಳ, ಗಜಂಚ ಆನೆಯನ್ನೂ, ಶ್ವೇತೇ - ಬೆಳ್ಳಗಿರುವ, ಚಾಮರ ವ್ಯಜನೆ - ಚಾಮರಗಳನ್ನೂ, ಬೀಸಣಿಗೆಗಳನ್ನೂ, ಪಾಂಡುರಂ- ಬೆಳ್ಳಗಿರುವ, ಧ್ವಜಂ-ಧ್ವಜವನ್ನೂ, ಛತ್ರಂಚ-ಕೊಡೆಯನ್ನೂ, ॥೧೦॥ ಶಾತಕುಂಭಾನಾಂ-ಭಂಗಾರದ, ಅಗ್ನಿವರ್ಚಸಾಂ - ಅಗ್ನಿಯಂತೆ ತೇಜಸ್ಸುಳ್ಳ, ಕುಂಭಾನಾಂ - ಕಲಶಗಳ, ಶತಂಚ - ನೂರನ್ನೂ, ಹಿರಣ್ಯಶೃಂಗಂ - ಭಂಗಾರದ ಕೊಂಬುಗಳುಳ್ಳ, ವೃಷಭಂ - ವೃಷಭವನ್ನೂ, ಸಮಗ್ರಂ - ಭಿನ್ನವಲ್ಲದಿರುವ, ವ್ಯಾಘ್ರ ಚರ್ಮಚ - ವ್ಯಾಘ್ರಾಜಿನವನ್ನೂ, ॥ ೧೧ ॥ ಪ್ರಾತಃ - ಪ್ರಾತಃಕಾಲದಲ್ಲಿ, ಮಹೀಪತೇಃ - ದಶರಥರಾಜನ, ಅಗ್ನ್ಯಗಾರಂ - ಅಗ್ನಿಹೋತ್ರ ಗೃಹದಲ್ಲಿ, ಉಪಸ್ಥಾಪಯತ - ತಂದಿರಿಸಿರಿ, ಏಷ್ಟವ್ಯಂ -

---

ಮುಗಿದು ನಿಂತಿದ್ದ ಸುಮಂತ್ರನೇ ಮೊದಲಾದ ಪ್ರಧಾನಿಗಳನ್ನು ಕುರಿತು ಈರೀತಿ ಆಜ್ಞಾಪಿಸಿದನು. "ಎಲೈ ಪ್ರಧಾನಿಗಳಿರಾ ! ಸುವರ್ಣವೇ ಮೊದಲಾದ ರತ್ನಗಳನ್ನೂ, ಪೂಜಾಯೋಗ್ಯವಾದ ದ್ರವ್ಯಗಳನ್ನೂ, ಸಮಸ್ತ ಮೂಲಿಕೆಗಳನ್ನೂ, ಶ್ವೇತ ಕುಸುಮಗಳನ್ನೂ, ಅರಳನ್ನೂ, ಮಧು, ನೂತನ ವಸ್ತ್ರ, ರಥ, ಸಮಸ್ತವಾದ ಆಯುಧಗಳೂ, ಗಜ, ತುರಗ, ರಥ, ಪದಾತಿಗಳೆಂಬ ಚತುರಂಗ ಸೇನೆ ಇವುಗಳನ್ನೂ, ಸಲ್ಲಕ್ಷಣ ಲಕ್ಷಿತವಾದ ಗಜವನ್ನೂ, ಬಿಳಿ ಚಾಮರ ಮತ್ತು ಬೀಸಣಿಗೆಗಳನ್ನೂ, ಶ್ವೇತ ಛತ್ರಿಯನ್ನೂ, ಅಗ್ನಿಯಂತೆ ಕಂಗೊಳಿಸುವ ನೂರು ಪೊಂಗೊಡಗಳನ್ನೂ, ಸುವರ್ಣ ಶೃಂಗಗಳುಳ್ಳ ವೃಷಭ, ಭಿನ್ನವಾಗದಿರುವ ಅವಯವಗಳುಳ್ಳ

ತ್ಕಿಂಚದೇಷ್ಟವ್ಯಂ ತತ್ಸರ್ವ ಮುಪಕಲ್ಪ್ಯತಾಂ ॥ ೧೨ ॥ ಅಂತಃಪುರಸ್ಯ ದ್ವಾರಾಣಿ ಸರ್ವಸ್ಯ ನಗರಸ್ಯ ಚ ॥ ಚಂದನ ಸ್ರಗ್ಭಿರರ್ಚ್ಯಂತಾಂ ಧೂಪೈಶ್ಚ ಘ್ರಾಣಹಾರಿಭಿಃ ॥ ೧೩ ॥ ಪ್ರಶಸ್ತ ಮನ್ನಂ ಗುಣವ ದ್ದಧಿ ಕ್ಷೀರೋಪ ಸೇಚನಂ ॥ ದ್ವಿಜಾನಾಂ ಶತಸಾಹಸ್ರೇ ಯತ್ಪ್ರಕಾಮಮಲಂಭವೇತ್ ॥ ೧೪ ॥ ಸತ್ಕೃತ್ಯ ದ್ವಿಜಮುಖ್ಯಾನಾಂ ಶ್ವಃ ಪ್ರಭಾತೇ ಪ್ರದೀಯತಾಂ ॥ ಘೃತಂ ದಧಿ ಚ ಲಾಜಾಶ್ಚ ದಕ್ಷಿಣಾಶ್ಚಾಪಿ ಪುಷ್ಕಲಾಃ ॥ ೧೫ ॥ ಸೂರ್ಯೇಽಭ್ಯುದಿತ ಮಾತ್ರೇ ಚ ಶ್ವೋ ಭವಿತಾ ಸ್ವಸ್ತಿ ವಾಚನಂ ॥ ಬ್ರಾಹ್ಮಣಾಶ್ಚ ನಿಮಂತ್ರ್ಯಂತಾಂ ಕಲ್ಪ್ಯಂತಾಮಾಸನಾನಿ ಚ ॥ ೧೬ ॥ ಆಬಧ್ಯಂತಾಂ ಪತಾಕಾಶ್ಚ ರಾಜಮಾರ್ಗಶ್ಚ

ತರಿಸತಕ್ಕ, ಅನ್ಯಚ್ಚ - ಮತ್ತೊಂದು ಕೂಡ, ಯತ್ಕಿಂಚಿತ್ - ಯಾವದುಂಟೊ, ತತ್ಸರ್ವಂ - ಅವೆಲ್ಲವೂ, ಉಪಕಲ್ಪ್ಯತಾಂ - ಇರಿಸಲ್ಪಡಲಿ. ॥ ೧೨ ॥ ಸರ್ವಸ್ಯ - ಸಮಸ್ತವಾದ, ಅಂತಃಪುರಸ್ಯ - ಅಂತಃಪುರದ, ನಗರಸ್ಯಚ - ಪಟ್ಟಣದ, ದ್ವಾರಾಣಿ - ಬಾಗಿಲುಗಳು, ಚಂದನಸ್ರಗ್ಭಿಃ - ಗಂಧ ಮತ್ತು ಪೂಮಾಲೆಗಳಿಂದ, ಘ್ರಾಣಹಾರಿಭಿಃ- ಮೂಸಿ ನೋಡಲು ಮನೋಹರವಾದ, ಧೂಪೈಶ್ಚ- ಕೃಷ್ಣಾಗರು ಧೂಪಗಳಿಂದಲೂ, ಅರ್ಚ್ಯಂತಾಂ - ಅಲಂಕರಿಸಲ್ಪಡಲಿ. ॥ ೧೩ ॥ ದಧಿಕ್ಷೀರೋಪಸೇಚನಂ - ಮೊಸರಿನಿಂದಲೂ ಹಾಲಿನಿಂದಲೂ ತೋಯಿಸಿದ, ಗುಣವತ್ - ಮಾಧುರ್ಯಾದಿ ಗುಣಯುಕ್ತವಾದ, ಯತ್ - ಯಾವ ಅನ್ನವು, ದ್ವಿಜಾನಾಂ - ಬ್ರಾಹ್ಮಣರ, ಶತಸಾಹಸ್ರೇ - ಅನೇಕ ಸಹಸ್ರಗಳಿಗೆ, ಪ್ರಕಾಮಂ - ಬಹಳವಾಗಿ, ಅಲಂಭವೇತ್ - ಸಾಕಾಗುವದೋ, ತತ್ - ಅಂತಹ, ಪ್ರಶಸ್ತಂ - ಶ್ರೇಷ್ಠವಾದ ಅನ್ನವು, ಉಪಕಲ್ಪ್ಯತಾಂ - ನಿರ್ಮಿಸಲ್ಪಡಲಿ. ॥ ೧೪ ॥ ಶ್ವಃ ಪ್ರಭಾತೇ - ನಾಳಿನ ಪ್ರಾತಃಕಾಲದಲ್ಲಿ, ದ್ವಿಜಮುಖ್ಯಾನಾಂ - ಬ್ರಾಹ್ಮಣಶ್ರೇಷ್ಠರನ್ನು, ಸತ್ಕೃತ್ಯ - ಸತ್ಕರಿಸಿ, ಘೃತಂ - ತುಪ್ಪ, ದಧಿಚ - ಮೊಸರು, ಲಾಜಾಶ್ಚ - ಅರಳು, ಪುಷ್ಕಲಾಃ - ಸಮೃದ್ಧವಾದ, ದಕ್ಷಿಣಾಶ್ಚ - ದಕ್ಷಿಣೆಗಳೂ, ಪ್ರದೀಯಂತಾಂ - ಕೊಡಲ್ಪಡಲಿ. ॥ ೧೫ ॥ ಶ್ವಃ - ನಾಳೆ, ಸೂರ್ಯೇ - ಸೂರ್ಯನು, ಅಭ್ಯುದಿತಮಾತ್ರೇಚ - ಉದಯಿಸಿದ ಕೂಡಲೆ, ಸ್ವಸ್ತಿವಾಚನಂ- ಪುಣ್ಯಾಹ ವಾಚನವು, ಭವಿತಾ - ಆಗಲಿ, ಬ್ರಾಹ್ಮಣಾಶ್ಚ - ಬ್ರಾಹ್ಮಣರು, ನಿಮಂತ್ರ್ಯಂತಾಂ - ಕರೆಯಿಸಲ್ಪಡಲಿ, ಆಸನಾನಿಚ - ಪೀಠಗಳೂ, ಕಲ್ಪ್ಯಂತಾಂ - ಸಜ್ಜಿಗೊಳಿಸಲ್ಪಡಲಿ. ॥ ೧೬ ॥ ಪತಾಕಾಶ್ಚ - ಧ್ವಜಪಟಗಳೂ, ಆಬಧ್ಯಂತಾಂ - ಕಟ್ಟಲ್ಪಡಲಿ, ರಾಜಮಾರ್ಗಶ್ಚ - ರಾಜವೀಥಿಯು ಸಹ, ಸಿಚ್ಯಂತಾಂ - ನೀರಿನಿಂದ ತೋಯಿಸಲ್ಪಡಲಿ, ಸರ್ವೇ - ಸಮಸ್ತರಾದ, ತಾಳಾವಚರಾಃ - ನಟರು,

---

ವ್ಯಾಘ್ರಾಜಿನ ಇವುಗಳನ್ನೂ, ನಾಳಿನ ಪ್ರಾತಃಕಾಲದಲ್ಲಿ ದಶರಥ ಭೂಪಾಲನ ಯಾಗಮಂಟಪದಲ್ಲಿ ಸಜ್ಜಿಗೊಳಿಸುವುದಲ್ಲದೆ, ಇನ್ನೂ ಯಾವ ಯಾವ ಸಲಕರಣಗಳು ಬೇಕೋ ಅವುಗಳನ್ನೂ ಸಿದ್ಧಗೊಳಿಸಿರಿ. ॥ ೧೨ ॥ ಇಷ್ಟೆಯಲ್ಲದೆ, ಅಂತಃಪುರದ ದ್ವಾರಗಳೂ, ಊರ ಹೆಬ್ಬಾಗಿಲುಗಳೂ, ಚಂದನ, ಪೂ ಮಾಲೆ, ಧೂಪದೀಪಾದಿಗಳಿಂದ ಪೂಜಿಸಲ್ಪಡಲಿ; ಬಲವನ್ನು ವೃದ್ಧಿಗೊಳಿಸುವ ಹಾಲು, ಮೊಸರು, ತುಪ್ಪ ಮೊದಲಾದ ರಸ ದ್ರವ್ಯಗಳಿಂದ ಬಹು ರುಚಿಕರವಾದ ಗುಣವುಳ್ಳ ಷಡ್ರಸೋಪೇತವಾದ ಅನ್ನವು, ಸಹಸ್ರ ಬ್ರಾಹ್ಮಣರಿಗೆ

ಸಿಚ್ಯತಾಂ ॥ ಸರ್ವೇಚ ತಾಳಾವಚರಾ ಗಣಿಕಾಶ್ಚ ಸ್ವಲಂಕೃತಾಃ ॥೧೭॥ ಕಕ್ಷ್ಯಾಂ ದ್ವಿತೀಯಾ ಮಾಸಾದ್ಯ ತಿಷ್ಠಂತು ನೃಪವೇಶ್ಮನಃ ॥ ದೇವಾಯತನ ಚೈತ್ಯೇಷು ಸಾನ್ನ ಭಕ್ಷಾ ಸ್ಸದಕ್ಷಿಣಾಃ ॥೧೮॥ ಉಪಸ್ಥಾಪಯಿತವ್ಯಾ ಸ್ಸ್ಯು ರ್ಮಾಲ್ಯಯೋಗ್ಯಾಃ ಪೃಥಕ್ಪೃಥಕ್ ॥ ದೀರ್ಘಾಸಿಬದ್ಧಾ ಯೋಧಾಶ್ಚ ಸನ್ನದ್ಧಾ ಮೃಷ್ಟ ವಾಸಸಃ ॥೧೯॥ ಮಹಾರಾಜಾಂಕಣಂ ಸರ್ವೇ ಪ್ರವಿಶಂತು ಮಹೋ ದಯಂ ॥ ಏವಂ ವ್ಯಾದಿಶ್ಯ ವಿಪ್ರೌ ತೌ ಕ್ರಿಯಾ ಸ್ತತ್ರ ಸುನಿಷ್ಠಿತೌ ॥೨೦॥

ಸ್ವಲಂಕೃತಾಃ - ಅಲಂಕರಿಸಲ್ಪಟ್ಟ, ಗಣಿಕಾಶ್ಚ - ವೇಶ್ಯಾ ಸ್ತ್ರೀಯರು ಸಹ, ನೃಪವೇಶ್ಮನಃ - ಅರಮನೆಯ, ದ್ವಿತೀಯಾಂ - ಎರಡನೆಯ, ಕಕ್ಷ್ಯಾಂ - ತೊಟ್ಟಿಯನ್ನು, ಆಸಾದ್ಯ - ಹೊಂದಿ, ತಿಷ್ಠಂತು - ಇರಲಿ. ದೇವಾಯತನಚೈತ್ಯೇಷು - ದೇವಸ್ಥಾನಗಳಲ್ಲಿಯೂ, ರಾಜವೀಥಿಗಳಲ್ಲಿಯೂ, ಸಾನ್ನಭಕ್ಷಾಃ - ಅನ್ನಗಳಿಂದಲು ಕಡುಬುಗಳಿಂದಲೂ, ಒಡಗೂಡಿದ, ಸದಕ್ಷಿಣಾಃ - ದಕ್ಷಿಣಾ ಸಮೇತರಾದವರನ್ನು. ॥೧೭-೧೮॥ ಮಾಲ್ಯಯೋಗ್ಯಾಃ - ಪುಷ್ಪಗಳನ್ನು ಕೊಡುವದಕ್ಕೆ ಅರ್ಹವಾದ ಸಾಮಗ್ರಿಗಳನ್ನು, ಪೃಥಕ್ ಪೃಥಕ್ - ಪ್ರತ್ಯೇಕ ಪ್ರತ್ಯೇಕವಾಗಿ, ಉಪಸ್ಥಾಪಯಿತವ್ಯಾಃ - ಇಡಲ್ಪಡತಕ್ಕವು, ದೀರ್ಘಾಸಿಬದ್ಧಾಃ - ಉದ್ದವಾದ ಖಡ್ಗಗಳಿಂದ ಕಟ್ಟಿದ, ಸನ್ನದ್ಧಾಃ - ಸಿದ್ಧರಾದ, ಮೃಷ್ಟವಾಸಸಃ, ಮೃಷ್ಟ - ಮಲಿನವಿಲ್ಲದಿರುವ, ವಾಸಸಃ - ವಸ್ತ್ರಗಳುಳ್ಳ. ॥೧೯॥ ಸರ್ವೇ - ಸಮಸ್ತರಾದ, ಯೋಧಾಶ್ಚ - ಭಟರೂ, ಮಹೋದಯಂ - ಮಹದುತ್ಸವವುಳ್ಳ, ಮಹಾರಾಜಾಂಕಣಂ - ಮಹತ್ತರವಾದ ಅರಮನೆಯ ಅಂಕಣವನ್ನು, ಪ್ರವಿಶಂತು - ಪ್ರವೇಶಿಸಲಿ, ತತ್ರ - ಆ ಅರಮನೆ

ಸಾಕಾಗುವಂತೆ ಸಿದ್ಧವಾಗಿರಲಿ; ನಾಳಿನ ಪ್ರಾತಃಕಾಲದಲ್ಲಿ ಬ್ರಾಹ್ಮಣ ಶ್ರೇಷ್ಠರನ್ನು ಕರೆಯಿಸಿ, ಅವರನ್ನು ಸತ್ಕರಿಸಿ, ಘೃತ, ದಧಿ, ಲಾಜಗಳನ್ನೂ, ಪುಷ್ಕಲವಾದ ಭೂರಿ ದಕ್ಷಿಣೆಗಳನ್ನೂ ಕೊಡುವವರಾಗಿರಿ. ನಾಳಿನ ಪ್ರಾತಃಕಾಲದಲ್ಲಿಯೇ ಸ್ವಸ್ತಿವಾಚನವು ನಡೆಯ ಬೇಕಾದುದರಿಂದ ಶಿಷ್ಟರಾದ ವಿಪ್ರರನ್ನು ಕರೆಯಿಸಿರಿ; ಅವರು ಕುಳಿತುಕೊಳ್ಳಲು ಆಸನಗಳು ಸಿದ್ಧಗೊಳಿಸಲ್ಪಡಲಿ; ರಾಜಮಾರ್ಗದಲ್ಲಿ ಶೀತಳೋದಕವನ್ನು ಚೆಲ್ಲಿಸಿ, ಪತಾಕೆಗಳು ಕಟ್ಟಲ್ಪಡಲಿ; ತಾಳ ಮದ್ದಳೆಗಳ ಲಯಕ್ಕೆ ಸರಿಯಾಗಿ ಗಾನ ಮಾಡುವ ನೈಪುಣ್ಯವನ್ನೊಳಗೊಂಡ, ಗಾಯಕರನ್ನೂ, ಕುಶಲಿನಿಯರೂ, ಸರ್ವಾಭರಣ ಭೂಷಿತೆಯರೂ ಆದ ಗಣಿಕಾಲಲನೆಯರನ್ನು ಕರೆಯಿಸಿ, ಅರಮನೆಯ ಎರಡನೆಯ ಅಂತಸ್ಥಿನಲ್ಲಿರುವಂತೆ ನಿಯಮಿಸಿರಿ; ದೇವಸ್ಥಾನಗಳಲ್ಲಿಯೂ, ರಾಜವೀಧಿಗಳಲ್ಲಿಯೂ, ಕೆಲಜನರು ಅಲ್ಲಲ್ಲಿಯೇ ಅನ್ನ, ಭಕ್ಷ್ಯ, ದಕ್ಷಿಣಾದಿಗಳನ್ನೂ, ಹೂ ಗಂಧಗಳನ್ನು ಕೊಡಲು ಯೋಗ್ಯವಾದ ಸಾಮಗ್ರಿಗಳನ್ನೂ ಅಣಿ ಮಾಡಿಕೊಂಡು ಬೇರೆಬೇರೆಯಾಗಿ ನಿಂತಿರಲಿ; ॥ ೧೮ ॥ ಆಯುಧಗಳನ್ನು ಧರಿಸಿಕೊಂಡು, ಶುಭ್ರವಾದ ವಸ್ತ್ರಗಳನ್ನುಟ್ಟು ಸನ್ನದ್ಧರಾಗಿರುವ ಭಟರೆಲ್ಲರೂ ರಾಜಾಂಗಣವನ್ನು ಪ್ರವೇಶಿಸಲಿ'' ॥ ೧೯ ॥ ಆ ವಸಿಷ್ಠ ವಾಮದೇವರೀರೀತಿ ರಘುನಂದನನ ಯೌವರಾಜ್ಯಾಭಿಷೇಕೋಪಯುಕ್ತವಾದ ಕಾರ್ಯಗಳನ್ನು ಆಯಾ ಅಧಿಕಾರಿಗಳಿಗೆ ಆಜ್ಞಾಪಿಸಿ, ಉಳಿದ

ಚಕ್ರತುಶ್ಚೈವ ಯಚ್ಛೇಷಂ ಪಾರ್ಥಿವಾಯ ನಿವೇದ್ಯಚ ‖ ಕೃತ ಮಿತ್ಯೇವ ಚಾಬ್ರೂತಾ ಮಭಿಗಮ್ಯ ಜಗತ್ಪತಿಂ ‖ ೨೧ ‖ ಯಥೋಕ್ತ ವಚನಂ ಪ್ರೀತೌ ಹರ್ಷಯುಕ್ತೌ ದ್ವಿಜರ್ಷಭೌ ‖ ತತಸ್ಸುಮಂತ್ರಂ ದ್ಯುತಿಮಾ ರಾಜಾ ವಚನಮಬ್ರವೀತ್ ‖ ೨೨ ‖ ರಾಮಃ ಕೃತಾತ್ಮಾ ಭವತಾ ಶೀಘ್ರ ಮಾನೀಯತಾಮಿತಿ ‖ ಸ ತಥೇತಿ ಪ್ರತಿಜ್ಞಾಯ ಸುಮಂತ್ರೋ ರಾಜ ಶಾಸ ನಾತ್ ‖ ೨೩ ‖ ರಾಮಂ ತತ್ರಾನಯಾಂಚಕ್ರೇ ರಥೇನ ರಥಿನಾಂ ವರಂ ‖

ಯಲ್ಲಿ, ಸುವಿಸ್ಮಿತೌ - ತದೇಕಾಯತ್ತ ಚಿತ್ತರಾದ, ತೌವಿಪ್ರೌ - ಆ ವಸಿಷ್ಠ ವಾಮದೇವ ಋಷಿಗಳು, ಕ್ರಿಯಾಃ - ಶ್ರೀರಾಮನ ಪಟ್ಟಾಭಿಷೇಕಕ್ಕೆ ಬೇಕಾದ ಕಾರ್ಯಗಳನ್ನು, ಏವಂ - ಈ ರೀತಿ, ವ್ಯಾದಿಶ್ಯ - ಆಜ್ಞಾಪಿಸಿ. ‖ ೨೦ ‖ ಶೇಷಂ - ಉಳಿದಿರುವ, ಯತ್ - ಯಾವದೋ, (ತತ್ - ಅದನ್ನು) ಪಾರ್ಥಿವಾಯ - ರಾಜನಿಗೆ, ನಿವೇದ್ಯಚ - ತಿಳಿಯಿಸಿ, ಚಕ್ರತುಃ - ಮಾಡಿದರು. ದ್ವಿಜರ್ಷಭೌ - ಬ್ರಾಹ್ಮಣ ಶ್ರೇಷ್ಠರಾದ ವಸಿಷ್ಠ ವಾಮದೇವರಿಬ್ಬರು, ಜಗತ್ಪತಿಂ - ಭೂನಾಯಕನಾದ ದಶರಥರಾಜನನ್ನು ಕುರಿತು, ಅಭಿಗಮ್ಯ - ಬಂದು, ಯಥೋಕ್ತವಚನಂ - ಹೇಳಿದ ಮಾತನ್ನತಿಕ್ರಮಿಸದೆ, ಕೃತಮಿತಿ - ಮಾಡಲ್ಪಟ್ಟಿತೆಂದು, ಪ್ರೀತೌ - ಮನೋಗತವಾದ ಹರ್ಷವುಳ್ಳವರಾಗಿ, ಹರ್ಷಯುಕ್ತೌ - (ಗೋ) ಸಂತೋಷದಿಂದುಂಟಾದ ರೋಮಾಂಚಾದಿಗಳುಳ್ಳವರಾಗಿ, ಅಬ್ರೂತಾಂ - ನಿರೂಪಿಸಿದರು. ‖ ೨೧ ‖ ತತಃ - ಬಳಿಕ, ದ್ಯುತಿಮಾ - ಕಾಂತಿಯುಕ್ತನಾದ, ರಾಜಾ - ದಶರಥ ರಾಜನು, ಸುಮಂತ್ರಂ - ಸುಮಂತ್ರನನ್ನು ಕುರಿತು, ಕೃತಾತ್ಮಾ-ಚನ್ನಾಗಿ ಶಿಕ್ಷಿಸಲ್ಪಟ್ಟ ಬುದ್ಧಿಯುಳ್ಳ, ರಾಮಃ - ಶ್ರೀರಾಮನು, ಭವತಾ - ನಿನ್ನಿಂದ, ಶೀಘ್ರಂ - ಜಾಗ್ರತೆಯಾಗಿ, ಆನೀಯತಾಂ - ಕರೆಯಿಸಲ್ಪಡಲಿ, ಇತಿ - ಇಂತೆಂದು, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ‖ ೨೨ ‖ ಸಸುಮಂತ್ರಃ - ಆ ಸುಮಂತ್ರನು, ತಥೇತಿ - ಹಾಗೆಯೇ ಆಗಲೆಂದು, ಪ್ರತಿಜ್ಞಾಯ - ಪ್ರತಿಜ್ಞೆ ಮಾಡಿ, ರಾಜಶಾಸನಾತ್ - ರಾಜಾಜ್ಞೆಯಿಂದ, ರಥಿನಾಂ - ರಥವಂತರಲ್ಲಿ, ವರಂ - ಶ್ರೇಷ್ಠನಾದ, ರಾಮಂ - ಶ್ರೀರಾಮನನ್ನು, ರಥೇನ - ತೇರಿನಿಂದ, ತತ್ರ - ಆ ದಶರಥನ ಸನ್ನಿಧಾನದಲ್ಲಿ, ಆನಯಾಂಚಕ್ರೇ - ಕರೆತಂದನು ‖ ೨೩ ‖ ಅಥ - (ಗೋ) ಸುಮಂತ್ರನು ಹೊರಟುಹೋದಬಳಿಕ, ತತ್ರ -

---

ದಾಸೀ ಪರಿಜನಾದ್ಯಾನಯನಾದಿ ಕಾರ್ಯಗಳನ್ನು ದಶರಥರಾಯನಿಗೆ ಬಿನ್ನವಿಸಿ, ಒಡೆಯನಾಜ್ಞೆಯು ಮೀರದಂತೆ ನಡಿಸಲಾಯಿತೆಂದು ಸಂತೋಷಚಿತ್ತರಾಗಿ, ಆ ಸಂತಸದಿಂದುಂಟಾದ ರೋಮಾಂಚವೇ ಮೊದಲಾದ ಶರೀರ ವಿಕಾರವುಳ್ಳವರಾಗಿ, ಭೂಲೋಕದೊಡೆಯನಾದ ದಶರಥ ಮಹೀಪಾಲನಿಗೆ "ಪಟ್ಟಾಭಿಷೇಕಕ್ಕೆ ಬೇಕಾದ ಸಲಕರಣಗಳೆಲ್ಲವೂ ಸಿದ್ಧವಾದುವು" ಎಂದು ಬಿನ್ನವಿಸಿದರು. ‖ ೨೧ ‖ ಆ ಬಳಿಕಲಾ ದಶರಥನು ಮಂತ್ರಿಯಾದ ಸುಮಂತ್ರನನ್ನು ಕರೆದು, ಸುಶಿಕ್ಷಿತ ಬುದ್ಧಿಯುಳ್ಳ ಶ್ರೀರಾಮನನ್ನು ಶೀಘ್ರವಾಗಿಯೇ ಕರೆದುತಾರೆಂದಾಣತಿಯಿತ್ತನು. ಆಗಲಾತನು ಹಸಾದವೆಂದು ರಾಯನ ಆಜ್ಞೆಯಿಂದ ತೆರಳಿ, ಮಹಾ ರಥಿಕನಾದ ಶ್ರೀರಾಮನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಕರೆತರುತಿದ್ದನು. ‖ ೨೩ ‖ ಅತ್ತ ಸುಮಂತ್ರನು ಶ್ರೀರಾಮ ಮೂರ್ತಿಯನ್ನು ಕರೆತರಲು ತೆರಳಲು,

ಅಥ ತತ್ರ ಸಮಾಸೀನಾ ಸ್ತದಾ ದಶರಥಂ ನೃಪಂ ‖ ೨೪ ‖ ಪ್ರಾಚ್ಯೋದೀಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಭೂಮಿಪಾಃ ‖ ಮ್ಲೇಚ್ಛಾಚಾರ್ಯಾಶ್ಚ ಯೇಚಾನ್ಯೇ ವನಶೈಲಾಂತವಾಸಿನಃ ‖ ೨೫ ‖ ಉಪಾಸಾಂ ಚಕ್ರಿರೇ ಸರ್ವೇ ತಂ ದೇವಾ ಇವ ವಾಸವಂ ‖ ತೇಷಾಂ ಮಧ್ಯೇ ಸರಾಜರ್ಷಿರ್ಮರುತಾಮಿವ ವಾಸವಃ ‖ ೨೬ ‖ ಪ್ರಾಸಾದಸ್ಥೋ ರಥಗತಂ ದದರ್ಶಾಯಾಂತಮಾತ್ಮಜಂ ‖ ಗಂಧರ್ವರಾಜಪ್ರತಿಮಂ ಲೋಕೇ ವಿಖ್ಯಾತ ಪೌರುಷಂ ‖ ೨೭ ‖ ದೀರ್ಘಬಾಹುಂ ಮಹಾಸತ್ವಂ ಮತ್ತ ಮಾತಂಗ ಗಾಮಿನಂ ‖ ಚಂದ್ರಕಾಂತಾನನಂ ರಾಮ

ಆ ಪ್ರಾಸಾದದಲ್ಲಿ, ತದಾ - ಆಗ, ಸಮಾಸೀನಾಃ - ಕುಳಿತುಕೊಂಡಿರುವ, ಪ್ರಾಚ್ಯೋದೀಚ್ಯಾಃ - ಪೂರ್ವದಿಕ್ಕಿನಲ್ಲಿಯೂ ಉತ್ತರದಿಕ್ಕಿನಲ್ಲಿಯೂ ಇರುವ, ಪ್ರತೀಚ್ಯಾಶ್ಚ - ಪಶ್ಚಿಮದೇಶವಾಸಿಗಳಾದ, ದಾಕ್ಷಿಣಾತ್ಯಾಶ್ಚ - ದಕ್ಷಿಣದೇಶವಾಸಿಗಳಾದ, ಭೂಮಿಪಾಃ - ಅರಸರು, ಅನ್ಯೇ - ಮತ್ತೆ ಕೆಲವರಾದ, ಮ್ಲೇಚ್ಛಾಚಾರ್ಯಾಃ - ತುರುಷ್ಕದೇಶದ ಅರಸರು, ಶೈಲಾಂತವಾಸಿನಶ್ಚ - ಪರ್ವತಪ್ರದೇಶವಾಸಿಗಳಾದ ರಾಜರೂ, ಯೇ - ಯಾರೋ, ತೇಸರ್ವೇ - ಅವರೆಲ್ಲರೂ, ತಂದಶರಥಂನೃಪಂ- ಆ ದಶರಥರಾಜನನ್ನು, ದೇವಾಃ - ದೇವತೆಗಳು, ವಾಸವಮಿವ - ಇಂದ್ರನನ್ನಂತೆ, ಉಪಾಸಾಂಚಕ್ರಿರೇ - ಸೇವಿಸುತ್ತಿದ್ದರು. ‖ ೨೫ ‖ ತೇಷಾಂ - ಅವರು, ಮಧ್ಯೇ - ನಡುವೆ, ರಾಜರ್ಷಿಃ - ರಾಜರ್ಷಿಯಾದ, ಸಃ - ಆ ದಶರಥನು, ಮರುತಾಂ - ದೇವತೆಗಳ ಮಧ್ಯದಲ್ಲಿ, ವಾಸವಇವ - ದೇವೇಂದ್ರನಂತೆ, ಪ್ರಾಸಾದಸ್ಥಃ - ಉಪ್ಪರಿಗೆಯಮೇಲೆ ಕುಳಿತುಕೊಂಡು, ರಥಗತಂ - ರಥಾರೂಢನಾಗಿ, ಆಯಾಂತಂ - ಬರುತ್ತಿರುವ, ಆತ್ಮಜಂ - ಕುಮಾರನಾದ ಶ್ರೀರಾಮುನನ್ನು, ದದರ್ಶ - ಕಂಡನು. ‖ ೨೬ ‖ ಗಂಧರ್ವರಾಜಪ್ರತಿಮಂ - ಗಂಧರ್ವಶ್ರೇಷ್ಠನಿಗೆ ಸಮಾನನಾದ, ಲೋಕೇ - ಪ್ರಪಂಚದಲ್ಲಿ, ವಿಖ್ಯಾತಪೌರುಷಂ - ಪ್ರಸಿದ್ಧವಾದ ಪರಾಕ್ರಮವುಳ್ಳ, ದೀರ್ಘಬಾಹುಂ - ಉದ್ದವಾದ ಭುಜಗಳುಳ್ಳ, ಮಹಾಸತ್ವಂ - ಮಹಾಬಲಶಾಲಿಯಾದ, ಮತ್ತಮಾತಂಗ ಗಾಮಿನಂ - ಮದಿಸಿದ ಆನೆಯಂತೆ ಗಮನವುಳ್ಳ, ಚಂದ್ರಕಾಂತಾನನಂ - ಚಂದ್ರನಂತೆ ಮನೋಹರವಾದ ಮುಖವುಳ್ಳ, ಅತೀವ - ಬಹಳವಾಗಿ, ಪ್ರಿಯದರ್ಶನಂ - ಇಂಪಾದ ನೋಟವುಳ್ಳ, ರೂಪೌದಾರ್ಯಗುಣೈಃ - ರೂಪು, ಆಕಾರದಿಂದಲೂ, ಔದಾರ್ಯ -

---

ಇತ್ತ ದಶರಥರಾಯನಿಂದಾಹೂತರಾದ, ಮೂಡಣ, ಪಡುವಣ, ಟೆಂಕಣ, ಬಡಗಣ, ದಿಶೆಗಳ ನರನಾಥರೂ, ಗಿರಿದುರ್ಗ, ವನದುರ್ಗ ಮೊದಲಾದ ಸಂಸ್ಥಾನಗಳ ಮ್ಲೇಚ್ಛರೇ ಮೊದಲಾದ ಭೂ ನಾಯಕರೂ ಕಪ್ಪುಕಾಣಿಕೆಗಳಿಂದಾ ರಾಯನನ್ನು, ದೇವೇಂದ್ರನನ್ನು ದೇವತೆಗಳು ಸೇವಿಸುವ ಮರ್ಯಾದೆಯಲ್ಲಿ ಸೇವಿಸುತ್ತಿದ್ದರು. ‖೨೪-೨೫‖ ಆ ರಾಯರ ಮಧ್ಯದಲ್ಲಿ ಪ್ರಾಸಾದೋಪವಿಷ್ಟನೂ, ರಾಜರ್ಷಿಯೂ ಆದ ದಶರಥರಾಯನು, ದೇವತೆಗಳ ನಡುವೆ ರಾರಾಜಿಸುವ ದೇವೇಂದ್ರನಂತೊಪ್ಪುತ್ತ, ರಥವೇರಿ ಬರುತ್ತಿರುವ ತನ್ನ ಜ್ಯೇಷ್ಠ ಕುಮಾರನಾದ ಶ್ರೀರಾಮ ಮೂರ್ತಿಯನ್ನು ನೋಡಿ ಆನಂದಿಸುತ್ತಿದ್ದನು. ಶ್ರೀರಾಮನು ಗಂಧರ್ವ ಶ್ರೇಷ್ಠನಂತೆ ಸೌಂದರ್ಯವುಳ್ಳವನೂ, ಲೋಕದಲ್ಲಿ ಸುಪ್ರಸಿದ್ಧವಾದ ಪರಾಕ್ರಮವುಳ್ಳವನೂ,

ಮತೀವ ಪ್ರಿಯದರ್ಶನಂ ॥ ೨೮ ॥ ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಂ ॥ ಘರ್ಮಾಭಿತಪ್ತಾಃ ಪರ್ಜನ್ಯಂ ಹ್ಲಾದಯಂತ ಮಿವ ಪ್ರಜಾಃ ॥ ೨೯ ॥ ನತತರ್ಪ ಸಮಾಯಾಂತಂ ಪಶ್ಯಮಾನೋ ನರಾಧಿಪಃ ॥

(ಮ) (೧) ಔನ್ನತ್ಯದಿಂದಲೂ (ಗೋ) ದಾತೃತ್ವದಿಂದಲೂ, ಗುಣೈಃ - (ಮ) ಸೌಶೀಲ್ಯಾದಿಗುಣಗಳಿಂದಲೂ, (ತ) ರೂಪ - ಶರೀರದ ಗುಣಗಳಿಂದಲೂ, ಔದಾರ್ಯಗುಣೈಃ - ಸ್ವರೂಪಗುಣಗಳಿಂದಲೂ, ಪುಂಸಾಂ - (೨) ಪುರುಷರ, ದೃಷ್ಟಿಚಿತ್ತಾಪಹಾರಿಣಂ - ಬಾಹ್ಯದೃಷ್ಟಿಯನ್ನೂ ಮನವನ್ನೂ ಅಪಹರಿಸುತ್ತಿರುವ, ಘರ್ಮಾಭಿತಪ್ತಾಃ, ಘರ್ಮ - ಗ್ರೀಷ್ಮಕಾಲದಲ್ಲಿ, ಅಭಿತಪ್ತಾಃ - ಬಿಸಿಲಿನಿಂದ ಬಳಲಿದ, ಪ್ರಜಾಃ - ಜನಗಳನ್ನು, ಹ್ಲಾದಯಂತಂ - ಸಂತೋಷಗೊಳಿಸುತ್ತಿರುವ, ಪರ್ಜನ್ಯಮಿವಸ್ಥಿತಂ - ಪರ್ಜನ್ಯನಂತಿರುವ, ಸಮಾಯಾಂತಂ - ಬರುತ್ತಿರುವ, ರಾಮಂ - ಶ್ರೀರಾಮನನ್ನು, ಪಶ್ಯಮಾನಃ -

ಜಾನುಪ್ರದೇಶ ಪರ್ಯಂತವೂ ಪಸರಿಸಿದ ದೀರ್ಘವಾದ ಭುಜಗಳುಳ್ಳವನೂ, ಮಹಾ ಸತ್ವಶಾಲಿಯೂ, ಮತ್ತಗಜಗಾಮಿಯು; ಚಂದ್ರನಂತೆ, ಮನೋಹರವಾದ ಮುಖವುಳ್ಳವನು; ಎಷ್ಟು ನೋಡಿದರೂ ಇನ್ನೂ ನೋಡಬೇಕೆಂಬಭಿಲಾಷೆಯನ್ನುಂಟುಮಾಡುವವನು; ಆಕಾರ, ಔದಾರ್ಯ, ಸೌಶೀಲ್ಯಾದಿ ಗುಣಗಳಿಂದ ನೋಡಿದ ಮಾನವನ ದೃಷ್ಟಿ ದೋಷವನ್ನಪಹರಿಸುವವನು; ಗ್ರೀಷ್ಮಕಾಲದಲ್ಲಿ ಬಳಲಿ ಬೆಂಡಾದ ಪ್ರಜೆಗಳಿಗೆ ಆನಂದವನ್ನು ಸವಿಸುವ, ಪರ್ಜನ್ಯನೋಪಾದಿಯಲ್ಲಿರುವಾತನು. ॥ ೨೯ ॥ ಇಂತಿರುವ ತನ್ನ ಕುವರನಾದ ಶ್ರೀರಾಮಮೂರ್ತಿಯು ರಥವೇರಿ ಬರುತ್ತಿದ್ದುದನ್ನು ನೋಡಿ ಆ ದಶರಥರಾಜನು ಆತನನ್ನು ಸ್ವಲ್ಪ ನೋಡಿ ಅಷ್ಟಕ್ಕೆ ಮಾತ್ರ ತೃಪ್ತನಾಗದೆ ಮತ್ತೆ ಮತ್ತೆ ನೋಡುತ್ತಲೇ ಇದ್ದನು. ಆ ಸಮಯ

ಟಿ. (೧) "ಔದಾರ್ಯಂ - ಎಂಬೆಡೆಯಲ್ಲಿ ಅನುಭವಿಸುವವರಿಗೆ ಆನುಭವ ದಾನವನ್ನು ಮಾಡುವವನು - ಎಂದರ್ಥ. ಇದಕ್ಕೆ "ಯ ಆತ್ಮಾ ಬಲದಾ" ಎಂಬ ಶೃತಿಯೇ ಪ್ರಮಾಣ. ಗುಣೈಃ - "ಗುಣ್ಯಾತೇ ಸದಾ ಅನುಸಂಧೀಯತೇ - ಇತಿ ಗುಣಃ, ತೈಃ ಗುಣೈಃ" ಎಂದು ಸಮಾಸ; ಅಂದರೆ ಅನುಸಂಧಾನ ಮಾಡುತ್ತಿರುವ ಸೌಶೀಲ್ಯಾದಿ ಗುಣಗಳುಳ್ಳವನು. ಅರ್ಥಾತ್ ಪದ ಸ್ವಾರಸ್ಯವೇನಂದರೆ, "ಶ್ರೀರಾಮಚಂದ್ರನು ಮಹನೀಯನು, ನಮ್ಮಂತಹ ಕ್ಷುದ್ರರಲ್ಲಿಯೂ ದಯವನ್ನು ತೋರುವನಲ್ಲಾ ! ಎಂದು ಜನಗಳು ಅನುಸಂಧಾನ ಮಾಡಿಕೊಳ್ಳಲು ಯೋಗ್ಯವಾದ ಗುಣಗಳುಳ್ಳವನು" ಎಂದು.

(೨) ಪುಂಸಾಂದೃಷ್ಟಿಚಿತ್ತಾಪಹಾರಕಃ;—ಕಠಿಣ ಚಿತ್ತರಾದ ಪುರುಷರ ದೃಷ್ಟಿದೋಷವನ್ನೇ ಹರಣ ಮಾಡುತ್ತಿರುವಲ್ಲಿ ಚಪಲಾಕ್ಷಿಯರಾದ ಹೆಂಗಸರ ದೃಷ್ಟಿದೋಷವನ್ನು ದೂರ ಮಾಡುವನೆಂಬುದರಲ್ಲಿ ಸಂಶಯವೇನು? ಅಥವ "ಪುಮಾನೇಕೋ ವ್ಯವಸ್ಥಿತಃ" ಎಂಬ ವಿಷ್ಣು ಪುರಾಣದ ವಚನದಂತೆ ಸ್ತ್ರೀ, ಪುರುಷರಿಗೆ ಸಾಧಾರಣವಾದ ಆತ್ಮವು ಹೇಳಲ್ಪಡುತ್ತದೆ. ಆದುದರಿಂದ ಸುರ, ನರ, ತಿರ್ಯಗಾದಿ ಭೇದದಿಂದ ಭಿನ್ನರಾದ ಸ್ತ್ರೀ, ಪುಂ, ನಪುಂಸಕ ಭೇದ ಭಿನ್ನರಾದ ಸಕಲ ಜನರಿಗೂ ದೃಷ್ಟಿ ಚಿತ್ತಾಪಹಾರಕನೆಂದು ಹೇಳಿದ ಹಾಗಾಯಿತು. ಅಥವ, ರಾಮಚಂದ್ರನನ್ನು ನೋಡಿದ ಪುರುಷರೂ "ಆಹಹ ! ನಾನು ಸುಂದರ ಸ್ತ್ರೀಯಾಗಿ ರಾಮನೊಡನೆ ವಿಹರಿಸಬೇಕು" ಎಂಬ ಅಭಿಲಾಷೆಯನ್ನು ಹೊಂದುತ್ತಿದ್ದರು. ಇದಕ್ಕೆ ಭಾರತದಲ್ಲಿ ಪ್ರಮಾಣ, "ಪಾಂಚಾಲ್ಯಾಃ ಪದ್ಮ ಪತ್ರಾಕ್ಷ್ಯಾಃ ಸ್ನಾಯಂತ್ಯಾ ಜಘನಂ ಘನಂ॥ ಯಾ ಸ್ತ್ರೀಯೋ ದೃಷ್ಟ ವತ್ಯಸ್ತಾಃ ಪುಂಭಾವಂ ಮನಸಾ ಯಯುಃ".

ಅವತಾರ್ಯ ಸುಮಂತ್ರಸ್ತಂ ರಾಘವಂ ಸ್ಯಂದನೋತ್ತಮಾತ್ ॥ ೩೦ ॥ ಪಿತು ಸ್ಸಮೀಪಂ ಗಚ್ಛಂತಂ ಪ್ರಾಂಜಲಿಃ ಪೃಷ್ಠತೋಽನ್ವಗಾತ್ ॥ ಸತಂ ಕೈಲಾಸ ಶೃಂಗಾಭಂ ಪ್ರಾಸಾದಂ ನರಪುಂಗವಃ ॥ ೩೧ ॥ ಆರುರೋಹ ನೃಪಂ ದ್ರಷ್ಟುಂ ಸಹ ಸೂತೇನ ರಾಘವಃ ॥ ಸಪ್ರಾಂಜಲಿರಭಿಪ್ರೇತ್ಯ ಪ್ರಣತಃ ಪಿತುರಂತಿಕೇ ॥ ೩೨ ॥ ನಾಮ ಸ್ವಂ ಶ್ರಾವಯನ್ ರಾಮೋ ವವಂದೇ ಚರಣೌ ಪಿತುಃ ॥

ನೋಡುತ್ತ, ಸನರಾಧಿಪಃ - ಆ ದಶರಥರಾಜನು, ನತತರ್ಪ - (೧) ತೃಪ್ತಿಹೊಂದಲಿಲ್ಲ. ॥ ೨೯ ॥ ಸುಮಂತ್ರಃ - ಸುಮಂತ್ರನು, ತಂರಾಘವಂ - ಆ ಶ್ರೀರಾಮನನ್ನು, ಸ್ಯಂದನೋತ್ತಮಾತ್ - ಉತ್ತಮವಾದ ರಥದಿಂದ, ಅವತಾರ್ಯ - ಇಳಿಸಿ, ಪಿತುಃ - ತಂದೆಯ, ಸಮೀಪಂ - ಸನ್ನಿಧಾನವನ್ನು ಕುರಿತು, ಗಚ್ಛಂತಂ - ತೆರಳುತ್ತಿರುವ ಆತನನ್ನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಪೃಷ್ಠತಃ - ಹಿಂದುಗಡೆ, ಅನ್ವಗಾತ್ - ಅನುಸರಿಸಿದನು. ॥ ೩೦ ॥ ನರಪುಂಗವಃ - ಮನುಷ್ಯಶ್ರೇಷ್ಠನಾದ, ಸರಾಘವಃ - ಆ ಶ್ರೀರಾಮನು, ನೃಪಂ - ರಾಜನನ್ನು, ದ್ರಷ್ಟುಂ - ನೋಡುವದಕ್ಕೆ, ಸೂತೇನಸಹ - ಸಾರಥಿಯೊಡನೆ, ಕೈಲಾಸಶೃಂಗಾಭಂ - ಕೈಲಾಸಗಿರಿಯ ಶಿಖರದಕಾಂತಿಯಂತೆ ಕಾಂತಿಯುಳ್ಳ, ತಂಪ್ರಾಸಾದಂ - ಆ ಉಪ್ಪರಿಗೆಯನ್ನು, ಆರುರೋಹ - ಏರಿದನು. ॥ ೩೧ ॥ ಸರಾಮಃ - ಆ ಶ್ರೀರಾಮನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಅಭಿಪ್ರೇತ್ಯ - ಬಂದು, ಪ್ರಣತಃ - ನಮ್ರನಾಗಿ, ಪಿತುಃ - ತಂದೆಯ, ಅಂತಿಕೇ - ಸಮೀಪದಲ್ಲಿ, ಸ್ವಂ - ತನ್ನ, ನಾಮ - ಹೆಸರನ್ನು, ಶ್ರಾವಯನ್ - ಕೇಳಿಸುತ್ತ, ಪಿತುಃ - ತಂದೆಯ, ಚರಣೌ - ಪಾದಗಳನ್ನು, ವವಂದೇ - ನಮುಸ್ಕರಿಸಿದನು. ॥ ೩೨ ॥ ನೃಪಃ - ಅರಸನು, ಪ್ರಣತಂ - ಪ್ರಣಾಮಮಾಡುತ್ತಿರುವ, ಕೃತಾಂಜಲಿಪುಟಂ - ಬದ್ಧಾಂಜಲಿಪುಟವುಳ್ಳ, ತಂ - ಆ ಶ್ರೀರಾಮನನ್ನು, ಪಾರ್ಶ್ವೇ - ಪಾರ್ಶ್ವದಲ್ಲಿ, ದೃಷ್ಟ್ವಾ - ಕಂಡು, ಅಂಜಲೌ - ಬೊಗಸೆಯಲ್ಲಿ, ಗೃಹ್ಯ - ಹಿಡಿದುಕೊಂಡು, ಪ್ರಿಯಂ ಇಷ್ಟನಾದ, ಆತ್ಮಜಂ-ಕುಮಾರನಾದ ಶ್ರೀರಾಮನನ್ನು, ಸಮಾಕೃಷ್ಯಚ-

ದಲ್ಲಿ ಮಂತ್ರಿ ಶ್ರೇಷ್ಠನಾದ ಸುಮಂತ್ರನು ಹಸ್ತಪ್ರದಾನಮಂಗೈದು, ರಥದಿಂದಲಾ ಶ್ರೀರಾಮಚಂದ್ರನನ್ನಿಳಿಸಿ ಜನಕನ ಸನ್ನಿಧಿಗೆ ಮುಂಬರಿಯುತ್ತಿರುವ ಆತನನ್ನು ಹಿಂಬಾಲಿಸಿ ಬದ್ಧಾಂಜಲಿಪುಟನಾಗಿ ತೆರಳುತ್ತಿದ್ದನು. ॥ ೩೦ ॥ ಆ ಬಳಿಕ ಶ್ರೀರಾಮ ಮೂರ್ತಿಯೂ, ಸೂತನಾದ ಸುಮಂತ್ರನೊಡಗೂಡಿ, ಕೈಲಾಸ ಗಿರಿಯ ಕೋಡುಗಲ್ಲಿನಂತೆ, ಬಹು ಬಿಳಿತಾದ ಉಪ್ಪರಿಗೆಯನ್ನು ಹತ್ತಿ, ತಂದೆಯಾದ ದಶರಥರಾಯನ ಬಳಿ ಸಾರಿ ತನ್ನ ಗೋತ್ರ ನಾಮಗಳನ್ನುಚ್ಚರಿಸಿ ಬದ್ಧಾಂಜಲಿಪುಟನಾಗಿ ನಮುಸ್ಕಾರ ಮಾಡಿದನು ; ಆಗಲಾ ರಾಯನು ಈ ರೀತಿ ತನಗೆ ನಮುಸ್ಕಾರ ಮಾಡಿ ಕೈ ಮುಗಿದು ಸಮೀಪದಲ್ಲಿ ನಿಂತಿದ್ದ ಮಗನನ್ನು ಕೈ ಹಿಡಿದೆತ್ತಿ

(೧) **"ನತತರ್ಪ"** - ಎಂದರೆ ಪ್ರತಿ ಕ್ಷಣದಲ್ಲಿಯೂ ಅನುಭವಿಸುತ್ತಿದ್ದರೂ ಹೊಸಹೊಸದಾಗಿ ಉದ್ಭವವಾಗುತ್ತಿದ್ದ ಪ್ರೇಮದಿಂದ ತೃಪ್ತಿಯಾಯಿತೆಂದು ಅರ್ಥವು, ಇದು **ತನಿ** ಶ್ಲೋಕೀಕಾರರ ಅಭಿಪ್ರಾಯ. **ಮಹೇಶ್ವರ ತೀರ್ಥರು** ಪ್ರತಿ ಕ್ಷಣದ ಅನುಭವದಲ್ಲಿಯೂ ನವನವ ಪ್ರೇಮಾಸ್ಪದವಾಗುತ್ತಿದ್ದುದರಿಂದ ತೃಪ್ತಿಯನ್ನು ಹೊಂದಲಿಲ್ಲ ಎಂಬುದೇ "ನತತರ್ಪ" ಎಂಬ ಪದದ ರಹಸ್ಯವೆಂದು ಹೇಳುತ್ತಾರೆ.

ದೃಷ್ಟ್ವಾತು ಪ್ರಣತಂ ಪಾರ್ಶ್ವೇ ಕೃತಾಂಜಲಿಪುಟಂ ನೃಪಃ ॥ ೩೩ ॥ ಗೃಹ್ಯಾಂಜಲೌ ಸಮಾಕೃಷ್ಯ ಸಸ್ವಜೇ ಪ್ರಿಯಮಾತ್ಮಜಂ ॥ ತಸ್ಮೈ ಚಾಭ್ಯುದಿತಂ ದಿವ್ಯಂ ಮಣಿಕಾಂಚನ ಭೂಷಿತಂ ॥೩೪॥ ದಿದೇಶ ರಾಜಾ ರುಚಿರಂ ರಾಮಾಯ ಪರಮಾಸನಂ ॥ ತದಾಸನವರಂ ಪ್ರಾಪ್ಯ ವ್ಯದೀಪಯತ ರಾಘವಃ ॥ ೩೫ ॥ ಸ್ವಯೇವ ಪ್ರಭಯಾ ಮೇರು ಮುದಯೇ ವಿಮಲೋ ರವಿಃ ॥ ತೇನ ವಿಭ್ರಾಜಿತಾ ತತ್ರ ಸಾಸಭಾ ಭಿವ್ಯರೋಚತ ॥ ೩೬ ॥ ವಿಮಲ ಗ್ರಹನಕ್ಷತ್ರಾ ಶಾರದೀ ದ್ಯೌ ರಿವೇಂದುನಾ ॥ ತಂ ಪಶ್ಯಮಾನೋ ನೃಪತಿ ಸ್ತುತೋಷ ಪ್ರಿಯ ಮಾತ್ಮಜಂ ॥ ೩೭ ॥ ಅಲಂಕೃತ ಮಿವಾತ್ಮಾನ ಮಾದರ್ಶ ತಲ ಸಂಸ್ಥಿತಂ ॥

ಬರಸೆಳೆದು, ಸಸ್ವಜೇ - ಆಲಿಂಗಿಸಿದನು. ॥ ೩೩ ॥ ರಾಜಾ - ದಶರಥರಾಜನು, ತಸ್ಮೈ ರಾಮಾಯ - ಆ ಶ್ರೀರಾಮನಿಗೆ, ಅಭ್ಯುದಿತಂ - ಉತ್ಪನ್ನವಾದ, ದಿವ್ಯಂ - ದೇವತೆಗಳು ಕುಳಿತುಕೊಳ್ಳುವ, ಮಣಿಕಾಂಚನಭೂಷಿತಂ - ರತ್ನದಿಂದಲೂ ಸುವರ್ಣದಿಂದಲೂ ಅಲಂಕೃತವಾದ, ರುಚಿರಂ ಮನೋಹರವಾದ, ಪರಮಾಸನಂಚ - ಉತ್ತಮಾಸನವನ್ನು, ದಿದೇಶ - ಆಜ್ಞಾಪಿಸಿದನು. ॥ ೩೪ ॥ ರಾಘವಃ - ಶ್ರೀರಾಮನು, ತದಾಸನವರಂ - ಶ್ರೇಷ್ಠವಾದ ಆ ಆಸನವನ್ನು, ಪ್ರಾಪ್ಯ - ಹೊಂದಿ, ಸ್ವಯಾ - ಸ್ವಕೀಯವಾದ, ಪ್ರಭಯಾ - ಕಾಂತಿಯಿಂದ, ಮೇರುಂ - ಮೇರುಪರ್ವತವನ್ನು, ಪ್ರಾಪ್ಯ - ಹೊಂದಿ, ಉದಯೇ - ಉದಯಕಾಲದಲ್ಲಿ, ವಿಮಲಃ - ನಿರ್ಮಲವಾದ, ರವಿರಿವ - ಸೂರ್ಯನಂತೆ, ವ್ಯದೀಪಯತ - ಹೊಳೆಯುತ್ತಿದ್ದನು. ॥ ೩೫ ॥ ತತ್ರ - ಆ ಮನೆಯಲ್ಲಿ, ವಿಭ್ರಾಜಿತ - ಹೊಳೆಯುತ್ತಿರುವ, ತೇನ - ಆ ಶ್ರೀರಾಮನಿಂದ, ಸಾಸಭಾ - ಆ ಸಭೆಯು, ವಿಮಲಗ್ರಹನಕ್ಷತ್ರಾ - ನಿರ್ಮಲವಾದ ಗ್ರಹಗಳು ನಕ್ಷತ್ರಗಳುಳ್ಳ, ಶಾರದೀ-ಶರತ್ಕಾಲ ಸಂಬಂಧವಾದ, ದ್ಯೌಃ - ಅಂತರಿಕ್ಷವು, ಇಂದುನೇವ - ಚಂದ್ರನೊಡಗೂಡಿದಂತೆ, ಅಭ್ಯರೋಚತ - ಹೊಳೆಯುತ್ತಿದ್ದಿತು ॥ ೩೬ ॥ ನೃಪತಿಃ - ನರಪತಿಯು, ಆದರ್ಶತಲಸಂಸ್ಥಿತಂ - ಕನ್ನಡಿಯ ಮಧ್ಯದಲ್ಲಿ ಪ್ರತಿಬಿಂಬಿಸಿದ, ಅಲಂಕೃತಂ - ಅಲಂಕರಿಸಲ್ಪಟ್ಟ, ಆತ್ಮಾನಮಿವಸ್ಥಿತಂ - ತನ್ನಂತಿರುವ, ಪ್ರಿಯಂ - ಇಷ್ಟನಾದ, ತಮಾತ್ಮಜಂ - ಆ ಕುಮಾರನನ್ನು, ಪಶ್ಯಮಾನಃ - ನೋಡುತ್ತ, ತುತೋಷ - ಸಂತೋಷಿಸಿದನು. ॥ ೩೭ ॥

ಆಲಿಂಗಿಸಿ, ಕುಳಿತುಕೊಳ್ಳಲು ಸುವರ್ಣ ರತ್ನಾಲಂಕೃತವೂ, ದೇವತೆಗಳು ಕುಳಿತುಕೊಳ್ಳಲು ತಕ್ಕದೂ, ಉನ್ನತವಾದುದೂ ಆದ ಆಸನವನ್ನು ತೋರಿದವನಾದನು. ॥ ೩೩ ॥ ಆಗ ತಂದೆಯನುಮತಿಯಿಂದ ಆ ಗದ್ದುಗೆಯಲ್ಲಿ ಕುಳಿತ ರಘುನಾಥನು, ಉದಯಗಿರಿಯನ್ನೇರಿದ ದಿನಕರನು, ತನ್ನ ಕಿರಣಗಳ ಕಾಂತಿಗಳಿಂದ ಮೇರುಗಿರಿಯನ್ನು ಕಂಗೊಳಿಸುವಂತೆ, ಸ್ವಕೀಯ ಕಾಂತಿಯಿಂದಾ ಪೀಠವನ್ನು ಕಂಗೊಳಿಸುತ್ತಿದ್ದನು. ಹೀಗೆ ಆ ರಾಜ ಭವನದಲ್ಲಿ ಹೊಳೆಯುತ್ತಲಿರುವ ಶ್ರೀರಾಮನಿಂದ ಆ ಸಭೆಯು, ನಿರ್ಮಲವಾದ ಗ್ರಹ, ನಕ್ಷತ್ರಗಳುಳ್ಳ ಶರತ್ಕಾಲದ ಆಕಾಶವು ಚಂದ್ರನಿಂದೊಡಗೂಡಿ ಬೆಳಗುವಂತೆ ಬೆಳಗುತ್ತಲಿದ್ದಿತು. ॥ ೩೬ ॥ ಪುತ್ರವಂತರಲ್ಲಿ ಶ್ರೇಷ್ಠನೂ, ನರಪತಿಯೂ ಆದ ಆ ದಶರಥನು, ಸಮಸ್ತಾಲಂಕಾರಗಳಿಂದ ಅಲಂಕೃತವಾದ ಸ್ವಶರೀರವೇ ಕನ್ನಡಿಯಲ್ಲಿ ಪ್ರತಿಬಿಂಬಿಸಿದುದೋ, ಎಂಬಂತಿದ್ದ ಶ್ರೀ

ಸತಂ ಸಸ್ಮಿತ ಮಾಭಾಷ್ಯ ಪುತ್ರಂ ಪುತ್ರವತಾಂ ವರಃ ॥ ೩೮ ॥ ಉವಾಚೇದಂ ವಚೋ ರಾಜಾ ದೇವೇಂದ್ರ ಮಿವ ಕಾಶ್ಯಪಃ ॥ ಜ್ಯೇಷ್ಠಾಯಾ ಮಸಿ ಮೇ ಪತ್ನ್ಯಾಂ ಸದೃಶ್ಯಾಂ ಸದೃಶ ಸ್ಸುತಃ ॥ ೩೯ ॥ ಉತ್ಪನ್ನ ಸ್ತ್ವಂ ಗುಣಶ್ರೇಷ್ಠೋ ಮಮ ರಾಮಾತ್ಮಜಃ ಪ್ರಿಯಃ ॥ ತ್ವಯಾ ಯತಃ ಪ್ರಜಾಶ್ಚೇಮಾಃ ಸ್ವಗುಣೈ ರನುರಂಜಿತಾಃ ॥ ೪೦ ॥ ತಸ್ಮಾತ್ತ್ವಂ ಪುಷ್ಯಯೋಗೇನ ಯೌವರಾಜ್ಯ ಮವಾಪ್ನುಹಿ ॥ ಕಾಮತಸ್ತ್ವಂ ಪ್ರಕೃತ್ಯೈವ ವಿನೀತೋ ಗುಣವಾನಸಿ ॥ ೪೧ ॥

ಪುತ್ರವತಾಂ - ಪುತ್ರವಂತರಲ್ಲಿ, ವರಃ - ಶ್ರೇಷ್ಠನಾದ, ಸರಾಜಾ - ಆ ದಶರಥರಾಜನು, ಸಸ್ಮಿತಂ - ಕಿರುನಗೆಯುಳ್ಳವನಾಗಿ, ತಂಪುತ್ರಂ - ಆ ಮಗನನ್ನು, ಆಭಾಷ್ಯ - ಕರೆದು, ಇದಂವಚಃ - ಈ ಮಾತನ್ನು, ಉವಾಚ - ಹೇಳಿದನು. ॥ ೩೮ ॥ ಹೇರಾಮ - ಎಲೈ ಶ್ರೀರಾಮನೇ, ಮೇ - ನನಗೆ, ಸದೃಶ್ಯಾಂ - ಸಮಾನಳಾದ, ಜ್ಯೇಷ್ಠಾಯಾಂಪತ್ನ್ಯಾಂ - ಹಿರಿಯಹೆಂಡತಿಯಲ್ಲಿ, ಸದೃಶಃ - ಸಮಾನನಾದ, ಸುತಃ - ಕುಮಾರನಾಗಿ, ತ್ವಂ - ನೀನು, ಉತ್ಪನ್ನಃ - ಹುಟ್ಟಿದವನು, ಅಸಿ - ಆದೆ, ಗುಣಶ್ರೇಷ್ಠಃ - ಗುಣಗಳಿಂದ ಶ್ರೇಷ್ಠನಾದಕಾರಣ, ಮಮ - ನನಗೆ, ಪ್ರಿಯಃ - ಇಷ್ಟನಾದ, ಆತ್ಮಜಃ - ಕುಮಾರನು, ಅಸಿ - ಆಗಿರುವೆ. ॥ ೩೯ ॥ ಯತಃ - ಯಾವಕಾರಣ, ತ್ವಯಾ - ನಿನ್ನಿಂದ, ಇಮಾಃಪ್ರಜಾಃ - ಈ ಪ್ರಜೆಗಳೆಲ್ಲರು, ಸ್ವಗುಣೈಃ - ನನ್ನ ಸದ್ಗುಣಗಳಿಂದ, ಅನುರಂಜಿತಾಃ - ಮನಸ್ಸಂತೋಷಗೊಳಿಸಲ್ಪಟ್ಟರೋ, ತಸ್ಮಾತ್ - ಆ ಕಾರಣ, ತ್ವಂ - ನೀನು, ಪುಷ್ಯಯೋಗೇನ - ಪುಷ್ಯನಕ್ಷತ್ರದಿಂದ (ಚಂದ್ರನಿಗೆ ಸಂಬಂಧಪಟ್ಟ ದಿವಸದಲ್ಲಿ,) ಯೌವರಾಜ್ಯಂ - ಎರಡನೆಯ ಪ್ರಭುತ್ವವನ್ನು, ಅವಾಪ್ನುಹಿ - ಹೊಂದು. ॥ ೪೦ ॥ ತ್ವಂ - ನೀನು, ಪ್ರಕೃತ್ಯೈವ - ಸ್ವಭಾವದಿಂದಲೆ, ಕಾಮತಃ - ಅತ್ಯಂತವಾಗಿ, ವಿನೀತಃ - ವಿನಯಸಂಪನ್ನನು, ಗುಣವಾನ್ - ಗುಣಶಾಲಿಯು, ಅಸಿ - ಆಗಿರುವೆ, ಹೇಪುತ್ರ - ಎಲೈ ಮಗನೇ, ಗುಣವತ್ಯಪಿ - ಗುಣವಂತನಾದರೂ, ಸ್ನೇಹಾತ್ - ಪುತ್ರವಾತ್ಸಲ್ಯದಿಂದ, ತೇ - ನಿನಗೆ, ಹಿತಂ - ಪ್ರಿಯಕರವಾದ ವಚನವನ್ನು, ವಕ್ಷ್ಯಾಮಿ - ಹೇಳುವೆನು. ॥ ೪೧ ॥ ಭೂಯಃ - ಮತ್ತೂ, ವಿನಯಂ - ನಮ್ರತೆಯನ್ನು, ಆಸ್ಥಾಯ - ಹೊಂದಿ, ನಿತ್ಯಂ - ಯಾವಾಗಲೂ, ಜಿತೇಂದ್ರಿಯಃ - ಇಂದ್ರಿಯನಿಗ್ರಹವುಳ್ಳವನು, ಭವ - ಆಗು, ಕಾಮಕ್ರೋಧ

ರಾಮ ಮೂರ್ತಿಯನ್ನು ನೋಡಿ ಸಂತೋಷಿಸಿದನಲ್ಲದೆ, ನಸುನಗೆಯನ್ನು ಜಿನುಂಗಿಸುತ್ತ, ಕಶ್ಯಪ ಬ್ರಹ್ಮನು ದೇವೇಂದ್ರನೊಡನೆ ಮಾತನಾಡುವಂತೆ ಆತನನ್ನು ಕುರಿತು, "ಎಲೈ ಶ್ರೀರಾಮನೆ! ನೀನು ನನ್ನ ಜ್ಯೇಷ್ಠ ಪತ್ನಿಯಾದ ಕೌಸಲ್ಯಾದೇವಿಯಲ್ಲಿ ನನ್ನ ಗುಣ ರೂಪಾದಿಗಳಿಗೆ ಸಮಾನನೂ, ಉತ್ತಮನೂ, ಆಗಿ ಜನಿಸಿದೆ; ನಿನ್ನಲ್ಲಿರುವ ಅನಂತ ಕಲ್ಯಾಣ ಗುಣಗಳಿಂದ ಪ್ರಜೆಗಳೆಲ್ಲರೂ ಸಂತುಷ್ಟರಾದರು; ಆದುದರಿಂದ ನೀನು ಪುಷ್ಯ ನಕ್ಷತ್ರ ಯುಕ್ತವಾದ ಶುಭದಿನದಲ್ಲಿ ಯೌವರಾಜ್ಯವನ್ನು ಹೊಂದುವವನಾಗು. ॥ ೪೦ ॥ ರಾಮಚಂದ್ರ! ನೀನು ಸ್ವಾಭಾವಿಕವಾಗಿಯೇ ವಿನೀತನೂ, ಸದ್ಗುಣಭರಿತನೂ ಆಗಿರುವೆ. ಇಂತಹ ನಿನಗೆ ನಾನು ಹೇಳಬೇಕಾದುದೇನೂ ಇಲ್ಲವಾದರೂ, ನನಗೆ ನಿನ್ನಲ್ಲಿರುವ ಪುತ್ರವಾತ್ಸಲ್ಯದಿಂದ ಹಿತವಾದುದನ್ನು ಹೇಳುತ್ತೇನೆ ಕೇಳು. ಎಲೈ ಮಗನೆ! ನೀನೀಗಿರುವುದಕ್ಕಿಂತಲೂ ಅತಿ

ಗುಣವತ್ಯಪಿತು ಸ್ನೇಹಾತ್ಪುತ್ರ ವಕ್ಷ್ಯಾಮಿ ತೇ ಹಿತಂ ॥ ಭೂಯೋ ವಿನಯ ಮಾಸ್ಥಾಯ ಭವನಿತ್ಯಂ ಜಿತೇಂದ್ರಿಯಃ ॥ ೪೨ ॥ ಕಾಮ ಕ್ರೋಧ ಸಮುತ್ಥಾನಿ ತ್ಯಜೇಥಾ ವ್ಯಸನಾನಿ ಚ ॥ ಪರೋಕ್ಷಯಾ ವರ್ತಮಾನೋ ವೃತ್ತ್ಯಾ ಪ್ರತ್ಯಕ್ಷಯಾ ತಥಾ ॥ ೪೩ ॥ ಅಮಾತ್ಯ ಪ್ರಭೃತೀ ಸ್ಸರ್ವಾಃ ಪ್ರಕೃತೀ ಶ್ಚಾನುರಂಜಯ ॥ ಕೋಷ್ಠಾಗಾರಾ ಯುಧಾಗಾರೈಃ ಕೃತ್ವಾ ಸನ್ನಿಚಯಾ‌ರ್ ಬಹೂ‌ರ್ ॥ ೪೪ ॥ ತುಷ್ಟಾನುರಕ್ತ ಪ್ರಕೃತಿರ್ಯಃ ಪಾಲಯತಿ ಮೇದಿನೀಂ ॥ ತಸ್ಯ ನಂದಂತಿ

ಸಮುತ್ಥಾನಿ - (೧) ಕಾಮದಿಂದಲೂ ಕೋಪದಿಂದಲೂ ಹುಟ್ಟಿದ, ವ್ಯಸನಾನಿ - ದುಃಖಗಳನ್ನು, ॥ ೪೨ ॥ ಪರೋಕ್ಷಯಾ - ಎದುರಾಗಿಲ್ಲದಿರುವ, ವೃತ್ತ್ಯಾ - ನಡತೆಯಿಂದಲೂ, ತಥಾ - ಹಾಗೆಯೆ, ಪ್ರತ್ಯಕ್ಷಯಾವೃತ್ತ್ಯಾ - ಪ್ರತ್ಯಕ್ಷಸ್ಥಿತಿಯಿಂದಲು, ಅಮಾತ್ಯಪ್ರಭೃತೀಃ, ಅಮಾತ್ಯ - ಮಂತ್ರಿಗಳೆ, ಪ್ರಭೃತೀಃ - ಮೊದಲಾಗುಳ್ಳ, ಸರ್ವಾಃ - ಸಮಸ್ತರಾದ, ಪ್ರಕೃತೀಃ - ಜನಗಳನ್ನು, ಅನುರಂಜಯ - ಸಂತಸಗೊಳಿಸು. ॥ ೪೩ ॥ ಕೋಷ್ಠಾಗಾರಾಯುಧಾಗಾರೈಃ, ಕೋಷ್ಠಾಗಾರಾ - ಧಾನ್ಯತುಂಬುವ ಮನೆಗಳಿಂದಲೂ, ಆಯುಧಾಗಾರೈಃ - ಆಯುಧಗಳನ್ನಿಡುವ ಮನೆಗಳಿಂದಲೂ ಸಹಾ, ಯುಕ್ತಾ‌ರ್ - ಕೂಡಿರುವ, ಬಹೂ‌ರ್ - ಅನೇಕವಾದ, ಸನ್ನಿಚಯಾ‌ರ್ - ಬೆಳ್ಳಿ ಮುಂತಾದವು

ಶಯವಾದ ವಿನಯವನ್ನು ತಾಳಿ, ಸದಾ ಕಾಲದಲ್ಲಿಯೂ ಜಿತೇಂದ್ರಿಯನಾಗಿರು ; ಕಾಮದಿಂದುತ್ಪನ್ನವಾಗುವ, ಸ್ತ್ರೀ, ದ್ಯೂತ, ಬೇಟೆ, ಮದ್ಯಪಾನ, ವಾಕ್ಪಾರುಷ್ಯ, ಉಗ್ರಶಿಕ್ಷೆ, ಅರ್ಥನಾಶಗಳೆಂಬ ಆರು ಬಗೆಗಳಾದ ವ್ಯಸನಗಳನ್ನೂ, ಕ್ರೋಧಜನ್ಯವಾದ, ಚಾಡಿ, ಸಾಹಸ, ದ್ರೋಹ, ಅಸೂಯೆ, ಈರ್ಷ್ಯೆ, ದ್ರವ್ಯನಾಶ, ವಾಕ್ಕಾಠಿಣ್ಯ, ದಂಡಕಾಠಿಣ್ಯಗಳೆಂಬ ಎಂಟು ಬಗೆಯ ವ್ಯಸನಗಳನ್ನೂ ತ್ಯಜಿಸುವವನಾಗು. ॥ ೪೨ ॥ ಇಷ್ಟೆಯಲ್ಲದೆ ಚಾರರ ಮುಖದಿಂದ, ಸ್ವರಾಷ್ಟ್ರ ಪರರಾಷ್ಟ್ರಗಳ ವೃತ್ತಾಂತಗಳನ್ನು ತಿಳಿವವನಾಗು; ಕಾಲಕಾಲಕ್ಕೆ ಆಸ್ಥಾನಕ್ಕೈದಿ ವಿಚಾರಣೆ ಮಾಡುತ್ತಿರು; ಮಂತ್ರಿಯೇ ಮೊದಲಾದ ಅಧಿಕಾರಿಗಳನ್ನೂ, ಪಟ್ಟಣಿಗರನ್ನೂ, ದೇಶವಾಸಿಗಳನ್ನೂ, ಸಂತೋಷಗೊಳಿಸುವವನಾಗು. ॥ ೪೩ ॥ ವತ್ಸ ! ಯಾವ ಮನುಜೇಂದ್ರನು, ಧಾನ್ಯಶಾಲೆ, ಆಯುಧಶಾಲೆಗಳಿಂದೊಡಗೂಡಿದ ಭಂಡಾರಗಳನ್ನು ಬಹುವಾಗಿ ವಿಸ್ತರಿಸಿ, ಸಂತೋಷಚಿತ್ತರೂ, ಅನುರಾಗಯುಕ್ತರೂ ಆದ ಮಂತ್ರಿಗಳನ್ನೊಳ

---

(೧) ಸ್ತ್ರೀ ದ್ಯೂತ ಮೃಗಯಾ ಮದ್ಯ ಪಾಕ್ಪಾರುಷ್ಯೋಗ್ರ ದಂಡಕಾ ॥ ಅರ್ಥಸಂದೂಷಣಂ ಚೇತಿ ರಾಜ್ಞಾಂ ವ್ಯಸನ ಸಪ್ತಕಂ ॥ ಎಂಬ ಈ ಏಳು ಗುಣಗಳಾದರೂ ಕಾಮಜನ್ಯಗಳಾಗಬಹುದು. (ಇಲ್ಲಿ "ಅರ್ಥ ಸಂದೂಷಣಂ" ಎಂದರೆ ಪಿತ್ರಾರ್ಜಿತವಾದ ಐಶ್ವರ್ಯವನ್ನು ನಾಶಗೊಳಿಸುವುದೆಂದು ಅರ್ಥ.) ಅಥವ, ಮೃಗಯಾ ಕ್ಷೋದಿವಾಸ್ವಾಪಃ ಪರೀವಾದ ಸ್ತ್ರಿಯೋ ಮದಃ ॥ ತೌರ್ಯತ್ರಿಕಂ ವೃಥಾಧ್ಯಾಚ ಕಾಮಜೋ ದಶಕೋ ಗುಣಃ ॥ ಎಂಬ ಹತ್ತು ಗುಣಗಳಾದರೂ ಕಾಮಜನ್ಯಗಳಾಗಬಹುದು. ಅಲ್ಲದೆ "ಪೈಶುನ್ಯಂ ಸಾಹಸಂ ದ್ರೋಹ ಈರ್ಷ್ಯಾಸೂಯಾರ್ಥ ದೂಷಣಂ ॥ ವಾಗ್ದಂಡಯೋಶ್ಚ ಪಾರುಷ್ಯಂ ಕ್ರೋಧಜೋಪಿ ಗುಣೋಷ್ಟಕಃ ॥ ಎಂಬೀ ಎಂಟು ವ್ಯಸನಗಳೂ ಕ್ರೋಧಜನ್ಯವಾದವುಗಳು.

ಮಿತ್ರಾಣಿ ಲಬ್ಧ್ವಾಽಮೃತಮಿವಾಮರಾಃ ॥ ೪೫ ॥ ತಸ್ಮಾತ್ತ್ವಮಪಿ ಚಾ
ತ್ಮಾನಂ ನಿಯಮ್ಯೈವಂ ಸಮಾಚರ ॥ ತಚ್ಛ್ರುತ್ವಾ ಸುಹೃದ ಸ್ತಸ್ಯ ರಾಮಸ್ಯ
ಪ್ರಿಯಕಾರಿಣಃ ॥ ೪೬ ॥ ತ್ವರಿತಾ ಶ್ಶೀಘ್ರ ಮಭ್ಯೇತ್ಯ ಕೌಸಲ್ಯಾಯೈ ನ್ಯವೇ
ದಯನ್ ॥ ಸಾ ಹಿರಣ್ಯಂ ಚ ಗಾಶ್ಚೈವ ರತ್ನಾನಿ ವಿವಿಧಾನಿಚ ॥ ೪೭ ॥ ವ್ಯಾದಿ
ದೇಶ ಪ್ರಿಯಾಖ್ಯೇಭ್ಯಃ ಕೌಸಲ್ಯಾ ಪ್ರಮದೋತ್ತಮಾ ॥ ಅಥಾಭಿವಾದ್ಯ ರಾಜಾ

ಗಳ ಕೋಶಮಂದಿರಗಳನ್ನು, ಕೃತ್ವಾ - ಮಾಡಿ, ಯಃ - ಯಾವಪುರುಷನು, ತುಷ್ಟಾನುರಕ್ತಪ್ರಕೃತಿಃ, ತುಷ್ಟ - ಸಂತೋಷಯುಕ್ತರಾದ, ಅನುರಕ್ತ - ಅನುರಾಗಯುಕ್ತರಾದ, ಪ್ರಕೃತಿಃ - ಮಂತ್ರಿಗಳು ಳ್ಳವನಾಗಿ, ಮೇದಿನೀಂ - ಭೂಮಿಯನ್ನು, ಪಾಲಯತಿ - ರಕ್ಷಿಸುವನೋ, ತಸ್ಯ - ಅವನಿಗೆ, ಮಿತ್ರಾ ಣಿ - ಸ್ನೇಹಿತರು, ಅಮೃತಂ - ದೇವತಾಹಾರವನ್ನು, ಲಬ್ಧ್ವಾ - ಪಡೆದು, ಅಮರಾಇವ - ದೇವತೆ ಗಳಂತೆ, ನಂದಂತಿ - ಸಂತೋಷಿಸುತ್ತಾರೆ, ತಸ್ಮಾತ್ - ಆ ಕಾರಣ, ತ್ವಮಪಿ - ನೀನು ಸಹ, ಆತ್ಮಾ ನಂ - ಮನಸ್ಸನ್ನು, ಏವಂ - ಈ ಬಗೆಯಾಗಿ, ನಿಯಮ್ಯ - ನಿಗ್ರಹಿಸಿ, ಸಮಾಚರ - ಮಾಡು. ॥೪೫॥ ತಸ್ಯರಾಮಸ್ಯ - ಆ ಶ್ರೀರಾಮನಿಗೆ, ಪ್ರಿಯಕಾರಿಣಃ - ಹಿತಕಾರಿಗಳಾದ, ಸುಹೃದಃ - ಸ್ನೇಹಿತರು, ತತ್ - ಆ ಅಭಿಷೇಕಪ್ರಸ್ತಾಪವನ್ನು, ಶ್ರುತ್ವಾ - ಕೇಳಿ, ತ್ವರಿತಾಃ - ತ್ವರೆಯುಳ್ಳವರಾಗಿ, ಅಭ್ಯೇತ್ಯ - ಬಂದು, ಕೌಸಲ್ಯಾಯೈ - ಕೌಸಲ್ಯಾದೇವಿಗೆ, ನ್ಯವೇದಯನ್ - ಅರುಹಿದರು. ॥ ೪೬ ॥ ಪ್ರಮ ದೋತ್ತಮಾ - ನಾರೀಮಣಿಯಾದ, ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಪ್ರಿಯಾಖ್ಯೇಭ್ಯಃ - ಪ್ರಿಯವಾರ್ತೆಯನ್ನು ಹೇಳುತ್ತಿರುವ ಅವರಿಗೆ, ಹಿರಣ್ಯಂಗಾಶ್ಚೈವ - ಗೋಸುವರ್ಣಗಳನ್ನು, ವಿವಿ ಧಾನಿ - ವಿಧವಿಧಗಳಾದ, ರತ್ನಾನಿಚ - ರತ್ನಗಳನ್ನೂ, ವ್ಯಾದಿದೇಶ - ಕೊಟ್ಟಳು. ॥ ೪೭ ॥ ಅಥ - ಬಳಿಕ, ರಾಘವಃ - ಶ್ರೀರಾಮನು, ರಾಜಾನಂ - ದಶರಥರಾಜನನ್ನು, ಅಭಿವಾದ್ಯ - ನಮಸ್ಕರಿಸಿ, ರಥಂ - ರಥವನ್ನು, ಆರುಹ್ಯ - ಏರಿ, ಜನೌಘೈಃ - ಜನಸಂದಣಿಯಿಂದ, ಪ್ರತಿಪೂಜಿತಃ - ಶ್ಲಾಘಿಸ ಲ್ಪಟ್ಟ, ದ್ಯುತಿಮತ್ - ಕಾಂತಿಯುಳ್ಳ, ಸ್ವಂ - ಸ್ವಕೀಯವಾದ, ವೇಶ್ಮ - ಮನೆಯನ್ನು ಕುರಿತು,

---

ಗೊಂಡು ರಾಜ್ಯಭಾರವನ್ನು ಮಾಡುವನೋ, ಅವನ ಮಿತ್ರರೆಲ್ಲರೂ, ಅಮೃತವನ್ನು ಸವಿದ ದೇವತೆಗಳಂತೆ ಸಂತೋಷಿಸುವರು. ಆದುದರಿಂದೆಲೈ ಶ್ರೀರಾಮನೆ! ನೀನು ಈರೀತಿಯಾಗಿ ಮನೋನಿಗ್ರಹವನ್ನು ಮಾಡಿಕೊಂಡು ನಡೆವವನಾಗು. ॥ ೪೫ ॥ ಈ ಪ್ರಕಾರವಾಗಿ ದಶ ರಥರಾಯನು ನುಡಿಯಲು, ಶ್ರೀರಾಮಚಂದ್ರನ ಹಿತೈಷಿಗಳಾದ ಮಿತ್ರರು ಅದನ್ನು ಕೇಳಿ, ಕೌಸಲ್ಯಾದೇವಿಯ ಬಳಿಗೆ ಬೇಗನೆ ಸಾರಿ ಆ ವೃತ್ತಾಂತವನ್ನು ತಿಳುಹಿದರು. ನಾರೀಮಣಿ ಯಾದಾಕೌಸಲ್ಯಾದೇವಿಯು ನಿಜಕುವರನ ಪಟ್ಟಾಭಿಷೇಕವಾರ್ತೆಯನ್ನು ಕೇಳಿ ಆನಂದಿತ ಳಾಗಿ ಆ ಶ್ರೀರಾಮಮೂರ್ತಿಯ ಸ್ನೇಹಿತರೆಲ್ಲರಿಗೂ ಗೋಸುವರ್ಣಾದಿಗಳನ್ನೂ, ವಿವಿಧರತ್ನಾ ಭರಣಾದಿಗಳನ್ನೂ ಕೊಟ್ಟವಳಾದಳು. ॥ ೪೭ ॥ ಆ ಬಳಿಕ ರಘುನಂದನನು ತಂದೆಯಾದ ದಶರಥರಾಯನಿಗೆ ವಂದನೆಯಂಗೈದು, ರಥಾರೂಢನಾಗಿ, ಜನಸಂದಣಿಯಿಂದ ಪೂಜಿತನಾಗಿ ಸ್ವಮಂದಿರಕ್ಕೆ ತೆರಳಿದವನಾದನು. ಆ ಸಮಯದಲ್ಲಿ ಪಟ್ಟಣಿಗರೆಲ್ಲರೂ ತಮ್ಮೊಡೆಯನ ವಚ

ನಂ ರಥಮಾರುಹ್ಯ ರಾಘವಃ ‖ ೪೮ ‖ ಯಯೌ ಸ್ವಂ ದ್ಯುತಿಮದ್ವೇಶ್ಮ ಜನೌಘೈಃ ಪ್ರತಿಪೂಜಿತಃ ‖ ೪೯ ‖ ತೇಚಾಪಿ ಪೌರಾ ನೃಪತೇರ್ವಚಸ್ತತ್ ಶ್ರುತ್ವಾ ತದಾ ಲಾಭಮಿವೇಷ್ಟಮಾಶು ‖ ನರೇಂದ್ರಮಾಮಂತ್ರ್ಯ ಗೃಹಾಣಿ ಗತ್ವಾ ‖ ದೇವಾನ್ ಸಮಾನರ್ಚುರತಿಪ್ರಹೃಷ್ಟಾಃ ‖ ೫೦ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸ್ಸರ್ಗಃ.

ಯಯೌ - ತೆರಳಿದನು. ‖ ೪೮ ‖ ತೇಪೌರಾಶ್ಚ - ಆ ಪಟ್ಟಣಸ್ಥರಾದ ಜನರೂ, ತದಾ - ಆಗ, ಇಷ್ಟಂ - ಪ್ರಿಯವಾದ, ಲಾಭಮಿವ - ಲಾಭವನ್ನೋಪಾದಿಯಲ್ಲಿ, ನೃಪತೇಃ - ದಶರಥರಾಜನ, ತದ್ವಚಃ - ಆ ಮಾತನ್ನು, ಶ್ರುತ್ವಾ - ಕೇಳಿ, ನರೇಂದ್ರಂ - ರಾಜನನ್ನು, ಆಮಂತ್ರ್ಯ - ಸಮ್ಮತಿಗೊಳಿಸಿ, ಆಶು - ಜಾಗ್ರತೆಯಾಗಿ, ಗೃಹಾಣಿ - ಮನೆಗಳನ್ನು, ಗತ್ವಾ - ಹೊಂದಿ, ಅತಿಪ್ರಹೃಷ್ಟಾಃ - ಅತ್ಯಂತ ಸಂತೋಷಯುಕ್ತರಾಗಿ, ದೇವಾನ್ - (೧) ದೇವತೆಗಳನ್ನು, ಸಮಾನರ್ಚುಃ - ಪೂಜಿಸಿದರು. ‖ ೪೯ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸ್ಸರ್ಗಃ.

ನವನ್ನಾಲಿಸಿ, ಮಹೋದಯವನ್ನು ಪಡೆದವರಂತೆ ಸಂತಸವಾಂತು ಆತನಿಂದಪ್ಪಣೆಪಡೆದು ನಿಜಮಂದಿರಗಳಿಗೆ ತೆರಳಿ ಶ್ರೀರಾಮಾಭಿಷೇಕವು ನಿರ್ವಿಘ್ನವಾಗಿ ನಡೆಯಲೆಂದು ತಮ್ಮತಮ್ಮ ಇಷ್ಟದೇವತೆಗಳನ್ನು ಪೂಜಿಸುತ್ತಲಿದ್ದರು. ‖ ೫೦ ‖

ಇಂತಿದು ಶ್ರೀರಾಮರಾಜ್ಯಾಭಿಷೇಕ ಸಾಮಾಗ್ರಿ ಸಮಾಹರಣ ? ವೃತ್ತಾಂತ
ವಿವರಣವೆಂಬ ಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುರ್ಥಸ್ಸರ್ಗಃ.

ಗತೇಷ್ವಥ ನೃಪೋ ಭೂಯಃ ಪೌರೇಷು ಸಹಮಂತ್ರಿಭಿಃ ॥ ಮಂತ್ರಯಿತ್ವಾ ತತಶ್ಚಕ್ರೇ ನಿಶ್ಚಯಜ್ಞ ಸ್ಸನಿಶ್ಚಯಂ ॥ ೧ ॥ ಶ್ವಏವ ಪುಷ್ಯೋ ಭವಿತಾ ಶ್ವೋಽಭಿಷೇಚ್ಯಸ್ತು ಮೇ ಸುತಃ ॥ ರಾಮೋ ರಾಜೀವ ತಾಮ್ರಾಕ್ಷೋ ಯೌವರಾಜ್ಯ ಇತಿಪ್ರಭುಃ ॥ ೨ ॥ ಅಥಾಂತರ್ಗೃಹ ಮಾವಿಶ್ಯ ರಾಜಾ ದಶರಥ ಸ್ತದಾ ॥ ಸೂತಮಾಮಂತ್ರಯಾಮಾಸ ರಾಮಂ ಪುನರಿಹಾನಯ ॥ ೩ ॥ ಪ್ರತಿಗೃಹ್ಯಸತದ್ವಾಕ್ಯಂ ಸೂತಃ ಪುನರುಪಾಯಯೌ ॥ ರಾಮಸ್ಯ ಭವನಂ

ಅಥ - ಬಳಿಕ, ಪೌರೇಷು - ಪಟ್ಟಣಸ್ಥರು, ಗತೇಷು - ಹೊರಟುಹೋಗಲು, ತತಃ-ಅನಂತರದಲ್ಲಿ, ನಿಶ್ಚಯಜ್ಞಃ - ಯಾವವೇಳೆಯಲ್ಲಿ ಯಾವಕೆಲಸವನ್ನು ಮಾಡಬೇಕೆಂಬುದನ್ನರಿತ, ಪ್ರಭುಃ - ಸಮರ್ಥನಾದ, ಸನೃಪಃ - ಆ ದಶರಥರಾಜನು, ಭೂಯಃ - ಮತ್ತೂ, ಮಂತ್ರಿಭಿಸ್ಸಹ - ಮಂತ್ರಿಗಳೊಡನೆ, ಮಂತ್ರಯಿತ್ವಾ - ಆಲೋಚಿಸಿ, ಶ್ವಏವ - ನಾಳೆಯದಿನವೇ, ಪುಷ್ಯಃ - ಪುಷ್ಯನಕ್ಷತ್ರವು, ಭವಿತಾ - ಆಗುವದು, ಶ್ವಃ - ನಾಳೆ, ಮೇ - ನನ್ನ, ಸುತಃ - ಕುಮಾರನಾದ, ರಾಜೀವತಾಮ್ರಾಕ್ಷಃ - ಕಮಲಗಳಂತೆ ಕೆಂಪಾದ ಕಂಗಳುಳ್ಳ, ರಾಮಸ್ತು - ಶ್ರೀರಾಮನು, ಅಭಿಷೇಚ್ಯಇತಿ - ಪಟ್ಟಾಭಿಷಿಕ್ತನಾಗತಕ್ಕವನೆಂದು, ನಿಶ್ಚಯಂ - ನಿರ್ಣಯವನ್ನು, ಚಕ್ರೇ - ಮಾಡಿದನು. ॥ ೨ ॥ ಅಥ - ಬಳಿಕ, ದಶರಥೋರಾಜಾ - ದಶರಥಮಹಾರಾಜನು, ಅಂತರ್ಗೃಹಂ - ಅಂತಃಪುರವನ್ನು, ಆವಿಶ್ಯ - ಪ್ರವೇಶಿಸಿ, ಪುನಃ - ಮತ್ತು, ರಾಮಂ - ಶ್ರೀರಾಮನನ್ನು, ಇಹ - ಇಲ್ಲಿಗೆ, ಆನಯೇತಿ - ಕರೆದುತಾರೆಂದು, ತದಾ - ಆ ಕಾಲದಲ್ಲಿ, ಸೂತಂ - ಸಾರಥಿಯಾದ ಸುಮಂತ್ರನನ್ನು ಕುರಿತು, ಆಮಂತ್ರಯಾಮಾಸ - ನಿರೂಪಿಸಿದನು. ॥ ೩ ॥ ಸಸೂತಃ - ಆ ಸುಮಂತ್ರನು, ತದ್ವಾಕ್ಯಂಪುನಃ - ಆ ಮಾತನ್ನು, ಪ್ರತಿಗೃಹ್ಯ - ತೆಗೆದುಕೊಂಡು, ರಾಮಂ - ಶ್ರೀರಾಮನನ್ನು, ಪುನಃ - ಮತ್ತು, ಆನಯಿತುಂ - ಕರೆದುಕೊಂಡು ಬರಲು, ರಾಮಸ್ಯ - ಶ್ರೀರಾಮನ, ಭವನಂ - ಮನೆಯನ್ನು ಕುರಿತು, ಶೀಘ್ರಂ,

---

ಆ ಬಳಿಕ ಕಾಲಕ್ಕನುಸಾರವಾಗಿ ಮಾಡಬೇಕಾದ ಕಾರ್ಯಗಳನ್ನರಿತಿರುವ ದಶರಥರಾಯನು ಪಟ್ಟಣಿಗರೆಲ್ಲರೂ ಹೊರಟುಹೋಗಲು, ತನ್ನ ಕುಮಾರನಾದ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಲು ತನ್ನ ಮಂತ್ರಿಗಳೊಡನೆ ಆಲೋಚಿಸಿ ಅಂತಃಪುರವನ್ನು ಹೊಕ್ಕು ಪ್ರಧಾನಮಂತ್ರಿಯಾದ ಸುಮಂತ್ರನನ್ನು ಕರೆದು "ಎಲೈ ಸುಮಂತ್ರನೆ! ಪುಷ್ಯನಕ್ಷತ್ರವಾಗಿರುವ ನಾಳೆಯದಿನವೇ ಕೆಂದಾವರೆಯೆಸಳಿನಂತೆ ಮನೋಹರವಾದ ಕಂಗಳುಳ್ಳ ಶ್ರೀರಾಮನಿಗೆ ಪಟ್ಟಗಟ್ಟಬೇಕು; ಆದುದರಿಂದ ನೀನಾತನನ್ನು ಮರಳಿ ಕರೆದುಕೊಂಡು ಬರುವವನಾಗು"

ಶೀಘ್ರಂ ರಾಮಮಾನಯಿತುಂ ಪುನಃ ॥ ೪ ॥ ದ್ವಾಸ್ಥೈರ್ರಾವೇದಿತಂ ತಸ್ಯ ರಾಮಾಯಾಗಮನಂ ಪುನಃ ॥ ಶ್ರುತ್ವೈವ ಚಾಪಿ ರಾಮಸ್ತಂ ಪ್ರಾಪ್ತಂ ಶಂಕಾನ್ವಿತೋ ಭವತ್ ॥ ೫ ॥ ಪ್ರವೇಶ್ಯ ಚೈನಂ ತ್ವರಿತಂ ರಾಮೋ ವಚನ ಮಬ್ರವೀತ್ ॥ ಯದಾಗಮನ ಕೃತ್ಯಂ ತೇ ಭೂಯ ಸ್ತದ್ಬ್ರೂಹ್ಯಶೇಷತಃ ॥ ೬ ॥ ತಮುವಾಚ ತತ ಸ್ಸೂತೋ ರಾಜಾ ತ್ವಾಂ ದ್ರಷ್ಟು ಮಿಚ್ಛತಿ ॥ ಶ್ರುತ್ವಾ ಪ್ರಮಾಣ ಮತ್ರತ್ವಂ ಗಮನಾ ಯೇತರಾಯವಾ ॥ ೭ ॥ ಇತಿ ಸೂತ ವಚಶ್ಶ್ರುತ್ವಾ ರಾಮೋ ಽಥ ತ್ವರಯಾನ್ವಿತಃ ॥ ಪ್ರಯಯೌ ರಾಜಭವನಂ ಪುನರ್ದ್ರಷ್ಟುಂ

ಜಾಗ್ರತೆಯಾಗಿ, ಉಪಾಯಯೌ - ಮತ್ತೆ ಬಂದನು. ॥ ೪ ॥ ತಸ್ಯ - ಆ ಸುಮಂತ್ರನ, ಪುನರಾಗಮನಂ - ಮತ್ತೆ ಬರೋಣವು, ದ್ವಾಸ್ಥೈಃ-ದ್ವಾರಪಾಲಕರಿಂದ, ರಾಮಾಯ - ಶ್ರೀರಾಮನಿಗೆ, ಆವೇದಿತಂ - ತಿಳಿಸಲಾಯಿತು, ರಾಮಶ್ಚಾಪಿ - ಶ್ರೀರಾಮನು, ತಂ - ಆತನನ್ನು, ಪ್ರಾಪ್ತಂ - ಬಂದವನನ್ನಾಗಿ, ಶ್ರುತ್ವೈವ - ಕೇಳುತ್ತಲೆ, ಶಂಕಾನ್ವಿತಃ - ಸಂಶಯದಿಂದ ಕೂಡಿದವನು, ಅಭವತ್ - ಆದನು. ॥ ೫ ॥ ರಾಮಃ - ಶ್ರೀರಾಮನು, ಪ್ರವೇಶ್ಯಚ - ಪ್ರವೇಶವನ್ನು ಮಾಡಿಸಿ, ತ್ವರಿತಂ - ಶೀಘ್ರವಾಗಿ, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು, ತೇ - ನಿನ್ನ - ಭೂಯಃ - ಮತ್ತೆ, ಆಗಮನಕೃತ್ಯಂ - ಬಂದ ಪ್ರಯೋಜನವು, ಯತ್ - ಯಾವದೋ, ತತ್ - ಅದನ್ನು, ಅಶೇಷತಃ - ಸಂಪೂರ್ಣವಾಗಿ, ಬ್ರೂಹಿ - ಹೇಳು, ಇತಿ - ಇಂತೆಂದು. ॥ ೬ ॥ ತತಃ - ಅನಂತರದಲ್ಲಿ, ಸೂತಃ - ಸುಮಂತ್ರನು, ರಾಜಾ - ಅರಸಾದ ದಶರಥನು, ತ್ವಾಂ - ನಿನ್ನನ್ನು, ದ್ರಷ್ಟುಂ- ನೋಡಲು, ಇಚ್ಛತಿ - ಅಪೇಕ್ಷಿಸುತ್ತಾನೆ, ಶ್ರುತ್ವಾ - ಕೇಳಿ, ಅತ್ರ - ಈ ಅರ್ಥದಲ್ಲಿ, ತ್ವಂ - ನೀನು, ಗಮನಾಯ - ಹೊರಡಲು, ಇತರಾಯವಾ - ಹೊರಡದಿರುವದಕ್ಕೂ ಕೂಡ, ಪ್ರಮಾಣಂ - ಕರ್ತನು, ಇತಿ - ಇಂತೆಂದು, ತಂ - ಆ ಶ್ರೀರಾಮನನ್ನು ಕುರಿತು, ಉವಾಚ- ನುಡಿದನು. ॥ ೭ ॥ ಇತಿ- ಹೀಗೆ, ರಾಮಃ- ಶ್ರೀರಾಮನು, ಸೂತವಚಃ- ಸುಮಂತ್ರನ ವಾಕ್ಯವನ್ನು, ಶ್ರುತ್ವಾ - ಕೇಳಿ, ಅಥ - ಬಳಿಕ, ತ್ವರಯಾ - ವೇಗದಿಂದ, ಅನ್ವಿತಃ - ಕೂಡಿದವನಾಗಿ, ನರೇಶ್ವರಂ - ನರಪತಿಯನ್ನು, ಪುನಃ - ಮತ್ತು,

---

ಎಂದು ಆಜ್ಞಾಪಿಸಿದನು. ॥ ೪ ॥ ಆಗಲಾ ಸುಮಂತ್ರನು ರಾಯನಪ್ಪಣೆಯನ್ನು ಕೈಕೊಂಡು ಶ್ರೀರಾಮನನ್ನು ಕರೆತರಲು ಆತನರಮನೆಗೆ ಮರಳಿಯೂ ಬಂದವನಾದನು. ಆ ಬಳಿಕ ದ್ವಾರಪಾಲಕರು ಸುಮಂತ್ರನು ಬಂದಿರುವನೆಂದು ತಿಳಿಸಲು, ಆ ರಘುನಂದನನು. ಅದನ್ನು ಕೇಳಿ "ನಾನೀತನೊಡನೆ ಈಗತಾನೆ ಅರಮನೆಗೆ ಹೋಗಿ ಹಿಂತಿರುಗಿದೆನಲ್ಲ! ಈತನು ಪುನಃ ಇಲ್ಲಿಗೆ ಬಂದುದೇಕೋ? ನನ್ನ ಯೌವರಾಜ್ಯಾಭಿಷೇಕಕ್ಕೇನಾದರೂ ಅಡಚಣೆ ಯುಂಟಾಯಿತೇನೋ? ಅಥವ ಉಪದ್ರವವೇನಾದರೂ ಸಂಭವಿಸಿತೇನೋ?" ಎಂದು ಶಂಕಿಸಿ, ಆ ಸುಮಂತ್ರನನ್ನು ಒಳಕ್ಕೆ ಬರಮಾಡಿಕೊಂಡು ಬಂದಕಾರಣವೇನೆಂದು ಕೇಳಿದನು. ॥ ೬ ॥ ಸುಮಂತ್ರನು ಆತನನ್ನು ಕುರಿತು, "ಎಲೈ ಶ್ರೀರಾಮನೆ! ದಶರಥರಾಯನು ನಿನ್ನನ್ನು ನೋಡಲಪೇಕ್ಷಿಸುವನು, ಬೇಗನೆ ತೆರಳುವನಾಗು" ಎಂದನು. ಹೀಗೆಂದ ಸೂತನ ನುಡಿಯನ್ನು ಕೇಳಿ ಆ ರಘುರಾಮನು ತಂದೆಯಾದ ದಶರಥಭೂಪಾಲನನ್ನು ನೋಡಲು ತ್ವರೆಯುಳ್ಳವನಾಗಿ ಬಹು

ನರೇಶ್ವರಂ ॥ ೮ ॥ ತಂ ಶ್ರುತ್ವಾ ಸಮನುಪ್ರಾಪ್ತಂ ರಾಮಂ ದಶರಥೋ ನೃಪಃ ॥
ಪ್ರವೇಶಯಾಮಾಸ ಗೃಹಂ ವಿವಕ್ಷುಃ ಪ್ರಿಯಮುತ್ತಮಂ ॥ ೯ ॥ ಪ್ರವಿ
ಶನ್ನೇವ ಚ ಶ್ರೀಮಾನ್ರಾಘವೋ ಭವನಂ ಪಿತುಃ ॥ ದದರ್ಶ ಪಿತರಂ ದೂರಾ
ತ್ಪ್ರಣಿಪತ್ಯ ಕೃತಾಂಜಲಿಃ ॥ ೧೦ ॥ ಪ್ರಣಮಂತಂ ಸಮುತ್ಥಾಪ್ಯ ತಂ ಪರಿ
ಷ್ವಜ್ಯ ಭೂಮಿಪಃ ॥ ಪ್ರದಿಶ್ಯ ಚಾಸ್ಮೈ ರುಚಿರಮಾಸನಂ ಪುನರಬ್ರವೀತ್
॥ ೧೧ ॥ ರಾಮ ವೃದ್ಧೋಽಸ್ಮಿ ದೀರ್ಘಾಯುರ್ಭುಕ್ತಾ ಭೋಗಾ ಮಯೇ
ಪ್ಸಿತಾಃ ॥ ಅನ್ನವದ್ಭಿಃ ಕ್ರತುಶತೈಸ್ತಥೇಷ್ಟಂ ಭೂರಿ ದಕ್ಷಿಣೈಃ ॥ ೧೨ ॥

ದ್ರಷ್ಟುಂ- ನೋಡುವದಕ್ಕೆ, ರಾಜಭವನಂ- ಅರಮನೆಯನ್ನು ಕುರಿತು, ಪ್ರಯಯೌ- ತೆರಳಿದನು. ॥೮॥ ನೃಪಃ - ರಾಜನಾದ, ದಶರಥಃ - ದಶರಥನು, ತಂರಾಮಂ - ಆ ಶ್ರೀರಾಮನನ್ನು, ಸಮನುಪ್ರಾಪ್ತಂ - ಬಂದವನನ್ನಾಗಿ, ಶ್ರುತ್ವಾ - ಕೇಳಿ, ಉತ್ತಮಂ - ಉತ್ಕೃಷ್ಟವಾದ, ಪ್ರಿಯಂ - ಹಿತಕಾರ್ಯವನ್ನು, ವಿವಕ್ಷುಃ - ಹೇಳಲಿಚ್ಛೆಗೊಂಡು, ಗೃಹಂ - ಮನೆಯನ್ನು, ಪ್ರವೇಶಯಾಮಾಸ-ಪ್ರವೇಶ ಮಾಡಿಸಿದನು. ॥ ೯ ॥ ಶ್ರೀಮಾನ್ - ಸಂಪದ್ಯುಕ್ತನಾದ, ರಾಘವಃ - ಶ್ರೀರಾಮನು, ಪಿತುಃ - ತಂದೆಯ, ಭವನಂ - ಮನೆಯನ್ನು ಕುರಿತು, ಪ್ರವಿಶನ್ನೇವ-ಪ್ರವೇಶಿಸುತ್ತಲೆ, ದೂರಾತ್-ದೂರದಿಂದ, ಪಿತರಂ-ಜನಕನನ್ನು, ಪ್ರಣಿಪತ್ಯ - ನಮಸ್ಕರಿಸಿ, ಕೃತಾಂಜಲಿಃ - ಅಂಜಲಿಬದ್ಧನಾಗಿ, ದದರ್ಶ - ಕಂಡನು. ॥ ೧೦ ॥ ಭೂಮಿಪಃ - ದಶರಥರಾಜನು, ಪ್ರಣಮಂತಂ - ನಮಸ್ಕರಿಸಿದ, ತಂ - ಆ ಶ್ರೀರಾಮನನ್ನು, ಸಮುತ್ಥಾಪ್ಯ - ಎಬ್ಬಿಸಿ, ಪರಿಷ್ವಜ್ಯಚ - ಆಲಿಂಗನವನ್ನು ಮಾಡಿ, ಅಸ್ಮೈ - ಈ ಶ್ರೀರಾಮನಿಗೋಸ್ಕರ, ರುಚಿರಂ - ಮನೋಹರವಾದ, ಆಸನಂಚ - ಪೀಠವನ್ನು ಕೂಡ, ಪ್ರದಿಶ್ಯ - ಆಜ್ಞಾಪಿಸಿ, ಪುನಃ - ಮತ್ತೂ, ಅಬ್ರವೀತ್ - ನುಡಿದನು. ॥ ೧೧ ॥ ಹೇ ರಾಮ - ಎಲೈ ಶ್ರೀರಾಮನೆ, (ಅಹಂ-ನಾನು) ದೀರ್ಘಾಯುಃ - ಚಿರಕಾಲವಾದ ಆಯುಸ್ಸುಳ್ಳ, ವೃದ್ಧಃ - ಮುದುಕನು, ಅಸ್ಮಿ - ಆಗಿರುವೆನು, ಮಯಾ - ನನ್ನಿಂದ, ಈಪ್ಸಿತಾಃ - ಇಷ್ಟವಾದ, ಭೋಗಾಃ - ಭೋಗಗಳು, ಭುಕ್ತಾಃ - ಅನುಭವಿಸಲ್ಪಟ್ಟವು, ತಥಾ - ಹಾಗೆಯೇ, ಅನ್ನವದ್ಭಿಃ - ಬಹ್ವನ್ನಯುಕ್ತವಾದ, ಭೂರಿ ದಕ್ಷಿಣೈಃ - ಅನೇಕ ದಕ್ಷಿಣಗಳುಳ್ಳ, ಕ್ರತುಶತೈಃ - ಅನೇಕವಾದ ಯಜ್ಞಗಳಿಂದ, ಇಷ್ಟಂ - ಯಾಗ ಮಾಡಲ್ಪಟ್ಟಿತು. ॥ ೧೨ ॥ ಮೇ - ನನಗೆ, ಭುವಿ - ಭೂಮಿಯಲ್ಲಿ, ಅನುಪಮಂ -

---

ಬೇಗನೆ ಅರಮನೆಗೆ ಬಂದನು. ಆಗಲಾರಾಯನು ಶ್ರೀರಾಮಾಗಮನವನ್ನು ಕೇಳಿ ಆತನನ್ನು ಒಳಗೆ ಬರಹೇಳಲು, ಆತನು ಜನಕಮಂದಿರವನ್ನು ಪ್ರವೇಶಿಸುತ್ತಲೆ ಆತನನ್ನು ಕಂಡು ದೂರದಿಂದಲೇ ವಂದನೆಯಂಗೈದು ಬದ್ಧಾಂಜಲಿಪುಟವುಳ್ಳವನಾದನು; ಆಗಲಾರಾಜನು ಮಗನನ್ನು ಬಿಗಿದಪ್ಪಿ ಮನೋಹರವಾದ ಗದ್ದುಗೆಯನ್ನು ಕೊಟ್ಟು, ಸಮೀಪದಲ್ಲಿ ಕುಳ್ಳಿರಿಸಿಕೊಂಡು ಆತನನ್ನು ಕುರಿತು ಹೀಗೆಂದನು. ॥ ೧೧ ॥ "ಎಲೈ ಶ್ರೀರಾಮನೆ! ದೀರ್ಘಾಯುಷ್ಮಂತನಾಗಿ, ಇಷ್ಟವಾದ ಅನೇಕ ಭೋಗಗಳನ್ನನುಭವಿಸಿ ಇದೀಗ ವೃದ್ಧನಾಗಿರುವೆನು. ಭೂರಿದಕ್ಷಿಣೆಗಳೂ, ಅಪಾರವಾದ ಅನ್ನದಾನವೂ ಉಳ್ಳ ಅನೇಕ ಯಾಗಗಳನ್ನು ಮಾಡಿದೆನು. ಇಂತಹ ನನಗೆ, ಈ ಭೂಮಂಡಲದಲ್ಲಿಯೇ ಅಸದೃಶನಾದವನೂ, ಪರಮಪ್ರೀತಿಪಾತ್ರನಾದವನೂ ಆದ

ಜಾತಮಿಷ್ಟಮಪತ್ಯಂ ಮೇ ತ್ವಮದ್ಯಾಯಮನುಪಮಂ ಭುವಿ ॥ ದತ್ತಮಿಷ್ಟಮಧೀತಂಚ ಮಯಾ ಪುರುಷಸತ್ತಮ ॥ ೧೩ ॥ ಅನುಭೂತಾನಿ ಚೇಷ್ಟಾನಿ ಮಯಾ ವೀರ ಸುಖಾನ್ಯಪಿ ॥ ದೇವರ್ಷಿ ಪಿತೃವಿಪ್ರಾಣಾಮನೃಣೋಽಸ್ಮಿ ತಥಾತ್ಮನಃ ॥ ೧೪ ॥ ನಕಿಂಚಿನ್ಮಮ ಕರ್ತವ್ಯಂ ತವಾನ್ಯತ್ರಾಭಿಷೇಚನಾತ್ ॥

ಅಸದೃಶನಾದ, ಇಷ್ಟಂ - ಇಷ್ಟನಾದ, ಅಪತ್ಯಂ - ಮಗನಾದ, ತ್ವಂ - ನೀನು, ಜಾತಂ - ಹುಟ್ಟಿದೆ, ಹೇ ಪುರುಷ ಸತ್ತಮ - ಎಲೈ ಪುರುಷ ಶ್ರೇಷ್ಠನೇ, ಮಯಾ - ನನ್ನಿಂದ, ದತ್ತಂ - ದಾನ ಮಾಡಲ್ಪಟ್ಟಿತು, ಅಧೀತಂಚ - ಅಧ್ಯಯನವೂ ಮಾಡಲ್ಪಟ್ಟಿತು. ॥ ೧೩ ॥ ಹೇ ವೀರ- ಎಲೈ ಶೂರನೇ, ಇಷ್ಟಾನಿ - ಇಚ್ಛಾ ವಿಷಯವಾದ, ಸುಖಾನ್ಯಪಿ - ಸುಖಗಳು ಸಹ, ಮಯಾ - ನನ್ನಿಂದ, ಅನುಭೂತಾನಿ - ಭೋಗಿಸಲ್ಪಟ್ಟವು, ತಥಾ - ಹಾಗೆಯೇ, ದೇವರ್ಷಿ ಪಿತೃವಿಪ್ರಾಣಾಂ - ದೇವ - ದೇವತೆಗಳ, ಋಷಿ - ಋಷಿಗಳ, ಪಿತೃ - ಪಿತೃಗಳ, ವಿಪ್ರಾಣಾಂ - ಬ್ರಾಹ್ಮಣರ, ಆತ್ಮನಃ - ತನ್ನ ಶರೀರದ, ಅನೃಣಃ - (೧) ಋಣವಿಲ್ಲದವನು, ಅಸ್ಮಿ - ಆಗಿರುವೆನು. ॥ ೧೪ ॥ ತವ - ನಿನ್ನ, ಅಭಿಷೇಚನಾತ್ - ಅಭಿಷೇಕ ಮಾಡುವದಕ್ಕಿಂತಲೂ, ಅನ್ಯತ್ರ - ಮತ್ತೊಂದು, ಕರ್ತವ್ಯಂ - ಮಾಡತಕ್ಕದು, ಕಿಂಚಿತ್-ಯಾವದೊಂದೂ, ಮಮ-ನನಗೆ, ನ - ಇಲ್ಲ, ಅತಃ - ಈ ಕಾರಣ, ಅಹಂ - ನಾನು, ತ್ವಾಂ - ನಿನ್ನನ್ನು ಕುರಿತು, ಯತ್-ಯಾವ ವಚನವನ್ನು, ಬ್ರೂಯಾಂ - ನಿರೂಪಿಸುವೆನೋ, ಮೇ - ನನ್ನ, ತತ್ - ಆ ವಚನವನ್ನು, ತ್ವಂ-ನೀನು, ಕರ್ತುಂ-ಮಾಡಲು, ಅರ್ಹಸಿ - ಯೋಗ್ಯನಾಗು.

ನೀನು ಪುತ್ರನಾಗಿ ಜನಿಸಿದೆ. ಸ್ರಕ್ಚಂದನ ವನಿತಾದಿ ಸಮಸ್ತ ಸುಖಗಳೂ ನನ್ನಿಂದ ಅನುಭವಿಸಲ್ಪಟ್ಟವು. ಬ್ರಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನಮಾಡಿ ಋಷಿಋಣವನ್ನು ಕಳೆದುಕೊಂಡೆನು. ಯಜ್ಞವೇ ಮೊದಲಾದ ಸತ್ಕರ್ಮವನ್ನಾಚರಿಸಿ ದೇವಋಣವನ್ನು ನೀಗಿಕೊಂಡೆನು. ಸಂತಾನವನ್ನು ಪಡೆದು ಪಿತೃಋಣವನ್ನು ದೂರಗೊಳಿಸಿದವನಾದೆನು. ಈರೀತಿ ಋಣತ್ರಯವಿಮುಕ್ತನಾದ ನನಗೆ, ಪ್ರಿಯಪುತ್ರನಾದ ನಿನಗೆ ಯೌವರಾಜ್ಯಾಭಿಷೇಕವನ್ನು ಮಾಡುವ ಕಾರ್ಯವೊಂದಲ್ಲದೆ ಮತ್ತೊಂದು ಕಾರ್ಯವಿಲ್ಲವು. ಆದುದರಿಂದ ನಾನೀಗ ಹೇಳುವುದ

ಟಿ. (೧) ಅನೃಣಃ - ದೇವ, ಋಷಿ, ಪಿತೃ ಋಣಗಳಿಂದ ವಿಮುಕ್ತನಾದವನು. ಯಾಗ ಕರಣದಿಂದ ದೇವಋಣವು ವಿಮೋಚನವಾಗುವುದು. ವೇದಾಧ್ಯಯನ ಕರಣದಿಂದ ಋಷಿಋಣವು ನೀಗುವುದು. ಪುತ್ರೋತ್ಪಾದನೆಯಿಂದ ಪಿತೃಋಣವು ಕಳೆಯುವುದು. ಇವು ಋಣತ್ರಯಗಳು. ವಿಪ್ರಋಣವು ದಾನಕರಣದಿಂದ ನಶಿಸುವುದು. ಆತ್ಮಋಣವು ಐಹಿಕ ಸುಖಾನುಭವದಿಂದ ದೂರವಾಗುವುದು. ಇವೂ ಸೇರಿ ಋಣಪಂಚಕವೆನಿಸಿಕೊಳ್ಳುವುದು. "ಜಾಯಮಾನೋವೈ ಬ್ರಾಹ್ಮಣ ಸ್ತ್ರಿಭಿರ್ ಋಣವಾಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ" ಎಂದು ಋಣತ್ರಯ ಮಾತ್ರ ಶ್ರುತಿ ಪ್ರಸಿದ್ಧನಾಗಿದ್ದರೂ ಋಣ ಪಂಚಕವೆಂದು ಮತಾಂತರದವರು ಒಪ್ಪುತ್ತಾರೆ. ಆತ್ಮ ಋಣವನ್ನು ನೀಗಿಕೊಳ್ಳುವುದರಲ್ಲಿ ವಿಷಯೋಪಭೋಗ ರಚನೆಯೇ ಹೇತುವೆಂದು ನಿರೂಪಿಸಿದೆನಷ್ಟೆ. ಇದು ಸಮಂಜಸವೇ ? ಎಂದು ಶಂಕಿಸಬಾರದು. "ಅನಿಷಿದ್ಧ ಸುಖತ್ಯಾಗೀ ಪಶುರೇವ ನಸಂಶಯಃ" ಎಂಬ ಹಿರಿಯರ ನಾಣ್ಣುಡಿಯನ್ನು ಸ್ಮೃತಿಪಥದಲ್ಲಿಡಬೇಕು.

ಅತೋ ಯತ್ತ್ವಾಮಹಂ ಬ್ರೂಯಾಂ ತನ್ಮೇತ್ವಂ ಕರ್ತುಮರ್ಹಸಿ ॥ ೧೫ ॥
ಅದ್ಯ ಪ್ರಕೃತಯ ಸ್ಸರ್ವಾ ಸ್ತ್ವಾಮಿಚ್ಛಂತಿ ನರಾಧಿಪಂ ॥ ಅತಸ್ತ್ವಾಂ ಯುವ
ರಾಜಾನ ಮಭಿಷೇಕ್ಷ್ಯಾಮಿ ಪುತ್ರಕ ॥ ೧೬ ॥ ಅಪಿಚಾದ್ಯಾಶುಭಾ ರಾಮ
ಸ್ವಪ್ನೇ ಪಶ್ಯಾಮಿ ದಾರುಣಾ ॥ ಸನಿರ್ಘಾತಾ ದಿವೋಲ್ಕಾಚ ಪತತೀಹ ಮಹಾ
ಸ್ವನಾ ॥ ೧೭ ॥ ಅವಷ್ಟಬ್ಧಂ ಚ ಮೇ ರಾಮ ನಕ್ಷತ್ರಂ ದಾರುಣೈರ್ಗ್ರಹೈಃ ॥
ಆವೇದಯಂತಿ ದೈವಜ್ಞಾ ಸ್ಸೂರ್ಯಾಂಗಾರಕ ರಾಹುಭಿಃ ॥ ೧೮ ॥ ಪ್ರಾ
ಯೇಣಹಿ ನಿಮಿತ್ತಾನಾಮೀದೃಶಾನಾಂ ಸಮುದ್ಭವೇ ॥ ರಾಜಾಹಿ ಮೃತ್ಯು
ಮಾಪ್ನೋತಿ ಘೋರಾಂ ವಾಪದಮೃಚ್ಛತಿ ॥ ೧೯ ॥ ತದ್ಯಾವದೇವ ಮೇ

॥ ೧೫ ॥ ಹೇ ಪುತ್ರಕ - ಎಲೈ ಮಗನೇ, ಅದ್ಯ - ಈಗ, ಸರ್ವಾಃ ಪ್ರಕೃತಿಯಃ - ಸಮಸ್ತ ಪ್ರಜೆಗಳೂ, ತ್ವಾಂ - ನಿನ್ನನ್ನು, ನರಾಧಿಪಂ - ರಾಜನನ್ನಾಗಿ, ಇಚ್ಛಂತಿ - ಅಪೇಕ್ಷಿಸುತ್ತಾರೆ, ಅತಃ - ಈ ಕಾರಣ, ತ್ವಾಂ - ನಿನ್ನನ್ನು, ಯುವರಾಜಾನಂ - ಯುವರಾಜನನ್ನಾಗಿ, ಅಭಿಷೇಕ್ಷ್ಯಾಮಿ - ಪಟ್ಟಾಭಿಷೇಕ ಮಾಡಿಸುವೆನು. ॥ ೧೬ ॥ ಅಪಿಚ - ಇಷ್ಟುಮಾತ್ರವಲ್ಲದೆ, ಹೇ ರಾಮ - ಎಲೈ ಶ್ರೀರಾಮನೇ, ಅದ್ಯ - ಈಗ, ಸ್ವಪ್ನೇ - ಕನಸಿನಲ್ಲಿ, ಅಶುಭಾ - ಅಮಂಗಳಕರವಾದ, ದಾರುಣಾ - ಉತ್ಪಾತಗಳನ್ನು, ಪಶ್ಯಾಮಿ - ಕಾಣುತ್ತಿದ್ದೇನೆ, ಸನಿರ್ಘಾತಾ - ಸಿಡಿಲಿನಿಂದೊಡಗೂಡಿದ, ಮಹಾಸ್ವನಾ - ಮಹಾ ಧ್ವನಿಯುಳ್ಳ, ಉಲ್ಕಾಚ - ಉಲ್ಕವೂ ಸಹ, ದಿವಃ - ಅಂತರಿಕ್ಷದಿಂದ, ಇಹ - ಇಲ್ಲಿ, ಪತತಿ - ಬೀಳುವುದು. ॥ ೧೭ ॥ ಹೇ ರಾಮ - ಎಲೈ ಶ್ರೀರಾಮನೇ, ಮೇ - ನನ್ನ, ನಕ್ಷತ್ರಂ- ಜನ್ಮ ನಕ್ಷತ್ರವು, ಸೂರ್ಯಾಂಗಾರಕ ರಾಹುಭಿಃ-ಸೂರ್ಯ, ಅಂಗಾರಕ, ರಾಹು ಎಂಬ, ದಾರುಣೈಃ- ಕ್ರೂರಗಳಾದ, ಗ್ರಹೈಃ - ಗ್ರಹಗಳಿಂದ, ಅವಷ್ಟಬ್ಧಂ - ಆಕ್ರಾಂತವಾಗಿದೆಯೆಂದು ದೈವಜ್ಞಾಃ - ಜ್ಯೋತಿಶ್ಶಾಸ್ತ್ರಜ್ಞರು, ಆವೇದಯಂತಿಚ - ತಿಳಿಸುತ್ತಾರೆ. ॥ ೧೮ ॥ ಪ್ರಾಯೇಣ - ಬಹುತರವಾಗಿ, ಈ ದೃಶಾನಾಂ - ಇಂಥಾ, ನಿಮಿತ್ತಾನಾಂ - ನಿಮಿತ್ತಗಳು, ಸಮುದ್ಭವೇ - ಹುಟ್ಟಲು, ರಾಜಾ - ಅರಸು, ಮೃತ್ಯುಂ - ಮರಣವನ್ನು, ಆಪ್ನೋತಿಹಿ - ಹೊಂದುವನಷ್ಟೆ, ಘೋರಾಂ - ಭಯಂಕರವಾದ, ಆಪದಂವಾ - ವಿಪತ್ತನ್ನಾಗಲಿ, ಋಚ್ಛತಿಹಿ-ಹೊಂದುತ್ತಾನಷ್ಟೆ. ॥ ೧೯ ॥

ನ್ನಂಗೀಕರಿಸು; ಈಗಲೆ ನಿನಗೆ ಯೌವರಾಜ್ಯಪಟ್ಟಾಭಿಷೇಕವನ್ನು ಮಾಡುತ್ತೇನೆ. ॥ ೧೫ ॥ ಎಲೈ ಶ್ರೀರಾಮಚಂದ್ರನೆ! ಇದಲ್ಲದೆ ನಾನು ಸ್ವಪ್ನದಲ್ಲಿ ಬಹು ಭಯಂಕರಗಳಾದ ಅಮಂಗಳ ಸೂಚಕವಾದ ಉತ್ಪಾತಗಳನ್ನು ಕಾಣುತ್ತಿರುವೆನು; ಗುಡುಗುಗಳಿಂದೊಡಗೂಡಿದ ಉಲ್ಕಗಳು ಭಯಂಕರವಾದ ಶಬ್ದವನ್ನು ಮಾಡಿಕೊಂಡು ಬೀಳುತ್ತಿರುವುವು; ನನ್ನ ಜನ್ಮನಕ್ಷತ್ರವು ಕ್ರೂರಗ್ರಹಗಳಾದ ಸೂರ್ಯಾಂಗಾರಕ ರಾಹುಗಳಿಂದ ಆಕ್ರಾಂತವಾಗಿರುವುದೆಂದು ದೈವಜ್ಞರೆಲ್ಲರೂ ಹೇಳುತ್ತಿರುವರು. ಇಂತಹ ಅದ್ಭುತಗಳಾದರೆ ಅರಸನು ಮೃತ್ಯುವನ್ನೋ, ಭಯಂಕರವಾದ ವಿಪತ್ತನ್ನೋ ಹೊಂದುತ್ತಾನೆ. ಅಯ್ಯಾ ರಘುರಾಮನೇ! ಪ್ರಾಣಿಗಳ ಬುದ್ಧಿಯು ಅತಿಚಂಚಲವಾದುದು; ಆದುದರಿಂದ ನಿನಗೆ ಯೌವರಾಜ್ಯಾಭಿಷೇಕವನ್ನು ಮಾಡಬೇಕೆಂಬ ಬುದ್ಧಿಯು

ಚೇತೋ ನವಿಮುಹ್ಯತಿ ರಾಘವ ॥ ತಾವದೇವಾ ಭಿಷಿಂಚಸ್ವ ಚಲಾಹಿ ಪ್ರಾಣಿನಾಂ ಮತಿಃ ॥ ೨೦ ॥ ಅದ್ಯ ಚಂದ್ರೋಽಭ್ಯುಪಗತಃ ಪುಷ್ಯಾತ್ಪೂರ್ವಂ ಪುನರ್ವಸೂ ॥ ಶ್ವಃ ಪುಷ್ಯ ಯೋಗಂ ನಿಯತಂ ವಕ್ಷ್ಯಂತೇ ದೈವ ಚಿಂತಕಾಃ ॥೨೧॥ ತತಃ ಪುಷ್ಯೇಽ ಭಿಷಿಂಚಸ್ವ ಮನಸ್ತ್ವರಯತೀವ ಮಾಂ ॥ ಶ್ವಸ್ತ್ವಾಹ ಮಭಿಷೇಕ್ಷ್ಯಾಮಿ ಯೌವರಾಜ್ಯೇ ಪರಂತಪ ॥೨೨॥ ತಸ್ಮಾತ್ತ್ವಯಾಽದ್ಯಪ್ರ ಭೃತಿ ನಿಶೇಯಂ ನಿಯತಾತ್ಮನಾ ॥ ಸಹ ವಧ್ವೋಪವಸ್ತವ್ಯಾ ದರ್ಭ ಪ್ರಸ್ತರ ಶಾಯಿನಾ ॥ ೨೩ ॥ ಸುಹೃದಶ್ಚಾಪ್ರಮತ್ತಾಸ್ತ್ವಾಂ ರಕ್ಷಂತ್ವದ್ಯ ಸಮಂ

ಹೇ ರಾಘವ - ಎಲೈ ಶ್ರೀರಾಮನೇ, ತತ್ - ಆ ಕಾರಣ, ಯಾವದೇವ - ಎಷ್ಟರಲ್ಲಿ, ಮೇ - ನನ್ನ, ಚೇತಃ - ಮನಸ್ಸು, (ಮಾಂ - ನನ್ನನ್ನು,) ನವಿಮುಂಚತಿ - ಬಿಡುವದಿಲ್ಲವೊ, ತಾವದೇವ - ಅಷ್ಟ ರಲ್ಲಿಯೇ, ಅಭಿಷಿಂಚಸ್ವ - ಅಭಿಷಿಕ್ತನಾಗು, ಪ್ರಾಣಿನಾಂ - ದೇಹಧಾರಿಗಳ, ಮತಿಃ - ಬುದ್ಧಿಯು, ಚಲಾಹಿ - ಚಂಚಲವಷ್ಟೆ. ॥೨೦॥ ಅದ್ಯ - ಈಗ, ಚಂದ್ರಃ - ಚಂದ್ರನು, ಪುಷ್ಯಾತ್ - ಪುಷ್ಯ ನಕ್ಷತ್ರ ಕ್ಕಿಂತಲೂ, ಪೂರ್ವಂ-ಮೊದಲನೆಯದಾದ, ಪುನರ್ವಸೂ-ಪುನರ್ವಸೂ ನಕ್ಷತ್ರವನ್ನು, ಅಭ್ಯುಪಗತಃ - ಹೊಂದಿದ್ದಾನೆ, ಶ್ವಃ - ನಾಳೆ, ದೈವಚಿಂತಕಾಃ - ದೈವಜ್ಞರು, ಪುಷ್ಯಯೋಗಂ - ಚಂದ್ರನಿಗೆ ಪುಷ್ಯ ಯೋಗವು, ನಿಯತಂ - ಅಭಿಷೇಕಕ್ಕೆ ಪ್ರಶಸ್ತವಾಗಿರುವದೆಂದು, ವಕ್ಷ್ಯಂತೇ - ಹೇಳುತ್ತಿರುವರು, ತತಃ - ಆದಕಾರಣ, ಪುಷ್ಯೇ - ಪುಷ್ಯ ನಕ್ಷತ್ರದಲ್ಲಿ, ಅಭಿಷಿಂಚಸ್ವ - ಅಭಿಷಿಕ್ತನಾಗು, ಮನಃ - ಮನವು, ಮಾಂ - ನನ್ನನ್ನು, ತ್ವರಯತೀವ - ತ್ವರೆ ಮಾಡುವಂತಿದೆ, ಶ್ವಃ - ನಾಳೆ, ಅಹಂ - ನಾನು, ತ್ವಾಂ - ನಿನ್ನನ್ನು, ಯೌವರಾಜ್ಯೇ - ಯೌವರಾಜ್ಯದಲ್ಲಿ, ಅಭಿಷೇಕ್ಷ್ಯಾಮಿ - ಅಭಿಷೇಕ ಮಾಡು ವೆನು. ॥ ೨೨ ॥ ತಸ್ಮಾತ್ - ಆದ್ದರಿಂದ, ಅದ್ಯಪ್ರಭೃತಿ - ಇಂದು ಮೊದಲ್ಗೊಂಡು, ನಿಯತಾ ತ್ಮನಾ - ನಿಯಮಿತವಾದ ಮನವುಳ್ಳ, ದರ್ಭಪ್ರಸ್ತರಶಾಯಿನಾ - ದರ್ಭಾಸ್ತರಣದಲ್ಲಿ ಶಯನ ಮಾಡು ತ್ತಿರುವ, ತ್ವಯಾ - ನಿನ್ನಿಂದ, ವಧ್ವಾಸಹ - ಪತ್ನಿಯೊಡನೆ, ಇಯಂನಿಶಾ - ಈ ರಾತ್ರಿಯು, ಉಪವಸ್ತವ್ಯಾ - ಉಪವಾಸ ಮಾಡತಕ್ಕುದು. ॥ ೨೩ ॥ ಸುಹೃದಃ - ಸ್ನೇಹಿತರು, ಅಪ್ರಮತ್ತಾಃ - ಜಾಗರೂಕರಾಗಿ, ತ್ವಾಂ - ನಿನ್ನನ್ನು, ಸಮಂತತಃ - ಎಲ್ಲೆಡೆಗಳಲ್ಲಿಯೂ, ಅದ್ಯ - ಈಗ, ರಕ್ಷಂತು - ಸಂರಕ್ಷಿಸಲಿ, ಹಿ - ಯಾವ ಕಾರಣ, ಏವಂ ವಿಧಾನಿ - ಇಂತಹ, ಕಾರ್ಯಾಣಿ - ಕೆಲಸಗಳು,

---

ನನ್ನನ್ನೆದುವರೆವಿಗೂ ತ್ಯಜಿಸುವುದಿಲ್ಲವೋ, ಅದರೊಳಗಾಗಿ ನೀನು ಪಟ್ಟಾಭಿಷಿಕ್ತನಾಗು. ॥ ೨೦ ॥ ಈಗ ಚಂದ್ರನು ಪುಷ್ಯನಕ್ಷತ್ರಕ್ಕಿಂತಲೂ ಮೊದಲನೆಯದಾದ ಪುನರ್ವಸೂನಕ್ಷತ್ರ ದಲ್ಲಿರುವನು. ನಾಳೆಯದಿನ ಪುಷ್ಯನಕ್ಷತ್ರವನ್ನು ಹೊಂದುವನು. ಈ ನಕ್ಷತ್ರವು ಅಭಿಷೇಕ ಕಾರ್ಯಕ್ಕೆ ಪ್ರಶಸ್ತವಾದುದೆಂದು ದೈವಜ್ಞರು ಹೇಳುತ್ತಿರುವರು. ಆ ಪುಷ್ಯನಕ್ಷತ್ರಯೋಗ ದಲ್ಲಿ ನಿನಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದು ನನ್ನ ಮನದಲ್ಲಿ ಬಹು ತ್ವರಿತವಾದ ಲವ ಲವಿಕೆಯಿರುವುದು. ಎಲೈ ಶತ್ರುಸಂಹಾರಕನಾದ ರಾಘವನೆ! ಆದುದರಿಂದ ನೀನು ಈ ಹಗಲಿರಳೂ ನಿಯಮಿತವಾದ ಮನವುಳ್ಳವನಾಗಿ ದರ್ಭಾಸ್ತರಣಶಾಯಿಯಾಗಿ ನಿನ್ನ ಪತ್ನಿಯೊ ಡನೆ ಉಪವಾಸವಿರುವವನಾಗು. ॥ ೨೩ ॥ ಇಂತಹ ಸತ್ಕಾರ್ಯಗಳಿಗೆ ವಿಘ್ನಗಳನೇಕ

ತತಃ ‖ ಭವಂತಿ ಬಹುವಿಘ್ನಾನಿ ಕಾರ್ಯಾಣ್ಯೇವಂ ವಿಧಾನಿಹಿ ‖ ೨೪ ‖ ವಿಪ್ರೋಷಿತಶ್ಚ ಭರತೋ ಯಾವದೇವ ಪುರಾದಿತಃ ‖ ತಾವದೇವಾಭಿಷೇಕಸ್ತೇ ಪ್ರಾಪ್ತಕಾಲೋ ಮತೋ ಮಮ ‖ ೨೫ ‖ ಕಾಮಂ ಖಲು ಸತಾಂ ವೃತ್ತೇ ಭ್ರಾತಾ ತೇ ಭರತಃ ಸ್ಥಿತಃ ‖ ಜ್ಯೇಷ್ಠಾನುವರ್ತೀ ಧರ್ಮಾತ್ಮಾ ಸಾನುಕ್ರೋಶೋ ಜಿತೇಂದ್ರಿಯಃ ‖ ೨೬ ‖ ಕಿಂತು ಚಿತ್ತಂ ಮನುಷ್ಯಾಣಾಮನಿತ್ಯಮಿತಿ

ಬಹು ವಿಘ್ನಾನಿ - ಅನೇಕ ವಿಘ್ನಗಳುಳ್ಳವುಗಳು, ಭವಂತಿ - ಆಗುವವೋ. ‖ ೨೪ ‖ ಭರತಶ್ಚ - ಭರತನು ಸಹ, ಇತಃಪುರಾತ್ - ಈ ಪಟ್ಟಣದಿಂದ, ಯಾವ ದೇವ - ಎಷ್ಟರಲ್ಲಿ, ವಿಪ್ರೋಷಿತಃ - (೧) ಹೊರಗೆ ಕಳುಹಲ್ಪಟ್ಟಿರುವನೋ, ತಾವದೇವ - ಅಷ್ಟರಲ್ಲಿಯೆ, ಪ್ರಾಪ್ತಕಾಲ ಇತಿ - ಸಂಪ್ರಾಪ್ತ ವಾದ ಯೋಗ್ಯ ಕಾಲವುಳ್ಳುದೆಂದು, ಮಮ - ನನಗೆ, ಸಮ್ಮತಃ - ಸಮ್ಮತವಾಗಿದೆ. ‖ ೨೫ ‖ ತೇ - ನಿನ್ನ, ಭ್ರಾತಾ - ಅನುಜನಾದ, ಭರತಃ - ಭರತನು, ಸತಾಂ - ಸತ್ಪುರುಷರ, ವೃತ್ತೇ - ನಡತೆಯಲ್ಲಿ, ಕಾಮಂ - ಅತ್ಯಂತವಾಗಿ, ಸ್ಥಿತಃಖಲು - ಇರುತಿರುವನಷ್ಟೆ, ಜ್ಯೇಷ್ಠಾನುವರ್ತೀ - ಅಣ್ಣ ನನ್ನನುವರ್ತಿಸುವವನು, ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳವನು, ಸಾನುಕ್ರೋಶಃ - (ಮ) ದಯೆಯಿಂದೊಡಗೂಡಿದವನು, (ಗೋ) ನಿಂದಿತವಾದ ಕಾರ್ಯದಲ್ಲಿ ಜುಗುಪ್ಸೆಯಿಂದೊಡಗೂಡಿ ದವನು, ಜಿತೇಂದ್ರಿಯಃ - ಜಯಿಸಲ್ಪಟ್ಟ ಇಂದ್ರಿಯಗಳುಳ್ಳವನು. ‖ ೨೬ ‖ ಕಿಂತು - ಹಾಗಾ ದರೂ, ಮನುಷ್ಯಾಣಾಂ - ಮನುಷ್ಯರ, ಚಿತ್ತಂ - ಮನವು, ಅನಿತ್ಯಮಿತಿ - ನಿತ್ಯವಲ್ಲವೆಂದು,

---

ವುಂಟಾಗುವುದರಿಂದೀರಾತ್ರಿ ನಿನ್ನ ಮಿತ್ರರೆಲ್ಲರೂ ನಿನ್ನನ್ನು ರಕ್ಷಿಸಿಕೊಂಡಿರಲಿ. ಭರತನೀಗೆ ಗ್ರಾಮಾಂತರಕ್ಕೆ ಹೋಗಿರುವನು; ಇದೇ ನಿನ್ನ ಅಭಿಷೇಕಕ್ಕೆ ತಕ್ಕ ಸಮಯವೆಂದು ನನಗೆ ತೋರುತ್ತಿರುವುದು. ಆದರೆ ನಿನ್ನನುಜನಾದ ಭರತನು ಬಹುವಾಗಿ ಸತ್ಪುರುಷರ ಆಚಾರವಲ್ಲಿಯೇ ಇರುವವನು; ಅಣ್ಣನಾದ ನಿನ್ನನ್ನೇ ಹಿಂಬಾಲಿಸುವವನು; ಧರ್ಮ ಸ್ವಭಾವವುಳ್ಳವನೂ, ನಿಂದಿತ ಕಾರ್ಯಕಲಾಪಗಳಲ್ಲಿ ಜುಗುಪ್ಸೆಯುಳ್ಳವನೂ, ಜಿತೇಂದ್ರಿ ಯನೂ ಆಗಿರುವನು. ಇಷ್ಟಾದರೂ ಮಾನುಷಚಿತ್ತವು ಚಂಚಲವಾದುದು. ಆದುದರಿಂದ ಇಂತಹ ಗುಣವಂತನಾದರೂ, ಆತನ ಮತಿಯು ದುರ್ಬೋಧನೆಯಿಂದ ರಾಜ್ಯದಲ್ಲಿ

ಟಿ. (೧) ದಶರಥರಾಜನು "ಭರತನು ದೂರ ದೇಶಕ್ಕೆ ಕಳುಹಲ್ಪಟ್ಟಿರುವನು, ಇದೇ ಸಮಯವು ನಿನ್ನ ಪಟ್ಟಾಭಿ ಷೇಕಕ್ಕೆ ಯೋಗ್ಯವಾಗಿದೆ" ಎಂದು ಹೇಳಲು ಒಂದು ಕಾರಣವಿರಬೇಕು. ದಶರಥರಾಯನು ಕೇಕಯ ರಾಜನಿಗೆ ರಾಜ್ಯ ಶುಲ್ಕವನ್ನು ಕೊಟ್ಟು ಕೈಕೇಯಿಯನ್ನು ಮದುವೆಯಾದನು. ಅದನ್ನು ನೆನಪಿನಲ್ಲಿಟ್ಟುಕೊಂಡಿದ್ದು ಹೀಗೆ ಹೇಳಿರ ಬಹುದೆಂದೂ, ಇದಕ್ಕೆ ಇದೇ ಕಾಂಡದ ೧೦೭ ನೆಯ ಸರ್ಗದಲ್ಲಿ ಈ ವೃತ್ತಾಂತವು "ಪುರಾಭ್ರಾತಃ..........." ಎಂಬ ಶ್ಲೋಕದಿಂದ ವಿದಿತವಾಗುವುದೆಂದೂ **ಗೋವಿಂದರಾಜರ** ಅಭಿಪ್ರಾಯ. **ಮಹೇಶ್ವರ ತೀರ್ಥರು** ಮೊದಲ ನೆಯ ಅಭಿಪ್ರಾಯವನ್ನು ಒಪ್ಪಿದರೂ "ಅಥವ ಭರತನ ಸಾಧುವೃತ್ತಿಯನ್ನರಿತ್ತಿದ್ದರೂ ಯಾವದೇವ ಮೇಚೇತಃ ಎಂಬುದರಿಂದ ತನ್ನ ಬುದ್ಧಿಯ ವಿಷಯದಲ್ಲಿಯೂ ಶಂಕಿಸಿದಂತೆ ಭರತನ ಚಿತ್ತವೃತ್ತಿಯಲ್ಲಿಯೂ ಶಂಕಿಸಿ ಹೀಗೆ ಹೇಳಿದ ನೆಂದು" ಬರೆದಿರುತ್ತಾರೆ.

ನೋಮತಿಃ ॥ ಸತಾಂ ತು ಧರ್ಮನಿತ್ಯಾನಾಂ ಕೃತಶೋಭಿ ಚ ರಾಘವ ॥ ೨೭ ॥
ಇತ್ಯುಕ್ತ ಸ್ಸೋಽಭ್ಯನುಜ್ಞಾತ ಶ್ಶ್ವೋಭಾವಿ ನ್ಯಭಿಷೇಚನೇ ॥ ವ್ರಜೇತಿ ರಾಮಃ
ಪಿತರ ಮಭಿವಾದ್ಯಾ ಭ್ಯಯಾದ್ಗೃಹಂ ॥ ೨೮ ॥ ಪ್ರವಿಶ್ಯ ಚಾತ್ಮನೋ ವೇಶ್ಮ
ರಾಜ್ಞೋದ್ದಿಷ್ಟೇಽಭಿಷೇಚನೇ ॥ ತತ್ಕ್ಷಣೇನ ಚ ನಿರ್ಗಮ್ಯ ಮಾತುರಂತಃಪುರಂ
ಯಯೌ ॥ ೨೯ ॥ ತತ್ರತಾಂ ಪ್ರವಣಾಮೇವ ಮಾತರಂ ಕ್ಷೌಮ ವಾಸಿನೀಂ ॥
ವಾಗ್ಯತಾಂ ದೇವತಾಗಾರೇ ದದರ್ಶಾಯಾಚತೀಂ ಶ್ರಿಯಂ ॥ ೩೦ ॥ ಪ್ರಾಗೇವ

ಮೇ - ನನ್ನ, ಮತಿಃ - ನಿಶ್ಚಯವು, ಹೇ ರಾಘವ - ಎಲೈ ಶ್ರೀರಾಮನೇ, ಧರ್ಮ ನಿತ್ಯಾನಾಂ - ಧರ್ಮದಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳ, ಸತಾಂತು - ಸತ್ಪುರುಷರಿಗೂ ಸಹ, (ಚೇತಃ - ಮನಸ್ಸು,) ಕೃತಶೋಭಿಚ - (ಮ) ಮತ್ತೊಬ್ಬರಿಂದ ಮಾಡಲ್ಪಟ್ಟ ಪ್ರಕಾಶವುಳ್ಳದು, (ಗೋ) ಧರ್ಮ ನಿತ್ಯಾನಾಂ- ಧರ್ಮಿಷ್ಠರಾದ, ಸತಾಂ - ಸತ್ಪುರುಷರ, ಚೇತಃ - ಮನಸ್ಸು, ಕೃತಶೋಭಿ, ಕೃತ - ಮಾಡಲ್ಪಟ್ಟ ಪರಸ್ಪರೋಪಕಾರದಿಂದ, ಶೋಭಿ - ಶೋಭಾಯಮಾನವಾದುದು, (ತ) ಕೃತಶೋಭಿ - ಮಾಡಲ್ಪಟ್ಟ ಮಿತ್ರ ಭೇದಾದಿಗಳಿಂದ ಕ್ಷೋಭಿಸುವ ಸ್ವಭಾವವುಳ್ಳದು, (ತಿ) ಮಾಡಲ್ಪಟ್ಟ ಕಾರ್ಯದಿಂದಲೇ ಶೋಭಿಸುತ್ತಿರುವುದು. ॥ ೨೭ ॥ ಇತಿ - ಈಪರಿಯಾಗಿ, ಶ್ವಃ - ನಾಳೆ, ಭಾವಿನಿ - ಆಗತಕ್ಕ, ಅಭಿಷೇಚನೇ - ಪಟ್ಟಾಭಿಷೇಕದ ವಿಷಯದಲ್ಲಿ, ಉಕ್ತಃ - ಹೇಳಲ್ಪಟ್ಟವನಾಗಿ, ವ್ರಜೇತಿ - ಹೋಗೆಂದು, ಅಭ್ಯನುಜ್ಞಾತಃ - ಆಜ್ಞಾಪಿಸಲ್ಪಟ್ಟ, ಸರಾಮಃ - ಆ ಶ್ರೀರಾಮನು, ಪಿತರಂ - ಜನಕನನ್ನು ಕುರಿತು, ಅಭಿವಾದ್ಯ - ವಂದಿಸಿ, ಗೃಹಂ - ಮನೆಯನ್ನು ಕುರಿತು, ಅಭ್ಯಯಾತ್ - ತೆರಳಿದನು. ॥ ೨೮ ॥ ಆತ್ಮನಃ - ತನ್ನ, ವೇಶ್ಮ - ಮನೆಯನ್ನು, ಪ್ರವಿಶ್ಯಚ - ಪ್ರವೇಶವನ್ನು ಮಾಡಿ, ಅಭಿಷೇಚನೆ- ಯೌವ ರಾಜ್ಯಪಟ್ಟಾಭಿಷೇಕವು, ರಾಜ್ಞಾ - ಅರಸಿನಿಂದ, ಉದ್ದಿಷ್ಟೇ - ಉದ್ದೇಶಮಾಡಲ್ಪಟ್ಟುದಾಗಲು, ತತ್ಕ್ಷಣೇನಚ - ಆಕ್ಷಣದಲ್ಲಿಯೇ, ನಿರ್ಗಮ್ಯ - ಹೊರಟು, ಮಾತುಃ - ತಾಯಿಯ, ಅಂತಃಪುರಂ - ಅಂತಃಪುರವನ್ನು ಕುರಿತು, ಯಯೌ - ತೆರಳಿದನು. ॥ ೨೯ ॥ ತತ್ರದೇವತಾಗಾರೇ - ಆ ದೇವರ ಮನೆಯಲ್ಲಿ, ಪ್ರವಣಾಂ - ತನ್ನ ಉಪಾಸ್ಯಮಾನ ದೇವತೆಯಲ್ಲಿ ಅಧೀನಚಿತ್ತಳಾದ, ಕ್ಷೌಮ ವಾಸಿನೀಂ - ಪಟ್ಟುವಸ್ತ್ರವನ್ನುಟ್ಟಿರುವ, ವಾಗ್ಯತಾಂ - ವಾಙ್ನಿಯಮನಿಷ್ಠಳಾದ, ಶ್ರಿಯಂ - ಲಕ್ಷ್ಮಿಯನ್ನು, ಆಯಾಚತೀಂ - ಪ್ರಾರ್ಥಿಸುತ್ತಿರುವ, ಮಾತರಂ - ತಾಯಿಯಾದ ಕೌಸಲ್ಯಾದೇವಿಯನ್ನು, ದದರ್ಶ - ಕಂಡನು. ॥ ೩೦ ॥ ತತ್ರ - ಅಲ್ಲಿ, ಸುಮಿತ್ರಾ - ಸುಮಿತ್ರಾದೇವಿಯು, ಪ್ರಾಗೇವ -

---

ಆಶೆಯುಳ್ಳದಾಗುವುದೇನೋ ಎಂಬ ಶಂಕೆಯಿರುವುದು. ಸತ್ಪುರುಷರ ಮನವು ಸಹ ದುರ್ಬೋಧನೆಗೆ ತುತ್ತಾಗಿ ಪ್ರಕಾಶಕ್ಕೆ ಬರುವುದು. ಆದುದರಿಂದ ನೀನೀಗ ಬೇಗನೆ ಪಟ್ಟಾಭಿಷಿಕ್ತನಾಗು." ದಶರಥರಾಯನೀರೀತಿ ನುಡಿಯಲು ಶ್ರೀರಾಮ ಮೂರ್ತಿಯು ಆತನ ಅಪ್ಪಣೆಯನ್ನು ತೆಗೆದುಕೊಂಡು ವಂದನೆಯುಂಗೈದು ನಿಜಮಂದಿರವನ್ನು ಕುರಿತು ತೆರಳಿದವನಾದನು. ॥ ೨೮ ॥ ಹೀಗೆ ಯೌವರಾಜ್ಯಾಭಿಷೇಕವು ನಿಶ್ಚಿತವಾಗಲು ಆ ರಘುನಂದನನು ನಿಜಮಂದಿರವನ್ನು ಸೇರಿ ತಕ್ಷಣದಲ್ಲಿಯೇ ಜನನಿಯಾದ ಕೌಸಲ್ಯಾದೇವಿಯ ಅಂತಃಪುರವನ್ನು ಹೊಂದಿದವನಾದನು. ಅಲ್ಲಿಯಾದರೋ ಪಟ್ಟುವಸ್ತ್ರವನ್ನುಟ್ಟು ದೇವತಾಗಾರದಲ್ಲಿ

ಚಾಗತಾ ತತ್ರ ಸುಮಿತ್ರಾ ಲಕ್ಷ್ಮಣಸ್ತದಾ ‖ ಸೀತಾ ಚಾನಾಯಿತಾ ಶ್ರುತ್ವಾ ಪ್ರಿಯಂ ರಾಮಾಭಿಷೇಚನಂ ‖ ೩೧ ‖ ತಸ್ಮಿನ್ ಕಾಲೇಹಿ ಕೌಸಲ್ಯಾ ತಸ್ಥಾವಾ ಮೀಲಿತೇಕ್ಷಣಾ ‖ ಸುಮಿತ್ರಯಾನ್ವಾಸ್ಯಮಾನಾ ಸೀತಯಾ ಲಕ್ಷ್ಮಣೇನಚ ‖ ೩೨ ‖ ಶ್ರುತ್ವಾತು ಪುಷ್ಯೇ ಪುತ್ರಸ್ಯ ಯೌವರಾಜ್ಯಾಭಿಷೇಚನಂ ‖ ಪ್ರಾಣಾ ಯಾಮೇನ ಪುರುಷಂ ಧ್ಯಾಯಮಾನಾ ಜನಾರ್ದನಂ ‖ ೩೩ ‖ ತಥಾ ಸನ್ನಿ ಯಮಾಮೇವ ಸೋಭಿಗಮ್ಯಾಭಿವಾದ್ಯಚ ‖ ಉವಾಚ ವಚನಂ ರಾಮೋ

ಮೊದಲೇ, ಆಗತಾಚ - ಬಂದಿದ್ದಳು, ತದಾ - ಆ ಕಾಲದಲ್ಲಿ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಆಗತಃ- ಬಂದನು, ಪ್ರಿಯಂ - ಇಷ್ಟವಾದ, ರಾಮಾಭಿಷೇಚನಂ - ಶ್ರೀರಾಮ ಪಟ್ಟಾಭಿಷೇಚನ ವಿಷಯವನ್ನು, ಶೃತ್ವಾ-ಕೇಳಿ, ಸೀತಾಚ - ಸೀತಾದೇವಿಯು ಸಹ, ಆನಾಯಿತಾ - ಕರೆಯಿಸಲ್ಪಟ್ಟಳು. ‖೩೧‖ ತಸ್ಮಿನ್ ಕಾಲೇ - ಆ ಶ್ರೀರಾಮನು ಬರುವ ವೇಳೆಯಲ್ಲಿ, ಪುತ್ರಸ್ಯ - ಶ್ರೀರಾಮನಿಗೆ, ಪುಷ್ಯೇಣ - ಪುಷ್ಯ ನಕ್ಷತ್ರದಲ್ಲಿ, ಯೌವರಾಜ್ಯಾಭಿಷೇಚನಂ - ಯೌವರಾಜ್ಯ ಪಟ್ಟಾಭಿಷೇಕವೆಂಬುದನ್ನು, ಶೃತ್ವಾ - ಕೇಳಿ, ಸುಮಿತ್ರಯಾ - ಸುಮಿತ್ರಾದೇವಿಯಿಂದಲೂ, ಸೀತಯಾ - ಸೀತಾದೇವಿಯಿಂದಲೂ, ಲಕ್ಷ್ಮಣೇನಚ - ಲಕ್ಷ್ಮಣಸ್ವಾಮಿಯಿಂದಲು ಸಹ, ಅನ್ವಾಸ್ಯಮಾನಾ - ಉಪಾಸಿಸಲ್ಪಡುತ್ತಿರುವ, ಕೌಸಲ್ಯಾ - ಕೌಸ ಲ್ಯಾದೇವಿಯು, ಪ್ರಾಣಾಯಾಮೇನ - ಪ್ರಾಣಾಯಾಮ ಪುರಸ್ಸರವಾಗಿ, ಪುರುಷಂ - (ಗೋ) ಪುರುಷ ಸೂಕ್ತ ಪ್ರತಿಪಾದ್ಯನಾದ (ಮ) ಪರಮ ಪುರುಷನಾದ, ಜನಾರ್ದನಂ - ನಾರಾಯಣನನ್ನು, ಧ್ಯಾಯ ಮಾನಾ - ಧ್ಯಾನಿಸುತ್ತ, ಆಮೀಲಿತೇಕ್ಷಣಾ - ಮುಕುಳಿತವಾದ ನೇತ್ರಗಳುಳ್ಳವಳಾಗಿ, ತಸ್ಥೌ - ನಿಂತಿದ್ದಳು. ‖೩೨-೩೩‖ ತದಾ - ಆ ವೇಳೆಯಲ್ಲಿ, ರಾಮಃ - ಶ್ರೀರಾಮನು, ತಥಾ - ಆ ಪರಿಯಾಗಿ, ಸನ್ನಿಯಮಾಮೇವ - ಸಮೀಚೀನವಾದ ನಿಯಮ ನಿಷ್ಠಾಪರಳೇ ಆದ, ಮಾತರಂ - ತಾಯಿಯನ್ನು ಕುರಿತು, ಅಭಿಗಮ್ಯ - ಸಮೀಪಿಸಿ, ಅಭಿವಾದ್ಯಚ - ನಮಸ್ಕಾರವನ್ನೂ ಮಾಡಿ, ತಾಂ - ಆಕೆಯನ್ನು, ಹರ್ಷಯನ್ - ಸಂತೋಷಗೊಳಿಸುತ್ತ, ಇದಂ ವಚನಂ - ಈ ಮಾತನ್ನು, ಉವಾಚ - ಹೇಳಿದನು.

ಕಾಯುತ್ತ ಚಿತ್ತಳಾಗಿ ಇಷ್ಟದೇವತೆಯನ್ನು ಧ್ಯಾನಿಸುತ್ತಿರುವವಳೂ, ವಾಙ್ನಿಯಮವುಳ್ಳವ ಳೂ, ತನಗೆ ಐಶ್ವರ್ಯವನ್ನು ಯಾಚಿಸುತ್ತಿರುವವಳೂ, ನಿಜ ಜನನಿಯೂ ಆದ ಕೌಸಲ್ಯಾದೇ ವಿಯನ್ನು ಕಂಡವನಾದನು. ಸುಮಿತ್ರಾದೇವಿಯೂ ಲಕ್ಷ್ಮಣನೂ ಅಲ್ಲಿ ಬಂದಿದ್ದರು. ಪ್ರಿಯಂ ಕರವಾದ ಶ್ರೀರಾಮ ಮೂರ್ತಿಯ ರಾಜ್ಯಾಭಿಷೇಕ ವಾರ್ತೆಯನ್ನು ಕೇಳಿ ಸೀತಾದೇವಿಯೂ ಸಹ ಕರೆಯಿಸಲ್ಪಟ್ಟದ್ದಳು. ಆ ರಘುನಂದನನು ಬರುವ ವೇಳೆಯಲ್ಲಿ ಕೌಸಲ್ಯಾದೇವಿ ಯು, ಪುತ್ರನಾದ ಶ್ರೀರಾಮನ ಯೌವರಾಜ್ಯಾಭಿಷೇಕೋತ್ಸವವಾರ್ತೆಯನ್ನು ಕೇಳಿ ಸುಮಿತ್ರೆ ಯಿಂದಲೂ, ಲಕ್ಷ್ಮಣ ಮೂರ್ತಿಯಿಂದಲೂ, ಸೀತಾದೇವಿಯಿಂದಲೂ ಸಹ ಸೇವಿತಳಾಗಿ ಇಷ್ಟ ದೇವತೆಯೂ, ಪರಮ ಪುರುಷನೂ ಆದ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ ಮುಕುಳಿತ ನಯನಳಾಗಿದ್ದಳು. ‖೩೩‖ ಆ ಸಮಯದಲ್ಲಿ ಶ್ರೀರಾಮನು ಈರೀತಿ ಪ್ರಾಣಾಯಾಮಪೂರ್ವಕ ವಾಗಿ ನಿಯಮವನ್ನಾಚರಿಸುತ್ತಿರುವ ತನ್ನ ತಾಯಿಯನ್ನು ವಂದಿಸಿ ಆಕೆಗೆ ಆನಂದವನ್ನುಂಟು

ಹರ್ಷಯಂ ಸ್ತ್ವಾಮನಿಂದಿತಾಂ ॥ ೩೪ ॥ ಅಂಬ ಪಿತ್ರಾ ನಿಯುಕ್ತೋಸ್ಮಿ ಪ್ರಜಾಪಾಲನ ಕರ್ಮಣಿ ॥ ಭವಿತಾಶ್ವೋಭಿಷೇಕೋ ಮೇ ಯಥಾ ಮೇ ಶಾಸನಂ ಪಿತುಃ ॥ ೩೫ ॥ ಸೀತಯಾಪ್ಯುಪವಸ್ತವ್ಯಾ ರಜನೀಯಂ ಮಯಾ ಸಹ ॥ ಏವಮೃತ್ವಿಗುಪಾಧ್ಯಾಯೈಸ್ಸಹಮಾಮುಕ್ತವಾನ್ಪಿತಾ ॥ ೩೬ ॥ ಯಾನಿಯಾನ್ಯತ್ರ ಯೋಗ್ಯಾನಿ ಶ್ವೋಭಾವಿನ್ಯಭಿಷೇಚನೇ ॥ ತಾನಿ ಮೇ ಮಂಗಳಾನ್ಯದ್ಯ ವೈದೇಹ್ಯಾಶ್ಚೈವ ಕಾರಯ ॥ ೩೭ ॥ ಏತಚ್ಛ್ರುತ್ವಾತು ಕೌಸಲ್ಯಾ ಚಿರಕಾಲಾಭಿ ಕಾಂಕ್ಷಿತಂ ॥ ಹರ್ಷ ಬಾಷ್ಪಾಕುಲಂ ವಾಕ್ಯಮಿದಂ ರಾಮಮಭಾಷತ ॥ ೩೮ ॥ ವತ್ಸ ರಾಮ ಚಿರಂಜೀವ ಹತಾಸ್ತೇ ಪರಿಪಂಥಿನಃ ॥

॥ ೩೪ ॥ ಹೇ ಅಂಬ - ಎಲೌ ತಾಯೆ! ಪಿತ್ರಾ - ತಂದೆಯಾದ ದಶರಥನಿಂದ, ಪ್ರಜಾಪಾಲನ ಕರ್ಮಣಿ - ಪ್ರಜಾಪರಿಪಾಲನ ಕೃತ್ಯದಲ್ಲಿ, ನಿಯುಕ್ತಃ - ನಿಯೋಗಿಸಲ್ಪಟ್ಟವನು, ಅಸ್ಮಿ - ಆದೆನು, ಮೇ ಪಿತುಃ - ನನ್ನ ತಂದೆಯ, ಶಾಸನಂ - ಆಜ್ಞೆಯು, ಯಥಾ - ಹೇಗೋ, ತಥಾ - ಹಾಗೆ, ಅಭಿಷೇಕಃ - ಪಟ್ಟಾಭಿಷೇಕವು, ಶ್ವಃ - ನಾಳೆ, ಭವಿತಾ - ಆಗುವದು. ॥ ೩೫ ॥ ಮಯಾಸಹ - ನನ್ನಿಂದಲೂ, ಸೀತಯಾಪಿ - ಸೀತಾದೇವಿಯಿಂದಲೂ, ಇಯಂನಿಶಾ - ಈ ರಾತ್ರಿಯು, ಉಪವಸ್ತವ್ಯಾ - ಉಪವಾಸವಿರತಕ್ಕದು, ಏವಂ - ಈ ಪರಿಯಾಗಿ, ಋತ್ವಿಗುಪಾಧ್ಯಾಯೈಸ್ಸಹ - ಋತ್ವಿಗುಪಾಧ್ಯಾಯರೊಡನೆ, ಪಿತಾ - ಜನಕನು, ಮಾಂ - ನನ್ನನ್ನು ಕುರಿತು, ಉಕ್ತವಾನ್ - ಹೇಳಿದನು. ॥ ೩೬ ॥ ಶ್ವಃ - ನಾಳೆ, ಭಾವಿನಿ - ಆಗತಕ್ಕ, ಅತ್ರ ಅಭಿಷೇಚನೇ - ಈ ಯೌವರಾಜ್ಯ ಪಟ್ಟಾಭಿಷೇಕದಲ್ಲಿ, ಯಾನಿಯಾನಿ - ಯಾವಯಾವವು, ಯೋಗ್ಯಾನಿ - ಯುಕ್ತವಾಗಿರುವವೋ, ತಾನಿಮಂಗಳಾನಿ - ಆ ಮಂಗಳ ಕಾರ್ಯವನ್ನು, ಅದ್ಯ - ಈಗ, ಮೇ - ನನಿಗೂ, ವೈದೇಹ್ಯಾಶ್ಚೈವ - ಸೀತಾದೇವಿಗೂ, ಕಾರಯ ಮಾಡಿಸು. ॥ ೩೭ ॥ ಕೌಸಲ್ಯಾ - ಕೌಸಲ್ಯಾದೇವಿಯು, ಚಿರಕಾಲಾಭಿ ಕಾಂಕ್ಷಿತಂ - ಬಹು ಕಾಲದಿಂದ ಅಪೇಕ್ಷಿಸುತ್ತಿರುವ, ಏತತ್ತು - ಈ ಮಾತನ್ನು, ಶ್ರುತ್ವಾ - ಕೇಳಿ, ಹರ್ಷ ಬಾಷ್ಪಾಕುಲಂ - ಆನಂದಬಾಷ್ಪಗಳಿಂದ, ವ್ಯಕ್ತ-ಮಧುರವಾದ, ಇದಂ ವಾಕ್ಯಂ - ಈ ಮಾತನ್ನು, ರಾಮಂ - ಶ್ರೀರಾಮನನ್ನು ಕುರಿತು, ಅಭಾಷತ - ಹೇಳಿದಳು. ॥ ೩೮ ॥ ಹೇ ರಾಮ - ಎಲೈ ಶ್ರೀರಾಮನೆ,

---

ಮಾಡುತ್ತ ಆಕೆಯನ್ನು ಕುರಿತು, "ಜನನೀ! ಪ್ರಜಾಪಾಲನ ಕಾರ್ಯದಲ್ಲಿ ತಂದೆಯಿಂದ ನಿಯೋಗಿತನಾಗಿರುವೆನು. ನನ್ನ ಜನಕನಾಣತಿಯಂತೆ ನಾಳೆಯ ದಿನ ಯೌವರಾಜ್ಯ ಪಟ್ಟಾಭಿಷೇಕವಾಗುವುದು. ಆದಕಾರಣ ನಾನೂ, ಸೀತಾದೇವಿಯೂ ಈ ರಾತ್ರಿ ಉಪವಾಸವಿರಬೇಕೆಂದು ನನ್ನ ತಂದೆಯು, ಋತ್ವಿಕ್ಕುಗಳಿಂದಲೂ, ಉಪಾಧ್ಯಾಯರಿಂದಲೂ ಒಡಗೂಡಿದವನಾಗಿ ನಿರೂಪವಿತ್ತಿರುವನು. ನಾಳೆಯ ದಿವಸದಲ್ಲಿ ಆಗತಕ್ಕ ಪಟ್ಟಾಭಿಷೇಕ ಮಹೋತ್ಸವದಲ್ಲಿ ನನಗೂ, ಸೀತಾದೇವಿಗೂ ಯಾವ ಯಾವ ಅಲಂಕಾರಗಳು ಯೋಗ್ಯವಾಗಿರುವುವೋ ಅಂತಹವುಗಳನ್ನು ಮಾಡಿಸುವವಳಾಗು" ಎಂದನು. ॥ ೩೭ ॥ ಇಂತು ನುಡಿದ ತನ್ನ ಕುವರನ ನುಡಿಗಳನ್ನು ಕೇಳಿದ ಕೌಸಲ್ಯಾದೇವಿಯು ತನ್ನ ಮನಸ್ಸಿನಲ್ಲಿದ್ದ

ಜ್ಞಾತೀನ್ಮೇ ತ್ವಂ ಶ್ರಿಯಾಯುಕ್ತ ಸ್ಸುಮಿತ್ರಾಯಾಶ್ಚ ನಂದಯ ‖ ೩೯ ‖ ಕಲ್ಯಾಣೇ ಬತ ನಕ್ಷತ್ರೇ ಮಯಿ ಜಾತೋಸಿ ಪುತ್ರಕ ‖ ಯೇನ ತ್ವಯಾ ದಶರಥೋ ಗುಣೈರಾರಾಧಿತಃ ಪಿತಾ ‖ ೪೦ ‖ ಅಮೋಘಂ ಬತ ಮೇ ಕ್ಷಾಂತಂ ಪುರುಷೇ ಪುಷ್ಕರೇಕ್ಷಣೇ ‖ ಯೇಯಮಿಕ್ಷ್ವಾಕು ರಾಜ್ಯಶ್ರೀಃ ಪುತ್ರತ್ವಾಂ ಸಂಶ್ರಯಿಷ್ಯತಿ ‖ ೪೧ ‖ ಇತ್ಯೇವಮುಕ್ತೋ ಮಾತ್ರೇದಂ ರಾಮೋ ಭ್ರಾತರಮಬ್ರವೀತ್ ‖ ಪ್ರಾಂಜಲಿಂ ಪ್ರಹ್ವಮಾಸೀನಮಭಿವೀಕ್ಷ್ಯಸ್ಮಯನ್ನಿವ ‖ ೪೨ ‖

ಚಿರಂ - ಬಹು ಕಾಲ, ಜೀವ - ಬದುಕು, ತೇ - ನಿನ್ನ, ಪರಿಪಂಥಿನಃ - ಶತ್ರುಗಳು, ಹತಾಃ - ಮೃತರಾಗಲಿ, ತ್ವಂ - ನೀನು, ಶ್ರಿಯಾ - ಸಂಪತ್ತಿನಿಂದ, ಯುಕ್ತಃ - ಕೂಡಿ, ಮೇಜ್ಞಾತೀ - ನನ್ನ ಬಂಧುಗಳನ್ನೂ, ಸುಮಿತ್ರಾಯಾಃ - ಸುಮಿತ್ರಾದೇವಿಯ, ಜ್ಞಾತೀಂಶ್ಚ - ನೆಂಟರನ್ನೂ, ನಂದಯ - ಸಂತೋಷಗೊಳಿಸು. ‖ ೩೯ ‖ ಹೇ ಪುತ್ರಕ - ಎಲೈ ಮಗನೆ, ಕಲ್ಯಾಣೇ - ಶುಭಕರವಾದ, ನಕ್ಷತ್ರೇ - ನಕ್ಷತ್ರದಲ್ಲಿ, ಮಯಿ - ನನ್ನ ಉದರದಲ್ಲಿ, ಜಾತಃ - (೧) ಹುಟ್ಟಿದವನು, ಅಸಿ - ಆಗಿರುವೆ, ಬತ - ಸಂತೋಷವು, ಯೇನ - ಯಾವ ಕಾರಣ, ತ್ವಯಾ - ನಿನ್ನಿಂದ, ಪಿತಾ - ತಂದೆಯಾದ, ದಶರಥಃ - ದಶರಥರಾಜನು, ಗುಣೈಃ - (ಗೋ) ಸೌಶೀಲ್ಯಾದಿ ಗುಣಗಳಿಂದ, ಆರಾಧಿತಃ - ಪೂಜಿಸಲ್ಪಟ್ಟನೋ. ‖ ೪೦ ‖ ಹೇಪುತ್ರ - ಎಲೈಮಗನೆ, ಪುಷ್ಕರೇಕ್ಷಣೇ - ಪುಂಡರೀಕಾಕ್ಷನಾದ, ಪುರುಷೇ (ಗೊ) ಪುರಸೂಕ್ತದಲ್ಲಿ, ಉಪಪಾದಿತನಾದ ನಾರಾಯಣನಲ್ಲಿ, ಮೆ-ನನ್ನ, ಕ್ಷಾಂತಂ - ವ್ರತೋಪವಾಸಾದಿ ಕ್ಲೇಶಸಹನವು, ಅಮೋಘಂ - ಸಫಲವಾಯಿತು, ಬತ-ಸಂತೋಷವು ! ಇಯಮಿಕ್ಷ್ವಾಕುರಾಜ್ಯಶ್ರೀಃ - ಈ ಇಕ್ಷ್ವಾಕುರಾಯನ ರಾಜ್ಯಸಂಪತ್ತು, ಯಾ - ಯಾವುದೋ (ಸಾ - ಅದು) ತ್ವಾಂ - ನಿನ್ನನ್ನು, ಸಂಶ್ರಯಿಷ್ಯತಿ - ಆಶ್ರಯಿಸುವುದು, ‖ ೪೧ ‖ ಮಾತ್ರಾ - ತಾಯಿಯಿಂದ, ಇತ್ಯೇವಂ - ಈ ಪ್ರಕಾರವಾಗಿ, ಉಕ್ತಃ - ಹೇಳಲ್ಪಟ್ಟ, ರಾಮಃ - ಶ್ರೀರಾಮನು, ಪ್ರಾಂಜಲಿಂ - ಅಂಜಲಿಬದ್ಧನಾಗಿ, ಪ್ರಹ್ವಂ - ವಿನಯಾನ್ವಿತನಾಗಿ, ಆಸೀನಂ - ಕುಳಿತುಕೊಂಡಿರುವ, ಭ್ರಾತರಂ - ಲಕ್ಷ್ಮಣನನ್ನು, ಅಭಿವೀಕ್ಷ್ಯ - ಕಂಡು, ಸ್ಮಯನ್ನಿವ - ನಗುತ್ತಿರುವನಂತೆ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ‖ ೪೨ ‖ ಹೇಲಕ್ಷ್ಮಣ - ಎಲೈ ಲಕ್ಷ್ಮಣನೇ, ತ್ವಂ - ನೀನು, ಇಮಾಂವಸುಂಧರಾಂ - ಈ

ಇಷ್ಟಾರ್ಥವು ಸಂದಿತೆಂದು ಆನಂದಬಾಷ್ಪಗಳಿಂದೊಡಗೂಡಿದವಳಾಗಿ ಆತನನ್ನು ಕುರಿತು, "ವತ್ಸ, ರಾಮಚಂದ್ರ ! ಆಯುಷ್ಮಂತನಾಗಿರು ; ನಿನ್ನ ಶತ್ರುಗಳೆಲ್ಲರೂ ಲಯ ಹೊಂದಲಿ ; ನನ್ನ ಮತ್ತು ಸುಮಿತ್ರಾದೇವಿಯ ನೆಂಟರನ್ನು ಆನಂದಗೊಳಿಸು ; ಶುಭಕರವಾದ ನಕ್ಷತ್ರದಲ್ಲಿ ಜನಿಸಿರುವೆ ; ನಿಮ್ಮ ತಂದೆಯು ನಿನ್ನ ಕಲ್ಯಾಣಗುಣಗಳಿಂದ ಸಂತುಷ್ಟನಾದನು. ‖೪೦‖ ಪುಂಡರೀಕಾಕ್ಷನೂ, ಪುರಾಣ ಪುರುಷನೂ ಆದ ಶ್ರೀಮನ್ನಾರಾಯಣಮೂರ್ತಿಯ ಪ್ರಸನ್ನತೆಗಾಗಿ ನಾನು ಮಾಡಿರುವ ಉಪವಾಸಾದಿ ವ್ರತಗಳೆಲ್ಲವು ಇಂದಿಗೆ ಸಫಲವಾದುವು, ಇಕ್ಷ್ವಾಕು ಮಹಾರಾಜನ ರಾಜ್ಯೈಶ್ವರ್ಯವು ನಿನ್ನನ್ನು ಆಶ್ರಯಿಸುವುದು" ಎಂದು ಹೇಳಿ

ಟಿ. (೧) ಪಾ:— ಮಯಾಜಾತೊಸಿಪುತ್ರಕ, ಮಯಾ - ನನ್ನಿಂದ, ಜಾತಃ - ಉತ್ಪನ್ನನನ್ನಾಗಿ ಮಾಡಲ್ಪಟ್ಟವನು, ಅಸಿ - ಅದೆ.

ಲಕ್ಷ್ಮಣೇಮಾಂ ಮಯಾಸಾರ್ಧಂ ಪ್ರಶಾಧಿ ತ್ವಂ ವಸುಂಧರಾಂ ॥ ದ್ವಿತೀಯಂ ಮೇಽಂತರಾತ್ಮಾನಂ ತ್ವಾಮಿಯಂ ಶ್ರೀರುಪಸ್ಥಿತಾ ॥ ೪೩ ॥ ಸೌಮಿತ್ರೇ ಭುಂಕ್ಷ್ವ ಭೋಗಾಂಸ್ತ್ವಮಿಷ್ಟಾನ್ ರಾಜ್ಯಫಲಾನಿಚ ॥ ಜೀವಿತಂ ಚ ಹಿ ರಾಜ್ಯಂಚ ತ್ವದರ್ಥಮಭಿಕಾಮಯೇ ॥ ೪೪ ॥ ಇತ್ಯುಕ್ತ್ವಾ ಲಕ್ಷ್ಮಣಂ ರಾಮೋ ಮಾತರಾವಭಿವಾದ್ಯಚ ॥ ಅಭ್ಯನುಜ್ಞಾಪ್ಯಸೀತಾಂತು ಜಗಾಮ ಸ್ವಂನಿವೇಶನಂ ॥೪೫॥
ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಸ್ಸರ್ಗಃ.

ಭೂಮಿಯನ್ನು, ಮಯಾಸಾರ್ಧಂ - ನನ್ನೊಡನೆ, ಪ್ರಶಾಧಿ - ಪರಿಪಾಲಿಸು, ಮೇ - ನನ್ನ ದ್ವಿತೀಯಂ - ಎರಡನೆಯದಾದ, ಅಂತರಾತ್ಮನಂ - ಪ್ರಾಣಪ್ರಾಯನಾದ, ತ್ವಾಂ-ನಿನ್ನನ್ನು, ಇಯಂಶ್ರೀಃ-ಈ ರಾಜ್ಯ ಸಂಪತ್ತು, ಉಪಸ್ಥಿತಾ - ಹೊಂದಿರುವುದು, ||೪೩|| ಹೇಸೌಮಿತ್ರೇ - ಎಲೈ ಲಕ್ಷ್ಮಣನೇ, ತ್ವಂ-ನೀನು, ಇಷ್ಟಾನ್ - ಪ್ರಿಯವಾಗಿರುವ, ಭೋಗಾನ್ - ವಸ್ತುಗಳನ್ನು, ರಾಜ್ಯಫಲಾನಿಚ - ಅಮೂಲ್ಯವಾದ ವಸ್ತ್ರಾಭರಣಾದಿಗಳನ್ನು, ಭುಂಕ್ಷ್ವ - ಅನುಭವಿಸು, ಜೀವಿತಂಚ - ಬದುಕುವಿಕೆಯನ್ನು, ರಾಜ್ಯಂಚ - ಈ ರಾಜ್ಯಭಾರವನ್ನೂ, ತ್ವದರ್ಥಂ - ನಿನಗೋಸುಗವಾಗಿಯೇ, ಅಭಿಕಾಮಯೇ ಹಿ - ಕೋರುವೆನಷ್ಟೆ ||೪೪|| ರಾಮಃ - ಶ್ರೀರಾಮನು. ಇತಿ - ಇಂತೆಂದು, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಉಕ್ತ್ವಾ - ಹೇಳಿ, ಮಾತರೌ - ಜನನಿಯರಾದ ಕೌಸಲ್ಯಾಸುಮಿತ್ರೆಯರನ್ನು ಕುರಿತು, ಅಭಿವಾದ್ಯಚ - ವಂದಿಸಿ, ಸೀತಾಂತು - ಸೀತಾದೇವಿಯನ್ನು, ಅಭ್ಯನುಜ್ಞಾಪ್ಯ - (ಗೋ) ಜನನಿಯರಿಂದಪ್ಪಣೆಕೊಡಿಸಿ, (ಮ) ಆಜ್ಞಾಪಿಸಿ, ಸ್ವಂನಿವೇಶನಂ - ತನ್ನರಮನೆಯನ್ನು ಕುರಿತು, ಜಗಾಮ - ಹೊರಟನು ||೪೫||
ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಸ್ಸರ್ಗಃ

೪೪. ಆ ಬಳಿಕ ಶ್ರೀರಾಮಚಂದ್ರನು ಅಂಜಲಿಬದ್ಧನಾಗಿಯೂ, ವಿನಯಾನ್ವಿತನಾಗಿಯೂ ನಿಂತಿರುವ ತಮ್ಮನಾದ ಲಕ್ಷ್ಮಣ ಸ್ವಾಮಿಯನ್ನು ಕುರಿತು, "ಲಕ್ಷ್ಮಣ ! ನೀನು ನನ್ನೊಡನೆ ಈ ಭೂಮಂಡಲವನ್ನು ಪರಿಪಾಲಿಸುವವನಾಗು ; ನನ್ನ ದ್ವಿತೀಯ ಪ್ರಾಣದಂತಿರುವ ನಿನ್ನನ್ನು ಈ ರಾಜ್ಯ ಪದವಿಯು ಹೊಂದಿರುವುದು. ಆದುದರಿಂದ ನೀನು ಬೇಕಾದ ಭೋಗಗಳನ್ನನುಭವಿಸುತ್ತಲೂ, ಇಷ್ಟವಾದ ವಸ್ತ್ರಾಭರಣಾದಿಗಳನ್ನು ಕೊಡುತ್ತಲೂ ಸುಖದಿಂದಿರುವವನಾಗು. ನಾನು ಈ ಜೀವಿತವನ್ನೂ, ಈ ರಾಜ್ಯವನ್ನೂ ನಿನಗೋಸುಗವಾಗಿಯೇ ಅಪೇಕ್ಷಿಸುತ್ತೇನೆಯಲ್ಲದೆ ಮತ್ತೆ ಬೇರೆಯಲ್ಲವು" ಎಂದನು. ಆ ಬಳಿಕ ರಘುರಾಮನು ಜನನಿಯರಾದ ಕೌಸಲ್ಯಾ, ಸುಮಿತ್ರಾದೇವಿಯರಿಗೆ ಅಭಿವಂದಿಸಿ ಅವರಿಂದ ಸೀತಾದೇವಿಗೂ ಅಪ್ಪಣೆ ಕೊಡಿಸಿ ನಿಜ ಮಂದಿರವನ್ನು ಕುರಿತು ತೆರಳಿದವನಾದನು. ॥ ೪೫ ॥

ಇಂತಿದು ಶ್ರೀರಾಮಕೃತ ವ್ರತಾಚರಣ ವೃತ್ತಾಂತ ವರ್ಣನವೆಂಬ
ನಾಲ್ಕನೆಯ ಸರ್ಗವು ಸಮಾಪ್ತವಾದುದು.
ಶ್ರೀ ಶ್ಶುಭಂ ಭೂಯಾತ್.

ಅಯೋಧ್ಯಾಕಾಂಡೇ ಪಂಚಮಸ್ಸರ್ಗಃ.

ಸಂದಿಶ್ಯ ರಾಮಂ ನೃಪತಿ ಶ್ಶ್ವೋ ಭಾವಿನ್ಯಭಿಷೇಚನೇ ॥ ಪುರೋಹಿತಂ ಸಮಾಹೂಯ ವಸಿಷ್ಠಮಿದಮಬ್ರವೀತ್ ॥ ೧ ॥ ಗಚ್ಛೋಪವಾಸಂ ಕಾಕುತ್ಸ್ಥಂ ಕಾರಯಾದ್ಯ ತಪೋಧನ ॥ ಶ್ರೀ ಯಶೋ ರಾಜ್ಯಲಾಭಾಯ ವಧ್ವಾ ಸಹ ಯತವ್ರತಂ ॥ ೨ ॥ ತಥೇತಿ ಚ ಸರಾಜಾನಮುಕ್ತ್ವಾ ವೇದ ವಿದಾಂ ವರಃ ॥ ಸ್ವಯಂ ವಸಿಷ್ಠೋ ಭಗವಾನ್ ಯಯೌ ರಾಮ ನಿವೇಶನಂ ॥ ೩ ॥ ಉಪವಾಸಯಿತುಂ ರಾಮಂ ಮಂತ್ರವನ್ಮಂತ್ರ ಕೋವಿದಃ ॥ ಬ್ರಾಹ್ಮಂ ರಥ

ನೃಪತಿಃ - ದಶರಥರಾಜನು, ಶ್ವಃ - ನಾಳೆಯದಿನದಲ್ಲಿ, ಭಾವಿನಿ - ಆಗುವ, ಅಭಿಷೇಚನೆ - ಪಟ್ಟಾಭಿಷೇಕವಿಷಯದಲ್ಲಿ, ರಾಮಂ - ಶ್ರೀರಾಮನನ್ನು, ಸಂದಿಶ್ಯ - ವ್ರತೋಪವಾಸಾದಿಗಳಂ ಮಾಡೆಂದಾಜ್ಞಾಪಿಸಿ, ಪುರೋಹಿತಂ - ಪುರೋಹಿತನಾದ, ವಸಿಷ್ಠಂ - ವಸಿಷ್ಠಮುನಿಯನ್ನು, ಸಮಾಹೂಯ - ಕರೆಯಿಸಿ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಹೇತಪೋಧನ - ಎಲೈ ತಪಸ್ಸೇಧನವಾಗಿ ಉಳ್ಳವನೆ, ಗಚ್ಛ - ತೆರಳು, ಶ್ರೀಯಶೋರಾಜ್ಯಲಾಭಾಯ - ಸಂಪತ್ಕೀರ್ತಿರಾಜ್ಯಗಳ ಲಾಭಕ್ಕೋಸುಗ, ವಧ್ವಾಸಹ - ಸೀತಾದೇವಿಯೊಡನೆ, ಯತವ್ರತಂ - ಪ್ರಯತವಾದ ನಿಯಮವುಳ್ಳ, ಕಾಕುತ್ಸ್ಥಂ - ಶ್ರೀರಾಮನನ್ನು, ಉಪವಾಸಂ - ಉಪವಾಸವನ್ನು, ಕಾರಯ - ಮಾಡಿಸು. ॥ ೨ ॥ ವೇದವಿದಾಂ - ವೇದವನ್ನು ತಿಳಿದವರಲ್ಲಿ, ವರಃ - ಉತ್ತಮನಾದ, ಭಗವಾನ್ - ಪೂಜ್ಯನಾದ, ಮಂತ್ರ ಕೋವಿದಃ - ಆಲೋಚನೆಯಲ್ಲಿ ಸಮರ್ಥನಾದ, ಸುದೃಢವ್ರತಃ - ಸಮೀಚೀನವಾಗಿಯೂ ದೃಢವಾಗಿಯೂ ಇರುವ ನಿಯಮವುಳ್ಳ, ಸವಸಿಷ್ಠಃ - ಆ ವಸಿಷ್ಠಋಷಿಯು, ತಥೇತಿ - ಹಾಗೆಯೇ ಆಗಲೆಂದು, ರಾಜಾನಂ - ದಶರಥರಾಜನನ್ನು ಕುರಿತು, ಉಕ್ತ್ವಾ - ಹೇಳಿ, ಸ್ವಯಂ - ತಾನಾಗಿಯೇ, ರಾಮಂ - ಶ್ರೀರಾಮನನ್ನು, ಮಂತ್ರವತ್ - ಮಂತ್ರವತ್ತಾಗಿ, ಉಪವಾಸಯಿತುಂ - ಉಪವಾಸಮಾಡಿಸುವದಕ್ಕೆ, ಯುಕ್ತಂ - ಯೋಗ್ಯವಾದ, ಬ್ರಾಹ್ಮಂ - ಬ್ರಾಹ್ಮಣರು ಕುಳಿತುಕೊಳ್ಳಲು ಯೋಗ್ಯ

ಆ ಬಳಿಕ ಭೂನಾಯಕನಾದ ದಶರಥರಾಯನು, ನಾಳೆಯದಿನವಾಗುವ ಯೌವ ರಾಜ್ಯಾಭಿಷೇಕಕ್ಕೋಸುಗೆ ಶ್ರೀರಾಮನಿಗೆ ಉಪವಾಸಾದಿ ವ್ರತಗಳನ್ನಾಚರಿಸೆಂದಾಜ್ಞಾಪಿಸಿ, ತಪೋಧನನೂ ಪುರೋಹಿತನೂ ಆದ ವಸಿಷ್ಠ ಮುನಿಯನ್ನು ಕರೆಯಿಸಿ, "ಎಲೈ ತಪೋಧನನಾದ ವಸಿಷ್ಠ ಋಷಿಯೆ! ನೀನೀಗಲೇ ತೆರಳಿ ಸಂಪತ್ಕೀರ್ತಿ ರಾಜ್ಯಗಳ ಲಾಭಕ್ಕೋಸುಗೆ ಸೀತಾದೇವಿಯೊಡಗೂಡಿದ ಶ್ರೀರಾಮನಿಗೆ ಪಟ್ಟಾಭಿಷೇಕ ವ್ರತಾಂಗವಾದ ಉಪವಾಸ ವ್ರತವನ್ನು ಮಾಡಿಸುವವನಾಗು" ಎಂದು ಹೇಳಿದನು. ಇಂತು ನುಡಿದ ಆ ರಾಯನ ನುಡಿಗಳನ್ನು ಕೇಳಿದ, ವೇದವೇದಾರ್ಥ ತತ್ವಜ್ಞನಾದ ಆ ವಸಿಷ್ಠ ಮುನಿಯು, ಹಾಗೆಯೆ ಆಗ

ವರಂ ಯುಕ್ತಮಾಸ್ಥಾಯ ಸುದೃಢ ವ್ರತಃ ॥ ೪ ॥ ಸ ರಾಮ ಭವನಂ ಪ್ರಾಪ್ಯ ಪಾಂಡುರಾಭ್ರ ಘನಪ್ರಭಂ ॥ ತಿಸ್ರಃ ಕಕ್ಷ್ಯಾ ರಥೇನೈವ ವಿವೇಶ ಮುನಿಸತ್ತಮಃ ॥ ೫ ॥ ತಮಾಗತ ಮೃಷಿಂ ರಾಮ ಸ್ತ್ವರನ್ನಿವ ಸಸಂಭ್ರಮಃ॥ ಮಾನಯಿಷ್ಯ ಸ ಮಾನಾರ್ಹಂ ನಿಶ್ಚಕ್ರಾಮ ನಿವೇಶನಾತ್ ॥ ೬ ॥ ಅಭ್ಯೇತ್ಯ ತ್ವರಮಾಣಶ್ಚ ರಥಾಭ್ಯಾಶಂ ಮುನೀಷಿಣಃ ॥ ತತೋವತಾರಯಾಮಾಸ ಪರಿ ಗೃಹ್ಯ ರಥಾತ್ಸ್ವಯಂ ॥ ೭ ॥ ಸಚೈನಂ ಪ್ರಶ್ರಿತಂ ದೃಷ್ಟ್ವಾ ಸಂಭಾಷ್ಯಾ ಭಿಪ್ರಸಾದ್ಯಚ ॥ ಪ್ರಿಯಾರ್ಹಂ ಹರ್ಷಯ್ರ್ ರಾಮಮಿತ್ಯುವಾಚ ಪುರೋ

ವಾದ, ರಥವರಂ - ಉತ್ತಮವಾದ ರಥವನ್ನು, ಆಸ್ಥಾಯ - ಹೊಂದಿ, ರಾಮನಿವೇಶನಂ - ಶ್ರೀರಾಮನ ಮನೆಯನ್ನು ಕುರಿತು, ಯಯೌ - ತೆರಳಿದನು. ॥ ೪ ॥ ಮುನಿಸತ್ತಮಃ - ಋಷಿಶ್ರೇಷ್ಠನಾದ, ಸಃ - ಆ ವಸಿಷ್ಠಋಷಿಯು, ಪಾಂಡುರಾಭ್ರಘನಪ್ರಭಂ, (ಗೋ) ಪಾಂಡುರ - ಬಿಳುಪಾಗಿರುವ, ಅಭ್ರ - ಮೇಘಗಳಂತೆ, ಘನ - ದಟ್ಟವಾದ, ಪ್ರಭಂ - ಕಾಂತಿಯುಳ್ಳ, (ಮ) ಪಾಂಡುರಭ್ರ - ಬಿಳೀ ಮೇಘಗಳ, ಘನ - ಆಕಾರಕ್ಕೆ ಸದೃಶವಾದ, ಪ್ರಭಂ - ಕಾಂತಿಯುಳ್ಳ, ರಾಮಭವನಂ - ಶ್ರೀರಾಮನ ಮನೆಯನ್ನು, ಪ್ರಾಪ್ಯ - ಹೊಂದಿ, ರಥೇನೈವ - ರಥದಿಂದಲೆ, ತಿಸ್ರಃಕಕ್ಷ್ಯಾಃ-ಮೂರುಕೋಟೆಗಳುಳ್ಳ ಮನೆಯನ್ನು, ವಿವೇಶ - ಪ್ರವೇಶಿಸಿದನು. ॥ ೫ ॥ ಮಾನಾರ್ಹಂ - ಬಹುಮಾನಿಸಲು ಅರ್ಹನಾದ, ಆಗತಂ - ಬಂದಿರುವ, ತಮ್ಮಷಿಂ - ಆ ವಸಿಷ್ಠಋಷಿಯನ್ನು, ಮಾನಯಿಷ್ಯ - ಬಹುಮಾನಿಸ ಬೇಕೆಂದು, ತ್ವರನ್ನಿವ - ತ್ವರೆಯುಳ್ಳವನಾಗಿ, ರಾಮಃ - ಆ ಶ್ರೀರಾಮನು, ಸಸಂಭ್ರಮಃ - ಆದರಣೆ ಯಿಂದೊಡಗೂಡಿ, ನಿವೇಶನಾತ್ - ಮನೆಯಿಂದ, ನಿಶ್ಚಕ್ರಾಮ - ಹೊರಟುಬಂದನು. ॥ ೬ ॥ ತ್ವರ ಮಾಣಃ - ತ್ವರೆಪಡುತ್ತ, ಮುನೀಷಿಣಃ - ಪಂಡಿತನಾದ ವಸಿಷ್ಠಋಷಿಯ, ರಥಾಭ್ಯಾಶಂ - ರಥಸಮೀ ಪವನ್ನು, ಅಭ್ಯೇತ್ಯ - ಹೊಂದಿ, ತತಃ - ಬಳಿಕ, ಸ್ವಯಂಚ - ತಾನೆ, ಪರಿಗೃಹ್ಯ - ಹಸ್ತಾಲಂಬನ ವನ್ನು ಮಾಡಿ, ರಥಾತ್ - ರಥದಿಂದ, ಅವತಾರಯಾಮಾಸ - ಇಳಿಸಿದನು. ॥ ೭ ॥ ಪುರೋಹಿತಃ- ಪುರೋಹಿತನಾದ, ಸಃ - ಆತನು, ಪ್ರಶ್ರಿತಂ - ವಿನೀತನಾದ, ಪ್ರಿಯಾರ್ಹಂ - ಇಷ್ಟವಚನಗಳಿಗೆ

ಲೆಂದು ಹೇಳಿ, ಮಂತ್ರವತ್ತಾಗಿ ಶ್ರೀರಾಮ ಮೂರ್ತಿಗೆ ಉಪವಾಸ ವ್ರತವನ್ನು ಮಾಡಿಸಲು, ಬ್ರಾಹ್ಮಣರು ಕುಳಿತುಕೊಳ್ಳುವುದಕ್ಕೆ ಯೋಗ್ಯವಾದುದೂ ಕುದುರೆಗಳಿಂದೊಡಗೂಡಿದುದೂ ಆದ ರಥವನ್ನೇರಿ ಶ್ರೀರಾಮ ಭವನವನ್ನು ಸೇರಿ ರಥಾರೂಢನಾಗಿಯೇ, ಮೂರನೆಯ ತೊಟ್ಟಿ ಯನ್ನು ಪ್ರವೇಶಿಸಿದನು. ॥ ೫ ॥ ಶ್ರೀರಾಮಚಂದ್ರನು ವಸಿಷ್ಠ ಮುನೀಶ್ವರನು ಬಂದ ವೃತ್ತಾಂತವನ್ನು ಕೇಳಿ ಆತನನ್ನು ಮರ್ಯಾದಿಸಲು ಆದರವುಳ್ಳವನಾಗಿ ಬೇಗನೆ ಮನೆಯಿಂದ ಹೊರಹೊರಟು, ರಥದ ಬಳಿಗೈದಿ ಹಸ್ತಾಲಂಬನದಿಂದಾ ಮುನಿ ಪುಂಗವನ್ನು ರಥದಿಂದಿಳಿಸಿ ದವನಾದನು. ಆ ಬಳಿಕ ವಸಿಷ್ಠ ಮುನಿಯು, ವಿಧೇಯನಾದ ಆ ರಾಮನನ್ನು ಕಂಡು ಮಾತನಾಡಿಸಿ ಕುಶಲ ವಾರ್ತೆಯನ್ನು ಕೇಳಿ ಸಂತೋಷಗೊಳಿಸುತ್ತ, "ರಘುನಂದನ! ನಿನ್ನ ಜನಕನು ಪ್ರಸನ್ನನಾಗಿರುವನು; ನೀನು ಯೌವರಾಜ್ಯವನ್ನು ಹೊಂದುವೆ; ನಾಳೆಯ ದಿನ

ಹಿತಃ ‖ ೮ ‖ ಪ್ರಸನ್ನ ಸ್ತೇಪಿತಾ ರಾಮ ಯೌವರಾಜ್ಯ ಮವಾಪ್ಸ್ಯಸಿ ‖ ಉಪವಾಸಂ ಭವಾನದ್ಯ ಕರೋತು ಸಹ ಸೀತಯಾ ‖ ೯ ‖ ಪ್ರಾತಸ್ತ್ವಾ ಮಭಿಷೇಕ್ತಾಹಿ ಯೌವರಾಜ್ಯೇ ನರಾಧಿಪಃ ‖ ಪಿತಾ ದಶರಥಃ ಪ್ರೀತ್ಯಾ ಯಯಾತಿಂ ನಹುಷೋ ಯಥಾ ‖ ೧೦ ‖ ಇತ್ಯುಕ್ತ್ವಾ ಸ ತದಾ ರಾಮಮುಪ ವಾಸಂ ಯತವ್ರತಂ ‖ ಮಂತ್ರವತ್ಕಾರಯಾಮಾಸ ವೈದೇಹ್ಯಾ ಸಹಿತಂ ಮುನಿಃ ‖ ೧೧ ‖ ತತೋ ಯಥಾವದ್ರಾಮೇಣ ಸ ರಾಜ್ಞೋ ಗುರುರರ್ಚಿತಃ ‖

ಯೋಗ್ಯನಾದ, ಏನಂರಾಮಂ - ಈ ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಸಂಭಾಷ್ಯ - (೧) ಮಾತನಾಡಿಸಿ, (ಗೋ) ಅಭಿಪ್ರಸಾದ್ಯಚ - ಸ್ತುತಿಗಳಿಂದಲೂ ಸಮಾಧಾನಗೊಳಿಸಿ, ಇತಿ - ಇಂತೆಂದು, ಉವಾಚ - ಹೇಳಿದನು. ‖ ೮ ‖ ಹೇ ರಾಮ - ಎಲೈ ಶ್ರೀರಾಮನೆ, ತೇಪಿತಾ - ನಿನ್ನ ತಂದೆಯು, ಪ್ರಸನ್ನಃ - ಸಂತುಷ್ಟನಾಗಿರುವನು, ಯೌವರಾಜ್ಯಂ - ಯೌವರಾಜ್ಯಪಟ್ಟಾಭಿಷೇಕವನ್ನು, ಅವಾಪ್ಸ್ಯಸಿ - ಹೊಂದುವೆ, ಭವಾನ್ - ನೀನು, ಅದ್ಯ - ಈ ದಿನದಲ್ಲಿ, ಸೀತಯಾಸಹ - ಸೀತಾದೇವಿಯೊಡನೆ, ಉಪವಾಸಂ - ಅನಶನವ್ರತವನ್ನು, ಕರೋತು - ಮಾಡು, ನರಾಧಿಪಃ - ಜನಪತಿಯಾದ, ಪಿತಾ- ತಂದೆಯಾದ, ದಶರಥಃ - ದಶರಥರಾಜನು, ಪ್ರೀತ್ಯಾ - ಸಂತೋಷದಿಂದ, ಯೌವರಾಜ್ಯೇ - ಯೌವ ರಾಜ್ಯದಲ್ಲಿ, ತ್ವಾಂ - ನಿನ್ನನ್ನು, ಪ್ರಾತಃ - ನಾಳೆಯ ಪ್ರಾತಃಕಾಲದಲ್ಲಿ, ಯಯಾತಿಂ - ಯಯಾತಿ ರಾಜನನ್ನು, ನಹುಷೋಯಥಾ - ನಹುಷರಾಜನಂತೆ, ಅಭಿಷೇಕ್ತಾಹಿ - ಪಟ್ಟಾಭಿಷೇಕವನ್ನು ಮಾಡುವ ನಷ್ಟೇ, ಇತಿ - ಇಂತೆಂದು, ಉಕ್ತ್ವಾ - ಹೇಳಿ, ತದಾ - ಆಗ, ಸಮುನಿಃ - ಆ ವಸಿಷ್ಠಋಷಿಯು, ವೈದೇಹ್ಯಾ - ಸೀತಾದೇವಿಯಿಂದ, ಸಹಿತಂ - ಕೂಡಿದ, ಯತವ್ರತಂ - ನಿಯಮವ್ರತವುಳ್ಳ, ರಾಮಂ - ಶ್ರೀರಾಮನನ್ನು, ಮಂತ್ರವತ್ - ಮಂತ್ರವತ್ತಾಗಿ, ಉಪವಾಸಂ - ಉಪವಾಸವನ್ನು, ಕಾರಯಾಮಾಸ- ಮಾಡಿಸಿದನು. ‖ ೧೧ ‖ ತತಃ - ಬಳಿಕ, ರಾಜ್ಞಃ - ದಶರಥರಾಜನ, ಗುರುಃ - ಪುರೋಹಿತನಾದ,

ಪ್ರಾತಃಕಾಲದಲ್ಲಿ ನಿನ್ನ ತಂದೆಯಾದ ದಶರಥ ಭೂಪಾಲನು, ಯಯಾತಿಯು ನಹುಷನಿಗೆ ಪಟ್ಟಾಭಿಷೇಕವನ್ನು ಮಾಡಿದಂತೆ ನಿನಗೆ ಯೌವರಾಜ್ಯಾಭಿಷೇಕವನ್ನು ಮಾಡಿಸುವನು. ಆದುದರಿಂದ ನೀನು ಸೀತಾದೇವಿಯೊಡನೆ ಈ ದಿವಸ ಉಪವಾಸವಿರುವವನಾಗು" ಎಂದನು. ಇಂತು ನುಡಿದ ರಾಜ ಗುರುವಾದ ವಸಿಷ್ಠ ಋಷಿಯು ಮಂತ್ರವತ್ತಾಗಿ ಶ್ರೀರಾಮನಿಗೆ ಉಪ ವಾಸ ವ್ರತವನ್ನು ಮಾಡಿಸಿ ಆತನಿಂದ ಶಾಸ್ತ್ರೋಕ್ತವಾಗಿ ಪೂಜಿತನಾಗಿ "ಇನ್ನು ನಾನು ಹೋಗಿ ಬರುವೆನು; ನೀನಿಲ್ಲಿಯೇ ನಿಲ್ಲು" ಎಂದು ನುಡಿದು ಹೊರಟು ಬಂದವನಾದನು. ‖ ೧೦ ‖ ಆ ಬಳಿಕಲಾ ರಘುರಾಮನು ಮೃದುಮಧುರವಾದ ಪ್ರಿಯ ವಾಕ್ಯಗಳನ್ನಾಡುತ್ತಿರುವ ತನ್ನ ಮಿತ್ರರೊಡನೆ ಸ್ವಲ್ಪ ಕಾಲ ಸುಖಾಸೀನನಾಗಿದ್ದು, ಅವರೆಲ್ಲರನ್ನೂ ಹಿಂದಕ್ಕೆ ಕಳುಹಿ ನಿಜ ಮಂದಿರಕ್ಕೆ ತೆರಳಿದನು. ಆ ಸಮಯದಲ್ಲಿ ಶ್ರೀರಾಮನರಮನೆಯು ಸಂತಸ

ಟಿ. (೧) "ಸಭಾಜ್ಯ" ಎಂದು ಪಾಠಾಂತರವುಂಟು, "ಆಗ ಕುಶಲಪ್ರಶ್ನಾದಿಗಳಿಂದ ಪ್ರೀತಿಯನ್ನುಂಟುಮಾಡಿ" ಎಂದು ಅರ್ಥವೆಂದು **ಗೋವಿಂದರಾಜರು** ಬರೆದಿರುವರು. **ಮಹೇಶ್ವರತೀರ್ಥರು** "ಸಂಭಾಷ್ಯ" ಎಂಬ ಪದಕ್ಕೇನೇ ಈ ಅರ್ಥವನ್ನು ನಿರೂಪಿಸಿರುತ್ತಾರೆ.

ಅಭ್ಯನುಜ್ಞಾಪ್ಯ ಕಾಕುತ್ಸ್ಥಂ ಯಯೌ ರಾಮ ನಿವೇಶನಾತ್ ॥ ೧೨ ॥ ಸು
ಹೃದ್ಭಿ ಸ್ತತ್ರ ರಾಮೋಽಪಿ ಸಹಾಸೀನಃ ಪ್ರಿಯಂ ವದೈಃ ॥ ಸಭಾಜಿತೋ ವಿವೇ
ಶಾಥ ತಾನನುಜ್ಞಾಪ್ಯ ಸರ್ವಶಃ ॥ ೧೩ ॥ ಹೃಷ್ಟ ನಾರೀ ನರಯುತಂ ರಾಮ
ವೇಶ್ಮ ತದಾ ಬಭೌ ॥ ಯಥಾ ಮತ್ತದ್ವಿಜಗಣಂ ಪ್ರಫುಲ್ಲ ನಳಿನಂ ಸರಃ ॥೧೪॥
ಸರಾಜ ಭವನ ಪ್ರಖ್ಯಾತ್ತಸ್ಮಾದ್ರಾಮ ನಿವೇಶನಾತ್ ॥ ನಿರ್ಗತ್ಯ ದದೃಶೇ
ಮಾರ್ಗಂ ವಸಿಷ್ಠೋ ಜನಸಂವೃತಂ ॥ ೧೫ ॥ ಬೃಂದಬೃಂದೈರಯೋಧ್ಯಾ
ಯಾಂ ರಾಜ ಮಾರ್ಗಾ ಸ್ಸಮಂತತಃ ॥ ಬಭೂವು ರಭಿಸಂಬಾಧಾಃ ಕುತೂಹಲ

ಸಃ - ಆ ವಸಿಷ್ಠಋಷಿಯು, ರಾಮೇಣ - ಶ್ರೀರಾಮನಿಂದ, ಯಥಾವತ್ - ಯೋಗ್ಯಾನುಸಾರ, ಅರ್ಚಿತಃ - ಪೂಜಿಸಲ್ಪಟ್ಟು, ಕಾಕುತ್ಸ್ಥಂ - ಶ್ರೀರಾಮನನ್ನು, ಅಭ್ಯನುಜ್ಞಾಪ್ಯ - ಹಿಂತಿರುಗೆಂದು ಹೇಳಿ, ರಾಮನಿವೇಶನಾತ್ - ಶ್ರೀರಾಮನ ಮನೆಯಿಂದ, ಯಯೌ - ತೆರಳಿದನು. ॥ ೧೨ ॥ ಅಥ ಬಳಿಕ, ತತ್ರ - ಅಲ್ಲಿ, ಪ್ರಿಯಂವದೈಃ - ಇಷ್ಟವಾದ ಮಾತುಗಳನ್ನು ನುಡಿಯುತ್ತಿರುವ, ಸುಹೃದ್ಭಿಃ - ಸ್ನೇಹಿತರೊಡನೆ, ಸಹಾಸೀನಃ - ಕುಳಿತುಕೊಂಡಿರುವ, ರಾಮೋಽಪಿ - ಶ್ರೀರಾಮನೂ, ತಾಸಭಾಜಿತಃ - ಸಭೆಯಲ್ಲಿರುವವರನ್ನು, ಸರ್ವಶಃ - ಎಲ್ಲೆಡೆಯಲ್ಲಿಯು, ಅನುಜ್ಞಾಪ್ಯ - ತೆರಳಬಹುದೆಂದು ಅಪ್ಪಣೆಕೊಟ್ಟು, (ವೇಶ್ಮ - ಮನೆಯನ್ನು,) ವಿವೇಶ - ಹೊಕ್ಕನು. ॥ ೧೩ ॥ ತದಾ - ಆ ವೇಳೆಯಲ್ಲಿ, ಹೃಷ್ಟನಾರೀ ನರಯುತಂ - ಸಂತುಷ್ಟರಾದ ಸ್ತ್ರೀಯರಿಂದಲೂ ಪುರುಷರಿಂದಲೂ ಯುಕ್ತವಾದ, ರಾಮವೇಶ್ಮ - ಶ್ರೀರಾಮನ ಮನೆಯು, ಮತ್ತದ್ವಿಜಗಣಂ - ಮದಿಸಿದ ಪಕ್ಷಿಸಮುದಾಯಗಳುಳ್ಳ, ಪ್ರಫುಲ್ಲನಳಿನಂ - ವಿಕಸಿತವಾದ ಕಮಲಗಳುಳ್ಳ, ಸರೋಯಥಾ - ಸರೋವರದಂತೆ, ಆಬಭೌ - ಹೊಳೆಯುತ್ತಿದ್ದಿತು. ॥೧೪॥ ಸವಸಿಷ್ಠಃ - ಆ ವಸಿಷ್ಠಮುನಿಯು, ರಾಜಭವನಪ್ರಖ್ಯಾತ್ - ಅರಮನಿಗೆ ಸದೃಶವಾದ, ರಾಮನಿವೇಶನಾತ್ - ಆ ಶ್ರೀರಾಮನ ಮನೆಯಿಂದ, ನಿರ್ಗತ್ಯ - ಹೊರಟು, ಜನಸಂವೃತಂ - ಜನಗಳಿಂದ ವ್ಯಾಪ್ತವಾದ, ಮಾರ್ಗಂ - ದಾರಿಯನ್ನು, ದದೃಶೇ - ಕಂಡನು. ॥ ೧೫ ॥ ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಸಮಂತತಃ - ಎಲ್ಲೆಡೆಯಲ್ಲಿಯೂ, ಬೃಂದಬೃಂದೈಃ - ಗುಂಪುಗುಂಪಾಗಿ ಸೇರಿದ, ಕುತೂಹಲಜನೈಃ - ಶ್ರೀರಾಮಾಭಿಷೇಕ ಮಹೋತ್ಸವವನ್ನು ನೋಡಲು ಕೌತೂಹಲವುಳ್ಳ ಜನಗಳಿಂದ, ವೃತಾಃ - ಸುತ್ತು ಬೆರೆಯಲ್ಪಟ್ಟ, ರಾಜಮಾರ್ಗಾಃ - ರಾಜವೀಥಿಗಳು, ಅಭಿಸಂಬಾಧಾಃ - ತುಂಬಿದವು

ವಾಂತ ಸ್ತ್ರೀಯರಿಂದಲೂ, ಪುರುಷರಿಂದಲೂ, ತುಂಬಿ ತುಳುಕಾಡುತ್ತ, ಮದಿಸಿದ ವಿಹಗ ನಿವಹವುಳ್ಳುದೂ, ನವವಿಕಸಿತ ಸರೋಜಗಳುಳ್ಳುದೂ ಆದ ಸರೋವರದಂತೆ ಕಂಗೊಳಿಸುತ್ತಿದ್ದಿತು. ಆ ಬಳಿಕ ವಸಿಷ್ಠ ಮುನೀಶ್ವರನು ಶ್ರೀರಾಮನ ಅರಮನೆಯಿಂದ ದಶರಥರಾಯನ ಮನೆಗೆ ಬರುವಾಗ ರಾಜವೀಥಿಗಳಲ್ಲಿ ಶ್ರೀ ರಘುರಾಮನ ಯೌವರಾಜ್ಯ ಪಟ್ಟಾಭಿಷೇಕ ಮಹೋತ್ಸವವನ್ನು ನೋಡಬೇಕೆಂಬ ಕುತೂಹಲದಿಂದ ಇಟ್ಟಣಿಸಿದ್ದ ಜನ ಸಮೂಹವನ್ನು ಕಂಡವನಾದನು. ॥ ೧೫ ॥ ಆ ಸಮಯದಲ್ಲಿ ಜನ ಸಂಘಗಳೆಂಬ ತೆರೆಗಳ ಸಂಘಟ್ಟನದಿಂದಲೂ, ಸಂತೋಷದಿಂದುಂಟಾದ ಕಲಕಲ ಧ್ವನಿಯಿಂದಲೂ ಕಂಗೊಳಿಸುವ ರಾಜವೀಥಿಯ ಘೋಷವು ಸಮುದ್ರ ಘೋಷದಂತೆ ಅತಿ ಗಂಭೀರವಾಗಿದ್ದಿತು. ಅಂದಿನ ದಿನದಲ್ಲಿ

ಜನೈರ್ವೃತಾಃ ॥ ೧೬ ॥ ಜನಬೃಂದೋರ್ಮಿಸಂಘರ್ಷ ಹರ್ಷ ಸ್ವನವತ ಸ್ತದಾ ॥ ಬಭೂವ ರಾಜಮಾರ್ಗಸ್ಯ ಸಾಗರಸ್ಯೇವ ನಿಸ್ವನಃ ॥ ೧೭ ॥ ಸಿಕ್ತ ಸಂಮೃಷ್ಟ ರಥ್ಯಾಹಿ ತದಹರ್ವನಮಾಲಿನೀ ॥ ಆಸೀದಯೋಧ್ಯಾ ನಗರೀ ಸಮುಚ್ಛ್ರಿತ ಗೃಹಧ್ವಜಾ ॥ ೧೮ ॥ ತದಾಹ್ಯಯೋಧ್ಯಾ ನಿಲಯ ಸ್ಸಸ್ತ್ರೀ ಬಾಲಾಬಲೋ ಜನಃ ॥ ರಾಮಾಭಿಷೇಕಮಾಕಾಂಕ್ಷ ನ್ನಾಕಾಂಕ್ಷದುದಯಂ ರವೇಃ ॥ ೧೯ ॥ ಪ್ರಜಾಲಂಕಾರ ಭೂತಂಚ ಜನಸ್ಯಾನಂದ ವರ್ಧನಂ ॥ ಉತ್ಸುಕೋ ಭೂಜ್ಜನೋ ದ್ರಷ್ಟುಂ ತಮಯೋಧ್ಯಾ ಮಹೋತ್ಸವಂ ॥ ೨೦ ॥

ಬಭೂವುಃ - ಆದವು. ॥ ೧೬ ॥ ತದಾ - ಆಗ, ಜನಬೃಂದೋರ್ಮಿಸಂಘರ್ಷಹರ್ಷಸ್ವನವತಃ, ಜನಬೃಂದ - ಜನಸಮೂಹಗಳೆಂಬ, ಊರ್ಮಿ - ತೆರೆಗಳ, ಸಂಘರ್ಷ - ಸಮ್ಮರ್ದದಿಂದಲೂ, ಹರ್ಷ - ಸಂತೋಷದಿಂದಲೂ ಹುಟ್ಟಿದ, ಸ್ವನವತಃ - ಶಬ್ದವುಳ್ಳ, ರಾಜಮಾರ್ಗಸ್ಯ - ರಾಜವೀಥಿಯ, ನಿಸ್ವನಃ- ಶಬ್ದವು, ಸಾಗರಸ್ಯ - ಕಡಲಿನ, ನಿಸ್ವನಇವ - ಶಬ್ದದಂತೆ, ಬಭೂವ - ಆಯಿತು. ॥ ೧೭ ॥ ತದಹಃ - ಆ ದಿನದಲ್ಲಿ, ವನಮಾಲಿನೀ - (ಗೋ) ಅಲಂಕಾರಾರ್ಥವಾಗಿ ಮಾಡಲ್ಪಟ್ಟ ಬಾಳೆ ಅಡಿಕೆ ಮುಂತಾದ ವೃಕ್ಷಗಳುಳ್ಳ ವನರಾಜಿಗಳಿಂದ ಯುಕ್ತವಾದ, ಸಮುಚ್ಛ್ರಿತಗೃಹಧ್ವಜಾ - ಉನ್ನತವಾದ ಮನೆಗಳೂ ಧ್ವಜಪಟಗಳೂ ಉಳ್ಳ, ಅಯೋಧ್ಯಾನಗರೀ - ಅಯೋಧ್ಯಾಪಟ್ಟಣವು, ಸಿಕ್ತಸಂಮೃಷ್ಟರಥ್ಯಾ, ಸಿಕ್ತ- ತೋಯಿಸಲ್ಪಟ್ಟ, ಸಂಮೃಷ್ಟ - ಶೋಧಿಸಲ್ಪಟ್ಟ, ರಥ್ಯಾ - ರಾಜವೀಥಿಗಳುಳ್ಳದು, ಆಸೀದ್ಧಿ - ಆಯಿತಷ್ಟೆ. ॥ ೧೮ ॥ ತದಾ - ಆ ವೇಳೆಯಲ್ಲಿ, ಅಯೋಧ್ಯಾನಿಲಯಃ - ಅಯೋಧ್ಯಾಪಟ್ಟಣವೇ ಸ್ಥಾನವಾಗಿ ಉಳ್ಳ, ಸಸ್ತ್ರೀಬಾಲಾಬಲಃ - ಸ್ತ್ರೀಬಾಲವೃದ್ಧರಿಂದೊಡಗೂಡಿದ, ಜನಃ - ಜನವು, ರಾಮಾಭಿಷೇಕಂ - ಶ್ರೀರಾಮನ ಯೌವರಾಜ್ಯಪಟ್ಟಾಭಿಷೇಕವನ್ನು, ಆಕಾಂಕ್ಷ್ಯ - ಅಪೇಕ್ಷಿಸುತ್ತ, ರವೇಃ - ಸೂರ್ಯನ, ಉದಯಂ - ಆವಿರ್ಭಾವವನ್ನು, ಆಕಾಂಕ್ಷತ್ - ಕೋರುತ್ತಿದ್ದಿತು. ॥ ೧೯ ॥ ಪ್ರಜಾಲಂಕಾರಭೂತಂ, ಪ್ರಜಾ - ಜನರ, ಅಲಂಕಾರ - ಅಲಂಕಾರಕ್ಕೆ, ಭೂತಂ-ಹೇತುಭೂತವಾದ, ಜನಸ್ಯ-ಜನಗಳಿಗೆ, ಆನಂದವರ್ಧನಂ-ಸಂತೋಷವನ್ನು ವೃದ್ಧಿಗೊಳಿಸುತ್ತಿರುವ, ತಂ - ಆ, ಅಯೋಧ್ಯಾಮಹೋತ್ಸವಂ - ಅಯೋಧ್ಯಾಪಟ್ಟಣದ ಮಹತ್ತರವಾದ ಉತ್ಸವವನ್ನು, ಜನಃ-ಜನವು, ದ್ರಷ್ಟುಂ ನೋಡುತ್ತ, ಉತ್ಸಕಃ - ಉತ್ಕಂಠತೆಯುಳ್ಳದು, ಅಭೂತ್-ಆಯಿತು ॥೨೦॥

ಆ ಅಯೋಧ್ಯಾ ನಗರಿಯು, ಸಾರಿಸಲ್ಪಟ್ಟು, ರಂಗವಲ್ಲಿಗಳಿಂದಲಂಕೃತವಾದ ರಾಜಮಾರ್ಗಗಳುಳ್ಳದಾಗಿಯೂ, ಶೃಂಗಾರಾರ್ಥವಾಗಿ ರಚಿತವಾಗಿದ್ದ ಕದಳೀ ಕ್ರಮುಕಾದಿ ವನರಾಜಿಯುಳ್ಳದಾಗಿಯೂ, ಮನೆಮನೆಯ ಮೇಲೆ ಎತ್ತಿ ಕಟ್ಟಲ್ಪಟ್ಟ ಧ್ವಜ ಪಟಗಳುಳ್ಳದಾಗಿಯೂ ಇದ್ದಿತು. ಆಗೆ ಅಲ್ಲಿ ನೆರದಿದ್ದ ಸ್ತ್ರೀ ಜನ, ಪರಿಜನ, ಪುರಜನರೇ ಮೊದಲಾದ ಸಮಸ್ತ ಪ್ರಜೆಗಳೂ "ಯಾವಾಗ ಸೂರ್ಯೋದಯವಾಗುವುದೋ! ಯಾವಾಗ ಶ್ರೀರಾಮನು ಯೌವರಾಜ್ಯಾಭಿಷಿಕ್ತನಾಗುವನೋ!" ಎಂದು ಬಹಳವಾದ ಉತ್ಸಾಹದಿಂದ ದಿನಮಣಿಯ ಪ್ರಾದುರ್ಭಾವವನ್ನಿದುರು ನೋಡುತ್ತಿದ್ದರು. ಪ್ರಜೆಗಳಿಗೆಲ್ಲ ಆನಂದವನ್ನು ವೃದ್ಧಿಗೊಳಿಸುತ್ತಿರುವುದೂ, ಜನಗಳ ಅಲಂಕಾರಕ್ಕೆಡೆಯಾದುದೂ ಆದ ಆ ಅಯೋಧ್ಯಾ ಪುರಿಯ ಮಹೋತ್ಸವವನ್ನು ನೋಡಲು ಪ್ರಜೆಗಳೆಲ್ಲರೂ ಅತ್ಯುತ್ಸಾಹಭರಿತರಾಗಿದ್ದರು. ॥ ೨೦ ॥ ಆಗಲಾ

ಅಯೋಧ್ಯಾಕಾಂಡೇ ಷಷ್ಠಸ್ಸರ್ಗಃ.

ಗತೇ ಪುರೋಹಿತೇ ರಾಮ ಸ್ಸ್ನಾತೋ ನಿಯತ ಮಾನಸಃ ॥ ಸಹ ಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣಮುಪಾಗಮತ್ ॥೧॥ ಪ್ರಗೃಹ್ಯ

ಪುರೋಹಿತೇ - ವಸಿಷ್ಠಋಷಿಯು, ಗತೇ - ಹೊರಟುಹೋಗಲು, ರಾಮಃ - ಶ್ರೀರಾಮನು, ಸ್ನಾತಃ - (ಗೊ + ಮ) ಕಾಯಶುದ್ಧಿಗೋಸ್ಕರ ಸ್ನಾನಮಾಡಿ, ನಿಯತಮಾನಸಃ - ಮನಶ್ಶುದ್ಧಿಯುಳ್ಳವನಾಗಿ, ವಿಶಾಲಾಕ್ಷ್ಯಾ - (೧) ವಿಸ್ತಾರವಾದ ನೇತ್ರಗಳುಳ್ಳ, ಪತ್ನ್ಯಾಸಹ (೨) - ಸೀತೆಯೊಡನೆ, ನಾರಾಯಣಂ - ಶ್ರೀರಂಗನಾಯಕನನ್ನು, ಉಪಾಗಮತ್ ಉಪಾಸಿಸಿದನು. ||೧|| ತದಾ - ಆ ಸಮಯದಲ್ಲಿ, ಹವಿಷಃ - ಹವಿಸ್ಸಿನ, ಪಾತ್ರೀಂ - ಪಾತ್ರೆಯನ್ನು, ಶಿರಸಾ - ಶಿರಸ್ಸಿನಿಂದ, ಪ್ರಗೃಹ್ಯ - ತೆಗೆದುಕೊಂಡು, ಜ್ವಲಿತೇ - ಪ್ರಜ್ವಲಿಸುತ್ತಿರುವ, ಅನಲೇ - ಅಗ್ನಿಯಲ್ಲಿ, ವಿಧಿವತ್ - ಶಾಸ್ತ್ರೀಯವಾಗಿ, ಆಜ್ಯಂ - ಆಜ್ಯವನ್ನು, ಮಹತೇ - (೩) ಮಹಿಮೆಯುಳ್ಳ, ದೈವತಾಯ - ದೇವರಾದ

ರಾಜ ಪುರೋಹಿತನಾದ ವಸಿಷ್ಠ ಮುನಿಯು ಹೊರಟುಹೋಗಲು, ರಘುರಾಮನು ತಾನು ಮನಶ್ಶುದ್ಧಿಯುಳ್ಳವನಾದರೂ, ಕಾಯಶುದ್ಧಿಗೋಸುಗ ಸ್ನಾನವನ್ನು ಮಾಡಿ, ವಿಶಾಲಾಕ್ಷಿಯೂ, ಸಾಕ್ಷಾಲ್ಲಕ್ಷ್ಮೀದೇವಿಯ ಅವತಾರ ಭೂತಳೂ, ತನ್ನ ಪತ್ನಿಯೂ, ಆದ ಸೀತಾದೇವಿಯೊಡನೆ ಶ್ರೀರಂಗನಾಥನನ್ನುಪಾಸನೆ ಮಾಡಿದನು. ಆಗಲಾ ದಶರಥರಾಜ

ಟಿ. (೧) ವಿಶಾಲಾಕ್ಷ್ಯಾ ಎಂಬೆಡೆಯಲ್ಲಿ ಗೋವಿಂದರಾಜೀಯ ವ್ಯಾಖ್ಯಾನದಲ್ಲಿ ಅತಿಶಯವಾದ ಅರ್ಥವನ್ನು ಬರೆಯಲ್ಪಟ್ಟಿರುವುದು. "ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರ ಭೂತನಾದ ಶ್ರೀರಾಮ ಮೂರ್ತಿಯನ್ನು ಸೀತಾದೇವಿಯು ನಿರಂತರ ನೋಡುತ್ತಿದ್ದರೂ ಶ್ರೀರಂಗನಾಯಕನ ವಿಗ್ರಹವನ್ನು ನೋಡುವಿಕೆಯಲ್ಲಿ ಅಸಾಧಾರಣ ಪ್ರೇಮವುಳ್ಳವಳಾಗಿ ಎವೆಯಿಕ್ಕದೆ ನೋಡುತ್ತಿರುವವಳು" ಎಂದು ರಹಸ್ಯವು. ಎಂದರೆ ಶ್ರೀರಾಮನೇ ಶ್ರೀಮನ್ನಾರಾಯಣನು, ಸೀತಾದೇವಿಯೇ ಸಾಕ್ಷಾಲ್ಲಕ್ಷ್ಮೀದೇವಿಯು ಎಂದು ಭಾಸವಾಗುವುದು.

ಟಿ. (೨) "ಸಹಪತ್ನ್ಯಾ" ಎಂಬೆಡೆಯಲ್ಲಿ ಸ್ವಲ್ಪ ರಹಸ್ಯವಿರುವುದು. "ಪತ್ಯುರ್ನೋ ಯಜ್ಞ ಸಂಯೋಗಃ" ಎಂಬ ದೀಕ್ಷಾ ನಿಯಮವುಳ್ಳ ಪತ್ನಿಯ ಸಹಾಯವುಳ್ಳವನು. ತೃತೀಯಾ ವಿಭಕ್ತಿ ಇರುವುದರಿಂದ ಉಪಕರಣ ಸಾಮಗ್ರಿಯನ್ನೊದಗಿಸುತ್ತಿರುವ ಪತ್ನೀ ಸಹಾಯವುಳ್ಳವನು. ಎಂಬರ್ಥವು ಇಲ್ಲಿ ಯೋಗ್ಯವಾಗಿರುವುದು.

ಟಿ. (೩) "ಮಹತೇ ದೈವತಾಯ" ಎಂಬ ಕಡೆಯಲ್ಲಿ ತನಿಶ್ಲೋಕಿಕಾರರು ಹೀಗೂ ಅರ್ಥ ಮಾಡಿಯಾರೆಂದು ಶಂಕಿಸಿ ಅದನ್ನು ದೂರೀಕರಿಸಿರುವರು. ಅದು ಹೀಗೆ:—"ತಂ ದೇವತಾನಾಂ ಪರಮಂ ಚ ದೈವತಂ" ಎಂಬ ಶ್ರುತ್ಯನುಸಾರವಾಗಿ ನಾರಾಯಣನಿಗೋಸುಗ ಎಂದರ್ಥ ಮಾಡಬೇಕು. "ನಾರಾಯಣ ಮುಪಾಗಮತ್" ಎಂದು ಪ್ರಾರಂಭ ಮಾಡಿ, "ಧ್ಯಾಯನ್ನಾರಾಯಣಂ ದೇವಂ" ಎಂದು ಉತ್ತರೋತ್ತರ ಹೇಳಿರುವುದು ಮಹಾ ದೇವಾಚಿತ್ವ ಭ್ರಾಂತಿ ನಿರಸನಕ್ಕೋಸುಗವಾಗಿಯೇ ಹೊರ್ತು ಮತ್ತೇನು ಇಲ್ಲ. ಆದುದರಿಂದ ಮಹತೇ ದೇವಾಯ ಎಂಬ ಪದಕ್ಕೆ ಮಹಾ ದೇವನನ್ನು ಎಂದು ಅರ್ಥ ಮಾಡಬಾರದು. ಇಲ್ಲಿ ಅನ್ಯ ದೇವತಾ ಕಲ್ಪನೆಯಾಗುವುದರಿಂದ ಹಾಗೆ ಅರ್ಥ ಮಾಡಲಾಗದು. ಇಷ್ಟು ಬರೆದುದಕ್ಕೆ ಅಷ್ಟೇನೂ ಬೆಲೆಯನ್ನು ಕೊಡಲಾಗುವುದಿಲ್ಲ. ಮಹತೇ ದೇವತಾಯ ಎಂಬುದು ಪೂರ್ವೋತ್ತರ ಸಂದರ್ಭಗಳಿಂದ ನಾರಾಯಣನಿಗೆ ಎಂದೇ ಅರ್ಥವಾಗುವಲ್ಲಿ, ಬೇರೊಂದು ಅರ್ಥವಾಗುವುದಿಲ್ಲ.



(ಪುಟ ೬೮)

—: ಶ್ರೀರಾಮಕೃತ ವ್ರತಾನುಷ್ಠಾನವು :—

ಶಿರಸಾ ಪಾತ್ರೀಂ ಹವಿಷೋ ವಿಧಿವತ್ತದಾ ॥ ಮಹತೇ ದೈವತಾಯಾಜ್ಯಂ
ಜುಹಾವ ಜ್ವಲಿತೇಽನಲೇ ॥ ೨ ॥ ಶೇಷಂಚ ಹವಿಷಸ್ತಸ್ಯ ಪ್ರಾಶ್ಯಾ ಶಾಸ್ಯಾ
ತ್ಮನಃ ಪ್ರಿಯಂ ॥ ಧ್ಯಾಯ ನ್ನಾರಾಯಣಂ ದೇವಂ ಸ್ವಾಸ್ತೀರ್ಣೇ ಕುಶ
ಸಂಸ್ತರೇ ॥ ೩ ॥ ವಾಗ್ಯತ ಸ್ಸಹವೈದೇಹ್ಯಾ ಭೂತ್ವಾ ನಿಯತ ಮಾನಸಃ ॥ ಶ್ರೀ
ಮತ್ಯಾಯತನೇ ವಿಷ್ಣೋಃ ಶಿಶ್ಯೇ ನರವರಾತ್ಮಜಃ ॥ ೪ ॥ ಏಕ ಯಾಮಾ
ವಶಿಷ್ಟಾಯಾಂ ರಾತ್ರ್ಯಾಂ ಪ್ರತಿ ವಿಬುಧ್ಯ ಸಃ ॥ ಅಲಂಕಾರವಿಧಿಂ ಕೃತ್ಸ್ನಂ ಕಾರ

ಶ್ರೀಮನ್ನಾರಾಯಣನಿಗೋಸುಗ, ಜುಹಾವ - ಹೋಮಮಾಡಿದನು ॥೨॥ ನರವರಾತ್ಮಜಃ - ಶ್ರೀರಾಮನು, ತಸ್ಯಹವಿಷಃ - ಆ ಹವಿಸ್ಸಿನ, ಶೇಷಂ - ಅವಸಿಷ್ಟಭಾಗವನ್ನು, ಪ್ರಾಶ್ಯ - ಭುಂಜಿಸಿ, ಆತ್ಮನಃ- ತನಗೆ, ಪ್ರಿಯಂ - ಇಷ್ಟವನ್ನು, ಆಶಾಸ್ಯ - ಅನುಸಂಧಾನಮಾಡಿಕೊಂಡು, ನಾರಾಯಣಂ - ಶ್ರೀರಂಗ ನಾಯಕರೂಪವಾಗಿರುವ ನಾರಾಯಣನೆಂಬ, ದೇವಂ - ದೇವತೆಯನ್ನು, ಧ್ಯಾಯನ್ - ಧ್ಯಾನಮಾಡುತ್ತ, ಸ್ವಾಸ್ತೀರ್ಣೇ - ತನಗೋಸುಗ ಹಾಸಲ್ಪಟ್ಟ, (ಗೋ) - ಸ್ವಾಸ್ತೀರ್ಣೇ - ಚನ್ನಾಗಿಹಾಸಲ್ಪಟ್ಟ, ಕುಶಸಂಸ್ತರೇ - ದರ್ಭೆಯ ಹಾಸಿಗೆಯಲ್ಲಿ, ವಾಗ್ಯತಃ - ಮೌನವ್ರತವುಳ್ಳವನು, ನಿಯತಮಾನಸಃ - ನಿಶ್ಚಂಚಲವಾದ ಮನಸ್ಸುಳ್ಳವನು, ಭೂತ್ವಾ - ಆಗಿ, ವೈದೇಹ್ಯಾಸಹ - (೧) ಸೀತಾದೇವಿಯೊಡನೆ, ವಿಷ್ಣೋಃ - ರಂಗನಾಥನ, ಶ್ರೀಮತಿ - (ಗೋ) ವೇದತ್ರಯಸಾರಭೂತಪ್ರಣವಾಕಾರವಾದ, ಆಯತನೇ -ಮನೆಯಲ್ಲಿ, ಶಿಶ್ಯೇ - ಮಲಗಿದನು ॥ ೪ ॥ ಸಃ - ಆಶ್ರೀರಾಮನು, ರಾತ್ರ್ಯಾಂ-ರಾತ್ರಿಯು, ಏಕಯಾಮಾವಶಿಷ್ಟಾಯಾಂ - ಒಂದು ಯಾಮವು ಉಳಿದಿರಲು, ಪ್ರತಿಬುಧ್ಯ-ಎಚ್ಚರಗೊಂಡು, ವೇಶ್ಮನಃ-

---

ಕುವರನಾದ ಶ್ರೀರಾಮನು ಹವಿಃಪಾತ್ರೆಯನ್ನು ಶಿರಸಾಧಾರಣೆ ಮಾಡಿದವನಾಗಿ, ಶ್ರೀಮನ್ನಾರಾಯಣನಿಗೋಸುಗ ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಶಾಸ್ತ್ರೋಕ್ತವಾಗಿ ಹೋಮ ಮಾಡಿ, ಆ ಹವಿಶ್ಶೇಷವನ್ನು ಭುಂಜಿಸಿ, ತನ್ನ ಪ್ರಿಯವನ್ನನುಸಂಧಾನ ಮಾಡಿಕೊಂಡು, ಶ್ರೀರಂಗನಾಯಕನನ್ನು ಧ್ಯಾನಿಸುತ್ತ ಮೌನ ವ್ರತವುಳ್ಳವನಾಗಿಯೂ, ಚಾಂಚಲ್ಯ ರಹಿತವಾದ ಮನವುಳ್ಳವನಾಗಿಯೂ, ಜಿತೇಂದ್ರಿಯನಾಗಿಯೂ ಇರುತ್ತ ದರ್ಭಾಸ್ತರಣದಲ್ಲಿ ಸೀತಾದೇವಿಯೊಡನೆ ದೇವಾಯತನದಲ್ಲಿ ಮಲಗಿದವನಾದನು. ಆ ಬಳಿಕಲಾತನು ಪ್ರಾತಃ

ಟಿ. (೧) "ವೈದೇಹ್ಯಾ ಸಹಶಿಶ್ಯೇ" ಎಂಬ ಕಡೆಯಲ್ಲಿ ಗೋವಿಂದರಾಜೀಯಕಾರರ ಅಭಿಪ್ರಾಯವು ಈ ರೀತಿ ಇರುವುದು. ಸೀತಾದೇವಿಯೊಡನೆ ಶ್ರೀರಾಮನು ಏಕಶಯ್ಯೆಯಲ್ಲಿ ಮಲಗಿದನೆಂದು ಸವಿಶೇಷಣಗಳಿಂದ ಹೇಳಿರುವುದು ಆತನ ಜಿತೇಂದ್ರಿಯತೆಯನ್ನು ನಿರೂಪಿಸಲೋಸುಗವೆಂದು ತಿಳಿಯತಕ್ಕದು. ಶ್ರೀಮತಿ ಎಂದರೆ "ವಿಮಾನಂ ಪ್ರಣವಾಕಾರಂ" ಎಂದು ಹೇಳಿದ ವೇದತ್ರಯ ಸಾರಭೂತವಾದ ಪ್ರಣವಾಕಾರವಾದ ವಿಷ್ಣೋಃ ರಾಯತನೆ ಎಂದರ್ಥ. ಇದಕ್ಕೆ ಋಚಸ್ಸಾಮಾನಿಯಜೂಗ್‌ಂಷಿ । ಸಾಹಿಶ್ರೀರ ಮೃತಾ ಸತಾಂ" ಎಂಬ ಶ್ರುತಿಯೇ ಆಧಾರವು. "ವಿಷ್ಣೋಃ ರಾಯತನೇ" ಎಂದರೆ ರಂಗಧಾಮದಲ್ಲಿ "ಶಿಶ್ಯೇ" ಮಲಗಿದನು, ಎಂದರ್ಥವು. ಇಷ್ಟನ್ನೂ ಒಕ್ಕಣಿಸಿ "ನರವರಾತ್ಮಜಃ" ಎಂಬ ವಿಶೇಷಣವನ್ನು ಕೊಟ್ಟದು "ಶ್ರೀರಾಮ ಮೂರ್ತಿಯು ಸಾಕ್ಷಾನ್ನಾರಾಯಣನ ಅವತಾರಭೂತನಾಗಿದ್ದರೂ, ಶ್ರೀರಂಗನಾಯಕನನ್ನು ಅರ್ಚಿಸಿದುದು ತನ್ನವತಾರಕ್ಕನುಮತವಾದ ಕ್ಷತ್ರಿಯ ಧರ್ಮವನ್ನು ತೋರುವುದಕ್ಕೆ" ಎಂಬ ರಹಸ್ಯವನ್ನು ಹೇಳುವುದಕ್ಕಾಗಿ ಎಂದು ತಿಳಿಯಬೇಕು.

ಯಾಮಾಸ ವೇಶ್ಮನಃ ॥ ೫ ॥ ತತ್ರ ಶೃಣ್ವನ್ ಸುಖಾವಾಚ ಸ್ಸೂತ ಮಾಗಧ ವಂದಿನಾಂ ॥ ಪೂರ್ವಾಂ ಸಂಧ್ಯಾ ಮುಪಾಸೀನೋ ಜಜಾಪ ಯತ ಮಾನಸಃ ॥ ೬ ॥ ತುಷ್ಟಾವ ಪ್ರಣತಶ್ಚೈವ ಶಿರಸಾ ಮಧುಸೂದನಂ ॥ ವಿಮಲಕ್ಷೌಮ ಸಂವೀತೋ ವಾಚಯಾಮಾಸ ಚ ದ್ವಿಜಾನ್ ॥ ೭ ॥ ತೇಷಾಂ ಪುಣ್ಯಾಹಘೋಷೋ ಷೋಥ ಗಂಭೀರ ಮಧುರಸ್ತದಾ ॥ ಅಯೋಧ್ಯಾಂ ಪೂರಯಾಮಾಸ ತೂರ್ಯ ಘೋಷಾನುನಾದಿತಃ ॥ ೮ ॥ ಕೃತೋಪವಾಸಂ ತು ತದಾ ವೈದೇಹ್ಯಾ ಸಹ

ಮನೆಗೆ, ಅಲಂಕಾರವಿಧಿಂ - ಅಲಂಕಾರವಿಧಿಯನ್ನು, ಕಾರಯಾಮಾಸ - ಮಾಡಿಸಿದನು ||೫|| ತತ್ರ - ಅಲ್ಲಿ, ಸೂತಮಾಗಧವಂದಿನಾಂ, ಸೂತ - ಪೌರಾಣಿಕರ, ಮಾಗಧ - ವಂಶಾವಳಿಯನ್ನು ಸ್ತುತಿಸುವರ, ವಂದಿನಾಂ - ಸ್ತುತಿಪಾಠಕರ, ಸುಖಾಃ - ಸುಖಕರವಾದ, ವಾಚಃ - ಮಾತುಗಳನ್ನು, ಶೃಣ್ವನ್ - ಕೇಳುತ್ತ, ಪೂರ್ವಾಂಸಂಧ್ಯಾಂ - ಪ್ರಾತಸ್ಸಂಧ್ಯಾಧಿದೇವತೆಯಾದ ಸೂರ್ಯನನ್ನು, ಉಪಾಸೀನಃ - ಧ್ಯಾನಿಸುತ್ತ, ನಿಯತಮಾನಸಃ - ಅನನ್ಯಚಿತ್ತನಾಗಿ, ಜಜಾಪ - ಗಾಯತ್ರೀಜಪ ವನ್ನು ಮಾಡಿದನು || ೬ || ಶಿರಸಾ - ಶಿರಸ್ಸಿನಿಂದ, ಪ್ರಣತಃ - ನಮ್ರನಾಗಿ, ಮಧುಸೂದನಂ - (ಗೊ) ಸೂರ್ಯಾಂತರ್ವರ್ತಿಯಾದ ನಾರಾಯಣನನ್ನು, ತುಷ್ಟಾವ - ಉಪಸ್ಥಾನಮಾಡಿದನು, ವಿಮಲಕ್ಷೌಮ ಸಂವೀತಃ, ವಿಮಲ - ನಿರ್ಮಲವಾದ, ಕ್ಷೌಮ - ಬಿಳಿತಾಗಿರುವ ವಸ್ತ್ರದಿಂದ, ಸಂವೀತಃ - ಸುತ್ತಲ್ಪಟ್ಟ ವನಾಗಿ, ದ್ವಿಜಾನ್ - ಬ್ರಾಹ್ಮಣರಿಂದ, (ಸ್ವಸ್ತಿವಾಚನಂ - ಪುಣ್ಯಾಹವನ್ನು,) ವಾಚಯಾಮಾಸ - ಮಾಡಿಸಿದನು || ೭ || ಅಥ - ಬಳಿಕ, ಗಂಭೀರಮಧುರಃ - ಗಂಭೀರವಾಗಿಯೂ ಮಧುರವಾಗಿಯೂ ಇರುವ, ತೇಷಾಂ - ಆ ಬ್ರಾಹ್ಮಣರ, ಪುಣ್ಯಾಹಘೋಷಃ - ಸ್ವಸ್ತಿವಾಚನಶಬ್ದವು, ತೂರ್ಯಘೋಷಾ ನುನಾದಿತಃ - ತುತ್ತೂರಿಗಳಶಬ್ದದಿಂದ ಸಂಬಂಧಿಸಿದ ನಾದವುಳ್ಳದಾಗಿ, ತದಾ - ಆಗ, ಅಯೋಧ್ಯಾಂ- ಅಯೋಧ್ಯಾ ಪಟ್ಟಣವನ್ನು, ಪೂರಯಾಮಾಸ - ತುಂಬಿಸಿತು || ೮ || ತದಾ - ಆಕಾಲದಲ್ಲಿ, ವೈದೇ ಹ್ಯಾಸಹ - ಸೀತಾದೇವಿಯೊಡನೆ, ಕೃತ - ಮಾಡಲ್ಪಟ್ಟ, ಉಪವಾಸಂ - ಉಪವಾಸವುಳ್ಳ, ರಾಘವಂ - ಶ್ರೀರಾಮನನ್ನು, ಶ್ರುತ್ವಾ - ಕೇಳಿ, ತದಾ - ಆ ಸಮಯದಲ್ಲಿ, ಆಯೋಧ್ಯಾನಿಲಯಃ - ಅಯೋಧ್ಯಾ ಪಟ್ಟಣದಲ್ಲಿರುವ, ಸರ್ವಃ - ಸಮಸ್ತವಾದ, ಜನಃ - ಜನವು, ಪ್ರಮುದಿತಃ - ಸಂತುಷ್ಟವಾದುದು,

---

ಕಾಲವಾಗಲು ಒಂದು ಯಾಮವಿರುವಾಗಲೆ ಎಚ್ಚರಗೊಂಡು ನಿಜ ಮಂದಿರಕ್ಕೆ ಅಲಂಕಾರ ವಿಧಾನಗಳನ್ನೆಲ್ಲ ಮಾಡಿಸಿದವನಾದನು. || ೧-೫ || ಇದಾದ ಮೇಲೆ ಆ ಶ್ರೀರಾಮನು ಪೌರಾ ಣಿಕರೂ, ವಂಶಾವಳಿಯನ್ನು ಸ್ತುತಿಸುವವರೂ, ಸ್ತುತಿಪಾಠಕರು ಹೇಳುತ್ತಿದ್ದ ಕಿವಿಗಿಂಪಾದ ನುಡಿಗಳನ್ನು ಕೇಳುತ್ತ, ಪ್ರಾತಸ್ಸಂಧ್ಯಾದಿ ದೇವತೆಗಳನ್ನು ಧ್ಯಾನಿಸಿ ಸೂರ್ಯೋಪಾಸನೆಯಂ ಗೈದು ಗಾಯತ್ರೀ ಜಪವನ್ನು ಮಾಡಿ, ತಲೆಬಾಗಿ ನಮಸ್ಕಾರವನ್ನು ಮಾಡಿ, ಪರಿಶುದ್ಧವಾದ ವಸ್ತ್ರವನ್ನುಟ್ಟು, ವಿಪ್ರಶ್ರೇಷ್ಠರಿಂದ ಸ್ವಸ್ತಿವಾಚನೆಯಂ ಗೈಸಿದವನಾದನು. ಆ ಸಮಯದಲ್ಲಿ ಆ ಬ್ರಾಹ್ಮಣ ಶ್ರೇಷ್ಠರು ಮಾಡಿದ ಗಂಭೀರವಾದುದೂ, ಮಧುರವಾದುದೂ ಆದ ಪುಣ್ಯಾಹ ವಾಚನದ ಘೋಷವು, ತುತ್ತೂರಿಯೇ ಮೊದಲಾದ ಮಂಗಳ ವಾದ್ಯಗಳ ಧ್ವನಿಯಿಂದ ಪ್ರತಿಧ್ವನಿಯುಳ್ಳದಾಗಿ ಆ ಪುರದಲ್ಲೆಲ್ಲ ತುಂಬಿದುದಾಯಿತು. ಶ್ರೀರಾಮನು ಯೌವರಾಜ್ಯ

ರಾಘವಂ ॥ ಅಯೋಧ್ಯಾನಿಲಯ ಶ್ಶ್ರುತ್ವಾ ಸರ್ವಃ ಸಮುದಿತೋಜನಃ ॥೯॥
ತತಃ ಪೌರಜನ ಸ್ಸರ್ವ ಶ್ಶ್ರುತ್ವಾ ರಾಮಾಭಿಷೇಚನಂ ॥ ಪ್ರಭಾತಾಂ ರಜನೀಂ
ದೃಷ್ಟ್ವಾ ಚಕ್ರೇ ಶೋಭಯಿತುಂ ಪುರೀಂ ॥೧೦॥ ಸಿತಾಭ್ರ ಶಿಖರಾಭೇಷು
ದೇವತಾಯತನೇಷುಚ ॥ ಚತುಷ್ಪಥೇಷು ರಥ್ಯಾಸು ಚೈತ್ಯೇಷ್ವಟ್ಟಾಲಕೇ
ಷುಚ ॥೧೧॥ ನಾನಾಪಣ್ಯಸಮೃದ್ಧೇಷು ವಣಿಜಾಮಾಪಣೇಷುಚ ॥
ಕುಟುಂಬಿನಾಂ ಸಮೃದ್ಧೇಷು ಶ್ರೀಮತ್ಸು ಭವನೇಷುಚ ॥೧೨॥ ಸಭಾಸು
ಚೈವ ಸರ್ವಾಸು ವೃಕ್ಷೇಷ್ವಾಲಕ್ಷಿತೇಷುಚ ॥ ಧ್ವಜಾ ಸ್ಸಮುಚ್ಛ್ರಿತಾ ಶ್ಚಿತ್ರಾಃ
ಪತಾಕಾಶ್ಚಾ ಭವಂಸ್ತದಾ ॥೧೩॥ ನಟನರ್ತಕ ಸಂಘಾನಾಂ ಗಾಯಕಾ

(ಅಭೂತ್ - ಆಯಿತು) ॥೯॥ ತತಃ - ಬಳಿಕ, ಸರ್ವಃ - ಸಮಸ್ತವಾದ, ಪೌರಜನಃ - ಪಟ್ಟಣಸ್ಥ ಜನವು, ರಾಮಾಭಿಷೇಚನಂ - ಶ್ರೀರಾಮನ ಯೌವರಾಜ್ಯ ಪಟ್ಟಾಭಿಷೇಕ ವಿಷಯವನ್ನು, ಶ್ರುತ್ವಾ-ಕೇಳಿ, ಪ್ರಭಾತಾಂ - ಬೆಳಗಾಗುತ್ತಿರುವ, ರಜನೀಂ - ರಾತ್ರಿಯನ್ನು, ದೃಷ್ಟ್ವಾ - ಕಂಡು, ಪುರೀಂ - ಪಟ್ಟಣವನ್ನು, ಶೋಭಯಿತುಂ - ಅಲಂಕಾರಮಾಡಲು, ಚಕ್ರೇ - ಉಪಕ್ರಮ ಮಾಡಿತು ॥೧೦॥ ತದಾ- ಆ ಸಮಯದಲ್ಲಿ, ಸಿತಾಭ್ರಶಿಖರಾಭೇಷು - ಬಿಳೀಮೇಘಗಳ, ತುದಿಭಾಗಗಳ ಕಾಂತಿಯುಳ್ಳ, ದೇವತಾ ಯತನೇಷುಚ-ದೇವಸ್ಥಾನಗಳಲ್ಲಿಯೂ, ಚತುಷ್ಪಥೇಷು-ನಾಲ್ಕುದಾರಿಗಳು ಕೂಡಿರುವಸ್ಥಳಗಲ್ಲಿಯೂ, ರಥ್ಯಾಸು - ರಾಜವೀಥಿಗಳಲ್ಲಿಯೂ, ಚೈತ್ಯೇಷು - ಬೌದ್ಧಾಲಯಗಳಲ್ಲಿಯೂ, (ಯಜನಶಾಲೆಗಳಲ್ಲಿ,) ಅಟ್ಟಾಲಕೇಷುಚ-(ಮ + ಗೋ)ಯುದ್ಧಾರ್ಥವಾಗಿ ಕೋಟೆಗೋಡೆಯ ಮೇಲೆ ಮಾಡಲ್ಪಟ್ಟ ಚತುಸ್ತಂಭನಿರ್ಮಿತವಾದ ಮಂಟಪಗಳಲ್ಲಿಯೂ, ನಾನಾಪಣ್ಯಸಮೃದ್ಧೇಷು-ಅನೇಕವಿಧವಾದ ಕ್ರಯಕ್ಕೆಕೊಡತಕ್ಕ ಪದಾರ್ಥಗಳಿಂದ, ಸಮೃದ್ಧೇಷು - ತುಂಬಿರುವ, ವಣಿಜಾಂ-ವರ್ತಕರ, ಆಪಣೇಷು ಮಳಿಗೆಗಳಲ್ಲಿಯೂ, ಸಮೃದ್ಧೇಷು - ತುಂಬಿರುವ, ಶ್ರೀಮತ್ಸು - ಕಾಂತಿಯುಕ್ತವಾದ ಸಂಪತ್ತುಳ್ಳ, ಕುಟುಂಬಿನಾಂ-ಗೃಹಸ್ಥರ, ಭವನೇಷುಚ - ಮನೆಗಳಲ್ಲಿಯೂ, ಸರ್ವಾಸು - ಸಮಸ್ತವಾದ, ಸಭಾಸುಚೈವ - ಸಭೆಗಳಲ್ಲಿಯೂ, ಆಲಕ್ಷಿತೇಷು - ಯಲ್ಲೆಡೆಯಲ್ಲಿಯೂ ಕಾಣುತ್ತಿರುವ, ವೃಕ್ಷೇಷುಚ - ಮರಗಳಲ್ಲಿಯೂ, ಚಿತ್ರಾಃ - ಆಶ್ಚರ್ಯಕರಗಳಾದ, ಧ್ವಜಾಃ - ಗುರ್ತುಗಳಿಂದೊಡಗೂಡಿದ ಧ್ವಜಗಳು, ಪತಾಕಾಶ್ಚ - ಚಿಹ್ನರಹಿತವಾದ ಧ್ವಜಗಳು, ಸಮುಚ್ಛ್ರಿತಾಃ - ಕಟ್ಟಲ್ಪಟ್ಟುವು, ಅಭವನ್ - ಆದವು ॥೧೧-೧೩॥

ಪಟ್ಟಾಭಿಷಿಕ್ತನಾಗಲು ಸೀತಾದೇವಿಯೊಡಗೂಡಿ ಉಪವಾಸ ವ್ರತವನ್ನು ಮಾಡಿದನೆಂಬ ವಾರ್ತೆಯನ್ನು ಕೇಳಿ ಪುರಜನರೆಲ್ಲರೂ ಮಹಾ ಸಂತೋಷಭರಿತರಾಗಿ ಬೆಳಗಾಗುತ್ತಿರುವುದನ್ನು ಕಂಡು ಪಟ್ಟಣವನ್ನು ಶೃಂಗರಿಸಲುಪಕ್ರಮಿಸಿದರು. ॥೬-೧೦॥ ಆಗಲಾ ಪಟ್ಟಣಿಗರು, ಬಿಳಿ ಮುಗಿಲುಗಳ ತುದಿ ಕಾಂತಿಗಳಂತಿರುವ ದೇವಸ್ಥಾನಗಳಲ್ಲಿಯೂ, ನಾಲ್ಕು ಬೀದಿಗಳು ಕೂಡುವ ಚಚ್ಚೌಕಗಳಲ್ಲಿಯೂ, ರಾಜವೀಥಿಗಳಲ್ಲಿಯೂ, ಯಜ್ಞವಾಟಗಳಲ್ಲಿಯೂ, ಯುದ್ಧಕ್ಕೋಸುಗ ಕೋಟೆಯ ಮೇಲ್ಗಡೆ ರಚಿಸಿರುವ ಮಂಟಪಗಳಲ್ಲಿಯೂ, ವಿಧವಿಧವಾದ ಪದಾರ್ಥಜಾಲಗಳಿಂದ ಪೂರ್ಣವಾದ ಮಳಿಗೆಗಳಲ್ಲಿಯೂ, ಮಹದೈಶ್ವರ್ಯಸಮೃದ್ಧಿಯುಳ್ಳ ಭವನಗಳಲ್ಲಿಯೂ, ಅನೇಕ ಸಭಾಸ್ಥಾನಗಳಲ್ಲಿಯೂ, ನಲ್ದಿಕ್ಕುಗಳಿಗೂ ಕಾಣಿಸುವ

ನಾಂ ಚ ಗಾಯತಾಂ ॥ ಮನಃ ಕರ್ಣಸುಖಾವಾಚ ಶ್ಶುಶ್ರುವುಶ್ಚ ತತಸ್ತತಃ ॥ ೧೪ ॥ ರಾಮಾಭಿಷೇಕ ಯುಕ್ತಾಶ್ಚ ಕಥಾಶ್ಚಕ್ರು ರ್ಮಿಥೋ ಜನಾಃ ॥ ರಾಮಾಭಿಷೇಕೇ ಸಂಪ್ರಾಪ್ತೇ ಚತ್ವರೇಷು ಗೃಹೇಷುಚ ॥ ೧೫ ॥ ಬಾಲಾ ಅಪಿ ಕ್ರೀಡಮಾನಾ ಗೃಹದ್ವಾರೇಷು ಸಂಘಶಃ ॥ ರಾಮಾಭಿಷೇಕ ಸಂಯುಕ್ತಾ ಶ್ಚಕ್ರುರೇವಂ ಮಿಥಃ ಕಥಾಃ ॥ ೧೬ ॥ ಕೃತ ಪುಷ್ಪೋಪಹಾರಶ್ಚ ಧೂಪ ಗಂಧಾಧಿ ವಾಸಿತಃ ॥ ರಾಜಮಾರ್ಗಃ ಕೃತಶ್ರೀಮಾ ನ್ಪ್ರಾಪ್ತೇ ರಾಮಾಭಿ

ತತಸ್ತತಃ - ಅಲ್ಲಲ್ಲಿ, ನಟನರ್ತಕಸಂಘಾನಾಂ, ನಟ - ನಾಟ್ಯವನ್ನು ಮಾಡುತ್ತಿರುವರ, ನರ್ತಕ - ನಾಟ್ಯವಾಡುತ್ತಿರುವರ, ಸಂಘಾನಾಂ - ಗುಂಪುಗಳ, ವಾಚಃ - ವಾಕ್ಕುಗಳನ್ನು, (ಗೋ) ನಟ - ಅಭಿನಯವನ್ನು ಕಲಿಸುತ್ತಿರುವ, ನರ್ತಕ - ಕುಣಿಯುವಕಾಲದಲ್ಲಿ ಕೇವಲವಾಗಿ ಮೈಕುಲುಕಿಸುವಿಕೆಯಂ ಗೈಯುತ್ತಿರುವರ, ಸಂಘಾನಾಂ - ಸಮುದಾಯಗಳ, ಗಾಯಕಾನಾಂ - ಗಾನಮಾಡುವವರ, ಮನಃ ಕರ್ಣಸುಖಾಃ - ಮನಸ್ಸಿಗೂ ಶ್ರೋತ್ರುಗಳಿಗೂ ಸುಖಕರಗಳಾದ, ವಾಚಃ - ಮಾತುಗಳನ್ನು, ಶುಶ್ರುವುಃ- ಕೇಳುತ್ತಿದ್ದರು ॥ ೧೪ ॥ ರಾಮಾಭಿಷೇಕೇ - ಶ್ರೀರಾಮನ ಪಟ್ಟಾಭಿಷೇಕವು, ಸಂಪ್ರಾಪ್ತೇ - ಒದಗಿ ಬರಲು, ರಾಮಾಭಿಷೇಕಯುಕ್ತಾಃ - ಶ್ರೀರಾಮನ ಅಭಿಷೇಕದಿಂದಯುಕ್ತರಾದ, ಜನಾಶ್ಚ - ಜನಗಳೂ ಸಹ, ಚತ್ವರೇಷು - ಅಂಗಣಗಳಲ್ಲಿಯೂ, ಗೃಹೇಷುಚ - ಮನೆಗಳಿಲ್ಲಿಯೂಕೂಡ, ಮಿಥಃ - ಅನ್ಯೋನ್ಯವಾಗಿ, ಕಥಾಃ - ಪ್ರಸ್ತಾವಗಳನ್ನು, ಚಕ್ರುಃ - ಮಾಡುತ್ತಿದ್ದರು ॥ ೧೫ ॥ ಗೃಹದ್ವಾರೇಷು - ಮನೆಬಾಗಿಲುಗಳಲ್ಲಿ, ಸಂಘಶಃ - ಗುಂಪುಸೇರಿ, ಕ್ರೀಡಮಾನಾಃ - ಆಡುತ್ತಿರುವ, ಬಾಲಾಅಪಿ - ಹುಡುಗರೂಕೂಡ, ರಾಮಾಭಿಷೇಕಸಂಯುಕ್ತಾಃ, ರಾಮ - ಶ್ರೀರಾಮನ, ಅಭಿಷೇಕ - ಪಟ್ಟಾಭಿಷೇಕಾರ್ಥವಾಗಿ, ಸಂಯುಕ್ತಾಃ - ಗುಂಪುಗೂಡಿ, ಏವಂ - ಹೀಗೆ, ಮಿಥಃ - ಅನ್ಯೋನ್ಯವಾಗಿ, ಕಥಾಃ - ಪ್ರಸ್ತಾಪಗಳನ್ನು, ಚಕ್ರುಃ - ಮಾಡಿದರು ॥ ೧೬ ॥ ಶ್ರೀಮಾ೯ - ಸಂಪದ್ಯುಕ್ತವಾದ, ರಾಜಮಾರ್ಗಃ- ರಾಜಬೀದಿಯು, ಪೌರೈಃ - ಪಟ್ಟಣಸ್ಥರಿಂದ, ರಾಮಾಭಿಷೇಚನೇ - ಶ್ರೀರಾಮನ ಪಟ್ಟಾಭಿಷೇಕವಿಷಯದಲ್ಲಿ, ಕೃತಪುಷ್ಪೋಪಹಾರಃ, ಕೃತ - ಮಾಡಲ್ಪಟ್ಟ, ಪುಷ್ಪೋಪಹಾರಃ - ಹೂಗಳು, ಉಪಹಾರಃ- ಪೂಜೆಯುಳ್ಳದಾಗಿಯೂ, ಧೂಪಗಂಧಾಧಿವಾಸಿತಃ - ಕೃಷ್ಣಾಗರುಧೂಪಗಳ ಗಂಧಪರಿಮಳದಿಂದ,

---

ಎತ್ತರವಾದ ವೃಕ್ಷಗಳಲ್ಲಿಯೂ, ಮತ್ಸ್ಯ ಮಕರಾದಿ ಚಿಹ್ನಿತವಾದ ದೊಡ್ಡ ದೊಡ್ಡ ಧ್ವಜಪಟಗಳನ್ನೂ, ಗುರ್ತುಗಳಿಲ್ಲದಿರುವ ಚಿಕ್ಕ ಚಿಕ್ಕ ಪತಾಕೆಗಳನ್ನೂ ಕಟ್ಟಿದವರಾದರು. ಇಷ್ಟೇಯಲ್ಲದೆ ಆ ಅಯೋಧ್ಯಾನಗರ ನಿವಾಸಿಗಳೂ, ನಟ, ನರ್ತಕ, ಗಾಯಕರು, ಮನಸ್ಸಂತೋಷಕರವಾಗಿ ನೃತ್ಯಗೀತಾದಿ ವಾದ್ಯಗಳನ್ನು ಮಾಡುತ್ತಿದ್ದುದನ್ನು, ಕೇಳುತ್ತಿದ್ದುದಲ್ಲದೆ, ಶ್ರೀ ರಾಮನ ಯೌವರಾಜ್ಯಪಟ್ಟಾಭಿಷೇಕ ಮಹೋತ್ಸವವು ಒದಗಿಬರಲು, ಅಂಗಳಗಳಲ್ಲಿಯೂ ಮಂದಿರಗಳಲ್ಲಿಯೂ, ಅನ್ಯೋನ್ಯವಾಗಿ ಅಭಿಷೇಕಕ್ಕೆ ತಕ್ಕ ಕಥೆಗಳನ್ನು ಹೇಳುತಿದ್ದರು; ಮನೆಗಳ ಬಾಗಿಲುಗಳಲ್ಲಿ ಆಡುತ್ತಿದ್ದ ಬಾಲಕರು ಸಹ ರಾಮಾಭಿಷೇಕಕ್ಕುಚಿತವಾದ ಕಥೆಗಳನ್ನೊಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು. ॥ ೧೧-೧೬ ॥ ಆ ಸಮಯದಲ್ಲಿ ರಾಜವೀಥಿಗಳು ಪುಷ್ಪ

ಷೇಚನೇ ॥ ೧೭ ॥ ಪ್ರಕಾಶ ಕರಣಾರ್ಥಂಚ ನಿಶಾಗಮನ ಶಂಕಯಾ ॥
ದೀಪ ವೃಕ್ಷಾಂಸ್ತಥಾ ಚಕ್ರು ರನುರಥ್ಯಾಸು ಸರ್ವಶಃ ॥ ೧೮ ॥ ಅಲಂಕಾರಂ
ಪುರಸ್ಯೈವಂ ಕೃತ್ವಾ ತತ್ಪುರ ವಾಸಿನಃ ॥ ಆಕಾಂಕ್ಷಮಾಣಾ ರಾಮಸ್ಯ ಯೌವ
ರಾಜ್ಯಾಭಿಷೇಚನಂ ॥ ೧೯ ॥ ಸಮೇತ್ಯ ಸಂಘಶಸ್ಸರ್ವೇ ಚತ್ವರೇಷು
ಸಭಾಸು ಚ ॥ ಕಥಯಂತೋ ಮಿಥಸ್ತತ್ರ ಪ್ರಶಶಂಸು ರ್ಜನಾಧಿಪಂ ॥ ೨೦ ॥
ಅಹೋ ಮಹಾತ್ಮಾ ರಾಜಾಯ ಮಿಕ್ಷ್ವಾಕು ಕುಲನಂದನಃ ॥ ಜ್ಞಾತ್ವಾಽಯೋ
ವೃದ್ಧಮಾತ್ಮಾನಂ ರಾಮಂ ರಾಜ್ಯೇಽಭಿಷೇಕ್ಷ್ಯತಿ ॥ ೨೧ ॥ ಸರ್ವೇಹ್ಯನು
ಗೃಹೀತಾಸ್ಸ್ಮ ಯನ್ನೋ ರಾಮೋ ಮಹೀಪತಿಃ ॥ ಚಿರಾಯ ಭವಿತಾ

ವಾಸನೆಕಟ್ಟಲ್ಪಟ್ಟುದಾಗಿಯೂ, ಕೃತಃ - ಮಾಡಲ್ಪಟ್ಟಿತು ॥ ೧೭ ॥ ಪ್ರಕಾಶಕರಣಾರ್ಥಂಚ - ಬೆಳಕು ಮಾಡುವ ನಿಮಿತ್ತ, ನಿಶಾಗಮನಶಂಕಯಾಚ-ರಾತ್ರಿಯ ಬರುವಿಕೆಯ ಭಯದಿಂದಲೂ, ಅನುರಥ್ಯಾಸು-ಪ್ರತಿಯೊಂದು ಬೀದಿಗಳಲ್ಲಿಯೂ, ಸರ್ವಶಃ-ಎಲ್ಲೆಡೆಗಳಲ್ಲಿಯೂ, ದೀಪವೃಕ್ಷಾನ್-ವೃಕ್ಷಾಕಾರಗಳಾಗಿರುವ ದೀಪಸ್ತಂಭಗಳನ್ನು, ತಥಾ - ಆ ಪ್ರಕಾರವಾಗಿ, ಚಕ್ರುಃ - ಮಾಡಿದರು ॥ ೧೮ ॥ ತತ್ಪುರವಾಸಿನಃ-ಆ ಅಯೋಧ್ಯಾಪಟ್ಟಣವಾಸಿಗಳಾದ ಜನರೆಲ್ಲರು, ಏವಂ-ಈರೀತಿ, ಪುರಸ್ಯ - ಪಟ್ಟಣಕ್ಕೆ, ಅಲಂಕಾರಂ-ಅಲಂಕಾರವನ್ನು, ಕೃತ್ವಾ - ಮಾಡಿ, ರಾಮಸ್ಯ - ಶ್ರೀರಾಮನಿಗೆ, ಯೌವರಾಜ್ಯಾಭಿಷೇಚನಂ-ಯೌವರಾಜ್ಯಪಟ್ಟಾಭಿಷೇಕವನ್ನು, ಆಕಾಂಕ್ಷಮಾಣಾಃ - ನಿರೀಕ್ಷಣೆಮಾಡುತ್ತ, ಸರ್ವೇ - ಸಮಸ್ತರೂ, ಚತ್ವರೇಷು - ಅಂಗಳಗಳಲ್ಲಿಯೂ, ಸಭಾಸುಚ - ಸಭಾಸ್ಥಾನಗಳಲ್ಲಿಯೂ, ಸಂಘಶಃ - ಗುಂಪುಗುಂಪಾಗಿ, ಸಮೇತ್ಯ - ಸೇರಿ, ತತ್ರ - ಆ ಪಟ್ಟಣದಲ್ಲಿ, ಮಿಥಃ - ಅನ್ಯೋನ್ಯವಾಗಿ, ಕಥಯಂತಃ - ಮಾತನಾಡುತ್ತ, ಜನಾಧಿಪಂ - ದಶರಥರಾಯನನ್ನು, ಪ್ರಶಶಂಸುಃ - ಹೊಗಳುತ್ತಿದ್ದರು ॥ ೨೦ ॥ ಯಃ - ಯಾವದಶರಥರಾಯನು, ಆತ್ಮಾನಂ - ತನ್ನನ್ನು, ವೃದ್ಧಂ - ಮುದುಕನನ್ನಾಗಿ, ಜ್ಞಾತ್ವಾ - ತಿಳಿದು, ರಾಮಂ - ಶ್ರೀರಾಮನನ್ನು, ರಾಜ್ಯೇ-ರಾಜ್ಯದಲ್ಲಿ, ಅಭಿಷೇಕ್ಷ್ಯತಿ - ಅಭಿಷೇಕಮಾಡುವನೋ, ತತ್-ಆದುದರಿಂದ, ಅಯಂ - ಈ, ರಾಜಾ - ದಶರಥರಾಯನು, ಮಹಾತ್ಮಾ - ಮಹಾನುಭಾವನು, ಇಕ್ಷ್ವಾಕುಕುಲನಂದನಃ - ಇಕ್ಷ್ವಾಕುಮಹಾರಾಯನವಂಶಕ್ಕೆ ಆನಂದಕರನು, ಅಹೋ-ಆಶ್ಚರ್ಯವು! ॥೨೧॥ ಸರ್ವೇ - ಸಮಸ್ತರೂ, ಅನುಗೃಹೀತಾಃ-ದೇವತೆಗಳಿಂದ ಅನುಗ್ರಹಿಸಲ್ಪಟ್ಟವರು, ಸ್ಮ-ಆದೆವು, ಯತ್ - ಯಾವಕಾರಣ, ದೃಷ್ಟಲೋಕಪರಾವರಃ, ದೃಷ್ಟ - ನೋಡಲ್ಪಟ್ಟ, ಲೋಕ - ಲೋಕದಲ್ಲಿಯ, ಪರಾವರಃ - (ಮ + ಗೋ) ಉತ್ಕೃಷ್ಟನಿಕೃಷ್ಟವಸ್ತುಗಳುಳ್ಳ, ರಾಮಃ - ಶ್ರೀರಾಮನು, ಮಹೀಪತಿಃ -

---

ಗಳಿಂದರ್ಚಿಸಲ್ಪಟ್ಟುವಾಗಿಯೂ, ಧೂಪಗಳಿಂದಲೂ, ಗಂಧವೇ ಮೊದಲಾದ ಪರಿಮಳ ದ್ರವ್ಯಗಳಿಂದಲೂ, ವಾಸನೆ ಕಟ್ಟಲ್ಪಟ್ಟವುಗಳಾಗಿದ್ದುವು. ಶ್ರೀ ರಾಮ ಪಟ್ಟಾಭಿಷೇಕ ಮಹೋತ್ಸವವು ಮುಗಿವುದರೊಳಗಾಗಿ ರಾತ್ರಿಯು ಸಂಭವಿಸಬಹುದೆಂದು ಯೋಚಿಸಿದ ಪ್ರಜೆಗಳು ರಾಜಮಾರ್ಗಗಳಲ್ಲಿ ಪ್ರಕಾಶಮಾನವಾಗಿರಲೋಸುಗ ವೃಕ್ಷಾಕಾರವಾದ ದೀಪಸ್ತಂಭಗಳನ್ನಲ್ಲಲ್ಲಿ ನೆಟ್ಟವರಾದರು. ಆ ಪಟ್ಟಣಿಗರೆಲ್ಲರೂ ಈ ರೀತಿ ಅಲಂಕಾರವನ್ನು ಮಾಡಿ, ಶ್ರೀ ರಾಮಮೂರ್ತಿಯ ಯೌವರಾಜ್ಯಾಭಿಷೇಕ ಮಹೋತ್ಸವವನ್ನಪೇಕ್ಷಿಸುತ್ತ, ಗುಂಪು ಗುಂಪಾಗಿ ಸೇರಿ, ಅಂಗಳಗಳಲ್ಲಿಯೂ, ಸಭೆಗಳಲ್ಲಿಯೂ, ಭೂಪಾಲನಾದ ದಶರಥನನ್ನು ಹೊಗಳುತ್ತ "ಅಹಹ ಏನಾಶ್ಚರ್ಯವು! ರಘುಕುಲಾನಂದಕರನೂ, ಮಹಾತ್ಮನೂ ಆದ ದಶರಥರಾಯನು ತನಗೆ ವಾರ್ಧಿಕ್ಯವುಂಟಾದುದನ್ನರಿತು ಶ್ರೀ ರಾಮಮೂರ್ತಿಗೆ ಯೌವರಾಜ್ಯ ಪಟ್ಟಾ

ಗೋಪ್ತಾ ದೃಷ್ಟಲೋಕಪರಾವರಃ ॥ ೨೨ ॥ ಅನುದ್ಧತಮನಾವಿದ್ವಾನ್ ಧರ್ಮಾತ್ಮಾ ಭ್ರಾತೃವತ್ಸಲಃ ॥ ಯಥಾಚ ಭ್ರಾತೃಷು ಸ್ನಿಗ್ಧಸ್ತಥಾಸ್ಮಾಸ್ವಪಿ ರಾಘವಃ ॥ ೨೩ ॥ ಚಿರಂ ಜೀವತು ಧರ್ಮಾತ್ಮಾ ರಾಜಾ ದಶರಥೋಽನಘಃ ॥ ಯತ್ಪ್ರಸಾದೇನಾಭಿಷಿಕ್ತಂ ರಾಮಂ ದ್ರಕ್ಷ್ಯಾಮಹೇ ವಯಂ ॥ ೨೪ ॥ ಏವಂ ವಿಧಂ ಕಥಯತಾಂ ಪೌರಾಣಾಂ ಶುಶ್ರುವುಸ್ತದಾ ॥ ದಿಗ್ಭ್ಯೋಽಪಿ ಶ್ರುತ ವೃತ್ತಾಂತಾಃ ಪ್ರಾಪ್ತಾ ಜಾನಪದಾ ಜನಾಃ ॥ ೨೫ ॥ ತೇತು ದಿಗ್ಭ್ಯಃ ಪುರೀಂ ಪ್ರಾಪ್ತಾ ದ್ರಷ್ಟುಂ ರಾಮಾಭಿಷೇಚನಂ ॥ ರಾಮಸ್ಯ ಪೂರಯಾಮಾಸುಃ

ಭೂಪತಿಯಾಗಿ, ನಃ - ನಮಗೆ, ಚಿರಾಯ - ಬಹುಕಾಲ, ಗೋಪ್ತಾ - ಸಂರಕ್ಷಕನು, ಭವಿತಾ - ಆಗುವನೋ ॥ ೨೨ ॥ ರಾಘವಃ - ಶ್ರೀರಾಮನು, ಭ್ರಾತೃಷು-ಅಣ್ಣತಮ್ಮಂದಿರಲ್ಲಿ, ಯಥಾ - ಹೇಗೆ, ಸ್ನಿಗ್ಧಃ - ಪ್ರೇಮವುಳ್ಳವನೊ, ತಥಾ - ಹಾಗೆಯೇ, ಅಸ್ಮಾಸ್ವಪಿ - ನಮ್ಮಗಳಲ್ಲಿಯೂ, ವರ್ತತೇ-ಇರುತ್ತಾನೆ, ಅನುದ್ಧತ - (ಗೋ) ಅಹಂಕಾರವರ್ಜಿತವಾದ, ಮನಾಃ - ಮನವುಳ್ಳವನು, ವಿದ್ವಾನ್ - ತಿಳಿವಳಿಕೆಯುಳ್ಳವನು, ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳವನು, ಭ್ರಾತೃವತ್ಸಲಃ - ಅಣ್ಣತಮ್ಮಂದಿರಲ್ಲಿ ವಾತ್ಸಲ್ಯವುಳ್ಳವನು ॥ ೨೩ ॥ ಯತ್‌ಪ್ರಸಾದೇನ - ಯಾವದಶರಥಮಹಾರಾಯನ ಅನುಗ್ರಹದಿಂದ, ರಾಮಂ - ಶ್ರೀರಾಮನನ್ನು, ಅಭಿಷಿಕ್ತಂ - ಪಟ್ಟಾಭಿಷಿಕ್ತನನ್ನಾಗಿ, ವಯಂ - ನಾವು, ದ್ರಕ್ಷ್ಯಾಮಹೇ - ನೋಡುತ್ತೇವೆಯೋ, ಅನಘಃ - ನಿರ್ದೋಷಿಯಾದ, ಧರ್ಮಾತ್ಮಾ - ಧರ್ಮಿಷ್ಠನಾದ, ರಾಜಾ - ಅರಸನಾದ, ಸಃ - ಆ ಪೂರ್ವೋಕ್ತನಾದ, ದಶರಥಃ - ದಶರಥರಾಯನು, ಚಿರಂ - ಬಹಳಕಾಲ, ಜೀವತು - ಬದುಕಲಿ ॥ ೨೪ ॥ ಏವಂವಿಧಂ - ಈಬಗೆಯಾಗಿ, ಕಥಯತಾಂ - ಮಾತನಾಡುತ್ತಿರುವ, ಪೌರಾಣಾಂ - ಪಟ್ಟಣಸ್ಥರ, ವಾಕ್ಯಜಾಲಂ - ಮಾತುಗಳ ಸಮೂಹಗಳನ್ನು, ತದಾ - ಆಕಾಲದಲ್ಲಿ, ಶುಶ್ರುವುಃ - ಕೇಳಿದರು, ಜಾನಪದಾಃ - ದೇಶದಲ್ಲಿರುವ, ಜನಾಃ - ಜನರು, ಶ್ರುತವೃತ್ತಾಂತಾಃ - ಕೇಳಲ್ಪಟ್ಟವಾರ್ತೆಯುಳ್ಳವರಾಗಿ, ದಿಗ್ಭ್ಯಃ - ದಿಕ್ಕುದಿಕ್ಕುಗಳಿಂದಲೂ, ಪ್ರಾಪ್ತಾಃ - ಬಂದರು ॥ ೨೫ ॥ ಜಾನಪದಾಃ - ದೇಶವಾಸಿಗಳಾದ, ತೇಜನಾಃ - ಆ ಜನರು, ರಾಮಾಭಿಷೇಚನಂ - ಶ್ರೀರಾಮನ ಪಟ್ಟಾಭಿಷೇಕವನ್ನು, ದ್ರಷ್ಟುಂ - ನೋಡಲು, ಪುರೀಂ - ಪಟ್ಟಣವನ್ನು

ಭಿಷೇಕವಂ ಗೈಯ್ಯುತ್ತಾನೆ; ನಮಗೆ ರಘುನಂದನನಾದ ಶ್ರೀ ರಾಮಚಂದ್ರನು ಒಡೆಯನಾದುದರಿಂದ ನಾವು ದೇವತೆಗಳಿಂದನುಗ್ರಹೀತರಾದೆವು. ಏಕೆಂದರೆ-- ಮಹಾತ್ಮನಾದ ಶ್ರೀ ರಾಮಚಂದ್ರನು ಲೋಕದಲ್ಲಿ "ಇದು ಉತ್ಕೃಷ್ಟವಾದವಸ್ತುವು; ಇದು ನಿಕೃಷ್ಟವಾದ ವಸ್ತುವು; ಎಂಬ ತತ್ವವನ್ನು ಚೆನ್ನದಾಗಿ ಅರಿತಿರುವವನು; ಸಹೋದರರಲ್ಲಿ ಹೇಗೆ ಪ್ರೇಮವುಳ್ಳವನೋ, ಹಾಗೆಯೆ ನಮ್ಮಲ್ಲಿಯೂ ಬಹಳ ಪ್ರೇಮವುಳ್ಳವನು, ಅಹಂಕಾರವಿಲ್ಲದ ಮನವುಳ್ಳವನು; ತಿಳಿವಳಿಕೆಯುಳ್ಳವನೂ, ಧರ್ಮಾತ್ಮನಾದವನೂ, ಸಹೋದರ ವಾತ್ಸಲ್ಯಯುಕ್ತನೂ ಆಗಿರುವನು. ಇಂತಹ ಮಹಾನುಭಾವನಾದ ಶ್ರೀ ರಾಮನು ಬಹುಕಾಲ ನಮಗೆ ರಾಜನಾಗಿರಲಿ ! ಯಾವಾತನ ಅನುಗ್ರಹದಿಂದ ಪಟ್ಟಾಭಿಷಿಕ್ತನಾದ ಶ್ರೀ ರಾಮನನ್ನು ನಾವೆಲ್ಲರೂನೋಡುವೆವೋ ಅಂತಹ ಮಹಾತ್ಮನೂ, ಪಾಪರಹಿತನೂ ಆದ ದಶರಥ ಭೂಪಾಲನು ಬಹುಕಾಲ ಜೀವಂತನಾಗಿರಲಿ, " ಎಂದು ಮಾತನಾಡಿಕೊಳ್ಳುತ್ತಿದ್ದರು. ॥೧೮-೨೪॥ ಆಗ ದೇಶದೇಶಗಳಿಂದಲೂ ಬಂದ ಜನಗಳು ಶ್ರೀರಾಮನ ಪಟ್ಟಾಭಿಷೇಕ ಮಹೋತ್ಸವವನ್ನು ನೋಡಲು ಆ ಅಯೋಧ್ಯಾ ಪಟ್ಟಣದಲ್ಲಿ ದಿಕ್ಕು ದಿಕ್ಕುಗಳಲ್ಲಿಯೂ ಬಂದು ತುಂಬಿ

ಪುರೀಂ ಜಾನಪದಾ ಜನಾಃ ॥ ೨೬ ॥ ಜನೌಘೈಸ್ತೈರ್ವಿಸರ್ಪದ್ಭಿಶ್ಶುಶ್ರುವೇ ತತ್ರ ನಿಸ್ವನಃ ॥ ಪರ್ವಸೂದೀರ್ಣವೇಗಸ್ಯ ಸಾಗರಸ್ಯೇವ ನಿಸ್ವನಃ ॥ ೨೭ ॥

ತತಸ್ತದಿಂದ್ರಕ್ಷಯಸನ್ನಿಭಂ ಪುರಂ
ದಿದೃಕ್ಷುಭಿರ್ಜಾನಪದೈರುಪಾಗತೈಃ ॥
ಸಮಂತತಸ್ಸಸ್ವನಮಾಕುಲಂ ಬಭೌ
ಸಮುದ್ರಯಾದೋಭಿರಿವಾರ್ಣವೋದಕಂ ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಸ್ಸರ್ಗಃ

ಕುರಿತು, ದಿಗ್ಭ್ಯಃ - ದಿಕ್ಕುಗಳಿಂದ, ಪ್ರಾಪ್ತಾಃ - ಬಂದು, ರಾಮಸ್ಯ - ಶ್ರೀರಾಮನ, ಪುರೀಂ - ಪಟ್ಟಣವನ್ನು, ಪೂರಯಾಮಾಸುಃ - ತುಂಬಿದರು ॥ ೨೬ ॥ ತತ್ರ - ಆ ಅಯೋಧ್ಯಾಪಟ್ಟಣದಲ್ಲಿ, ವಿಸರ್ಪದ್ಭಿಃ - ಬರುತ್ತಿರುವ, ತೈರ್ಜನೌಘೈಃ - ಆ ದೇಶದಜನರಗುಂಪುಗಳಿಂದ, ನಿಸ್ವನಃ-ಧ್ವನಿಯು, ಪರ್ವಸು - ಪೌರ್ಣಮಾಸ್ಯಾದಿಪರ್ವಕಾಲಗಳಲ್ಲಿ, ಉದೀರ್ಣವೇಗಸ್ಯ, ಉದೀರ್ಣ - ಹುಟ್ಟಿದ, ವೇಗಸ್ಯ - ಜಾಗ್ರತೆಯುಳ್ಳ, ಸಮುದ್ರಸ್ಯ - ಕಡಲಿನ, ನಿಸ್ವನಇವ - ಧ್ವನಿಯಂತೆ, ಶುಶ್ರುವೇ-ಕೇಳಲ್ಪಟ್ಟಿತ್ತು ॥ ೨೭ ॥ ತತಃ - ಬಳಿಕ, ಇಂದ್ರಕ್ಷಯಸನ್ನಿಭಂ - (೧) ದೇವೇಂದ್ರನ ಮನೆಗೆ ಸಮಾನವಾದ, ತತ್ಪುರಂ - ಆ ಪಟ್ಟಣವು, ದಿದೃಕ್ಷುಭಿಃ - ನೋಡಲಿಚ್ಛೆಯುಳ್ಳ, ಸಮಂತತಃ - ಎಲ್ಲ ಕಡೆಯಿಂದ, ಉಪಾಗತೈಃ - ಬರುತ್ತಿರುವ, ಜಾನಪದೈಃ - ದೇಶವಾಸಿಗಳಾದ ಜನರಿಂದ, ಸಮುದ್ರಯಾದೋಭಿಃ - (ಮ) ಕಡಲಿನ ಜಲಜಂತುಗಳಿಂದ, ಅರ್ಣವೋದಕಮಿವ - ಸಮುದ್ರೋದಕದಂತೆ, ಸಸ್ವನಂ - ಧ್ವನಿಯೊಡಗೂಡಿ, ಆಕುಲಂ - ವ್ಯಾಕುಲವಾದುದಾಗಿ, ಬಭೌ - ಹೊಳೆಯುತ್ತಿದ್ದಿತು, (ಗೋ) ಸಮುದ್ರಯಾದೋಭಿಃ - ಸಮುದ್ರಗಾಮಿನಿಗಳಾದ ನದಿಗಳಿಂದ, ಅರ್ಣವೋದಕಮಿವ - ಸಮುದ್ರೋಕದ ಘೋಷದಿಂದಯುಕ್ತವಾಗಿ, ಬಭೌ - ಹೊಳೆಯುತ್ತಿದ್ದಿತು ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಸ್ಸರ್ಗಃ

ಕೊಂಡರು. ಆ ಪಟ್ಟಣಕ್ಕೆ ಬರುತ್ತಿರುವ ಜನಗಳಿಂದುತ್ಪನ್ನವಾದ ಮಹಾಧ್ವನಿಯು ಪರ್ವಕಾಲಗಳಲ್ಲಿ ಮಹಾ ವೇಗವುಳ್ಳ ಸಮುದ್ರದ ಧ್ವನಿಯಂತೆ ಕೇಳಿಸುತಲಿದ್ದಿತು. ॥ ೨೭ ॥ ಆ ಬಳಿಕ ದೇಶದೇಶಗಳಿಂದ ನೋಡಲಿಚ್ಛೆಯುಳ್ಳವರಾಗಿ ಬಂದು ಸೇರಿದ್ದ ಜನರಿಂದ ತುಂಬಿದ್ದ ಇಂದ್ರಭವನಕ್ಕೆ ಸಮಾನವಾದ ಆ ಅಯೋಧ್ಯಾಪಟ್ಟಣವು, ಜಲಜಂತುಗಳಿಂದ ಶಬ್ದಾಯಮಾನವಾದ ಸಮುದ್ರದಂತೆ ರಾರಾಜಿಸುತಲಿದ್ದಿತು.

ಇಂತಿದು ಜನಕೃತ ದಶರಥರಾಜ ಪಟ್ಟಣಾಲಂಕಾರ ವರ್ಣನವೆಂಬ
ಆರನೆಯ ಸರ್ಗವು ಸಮಾಪ್ತವಾದುದು.

ಟಿ. (೧) "ನಿವೇಶಶ್ಶರಣಂ ಕ್ಷಯಃ" ಎಂದು ಅಮರ ನಿಘಂಟುವು. ಕ್ಷಯಃ ಎಂದರೆ ಮನೆಯೆಂದು ಅರ್ಥವು.

ಅಯೋಧ್ಯಾಕಾಂಡೇ ಸಪ್ತಮಸ್ಸರ್ಗಃ.

ಜ್ಞಾತಿ ದಾಸೀ ಯತೋ ಜಾತಾ ಕೈಕೇಯ್ಯಾಸ್ತು ಸಹೋಷಿತಾ ॥ ಪ್ರಾಸಾದಂ ಚಂದ್ರಸಂಕಾಶಮಾರುರೋಹ ಯದೃಚ್ಛಯಾ ॥ ೧ ॥ ಸಿಕ್ತ ರಾಜಪಥಾಂ ಕೃತ್ಸ್ನಾಂ ಪ್ರಕೀರ್ಣ ಕುಸುಮೋತ್ಕರಾಂ ॥ ಅಯೋಧ್ಯಾಂ ಮಂಥರಾ ತಸ್ಮಾತ್ಪ್ರಾಸಾದಾ ದನ್ವವೈಕ್ಷತ ॥ ೨ ॥ ಪತಾಕಾಭಿರ್ವರಾರ್ಹಾಭಿ ರ್ಧ್ವಜೈಶ್ಚ ಸಮಲಂಕೃತಾಂ ॥ ವೃತಾಂ ಛಂದಪಥೈಶ್ಚಾಪಿ ಶಿರಸ್ಸ್ನಾತ ನರೈ ರ್ಯುತಾಂ ॥ ೩ ॥ ಮಾಲ್ಯ ಮೋದಕ ಹಸ್ತೈಶ್ಚ ದ್ವಿಜೇಂದ್ರೈರಭಿನಾದಿ ತಾಂ ॥ ಶುಕ್ಲದೇವ ಗೃಹದ್ವಾರಾಂ ಸರ್ವವಾದಿತ್ರ ನಿಸ್ವನಾಂ ॥ ೪ ॥ ಸಂಪ್ರ

ಜ್ಞಾತಿದಾಸೀ, ಜ್ಞಾತಿ - ಕೈಕೆಯಿಯಬಂಧುಗಳಿಗೆ, ದಾಸೀ-ದಾಸಳಾದ, ಯತಃ ಎಲ್ಲಿಯೋ ಒಂದುಕಡೆ, ಜಾತಾ - ಹುಟ್ಟಿರುವ, ಕೈಕೇಯ್ಯಾಸ್ತು - ಕೈಕೆಯಿಾದೇವಿಗೆ, ಸಹೋಷಿತಾ - ಜತೆಯ ಲ್ಲಿಯೇ ಇರುವಾಮಂಥರೆಯು, ಚಂದ್ರಸಂಕಾಶಂ - ಚಂದ್ರನಂತೆ ಪ್ರಕಾಶಮಾನವಾದ, ಪ್ರಾಸಾದಂ - ಉಪ್ಪರಿಗೆಯನ್ನು, ಯದೃಚ್ಛಯಾ - ಅಕಸ್ಮಾತ್ತಾಗಿ, ಆರುರೋಹ - ಏರಿದಳು ॥ ೧ ॥ ಮಂಥರಾ-ಮಥಂರೆಯು,ಸಿಕ್ತರಾಜಪಥಾಂ, ಸಿಕ್ತ-ತೋಯಿಸಲ್ಪಟ್ಟ, ರಾಜಪಥಾಂ-ರಾಜವೀಥಿಯುಳ್ಳ, ಕೃತ್ಸ್ನಾಂ-ಸಂಪೂರ್ಣವಾದ, ಪ್ರಕೀರ್ಣಕುಸುಮೋತ್ಕರಾಂ - ಎರಚಲ್ಪಟ್ಟ ಪುಷ್ಪರಾಶಿಗಳುಳ್ಳ, ಅಯೋಧ್ಯಾಂ - ಅಯೋಧ್ಯಾಪುರವನ್ನು, ತಸ್ಮಾತ್ಪ್ರಾಸಾದಾತ್ - ಆ ಉಪ್ಪರಿಗೆಯಿಂದ, ಅನ್ವವೈಕ್ಷತ - ಕಂಡಳು. ॥ ೨ ॥ ಮಂಥರಾ - ಮಂಥರೆಯು, ವರಾರ್ಹಾಭಿಃ - ಶ್ರೇಷ್ಠಗಳಾದ, ಪತಾಕಾಭಿಃ - ಬಾವುಟಗಳಿಂದ, ಧ್ವಜೈಶ್ಚ - ಧ್ವಜಪತಾಕೆಗಳಿಂದ, ಸಮಲಂಕೃತಾಂ - ಅಲಂಕರಿಸಲ್ಪಟ್ಟ, ಛಂದಪಥೈಃ - ಧಾರಾಳವಾಗಿ ಜನರು ಓಡಾಡಲು ಯೋಗ್ಯವಾದ, ಪಥೈಶ್ಚಾಪಿ - ಚಿಕ್ಕಚಿಕ್ಕ ಬೀದಿಗಳಿಂದಲೂ, ವೃತಾಂ - ಆವರಿಸಲ್ಪಟ್ಟ, ಶಿರಸ್ನಾತಜನೈಃ - ಮಂಗಳಾಭ್ಯಂಗನವನ್ನು ಮಾಡಿದ ಜನರಿಂದ, ವೃತಾಂ - ಪರಿವೃತವಾದ, ಮಾಲ್ಯಮೋದಕಹಸ್ತೈಶ್ಚ - ಪುಷ್ಪಮಾಲಿಕೆಗಳೂ ಮೋದಕಗಳೂ ಹಸ್ತ ಗಳಲ್ಲಿ ಉಳ್ಳ, ದ್ವಿಜೇಂದ್ರೈಃ - ವಿಪ್ರೋತ್ತಮರಿಂದ, ಅಭಿನಾದಿತಾಂ - ಧ್ವನಿಗೊಳಿಸಲ್ಪಟ್ಟ, ಶುಕ್ಲದೇ ವಗೃಹದ್ವಾರಾಂ - ಸುಣ್ಣ ಬಳಿದು ಬೆಳ್ಳಗಿರುವ ದೇವಸ್ಥಾನಗಳ ಬಾಗಿಲುಗಳುಳ್ಳ, ಸರ್ವವಾದಿತ್ರನಿ

ಭರತನ ಜನನಿಯಾದ ಕೈಕೇಯಿಾದೇವಿಗೆ ಮಂಥರೆಯೆಂಬ ದಾಸಿಯೋರ್ವಳಿದ್ದಳು. ಇವಳು ಎಲ್ಲಿಯೋ ಹುಟ್ಟಿದವಳು ; ಇವಳು ಸದಾ ಕಾಲದಲ್ಲಿಯೂ ಕೈಕೇಯಿಾಯೊಡನೆಯೇ ಇರುವವಳು. ಇವಳು ಶ್ರೀರಾಮನ ಪಟ್ಟಾಭಿಷೇಕ ಸಮಯದಲ್ಲಿ, ಚಂದ್ರಕಾಂತ ಶಿಲೆ ಗಳಂತೆ ರಮಣೀಯವಾದ ಅರಮನೆಯ ಉಪ್ಪರಿಗೆಯನ್ನು ಅಕಸ್ಮಾತ್ತಾಗಿ ಹತ್ತಿದವಳಾಗಿ ಅಯೋಧ್ಯಾ ಪಟ್ಟಣವನ್ನು ನೋಡುತ್ತಿದ್ದಳು. ಆಗ ಆ ನಗರದ ರಾಜವೀಥಿಗಳು ನೀರಿ ನಿಂದ ತೋಯಿಸಲ್ಪಟ್ಟು, ಹೂಗಳಿಂದಲಂಕೃತವಾಗಿಯೂ ಮಂಗಳಾಭ್ಯಂಗವನ್ನು ಮಾಡಿ

ಹೃಷ್ಟ ಜನಾಕೀರ್ಣಾಂ ಬ್ರಹ್ಮಘೋಷಾ ಸುನಾದಿತಾಂ ॥ ಪ್ರಹೃಷ್ಟ ವರಹ
ಸ್ತ್ಯಶ್ವಾಂ ಸಂಪ್ರಣರ್ದಿತ ಗೋವೃಷಾಂ ॥ ೫ ॥ ಪ್ರಹೃಷ್ಟ ಮುದಿತೈಃ ಪೌರೈ
ರುಚ್ಛ್ರಿತ ಧ್ವಜಮಾಲಿನೀಂ ॥ ಅಯೋಧ್ಯಾಂ ಮಂಥರಾ ದೃಷ್ಟ್ವಾ ಪರಂ ವಿಸ್ಮ
ಯ ಮಾಗತಾ ॥ ೬ ॥ ಪ್ರಹರ್ಷೋತ್ಫುಲ್ಲ ನಯನಾಂ ಪಾಂಡುರ ಕ್ಷೌಮವಾ
ಸಿನೀಂ ॥ ಅವಿದೂರೇ ಸ್ಥಿತಾಂ ದೃಷ್ಟ್ವಾ ಧಾತ್ರೀಂ ಪಪ್ರಚ್ಛ ಮಂಥರಾ ॥ ೭ ॥

ಸ್ವನಾಂ - ಮೃದಂಗವೇ ಮೊದಲಾದ ವಾದ್ಯಧ್ವನಿಗಳುಳ್ಳ, ಸಂಪ್ರಹೃಷ್ಟಜನಾಕೀರ್ಣಾಂ, ಸಂಪ್ರಹೃಷ್ಟ - ಸಂತಸವಾಂತ, ಜನ - ಜನದಿಂದ, ಆಕೀರ್ಣಾಂತ - ತುಂಬಿರುವ, ಬ್ರಹ್ಮಘೋಷಾಭಿನಾದಿತಾಂ - ವೇದಘೋಷದಿಂದ ಧ್ವನಿಗೊಳಿಸುತ್ತಿರುವ, ಪ್ರಹೃಷ್ಟವರಹಸ್ತ್ಯಶ್ವಾಂ, ಪ್ರಹೃಷ್ಟ - ಸಂತೋಷಗೊಂಡ, ವರ - ಶ್ರೇಷ್ಠವಾದ, ಹಸ್ತಿ - ಆನೆ, ಅಶ್ವಾಂ - ಕುದುರೆಗಳೂ ಉಳ್ಳ, ಸಂಪ್ರಣರ್ದಿತ - ಸಂತೋಷದಿಂದ ಧ್ವನಿಗೈಯುತ್ತಿರುವ, ಗೋವೃಷಾಂ - ಗೋವುಗಳೂ ವೃಷಭಗಳೂ ಉಳ್ಳ, ಪ್ರಹೃಷ್ಟಮುದಿತೈಃ, ಪ್ರಹೃಷ್ಟ-(ಗೋ) ಬಾಹ್ಯಸಂತೋಷಯುಕ್ತರಾದ, ಮುದಿತೈಃ-ಮನಸ್ಸಂತೋಷದಿಂದಲೂ ಯುಕ್ತರಾದ, ಪೌರೈಃ - ಪಟ್ಟಣವಾಸಿಗಳಿಂದ, ಉಚ್ಛ್ರಿತಧ್ವಜಮಾಲಿನೀಂ, ಉಚ್ಛ್ರಿತ - ಮೇಲಕ್ಕೆತ್ತಲ್ಪಟ್ಟ, ಧ್ವಜಮಾಲಿನೀಂ - ಪತಾಕಪಙ್ಕ್ತಿಗಳುಳ್ಳ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ದೃಷ್ಟ್ವಾ - ಕಂಡು, ಪರಂ - ಬಹಳವಾದ, ವಿಸ್ಮಯಂ - ಆಶ್ಚರ್ಯವನ್ನು, ಆಗತಾಃ - ಹೊಂದಿದರು. ॥ ೬ ॥ ಪ್ರಹರ್ಷೋತ್ಫುಲ್ಲನಯನಾಂ, ಪ್ರಹರ್ಷ - ಅತಿಸಂತೋಷದಿಂದ, ಉತ್ಫುಲ್ಲ - ವಿಕಸಿತವಾದ, ನಯನಾಂ - ನೇತ್ರಗಳುಳ್ಳ, ಪಾಂಡುರಕ್ಷೌಮವಾಸಿನೀಂ, ಪಾಂಡುರ - ಬೆಳ್ಳಗಿರುವ, ಕ್ಷೌಮ - ದುಕೂಲವನ್ನು, ವಾಸಿನೀಂ - ಉಟ್ಟಿರುವ, ಅವಿದೂರೇ - ಸಮೀಪದಲ್ಲಿ, ಸ್ಥಿತಾಂ - ಇರುತ್ತಿರುವ, ಧಾತ್ರೀಂ - (೧) ಉಪಮಾತೆಯನ್ನು, ದೃಷ್ಟ್ವಾ-ಕಂಡು, ಮಂಥರಾ-ಮಂಥರೆಯು, ಪಪ್ರಚ್ಛ-ಕೇಳಿದಳು, ಅರ್ಥಪರಾ-(ಮ) ಧನಾಭಿವೃದ್ಧಿಯಲ್ಲಿ ಆಸಕ್ತಳಾದ, ಅರ್ಥ-(ಗೋ)ಉತ್ತ

ಕೊಂಡ ಜನಗಳಿಂದಾವೃತವಾಗಿಯೂ, ಪುಷ್ಪಗಳನ್ನೂ ಭಕ್ಷ್ಯಗಳನ್ನೂ ಕೈಯಲ್ಲಿ ಹಿಡಿದು ಶ್ರೀರಾಮಮೂರ್ತಿಗರ್ಪಿಸಬೇಕೆಂದು ನಿಂತಿದ್ದ ವಿಪ್ರಶ್ರೇಷ್ಠರಿಂದ ಶಬ್ದಾಯಮಾನವಾದುದೂ, ಬೆಳ್ಳಗಿರುವ ದೇವಾಲಯಗಳ ಬಾಗಿಲುಗಳಿಂದ ಕೂಡಿದುದೂ, ಮೃದಂಗಾದಿ ಸಕಲವಾದ್ಯಗಳ ಧ್ವನಿಯಿಂದಲೂ, ವೇದಪಾರಾಯಣ ಘೋಷದಿಂದ ಒಡಗೂಡಿರುವುದಾಗಿಯೂ, ಸಂತಸವಾಂತ ಚಿತ್ತವೃತ್ತಿಯುಳ್ಳ ಗಜತುರಗಗಳುಳ್ಳುದಾಗಿಯೂ, ಧ್ವನಿ ಮಾಡುತ್ತಿರುವ ಗೋವೃಷಭಗಳುಳ್ಳುದಾಗಿಯೂ, ಬಾಹ್ಯಂತರಾನಂದವುಳ್ಳುದಾಗಿಯೂ, ಪುರಜನರಿಂದ ಕಟ್ಟಲ್ಪಟ್ಟಿದ್ದ ಧ್ವಜಪಟಗಳುಳ್ಳುದಾಗಿಯೂ ಇದ್ದುವು. ॥ ೬ ॥ ಇದನ್ನು ನೋಡಿದ ಆ ಮಂಥರೆಯು ಮಹದಾಶ್ಚರ್ಯವನ್ನು ಹೊಂದಿ, ಸಂತಸದಿಂದರಳಿದ ಕಂಗಳುಳ್ಳವಳಾಗಿಯೂ, ಬಿಳಿತಾದ ಪಟ್ಟೆಯುಸೀರೆಯುನ್ನುಟ್ಟವಳಾಗಿಯೂ ಇರುವ ಧಾತ್ರಿಯನ್ನು ನೋಡಿ "ಎಲೌ ಉತ್ತ

ಟಿ. (೧) ಮಕ್ಕಳಿಗೆ ಮೊಲೆ ಹಾಲನ್ನು ಉಣಿಸುವ ದಾಸಿ. ಇವಳಿಗೆ ಉಪಮಾತೆ ಅಥವ ಧಾತ್ರೀ ಎಂದು ಹೆಸರು.

ಉತ್ತಮೇನಾಭಿಸಂಯುಕ್ತಾ ಹರ್ಷೇಣಾರ್ಥ ಪರಾಸತೀ ॥ ರಾಮಮಾತಾ ಧನಂ ಕಿನ್ನು ಜನೇಭ್ಯ ಸ್ಸಂಪ್ರಯಚ್ಛತಿ ॥ ೮ ॥ ಅತಿಮಾತ್ರಂ ಪ್ರಹರ್ಷೋಽಯಂ ಕಿಂ ಜನಸ್ಯ ಚ ಶಂಸಮೇ ॥ ಕಾರಯಿಷ್ಯತಿ ಕಿಂವಾಪಿ ಸಂಪ್ರಹೃಷ್ಟೋ ಮಹೀಪತಿಃ ॥ ೯ ॥ ವಿದೀರ್ಯಮಾಣಾ ಹರ್ಷೇಣ ಧಾತ್ರೀತು ಪರಯಾ ಮುದಾ ॥ ಆಚಚಕ್ಷೇಥ ಕುಬ್ಜಾಯೈ ಭೂಯಸೀಂ ರಾಘವಶ್ರಿಯಂ ॥ ೧೦ ॥ ಶ್ವಃ ಪುಷ್ಯೇಣ ಜಿತಕ್ರೋಧಂ ಯೌವರಾಜ್ಯೇನ ರಾಘವಂ ॥ ರಾಜಾ ದಶರಥೋ ರಾಮಮಭಿಷೇಚಯಿತಾನಘಂ ॥ ೧೧ ॥ ಧಾತ್ರ್ಯಾಸ್ತು ವಚನಂ ಶ್ರುತ್ವಾ

ರೋತ್ತರ ಧನಾಭಿವೃದ್ಧಿಯಲ್ಲಿ, ಪರಾ - ಆಸಕ್ತಳಾದರೂ, ಸತೀ - ಪತಿವ್ರತೆಯಾದ, ರಾಮಮಾತಾ - ಶ್ರೀರಾಮನ ತಾಯಿಯು, ಉತ್ತಮೇನ - ಉತ್ಕೃಷ್ಟವಾದ, ಹರ್ಷೇಣ - ಸಂತೋಷದಿಂದ, ಅಭಿಸಂಯುಕ್ತಾ - ಕೂಡಿದವಳಾಗಿ, ಜನೇಭ್ಯಃ - ಜನರಿಗೋಸುಗ, ಧನಂ - ಅರ್ಥವನ್ನು, ಕಿನ್ನುಸಂಪ್ರಯಚ್ಛತಿ - ಏತಕ್ಕಾಗಿ ಕೊಡುತ್ತಾಳೆ. ॥ ೮ ॥ ಜನಸ್ಯ - ಜನರಿಗೆ, ಅಯಂಅತಿಮಾತ್ರಪ್ರಹರ್ಷಃ - ಈ ಮಹಾಸಂತೋಷವು, ಕಿಂ - ಏನು, ಮೇ - ನನಗೆ, ಶಂಸ - ಹೇಳುವವಳಾಗು, ಸಂಪ್ರಹೃಷ್ಟಃ - ಹರ್ಷಯುಕ್ತನಾದ, ಮಹೀಪತಿಃ - ದೊರೆಯು, ಕಿಮಪಿ - ಏನನ್ನಾದರೂ, ಕಾರಯಿಷ್ಯತಿ - ಮಾಡಿಸುತ್ತಾನೆಯೇನು. ॥ ೯ ॥ ಅಥ - ಬಳಿಕ, ಹರ್ಷೇಣ - ಸಂತೋಷದಿಂದ, ವಿದೀರ್ಯಮಾಣಾ - ರೋಮಾಂಚಗೊಳಿಸಲ್ಪಟ್ಟ ಶರೀರವುಳ್ಳವಳಾದ, ಧಾತ್ರೀ - ಉಪಮಾತೆಯು, ಪರಮಯಾ - ಬಹಳವಾದ, ಮುದಾ - ಸಂತೋಷದಿಂದ, ಕುಬ್ಜಾಯೈ - ವಕ್ರಾವಯವವುಳ್ಳ ಮಂಥರೆಗೆ, ಭೂಯಸೀಂ - ಬಹಳವಾದ, ರಾಘವಶ್ರಿಯಂ - ಶ್ರೀರಾಮನಿಗೆ ರಾಜ್ಯಪಟ್ಟಾಭಿಷೇಕ ಸಂಪತ್ತಿಯನ್ನು, ಆಚಚಕ್ಷೇ - ಹೇಳಿದಳು. ॥ ೧೦ ॥ ದಶರಥೋರಾಜಾ - ದಶರಥರಾಯನು, ಪುಷ್ಯೇಣ - ಪುಷ್ಯನಕ್ಷತ್ರದಿಂದ ಯುಕ್ತವಾದ, ಶ್ವಃ - ನಾಳೆಯದಿನ, ಜಿತಕ್ರೋಧಂ-ಜಿತೇಂದ್ರಿಯನಾದ, ರಾಘವಂ-ರಘುಕುಲೋತ್ಪನ್ನನಾದ, ರಾಮಂ - ಶ್ರೀರಾಮನನ್ನು, ಯೌವರಾಜ್ಯೇನ - ಯೌವರಾಜ್ಯದಲ್ಲಿ, ಅಭಿಷೇಚಯಿತಾ - ಪಟ್ಟಾಭಿಷೇಕಮಾಡುವನಾಗಿರುವನು. ॥ ೧೧ ॥ ಕುಬ್ಜಾ - ಮಂಥರೆಯು, ಧಾತ್ರ್ಯಾಃ - ಉಪಮಾತೆಯ,

---

ಮಳೆ! ರಾಮನ ತಾಯಾದ ಕೌಸಲ್ಯಾದೇವಿಯು, ಜನರೆಲ್ಲರಿಗೂ ದ್ರವ್ಯವನ್ನೇತಕ್ಕಾಗಿ ಕೊಡುತ್ತಿರುವಳು ? ಜನಗಳೆಲ್ಲರೂ ಇಷ್ಟು ಸಂತಸನಾಂತಿರಲು ಕಾರಣವೇನು ? ದಶರಥ ಮಹಾರಾಜನು ಮಹದಾನಂದಭರಿತನಾಗಿ ಯಾವ ಕಾರ್ಯವನ್ನೆಸಗುವನು ? ಈ ವೃತ್ತಾಂತವನ್ನು ನನಗೆ ತಿಳುಹುವವಳಾಗು" ಎಂದಳು. ॥ ೯ ॥ ಇಂತು ನುಡಿದ ಮಂಥರೆಯ ನುಡಿಗಳನ್ನಾಲಿಸಿದ ಆ ಧಾತ್ರಿಯು ಸಂತೋಷದಿಂದ ಮನವುಬ್ಬಿ, ಅವಳನ್ನು ನೋಡಿ ಮುಂದೆ ಶ್ರೀರಾಮನಿಗುಂಟಾಗುವ ಯೌವರಾಜ್ಯಾಭಿಷೇಕ ಸಂಪದವನ್ನು ಹೀಗೆ ಹೇಳಿದಳು. "ಎಲೌ ಕುಬ್ಜೆಯೆ! ಒಡೆಯನಾದ ದಶರಥನು, ಕಾಮಕ್ರೋಧಾದಿರಹಿತನೂ, ನಿರ್ದೋಷಿಯೂ ಆದ ಶ್ರೀರಾಮನಿಗೆ ನಾಳೆಯ ದಿನ ಪುಷ್ಯ ನಕ್ಷತ್ರದಲ್ಲಿ ಯೌವರಾಜ್ಯಾಭಿಷೇಕವನ್ನು ಮಾಡುತ್ತಾನೆ." ॥ ೧೧ ॥ ಹೀಗೆಂದ ಆ ದಾಸಿಯ ಮಾತುಗಳನ್ನು ಕೇಳಿ, ಮಂಥರೆಯು

ಕುಬ್ಜಾ ಕ್ಷಿಪ್ರಮನುರ್ಷಿತಾ ॥ ಕೈಲಾಸ ಶಿಖರಾಕಾರಾತ್ಪ್ರಾಸಾದಾ ದವರೋಹತ ॥೧೨॥ ಸಾ ದಹ್ಯಮಾನಾ ಕೋಪೇನ ಮಂಥರಾ ಪಾಪದರ್ಶಿನೀ ॥ ಶಯಾನಾ ಮೇತ್ಯ ಕೈಕೇಯೀ ಮಿದಂ ವಚನ ಮಬ್ರವೀತ್ ॥ ೧೩ ॥ ಉತ್ತಿಷ್ಠ ಮೂಢೇ ಕಿಂಶೇಷೇ ಭಯಂ ತ್ವಾಮಭಿವರ್ತತೇ ॥ ಉಪಪ್ಲುತ ಮಘೌಘೇನ ಕಿಮಾತ್ಮಾನಂ ನಬುಧ್ಯಸೇ ॥೧೪॥ ಅನಿಷ್ಟೇ ಸುಭಗಾಕಾರೇ ಸೌಭಾಗ್ಯೇನ ವಿಕತ್ಥಸೇ ॥ ಚಲಂಹಿ ತವಸೌಭಾಗ್ಯಂ ನದ್ಯಾ ಸ್ರೋತ ಇವೋಷ್ಣಗೇ ॥ ೧೫ ॥ ಏವಮುಕ್ತಾ ತು ಕೈಕೇಯೀ ದುಷ್ಟಯಾ ಪರುಷಂ ವಚಃ ॥ ಕುಬ್ಜಯಾ

ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅಮರ್ಷಿತಾ - ಕೋಪಗೊಂಡು, ಕೈಲಾಸಶಿಖರಾಕಾರಾತ್ - ಕೈಲಾಸಪರ್ವತದ ಶೃಂಗದಂತೆ ಆಕಾರವುಳ್ಳ, ಪ್ರಾಸಾದಾತ್ - ಉಪ್ಪರಿಗೆಯಿಂದ, ಕ್ಷಿಪ್ರಂ - ಜಾಗ್ರತೆಯಾಗಿ, ಅವರೋಹತ - ಇಳಿದಳು. ॥ ೧೨ ॥ ಪಾಪದರ್ಶಿನೀ - ಪಾಪಕಾರ್ಯಾಸಕ್ತಳಾದ, ಸಾಮಂಥರಾ - ಆ ಕುಬ್ಜೆಯು, ಕೋಪೇನ - ಕ್ರೋಧದಿಂದ, ದಹ್ಯಮಾನಾ - ಸುಡಲ್ಪಟ್ಟವಳಾಗಿ, ಏತ್ಯ - ಬಂದು, ಶಯಾನಾಂ - ಮಲಗಿರುವ, ಕೈಕೇಯೀಂ - ಕೈಕೆಯೀದೇವಿಯನ್ನು ಕುರಿತು, ಇದಂ- ಈ ಮುಂದೆಹೇಳುವ, ವಚನಂ - ಮಾತನ್ನು, ಅಬ್ರವೀತ್ - ನುಡಿದಳು. ॥ ೧೩ ॥ ಹೇ ಮೂಢೇ - ಎಲೌ ಮೂಢಳೆ, ಉತ್ತಿಷ್ಠ - ಎದ್ದೇಳು, ಕಿಂಶೇಷೇ - ಮಲಗಿರುವೆಯೇಕೆ, ತ್ವಾಂ - ನಿನ್ನನ್ನು, ಭಯಂ - ಭಯವು, ಅಭಿವರ್ತತೇ - ಎದುರುಗೊಳ್ಳುತ್ತಿರುವುದು, ಆತ್ಮಾನಂ - ನಿನ್ನನ್ನು, ಅಘೌಘೇನ- ದುಃಖಪರಂಪರೆಯಿಂದ, ಉಪಪ್ಲುತಂ-ಬಾಡಿಹೋದವಳನ್ನಾಗಿ, ಕಿನ್ನಬುಧ್ಯಸೇ-ತಿಳಿವುದಿಲ್ಲವೇ, ಹೇ ಅನಿಷ್ಟೇ - ಎಲೌ ಅರಸಿಗೆ ಇಷ್ಟಳಲ್ಲದವಳೆ, ಹೇ ಸುಭಗಾಕಾರೆ - ಎಲೈ ಸುಂದರವಾದಆಕಾರವುಳ್ಳವಳೆ, (ಗೋ) ಅಸುಭಗಾಕಾರೇ - ಸುಂದರವಲ್ಲದ ಆಕಾರವುಳ್ಳವಳೆ, ಸೌಭಾಗ್ಯೇನ - ಸೌಂದರ್ಯದಿಂದೆ, ವಿಕತ್ಥಸೇ-ವ್ಯರ್ಥವಾಗಿ ಹೊಗಳುವೆ, ತವ- ನಿನ್ನ, ಸೌಭಾಗ್ಯಂ- ಐಶ್ವರ್ಯವು, ಉಷ್ಣಗೇ- ಗ್ರೀಷ್ಮಕಾಲದಲ್ಲಿ, ನದ್ಯಾಃ- ನದಿಯ, ಸ್ರೋತಇವ- ಪ್ರವಾಹದಂತೆ, ಚಲಂಹಿ- ಚಂಚಲವಾದುದಷ್ಟೆ. ॥೧೫॥ ಏವಂ-ಹೀಗೆ, ರುಷ್ಟಯಾ-ಕೋಪವಂತವಳೂ, ಪಾಪದರ್ಶಿನ್ಯಾ-ಪಾಪಕರ್ಮಾಸಕ್ತಳೂಆದ, ಕುಬ್ಜಯಾ-

---

ಬಹಳವಾದ ಕೋಪವನ್ನು ತಾಳಿ ಕೈಲಾಸಗಿರಿ ಶಿಖರದಂತೆ, ಅತ್ಯುನ್ನತವಾಗಿದ್ದ ಅರಮನೆಯ ಉಪ್ಪರಿಗೆಯಿಂದ ಬಲು ಬೇಗನೆ ಕೆಳಕ್ಕಿಳಿದಳು. ಆ ಬಳಿಕ ಅತ್ಯಂತ ಪಾಪಬುದ್ಧಿಯುಳ್ಳ ಆ ಮಂಥರೆಯು ಕೋಪದಿಂದ ಸುಡಲ್ಪಟ್ಟವಳಾಗಿ, ಭೋಜನಾನಂತರ ಸುಖಶಯ್ಯೆಯಲ್ಲಿ ಪವಳಿಸಿದ್ದ ತನ್ನ ಒಡತಿಯಾದ ಕೈಕೇಯಿಯ ಬಳಿಗೈದಿ, "ಎಲೆ ಮೂಢಳೆ! ನಿನಗೆ ಬಂದ ಉಪದ್ರವವನ್ನರಿಯದೆ ಏಕೆ ಮಲಗಿರುವೆ? ಏಳೇಳು ; ನಿನಗೆ ಬಹು ಆಪತ್ತುಗಳು ಬಂದಿರುವವು! ಇಂತಹ ನಿನ್ನನ್ನು ನೀನೇ ತಿಳಿಯಲಾರದಿರುವೆಯೇಕೆ? ಪತಿಗೆ ಪ್ರೀತಿಪಾತ್ರವಾಗದ ಮಂಗಳಕರವಾದ ಸೊಬಗುಳ್ಳ ಕೈಕೇಯಿಯೆ! ಮುಂದೆ ಕೆಡಲುಳ್ಳ ಸಂಪತ್ತಿನಿಂದೇಕೆ ಹಿಗ್ಗುವೆ? ನಿನ್ನ ಐಶ್ವರ್ಯವು ಗ್ರೀಷ್ಮಕಾಲದ ನದಿಗಳು ಹೆಚ್ಚಿ ತಗ್ಗುವಂತೆ ದಿನಂಪ್ರತಿಯೂ ಕ್ಷೀಣವಾಗುವುದು" ಎಂದು ಕಠಿನವಾಗಿ ನುಡಿದಳು. ॥ ೧೫ ॥ ಈ ರೀತಿ ಪರುಷವಾಗಿ

ಪಾಪದರ್ಶಿನ್ಯಾ ವಿಷಾದ ಮಗಮತ್ಪರಂ ॥೧೬॥ ಕೈಕೇಯಿಶಾ ತ್ವಬ್ರವೀ ತ್ಕುಬ್ಜಾಂ ಕಚ್ಚಿತ್ ಕ್ಷೇಮಂ ನಮಂಥರೇ॥ ವಿಷಣ್ಣವದನಾಂ ಹಿ ತ್ವಾಂ ಲಕ್ಷಯೇ ಭೃಶ ದುಃಖಿತಾಂ ॥೧೭॥ ಮಂಥರಾತು ವಚಶ್ಶ್ರುತ್ವಾ ಕೈಕೇಯ್ಯಾ ಮಧು ರಾಕ್ಷರಂ ॥ ಉವಾಚ ಕ್ರೋಧ ಸಂಯುಕ್ತಾ ವಾಕ್ಯಂ ವಾಕ್ಯ ವಿಶಾರದಾ ॥೧೮॥ ಸಾವಿಷಣ್ಣತರಾ ಭೂತ್ವಾ ಕುಬ್ಜಾ ತಸ್ಯಾ ಹಿತೈಷಿಣೀ ॥ ವಿಷಾದಯಂತೀ ಪ್ರೋ ವಾಚ ಭೇದಯಂತೀಚ ರಾಘವಂ ॥೧೯॥ ಅಕ್ಷಯ್ಯಂ ಸುಮಹದ್ದೇವಿ ಪ್ರವೃತ್ತಂ ತ್ವದ್ವಿನಾಶನಂ ॥ ರಾಮಂ ದಶರಥೋ ರಾಜಾ ಯೌವರಾಜ್ಯೇ ನಿಯೋ

ಮಂಥರೆಯಿಂದ, ಪರುಷಂ- ಕ್ರೂರವಾದ, ವಚಃ- ವಾಕ್ಯವನ್ನು, ಉಕ್ತಾ- ಹೇಳಲ್ಪಟ್ಟು, ಕೈಕೇಯೀ- ಕೈಕೇಯಿಯು, ಪರಂ - ಬಹಳವಾದ, ವಿಷಾದಂ - ವ್ಯಸನವನ್ನು, ಅಗಮತ್ - ಹೊಂದಿದಳು ||೧೬|| ಕೈಕೇಯಿಶಾತು - ಕೈಕೇಯಿಯಾದರೆ, ಕುಬ್ಜಾಂ - ಮಂಥರೆಯನ್ನುಕುರಿತು, ಹೇಮಂಥರೇ - ಎಲೌ ಮಂಥರೆಯೇ, ಕ್ಷೇಮಂ - ಕ್ಷೇಮವು, ನಕಚ್ಚಿತ್ - ಇಲ್ಲವೋಏನು, ಹಿ - ಯಾವಕಾರಣ, ತ್ವಾಂ - ನಿನ್ನನ್ನು, ಭೃಶದುಃಖಿತಾಂ - ಅತ್ಯಂತವ್ಯಸನಗೊಂಡವಳನ್ನಾಗಿ, ವಿಷಣ್ಣವದನಾಂ - ಬಾಡಿದ ಮುಖವುಳ್ಳವಳನ್ನಾಗಿಯೂ, ಲಕ್ಷಯೇ - ಕಾಣುತ್ತೇನೆ, ಇತಿ - ಇಂತೆಂದು, ಅಬ್ರವೀತ್ - ನುಡಿದಳು ||೧೭|| ಮಂಥರಾತು - ಮಂಥರೆಯಾದರೆ, ಕೈಕೇಯ್ಯಾಃ - ಕೈಕೇಯಿದೇವಿಯ, ಮಧುರಾಕ್ಷರಂ - ಮನೋಹರವಾದ ಅಕ್ಷರಗಳುಳ್ಳ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ವಾಕ್ಯವಿಶಾರದಾ - ಮಾತುಗಳಲ್ಲಿ ಸಮರ್ಥಳಾದುದರಿಂದ, ಕ್ರೋಧಸಂಯುಕ್ತಾ - ಕ್ರೋಧದಿಂದ ಯುಕ್ತಳಾಗಿ, ವಾಕ್ಯಂ - ಮಾತನ್ನು, ಉವಾಚ - ಹೇಳಿದಳು ||೧೮|| ಸಾಕುಬ್ಜಾ - ಆ ಮಂಥರಾದೇವಿಯು, ವಿಷಣ್ಣತರಾ - ಅತ್ಯಂತವ್ಯಸನಗೊಂಡವಳು, ಭೂತ್ವಾ - ಆಗಿ, ತಸ್ಯಾಃ - ಆ ಕೈಕೆಯಿದೇವಿಗೆ, ಹಿತೈಷಿಣೀ - ಹಿತವನ್ನೇ ಬೇಡುತ್ತಿರುವಳಾದಕಾರಣ, ವಿಷಾದಯಂತೀ - ಕೈಕೇಯೀದೇವಿಯನ್ನು ವ್ಯಸನಗೊಳಿಸುತ್ತ, ರಾಘವಂ - ಶ್ರೀರಾಮನನ್ನು, ಭೇದಯಂತೀ - ಪ್ರತ್ಯೇಕವಮಾಡುತ್ತ, ಉವಾಚ - ಹೇಳಿದಳು ||೧೯|| ಹೇದೇವೀ - ಎಲೌ ಕೈಕೇಯೀದೇವಿಯೆ, ಅಕ್ಷಯಂ - ನಾಶರಹಿತವಾದ, ಸುಮಹತ್ - ದೊಡ್ಡದಾದ, ತ್ವದ್ವಿನಾಶನಂ - ನಿನ್ನ ವಿನಾಶವು, ಪ್ರವೃತ್ತಂ - ಪ್ರವರ್ತಿಸಿತು, ದಶರಥೋರಾಜಾ - ದಶರಥ ಮಹಾರಾಯನು, ರಾಮಃ - ಶ್ರೀರಾಮನನ್ನು, ಯೌವರಾಜ್ಯೇ - ಯೌವರಾಜ್ಯದಲ್ಲಿ, ಅಭಿಷೇಕ್ಷ್ಯತಿ -

---

ನುಡಿದ ಆ ದುಷ್ಟೆಯೂ, ಕುಬ್ಜೆಯೂ, ಆದ ಮಂಥರೆಯು ನುಡಿಗಳನ್ನು ಕೇಳಿ ಖತಿಗೊಂಡು ಅವಳನ್ನು ಕುರಿತು "ಮಂಥರೆ! ನೀನು ಬಹಳವಾದ ದುಃಖದಿಂದಾವೃತಳಾಗಿ ಮುಖ ಕಾಂತಿ ಕುಂದಿದವಳಾಗಿರುವೆ! ನನಗೆ ಕ್ಷೇಮವಷ್ಟೆ? ನಿನಗೇಕೆ ಮುಖಗೆಟ್ಟಿರುವುದು" ಎಂದಳು. ಕೈಕೇಯೀದೇವಿ ಈ ರೀತಿ ಹೇಳಲು ಮಾತನಾಡುವುದರಲ್ಲಿ ಮಹಾ ಚತುರೆಯಾದಾ ಮಂಥರೆಯು ಆಕೆಯ ಮೃದು ನುಡಿಗಳನ್ನಾಲಿಸಿ ಮತ್ತು ಕೋಪವುಳ್ಳವಳಾಗಿ ತನ್ನ ಒಡತಿಯಾದ ಕೈಕೇಯಿಗೆ ಹಿತವನ್ನು ಕೋರುತ್ತ, ಶ್ರೀರಾಮನಲ್ಲಿ ಭೇದಭಾವವನ್ನು ಹುಟ್ಟಿಸುತ್ತಲೂ, ಆಕೆಗೆ ಬಹಳವಾದ ಮನೋವ್ಯಥೆಯನ್ನುಂಟುಮಾಡಿ ದುಃಖಿತಳನ್ನಾಗಿ ಮಾಡುತ್ತಲೂ ಈ ನುಡಿಯನ್ನಾಡಿದಳು. ||೧೯|| "ದೇವೀ! ನಿನಗೆ ಸಂಭವಿಸಿರುವ ವಿಪತ್ತು



Manthara's Intrigue.

Lakshmi Art Bombay, 8

ಕ್ಷ್ಯತಿ ॥ ೨೦ ॥ ಸಾಸ್ಮ್ಯಗಾಧೇ ಭಯೇ ಮಗ್ನಾ ದುಃಖಶೋಕ ಸಮನ್ವಿತಾ ॥ ದಹ್ಯಮಾನಾನಲೇನೇವ ತ್ವದ್ಧಿತಾರ್ಥ ಮಿಹಾಗತಾ ॥ ೨೧ ॥ ತವ ದುಃಖೇನ ಕೈಕೇಯಿ ಮಮ ದುಃಖಂ ಮಹದ್ಭವೇತ್॥ ತ್ವದ್ವೃದ್ಧೌ ಮಮವೃದ್ಧಿಶ್ಚ ಭವೇದತ್ರ ನ ಸಂಶಯಃ ॥ ೨೨ ॥ ನರಾಧಿಪ ಕುಲೇ ಜಾತಾ ಮಹಿಷೀ ತ್ವಂ ಮಹೀಪತೇಃ ॥ ಉಗ್ರತ್ವಂ ರಾಜಧರ್ಮಾಣಾಂ ಕಥಂ ದೇವಿ ನಬುಧ್ಯಸೇ ॥ ೨೩ ॥ Imp. ಧರ್ಮವಾದೀ ಶಠೋ ಭರ್ತಾ ಶ್ಲಕ್ಷ್ಣವಾದೀಚ ದಾರುಣಃ ॥ ಶುದ್ಧಭಾವೇನ

ನಿಯೋಕ್ಷ್ಯತಿ - ಅಭಿಷೇಕಮಾಡಿಸುವನು ॥ ೨೦ ॥ ಸಾ - ಆ ನಾನು, ದುಃಖಶೋಕ - ಮನೋವ್ಯಸನದಿಂದಲೂ, ಪ್ರಲಾಪಾದಿಗಳಿಂದಲೂ, ಸಮನ್ವಿತಾ - ಕೂಡಿದವಳಾಗಿ, ಅಗಾಧೇ - ಪಾರವಿಲ್ಲದ, ಭಯೇ - ಭಯದಲ್ಲಿ, ಮಗ್ನಾ - ಮುಳುಗಿ, ಅನಲೇನ - ಅಗ್ನಿಯಿಂದ, ದಹ್ಯಮಾನೇವ - ದಹಿಸಲ್ಪಡುವೆನೋ ಎಂಬಂತೆ, ತ್ವದ್ಧಿತಾರ್ಥಂ - ನಿನ್ನಹಿತಕ್ಕೋಸುಗ, ಇಹ - ಇಲ್ಲಿ, ಆಗತಾ - ಬಂದವಳು, ಅಸ್ಮಿ - ಆಗಿರುವೆನು ॥ ೨೧ ॥ ಹೇಕೈಕೇಯಿ - ಎಲೈ ಕೈಕೇಯಿಯೆ, ತವ - ನಿನ್ನ, ದುಃಖೇನ - ದುಃಖದಿಂದ, ಮಮ - ನನಗೆ, ಮಹತ್ - ದೊಡ್ಡದಾದ, ದುಃಖಂ - ವ್ಯಸನ, ಭವೇತ್ - ಆಗುವುದು, ತ್ವದ್ವೃದ್ಧೌ - ನಿನಿಗೆಅಭಿವೃದ್ಧಿಯಾದರೆ, ಮಮ - ನನಗೆ, ವೃದ್ಧಿಶ್ಚ - ವೃದ್ಧಿಯೂ, ಅತ್ರ - ಈ ಅರ್ಥದಲ್ಲಿ, ಸಂಶಯೋನ - ಸಂಶಯವಿಲ್ಲವು ॥ ೨೨ ॥ ತ್ವಂ - ನೀನು, ನರಾಧಿಪಕುಲೇ - ರಾಜವಂಶದಲ್ಲಿ, ಜಾತಾ - ಹುಟ್ಟಿದವಳು, ಮಹೀಪತೇಃ - ಅರಸಿಗೆ, ಮಹಿಷೀ - ಪಟ್ಟದರಾಣಿಯೂ, ಅಸಿ - ಆಗಿರುವೆ, ಹೇದೇವಿ - ಎಲೈ ಕೈಕೇಯಿದೇವಿಯೆ, ರಾಜಧರ್ಮಾಣಾಂ - ರಾಜಧರ್ಮಗಳ, ಉಗ್ರತ್ವಂ - ಕ್ರೌರ್ಯವನ್ನು, ಕಥಂ - ಹೇಗೆತಾನೆ, ನಬುಧ್ಯಸೇ - ತಿಳಿಯದೆ ಇರುವೆ. ॥ ೨೩ ॥ ಭರ್ತಾ - ನಿನ್ನ ಪತಿಯೂ, ಧರ್ಮವಾದೀ - (ಗೋ) ಧರ್ಮವನ್ನು ಹೇಳುವನಂತೆ ತೋರುವ, ರಹಃ - ರಹಸ್ಯವಾಗಿ ಅಪ್ರಿಯವನ್ನು ಮಾಡುತ್ತಿರುವ, ಶ್ಲಕ್ಷ್ಣವಾದೀ - (ಮ) ಕಂಠದಿಂದಮೇಲಕ್ಕೆ ಮೃದು

ದೂರಮಾಡಲಸಮಳನಾಗಿರುವುದು ; ಸ್ವಾಮಿಯಾದ ದಶರಥ ಭೂಪಾಲನು ಶ್ರೀರಾಮಚಂದ್ರನಿಗೆ ಯೌವರಾಜ್ಯ ಪಟ್ಟಾಭಿಷೇಕವನ್ನು ಮಾಡುತ್ತಾನೆ. "ನನಗೆ ಇಷ್ಟವಿಲ್ಲದಿರುವ ಶ್ರೀರಾಮನ ಅಭಿಷೇಕ ವಾರ್ತೆಯನ್ನು ಕೇಳಿದುದರಿಂದುಂಟಾದ ವ್ಯಸನದಿಂದಲೂ, ಪ್ರೀತಿಪಾತ್ರನಾದ ಭರತನಿಗೆ ಅಭಿಷೇಕವಿಲ್ಲದಂತಾಯಿತಲ್ಲ!" ಎಂಬ ದುಃಖದಿಂದಲೂ ಆವೃತಳಾದ ನಾನು ಅಗ್ನಿಜ್ವಾಲೆಯಿಂದ ಸುಡಲ್ಪಟ್ಟವಳಂತಾಗಿ ನಿನ್ನ ಬಳಿಗೈದಿದೆನು. ॥ ೨೧ ॥ ಎಲೌ ಕೈಕೇಯಿಯೆ ! ನೀನು ನನ್ನ ಸ್ವಾಮಿನಿಯಾದುದರಿಂದ ನಿನ್ನ ಅಭಿವೃದ್ಧಿಯೇ ನನ್ನ ಅಭಿವೃದ್ಧಿಯು ; ನಿನ್ನ ಹಾನಿಯೇ ನನ್ನ ಹಾನಿಯು ; ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ದೇವೀ ! ನೀನು ಉತ್ತಮವಾದ ಕ್ಷತ್ರಿಯರ ವಂಶದಲ್ಲಿ ಜನಿಸಿ, ಉತ್ತಮ ರಾಜನ ಪಟ್ಟದರಸಿಯಾಗಿರುವೆ; ರಾಜ ಧರ್ಮವು ಮಹಾ ಕ್ರೌರ್ಯವುಳ್ಳದು; ಅದನ್ನು ನೀನರಿತವಳಾಗಿಲ್ಲ. ಕೇಳೌ ದೇವಿಯೆ! ನಿನ್ನ ಪತಿಯಾದ ದಶರಥನು ನೋಡುವುದಕ್ಕೆ ಧರ್ಮವನ್ನೇ ನುಡಿವವನಂತೆ ತೋರುವನು ; ಅಂತರಂಗವನ್ನು ನೋಡ ಹೋದರೆ ಧರ್ಮಕ್ಕೆ ವಿರುದ್ಧವಾದುದನ್ನೇ ಮಾಡುತ್ತಾನೆ. ಬಾಯಿಯಲ್ಲಿ ಒಳ್ಳೆಯ ನುಡಿ ; ಮಾಡುವ ಕಾರ್ಯವಾದರೋ ಮಹಾ ಕ್ರೌರ್ಯವುಳ್ಳದು,

ಜಾನೀಷೇ ತೇನೈವ ಮತಿಸಂಧಿತಾ ॥ ೨೪ ॥ ಉಪಸ್ಥಿತಂ ಪ್ರಯುಂಜಾನ
ಸ್ತ್ವಯಿ ಸಾಂತ್ವಮನರ್ಥಕಂ ॥ ಅರ್ಥೇನೈವಾದ್ಯ ತೇ ಭರ್ತಾ ಕೌಸಲ್ಯಾಂ ಯೋ
ಜಯಿಷ್ಯತಿ ॥ ೨೫ ॥ ಅಪವಾಹ್ಯ ಸ ದುಷ್ಟಾತ್ಮಾ ಭರತಂ ತವ ಬಂಧುಷು ॥
ಕಾಲ್ಯೇ ಸ್ಥಾಪಯಿತಾ ರಾಮಂ ರಾಜ್ಯೇ ನಿಹತ ಕಂಟಕೇ ॥ ೨೬ ॥ ಶತ್ರುಃ
ಪ್ರತಿಪ್ರವಾದೇನ ಮಾತ್ರೇವ ಹಿತ ಕಾಮ್ಯಯಾ ॥ ಆಶೀವಿಷ ಇವಾಂಕೇನ ಬಾಲೇ
ಪರಿಹೃತ ಸ್ತ್ವಯಾ ॥ ೨೭ ॥ ಯಥಾಹಿ ಕುರ್ಯಾತ್ಸರ್ಪೋವಾ ಶತ್ರುರ್ವಾ

ವಾಗಿ ಮಾತನಾಡುತ್ತಿರುವ, ದಾರುಣಃ - ಕ್ರೂರನಾದವನು, ತೇನ - ಆ ಗಂಡನಿಂದ, ಏವಂ - ಹೀಗೆ ಅತಿಸಂಧಿತಾ - ವಂಚಿಸಲ್ಪಟ್ಟವಳಾದರೂ, ಶುದ್ಧಭಾವೇನ - ನಿರ್ದೋಷಭಾವದಿಂದ, ಜಾನೀಷೇ - ತಿಳಿದುಕೊಂಡಿರುವೆ ॥೨೪॥ ತ್ವಯಿ - ನಿನ್ನಲ್ಲಿ, ಅನರ್ಥಕಂ - ನಿರರ್ಥಕವಾದ, ಉಪಸ್ಥಿತಂ - ಆಯಾ ಕಾಲಕ್ಕೆ ಸರಿಯಾಗಿರುವ, ಸಾಂತ್ವ - ಸಮಾಧಾನವಚನವನ್ನು, ಪ್ರಯುಂಜಾನಃ - ಹೇಳುತ್ತ, ಅದ್ಯ - ಈಗ, ತೇ - ನಿನ್ನ, ಭರ್ತಾ - ಪತಿಯು, ಕೌಸಲ್ಯಾಮೇವಂ - ಕೌಸಲ್ಯಾದೇವಿಯನ್ನೇ, ಅರ್ಥೇನ - ಪ್ರಯೋಜನದಿಂದ, ಯೋಜಯಿಷ್ಯತಿ - ನಿಯೋಗಿಸುತ್ತಾನೆ ॥ ೨೫ ॥ ದುಷ್ಟಾತ್ಮಾ - ದುಷ್ಟಸ್ವಭಾವವುಳ್ಳ, ಸಃ - ಆ ನಿನ್ನಗಂಡನು, ಭರತಂ - ಭರತನನ್ನು, ತವ - ನಿನ್ನ, ಬಂಧುಷು - ಬಂಧುಗಳಲ್ಲಿ, ಅಪವಾಹ್ಯ - ಎತ್ತಿಹಾಕಿ, ಕಾಲ್ಯೇ - ನಾಳೆಯ ಪ್ರಾತಃಕಾಲದಲ್ಲಿ, ರಾಮಂ - ಶ್ರೀರಾಮನನ್ನು, ನಿಹತಕಂಟಕೇ - ಹತರಾದಶತ್ರುಗಳುಳ್ಳ, ರಾಜ್ಯೇ - ರಾಜ್ಯದಲ್ಲಿ, ಸ್ಥಾಪಯಿತಾ - ನಿಯಮಿಸುವವನಾಗಿರುವನು ॥ ೨೬ ॥ ಹೇಬಾಲೇ - ಎಲೌಮೂಢಳೇ, ಪತಿಪ್ರವಾದೇನ - ಪತಿಯೆಂಬ ಪ್ರಸಿದ್ಧಿಯಿಂದ, ಶತ್ರುಃ - ಶತ್ರುವು, ಹಿತಕಾಮ್ಯಯಾ - ಹಿತವನ್ನೇ ಕೋರುತ್ತಿರುವ, ಮಾತ್ರೇವ - ತಾಯಿಯಿಂದ ಹೇಗೋ ಹಾಗೆ, ತ್ವಯಾ - ನಿನ್ನಿಂದ, ಅಂಕೇನ - ತೊಡೆಯಿಂದ, ಪರಿಹೃತಃ - (೧) ಧರಿಸಲ್ಪಟ್ಟನು ॥೨೭॥

ನೀನಿದನ್ನು ತಿಳಿಯದೆ, ಇಂತಹನನ್ನು ನಿಷ್ಕಲ್ಮಷನನ್ನಾಗಿ ತಿಳಿದುಕೊಂಡಿರುವೆ. ॥ ೨೪ ॥ ಆದುದರಿಂದ ನೀನು ವಂಚಿತಳಾಗಿರುವೆ. ಆ ದಶರಥರಾಯನಾದರೋ ಕಾಲೋಚಿತವಾಗಿ ನಿನ್ನಲ್ಲಿ ಪ್ರಿಯ ವಚನಗಳನ್ನಾಡಿ, ನಿನ್ನನ್ನನುಸರಿಸುತ್ತ ಫಲವೇನೂ ಇಲ್ಲದಂತೆ ಮಾಡಿ, ರಾಜ್ಯ ಫಲವು ಕೌಸಲ್ಯಾದೇವಿಗಾಗುವಂತೆ ಮಾಡುವನು. ಇದಕ್ಕೋಸುಗ ನಿನ್ನ ಮಗನಾದ ಭರತನನ್ನು ಸೋದರಮಾವನ ಮನೆಗೆ ಕಳುಹುವ ನೆವದಿಂದ ಪಟ್ಟಣದಿಂದಾಚೆಗೆ ಹೊರಡಿಸಿ, ಪ್ರಾತಃಕಾಲದಲ್ಲಿ ಶ್ರೀರಾಮನಿಗೆ ಯೌವರಾಜ್ಯ ಪಟ್ಟಾಭಿಷೇಕವನ್ನು ಮಾಡಿಸುವನು. ಕೇಳೆಲೇ ಬಾಲೆ! ಸರ್ಪವನ್ನು ಸಲಹುವ ಬಾಲಕಿಯು ಅದರಲ್ಲಿರುವ ವಿಷವನ್ನರಿಯದೆ, ಕೇವಲ ಮುದ್ದಿನಿಂದದನ್ನು ತೊಡೆಯ ಮೇಲಿರಿಸಿ ಲಾಲಿಸುವಳಿಂತೋ, ಅಂತು ಅರಿಯದವಳಾದ ನೀನು ಬಾಲೆಯಾದುದರಿಂದ ನಿಜಪತಿಯ ಕುಟಿಲ ಹೃದಯವನ್ನರಿಯದೆ ಆತನಲ್ಲಿ ನಂಬುಗೆಯನ್ನಿಟ್ಟು ಪ್ರೀತಿಸುತ್ತಿರುವೆ; ತೊಡೆಯ ಮೇಲೆ ಲಾಲಿಸಲ್ಪಡುವ ಸರ್ಪವು ತನ್ನ ಪೋಷಕಳನ್ನೇ ಹೇಗೆ ಕಡಿವುದೋ, ಹಾಗೆ ಏನೂ ಅರಿಯದ ನಿನ್ನಿಂದ ಪೋಷಿತನಾದ ನಿನ್ನ ಪತಿಯು ನಿನಗಾವ ಪ್ರಯೋಜನವನ್ನೂ ಮಾಡುವುದಿಲ್ಲವೆಂಬುದನ್ನರಿವವಳಾಗು. ॥೨೫-೨೭॥

ಟಿ. (೧) ಬಾಲೇಪರಿಹೃತಸ್ತ್ವಮೇತಿಪಾಠೇ - ಅಪರಿಹೃತ ಎಂದು ಪದಚ್ಛೇದವನ್ನು ಮಾಡಿ, ಅಪರಿಹೃತಃ - ಪರಿಹರಿಸಲ್ಪಡಲಿಲ್ಲ ಎಂದು ಗೋವಿಂದರಾಜರು ಬರೆಯುತ್ತಾರೆ.

ಪ್ರತ್ಯುಪೇಕ್ಷಿತಃ ॥ ರಾಜ್ಞಾ ದಶರಥೇನಾದ್ಯ ಸಪುತ್ರಾ ತ್ವಂ ತಥಾಕೃತಾ ॥ ೨೮ ॥ ಪಾಪೇನಾನೃತಸಾಂತ್ವೇನ ಬಾಲೇ ನಿತ್ಯ ಸುಖೋಚಿತೇ ॥ ರಾಮಂ ಸ್ಥಾಪಯಿತಾ ರಾಜ್ಯೇ ಸಾನುಬಂಧಾ ಹತಾಹ್ಯಸಿ ॥ ೨೯ ॥ ಸಂಪ್ರಾಪ್ತ ಕಾಲಂ ಕೈಕೇಯೀ ಕ್ಷಿಪ್ರಂ ಕುರು ಹಿತಂ ತವ ॥ ತ್ರಾಯಸ್ವ ಪುತ್ರಮಾತ್ಮಾನಂ ಮಾಂಚ ವಿಸ್ಮಯ ದರ್ಶನೇ ॥ ೩೦ ॥ ಮಂಥರಾಯಾ ವಚಶ್ಶ್ರುತ್ವಾ ಶಯಾನಾ ಸಾ ಶುಭಾನನಾ ॥ ಉತ್ತಸ್ಥೌ ಹರ್ಷಸಂಪೂರ್ಣಾ ಚಂದ್ರಲೇಖೇವ ಶಾರದೀ ॥೩೧॥

ಯಥಾ - ಹೇಗೆ, ಸರ್ಪೇವಾ - ಸರ್ಪವೇಆಗಲಿ, ಪ್ರತ್ಯುಪೇಕ್ಷಿತಃ - ಉಪೇಕ್ಷೆಮಾಡಲ್ಪಟ್ಟುದೇ ಆದರೆ, ಯಥಾಪಿಕುರ್ಯಾತ್ - ಹೇಗೆಮಾಡುವುದೋ, ತಥಾ - ಹಾಗೆಯೇ, ರಾಜ್ಞಾ - ಅರಸಾದ, ದಶರಥೇನ - ದಶರಥರಾಯನಿಂದ, ಅದ್ಯ - ಈಗ, ಸಪುತ್ರಾ - ಮಗನಿಂದೊಡಗೂಡಿದ, ತ್ವಂ - ನೀನು, ತಥಾಕೃತಾ - ಹಾಗೆಮಾಡಲ್ಪಟ್ಟವಳಾದೆ ॥ ೨೮ ॥ ಹೇಬಾಲೇ - ಎಲೌ ಮುಗ್ಧಳೇ, ಹೇನಿತ್ಯ ಸುಖೋಚಿತೇ-ಎಲೌ ನಿರಂತರವೂ ಸುಖಕ್ಕೆಯೋಗ್ಯಳೆ, ಅನೃತಸಾಂತ್ವೇನ- (ಮ) ಕಪಟವಾದಶಾಂತಿ ಗುಣವುಳ್ಳ, ರಾಮಂ - ಶ್ರೀರಾಮನನ್ನು, ರಾಜ್ಯೇ - ಕೋಶದಲ್ಲಿ, ಸ್ಥಾಪಯಿತಾ - ಸ್ಥಾಪನೆಮಾಡುವ, ಪಾಪೇನ - ಪಾಪಿಷ್ಠನಾದ ನಿನ್ನಪತಿಯಿಂದ, ಸಾನುಬಂಧಾ - ಪುತ್ರಮಿತ್ರಾದಿಗಳಿಂದ ಸಹಿತಳಾದ, ತ್ವಂ - ನೀನು, ಹತಾ - ನಾಶವಾಂತವಳು, ಅಸಿ - ಆದೆ, (ಗೋ) ನಿತ್ಯಸುಖೋಚಿತೇ, ನಿತ್ಯ - ನಿರಂತರವೂ ಶಾಶ್ವತವಾದ, ಸುಖ - ಸುಖಕ್ಕೆ, ಉಚಿತ - ಯೋಗ್ಯವಾದ, ರಾಜ್ಯೇ - ರಾಜ್ಯದಲ್ಲಿ, ರಾಮಂ - ಶ್ರೀರಾಮನನ್ನು, ಸ್ಥಾಪಯಿತಾ - ಪಟ್ಟಾಭಿಷೇಕಮಾಡುತ್ತಿರುವ. ಪಾಪೇನ - ಪಾಪಿಯಾದ ಪತಿಯಿಂದ, ಹತಾ - ಹೊಡೆಯಲ್ಪಟ್ಟವಳು, ಅಸಿ - ಆದೆ, ॥ ೨೯ ॥ ಹೇವಿಸ್ಮಯದರ್ಶನೇ - ಎಲೈ ಆಶ್ಚರ್ಯಕರವಾದ ನೋಡುವಿಕೆಯುಳ್ಳವಳೇ, ಹೇಕೈಕೇಯಿ - ಎಲೌ ಕೇಕಯರಾಜಕುವರಿಯೆ, ಸಾತ್ವಂ - ಅಂತಹ ನೀನು, ಪ್ರಾಪ್ತಕಾಲಂ - ಹೊಂದಿದ, ಸಮಯವುಳ್ಳ, ಹಿತಂ - ಹಿತವನ್ನು, ತವ- ನಿನಗೆ, ಕ್ಷಿಪ್ರಂ - ಜಾಗ್ರತೆಯಾಗಿ, ಕುರು - ಮಾಡಿಕೊ, ಪುತ್ರಂ - ಮಗನನ್ನೂ, ಆತ್ಮಾನಂ - ನಿನ್ನನ್ನೂ, ಮಾಂಚ - ನನ್ನನ್ನೂ, ತ್ರಾಯಸ್ವ- ಸಂರಕ್ಷಿಸು ॥ ೩೦ ॥ ಶುಭಾನನಾ - ಶುಭಕರವಾದ ಮುಖವುಳ್ಳ, ಶಯಾನಾ- ಮಲಗಿರುವ, ಸಾ - ಆ ಕೈಕೆಯೀದೇವಿಯು, ಮಂಥರಾಯಾಃ - ಮಂಥರಾ ದೇವಿಯ, ವಚಃ- ಮಾತನ್ನು, ಶ್ರುತ್ವಾ- ಕೇಳಿ, ಹರ್ಷಸಂಪೂರ್ಣಾ- ಸಂತೋಷದಿಂದ ತುಂಬಿದವಳಾಗಿ, ಶಾರದೀ - ಶರತ್ಕಾಲದಲ್ಲಿ ಹುಟ್ಟಿದ, ಚಂದ್ರಲೇಖೇವ - ಚಂದ್ರರೇಖೆಯಂತೆ, ಕ್ಷಿಪ್ರಂ - ಜಾಗ್ರತೆ ಯಾಗಿ, ಉತ್ತಸ್ಥೌ - ಮೇಲಕ್ಕೆದ್ದಳು ॥ ೩೧ ॥ ಸಾ - ಆ ಕೈಕೆಯಿಯು, ಅತೀವ - ಬಹಳವಾಗಿ,

---

ಎಲೌ ಕೈಕೇಯಿಯೆ ! ಪಾಪಿಷ್ಠನಾಗಿ ಸುಳ್ಳನ್ನೇ ನುಡಿಯುತ್ತಲೂ, ಸಮಾಧಾನವನ್ನು ಮಾಡುತ್ತಲೂ, ಕಪಟ ಸ್ನೇಹವನ್ನು ತೋರುತ್ತಲೂ ಇರುವ ನಿನ್ನ ಪತಿಯು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡುತ್ತಾನೆ. ಇಂತಹ ನಿನ್ನ ಪತಿಯಿಂದ ನಿತ್ಯವೂ ಸುಖಾರ್ಹ ಳಾದ ನೀನು ಪುತ್ರ ಸಹಿತಳಾಗಿ ಕೆಟ್ಟುಹೋಗುವೆ. ಕೈಕೇಯೀ! ಕಾಲವು ಒದಗಿ ಬಂದಿರು ವುದು ; ನಿನಗೆ ನೀನೇ ಜಾಗ್ರತೆಯಾಗಿ ಹಿತವನ್ನುಂಟುಮಾಡಿಕೊಳ್ಳುವವಳಾಗು. ನನ್ನನ್ನೂ ನಿನ್ನ ಕುವರನಾದ ಭರತನನ್ನೂ ರಕ್ಷಿಸಿಕೊಳ್ಳುವವಳಾಗು." ॥ ೩೦ ॥ ಹೀಗೆಂದ ಮಂಥ ರೆಯ ಮಾತುಗಳನ್ನು ಕೇಳಿ ಮಹಾ ಸಂತುಷ್ಟಳಾಗಿ ಶರತ್ಕಾಲದ ಚಂದ್ರನಂತಿರುವ ಮುಖ

ಅತೀವ ಸಾತು ಸಂಹೃಷ್ಟಾ ಕೈಕೇಯೀ ವಿಸ್ಮಯಾನ್ವಿತಾ ॥ ಏಕಮಾಭರಣಂ ತಸ್ಯೈ ಕುಬ್ಜಾಯೈ ಪ್ರದದೌ ಶುಭಂ ॥ ೩೨ ॥ ದತ್ವಾತ್ವಾಭರಣಂ ತಸ್ಯೈ ಕುಬ್ಜಾಯೈ ಪ್ರಮದೋತ್ತಮಾ ॥ ಕೈಕೇಯೀ ಮಂಥರಾಂ ದೃಷ್ಟ್ವಾ ಪುನರೇವಾಬ್ರವೀದಿದಂ ॥ ೩೩ ॥ ಇದಂತು ಮಂಥರೇ ಮಹ್ಯಮಾಖ್ಯಾಸಿ ಪರಮಂ ಪ್ರಿಯಂ ॥ ಏತನ್ಮೇ ಪ್ರಿಯಮಾಖ್ಯಾತುಃ ಕಿಂವಾ ಭೂಯಃ ಕರೋಮಿ ತೇ ॥ ೩೪ ॥ ರಾಮೇವಾ ಭರತೇವಾಹಂ ವಿಶೇಷಂ ನೋಪಲಕ್ಷಯೇ ॥ ತಸ್ಮಾತ್ತುಷ್ಟಾಸ್ಮಿ ಯದ್ರಾಜಾ ರಾಮಂ ರಾಜ್ಯೇಭಿಷೇಕ್ಷ್ಯತಿ ॥೩೫॥

ಸಂಹೃಷ್ಟಾ - ಸಂತೋಷಗೊಂಡವಳಾಗಿ, ವಿಸ್ಮಯಾನ್ವಿತಾ - ಆಶ್ಚರ್ಯದಿಂದಯುಕ್ತಳಾಗಿ, ತಸ್ಯೈಕುಬ್ಜಾಯೈ - ಆ ಮಂಥರೆಗೆ, ಶುಭಂ - ಶುಭಕರವಾದ, ಏಕಂ - ಒಂದಾದ, ಆಭರಣಂ - ಆಭರಣವನ್ನು, ಪ್ರದದೌ - ಕೊಟ್ಟಳು ॥ ೩೨ ॥ ಪ್ರಮದೋತ್ತಮಾ - ಉತ್ತಮಸ್ತ್ರೀಯಾದ, ಕೈಕೇಯೀ - ಕೈಕೆಯೀದೇವಿಯು, ಕುಬ್ಜಾಯೈ - ವಕ್ರಳಾದ, ತಸ್ಯೈ - ಆ ಮಂಥರೆಗೆ, ಆಭರಣಂ - ಒಡವೆಯನ್ನು, ದತ್ವಾ - ಕೊಟ್ಟು, ಮಂಥರಾಂ - ಮಂಥರೆಯನ್ನು, ದೃಷ್ಟ್ವಾ - ಕಂಡು, ಪುನರೇವ - ಮತ್ತೂ, ಇದಂ - ಈ ಮುಂದೆ ಹೇಳುವಮಾತನ್ನು, ಅಬ್ರವೀತ್ - ನುಡಿದಳು ॥ ೩೩ ॥ ಹೇ ಮಂಥರೇ - ಎಲೈ ಮಂಥರೆಯೇ, ಪರಮಂ- ಶ್ರೇಷ್ಠವಾದ, ಇದಂಪ್ರಿಯಂತು- ಈಇಷ್ಟವಾದ ವಚನವನ್ನು, ಮಹ್ಯಂ - ನನಗೆ, ಆಖ್ಯಾಸಿ - ಹೇಳಿದೆ, ಮೇ - ನನಗೆ, ಏತತ್ಪ್ರಿಯಂ - ಇಂತಹ ಹಿತಕರವಾದ ಮಾತನ್ನು, ಆಖ್ಯಾತುಃ - ಹೇಳುತ್ತಿರುವ, ತೇ - ನಿನಗೆ, ಭೂಯಃ - ಮತ್ತೂ, ಕಿಂ - ಏನನ್ನು, ಕರೋಮಿ - ಮಾಡಲಿ ॥ ೩೪ ॥ ರಾಮೇವಾ - ರಾಮನಲ್ಲಿಯೇ ಆಗಲಿ, ಭರತೇವಾ - ಭರತನಲ್ಲಿಯೇ ಆಗಲಿ, ಅಹಂ - ನಾನು, ಭೇದಂ - ಭೇದವನ್ನು, ನೋಪಲಕ್ಷಯೇ - ಕಾಣೆನು, ಯತ್ - ಯಾವಕಾರಣ, ರಾಜಾ - ದಶರಥರಾಯನು, ರಾಮಂ - ಶ್ರೀರಾಮನನ್ನು, ರಾಜ್ಯೇ - ರಾಜ್ಯದಲ್ಲಿ, ಅಭಿಷೇಕ್ಷ್ಯತಿ - ಪಟ್ಟಾಭಿಷೇಕವನ್ನು ಮಾಡುವನೋ, ತಸ್ಮಾತ್ - ಆಕಾರಣ, ತುಷ್ಟಾಸ್ಮಿ - ಸಂತುಷ್ಟಳಾದೆನು ॥ ೩೫ ॥ ಹೇಪ್ರಿಯಾರ್ಹೇ - ಎಲೈ ಇಷ್ಟವಾದ ಪದಾರ್ಥವನ್ನು ಕೊಡಲರ್ಹಳೇ, ಮೇ - ನನಗೆ, ಇತಃ - ಈ ಶ್ರೀರಾಮಪಟ್ಟಾಭಿಷೇಕಕ್ಕಿಂತಲೂ, ಪರಂ - ಮತ್ತೊಂದಾದ, ಪ್ರಿಯಂ - ಇಷ್ಟವಾದ ವರಂ - ಶ್ರೇಷ್ಠವಾದ, ವಚಃ - ಮಾತು, ತ್ವಯಾಪುನಃ - ನಿನ್ನಿಂದ, ಕಿಂಚಿತ್- ಯಾವದೊಂದೂ, ನಶಕ್ಯಂ - ಹೇಳುವದಕ್ಕೆಸಾಧ್ಯವಲ್ಲಪ್ಪ, ತ್ವಂ - ನೀನು, ತಥಾ - ಆಪ್ರಕಾರವಾಗಿ, ಅವೋಚಃ -

---

ದಿಂದೊಪ್ಪುತ ಎದ್ದು ಕುಳಿತುಕೊಂಡು, ಆಶ್ಚರ್ಯ ಸಂತೋಷಗಳಿಂದೊಡಗೂಡಿ ಆ ಮಂಥರೆಗೊಂದು ಆಭರಣವನ್ನಿತ್ತು "ಮಂಥರೆ! ನೀನು ನನಗೆ ಬಹು ಇಷ್ಟವಾದ ವಾರ್ತೆಯನ್ನು ಹೇಳಿದೆ; ಇಂತಹ ಪ್ರಿಯವನ್ನು ನುಡಿದ ನಿನಗೆ ಮತ್ತೇನನ್ನು ಕೊಡಲಿ; ಕೇಳು. ಶ್ರೀರಾಮನಲ್ಲಾಗಲಿ, ಭರತನಲ್ಲಾಗಲಿ, ನಾನಾವ ವಿಧವಾದ ಪಕ್ಷಪಾತವನ್ನೂ ಮಾಡಿದವಳಲ್ಲವು; ಪ್ರಿಯ ವೃತ್ತಾಂತವನ್ನು ನುಡಿವ ಎಲೌ ಮಂಥರೆಯೆ! ನೀನು "ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದು" ಎಂಬ ಸಮಾಚಾರವನ್ನು ಹೇಳಿದೆ; ನನಗೆ ಇದಕ್ಕಿಂತಲೂ

ನಮೇ ಪರಂ ಕಿಂಚಿದಿತಸ್ತ್ವಯಾ ಪುನಃ
ಪ್ರಿಯಂ ಪ್ರಿಯಾರ್ಹೇ ಸುವಚಂ ವಚಃ ಪರಂ ॥
ತಥಾಹ್ಯವೋಚಸ್ತ್ವಮತಃ ಪ್ರಿಯೋತ್ತರಂ
ಪರಂ ವರಂ ತೇ ಪ್ರದದಾಮಿ ತಂವೃಣು ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಸ್ಸರ್ಗಃ

ಹೇಳಿದೆ, ಅತಃ - ಈ ಕಾರಣ, ಪ್ರಿಯೋತ್ತರಂ - ಇಷ್ಟವಾದಮಾತನ್ನುಹೇಳಿದ್ದಕ್ಕೆ ಉತ್ತರರೂಪವಾದ, ಪರಂ - ಮತ್ತೊಂದಾದ, ವರಂ - ವರವನ್ನು, ತೇ - ನಿನಗೆ, ಪ್ರದದಾಮಿ - ಕೊಡುವೆನು, ತಂ - ಅಂತಹ ಶ್ರೇಷ್ಠವಾದ ವಸ್ತುವನ್ನು, ವೃಣುಷ್ವ - ಕೇಳು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಸ್ಸರ್ಗಃ

ಹೆಚ್ಚಿನ ಪ್ರಿಯವಾರ್ತೆಯಿಲ್ಲವು ; ಈ ವೃತ್ತಾಂತವನ್ನು ಹೇಳಿದುದಕ್ಕೆ ನಿನಗೆ ಮತ್ತೊಂದು ವರವನ್ನೀಯುವೆನು, ಕೇಳುವವಳಾಗು" ಎಂದು ನುಡಿದಳು. ॥ ೩೬ ॥

ಇಂತಿದು ಕುಬ್ಜ ಮಂಥರಾಕೃತ ಕೈಕೇಯೀ ಚಿತ್ತವೃತ್ತಿ ಮಂಥನೋಪಕ್ರಮ
ವೃತ್ತಾಂತ ವಿವರಣವೆಂಬ ಏಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಮಸ್ಸರ್ಗಃ.

ಮಂಥರಾತ್ವಭ್ಯಸೂಯ್ಯೈನಾಮುತ್ಸೃಜ್ಯಾಭರಣಂ ಚ ತತ್ ॥ ಉವಾಚೇದಂ ತತೋ ವಾಕ್ಯಂ ಕೋಪ ದುಃಖ ಸಮನ್ವಿತಾ ॥ ೧ ॥ ಹರ್ಷಂ ಕಿಮಿದ ಮಸ್ಥಾನೇ ಕೃತವತ್ಯಸಿ ಬಾಲಿಶೇ ॥ ಶೋಕ ಸಾಗರಮಧ್ಯಸ್ಥಮಾತ್ಮಾನಂ ನಾವಬುಧ್ಯಸೇ ॥ ೨ ॥ ಮನಸಾ ಪ್ರಹಸಾಮಿ ತ್ವಾಂ ದೇವೀ ದುಃಖಾರ್ದಿತಾ ಸತೀ ॥ ಯಚ್ಛೋಚಿತವ್ಯೇ ಹೃಷ್ಟಾ ಸಿ ಪ್ರಾಪ್ಯೇದಂ ವ್ಯಸನಂ ಮಹತ್ ॥ ೩ ॥

ಮಂಥರಾತು- ಮಂಥರಾದೇವಿಯು, ಏನಾಂ - ಈ ಕೈಕೆಯಿಾದೇವಿಯನ್ನು ಕುರಿತು, ಅಭ್ಯಸೂಯ - ಅಸೂಯೆಗೊಂಡು, ತದಾಭರಣಂಚ - ಆ ಆಭರಣವನ್ನು, ಉತ್ಸೃಜ್ಯ - ಬಿಸುಟು, ತತಃ - ಬಳಿಕ, ಕೋಪದುಃಖ - ಕೋಪದಿಂದಲೂ ಅನರ್ಥಬರುತ್ತದೆಂಬ ದುಃಖದಿಂದಲೂ, ಸಮನ್ವಿತಾ - ಕೂಡಿದವಳಾಗಿ, ಇದಂ - ಈ ವಕ್ಷ್ಯಮಾಣ, ವಚಃ - ವಾಕ್ಯವನ್ನು, ಉವಾಚ - ಹೇಳಿದಳು. ॥ ೧ ॥ ಹೇ ಬಾಲಿಶೇ - ಎಲೆ ಅಜ್ಞಳೆ! ಅಸ್ಥಾನೇ - ಅಕಾಲದಲ್ಲಿ, ಹರ್ಷಂ - ಸಂತೋಷವನ್ನು, ಕೃತವತೀ - ಮಾಡಿದವಳು, ಅಸಿ - ಆದೆ, ಇದಂ - ಇದು, ಕಿಂ - ಏನು, ಆತ್ಮಾನಂ - ನಿನ್ನನ್ನು, ಶೋಕಸಾಗರಮಧ್ಯಸ್ಥಂ - ಶೋಕವೆಂಬ ಸಮುದ್ರದಲ್ಲಿರುವವಳನ್ನಾಗಿ, ನಾವಬುಧ್ಯಸೇ - ತಿಳಿಯದೆಹೋದೆ. ॥ ೨ ॥ ಹೇ ದೇವಿ - ಎಲೌ ಕೈಕೇಯಿಯೆ! ಯತ್ - ಯಾವಕಾರಣ, ಮಹತ್ - ಮಹತ್ತರವಾದ, ಇದಂವ್ಯಸನಂ - ಈ ವ್ಯಸನವನ್ನು, ಪ್ರಾಪ್ಯ - ಹೊಂದಿ, ಶೋಚಿತವ್ಯೇ - ದುಃಖಪಡತಕ್ಕ ಕಾಲದಲ್ಲಿ, ಹೃಷ್ಟಾಸಿ - ಸಂತೋಷಪಡುವೆ, ತಸ್ಮಾತ್ - ಆ ಕಾರಣ, ದುಃಖಾರ್ದಿತಾಸತೀ - ದುಃಖದಿಂದಾಕ್ರಾಂತಳಾಗಿ, ತ್ವಾಂ- ನಿನ್ನನ್ನು (ನೋಡಿ), ಮನಸಾ- ಮನಸ್ಸಿನಿಂದ, ಪ್ರಹಸಾಮಿ- ನಗುತ್ತೇನೆ. ॥ ೩ ॥ ತೇ - ನಿನಗೆ, ದುರ್ಮತಿತ್ವಂ - ದುರ್ಬುದ್ಧಿಯುಂಟಾಗಿರುವ ಭಾವವನ್ನು ಕುರಿತು, ಶೋಚಾಮಿ-ದುಃಖಿಸುತ್ತೇನೆ, ಮೃತ್ಯೋರಿವ- ಮೃತ್ಯುವಿನಂತೆ, ಅರೇಃ- ಶತ್ರುವಾದ, ಸಪತ್ನೀಪುತ್ರಸ್ಯ- ಸವತಿಯಮಗನಿಗೆ, ಆಗತಾಂ - ಲಭ್ಯವಾಗುವ, ವೃದ್ಧಿಂ - ಅಭಿವೃದ್ಧಿಯನ್ನು ಕುರಿತು, ಪ್ರಾಜ್ಞಾ -

---

ಆ ಬಳಿಕ ಮಂಥರೆಯು ಕೈಕೇಯಿಯ ನುಡಿಗಳನ್ನು ಕೇಳಿ ಅತಿಯಾಗಿ ಕೋಪಗೊಂಡು, ಆಕೆಯು ಉಡುಗೆರೆಯಾಗಿ ಕೊಟ್ಟಿದ್ದ ಆಭರಣವನ್ನು ಬಿಸುಟು, ಕೋಪದಿಂದಲೂ, ದುಃಖದಿಂದಲೂ ಆಕೆಯನ್ನು ಕುರಿತು, “ಎಲೌ ವಿವೇಕಶೂನ್ಯಳೆ ! ಏನಿದು; ಸಂಕಟಪಡುವ ವಿಷಯದಲ್ಲಿ ಸಂತೋಷಪಡುತ್ತಿರುವೆ? ನೀನು ಅಜ್ಞಾನಿಯು; ಅಯ್ಯೋ! ಶೋಕಸಮುದ್ರದಲ್ಲಿ ಮುಳುಗಿದ ನೀನು ನಿನ್ನನ್ನೇ ಅರಿಯದಿರುವೆಯಲ್ಲ! ದೇವೀ! ಇಂತಹ ಮಹತ್ತರವಾದ ದುಃಖವನ್ನು ಹೊಂದಿ, ವ್ಯಸನ ಪಡುವಕಾಲದಲ್ಲಿ ಸಂತೋಷಚಿತ್ತಳಾಗಿರುವ ನಿನ್ನನ್ನು ನೋಡಿ ನಾನು ಶೋಕಸಂತಪ್ತಳಾಗಿ ಆಶ್ಚರ್ಯಪಡುತ್ತಿರುವೆನು. ಅಹಹ! ನಿನ್ನ ದುರ್ಬುದ್ಧಿಯನ್ನು ಕುರಿತು ದುಃಖಿಸುತ್ತೇನೆ; ಶತ್ರುವಾದ ಸವತಿಗುವರನ ವೃದ್ಧಿಯು ಮೃತ್ಯುವಿನಂತೆ ಒದಗಿ

ಶೋಚಾಮಿ ದುರ್ಮತಿತ್ವಂ ತೇ ಕಾಹಿ ಪ್ರಾಜ್ಞಾ ಪ್ರಹರ್ಷಯೇತ್ ‖ ಅರೇಸ್ಸಪತ್ನೀ ಪುತ್ರಸ್ಯ ವೃದ್ಧಿಂ ಮೃತ್ಯೋರಿವಾಗತಾಂ ‖ ೪ ‖ ಭರತಾದೇವ ರಾಮಸ್ಯ ರಾಜ್ಯ ಸಾಧಾರಣಾದ್ಭಯಂ ‖ ತದ್ವಿಚಿಂತ್ಯ ವಿಷಣ್ಣಾಸ್ಮಿ ಭಯಂ ಭೀತಾದ್ಧಿ ಜಾಯತೇ ‖ ೫ ‖ ಲಕ್ಷ್ಮಣೋ ಹಿ ಮಹೇಷ್ವಾಸೋ ರಾಮಂ ಸರ್ವಾತ್ಮನಾ ಗತಃ ‖ ಶತ್ರುಘ್ನಶ್ಚಾಪಿ ಭರತಂ ಕಾಕುತ್ಸ್ಥಂ ಲಕ್ಷ್ಮಣೋ ಯಥಾ ‖ ೬ ‖ ಪ್ರತ್ಯಾಸನ್ನ ಕ್ರಮೇಣಾಪಿ ಭರತಸ್ಯೈವ ಭಾಮಿನಿ ‖ ರಾಜ್ಯ ಕ್ರಮೋ ವಿಪ್ರಕೃಷ್ಟ ಸ್ತಯೋಸ್ತಾವದ್ಯವೀಯಸೋಃ ‖ ೭ ‖ ವಿದುಷಃ

(ಗೋ) ಊಹಾಪೋಹಚತುರಳಾದ, ಕಾವಾ- ಯಾವಳು ತಾನೆ, ಪ್ರಹರ್ಷಯೇತ್-ಸಂತೋಷಪಟ್ಟಾಳು? ‖೪‖ ರಾಜ್ಯಸಾಧಾರಣಾತ್ - (ಗೋ) ರಾಜ್ಯದ ಹಕ್ಕಿನಲ್ಲಿ ಸಾಮಾನ್ಯವಾದ ಅಧಿಕಾರವುಳ್ಳ, ಭರತಾದೇವ ಭರತನಿಂದಲೇ, ರಾಮಸ್ಯ - ಶ್ರೀರಾಮನಿಗೆ, ಭಯಂ ಭಯವು. ತತ್ - ಅದನ್ನು, ವಿಚಿಂತ್ಯ - ಆಲೋಚಿಸಿ, ವಿಷಣ್ಣಾ - ವ್ಯಸನಗೊಂಡವಳು, ಅಸ್ಮಿ - ಆಗಿರುವೆನು, ಭೀತಾತ್ - ಭಯಬೀಳುತ್ತಿರುವನಾದ, ಭಯಂ - ಭಯವು, ಜಾಯತೇಹಿ - ಆಗುತ್ತದಷ್ಟೆ. ‖ ೫ ‖ ಮಹೇಷ್ವಾಸಃ - ಮಹಾಧನುರ್ಧಾರಿಯಾದ, ಲಕ್ಷ್ಮಣೋಹಿ - ಲಕ್ಷ್ಮಣಸ್ವಾಮಿಯಾದರೋ, ರಾಮಂ - ಶ್ರೀರಾಮನನ್ನು, ಸರ್ವಾತ್ಮನಾ - ಎಲ್ಲರೀತಿಯಾಗಿಯೂ, ಗತಃ - ಹೊಂದಿರುವನು, ಕಾಕುತ್ಸ್ಥಂ - ಶ್ರೀರಾಮನನ್ನು, ಲಕ್ಷ್ಮಣೋಯಥಾ - ಲಕ್ಷ್ಮಣನು ಹೇಗೋ ಹಾಗೆ, ಶತೃಘ್ನಶ್ಚಾಪಿ - ಶತೃಘ್ನನು, ಭರತಂ - ಭರತನನ್ನು, ಸರ್ವಾತ್ಮನಾ - ಎಲ್ಲರೀತಿಗಳಲ್ಲಿಯೂ, ಗತಃ - ಅನುಸರಿಸುತ್ತಾನೆ. ‖ ೬ ‖ ಹೇ ಭಾಮಿನಿ - ಎಲೌ ಕೈಕೇಯಿಯೆ, ಪ್ರತ್ಯಾಸನ್ನಕ್ರಮೇಣಾಪಿ, ಪ್ರತ್ಯಾಸನ್ನ - ಸಮೀಪವರ್ತಿಯಾದ, ಕ್ರಮೇಣಾಪಿ - ಕ್ರಮದಿಂದಲೂ, ಭರತಸ್ಯೈವ - ಭರತನಿಗೇನೆ, ರಾಜ್ಯಕ್ರಮಃ - ರಾಜ್ಯಕ್ರಮವು, ಕನೀಯಸೋಃ - ಕಿರಿಯರಾದ, ತಯೋಸ್ತಾವತ್ - ಆ ಲಕ್ಷ್ಮಣ ಶತ್ರುಘ್ನರಿಗೆ, ರಾಜ್ಯಕ್ರಮಃ - ರಾಜ್ಯಪ್ರಾಪ್ತಿಕ್ರಮವು, ವಿಪ್ರಕೃಷ್ಟಃ - ದೂರಸ್ಥವಾಗಿರುವದು. ‖ ೭ ‖ ವಿದುಷಃ - ತಿಳಿವಳಿಕೆಯುಳ್ಳ, ಕ್ಷತ್ರಚಾರಿತ್ರೇ -

ಬರುತ್ತಿರುವುದು. ಇದನ್ನು ನೋಡಿ ಊಹಾಪೋಹ ಚತುರಳಾದ ಯಾವಳು ತಾನೆ ಸಂತಸವನ್ನು ಹೊಂದುವಳು. ‖ ೪ ‖ ದೇವೀ! ಈ ರಾಜ್ಯಕ್ಕೆ ಸರಿಪಾಲುಗಾರನಾಗಿರುವುದರಿಂದ ಭರತನಿಂದಲೇ ಶ್ರೀರಾಮನಿಗೆ ಭೀತಿಯು; ಅದನ್ನು ಯೋಚಿಸಿ ದುಃಖಿಸುತ್ತಿರುವೆನು. "ಶ್ರೀರಾಮನಿಗೆ ಭಯವುಂಟಾದರೆ ನಮ್ಮ ಭರತನಿಗೇನು ಭಯ?" ಎಂದು ಕೇಳುವೆಯೇನೋ? ಕೇಳು; ಲೋಕದಲ್ಲಿ ಯಾವನು ಯಾವನಿಗೆ ಹೆದರುವನೋ, ಅವನು ತನಗೆ ಹೆದರಿಕೆಯನ್ನುಂಟುಮಾಡುವವನಿಗೆ ಖಂಡಿತವಾಗಿಯೂ ಭೀತಿಯನ್ನು ಹುಟ್ಟಿಸುವನು. ಲಕ್ಷ್ಮಣ ಶತ್ರುಘ್ನರಿಗೂ ಈ ರಾಜ್ಯವು ಸಮಾನವಾಗಿದ್ದರೂ, ಪರಾಧೀನರಾಗಿರುವುದರಿಂದ ಅವರಿಗೆ ಭಯವಿಲ್ಲವು. ಮಹಾ ಧನುರ್ಧಾರಿಯಾದ ಲಕ್ಷ್ಮಣನು ತ್ರಿಕರಣ ಶುದ್ಧಿಯಾಗಿ ಎಲ್ಲ ರೀತಿಗಳಲ್ಲಿಯೂ ರಾಮನನ್ನೇ ಅನುಸರಿಸಿಕೊಂಡಿರುವನು, ಅದೇ ರೀತಿ ಶತ್ರುಘ್ನನು ಭರತನನ್ನನುಸರಿಸಿಕೊಂಡಿರುವನು. ಈ ಲಕ್ಷ್ಮಣ ಶತ್ರುಘ್ನರು ರಾಮ ಭರತರನ್ನಾಶ್ರಯಿಸಿಕೊಂಡಿರಲು ಮತ್ತೊಂದು ಕಾರಣವಿರುವುದು. ಶ್ರೀರಾಮನು ಪುನರ್ವಸೂ ನಕ್ಷತ್ರದಲ್ಲಿ

ಕ್ಷತ್ರಚಾರಿತ್ರೇ ಪ್ರಾಜ್ಞಸ್ಯ ಪ್ರಾಪ್ತಕಾರಿಣಃ ॥ ಭಯಾತ್ಪ್ರವೇಪೇ ರಾಮಸ್ಯ ಚಿಂತಯಂತೀ ತವಾತ್ಮಜಂ ॥ ೮ ॥ ಸುಭಗಾ ಖಲು ಕೌಸಲ್ಯಾ ಯಸ್ಯಾಃ ಪುತ್ರೋಽಭಿಷೇಕ್ಷ್ಯತೇ ॥ ಯೌವರಾಜ್ಯೇನ ಮಹತಾ ಶ್ವಃ ಪುಷ್ಯೇಣ ದ್ವಿಜೋತ್ತಮೈಃ ॥ ೯ ॥ ಪ್ರಾಪ್ತಾಂ ಸುಮಹತೀಂ ಪ್ರೀತಿಂ ಪ್ರತೀತಾಂ ತಾಂ ಹತದ್ವಿಷಂ ॥ ಉಪಸ್ಥಾಸ್ಯಸಿ ಕೌಸಲ್ಯಾಂ ದಾಸೀವತ್ತ್ವಂ ಕೃತಾಂಜಲಿಃ ॥ ೧೦ ॥ ಏವಂಚೇತ್ತ್ವಂ ಸಹಾಸ್ಮಾಭಿಸ್ತಸ್ಯಾಃ ಪ್ರೇಷ್ಯಾ ಭವಿಷ್ಯಸಿ ॥ ಪುತ್ರಶ್ಚ ತವ ರಾಮಸ್ಯ ಪ್ರೇಷ್ಯಭಾವಂ ಗಮಿಷ್ಯತಿ ॥ ೧೧ ॥ ಹೃಷ್ಟಾಃ ಖಲು ಭವಿಷ್ಯಂತಿ

ರಾಜರ ನಡತೆಯಲ್ಲಿ, ಪ್ರಾಜ್ಞಸ್ಯ - ಪಂಡಿತನಾದ, ಪ್ರಾಪ್ತಕಾರಿಣಃ - ಕಾಲೋಚಿತಕಾರ್ಯಗಳನ್ನು ನಡಿಸುತ್ತಿರುವ, ರಾಮಸ್ಯ - ಶ್ರೀರಾಮನ, ಭಯಾತ್ - ಭಯದಿಂದ, ತವ - ನಿನ್ನ, ಆತ್ಮಜಂ - ಕುವರನ ವಿಷಯವನ್ನು, ಚಿಂತಯಂತೀ-ಆಲೋಚಿಸುತ್ತ, ಪ್ರವೇಪೇ-ನಡಿಗಿಹೋಗುತ್ತೇನೆ. ॥೮॥ ಯಸ್ಯಾಃ-ಯಾವ ಕೌಸಲ್ಯಾದೇವಿಯ, ಪುತ್ರಃ - ಮಗನು, ಪುಷ್ಯೇಣ - ಪುಷ್ಯನಕ್ಷತ್ರಯುಕ್ತವಾದ, ಶ್ವಃ - ನಾಳಿಯದಿವಸ, ದ್ವಿಜೋತ್ತಮೈಃ - ಬ್ರಾಹ್ಮಣಶ್ರೇಷ್ಠರಿಂದ, ಮಹತಾ - (ಗೋ) ಮಹಿಮೆಗೊಂಡ, ಯೌವರಾಜ್ಯೇನ - ಎರಡನೆಯ ಪ್ರಭುತ್ವದಿಂದ, ಅಭೀಷೇಕ್ಷ್ಯತೇ - ಅಭಿಷೇಕವಮಾಡಿಸುತ್ತಾನೋ, ಸಾ ಕೌಸಲ್ಯಾ - ಆ ಕೌಸಲ್ಯಾದೇವಿಯು, ಸುಭಗಾಖಲು - ಪುಣ್ಯವಂತಳಷ್ಟೆ. ॥ ೯ ॥ ಸುಮಹತೀಂ - ಅಪಾರವಾದ, ಪ್ರೀತಿಂ - ಸಂತೋಷವನ್ನು, ಪ್ರಾಪ್ತಾಂ - ಹೊಂದಿರುವ, ಪ್ರತೀತಾಂ - ಪ್ರಸಿದ್ಧಳಾದ, ಹತದ್ವಿಷಂ, ಹತ - ಹೊಡಿಯಲ್ಪಟ್ಟ, ದ್ವಿಷಂ - ದ್ವೇಷಿಗಳುಳ್ಳ, ತಾಂಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು, ತ್ವಂ - ನೀನು, ಕೃತಾಂಜಲಿಃ - ಬದ್ಧಾಂಜಲಿಪುಟವುಳ್ಳವಳಾಗಿ, ದಾಸೀವತ್ - ಚಾಕರಳಂತೆ, ಉಪಸ್ಥಾಸ್ಯಸಿ - ಇರುತ್ತೀಯೆ. ॥ ೧೦ ॥ ಏವಂಚೇತ್ - ಹೀಗಾದರೆ, ತ್ವಂ - ನೀನು, ಅಸ್ಮಾಭಿಸ್ಸಹ - ನಮ್ಮಿಂದೊಡಗೂಡಿ, ತಸ್ಯಾಃ - ಆ ಕೌಸಲ್ಯಾದೇವಿಗೆ, ಪ್ರೇಷ್ಯಾ - ಪರಿಚಾರಕಳು, ಭವಿಷ್ಯಸಿ - ಆಗುವೆ, ತವ - ನಿನ್ನ, ಪುತ್ರಶ್ಚ - ಮಗನೂ, ರಾಮಸ್ಯ - ಶ್ರೀರಾಮನಿಗೆ, ಪ್ರೇಷ್ಯಭಾವಂ - ಪರಿಚಾರಕತ್ವವನ್ನು, ಗಮಿಷ್ಯತಿ - ಹೊಂದುವನು. ॥ ೧೧ ॥ ರಾಮಸ್ಯ - ಶ್ರೀರಾಮನ, ಪರಮಾ -

---

ಜನಿಸಿರುವನು ; ಭರತನು ಪುಷ್ಯ ನಕ್ಷತ್ರದಲ್ಲಿ ಹುಟ್ಟಿರುವನು. ಆದುದರಿಂದ ಶ್ರೀರಾಮನಿಗೆ ರಾಜ್ಯಾಭಿಷೇಕವು ತಪ್ಪಿದರೆ ಭರತನಿಗೆ ಪಟ್ಟಾಭಿಷೇಕ ಮಾಡುವುದು ಯುಕ್ತವಾಗಿರುವುದು. ಹೀಗೆ ಆ ಲಕ್ಷ್ಮಣ ಶತ್ರುಘ್ನರಿಗೆ ರಾಜ್ಯಪ್ರಾಪ್ತಿ ಕ್ರಮವು ಸ್ವಲ್ಪ ದೂರದಲ್ಲಿರುವುದು. ಕ್ಷತ್ರಿಯ ಧರ್ಮದಲ್ಲಿ ಚತುರನೂ, ವಿವೇಕಿಯೂ, ಆಯಾ ಕಾಲಗಳಲ್ಲಿ ಮಾಡಬೇಕಾದುದನ್ನು ನಡೆಯಿಸುತ್ತಿರುವನೂ ಆದ ಶ್ರೀರಾಮನ ಭೀತಿಯಿಂದ ನಿನ್ನ ಕುವರನ ವಿಷಯವಾಗಿ ಚಿಂತಿಸುತ್ತ ನಡುಗುತ್ತಲಿರುವೆನು. ॥ ೮ ॥ ಯಾರ ಮಗನಾದ ಶ್ರೀರಾಮನು ನಾಳೆಯ ಪುಷ್ಯ ನಕ್ಷತ್ರದಲ್ಲಿ ವಿಪ್ರವರೇಣ್ಯರಿಂದ ಯೌವರಾಜ್ಯಾಭಿಷಿಕ್ತನಾಗುವನೋ, ಅಂತಹ ಕೌಸಲ್ಯಾದೇವಿಯು ಮಹಾ ಪುಣ್ಯವಂತಳು ; ಆಕೆಯು ತನ್ನ ಕುಮಾರನಾದ ಶ್ರೀರಾಮನ ಯೌವರಾಜ್ಯ ಪಟ್ಟಾಭಿಷೇಕದಿಂದ ಮಹದೈಶ್ವರ್ಯವನ್ನು ಹೊಂದಿ, ಪ್ರಸಿದ್ಧಳೂ, ತಿರಸ್ಕೃತರಾದ ಸವತಿಯರುಳ್ಳವಳೂ ಆದ ಆಕೆಗೆ ನೀನು ಬದ್ಧಾಂಜಲಿಪುಟವುಳ್ಳವಳಾಗಿ ದಾಸೀಯಂತೆ ಸೇವಿಸುವವಳಾಗು. ಕೈಕೇಯಿ ! ಹೀಗೆ ಶ್ರೀರಾಮನಿಗೆ ಪಟ್ಟಾಭಿಷೇಕವಾದರೆ ಚಾಕರರಾದ ನಮ್ಮೊಡಗೂಡಿದ ನೀನು ಆತನ ತಾಯಿಯಾದ ಕೌಸಲ್ಯೆಗೆ ಚಾಕರ

ರಾಮಸ್ಯ ಪರಮಾಃ ಸ್ತ್ರಿಯಃ ॥ ಅಪಹೃಷ್ಟಾ ಭವಿಷ್ಯಂತಿ ಸ್ನುಷಾಸ್ತೇೞ ಭರತ
ಕ್ಷಯೇ ॥ ೧೨ ॥ ತಾಂದೃಷ್ಟ್ವಾ ಪರಮಪ್ರೀತಾಂ ಬ್ರುವಂತೀಂ ಮಂಥರಾಂ
ತತಃ ॥ ರಾಮಸ್ಯೈವ ಗುಣಾನ್ ದೇವೀ ಕೈಕೇಯಿಾ ಪ್ರಶಶಂಸಹ ॥ ೧೩ ॥
ಧರ್ಮಜ್ಞೋ ಗುರುಭಿರ್ದಾಂತಃ ಕೃತಜ್ಞಸ್ಸತ್ಯವಾಕ್ಶುಚಿಃ ॥ ರಾಮೋ ರಾಜ್ಞ
ಸ್ಸುತೋ ಜ್ಯೇಷ್ಠೋ ಯೌವರಾಜ್ಯ ಮತೋಽರ್ಹತಿ ॥ ೧೪ ॥ ಭ್ರಾತೄನ್
ಭೃತ್ಯಾಂಶ್ಚ ದೀರ್ಘಾಯುಃ ಪಿತೃವತ್ಪಾಲಯಿಷ್ಯತಿ ॥ ಸಂತಪ್ಸ್ಯಸೇ ಕಥಂ
ಕುಬ್ಜೇ ಶ್ರುತ್ವಾ ರಾಮಾಭಿಷೇಚನಂ ॥ ೧೫ ॥ ಭರತಶ್ಚಾಪಿ ರಾಮಸ್ಯ ಧ್ರುವಂ

ಉತ್ಕೃಷ್ಟರಾದ, ಸ್ತ್ರಿಯಃ - ಸ್ತ್ರೀಯರಾದ ಸೀತಾದೇವಿಯೂ (ಗೋ) ಅವರ ಸಖಿಗಳೂ, (ಮ) ಸೀತಾ ದೇವಿಯ ಪರಿಚಾರಕಸ್ತ್ರೀಯರು, ಹೃಷ್ಟಾಃ - ಹರ್ಷಯುಕ್ತರು, ಭವಿಷ್ಯಂತಿಖಲು - ಆಗುವರಷ್ಟೆ, ಭರತಕ್ಷಯೇ - ಭರತನಿಗೆ ಹಾನಿಯಾಗುತ್ತಿರಲು, ತೇಸ್ನುಷಾಃ - (ಗೋ) ನಿನ್ನ ಸೊಸೆಯೂ, ಆಕೆಯ ಸಖಿಗಳೂ, ಅವಳ ಪರಿಚಾರಕಸ್ತ್ರೀಯರೂ, ಅಪ್ರಹೃಷ್ಟಾಃ - ಸಂತೋಷಶೂನ್ಯರು, ಭವಿಷ್ಯಂತಿ - ಆಗುತ್ತಾರೆ. ॥ ೧೨ ॥ ತತಃ - ಬಳಿಕ, ಅಪ್ರೀತಾಂ - ಸಂತೋಷಹೀನಳಾಗಿ, ಬ್ರುವಂತೀಂ - ಮಾತನಾಡುತ್ತಿರುವ, ತಾಂಮಂಥರಾಂ - ಆ ಮಂಥರೆಯನ್ನು, ದೃಷ್ಟ್ವಾ - ಕಂಡು, ಕೈಕೇಯಿಾ - ಕೈಕೇಯಿಾದೇವಿಯು, ರಾಮಸ್ಯ - ಶ್ರೀರಾಮನ, ಗುಣಾನೇವ - ಗುಣಗಳನ್ನು, ಪರಂ - ಅತ್ಯಂತವಾಗಿ, ಪ್ರಶಶಂಸ - ಶ್ಲಾಘಿಸಿದಳು. ॥ ೧೩ ॥ ರಾಮಃ - ಶ್ರೀರಾಮನು, ಧರ್ಮಜ್ಞಃ - ಧರ್ಮಜ್ಞನು, ಗುರುಭಿಃ - ಗುರುಗಳಿಂದ, ದಾಂತಃ - ಶಿಕ್ಷಿತನು, ಕೃತಜ್ಞಃ - ಉಪಕಾರವನ್ನು ಸ್ಮರಿಸುವನು, ಸತ್ಯವಾಕ್ - ಸತ್ಯವಾದ ವಚನವುಳ್ಳವನು, ಶುಚಿಃ - ತ್ರಿಕರಣಶುದ್ಧಿಯುಳ್ಳವನು, ರಾಜ್ಞಃ - ದಶರಥರಾಯನಿಗೆ, ಜ್ಯೇಷ್ಠಸ್ಸುತಃ - ಹಿರಿಯಪುತ್ರನು, ಅತಃ - ಆ ಕಾರಣ, ಯೌವರಾಜ್ಯಂಯುವ - ದ್ವಿತೀಯವಾದ ಪ್ರಭುತ್ವವನ್ನು ಕುರಿತು, ಅರ್ಹತಿ - ಅರ್ಹನಾಗುತ್ತಾನೆ. ॥ ೧೪ ॥ ದೀರ್ಘಾಯುಃ - ದೀರ್ಘಾಯುಷ್ಮಂತನಾದ ರಾಮನು, ಭ್ರಾತೄನ್ - ತಮ್ಮಂದಿರನ್ನೂ, ಭೃತ್ಯಾಂಶ್ಚ - ಸೇವಕರನ್ನೂ, ಪಿತೃವತ್ - ತಂದೆಯಂತೆ, ಪಾಲಯಿಷ್ಯತಿ - ರಕ್ಷಿಸುವನು, ಹೇ ಕುಬ್ಜೆ - ಎಲೌ ಮಂಥರೆಯೆ, ರಾಮಾಭಿಷೇಚನಂ - ಶ್ರೀರಾಮನ ಪಟ್ಟಾಭಿಷೇಕವನ್ನು, ಶ್ರುತ್ವಾ - ಕೇಳಿ, ಕಥಂಸಂತಪ್ಸ್ಯಸೇ - ಹೇಗೆ ಪರಿತಪಿಸುವೆ. ॥ ೧೫ ॥ ಪುರು

ಳಾಗು. ನಿನ್ನ ಮಗನಾದ ಭರತನು ರಾಮ ಕಿಂಕರನಾಗಿರಲಿ; ಶ್ರೀರಾಮನ ಸತಿಯಾದ ಸೀತಾದೇವಿಯು ಸಖಿಯರೊಡಗೂಡಿ ಸಂತಸವನ್ನು ಹೊಂದಲಿ; ಭರತನ ಅಂತಃಪುರವಾಸಿನಿಯಾದ ನಿನ್ನ ಸೊಸೆಯೂ, ಅವಳ ಸಖಿಯರೂ ಸಂತೋಷ ಶೂನ್ಯರಾಗಲಿ;" ಎಂದು ಹೇಳಿದಳು. ॥ ೧೨ ॥ ಈ ರೀತಿ ಮಹಾ ದುಃಖಿತಳಾಗಿ ನುಡಿಯುತ್ತಿರುವ ಆ ಮಂಥರೆಯನ್ನು ಕುರಿತು, ಕೈಕೇಯಿಾ ದೇವಿಯು ಶ್ರೀರಾಮ ಮೂರ್ತಿಯ ಗುಣಗಳನ್ನೇ ಈ ರೀತಿ ಹೊಗಳಿದಳು. "ಎಲೌ ಮಂಥರೆ! ಶ್ರೀರಾಮನು, ವಸಿಷ್ಠ, ವಾಮದೇವರೇ ಮೊದಲಾದ ಗುರುಗಳಿಂದ ಹಿತೋಪದೇಶವನ್ನು ಹೊಂದಿ ಶಿಕ್ಷಿಸಲ್ಪಟ್ಟು ಸಕಲ ಧರ್ಮರಹಸ್ಯವನ್ನೂ ತಿಳಿದಿರುವನು; ಮಾಡಿದ ಉಪಕಾರವನ್ನು ಮರೆಯದವನು; ಸತ್ಯವನ್ನೇ ನುಡಿಯುವವನು; ಪರಿಶುದ್ಧನು; ಈತನು

ವರ್ಷ ಶತಾತ್ಪರಂ ॥ ಪಿತೃ ಪೈತಾಮಹಂ ರಾಜ್ಯಮವಾಪ್ತಾ ಪುರುಷರ್ಷಭಃ ॥ ೧೬ ॥ ಸಾತ್ವಮಭ್ಯುದಯೇ ಪ್ರಾಪ್ತೇ ವರ್ತಮಾನೇಚ ಮಂಥರೇ ॥ ಭವಿಷ್ಯತಿ ಚ ಕಲ್ಯಾಣೇ ಕಿಮರ್ಥಂ ಪರಿತಪ್ಯಸೇ ॥ ೧೭ ॥ ಯಥಾ ಮೇ ಭರತೋ ಮಾನ್ಯ ಸ್ತಥಾ ಭೂಯೋಪಿ ರಾಘವಃ ॥ ಕೌಸಲ್ಯಾತೋತಿರಿಕ್ತಂಚ ಸೋನುಶುಶ್ರೂಷತೇ ಹಿ ಮಾಂ ॥ ೧೮ ॥ ರಾಜ್ಯಂ ಯದಿಹಿ ರಾಮಸ್ಯ ಭರತಸ್ಯಾಪಿ ತತ್ತಥಾ ॥ ಮನ್ಯತೇಹಿ ಯಥಾತ್ಮಾನಂ ತಥಾ ಭ್ರಾತೄಂಸ್ತು ರಾಘವಃ ॥೧೯॥

ಷರ್ಭಃ - ಪುರುಷಶ್ರೇಷ್ಠನಾದ, ಭರತಸ್ಯಾಪಿ - ಭರತನೂ, ರಾಮಸ್ಯ - ಶ್ರೀರಾಮನ, ವರ್ಷಶತಾತ್ಪರಂ - ನೂರುವರುಷಗಳ ಕಳೆದಮೇಲೆ, ಪಿತೃಪೈತಾಮಹಂ - ಪಿತೃಪಿತಾಮಹಾರ್ಜಿತವಾದ, ರಾಜ್ಯಂ - ರಾಜ್ಯವನ್ನು, ಅವಾಪ್ತಾ - ಹೊಂದುವನು, ಧ್ರುವಂ - ನಿಶ್ಚಯವು. ॥ ೧೬ ॥ ಹೇ ಮಂಥರೇ - ಎಲೌ ಮಂಥರೆಯೆ, ಅಭ್ಯುದಯೇ - ಅಭಿವೃದ್ಧಿಕಾಲವು, ಪ್ರಾಪ್ತೇ - ಪ್ರಾಪ್ತವಾಗಿ, ವರ್ತಮಾನೇ - ಬಂದಿರಲು, ಕಲ್ಯಾಣೇ - ಭರತಪಟ್ಟಾಭಿಷೇಕರೂಪವಾದ ಶುಭವು, ಭವಿಷ್ಯತಿಚ - ಮುಂದೆ ಆಗುತ್ತಿರಲು, ಸಾತ್ವಂ - ಅಂತಹ ನೀನು, ಕಿಮರ್ಥಂ - ಏತಕ್ಕೋಸುಗ, ಪರಿತಪ್ಯಸೇ - ಸಂಕಟಬೀಳುತ್ತಿರುವೆ. ॥ ೧೭ ॥ ಮೇ - ನನಗೆ, ಭರತಃ - ಭರತನು, ಯಥಾ- ಹೇಗೆ, ಮಾನ್ಯಃ - ಪೂಜ್ಯನೋ, ತಥಾ - ಹಾಗೆಯೆ, ರಾಘವಃ - ಶ್ರೀರಾಮನು, ಭೂಯೋಪಿ - ಮತ್ತೂ, ಮಾನ್ಯಃ - ಪೂಜ್ಯನು, ಸಃ - ಆ ಶ್ರೀರಾಮನು, ಕೌಸಲ್ಯಾತಃ - ಕೌಸಲ್ಯಾದೇವಿಗಿಂತಲೂ, ಮಾಂ- ನನ್ನನ್ನು, ಅತಿರಿಕ್ತಂ- ಹೆಚ್ಚಾಗಿ, ಅನುಶುಶ್ರೂಷತೇ - ಅನುಸರಿಸಿ ಸೇವೆಮಾಡುತ್ತಾನೆ. ॥ ೧೮ ॥ ರಾಮಸ್ಯ - ಶ್ರೀರಾಮನಿಗೆ, ರಾಜ್ಯಂ ಯದಿ - ರಾಜ್ಯಭಾರವಾದರೆ, ತದಾ - ಆಗ, ತತ್ - ಆ ರಾಜ್ಯವು, ಭರತಸ್ಯಾಪಿ - ಭರತನದೇ ಸರಿ, ರಾಘವಃ - ಶ್ರೀರಾಮನು, ಆತ್ಮಾನಂ - ತನ್ನನ್ನು, ಯಥಾಮನ್ಯತೇ - ಹೇಗೆ ತಿಳಿದಿರುವನೋ, ತಥಾ - ಹಾಗೆಯೆ, ಭ್ರಾತೄಂಸ್ತು - ತಮ್ಮಂದಿರನ್ನೂ, ಮನ್ಯತೇಹಿ - ತಿಳಿದುಕೊಂಡಿರುವನಷ್ಟೆ. ॥ ೧೯ ॥ ಕೈಕೇಯ್ಯಾಃ - ಕೈಕೇಯಿದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ,

ದಶರಥರಾಜನ ಜ್ಯೇಷ್ಠಕುವರನು; ಆದುದರಿಂದ ಪಟ್ಟಾಭಿಷೇಕಕ್ಕೆ ಈತನೇ ಅರ್ಹನಾಗಿರುವನು. ಇಂತಹ ಶ್ರೀರಾಮನಿಗೆ ರಾಜ್ಯಾಭಿಷೇಕವಾಗುವುದೆಂಬ ವಾರ್ತೆಯನ್ನು ಕೇಳಿ ನೀನೇಕೆ ಚಿಂತಿಸುವೆ ? ದೀರ್ಘಾಯುಷ್ಮಂತನಾದ ಶ್ರೀ ರಾಮನು ತಮ್ಮಂದಿರನ್ನೆಲ್ಲ ತಂದೆಯಂತೆ ಸಂರಕ್ಷಿಸುವಾತನು. ಇಂತಹ ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದೆಂದರೆ ಚಿಂತಿಸುವಿಯೇಕೆ ? ರಾಮನು ರಾಜ್ಯವನ್ನಾಳಿದಬಳಿಕ ಪರಂಪರಾಗತವಾದ ರಾಜ್ಯವನ್ನು ಭರತನೇ ಹೊಂದುವನಲ್ಲವೆ ? ಮಂಥರೆ ! ಶ್ರೀರಾಮಪಟ್ಟಾಭಿಷೇಕರೂಪವಾದ ಅಭ್ಯುದಯವು ಈಗ ಒದಗಿರಲು ಸುಮ್ಮನೆ ಏಕೆ ಚಿಂತಿಸುವೆ ? ಭರತನಿಗೆ ಮುಂದೆ ರಾಜ್ಯಾಭಿಷೇಕವಾಗುವುದು; ನನಗೆ ಭರತನಮೇಲೆ ಎಷ್ಟು ವಾತ್ಸಲ್ಯವಿರುವುದೋ ಅದಕ್ಕಿಂತಲೂ ಅತಿಶಯವಾದ ವಾತ್ಸಲ್ಯವು ಶ್ರೀರಾಮಚಂದ್ರನಲ್ಲಿರುವುದು. ಆತನು ತನ್ನ ಜನನಿಯಾದ ಕೌಸಲ್ಯೆಗಿಂತಲೂ ನನ್ನನ್ನು ಹೆಚ್ಚೆಂದು ಭಾವಿಸಿ ಸೇವೆ ಸತ್ಕಾರಗಳನ್ನು ಮಾಡುತ್ತಿರುವನು; ಶ್ರೀರಾಮನಿಗೆ ರಾಜ್ಯಾಭಿಷೇಕವಾದರೆ ಅದು ಭರತನದಾಗಿಯೇ ಇರುವುದು; ಆತನು ತನ್ನ ರಾಜ್ಯಭಾರದಲ್ಲಿ ತಾನು ಸುಖಿಸುವಂತೆ

ಕೈಕೇಯಿಯಾ ವಚನಂ ಶ್ರುತ್ವಾ ಮಂಥರಾ ಭೃಶದುಃಖಿತಾ || ದೀರ್ಘಮುಷ್ಣಂ ವಿನಿಶ್ವಸ್ಯ ಕೈಕೇಯೀಮಿದಮಬ್ರವೀತ್ || ೨೦ || ಅನರ್ಥ ದರ್ಶಿನೀ ಮೌರ್ಖ್ಯಾ ನ್ನಾತ್ಮಾನ ಮವಬುಧ್ಯಸೇ || ಶೋಕವ್ಯಸನ ವಿಸ್ತೀರ್ಣೇ ಮಜ್ಜಂತೀ ದುಃಖಸಾಗರೇ || ೨೧ || ಭವಿತಾ ರಾಘವೋ ರಾಜಾ ರಾಘವಸ್ಯಾನುಯ ಸ್ಸುತಃ || ರಾಜವಂಶಾತ್ತು ಕೈಕೇಯಿ ಭರತಃ ಪರಿಹಾಸ್ಯತೇ || ೨೨ || ನಹಿ ರಾಜ್ಞ ಸ್ಸುತಾಸ್ಸರ್ವೇ ರಾಜ್ಯೇ ತಿಷ್ಠಂತಿ ಭಾಮಿನಿ || ಸ್ಥಾಪ್ಯಮಾನೇಷು ಸರ್ವೇಷು ಸುಮಹಾನನಯೋ ಭವೇತ್ || ೨೩ || ತಸ್ಮಾ ಜ್ಜ್ಯೇಷ್ಠೇಹಿ

ಮಂಥರಾ - ಮಂಥರೆಯು, ಭೃಶದುಃಖಿತಾ - ಬಹಳ ದುಃಖಿತಳಾಗಿ, ದೀರ್ಘಂ - ಬಹುವೇಗವಾಗಿ, ಉಷ್ಣಂಚ - ಬಿಸಿಯಾದಂತೆ, ವಿನಿಶ್ವಸ್ಯ - ನಿಟ್ಟುಸುರುಬಿಟ್ಟು, ಕೈಕೇಯೀಂ - ಕೈಕೇಯೀದೇವಿಯನ್ನು ಕುರಿತು, ಇದಂ - ಈಮುಂದೆ ಹೇಳುವಮಾತನ್ನು, ಅಬ್ರವೀತ್ - ನುಡಿದಳು ||೨೦|| ಅನರ್ಥದರ್ಶನೀ- (ಮ + ತಿ) ಪ್ರಯೋಜನದಲ್ಲಿ ದೃಷ್ಟಿಯಿಲ್ಲದಿರುವ ನೀನು, (ಗೋ) ಪ್ರಯೋಜನವಲ್ಲದಿರುವ ವಸ್ತು ವಿನಲ್ಲಿ ಪ್ರಯೋಜನಜ್ಞಾನವುಳ್ಳ ನೀನು, ಮೌರ್ಖ್ಯಾತ್ - ತಿಳಿವಳಿಕೆಯುಳ್ಳ ಕಾರ್ಯವನ್ನು ಮಾಡದೆ ಇರುವಿಕೆಯಿಂದ, ಶೋಕವ್ಯಸನವಿಸ್ತೀರ್ಣೇ, ಶೋಕ - ಸಪತ್ನೀಪುತ್ರನಿಗೆ ಪಟ್ಟಾಭಿಷೇಕವಾಗುತ್ತ ದೆಂಬ ದುಃಖದಿಂದಲೂ, ವ್ಯಸನ - ತನಗೆ ಸುಖತಪ್ಪಿಹೋಗುತ್ತದೆಂಬ ವ್ಯಸನದಿಂದಲೂ, ವಿಸ್ತೀರ್ಣೇ- ವಿಸ್ತಾರವಾದ, ದುಃಖಸಾಗರೇ - ದುಃಖವೆಂಬಸಮುದ್ರದಲ್ಲಿ, ಮಜ್ಜಂತೀ - ಮುಳುಗುತ್ತ, ಆತ್ಮಾನಂ - ನಿನ್ನನ್ನು, ನಾವಬುಧ್ಯಸೇ - ತಿಳಿಯದೆಹೋದೆ || ೨೧ || ರಾಘವಃ - ಶ್ರೀರಾಮನು, ರಾಜಾ - ಅರಸು, ಭವಿತಾ - ಆಗುವನು, ರಾಘವಸ್ಯಾನು - ಶ್ರೀರಾಮನ ಅನಂತರದಲ್ಲಿ, ತಸ್ಯ - ಆ ಶ್ರೀರಾಮನಿಗೆ, ಯಃ - ಯಾವನು, ಸುತಃ - ಕುವರನೋ, ಸಃ - ಅವನು, ರಾಜಾಭವಿತಾ-ದೊರೆಯಾಗುವನು, ಹೇಕೈಕೇಯಿ - ಎಲೌ ಕೈಕೇಯೀದೇವಿಯೆ, ಭರತಃ - ಭರತನು, ರಾಜವಂಶಾತ್ - ರಾಜರಪರಂಪರೆ ಯಿಂದ, ಪರಿಹಾಸ್ಯತೇ - ತೊರೆಯಲ್ಪಡುವನು || ೨೨ || ಹೇಭಾಮಿನಿ - ಎಲೌ ರಾಜಸ್ತ್ರೀಯೆ, ರಾಜ್ಞಃ - ಅರಸಿನ, ಸರ್ವೇಸುತಾಃ - ಎಲ್ಲಕುವರರೂ, ರಾಜ್ಯೇ - ರಾಜ್ಯದಲ್ಲಿ, ನತಿಷ್ಠಂತಿಹಿ - ಇರುವದಿಲ್ಲವಷ್ಟೆ, ಸರ್ವೇಷು - ಎಲ್ಲಮಕ್ಕಳೂ, ಸ್ಥಾಪ್ಯಮಾನೇಷು - ರಾಜ್ಯದಲ್ಲಿ ಇರಿಸಲ್ಪಟ್ಟವ ರಾಗಲು, ಸುಮಹಾ್ - ಬಹಳವಾದ, ಅನಯಃ - ಅನರ್ಥವು, ಭವೇತ್ - ಆದೀತು || ೨೩ ||

ತನ್ನನುಜರನ್ನು ಸುಖಗೊಳಿಸುವನು." || ೧೯ || ಇಂತು ನುಡಿದ ಕೈಕೇಯಿಯ ನುಡಿಗಳನ್ನು ಕೇಳಿದ ಮಂಥರೆಯು ಬಹಳವಾದ ದುಃಖವನ್ನು ಹೊಂದಿ ನಿಟ್ಟುಸಿರುಗಳನ್ನು ಬಿಡುತ್ತ ಆಕೆಯನ್ನು ಕುರಿತು ಹೀಗೆ ಹೇಳಿದಳು. "ಎಲೌ ಕೈಕೇಯೀದೇವಿಯೆ! ನೀನು ಮಹಾಮೂರ್ಖತನದಿಂದ ಮುಂದೆ ಬರುವ ಅಪಾಯವನ್ನು ಚಿಂತಿಸದೆ, ಮುಂದಾಗುವ ಅನೇಕ ಉಪದ್ರವಗಳಿಂದ ಶೋಕಸಾಗರದಲ್ಲಿ ಮುಳುಗುವ ನಿನ್ನನ್ನು ನೀನು ತಿಳಿಯದಿರುವೆ. ಶ್ರೀರಾಮನಿಗೆ ರಾಜ್ಯಾಭಿಷೇಕವಾದರೆ ಆತನ ಮಗನಾದವನಿಗೆ ರಾಜ್ಯಪದವಿಯುಂಟಾಗುವುದೇ ಹೊರ್ತು ಬೇರೊಬ್ಬನಿಗಾಗಲಾರದು. ರಾಜವಂಶದ ಕ್ರಮವು ಹೀಗಿರುವುದರಿಂದ ನಿನ್ನ ಕುವರನಾದ ಭರತನು ರಾಜ್ಯದಿಂದ ಹೊರಡಿಸಲ್ಪಡುವನು. ರಾಜನ ಮಕ್ಕಳೆಲ್ಲರೂ ರಾಜ್ಯದಲ್ಲಿ ನಿಯೋಗಿತ

ಕೈಕೇಯಿಯಾ ರಾಜ್ಯತಂತ್ರಾಣಿ ಪಾರ್ಥಿವಾಃ || ಸ್ಥಾಪಯಿಷ್ಯಂತ್ಯನವದ್ಯಾಂಗಿ ಗುಣವತ್ಸ್ವಿತರೇಷ್ವಪಿ || ೨೪ || ಅಸಾವತ್ಯಂತ ನಿರ್ಭಗ್ನ ಸ್ತವಪುತ್ರೋ ಭವಿಷ್ಯತಿ || ಅನಾಥವತ್ಸುಖೇಭ್ಯಶ್ಚ ರಾಜವಂಶಾಚ್ಚ ವತ್ಸಲೇ || ೨೫ || ಸಾಽಹಂ ತ್ವದರ್ಥೇ ಸಂಪ್ರಾಪ್ತಾ ತ್ವಂತು ಮಾಂ ನಾವಬುಧ್ಯಸೇ || ಸಪತ್ನಿ ವೃದ್ಧೌ ಯಾ ಮೇ ತ್ವಂ ಪ್ರದೇಯಂ ದಾತುಮಿಚ್ಛಸಿ || ೨೬ || ಧ್ರುವಂತು ಭರತಂ ರಾಮಃ ಪ್ರಾಪ್ಯ ರಾಜ್ಯ ಮಕಂಟಕಂ || ದೇಶಾಂತರಂ ವಾ ನಯಿತಾ ಲೋಕಾಂತರ ಮಥಾಪಿವಾ || ೨೭ || ಬಾಲ ಏವಹಿ ಮಾತುಲ್ಯಂ ಭರತೋ ನಾಯಿತ

ಹೇಅನವದ್ಯಾಂಗೀ-(ಗೋ) ಎಲೈ ನಿರ್ದುಷ್ಟವಾದ ಅವಯವಗಳುಳ್ಳವಳೆ, ಹೇಕೈಕೇಯಿಯಾ-ಎಲೈ ಕೈಕೇಯಿಯೆ, ತಸ್ಮಾತ್ - ಆಕಾರಣ, ಇತರೇಷು - ಇತರರಾದತಂಮಂದಿರು, ಗುಣವತ್ಸ್ವಪಿ - ಗುಣವಂತರಾದರೂ, ಪಾರ್ಥಿವಾಃ - ರಾಜರು, ಜ್ಯೇಷ್ಠೇ - ಜ್ಯೇಷ್ಠನಲ್ಲಿ, ರಾಜ್ಯತಂತ್ರಾಣಿ - ರಾಜ್ಯವ್ಯಾಪಾರಗಳನ್ನು, ಸ್ಥಾಪಯಿಷ್ಯಂತಿ - ಇರಿಸುತ್ತಾರೆ ||೨೪|| ಹೇವತ್ಸಲೇ - ಎಲೈ ಪುತ್ರವಾತ್ಸಲ್ಯವುಳ್ಳವಳೆ, ಅಸೌ - ಈ, ತವಪುತ್ರಃ - ನಿನ್ನಮಗನು, ಅನಾಥವತ್ - ನಾಥರಹಿತನಂತೆ, ಸುಖೇಭ್ಯಶ್ಚ - ಸುಖದಿಂದಲೂ, ರಾಜವಂಶಾಚ್ಚ - ರಾಜರಪರಂಪರೆಯಿಂದಲೂ, ಅತ್ಯಂತನಿರ್ಭಗ್ನಃ - ಬಹಳವಾಗಿ ನಿಬಿಡಿಸಲ್ಪಟ್ಟವನು, ಭವಿಷ್ಯತಿ - ಆಗುವನು || ೨೫ || ಸಾಹಂ - ಇದನ್ನೆಲ್ಲತಿಳಿದ ತ್ವದರ್ಥೇ - ನಿನ್ನನಿಮಿತ್ತವಾಗಿ, ಸಂಪ್ರಾಪ್ತಾ - ಬಂದೆನು, ಯಾತ್ವಂ - ಯಾವನೀನು, ಸಪತ್ನಿವೃದ್ಧೌ - ಸವತಿಯಾದ ಕೌಸಲ್ಯಾದೇವಿಗೆ ಅಭಿವೃದ್ಧಿಯಾಗುತ್ತಿರಲು, ಮೇ - ನನಗೆ, ಪ್ರದೇಯಂ - ಬಹುಮತಿಯಾಗಿ ಕೊಡತಕ್ಕದನ್ನು, ದಾತುಂ - ಕೊಡಲು, ಇಚ್ಛಸಿ - ಇಚ್ಛೆಸುತ್ತೀಯೊ, ಸಾತ್ವಂತು - ಅಂತಹ ನೀನು, ಮಾಂ - ನನ್ನನ್ನು, ನಾವಬುಧ್ಯಸೇ - ತಿಳಿಯದೆಹೋದೆ || ೨೬ || ರಾಮಃ - ಶ್ರೀರಾಮನು, ರಾಜ್ಯ - ರಾಜ್ಯವನ್ನು, ಅಕಂಟಕಂ - ನಿಷ್ಕಂಟಕವನ್ನಾಗಿ, ಪ್ರಾಪ್ಯ - ಹೊಂದಿ, ಭರತಂತು - ಭರತನನ್ನು, ದೇಶಾಂತರಂವಾ - ತನ್ನದೇಶಬಿಟ್ಟು ಪರಸ್ಥಲವನ್ನುಕುರಿತಾಗಲಿ, ಅಥವಾ-ಹಾಗಲ್ಲದಿದ್ದರೆ, ಲೋಕಾಂತರಮಪಿ - ಪರಲೋಕವನ್ನಾದರೂ, ನಯಿತಾ - ಹೊಂದಿಸುವವನು, ಧ್ರುವಂ - ನಿಶ್ಚಯವು || ೨೭ || ಬಾಲಃ - ಹುಡುಗನಾದ, ಭರತಂ - ಭರತನು, ತ್ವಯಾ - ನಿನ್ನಿಂದ,

---

ರಾಗುವುದಿಲ್ಲ. ಜ್ಯೇಷ್ಠಪುತ್ರನಿಗೆ ಮಾತ್ರ ರಾಜ್ಯವು ದೊರೆವುದು. ಎಲೌ ಪುತ್ರವಾತ್ಸಲ್ಯಯುಕ್ತಳಾದ ಕೈಕೇಯಿಯೆ! ನಿನ್ನ ಕುವರನಾದ ಭರತನು ಅನಾಥನಾಗಿ ಸುಖವಿಲ್ಲದೆ ರಾಜವಂಶದಿಂದ ಜಾರಿಹೋಗುತ್ತಾನೆ. ಈ ವಿಷಯಗಳನ್ನೆಲ್ಲ ಚೆನ್ನಾಗಿ ತಿಳಿದಿರುವ ನಾನು ನಿನ್ನ ಮಗನಿಗೆ ರಾಜ್ಯಹೀನತೆಯ ಪರಿಹಾರವನ್ನು ಹೇಳಲೋಸುಗ ಇಲ್ಲಿಗೆ ಬಂದವಳಾದೆನು. ನಿನ್ನ ಸವತಿಯ ಅಭಿವೃದ್ಧಿಕಾಲದಲ್ಲಿ ನನಗೆ ಪಾರಿತೋಷಕವನ್ನು ಕೊಡಲು ಬಯಸಿದ ನೀನು ನಿನ್ನನ್ನೇ ತಿಳಿದುಕೊಳ್ಳದೆ ಹೋದೆಯಲ್ಲ! || ೨೬ || ಶ್ರೀರಾಮನು ನಿಷ್ಕಂಟಕವಾದ ರಾಜ್ಯಪದವಿಯನ್ನು ಹೊಂದಿ, ಭರತನನ್ನು ದೇಶಾಂತರವನ್ನೋ, ಲೋಕಾಂತರವನ್ನೋ ಹೊಂದಿಸದೆ ಬಿಡುವುದಿಲ್ಲ. ಇದು ನಿಶ್ಚಯವೆಂದು ತಿಳಿ. ಭರತನು ಬಾಲಕನಾಗಿರುವಾಗಲೇ ನಿನ್ನಿಂದ ಸೋದರಮಾವನ ಮನೆಯನ್ನು ಹೊಂದಿಸಲ್ಪಟ್ಟನು. ಸಮೀಪದಲ್ಲಿರುವುದರಿಂದ

ಸ್ತ್ವಯಾ ॥ ಸನ್ನಿಕರ್ಷಾಚ್ಚ ಸೌಹಾರ್ದಂ ಜಾಯತೇ ಸ್ಥಾವರೇಷ್ವಪಿ ॥ ೨೮ ॥ ಭರತಸ್ಯಾಪ್ಯನುವಶಶ್ಶತ್ರುಘ್ನೋಽಪಿ ಸಮಂಗತಃ ॥ ಲಕ್ಷ್ಮಣೋಹಿ ಯಥಾ ರಾಮಂ ತಥಾಽಸೌ ಭರತಂ ಗತಃ ॥ ೨೯ ॥ ಶ್ರೂಯತೇಹಿ ದ್ರುಮಃ ಕಶ್ಚಿ ಚ್ಛೇತ್ತವ್ಯೋ ವನಜೀವಿಭಿಃ ॥ ಸನ್ನಿಕರ್ಷಾದಿಷೀಕಾಭಿರ್ಮೋಚಿತಃ ಪರಮಾ ದ್ಭಯಾತ್ ॥ ೩೦ ॥ ಗೋಪ್ತಾಹಿ ರಾಮಂ ಸೌಮಿತ್ರಿರ್ಲಕ್ಷ್ಮಣಂ ಚಾಪಿ ರಾಘವಃ ॥ ಅಶ್ವಿನೋರಿವ ಸೌಭ್ರಾತ್ರಂ ತಯೋರ್ಲೋಕೇಷು ವಿಶ್ರುತಂ ॥೩೧॥

ಮಾತುಲ್ಯಂ - ಸೋದರಮಾವನ ಮನೆಯನ್ನು, ನಾಯಿತಃ - ಹೊಂದಿಸಲ್ಪಟ್ಟನು, ಸ್ಥಾವರೇಷ್ವಪಿ - ಗಿಡಗಳಲ್ಲಿಯೂ, ಸನ್ನಿಕರ್ಷಾತ್ - ಸಾಮಿಪ್ಯದಲ್ಲಿರುವುದರಿಂದ, ಸೌಹಾರ್ದಂ - ಸ್ನೇಹವು, ಜಾಯತೇ - ಹುಟ್ಟುತ್ತದೆ ॥ ೨೮ ॥ ಭರತಸ್ಯ - ಭರತನಿಗೆ, ಅನುವಶಃ - ವಿಧೇಯಭಾವವನ್ನು ಹೊಂದಿದ, ಶತ್ರುಘ್ನೋಽಪಿ - ಶತ್ರುಘ್ನನೂ, ಭರತೇನಸಮಂ - ಭರತನೊಡನೆ, ಗತಃ - ಹೋದನು, ಲಕ್ಷ್ಮಣಃ- ಲಕ್ಷ್ಮಣಸ್ವಾಮಿಯು, ರಾಮಂ - ಶ್ರೀರಾಮನನ್ನು, ಯಥಾ - ಹೇಗೆ, ಗತಃ - ಹೊಂದಿರುವನೊ, ತಥಾ - ಹಾಗೆಯೇ, ಅಸೌ - ಈ ಶತ್ರುಘ್ನನು, ಭರತಂ - ಭರತನನ್ನು, ಗತಃ - ಹೊಂದಿರುವನು. ॥ ೨೯ ॥ ವನಜೀವಿಭಿಃ - ವನದಲ್ಲಿ ಕಾಷ್ಠಭಾರಾದಿಗಳಿಂದ ಜೀವಿಸುವ ಜನರಿಂದ, ಛೇತ್ತವ್ಯಃ - ಕತ್ತರಿಸತಕ್ಕ, ಕಶ್ಚಿದ್ರುಮಃ - ಒಂದಾನೊಂದು ವೃಕ್ಷವು, ಇಷೀಕಾಭಿಃ - (ಗೋ + ಮು) ಮುಳ್ಳೇ ಪ್ರಚುರವಾಗುಳ್ಳಬಿದುರು, ಬೆತ್ತ ಮುಂತಾದವುಗಳ, ಸನ್ನಿಕರ್ಷಾತ್-ಸಾಮಿಪ್ಯದಿಂದ, ಪರಮಾತ್ - ಬಹಳವಾದ, ಭಯಾತ್ - ಭಯದಿಂದ, ಮೋಚತೋಹಿ - ಬಿಡಿಸಲ್ಪಟ್ಟಿತಷ್ಟೆ, ಇತಿ - ಇಂತೆಂದು, ಶ್ರೂಯತೇ - ಕೇಳಲ್ಪಡುತ್ತೆ. ॥ ೩೦ ॥ ಸೌಮಿತ್ರಿಃ - ಲಕ್ಷ್ಮಣಸ್ವಾಮಿಯು, ರಾಮಂ - ಶ್ರೀರಾಮನನ್ನು, ಗೋಪ್ತಾಹಿ - ಸಂರಕ್ಷಣೆ ಮಾಡುವನಷ್ಟೆ, ರಾಘವಃ - ಶ್ರೀರಾಮನೂ, ಲಕ್ಷ್ಮಣಂ ಚಾಪಿ - ಲಕ್ಷ್ಮಣನನ್ನೂ, ಗೋಪ್ತಾ - ಸಂರಕ್ಷಿಸುವನು, ತಯೋಃ - ಅವರಿಬ್ಬರಿಗೂ, ಅಶ್ವಿನೋರಿವ - ಅಶ್ವಿನೀ ದೇವತೆಗಳಂತೆ, ಸೌಭ್ರಾತ್ರಂ - ಒಳ್ಳೆ ಸಹೋದರ ಭಾವವು, ಲೋಕೇಷು - ಜನರಲ್ಲಿ, ವಿಶ್ರುತಂ - ಪ್ರಸಿದ್ಧವಾಗಿದೆ. ॥ ೩೧ ॥ ತಸ್ಮಾತ್ - ಆ ಕಾರಣ, ರಾಮಃ - ಶ್ರೀರಾಮನು,

---

ವೃಕ್ಷಗುಲ್ಮಾದಿಗಳಲ್ಲಿಯೂ ಸ್ನೇಹಭಾವವುಂಟಾಗಿರುವುದು. ನೀನು ಭರತನನ್ನು ಕಳುಹಿಸದಿದ್ದಿದ್ದರೆ ಒಡೆಯನಾದ ದಶರಥರಾಜನಿಗೂ ರಾಮನಲ್ಲಿರುವಂತೆಯೇ ಭರತನಲ್ಲಿಯೂ ಪ್ರೇಮವಿರುತಿದ್ದಿತು. ಅದಕ್ಕೂ ಅವಕಾಶವಿಲ್ಲದಂತೆ ಮಾಡಿದವಳೂ ನೀನೆ! ॥ ೨೮ ॥ ಲಕ್ಷ್ಮಣನು ಶ್ರೀರಾಮನನ್ನು ಹೇಗೆ ಅನುಸರಿಸಿರುವನೋ, ಹಾಗೆ ಭರತನನ್ನು ಶತ್ರುಘ್ನನು ಅನುಸರಿಸುತ್ತಿರುವನು. ಅವನಾದರೂ ಸಮೀಪದಲ್ಲಿದ್ದರೆ ಅವನ ಸ್ನೇಹದಿಂದಲಾದರೂ ರಾಮನಿಗೆ ಭರತನಲ್ಲಿ ಸ್ನೇಹವುಂಟಾಗುವುದೇನೊ? ಅವನೂ ಇಲ್ಲಿಲ್ಲವು; ದೇವೀ! ಅರಣ್ಯದಲ್ಲಿರುವ ತೃಣವೃಕ್ಷಾದಿಗಳ ಮೂಲಕ ಜೀವಿಸುತ್ತಿರುವ ಬೇಡರೇ ಮೊದಲಾದವರಿಂದ ಕತ್ತರಿಸಲ್ಪಡುವ ಗಿಡವೂ ಸಹ, ಮುಳ್ಳು, ಹುಲ್ಲು, ಬೆತ್ತದಬಳ್ಳಿ ಮುಂತಾದವುಗಳ ಸನ್ನಿಕರ್ಷದಿಂದ ಆಚ್ಛಾದಿತವಾಗಿ ಪಾಲಿತವಾಗುವುದೆಂದು ಎಲ್ಲರಿಂದಲೂ ಕೇಳಲ್ಪಡುವುದು. ॥ ೩೦ ॥ ಶ್ರೀರಾಮಲಕ್ಷ್ಮಣರಿಬ್ಬರೂ ಪರಸ್ಪರ ಪರಿಪಾಲಿಸುತ್ತ ಅಶ್ವಿನೀದೇವತೆಗಳಂತೆ ಒಳ್ಳೆಯ ಸಹೋದರಭಾವ

ತಸ್ಮಾನ್ನ ಲಕ್ಷ್ಮಣೇ ರಾಮಃ ಪಾಪಂ ಕಿಂಚಿತ್ಕರಿಷ್ಯತಿ ॥ ರಾಮಸ್ತು ಭರತೇ ಪಾಪಂ ಕುರ್ಯಾದಿತಿ ನಸಂಶಯಃ ॥ ೩೨ ॥ ತಸ್ಮಾದ್ರಾಜಗೃಹಾದೇವ ವನಂ ಗಚ್ಛತು ತೇ ಸುತಃ ॥ ಏತದ್ಧಿ ರೋಚತೇ ಮಹ್ಯಂ ಭೃಶಂ ಚಾಪಿ ಹಿತಂ ತವ ॥ ೩೩ ॥ ಏವಂ ತೇ ಜ್ಞಾತಿಪಕ್ಷಸ್ಯ ಶ್ರೇಯಶ್ಚೈವ ಭವಿಷ್ಯತಿ ॥ ಯದಿ ಚೇದ್ಭರತೋ ಧರ್ಮಾತ್ಪಿತ್ರ್ಯಂ ರಾಜ್ಯಮವಾಪ್ಸ್ಯತಿ ॥ ೩೪ ॥ ಸತೇ ಸುಖೋಚಿತೋ ಬಾಲೋ ರಾಮಸ್ಯ ಸಹಜೋ ರಿಪುಃ ॥ ಸಮೃದ್ಧಾರ್ಥಸ್ಯ ನಷ್ಟಾರ್ಥೋ ಜೀವಿಷ್ಯತಿ ಕಥಂ ವಶೇ ॥ ೩೫ ॥ ಅಭಿದ್ರುತಮಿವಾರಣ್ಯೇ ಸಿಂಹೇನ ಗಜ

ಲಕ್ಷ್ಮಣೇ - ಲಕ್ಷ್ಮಣಸ್ವಾಮಿಯ ವಿಷಯದಲ್ಲಿ, ಪಾಪಂ - ಪಾಪವನ್ನು, ಕಿಂಚಿತ್ - ಕೊಂಚ ವಾದರೂ, ನಕರಿಷ್ಯತಿ - ಮಾಡುವನಲ್ಲ, ರಾಮಃ - ಶ್ರೀರಾಮನು, ಭರತೇತು - ಭರತನ ವಿಷಯದಲ್ಲಿ, ಪಾಪಂ-ಪಾಪವನ್ನು, ಕುರ್ಯಾದಿತಿ-ಮಾಡುವನೆಂಬ ಅರ್ಥದಲ್ಲಿ, ಸಂಶಯಃ-ಸಂದೇಹವು, ನ-ಇಲ್ಲವು, ||೩೨|| ತೇ ನಿನ್ನ, ಸುತಃ - ಮಗನಾದ ಭರತನು, ತಸ್ಮಾತ್ ರಾಜಗೃಹಾದೇವ - ಆ ಕೇಕಯರಾಯನ ಮನೆಯಿಂದಲೇ, ವನಂ - ವನವನ್ನು ಕುರಿತು, ಗಚ್ಛತು - ಹೋಗಲಿ, ಏತತ್ - ಇದು, ಮಹ್ಯಂ - ನನಿಗೆ, ರೋಚತೇಹಿ - ತೋರುತ್ತದೆ, ತವಚಾಪಿ - ನಿನಗೂ, ಭೃಶಂ - ಅತ್ಯಂತವಾಗಿ, ಹಿತಂ - ಇಷ್ಟವು. || ೩೩ || ಭರತಃ - ಭರತನು, ಧರ್ಮಾತ್ - ಧರ್ಮದಿಂದ, ಪಿತ್ರ್ಯಂ - ತಂದೆಯ ಸಂಬಂಧವಾದ, ರಾಜ್ಯಂ - ರಾಜ್ಯವನ್ನು, ಅವಾಪ್ಸ್ಯತಿಯದಿ - ಹೊಂದಿದವನೇ ಆದರೆ, ಏವಂ - ಹೀಗೆ, ತೇ - ನಿನಗೂ, ಜ್ಞಾತಿಪಕ್ಷಸ್ಯಚ - ಬಂಧುವರ್ಗಕ್ಕೂ, ಶ್ರೇಯಃ - ಶ್ರೇಯಸ್ಸು, ಭವಿಷ್ಯತಿ - ಆಗುವದು. || ೩೪ || ಸುಖೋಚಿತಃ - ಸುಖಕ್ಕೆ ಯೋಗ್ಯವಾಗಿರುವ, ತೇ - ನಿನ್ನ, ಬಾಲಃ - ಮಗನಾದ, ಸಃ - ಆ ಭರತನು, ರಾಮಸ್ಯ - ಶ್ರೀರಾಮನಿಗೆ, ಸಹಜಃ - ನಿಜವಾದ, ರಿಪುಃ - ಶತ್ರುವಾಗಿರುವನು, ನಷ್ಟಾರ್ಥಃ - ನಷ್ಟಪ್ರಯೋಜನವುಳ್ಳ ಭರತನು, ಸಮೃದ್ಧಾರ್ಥಸ್ಯ - ಮಹದೈಶ್ವರ್ಯವುಳ್ಳ ಶ್ರೀರಾಮನ, ವಶೇ - ಸ್ವಾಧೀನದಲ್ಲಿ, ಕಥಂಜೀವಿಸ್ಯತಿ - ಹೇಗೆ ಬದುಕಿಯಾನು. || ೩೫ || ಅರಣ್ಯೇ - ಅರಣ್ಯದಲ್ಲಿ, ಸಿಂಹೇ - ಸಿಂಹದಿಂದ, ಅಭಿದೃತಂ - ಅನುಸರಿಸಿ ಬರಲ್ಪಟ್ಟ, ಗಜಯೂಥಪಮಿವ - ಸಲಗದಂತೆ, ರಾಮೇಣ - ಶ್ರೀರಾಮನಿಂದ, ಪ್ರಚ್ಛಾಧ್ಯಮಾನಂ - ತಿರಸ್ಕರಿಸಲ್ಪಟ್ಟ, ಭರತಂ - ಭರತನನ್ನು,

---

ದಿಂದಿರುವರೆಂದು ಎಲ್ಲರಿಗೂ ತಿಳಿದಿರುವುದರಿಂದ, ಶ್ರೀರಾಮನು ಲಕ್ಷ್ಮಣನ ವಿಷಯವಾಗಿ ಪಾಪಬುದ್ಧಿಯನ್ನು ಮಾಡುವುದಿಲ್ಲ, ಭರತನ ವಿಷಯದಲ್ಲಿ ಪಾಪಬುದ್ಧಿಯನ್ನು ಮಾಡಿಯೇ ಮಾಡುತ್ತಾನೆ, ಇದರಲ್ಲಿ ಸಂದೇಹವಿಲ್ಲ. ಆದುದರಿಂದ ನಿನ್ನ ಕುಮಾರನಾದ ಭರತನು ಈಗಲೇ ಅರಣ್ಯಕ್ಕೆ ಹೊರಡಲಿ; ನನಗೆ ಹೀಗೆ ತೋರುವುದು; ಇದು ನಿನಗೂ ಸಮ್ಮತವಾಗಿರುವುದು. ಭರತನು ಧರ್ಮದಿಂದ ಪಿತೃಸಂಬಂಧವಾದ ರಾಜ್ಯವನ್ನು ಹೊಂದಿದರೆ ನಿನಗೂ ನಿನ್ನ ಬಂಧುವರ್ಗಕ್ಕೂ ಕ್ಷೇಮವಾಗುವುದು. || ೩೪ || ಸುಖಾರ್ಹನೂ, ನಿನ್ನ ಕುಮಾರನೂ ಆದ ಭರತನು ಶ್ರೀರಾಮನಿಗೆ ಸಹಜವಾದ ಶತ್ರುವು; ಇಂತಹನು ಐಶ್ವರ್ಯಹೀನನಾಗಿ ಮಹದೈಶ್ವರ್ಯಶಾಲಿಯಾದ ಆ ಶ್ರೀರಾಮನ ಅಧೀನದಲ್ಲಿ ಹೇಗೆತಾನೇ ಇದ್ದಾನು: ಕೈಕೇಯಿ! ಅರಣ್ಯ

ಽಸ್ಸೂಧಪಂ ॥ ಪ್ರಚ್ಛಾದ್ಯಮಾನಂ ರಾಮೇಣ ಭರತಂ ತ್ರಾತು ಮರ್ಹಸಿ ॥೩೬॥
ದರ್ಪಾನ್ನಿರಾಕೃತಾ ಪೂರ್ವಂ ತ್ವಯಾ ಸೌಭಾಗ್ಯ ವತ್ತಯಾ ॥ ರಾಮಮಾತಾ
ಸಪತ್ನೀತೇ ಕಥಂ ವೈರಂ ನಯಾತಯೇತ್ ॥ ೩೭ ॥

ಯದಾಹಿ ರಾಮಃ ಪೃಥಿವೀ ಮವಾಪ್ಸ್ಯತೇ
ಪ್ರಭೂತ ರತ್ನಾಕರ ಶೈಲಪಟ್ಟಣಾಂ ॥
ತದಾ ಗಮಿಷ್ಯಸ್ಯಶುಭಂ ಪರಾಭವಂ
ಸಹೈವ ದೀನಾ ಭರತೇನ ಭಾಮಿನಿ ॥ ೩೮ ॥

ತ್ರಾತುಂ - ಸಂರಕ್ಷಿಸಲು, ಅರ್ಹಸಿ - ಯೋಗ್ಯಳಾಗು. ॥ ೩೬ ॥ ರಾಮಮಾತಾ - ಶ್ರೀರಾಮನ ತಾಯಿಯಾದ, ತೇ - ನಿನಗೆ, ಸಾಪತ್ನೀ - ಸವತಿಯಾದ ಕೌಸಲ್ಯಾದೇವಿಯು, ತ್ವಯಾ - ನಿನ್ನಿಂದ, ಸೌಭಾಗ್ಯವತ್ತಯಾ - ಸೌಂದರ್ಯಾತಿಶಯದಿಂದಲೂ ಪತಿವಾಲ್ಲಭ್ಯದಿಂದಲೂ ಹುಟ್ಟಿದ, ದರ್ಪಾತ್ - ಗರ್ವದಿಂದ, ಪೂರ್ವಂ - ಮೊದಲು, ನಿರಾಕೃತಾ - ನಿರಾಕರಿಸಲ್ಪಟ್ಟು, ವೈರಂ - ದ್ವೇಷವನ್ನು, ಕಥಂ ನಯಾತಯೇತ್ - ಹೇಗೆ ಸಾಧಿಸದೆ ಹೋಗುವಳು. ॥ ೩೭ ॥ ಯದಾಹಿ - ಯಾವಕಾಲದಲ್ಲಿಯಾದರೆ, ರಾಮಃ - ಶ್ರೀರಾಮನು, ಪ್ರಭೂತರತ್ನಾಕರಶೈಲಪತ್ತನಾಂ, ಪ್ರಭೂತ - ಪ್ರಚುರವಾದ, ರತ್ನ - ರತ್ನಗಳಿಗೆ, ಆಕರ - ಆಶ್ರಯಗಳಾದ, ಶೈಲ - ಬೆಟ್ಟಗಳೂ, ಪತ್ತನಾಂ - ಪಟ್ಟಣಗಳೂ ಉಳ್ಳ, ಪೃಥಿವೀಂ - ಭೂಮಿಯನ್ನು, ಅವಾಪ್ಸ್ಯತಿ - ಹೊಂದುವನೋ, ತದಾ ಆಗ, ಹೇ ಭಾಮಿನಿ - ಎಲೈ ಕೈಕೇಯಿಯೆ, ಭರತೇನಸಹ - ಭರತನೊಡಗೂಡಿ, ದೀನಾ - ದರಿದ್ರಳಾಗಿ, ಅಶುಭಂ - ಅಮಂಗಳವಾದ, ಪರಾಭವಮೇವ - ತಿರಸ್ಕಾರವನ್ನೇ, ಗಮಿಷ್ಯಸಿ - ಹೊಂದುವೆ. ॥ ೩೮ ॥ ಯದಾಹಿ - ಯಾವಕಾಲದಲ್ಲಾದರೆ, ರಾಮಃ - ಶ್ರೀರಾಮನು, ಪೃಥಿವೀಂ-ಭೂಮಿಯನ್ನು, ಅವಾಪ್ಸ್ಯತಿ-ಹೊಂದುವನೋ, ತದಾ-ಆಗ, ಭರತಃ - ಭರತನು, ಪ್ರಣಷ್ಟಃ - ನಾಶಗೊಂಡವನು, ಭವಿಷ್ಯತಿ - ಆಗುವನು, ಧೃವಂ - ನಿಶ್ಚಯವು, ಅತಃ - ಈ ಕಾರಣ, ಆತ್ಮಜೇ - ಮಗನಾದ ಭರತನ ವಿಷಯದಲ್ಲಿ, ರಾಜ್ಯಂ - ರಾಜ್ಯವನ್ನೂ,

---

ದಲ್ಲಿ ಮೃಗರಾಜನನ್ನನುಸರಿಸುವ ಗಜರಾಜನಂತೆ ಶ್ರೀರಾಮನಿಂದ ತಿರಸ್ಕೃತನಾಗುವ ನಿನ್ನ ಕುವರನಾದ ಭರತನನ್ನು ಸಂರಕ್ಷಿಸುವವಳಾಗು. ಹಿಂದೆ ಸೌಭಾಗ್ಯಮದದಿಂದ ತಿರಸ್ಕೃತಳಾದ ಆ ನಿನ್ನ ಸವತಿಯಾದ ಕೌಸಲ್ಯೆಯು ಮಹದೈಶ್ವರ್ಯವನ್ನು ಹೊಂದಿ ಆ ಶತ್ರುತ್ವವನ್ನು ಸಾಧಿಸದೆ ಬಿಡುವಳೆ? ಯಾವಾಗ ಶ್ರೀರಾಮನು ಸಮಸ್ತವಾದ ಪರ್ವತ, ಸಮುದ್ರ, ಪಟ್ಟಣಸಹಿತವಾದ ಭೂಮಿಯನ್ನು ಆಳುವನೋ ಆಗಲೇ ನೀನು ಭರತನೊಡಗೂಡಿ ದೈನ್ಯವನ್ನು ಹೊಂದತಕ್ಕವಳು. ನಿನ್ನ ಕುವರನಾದ ಭರತನು ನಾಶವಾಗುವನು. ಆದುದ

ಯದಾಹಿ ರಾಮಃ ಪೃಥಿವೀಮವಾಪ್ಸ್ಯತಿ
ಧ್ರುವಂಪ್ರಣಷ್ಟೋಭರತೋಭವಿಷ್ಯತಿ ॥
ಅತೋಹಿ ಸಂಚಿಂತಯ ರಾಜ್ಯಮಾತ್ಮಜೇ
ಪರಸ್ಯ ಚೈವಾದ್ಯ ವಿವಾಸಕಾರಣಂ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಸ್ಸರ್ಗಃ.

ಪರಸ್ಯ - ಶತ್ರುವಾದ ಶ್ರೀರಾಮನಿಗೆ, ಅದ್ಯೈವ - ಈಗಲೆ, ವಿವಾಸಕಾರಣಂಚ - ಈ ದೇಶದಿಂದ ಪ್ರವಾಸಕ್ಕೆ ಹೇತುವನ್ನೂ ಸಹ, ಸಚಿಂತಯ - ಚನ್ನಾಗಿ ಯೋಚಿಸು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಸ್ಸರ್ಗಃ.

ರಿಂದ ನಿನ್ನ ಮಗನಾದ ಭರತನಿಗೆ ರಾಜ್ಯವು ದೊರೆಯುವಂತೆಯೂ ಶ್ರೀರಾಮನಿಗೆ ವನವಾಸ ವುಂಟಾಗುವಂತೆಯೂ ಯೋಚಿಸುವವಳಾಗು."

ಇಂತಿದು ಕುಬ್ಜ ಮಂಥರಾಕೃತ ಕೈಕೇಯೀಚಿತ್ತವೃತ್ತಿ ಭೇದನರೀತಿ ವಿವರಣವೆಂಬ ಎಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ನವಮಸ್ಸರ್ಗಃ.

ಏವಮುಕ್ತಾತು ಕೈಕೇಯಿೀ ಕ್ರೋಧೇನ ಜ್ವಲಿತಾನನಾ ‖ ದೀರ್ಘಮುಷ್ಣಂ ವಿನಿಶ್ವಸ್ಯ ಮಂಥರಾಮಿದಮಬ್ರವೀತ್ ‖ ೧ ‖ ಅದ್ಯ ರಾಮಮಿತಃ ಕ್ಷಿಪ್ರಂ ವನಂ ಪ್ರಸ್ಥಾಪಯಾಮ್ಯಹಂ ‖ ಯೌವರಾಜ್ಯೇಚ ಭರತಂ ಕ್ಷಿಪ್ರಮೇವಾಭಿಷೇಚಯೇ ‖ ೨ ‖ ಇದಂತ್ವಿದಾನೀಂ ಸಂಪಶ್ಯ ಕೇನೋಪಾಯೇನ ಮಂಥರೇ ‖ ಭರತಃ ಪ್ರಾಪ್ನುಯಾದ್ರಾಜ್ಯಂ ನತು ರಾಮಃ ಕಥಂಚನ ‖ ೩ ‖ ಏವಮುಕ್ತಾ ತಯಾ ದೇವ್ಯಾ ಮಂಥರಾ ಪಾಪದರ್ಶಿನೀ ‖

ಏವಂ - ಹೀಗೆ, ಉಕ್ತಾ - ಹೇಳಲ್ಪಟ್ಟ, ಕೈಕೇಯಿತು-ಕೈಕೇಯಿಯು, ಕೋಪೇನ-ಕ್ರೋಧದಿಂದ, ಜ್ವಲಿತಾನನಾ - ಪ್ರಜ್ವಲಿಸುತ್ತಿರುವ ಮುಖವುಳ್ಳವಳಾಗಿ, ಉಷ್ಣಂ - ಬಿಸಿಯಾಗಿಯೂ, ದೀರ್ಘಂ - ಉದ್ದವಾಗಿಯೂ, ವಿನಿಶ್ವಸ್ಯ - ನಿಟ್ಟುಸಿರುಬಿಟ್ಟು, ಮಂಥರಾಂ- ಮಂಥರೆಯನ್ನು ಕುರಿತು, ಇದಂ ಈ ಮಾತನ್ನು, ಅಬ್ರವೀತ್ - ನುಡಿದಳು. ‖ ೧ ‖ ಅದ್ಯ - ಈಗಲೆ, ಅಹಂ - ನಾನು, ರಾಮಂ - ಶ್ರೀರಾಮನನ್ನು, ಇತಃ - ಈ ಊರಿನಿಂದ, ಕ್ಷಿಪ್ರಂ - ಜಾಗ್ರತೆಯಾಗಿ, ವನಂ - ವನವನ್ನು ಕುರಿತು, ಪ್ರಸ್ಥಾಪಯಾಮಿ - ಕಳುಹುತ್ತೇನೆ, ಭರತಂ - ಭರತನನ್ನು, ಯೌವರಾಜ್ಯೇ - ಎರಡನೆಯ ಅಧಿಕಾರದಲ್ಲಿ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ಅಭಿಷೇಚಯೇ - ಅಭಿಷೇಕಮಾಡಿಸುವೆನು. ‖ ೨ ‖ ಹೇ ಮಂಥರೇ - ಎಲೈ ಮಂಥರಾದೇವಿಯೆ, ಇದಾನೀಂ - ಈಗ, ಕೇನೋಪಾಯೇನ - ಯಾವ ಉಪಾಯದಿಂದ, ಭರತಃ-ಭರತನು, ರಾಜ್ಯಂ-ರಾಜ್ಯವನ್ನು, ಪ್ರಾಪ್ನುಯಾತ್-ಹೊಂದುವನೋ, ರಾಮಸ್ತು-ಶ್ರೀರಾಮನಾದರೆ, ಕಥಂಚನ - ಅತಿಪ್ರಯಾಸದಿಂದಲಾದರೂ, ರಾಜ್ಯಂ - ರಾಜ್ಯವನ್ನು, ನಪ್ರಾಪ್ನುಯಾತ್ - ಹೊಂದಬಾರದು, ಇದಂತು - ಈ ಕಾರಣವನ್ನು, ಇದಾನೀಂ - ಈಗಲೇ, ಸಂಪಶ್ಯ - ನೋಡು. ‖ ೩ ‖ ಏವಂ - ಈಪರಿ, ತಯಾದೇವ್ಯಾ - ಆ ಕೈಕೇಯೀದೇವಿಯಿಂದ, ಉಕ್ತಾ - ಹೇಳಲ್ಪಟ್ಟ, ಪಾಪದರ್ಶನಿ - ಪಾಪದಲ್ಲಿಯೇ ದೃಷ್ಟಿಯುಳ್ಳ, ಮಂಥರಾ - ಮಂಥರೆಯು, ರಾಮಾರ್ಥಂ-

---

ಹೀಗೆ ಕುಬ್ಜಮಂಥರೆಯಿಂದ ಹೇಳಲ್ಪಟ್ಟ ಕೈಕೇಯಿಯು ತನಗೆ ದಾಸ್ಯವು ಪ್ರಾಪ್ತವಾಗುವುದೆಂದರಿತು, ಕೋಪಾಗ್ನಿಯಿಂದ ಜಾಜ್ವಲ್ಯಮಾನವಾದ ಮುಖವುಳ್ಳವಳಾಗಿ ಬಿಸುಸುಯ್ದು, ನಿಟ್ಟುಸಿರ್ಗಳನ್ನು ಬಿಡುತ್ತ ಆ ಮಂಥರೆಯನ್ನು ಕುರಿತು, “ಎಲೌ ಮಂಥರೆಯೆ! ಶ್ರೀರಾಮನನ್ನೀಗಲೇ ಅಯೋಧ್ಯಾನಗರದಿಂದ ಹೊರಡಿಸಿ ವನವನ್ನು ಸೇರುವಂತೆ ಮಾಡುತ್ತೇನೆ. ನನ್ನ ಕುಮಾರನಾದ ಭರತನಿಗೀಗಲೇ ಯೌವರಾಜ್ಯಪಟ್ಟಾಭಿಷೇಕವನ್ನು ಮಾಡಿಸುತ್ತೇನೆ. ಆದರೆ ರಾಮನು ರಾಜ್ಯವನ್ನೆಂದಿಗೂ ಪಡೆಯದಿರುವುದಕ್ಕೂ ನನ್ನ ಕುಮಾರನಾದ ಭರತನು ಸುಲಭವಾಗಿ ರಾಜ್ಯವನ್ನು ಹೊಂದುವುದಕ್ಕೂ ಉಪಾಯವನ್ನು ಯೋಚಿಸಿ ಹೇಳುವವಳಾಗು” ಎಂದಳು. ಆಗಲಾ ಪಾಪದರ್ಶಿನಿಯಾದ ಕುಬ್ಜಮಂಥರೆಯು ಶ್ರೀರಾಮಪಟ್ಟಾಭಿ

ರಾಮಾರ್ಥಮುಪಹಿಂಸಂತೀ ಕೈಕೇಯೀಮಿದಮಬ್ರವೀತ್ ॥ ೪ ॥ ಹಂತೇ ದಾನೀಂ ಪ್ರವಕ್ಷ್ಯಾಮಿ ಕೈಕೇಯಿ ಶ್ರೂಯತಾಂ ಚ ಮೇ ॥ ಯಥಾ ತೇ ಭರತೋ ರಾಜ್ಯಂ ಪುತ್ರಃ ಪ್ರಾಪ್ಸ್ಯತಿ ಕೇವಲಂ ॥ ೫ ॥ ಕಿಂ ನಸ್ಮರಸಿ ಕೈಕೇಯಿ ಸ್ಮರಂತೀ ವಾ ನಿಗೂಹಸೇ ॥ ಯದುಚ್ಯಮಾನಮಾತ್ಮಾರ್ಥಂ ಮತ್ತ ಸ್ತ್ವಂ ಶ್ರೋತು ಮಿಚ್ಛಸಿ ॥ ೬ ॥ ಮಯೋಚ್ಯಮಾನಂ ಯದಿ ತೇ ಶ್ರೋತುಂ ಛಂದೋವಿಲಾಸಿನಿ ॥ ಶ್ರೂಯತಾಮಭಿಧಾಸ್ಯಾಮಿ ಶ್ರುತ್ವಾ ಚಾಪಿ ವಿಮೃಶ್ಯತಾಂ ॥ ೭ ॥ ಶ್ರುತ್ವೈವಂ ವಚನಂ ತಸ್ಯಾ ಮಂಥರಾಯಾಸ್ತು ಕೈಕಯೀ ॥ ಕಿಂಚಿದುತ್ಥಾಯ ಶಯನಾ ತ್ಸ್ವಾಸ್ತೀರ್ಣಾದಿದಮಬ್ರವೀತ್ ॥ ೮ ॥ ಕಥಯ

ಶ್ರೀರಾಮನ ರಾಜ್ಯಾಭಿಷೇಕಕ್ಕೆ, ಉಪಹಿಂಸಂತೀ - ವಿಘ್ನಮಾಡುತ್ತ, ಕೈಕೇಯೀಂ - ಕೈಕೆಯೀದೇವಿಯನ್ನು ಕುರಿತು, ಇದಂ - ಈ ವಕ್ಷ್ಯಮಾಣವಚನವನ್ನು, ಅಬ್ರವೀತ್ - ನುಡಿದಳು. ॥ ೪ ॥ ಹೇ ಕೈಕೇಯಿ - ಎಲೈ ಕೈಕೇಯೀದೇವಿಯೇ, ಇದಾನೀಂ - ಈಗ, ತೇ - ನಿನ್ನ, ಪುತ್ರಃ - ಮಗನಾದ, ಭರತಃಕೇವಲಂ - ಭರತನು ಮಾತ್ರವೆ, ಯಥಾ - ಹೇಗೆ, ರಾಜ್ಯಂ - ರಾಜ್ಯವನ್ನು, ಪ್ರಾಪ್ಸ್ಯತಿ- ಹೊಂದುವನೋ, ತಥಾ - ಹಾಗೆಯೆ, ಪ್ರವಕ್ಷ್ಯಾಮಿ - ಹೇಳುತ್ತೇನೆ. ॥ ೫ ॥ ಹೇ ಕೈಕೇಯಿ - ಎಲೌ ಕೈಕೇಯೀದೇವಿಯೇ, ನಸ್ಮರಸಿಕಿಂ - ಸ್ಮರಣೆ ತಪ್ಪಿದೆಯೇನು, ಸ್ಮರಂತೀವಾ - ಜ್ಞಾಪಿಸಿಕೊಳ್ಳುವಳಾದರೂ, ನಿಗೂಹಸೇ - ಬಚ್ಚಿಡುತ್ತಿರುವೆಯೋ, ಯತ್ - ಯಾವಕಾರಣ, ಉಚ್ಯಮಾನಂ - ಹೇಳಲ್ಪಡುವ, ಆತ್ಮಾರ್ಥಂ - ತನ್ನ ಕಾರ್ಯವನ್ನು, ಮತ್ತಃ- ನನ್ನಿಂದ, ತ್ವಂ- ನೀನು, ಶ್ರೋತುಂ - ಕೇಳಲು, ಇಚ್ಛಸಿ - ಇಚ್ಛೈಸುವೆ, ಹೇ ವಿಲಾಸಿನಿ - ಎಲೈ ವಿಲಾಸವಂತಳೇ, ತೇ - ನಿನಗೆ, ಉಚ್ಯಮಾನಂ - ಹೇಳಲ್ಪಡುವ ಅರ್ಥವನ್ನು, ಶ್ರೋತುಂ - ಕೇಳುವದಕ್ಕೆ, ಛಂದೋಯದಿ - ಅಭಿಪ್ರಾಯವಿದ್ದದೇ ಆದರೆ, ಅಭಿಧಾಸ್ಯಾಮಿ - ಹೇಳುತ್ತೇನೆ, ಶ್ರೂಯತಾಂ - ಕೇಳಲ್ಪಡಲಿ, ಶ್ರುತ್ವಾಚಾಪಿ - ಕೇಳಿಯೂಕೂಡ, ವಿಮೃಶ್ಯತಾಂ - ಆಲೋಚಿಸಲ್ಪಡಲಿ. ॥ ೬-೭ ॥ ಏವಂ - ಈಪರಿಯಾಗಿ, ತಸ್ಯಾಃ - ಆ ಮಂಥರೆಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಕೈಕೇಯಿ - ಕೈಕೇಯಿದೇವಿಯು, ಸ್ವಾಸ್ತೀರ್ಣಾತ್ - ಚನ್ನಾಗಿ ಹಾಸಲ್ಪಟ್ಟ, ಶಯನಾತ್ - ಹಾಸಿಗೆಯಿಂದ, ಕಿಂಚಿತ್ - ಸ್ವಲ್ಪ, ಉತ್ಥಾಯ - ಮೇಲಕ್ಕೆದ್ದು, ಇದಂ - ಈ ವಕ್ಷ್ಯಮಾಣವಚನವನ್ನು, ಅಬ್ರವೀತ್ - ನುಡಿದಳು. ॥ ೮ ॥ ಹೇ ಮಂಥರೇ-

---

ಷೇಕಕ್ಕೆ ವಕ್ರವನ್ನು ಯೋಚಿಸಿ ಕೈಕೇಯಿಯನ್ನು ಕುರಿತು, "ದೇವಿ ! ಈಗ ನನ್ನಮಾತುಗಳನ್ನೆಲ್ಲ ಅರ್ಥಮಾಡಿಕೊಂಡು ನನ್ನ ದಾರಿಯನ್ನು ಅನುಮೋದಿಸಿದೆಯಲ್ಲವೆ. ನಿನ್ನ ಕುವರನಾದ ಭರತನು ರಾಜ್ಯವನ್ನು ಹೊಂದಲು ಯೋಗ್ಯವಾದ ಉಪಾಯವನ್ನು ಈಗ ಹೇಳುತ್ತೇನೆ ಕೇಳು; ॥ ೧-೫ ॥ ಕೈಕೇಯಿ ! ಜ್ಞಾಪಕವಿಲ್ಲವೇ? ಜ್ಞಾಪಕವಿದ್ದರೂ ಮರೆಮಾಚುತ್ತಿರುವೆಯೋ? ಅಥವ ನಿನ್ನಿಂದಲೇ ಅನೇಕಸಲ ಹೇಳಲ್ಪಟ್ಟ ಸ್ವಪ್ರಯೋಜನವನ್ನು ನನ್ನಿಂದ ಕೇಳಬೇಕೆಂದಿರುವೆಯೋ? ಹಾಗಿದ್ದರೆ ಹೇಳುತ್ತೇನೆ; ಕೇಳು. ನಾನು ಹೇಳುವುದನ್ನು ಕೇಳಿದ ಮೇಲೆ ನೀನು ಯೋಚಿಸುವವಳಾಗು" ಎಂದು ಹೇಳಿದಳು. ಆಗಲಾ ಕೈಕೇಯಿಯು ಮಂಥರೆಯ ನುಡಿಗಳನ್ನು ಕೇಳಿ ಕುತೂಹಲಾವಿಷ್ಟಳಾಗಿ ಹಾಸಿಗೆಯಿಂದೆದ್ದು; "ಮಂಥರೆ ! ನನ್ನ

ತ್ವಂ ಮಮೋಪಾಯಂ ಕೇನೋಪಾಯೇನ ಮಂಥರೇ ॥ ಭರತಃ ಪ್ರಾಪ್ನುಯಾ
ದ್ರಾಜ್ಯಂ ನತು ರಾಮಃ ಕಥಂಚನ ॥೯॥ ಏವಮುಕ್ತಾ ತಯಾ ದೇವ್ಯಾ
ಮಂಥರಾ ಪಾಪದರ್ಶಿನೀ ॥ ರಾಮಾರ್ಥ ಮುಪಹಿಂಸಂತೀ ಕುಬ್ಜಾ ವಚನ
ಮಬ್ರವೀತ್ ॥೧೦॥ ತವ ದೈವಾಸುರೇ ಯುದ್ಧೇ ಸಹ ರಾಜರ್ಷಿಭಿಃ ಪತಿಃ॥
ಅಗಚ್ಛ ತ್ತ್ವಾಮುಪಾದಾಯ ದೇವರಾಜಸ್ಯ ಸಾಹ್ಯಕೃತ್ ॥೧೧॥ ದಿಶ
ಮಾಸ್ಥಾಯ ವೈದೇವಿ ದಕ್ಷಿಣಾಂ ದಂಡಕಾನ್ ಪ್ರತಿ ॥ ವೈಜಯಂತಮಿತಿ
ಖ್ಯಾತಂ ಪುರಂ ಯತ್ರ ತಿಮಿಧ್ವಜಃ ॥೧೨॥ ಸ ಶಂಬರ ಇತಿ ಖ್ಯಾತಶ್ಶತ

ಎಲೌ ಮಂಥರೆಯೇ, ಭರತಃ - ಭರತನು, ಕೇನೋಪಾಯೇನ - ಯಾವ ಉಪಾಯದಿಂದ, ರಾಜ್ಯಂ - ರಾಜ್ಯವನ್ನು, ಪ್ರಾಪ್ನುಯಾತ್ - ಹೊಂದುವನೋ, ರಾಮಸ್ತು - ಶ್ರೀರಾಮನು, ಕಥಂಚನ - ಅತಿಪ್ರಯಾಸದಿಂದಲಾದರೂ, ನಪ್ರಾಪ್ನುಯಾತ್ - ಹೊಂದದೇ ಹೋಗುವನೋ, ತಮುಪಾಯಂ - ಅಂತಹ ಉಪಾಯವನ್ನು, ತ್ವಂ - ನೀನು, ಮಮ - ನನಗೆ, ಕಥಯ - ಹೇಳು. ॥೯॥ ಏವಂ - ಹೀಗೆ, ತಯಾದೇವ್ಯಾ - ಆ ಕೈಕೆಯಿಯಾದೇವಿಯಿಂದ, ಉಕ್ತಾ - ಹೇಳಲ್ಪಟ್ಟ, ಪಾಪದರ್ಶಿನೀ - ಪಾಪಕರ್ಮನಿರತಳಾದ, ಕುಬ್ಜಾ - ವಾಮನಳಾದ, ಮಂಥರಾ - ಮಂಥರೆಯು, ರಾಮಾರ್ಥಂ - ಶ್ರೀರಾಮನ ಅಭಿಷೇಕ ಪ್ರಯೋಜನವನ್ನು, ಉಪಹಿಂಸಂತೀ - ವಿಘ್ನಗೊಳಿಸುತ್ತ, ವಚನಂ - ಮಾತನ್ನು, ಅಬ್ರವೀತ್ - ನುಡಿದಳು. ॥೧೦॥ ತವ - ನಿನ್ನ, ಪತಿಃ - ಪತಿಯಾದ, ದಶರಥಃ - ದಶರಥರಾಯನು, ದೈವಾಸುರೇ - ದೇವರಾಕ್ಷಸರ ಸಂಬಂಧವಾದ, ಯುದ್ಧೇ - ಕಾಳಗದಲ್ಲಿ, ರಾಜರ್ಷಿಭಿಸ್ಸಹ - ರಾಜರ್ಷಿಗಳಿಂದೊಡಗೂಡಿ, ತ್ವಾಂ - ನಿನ್ನನ್ನು, ಉಪಾದಾಯ - ಕರೆದುಕೊಂಡು, ದೇವರಾಜಸ್ಯ - ದೇವೇಂದ್ರನಿಗೆ, ಸಾಹ್ಯಕೃತ್ - ಸಹಾಯವನ್ನು ಮಾಡುವವನಾಗಿ. ॥೧೧॥ ಹೇ ದೇವಿ - ಎಲೈ ಕೈಕೇಯಿಯೆ, ಯತ್ರ - ಯಾವಪಟ್ಟಣದಲ್ಲಿ, ತಿಮಿಧ್ವಜಃ - ತಿಮಿಧ್ವಜನೆಂಬ ಶಂಬರಾಸುರನು, ವರ್ತತೇ - ಇರುವನೋ, ತತ್ರ - ಆ ಸ್ಥಳದಲ್ಲಿ, ದಕ್ಷಿಣಾಂದಿಶಂ - ದಕ್ಷಿಣದಿಕ್ಕನ್ನು, ಆಸ್ಥಾಯ - ಹೊಂದಿ, ದಂಡಕಾನ್‌ಪ್ರತಿ - ದಂಡಕಾರಣ್ಯದಲ್ಲಿ, ವೈಜಯಂತಮಿತಿ - ವೈಜಯಂತವೆಂದು, ಖ್ಯಾತಂ - ಪ್ರಸಿದ್ಧವಾದ, ಪುರಂ - ಪಟ್ಟಣವು, ಅಸ್ತಿ - ಇರುವದೋ, ತತ್ - ಆ ಪಟ್ಟಣವನ್ನು ಕುರಿತು, ಅಗಚ್ಛತ್ - ತೆರಳಿದನು. ॥೧೨॥ ಸಃ - ಆ ತಿಮಿಧ್ವಜನೆಂಬ, ಮಹಾಸುರಃ - ರಾಕ್ಷಸಶ್ರೇಷ್ಠನು, ಶಂಬರಇತಿ -

---

ಮಗನಾದ ಭರತನು ರಾಜ್ಯವನ್ನು ಹೊಂದುವಂತೆಯೂ, ಶ್ರೀರಾಮನು ರಾಜ್ಯವನ್ನು ಪಡೆಯದಿರುವಹಾಗೂ ಯಾವ ಉಪಾಯವಿರುವುದೋ ಅದನ್ನು ನಿರೂಪಿಸುವವಳಾಗು'' ಎಂದಳು. ಕೈಕೇಯಿಯಾದೇವಿಯು ಈರೀತಿ ನುಡಿಯಲು ಆ ಮಂಥರೆಯು ಶ್ರೀರಾಮಮೂರ್ತಿಯ ರಾಜ್ಯಾಭಿಷೇಕಕ್ಕೆ ವಿಘ್ನವನ್ನಾಚರಿಸುತ್ತ ಹೀಗೆಂದಳು. ॥೬-೧೦॥ "ಕೇಳೌ ದೇವಿಯೆ! ಪೂರ್ವದಲ್ಲಿ ದೇವದಾನವ ಸಂಗರದಲ್ಲಿ ನಿನ್ನ ಪತಿಯಾದ ದಶರಥರಾಯನು ಸಕಲ ರಾಜರ್ಷಿಗಳಿಂದೊಡಗೂಡಿದವನಾಗಿ ನಿನ್ನನ್ನು ಕರೆದುಕೊಂಡು ಮಹೇಂದ್ರನಿಗೆ ಸಹಾಯಮಾಡುವವನಾಗಿ ದಕ್ಷಿಣದಿಶೆಯನ್ನು ಹೊಂದಿ, ದಂಡಕಾರಣ್ಯವನ್ನು ಕಳೆದು, ಸುರವೈರಿಯಾದ ಶಂಬರನ ಪಟ್ಟಣವಾದ ವೈಜಯಂತಪುರಪ್ರದೇಶವನ್ನು ಸೇರಿದನು. ಅಲ್ಲಿಯಾದರೋ ದೇವೇಂದ್ರನು ದೇವಗಣ-

ಮಾಯೋ ಮಹಾಸುರಃ ॥ ದದೌ ಶಕ್ರಸ್ಯ ಸಂಗ್ರಾಮಂ ದೇವಸಂಘೈರನಿರ್ಜಿತಃ ॥ ೧೩ ॥ ತಸ್ಮಿನ್ಮಹತಿ ಸಂಗ್ರಾಮೇ ಪುರುಷಾನ್ ಕ್ಷತ ವಿಕ್ಷತಾನ್ ॥ ರಾತ್ರೌ ಪ್ರಸುಪ್ತಾನ್ ಘ್ನಂತಿಸ್ಮ ತರಸಾಸಾದ್ಯ ರಾಕ್ಷಸಾಃ ॥ ೧೪ ॥ ತತ್ರಾಕರೋನ್ಮಹದ್ಯುದ್ಧಂ ರಾಜಾ ದಶರಥಸ್ತದಾ ॥ ಅಸುರೈಶ್ಚ ಮಹಾಬಾಹುಃ ಶಸ್ತ್ರೈಶ್ಚ ಶಕಲೀ ಕೃತಃ ॥ ೧೫ ॥ ಅಪವಾಹ್ಯ ತ್ವಯಾದೇವಿ ಸಂಗ್ರಾಮಾನ್ನಷ್ಟ ಚೇತನಃ ॥ ತತ್ರಾಪಿ ವಿಕ್ಷತ ಶ್ಶಸ್ತ್ರೈಃ ಪತಿಸ್ತೇ ರಕ್ಷಿತ ಸ್ತ್ವಯಾ ॥೧೬॥

ಶಂಬರಾಸುರನೆಂದು, ಖ್ಯಾತಃ - ಪ್ರಖ್ಯಾತನಾಗಿ, ಶತಮಾಯಃ - ಅನೇಕ ಮಾಯೆಗಳುಳ್ಳವನಾಗಿ, ದೇವಸಂಘೈಃ - ದೇವತಾಸಮೂಹಗಳಿಂದ, ಅನಿರ್ಜಿತಃ ಜಯಿಸಲ್ಪಡದವನಾಗಿ, ಶಕ್ರಸ್ಯ - ಇಂದ್ರನಿಗೆ, ಸಂಗ್ರಾಮಂ - ಕಾಳಗವನ್ನು, ದದೌ - ಕೊಟ್ಟನು. ॥ ೧೩ ॥ ಮಹತಿ - ದೊಡ್ಡದಾದ, ತಸ್ಮಿನ್ಸಂಗ್ರಾಮೇ - ಆ ಯುದ್ಧರಂಗದಲ್ಲಿ, ಕ್ಷತವಿಕ್ಷತಾನ್, ಕ್ಷತ - ಶೂಲಾದಿಗಳಿಂದ ತಿವಿಯಲ್ಪಟ್ಟ, ವಿಕ್ಷತಾನ್ - ಖಡ್ಗಾದಿಗಳೇ ಮುಂತಾದವುಗಳಿಂದ ಹೊಡಿಯಲ್ಪಟ್ಟ, ರಾತ್ರೌ-ರಾತ್ರಿಯಲ್ಲಿ, ಪ್ರಸುಪ್ತಾನ್-ನಿದ್ದೆಹೋಗುತ್ತಿರುವ, ಪುರುಷಾನ್ - ಮನುಷ್ಯರನ್ನು, ಆಸಾದ್ಯ - ಹೊಂದಿ, ರಾಕ್ಷಸಾಃ - ರಾಕ್ಷಸರು, ತರಸಾ - ಬಲದಿಂದ, ಘ್ನಂತಿಸ್ಮ - ಹೊಡೆಯುತ್ತಿದ್ದರಷ್ಟೆ, ತತ್ರ - ಆ ಜನರು ನಿದ್ದೆಹೋಗುವ ಪ್ರದೇಶದಲ್ಲಿ, ತದಾ - ಆಗ, ದಶರಥಃ - ದಶರಥನೆಂಬ, ರಾಜಾ - ಅರಸು, ಮಹಾಬಾಹುಃ - ಮಹಾಭುಜಪರಾಕ್ರಮಶಾಲಿಯಾಗಿ, ಅಸುರೈಶ್ಚ - ರಾಕ್ಷಸರೊಡನೆ, ಮಹತ್ - ದೊಡ್ಡದಾದ, ಯುದ್ಧಂ - ಕಾಳಗವನ್ನು, ಅಕರೋತ್ - ಮಾಡಿದನು, ಶಸ್ತ್ರೈಶ್ಚ - ಶಸ್ತ್ರಗಳಿಂದ, ಶಕಲೀಕೃತಃ - ಖಂಡಖಂಡವಾಗಿ ಮಾಡಲ್ಪಟ್ಟನು. ॥ ೧೫ ॥ ಹೇ ದೇವಿ - ಎಲೈ ಕೈಕೆಯಿದೇವಿಯೆ, ನಷ್ಟಚೇತನಃ - ಕಳೆದುಹೋದ ಪ್ರಜ್ಞೆಯುಳ್ಳವನಾಗಿ, ಸಂಗ್ರಾಮಾತ್ - ಕಾಳಗದಿಂದ, ಅಪವಾಹ್ಯ - ಹಿಂದಿರುಗಿಸಿ, ತ್ವಯಾ - ನಿನ್ನಿಂದ, ತತ್ರಾಪಿ - ಆ ಪ್ರದೇಶದಲ್ಲಿಯೂ, ಶಸ್ತ್ರೈಃ - ಶಸ್ತ್ರಗಳಿಂದ, ವಿಕ್ಷತಃ - ಘಾಯಮಾಡಲ್ಪಟ್ಟ, ತೇ - ನಿನ್ನ, ಪತಿಃ - ಗಂಡನಾದ ದಶರಥಮಹಾರಾಯನು, ತ್ವಯಾ - ನಿನ್ನಿಂದ, ರಕ್ಷಿತಃ - ಸಂರಕ್ಷಿಸಲ್ಪಟ್ಟನು, ಹೇ ಶುಭದರ್ಶನೇ - ಎಲೈ ಮಂಗಳಕರವಾದ ನೋಟವುಳ್ಳವಳೇ, ತುಷ್ಟೇನ - ಸಂತೋಷಗೊಂಡ, ತೇನ - ಆ ದಶರಥರಾಯನಿಂದ, ತೇ - ನಿನಗೆ, ದ್ವೌವರೌ - ಎರಡು ವರಗಳು, ದತ್ತೌ - ಕೊಡಲ್ಪಟ್ಟವು. ॥ ೧೬ ॥ ಹೇ ದೇವೀ - ಎಲೈ ಕೈಕೇಯಿದೇವಿಯೇ, ತ್ವಯಾ-ನಿನ್ನಿಂದ,

---

ಗಳಿಂದೊಡಗೂಡಿ, ನೂರುಮಾಯೆಗಳನ್ನೊಳಗೊಂಡವನೂ, ಯಾರಿಂದಲೂ ಜಯಿಸಲಸದಳನೂ ಆದ ಆ ಶಂಬರನೊಡನೆ ಸಮರವಂಗೈಯುತ್ತಿದ್ದನು. ಆ ಮಹಾಯುದ್ಧದಲ್ಲಿ ಆ ಘೋರರಾತ್ರಿಯಲ್ಲಿ ರಾಕ್ಷಸರೆಲ್ಲರೂ ಗುಂಪುಗೂಡಿ ಬಾಣಶೂಲಾದ್ಯಾಯುಧಗಳಿಂದ ಗಾಯಮಾಡಲ್ಪಟ್ಟವರೂ, ಖಡ್ಗಾದಿಗಳಿಂದ ತಾಡಿತರಾದವರೂ ಆಗಿ ಕೆಳಗೆ ಬಿದ್ದಿರುವ ದೇವತೆಗಳನ್ನು ಹೊಡೆಯುತ್ತಿದ್ದರು. ಆಗ ಮಹಾಭುಜಬಲಪರಾಕ್ರಮಶಾಲಿಯೂ, ನಿನ್ನ ಪತಿಯೂ ಆದ ದಶರಥಭೂಪಾಲನು ಆ ರಣರಂಗದಲ್ಲಿ ರಕ್ಕಸರೊಡನೆ ಅದ್ಭುತವಾಗಿ ಯುದ್ಧಮಾಡಿ ಶಸ್ತ್ರಗಳಿಂದ ಹೊಡೆಯಲ್ಪಟ್ಟು ನಷ್ಟಚೇತನನಾಗಿ ಮಾಡಲ್ಪಟ್ಟನು. ॥ ೧೧-೧೫ ॥ ದೇವೀ! ಕೇಳು; ಆಗ ಪ್ರಜ್ಞೆತಪ್ಪಿದ ನಿನ್ನ ಪತಿಯು ನಿನ್ನಿಂದ ಆ ರಣಭೂಮಿಯಿಂದ ದೂರವಾಗಿ ಕರೆದೊಯಲ್ಪಡುತ್ತಿದ್ದರೂ ಶಸ್ತ್ರಗಳಿಂದ ಗಾಯಗೊಳಿಸಲ್ಪಟ್ಟು ರಕ್ಷಿತನಾದನು. ॥ ೧೬ ॥

ತುಷ್ಟೇನ ತೇನ ದತ್ತೌ ತೇ ದ್ವೌವರೌ ಶುಭದರ್ಶನೇ ॥ ಸತ್ವಯೋಕ್ತಃ ಪತಿ
ರ್ದೇವಿ ಯದೇಚ್ಛೇಯಂ ತದಾ ವರೌ ॥ ೧೭ ॥ ಗೃಹ್ಣೀಯಾಮಿತಿ ತತ್ತೇನ
ತಥೇತ್ಯುಕ್ತಂ ಮಹಾತ್ಮನಾ ॥ ಅನಭಿಜ್ಞಾಹ್ಯಹಂ ದೇವಿ ತ್ವಯ್ಯೈವ ಕಥಿತಾ
ಪುರಾ ॥ ೧೮ ॥ ಕಥೈಷಾ ತವತು ಸ್ನೇಹಾನ್ಮನಸಾ ಧಾರ್ಯತೇ ಮಯಾ ॥
ರಾಮಾಭಿಷೇಕ ಸಂಭಾರಾನ್ನಿಗೃಹ್ಯ ವಿನಿವರ್ತಯ ॥ ೧೯ ॥ ತೌ ವರೌ
ಯಾಚ ಭರ್ತಾರಂ ಭರತಸ್ಯಾಭಿಷೇಚನಂ ॥ ಪ್ರವ್ರಾಜನಂ ತು ರಾಮಸ್ಯ ತ್ವಂ
ವರ್ಷಾಣಿ ಚತುರ್ದಶ ॥ ೨೦ ॥ ಚತುರ್ದಶ ಹಿ ವರ್ಷಾಣಿ ರಾಮೋ ಪ್ರವ್ರಾ

ಯದಾ - ಯಾವಾಗ, ದ್ವೌವರೌ - ಎರಡು ವರಗಳನ್ನು, ಇಚ್ಛೇಯಂ - ಅಪೇಕ್ಷಿಸುವೆನೋ, ತದಾ - ಆಗ, ಗೃಹ್ಣೀಯಾಂ - ಗ್ರಹಿಸುವೆನು, ಇತಿ - ಇಂತೆಂದು, ತೇ - ನಿನ್ನ, ಪತಿಃ - ಗಂಡನಾದ, ಸಃ - ಆ ದಶರಥರಾಯನು, ಉಕ್ತಃ - ಹೇಳಲ್ಪಟ್ಟನು. ॥ ೧೭ ॥ ಹೇ ದೇವಿ - ಎಲೈ ಕೈಕೇಯಿಯೇ, ಅಹಂ - ನಾನು, ಅನಭಿಜ್ಞಾಹಿ - ತಿಳಿಯದಿರುವಳಷ್ಟೆ, ಪುರಾ - ಪೂರ್ವದಲ್ಲಿ, ಏಷಾಕಥಾ - ಈ ಕಥೆಯು, ಸ್ನೇಹಾತ್ - ಮೈತ್ರಿಯಿಂದ, ತ್ವಯ್ಯೈವ - ನಿನ್ನಿಂದಲೆ, ಕಥಿತಾ - ಹೇಳಲ್ಪಟ್ಟಿತು, ಮಯಾ - ನನ್ನಿಂದ, ಮನಸಾ - ಮನಸ್ಸಿನಿಂದ, ಧಾರ್ಯತೇ - ಧರಿಸಲ್ಪಟ್ಟಿರುವುದು. ॥ ೧೮ ॥ ರಾಮಾಭಿಷೇಕ ಸಂಭಾರಾತ್, ರಾಮ-ಶ್ರೀರಾಮನ, ಅಭಿಷೇಕ-ಪಟ್ಟಾಷೇಕದ, ಸಂಭಾರಾತ್-ಸಾಮಗ್ರಿಯಿಂದ, ದಶರಥಂ-ದಶರಥಮಹಾರಾಯನನ್ನು, ನಿಗೃಹ್ಯ (ಗೋ) ಬಲಾತ್ಕಾರವಾಗಿ ಹಿಂತಿರಿಗಿಸಿ, ಭರತಸ್ಯ-ಭರತನಿಗೆ, ಅಭಿಷೇಚನಂ - ಅಭಿಷೇಕವನ್ನೂ, ರಾಮಸ್ಯ-ಶ್ರೀರಾಮನಿಗೆ, ಚತುರ್ದಶ ವರ್ಷಾಣಿ-ಹದಿನಾಲ್ಕು ವರುಷಗಳು, ಪ್ರವ್ರಾಜನಂತು - ಅರಣ್ಯವಾಸವೆಂಬ, ತೌವರೌ - ಆ ಎರಡು ವರಗಳನ್ನೂ, ತ್ವಂ - ನೀನು, ಯಾಚಯ - ಬೇಡು. ॥ ೨೦ ॥ ರಾಮಃ - ಶ್ರೀರಾಮನು, ಚತುರ್ದಶ ವರ್ಷಾಣಿ-ಹದಿನಾಲ್ಕು ವರುಷಗಳು, ವನಂ - ವನವನ್ನು ಕುರಿತು, ಪ್ರವ್ರಾಜಿತೇಸತಿ - ಪ್ರಯಾಣ ಮಾಡಿಸ

ಮಂಗಳಕರವಾದ ನೋಟವುಳ್ಳ ಕೈಕೇಯಿಯಾದೇವಿಯೆ! ಆಗ ನಿನ್ನ ಪತಿಯಾದ ದಶರಥನು ನಿನ್ನ ಜಾಣ್ಮೆಗೆ ಮೆಚ್ಚಿ ಸಂತಸವಾಂತು ಎರಡು ವರಗಳನ್ನು ಕೊಡಲು, ನೀನು "ನನಗೆ ಬೇಕಾದಾಗ ಬೇಡುತ್ತೇನೆ; ಆಗ ನೀನು ಕೊಡುವವನಾಗು; ಅದುವರೆಗೂ ಈ ವರಗಳು ನಿನ್ನಲ್ಲಿಯೇ ಇರಲಿ" ಎಂದುತ್ತರವಿತ್ತೆಯಷ್ಟೆ; ಆಗ ದಶರಥರಾಯನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಈ ವೃತ್ತಾಂತವನ್ನು ನೀನು ನನಗೆ ಹೇಳಿದ್ದುದರಿಂದಲೆ ನನಗೆ ತಿಳಿದಿರುವುದು. ನಾನು ಪ್ರತ್ಯಕ್ಷವಾಗಿ ನೋಡಿದವಳಲ್ಲವು. ಆದರೆ ಈ ವೃತ್ತಾಂತವೆಲ್ಲವನ್ನೂ ನೀನೇ ನನಗೆ ಹೇಳಿದ್ದೆಯಾದುದರಿಂದ, ನಿನ್ನಲ್ಲಿ ನನಗಿರುವ ಸ್ನೇಹದಿಂದ ಅದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಈಗ ಹೇಳಿರುವೆನು. ಆದುದರಿಂದ ನೀನೀಗ ಈ ಎರಡುವರಗಳನ್ನು ನಿನ್ನ ಪತಿಯಾದ ದಶರಥರಾಯನಲ್ಲಿ ಬೇಡುವವಳಾಗು. ಒಂದು ವರದಿಂದ ನಿನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವಾಗುವಂತೆಯೂ, ಇನ್ನೊಂದುವರದಿಂದ ಶ್ರೀರಾಮನಿಗೆ ಹದಿನಾಲ್ಕುವರ್ಷಗಳವರೆವಿಗೂ ವನವಾಸವಾಗುವಂತೆಯೂ ಮಾಡುವವಳಾಗು. ॥೧೭-೨೦॥ ಎಲೌ ಕೇಕಯರಾಜ

ಜಿತೇ ವನಂ ॥ ಪ್ರಜಾಭಾವ ಗತಸ್ನೇಹಃ ಸ್ಥಿರಃ ಪುತ್ರೋ ಭವಿಷ್ಯತಿ ॥ ೨೧ ॥ ಕ್ರೋಧಾಗಾರಂ ಪ್ರವಿಶ್ಯಾದ್ಯ ಕ್ರುದ್ಧೇವಾಶ್ವಪತೇಸ್ಸುತೇ ॥ ಶೇಷ್ವಾನಂತರ್ಹಿತಾಯಾಂ ತ್ವಂ ಭೂಮೌ ಮಲಿನ ವಾಸಿನೀ ॥ ೨೨ ॥ ಮಾಸ್ಮೈನಂ ಪ್ರತ್ಯುದೀಕ್ಷೇಥಾ ಮಾಚೈನಮಭಿಭಾಷಥಾಃ ॥ ರುದಂತೀ ಚಾಪಿ ತಂ ದೃಷ್ಟ್ವಾ ಜಗತ್ಯಾಂ ಶೋಕ ಲಾಲಸಾ ॥ ೨೩ ॥ ದಯಿತಾ ತ್ವಂ ಸದಾಭರ್ತುರತ್ರ ಮೇ ನಾಸ್ತಿ ಸಂಶಯಃ ॥ ತ್ವತ್ಕೃತೇ ಸ ಮಹಾರಾಜೋ ವಿಶೇದಪಿ ಹುತಾಶನಂ ॥ ೨೪ ॥ ನತ್ವಾಂ ಕ್ರೋಧಯಿತುಂ ಶಕ್ತೋ ನಕ್ರುದ್ಧಾಂ ಪ್ರತ್ಯುದೀಕ್ಷಿತುಂ ॥ ತವ

ಲ್ಪಟ್ಟವನಾಗಲು, ಪುತ್ರಃ - ನಿನ್ನ ಮಗನಾದ ಭರತನು, ಪ್ರಜಾಭಾವಗತಃ, ಪ್ರಜಾ - ಪ್ರಜೆಗಳ, ಭಾವ - ಹೃದಯಾಭಿಪ್ರಾಯವನ್ನು, ಗತಃ - ಹೊಂದಿದ ಮೈತ್ರಿಯುಳ್ಳವನಾಗಿ, ಸ್ಥಿರಃ-ಸ್ಥೈರ್ಯವುಳ್ಳವನು, ಭವಿಷ್ಯತಿ - ಆಗುವನು. || ೨೧ || ಹೇ ಅಶ್ವಪತೇಸ್ಸುತೇ - ಎಲೌ ಕೇಕಯರಾಯನ ಮಗಳೇ, ಅದ್ಯ-ಈಗ, ಕ್ರೋಧಾಗಾರಂ, ಕ್ರೋಧ-ಕೋಪಾವಿಷ್ಟರಾದ ಹೆಂಗಸರು ಮಲಗತಕ್ಕ, ಅಗಾರಂ ಮನೆಯನ್ನು, ಪ್ರವಿಶ್ಯ - ಹೊಕ್ಕು, ಕ್ರುದ್ಧೇವ - ಕೋಪಿಷ್ಠಳಂತೆ, ತ್ವಂ - ನೀನು, ಅನಂತರ್ಹಿತಾಯಾಂ - ಆವರಣವಿಲ್ಲದಿರುವ, ಭೂಮೌ - ನೆಲವಲ್ಲಿ, ಮಲಿನವಾಸಿನೀ - ಮಲಿನವಾದ ವಸ್ತ್ರವನ್ನು ಧರಿಸಿದವಳಾಗಿ, ಶೇಷ್ವ - ಮಲಗು. || ೨೨ || ಶೋಕಲಾಲಸಾ - ಶೋಕದಿಂದ ಬಳಲಿದವಳಾಗಿ, ತ್ವಂ-ನೀನು, ತಂ - ಆ ನಿನ್ನ ಪತಿಯನ್ನು, ದೃಷ್ಟ್ವಾ - ಕಂಡು, ಜಗತ್ಯಾಂ - ನೆಲದಲ್ಲಿ, ರುದಂತೀ - ಅಳುತ್ತ, ಏನಂ - ಈ ಗಂಡನನ್ನು, ಮಾಪ್ರತ್ಯುದೀಕ್ಷೇಥಾಃ - ನೋಡಲೇ ಬೇಡ, ಏನಂಚ - ಇವನ ಸಂಗಡ, ಮಾಭಿಭಾಷಥಾಃಸ್ಮ - ಮಾತನಾಡಲೂ ಬೇಡ. || ೨೩ || ತ್ವಂ - ನೀನು, ಭರ್ತುಃ - ಗಂಡನಾದ ದಶರಥರಾಯನಿಗೆ, ಸದಾ - ಸರ್ವ ಕಾಲದಲ್ಲಿಯು, ದಯಿತಾ - ಇಷ್ಟಳಾಗಿರುವೆ, ಅತ್ರ - ಈ ವಿಷಯದಲ್ಲಿ, ಮೇ - ನನಗೆ, ಸಂಶಯಃ - ಸಂದೇಹವು, ನಾಸ್ತಿ - ಇಲ್ಲವು, ಸಮಹಾರಾಜಃ - ಆ ದಶರಥಮಹಾರಾಯನು, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ಹುತಾಶನಮಪಿ - ಅಗ್ನಿಯನ್ನೂ ಕೂಡ, ವಿಶೇತ್ - ಪ್ರವೇಶಿಸುವನು. || ೨೪ || ತ್ವಾಂ - ನಿನ್ನನ್ನು, ಕ್ರೋಧಯಿತುಂ - ಕೋಪವಂತಳಾಗಿ ಮಾಡುವುದಕ್ಕೂ, ರಾಜಾ - ದಶರಥರಾಯನು, ನಶಕ್ತಃ - ಸಮರ್ಥನಲ್ಲ, ಕ್ರುದ್ಧಾಂ - ಕೋಪಿಷ್ಠಳಾದ ನಿನ್ನನ್ನು, ಪ್ರತ್ಯುದೀಕ್ಷಿತುಂ - ನೋಡುವದಕ್ಕೂ,

---

ಕುಮಾರಿಯೆ! ಕೇಳು; ಭರತನು ರಾಜ್ಯಾಭಿಷಿಕ್ತನಾಗಿ, ಶ್ರೀರಾಮನು ಹದಿನಾಲ್ಕುಸಂವತ್ಸರಗಳು ವನವಾಸಕ್ಕೆ ಹೊರಟುಹೋದರೆ, ಪ್ರಜೆಗಳೆಲ್ಲರೂ ಭರತನಲ್ಲಿಯೇ ಪ್ರೇಮವುಳ್ಳವರಾಗುತ್ತಾರೆ. ನಿನ್ನ ಮಗನಾದ ಭರತನಿಗೆ ರಾಜ್ಯವು ಸ್ಥಿರವಾಗುವುದು. ಆದುದರಿಂದ ನೀನೀಗ ಮಹಾಕೋಪವಾಂತವಳಂತೆ ಕ್ರೋಧಾಗಾರವನ್ನು ಹೊಂದಿ, ಮಾಸಿದ ವಸ್ತ್ರವನ್ನುಟ್ಟು, ಭೂಶಾಯಿನಿಯಾಗು. ಆಗ ದಶರಥರಾಯನು ಅಲ್ಲಿಗೆ ಬಂದರೆ, ಆತನನ್ನು ನೋಡಿ ಅಳುತ್ತ, ಆತನನ್ನು ನೋಡದೆಯೂ, ಆತನೊಡನೆ ಮಾತನಾಡದೆಯೂ ಇರುವವಳಾಗು. ನೀನಾತನಿಗೆ ಮಹಾಪ್ರೀತಿಪಾತ್ರಳಾದುದರಿಂದ, ಆತನು ನಿನಗಾಗಿ ಬೆಂಕಿಯಲ್ಲಾದರೂ ಧುಮ್ಮಿಕ್ಕುವನು. ನಿನ್ನ ಪ್ರೀತಿಗಾಗಿ ಪ್ರಾಣವನ್ನಾದರೂ ಬಿಡುವನೇಹೊರ್ತು, ನಿನ್ನನ್ನು

ಪ್ರಿಯಾರ್ಥಂ ರಾಜಾಹಿ ಪ್ರಾಣಾನಪಿ ಪರಿತ್ಯಜೇತ್ ॥ ೨೫ ॥ ನಹ್ಯತಿಕ್ರಮಿತುಂ ಶಕ್ತ ಸ್ತವವಾಕ್ಯಂ ಮಹೀಪತಿಃ ॥ ಮಂದಸ್ವಭಾವೇ ಬುಧ್ಯಸ್ವ ಸೌಭಾಗ್ಯ ಬಲ ಮಾತ್ಮನಃ ॥ ೨೬ ॥ ಮಣಿಮುಕ್ತಂ ಸುವರ್ಣಾನಿ ರತ್ನಾನಿ ವಿವಿಧಾನಿಚ ॥ ದದ್ಯಾದ್ದಶರಥೋ ರಾಜಾ ಮಾಸ್ಮ ತೇಷು ಮನಃ ಕೃಥಾಃ ॥ ೨೭ ॥ ಯೌ ತೇ ದೈವಾಸುರೇ ಯುದ್ಧೇ ವರೌ ದಶರಥೋ ದದಾತ್ ॥ ತೌ ಸ್ಮಾರಯ ಮಹಾಭಾಗೇ ಸೋಽರ್ಥೋ ಮಾತ್ವಾ ಮತಿಕ್ರಮೇತ್ ॥ ೨೮ ॥ ಯದಾತು ತೇ ವರಂ ದದ್ಯಾತ್ಸ್ವಯಮುತ್ಥಾಪ್ಯ ರಾಘವಃ ॥ ವ್ಯವಸ್ಥಾಪ್ಯ ಮಹಾರಾಜಂ ತ್ವಮಿಮಂ

ನಶಕ್ತಃ - ಸಮರ್ಥನಲ್ಲ, ಹಿ - ಯಾವ ಕಾರಣ, ತವ - ನಿನ್ನ, ಪ್ರಿಯಾರ್ಥಂ - ಪ್ರೀತಿಗೋಸುಗ, ಪ್ರಾಣಾನಪಿ - ಪ್ರಾಣಗಳನ್ನೂ, ಪರಿತ್ಯಜೇತ್ - ಬಿಟ್ಟುಬಿಡುವನು. ॥ ೨೫ ॥ ಮಹೀಪತಿಃ - ಅರಸ, ತವ - ನಿನ್ನ, ವಾಕ್ಯಂ - ಮಾತನ್ನು, ಅತಿಕ್ರಮಿತುಂ - ಮೀರಲು, ನಶಕ್ತಃ - ಸಮರ್ಥನಲ್ಲವು, ಹೇಮಂದಸ್ವಭಾವೇ - ಎಲೈ ಮೂಢಬುದ್ಧಿಯುಳ್ಳವಳೆ, ಆತ್ಮನಃ - ತನ್ನ, ಸೌಭಾಗ್ಯಬಲಂ - ಸೌಂದರ್ಯದ ಅತಿಶಯವನ್ನು, ಬುಧ್ಯಸ್ವ - ತಿಳಿದುಕೊ, ಮಣಿಮುಕ್ತಂ, ಮಣಿ - ರತ್ನಾದಿಗಳನ್ನೂ, ಮುಕ್ತಂ - ಮುತ್ತುಗಳನ್ನೂ, ಸುವರ್ಣಾನಿ - ವರಹಗಳನ್ನೂ, ವಿವಿಧಾನಿ - ನಾನಾ ಬಗೆಗಳಾದ, ರತ್ನಾನಿ - ಉತ್ತಮ ವಸ್ತುಗಳನ್ನೂ, ದಶರಥೋ ರಾಜಾ - ದಶರಥರಾಜನು, ದದ್ಯಾತ್ - ಕೊಟ್ಟಾನು, ತೇಷು - ಅವುಗಳಲ್ಲಿ, ಮನಃ - ಮನವನ್ನು, ಮಾಕೃಥಾಃ - ಮಾಡಬೇಡ. ॥ ೨೭ ॥ ದಶರಥಃ - ದಶರಥರಾಯನು, ದೈವಾಸುರೇ - ದೇವಾಸುರ ಸಂಬಂಧವಾದ, ಯುದ್ಧೇ - ಯುದ್ಧದಲ್ಲಿ, ಯೌವರೌ - ಯಾವ ವರಗಳನ್ನು, ಅದದಾತ್ - ಕೊಟ್ಟನೋ, ಹೇ ಮಹಾಭಾಗೇ - ಎಲೈ ಮಹಾಪುಣ್ಯವಂತಳೇ, ತೌ - ಪ್ರಸಿದ್ಧವಾದ, ತೌ - ಆ ವರಗಳನ್ನು, ಸ್ಮಾರಯ-ಜ್ಞಾಪಿಸಿಕೊ, ಸೋಽರ್ಥಃ - ಆ ಅರ್ಥವು, ತ್ವಾಂ - ನಿನ್ನನ್ನು, ಮಾತಿಕ್ರಮೇತ್ - ಅತಿಕ್ರಮಿಸದಿರಲಿ. ॥ ೨೮ ॥ ಯದಾ - ಯಾವ ಕಾಲದಲ್ಲಿ, ತೇ - ನಿನಗೆ, ಸ್ವಯಂ - ತಾನಾಗಿಯೆ, ಉತ್ಥಾಪ್ಯ - (ಗೋ) ಸುಮ್ಮನಿರುವಳನ್ನು ಮೇಲಕ್ಕೆಬ್ಬಿಸಿ, ವರಂ - ವರವನ್ನು, ದದ್ಯಾತ್ - ಕೊಡುವನೋ, (ತದಾ - ಆಗ) ತ್ವಂ - ನೀನು, ಮಹಾರಾಜಂ - ದಶರಥ ಮಹಾರಾಯನನ್ನು, ವ್ಯವಸ್ಥಾಪ್ಯ - ಸತ್ಯದಲ್ಲಿ ಸ್ಥಾಪಿಸಿ, ವರಂ - ವರವನ್ನು, ವೃಣುಯಾಃ-ವರಿಸು. ॥೨೯॥ ಇಮಂ ರಾಮಂ-ಈ ಶ್ರೀರಾಮನನ್ನು, ಅರಣ್ಯೇ-ವನದಲ್ಲಿ, ನವವರ್ಷಾಣಿ

ಕೋಪಗೊಳಿಸುವುದಕ್ಕಾಗಲಿ, ಹಾಗೆ ಕೋಪಗೊಂಡ ನಿನ್ನನ್ನು ನೋಡುವುದಕ್ಕಾಗಲಿ, ನಿನ್ನ ಮಾತನ್ನು ಮೀರುವುದಕ್ಕಾಗಲಿ ಸಮರ್ಥನಾಗುವುದಿಲ್ಲ. ಎಲೌ ಮಂಡಬುದ್ಧಿಯುಳ್ಳವಳೆ! ನಿನ್ನ ಸೌಭಾಗ್ಯವೆಂತಹುದೋ ಅದನ್ನು ನೀನೇ ತಿಳಿದುಕೊಳ್ಳುವವಳಾಗು. ॥ ೨೧-೨೬ ॥ ಓ ಪುಣ್ಯಶಾಲಿನಿಯೆ! ಆ ದಶರಥರಾಯನು ನಿನ್ನನ್ನು ಸಮಾಧಾನಗೊಳಿಸಲೋಸುಗ ಚಿನ್ನ, ರನ್ನ, ಮುತ್ತುಗಳೇ ವೊದಲಾದ ಅನೇಕಬೆಲೆ ಬಾಳುವ ವಸ್ತುಗಳನ್ನು ಕೊಡ ಹೋದಾನು. ಅದಕ್ಕಾವುದಕ್ಕೂ ಮನಗೊಡಬೇಡ. ಆ ಸಮಯದಲ್ಲಿ ದೇವಾಸುರಯುದ್ಧದಲ್ಲಿ ಆತನು ನಿನಗೆ ಕೊಟ್ಟ ಎರಡು ವರಗಳನ್ನು ಮಾತ್ರ ಸ್ಮರಿಸಿಕೊ. ಹೀಗೆ ಮಾಡಿದರೆ, ಭರತನಿಗೆ ಪಟ್ಟಾಭಿಷೇಕವೂ, ರಾಮನಿಗೆ ವನವಾಸವೂ ಕೈಗೂಡುವುದು. ಇಲ್ಲವಾದರೆ ಕೆಟ್ಟುಹೋಗುವುದು.

ವೃಣು ಯಾವರಂ ॥ ೨೯ ॥ ರಾಮಂ ಪ್ರವ್ರಾಜಯಾರಣ್ಯೇ ನವವರ್ಷಾಣಿ ಪಂಚಚ ॥ ಭರತಃ ಕ್ರಿಯತಾಂ ರಾಜಾ ಪೃಥಿವ್ಯಾಃ ಪಾರ್ಥಿವರ್ಷಭಃ ॥ ೩೦ ॥ ಚತುರ್ದಶಹಿ ವರ್ಷಾಣಿ ರಾಮೋ ಪ್ರವ್ರಾಜಿತೇ ವನಂ ॥ ರೂಢಶ್ಚ ಕೃತಮೂಲಶ್ಚ ಶೇಷಂ ಸ್ಥಾಸ್ಯತಿ ತೇ ಸುತಃ ॥ ೩೧ ॥ ರಾಮ ಪ್ರವ್ರಾಜನಂ ಚೈವ ದೇವಿ ಯಾಚಸ್ವ ತಂ ವರಂ ॥ ಏವಂ ಸಿಧ್ಯಂತಿ ಪುತ್ರಸ್ಯ ಸರ್ವಾರ್ಥಾ ಸ್ತವ ಭಾಮಿನಿ ॥ ೩೨ ॥ ಏವಂ ಪ್ರವ್ರಾಜಿತ ಶ್ಚೈವ ರಾಮೋಽರಾಮೋ ಭವಿಷ್ಯತಿ ॥ ಭರತಶ್ಚ

ಪಂಚಚ - ಹದಿನಾಲ್ಕು ವರುಷಗಳು, ಪ್ರವ್ರಾಜಯ - ಹೊರಡಿಸು. ಹೇ ಪಾರ್ಥಿವರ್ಷಭ - ಎಲೈ ದಶರಥರಾಯನೆ, ಭರತಃ - ಭರತನು, ಪೃಥಿವ್ಯಾಃ - ಭೂಮಿಗೆ, ರಾಜಾ - ಅರಸನಾಗಿ, ಕ್ರಿಯತಾಂ - ಮಾಡಲ್ಪಡಲಿ. ॥ ೩೦ ॥ ರಾಮೇ - ಶ್ರೀರಾಮನು, ಚತುರ್ದಶ ವರ್ಷಾಣಿ - ಹದಿನಾಲ್ಕು ವರುಷಗಳು, ವನಂ - ವನವನ್ನು ಕುರಿತು, ಪ್ರವ್ರಾಜಿತೇಸತಿ - ಹೊರಡಿಸಲ್ಪಡಲು, ತೇ - ನಿನ್ನ, ಸುತಃ - ಕುವರನು, ರೂಢಶ್ಚ - ರಾಜ್ಯದಲ್ಲಿ ಸ್ಥಿರನಾಗಿ, ಕೃತಮೂಲಃ, ಕೃತ - ದೃಢವಾಗಿ ಮಾಡಲ್ಪಟ್ಟ, ಮೂಲಃ - ಮೂಲವುಳ್ಳವನಾಗಿ, ಶೇಷಂ - ಆಯುಶ್ಶೇಷವನ್ನು, ಸ್ಥಾಸ್ಯತಿ - ನಿಲ್ಲುತ್ತಾನೆ. ॥ ೩೧ ॥ ಹೇ ದೇವಿ - ಎಲೈ ಕೈಕೆಯಿಾದೇವಿಯೆ, ರಾಮ ಪ್ರವ್ರಾಜನಂ, ರಾಮ - ಶ್ರೀರಾಮನಿಗೆ, ಪ್ರವ್ರಾಜನಂ - ವನವನ್ನು ಕುರಿತು ಪ್ರಯಾಣವನ್ನೇ, ತಂವರಂ - ಆ ವರವನ್ನಾಗಿ, ಯಾಚಸ್ವ - ಬೇಡಿಕೊ, ಏವಂಚೇತ್ - ಹೀಗಾದರೆ, ಹೇ ಭಾಮಿನಿ - ಎಲೈ ಕೈಕೆಯಿಾದೇವಿಯೆ, ತವ - ನಿನ್ನ, ಪುತ್ರಸ್ಯ - ಮಗನಿಗೆ, ಸರ್ವಾರ್ಥಾಃ - ಸಕಲ ಪುರುಷಾರ್ಥಗಳು, ಸಿಧ್ಯಂತಿ - ಫಲಿಸುತ್ತವೆ. ॥ ೩೨ ॥ ಏವಂ - ಈ ಪರಿಯಾಗಿ, ಪ್ರವ್ರಾಜಿತಃ - ವನಕ್ಕೆ ಪ್ರಯಾಣ ಮಾಡಿಸಲ್ಪಟ್ಟ, ರಾಮಃ - ಶ್ರೀರಾಮನು, ಅರಾಮಃ - (೧) ಪ್ರಜಾನಂದಕರನಲ್ಲದಿರುವನು, ಭವಿಷ್ಯತಿ - ಆಗುತ್ತಾನೆ,

---

ಯಾವಾಗ ದಶರಥರಾಯನು ನಿನ್ನನ್ನು ಎಬ್ಬಿಸಿ ವರವನ್ನು ಕೊಡುತ್ತಾನೆಯೋ ಆಗ ನೀನು ಆತನಿಂದ ಮಾತುತಪ್ಪದಂತೆ ಪ್ರಮಾಣಮಾಡಿಸಿ, "ಎಲೈ ರಾಯನೆ! ಶ್ರೀರಾಮಮೂರ್ತಿಯನ್ನು ಹದಿನಾಲ್ಕುವರುಷ ವನವಾಸಕ್ಕೆ ಕಳುಹಿ, ನನ್ನ ಕುವರನಾದ ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿಸು" ಎಂದು ಎರಡು ವರಗಳನ್ನು ಬೇಡಿಕೊ? ॥ ೨೭-೩೦ ॥ ಹೀಗೆ ಶ್ರೀರಾಮನು ಹದಿನಾಲ್ಕುವರ್ಷಗಳಕಾಲ ವನವಾಸಮಾಡಿದರೆ ನಿನ್ನ ಕುವರನಾದ ಭರತನು ಪ್ರಸಿದ್ಧವಂತನೂ, ಅಧೀನಬಲವುಳ್ಳವನೂ ಆಗಿ ದೀರ್ಘಾಯುಷ್ಮಂತನಾಗುವನು. ॥೩೧॥ ಎಲಾ

ಟ. (೧) "ರಾಮೋ ರಾಮಃ" ಎಂಬೆಡೆಯಲ್ಲಿ "ಅರಾಮಃ" ಎಂದು ಪದಚ್ಛೇದವು. ಅರಾಮಃ ಎಂದರೆ ರಾಮನು ಇದುವರೆವಿಗೂ ಜನರ ಪ್ರೇಮಕ್ಕೆ ಪಾತ್ರನಾಗಿದ್ದನು. ಇನ್ನು ಮೇಲೆ ಹಾಗಿರಲಿಕ್ಕಿಲ್ಲವೆಂದು ಅರ್ಥ;—ಅಥವ, ರಾಮೋ ಭವಿಷ್ಯತಿ - ರಾಮನೊಬ್ಬನೇ ಆಗುತ್ತಾನೆ ಎಂದರ್ಥ. ಇದು **ಗೋವಿಂದರಾಜರ** ಅಭಿಪ್ರಾಯ.

ಅಥವ:—ರಮಯತ್ಯಾನಂದಯತೀತಿ ರಾಮಃ ಎಂಬ ವ್ಯುತ್ಪತ್ತಿಯಿಂದ, ಇದುವರೆನಿಗೂ ಜನಗಳನ್ನು ಸಂತೋಷಗೊಳಿಸುವವನಾಗಿದ್ದನು. ಇನ್ನುಮೇಲೆ ಕಾಡಿನಲ್ಲಿರುವ ಮುನಿಗಳಿಗೆ ಮಾತ್ರ ಆನಂದ ಸಂದಾಯಕನಾಗುತ್ತಾನೆಂದು ಭಾವವು. ಇದು **ಮಹೇಶ್ವರತೀರ್ಥರ** ಮತ.

ಹತಾಮಿತ್ರ ಸ್ತವ ರಾಜಾ ಭವಿಷ್ಯತಿ || ೩೩ || ಯೇನ ಕಾಲೇನ ರಾಮಶ್ಚ
ವನಾತ್ಪ್ರತ್ಯಾಗಮಿಷ್ಯತಿ || ತೇನ ಕಾಲೇನ ಪುತ್ರಸ್ತೇ ಕೃತ ಮೂಲೋ ಭವಿ
ಷ್ಯತಿ || ೩೪ || ಸಂಗೃಹೀತ ಮನುಷ್ಯಶ್ಚ ಸುಹೃದ್ಭಿಸ್ಸಾರ್ಧಮಾತ್ಮವಾನ್ ||
ಪ್ರಾಪ್ತ ಕಾಲಂತು ತೇ ಮನ್ಯೇ ರಾಜಾನಂ ವೀತ ಸಾಧ್ವಸಾ || ೩೫ || ರಾಮಾಭಿ
ಷೇಕ ಸಂಭಾರಾನ್ನಿಗೃಹ್ಯ ವಿನಿವರ್ತಯ || ಅನರ್ಥಮರ್ಥ ರೂಪೇಣ ಗ್ರಾಹಿತಾ
ಸಾ ತತಸ್ತಯಾ || ೩೬ || ಹೃಷ್ಟಾ ಪ್ರತೀತಾ ಕೈಕೇಯೀ ಮಂಥರಾಮಿದ

ತವ - ನಿನ್ನ ಕುವರನಾದ, ಭರತಶ್ಚ - ಭರತನಾದರೋ, ಹತಾಮಿತ್ರಃ, ಹತ - ನಾಶಗೊಳಿಸಲ್ಪಟ್ಟ, ಅಮಿತ್ರಃ - ಶತ್ರುಗಳುಳ್ಳ, ರಾಜಾ - ಅರಸು, ಭವಿಷ್ಯತಿ - ಆಗುವನು. || ೩೩ || ರಾಮಃ - ಶ್ರೀರಾಮನು, ವನಾತ್ - ವನದಿಂದ, ಯೇನಕಾಲೇನ - ಯಾವ ಕಾಲದಲ್ಲಿ, ಪ್ರತ್ಯಾಗಮಿಷ್ಯತಿ - ಮತ್ತೆ ಹಿಂತಿರುಗಿ ಬರುವನೋ, ತೇನಕಾಲೇನ - ಆ ಕಾಲದಲ್ಲಿ, ತೇ ಪುತ್ರಃ - ನಿನ್ನ ಮಗನು, ಕೃತಮೂಲಃ - ದೃಢಮೂಲವುಳ್ಳವನು, ಭವಿಷ್ಯತಿ - ಆಗುವನು, ಸಂಗೃಹೀತ ಮನುಷ್ಯಶ್ಚ, ಸಂಗೃಹೀತ - ಸ್ವಾಧೀನಗೊಳಿಸಲ್ಪಟ್ಟ, ಮನುಷ್ಯಶ್ಚ - ಮನುಷ್ಯರುಳ್ಳವನಾಗಿ, ಸುಹೃದ್ಭಿಸ್ಸಾರ್ಧಂ - ಸ್ನೇಹಿತರೊಡನೆ, ಆತ್ಮವಾನ್ - ಧೈರ್ಯವಂತನು, ಭವಿಷ್ಯತಿ- ಆಗುವನು || ೩೪ || ವೀತಸಾಧ್ವಸಾ, ವೀತ-ಹೋಗಲಾಡಿಸಲ್ಪಟ್ಟ, ಸಾಧ್ವಸಾ - ಭಯವುಳ್ಳವಳಾಗಿ, ರಾಜಾನಂ - ದಶರಥರಾಯನನ್ನು, ರಾಮಾಭಿಷೇಕಸಂಭಾರತ್, ರಾಮ - ಶ್ರೀರಾಮನ, ಅಭಿಷೇಕ - ಪಟ್ಟಾಭಿಷೇಕವಿಷಯಕವಾದ, ಸಂಭಾರಾತ್ - ಸಾಮಗ್ರೀಸಂಪಾದನೇಚ್ಛೆಯಿಂದ, ನಿಗೃಹ್ಯ - ನಿಗ್ರಹಿಸಿ, ವಿನಿವರ್ತಯ - ಹಿಂತಿರಿಗಿಸು, ತೇ - ನಿನಗೆ, ಕಾರ್ಯಂ - ಕಾರ್ಯವನ್ನು, ಪ್ರಾಪ್ತಕಾಲಂ, ಪ್ರಾಪ್ತ - ಹೊಂದಲ್ಪಟ್ಟ, ಕಾಲಂ-ಕಾಲವುಳ್ಳದನ್ನಾಗಿ, ಮನ್ಯೇ - ಎಣಿಸುತ್ತೇನೆ || ೩೫ || ತತಃ - ಬಳಿಕ, ತಯಾ - ಆ ಮಂಥರೆಯಿಂದ, ಅನರ್ಥಂ - ಕೇಡನ್ನು, ಅರ್ಥರೂಪೇಣ - ಪ್ರಯೋಜನರೂಪದಿಂದ, ಗ್ರಾಹಿತಾ - ಗ್ರಹಿಸುವಂತೆ ಮಾಲ್ಪಟ್ಟ, ಪ್ರತೀತ- ಗ್ರಹಿಸಲ್ಪಟ್ಟ ಪ್ರಯೋಜನವುಳ್ಳ, ಸಾ - ಆ ಕೈಕೇಯಿಯು, ಹೃಷ್ಟಾ - ಸಂತೋಷಚಿತ್ತಳಾಗಿ, ಮಂಥರಾಂ - ಮಂಥರಾದೇವಿಯನ್ನು ಕುರಿತು, ಇದಂ ಈ ಮುಂದೆ ಹೇಳತಕ್ಕ ಮಾತನ್ನು, ಅಬ್ರವೀತ್ - ನುಡಿದಳು || ೩೬ || ಸಾಕೈಕೇಯೀ - ಆ ಕೈಕೆಯೀದೇವಿಯು,

---

ಕೋಪಗಾತಿ ! ಕೇಳು, ಈ ಎರಡು ವರಗಳನ್ನು ಬೇಡಿದರೆ ಭರತನು ಸುಖಿಯಾಗುತ್ತಾನೆ. ಹೀಗಾದರೆ ರಾಮನು ರಾಮನೇ ಆಗುತ್ತಾನೆ. ಭರತನಾದರೋ ನಿಶ್ಶತ್ರುವಾದ ರಾಜನಾಗುವನು. ಕೈಕೇಯಿ ! ಶ್ರೀರಾಮನು ವನವಾಸವನ್ನು ಮಾಡಿ ಬರುವುದರೊಳಗಾಗಿ, ಮಹಾಬುದ್ಧಿಶಾಲಿಯಾದ ನಿನ್ನ ಮಗನು, ಮಿತ್ರರೊಡಗೂಡಿ, ಪ್ರಜಾರಂಜನೆಯಂಗೈಯುತ್ತ, ಚತುರಂಗಬಲವನ್ನು ಅಧೀನದಲ್ಲಿಟ್ಟುಕೊಂಡು ಸುಖವಾಗಿರುತ್ತಾನೆ. ಹೀಗೆ ಮಾಡಲು ಇದೇ ನಿನಗೆ ಸುಸಮಯವೆಂದೆಣಿಸುತ್ತೇನೆ. ಆದುದರಿಂದ ಈ ಸಮಯದಲ್ಲಿ ಭಯಪಡದೆ ರಾಯನನ್ನು ನಿರ್ಬಂಧಗೊಳಿಸಿ ಶ್ರೀರಾಮನ ಯೌವರಾಜ್ಯಕ್ಕೆ ಆತಂಕವನ್ನುಂಟುಮಾಡುವವಳಾಗು.”

ಮಬ್ರವೀತ್ ॥ ಸಾಹಿ ವಾಕ್ಯೇನ ಕುಬ್ಜಾಯಾಃ ಕಿಶೋರೀವೋತ್ಪಥಂ ಗತಾ ॥ ೩೭ ॥ ಕೈಕೇಯಿೀ ವಿಸ್ಮಯಂ ಪ್ರಾಪ್ತಾ ಪರಂ ಪರಮ ದರ್ಶನಾ ॥ ಕುಬ್ಜೇ ತ್ವಾಂ ನಾಭಿಜಾನಾಮಿ ಶ್ರೇಷ್ಠಾಂ ಶ್ರೇಷ್ಠಾಭಿಧಾಯಿನೀಮ್ ॥ ೩೮ ॥ ಪೃಥಿವ್ಯಾಮಸಿ ಕುಬ್ಜಾನಾಮುತ್ತಮಾ ಬುದ್ಧಿನಿಶ್ಚಯೇ ॥ ತ್ವಮೇವತು ಮಮಾರ್ಥೇಷು ನಿತ್ಯಯುಕ್ತಾ ಹಿತೈಷಿಣೀ ॥೩೯॥ ನಾಹಂ ಸಮವಬುಧ್ಯೇಯಂ ಕುಬ್ಜೇ ರಾಜ್ಞಶ್ಚಿಕೀರ್ಷಿತಂ ॥ ಸಂತಿ ದುಸ್ಸಂಸ್ಥಿತಾಃ ಕುಬ್ಜಾ ವಕ್ರಾಃ ಪರಮ ದಾರುಣಾಃ ॥ ೪೦ ॥ ತ್ವಂ ಪದ್ಮಮಿವ ವಾತೇನ ಸನ್ನತಾ ಪ್ರಿಯದರ್ಶನಾ ॥ ಉರಸ್ತೇಽಭಿನಿವಿಷ್ಟಂ ವೈ ಯಾತತ್ಸ್ಕಂಧಾತ್ಸಮುನ್ನತಂ ॥ ೪೧ ॥ ಅಧಸ್ತಾ

ಕುಬ್ಜಾಯಾಃ - ಮಂಥರೆಯ, ವಾಕ್ಯೇನ - ಮಾತಿನಿಂದ, ಕಿಶೋರೀವ - ಶಿಕ್ಷಿಸಲ್ಪಡುತ್ತಿರುವ ಹೆಣ್ಣುದುರೆಯ ಪರಿಯಂತೆ, ಉತ್ಪಥಂ - ದುರ್ಮಾರ್ಗವನ್ನು, ಗತಾ-ಹೊಂದಿ, ಪರಂ-ಅತ್ಯಂತವಾಗಿ, ಅದರ್ಶನಾ - ವಿರುದ್ಧದೃಷ್ಟಿಯುಳ್ಳವಳಾಗಿ, ಪರಂ - ಬಹಳವಾದ, ವಿಸ್ಮಯಂ - ಆಶ್ಚರ್ಯವನ್ನು, ಪ್ರಾಪ್ತಾ - ಹೊಂದಿದಳು ॥ ೩೭ ॥ ಹೇಕುಬ್ಜೇ - ಎಲೌ ಮಂಥರೆಯೆ, ತ್ವಾಂ - ನಿನ್ನನ್ನು, ಶ್ರೇಷ್ಠಾಂ - ಶ್ರೇಷ್ಠಳನ್ನಾಗಿ, ಶ್ರೇಷ್ಠಾಭಿಧಾಯಿನೀಂ - ಒಳ್ಳೇಯಮಾತುಗಳನ್ನು ಹೇಳುವಳನ್ನಾಗಿಯೂ, ನಾಭಿಜಾನಾಮಿ - ತಿಳಿಯದೆಹೋದೆ, ಪೃಥಿವ್ಯಾಂ - ಪ್ರಪಂಚದಲ್ಲಿ, ಬುದ್ಧಿನಿಶ್ಚಯೇ - ನಿಶ್ಚಿತಬುದ್ಧಿಯಲ್ಲಿ, ಕುಬ್ಜಾನಾಂ - ಕುಬ್ಜರಾದ ಅಂತಃಪುರಸ್ತ್ರೀಯರೊಳಗಾಗಿ, ಉತ್ತಮಾ - ಶ್ರೇಷ್ಠಳು, ಅಸಿ - ಆಗಿರುವೆ. ॥ ೩೮ ॥ ತ್ವಮೇವ - ನೀನೆ, ಮಮ - ನನ್ನ, ಅರ್ಥೇಷು - ಪ್ರಯೋಜನಗಳಲ್ಲಿ, ನಿತ್ಯಯುಕ್ತಾ - ನಿರಂತರವೂ ಆಸಕ್ತಳಾಗಿ, ಹಿತೈಷಿಣೀಹಿ - ಹಿತವನ್ನು ಕೋರುವವಳಷ್ಟೆ/ ಹೇ ಕುಬ್ಜೇ - ಎಲೈ ಕುಬ್ಜಳೇ, ಅಹಂ - ಆತನಿಗೆ ಪ್ರಿಯಸತಿಯಾದ ನಾನು, ರಾಜಃ - ಅರಸಾದ ದಶರಥರಾಯನ, ಚಿಕೀರ್ಷಿತಂ - ಮಾಡಲಿಚ್ಛಾವಿಷಯವಾದ ಕಾರ್ಯವನ್ನು, ನಸಮವಬುಧ್ಯೇಯಂ - ತಿಳಿಯದೆಹೋದೆ. ॥ ೩೯ ॥ ದುಸ್ಸಂಸ್ಥಿತಾಃ - ದುಷ್ಟವಾದ ಅವಯವಸ್ಥಿತಿಗಳುಳ್ಳ, ವಕ್ರಾಃ - ವಕ್ರರಾದ, ಪರಮದಾರುಣಾಃ - ಬಹಳ ಕ್ರೂರರಾದ, ಕುಬ್ಜಾಃ - ಕುಬ್ಜರು, ಸಂತಿ - ಇದ್ದಾರೆ,/ ತ್ವಂ - ನೀನು, ವಾತೇನ - ಗಾಳಿಯಿಂದ, ಪದ್ಮಮಿವ-ಬಗ್ಗಿದ ಕಮಲದಂತೆ, ಸನ್ನತಾ - ನಮ್ರಳಾಗಿ, ಪ್ರಿಯದರ್ಶನಾ - ಇಷ್ಟವಾದ ನೋಟವುಳ್ಳವಳು, ಅಸಿ - ಆಗಿರುವೆ. ॥ ೪೦ ॥ ತೇ - ನಿನ್ನ, ಉರಃ - ವಕ್ಷಸ್ಥಳವು, ಯಾತತ್ಸ್ಕಂಧಾತ್ - ಭುಜಶಿರಸ್ಸುಗಳ ಪರಿಯಂತ, ಸಮುನ್ನತಂ - ಉನ್ನತವಾಗಿ, ಅಭಿನಿವಿಷ್ಟಂ - ಉಭಯಪಾರ್ಶ್ವಗಳಲ್ಲಿಯೂ ಇರಿಸಲ್ಪಟ್ಟಿಧೆ/ ಅಧಸ್ತಾತ್ - ಕೆಳಭಾಗದಲ್ಲಿ, ಉದರಂ - ಉದರವು, ಸುನಾಭಂ - ಸಮೀಚೀನವಾದ ನಾಭೀಪ್ರದೇಶವುಳ್ಳುದಾಗಿ, ಲಜ್ಜಿತಮಿವ - ನಾಚಿಕೆಯುಳ್ಳುದಂತೆ, ಶಾಂತಂ - ನಿರ್ವ್ಯಾಪಾರವಾಗಿ ಕೃಶವಾಗಿರುವುದು. ॥ ೪೧ ॥ ಹೇ ಮಂಥರೇ - ಎಲೈ

['೩೭-೩೮॥ ಮಂಥರೆಯು ಹೀಗೆನ್ನಲು, ಕೈಕೇಯಿೀದೇವಿಯು ಶ್ರೀರಾಮಚಂದ್ರನ ವನವಾಸವು ತನ್ನ ಅನರ್ಥಪರಂಪರೆಗೆ ಕಾರಣವಾದರೂ, ಅನುಕೂಲವಾಗಿರುವುದೆಂಬ ಮಂಥರೆಯ ಮಾತಿಗೆ ಒಳಗಾಗಿ, ಬಹಳವಾದ ಸಂತೋಷವನ್ನು ಹೊಂದಿ ಆಶ್ಚರ್ಯದಿಂದೊಡಗೂಡಿ ಅವ

ಜ್ಯೋದರಂ ಶಾಂತಂ ಸುಸಾಭಮಿವ ಲಜ್ಜಿತಂ ॥ ಪರಿಪೂರ್ಣಂ ತು ಜಘನಂ ಸುಪೀನೌ ಚ ಪಯೋಧರೌ ॥ ೪೨ ॥ ವಿಮಲೇಂದು ಸಮಂ ವಕ್ತ್ರಮಹೋ ರಾಜಸಿ ಮಂಥರೇ ॥ ಜಘನಂ ತವ ನಿರ್ಘುಷ್ಟಂ ರಶನಾದಾಮ ಶೋಭಿತಂ ॥ ೪೩ ॥ ಜಂಘೇ ಭೃಶಮುಪನ್ಯಸ್ತೇ ಪಾದೌಚಾಪ್ಯಾಯತಾ ವುಭೌ ॥ ತ್ವಮಾಯತಾಭ್ಯಾಂ ಸಕ್ಥಿಭ್ಯಾಂ ಮಂಥರೇ ಕ್ಷೌಮ ವಾಸಿನೀ ॥೪೪॥ ಅಗ್ರತೋ ಮಮ ಗಚ್ಛಂತೀ ರಾಜಹಂಸೀವ ರಾಜಸೇ ॥ ಆಸನ್ಯಾಶ್ಶಂಬರೇ ಮಾಯಾ ಸ್ಸಹಸ್ರಮಸುರಾಧಿಪೇ ॥ ೪೫ ॥ ಸರ್ವಾಸ್ತ್ವಯಿ ನಿವಿಷ್ಟಾ ಸ್ತಾ ಭೂಯ

ಮಂಥರೆಯೆ! ಜಘನಂತು-ಕಟಿಪುರೋಭಾಗವಾದರೊ, ಪರಿಪೂರ್ಣ-ವಿಸ್ತಾರವಾಗಿರುವುದು, ಪಯೋಧರೌಚ - ಸ್ತನಗಳೂ, ಸುಪೀನೌ - ಬಲಿತಿವೆ,| ವಕ್ತ್ರಂ - ಮುಖವು, ವಿಮಲೇಂದುಸಮಂ, ವಿಮಲ - ನಿಷ್ಕಳಂಕವಾದ, ಇಂದುಸಮಂ - ಚಂದ್ರನಿಗೆ ಸಮಾನವಾಗಿರುವುದು, ಅಹೋ - ಆಶ್ಚರ್ಯಕರವಾಗಿ, ರಾಜಸಿ - ಹೊಳೆಯುತ್ತಿವೆ. ॥ ೪೨ ॥ ತವ - ನಿನ್ನ, ಜಘನಂ - ಕಟಿಪುರೋಭಾಗವು, ರಶನಾದಾಮ ಶೋಭಿತಂ, ರಶನಾದಾಮ - ಹಗ್ಗದಂತಿರುವ ಏಳೆಳೆಗಳುಳ್ಳ ಒಡ್ಯಾಣದಿಂದ, ಶೋಭಿತಂ - ಪ್ರಕಾಶಿಸಲ್ಪಟ್ಟು,|ನಿರ್ಘುಷ್ಟಂ - ಧ್ವನಿಮಾಡುತ್ತಿರುವುದು, ಜಂಘೇ - ಮೊಣಕಾಲುಗಳು, ಭೃಶಂ - ಅತ್ಯಂತವಾಗಿ, ಉಪನ್ಯಸ್ತೇ - ಒಳ್ಳೆಯ ಅವಯವಾಕೃತಿಗಳಿಂದ ಕೂಡಲ್ಪಟ್ಟಿರುವುದು, ಉಭೌ - ಎರಡಾದ, ಪಾದೌಚಾಪಿ - ಪಾದಗಳೂ, ಆಯತೌ - ದೀರ್ಘಗಳಾಗಿವೆ. ॥ ೪೩ ॥ ಹೇ ಮಂಥರೇ - ಎಲೌ ಮಂಥರೆಯೆ, ಕ್ಷೌಮವಾಸಿನೀ - ಪಟ್ಟೆ ದುಕೂಲವನ್ನುಟ್ಟುಕೊಂಡಿರುವ, ತ್ವಂ - ನೀನು, ಆಯತಾಭ್ಯಾಂ - ವಿಸ್ತಾರವಾದ, ಸಕ್ಥಿಭ್ಯಾಂ-ಊರುಗಳಿಂದ, ಮಮ-ನನ್ನ, ಅಗ್ರತಃ - ಮುಂಗಡೆ, ಗಚ್ಛಂತೀ - ಹೋಗುತ್ತ, ರಾಜಹಂಸೀವ - ರಾಜಹಂಸಪಕ್ಷಿಯಂತೆ, ರಾಜಸಿ - ಹೊಳೆಯುತ್ತಿರುವೆ. ॥ ೪೪ ॥ ಅಸುರಾಧಿಪೇ - ರಾಕ್ಷಸಾಧಿಪತಿಯಾದ, ಶಂಬರೇ - ಶಂಬರಾಸುರನಲ್ಲಿ, ಸಹಸ್ರಂ - ಸಾವಿರ, ಯಾಮಾಯಾಃ - ಯಾವಮಾಯೆಗಳು, ಆಸನ್ - ಇದ್ದುವೋ, ಸರ್ವಾಃ - ಸಮಸ್ತಗಳಾದ, ತಾಃ - ಆ ಮಾಯಗಳೂ, ಅನ್ಯಾಃ - ಮತ್ತೂ ಕೆಲವಾದ ಮಾಯೆಗಳೂ, ಸಹಸ್ರಶಃ - ಸಾವಿರಾರುಗಳು, ಭೂಯಃ - ಮತ್ತೂ, ತ್ವಯಿ - ನಿನ್ನಲ್ಲಿ, ನಿವಿಷ್ಟಾಃ - ಇರಿಸಲ್ಪಟ್ಟಿರುವುವು. ॥ ೪೫ ॥ ತವ - ನಿನ್ನ ಸಂಬಂಧ

ಳನ್ನು ಕುರಿತು ಇಂತೆಂದಳು: "ಎಲೌ ಕುಬ್ಜಮಂಥರೆಯೆ! ನೀನು ಹಿತೋಪದೇಶಮಾಡುವುದರಲ್ಲಿ ಸಮರ್ಥಳೂ, ಶ್ರೇಷ್ಠಳೂ ಎಂಬುದನ್ನು ನಾನಿದುವರೆವಿಗೂ ತಿಳಿದೇ ಇರಲಿಲ್ಲವು. ಕೇಳು; ಈ ಪ್ರಪಂಚದಲ್ಲಿ ಎಷ್ಟುಮಂದಿ ಕುಬ್ಜೆಯರಿರುವರೋ ಅವರಲ್ಲಿ ನೀನೊಬ್ಬಳೇ ನಿಶ್ಚಿತಜ್ಞಾನದಲ್ಲಿ ಉತ್ತಮಳಾಗಿರುವೆ. ಮಂಥರೆ! ದಶರಥರಾಯನು ಶ್ರೀರಾಮಚಂದ್ರನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿಸುತ್ತಾನೆಂಬುದನ್ನು ಆತನ ಪ್ರಿಯಪತ್ನಿಯಾದ ನಾನೇ ತಿಳಿಯಲಿಲ್ಲ. ಎಲ್ಲ ಸಮಯಗಳಲ್ಲಿಯೂ ನನ್ನ ಕಾರ್ಯದಲ್ಲಿಯೇ ಉದ್ಯುಕ್ತಳಾಗಿ, ನನಗೆ ಹಿತಕಾಂಕ್ಷಿಣಿಯಾದುದರಿಂದ ನೀನದನ್ನು ತಿಳಿದು ನನಗೆ ಹೇಳಿರುವೆ. ಅರಮನೆಯಲ್ಲಿ ಅನೇಕಮಂದಿ ಕುಬ್ಜೆಯರಿದ್ದಾರೆ. ಆದರೇನು? ಅವರೆಲ್ಲರೂ ವಕ್ರವಕ್ರವಾದ ಅವಯವ

ಶ್ಚಾನ್ಯಾ ಸ್ಸಹಸ್ರಶಃ ॥ ತವೇದಂ ಸ್ಥಗು ಯದ್ದೀರ್ಘಂ ರಥಘೋಣಮಿವಾ
ಯತಂ ॥ ೪೬ ॥ ಮತಯಃ ಕ್ಷತ್ರ ವಿದ್ಯಾಶ್ಚ ಮಾಯಾಶ್ಚಾತ್ರ ವಸಂತಿ ತೇ ॥
ಅತ್ರ ತೇ ಪ್ರತಿಮೋಕ್ಷ್ಯಾಮಿ ಮಾಲಾಂ ಕುಬ್ಜೇ ಹಿರಣ್ಮಯೀಂ ॥ ೪೭ ॥ ಅಭಿಷಿ
ಕ್ತೇಚ ಭರತೇ ರಾಘವೇಚ ವನಂ ಗತೇ ॥ ಜಾತ್ಯೇನ ಚ ಸುವರ್ಣೇನ ಸುನಿಷ್ಟ
ಪ್ತೇನ ಮಂಥರೇ ॥ ೪೮ ॥ ಲಬ್ಧಾರ್ಥಾ ಚ ಪ್ರತೀತಾಚ ಲೇಪಯಿಷ್ಯಾಮಿ
ತೇ ಸ್ಥಗು ॥ ಮುಖೇಚ ತಿಲಕಂ ಚಿತ್ರಂ ಜಾತರೂಪಮಯಂ ಶುಭಂ ॥ ೪೯ ॥

ವಾದ, ಇದಂ - ಈಪರಿದೃಶ್ಯಮಾನವಾದ, ಸ್ಥಗು - ವಕ್ಷಸ್ಥಳದ ಉನ್ನತಾಕಾರವುಳ್ಳ ಅವಯವವು, ಯತ್ - ಯಾವದುಂಟೋ, ರಥಘೋಣಮಿವ, ರಥ - ರಥದ, ಘೋಣಮಿವ - ಚಕ್ರದ ಗಂಡಿಗಳ ಸಮೀಪದಲ್ಲಿರುವ ಉನ್ನತಪ್ರದೇಶದಂತೆ, ಆಯತಂ - ವಿಸ್ತಾರವಾಗಿದೆ, ಮತಯಃ - ಬುದ್ಧಿವಿಶೇಷಗಳು, ಕ್ಷತ್ರವಿದ್ಯಾಶ್ಚ - ಕ್ಷತ್ರಿಯರ ರಾಜನೀತಿಗಳೂ, ಮಾಯಾಶ್ಚ - ಮಾಯೆಗಳೂ, ತೇ - ನಿನ್ನ, ಅತ್ರ - ಈ ನಾಭಿಯ ಉನ್ನತಪ್ರದೇಶದಲ್ಲಿ, ವಸಂತಿ - ಇವೆ. ॥ ೪೬ ॥ ಹೇ ಕುಬ್ಜೇ - ಎಲೈ ಕುಬ್ಜಳೇ, ಭರತೇ - ಭರತನು, ಅಭಿಷಿಕ್ತೇ - ಪಟ್ಟಾಭಿಷಿಕ್ತನಾದರೆ, ರಾಘವೇಚ - ಶ್ರೀರಾಮನೂ, ವನಂ - ವನವನ್ನು ಕುರಿತು, ಗತೇ - ಹೋಗಲು, ತೇ ನಿನ್ನ, ಅತ್ರ - ಈ ಎದೆಯಲ್ಲಿ, ಹಿರಣ್ಮಯೀಂ - ಭಂಗಾರದ, ಮಾಲಾಂ - ಮಾಲಿಕೆಯನ್ನು, ಪ್ರತಿಮೋಕ್ಷ್ಯಾಮಿ - ಕಟ್ಟುತ್ತೇನೆ. ॥ ೪೭ ॥ ಹೇ ಮಂಥರೇ - ಎಲೌ ಮಂಥರೆಯೆ, ಅಹಂ - ನಾನು, ಲಬ್ಧಾರ್ಥಾಚ - ಹೊಂದಲ್ಪಟ್ಟ ಕಾರ್ಯವುಳ್ಳವಳಾಗಿ, ಪ್ರತೀತಾಚ - ಸಂತುಷ್ಟಳಾಗಿ, ಸುನಿಷ್ಟಪ್ತೇನ - ಚನ್ನಾಗಿ ಕಾಯಿಸಲ್ಪಟ್ಟ, ಜಾತ್ಯೇನ - ಉತ್ತಮವಾದ, ಸುವರ್ಣೇನ - ಚಿನ್ನದ ಮಾಲಿಕೆಯಿಂದ, ತೇ - ನಿನ್ನ, ಸ್ಥಗು - ವಕ್ಷಸ್ಥಳದ ಉನ್ನತ ಪ್ರದೇಶವನ್ನು, ಲೇಪಯಿಷ್ಯಾಮಿ - ಅಲಂಕರಿಸುತ್ತೇನೆ, (ಗೋ) ಸುವರ್ಣಕಂಚುಕದಿಂದ, ಲೇಪಯಿಷ್ಯಾಮಿ - ಅಲಂಕರಿಸುತ್ತೇನೆ, (ಮ) ಸುವರ್ಣಾಲಂಕೃತವಾದ ನಿನ್ನ ವಕ್ಷಸ್ಥಲವನ್ನು ಶ್ರೀಗಂಧದಿಂದ ಅರೆಯಲ್ಪಟ್ಟ ಭಂಗಾರದ ನೀರಿನಿಂದ ಲೇಪನಮಾಡಿಸುವೆನು, (ಗೋ) ಚಿನ್ನದ ಬಣ್ಣವುಳ್ಳ ಶ್ರೀಗಂಧದಿಂದ ಲೇಪನಮಾಡಿಸುವೆನು. ॥೪೮॥ ಹೇ ಕುಬ್ಜೆ - ಎಲೌ ಮಂಥರೆಯೇ, ತೇ - ನಿನ್ನ, ಮುಖೇಚ - ಮುಖದಲ್ಲಿ, ಜಾತರೂಪಮಯಂ - ಚಿನ್ನದ, ಚಿತ್ರಂ - ನಾನಾರತ್ನಪ್ರಭೆಗಳಿಂದ ಚಿತ್ರಬಣ್ಣವುಳ್ಳ, ಶುಭಂ - ಶೋಭಾಯಮಾನವಾದ, ತಿಲಕಂ - ತಿಲಕವನ್ನು, ಕಾರಯಿಷ್ಯಾಮಿ - ಮಾಡಿಸುವೆನು,

---

ಗಳುಳ್ಳವರು; ಮಾತ್ರವಲ್ಲದೆ ಮಹಾಕ್ರೂರಿಗಳು ; ನೀನಾದರೋ ಗಾಳಿಗೆ ಬಗ್ಗುವ ತಾವರೆಯಂತೆ ನಮ್ರಳಾಗಿಯೂ, ಇಷ್ಟವಾದ ನೋಟವುಳ್ಳವಳಾಗಿಯೂ ಇರುವೆ. ॥೩೬-೪೦॥ ನಿನ್ನ ವಕ್ಷಸ್ಥಳವು ಭುಜ ಶಿರಸ್ಸುಗಳವರೆವಿಗೂ ಉನ್ನತವಾಗಿದೆ; ಅದರ ಕೆಳಭಾಗದಲ್ಲಿ ಉದರವು ಸೊಗಸಾದ ನಾಭಿಪ್ರದೇಶವುಳ್ಳದಾಗಿ, ನಾಚಿಕೆಯನ್ನೊಳಗೊಂಡಂತೆ ವ್ಯಾಪಾರ ಶೂನ್ಯವಾಗಿಯೂ ಇರುವುದು; ವಿಸ್ತಾರವಾದ ಜಘನ; ಪ್ರೌಢಗಳಾದ ಪೂರ್ವಾರಗಳು; ಕಳಂಕರಹಿತನಾದ ಚಂದ್ರನಂತಿರುವ ಮುಖ, ಇವುಗಳಿಂದೊಡಗೂಡಿ ಬಹಳವಾಗಿ ಕಂಗೊಳಿಸುತ್ತಿರುವೆ. ನಿನ್ನ ಕಟಿ ಪುರೋಭಾಗವು ಏಳೆಳೆಗಳುಳ್ಳ ರಜ್ಜುವಿನಂತೆ, ಒಡ್ಯಾಣದಿಂದ ಹೊಳೆಯುತ್ತಲೂ

ಕಾರಯಿಷ್ಯಾಮಿ ತೇ ಕುಬ್ಜೇ ಶುಭಾನ್ಯಾಭರಣಾನಿಚ ॥ ಪರಿಧಾಯ ಶುಭೇ
ವಸ್ತ್ರೇ ದೇವತೇವ ಚರಿಷ್ಯಸಿ ॥೫೦॥ ಚಂದ್ರಮಾಹ್ವಯಮಾನೇನ ಮುಖೇನಾ
ಪ್ರತಿಮಾನನಾ ॥ ಗಮಿಷ್ಯಸಿ ಗತಿಂ ಮುಖ್ಯಾಂ ಗರ್ವಯಂತೀ ದ್ವಿಷಜ್ಜನಂ॥೫೧॥
ತವಾಪಿ ಕುಬ್ಜಾಃ ಕುಬ್ಜಾಯಾಃ ಸರ್ವಾಭರಣ ಭೂಷಿತಾಃ ॥ ಪಾದೌ ಪರಿಚರಿ
ಷ್ಯಂತಿ ಯಥೈವ ತ್ವಂ ಸದಾ ಮಮ ॥ ೫೨ ॥ ಇತಿ ಪ್ರಶಸ್ಯಮಾನಾ ಸಾ
ಕೈಕೇಯೀಮಿದಮಬ್ರವೀತ್ ॥ ಶಯಾನಾಂ ಶಯನೇ ಶುಭ್ರೇ ವೇದ್ಯಾ
ಮಗ್ನಿ ಶಿಖಾಮಿವ ॥ ೫೩ ॥ ಗತೋದಕೇ ಸೇತುಬಂಧೋ ನಕಲ್ಯಾಣಿ ವಿಧೀ

ಶುಭಾನಿ - ಶುಭಕರಗಳಾದ, ಆಭರಣಾನಿ - ಭೂಷಣಗಳನ್ನು, ಪರಿಧಾಯ - ಧರಿಸಿಕೊಂಡು, ಶುಭೇ - ಶುಭಕರಗಳಾದ, ವಸ್ತ್ರೇ - ವಸ್ತ್ರಗಳನ್ನು, ಪರಿಧಾಯ - ಉಟ್ಟು, ದೇವತೇವ - ದೇವಕನ್ನಿಕೆಯಂತೆ, ಚರಿಷ್ಯಸಿ - ಸಂಚರಿಸುವೆ. ॥ ೫೦ ॥ ಚಂದ್ರಂ - ಚಂದ್ರನನ್ನು, ಆಹ್ವಯಮಾನೇನ - ಕರಿಯುತ್ತದೋ ಎಂಬಂತಿರುವ, ಮುಖೇನ - ಮುಖದಿಂದ, ಅಪ್ರತಿಮಾ - ಸಮಾನವಿಲ್ಲದ, ಆನನಾ - ಮುಖವುಳ್ಳವಳಾಗಿ, ದ್ವಿಷಜ್ಜನಂ - ಶತ್ರುಜನವನ್ನು ಕುರಿತು, ಗರ್ವಯಂತೀ - ಗರ್ವಬೀಳುವವಳಾಗಿ, ಮುಖ್ಯಾಂ - ರಮಣೀಯವಾದ, ಗತಿಂ - ಪದನ್ಯಾಸವಿಶೇಷವನ್ನು, ಗಮಿಷ್ಯಸಿ - ನಡೆವೆ. ॥ ೫೧ ॥ ಕುಬ್ಜಾಯಾಃ - ಗಿಡ್ಡಗಿರುವ, ತವ - ನಿನ್ನ ಸಂಬಂಧವಾದ, ಕುಬ್ಜಾಃ - ಕುಬ್ಜೆಯರು, ಸರ್ವಾಭರಣ ಭೂಷಿತಾಃ - ಸಮಸ್ತವಾದ ಆಭರಣಗಳಿಂದ ಅಲಂಕೃತರಾಗಿ, ತ್ವಂ - ನೀನು, ಮಮ - ನನಗೆ, ಯಥಾ - ಹೇಗೋ, ತಥೈವ - ಹಾಗೆಯೆ, ತವ - ನಿನ್ನ, ಪಾದೌ - ಚರಣಗಳನ್ನು, ಸದಾ - ನಿರಂತರವೂ, ಪರಿಚರಿಷ್ಯಂತಿ - ಸೇವಿಸುವರು. ॥ ೫೨ ॥ ಇತಿ - ಈಪರಿಯಾಗಿ, ಪ್ರಶಸ್ಯಮಾನಾ - ಸ್ತೋತ್ರ ಮಾಡಲ್ಪಟ್ಟ, ಸಾ - ಆ ಮಂಥರೆಯು, ವೇದ್ಯಾಂ - ಬಹಿರ್ವೇದಿಕೆಯಲ್ಲಿರುವ, ಅಗ್ನಿಶಿಖಾಮಿವ - ಅಗ್ನಿಜ್ವಾಲೆಯಂತೆ, ಶುಭ್ರೇ - ಬಿಳಿತಾಗಿರುವ, ಶಯನೇ - ಹಾಸಿಗೆಯಲ್ಲಿ, ಶಯಾನಾಂ - ಮಲಗಿರುವ, ಕೈಕೇಯೀಂ - ಕೈಕೆಯೀದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ ನುಡಿದಳು. ॥ ೫೩ ॥ ಹೇ ಕಲ್ಯಾಣಿ - ಎಲೌ ಶುಭಕರಳೆ, ಗತೋದಕೇ - ಹರಿದು ಹೋದ

ಧ್ವನಿಗೊಳಿಸುತ್ತಿರುವುದಾಗಿಯೂ ಇರುವುದು. ಮಂಥರೆ ! ಬಿಳಿವಸ್ತ್ರಗಳನ್ನುಟ್ಟಿರುವ ನೀನು ವಿಶಾಲವಾದ ಊರುಯುಗ್ಮಗಳಿಂದ ನನ್ನ ಮುಂಗಡೆ ಮೆಲ್ಲಮೆಲ್ಲನೆ ನಡೆಯುತ್ತ ಮರಾಳ ಪಕ್ಷಿಯಂತೆ ಹೊಳೆಯುತ್ತಿರುವೆ, ರಾಕ್ಷಸರೊಡೆಯನಾದ ಶಂಭರಾಸುರನಲ್ಲಿರುವ ಮಾಯೆಗಳಿಗಿಂತಲೂ ನಿನ್ನಲ್ಲಿ ಇನ್ನೂಕೆಲವು ಮಾಯೆಗಳು ಹೆಚ್ಚಾಗಿವೆ. ॥೪೧-೪೫॥ ರಥವು ತನ್ನ ಅಚ್ಚಿನಮೇಲಿರುವ ಕುದುರೆ, ಗಾಲಿ, ಮರ ಇವುಗಳನ್ನು ಹೇಗೆ ಗೋಪ್ಯವಾಗಿಟ್ಟುಕೊಂಡಿರುವುದೋ ಹಾಗೆ ನೀನು ನಿನ್ನ ಹೃದಯದಲ್ಲಿ ಮಾಯೆಗಳೆಲ್ಲವನ್ನೂ ಅಡಕಮಾಡಿಟ್ಟುಕೊಂಡಿರುವೆ. ಬುದ್ಧಿಯ ಕುಶಲತೆ, ರಾಜನೀತಿ, ಮಾಯೆ ಇವೆಲ್ಲವೂ ನಿನ್ನಲ್ಲಿರುವುದು. ಕೇಳೆಲೇ ಕುಬ್ಜೆ! ಭರತನು ಪಟ್ಟಾಭಿಷಿಕ್ತನಾಗಿ, ಶ್ರೀರಾಮನು ವನವಾಸಕ್ಕೆ ತೆರಳಿದೊಡನೆಯೆ, ನಿನ್ನ ಕೊರಳಿಗೆ ಚಿನ್ನದ ಮಾಲೆಯನ್ನು ಹಾಕುತ್ತೇನೆ; ಅಪರಂಜಿಯ ಕುಪ್ಪಸವನ್ನು ತೊಡಿಸುತ್ತೇನೆ; ಅನೇಕ ಪರಿ

ಯತೇ || ಉತ್ತಿಷ್ಠ ಕುರು ಕಲ್ಯಾಣಂ ರಾಜಾನಮನುದರ್ಶಯ || ೩೪ ||
ತಥಾಪ್ರೋತ್ಸಾಹಿತಾ ದೇವೀ ಗತ್ವಾ ಮಂಥರಯಾ ಸಹ|| ಕ್ರೋಧಾಗಾರಂ ವಿಶಾ
ಲಾಕ್ಷೀ ಸೌಭಾಗ್ಯಮದಗರ್ವಿತಾ || ೩೫ || ಅನೇಕ ಶತಸಾಹಸ್ರಂ ಮುಕ್ತಾ
ಹಾರಂ ವರಾಂಗನಾ || ಅವಮುಚ್ಯ ವರಾರ್ಹಾಣಿ ಶುಭಾನ್ಯಾಭರಣಾನಿಚ ||೩೬||
ತತೋ ಹೇಮೋಪಮಾ ತತ್ರ ಕುಬ್ಜಾವಾಕ್ಯ ವಶಂಗತಾ || ಸಂವಿಶ್ಯ ಭೂಮೌ
ಕೈಕೇಯೀ ಮಂಥರಾಮಿದಮಬ್ರವೀತ್ || ೩೭ || ಇಹವಾ ಮಾಂ ಮೃತಾಂ

ಉದಕವುಳ್ಳ ಪ್ರದೇಶದಲ್ಲಿ, ಸೇತುಬಂಧಾ - ಕಟ್ಟೆಕಟ್ಟುವುದು, ನವಿಧೀಯತೇ - ಮಾಡಲ್ಪಡುವದಿಲ್ಲ, ಉತ್ತಿಷ್ಠ - ಏಳು, ಮದ್ವಚನಂ - ನನ್ನ ಮಾತನ್ನು, ಕುರು - ಮಾಡು, ರಾಜಾನಂ - ಅರಸನನ್ನು, ಕ್ರೋಧಾಗಾರಂ - ಸ್ತ್ರೀಯರು ಕೋಪ ಮಾಡಿಕೊಂಡು ಮಲಗುವ ಮನೆಯನ್ನು, ಅನುದರ್ಶಯ - ನಿರೀಕ್ಷಿಸು. || ೩೪ || ತಥಾ - ಹಾಗೆ, ಪ್ರೋತ್ಸಾಹಿತಾ - ಉತ್ಸಾಹಗೊಳಿಸಲ್ಪಟ್ಟ, ವಿಶಾಲಾಕ್ಷೀ- ವಿಸ್ತಾರವಾದ ನೇತ್ರಗಳುಳ್ಳ, ಸೌಭಾಗ್ಯಮದ ಗರ್ವಿತಾ, ಸೌಭಾಗ್ಯ - ಸೌಂದರ್ಯದಿಂದ ಹುಟ್ಟಿದ, ಮದ - ಮತ್ತತೆಯಿಂದ, ಗರ್ವಿತಾ - ಕೊಬ್ಬಿದ, ವರಾಂಗನಾ - ಶ್ರೇಷ್ಠ ಸ್ತ್ರೀಯಾದ, ಹೇಮೋ ಪಮಾ - ಚಿನ್ನದ ಬಣ್ಣಕ್ಕೆ ಸರಿಯಾದ ಬಣ್ಣವುಳ್ಳ, ಕೈಕೇಯೀದೇವಿ - ಕೈಕೇಯೀ ದೇವಿಯು, ಮಂಥರಾಯಾಸಹ - ಮಂಥರೆಯೊಡಗೂಡಿ, ಕ್ರೋಧಾಗಾರಂ - ಕೋಪಮಾಡತಕ್ಕ ಮನೆಯನ್ನು, ಗತ್ವಾ - ಹೊಂದಿ, ಅನೇಕ ಶತಸಾಹಸ್ರಂ - ಅನೇಕ ಸಹಸ್ರ ನಿಷ್ಕಗಳ ಮೌಲ್ಯವುಳ್ಳ, ಮುಕ್ತಾಹಾರಂ- ಮುತ್ತುಗಳ ಸರವನ್ನು, ವರಾರ್ಹಾಣಿ - ಶ್ರೇಷ್ಠಗಳಾದ, ಶುಭಾನಿ - ಶುಭಕರಗಳಾದ, ಆಭರಣಾನಿಚ- ಒಡವೆಗಳನ್ನು, ಅವಮುಚ್ಯ - ತೆಗೆದುಹಾಕಿ, ಕುಬ್ಜಾವಾಕ್ಯವಶಂಗತಾ - ಮಂಥರೆಯ ಮಾತಿಗೆ ಸ್ವಾಧೀನಳಾಗಿ, ತತ್ರ - ಆ ಕ್ರೋಧಾಗಾರದಲ್ಲಿ, ಭೂಮೌ - ನೆಲದಲ್ಲಿ, ಸಂವಿಶ್ಯ - ಮಲಗಿ, ಮಂಥರಾಂ - ಮಂಥರೆಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದಳು. ||೩೭||

ಮಳ ದ್ರವ್ಯಗಳನಿತ್ತು, ನಿನ್ನ ಮುದ್ದುಮುಖಕ್ಕೆ ಕಸ್ತೂರಿಯಬಟ್ಟನ್ನಿಡುತ್ತೇನೆ; ಇಷ್ಟೆ ಯಲ್ಲದೆ ಉತ್ತಮವಾದ ವಸ್ತ್ರಗಳನ್ನೂ, ಅಮೂಲ್ಯಗಳಾದ ಆಭರಣಗಳನ್ನೂ ಕೊಡುತ್ತೇನೆ. ನೀನಿವುಗಳೆಲ್ಲವನ್ನೂ ತೊಟ್ಟು ದೇವಕನ್ನಿಕೆಯಂತೆ ತಿರುಗುತ್ತಿರು. ಆಗ ಚಂದ್ರನನ್ನು ಕರೆ ಯುತ್ತಿರುವುದೋ ಎಂಬಂತಿರುವ ಮುಖದಿಂದೊಪ್ಪಿ ಶತ್ರುಜನರನ್ನು ನೋಡಿ ಗರ್ವಪಡುತ್ತ ಮನೋಹರವಾದ ನಿನ್ನ ಕಾಲುಗಳಿಂದ ಹೆಜ್ಜೆಯನ್ನಿಡುತ್ತಿರುವವಳಾಗು. ಈಗ ನೀನು ನನಗೆ ಹೇಗೆ ಪಾದಸೇವೆಯನ್ನು ಮಾಡುತ್ತಿರುವೆಯೋ ಹಾಗೆ ನಿನ್ನನ್ನು ಆಗ ಅನೇಕ ಆಭರಣಾದಿ ಗಳಿಂದಲಂಕೃತರಾದ ಕುಬ್ಜೆಯರು ಸೇವೆಮಾಡುತ್ತಾರೆ ||೪೬-೩೨|| ಕೈಕೇಯಿಯು ಹೀಗೆ ನುಡಿಯಲು, ಆ ಕುಬ್ಜಮಂಥರೆಯು, ವೇದಿಕೆಯಲ್ಲಿರುವ ಬೂದಿಮುಚ್ಚಿದ ಕೆಂಡದಂತೆ ಬೆಳಗಿರುವ ಹಾಸಿಗೆಯಲ್ಲಿ ಮಲಗಿರುವ ಆಕೆಯನ್ನು ಕುರಿತು, "ಓ ಕೈಕೇಯೀ ! ನೀರು ಹೋದಮೇಲೆ ಕಟ್ಟೆಯನ್ನಾರೂ ಕಟ್ಟುವುದಿಲ್ಲವು, ಶ್ರೀರಾಮನಿಗೆ ಪಟ್ಟಾಭಿಷೇಕವಾದ ಮೇಲೆ ಆ ವರಗಳನ್ನು ಪಡೆದರೆ ವ್ಯರ್ಥವಾಗುವುದು. ಆದುದರಿಂದ ನೀನೀಗಲೇ ಕ್ರೋಧಾ

ಕುಬ್ಜೇ ನೃಪಾಯಾ ವೇದಯಿಷ್ಯಸಿ ॥ ವನಂತು ರಾಘವೇ ಪ್ರಾಪ್ತೇ ಭರತಃ
ಪ್ರಾಪ್ಸ್ಯತೇ ಕ್ಷಿತಿಂ ॥ ೫೮ ॥ ನ ಸುವರ್ಣೇನ ಮೇಹ್ಯರ್ಥೋ ನರತ್ನೈರ್ನಚ
ಭೂಷಣೈಃ ॥ ಏಷ ಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ॥೫೯॥
ಅಥೋ ಪುನಸ್ತಾಂ ಮಹಿಷೀಂ ಮಹೀಕ್ಷಿತೋ ವಚೋಭಿರತ್ಯರ್ಥ ಮಹಾಪರಾ
ಕ್ರಮೈಃ ॥ ಉವಾಚ ಕುಬ್ಜಾ ಭರತಸ್ಯ ಮಾತರಂ ಹಿತಂ ವಚೋ ರಾಮಮು
ಪೇತ್ಯ ಚಾಹಿತಂ ॥ ಪ್ರಪತ್ಸ್ಯತೇ ರಾಜ್ಯಮಿದಂ ಹಿ ರಾಘವೋ ಯದಿಧ್ರುವಂ

ಹೇ ಕುಬ್ಜೇ - ಎಲೈ ವಾಮನಾಕಾರಳಾದ ಮಂಥರೆಯೇ, ಇಹ - ಇಲ್ಲಿ, ಮೃತಾಂ - ಮರಣವನ್ನು ಹೊಂದಿದ, ಮಾಂವಾ - ನನ್ನನ್ನಾದರೂ, ನೃಪಾಯ - ಅರಸನಿಗೆ, (ಗೋ) ಕೇಕಯ ರಾಯನಿಗೆ, ಅವೇದಯಿಷ್ಯಸಿ - ತಿಳಹುವೆ, ಅಥವಾ - ಹಾಗಲ್ಲದೆ ಹೋದರೆ, ರಾಘವೇ - ಶ್ರೀರಾಮನು, ವನಂ - ಅರಣ್ಯವನ್ನು, ಪ್ರಾಪ್ತೇಸತಿ - ಹೊಂದಲು, ಭರತಃ - ಭರತನು, ಕ್ಷಿತಿಂವಾ - ಭೂಮಿಯನ್ನಾದರೂ, ಪ್ರಾಪ್ಸ್ಯತಿ - ಹೊಂದುವನು. ॥ ೫೮ ॥ ರಾಮಃ - ಶ್ರೀರಾಮನು, ಅಭಿಷಿಚ್ಯತೇಯದಿ - ಪಟ್ಟಾಭಿಷೇಕ ಮಾಡಲ್ಪಟ್ಟವನಾದರೆ, ಮೇ - ನನಗೆ, ಸುವರ್ಣೇನ - ಚಿನ್ನದಿಂದ, ಅರ್ಥಃ - ಪ್ರಯೋಜನವು, ನ - ಇಲ್ಲ, ರತ್ನೈಃ - ರತ್ನಗಳಿಂದಲೂ, ನ - ಪ್ರಯೋಜನವಿಲ್ಲ, ಭೂಷಣೈಶ್ಚ - ಒಡವೆಗಳಿಂದಲೂ, ನ - ಇಲ್ಲ, ಏಷಃ - ಈ ಕಾಲವೇ, ಮೇ - ನನ್ನ, ಜೀವಿತಸ್ಯ - ಪ್ರಾಣಕ್ಕೆ, ಅಂತಃ - ಕೊನೆಯು. ॥ ೫೯ ॥ ಅಥ - ಅನಂತರದಲ್ಲಿ, ಕುಬ್ಜಾ - ಮಂಥರೆಯು, ಅತ್ಯರ್ಥ ಮಹಾ ಪರಾಕ್ರಮೈಃ, ಅತ್ಯರ್ಥ - ಅತ್ಯಂತವಾಗಿ, ಮಹಾ ಪರಾಕ್ರಮೈಃ - ಬಹಳ ಕ್ರೂರಗಳಾದ, ವಚೋಭಿಃ - ಮಾತುಗಳಿಂದ, ಉಪಲಕ್ಷಿತಾ- ಕೂಡಿದ, ಮಹೀಕ್ಷಿತಃ-ಅರಸನಾದ ದಶರಥರಾಯನಿಗೆ, ಮಹಿಷೀಂ - ಪಟ್ಟದರಸಿಯಾದ, ತಾಂ - ಆ, ಭರತಸ್ಯ ಮಾತರಂ - ಭರತನಿಗೆ ತಾಯಿಯಾದ ಕೈಕೇಯಿಯನ್ನು ಕುರಿತು, ಭರತಸ್ಯ - ಭರತನಿಗೆ, ಹಿತಂ - ಇಷ್ಟವಾದ, ರಾಮಂ - ಶ್ರೀರಾಮನನ್ನು, ಉಪೇತ್ಯ - ಉದ್ದೇಶಿಸಿ, ಅಹಿತಂಚ - ಅನಿಷ್ಟಕರವೂ ಆದ, ವಚಃ - ಮಾತನ್ನು, ಪುನಃ - ಮತ್ತು, ಉವಾಚ - ಹೇಳಿದಳು. ॥ ೬೦ ॥ ಹೇ ಕಲ್ಯಾಣಿ - ಎಲೌ ಶುಭಕರಳೆ, ಹಿ - ಯಾವ ಕಾರಣ, ರಾಘವಃ -

---

ಗಾರವನ್ನು ಸೇರಿ ರಾಜನನ್ನು ನಿರೀಕ್ಷಿಸುತ್ತಿರು "ಎಂದಳು. ಈ ರೀತಿ ಮಂಥರೆಯಿಂದ ಪ್ರೇರಿತಳಾದ ಕೈಕೇಯೀದೇವಿಯು ಮಂಥರೆಯೊಡಗೂಡಿ, ಸೌಂದರ್ಯಾತಿಶಯದಿಂದಾದ ಮತ್ತತೆಯಿಂದ ಮೈಮರೆತು, ಕೋಪವನ್ನು ತಾಳಿ, ಶಯನ ಗೃಹವನ್ನು ಹೊಕ್ಕು ಅನರ್ಘ್ಯಗಳಾದ ಮುತ್ತಿನ ಸರಗಳನ್ನೂ, ರತ್ನಾಭರಣಗಳನ್ನೂ ಬಿಚ್ಚಿಹಾಕಿ, ಆ ಕುಬ್ಜೆಯ ಮಾತಿಗೊಳಗಾಗಿ ಭೂಶಯನವನ್ನು ಮಾಡಿಕೊಂಡು ಅವಳನ್ನು ಕುರಿತು "ಎಲೆ ಮಂಥರೆ ! ಶ್ರೀರಾಮನಿಗೆ ರಾಜ್ಯಾಭಿಷೇಕವಾದರೆ ನಾನಿಲ್ಲಿಯೇ ಮೃತಳಾದೆನೆಂದು ದಶರಥರಾಯನಿಗೆ ತಿಳುಹುವೆಯಂತೆ. ಅಥವ ಶ್ರೀರಾಮನು ಅರಣ್ಯಕ್ಕೆ ಹೊರಟುಹೋದರೆ ಭರತನು ಭೂಮಿಯನ್ನು ಹೊಂದುತ್ತಾನೆ. ಇದಲ್ಲದೆ ಸುವರ್ಣ ರತ್ನಾದ್ಯಾಭರಣಗಳಿಂದ ನನಗಾವ ಪ್ರಯೋಜನವೂ ಆಗುವುದಿಲ್ಲ. ಶ್ರೀರಾಮನಿಗೆ ಪಟ್ಟಾಭಿಷೇಕವಾದರೆ ಇದೇ ನನಗೆ ಕೊನೆ

ತ್ವಂ ಸಸುತಾಚ ತಪ್ಸ್ಯಸೇ ॥ ಅತೋಹಿ ಕಲ್ಯಾಣಿ ಯತಸ್ವ ತತ್ತಥಾ ಯಥಾ ಸುತಸ್ತೇ ಭರತೋಽಭಿಷೇಕ್ಷ್ಯತೇ ||೬೦|| ತಥಾಽತಿವಿದ್ಧಾ ಮಹಿಷೀತು ಕುಬ್ಜಯಾ ಸಮಾಹತಾ ವಾಗಿಷುಭಿರ್ಮುಹುರ್ಮುಹುಃ ॥ ನಿಧಾಯ ಹಸ್ತೌ ಹೃದಯೇಽತಿವಿಸ್ಮಿತಾ ಶಶಂಸ ಕುಬ್ಜಾಂ ಕುಪಿತಾ ಪುನಃ ಪುನಃ ||೬೧|| ಯಮಸ್ಯ ವಾ ಮಾಂ ವಿಷಯಂ ಗತಾಮಿತೋ ನಿಶಾಮ್ಯ ಕುಬ್ಜೇ ಪ್ರತಿವೇದಯಿಷ್ಯಸಿ ॥ ವನಂಗತೇ ವಾಸು ಚಿರಾಯ ರಾಘವೇ ಸಮೃದ್ಧಕಾಮೋ ಭರತೋ ಭವಿಷ್ಯತಿ ||೬೨||

ಶ್ರೀರಾಮನು, ಇದಂರಾಜ್ಯಂ-ಈ ರಾಜ್ಯವನ್ನು, ಪ್ರಪತ್ಸ್ಯತೇಯದಿ ಹೊಂದುವವನಾದರೆ, ತ್ವಂ-ನೀನು, ಸಸುತಾಚ- ಮಗನೊಡಗೂಡಿ, ತಪ್ಸ್ಯಸೇ-ತಾಪವನ್ನು ಹೊಂದುವೆಯೆಂಬುದು, ಧೃವಂ- ನಿಶ್ಚಯವು, ಅತಃ-ಈ ಕಾರಣ, ತೇ - ನಿನಗೆ, ಸುತಃ - ಮಗನಾದ, ಭರತಃ - ಭರತನು, ಯಥಾ - ಹೇಗೆ, ಅಭಿಷೇಕ್ಷ್ಯತೇ - ಅಭಿಷೇಕ ಮಾಡಿಸಲ್ಪಡುವನೋ, ತತ್ - ಅದನ್ನು, ತಥಾ - ಹಾಗೆಯೆ, ಯತಸ್ವ - ಪ್ರಯತ್ನ ಮಾಡು. ||೬೦|| ಮಹಿಷೀ - ಪಟ್ಟದ ರಾಣಿಯಾದ ಕೈಕೇಯಿಯು, ಕುಬ್ಜಯಾ - ಮಂಥರೆಯಿಂದ, ವಾಗಿಷುಭಿಃ - ವಾಕ್ಯಗಳೆಂಬ ಬಾಣಗಳಿಂದ, ಮುಹುರ್ಮುಹುಃ - ಬಾರಿಬಾರಿಗೂ, ಸಮಾಹತಾ- ಹೊಡೆಯಲ್ಪಟ್ಟು, ಅತಿವಿದ್ಧಾ ಬಹಳವಾಗಿ ಪೀಡಿಸಲ್ಪಟ್ಟು, ಹಸ್ತೌ- ಕೈಗಳನ್ನು, ಹೃದಯೇ ವಕ್ಷಸ್ಥಲದಲ್ಲಿ, ನಿಧಾಯ- ಇರಿಸಿ, ಅತಿವಿಸ್ಮಿತಾ- ಬಹಳವಾದ ಆಶ್ಚರ್ಯವನ್ನು ಹೊಂದಿ, ಪುನಃಪುನಃ ಬಾರಿಬಾರಿಗೂ, ಕುಪಿತಾ - ಕೋಪಗೊಳ್ಳುತ್ತಾ, ಕುಬ್ಜಾ - ಮಂಥರೆಯನ್ನು ಕುರಿತು, ಪ್ರಶಶಂಸ - ಹೇಳಿದಳು. ||೬೧|| ಹೇ ಕುಬ್ಜೇ - ಎಲೌ ಮಂಥರೆಯೆ, ಮಾಂ - ನನ್ನನ್ನು, ಇತಃ - ಇಲ್ಲಿಂದ, ಯಮಸ್ಯ - ಯಮಧರ್ಮರಾಯನಿಗೆ, ವಿಷಯಂ - ಗೋಚರತ್ವವನ್ನು, ಗತಾಂವಾ - ಹೊಂದಿದವಳನ್ನಾಗಿಯಾದರೂ, ನಿಶಾಮ್ಯ - ಕಂಡು, ರಾಜ್ಞೇ - ದಶರಥರಾಯನಿಗೆ, ಪ್ರತಿವೇದಯಿಷ್ಯಸಿ - ಈ ಅರ್ಥವನ್ನು ತಿಳುಹುವೆ, ರಾಘವೇ-ಶ್ರೀರಾಮನು, ಚಿರಾಯ -ಬಹುಕಾಲವು, ವನಂ-ವನವನ್ನು ಕುರಿತು, ಗತೇಸತಿ - ಹೊಂದಲು, ಭರತೋವಾ - ಭರತನಾದರೂ, ಸಮೃದ್ಧಕಾಮಃ - ಸಂಪೂರ್ಣವಾದ ಇಷ್ಟಾರ್ಥವುಳ್ಳವನು, ಭವಿಷ್ಯತಿ - ಆಗುವನು. ||೬೨|| ರಾಘವಃ - ಶ್ರೀರಾಮನು, ಇತಃ -

---

ಗಾಲವು.” ಎಂದು ಹೇಳಿದಳು. ಇಂತು ನುಡಿದ ಕೈಕೇಯಿಯ ಮಾತುಗಳನ್ನು ಕೇಳಿ ಆ ಕುಬ್ಜ ಮಂಥರೆಯು ಆಕೆಯನ್ನು ಕುರಿತು ಬಹಳ ಕ್ರೂರವಾದ ಮಾತುಗಳಿಂದ ಭರತನಿಗೆ ಹಿತವಾಗಿಯೂ, ಶ್ರೀರಾಮನಿಗೆ ಅಹಿತವಾಗಿಯೂ ಇರುವ ಈ ಮಾತನ್ನಾಡಿದಳು ||೫೩-೬೦|| “ಎಲೌ ಮಂಗಳಕರಳೇ! ಶ್ರೀರಾಮಚಂದ್ರನು ರಾಜ್ಯವನ್ನು ಹೊಂದಿದರೆ, ಕುವರನಾದ ಭರತನಿಂದೊಡಗೂಡಿದ ನೀನು ಸಂತಾಪಗೊಳ್ಳುವೆ. ಆದುದರಿಂದ ನಿನ್ನ ಮಗನಾದ ಭರತನು ಪಟ್ಟಾಭಿಷಿಕ್ತನಾಗಲು ಪ್ರಯತ್ನಮಾಡುವವಳಾಗು.” ಪಾಪದರ್ಶಿನಿಯೂ, ಕುಬ್ಜೆಯೂ ಆದ ಮಂಥರೆಯು ಈರೀತಿ ನುಡಿಯಲು, ಕೈಕೇಯಿಯು ಆ ಮಂಥರೆಯ ಮಾತುಗಳೆಂಬ ಬಾಣಗಳಿಂದಡಿಗಡಿಗೂ ಹೊಡೆಯಲ್ಪಡುತ್ತಲೂ, ತಿವಿಯಲ್ಪಡುತ್ತಲೂ, ಯೆದೆಯಮೇಲೆ ಕೈಗಳನ್ನಿಟ್ಟುಕೊಂಡು, “ಇಂತಹ ಉಪಾಯವನ್ನೀಮಂಥರೆಯು ನುಡಿದಳಲ್ಲ” ಎಂದು ಆಶ್ಚರ್ಯ

ಅಹಂ ಹಿ ನೈವಾಸ್ತರಣಾನಿ ನಸ್ರಜೋ ನಚಂದನಂ ನಾಂಜನ ಪಾನಭೋಜನಂ ॥ ನಕಿಂಚಿದಿಚ್ಛಾಮಿ ನಚೇಹ ಜೀವಿತಂ ನಚೇದಿತೋ ಗಚ್ಛತಿ ರಾಘವೋ ವನಂ ॥ ೬೪ ॥ ಅಥೈತದುಕ್ತ್ವಾ ವಚನಂ ಸುದಾರುಣಂ ನಿಧಾಯ ಸರ್ವಾಭರಣಾನಿ ಭಾಮಿನೀ ॥ ಅಸಂವೃತಾಮಾಸ್ತರಣೇನ ಮೇದಿನೀಂ ತದಾಧಿಶಿಶ್ಯೇ ಪತಿತೇವ ಕಿನ್ನರೀ ॥ ೬೫ ॥

ಇಲ್ಲಿಂದ, ವನಂ - ಅರಣ್ಯವನ್ನು ಕುರಿತು, ನಗಚ್ಛತಿಚೇತ್ - ಹೋಗದೆ ಇರುವನಾದರೆ, ಅಹಂ-ನಾನು, ಆಸ್ತರಣಾನಿ - ಹಾಸಿಕೆಗಳನ್ನು, ನೈವೇಚ್ಛಾಮಿ - ಇಚ್ಛಿಸುವದೇ ಇಲ್ಲ, ಸ್ರಜಃ - ಹಾರಗಳನ್ನು, ನೇಚ್ಛಾಮಿ - ಅಪೇಕ್ಷಿಸುವುದಿಲ್ಲ, ಚಂದನಂ - ಗಂಧವನ್ನು, ನೇಚ್ಛಾಮಿ - ಬಯಸುವುದಿಲ್ಲ, ಅಂಜನ ಪಾನಭೋಜನಂ, ಅಂಜನ - ಕಾಡಿಗೆಯನ್ನೂ, ಪಾನ - ಉದಕ ಪಾನವನ್ನೂ, ಭೋಜನಂ - ಅನ್ನಾದಿಗಳ ಭೋಜನವನ್ನೂ, ನೇಚ್ಛಾಮಿ - ಅಪೇಕ್ಷಿಸುವುದಿಲ್ಲ. ॥ ೬೪ ॥ ಅಥ - ಬಳಿಕ, ಭಾಮಿನಿ - ಕೋಪಿಷ್ಠಳಾದ ಕೈಕೆಯಿಾದೇವಿಯು, ಸುದಾರುಣಂ - ಬಹು ಕ್ರೂರವಾದ, ಏತದ್ವಚನಂ - ಈ ಮಾತನ್ನು, ಉಕ್ತ್ವಾ - ನುಡಿದು, ಸರ್ವಾಭರಣಾನಿ - ಒಡಿವೆಗಳೆಲ್ಲವನ್ನೂ, ನಿಧಾಯ - ತೆಗೆದಿರಿಸಿ, ತದಾ - ಆಗ, ಪತಿತಾ - ಬಿದ್ದ, ಕಿನ್ನರೀವ - ಕಿನ್ನರಸ್ತ್ರೀಯಂತೆ, ಆಸ್ತರಣೇನ - ಹಾಸಿಕೆಯಿಂದ, ಅಸಂವೃತಾಂ - ಹಾಸಲ್ಪಡದಿರುವ, ಮೇದಿನೀಂ - ನೆಲದಲ್ಲಿ, ಅಧಿಶಿಶ್ಯೇ - ಮಲಗಿದಳು. ॥ ೬೫ ॥ ಉದೀರ್ಣ ಸಂರಂಭತಮೋ ವೃತಾನನಾ, ಉದೀರ್ಣ - ಹುಟ್ಟಿದ, ಸಂರಂಭ - ಕೋಪವೆಂಬ, ತಮಃ - ಕತ್ತಲೆಯಿಂದ, ವೃತ - ವ್ಯಾಪ್ತವಾದ, ಆನನಾ - ಮುಖವುಳ್ಳ, ತಥಾ - ಹಾಗೆಯೆ, ಅವಮುಕ್ತೋತ್ತಮಮಾಲ್ಯಭೂಷಣಾ, ಅವಮುಕ್ತ - ತೆಗೆಯಲ್ಪಟ್ಟ, ಉತ್ತಮ - ಉತ್ಕೃಷ್ಟಗಳಾದ, ಮಾಲ್ಯ - ಮಾಲಿಕೆಗಳೂ, ಭೂಷಣಾ - ಆಭರಣಗಳೂ ಉಳ್ಳ, ನರೇಂದ್ರ ಪತ್ನೀ - ರಾಜಪತ್ನಿಯಾದ, ಸಾ -

---

ಗೊಂಡು, ಬಾರಿಬಾರಿಗೂ ರಾಜನಮೇಲೆ ಕೋಪವಾನುತ್ತ, ಆ ಕುಬ್ಜೆಯನ್ನು ಕುರಿತು, "ಎಲೆಗೆ ಕುಬ್ಜೆ ! ಕೇಳು; ಶ್ರೀರಾಮನು ವನವಾಸಮಾಡಿದರೆ, ಭರತನು ಚಿರಕಾಲ ಸಂಪೂರ್ಣಗೊಂಡ ಇಷ್ಟಾರ್ಥವುಳ್ಳವನಾಗುತ್ತಾನೆ. ಹಾಗಾಗದಿದ್ದರೆ, ನಾನಾದರೂ ಈ ಸ್ಥಳದಿಂದ ಯಮನ ನೋಟಕ್ಕೆ ತುತ್ತಾದೆನೆಂದು ನೀನು ದಶರಥರಾಯನಿಗೆ ತಿಳುಹುವೆ! ಮಂಥರೆ! ಶ್ರೀರಾಮನು ವನಕ್ಕೆ ತೆರಳದಿದ್ದರೆ, ನಾನು ಈ ಶಯ್ಯೆ, ಪುಷ್ಪಮಾಲಿಕೆ, ಕಸ್ತೂರಿ, ಕಡಿಗೆ, ಚಂದನವೇ ಮೊದಲಾದುವನ್ನೂ, ಅನ್ನೋದಕಗಳನ್ನೂ ಬಯಸೆನು. ಪ್ರಾಣದಮೇಲಣ ಆಶೆಯನ್ನೇ ಹೊಂದುವುದಿಲ್ಲವು" ಎಂದು ಬಹು ಕಠಿನವಾಗಿ ನುಡಿಯುತ್ತ, ಆಭರಣಗಳನ್ನು ತೆಗೆದೊಗೆದು ಬರಿನೆಲದಲ್ಲಿ ಬಿದ್ದಿರುವ ಕಿನ್ನರ ಸುಂದರಿಯಂತೆ ಮಲಗಿದವಳಾದಳು. ॥ ೬೧-೬೫ ॥ ಹೀಗೆ ಪೂರ್ವದಲ್ಲಿ ಪರಿಶುದ್ಧವಾದ ಮನವುಳ್ಳವಳಾದರೂ, ಮಂಥರೆಯ ವಾಕ್ಯಶಲ್ಯಾಹತಳಾಗಿ ಭೇದಿಸಲ್ಪಟ್ಟ ಮನವುಳ್ಳವಳಾದುದರಿಂದ, ಆ ಕೈಕೇಯಿಾದೇವಿಯು ಕ್ರೋಧಾರುಣಿತ ಮುಖವುಳ್ಳ

ಉದೀರ್ಣ ಸಂರಂಭ ತಮೋವೃತಾನನಾ
ತಥಾವಮುಕ್ತೋತ್ತಮ ಮಾಲ್ಯ ಭೂಷಣಾ ॥
ನರೇಂದ್ರ ಪತ್ನೀ ವಿಮನಾ ಬಭೂವ ಸಾ
ತಮೋ ವೃತಾ ದ್ಯೌರಿವ ಮಗ್ನ ತಾರಕಾ ॥ ೬೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವಮಸ್ಸರ್ಗಃ.

ಆ ಕೈಕೆಯಿಾದೇವಿಯು, ವಿಮನಾಃ - ದುಷ್ಟವಾದ ಮನವುಳ್ಳವಳಾಗಿ, ತಮೋವೃತಾ, ತಮಃ - ಕತ್ತಲೆಯಿಂದ, ವೃತಾ - ವ್ಯಾಪ್ತವಾದ, ಮಗ್ನತಾರಕಾ - ಮುಳುಗಿ ಹೋದ ನಕ್ಷತ್ರಗಳುಳ್ಳ, ದ್ಯೌರಿವ - ಆಕಾಶದಂತೆ, ಬಭೂವ - ಆದಳು. ॥ ೬೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವಮಸ್ಸರ್ಗಃ.

ವಳಾಗಿಯೂ, ತೆಗೆದೊಗೆಯಲ್ಪಟ್ಟ ಆಭರಣ, ಪೂಮಾಲಿಕೆಗಳುಳ್ಳವಳೂ ಆಗಿ ನಕ್ಷತ್ರಗಳಿಲ್ಲದೆ ಕತ್ತಲೆ ಕವಿದುಕೊಂಡಿರುವ ಅಂತರಿಕ್ಷದಂತೆ ಹೊಳೆಯುತ್ತಿದ್ದಳು. ॥ ೬೬ ॥

ಇಂತಿದು ಕೈಕೇಯಿಾಕೃತ ಕ್ರೋಧಾಗಾರ ಪ್ರವೇಶಕಥಾ ಕಥನವೆಂಬ
ಒಂಭತ್ತನೆಯ ಸರ್ಗವು ಸಂಪೂರ್ಣವಾದುದು.

ಅಯೋಧ್ಯಾಕಾಂಡೇ ದಶಮಸ್ಸರ್ಗಃ.

ವಿದರ್ಶಿತಾ ಯದಾ ದೇವೀ ಕುಬ್ಜಯಾ ಪಾಪಯಾ ಭೃಶಂ ॥ ತದಾ ಶೇತೇಸ್ಮ ಸಾ ಭೂಮೌ ದಿಗ್ಧ ವಿದ್ಧೇವ ಕಿನ್ನರೀ ॥ ೧ ॥ ನಿಶ್ಚಿತ್ಯ ಮನಸಾ ಕೃತ್ಯಂ ಸಾ ಸಮ್ಯಗಿತಿ ಭಾಮಿನೀ ॥ ಮಂಥರಾಯೈ ಶನೈಸ್ಸರ್ವಮಾಚಚಕ್ಷೇ ವಿಚಕ್ಷಣಾ ॥ ೨ ॥ ಸಾ ದೀನಾ ನಿಶ್ಚಯಂ ಕೃತ್ವಾ ಮಂಥರಾ ವಾಕ್ಯಮೋಹಿತಾ ॥ ನಾಗಕನ್ಯೇವ ನಿಶ್ವಸ್ಯ ದೀರ್ಘಮುಷ್ಣಂಚ ಭಾಮಿನೀ ॥ ೩ ॥ ಮುಹೂರ್ತಂ ಚಿಂತಯಾಮಾಸ ಮಾರ್ಗಮಾತ್ಮ ಸುಖಾವಹಂ ॥ ಸಾ ಸುಹೃ

ಯದಾ - ಯಾವ ಕಾಲದಲ್ಲಿ, ದೇವೀ - ಕೈಕೆಯಿೀದೇವಿಯು, ಭೃಶಂ - ಅತ್ಯಂತವಾಗಿ, ಪಾಪಯಾ - ಪಾಪಿಷ್ಠಳಾದ, ಕುಬ್ಜಯಾ - ಮಂಥರೆಯಿಂದ, ವಿದರ್ಶಿತಾ - ವಿರುದ್ಧಾರ್ಥವನ್ನು ಬೋಧಿಸಲ್ಪಟ್ಟಳೋ, ತದಾ - ಆಗ, ಸಾ - ಆ ಕೈಕೆಯಿೀದೇವಿಯು, ದಿಗ್ಧವಿದ್ಧಾ, ದಿಗ್ಧ - (ಗೋ) ವಿಷದಿಂದ ಲೇಪನ ಮಾಡಲ್ಪಟ್ಟ ಬಾಣದಿಂದ, ವಿದ್ಧಾ - ತಿವಿಯಲ್ಪಟ್ಟ, ಕಿನ್ನರೀವ - ಕಿನ್ನರ ಸ್ತ್ರೀಯಂತೆ, ಭೂಮೌ - ನೆಲದಲ್ಲಿ, ಶೇತೇಸ್ಮ - ಮಲಗಿದಳಷ್ಟೆ. ॥ ೧ ॥ ವಿಚಕ್ಷಣಾ - (ಮ) ತಿಳಿವಳಿಕೆಯುಳ್ಳ, (ಗೋ) ವಿಚಕ್ಷಣಾ - ಸ್ವಯಂಪ್ರಾಜ್ಞಳಾಗಿರುವ, ಭಾಮಿನೀ - ಕೋಪವಾಂತವಳಾದ, ಸಾ - ಆ ಕೈಕೇಯಿೀದೇವಿಯು, ಮನಸಾ - ಮನಸ್ಸಿನಿಂದ, ಕೃತ್ಯಂ - ಕರ್ತವ್ಯವನ್ನು, ನಿಶ್ಚಿತ್ಯ - ನಿಶ್ಚಯಿಸಿ, ಮಂಥರಾಯೈ - ಮಂಥರೆಗೆ, ಶನೈಃ - ಮೆಲ್ಲಮೆಲ್ಲಗೆ, ಸರ್ವಂ - ಸಮಸ್ತಕಾರ್ಯವೆಲ್ಲವೂ, ಸಮ್ಯಗಿತಿ - ಒಳ್ಳಿತೆಂದು, ಆಚಚಕ್ಷೇ - ಹೇಳಿದಳು. ॥ ೨ ॥ ದೀನಾ - ದೀನಳಾದ, ಸಾಭಾಮಿನೀ - ಆ ಕೈಕೇಯಿೀದೇವಿಯು, ಮಂಥರಾವಾಕ್ಯಮೋಹಿತಾ, ಮಂಥರಾ - ಮಂಥರೆಯ, ವಾಕ್ಯ - ವಚನದಿಂದ, ಮೋಹಿತಾ - ಮೋಹಿತಳಾಗಿ, ನಿಶ್ಚಯಂ - ಸ್ವಪ್ರಯತ್ನವು ಸಫಲವಾಗುತ್ತದೆಂಬ ನಿಶ್ಚಯವನ್ನು, ಕೃತ್ವಾ - ಮಾಡಿ, ನಾಗಕನ್ಯೇವ - ನಾಗಕನ್ಯಕೆಯಂತೆ, ದೀರ್ಘಂ - ಉದ್ದವಾಗಿಯೂ, ಉಷ್ಣಂಚ - ಬಿಸಿಯಾಗಿಯೂ, ನಿಶ್ವಸ್ಯ - ನಿಟ್ಟುಸಿರುಬಿಟ್ಟು, ಆತ್ಮಸುಖಾವಹಂ, ಆತ್ಮ - ತನಗೆ, ಸುಖಾವಹಂ - ಸುಖಕರವಾದ, ಮಾರ್ಗಂ - ಉಪಾಯವನ್ನು, ಮುಹೂರ್ತಂ - ಮುಹೂರ್ತಕಾಲ, ಚಿಂತಯಾಮಾಸ - ಆಲೋಚಿಸಿದಳು. ॥ ೩ ॥ ಸಾಮಂಥರಾ - ಆ ಮಂಥರೆಯು, ಸುಹೃತ್ -

---

ಈ ಪ್ರಕಾರವಾಗಿ ಮಹಾಪಾಪಿಯಾದ ಕುಬ್ಜೆಯಿಂದ ಕೈಕೇಯಿೀದೇವಿಯು ಯಾವಾಗ ವಿಪರೀತವಾಗಿ ಬೋಧಿಸಲ್ಪಟ್ಟಳೋ, ಆಗಲಾಕೆಯು, ವಿಷಬಾಣದಿಂದ ಹೊಡೆಯಲ್ಪಟ್ಟ ಕಿನ್ನರಾಂಗನೆಯಂತೆ ಮಲಗಿಕೊಂಡು, ಮಾಡಬೇಕಾದ ಕಾರ್ಯವನ್ನು ಮನದಲ್ಲಿ ನಿಶ್ಚಯಿಸಿದವಳಾಗಿ, ಮಂಥರೆಯು ಹೇಳಿದುದು ಸರಿಯೆಂದಾಕೆಗೆ ಹೇಳಿ, ಅವಳ ಮಾತುಗಳಿಗೊಳಗಾಗಿ, ತಾನು ಮಾಡುವ ಪ್ರಯತ್ನವು ಹೇಗಾದರೂ ಸಫಲವಾಗುವದೆಂಬ ನಿಶ್ಚಯವನ್ನು ಹೊಂದಿ, ನಾಗಕನ್ನಿಕೆಯಂತೆ ದೀರ್ಘವಾದ ನಿಟ್ಟುಸಿರ್ಗಳನ್ನು ಬಿಟ್ಟು, ಸ್ವಲ್ಪಹೊತ್ತು ತನಗೆ

ಚ್ಚಾರ್ಥ ಕಾಮಾಚ ತಂ ನಿಶಮ್ಯ ಸುನಿಶ್ಚಯಂ ॥ ೪ ॥ ಬಭೂವ ಪರಮ ಪ್ರೀತಾ ಸಿದ್ಧಿಂ ಪ್ರಾಪ್ಯೇವ ಮಂಥರಾ ॥ ಅಥ ಸಾ ರುಷಿತಾ ದೇವೀ ಸಮ್ಯಕ್ಕೃತ್ವಾ ವಿನಿಶ್ಚಯಂ ॥ ೫ ॥ ಸಂವಿವೇಶಾಬಲಾ ಭೂಮೌ ನಿವೇಶ್ಯ ಭ್ರುಕುಟಿಂ ಮುಖೇ ॥ ತತಶ್ಚಿತ್ರಾಣಿ ಮಾಲ್ಯಾನಿ ದಿವ್ಯಾನ್ಯಾಭರಣಾನಿಚ ॥೬॥ ಅಪವಿದ್ಧಾನಿ ಕೈಕೇಯ್ಯಾ ತಾನಿ ಭೂಮಿಂ ಪ್ರಪೇದಿರೇ ॥ ತಯಾ ತಾನ್ಯಪವಿದ್ಧಾನಿ ಮಾಲ್ಯಾನ್ಯಾಭರಣಾನಿಚ ॥ ೭ ॥ ಅಶೋಭಯಂತ ವಸುಧಾಂ ನಕ್ಷತ್ರಾಣಿ ಯಥಾನಭಃ ॥ ಕ್ರೋಧಾಗಾರೇ ನಿಪತಿತಾ ಸಾ ಬಭೌ ಮಲಿನಾಂ

ಕೈಕೇಯಿಗೆ ಮಿತ್ರಳಾದಕಾರಣ, ಅರ್ಥಕಾಮಾಚ - ಕೈಕೇಯಿಯ ಕಾರ್ಯವನ್ನೇ ಕೋರುತ್ತ, ತಂ ಸುನಿಶ್ಚಯಂ - ಆ ನಿಶ್ಚಯವನ್ನು, ನಿಶಮ್ಯ-ಕೇಳಿ, ಸಿದ್ಧಿಂ-ಕಾರ್ಯಸಿದ್ಧಿಯನ್ನು, ಪ್ರಾಪ್ಯೇವ - ಹೊಂದಿದಂತೆ, ಪರಮಪ್ರೀತಾ - ಬಹಳ ಸಂತೋಷಗೊಂಡವಳು, ಬಭೂವ - ಆದಳು. ॥ ೪ ॥ ಅಥ - ಬಳಿಕ, ಅಬಲಾ - ಬಲಹೀನಳಾದ, ಸಾದೇವೀ - ಆ ಕೈಕೇಯೀದೇವಿಯು, ವಿನಿಶ್ಚಯಂ-ಕಾರ್ಯನಿಶ್ಚಯವನ್ನು, ಸಮ್ಯಕ್ - ಚನ್ನಾಗಿ, ಕೃತ್ವಾ - ಮಾಡಿಕೊಂಡು, ರುಷಿತಾ - ಕೋಪಗೊಂಡವಳಾಗಿ, ಮುಖೇ - ಮುಖದಲ್ಲಿ, ಭ್ರುಕುಟಿಂ - ಕಣ್ಣುಬ್ಬುಗಂಟನ್ನು, ನಿವೇಶ್ಯ - ಇರಿಸಿ, ಭೂಮೌ - ನೆಲದಲ್ಲಿ, ಸಂವಿವೇಶ - ಮಲಗಿದಳು. ॥ ೫ ॥ ತತಃ - ಬಳಿಕ, ಚಿತ್ರಾಣಿ - ಚಿತ್ರವರ್ಣವುಳ್ಳ, ಮಾಲ್ಯಾನಿ - ಪುಷ್ಪಸರಗಳೂ, ದಿವ್ಯಾನಿ - ಬೆಲೆಯಿಲ್ಲದ, ಆಭರಣಾನಿಚ - ಒಡವೆಗಳೂ, ಯಾನಿ - ಯಾವುಗಳು, ಕೈಕೇಯ್ಯಾ - ಕೈಕೇಯೀದೇವಿಯಿಂದ, ಅಪವಿದ್ಧಾನಿ - ತೆಗದುಹಾಕಲ್ಪಟ್ಟವೋ, ತಾನಿ - ಆ ಒಡವೆಗಳೂ ಪುಷ್ಪಮಾಲಿಕೆಗಳೂ ಸಹ, ಭೂಮಿಂ - ನೆಲವನ್ನು, ಪ್ರಪೇದಿರೇ - ಹೊಂದಿದವು. ॥ ೬ ॥ ತಯಾ - ಆ ಕೈಕೇಯೀದೇವಿಯಿಂದ, ಅಪವಿದ್ಧಾನಿ - ತೆಗದುಹಾಕಲ್ಪಟ್ಟ, ತಾನಿಮಾಲ್ಯಾನಿ - ಆ ಪುಷ್ಪಹಾರಗಳೂ, ಆಭರಣಾನಿಚ - ಒಡವೆಗಳೂ, ನಕ್ಷತ್ರಾಣಿ - ನಕ್ಷತ್ರಗಳು, ನಭೋಯಥಾ - ಅಂತರಿಕ್ಷವನ್ನಂತೆ, ವಸುಧಾಂ - ಭೂಮಿಯನ್ನು, ಅಶೋಭಯಂತ - ಪ್ರಕಾಶಗೊಳಿಸಿದವು. ॥ ೭ ॥ ಮಲಿನಾಂಬರಾ, ಮಲಿನ - ಮಾಸಿದ, ಅಂಬರಾ - ವಸ್ತ್ರವುಳ್ಳ, ಸಾ - ಆ ಕೈಕೇಯಿಯು, ಕ್ರೋಧಾಗಾರೇ - ಕ್ರೋಧಗೃಹದಲ್ಲಿ, ನಿಪತಿತಾ - ಬಿದ್ದವಳಾಗಿ, ಏಕವೇಣೀಂ, ಏಕ - ಒಂದಾದ, ವೇಣೀಂ -

---

ಹಿತಕರವಾದ ಕಾರ್ಯವನ್ನಾಲೋಚಿಸಿ ಅದನ್ನು ಮಂಥರೆಗೆ ತಿಳುಹಿದಳು. ಆ ಮಂಥರೆಯಾದರೋ, ಕೈಕೇಯೀದೇವಿಯ ಸ್ನೇಹಿತಳಾಗಿಯೂ ಆಕೆಯ ಅರ್ಥಸಿದ್ಧಿಯನ್ನೇ ಬಯಸುವವಳಾಗಿಯೂ ಇರುವುದರಿಂದ, ತನ್ನೊಡತಿಯ ಆ ನಿಶ್ಚಯವನ್ನು ಕೇಳಿ, ಕಾರ್ಯಸಿದ್ಧಿಯನ್ನು ಹೊಂದಿದವಳಂತೆ ಬಹಳವಾದ ಸಂತಸವನ್ನು ಹೊಂದಿದವಳಾದಳು. ॥೧-೫॥ ಬಳಿಕಲಾ ಕೈಕೇಯಿಯು ಕಾರ್ಯನಿಶ್ಚಯವನ್ನು ಚೆನ್ನಾಗಿ ಮಾಡಿಕೊಂಡು, ಬಹಳವಾದ ಕೋಪವನ್ನು ತಾಳಿ, ಹುಬ್ಬುಗಂಟಿಕ್ಕಿ ಭೂಶಾಯಿನಿಯಾದಳು. ಆಗ ಆ ದೇವಿಯಿಂದ ಕಿತ್ತೊಗೆಯಲ್ಪಟ್ಟ ವಿಚಿತ್ರವಾದ ಹೂಗಳೂ, ದಿವ್ಯವಾದ ದುಕೂಲಗಳೂ, ಆಭರಣಗಳೂ ಸಹ ನೆಲದಲ್ಲಿ ಬಿದ್ದು, ತಾರೆಗಳು ಅಂಬರತಲವನ್ನು ಪ್ರಕಾಶಗೊಳಿಸುವಂತೆ ಭೂಮಿಯನ್ನು ಪ್ರಕಾಶಗೊಳಿಸುತ್ತಿದ್ದುವು. ಮಲಿನವಸ್ತ್ರವನ್ನುಟ್ಟಿದ್ದ ಆ ಕೈಕೇಯಿಯು ಕೋಪದಿಂದ ಶಯನಗೃಹದಲ್ಲಿ ಬಿದ್ದು,

ಬರಾ ॥ ೮ ॥ ಏಕವೇಣೀಂ ದೃಢಂ ಬದ್ಧ್ವಾ ಗತಸತ್ತ್ವೇವ ಕಿನ್ನರೀ ॥ ಆಜ್ಞಾಪ್ಯತು ಮಹಾರಾಜೋ ರಾಘವಸ್ಯಾಭಿಷೇಚನಂ ॥ ೯ ॥ ಉಪಸ್ಥಾನಮನುಜ್ಞಾಪ್ಯ ಪ್ರವಿವೇಶ ನಿವೇಶನಂ ॥ ಅದ್ಯ ರಾಮಾಭಿಷೇಕೋವೈ ಪ್ರಸಿದ್ಧ ಇತಿ ಜಜ್ಞಿವಾನ್ ॥ ೧೦ ॥ ಪ್ರಿಯಾರ್ಹಾಂ ಪ್ರಿಯಮಾಖ್ಯಾತುಂ ವಿವೇಶಾಂತಃಪುರಂ ವಶೀ ॥ ಸ ಕೈಕೇಯ್ಯಾ ಗೃಹಂ ಶ್ರೇಷ್ಠಂ ಪ್ರವಿವೇಶ ಮಹಾಯಶಾಃ ॥ ೧೧ ॥ ಪಾಂಡು ರಾಭ್ರಮಿವಾಕಾಶಂ ರಾಹುಯುಕ್ತಂ ನಿಶಾಕರಃ ॥ ಶುಕಬರ್ಹಿಣ ಸಂಘುಷ್ಟಂ

ಜಡೆಯನ್ನು, ದೃಢಂ - ದೃಢವಾಗಿ, ಬದ್ಧ್ವಾ - ಬಿಗಿಸಿಕೊಂಡು, ಕಿನ್ನರೀವ - ಕಿನ್ನರಸ್ತ್ರೀಯಂತೆ, ಗತಸತ್ತ್ವಾ, ಗತ - ಕಳೆದುಹೋದ, ಸತ್ತ್ವಾ - ಬಲವುಳ್ಳವಳಾಗಿ, (ಮ) ಹೋದ ಪ್ರಾಣವುಳ್ಳವಳಂತೆ, ಬಭೌ - ಹೊಳೆಯುತ್ತಿದ್ದಳು. ॥ ೮ ॥ ಮಹಾರಾಜಃ - ದಶರಥಮಹಾರಾಯನು, ರಾಘವಸ್ಯ - ಶ್ರೀರಾಮನಿಗೆ, ಅಭಿಷೇಚನಂ - ಅಭಿಷೇಕವನ್ನು, ಆಜ್ಞಾಪ್ಯ - ಸುಮಂತ್ರಾದಿಗಳನ್ನು ಕುರಿತು ಆಜ್ಞಾಪಿಸಿ, ಉಪಸ್ಥಾನಂ - (ಮ) ಸದಸ್ಸನ್ನು, ಅನುಜ್ಞಾಪ್ಯ - ಸಮ್ಮತಿಸಿ, (ಗೋ) ಉಪಸ್ಥಾನಂ - ಸಮೀಪವರ್ತಿಯಾದ ವಸಿಷ್ಠಋಷಿಯನ್ನು, ಅನುಜ್ಞಾಪ್ಯ - ಸಮ್ಮತಿಸಿ, ನಿವೇಶನಂ - ತನ್ನಮನೆಯನ್ನು, ಪ್ರವಿವೇಶ - ಹೊಕ್ಕನು. ॥ ೯ ॥ ರಾಮಾಭಿಷೇಕಃ, ರಾಮ - ಶ್ರೀರಾಮನಿಗೆ, ಅಭಿಷೇಕಃ - ಪಟ್ಟಾಭಿಷೇಕವು, ಅದ್ಯ - ಈಗಲೆ, ಪ್ರಸಿದ್ಧ ಇತಿ - ಪ್ರಸಿದ್ಧವೆಂದು, ಜಜ್ಞಿವಾನ್ - ತಿಳಿದು, ವಶೀ - ಸ್ವತಂತ್ರನಾದಕಾರಣ, ಪ್ರಿಯಾರ್ಹಾಂ - ಪ್ರೇಮಕ್ಕೆ ಯೋಗ್ಯಳಾದ ಕೈಕೇಯಿಯನ್ನು ಕುರಿತು, ಪ್ರಿಯಂ - ಇಷ್ಟವಾದ ಕಾರ್ಯವನ್ನು, ಆಖ್ಯಾತುಂ- ಹೇಳಲೋಸುಗ, ಅಂತಃಪುರಂ- ಅಂತಃಪುರವನ್ನು, ವಿವೇಶ- ಹೊಕ್ಕನು. ॥ ೧೦ ॥ ಮಹಾಯಶಾಃ - ಮಹಾಕೀರ್ತಿವಂತನಾದ, ಸಃ - ಆ ದಶರಥರಾಯನು, ಪಾಂಡುರಾಭ್ರಂ, ಪಾಂಡುರ - ಬೆಳ್ಳಗಿರುವ, ಅಭ್ರಂ - ಮೇಘಗಳುಳ್ಳ, ರಾಹುಯುಕ್ತಂ - ರಾಹುಗ್ರಹದಿಂದ ಕೂಡಿಕೊಂಡಿರುವ, ಆಕಾಶಂ - ಅಂಬರವನ್ನು, ನಿಶಾಕರಇವ - ಚಂದ್ರನಂತೆ, ಶ್ರೇಷ್ಠಂ - ಉತ್ತಮವಾದ, ಕೈಕೇಯ್ಯಾಃ - ಕೈಕೇಯಿಯಾದೇವಿಯ, ಗೃಹಂ - ಅಂತಃಪುರವನ್ನು, ಪ್ರವಿವೇಶ - ಹೊಕ್ಕನು. ॥ ೧೧ ॥ ಶುಕಬರ್ಹಿಣಸಂಘುಷ್ಟಂ, ಶುಕ - ಗಿಣಿಗಳಿಂದಲೂ, ಬರ್ಹಿಣ - ನವಿಲುಗಳಿಂದಲೂ, ಸಂಘುಷ್ಟಂ - ಧ್ವನಿಗೊಳಿಸುತ್ತಿರುವ, ಕ್ರೌಂಚಹಂಸರುತಾಯುತಂ, ಕ್ರೌಂಚ - ಕ್ರೌಂಚಪಕ್ಷಿಗಳ, ಹಂಸ - ಹಂಸಪಕ್ಷಿಗಳ, ಋತ - ಧ್ವನಿಗಳಿಂದ, ಆಯುತಂ - ಕೂಡಿಕೊಂಡಿರುವ, ವಾದಿತ್ರ

ಒಂದೇತಿರಿಯುಳ್ಳ ಜಡೆಯನ್ನು ಬಲವಾಗಿ ಬಿಗಿದು, ಗತಪ್ರಾಣಗಳಾದ ಕಿನ್ನರಿಯಂತೆ ಬೆಳಗುತಿದ್ದಳು. ॥೬-೮॥ ಕೈಕೇಯಿಯಾದೇವಿಯು ಈರೀತಿ ಇರಲು, ಇತ್ತಲಾ ದಶರಥರಾಯನು ತನ್ನ ಜ್ಯೇಷ್ಠಕುಮರನಾದ ಶ್ರೀರಾಮಮೂರ್ತಿಯ ಯೌವರಾಜ್ಯಾಭಿಷೇಕಕ್ಕೆ ಬೇಕಾದ ಪದಾರ್ಥಗಳನ್ನು ಅಣಿಮಾಡುವಂತೆ ತನ್ನ ಮಂತ್ರಿಗಳಾದ ಸುಮಂತ್ರನೇ ಮೊದಲಾದವರಿಗೆ ಅಪ್ಪಣೆಯನ್ನಿತ್ತು, ಆ ಶುಭವಾರ್ತೆಯನ್ನು ತನ್ನ ಪ್ರಿಯಪತ್ನಿಯಾದ ಕೈಕೇಯಿಯಾದೇವಿಗೆ ತಿಳುಹಲೋಸುಗ ಅಂತಃಪುರಕ್ಕೆ ಹೋಗಿ, ರಾಹುಗ್ರಸ್ತವಾದ ಅಂತರಿಕ್ಷವನ್ನು ಚಂದ್ರನು ಹೊಗುವಂತೆ, ಆ ದೇವಿಯ ಅರಮನೆಯನ್ನು ಹೊಕ್ಕವನಾದನು. ॥೯-೧೧॥ ಆ ಅರಮನೆಯು ಗಿಳಿಗಳ ಮನೋಹರಧ್ವನಿಯಿಂದಲೂ, ಮಯೂರಗಳ ಕೇಕಾರವದಿಂದಲೂ, ಕ್ರೌಂಚಪಕ್ಷಿಗಳು ಮತ್ತು ಹಂಸ

ಕ್ರೌಂಚಹಂಸರುತಾಯುತಂ ॥ ೧೨ ॥ ವಾದಿತ್ರರವಸಂಘುಷ್ಟಂ ಕುಬ್ಜಾ
ವಾಮನಿಕಾಯುತಂ ॥ ಲತಾಗೃಹೈಶ್ಚಿತ್ರಗೃಹೈಶ್ಚಂಪಕಾಶೋಕಶೋಭಿತೈಃ
॥ ೧೩ ॥ ದಾಂತರಾಜತಸೌವರ್ಣವೇದಿಕಾಭಿಸ್ಸಮಾಯುತಂ ॥ ನಿತ್ಯ
ಪುಷ್ಪಫಲೈರ್ವೃಕ್ಷೈರ್ವಾಪೀಭಿಶ್ಚೋಪಶೋಭಿತಂ ॥ ೧೪ ॥ ದಾಂತರಾಜತ
ಸೌವರ್ಣೈಸ್ಸಂವೃತಂ ಪರಮಾಸನೈಃ ॥ ವಿವಿಧೈರನ್ನಪಾನೈಶ್ಚ ಭಕ್ಷ್ಯೈಶ್ಚ
ವಿವಿಧೈರಪಿ ॥ ೧೫ ॥ ಉಪಪನ್ನಂ ಮಹಾರ್ಹೈಶ್ಚ ಭೂಷಿತೈಸ್ತ್ರಿದಿವೋಪಮಂ ॥

ರವಸಂಘುಷ್ಟಂ, ವಾದಿತ್ರ-ಚತುರ್ವಿಧವಾದ್ಯವಿಶೇಷಗಳ, ರವ-ಧ್ವನಿಗಳಿಂದ, ಸಂಘುಷ್ಟಂ-ಧ್ವನಿಮಾಡುತ್ತಿರುವ, ಕುಬ್ಜಾವಾಮನಿಕಾಯುತಂ, ಕುಬ್ಜಾ - ದಪ್ಪವಾಗಿಯೂ ಗಿಡ್ಡಾಗಿಯೂ ಇರುವ ಸ್ತ್ರೀಯರಿಂದಲೂ, ವಾಮನಿಕಾ-ಹ್ರಸ್ವಾಂಗಿಗಳಾದ ಸ್ತ್ರೀಯರಿಂದಲೂ, ಯುತಂ ಕೂಡಿಕೊಂಡಿರುವ, ಚಂಪಕಾಶೋಕಶೋಭಿತೈಃ, ಚಂಪಕ - ಸಂಪಿಗೆ ಗಿಡಗಳಿಂದಲೂ, ಅಶೋಕ - ಅಶೋಕ ವೃಕ್ಷಗಳಿಂದಲೂ, ಶೋಭಿತೈಃ - ಹೊಳೆಯುತ್ತಿರುವ, ಲತಾಗೃಹೈಃ - ಲತಾಗೃಹಗಳಿಂದಲೂ, ಚಿತ್ರಗೃಹೈಃ - ನಾನಾ ಬಣ್ಣಗಳಾದ ಮನೆಗಳಿಂದಲೂ, ದಾಂತರಾಜತ ಸೌವರ್ಣವೇದಿಕಾಭಿಃ, ದಾಂತ - ದಂತವಿಕಾರಗಳಾದ, ರಾಜತ - ಬೆಳ್ಳಿಯ, ಸೌವರ್ಣ - ಚಿನ್ನದ, ವೇದಿಕಾಭಿಃ - ಜಗುಲಿಗಳಿಂದಲೂ, ಸಮಾಯುತಂ - ಕೂಡಿದ, ನಿತ್ಯಪುಷ್ಪಫಲೈಃ, ನಿತ್ಯ - ನಿರಂತರವೂ, ಪುಷ್ಪಫಲೈಃ - ಪುಷ್ಪಗಳೂ, ಫಲಗಳೂ ಉಳ್ಳ, ವೃಕ್ಷೈಃ - ಗಿಡಗಳಿಂದ, ವಾಪೀಭಿಶ್ಚ - ಚೌಕಟ್ಟು ಭಾವಿಗಳಿಂದ, ಉಪಶೋಭಿತಂ - ಹೊಳೆಯುತ್ತಿರುವ, ದಾಂತರಾಜತ ಸೌವರ್ಣೈಃ, ದಾಂತ - ಗಜದಂತಗಳಿಂದ ಮಾಡಲ್ಪಟ್ಟ, ರಾಜತ-ಬೆಳ್ಳಿಯಿಂದ ಮಾಡಲ್ಪಟ್ಟ, ಸೌವರ್ಣೈಃ - ಸುವರ್ಣ ವಿಕಾರಗಳಾದ, ಪರಮಾಸನೈಃ - ಶ್ರೇಷ್ಠಗಳಾದ ಪೀಠಗಳಿಂದ, ವಿವಿಧೈಃ - ನಾನಾ ವಿಧಗಳಾದ, ಅನ್ನಪಾನೈಶ್ಚ - (ಗೋ) ಅನ್ನಪಾತ್ರೆಗಳಿಂದಲೂ, ಪಾನಪಾತ್ರೆಗಳಿಂದಲೂ, (ಮ) ಅನ್ನಗಳಿಂದಲೂ, ಪಾನಕಾದಿ ರಸಗಳಿಂದಲೂ, ವಿವಿಧೈರಪಿ - ನಾನಾ ಬಗೆಗಳಾದ, ಭಕ್ಷ್ಯೈಶ್ಚ - ಭಕ್ಷ್ಯಗಳಿಂದಲೂ, ಉಪಪನ್ನಂ - ಕೂಡಿದ, ಭೂಷಿತೈಃ - ಅಲಂಕರಿಸಲ್ಪಟ್ಟ, ಮಹಾರ್ಹೈಃ - ಶ್ರೇಷ್ಠ ವಸ್ತುಗಳಿಂದ, ತ್ರಿದಿವೋಪಮಂ - ಸ್ವರ್ಗಕ್ಕೆ ಸಮಾನವಾದ, ಋದ್ಧಿಮತ್ - ಸಕಲೈಶ್ವರ್ಯಸಂಪನ್ನವಾದ, ಸ್ವಂ - ತನ್ನ, ತದಂತಃಪುರಂ ಆ ಅಂತಃಪುರವನ್ನು, ಮಹಾ

ಪಕ್ಷಿಗಳ ಸಂತೋಷನಾದದಿಂದ ನಾದಿತವಾಗಿಯೂ, ನಾನಾವಿಧ ವಾದ್ಯವಿಶೇಷಗಳ ಶಬ್ದದಿಂದ ಕೂಡಿದುದಾಗಿಯೂ, ದಪ್ಪವಾಗಿರುವ ಕುಬ್ಜೆಯರಿಂದಲೂ, ಕೃಶಾಂಗಿನಿಯರಾದ ಕುಬ್ಜೆಯರಿಂದಲೂ ತುಂಬಿದುದಾಗಿಯೂ ಇದ್ದಿತು. ಇಷ್ಟೆಯಲ್ಲದೆ ಕೈಕೇಯಿದೇವಿಯ ಆ ಭವನವು ಲತಾಮಂಟಪಗಳಿಂದಲೂ, ಚಿತ್ರವಿಚಿತ್ರ ಗೃಹಗಳಿಂದಲೂ ವ್ಯಾಪ್ತವಾಗಿದ್ದಿತು. ದಂತದಿಂದ ಮಾಡಲ್ಪಟ್ಟುದೂ, ಚಿನ್ನ ಬೆಳ್ಳಿಗಳಿಂದ ನಿರ್ಮಿತವಾದುದೂ ಆದ ವೇದಿಕೆಗಳಿಂದೊಡಗೂಡಿದ್ದಿತು; ಸದಾಕಾಲದಲ್ಲಿಯೂ ಫಲಗಳನ್ನೊಳಗೊಂಡ ವೃಕ್ಷಗಳಿಂದಲೂ, ಚಚ್ಚೌಕದ ಭಾವಿಗಳಿಂದಲೂ ಮನೋಹರವಾಗಿದ್ದಿತು: ದಂತದಿಂದಲೂ, ಚಿನ್ನ ಬೆಳ್ಳಿಗಳಿಂದಲೂ ಮಾಡಲ್ಪಟ್ಟ ಪೀಠಗಳಿಂದ ಆ ಭವನವು ಕಂಗೊಳಿಸುತಲಿದ್ದಿತು; ಇಷ್ಟೆಯಲ್ಲದೆ ಆ ಕೈಕೇಯಿಯ ಅರಮನೆಯಲ್ಲಿ ವಿಧವಿಧವಾದ ಅನ್ನಗಳೂ, ಕುಡಿಯತಕ್ಕ ಪದಾರ್ಥಗಳೂ, ವಿವಿಧ

ತತ್ಪ್ರವಿಶ್ಯ ಮಹಾರಾಜ ಸ್ಸ್ವಮಂತಃ ಪುರಮೃದ್ಧಿಮತ್ ||೧೬|| ನದದರ್ಶ ಪ್ರಿಯಾಂ ರಾಜಾ ಕೈಕೇಯೀಂ ಶಯನೋತ್ತಮೇ || ಸಕಾಮ ಬಲ ಸಂಯುಕ್ತೋ ರತ್ಯರ್ಥಂ ಮನುಜಾಧಿಪಃ ||೧೭|| ಅಪಶ್ಯ ದಯಿತಾಂ ಭಾರ್ಯಾಂ ಪಪ್ರಚ್ಛ ವಿಷಸಾದಚ || ನಹಿ ತಸ್ಯ ಪುರಾ ದೇವೀ ತಾಂ ವೇಳಾ ಮತ್ಯವರ್ತತ ||೧೮|| ನಚ ರಾಜಾ ಗೃಹಂ ಶೂನ್ಯಂ ಪ್ರವಿವೇಶ ಕದಾಚನ || ತತೋ ಗೃಹಂ ಗತೋ ರಾಜಾ ಕೈಕೇಯೀಂ ಪರ್ಯಪೃಚ್ಛತ ||೧೯||

ರಾಜಃ - ದಶರಥರಾಯನು, ಪ್ರವಿಶ್ಯ - ಪ್ರವೇಶಿಸಿ, ರಾಜಾ - ದಶರಥರಾಯನು, ಶಯನೋತ್ತಮೇ- ಉತ್ತಮವಾದ ಹಾಸಿಕೆಯಲ್ಲಿ, ಪ್ರಿಯಾಂ - ಇಷ್ಟಳಾದ, ಕೈಕೇಯೀಂ - ಕೈಕೆಯಿದೇವಿಯನ್ನು, ನದದರ್ಶ - ನೋಡಲಿಲ್ಲವು. ||೧೬|| ಮನುಜಾಧಿಪಃ - ರಾಜನಾದ, ಸಃ - ಆ ದಶರಥರಾಯನು, ಕಾಮಬಲಸಂಯುಕ್ತಃ - ಮನ್ಮಥ ಶಕ್ತಿಯಿಂದ ಕೂಡಿದವನಾಗಿ, ರತ್ಯರ್ಥಂ - ಕ್ರೀಡಾರ್ಥವಾಗಿ, ದಯಿತಾ - ಇಷ್ಟಳಾದ, ಭಾರ್ಯಾಂ - ಹೆಂಡತಿಯನ್ನು, ಅಪಶ್ಯ - ನೋಡದೆ, ಪಪ್ರಚ್ಛ - ಕೇಳಿ, ವಿಷಸಾದಚ - ವಿಷಾದವನ್ನೂ ಹೊಂದಿದನು. ||೧೭|| ಪುರಾ - ಪೂರ್ವದಲ್ಲಿ, ದೇವೀ - ಕೈಕೆಯಿದೇವಿಯು, ತಾಂವೇಳಾಂ - ಆ ಸಮಯವನ್ನು, ನಾತ್ಯವರ್ತತ - ಅತಿಕ್ರಮಿಸಲಿಲ್ಲವು, ರಾಜಾಚ - ದಶರಥರಾಯನೂ, ಕದಾಚನ ಎಂದಿಗೂ, ಶೂನ್ಯಂ - ಕೈಕೇಯಿಯಿಂದ ವರ್ಜಿತವಾದ, ಗೃಹಂ - ಮನೆಯನ್ನು, ನಪ್ರವಿವೇಶ - ಹೊಗಲಿಲ್ಲ. ||೧೮|| ತತಃ - ಬಳಿಕ, ಗೃಹಗತಃ - ಮನೆಗೆ ಪ್ರವೇಶ ಮಾಡಿದ, ರಾಜಾ - ಅರಸನು, ಯಥಾಪುರಂ - ಪೂರ್ವದಂತೆ, ಸ್ವಾರ್ಥಲಿಪ್ಸಾಂ - ಸ್ವಕಾರ್ಯಧುರಂಧರಳಾದವಳನ್ನಾಗಿ, ಅವಿಜ್ಞಾಯ - ತಿಳಿಯದೆ, ಅಪಂಡಿತಾಂ - ಅನಭಿಜ್ಞಳಾದ, ಕೈಕೇಯೀಂ - ಕೈಕೆಯಿದೇವಿಯನ್ನು, ಪರ್ಯಪೃಚ್ಛತ - ಕೇಳಿದನು. ||೧೯|| ಅಥ - ಬಳಿಕ, ಸಂತ್ರಸ್ತಾ - ಭಯಗೊಂಡ, ಸುಕೃತಾಂಜಲಿಃ - ಬದ್ಧಾಂಜಲಿ ಪುಟವುಳ್ಳ, ಪ್ರತಿಹಾರೀ - ದ್ವಾರ ಪಾಲಕಳು, ಹೇ ದೇವ - ಎಲೈ ಸ್ವಾಮಿಯೆ, ದೇವೀ - ಕೈಕೆಯಿದೇವಿಯು, ಭೃಶಂ - ಅತ್ಯಂತ

ಭಕ್ಷ್ಯಗಳೂ, ಅಮೂಲ್ಯಗಳಾದ ಆಭರಣಗಳೂ ಹೇರಳವಾಗಿದ್ದುವು. ಇಂತಹ ಸೊಬಗುಗಳಿಂ ದೊಡಗೂಡಿ, ಸ್ವರ್ಗಲೋಕದಂತೆ ಮಹದೈಶ್ವರ್ಯಸಂಪನ್ನವಾದ ತನ್ನ ರಾಣಿವಾಸವನ್ನು ಪ್ರವೇಶಿಸಿದ ದಶರಥರಾಯನು ತನ್ನ ಪ್ರಿಯಳಾದ ಕೈಕೇಯಿಯನ್ನು ಕಾಣಲಿಲ್ಲವು. ||೧೨-೧೬|| ಆಗಲಾರಾಯನು ತನ್ನ ಪ್ರಿಯಪತ್ನಿಯಾದ ಆ ಕೈಕೇಯಿಯನ್ನು ಕಾಣದೆ ಕಾಮಮೋಹಿತ ನಾಗಿ ವ್ಯಥೆಪಟ್ಟನು; ಹಿಂದಾವಾಗಲೂ ಆತನು ಹೋದಾಗ ಕೈಕೇಯಿಯು ಅಲ್ಲಿ ಇಲ್ಲದಿರು ತ್ತಿರಲಿಲ್ಲ; ದಶರಥರಾಯನೂ ಸಹ ಆಕೆಯಿಲ್ಲದವೇಳೆಯಲ್ಲಿ ಆ ಗೃಹವನ್ನು ಪ್ರವೇಶಿಸುತ್ತಿರಲಿ ಲ್ಲವು. ಆದುದರಿಂದ ದಶರಥಮಹೀಪಾಲನು ಆ ಗೃಹಕ್ಕೆ ಹೋಗಿ, ಕೈಕೇಯಿಯು ತನ್ನ ಮಗನಾದ ಭರತನಿಗೆ ಪಟ್ಟಾಭಿಷೇಕವನ್ನು ಬಯಸಿ, ಮುಂದೆ ಬಂದೊದಗುವ ಅನರ್ಥಪರಂ ಪರೆಯನ್ನರಿಯದೆ ಕ್ರೋಧಾಗಾರವನ್ನು ಪ್ರವೇಶಿಸಿರುವ ವೃತ್ತಾಂತವನ್ನರಿಯದೆ, ಬಾಗಿಲನ್ನು ಕಾದುಕೊಂಡಿದ್ದ ದಾದಿಯನ್ನು ಹಿಂದೆ ಕೇಳುತ್ತಿದ್ದಂತೆ ಆಗಲೂ ಕೇಳಿದವನಾದನು.||೧೭-೧೯||

ಯಥಾ ಪುರಮವಿಜ್ಞಾಯ ಸ್ವಾರ್ಥಲಿಪ್ಸುಮುಪಂಡಿತಾಂ ‖ ಪ್ರತಿಹಾರೀ ತ್ವಥೋವಾಚ ಸಂತ್ರಸ್ತಾ ಸುಕೃತಾಂಜಲಿಃ ‖ ೨೦ ‖ ದೇವ ದೇವೀ ಭೃಶಂ ಕ್ರುದ್ಧಾ ಕ್ರೋಧಾಗಾರಮಭಿದ್ರುತಾ ‖ ಪ್ರತಿಹಾರ್ಯಾ ವಚಶ್ಶ್ರುತ್ವಾ ರಾಜಾ ಪರಮ ದುರ್ಮನಾಃ ‖ ೨೧ ‖ ವಿಷಸಾದ ಪುನರ್ಭೂಯೋ ಲುಳಿತ ವ್ಯಾಕುಲೇಂದ್ರಿಯಃ ‖ ತತ್ರ ತಾಂ ಪತಿತಾಂ ಭೂಮೌ ಶಯಾನಾಮತಥೋಚಿತಾಂ ‖ ೨೨ ‖ ಪ್ರತಪ್ತ ಇವ ದುಃಖೇನ ಸೋಽಪಶ್ಯಜ್ಜಗತೀ ಪತಿಃ ‖ ಸವೃದ್ಧ ಸ್ತರುಣೀಂ ಭಾರ್ಯಾಂ ಪ್ರಾಣೇಭ್ಯೋಽಪಿ ಗರೀಯಸೀಂ ‖ ೨೩ ‖ ಅಪಾಪಃ ಪಾಪಸಂಕಲ್ಪಾಂ ದದರ್ಶ ಧರಣೀತಲೇ ‖ ಲತಾಮಿವ ವಿನಿಷ್ಕೃತ್ತಾಂ ಪತಿತಾಂ

ವಾಗಿ, ಕೃದ್ಧಾ - ಕೋಪಿಸ್ಠಳಾಗಿ, ಕ್ರೋಧಾಗಾರಂ - ಕೋಪ ಮಾಡತಕ್ಕ ಮನೆಯನ್ನು, ಅಭಿದೃತಾ - ಪ್ರವೇಶ ಮಾಡಿದಳು, ಇತಿ - ಇಂತೆಂದು, ಉವಾಚ - ಹೇಳಿದಳು. ‖ ೨೦ ‖ ರಾಜಾ - ಅರಸನಾದ ದಶರಥರಾಯನು, ಪ್ರತಿಹಾರ್ಯಾಃ - ದ್ವಾರರಕ್ಷಕಳ, ವಚಃ - ಮಾತನ್ನು, ಶೃತ್ವಾ - ಕೇಳಿ, ಪರಮದುರ್ಮನಾಃ - ಬಹಳ ವೈಮನಸ್ಯವುಳ್ಳವನಾಗಿ, ಪುನಃ - ಮತ್ತೂ, ಭೂಯಃ - ಬಹಳವಾಗಿ, ಲುಳಿತವ್ಯಾಕುಲೇಂದ್ರಿಯಃ, ಲುಳಿತ - ಕ್ಷೋಭಿಸಲ್ಪಟ್ಟ, ವ್ಯಾಕುಲ - ಚಂಚಲವಾದ, ಇಂದ್ರಿಯಃ - ಇಂದ್ರಿಯಗಳುಳ್ಳವನಾಗಿ, ವಿಷಸಾದ - ವ್ಯಸನಗೊಂಡನು. ‖ ೨೧ ‖ ಜಗತೀಪತಿಃ- ಪೃಥ್ವೀಪತಿಯಾದ, ಸಃ - ಆ ದಶರಥರಾಯನು, ತತ್ರ - ಆ ಕ್ರೋಧಾಗಾರದಲ್ಲಿ, ಭೂಮೌ - ನೆಲದಲ್ಲಿ, ಪತಿತಾಂ - ಬಿದ್ದಿರುವ, ಮತ್ತು ಶಯಾನಾಂ-ಮಲಗಿರುವ, ಅತಥೋಚಿತಾಂ-ಅಂತಹ ಅವಸ್ಥೆಗೆ ಯೋಗ್ಯಳಲ್ಲದಿರುವ, ತಾಂ - ಆ ಕೈಕೇಯಿಯನ್ನು, ದುಃಖೇನ - ವ್ಯಸನದಿಂದ, ಪ್ರತಪ್ತ ಇವ - ತಪಿಸುವನಂತೆ, ಅಪಶ್ಯತ್ - ನೋಡಿದನು. ‖ ೨೨ ‖ ವೃದ್ಧಃ - ಮುದುಕನಾದ, ಅಪಾಪಃ - ಪಾಪರಹಿತನಾದ, ಸಃ - ಆ ದಶರಥರಾಯನು, ತರುಣೀಂ - ಯೌವನಶಾಲಿಯಾದ, ಪ್ರಾಣೇಭ್ಯೋಽಪಿ - ಪ್ರಾಣಗಳಿಗಿಂತಲೂ, ಗರೀಯಸೀಂ - ಶ್ರೇಷ್ಠಳಾದ, ಪಾಪಸಂಕಲ್ಪಾಂ - ದುಷ್ಟಸಂಕಲ್ಪವುಳ್ಳ, ಭಾರ್ಯಾಂ - ಹೆಂಡತಿಯನ್ನು, ಧರಣೀತಲೇ - ನೆಲದಲ್ಲಿರುವವಳನ್ನಾಗಿ, ದದರ್ಶ - ಕಂಡನು, ವಿನಿಷ್ಕೃತಾಂ - ಕತ್ತರಿಸಲ್ಪಟ್ಟ, ಲತಾಮಿವಸ್ಥಿತಾಂ - ಬಳ್ಳಿಯಂತಿರುವ, ಪತಿತಾಂ - ಕೆಳಕ್ಕೆ ಬಿದ್ದಿರುವ, ದೇವತಾಮಿವ - ದೇವತೆಯಂತಿರುವ, ನಿರ್ಧೂತಾಂ - ಕೊಡಲ್ಪಟ್ಟ, ಕಿನ್ನರೀಮಿವ - ಕಿನ್ನರ

ಆಗಲಾದ್ವಾರಪಾಲಕಿಯು ರಾಜಭಯದಿಂದ ಹೆದರಿ, ಕೈಮುಗಿದುಕೊಂಡು, "ಮಹಾರಾಜ! ಒಡತಿಯಾದ ಕೈಕೇಯಿದೇವಿಯು ಕೋಪಗೊಂಡು ಕ್ರೋಧಾಗಾರವನ್ನು ಕುರಿತು ಹೊರಟುಹೋದಳು" ಎಂದು ನುಡಿದಳು. ಇಂತು ನುಡಿದ ಆ ತೊತ್ತಿನ ನುಡಿಗಳನ್ನು ಕೇಳಿದ ಆ ರಾಯನು ಮನನೊಂದಿದವನೂ, ವ್ಯಾಕುಲವಾದ ಇಂದ್ರಿಯಗಳುಳ್ಳವನೂ, ದುಃಖದಿಂದ ಕಂಗೆಟ್ಟವನೂ ಆಗಿ, ಆ ಕ್ರೋಧಾಗಾರದಲ್ಲಿ ಭೂಶಾಯಿನಿಯಾಗಿರುವ ಆ ಕೈಕೇಯಿಯನ್ನು ಕಂಡವನಾದನು. ‖ ೨೦-೨೨ ‖ ವೃದ್ಧನೂ, ಪಾಪರಹಿತನೂ ಆದ ಆ ರಾಯನು ಯುವತಿಯಾಗಿಯೂ, ಪ್ರಾಣಾಧಿಕಳಾದ ಸತಿಯಾಗಿಯೂ, ಪಾಪಸಂಕಲ್ಪವುಳ್ಳವಳಾಗಿಯೂ, ಕಿತ್ತೊಗೆಯಲ್ಪಟ್ಟ ಲತೆಯಂತೆಯೂ, ಸ್ವರ್ಗದಿಂದ ನೆಲಕ್ಕೆ ಬಿದ್ದಿರುವ ದೇವತೆಯಂತೆಯೂ,

ದೇವತಾಮಿವ ॥ ೨೪ ॥ ಕಿನ್ನರೀಮಿವ ನಿರ್ಧೂತಾಂ ಚ್ಯುತಾಮಪ್ಸರಸಂ ಯಥಾ ॥ ಮಾಯಾಮಿವ ಪರಿಭ್ರಷ್ಟಾಂ ಹರಿಣೀಮಿವ ಸಂಯುತಾಂ ॥ ೨೫ ॥ ಕರೇಣುಮಿವ ದಿಗ್ಧೇನ ವಿದ್ಧಾಂ ಮೃಗಯುನಾ ವನೇ ॥ ಮಹಾಗಜ ಇವಾರಣ್ಯೇ ಸ್ನೇಹಾತ್ಪರಿಮಮರ್ಶ ತಾಂ ॥ ೨೬ ॥ ಪರಿಮೃಶ್ಯಚ ಪಾಣಿಭ್ಯಾಮಭಿಸಂತ್ರಸ್ತ ಚೇತನಃ ॥ ಕಾಮೀ ಕಮಲಪತ್ರಾಕ್ಷೀಮುವಾಚ ವನಿತಾಮಿದಂ ॥ ೨೭ ॥ ನ ತೇಽಹಮಭಿಜಾನಾಮಿ ಕ್ರೋಧಮಾತ್ಮನಿ ಸಂಶ್ರಿತಂ ॥ ದೇವಿ ಕೇನಾಽಭಿಶಪ್ತಾಸಿ ಕೇನ ವಾಽಸಿ ವಿಮಾನಿತಾ ॥೨೮॥ ಯದಿದಂ ಮಮ

ಸ್ತ್ರೀಯಂತಿರುವ, ಚ್ಯುತಾಂ - ಜಾರಿ ಬಿದ್ದ, ಅಪ್ಸರಸಂಯಥಾ - ಅಪ್ಸರಸ್ತ್ರೀಯಂತಿರುವ, ಪರಿಭ್ರಷ್ಟಾಂ - (ಗೋ) ಪರಮೋಹನಾರ್ಥವಾಗಿ ಪ್ರಯೋಗ ಮಾಡಲ್ಪಟ್ಟ, ಮಾಯಾಮಿವಸ್ಥಿತಾಂ - ಮಾಯೆಯಂತಿರುವ, ಸಂಯುತಾಂ - ಬಲೆಯಿಂದ ಹಿಡಿಯಲ್ಪಟ್ಟ, ಹರಿಣೀಮಿವಸ್ಥಿತಾಂ - ಚಿಗುರಿಯಂತಿರುವ, ವನೇ - ವನದಲ್ಲಿ, ಮೃಗಯುನಾ - ಬೇಡನಿಂದ, ದಿಗ್ಧೇನ - ವಿಷದಿಂದ ಲೇಪಿತವಾದ ಬಾಣದಿಂದ, ವಿದ್ಧಾಂ - ತಿವಿಯಲ್ಪಟ್ಟ, ಕರೇಣುಮಿವ - ಹೆಣ್ಣಾನೆಯಂತಿರುವ, ತಾಂ - ಆ ಕೈಕೇಯಿಯನ್ನು, ಅರಣ್ಯೇ - ಅರಣ್ಯದಲ್ಲಿರುವ, ಮಹಾಗಜಇವ - ದೊಡ್ಡ ಆನೆಯಂತೆ, ಸ್ನೇಹಾತ್ - ಸ್ನೇಹದಿಂದ, ಪರಿಮಮರ್ಶ - ಸವರಿದನು. ಪಾಣಿಭ್ಯಾಂ - ಹಸ್ತಗಳಿಂದ, ಪರಿಮೃಶ್ಯ - ಸ್ಪರ್ಶಮಾಡಿ, ಅಭಿಸಂತ್ರಸ್ತಚೇತನಃ - ಭಯಗೊಂಡ ಬುದ್ಧಿಯುಳ್ಳವನಾಗಿ, ಕಾಮೀ - ಕಾಮಾಸಕ್ತನಾದ ಕಾರಣ, ಕಮಲಪತ್ರಾಕ್ಷೀಂ - ಕಮಲಪತ್ರಗಳಂತೆ ನೇತ್ರಗಳುಳ್ಳ, ವನಿತಾಂ - ಕೈಕೇಯಿಯಾದೇವಿಯನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೨೪-೨೭ ॥ ಹೇ ದೇವೀ-ಎಲೌ ಕೈಕೇಯಿಯೆ, ತೇ - ನಿನ್ನ, ಆತ್ಮನಿ - ಮನದಲ್ಲಿ, ಸಂಶ್ರಿತಂ - ಆಶ್ರಯಿಸಲ್ಪಟ್ಟ, ಕ್ರೋಧಂ - ಕೋಪವನ್ನು, ಅಹಂ - ನಾನು, ನಾಭಿಜಾನಾಮಿ - ತಿಳಿಯಲಾರೆನು, ಕೇನ - ಯಾರಿಂದ, ಅಭಿಶಪ್ತಾ - ನಿಂದಿಸಲ್ಪಟ್ಟವಳು, ಅಸಿ - ಆಗಿರುವೆ, ಕೇನ - ಯಾವನಿಂದ, ವಿಮಾನಿತಾ - ಅವಮಾನ ಮಾಡಲ್ಪಟ್ಟವಳು, ಅಸಿವಾ - ಆದೆ, ಹೇ ಕಲ್ಯಾಣಿ - ಎಲೌ ಶುಭಕರಳೆ, ಪಾಂಸುಷು - ಧೂಳಿನಲ್ಲಿ,

---

ಕೊಡಹಲ್ಪಟ್ಟ ಕಿನ್ನರಿಯಂತೆಯೂ, ಸ್ವರ್ಲೋಕಚ್ಯುತಳಾದ ಅಪ್ಸರಾಂಗನೆಯಂತೆಯೂ, ಇತರರನ್ನು ತನ್ನ ವಶಪಡಿಸಿಕೊಳ್ಳಲು ಬಿಡಲ್ಪಟ್ಟ ಮಾಯೆಯಂತೆಯೂ, ಬಲೆಯಲ್ಲಿ ಸಿಲುಕಿದ ಚಿಗುರಿಯಂತೆಯೂ, ಕಾಡಿನಲ್ಲಿ ಬೇಡರಿಂದ ವಿಷಬಾಣದಿಂದ ಹೊಡೆಯಲ್ಪಟ್ಟ ಹೆಣ್ಣಾನೆಯಂತೆಯೂ, ನೆಲದಮೇಲೆ ಬಿದ್ದಿರುವ ಆ ಕೈಕೇಯಿಯನ್ನು ಕಂಡು, ಅರಣ್ಯದಲ್ಲಿ ಮದ್ದಾನೆಯು ಹೆಣ್ಣಾನೆಯನ್ನು ತನ್ನ ಸೊಂಡಲಿನಿಂದ ಸವರುವಂತೆ ಆಕೆಯನ್ನು ಕೈಗಳಿಂದ ಸವರಿ, ಕಾಮಸಂತಪ್ತನಾಗಿ, ಕಮಲದೆಲೆಯಂತೆ ವಿಶಾಲವಾದ ಕಂಗಳುಳ್ಳ ಆಕೆಯನ್ನು ಕುರಿತು ಹೀಗೆಂದನು. ॥೨೪-೨೭॥ "ದೇವಿ! ನಿನಗಿಷ್ಟು ಕ್ರೋಧವೇಕೆ? ನಿನ್ನನ್ನು ಕುರಿತು ಯಾರಾದರೂ ನಿಷ್ಠುರವಾಕ್ಯಗಳನ್ನಾಡಿದರೆ? ಯಾವುದರಿಂದ ನಿನಗೆ ಅವಮಾನವಾಯಿತು! ಎಲೌ ಮಂಗಳಕರಳೆ! ನಿನ್ನ ಪತಿಯಾದ ನಾನು ಬದುಕಿರಲು, ನೀನೇತಕ್ಕೋಸುಗ ಭೂಶಾಯಿನಿ

ದುಃಖಾಯ ಶೇಷೇ ಕಲ್ಯಾಣಿ ಪಾಂಸುಷು ॥ ಭೂಮೌ ಶೇಷೇ ಕಿಮರ್ಥಂ ತ್ವಂ ಮಯಿ ಕಲ್ಯಾಣಿ ಜೀವತಿ ॥ ೨೯ ॥ ಭೂತೋಪಹತ ಚಿತ್ತೇವ ಮಮ ಚಿತ್ತ ಪ್ರಮಾಥಿನೀ ॥ ಸಂತಿ ಮೇ ಕುಶಲಾ ವೈದ್ಯಾ ಸ್ತ್ವಭಿತುಷ್ಟಾಶ್ಚ ಸರ್ವಶಃ ॥೩೦॥ ಸುಖಿತಾಂ ತ್ವಾಂ ಕರಿಷ್ಯಂತಿ ವ್ಯಾಧಿಮಾಚಕ್ಷ್ವ ಭಾಮಿನಿ ॥ ಕಸ್ಯ ವಾ ತೇ ಪ್ರಿಯಂ ಕಾರ್ಯಂ ಕೇನವಾ ವಿಪ್ರಿಯಂ ಕೃತಂ ॥ ೩೧ ॥ ಕಃ ಪ್ರಿಯಂ ಲಭತಾ ಮದ್ಯ ಕೋವಾ ಸುಮಹದಪ್ರಿಯಂ ॥ ಮಾರೋದೀರ್ಮಾಚಕಾರ್ಷೀಸ್ತ್ವಂ ದೇವಿ ಸಂಪರಿಶೋಷಣಂ ॥ ೩೨ ॥ ಅವಧ್ಯೋ ವಧ್ಯತಾಂ ಕೋವಾ ಕೋವಾ

ಶೇಷೇತ್ರಿಯತ್ - ಮಲಗಿರುವುದೆಂಬ, ತತ್ - ಅದು, ಮಮ - ನನ್ನ, ದುಃಖಾಯ - ದುಃಖಕ್ಕೋಸುಗ, ಮಯಿ - ನಾನು, ಕಲ್ಯಾಣೀ - (ಗೋ) ಸಂತೋಷಚಿತ್ತವುಳ್ಳವನಾಗಿರಲು, ತ್ವಂ - ನೀನು, ಭೂಮೌ - ನೆಲದಲ್ಲಿ, ಕಿಮರ್ಥಂ-ಏತಕ್ಕೆ, ಶೇಷೇ-ಮಲಗಿರುವೆ, ||೨೮-೨೯|| ಭೂತೋಪಹತಚಿತ್ತೇವ, ಭೂತ - (ಗೋ) ಪಿಶಾಚಾದಿಗಳಿಂದ, (ಮ) ಗ್ರಹಗಳಿಂದ, ಉಪಹತ - ಹೊಡೆಯಲ್ಪಟ್ಟ, ಚಿತ್ತೇವ- ಮನವುಳ್ಳವಳಂತೆ, ಮಮ - ನನ್ನ, ಚಿತ್ತಪ್ರಮಾಥಿನೀ - ಮನಸ್ಸನ್ನು ಕೆಲಕುವವಳಾಗಿರುವೆ, ಹೇ ಭಾಮಿನಿ - ಎಲೌ ಕೋಪಗಾತ್ರಿಯಾದವಳೆ, ವ್ಯಾಧಿಂ - ನಿನ್ನ ರೋಗವನ್ನು, ಆಚಕ್ಷ್ವ - ಹೇಳು, ಮೇ - ನನ್ನ ಸನ್ನಿಧಾನದಲ್ಲಿ, ಕುಶಲಾಃ - ಸಮರ್ಥರಾದ, ವೈದ್ಯಾಃ - ವೈದ್ಯರು, ಸರ್ವಶಃ - ಸರ್ವ ಪ್ರಕಾರದಲ್ಲಿಯೂ, ಅಭಿತುಷ್ಟಾಶ್ಚ-ತೃಪ್ತಿಯನ್ನು ಪಡೆದಿರುವವರಾಗಿ, ಸಂತಿ - ಇರುವರು. ||೩೦|| ತ್ವಾಂ - ನಿನ್ನನ್ನು, ಸುಖಿತಾಂ - (ಗೋ) ಸುಖವುಳ್ಳವಳನ್ನಾಗಿ, (ಮ) ವ್ಯಾಧಿರಹಿತಳನ್ನಾಗಿ, ಕರಿಷ್ಯಂತಿ - ಮಾಡುವರು, ತೇ - ನಿನ್ನಿಂದ, ಕಸ್ಯವಾ - ಯಾವನಿಗೆ, ಪ್ರಿಯಂ-ಇಷ್ಟವಾದ, ಕಾರ್ಯಂ- ಮಾಡತಕ್ಕುದು, ಕೇನವಾ - ಯಾರಿಂದ, ವಿಪ್ರಿಯಂ-ಅಕಾರ್ಯವು, ಕೃತಂ-ಮಾಡಲ್ಪಟ್ಟಿತು. ||೩೧|| ಕಃ - ಯಾವನು, ಅದ್ಯ - ಈಗ, ಪ್ರಿಯಂ - ಇಷ್ಟವನ್ನು, ಲಭತಾಂ - ಹೊಂದಲಿ, ಕೋವಾ - ಯಾರುತಾನೆ, ಸುಮಹತ್ - ಬಹಳವಾದ, ಅಪ್ರಿಯಂ - ಅನಿಷ್ಟವನ್ನು, ಲಭತಾಂ - ಹೊಂದಲಿ, ಹೇ ದೇವೀ - ಎಲೌ ಕೈಕೇಯಿಯೇ, ಮಾರೋದೀಃ-ಅಳದಿರು, ತ್ವಂ ನೀನು, ಸಂಪರಿಶೋಷಣಂಚ - ಕಾಯಕ್ಲೇಶವನ್ನು, ಮಾಕಾರ್ಷೀಃ-ಮಾಡಬೇಡ. ||೩೨|| ಅವಧ್ಯಃ - ವಧಾರ್ಹನಲ್ಲದಿರುವ, ಕೋವಾ-

---

ಯಾಗಿರುವೆ? ನೀನೀರೀತಿ ಪಿಶಾಚಗ್ರಸ್ತಳಂತಿರುವುದಾದರೆ ನನಗೆ ಬಹಳವಾದ ವ್ಯಸನವಾಗುವುದು. ನಿನ್ನ ಆರೋಗ್ಯಭಾಗ್ಯದಲ್ಲೇನಾದರೂ ಕುಂದುಕೊರತೆಗಳಿದ್ದರೆ ಹೇಳು. ನನ್ನ ಸನ್ನಿಧಾನದಲ್ಲಿ ಅನೇಕ ಧನ, ಕನಕ, ವಸ್ತು, ವಾಹನಾದಿಗಳಿಂದ ಸತ್ಕೃತರಾಗಿ, ಸಂತಸಚಿತ್ತವುಳ್ಳವರೂ, ಚಿಕಿತ್ಸೆಯಲ್ಲಿ ಅತಿ ನಿಪುಣರೂ ಆದ ವೈದ್ಯರನೇಕರಿರುವರು. ನಿನಗಾವ ವ್ಯಾಧಿಯಿದ್ದರೂ ಹೇಳುವವಳಾಗು; ಅವರು ಅದನ್ನು ಪರಿಹರಿಸಿ ನಿನಗೆ ಸಂತೋಷವನ್ನುಂಟುಮಾಡುತ್ತಾರೆ. ಕೈಕೇಯಿ! ನಿನ್ನ ಮನದಲ್ಲಿರುವ ಸಂತಾಪವೇನು? ನಿನಗಾಗಬಾರದುದನ್ನು ಮಾಡಿದವರಾರು? ನಿನಗೋಸುಗ ಯಾರಿಗಾದರೂ ಪ್ರಯೋಜನವನ್ನುಂಟುಮಾಡಬೇಕೆ? ಅಥವ ನೀನಾರಿಗೆ ಅಪ್ರಿಯವನ್ನು ಮಾಡಬೇಕು? ದೇವಿ ಅಳುವೆಯೇಕೆ; ಅಳದಿರು. ಶರೀರಶೋಷಣೆಯನ್ನು ಮಾಡಬೇಡ, ನಿನ್ನಿಷ್ಟವನ್ನರುಹು; ನಿನ್ನ ನಿಮಿತ್ತವಾಗಿ ವಧಾರ್ಹನಲ್ಲದಿರುವ

ವಧ್ಯೋ ವಿಮುಚ್ಯತಾಂ ॥ ದರಿದ್ರಃ ಕೋ ಭವತ್ವಾಢ್ಯೋ ದ್ರವ್ಯವಾನ್ವಾಪ್ಯಕಿಂ
ಚನಃ ॥ ೩೩ ॥ ಅಹಂಚೈವ ಮದೀಯಾಶ್ಚ ಸರ್ವೇ ತವ ವಶಾನುಗಾಃ ॥
ನ ತೇ ಕಿಂಚಿದಭಿಪ್ರಾಯಂ ವ್ಯಾಹಂತುಮಹಮುತ್ಸಹೇ ॥ ೩೪ ॥ ಆತ್ಮನೋ
ಜೀವಿತೇನಾಪಿ ಬ್ರೂಹಿ ಯನ್ಮನಸೇಚ್ಛಸಿ ॥ ಬಲಮಾತ್ಮನಿ ಜಾನಂತೀ ನ ಮಾಂ
ಶಂಕಿತು ಮರ್ಹಸಿ ॥ ೩೫ ॥ ಕರಿಷ್ಯಾಮಿ ತವ ಪ್ರೀತಿಂ ಸುಕೃತೇನಾಪಿ ತೇ
ಶಪೇ ॥ ಯಾವದಾವರ್ತತೇ ಚಕ್ರಂ ತಾವತೀ ಮೇ ವಸುಂಧರಾ ॥ ೩೬ ॥

ಯಾರುತಾನೆ, ವಧ್ಯತಾಂ - ಸಂಹರಿಸಲ್ಪಡಲಿ, ವಧ್ಯಃ - ಸಂಹಾರಾರ್ಹನಾದ, ಕೋವಾ - ಯಾರು ತಾನೆ, ವಿಮುಚ್ಯತಾಂ - ಬಿಡಿಸಲ್ಪಡಲಿ, ದರಿದ್ರಃ - ಬಡವನಾದ, ಕಃ - ಯಾವನು, ಆಢ್ಯಃ - ಧನಿಕನಾಗಿ, ಭವತು - ಆಗಲಿ, ದ್ರವ್ಯವಾನ್ವಾ - ಧನಿಕನೇ ಆಗಲಿ, ಕೋವಾ - ಯಾರು, ಅಕಿಂಚನಃ - ದರಿದ್ರನು, ಭವತು - ಆಗಲಿ. ॥ ೩೩ ॥ ಅಹಂಚೈವ - ನಾನೂ, ಮದೀಯಾಶ್ಚ - ನನ್ನ ಸಂಬಂಧಿಗಳೂ, ಸರ್ವೇ - ಎಲ್ಲರೂ, ತವವಶಾನುಗಾಃ - ನಿನ್ನಾಧೀನವಾಗಿರುವೆವು, ತೇ - ನಿನ್ನ, ಅಭಿಪ್ರಾಯಂ - ಆಶಯವನ್ನು, ಕಿಂಚಿತ್ - ಸ್ವಲ್ಪವಾದರೂ, ವ್ಯಾಹಂತುಂ - ಹೋಗಲಾಡಿಸಲು, ಅಹಂ- ನಾನು, ನೋತ್ಸಹೇ - ಇಷ್ಟಪಡುವುದಿಲ್ಲ. ॥೩೪॥ ಆತ್ಮನಃ-ನನ್ನ, ಜೀವಿತೇನಾಪಿ - ಪ್ರಾಣದಿಂದಲೇ ಆಗಲಿ, ಮನಸಾ - ಮನಸ್ಸಿನಿಂದಲೇ ಆಗಲಿ, ಯತ್ - ಯಾವದನ್ನು, ಇಚ್ಛಸಿ - ಅಪೇಕ್ಷಿಸುವೆಯೋ, ಬ್ರೂಹಿ - ಹೇಳು, ಆತ್ಮನಿ - ಮನದಲ್ಲಿ, ಬಲಂ - (ಗೋ) ವಾಲ್ಲಭ್ಯ ಬಲವನ್ನು, (ಮ) ಕಾರ್ಯ ಸಮರ್ಥನೆ ಮಾಡುವ ಬಲವನ್ನು, ಜಾನಂತೀ - ತಿಳಿದ, ಮಾಂ - ನನ್ನನ್ನು ಕುರಿತು, ಶಂಕಿತುಂ-ಸಂಶಯಗೊಳ್ಳಲು, ನಾರ್ಹಸಿ-ಯೋಗ್ಯಳಾಗದಿರು. ॥೩೫॥ ತವ-ನಿನಗೆ, ಪ್ರೀತಿಂ - ಸಂತೋಷವನ್ನು, ಕರಿಷ್ಯಾಮಿ - ಮಾಡುವೆನು, ತೇ - ನಿನಗೆ, ಸುಕೃತೇನಾಪಿ-ಪುಣ್ಯದಿಂದಲೂ, ಶಪೇ - ಆಣೆಯಿಟ್ಟುಕೊಳ್ಳುತ್ತೇನೆ, ಚಕ್ರಂ - (ಗೋ) ಸೂರ್ಯ ಚಕ್ರವು, (ಮ) ಭೂ ಚಕ್ರವು, ಯಾವತ್ - ಎಷ್ಟು ಪರಿಯಂತ, ಆವರ್ತತೇ - ಚಲಿಸುವುದೋ, ಮೇ - ನನಗೆ, ವಸುಂಧರಾ - ಭೂಮಿಯು, ತಾವತಿ - ಅಷ್ಟು ಪರಿಯಂತವಿರುವುದು. ॥೩೬॥ ಪ್ರಾಚೀನಾಃ - ಪೂರ್ವದಿಕ್ಕಿನಲ್ಲಿರುವ, ಸಿಂಧು- ಸಿಂಧು, ಸೌವೀರಾಃ - ಸೌವೀರ, ಸೌರಾಷ್ಟ್ರಾಃ - ಸೌರಾಷ್ಟ್ರ ದೇಶಗಳು, ದಕ್ಷಿಣಾಪಥಾಃ - ದಕ್ಷಿಣ

ಯಾವನನ್ನಾದರೂ ವಧಿಸಲೆ? ಅಥವ ವಧೆಗೆ ಯೋಗ್ಯನಾದ ಯಾವನನ್ನಾದರೂ ಬಿಡಿಸಲೆ? ನಿನಗೋಸುಗ ದರಿದ್ರನಾವನನ್ನಾದರೂ ಭಾಗ್ಯವಂತನನ್ನಾಗಿ ಮಾಡಲೆ? ಅಥವ ಧನವಂತನಾವನನ್ನಾದರೂ ದರಿದ್ರನನ್ನಾಗಿ ಮಾಡಬೇಕೋ? ಹೇಳು; ಈಗಲೇ ಮಾಡಿಸುತ್ತೇನೆ. ಪ್ರಿಯೆ! ಕೇಳು; ನಾನು ಮತ್ತು ನನ್ನ ಎಲ್ಲ ಸಂಬಂಧಿಗಳೂ ನಿನ್ನ ಅಧೀನರಾಗಿರುವೆವು; ನಿನಗೆ ವಿರೋಧವಾಗಿ ನಡೆಯಲು ನಾನು ಸ್ವಲ್ಪಮಾತ್ರವೂ ಬಯಸುವುದಿಲ್ಲವು. ನನಗೆ ನಿನ್ನಲ್ಲಿರುವ ಪ್ರೀತಿಗಾಗಿ ಪ್ರಾಣವನ್ನಾದರೂ ಬಿಡುತ್ತೇನೆ, ನೀನು ಸಂಶಯಗೊಳ್ಳಬೇಡ; ನನ್ನ ಸಾಮರ್ಥ್ಯವನ್ನು ನೀನು ತಿಳಿದಿರುವೆ; ನನ್ನಸಾಕ್ಷಿಯಾಗಿಯೇ ನಿನ್ನ ಅಭಿಮತವನ್ನು ನೆರವೇರಿಸಿಕೊಡುತ್ತೇನೆ.॥೨೮ ೩೫॥ ಈ ಭೂಚಕ್ರವು ಎದುವರೆವಿಗೂ ಚಲಿಸುವುದೋ ಅಷ್ಟರಲ್ಲಿರುವ ಭೂಮಿ, ದೇಶವೆಲ್ಲವೂ ನನ್ನಧೀನವಾದುದಲ್ಲದೆ ಮತ್ತೆಬೇರೆಯಿಲ್ಲ. ಪೂರ್ವದಿಕ್ಕಿನಲ್ಲಿರುವ ಸಿಂಧು,

ಪ್ರಾಚೀನಾ ಸ್ಸಿಂಧು ಸೌವೀರಾ ಸ್ಸೌರಾಷ್ಟ್ರಾ ದಕ್ಷಿಣಾಸ್ತಥಾ ॥ ವಂಗಾಂಗ ಮಗಧಾ ಮತ್ಸ್ಯಾ ಸ್ಸಮೃದ್ಧಾಃ ಕಾಶಿ ಕೋಸಲಾಃ ॥ ೩೭ ॥ ತತ್ರ ಜಾತಂ ಬಹುದ್ರವ್ಯಂ ಧನ ಧಾನ್ಯ ಮಜಾವಿಕಂ ॥ ತತೋ ವೃಣೀಷ್ವ ಕೈಕೇಯಿ ಯದ್ಯತ್ತ್ವಂ ಮನಸೇಚ್ಛಸಿ ॥ ೩೮ ॥ ಕಿಮಾಯಾಸೇನ ತೇ ಭೀರು ಉತ್ತಿಷ್ಠೋತ್ತಿಷ್ಠ ಶೋಭನೇ ॥ ತತ್ತ್ವಂ ಮೇ ಬ್ರೂಹಿ ಕೈಕೇಯಿ ಯತಸ್ತೇ ಭಯಮಾಗತಂ ॥ ೩೯ ॥ ತತ್ತದ್ವ್ಯಪನಯಿಷ್ಯಾಮಿ ನೀಹಾರಮಿವ ಭಾಸ್ಕರಃ ॥ ತಥೋಕ್ತಾ

ದಿಕ್ಕಿನಲ್ಲಿರುವ, ವಂಗಾಂಗಮಗಧಾಃ - ವಂಗ, ಅಂಗ, ಮಗಧಗಳೆಂಬ ದೇಶಗಳೂ, ಮತ್ಸ್ಯಾಃ - ಮತ್ಸ್ಯ ದೇಶಗಳು, ಸಮೃದ್ಧಾಃ - ಐಶ್ವರ್ಯದಿಂದ ತುಂಬಿರುವ, ಕಾಶಿಕೋಸಲಾಃ - ಕಾಶಿ, ಕೋಸಲ ದೇಶಗಳೂ, ತತ್ರ - ಆಯಾಯ ದೇಶಗಳಲ್ಲಿ, ಅಜಾವಿಕಂ - (ಗೋ) ಮೇಕೆ, ಕುರಿ ಮುಂತಾದವೂ, ಧನಧಾನ್ಯಂ - ಧನಧಾನ್ಯವೂ, ತತ್ರ - ಆಯಾಯ ದೇಶಗಳಲ್ಲಿ, ಬಹು ದ್ರವ್ಯಂ - ಬಹಳ ದ್ರವ್ಯವು, ಜಾತಂ - ಉತ್ಪನ್ನವಾಗುವ್ರು, ಹೇ ಕೈಕೇಯಿ - ಎಲೌ ಕೈಕೇಯಿಯೆ, ತತಃ - ಆ ದೇಶಗಳಿಂದ, ತ್ವಂ - ನೀನು, ಯತ್ - ಯಾವುದನ್ನು, ಮನಸಾ - ಮನದಿಂದ, ಇಚ್ಛಸಿ - ಕೋರುವೆಯೋ, ತತ್ತತ್ - ಅದೆಲ್ಲವನ್ನೂ, ವೃಣೀಷ್ವ - ಬೇಡು. ॥ ೩೭-೩೮ ॥ ಹೇ ಭೀರು - ಎಲೌ ಭಯಶೀಲಳೆ, ತೇ - ನಿನಗೆ, ಆಯಾಸೇನ - ದೇಹದಂಡನೆಯಿಂದ, ಕಿಂ - ಪ್ರಯೋಜನವೇನು, ಹೇ ಶೋಭನೇ - ಎಲೌ ಶುಭಕರಳೆ, ಉತ್ತಿಷ್ಠೋತ್ತಿಷ್ಠ - ಏಳೇಳು, ಹೇ ಕೈಕೇಯಿ - ಎಲೌ ಕೈಕೇಯಿಯೆ, ತ್ವಂ - ನೀನು, ಮೇ - ನನಗೆ, ತತ್ - ಮನಶ್ಚಿಂತೆಯನ್ನು, ಬ್ರೂಹಿ - ಹೇಳು, ಯತಃ - ಯಾವನಿಂದ, ತೇ - ನಿನಗೆ, ಭಯಂ - ಭಯವು, ಆಗತಂ - ಬಂದಿರುವುದೋ. ॥೩೯॥ ತೇ - ನಿನ್ನ, ತತ್-ಆ ಭಯವನ್ನು, ಭಾಸ್ಕರಃ - ಸೂರ್ಯನು, ನೀಹಾರಮಿವ - ಮಂಜಿನಂತೆ, ವ್ಯಪನಯಿಷ್ಯಾಮಿ - ಹೋಗಲಾಡಿಸುವೆನು, ತಥಾ - ಆ ಪರಿಯಾಗಿ, ಸಮಾಶ್ವಸ್ತಾ - ಸಮಾಧಾನಗೊಳಿಸಲ್ಪಟ್ಟು, ಉಕ್ತಾ - ಹೇಳಲ್ಪಟ್ಟ, ಸಾ - ಆ ಕೈಕೇಯಿದೇವಿಯು, ತದಪ್ರಿಯಂ - ಆ ಅನಿಷ್ಟ ಕಾರ್ಯವನ್ನು, ವಕ್ತು

ಸೌವೀರದೇಶಗಳೂ, ದಕ್ಷಿಣದಿಕ್ಕಿನಲ್ಲಿರುವ ಅಂಗ, ವಂಗ, ಮಗಧ, ಮತ್ಸ್ಯ, ಕಾಶಿ, ಕೋಸಲದೇಶಗಳೂ ನನ್ನಧೀನದಲ್ಲಿಯೇ ಇರುವುವು. ಆ ದೇಶಗಳಲ್ಲಿ ಉತ್ಪನ್ನವಾಗುವ ಅಸಾರವಾದ ಧನದಲ್ಲಿ ನಿನಗೆಷ್ಟುಬೇಕಾದರೂ ತೆಗೆದುಕೊ; ಕೈಕೇಯಿ! ಏಳು; ನೆಲದಲ್ಲಿ ಮಲಗಿಕೊಂಡು ಬೇಸರಗೊಳ್ಳುವುದರಿಂದೇನು ಪ್ರಯೋಜನ? ಯಾವುದರಿಂದ ನಿನಗೆ ಭಯವುಂಟಾಗಿರುವುದೋ ಅದನ್ನು ಹೇಳು; ಸೂರ್ಯನು ಮಂಜನ್ನು ಹೋಗಲಾಡಿಸುವಂತೆ ನಾನು ಆ ನಿನ್ನ ಭಯವನ್ನು ನೀಗುತ್ತೇನೆ.” ದಶರಥರಾಯನಿಂದೀರೀತಿ ಸಮಾಧಾನಗೊಳಿಸ

ಸಾ ಸಮಾಶ್ವಸ್ತಾ ವಕ್ತು ಕಾಮಾ ತದಪ್ರಿಯಂ ॥ ಪರಿಪೀಡಯಿತುಂ ಭೂಯೋ ಭರ್ತಾರಮುಪಚಕ್ರಮೇ ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶಮಸ್ಸರ್ಗಃ.

ಕಾಮಾ - ಹೇಳಲಿಚ್ಛೆಯುಳ್ಳವಳಾಗಿ, ಭೂಯಃ - ಬಹಳವಾಗಿ, ಭರ್ತಾರಂ - ಗಂಡನನ್ನು, ಪರಿಪೀಡಯಿತುಂ - ಬಾಧೆಗೊಳಿಸಲು, ಉಪಚಕ್ರಮೇ - ಆರಂಭಿಸಿದಳು. ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶಮಸ್ಸರ್ಗಃ.

ಲ್ಪಟ್ಟ ಕೈಕೇಯಿಯು ಆತನಿಗೆ ಅಪ್ರಿಯವಾದುದನ್ನು ನುಡಿಯಲಿಷ್ಟವುಳ್ಳವಳಾಗಿ, ಆತನನ್ನು ಇನ್ನೂ ಬಹಳವಾಗಿ ಪೀಡಿಸಲುಪಕ್ರಮಿಸಿದಳು. ॥ ೪೦ ॥

ಇಂತಿದು ದಶರಥರಾಜಕೃತ ಕೈಕೇಯೀಸಮಾಶ್ವಾಸನ ವೃತ್ತಾಂತ ವಿವರಣವೆಂಬ ಹತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಾದಶಸ್ಸರ್ಗಃ.

ತಂ ಮನ್ಮಥ ಶರೈರ್ವಿದ್ಧಂ ಕಾಮವೇಗ ವಶಾನುಗಂ ॥ ಉವಾಚ ಪೃಥಿವೀಪಾಲಂ ಕೈಕೇಯಿೀ ದಾರುಣಂ ವಚಃ ॥ ೧ ॥ ನಾಸ್ಮಿ ವಿಪ್ರಕೃತಾ ದೇವ ಕೇನಚಿನ್ನಾವಮಾನಿತಾ ॥ ಅಭಿಪ್ರಾಯಸ್ತು ಮೇ ಕಶ್ಚಿತ್ತ್ವಮಿಚ್ಛಾಮಿ ತ್ವಯಾ ಕೃತಂ ॥ ೨ ॥ ಪ್ರತಿಜ್ಞಾಂ ಪ್ರತಿಜಾನೀಷ್ವ ಯದಿ ತ್ವಂ ಕರ್ತುಮಿಚ್ಛಸಿ ॥ ಅಥ ತದ್ವ್ಯಾಹರಿಷ್ಯಾಮಿ ಯದಭಿಪ್ರಾರ್ಥಿತಂ ಮಯಾ ॥ ೩ ॥ ತಾಮುವಾಚ ಮಹಾತೇಜಾಃ ಕೈಕೇಯೀಮೀಷದುತ್ಸ್ಮಿತಃ ॥ ಕಾಮೀ

ಕೈಕೇಯೀ - ಕೈಕೇಯಿಯು, ಮನ್ಮಥಶರೈಃ - ಕುಸುಮಶರನ ಶರಗಳಿಂದ, ವಿದ್ಧಂ - ಹೊಡೆಯಲ್ಪಟ್ಟ, ಕಾಮವೇಗವಶಾನುಗಂ, ಕಾಮ - ಮನ್ಮಥನ, ವೇಗ - ಬೇಗೆಗೆ ವಶನಾಗಿರುವ, ಪೃಥಿವೀಪಾಲಂ - ದಶರಥರಾಯನನ್ನು ಕುರಿತು, ದಾರುಣಂ - ಕಠಿಣವಾದ, ವಚಃ - ಮಾತನ್ನು, ಉವಾಚ-ಹೇಳಿದಳು. ॥ ೧ ॥ ಹೇ ದೇವ - ಎಲೈ ಸ್ವಾಮಿಯೆ, ಅಹಂ - ನಾನು, ವಿಪ್ರಕೃತಾ - ರೋಗಪೀಡಿತಳು, ನಾಸ್ಮಿ - ಅಲ್ಲವು, (ಗೋ) ನನಗೆ ಮತ್ತಾವ ಧನ ಕನಕ ವಾಹನಾದಿಗಳೂ ಬೇಕಾಗಿಲ್ಲವು, ಕೇನಚಿತ್-ಯಾವನಿಂದಲೂ, ನಾವಮಾನಿತಾ-ಅವಮಾನ ಮಾಡಲ್ಪಡಲಿಲ್ಲ, ಮೇ-ನನಗೆ, ಕಶ್ಚಿತ್ - ಯಾವದೋ ಒಂದು, ಅಭಿಪ್ರಾಯಃ - ಅಭಿಪ್ರಾಯವು, ಅಸ್ತಿ-ಇರುವುದು, ತ್ವಂ-ಅದನ್ನು, ತ್ವಯಾ - ನಿನ್ನಿಂದ, ಕೃತಂ-ಮಾಡಲ್ಪಟ್ಟದಾಗಿ, ಇಚ್ಛಾಮಿ-ಅಪೇಕ್ಷಿಸುತ್ತೇನೆ. ॥೨॥ ತ್ವಂ-ನೀನು, ಕರ್ತುಂ-ಮಾಡಲು, ಇಚ್ಛಸಿಯದಿ - ಮನಗೊಂಡುದಾದರೆ, ಪ್ರತಿಜ್ಞಾಂ-ಶಪಥವನ್ನು, ಪ್ರತಿಜಾನೀಷ್ವ - ಮಾಡುವವನಾಗು, ಅಥ - ಅನಂತರದಲ್ಲಿ, ಯತ್ - ಯಾವದು, ಮಯಾ - ನನ್ನಿಂದ, ಅಭಿಪ್ರಾರ್ಥಿತಂ - ಅಪೇಕ್ಷಿಸಲ್ಪಟ್ಟದೊ, ತತ್ - ಅದನ್ನು, ವ್ಯಾಹರಿಷ್ಯಾಮಿ - ಹೇಳುವೆನು. ॥ ೩ ॥ ಮಹಾತೇಜಾಃ -

---

ಆ ಬಳಿಕ ಕೈಕೇಯಿಯು, ಕಾಮಬಾಣಸಂತಪ್ತನಾದುದರಿಂದ, ಆ ಕಾಮನ ಬೇಗೆಗೆ ತುತ್ತಾದ ದಶರಥರಾಯನನ್ನು ಕುರಿತು "ಸ್ವಾಮಿಯೆ! ನಾನು ಯಾರಿಂದಲೂ ಅಪಕೃತಳಾಗಲಿಲ್ಲ; ಯಾರಿಂದಲೂ ವಂಚಿತಳೂ ಆಗಲಿಲ್ಲವು; ನನ್ನ ಅಭಿಪ್ರಾಯವು ಬೇರೊಂದು ವಿಧವಾಗಿರುವುದು; ಅದು ನಿನ್ನಿಂದಲೇ ಆಗಬೇಕಾಗಿರುವುದು. ನೀನದನ್ನು ಮಾಡಿಕೊಡುತ್ತೇನೆಂದು ಪ್ರತಿಜ್ಞೆಮಾಡಿದರೆ ನನ್ನ ಅಭಿಪ್ರಾಯವಾವುದೋ ಅದನ್ನು ಹೇಳುತ್ತೇನೆ" ಎಂದು ಕಠಿಣವಾಗಿ ನುಡಿದಳು. ಆಗಲಾರಾಯನು ಮದನಶರಹತಿಗೊಳಗಾಗಿ, ಆ ಕೈಕೇಯಿಯ ಮುಂಗುರುಳನ್ನು ಪಿಡಿದು ಮುದ್ದಾಡಿ, ಮುಗುಳ್ನಗೆಗೊಂಡು ಆಕೆಯನ್ನು ಕುರಿತು, "ಎಲೌ ಸೌಭಾಗ್ಯಗರ್ವಿತಳೂ, ಅಜ್ಞಾನಿಯೂ ಆದ ಕೈಕೇಯಿಯೆ! ಹೇಗೆ ನೀನು ನನಗೆ ಸ್ತ್ರೀಯರಲ್ಲೆಲ್ಲ

ಹಸ್ತೇನ ಸಂಗೃಹ್ಯ ಮೂರ್ಧಜೇಷು ಶುಚಿಸ್ಮಿತಾಂ ॥ ೪ ॥ ಅವಲಿಪ್ತೇ ನಜಾನೀಷೇ ತ್ವತ್ತಃ ಪ್ರಿಯತಮಾ ಮಮ ॥ ಮನುಜೋ ಮನುಜವ್ಯಾಘ್ರಾದ್ರಾಮಾದನ್ಯೋ ನವಿದ್ಯತೇ ॥ ೫ ॥ ತೇನಾಜಯ್ಯೇನ ಮುಖ್ಯೇನ ರಾಘವೇಣ ಮಹಾತ್ಮನಾ ॥ ಶಪೇ ತೇ ಜೀವನಾರ್ಹೇಣ ಬ್ರೂಹಿ ಯನ್ಮನಸೇಚ್ಛಸಿ ॥ ೬ ॥ ಯಂ ಮುಹೂರ್ತಮಪಶ್ಯಂಸ್ತು ನಜೀವೇಯಮಹಂ ಧ್ರುವಂ ॥ ತೇನ ರಾಮೇಣ ಕೈಕೇಯಿ ಶಪೇ ತೇ ವಚನ ಕ್ರಿಯಾಂ ॥ ೭ ॥ ಆತ್ಮನಾ ವಾತ್ಮಜೈಶ್ಚಾನ್ಯೈ

ಬಹಳ ತೇಜಸ್ವಿಯಾದ, ಕಾಮೀ - ಕಾಮುಕನಾದ ದಶರಥರಾಯನು, ಈಷದುತ್ಸ್ಮಿತಃ - (೧) ಸ್ವಲ್ಪವಾದ ನಸುನಗೆಯುಳ್ಳವನಾಗಿ, ಹಸ್ತೇನ - ಕೈಯಿಂದ, ಮೂರ್ಧಜೇಷು - ಮುಂಗುರುಳುಗಳಲ್ಲಿ, ಶುಚಿಸ್ಮಿತಾಂ - ಮಂದಸ್ಮಿತ ಯುಕ್ತಳಾದ, ತಾಂ ಕೈಕೇಯೀಂ - ಆ ಕೈಕೇಯಿದೇವಿಯನ್ನು ಕುರಿತು, ಉವಾಚ - ಹೇಳಿದನು. ॥ ೪ ॥ ಹೇ ಅವಲಿಪ್ತೇ - (ಗೋ) ಎಲೌ ಸೌಂದರ್ಯಾತಿಶಯದಿಂದ ಗರ್ವವುಳ್ಳವಳೆ, (ಮ) ಅಜ್ಞಾನಿಯೆ, ಮಮ - ನನಗೆ, ತ್ವತ್ತಃ - ನಿನಗಿಂತಲೂ, ಪ್ರಿಯತಮಾ - ಇಷ್ಟಳಾಗಿರುವ ಹೆಂಗಸೂ, ಮನುಜವ್ಯಾಘ್ರಾತ್ - ಮನುಷ್ಯ ಶ್ರೇಷ್ಠನಾದ, ರಾಮಾತ್ - ರಾಮನಿಗಿಂತಲೂ, ಅನ್ಯಃ - ಮತ್ತೊಬ್ಬನಾದ, ಮನುಜಃ - ಮನುಷ್ಯನು, ನವಿದ್ಯತೇ ಇಲ್ಲವೆಂದು, (ತ್ವಂ - ನೀನು,) ನಜಾನಾಷೇ - ತಿಳಿದಿಲ್ಲವೆ. ॥ ೫ ॥ ಅಜಯ್ಯೇನ - ಜಯಿಸಲಸಾಧ್ಯನಾದ, ಮುಖ್ಯೇನ - ನಿನಗೆ ಮುಖ್ಯನಾದ, ಮಹಾತ್ಮನಾ - ಮಹಾ ಮನಸ್ವಿಯಾದ, ಜೀವನಾರ್ಹೇಣ - ನನ್ನ ಪ್ರಾಣಕ್ಕೆ ಅರ್ಹನಾದ, ತೇನ ರಾಘವೇಣ - ಆ ಶ್ರೀರಾಮನ ಮೇಲೆ, ತೇ - ನಿನಗೆ, ಶಪೇ - ಆಣೆಯಿಡುತ್ತೇನೆ, ಮನಸಾ - ಮನಸ್ಸಿನಿಂದ, ಯತ್ - ಯಾವುದನ್ನು, ಇಚ್ಛಸಿ - ಬಯಸುವೆಯೋ, ಬ್ರೂಹಿ - ಅದನ್ನು ಹೇಳು. ॥ ೬ ॥ ಹೇ ಕೈಕೇಯಿ - ಎಲೌ ಕೈಕೇಯಿಯೆ, ಅಹಂ - ನಾನು, ಯಂ - ಯಾವ ಶ್ರೀರಾಮನನ್ನು, ಮುಹೂರ್ತಂ - ಒಂದು ಘಳಿಗೆ ಕಾಲವು, ಅಪಶ್ಯಂಸ್ತು - ನೋಡದೇ ಹೋದರೆ, ನಜೀವೇಯಂ - ಬದುಕಿರಲಾರೆನೋ, ಧ್ರುವಂ - ನಿಶ್ಚಯವಾಗಿಯೂ, ತೇನ ರಾಮೇಣ - ಆ ಶ್ರೀರಾಮನೊಡನೆ, ತೇ-ನಿನ್ನ, ವಚನ ಕ್ರಿಯಾಂ - ಮಾತಿನ ನಡೆವಳಿಕೆಯನ್ನು ಕುರಿತು, ಶಪೇ - ಶಪಥ ಮಾಡುವೆನು. ॥ ೭ ॥

ಪ್ರಿಯತಮೆಯಾಗಿರುವೆಯೋ, ಹಾಗೆಯೇ ಶ್ರೀರಾಮನು ಸಹ ಪುರುಷರಲ್ಲೆಲ್ಲ ಪ್ರಿಯತಮನಾಗಿರುವನೆಂಬುದು ನಿನಗೆ ತಿಳಿಯದೆ? ಹಗೆಗಳಿಗೆ ದುರ್ಜಯನೂ, ಪುರುಷಶ್ರೇಷ್ಠನೂ, ರಘುಕುಲ ಸಂಭೂತನೂ, ಮಹಾತ್ಮನೂ, ಮತ್ಪ್ರಾಣಾಧಿಕನೂ ಆದ ಆ ಶ್ರೀರಾಮನ ಸಾಕ್ಷಿಯಾಗಿಯೂ, ನಿನ್ನ ಮನೋಭಿಪ್ರಾಯವನ್ನು ನೆರವೇರಿಸುತ್ತೇನೆ. ಕೈಕೇಯಿ! ಯಾವಾತನನ್ನು ನೋಡದೆ ಒಂದು ಕ್ಷಣಮಾತ್ರವಾದರೂ ಜೀವಿಸಿರಲಾರೆನೋ ಅಂತಹ ಶ್ರೀರಾಮನ ಸಾಕ್ಷಿಯಾಗಿಯೂ,

---

(೧) ಗೋವಿಂದರಾಜೀಯವ್ಯಾಖ್ಯಾನದಲ್ಲಿ "ಈಷದುತ್ಸ್ಮಿತಃ" ಎಂಬುದಕ್ಕೆ ಎರಡು ಮುಖ್ಯವಾದ ವಿಶೇಷಾರ್ಥಗಳನ್ನು ಬರೆದಿದ್ದಾರೆ. (೧) "ನಿನ್ನಾಣತಿಯನ್ನು ನೆರವೇರಿಸುವವನಾದ ನಾನೇ ಇರುವಾಗ ಪ್ರತಿಜ್ಞೆಯಿಂದೇನು ತಾನೇ ಪ್ರಯೋಜನವು" ಎಂದು ಮುಗುಳ್ನಗೆಯಾಂತು, (೨) "ಈಕೆಯ ಅಭಿಮತವನ್ನು ಈಡೇರಿಸುವುದು ಅಷ್ಟೇನೂ ಹೆಚ್ಚಿನದಲ್ಲ, ಎಂದು ನಸುನಕ್ಕು" ಎಂದು.

ವೃಣೀಯಂ ಮನುಜರ್ಷಭಂ ॥ ತೇನ ರಾಮೇಣ ಕೈಕೇಯಿ ಶಪೇ ತೇ ವಚನ ಕ್ರಿಯಾಂ ॥ ೮ ॥ ಭದ್ರೇ ಹೃದಯಮಪ್ಯೇತದನುಮೃಶ್ಯೋದ್ಧರಸ್ವ ಮೇ ॥ ಏತತ್ಸಮೀಕ್ಷ್ಯ ಕೈಕೇಯಿ ಬ್ರೂಹಿ ಯತ್ಸಾಧು ಮನ್ಯಸೇ ॥ ೯ ॥ ಬಲಮಾತ್ಮನಿ ಜಾನಂತೀ ನ ಮಾಂ ಶಂಕಿತುಮರ್ಹಸಿ ॥ ಕರಿಷ್ಯಾಮಿ ತವಪ್ರೀತಿಂ ಸುಕೃತೇನಾಪಿ ತೇ ಶಪೇ ॥ ೧೦ ॥ ಸಾ ತದರ್ಥಮನಾ ದೇವೀ ತಮಭಿಪ್ರಾಯಮಾಗತಂ ॥ ನಿರ್ಮಾಧ್ಯಸ್ಥ್ಯಾಚ್ಚ ಹರ್ಷಾಚ್ಚ ಬಭಾಷೇ ದುರ್ವಚಂ ವಚಃ ॥೧೧॥

ಆತ್ಮನಾ - ನನ್ನ ದೇಹದಿಂದಲೂ, ಅನ್ಯೈಃ - ಕಡಿಮೆಯವರಾದ, ಆತ್ಮಜೈಶ್ಚಾಪಿ - ಮಕ್ಕಳಿಂದಲೇ ಆಗಲಿ, ಮನುಜರ್ಷಭಂ - ಮನುಷ್ಯಶ್ರೇಷ್ಠನಾದ, ಯಂ - ಯಾವ ಶ್ರೀರಾಮನನ್ನು, ವೃಣೇ - ಕಡಮೆ ಮಕ್ಕಳನ್ನಾದರೂ, ನನ್ನ ದೇಹವನ್ನಾದರೂ ಮಾರಿ ಶ್ರೀರಾಮನನ್ನೇ ಕೋರುವೆನೋ, ತೇನ ರಾಮೇಣ - ಅಂತಹ ಶ್ರೀರಾಮನೊಡಗೂಡಿ, ತೇ - ನಿನ್ನ, ವಚನಕ್ರಿಯಾಂ - ಮಾತಿನಂತೆ ನಡೆಯುವ, ಶಪೇ - ಶಪಥ ಮಾಡುವೆನು. ॥ ೮ ॥ ಹೇ ಭದ್ರೇ - ಎಲೌ ಶುಭಕರಳೆ, ಏತತ್ - (ಮ) ಇದು, ಮೇ ಹೃದಯಂ - ನನ್ನ ಮನಸ್ಸು, (ಗೋ) ಎತತ್ - ನಿನ್ನ ವಾಕ್ಯಾನುಸಾರವಾಗಿ ನಡಿಸು ವಿಕೆಯೇ, ಮೇ - ನನ್ನ, ಹೃದಯಾ - ಅಭಿಪ್ರಾಯವು, ಏತತ್ - ಇದನ್ನು, ಅನುಮೃಶ್ಯ - ಆಲೋಚಿಸಿ, ಯತ್ - ಯಾವ ಕಾರ್ಯವನ್ನು, ಸಾಧು - ಯುಕ್ತವಾದುದನ್ನಾಗಿ, ಮನ್ಯಸೇ - ತಿಳಿದಿರುವೆಯೋ, ಮೇ - ನನ್ನನ್ನು, ಉದ್ಧರಸ್ವ - ಈ ದುಃಖದಿಂದ ಉದ್ಧಾರ ಮಾಡು, ತತ್ - ಅದನ್ನು, ಬ್ರೂಹಿ - ಹೇಳು. ॥ ೯ ॥ ಆತ್ಮನಿ - ತನ್ನಲ್ಲಿ, ಬಲಂ - ಪ್ರೇಮಾತಿಶಯ ರೂಪವಾದ ಬಲವನ್ನು, (ಮ - ಭಾ - ಪು) ಕಾರ್ಯವನ್ನು ನಡೆಯಿಸುವುದರಲ್ಲಿ ನನಗಿರುವ ಶಕ್ತಿಯನ್ನು, ಜಾನಂತೀ-ತಿಳಿದವಳಾಗಿ, ಮಾಂ - ನನ್ನನ್ನು ಕುರಿತು, ಶಂಕಿತುಂ - ಸಂಶಯಗೊಳ್ಳಲು, ನಾರ್ಹಸಿ-ಯೋಗ್ಯಳಾಗದಿರು, ತವ - ನಿನಗೆ, ಪ್ರೀತಿಂ - ವಿಶ್ವಾಸವನ್ನು, ಕರಿಷ್ಯಾಮಿ - ಮಾಡುತ್ತೇನೆ, ಸುಕೃತೇನಾಪಿ - ಪುಣ್ಯದಿಂದಲೂ, ತೇ - ನಿನಗೆ, ಶಪೇ - ಶಪಥ ಮಾಡುತ್ತೇನೆ. ॥ ೧೦ ॥ ತದರ್ಥಮನಾಃ - ಆ ಮಂಥರೆಯು ಹೇಳಿದ ಪ್ರಯೋಜನದಲ್ಲಿಯೇ ಮನವುಳ್ಳ, ಸಾದೇವಿ - ಆ ಕೈಕೇಯಿದೇವಿಯು, ತಮಭಿಪ್ರಾಯಂ - ಆ ಪೂರ್ವೋಕ್ತಾಭಿಪ್ರಾಯವನ್ನೇ ಕುರಿತು, ಆಗತಂ - ಬಂದ ದಶರಥನನ್ನು ಕುರಿತು, ನಿರ್ಮಾಧ್ಯಸ್ಥ್ಯಾಚ್ಚ - ಮಧ್ಯಸ್ಥರಾರೂ ಇಲ್ಲದ ಭಾವದಿಂದಲೂ, ಹರ್ಷಾಚ್ಚ - ಸಂತೋಷದಿಂದಲೂ, ದುರ್ವಚಂ - ಹೇಳಲು ಅಯೋಗ್ಯವಾದ, ವಚಃ - ಮಾತನ್ನು, ಬಭಾಷೇ - ನುಡಿದಳು. ॥ ೧೧ ॥

ನನ್ನ ಸಾಕ್ಷಿಯಾಗಿಯೂ, ರಾಮಾನುಜರಾದ ಭರತ ಶತ್ರುಘ್ನರ ಸಾಕ್ಷಿಯಾಗಿಯೂ ನಿನ್ನ ಕಾರ್ಯವನ್ನು ಮಾಡಿಕೊಡುತ್ತೇನೆ. ॥ ೧-೮ ॥ ಎಲೌ ಮಂಗಳಕರಳೆ! ಹೇಳು; ನಿನಗೆ ಯಾವುದಿಷ್ಟವಾಗಿರುವುದೋ ಅದನ್ನು ಹೇಳಿ ನನ್ನನ್ನುದ್ಧರಿಸು. ನನಗೆ ನಿನ್ನಲ್ಲಿರುವ ಪ್ರೀತಿಯನ್ನು ನೀನೇ ಬಲ್ಲೆಯಲ್ಲವೆ? ಹೇಗಾದರೂ ನಿನ್ನ ಕಾರ್ಯವನ್ನು ಮಾಡಿಕೊಡುತ್ತೇನೆ, ಸಂಶಯಪಡಬೇಡ" ಎಂದನು. ॥ ೯-೧೦ ॥ ಇಂತು ದಶರಥನಿಂದ ನಿರೂಪಿತಳಾದ ಆ ಕೈಕೇಯಿಯು, ತನ್ನ ಸಂಕಲ್ಪದ ಪ್ರಯೋಜನದಲ್ಲಿಯೇ ಸಿಲುಕಿದ ಮನವುಳ್ಳವಳಾಗಿ, ತನ್ನ ಅಭಿಪ್ರಾಯದಂತೆ ಶಪಥವಂಗೈದ ಆ ರಾಯನು, ಭರತನಲ್ಲಿರುವ ಪಕ್ಷಪಾತದಿಂದಲೂ,

ತೇನ ವಾಕ್ಯೇನ ಸಂಹೃಷ್ಟಾ ತಮಭಿಪ್ರಾಯ ಮಾಗತಂ ॥ ವ್ಯಾಜಹಾರ ಮಹಾ ಘೋರ ಮಭ್ಯಾಗತಮಿವಾಂತಕಂ ॥ ೧೨ ॥ ಯಥಾ ಕ್ರಮೇಣ ಶಪಸಿ ವರಂ ಮಮ ದದಾಸಿ ಚ ॥ ತಚ್ಛೃಣ್ವಂತು ತ್ರಯಸ್ತ್ರಿಂಶದ್ದೇವಾಸ್ಸಾಗ್ನಿ ಪುರೋಗಮಾಃ ॥ ೧೩ ॥ ಚಂದ್ರಾದಿತ್ಯೌ ನಭಶ್ಚೈವ ಗ್ರಹಾ ರಾತ್ರ್ಯಹನೀ ದಿಶಃ ॥ ಜಗಚ್ಚ ಪೃಥಿವೀಚೇಯಂ ಸಗಂಧರ್ವಾ ಸರಾಕ್ಷಸಾ ॥ ೧೪ ॥ ನಿಶಾಚರಾಣಿ ಭೂತಾನಿ ಗೃಹೇಷು ಗೃಹದೇವತಾಃ ॥ ಯಾನಿ ಚಾನ್ಯಾನಿ ಭೂತಾನಿ ಜಾನೀಯು ರ್ಭಾಷಿತಂ ತವ ॥ ೧೫ ॥ ಸತ್ಯಸಂಧೋ ಮಹಾತೇಜಾ ಧರ್ಮಜ್ಞ ಸ್ಸುಸ

ತೇನವಾಕ್ಯೇನ - ಆ ದಶರಥರಾಯನ ಮಾತಿನಿಂದ, ಸಂಹೃಷ್ಟಾ - (ಗೋ) ಹರ್ಷಯುಕ್ತಳಾಗಿ, ತಮಭಿಪ್ರಾಯಂ - ತನ್ನ ಮಗನಿಗೆ ರಾಜ್ಯಪ್ರಾಪ್ತಿಯೂ, ಶ್ರೀರಾಮನಿಗೆ ವನವಾಸವೂ ಎಂಬ ಎರಡೂ ಸಿದ್ಧವಾಯಿತೆಂಬ ಅಭಿಪ್ರಾಯವನ್ನು, ಆಗತಂ - ಪ್ರಾಪ್ತವಾದುದನ್ನಾಗಿ, ಮತ್ವಾ - ತಿಳಿದು, ಮಹಾಘೋರಂ - ಅತಿ ಭಯಂಕರವಾದ, ಅಭ್ಯಾಗತಂ - ಎದುರಾಗಿ ಬಂದ, ಅಂತಕಮಿವ - ಯಮನಂತಿರುವ ಮಾತನ್ನು, ವ್ಯಾಜಹಾರ - ಹೇಳಿದಳು. ॥ ೧೨ ॥ ಯಥಾಕ್ರಮೇಣ - ಕ್ರಮ ಮೀರದೆ, ಶಪಸಿ - ಶಪಥವನ್ನು ಮಾಡಿರುವೆ, ಮಮ - ನನಗೆ, ವರಂಚ - ವರವನ್ನೂ, ದದಾಸಿ - ಕೊಡುವೆ, ತತ್ - ಅದನ್ನು, ತ್ರಯಸ್ತ್ರಿಂಶದ್ದೇವಾಃ - ಮುವ್ವತ್ತುಮೂರು ದೇವತೆಗಳು, ಸಾಗ್ನಿಪುರೋಗಮಾಃ - ಅಗ್ನಿಯೇ ಮೊದಲಾದವರಿಂದೊಡಗೂಡಿ, ತತ್ - ಅದನ್ನು, ಶೃಣ್ವಂತು - ಕೇಳಲಿ, ಚಂದ್ರಾದಿತ್ಯೌ - ಚಂದ್ರ ಸೂರ್ಯರೂ, ನಭಶ್ಚೈವ - ಅಂತರಿಕ್ಷವೂ, ಗ್ರಹಾಃ - ಅಂಗಾರಕಾದಿ ಗ್ರಹಗಳೂ, ರಾತ್ರ್ಯಹಾನಿ - ಹಗಲು ರಾತ್ರ್ಯಭಿಮಾನಿ ದೇವತೆಗಳೂ, ದಿಶಃ - ಅಷ್ಟದಿಗಭಿಮಾನಿ ದೇವತೆಗಳೂ, ಜಗಚ್ಚ - ಲೋಕವೂ, ಸಗಂಧರ್ವಾಃ - ಗಂಧರ್ವರಿಂದಲೂ, ಸರಾಕ್ಷಸಾಃ - ರಾಕ್ಷಸರಿಂದಲೂ ಕೂಡಿದ, ಇಯಂಪೃಥಿವೀಚ- ಈ ನೆಲವೂ, ನಿಶಾಚರಾಣಿ-ರಾತ್ರಿ ಸಂಚರಿಸುವ, ಭೂತಾನಿ - ಭೂತಗಳೂ, ಗೃಹೇಷು - ಮನೆಗಳಲ್ಲಿ, ಗೃಹದೇವತಾಃ - ಗೃಹವಾಸಿಗಳಾದ ದೇವತೆಗಳೂ, ಅನ್ಯಾನಿ- ಮತ್ತು ಕೆಲವು, ಭೂತಾನಿ - ಜಂತುಗಳು, ಯಾನಿ - ಯಾವುವುಂಟೋ, ತಾನಿ - ಅವುಗಳು, ತವ - ನಿನ್ನ, ಭಾಷಿತಂ - ಮಾತನ್ನು, ಜಾನೀಯುಃ - ತಿಳಿದವರಾಗಲಿ, ಸತ್ಯಸಂಧಃ - ಸತ್ಯಪ್ರತಿಜ್ಞೆಯುಳ್ಳ, ಮಹಾತೇಜಾಃ - ಮಹಾಪರಾಕ್ರಮಿಯಾದ, ಧರ್ಮಜ್ಞಃ - ಧರ್ಮವನ್ನರಿತ,

---

ಸಂತೋಷದಿಂದಲೂ, ತಾನು ನುಡಿದ ಕಾರ್ಯವನ್ನು ಮಾಡುತ್ತಾನೆಂದು ಹರ್ಷವಾಂತವಳಾದಳು. ಆ ಬಳಿಕ ಹಗೆಗಳಿಗೂ ಹೇಳಲಾಗದ, ಆಕಸ್ಮಿಕವಾಗಿ ಬಂದೊದಗಿದ ಯಮನಂತೆ ಮಹಾಭಯಂಕರವಾಗಿ, ಆ ರಾಯನ ಪ್ರಾಣವನ್ನೇ ಸೂರೆಗೊಂಡು ಹೋಗುವ ಈ ನುಡಿಯನ್ನಾಡಲುಜ್ಜುಗಿಸಿ ಆತನನ್ನು ಕುರಿತು "ಎಲೈ ಒಡೆಯನೆ! ನೀನು ನಿನಗೆ ಪ್ರಿಯಂಕರರಾದ ಪುತ್ರ, ಸುಕೃತಾದಿಗಳ ಸಾಕ್ಷಿಗಳ ಮೂಲಕ ಆಣೆಗಳನ್ನಿಟ್ಟುಕೊಂಡು, ನನಗೆ ವರವನ್ನು ಕೊಡಲು ನಿಶ್ಚಯಿಸಿರುವೆ. ಈ ನಿಶ್ಚಯದಲ್ಲಿ ಅಗ್ನಿಯೇ ಮೊದಲಾದ ಮೂವತ್ತುಮೂರು ದೇವತೆಗಳೂ, ಹಗಲಿರಳುಗಳೂ, ದಶದಿಶೆಗಳೂ, ಜಗತ್ತೂ, ಸಾಕ್ಷಿಯಾಗಿರಲಿ; ಇದಲ್ಲದೆ, ಗಂಧರ್ವ ರಾಕ್ಷಸರಿಂದೊಡಗೂಡಿದ ಈ ಭೂತಳವೂ, ರಾತ್ರಿಯಲ್ಲಿ ಸಂಚರಿಸುವ ಭೂತಗಳೂ,

ಮಾಹಿತಃ ॥ ವರಂ ಮಮ ದದಾತ್ಯೇಷ ತನ್ಮೇ ಶೃಣ್ವಂತು ದೇವತಾಃ ॥೧೬॥ ಇತಿ ದೇವೀ ಮಹೇಷ್ವಾಸಂ ಪರಿಗೃಹ್ಯಾಭಿಶಸ್ಯ ಚ ॥ ತತಃ ಪರಮುವಾಚೇದಂ ವರದಂ ಕಾಮ ಮೋಹಿತಂ ॥೧೭॥ ಸ್ಮರ ರಾಜನ್ ಪುರಾವೃತ್ತಂ ತಸ್ಮಿನ್ ದೈವಾಸುರೇ ರಣೇ ॥ ತತ್ರ ಚಾಚ್ಯಾವಯಚ್ಛತ್ರುಸ್ತವ ಜೀವಿತ ಮಂತರಾ ॥೧೮॥ ತತ್ರಚಾಪಿ ಮಯಾ ದೇವ ಯತಸ್ತ್ವಮಭಿರಕ್ಷಿತಃ ॥ ಜಾಗ್ರತ್ಯಾ ಯತಮಾನಾಯಾ ಸ್ತತೋ ಮೇ ಪ್ರಾದದಾ ವರೌ ॥೧೯॥ ತೌ ತು ದತ್ತೌ

ಏಷಃ-ಈ ದಶರಥರಾಯನು, ಸುಸಮಾಹಿತಃ-ಸಮಾಧಾನಚಿತ್ತನಾಗಿ, ಮಮ-ನನಗೆ, ವರಂ-ವರವನ್ನು, ದದಾತಿ - ಕೊಡುತ್ತಾನೆ, ತತ್ - ಅದನ್ನು, ದೇವತಾಃ - ದೇವತೆಗಳು, ಶೃಣ್ವಂತು - ಕೇಳಲಿ, ಇತಿ - ಹೀಗೆ, ದೇವೀ - ಕೈಕೇಯಿಯಾದೇವಿಯು, ಮಹೇಷ್ವಾಸಂ - ಮಹಾಧನುರ್ಧಾರಿಯಾದ ದಶರಥರಾಯನನ್ನು, ಸಂಪರಿಗೃಹ್ಯ - ಮಾತಿನ ಬಲೆಯಲ್ಲಿ ಸಿಲುಕಿದವನನ್ನಾಗಿ ಮಾಡಿ, ಅಭಿಶಸ್ಯ - ದೇವತೆಗಳನ್ನು ಸಾಕ್ಷಿಗಳನ್ನಾಗಿ ಉದ್ಘೋಷಿಸಿ, ಕಾಮಮೋಹಿತಂ - ಕಾಮಪೀಡಿತನಾದ, ವರದಂ - ವರಪ್ರದಾತನಾದ ದಶರಥರಾಯನನ್ನು ಕುರಿತು, ತತಃಪರಂ- ಆ ಬಳಿಕ, ಇದಂ - ಈ ಮಾತನ್ನು, ಉವಾಚ-ಹೇಳಿದಳು. ॥ ೧೭ ॥ ಹೇ ರಾಜನ್ - ಎಲೈ ದಶರಥರಾಯನೆ, ದೈವಾಸುರೇ - ದೇವರಾಕ್ಷಸ ಸಂಬಂಧವಾದ, ತಸ್ಮಿನ್ - ಆ, ರಣೇ - ಯುದ್ಧದಲ್ಲಿ, ಪುರಾವೃತ್ತಂ - ಪೂರ್ವದಲ್ಲಿ ನಡೆದ ಕಥೆಯನ್ನು, ಸ್ಮರ - ಸ್ಮರಿಸಿಕೊ, ತತ್ರ - ಆ ಯುದ್ಧರಂಗದಲ್ಲಿ, ಶತ್ರುಃ - ವೈರಿಯಾದ ಶಂಬರಾಸುರನು, ಅಂತರಾ - ಮಧ್ಯಕಾಲದಲ್ಲಿ, ತವ - ನಿನ್ನ, ಜೀವಿತಂ - ಪ್ರಾಣವನ್ನು, ಅಚ್ಯಾವಯತ್ - ಕದುಲಿಸಿದನು. ॥ ೧೮ ॥ ತತ್ರ - ಆ ಸಮಯದಲ್ಲಿ, ಹೇ ದೇವ - ಎಲೈ ಸ್ವಾಮಿಯೆ, ಜಾಗ್ರತಾಂ - ಜಾಗರೂಕಳಾದ, ಮಯಾ - ನನ್ನಿಂದ, ತ್ವಂ - ನೀನು, ಯತ್ - ಯಾವಕಾರಣ, ಅಭಿರಕ್ಷತಃ - ಸಂರಕ್ಷಿಸಲ್ಪಟ್ಟೆಯೊ, ತತಃ - ಆ ಕಾರಣ, ಯತಮಾನಾಯಾಃ - ನಿನ್ನ ಸಂರಕ್ಷಣೆಯಲ್ಲಿ ಯತ್ನಮಾಡುತ್ತಿರುವ, ಮೇ - ನನಗೆ, ವರೌ-ಎರಡು ವರಗಳನ್ನು, ಪ್ರಾದದಾಃ - ಕೊಟ್ಟವನಾದೆ. ॥ ೧೯ ॥ ಹೇ ದೇವ - ಎಲೈ ಸ್ವಾಮಿಯೆ, ದತ್ತೌ-ನಿನ್ನಿಂದ ಕೊಡಲ್ಪಟ್ಟ, ವರೌ - ಎರಡುವರಗಳು, ನಿಕ್ಷೇಪೌ - ನಿನ್ನ ಹತ್ತಿರವೇ ಇಡಲ್ಪಟ್ಟುವು, ತೌ - ಆ ವರಗಳನ್ನೇ, ಹೇ ಪೃಥ್ವೀಪಾಲ - ಎಲೈ ಭೂಪಾಲಕನೆ, ಹೇ ಸತ್ಯಸಂಗರ - ಎಲೈ ಸತ್ಯಸಂ

ಗೃಹದೇವತೆಗಳೂ, ಇತರ ಭೂತಗಳೂ, ನಿನ್ನಮಾತನ್ನರಿಕಿರಲಿ; ಎಲೈ ದೇವತೆಗಳಿರಾ! ಈ ದಶರಥರಾಯನು ಮಹಾಸತ್ಯಸಂಧನು; ಮಹಾತೇಜಸ್ವಿಯು; ಧರ್ಮವನ್ನರಿತವನು; ಮಹಾಮನಸ್ವಿಯು; ಈತನು ನನಗೆ ಸಾವಧಾನಚಿತ್ತನಾಗಿ ವರವನ್ನು ಕೊಡುತ್ತಾನೆ” ಎಂದು ಹೇಳಿ ಮೋಹಿತನಾದ ಆ ದಶರಥಭೂಪಾಲನನ್ನು ತನ್ನಧೀನಮಾಡಿಕೊಂಡು ಆತನನ್ನು ಕುರಿತು ಈ ನುಡಿಯನ್ನಾಡಿದಳು. ॥ ೧೧-೧೭ ॥ “ದೇವ! ಪೂರ್ವದಲ್ಲಿ ದೇವಾಸುರಯುದ್ಧದಲ್ಲಿ ನೀನು ದೇವತೆಗಳಿಗೆ ಸಹಾಯಭೂತನಾಗಿ ತೆರಳಿದಾಗ, ಹಗೆಗಳು ನಿನ್ನನ್ನು ಮುತ್ತಿ ಬಾಣಪ್ರಯೋಗವನ್ನು ಮಾಡಿ ಪ್ರಜ್ಞೆತಪ್ಪಿದವನನ್ನಾಗಿ ಮಾಡಿದ ಸಮಯದಲ್ಲಿ, ನಾನು ಬಹುಬೇಗನೆ ಆ ಸ್ಥಳಕ್ಕೆ ಬಂದು ನಿನ್ನನ್ನು ಬೇರೊಂದು ಸುರಕ್ಷಿತವಾದೆಡೆಗೆ ತೆಗೆದುಕೊಂಡು ಹೋಗಿ ಬಹಳ ಜಾಗರೂಕತೆಯಿಂದ ಸಂರಕ್ಷಿಸಿದೆನು; ಆಗ ನೀನು ನನಗೆ ಎರಡು ವರಗಳನ್ನು

ವರೌ ದೇವ ನಿಕ್ಷಿಪ್ತೌ ಮೃಗಯಾಮ್ಯಹಂ ॥ ತವೈವ ಪೃಥಿವೀ ಪಾಲ ಸಕಾಶೇಸ ತ್ಯಸಂಗರ ॥ ೨೦ ॥ ತತ್ಪ್ರತಿಶ್ರುತ್ಯ ಧರ್ಮೇಣ ನಚೇದ್ದಾಸ್ಯಸಿ ಮೇ ವರಂ ॥ ಅದ್ಯೈವ ಹಿ ಪ್ರಹಾಸ್ಯಾಮಿ ಜೀವಿತಂ ತ್ವದ್ವಿಮಾನಿತಾ ॥ ೨೧ ॥ ವಾಙ್ಮಾತ್ರೇಣ ತದಾ ರಾಜಾ ಕೈಕೇಯ್ಯಾ ಸ್ವವಶೇಕೃತಃ ॥ ಪ್ರಚಸ್ಕಂದ ವಿನಾ ಶಾಯ ಪಾಶಂ ಮೃಗ ಇವಾತ್ಮನಃ ॥ ೨೨ ॥ ತತಃ ಪರಮುವಾಚೇದಂ ವರದಂ ಕಾಮ ಮೋಹಿತಂ ॥ ವರೌ ಯೌ ಮೇ ತ್ವಯಾ ದೇವ ತದಾ ದತ್ತೌ ಮಹೀ ಪತೇ ॥ ೨೩ ॥ ತೌ ತಾವದಹಮದ್ಯೈವ ವಕ್ಷ್ಯಾಮಿ ಶೃಣು ಮೇ ವಚಃ ॥

ಧನೆ, ತವ - ನಿನ್ನ, ಸಕಾಶಏವ - ಸನ್ನಿಧಾನದಲ್ಲಿಯೇ, ಅಹಂ - ನಾನು, ಮೃಗಯಾಮಿ - ಬೇಡಿಕೊಳ್ಳುತ್ತೇನೆ. ॥ ೨೦ ॥ ತತ್ - ಆ ಎರಡು ವರಗಳನ್ನು, ಪ್ರತಿಶ್ರುತ್ಯ - ಪ್ರತಿಜ್ಞೆಮಾಡಿ, ಧರ್ಮೇಣ - ಧರ್ಮದಿಂದ, ಮೇ - ನನಗೆ, ವರಂ - ವರವನ್ನು, ನದಾಸ್ಯಸಿಚೇತ್ - ಕೊಡದೇಹೋದರೆ, ತ್ವದ್ವಿಮಾನಿತಾ - ನಿನ್ನಿಂದ ಅವಮಾನಿತಳಾಗಿ, ಅದ್ಯೈವ - ಈಗಲೆ, ಜೀವಿತಂ - ಪ್ರಾಣವನ್ನು, ಪ್ರಹಾಸ್ಯಾಮಿಹಿ - ಬಿಡುವೆನಷ್ಟೆ. ॥ ೨೧ ॥ ತದಾ - ಆಗ, ರಾಜಾ - ದಶರಥರಾಯನು, ಕೈಕೇಯ್ಯಾ - ಕೈಕೇಯಿದೇವಿಯಿಂದ, ವಾಙ್ಮಾತ್ರೇಣ - ವಚನಮಾತ್ರದಿಂದಲೆ, ಆತ್ಮನಃ - ತನ್ನ, ವಿನಾಶಾಯ - ನಾಶಕ್ಕೋಸುಗ, ಮೃಗಃ - ಮೃಗವು, ಪಾಶಮಿವ - ಪಾಶವನ್ನಂತೆ, ಸ್ವವಶೇ - ತನ್ನ ಸ್ವಾಧೀನದಲ್ಲಿ, ಕೃತಃ - ಮಾಡಲ್ಪಟ್ಟು, (ಗೋ) ಪಾಶಂ - ಬಲೆಯನ್ನು, ಪ್ರಾಪ್ತಃ - ಹೊಂದಿದ, ಮೃಗಇವ - ಮೃಗದಂತೆ, ಪಾಶಂ - (ಮ) ವರದ್ವಯದಾನರೂಪವಾದ ಪಾಶವನ್ನು, ಗತಃ - ಹೊಂದಿದವಳಾಗಿ, ಪ್ರಚಸ್ಕಂದ - ಸತ್ಯಪ್ರತಿಜ್ಞಾರೂಪವಾದ ಪಾಶದಲ್ಲಿ ಹೊಕ್ಕನು, (ಗೋ + ಮ + ತಿ) ಪಾಶಂ - ವರದಾನರೂಪವಾದ ಪಾಶವನ್ನು ಅಂದರೆ ಧರ್ಮಪಾಶವನ್ನು, ಪ್ರಚಸ್ಕಂದ - ಹೊಂದಿದನು. ॥ ೨೨ ॥ ತತಃ ಪರಂ - ಆ ಬಳಿಕ, ಕಾಮಮೋಹಿತಂ - ಕಾಮೋದ್ರೇಕದಿಂದ ಭ್ರಾಂತನಾದ, ವರದಂ - ವರಪ್ರದಾತನಾದ ದಶರಥರಾಯನನ್ನು ಕುರಿತು, ಹೇ ದೇವ - ಎಲೈ ಸ್ವಾಮಿಯೆ, ಹೇ ಮಹೀಪತೇ - ಎಲೈ ಭೂಪತಿಯೆ, ತ್ವಯಾ - ನಿನ್ನಿಂದ, ಯೌವರೌ - ಯಾವವರಗಳು, ತದಾ - ಅಂತಹ ಆಪನ್ನಿವಾರಣಕಾಲದಲ್ಲಿ, ದತ್ತೌ - ಕೊಡಲ್ಪಟ್ಟಿತೊ, ತೌತಾವತ್ - ಆ ಎರಡುವರಗಳನ್ನಾದರೆ, ಅಹಂ-ನಾನು, ಅದ್ಯೈವ - ಈಗಲೆ, ವಕ್ಷ್ಯಾಮಿ - ಹೇಳುವೆನು, ಮೇ - ನನ್ನ, ವಚಃ - ಮಾತನ್ನು, ಶೃಣು - ಕೇಳು. ॥ ೨೩ ॥ ರಾಘವಸ್ಯ - ಶ್ರೀರಾಮನ ನಿಮಿತ್ತವಾಗಿ, ಉಪಕಲ್ಪಿತಃ - ಮಾಡಲ್ಪಟ್ಟ, ಅಭಿಷೇಕಸಮಾ

ಕೊಡುವುದಾಗಿ ಹೇಳಿದೆ; ಆ ವೃತ್ತಾಂತವನ್ನು ಸ್ಮರಿಸಿಕೋ; ಆಗ ನಾನು ಆ ಎರಡು ವರಗಳನ್ನು ನನಗೆ ಬೇಕಾದಾಗ ಬೇಡುವೆನು; ಅದುವರೆವಿಗೂ ನಿನ್ನಲ್ಲಿ ಇರಲೆಂದು ಹೇಳಿದುದು ಸರಿಯಷ್ಟೆ; ಅವುಗಳನ್ನೀಗ ಬಯಸುತ್ತೇನೆ. ಅವುಗಳನ್ನೀಗ ನೀನು ಕೊಡದಿದ್ದರೆ, ನಿನ್ನಿಂದ ಅವಮಾನಿತಳಾಗುವ ನಾನು ಈಗಲೇ ಪ್ರಾಣತ್ಯಾಗವನ್ನು ಮಾಡುತ್ತೇನೆ" ಎಂದಳು. ॥೧೮-೨೧॥ ಹೀಗೆ ದಶರಥರಾಯನು, ಮುಂದಿನ ಪರಿಣಾಮವನ್ನರಿಯದೆ, ಗೀತವಾದಿತ್ರಾದಿಗಳ ಧ್ವನಿಗೆ ಸೊಕ್ಕಿ ಬಲೆಗೆ ಬೀಳುವ ಮೃಗಗಳಂತೆ ಕೈಕೇಯಿದೇವಿಯ ಮಾತಿಗೊಳಗಾದನು. ಆಗಲಾ ಕೈಕೇಯಿಯು ಕಾಮಮೋಹಿತನೂ, ವರಪ್ರದಾತನೂ ಆದ ಆ ದಶರಥರಾಜನನ್ನು ಕುರಿತು,

ಅಭಿಷೇಕ ಸಮಾರಂಭೋ ರಾಘವಸ್ಯೋಪಕಲ್ಪಿತಃ ॥ ೨೪ ॥ ಅನೇನೈವಾಭಿಷೇಕೇಣ ಭರತೋ ಮೇಽಭಿಷಿಚ್ಯತಾಂ ॥ ಯೋ ದ್ವಿತೀಯೋ ವರೋ ದೇವ ದತ್ತಃ ಪ್ರೀತೇನ ಮೇ ತ್ವಯಾ ॥ ೨೫ ॥ ತದಾ ದೈವಾಸುರೇ ಯುದ್ಧೇ ತಸ್ಯ ಕಾಲೋಽಯ ಮಾಗತಃ ॥ ನವಪಂಚಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ॥ ೨೬ ॥ ಚೀರಾಜಿನ ಜಟಾಧಾರೀ ರಾಮೋಭವತು ತಾಪಸಃ ॥ ಭರತೋ ಭಜತಾಮದ್ಯ ಯೌವರಾಜ್ಯಮಕಂಟಕಂ ॥ ೨೭ ॥ ಏಷಮೇ ಪರಮಃ ಕಾಮೋ ದತ್ತಮೇವ ವರಂ ವೃಣೇ ॥ ಅದ್ಯಚೈವಹಿ ಪಶ್ಯೇಯಂ ಪ್ರಯಾಂತಂ ರಾಘವಂ ವನಂ ॥ ೨೮ ॥

ರಂಭಃ - ಅಭಿಷೇಕಸಾಮಗ್ರಿಯು, ಯಃ - ಯಾವದುಂಟೋ, ಅನೇನೈವಾಭಿಷೇಕೇಣ - ಇದೇ ಅಭಿಷೇಕದ ಸಾಮಗ್ರಿಯಿಂದಲೆ, ಮೇ - ನನ್ನಮಗನಾದ, ಭರತಃ - ಭರತನು, ಅಭಿಷಿಚ್ಯತಾಂ - ಅಭಿಷೇಕ ಮಾಡಲ್ಪಡಲಿ. ॥ ೨೪ ॥ ಹೇ ದೇವ - ಎಲೈ ಸ್ವಾಮಿಯೆ, ತದಾ - ಆ ಕಾಲದಲ್ಲಿ, ದೈವಾಸುರೇ - ದೇವರಾಕ್ಷಸ ಸಂಬಂಧವಾದ, ಯುದ್ಧೇ - ಕಾಳಗದಲ್ಲಿ, ಪ್ರೀತೇನ - ಸಂತುಷ್ಟನಾದ, ತ್ವಯಾ - ನಿನ್ನಿಂದ, ದ್ವಿತೀಯಃ - ಎರಡನೆಯದಾದ, ಯೋವರಃ - ಯಾವವರವು, ಮೇ - ನನಗೆ, ದತ್ತಃ - ಕೊಡಲ್ಪಟ್ಟಿತೊ, ತಸ್ಯ - ಆ ವರಕ್ಕೆ, ಅಯಂಕಾಲಃ - ಈ ಸಮಯವು, ಪ್ರಾಪ್ತಃ - ಬಂದಿತು. ॥೨೫॥ ರಾಮಃ - ಶ್ರೀರಾಮನು, ಚೀರಾಜಿನಜಟಾಧಾರೀ - ನಾರುಶೀರೆಗಳನ್ನೂ, ಕೃಷ್ಣಾಜಿನವನ್ನೂ, ಜಡೆಗಳನ್ನೂ ಧರಿಸಿ, ನವಪಂಚಚವರ್ಷಾಣಿ - ಹದಿನಾಲ್ಕುವರುಷಗಳು, ದಂಡಕಾರಣ್ಯಂ - ದಂಡಕಾರಣ್ಯವನ್ನು, ಆಶ್ರಿತಃ - ಆಶ್ರಯಿಸಿ, ತಾಪಸಃ - ಋಷಿಯು, ಭವತು - ಆಗಲಿ. ॥ ೨೬ ॥ ಅದ್ಯ-ಈಗಲೆ, ಭರತಃ - ಭರತನು, ಯೌವರಾಜ್ಯಂ - ಎರಡನೇ ಪ್ರಭುತ್ವವನ್ನು, ಅಕಂಟಕಂ - ನಿಷ್ಕಂಟಕವಾಗಿ, ಭಜತಾಂ - ಹೊಂದಲಿ, ಮೇ - ನನಗೆ, ಏಷಃ - ಇದೇ, ಪರಮಃ - ಉತ್ಕೃಷ್ಟವಾದ, ಕಾಮಃ - ಕೋರಿಕೆಯು, ದತ್ತಂ - ಕೊಡಲ್ಪಟ್ಟ, ವರಮೇವ - ವರವನ್ನೇ, ವೃಣೇ - ವರಿಸಿದ್ದೇನೆ, ಅದ್ಯಚೈವ-ಈಗಲೆ, ರಾಘವಂ - ಶ್ರೀರಾಮನನ್ನು, ವನಂ - ವನವನ್ನುಕುರಿತು, ಪ್ರಯಾಂತಂ - ಹೋಗುವವನನ್ನಾಗಿ, ಪಶ್ಯೇಯಂ - ನೋಡುವೆನು ॥೨೮॥ ರಾಜರಾಜಃ - ರಾಜಶ್ರೇಷ್ಠನಾದ, ಸಃ - ಅಂತಹ

“ಎಲೈ ರಾಯನೆ! ಆಗ ನೀನಾವ ವರಗಳನ್ನು ನನಗೆ ಕೊಟ್ಟದ್ದೆಯೋ ಅವುಗಳನ್ನೇ ಈಗ ಬೇಡುತ್ತೇನೆ; ಕೇಳು. ಈಗ ಶ್ರೀರಾಮನ ಯೌವರಾಜ್ಯ ಪಟ್ಟಾಭಿಷೇಕಕ್ಕಾಗಿ ಸಕಲ ಸಾಮಗ್ರಿಗಳೂ ಸಿದ್ಧಗೊಳಿಸಲ್ಪಟ್ಟಿವೆಯಷ್ಟೆ? ಅದೇ ಪದಾರ್ಥಗಳಿಂದಲೇ ನನ್ನ ಕುವರನಾದ ಭರತನು ಪಟ್ಟಾಭಿಷಿಕ್ತನಾಗಿ ಮಾಡಲ್ಪಡಲಿ; ಶ್ರೀರಾಮನು ನಾರುಬಟ್ಟೆ, ಕೃಷ್ಣಾಜಿನ, ಜಟೆ, ಇವುಗಳನ್ನು ಧರಿಸಿ, ತಪಸ್ವಿಯಾಗಿ, ಹದಿನಾಲ್ಕುವರ್ಷಗಳಕಾಲ ದಂಡಕಾರಣ್ಯದಲ್ಲಿರಲಿ. ಭರತನೀಗಲೇ ನಿಷ್ಕಂಟಕವಾಗಿ ಯೌವರಾಜ್ಯವನ್ನು ಹೊಂದಿದುದನ್ನೂ, ಶ್ರೀರಾಮನು ಈ ಕ್ಷಣದಲ್ಲಿಯೇ ವನಗಮನ ಮಾಡಿದುದನ್ನೂ ನೋಡಲು ನಾನಿಷ್ಟಪಡುತ್ತೇನೆ. ಇದು ನನಗೆ ಪ್ರಿಯಂಕರವಾಗಿರುವುದು. ನೀನು ಹಿಂದೆ ದಯಪಾಲಿಸಿದ್ದ ವರಗಳನ್ನು ಈಗ ಕೇಳಿದೆನೇ ಹೊರ್ತು, ಹೊಸತಾಗಿ ಏನನ್ನೂ ಕೇಳಲಿಲ್ಲ. ॥ ೨೪-೨೮ ॥ ರಾಜಾಧಿರಾಜನಾದವನೆಂದು ಕೀರ್ತಿಯ

ಸರಾಜರಾಜೋ ಭವ ಸತ್ಯ ಸಂಗರಃ
ಕುಲಂಚ ಶೀಲಂಚ ಹಿ ರಕ್ಷ ಜನ್ಮಚ ||
ಪರತ್ರ ವಾಸೇಹಿ ವದಂತ್ಯನುತ್ತಮಂ
ತಪೋಧನಾ ಸ್ಸತ್ಯ ವಚೋಹಿ ತಂ ನೃಣಾಂ || ೨೯ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾದಶಸ್ಸರ್ಗಃ.

ನೀನು, ಸತ್ಯಸಂಗರಃ - ಸತ್ಯಪ್ರತಿಜ್ಞೆಯುಳ್ಳವನು, ಭವ - ಆಗು, ಕುಲಂಚ - ಕುಲವನ್ನು, ಶೀಲಂಚ- ಸ್ವಭಾವವನ್ನೂ, ಜನ್ಮಚ - ಹುಟ್ಟುವಿಕೆಯನ್ನೂ, ರಕ್ಷ - ಸಂರಕ್ಷಣಮಾಡಿಕೊ, ಹಿ - ಯಾವ ಕಾರಣ, ತಪೋಧನಾಃ - ಋಷಿಗಳು, ಪರತ್ರವಾಸೇ - ಪರಲೋಕವಾಸದಲ್ಲಿಯೂ, ಅನುತ್ತಮಂ - ಸರ್ವೋತ್ತಮವಾದ, ಸತ್ಯವಚಃ - ಸತ್ಯವಾಕ್ಕನ್ನೇ, ನೃಣಾಂ - ಮನುಷ್ಯರಿಗೆ, ಹಿತಂ - ಹಿತಕರವನ್ನಾಗಿ, ವದಂತಿ - ಹೇಳುತ್ತಾರೆ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾದಶಸ್ಸರ್ಗಃ

ನ್ನಾಂತ ನೀನು, ಸತ್ಯಪ್ರತಿಜ್ಞೆಯುಳ್ಳವನಾಗಿ, ನಿನ್ನ ಕುಲವನ್ನೂ, ಶೀಲವನ್ನೂ, ಜನ್ಮವನ್ನೂ ರಕ್ಷಿಸುವವನಾಗು. ಏಕೆಂಬೆಯೋ? ಮನುಷ್ಯರಿಗೆ ಅನೃತವಾಡದಿರುವಿಕೆಯೇ ಮುಖ್ಯವಾದ ಪರಲೋಕಸಾಧನವೆಂದು ಮನನಶೀಲರಾದ ಮುನಿಗಳೆಲ್ಲರೂ ಹೇಳುತ್ತಾರೆ. ಆದುದರಿಂದ ನೀನು ಮಾಡಿರುವ ಪ್ರತಿಜ್ಞೆಯಂತೆ ನಡೆಸುವವನಾಗು" ಎಂದು ಹೇಳಿದಳು. || ೨೯ ||

ಇಂತಿದು ಕೈಕೇಯಿಯಾಕೃತ ವರಯಾಚನಾ ವಿಧಾನವರ್ಣನವೆಂಬ
ಹನ್ನೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಾದಶಸ್ಸರ್ಗಃ.

ತತ ಶ್ಶ್ರುತ್ವಾ ಮಹಾರಾಜಃ ಕೈಕೇಯ್ಯಾ ದಾರುಣಂ ವಚಃ ॥ ಚಿಂತಾ ಮಭಿಸಮಾಪೇದೇ ಮುಹೂರ್ತಂ ಪ್ರತತಾಪಚ ॥ ೧ ॥ ಕಿನ್ನು ಮೇ ಯದಿವಾ ಸ್ವಪ್ನ ಶ್ಚಿತ್ತ ಮೋಹೋಪಿ ವಾ ಮಮ ॥ ಅನುಭೂತೋಪಸರ್ಗೋವಾ ಮನಸೋ ವಾಪ್ಯುಪದ್ರವಃ ॥ ೨ ॥ ಇತಿ ಸಂಚಿಂತ್ಯ ತದ್ರಾಜಾ ನಾಧ್ಯಗಚ್ಛತ್ತದಾ ಸುಖಂ ॥ ಪ್ರತಿಲಭ್ಯ ಚಿರಾತ್ಸಂಜ್ಞಾಂ ಕೈಕೇಯಿೀ ವಾಕ್ಯತಾಡಿತಃ ॥ ೩ ॥ ವ್ಯಥಿತೋ ವಿಕ್ಲಬಶ್ಚೈವ ವ್ಯಾಘ್ರೀಂ ದೃಷ್ಟ್ವಾ ಯಥಾ ಮೃಗಃ ॥ ಅಸಂವೃ

ತತಃ - ಬಳಿಕ, ಮಹಾರಾಜಃ - ಮಹಾರಾಜನಾದ ದಶರಥರಾಯನು, ಕೈಕೇಯ್ಯಾಃ - ಕೈಕೇಯೀದೇವಿಯ, ದಾರುಣಂ - ಕ್ರೂರವಾದ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಮುಹೂರ್ತಂ - ಮುಹೂರ್ತಕಾಲ, ಚಿಂತಾಂ - ಆಲೋಚನೆಯನ್ನು, ಅಭಿಸಮಾಪೇದೇ - ಹೊಂದಿದನು, ಪ್ರತತಾಪಚ - ತಪಿಸಿಹೋದನು ||೧|| ಮೇ - ನನಗೆ, ಕಿಂ - ವೃಥಾಚಿಂತೆಯೇಕೆ, ಯದಿವಾ - ಹಾಗಲ್ಲದೆ ಹೋದರೆ, ಸ್ವಪ್ನೋವಾ - ಕನಸೇ, ಮಮ - ನನಗೆ, ಚಿತ್ತಮೋಹೋವಾ - ಚಿತ್ತಭ್ರಾಂತಿಯೋ, ಅನುಭೂತೋಪಸರ್ಗೋವಾ, ಅನುಭೂತ - (ಗೋ) ಜಾಗ್ರತ್ಸ್ವಪ್ನಾವಸ್ಥೆಗಳಲ್ಲಿ ಅನುಭವಿಸುವ ಪದಾರ್ಥಗಳ, ಉಪಸರ್ಗೋವಾ - (ಮ) ನಾಶಭೂತವಾದ ಸುಷುಪ್ತಿಯೋ, ಮನಸಃ - ಮನಸ್ಸಿಗೆ, ಉಪದ್ರವೋಪಿವಾ - ರೋಗವೋ ||೨|| ಇತಿ - ಹೀಗೆ, ರಾಜಾ - ದಶರಥನು, ತತ್ - ಅದನ್ನು, ಸಂಚಿಂತ್ಯ - ಆಲೋಚಿಸಿ, ತದಾ ಆಕಾಲದಲ್ಲಿ, ಸುಖಂ - ಸುಖವನ್ನು, ನಾಧ್ಯಗಚ್ಛತ್ - ಹೊಂದಲಿಲ್ಲ ||೨|| ಕೈಕೇಯೀವಾಕ್ಯತಾಡಿತಃ - (ಗೋ) ಕೈಕೇಯೀದೇವಿಯ ಮಾತೆಂಬ ವಜ್ರಾಯುಧದಿಂದ ಆಹತನಾಗಿ, ಚಿರಾತ್ - ಬಹು ಕಾಲದಿಂದ, ಸಂಜ್ಞಾಂ - ಚೈತನ್ಯವನ್ನು, ಪ್ರತಿಲಭ್ಯ - ಹೊಂದಿ, ವ್ಯಾಘ್ರೀಂ - ಪೆಣ್ಬುಲಿಯನ್ನು, ದೃಷ್ಟ್ವಾ - ಕಂಡ, ಮೃಗೋಯಥಾ - ಚಿಗುರೆಯಂತೆ, ವ್ಯಥಿತಃ - ದುಃಖಪಡುತ್ತಿರುವವನೂ, ವಿಕ್ಲಬಶ್ಚ - ವಿಹ್ವಲಚಿತ್ತನಾಗಿ, ಅಸಂವೃತಾಯಾಂ - ಹಾಸಿಕೆಯಿಲ್ಲದಿರುವ, ಜಗತ್ಯಾಂ - ನೆಲದಲ್ಲಿ, ಆಸೀನಃ - ಕುಳಿತುಕೊಂಡು, ದೀರ್ಘಂ - ಉದ್ದವಾಗಿ,

---

ಆ ಬಳಿಕ ದಶರಥಮಹೀಪಾಲನು, ಕೈಕೇಯಿಯು ನುಡಿದ ಕರ್ಣಕಠೋರವಾದ ನುಡಿಗಳನ್ನು ಕೇಳಿ, ಮೂರ್ಛೆಗೊಂಡು ಸ್ವಲ್ಪಹೊತ್ತಿನಮೇಲೆ ಎಚ್ಚೆತ್ತು, ಅತಿಶಯವಾದ ವ್ಯಸನವನ್ನು ತಾಳಿ, "ಅಹಹ ! ನಾನೀಗ ಕೇಳುತ್ತಿರುವ ನುಡಿಗಳು ನಿಜವಾದುವೆ? ಅಥವ ಸ್ವಪ್ನವೊ; ಇಲ್ಲದೆ ಮನಸ್ಸಿನ ವಿಕಾರವೊ? ಚಿತ್ತಭ್ರಮಣೆಯಿರಬಹುದೊ? ಸುಷುಪ್ತ್ಯವಸ್ಥೆಯಾಗಿರಬಹುದೆ? ಅದಿಲ್ಲದಿದ್ದರೆ ಮನೋವ್ಯಾಧಿಯೊ?" ಎಂದು ಯೋಚಿಸಿ ಏನನ್ನೂ ನಿರ್ಧರಿಸಲಾರದೆ, ಕೈಕೇಯಿಯು ಬಿರಿನುಡಿಗಳೆಂಬ ಬಾಣಾಹತಿಗೆ ತುತ್ತಾಗಿ ಮರಳಿಯೂ ಮೂರ್ಛೆಯನ್ನಾಂತು, ಬಹಳಹೊತ್ತಿನಮೇಲೆ ಪ್ರಜ್ಞೆಹೊಂದಿ, ಚಿಗುರೆಯು ಪೆಣ್ಬುಲಿಯನ್ನು ದಿಟ್ಟಿಸಿ

ತಾಯಾಮಾಸೀನೋ ಜಗತ್ಯಾಂ ದೀರ್ಘಮುಚ್ಛ್ವಸನ್ ॥ ೪ ॥ ಮಂಡಲೇ ಪನ್ನಗೋ ರುದ್ಧೋ ಮಂತ್ರೈರಿವ ಮಹಾವಿಷಃ ॥ ಅಹೋ ಧಿಗಿತಿ ಸಾಮರ್ಷೋ ವಾಚಮುಕ್ತ್ವಾ ನರಾಧಿಪಃ ॥ ೫ ॥ ಮೋಹಮಾಪೇದಿವಾನ್ ಭೂಯಶ್ಶೋಕೋಪಹತ ಚೇತನಃ ॥ ಚಿರೇಣತು ನೃಪಸ್ಸಂಜ್ಞಾಂ ಪ್ರತಿಲಭ್ಯ ಸುದುಃಖಿತಃ ॥ ೬ ॥ ಕೈಕೇಯೀಮಬ್ರವೀ ತ್ಕೃದ್ಧಃ ಪ್ರದಹನ್ನಿವ ಚಕ್ಷುಷಾ ॥ ನೃಶಂಸೇ ದುಷ್ಟಚಾರಿತ್ರೇ ಕುಲಸ್ಯಾಸ್ಯ ವಿನಾಶಿನಿ ॥ ೭ ॥ ಕಿಂಕೃತಂ ತವ ರಾಮೇಣ ಪಾಪಂ ಪಾಪೇ ಮಯಾಪಿ ವಾ ॥ ಸದಾ ತೇ ಜನನೀ ತುಲ್ಯಾಂ

ಉಚ್ಛ್ವಸನ್ - ಉಚ್ಛ್ವಾಸ ನಿಶ್ವಾಸಗಳನ್ನು, ಬಿಡುತ್ತಿರುವ, ಮಂಡಲೇ - ಯಂತ್ರ ಹಾಕಿದ ಪ್ರದೇಶದಲ್ಲಿ, ಮಂತ್ರೈಃ - ಮಂತ್ರಗಳಿಂದ, ರುದ್ಧಃ - ಅಡಗಿಸಲ್ಪಟ್ಟ, ಮಹಾವಿಷಃ - ತೀಕ್ಷ್ಣವಾದ ವಿಷವುಳ್ಳ, ಪನ್ನಗಇವ - ಹಾವಿನಂತೆ, ಸಾಮರ್ಷಃ - ಕೋಪಿಷ್ಠನಾದ, ನರಾಧಿಪಃ - ದಶರಥರಾಯನು, ಅಹೋ - ಆಶ್ಚರ್ಯವು, ಧಿಕ್ - ನಿಂದಿಸು, ಇತಿ - ಇಂತೆಂದು, ವಾಚಂ - ವಾಕ್ಯವನ್ನು, ಉಕ್ತ್ವಾ-ಹೇಳಿ, ಶೋಕೋಪಹತಚೇತಸಃ - ವ್ಯಸನದಿಂದ ನಾಶವಾದ, ಪ್ರಜ್ಞೆಯುಳ್ಳವನಾಗಿ, ಭೂಯಃ - ಮತ್ತೂ, ಮೋಹಂ - ಅಜ್ಞಾನವನ್ನು, ಆಪೇದಿವಾನ್ - ಹೊಂದಿದವನಾದನು. ॥ ೫ ॥ ನೃಪಃ - ದಶರಥರಾಯನು, ಚಿರೇಣ - ಬಹು ಕಾಲದಿಂದ, ಸಂಜ್ಞಾಂ - ಎಚ್ಚರವನ್ನು, ಪ್ರತಿಲಭ್ಯ - ಹೊಂದಿ, ಸುದುಃಖಿತಃ - ದುಃಖಿತನಾಗಿ, ಚಕ್ಷುಷಾ - ಕಣ್ಣಿನಿಂದ, ಪ್ರದಹನ್ನಿವ - ಸುಡುವನೋ ಎಂಬಂತೆ, ಕೃದ್ಧಃ - ಕೋಪವನ್ನು ತಾಳಿ, ಕೈಕೇಯೀಂ - ಕೈಕೇಯಿಯನ್ನು ಕುರಿತು, ಅಬ್ರವೀತ್ ನುಡಿದನು. ॥ ೬ ॥ ಹೇ ನೃಶಂಸೇ - ಎಲೌ ಕ್ರೂರಳೆ, ಹೇ ದುಷ್ಟಚಾರಿತ್ರೆ - ಎಲೌ ದುರ್ನಡತೆಯುಳ್ಳವಳೆ, ಅಸ್ಯಕುಲಸ್ಯ - ಈ ಕುಲಕ್ಕೆ, ವಿನಾಶನಿ - ನಾಶಕರಳೆ, ಹೇ ಪಾಪೇ - ಎಲೌ ಪಾಪಿಷ್ಠಳೆ, ತವ-ನಿನಗೆ, ರಾಮೇಣ - ಶ್ರೀರಾಮನಿಂದ, ಕಿಂಕೃತಂ - ಯಾವ ಅಪರಾಧವು ಮಾಡಲ್ಪಟ್ಟಿತು, ಮಯಾಪಿವಾ - ನನ್ನಿಂದಲೇ ಆಗಲಿ, ಪಾಪಂ - ಪಾಪವು, ಕಿಂಕೃತಂ - ಏನು ಮಾಡಲ್ಪಟ್ಟಿತು. ॥ ೭ ॥ ರಾಘವಃ - ಶ್ರೀರಾಮನು, ಯದಾ - ಯಾವ, ತೇ - ನಿನಗೆ, ಜನನೀತುಲ್ಯಾಂ - ತಾಯಿಗೆ ಸಮಾನವಾದ, ವೃತ್ತಿಂ - ಶುಶ್ರೂಷೆಯನ್ನು, ವಹತಿ - ಮಾಡುತ್ತಾನೆಯೋ, ತದೈವ - ಆಗಲೇ, ತ್ವಂ - ನೀನು, ತಸ್ಯ - ಆ ಶ್ರೀರಾಮನಿಗೆ, ಅನರ್ಥಾಯ - ಕಾರ್ಯಘಾತಕ್ಕೋಸುಗ, ಕಿಂನಿಮಿತ್ತಂ - ಯಾವ ಕಾರಣ,

ದುಃಖಿಸುವಂತೆ ವ್ಯಸನವನ್ನು ತಾಳುತ್ತ, ಭೀತಿಯಿಂದ ತನ್ನ ಅವಯವಗಳನ್ನು ಚಲಿಸಲು ಸಹ ಶಕ್ತಿಯಿಲ್ಲದೆ, ಬರಿನೆಲದಲ್ಲಿ ಕುಳಿತು, ಮಂತ್ರಚಕ್ರದಲ್ಲಿ ಬಂಧಿತವಾದ ಕಾಳಸರ್ಪದಂತೆ ಮಹಾರೋಷಾವಿಷ್ಟನಾಗಿ "ಹಾ ಕಷ್ಟ !!" ಎಂದು ಬಿಸುಸುಯ್ದು ಮರಳಿ ಮೂರ್ಛೆಯೊಂದಿ ಎಚ್ಚೆತ್ತು ಬಹಳವಾದ ಕ್ರೋಧವನ್ನು ತಾಳಿ, ಆ ಕೈಕೇಯಿಯಯನ್ನು ಅದೇ ಕೋಪದಿಂದಲೇ ದಹಿಸುವಂತೆ ಅವಳನ್ನು ಕುರಿತು ಹೀಗೆಂದನು. ॥ ೬ ॥ "ಎಲೆಗೆ! ಘಾತುಕಿ! ದುರ್ನಡತೆಯುವಳೆ! ಕುಲಾಂತಕಳೆ!! ಪಾಪೀ! ಶ್ರೀರಾಮಮೂರ್ತಿಯಾಗಲಿ, ನಾನಾಗಲಿ ನಿನಗಾವ ಅಪರಾಧವನ್ನೆಣಿಸಿದೆವು. ರಘುಕುಲಕ್ಕೆಲ್ಲ ಸಂತೋಷವನ್ನುಂಟುಮಾಡು ಆ ರಾಮಚಂದ್ರನು ನಿನ್ನನ್ನು ನಿಜಜನನಿಯಂತೆ ಕಾಣುತ್ತ ಸೇವೆ ಸತ್ಕಾರಗಳನ್ನು ಮಾಡುತ್ತಿದ್ದನು.

ವೃತ್ತಿಂ ವಹತಿ ರಾಘವಃ ॥ ೮ ॥ ತಸ್ಯೈವ ತ್ವಮನರ್ಥಾಯ ಕಿನ್ನಿಮಿತ್ತ ಮಿಹೋದ್ಯತಾ ॥ ತ್ವಂ ಮಯಾತ್ಮ ವಿನಾಶಾರ್ಥಂ ಭವನಂ ಸ್ವಂ ಪ್ರವೇಶಿತಾ ॥ ೯ ॥ ಅವಿಜ್ಞಾನಾನ್ನೃಪಸುತಾ ವ್ಯಾಳೀ ತೀಕ್ಷ್ಣವಿಷಾ ಯಥಾ ॥ ಜೀವ ಲೋಕೋ ಯದಾ ಸರ್ವೋ ರಾಮಸ್ಯಾಹ ಗುಣಸ್ತವಂ ॥ ೧೦ ॥ ಅಪರಾಧಂ ಕಮುದ್ದಿಶ್ಯ ತ್ಯಕ್ಷ್ಯಾಮೀಷ್ಟಮಹಂ ಸುತಂ ॥ ಕೌಸಲ್ಯಾಂ ವಾ ಸುಮಿತ್ರಾಂ ವಾ ತ್ಯಜೇಯಮಪಿವಾ ಶ್ರಿಯಂ ॥ ೧೧ ॥ ಜೀವಿತಂ ವಾತ್ಮನೋ ರಾಮಂ ನತ್ವೇವ ಪಿತೃವತ್ಸಲಂ ॥ ಪರಾಭವತಿ ಮೇ ಪ್ರೀತಿರ್ದೃಷ್ಟ್ವಾ ತನಯ ಮಗ್ರಜಂ ॥ ೧೨ ॥ ಅಪಶ್ಯತಸ್ತು ಮೇ ರಾಮಂ ನಷ್ಟಾ ಭವತಿ ಚೇತನಾ ॥

ಇಹ - ಈಗ, ಉದ್ಯತಾ - ಉದ್ಯುಕ್ತಳಾದೆ. ॥ ೮ ॥ ನೃಪಸುತಾ - ರಾಜಪುತ್ರಿಯಾದ, ತ್ವಂ - ನೀನು, ಮಯಾ - ನನ್ನಿಂದ, ಆತ್ಮವಿನಾಶಾರ್ಥಂ - ನನ್ನ ನಾಶಕ್ಕೋಸುಗ, ತೀಕ್ಷ್ಣವಿಷಾ - ತೀಕ್ಷ್ಣ - ಕ್ರೂರವಾದ, ವಿಷಾ - ವಿಷವುಳ್ಳ, ವ್ಯಾಳೀಯಥಾ - ಸ್ತ್ರೀ ಸರ್ಪದಂತೆ, ಅವಿಜ್ಞಾನಾತ್ - ಅಜ್ಞಾನದಿಂದ, ಸ್ವಂ - ನನ್ನ, ಭವನಂ - ಮನೆಯನ್ನು, ಪ್ರವೇಶಿತಾ - ಪ್ರವೇಶಗೊಳಿಸಲ್ಪಟ್ಟಿ. ॥೯॥ ಯದಾ - ಯಾವಾಗ, ಸರ್ವಃ - ಸಮಸ್ತವಾದ, ಜೀವಲೋಕಃ - ಪ್ರಾಣಸಮುದಾಯವು, ರಾಮಸ್ಯ - ಶ್ರೀರಾಮನ, ಗುಣಸ್ತವಂ, ಗುಣ - (ಗೋ) ಕಲ್ಯಾಣಗುಣಗಳ, ಸ್ತವಂ - ಸ್ತೋತ್ರವನ್ನು, ಆಹ - ಹೇಳುತ್ತದೆಯೋ, ತದಾ - ಆಗ, ಕಮಪರಾಧಂ - ಯಾವ ತಪ್ಪನ್ನು, ಉದ್ದಿಶ್ಯ - ಉದ್ದೇಶಿಸಿ, ಅಹಂ - ನಾನು, ಇಷ್ಟಂ - ಪ್ರೀತಿಪಾತ್ರನಾದ, ಸುತಂ - ಕುವರನನ್ನು, ತ್ಯಕ್ಷ್ಯಾಮಿ-ಬಿಡಲಿ. ॥೧೦॥ ಕೌಸಲ್ಯಾಂವಾ - ಕೌಸಲ್ಯಾದೇವಿಯನ್ನಾದರೂ, ಸುಮಿತ್ರಾಂವಾ - ಸುಮಿತ್ರೆಯನ್ನಾದರೂ, ಶ್ರಿಯಂ ವಾಪಿ - ಐಶ್ವರ್ಯವನ್ನಾದರೂ, ತ್ಯಜೇಯಂ - ಬಿಟ್ಟುಬಿಡುವೆನು, ಆತ್ಮನಃ - ನನ್ನ, ಜೀವಿತಂವಾ - ಪ್ರಾಣವನ್ನಾದರೂ, ತ್ಯಜೇಯಂ - ಬಿಡುತ್ತೇನೆ, ಕಿಂತು - ಆದರೆ, ಪಿತೃವತ್ಸಲಂ - ತಂದೆಯಲ್ಲಿ ಪ್ರೀತಿ ಯುಳ್ಳ, ರಾಮಂ - ಶ್ರೀರಾಮನನ್ನು, ನೈವತ್ಯಜೇಯಂ - ಬಿಡಲೇ ಆರೆನು. ॥ ೧೧ ॥ ಅಗ್ರಜಂ - ಜ್ಯೇಷ್ಠನಾದ, ತನಯಂ - ಕುವರನಾದ ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಮೇ - ನನಗೆ, ಪರಾ ಪ್ರೀತಿಃ - ಬಹಳ ವಿಶ್ವಾಸವು, ಭವತಿ - ಆಗುತ್ತದೆ, ರಾಮಂ - ಶ್ರೀರಾಮನನ್ನು, ಅಪಶ್ಯತಃ - ನೋಡ ದಿರುವ, ಮೇ - ನನಗೆ, ಚೇತನಾ - ಪ್ರಜ್ಞೆಯು, ನಷ್ಟಾ - ನಾಶವಾದುದು, ಭವತಿ - ಆಗುತ್ತದೆ. ॥ ೧೨ ॥ ಲೋಕಃ - ಲೋಕವು, ಸೂರ್ಯಂವಿನಾ - ಸೂರ್ಯನನ್ನುಳಿದು, ತಿಷ್ಠೇತ್ - ಇದ್ದೀತು,

---

ಅಂತಹನಿಗೆ ದ್ರೋಹವನ್ನೇತಕ್ಕೆಣಿಸುವೆ. ಅಯ್ಯೋ! ಘೋರಗರಳವುಳ್ಳ ಮಹಾಕಾಳಸರ್ಪ ವೆಂದರಿಯದೆ, ರಾಜಕುವರಿಯೆಂದರಿತು, ನಿನ್ನನ್ನು ನನ್ನ ವಿನಾಶಕ್ಕೋಸುಗ ನಾನೇ ಮನೆಗೆ ಸೇರಿಸಿದೆನಲ್ಲ! ಎಲ್ಲಜನರೂ ಶ್ರೀರಾಮನ ಅನಂತಕಲ್ಯಾಣಗುಣಗಳನ್ನು ಹೊಗಳುತ್ತಿರುವರು. ಇಂತಹ ಪ್ರಿಯಪುತ್ರನಲ್ಲಿ ಯಾವ ಅಪರಾಧವನ್ನು ಕಂಡು ಆತನನ್ನಗಲಲಿ. ॥ ೧೦ ॥ ಕೈಕೇಯೀ! ಕೇಳು: ಕೌಸಲ್ಯಾ, ಸುಮಿತ್ರೆಯರನ್ನಾಗಲಿ, ರಾಜ್ಯಸಂಪತ್ತನ್ನಾಗಲಿ, ಅಲ್ಲದೆ ಪ್ರಾಣ ವನ್ನಾಗಲಿ ತೊರೆಯಬಹುದು. ಪಿತೃವಾತ್ಸಲ್ಯವನ್ನುಳ್ಳ ಆ ಶ್ರೀರಾಮಮೂರ್ತಿಯನ್ನು ಬಿಡ ಲಾರೆನು. ಜ್ಯೇಷ್ಠಪುತ್ರನಾದ ಅವನನ್ನು ಕಂಡರೆ ನನಗೆ ಬಹಳ ಪ್ರೇಮೆಯಿರುವುದು.

ತಿಷ್ಠೇಲ್ಲೋಕೋ ವಿನಾ ಸೂರ್ಯಂ ಸಸ್ಯಂವಾ ಸಲಿಲಂ ವಿನಾ || ೧೩ || ನತು
ರಾಮಂ ವಿನಾ ದೇಹೇ ತಿಷ್ಠೇತ್ತು ಮಮ ಜೀವಿತಂ || ತದಲಂ ತ್ಯಜ್ಯತಾ ಮೇಷ
ನಿಶ್ಚಯಃ ಪಾಪನಿಶ್ಚಯೇ || ೧೪ || ಅಪಿ ತೇ ಚರಣೌ ಮೂರ್ಧ್ನಾ ಸ್ಪೃಶಾ
ಮ್ಯೇಷ ಪ್ರಸೀದ ಮೇ || ಕಿಮಿದಂ ಚಿಂತಿತಂ ಪಾಪೇ ತ್ವಯಾ ಪರಮ ದಾರುಣಂ
|| ೧೫ || ಅಥ ಜಿಜ್ಞಾಸಸೇ ಮಾಂ ತ್ವಂ ಭರತಸ್ಯ ಪ್ರಿಯಾಪ್ರಿಯೇ || ಅಸ್ತು
ಯತ್ತತ್ತ್ವಯಾ ಪೂರ್ವಂ ವ್ಯಾಹೃತಂ ರಾಘವಂ ಪ್ರತಿ || ೧೬ || ಸ ಮೇ
ಜ್ಯೇಷ್ಠಸ್ಸುತ ಶ್ರೀಮಾನ್ ಧರ್ಮಜ್ಯೇಷ್ಠ ಇತೀವ ಮೇ || ತತ್ತ್ವಯಾ ಪ್ರಿಯ

ಸಸ್ಯಂ - ಪೈರು, ಸಲಿಲಂವಿನಾ - ನೀರಿಲ್ಲದೆಯೆ, ತಿಷ್ಠೇತ್ - ಇದ್ದೀತು, ರಾಮಂವಿನಾತು - ಶ್ರೀರಾಮನನ್ನಳಿದು, ಮಮ - ನನ್ನ, ಜೀವಿತಂ - ಪ್ರಾಣವು, ದೇಹೇ - ದೇಹದಲ್ಲಿ, ನತಿಷ್ಠೇತ್ - ನಿಲ್ಲಲಾರದು. || ೧೩ || ಹೇ ಪಾಪನಿಶ್ಚಯೇ - ಎಲೌ ಪಾಪನಿರತಳೆ! ತತ್ - ಆ ಕಾರಣ, ಅಲಂ - ಸಾಕು, ಏಷನಿಶ್ಚಯಃ - ಈ ನಿಶ್ಚಯವು, ತ್ಯಜ್ಯತಾಂ - ಬಿಡಲ್ಪಡಲಿ, ತೇ - ನಿನ್ನ, ಚರಣಾವಪಿ - ಪಾದಗಳನ್ನಾದರೂ, ಮೂರ್ಧ್ನಾ - ಶಿರಸ್ಸಿನಿಂದ, ಸ್ಪೃಶಾಮ್ಯೇಷ - ಸ್ಪರ್ಶಮಾಡೇನು, ಮೇ-ನನ್ನಲ್ಲಿ, ಪ್ರಸೀದ-ಪ್ರಸನ್ನಳಾಗು, ಪಾಪೇ - ಎಲೌ ಪಾಪಿಷ್ಠಳೆ, ತ್ವಯಾ - ನಿನ್ನಿಂದ, ಪರಮದಾರುಣಂ - ಬಹಳ ಕ್ರೂರವಾದ, ಇದಂ - ಇದು, ಕಿಂಚಿಂತಿತಂ - ಹೇಗೆ ಆಲೋಚಿಸಲ್ಪಟ್ಟಿತು. || ೧೫ || ಅಥ - ಬಳಿಕ, ತ್ವಂ - ನೀನು, ಭರತಸ್ಯ - ಭರತನ, ಪ್ರಿಯಾಪ್ರಿಯೇ - ಇಷ್ಟಾನಿಷ್ಟವಿಷಯದಲ್ಲಿ, ಮಾಂ - ನನ್ನನ್ನು, ಜಿಜ್ಞಾಸಸೇ - ತಿಳಿದುಕೊಳ್ಳಲು ಇಚ್ಛಿಸುತ್ತೀಯೋ, ತತ್ - ಅದು, ಅಸ್ತು - ಆಗಲಿ, ತ್ವಯಾ - ನಿನ್ನಿಂದ, ರಾಘವಂಪ್ರತಿ - ಶ್ರೀರಾಮನನ್ನು ಕುರಿತು, ಶ್ರೀಮಾನ್-ಸಂಪದ್ಯುಕ್ತನಾದ, ಧರ್ಮಜ್ಯೇಷ್ಠಃ-ಧರ್ಮವೇ ಶ್ರೇಷ್ಠವಾಗುಳ್ಳ, ಸಃ - ಆ ಶ್ರೀರಾಮನು, ಮೇ - ನನಗೆ, ಜ್ಯೇಷ್ಠಸ್ಸುತಇತಿ - ಜ್ಯೇಷ್ಠಪುತ್ರನೆಂದು, ಮೇ - ನನಗೆ, ಪೂರ್ವಂ - ಮೊದಲು, ಯತ್ - ಯಾವದು, ವ್ಯಾಹೃತಂ - ಹೇಳಲ್ಪಟ್ಟಿತೋ, ತತ್ - ಆ ವಚನವು, ಪ್ರಿಯಸೇವಾರ್ಥಂ - ಚಾಕರಿಮಾಡಿಸಿಕೊಳ್ಳುವನಿಮಿತ್ತ, ಪ್ರಿಯವಾದಿನ್ಯಾ - ಇಷ್ಟವಾದ ಮಾತುಗಳನ್ನು ಹೇಳುತ್ತಿರುವ, ತ್ವಯಾ - ನಿನ್ನಿಂದ, ಕಥಿತಂ - ಹೇಳಲ್ಪಟ್ಟಿದು, ಭವೇ

ಆತನನ್ನು ಕಾಣದಿದ್ದರೆ ನನ್ನ ಪ್ರಾಣಗಳು ಉಳಿವುದಿಲ್ಲ. ಸೂರ್ಯನಿಲ್ಲದಿದ್ದರೂ ಲೋಕವಿರಬಹುದು; ನೀರಿಲ್ಲದಿದ್ದರೂ ಪೈರುಗಳಿರಬಹುದು; ಆದರೆ ಶ್ರೀರಾಮನಿಲ್ಲದಿದ್ದರೆ ನನ್ನ ಶರೀರದಲ್ಲಿನ ಜೀವವು ನಿಲ್ಲಲಾರದು. ಹೆಚ್ಚಾಗಿ ಹೇಳುವುದರಿಂದೇನು? ಎಲೆಗೆ ಪಾಪಸಂಕಲ್ಪೆ! ಕೇಳು; ಸಾಕು; ಈ ನಿಶ್ಚಯವನ್ನು ಬಿಡು. ನಿನ್ನ ಪಾದಗಳಿಗೆ ದಂಡವತ್ಪ್ರಣಾಮಮಂಗೈಯುತ್ತೇನೆ. ಕೈಕೇಯಿ! ನಿನ್ನ ಕುವರನಾದ ಭರತನ ವಿಷಯದಲ್ಲಿ ನನಗೆ ಪ್ರೇಮವಿರುವುದೋ ಇಲ್ಲವೋ, ಎಂಬುದನ್ನರಿಯಬೇಕೆಂದಿರುವೆಯೇನೋ? ಅದಂತಿರಲಿ; ನೀನು ಶ್ರೀರಾಮನನ್ನು ಕುರಿತು, ಆತನು ನನ್ನ ಜ್ಯೇಷ್ಠಪುತ್ರನೆಂದೂ, ಶ್ರೀಮಂತನೆಂದೂ, ಧರ್ಮಜ್ಯೇಷ್ಠನೆಂದೂ, ಹೇಳುತ್ತಿದ್ದುದೆಲ್ಲ, ನನ್ನ ಮನಸ್ಸನ್ನು ಸಂತೋಷಗೊಳಿಸುವುದಕ್ಕೂ, ಆತನಿಂದ ಸೇವೆ ಸತ್ಕಾರಗಳನ್ನು ಹೊಂದುವುದಕ್ಕೂ ಹೇಳಲ್ಪಟ್ಟುದೆಂದು ಭಾವಿಸುತ್ತೇನೆ. ಏಕೆಂದರೆ

ನಾದಿನ್ಯಾ ಸೇನಾರ್ಥಂ ಕಥಿತಂ ಭವೇತ್ ॥೧೭॥ ತಚ್ಛ್ರುತ್ವಾ ಶೋಕ ಸಂತಪ್ತಾ ಸಂತಾಪಯಸಿ ಮಾಂ ಭೃಶಂ ॥ ಆವಿಷ್ಟಾಸಿ ಗೃಹಂ ಶೂನ್ಯಂ ಸಾ ತ್ವಂ ಪರವಶಂ ಗತಾ ॥೧೮॥ ಇಕ್ಷ್ವಾಕೂಣಾಂ ಕುಲೇ ದೇವೀ ಸಂಪ್ರಾಪ್ತಸ್ಸುಮಹಾನಯಂ॥ ಅನಯೋ ನಯಸಂಪನ್ನೇ ಯತ್ರ ತೇ ವಿಕೃತಾ ಮತಿಃ॥೧೯॥ ನಹಿ ಕಿಂಚಿದಯುಕ್ತಂ ವಾ ವಿಪ್ರಿಯಂ ವಾ ಪುರಾ ಮಮ ॥ ಅಕರೋಸ್ತ್ವಂ ವಿಶಾಲಾಕ್ಷಿ ತೇನ ನಶ್ರದ್ದಧಾಮ್ಯಹಂ ॥೨೦॥ ನನು ತೇ ರಾಘವಸ್ತುಲ್ಯೋ ಭರತೇನ ಮಹಾತ್ಮನಾ ॥ ಬಹುಶೋಹಿ ಸುಬಾಲೇ ತ್ವಂ ಕಥಾಃ ಕಥಯಸೇ

ತ್ - ಆಗುವದು. ||೧೬-೧೭|| ತತ್ - ಆ ಶ್ರೀರಾಮನ ಪಟ್ಟಾಭಿಷೇಕವಚನವನ್ನು, ಶ್ರುತ್ವಾ - ಕೇಳಿ, ಶೋಕಸಂತಪ್ತಾ - ಶೋಕದಿಂದ ಪೀಡಿತಳಾಗಿ, ಮಾಂ - ನನ್ನನ್ನು, ಭೃಶಂ - ಅತ್ಯಂತವಾಗಿ, ಸಂತಾಪಯಸಿ - ಸಂಕಟಗೊಳಿಸುವೆ, ಶೂನ್ಯಂ ಕ್ರೋಧಾಗಾರವನ್ನು, ಗೃಹಂ - ಮನೆಯನ್ನು, ಆವಿಷ್ಟಾ - ಹೊಕ್ಕವಳು, ಅಸಿ - ಆಗಿರುವೆ, ಸಾತ್ವಂ-ಅಂತಹ ನೀನು, ಪರವಶಂ - (೧) ಪರರ ದುರ್ಬೋಧನೆಗೆ ಒಳಗಾಗಿ, ಗತಾ - ಹೊಂದಿದವಳು, ಅಸಿ - ಆಗಿರುವೆ. ||೧೮|| ಹೇ ದೇವಿ - ಎಲೈ ಕೈಕೇಯೀದೇವಿಯೆ, ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶಸ್ಥರಾಜರ, ಕುಲೇ - ವಂಶದಲ್ಲಿ, ಸುಮಹಾನ್ - ಬಹಳವಾದ, ಅನಯಃ - ಅನ್ಯಾಯವು, ಸಂಪ್ರಾಪ್ತಃ - ಒದಗಿಬಂದಿತು, ಹೇ ನಯಸಂಪನ್ನೆ - ಎಲೌ ನೀತಿಮಾರ್ಗವನ್ನರಿತವಳೆ! ಯತ್ರ - ಯಾವಕುಲದಲ್ಲಿ, ತೇ - ನಿನ್ನ, ಮತಿಃ - ಬುದ್ಧಿಯು, ವಿಕೃತಾ-ವಿಕಾರವನ್ನು ಹೊಂದಿರುವುದು. ||೧೯|| ಹೇ ವಿಶಾಲಾಕ್ಷಿ - ಎಲೈ ವಿಶಾಲವಾದ ನೇತ್ರಗಳುಳ್ಳವಳೆ, ತ್ವಂ - ನೀನು, ಪುರಾ - ಹಿಂದೆ, ಮಮ - ನನಗೆ, ಅಯುಕ್ತಂ - ಮಾಡಬಾರದ ಕಾರ್ಯವನ್ನೇ ಆಗಲಿ, ವಿಪ್ರಿಯಂವಾ - ಅನಿಷ್ಟಕಾರ್ಯವನ್ನೇ ಆಗಲಿ, ನಾಕರೋಃ - ಮಾಡಿದವಳಲ್ಲವು, ತೇನ - ಆ ಕಾರಣ, ಅಹಂ - ನಾನು, ನಶ್ರದ್ದಧಾಮಿ - ನಂಬಲಾರೆನು. ||೨೦|| ತೇ - ನಿನಗೆ, ರಾಘವಃ - ಶ್ರೀರಾಮನು, ಮಹಾತ್ಮನಾ - ಮಹಾತ್ಮನಾದ, ಭರತೇನ - ಭರತನಿಂದ, ತುಲ್ಯೋನನು - ಸಮಾನ

ಈಗ ಸಮೀಪಿಸಿ ಬಂದಿರುವ ಶ್ರೀರಾಮನ ಯೌವರಾಜ್ಯಪಟ್ಟಾಭಿಷೇಕವನ್ನು ಕೇಳಿ ಅಸೂಯೆಗೊಂಡು ನನ್ನನ್ನು ದುಃಖಗೊಳಿಸುತ್ತಿರುವೆ. ಕೈಕೇಯಿ! ನೀನು ಇತರರ ದುರ್ಬೋಧನೆಗೊಳಪಟ್ಟು ಕ್ರೋಧಾಗಾರವನ್ನು ಹೊಕ್ಕಿರುವೆ. ಇದೆಲ್ಲವನ್ನೂ ನೀನು ನನ್ನನ್ನು ಪರೀಕ್ಷಿಸಲೋಸುಗ ಮಾಡಿರಬಹುದು. ||೧೧-೧೮|| ಕೈಕೇಯಿ! ನೀನು ನೀತಿಯನ್ನರಿತವಳು; ಇಕ್ಷ್ವಾಕುವಂಶದಲ್ಲಿ ನಿನಗೀವಿಪರೀತಬುದ್ಧಿಯುಂಟಾಗಿರುವುದು ಯಾವುದೋ ಒಂದು ಅನರ್ಥಕ್ಕೆಂದೆಣಿಸುತ್ತೇನೆ. ದೇವಿ! ನೀನಿದುವರೆವಿಗೆ ಎಂದೂ ನನಗೆ ಅಹಿತವನ್ನಾಗಲಿ, ಅಪಕಾರವನ್ನಾಗಲಿ ಮಾಡಿದವಳಲ್ಲವು. ಆದುದರಿಂದ ನೀನೀಗ ಹೇಳಿದ ನುಡಿಗಳನ್ನು ನಂಬಲಾರೆನು. ಭರತನಲ್ಲಿ ನನಗೆ ವಿಶ್ವಾಸವಿರುವುದೋ ಇಲ್ಲವೊ ಎಂಬುದನ್ನು ತಿಳಿದುಕೊಳ್ಳಲು ಹೀಗೆ ಮಾತನಾಡುವೆ

ಟಿ. (೧) ಆವಿಷ್ಟಾಸಿಗ್ರಹೈಶ್ಶೂನ್ಯೈರಿತಿಪಾಠೇ:—ಶೂನ್ಯೈಃ - ಗ್ರಹೈಃ - ಕೇವಲ ಪಿಶಾಚಾದಿಭೂತಗಳಿಂದ, ಆವಿಷ್ಟಾ - ಆವೇಶಮಾಡಲ್ಪಟ್ಟವಳಾಗಿ, ಪರವಶಂಗತಾ - ಪರಾಧೀನತೆಯನ್ನು ಪಡೆದಿರುವೆ.

ಮಮ || ೨೦ || ತಸ್ಯ ಧರ್ಮಾತ್ಮನೋ ದೇವೀ ವನೇ ವಾಸಂ ಯಶಸ್ವಿನಃ || ಕಥಂ ರೋಚಯಸೇ ಭೀರು ನವವರ್ಷಾಣಿ ಪಂಚಚ || ೨೧ || ಅತ್ಯಂತ ಸುಕುಮಾರಸ್ಯ ತಸ್ಯ ಧರ್ಮೇ ಧೃತಾತ್ಮನಃ || ಕಥಂ ರೋಚಯಸೇ ವಾಸ ಮರಣ್ಯೇ ಭೃಶದಾರುಣೇ || ೨೨ || ರೋಚಯಸ್ಯಭಿರಾಮಸ್ಯ ರಾಮಸ್ಯ ಪ್ರಿಯದರ್ಶನೇ || ತವ ಶುಶ್ರೂಷಮಾಣಸ್ಯ ಕಿಮರ್ಥಂ ವಿಪ್ರವಾಸನಂ||೨೩|| ರಾಮೋಹಿ ಭರತಾದ್ಭೂಯ ಸ್ತವ ಶುಶ್ರೂಷತೇ ಸದಾ || ವಿಶೇಷಂ ತ್ವಯಿ ತಸ್ಮಾತ್ತು ಭರತಸ್ಯ ನಲಕ್ಷಯೇ || ೨೪ || ಶುಶ್ರೂಷಾಂ ಗೌರವಂಚೈವ

ನಲ್ಲವೆ, ಸುಬಾಲೇ - ಎಲೆ ಬಾಲೆ, ಇತಿ - ಹೀಗೆ, ಬಹುಶಃ - ಅನೇಕವಿಧವಾಗಿ, ತ್ವಂ-ನೀನು, ಮಮ - ನನಗೆ, ಕಥಾಃ - ಕಥೆಗಳನ್ನು, ಕಥಯಸೇಹಿ - ಹೇಳುತ್ತಲಿದ್ದೆಯಷ್ಟೆ. || ೨೦ || ಹೇ ದೇವಿ-ಎಲೌ ಕೈಕೇಯಿಯೆ, ಧರ್ಮಾತ್ಮನಃ - ಧರ್ಮದಲ್ಲಿಯೇ ಮನವುಳ್ಳ, ಯಶಸ್ವಿನಃ - ಕೀರ್ತಿವಂತನಾದ, ತಸ್ಯ- ಆ ಶ್ರೀರಾಮನಿಗೆ, ಹೇ ಭೀರು - ಎಲೌ ಭಯಶೀಲಳೆ, ನವವರ್ಷಾಣಿಪಂಚಚ - ಹದಿನಾಲ್ಕು ವರ್ಷಗಳು, ವನೇ - ವನದಲ್ಲಿ, ವಾಸಂ - ನಿವಾಸವನ್ನು, ಕಥಂರೋಚಯಸೇ - ಹೇಗೆತಾನೆ ಸಮ್ಮತಿಸುವೆ. || ೨೧ || ಅತ್ಯಂತ ಸುಕುಮಾರಸ್ಯ - ಬಹಳ ಮೃದುವಾದ ದೇಹವುಳ್ಳ, ಧರ್ಮೇ - ಧರ್ಮದಲ್ಲಿಯೇ, ಧೃತಾತ್ಮನಃ - ಧರಿಸಲ್ಪಟ್ಟ ಮನಸ್ಸುಳ್ಳ, ತಸ್ಯ - ಆ ಶ್ರೀರಾಮನಿಗೆ, ಭೃಶದಾರುಣೇ - ಬಹಳ ಕ್ರೂರವಾಗಿರುವ, ಅರಣ್ಯೇ - ಅರಣ್ಯದಲ್ಲಿ, ವಾಸಂ - ವಾಸವನ್ನು, ಕಥಂರೋಚಯಸೇ - ಹೇಗೆ ಸಮ್ಮತಿಪಟ್ಟೆ. || ೨೨ || ಹೇ ಪ್ರಿಯದರ್ಶನೇ - ಎಲೌ ಶುಭಕರವಾದ ನೇತ್ರಗಳುಳ್ಳವಳೆ, ತವ - ನಿನಗೆ, ಶುಶ್ರೂಷಮಾಣಸ್ಯ - ಸೇವೆಯನ್ನು ಮಾಡುತ್ತಿರುವ, ಅಭಿರಾಮಸ್ಯ - ಲೋಕಕ್ಕೆಲ್ಲ ಮನೋರಂಜಕನಾದ, ರಾಮಸ್ಯ - ಶ್ರೀರಾಮನಿಗೆ, ವಿಪ್ರವಾಸನಂ - ದೇಶವನ್ನು ಬಿಟ್ಟು ಹೊರಡಿಸುವಿಕೆಯನ್ನು, ಕಿಮರ್ಥಂ - ಏತಕ್ಕೆ, ರೋಚಯಸಿ - ಸಮ್ಮತಿಸಿದೆ. || ೨೩ || ರಾಮೋಹಿ - ಶ್ರೀರಾಮನಾದರೆ, ಭರತಾತ್ - ಭರತನಿಗಿಂತಲೂ, ಭೂಯಃ - ಹೆಚ್ಚಾಗಿ, ತವ - ನಿನಗೆ, ಸದಾ - ನಿರಂತರವೂ, ಶುಶ್ರೂಷತೇ - ಸೇವೆ ಮಾಡುತ್ತಾನೆ, ತ್ವಯಿ - ನಿನ್ನ ವಿಷಯದಲ್ಲಿ, ತಸ್ಮಾತ್ - ಆ ಶ್ರೀರಾಮನಿಗಿಂತಲೂ, ಭರತಸ್ಯ - ಭರತನಿಗೆ, ವಿಶೇಷಂ - ಆಧಿಕ್ಯವನ್ನು, ನಲಕ್ಷಯೇ - ಕಾಣಲಿಲ್ಲವು. || ೨೪ || ಮನು

ಯೆಂದು ತಿಳಿಯುತ್ತೇನೆ. ಕೈಕೇಯಿ! ಶ್ರೀರಾಮನು ನಿನ್ನ ಕುವರನಾದ ಭರತನಂತೆಯೇ ಪ್ರೇಮಪಾತ್ರನಲ್ಲವೆ? ಈ ವಿಷಯವನ್ನು ನೀನು ನನ್ನಮುಂದೆ ಅನೇಕಸಲ ಹೇಳಿರುವೆಯಲ್ಲವೆ. ಎಲೌ ಭೀರುವೆ! ಹೀಗೆ ಪ್ರೀತಿಪಾತ್ರನೂ, ಧರ್ಮಾತ್ಮನೂ, ಕೀರ್ತಿವಂತನೂ ಆದ ಶ್ರೀರಾಮನಿಗೆ, ಹದಿನಾಲ್ಕುವರುಷಗಳ ವನವಾಸವನ್ನು ಮಾಡಿಸಬೇಕೆಂದು ಹೇಗೆತಾನೆ ಬಯಸಿದೆ! ||೧೯-೨೧|| ಸುಕುಮಾರನೂ, ಧರ್ಮನಿರತನೂ ಆದ ಆತನಿಗೆ ಮಹಾಕಠಿಣವಾದ ವನವಾಸವನ್ನು ಬಯಸಬಹುದೆ? ಎಲೌ ಮನೋಹರವಾದ ಕಂಗಳುಳ್ಳವಳೆ! ಪ್ರೇಮಪಾತ್ರನಾದ ಶ್ರೀರಾಮಮೂರ್ತಿಯ ಅಗಲುವಿಕೆಯನ್ನು ಅಪೇಕ್ಷಿಸುವೆಯೇಕೆ? ಆತನು ನಿನ್ನ ಕುವರನಾದ ಭರತನಿಗಿಂತಲೂ ಅತಿಶಯವಾಗಿ ನಿನಗೆ ಸೇವೆ ಸತ್ಕಾರಗಳನ್ನು ಮಾಡುತ್ತಿರುವನಲ್ಲವೆ? ಆದುದರಿಂದ ಭರತನಿಗೂ ರಾಮನಿಗೂ ಯಾವ ಭೇದವೂ ಇಲ್ಲ. ಕೈಕೇಯಿ!

ಪ್ರಮಾಣಂ ವಚನಕ್ರಿಯಾ || ಕಸ್ತೇ ಭೂಯಸ್ತರಂ ಕುರ್ಯಾದನ್ಯತ್ರ ಮನುಜರ್ಷಭಾತ್ || ೨೬ || ಬಹೂನಾಂ ಸ್ತ್ರೀಸಹಸ್ರಾಣಾಂ ಬಹೂನಾಂಚೋಪಜೀವಿನಾಂ || ಪರಿವಾದೋಪವಾದೋ ವಾ ರಾಘವೇ ನೋಪಪದ್ಯತೇ || ೨೭ || ಸಾಂತ್ವಯನ್ಸರ್ವಭೂತಾನಿ ರಾಮಶ್ಶುದ್ಧೇನ ಚೇತಸಾ || ಗೃಹ್ಣಾತಿ ಮನುಜವ್ಯಾಘ್ರಃ ಪ್ರಿಯೈರ್ವಿಷಯವಾಸಿನಃ || ೨೮ || ಸತ್ಯೇನ ಲೋಕಾನ್ ಜಯತಿ ದೀನಾನ್ ದಾನೇನ ರಾಘವಃ || ಗುರೂನ್ ಶುಶ್ರೂಷಯಾ ವೀರೋ ಧನುಷಾ ಯುಧಿ ಶಾತ್ರವಾನ್ || ೨೯ || ಸತ್ಯಂ ದಾನಂ ತಪಸ್ತ್ಯಾಗೋ ಮಿತ್ರತಾ

ಜರ್ಷಭಾತ್ - ಮನುಷ್ಯ ಶ್ರೇಷ್ಠನಾದ ಶ್ರೀರಾಮನಿಗಿಂತಲೂ, ಅನ್ಯತ್ರ - ಇತರ ಮಕ್ಕಳಲ್ಲಿ, ಕಃ - ಯಾರು, ತೇ - ನಿನಗೆ, ಶುಶ್ರೂಷಾಂ - ಸೇವೆಯನ್ನೂ, ಗೌರವಂ-ಬಹುಮಾನವನ್ನೂ, ಪ್ರಮಾಣಂ - ನಂಬಿಕೆಯನ್ನೂ, ವಚನ ಕ್ರಿಯಾಂಚ - ಮಾತಿನ ನಡೆಯಿಸುವಿಕೆಯನ್ನೂ, ಭೂಯಸ್ತರಂ - ಹೆಚ್ಚಾಗಿ, ಕುರ್ಯಾತ್ - ಮಾಡಿಯಾನು. || ೨೬ || ಬಹೂನಾಂ - ಅನೇಕ, ಸ್ತ್ರೀ ಸಹಸ್ರಾಣಾಂ - ಸಹಸ್ರ ಸ್ತ್ರೀಯರಲ್ಲಿ, ಪರಿವಾದಃ - ಶ್ರೀರಾಮನು ಅಕಾರ್ಯ ಮಾಡಿದನೆಂಬ ಅಪಯಶಸ್ಸು, ಬಹೂನಾಂ - ಅನೇಕ, ಉಪಜೀವಿನಾಂಚ - ಸೇವಕ ಜನರಲ್ಲಿ, ಅಪವಾದೋವಾ - ಅಸೂಯೆಯಿಂದ ಹುಟ್ಟಿದ ಅಪಕೀರ್ತಿಯಾಗಲಿ, ರಾಘವೇ - ಶ್ರೀರಾಮನಲ್ಲಿ, ನೋಪಪದ್ಯತೇ - ಇರುವುದಿಲ್ಲ. || ೨೭ || ಮನುಜವ್ಯಾಘ್ರಃ - ಮನುಷ್ಯ ಶ್ರೇಷ್ಠನಾದ, ರಾಮಃ - ಶ್ರೀರಾಮನು, ಶುದ್ಧೇನ - ನಿಷ್ಕಳಂಕವಾದ, ಮನಸಾ- ಮನಸ್ಸಿನಿಂದ, ಸರ್ವಭೂತಾನಿ - ಸಮಸ್ತ ಪ್ರಾಣಿಗಳನ್ನು, ಸಾಂತ್ವಯನ್ - ಸಮಾಧಾನಗೊಳಿಸುತ್ತ, ಪ್ರಿಯೈಃ - ಕಿವಿಗಿಂಪಾಗಿರುವ ಮಾತುಗಳಿಂದ, ವಿಷಯವಾಸಿನಃ - ದೇಶವಾಸಿಗಳಾದ ಪ್ರಜೆಗಳನ್ನು, ಗೃಹ್ಣಾತಿ - ಸ್ವಾಧೀನಪಡಿಸಿಕೊಳ್ಳುತ್ತಾನೆ. || ೨೮ || ರಾಘವಃ - ಶ್ರೀರಾಮನು, ಸತ್ಯೇನ - ಸತ್ಯದಿಂದ, ಲೋಕಾನ್ - (ಗೋ) ಇಹಲೋಕ ಪರಲೋಕಗಳನ್ನೂ, (ಮ + ಗೋ) ಲೋಕಾನ್ - ಪ್ರಜೆಗಳೆಲ್ಲರನ್ನೂ, ಜಯತಿ - ಜಯಿಸುತ್ತಾನೆ, ದೀನಾನ್ - ದರಿದ್ರರನ್ನು, ದಾನೇನ - ದಾನದಿಂದಲೂ, ಗುರೂನ್ - ತನಗಿಂತಲೂ ದೊಡ್ಡವರನ್ನು, ಶುಶ್ರೂಷಯಾ - ಸೇವೆಯಿಂದಲೂ, ಧನುಷಾ - ಆಯುಧಗಳಿಂದ, ಯುಧಿ - ರಣರಂಗದಲ್ಲಿ, ಶಾತ್ರವಾನ್ - ರಿಪುಗಳನ್ನು, ಜಯತಿ - ವಶಪಡಿಸಿಕೊಳ್ಳುವನು, ಸತ್ಯಂ - ನಿಶ್ಚಯ, ದಾನಂ - (ಗೋ) ಪರಲೋಕ ಪ್ರಯೋಜನಕರವಾದ ಸತ್ಪಾತ್ರ

ಆತನನ್ನುಳಿದು ಮಿಕ್ಕ ಮಕ್ಕಳಲ್ಲಿ ಯಾರುತಾನೆ ನಿನಗೆ ಸೇವೆಯನ್ನೂ, ಬಹುಮಾನವನ್ನೂ, ನಂಬಿಕೆಯನ್ನೂ, ಹೇಳಿದಂತೆ ಕೇಳುವುದನ್ನೂ ಮಾಡುತ್ತಾರೆ. ಶ್ರೀರಾಮನು ಮಾಡಬಾರದುದನ್ನು ಮಾಡಿದನೆಂಬ ಅಪಕೀರ್ತಿಯನ್ನು, ಸ್ತ್ರೀಯರಲ್ಲಾಗಲಿ, ಕೆಲಸಗಾರರಲ್ಲಾಗಲಿ ಎಲ್ಲಿಯೂ ಕೇಳಲಿಲ್ಲ. ಶ್ರೀರಾಮನು ಎಲ್ಲಪ್ರಾಣಿಗಳನ್ನೂ ಸಮಾಧಾನಗೊಳಿಸುತ್ತಲೂ, ಪ್ರಜೆಗಳೆಲ್ಲರನ್ನೂ ಸ್ವಾಧೀನಪಡಿಸಿಕೊಳ್ಳುತ್ತಲೂ. ಸತ್ಯದಿಂದಲೇ ಇಹಪರಲೋಕಗಳನ್ನು ಜಯಿಸುತ್ತಲೂ, ದರಿದ್ರರನ್ನು ದಾನದಿಂದ ಗೆಲ್ಲುತ್ತಲೂ, ಗುರುಗಳನ್ನು ಸೇವೆ ಸತ್ಕಾರಗಳಿಂದ ಸ್ವಾಧೀನಪಡಿಸಿಕೊಳ್ಳುತ್ತಲೂ, ಕೋದಂಡದಿಂದ ಹಗೆಗಳನ್ನು ವಶವರ್ತಿಗಳನ್ನಾಗಿ ಮಾಡಿಕೊಳ್ಳುತ್ತಲೂ ಇರುವನು. ||೨೬-೨೯|| ಆತನಲ್ಲಿ ಸತ್ಪುರುಷರ ಗುಣಗಳಿಗಿಂತಲೂ ಉತ್ತಮವಾದ ಗುಣಗಳಿರುವುವು; ಆಡಿದ ಮಾತಿಗೆ ತಪ್ಪದಿರುವ ಸತ್ಯವೂ, ಪಾತ್ರಾಪಾತ್ರವನ್ನು

ಶೌಚಮಾರ್ಜವಂ || ವಿದ್ಯಾಚ ಗುರುಶುಶ್ರೂಷಾ ಧ್ರುವಾಣ್ಯೇತಾನಿ ರಾಘವೇ
|| ೩೦ || ತಸ್ಮಿನ್ನಾರ್ಜವಸಂಪನ್ನೇ ದೇವದೇವೋಪಮೇ ಕಥಂ || ಪಾಪ
ಮಾಶಂಸಸೇ ರಾಮೇ ಮಹರ್ಷಿ ಸಮತೇಜಸಿ || ೩೧ || ನಸ್ಮರಾಮ್ಯಪ್ರಿಯಂ
ವಾಕ್ಯಂ ಲೋಕಸ್ಯ ಪ್ರಿಯವಾದಿನಃ || ಸ ಕಥಂ ತ್ವತ್ಕೃತೇ ರಾಮಂ ವಕ್ಷ್ಯಾಮಿ
ಪ್ರಿಯ ಮಪ್ರಿಯಂ || ೩೨ || ಕ್ಷಮಾ ಯಸ್ಮಿನ್ದಮಸ್ತ್ಯಾಗ ಸ್ಸತ್ಯಂ ಧರ್ಮಃ
ಕೃತಜ್ಞತಾ || ಅಪ್ಯಹಿಂಸಾ ಚ ಭೂತಾನಾಂ ತಮೃತೇ ಕಾಗತಿರ್ಮಮ ||೩೩||

ದಾನ, ತಪಃ - (ಮ) ಉಪವಾಸಾದಿ ರೂಪವಾದ ತಪಸ್ಸು, ತ್ಯಾಗಃ - (ಗೋ) ಐಹಿಕ ಪ್ರಯೋಜನ ಕರವಾದ ದ್ರವ್ಯತ್ಯಾಗ, ಮಿತ್ರತಾ - ಸರ್ವಭೂತ ಸುಹೃತ್ವ, ಶೌಚಂ - (ಮ) ಆಯಾ ಸಮಯದಲ್ಲಿ ಸ್ನಾನಾದಿಗಳಿಂದ ಪರಿಶುದ್ಧತೆ, ಆರ್ಜವಂ - (ಗೋ) ಕಪಟ ದೋಷರಾಹಿತ್ಯ, ವಿದ್ಯಾಚ - ಜ್ಞಾನ ಸಂಪತ್ತಿ, ಗುರು ಶುಶ್ರೂಷಾ - ಗುರುಗಳ ಸೇವೆ, ಏತಾನಿ - ಇವುಗಳು, ರಾಘವೇ - ಶ್ರೀರಾಮನಲ್ಲಿ, ಧ್ರುವಾಣಿ - ಶಾಶ್ವತಗಳಾಗಿರುವುವು. || ೩೦ || ಹೇ ದೇವಿ - ಎಲೌ ಕೈಕೇಯಿಯೆ, ಆರ್ಜವ ಸಂಪನ್ನೇ - ನಿಷ್ಕಪಟ ಸ್ವಭಾವದಿಂದ, ದೇವೋಪಮೇ - ದೇವತೆಗಳಿಗೆ ಸಮಾನನಾದ, ಮಹರ್ಷಿ ಸಮತೇಜಸಿ - ಮಹರ್ಷಿಗಳಿಗೆ ಸಮಾನವಾದ ತೇಜಸ್ಸುಳ್ಳ, ತಸ್ಮಿನ್ರಾಮೇ - ಆ ಶ್ರೀರಾಮನಲ್ಲಿ, ಪಾಪಂ - ಪಾಪಕರವಾದುದನ್ನು, ಕಥಮಾಶಂಸಸೇ - ಹೇಗೆತಾನೆ ಹೇಳಹೋಗುವೆ. || ೩೧ || ಲೋಕಸ್ಯ - ಪ್ರಜೆಗಳಿಗೆ, ಪ್ರಿಯವಾದಿನಃ - ಪ್ರೀತಿಕರವಾದ ವಚನವನ್ನು ಹೇಳುತ್ತಿರುವ ಶ್ರೀರಾಮನ, ವಾಕ್ಯಂ - ಮಾತನ್ನು, ಅಪ್ರಿಯಂ - ಇಷ್ಟವಲ್ಲದುದನ್ನಾಗಿ, ನಸ್ಮರಾಮಿ - ಎಣಿಸಲಾರೆನು, ಸಃ - ಅಂತಹ ನಾನು, ತ್ವತ್ಕೃತೇ - ನಿನಗೋಸುಗ, ಪ್ರಿಯಂ - ಇಷ್ಟನಾದ, ರಾಮಂ - ಶ್ರೀರಾಮನನ್ನು ಕುರಿತು, ಅಪ್ರಿಯಂ - ಅನಿಷ್ಟವಾದ ಮಾತನ್ನು, ಕಥಂವಕ್ಷ್ಯಾಮಿ - ಹೇಗೆತಾನೆ ಹೇಳಲಿ. ||೩೨|| ಯಸ್ಮಿನ್ - ಯಾವ ಶ್ರೀರಾಮನಲ್ಲಿ, ಕ್ಷಮಾ - (ಗೋ) ಅಂತರಿಂದ್ರಿಯ ನಿಗ್ರಹವು, ದಮಃ - ಬಹಿ ರಿಂದ್ರಿಯ ನಿಗ್ರಹವು, ತ್ಯಾಗಃ - (ಗೋ) ನಿಷಿದ್ಧಕಾರ್ಯ ಪರಿತ್ಯಾಗವು, ಸತ್ಯಂ - ಸತ್ಯ ವಚನವು, ಧರ್ಮಃ - ನಿತ್ಯಕರ್ಮಾನುಷ್ಠಾನ ರೂಪ ಧರ್ಮವು, ಕೃತಜ್ಞತಾ - ಉಪಕಾರವನ್ನು ಸ್ಮರಿಸುವಿಕೆಯು, ಭೂತಾನಾಂ - ಪ್ರಾಣಿಗಳಿಗೆ, ಅಹಿಂಸಾಚ - ಹಿಂಸೆ ಮಾಡದಿರುವಿಕೆಯು, ಸಂತಿ - ಇರುತ್ತವೊ,

ತಿಳಿದು ಮಾಡುವ ದಾನವೂ, ನಿತ್ಯಕರ್ಮಗಳಿಂದುಂಟಾದ ಪರಿಶುದ್ಧತೆಯೂ, ನಿಷ್ಕಪಟ ವೃತ್ತಿಯೂ, ಜ್ಞಾನಸಂಪತ್ತಿಯೂ ಸ್ಥಿರವಾಗಿರುವುವು. ಇಂತಹ ಕಪಟರಹಿತನೂ, ದೇವತೆ ಗಳಿಗೆ ಸಮಾನನಾದವನೂ, ಮಹಾಮುನಿಗಳಿಗೆ ಸದೃಶನಾದವನೂ, ಮಹಾತೇಜಸ್ವಿಯೂ ಆದ ಆ ಶ್ರೀರಾಮಮೂರ್ತಿಯ ವಿಷಯದಲ್ಲಿ ಕೆಟ್ಟನುಡಿಯನ್ನು ಹೇಗೆತಾನೆ ಹೇಳುವೆ. ಎಲ್ಲ ರಿಗೂ ಹಿತಕರವಾದ ನುಡಿಯನ್ನಾಡುವ ಆತನ ಮಾತು ಅಪ್ರಿಯವಾದುದೆಂದು ನಾನೆಂದಿಗೂ ತಿಳಿಯುವುದಿಲ್ಲವು. ಹೀಗಿರುವಲ್ಲಿ ನಿನಗಾಗಿ ಆತನನ್ನು ಕುರಿತು ಅಪ್ರಿಯವನ್ನು ಹೇಗೆತಾನೆ ಹೇಳಲಿ. ತ್ಯಾಗ, ಕ್ಷಮೆ, ಸತ್ಯ, ಧರ್ಮ, ಉಪಕಾರವನ್ನೆಂದಿಗೇ ಆಗಲಿ ಮರೆಯದಂತಹ ಕೃತಜ್ಞತೆ, ಭೂತದಯೆಯೇ ಮೊದಲಾದ ಸುಗುಣಗಣ ಭೂಷಿತನಾದ ಆ ನನ್ನ ರಘುನಾಥ ನನ್ನು ವನಕ್ಕಟ್ಟಿದರೆ ನನಗೇನುಗತಿ ? ದೇವಿ; ಕೈಕೇಯಿ ! ಕೇಳು; ನಾನು ವೃದ್ಧನು. ನನಗೆ

ಮಮ ವೃದ್ಧಸ್ಯ ಕೈಕೇಯಿ ಗತಾಂತಸ್ಯ ತಪಸ್ವಿನಃ ॥ ದೀನಂ ಲಾಲಪ್ಯಮಾನಸ್ಯ
ಕಾರುಣ್ಯಂ ಕರ್ತುಮರ್ಹಸಿ ॥೩೪॥ ಪೃಥಿವ್ಯಾಂ ಸಾಗರಾಂತಾಯಾಂ ಯತ್ಕಿಂಚಿ
ದಧಿಗಮ್ಯತೇ ॥ ತತ್ಸರ್ವಂ ತವ ದಾಸ್ಯಾಮಿ ಮಾ ಚ ತ್ವಾಂ ಮನ್ಯುರಾವಿಶೇತ್
॥ ೩೫ ॥ ಅಂಜಲಿಂ ಕುರ್ಮಿ ಕೈಕೇಯಿ ಪಾದೌ ಚಾಪಿ ಸ್ಪೃಶಾಮಿ ತೇ ॥
ಶರಣಂ ಭವ ರಾಮಸ್ಯ ಮಾಧರ್ಮೋ ಮಾಮಿಹ ಸ್ಪೃಶೇತ್ ॥ ೩೬ ॥ ಇತಿ
ದುಃಖಾಭಿಸಂತಪ್ತಂ ವಿಲಪಂತಮಚೇತನಂ ॥ ಘೂರ್ಣಮಾನಂ ಮಹಾರಾಜಂ

ತಮೃತೇ - ಅಂತಹ ರಕ್ಷಕನಾದ ಶ್ರೀರಾಮನನ್ನುಳಿದು, ಮಮ - ನನಗೆ, ಕಾಗತಿಃ ಗತಿಯೇನು, ॥ ೩೩ ॥ ಹೇ ಕೈಕೇಯಿ - ಎಲೌ ಕೇಕಯರಾಜನ ಮಗಳೆ, ವೃದ್ಧಸ್ಯ - ಮುದುಕನಾದ, ಗತಾಂತಸ್ಯ - ಗಳಿತವಾದ ಆಯುಸ್ಸುಳ್ಳ, ತಪಸ್ವಿನಃ - ದೈನ್ಯದಿಂದ ಪರಿತಪಿಸುತ್ತಿರುವ, ದೀನಂ - ದೈನ್ಯವುಳ್ಳಂತೆ, ಲಾಲಪ್ಯಮಾನಸ್ಯ - ಪ್ರಲಾಪಿಸುತ್ತಿರುವ, ಮಮ - ನನ್ನಲ್ಲಿ, ಕಾರುಣ್ಯಂ - ದಯೆಯನ್ನು, ಕರ್ತುಂ - ಮಾಡಲು, ಅರ್ಹಸಿ - ಯೋಗ್ಯಳಾಗು. ॥ ೩೪ ॥ ಸಾಗರಾಂತಾಯಾಂ - ಸಮುದ್ರ ತುದಿಯವರೆವಿಗೂ ಇರುವ, ಪೃಥಿವ್ಯಾಂ - ಭೂಮಂಡಲದಲ್ಲಿ, ಯತ್ಕಿಂಚಿತ್ - ಯಾವದ್ರವ್ಯಜಾಲವು, ಅಧಿಗಮ್ಯತೇ - ನನ್ನಿಂದ ಹೊಂದಲ್ಪಡುತ್ತದೋ, ಸರ್ವಂ - ಸಮಸ್ತವಾದ, ತತ್ - ಆ ದ್ರವ್ಯವನ್ನು, ತವ - ನಿನಗೆ, ದಾಸ್ಯಾಮಿ - ಕೊಡುವೆನು, ಮನ್ಯುಃ - ಕೋಪವು, ತ್ವಾಂ - ನಿನ್ನನ್ನು, ಮಾವಿಶೇಚ್ಚ - ಹೊಗಬೇಡ. ॥ ೩೫ ॥ ಹೇ ಕೈಕೇಯಿ - ಎಲೌ ಕೈಕೇಯಿಯೆ, ತೇ - ನಿನಗೆ, ಅಂಜಲಿಂ - ನಮಸ್ಕಾರವನ್ನು, ಕುರ್ಮಿ - ಮಾಡುವೆನು, ತೇ - ನಿನ್ನ, ಪಾದೌಚ - ಚರಣಗಳನ್ನು, ಸ್ಪೃಶಾಮಿ - ಸ್ಪರ್ಶಮಾಡುವೆನು, ರಾಮಸ್ಯ - ಶ್ರೀರಾಮನಿಗೆ, ಶರಣಂ - ರಕ್ಷಕಳು, ಭವ - ಆಗು, ಇಹ - ಈಗ, ಮಾಂ- ನನ್ನನ್ನು, ಅಧರ್ಮಃ - ಅಧರ್ಮವು, ಮಾಸ್ಪೃಶೇತ್ - ಸ್ಪರ್ಶಮಾಡದಿರಲಿ. ॥ ೩೬ ॥ ಇತಿ - ಈ ರೀತಿ, ದುಃಖಾಭಿಸಂತಪ್ತಂ - ದುಃಖದಿಂದ ಸಂಕಟಪಡುತ್ತಿರುವ, ವಿಲಪಂತಂ - ಅಳುತ್ತಿರುವ, ಅಚೇತನಂ - ಪ್ರಜ್ಞಾಶೂನ್ಯನಾದ, ಘೂರ್ಣಮಾನಂ - ನೆಲದಲ್ಲಿ ಹೊರಳಾಡುತ್ತಿರುವ, ಶೋಕೇನ - ಮನೋವ್ಯಥೆಯಿಂದ, ಸಮಭಿಪ್ಲುತಂ - ಮುಗ್ಗಿಹೋಗುತ್ತಿರುವ, ಆಶು - ಜಾಗ್ರತೆಯಾಗಿ, ಶೋಕಾರ್ಣವಸ್ಯ - ದುಃಖಸಮುದ್ರದ, ಪಾರಂ - ದಡವನ್ನು, ಪುನಃಪುನಃ - ಬಾರಿಬಾರಿಗೂ, ಪ್ರಾರ್ಥಯಂತಂ-

ಆಯುಸ್ಸು ಕ್ಷೀಣವಾಗುತ್ತಿರುವುದು; ತಪವೊಂದಲ್ಲದೆ ಮತ್ತೊಂದು ಗತ್ಯಂತರವಿಲ್ಲದವನೂ, ದುಃಖಿಸುತ್ತಿರುವವನೂ, ದೈನ್ಯದಿಂದ ಸಂತಪಿಸುತ್ತಿರುವವನೂ, ದೀನಸ್ವರದಿಂದ ಕೂಗುತ್ತಿರುವವನೂ ಆಗಿರುವ ನನ್ನಲ್ಲಿ ದಯೆತೋರು. ॥ ೩೦-೩೪ ॥ ಸಾಗರಾಂತವಾದ ಈ ಜಗತ್ತಿನಲ್ಲಿ ಎಷ್ಟು ದ್ರವ್ಯವು ನನಗೆ ದೊರೆವುದೋ, ಅಷ್ಟನ್ನೂ ನಿನಗೇ ಕೊಡುತ್ತೇನೆ, ಕೋಪವನ್ನು ಬಿಡು. ಎಲೌ ಕೇಕಯರಾಜಕುಮಾರಿಯೆ! ನಿನಗೆ ಕೈಮುಗಿವೆನು. ನಿನ್ನ ಪಾದಗಳಿಗೆರಗುತ್ತೇನೆ. ಶ್ರೀರಾಮನನ್ನು ಕಾಪಾಡು. ಕೃಪೆದೋರು. ನನಗೆ ಅಧರ್ಮವನ್ನು ಕಟ್ಟಬೇಡ." ॥೩೬॥ ಹೀಗೆ ಸಂತಾಪಗೊಳ್ಳುತ್ತಲೂ, ವಿಲಪಿಸುತ್ತಲೂ, ಅಡಿಗಡಿಗೂ ಮೂರ್ಛೆಹೊಂದುತ್ತಲೂ, ಚಿತ್ತಭ್ರಮಣೆಯಿಂದ ಅತ್ತಿತ್ತನೋಡುತ್ತಲೂ, ದುಃಖಾಕ್ರಾಂತನಾಗಿ ಶೋಕಸಮುದ್ರದಿಂದ ಕಡೆಹಾಯಿಸಬೇಕೆಂದು ಬೇಡುತ್ತಲೂ ಇರುವ ಆ ದಶರಥ ಭೂನಾಥನನ್ನು ಕುರಿತು ಕಠಿಣಳಾದ

ಶೋಕೇನ ಸಮಭಿಪ್ಲುತಂ ॥ ೩೭ ॥ ಪಾರಂ ಶೋಕಾರ್ಣವಸ್ಯಾಶು ಪ್ರಾರ್ಥಯಂತಂ ಪುನಃ ಪುನಃ ॥ ಪ್ರತ್ಯುವಾಚಾಥ ಕೈಕೇಯೀ ರೌದ್ರಾ ರೌದ್ರತರಂ ವಚಃ ॥೩೮॥ ಯದಿ ದತ್ವಾ ವರೌ ರಾಜನ್ ಪುನಃ ಪ್ರತ್ಯನುತಪ್ಯಸೇ ॥ ಧಾರ್ಮಿಕತ್ವಂ ಕಥಂ ವೀರ ಪೃಥಿವ್ಯಾಂ ಕಥಯಿಷ್ಯಸಿ ॥೩೯॥ ಯದಾ ಸಮೇತಾ ಬಹವಸ್ತ್ವಯಾ ರಾಜರ್ಷಯಸ್ಸಹ॥ಕಥಯಿಷ್ಯಂತಿ ಧರ್ಮಜ್ಞ ತತ್ರ ಕಿಂ ಪ್ರತಿವಕ್ಷ್ಯಸಿ ॥ ೪೦ ॥ಯಸ್ಯಾಃ ಪ್ರಸಾದೇ ಜೀವಾಮಿ ಯಾ ಚ ಮಾಮಭ್ಯಪಾಲಯತ್ ॥ ತಸ್ಯಾಃ ಕೃತಂ ಮಯಾ ಮಿಥ್ಯಾ ಕೈಕೇಯ್ಯಾ ಇತಿ ವಕ್ಷ್ಯಸಿ ॥೪೧॥ ಕಿಲ್ಬಿಷತ್ವಂ

ಬೇಡಿಕೊಳ್ಳುತ್ತಿರುವ, ಮಹಾರಾಜಂ - ದಶರಥರಾಯನನ್ನು ಕುರಿತು, ಅಥ - ಬಳಿಕ, ರೌದ್ರಾ-ಕ್ರೂರಳಾದ ಕೈಕೇಯಿಯು, ರೌದ್ರತರಂ - ಬಹು ಭಯಂಕರವಾದ, ವಚಃ - ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟಳು. ॥ ೩೭-೩೮ ॥ ಹೇ ರಾಜನ್ - ಎಲೈ ದಶರಥರಾಯನೆ, ವರೌ - ಎರಡುವರಗಳನ್ನು, ದತ್ವಾ - ಕೊಟ್ಟು, ಪುನಃ - ಮತ್ತು, ಪ್ರತ್ಯನುತಪ್ಯಸೇಯದಿ - ಪರಿತಪಿಸುವೆಯೇ ಆದರೆ, ಹೇ ವೀರ - ಎಲೈ ಶೂರನೆ, ಧಾರ್ಮಿಕತ್ವಂ - ಧರ್ಮಿಷ್ಠನೆಂಬುದನ್ನು, ಪೃಥಿವ್ಯಾಂ - ಭೂಮಂಡಲದಲ್ಲಿ, ಕಥಂ - ಹೇಗೆ, ಕಥಯಿಷ್ಯಸಿ - ಹೇಳಿಕೊಳ್ಳುವೆ. ॥ ೩೯ ॥ ಬಹವಃ - ಅನೇಕ, ರಾಜರ್ಷಯಃ - ರಾಜರ್ಷಿಗಳು, ತ್ವಯಾಸಹ - ನಿನ್ನೊಡನೆ, ಯದಾ - ಯಾವಾಗ, ಸಮೇತಾಃ - ಸೇರುವರೋ, ತದಾ-ಆಗ, ಕಥಯಿಷ್ಯಂತಿ - ನನಗೆ ಕೊಟ್ಟ ವರದಾನವನ್ನು ಕುರಿತು ಮಾತನಾಡುವರು, ತತ್ರ - ಆ ಸಮಾಜದಲ್ಲಿ, ಕಿಂಪ್ರತಿವಕ್ಷ್ಯಸಿ - ಯಾವ ಪ್ರತ್ಯುತ್ತರವನ್ನೀಯುವೆ. ॥ ೪೦ ॥ ಯಸ್ಯಾಃ - ಯಾವ ಕೈಕೇಯಿಯ, ಪ್ರಸಾದೇ - ಪ್ರಸಾದದಿಂದ, ಜೀವಾಮಿ - ಬದುಕಿದೆನೋ, ಯಾಚ - ಯಾವಳು, ಮಾಂ - ನನ್ನನ್ನು, ಅಭ್ಯಪಾಲಯತ್ - ಸಂರಕ್ಷಿಸಿದಳೋ, ತಸ್ಯಾಃಕೈಕೇಯ್ಯಾಃ - ಅಂತಹ ಕೈಕೇಯಿಗೆ, ಮಯಾ - ನನ್ನಿಂದ, ಮಿಥ್ಯಾ - ಅನೃತವು, ಕೃತಂ - ಮಾಡಲ್ಪಟ್ಟಿತು, ಇತಿ - ಇಂತೆಂದು, ಕಥಯಿಷ್ಯಸಿ - ಹೇಳುವೆಯೇನು. ॥ ೪೧ ॥ ಹೇ ನರಾಧಿಪ - ಎಲೈ ರಾಜನೆ, ನರೇಂದ್ರಾಣಾಂ - ರಾಜರಿಗೆ, ಕಿಲ್ಬಿಷತ್ವಂ - ಸುಳ್ಳನ್ನಾಡಿದುದರಿಂದ ಹುಟ್ಟಿದ ಅಪಕೀರ್ತಿಯನ್ನು, ಕರಿಷ್ಯಸಿ - ಮಾಡುವೆ,

---

ಆ ಕೈಕೇಯಿಯು ಮಹಾಕರ್ಣಕಠೋರವಾದ ನುಡಿಗಳನ್ನಾಡಲುಜ್ಜುಗಿಸಿ, "ಅರಸ! ನನ್ನಭಿಲಾಷೆಯನ್ನು (ವರಗಳನ್ನು) ಸಲ್ಲಿಸುವುದಾಗಿ ಪ್ರತಿಜ್ಞೆಮಾಡಿ ಈಗ ಸಂತಪಿಸುವೆಯಾದರೆ ಈ ರಸೆಯಲ್ಲಿ ಧಾರ್ಮಿಕತ್ವವನ್ನು ಹೇಗೆತಾನೆ ಪಡೆಯುತ್ತೀಯೆ? ರಾಜರ್ಷಿಗಳೆಲ್ಲರೂ ಸೇರಿದಾಗ ಬಹಳವಾದ ಉಪಕಾರವನ್ನು ಮಾಡಿದ ಕೈಕೇಯಿಗೆ ಯಾವ ಪ್ರತ್ಯುಪಕಾರವನ್ನು ಮಾಡಿದೆಯೆಂಬ ಪ್ರಸ್ತಾಪಬಂದಾಗ ನೀನಾವ ಉತ್ತರವನ್ನೊಸಗುವೆ. ಯಾವಾಕೆಯ ಮಹತ್ಪ್ರಯತ್ನದಿಂದ ಆ ದೇವಾಸುರ ರಣರಂಗದಲ್ಲಿ ಈ ನಾನು ಜೀವಿಸಿದೆನೊ, ಯಾವಾಕೆಯು ಉಪಚಾರಗಳನ್ನು ಮಾಡಿ ನನ್ನನ್ನು ಕಾಪಾಡಿದಳೊ, ಅಂತಹ ಕೈಕೇಯಿಯ ಮುಂದೆ ನಾನು ನನ್ನ ಪ್ರತಿಜ್ಞೆಯನ್ನು ಸುಳ್ಳುಮಾಡಿದೆನು" ಎಂದು ಹೇಳುವೆಯೇನು? ಈಗ ನನಗೆ ಬೇಕಾದ ವರಗಳನ್ನು ಕೊಡುವೆನೆಂದು ಹೇಳಿ, ಈರೀತಿ ಮಾತು ತಪ್ಪುವುದಾದರೆ, ನಿನ್ನ ವಂಶದ ಭೂನಾಯ

ನರೇಂದ್ರಾಣಾಂ ಕರಿಷ್ಯಸಿ ನರಾಧಿಪ ॥೪೨॥ ಯೋದತ್ವಾ ವರಮದ್ಯೈವ ಪುನರ
ನ್ಯಾನಿ ಭಾಷಸೇ॥ಶೈಬ್ಯ ಶ್ಯೇನ ಕಪೋತೀಯೇ ಸ್ವಮಾಂಸಂ ಪಕ್ಷಿಣೇ ದದೌ॥೪೩॥
ಅಲರ್ಕಶ್ಚಕ್ಷುಷೀ ದತ್ವಾ ಜಗಾಮ ಗತಿ ಮುತ್ತಮಾಂ ॥ ಸಾಗರಸ್ಸಮಯಂ
ಕೃತ್ವಾ ನವೇಲಾಮತಿವರ್ತತೇ ॥೪೪॥ ಸಮಯಂ ಮಾನೃತಂಕಾರ್ಷೀಃ ಪೂರ್ವ
ವೃತ್ತಮನುಸ್ಮರನ್॥ಸತ್ಯಂ ಧರ್ಮಂ ಪರಿತ್ಯಜ್ಯ ರಾಮಂ ರಾಜ್ಯೇಭಿಷಿಚ್ಯಚ ॥೪೫॥
ಸಹ ಕೌಸಲ್ಯಯಾ ನಿತ್ಯಂ ರಂತುಮಿಚ್ಛಸಿ ದುರ್ಮತೇ ॥ ಭವತ್ವಧರ್ಮೋ
ಧರ್ಮೋವಾ ಸತ್ಯಂ ವಾ ಯದಿವಾನೃತಂ ॥೪೬॥ ಯತ್ತ್ವಯಾ ಸಂಶ್ರುತಂ
ಮಹ್ಯಂತಸ್ಯ ನಾಸ್ತಿ ವ್ಯತಿಕ್ರಮಃ ॥ ಅಹಂಹಿ ವಿಷಮದ್ಯೈವ ಪೀತ್ವಾ ಬಹು

ಯಃ - ಯಾವ ನೀನು, ವರಂ - ವರವನ್ನು, ದತ್ವಾ - ಕೊಟ್ಟು, ಅದ್ಯೈವ - ಈಗಲೆ, ಪುನಃ - ಮರಳಿ, ಅನ್ಯಾನಿ - ಬೇರೆವಿಧವಾದ ಮಾತುಗಳನ್ನು, ಭಾಷ್ಯಸೇ - ಹೇಳುವೆಯೊ, ಶ್ಯೇನಕಪೋತೀಯೇ - ಶ್ಯೇನಕಪೋತಪಕ್ಷಿಗಳ ವಿವಾದಸಮಯದಲ್ಲಿ, ಶೈಬ್ಯಃ - ಶಿಬಿಚಕ್ರವರ್ತಿಯು, ಸ್ವಮಾಂಸಂ - ತನ್ನ ಶರೀರಮಾಂಸವನ್ನು, ಪಕ್ಷಿಣೇ - ಶ್ಯೇನಪಕ್ಷಿಗೋಸ್ಕರ, ದದೌ ಕೊಟ್ಟನು. ॥೪೨ ೪೩॥ ಅಲರ್ಕಃ-ಅಲರ್ಕನೆಂಬ ರಾಜರ್ಷಿಯು, ಚಕ್ಷುಷೀ - ಕಣ್ಣುಗಳನ್ನು, ದತ್ವಾ - ಕೊಟ್ಟು, ಉತ್ತಮಾಂ - ಉತ್ಕೃಷ್ಟವಾದ, ಗತಿಂ - ಸದ್ಗತಿಯನ್ನು, ಜಗಾಮ - ಹೊಂದಿದನು, ಸಾಗರಃ - ಸಮುದ್ರನು, ಸಮಯಂ - ಶಪಥವನ್ನು, ಕೃತ್ವಾ - ಮಾಡಿ, ವೇಲಾಂ - ದಡವನ್ನು, ನಾತಿವರ್ತತೇ-ಅತಿಕ್ರಮಿಸುವುದಿಲ್ಲವು. ॥೪೪॥ ಪೂರ್ವವೃತ್ತಂ - ಹಿಂದೆ ನಡದ ವೃತ್ತಾಂತವನ್ನು, ಅನುಸ್ಮರನ್ - ಜ್ಞಾಪಿಸಿಕೊಂಡು, ಸಮಯಂ - ನೀನುಮಾಡಿದ ಶಪಥವನ್ನು, ಅನೃತಂ - ಅಬದ್ಧವನ್ನಾಗಿ, ಮಾಕಾರ್ಷೀಃ - ಮಾಡದಿರು, ಹೇ ದುರ್ಮತೇ - ಎಲೈ ದುರ್ಬುದ್ಧಿಯುಳ್ಳವನೆ, ಸತ್ಯಂ - ಸತ್ಯವನ್ನು, ಧರ್ಮಂ-ಧರ್ಮವನ್ನು, ಪರಿತ್ಯಜ್ಯ-ಬಿಟ್ಟು, ರಾಮಂ - ಶ್ರೀರಾಮನನ್ನು, ರಾಜ್ಯೇ - ರಾಜ್ಯದಲ್ಲಿ, ಅಭಿಷಿಚ್ಯಚ - ಅಭಿಷೇಕವನ್ನೂ ಮಾಡಿ. ॥ ೪೫ ॥ ಕೌಸಲ್ಯಯಾಸಹ - ಕೌಸಲ್ಯಾದೇವಿಯೊಡನೆ, ನಿತ್ಯಂ - ನಿರಂತರವೂ, ರಂತುಂ - ವಿಹಾರ ಮಾಡಲು, ಇಚ್ಛಸಿ - ಕೋರುವೆ, ಅಧರ್ಮಃ - ಅಧರ್ಮವಾದರೂ, ಧರ್ಮೋವಾ - ಧರ್ಮ

ಕರೆಲ್ಲರಿಗೂ ಅಪಯಶಸ್ಸನ್ನು ತರುವವನಾಗುತ್ತೀಯೆ! ॥ ೩೫-೪೨ ॥ ಎಲೈ ನರನಾಥನೆ! ನಿನ್ನ ಪೂರ್ವಿಕರಾದ ಚಕ್ರವರ್ತಿಗಳು ಅಶಕ್ಯವಾದ ಪ್ರತಿಜ್ಞೆಗಳನ್ನು ಮಾಡಿ ಅದನ್ನು ನೆರವೇರಿಸಿರುವರು; ಅದನ್ನು ಹೇಳುತ್ತೇನೆ; ಕೇಳು. ಗಿಡಗ ಪಾರಿವಾಣ ಪಕ್ಷಿಗಳಿಗೆ ಯುದ್ಧವಾಗಿ, ಗಿಡಗನು ಆ ಪಾರಿವಾಣ ಪಕ್ಷಿಯನ್ನು ಕೊಂದು ತಿನ್ನಬೇಕೆಂದೆಣಿಸಿ ಅಟ್ಟಿಕೊಂಡು ಬರಲು, ಆ ಪಾರಿವಾಣವು ಶಿಬಿಚಕ್ರವರ್ತಿಯನ್ನು ಆಶ್ರಯಿಸಿತು. ಆಗಲಾ ಶಿಬಿರಾಯನು ಆ ಗಿಡಗನಿಗೆ ತನ್ನ ಶರೀರದ ಮಾಂಸವನ್ನೇ ಕಡಿದು ಕೊಟ್ಟು, ಆಶ್ರಿತವಾದ ಪಾರಿವಾಣಪಕ್ಷಿಯನ್ನು ಕಾಪಾಡಿದನು. ಇದಲ್ಲದೆ ಅಲರ್ಕನೆಂಬ ರಾಜನು ತನ್ನನ್ನು ಬೇಡಿದ ಒಬ್ಬ ಅಂಧವಿಪ್ರನಿಗೆ ತನ್ನ ಕಂಗಳನ್ನು ಕಿತ್ತುಕೊಟ್ಟು ಉತ್ತಮಗತಿಯನ್ನು ಪಡದನು. ಇದು ಪೂರ್ವದಲ್ಲಿ ಪ್ರಸಿದ್ಧವಾದ ಇತಿಹಾಸವಾಗಿರುವುದು. ಇದನ್ನು ನೀನು ಕೇಳಿಲ್ಲವೆ? ಕೇಳು; ಸಮುದ್ರವೂ ಸಹ

ತವಾಗ್ರತಃ ॥ ಪಶ್ಯತ ಸ್ತೇ ಮರಿಷ್ಯಾಮಿ ರಾಮೋ ಯದ್ಯಭಿಷಿಚ್ಯತೇ ॥೪೭॥ ಏಕಾಹ ಮಪಿ ಪಶ್ಯೇಯಂ ಯದ್ಯಹಂ ರಾಮಮಾತರಂ ॥ ಅಂಜಲಿಂ ಪ್ರತಿ ಗೃಹ್ಣಂತೀಂ ಶ್ರೇಯೋನನು ಮೃತಿರ್ಮಮ ॥ ೪೮ ॥ ಭರತೇನಾತ್ಮನಾ ಚಾಹಂ ಶಪೇಯಂ ಮನುಜಾಧಿಪ ॥ ಯಥಾ ನಾನ್ಯೇನ ತುಷ್ಯೇಯಮೃತೇ ರಾಮ ವಿವಾಸನಾತ್ ॥ ೪೯ ॥ ಏತಾವದುಕ್ತ್ವಾ ವಚನಂ ಕೈಕೇಯೀ ವಿರರಾಮಹ ॥

ವಾದರೂ, ಭವತು - ಆಗಲಿ, ಸತ್ಯಂವಾ - ಸತ್ಯವೇ ಆಗಲಿ, ಅನೃತಂಯದಿವಾ - ಅನೃತವಾದರೂ, ಭವತು - ಆಗಲಿ, ತ್ವಯಾ - ನಿನ್ನಿಂದ, ಮಹ್ಯಂ - ನನಗೆ, ಯತ್-ಯಾವದು, ಸಂಶ್ರುತಂ - ಪ್ರತಿಜ್ಞೆ ಮಾಡಲ್ಪಟ್ಟಿತೊ, ತಸ್ಯ - ಆ ಪ್ರತಿಜ್ಞಾತವಾದ ಭರತನ ಪಟ್ಟಾಭಿಷೇಕಕ್ಕೂ ಶ್ರೀರಾಮನ ಅರಣ್ಯವಾಸಕ್ಕೂ, ವ್ಯತಿಕ್ರಮಃ - ವ್ಯತ್ಯಾಸವು, ನಾಸ್ತಿ - ಇಲ್ಲವು. ॥ ೪೬ ॥ ರಾಮಃ - ಶ್ರೀರಾಮನು, ಅಭಿಷಿಚ್ಯತೇಯದಿ - ಪಟ್ಟಾಭಿಷೇಕಮಾಡಲ್ಪಟ್ಟವನಾದರೆ, ತವ - ನಿನ್ನ, ಅಗ್ರತಃ - ಮುಂಗಡೆ, ಬಹು - ಬಹಳವಾದ, ವಿಷಂ - ವಿಷವನ್ನು, ಪೀತ್ವಾ - ಪಾನಮಾಡಿ, ಅಹಂ - ನಾನು, ತೇ - ನೀನು, ಪಶ್ಯತಸ್ಸತಃ - ನೋಡುತ್ತಿರಲಾಗಿ, ಮರಿಷ್ಯಾಮಿ - ಮರಣವನ್ನು ಹೊಂದುವೆನು. ॥ ೪೭ ॥ ಅಹಂ-ನಾನು, ಅಂಜಲಿಂ - ಪ್ರಜೆಗಳ ಅಂಜಲಿಬಂಧವನ್ನು, ಪ್ರತಿಗೃಹ್ಣಂತೀಂ - ಪರಿಗ್ರಹಿಸುತ್ತಿರುವ, ರಾಮಮಾತರಂ - ಶ್ರೀರಾಮನ ತಾಯಿಯನ್ನು, ಏಕಾಹಮಪಿ - ಒಂದುದಿವಸದಲ್ಲಿಯಾದರೂ, ಪಶ್ಯೇಯಂಯದಿ - ನೋಡುವವಳೇ ಆದರೆ, ಮಮ - ನನಗೆ, ಮೃತಿಃ - ಮರಣವೆ, ಶ್ರೇಯೋನನು - ಶ್ರೇಯಸ್ಕರವಲ್ಲವೆ ? (ಹೆಚ್ಚಿನದಷ್ಟೆ.) ॥೪೮॥ ಅಹಂ - ನಾನು, ಹೇ ಮನುಜಾಧಿಪ - ಎಲೈ ರಾಜನೆ, ಭರತೇನ - ಭರತನಿಂದಲೂ, ಆತ್ಮನಾಚ-ನನ್ನಿಂದಲೂ, ಶಪೇ - ಶಪಥ ಮಾಡುತ್ತೇನೆ, ಯಥಾ - ಹೇಗೆ, ರಾಮವಿವಾಸನಾದೃತೇ - ಶ್ರೀರಾಮನ ವನವಾಸವನ್ನುಳಿದು, ಅನ್ಯೇನ - ಮತ್ತೊಂದು ಉಪಾಯದಿಂ, ನತುಷ್ಯೇಯಂ-ಸಂತೋಷಗೊಂಡವಳಾಗುವದಿಲ್ಲವೊ. ॥ ೪೯ ॥ ಕೈಕೇಯೀ - ಕೈಕೇಯೀದೇವಿಯು, ಏತಾವತ್-

---

ತನ್ನ ಶಪಥನನ್ನು ಮೀರಿ ಮುಂಬರಿವುದಿಲ್ಲ. ಅದರಂತೆ ನೀನೂಸಹ ಪೂರ್ವ ವೃತ್ತಾಂತವನ್ನು ಮನನಮಾಡಿಕೊಂಡು, ಪ್ರತಿಜ್ಞೆಯನ್ನು ತಪ್ಪಬೇಡ. ಎಲೈ ದುರ್ಬುದ್ಧಿಯುಳ್ಳವನೆ! ನೀನು ಸತ್ಯವನ್ನೂ, ಧರ್ಮವನ್ನೂ ತೊರೆದು ಶ್ರೀರಾಮನಿಗೆ ರಾಜ್ಯಾಭಿಷೇಕವಂಗೈದು, ನನ್ನನ್ನುಪೇಕ್ಷಿಸಿ, ಆ ಶ್ರೀರಾಮಜನನಿಯಾದ ಕೌಸಲ್ಯೆಯೊಡನೆ ಸುಖವಾಗಿ ವಿಹರಿಸಬೇಕೆಂಬ ಪ್ರಯತ್ನವನ್ನು ಮಾಡುತ್ತಿರುವೆ, ಕೇಳು; ಸತ್ಯವಾಗಲಿ, ಅಸತ್ಯವಾಗಲಿ, ಧರ್ಮವೇ ಆಗಲಿ, ಅಧರ್ಮವೇ ಆಗಲಿ, ನೀನೆನಗೆ ಮಾತು ಕೊಟ್ಟಿರುವಂತೆ, "ಭರತನಿಗೆ ರಾಜ್ಯಾಭಿಷೇಕ, ಶ್ರೀರಾಮನಿಗೆ ವನವಾಸ" ವೆಂಬ ವಿಷಯದಲ್ಲಿ ಏನೂ ವ್ಯತ್ಯಾಸವಿಲ್ಲವು ಹಾಗೊಂದುವೇಳೆ ನೀನು ಮಾತಿಗೆ ತಪ್ಪಿ ರಾಮನಿಗೆ ರಾಜ್ಯಾಭಿಷೇಕವನ್ನು ಮಾಡುವೆಯಾದರೆ, ನಾನು ನಿನ್ನ ಮುಂಗಡೆಯೇ, ಬಹಳವಾದ ವಿಷವನ್ನು ಕುಡಿದು ಮರಣವನ್ನು ಹೊಂದುವೆನಲ್ಲದೆ ಮತ್ತೆ ಬೇರೆಯಿಲ್ಲ! ಎಲೈ ರಾಯನೆ! ನೀನು ಶ್ರೀರಾಮನಿಗೆ ರಾಜ್ಯಾಭಿಷೇಕವನ್ನು ಮಾಡಿದರೆ ರಾಜಮಾತೆಯೆನಿಸುವ ಕೌಸಲ್ಯೆಯು, ಪ್ರಜೆಗಳೆಲ್ಲರಿಂದಲೂ ನಮಸ್ಕೃತಳಾಗುತ್ತಾಳೆ. ಇದನ್ನು ಒಂದಿನವಾದರೂ ನಾನು ನೋಡುವುದಕ್ಕಿಂತ ಮರಣವೇ ನನಗೆ ಶ್ರೇಯಸ್ಕರವಾಗಿರುವುದು. ॥ ೪೮ ॥ ಅರಸನೇ ! ಕೇಳು;

ವಿಲಪಂತಂ ಚ ರಾಜಾನಂ ನಪ್ರತಿ ವ್ಯಾಜಹಾರ ಸಾ ॥ ೫೦ ॥ ಶ್ರುತ್ವಾ ತು ರಾಜಾ ಕೈಕೇಯ್ಯಾ ವೃತ್ತಂ ಪರಮಶೋಭನಂ ॥ ರಾಮಸ್ಯಚ ವನೇ ವಾಸಮೈಶ್ವರ್ಯಂ ಭರತಸ್ಯ ಚ ॥ ೫೧ ॥ ನಾಭ್ಯಭಾಷತ ಕೈಕೇಯೀಂ ಮುಹೂರ್ತಂ ವ್ಯಾಕುಲೇಂದ್ರಿಯಃ ॥ ಪ್ರೈಕ್ಷತಾ ನಿಮಿಷೋ ದೇವೀಂ ಪ್ರಿಯಾಮಪ್ರಿಯವಾದಿನೀಂ ॥ ೫೨ ॥ ತಾಂಹಿ ವಜ್ರಸಮಾಂ ವಾಚಮಾಕರ್ಣ್ಯ ಹೃದಯಾಪ್ರಿಯಾಂ ॥ ದುಃಖ ಶೋಕ ಮಯೀಂ ಘೋರಾಂ ರಾಜಾ ನಸುಖಿತೋಽಭವತ್ ॥ ೫೩ ॥ ಸದೇವ್ಯಾ ವ್ಯವಸಾಯಂ ಚ ಘೋರಂಚ ಶಪಥಂ ಕೃತಂ ॥

ಇಷ್ಟರ, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ವಿರರಾಮಹ - ವಿರಾಮವನ್ನು ಹೊಂದಿದಳು, ವಿಲಪಂತಂ - ಅಳುತ್ತಿರುವ, ರಾಜಾನಂಚ - ದಶರಥರಾಯನನ್ನು ಕುರಿತು, ಸಾ - ಆ ಕೈಕೇಯಿಯು, ನಪ್ರತಿವ್ಯಾಜಹಾರ - ಪ್ರತ್ಯುತ್ತರ ಕೊಡಲಿಲ್ಲ. ॥ ೫೦ ॥ ರಾಜಾ - ದಶರಥರಾಜನು, ಕೈಕೇಯ್ಯಾ- ಕೈಕೇಯೀದೇವಿಯಿಂದ, ವೃತಂ - ವರಿಸಲ್ಪಟ್ಟ, ರಾಮಸ್ಯಚ - ಶ್ರೀರಾಮನಿಗೆ, ವನೇ - ವನದಲ್ಲಿ, ವಾಸಂ- ಇರುವಿಕೆಯನ್ನೂ, ಭರತಸ್ಯ - ಭರತನಿಗೆ, ಐಶ್ವರ್ಯಂ - ಪ್ರಭುತ್ವವೂ ಎಂಬ, ಅಶೋಭನಂ- ಅಮಂಗಳಕರವಾದ, ವರಂ - ವರಗಳನ್ನು, ಶ್ರುತ್ವಾ - ಕೇಳಿ, ಮುಹೂರ್ತಂ - ಮುಹೂರ್ತ ಕಾಲ, ವ್ಯಾಕುಲೇಂದ್ರಿಯಃ - ಇಂದ್ರಿಯ ವ್ಯಾಪಾರ ಶೂನ್ಯನಾಗಿ, ಕೈಕೇಯೀಂ - ಕೈಕೇಯೀದೇವಿಯನ್ನು ಕುರಿತು, ನಾಭ್ಯಭಾಷತ - ಮಾತನಾಡಲಿಲ್ಲ, ಅನಿಮಿಷಃ - ರಪ್ಪೆಹಾಕದೆ, ಅಪ್ರಿಯವಾದಿನೀಂ - ಅನಿಷ್ಟವಾದ ಮಾತನ್ನು ಹೇಳುತ್ತಿರುವ, ಪ್ರಿಯಾಂ - ಹೆಂಡತಿಯಾದ, ದೇವೀಂ - ಕೈಕೇಯೀದೇವಿಯನ್ನು, ವಜ್ರಸಮಾಂ - ವಜ್ರಪ್ರಹಾರಕ್ಕೆ ಸಮಾನವಾದ, ಹೃದಯಾ ಪ್ರಿಯಾಂ - ಮನಸ್ಸಿಗೆ ಸಂಕಟ ಕರವಾದ, ದುಃಖಶೋಕಮಯೀಂ - (ಗೋ) ಬಾಹ್ಯತಾಪವನ್ನು ಅಂತಸ್ತಾಪವನ್ನೂ ಉಂಟುಮಾಡುತ್ತಿರುವ, ಘೋರಾಂ - ಭಯಂಕರವಾದ, ವಾಚಂ - ಮಾತನ್ನು, ಆಕರ್ಣ್ಯ - ಕೇಳಿ, ಸುಖಿತಃ - ಸುಖವುಳ್ಳವನು, ನಾಭವತ್ - ಆಗದೆ ಹೋದನು. ॥ ೫೩ ॥ ಸಃ - ಆ ದಶರಥರಾಯನು, ದೇವ್ಯಾ- ಕೈಕೇಯೀದೇವಿಯಿಂದ, ಕೃತಂ - ಮಾಡಲ್ಪಟ್ಟ, ವ್ಯವಸಾಯಂಚ - ಉದ್ಯೋಗವನ್ನು, ಕೃತಂ -

ಭರತನ ಸಾಕ್ಷಿಯಾಗಿಯೂ, ನನ್ನ ಸಾಕ್ಷಿಯಾಗಿಯೂ ರಾಮನ ವನವಾಸ ಒಂದು ಹೊರ್ತು ಬೇರೊಂದು ಬಗೆಯ ಉಪಾಯದಿಂದ ನಾನು ಸಂತೋಷಿಸಲಾರೆನು" ಎಂದು ಕಠಿಣವಾಗಿ ನುಡಿದು ಸುಮ್ಮನಾಗಿ, ವಿಲಾಪಿಸುತ್ತಿರುವ ಆ ರಾಯನನ್ನು ಕುರಿತು ಮತ್ತೆ ಏನನ್ನೂ ಹೇಳಲಿಲ್ಲವು. ಆಗಲಾದಶರಥ ನರನಾಥನು, ಆಕೆಯಿಂದ ವರಿಸಲ್ಪಟ್ಟ ಅಮಂಗಳಕರವಾದ ಶ್ರೀರಾಮನ ವನವಾಸವನ್ನೂ, ಭರತನ ರಾಜ್ಯಾಭಿಷೇಕವನ್ನೂ ಕೇಳಿ ಸ್ವಲ್ಪಕಾಲ ಇಂದ್ರಿಯವ್ಯಾಪಾರರಹಿತನಾಗಿ, ಕೆಟ್ಟನುಡಿಯಾಡುತ್ತಿರುವ ಆಕೆಯನ್ನು ಕೋಪದಿಂದ ನೋಡಿ, ನಿಟ್ಟುಸಿರುಬಿಟ್ಟು "ರಾಮ" ಎಂದು ಬಿಸಸುಯ್ದು ಬಸಿವಳಿದು, "ಕೈಕೇಯಿಯು ಇಂತಹ ಪಾಪಬುದ್ಧಿಯನ್ನು ಮಾಡಬಹುದೆ?" ಎಂದು ಆಶ್ಚರ್ಯವನ್ನು ಹೊಂದಿ, ಸಿಡಿಲಿನಂತಿರುವ ಆಕೆಯ ಮಾತುಗಳನ್ನು ನೆನೆನೆನೆದು, ತಾನು ಮಾಡಿದ ಪ್ರತಿಜ್ಞೆಯನ್ನಡಿಗಡಿಗೂ ಚಿಂತಿಸುತ್ತ, ಮುಹೂರ್ತಮಾತ್ರ ಚಿಂತಿಸಿ ನಿಟ್ಟುಸಿರಿಟ್ಟು ಛೇದಿತವಾದ ಗಿಡದಂತೆ ದೊಪ್ಪನೆ ನೆಲದಮೇಲೆ ಬಿದ್ದು,

ಧ್ಯಾತ್ವಾ ರಾಮೇತಿ ನಿಶ್ವಸ್ಯ ಛಿನ್ನಸ್ತರುರಿವಾಪತತ್ ॥ ೩೪ ॥ ನಷ್ಟಚಿತ್ತೋ ಯಥೋನ್ಮತ್ತೋ ವಿಪರೀತೋ ಯಥಾತುರಃ ॥ ಹೃತ ತೇಜಾ ಯಥಾ ಸರ್ಪೋ ಬಭೂವ ಜಗತೀಪತಿಃ ॥ ೩೫ ॥ ದೀನಯಾತು ಗಿರಾ ರಾಜಾ ಇತಿಹೋವಾಚ ಕೈಕಯೀಂ ॥ ಅನರ್ಥಮಿಮ ಮರ್ಥಾಭಂ ಕೇನ ತ್ವಮುಪದರ್ಶಿತಾ ॥ ೩೬ ॥ ಭೂತೋಪಹತ ಚಿತ್ತೇವ ಬ್ರುವಂತೀ ಮಾಂ ನಲಜ್ಜಸೇ ॥ ಶೀಲವ್ಯಸನ ಮೇ ತತ್ತೇ ನಾಭಿಜಾನಾಮ್ಯಹಂ ಪುರಾ ॥ ೩೭ ॥ ಬಾಲಾಯಾ ಸ್ತತ್ತ್ವಿದಾನೀಂತೇ

ಮಾಡಲ್ಪಟ್ಟ, ಘೋರಂ - ಭಯಂಕರವಾದ, ಶಪಥಂ - ಶಪಥವನ್ನು, ಧ್ಯಾತ್ವಾ - ಆಲೋಚಿಸಿ, ಹೇ ರಾಮ - ಎಲೈ ಶ್ರೀರಾಮನೆ, ಇತಿ - ಇಂತೆಂದು, ನಿಶ್ವಸ್ಯ - ನಿಟ್ಟುಸಿರುಬಿಟ್ಟು, ಛಿನ್ನಃ - ಕತ್ತರಿಸಲ್ಪಟ್ಟ, ತರುರಿವ - ಗಿಡದಂತೆ, ಅಪತತ್ - ಕೆಳಕ್ಕೆ ಬಿದ್ದನು. ॥ ೩೪ ॥ ಜಗತೀಪತಿಃ - ದಶರಥರಾಯನು, ಉನ್ಮತ್ತೋಯಥಾ - ಹುಚ್ಚು ಹಿಡಿದವನಂತೆ, ನಷ್ಟಚಿತ್ತಃ - ಕರಗಿಹೋದ ಮನವುಳ್ಳವನಾಗಿ, ವಿಪರೀತಃ - (ಗೋ ಮ) ಸನ್ನಿಪಾತ ಜ್ವರಾದಿಗಳಿಂದ ವಿಪರೀತ ಬುದ್ಧಿಯುಳ್ಳ- ಆತುರೋಯಥಾ - ರೋಗಿಯಂತೆ, ಹೃತತೇಜಾಃ - ಹೃತ - (ಮ) ಮಂತ್ರಾದಿಗಳಿಂದ ಅಪಹರಿಸಲ್ಪಟ್ಟ, ತೇಜಾಃ - ಸಾಮರ್ಥ್ಯವುಳ್ಳ, ಸರ್ಪೋಯಥಾ - ಸರ್ಪದಂತೆ, ಬಭೂವ - ಆದನು. ॥೩೫॥ ರಾಜಾ - ದಶರಥರಾಯನು, ದೀನಯಾ - (ಮ) ದೈನ್ಯಯುಕ್ತವಾದ, (ಗೋ) - ದೀನ ಸ್ವರದಿಂದ ಕೂಡಿದ, ಗಿರಾ - ವಾಕ್ಕಿನಿಂದ, ಕೈಕಯೀಂ - ಕೇಕಯರಾಜನ ಮಗಳನ್ನು ಕುರಿತು, ಇತಿ - ಈ ಮಾತನ್ನು, ಉವಾಚಹ - ಹೇಳಿದನಷ್ಟೆ. ॥ ೩೬ ॥ ಅರ್ಥಾಭಂ - ಫಲವಿದ್ದಂತೆ ತೋರುವ, ಇಮಂ - ಈ, ಅನರ್ಥಂ - ಅನಿಷ್ಟವನ್ನು, ಕೇನ - ಯಾವನಿಂದ, ತ್ವಂ - ನೀನು, ಉಪದರ್ಶಿತಾ - ಉಪದೇಶಿತಳಾದೆ, ಭೂತೋಪಹತಚಿತ್ತೇವ - ಪಿಶಾಚದಿಂದಾವೃತವಾದ, ಮನವುಳ್ಳವಳಂತೆ, ಮಾಂ- ನನ್ನನ್ನು ಕುರಿತು, ಬ್ರುವಂತೀ - (ಮ) ಧ್ರೌಷ್ಟ್ಯವನ್ನು, (ತಿ) ಆಡಬಾರದುದನ್ನು ಹೇಳುತ್ತ, ನಲಜ್ಜಸೇ - ನಾಚಿಕೆ ಇಲ್ಲದವಳಾಗಿರುವೆ. ॥ ೩೭ ॥ ಬಾಲಾಯಾಃ - ಮೂಢಳಾದ, ತೇ - ನಿನ್ನ, ಏತತ್ - ಈ, ಶೀಲವ್ಯಸನಂ - (ಗೋ) ಸದ್ವೃತ್ತಿಭ್ರಂಶವನ್ನು, ಅಹಂ - ನಾನು, ಪುರಾ-ಮೊದಲು, ನಾಭಿಜಾನಾಮಿ - ಅರಿಯದೆ ಹೋದೆ, ತೇ - ನಿನ್ನ, ತತ್ - ಆ ಶೀಲವು, ಇದಾನೀಂ - ಈಗ, ವಿಪರೀತವತ್ - ಬೇರೆಯಾದಂತೆ, ಲಕ್ಷಯೇ - ಕಾಣುತ್ತೇನೆ. ॥ ೩೮ ॥ ತೇ - ನಿನಗೆ, ಕುತೋವಾ,

---

ಮರೆವೆಯಿಂದಿರುವ ಉನ್ಮತ್ತನಂತೆಯೂ, ಸನ್ನಿಪಾತಾದಿ ಜ್ವರಪೀಡಿತನಾದಂತೆಯೂ, ವಿಷದ ಹಲ್ಲನ್ನು ಕೀಳಿಸಿಕೊಂಡ ಸರ್ಪದಂತೆಯೂ, ತೇಜೋಹೀನನಾಗಿ ಮೆಲ್ಲಮೆಲ್ಲನಾನಲ್ಲೆಯಾದ ಕೈಕೇಯಿಯನ್ನು ಕುರಿತು ಹೀಗೆಂದನು. ॥೩೫॥ "ಕೈಕೇಯಿ! ಪ್ರಯೋಜನಕರವಾಗಿ ತೋರುತ್ತಿರುವ ಈ ಅನರ್ಥವನ್ನು ನಿನಗೆ ಉಪದೇಶಮಾಡಿದರಾರು? ಭೂತಾವಿಷ್ಟೆಯಂತೆ ನಿನ್ನ ದ್ರೋಹವನ್ನು ನೀನರಿಯದೆ, ಏನೂ ಲಜ್ಜೆಯಿಲ್ಲದೆ ಮಾತನಾಡುತ್ತಿರುವೆಯಲ್ಲ! ನೀನು ಹುಡುಗಿಯಾಗಿದ್ದಾಗಿನಿಂದ ಇದುವರೆವಿಗೂ ಇಂತಹ ದುರಾಚಾರವಹಿಸಿದುದನ್ನು ನಾನು ಒಂದುಸಲವಾದರೂ ನೋಡಿದುದಿಲ್ಲ. ಈಗ ಪ್ರೌಢೆಯಾದಮೇಲೆ ನಿನಗೀಬುದ್ಧಿಮಾಂದ್ಯವುಂಟಾಯಿತೆಂದು ತಿಳಿಯುತ್ತೇನೆ. ಭರತನಿಗೆ ರಾಜ್ಯಾಭಿಷೇಕ, ರಾಮನಿಗೆ ವನವಾಸವೆಂದು ಕೇಳುತ್ತಿ

ಲಕ್ಷಯೇ ವಿಪರೀತವತ್ ॥ ಕುತೋವಾ ತೇಭಯಂ ಜಾತಂ ಯಾತ್ವಮೇವಂ ವಿಧಂ ವರಂ ॥ ೫೮ ॥ ರಾಷ್ಟ್ರೇ ಭರತಮಾಸೀನಂ ವೃಣೀಷೇ ರಾಘವಂ ವನೇ ॥ ವಿರಮೈತೇನ ಭಾವೇನ ತ್ವಮೇತೇನಾ ನೃತೇನವಾ ॥ ೫೯ ॥ ಯದಿ ಭರ್ತುಃ ಪ್ರಿಯಂ ಕಾರ್ಯಂ ಲೋಕಸ್ಯ ಭರತಸ್ಯ ಚ ॥ ನೃಶಂಸೇ ಪಾಪಸಂಕಲ್ಪೇ ಕ್ಷುದ್ರೇ ದುಷ್ಕೃತ ಕಾರಿಣಿ ॥ ೬೦ ॥ ಕಿನ್ನು ದುಃಖಮಳೀಕಂವಾ ಮಯಿ ರಾಮೇಚ ಪಶ್ಯಸಿ ॥ ನಕಥಂಚಿ ದ್ವೃತೇರಾಮಾ ದ್ಭರತೋ ರಾಜ್ಯಮಾವಸೇತ್ ॥ ೬೧ ॥ ರಾಮಾದಪಿ ಹಿತಂ ಮನ್ಯೇ ಧರ್ಮತೋ ಬಲವತ್ತರಂ ॥

ಯಾವ ಕಾರಣ, ಭಯಂ - ಭಯವು, ಜಾತಂ - ಹುಟ್ಟಿತು, ಯಾತ್ವಂ - ಯಾವ ನೀನು, ಏವಂ ವಿಧಂ - ಈ ಪರಿಯಾಗಿ, ಭರತಂ - ಭರತನನ್ನು, ರಾಷ್ಟ್ರೇ - ರಾಜ್ಯದಲ್ಲಿ, ಆಸೀನಂ - ಇರುವವನನ್ನಾಗಿಯೂ, ರಾಘವಂ - ಶ್ರೀರಾಮನನ್ನು, ವನೇ - ಅಟವಿಯಲ್ಲಿ, ಆಸೀನಂ - ಇರುವನನ್ನಾಗಿಯೂ, ವರಂ - ವರವನ್ನು, ವೃಣೀಷೇ - ಕೋರುತ್ತೀಯೊ, ॥ ೫೮ ॥ ಭರ್ತುಃ - ಗಂಡನಿಗೂ, ಲೋಕಸ್ಯ ಜನಕ್ಕೂ, ಭರತಸ್ಯ - ಭರತನಿಗೂ, ಪ್ರಿಯಂ - ಇಷ್ಟವು, ತ್ವಯಾ - ನಿನ್ನಿಂದ, ಕಾರ್ಯಂಯದಿ - ಮಾಡತಕ್ಕದೇ ಆದರೆ, ತ್ವಂ - ನೀನು, ಏತೇನಭಾವೇನ - ಈ ಭರತ ಪಟ್ಟಾಭಿಷೇಕಾಭಿಪ್ರಾಯದಿಂದ, ಅನೃತೇನ - ಸುಳ್ಳಾದ, ಏತೇನ - ಈ ಶ್ರೀರಾಮನ ವನವಾಸಾಭಿಪ್ರಾಯದಿಂದ, ವಿರಮ - ವಿರಾಮವನ್ನು ಹೊಂದು. ॥ ೫೯ ॥ ಹೇ ನೃಶಂಸೇ - ಎಲೌ ಘಾತಕಳೆ, ಹೇ ಪಾಪಸಂಕಲ್ಪೇ - ಎಲೌ ಪಾಪದಲ್ಲೇ ಮನೋರಥವುಳ್ಳವಳೆ, ಹೇ ಕ್ಷುದ್ರೇ - ಎಲೌ ನೀಚಳೆ, ಹೇ ದುಷ್ಕೃತಕಾರಿಣಿ - (ಗೋ) ಜನ್ಮಾಂತರದಲ್ಲಿಯೂ ಪಾಪ ಮಾಡಿದವಳೆ, (ಮ) ಕೆಟ್ಟದನ್ನು ಮಾಡುವವಳೆ, ಮಯಿವಾ - ನನ್ನಲ್ಲೇ ಆಗಲಿ, ರಾಮೇಚ - ಶ್ರೀರಾಮನಲ್ಲೇ ಆಗಲಿ, ಕಿಂ - ಯಾವ, ದುಃಖಂ - ದುಃಖಕರವಾದ, ಅಳೀಕಂ - ಅಪ್ರಿಯವನ್ನು, ಪಶ್ಯಸಿ - ನೋಡಿರುವೆ. ॥ ೬೦ ॥ ರಾಮಾದೃತೇ - ರಾಮನ ವಿನಹ, ಭರತಃ - ಭರತನು, ಕಥಂಚಿದಪಿ - ಹೇಗಾದರೂ, ರಾಜ್ಯಂ - ರಾಜ್ಯವನ್ನು, ನಾವಸೇತ್ - ವಹಿಸಲಾರನು, ಹಿ - ಯಾವ ಕಾರಣ, ರಾಮಾದಪಿ - ಶ್ರೀರಾಮನಿಗಿಂತ, ತಂ - ಆ ಭರತನನ್ನು, ಧರ್ಮತಃ- ಧರ್ಮಗಳಲ್ಲಿ, ಬಲವತ್ತರಂ - ಬಲವಂತನನ್ನಾಗಿ, ಮನ್ಯೇ - ಎಣಿಸಿದೇನೆಯೋ. ॥ ೬೧ ॥ ವನಂ - ವನವನ್ನು ಕುರಿತು, ಗಚ್ಛೇತಿ - ಹೋಗೆಂದು, ಭಾಷಿತೇ - ನುಡಿಯಲ್ಪಡಲು, ವಿವರ್ಣಂ - ವಿಪರೀತ

ರುವ ನಿನಗೆ ರಾಮನಿಂದಾವಭಯವು ಹುಟ್ಟಿತು. ನಿನ್ನ ಪತಿಯಾದ ನನಗೂ, ನಿನ್ನ ಕುವರನಾದ ಭರತನಿಗೂ, ಪ್ರಜೆಗಳಿಗೂ ಪ್ರಿಯವನ್ನುಂಟುಮಾಡಬೇಕೆಂದು ನಿನ್ನ ಮನದಲ್ಲಿದ್ದರೆ, ನೀನು ಈ ಭರತರಾಜ್ಯಾಭಿಷೇಕವೆಂಬಭಿಲಾಷೆಯನ್ನೂ, ಅನೃತವಾದ ಶ್ರೀರಾಮವನವಾಸವೆಂಬ ಬಯಕೆಯನ್ನೂ ನಿಲ್ಲಿಸುವವಳಾಗು. ಎಲೌ ಘಾತಕಳೆ! ಕ್ಷುದ್ರಬುದ್ಧಿಯವಳೆ: ನೀಚೆ; ನನ್ನಲ್ಲಿಯಾಗಲಿ, ರಾಮನಲ್ಲಿಯೇ ಆಗಲಿ ಯಾವ ಅಪರಾಧವನ್ನು ಕಂಡಿರುವೆ. ॥೬೦॥ ಶ್ರೀರಾಮನನ್ನುಳಿದು ಭರತನು ಹೇಗಾದರೂ ಪ್ರಭುತ್ವವನ್ನು ಹೊಂದುವದಿಲ್ಲ. ಆತನು ಧರ್ಮಗಳನ್ನು ಚೆನ್ನಾಗಿ ಬಲ್ಲಿದನಾದುದರಿಂದ ಆತನೇ ಅಣ್ಣನಾದ ಶ್ರೀರಾಮನಿಗಾಗಬೇಕಾದ ಯೌವರಾಜ್ಯಾಭಿಷೇಕವು, ತನಗಾಗಬೇಕೆಂದು ಒಪ್ಪುವುದಿಲ್ಲ. ಆಹಹ! ಕೈಕೇಯಿ; ವನಗಮನಮಾಡೆಂದು

ಕಥಂ ದ್ರಕ್ಷ್ಯಾಮಿ ರಾಮಸ್ಯ ವನಂ ಗಚ್ಛೇತಿ ಭಾಷಿತೇ ॥ ೬೨ ॥ ಮುಖವರ್ಣಂ ವಿವರ್ಣಂ ತಂ ಯಥೈವೇಂದು ಮುಪಪ್ಲುತಂ ॥ ತಾಂಹಿ ಮೇ ಸುಕೃತಾಂ ಬುದ್ಧಿಂ ಸುಹೃದ್ಭಿ ಸ್ಸಹ ನಿಶ್ಚಿತಾಂ ॥ ೬೩ ॥ ಕಥಂ ದ್ರಕ್ಷ್ಯಾಮ್ಯಪಾವೃತ್ತಾಂ ಪರೈರಿವ ಹತಾಂ ಚಮೂಂ ॥ ಕಿಂಮಾಂ ವಕ್ಷ್ಯಂತಿ ರಾಜಾನೋ ನಾನಾದಿಗ್ಭ್ಯ ಸ್ಸಮಾಗತಾಃ ॥ ೬೪ ॥ ಬಾಲೋ ಬತಾಯ ಮೈಕ್ಷ್ವಾಕ ಶ್ಚಿರಂ ರಾಜ್ಯ ಮಕಾರಯತ್ ॥ ಯದಾತು ಬಹವೋ ವೃದ್ಧಾ ಗುಣವಂತೋ ಬಹುಶ್ರುತಾಃ ॥ ೬೫ ॥ ಪರಿಪ್ರಕ್ಷ್ಯಂತಿ ಕಾಕುತ್ಸ್ಥಂ ವಕ್ಷ್ಯಾಮಿ ಕಿಮಹಂ ತದಾ ॥

ವರ್ಣವುಳ್ಳ, ರಾಮಸ್ಯ - ಶ್ರೀರಾಮನ, ಮುಖವರ್ಣಂ - ಮುಖಕಾಂತಿಯನ್ನು, (ಮ + ತಿ) ಉಪಪ್ಲುತಂ - ರಾಹುಗ್ರಸ್ತವಾದ, ಇಂದುಮಿವ - ಚಂದ್ರನಂತೆ, ಯಥಾ - ಹೇಗೆ, ಕಥಂ - ಅತಿ ಪ್ರಯಾಸದಿಂದ, ದ್ರಕ್ಷ್ಯಾಮಿ - ನೋಡುವೆನು, (ಗೋ) ಇಂದುಂ ಯಥಾ - ಚಂದ್ರನಂತೆ, ವಿವರ್ಣಂ - ವಿಪರೀತವರ್ಣವುಳ್ಳ, ರಾಮಸ್ಯ - ಶ್ರೀರಾಮನ, ಮುಖವರ್ಣಂ - ಮುಖದ ಕಾಂತಿಯನ್ನು, ಕಥಂದ್ರಕ್ಷ್ಯಾಮಿ - ಹೇಗೆ ನೋಡಲಿ. ॥೬೨॥ ಮೇ - ನನ್ನ, ಸುಕೃತಾಂ-ಚೆನ್ನಾಗಿ ಆಲೋಚಿಸಲ್ಪಟ್ಟ, ಸುಹೃದ್ಭಿಸ್ಸಹ - ಸ್ನೇಹಿತರಿಂದ, ನಿಶ್ಚಿತಾಂ - ನಿಶ್ಚಯಿಸಲ್ಪಟ್ಟ, ತಾಂಬುದ್ಧಿಂ - ಶ್ರೀರಾಮನಿಗೆ, ಪಟ್ಟಾಭಿಷೇಕ ಮಾಡಬೇಕೆಂಬ ನಿಶ್ಚಯವನ್ನು, ಪರೈಃ - ಶತ್ರುಗಳಿಂದ, ಹತಾಂ ಹೊಡೆಯಲ್ಪಟ್ಟ, ಚಮೂಮಿವ - ಸೈನ್ಯದಂತೆ, ಅಪಾವೃತ್ತಾಂ - ವಿಮುಖವಾದುದನ್ನಾಗಿ, ಕಥಂ - ಹೇಗೆ, ದ್ರಕ್ಷ್ಯಾಮಿ- ನೋಡಲಿ. ॥ ೬೩ ॥ ಅಯಂ - ಈ, ಬಾಲಃ - ಮೂಢನಾದ, ಐಕ್ಷ್ವಾಕಃ - ಇಕ್ಷ್ವಾಕು ಮಹಾರಾಯನ ವಂಶಸ್ಥನಾದ ದಶರಥನು, ಚಿರಂ - ಬಹು ಕಾಲ, ಕಥಂ - ಹೇಗೆ, ರಾಜ್ಯಂ - ರಾಜ್ಯಭಾರವನ್ನು, ಅಕಾರಯತ್ - ಮಾಡಿದನು, ಇತಿ - ಇಂತೆಂದು, ನಾನಾದಿಗ್ಭ್ಯಃ - ನಾನಾ ದೇಶಗಳಿಂದ, ಸಮಾಗತಾಃ - ಬಂದಿರುವ, ರಾಜಾನಃ - ಅರಸರು, ಮಾಂ - ನನ್ನನ್ನುಕುರಿತು, ಕಿಂವಕ್ಷ್ಯಂತಿ - ಏನು ಹೇಳುವರು. ॥ ೬೪ ॥ ಯದಾತು - ಯಾವಕಾಲದಲ್ಲಾದರೆ, ಗುಣವಂತಃ - ಸೌಶೀಲ್ಯಾದಿ ಗುಣವಂತರಾದ, ಬಹುಶ್ರುತಾಃ - ಬಹು ಶಾಸ್ತ್ರಜ್ಞರಾದ, ಬಹವಃ - ಬಹಳಮಂದಿ, ವೃದ್ಧಾಃ - ವೃದ್ಧರು, ಕಾಕುತ್ಸ್ಥಂ - ಶ್ರೀರಾಮನನ್ನುದ್ದೇಶಿಸಿ, ಪರಿಪ್ರಕ್ಷ್ಯಂತಿಯದಿ - ಮಾತನಾಡಿದರೆ, ತದಾ - ಆಗ, ಅಹಂ - ನಾನು, ಕಿಂವಕ್ಷ್ಯಾಮಿ - ಯಾವ ಪ್ರತ್ಯುತ್ತರವನ್ನು ಹೇಳಲಿ. ॥ ೬೫ ॥

ಹೇಳಿದರೆ, ರಾಹುಗ್ರಸ್ತನಾದ ಚಂದ್ರನಂತೆ ವಿವರ್ಣಮುಖನಾಗುವ ಶ್ರೀರಾಮನನ್ನು ಹೇಗೆತಾನೆ ನೋಡಲಿ! ನಾನುಮಾತ್ರ ಆಲೋಚಿಸಿಮವಲ್ಲದೆ, ಮಿತ್ರರಿಂದಲೂ ನಿಶ್ಚಿತವಾದ ಶ್ರೀರಾಮ ಪಟ್ಟಾಭಿಷೇಕ ರೂಪವಾದ ಈ ನಿಶ್ಚಯವು, ಹಗೆಗಳಿಂದ ಹೊಡೆದು ಕೆಡುಹಲ್ಪಟ್ಟ ಸೇನೆ ಯಂತೆ ವಿಮುಖವಾಯಿತಲ್ಲ! ಇದನ್ನು ಹೇಗೆತಾನೆ ಅನುಭವಿಸಲಿ! ಪಟ್ಟಾಭಿಷೇಕಕ್ಕಾಗಿ ದೇಶದೇಶಗಳಿಂದಲೂ ಬಂದಿರುವ ಭೂನಾಯಕರೆಲ್ಲರೂ, "ಇಕ್ಷ್ವಾಕು ರಾಯನ ಮನೆ ತನದಲ್ಲಿ ಹುಟ್ಟಿದವನಾದರೂ, ಮೂಢನಾಗಿ ಹೋದ ಈ ದಶರಥನು ಚಿರಕಾಲ ರಾಜ್ಯವನ್ನು ಹೇಗೆತಾನೆ ಆಳಿದನೋ" ಎನ್ನುವುದಿಲ್ಲವೆ? ಗುಣವಂತರೂ, ಶಾಸ್ತ್ರವನ್ನರಿತವರೂ, ವೃದ್ಧರೂ ಸೇರಿ ಶ್ರೀರಾಮನ ವಿಷಯವಾಗಿ ಮಾತನಾಡಿದರೆ ನಾನಾವ ಉತ್ತರವನ್ನೀಯಲಿ!

ಕೈಕೇಯ್ಯಾ ಕ್ಲಿಶ್ಯಮಾನೇನ ರಾಮಃ ಪ್ರವ್ರಾಜಿತೋ ಮಯಾ ||೬೬|| ಯದಿ ಸತ್ಯಂ ಬ್ರವೀಮ್ಯೇತ ತ್ತದಸತ್ಯಂ ಭವಿಷ್ಯತಿ || ಕಿಂ ಮಾಂ ವಕ್ಷ್ಯತಿ ಕೌಸಲ್ಯಾ ರಾಘವೇ ವನಮಾಸ್ಥಿತೇ ||೬೭|| ಕಿಂಚೈನಾಂ ಪ್ರತಿವಕ್ಷ್ಯಾಮಿ ಕೃತ್ವಾ ವಿಪ್ರಿಯ ಮೀದೃಶಂ || ಯದಾ ಯದಾಹಿ ಕೌಸಲ್ಯಾ ದಾಸೀವಚ್ಚ ಸಖೀವಚ ||೬೮|| ಭಾರ್ಯಾವದ್ಭಗಿನೀವಚ್ಚ ಮಾತೃವಚ್ಚೋಪತಿಷ್ಠತಿ || ಸತತಂ ಪ್ರಿಯ

ಕೈಕೇಯ್ಯಾ - ಕೈಕೇಯೀ ದೇವಿಯಿಂದ, ಕ್ಲಿಶ್ಯಮಾನೇನ - ಬಾಧೆಗೊಳಿಸಲ್ಪಟ್ಟ, ಮಯಾ-ನನ್ನಿಂದ, ರಾಮಃ - ಶ್ರೀರಾಮನು, ಪ್ರವ್ರಾಜಿತಃ - ಅರಣ್ಯಕ್ಕೆ ಹೊರಡಿಸಲ್ಪಟ್ಟನು, ಇತಿ - ಎಂದು, ಏತತ್ - ಈ ಕೈಕೇಯಿಯ ನಿರ್ಬಂಧರೂಪವಾದ ವಚನವನ್ನು, ಸತ್ಯಂ - ಸತ್ಯವನ್ನಾಗಿ, ಬ್ರವೀಮಿಯದಿ - ಹೇಳಿದರೆ, ತತ್ - ಆ ಶ್ರೀರಾಮನಿಗೆ ಪಟ್ಟಾಭಿಷೇಕ ವಚನವು, ಅಸತ್ಯಂ - ಸುಳ್ಳಾದುದು, ಭವಿಷ್ಯತಿ - ಆಗುತ್ತದೆ. ||೬೬|| ರಾಘವೇ - ಶ್ರೀರಾಮನು, ವನಂ - ವನವನ್ನು, ಆಸ್ಥಿತೇಸತಿ - ಹೊಂದಲು, ಕೌಸಲ್ಯಾ - ಕೌಸಲ್ಯಾದೇವಿಯು, ಮಾಂ - ನನ್ನನ್ನು ಕುರಿತು, ಕಿಂವಕ್ಷ್ಯತಿ - ಏನೆಂದಾಳು, ಈದೃಶಂ - ಇಂತಹ, ವಿಪ್ರಿಯಂ - ಅನಿಷ್ಟವನ್ನು, ಕೃತ್ವಾ - ಮಾಡಿ, ಏನಾಂ - ಈ ಕೌಸಲ್ಯಾದೇವಿಯನ್ನು ಕುರಿತು, ಕಿಂಪ್ರತಿವಕ್ಷ್ಯಾಮಿ - ಯಾವ ಪ್ರತ್ಯುತ್ತರವನ್ನು ಹೇಳಲಿ. ||೬೭|| ಕೌಸಲ್ಯಾ- ಕೌಸಲ್ಯಾದೇವಿಯು, ಯದಾಯದಾ - ಯಾವ ಯಾವ ಕಾಲದಲ್ಲಿ, ದಾಸೀವಚ್ಚ - (೧) ದಾಸಿಯಂತೆ, ಸಖೀವಚ್ಚ - ಸ್ನೇಹಿತಳಂತೆ, ಭಾರ್ಯಾವಚ್ಚ-ಹೆಂಡತಿಯಂತೆ, ಭಗಿನೀವಚ್ಚ - ತಂಗಿಯಂತೆ, ಮಾತೃವಚ್ಚ - ತಾಯಿಯಂತೆ, ಉಪತಿಷ್ಠತಿ - ತತ್ತತ್ಕಾಲೋಚಿತ ಕೃತ್ಯದಿಂದ ನನ್ನನ್ನು ಉಪಾಸನೆ ಮಾಡುತ್ತಾಳೆಯೋ, ತದಾತದಾ - ಆಯಾಕಾಲದಲ್ಲಿ, ಸತತಂ - ನಿರಂತರವು, ಮೇ - ನನಗೆ, ಪ್ರಿಯ

ಕೈಕೇಯಿಯಿಂದ ನಿರ್ಬಂಧಗೊಳಿಸಲ್ಪಟ್ಟ ನಾನು ಶ್ರೀರಾಮನನ್ನರಣ್ಯಕ್ಕೆ ಕಳುಹಿದೆನೆಂದರೆ, ಆತನಿಗೆ ರಾಜ್ಯಾಭಿಷೇಕವನ್ನು ಮಾಡಿಸುವೆನೆಂದು ಹೇಳಿದುದು ಸುಳ್ಳಾಗುವುದು. ಶ್ರೀರಾಮನು ವನಕ್ಕೆ ತೆರಳಿದ ಬಳಿಕ, ಆತನ ತಾಯಿಯಾದ, ಕೌಸಲ್ಯೆಯು, "ನನ್ನ ಕುವರನು ನಿನಗೆ ಮಾಡಿದ ಅಪರಾಧವೇನು?" ಎಂದು ಕೇಳಿದರೆ ಯಾವ ಉತ್ತರವನ್ನು ಹೇಳಲಿ! ಆಕೆಯಾದರೊ, ನನ್ನನ್ನು ಉಪಚರಿಸುವಾಗ ದಾಸಿಯಂತೆ ವರ್ತಿಸುತ್ತಾಳೆ; ಆಗ ಪಟ್ಟದರಸಿಯ ಭಾವವನ್ನು ತೋರುವುದಿಲ್ಲ; ದ್ಯೂತ ಕ್ರೀಡಾದಿ ಕಾಲದಲ್ಲಿ ಸಖಿಯಂತಿರುವಳು; ಧರ್ಮಾನುಷ್ಠಾನ ಸಮಯದಲ್ಲಿ ಸಹಜಾತೆಯಂತೆ ಲಾಲಿಸುತ್ತಾಳೆ; ದೇಹ ಪೋಷಣೆಯಲ್ಲಿ ಜನನಿಯಂತೆ ಹಿತಕಾಂಕ್ಷಿಣಿಯಾಗಿರುವಳು; ಈ ರೀತಿ ಯಾವ ಯಾವ ಸಮಯದಲ್ಲಿ ಹೇಗೆ ಹೇಗೆ ನಡೆಯಬೇಕೋ, ಆಯಾ ರೀತಿಯಲ್ಲಿರುತ್ತ, ಯಾವಾಗಲೂ ನನಗೆ ಹಿತವನ್ನೇ

ಟಿ. (೧) ಅಂದರೆ ಸೇವೆ ಮಾಡುವ ಕಾಲದಲ್ಲಿ, ದಾಸೀವತ್ - ದಾಸಿಯಂತೆಯೂ, ದ್ಯೂತಾದಿ ಕಾಲದಲ್ಲಿ, ಸಖೀವತ್ - ಸ್ನೇಹಿತಳಂತೆಯೂ, ಅತಿಥಿ ಸತ್ಕಾರವೇ ಮೊದಲಾದ, ಧರ್ಮಗಳನ್ನಾಚರಿಸುವ ಸಮಯದಲ್ಲಿ, ಭಾರ್ಯಾವತ್ - ಹೆಂಡತಿಯಂತೆಯೂ, ಹೆಂಡತಿಯಾಗುವುದಕ್ಕೆ ಮೊದಲು, ಭಗಿನೀವತ್ - ಸೋದರಿಯಂತೆಯೂ, ಶರೀರ ಪೋಷಣ ಕಾಲದಲ್ಲಿ, ಮಾತೃವತ್ - ತಾಯಿಯಂತೆಯೂ ರಕ್ಷಿಸುತ್ತಿರುವಳು, ಎಂದು ಭಾವವು. ಇದು ಗೋವಿಂದ ರಾಜೀಯ ವ್ಯಾಖ್ಯಾನಕಾರರ ಅಭಿಪ್ರಾಯವು.

ಕಾಮಾ ನೋ ಪ್ರಿಯಪುತ್ರಾ ಪ್ರಿಯಂವದಾ ॥ ೧೯ ॥ ನ ಮಯಾ ಸತ್ಕೃತಾ ದೇವೀ ಸತ್ಕಾರಾರ್ಹಾ ಕೃತೇ ತವ ॥ ಇದಾನೀಂ ತತ್ತಪತಿ ಮಾಂ ಯನ್ಮಯಾ ಸುಕೃತಂ ತ್ವಯಿ ॥ ೨೦ ॥ ಅಪಥ್ಯವ್ಯಂಜನೋಪೇತಂ ಭುಕ್ತಮನ್ನಮಿವಾತುರಂ ॥ ವಿಪ್ರಕಾರಂಚ ರಾಮಸ್ಯ ಸಂಪ್ರಯಾಣಂ ವನಸ್ಯಚ ॥ ೨೧ ॥ ಸುಮಿತ್ರಾ ಪ್ರೇಕ್ಷ್ಯವೈ ಭೀತಾ ಕಥಂ ಮೇ ವಿಶ್ವಸಿಷ್ಯತಿ ॥ ಕೃಪಣಂ ಬತ ವೈದೇಹೀ ಶ್ರೋಷ್ಯತಿ ದ್ವಯಮಪ್ರಿಯಂ ॥ ೨೨ ॥ ಮಾಂಚ ಪಂಚತ್ವಮಾ

ಕಾಮಾ - ಇಷ್ಟವನ್ನೇ ಕೋರುತ್ತಿರುವ, ಪ್ರಿಯಪುತ್ರಾ - ಎಲ್ಲರಿಗೂ ಪ್ರೀತಿಪಾತ್ರನಾದ ಮಗನುಳ್ಳ, ಪ್ರಿಯಂವದಾ - ಎಲ್ಲರಿಗೂ ಇಷ್ಟವಾದ ವಚನವನ್ನೇ ನುಡಿಯುತ್ತಿರುವ, ಸತ್ಕಾರಾರ್ಹಾ - ಪೂಜಾರ್ಹಳಾದ, ಸಾದೇವೀ - ಆ ಕೌಸಲ್ಯಾದೇವಿಯು, ತವಕೃತೇ - ನಿನ್ನನಿಮಿತ್ತವಾಗಿ, ಮಯಾ - ನನ್ನಿಂದ, ನಸತ್ಕೃತಾ - ಪೂಜಿಸಲ್ಪಡಲಿಲ್ಲವು. ॥ ೧೯ ॥ ಯತ್ - ಯಾವ ಉಪಚಾರವು, ಮಯಾ-ನನ್ನಿಂದ, ತ್ವಯಿ - ನಿನಗೋಸ್ಕರ, ಸುಕೃತಂ - ಚನ್ನಾಗಿ ಮಾಡಲ್ಪಟ್ಟಿತೋ, ಅಪಥ್ಯವ್ಯಂಜನೋಪೇತಂ - ಅಪಥ್ಯ - ಅಪಥ್ಯಕರವಾದ, ವ್ಯಂಜನ - ದಧ್ಯಾದಿ ಉಪದಂಶ ಸಾಮಗ್ರಿಗಳಿಂದ, ಉಪೇತಂ - ಕೂಡಿಕೊಂಡಿರುವ, ಭುಕ್ತಂ - ಭಕ್ಷಣೆಮಾಡಲ್ಪಟ್ಟ, ಅನ್ನಂ - ಅನ್ನವು, ಆತುರಮಿವ-ರೋಗಿಷ್ಠನನ್ನಂತೆ, ತತ್ - ನಿನಗೆ ಮಾಡಿದ ಆ ಉಪಚಾರವು, ಇದಾನೀಂ - ಈಗ, ಮಾಂ - ನನ್ನನ್ನು, ತಪತಿ - ತಪಿಸುತ್ತಿರುವುದು. ॥ ೨೦ ॥ ರಾಮಸ್ಯ - ಶ್ರೀರಾಮನಿಗೆ, ವಿಪ್ರಕಾರಂಚ - ಅಭಿಷೇಕ ತಿರಸ್ಕಾರರೂಪ ವಿರುದ್ಧ ಕಾರ್ಯವನ್ನು, ವನಸ್ಯಚ - ವನವನ್ನು ಕುರಿತು, ಪ್ರಯಾಣಂಚ - ಪ್ರಯಾಣವನ್ನು, ಪ್ರೇಕ್ಷ್ಯ - ಕಂಡು, ಸುಮಿತ್ರಾ - ಸುಮಿತ್ರಾದೇವಿಯು, ಭೀತಾ - ಭಯಗೊಂಡು, ಮಾಂ-ನನ್ನನ್ನು, ಕಥಂ - ಹೇಗೆತಾನೆ, ವಿಶ್ವಸಿಷ್ಯತಿ - ವಿಶ್ವಾಸಿಸುವಳು. ॥ ೨೧ ॥ ವೈದೇಹೀ - ಸೀತಾದೇವಿಯು, ಮಾಂ - ನನ್ನನ್ನು, ಪಂಚತ್ವಂ - ಮರಣವನ್ನು, ಆಪನ್ನಂ ಹೊಂದಿರುವವನನ್ನಾಗಿಯೂ, ರಾಮಂಚ - ಶ್ರೀರಾಮನನ್ನು, ವನಂ - ಅರಣ್ಯವನ್ನು, ಆಶ್ರಿತಂ - ಹೊಂದಿದವನನ್ನಾಗಿ, ಏತತ್ - ಈ, ಅಪ್ರಿಯಂ - ಅನಿಷ್ಟವಾದ, ದ್ವಯಂ - ಎರಡು ಕಾರ್ಯಗಳನ್ನು, ಕೃಪಣಂ - ದೈನ್ಯಯುಕ್ತಳಾದವಳಂತೆ, ಶ್ರೋಷ್ಯತಿ - ಕೇಳುವಳಲ್ಲವೆ, ಬತ - ಕಷ್ಟವು. ॥ ೨೨ ॥ ವೈದೇಹೀ - ಸೀತಾದೇವಿಯು,

ಕೋರುತ್ತ, ಎಲ್ಲ ಜನಕ್ಕೂ ಪ್ರೀತಿಪಾತ್ರನಾದ ಪುತ್ರನುಳ್ಳವಳೂ, ಎಲ್ಲರಿಗೂ ಹಿತವಾಗಿ ನುಡಿವವಳೂ ಆಗಿರುವಳು. ಹೀಗಿದ್ದರೂ ಇಂತಹಳನ್ನು ನಿನಗೋಸ್ಕರ ಸತ್ಕರಿಸಲಿಲ್ಲವು. ನಿನ್ನ ವಿಷಯದಲ್ಲಿ ಯಾವಾವ ಉಪಚಾರಗಳನ್ನು ಮಾಡಿದೆನೊ, ಅದು ಅಪಥ್ಯವು ರೋಗಿಯನ್ನು ಬಾಧಿಸಿದಂತೆ ನನ್ನನ್ನು ಪೀಡಿಸುತ್ತಿರುವುದು. ॥೨೦॥ ಎಲೌ ಕೈಕೇಯಿಯೆ! ಶ್ರೀರಾಮಮೂರ್ತಿಯಲ್ಲಿ ಬಹಳವಾದ ವಿಶ್ವಾಸವುಳ್ಳ ಸುಮಿತ್ರೆಯು, ಭರತನಿಗೆ ರಾಜ್ಯಾಭಿಷೇಚನ, ಶ್ರೀರಾಮನಿಗೆ ವನವಾಸ ಇವುಗಳನ್ನು, ಕೇಳಿ ನನ್ನಲ್ಲಿ ಹೇಗೆತಾನೆ ವಿಶ್ವಾಸವನ್ನಿಡುವಳು ? ದೀನಳಾದ ಸೀತಾದೇವಿಯೂ, ನಾನು ಮಡಿದುದು, ಪತಿಯಾದ ರಾಘವನು ವನವನ್ನು ಹೊಂದಿದುದು ಎಂಬ ಅನಿಷ್ಟದ್ವಯವನ್ನು ದೈನ್ಯದಿಂದ ಕೇಳುತ್ತಾಳೆಯಲ್ಲವೆ ? ಹಾ; ಕಷ್ಟವು !! ದೇವೀ ! ರಾಮಪತ್ನಿಯಾದ ಸೀತಾದೇವಿಯು ನನ್ನ ಮರಣವನ್ನು ಕೇಳಿ ಬಹಳ ಕೃಶಳಾಗು

ಪನ್ನಂ ರಾಮಂಚ ವನಮಾಶ್ರಿತಂ ॥ ವೈದೇಹೀ ಬತಮೇ ಪ್ರಾಣಾನ್ ಶೋಚಂತೀ ಕ್ಷಪಯಿಷ್ಯತಿ ॥ ೭೩ ॥ ಹೀನಾ ಹಿಮವತಃ ಪಾರ್ಶ್ವೇ ಕಿನ್ನರೇಣೇವ ಕಿನ್ನರೀ॥ ನಹಿ ರಾಮಮಹಂ ದೃಷ್ಟ್ವಾ ಪ್ರವಸಂತಂ ಮಹಾವನೇ ॥ ೭೪ ॥ ಚಿರಂ ಜೀವಿತು ಮಾಶಂಕೇ ರುದಂತೀಂ ಚಾಪಿ ಮೈಥಿಲೀಂ ॥ ಸಾನೂನಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥ ೭೫ ॥ ನಹಿ ಪ್ರವ್ರಾಜಿತೇ ರಾಮೇ ದೇವೀ ಜೀವಿತು ಮುತ್ಸಹೇ ॥ ಸತೀಂ ತ್ವಾಮಹಮತ್ಯಂತಂ ವ್ಯವಸ್ಯಾ ಮ್ಯಸತೀಂ ಸತೀಂ ॥ ೭೬ ॥ ರೂಪಿಣೀಂ ವಿಷಸಂಯುಕ್ತಾಂ ಪೀತ್ವೇವ ಮದಿರಾಂ ನರಃ॥

ಮೇ - ನನ್ನ ದೆಶೆಯಿಂದ, ಹಿಮವತಃ - ಹಿಮವತ್ಪರ್ವತದ, ಪಾರ್ಶ್ವೇ - ಪ್ರಾಂತಪ್ರದೇಶದಲ್ಲಿ, ಕಿನ್ನರೇಣ - ಕಿನ್ನರನಿಂದ, ಹೀನಾ-ವಿಯುಕ್ತಳಾದ, ಕಿನ್ನರೀವ - ಕಿನ್ನರ ಸ್ತ್ರೀಯಂತೆ, ಶೋಚಂತೀ- ದುಃಖಿಸುತ್ತ, ಪ್ರಾಣಾನ್ - ಪ್ರಾಣಗಳನ್ನು, ಕ್ಷಪಯಿಷ್ಯತಿ - ಕ್ಷಯ ಹೊಂದುತ್ತಾಳೆ. ॥ ೭೩ ॥ ಅಹಂ - ನಾನು, ಮಹಾವನೇ - ಗೊಂಡಾರಣ್ಯದಲ್ಲಿ, ಪ್ರವಸಂತೀಂ - ವಾಸಮಾಡುತ್ತಿರುವ, ರಾಮಂ - ಶ್ರೀರಾಮನನ್ನು, ರುದಂತೀಂ - ಅಳುತ್ತಿರುವ, ಮೈಥಿಲೀಂಚಾಪಿ - ಸೀತಾದೇವಿಯನ್ನೂ ದೃಷ್ಟ್ವಾ - ಕಂಡು, ಚಿರಂ - ಬಹುಕಾಲ, ಜೀವಿತುಂ - ಬದುಕಲು, ನಾಶಂಸೇ - ಕೋರುವ ದಿಲ್ಲವು. ॥ ೭೪ ॥ ಹೇದೇವಿ - ಎಲೌ ಕೈಕೇಯಿಯೇ, ರಾಮೇ - ಶ್ರೀರಾಮನು, ಪ್ರವ್ರಾಜಿತೇ - ವನವನ್ನು ಕುರಿತು ಹೊರಡಿಸಲ್ಪಡಲು, ಅಹಂ - ನಾನು, ಜೀವಿತುಂ - ಬದುಕುವದಕ್ಕೆ, ನೋತ್ಸಹೇಹಿ - ಉದ್ಯುಕ್ತನಾಗಲಾರನಷ್ಟೆ, ಸಾತ್ವಂ - ಅಂತಹ ನೀನು, ವಿಧವಾ - ಪತಿಹೀನಳಾಗಿ, ಸಪುತ್ರಾ - ಮಗನಿಂದೊಡಗೂಡಿ, ರಾಜ್ಯಂ - ರಾಜ್ಯಭಾರವನ್ನು, ಕಾರಯಿಷ್ಯಸಿ - ಮಾಡುವೆ, ನೂನಂ - ನಿಶ್ಚಯವು. ॥ ೭೫ ॥ ಅಹಂ - ನಾನು, ಸತೀಂ - (ಗೋ + ಮ) ಪತಿಶುಶ್ರೂಷಾದಿಗಳಿಂದ ಸತೀ ಎಂದು ಪ್ರಸಿದ್ಧಳಾದ, ತ್ವಾಂ - ನಿನ್ನನ್ನು, ಸತೀಂ - ಪ್ರತಿವ್ರತೆಯನ್ನಾಗಿ, ಅತ್ಯಂತಂ - ಬಹಳವಾಗಿ, ಅಸತೀಂ - (೧) ಪತಿಮಾರಕಳಾದ ದುಷ್ಟಸ್ತ್ರೀಯನ್ನಾಗಿ, ರೂಪಿಣೀಂ - ರೂಪಯುಕ್ತವಾದ, ವಿಷಸಂಯುಕ್ತಾಂ - ವಿಷದಿಂದ ಮಿಶ್ರಿತವಾದ, ಮದಿರಾಂ - ಮದ್ಯವನ್ನು, ಪೀತ್ವಾ - ಪಾನಮಾಡಿದ, ನರಇವ - ಮನುಷ್ಯನಂತೆ, ವ್ಯವಸ್ಯೇ - ನಿಶ್ಚಯಿಸುತ್ತೇನೆ. ॥ ೭೬ ॥ ಅನೃತೈಃ -

---

ತ್ತಾಳೆ. ಶ್ರೀರಾಮಚಂದ್ರನು ವನಗಮನ ಮಾಡಿದರೆ, ಸೀತಾದೇವಿಯು, ಕಿನ್ನರ ಶ್ರೇಷ್ಟನಿಂದ ಅಗಲಿದ ಕಿನ್ನರ ಸ್ತ್ರೀಯು ಹಿಮವತ್ಪ್ರಾಂತದಲ್ಲಿ ಸಂತಪಿಸುವಂತೆ, ದುಃಖಿಸುವಿಕೆಯನ್ನು, ರಾಮನು ಅರಣ್ಯದಲ್ಲಿ ವಾಸಮಾಡುವಿಕೆಯನ್ನೂ ಕೇಳಿ ಬಹಳಕಾಲ ಜೀವಿಸಲಾರೆನು. ಕೈಕೇಯಿಯೇ ! ಕೇಳು. ನಾನು ಮರಣ ಹೊಂದಿದರೆ ವಿಧವೆಯಾದ ನೀನು ನಿನ್ನ ಕುಮಾರನಾದ ಭರತನೊಡಗೂಡಿ ರಾಜ್ಯವನ್ನಾಳುವೆ. ॥ ೭೫ ॥ ದೇವಿ ! ಶ್ರೀರಾಮಚಂದ್ರನು ವನವಾಸಕ್ಕೆ ತೆರಳಿದರೆ ನಾನು ಬದುಕಲುತ್ಸುಕನಾಗಲಾರೆನು. ಎಲೆಗೆ ! ಪತಿಶುಶ್ರೂಷಣೆ

ಟ. (೧) ಅಂದರೆ ಮನುಷ್ಯನು ವರ್ಣದಿಂದ ಕೂಡಿದ, ವಿಷಮಿಶ್ರವಾದ ಮದ್ಯವನ್ನು ಪಾನಮಾಡಿ "ಈ ಮದ್ಯವು ದುಷ್ಟವಾದುದೆಂದು ಹೇಗೆ ನಿಶ್ಚಯಿಸುವನೊ, ಹಾಗೆ ನಾನೂ ಪತಿ ಶುಶ್ರೂಷಣಾದಿಗಳಿಂದ ಪತಿವ್ರತೆಯೆನಿಸಿಕೊಂಡಿರುವ ನಿನ್ನನ್ನು, ಪತಿಮಾರಕಳು ಎಂದು ನಿಶ್ಚಯಿಸಿದ್ದೇನೆ" ಎಂದು ಭಾವವು.

ಅನೃತೈರ್ಬಹು ಮಾಂ ಸಾಂತ್ವೈಸ್ಸಾಂತ್ವಯಂತೀಸ್ಮ ಭಾಷಸೇ ॥ ೭೭ ॥
ಗೀತಶಬ್ದೇನ ಸಂರುಧ್ಯ ಲುಬ್ಧೋ ಮೃಗಮಿವಾವಧೀಃ ॥ ಅನಾರ್ಯ ಇತಿಮಾ
ಮಾರ್ಯಾಃ ಪುತ್ರವಿಕ್ರಾಯಿಕಂ ಧ್ರುವಂ ॥ ೭೮ ॥ ಧಿಕ್ಕರಿಷ್ಯಂತಿ ರಥ್ಯಾಸು
ಸುರಾಪಂ ಬ್ರಾಹ್ಮಣಂ ಯಥಾ ॥ ಅಹೋ ದುಃಖಮಹೋ ಕೃಛ್ರಂ ಯತ್ರ
ವಾಚಃ ಕ್ಷಮೇ ತವ ॥ ೭೯ ॥ ದುಃಖಮೇವಂ ವಿಧಂ ಪ್ರಾಪ್ತಂ ಪುರಾಕೃತ

ಸುಳ್ಳುಗಳಾದ, ಸಾಂತ್ವೈಃ - ಸಮಾಧಾನ ವಚನಗಳಿಂದ, ಸಾಂತ್ವಯಂತೀಸ್ಮ ಸಮಾಧಾನಗೊಳಿಸುತ್ತ, ಬಹು ಭಾಷಸೇ-ಬಹಳ ಮಾತನಾಡುವೆ. ||೭೭|| ಲುಬ್ಧಃ-ಬೇಡನು, ಗೀತಶಬ್ದೇನ-ಗಾನಧ್ವನಿಯಿಂದ, ಸಂರುಧ್ಯ - ತಡೆಮಾಡಿದ, ಮೃಗಮಿವ - ಮೃಗವನ್ನಂತೆ, ಮಾಂ - ನನ್ನನ್ನು, ಅವಧೀಃ-ಕೊಲ್ಲುವೆ, ಆರ್ಯಾಃ - ದೊಡ್ಡವರು, ಪುತ್ರವಿಕ್ರಾಯಿಕಂ - ಸ್ತ್ರೀಸುಖಾರ್ಥವಾಗಿ ಪುತ್ರನನ್ನು ಮೌಲ್ಯಕ್ಕೆಕೊಟ್ಟ, ಮಾಂ - ನನ್ನನ್ನು, ರಥ್ಯಾಸು - ರಾಜವೀಥಿಗಳಲ್ಲಿ, ಸುರಾಪಂ - ಮದ್ಯಪಾಯಿಯಾದ, ಬ್ರಾಹ್ಮಣಂ ಯಥಾ - ಬ್ರಾಹ್ಮಣನಂತೆ, ಅನಾರ್ಯಇತಿ - ದುಷ್ಟನೆಂದು, ಧಿಕ್ಕರಿಷ್ಯಂತಿ - ತಿರಸ್ಕಾರಮಾಡುವರು, ಅಹೋ-ಆಶ್ಚರ್ಯವು, ಯತ್ - ಯಾವ ವರದಾನವಿಷಯದಲ್ಲಿ, ತವ-ನಿನ್ನ, ವಾಚಃ-ಮಾತುಗಳನ್ನು, ಕ್ಷಮೇ-ಸಹಿಸುತ್ತೇನೆಯೋ ||೭೮-೭೯|| ಏವಂವಿಧಂ - ಇಂತಹುದಾದ, ದುಃಖಂ - ವ್ಯಸನವು, ಪುರಾ-ಪೂರ್ವಜನ್ಮದಲ್ಲಿ, ಕೃತಂ - ಮಾಡಲ್ಪಟ್ಟ, ಅಶುಭಮಿವ - ಪಾಪದಂತೆ, ಪ್ರಾಪ್ತಂ - ಪ್ರಾಪ್ತವಾದ ಫಲವುಳ್ಳದಾಯಿತು, ಅಹೋ-ಅತ್ಯಾಶ್ಚರ್ಯವು, ಕೃಚ್ಛ್ರಂ-ಕಷ್ಟವು, ಹೇಪಾಪೇ-ಎಲೌ ಪಾಪಿಷ್ಠಳೇ, ತ್ವಂ - ನೀನು, ಪಾಪೇನ - ಪಾಪಿಷ್ಠನಾದ, ಮಯಾ - ನನ್ನಿಂದ, ಚಿರಂ - ಬಹುಕಾಲದಿಂದ, ಅಜ್ಞಾನಾತ್-ತಿಳಿವಳಿಕೆಯಿಲ್ಲದೆ, ಉಪಸಂಪನ್ನಾ - ಸಂಪಾದಿತವಾದ, ಉದ್ಬಂಧಿನೀ - ಉರಲುಹಾಕತಕ್ಕ, ರಜ್ಜುರ್ಯಥಾ - ಪಾಶದಂತೆ, ಅಭಿರಕ್ಷಿತಾ - ಸಂರಕ್ಷಣೆ ಮಾಡಲ್ಪಟ್ಟೆ, ತ್ವಯಾಸಾರ್ಧಂ - ನಿನ್ನೊಡಗೂಡಿ, ರಮಮಾಣಃ - ವಿಹರಿಸುತ್ತ, ಬಾಲಃ - ಶಿಶುವು, ರಹಸಿ - ಏಕಾಂತದಲ್ಲಿ, ಹಸ್ತೇನ - ಕೈಯಿಂದ, ಕೃಷ್ಣಸರ್ಪಮಿವ - ಕರೀಹಾವಿನಂತೆ, ತ್ವಾಂ - ನಿನ್ನನ್ನು, ಅಸ್ಪೃಶಂ - ಸ್ಪರ್ಶಮಾಡಿ

ಯೇ ಮೊದಲಾದವುಗಳಿಂದ ಪತಿವ್ರತೆಯೆಂದು ಇದುವರೆವಿಗೂ ತಿಳಿದಿದ್ದ ನಾನು ನಿನ್ನನ್ನೀಗ ಅಸತಿಯೆಂದೆಣಿಸುತ್ತೇನೆ. ಕೈಕೇಯಿ ! ನೀನು ವಿಷವನ್ನೊಳಗೊಂಡಿರುವ ರೂಪಸಂಪನ್ನೆಯಾಗಿಯೂ, ಬಹುವಾಗಿ ಕುಡಿದ ಮನುಷ್ಯನಂತಿರುವವಳಾಗಿಯೂ, ಆ ಸುಳ್ಳಾದ ಅನೇಕ ಸಾಂತ್ವವಚನಗಳಿಂದ ನನ್ನನ್ನು ಸಮಾಧಾನ ಗೊಳಿಸುತ್ತ ಮಾತನಾಡುವೆ. ಬೇಡರವನು ಗೀತವಾದಿತ್ರಾದಿಗಳ ಧ್ವನಿಯಿಂದ ಮೃಗವನ್ನು ಬಂಧಿಸಿ ಹೇಗೆ ಕೊಲ್ಲುವನೊ, ಹಾಗೆಯೇ ನೀನೂ ಸಹ ಅನೃತವಾದ ವಚನಗಳಿಂದ ನನ್ನನ್ನು ಬಂಧಿಸಿ ಕೊಲ್ಲುವೆ. ದೇವಿ ! ಪೂಜ್ಯರು ಹೆಂಗಸುಗೋಸುಗ ಮಗನನ್ನು ಮಾರಿದವನೆಂದೂ, ಅನಾರ್ಯನೆಂದೂ ಬಗೆದು, ಮದ್ಯವನ್ನು ಕುಡಿದು ರಾಜವೀಥಿಯಲ್ಲಿ ನಡೆವ ಬ್ರಾಹ್ಮಣನನಂತೆ ನನ್ನನ್ನು ಧಿಕ್ಕರಿಸುವರಲ್ಲ ! ಅಯ್ಯೋ ! ಬಹುಕಷ್ಟವು ! ನಿನ್ನ ಮಾತು ಸಹಿಸಲಸದಳವಾಗಿರುವುದು. ಈ ತೆರನಾದ ದುಃಖವು ಹಿಂದಿನ ಜನ್ಮದಲ್ಲಿ ಮಾಡಿದ ಅಮಂಗಳದಂತೆ ಈಗ ಪ್ರಾಪ್ತವಾಯಿತು. ಎಲೆಗೆ ! ದುಷ್ಟೆಯೆ! ನಾನು ನಿನ್ನನ್ನು ನನ್ನ ನಾಶಕ್ಕಾಗಿಯೇ ರಕ್ಷಣೆಮಾಡಿದೆನು. ಎಲೌ ! ಪಾಪಿಯಾದ

ಮಿವಾಶುಭಂ ॥ ಚಿರಂ ಖಲು ಮಯಾ ಪಾಪೇ ತ್ವಂ ಪಾಪೇನಾಭಿರಕ್ಷಿತಾ ॥೮೦॥ ಅಜ್ಞಾನಾ ದುಪಸಂಪನ್ನಾ ರಜ್ಜುರುದ್ಬಂಧಿನೀ ಯಥಾ ॥ ರಮಮಾಣ ಸ್ತ್ವಯಾ ಸಾರ್ಧಂ ಮೃತ್ಯುಂ ತ್ವಾಂ ನಾಭಿಲಕ್ಷಯೇ ॥ ೮೧ ॥ ಬಾಲೋ ರಹಸಿ ಹಸ್ತೇನ ಕೃಷ್ಣಸರ್ಪ ಮಿವಾಸ್ಪೃಶಂ ॥ ಮಯಾಹ್ಯಪಿ ತೃಕಃ ಪುತ್ರಸ್ಸಮಹಾತ್ಮಾ ದುರಾತ್ಮನಾ ॥ ೮೨ ॥ ತಂ ತು ಮಾಂ ಜೀವಲೋಕೋಽಯಂ ನೂನ ಮಾಕ್ರೋಷ್ಟು ಮರ್ಹತಿ ॥ ಬಾಲಿಶೋ ಬತಕಾಮಾತ್ಮಾ ರಾಜಾ ದಶರಥೋ ಭೃಶಂ ॥ ೮೩ ॥ ಯಸ್ತ್ರೀಕೃತೇ ಪ್ರಿಯಂ ಪುತ್ರಂ ವನಂ ಪ್ರಸ್ಥಾಪಯಿಷ್ಯತಿ ॥ ವ್ರತೈಶ್ಚ ಬ್ರಹ್ಮ

ದೆನು, ಮೃತ್ಯುಂ - ಮೃತ್ಯುಸ್ವರೂಪಳನ್ನಾಗಿ, ನಾಭಿಲಕ್ಷಯೇ - ಕಾಣದೆಹೋದೆನು, ಮಹಾತ್ಮಾ - ಮಹಾಮನಸ್ವಿಯಾದ, ಪುತ್ರಃ - ಮಗನಾದ, ಸಃ - ಆ ಶ್ರೀರಾಮನು, ದುರಾತ್ಮನಾ - ದುಷ್ಟಬುದ್ಧಿಯುಳ್ಳ, ಮಯಾ - ನನ್ನಿಂದ, ಅಪಿತೃಕಃ - ತಂದೆಯಿಂದ ರಹಿತನಾದವನು, ಆಸೀತ್ - ಆದನು. ॥ ೮೦-೮೨ ॥ ತಂಮಾಂತು - ಅಂತಹ ನನ್ನನ್ನು, ಅಯಂಜೀವಲೋಕಃ - ಈ ಮನುಷ್ಯ ಸಮುದಾಯವು, ಆಕ್ರೋಷ್ಟುಂ - ನಿಂದಿಸಲು, ಅರ್ಹತಿ - ಯೋಗ್ಯವಾಗಿರುವುದು, ಯಃ - ಯಾವ ದಶರಥನು, ಸ್ತ್ರೀಕೃತೇ - ಹೆಂಗಸಿನ ನಿಮಿತ್ತವಾಗಿ, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು, ವನಂ - ವನವನ್ನು ಕುರಿತು, ಪ್ರಸ್ಥಾಪಯಿಷ್ಯತಿ - ಕಳುಹಿಕೊಡುವನೋ, ಸಃ - ಅಂತಹ, ಬಾಲಿಶಃ - ಮೂರ್ಖನಾದ, ದಶರಥೋರಾಜ - ದಶರಥರಾಯನು, ಭೃಶಂ - ಬಹಳವಾಗಿ, ಕಾಮಾತ್ಮಾ - ಕಾಮುಕವಾದ ಮನವುಳ್ಳವನು, (ಗೋ) ಕಾಮಾತ್ಮಾ - ಕಾಮದಲ್ಲಿಯೇ ಸ್ವಭಾವವುಳ್ಳವನು, ವ್ರತೈಶ್ಚ - (ಗೋ + ಮ) ಕೃಚ್ಛ್ರಚಾಂದ್ರಾಯಣಾದಿ ವ್ರತಗಳಿಂದಲೂ, (ತಿ) - ಕಾಂಡವ್ರತಗಳಿಂದಲೂ, ಬ್ರಹ್ಮಚರ್ಯೈಶ್ಚ - ಬ್ರಹ್ಮಚರ್ಯಗಳಿಂದಲೂ, ಗುರುಭಿಶ್ಚ - ಗುರುಶುಶ್ರೂಷಾದಿಗಳಿಂದಲೂ, ಉಪಕರ್ಶಿತಃ - ಕೃಶೀಭಾವವನ್ನು ಹೊಂದಿಸಲ್ಪಟ್ಟ. ॥೮೩ ೮೪॥ ಭೋಗಕಾಲೇ - ಸ್ತ್ರೀ ಭೋಗ ಕಾಲದಲ್ಲಿ, ಮಹತ್ - ದೊಡ್ಡದಾದ, ಕೃಚ್ಛ್ರಂ - ಕಷ್ಟವನ್ನು, ಪುನರೇವ - ಮತ್ತು, ಪ್ರಪತ್ಸ್ಯತೇ - ಹೊಂದುವನು, ಪುತ್ರಃ - ಮಗನಾದ, ಸಃ - ಆ ಶ್ರೀರಾಮನು, ದ್ವಿತೀಯಂ ವಚನಂ - ಎರಡನೆಯ ಮಾತನ್ನು, ಮಾಂಪ್ರತಿ - ನನ್ನನ್ನು ಕುರಿತು, ಭಾಷಿತುಂ - ಮಾತನಾಡುವದಕ್ಕೆ, ನಾಲಂ - ಸಮರ್ಥನಲ್ಲವು. ॥೮೫॥ ಸಃ - ಆ ಶ್ರೀರಾಮನು, ವನಂ - ವನವನ್ನು ಕುರಿತು,

---

ನಿನ್ನನ್ನು ಪಾಪಿಷ್ಠನಾದ ನಾನು ಅಜ್ಞಾನದಿಂದ ಒದಗಿ ಬಂದ ಉರುಲು ಹಾಕಿಕೊಳ್ಳುವ ಹಗ್ಗವೆಂಬುವನ್ನರಿಯದೆ, ರಕ್ಷಣೆಮಾಡುತ್ತ, ನಿನ್ನೊಡನೆ ಕ್ರೀಡಿಸುತ್ತ, ನೀನೇ ನನಗೆ ಮೃತ್ಯು ಸ್ವರೂಪಳೆಂಬುದನ್ನು ತಿಳಿಯದೆ ಹೋದೆನು. ಬಾಲಕನು ರಹಸ್ಯವಾಗಿ ಕೃಷ್ಣಸರ್ಪವನ್ನು ಮುಟ್ಟುವಂತೆ ನಿನ್ನನ್ನು ಸ್ಪರ್ಶಮಾಡಿದೆನು. ॥ ೭೬-೮೨ ॥ ದುಷ್ಟಾತ್ಮನಾದ ನನ್ನಿಂದ ಮಹಾತ್ಮನಾದ ಶ್ರೀರಾಮನು ತಂದೆಯಿಲ್ಲದವನಾಗಿ ಮಾಡಲ್ಪಟ್ಟನು. ಇಂತಹ ನನ್ನನ್ನು ಇಡೀ ಮನುಷ್ಯಲೋಕವೆಲ್ಲ, "ಅಯ್ಯೋ ! ಈ ಇಕ್ಷ್ವಾಕುಕುಲ ಸಂಭೂತನಾದ ದಶರಥನು ಮೂಢನು. ಇವನು ಸ್ತ್ರೀನಿಮಿತ್ತವಾಗಿ ಪ್ರಿಯ ಪುತ್ರನಾದ ಶ್ರೀರಾಮನನ್ನು ವನಕ್ಕೆ ಕಳುಹುತ್ತಾನೆ" ಎಂದು ಅಲ್ಲಿಗಳೆಯಲು ಯೋಗ್ಯವಾಗಿರುವುದು. ॥ ೮೩-೮೪ ॥ ಎಲಾ

ಚರ್ಯೈಶ್ಚ ಗುರುಭಿಶ್ಚೋಪಕರ್ಶಿತಃ ‖ ೬೪ ‖ ಭೋಗ ಕಾಲೇ ಮಹ ತ್ಕೃಛ್ರಂ ಪುನರೇವ ಪ್ರಪತ್ಸ್ಯತೇ ‖ ನಾಲಂ ದ್ವಿತೀಯಂ ವಚನಂ ಪುತ್ರೋಮಾಂ ಪ್ರತಿಭಾಷಿತುಂ ‖ ೬೫ ‖ ಸ ವನಂ ಪ್ರವ್ರಜೇತ್ಯುಕ್ತೋ ಬಾಢಮಿತ್ಯೇವ ವಕ್ಷ್ಯತಿ ‖ ಯದಿ ಮೇ ರಾಘವಃ ಕುರ್ಯಾದ್ವನಂ ಗಚ್ಛೇತಿ ಚೋದಿತಃ ‖ ೬೬ ‖ ಪ್ರತಿ ಕೂಲಂ ಪ್ರಿಯಂ ಮೇ ಸ್ಯಾನ್ನತು ವತ್ಸಃ ಕರಿಷ್ಯತಿ ‖ ಶುದ್ಧಭಾವೋಹಿ ಭಾವಂ ಮೇ ನತು ಜ್ಞಾಸ್ಯತಿ ರಾಘವಃ ‖ ೬೭ ‖ ಸ ವನಂ ಪ್ರವ್ರಜೇತ್ಯುಕ್ತೋ ಬಾಢ

ಪ್ರವ್ರಜೇತ್ಯುಕ್ತಃ - ಹೊರಟುಹೋಗೆಂದು ಹೇಳಲ್ಪಟ್ಟವನಾದರೆ, ಬಾಢಮಿತ್ಯೇವ - ಹಾಗೆಯೇ ಅಂಗೀಕರಿಸಿರುವೆನೆಂದು, ವಕ್ಷ್ಯತಿ - ಹೇಳಿಯಾನು, ರಾಘವಃ - ಶ್ರೀರಾಮನು, ಮೇ - ನನ್ನಿಂದ, ವನಂಗಚ್ಛೇತಿ - ವನವನ್ನು ಕುರಿತು ಹೋಗೆಂದು, ಚೋದಿತಃ - ಪ್ರೇರಿತನಾಗಿ. ‖ ೬೬ ‖ ಪ್ರತಿ ಕೂಲಂ - ಪ್ರತಿಕೂಲ ಭಾವವನ್ನು, ಕುರ್ಯಾದ್ಯದಿ - ಮಾಡಿದವನಾದರೆ, ತತ್ - ಅದು, ಮೇ - ನನಗೆ, ಪ್ರಿಯಂ - ಇಷ್ಟವು, ಸ್ಯಾತ್ - ಆದೀತು, ವತ್ಸಸ್ತು - ಹುಡುಗನಾದ ಶ್ರೀರಾಮನಾದರೆ, ನಕರಿಷ್ಯತಿ - ಪ್ರಾತಿಕೂಲ್ಯವನ್ನು ಆಚರಿಸುವನಲ್ಲವು, ಶುದ್ಧ ಭಾವಃ - ನಿರ್ಮಲವಾದ ಅಭಿಪ್ರಾಯ ವುಳ್ಳ, ರಾಘವಃ - ಶ್ರೀರಾಮನು, ಮೇ - ನನ್ನ, ಭಾವಂ - ಅಭಿಪ್ರಾಯವನ್ನು, ನಜ್ಞಾಸ್ಯತಿ - ತಿಳಿ ಯುವನಲ್ಲ. ‖ ೬೭ ‖ ಸಃ - ಆ ಶ್ರೀರಾಮನು, ವನಂ - ವನವನ್ನು ಕುರಿತು, ಪ್ರವ್ರಜೇತ್ಯುಕ್ತಃ - ಪ್ರಯಾಣ ಮಾಡೆಂದು ಹೇಳಲ್ಪಟ್ಟವನಾಗಿ, ಬಾಢಮಿತ್ಯೇವ - ಅಂಗೀಕರಿಸಿರುವೆನೆಂದು, ವಕ್ಷ್ಯತಿ - ಹೇಳುವನು, ರಾಘವೇ - ಶ್ರೀರಾಮನು, ವನಂ - ವನವನ್ನು, ಪ್ರಾಪ್ತೇ - ಹೊಂದಲು, ಸರ್ವ ಲೋಕಸ್ಯ - ಎಲ್ಲ ಜನರ, ಧಿಕ್ಕೃತಂ - ಧಿಕ್ಕಾರವನ್ನು, ಅಕ್ಷಮಣೀಯಂ - ಸಹಿಸಲಶಕ್ತ ನಾದ, ಮಾಂ - ನನ್ನನ್ನು, ಮೃತ್ಯುಃ - ಮೃತ್ಯುವು, ಯಮಕ್ಷಯಂ - ಯಮಾಲಯವನ್ನು, ನಯಿ ಷ್ಯತಿ - ಹೊಂದಿಸುತ್ತದೆ. ‖ ೬೮ ‖ ಮಯಿ - ನಾನು, ಮೃತೇಸತಿ - ಮರಣಾವಸ್ಥೆಯನ್ನು ಹೊಂ ದಲು, ಮನುಜಪುಂಗವೇ - ನರಶ್ರೇಷ್ಠನಾದ, ರಾಮೇ - ಶ್ರೀರಾಮನು, ವನಂ - ವನವನ್ನು, ಗತೇ-

---

ದುಷ್ಟಳೆ ! ನಾನು ಸಂತಾನಾರ್ಥವಾಗಿ ಅನೇಕ ಕೃಛ್ರ, ಚಾಂದ್ರಾಯಣಾದಿ ವ್ರತೋಪವಾಸಾದಿ ನಿಯಮಗಳಿಂದಲೂ, ಬ್ರಹ್ಮಚರ್ಯಾದಿಗಳಿಂದಲೂ, ಗುರು ಶುಶ್ರೂಷಣೆಯೇ ಮೊದಲಾದ ಕೃತ್ಯಗಳಿಂದಲೂ ಕೃಶವನ್ನೈದಿದೆನು ; ಅದೇ ದುಃಖವು ಮರಳಿ ಪ್ರಾಪ್ತವಾದುದಾಯಿತು. ನಾನು ಶುದ್ಧಾಂತಃಕರಣನಾದ ಶ್ರೀರಾಮನನ್ನು ಅರಣ್ಯಕ್ಕೆ ತೆರಳೆಂದು ಹೇಳಿದರೆ, ಆತನು ಪ್ರತಿ ನುಡಿಯನ್ನಾಡದೆ ಹಸಾದವೆಂದಂಗೀಕರಿಸುತ್ತಾನೆಯೆಂಬುದರಲ್ಲಿ ಸಂದೇಹವಿಲ್ಲವು. ಆತನು ನನ್ನಮಾತಿಗೆ ಬದಲು ನುಡಿದರೆ ನನಗೇನೋ ಒಳ್ಳೆಯದೇ ಆಯಿತು. ಆದರೆ ಆ ನನ್ನ ಮುದ್ದುಕುವರನು ಹಾಗೆ ಹೇಳುವವನಲ್ಲ. ನಿರ್ಮಲಚಿತ್ತನಾದ ಶ್ರೀರಾಮನು ನನ್ನ ಶುದ್ಧವಾದ ಭಾವವನ್ನರಿತವನಾದುದರಿಂದ ಏನೊಂದೂ ನುಡಿಯದೆ ವನಕ್ಕೆ ತೆರಳುತ್ತಾನೆ. ಆತನು ವನಕ್ಕೆಹೊರಟರೆ, ಜನರೆಲ್ಲರೂ ಮಾಡುವ ತಿರಸ್ಕಾರವನ್ನೂ, ಪುತ್ರವಿಯೋಗವನ್ನೂ, ತಾಳಲಾರದ ನನ್ನನ್ನು ಮೃತ್ಯುವು ಯಮಾಲಯವನ್ನೈದಿಸುವುದು. ಎಲೌ ಕೈಕೇಯಿ ! ನರಶ್ರೇಷ್ಠನಾದ ಶ್ರೀರಾಮನು ವನಕ್ಕೆಹೋಗಲು, ನಾನು ಮೃತಿಯೊಂದಲು, ನನ್ನ ಸಂಬಂಧಿ

ಮಿತ್ಯೇವ ವಕ್ಷ್ಯತಿ ॥ ರಾಘವೇಹಿ ವನಂ ಪ್ರಾಪ್ತೇ ಸರ್ವಲೋಕಸ್ಯ ಧಿಕ್ಕೃತಂ ॥ ೮೮ ॥ ಮೃತ್ಯುರಕ್ಷಮಣೀಯಂ ಮಾಂ ನಯಿಷ್ಯತಿ ಯಮಕ್ಷಯಂ ॥ ಮೃತೇ ಮಯಿ ಗತೇ ರಾಮೇ ವನಂ ಮನುಜ ಪುಂಗವೇ ॥ ೮೯ ॥ ಇಷ್ಟೇ ಮಮ ಜನೇ ಶೇಷೇ ಕಿಂಪಾಪಂ ಪ್ರತಿಪತ್ಸ್ಯಸೇ ॥ ಕೌಸಲ್ಯಾಂ ಮಾಂಚ ರಾಮಂಚ ಪುತ್ರೌಚ ಯದಿ ಹಾಸ್ಯಸಿ ॥ ೯೦ ॥ ದುಃಖಾನ್ಯಸಹತೀ ದೇವೀ ಮಾಮೇವಾ ನುಮರಿಷ್ಯತಿ ॥ ಕೌಸಲ್ಯಾಂಚ ಸುಮಿತ್ರಾಂಚ ಮಾಂಚ ಪುತ್ರೈಸ್ತ್ರಿಭಿ ಸ್ಸಹ ॥ ೯೧ ॥ ಪ್ರಕ್ಷಿಪ್ಯ ನರಕೇ ಸಾ ತ್ವಂ ಕೈಕೇಯಿ ಸುಖಿತಾ ಭವ ॥ ಮಯಾ ರಾಮೇಣಚ ತ್ಯಕ್ತಂ ಶಾಶ್ವತಂ ಸತ್ಕೃತಂ ಗುಣೈಃ ॥ ೯೨ ॥ ಇಕ್ಷ್ವಾಕು ಕುಲ

ಹೊಂದಿದವನಾಗಲು, ಶೇಷೇ - ಉಳಿದ, ಮಮ - ನನಗೆ, ಇಷ್ಟೇ - ಇಷ್ಟರಾದ, ಜನೇ - ಜನರ ವಿಷಯದಲ್ಲಿ, ಕಿಂಪಾಪಂ - ಯಾವ ಪಾಪವನ್ನು, ಪ್ರತಿಪತ್ಸ್ಯಸೇ - ಹೊಂದುವೆ. ॥ ೮೯ ॥ ಕೌಸಲ್ಯಾಂ - ಕೌಸಲ್ಯಾದೇವಿಯನ್ನೂ, ಮಾಂಚ - ನನ್ನನ್ನೂ, ರಾಮಂ - ರಾಮನನ್ನೂ, ಪುತ್ರೌಚ- ಸುಮಿತ್ರಾ ಪುತ್ರರಾದ ಲಕ್ಷ್ಮಣ ಶತ್ರುಘ್ನರನ್ನೂ, ಹಾಸ್ಯಸಿಯದಿ - ಬಿಡುವಳೇ ಆದರೆ, ದುಃಖಾನಿ - ಮಕ್ಕಳ ವಿಷಯವಾದ ವ್ಯಸನಗಳನ್ನು, ಅಸಹತೀ - ಸಹಿಸದೆ, ದೇವೀ - ಸುಮಿತ್ರಾದೇವಿಯು, ಮಾಮೇವ - ನನ್ನನ್ನೇ, ಅನುಮರಿಷ್ಯತಿ - ಅನುಸರಿಸಿ ಮರಣವನ್ನು ಹೊಂದುವಳು. ॥ ೯೦ ॥ ಹೇ ಕೈಕೇಯಿ - ಎಲೌ ಕೈಕೇಯಿಯೆ, ಕೌಸಲ್ಯಾಂಚ-ಕೌಸಲ್ಯಾದೇವಿಯನ್ನೂ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ಮಾಂಚ - ನನ್ನನ್ನೂ, ತ್ರಿಭಿಃಪುತ್ರೈಸ್ಸಹ - ಮೂರು ಮಂದಿ ಮಕ್ಕಳಾದ ಶ್ರೀ ರಾಮ, ಲಕ್ಷ್ಮಣ, ಶತ್ರುಘ್ನರೊಡಗೂಡಿ, ನರಕೇ - ನರಕದಲ್ಲಿ, ಪ್ರಕ್ಷಿಪ್ಯ - ಹಾಕಿ, ಸಾತ್ವಂ-ಅಂತಹ ನೀನು, ಸುಖಿತಾಭವ - ಸುಖವುಳ್ಳವಳಾಗಿರು. ॥ ೯೧ ॥ ಮಯಾ - ನನ್ನಿಂದಲೂ, ರಾಮೇಣ - ಶ್ರೀರಾಮನಿಂದಲೂ, ತ್ಯಕ್ತಂ - ಬಿಡಲ್ಪಟ್ಟ, ಗುಣೈಃ - ಗುಣಗಳಿಂದ, ಸತ್ಕೃತಂ - ಪೂಜಿಸಲ್ಪಟ್ಟ, ಅಕ್ಷೋಭ್ಯಂ - ಕ್ಷೋಭೆಗೊಳಿಸಲಸದಳವಾದ, ಇಕ್ಷ್ವಾಕುಕುಲಂ - ಇಕ್ಷ್ವಾಕು ಮಹಾರಾಯನ ವಂಶವನ್ನು, ಶಾಶ್ವತಂ - ಸ್ಥಿರವಾಗಿ, ಆಕುಲಂ - ಕ್ಷೋಭಿಸಲ್ಪಟ್ಟಂತೆ, ಪಾಲಯಿಷ್ಯಸಿ - ಪಾಲಿಸುವೆ. ॥ ೯೨ ॥ ಭರತಸ್ಯ ಭರತನಿಗೆ, ಏತತ್ - ಈ, ರಾಮಪ್ರವ್ರಾಜನಂ - ಶ್ರೀರಾಮನ ವನ ಪ್ರಯಾಣವು, ಪ್ರಿಯಂಭವೇಚ್ಛೇತ್ - ಇಷ್ಟವಾದುದೇ ಆದರೆ, ಗತಾಯುಷಃ - ಆಯುಃಪೂರ್ತಿ

ಗಳಾದ ಕೌಸಲ್ಯೆಯೇ ಮೊದಲಾದವರಲ್ಲಿ ಯಾವ ಅನ್ಯಾಯವನ್ನು ಮಾಡಬೇಕೆಂದು ಯೋಚಿಸಿರುವೆ? ಸುಮಿತ್ರಾದೇವಿಯು ಕೌಸಲ್ಯೆಯನ್ನೂ, ರಾಮನನ್ನೂ, ಮಕ್ಕಳಾದ ಲಕ್ಷ್ಮಣ ಶತ್ರುಘ್ನರನ್ನೂ ಅಗಲಿದವಳಾದರೆ, ಯಮಾಲಯವನ್ನುಹೊಗುವ ನನ್ನನ್ನೇ ಅನುಸರಿಸುತ್ತಾಳೆ.॥೮೫-೯೦॥ ಎಲೌ ಕೇಕಯರಾಜ ಕುಮಾರಿಯೆ! ಹೀಗೆ ಕೌಸಲ್ಯೆಯನ್ನೂ, ಸುಮಿತ್ರೆಯನ್ನೂ, ನನ್ನನ್ನೂ, ರಾಮ, ಲಕ್ಷ್ಮಣ, ಶತ್ರುಘ್ನರನ್ನೂ ಘೋರನರಕದಲ್ಲಿ ಕೆಡುಹಿ ನೀನು ಸುಖದಿಂದಿರು. ನನ್ನಿಂದಲೂ, ಶ್ರೀರಾಮನಿಂದಲೂ ಸತ್ಕೃತವಾಗುವುದಾಗಿಯೂ, ಸದ್ಗುಣಭೂಷಿತವಾಗಿಯೂ, ಕ್ಷೋಭೆಗೊಳಿಸಲಸದಳವಾಗಿಯೂ ಇರುವ ಈ ಇಕ್ಷ್ವಾಕು ಕುಲವನ್ನು ನೀನು ಆಕುಲವಾಗುವನ್ನಾಗಿ ಪರಿಪಾಲಿಸಿಕೊಂಡಿರು. ಶ್ರೀರಾಮನ ವನವಾಸವು ನಿನ್ನ ಕುವರನಾದ ಭರತನಿಗೆ

ಮುಕ್ಷೋಭ್ಯಮಾಕುಲಂ ಪಾಲಯಿಷ್ಯಸಿ ॥ ಪ್ರಿಯಂ ಚೇದ್ಭರತಸ್ಯೈತ ದ್ರಾಮ ಪ್ರವ್ರಾಜನಂ ಭವೇತ್ ॥ ೯೩ ॥ ಮಾಸ್ಮ ಮೇ ಭರತಃ ಕಾರ್ಷೀತ್ಪ್ರೇತ ಕೃತ್ಯಂ ಗತಾಯುಷಃ ॥ ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಭವ ಕೈಕಯಿ ॥ ೯೪ ॥ ಮೃತೇ ಮಯಿ ಗತೇ ರಾಮೇ ವನಂ ಪುರುಷ ಪುಂಗವೇ ॥ ಸೇದಾನೀಂ ವಿಧವಾ ರಾಜ್ಯಂ ಸಪುತ್ರಾ ಕಾರಯಿಷ್ಯಸಿ ॥ ೯೫ ॥ ತ್ವಂ ರಾಜ ಪುತ್ರೀ ವಾದೇನ ನ್ಯವಸೋ ಮಮ ವೇಶ್ಮನಿ ॥ ಅಕೀರ್ತಿಶ್ಚಾತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ॥ ೯೬ ॥ ಸರ್ವಭೂತೇಷು ಚಾವಜ್ಞಾ ಯಥಾ ಪಾಪಕೃತಸ್ತಥಾ ॥ ಕಥಂ ರಥೈರ್ವಿಭುರ್ಯಾತ್ವಾ ಗಜಾಶ್ವೈಶ್ಚ ಮುಹು

ಯನ್ನು ಹೊಂದಿದ, ಮೇ - ನನಗೆ, ಭರತಃ - ಭರತನು, ಪ್ರೇತಕೃತ್ಯಂ - ಉತ್ತರ ಕ್ರಿಯೆಯನ್ನು, ಮಾಕಾರ್ಷೀತ್ - ಮಾಡದಿರಲಿ. ॥ ೯೩ ॥ ಹೇ ಅನಾರ್ಯೇ - ಎಲೌ ನೀಚಳೆ, ಮಮ - ನನಗೆ, ಅಮಿತ್ರೇ - ಹಗೆಯುಳ್ಳೇ, ಹೇ ಕೈಕೇಯಿ - ಎಲೌ ಕೇಕಯರಾಯನ ಮಗಳೇ, ತ್ವಂ - ನೀನು, ಸಕಾಮಾಭವ - ಈಡೇರಿದ ಸಂಕಲ್ಪವುಳ್ಳವಳಾಗು. ॥ ೯೪ ॥ ಮಯಿ - ನಾನು, ಮೃತೇಸತಿ - ಮರಣವನ್ನು ಹೊಂದಲು, ಪುರುಷಪುಂಗವೇ - ಪುರುಷ ಶ್ರೇಷ್ಠನಾದ, ರಾಮೇ - ಶ್ರೀರಾಮನು, ವನಂ - ಅರಣ್ಯವನ್ನು, ಗತೇಸತಿ - ಹೊಂದಲು, ಸಾತ್ವಂ - ಅಂತಹ ನೀನು, ಇದಾನೀಂ - ಈಗ, ವಿಧವಾ - ಗಂಡನಿಂದ ಹೀನಳಾಗಿ, ಸಪುತ್ರಾ - ಮಗನೊಡಗೂಡಿ, ರಾಜ್ಯಂ - ರಾಜ್ಯಭಾರವನ್ನು, ಕಾರಯಿಷ್ಯಸಿ- ಮಾಡಿಸುವೆ. ॥ ೯೫ ॥ ತ್ವಂ - ನೀನು, ರಾಜಪುತ್ರೀವಾದೇನ - ರಾಜಪುತ್ರಿಯೆಂಬ ಪ್ರವಾದದಿಂದ, ಮಮ - ನನ್ನ, ವೇಶ್ಮನಿ - ಮನೆಯಲ್ಲಿ, ನ್ಯವಸಃ - ಇರುವೆ, ಮೇ - ನನಗೆ, ಲೋಕೇ - ಲೋಕದಲ್ಲಿ, ಅತುಲಾ - ಸಮಾನವಿಲ್ಲದಿರುವ, ಅಕೀರ್ತಿಶ್ಚ - ಅಪಕೀರ್ತಿಯೂ, ಪರಿಭವಶ್ಚ - ತಿರಸ್ಕಾರವೂ, ಧ್ರುವಃ - ಶಾಶ್ವತವು, ಸರ್ವಭೂತೇಷು - ಜನರೆಲ್ಲರಲ್ಲಿಯೂ, ಪಾಪಕೃತಃ - ಪಾಪ ಮಾಡಿದವನಿಗೆ, ಯಥಾ - ಹೇಗೆ, (ಅವಜ್ಞಾ - ಅವಮಾನವೋ,) ತಥಾ - ಹಾಗೆಯೇ, ಮೇ - ನನಗೆ, ಅವಜ್ಞಾ - ಅವಮಾನವು. ॥ ೯೬ ॥ ವಿಭುಃ - ಸಮರ್ಥನಾದ, ರಾಮಃ - ಶ್ರೀರಾಮನು, ಮೇ - ನನಗೆ, ವತ್ಸಃ - ಕುವರನಾಗಿ, ರಥೈಃ - ರಥಗಳಿಂದಲೂ, ಗಜಾಶ್ವೈಶ್ಚ - ಆನೆಗಳಿಂದಲೂ ಕುದುರೆ

ಇಷ್ಟವಾದುದಾದರೆ, ಅವನು ಸ್ವರ್ಗಸ್ಥನಾದ ನನಗೆ ಉತ್ತರಕ್ರಿಯಾದಿಗಳನ್ನು ಮಾಡದಿರಲಿ. ಅಯ್ಯೋ ! ದುಶ್ಚರಿತ್ರೆಯುಳ್ಳವಳೆ ! ಎನಗೆ ಶತ್ರುವಾದವಳೆ !! ನೀಚಳೆ; ನಾನು ಮೃತನಾಗಲು, ಶ್ರೀರಾಮನು ಅರಣ್ಯವನ್ನು ಸೇರಲು, ಈಡೇರಿದ ಸಂಕಲ್ಪವುಳ್ಳವಳೂ ವಿಧವೆಯೂ ಆಗುವ ನೀನು ನಿನ್ನ ಕುವರನಾದ ಆ ಭರತನೊಡಗೂಡಿ ರಾಜ್ಯವನ್ನಾಳಿಕೊಂಡು ಸುಖವಾಗಿರು. ॥ ೯೫ ॥ ಈ ಲೋಕದಲ್ಲಿ ನಿನಗೆ ಬಹಳವಾದ ಅಪಕೀರ್ತಿಯೂ, ತಿರಸ್ಕಾರವೂ ಉಂಟಾಗುತ್ತವೆ ; ನನಗೂ ಸಹ ನಿನ್ನಿಂದ ಸಮಸ್ತವಾದ ದೊರೆಗಳಲ್ಲಿ ಅವಮನ್ನಣೆಯುಂಟಾಗುವುದು ! ರಥ, ಗಜ, ತುರುಗಾದಿಗಳನ್ನೇರಿ ಸಂಚರಿಸುವ ಶ್ರೀರಾಮನು ಅರಣ್ಯದಲ್ಲಿ ಕಾಲ್ನಡೆಯಿಂದಲೇ ಸಂಚರಿಸುವಂತಾಯಿತಲ್ಲ ! ಸುಖವಾದ ಭಕ್ಷ್ಯ ಭೋಜ್ಯಾದಿಗಳನ್ನುಣುತಿದ್ದ ಶ್ರೀರಾಮಚಂದ್ರನಿಗೆ ಪರಿಚಾರಕ ವೃಂದದವರು ನಾನು

ಮುರ್ಹುಹುಃ ‖ ೯೭ ‖ ಪದ್ಭ್ಯಾಂ ರಾಮೋ ಮಹಾರಣ್ಯೇ ವತ್ಸೋ ಮೇ ವಿಚರಿ
ಷ್ಯತಿ ‖ ಯಸ್ಯತ್ವಾಹಾರಸಮಯೇ ಸೂದಾಃ ಕುಂಡಲಧಾರಿಣಃ ‖ ೯೮ ‖
ಅಹಂ ಪೂರ್ವಾಃ ಪಚಂತಿಸ್ಮ ಪ್ರಶಸ್ತಂ ಪಾನಭೋಜನಂ ‖ ಸ ಕಥಂನು ಕಷಾ
ಯಾಣಿ ತಿಕ್ತಾನಿ ಕಟುಕಾನಿಚ ‖ ೯೯ ‖ ಭಕ್ಷಯರ್ನ್ವನ್ಯಮಾಹಾರಂ ಸುತೋ
ಮೇ ವರ್ತಯಿಷ್ಯತಿ ‖ ಮಹಾರ್ಹವಸ್ತ್ರ ಸಂವೀತೋ ಭೂತ್ವಾ ಚಿರಸುಖೋ
ಷಿತಃ ‖ ೧೦೦ ‖ ಕಾಷಾಯ ಪರಿಧಾನಸ್ತು ಕಥಂ ಭೂಮೌ ನಿವತ್ಸ್ಯತಿ ‖

ಗಳಿಂದಲೂ, ಮುಹುರ್ಮುಹುಃ - ಬಾರಿಬಾರಿಗೂ, ಯಾತ್ವಾ - ಪ್ರಯಾಣ ಮಾಡಿ, ಮಹಾರಣ್ಯೇ - ದೊಡ್ಡ ಕಾಡಿನಲ್ಲಿ, ಪದ್ಭ್ಯಾಂ - ಪಾದಗಳಿಂದ, ಕಥಂಚರಿಷ್ಯತಿ - ಹೇಗೆ ಸಂಚರಿಸುವನು. ‖ ೯೭ ‖ ಯಸ್ಯ - ಯಾವ ಶ್ರೀರಾಮನ, ಆಹಾರ ಸಮಯೇ - ಭೋಜನ ಕಾಲದಲ್ಲಿ, ಕುಂಡಲಧಾರಿಣಃ - ಕರ್ಣಕುಂಡಲಗಳನ್ನು ಧರಿಸಿದ, ಸೂದಾಃ-ಅಡಿಗೆಯವರು, ಅಹಂಪೂರ್ವಾಃ - ನಾನು ಮುಂದು ತಾನು ಮುಂದೆಂದು, ಪ್ರಶಸ್ತಂ - ಶ್ರೇಷ್ಠವಾದ, ಪಾನಭೋಜನಂ - ಕುಡಿಯುವದಕ್ಕೆ ಯೋಗ್ಯವಾದ ವಸ್ತುಗಳನ್ನೂ, ಪಚಂತಿಸ್ಮ - ಪಕ್ವ ಮಾಡುವರೋ, ಸಃ - ಅಂತಹ, ಮೇ ಸುತಃ - ಅಂತಹ ನನ್ನ ಕುವರನಾದ ಶ್ರೀರಾಮನು, ಕಷಾಯಾಣಿ - ಕಾರವಾಗಿರುವ, ತಿಕ್ತಾನಿ - ಒಗರಾಗಿರುವ, ಕಟುಕಾನಿಚ - ಕಹಿಯಾಗಿಯೂ ಇರುವ ವಸ್ತುಗಳನ್ನು, ವನ್ಯಂ - ವನದಲ್ಲಿ ಹುಟ್ಟಿದ, ಆಹಾರಂ - ಭೋಜನವನ್ನು, ಭಕ್ಷಯರ್ನ್ - ತಿನ್ನುತ್ತ, ಕಥಂ - ಹೇಗೆ, ವರ್ತಯಿಷ್ಯತಿ - ಜೀವಿಸುವನು. ‖ ೯೮-೯೯ ‖ ಮಹಾರ್ಹವಸ್ತ್ರ ಸಂವೀತಃ, ಮಹಾರ್ಹ - ಅಮೂಲ್ಯವಾದ, ವಸ್ತ್ರ - ವಸ್ತ್ರಗಳಿಂದ, ಸಂವೀತಃ - ಸುತ್ತಿಕೊಳ್ಳಲ್ಪಟ್ಟವನು, ಚಿರಸುಖೋಷಿತಃ - ಬಹು ಕಾಲದಿಂದ ಸುಖವಾಗಿದ್ದವನು, ಭೂತ್ವಾ-ಆಗಿ, ಕಾಷಾಯಪರಿಧಾನಸ್ತು - ಕಾವಿ ವಸ್ತ್ರವನ್ನುಟ್ಟು, ಭೂಮೌ - ನೆಲದಲ್ಲಿ, ಕಥಂ - ಹೇಗೆ, ನಿವತ್ಸ್ಯತಿ - ಇರುವನು. ‖ ೧೦೦ ‖ ರಾಮಸ್ಯ - ಶ್ರೀರಾಮನಿಗೆ, ಅರಣ್ಯಗಮನಂ - ಕಾಡನ್ನು ಕುರಿತು ತೆರಳುವಿಕೆಯೂ, ಭರತಸ್ಯ - ಭರತನಿಗೆ, ಅಭಿಷೇಕಂ - ಅಭಿಷೇಕವು ಎಂಬ, ಏವಂವಿಧಂ- ಇಂತಹ ಬಗೆಯಾದ, ದಾರುಣಂ - ಕ್ರೂರವಾದ, ಅಚಿಂತಿತಂ - ಆಲೋಚಿಸಲ್ಪಡದಿರುವ, ಏತದ್ವಾಕ್ಯಂ - ಈ ಮಾತು, ಕಸ್ಯ - ಯಾರದು. ‖ ೧೦೧ ‖ ಯೋಷಿತೋನಾಮ - ಸ್ತ್ರೀಯರನ್ನು, ಧಿಕ್-ನಿಂದಿಸು, ಸದಾ - ನಿರಂತರವೂ, ಶಠಾಃ-ಮೂರ್ಖರು, ಸ್ವಾರ್ಥಪರಾಃ - ಸ್ವಕಾರ್ಯಧುರಂಧರರು,

ಮುಂದು ತಾನು ಮುಂದೆಂದು ಕೈ ಜೋಡಿಸಿ ನಿಂದಿರುತ್ತಿದ್ದರು. ಇಂತಹ ರಘುರಾಮನು ಅರಣ್ಯದಲ್ಲಿ ಗೆಡ್ಡೆ ಗೆಣಸುಗಳನ್ನುಣುವನಲ್ಲ! ಶ್ರೇಷ್ಠವಾದ ವಸ್ತ್ರಗಳನ್ನುಟ್ಟು ಬಹುಕಾಲದಿಂದ ಸುಖವಾಗಿದ್ದ ಶ್ರೀರಾಮನು ಇದೀಗ ಕಾಷಾಯಾಂಬರಗಳನ್ನೂ, ನಾರುಮಡಿಗಳನ್ನೂ ಹೇಗೆತಾನೆ ಧರಿಸುತ್ತಾನೆ! ಅಕಟಕಟ! ಮನದಲ್ಲಿಯೂ ನೆನೆಯಲಸದಳವಾದ ಘೋರವಾದ ದುಃಖವು ಪ್ರಾಪ್ತವಾಯಿತು! ಶ್ರೀರಾಮನ ವನವಾಸವನ್ನೂ ಭರತನಿಗೆ ರಾಜ್ಯಾಭಿಷೇಕವನ್ನೂ ಬಯಸಿದ ನಿನ್ನನ್ನು ಏಕೆ ನಿಂದಿಸಬೇಕು? ಛೀ!! ಎಂತಹ ದುಷ್ಕರ್ಮದ ಫಲವೋ, ಏನೋ? ಹೆಂಗಸರೆಲ್ಲರೂ ದುಷ್ಟರು; ಲೋಕದಲ್ಲಿ ಈ ಸ್ತ್ರೀಯರು ತಮ್ಮ ಹಿತಕ್ಕಾಗಿಯೇ, ಪರರಿಗೆ ಹಿತವನ್ನು ಕೋರುವರಲ್ಲದೆ, ಪರರಿಗೆ ಸ್ವಾರ್ಥವಿಲ್ಲದೆ ಹಿತವನ್ನು

ಕಸ್ಯೈತದ್ದಾರುಣಂ ವಾಕ್ಯ ಮೇವಂ ವಿಧಮಚಿಂತಿತಂ ॥ ೧೦೧ ॥ ರಾಮಸ್ಯಾ
ರಣ್ಯಗಮನಂ ಭರತಸ್ಯಾಭಿಷೇಚನಂ ॥ ಧಿಗಸ್ತು ಯೋಷಿತೋ ನಾಮ ಶಠಾ
ಸ್ಸ್ವಾರ್ಥಪರಾಸ್ಸದಾ ॥ ೧೦೨ ॥ ನಬ್ರವೀಮಿ ಸ್ತ್ರಿಯಸ್ಸರ್ವಾ ಭರತ
ಸ್ಯೈವ ಮಾತರಂ ॥ ೧೦೩ ॥ ಅನರ್ಥಭಾವೇಽರ್ಥಪರೇ ನೃಶಂಸೇ ಮಮಾ
ನುತಾಪಾಯ ನಿವಿಷ್ಟಭಾವೇ ॥ ಕಿಮಪ್ರಿಯಂ ಪಶ್ಯಸಿ ಮನ್ನಿಮಿತ್ತಂ ಹಿತಾನು
ಕಾರಿಣ್ಯಥವಾಪಿ ರಾಮೇ ॥ ೧೦೪ ॥ ಪರಿತ್ಯಜೇಯುಃ ಪಿತರೋಹಿ ಪುತ್ರಾನ್

ಅಥವಾ - ಹಾಗಲ್ಲದೆ ಹೋದರೆ, ಸರ್ವಾಃ - ಸಮಸ್ತರಾದ, ಸ್ತ್ರಿಯಃ - ಸ್ತ್ರೀಯರನ್ನು ಕುರಿತು, ನಬ್ರವೀಮಿ - ಹೇಳಲಾರೆನು, ಭರತಸ್ಯ - ಭರತನ, ಮಾತರಮೇವ - ತಾಯಿಯನ್ನೇ ಕುರಿತು, ಬ್ರವೀಮಿ-ಹೇಳುವೆನು. ॥ ೧೦೨ ॥ ಹೇ ಅನರ್ಥಭಾವೇ - (ಗೋ) ಎಲೇ ತನ್ನವರಿಗೂ ಕೇಡನ್ನು ಮಾಡುವದರಲ್ಲಿಯೇ ಅಭಿಪ್ರಾಯವುಳ್ಳವಳೇ, ಹೇ ಅರ್ಥಪರೇ - ಎಲೈ ಸ್ವಕಾರ್ಯದಲ್ಲಿ ಆಸಕ್ತಳೇ, ಹೇ ನೃಶಂಸೇ-ಎಲೌ ಘಾತಕಿಯೇ, ಮಮ - ನನಗೆ, ಅನುತಾಪಾಯ - ಸಂಕಟ ಉಂಟುಮಾಡಲು, ಹೇ ನಿವಿಷ್ಟಭಾವೇ - ಎಲೌ ಬಹು ಕೆಟ್ಟ ಅಭಿಪ್ರಾಯವುಳ್ಳವಳೆ, ಹಿತಾನುಕಾರಿಣಿ - ಹಿತವನ್ನೇ ಮಾಡುತ್ತಿರುವ, ರಾಮೇವಾಪಿ - ಶ್ರೀರಾಮನಲ್ಲಿಯೇ ಆಗಲಿ, ಅಥವಾ - ಹಾಗಲ್ಲದೆ ಹೋದರೆ, ಮನ್ನಿಮಿತ್ತಂ - ನನ್ನ ನಿಮಿತ್ತವಾಗಿಯೇ ಆಗಲಿ, ಅಪ್ರಿಯಂ - ಅನಿಷ್ಟವನ್ನು, ಪಶ್ಯಸಿ - ನೋಡಿರುವೆಯೇನು. ॥ ೧೦೩ ॥ ಪಿತರಃ - ತಾಯಿತಂದೆಗಳು, ಪುತ್ರಾನ್ - ಮಕ್ಕಳನ್ನು, ಪರಿತ್ಯಜೇಯುಃ - ಪರಿತ್ಯಾಗ ಮಾಡುವರು, ಕೃತಾನುರಾಗಾಃ - ಶ್ರೀರಾಮನಲ್ಲಿಯೇ ಇಡಲ್ಪಟ್ಟ ವಿಶ್ವಾಸವುಳ್ಳ, ಭಾರ್ಯಾಃ - ಹೆಂಡತಿಯರು, ಪತೀಂಶ್ಚಾಪಿ - ಗಂಡಂದಿರನ್ನು, ಪರಿತ್ಯಜೇಯುಃ - ತ್ಯಾಗ ಮಾಡುತ್ತಾರೆ, ವ್ಯಸನೇ-ಅರಣ್ಯಗಮನ ವಿಷಯಕ ವ್ಯಸನದಲ್ಲಿ, ನಿಮಗ್ನಂ - ಮುಳುಗಿದ, ರಾಮಂಚ - ಶ್ರೀರಾಮನನ್ನು, ದೃಷ್ಟ್ವೈವ-ನೋಡಿಯೇ, ಸರ್ವಾಂ - ಸಮಸ್ತವಾದ, ಕೃತ್ಸ್ನಂಜಗತ್ - ಚರಾಚರಾತ್ಮಕವಾದ ಪ್ರಪಂಚವು, ಕುಪಿತಂ - ನಿನ್ನ ಉದ್ದಿಶ್ಯವಾಗಿ ಕೋಪವುಳ್ಳುದು, ಸ್ಯಾತ್ - ಆಗುತು. ॥ ೧೦೪ ॥ ಅಹಂಪುನಃ-

---

ಬಯಸುವುದಿಲ್ಲವು. ಸ್ತ್ರೀಯರಲ್ಲಿ ಕೆಲವರಾದರೂ ಉತ್ತಮ ಗುಣಗಳುಳ್ಳವರಿರುವುದರಿಂದ, ಭರತಮಾತೆಯಾದ ನಿನ್ನನ್ನೇ ಉದ್ದೇಶಿಸಿ ಹೀಗೆ ಹೇಳುತ್ತಿರುವೆನಲ್ಲದೆ ಮತ್ತೆ ಬೇರೆಯಲ್ಲವು. ಸ್ವಜನಕ್ಕೂ ಅನರ್ಥವನ್ನುಂಟುಮಾಡುವುದರಲ್ಲಿಯೇ ಆಸಕ್ತಿಯುಳ್ಳವಳೂ, ಸ್ವಕಾರ್ಯವನ್ನು ಸಾಧಿಸುವುದರಲ್ಲಿ ಚತುರಳಾದವಳೂ, ಘಾತಕಳೂ, ನನಗೆ ಸಂಕಟವನ್ನೇ ಉಂಟುಮಾಡುವುದರಲ್ಲಿಯೇ ಅಭಿಪ್ರಾಯವುಳ್ಳವಳೂ ಆದ ಕೇಕಯರಾಯನ ಮಗಳೆ! ನಿನಗೆ ನಾನು ಮಾಡಿದ ಅಪರಾಧವೇನು; ಅಥವ ರಾಮನೇ ಆಗಲಿ ನಿನಗೇನು ಅಪರಾಧಮಾಡಿದನು ? ॥೯೩-೧೦೩॥ ಕೇಳೌ ಕೈಕೇಯಿ! ಶ್ರೀರಾಮನನ್ನು ಅಟವಿಗೆ ಹೊರಡಿಸಬೇಕೆಂದು ಬಗೆದಿರುವ ನಿನ್ನ ಉದ್ಯಮವನ್ನು ಕೇಳಿ ನಿನ್ನಿಂದುಂಟಾದ ದುಃಖನಿಮಗ್ನನಾದ ಶ್ರೀರಾಮನನ್ನು ಕಾಣುತ್ತಲೆ, ಜನರೆಲ್ಲರೂ ನಿನ್ನಲ್ಲಿ ಕೋಪಗೊಳ್ಳುವರಲ್ಲದೆ, ಶ್ರೀರಾಮನಲ್ಲಿ ಅವರಿಗೆ ಬಹಳವಾದ ಪ್ರೇಮವಿರುವುದರಿಂದ, ಪರಸ್ಪರ ಅಗಲಿಕೆಯನ್ನು ತಾಳಲಾರದ ತಂದೆಗಳು ಮಕ್ಕಳನ್ನು ತೊರೆಯುತ್ತಾರೆ; ಪತಿಗಳು ಸತಿಗಳನ್ನು ಅಗಲುತ್ತಾರೆ; ಅತಿ ವೃದ್ಧನಾದ ನಾನಾದರೋ, ಸ್ವಾಭಾವಿಕವಾಗಿ

ಭಾರ್ಯಾಃ ಪತೀಂಶ್ಚಾಪಿ ಕೃತಾನುರಾಗಾಃ ॥ ಕೃತ್ಸ್ನಂ ಹಿ ಸರ್ವಂ ಕುಪಿತಂ ಜಗತ್ಸ್ಯಾದ್ದೃಷ್ಟ್ವೈವ ರಾಮಂ ವ್ಯಸನೇ ನಿಮಗ್ನಂ ॥ ೧೦೪ ॥ ಅಹಂ ಪುನರ್ದೇವ ಕುಮಾರ ರೂಪಮಲಂಕೃತಂ ತಂ ಸುತಮಾವ್ರಜಂತಂ ॥ ನಂದಾಮಿ ಪಶ್ಯನ್ನಪಿ ದರ್ಶನೇನ ಭವಾಮಿ ದೃಷ್ಟ್ವಾಚ ಪುನರ್ಯುವೇವ ॥ ೧೦೫ ॥ ವಿನಾಪಿ ಸೂರ್ಯೇಣ ಭವೇತ್ಪ್ರವೃತ್ತಿ ರವರ್ಷತಾ ವಜ್ರಧರೇಣ ವಾಪಿ ॥ ರಾಮಂತು ಗಚ್ಛಂತಮಿತಸ್ಸಮೀಕ್ಷ್ಯ ಜೀವೇನ್ನಕಶ್ಚಿತ್ತ್ವಿತಿ ಚೇತನಾ ಮೇ ॥ ೧೦೬ ॥ ವಿನಾಶಕಾಮಾ ಮಹಿತಾಮಮಿತ್ರಾಮಾವಾಸಯಂ ಮೃತ್ಯುಮಿವಾತ್ಮನಸ್ತ್ವಾಂ ॥ ಚಿರಂಬತಾಂಕೇನ ಧೃತಾಸಿ ಸರ್ಪೀ ಮಹಾವಿಷಾ ತೇನ

ನಾನಾದರೋ, ದೇವಕುಮಾರರೂಪಂ - ದೇವತಾಪುತ್ರನಿಗೆ ಸಮಾನವಾದ ರೂಪವುಳ್ಳ, ಅಲಂಕೃತಂ-ಸರ್ವಾಭರಣಗಳಿಂದ ಲಂಕರಿಸಲ್ಪಟ್ಟ, ಆವ್ರಜಂತಂ - ನಡದು ಬರುತ್ತಿರುವ, ಸುತಂ - ಕುಮಾರನಾದ, ತಂ - ಆ ಶ್ರೀರಾಮನನ್ನು, ಪಶ್ಯನ್ನಪಿ - ನೋಡುತ್ತಿರುವನಾದರೂ, ದರ್ಶನೇನಪುನಃ - ಪುನರ್ದರ್ಶನದಿಂದ, ನಂದಾಮಿ - ಸಂತೋಷಗೊಳ್ಳುವನು, ದೃಷ್ಟ್ವಾಚ - ನೋಡುತ್ತಲೇ, ಪುನಃ-ತಿರುಗಿ, ಯುವೇವ - ಯೌವನಶಾಲಿಯಂತೆ ಹೃಷ್ಟಪುಷ್ಟನಾಗಿ, ಭವಾಮಿ - ಆಗುತ್ತೇನೆ. ॥ ೧೦೫ ॥ ಸೂರ್ಯೇಣವಿನಾಪಿ - ಸೂರ್ಯನನ್ನುಳಿದು, ಪ್ರವೃತ್ತಿಃ - ಸಂಚಾರವು, ಭವೇತ್ - ಆಗುತ್ತದೆ, ಅವರ್ಷತಾ - ವರ್ಷಿಸದಿರುವ, ವಜ್ರಧರೇಪಿವಿನಾ - ಪರ್ಜನ್ಯನಿಂದಲಾದರೂ ವಿನಾಯಿಸಿ, ಪ್ರವೃತ್ತಿಃ-ಜೀವನೋಪಾಯವು, ಭವೇತ್ - ಆಗುವದು, ಇತಃ - ಈ ಪಟ್ಟಣದಿಂದ, ಗಚ್ಛಂತಂ - ಹೋಗುತ್ತಿರುವ, ರಾಮಂತು - ಶ್ರೀರಾಮನನ್ನು, ಸಮೀಕ್ಷ್ಯ - ನೋಡಿ, ಕಶ್ಚಿತ್ - ಯಾವ ಪುರುಷನೂ, ನಜೀವೇತ್ - ಬದುಕಲಾರನು, ಇತಿ - ಇಂತೆಂದು, ಮೇ - ನನ್ನ, ಚೇತನಾ - ಅಭಿಪ್ರಾಯವು, ॥ ೧೦೬ ॥ ವಿನಾಶಕಾಮಾಂ - ನಾಶವನ್ನೇ ಕೋರುತ್ತಿರುವ, ಅಹಿತಾಂ - ಹಗೆಯಳಾದ, ಅಮಿತ್ರಾಂ-ದ್ರೋಹಿಯಾದ, ಆತ್ಮನಃ - ನನಗೆ, ಮೃತ್ಯುಮಿವ - ಮೃತ್ಯುವಿನಂತಿರುವ, ತ್ವಾಂ - ನಿನ್ನನ್ನು,

---

ಬಹುರೂಪವಂತನೂ, ಅಲಂಕಾರಾದಿಗಳಿಂದ ಬಹುಸುಂದರನೂ, ಚಂದ್ರನಂತೆ ಸಂತೋಷವನ್ನುಂಟುಮಾಡುತ್ತಿರುವವನೂ, ಸೌದಂರ್ಯವಿಲ್ಲದಿದ್ದರೂ, ಮಗನಾದುದರಿಂದ ಪ್ರೇಮಾಸ್ಪದನೂ, ಮತ್ತಮಾತಂಗದಂತೆ ನಡಿಗೆಯುಳ್ಳವನೂ ಆದ ಆ ಶ್ರೀರಾಮಮೂರ್ತಿಯನ್ನು ನೆನದ ಮಾತ್ರದಿಂದಲೇ ಸಂತುಷ್ಟನಾಗುತ್ತೇನೆ. ಪ್ರತ್ಯಕ್ಷವಾಗಿ ನೋಡಿದರಂತೂ ಹೃಷ್ಟಪುಷ್ಟವಾದ ಅವಯವಗಳುಳ್ಳ ಯುವಕನೇ ಆಗುತ್ತೇನೆ; ಹೀಗಿರುವಲ್ಲಿ, ಇಂತಹ ಪ್ರಿಯ ಪುತ್ರನನ್ನು ಹೇಗೆತಾನೆ ತೊರೆಯಲಿ? ಸೂರ್ಯನು ಬೆಳಗದಿದ್ದರೂ ಮನುಷ್ಯರ ವ್ಯಾಪಾರಗಳು ನಡೆಯುತ್ತವೆ. ದೇವೇಂದ್ರನು ಮಳೆಗರೆಯದಿದ್ದರೂ ಭೋಜನಾದಿಗಳು ನಡೆಯುತ್ತವೆ; ಶ್ರೀರಾಮನಿಲ್ಲದಿದ್ದರೆ ಯಾರೂ ಜೀವಿಸಲಾರರೆಂದು ನನ್ನ ಬುದ್ಧಿಗೆ ತೋರುತ್ತದೆ. ॥೧೦೪-೧೦೬॥ ವಿನಾಶವನ್ನೇ ಕೋರುತ್ತಲೂ, ಹಿತವನ್ನು ಬಯಸದೆಯೂ, ಅಮಿತ್ರಳಾಗಿಯೂ, ನನಗೆ ಮೃತ್ಯುಸ್ವರೂಪಳೂ ಆದ ನಿನ್ನನ್ನು ನಾನೇ ನನ್ನಮನೆಗೆ ಸೇರಿಸಿಕೊಂಡೆನಲ್ಲವೆ ! ಅಯ್ಯೋ !

ಹತೋಽಸ್ಮಿ ಮೋಹಾತ್ ॥ ೧೦೭ ॥ ಮಯಾಚ ರಾಮೇಣಚ ಲಕ್ಷ್ಮಣೇನ
ಪ್ರಶಾಸ್ತು ಹೀನೋ ಭರತಸ್ತ್ವಯಾ ಸಹ ॥ ಪುರಂಚ ರಾಷ್ಟ್ರಂಚ ನಿಹತ್ಯ
ಬಾಂಧವಾನ್ ಮಮಾಹಿತಾನಾಂ ಚ ಭವಾಭಿಹರ್ಷಿಣೀ ॥ ೧೦೮ ॥ ನೃಶಂಸ
ವೃತ್ತೇ ವ್ಯಸನಪ್ರಹಾರಿಣೀ ಪ್ರಸಹ್ಯ ವಾಕ್ಯಂ ಯದಿಹಾದ್ಯ ಭಾಷಸೇ ॥ ನನಾಮ
ತೇ ಕೇನ ಮುಖಾತ್ಪತತ್ಯಧೋ ವಿಶೀರ್ಯಮಾಣಾ ದಶನಾಸ್ಸಹಸ್ರಧಾ ॥೧೦೯॥
ನಕಿಂಚಿದಾಹಾಹಿತಮಪ್ರಿಯಂ ವಚೋ ನವೇತ್ತಿ ರಾಮಃ ಪರುಷಾಣಿ

ಗೃಹೇ - ಮನೆಯಲ್ಲಿ, ಆವಾಸಯಂ - ಇರಿಸಿ ಕೊಂಡೆನು, ಚಿರಂ - ಬಹುಕಾಲದಿಂದಲೂ, ಮಹಾ ವಿಷಾ - ಮಹಾವಿಷವುಳ್ಳ, ಸರ್ಪೀ - ಹೆಣ್ಣು ಸರ್ಪರೂಪಳಾದ, ತ್ವಂ - ನೀನು, ಅಂತೇನ - ತುದಿಯಿಂದ, ಧೃತಾ - ಧರಿಸಲ್ಪಟ್ಟವಳು, ಅಸೀತಿಯತ್ - ಆಗಿರುವೆಯೆಂಬುದು ಯಾವದುಂಟೋ, ತೇನ - ಅದರಿಂದಲೇ, ಮೋಹಾತ್ - ಅಜ್ಞಾನದಿಂದ, ಹತಃ - ಹೊಡೆಯಲ್ಪಟ್ಟವನು, ಅಸ್ಮಿ - ಆದೆನು, ಬತ - ಕಷ್ಟವು. ॥ ೧೦೭ ॥ ಭರತಃ - ಭರತನು, ಮಯಾಚ - ನನ್ನಿಂದಲೂ, ರಾಮೇಣಚ - ಶ್ರೀರಾಮನಿಂದಲೂ, ಲಕ್ಷ್ಮಣೇನಚ - ಲಕ್ಷ್ಮಣನಿಂದಲೂ, ಹೀನಃ - ನಷ್ಟನಾಗಿ, ತ್ವಯಾ ಸಹ - ನಿನ್ನೊಡಗೂಡಿ, ಪ್ರಶಾಸ್ತು - ರಾಜ್ಯಭಾರ ಮಾಡಲಿ, ತ್ವಂ - ನೀನು, ಪುರಂಚ - ಪಟ್ಟಣವನ್ನೂ, ರಾಷ್ಟ್ರಂಚ - ರಾಜ್ಯವನ್ನೂ, ಬಾಂಧವಾನ್ - ಬಂಧುಗಳನ್ನೂ, ನಿಹತ್ಯ - ನಾಶಗೊಳಿಸಿ, ಮಮ - ನನಗೆ, ಅಹಿತಾನಾಂ - ಶತ್ರುಗಳಾದವರಿಗೆ, ಅಭಿಹರ್ಷಿಣೀ - ಸಂತೋಷ ಗೊಳಿಸುವವಳು, ಭವ - ಆಗು. ॥ ೧೦೮ ॥ ಹೇನೃಶಂಸವೃತ್ತೇ - ಎಲೇ ಘಾತುಕ ವ್ಯಾಪಾರವುಳ್ಳವಳೇ, ಹೇ ವ್ಯಸನ ಪ್ರಹಾರಿಣೀ - ಆಪತ್ಕಾಲದಲ್ಲಿ ಉಪದ್ರವವನ್ನು ಮಾಡುವವಳೇ, ಅದ್ಯ - ಈಗ, ಪ್ರಹಸ್ಯ - ನಕ್ಕು, ಇಹ - ಇಲ್ಲಿ, ವಾಕ್ಯಂ - ಪರಿಹಾಸ್ಯ ವಚನವನ್ನು, ಭಾಷಸೇತಿಯತ್ - ಮಾತನಾಡಿದೆಯೆಂಬುದು ಯಾವದುಂಟೋ, ತೇ - ಅಂತಹ ನಿನ್ನ, ದಶನಾಃ - ಹಲ್ಲುಗಳು, ಸಹಸ್ರಧಾ - ಸಾವಿರಹೋಳಾಗಿ, ವಿಶೀರ್ಯಮಾಣಾಃ - ಶೀಳಿಹೋದುವಾಗಿ, ಮುಖಾತ್ - ಮುಖದಿಂದ, ಕೇನ - ಯಾವಕಾರಣ, ಅಧಃ- ಕೆಳಗೆ, ನಪತಂತಿ - ಬೀಳಲಿಲ್ಲವೊ, ನಜಾನೇ - ಕಾಣೆನು. ॥ ೧೦೯ ॥ ರಾಮಃ - ಶ್ರೀರಾಮನು, ಅಹಿತಂ - ಹಿತವಲ್ಲದಿರುವ, ಅಪ್ರಿಯಂ - ಅನಿಷ್ಟಮಾತನ್ನು, ಕಿಂಚಿತ್ - ಸ್ವಲ್ಪವಾದರೂ, ನಾಹ - ಹೇಳಿದವನಲ್ಲ, ಪರುಷಾಣಿ - ಕಠಿನೋಕ್ತಿಗಳನ್ನು, ಭಾಷಿತುಂ - ನುಡಿಯುವದಕ್ಕೂ, ನವೇತ್ತಿ - ತಿಳಿದವನಲ್ಲ, ಅಭಿರಾಮವಾದಿನೀ, ಅಭಿರಾಮ - ಇಂಪಾಗಿ,

---

ಮಹಾ ವಿಷವುಳ್ಳ ಸ್ತ್ರೀಸರ್ಪದಂತಿರುವ ನೀನು ನನ್ನಿಂದ ಅಂಕಗತಳಾಗಿ ಲಾಲಿತಳಾದೆ!! ಆದುದರಿಂದಲೇ ನಾನು ನಿನ್ನಮೇಲಣ ವ್ಯಾಮೋಹದಿಂದ ಹತನಾದೆನು. ಭರತನು ನನ್ನನ್ನೂ ಶ್ರೀರಾಮ ಲಕ್ಷ್ಮಣರನ್ನೂ ಬಿಟ್ಟು ನಿನ್ನೊಡನೆ ರಾಜ್ಯವಾಳಲಿ; ಪಟ್ಟಣವನ್ನೂ ನೆಂಟರನ್ನೂ ಹಾಳುಮಾಡಿ, ಹಗೆಯರಿಗೆಲ್ಲ ಹರ್ಷವನ್ನುಂಟು ಮಾಡುವವಳಾಗು. ॥ ೧೦೭-೧೦೮ ॥ ಕೆಟ್ಟವ್ಯಾಪಾರವುಳ್ಳವಳೆ ! ವ್ಯಸನಕಾಲದಲ್ಲಿಯೇ ಬಾಧಿಸುವವಳೆ !! ಗಾಯದಮೇಲೆಯೇ ಪೆಟ್ಟನ್ನಿಡುವಂತೆ ರಾಮವಿರಹವೆಂಬ ವಿಪತ್ತಿನಲ್ಲಿಯೇ ನನ್ನನ್ನು ಅಡಿಗಡಿಗೂ ನುಗ್ಗಿಸುತ್ತಲೂ, ಹಾಸ್ಯಮಾಡುತ್ತಲೂ ಯಾವ ಯಾವ ಮಾತುಗಳನ್ನಾಡಿದೆಯೋ, ಅವುಗಳಿಗೋಸುಗ ನಿನ್ನ

ಭಾಷಿತುಂ ॥ ಕಥನ್ನು ರಾಮೇಽಹ್ಯಭಿರಾಮ ವಾದಿನೀ ಬ್ರವೀಷಿ ದೋಷಾ೯ ಗುಣನಿತ್ಯಸಮ್ಮತೇ ॥ ೧೧೦ ॥ ಪ್ರತಾಮ್ಯವಾ ಪ್ರಜ್ವಲ ವಾ ಪ್ರಣಶ್ಯ ವಾ ಸಹಸ್ರಶೋವಾ ಸ್ಫುಟಿತಾ ಮಹೀಂ ವ್ರಜ ॥ ನ ತೇ ಕರಿಷ್ಯಾಮಿ ವಚಸ್ಸುದಾರುಣಂ ಮಮಾಹಿತಂ ಕೇಕಯ ರಾಜ ಪಾಂಸನೀ ॥ ೧೧೧ ॥ ಕ್ಷುರೋಪಮಾಂ ನಿತ್ಯಮಸತ್ಪ್ರಿಯಂವದಾಂ ಪ್ರದುಷ್ಟಭಾವಾಂ ಸ್ವಕುಲೋಪಘಾತಿನೀಂ ॥ ನಜೀವಿತುಂ ತ್ವಾಂ ವಿಷಹೇಽಮನೋರಮಾಂ ದಿಧಕ್ಷಮಾಣಾಂ ಹೃದಯಂ ಸಬಂಧನಂ ॥ ೧೧೨ ॥ ನಜೀವಿತಂ ಮೇಽಸ್ತಿ ಪುನಃ ಕುತಸ್ಸುಖಂ ವಿನಾತ್ಮಜೇ

ವಾದಿನೀ - ಮಾತನಾಡುತ್ತಿರುವ, ಗುಣನಿತ್ಯಸಮ್ಮತೇ, ಗುಣ - ಗುಣಗಳಿಂದ, ನಿತ್ಯ - ಯಾವಾಗಲೂ, ಸಮ್ಮತೇ - (ಗೋ) ಎಲ್ಲರಿಗೂ ಹಿತಕರನಾದ, ರಾಮೇ - ಶ್ರೀರಾಮನಲ್ಲಿ, ದೋಷಾ೯ - ದೋಷಗಳನ್ನು, ಕಥನ್ನು - ಹೇಗೆ, ಬ್ರವೀಷಿ - ನುಡಿಯುವೆ. ॥ ೧೧೦ ॥ ಪ್ರತಾಮ್ಯವಾ - ಮುಗ್ಗಿಯಾದರೂ ಹೋಗು, ಪ್ರಜ್ವಲವಾ - ಕೋಪಿಷ್ಠಳಾದರೂ ಆಗು, ಪ್ರಣಶ್ಯವಾ - ನಷ್ಟಳಾದರೂ ಆಗು, ಸಹಸ್ರಶಃ - ಸಹಸ್ರ ಭಾಗಗಳಾಗಿ, ಸ್ಫುಟಿತಾಸತೀ - ಒಡದುಹೋಗಿ, ಮಹೀಂ - ನೆಲವನ್ನು, ವ್ರಜ- ಹೊಂದಿ ಹೋಗು, ಹೇಕೇಕಯರಾಜಪಾಂಸಿನೀ - ಎಲೌ ಕೇಕಯರಾಯನ ವಂಶದವರಿಗೆಲ್ಲ ಅಪಕೀರ್ತಿಯನ್ನು ತರುವವಳೇ, ಮಮ - ನನಗೆ, ಅಹಿತಂ - ಅನಿಷ್ಟಕರನಾದ, ಸುದಾರುಣಂ - ಕಠೋರವಾದ, ತೇ - ನಿನ್ನ, ವಚಃ - ಮಾತನ್ನು, ನಕರಿಷ್ಯಾಮಿ - ಮಾಡುವುದೇ ಇಲ್ಲವು. ॥ ೧೧೧ ॥ ಕ್ಷುರೋಪಮಾಂ, ಕ್ಷುರ - ಚಿಕ್ಕಕತ್ತಿಯ, ಉಪಮಾಂ - ಸಮಾನಳಾದ, ಅಸತ್ಪ್ರಿಯಂವದಾಂ - ಸುಳ್ಳಾದ ಇಷ್ಟವನ್ನು ಹೇಳುತ್ತಿರುವ, ಪ್ರದುಷ್ಟಭಾವಂ - ಬಹಳ ಕೆಟ್ಟ ಮನಸ್ಸುಳ್ಳ, ಸ್ವಕುಲೋಪಘಾತಿನೀಂ - ತನ್ನ ಕುಲವನ್ನೇ ನಾಶಗೊಳಿಸುತ್ತಿರುವ, ಅಮನೋರಮಾಂ - ಮನೋಹರಳಲ್ಲದಿರುವ, ಹೃದಯಂ - ಮನವನ್ನು, ಸಬಂಧನಂ - ಸಮೂಲವಾಗಿ, ದಿಧಕ್ಷಮಾಣಾಂ - (೧) ಸುಡುತ್ತಿರುವ, ತ್ವಾಂ - ನಿನ್ನನ್ನು, ಜೀವಿತುಂ - ಬದುಕಿಸಲು, ನವಿಷಹೇ - ಸಹಿಸಲಾರೆನು, ॥ ೧೧೨ ॥ ಹೇದೇವೀ - ಎಲೌ ಕೈಕೇಯಿದೇವಿಯೆ, ಆತ್ಮವತಃ - ದೇಹಧಾರಿಯಾದ, ಮೇ -

---

ದಂತಗಳು ಸಹಸ್ರಹೋಳುಗಳಾಗಿ ಉದುರಿ ಹೋಗಲಿಲ್ಲವೇಕೆ? ಎಲೌ ಪಾಪಿಷ್ಠಳೆ! ಶ್ರೀರಾಮನು ಅಹಿತವಾದ ಮಾತುಗಳನ್ನು ಸ್ವಲ್ಪವಾದರೂ ಆಡುವದಿಲ್ಲವು. ಅಂತಹುದನ್ನಾತನು ತಿಳಿದೇ ಇಲ್ಲವು. ಮನೋಹರವಾಗಿ ನುಡಿಯುತ್ತಿರುವ ಗುಣವಂತನಾದ ಆತನಲ್ಲಿ ಹೇಗೆ ತಾನೆ ದೋಷಾರೋಪಣೆಯನ್ನು ಮಾಡಿದೆ. ಎಲೌ ಕೇಕಯರಾಯನಿಗೆ ಅಪಕೀರ್ತಿಯನ್ನು ತರುವವಳೆ! ನೀನು ಮುಗ್ಗಿಯಾದರೂ ಹೋಗು; ಕೋಪದಿಂದ ಉರಿದು ನೆಗೆದಾದರೂ ಬೀಳು; ಸಾವಿರ ತುಂಡುಗಳಾಗಿ ನೆಲದಲ್ಲಿಯಾದರೂ ಹೊರಳಾಡು. ಏನು ಮಾಡಿದರೂ, ಶ್ರೀರಾಮನನ್ನು ವನವಾಸಕ್ಕೆ ಕಳುಹುವುದಿಲ್ಲ. ಅಲುಗಿನಂತಿರುವವಳಾಗಿಯೂ, ಕೆಟ್ಟ

ಟ. (೧) ಸದಿಂಧನಮಿತಿಪಾಠೆ - ಹೃದಯಂ - ಹೃದಯವೆಂಬ, ಸದಿಂಧನಂ - ಒಳ್ಳೆಯ ಕಟ್ಟಿಗೆಯನ್ನು, ದಿಧಕ್ಷಮಾಣಾಂ - ದಹಿಸಲಿಚ್ಛಿಸುತ್ತಿರುವ.



Dasaratha's Lament.

Lakshmi Art Bombay, 8

ನಾತ್ಮವತಃ ಕುತೋರತಿಃ ॥ ಮಮಾಹಿತಂ ದೇವಿ ನಕರ್ತುಮರ್ಹಸಿ ಸ್ಪೃಶಾಮಿ ಪಾದಾವಪಿ ತೇ ಪ್ರಸೀದ ಮೇ ॥ ೧೧೩ ॥

ಸಭೂಮಿಪಾಲೋ ವಿಲಪನ್ನನಾಥವತ್
ಸ್ತ್ರಿಯಾ ಗೃಹೀತೋ ಹೃದಯೇತಿ ಮಾತ್ರಯಾ ॥
ಪಪಾತ ದೇವ್ಯಾಶ್ಚರಣೌ ಪ್ರಸಾರಿತಾ
ವುಭಾವಸಂಸ್ಪೃಶ್ಯ ಯಥಾತುರ ಸ್ತಥಾ ॥ ೧೧೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾದಶಸ್ಸರ್ಗಃ

ನನಗೆ, ಆತ್ಮಜೇನವಿನಾ - ಕುಮಾರನಾದ ಶ್ರೀರಾಮನನ್ನುಳಿದು, ಮೇ - ನನ್ನ, ಜೀವಿತಂ - ಪ್ರಾಣವು, ನಾಸ್ತಿ - ಇರುವುದಿಲ್ಲ, ಸುಖಂಪುನಃ - ಇನ್ನು ಸುಖವೆಂಬುದು, ಕುತಃ - ಎಲ್ಲಿಯದು, ರತಿಃ-ಕ್ರೀಡಾವಿಹಾರವು, ಕುತಃ - ಎಲ್ಲಿಬಂತು, ತ್ವಂ - ನೀನು, ಮಮ - ನನಗೆ, ಅಹಿತಂ - ಹಿತಕರವಲ್ಲದ ಕಾರ್ಯವನ್ನು, ಕರ್ತುಂ - ಮಾಡಲು, ನಾರ್ಹಸಿ - ಯೋಗ್ಯಳಾಗಬೇಡ, ತೇ - ನಿನ್ನ, ಪಾದಾವಪಿ-ಪಾದಗಳನ್ನೂ ಕೂಡ, ಸ್ಪೃಶಾಮಿ - ಮುಟ್ಟುವೆನು, ಮೇ - ನನಗೆ, ಪ್ರಸೀದ - ಪ್ರಸನ್ನಳಾಗು. ॥ ೧೧೩ ॥ ಭೂಮಿಪಾಲಃ - ಪೃಥ್ವಿಪಾಲಕನಾದ, ಸಃ-ಆ ದಶರಥರಾಯನು, ಅತಿಮಾತ್ರಯಾ - ಮರ್ಯಾದಾರಹಿತಳಾದ, ಸ್ತ್ರಿಯಾ - ಹೆಂಗಸಿನಿಂದ, ಹೃದಯೇ - ಮನಸ್ಸಿನಲ್ಲಿ, ಅನಾಥವತ್-ದಿಕ್ಕಿಲ್ಲದವನಂತೆ, ವಿಲಪರ್ - ಪ್ರಲಾಪಮಾಡುತ್ತ, ಪ್ರಸಾರಿತೌ - ಪಸರಿಸಲ್ಪಟ್ಟ, ದೇವ್ಯಾಃ - ಕೈಕೇಯಿಯಾದೇವಿಯ, ಉಭೌ - ಎರಡಾದ, ಚರಣೌ - ಪಾದಗಳನ್ನು, ಅಸಂಸ್ಪೃಶ್ಯ - ಸ್ಪರ್ಶಮಾಡದೆ, ಆತುರಃ - ರೋಗಾರ್ತನು, ಯಥಾ - ಹೇಗೆ, ಪತತಿ - ಬೀಳುತ್ತಾನೆಯೋ, ತಥಾ - ಹಾಗೆಯೆ, ಪಪಾತ - ಕೆಳಕ್ಕೆ ಬಿದ್ದನು, (ಗೋ) ಆತುರೋಯಥಾ - ರೋಗಾರ್ತನಂತೆ, ತಥಾಪಪಾತ - ಬಹಳ ಕ್ರೂರವಾಗಿ ಬಿದ್ದನು. ॥ ೧೧೪ ॥

ಇತ್ಯಾರ್ಷೇ ಶ್ರೀಮದ್ರಾಮಾಣೇ ಅಯೋಧ್ಯಾಕಾಂಡೇ ದ್ವಾದಶಸ್ಸರ್ಗಃ

ದನ್ನೇ ನುಡಿಯುತ್ತಿರುವವಳಾಗಿಯೂ, ಕೆಟ್ಟ ಸ್ವಭಾವವುಳ್ಳವಳಾಗಿಯೂ, ತನ್ನ ಕುಲವನ್ನೇ ನಾಶಪಡಿಸುವವಳಾಗಿಯೂ, ಹೃದಯವನ್ನು ಸಮೂಲವಾಗಿಯೇ ಸುಡುವವಳಾಗಿಯೂ ಇರುವ ನೀನು ಬದುಕಿರುವುದೇ ನನಗಿಷ್ಟವಿಲ್ಲವು. ಕುಮಾರನಾದ ಶ್ರೀರಾಮನು ನನ್ನನ್ನಗಲಿದರೆ ನನಗೆ ಸುಖವೆತ್ತಣದು ; ನಾನು ಬದುಕುವುದು ತಾನೆ ಹೇಗೆ? ಎಲೌ ದೇವಿಯೆ! ನನಗೆ ಅನಿಷ್ಟವನ್ನುಂಟುಮಾಡಬೇಡ. ನಿನ್ನ ಪಾದಗಳನ್ನಾದರೂ ಸ್ಪರ್ಶಿಸುತ್ತೇನೆ. ಪ್ರಸನ್ನಳಾಗು" ಎಂಬೀ ಪ್ರಕಾರವಾಗಿ ನರನಾಥನಾದ ಆ ದಶರಥರಾಯನು ಮರ್ಯಾದೆಯಿಲ್ಲದ ಆ ಕೈಕೇಯಿಯಿಂದ ಬಂಧಿಸಲ್ಪಟ್ಟು ಅನಾಥನಂತೆ ಕೈಗಳನ್ನು ಪಸರಿಸಿ ಆತುರನಂತೆ ಆಕೆಯ ಪಾದಗಳಲ್ಲಿ ಬಿದ್ದವನಾದನು. ॥ ೧೦೯-೧೧೪ ॥

ಇಂತಿದು ದಶರಥ ವಿಲಾಪ ವಿಧಾನ ವರ್ಣನವೆಂಬ
ಹನ್ನೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಯೋದಶಸ್ಸರ್ಗ.

ಅತದರ್ಹಂ ಮಹಾರಾಜಂಶಯಾನಮತಥೋಚಿತಂ ॥ ಯಯಾತಿ ಮಿವ ಪುಣ್ಯಾಂತೇ ದೇವಲೋಕಾತ್ಪರಿಚ್ಯುತಂ ॥ ೧ ॥ ಅನರ್ಥರೂಪಾ ಸಿದ್ಧಾರ್ಥಾಹ್ಯಭೀತಾ ಭಯದರ್ಶಿನೀ ॥ ಪುನರಾಕಾರಯಾಮಾಸ ತಮೇವ ವರಮಂಗನಾ ॥ ೨ ॥ ತ್ವಂ ಕತ್ಥಸೇ ಮಹಾರಾಜ ಸತ್ಯವಾದೀ ದೃಢವ್ರತಃ ॥ ಮಮಚೇದಂ ವರಂ ಕಸ್ಮಾದ್ವಿಧಾರಯಿತು ಮಿಚ್ಛಸಿ ॥ ೩ ॥ ಏವಮುಕ್ತಸ್ತು

ಅತದರ್ಹಂ - ಹೆಂಗಸನ್ನು ಹಂದಿಸಲು ಅರ್ಹನಲ್ಲದಿರುವ, ಶಯಾನಂ - ನೆಲದಲ್ಲಿ ಮಲಗಿರುವ, ಅತಥೋಚಿತಂ - ಅಂತಹ ವ್ಯಸನಕ್ಕೆ ಅರ್ಹನಲ್ಲದಿರುವ, ಪುಣ್ಯಾಂತೇ-ಪುಣ್ಯವು ಕಳೆದ ಮೇಲೆ, ದೇವಲೋಕಾತ್ - ಸ್ವರ್ಗಲೋಕದಿಂದ, ಪರಿಚ್ಯುತಂ - ಜಾರಿಬಿದ್ದ, ಯಯಾತಿಮಿವಸ್ಥಿತಂ - ಯಯಾತಿ ರಾಯನಂತೆ ಬಿದ್ದಿರುವ, ಮಹಾರಾಜಂ - ದಶರಥ ಮಹಾರಾಜನನ್ನು ಕುರಿತು, ಅನರ್ಥರೂಪಾ - ಪಾಪ ಸ್ವಭಾವವುಳ್ಳ, ಅಸಿದ್ಧಾರ್ಥಾ - ಇನ್ನೂ ಫಲಿಸದಿರುವ ಪ್ರಯೋಜನವುಳ್ಳ, ಅಭೀತಾ-ಗಂಡನಭಯವಿಲ್ಲದ, ಅಂಗನಾ - ಕೈಕೇಯಿಯು, ಭಯದರ್ಶಿನೀ - ದಶರಥರಾಯನಿಗೆ ಬಂದ ಭಯವನ್ನು (ಅಲಕ್ಷ್ಯ-ನೋಡದೆ,) (ಗೋ) ಭಯದರ್ಶಿನೀ, ಭಯ - ರಾಮನದೆಶೆಯಿಂದ ಭರತನಿಗೆ ಭಯವನ್ನು, ದರ್ಶಿನೀ - ಎಣಿಸುತ್ತ, ಪುನಃ-ಮತ್ತೂ, ತಮೇವವರಂ-ಆ ಹಿಂದೆ ಹೇಳಿದ ಶ್ರೀರಾಮನಿಗೆ ವನವಾಸ ರೂಪವಾದ ವರವನ್ನೇ, ಆಕಾರಯಾಮಾಸ - ಪ್ರೇರೇಪಿಸಿದಳು. ॥೧-೨॥ ಹೇಮಹಾರಾಜ - ಎಲೈ ಮಹಾರಾಜನೆ, ತ್ವಂ - ನೀನು, ಸತ್ಯವಾದೀ - ಸತ್ಯವನ್ನೇ ನುಡಿವವನು, ದೃಢವ್ರತಃ - ನಿಶ್ಚಿತವಾದ ನಿಯಮವುಳ್ಳವನೆಂದು, ಕತ್ಥಸೇ - ಆತ್ಮಶ್ಲಾಘನೆ ಮಾಡಿಕೊಳ್ಳುವೆ, ಮಮ - ನನ್ನ, ಇದಂವರಂಚ - ಈ ವರವನ್ನು, ಯಸ್ಮಾತ್ - ಯಾವಕಾರಣ, ವಿಧಾರಯಿತುಂ - (ಗೋ) ವಿಶೇಷವಾಗಿ ಋಣರೂಪದಿಂದ ಹೊರಲು, ಇಚ್ಛಸಿ - ಇಚ್ಛಿಸುವೆ, (ಮ) - ವಿಧಾರಯಿತುಂ - ಬದಲಾಯಿಸಲು, ಇಚ್ಛಸಿ - ಇಚ್ಛಿಸುವೆ. ॥ ೩ ॥ ಏವಂ - ಈ ಪರಿಯಾಗಿ, ಕೈಕೇಯಿಾ - ಕೈಕೇಯಿಾದೇವಿ

ಈ ರೀತಿ ಸತ್ಯವೆಂಬ ಪಾಶದಿಂದ ಬದ್ಧನಾದ ದಶರಥರಾಯನು ಹೆಂಡತಿಯಾದವಳಿಗೆ ಪ್ರಣಾಮವನ್ನು ಮಾಡಬಹುದೋ ಮಾಡಬಾರದೋ ಎಂಬುದನ್ನರಿಯದೆ ಸ್ತ್ರೀಪ್ರಣಾಮವನ್ನು ಮಾಡುತ್ತಲೂ, ರಾಜನಾದವನು ನೆಲದ ಮೇಲೆ ಬಿದ್ದು ಹೊರಳಾಡಬಾರದೆಂಬುದನ್ನೂ ವಿಚಾರಿಸಿದೆ ಬಿದ್ದು ಹೊರಳಾಡುತ್ತಲೂ, ಪುಣ್ಯವು ನಶಿಸಿಹೋಗಲು ಸ್ವರ್ಗದಿಂದ ನೆಲಕ್ಕುರುಳಿದ ಯಯಾತಿ ರಾಯನಂತೆ ಬಹಳವಾಗಿ ದುಃಖಿಸುತ್ತಿದ್ದನು. ಹೀಗಿರಲು ಪಾಪಿಯೂ, ನಿಷ್ಫಲವಾದ ಮನೋರಥವುಳ್ಳವಳೂ, ಲೋಕಾಪವಾದಕ್ಕೆ ಎಳ್ಳಷ್ಟು ಭಯಪಡದವಳೂ ಆದ ಆ ಕೈಕೇಯಿಯು ತನ್ನ ಪತಿಯಾದ ದಶರಥನ ದುಃಖವನ್ನೆಣಿಸದೆ ಹಿಂದೆ ಉಳಿದಿದ್ದ ಆ ಎರಡು ವರಗಳನ್ನೇ ಉದ್ದೇಶಿಸಿ ಆತನನ್ನು ಕುರಿತು, "ಮಹಾರಾಜ! ನೀನು "ನಾನು ಸತ್ಯವಾದಿಯು; ಸ್ಥಿರಸಂಕಲ್ಪವುಳ್ಳವನು" ಎಂದು ನಿನ್ನನ್ನು ನೀನೇ

ಕೈಕೇಯ್ಯಾ ರಾಜಾ ದಶರಥ ಸ್ತದಾ ॥ ಪ್ರತ್ಯುವಾಚ ತತಃಕ್ರುದ್ಧೋ ಮುಹೂ ರ್ತಂ ವಿಹ್ವಲನ್ನಿವ ॥ ೪ ॥ ಮೃತೇ ಮಯಿ ಗತೇ ರಾಮೇ ವನಂ ಮನುಜ ಪುಂಗವೇ ॥ ಹಂತಾನಾರ್ಯೇ ಮಮಾಮಿತ್ರೇ ಸಕಾಮಾ ಸುಖಿನೀ ಭವ ॥೫॥ ಸ್ವರ್ಗೇಪಿ ಖಲು ರಾಮಸ್ಯ ಕುಶಲಂ ದೈವತೈರಹಂ ॥ ಪ್ರತ್ಯಾದೇಶಾದಭಿಹಿತಂ ಧಾರಯಿಷ್ಯೇ ಕಥಂ ಬತ ॥ ೬ ॥ ಕೈಕೇಯ್ಯಾಃ ಪ್ರಿಯಕಾಮೇನ ರಾಮಃ ಪ್ರವ್ರಾಜಿತೋ ಮಯಾ ॥ ಯದಿ ಸತ್ಯಂ ಬ್ರವೀಮ್ಯೇತತ್ತದಸತ್ಯಂ ಭವಿಷ್ಯತಿ ॥ ೭ ॥ ಅಪುತ್ರೇಣ ಮಯಾ ಪುತ್ರಶ್ಶ್ರಮೇಣ ಮಹತಾ ಮಹಾನ್ ॥

ಯಿಂದ, ಉಕ್ತಃ - ಹೇಳಲ್ಪಟ್ಟ, ದಶರಥೋರಾಜಾ - ದಶರಥರಾಯನು, ತದಾ - ಆಗ, ಕ್ರುದ್ಧಃ - ಕೋಪಿಷ್ಠನಾಗಿ, ತತಃ - ಬಳಿಕ, ಮುಹೂರ್ತಂ - ಎರಡುಘಳಿಗೆ ಕಾಲ, ವಿಹ್ವಲನ್ನಿವ - ಮೂರ್ಛಾವಸ್ಥೆಯನ್ನು ಪಡೆದವನಂತಾಗಿ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೪ ॥ ಮಯಿ - ನಾನು, ಮೃತೇಸತಿ - ಮರಣವನ್ನು ಹೊಂದಲು, ಮನುಜಪುಂಗವೇ - ಮನುಜಶ್ರೇಷ್ಠನಾದ, ರಾಮೇ- ಶ್ರೀರಾಮನು, ವನಂಗತೇ - ವನವನ್ನು ಹೊಂದಲು, ಹೇಅನಾರ್ಯೇ - ಎಲೌ ದುಷ್ಟಳೆ, ಮಮ-ನನಗೆ, ಹೇ ಅಮಿತ್ರೇ - ಎಲೌ ಹಗೆಯಳೆ ! ಸಕಾಮಾ - ಕೋರಿಕೆಯಿಂದೊಡಗೂಡಿದವಳೂ, ಸುಖಿನೀ - ಸುಖವಂತಳೂ, ಭವ - ಆಗು. ॥ ೫ ॥ ಅಹಂ - ನಾನು, ಸ್ವರ್ಗೇಪಿ - ಸ್ವರ್ಗಲೋಕದಲ್ಲಿಯೂ ಕೂಡ, ರಾಮಸ್ಯ - ಶ್ರೀರಾಮನ, ಕುಶಲಂಪ್ರತಿ - ಕ್ಷೇಮವನ್ನು ಕುರಿತು, ದೈವತೈಃ - ದೇವತೆಗಳಿಂದ, ಪ್ರತ್ಯಾದೇಶಾತ್ - ಧಿಕ್ಕಾರವನ್ನು ಮಾಡಿ, ಅಭಿಹಿತಂ - ಹೇಳಲ್ಪಟ್ಟವಾಕ್ಯವನ್ನು, ಕಥಂ - ಹೇಗೆ, ಧಾರಯಿಷ್ಯಸಿ - ಧರಿಸಲಿ, ಬತ - ಕಷ್ಟವು. ॥ ೬ ॥ ಕೈಕೇಯ್ಯಾ - ಕೈಕೇಯಿಾದೇವಿಗೆ, ಪ್ರಿಯ ಕಾಮೇನ - ಇಷ್ಟವನ್ನು ಮಾಡಬೇಕೆಂಬ ಕೋರಿಕೆಯುಳ್ಳ, ಮಯಾ - ನನ್ನಿಂದ, ರಾಮಃ - ಶ್ರೀರಾಮನು, ಪ್ರವ್ರಾಜಿತಃಇತಿ - ವನವನ್ನು ಕುರಿತು ಹೊರಡಿಸಲ್ಪಟ್ಟನೆಂದು, ಏತತ್ - ಈ, ಸತ್ಯಂ - ಸತ್ಯವಾಕ್ಯವನ್ನು, ಬ್ರವೀಮಿಯದಿ - ಹೇಳಿದರೆ, ತತ್ - ಪಟ್ಟಾಭಿಷೇಕ ವಚನವು, ಅಸತ್ಯಂ - ಸುಳ್ಳಾದುದು, ಭವಿಷ್ಯತಿ - ಆಗುವದು. ॥ ೭ ॥ ಅಪುತ್ರೇಣ - ಮಕ್ಕಳಿಲ್ಲದ, ಮಯಾ-ನನ್ನಿಂದ,

ಹೊಗಳಿಕೊಳ್ಳುವೆ. ಇಂತಹ ನೀನು ನನಗೆ ಕೊಟ್ಟ ವರರೂಪವಾದ ಈ ಬಾಣ ಭಾರವನ್ನು ವಹಿಸಲಿಚ್ಛಿಸುವೆಯೇಕೆ ?" ಎಂದಳು. ಆಗಲಾ ದಶರಥರಾಯನು ಕೈಕೇಯಿಯಿಂದೀರೀತಿ ನುಡಿಯಲ್ಪಟ್ಟು, ಸ್ವಲ್ಪಕಾಲ ಚಿಂತಿಸುತ್ತಿದ್ದು ಆ ಬಳಿಕ ಬಹಳವಾದ ಕೋಪವನ್ನು ತಾಳಿ ಅವಳನ್ನು ಕುರಿತು ಹೀಗೆಂದನು. "ಎಲೇ ಕೈಕೇಯಿ ! ಪುರುಷಸತ್ತಮನಾದ ಶ್ರೀರಾಮನು ವನಕ್ಕೆ ತೆರಳಿ, ನಾನು ಮೃತನಾದ ಬಳಿಕ ನಿನ್ನ ಮನಸ್ಸಿನ ಇಷ್ಟಾರ್ಥವನ್ನು ಪಡೆದುಕೊಂಡು ಸುಖವಾಗಿರು. ಹಿಂದೆ ನಾನು ದೇವಲೋಕಕ್ಕೆ ಹೋಗಿದ್ದಾಗಲೆಲ್ಲ, ದೇವತೆಗಳು ಶ್ರೀರಾಮನ ಕುಶಲವನ್ನು ಕೇಳುತ್ತಿದ್ದರು. ನಾನು ಕುಶಲವೆಂದು ಹೇಳುತ್ತಿದ್ದೆನು. ಅಯ್ಯೋ ! ಈಗ ನಾನು ಶ್ರೀರಾಮನ ಅಗಲುವಿಕೆಯಿಂದ ಶರೀರವನ್ನೊದರಿ ದೇವಲೋಕಕ್ಕೆ ಹೋದರೆ, ಆಗ ದೇವತೆಗಳು ನನ್ನನ್ನು ಕುರಿತು, ಶ್ರೀರಾಮನಿಗೆ ರಾಜ್ಯಾಭಿಷೇಕಾದಿಗಳಿಂದುಂಟಾದ ಕುಶಲವನ್ನು ಕೇಳಿದರೆ ಹೇಗೆತಾನೆ ಸಹಿಸಲಿ ! ಬಹು ಕಷ್ಟವು ಸಂಪ್ರಾಪ್ತವಾಯಿತು. ॥೧-೬॥

ರಾಮೋ ಲಬ್ಧೋ ಮಹಾಬಾಹು ಸ್ಸಕಥಂ ತ್ಯಜ್ಯತೇ ಮಯಾ ॥ ೮ ॥ ಶೂರಶ್ಚ ಕೃತವಿದ್ಯಶ್ಚ ಜಿತಕ್ರೋಧ ಕ್ಷಮಾಪರಃ ॥ ಕಥಂ ಕಮಲಪತ್ರಾಕ್ಷೋ ಮಯಾ ರಾಮೋ ವಿವಾಸ್ಯತೇ ॥ ೯ ॥ ಕಥಮಿಂದೀವರ ಶ್ಯಾಮಂ ದೀರ್ಘಬಾಹುಂ ಮಹಾಬಲಮ್ ॥ ಅಭಿರಾಮಮಹಂ ರಾಮಂ ಪ್ರೇಷಯಿಷ್ಯಾಮಿ ದಂಡಕಾ ॥ ೧೦ ॥ ಸುಖಾನಾಮುಚಿತಸ್ಯೈವ ದುಃಖೈರನುಚಿತಸ್ಯಚ ॥ ದುಃಖಾನಾಮ

ಮಹತಾ - ಬಹಳವಾದ, ಶ್ರಮೇಣ - ಕೃಚ್ಛ್ರ, ಚಾಂದ್ರಾಯಣ, ಪುತ್ರಕಾಮೇಷ್ಟ್ಯಾದಿಗಳಿಂದ ಹುಟ್ಟಿದ ಶ್ರಮೆಯಿಂದ, ಮಹಾ-ಮಹಾ ಪುರುಷನಾದ, ರಾಮಃ-ಶ್ರೀರಾಮನೆಂಬ, ಪುತ್ರಃ-ಮಗನು, ಲಬ್ಧಃ - ಹೊಂದಲ್ಪಟ್ಟನು, ಮಹಾಬಾಹುಃ - ಮಹಾ ಭುಜಪರಾಕ್ರಮ ಶಾಲಿಯಾದ, ಸಃ - ಆ ಶ್ರೀರಾಮನು, ಮಯಾ - ನನ್ನಿಂದ, ಕಥಂತ್ಯಜ್ಯತೇ - ಹೇಗೆ ಪರಿತ್ಯಾಗ ಮಾಡಿಸಲ್ಪಡುವನು. ||೮|| ಶೂರಶ್ಚ - ಶೂರನಾಗಿಯೂ, ಕೃತವಿದ್ಯಶ್ಚ - ಶಾಸ್ತ್ರಜ್ಞನೂ ಆದ, ಜಿತಕ್ರೋಧಃ - ಜಯಿಸಲ್ಪಟ್ಟ ಕ್ರೋಧವುಳ್ಳ, ಕ್ಷಮಾಪರಃ - ಶಾಂತಿಯಲ್ಲೇ ಆಸಕ್ತನಾದ, ಕಮಲಪತ್ರಾಕ್ಷಃ - ಕಮಲದಳಗಳಿಗೆ ಸಮಾನವಾದ ನೇತ್ರಗಳುಳ್ಳ, ರಾಮಃ - ಶ್ರೀರಾಮನು, ಕಥಂವಿವಾಸ್ಯತೇ - ಗ್ರಾಮದಿಂದ ಹೇಗೆತಾನೆ ಹೊರಡಿಸಲ್ಪಡುವನು. ॥ ೯ ॥ ಇಂದೀವರಶ್ಯಾಮಂ - ಕನ್ನೈದಿಲೆ ಹುವ್ವುಗಳಂತೆ ಕಪ್ಪಗಿರುವ, ದೀರ್ಘಬಾಹುಂ - ಉದ್ದವಾಗಿರುವ ಭುಜಗಳುಳ್ಳ, ಮಹಾಬಲಂ - ಮಹಾ ಬಲಶಾಲಿಯಾದ, ಅಭಿರಾಮಂ - ಶ್ರೀರಾಮನನ್ನು, ಅಹಂ - ನಾನು, ದಂಡಕಾ - ದಂಡಕಾರಣ್ಯವನ್ನು ಕುರಿತು, ಕಥಂ ಪ್ರೇಷಯಿಷ್ಯಾಮಿ - ಹೇಗೆ ಕಳುಹಿಸುವೆನು. || ೧೦ || ಸುಖಾನಾಂ - ಸುಖಗಳಿಗೆ, ಉಚಿತಸ್ಯೈವ -

"ಕೈಕೇಯಿದೇವಿಯ ಪ್ರೀತಿಗೋಸುಗ ಶ್ರೀರಾಮನು ಅರಣ್ಯಕ್ಕಟ್ಟಲ್ಪಟ್ಟನು" ಎಂದು ಹೇಳಲೆ? ಆತನಿಗೆ ಪಟ್ಟಾಭಿಷೇಕ ಮಾಡುವೆನೆಂದು ಹೇಳಿದ ನುಡಿಯು ಸುಳ್ಳಾಗುವುದು! ಪೂರ್ವದಲ್ಲಿ ನಾನು ಅನೇಕ ವ್ರತೋಪವಾಸ ನಿಯಮಗಳಿಂದೀಶರೀರವನ್ನು ಬಾಡಿಸಿ, ಮಹಾ ಭುಜಬಲ ಪರಾಕ್ರಮಶಾಲಿಯಾದ ಶ್ರೀರಾಮನನ್ನು ಮಗನಾಗಿ ಪಡೆದೆನು; ಅಂತಹ ನನ್ನು ಈಗ ಅಟವಿಗೆ ಹೇಗೆತಾನೆ ಕಳುಹಿಸಲಿ! ಪ್ರಪಂಚದಲ್ಲಿ ರಾಜರು ಮಗನು ಅಪ್ರಯೋಜಕನಾದರೆ ಅವನಿಗೆ ರಾಜ್ಯಾಭಿಷೇಕವನ್ನು ಮಾಡದೆ ಬಿಡುತ್ತಾರೆ; ಶ್ರೀರಾಮನ ಗುಣಗಳನ್ನು ವಿಚಾರ ಮಾಡಹೋದರೆ ಅವನು ಮಹಾತ್ಮನೆನಿಸುವನು. ಆತನು ಶೂರನು; ಜಿತೇಂದ್ರಿಯನು; ಸೌಜನ್ಯ ಗುಣಸಂಪನ್ನನು; ತಾವರೆಯೆಸಳಿನಂತೆ ವಿಶಾಲವಾದ ಕಂಗಳುಳ್ಳವನು; ಇಂತಹ ರಘುನಾಥನನ್ನು ಹೇಗೆತಾನೆ ವನಕ್ಕಟ್ಟಲಿ! ಅಕಟಕಟಾ! ಕನ್ನೈದಿಲೆಯಂತೆ ಶ್ಯಾಮಲ ವರ್ಣವುಳ್ಳವನೂ, ದೀರ್ಘಬಾಹುವು, ಬಲಶಾಲಿಯೂ, ದಿವ್ಯ ಸುಂದರ ವಿಗ್ರಹನೂ ಆದ ಆ ರಘುರಾಮನನ್ನು ದಂಡಕಾರಣ್ಯಕ್ಕೆ ಹೇಗೆ ಕಳುಹಲಿ! ಕೈಕೇಯಿ! ಒಂದು ದಿನವಾದರೂ ಮಾರ್ಗಾಯಾಸ, ಹಸಿವು, ತೃಷ್ಣೆ ಇತ್ಯಾದಿಗಳನ್ನು ಕಾಣದಿರುವ ಆ ನನ್ನ ಮುದ್ದುಗುವರನನ್ನು ಆರಣ್ಯಕ್ಕೆ ಕಳುಹಿ ಹೇಗೆತಾನೆ ದುಃಖಿಸದಿರಲಿ! ಸುಖವನ್ನನುಭವಿಸಲು ಅರ್ಹನಾಗಿಯೂ, ದುಃಖವನ್ನು ಅನುಭವಿಸಲನರ್ಹನಾಗಿಯೂ ಇರುವ ಆ ಶ್ರೀರಾಮನ

ನುಪಶ್ಯೇಯಂ ಕಥಂ ರಾಮಸ್ಯ ಧೀಮತಃ ‖ ೧೧ ‖ ಯದಿದುಃಖಮಕೃ
ತ್ವಾದ್ಯ ಮಮಸಂಕ್ರಮಣಂ ಭವೇತ್ ‖ ಅದುಃಖಾರ್ಹಸ್ಯ ರಾಮಸ್ಯ ತತಸ್ಸುಖ
ಮವಾಪ್ನುಯಾಂ ‖ ೧೨ ‖ ನೃಶಂಸೇ ಪಾಪಸಂಕಲ್ಪೇ ರಾಮಂ ಸತ್ಯಪರಾ
ಕ್ರಮಂ ‖ ಕಿಂ ವಿಪ್ರಿಯೇಣ ಕೈಕೇಯಿ ಪ್ರಿಯಂ ಯೋಜಯಸೇ ಮಮ ‖೧೩‖
ಅಕೀರ್ತಿರತುಲಾ ಲೋಕೇ ಧ್ರುವಃ ಪರಿಭವಶ್ಚ ಮೇ ‖ ತಥಾ ವಿಲಪತಸ್ತಸ್ಯ
ಪರಿಭ್ರಮಿತ ಚೇತಸಃ ‖ ೧೪ ‖ ಅಸ್ತಮಭ್ಯಗಮತ್ಸೂರ್ಯೋ ರಜನೀ
ಚಾಭ್ಯವರ್ತತ ‖ ಸಾತ್ರಿಯಾಮಾ ತಥಾರ್ತಸ್ಯ ಚಂದ್ರಮಂಡಲ ಮಂಡಿತಾ

ಯೋಗ್ಯನಾಗಿರುವ, ದುಃಖಾನಾಂ - ದುಃಖಗಳಿಗೆ, ಅನುಚಿತಸ್ಯಚ - ಅನರ್ಹನಾದ, ಧೀಮತಃ - ಬುದ್ಧಿಶಾಲಿಯಾದ, ರಾಮಸ್ಯ - ಶ್ರೀರಾಮನ, ದುಃಖಂ - ದುಃಖವನ್ನು, ಕಥನ್ನಾಮ - ಹೇಗೆತಾನೇ, ಅನುಪಶ್ಯೇಯಂ - ನೋಡುವೆನು. ‖ ೧೧ ‖ ಅದುಃಖಾರ್ಹಸ್ಯ - ದುಃಖಗಳಿಗೆ ಯೋಗ್ಯನಲ್ಲದ, ರಾಮಸ್ಯ - ಶ್ರೀರಾಮನಿಗೆ, ದುಃಖಂ - ವನವಾಸ ದುಃಖವನ್ನು, ಅಕೃತ್ವಾ - ಮಾಡದೆ, ಅದ್ಯ-ಈಗ, ಮಮ - ನನಗೆ, ಸಂಕ್ರಮಣಂ - ಲೋಕಾಂತರ ಗಮನವು, ಭವೇದ್ಯದಿ - ಆದುದೆ ಆದರೆ, ತತಃ - ಬಳಿಕ, ಸುಖಂ - ಸುಖವನ್ನು, ಅವಾಪ್ನುಯಾಂ - ಹೊಂದುವೆನು. ‖ ೧೨ ‖ ಹೇನೃಶಂಸೇ - ಎಲೌ ಘಾತಕಳೇ, ಹೇಪಾಪಸಂಕಲ್ಪೇ - ಎಲೌ ಪಾಪದಲ್ಲಿ ಸಂಕಲ್ಪವುಳ್ಳವಳೆ, ಹೇಕೈಕೇಯಿ - ಎಲೌ ಕೇಕಯರಾಜನ ಮಗಳೇ, ಸತ್ಯಪರಾಕ್ರಮಂ - (ಮ) ಸತ್ಯದಿಂದ ಶತ್ರುಗಳನ್ನು ಸಂಹಾರಮಾಡುತ್ತಿರುವ, (ಗೋ) - ಸತ್ಯಪರಾಕ್ರಮಂ - ಸಫಲವಾದ ಪರಾಕ್ರಮವುಳ್ಳ, ಮಮ - ನನಗೆ, ಪ್ರಿಯಂ - ಇಷ್ಟನಾದ ಶ್ರೀರಾಮನನ್ನು, ವಿಪ್ರಿಯೇಣ - ಇಷ್ಟವಲ್ಲದಿರುವ ದಂಡಕಾರಣ್ಯಗಮನದಿಂದ, ಕಿಂಯೋಜಯಸೇ - ಏತಕ್ಕೆ ಕೂಡಿಸುವೆ. ‖ ೧೩ ‖ ಲೋಕೇ - ಲೋಕದಲ್ಲಿ, ತವ - ನಿನಗೆ, ಅತುಲಂ - ಸಮಾನವಲ್ಲದಿರುವ, ಅಕೀರ್ತಿಃ - ಅಪಕೀರ್ತಿಯು, ಮೇ - ನನಗೆ, ಪರಿಭವಶ್ಚ - ತಿರಸ್ಕಾರವೂ, ಧೃವಃ - ನಿಶ್ಚಯವು, ತಥಾ - ಆಪರಿಯಾಗಿ, ವಿಲಪತಃ - ರೋದಿಸುತ್ತಿರುವ, ತಸ್ಯ - ಆರಾಯನು, ಪರಿಭ್ರಮಿತಚೇತಸಃ - ಭ್ರಾಂತಿಗೊಳಿಸಲ್ಪಟ್ಟ ಮನಸುಳ್ಳವನಾಗುತ್ತಿರಲು, ಸೂರ್ಯಃ - ಸೂರ್ಯನು, ಅಸ್ತಂ - ಅಸ್ತಮಯ ಪರ್ವತವನ್ನು, ಅಭ್ಯಗಮತ್ - ಹೊಂದಿದನು, ರಜನೀಚ - ರಾತ್ರಿಯೂ, ಅಭ್ಯವರ್ತತ - ಪ್ರವರ್ತಿಸಿತು. ‖ ೧೪ ‖ ತಥಾ - ಹಾಗೆ, ಆರ್ತಸ್ಯ - ದುಃಖಗೊಂಡು, ವಿಲಪಮಾನಸ್ಯ - ಪ್ರಲಾಪಮಾಡುತ್ತಿರುವ, ರಾಜ್ಞಃ - ದಶರಥಮಹಾರಾಯನಿಗೆ, ಚಂದ್ರಮಂಡಲ

ದುಃಖವನ್ನು ಎಂತು ಸೈರಿಸಲಿ! ದುಃಖಸ್ವರೂಪವನ್ನೇ ತಿಳಿಯದ ನನ್ನ ಮಗನಿಗೆ ನಾನು ಬುದ್ಧಿಪೂರ್ವಕವಾಗಿ ದುಃಖವನ್ನುಂಟುಮಾಡದೆ, ಮೃತಿಯನ್ನೈದಿದರೆ ಪರಲೋಕದಲ್ಲಿಯಾದರೂ ಸುಖವಾಗಿರುತ್ತೇನೆ. ‖ ೭-೧೨ ‖ ಎಲೌ, ಘಾತಕಳೆ! ಪಾಪಿಷ್ಠೆ, ನನ್ನ ಮುದ್ದುಗುವರನಾದ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಬೇಕೆಂದು ಬಹು ಕಠಿಣ ನುಡಿಗಳಿಂದ ನನ್ನನ್ನು ನೋಯಿಸುತ್ತಿರುವೆ! ನಿನ್ನ ಮಾತನ್ನು ಕೇಳಿ ಆ ಶ್ರೀರಾಮನನ್ನು ವನಕ್ಕೆ ಕಳುಹಿದರೆ ನನಗೆ ಬಹಳವಾದ, ಅಪಯಶಸ್ಸೂ, ತಿರಸ್ಕಾರವೂ ಉಂಟಾಗುವುದು" ಈ ರೀತಿ ದಶರಥರಾಯನು ವಿಲಪಿಸುತ್ತಿರಲು ದಿನಕರನು ಅಸ್ತಂಗತನಾಗಿ ರಾತ್ರಿಯಾಯಿತು. ಚಂದ್ರ

॥ ೧೫ ॥ ರಾಜ್ಞೋ ವಿಲಪಮಾನಸ್ಯ ನವ್ಯಭಾಸತ ಶರ್ವರೀ ॥ ತಥೈವೋಷ್ಣಂ ವಿನಿಶ್ವಸ್ಯ ವೃದ್ಧೋ ದಶರಥೋ ನೃಪಃ ॥ ೧೬ ॥ ವಿಲಲಾಪಾರ್ತವದ್ದುಃಖಂ ಗಗನಾಸಕ್ತ ಲೋಚನಃ ॥ ನಪ್ರಭಾತಂ ತ್ವಯೇಚ್ಛಾಮಿ ನಿಶೇ ನಕ್ಷತ್ರ ಭೂಷಣೇ ॥ ೧೭ ॥ ಕ್ರಿಯತಾಂ ಮೇ ದಯಾ ಭದ್ರೇ ಮಯಾಯಂ ರಚಿತೋಂಜಲಿಃ ॥ ಅಥವಾ ಗಮ್ಯತಾಂ ಶೀಘ್ರಂ ನಾಹಮಿಚ್ಛಾಮಿ ನಿರ್ಘೃಣಾಂ ॥ ೧೮ ॥ ನೃಶಂಸಾಂ ಕೈಕಯೀಂ ದ್ರಷ್ಟುಂ ಯತ್ಕೃತೇ ವ್ಯಸನಂ ಮಹತ್ ॥ ಏವಮುಕ್ತ್ವಾ

ಮಂಡಿತಾ - (ಮ + ತಿ) ಚಂದ್ರ ಮಂಡಲದಿಂದ ಅಲಂಕೃತವಾದ, ಶರ್ವರೀ - ಆ ರಾತ್ರಿಯು, ತ್ರಿಯಾಮಾ - ಯಾಮತ್ರಯವುಳ್ಳುದಾದರೂ ದೀರ್ಘವಾದುದಾಗಿ, ನವ್ಯಭಾಸತ - ಪ್ರಕಾಶಿಸಲಿಲ್ಲ, (ಗೋ) - ಅತ್ರಿಯಾಮಾ - ಯಾಮತ್ರಯಾತೀತವಾಗಿ ದೀರ್ಘವಾದುದಾಗಿ, ನವ್ಯಭಾಸತ - ಪ್ರಕಾಶಿಸಲಿಲ್ಲವು. ॥ ೧೫ ॥ ವೃದ್ಧಃ - ಮುದುಕನಾದ, ದಶರಥೋನೃಪಃ - ದಶರಥರಾಯನು, ತಥೈವ - ಹಾಗೆಯೇ, ಉಷ್ಣಂ - ಬಿಸಿಯಾಗಿ, ವಿನಿಶ್ವಸ್ಯ - ನಿಟ್ಟುಸಿರು ಬಿಟ್ಟು, ಗಗನಾಸಕ್ತಲೋಚನಃ - ಅಂತರಿಕ್ಷದಲ್ಲಿಯೇ ನೆಟ್ಟದೃಷ್ಟಿಯುಳ್ಳವನಾಗಿ, ಆರ್ತವತ್ - (ಮ) ದೀನನಂತೆ, (ಗೋ) ಮಹಾ ರೋಗಿಷ್ಟನಂತೆ, ದುಃಖಂ - ದುಃಖವುಳ್ಳವನಂತೆ, ವಿಲಲಾಪ - ಶೋಕಿಸಿದನು. ॥ ೧೬ ॥ ಹೇನಿಶೇ - ಎಲೌ ರಾತ್ರಿಯೇ, ಹೇನಕ್ಷತ್ರಭೂಷಣೇ - ಎಲೌ ನಕ್ಷತ್ರಗಳೇ ಅಲಂಕಾರವಾಗುಳ್ಳವಳೇ, ಹೇಭದ್ರೇ - ಎಲೌ ಶುಭಕರಳೇ, ಮಯಾ - ನನ್ನಿಂದ, ಅಯಂಅಂಜಲಿಃ - ಈ ನಮಸ್ಕಾರವು, ರಚಿತಃ - ಮಾಡಲ್ಪಟ್ಟಿತು, ಮೇ - ನನಗೆ, ದಯಾ - ದಯೆಯು, ಕ್ರಿಯತಾಂ - ಮಾಡಲ್ಪಡಲಿ, ತ್ವಯಾ - ನಿನ್ನಿಂದ, ಪ್ರಭಾತಂ - ಬೆಳಗಾಗುವುದನ್ನು, ನೇಚ್ಛಾಮಿ - ಅಪೇಕ್ಷಿಸುವುದಿಲ್ಲ. ॥ ೧೭ ॥ ಅಥವಾ - ಹಾಗಲ್ಲದೆಹೋದರೆ, ಶೀಘ್ರಂ - ಜಾಗ್ರುತೆಯಾಗಿ, ಗಮ್ಯತಾಂ - ರಾತ್ರಿಯು ಕಳದುಹೋಗಲಿ, ನಿರ್ಘೃಣಾಂ - ದಯಾರಸವಿಲ್ಲದಿರುವ, ನೃಶಂಸಾಂ-ಘಾತಕಳಾದ, ಕೈಕೇಯೀಂ - ಕೇಕಯ ರಾಯನ ಮಗಳನ್ನು, ದ್ರಷ್ಟುಂ - ನೋಡಲು, ಅಹಂ - ನಾನು, ನೇಚ್ಛಾಮಿ - ಇಚ್ಛಿಸಲಾರೆನು, ಯತ್ಕೃತೇ - ಯಾವ ಕೈಕೇಯಿಗೋಸುಗ, ಮಹತ್ - ದೊಡ್ಡದಾದ, ವ್ಯಸನಂ - ವ್ಯಸನವೋ, ॥ ೧೮ ॥ ಏವಂ - ಹೀಗೆ, ಉಕ್ತ್ವಾ - ಹೇಳಿ, ತತಃ - ಬಳಿಕ, ರಾಜಾ - ದಶರಥರಾಯನು, ಸಂಯತಾಂಜಲಿಃ - ಕೈಮುಗಿದವನಾಗಿ, ಕೈಕೇಯೀಂ - ಕೈಕೇಯಿದೇವಿಯನ್ನು, ಪ್ರಸಾದಯಾಮಾಸ -

---

ಮಂಡಲದಿಂದಲಂಕೃತವಾದ ಆ ನಿಶೆಯೂ ಸಹ, ವಿಲಪಿಸುತ್ತಿರುವ ದಶರಥರಾಯನಿಗೆ ಪ್ರಕಾಶಿಸಲಿಲ್ಲವು. ॥೧೪-೧೫ ॥ ಈ ಪ್ರಕಾರವಾಗಿ ನಿಟ್ಟುಸಿರುಗಳನ್ನು ಬಿಡುತ್ತಲೂ, ಆಕಾಶದ ಕಡೆ ನೋಡುತ್ತಲೂ ಇರುವ ಆ ದಶರಥ ಮಹೀಪಾಲನು ರೋಗಪೀಡಿತನಂತೆ ವಿಲಪಿಸುತ್ತ, "ಎಲೌ ನಿಶೆಯೆ ! ನನ್ನಲ್ಲಿ ನಿನಗೆ ದಯೆಯಿದ್ದರೆ ಬೆಳಗಾಗಬೇಡ ! ನಿನಗೆ ಕೈಮುಗಿಯುತ್ತೇನೆ ! ಅಥವ ಬೇಗನೆ ಕಳೆದುಹೋಗು ! ಮಹಾ ಘಾತಕಿಯಾದ ಯಾವ ಈ ಕೈಕೇಯಿಯಿಂದ ನನಗೀರೀತಿಯಾದ ವ್ಯಸನವುಂಟಾಯಿತೋ ಅಂತಹ ಇವಳನ್ನು ನೋಡಲಾರೆನು" ಎಂದು ಹೇಳಿ ಬದ್ಧಾಂಜಲಿಪುಟನಾಗಿ ಆ ಕೈಕೇಯಿದೇವಿಯನ್ನು ಕುರಿತು, "ದೇವಿ ! ಒಳ್ಳೆಯ ನಡತೆಯುಳ್ಳವನೂ, ದೈನ್ಯವುಳ್ಳವನೂ, ನಿನ್ನಧೀನದಲ್ಲಿ ಸಿಲುಕಿದವನೂ,

ತತೋ ರಾಜಾ ಕೈಕೇಯೀಂ ಸಂಯುತಾಂಜಲಿಃ ॥ ೧೯ ॥ ಪ್ರಸಾದಯಾಮಾಸ ಪುನಃ ಕೈಕೇಯೀಮಿದಮಬ್ರವೀತ್ ॥ ಸಾಧುವೃತ್ತಸ್ಯ ದೀನಸ್ಯ ತ್ವದ್ಗತಸ್ಯ ಗತಾಯುಷಃ ॥ ೨೦ ॥ ಪ್ರಸಾದಃ ಕ್ರಿಯತಾಂ ದೇವೀ ಮಮ ರಾಜ್ಞೋ ವಿಶೇಷತಃ ॥ ಶೂನ್ಯೇನ ಖಲು ಸುಶ್ರೋಣೀ ಮಯೇದಂ ಸಮುದಾಹೃತಂ॥೨೧॥ ಕುರು ಸಾಧು ಪ್ರಸಾದಂ ಮೇ ಬಾಲೇ ಸಹೃದಯಾಹ್ಯಸಿ ॥ ಪ್ರಸೀದ ದೇವಿ ರಾಮೋ ಮೇ ತ್ವದ್ದತ್ತಂ ರಾಜ್ಯಮವ್ಯಯಂ ॥ ೨೨ ॥ ಲಭತಾಮಸಿತಾಪಾಂಗೇ ಯಶಃ ಪರಮವಾಪ್ನುಹಿ ॥ ಮಮ ರಾಮಸ್ಯ ಲೋಕಸ್ಯ ಗುರೂಣಾಂ ಭರ

ಸಮಾಧಾನಗೊಳಿಸಿದನು, ಪುನಃ - ಮತ್ತು, ಕೈಕೇಯೀಂಚ - ಕೈಕೇಯೀದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೯ ॥ ಹೇ ದೇವೀ - ಎಲೌ ದೇವಿಯೆ, ಹೇ ಭದ್ರೇ - ಎಲೌ ಶುಭಕರಳೆ, ಸಾಧುವೃತ್ತಸ್ಯ - ಸದ್ವ್ಯಾಪಾರಶೀಲನಾದ, ದೀನಸ್ಯ - ದೈನ್ಯವುಳ್ಳ, ತ್ವದ್ಗತಸ್ಯ - ನಿನ್ನನ್ನೇ ಹೊಂದಿಕೊಂಡಿರುವ, ಗತಾಯುಷಃ - ಗಳಿತವಾದ ಆಯುಸ್ಸುಳ್ಳ, ರಾಜ್ಞಃ - ಅರಸನಾದ ನನಗೆ, ಪ್ರಸಾದಃ - ಅನುಗ್ರಹವು, ವಿಶೇಷತಃ - ವಿಶೇಷವಾಗಿ, ಕ್ರಿಯತಾಂ - ಮಾಡಲ್ಪಡಲಿ, (ಗೋ) ವಿಶೇಷತಃ - ವಿಶೇಷವಾಗಿ, ರಾಜ್ಞಃ - ಪ್ರಭುತ್ವಮಾಡತಕ್ಕವನಿಗೆ, ಪ್ರಸಾದಃ - ಅನುಗ್ರಹವು, ಕ್ರಿಯತಾಂ - ಮಾಡಲ್ಪಡಲಿ. ॥ ೨೦ ॥ ಹೇಸುಶ್ರೋಣೀ - ಎಲೌ ಬೃಹನ್ನಿತಂಬ ಪ್ರದೇಶವುಳ್ಳವಳೇ, ಇದಂ - ಈ ಪಟ್ಟಾಭಿಷೇಕ ವಚನವು, ಶೂನ್ಯೇ - ಜನಶೂನ್ಯವಾದ ಪ್ರದೇಶದಲ್ಲಿ, ನಸಮುದಾಹೃತಂ - ಹೇಳಲ್ಪಡಲಿಲ್ಲ, ಹೇಬಾಲೇ - ಎಲೌ ತರುಣಿಯೇ, ಹಿ - ಯಾವಕಾರಣ, ಸಹೃದಯಾ-ನನ್ನಲ್ಲಿ ಕೇವಲ ಸೌಹಾರ್ದವುಳ್ಳವಳು, ಅಸಿ - ಆಗಿರುವೆಯೋ, ತಸ್ಮಾತ್-ಆಕಾರಣ, ಸಾಧು-ಚನ್ನಾಗಿ, ಮೇ - ನನಗೆ, ಪ್ರಸಾದಂ - ಅನುಗ್ರಹವನ್ನು, ಕುರು - ಮಾಡು. ॥ ೨೧ ॥ ಹೇದೇವಿ - ಎಲೌ ಕೈಕೇಯಿಯೆ, ರಾಮಃ - ಶ್ರೀರಾಮನು, ಮೇ - ನನಗೆ, ತ್ವದ್ದತ್ತಂ - ನಿನ್ನಿಂದ ಕೊಡಲ್ಪಟ್ಟ, ರಾಜ್ಯಂ - ರಾಜ್ಯವನ್ನು, ಅವ್ಯಯಂ - ನಾಶರಹಿತವಾಗಿ, ಲಭತಾಂ - ಹೊಂದಲಿ, ಪ್ರಸೀದ - ಪ್ರಸನ್ನಳಾಗು, ಹೇಅಸಿತಾಪಾಂಗೇ - ಎಲೌ ಕಪ್ಪಾಗಿರುವ ಕಟಾಕ್ಷವುಳ್ಳವಳೇ, ಪರಂ - ಬಹಳವಾದ, ಯಶಃ - ಕೀರ್ತಿಯನ್ನು, ಅವಾಪ್ನುಹಿ - ಹೊಂದುವೆ. ॥ ೨೨ ॥ ಹೇಗುರುಶ್ರೋಣೀ - ಎಲೌ ಬೃಹನ್ನಿತಂಬಪ್ರದೇಶವುಳ್ಳವಳೆ, ಹೇಚಾರುಮುಖೇಕ್ಷಣೇ - ಮನೋಹರವಾದ ಮುಖವೂ

ಕಳೆದುಹೋಗುತ್ತಿರುವ ಆಯುಸ್ಸುಳ್ಳವನೂ, ರಾಜನೂ ಆದ ನನ್ನನ್ನು ಅನುಗ್ರಹಿಸು. ಬಾಲೆ! ಶ್ರೀರಾಮಮೂರ್ತಿಗೆ ಪಟ್ಟಾಭಿಷೇಕವನ್ನು ಮಾಡುತ್ತೇನೆಂದು ನಾನು ರಹಸ್ಯವಾಗಿ ಹೇಳಲಿಲ್ಲವು. ಎಲ್ಲರ ಸಮಕ್ಷದಲ್ಲಿಯೂ ಹೇಳಿದ್ದೇನೆ. ನೀನು ನನ್ನಲ್ಲಿ ಪ್ರೀತಿಯುಳ್ಳವಳಾದುದರಿಂದ, ನಿನಗೆ ಹೇಳದಿದ್ದ ನನ್ನ ಅಪರಾಧವನ್ನು ಮನ್ನಿಸು. ಈಗ ನಿನ್ನಿಂದಲೇ ಕೊಡಲ್ಪಟ್ಟ ಈ ರಾಜ್ಯವನ್ನು ಶ್ರೀರಾಮನು ಪಡೆವವನಾಗಲಿ! ನಿನಗೆ ಬಹಳವಾದ ಕೀರ್ತಿಯುಂಟಾಗುವುದು. ಇದು ಶ್ರೀರಾಮನಿಗೂ, ಪ್ರಜೆಗಳಿಗೂ ಗುರುವಾದ ವಸಿಷ್ಠ ಮುನಿಗೂ, ಕಡೆಗೆ ನಿನ್ನ ಕುವರನಾದ ಭರತನಿಗೂ ಸಮ್ಮತವಾದುದು" ಎಂದು ಹೇಳಿದನು. ॥೧೯-೨೨॥ ಪರಿಶುದ್ಧವಾದ ಸ್ವಭಾವವುಳ್ಳವನೂ, ಕಂಬನಿದುಂಬಿದ ಕಂಗಳುಳ್ಳವನೂ ಆದ ಆ ರಾಯನ

ತಸ್ಯಚ ‖ ೨೩ ‖ ಪ್ರಿಯಮೇತದ್ಗುರುಶ್ರೋಣೀ ಕುರು ಚಾರು ಮುಖೇಕ್ಷಣೇ ‖ ೨೪ ‖ ವಿಶುದ್ಧ ಭಾವಸ್ಯ ಸುದುಷ್ಟಭಾವಾ ತಾಮ್ರೇಕ್ಷಣಸ್ಯಾಶ್ರುಕಲಸ್ಯ ರಾಜ್ಞಃ ‖ ಶ್ರುತ್ವಾ ವಿಚಿತ್ರಂ ಕರುಣಂ ವಿಲಾಪಂ ಭರ್ತುರ್ನೃಶಂಸಾ ನ ಚಕಾರ ವಾಕ್ಯಂ ‖ ೨೫ ‖ ತತಸ್ಸರಾಜಾ ಪುನರೇವ ಮೂರ್ಛಿತಃ ಪ್ರಿಯಾಮದುಷ್ಟಾಂ ಪ್ರತಿಕೂಲ ಭಾಷಿಣೀಂ ‖ ಸಮೀಕ್ಷ್ಯ ಪುತ್ರಸ್ಯ ವಿವಾಸನಂಪ್ರತಿ ಕ್ಷಿತೌ ವಿಸಂಜ್ಞೋ ನಿಪಪಾತ ದುಃಖಿತಃ ‖ ೨೬ ‖

ಕಣ್ಣುಗಳೂ ಉಳ್ಳವಳೇ, ಮಮ - ನನಗೂ, ರಾಮಸ್ಯ - ಶ್ರೀರಾಮನಿಗೂ, ಲೋಕಸ್ಯ - ಪ್ರಜೆಗಳಿಗೂ, ಗುರೂಣಾಂ - ವಸಿಷ್ಠರೇಮೊದಲಾದ ನಮ್ಮ ಕುಲಾಚಾರ್ಯರಿಗೂ, ಭರತಸ್ಯಚ - ಕಡೆಗೆ ನಿನ್ನಮಗನಾದ ಭರತನಿಗೂ, ಏತತ್ - ಈ, ಪ್ರಿಯಂ - ಇಷ್ಟವಾದ ಕಾರ್ಯವನ್ನು, ಕುರು - ಮಾಡು. ‖ ೨೩ ‖ ವಿಶುದ್ಧಭಾವಸ್ಯ - ನಿರ್ಮಲವಾದ ಅಂತಃಕರಣವುಳ್ಳ, ತಾಂಮ್ರೇಕ್ಷಣಸ್ಯ - ನಿದ್ದೆ ಇಲ್ಲದಿರುವುದರಿಂದಲೂ ವ್ಯಸನದಿಂದಲೂ ಕೆಂಗಣ್ಣುಗಳುಳ್ಳ, ಅಶ್ರುಕಲಸ್ಯ - ಕಣ್ಣೀರಿನಿಂದ ತುಂಬಿದ, ಭರ್ತುಃ - ಗಂಡನಾದ, ರಾಜ್ಞಃ - ದಶರಥರಾಯನ, ವಿಚಿತ್ರಂ - ಆಶ್ಚರ್ಯಕರವಾದ, ಕರುಣಂ - ದೈನ್ಯವನ್ನೂ, ವಿಲಾಪಂ - ಪ್ರಲಾಪವನ್ನೂ, ಶೃತ್ವಾ - ಕೇಳಿಯೂ ಕೂಡ, ನೃಶಂಸಾ - ಘಾತಕಳಾದ, ಸುದುಷ್ಟಭಾವಾ - ದುಷ್ಟಸ್ವಭಾವವುಳ್ಳ ಕೈಕೇಯಿಯು, ಭರ್ತುಃ - ಗಂಡನ, ವಾಕ್ಯಂ - ವಚನವನ್ನು, ನಚಕಾರ - ಕೇಳದೇಹೋದಳು. ‖ ೨೪ ‖ ತತಃ - ಬಳಿಕ, ಸರಾಜಾ - ಆ ದಶರಥರಾಯನು, ಪುನರೇವ - ಮತ್ತೂ, ಮೂರ್ಛಿತಃ - ಮೂರ್ಛೆಗೊಂಡು, ಪ್ರಿಯಾಂ-ಇಷ್ಟಳಾದ, ಅದುಷ್ಟಾಂ-ಪೂರ್ವದಲ್ಲಿ ಪತಿವ್ರತೆಯಾದ,ಪ್ರತಿಕೂಲಭಾಷಿಣೀಂ-ಈಗ ದೈವಾಧೀನದಿಂದ ಪ್ರತಿಕೂಲವಾಗಿ ಮಾತನಾಡುತ್ತಿರುವ, ಕೈಕೇಯಿಾಂ - ಕೈಕೇಯಿಯನ್ನು, ಪ್ರತೀಕ್ಷ್ಯ - ನೋಡಿ, ಪುತ್ರಸ್ಯ - ಮಗನಾದ ಶ್ರೀರಾಮನ, ವಿವಾಸನಂಪ್ರತಿ - ವನವಾಸವನ್ನು ಕುರಿತು, ದುಃಖಿತಃ-ದುಃಖಿಸಿ, ವಿಸಂಜ್ಞಃ - ಪ್ರಜ್ಞೆತಪ್ಪಿ, ಕ್ಷಿತೌ - ನೆಲದಲ್ಲಿ, ನಿಪಪಾತ - ಬಿದ್ದನು. ‖ ೨೫ ‖ ಇತೀವ - ಹೀಗೆ, ವ್ಯಥಿತಸ್ಯ - ವ್ಯಸನಬೀಳುತ್ತಿರುವ, ಘೋರಂ - ಭಯಂಕರವಾಗಿ, ಶ್ವಸತಃ - ನಿಟ್ಟುಸಿರು ಬಿಡುತ್ತಿರುವ, ಮನಸ್ವಿನಃ - ಮಹಾಮನಸ್ವಿಯಾದ, ರಾಜ್ಞಃ - ದಶರಥರಾಯನಿಗೆ, ಸಾನಿಶಾ - ಆ ರಾತ್ರಿಯು, ಜಗಾಮ - ಕಳೆದುಹೋಯಿತು, ವಿಬೋಧ್ಯಮಾನಃ - ಭಟ್ಟರಾಜರಿಂದ ಎಚ್ಚರಗೊಳಿಸಲ್ಪಟ್ಟ, ರಾಜಸತ್ತಮಃ - ರಾಜ

ಈ ರೀತಿಯಾಗಿ ಪ್ರಲಾಪವನ್ನು ಕೇಳಿ, ದಯಾರಹಿತಳಾದ ಆ ಕೈಕೇಯಿಯು ಉತ್ತರವನ್ನೀಯದಿರಲು, ದಶರಥನು ಮತ್ತೆ ಮೂರ್ಛೆಯಾಂತು, ದುಷ್ಟೆಯಲ್ಲದಿದ್ದರೂ ತನಗೆ ಪ್ರತಿಕೂಲವಾಗಿಯೇ ನುಡಿಯುತ್ತಲಿದ್ದ ಆ ಕೈಕೇಯಿಯನ್ನು ಕಂಡು, ಶ್ರೀರಾಮನ ವನವಾಸವನ್ನು ನೆನಪಿಗೆ ತಂದುಕೊಂಡು ನೆಲಕ್ಕೆ ಬಿದ್ದನು. ಹೀಗೆ ದಶರಥ ಭೂನಾಥನು ದುಃಖಿಸುತ್ತಿರುವಾಗಲೆ ರಾತ್ರಿಯು ಕಳೆದುಹೋಯಿತು ಆ ಬಳಿಕ ಪ್ರಾತಃಕಾಲದಲ್ಲಿ

ಇತೀವರಾಜ್ಞೋ ವ್ಯಥಿತಸ್ಯ ಸಾ ನಿಶಾ
ಜಗಾಮ ಘೋರಂ ಶ್ವಸತೋ ಮನಸ್ವಿನಃ ||
ವಿಬೋಧ್ಯಮಾನಃ ಪ್ರತಿಬೋಧನಂ ತದಾ
ನಿವಾರಯಾಮಾಸ ಸರಾಜಸತ್ತಮಃ || ೨೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋದಶಸ್ಸರ್ಗಃ

ಶ್ರೇಷ್ಠನಾದ, ಸಃ - ಆ ದಶರಥರಾಯನು, ತದಾ - ಆ ಪ್ರಾತಃಕಾಲದಲ್ಲಿ, ಪ್ರತಿಬೋಧನಂ - ಎಚ್ಚರಗೊಳಿಸಲು ಅನುಕೂಲವಾದ ಮಂಗಳವಾದ್ಯಗಳನ್ನು, ನಿವಾರಯಾಮಾಸ - ಅಡ್ಡಿ ಮಾಡಿದನು. ||೨೬||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋದಶಸ್ಸರ್ಗಃ

ಸ್ತುತಿಪಾಠಕರು ಮಂಗಳವಾದ್ಯಗಳಿಂದೊಡಗೂಡಿ ಆ ರಾಯನನ್ನು ಎಚ್ಚರಗೊಳಿಸಲು ಆತನವುಗಳೆಲ್ಲವನ್ನೂ ಬೇಡವೆಂದು ನಿರೋಧಿಸಿದವನಾದನು. || ೨೩-೨೬ ||

ಇಂತಿದು ದಶರಥರಾಜ ವಿಲಾಪ ಕಥಾಕಥನವೆಂಬ
ಹದಿಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುರ್ದಶಸ್ಸರ್ಗಃ.

ಪುತ್ರಶೋಕಾರ್ದಿತಂ ಪಾಪಾ ವಿಸಂಜ್ಞಂ ಪತಿತಂ ಭುವಿ ॥ ವಿವೇಷ್ಟ
ಮಾನಮುದ್ವೀಕ್ಷ್ಯ ಸೈಕ್ಷ್ವಾಕುಮಿದಮಬ್ರವೀತ್ ॥ ೧ ॥ ಪಾಪಂ ಕೃತ್ವೈವ
ಕಿಮಿದಂ ಮಮ ಸಂಶ್ರುತ್ಯ ಸಂಶ್ರವಂ ॥ ಶೇಷೇ ಕ್ಷಿತಿತಲೇ ಸನ್ನಃ ಸ್ಥಿತ್ಯಾಂ ತ್ವಂ
ಸ್ಥಾತು ಮರ್ಹಸಿ ॥ ೨ ॥ ಆಹುಸ್ಸತ್ಯಂಹಿ ಪರಮಂ ಧರ್ಮಂ ಧರ್ಮವಿದೋ
ಜನಾಃ ॥ ಸತ್ಯಮಾಶ್ರಿತ್ಯ ಹಿ ಮಯಾ ತ್ವಂಚ ಧರ್ಮಂ ಪ್ರಚೋದಿತಃ ॥ ೩ ॥
ಸಂಶ್ರುತ್ಯ ಶೈಬ್ಯಶ್ಶ್ಯೇನಾಯ ಸ್ವಾಂ ತನುಂ ಜಗತೀ ಪತಿಃ ॥ ಪ್ರದಾಯ

ಪುತ್ರಶೋಕಾರ್ದಿತಂ - ಪುತ್ರಶೋಕದಿಂದ ಬಾಧಿತನಾಗಿ, ವಿಸಂಜ್ಞಂ - ಪ್ರಜ್ಞೆತಪ್ಪಿ, ಭುವಿ - ನೆಲದಲ್ಲಿ, ಪತಿತಂ - ಬಿದ್ದಿರುವ, ವಿವೇಷ್ಟಮಾನಂ - ಹೊರಳಾಡುತ್ತಿರುವ, ಇಕ್ಷ್ವಾಕುಂ - ಇಕ್ಷ್ವಾಕು ಮಹಾರಾಯನ ವಂಶಸ್ಥನಾದ ದಶರಥರಾಯನನ್ನು, ಉದ್ವೀಕ್ಷ್ಯ - ಕಂಡು, ಪಾಪಾ-ಪಾಪಿಷ್ಠಳಾದ, ಸಾ - ಆ ಕೈಕೇಯಿಯು, ಇದಂ - ಈ ಮುಂದೆ ಹೇಳುವ ಮಾತನ್ನು, ಅಬ್ರವೀತ್ - ನುಡಿದಳು. ॥೧॥ ಮಮ - ನನಗೆ, ಸಂಶ್ರವಂ - ವರವನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು, ಸಂಶ್ರುತ್ಯ - ಮಾಡಿ, ಪಾಪಂ - ಪ್ರತಿಜ್ಞೆಯನ್ನು ನಡೆಯಿಸುವುದಿಲ್ಲವೆಂಬ ದೋಷವನ್ನು, ಕೃತ್ವಾ - ಮಾಡಿ, ಕ್ಷಿತಿತಲೇ - ಭೂತಲದಲ್ಲಿ, ಸನ್ನಃ - ಅವಸನ್ನನಾಗಿ, ಶೇಷೇ - ಮಲಗಿರುವೆ, ಕಿಮಿದಂ - ಇದೇನು, ಸ್ಥಿತ್ಯಾಂ - ಪ್ರತಿಜ್ಞಾಪರಿಪಾಲನೆಯೆಂಬುದರಲ್ಲಿ, ಸ್ಥಾತುಂ - ಇರಲು, ತ್ವಂ - ನೀನು, ಅರ್ಹಸಿ - ಯೋಗ್ಯನಾಗು. ॥ ೨ ॥ ಧರ್ಮವಿದಃ - ಧರ್ಮಜ್ಞರಾದ, ಜನಾಃ - ಜನರು, ಸತ್ಯಂ - ಸತ್ಯವನ್ನೇ, ಪರಮಂ - ಶ್ರೇಷ್ಠವಾದ, ಧರ್ಮಂ - ಧರ್ಮವನ್ನಾಗಿ, ಆಹುಃ - ಹೇಳುತ್ತಾರೆ, ಸತ್ಯಂ - ಸತ್ಯವನ್ನು, ಆಶ್ರಿತ್ಯ - ಅವಲಂಬಿಸಿ, ತ್ವಂಚ - ನೀನೂ, ಮಯಾ - ನನ್ನಿಂದ, ಧರ್ಮಂ - ಧರ್ಮವನ್ನು ಕುರಿತು, ಪ್ರಚೋದಿತಃ - ಪ್ರೇರೇಪಿಸಲ್ಪಟ್ಟಿವೆ. ॥ ೩ ॥ ಹೇರಾಜನ್ - ಎಲೈ ದಶರಥರಾಯನೇ, ಶೈಬ್ಯಃ - ಶಿಬಿಚಕ್ರವರ್ತಿ ಎಂಬ, ಜಗತೀಪತಿಃ - ರಾಜನು, ಸಂಶ್ರುತ್ಯ - ಪ್ರತಿಜ್ಞೆಮಾಡಿ, ಶ್ಯೇನಾಯ - ಗಿಡಗನೆಂಬ, ಪಕ್ಷಿಣೇ - ಪಕ್ಷಿಗೋಸುಗ, ಸ್ವಾಂತನುಂ - ತನ್ನ ಶರೀರವನ್ನು, ಪ್ರದಾಯ - ಕೊಟ್ಟು,

---

ಆ ಬಳಿಕ ಮಹಾ ಪಾಪಿನಿಯಾದ ಕೈಕೇಯಿಯು, ಪುತ್ರಶೋಕಸಂತಪ್ತನಾಗಿ, ಮರೆವು ತಪ್ಪಿ ಭೂಮಿಯಲ್ಲಿ ಬಿದ್ದು ನರಳಿ ನರಳಿ ಹೊರಳಾಡುತ್ತಿರುವ ಭೂನಾಥನಾದ ದಶರಥರಾಯನನ್ನು ಕುರಿತು, "ಎಲೈ ರಾಯನೆ! ಮೊದಲು ನಾನು ಬೇಡಿದುದನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ, ಈಗ ಅದನ್ನು ತಪ್ಪುವಿಕೆಯೆಂಬ ಪಾಪವನ್ನು ಮಾಡುತ್ತ ನೆಲದಮೇಲೆ ಬಿದ್ದು ಹೊರಳಾಡುತ್ತಿರುವೆ; ಇದು ನಿನಗೆ ತಕ್ಕುದಲ್ಲ; ಮಾತಿಗೆತಪ್ಪಿ ನಡೆಯಬೇಡ; ಮೇಲಕ್ಕೇಳು. ಈ ಪ್ರಪಂಚದಲ್ಲಿ ಧರ್ಮದ ತಿರುಳನ್ನು ಬಲ್ಲವರೆಲ್ಲರೂ, ಸತ್ಯವೇ ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ. ನಾನು ಸತ್ಯವನ್ನೇ ಆಶ್ರಯಿಸಿರುವೆ

ಪಕ್ಷಿಣೇ ರಾಜಾ ಜಗಾಮ ಗತಿಮುತ್ತಮಾಂ ‖ ೪ ‖ ತಥಾಹ್ಯಲರ್ಕ ಸ್ತೇಜಸ್ವೀ ಬ್ರಾಹ್ಮಣೇ ವೇದಪಾರಗೇ ‖ ಯಾಚಮಾನೇ ಸ್ವಕೇ ನೇತ್ರೇ ಉದ್ಧೃತ್ಯ ಸುಮನಾ ದದೌ ‖ ೫ ‖ ಸರಿತಾಂತು ಪತಿಸ್ಸ್ವಲ್ಪಾಂ ಮರ್ಯಾದಾಂ ಸತ್ಯಮನ್ವಿತಃ ‖ ಸತ್ಯಾನುರೋಧಾತ್ಸಮಯೇ ಸ್ವಾಂ ವೇಲಾಂ ನಾತಿ ವರ್ತತೇ ‖ ೬ ‖ ಸತ್ಯ ಮೇಕಪದಂ ಬ್ರಹ್ಮ ಸತ್ಯೇ ಧರ್ಮಃ ಪ್ರತಿಷ್ಠಿತಃ ‖ ಸತ್ಯಮೇವಾಕ್ಷಯಾ ವೇದಾಸ್ಸತ್ಯೇನೈವಾಪ್ಯತೇ ಪರಂ ‖ ೭ ‖ ಸತ್ಯಂ ಸಮನುವರ್ತಸ್ವ ಯದಿ ಧರ್ಮೇ ಧೃತಾ ಮತಿಃ ‖ ಸಫಲಸ್ಸವರೋ ಮೇಸ್ತು

ಉತ್ತಮಾಂ - ಉತ್ಕೃಷ್ಟವಾದ, ಗತಿಂ - ಸದ್ಗತಿಯನ್ನು, ಜಗಾಮ - ಹೊಂದಿದನು. ‖ ೪ ‖ ತಥಾ-ಹಾಗೆಯೇ, ಸುಮನಾಃ - ನಿರ್ಮಲಾಂತಃಕರಣವುಳ್ಳ, ತೇಜಸ್ವೀ - ತೇಜೋವಂತನಾದ, ಅಲರ್ಕಃ-ಅಲರ್ಕನೆಂಬ ರಾಜರ್ಷಿಯು, ವೇದಪಾರಗೇ - ವೇದಪಾರಂಗತನಾದ, ಯಾಚಮಾನೇ - ಬೇಡುತ್ತಿರುವ, ಬ್ರಾಹ್ಮಣೇ - ಬ್ರಾಹ್ಮಣನಿಗೆ, ಸ್ವಕೇ - ತನ್ನ, ನೇತ್ರೇ - ಕಣ್ಣುಗಳನ್ನು, ಉಧೃತ್ಯ - ಕಿತ್ತು, ದದೌ - ಕೊಟ್ಟನು. ‖ ೫ ‖ ಸರಿತಾಂಪತಿಸ್ತು - ಸಮುದ್ರ ರಾಜನಾದರೋ, ಮರ್ಯಾದಾಂ-ಮರ್ಯಾದಾರೂಪವಾದ, ಸತ್ಯಂ - ಸತ್ಯವನ್ನು, ಅನ್ವಿತಸ್ಸ್ - ಒಳಗೊಂಡು, ಸತ್ಯಾನುರೋಧಾತ್-ಸತ್ಯದ ಅನುಸರಣೆಯಿಂದ, ಸಮಯೇ - ತನ್ನ ಅಭ್ಯುದಯದಲ್ಲಿಯೂ ಸಹ, ಸ್ವಲ್ಪಾಂ - ಸ್ವಲ್ಪವಾದರೂ, ಸ್ವಾಂ - ತನ್ನ, ವೇಲಾಂ - ದಡವನ್ನು, ನಾತಿವರ್ತತೇ - ಅತಿಕ್ರಮಿಸುವುದಿಲ್ಲವು. ‖ ೬ ‖ ಸತ್ಯಂ - ಸತ್ಯವೇ, ಏಕಪದಂ - ಮುಖ್ಯವಾಗಿ ಹೊಂದತಕ್ಕದಾದ, ಬ್ರಹ್ಮ - ಪ್ರಣವಸ್ವರೂಪವಾದುದು, (ಗೋ) - ಏಕಪದಂ - ಒಂದೇ ಪ್ರಣವರೂಪಪದವುಳ್ಳ, ಸತ್ಯಂ - ಸತ್ಯಸ್ವರೂಪನಾದ, ಬ್ರಹ್ಮ - ಪರಬ್ರಹ್ಮಪ್ರತಿಪಾದಿಕವಾದದು, ಸತ್ಯೇ - ಸತ್ಯದಲ್ಲಿ, ಧರ್ಮಃ - ಧರ್ಮವು, ಪ್ರತಿಷ್ಠಿತಃ - ಪ್ರತಿಷ್ಠಾಪಿಸಲ್ಪಟ್ಟಿದ್ದು, ಸತ್ಯಮೇವ - ಸತ್ಯವೇ, ಅಕ್ಷಯಾಃ - ನಾಶರಹಿತಗಳಾದ, ವೇದಾಃ - ವೇದಗಳು, ಸತ್ಯೇನೈವ - ಸತ್ಯದಿಂದಲೇ, ಪರಂಪ್ರಾಪ್ಯತೆ - ಬಹಳವಾಗಿ ಹೊಂದತಕ್ಕದು. ‖ ೭ ‖ ಹೇಸತ್ತಮ - ಎಲೈ ಸತ್ಪುರುಷನೇ, ಧರ್ಮೇ - ಧರ್ಮದಲ್ಲಿ, ಮತಿಃ - ಬುದ್ಧಿಯು, ಧೃತಾಯದಿ - ಧರಿಸಲ್ಪಟ್ಟಿದ್ದೇ ಆದರೆ, ಸತ್ಯಂ - ಸತ್ಯವನ್ನು, ಸಮನುವರ್ತಸ್ವ - ಅನುಸರಿಸು, ಮೇ - ನನ್ನ, ಸವರಃ - ಆ ಶ್ರೀರಾಮನಿಗೆ ವನವಾಸರೂಪವಾದವರವು, ಸಫಲಃ - ಸಪ್ರಯೋಜನವಾದುದು, ಅಸ್ತು-

---

ನಾದುದರಿಂದ ನಿನಗೇ ಧರ್ಮವನ್ನು ಹೇಳಿರುವೆನು. ಕೇಳು ; ಶಿಬಿಚಕ್ರವರ್ತಿಯು ಪ್ರತಿಜ್ಞೆಯನ್ನು ಮಾಡಿ ಗಿಡಗನಿಗೆ ತನ್ನ ಶರೀರವನ್ನು ಆಹಾರಕ್ಕೋಸುಗ ಕೊಟ್ಟು ಉತ್ತಮವಾದ ಗತಿಯನ್ನು ಪಡೆದನು. ಅಲರ್ಕ ಮಹಾರಾಜನು, ವೇದಪಾರಂಗತನಾದ ವಿಪ್ರವರೇಣ್ಯನು ಕಣ್ಣುಗಳನ್ನು ಕೇಳಲು, ಲಕ್ಷಣವಾದ ತನ್ನ ಕಣ್ಣುಗಳನ್ನೇ ತೆಗೆದು ಕೊಟ್ಟವನಾದನು.‖೧-೫‖ ಇದಲ್ಲದೆ ಸರಿತ್ಪತಿಯಾದ ಸಮುದ್ರನು ಸತ್ಯಪಾಶಕ್ಕೊಳಪಟ್ಟು ತನ್ನ ಮಿತಿಯನ್ನು ಮೀರುವುದಿಲ್ಲ. ಸತ್ಯವೇ ಪ್ರಣವಸ್ವರೂಪವಾದ ಪರಬ್ರಹ್ಮವು; ಧರ್ಮವು ಸತ್ಯದಲ್ಲಿಯೇ ಪ್ರತಿಷ್ಠಿತವಾಗಿರುವುದು. ವೇದಸ್ವರೂಪವೂ ಸಹ ಸತ್ಯವೆ; ಹೆಚ್ಚೇನು ; ಸತ್ಯದಿಂದ, ಸಕಲವೂ ಪ್ರವೃತ್ತವಾಗಿರುವುದು. ರಾಜೇಂದ್ರನೆ! ನಿನ್ನ ಬುದ್ಧಿಯು ಧರ್ಮದಲ್ಲಿಯೇ ಆಸಕ್ತ

ವರದೋಽಹ್ಯಸಿ ಸತ್ತಮ ॥ ೮ ॥ ಧರ್ಮಸ್ಯೇಹಾಭಿಕಾಮಾರ್ಥಂ ಮಮ ಚೈವಾಭಿಚೋದನಾತ್ ॥ ಪ್ರವ್ರಾಜಯ ಸುತಂ ರಾಮಂ ತ್ರಿಃಖಲು ತ್ವಾಂ ಬ್ರವೀಮ್ಯಹಂ ॥ ೯ ॥ ಸಮಯಂ ಚ ಮಮಾರ್ಯೇಮಂ ಯದಿ ತ್ವಂ ನಕರಿಷ್ಯಸಿ ॥ ಅಗ್ರತಸ್ತೇ ಪರಿತ್ಯಕ್ತಾ ಪರಿತ್ಯಕ್ಷ್ಯಾಮಿ ಜೀವಿತಂ ॥ ೧೦ ॥ ಏವಂ ಪ್ರಚೋದಿತೋ ರಾಜಾ ಕೈಕೇಯ್ಯಾ ನಿರ್ವಿಶಂಕಯಾ ॥ ನಾಶಕತ್ಪಾಶಮುನ್ಮೋಕ್ತುಂ ಬಲಿರಿಂದ್ರಕೃತಂ ಯಥಾ ॥ ೧೧ ॥ ಉದ್ಭ್ರಾಂತ ಹೃದಯಶ್ಚಾಪಿ ವಿವರ್ಣ ವದನೋಽಭವತ್ ॥ ಸ ಧುರ್ಯೋವೈ ಪರಿಸ್ಪಂದರ್ ಯುಗಚ

ಆಗಲಿ, ತ್ವಮಪಿ - ನೀನೂ, ವರದಃ - ವರಪ್ರದಾತನು, ಅಸಿ - ಆಗುವೆ. ॥ ೮ ॥ ಧರ್ಮಸ್ಯ - ಧರ್ಮದ, ಅಭಿಕಾಮಾರ್ಥಂ - ಪಾಲನೆಗಾಗಿ, ಮಮ - ನನ್ನ, ಅಭಿಚೋದನಾದೇವ - ಪ್ರೇರಣೆಯಂತೆಯೇ, ಸುತಂ - ಮಗನಾದ, ರಾಮಂ - ಶ್ರೀರಾಮನನ್ನು, ಪ್ರವ್ರಾಜಯ - ಕಳುಹಿಕೊಡು, ಏವಂ - ಹೀಗೆ, ತ್ವಾಂ - ನಿನ್ನನ್ನು, ಅಹಂ - ನಾನು, ತ್ರಿಃ - ಒಂದುಸಲವಲ್ಲ ಮೂರು ಮೂರು ಬಾರಿಗೂ, ಬ್ರವೀಮಿ - ಹೇಳುತ್ತೇನೆ. ॥ ೯ ॥ ಹೇಆರ್ಯ - ಎಲೈ ಪೂಜ್ಯನೇ, ಮಮ - ನನ್ನ, ಇಮಂ - ಈ, ಸಮಯಂ - ಶಪಥವನ್ನು, ತ್ವಂ - ನೀನು, ನಕರಿಷ್ಯಸಿಯದಿ - ಮಾಡದೇ ಹೋದರೆ, ಪರಿತ್ಯಕ್ತಾ - ನಿನ್ನಿಂದ ನಿರಾಕೃತಳಾದ ನಾನು, ತೇ - ನಿನ್ನ, ಅಗ್ರತಃ - ಮುಂಗಡೆ, ಜೀವಿತಂ - ಪ್ರಾಣವನ್ನು, ಪರಿತ್ಯಕ್ಷ್ಯಾಮಿ - ಕಳೆದುಕೊಳ್ಳುತ್ತೇನೆ. ॥ ೧೦ ॥ ಏವಂ - ಈ ಪರಿಯಾಗಿ, ರಾಜಾ - ದಶರಥರಾಯನು, ನಿರ್ವಿಶಂಕಯಾ - ನಿರ್ಭಯಳಾದ, ಕೈಕೇಯ್ಯಾ - ಕೈಕೇಯಿಯಿಂದ, ಚೋದಿತಃ-ಪ್ರೇರಿತನಾಗಿ, ಬಲಿಃ - ಬಲಿಚಕ್ರವರ್ತಿಯು, ಇಂದ್ರಕೃತಂ - ಉಪೇಂದ್ರನಿಂದೊಡ್ಡಲ್ಪಟ್ಟ ಪಾಶದಂತೆ, ಪಾಶಂ - ಕೈಕೇಯಿಯ ನಿರ್ಬಂಧರೂಪವಾದ ಸತ್ಯಪಾಶವನ್ನು, ಉನ್ಮೋಕ್ತುಂ - ಬಿಡಿಸಿಕೊಳ್ಳಲು, ನಾಶಕತ್ - ಸಮರ್ಥನಾಗದೆ ಹೋದನು. ॥ ೧೧ ॥ ಸಃ - ಆ ದಶರಥರಾಯನು, ಯುಗಚಕ್ರಾಂತರಂ, ಯುಗ - ಕಾಡಿಮರದ, ಚಕ್ರ - ಭಂಡಿಯಚಕ್ರಗಳ, ಅಂತರಂ - ಮಧ್ಯಪ್ರದೇಶದಲ್ಲಿ, ಪರಿಸ್ಪಂದರ್ - ಹೋಗುತ್ತಿರುವ, ಧುರ್ಯೋಯಥಾ - ಎತ್ತಿನಂತೆ, ಉದ್ಭ್ರಾಂತಹೃದಯಶ್ಚಾಪಿ, ಉದ್ಭ್ರಾಂತ - ಭ್ರಾಂತಿಗೊಂಡ, ಹೃದಯಶ್ಚಾಪಿ - ಹೃದಯವುಳ್ಳವನಾಗಿಯೂ, ವಿವರ್ಣವದನಃ,

---

ವಾಗಿದ್ದರೆ ಸತ್ಯವನ್ನವಲಂಬಿಸು. ನೀನೆನಗೆ ದಯಪಾಲಿಸಿದ ವರವೂ ಸಹ ಸಫಲವಾಗುವುದು. ಧರ್ಮ ಪರಿಪಾಲನೆಗಾಗಿ, ನನ್ನ ಪ್ರೇರಣೆಯಿಂದೀಗ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸು. ಮೂರು ಮೂರು ಬಾರಿಗೂ ಒತ್ತಿ ಒತ್ತಿ ಹೇಳುತ್ತೇನೆ. “ಎಲೈ ಪೂಜ್ಯನೆ! ನೀನೀ ಪ್ರತಿಜ್ಞೆಯನ್ನು ನೆರವೇರಿಸದಿದ್ದರೆ, ನಿನ್ನಿಂದ ಅವಮಾನಿತಳಾಗುವ ನಾನು ಪ್ರಾಣಗಳನ್ನು ಬಿಡುವವಳಾಗುತ್ತೇನೆ” ಎಂದಳು. ॥ ೬-೧೦ ॥ ಈ ರೀತಿ ಏನೊಂದೂ ಭಯವಿಲ್ಲದೆ ನುಡಿಯುತ್ತಿರುವ ಕೈಕೇಯಿಯಿಂದ ಪೀಡಿತನಾಗಿಯೂ, ಹಿಂದೆ ದೇವೇಂದ್ರನಿಂದ ಉರುಲು ಹಾಕಲ್ಪಟ್ಟ ಬಲಿಚಕ್ರವರ್ತಿಯಂತೆ ಆಕೆಯ ಮಾತನ್ನು ಮೀರಲಶಕ್ತನಾಗಿ ಕಳವಳಗೊಂಡ ಮನವುಳ್ಳವನಾಗಿಯೂ, ಕಾಂತಿ ಗುಂದಿದ ಮುಖವುಳ್ಳವನಾಗಿಯೂ ಆಗಿ, ಫಾಲಿನೊಗಗಳ ಮಧ್ಯ ಪ್ರದೇಶದಲ್ಲಿ ಸಿಲುಕಿದ ಎತ್ತಿನಂತೆ ಬಹಳವಾಗಿ ದುಃಖ ಪಡುತ್ತಿದ್ದು, ಕಂಬನಿ

ಕ್ಕಾಂತರಂ ಯಥಾ ॥ ೧೨ ॥ ವಿಹ್ವಲಾಭ್ಯಾಂ ಚ ನೇತ್ರಾಭ್ಯಾಮಪಶ್ಯನ್ನಿವ ಭೂಪತಿಃ ॥ ಕೃಛ್ರಾದ್ಧೈರ್ಯೇಣ ಸಂಸ್ತಭ್ಯ ಕೈಕೇಯೀಮಿದಮಬ್ರವೀತ್ ॥ ೧೩ ॥ ಯಸ್ತೇ ಮಂತ್ರಕೃತಃ ಪಾಣಿರಗ್ನೌ ಪಾಪೇ ಮಯಾ ಧೃತಃ ॥ ತಂ ತ್ಯಜಾಮಿ ಸ್ವಜಂ ಚಾಪಿ ತವಪುತ್ರಂ ತ್ವಯಾಸಹ ॥ ೧೪ ॥ ಪ್ರಯಾತಾ ರಜನೀ ದೇವೀ ಸೂರ್ಯಸ್ಯೋದಯನಂ ಪ್ರತಿ ॥ ಅಭಿಷೇಕಂ ಗುರುಜನಸ್ತ್ವರ ಯಿಷ್ಯತಿ ಮಾಂ ಧ್ರುವಂ ॥ ೧೫ ॥ ರಾಮಾಭಿಷೇಕ ಸಂಭಾರೈ ಸ್ತದರ್ಥ ಮುಪಕಲ್ಪಿತೈಃ ॥ ರಾಮಃ ಕಾರಯಿತವ್ಯೋ ಮೇ ಮೃತಸ್ಯ ಸಲಿಲಕ್ರಿಯಾಂ

ವಿವರ್ಣ - ಬಣ್ಣಗೆಟ್ಟ, ವದನಃ - ಮುಖವುಳ್ಳವನಾಗಿಯೂ, ಅಭವತ್ - ಆದನು. ॥ ೧೨ ॥ ಭೂಪತಿಃ - ದಶರಥರಾಯನು, ವಿಹ್ವಲಾಭ್ಯಾಂ - ಕಣ್ಣೀರಿನಿಂದ ಸಂಕಟಗೊಳ್ಳುತ್ತಿರುವ, ನೇತ್ರಾ ಭ್ಯಾಂ - ನೇತ್ರಗಳಿಂದ, ಅಪಶ್ಯನ್ನಿವ - ಕುರುಡನಂತೆ, ಕೃಚ್ಛ್ರಾತ್-ಕಷ್ಟದಿಂದಲೂ, ಧೈರ್ಯೇಣ- ಧೈರ್ಯದಿಂದಲೂ, ಸಂಸ್ತಭ್ಯ - ಪ್ರಾಣಗಳನ್ನು ಬಿಗಿಹಿಡಿದುಕೊಂಡು, ಕೈಕೇಯೀಂ - ಕೈಕೇಯಿ ಯನ್ನು, ಇದಂ - ಈ ವಕ್ಷ್ಯಮಾಣ ವಚನವನ್ನು, ಅಬ್ರವೀತ್ - ನುಡಿದನು. ॥ ೧೩ ॥ ಹೇ ಪಾಪೇ - ಎಲೌ ಪಾಪಿಷ್ಠಳೇ, ಅಗ್ನೌ - ಅಗ್ನಿಸಾಕ್ಷಿಯಾಗಿ, ಮಯಾ ನನ್ನಿಂದ, ತೇ - ನಿನ್ನ, ಯಃ - ಯಾವಹಸ್ತವು, ಮಂತ್ರಕೃತಃ - ಮಂತ್ರ ಸಂಸ್ಕೃತವಾದ, ಪಾಣಿಃ - ಹಸ್ತವು, ಧೃತಂ - ಧರಿಸಲ್ಪಟ್ಟಿತೋ, ತಂ - ಅಂತಹ ಪಾಣಿಗ್ರಹಣವನ್ನು, ಸ್ವಜಂ, ಸ್ವ - ನಿನಗೆ, ಜಂ - ಹುಟ್ಟಿದ, ತವ - ನಿನ್ನ, ಪುತ್ರಂ - ಮಗನನ್ನು, ತ್ವಯಾಸಹ - ನಿನ್ನೊಡನೆ, ತ್ಯಜಾಮಿ - ಪರಿ ತ್ಯಾಗಮಾಡುತ್ತೇನೆ. ॥ ೧೪ ॥ ಹೇ ದೇವೀ - ಎಲೌ ಕೈಕೇಯೀ ದೇವಿಯೇ, ರಜನೀ - ರಾತ್ರಿಯು, ಪ್ರಯಾತಾ - ಕಳದು ಹೋಯಿತು, ಗುರುಜನಃ-ವಸಿಷ್ಠಾದಿ ಋಷಿಜನವು, ಸೂರ್ಯಸ್ಯ- ಸೂರ್ಯನ, ಉದಯನಂಪ್ರತಿ - ಉದಯಕಾಲವನ್ನು ನೋಡಿ, ಮಾಂ - ನನ್ನನ್ನು, ಅಭಿಷೇಕಂಪ್ರತಿ- ಪಟ್ಟಾಭಿಷೇಕ ವಿಷಯವನ್ನು ಕುರಿತು, ತ್ವರಯಿಷ್ಯತಿ - ಜಾಗ್ರತೆಗೊಳಿಸುತ್ತಾರೆ, ಧೃವಂ - ನಿಶ್ಚಯವು, ರಾಮಃ - ಶ್ರೀರಾಮನು, ತದರ್ಥಂ - ತನ್ನ ಪಟ್ಟಾಭಿಷೇಕಕ್ಕೋಸುಗ, ಉಪಕಲ್ಪಿತೈಃ - ಕಲ್ಪಿಸಲ್ಪಟ್ಟ, ರಾಮಾಭಿಷೇಕಸಂಭಾರೈಃ - ಶ್ರೀರಾಮನ ಪಟ್ಟಾಭಿಷೇಕಾರ್ಥವಾದ ಸಾಮಗ್ರಿಗಳಿಂದ, ಮೃತಸ್ಯ - ಮರಣವನ್ನು ಹೊಂದಿದ, ಮೇ - ನನಗೆ, ಸಲಿಲಕ್ರಿಯಾಂ - ಪರಲೋಕಾರ್ಥವಾದ ತಿಲತರ್ಪಣವು,

---

ಗಳಿಂದ ಕಲುಷಿತವಾದ ಕಂಗಳುಳ್ಳವನಾದುದರಿಂದ ಕುರುಡನಂತೆ, ಬಹಳವಾದ ಪ್ರಯಾಸ ದಿಂದ ಪ್ರಾಣಗಳನ್ನು ಬಿಗಿಸಿ, ಧೈರ್ಯವನ್ನು ತಂದುಕೊಂಡು ಆ ಕೈಕೇಯಿಯನ್ನು ಕುರಿತು, "ಎಲೌ ಪಾಪಿಷ್ಠಳೆ! ಮೊದಲು ಪಾಪರೂಪಿಣಿಯಾದ ನಿನ್ನ ಕರವನ್ನು ಮಂತ್ರ ಪುರಸ್ಸರ ವಾಗಿ ಅಗ್ನಿ ಸಮಕ್ಷಮದಲ್ಲಿ ಹಿಡಿದವನಾದೆನು ಇಂತಹ ನಿನ್ನಿಂದ ಪಡೆದ ನಿನ್ನ ಮಗನಾದ ಭರತನನ್ನೂ ತ್ಯಜಿಸುತ್ತೇನೆ. ಎಲೌ ಕೈಕೇಯಿ! ರಾತ್ರಿಯು ಕಳೆದು ಸೂರ್ಯೋದಯ ವಾಯಿತು. ಹಿರಿಯರೆಲ್ಲರೂ ಶ್ರೀರಾಮನ ಯೌವರಾಜ್ಯಾಭಿಷೇಕಕ್ಕೋಸುಗ ನನ್ನನ್ನು ತ್ವರೆಗೊಳಿಸುವರು. ॥ ೧೧-೧೫ ॥ ಆ ಪಟ್ಟಾಭಿಷೇಕಕ್ಕೋಸುಗ ಅಣಿ ಮಾಡಲ್ಪಟ್ಟ ಸಾಮಗ್ರಿ ಗಳಿಂದಲೇ ಶ್ರೀರಾಮಚಂದ್ರನು ಮೃತನಾದ ನನಗೆ ಉತ್ತರ ಕ್ರಿಯಾದಿಗಳನ್ನು ಮಾಡಲಿ.

|| ೧೬ || ತ್ವಯಾ ಸಪುತ್ರಯಾ ನೈವ ಕರ್ತವ್ಯಾ ಸಲಿಲಕ್ರಿಯಾ || ವ್ಯಾಹಂತಾಸ್ಯಶುಭಾಚಾರೇ ಯದಿ ರಾಮಾಭಿಷೇಚನಂ || ೧೭ || ನಚಶಕ್ನೋಮ್ಯಹಂ ದ್ರಷ್ಟುಂ ದೃಷ್ಟ್ವಾ ಪೂರ್ವಂ ತಥಾ ಸುಖಂ || ಹತಹರ್ಷಂ ನಿರಾನಂದಂ ಪುನರ್ಜನಮವಾಙ್ಮುಖಂ || ೧೮ || ತಾಂ ತಥಾ ಬ್ರುವತಸ್ತಸ್ಯ ಭೂಮಿಪಸ್ಯ ಮಹಾತ್ಮನಃ || ಪ್ರಭಾತಾ ಶರ್ವರೀ ಪುಣ್ಯಾ ಚಂದ್ರನಕ್ಷತ್ರಶಾಲಿನೀ || ೧೯ || ತತಃ ಪಾಪ ಸಮಾಚಾರಾ ಕೈಕೇಯೀ ಪಾರ್ಥಿವಂ ಪುನಃ || ಉವಾಚ ಪರುಷಂ ವಾಕ್ಯಂ ವಾಕ್ಯಜ್ಞಾ ಕ್ರೋಧಮೂರ್ಛಿತಾ || ೨೦ || ಕಿಮಿದಂ ಭಾಷಸೇ ರಾಜನ್

ಕಾರಯಿತವ್ಯಃ - ಮಾಡಿಸತಕ್ಕವನು. || ೧೫-೧೬ || ಹೇ ಅಶುಭಾಚಾರೇ - ಎಲೌ ಅಮಂಗಳಕರವಾದ ನಡತೆಯುಳ್ಳವಳೆ, ರಾಮಾಭಿಷೇಚನಂ ಶ್ರೀರಾಮನ ಅಭಿಷೇಕವನ್ನು, ವ್ಯಾಹಂತಾಸಿಯದಿ - ವಿಘ್ನವನ್ನು ಮಾಡುವವಳಾದರೆ, ಸಪುತ್ರಯಾ - ಮಗನಿಂದೊಡಗೂಡಿದ, ತ್ವಯಾ - ನಿನ್ನಿಂದ, ಸಲಿಲಕ್ರಿಯಾ - ಉದಕಕ್ರಿಯೆಯು, ನಕರ್ತವ್ಯಾ - ಮಾಡತಕ್ಕದಲ್ಲ. || ೧೭ || ಅಹಂ - ನಾನು, ಪೂರ್ವಂ - ಪೂರ್ವದಲ್ಲಿ, ತಥಾಸುಖಂ - ಅಂತಹ ಆನಂದವನ್ನು ಅನುಭವಿಸುತ್ತಿರುವ ಜನವನ್ನು, ಹತಹರ್ಷಂ - ನಾಶವಾದ ಸಂತೋಷವುಳ್ಳದನ್ನಾಗಿಯೂ, ನಿರಾನಂದಂ - ಆನಂದ ರಹಿತನಾಗಿಯೂ, ಅವಾಙ್ಮುಖಂ - ತಗ್ಗಿದ ಮುಖವುಳ್ಳದನ್ನಾಗಿಯೂ, ಪುನಃ - ಮರಳಿ, ದ್ರಷ್ಟುಂ - ನೋಡಲು, ನಚಶಕ್ನೋಮಿ - ಸಮರ್ಥನಾಗಲಾರೆನು. || ೧೮ || ಮಹಾತ್ಮನಃ - ಮಹಾತ್ಮನಾದ, ತಸ್ಯಭೂನೃಪಸ್ಯ - ಆ ದಶರಥರಾಯನು, ತಾಂ - ಆ ಕೈಕೇಯೀದೇವಿಯನ್ನು ಕುರಿತು, ತಥಾ - ಆಪರಿಯಾಗಿ, ಬೃವತಃ - ಹೇಳುತ್ತಿರಲು, ಚಂದ್ರನಕ್ಷತ್ರಶಾಲಿನೀ - ಚಂದ್ರನಿಂದಲೂ ನಕ್ಷತ್ರಗಳಿಂದಲೂ ಒಪ್ಪುತ್ತಿರುವ, ಪುಣ್ಯಾ - ಪುಣ್ಯಕರವಾದ, ಶರ್ವರೀ - ರಾತ್ರಿಯು, ಪ್ರಭಾತಾ - ಬೆಳಗಾಯಿತು. || ೧೯ || ತತಃ - ಬಳಿಕ, ಪಾಪಸಮಾಚಾರಾ - ಪಾಪವ್ಯಾಪಾರಿಯಾದ, ವಾಕ್ಯಜ್ಞಾ - ನುಡಿಜಾಣ್ಮೆಯುಳ್ಳ, ಕೈಕೇಯೀ - ಕೈಕೇಯೀದೇವಿಯು, ಕ್ರೋಧಮೂರ್ಛಿತಾ ಕೋಪದಿಂದೊಡಗೂಡಿ ಪ್ರಜ್ಞಾಹೀನನಾದ, ಪಾರ್ಥಿವಂ-ದಶರಥರಾಯನನ್ನು ಕುರಿತು, ಪುನಃ - ಮತ್ತೆ, ಪರುಷಂ - ಕಠಿಣವಾದ, ವಾಕ್ಯಂ-ವಚನವನ್ನು, ಉವಾಚ-ಹೇಳಿದಳು. || ೨೦ || ಹೇ ರಾಜನ್-ಎಲೈ ದಶರಥರಾಯನೆ, (೧) ಗರರುಜೋಪಮಂ-

ಎಲೌ ದುರ್ನಡತೆಯುಳ್ಳವಳೇ ! ನೀನು ಶ್ರೀರಾಮನ ಯೌವರಾಜ್ಯ ಪಟ್ಟಾಭಿಷೇಕಕ್ಕೆ ವಿಘ್ನವನ್ನಾಚರಿಸುವುದಾದರೆ, ಮಗನಿಂದೊಡಗೂಡಿದ ನೀನು ನನಗೆ ಉತ್ತರ ಕ್ರಿಯಾದಿಗಳನ್ನು ಮಾಡಬೇಡ. ಕೈಕೇಯಿ ! ಪೂರ್ವದಲ್ಲಿ ರಾಮಾಭಿಷೇಕ ವಾರ್ತೆಯಿಂದ ಸಂತುಷ್ಟರಾಗಿದ್ದ ಪ್ರಜೆಗಳು ಈಗ ನಿರಾನಂದರಾಗಿ ತಲೆ ಬಗ್ಗಿಸಿಕೊಂಡಿರುವುದನ್ನು ನಾನು ನೋಡಲಾರೆನು" ಎಂದನು. ದಶರಥರಾಯನಿಂತು ನುಡಿಯುತ್ತಿರಲು ನಕ್ಷತ್ರಗಳಿಂದಲಂಕೃತವಾದ ರಾತ್ರಿಯು ಕಳೆದು ಪ್ರಾತಃಕಾಲವಾಯಿತು. || ೧೬-೧೯ || ಆ ಬಳಿಕ ಕೆಟ್ಟ ನಡತೆಯುಳ್ಳ ಆ ಕೈಕೇಯಿಯು ಮಹಾ ರೋಷಾವೇಶವುಳ್ಳವಳಾಗಿ, ಆ ದಶರಥರಾಜನನ್ನು ಕುರಿತು,

ಟಿ. (೧) ಅಂಗರುಜೋಪಮಮಿತಿಪಾಠೇ - ದೇಹದಲ್ಲಿ ಹುಟ್ಟಿದ ರೋಗಕ್ಕೆ ಸಮಾನವಾದ ಅಂದರೆ ಸಹಿಸಲಸಾಧ್ಯವಾದ, ಇದಂವಾಕ್ಯಂ - ಈ ಮಾತನ್ನು, ಇದು ಗೋವಿಂದರಾಜರ ಟೀಕೆಯು.

ವಾಕ್ಯಂ ಗರರುಜೋಪಮಮ್ ॥ ಆನಾಯಯಿತುಮಕ್ಲಿಷ್ಟಂ ಪುತ್ರಂ ರಾಮ
ಮಿಹಾರ್ಹಸಿ ॥ ೨೧ ॥ ಸ್ಥಾಪ್ಯ ರಾಜ್ಯೇ ಮಮ ಸುತಂ ಕೃತ್ವಾ ರಾಮಂ ವನೇ
ಚರಂ ॥ ನಿಸ್ಸಪತ್ನಾಂಚ ಮಾಂ ಕೃತ್ವಾ ಕೃತಕೃತ್ಯೋ ಭವಿಷ್ಯಸಿ ॥ ೨೨ ॥
ಸನುನ್ನಇವ ತೀಕ್ಷ್ಣೇನ ಪ್ರತೋದೇನ ಹಯೋತ್ತಮಃ॥ ರಾಜಾ ಪ್ರಚೋದಿತೋ
ಭೀಕ್ಷ್ಣಂ ಕೈಕೇಯಿಮಿದಮಬ್ರವೀತ್ ॥ ೨೩ ॥ ಧರ್ಮಬಂಧೇನ ಬದ್ಧೋಽಸ್ಮಿ
ನಷ್ಟಾಚ ಮಮ ಚೇತನಾ ॥ ಜ್ಯೇಷ್ಠಪುತ್ರಂ ಪ್ರಿಯಂ ರಾಮಂ ದ್ರಷ್ಟುಮಿಚ್ಛಾಮಿ
ಧಾರ್ಮಿಕಂ ॥ ೨೪ ॥ ತತಃ ಪ್ರಭಾತಾಂ ರಜನೀಮುದಿತೇಚ ದಿವಾಕರೇ ॥

ವಿಷದಿಂದ ಹುಟ್ಟಿದರೋಗಕ್ಕೆ ಸಮಾನವಾದ, ಇದಂವಾಕ್ಯಂ - ಈ ಮಾತನ್ನು, ಕಿಂಭಾಷಸೇ - ಏನೆಂದು ಹೇಳುವೆ, ಇಹ - ಇಲ್ಲಿಗೆ, ಅಕ್ಲಿಷ್ಟಂ - ದುಃಖವಿಲ್ಲದ, ಪುತ್ರಂ - ಮಗನಾದ, ರಾಮಂ - ಶ್ರೀರಾಮನನ್ನು, ಆನಾಯಯಿತುಂ - ಕರೆಯಿಸಲು, ಅರ್ಹಸಿ - ಯೋಗ್ಯನಾಗು. ॥ ೨೧ ॥ ಮಮ- ನನ್ನ, ಸುತಂ - ಕುವರನಾದ ಭರತನನ್ನು, ರಾಜ್ಯೇ - ರಾಜ್ಯದಲ್ಲಿ, ಸ್ಥಾಪ್ಯ - ಇರಿಸಿ, ರಾಮಂ - ಶ್ರೀರಾಮನನ್ನು, ವನೇಚರಂ-ಅಟವಿಯಲ್ಲಿ ಸಂಚರಿಸುವನನ್ನಾಗಿ, ಕೃತ್ವಾ-ಮಾಡಿ, ಮಾಂಚ ನನ್ನನ್ನೂ, ನಿಸ್ಸಪತ್ನಾಂ - ಶತ್ರುರಹಿತಳನ್ನಾಗಿ, ಕೃತ್ವಾ - ಮಾಡಿ, ಕೃತಕೃತ್ಯಃ - ಕೃತಾರ್ಥನು, ಭವಿಷ್ಯಸಿ - ಆಗುವೆ. ॥ ೨೨ ॥ ಸರಾಜಾ - ಆ ದಶರಥರಾಯನು, ತೀಕ್ಷ್ಣೇನ-ದಾರುಣವಾದ, ಪ್ರತೋದೇನ- ಚಿತ್ರದಿಂದ, ನುನ್ನಃ - ತಿವಿಯಲ್ಪಟ್ಟ, ಹಯೋತ್ತಮಃಇವ - ಕುದುರೆಯಂತೆ, ಅಭೀಕ್ಷ್ಣಂ - ಬಹಳ ವಾಗಿ, ಪ್ರಚೋದಿತಃ - ತಿವಿಯಲ್ಪಟ್ಟು, ಕೈಕೇಯಿಂ - ಕೈಕೇಯಿದೇವಿಯನ್ನು ಕುರಿತು, ಇದಂ - ಈ ವಚನವನ್ನು, ಅಬ್ರವೀತ್ - ನುಡಿದನು. ॥ ೨೩ ॥ ಧರ್ಮಬಂಧೇನ - ಧರ್ಮಪಾಶದಿಂದ, ಬದ್ಧಃ - ಕಟ್ಟಲ್ಪಟ್ಟವನು, ಅಸ್ಮಿ - ಆದೆನು, ಮಮ - ನನ್ನ, ಚೇತನಾ - ಪ್ರಜ್ಞೆಯು, ನಷ್ಟಾ - ಹೋಯಿತು, ಜ್ಯೇಷ್ಠಪುತ್ರಂ - ಹಿರಿಯಮಗನೂ, ಪ್ರಿಯಂ-ಇಷ್ಟನೂ, ಧಾರ್ಮಿಕಂ - ಧರ್ಮಿಷ್ಠನೂ ಆದ, ರಾಮಂ - ಶ್ರೀರಾಮನನ್ನು, ದ್ರಷ್ಟುಂ - ನೋಡಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೨೪ ॥ ತತಃ - ಬಳಿಕ, ರಜನೀಂ - ರಾತ್ರಿಯು ಕಳೆದು, ಪ್ರಭಾತಾಂ-ಬೆಳಗಾಗಲು, ದಿವಾಕರೇ-ಸೂರ್ಯನು, ಉದಿತೇಚ - ಉದಯವಾಗಲು, ಪುಣ್ಯೇ - ಪುಣ್ಯಕರವಾದ, ನಕ್ಷತ್ರಯೋಗೇ - ನಕ್ಷತ್ರಸಂಬಂಧವುಳ್ಳ,

---

"ಎಲೈ ಅರಸನೆ! ಇದೇನು? ವಿಷಪಾನದಿಂದ ಹುಟ್ಟಿದ ರೋಗಕ್ಕೆ ಸಮವಾಗಿ ಮಾತನಾಡು ತ್ತಿರುವೆ? ಯಾವ ದುಃಖವೂ ಇಲ್ಲದೆ ಕಾರ್ಯಗಳನ್ನು ಮಾಡುತ್ತಿರುವ ರಾಮನನ್ನಿಲ್ಲಿಗೆ ಕರೆಯಿಸಿ ವನಕ್ಕೆ ಕಳುಹಿಸು. ನನ್ನ ಕುವರನಾದ ಭರತನನ್ನು ರಾಜ್ಯಾಭಿಷಿಕ್ತನನ್ನಾಗಿ ಮಾಡು, ಇವೆರಡನ್ನೂ ನೆರವೇರಿಸಿ ನನ್ನನ್ನು ಶತ್ರುರಹಿತಳನ್ನಾಗಿ ಮಾಡು. ಹೀಗೆ ನೀನು ಮಾಡಿದುದೇ ಆದರೆ ನೀನು ಕೃತಕೃತ್ಯನಾಗುವೆ" ಎಂದು ಕಠಿಣವಾಗಿ ನುಡಿದಳು. ಈ ನುಡಿಗಳನ್ನು ಕೇಳಿದ ದಶರಥರಾಯನು, ಚಬುಕಿನ ಪೆಟ್ಟಿನಿಂದ ಉತ್ತಮಾಶ್ವವು ಬೆದರುವಂತೆ ನೆಗೆದು ಬಿದ್ದು ಆ ಕೈಕೇಯಿಯನ್ನು ಕುರಿತು, "ಎಲೌ ದೇವಿಯೆ! ನಾನು ಧರ್ಮಪಾಶದಿಂದ ಬದ್ಧನಾಗಿರು ನೆನು. ಆದುದರಿಂದಲೇ ನನ್ನ ಪ್ರಜ್ಞೆಯು ತಪ್ಪಿರುವುದು. ಈಗ ನಾನು ನನ್ನ ಜ್ಯೇಷ್ಠಪುತ್ರನೂ, ಧರ್ಮಾತ್ಮನೂ ಆದ ಶ್ರೀರಾಮನನ್ನು ನೋಡಲಿಚ್ಛಿಸುತ್ತೇನೆ" ಎಂದನು. ॥ ೨೧-೨೪ ॥

ಪುಣ್ಯೇ ನಕ್ಷತ್ರಯೋಗೇಚ ಮುಹೂರ್ತೇಚ ಸಮಾಹಿತೇ ॥೨೫॥ ವಸಿಷ್ಠೋ ಗುಣಸಂಪನ್ನಶ್ಶಿಷ್ಯೈಃ ಪರಿವೃತಸ್ತದಾ ॥ ಉಪಗೃಹ್ಯಾಶು ಸಂಭಾರಾ ಪ್ರವಿವೇಶ ಪುರೋತ್ತಮಂ ॥ ೨೬ ॥ ಸಿಕ್ತ ಸಮ್ಮಾರ್ಜಿತಪಥಾಂ ಪತಾಕೋತ್ತಮ ಭೂಷಿತಾಂ ॥ ವಿಚಿತ್ರ ಕುಸುಮಾಕೀರ್ಣಾಂ ನಾನಾ ಸ್ರಗ್ಭಿರ್ವಿರಾಜಿತಾಂ ॥ ೨೭ ॥ ಸಂಹೃಷ್ಟ ಮನುಜೋಪೇತಾಂ ಸಮೃದ್ಧ ವಿಪಣಾಪಣಾಂ ॥ ಮಹೋತ್ಸವ ಸಮಾಕೀರ್ಣಾಂ ರಾಘವಾರ್ಥೇ ಸಮುತ್ಸುಕಾಂ ॥ ೨೮ ॥ ಚಂದನಾಗರು ಧೂಪೈಶ್ಚ ಸರ್ವತಃ ಪ್ರತಿಧೂಪಿತಾಂ ॥ ತಾಂ ಪುರೀಂ ಸಮತಿಕ್ರಮ್ಯ ಪುರಂ

ಮುಹೂರ್ತೇಚ - ಮುಹೂರ್ತವು, ಸಮಾಹಿತೇ - ಸಮೀಪಿಸುತ್ತಿರಲು, ಗುಣಸಂಪನ್ನಃ - ಸೌಶೀಲ್ಯಾದಿ ಗುಣಭರಿತನಾದ, ವಸಿಷ್ಠಃ - ವಸಿಷ್ಠಋಷಿಯು, ಶಿಷ್ಯೈಃ - ಶಿಷ್ಯರಿಂದ, ಪರಿವೃತಃ - ಆವೃತನಾಗಿ, ತದಾ - ಆಗ, ಆಶು - ಜಾಗ್ರತೆಯಾಗಿ, ಸಂಭಾರಾ - ಪಟ್ಟಾಭಿಷೇಕ ಸಾಮಗ್ರಿಗಳನ್ನು, ಉಪಗೃಹ್ಯ - ತೆಗದುಕೊಂಡು, ಪುರೋತ್ತಮಂ - ಪಟ್ಟಣಶ್ರೇಷ್ಠವಾದ ಅಯೋಧ್ಯೆಯನ್ನು, ವಿವೇಶ - ಹೊಕ್ಕನು. ॥ ೨೫ ॥ ಸಿಕ್ತಸಂಮಾರ್ಜಿತಪಥಾಂ - ಸಾರಿಸಿ ಗುಡಿಸಲ್ಪಟ್ಟ ರಾಜವೀಥಿಗಳುಳ್ಳ, ಪತಾಕೋತ್ತಮಭೂಷಿತಾಂ - ಉತ್ತಮವಾದ ಧ್ವಜಪಟಗಳಿಂದಲಂಕೃತವಾದ, ವಿಚಿತ್ರಕುಸುಮಾಕೀರ್ಣಾಂ-ನಾನಾವಿಧ ಪುಷ್ಪಗಳಿಂದ ಹರಡಿದ, ನಾನಾಸ್ರಗ್ಭಿಃ-ಅನೇಕವಿಧವಾದ ಪೂಮಾಲಿಕೆಗಳಿಂದ, ವಿರಾಜಿತಾಂ - ಹೊಳೆಯುತ್ತಿರುವ, ಸಂಹೃಷ್ಟಮನುಜೋಪೇತಾಂ - ಸಂತೋಷಚಿತ್ತರಾದ ಮನುಷ್ಯರಿಂದ ಕೂಡಿದ, ಸಮೃದ್ಧ ವಿಪಣಾಪಣಾಂ, ಸಮೃದ್ಧ - ತುಂಬಿದ, ವಿಪಣ - ವ್ಯಾಪಾರವುಳ್ಳ, ಆಪಣಾಂ - ಮಳಿಗೆಗಳುಳ್ಳ, ಮಹೋತ್ಸವಸಮಾಕೀರ್ಣಾಂ - ಮಹತ್ತರವಾದ ಉತ್ಸವದಿಂದೊಡಗೂಡಿದ, ರಾಘವಾರ್ಥೇ - ಶ್ರೀರಾಮನಿಗೋಸುಗ, ಸಮುತ್ಸುಕಾಂ - ಆಸಕ್ತಿಯುಳ್ಳ ಜನಗಳುಳ್ಳ, ಚಂದನಾಗರುಧೂಪೈಶ್ಚ - ಚಂದನ ಕೃಷ್ಣಾಗರು ಇವುಗಳ ಧೂಪಗಳಿಂದಲೂ, ಸಹಸರ್ವತಃ - ಎಲ್ಲೆಡೆಗಳಲ್ಲಿಯೂ, ಪ್ರತಿಧೂಪಿತಾಂ - ಧೂಪಹಾಕಲ್ಪಟ್ಟ, ಪುರಂದರಪುರೋಪಮಾಂ - ಇಂದ್ರನ ಪಟ್ಟಣದಂತಿರುವ ಅಯೋಧ್ಯಾಪಟ್ಟಣವನ್ನು, ಸಮತಿಕ್ರಮ್ಯ - ಅತಿಕ್ರಮಿಸಿ, ನಾನಾದ್ವಿಜಗಣಾಯುತಂ - ಅನೇಕವಿಧವಾದ ಪಕ್ಷಿಸಮೂಹಗಳಿಂದ ವ್ಯಾಪ್ತವಾದ, ಪೌರಜಾನಪದಾಕೀರ್ಣಂ, ಪೌರ - ಪಟ್ಟಣ

ಆ ಬಳಿಕ ಸೂರ್ಯೋದಯವಾಗಲು, ಪುಣ್ಯಕರವಾದ ನಕ್ಷತ್ರ ಸಂಯೋಗವುಳ್ಳ, ರಾಮಾಭಿಷೇಕದ ಶುಭ ಮುಹೂರ್ತವು ಒದಗಿ ಬಂದಿತು. ಆಗ ಸದ್ಗುಣಭೂಷಿತನೂ, ಮಹರ್ಷಿಯೂ ಆದ ವಸಿಷ್ಠ ಮುನಿಯು ಶಿಷ್ಯನಿಂದೊಡಗೂಡಿ, ಉಪಕರಣ ಸಾಮಗ್ರೀಗಳನ್ನು ತೆಗೆದುಕೊಂಡು ಅಯೋಧ್ಯಾ ಪಟ್ಟಣವನ್ನು ಪ್ರವೇಶಿಸಿದನು. ಆಗಲಾ ಪಟ್ಟಣವು ಎಲ್ಲಿ ನೋಡಿದರೂ ಸಮ್ಮಾರ್ಜನೆ ಮಾಡಲ್ಪಟ್ಟು, ರಂಗುವಲ್ಲಿಗಳಿಂದಲಂಕೃತವಾಗಿದ್ದಿತು ; ವಿಧವಿಧವಾದ ಪುಷ್ಪಗಳಿಂದಲೂ, ಹೂವಿನ ಸರಗಳಿಂದಲೂ, ಸಂತೋಷಚಿತ್ತರಾದ ಜನರಿಂದಲೂ ನಿಬಿಡೀಕೃತವಾದ ವರ್ತಕರಿಂದಲೂ, ವ್ಯಾಪ್ತವಾದ ಆಪುರವು, ಎಲ್ಲಿ ನೋಡಿದರೂ ಶ್ರೀರಾಮಪಟ್ಟಾಭಿಷೇಕದಲ್ಲಿ ಉತ್ಸಾಹಗೊಂಡು, ಜನರಿಂದ ವಾಸನೆಗೊಳಿಸಲ್ಪಟ್ಟದ್ದ ಕೃಷ್ಣಾಗರು, ಚಂದನ, ಮುಂತಾದ ಧೂಪಗಳಿಂಪಲೂ ರಂಜಿಸುತ್ತ, ದೇವೇಂದ್ರನ ಅಮರಾವತಿಯಂತೆ

ದರ ಪುರೋಪವನಾಂ ॥ ೨೯ ॥ ದದರ್ಶಾಂತಃಪುರಂ ಶ್ರೇಷ್ಠಂ ನಾನಾ ದ್ವಿಜ ಗಣಾಯುತಂ ॥ ಪೌರ ಜಾನಪದಾಕೀರ್ಣಂ ಬ್ರಾಹ್ಮಣೈ ರುಪಶೋಭಿತಂ ॥೩೦॥ ಯಜ್ಞವಿದ್ಭಿಸ್ಸುಸಂಪೂರ್ಣಂ ಸದಸ್ಯೈಃ ಪರಮರ್ತ್ವಿಜೈಃ ॥ ತದಂತಃಪುರ ಮಾಸಾದ್ಯ ವ್ಯತಿಚಕ್ರಾಮ ತಂ ಜನಂ ॥ ೩೧ ॥ ವಸಿಷ್ಠಃ ಪರಮಪ್ರೀತಃ ಪರ ಮರ್ಷಿರ್ವಿವೇಶಚ ॥ ಸತ್ವಪಶ್ಯದ್ವಿನಿಷ್ಕ್ರಾಂತಂ ಸುಮಂತ್ರಂ ನಾಮ ಸಾರಥಿಂ ॥ ೩೨ ॥ ದ್ವಾರೇ ಮನುಜಸಿಂಹಸ್ಯ ಸಚಿವಂ ಪ್ರಿಯ ದರ್ಶನಂ ॥ ತಮು ವಾಚ ಮಹಾತೇಜಾಸ್ಸೂತಪುತ್ರಂ ವಿಶಾರದಂ ॥ ೩೩ ॥ ವಸಿಷ್ಠಂ ಕ್ಷಿಪ್ರ

ರಿದಲೂ, ಜಾನಪದ - ದೇಶವಾಸಿಗಳಿಂದಲೂ, ಆಕೀರ್ಣಂ - ವ್ಯಾಪ್ತವಾದ, ಬ್ರಾಹ್ಮಣೈಃ - ಬ್ರಾಹ್ಮಣರಿಂದ, ಉಪಶೋಭಿತಂ - ಶೋಭೆಯುತ್ತಿರುವ, ಯಜ್ಞವಿದ್ಭಿಃ-ಯಾಗಗಳನ್ನು ತಿಳಿದಿರುವ, ಸದಸ್ಯೈಃ-ಸಭಾಸದರಿಂದಲೂ, ಪರಮರ್ತ್ವಿಜೈಃ - ಶ್ರೇಷ್ಠರಾದ ಋತ್ವಿಕ್ಕುಗಳಿಂದಲೂ ಯುಕ್ತವಾದ, ಶ್ರೇಷ್ಠಂ-ಉತ್ತಮವಾದ, ಅಂತಃಪುರಂ - ರಾಣಿವಾಸಸ್ಥಳವನ್ನು, ದದರ್ಶ - ಕಂಡನು. ||೨೯-೩೦|| ಮಹರ್ಷಿಃ-ಮಹಾ ಮುನಿಯಾದ, ವಸಿಷ್ಠಃ - ವಸಿಷ್ಠಋಷಿಯು, ಪರಮಪ್ರೀತಃ - ಬಹಳ ಸಂತೋಷವುಳ್ಳವನಾಗಿ, ತದಂತಃಪುರಂ - ಆ ಅಂತಃಪುರವನ್ನು, ಆಸಾದ್ಯ - ಹೊಂದಿ, ತಂಜನಂ - ಆ ಪಟ್ಟಣಸ್ಥರೇ ಮೊದಲಾದ ಜನಗಳನ್ನು, ವ್ಯತಿಚಕ್ರಾಮ - ಅತಿಕ್ರಮಿಸಿ, ವೇದಿಕಾಂ - ವೇದಿಕೆಯನ್ನು, ವಿವೇಶ - ಹೊಕ್ಕನು, (ಅಂದರೆ ಕುಳಿತುಕೊಂಡನು.) || ೩೧ || ಸತು - ಆ ವಸಿಷ್ಠಮುನಿಯಾದರೆ, ದ್ವಾರೇ-ಬಾಗಿಲನಲ್ಲಿ, ವಿನಿಷ್ಕ್ರಾಂತಂ - ಹೊರಟುಬರುತ್ತಿರುವ, ಮನುಜಸಿಂಹಸ್ಯ - ರಾಜನಾದ ದಶರಥನಿಗೆ, ಸಚಿವಂ - ಮಂತ್ರಿಯಾದ, ಪ್ರಿಯದರ್ಶನಂ - ಮನೋಹರವಾದ ನೋಟವುಳ್ಳ, ಸುಮಂತ್ರಂನಾಮ - ಸುಮಂತ್ರನೆಂದು ಪ್ರಸಿದ್ಧನಾದ, ಸಾರಥಿಂ - ಸಾರಥಿಯನ್ನು, ಅಪಶ್ಯತ್ - ಕಂಡನು. || ೩೨ || ಮಹಾತೇಜಾಃ-ಅತಿ ತೇಜಸ್ವಿಯಾದ, ವಸಿಷ್ಠಃ-ವಸಿಷ್ಠಋಷಿಯು, ಸೂತಪುತ್ರಂ-ಸಾರಥಿಯ ಮಗನೂ, ವಿಶಾರದಂ - ಸಮರ್ಥನೂ ಆದ, ತಂ - ಆ ಸುಮಂತ್ರನನ್ನು ಕುರಿತು, ನೃಪತೇಃ - ದಶರಥರಾಜನಿಗೆ, ಮಾಂ - ನನ್ನನ್ನು, ಇಹ - ಇಲ್ಲಿ, ಆಗತಂ - ಬಂದವನನ್ನಾಗಿ, ಕ್ಷಿಪ್ರಂ - ಬೇಗನೆ, ಆಚಕ್ಷ್ವ - ಹೇಳು, ಇತಿ - ಇಂತೆಂದು, ಉವಾಚ - ಹೇಳಿದನು. || ೩೩ || ಇಮೇ - ಈ ಇದಿರಾಗಿರುವ,

---

ಕಂಗೊಳಿಸುತಲಿದ್ದಿತು. || ೨೫-೨೯ || ಇಂತಿರುವ ಆ ಅಯೋಧ್ಯಾ ನಗರಿಯನ್ನು ಹೊಕ್ಕ ಬ್ರಹ್ಮರ್ಷಿಯೂ ಮಹಾ ಮನಸ್ವಿಯೂ ಆದ ವಸಿಷ್ಠ ಮುನಿಯು, ನಾನಾ ವಿಧವಾದ ಪಕ್ಷಿಗಳಿಂದಲಂಕೃತವಾಗಿ, ವೇದಪಾರಂಗತರಾದ ಬ್ರಾಹ್ಮಣರಿಂದಲೂ, ಯಾಗ ವಿಧಾನವನ್ನರಿತಿರುವ ಸದಸ್ಯರಾದ ವಿಪ್ರರಿಂದಲೂ ತುಂಬಿರುವ ಆ ದಶರಥರಾಯನ ಅಂತಃಪುರವನ್ನು ಪ್ರವೇಶಿಸಿದನು. ಆ ಬಳಿಕಲಾ ಮುನಿಯು ಪಟ್ಟಣಿಗರನ್ನತಿಕ್ರಮಿಸಿದವನಾಗಿ ಅಂತಃಪುರವನ್ನು ಹೊಕ್ಕು, ಅರಮನೆಯಿಂದ ಹೊರಕ್ಕೆ ಬರುತ್ತಿರುವ ಮಂತ್ರಿ ಶ್ರೇಷ್ಠನಾದ ಸುಮಂತ್ರನನ್ನು ಬಾಗಿಲಿನಲ್ಲಿ ಕಂಡು, "ಎಲೈ ಸುಮಂತ್ರನೆ! ನಾನು ಬಂದಿರುವೆನೆಂದು ದಶರಥರಾಯನಿಗೆ ಬಿನ್ನವಿಸು. ಶ್ರೀರಾಮನ ಯೌವರಾಜ್ಯಾಭಿಷೇಕಕ್ಕೋಸುಗ, ಸಮುದ್ರೋದಕಪೂರಿತವಾದ ಈ ಕನಕ ಕಲಶಗಳೂ, ಅತ್ತಿಯ ಮರದಿಂದ ನಿರ್ಮಿತವಾದ ಸಿಂಹಾಸನವೂ, ವಿವಿಧ

ಮಾಚಕ್ಷ್ವ ನೃಪತೇರ್ಮಾನಿಹಾಗತಂ ॥ ಇಮೇ ಗಂಗೋದಕಘಟಾಸ್ಸಾಗ
ರೇಭ್ಯಶ್ಚ ಕಾಂಚನಾಃ ॥ ೩೪ ॥ ಔದುಂಬರಂ ಭದ್ರಪೀಠಮಭಿಷೇಕಾರ್ಥ
ಮಾಹೃತಂ ॥ ಸರ್ವ ಬೀಜಾನಿ ಗಂಧಾಶ್ಚ ರತ್ನಾನಿ ವಿವಿಧಾನಿಚ ॥ ೩೫ ॥
ಕ್ಷೌದ್ರಂ ದಧಿಘೃತಂ ಲಾಜಾ ದರ್ಭಾಸ್ಸುಮನಸಃ ಪಯಃ ॥ ಅಷ್ಟೌಚ ಕನ್ಯಾ
ರುಚಿರಾ ಮತ್ತಶ್ಚ ವರವಾರಣಃ ॥ ೩೬ ॥ ಚತುರಶ್ವೋ ರಥಶ್ಶ್ರೀಮಾ
ನ್ನಿಸ್ತ್ರಿಂಶೋ ಧನುರುತ್ತಮಂ ॥ ವಾಹನಂ ನರಸಂಯುಕ್ತಂ ಛತ್ರಂ ಚ ಶಶಿ
ಸನ್ನಿಭಂ ॥ ೩೭ ॥ ಶ್ವೇತೇಚ ವಾಲವ್ಯಜನೇ ಭೃಂಗಾರುಶ್ಚ ಹಿರಣ್ಮಯಃ ॥

ಗಂಗೋದಕಘಟಾಃ - ಗಂಗಾಜಲ ಪೂರಿತವಾದ ಕಲಶಗಳೂ, ಸಮುದ್ರೇಭ್ಯಃ - ಸಮುದ್ರಗಳಿಂದ, ಸಮಾಹೃತಾಃ - ತರಲ್ಪಟ್ಟ, ಕಾಂಚನಾಶ್ಚ - ಭಂಗಾರದ ಕಲಶಗಳೂ, ಔದುಂಬರಂ - ಅತ್ತಿಯಮರದ ಸಂಬಂಧವಾದ, ಭದ್ರಪೀಠಂ - ಪೀಠವು, ಅಭಿಷೇಕಾರ್ಥಂ - ಅಭಿಷೇಕಕ್ಕೋಸುಗ, ಆಹೃತಂ - ತರಲ್ಪಟ್ಟಿತು, ಸರ್ವಬೀಜಾನಿ - ಸಮಸ್ತವಾದ ಬೀಜಗಳು, ಗಂಧಾಶ್ಚ - ಅಷ್ಟಗಂಧಗಳು, ವಿವಿಧಾನಿ - ನಾನಾಬಗೆಗಳಾದ, ರತ್ನಾನಿ - ರತ್ನಗಳು, ಕ್ಷೌದ್ರಂ - ಜೇನುತುಪ್ಪ, ದಧಿ - ಮೊಸರು, ಘೃತಂ - ತುಪ್ಪ, ಲಾಜಾಃ - ಅರಳು, ದರ್ಭಾಃ - ದರ್ಭೆಗಳು, ಸುಮನಸಃ - ಹೂಗಳು, ಪಯಃ - ಹಾಲು, ರುಚಿರಾಃ - ಮನೋಹರಿಯರಾದ, ಅಷ್ಟೌಕನ್ಯಾಶ್ಚ - ಎಂಟುಮಂದಿ ಕನ್ನಿಕೆಯರು, ಮತ್ತಃ - ಮದವೇರಿದ, ವರವಾರಣಃ - ಉತ್ತಮವಾದ ಆನೆಯು, ಚತುರಶ್ವಃ (೧) - ನಾಲ್ಕು ಕುದುರೆಗಳುಳ್ಳ, ಶ್ರೀಮಾನ್ - ಸಂಪದ್ಯುಕ್ತವಾದ, ರಥಃ - ರಥವು, ನಿಸ್ತ್ರಿಂಶಃ - ಪಟ್ಟಾಕತ್ತಿಯು, ಉತ್ತಮಂ - ಶ್ರೇಷ್ಠವಾದ, ಧನುಃ - ಕೋದಂಡವು, ನರಸಂಯುಕ್ತಂ - ಬೆಸ್ತರಿಂದಕೂಡಿರುವ, ವಾಹನಂ - ಪಾಲಕ್ಕಿಯು, ಶಶಿಸನ್ನಿಭಂ - ಚಂದ್ರನಿಗೆ ಸಮಾನವಾದ, ಛತ್ರಂಚ - ಛತ್ರವೂ, ಶ್ವೇತೇ - ಬಿಳಿತಾಗಿರುವ, ಹಿರಣ್ಮಯಃ - ಸುವರ್ಣ ವಿಕಾರವಾದ ಬಟ್ಟಲುಗಳು, ಹೇಮದಾಮಪಿನದ್ಧಃ - ಭಂಗಾರದ ಸರಪಣಿಯಿಂದ ಕಟ್ಟಲ್ಪಟ್ಟ, ಪಾಂಡುರಃ - ಬೆಳ್ಳಗಿರುವ, ಕಕುದ್ಮಾನ್ - ಭುಜಗೋಪುರವುಳ್ಳ, ವೃಷಃ - ವೃಷಭವು,

ಗಳಾದ ಬೀಜಗಳೂ, ಅಷ್ಟಗಂಧಗಳೂ, ಬಗೆಬಗೆಯ ರತ್ನಗಳೂ, ಜೇನು, ಮೊಸರು, ತುಪ್ಪ, ಅರಳು, ಪುಷ್ಪ, ಕ್ಷೀರ ಮೊದಲಾದ ವಸ್ತು ಸಮುದಾಯವೂ, ಅಷ್ಟಕನ್ನಿಕೆಯರೂ, ಪಟ್ಟದಾನೆಯೂ, ನಾಲ್ಕು ಉತ್ತಮಾಶ್ವಗಳನ್ನು ಕಟ್ಟಿದ ಶ್ರೇಷ್ಠವಾದ ರಥವೂ, ಪಟ್ಟದ ಕತ್ತಿಯೂ, ಧನಸ್ಸು, ಪಾಲಕ್ಕಿ, ಚಂದ್ರನಂತೆ ಕಂಗೊಳಿಸುವ ಛತ್ರಿ, ಬಿಳಿತಾದ ಚಾಮರ, ಸುವರ್ಣಮಯವಾದ ಗಿಂಡಿ, ಚಿನ್ನದ ಸರಪಣಿಗಳಿಂದ ಕಟ್ಟಲ್ಪಟ್ಟ ಉತ್ತಮವಾದ ಬಿಳೀ ಎತ್ತು,

ಟಿ. (೧) "ಚತುರಶ್ವೋರಥಶ್ಶ್ರೀಮಾನ್" ಎಂಬ ಕಡೆಯಲ್ಲಿ ಗಾಯತ್ರೀಮಂತ್ರದ ನಾಲ್ಕನೆಯ ಅಕ್ಷರವಾದ "ತು" ಎಂಬ ಅಕ್ಷರವು ನಿವೇಶಿತವಾಗಿರುವುದು. ಇಲ್ಲಿಗೆ ನಾಲ್ಕುಸಾವಿರ ಶ್ಲೋಕಗಳು ಮುಗಿದವು.

ಗಾಯತ್ರಿಯ "ವಿ" ಎಂಬ ಮೂರನೆಯ ಅಕ್ಷರವು ಬಾಲಕಾಂಡ ಅರವತ್ತೇಳನೆಯಸರ್ಗ "ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾಜನಕಭಾಷಿತಂ । ವತ್ಸರಾಮ ……………" ಎಂಬ ಶ್ಲೋಕದ ಪ್ರಥಮಾಕ್ಷರ ವೆಂದೂ ಇಲ್ಲಿಗೆ ಮೂರುಸಾವಿರ ಶ್ಲೋಕಗಳು ಮುಗಿದುವೆಂದೂ ಹೇಳಿದೆ. ಈ ಟಿಪ್ಪಣಿಯನ್ನು ಅಲ್ಲಿಯೇ ಕೊಡ ಬೇಕಾಗಿದ್ದಿತು. ಆದರೆ ಪ್ರಮಾದ ವಶದಿಂದ ಬಿಟ್ಟು ಹೋಯಿತಾದುದರಿಂದ ಇಲ್ಲಿ ಕೊಡಲಾಗಿದೆ.

ಹೇಮದಾಮ ಪಿನದ್ಧಶ್ಚ ಕಕುದ್ಮಾನ್ ಪಾಂಡುರೋ ವೃಷಃ ॥ ೩೮ ॥ ಕೇಸರೀಚ ಚತುರ್ದಂಷ್ಟ್ರೋ ಹರಿಶ್ರೇಷ್ಠೋ ಮಹಾಬಲಃ ॥ ಸಿಂಹಾಸನಂ ವ್ಯಾಘ್ರತನುಸ್ಸಮಿದ್ಧಶ್ಚ ಹುತಾಶನಃ ॥ ೩೯ ॥ ಸರ್ವವಾದಿತ್ರ ಸಂಘಾಶ್ಚ ವೇಶ್ಯಾಶ್ಚಾಲಂಕೃತಾಃ ಸ್ತ್ರಿಯಃ ॥ ಆಚಾರ್ಯಾ ಬ್ರಾಹ್ಮಣಾ ಗಾವಃ ಪುಣ್ಯಾಶ್ಚ ಮೃಗಪಕ್ಷಿಣಃ ॥ ೪೦ ॥ ಪೌರ ಜಾನಪದಶ್ರೇಷ್ಠಾ ನೈಗಮಾಶ್ಚ ಗಣೈಸ್ಸಹ ॥ ಏತೇಚಾನ್ಯೇಚ ಬಹವಃ ಪ್ರೀಯಮಾಣಾ ಪ್ರಿಯಂ ವದಾಃ ॥ ೪೧ ॥ ಅಭಿಷೇಕಾಯ ರಾಮಸ್ಯ ಸಹತಿಷ್ಠಂತಿ ಪಾರ್ಥಿವೈಃ ॥ ತ್ವರಯಸ್ವ ಮಹಾರಾಜಂ ಯಥಾ ಸಮುದಿತೇಹನಿ ॥ ೪೨ ॥ ಪುಷ್ಯೇ ನಕ್ಷತ್ರಯೋಗೇಚ ರಾಮೋ ರಾಜ್ಯ ಮವಾ

ಚತುರ್ದಂಷ್ಟ್ರಃ - ನಾಲ್ಕು ಹಲ್ಲುಗಳುಳ್ಳ, ಕೇಸರೀ - ಕೇಶಗಳುಳ್ಳ, ಮಹಾಬಲಃ - ಅತಿಶಕ್ತಿಯುಳ್ಳ, ಹರಿಶ್ರೇಷ್ಠಶ್ಚ - ಉತ್ತಮವಾದ ಕುದುರೆಯು, ಸಿಂಹಾಸನಂ - ಸಿಂಹಾಸನವು, ವ್ಯಾಘ್ರತನುಃ - ವ್ಯಾಘ್ರಚರ್ಮವು, ಸಮಿದ್ಧಃ - ಪ್ರಜ್ವಲಿಸುತ್ತಿರುವ, ಹುತಾಶನಶ್ಚ - ಅಗ್ನಿಯೂ, ಸರ್ವವಾದಿತ್ರ ಸಂಘಾಶ್ಚ - ಸಮಸ್ತವಾದ ವಾದ್ಯಗಳ ಸಮೂಹಗಳೂ, ಅಲಂಕೃತಾಃ - ಭೂಷಿತರಾದ, ವೇಶ್ಯಾಃ- ನರ್ತಕಿಯರೂ, ಆಚಾರ್ಯಃ - ಉಪದೇಶಕರಾದ, ಬ್ರಾಹ್ಮಣಾಃ - ಬ್ರಾಹ್ಮಣರು, ಪುಣ್ಯಾಃ - ಪುಣ್ಯಕರವಾದ, ಗಾವಃ - ಗೋವುಗಳು, ಮೃಗಪಕ್ಷಿಣಃ - ಮೃಗಗಳೂ ಪಕ್ಷಿಗಳೂ, ಪೌರಜಾನಪದ ಶ್ರೇಷ್ಠಾಃ - ಪಟ್ಟಣಸ್ಥರಲ್ಲಿ ಶ್ರೇಷ್ಠರೂ ದೇಶವಾಸಿಗಳಲ್ಲಿ ಉತ್ತಮರೂ, ನೈಗಮಾಃ - ಅಧ್ಯಾಪಕರೂ, ಗಣೈಸ್ಸಹ - ಗುಂಪುಗಳೊಡಗೂಡಿದ, ಏತೇಚ - ಇವರೂ, ಬಹವಃ - ಅನೇಕರಾದ, ಅನ್ಯೇಚ - ಮತ್ತೆ ಕೆಲವರೂ, ಪ್ರೀಯಮಾಣಾಃ - ಧನಸಮ್ಮಾನಾದಿಗಳಿಂದ ತೃಪ್ತರಾಗಿ, ಪ್ರಿಯಂವದಾಃ - ಕರ್ಣಶ್ರಾವ್ಯವಾದ ಮಾತುಗಳನ್ನು ನುಡಿಯುತ್ತಿರುವರಾಗಿ, ರಾಮಸ್ಯ - ಶ್ರೀರಾಮನಿಗೆ, ಅಭಿಷೇಕಾಯ - ಅಭಿಷೇಕಕ್ಕೋಸುಗ, ಪಾರ್ಥಿವೈಸ್ಸಹ - ರಾಜರೊಡನೆ, ತಿಷ್ಠಂತಿ - ಇರುವರು. ॥ ೩೮-೪೧ ॥ ಸಮುದಿತೇ - ಚನ್ನಾಗಿ ಪ್ರಕಾಶಿಸುತ್ತಿರುವ, ಅಹನಿ - ಹಗಲು, ಪುಷ್ಯೇ - ಪುಣ್ಯಕರವಾದ, ನಕ್ಷತ್ರಯೋಗೇಚ - ಪುಷ್ಯ ನಕ್ಷತ್ರಯೋಗದಲ್ಲಿಯೇ, ರಾಮಃ - ಶ್ರೀರಾಮನು, ರಾಜ್ಯಂ - ರಾಜ್ಯವನ್ನು, ಯಥಾ - ಹೇಗೆ, ಅವಾಪ್ನುಯಾತ್ - ಹೊಂದುವನೋ, ತಥಾ - ಹಾಗೆ, ಮಹಾರಾಜಂ - ದಶರಥರಾಜನನ್ನು, ತ್ವರಯಸ್ವ - ಜಾಗ್ರತೆಗೊಳಿಸು. ॥೪೨॥ ಇತಿ - ಇಂತೆಂದ, ಮಹಾತ್ಮನಃ - ಮಹಾ ಮನಸ್ವಿಯಾದ,

---

ನಾಲ್ಕು ಕೋರದಾಡೆಗಳುಳ್ಳ ಶ್ರೇಷ್ಠವಾದ ಕುದುರೆ, ರತ್ನಖಚಿತವಾದ ಸಿಂಹಾಸನ, ವ್ಯಾಘ್ರಚರ್ಮ ಇವುಗಳೂ, ಗೋವುಗಳೂ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳೂ ಹೋಮಕ್ಕೆ ತಕ್ಕುದಾದ ಸಮಿತ್ತುಗಳೂ, ಇವೇ ಮೊದಲಾದ ಸಾಮಗ್ರಿಗಳೆಲ್ಲವೂ ಸಿದ್ಧವಾಗಿರುವುವು. ಸರ್ವಾಭರಣ ಭೂಷಿತೆಯರಾದ ವೇಶ್ಯಾಸ್ತ್ರೀಯರೂ, ಉಪದೇಶಕರ್ತರಾದ ಆಚಾರ್ಯರೂ, ವೇದಸೂಕ್ತಗಳನ್ನು ತಿಳಿದಿರುವ ಬ್ರಾಹ್ಮಣರೂ, ಪುರ ಪ್ರಮುಖರೂ, ದೇಶಮುಖ್ಯರೂ, ವರ್ತಕರೂ ಇವರೇ ಮೊದಲಾದವರೆಲ್ಲರೂ ಗುಂಪು ಗುಂಪಾಗಿ ಸೇರಿರುವರು. ಆದುದರಿಂದ ಶ್ರೀರಾಮಚಂದ್ರನು ಪುಷ್ಯನಕ್ಷತ್ರಯುಕ್ತವಾದ ಇಂದಿನ ದಿನ ದ್ವಿತೀಯಾಧಿಕಾರವನ್ನು ಪಡೆಯುವ ಹಾಗೆ ದಶರಥರಾಜನನ್ನು ಜಾಗ್ರತೆ ಗೊಳಿಸುವವನಾಗು'' ಎಂದು ಹೇಳಿದನು. ॥ ೩೦-೪೨ ॥

ಪೃಚ್ಛಯಾತ್ ॥ ಇತಿತಸ್ಯ ವಚಶ್ಶ್ರುತ್ವಾ ಸೂತಪುತ್ರೋ ಮಹಾತ್ಮನಃ ॥೪೩॥ ಸ್ತುವನ್ನೃಪತಿ ಶಾರ್ದೂಲಂ ಪ್ರವಿವೇಶ ನಿವೇಶನಂ ॥ ತಂತು ಪೂರ್ವೋದಿತಂ ವೃದ್ಧಂ ದ್ವಾರಸ್ಥಾ ರಾಜ ಸಂಮತಂ ॥ ೪೪ ॥ ನಶೇಕು ರಭಿಸಂರೋದ್ಧುಂ ರಾಜ್ಞಃ ಪ್ರಿಯಚಿಕೀರ್ಷವಃ ॥ ಸ ಸಮೀಪಸ್ಥಿತೋ ರಾಜ್ಞ ಸ್ತಾಮವಸ್ಥಾ ಮಜಜ್ಞಿವಾನ್ ॥ ೪೫ ॥ ವಾಗ್ಭಿಃ ಪರಮತುಷ್ಟಾಭಿ ರಭಿಷ್ಟೋತುಂ ಪ್ರಚಕ್ರಮೇ ॥ ತತ ಸ್ಸೂತೋ ಯಥಾ ಕಾಲಂ ಪಾರ್ಥಿವಸ್ಯ ನಿವೇಶನೇ ॥ ೪೬ ॥ ಸುಮಂತ್ರಃ ಪ್ರಾಂಜಲಿರ್ಭೂತ್ವಾ ತುಷ್ಟಾವ ಜಗತೀಪತಿಂ ॥ ಯಥಾ ನಂದತಿ ತೇಜಸ್ವೀ

ತಸ್ಯ - ಆ ವಸಿಷ್ಠಋಷಿಯ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಸೂತಪುತ್ರಃ - ಸುಮಂತ್ರನು, ನೃಪತಿಶಾರ್ದೂಲಂ - ರಾಜಶ್ರೇಷ್ಠನನ್ನು, ಸ್ತುವನ್ - ಸ್ತೋತ್ರಮಾಡುತ್ತ, ನಿವೇಶನಂ - ಮನೆಯನ್ನು, ಪ್ರವಿವೇಶ - ಹೊಕ್ಕನು. ॥ ೪೩ ॥ ಪೂರ್ವೋದಿತಂ - ಸದಾಕಾಲದಲ್ಲಿಯೂ ಈತನು ತಡೆಯಲ್ಪಡತಕ್ಕವನಲ್ಲವೆಂದು ಹಿಂದೆಯೇ ದಶರಥನಿಂದ ಹೇಳಲ್ಪಟ್ಟ, ವೃದ್ಧಂ - ಮುದುಕನಾದ, ರಾಜಸಮ್ಮತಂ - ದಶರಥರಾಜನಿಗೆ ಇಷ್ಟನಾದ, ತಂತು - ಆ ಸುಮಂತ್ರನನ್ನಾದರೆ, ರಾಜ್ಞಃ - ಅರಸನಿಗೆ, ಪ್ರಿಯಚಿಕೀರ್ಷವಃ - ಇಷ್ಟವನ್ನು ಮಾಡಲಿಚ್ಛೆಯುಳ್ಳ, ದ್ವಾರಸ್ಥಾಃ - ದ್ವಾರಪಾಲಕರು, ಅಭಿಸಂರೋದ್ಧುಂ - ತಡೆಯಲು, ನಶೇಕುಃ - ಸಮರ್ಥರಾಗದೇ ಹೋದರು. ॥ ೪೪ ॥ ರಾಜ್ಞಃ - ಅರಸಿನ, ಸಮೀಪಸ್ಥಿತಃ - ಸಮೀಪದಲ್ಲಿರುವ, ಸಃ - ಆ ಸುಮಂತ್ರನು, ತಾಮವಸ್ಥಾಂ - ಆ ರಾಯನಿದ್ದ ರೀತಿಯನ್ನು, ಅಜಜ್ಞಿವಾನ್ - ತಿಳಿಯದೆಹೋದನಾದಕಾರಣ, ಪರಮತುಷ್ಟಾಭಿಃ - ಬಹಳ ಸಂತುಷ್ಟವಾದ, ವಾಗ್ಭಿಃ - ಮಾತುಗಳಿಂದ, ಅಭಿಷ್ಟೋತುಂ - ಸ್ತುತಿಸುವುದಕ್ಕೆ, ಪ್ರಚಕ್ರಮೇ - ಪ್ರಾರಂಭಿಸಿದನು. ॥ ೪೫ ॥ ತತಃ - ಬಳಿಕ, ಸೂತಃ - ಸಾರಥಿಯಾದ, ಸುಮಂತ್ರಃ - ಸುಮಂತ್ರನು, ಪಾರ್ಥಿವಸ್ಯ - ರಾಜನ, ನಿವೇಶನೇ - ಮನೆಯಲ್ಲಿ, ಪ್ರಾಂಜಲಿಃ - ಅಂಜಲಿಬದ್ಧನಾದವನು, ಭೂತ್ವಾ- ಆಗಿ, ಯಥಾಕಾಲಂ - ಪ್ರಾತಃಕಾಲಕ್ಕೆ ಯೋಗ್ಯವಾದಂತೆ, ಜಗತೀಪತಿಂ - ರಾಜನನ್ನು, ತುಷ್ಟಾವ - ಸ್ತುತಿಸಿದನು. ॥ ೪೬ ॥ ಭಾಸ್ಕರೋದಯೇಸತಿ - ಪ್ರಕಾಶವನ್ನುಂಟುಮಾಡುತ್ತಿರುವ ಸೂರ್ಯನು ಉದಯವಾಗಲೂ, ಪ್ರೀತೇನ - ಸಂತುಷ್ಟವಾದ, ಮನಸಾ - ಮನಸ್ಸಿನಿಂದ, ಪ್ರೀತಃ - ಸಂತೋಷವುಳ್ಳ, ತೇಜಸ್ವೀ - ತೇಜೋವಂತನಾದ, ಸಾಗರಃ - ಸಮುದ್ರವು, ಯಥಾ - ಹೇಗೆ, ನಂದತಿ -

---

ವಸಿಷ್ಠಮುನಿಯ ಈ ಮಾತುಗಳನ್ನು ಕೇಳಿ ಸೂತಪುತ್ರನಾದ ಸುಮಂತ್ರನು, ನರಪಾಲತಿಲಕನಾದ ಆ ದಶರಥರಾಯನನ್ನು ಸ್ತುತಿಸುತ್ತ, ಆ ಸಮಾಚಾರವನ್ನಾತನಿಗೆ ತಿಳುಹಲು ಅರಮನೆಯನ್ನು ಪ್ರವೇಶಿಸಿದನು. ದಶರಥರಾಯನು, "ಈತನು ಯಾವ ಕಾಲದಲ್ಲಿ ಬಂದರೂ ನಿರೋಧಿಸಬೇಡಿರಿ" ಎಂದು ದ್ವಾರಪಾಲಕರಿಗೆ ಅಪ್ಪಣೆಮಾಡಿದ್ದುದರಿಂದಾತನನ್ನು ಯಾರೂ ತಡೆಯಲಿಲ್ಲ. ಆ ಬಳಿಕ ಮಂತ್ರಿವರ್ಯನಾದ ಸುಮಂತ್ರನು ಆ ರಾಯನ ಸಮೀಪವನ್ನು ಸೇರಿ ಆತನ ಅವಸ್ಥೆಯನ್ನು ತಿಳಿಯದೆ, ಅಂಜಲಿಬದ್ಧನಾಗಿ ಆ ರಾಯನು ಸಂತೋಷಗೊಳ್ಳುವಂತೆ ಸ್ತುತಿಸಲಾರಂಭಿಸಿದನು. "ಎಲೈ ದಶರಥರಾಜನೆ! ಮಹಾ ತೇಜಸ್ವಿಯಾದ, ಪೌರ್ಣಮಿಯ ಚಂದ್ರನು ಉದಯಿಸಲು, ಸಮುದ್ರರಾಯನು ಹೇಗೆ ಸಂತೋಷಿಸುವನೋ, ಹಾಗೆ ನೀನೂ

ಸಾಗರೋ ಭಾಸ್ಕರೋದಯೇ ‖ ೪೭ ‖ ಪ್ರೀತಃ ಪ್ರೀತೇನ ಮನಸಾ ತಥಾನಂದ ಘನಸ್ಸ್ವತಃ ‖ ಇಂದ್ರಮಸ್ಯಾಂತು ವೇಳಾಯಾಮಭಿತುಷ್ಟಾವ ಮಾತಲಿಃ ‖ ೪೮ ‖ ಸೋಜಯದ್ದಾನವಾರ್ನ ಸರ್ವಾಂಸ್ತಥಾ ತ್ವಾಂ ಬೋಧಯಾಮ್ಯಹಂ ‖ ಆದಿತ್ಯಸ್ಸಹಚಂದ್ರೇಣ ಯಥಾ ಭೂತಧರಾಂ ಶುಭಾಂ ‖ ೪೯ ‖ ಬೋಧಯತ್ಯದ್ಯ ಪೃಥಿವೀಂ ತಥಾ ತ್ವಾಂ ಬೋಧಯಾಮ್ಯಹಂ ‖ ವೇದಾ ಸ್ಸಹಾಂಗಾ

ಸಂತೋಷಿಸುವನೋ, ತಥಾ - ಹಾಗೆ, ಆನಂದಘನಃ - ಸಂತೋಷಭರಿತನಾಗಿ, ನಂದ-ಸಂತೋಷಿಸು. ‖ ೪೭ ‖ ಅಸ್ಯಾಂವೇಳಾಯಾಂ - ಈ ಸೂರ್ಯೋದಯಕಾಲದಲ್ಲಿ, ಮಾತಲಿಸ್ತು - ಮಾತಲಿಯು, ಇಂದ್ರಂ - ಇಂದ್ರನನ್ನು, ಯಥಾಅಭಿತುಷ್ಟಾವ - ಹೇಗೆಸ್ತುತಿಸಿದನೋ, ತಥಾ - ಹಾಗೆ, ಅಹಂ - ನಾನು, ತ್ವಾಂ - ನಿನ್ನನ್ನು, ಬೋಧಯಾಮಿ - ಎಚ್ಚರಗೊಳಿಸುತ್ತೇನೆ, ಸಃ - ಆ ದೇವೇಂದ್ರನು, ಸರ್ವಾನ್ - ಸಮಸ್ತರಾದ, ದಾನವಾನ್ - ರಾಕ್ಷಸರನ್ನು, ಯಥಾ - ಹೇಗೆ, ಅಜಯತ್-ಜಯಿಸಿದನೋ, ತಥಾ - ಹಾಗೆ, ಜಯ - ಜಯಿಸು. ‖ ೪೮ ‖ ಸಹಾಂಗವಿದ್ಯಾಃ (೧) - ಅಂಗಭೂತವಾದ ಶಿಕ್ಷಾದಿ ವಿದ್ಯೆಗಳಿಂದೊಡಗೂಡಿದ, ವೇದಾಶ್ಚ - ವೇದಗಳೂ ಸಹ, ಆತ್ಮಭುವಂ - ಸ್ವಯಂಭುವನಾದ, ವಿಭುಂ - ಸಮರ್ಥನಾದ, ಬ್ರಹ್ಮಾಣಂ - ಬ್ರಹ್ಮನನ್ನು, ಯಥಾ - ಹೇಗೆ, ಬೋಧಯಂತಿ - ಎಚ್ಚರಗೊಳಿಸುವುವೋ, ತಥಾ - ಹಾಗೆ, ಅಹಂ - ನಾನು, ತ್ವಾಂ - ನಿನ್ನನ್ನು, ಅದ್ಯ - ಈಗ, ಬೋಧಯಾಮಿಹಿ - ಎಚ್ಚರಗೊಳಿಸುತ್ತಿರುವನಷ್ಟೆ. ‖ ೪೯ ‖ ಚಂದ್ರೇಣಸಹ - ಚಂದ್ರನಿಂದೊಡಗೂಡಿದ, ಆದಿತ್ಯಃ - ಸೂರ್ಯನು, ಭೂತಧರಾಂ - ಪ್ರಾಣಗಳನ್ನು ಧರಿಸುತ್ತಿರುವ, ಶುಭಾಂ-ಮಂಗಳಕರವಾದ, ಪೃಥಿವೀಂ-ಭೂಮಿಯಲ್ಲಿರುವ ಜನರನ್ನು, ಯಥಾಬೋಧಯತಿ-ಹೇಗೆ ಎಚ್ಚರಗೊಳಿಸುವನೋ, ತಥಾ -

ಸಹ ಸಂತೋಷಿಸುವವನಾಗು ! ದೇವೇಂದ್ರನ ಸಾರಥಿಯಾದ ಮಾತಲಿಯಿಂದ ಎಚ್ಚರಗೊಳಿಸಲ್ಪಟ್ಟ ಆ ಸ್ವರ್ಗರಾಜನು ಶತ್ರುಗಳನ್ನು ಹೇಗೆ ಜಯಿಸುತ್ತಾನೆಯೋ, ಹಾಗೆಯೋ ನೀನೂ ಸಹ, ನಿನ್ನ ಸಾರಥಿಯಾದ ನನ್ನಿಂದ ಎಚ್ಚರಗೊಳಿಸಲ್ಪಟ್ಟು ನಿನ್ನ ಶತ್ರುಗಳನ್ನು ಜಯಿಸುವವನಾಗು. ರಾಜೇಂದ್ರ ! ಶಿಕ್ಷಾದಿ ಷಡಂಗಯುಕ್ತವಾದ ಚತುರ್ವೇದಗಳು ಚತುರಾನನನ್ನು ಎಚ್ಚರಗೊಳಿಸುವಂತೆಯೂ, ದಿನಕರನು ನಿಶಾನಾಥನೊಡಗೂಡಿ, ಲೋಕದ ಜನರನ್ನೆಚ್ಚರಗೊಳಿಸುವಂತೆಯೂ, ನಾನು ನಿನ್ನನ್ನು ಎಚ್ಚರಗೊಳಿಸುತ್ತೇನೆ. ‖೪೩-೪೯‖ ಎಲೈ ರಾಯನೆ!

ಟಿ. (೧) " ಸಹಾಂಗ ವಿದ್ಯಾ " ಇಲ್ಲಿ ಭೂತಶೀಕ್ಷೆಯೇ ಮೊದಲಾದ ವಿದ್ಯೆಗಳಿಂದೊಡಗೂಡಿದ ವೇದಗಳು ಬ್ರಹ್ಮನನ್ನು ಎಚ್ಚರಗೊಳಿಸುವಂತೆ ನಾನು ನಿನ್ನನ್ನು ಎಚ್ಚರಗೊಳಿಸುತ್ತೇನೆ ಎಂದರ್ಥವು. " ಭೂತಶೀಕ್ಷಾದಿ ವಿದ್ಯಾ ಸಹಿತಾಃ " ಎಂದು ಹೇಳಲು ಪ್ರಮಾಣ —ಮನುಧರ್ಮಶಾಸ್ತ್ರದಲ್ಲಿ—

ನಾಮರೂಪಂಚ ಭೂತಾನಾಂ ಕೃತ್ಯಾನಾಂಚ ಪ್ರಪಂಚನಂ ।
ವೇದಶಬ್ದೇಭ್ಯಏವಾದೌ ದೇವಾದೀನಾಂಚ ಕಾರಸಃ ‖

ಎಂದು ಹೇಳಲ್ಪಟ್ಟದೆ. ಇದು **ಗೋವಿಂದರಾಜೀಯ** ವ್ಯಾಖ್ಯಾನವು. **ತಿಲಕ** ವ್ಯಾಖ್ಯಾನಕಾರರು ಶಿಕ್ಷಾ ವ್ಯಾಕರಣಾದಿಗಳೊಡಗೂಡಿದ ವೇದಗಳು ಸೃಷ್ಟಿಗೋಸುಗ ಬ್ರಹ್ಮನನ್ನು ಎಚ್ಚರಗೊಳಿಸುವಂತೆ ನಾನು ನಿನ್ನನ್ನು ಜಾಗ್ರತೆಗೊಳಿಸುತ್ತೇನೆ ಎಂಬ ಅರ್ಥವನ್ನು ಸೂಚಿಸಿರುತ್ತಾರೆ.

ವಿದ್ಯೈಶ್ಚ ಯಥಾಹ್ಯಾತ್ಮಭುವಂ ವಿಭುಂ ॥ ೫೦ ॥ ಬ್ರಹ್ಮಾಣಂ ಬೋಧಯಂತ್ಯದ್ಯ ತಥಾ ತ್ವಾಂ ಬೋಧಯಾಮ್ಯಹಂ ॥ ಉತ್ತಿಷ್ಠಾಶು ಮಹಾರಾಜ ಕೃತಕೌತುಕ ಮಂಗಳಃ ॥ ೫೧ ॥ ವಿರಾಜಮಾನೋ ವಪುಷಾ ಮೇರೋರಿವ ದಿವಾಕರಃ ॥ ಸೋಮ ಸೂರ್ಯೌಚ ಕಾಕುತ್ಸ್ಥ ಶಿವವೈಶ್ರವಣಾವಪಿ ॥೫೨॥ ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ॥ ಗತಾ ಭಗವತೀ ರಾತ್ರಿ ರಹಶ್ಶಿವಮುಪಸ್ಥಿತಂ ॥ ೫೩ ॥ ಪ್ರತಿಬುಧ್ಯಸ್ವ ರಾಜರ್ಷೇ ಕೃತಂ ಕೃತ್ಯಮಿದಂ ತವ ॥ ಬುಧ್ಯಸ್ವ ನೃಪ ಶಾರ್ದೂಲ ಕುರುಕಾರ್ಯಮನಂತರಂ ॥ ೫೪ ॥ ಉದತಿಷ್ಠತ ರಾಮಸ್ಯ ಸಮಗ್ರ ಮಭಿಷೇಚನಂ ಪೌರ ಜಾನಪದೈ

ಹಾಗೆ, ಅಹಂ-ನಾನು, ಅದ್ಯ-ಈಗ, ತ್ವಾಂ-ನಿನ್ನನ್ನು, ಬೋಧಯಾಮಿ-ಎಚ್ಚರಗೊಳಿಸುತ್ತೇನೆ.॥ ೫೦ ॥ ಹೇ ಮಹಾರಾಜ - ಎಲೈ ಮಹಾರಾಜನೇ, ಮೇರೋಃ - ಮೇರುಪರ್ವತದಿಂದ, ದಿವಾಕರಇವ - ಸೂರ್ಯನಂತೆ, ತ್ವಂ - ನೀನು, ಕೃತಕೌತುಕಮಂಗಳಃ, ಕೃತ - ಮಾಡಲ್ಪಟ್ಟ, ಕೌತುಕ - ಅಭಿಷೇಕೋತ್ಸವಾರ್ಥವಾಗಿ, ಮಂಗಳಃ - ಮಂಗಳಾನುಷ್ಠಾನವುಳ್ಳವನಾಗಿ, ವಪುಷಾ - ಶರೀರದಿಂದ, ವಿರಾಜಮಾನಃ - ಹೊಳೆಯುತ್ತ, ಆಶು - ಜಾಗ್ರತೆಯಾಗಿ, ಉತ್ತಿಷ್ಠ - ಏಳು. ॥ ೫೧ ॥ ಹೇ ಕಾಕುತ್ಸ್ಥ - ಎಲೈ ದಶರಥರಾಜನೇ, ಸೋಮಸೂರ್ಯೌ - ಚಂದ್ರಸೂರ್ಯರು, ಶಿವವೈಶ್ರವಣಾವಪಿ - ಈಶ್ವರ ಕುಬೇರರೂ, ವರುಣಶ್ಚ - ವರುಣನು, ಅಗ್ನಿಃ - ಅಗ್ನಿಯು, ಇಂದ್ರಶ್ಚ - ಇಂದ್ರನೂ ಸಹ, ತೇ - ನಿನಗೆ, ವಿಜಯಂ - ಜಯವನ್ನು, ಪ್ರದಿಶಂತು - ಕೊಡಲಿ. ॥ ೫೨ ॥ ಹೇ ನೃಪಶಾರ್ದೂಲ-ಎಲೈ ರಾಜಶ್ರೇಷ್ಠನೇ, ಭಗವತೀ - ಪೂಜ್ಯವಾದ, ರಾತ್ರಿಃ - ರಾತ್ರಿಯು, ಗತಾ - ಕಳೆದುಹೋಯಿತು, ತವ - ನಿನಗೆ, ಇದಂ - ಇದು, ಕೃತಂಕೃತ್ಯಂ - ಮಾಡಲ್ಪಟ್ಟ ಕೃತ್ಯವುಳ್ಳದು, ಆಸೀತ್ - ಆಯಿತು, ಬುಧ್ಯಸ್ವ - ಎಚ್ಚರಗೊಳ್ಳುವವನಾಗು, ಅನಂತರಂ - ಬಳಿಕ, ಕಾರ್ಯಂ - ಮಾಡಬೇಕಾದ ಕೆಲಸವನ್ನು, ಕುರು - ಮಾಡು. ॥ ೫೩ ॥ ರಾಮಸ್ಯ - ಶ್ರೀರಾಮನ, ಸಮಗ್ರಂ - ಸಂಪೂರ್ಣವಾದ, ಅಭಿಷೇಚನಂ - ಯೌವರಾಜ್ಯ ಪಟ್ಟಾಭಿಷೇಕವು, ಉದತಿಷ್ಠತ - ಸಮೀಪಿಸಿರುವುದು, ಪೌರಜಾನಪದೈಶ್ಚಾಪಿ - ಪುರವಾಸಿಗಳಿಂದಲೂ, ದೇಶವಾಸಿಗಳಿಂದಲೂ, ನೈಗಮೈಶ್ಚ - ವರ್ತಕರಿಂದಲೂ, ಕೃತಾಂಜಲಿಃ, ಕೃತ - ಮಾಡಲ್ಪಟ್ಟ, ಅಂಜಲಿಃ - ವಂದನೆಗಳುಳ್ಳ, ಭಗವಾನ್ - ಪೂಜ್ಯನಾದ, ವಸಿಷ್ಠಃ - ವಸಿಷ್ಠಮುನಿಯು, ಸ್ವಯಂ - ತಾನಾಗಿಯೆ, ಬ್ರಾಹ್ಮಣೈಸ್ಸಹ - ಬ್ರಾಹ್ಮಣರೊಡನೆ, ತಿಷ್ಠತಿ - ಇರು

ಸೂರ್ಯದೇವನು ಮೇರುಪರ್ವತದಿಂದ ಉದಯಿಸುವಂತೆ, ನೀನೂ ಸಹ ಶ್ರೀರಾಮ ರಾಜ್ಯಾಭಿಷೇಕಾರ್ಥವಾಗಿ ಮಾಡಲ್ಪಟ್ಟ ಮಂಗಳಾಚರಣೆಯುಳ್ಳವನಾಗಿ ಏಳುವವನಾಗು. ನಿನಗೆ ಹರಿ ಹರ ಚತುರಾನನರೂ ಇಂದ್ರ, ವರುಣರೇ ಮೊದಲಾದ ದೇವತೆಗಳೂ ಜಯವನ್ನುಂಟು ಮಾಡಲಿ ! ರಾತ್ರಿಯು ಕಳೆದು ಬೆಳಗಾಗಿರುವುದು. ಎಲೈ ರಾಜರ್ಷಿಯಾದ ದಶರಥಮಹೀಪಾಲನೆ ! ಎಚ್ಚರಗೊಳ್ಳುವವನಾಗು. ನೀನು ನಮಗಾಜ್ಞಾಪಿಸಿದಂತೆ ಪ್ರಕಾರವಾಗಿ ಎಲ್ಲವನ್ನೂ ಮಾಡಿರುತ್ತೇವೆ. ಮುಂದೆ ನೀನು ಮಾಡತಕ್ಕ ಕಾರ್ಯವನ್ನು ಮಾಡುವವನಾಗು. ಪಟ್ಟಣಿಗರಿಂದಲೂ, ದೇಶಸ್ಥರಿಂದಲೂ ಸಹ ನಮಸ್ಕೃತನಾಗಿರುವ ಪೂಜ್ಯನಾದ ವಸಿಷ್ಠಮಹರ್ಷಿಯು ವಿಪ್ರ

ಶ್ಚಾಪಿ ನೈಗಮೈಶ್ಚ ಕೃತಾಂಜಲಿಃ ॥ ಸ್ವಯಂ ವಸಿಷ್ಠೋ ಭಗವಾನ್ ಬ್ರಾಹ್ಮಣೈ ಸ್ಸಹ ತಿಷ್ಠತಿ ॥ ೫೫ ॥ ಕ್ಷಿಪ್ರಮಾಜ್ಞಾಪ್ಯತಾಂ ರಾಜನ್ ರಾಘವಸ್ಯಾ ಭಿಷೇಚನಂ ॥ ಯಥಾ ಹ್ಯಪಾಲಾಃ ಪಶವೋ ಯಥಾ ಸೇನಾಹ್ಯನಾಯಕಾ ॥೫೬॥ ಯಥಾ ಚಂದ್ರಂ ವಿನಾ ರಾತ್ರಿ ರ್ಯಥಾ ಗಾವೋ ವಿನಾ ವೃಷಂ ॥ ಏವಂ ಹಿ ಭವಿತಾ ರಾಷ್ಟ್ರಂ ಯತ್ರ ರಾಜಾ ನದೃಶ್ಯತೇ ॥ ೫೭ ॥ ಇತಿ ತಸ್ಯ ವಚಶ್ಶ್ರುತ್ವಾ ಸಾಂತ್ವಪೂರ್ವಮಿವಾರ್ಥವತ್ ॥ ಅಭ್ಯಕೀರ್ಯತ ಶೋಕೇನ ಭೂಯ ಏವ ಮಹೀಪತಿಃ ॥ ೫೮ ॥ ತತಸ್ಸರಾಜಾ ತಂ ಸೂತಂ ಸನ್ನಹರ್ಷಸ್ಸುತಂ ಪ್ರತಿ ॥ ಶೋಕರಕ್ತೇಕ್ಷಣಶ್ಶ್ರೀಮಾ ನುದ್ವೀಕ್ಷ್ಯೋವಾಚ ಧಾರ್ಮಿಕಃ ॥ ೫೯ ॥

ವನು, ಹೇ ರಾಜನ್ - ಎಲೈ ಅರಸನೇ, ರಾಘವಸ್ಯ - ಶ್ರೀರಾಮನ, ಅಭಿಷೇಚನಂ - ಪಟ್ಟಾಭಿಷೇಕ ವನ್ನು ಕುರಿತು, ಕ್ಷಿಪ್ರಂ - ಜಾಗ್ರತೆಯಾಗಿ, ಆಜ್ಞಾಪ್ಯತಾಂ - ಅಪ್ಪಣೆ ಕೊಡಲ್ಪಡಲಿ. ॥ ೫೫ ॥ ಯತ್ರ - ಯಾವ ಪ್ರದೇಶದಲ್ಲಿ, ರಾಜಾ - ಅರಸನಾದ, ಭವಾನ್ - ನೀನು, ನದೃಶ್ಯತೇ - ಕಾಣುವು ದಿಲ್ಲವೊ, (ತತ್ರ - ಆಸ್ಥಳದಲ್ಲಿ,) ಅಪಾಲಾಃ-ಪೋಷಕನಿಲ್ಲದಿರುವ, ಗಾವಃ - ಗೋವುಗಳು, ಯಥಾಹಿ - ಹೇಗೋ, ಅನಾಯಕಾ - ನಾಥನಿಲ್ಲದಿರುವ, ಸೇನಾಹಿ - ಸೈನ್ಯವು, ಯಥಾ - ಹೇಗೋ, ರಾತ್ರಿಃ - ರಾತ್ರಿಯು, ಚದ್ರಂವಿನಾ - ಚಂದ್ರನನ್ನುಳಿದು, ಯಥಾ - ಹೇಗೆ, ಗಾವಃ - ಹಸುಗಳೂ, ವೃಷಂ ವಿನಾ - ವೃಷಭವನ್ನುಳಿದು, ಯಥಾ - ಹೇಗೋ, ಏವಂ - ಹಾಗೆಯೆ, ರಾಷ್ಟ್ರಂ - ದೇಶವು, ಭವಿತಾಹಿ - ಆಗುವದಷ್ಟೆ. ॥ ೫೭ ॥ ಇತಿ - ಇಂತೆಂದು, ಅರ್ಥವದಿವ - ಸಾರ್ಥಕವೇ ಆದ, ಸಾಂತ್ವಂ - ಸಮಾಧಾನ ಪೂರ್ವಕವಾದ, ತಸ್ಯ - ಆ ಸುಮಂತ್ರನ, ವಚಃ - ಮಾತನ್ನು, ಶೃತ್ವಾ - ಕೇಳಿ, ಮಹೀಪತಿಃ - ರಾಜನು, ಶೋಕೇನ - ದುಃಖದಿಂದ, ಭೂಯಏವ - ಮತ್ತೂ, ಅಭ್ಯಕೀರ್ಯತ - ವ್ಯಾಪ್ತನಾದನು. ॥ ೫೮ ॥ ಧಾರ್ಮಿಕಃ - ಧರ್ಮಿಷ್ಠನೂ, ಶ್ರೀಮಾನ್ - ಸಂಪದ್ಯುಕ್ತನೂ, ರಾಜಾ - ಅರಸನೂ ಆದ, ಸಃ - ಆ ದಶರಥರಾಜನು, ತತಃ - ಆ ಸುಮಂತ್ರನ ಸ್ತುತಿಯನ್ನು ಕೇಳಿದಬಳಿಕ, ಸುತಂಪ್ರತಿ - ಮಗನಾದ ಶ್ರೀರಾಮನನ್ನು ಕುರಿತು, ಸನ್ನಹರ್ಷಃ - ನಷ್ಟವಾದ ಸಂತೋಷವುಳ್ಳವನಾದಕಾರಣ, ಶೋಕರಕ್ತೇಕ್ಷಣಃ - ವ್ಯಸನದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ,

---

ಪರೇಣ್ಯರೊಡಗೂಡಿ ತಾನಾಗಿಯೇ ನಿನಗೋಸುಗ ಕಾದುಕೊಂಡಿರುವನು. ಶ್ರೀರಾಮ ರಾಜ್ಯಾ ಭಿಷೇಕಕ್ಕೋಸುಗ ಜಾಗ್ರತೆಯಾಗಿ ಆಜ್ಞಾಪಿಸುವವನಾಗು. ॥೫೦-೫೫॥ ಎಲೈ ರಾಜೇಂದ್ರನೆ! ನೀನೀರೀತಿ ಮಲಗಿರುವುದು ಸರಿಯಲ್ಲವು. ರಾಜನಿಲ್ಲದಸ್ಥಳವು ಪಾಲಕನಿಲ್ಲದ ಪಶುಗಳಂತೆಯೂ, ನಾಥನಿಲ್ಲದ ಸೇನೆಯಂತೆಯೂ, ಚಂದ್ರನಿಲ್ಲದ ರಾತ್ರಿಯಂತೆಯೂ, ವೃಷಭವಿಲ್ಲದ ಗೋವಿನಂತೆಯೂ ಆಗುವುದು.'' ॥ ೫೬-೫೭ ॥ ಈ ರೀತಿ ಸುಮಂತ್ರನು ಅರ್ಥಯುಕ್ತವಾಗಿಯೂ, ಸಮಾಧಾನಯುಕ್ತವಾಗಿಯೂ ನುಡಿಯಲು, ಅದನ್ನು ಕೇಳಿದ ದಶರಥರಾಯನು ಮೊದಲಿಗಿಂತಲೂ ಶೋಕಾಕ್ರಾಂತನಾಗಿ, ಶ್ರೀರಾಮಚಂದ್ರನ ಪಟ್ಟಾಭಿಷೇಕ ವಿಘ್ನವನ್ನು ಸ್ಮರಿಸಿಕೊಂಡು ಸಂತೋಷಹೀನನಾಗಿ, ಸೂತಪುತ್ರನಾದ ಸುಮಂತ್ರನನ್ನು ಕಂಡು ದುಃಖದಿಂದ ಕೆಂಗೆಟ್ಟು ಕೆಂಪಡರಿದ ಕಂಗಳುಳ್ಳವನಾಗಿ "ಎಲೈ ಸುಮಂತ್ರನೆ! ನೀನೀರೀತಿ ನುಡಿದು,

ವಾಕ್ಯೈಸ್ತು ಖಲು ಮರ್ಮಾಣಿ ಮಮ ಭೂಯೋ ನಿಕೃಂತಸಿ || ಸುಮಂತ್ರಃ ಕರುಣಂ ಶ್ರುತ್ವಾ ದೃಷ್ಟ್ವಾ ದೀನಂಚ ಪಾರ್ಥಿವಂ ||೬೦|| ಪ್ರಗೃಹೀತಾಂಜಲಿಃ ಕಿಂಚಿ ತ್ತಸ್ಮಾ ದ್ದೇಶಾ ದಪಾಕ್ರಮತ್ || ಯದಾ ವಕ್ತುಂ ಸ್ವಯಂ ದೈನ್ಯಾ ನ್ನಶಶಾಕ ಮಹೀಪತಿಃ ||೬೧|| ತದಾ ಸುಮಂತ್ರಂ ಮಂತ್ರಜ್ಞಾ ಕೈಕೇಯಿಾ ಪ್ರತ್ಯುವಾಚಹ || ಸುಮಂತ್ರ! ರಾಜಾ ರಜನೀಂ ರಾಮಹರ್ಷ ಸಮುತ್ಸುಕಃ ||೬೨|| ಪ್ರಜಾಗರ ಪರಿಶ್ರಾಂತೋ ನಿದ್ರಾಯಾ ವಶಮೇಯಿವಾ೯ || ತದ್ಗಚ್ಛ ತ್ವರಿತಂ ಸೂತ ರಾಜಪುತ್ರಂ ಯಶಸ್ವಿನಂ ||೬೩|| ರಾಮ

ಸೂತಂ - ಸಾರಥಿಯಾದ, ತಂ - ಆ ಸುಮಂತ್ರನನ್ನು, ದೀನಂ - ದೈನ್ಯವುಳ್ಳ, ಪಾರ್ಥಿವಂ - ಅರಸನನ್ನು ಕೂಡ, ದೃಷ್ಟ್ವಾ - ಕಂಡು, ಪ್ರಗೃಹೀತಾಂಜಲಿಃ - ಗ್ರಹಿಸಲ್ಪಟ್ಟ ಅಂಜಲಿಯುಳ್ಳವನಾಗಿ, ಕಿಂಚಿತ್ - ಸ್ವಲ್ಪವಾಗಿ, ತಸ್ಮಾದ್ದೇಶಾತ್ - ಆ ಸ್ಥಳದಿಂದ, ಅಪಾಕ್ರಮತ್ - ದೂರ ಸರಿದನು. || ೫೯-೬೦ || ಮಹೀಪತಿಃ - ದಶರಥರಾಜನು, ದೈನ್ಯಾತ್ - ದೈನ್ಯದಿಂದ, ಯದಾ - ಯಾವಾಗ, ಸ್ವಯಂ - ತಾನಾಗಿಯೆ, ವಕ್ತುಂ - ತನಗೆ ಕೊಟ್ಟದ್ದ ವರಗಳ ವಿಷಯವನ್ನು ಹೇಳಲು, ನಶಶಾಕ - ಸಮರ್ಥನಾಗಲಿಲ್ಲವೋ, ತದಾ - ಆ ವೇಳೆಯಲ್ಲಿ, ಮಂತ್ರಜ್ಞಾ - ಆಲೋಚನಾಪರಳಾದ, ಕೈಕೇಯಿಾ - ಕೈಕೇಯಿಯು, ಸುಮಂತ್ರಂ - ಸುಮಂತ್ರನನ್ನು ಕುರಿತು, ಹೇ ಸುಮಂತ್ರ - ಎಲೈ ಸುಮಂತ್ರನೆ, ರಾಮಹರ್ಷ ಸಮುತ್ಸುಕಃ - ಶ್ರೀರಾಮನ ಸಂತೋಷದಿಂದ ಉತ್ಕಂಠತೆಯುಳ್ಳವನಾದ, ರಾಜಾ - ದಶರಥರಾಜನು, ರಜನೀಂ - ರಾತ್ರಿಯಲ್ಲಿ, ಪ್ರಜಾಗರಪರಿಶ್ರಾಂತಃ, ಪ್ರಜಾಗರ - ಜಾಗರಣೆಯಿಂದ, ಪರಿಶ್ರಾಂತಃ - ಬಳಲಿ, ನಿದ್ರಾಯಾಃ - ನಿದ್ರಾದೇವಿಯ, ವಶಂ - ಸ್ವಾಧೀನವನ್ನು, ಏಯಿವಾ೯ - ಹೊಂದಿರುವನು, ಹೇ ಸೂತ - ಎಲೈ ಸಾರಥಿಯೆ, ತತ್ - ಆ ಕಾರಣ, ತ್ವರಿತಂ - ಜಾಗ್ರುತೆಯಾಗಿ, ಗಚ್ಛ - ಹೋಗು, ಯಶಸ್ವಿನಂ - ಕೀರ್ತಿವಂತನಾದ, ರಾಜಪುತ್ರಂ - ರಾಜಕುವರನಾದ, ರಾಮಂ - ಶ್ರೀರಾಮನನ್ನು, ಆನಯ - ಕರೆದುಕೊಂಡು ಬಾ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ಅತ್ರ - ಈ ವಿಷಯದಲ್ಲಿ, ವಿಚಾರಣಾ - ಚರ್ಚೆಯು, ನಕಾರ್ಯಾ - ಮಾಡತಕ್ಕದಲ್ಲ, (ಇತಿ - ಇಂತೆಂದು,) ಪ್ರತ್ಯುವಾಚಹ - ಉತ್ತರಕೊಟ್ಟಳಷ್ಟೆ.

ನನ್ನ ಮರ್ಮಸ್ಥಾನಗಳನ್ನೆಲ್ಲ ಕತ್ತರಿಸುವವನಾಗಿರುವೆ" ಎಂದನು. ಆಗಲಾ ಸುಮಂತ್ರನು ದೀನವಾದ ಆ ರಾಯನ ನುಡಿಗಳನ್ನು ಕೇಳಿ ದುಃಖಿತನಾದ ಆತನನ್ನು ಕಂಡು ಬದ್ಧಾಂಜಲಿಪುಟನಾಗಿ ಸ್ವಲ್ಪ ಹಿಂದಕ್ಕೆ ಹೋದನು. || ೫೮-೬೦ || ಯಾವಾಗ ದಶರಥರಾಜನು ವಿಷಯವನ್ನು ತಾನಾಗಿಯೇ ಹೇಳಲು ಸಮರ್ಥನಾಗದೆ ಹೋದನೋ ಆಗ, ಮಹಾ ಊಹಾಪೋಹ ಚತುರಳಾದ ಆ ಕೇಕಯರಾಯನ ಮಗಳು ಸುಮಂತ್ರನನ್ನು ಕುರಿತು, "ಎಲೈ ಸುಮಂತ್ರನೆ! ದಶರಥರಾಜನು ಶ್ರೀರಾಮನ ಯೌವರಾಜ್ಯಾಭಿಷೇಕ ಸಂತೋಷದಿಂದ ರಾತ್ರಿಯಲ್ಲಿ ನಿದ್ರಿಸದೆ ಬಹಳವಾಗಿ ಬಳಲಿ ಈಗ ನಿದ್ರಾದೇವಿಯ ವಶನಾಗಿರುವನು. ಆದುದರಿಂದ ನೀನು ಬೇಗ ತೆರಳಿ, ಮಹಾ ಕೀರ್ತಿವಂತನಾದ ಶ್ರೀರಾಮನನ್ನು ಇಲ್ಲಿಗೆ ಕರೆದುಕೊಂಡು ಬರುವವನಾಗು. ನಿನಗೆ ಮಂಗಳವಾಗುವುದು. ಈ ವಿಷಯದಲ್ಲಿ ಚರ್ಚಿಸಬೇಡ" ಎಂದು

ಮಾನಯ ಭದ್ರಂ ತೇ ನಾತ್ರಕಾರ್ಯಾ ವಿಚಾರಣಾ ॥ ಸಮನ್ಯಮಾನಃ ಕಲ್ಯಾಣಂ ಹೃದಯೇನ ನನಂದಚ ॥ ೬೪ ॥ ನಿರ್ಜಗಾಮ ಚ ಸಂಪ್ರೀತ್ಯಾ ತ್ವರಿತೋ ರಾಜ ಶಾಸನಾತ್ ॥ ಸುಮಂತ್ರಶ್ಚಿಂತಯಾಮಾಸ ತ್ವರಿತಂ ಚೋದಿತಸ್ತಯಾ ॥ ೬೫ ॥ ವ್ಯಕ್ತಂ ರಾಮಾಭಿಷೇಕಾರ್ಥಮಿಹಾಯಾಸ್ಯತಿ ಧರ್ಮವಿತ್ ॥ ಇತಿ ಸೂತೋ ಮತಿಂ ಕೃತ್ವಾ ಹರ್ಷೇಣ ಮಹತಾ ವೃತಃ ॥ ೬೬ ॥ ನಿರ್ಜಗಾಮ ಮಹಾಬಾಹೋ ರಾಘವಸ್ಯ ದಿದೃಕ್ಷಯಾ ॥ ಸಾಗರ ಹ್ರದಸಂಕಾಶಾತ್ಸುಮಂತ್ರೋಂತಃಪುರಾ ಚ್ಛುಭಾತ್ ॥ ೬೭ ॥ ನಿಷ್ಕ್ರಮ್ಯ ಜನಸಂಬಾಧಂ ದದರ್ಶ ದ್ವಾರಮಗ್ರತಃ

ಸಃ - ಆ ಸುಮಂತ್ರನು, ಕಲ್ಯಾಣಂ - ಶುಭವನ್ನು, ಮನ್ಯಮಾನಃ - ಎಣಿಸುತ್ತ, ಹೃದಯೇನ - ಮನದಿಂದ, ನನಂದಚ - ಸಂತೋಷವನ್ನೂ ಹೊಂದಿದನು, ರಾಜಶಾಸನಾತ್ - ರಾಜನಾದ ದಶರಥನಿಗೆ ಇಷ್ಟವಾಗಿರುವದೆಂಬ ಬುದ್ಧಿಯಿಂದ, ಸಂಪ್ರೀತ್ಯಾ - ವಿಶ್ವಾಸದಿಂದ, ತ್ವರಿತಃ - ಜಾಗ್ರತೆಯಾಗಿ, ನಿರ್ಜಗಾಮಚ - ಹೊರಟೇ ಹೋದನು. ॥ ೬೩-೬೪ ॥ ತಯಾ - ಆ ಕೈಕೇಯಿಯಿಂದ, ತ್ವರಿತಂ - ಜಾಗ್ರತೆಯಾಗಿ, ಚೋದಿತಃ - ಕಳುಹಲ್ಪಟ್ಟ, ಸುಮಂತ್ರಃ - ಸುಮಂತ್ರನು, ಏಷಾ - ಈ ಕೈಕೇಯಿಯು, ರಾಮಾಭಿಷೇಕಾರ್ಥಂ - ಶ್ರೀರಾಮನ ಪಟ್ಟಾಭಿಷೇಕಕ್ಕೋಸ್ಕರ, ತ್ವರಯತಿ - ಜಾಗ್ರತೆಗೊಳಿಸುತ್ತಾಳೆ, ಧರ್ಮವಿತ್ - ಧರ್ಮವನ್ನರಿತಿರುವ ದಶರಥರಾಜನು, ಇಹ - ಇಲ್ಲಿ, ಆಯಾಸ್ಯತಿ - ಆಯಾಸವುಳ್ಳವನಾಗಿರುವನು, ವ್ಯಕ್ತಂ - ನಿಶ್ಚಯವು, (ಇತಿ - ಇಂತೆಂದು,) ಚಿಂತಯಾಮಾಸ - ಯೋಚಿಸಿದನು. ॥ ೬೫ ॥ ಇತಿ - ಇಂತೆಂದು, ಸೂತಃ - ಸುಮಂತ್ರನು, ಮತಿಂ - ಬುದ್ಧಿಯನ್ನು, ಕೃತ್ವಾ - ಮಾಡಿ, ಮಹತಾ - ಮಹತ್ತರವಾದ, ಹರ್ಷೇಣ - ಸಂತೋಷದಿಂದ, ವೃತಃ - ಕೂಡಿದವನಾಗಿ, ಮಹಾಬಾಹೋಃ-ಮಹಾ ಭುಜಪರಾಕ್ರಮಿಯಾದ, ರಾಘವಸ್ಯ-ಶ್ರೀರಾಮನನ್ನು, ದಿದೃಕ್ಷಯಾ-ನೋಡಲಿಚ್ಛೆಯಿಂದ, ನಿರ್ಜಗಾಮ - ಹೊರಟನು. ॥ ೬೬ ॥ ಸುಮಂತ್ರಃ - ಸುಮಂತ್ರನು, ಸಾಗರಹ್ರದಸಂಕಾಶಾತ್ - ಸಮುದ್ರಪಮಡುವಿಗೆ ಸಮಾನವಾದ, ಶುಭಾತ್ - ಮಂಗಳಕರವಾದ, ಅಂತಃಪುರಾತ್ - ರಾಣಿವಾಸದಿಂದ, ನಿಷ್ಕ್ರಮ್ಯ - ಹೊರಗೆ ಬಂದು, ಅಗ್ರತಃ - ಮುಂಗಡೆ, ಜನಸಂಬಾಧಂ - ಜನಗಳಿಂದ ತುಂಬಿರುವ, ದ್ವಾರಂ - ಬಾಗಿಲನ್ನು, ದದರ್ಶ - ಕಂಡನು. ॥೬೭॥ ತತಃ - ಬಳಿಕ, ಸಹಸಾ - ಜಾಗ್ರತೆಯಾಗಿ, ವಿನಿರ್ಗತಃ - ಹೊರಟುಬಂದ ಸುಮಂತ್ರನು, ದ್ವಾರಗತಃ - ಅರಮನೆಯ ಬಾಗಿಲನ್ನು ಸೇರಿ, ಪುರಸ್ತಾತ್-ಮುಂಗಡೆ ಇರುವ, ಮಹೀಪತೀಃ-ರಾಜರನ್ನು, ವಿಲೋಕಯನ್ - ನೋಡುತ್ತ, ದ್ವಾರಂ - ಬಾಗಿಲನ್ನು ಕುರಿತು, ಉಪೇತ್ಯ - ಬಂದು, ವಿಷ್ಠಿತಾನ್-ಕುಳಿತಿರುವ,

---

ನಿರೂಪಿಸಿದಳು. ಇಂತು ಕೈಕೇಯಿಯಿಂದ ಪ್ರೇರಿತನಾದ ಸುಮಂತ್ರನು ಶ್ರೀರಾಮನನ್ನು ಕರೆತರುವುದು ದಶರಥರಾಯನಿಗೆ ಸಂತೋಷಕರವೆಂದೂ, ಸಮ್ಮತವಾದುದೆಂದೂ ತಿಳಿದು ಸಂತೋಷಿಸಿ, ರಾಮಾಭಿಷೇಕ ಸಂತಸದಿಂದಲೇ ರಾಯನು ಆಯಾಸ ಹೊಂದಿರುವನೆಂದೂ, ಕೈಕೇಯಿಯು ರಾಮಾಭಿಷೇಕಕ್ಕಾಗಿಯೇ ತನ್ನನ್ನು ತ್ವರೆಗೊಳಿಸುತ್ತಿರುವಳೆಂದೂ, ಚಿಂತಿಸಿ, ಭುಜಬಲಪರಾಕ್ರಮಶಾಲಿಯಾದ ಶ್ರೀರಾಮನನ್ನು ಕಾಣಲು, ಸಮುದ್ರದ ಮಳು

ತತಃ ಪುರಸ್ತಾತ್ಸಹಸಾ ವಿನಿರ್ಗತೋ
ಮಹೀಪತೀನ್ ದ್ವಾರಗತೋ ವಿಲೋಕಯನ್ ॥
ದದರ್ಶ ಪೌರಾನ್ವಿವಿಧಾನ್ ಮಹಾಧನಾ
ನುಪಸ್ಥಿತಾನ್ ದ್ವಾರಮುಪೇತ್ಯ ವಿಷ್ಠಿತಾನ್ ॥ ೬೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ದಶಸ್ಸರ್ಗಃ

ಉಪಸ್ಥಿತಾನ್ - ಗುಂಪಾಗಿ ಸೇರಿರುವ, ಮಹಾಧನಾನ್ - ಮಹದೈಶ್ವರ್ಯವಂತರಾದ, ವಿವಿಧಾನ್ - ಅನೇಕ, ಪೌರಾನ್ - ಪಟ್ಟಣಸ್ಥರನ್ನು, ದದರ್ಶ - ಕಂಡನು. ॥ ೬೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ದಶಸ್ಸರ್ಗಃ

ವಿಗೆ ಸಮಾನವಾದುದೂ, ಮಂಗಳಕರವಾದುದೂ ಆದ ಆ ಅಂತಃಪುರವನ್ನು ದಾಟಿ ಜನನಿಬಿಡವಾದ ರಾಜ ದ್ವಾರವನ್ನು ಕಂಡನು. ಇಷ್ಟೆಯಲ್ಲದೆ ಆ ಬಾಗಿಲಿನಲ್ಲಿ ಕಾಣಿಕೆಗಳನ್ನು ಸಾಮಂತ ರಾಜರನ್ನೂ, ತೆಗೆದುಕೊಂಡು ಬಂದಿದ್ದ ಪುರಜನರನ್ನೂ ಸಹ ನೋಡಿದನು.

ಇಂತಿದು ರಾಮಾಭಿಷೇಕಸನ್ನದ್ಧ ವಸಿಷ್ಠಕೃತ ದಶರಥಭವನಪ್ರವೇಶ
ಕಥಾಕಥನವೆಂಬ ಹದಿನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚದಶಸ್ಸರ್ಗಃ.

ತೇತು ತಾಂ ರಜನೀಮುಷ್ಯ ಬ್ರಾಹ್ಮಣಾ ವೇದಪಾರಗಾಃ ॥ ಉಪತಸ್ಥುರುಪಸ್ಥಾನಂ ಸಹರಾಜ ಪುರೋಹಿತಾಃ ॥ ೧ ॥ ಅಮಾತ್ಯಾ ಬಲಮುಖ್ಯಾಶ್ಚ ಮುಖ್ಯಾಯೇ ನಿಗಮಸ್ಯಚ ॥ ರಾಘವಸ್ಯಾಭಿಷೇಕಾರ್ಥೇ ಪ್ರೀಯಮಾಣಾಸ್ತು ಸಂಗತಾಃ ॥ ೨ ॥ ಉದಿತೇ ವಿಮಲೇ ಸೂರ್ಯೇ ಪುಷ್ಯೇಚಾ ಭ್ಯಾಗತೇಹನಿ ॥ ಲಗ್ನೇ ಕರ್ಕಟಕೇ ಪ್ರಾಪ್ತೇ ಜನ್ಮ ರಾಮಸ್ಯಚ ಸ್ಥಿತೇ ॥ ಅಭಿಷೇಕಾಯ ರಾಮಸ್ಯದ್ವಿಜೇಂದ್ರೈರುಪಕಲ್ಪಿತಂ ॥ ೩ ॥ ಕಾಂಚನಾ ಜಲಕುಂಭಾಶ್ಚ

ವೇದಪಾರಗಾಃ - ವೇದಪಾರಂಗತರಾದ, ತೇ ಬ್ರಾಹ್ಮಣಾಸ್ತು - ಆ ಬ್ರಾಹ್ಮಣರಾದರೋ, ತಾಂರಜನೀಂ - ಆ ರಾತ್ರಿಯನ್ನು, ಉಷ್ಯ - ಕಳೆದು, ಸಹರಾಜಪುರೋಹಿತಾಃ - ರಾಜಪುರೋಹಿತರಾದ ವಸಿಷ್ಠಾದಿಗಳಿಂದೊಡಗೂಡಿ, ಉಪಸ್ಥಾನಂ - ಸಭೆಯನ್ನು, ಉಪತಸ್ಥುಃ - ಸೇರಿದರು. ॥೧॥ ಕಿಂತು - ಮತ್ತು, ನಿಗಮಸ್ಯ - ಪಟ್ಟಣಕ್ಕೆ, ಮುಖಾಃ - ಮುಖಂಡರಾದವರು, ಯೇ - ಯಾರೋ, ತೇ - ಅವರು, ಅಮಾತ್ಯಾಃ - ಮಂತ್ರಿಗಳು, ಬಲಮುಖ್ಯಾಶ್ಚ - ಸೇನೆಯಲ್ಲಿ ಮುಖಂಡರಾದವರು ಸಹ, ರಾಘವಸ್ಯ - ಶ್ರೀರಾಮನ, ಅಭಿಷೇಕಾರ್ಥೇ - ಪಟ್ಟಾಭಿಷೇಕಕ್ಕೋಸುಗ, ಪ್ರೀಯಮಾಣಾಃ - ಸಂತೋಷಿಸುತ್ತ, ಸಂಗತಾಃ - ಸೇರಿದರು. ॥ ೨ ॥ ವಿಮಲೇ ಕಳಂಕರಹಿತನಾದ, ಸೂರ್ಯೇ-ಸೂರ್ಯನು, ಉದಿತೇ - ಹುಟ್ಟಿದವನಾಗಲು, ಪುಷ್ಯೇ - ಪುಷ್ಯನಕ್ಷತ್ರಯುಕ್ತವಾದ, ಅಹನಿ - ಹಗಲು, ಅಭ್ಯಾಗತೇ - ಒದಗಿಬರಲು, ರಾಮಸ್ಯ - ಶ್ರೀರಾಮನ, ಜನ್ಮ - ಉತ್ಪತ್ತಿಯನ್ನು, ಪ್ರಾಪ್ತೇ - ಹೊಂದಿ, ಸ್ಥಿತೇ - ಇರುತ್ತಿರುವ, ಕರ್ಕಟಕೇಲಗ್ನೇಚ - ಕರ್ಕಾಟಕಲಗ್ನವೂಸಹ, ಪ್ರಾಪ್ತೇ - ಬಂದುದಾಗಲು, ರಾಮಸ್ಯ - ಶ್ರೀರಾಮನ, ಅಭಿಷೇಕಾಯ - ಪಟ್ಟಾಭಿಷೇಕಕ್ಕೋಸುಗ, ದ್ರವ್ಯಜಾತಂ - ಪದಾರ್ಥಸಮುದಾಯವು, ದ್ವಿಜೇಂದ್ರೈಃ - ಬ್ರಾಹ್ಮಣೋತ್ತಮರಿಂದ, ಉಪಕಲ್ಪಿತಂ-ಕಲ್ಪಿಸಲ್ಪಟ್ಟಿತು. ॥ ೩ ॥ ಕಾಂಚನಾಃ - ಸುವರ್ಣವಿಕಾರವಾದ, ಜಲಕುಂಭಾಶ್ಚ - ಉದಕಕಲಶಗಳೂ, ಸ್ವಲಂಕೃತಂ-

---

ವೇದ ವೇದಾಂಗ ಪಾರಂಗತರಾದ ಆ ವಿಪ್ರವರೇಣ್ಯರು ಅಂದಿನ ರಾತ್ರಿಯನ್ನು ಕಳೆದು ರಾಜ ಪುರೋಹಿತರಾದ ವಸಿಷ್ಠಾದಿಗಳಿಂದೊಡಗೂಡಿ, ದಶರಥರಾಯನ ಸಭಾಮಂದಿರವನ್ನು ಹೊಕ್ಕವರಾದರು. ಆಗ ಮಂತ್ರಿವರೇಣ್ಯರೂ, ಸೇನಾ ನಾಯಕರೂ, ಪುರಪ್ರಮುಖರೂ ಸಹ, ಶ್ರೀರಾಮಮೂರ್ತಿಯ ಯೌವರಾಜ್ಯಾಕ್ಕೋಸುಗ ಸಂತೋಷಚಿತ್ತರಾಗಿ ಅಲ್ಲಿಗೆ ಬಂದವರಾದರು. ಸೂರ್ಯೋದಯವಾಗಲು, ಪುಷ್ಯ ನಕ್ಷತ್ರಯುಕ್ತವಾದ ಅಂದಿನ ದಿನ ಶ್ರೀರಾಮನ ಜನ್ಮ ಲಗ್ನವಾದ ಕರ್ಕಾಟಕ ಲಗ್ನವು ಪ್ರಾಪ್ತವಾಗಲು, ಬ್ರಾಹ್ಮಣೋತ್ತಮರು ಆ ಶ್ರೀರಾಮನ ಯೌವ ರಾಜ್ಯಾಭಿಷೇಕಕ್ಕೆ ಬೇಕಾದ ಸಲಕರಣಗಳನ್ನೀರೀತಿ ಸಜ್ಜಿಗೊಳಿಸಿದರು. ॥ ೩ ॥ ಜಲಪೂರಿತವಾದ ಭಂಗಾರದ ಕಲಶಗಳೂ, ಸೊಗಸಾಗಿ ಸಿಂಗರಿಸಲ್ಪಟ್ಟ

ಭದ್ರಪೀಠಂ ಸ್ವಲಂಕೃತಂ ‖ ರಥಶ್ಚ ಸಮ್ಯಗಾಸ್ತೀರ್ಣೋ ಭಾಸ್ವತಾ ವ್ಯಾಘ್ರ ಚರ್ಮಣಾ ‖ ೪ ‖ ಗಂಗಾ ಯಮುನಯೋಃ ಪುಣ್ಯಾತ್ಸಂಗಮಾದಾಹೃತಂ ಜಲಂ ‖ ಯಾಶ್ಚಾನ್ಯಾ ಸರಿತಃ ಪುಣ್ಯಾ ಹ್ರದಾಃ ಕೂಪಾಸ್ಸರಾಂಸಿಚ ‖ ೫ ‖ ಪ್ರಾಗ್ವಾಹಾ ಶ್ಚೋರ್ಧ್ವ ವಾಹಾಶ್ಚ ತಿರ್ಯಗ್ವಾಹಾಸ್ಸಮಾಹಿತಾಃ‖ ತಾಭ್ಯಶ್ಚೈವಾ ಹೃತಂ ತೋಯಂ ಸಮುದ್ರೇಭ್ಯಶ್ಚ ಸರ್ವಶಃ ‖ ೬ ‖ ಸಲಾಜಾಃ ಕ್ಷೀರ ಭಿಶ್ಛನ್ನಾ ಘಟಾಃ ಕಾಂಚನ ರಾಜತಾಃ ‖ ಪದ್ಮೋತ್ಪಲಯುತಾ ಭಾಂತಿ

ಚನ್ನಾಗಿ ಅಲಂಕರಿಸಲ್ಪಟ್ಟ, ಭದ್ರಪೀಠಂ - ಸಿಂಹಾಸನವು, ಭಾಸ್ವತಾ - ಹೊಳೆಯುತ್ತಿರುವ, ವ್ಯಾಘ್ರಚರ್ಮಣಾ - ಹುಲಿಯ ಚರ್ಮದಿಂದ, ಸಮ್ಯಕ್ - ಚನ್ನಾಗಿ, ಆಸ್ತೀರ್ಣಃ - ಹಾಸಲ್ಪಟ್ಟ, ರಥಶ್ಚ - ರಥವೂ, ಉಪಕಲ್ಪಿತಾಃ - ಸಿದ್ಧಗೊಳಿಸಲ್ಪಟ್ಟುವು. ‖ ೪ ‖ ಪುಣ್ಯಾತ್ - ಪುಣ್ಯಕರವಾದ, ಗಂಗಾಯಮುನಯೋಃ - ಗಂಗಾಯಮುನಾನದಿಗಳ, ಸಂಗಮಾತ್ - ಸಂಗಮಸ್ಥಳದಿಂದ, ಜಲಂ - ಉದಕವು, ಆಹೃತಂ - ತರಲ್ಪಟ್ಟುದಾಯಿತು, ಪುಣ್ಯಾಃ - ಪುಣ್ಯಕರವಾದ, ಸರಿತಃ - ನದಿಗಳು, ಯಾಃ - ಯಾವುಗಳೋ, ಹ್ರದಾಃ - ಮಡುವುಗಳು, ಕೂಪಾಃ - ಭಾವಿಗಳು, ಯೇ - ಯಾವವೋ, ಸರಾಂಸಿಚ - ಸರಸ್ಸುಗಳು, (ಯಾನಿ - ಯಾವವೂ,) ತೇಭ್ಯಃ - ಅವುಗಳಿಂದಲೂ, ಜಲಾನಿ - ಉದಕಗಳು, ಆಹೃತಾನಿ - ತರಲ್ಪಟ್ಟವು. ‖ ೫ ‖ ಪ್ರಾಗ್ವಾಹಾಃ - ಪೂರ್ವಾಭಿಮುಖವಾಗಿ ಹರಿಯುತ್ತಿರುವ, ಉರ್ಧ್ವವಾಹಾಶ್ಚ - ಮೇಲ್ಭಾಗದಲ್ಲಿ ಹರಿಯುತ್ತಿರುವ, ತಿರ್ಯಗ್ವಾಹಾಃ-ಅಡ್ಡವಾಗಿ ಹರಿಯುತ್ತಿರುವ, (ಅಂದರೆ ದಕ್ಷಿಣೋತ್ತರವಾಗಿ ಹರಿಯುತ್ತಿರುವ ಗಂಡಕೀ, ಶೋಣ, ಭದ್ರೆಯೇ ಮುಂತಾದವುಗಳು,) ಸಮಾಗತಾಃ - ಸಮುದ್ರದೊಡನೆಸೇರಿದ, (ನದಯಃ - ನದಿಗಳು,) ಯಾಃ - ಯಾವುಗಳೋ, ತಾಭ್ಯಶ್ಚೈವ - ಅವುಗಳಿಂದಲೂ, ಸರ್ವಶಃ - ಚತುರ್ದಿಕ್ಕುಗಳಲ್ಲಿರುವ, ಸಮುದ್ರೇಭ್ಯಶ್ಚ - ಕಡಲುಗಳಿಂದಲೂ, ತೋಯಂ - ಉದಕವು, ಆಹೃತಂ - ತರಲ್ಪಟ್ಟಿತು. ‖೬‖ ಕ್ಷೀರಾಭಿಃ - ಹಾಲಿನಿಂದೊಡಗೂಡಿದ, ಪಲ್ಲವೈಃ-ಚಿಗುರುಗಳಿಂದ, ಛನ್ನಾಃ - ಮುಚ್ಚಲ್ಪಟ್ಟ, ಸಲಾಜಾಃ-ಅರಳುಗಳಿಂದೊಡಗೂಡಿದ, ಪದ್ಮೋತ್ಪಲಯುತಾಃ - ಕಮಲಗಳಿಂದಲೂ ಕನ್ನೈದಿಲೆಗಳಿಂದಲೂ ಯುಕ್ತವಾದ, ಪರಮವಾರಿಣಾ-ಉತ್ಕೃಷ್ಟವಾದ ಉದಕದಿಂದ, ಪೂರ್ಣಾಃ - ತುಂಬಿರುವ, ಕಾಂಚನರಾಜತಾಃ - ಸುವರ್ಣ ವಿಕಾರವಾಗಿಯೂ ಬೆಳ್ಳಿಯಮಯವಾಗಿಯೂ, ಇರುವ, ಘಟಾಃ - ಕಲಶಗಳು, ಭಾಂತಿ - ಹೊಳೆಯುತ್ತಿದ್ದವು.

ಭದ್ರಾಸನವೂ, ಹುಲಿ ಚರ್ಮದ ಹೊದಿಕೆಯುಳ್ಳ ರಥವೂ, ಗಂಗಾ ಯಮುನಾ ನದಿಗಳ ಸಂಗಮಸ್ಥಾನದಿಂದ ತರಲ್ಪಟ್ಟ ಉದಕವೂ, ಪುಣ್ಯಕರವಾದ ಅನೇಕ ನದ್ಯೋದಕಗಳೂ, ಪೂರ್ವಾಭಿಮುಖವಾಗಿ ಪ್ರವಹಿಸುತ್ತಿರುವ ಕಾವೇರಿಯ ಜಲವೂ, ಬೆಟ್ಟಗಳಿಂದ ಹರಿಯುತ್ತಿರುವ ನದ್ಯೋದಕಗಳೂ, ದಕ್ಷಿಣೋತ್ತರವಾಗಿ ಪ್ರವಹಿಸುತ್ತಿರುವ ಗಂಡಕೀ, ಶೋಣ, ಭದ್ರಾ ಮುಂತಾದ ನದಿಗಳ ಉದಕವೂ, ಮಡುವು, ಭಾವಿ, ಸರೋವರ ಮೊದಲಾದುವುಗಳ ಉದಕವೂ, ಸಮುದ್ರೋದಕಗಳೂ ಸಹ ಸಿದ್ಧಗೊಳಿಸಲ್ಪಟ್ಟುವು. ಲಾಜ ಸಹಿತವಾಗಿಯೂ, ಕ್ಷೀರಯುಕ್ತವಾದ ಪಲ್ಲವಗಳಿಂದ ಆಚ್ಛಾದಿತವಾಗಿಯೂ, ಕಮಲಗಳಿಂದಲೂ, ಕನ್ನೈದಿಲೆಗಳಿಂದಲೂ ಕೂಡಿದುದಾಗಿಯೂ, ಉತ್ತಮವಾದ ಉದಕಗಳಿಂದ ತುಂಬಲ್ಪಟ್ಟುವುಗಳಾ

ಪೂರ್ಣಾಃ ಪರಮ ವಾರಿಣಾ ॥ ೭ ॥ ಕ್ಷೌದ್ರಂ ದಧಿಘೃತಂ ಲಾಜಾ ದರ್ಭಾ ಸ್ಸುಮನಸಃ ಪಯಃ ॥ ವೇಶ್ಯಾಶ್ಚೈವ ಶುಭಾಚಾರಾ ಸ್ಸರ್ವಾಭರಣ ಭೂಷಿತಾಃ ॥ ೮ ॥ ಚಂದ್ರಾಂಶು ವಿಕಚಪ್ರಖ್ಯಂ ಕಾಂಚನಂ ರತ್ನ ಭೂಷಿತಂ ॥ ಸಜ್ಜಂ ತಿಷ್ಠತಿ ರಾಮಸ್ಯ ವಾಲವ್ಯಜನ ಮುತ್ತಮಂ ॥ ೯ ॥ ಚಂದ್ರಮಂಡಲ ಸಂಕಾಶ ಮಾತಪತ್ರಂ ಚ ಪಾಂಡುರಂ ॥ ಸಜ್ಜಂ ದ್ಯುತಿಕರಂ ಶ್ರೀಮದಭಿಷೇಕ ಪುರಸ್ಕೃತಂ ॥ ೧೦ ॥ ಪಾಂಡುರಶ್ಚ ವೃಷಸ್ಸಜ್ಜಃ ಪಾಂಡುರೋಶ್ವಶ್ಚ ಸುಸ್ಥಿತಃ ॥ ಪ್ರಸೃತಶ್ಚ ಗಜಶ್ಶ್ರೀಮಾ ನೌಪವಾಹ್ಯಃ ಪ್ರತೀಕ್ಷತೇ ॥ ೧೧ ॥ ಅಷ್ಟಾಚ ಕನ್ಯಾ ಮಾಂಗಲ್ಯಾ ಸ್ಸರ್ವಾಭರಣ ಭೂಷಿತಾಃ ॥ ವಾದಿತ್ರಾಣಿ ಚ ಸರ್ವಾಣಿ ವಂದಿನಶ್ಚ

॥ ೭ ॥ ಕ್ಷೌದ್ರಂ - ಜೇನುತುಪ್ಪ, ದಧಿ - ಮೊಸರು, ಘೃತಂ - ತುಪ್ಪ, ಲಾಜಾಃ - ಅರಳು, ದರ್ಭಾಃ - ದರ್ಭೆಗಳು, ಸುಮನಸಃ - ಪುಷ್ಪಗಳು, ಪಯಃ - ಹಾಲು, ಶುಭಾಚಾರಾಃ - ಶುಭಕರವಾದ ಆಚಾರಗಳುಳ್ಳ, ಸರ್ವಾಭರಣ ಭೂಷಿತಾಃ- ಸಮಸ್ತವಾದ ಒಡವೆಗಳಿಂದಲಂಕೃತರಾದ, ವೇಶ್ಯಾಶ್ಚೈವ - ವೇಶ್ಯಾಸ್ತ್ರೀಯರು ಸಹ, ತಿಷ್ಠಂತಿ - ನಿಂತಿರುವರು. ॥ ೮ ॥ ಚಂದ್ರಾಂಶುವಿಕಚಪ್ರಖ್ಯಂ - ಚಂದ್ರ ಕಿರಣಗಳ ಕಾಂತಿಯಂತೆ ಕಾಂತಿಯುಳ್ಳ, ಕಾಂಚನಂ - ಸುವರ್ಣ ವಿಕಾರವಾದ, ರತ್ನಭೂಷಿತಂ - ರತ್ನಗಳಿಂದಲಂಕೃತವಾದ, ಉತ್ತಮಂ - ಶ್ರೇಷ್ಠವಾದ, ವಾಲವ್ಯಜನಂ - ಚಾಮರವು, ರಾಮಸ್ಯ - ಶ್ರೀರಾಮನಿಗೆ, ಸಜ್ಜಂ - ಸನ್ನದ್ಧವಾಗಿ, ತಿಷ್ಠತಿ - ಇರುವುದು. ॥೯॥ ಚಂದ್ರಮಂಡಲಸಂಕಾಶಂ - ಚಂದ್ರಮಂಡಲಕ್ಕೆ ಸಮಾನವಾದ, ಅಭಿಷೇಕಪುರಸ್ಕೃತಂ - ಪ್ರಕ್ಷಾಳಿತವಾದ, ದ್ಯುತಿಕರಂ - ಕಾಂತಿಯನ್ನುಂಟುಮಾಡುವ, ಶ್ರೀಮತ್ - ಐಶ್ವರ್ಯಕರವಾದ, ಪಾಂಡುರಂ - ಬಿಳುಪಾಗಿರುವ ಆತಪತ್ರಂಚ- ಛತ್ರವು ಸಹ, ಸಜ್ಜಂ - ಸನ್ನದ್ಧವಾಗಿದೆ. ॥ ೧೦ ॥ ಪಾಂಡುರಃ - ಬಿಳುಪಾಗಿರುವ, ವೃಷಃ - ವೃಷಭವು, ಸಜ್ಜಃ - ಸಿದ್ಧವಾಗಿರುವುದು, ಪಾಂಡುರೋಶ್ವಶ್ಚ - ಬಿಳಿಗುದುರೆಯುಸಹ, ಸುಸ್ಥಿತಃ - ಇರುವುದು, ಪ್ರಸೃತಃ - ಚಪಳವಾಗಿ ಮದೋದಕವನ್ನು ಸುರಿಸುತ್ತಿರುವ, ಶ್ರೀಮಾ - ಕಾಂತಿಯುಕ್ತವಾದ, ಔಪವಾಹ್ಯಃ - ರಾಜನು ಕುಳಿತುಕೊಳ್ಳುವ, ಗಜಶ್ಚ - ಆನೆಯೂ ಪ್ರತೀಕ್ಷತೇ - ಕಾದುಕೊಂಡಿರುವುದು, ॥ ೧೧ ॥ ಸರ್ವಾಭರಣಭೂಷಿತಾಃ-ಸಮಸ್ತವಾದ ಒಡಿವೆಗಳಿಂದಲಂಕೃತರಾದ, ಮಾಂಗಳ್ಯಾಃ - ಶುಭಕರರಾದ, ಅಷ್ಟೌ - ಎಂಟು ಮಂದಿಯಾದ, ಕನ್ಯಾಶ್ಚ - ಕನ್ನಿಕೆಯರೂ, ಸರ್ವಾಣಿ - ಸಮಸ್ತವಾದ, ವಾದಿತ್ರಾಣಿ - ವೀಣಾದಿ ಚತುರ್ವಿಧ ವಾದ್ಯಗಳೂ, ವಂದಿನಶ್ಚ - ಸ್ತುತಿ

ಗಿಯೂ ಇರುವ ಸುವರ್ಣ ಕಲಶಗಳು ಅಲ್ಲಲ್ಲಿ ಕಂಗೊಳಿಸುತ್ತಿದ್ದುವು. ॥ ೭ ॥ ಜೇನುತುಪ್ಪ, ಮೊಸರು, ತುಪ್ಪ, ಅರಳು, ದರ್ಭೆ, ಕುಸುಮಗಳು, ಕ್ಷೀರ ಇವೇ ಮೊದಲಾದ ಪದಾರ್ಥಗಳೂ, ಸಜ್ಜಿಗೊಳಿಸಲ್ಪಟ್ಟಿದ್ದುವಲ್ಲದೆ, ದಿವ್ಯಾ ಭರಣಾದಿಗಳಿಂದಲಂಕೃತರಾದ ವೇಶ್ಯಾಸ್ತ್ರೀಯರೂ ಸಿದ್ಧರಾಗಿದ್ದರು. ಇದಲ್ಲದೆ ಚಂದ್ರ ಕಿರಣಗಳಂತೆ ವಿಸ್ತಾರವಾಗಿಯೂ, ರತ್ನಗಳಿಂದಲಂಕೃತ ವಾಗಿಯೂ ಇರುವ ಶ್ವೇತ ಚಾಮರಗಳೂ, ಚಂದ್ರ ಮಂಡಲದಂತೆ ಶುಭ್ರವಾದ ಶ್ವೇತ ಛತ್ರಿಯೂ, ಬೆಳ್ಳಗಿರುವ ವೃಷಭವೂ, ಶುಭ್ರವಾದ ಪಟ್ಟದ ಕುದುರೆಯೂ, ಮದೋದಕ ವನ್ನು ಸುರಿಸುತ್ತಿರುವ ಪಟ್ಟದಾನೆಯೂ, ಸರ್ವಾಲಂಕಾರ ಸಮನ್ವಿತರಾದ ಎಂಟು ಮಂದಿ

ತಥಾಪರೇ ॥ ೧೨ ॥ ಇಕ್ಷ್ವಾಕೂಣಾಂ ಯಥಾ ರಾಜ್ಯೇ ಸಂಭ್ರಿಯೇತಾ
ಭಿಷೇಚನಂ ॥ ತಥಾಜಾತೀಯ ಮಾದಾಯ ರಾಜಪುತ್ರಾಭಿಷೇಚನಂ ॥೧೩॥
ತೇ ರಾಜ ವಚನಾತ್ತತ್ರ ಸಮವೇತಾ ಮಹೀಪತಿಂ ॥ ಅಪಶ್ಯಂತೋ ಬ್ರುವನ್
ಕೋನು ರಾಜ್ಞೋ ನಃ ಪ್ರತಿವೇದಯೇತ್ ॥ ೧೪ ॥ ನಪಶ್ಯಾಮಶ್ಚ ರಾಜಾನ
ಮುದಿತಶ್ಚ ದಿವಾಕರಃ ॥ ಯೌವರಾಜ್ಯಾಭಿಷೇಕಶ್ಚ ಸಜ್ಜೋ ರಾಮಸ್ಯ ಧೀಮತಃ
॥ ೧೫ ॥ ಇತಿ ತೇಷು ಬ್ರುವಾಣೇಷು ಸಾರ್ವಭೌಮಾನ್ ಮಹೀಪತೀನ್ ॥
ಅಬ್ರವೀತ್ತಾನಿದಂ ಸರ್ವಾನ್ ಸುಮಂತ್ರೋ ರಾಜಸತ್ಕೃತಃ ॥ ೧೬ ॥ ರಾಮಂ

ಪಾಠಕರು, ತಥಾ - ಹಾಗೆಯೆ, ಅಪರೇ - ಮತ್ತೆ ಕೆಲವರು ಸಹಾ, (ಪ್ರತೀಕ್ಷಂತೇ - ಕಾದುಕೊಂಡಿರುವರು) ॥ ೧೨ ॥ ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶಸ್ಥರಾಜರ, ರಾಜ್ಯೇ - ರಾಷ್ಟ್ರದಲ್ಲಿ, ಅಭಿಷೇಚನಂ - ಅಭಿಷೇಕವನ್ನು ಕುರಿತು, ವಸ್ತುಜಾತಂ - ಪದಾರ್ಥಗಳ ಸಮೂಹವನ್ನು, ಯಥಾ - ಹೇಗೆ, ಸಂಭ್ರಿಯೇತ - ಸಂಪಾದಿಸಬೇಕೊ, ತಥಾ - ಹಾಗೆ, ಜಾತೀಯಂ - ಅಮೂಲ್ಯವಾದ ರತ್ನಾದಿಗಳನ್ನು, ಆದಾಯ - ತೆಗೆದುಕೊಂಡು, ರಾಜಪುತ್ರಾಭಿಷೇಚನಂ - ಶ್ರೀರಾಮನ ಪಟ್ಟಾಭಿಷೇಕವನ್ನು ಕುರಿತು, ತೇ - ಆ ಅರಸರು, ರಾಜವಚನಾತ್ - ರಾಜಾಜ್ಞೆಯಿಂದ, ತತ್ರ - ಆ ಅರಮನೆಯ ಬಾಗಿಲಿನಲ್ಲಿ, ಸಮವೇತಾಃ - ಗುಂಪುಸೇರಿ, ಮಹೀಪತಿಂ - ಭೂಪತಿಯಾದ ದಶರಥನನ್ನು, ಅಪಶ್ಯಂತಃ - ಕಾಣದವರಾಗಿ, ಕೋನು - ಯಾವ ಪುರುಷನಾದರೆ, ನಃ - ನಮ್ಮನ್ನು, ರಾಜ್ಞಃ - ಧೊರೆಗೆ, ಪ್ರತಿವೇದಯೇತ್ - ತಿಳುಹಿಸುವನು, (ಇತಿ - ಇಂತೆಂದು,) ಅಬ್ರುವನ್ - ನುಡಿದರು. ॥ ೧೪ ॥ ರಾಜಾನಂಚ - ಅರಸನನ್ನೂ, ನಪಶ್ಯಾಮಃ-ನೋಡಲಿಲ್ಲ, ದಿವಾಕರಶ್ಚ - ಸೂರ್ಯನು ಸಹಾ, ಉದಿತಃ-ಉದಯಿಸಿರುವನು, ಧೀಮತಃ - ಮತಿವಂತನಾದ, ರಾಮಸ್ಯ - ಶ್ರೀರಾಮನ, ಯೌರಾಜ್ಯಾಭಿಷೇಕಶ್ಚ-ಯೌವ ರಾಜ್ಯಪಟ್ಟಾಭಿಷೇಕವು ಸಹ, (ಸಜ್ಜಃ - ಸನ್ನದ್ಧವಾಗಿದೆ, ಇತಿ - ಇಂತೆಂದು, ತೇಷು - ಆ ರಾಜರು,) ಬ್ರುವಾಣೇಷು - ಹೇಳುತ್ತಿರಲು, ರಾಜ ಸತ್ಕೃತಃ - ಒಡೆಯನಿಂದ ಸತ್ಕರಿಸಲ್ಪಟ್ಟ, ಸುಮಂತ್ರಃ - ಸುಮಂತ್ರನು, ಮಹೀಪತೀನ್ - ಭೂಪತಿಗಳಾದ, ಸರ್ವಾನ್ - ಸಮಸ್ತರಾದ, ತಾನ್ ಸಾರ್ವಭೌಮಾನ್ - ಆ ಚಕ್ರವರ್ತಿಗಳನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್-ನುಡಿದನು, ॥ ೧೬ ॥ ಅಹಂ - ನಾನು, ರಾಜ್ಞಃ - ದಶರಥರಾಜನ, ನಿಯೋಗೇನ - ಅಜ್ಞಾ ವಚನದಿಂದ,

---

ಕನ್ನಿಕೆಯರೂ, ವೀಣಾದಿವಾದ್ಯ ವಿಶೇಷಗಳೂ ಸನ್ನದ್ಧವಾಗಿದ್ದುವಲ್ಲದೆ, ಸ್ತುತಿಪಾಠಕರು ಸಹ ಸಿದ್ಧರಾಗಿದ್ದರು. ॥ ೧೨ ॥ ದಶರಥ ಮಹೀಪಾಲನು ಯಾವ ಯಾವ ರಾಯರ ಕರೆಯಿಸಿದ್ದನೋ ಅವರೆಲ್ಲರೂ ಶ್ರೀರಾಮ ರಾಜ್ಯಾಭಿಷೇಕಕ್ಕೆ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಅರಮನೆಯ ಹೆಬ್ಬಾಗಿಲಿನ ಬಳಿ ಗುಂಪುಗೂಡಿ ನಿಂತಿದ್ದು ರಾಜನನ್ನು ಕಾಣದಿರುವವರಾಗಿ, "ನಾವು ಬಂದಿರುವ ವೃತ್ತಾಂತವನ್ನು ದಶರಥರಾಯನಿಗೆ ತಿಳಿಸುವವರಾರು ? ಸೂರ್ಯೋದಯವಾಯಿತು. ರಾಜನ ಸಂದರ್ಶನವೇ ಆಗಲಿಲ್ಲವಲ್ಲ ! ಶ್ರೀರಾಮಚಂದ್ರನ ಪಟ್ಟಾಭಿಷೇಕಕ್ಕೆ ಬೇಕಾದ ಸಮಸ್ತ ಸಾಮಗ್ರಿಗಳೂ ಸಿದ್ಧವಾಗಿರುವುವಲ್ಲ !" ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗ ರಾಜ ಸನ್ಮಾನಿತನೂ ಮಂತ್ರಿ ಪುಂಗವನೂ ಆದ ಸುಮಂತ್ರನು

ರಾಜ್ಞೋ ನಿಯೋಗೇನ ತ್ವರಯಾ ಪ್ರಸ್ಥಿತೋಸ್ಮ್ಯಹಂ ॥ ಪೂಜ್ಯಾ ರಾಜ್ಞೋ
ಭವಂತಸ್ತು ರಾಮಸ್ಯ ಚ ವಿಶೇಷತಃ ॥ ೧೭ ॥ ಅಯಂ ಪೃಚ್ಛಾಮಿ ವಚನಾ
ತ್ಸುಖಮಾಯುಷ್ಮತಾಮಹಂ ॥ ರಾಜ್ಞ ಸ್ಸಂಪ್ರತಿಬುದ್ಧಸ್ಯ ಯಚ್ಚಾಗಮನ
ಕಾರಣಂ ॥ ೧೮ ॥ ಇತ್ಯುಕ್ತ್ವಾಂತಃಪುರದ್ವಾರಮಾಜಗಾಮ ಪುರಾಣವಿತ್ ॥
ಸದಾಸಕ್ತಂ ಚ ತದ್ವೇಶ್ಮ ಸುಮಂತ್ರಃ ಪ್ರವಿವೇಶಸಃ ॥ ೧೯ ॥ ತುಷ್ಟಾವಾಸ್ಯ
ತದಾ ವಂಶಂ ಪ್ರವಿಶ್ಯ ಸ ವಿಶಾಂಪತೇಃ ॥ ಶಯನೀಯಂ ನರೇಂದ್ರಸ್ಯ ತದಾ
ಸಾದ್ಯ ವ್ಯತಿಷ್ಠತ ॥೨೦॥ ಸೋತ್ಯಾಸಾದ್ಯ ತು ತದ್ವೇಶ್ಮ ತಿರಸ್ಕರಣಿಮಂತರಾ ॥

ತ್ವರಯಾ - ಬೇಗನೆ, ರಾಮಂ - ಶ್ರೀರಾಮನನ್ನು, (ಆನೇತುಂ - ಕರೆದುಕೊಂಡು ಬರುವದಕ್ಕೆ,) ಪ್ರಸ್ಥಿತಃ - ಬಂದವನು, ಅಸ್ಮಿ - ಆದೆನು, ಭವಂತಸ್ತು - ನೀವಾದರೆ, ರಾಜ್ಞಃ - ಅರಸಾದ ದಶರಥ ರಾಜನಿಗೂ, ರಾಮಸ್ಯಚ - ಶ್ರೀರಾಮನಿಗೂ, ವಿಶೇಷತಃ - ಬಹಳವಾಗಿ, ಪೂಜ್ಯಾಃ - ಪೂಜನೀಯರು ॥ ೧೭ ॥ ಅಯಮಹಂ - ಆ ಈ ನಾನು, ಆಯುಷ್ಮತಾಂ - ತಮ್ಮ, ವಚನಾತ್ - ಮಾತಿನಿಂದ, ಸಂಪ್ರತಿಬುದ್ಧಸ್ಯ - ಎಚ್ಚತ್ತ, ರಾಜ್ಞಃ - ಅರಸಿನ, ಸುಖಂ - ಸುಖವನ್ನು, ಪೃಚ್ಛಾಮಿ - ಕೇಳುತ್ತೇನೆ, ಆಗಮನಕಾರಣಂ - ಬರುವದಕ್ಕೆ ನಿಮಿತ್ತವು, ಯತ್ - ಯಾವುದೋ, ತತ್-ಅದನ್ನು, ಪೃಚ್ಛಾಮಿ- ಕೇಳುತ್ತೇನೆ, ಇತಿ - ಇಂತೆಂದು, ಉಕ್ತ್ವಾ - ಹೇಳಿ, ಪುರಾಣವಿತ್ - ಪುರಾತನವಾದ ವಾಡಿಕೆಯನ್ನು ತಿಳಿದಿರುವ, ಸುಮಂತ್ರಃ - ಸುಮಂತ್ರನು, ಅಂತಃಪುರದ್ವಾರಂ - ರಾಣಿವಾಸದ ಬಾಗಿಲಿಗೆ, ಆಜಗಾಮ - ಬಂದನು, ಸದಾ - ನಿರಂತರವು, ಆಸಕ್ತಂ - ನಿರೋಧವಿಲ್ಲದಿರುವ, (ಅಥವಾ ತಡೆಯಿ ಲ್ಲದಂತೆ,) ತದ್ವೇಶ್ಮ - ಆ ಮನೆಯನ್ನು, ಪ್ರವಿವೇಶ - ಹೊಕ್ಕನು. ॥ ೧೯ ॥ ತದಾ - ಆ ವೇಳೆಯಲ್ಲಿ, ಸಃ - ಆ ಸುಮಂತ್ರನು, ಪ್ರವಿಶ್ಯ - ಹೊಕ್ಕು, ಅಸ್ಯವಿಶಾಂಪತೇಃ - ಈ ದಶರಥರಾಜನ, ವಂಶಂ - ಕುಲವನ್ನು, ತುಷ್ಟಾವ - ಸ್ತೋತ್ರ ಮಾಡಿದನು, ನರೇಂದ್ರಸ್ಯ - ದಶರಥರಾಜನ, ತತ್ಶಯನೀಯಂ - ಆ ಶಯನಯೋಗ್ಯವಾದ ಗೃಹವನ್ನು, ಆಸಾದ್ಯ - ಹೊಂದಿ, ವ್ಯತಿಷ್ಠತ - ನಿಂತನು. ॥ ೨೦ ॥ ಸಃ - ಆ ಸುಮಂತ್ರನು, ತದ್ವೇಶ್ಮ - ಆ ಮನೆಯನ್ನು, ಅತ್ಯಾಸಾದ್ಯ - ಅತಿಶಯವಾಗಿ ಹೊಕ್ಕು, ತಿರಸ್ಕರಣಿಂ - ಪರದೆಯನ್ನು, ಅಂತರಾ - ತಡೆಯುಳ್ಳದಾಗಿ ಮಾಡಿಕೊಂಡು, ಗುಣಯು

ಆ ರಾಯರೆಲ್ಲರನ್ನೂ ಕುರಿತು "ಎಲೈ ರಾಜರುಗಳಿರಾ ! ನಾನೀಗ ಮಹಾರಾಜನಾಣತಿಯಂತೆ ಶ್ರೀರಾಮನನ್ನು ಕುರಿತು ತೆರಳುತ್ತಿರುವೆನು. ಆದರೆ ನೀವೆಲ್ಲರೂ ಒಡೆಯನಾದ ದಶರಥ ಭೂಪಾಲನಿಗೂ, ಶ್ರೀರಾಮ ಮೂರ್ತಿಗೂ ವಿಶೇಷವಾಗಿ ಪೂಜೆಯನ್ನರ್ಪಿಸಲು ಯೋಗ್ಯರಾದವರು. ಇಂತಹ ತಮ್ಮ ಮಾತಿನಂತೆ ನಾನು ಶಯನದಿಂದೀಗತಾನೆ ಎಚ್ಚರಗೊಂಡಿರುವ ದಶರಥರಾಯನ ಕ್ಷೇಮವನ್ನು ಕೇಳಿ ಯಾವಾಗ ಬರುವನೆಂಬುದನ್ನು ತಿಳಿದುಕೊಂಡು ಮರಳಿ ಬರುತ್ತೇನೆ" ಎಂದು ಹೇಳಿದನು. ॥೧೭-೧೮॥ ಆ ಬಳಿಕ ಅರಮನೆಯ ಮರ್ಯಾದೆಯನ್ನರಿತವನಾದ ಆ ಸುಮಂತ್ರನು ತನ್ನ ಗಮನಾಗಮನಗಳಿಗೆ ಆತಂಕವಿಲ್ಲದ ಅಂತಃಪುರವನ್ನು ಸೇರಿ, ದಶರಥರಾಯನ ವಂಶಾವಳಿಯನ್ನು ಹೊಗಳುತ್ತ, ಆ ರಾಯನ ಶಯನಾಗಾರವನ್ನು ಪ್ರವೇಶಿಸಿ, ಪರದೆಯನ್ನು ಮರೆಮಾಡಿಕೊಂಡು, ಆ ರಾಯನಿಗನುಗುಣವಾದ ಆಶೀರ್ವಚನಗಳಿಂದ

ಆಶೀರ್ಭಿರ್ಗುಣಯುಕ್ತಾಭಿರಭಿತುಷ್ಟಾವ ರಾಘವಂ ॥ ೨೧ ॥ ಸೋಮ ಸೂರ್ಯೌಚ ಕಾಕುತ್‌ಸ್ಥ ಶಿವ ವೈಶ್ರವಣಾವಪಿ ॥ ವರುಣಶ್ಚಾಗ್ನಿರಿಂದ್ರಶ್ಚ ವಿಜಯಂ ಪ್ರದಿಶಂತು ತೇ ॥ ೨೨ ॥ ಗತಾ ಭಗವತೀ ರಾತ್ರಿರಹಶ್ಶಿವ ಮುಪ ಸ್ಥಿತಂ ॥ ಬುಧ್ಯಸ್ವ ನೃಪ ಶಾರ್ದೂಲ ಕುರು ಕಾರ್ಯಮನಂತರಂ ॥ ೨೩ ॥ ಬ್ರಾಹ್ಮಣಾ ಬಲಮುಖ್ಯಾಶ್ಚ ನೈಗಮಾಶ್ಚಾಗತಾ ನೃಪ ॥ ದರ್ಶನಂ ಪ್ರತಿಕಾಂ ಕ್ಷಂತೇ ಪ್ರತಿಬುಧ್ಯಸ್ವ ರಾಘವ ॥ ೨೪ ॥ ಸ್ತುವಂತಂ ತಂ ತದಾ ಸೂತಂ ಸುಮಂತ್ರಂ ಮಂತ್ರ ಕೋವಿದಂ ॥ ಪ್ರತಿಬುಧ್ಯ ತತೋ ರಾಜಾ ಇದಂ ವಚನ ಮಬ್ರವೀತ್ ॥ ೨೫ ॥ ರಾಮಮಾನಯ ಸೂತೇತಿ ಯದಸ್ಯಭಿಹಿತೋನಯಾ ॥

ಕ್ತಾಭಿಃ - ಗುಣಗಳಿಂದ ಕೂಡಿರುವ, ಆಶೀರ್ಭಿಃ - ಆಶೀರ್ವಾದಗಳಿಂದ, ರಾಘವಂ-ದಶರಥರಾಜನನ್ನು, ಅಭಿತುಷ್ಟಾವ - ಸ್ತೋತ್ರ ಮಾಡಿದನು. ॥ ೨೧ ॥ ಹೇ ಕಾಕುತ್‌ಸ್ಥ - ಎಲೈ ಕಕುತ್‌ಸ್ಥವಂಶೋ ತ್ಪನ್ನನೆ! ಸೋಮಸೂರ್ಯೌಚ - ಚಂದ್ರ ಸೂರ್ಯರೂ, ಶಿವವೈಶ್ರವಣಾವಪಿ - ಈಶಾನ ಕುಬೇರರೂ, ವರುಣಶ್ಚ - ವರುಣನೂ, ಅಗ್ನಿಶ್ಚ - ಅಗ್ನಿಯೂ, ಇಂದ್ರಶ್ಚ - ಇಂದ್ರನೂ ಸಹ, ತೇ - ನಿನಗೆ, ವಿಜಯಂ - ಜಯವನ್ನು, ಪ್ರದಿಶಂತು - ಕೊಡಲಿ. ॥ ೨೨ ॥ ಹೇ ನೃಪಶಾರ್ದೂಲ - ಎಲೈ ರಾಜಶ್ರೇಷ್ಠನೆ, ಭಗವತೀ - ಪೂಜ್ಯವಾದ, ರಾತ್ರಿಃ - ರಾತ್ರಿಯು, ಗತಾ - ಕಳೆದು ಹೋಯಿತು, ತವ- ನಿನ್ನ, ಇದಂಕೃತ್ಯಂ - ಈ ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಬುಧ್ಯಸ್ವ - ಏಳು, ಅನಂತರಂ- ಮುಂದೆ ಮಾಡತಕ್ಕ, ಕಾರ್ಯಂ - ಕೆಲಸವನ್ನು, ಕುರು - ಮಾಡು. ॥ ೨೩ ॥ ಹೇ ನೃಪ - ಎಲೈ ಅರಸೆ, ಬ್ರಾಹ್ಮಣಾಃ - ಬ್ರಾಹ್ಮಣರು, ಬಲಮುಖ್ಯಾಶ್ಚ - ಸೇನಾನಾಯಕರೂ, ನೈಗಮಾಶ್ಚ - ವರ್ತ ಕರೂ, ಆಗತಾಃ - ಬಂದು, ಹೇ ರಾಘವ - ಎಲೈ ದಶರಥರಾಜನೆ, ದರ್ಶನಂ - ಸಂದರ್ಶನವನ್ನು, ಪ್ರತಿಕಾಂಕ್ಷಂತೇ - ನಿರೀಕ್ಷಿಸುತ್ತಿರುವರು, ಪ್ರತಿಬುಧ್ಯಸ್ವ - ಏಳು. ॥ ೨೪ ॥ ತದಾ - ಆಗ, ರಾಜಾ - ದಶರಥರಾಜನು, ತತಃ - ಬಳಿಕ, ಪ್ರತಿಬುಧ್ಯ - ಎದ್ದು, ಸ್ತುವಂತಂ - ಸ್ತೋತ್ರ ಮಾಡು ತ್ತಿರುವ, ಮಂತ್ರಕೋವಿದಂ-ಆಲೋಚನೆಯಲ್ಲಿ ಪಂಡಿತನಾದ, ಸೂತಂ-ಸಾರಥಿಯಾದ, ಸುಮಂತ್ರಂ- ಸುಮಂತ್ರನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೨೫॥

ಸ್ತುತಿಸುತ್ತ ಆತನನ್ನು ಕುರಿತು ಹೀಗೆಂದನು. ॥೧೯-೨೧॥ "ಎಲೈ ಕಕುತ್ಸ್ಥ ವಂಶೋತ್ಪನ್ನ ನಾದ ದಶರಥನರನಾಥನೆ! ಚಂದ್ರ ಸೂರ್ಯರೂ, ಶಿವ ಕುಬೇರರೂ, ವರುಣ, ಅಗ್ನಿ, ಇಂದ್ರನೇ ಮೊದಲಾದವರೆಲ್ಲರೂ ನಿನಗೆ ಜಯವನ್ನುಂಟುಮಾಡಲಿ! ಬೆಳಗಾಯಿತು; ಏಳು, ಯಾವ ಯಾವ ಕಾರ್ಯಗಳು ಮಾಡಬೇಕಾಗಿರುವುವೋ ಅವೆಲ್ಲವೂ ಮಾಡಲಾಗಿದೆ. ನೀನೀಗ ಳೆದ್ದು ಮುಂದೆ ಮಾಡಬೇಕಾದ ಕಾರ್ಯವನ್ನು ಮಾಡುವವನಾಗು. ವಸಿಷ್ಠಮುನಿಪುಂಗ ನನೇ ಮೊದಲಾದ ಬ್ರಾಹ್ಮಣ ಶ್ರೇಷ್ಠರೂ, ಸೇನಾನಾಯಕರೂ, ಪುರಪ್ರಮುಖರೂ, ವರ್ತ ಕರೂ ನಿನ್ನಿಂದಾಹೂತರಾದ ಸಾಮಂತ ರಾಯರೂ ನಿನ್ನನ್ನು ಕಾಣಿಸಿಕೊಳ್ಳಲು ಕಾಂಕ್ಷಿಸು ತ್ತಿರುವರು." ॥೨೧-೨೪॥ ಎಂಬೀಪ್ರಕಾರವಾಗಿ ಸ್ತುತಿಸುತ್ತಿರುವ ಆ ಸುಮಂತ್ರನ ಮಾತು ಗಳನ್ನು ಕೇಳಿ, ಮಹಾ ಆಲೋಚನಾಪರನಾದ ಆತನನ್ನು ಕುರಿತು ದಶರಥರಾಯನು

ಕಿಮಿದಂ ಕಾರಣಂ ಯೇನ ಮಮಾಜ್ಞಾ ಪ್ರತಿಹನ್ಯತೇ ॥ ೨೬ ॥ ನಚೈವ ಸಂಪ್ರಸುಪ್ತೋಽಹಮಾನಯೇಹಾಶು ರಾಘವಂ ॥ ಇತಿ ರಾಜಾ ದಶರಥ ಸ್ಸೂತಂ ತತ್ರಾನ್ವಶಾತ್ಪುನಃ ॥ ೨೭ ॥ ಸ ರಾಜವಚನಂ ಶ್ರುತ್ವಾ ಶಿರಸಾ ಪ್ರತಿಪೂಜ್ಯ ತಂ ॥ ನಿರ್ಜಗಾಮ ನೃಪಾವಾಸಾನ್ಮನ್ಯಮಾನಃ ಪ್ರಿಯಂ ಮಹತ್ ॥ ೨೮ ॥ ಪ್ರಸನ್ನೋ ರಾಜಮಾರ್ಗಂಚ ಪತಾಕಾಧ್ವಜ ಶೋಭಿತಂ ॥ ಹೃಷ್ಟಃ ಪ್ರಮುದಿತಸ್ಸೂತೋ ಜಗಾಮಾಶು ವಿಲೋಕಯರ್ನ್ ॥ ೨೯ ॥ ಸ ಸೂತಸ್ತತ್ರ

ಹೇ ಸೂತ - ಎಲೈ ಸಾರಥಿಯೆ, ರಾಮಂ - ಶ್ರೀರಾಮನನ್ನು, ಆನಯ - ಕರೆದುಕೊಂಡುಬಾ, ಇತಿ - ಇಂತೆಂದು, ಅನಯಾ - ಈ ಕೈಕೇಯಿಯಿಂದ, ಅಭಿಹಿತಃ-ಹೇಳಲ್ಪಟ್ಟವನು, ಆಸೀದಿತಿಯತ್-ಆದೆಯೆಂಬುದಾವದೋ, ಯೇನ - ಯಾವಕಾರಣ, ಮಮ - ನನ್ನ, ಆಜ್ಞಾ - ಅಪ್ಪಣೆಯು, ಪ್ರತಿಹನ್ಯತೇ - ಹೊಡೆಯಲ್ಪಟ್ಟಿತೋ, ಇದಂ - ಈ ಆಜ್ಞಾಭಂಗವು, ಕಿಂಕಾರಣಂ - ಏನುಕಾರಣವುಳ್ಳದು. ॥ ೨೬ ॥ ಅಹಂ - ನಾನು, ಸಂಪ್ರಸುಪ್ತಃ - ಮಲಗಿದವನು, ನಚೈವ - ಅಲ್ಲವೇಅಲ್ಲವು, ರಾಘವಂ - ಶ್ರೀರಾಮನನನ್ನು, ಆಶು - ಜಾಗ್ರತೆಯಾಗಿ, ಇಹ-ಇಲ್ಲಿಗೆ, ಆನಯ-ಕರೆದುಕೊಂಡುಬಾ, ಇತಿ - ಇಂತೆಂದು, ದಶರಥೋರಾಜಾ - ದಶರಥರಾಜನು, ಸೂತಂ - ಸುಮಂತ್ರನನ್ನು ಕುರಿತು, ತತ್ರ - ಆ ಅಂತಃಪುರದಲ್ಲಿ, ಪುನಃ - ಮತ್ತು, ಅನ್ವಶಾತ್ - ಆಜ್ಞಾಪಿಸಿದನು. ॥ ೨೭ ॥ ಸಃ - ಆ ಸುಮಂತ್ರನು, ರಾಜವಚನಂ - ರಾಜನವಾಕ್ಯವನ್ನು, ಶೃತ್ವಾ-ಕೇಳಿ, ಶಿರಸಾ - ಶಿರಸ್ಸಿನಿಂದ, ತಂ-ಆ ದಶರಥರಾಜನನ್ನು, ಪ್ರತಿಪೂಜ್ಯ - ಪೂಜಿಸಿ, ಮಹತ್ - ಬಹಳವಾದ, ಪ್ರಿಯಂ - ಇಷ್ಟವನ್ನಾಗಿ, ಮನ್ಯಮಾನಃ - ತಿಳಿದುಕೊಂಡವನಾಗಿ, ನೃಪಾವಾಸಾತ್ - ರಾಜನರಮನೆಯಿಂದ, ನಿರ್ಜಗಾಮ - ಹೊರಟನು. ॥ ೨೮ ॥ ಹೃಷ್ಟಃ - ಬಾಹ್ಯಸಂತೋಷವುಳ್ಳ, ಪ್ರಸನ್ನಃ - ಪ್ರಸನ್ನಮುಖನಾದ, ಸೂತಃ - ಸುಮಂತ್ರನು, ಪತಾಕಾಧ್ವಜಶೋಭಿತಂ, ಪತಾಕಾ - ಚಿಕ್ಕಧ್ವಜಗಳಿಂದಲೂ, ಧ್ವಜ - ದೊಡ್ಡಧ್ವಜಗಳಿಂದಲೂ, ಶೋಭಿತಂ - ಹೊಳೆಯುತ್ತಿರುವ, ರಾಜಮಾರ್ಗಂ - ರಾಜವೀಥಿಯನ್ನು, ವಿಲೋಕಯರ್ನ್ - ನೋಡುತ್ತ, ಪ್ರಮುದಿತಃ - ಅಂತಸ್ಸಂತೋಷವುಳ್ಳವನಾಗಿ, ಆಶು-ಜಾಗ್ರತೆಯಾಗಿ, ಜಗಾಮ - ತೆರಳಿದನು. ॥ ೨೯ ॥ ಸಸೂತಃ - ಆ ಸುಮಂತ್ರನು, ತತ್ರ - ಆ ಮಾರ್ಗದಲ್ಲಿ,

"ಎಲೈ ಸುಮಂತ್ರನೆ! ಮೊದಲೇ ಶ್ರೀರಾಮನನ್ನು ಕರೆದುತಾರೆಂದು ಆಜ್ಞಾಪಿಸಿದೆನಲ್ಲವೆ? ಈ ನನ್ನ ಅಪ್ಪಣೆಯನ್ನು ಮೀರಲು ಕಾರಣವೇನು? ನಾನು ನಿದ್ರಿಸುವುದಿಲ್ಲ. ಶ್ರೀರಾಮನನ್ನು ಬೇಗನೆ ಇಲ್ಲಿಗೆ ಕರೆದುಕೊಂಡು ಬರುವವನಾಗು" ಎಂದು ಮರಳಿ ಆಜ್ಞಾಪಿಸಿದವನಾದನು. ॥೨೫-೨೭॥ ಆ ಬಳಿಕಲಾ ಸುಮಂತ್ರನು ತನ್ನೊಡೆಯನಾದ ದಶರಥರಾಯನ ಮಾತುಗಳನ್ನು ಕೇಳಿ, ಅದನ್ನು ಶಿರಸಾ ವಹಿಸಿ, ಅದನ್ನು ನೆರವೇರಿಸಿದರೆ ಆತನಿಗೆ ಬಹಳವಾದ ಹರ್ಷವುಂಟಾಗುವುದೆಂದು ತಿಳಿದು, ಪ್ರಸನ್ನತೆಯನ್ನು ಹೊಂದಿ, ಅರಳಿದ ಮುಖವುಳ್ಳವನಾಗಿ, ಅರಮನೆಯಿಂದ ಹೊರಹೊರಟು, ಪತಾಕೆಗಳಿಂದಲೂ ಧ್ವಜಗಳಿಂದಲೂ ಕಂಗೊಳಿಸುತ್ತಿರುವ ರಾಜಮಾರ್ಗವನ್ನು ಇರ್ಕಡೆಗಳಲ್ಲಿಯೂ ನೋಡುತ್ತಲೂ, ಶ್ರೀರಾಮ ರಾಜ್ಯಾಭಿಷೇಕ ವಿಷಯವಾಗಿ ಸಂತೋಷದಿಂದ ಮಾತನಾಡುತ್ತಿರುವ ಪುರಜನರ ಮಾತುಗಳನ್ನು

ಶುಶ್ರಾವ ರಾಮಾಧಿಕರಣಾಃ ತಥಾಃ ॥ ಅಭಿಷೇಚನ ಸಂಯುಕ್ತಾಸ್ಸರ್ವಲೋಕಸ್ಯ ಹೃಷ್ಟವತ್ ॥ ೩೦ ॥ ತತೋ ದದರ್ಶ ರುಚಿರಂ ಕೈಲಾಸ ಶಿಖರಪ್ರಭಂ॥ ರಾಮವೇಶ್ಮ ಸುಮಂತ್ರಸ್ತು ಶಕ್ರವೇಶ್ಮ ಸಮಪ್ರಭಂ ॥ ೩೧ ॥ ಮಹಾಕವಾಟವಿಹಿತಂ ವಿತರ್ದಿ ಶತಶೋಭಿತಂ ॥ ಕಾಂಚನ ಪ್ರತಿಮೈಕಾಗ್ರ್ಯಂ ಮಣಿವಿದ್ರುಮತೋರಣಂ ॥ ೩೨ ॥ ಶಾರದಾಭ್ರ ಘನಪ್ರಖ್ಯಂ ದೀಪ್ತಂ ಮೇರು ಗುಹೋಪಮಂ ॥ ಮಣಿಭಿರ್ವರಮಾಲ್ಯಾನಾಂ ಸುಮಹದ್ಭಿರಲಂಕೃತಂ ॥ ೩೩ ॥ ಮುಕ್ತಾಮಣಿಭಿರಾಕೀರ್ಣಂ ಚಂದನಾಗರು ಧೂಪಿತಂ॥ಗಂಧಾರ್ನ್ ಮನೋಜ್ಞಾನ್

ರಾಮಾಧಿಕರಣಾಃ - ಶ್ರೀರಾಮನೇ ಉದ್ದೇಶವಾಗಿ ಉಳ್ಳ, ಅಭಿಷೇಚನಸಂಯುಕ್ತಾಃ - ಪಟ್ಟಾಭಿಷೇಕದಿಂದ ಕೂಡಿರುವ, ಸರ್ವಲೋಕಸ್ಯ - ಸಮಸ್ತಜನರ, ಕಥಾಃ - ಕಥೆಗಳನ್ನು, ಹೃಷ್ಟವತ್-ಸಂತೋಷಯುಕ್ತನಂತೆ, ಶುಶ್ರಾವ - ಕೇಳಿದನು. ॥ ೩೦ ॥ ತತಃ - ಬಳಿಕ, ಸುಮಂತ್ರಸ್ತು - ಸುಮಂತ್ರನಾದರೆ, ರುಚಿರಂ - ಮನೋಹರವಾದ, ಕೈಲಾಸಶಿಖರ ಪ್ರಭಂ - ಕೈಲಾಸಗಿರಿಯ ಶಿಖರದಂತೆ ಹೊಳೆಯುತ್ತಿರುವ, ಶಕ್ರವೇಶ್ಮಸಮಪ್ರಭಂ - ದೇವೇಂದ್ರನ ಮನೆಗೆ ಸಮಾನವಾದ ಕಾಂತಿಯುಳ್ಳ, ರಾಮವೇಶ್ಮ - ರಾಮನರಮನೆಯನ್ನು, ದದರ್ಶ - ಕಂಡನು. ॥ ೩೧ ॥ ಮಹಾಕವಾಟವಿಹಿತಂ - ಮಾಡಲ್ಪಟ್ಟ ದೊಡ್ಡ ಬಾಗಿಲುಗಳುಳ್ಳ, ವಿತರ್ದಿಶತಶೋಭಿತಂ - ಅನೇಕ ವೇದಿಕೆಗಳಿಂದ ಹೊಳೆಯುತ್ತಿರುವ, ಕಾಂಚನಪ್ರತಿಮೈಕಾಗ್ರ್ಯಃ - ಭಂಗಾರದ ಪ್ರತಿಮೆಗಳಿಂದೊಡಗೂಡಿದ ಮುಖ್ಯಶಿಖರವುಳ್ಳ, ಮಣಿವಿದ್ರುಮತೋರಣಂ - ರತ್ನಗಳಿಂದಲೂ ಹವಳಗಳಿಂದಲೂ ಮಾಡಲ್ಪಟ್ಟ ಹೊರಬಾಗಿಲುಗಳುಳ್ಳ, ಶಾರದಾಭ್ರಘನಪ್ರಖ್ಯಂ - ಶರತ್ಕಾಲದ ಮೇಘದಂತೆ ಕಾಂತಿಯುಳ್ಳ, ದೀಪ್ತಂ - ಹೊಳೆಯುತ್ತಿರುವ, ಮೇರುಗುಹೋಪಮಂ - ಮೇರುಪರ್ವತದ ಗುಹೆಗೆ ಸಮಾನವಾದ, ವರಮಾಲ್ಯಾನಾಂ - ಉತ್ತಮವಾದ ಪುಷ್ಪಮಾಲಿಕೆಗಳಲ್ಲಿ, ಸುಮಹದ್ಭಿಃ - ದೊಡ್ಡವಾದ, ಮಣಿಭಿಃ - ರತ್ನಗಳಿಂದ, ಅಲಂಕೃತಂ - ಅಲಂಕರಿಸಲ್ಪಟ್ಟ, ಮುಕ್ತಾಮಣಿಃ - ಮುತ್ತುಗಳಿಂದಲೂ ರತ್ನಗಳಿಂದಲೂ, ಆಕೀರ್ಣಂ - ತುಂಬಿರುವ, ಚಂದನಾಗರುಧೂಪಿತಂ - ಶ್ರೀಗಂಧದಿಂದಲೂ ಕೃಷ್ಣಾಗರುವಿನಿಂದಲೂ ವಾಸನೆ ಕಟ್ಟಲ್ಪಟ್ಟ, ದಾರ್ದರಂ - (ಗೋ) ಚಂದನಕಾಷ್ಟಗಳಿಗೆ ಆವಾಸಭೂತವಾದ, ದರ್ದರ - ಪರ್ವತದ ಸಂಬಂಧವಾದ,

---

ಕೇಳುತ್ತಲೂ, ಮಹಾ ಸಂತೋಷಚಿತ್ತನಾಗಿ ಶ್ರೀರಾಮನರಮನೆಯನ್ನು ಕುರಿತು ತೆರಳುತ್ತಿದ್ದನು. ॥೨೮-೩೦॥ ಆ ಬಳಿಕ ಸುಮಂತ್ರನು ಕೈಲಾಸ ಪರ್ವತದ ಶಿಖರದಂತೆ ಅತ್ಯುನ್ನತವಾಗಿಯೂ, ದೇವೇಂದ್ರನರಮನೆಗೆ ಸಮಾನವಾದುದಾಗಿಯೂ, ಎತ್ತರವಾದ ಬಾಗಿಲುಗಳುಳ್ಳದಾಗಿಯೂ, ಅಸಂಖ್ಯಾಕವಾದ ವೇದಿಕೆಗಳಿಂದ ಕಣ್ಗೊಪ್ಪಿರುವುದಾಗಿಯೂ, ಭಂಗಾರದ ಪ್ರತಿಮೆಗಳುಳ್ಳ ಮುಖ್ಯ ಶಿಖರಗಳುಳ್ಳದಾಗಿಯೂ, ರತ್ನಗಳಿಂದಲೂ, ಹವಳಗಳಿಂದಲೂ ಸಿಂಗರಿಸಲ್ಪಟ್ಟುದಾಗಿಯೂ, ಶರತ್ಕಾಲದ ಮೇಘಗಳಂತೆ ಶುಭ್ರವಾದುದಾಗಿಯೂ, ಮೇರುಪರ್ವತದ ಗಹ್ವರದಂತಿರುವುದಾಗಿಯೂ, ಪೂಮಾಲೆಗಳಲ್ಲಿ ಪೋಣಿಸಿರುವ ಅಮೂಲ್ಯರತ್ನಗಳಿಂದಲಂಕೃತವಾದುದಾಗಿಯೂ, ಮುತ್ತುಗಳಿಂದ ಅಲಂಕಾರ ಮಾಡಲ್ಪಟ್ಟುದಾಗಿಯೂ, ಶ್ರೀಗಂಧ, ಅಗರು, ಮುಂತಾದ ಪರಿಮಳ ದ್ರವ್ಯಗಳ ಧೂಪಧೂಮದಿಂದ ವ್ಯಾಪ್ತವಾದು

ವಿಸೃಜ ದ್ದಾರ್ದರಂ ಶಿಖರಂ ಯಥಾ ॥ ಸಾರಸೈಶ್ಚ ಮಯೂರೈಶ್ಚ ವಿನ ದದ್ಭಿರ್ವಿರಾಜಿತಂ ॥ ೩೪ ॥ ಸುಕೃತೇಹಾ ಮೃಗಾಕೀರ್ಣಂ ಸುಕೀರ್ಣಂ ಭಕ್ತಿಭಿಸ್ತಥಾ ॥ ಮನಶ್ಚಕ್ಷುಶ್ಚ ಭೂತಾನಾಮಾದದತ್ತಿಗ್ಮತೇಜಸಾ ॥ ೩೫ ॥ ಚಂದ್ರ ಭಾಸ್ಕರ ಸಂಕಾಶಂ ಕುಬೇರ ಭವನೋಪಮಂ ॥ ಮಹೇಂದ್ರ ಧಾಮ ಪ್ರತಿಮಂ ನಾನಾಪಕ್ಷಿ ಸಮಾಕುಲಂ ॥ ೩೬ ॥ ಮೇರುಶೃಂಗಸಮಂ ಸೂತೋ ರಾಮವೇಶ್ಮ ದದರ್ಶಹ ॥ ಉಪಸ್ಥಿತೈಸ್ಸಮಾಕೀರ್ಣಂ ಜನೈರಂಜಲಿ ಕಾರಿಭಿಃ ॥ ೩೭ ॥ ಉಪಾದಾಯ ಸಮಾಕ್ರಾಂತೈಸ್ತಥಾ ಜಾನಪದೈರ್ಜನೈಃ ॥ ರಾಮಾಭಿಷೇಕ ಸುಮುಖೈರುನ್ಮುಖೈ ಸ್ಸಮಲಂಕೃತಂ ॥ ೩೮ ॥ ಮಹಾ

ಶಿಖರಂಯಥಾ - ಶೃಂಗದಂತೆ, ಮನೋಜ್ಞಾ - ಮನಸ್ಸಿಗೆ ಇಂಪಾಗಿರುವ, ಗಂಧಾ - ಗಂಧಗಳನ್ನು, ವಿಸೃಜತ್ - ಹೊರಸೂಸುತ್ತಿರುವ, ಸಾರಸೈಶ್ಚ - ಸಾರಸ ಪಕ್ಷಿಗಳಿಂದಲೂ, ವಿನದದ್ಭಿಃ-ಕೇಕಾರವನ್ನು ಮಾಡುತ್ತಿರುವ, ಮಯೂರೈಶ್ಚ - ನವಿಲುಗಳಿಂದಲು, ವಿರಾಜಿತಂ - ಹೊಳೆಯುತ್ತಿರುವ, ಸುಕೃತೇಹಾ ಮೃಗಾಕೀರ್ಣಂ, ಸುಕೃತ - ಚನ್ನಾಗಿ ಮಾಡಲ್ಪಟ್ಟ, ಈಹಾಮೃಗ - ತೋಳಗಳಿಂದ, ಆಕೀರ್ಣಂ - ತುಂಬಿರುವ, ಭಕ್ತಿಭಿಃ - ಶಿಲ್ಪಿಗಳ ರಚನಾ ವಿಶೇಷಗಳಿಂದಲು, ಸುಕೀರ್ಣಂ - ತುಂಬಿರುವ, ತಥಾ - ಹಾಗೆಯೇ, ತಿಗ್ಮತೇಜಸಾ - ತೀಕ್ಷ್ಣವಾದ ತೇಜಸ್ಸಿನಿಂದ, ಭೂತಾನಾಂ - ಪ್ರಾಣಿಗಳ, ಮನಃ - ಮನವನ್ನೂ, ಚಕ್ಷುಶ್ಚ - ನೇತ್ರಗಳನ್ನೂ, ಆದದತ್ - ಸೆಳೆಯುತ್ತಿರುವ, ಚಂದ್ರಭಾಸ್ಕರಸಂಕಾಶಂ - ಚಂದ್ರ ಸೂರ್ಯರಿಗೆ ಸಮಾನವಾದ, ಕುಬೇರಭವನೋಪಮಂ - ಕುಬೇರನಮನೆಗೆ ಸಮಾನವಾದ, ಮಹೇಂದ್ರಧಾಮಪ್ರತಿಮಂ - ದೇವೇಂದ್ರನ ಮನೆಗೆ ಸದೃಶವಾದ, ನಾನಾ ಪಕ್ಷಿಸಮಾಕುಲಂ - ವಿವಿಧ ವಾದ ಪಕ್ಷಿಗಳಿಂದ ತುಂಬಿದ, ಮೇರುಶೃಂಗಸಮಂ - ಮೇರುಪರ್ವತದ ಶಿಖರಕ್ಕೆ ಸಮಾನವಾದ, ಉಪಸ್ಥಿತೈಃ - ಬರುತ್ತಿರುವ, ಅಂಜಲಿಕಾರಿಭಿಃ - ನಮಸ್ಕಾರಗಳನ್ನು ಮಾಡುತ್ತಿರುವ, ಜನೈಃ - ಜನಗಳಿಂದ, ಸಮಾಕೀರ್ಣಂ - ತುಂಬಿರುವ, ಉಪಾದಾಯ - ಕಾಣಿಕೆಗಳನ್ನು ತೆಗೆದುಕೊಂಡು, ಸಮಾಕ್ರಾಂತೈಃ - ಬರುತ್ತಿರುವ, ಜಾನಪದೈಃ - ದೇಶವಾಸಿಗಳಾದ, ತಥಾ - ಹಾಗೆಯೇ, ರಾಮಾಭಿಷೇಕಸುಮುಖೈಃ - ಶ್ರೀರಾಮನ ಪಟ್ಟಾಭಿಷೇಕ ವಿಷಯವಾಗಿ ಸಂತಸವನಾಂತ ಮುಖವುಳ್ಳ,

---

ದಾಗಿಯೂ, ಮನಸ್ಸಿಗಿಂಪಾದ ವಾಸನೆಯುನ್ನೆಸಗುವ ಮಲಯ ಪರ್ವತದಂತೆ ಸುವಾಸನೆ ಯುಳ್ಳದಾಗಿಯೂ, ಸಾರಸ, ನವಿಲು, ಮುಂತಾದ ಪಕ್ಷಿಗಳಿಂದಲಂಕೃತವಾಗಿಯೂ, ಚಿತ್ರ ಗೆತವಾದ ತೋಳಗಳಿಂದಲೂ, ವಿಚಿತ್ರವಾದ ರಚನಾ ವಿಶೇಷಗಳಿಂದಲೂ ಕೂಡಿದುದಾಗಿ ವಿಶೇಷವಾದ ಕಾಂತಿಯಿಂದ ಎಲ್ಲರ ಕಣ್ಮನಂಗಳನ್ನು ಮೋಹಪಡಿಸುತ್ತಿರುವುದಾಗಿ ಯೂ, ಚಂದ್ರ ಸೂರ್ಯರಂತೆ ಹೊಳೆಯುತ್ತಿರುವುದಾಗಿಯೂ, ಇಂದ್ರ ಕುಬೇರರ ಅರಮನೆ ಗಳಿಗೆ ಸಮಾನವಾದುದಾಗಿಯೂ, ಮೇರು ಪರ್ವತದ ಶಿಖರದಂತೊಪ್ಪಿ ಮೆರೆಯುತ್ತಿರುವು ದಾಗಿಯೂ, ಪಟ್ಟಾಭಿಷೇಕೋತ್ಸವಕ್ಕೋಸುಗ ತಮ್ಮ ತಮ್ಮ ದೇಶಗಳಲ್ಲಿದ್ದ ಅಪೂರ್ವ ವಸ್ತು ಜಾತವನ್ನು ಕಾಣಿಕೆಯಾಗಿ ತಂದು, ಕೈ ಮುಗಿದು ನಿಂತಿದ್ದ ದೇಶದೇಶದ ರಾಯರಿಂದ ಇಟ್ಟಣಿಸಿದುದಾಗಿಯೂ, ಶ್ರೀರಾಮ ಮೂರ್ತಿಗೆ ಯೌವರಾಜ್ಯಾಭಿಷೇಕವಾಗುವುದೆಂಬ

ಮೇಘ ಸಮಪ್ರಖ್ಯಮುದಗ್ರಂ ಸುವಿಭೂಷಿತಂ ॥ ನಾನಾರತ್ನ ಸಮಾಕೀರ್ಣಂ ಕುಬ್ಜ ಕೈರಾತಕಾವೃತಂ ॥ ೩೮ ॥ ಸವಾಜಿ ಯುಕ್ತೇನ ರಥೇನ ಸಾರಥಿ ರ್ನರಾಕುಲಂ ರಾಜಪಥಂ ವಿಲೋಕಯನ್ ॥ ವರೂಥಿನಾ ರಾಮಗೃಹಾಭಿಪಾತಿನಾ ಪುರಸ್ಯ ಸರ್ವಸ್ಯ ಮನಾಂಸಿ ಹರ್ಷಯನ್ ॥ ೪೦ ॥ ತತಸ್ಸಮಾಸಾದ್ಯ ಮಹಾಧನಂ ಮಹತ್ಪ್ರಹೃಷ್ಟ ರೋಮಾ ಸ ಬಭೂವ ಸಾರಥಿಃ ॥ ಮೃಗೈ ರ್ಮಯೂರೈಶ್ಚ ಸಮಾಕುಲೋಲ್ಬಣಂ ಗೃಹಂ ವರಾರ್ಹಸ್ಯ ಶಚೀಪತೇರಿವ ॥ ೪೧ ॥ ಸತತ್ರ ಕೈಲಾಸ ನಿಭಾಸ್ಸ್ವಲಂಕೃತಾಃ ಪ್ರವಿಶ್ಯ ಕಕ್ಷ್ಯಾ ಸ್ತ್ರಿದಶಾಲ ಯೋಪಮಾಃ ॥ ಪ್ರಿಯಾನ್ನರಾನ್ ರಾಮ ಮತೇಸ್ಥಿತಾನ್ ಬಹೂ ನಪೋಹ್ಯ

ಉನ್ಮುಖೈಃ - ಉದ್ಯುಕ್ತರಾದ, ಜನೈಃ - ಜನರಿಂದ, ಸಮಲಂಕೃತಂ - ಅಲಂಕರಿಸಲ್ಪಟ್ಟ, ಮಹಾಮೇಘಸಮಪ್ರಖ್ಯಂ - ಕಾರ್ಮುಗಿಲಿಗೆ ಸಮಾನವಾದ ಕಾಂತಿಯುಳ್ಳ, ಉದಗ್ರಂ - ಉನ್ನತವಾದ, ಸುವಿಭೂಷಿತಂ - ಅಲಂಕರಿಸಲ್ಪಟ್ಟ, ನಾನಾರತ್ನಸಮಾಕೀರ್ಣಂ - ಅನೇಕ ಬಗೆಗಳಾದ ರತ್ನಗಳಿಂದ ವ್ಯಾಪ್ತವಾದ, ಕುಬ್ಜಕೈರಾತಕಾವೃತಂ, ಕುಬ್ಜ - ವಾಮನರಿಂದಲೂ, ಕೈರಾತಕ - ಗುಜ್ಜುದೇಹಿಗಳಿಂದಲೂ, ಆವೃತಂ - ಸುತ್ತುವರೆಯಲ್ಪಟ್ಟ, ರಾಮವೇಶ್ಮ - ಶ್ರೀರಾಮನ ಮನೆಯನ್ನು, ದದರ್ಶ - ಕಂಡನು. ॥ ೪೦ ॥ ಸಸಾರಥಿಃ - ಆ ಸುಮಂತ್ರನು, ವಾಜಿಯುಕ್ತೇನ - ಕುದುರೆಗಳಿಂದ ಕೂಡಿದ, ವರೂಥಿನಾ - ಹೊದಿಕೆವಸ್ತ್ರವುಳ್ಳ, ರಾಮಗೃಹಾಭಿಪಾತಿನಾ - ಶ್ರೀರಾಮನ ಮನೆಗಿದಿರಾಗಿ ಬರುತ್ತಿರುವ, ರಥೇನ - ರಥದಿಂದ, ನರಾಕುಲಂ - ಮನುಷ್ಯರಿಂದ ವ್ಯಾಪ್ತವಾದ, ರಾಜಕುಲಂ - ಅರಮನೆಯನ್ನು, ವಿಲೋಕಯನ್ - ನೋಡುತ್ತ, ಸರ್ವಸ್ಯ - ಸಮಸ್ತವಾದ, ಪುರಸ್ಯ - ಪಟ್ಟಣಸ್ಥರ, ಮನಾಂಸಿ - ಮನಸ್ಸುಗಳನ್ನು, ರಂಜಯನ್ - ಸಂತೋಷಗೊಳಿಸಿದನು. ॥ ೪೧ ॥ ತತಃ - ಬಳಿಕ, ಸಸಾರಥಿಃ - ಆ ಸುಮಂತ್ರನು, ಮೃಗೈಃ - ಜಿಂಕೆಗಳಿಂದಲೂ, ಮಯೂರೈಶ್ಚ - ನವಿಲುಗಳಿಂದಲೂ, ಸಮಾಕುಲೋಲ್ಬಣಂ - ಅತಿಶಯವಾಗಿ ವ್ಯಾಪ್ತವಾದ, ಶಚೀಪತೇಃ - ದೇವೇಂದ್ರನ, ಗೃಹಮಿವ - ಮನೆಯಂತೆ, ಮಹತ್ - ದೊಡ್ಡದಾದ, ವರಾರ್ಹಸ್ಯ - ಶ್ರೀರಾಮನ, ಮಹಾಧನಂ-ಅಮೂಲ್ಯವಾದ, ಗೃಹಂ - ಮನೆಯನ್ನು, ಸಮಾಸಾದ್ಯ - ಹೊಂದಿ, ಪ್ರಹೃಷ್ಟರೋಮಾ - ಮೈನವಿರುಳ್ಳವನಾಗಿ,

---

ಸಂತೋಷದಿಂದ ಅರಳಿದ ಮುಖಂಗಳುಳ್ಳ ಪುರಜನರ ಸಮ್ಮರ್ದವುಳ್ಳುದಾಗಿಯೂ, ವಿಧವಿಧಗಳಾದ ರತ್ನಗಳಿಂದ ವ್ಯಾಪ್ತವಾಗಿ ಕಾರ್ಮುಗಿಲಂತಿರುವುದಾಗಿಯೂ, ಕುಬ್ಜ ಕುಬ್ಜೆಯರಿಂದಲಂಕೃತವಾದುದಾಗಿಯೂ ಇದು ಶ್ರೀರಾಮಚಂದ್ರನರಮನೆಯನ್ನು ದೂರದಿಂದಲೇ ನೋಡಿದವನಾದನು. ॥೩೧-೪೦॥ ಇಷ್ಟೆಯಲ್ಲದೆ ಕುದುರೆಗಳಿಂದ ಕಟ್ಟಲ್ಪಟ್ಟುದಾಗಿಯೂ, ಮೇಲ್ಪರದೆಯುಳ್ಳುದಾಗಿಯೂ ಇರುವ ರಥದಲ್ಲಿ ಕುಳಿತಿದ್ದ ಆ ಮಂತ್ರಿಶ್ರೇಷ್ಠನಾದಾ ಸುಮಂತ್ರನು, ಮಹಾಜನ ಸಮ್ಮರ್ದವುಳ್ಳ ಶ್ರೀರಾಮನರಮನೆಯನ್ನು ನೋಡುತ್ತ, ಪ್ರಜೆಗಳ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತ, ಮೃಗಗಳಿಂದಲೂ, ನವಿಲುಗಳು ಮೊದಲಾದ ಪಕ್ಷಿಗಳಿಂದಲೂ ಕೂಡಿಡ ದೇವೇಂದ್ರ ಭವನವೋ ಎಂಬಂತಿದ್ದ ಅತ್ಯಮೂಲ್ಯವಾದ ಆ ರಘುರಾಮನರಮನೆಯನ್ನು ಹೊಂದಿ, ಮೈನವಿರುಂಟಾಗಲು, ಆ ಅರಮನೆಯ ಸ್ವರ್ಗ ಸಮಾನ

ಶುದ್ಧಾಂತಮುಪಸ್ಥಿತೋ ರಥೀ ॥ ೪೨ ॥ ಸತತ್ರ ಶುಶ್ರಾವ ಚ ಹರ್ಷ
ಯುಕ್ತಾ ರಾಮಾಭಿಷೇಕಾರ್ಥ ಕೃತಾಜನಾನಾಂ ॥ ನರೇಂದ್ರ ಸೂನೋರಭಿ
ಮಂಗಳಾರ್ಥಾ ಸ್ಸರ್ವಸ್ಯ ಲೋಕಸ್ಯ ಗಿರಃ ಪ್ರಹೃಷ್ಟಃ ॥ ೪೩ ॥ ಮಹೇಂದ್ರ
ಸದ್ಮಪ್ರತಿಮಂ ತು ವೇಶ್ಮ ರಾಮಸ್ಯ ರಮ್ಯಂ ಮೃಗ ಪಕ್ಷಿ ಜುಷ್ಟಂ ॥ ದದರ್ಶ
ಮೇರೋರಿವ ಶೃಂಗಮುಚ್ಚಂ ವಿಭ್ರಾಜಮಾನಂ ಪ್ರಭಯಾ ಸುಮಂತ್ರಃ ॥೪೪॥
ಉಪಸ್ಥಿತೈರಂಜಲಿಕಾರಕೈಶ್ಚ ಸೋಪಾಯನೈರ್ಜಾನಪದೈಶ್ಚ ಮರ್ತ್ಯೈಃ ॥

ಬಭೂವ - ಆದನು. ॥ ೪೨ ॥ ಸಃ - ಆ ಸುಮಂತ್ರನು, ತತ್ರ - ಆ ಮನೆಯಲ್ಲಿ, ಕೈಲಾಸನಿಭಾಃ - ಕೈಲಾಸಗಿರಿಗೆ ಸಮಾನವಾದ, ಸ್ವಲಂಕೃತಾಃ - ಅಲಂಕರಿಸಲ್ಪಟ್ಟ, ತ್ರಿದಶಾಲಯೋಪಮಾಃ - ಸ್ವರ್ಗ ಲೋಕದ ಮನೆಗಳಿಗೆ ಸಮಾನವಾದ, ಕಕ್ಷ್ಯೈಃ - ತೊಟ್ಟಿ ಮನೆಗಳನ್ನು, ಪ್ರವಿಶ್ಯ - ಹೊಕ್ಕು, ರಾಮಮತೇ - ಶ್ರೀರಾಮನ ಇಷ್ಟದಲ್ಲಿ, ಸ್ಥಿತಾನ್ - ಇರುವ, ಪ್ರಿಯಾನ್ - ರಾಜವಲ್ಲಭರಾದ, ಬಹೂನ್- ಅನೇಕ, ನರಾನ್ - ಮನುಷ್ಯರನ್ನು, ಅಪ್ರೋಹ್ಯ - ಅತಿಕ್ರಮಿಸಿ, ಶುದ್ಧಾಂತಂ - ಅಂತಃಪುರವನ್ನು, ರಥೀ - ರಥಾರೂಢನಾಗಿಯೇ, ಉಪಸ್ಥಿತಃ - ಸಮೀಪಿಸಿದನು. ॥ ೪೩ ॥ ಸಃ - ಆ ಸುಮಂತ್ರನು, ತತ್ರ - ಆ ಅಂತಃಪುರದಲ್ಲಿ, ನರೇಂದ್ರಸೂನೋಃ-ರಾಜಪುತ್ರನಾದ ಶ್ರೀರಾಮನಿಗೆ, ಅಭಿಮಂಗಳಾರ್ಥಾಃ- ಶುಭವನ್ನುಂಟುಮಾಡುವ, ರಾಮಾಭಿಷೇಕಾರ್ಥಕೃತಾಃ ಶ್ರೀರಾಮನ ಅಭಿಷೇಕಕ್ಕೋಸುಗ ಮಾಡಲ್ಪಟ್ಟ, ಸರ್ವಸ್ಯ - ಸಮಸ್ತವಾದ, ಲೋಕಸ್ಯ - ಜನರ, ಹರ್ಷಯುಕ್ತಾಃ - ಉತ್ಸಾಹದಿಂದೊಡಗೂಡಿದ ಪ್ರಜೆಗಳ ಮಾತುಗಳನ್ನು, ಪ್ರಹೃಷ್ಟಃ - ಸಂತೋಷವುಳ್ಳವನಾಗಿ, ಶುಶ್ರಾವ - ಕೇಳಿದನು. ॥ ೪೪ ॥ ಸುಮಂತ್ರಃ - ಸುಮಂತ್ರನನ್ನು, ಮಹೇಂದ್ರಸದ್ಮಪ್ರತಿಮಂ - ದೇವೇಂದ್ರನ ಮನೆಗೆ ಸಮಾನವಾದ, ರಮ್ಯಂ - ಸೊಗಸಾಗಿರುವ, ಮೃಗಪಕ್ಷಿಜುಷ್ಟಂ - ಮೃಗಗಳಿಂದಲೂ ಪಕ್ಷಿಗಳಿಂದಲೂ ತುಂಬಿದ, ಮೇರೋಃ - ಮೇರುಪರ್ವತದ, ಶೃಂಗಮಿವ - ಶಿಖರದಂತೆ, ಉಚ್ಚಂ - ಎತ್ತರವಾದ, ಪ್ರಭಯಾ - ಕಾಂತಿಯಿಂದ, ವಿಭ್ರಾಜಮಾನಂ - ಹೊಳೆಯುತ್ತಿರುವ, ರಾಮಸ್ಯ - ಶ್ರೀರಾಮನ, ವೇಶ್ಮ - ಮನೆಯನ್ನು, ದದರ್ಶ - ಕಂಡನು. ॥ ೪೫ ॥ ಉಪಸ್ಥಿತೈಃ - ನಿಂತಿರುವ, ಅಂಜಲಿಕಾರಕೈಶ್ಚ -

---

ಗಳಾದ ತೊಟ್ಟಿಗಳನ್ನು ದಾಟಿದವನಾಗಿ, ರಥದಿಂದಲೇ ಶ್ರೀರಾಮನ ಸೇವಕರನ್ನತಿಕ್ರಮಿಸಿ ಅಂತಃಪುರದ ಸಮೀಪಕ್ಕೆ ಬಂದನು. ಆಗ ಆ ಸ್ಥಳದಲ್ಲಿ ಜನರು ಶ್ರೀರಾಮನ ಪಟ್ಟಾಭಿ ಷೇಕಕ್ಕೆ ಸಂಬಂಧಿಸಿದ ಸಂತೋಷವಾದ ನುಡಿಗಳನ್ನಾಡುತ್ತಿದ್ದರು. ಅನೇಕರು ಶ್ರೀರಾಮ ನಿಗೆ ಮಂಗಳಕರವಾದ ವಾಕ್ಯಗಳನ್ನಾಡುತ್ತಿದ್ದರು. ಆ ಬಳಿಕಲಾ ಸುಮಂತ್ರನು ಇವೆಲ್ಲ ವನ್ನೂ ಕೇಳಿ ಆನಂದಿಸುತ್ತ, ದೇವೇಂದ್ರನರಮನೆಯಂತೆ ಮನೋಹರವಾದುದಾಗಿಯೂ, ಮೃಗಗಳಿಂದಲೂ, ಪಕ್ಷಿಗಳಿಂದಲೂ ವ್ಯಾಪ್ತವಾದುದಾಗಿಯೂ, ಮೇರುಪರ್ವತದ ಕೋಡು ಗಲ್ಲಿನಂತೆ ಅತ್ಯುನ್ನತವಾಗಿಯೂ, ಕಾಂತಿಯಿಂದ ಕಣ್ಗೊಪ್ಪಿ ರಂಜಿಸುತ್ತಿರುವುದಾಗಿಯೂ, ಇರುವ ಆ ಶ್ರೀರಾಮಮೂರ್ತಿಯ ಅರಮನೆಯನ್ನು ಸಮೀಪದಿಂದ ನೋಡಿದವನಾದನು. ॥೪೧-೪೫॥ ಕಾಣಿಕೆಗಳನ್ನು ತೆಗೆದುಕೊಂಡು ಬಂದಿರುವವರಾಗಿಯೂ, ಕೈ ಜೋಡಿಸಿ ನಿಂತಿ ರುವವರಾಗಿಯೂ, ರಥಗಳಿಂದಿಳಿದು ನೆಲದಮೇಲೆ ನಿಂತಿರುವವರಾಗಿಯೂ ಇರುವ ಕೋಟ್ಯಪ

ಕೋಟ್ಯಾಪರಾರ್ಧೈಶ್ಚ ವಿಮುಕ್ತಯಾನೈಸ್ಸಮಾಕುಲಂ ದ್ವಾರಪಥಂ ದದರ್ಶಹ ‖ ೪೬ ‖ ತತೋ ಮಹಾಮೇಘ ಮಹೀಧರಾಭಂ ಪ್ರಭಿನ್ನ ಮತ್ಯಂಕುಶಮಪ್ರಸಹ್ಯಂ ‖ ರಾಮೌಪವಾಹ್ಯಂ ರುಚಿರಂ ದದರ್ಶ ಶತ್ರುಂಜಯಂ ನಾಗಮುದಗ್ರಕಾಯಂ ‖ ೪೭ ‖ ಸ್ವಲಂಕೃತಾನ್ ಸಾಶ್ವರಥಾನ್ ಸಕುಂಜರಾ ನಮಾತ್ಯಮುಖ್ಯಾನ್ ಶತಶಶ್ಚ ವಲ್ಲಭಾನ್ ‖ ವ್ಯಪೋಹ್ಯ ಸೂತ ಸ್ಸಹಿತಾನ್ ಸಮಂತತ ಸ್ಸಮೃದ್ಧ ಮಂತಃಪುರ ಮಾವಿವೇಶ ‖ ೪೮ ‖

ವಂದನೆಗಳನ್ನು ಮಾಡುತ್ತಿರುವ, ಸೋಪಾಯನೈಃ - ಕಾಣಿಕೆಗಳಿಂದೊಡಗೂಡಿದ, ಕೋಟ್ಯಾಪರಾರ್ಧೈಶ್ಚ - ಒಂದೂವರೆಕೋಟಿ ಸಂಖ್ಯೆಯುಳ್ಳ, ವಿಮುಕ್ತಯಾನೈಃ - ಬಿಡಲ್ಪಟ್ಟವಾಹನಗಳುಳ್ಳ, ಜಾನಪದೈಶ್ಚ - ದೇಶವಾಸಿಗಳಾದ, ಮರ್ತ್ಯೈಃ ಮನುಷ್ಯರಿಂದ, ಸಮಾಕುಲಂ-ವ್ಯಾಪ್ತವಾದ, ದ್ವಾರಪಥಂ - ದ್ವಾರ ಪ್ರದೇಶವನ್ನು, ದದರ್ಶಃ ನೋಡಿದನಷ್ಟೆ. ‖೪೬‖ ತತಃ - ಬಳಿಕ, ಮಹಾಮೇಘಮಹೀಧರಾಭಂ-ಕಾರ್ಮುಗಿಲು ಪರ್ವತದ ಕಾಂತಿಯಂತೆ ಕಾಂತಿಯುಳ್ಳ, ಪ್ರಭಿನ್ನಂ - ಮದವೇರಿದ, ಅತ್ಯಂಕುಶಂ - ಅಂಕುಶಕ್ಕೂಬೊಗ್ಗದ, ಅಪ್ರಸಹ್ಯಂ - ತಡೆಯಲಸದಳವಾದ, ರಾಮೌಪವಾಹ್ಯಂ - ಶ್ರೀರಾಮನಿಗೆ ವಾಹನವಾದ, ರುಚಿರಂ - ಮನೋಹರವಾದ, ಉದಗ್ರಕಾಯಂ - ಉನ್ನತವಾದ ಶರೀರವುಳ್ಳ, ಶತ್ರುಂಜಯಂ - ಶತ್ರುಂಜಯವೆಂಬ, ನಾಗಂ - ಆನೆಯನ್ನು, ದದರ್ಶ - ಕಂಡನು. ‖ ೪೭ ‖ ಸೂತಃ - ಸಾರಥಿಯು, ಸ್ವಲಂಕೃತಾನ್ - ಚನ್ನಾಗಿ ಅಲಂಕರಿಸಲ್ಪಟ್ಟ, ಸಾಶ್ವರಥಾನ್ ಕುದುರೆಗಳನ್ನು ಕಟ್ಟಿದ ರಥಗಳುಳ್ಳ, ಸಕುಂಜರಾನ್ - ಆನೆಗಳಿಂದೊಡಗೂಡಿದ, ವಲ್ಲಭಾನ್ - ರಾಜನಿಗೆ ಪ್ರೀತಿಪಾತ್ರರಾದ, ಶತಶಃ - ಅನೇಕರಾದ, ಸಹಿತಾನ್ - ಗುಂಪುಸೇರಿದ, ಅಮಾತ್ಯಮುಖ್ಯಾನ್ - ಮಂತ್ರಿಶ್ರೇಷ್ಠರನ್ನು, ವ್ಯಪೋಹ್ಯ - ದಾಟಿ, ಸಮಂತತಃ - ಎಲ್ಲೆಡೆಯಲ್ಲಿಯೂ, ಸಮೃದ್ಧಂ - ಸಕಲೈಶ್ವರ್ಯ ಸಂಪನ್ನವಾದ, ಅಂತಃಪುರಂ - ಅಂತಃಪುರವನ್ನು, ಆವಿವೇಶ - ಹೊಕ್ಕನು. ‖ ೪೮ ‖ ಅದ್ರಿಕೂಟಾಚಲಮೇಘಸನ್ನಿಭಂ - ಪರ್ವತದ ಶಿಖರಕ್ಕೂ ನಿಶ್ಚಲವಾದ ಮೇಘಕ್ಕೂ ಸಮಾನವಾದ, ಮಹಾವಿಮಾನೋತ್ತಮವೇಶ್ಮಸಂಘವತ್ - ದೊಡ್ಡದಾದ ವಿಮಾನಗಳಿಗಿಂತಲೂ ವಿಶಾಲವಾದ ಮನೆಗಳ ಸಮೂಹಗಳುಳ್ಳ,

---

ರಾರ್ಧ ಸಂಖ್ಯಾಕರಾದ ಪುರಜನರಿಂದಲೂ, ದೇಶವಾಸಿಗಳಿಂದಲೂ ವ್ಯಾಪ್ತವಾದ ದ್ವಾರ ಪ್ರದೇಶವನ್ನು ಕಂಡನು. ಆ ಬಳಿಕ ಮಂತ್ರಿ ಪುಂಗವನಾದ ಆ ಸುಮಂತ್ರನು ಕಾರ್ಮುಗಿಲಿಗೂ, ಪರ್ವತಕ್ಕೂ ಸಮಾನವಾದ ಕಾಂತಿಯುಳ್ಳುದಾಗಿಯೂ, ಮದವೇರಿದುದಾಗಿಯೂ, ಅಂಕುಶದ ಪೆಟ್ಟಿಗೂ ಸಹ ಬೊಗ್ಗದಿರುವುದಾಗಿಯೂ ಇರುವ ಶತ್ರುಂಜಯವೆಂದು ಹೆಸರುಳ್ಳ ಆ ಶ್ರೀರಾಮನ ಪಟ್ಟದಾನೆಯನ್ನು ಕಂಡನು. ಆಮೇಲೆ ಆತನು ಬಹು ಚೆನ್ನಾಗಿ ಅಲಂಕರಿಸಲ್ಪಟ್ಟವರಾಗಿಯೂ, ಕುದುರೆಗಳನ್ನು ಕಟ್ಟಿದ ರಥಗಳಿಂದಲೂ, ಆನೆಗಳಿಂದೊಡಗೂಡಿದವರಾಗಿಯೂ, ಶ್ರೀರಾಮಚಂದ್ರನಿಗೆ ಪ್ರೀತಿಪಾತ್ರರಾಗಿಯೂ ಇರುವ ಅನೇಕ ಜನರನ್ನೂ, ಮಂತ್ರಿ ಶ್ರೇಷ್ಠರನ್ನೂ ಅತಿಕ್ರಮಿಸಿ, ಸಕಲೈಶ್ವರ್ಯ ಸಮೃದ್ಧವಾಗಿಯೂ, ಗಿರಿಶಿಖರದಂತೆಯೂ, ಮಹಾ ಮೇಘದಂತೆಯೂ ಇರುವುದಾಗಿಯೂ, ದೇವ ವಿಮಾನಗಳಂತೆ ಶ್ರೇಷ್ಠವಾದ ಸಾಲು ಮನೆಗಳುಳ್ಳುದಾಗಿಯೂ, ಶ್ರೇಷ್ಠಗಳಾದ ರತ್ನಗಳುಳ್ಳುದಾಗಿಯೂ

ತದದ್ರಿಕೂಟಾಚಲ ಮೇಘಸನ್ನಿಭಂ
ಮಹಾವಿಮಾನೋತ್ತಮ ವೇಶ್ಮ ಸಂಘವತ್ ||
ಅವಾರ್ಯಮಾಣಃ ಪ್ರವಿವೇಶ ಸಾರಥಿಃ
ಪ್ರಭೂತರತ್ನಂ ಮಕರೋ ಯಥಾರ್ಣವಂ || ೪೯ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶಸ್ಸರ್ಗಃ

ತತ್ - ಆ ಅಂತಃಪುರವನ್ನು, ಸಾರಥಿಃ - ಸುಮಂತ್ರನು, ಅವಾರ್ಯಮಾಣಃ - ತಡಯಲ್ಪಡದೆ, ಮಕರಃ - ಮೊಸಳೆಯು, ಪ್ರಭೂತರತ್ನಂ - ವಿಶೇಷರತ್ನಗಳುಳ್ಳ, ಅರ್ಣವಮಿವ - ಸಮುದ್ರವನ್ನಂತೆ, ಪ್ರವಿವೇಶ - ಹೊಕ್ಕನು. || ೪೯ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶಸ್ಸರ್ಗಃ

ಇರುವ ಆ ಶ್ರೀರಾಮಚಂದ್ರನ ಅರಮನೆಯ ಅಂತಃಪುರವನ್ನು, ಮೊಸಳೆಗಳು ಸಮುದ್ರವನ್ನು ಯಾವ ತಡೆಯೂ ಇಲ್ಲದೆ ಪ್ರವೇಶಿಸುವಂತೆ ಪ್ರವೇಶಿಸಿದನು. || ೪೬-೪೯ ||

ಇಂತಿದು ದಶರಥರಾಜಕೃತ ರಾಮಾನಯನಾಜ್ಞಾಪ್ರಕಾರ ಕಥಾಕಥನವೆಂಬ
ಹದಿನೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷೋಡಶಸ್ಸರ್ಗಃ.

ಸ ತದಂತಃಪುರದ್ವಾರಂ ಸಮತೀತ್ಯ ಜನಾಕುಲಂ ॥ ಪ್ರವಿವಿಕ್ತಾಂ ತತಃ ಕಕ್ಷ್ಯಾ ಮಾಸಸಾದ ಪುರಾಣವಿತ್ ॥ ೧ ॥ ಪ್ರಾಸ ಕಾರ್ಮುಕ ಬಿಭ್ರದ್ಭಿ ರ್ಯುವಭಿರ್ಮೃಷ್ಟ ಕುಂಡಲೈಃ ॥ ಅಪ್ರಮಾದಿಭಿರೇಕಾಗ್ರ್ಯೈ ಸ್ಸ್ವನುರಕ್ತೈ ರಧಿಷ್ಠಿತಾಂ ॥ ೨ ॥ ತತ್ರ ಕಾಷಾಯಿಣೋ ವೃದ್ಧಾ ನ್ವೇತ್ರಪಾಣೀನ್ ಸ್ವಲಂಕೃತಾನ್ ॥ ದದರ್ಶ ವಿಷ್ಠಿತಾನ್ ದ್ವಾರಿ ಸ್ತ್ರ್ಯಧ್ಯಕ್ಷಾನ್ ಸು ಸಮಾಹಿತಾನ್ ॥ ೩ ॥ ತೇ ಸಮೀಕ್ಷ್ಯ ಸಮಾಯಾಂತಂ ರಾಮಪ್ರಿಯಚಿಕೀರ್ಷವಃ ॥ ಸಹಸೋತ್ಪತಿತಾ

ತತಃ - ಬಳಿಕ, ಪುರಾಣವಿತ್ - ಹಿಂದಿನ ರಾಯರ ಆಚಾರ ವ್ಯವಹಾರವೇತ್ತ್ರನಾದ, ಸಃ - ಆ ಸುಮಂತ್ರನು, ಜನಾಕುಲಂ - ಜನಸಂದಣಿಯುಳ್ಳ, ತದಂತಃಪುರದ್ವಾರಂ - ಆ ಅಂತಃಪುರದ ಬಾಗಿಲನ್ನು, ಸಮತೀತ್ಯ - ದಾಟಿ, ಪ್ರಾಸಕಾರ್ಮುಕಬಿಭ್ರದ್ಭಿಃ - ಪ್ರಾಸಾಯುಧಗಳನ್ನೂ ಧನಸ್ಸುಗಳನ್ನೂ ಧರಿಸಿರುವ, ಮೃಷ್ಟಕುಂಡಲೈಃ - ಹೊಳೆಯುತ್ತಿರುವ ಕರ್ಣಭೂಷಣಗಳುಳ್ಳ, ಅಪ್ರಮಾದಿಭಿಃ - ಮರಿವೆಯಿಲ್ಲದಿರುವ, ಏಕಾಗ್ರ್ಯೈಃ - ಸ್ವಸ್ಥಚಿತ್ತರಾದ, ಸ್ವನುರಕ್ತೈಃ - ತನ್ನಲ್ಲಿವಿಶ್ವಾಸವುಳ್ಳ, ಯುವಭಿಃ - ಯುವಕರಿಂದ, ಅಧಿಷ್ಠಿತಾಂ - ಸನ್ನಿಧಿಗೊಳಿಸಲ್ಪಟ್ಟ, ಪ್ರವಿವಿಕ್ತಾಂ - ಜನಸಂದಣಿಯಿಲ್ಲದಿರುವ, ಕಕ್ಷ್ಯಾಂ - ತೊಟ್ಟೀ ಮನೆಯನ್ನು, ಆಸಸಾದ - ಹೊಂದಿದನು. ॥ ೧-೨ ॥ ತತ್ರ - ಆ ಅಂತಃಪುರದ ಬಾಗಿಲಲ್ಲಿ, ವಿಷ್ಠಿತಾನ್ - ಕುಳಿತುಕೊಂಡಿರುವ, ಕಾಷಾಯಿಣಃ - ಕಾವೀಬಟ್ಟೆಯನ್ನುಟ್ಟಿದ್ದ, ವೃದ್ಧಾನ್ - ಮುದುಕರಾದ, ವೇತ್ರಪಾಣೀನ್ - ಬೆತ್ತಗಳೇ ಹಸ್ತಗಳಲ್ಲಿಉಳ್ಳ, ಸ್ವಲಂಕೃತಾನ್ - ಅಲಂಕರಿಸಲ್ಪಟ್ಟ, ಸುಸಮಾಹಿತಾನ್ - ಸ್ವಸ್ಥಚಿತ್ತರಾದ, ಸ್ತ್ರ್ಯಧ್ಯಕ್ಷಾನ್ - ಸ್ತ್ರೀಯರಿಗೆ ಅಧ್ಯಕ್ಷರಾದವರನ್ನು, ದದರ್ಶ - ಕಂಡನು. ॥ ೩ ॥ ರಾಮಪ್ರಿಯಚಿಕೀರ್ಷವಃ - ಶ್ರೀರಾಮನಿಗೆ ಇಷ್ಟವನ್ನು ಮಾಡಬೇಕೆಂದಿಚ್ಛೆಯುಳ್ಳ, ತೇ - ಅವರು, ಸಮಾಯಾಂತಂ - ಬರುತ್ತಿರುವ, (ಸುಮಂತ್ರಂ - ಸುಮಂತ್ರನನ್ನು,)

ಹೀಗೆ ದಶರಥ ಮಹೀಪಾಲನ ಮುಖ್ಯ ಮಂತ್ರಿಯಾಗಿ ಇಕ್ಷ್ವಾಕು ವಂಶದ ರಾಯರ ಪೂರ್ವ ವೃತ್ತಾಂತವನ್ನೆಲ್ಲ ಚೆನ್ನಾಗಿ ಬಲ್ಲವನಾದ ಆ ಸುಮಂತ್ರನು ಬಹು ಜನರಿಂದ ತುಂಬಿ ತುಳುಕಾಡುತ್ತಿದ್ದ ಅಂತಃಪುರದ ಬಾಗಿಲನ್ನತಿಕ್ರಮಿಸಿ, ಬಿಲ್ಲಂಬುಗಳನ್ನು ಧರಿಸಿಕೊಂಡು, ಕಂಗೊಳಿಸುತ್ತಿರುವ ಕರ್ಣಕುಂಡಲಧಾರಿಗಳೂ, ಜಾಗರೂಕರೂ, ಸ್ಥಿರಚಿತ್ತವುಳ್ಳವರೂ, ಶ್ರೀರಾಮಾನುವರ್ತಿಗಳೂ ಆದ ಯುವಕರಿಂದೊಡಗೂಡಿದ ಆ ಅಂತಃಪುರದ ತೊಟ್ಟಿಯನ್ನು ಪ್ರವೇಶಿಸಿದವನಾದನು. ಅಲ್ಲಿ ಕಾವಿಬಟ್ಟೆಯನ್ನುಟ್ಟವರಾಗಿಯೂ, ವಯೋವೃದ್ಧರಾಗಿಯೂ, ಕಶಾಧಾರಿಗಳಾಗಿಯೂ, ಸಾವಧಾನಚಿತ್ತರಾಗಿಯೂ, ಅಲಂಕೃತರಾಗಿಯೂ ಇರುವ ಅಂತಃಪುರವನ್ನು ಕಾಯುವ ಗೊಲ್ಲರನ್ನು ಕಂಡವನಾದನು. ॥ ೧-೩ ॥ ಶ್ರೀರಾಮಚಂದ್ರನಿಗೆ ಪ್ರಿಯವನ್ನೇ ಬಯಸುವ ಆ ಗೊಲ್ಲರು ಸುಮಂತ್ರನ ಬರುವಿಕೆಯನ್ನು ಕಂಡು

ಸ್ಸರ್ವೇ ಸ್ವಾಸನೇಭ್ಯಸ್ಸಸಂಭ್ರಮಾಃ ॥ ೪ ॥ ತಾನುವಾಚ ವಿನೀತಾತ್ಮಾ ಸೂತಪುತ್ರಃ ಪ್ರದಕ್ಷಿಣಃ ॥ ಕ್ಷಿಪ್ರಮಾಖ್ಯಾತ ರಾಮಾಯ ಸುಮಂತ್ರೋ ದ್ವಾರಿ ತಿಷ್ಠತಿ ॥ ೫ ॥ ತೇ ರಾಮಮುಪಸಂಗಮ್ಯ ಭರ್ತುಃ ಪ್ರಿಯ ಚಿಕೀರ್ಷವಃ ॥ ಸಹಭಾರ್ಯಾಯ ರಾಮಾಯ ಕ್ಷಿಪ್ರಮೇವಾಭಿಚಕ್ಷಿರೇ ॥ ೬ ॥ ಪ್ರತಿವೇದಿತ ಮಾಜ್ಞಾಯ ಸೂತಮಭ್ಯಂತರಂ ಪಿತುಃ ॥ ತತ್ರೈವಾನಾಯಯಾಮಾಸ ರಾಘವಪ್ರಿಯಕಾಮ್ಯಯಾ ॥ ೭ ॥ ತಂ ವೈಶ್ರವಣ ಸಂಕಾಶಮುಪವಿಷ್ಟಂ

ಸಮೀಕ್ಷ್ಯ - ಕಂಡು, ಸಹಸಾ - ಜಾಗ್ರತೆಯಾಗಿ, ಸಸಂಭ್ರಮಾಃ - ಉತ್ಸಾಹದಿಂದೊಡಗೂಡಿ, ಸ್ವಾಸನೇಭ್ಯಃ - ತಮ್ಮತಮ್ಮ ಪೀಠಗಳಿಂದ, ಉತ್ಪತಿತಾಃ - ಎದ್ದವರಾದರು. ॥ ೪ ॥ ವಿನೀತಾತ್ಮಾ - ಶಿಕ್ಷಿತವಾದ ಬುದ್ಧಿಯುಳ್ಳ, ಪ್ರದಕ್ಷಿಣಃ - (ಗೋ) ಸೇವಾತತ್ಪರನಾದ, ಸೂತಪುತ್ರಃ - ಸಾರಥಿಯ ಮಗನಾದ, ಸುಮಂತ್ರಃ - ಸುಮಂತ್ರನು, ದ್ವಾರೀ - ಬಾಗಿಲಲ್ಲಿ, ತಿಷ್ಠತೀತಿ - ಇರುವನೆಂದು, ಕ್ಷಿಪ್ರಂ - ಬೇಗನೆ, ರಾಮಾಯ - ಶ್ರೀರಾಮನಿಗೆ, ಆಖ್ಯಾತ - ಹೇಳಿರಿ, ಇತಿ - ಇಂತೆಂದು, ತಾನ್ - ಆ ದ್ವಾರಪಾಲಕರನ್ನು ಕುರಿತು, ಉವಾಚ - ಹೇಳಿದನು. ॥ ೫ ॥ ಭರ್ತುಃ - ತಮ್ಮ ಯಜಮಾನನಿಗೆ, ಪ್ರಿಯಚಿಕೀರ್ಷವಃ-ಹಿತವನ್ನುಂಟುಮಾಡಬೇಕೆಂದಿರುವ, ತೇ-ಆ ದ್ವಾರಪಾಲಕರು, ರಾಮಂ-ಶ್ರೀರಾಮನನ್ನು ಕುರಿತು, ಉಪಸಂಗಮ್ಯ - ಬಂದು, ಸಹಭಾರ್ಯಾಯ - ಸತಿಯಿಂದೊಡಗೂಡಿದ, ರಾಮಾಯ-ಶ್ರೀರಾಮನಿಗೆ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ಅಭಿಚಕ್ಷಿರೇ - ಹೇಳಿದರು. ॥ ೬ ॥ ರಾಘವ ಪ್ರಿಯಕಾಮ್ಯಯಾ-(ಗೋ) ರಾಘವ-ರಘುವಂಶೋತ್ಪನ್ನನಾದ ದಶರಥರಾಜನಿಗೆ, ಪ್ರಿಯಕಾಮ್ಯಯಾ-ಇಷ್ಟವನ್ನುಮಾಡಬೇಕೆಂಬಭಿಲಾಷೆಯಿಂದ, ಪ್ರತಿವೇದಿತಂ - ತಿಳುಹಲ್ಪಟ್ಟ, ಪಿತುಃ - ತಂದೆಗೆ, ಸೂತಂ - ಸುಮಂತ್ರನನ್ನು, ಅಭ್ಯಂತರಂ - ಅಂತರಂಗಭಕ್ತನನ್ನಾಗಿ, ಆಜ್ಞಾಯ - ತಿಳಿದು, ತತ್ರೈವ - ಆ ಸೀತಾಸಮೇತನಾಗಿರುವ ಸ್ಥಳದಲ್ಲಿಯೇ, ಆನಾಯಯಾಮಾಸ - ಕರೆಯಿಸಿದನು. ॥೭॥ ಸೂತಃ - ಸುಮಂತ್ರನು, ಸೌವರ್ಣೇ - ಭಂಗಾರದ, ಸೋತ್ತರಚ್ಛದೇ - ಉತ್ತರಪಟದಿಂದ ಕೂಡಿದ, ಪರ್ಯಂಕೇ - ಮಂಚದಲ್ಲಿ, ಉಪವಿಷ್ಟಂ - (೧) ಕುಳಿತುಕೊಂಡಿರುವ, ವೈಶ್ರವಣಸಂಕಾಶಂ - (೨)

ತಮ್ಮ ತಮ್ಮ ಪೀಠಗಳಿಂದೆದ್ದು ಆತನನ್ನು ಸನ್ಮಾನಿಸಿದರು. ಆಗ ಸುಮಂತ್ರನು ಅವರನ್ನು ಕುರಿತು, "ಎಲೈ ದ್ವಾರಪಾಲಕರಿರಾ! ನಾನಿಲ್ಲಿಗೆ ಬಂದಿರುವೆನೆಂಬ ಸಂಗತಿಯನ್ನು ಶ್ರೀರಾಮನಿಗೆ ಜಾಗ್ರತೆಯಾಗಿ ತಿಳುಹಿರಿ!" ಎಂದು ಆಜ್ಞಾಪಿಸಿದನು. ಆಗಲಾ ದ್ವಾರಪಾಲಕರು

ಟಿ. (೧) "ಉಪವಿಷ್ಟಂ ಸ್ವಲಂಕೃತಂ"—"ಸಹಪತ್ನ್ಯಾ ವಿಶಾಲಾಕ್ಷ್ಯಾ ನಾರಾಯಣ ಮುಪಾಗಮತ್" ಎಂದು ಹಿಂದೆಯೇ ಹೇಳಿರುವಂತೆ ಭಗವದ್ಧ್ಯಾನ ಪರತೆಯಿಂದ ಧ್ಯಾನಾನುಕೂಲವಾದ ಬದ್ಧಾಂಜಲಿಪುಟವುಳ್ಳವನೂ ಅಥವ ಮನೋಹರವಾದ ವನಮಾಲಿಕೆಯಿಂದಲಂಕೃತವಾದವನು ಎಂದು ತಾತ್ಪರ್ಯ. (ಇದು ಗೋವಿಂದರಾಜರ ಟೀಕೆಯು.)

ಟಿ. (೨) "ವೈಶ್ರವಣ ಸಂಕಾಶಂ" ಎಂಬೆಡೆಯಲ್ಲಿ ಗೋವಿಂದರಾಜರು ಸ್ವಾರಸ್ಯವಾದ ಟೀಕೆಯನ್ನು ಒಕ್ಕಣಿಸಿರುತ್ತಾರೆ. ಅದು ಹೀಗೆ, "ಕುಬೇರನಂತೆ ಎಂದೆಂದಿಗೂ ಕ್ಷೀಣವಾಗದ ಐಶ್ವರ್ಯವುಳ್ಳವನು" ಎಂದು ಸಾಮಾನ್ಯಾರ್ಥ. ತತ್ವಾರ್ಥದಲ್ಲಿ ಹೆಚ್ಚು ಸ್ವಾರಸ್ಯವುಂಟು. "ಯಥಾ ವೈಶ್ರವಣೋ ದಾತಾ ಕಾಮೇಶ್ವರೋ ವೈಶ್ರವಣೋ ದದಾತು" ಎಂಬ ಶ್ರುತ್ಯನುಸಾರವಾಗಿ ನಿಜ ಸೌಂದರ್ಯ ಸರ್ವಸ್ವಾನುಭವವನ್ನು ಮಾಡಿ ಕೊಡುವ ಅನವಧಿಕ ಸೌಂದರ್ಯ ಸಂಪತ್ಸಮೇತನಾದ ದಿವ್ಯ ಸುಂದರ ವಿಗ್ರಹನೆಂದು ಅಭಿಪ್ರಾಯವು.

ಸ್ವಲಂಕೃತಂ ॥ ದದರ್ಶ ಸೂತಃ ಪರ್ಯಂಕೇ ಸೌವರ್ಣೇ ಸೋತ್ತರಚ್ಛದೇ ॥೮॥ ವರಾಹ ರುಧಿರಾಭೇಣ ಶುಚಿನಾಚ ಸುಗಂಧಿನಾ ॥ ಅನುಲಿಪ್ತಂ ಪರಾರ್ಧ್ಯೇನ ಚಂದನೇನ ಪರಂತಪಂ ॥೯॥ ಸ್ಥಿತಯಾ ಪಾರ್ಶ್ವತಶ್ಚಾಪಿ ವಾಲ ವ್ಯಜನ ಹಸ್ತಯಾ ॥ ಉಪೇತಂ ಸೀತಯಾ ಭೂಯಶ್ಚಿತ್ರಯಾ ಶಶಿನಂ ಯಥಾ ॥೧೦॥ ತಂ ತಪಂತಮಿವಾದಿತ್ಯಮುಪಪನ್ನಂ ಸ್ವತೇಜಸಾ ॥ ವವಂದೇ ವರದಂ ವಂದೀ

ಕುಬೇರನಂತಿರುವ, ಸ್ವಲಂಕೃತಂ - ಅಲಂಕರಿಸಲ್ಪಟ್ಟವನಾದ, ವರಾಹರುಧಿರಾಭೇಣ - ಹಂದಿಯ ರಕ್ತದಂತೆ ಕಾಂತಿಯುಳ್ಳ, ಶುಚಿನಾ - ನಿರ್ಮಲವಾದ, ಸುಗಂಧಿನಾ-ಸುವಾಸನೆಯುಳ್ಳ, ಪರಾರ್ಧ್ಯೇನ-ಶ್ರೇಷ್ಠವಾದ, ಚಂದನೇನ - ಚಂದನದಿಂದ, ಅನುಲಿಪ್ತಂ - ಲೇಪನಮಾಡಲ್ಪಟ್ಟ, ಪರಂತಪಂ - ಶತ್ರುಸಂಹಾರಕನಾದ, ಪಾರ್ಶ್ವತಃ - ಪಕ್ಕದಲ್ಲಿ, ಸ್ಥಿತಯಾ - ನಿಂತಿರುವ, ವಾಲವ್ಯಜನ ಹಸ್ತಯಾ - ಚಾಮರವೇ ಹಸ್ತದಲ್ಲಿವುಳ್ಳ, ಸೀತಯಾ - ಸೀತಾದೇವಿಯಿಂದ, ಚಿತ್ರಯಾ - ಚಿತ್ರಾ ನಕ್ಷತ್ರದಿಂದ, ಶಶಿನಂಯಥಾ-ಚಂದ್ರನಂತೆ, (೧) ಉಪೇತಂ - ಕೂಡಿರುವ, ತಂ - ಆ ಶ್ರೀರಾಮನನ್ನು, ಭೂಯಃ - ಮತ್ತೂ, ದದರ್ಶ - ಕಂಡನು. ॥ ೮-೧೦ ॥ ವಂದೀ - ಸ್ತುತಿಪಾಠಕನಾದ, ವಿನಯಜ್ಞಃ-ವಿನಯಭಾವವನ್ನು ತಿಳಿದಿರುವ ಸುಮಂತ್ರನು, ವಿನೀತವತ್ - ನಮ್ರನಾಗಿ, ಸ್ವತೇಜಸಾ - (೨) ತನ್ನ

ತನ್ನೊಡೆಯನಾದ ಶ್ರೀರಾಮನಿಗೆ ಪ್ರಿಯವನ್ನುಂಟುಮಾಡಬೇಕೆಂದು ಕೋರಿದವರಾಗಿ ಸೀತೆಯಿಂದೊಡಗೂಡಿದ ಶ್ರೀರಾಮನ ಬಳಿಗೈದಿ ಆ ಸುದ್ದಿಯನ್ನು ಶೀಘ್ರವಾಗಿ ತಿಳುಹಿಸುವರಾದರು. ॥ ೪-೯ ॥ ದಶರಥರಾಯನಿಗೆ ಹಿತೈಷಿಯಾದ ಆ ಸುಮಂತ್ರನು ಬಂದಿರುವನೆಂಬ ವಾರ್ತೆಯನ್ನು ಕೇಳಿ ರಘುನಂದನನು ತಂದೆಗೆ ಅಂತರಂಗಭಕ್ತನಾದ ಆತನನ್ನು ಅದೇ ಸ್ಥಳದಲ್ಲಿಯೇ ಕರೆಯಿಸಿಕೊಂಡವನಾಗಲು, ಆ ಸುಮಂತ್ರನು ಸುವರ್ಣ ವಿಕಾರವಾದ

ಟಿ. (೧) "ಉಪೇತಂ ಸೀತಯಾ ಭೂಯಃ" ಎಂದು ಮೂಲ. ಇದಕ್ಕೆ ಸಾಧಾರಣವಾಗಿ "ಮತ್ತೂ ಸೀತೆಯಿಂದೊಡಗೂಡಿದವನು" ಎಂದರ್ಥವು. ಆದರೆ ಇದಕ್ಕೆ ವ್ಯಾಖ್ಯಾನಕಾರರು ಹೊಸ ರಂಗನ್ನು ಕಟ್ಟಿ ಪದ ಸ್ವಾರಸ್ಯಗಳನ್ನು ಹೆಚ್ಚಿಸಿರುತ್ತಾರೆ. ಪತಿಯನ್ನು ಚಂದನದಿಂದನುಲಿಪ್ತ ಶರೀರನನ್ನಾಗಿ ಮಾಡಿ ವಾಲವ್ಯಜನ ಪಾಣಿಯಾಗಿ ನಮ್ರಭಾವದಿಂದ ಪಕ್ಕದಲ್ಲಿ ನಿಂತಿರುವ ಸೀತಾದೇವಿಯಿಂದೊಡಗೂಡಿದನನು. "ಭೂಯಃ" ಎಂದು ಹೇಳಿರುವುದರಿಂದ "ವಿರಾಜಮಾನನಾದ" ಎಂದು ಸೇರಿಸಿಕೊಳ್ಳತಕ್ಕುದು. ಇಷ್ಟು ಹೇಳಿದುದನ್ನೂ "ಚಿತ್ರಯಾ ಶಶಿನಂ ಯಥಾ" ಎಂಬ ದೃಷ್ಟಾಂತದಿಂದ ವಿಶದಗೊಳಿಸುತ್ತಾರೆ. "ಚಿತ್ರಯಾ" ಎಂಬುದರಿಂದ ಅನುರಾಗವೂ, "ಶಶಿನಂ" ಎಂಬುದರಿಂದ ಸೀತಾದೇವಿಯನ್ನು ಆಲಿಂಗಿಸುವುದರಿಂದುಂಟಾದ ಚಂದನವಕ್ಷಸ್ಥಳವನ್ನೊಳಗೊಂಡಿರುವಿಕೆಯು ಹೇಳಲ್ಪಟ್ಟಿತು. ಇಂತಹ ಶ್ರೀರಾಮನನ್ನು ನೋಡಿದನೆಂಬುದರಿಂದ ಸೂತನ ದೃಷ್ಟಿ ಸಾಫಲ್ಯವೂ ಹೇಳಿದಂತಾಯಿತು" ಎಂದು **ಗೋವಿಂದರಾಜರ** ಮತ. **ಮಹೇಶ್ವರ ತೀರ್ಥರು** "ಭೂಯಃ" ಎಂಬ ಪದ ಸ್ವಾರಸ್ಯವನ್ನು "ಯಾವನು ಎಲ್ಲರ ಹೃದಯವನ್ನೂ ನಿಜ ಸೌಂದರ್ಯಾತಿಶಯದಿಂದ ಅಪಹರಿಸುತ್ತಾನೆಯೋ ಅಂತಹವನು ಸೀತಾದೇವಿಯಿಂದಲೂ ಒಡಗೂಡಿರುವನೆಂದಮೇಲೆ ಹೇಳತಕ್ಕುದೇನಿದೆ" ಎಂದು ಹೇಳಿದ್ದಾರೆ.

ಟಿ. (೨) "ತಂ ವೈಶ್ರವಣ ಸಂಕಾಶಂ" ಎಂಬುದರಿಂದ ಮೊದಲ್ಗೊಂಡು "ಸ್ವತೇಜಸಾ" ಎಂಬುದರ ವರೆಗೂ ಶ್ರೀರಾಮಚಂದ್ರನ ಸರ್ವಶ್ರೈಯವಾದ ಶುಭಾಶ್ರಯಾಕಾರ ವಿಶೇಷವು ನಿರೂಪಿತವಾಗಿದೆ.

ವಿನಯಜ್ಞೋ ವಿನೀತವತ್ ॥ ೧೧ ॥ ಪ್ರಾಂಜಲಿಸ್ತು ಸುಖಂ ಪೃಷ್ಟ್ವಾ ವಿಹಾರ ಶಯನಾಸನೇ ॥ ರಾಜಪುತ್ರಮುವಾಚೇದಂ ಸುಮಂತ್ರೋ ರಾಜ ಸತ್ಕೃತಃ ॥ ೧೨ ॥ ಕೌಸಲ್ಯಾ ಸುಪ್ರಜಾ ರಾಮ ಪಿತಾ ತ್ವಾಂ ದ್ರಷ್ಟು ಮಿಚ್ಛತಿ ॥ ಮಹಿಷ್ಯಾಸಹ ಕೈಕೇಯ್ಯಾ ಗಮ್ಯತಾಂ ತತ್ರ ಮಾಚಿರಂ ॥ ೧೩ ॥ ಏವಮುಕ್ತಸ್ತು ಸಂಹೃಷ್ಟೋ ನರಸಿಂಹೋ ಮಹಾದ್ಯುತಿಃ ॥ ತತ ಸ್ಸಮ್ಮಾನ ಯಾಮಾಸ ಸೀತಾಮಿದಮುವಾಚಹ ॥ ೧೪ ॥ ದೇವಿ ದೇವಶ್ಚ ದೇವೀಚ ಸಮಾಗಮ್ಯ ಮದಂತರೇ ॥ ಮಂತ್ರಯೇತೇ ಧ್ರುವಂ ಕಿಂಚಿದಭಿಷೇಚನ

ತೇಜಸ್ಸಿನಿಂದ, ಉಪಪನ್ನಂ - ಕೂಡಿರುವ, ತಪಂತಂ - ತಪಿಸುತ್ತಿರುವ, ಆದಿತ್ಯಮಿವಸ್ಥಿತಂ - ಸೂರ್ಯನಂತಿರುವ, ವರದಂ-ವರಪ್ರದಾತನಾದ, ತಂ - ಆ ಶ್ರೀರಾಮನನ್ನು, ವವಂದೇ-ವಂದಿಸಿದನು. ॥ ೧೧ ॥ ಸುಮಂತ್ರಃ - ಸುಮಂತ್ರನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಿಹಾರಶಯನಾಸನೇ - (ಗೊ) ವಿಹಾರದಲ್ಲಿಯೂ ಶಯನದಲ್ಲಿಯೂ ಆಸನದಲ್ಲಿಯೂ, ರಾಜಸತ್ಕೃತಃ - ರಾಜನಾದ ಶ್ರೀರಾಮನಿಂದ ಪೂಜೆಮಾಡಲ್ಪಟ್ಟು, ಸುಖಂ - ಕುಶಲವನ್ನು, ಪೃಷ್ಟ್ವಾ - ಕೇಳಿ, ರಾಜಪುತ್ರಂ - ಶ್ರೀರಾಮನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೧೨ ॥ ಹೇ ರಾಮ - ಎಲೈ ಶ್ರೀರಾಮನೆ, ಕೌಸಲ್ಯಾ - ಕೌಸಲ್ಯಾದೇವಿಯು, ಸುಪ್ರಜಾಃ - ಒಳ್ಳೆಯ ಪುತ್ರನುಳ್ಳವಳಾಗಿ, ಪಿತಾ - ತಂದೆಯು, ಮಹಿಷ್ಯಾ - ಪಟ್ಟದರಸಿಯಾದ, ಕೈಕೇಯ್ಯಾಸಹ-ಕೈಕೇಯಿಯೊಡನೆ, ತ್ವಾಂ-ನಿನ್ನನ್ನು, ದ್ರಷ್ಟುಂ - ನೋಡಲು, ಇಚ್ಛತಿ - ಅಪೇಕ್ಷಿಸುತ್ತಾನೆ, ತತ್ರ - ಆ ಕೈಕೇಯಿಯು ದಶರಥನೊಡನಿರುವಸ್ಥಳಕ್ಕೆ, ಗಮ್ಯತಾಂ - ತೆರಳುವವನಾಗು, ಮಾಚಿರಂ - ಸಾವಕಾಶಮಾಡಬೇಡ. ॥ ೧೩ ॥ ಏವಂ - ಈಪರಿ, ಉಕ್ತಃ - ಹೇಳಲ್ಪಟ್ಟ, ಸಂಹೃಷ್ಟಃ - ಸಂತೋಷಗೊಂಡ, ಮಹಾದ್ಯುತಿಃ - ಅತಿಕಾಂತಿಯುಳ್ಳ, ನರಸಿಂಹಃ - ನರಶ್ರೇಷ್ಠನಾದ ಶ್ರೀರಾಮನು, ತತಃ - ಬಳಿಕ, ಸಮ್ಮಾನಯಾಮಾಸ - ಆ ಮಾತನ್ನು ಆದರಿಸಿದನು, ಸೀತಾಂ - ಸೀತಾದೇವಿಯನ್ನು ಕುರಿತು, ಇದಂ - ಈ ಮಾತನ್ನು, ಉವಾಚ-ಹೇಳಿದನಷ್ಟೆ. ॥೧೪॥ ಹೇ ದೇವಿ - ಎಲೌ ಸೀತಾದೇವಿಯೇ, ದೇವಶ್ಚ-ರಾಜನೂ, ದೇವೀಚ - ಅರಸಿಯಾದ ಕೈಕೇಯಿಯೂ, ಸಮಾಗಮ್ಯ - ಸೇರಿ, ಮದಂತರೇ - ನನ್ನ ವಿಷಯವಾಗಿ, ಅಭಿಷೇಚನ

ಉತ್ತರಪಟವುಳ್ಳುದಾಗಿಯೂ, ಮನೋಹರವಾಗಿಯೂ ಇರುವ ಪರ್ಯಂಕದಲ್ಲಿ ಕುಳಿತುಕೊಂಡಿರುವವನಾಗಿಯೂ, ಕುಬೇರನಿಗೆ ಸಮಾನನಾಗಿಯೂ, ಕಣ್ಗಿಂಪೂಗೆನಂತೆ ಅಲಂಕಾರ ಮಾಡಲ್ಪಟ್ಟವನಾಗಿಯೂ, ಬಹು ಕೆಂಪಾಗಿರುವ ಚಂದನ ಗಂಧವನ್ನು ಪೂಸಿಕೊಂಡಿರುವವನಾಗಿಯೂ, ಶತ್ರು ನಾಶಕನಾಗಿಯೂ, ಚಾಮರವನ್ನು ಹಿಡಿದು ಪಕ್ಕದಲ್ಲಿ ನಿಂತಿದ್ದ ಸೀತಾದೇವಿಯಿಂದೊಡಗೂಡಿ, ಚಿತ್ರಾ ನಕ್ಷತ್ರ ಸಮೇತನಾದ ಚಂದ್ರನಂತೆ ರಾರಾಜಿಸುತ್ತಿರುವವನಾಗಿಯೂ, ತನ್ನ ತೇಜಸ್ಸಿನಿಂದಲೇ ಕಂಗೊಳಿಸುತ್ತಿರುವ ದಿನಕರನಂತೆ ಬೆಳಗುತ್ತಿರುವವನಾಗಿಯೂ, ಇರುವ ಆ ರಘುರಾಮನನ್ನು ಕಂಡು ವಿಧೇಯತೆಯಿಂದ ವಂದಿಸಿ, ಶ್ರೇಷ್ಠವಾದ ಪೀಠದಲ್ಲಿ ಕುಳಿತುಕೊಂಡು ಶ್ರೀರಾಮನಿಂದ ಸತ್ಕೃತನಾಗಿ ಕೈ ಜೋಡಿಸಿಕೊಂಡು ಕ್ಷೇಮವನ್ನು ಕೇಳಿ, "ಎಲೈ ರಘುನಂದನನೆ! ಕೌಸಲ್ಯಾದೇವಿಯು ಸತ್ಪುತ್ರನನ್ನುಳ್ಳವಳಾಗಲಿ!

ಸಂಹಿತಂ ॥ ೧೫ ॥ ಲಕ್ಷಯಿತ್ವಾ ಹ್ಯಭಿಪ್ರಾಯಂ ಪ್ರಿಯಕಾಮಾ ಸುದಕ್ಷಿಣಾ ॥ ಸಂಚೋದಯತಿ ರಾಜಾನಂ ಮದರ್ಥಂ ಮದಿರೇಕ್ಷಣೇ ॥ ೧೬ ॥ ಸಾಪ್ರಹೃಷ್ಟಾ ಮಹಾರಾಜಂ ಹಿತಕಾಮಾನುವರ್ತಿನೀ ॥ ಜನನೀ ಚಾರ್ಥಕಾಮಾ ಮೇ ಕೇಕಯಾಧಿಪತೇಸ್ಸುತಾ ॥ ೧೭ ॥ ದಿಷ್ಟ್ಯಾ ಖಲು ಮಹಾರಾಜೋ ಮಹಿಷ್ಯಾ ಪ್ರಿಯಯಾ ಸಹ ॥ ಸುಮಂತ್ರಂ ಪ್ರಾಹಿಣೋದ್ದೂತಮರ್ಥಕಾಮಕರಂ ಮಮ ॥ ೧೮ ॥ ಯಾದೃಶೀ ಪರಿಷತ್ತತ್ರ ತಾದೃಶೋ ದೂತ ಆಗತಃ ॥

ಸಂಹಿತಂ - ಪಟ್ಟಾಭಿಷೇಕ ಸಂಬಂಧವಾದ, ಕಿಂಚಿತ್ - ಯಾವದೋ ಒಂದು ಆಲೋಚನೆಯನ್ನು, ಧ್ರುವಂ - ನಿಶ್ಚಯವಾಗಿ, ಮಂತ್ರಯೇತೇ - ಆಲೋಚಿಸುತ್ತಾರೆ, ಹೇ ಮದಿರೇಕ್ಷಣೇ - ಎಲೌ ಮದಕರವಾದ ನೇತ್ರಗಳುಳ್ಳವಳೇ, ಕೇಕಯಾಧಿಪತೇಃ - ಕೇಕಯರಾಜನ, ಸುತಾ - ಕುವರಿಯಾದ, ಮೇ - ನನ್ನ, ಅರ್ಥಕಾಮಾ - ಹಿತವನ್ನೇಕೋರುವ, ಹಿತಕಾಮಾ - ರಾಜನ ಹಿತವನ್ನೇಕೋರುವ, ಅನುವರ್ತಿನೀ - ಪತಿಯನ್ನು ಅನುಸರಿಸುತ್ತಿರುವ, ಪ್ರಿಯಕಾಮಾ - ನನಗೆ ಇಷ್ಟವನ್ನು ಬಯಿಸುತ್ತಿರುವ, ಸುದಕ್ಷಿಣಾ - ಸಮರ್ಥಳಾದ, ಜನನೀ - ನನ್ನ ತಾಯಿಯಾದ, ಸಾ-ಆ ಕೈಕೇಯಿಯು, ಅಭಿಪ್ರಾಯಂ - ದಶರಥರಾಜನಭಿಪ್ರಾಯವನ್ನು, ಲಕ್ಷಯಿತ್ವಾ - ಕಂಡು, ಪ್ರಹೃಷ್ಟಾಸತೀ - ಸಂತೋಷಗೊಂಡವಳಾಗಿ, ಮದರ್ಥಂ - ನನಗೋಸುಗ, ಮಹಾರಾಜಂ - ರಾಜೋತ್ತಮನಾದ, ರಾಜಾನಂ - ದಶರಥರಾಜನನ್ನು, ಸಂಚೋದಯತಿ - ಪ್ರೇರಿಸುತ್ತಾಳೆ. ॥ ೧೬-೧೭ ॥ ಮಹಾರಾಜಃ - ಧೊರೆಯು, ಪ್ರಿಯಯಾ - ಇಷ್ಟಳಾದ, ಮಹಿಷ್ಯಾಸಹ - ಹೆಂಡತಿಯಿಂದೊಡಗೂಡಿ, ದಿಷ್ಟ್ಯಾ - ದೈವಾಧೀನದಿಂದ, ಮಮ - ನನಗೆ, ಅರ್ಥಕಾಮಕರಂ - ಪ್ರಯೋಜನಕರವಾದ ಕಾರ್ಯವನ್ನು ಮಾಡುತ್ತಿರುವ, ದೂತಂ - ಸೇವಕನಾದ, ಸುಮಂತ್ರಂ - ಸುಮಂತ್ರನನ್ನು, ಪ್ರಾಹಿಣೋತ್ - ಕಳುಹಿರುವನು. ॥ ೧೮ ॥ ತತ್ರ - ಆ ಅಂತಃಪುರದಲ್ಲಿ, ಪರಿಷತ್ - ಸಭೆಯು, ಯಾದೃಶೀ - ಎಂಥದೋ, ತಾದೃಶಃ - ಅಂತಹ ಕಾರ್ಯಾಸಕ್ತನಾದ, ದೂತಃ-ಸೇವಕನು, ಆಗತಃ - ಬಂದಿರುವನು, ಅದ್ಯೈವ - ಈಗಲೇ, ರಾಜಾ - ದಶರಥರಾಜನು, ಮಾಂ - ನನ್ನನ್ನು, ಯೌವರಾಜ್ಯೇ - ಯುವರಾಜ

ಒಡೆಯನಾದ ದಶರಥರಾಯನು, ಪ್ರಿಯ ಪತ್ನಿಯಾದ ಕೈಕೇಯಿಯಿಂದೊಡಗೂಡಿದವನಾಗಿ ನಿನ್ನನ್ನು ನೋಡಲಿಚ್ಛಿಸುತ್ತಾನೆ. ಬೇಗನೆ ತೆರಳುವವನಾಗು" ಎಂದನು. ಆಗ ಶ್ರೀರಾಮಚಂದ್ರನು ಆ ಸುಮಂತ್ರನ ನುಡಿಗಳನ್ನು ಕೇಳಿ ಸಂತಸಗೊಂಡು ಸೀತಾದೇವಿಯನ್ನು ಕುರಿತು, "ಎಲೌ ದೇವಿಯೆ! ನನ್ನ ಜನಕನಾದ ದಶರಥರಾಯನೂ, ಜನನಿಯಾದ ಕೈಕೇಯಿಯೂ ನನ್ನ ವಿಷಯವಾದ ಯೌವರಾಜ್ಯ ಪಟ್ಟಾಭಿಷೇಕವನ್ನು ಕುರಿತು ಏನೋ ಯೋಚಿಸುತ್ತಿರಬೇಕು. ಕೇಳೌ ಮದಿರಾಕ್ಷಿಯೆ! ನನಗೆ ಹಿತವನ್ನೇ ಕೋರುತ್ತಿರುವವಳಾಗಿಯೂ, ಪತಿಯಾದ ದಶರಥರಾಯನನ್ನೇ ಅನುವರ್ತಿಸುತ್ತಿರುವವಳಾಗಿಯೂ, ನನ್ನ ಅಭಿವೃದ್ಧಿಯನ್ನಪೇಕ್ಷಿಸುತ್ತಿರುವವಳಾಗಿಯೂ, ಕೇಕಯರಾಜನ ಕುವರಿಯಾಗಿಯೂ ಇರುವ ಆ ಕೈಕೇಯೀದೇವಿಯು ರಾಜನ ಅಭಿಪ್ರಾಯವನ್ನು ಕುರಿತು ಸಂತಸವಾಂತು ಆತನನ್ನು ಪ್ರೇರಿಸಿದ್ದಾಳೆಂಬುದು ನಿಜವು. ಸತಿಯಿಂದೊಡಗೂಡಿದ ದಶರಥರಾಯನು ನನಗೆ ಪ್ರಯೋಜನಕರ

ಧ್ರುವಮದ್ಯೈವ ಮಾಂ ರಾಜಾ ಯೌವರಾಜ್ಯೇಽಭಿಷೇಕ್ಷ್ಯತಿ ॥ ೧೯ ॥ ಹಂತ ಶೀಘ್ರ ಮಿತೋಗತ್ವಾ ದ್ರಕ್ಷ್ಯಾಮಿ ಚ ಮಹೀಪತಿಂ ॥ ಸಹ ತ್ವಂ ಪರಿವಾರೇಣ ಸುಖಮಾಸ್ಸ್ವ ರಮಸ್ವಚ ॥ ೨೦ ॥ ಪತಿ ಸಂಮಾನಿತಾ ಸೀತಾ ಭರ್ತಾರಮಸಿತೇಕ್ಷಣಾ ॥ ಆದ್ವಾರಮನುವವ್ರಾಜ ಮಂಗಳಾನ್ಯಭಿದಧ್ಯುಷೀ ॥ ೨೧ ॥ ರಾಜ್ಯಂ ದ್ವಿಜಾತಿಭಿರ್ಜುಷ್ಟಂ ರಾಜಸೂಯಾಭಿಷೇಚನಂ ॥ ಕರ್ತುಮರ್ಹತಿ

ಪಟ್ಟದಲ್ಲಿ, ಅಭಿಷೇಕ್ಷ್ಯತಿ - ಅಭಿಷೇಕಮಾಡುವುದು, ಧೃವಂ - ನಿಶ್ಚಯವು. ॥ ೧೯ ॥ ಹಂತ - ಸಂತೋಷವು, ಇತಃ - ಇಲ್ಲಿಂದ, ಶೀಘ್ರಂ - ಜಾಗ್ರತೆಯಾಗಿ, ಗತ್ವಾ - ಹೋಗಿ, ಮಹೀಪತಿಂ - ರಾಜನನ್ನು, ದ್ರಕ್ಷ್ಯಾಮಿ - ನೋಡುವೆನು, ತ್ವಂ - ನೀನು, ಪರಿವಾರೇಣಸಹ - ಸಖೀಜನರೊಡನೆ, ಸುಖಂ - ಸುಖವಾಗಿ, ಆಸ್ಸ್ವ - ಇರು, ರಮಸ್ವಚ - ಪಗಡೆಮುಂತಾದುವುಗಳನ್ನು ಆಡುತ್ತಲೂ ಇರು. ॥೨೦॥ ಪತಿಸಂಮಾನಿತಾ - ಪತಿಯಿಂದ ಗೌರವಿಸಲ್ಪಟ್ಟ, ಅಸಿತೇಕ್ಷಣಾ - (೧) ಕಪ್ಪಾಗಿರುವ ನೇತ್ರುಗಳುಳ್ಳ, ಸೀತಾ - ಸೀತಾದೇವಿಯು, ದ್ವಿಜಾತಿಭಿಃ - ಬ್ರಾಹ್ಮಣರಿಂದ, ಜುಷ್ಟಂ - ಪ್ರಯೋಗಿಸಲ್ಪಟ್ಟ, ರಾಜ್ಯಂ - ರಾಜ್ಯವನ್ನು, ರಾಜಸೂಯಾಭಿಷೇಚನಂ - ರಾಜಸೂಯಯಾಗಕ್ಕೆ ಯೋಗ್ಯವಾದ ಪಟ್ಟಾಭಿಷೇಕವನ್ನು, ವಾಸವಸ್ಯ - ದೇವೇಂದ್ರನಿಗೆ, ಲೋಕಕೃದಿವ - ಬ್ರಹ್ಮನಂತೆ, ರಾಜಾ - ಅರಸು, ತೇ - ನಿನಗೆ, ಕರ್ತುಂ - ಮಾಡಲು, ಅರ್ಹತಿ - ಯೋಗ್ಯನಾಗುತ್ತಾನೆ, ದೀಕ್ಷಿತಂ - ದೀಕ್ಷಾಬದ್ಧನಾದ, ವ್ರತಸಂಪನ್ನಂ - ನಿಯಮಯುಕ್ತನಾದ, ವರಾಜಿನಧರಂ - ಶ್ರೇಷ್ಠವಾದ ಕೃಷ್ಣಾಜಿನವನ್ನು ಧರಿಸಿರುವ, ಶುಚಿಂ - ಪರಿಶುದ್ಧನಾದ, ಕುರಂಗಶೃಂಗಪಾಣಿಂ - ಜಿಂಕೆಯಕೊಂಬನ್ನು ಹಸ್ತದಲ್ಲಿ ಉಳ್ಳ,

ವಾದ ಕಾರ್ಯಗಳನ್ನು ಮಾಡುತ್ತಿರುವ ಈ ಸುಮಂತ್ರನನ್ನು ದೈವಾಧೀನದಿಂದ ಕಳುಹಿದವನಾದನು. ಅರಮನೆಯ ಬಳಿಯಲ್ಲಿ ಎಂತಹ ಸಭೆಯು ಸೇರಿರುವುದೋ, ಅಂತಹ ದೂತನೇ ಬಂದಿರುವನು. ರಾಜನು ನನ್ನನ್ನು ಯುವರಾಜನನ್ನಾಗಿ ಖಂಡಿತವಾಗಿಯು ಪಟ್ಟಾಭಿಷೇಕ ಮಾಡುವನು. ಬೇಗನೆ ಹೋಗಿ ಒಡೆಯನನ್ನು ನೋಡಿ ಬರುತ್ತೇನೆ. ನೀನು ಸಖಿಯರೊಡಗೂಡಿ ಪಗಡೆ ಮುಂತಾದ ಆಟಗಳನ್ನಾಡಿಕೊಂಡು ಸುಖವಾಗಿರು" ಎಂದು ಹೇಳಿ ತೆರಳಿದವನಾದನು. ॥ ೨೦ ॥ ಆ ಬಳಿಕ ಪತಿಯಾದ ಶ್ರೀರಾಮಚಂದ್ರನಿಂದ ಸಮ್ಮಾನಿತಳಾದವಳೂ, ಕನ್ನೈದಿಲೆಯಂತೆ ಕಪ್ಪಾದ ಕಂಗಳುಳ್ಳವಳೂ ಆದ ಸೀತಾದೇವಿಯು ಶ್ರೀರಾಮನನ್ನು ಕುರಿತು, "ಎಲೈ ರಾಮನೆ! ವಿಪ್ರಶ್ರೇಷ್ಠರಿಂದ ಪ್ರಯೋಗಿಸಲ್ಪಟ್ಟ ರಾಜಸೂಯಯಾಗಕ್ಕೆ ಯೋಗ್ಯತಾನುಸಾರವಾದ ಯೌವರಾಜ್ಯ ಪಟ್ಟಾಭಿಷೇಕವನ್ನು, ಸಾಕ್ಷಾತ್ ಚತುರ್ಮುಖ

ಟಿ. (೧) "ಅಸಿತೇಕ್ಷಣಾ" ಇಲ್ಲಿನ ಪದ ಸ್ವಾರಸ್ಯಕ್ಕೆ ಗೋವಿಂದರಾಜರು ಹೆಚ್ಚು ಗಮನ ಕೊಟ್ಟಿರುತ್ತಾರೆ. "ಶ್ರೀರಾಮನಿಂದ ಪೂ ಮಾಲಿಕೆಯು ಸೀತಾದೇವಿಗೆ ಕೊಡಲ್ಪಟ್ಟುದಕ್ಕೆ ಪ್ರತಿಯಾಗಿ ಆ ದೇವಿಯು ಆತನಿಗೆ ಕಂಗಳಿಂದ ಕನ್ನೈದಿಲೆಯ ಮಾಲಿಕೆಯನ್ನು ಕೊಟ್ಟವಳಾದಳು" ಎಂಬ ಅಭಿಪ್ರಾಯವು ತೋರಲೋಸುಗ "ಅಸಿತೇಕ್ಷಣಾ" ಎಂಬ ಪದ ಪ್ರಯೋಗವು ಮಾಡಲಾಗಿದೆ. ಮತ್ತು "ಭರ್ತಾರಮಾದ್ವಾರಮನು ವವ್ರಾಜ" ಎಂಬ ಕಡೆಯಲ್ಲಿ, ಸೀತಾ ರಮಣಿಯು ತನ್ನನ್ನು ಯಾವಾಗಲೂ ಹೃದಯದಲ್ಲಿಯೇ ಧರಿಸಿಕೊಂಡಿರುವ ನಿಜ ಸ್ವಾಮಿಯಾದ ರಾಮಚಂದ್ರನ ವಿರಹವನ್ನು ಸೈರಿಸಲಾರದೆ, ತಾನು ಹೋಗಲು ಯೋಗ್ಯವಾದ ದ್ವಾರ ಪ್ರದೇಶದವರೆಗೂ ಹಿಂಬಾಲಿಸಿದಳೆಂದು ಅಭಿಪ್ರಾಯವು.

ತೇ ರಾಜಾ ವಾಸವಸ್ಯೇವ ಲೋಕಕೃತ್ ॥ ೨೨ ॥ ದೀಕ್ಷಿತಂ ವ್ರತಸಂಪನ್ನಂ ವರಾಜಿನಧರಂ ಶುಚಿಂ ॥ ಕುರಂಗಶೃಂಗಪಾಣಿಂಚ ಪಶ್ಯಂತೀ ತ್ವಾಂ ಭಜಾಮ್ಯಹಂ ॥ ೨೩ ॥ ಪೂರ್ವಾಂ ದಿಶಂ ವಜ್ರಧರೋ ದಕ್ಷಿಣಾಂ ಪಾತು ತೇ ಯಮಃ ॥ ವರುಣಃ ಪಶ್ಚಿಮಾಮಾಶಾಂ ಧನೇಶಸ್ತೂತ್ತರಾಂದಿಶಂ ॥೨೪॥ ಅಥ ಸೀತಾಮನುಜ್ಞಾಪ್ಯ ಕೃತ ಕೌತುಕ ಮಂಗಳಃ ॥ ನಿಶ್ಚಕ್ರಾಮ ಸುಮಂತ್ರೇಣ ಸಹರಾಮೋ ನಿವೇಶನಾತ್ ॥ ೨೫ ॥ ಪರ್ವತಾದಿವ ನಿಷ್ಕ್ರಮ್ಯ ಸಿಂಹೋ ಗಿರಿಗುಹಾಶಯಃ ॥ ಲಕ್ಷ್ಮಣಂ ದ್ವಾರಿ ಸೋ ಪಶ್ಯತ್ಪ್ರಹ್ವಾಂಜಲಿ

ತ್ವಾಂ - ನಿನ್ನನ್ನು, ಪಶ್ಯಂತೀ - ನೋಡುತ್ತ, ಅಹಂ - ನಾನು, ಭಜಾಮಿ - ಸೇವಿಸುತ್ತೇನೆ, ವಜ್ರಧರಃ - ದೇವೇಂದ್ರನು, ತೇ - ನಿನಗೆ, ಪೂರ್ವಾಂದಿಶಂ - ಪೂರ್ವದಿಕ್ಕಿನಲ್ಲಿ, ಪಾತು-ಸಂರಕ್ಷಿಸಲಿ, ಯಮಃ - ಯಮನು, ದಕ್ಷಿಣಾಂ - ದಕ್ಷಿಣದಿಕ್ಕಿನಲ್ಲಿ, ಪಾತು - ಪಾಲಿಸಲಿ, ವರುಣಃ - ವರುಣನು, ಪಶ್ಚಿಮಾಮಾಶಾಂ - ಪಶ್ಚಿಮದಿಕ್ಕಿನಲ್ಲಿ, ಪಾತು - ಕಾಪಾಡಲಿ, ಧನೇಶಸ್ತು - ಕುಬೇರನಾದರೆ, ಉತ್ತರಾಮಾಶಾಂ - ಉತ್ತರದಿಕ್ಕಿನಲ್ಲಿ, ಪಾತು - ಪಾಲಿಸಲಿ, ಇತಿ - ಇಂತೆಂದು, ಮಂಗಳಾನಿ-ಶುಭಗಳನ್ನು, ಅಭಿದಧ್ಯುಷೀ - ಪ್ರಾರ್ಥಿಸುತ್ತ, ಭರ್ತಾರಂ - ಪತಿಯಾದ ಶ್ರೀರಾಮನನ್ನು, ಆದ್ವಾರಂ - ಹೊರಬಾಗಿಲುಪರ್ಯಂತ, ಅನುವವ್ರಾಜ - ಅನುಸರಿಸಿಬಂದಳು. ॥ ೨೧ ೨೩ ॥ ಅಥ-ಬಳಿಕ, ರಾಮಃ - ಶ್ರೀರಾಮನು, ಕೃತಕೌತುಕಮಂಗಳಃ, ಕೃತ - ಮಾಡಲ್ಪಟ್ಟ, ಕೌತುಕಮಂಗಳಃ - (ಗೋ + ಮ) ರಕ್ಷಾಬಂಧನಾದಿ ಶುಭಕಾರ್ಯಗಳುಳ್ಳವನಾಗಿ, ಸೀತಾಂ - ಸೀತಾದೇವಿಯನ್ನು, ಅನುಜ್ಞಾಪ್ಯ - ಸಮ್ಮತಿಸಿ, ಸುಮಂತ್ರೇಣಸಹ - ಸುಮಂತ್ರನೊಡಗೂಡಿ, ನಿವೇಶನಾತ್ - ಮನೆಯಿಂದ, ನಿಶ್ಚಕ್ರಾಮ- ಹೊರಟುಬಂದನು. ॥ ೨೪-೨೫ ॥ ಸಃ - ಆ ಶ್ರೀರಾಮನು, ಪರ್ವತಾತ್ - ಬೆಟ್ಟದಿಂದ, ಗಿರಿಗುಹಾಶಯಃ - ಪರ್ವತದಲ್ಲಿನ ಗುಹೆಯಲ್ಲಿ ಮಲಗಿರುವ, ಸಿಂಹ ಇವ - ಸಿಂಹದಂತೆ, ವಿನಿಷ್ಕ್ರಮ್ಯ-ಹೊರಟು, ಪ್ರಹ್ವಾಂಜಲಿಪುಟಂ - ನಮ್ರನಾಗಿ ಬದ್ಧಾಂಜಲಿಯುಳ್ಳ, ದ್ವಾರಿ - ಹೊರಬಾಗಿಲಲ್ಲಿ, ಸ್ಥಿತಂ - ನಿಂತಿ

ಬ್ರಹ್ಮನು ಇಂದ್ರನಿಗೆ ರಾಜ್ಯಾಭಿಷೇಕವನ್ನು ಮಾಡುವಂತೆ ದಶರಥರಾಯನು ನಿನಗೆ ಮಾಡಿಸುವನು. ಆಗ ದೀಕ್ಷಾಬದ್ಧನಾಗಿಯೂ, ನಿಯಮಸಂಪನ್ನನಾಗಿಯೂ, ಉತ್ತಮವಾದ ಅಜಿನವನ್ನು ಧರಿಸಿದವನಾಗಿಯೂ, ಪರಿಶುದ್ಧನಾಗಿಯೂ, ಜಿಂಕೆಯ ಕೊಂಬನ್ನು ಕೈಯಲ್ಲಿ ಹಿಡಿದವನಾಗಿಯೂ ಇರುವ ನಿನ್ನನ್ನು ನಾನು ಎವೆಇಕ್ಕದೆ ನೋಡುತ್ತಾ ಆದರದಿಂದ ಸೇವಿಸುತ್ತೇನೆ. ಪೂರ್ವದೆಶೆಯಲ್ಲಿ ದೇವೇಂದ್ರನೂ, ದಕ್ಷಿಣ ದಿಕ್ಕಿನಲ್ಲಿ ಯಮಧರ್ಮನೂ, ವರುಣನು ಪಶ್ಚಿಮ ದಿಕ್ಕಿನಲ್ಲಿಯೂ, ಕುಬೇರನು ಉತ್ತರ ದಿಕ್ಕಿನಲ್ಲಿಯೂ ನಿನ್ನನ್ನು ರಕ್ಷಿಸಲಿ" ಎಂದು ಹೇಳಿ ಹೊರಬಾಗಿಲಿನವರೆಗೂ ಆತನನ್ನು ಅನುಸರಿಸಿ ಬಂದವಳಾದಳು. ॥ ೨೪ ॥ ಆಮೇಲೆ ಶ್ರೀರಾಮನು ಸೀತಾದೇವಿಗೆ "ನೀನಿನ್ನು ನಿಲ್ಲಬಹುದು" ಎಂದು ಹೇಳಿ, ಸುಮಂತ್ರನೊಡಗೂಡಿ, ಗಿರಿ ಗಹ್ವರದಲ್ಲಿ ಸುಖಸುಪ್ತವಾದ ಸಿಂಹವು ಪರ್ವತದಿಂದಿಳಿದು ಬರುವಂತೆ ತನ್ನರಮನೆಯಿಂದ ಪೊರಮಟ್ಟು ಬರುತ್ತ, ವಿಧೇಯನಾಗಿ ಕೈ ಮುಗಿದು ನಿಂತುಕೊಂಡಿದ್ದ

ಪುಟಂ ಸ್ಥಿತಂ ॥ ೨೬ ॥ ಅಥ ಮಧ್ಯಮ ಕಕ್ಷ್ಯಾಯಾಂ ಸಮಾಗಮ್ಯ ಸುಹೃಜ್ಜನೈಃ ॥ ಸ ಸರ್ವಾನರ್ಥಿನೋ ದೃಷ್ಟ್ವಾ ಸಮೇತ್ಯ ಪ್ರತಿನಂದ್ಯಚ ॥ ೨೭ ॥ ತತಃ ಪಾವಕಸಂಕಾಶಮಾರುರೋಹ ರಥೋತ್ತಮಂ ॥ ವೈಯಾಘ್ರಂ ಪುರುಷವ್ಯಾಘ್ರೋ ರಾಜತಂ ರಾಜನಂದನಃ ॥ ೨೮ ॥ ಮೇಘನಾದಮಸಂಬಾಧಂ ಮಣಿ ಹೇಮವಿಭೂಷಿತಂ ॥ ಮುಷ್ಣಂತಮಿವ ಚಕ್ಷೂಂಷಿ ಪ್ರಭಯಾ ಸೂರ್ಯವರ್ಚಸಂ ॥ ೨೯ ॥ ಕರೇಣು ಶಿಶುಕಲ್ಪೈಶ್ಚ ಯುಕ್ತಂ ಪರಮ ವಾಜಿಭಿಃ ॥ ಹರಿಯುಕ್ತಂ ಸಹಸ್ರಾಕ್ಷೋ ರಥಮಿಂದ್ರ ಇವಾಶುಗಂ ॥ ೩೦ ॥ ಪ್ರಯಯೌ

ರುವ, ಲಕ್ಷ್ಮಣಂ - ಲಕ್ಷ್ಮಣನನ್ನು, ಅಪಶ್ಯತ್ - ಕಂಡನು. ॥ ೨೬ ॥ ಅಥ - ಬಳಿಕ, ಸುಹೃಜ್ಜನೈಃ-ಸ್ನೇಹಿತರೊಡನೆ, ಮಧ್ಯಮಕಕ್ಷ್ಯಾಯಾಂ-ಮಧ್ಯದತೊಟ್ಟಿಯಮನೆಯನ್ನು,ಸಮಾಗಮ್ಯ-ಸೇರಿ, ಸರ್ವಾ - ಸಮಸ್ತರಾದ, ಅರ್ಥಿನಃ - ಅಭಿಷೇಕವನ್ನು ಬೇಡುತ್ತಿರುವ ಜನಗಳನ್ನು, ದೃಷ್ಟ್ವಾ - ಕಂಡು, ಸಮೇತ್ಯ - ಬಂದು, ಪ್ರತಿನಂದ್ಯಚ - ಸಂತೋಷಗೊಳಿಸಿ, ತತಃ - ಬಳಿಕ, ಪುರುಷವ್ಯಾಘ್ರಃ-ಪುರುಷಶ್ರೇಷ್ಠನಾದ, ರಾಘವಃ - ರಘುವಂಶೋತ್ಪನ್ನನಾದ, ರಾಜನಂದನಃ - ರಾಜಪುತ್ರನಾದ, ಸಃ - ಆ ಶ್ರೀರಾಮನು, ಶ್ರಿಯಾ - ಕಾಂತಿಯಿಂದ, ಜ್ವಲಿತಃ - ಹೊಳೆಯುತ್ತ, ವೈಯಾಘ್ರಂ - ವ್ಯಾಘ್ರಚರ್ಮದಿಂದ ಯುಕ್ತವಾದ, ರಾಜತಂ-ಬೆಳ್ಳಿಯ, ಪಾವಕಸಂಕಾಶಂ - ಅಗ್ನಿಗೆ ಸಮಾನವಾದ, ಮೇಘನಾದಂ-ಮೇಘದಂತೆ ಗಂಭೀರಧ್ವನಿಯುಳ್ಳ, ಅಸಂಬಾಧಂ-ಜನಸಂಮರ್ದವಿಲ್ಲದಿರುವ, ಮಣಿಹೇಮವಿಭೂಷಿತಂ - ರತ್ನಗಳಿಂದಲೂ ಭಂಗಾರದಿಂದಲೂ ಅಲಂಕರಿಸಲ್ಪಟ್ಟ, ಚಕ್ಷೂಂಷಿ - ನೇತ್ರಗಳನ್ನು, ಪ್ರಭಯಾ - ಕಾಂತಿಯಿಂದ, ಮುಷ್ಣಂತಮಿವಸ್ಥಿತಂ - ಅಪಹರಿಸುತ್ತದೆಯೋ ಎಂಬಂತಿರುವ, ಸೂರ್ಯವರ್ಚಸಂ - ಸೂರ್ಯನಕಾಂತಿಯುಳ್ಳ, ಕರೇಣುಶಿಶುಕಲ್ಪೈಃ - ಆನೆಯಮರಿಗಳಿಗೆ ಸಮಾನವಾದ, ಪರಮವಾಜಿಭಿಃ - ಉತ್ತಮವಾದ ಕುದುರೆಗಳಿಂದ, ಯುಕ್ತಂ - ಕೂಡಿರುವ, ರಥೋತ್ತಮಂ - ಉತ್ತಮವಾದ ರಥವನ್ನು, ಸಹಸ್ರಾಕ್ಷಃ - ಸಾವಿರ ಕಣ್ಣುಗಳುಳ್ಳ, ಇಂದ್ರಃ - ದೇವೇಂದ್ರನು, ಹರಿಯುಕ್ತಂ - ಕುದುರೆಗಳಿಂದ ಕೂಡಿದ, ಆಶುಗಂ - ಶೀಘ್ರವಾಗಿ ಹೋಗುತ್ತಿರುವ, ರಥಮಿವ - ರಥವನ್ನಂತೆ, ಆಸ್ಥಾಯ - ಏರಿ, ತೂರ್ಣಂ - ಜಾಗ್ರತೆಯಾಗಿ, ಯಯೌ - ಹೊರಟನು. ॥ ೨೭-೩೦ ॥ ಆಕಾಶೇ - ಅಂತರಿಕ್ಷದಲ್ಲಿ, ಪರ್ಜನ್ಯಇವ - ಮೇಘದಂತೆ, ಸ್ವನವಾ -

ಲಕ್ಷ್ಮಣಸ್ವಾಮಿಯನ್ನು ಕಂಡವನಾದನು. ॥೨೫-೨೬॥ ಆ ಬಳಿಕ ನಡುಮನೆಯಲ್ಲಿ ಸ್ನೇಹಿತರನ್ನು ಕಂಡು, ಅವರೊಡನೆ ಸೇರಿ ಸಂತೋಷವನ್ನು ಹೊಂದಿ, ಬಹಳವಾದ ಕಾಂತಿಯಿಂದೊಪ್ಪುತ್ತ ಹುಲಿದೊಗಲಿನಿಂದ ಮಾಡಲ್ಪಟ್ಟ ಮೇಲ್ಮುಸುಕುಳ್ಳದಾಗಿಯೂ, ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಹೊಳೆಯುತ್ತಿರುವುದಾಗಿಯೂ, ಮುಗಿಲು ಧ್ವನಿಯಂತೆ ಗಂಭೀರವಾದುದಾಗಿಯೂ, ಸುವರ್ಣ ರತ್ನಾಲಂಕೃತವಾಗಿಯೂ, ತನ್ನ ಕಾಂತಿಯಿಂದ ನೋಡಿದವರ ಕಂಗಳನ್ನಪಹರಿಸುತ್ತಿರುವಂತಿರುವುದಾಗಿಯೂ, ಸೂರ್ಯನಂತೆ ಬೆಳಗುತ್ತಿರುವುದಾಗಿಯೂ, ಗುಜ್ಜಾನೆಯ ಮರಿಗಳಂತಿರುವ ಉತ್ತಮಾಶ್ವಗಳಿಂದ ಕಟ್ಟಲ್ಪಟ್ಟುದಾಗಿಯೂ ಇರುವ ಉತ್ತಮೋತ್ತಮವಾದ ರಥವನ್ನು ದೇವೇಂದ್ರನಂತೆ ಏರಿ ಬೇಗನೆ ಹೊರಟವನಾದನು. ॥೨೭-೩೦॥

ತೂರ್ಣಮಾಸ್ಥಾಯ ರಾಘವೋ ಜ್ವಲಿತಶ್ರಿಯಾ ॥ ಸಪರ್ಜನ್ಯ ಇವಾಕಾಶೇ ಸ್ವನವಾನಭಿನಾದಯನ್ ॥ ೩೧ ॥ ನಿಕೇತಾನ್ನಿರ್ಯಯೌ ಶ್ರೀಮಾನ್ ಮಹೇಂದ್ರಾದಿವ ಚಂದ್ರಮಾಃ॥ ಛತ್ರ ಚಾಮರಪಾಣಿಸ್ತು ಲಕ್ಷ್ಮಣೋ ರಾಘವಾನುಜಃ ॥ ೩೨ ॥ ಜುಗೋಪ ಭ್ರಾತರಂ ಭ್ರಾತಾ ರಥಮಾಸ್ಥಾಯ ಪೃಷ್ಠತಃ ॥ ತತೋ ಹಲಹಲಾ ಶಬ್ದಸ್ತುಮುಲಸ್ಸಮಜಾಯತ ॥ ೩೩ ॥ ತಸ್ಯ ನಿಷ್ಕ್ರಮಮಾಣಸ್ಯ ಜನೌಘಸ್ಯ ಸಮಂತತಃ ॥ ತತೋ ಹಯವರಾ ಮುಖ್ಯಾ ನಾಗಾಶ್ಚ ಗಿರಿಸನ್ನಿಭಾಃ ॥ ೩೪ ॥ ಅನುಜಗ್ಮುಸ್ತದಾ ರಾಮಂ ಶತಶೋಥ ಸಹಸ್ರಶಃ ॥ ಅಗ್ರತಶ್ಚಾಸ್ಯ ಸನ್ನದ್ಧಾಶ್ಚಂದನಾಗರು ರೂಷಿತಾಃ

ಧ್ವನಿಯುಳ್ಳವನಾಗಿ, ಅಭಿನಾದಯನ್ - ದಿಕ್ಕುಗಳನ್ನೆಲ್ಲ ಧ್ವನಿಗೊಳಿಸುತ್ತಿರುವ, ಶ್ರೀಮಾನ್ - ಸಂಪದ್ಯುಕ್ತನಾದ, ಸಃ - ಆ ಶ್ರೀರಾಮನು, (ರಥೇನ - ರಥದಿಂದ,) ಮಹೇಂದ್ರಾತ್ - ಉದಯಪರ್ವತದಿಂದ, ಚಂದ್ರಮಾ ಇವ - ಚಂದ್ರನಂತೆ, ನಿಕೇತಾತ್ - ಮನೆಯಿಂದ, ನಿರ್ಯಯೌ - ಹೊರಟನು. ॥ ೩೧ ॥ ಛತ್ರಚಾಮರಪಾಣಿಃ - ಛತ್ರಚಾಮರಗಳೇ ಹಸ್ತದಲ್ಲಿವುಳ್ಳ, ಭ್ರಾತಾ - ಸಹೋದರನಾದ, ರಾಘವಾನುಜಃ - ಶ್ರೀರಾಮನಿಗೆ ತಮ್ಮನಾದ, ಲಕ್ಷ್ಮಣಃ - ಲಕ್ಷ್ಮಣನು, ರಥಂ-ರಥದಲ್ಲಿ, ಆಸ್ಥಾಯ- ಕುಳಿತುಕೊಂಡು, ಭ್ರಾತರಂ - ಅಣ್ಣನಾದ ಶ್ರೀರಾಮನನ್ನು, ಪೃಷ್ಠತಃ - ಹಿಂದುಗಡೆಯಲ್ಲಿ, ಜುಗೋಪ - ಸಂರಕ್ಷಿಸಿದನು. ॥ ೩೨ ॥ ತತಃ - ಬಳಿಕ, ತಸ್ಯ - ಆ ರಥವು, ನಿಷ್ಕ್ರಮಮಾಣಸ್ಯ - ಹೊರಡಲು, ಸಮಂತತಃ - ಎಲ್ಲ ಕಡೆಯಲ್ಲಿಯೂ, ಜನೌಘಸ್ಯ - ಜನಸಮುದಾಯದ, ತುಮುಲಃ- ಸಂಕುಲವಾದ, ಹಲಹಲಾಶಬ್ದಃ - ಕೋಲಾಹಲಶಬ್ದವು, ಸಮಜಾಯತ - ಹುಟ್ಟಿತು. ॥ ೩೩ ॥ ತತಃ - ಬಳಿಕ, ಮುಖ್ಯಾಃ - ಶ್ರೇಷ್ಠವಾದ, ಹಯವರಾಃ - ಉತ್ತಮವಾದ ಕುದುರೆಗಳು, ಗಿರಿಸನ್ನಿಭಾಃ - ಪರ್ವತಸದೃಶವಾದ, ನಾಗಾಶ್ಚ - ಆನೆಗಳೂ, ತದಾ - ಆ ಸಮಯದಲ್ಲಿ, ರಾಮಂ - ಶ್ರೀರಾಮನನ್ನು ಕುರಿತು, ಶತಶಃ - ಅನೇಕ ಬಗೆಗಳಾಗಿ, ಸಹಸ್ರಶಃ - ಸಾವಿರಾರುವಿಧವಾಗಿ, ಅನುಜಗ್ಮುಃ - ಅನುಸರಿಸಿಹೋದವು. ॥ ೩೪ ॥ ಅಸ್ಯ - ಈ ಶ್ರೀರಾಮನ, ಅಗ್ರತಃ - ಮುಂಗಡೆ, ಸನ್ನದ್ಧಾಃ - ಸಕಲ ಸಾಮಗ್ರಿಗಳಿಂದ ಸಿದ್ಧರಾದ, ಚಂದನಾಗರುರೂಷಿತಾಃ - ಶ್ರೀಗಂಧದಿಂದಲೂ, ಕೃಷ್ಣಾಗರುವಿನಿಂದಲೂ ಲೇಪನಮಾಡಿಕೊಂಡಿರುವ, ಖಡ್ಗಚಾಪಧರಾಃ - ಕತ್ತಿಗಳನ್ನೂ ಬಿಲ್ಲುಗಳನ್ನೂ

ರಘುರಾಮನು ಕುಳಿತುಕೊಂಡಿದ್ದ ಆ ರಥವು ಅಂತರಿಕ್ಷದ ಮೇಘಗಳಂತೆ ಶಬ್ದವನ್ನು ಮಾಡುತ್ತ, ಉದಯಾದ್ರಿಯಿಂದ ಚಂದ್ರನು ಹೊರಡುವಂತೆ ಮುಂಬರಿಯಿತು. ರಾಮಾನುಜನಾದ ಲಕ್ಷ್ಮಣಸ್ವಾಮಿಯು ಛತ್ರಚಾಮರಗಳನ್ನು ಹಿಡಿದು ಶ್ರೀರಾಮನ ಹಿಂದುಗಡೆ ಕುಳಿತು ಅಣ್ಣನನ್ನು ರಕ್ಷಿಸುತ್ತಿದ್ದನು. ಬಳಿಕ ಆತನ ಸುತ್ತಲೂ ಕಿಕ್ಕಿರಿದು ಹೊರಟ ಜನರು ಕೋಲಾಹಲ ಧ್ವನಿಯನ್ನು ಮಾಡತೊಡಗಿದರು. ಆಗ ಶ್ರೀರಾಮ ಮೂರ್ತಿಯ ರಥವನ್ನು ಅನುಸರಿಸಿ ಸಾವಿರಾರು ಕುದುರೆಗಳೂ ಆನೆಗಳೂ ಹೊರಟವು. ಶ್ರೀರಾಮನ ಮುಂಗಡೆ ಸಿದ್ಧವಾದ ಸಾಮಗ್ರಿಗಳನ್ನುಳ್ಳವರಾಗಿಯೂ, ಚಂದನಗಂಧವನ್ನು ಪೂಸಿಕೊಂಡಿರುವವರಾಗಿಯೂ, ಖಡ್ಗಗಳನ್ನೂ ಬಿಲ್ಲುಗಳನ್ನೂ ಧರಿಸಿರುವವರಾಗಿಯೂ, ಶೂರರಾಗಿಯೂ, ಇರುವ

|| ೩೫ || ಖಡ್ಗ ಚಾಪಧರಾಶ್ಶೂರಾ ಜಗ್ಮುರಾಶಂಸವೋ ಜನಾಃ || ತತೋ ವಾದಿತ್ರಶಬ್ದಾಶ್ಚ ಸ್ತುತಿಶಬ್ದಾಶ್ಚ ವಂದಿನಾಂ || ೩೬ || ಸಿಂಹನಾದಾಶ್ಚ ಶೂರಾಣಾಂ ತದಾ ಶುಶ್ರುವಿರೇ ಪಥಿ || ಹರ್ಮ್ಯವಾತಾಯನಸ್ಥಾಭಿರ್ಭೂಷಿತಾಭಿಸ್ಸಮಂತತಃ || ೩೭ || ಕೀರ್ಯಮಾಣಸ್ಸುಪುಷ್ಪೌಘೈ ರ್ಯಯೌ ಸ್ತ್ರೀಭಿರರಿಂದಮಃ || ರಾಮಂ ಸರ್ವಾನವದ್ಯಾಂಗ್ಯೋ ರಾಮಪಿಪ್ರೀಷಯಾ ತತಃ || ೩೮ || ವಚೋಭಿ ರಗ್ರ್ಯೈರ್ಹರ್ಮ್ಯಸ್ಥಾಃ ಕ್ಷಿತಿಸ್ಥಾಶ್ಚ ವವಂದಿರೇ || ನೂನಂ ನಂದತಿ ತೇ ಮಾತಾ ಕೌಸಲ್ಯಾ ಮಾತೃನಂದನ ! || ೩೯ || ಪಶ್ಯಂತೀ

ಧರಿಸಿಕೊಂಡಿರುವ, ಶೂರಾಃ - ವೀರರಾದ, ಜನಾಃ - ಮನುಷ್ಯರು, ಆಶಂಸವಃ - ಶ್ರೀರಾಮನಿಗೆ ಶ್ರೇಯಸ್ಸುಂಟಾಗಬೇಕೆಂದು ಅಪೇಕ್ಷಿಸುತ್ತ, ಆಜಗ್ಮುಃ - ಬಂದರು. || ೩೫ || ತತಃ - ಬಳಿಕ, ವಾದಿತ್ರಶಬ್ದಾಶ್ಚ - ವಾದ್ಯವಿಶೇಷಗಳ ಧ್ವನಿಗಳೂ, ವಂದಿನಾಂ - ಸ್ತುತಿಪಾಠಕರ, ಸ್ತುತಿಶಬ್ದಾಶ್ಚ - ಸ್ತೋತ್ರಗಳೂ, ಶೂರಾಣಾಂ - ವೀರರ, ಸಿಂಹನಾದಾಶ್ಚ - ಕೋಲಾಹಲ ಧ್ವನಿಗಳೂ, ತದಾ - ಆ ಕಾಲದಲ್ಲಿ, ಪಥಿ - ಮಾರ್ಗದಲ್ಲಿ, ಶುಶ್ರುವಿರೇ - ಕೇಳಲ್ಪಟ್ಟವು. || ೩೬ || ಅರಿಂದಮಃ - ಶತ್ರುನಾಶನಾದ, ರಾಘವಃ - ಶ್ರೀರಾಮನು, ಹರ್ಮ್ಯವಾತಾಯನಸ್ಥಾಭಿಃ - ಪ್ರಾಸಾದದಲ್ಲಿಯೂ ಗವಾಕ್ಷಿಗಳಲ್ಲಿಯೂ ಇರುವ, ಸಮಂತತಃ - ಎಲ್ಲೆಡೆಯಲ್ಲಿಯೂ, ಭೂಷಿತಾಭಿಃ - ಅಲಂಕೃತರಾದ, ಸ್ತ್ರೀಭಿಃ - ಕನ್ನಿಕೆಯರಿಂದ, ಪುಷ್ಪೌಘೈಃ - ಹುವ್ವುಗಳ ಸಮೂಹಗಳಿಂದ, ಕೀರ್ಯಮಾಣಃ - ಎಚ್ಚರಿಸಲ್ಪಟ್ಟವನಾಗಿ, ಯಯೌ - ತೆರಳಿದನು. || ೩೭ || ತತಃ - ಬಳಿಕ, ಹರ್ಮ್ಯಸ್ಥಾಃ - ಪ್ರಾಸಾದದಲ್ಲಿರುವ, ಕ್ಷಿತಿಸ್ಥಾಃ - ನೆಲದಲ್ಲಿರುವ ಜನಗಳು, ರಾಮಪಿಪ್ರೀಷಯಾ - (ಗೋ) ಶ್ರೀರಾಮನಿಗೆ ಸೇವೆಮಾಡಲಿಚ್ಛೆಯಿಂದ, ತತಃ - ಬಳಿಕ, ಅಗ್ರ್ಯೈಃ - ಉತ್ತಮವಾದ, ವಚೋಭಿಃ - ವೇದವಾಕ್ಯಗಳಿಂದ, ವವಂದಿರೇ ನಮಸ್ಕಾರಮಾಡಿದರು. || ೩೮ || ಹೇ ಮಾತೃನಂದನ-ಎಲೈ ತಾಯಿಗೆ ಆನಂದವನ್ನುಂಟುಮಾಡುವ ಶ್ರೀರಾಮನೆ, ತೇ - ನಿನಗೆ, ಮಾತಾ - ತಾಯಿಯಾದ, ಕೌಸಲ್ಯಾ - ಕೌಸಲ್ಯಾದೇವಿಯು, ಸಿದ್ಧಯಾತ್ರಂ - ಸಫಲವಾದ ಗಮನವುಳ್ಳ, ಪಿತ್ರ್ಯಂ - ತಂದೆಯ ಸಂಬಂಧವಾದ, ರಾಜ್ಯಂ - ರಾಜ್ಯವನ್ನು, ಉಪಸ್ಥಿತಂ - ಹೊಂದಿರುವ, ತ್ವಾಂ - ನಿನ್ನನ್ನು, ಪಶ್ಯಂತೀ - ನೋಡುತ್ತ, ನಂದತಿ - ಸಂತೋಷಿಸುತ್ತಾಳೆ, ನೂನಂ - (ಇದು) ನಿಶ್ಚಯವು. || ೩೯ || ಹಿ - ಯಾವ

ಜನರು ಶ್ರೀರಾಮನ ಅಭಿವೃದ್ಧಿಯನ್ನಪೇಕ್ಷಿಸುತ್ತ ಮುಂಬರಿದರು. ||೩೧-೩೫|| ಆ ಬಳಿಕ ವೀಣಾದಿ ಚತುರ್ವಿಧವಾದ್ಯಗಳೂ, ಸ್ತುತಿಪಾಠಕರ ಹೊಗಳಿಕೆಗಳೂ, ವೀರರ ಕೋಲಾಹಲ ಧ್ವನಿಯೂ, ಬಹಳವಾಗಿ ಕೇಳಿಸುತ್ತಿದ್ದಿತು. ಆಗಲಾ ರಘುನಂದನು ಉಪ್ಪರಿಗೆಗಳ ಮೇಲಿನ ಗವಾಕ್ಷಿಗಳಲ್ಲಿ ನೋಡುತ್ತಿದ್ದ ಸರ್ವಾಲಂಕಾರ ಭೂಷಿತರಾದ ಸ್ತ್ರೀಯರಿಂದ ಎಲ್ಲೆಡೆಗಳಲ್ಲಿಯೂ ಚೆಲ್ಲಲ್ಪಟ್ಟ ಕುಸುಮಗಳಿಂದ ವ್ಯಾಪ್ತನಾದನು. ಆ ಬಳಿಕ ಎಷ್ಟು ವಿಧದಿಂದ ನೋಡಿದರೂ ಯಾವ ದೋಷವೂ ಇಲ್ಲದ ಉಪ್ಪರಿಗೆಗಳ ಮೇಲಿದ್ದ ಸ್ತ್ರೀಯರೂ, ನೆಲದ ಮೇಲಿದ್ದ ಪುರುಷರೂ ಸಹ ಶ್ರೀರಾಮನ ಪ್ರೀತಿಗೋಸುಗ ಉತ್ತಮವಾದ ವಾಕ್ಯಗಳಿಂದಾತನನ್ನು ಈ ರೀತಿ ಸ್ತೋತ್ರ ಮಾಡುತಿದ್ದರು. “ ಎಲೈ ಶ್ರೀರಾಮನೆ ! ನಿನ್ನ ಜನನಿಯಾದ ಕೌಸಲ್ಯೆಯು

ಸಿದ್ಧಯಾತ್ರಂ ತ್ವಾಂ ಪಿತ್ರ್ಯಂ ರಾಜ್ಯಮುಪಸ್ಥಿತಂ || ಸರ್ವಸೀಮಂತಿನೀಭ್ಯಶ್ಚ ಸೀತಾಂ ಸೀಮಂತಿನೀಂ ವರಾಂ ||೪೦|| ಅಮನ್ಯಂತಹಿ ತಾನಾರ್ಯೋ ರಾಮಸ್ಯ ಹೃದಯಪ್ರಿಯಾ || ತಯಾ ಸುಚರಿತಂ ದೇವ್ಯಾ ಪುರಾ ನೂನಂ ಮಹತ್ತಪಃ ||೪೧|| ರೋಹಿಣೀವ ಶಶಾಂಕೇನ ರಾಮಸಂಯೋಗಮಾಪ್ತಯಾ || ಇತಿ ಪ್ರಾಸಾದ ಶೃಂಗೇಷು ಪ್ರಮದಾಭಿರ್ನರೋತ್ತಮಃ ||೪೨|| ಶುಶ್ರಾವ ರಾಜಮಾರ್ಗಸ್ಥಃ ಪ್ರಿಯಾವಾಚ ಉದಾಹೃತಾಃ || ಸರಾಘವ

ಕಾರಣ, ತಾಃ ನಾರ್ಯಃ - ಆ ಪಟ್ಟಣಸ್ಥರಾದ ಹೆಂಗಸರು, ಸೀತಾಂ - ಸೀತಾದೇವಿಯೆಂಬ, ಸೀಮಂತಿನೀಂ - ಸ್ತ್ರೀಯನ್ನು, ಸರ್ವಸೀಮಂತಿನೀಭ್ಯಃ - ಎಲ್ಲ ಹೆಂಗಸರಿಗಿಂತಲೂ, ವರಾಂ - ಶ್ರೇಷ್ಠಳಾದವಳನ್ನಾಗಿಯೂ, ರಾಮಸ್ಯ - ಶ್ರೀರಾಮನಿಗೆ, ಹೃದಯಪ್ರಿಯಾಂ - ಮನಸ್ಸಿಗೆ ಇಂಪಾಗಿರುವಳನ್ನಾಗಿಯೂ, ಅಮನ್ಯಂತಹಿ - ತಿಳಿದುಕೊಂಡರೋ, ತಯಾದೇವ್ಯಾ-ಆ ಸೀತಾದೇವಿಯಿಂದ, ಪುರಾ-ಪೂರ್ವದಲ್ಲಿ, ಮಹತ್ - ದೊಡ್ಡದಾದ, ತಪಃ - ತಪಸ್ಸು, ಸುಚರಿತಂ - ಚನ್ನಾಗಿ ಮಾಡಲ್ಪಟ್ಟಿತು, ನೂನಂ - ನಿಶ್ಚಯವು, ತಯಾ - ಯಾವ ಸೀತಾದೇವಿಯು, ರೋಹಿಣೀ - ರೋಹಿಣೀದೇವಿಯು, ಶಶಾಂಕೇನೇವ - ಚಂದ್ರನೊಡನೆ ಹೇಗೋಹಾಗೆ, ರಾಮ ಸಂಯೋಗಂ - ಶ್ರೀರಾಮನ ಸಂಬಂಧವನ್ನು, ಆಪ್ತಯಾ - ಹೊಂದಿದಳೋ, ಇತಿ - ಈ ಪರಿಯಾಗಿ, ರಾಜಮಾರ್ಗಸ್ಥಃ-ರಾಜವೀಥಿಯಲ್ಲಿರುವ, ನರೋತ್ತಮಃ - ನರಶ್ರೇಷ್ಠನಾದ ಶ್ರೀರಾಮನು, ಪ್ರಾಸಾದ ಶೃಂಗೇಷು - ಉಪ್ಪರಿಗೆಗಳ ಅಗ್ರಭಾಗಗಳಲ್ಲಿ, ಪ್ರಮದಾಭಿಃ - ಸ್ತ್ರೀಯರಿಂದ, ಉದಾಹೃತಾಃ - ಹೇಳಲ್ಪಟ್ಟ, ಪ್ರಿಯಾಃ - ಶ್ರೋತ್ರಗಳಿಗೆ ಇಂಪಾಗಿರುವ, ವಾಚಃ - ಮಾತುಗಳನ್ನು, ಶುಶ್ರಾವ - ಕೇಳಿದನು. ||೪೦-೪೨|| ಸರಾಘವಃ-ಆ ಶ್ರೀರಾಮನು, ತತ್ರ - ಆ ಮಾರ್ಗದಲ್ಲಿ, ಸಮಾಗತಸ್ಯ - ಬರುತ್ತಿರುವ, ಲೋಕಸ್ಯ - ಜನರ, ಕಥಾಪ್ರಪಂಚಾನ್ - ಮಾತುಗಳ ಅತಿಶಯವನ್ನು, ಶುಶ್ರಾವ - ಕೇಳಿದನು, ಪ್ರಹೃಷ್ಟರೂಪಸ್ಯ - ಸಂತೋಷಯುಕ್ತವಾದ ಸ್ವಭಾವವುಳ್ಳ, ಪುರಃ - ಪಟ್ಟಣದಸಂಬಂಧವಾದ, ಜನಸ್ಯ - ಜನದ, ಆತ್ಮಾಧಿಕಾರಾಃ - ತನ್ನ ಉದ್ದೇಶದಿಂದ ಪ್ರವೃತ್ತವಾದ, ವಿವಿಧಾಃ - ನಾನಾವಿಧವಾದ, ವಾಚಶ್ಚ - ಮಾತುಗಳನ್ನೂ ಸಹ, ಶುಶ್ರಾವ - ಕೇಳಿದನು. ||೪೩|| ಏಷರಾಘವಃ - ಈ ಶ್ರೀರಾಮನು, ಅದ್ಯ - ಈಗಲೇ, ಗಮಿಷ್ಯನ್-ಹೋಗುತ್ತ,

---

ಸಫಲಹೊಂದಿದ ಮನವುಳ್ಳವಳಾಗಿ ತಂದೆಯಿಂದ ಕೊಡಲ್ಪಟ್ಟ ರಾಜ್ಯವನ್ನುಹೊಂದಿದ ನಿನ್ನನ್ನು ನೋಡಿ ಆನಂದಿಸಲಿ! ನಾರೀಮಣಿಯಾದ ಸೀತಾದೇವಿಯು ಸ್ತ್ರೀಯರೆಲ್ಲರಿಗಿಂತಲೂ ಶ್ರೇಷ್ಠಳಾಗಿರಲಿ. ಆಕೆಯು ಜನ್ಮಾಂತರದಲ್ಲಿ ಬಹಳವಾದ ತಪಸ್ಸನ್ನು ಮಾಡಿರಬೇಕು; ಇಲ್ಲದಿದ್ದರೆ ನಿನ್ನಂತಹನು ಆಕೆಗೆ ಪತಿಯಾಗಲಾರನು. ಚಂದ್ರನನ್ನು ಕೈಹಿಡಿದ ರೋಹಿಣೀದೇವಿಯಂತೆ ಆ ಸೀತಾದೇವಿಯು ನಿನ್ನನ್ನು ಕೈಹಿಡಿದಳು.'' ಈ ರೀತಿಯಾಗಿ ನುಡಿಯುತ್ತಿರುವ ಅಂಗನೆಯರ ನುಡಿಗಳನ್ನು ಕೇಳಿದ ಶ್ರೀರಾಮನು, ರಾಜವೀಥಿಗಳಲ್ಲಿ ಗುಂಪು ಗುಂಪಾಗಿ ಬರುತ್ತಿರುವ ಪುರ ಜನರೆಲ್ಲರೂ ತನ್ನ ಯೌವರಾಜ್ಯಾಧಿಕಾರದ ವಿಷಯವಾಗಿ ಮಾತನಾಡುತ್ತಿದ್ದ ಈ ಮಾತುಗಳನ್ನು ಕೇಳಿದವನಾದನು. "ಅಹಹ! ಈ ರಘುರಾಮನು ಒಡೆಯನಾದ ದಶರಥರಾಯನ ಪ್ರಸಾದದಿಂದ ಅತಿಶಯವಾದ ಸಂಪತ್ತನ್ನು ಪಡೆಯುತ್ತಾನೆ. ಶ್ರೀರಾಮ

ಸ್ತತ್ರಕಥಾ ಪ್ರಪಂಚಾ೯ ಶುಶ್ರಾವ ಲೋಕಸ್ಯ ಸಮಾಗತಸ್ಯ || ಆತ್ಮಾಧಿಕಾರಾ ವಿವಿಧಾಶ್ಚ ವಾಚಃ ಪ್ರಹೃಷ್ಟರೂಪಸ್ಯ ಪುರೋ ಜನಸ್ಯ ||೪೩|| ಏಷಶ್ಶ್ರಿಯಂ ಗಚ್ಛತಿ ರಾಘವೋದ್ಯ ರಾಜಪ್ರಸಾದಾದ್ವಿಪುಲಾಂ ಗಮಿಷ್ಯ೯ || ಏತೇ ವಯಂ ಸರ್ವಸಮೃದ್ಧಕಾಮಾ ಏಷಾಮಯಂ ನೋ ಭವಿತಾ ಪ್ರಶಾಸ್ತಾ ||೪೪|| ಲಾಭೋ ಜನಸ್ಯಾಸ್ಯ ಯದೇಷ ಸರ್ವಂ ಪ್ರಪತ್ಸ್ಯತೇ ರಾಷ್ಟ್ರಮಿದಂ ಚಿರಾಯ || ನಹ್ಯಪ್ರಿಯಂ ಕಿಂಚನ ಜಾತುಕಶ್ಚಿ ತ್ಪಶ್ಯೇನ್ನ

ರಾಜಪ್ರಸಾದಾತ್ - ರಾಜಾನುಗ್ರಹದಿಂದ, ವಿಪುಲಾಂ - ಅತಿಶಯವಾದ, ಶ್ರಿಯಂ - ಐಶ್ವರ್ಯವನ್ನು, ಗಚ್ಛತಿ - ಹೊಂದುತ್ತಾನೆ, ಏತೇವಯಂ - ಶ್ರೀರಾಮನ ಕೈಕೆಳಗಿರುವ ನಾವು, ಸರ್ವಸಮೃದ್ಧಕಾಮಾಃ- ಸಂಪೂರ್ಣವಾದ ಕೋರಿಕೆಗಳುಳ್ಳವರಾದೆವು, ಯೇಷಾಂ - ಯಾವ, ನಃ - ನಮಗೆ, ಅಯಂ - ಈ ಶ್ರೀರಾಮನು, ಪ್ರಶಾಸ್ತಾ - ಶಿಕ್ಷಾಕರ್ತನು, ಭವಿತಾ - ಆಗುವನೋ. ||೪೪|| ಏಷಃ - ಈ ಶ್ರೀರಾಮನು, ಸರ್ವಂ - ಸಮಸ್ತವಾದ, ಇದಂರಾಷ್ಟ್ರಂ - ಈ ರಾಜ್ಯವನ್ನು, ಚಿರಾಯ - ಬಹುಕಾಲ, ಪ್ರಪತ್ಸ್ಯತಇತಿಯತ್ - ಹೊಂದುವನೆಂಬದಾವದೋ,ಏಷಃ - ಇದೇ, ಅಸ್ಯಜನಸ್ಯ - ಈಜನಕ್ಕೆ, ಲಾಭಃ - ಲಾಭವು, ಅಸ್ಮಿ೯ - ಈ ಶ್ರೀರಾಮನು, ಮನುಜಾಧಿಪೇಸತಿ - ಮನುಷ್ಯರಿಗೆಲ್ಲ ಅಧಿಪತಿಯಾಗಲು, ಜಾತು - ಒಂದಾನೊಂದು ಕಾಲದಲ್ಲಿಯೂ, ಅಪ್ರಿಯಂ - ಅನಿಷ್ಟವನ್ನು, ಕಿಂಚನ - ಸ್ವಲ್ಪವಾದರೂ, ದುಃಖಂಚ - ದುಃಖವನ್ನು, ಕಶ್ಚಿತ್ - ಒಬ್ಬಾನೊಬ್ಬನು, ನಪಶ್ಯೇತ್ - ನೋಡುವುದಿಲ್ಲ. ||೪೫|| ಸಃ - ಆ ಶ್ರೀರಾಮನು, ಘೋಷವದ್ಭಿಃ - ಧ್ವನಿಗೊಳಿಸುತ್ತಿರುವ, ಹಯೈಃ - ಕುದುರೆಗಳಿಂದಲೂ, ಪುರಸ್ಸರೈಃ-ಮುಂದೆಹೋಗುತ್ತಿರುವ, ಮತಂಗಜೈಃ-ಆನೆಗಳಿಂದಲೂ, (೧) ಸ್ವಸ್ತಿಕಸೂತಮಾಗಧೈಃ, ಸ್ವಸ್ತಿಕ - ವಂದಿಗಳಿಂಲೂ, ಸೂತ - ಪುರಾಣದ ಕಥೆಗಳನ್ನು ಹೇಳುವರಿಂದಲೂ,

ಚಂದ್ರನು ನಮಗೆ ಸ್ವಾಮಿಯಾಗುವುದರಿಂದ ನಾವೆಲ್ಲರೂ ಸಫಲಮನೋರಥರಾದೆವು ! ಮಹಾತ್ಮನಾದೀತನು ಅರಸನಾಗಿದ್ದರೆ ನಮಗೆ ಎಂದಿಗೇ ಆಗಲಿ ಅನಿಷ್ಟವಾದ ದುಃಖಗಳು ಸಂಭವಿಸುವುದಿಲ್ಲವು. ಆದುದರಿಂದೀತನೇ ಚಿರಕಾಲ ಒಡೆಯನಾಗಿರಲಿ ! ಇದೇ ನಮಗೆ ಪರಮಲಾಭವು. || ೩೬-೪೫ || ಇಷ್ಟೆಯಲ್ಲದೆ ಆ ರಘುರಾಮನು " ಜಯ ಜಯ " ಎಂದು ಜಯಘೋಷವನ್ನು ಮಾಡುತ್ತಿರುವ ಸ್ವಸ್ತಿಕರಿಂದಲೂ, ಸ್ತುತಿಪಾಠಕರಿಂದಲೂ, ಇಕ್ಷ್ವಾಕು

ಟಿ. (೧) "ಸ್ವಸ್ತಿಕ ಸೂತಮಾಗಧೈಃ"—"ಸ್ವಸ್ತಿಕಃ" ಎಂದರೆ "ಜಯ ಜಯ" ಶಬ್ದವನ್ನುಚ್ಚರಿಸುವ "ವಂದೀ" ಎಂದರ್ಥ—"ಸೂತಃ"—ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದವನು. ಇವನು ಸಾರಥ್ಯವನ್ನು ಮಾಡುವವರಲ್ಲಿಯೂ, ಸ್ತೋತ್ರ ಮಾಡುವವರಲ್ಲಿಯೂ ನಿಯೋಗಿತನಾಗುವನು. ಸಾರಥ್ಯವೆಂದರೆ ಎತ್ತಿನ ಭಂಡಿ, ಕುದುರೆ ಭಂಡಿಗಳನ್ನು ಹೊಡೆಯುವದಲ್ಲ. ರಣಾಂಗಣಗಳಲ್ಲಿ ಅತಿರಥ, ಮಹಾರಥರ ರಥಗಳನ್ನು ಎದೆಗುಂದದೆ ಶತ್ರುಪಕ್ಷದ ಕಡೆಗೆ ಓಡಿಸಿ, ನಂಬಿದ ಧೀರನಿಗೆ ವೀರಲಕ್ಷ್ಮಿಯ ಕರಗ್ರಹಣಾನುಭವವನ್ನು ಮಾಡಿ ಕೊಡುವ ಶೂರಾಗ್ರಣಿ—"ಬ್ರಾಹ್ಮಣ್ಯಾಂಕ್ಷತ್ರಿಯಾತ್ಸೂತಃ" ಎಂದು ಅಮರಸಿಂಹನು ಹೇಳಿದ್ದಾನೆ. "ಮಾಗಧಃ"—ಕ್ಷತ್ರಿಯ ರಮಣಿಯಲ್ಲಿ ವೈಶ್ಯನಿಂದ ಹುಟ್ಟಿದವನು. ಸುಖಸುಪ್ತನಾದ ನರಪತಿಯನ್ನು ಎಚ್ಚರಗೊಳಿಸುವುದೇ ಈತನ ಕರ್ತವ್ಯ ಕರ್ಮ. "ಮಾಗಧಃ ಕ್ಷತ್ರಿಯಾ ವಿಶೋಃ" ಎಂದು ನಿಘಂಟುವು.

ದುಃಖಂ ಮನುಜಾಧಿಪೇಸ್ಮಿ ॥೪೫॥ ಸಘೋಷವದ್ಭಿಶ್ಚ ಹಯೈರ್ಮತಂಗಜೈಃ
ಪುರಸ್ಸರೈ ಸ್ವಸ್ತಿಕ ಸೂತ ಮಾಗಧೈಃ ॥ ಮಹೀಯಮಾನಃ ಪ್ರವರೈಶ್ಚ
ವಾದಕೈರಭಿಷ್ಟುತೋ ವೈಶ್ರವಣೋ ಯಥಾ ಯಯೌ ॥ ೪೬ ॥
ಕರೇಣು ಮಾತಂಗ ರಥಾಶ್ವ ಸಂಕುಲಂ
ಮಹಾಜನೌಘ ಪ್ರತಿಪೂರ್ಣ ಚತ್ವರಂ ॥
ಪ್ರಭೂತ ರತ್ನಂ ಬಹುಪುಣ್ಯಸಂಚಯಂ
ದದರ್ಶ ರಾಮೋ ರುಚಿರಂ ಮಹಾಪಥಂ ॥ ೪೭ ॥
ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷೋಡಶಸ್ಸರ್ಗಃ

ಮಾಗಧೈಃ-ವಂಶಾವಳಿಯನ್ನು ಸ್ತುತಿಸುವರಿಂದಲೂ, ಪ್ರವರೈಃ-ಉತ್ತಮರಾದ, ವಾದಕೈಃ-ವಾದ್ಯಗಾರರಿಂದಲೂ, ಅಭಿಷ್ಟುತಃ - ಸ್ತೋತ್ರಮಾಡಿಸಿಕೊಳ್ಳಲ್ಪಟ್ಟು, ಮಹೀಯಮಾನಃ - ಮರ್ಯಾದಿತನಾಗಿ, ವೈಶ್ರವಣೋಯಥಾ - ಕುಬೇರನಂತೆ, ಯಯೌ-ತೆರಳಿದನು. ॥೪೬॥ ರಾಮಃ - ಶ್ರೀರಾಮನು, ಕರೇಣುಮಾತಂಗರಥಾಶ್ವಸಂಕುಲಂ, ಚಿಕ್ಕ ಆನೆಗಳಿಂದಲೂ, ದೊಡ್ಡ ಆನೆಗಳಿಂದಲೂ, ರಥಗಳಿಂದಲೂ, ಕುದುರೆಗಳಿಂದಲೂ, ವ್ಯಾಪ್ತವಾದ, ಮಹಾಜನೌಘ ಪ್ರತಿಪೂರ್ಣಚತ್ವರಂ, ಅನೇಕ ಜನರ ಸಮೂಹದಿಂದ ತುಂಬಿದ ಅಂಗಣಗಳುಳ್ಳ, ಪ್ರಭೂತರತ್ನಂ - ಪ್ರಚುರವಾದ ರತ್ನಗಳುಳ್ಳ, ಬಹುಪುಣ್ಯಸಂಚಯಂ - ಬಹಳವಾದ ವ್ಯಾಪಾರದ ಸಂಗ್ರಹವುಳ್ಳ, ಖುಚಿರಂ - ಮನೋಹರವಾದ, ಮಹಾಪಥಂ-ರಾಜವೀಥಿಯನ್ನು, ದದರ್ಶ - ಕಂಡನು. ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷೋಡಶಸ್ಸರ್ಗಃ

ರಾಯರ ವಂಶಾವಳಿಯನ್ನು ಹೊಗಳುತ್ತಿರುವ ಹೊಗಳುಭಟ್ಟರಿಂದಲೂ ಪರಿವೃತನಾಗಿ, ಗಂಭೀರವಾದ ನಡಿಗೆಯಿಂದ ಹೋಗುತ್ತಿರುವ ಕುದುರೆಗಳಿಂದಲೂ, ಮುಂಗಡೆಯಲ್ಲಿ ಮಂದಗಮನದಿಂದ ಮುಂಬರಿಯುತ್ತಿರುವ ಮದ್ದಾನೆಗಳಿಂದಲೂ ವ್ಯಾಪ್ತನಾಗಿ ಸಾಕ್ಷಾತ್ ಕುಬೇರನಂತೆ ಸ್ತುತಿಸಲ್ಪಡುತ್ತ ತೆರಳಿದವನಾದನು. ಗುಜ್ಜಾನೆಗಳಿಂದಲೂ, ಎತ್ತರವಾದ ಆನೆಗಳಿಂದಲೂ ವ್ಯಾಪ್ತವಾದುದಾಗಿಯೂ, ಪುರಜನ ಪರಿಜನ ಸಮ್ಮರ್ದದಿಂದ ನಿಬಿಡೀಕೃತವಾದ ರಾಜಾಂಗಣಗಳುಳ್ಳದಾಗಿ, ಉತ್ತಮವಾದ ರತ್ನಗಳುಳ್ಳದಾಗಿಯೂ, ಬಹಳವಾದ ವರ್ತಕರ ಸಂಪತ್ತಿಯುಳ್ಳದಾಗಿಯೂ ಇರುವ ಆ ಅಯ್ಯೋಧ್ಯಾನಗರದ ರಾಜವೀಥಿಯನ್ನು ಅವಲೋಕಿಸಿದವನಾದನು. ॥ ೪೭ ॥

ಇಂತಿದು ಶ್ರೀರಾಮಕೃತ ದಶರಥಾರಾಜ ಸಮೀಪ ಗಮನವೃತ್ತಾಂತ ವರ್ಣನವೆಂಬ
ಹದಿನಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತದಶಸ್ಸರ್ಗಃ.

ಸ ರಾಮೋ ರಥಮಾಸ್ಥಾಯ ಸಂಪ್ರಹೃಷ್ಟ ಸುಹೃಜ್ಜನಃ ‖ ಪತಾಕಾ ಧ್ವಜ ಸಂಪನ್ನಂ ಮಹಾರ್ಹಾಗರುಧೂಪಿತಂ ‖ ೧ ‖ ಅಪಶ್ಯನ್ನಗರಂ ಶ್ರೀಮಾನ್ನಾನಾಜನ ಸಮಾಕುಲಂ ‖ ಸಗೃಹೈರಭ್ರ ಸಂಕಾಶೈಃ ಪಾಂಡುರೈರುಪಶೋಭಿತಂ ‖ ೨ ‖ ರಾಜಮಾರ್ಗಂ ಯಯೌ ರಾಮೋ ಮಧ್ಯೇನಾಗರುಧೂಪಿತಂ ‖ ಚಂದನಾನಾಂಚ ಮುಖ್ಯಾನಾಮಗರೂಣಾಂಚ ಸಂಚಯೈಃ ‖ ೩ ‖ ಉತ್ತಮಾನಾಂಚ ಗಂಧಾನಾಂ ಕ್ಷೌಮ ಕೋಶಾಂಬರಸ್ಯಚ ‖ ಅವಿದ್ಧಾಭಿಶ್ಚ

ಶ್ರೀಮಾನ್ - ಸಂಪದ್ಯುಕ್ತನಾದ, ಸರಾಮಃ - ಆ ಶ್ರೀರಾಮನು, ರಥಂ-ರಥದಲ್ಲಿ, ಆಸ್ಥಾಯ-ಕುಳಿತುಕೊಂಡು, ಸಂಪ್ರಹೃಷ್ಟಸುಹೃಜ್ಜನಃ - ಸಂತೋಷಚಿತ್ತರಾದ ಸ್ನೇಹಿತರುಳ್ಳವನಾಗಿ, ಪತಾಕಾಧ್ವಜಸಂಪನ್ನಂ, ಪತಾಕಾ - ಚಿಕ್ಕ ಧ್ವಜಗಳಿಂದಲೂ, ಧ್ವಜ - ದೊಡ್ಡ ಧ್ವಜಗಳಿಂದಲೂ, ಸಂಪನ್ನಂ - ಕೂಡಿರುವ, ಮಹಾರ್ಹಾಗರುಧೂಪಿತಂ - ಅಮೂಲ್ಯವಾದ ಕೃಷ್ಣಾಗರುವಿನಿಂದ ವಾಸನೆ ಕಟ್ಟಲ್ಪಟ್ಟ, ನಾನಾಜನಸಮಾಕುಲಂ - ಅನೇಕ ಜನರಿಂದ ತುಂಬಿರುವ, ನಗರಂ - ಪಟ್ಟಣವನ್ನು, ಅಪಶ್ಯತ್ - ಕಂಡನು, ‖ ೧ ‖ ಸರಾಮಃ - ಆ ಶ್ರೀರಾಮನು, ಪಾಂಡುರೈಃ - ಬೆಳ್ಳಗಿರುವ, ಅಭ್ರಸಂಕಾಶೈಃ - ಮೇಘಗಳಿಗೆ ಸಮಾನವಾದ, ಗೃಹೈಃ - ಮನೆಗಳಿಂದ, ಉಪಶೋಭಿತಂ - ಹೊಳೆಯುತ್ತಿರುವ, ಅಗರುಧೂಪಿತಂ - ಕೃಷ್ಣಾಗರುವಿನ ಧೂಪದಿಂದವಾಸನೆ ಕಟ್ಟಲ್ಪಟ್ಟ, ರಾಜಮಾರ್ಗಂ - ರಾಜವೀಧಿಯ, ಮಧ್ಯೇನ - ಮಧ್ಯಪ್ರದೇಶದಿಂದ, ಯಯೌ - ತಿರಳಿದನು. ‖ ೨ ‖ ಮುಖ್ಯಾನಾಂ - ಉತ್ತಮವಾದ, ಚಂದನಾನಾಂ - ಚಂದನಗಂಧಗಳ, ಅಗರೂಣಾಂ - ಕೃಷ್ಣಾಗರುಗಳ, ಸಂಚಯೈಃ - ಸಮುದಾಯಗಳ, ಉತ್ತಮಾನಾಂ - ಶ್ರೇಷ್ಠಗಳಾದ, ಗಂಧಾನಾಂ - ಇತರ ಗಂಧಗಳ, ಸಂಚಯೈಃ - ಸಮುದಾಯಗಳಿಂದ, ಕ್ಷೌಮಕೋಶಾಂಬರಸ್ಯ, ಕ್ಷೌಮ - ದುಕೂಲಗಳ, ಕೋಶಾಂಬಸ್ಯ - ಪಟ್ಟುವಸ್ತ್ರಗಳ, ಸಂಚಯೈಶ್ಚ - ಸಮುದಾಯಗಳಿಂದಲೂ, ಅಪವಿದ್ಧಾಭಿಃ - ರಂಧ್ರಗಳಿಲ್ಲದಿರುವ, ಮುಕ್ತಾಭಿಃ - ಮುತ್ತುಗಳಿಂದ, ಉತ್ತಮೈಃ - ಉತ್ಕೃಷ್ಟವಾದ, ಅಸಂಬಾಧೈಃ - ಒಂದರಲ್ಲೊಂದು

ಈ ಪ್ರಕಾರವಾಗಿ ಶ್ರೀರಾಮನು ಬಹಳವಾದ ಕಾಂತಿಯುಳ್ಳ ರಥದಲ್ಲಿ ಕುಳಿತುಕೊಂಡು, ಪ್ರಸನ್ನ ಮನಸ್ಕರಾದ ಮಿತ್ರರಿಂದೊಡಗೂಡಿದವನಾಗಿ, ಪತಾಕೆಗಳಿಂದಲೂ, ಅಗರುಧೂಪಗಳಿಂದಲೂ ಅಲಂಕೃತವಾದ, ಅನೇಕ ಜನಸಮುದಾಯದಿಂದ ಕಿಕ್ಕಿರಿಯುತ್ತಿರುವ, ಅಯೋಧ್ಯಾನಗರವನ್ನು ನೋಡುತ್ತ, ಮುಗಿಲುಗಳನ್ನು ಮುಟ್ಟುತ್ತಿರುವ ಸೌಧಗಳಿಂದ ಕಂಗೊಳಿಸುತ್ತಿರುವ ರಾಜವೀಥಿಯಲ್ಲಿ ಪೊರಮಟ್ಟದನಾದನು. ‖ ೨ ‖ ಉತ್ತಮೋತ್ತಮವಾದ ಚಂದನ ಗಂಧಂಗಳಿಂದಲೂ, ಕೃಷ್ಣಾಗರುವಿನಿಂದಲೂ, ಇನ್ನೂ ವಿಧವಿಧವಾದ ಸುವಾಸನಾ ದ್ರವ್ಯಗಳಿಂದಲೂ, ಪಟ್ಟುವಸ್ತ್ರಗಳಿಂದಲೂ, ಮುತ್ತುಗಳಿಂದಲೂ, ಉತ್ತಮವಾದ

ಮುಕ್ತಾಭಿರುತ್ತಮೈ ಸ್ಸ್ಫಾಟಿಕೈರಪಿ ॥೪॥ ಶೋಭಮಾನ ಮಸಂಬಾಧೈ ಸ್ತಂ
ರಾಜಪಥಮುತ್ತಮಂ ॥ ಸಂವೃತಂ ವಿವಿಧೈಃ ಪಣ್ಯೈ ರ್ಭಕ್ಷ್ಯೈ ರುಚ್ಚಾವಚೈ
ರಪಿ ॥೫॥ ದದರ್ಶ ತಂ ರಾಜಪಥಂ ದಿವಿ ದೇವಪಥಂ ಯಥಾ ॥ ದಧ್ಯಕ್ಷತ
ಹವಿರ್ಲಾಜೈ ರ್ಧೂಪೈರಗರು ಚಂದನೈಃ ॥೬॥ ನಾನಾ ಮಾಲ್ಯೋಪಗಂಧೈಶ್ಚ
ಸದಾಭ್ಯರ್ಚಿತ ಚತ್ವರಂ ॥ ಆಶೀರ್ವಾದಾನ್ ಬಹೂನ್ ಶೃಣ್ವನ್ ಸುಹೃದ್ಭಿ ಸ್ಸಮು
ದೀರಿತಾನ್ ॥೭॥ ಯಥಾರ್ಹಂ ಚಾಪಿ ಸಂಪೂಜ್ಯ ಸರ್ವಾನೇವ ನರಾನ್
ಯಯೌ ॥ ಪಿತಾಮಹೈ ರಾಚರಿತಂ ತಥೈವ ಪ್ರಪಿತಾಮಹೈಃ ॥೮॥

ಸೇರದಿರುವ, ಸ್ಫಾಟಿಕೈರಪಿ - ಸ್ಫಟಿಕಮಣಿಗಳಿಂದಲೂ, ಶೋಭಮಾನಂ - ಕಂಗೊಳಿಸುತ್ತಿರುವ, ವಿವಿಧೈಃ - ನಾನಾವಿಧವಾದ, ಪಣ್ಯೈಃ - ವ್ಯಾಪಾರಮಾಡತಕ್ಕ ಪದಾರ್ಥಗಳಿಂದಲೂ, ಉಚ್ಚಾವಚೈಃ- ನಾನಾಬಗೆಗಳಾದ, ಭಕ್ಷ್ಯೈರಪಿ - ಭಕ್ಷ್ಯಗಳಿಂದಲೂ, ಸಂವೃತಂ - ಕೂಡಿದ, ಉತ್ತಮಂ - ಶ್ರೇಷ್ಠ ವಾದ, ತಂರಾಜಪಥಂ - ಆ ರಾಜವೀಧಿಯನ್ನು, ದದರ್ಶ - ಕಂಡನು, ದಧ್ಯಕ್ಷತಹವಿರ್ಲಾಜೈಃ, ದಧಿ - ಮೊಸರಿನಿಂದಲೂ, ಅಕ್ಷತ - ಅಕ್ಷತೆಗಳಿಂದ, ಹವಿಃ - ಹೋಮದ್ರವ್ಯಗಳಿಂದಲೂ, ಲಾಜೈಃ - ಅರಳುಗಳಿಂದಲೂ, ಅಗರುಚಂದನೈಃ - ಕೃಷ್ಣಾಗರು ಚಂದನಮಯವಾದ, ಧೂಪೈಃ - ಧೂಪಗಳಿಂದಲೂ, ನಾನಾಮಾಲ್ಯೋಪಗಂಧೈಶ್ಚ - ಅನೇಕ ಬಗೆಗಳಾದ ಪೂಮಾಲಿಕೆಗಳ ವಾಸನೆಗಳಿಂದಲೂ, ಸದಾ - ನಿರಂತರವು, ಅಭ್ಯರ್ಚಿತಚತ್ವರಂ - ಪೂಜಿಸಲ್ಪಟ್ಟ ಅಂಗಣಗಳುಳ್ಳ, ದಿವಿ - ಸ್ವರ್ಗಲೋಕ ದಲ್ಲಿ, ದೇವಪಥಂಯಥಾ - ದೇವಮಾರ್ಗದಂತಿರುವ, ತಂರಾಜಪಥಂ - ಆ ರಾಜವೀದಿಯಲ್ಲಿ, ಸುಹೃದ್ಭಿಃ - ಸ್ನೇಹಿತರಿಂದ, ಸಮುದೀರಿತಾನ್ - ಹೇಳಲ್ಪಟ್ಟ, ಬಹೂನ್-ಅನೇಕ ಬಗೆಗಳಾದ, ಆಶೀರ್ವಾದಾನ್- ಆಶೀರ್ವಾದಗಳನ್ನು, ಶೃಣ್ವನ್ - ಕೇಳುತ್ತ, ಸರ್ವಾನ್ - ಸಮಸ್ತರಾದ, ನರಾನೇವ - (ಗೋ) ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ಚತುರ್ವರ್ಣದವರನ್ನು, ಯಥಾರ್ಹಂ - ಅವರವರಯೋಗ್ಯತೆಗೆ ತಕ್ಕಂತೆ ಮರ್ಯಾದಿಸಿ, ಯಯೌ - ತೆರಳಿದನು. ॥ ೭ ॥ ಪಿತಾಮಹೈಃ - ತಾತಂದರಿಂದಲೂ, ತಥೈವ - ಹಾಗೆಯೆ, ಪ್ರಪಿತಾಮಹೈಃ - ಮುತ್ತಾತಂದರಿಂದ, ಆಚರಿತಂ - ಅನುಷ್ಠಿಸಲ್ಪಟ್ಟ, ತಂಮಾರ್ಗಂ - ಆ ಮಾರ್ಗವನ್ನೆ, ಅದ್ಯ - ಈಗ, ಉಪಾದಾಯ - ಹಿಡಿದು, ಅಭಿಷಿಕ್ತಃ - ಅಭಿಷಿಕ್ತನಾಗಿ, ಅನುಪಾ

ಸ್ಫಟಿಕಮಣಿಗಳಿಂದಲೂ, ವಿಧವಿಧವಾದ ವಿಕ್ರೇಯಪದಾರ್ಥ ಸಮುದಾಯಗಳಿಂದಲೂ, ವಿವಿಧವಾದ ಭಕ್ಷ್ಯಗಳಿಂದಲೂ ಸಹ ತುಂಬಿ ತುಳುಕಾಡುತ್ತಿರುವ ಆ ರಾಜವೀಥಿಯಲ್ಲಿ, ಮೊಸರು, ಅಕ್ಷತೆ, ಹವಿಸ್ಸು, ಲಾಜೆಗಳು, ಅಷ್ಟವಿಧ ಧೂಪಗಳು, ಚಂದನಗಂಧ, ಮಾಲಿಕೆಗಳೇ ಮೊದಲಾದುವುಗಳು ಶೋಭಾಯಮಾನವಾಗಿದ್ದವು. ಇಂತು ಮನೋಹರವಾದ ರಾಜಪಥದಲ್ಲಿ ಆ ಶ್ರೀರಾಮನು, ಬ್ರಾಹ್ಮಣರೂ, ಸ್ನೇಹಿತರೂ ಮಾಡುತ್ತಿದ್ದ ಅನೇಕ ಆಶೀರ್ವಚನಗಳನ್ನು ಕೇಳುತ್ತ, ಅವರನ್ನು ಯೋಗ್ಯತಾನುಸಾರವಾಗಿ ಮರ್ಯಾದಿಸುತ್ತ ಮುಂಬರಿದನು. ॥ ೩-೭ ॥ ಆಗ ಶ್ರೀರಾಮಚಂದ್ರನ ಸ್ನೇಹಿತರೂ, ವಿಪ್ರವರೇಣ್ಯರೂ ಸಹ ಆತನನ್ನು ಕುರಿತು, "ಓ, ದಶರಥರಾಜನಂದನನಾದ ಶ್ರೀರಾಮನೆ! ನಿನ್ನ ಪಿತೃ,ಪಿತಾಮಹ, ಪ್ರಪಿತಾಮಹಾದಿಗಳಿಂದ ಸಂರಕ್ಷಿತವಾದ ಅಖಂಡವಾದೀ ಭೂಮಂಡಲವನ್ನು ಪರಿಪಾಲಿಸುವವನಾಗು !

ಅದ್ಯೋಪಾದಾಯ ತಂ ಮಾರ್ಗಮಭಿಷಿಕ್ತೋಽನುಪಾಲಯ॥ ಯಥಾಸ್ಮಲಾಲಿತಾಃ ಪಿತ್ರಾ ಯಥಾಪೂರ್ವೈಃ ಪಿತಾಮಹೈಃ ॥೯॥ ತತಸ್ಸುಖತರಂ ರಾಮೇ ವತ್ಸ್ಯಾಮ ಸ್ಸತಿ ರಾಜನಿ ॥ ಅಲಮದ್ಯಹಿ ಭುಕ್ತೇನ ಪರಮಾರ್ಥೈರಲಂಚನಃ ॥೧೦॥ ಯಥಾ ಪಶ್ಯಾಮ ನಿರ್ಯಾಂತಂ ರಾಮಂ ರಾಜ್ಯೇ ಪ್ರತಿಷ್ಠಿತಂ ॥ ತತೋಹಿ ನಃ ಪ್ರಿಯತರಂ ನಾನ್ಯತ್ಕಿಂಚಿ ದ್ಭವಿಷ್ಯತಿ"॥೧೧॥ ಯಥಾಭಿಷೇಕೋ ರಾಮಸ್ಯ ರಾಜ್ಯೇನಾಮಿತತೇಜಸಃ॥ ಏತಾಶ್ಚಾನ್ಯಾಶ್ಚ ಸುಹೃದಾ ಮುದಾಸೀನಃ ಕಥಾ ಶ್ಶುಭಾಃ ॥೧೨॥ ಆತ್ಮಸಂಪೂಜನೀ ಶ್ಶೃಣ್ವ ಯಯೌ ರಾಮೋ

ಲಯ - ಪರಿಪಾಲಿಸು, ಪಿತ್ರಾ - ತಂದೆಯಿಂದ, ಯಥಾ - ಹೇಗೆ, ಲಾಲಿತಾಸ್ಸ್ಮ - ಲಾಲನೆ ಮಾಡಲ್ಪಟ್ಟವರು ಆದೆವೋ, ಪೂರ್ವೈಃ - ಅವರಿಗೆ ಹಿಂದಿನವರಾದ, ಪಿತಾಮಹೈಃ - ತಾತಂದಿರಿಂದಲೂ, (ಲಾಲಿತಾಃ - ಪೋಷಿಸಲ್ಪಟ್ಟವರು, ಸ್ಮ - ಆದೆವು,) ರಾಮೇ - ಶ್ರೀರಾಮನು, ರಾಜನಿಸತಿ - ರಾಜನಾಗಲು, ತತಃ - ಅದಕ್ಕಿಂತಲೂ, ಸುಖತರಂ - ಅತಿಶಯವಾದ ಸುಖವುಳ್ಳಂತೆ, ವತ್ಸ್ಯಾಮಃ - ಇರುತ್ತೇವೆ, ಭುಕ್ತೇನ - ಭೋಜನದಿಂದ, ಅದ್ಯ - ಈಗ, ಅಲಂ - ಸಾಕು, ನಃ - ನಮಗೆ, ಪರಮಾರ್ಥೈಶ್ಚ - (ಗೋ + ಪ) ಉತ್ತಮವಾದ ಪುರುಷಾರ್ಥರೂಪವಾದ ಜಪಾದಿಗಳಿಂದಲೂ, ಅಲಂ-ಸಾಕು, ನಿರ್ಯಾಂತಂ - ಉತ್ಸವದೊಡನೆ ಹೋಗುತ್ತಿರುವ, ರಾಜ್ಯೇ - ರಾಜ್ಯದಲ್ಲಿ, ಪ್ರತಿಷ್ಠಿತಂ - ಸ್ಥಾಪಿತನಾದ, ರಾಮಂ - ಶ್ರೀರಾಮನನ್ನು, ಯಥಾ - ಹೇಗೆ, ಪಶ್ಯಾಮ-ನೋಡುವೆವೋ, ಅಮಿತತೇಜಸಃ - ಅಪಾರವಾದ ಕಾಂತಿಯುಳ್ಳ, ರಾಮಸ್ಯ - ಶ್ರೀರಾಮನಿಗೆ, ಯಥಾ - ಹೇಗೆ, ರಾಜ್ಯೇನ - ರಾಜ್ಯದಿಂದ, ಅಭಿಷೇಕಃ - ಅಭಿಷೇಕವೋ, ತತಃ - ಅದಕ್ಕಿಂತಲೂ, ಪ್ರಿಯತರಂ - ಹೆಚ್ಚಿನದಾದ, ಅನ್ಯತ್ - ಮತ್ತೊಂದು, ಕಿಂಚಿತ್ - ಸ್ವಲ್ಪವೂ, ನಭವಿಷ್ಯತಿ - ಆಗಲಾರದು, ಏತಾಶ್ಚ - ಇವೇ ಮೊದಲಾದ, ಅನ್ಯಾಶ್ಚ - ಮತ್ತು ಕೆಲವು, ಶುಭಾಃ - ಶುಭಕರಗಳಾದ, ಆತ್ಮಸಂಪೂಜನೀಃ - ತನ್ನನ್ನೇ ಶ್ಲಾಘಿಸುತ್ತಿರುವ, ಸುಹೃದಾಂ - ಸ್ನೇಹಿತರ, ಕಥಾಃ - ಕಥೆಗಳನ್ನು, ಉದಾಸೀನಃ - ತಟಸ್ಥನಾಗಿ, ಶೃಣ್ವ - ಕೇಳುತ್ತ, ರಾಮಃ-ಶ್ರೀರಾಮ ನು, ಮಹಾಪಥಂ-ದೊಡ್ಡ ಬೀದಿಯಲ್ಲಿ, ಯಯೌ-ತೆರಳಿದನು. ॥೮-೧೨॥

ಪೂರ್ವದ ಅರಸರು ಯಾವ ರೀತಿಯಲ್ಲಿ ನಮ್ಮನ್ನು ಪರಿಪಾಲಿಸಿದರೋ, ಆಗ ನಾವೆಷ್ಟು ಸುಖದಿಂದ್ದೆವೋ, ಅಂತಹ ನಾವು ನಿನ್ನಿಂದೀಗ ಪರಿಪಾಲಿತರಾಗಿ ಅದಕ್ಕಿಂತಲೂ ಸುಖವಾಗಿರುತ್ತೇವೆ ! ಎಲೈ ರಘುನಂದನನೆ ! ನೀನು ಪಟ್ಟಾಭಿಷಿಕ್ತನಾಗಿ ಉತ್ಸವದಿಂದ ಬರುವುದನ್ನು ನೋಡುವ ನಾವು ಕೃತಾರ್ಥರು! ನಾವೀಗ ಅನುಭವಿಸಿರುವ ಐಹಿಕ ಸುಖವೂ, ಜಪ ತಪಾದಿಗಳಿಂದ ಹೊಂದಿರುವ ಸುಖವೂ ಸಾಕಾಗಿರುವುದು ! ಪಟ್ಟಾಭಿಷಿಕ್ತನಾದ ನಿನ್ನನ್ನು ನೋಡುವುದಕ್ಕಿಂತ ನಮಗೆ ಹೆಚ್ಚಿನ ಸುಖವು ಮತ್ತೊಂದಿಲ್ಲವು ! ಎಂದು ಹೊಗಳುತ್ತಿದ್ದರು. ಶ್ರೀರಾಮಚಂದ್ರನು ತನ್ನ ಹೊಗಳಿಕೆಯರೂಪವಾದ ಈ ಮಾತುಗಳೆಲ್ಲವನ್ನೂ ಉದಾಸೀನಭಾವದಿಂದ ಕೇಳುತ್ತ ತೆರಳುತ್ತಿದ್ದನು. ॥ ೮-೧೨ ॥ ಶ್ರೀರಾಮಮೂರ್ತಿಯು ಮುಂದು ಮುಂದಕ್ಕೆ ಹೊರಟರೂ ಸಹ, ಯಾವ ಪುರುಷನೇ ಆಗಲಿ ಆತನ ದರ್ಶನದಿಂದ ಕಣ್ಮನಗಳನ್ನು ಹಿಂತಿರು

ಮಹಾಪಥಂ ॥ ನಹಿ ತಸ್ಮಾನ್ಮನಃ ಕಶ್ಚಿಚ್ಚಕ್ಷುಷೀ ವಾ ನರೋತ್ತಮಾತ್ ॥೧೩॥ ನರಶ್ಶಕ್ನೋತ್ಯಪಾಕೃಷ್ಟುಮತಿಕ್ರಾಂತೇಪಿ ರಾಘವೇ ॥" ಯಶ್ಚ ರಾಮಂ ನಪಶ್ಯೇತ್ತು ಯಂಚ ರಾಮೋ ನಪಶ್ಯತಿ "॥ ೧೪ ॥ ನಿಂದಿತ ಸ್ಸ ವಸೇ ಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ"॥ ಸರ್ವೇಷಾಂ ಹಿ ಸ ಧರ್ಮಾತ್ಮಾ ವರ್ಣಾನಾಂ

ರಾಘವೇ - ಶ್ರೀರಾಮನು, (೧) ಅತಿಕ್ರಾಂತೇ - ಹೊರಟುಹೋಗುತ್ತಿದ್ದರೂ, ನರೋತ್ತಮಾತ್ - ಪುರುಷಶ್ರೇಷ್ಠನಾದ, ತಸ್ಮಾತ್ - ಆ ಶ್ರೀರಾಮನಿಂದ, ಕಶ್ಚಿತ್ - ಯಾವ, ನರಶ್ಚ - ಮನುಷ್ಯನು, ಮನಃ - ಮನವನ್ನೂ, ಚಕ್ಷುಷೀವಾ - ನೇತ್ರಗಳನ್ನಾಗಲಿ, ಅಪಾಕ್ರುಷ್ಟುಂ - ಹಿಂತಿರಿಗಿಸುವದಕ್ಕೆ, ನಶಕ್ನೋತಿಹಿ - ಸಮರ್ಥನಾಗುವುದಿಲ್ಲವಷ್ಟೆ. ॥ ೧೩ ॥ ಯಶ್ಚ - ಯಾವ ಪುರುಷನಾದರೆ, ರಾಮಂ - ಶ್ರೀರಾಮನನ್ನು, ನಪಶ್ಯೇತ್ - ನೋಡುವದಿಲ್ಲವೋ, ಯಂತು - ಯಾವನನ್ನಾದರೆ, ರಾಮಃ - ಶ್ರೀರಾಮನು, ನಪಶ್ಯತಿ - ನೋಡಲಿಲ್ಲವೋ, ಸಃ - ಆ ಪುರುಷನು, ಲೋಕೇ - ಲೋಕದಲ್ಲಿ, ನಿಂದಿತಃ - ದೂಷಿತನಾಗಿ, ವಸೇತ್ - ಇರುವನು, ಸ್ವಾತ್ಮಾಪಿ - (ಗೋ) ತನ್ನ ಮನವೂ ಕೂಡ, ಏನಂ - ಆ ಶ್ರೀರಾಮನನ್ನು ನೋಡದಿರುವ ಪುರುಷನನ್ನು, ವಿಗರ್ಹತೇ - ನಿಂದಿಸುವದು, (ಗೋ + ಮ) ಯಶ್ಚ - ಯಾವ ಪುರುಷನು, ರಾಮಂ - ಸ್ವದೇಶಸ್ಥನನ್ನಾಗಿ, ನಪಶ್ಯೇತ್-ನೋಡದಿರುವನೋ, ಯಂತು - ಸ್ವದೇಶಸ್ಥನಾದ ಯಾವ ಪುರುಷನನ್ನು, ರಾಮಃ-ಶ್ರೀರಾಮನು, ನಪಶ್ಯತಿ-ನೋಡಲಿಲ್ಲವೋ, ಸಃ - ಆ ಪುರುಷನು, ಇಹಲೋಕೇ -(ಮ) ಇಹಲೋಕ ಪರಲೋಕಗಳಲ್ಲಿಯೂ, ನಿಂದಿತಃ-ನಿಂದಿಸಲ್ಪಟ್ಟವನಾಗಿ, ವಸೇತ್-ಇರುವನು, ಸ್ವಾತ್ಮಾಪಿ-ತನ್ನ ಅಂತರ್ಯಾಮಿಯಾದ [(ತಿ) ಸಾಕ್ಷಿಯಾದ] ಭಂಗವಂತನೂ ಕೂಡ, ಏನಂ-ಈ ಶ್ರೀರಾಮನನ್ನು ಕಾಣದಿರುವ ಪುರುಷನನ್ನು, ವಿಗರ್ಹತೇ-ಪಾಪಿಷ್ಠನೆಂದು ನಿಂದಿಸುವನು. ॥ ೧೪ ॥ ಹಿ - ಯಾವಕಾರಣ, ಧರ್ಮಾತ್ಮಾ - ಧರ್ಮದಲ್ಲಿಯೇ ಮನಸ್ಸುಳ್ಳ, ಸಃ - ಆ ಶ್ರೀರಾಮನು, ಚತುರ್ಣಾಂ - ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು

ಗಿಸಿಕೊಳ್ಳಲು ಸಮರ್ಥರಾಗದೇಹೋದರು ಆ ಪ್ರದೇಶದಲ್ಲಿದ್ದ ಜನಗಳಲ್ಲಿ ಯಾವಾತನು ಶ್ರೀರಾಮಮೂರ್ತಿಯನ್ನು ನೋಡಲಿಲ್ಲವೋ, ಯಾವಾತನು ಶ್ರೀರಾಮನಿಂದ ನೋಡಲ್ಪಡಲಿಲ್ಲವೋ ಅಂತಹನು ಲೋಕದಲ್ಲಿ ನಿಂದಿತನಾದವನಲ್ಲದೆ, ತನ್ನ ಆತ್ಮನಿಂದಲೂ ನಿಂದಿಸಲ್ಪಡುವನು. ॥ ೧೩-೧೪ ॥ ಧರ್ಮಿಷ್ಠನಾದ ರಘುನಂದನನು ಚತುರ್ವರ್ಣದ ಜನರೆಲ್ಲರಲ್ಲಿಯೂ ಸಮಾನವಾದ ದಯೆಯನ್ನು ತೋರುತ್ತಿದ್ದುದರಿಂದ ಎಲ್ಲರೂ ಆತನನ್ನು ಅನುಸರಿಸುತ್ತಿದ್ದರು.

ಟಿ. (೧) "ರಾಘವೇ ಅತಿಕ್ರಾಂತೇಪಿ......." ಎಂಬೆಡೆಯಲ್ಲಿ ಅಭಿಪ್ರಾಯಸ್ವಾರಸ್ಯವು ಹೀಗೆ—"ಶ್ರೀರಾಮಚಂದ್ರನು ದೂರದೂರವಾಗಿ ಹೋದರೂ ಜನಗಳು ಆತನಿಂದ ಮನವನ್ನು ಹಿಂತಿರುಗಿಸಿಕೊಳ್ಳಲಾಗಲಿಲ್ಲ" ಎಂದಮೇಲೆ ಆತನು ಸಮೀಪದಲ್ಲಿಯೇ ಇದ್ದಿದ್ದರೆ ಜನಗಳ ಮನಸ್ಸಿನ ಪರಿಣಾಮವೇನಾಗುತ್ತಿದ್ದಿತು; ಅವನಲ್ಲಿಯೇ ನ್ಯಸ್ತಚಿತ್ತರಾಗಿ ಹೋಗುತ್ತಿದ್ದರು. ಇದು **ಗೋವಿಂದರಾಜರ** ಮತ. **ಮಹೇಶ್ವರತೀರ್ಥರು** ಬೇರೆ ವಿಧವಾಗಿ ಅಭಿಪ್ರಾಯಪಟ್ಟಿರುವರು. "ರಘುನಂದನನು ದೂರ ಸರಿದರೂ ಜನರ ಮನಸ್ಸೆಂಬ ಕಂಗಳನ್ನು ಮೋಹಗೊಳಿಸುವ ಆತನ ಆಕಾರಾನುಭವಜನಿತವಾಸನಾ ಬಲದಿಂದ ಕಣ್ಮುಂದೆಯೇ ಕಾಣುತ್ತಿರುವ ಆತನ ವಿಷಯಕವಾದ ಮನಸ್ಸನ್ನೇ ಆಗಲಿ, ಕಣ್ನೋಟವನ್ನೇ ಆಗಲಿ ಹಿಂತಿರುಗಿಸಿಕೊಳ್ಳಲಾಗಲಿಲ್ಲ. ಇದು ಪುರುಷರ ಪಾಡಾಯಿತು. ಇನ್ನು ಚಪಲಾಕ್ಷಿಯರೂ ಚಪಲಚಿತ್ತೆಯರೂ ಆದ ಹೆಂಗಳ ಪಾಡೇನು" ಎಂಬುದೇ ಮೇಲಿನ ಪದಗಳ ಅರ್ಥ ಸ್ವಾರಸ್ಯವು.

ಕುರುತೇ ದಯಾಂ ॥ ೧೫ ॥ ಚತುರ್ಣಾಂ ಹಿ ವಯಸ್ಥಾನಾಂ ತೇನ ತೇ ತಮನುವ್ರತಾಃ ॥ ಚತುಷ್ಪಥಾನ್ ದೇವಪಥಾಂಶ್ಚೈತ್ಯಾನ್ಯಾಯತನಾನಿ ಚ ॥೧೬॥ ಪ್ರದಕ್ಷಿಣಂ ಪರಿಹರನ್ ಜಗಾಮ ನೃಪತೇಸ್ಸುತಃ ॥ ಸರಾಜ ಕುಲ ಮಾಸಾದ್ಯ ಮೇಘಸಂಘೋಪಮೈಶ್ಶುಭೈಃ ॥ ೧೭ ॥ ಪ್ರಾಸಾದ ಶೃಂಗೈ ರ್ವಿವಿಧೈಃ ಕೈಲಾಸ ಶಿಖರೋಪಮೈಃ ॥ ಆವಾರಯದ್ಭಿರ್ಗಗನಂ ವಿಮಾನೈ ರಿವ ಪಾಂಡುರೈಃ ॥ ೧೮ ॥ ವರ್ಧಮಾನ ಗೃಹೈಶ್ಚಾಪಿ ರತ್ನಜಾಲಪರಿಷ್ಕೃತೈಃ ॥

ಬಗೆಗಳಾದ, ವರ್ಣಾನಾಂ - ವರ್ಣಗಳಲ್ಲಿ, (೧) ಸರ್ವೇಷಾಂ-ಎಲ್ಲರಿಗೂ, ವಯಸ್ಥಾನಾಂ-ವಯಸ್ಸಿಗೆ ಅನುರೂಪವಾದ, ದಯಾಂ - ದಯೆಯನ್ನು, ಕುರುತೇ - ಮಾಡುವನೋ, (ಮ) ಸರಾಮಃ - ಆ ಶ್ರೀರಾಮನು, ವಯಸ್ಥಾನಾಂ - ಬಾಲ್ಯಾದಿ ವಯಸ್ಸುಳ್ಳ ಅಜ್ಞಾನಿಗಳಿಗೂ ಕೂಡ, ದಯಾಂ - ದಯೆಯನ್ನು, ಕುರುತೇ - ಮಾಡುತ್ತಾನೆಯೋ, ತೇನ - ಆಕಾರಣ, ತೇ - ಆ ಸಮಸ್ತರೂ, ತಮೇವ - ಆ ಶ್ರೀರಾಮನನ್ನೇ, ಅನುವ್ರತಾಃ - ಅನುಸರಿಸುತ್ತಿದ್ದರು. ॥ ೧೫ ॥ ಚತುಷ್ಪಥಾನ್ - ನಾಲ್ಕು ಬೀದಿಗಳು ಸೇರುವ ಪ್ರದೇಶಗಳನ್ನು, ದೇವಪಥಾನ್ - ದೇವ ಮಾರ್ಗಗಳನ್ನೂ, (ಗೋ) - ರಾಜಬೀದಿಯಲ್ಲಿರುವ ಅಶ್ವತ್ಥಾದಿ ದೇವ ವೃಕ್ಷಗಳನ್ನೂ, ಚೈತ್ಯಾನಿ - ಬೌದ್ಧಾಲಯಗಳನ್ನೂ, ಆಯತನಾನಿಚ - ರಾಜಸಭೆಗಳನ್ನೂ, ಪ್ರದಕ್ಷಿಣಂ - ಪ್ರದಕ್ಷಿಣಾಕಾರವಾಗಿ, ಪರಿಹರನ್ - ಅತಿಕ್ರಮಿಸಿ, ಯಯೌ - ತೆರಳಿದನು. ರಾಜಪುತ್ರಃ - ಅರಸು ಮಗನಾದ, ಸಃ - ಆ ಶ್ರೀರಾಮನು, ಮೇಘಸಂಘೋಪಮೈಃ - ಮೇಘತಂಡಗಳಿಗೆ ಸಮಾನವಾದ, ಶುಭೈಃ - ಶುಭಕರವಾದ, ವಿವಿಧೈಃ - ನಾನಾ ಬಗೆಗಳಾದ, ಕೈಲಾಸಶಿಖರೋಪಮೈಃ - ಕೈಲಾಸಗಿರಿಯಶಿಖರಕ್ಕೆ ಸಮಾನವಾದ, ಪ್ರಾಸಾದಶೃಂಗೈಃ - ಉಪ್ಪರಿಗೆಗಳ ಶಿಖರಗಳಿಂದ, (ಉಪಲಕ್ಷಿತಂ - ಕೂಡಿಕೊಂಡಿರುವ,) ಗಗನಂ - ಅಂತರಿಕ್ಷವನ್ನು, ಆವಾರಯದ್ಭಿಃ - ತಡೆಮಾಡುತ್ತಿರುವ, ವಿಮಾನೈರಿವ - ವಿಮಾನಗಳಂತೆ, ಪಾಂಡುರೈಃ - ಬೆಳ್ಳಗಿರುವ, ರತ್ನಜಾಲಪರಿಷ್ಕೃತೈಃ - ರತ್ನಗಳಗೊಂಚಲುಗಳಿಂದ ಅಲಂಕರಿಸಲ್ಪಟ್ಟ, ವರ್ಧಮಾನ ಗೃಹೈಶ್ಚಾಪಿ - ಬಾಗಿಲುಗಳ ವ್ಯತ್ಯಾಸಗಳಿಂದ ವರ್ಧಮಾನವೆಂದು ಪ್ರಸಿದ್ಧವಾದ ಮನೆಗಳಿಂದಲೂ,

---

ಆ ಬಳಿಕಲಾ ಶ್ರೀರಾಮಚಂದ್ರನು ಚತುಷ್ಪಥಗಳನ್ನೂ, ದೇವಮಾರ್ಗಗಳನ್ನೂ, ಅಶ್ವತ್ಥವೇ ಮೊದಲಾದ ವೃಕ್ಷಶ್ರೇಷ್ಠಗಳನ್ನೂ ಅತಿಕ್ರಮಿಸಿ, ಮುಗಿಲಿನ ಗುಂಪುಗಳಿಗೆ ಸಮಾನವಾದ ಬಿಳುಪುಳ್ಳವೂ,ಮಂಗಳಕರವೂ,ಕೈಲಾಸಗಿರಿಯಶಿಖರಗಳಂತೆ ಗಗನಮಾರ್ಗವನ್ನು ಮುಟ್ಟುತ್ತಿರುವುದಾದ, ಬಿಳಿತಾದ ದೇವ ವಿಮಾನಗಳಂತಿರುವುದಾದ ಉಪ್ಪರಿಗೆಗಳ ಶಿಖರಗಳಿಂದಲೂ, ರತ್ನಮಯವಾದ ಗವಾಕ್ಷಿಗಳುಳ್ಳ ವರ್ಧಮಾನಗಳೆಂಬ ಸುಂದರ ಮಂದಿರ ವಿಶೇಷಗಳಿಂದಲೂ

ಟಿ. (೧) "ಸರ್ವೇಷಾಂ ವಯಸ್ಥಾನಾಂ ವರ್ಣಾನಾಂ ದಯಾಂ ಕರುತೇ" ಇಲ್ಲಿ "ನಾಲ್ಕು ವರ್ಣದ ಜನರೆಲ್ಲರಿಗೂ ವಯಸ್ಸಿಗೆ ಅನುರೂಪವಾದ ದಯೆಯನ್ನು ತೋರುವನು" ಎಂಬುದು **ಗೋವಿಂದರಾಜರ** ಅಭಿಪ್ರಾಯ. "ಬಾಲ್ಯವೇ ಮೊದಲಾದ ವಯಃ ಪ್ರಾಮಾಣ್ಯವುಳ್ಳ, ಏನೂ ತಿಳಿಯದ ಜನರಿಗೆ ಮುಕ್ತಿಯವರೆಗೂ ದಯಾ ಪೂರ್ವಕವಾದ ಅನುಗ್ರಹವನ್ನು ಮಾಡುವವನು" ಎಂದು **ಮಹೇಶ್ವರತೀರ್ಥರು** ಹೇಳುತ್ತಾರೆ.

ತತ್ಪೃಥಿವ್ಯಾಂ ಗೃಹವರಂ ಮಹೇಂದ್ರ ಭವನೋಪಮಂ ‖ ೧೯ ‖ ರಾಜಪುತ್ರಃ ಪಿತುರ್ವೇಶ್ಮ ಪ್ರವಿವೇಶ ಶ್ರಿಯಾಜ್ವಲ ‖ ಸಕಕ್ಷ್ಯಾ ಧನ್ವಿಭಿರ್ಗುಪ್ತಾ ಸ್ತಿಸ್ರೋತಿಕ್ರಮ್ಯ ವಾಜಿಭಿಃ ‖ ೨೦ ‖ ಪದಾತಿರಪರೇ ಕಕ್ಷ್ಯೇದ್ವೇ ಜಗಾಮ ನರೋತ್ತಮಃ ‖ ಸ ಸರ್ವಾ ಸ್ಸಮತಿಕ್ರಮ್ಯ ಕಕ್ಷ್ಯಾ ದಶರಥಾತ್ಮಜಃ ‖ ೨೧ ‖ ಸನ್ನಿವರ್ತ್ಯ ಜನಂ ಸರ್ವಂ ಶುದ್ಧಾಂತಂ ಪುನರಭ್ಯಗಾತ್ ‖ ೨೨ ‖

ತತಃ ಪ್ರವಿಷ್ಟೇ ಪಿತುರಂತಿಕಂ ತದಾ
ಜನ ಸ್ಸಸರ್ವೋ ಮುದಿತೋ ನೃಪಾತ್ಮಜೇ ‖
ಪ್ರತೀಕ್ಷತೇ ತಸ್ಯ ಪುನಶ್ಚ ನಿರ್ಗಮಂ
ಯಥೋದಯಂ ಚಂದ್ರಮಸ ಸ್ಸರಿತ್ಪತಿಃ ‖ ೨೩ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶಸ್ಸರ್ಗಃ

(ಉಪಲಕ್ಷಿತಂ - ಕೂಡಿಕೊಂಡಿರುವ,) ರಾಜಕುಲಂ - ಅರಮನೆಯನ್ನು, ಆಸಾದ್ಯ - ಹೊಂದಿ, ಪೃಥಿವ್ಯಾಂ - ಭೂಮಿಯಲ್ಲಿ, ಮಹೇಂದ್ರಭವನೋಪಮಂ - ಇಂದ್ರನ ಮನೆಗೆ ಸಮಾನವಾದ, ತತ್ ಗೃಹವರಂ - ಆ ಮನೆಗಳಲ್ಲಿ ಉತ್ತಮವಾದ, ಪಿತುಃ - ತಂದೆಯ, ವೇಶ್ಮ - ಮನೆಯನ್ನು, ಶ್ರಿಯಾ - ಐಶ್ವರ್ಯದಿಂದ, ಜ್ವಲ - ಹೊಳೆಯುತ್ತ, ಪ್ರವಿವೇಶ - ಹೊಕ್ಕನು. ‖ ೧೬-೧೯ ‖ ನರೋತ್ತಮಃ ಮನುಷ್ಯಶ್ರೇಷ್ಠನಾದ, ಸಃ - ಆ ಶ್ರೀರಾಮನು, ಧನ್ವಿಭಿಃ - ಧನುರ್ಧಾರಿಗಳಿಂದ, ಗುಪ್ತಾಃ - ಸಂರಕ್ಷಿಸಲ್ಪಟ್ಟ, ತಿಸ್ರಃ - ಮೂರಾದ, ಕಕ್ಷ್ಯಾಃ - ತೊಟ್ಟಿಗಳನ್ನು, ವಾಜಿಭಿಃ - ರಥದ ಕುದುರೆಗಳಿಂದಲೇ, ಅತಿಕ್ರಮ್ಯ - ದಾಟಿ, ಪದಾತಿಃ - ಪಾದಚಾರಿಯಾಗಿ, ಅಪರೇ - ಉಳಿದಿರುವ, ದ್ವೇಕಕ್ಷ್ಯೇ - ಎರಡು ತೊಟ್ಟಿಗಳನ್ನು, ಜಗಾಮ-ತೆರಳಿದನು. ‖೨೦‖ ದಶರಥಾತ್ಮಜಃ-ರಾಜಪುತ್ರನಾದ, ಸಃ-ಆ ಶ್ರೀರಾಮನು, (ಏವಂ-ಹೀಗೆ,) ಸರ್ವಾಃಕಕ್ಷ್ಯಾಃ - ಸಮಸ್ತ ತೊಟ್ಟಿಗಳನ್ನೂ, ಸಮತಿಕ್ರಮ್ಯ - ದಾಟಿ, ಸರ್ವಂ-ಸಮಸ್ತವಾದ, ಜನಂ - ಜನವನ್ನು, ಸನ್ನಿವರ್ತ್ಯ - ಹಿಂತಿರುಗಿಸಿ, ಶುದ್ಧಾಂತಂಪುನಃ - ಅಂತಃಪುರವನ್ನು ಕುರಿತಾದರೆ, ಅಭ್ಯಗಾತ್ - ತೆರಳಿದನು. ‖ ೨೧ ‖ ತತಃ - ಬಳಿಕ, ನೃಪಾತ್ಮಜೇ - ರಾಜಪುತ್ರನಾದ ಶ್ರೀರಾಮನು, ಪಿತುರಂತಿಕಂ-ತಂದೆಯ ಸಮೀಪವನ್ನು ಕುರಿತು, ಪ್ರವಿಷ್ಟೇಸತಿ-ಪ್ರವೇಶಿಸಲು, ತದಾ-ಆ ಕಾಲದಲ್ಲಿ, ಸರ್ವಃ - ಸಮಸ್ತವಾದ, ಸಜನಃ - ಆ ಜನವು, ಮುದಿತಃ - ಸಂತೋಷಯುಕ್ತವಾಗಿ, ತಸ್ಯ - ಆ ಶ್ರೀರಾಮನ, ಪುನಃ - ಮತ್ತೂ, ನಿರ್ಗಮಂ - ಹೊರಟು ಬರುವಿಕೆಯನ್ನು, ಚಂದ್ರಮಸಃ- ಚಂದ್ರನ, ಉದಯಂ - ಆವಿರ್ಭಾವವನ್ನು, ಸರಿತ್ಪತಿರ್ಯಥಾ - ಕಡಲಂತೆ, ಪ್ರತೀಕ್ಷತೇ - ನಿರೀಕ್ಷಿಸುತ್ತಿದ್ದಿತು. ‖ ೨೨ ‖ ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶಸ್ಸರ್ಗಃ

ಒಡಗೂಡಿದ ಭೂಮಂಡಲದಲ್ಲಿರುವ ಚಂದ್ರಭವನವೋ ಎಂಬಂತಿರುವ ತಂದೆಯಾದ ದಶರಥರಾಯನ ಅರಮನೆಯನ್ನು ರಥದಿಂದಲೇ ಪ್ರವೇಶಿಸಿ, ಮೂರು ತೊಟ್ಟಿಗಳನ್ನುದಾಟಿ, ಆ ಬಳಿಕ ಕಾಲ್ನಡಿಗೆಯಿಂದಲೇ ಎರಡು ತೊಟ್ಟಿಗಳನ್ನು ಪ್ರವೇಶಿಸಿ, ಜೊತೆಯಲ್ಲಿ ಬಂದಿದ್ದ ಜನರೆಲ್ಲರನ್ನೂ "ನೀವಿಲ್ಲಿಯೇ ನಿಲ್ಲಿರಿ" ಎಂದಾಜ್ಞಾಪಿಸಿ ಅಂತಃಪುರವನ್ನು ಪ್ರವೇಶಿಸಿದನು. ಆಗಲಾ ಶ್ರೀರಾಮನು ತಂದೆಯ ಸಮೀಪವನ್ನು ಹೊಂದಿದ ಬಳಿಕ ಆ ಜನರೆಲ್ಲರೂ ಸಮುದ್ರವು ಚಂದ್ರೋದಯವನ್ನು ನಿರೀಕ್ಷಿಸುವಂತೆ, ರಘುರಾಮನ ಪುನರಾಗಮನವನ್ನು ನಿರೀಕ್ಷಿಸುತ್ತಿದ್ದರು.‖೧೫-೨೨‖ ಇಂತಿದು ಶ್ರೀರಾಮಕೃತ ದಶರಥರಾಜ ಸಮೀಪಗಮನ ಕಥಾಕಥನವೆಂಬ ಹದಿನೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಾದಶಸ್ಸರ್ಗಃ.

ಸದದರ್ಶಾಸನೇ ರಾಮೋ ನಿಷಣ್ಣಂ ಪಿತರಂ ಶುಭೇ ॥ ಕೈಕೇಯೀಸಹಿತಂ ದೀನಂ ಮುಖೇನ ಪರಿಶುಷ್ಯತಾ ॥೧॥ ಸಪಿತುಶ್ಚರಣೌ ಪೂರ್ವಮಭಿವಾದ್ಯ ವಿನೀತವತ್ ॥ ತತೋ ವವಂದೇ ಚರಣೌ ಕೈಕೇಯ್ಯಾಸ್ಸುಸಮಾಹಿತಃ ॥೨॥ ರಾಮೇತ್ಯುಕ್ತ್ವಾ ಚ ವಚನಂ ಬಾಷ್ಪಪರ್ಯಾಕುಲೇಕ್ಷಣಃ ॥ ಶಶಾಕ ನೃಪತಿರ್ದೀನೋ ನೇಕ್ಷಿತುಂ ನಾಭಿಭಾಷಿತುಂ ॥೩॥ ತದಪೂರ್ವಂ ನರಪತೇ ರ್ದೃಷ್ಟ್ವಾ ರೂಪಂ ಭಯಾವಹಂ ॥ ರಾಮೋಽಪಿ ಭಯಮಾಪನ್ನಃ

ಸರಾಮಃ - ಆ ಶ್ರೀರಾಮನು, ಶುಭೇ - ಮಂಗಳಕರವಾದ, ಆಸನೇ-ಪೀಠದಲ್ಲಿ, ನಿಷಣ್ಣಂ-ಕುಳಿತುಕೊಂಡಿರುವ, ಕೈಕೇಯೀಸಹಿತಂ-ಕೈಕೆಯಿಂದೊಡಗೂಡಿದ, ಪರಿಶುಷ್ಯತಾ - ಬಾಡಿಹೋಗುತ್ತಿರುವ, ಮುಖೇನ - ಮುಖದಿಂದ, ದೀನಂ-ದೈನ್ಯವನ್ನುಹೊಂದಿದ, ಪಿತರಂ-ತಂದೆಯನ್ನು, ದದರ್ಶ - ಕಂಡನು. ॥೧॥ ಸಃ - ಆ ಶ್ರೀರಾಮನು, ಸುಸಮಾಹಿತಃ - ಸಾವಧಾನಚಿತ್ತನಾಗಿ, ಪಿತುಃ - ತಂದೆಯ, ಚರಣೌ - ಪಾದಗಳನ್ನು, ಪೂರ್ವಂ-ಮೊದಲು, ವಿನೀತವತ್-ವಿಧೇಯನಾಗಿ, ಅಭಿವಾದ್ಯ-ನಮಸ್ಕರಿಸಿ, ತತಃ - ಬಳಿಕ, ಕೈಕೇಯ್ಯಾಃ - ಕೈಕೇಯೀದೇವಿಯ, ಚರಣೌ - ಪಾದಗಳನ್ನು, ವವಂದೇ - ನಮಸ್ಕರಿಸಿದನು. ॥೨॥ ನೃಪತಿಃ - ದಶರಥರಾಜನು, ದೀನಃ - ಸಂತಪಿಸುತ್ತ, ರಾಮೇತಿ - ರಾಮ ಎಂದು, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ಬಾಷ್ಪಪರ್ಯಾಕುಲೇಕ್ಷಣಃ-ಕಣ್ಣೀರಿನಿಂದ ಕದಡಿದ ಕಂಗಳುಳ್ಳವನಾಗಿ, ಈಕ್ಷಿತುಂ - ನೋಡುವದಕ್ಕೇ ಆಗಲಿ, ಅಭಿಭಾಷಿತುಂಚ - ಮಾತನಾಡುವದಕ್ಕೇ ಆಗಲಿ, ನಶಶಾಕ - ಸಮರ್ಥನಾಗಲಿಲ್ಲ. ॥೩॥ ರಾಮೋಽಪಿ - ಶ್ರೀರಾಮನೂ ಸಹ, ಅಪೂರ್ವಂ - ಎಂದಿಗೂ ಇಲ್ಲದಿರುವ, ನೃಪತೇಃ - ದಶರಥರಾಜನ, ರೂಪಂ - ಆಕಾರವನ್ನು, ಭಯಾವಹಂ-ಭಯಂಕರವಾದುದನ್ನಾಗಿ, ದೃಷ್ಟ್ವಾ - ಕಂಡು, ಪನ್ನಗಂ - ಹಾವನ್ನು, ಪದಾ - ಕಾಲಿನಿಂದ, ಸ್ಪೃಷ್ಟ್ವೇವ - ತುಳಿದಂತೆ, ಭಯಂ - ಭೀತಿಯನ್ನು, ಆಪನ್ನಃ -

---

ಆಮೇಲೆ ಶ್ರೀರಾಮನು, ಕೈಕೇಯೀ ಸಹಿತನಾಗಿ ದೈನ್ಯತೆಯಿಂದ ಕಂಗೆಟ್ಟ ಮುಖವುಳ್ಳವನಾಗಿ, ಸಿಂಹಾಸನದಲ್ಲಿ ಕುಳಿತಿರುವ ತನ್ನ ತಂದೆಯನ್ನು ನೋಡಿ, ಸಾವಧಾನಚಿತ್ತನಾಗಿ ಮೊದಲು ಆತನಿಗೆ ನಮಸ್ಕರಿಸಿ, ಆ ಬಳಿಕ ವಿಧೇಯತೆಯಿಂದ ತನ್ನ ಬ್ಬಲತಾಯಿಯಾದ ಕೈಕೇಯೀದೇವಿಗೆ ವಂದನೆಯಂಗೈದನು. ಆಗಲಾ ದಶರಥರಾಯನು ಒಂದು ಸಲ "ರಾಮ!!" ಎಂದು ಮಾತ್ರ ಕೂಗಿ ಕಂಬನಿಗಳಿಂದ ತುಂಬಿದ ಕಂಗಳುಳ್ಳವನಾಗಿ, ನೋಡುವುದಕ್ಕೂ, ಮಾತನಾಡುವುದಕ್ಕೂ ಕೂಡ ಅಶಕ್ತನಾಗಿ ಹೋದನು. ॥೧-೩॥ ಆ ಸಮಯದಲ್ಲಿ ರಘುನಂದನನು, ಎಂದೂ ನೋಡದ ನಿಜ ಜನಕನ ಇಂತಹ ಭಯಂಕರವಾದ ರೂಪವನ್ನು ಕಂಡು, ಅಕಸ್ಮಾತ್ತಾಗಿ ಕಾಲಿನಿಂದ ಸರ್ಪವನ್ನು ತುಳಿದವನಂತೆ ಮಹತ್ತರವಾದ ಭಯವನ್ನು ಹೊಂದಿ

ಪದಾಸ್ಪೃಷ್ಟ್ವೇವ ಪನ್ನಗಂ ॥ ೪ ॥ ಇಂದ್ರಿಯೈರಪ್ರಹೃಷ್ಟೈಸ್ತಂ ಶೋಕ ಸಂತಾಪ ಕರ್ಶಿತಂ ॥ ನಿಶ್ವಸಂತಂ ಮಹಾರಾಜಂ ವ್ಯಥಿತಾಕುಲಚೇತಸಂ ॥೫॥ ಊರ್ಮಿಮಾಲಿನಮಕ್ಷೋಭ್ಯಂ ಕ್ಷುಭ್ಯಂತಮಿವ ಸಾಗರಂ ॥ ಉಪಪ್ಲುತ ಮಿವಾದಿತ್ಯ ಮುಕ್ತಾನೃತ ಮೃಷಿಂ ಯಥಾ ॥ ೬ ॥ ಅಚಿಂತ್ಯ ಕಲ್ಪಂ ಹಿ ಪಿತು ಸ್ತಂ ಶೋಕಮುಪಧಾರಯನ್ ॥ ಬಭೂವ ಸಂರಬ್ಧತರ ಸ್ಸಮುದ್ರ ಇವ ಪರ್ವಣಿ ॥ ೭ ॥ ಚಿಂತಯಾಮಾಸ ಚ ತದಾ ರಾಮಃ ಪಿತೃಹಿತೇ ರತಃ ॥ ಕಿಂಸ್ವಿದದ್ಯೈವ ನೃಪತಿ ರ್ನಮಾಂ ಪ್ರತ್ಯಭಿನಂದತಿ ॥ ೮ ॥ ಅನ್ಯಥಾ ಮಾಂ ಪಿತಾ ದೃಷ್ಟ್ವಾ ಕುಪಿತೋಽಪಿ ಪ್ರಸೀದತಿ ॥ ತಸ್ಯ ಮಾಮದ್ಯ ಸಂಪ್ರೇಕ್ಷ್ಯ ಕಿಮಾ

ಹೊಂದಿದನು, ಅಪ್ರಹೃಷ್ಟೈಃ - ಸಂತೋಷವಿಲ್ಲದಿರುವ, ಇಂದ್ರಿಯೈಃ - ಇಂದ್ರಿಯಗಳಿಂದ, ಶೋಕ ಸಂತಾಪಕರ್ಶಿತಂ, ಶೋಕ-ಮನೋವ್ಯಥೆಯಿಂದಲೂ, ಸಂತಾಪ - ಸಂಕಟದಿಂದಲೂ, ಕರ್ಶಿತಂ-ಸವೆದು ಹೋದ, ನಿಶ್ವಸಂತಂ - ನಿಟ್ಟುಸಿರುಗಳನ್ನು ಬಿಡುತ್ತಿರುವ, ವ್ಯಥಿತಾಕುಲಚೇತಸಂ, ವ್ಯಥಿತ - ಸಂಕಟ ಪಡುತ್ತಿರುವ, ಆಕುಲ - ಕದಡಿಹೋದ, ಚೇತಸಂ - ಮನವುಳ್ಳ, ಅಕ್ಷೋಭ್ಯಂ - ಕ್ಷೋಭಿಸಲಸಾಧ್ಯವಾದ, ಕ್ಷುಭ್ಯಂತಂ - ತನ್ನಷ್ಟಕ್ಕೆ ತಾನೇ ಕ್ಷೋಭೆಬೀಳುತ್ತಿರುವ, ಊರ್ಮಿಮಾಲಿನಂ - ತೆರೆಗಳೇ ಮಾಲಿಕೆಗಳಾಗಿ ಉಳ್ಳ, ಸಾಗರಮಿವಸ್ಥಿತಂ - ಸಮುದ್ರನೆಂಬಂತಿರುವ, ಉಪಪ್ಲುತಂ - ಕೇತುಗ್ರಸ್ತನಾದ, ಆದಿತ್ಯಮಿವಸ್ಥಿತಂ - ಸೂರ್ಯನಂತಿರುವ, ಉಕ್ತಾನೃತಂ - ಹೇಳಲ್ಪಟ್ಟ ಪುಸಿಮಾತುಳ್ಳ, ಋಷಿಂಯಥಾ - ಋಷಿಯಂತೆ, ಅಚಿಂತ್ಯಕಲ್ಪಂ - ಎಂದಿಗೂ ಬಾರದಂತಿರುವ, ಪಿತುಃ - ತಂದೆಯ, ತಂಶೋಕಂ - ಆ ವ್ಯಸನವನ್ನು, ಉಪಧಾರಯನ್ - ಆಲೋಚಿಸುತ್ತ, ಪರ್ವಣಿ - ಪೌರ್ಣಿಮಾಸ್ಯೆಯಲ್ಲಿ, ಸಮುದ್ರ ಇವ - ಸಮುದ್ರನಂತೆ, ಸಂರಬ್ಧತರಃ - ಅತಿಶಯವಾಗಿ ಕ್ಷೋಭಿಸುತ್ತಿರುವವನು, ಬಭೂವ - ಆದನು. ॥ ೭ ॥ ತದಾ - ಆಗ, ರಾಮಃ - ಶ್ರೀರಾಮನು, ಪಿತೃಹಿತೇ - ತಂದೆಗೆ ಹಿತವನುಂಟು ಮಾಡುವುದರಲ್ಲಿ, ರತಃ - ಆಸಕ್ತನಾಗಿ, ಕಿಂಸ್ವಿತ್ - ಇದೇನು, ಅದ್ಯೈವ - ಈಗಲೇ, ಮಾಂ - ನನ್ನನ್ನು, ನಪ್ರತ್ಯಭಿನಂದತಿ - ಸಂತೋಷಿಸುವುದಿಲ್ಲ, ಅನ್ಯಥಾ - ಮತ್ತೊಂದು ಕಾಲದಲ್ಲಿ, ಮಾಂ - ನನ್ನು, ಪಿತಾ - ತಂದೆಯು, ದೃಷ್ಟ್ವಾ - ಕಂಡು, ಕುಪಿತೋಽಪಿ - ಕೋಪಗೊಂಡರೂ, ಪ್ರಸೀದತಿ - ಪ್ರಸನ್ನನಾಗುತ್ತಾನೆ, ಅದ್ಯ - ಈಗ, ಮಾಂ - ನನ್ನನ್ನು, ಸಂಪ್ರೇಕ್ಷ್ಯ - ಕಂಡು, ತಸ್ಯ - ಅಂತಹ,

---

ದನು. ॥ ೪ ॥ ಸಂತೋಷ ಶೂನ್ಯವಾದ ಚಕ್ಷುರಾದೀಂದ್ರಿಯಗಳಿಂದಲೂ, ದುಃಖದಿಂದಲೂ ಸವೆದು ಸಪ್ಪೆಯಾಗಿ, ನಿಟ್ಟುಸಿರ್ಗಳನ್ನು ಬಿಟ್ಟು, ಕಳವಳಗೊಂಡ ಮನಸ್ಸುಳ್ಳವನಾಗಿ, ತೆರೆಗಳೇ ಮಾಲಿಕೆಗಳಾಗಿ, ಶೋಭಿಸಲಸದಳವಾದ ಸಮುದ್ರದಂತೆ ಕ್ಷೋಭಿಸುತ್ತಿರುವ, ರಾಹುಪೀಡಿತನಾದ ದಿನಕರನಂತೆಯೂ, ಅನೃತವನ್ನಾಡಿದ ಋಷಿಯಂತೆಯೂ ಇರುವ ತನ್ನ ತಂದೆಯಾದ ದಶರಥರಾಜನನ್ನು ನೋಡಿ, ಹಿಂದಾವಾಗಲೂ ಇಲ್ಲದಿದ್ದ ಆತನ ವ್ಯಸನವನ್ನು ತಿಳಿದುಕೊಂಡು ಪರ್ವಕಾಲದಲ್ಲಿ ಸಮುದ್ರವು ಗಾಬರಿ ಪಡುವಂತೆ ಚಕಿತನಾಗಿ ತಂದೆಗೆ ಹಿತವನ್ನುಂಟುಮಾಡಬೇಕೆಂದು ಮನಸ್ಸಿನಲ್ಲಿ ಚಿಂತಿಸುತ್ತ ಹೀಗೆಂದುಕೊಂಡನು. ॥೫-೮॥ “ ಅಕಟ! ಇದೇನಾಶ್ಚರ್ಯ!! ಜನಕನೀಗ ನನ್ನ ವಿಷಯದಲ್ಲಿ ಪ್ರಸನ್ನನಾಗುವುದಿಲ್ಲವಲ್ಲ!

ಯಾಸಃ ಪ್ರವರ್ತತೇ ॥ ೯ ॥ ಸದೀನ ಇವ ಶೋಕಾರ್ತೋ ವಿಷಣ್ಣ ವದನ ದ್ಯುತಿಃ ॥ ಕೈಕೇಯೀಮಭಿವಾದ್ಯೈವ ರಾಮೋ ವಚನಮಬ್ರವೀತ್ ॥ ೧೦ ॥ ಕಚ್ಚಿನ್ಮಯಾನಾಪರಾದ್ಧಮಜ್ಞಾನಾದ್ಯೇನ ಮೇ ಪಿತಾ ॥ ಕುಪಿತಸ್ತನ್ಮಮಾ ಚಕ್ಷ್ವ ತ್ವಂಚೈವೈನಂ ಪ್ರಸಾದಯ ॥೧೧॥ ಅಪ್ರಸನ್ನ ಮನಾಃ ಕಿನ್ನು ಸದಾ ಮಾಂ ಪ್ರತಿ ವತ್ಸಲಃ ॥ ವಿವರ್ಣ ವದನೋ ದೀನೋ ನಹಿ ಮಾಮಭಿಭಾಷತೇ ॥೧೨॥ ಶಾರೀರೋ ಮಾನಸೋವಾಪಿ ಕಚ್ಚಿದೇನಂ ನಬಾಧತೇ ॥ ಸಂತಾ ಪೋವಾಭಿತಾಪೋವಾ ದುರ್ಲಭಂ ಹಿ ಸದಾ ಸುಖಂ ॥ ೧೩ ॥ ಕಚ್ಚಿನ್ನಕಚ್ಚಿ

ದಶರಥರಾಜನಿಗೆ, ಕಿಮಾಯಾಸಃ - ಏನು ಆಯಾಸವು, ಪ್ರವರ್ತತೇ - ಉಂಟಾಗಿರುವದು, ಇತಿ - ಇಂತೆಂದು, ಚಿಂತಯಾಮಾಸ - ಆಲೋಚಿಸಿದನು. ॥ ೯ ॥ ಸರಾಮಃ - ಆ ಶ್ರೀರಾಮನು, ದೀನ ಇವ - ದೀನನಂತೆ, ಶೋಕಾರ್ತಃ - ಶೋಕದಿಂದ ಬಾಧಿತನಾಗಿ, ವಿಷಣ್ಣವದನದ್ಯುತಿಃ - ಕಂಗೆಟ್ಟ ಮುಖವುಳ್ಳವನಾಗಿ, ಕೈಕೇಯೀಂ - ಕೈಕೇಯಿದೇವಿಯನ್ನು ಕುರಿತು, ಅಭಿವಾದ್ಯೈವ - ನಮಸ್ಕರಿಸಿ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧೦ ॥ ಮಯಾ - ನನ್ನಿಂದ, ಅಜ್ಞಾನಾತ್ - ತಿಳಿಯದೆ, ಕಚ್ಚಿನ್ನಾಪರಾದ್ಧಂ - ಯೇನೂ ಅಪರಾಧಮಾಡಲ್ಪಡಲಿಲ್ಲ, ಯೇನ - ಯಾವನಿಮಿತ್ತದಿಂದ, ಮೇ - ನನ್ನ, ಪಿತಾ - ತಂದೆಯು, ಕುಪಿತಃ - ಕೋಪಿಷ್ಠನಾಗಿರುವ, ತತ್ - ಅದನ್ನು, ಮಮ - ನನಗೆ, ಆಚಕ್ಷ್ವ - ಹೇಳು, ತ್ವಂಚೈವ - ನೀನೇ, ಏನಂ - ಈ ಜನಕನನ್ನು, ಪ್ರಸಾದಯ- ಪ್ರಸನ್ನನಾಗಿಮಾಡು. ॥ ೧೧ ॥ ಸದಾ - ಯಾವಾಗಲು, ಮಾಂಪ್ರತಿ - ನನ್ನನ್ನು ಉದ್ದೇಶಿಸಿ, ವತ್ಸಲಃ - ಪ್ರೀತಿಯುಳ್ಳ ನನ್ನ ತಂದೆಯು, ಕಿನ್ನು - ಯಾವ ನಿಮಿತ್ತವಾಗಿ, ಅಪ್ರಸನ್ನಮನಾಃ - ಪ್ರಸನ್ನವಾಗದಿರುವ ಮನಸ್ಸುಳ್ಳವನಾಗಿ, ವಿವರ್ಣವದನಃ - ಕಂಗೆಟ್ಟ ಮುಖವುಳ್ಳವನಾಗಿ, ದೀನಃ - ದೀನನಾಗಿ, ಮಾಂ - ನನ್ನನ್ನು ಕುರಿತು, ನಾಭಿಭಾಷತೇ - ಮಾತನಾಡುವದಿಲ್ಲ. ॥ ೧೨ ॥ ಶಾರೀರಃ - ಶರೀರ ಸಂಬಂಧವಾದ, ಸಂತಾಪಃ - ವ್ಯಾಧಿಯು, ಮಾನಸಃ - ಮನಸ್ಸಂಬಂಧವಾದ, ಅಭಿತಾಪೋವಾ-ಸಂಕಟವಾದರೂ, ಏನಂ-ಈ ಜನಕನನ್ನು, ನಬಾಧತೇಕಚ್ಚಿತ್-ಬಾಧಿಸುವದಿಲ್ಲವಷ್ಟೆ,

ಇದೇತರಿಂದುಂಟಾದುದೋ? ಇತರ ಕಾಲಗಳಲ್ಲಿ ಕೋಪಗೊಂಡಿದ್ದರೂ ನನ್ನ ವಿಷಯದಲ್ಲಿ ಸಂತೋಷಿಸುತ್ತಿದ್ದ ಮಹಾತ್ಮನಾದೀ ರಾಯನು, ಈಗ ನನ್ನನ್ನು ನೋಡುತ್ತಲೇ ಇಷ್ಟು ಆಯಾಸವನ್ನು ಹೊಂದಿರುವನಲ್ಲ! ಇದೇನು ವಿಚಿತ್ರ." ॥ ೯ ॥ ಹೀಗೆ ಯೋಚಿಸಿದ ತರುವಾಯ ಆ ರಘುರಾಮನು ದುಃಖಪೀಡಿತನಾಗಿಯೂ, ಕಂಗೆಟ್ಟ ಮುಖವುಳ್ಳವನಾಗಿಯೂ ಆಗಿ ಕೈಕೇಯಿದೇವಿಯನ್ನು ನೋಡಿ, ಕೈಜೋಡಿಸಿಕೊಂಡು ಹೀಗೆಂದನು. ॥ ೧೦ ॥ 'ಅಮ್ಮಾ ; ಕೈಕೇಯಿದೇವಿಯೇ! ಮಹಾರಾಜನು ಕುಪಿತನಾಗಿರುವನೇಕೆ? ನಾನೇನಾದರೂ ತಪ್ಪು ಮಾಡಿದೆನೇ? ಈ ವಿಷಯವನ್ನು ನನಗೆ ಹೇಳು! ತಂದೆಯನ್ನು ಸಮಾಧಾನಗೊಳಿಸು. ॥ ೧೧ ॥ ಎಲೌ ತಾಯೆ ! ನಾನು ಸಮ್ಮುಖದಲ್ಲಿದ್ದರೂ ಪ್ರಸನ್ನನಾಗದೆ, ಬಾಡಿದ ಮುಖವುಳ್ಳವನಾಗಿ ನನ್ನೊಡನೆ ಮಾತನಾಡುವುದಿಲ್ಲವೇಕೆ ? ಲೋಕದಲ್ಲಿ ಯಾವನಿಗಾದರೂ ಸುಖವೆಂಬುದು ಎಲ್ಲ ಕಾಲಗಳಲ್ಲಿಯೂ ಒಂದೇ ರೀತಿಯಾಗಿರಲಾರದು. ಮಹಾ

ದ್ಭರತೇ ಕುಮಾರೇ ಪ್ರಿಯದರ್ಶನೇ॥ಶತ್ರುಘ್ನೇವಾ ಮಹಾಸತ್ವೇ ಮಾತೄಣಾಂ ವಾ ಮಮಾಶುಭಂ ॥ ೧೪ ॥ ಅತೋಷಯನ್ಮಹಾರಾಜ ಮಕುರ್ವನ್ವಾ ಪಿತುರ್ವಚಃ ॥ ಮುಹೂರ್ತಮಪಿ ನೇಚ್ಛೇಯಂ ಜೀವಿತುಂ ಕುಪಿತೇ ನೃಪೇ ॥ ೧೫ ॥ ಯತೋ ಮೂಲಂ ನರಃ ಪಶ್ಯೇತ್ಪ್ರಾದುರ್ಭಾವಮಿಹಾತ್ಮನಃ ॥ ಕಥಂ ತಸ್ಮಿನ್ನವರ್ತೇತ ಪ್ರತ್ಯಕ್ಷೇ ದೈವತೇ ಸತಿ ॥ ೧೬ ॥ ಕಚ್ಚಿತ್ತೇ ಪರುಷಂ ಕಿಂಚಿದಭಿಮಾನಾತ್ಪಿತಾಮಮ ॥ ಉಕ್ತೋ ಭವತ್ಯಾ ಕೋಪೇನ ಯತ್ರಾಸ್ಯ

ಸದಾ-ಸರ್ವಕಾಲದಲ್ಲಿಯೂ, ಸುಖಂ - ಸುಖವು, ದುರ್ಲಭಂಹಿ - ದುರ್ಲಭವಷ್ಟೆ,॥ ಪ್ರಿಯದರ್ಶನೇ - ಇಂಪಾದ ನೋಟವುಳ್ಳ, ಭರತೇ - ಭರತನೆಂಬ, ಕುಮಾರೇ - ಮಗನಲ್ಲಿ, ಕಿಂಚಿತ್ - ಸ್ವಲ್ಪವಾದರೂ, ಅಶುಭಂ - ಅಮಂಗಳವು, ನಕಚ್ಚಿತ್ - ಇಲ್ಲವಷ್ಟೆ, ಮಹಾಸತ್ವೇ - ಬಹು ಬಲವುಳ್ಳ, ಶತ್ರುಘ್ನೇವಾ - ಶತ್ರುಘ್ನನ ವಿಷಯದಲ್ಲಿಯೇ ಆಗಲಿ, ಮಮ - ನನ್ನ, ಮಾತೄಣಾಂವಾ - ತಾಯಂದರಿಗೇ ಆಗಲಿ, ಕಿಂಚಿತ್ - ಸ್ವಲ್ಪವಾದರೂ, ಅಶುಭಂ - ಅಸೌಖ್ಯವು, ನಕಚ್ಚಿತ್ - ಇಲ್ಲವಲ್ಲವೆ. ॥ ೧೪ ॥ ನೃಪೇ - ಅರಸು, ಕುಪಿತೇಸತಿ - ಕೋಪಿಷ್ಠನಾಗಲು, ಮಹಾರಾಜಂ - ಮಹಾರಾಜನನ್ನು, ಅತೋಷಯನ್ - ಸಂತೋಷಗೊಳಿಸದೆ, ಪಿತುಃ - ತಂದೆಯ, ವಚೋವಾ - ಮಾತನ್ನೇ ಆಗಲಿ, ಅಕುರ್ವನ್ - ಮಾಡದೆ, ಮುಹೂರ್ತಂ - ಸ್ವಲ್ಪಕಾಲವಾದರೂ, ಜೀವಿತುಂ - ಬದುಕುವದಕ್ಕೆ, ನೇಚ್ಛಾಮಿ - ಅಪೇಕ್ಷಿಸಲಾರನು. ॥ ೧೫ ॥ ಇಹ - ಈ ಲೋಕದಲ್ಲಿ, ನರಃ - ಮನುಷ್ಯನು, ಆತ್ಮನಃ - ತನ್ನ ದೇಹಕ್ಕೆ, ಪ್ರಾದುರ್ಭಾವಂ - ಉತ್ಪತ್ತಿಯನ್ನು, ಯತೋಮೂಲಂ - ಯಾವ ತಂದೆಯೇ ಮೂಲಕಾರಣವನ್ನಾಗಿ, ಪಶ್ಯೇತ್ - ನೋಡುವನೋ, ಪ್ರತ್ಯಕ್ಷೇಸತಿ - ಪ್ರತ್ಯಕ್ಷವಾಗಿರುವ, ದೈವತೇ - ದೇವತಾ ಸ್ವರೂಪನಾದ, ತಸ್ಮಿನ್ - ಅಂತಹ ತಂದೆಯಲ್ಲಿ, ಕಥಂನವರ್ತೇತ - ಹೇಗೆ ನಡೆದುಕೊಳ್ಳದೆ ಇದ್ದಾನು. ॥ ೧೬ ॥ ಮಮ - ನನ್ನ, ಪಿತಾ - ತಂದೆಯು, ಭವತ್ಯಾ - ನಿನ್ನಿಂದ, ಕೋಪೇನ - ಕೋಪದಿಂದಲೇ ಆಗಲಿ, ತೇ - ನಿನ್ನ, ಅಭಿಮಾನಾತ್ - ವಾಲ್ಲಭ್ಯಪ್ರಯುಕ್ತವಾದ ಅಭಿಮಾನದಿಂದಲೇ ಆಗಲಿ, ಕಿಂಚಿತ್ - ಸ್ವಲ್ಪವಾದರೂ, ಪರುಷಂ - ಕ್ರೂರವಾದ ವಚನವು, ನೋಕ್ತಃಕಚ್ಚಿತ್ - ಹೇಳಲ್ಪಡಲಿಲ್ಲವಷ್ಟೆ, ಯತ್ರ - ಯಾವ ವಿಷಯದಲ್ಲಿ, ಅಸ್ಯ - ಈತನ,

ರಾಜನಿಗೆ ದೇಹದಲ್ಲಿ ಸ್ವಸ್ಥತೆಯಿಲ್ಲದಿರುವುದೆ? ಮನೋರೋಗವಾಗಲಿ, ಸಂಕಟವಾಗಲಿ, ಮತ್ತೇನಾದರೂ ಇತರ ಬಾಧೆಯಾಗಲಿ ಇರುವುದೆ? ಪ್ರಿಯ ದರ್ಶನನಾದ ಭರತನೂ, ಮಹಾಬಲಶಾಲಿಯಾದ ಶತ್ರುಘ್ನನೂ, ನಮ್ಮ ತಾಯಂದರೂ ಕ್ಷೇಮವಾಗಿರುವರಷ್ಟೆ? ಜನನೀ! ಕೇಳು; ನನ್ನ ಜನಕನಾದೀ ರಾಯನು ಕೋಪವಾಂತಿದ್ದರೆ, ಆತನನ್ನು ಪ್ರಸನ್ನನನ್ನಾಗಿ ಮಾಡದೆಯೂ, ಆತನಾಜ್ಞೆಯನ್ನು ನೆರವೇರಿಸದೆಯೂ, ಮುಹೂರ್ತ ಮಾತ್ರವಾದರೂ ಬದುಕಿರಲು ನಾನು ಅಪೇಕ್ಷಿಸುವುದಿಲ್ಲ. ॥ ೧೨-೧೫ ॥ ಲೋಕದಲ್ಲಿ ಮಕ್ಕಳು ತಂದೆಗೆ ವ್ಯತಿರಿಕ್ತವಾಗಿ ನಡೆವುದುಂಟೆ? ಯಾರಿಂದ ಈ ಜನ್ಮವುಂಟಾಯಿತೊ, ಅಂತಹ ಪ್ರತ್ಯಕ್ಷದೇವತೆಯಾದ ಜನಕನ ವಿಷಯದಲ್ಲಿ, ಯಾವನು ತಾನೆ ಅತಿಕ್ರಮಿಸಲು ಯೋಗ್ಯನಾದಾನು? ಎಲೌ ಕೈಕೇಯೀದೇವಿಯೆ! ನೀನೇನಾದರೂ ಪತಿ ವಾಲ್ಲಭ್ಯದಿಂದ ಕ್ರೂರ ಮಾತುಗಳನ್ನು

ಲುಳಿತಂ ಮನಃ ‖ ೧೭ ‖ ಏತದಾಚಕ್ಷ್ವ ಮೇ ದೇವಿ ತತ್ವೇನ ಪರಿಪೃಚ್ಛತಃ‖ ಕಿನ್ನಿಮಿತ್ತ ಮಪೂರ್ವೋಽಯಂ ವಿಕಾರೋ ಮನುಜಾಧಿಪೇ ‖ ೧೮ ‖ ಏವ ಮುಕ್ತಾತು ಕೈಕೇಯಿೀ ರಾಘವೇಣ ಮಹಾತ್ಮನಾ ‖ ಉವಾಚೇದಂ ಸು ನಿರ್ಲಜ್ಜಾ ಧೃಷ್ಟ ಮಾತ್ಮಹಿತಂ ವಚಃ ‖ ೧೯ ‖ ನರಾಜಾ ಕುಪಿತೋ ರಾಮ ವ್ಯಸನಂ ನಾಸ್ಯ ಕಿಂಚನ ‖ ಕಿಂಚಿನ್ಮನೋಗತಂತ್ವಸ್ಯ ತ್ವದ್ಭಯಾನ್ನಾಭಿ ಭಾಷತೇ ‖ ೨೦ ‖ ಪ್ರಿಯಂ ತ್ವಾಮಪ್ರಿಯಂ ವಕ್ತುಂ ವಾಣೀ ನಾಸ್ಯೋಪ ವರ್ತತೇ ‖ ತದವಶ್ಯಂ ತ್ವಯಾ ಕಾರ್ಯಂ ಯದನೇನಾಶ್ರುತಂ ಮಮ ‖ ೨೧ ‖

ಮನಃ - ಮನವು, ಲುಳಿತಂ - ವ್ಯಾಕುಲವಾಗಿ ಮಾಡಲ್ಪಟ್ಟಿತೊ ! ‖ ೧೭ ‖ ಹೇ ದೇವಿ - ಎಲೌ ತಾಯೆ, ತತ್ವೇನ - ಯಥಾರ್ಥವನ್ನು, ಪರಿಪೃಚ್ಛತಃ - ಕೇಳುತ್ತಿರುವ, ಮೇ - ನನಗೆ, ಏತತ್ - ಇದನ್ನು, ಆಚಕ್ಷ್ವ - ಹೇಳು, ಮನುಜಾಧಿಪೇ - ಅರಸನಲ್ಲಿ, ಅಪೂರ್ವಃ - ಎಂದಿಗೂ ಇಲ್ಲದ, ಅಯಂವಿಕಾರಃ - ಈ ವ್ಯತ್ಯಾಸವು, ಕಿಂನಿಮಿತ್ತಂ - ಯಾವ ಕಾರಣವುಳ್ಳದು, ಭವತಿ - ಆಗಿದೆ. ‖ ೧೮ ‖ ಏವಂ - ಹೀಗೆ, ಮಹಾತ್ಮನಾ - ಮಹಾಮನಸ್ವಿಯಾದ, ರಾಘವೇಣ - ಶ್ರೀರಾಮನಿಂದ, ಉಕ್ತಾ - ಹೇಳಲ್ಪಟ್ಟ, ಕೈಕೇಯಿೀತು - ಕೈಕೇಯಿೀದೇವಿಯಾದರೆ, ಸುನಿರ್ಲಜ್ಜಾ - ಯಾವ ನಾಚಿ ಕೆಯೂ ಇಲ್ಲದೆ, ಧೃಷ್ಟಂ - ಧೈರ್ಯದಿಂದ ಯುಕ್ತವಾದಂತೆ, ಆತ್ಮಹಿತಂ - ತನಗೆ ಹಿತವಾದ, ಇದಂವಚಃ - ಈ ಮಾತನ್ನು, ಉವಾಚ - ಹೇಳಿದಳು. ‖ ೧೯ ‖ ಹೇ ರಾಮ - ಎಲೈ ಶ್ರೀರಾಮನೆ, ರಾಜಾ - ಅರಸು, ಕುಪಿತಃ ನ - ಕೋಪಿಷ್ಠನಾಗಿಲ್ಲವು, ಅಸ್ಯ - ಈತನಿಗೆ, ವ್ಯಸನಂ - ದುಃಖವು, ಕಿಂಚನ - ಸ್ವಲ್ಪವಾದರೂ, ನ - ಇಲ್ಲ, ಕಿಂತು - ಆದರೆ, ಅಸ್ಯ - ಈ ರಾಜನಿಗೆ, ಕಿಂಚಿತ್ - ಕೊಂಚವಾದ, ಮನೋಗತಂ - ಅಭಿಪ್ರಾಯವು, ಅಸ್ತಿ - ಇರುವುದು, ತ್ವದ್ಭಯಾತ್ - ನಿನ್ನ ಭಯದಿಂದ, ನಾಭಿಭಾಷತೇ - ಮಾತನಾಡುವದಿಲ್ಲ, ಪ್ರಿಯಂ - ಇಷ್ಟನಾದ, ತ್ವಾಂ-ನಿನ್ನನ್ನು ಕುರಿತು, ಅಪ್ರಿಯಂ - ಅಹಿತವಾದ ವಚನವನ್ನು, ವಕ್ತುಂ - ಹೇಳಲು, ಅಸ್ಯ - ಈ ರಾಯನಿಗೆ, ವಾಣೀ - ಮಾತು, ನೋಪವರ್ತತೇ - ಹೊರಡುವುದಿಲ್ಲ, ಯತ್ - ಯಾವ ಮಾತು, ಅನೇನ - ಈತ ನಿಂದ, ಮಮ - ನನಗೆ, ಆಶ್ರುತಂ - ಪ್ರತಿಜ್ಞೆಮಾಡಲ್ಪಟ್ಟಿತೋ, ತತ್-ಅದು, ತ್ವಯಾ - ನಿನ್ನಿಂದ,

---

ನುಡಿಯಿಯೊ? ಈತನ ಚಿತ್ತವೇಕೆ ಕಳವಳಗೊಂಡಿರುವುದು? ಮಹಾರಾಜನೀರೀತಿ ಎಂದೂ ಇದ್ದುದೇ ಇಲ್ಲವಲ್ಲ! ಏತರಿಂದೀರೀತಿಯಾದ ವ್ಯತ್ಯಾಸವಾಗಿರುವುದೋ? ನಿಜತತ್ವವನ್ನುಹೇಳು ವವಳಾಗು.” ‖ ೧೭-೧೮ ‖ ಈ ರೀತಿಯಾಗಿ ಶ್ರೀರಾಮನಿಂದ ಪ್ರಶ್ನಿಸಲ್ಪಟ್ಟ ಕೈಕೇಯಿಯು ನಾಚಿಕೆಯೇನೂ ಇಲ್ಲದೆ ತನಗೆ ಹಿತಕರವಾದ ಈ ನುಡಿಯನ್ನು ಬಹಳ ಧೈರ್ಯದಿಂದ ಹೇಳಿ ದಳು. “ಎಲೈ ಶ್ರೀರಾಮನೆ! ನಿನ್ನ ಜನಕನಾದ ಈ ದಶರಥರಾಜನು ಯಾವ ರೀತಿ ಯಿಂದಲೂ ಕುಪಿತನಾಗಿಲ್ಲವು. ಈತನಿಗೆ ಏತರಿಂದಲೂ ದುಃಖವುಂಟಾಗಿಲ್ಲ. ಈತನ ಮನಸ್ಸಿ ನಲ್ಲಿ ಸ್ವಲ್ಪ ಕಾರ್ಯವನ್ನು ಮಾಡಬೇಕೆಂಬ ಯೋಚನೆಯಿರುವುದು. ಅದು ನಿನ್ನ ಸಂಬಂಧ ವಾದುದರಿಂದ, ನಿನ್ನ ಭೀತಿಯಿಂದ ಅದನ್ನು ಕುರಿತು ಮಾತನಾಡದಿರುವನು. ಪ್ರಿಯ ಪುತ್ರನಾದ ನಿನ್ನನ್ನುದ್ದೇಶಿಸಿ, ಅಪ್ರಿಯವಾದ ನುಡಿಗಳನ್ನಾಡಲು ಈತನಿಗೆ ನಾಲಿಗೆ

ಏಷಮಹ್ಯಂ ವರಂ ದತ್ವಾ ಪುರಾ ಮಾಮಭಿಪೂಜ್ಯಚ ॥ ಸಪಶ್ಚಾತ್ತಪ್ಯತೇ ರಾಜಾ ಯಥಾನ್ಯಃ ಪ್ರಾಕೃತಸ್ತಥಾ ॥ ೨೨ ॥ ಅತಿಸೃಜ್ಯ ದದಾನೀತಿ ವರಂ ಮಮ ವಿಶಾಂಪತಿಃ ॥ ಸನಿರರ್ಥಂ ಗತಜಲೇ ಸೇತುಂ ಬಂಧಿತುಮಿಚ್ಛತಿ ॥೨೩॥ ಧರ್ಮಮೂಲಮಿದಂ ರಾಮ ವಿದಿತಂಚ ಸತಾಮಪಿ ॥ ತತ್ಸತ್ಯಂ ನತ್ಯಜೇದ್ರಾಜಾ ಕುಪಿತಸ್ತ್ವತ್ಕೃತೇ ಯಥಾ ॥ ೨೪ ॥ ಯದಿ ತದ್ವಕ್ಷ್ಯತೇ ರಾಜಾ ಶುಭಂವಾ ಯದಿವಾಽಶುಭಂ ॥ ಕರಿಷ್ಯಸಿ ತತಸ್ಸರ್ವ ಮಾಖ್ಯಾಸ್ಯಾಮಿ ಪುನ

ಅವಶ್ಯಂ - ಅವಶ್ಯವಾಗಿ, ಕಾರ್ಯಂ - ಮಾಡತಕ್ಕದು. || ೨೦-೨೧ || ಏಷರಾಜಾ - ಈ ಅರಸು, ಪುರಾ - ಪೂರ್ವದಲ್ಲಿ, ಮಹ್ಯಂ - ನನಗೆ, ವರಂ - ವರವನ್ನು, ದತ್ವಾ - ಕೊಟ್ಟು, ಮಾಂ - ನನ್ನನ್ನು, ಅಭಿಪೂಜ್ಯಚ - ಸತ್ಕರಿಸಿ, ಸಃ - ಅಂತಹನು, ಪಶ್ಚಾತ್ - ಬಳಿಕ, ಪ್ರಾಕೃತಃ - ಪಾಮರನಾದ, ಅನ್ಯಃ - ಮತ್ತೊಬ್ಬನು, ಯಥಾ - ಹೇಗೆ, ತಪ್ಯತೇ - ಸಂಕಟಪಡುವನೋ, ತಥಾ - ಹಾಗೆ, ತಪ್ಯತೇ - ಪರಿತಪಿಸುತ್ತಾನೆ. || ೨೨ || ವಿಶಾಂಪತಿಃ - ರಾಜನು, ಮಮ - ನನಗೆ, ವರಂ - ವರವನ್ನು, ದದಾನೀತಿ - ಕೊಡುವೆನೆಂದು, ಅತಿಸೃಜ್ಯ - ಪ್ರತಿಜ್ಞೆಮಾಡಿ, ಗತಜಲೇ - ನೀರು ಹೋದ ಮೇಲೆ, ನಿರರ್ಥಂ - ಪ್ರಯೋಜನವಿಲ್ಲದೆ, ಸೇತುಂ - ಸೇತುವನ್ನು, ಬಂಧಿತುಂ-ಕಟ್ಟುವಂತೆ, ಇಚ್ಛತಿ- ಇಚ್ಛಿಸುತ್ತಾನೆ. || ೨೩ || ಹೇ ರಾಮ - ಎಲೈ ಶ್ರೀರಾಮನೆ, ಇದಂ-ಈ ಸತ್ಯವು, ಧರ್ಮಮೂಲಂ- ಧರ್ಮಕ್ಕೆ ಮೂಲಕಾರಣವು, ಸತಾಮಪಿ - ಸತ್ಪುರುಷರಿಗೂ, ವಿಧಿತಂ - ತಿಳಿದೇ ಇಧೆ, ತತ್ - ಆ ಕಾರಣ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ರಾಜಾ - ಅರಸು, ಮಯಿ - ನನ್ನಲ್ಲಿ, ಕುಪಿತಃ - ಕೋಪಿಷ್ಠನಾಗಿ, ಯಥಾ - ಹೇಗೆ, ಸತ್ಯಂ - ಸತ್ಯವನ್ನು, ನತ್ಯಜೇತ್ - ಬಿಡಲಾರನೋ, ತಥಾ - ಹಾಗೆ, ಕುರು - ಮಾಡು. || ೨೪ || ರಾಜಾ - ಒಡೆಯನು, ಶುಭಂವಾ - ಒಳ್ಳೆಯದನ್ನೋ ಆಗಲಿ, ಯದಿವಾ - ಹಾಗಲ್ಲದಿದ್ದರೆ, ಅಶುಭಂವಾ - ಕೆಟ್ಟದನ್ನೋ ಆಗಲಿ, ಯತ್ - ಯಾವದನ್ನು, ವಕ್ಷ್ಯತೇ- ಹೇಳುವನೋ, ತತ್ - ಅದನ್ನು, ಕರಿಷ್ಯಸಿಯದಿ - ಮಾಡುವೆಯೋ ಆದರೆ, ತತಃ - ಬಳಿಕ, ಸರ್ವಂ-

ಬಾರದು. ಈ ರಾಯನು ನನಗೆ ಎರಡು ವರಗಳನ್ನು ಕೊಡುತ್ತೇನೆಂದು ಪ್ರತಿಜ್ಞೆ ಮಾಡಿ ಕೊಟ್ಟಿರುವನು. ಅದನ್ನು ನೀನು ನಡೆಯಿಸಿ ಕೊಡಬೇಕು. ‖ ೧೯-೨೧ ‖ ಪೂರ್ವದಲ್ಲಿ ನಾನೀತನಿಗೆ ಮಾಡಿದ ಉಪಕಾರವನ್ನು ಶ್ಲಾಘಿಸಿ, ಈ ರಾಯನು ನನಗೆ ಎರಡು ವರಗಳನ್ನು ಕೊಡುತ್ತೇನೆಂದು ಪ್ರಮಾಣ ಮಾಡಿ ಕೊಟ್ಟು, ಈಗ ಆ ವರಗಳನ್ನು ಕೊಡದೆ ಸಾಮಾನ್ಯ ಪುರುಷನಂತೆ ಸಂಕಟಪಡುತ್ತಿದ್ದಾನೆ. ಇದು ನೀರು ಹರಿದು ಹೋದ ಬಳಿಕ ಕೆರೆಗೆ ಕಟ್ಟೆ ಗಟ್ಟುವಂತೆ ಕೇವಲ ನಿರರ್ಥಕವಾದುದಲ್ಲವೆ? ಶ್ರೀರಾಮ! ಲೋಕದಲ್ಲಿ ಸತ್ಪುರುಷರು ಸತ್ಯವೇ ಧರ್ಮಕ್ಕೆ ಮೂಲಕಾರಣವೆಂದು ಹೇಳುತ್ತಿರುವರು. ಆದುದರಿಂದ ಮಹಾರಾಜನು ನಿನಗಾಗಿ ನನ್ನಮೇಲೆ ಕೋಪಗೊಂಡು ಸತ್ಯವನ್ನು ಮೀರದಿರುವಂತೆ ಮಾಡುವವನಾಗು. ‖ ೨೨-೨೪ ‖ ಈತನು ಮಂಗಳವನ್ನೋ ಅಮಂಗಳವನ್ನೋ ಯಾವುದನ್ನು ಹೇಳಿದರೂ ಮಾಡುವೆನೆಂದು, ನೀನೀಗ ಮಾತು ಕೊಡುವೆಯಾದರೆ ಸಂಗತಿಯೆಲ್ಲವನ್ನೂ ವಿಶದವಾಗಿ ಹೇಳುತ್ತೇನೆ. ಮಹಾರಾಜನ ಅನುಮತಿಯಂತೆ ನಾನು ನಿನಗೀ ವಿಷಯವನ್ನು ಹೇಳಿ

ಸ್ತ್ವಹಂ ||೨೫|| ಯದಿತ್ಯಭಿಹಿತಂ ರಾಜ್ಞಾ ತ್ವಯಿ ತನ್ನವಿಪತ್ಸ್ಯತೇ || ತತೋಽಹ ಮಭಿಧಾಸ್ಯಾಮಿ ನಹ್ಯೇಷ ತ್ವಯಿ ವಕ್ಷ್ಯತಿ || ೨೬ || ಏತತ್ತು ವಚನಂ ಶ್ರುತ್ವಾ ಕೈಕೇಯ್ಯಾ ಸಮುದಾಹೃತಂ || ಉವಾಚ ವ್ಯಥಿತೋ ರಾಮ ಸ್ತಾಂ ದೇವೀಂ ನೃಪಸನ್ನಿಧೌ || ೨೭ || ಅಹೋ ಧಿಙ್ನಾರ್ಹಸೇ ದೇವಿ ವಕ್ತುಂ ಮಾಮೀದೃಶಂ ವಚಃ || ಅಹಂಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ || ೨೮ || ಭಕ್ಷಯೇಯಂ ವಿಷಂ ತೀಕ್ಷ್ಣಂ ಮಜ್ಜೇಯಮಪಿ ಚಾರ್ಣವೇ || ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನಚ || ೨೯ || ತದ್ಬ್ರೂಹಿ ವಚನಂ

ಸಮಸ್ತವನ್ನೂ, ಅಹಂತು - ನಾನು, ಪುನಃ - ಮತ್ತು, ಆಖ್ಯಾಸ್ಯಾಮಿ - ಹೇಳುವೆನು. || ೨೫ || ರಾಜ್ಞಾ - ಅರಸನ ಅಪ್ಪಣೆಯಂತೆ ನನ್ನಿಂದ, ಅಭಿಹಿತಂಯದಿ - ಹೇಳಲ್ಪಟ್ಟುದೇ ಆದರೆ, ತ್ವಯಿ - ನಿನ್ನ ವಿಷಯದಲ್ಲಿ, ತತ್ - ಅದು, ನವಿಪತ್ಸ್ಯತೇ - ವ್ಯರ್ಥವಾಗುವುದಿಲ್ಲ, ತತಃ - ಆ ಕಾರಣ, ಅಹಂ - ನಾನು, ಅಭಿಧಾಸ್ಯಾಮಿ - ಹೇಳುವೆನು, ಏಷಃ - ಈತನು, ತ್ವಯಿ - ನಿನ್ನ ವಿಷಯವಾಗಿ, ನವಕ್ಷ್ಯತಿಹಿ - ಹೇಳುವದಿಲ್ಲವಷ್ಟೆ. || ೨೬ || ರಾಮಃ - ಶ್ರೀರಾಮನು, ಕೈಕೇಯ್ಯಾ - ಕೈಕೇಯಿಾ ದೇವಿಯಿಂದ, ಸಮುದಾಹೃತಂ-ಚನ್ನಾಗಿಹೇಳಲ್ಪಟ್ಟ, ಏತದ್ವಚನಂತು-ಈ ವಾಕ್ಯವನ್ನು, ಶ್ರುತ್ವಾ-ಕೇಳಿ, ವ್ಯಥಿತಃ - ದುಃಖಿತನಾಗಿ, ತಾಂ ದೇವೀಂ - ಆ ಕೈಕೇಯಿಯನ್ನು ಕುರಿತು, ನೃಪಸನ್ನಿಧೌ - ರಾಜನ ಬಳಿಯಲ್ಲಿ, ಉವಾಚ - ಹೇಳಿದನು. || ೨೭ || ಹೇ ದೇವಿ - ಎಲೌ ಕೈಕೇಯಿಯೆ, ಅಹೋ - ಕಷ್ಟವು, ಧಿಕ್ - ನಿಂದಿಸು, ಮಾಂ - ನನ್ನನ್ನು ಕುರಿತು, ಈದೃಶಂವಚಃ - ಇಂತಹ ಮಾತನ್ನು, ವಕ್ತುಂ - ಹೇಳಲು, ನಾರ್ಹಸೇ - ಯೋಗ್ಯಳಾಗದಿರು, ಗುರುಣಾ - ಗುರುವೂ, ನೃಪೇಣ - ಅರಸನೂ, ಹಿತೇನಚ - ಹಿತಕರನೂ ಆದ, ಪಿತ್ರಾ - ತಂದೆಯಿಂದ, ನಿಯುಕ್ತಃ - ನಿಯಮಿಸಲ್ಪಟ್ಟ, ಅಹಂಹಿ - ನಾನಾದರೆ, ರಾಜ್ಞಃ - ರಾಜನ, ವಚನಾತ್ - ಮಾತಿನಿಂದ, ಪಾವಕೇಪಿ - ಅಗ್ನಿಯಲ್ಲಿಯಾದರೂ, ಪತೇಯಂ - ಬೀಳುತ್ತೇನೆ, ತೀಕ್ಷ್ಣಂ - ಕ್ರೂರವಾದ, ವಿಷಂ - ವಿಷವನ್ನು, ಭಕ್ಷಯೇಯಂ - ಪಾನಮಾಡುತ್ತೇನೆ, ಅರ್ಣವೇಪಿಚ - ಸಮುದ್ರದಲ್ಲಿಯಾದರೂ, ಮಜ್ಜೇಯಂ - ಮುಳುಗುತ್ತೇನೆ. ||೨೭-೨೯|| ಹೇ ದೇವೀ - ಎಲೌ ದೇವಿಯೆ, ರಾಜ್ಞಃ-ಅರಸನಿಗೆ, ಯತ್-ಯಾವುದು, ಅಭಿಕಾಂಕ್ಷಿತಂ-

---

ದರೆ ಅದು ನಿನ್ನಲ್ಲಿ ನಿರರ್ಥಕವಾಗಲಾರದು. ಆದುದರಿಂದ ನಾನೇ ನಿರೂಪಿಸುತ್ತೇನೆ. ಈತನು ಪ್ರತ್ಯಕ್ಷವಾಗಿ ಆ ವಿಷಯವನ್ನು ನಿನಗೆ ಹೇಳಲಾರನು." || ೨೫-೨೬ || ಕೈಕೇಯಿಾ ದೇವಿಯು ಈ ಪ್ರಕಾರವಾಗಿ ನುಡಿಯಲು ಶ್ರೀರಾಮ ಮೂರ್ತಿಯು ಬಹಳವಾದ ದುಃಖ ವನ್ನು ಹೊಂದಿ, ದಶರಥರಾಯನ ಸಮ್ಮುಖದಲ್ಲಿಯೇ ಆ ಕೇಕಯರಾಯನ ಮಗಳನ್ನು ಕುರಿತು, "ಎಲೌ ದೇವಿಯೆ! "ತಂದೆಯು ಮಾತನ್ನು ನಡಿಸಿ ಕೊಡುವನೋ ಇಲ್ಲವೋ" ಎಂದು ಸಂದೇಹಪಟ್ಟು ಇಂತಹ ಮಾತುಗಳನ್ನಾಡದಿರು. ಒಡೆಯನಾಣತಿಯಿಂದ ಬೆಂಕಿ ಯಲ್ಲಾದರೂ ಧುಮ್ಮಿಕ್ಕುವೆನು. ವಿಷವನ್ನಾದರೂ ಪಾನ ಮಾಡುತ್ತೇನೆ; ಎಂದ ಮೇಲೆ ತಂದೆಯ ಮಾತಿನ ಮೇಲೆ ಯಾವ ಕೆಲಸವನ್ನು ತಾನೆ ಮಾಡದೇ ಇದ್ದೇನು? || ೨೭-೨೯ || ಆದುದರಿಂದ ಸಂಶಯವನ್ನು ಬಿಡು. ಮಹಾರಾಜನಿಗೆ ಯಾವದು ಇಷ್ಟವಾದುದೋ ಅದನ್ನು

ದೇವಿ ರಾಜ್ಞೋ ಯದಭಿಕಾಂಕ್ಷಿತಂ ॥ ಕರಿಷ್ಯೇ ಪ್ರತಿಜಾನೇಚ ರಾಮೋ ದ್ವಿರ್ನಾಭಿಭಾಷತೇ ॥ ೩೦ ॥ ತಮಾರ್ಜವ ಸಮಾಯುಕ್ತಮನಾರ್ಯಾ ಸತ್ಯವಾದಿನಂ ॥ ಉವಾಚ ರಾಮಂ ಕೈಕೇಯೀ ವಚನಂ ಭೃಶ ದಾರುಣಂ ॥ ೩೧ ॥ ಪುರಾ ದೈವಾಸುರೇ ಯುದ್ಧೇ ಪಿತ್ರಾ ತೇ ಮಮ ರಾಘವ ॥ ರಕ್ಷಿತೇನ ವರೌ ದತ್ತೌ ಸಶಲ್ಯೇನ ಮಹಾರಣೇ ॥ ೩೨ ॥ ತತ್ರ ಮೇ ಯಾಚಿತೋ ರಾಜಾ ಭರತಸ್ಯಾಭಿಷೇಚನಂ ॥ ಗಮನಂ ದಂಡಕಾರಣ್ಯೇ ತವಚಾದ್ಯೈವ

ಇಷ್ಟವಾದುದೋ, ತದ್ವಚನಂ - ಆ ಮಾತನ್ನು, ಬ್ರೂಹಿ - ಹೇಳು, ಕರಿಷ್ಯೇ - ಮಾಡುವೆನು, ಪ್ರತಿಜಾನೇಚ - ಪ್ರತಿಜ್ಞೆಯನ್ನೂ ಮಾಡುವೆನು, ರಾಮಃ - ಶ್ರೀರಾಮನು, ದ್ವಿಃ - ಎರಡುಸಲ, (೧) ನಾಭಿಭಾಷತೇ - ಮಾತನಾಡುವದಿಲ್ಲ. ॥ ೩೦ ॥ ಅನಾರ್ಯಾ - ದುಷ್ಟಳಾದ, ಕೈಕೇಯೀ - ಕೈಕೇಯಿಯು, ಆರ್ಜವಸಮಾಯುಕ್ತಂ - ಅಕೌಟಿಲ್ಯದಿಂದ ಕೂಡಿರುವ, ಸತ್ಯವಾದಿನಂ - ಸತ್ಯವನ್ನೇ ನುಡಿಯುತ್ತಿರುವ, ತಂರಾಮಂ - ಆ ಶ್ರೀರಾಮನನ್ನು ಕುರಿತು, ಭೃಶದಾರುಣಂ - ಮಹಾ ಭಯಂಕರವಾದ, ವಚನಂ - ಮಾತನ್ನು, ಉವಾಚ - ಹೇಳಿದಳು. ॥ ೩೧ ॥ ಹೇ ರಾಘವ - ಎಲೈ ಶ್ರೀರಾಮನೇ, ಪುರಾ - ಪೂರ್ವದಲ್ಲಿ, ದೈವಾಸುರೇ - ದೇವರಾಕ್ಷಸ ಸಂಬಂಧವಾದ, ಯುದ್ಧೇ - ಕಾಳಗದಲ್ಲಿ, ಸಶಲ್ಯೇನ-ಬಾಣಶಲ್ಯಗಳಿಂದೊಡಗೂಡಿದ, (ಮಯಾ) ರಕ್ಷಿತೇನ-ನನ್ನಿಂದ ಸಂರಕ್ಷಿಸಲ್ಪಟ್ಟ, ತೇಪಿತ್ರಾ-ನಿಮ್ಮ ತಂದೆಯಿಂದ, ವರೌ - ಎರಡುವರಗಳು, ಮಮ - ನನಗೆ, ಮಹಾರಣೇ - ಮಹಾಕಾಳಗದಲ್ಲಿ, ದತ್ತೌ - ಕೊಡಲ್ಪಟ್ಟವು. ॥ ೩೨ ॥ ಹೇ ರಾಘವ - ಎಲೈ ಶ್ರೀರಾಮನೆ, ತತ್ರ-ಆ ಎರಡುವರಗಳಲ್ಲಿ, ರಾಜಾ - ಅರಸು, ಮೇ - ನನ್ನಿಂದ, ಭರತಸ್ಯ - ಭರತನಿಗೆ, ಅಭಿಷೇಚನಂ - ಪಟ್ಟಾಭಿಷೇಕವನ್ನು

ನಿರೂಪಿಸು. ನಾನು ಖಂಡಿತವಾಗಿಯೂ ಆ ವಚನವನ್ನು ನಡೆಯಿಸುತ್ತೇನೆಂದು ಪ್ರಮಾಣ ಮಾಡುತ್ತೇನೆ. ಶ್ರೀರಾಮನು ಎಂದಿಗೇ ಆಗಲಿ ಎರಡು ವಿಧವಾಗಿ ಮಾತನಾಡುವವನಲ್ಲ" ಎಂದು ನುಡಿದನು. ॥೩೦॥ ಆಗ ದುಷ್ಟ ಚಾರಿಣಿಯಾದ ಆ ಕೈಕೇಯಿಯು ನಿಜವಾಗಿ ಕಪಟವಿಲ್ಲದೆ ನುಡಿಯುತ್ತಿರುವ ಆ ರಘುನಂದನನನ್ನು ಕುರಿತು ಮಹಾ ಭಯಂಕರವಾದ ಈ ಮಾತನ್ನಾಡತೊಡಗಿದಳು. ॥ ೩೧ ॥ "ಅಯ್ಯಾ ರಘುಕುಲಕ್ಕೆ ತಿಲಕಪ್ರಾಯನಾದ ಶ್ರೀರಾಮಚಂದ್ರನೇ! ಹಾಗಿದ್ದರೆ ಕೇಳು ; ಪೂರ್ವ ಕಾಲದಲ್ಲಿ ಸುರಾಸುರ ಸಂಗರಲ್ಲಿ ನಿನ್ನ ತಂದೆಯಾದೀ ದಶರಥರಾಯನು ರಾಕ್ಷಸರಿಂದ ಬಾಧಿತನಾಗಿ ಮೂರ್ಛಿತನಾಗಲು, ಆತನನ್ನು ಪಚರಿಸಿ ಪ್ರಾಣ ಸಂರಕ್ಷಣೆಯನ್ನು ಮಾಡಿದೆನು. ಆಗ ಸಂತುಷ್ಟಾಂತರಂಗನಾದೀ ರಾಯನು ನನಗೆ ಎರಡು ವರಗಳನ್ನು ಕೊಟ್ಟವನಾದನು. ॥ ೩೨ ॥ ಆ ಎರಡು ವರಗಳಲ್ಲಿ ಈಗ ಭರತನಿಗೆ ಪಟ್ಟಾಭಿಷೇಕ ಮಾಡುವಂತೆಯೂ, ನೀನು ಹದಿನಾಲ್ಕು ವರುಷಗಳವರೆವಿಗೂ

ಟಿ. (೧) (ಗೋ) ಶ್ರೀರಾಮನು ಯಾವ ಕಾರ್ಯವನ್ನು ಕುರಿತು ಮಾತನಾಡುವನೋ ಅದರ ವಿಷಯದಲ್ಲಿ ಪ್ರತಿಜ್ಞೆ ಮಾಡಿ ಅದನ್ನು ಎರಡು ಸಲ ಹೇಳುವುದಿಲ್ಲ. (ಮ) ಮೊದಲಾವ ಮಾತನ್ನು ನುಡಿವನೋ ಅದನ್ನು ಮರೆಗೊಳಿಸುವ ಮತ್ತೊಂದು ನುಡಿಯನ್ನಾಡುವುದಿಲ್ಲ ಎಂದು ಭಾವವು.



The Sentence.

Lakshmi Art, Bombay 8.

ರಾಘವ ॥೩೩॥ ಯದಿ ಸತ್ಯಪ್ರತಿಜ್ಞಂ ತ್ವಂ ಪಿತರಂ ಕರ್ತುಮಿಚ್ಛಸಿ॥ ಆತ್ಮಾನಂ ಚ ನರಶ್ರೇಷ್ಠ ಮಮವಾಕ್ಯಮಿದಂ ಶೃಣು ॥ ೩೪ ॥ ಸನ್ನಿದೇಶೇ ಪಿತುಸ್ತಿಷ್ಠ ಯಥಾ ತೇನ ಪ್ರತಿಶ್ರುತಂ ॥ ತ್ವಯಾಽರಣ್ಯಂಪ್ರವೇಷ್ಟವ್ಯಂ ನವವರ್ಷಾಣಿ ಪಂಚಚ ॥ ೩೫ ॥ ಭರತ ಸ್ತ್ವಭಿಷಿಚ್ಯೇತ ಯದೇತದಭಿಷೇಚನಂ ॥ ತ್ವದರ್ಥೇ ವಿಹಿತಂ ರಾಜ್ಞಾ ತೇನ ಸರ್ವೇಣ ರಾಘವ ॥ ೩೬ ॥ ಸಪ್ತಸಪ್ತಚ ವರ್ಷಾಣಿ ದಂಡಕಾರಣ್ಯಮಾಶ್ರಿತಃ ॥ ಅಭಿಷೇಕಮಿಮಂ ತ್ಯಕ್ತ್ವಾ ಜಟಾಜಿನ ಧರೋ ವಸ ॥ ೩೭ ॥ ಭರತಃ ಕೋಸಲಪುರೇ ಪ್ರಶಾಸ್ತು ವಸುಧಾಮಿಮಾಂ ॥ ನಾನಾ ರತ್ನ ಸಮಾಕೀರ್ಣಾಂ ಸವಾಜಿ ರಥಕುಂಜರಾಂ ॥ ೩೮ ॥ ಏತೇನ ತ್ವಾಂ

ಕುರಿತು, ತವಚ - ನಿನಿಗಾದರೋ, ಅದ್ಯೈವ - ಈಗಲೆ, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ಗಮನಂ - ಹೋಗುವಿಕೆಯನ್ನು ಕುರಿತು, ಯಾಚಿತಃ - ಪ್ರಾರ್ಥಿಸಲ್ಪಟ್ಟನು. ॥ ೩೩ ॥ ತ್ವಂ - ನೀನು, ಪಿತರಂ - ತಂದೆಯನ್ನೂ, ಆತ್ಮಾನಂ - ನಿನ್ನನ್ನೂ, ಸತ್ಯ ಪ್ರತಿಜ್ಞಂ - ಸತ್ಯವಾದ ಪ್ರತಿಜ್ಞೆ ಯುಳ್ಳವರನ್ನಾಗಿ, ಕರ್ತುಂ-ಮಾಡುವದಕ್ಕೆ, ಇಚ್ಛಸಿಯದಿ-ಅಪೇಕ್ಷಿಸಿದವನಾದರೆ, ಹೇ ನರಶ್ರೇಷ್ಠ - ಎಲೈ ಪುರುಷಶ್ರೇಷ್ಠನೆ, ಮಮ - ನನ್ನ, ಇದಂವಾಕ್ಯಂ - ಈ ಮಾತನ್ನು, ಶೃಣು - ಕೇಳು. ॥೩೪॥ ಪಿತುಃ - ತಂದೆಯ, ಸನ್ನಿದೇಶೇ - ಆಜ್ಞಾವಚನದಲ್ಲಿ, ತಿಷ್ಠ - ಇರು, ತೇನ - ಆ ಜನಕನಿಂದ, ಯಥಾ ಪ್ರತಿಶ್ರುತಂ - ಹೇಗೆ ಪ್ರತಿಜ್ಞೆಮಾಡಲಾಯಿತೋ, ತಥಾ - ಹಾಗೆ, ತ್ವಯಾ - ನಿನ್ನಿಂದ, ಅರಣ್ಯಂ - ಅರಣ್ಯವು, ನವವರ್ಷಾಣಿಪಂಚಚ - ಹದಿನಾಲ್ಕು ವರುಷಗಳು, ಪ್ರವೇಷ್ಟವ್ಯಂ - ಪ್ರವೇಶ ಮಾಡಲ್ಪಡತಕ್ಕುದು. ॥ ೩೫ ॥ ಹೇ ರಾಘವ - ಎಲೈ ಶ್ರೀರಾಮನೇ, ತ್ವದರ್ಥೇ - ನಿನ್ನನಿಮಿತ್ತವಾಗಿ, ರಾಜ್ಞಾ - ಅರಸನಿಂದ, ಯದೇತತ್ - ಯಾವ ಈ, ಅಭಿಷೇಚನಂ - ಅಭಿಷೇಕ ಸಾಮಗ್ರಿಯು, ವಿಹಿತಂ - ಮಾಡಲ್ಪಟ್ಟಿರುವುದೋ, ಸರ್ವೇಣ - ಸಮಸ್ತವಾದ, ತೇನ - ಆ ಪದಾರ್ಥಗಳಿಂದ, ಭರತಸ್ತು - ಭರತನಾದರೆ, ಅಭಿಷಿಚ್ಯೇತ - ಅಭಿಷೇಕಮಾಡಲ್ಪಡಲಿ. ॥ ೩೬ ॥ ಇಮಮಭಿಷೇಕಂ- ಈ ಅಭಿಷೇಕವನ್ನು, ತ್ಯಕ್ತ್ವಾ - ಬಿಟ್ಟು, (ತ್ವಂ-ನೀನು,) ಸಪ್ತಸಪ್ತಚವರ್ಷಾಣಿ - ಹದಿನಾಲ್ಕು ವರುಷ ಗಳು, ದಂಡಕಾರಣ್ಯಂ - ದಂಡಕಾರಣ್ಯವನ್ನು, ಆಶ್ರಿತಃ - ಹೊಂದಿದವನಾಗಿ, ಜಟಾಜಿನಧರಃ - ಜಡೆ ಗಳನ್ನು ಕೃಷ್ಣಾಜಿನವನ್ನೂ ಧರಿಸಿ, ವಸ - ಇರುವವನಾಗು. ॥೩೭॥ ಭರತಃ-ಭರತನು, ಕೋಸಲಪುರೇ- ಅಯೋಧ್ಯಾಪಟ್ಟಣದಲ್ಲಿ, ನಾನಾರತ್ನಸಮಾಕೀರ್ಣಾಂ - ಅನೇಕರತ್ನಗಳಿಂದ ಕೂಡಿರುವ, ಸವಾಜಿರಥ

ದಂಡಕಾರಣ್ಯದಲ್ಲಿರುವಂತೆಯೂ ಬೇಡಿದೆನು. ಈಗ ನೀನು ನಿನ್ನ ಜನಕನನ್ನೂ ನಿನ್ನನ್ನೂ ಸತ್ಯಪ್ರತಿಜ್ಞೆಯುಳ್ಳವರನ್ನಾಗಿ ಮಾಡಿಕೊಳ್ಳಬೇಕೆಂದಪೇಕ್ಷಿಸಿದರೆ ನನ್ನ ನುಡಿಗಳನ್ನಾಲಿಸಿ ಹದಿನಾಲ್ಕು ವರುಷಗಳ ಕಾಲ ದಂಡಕಾರಣ್ಯದಲ್ಲಿ ವಾಸ ಮಾಡುತ್ತ ತಂದೆಯ ಆಜ್ಞೆಯಲ್ಲಿರು. ॥ ೩೩-೩೫ ॥ ಈಗ ಸಿದ್ಧವಾಗಿರುವ ನಿನ್ನ ಯೌವರಾಜ್ಯಾಭಿಷೇಕ ಸಲಕರಣಗಳಿಂದ ಭರತನು ಅಭಿಷಿಕ್ತನಾಗಲಿ. ಆದಕಾರಣ ಈಗ ನೀನು ಯೌವರಾಜ್ಯಾಭಿಷಿಕ್ತನಾಗದೆ ಜಟೆಗಳನ್ನು ಬಿಡಿಸಿ, ಕೃಷ್ಣಾಜಿನವನ್ನು ಧರಿಸಿ ಹದಿನಾಲ್ಕು ವರುಷಗಳ ಕಾಲ ದಂಡಕಾರಣ್ಯದಲ್ಲಿರುವವನಾಗು. ॥೩೬-೩೭॥ ನನ್ನ ಮಗನಾದ ಭರತನು ಈ ಅಯೋಧ್ಯೆಯಲ್ಲಿ ವಿಧವಿಧಗಳಾದ

ನರೇಂದ್ರೋಽಯಂ ಕಾರುಣ್ಯೇನ ಸಮಾಪ್ಲುತಃ ॥ ಶೋಕ ಸಂಕ್ಲಿಷ್ಟವದನೋ ನಶಕ್ನೋತಿ ನಿರೀಕ್ಷಿತುಂ ॥ ೩೯ ॥ ಏತತ್ಕುರು ನರೇಂದ್ರಸ್ಯ ವಚನಂ ರಘುನಂದನ ॥ ಸತ್ಯೇನ ಮಹತಾ ರಾಮ ತಾರಯಸ್ವ ನರೇಶ್ವರಂ ॥ ೪೦ ॥

ಇತೀವ ತಸ್ಯಾಂ ಪರುಷಂ ವದಂತ್ಯಾಂ
ನಚೈವ ರಾಮಃ ಪ್ರವಿವೇಶಶೋಕಂ ॥
ಪ್ರವಿವ್ಯಥೇಚಾಪಿ ಮಹಾನುಭಾವೋ
ರಾಜಾತು ಪುತ್ರವ್ಯಸನಾಭಿತಪ್ತಃ ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾದಶಸ್ಸರ್ಗಃ

ಕುಂಜರಾಂ - ಕುದುರೆಗಳಿಂದಲೂ ರಥಗಳಿಂದಲೂ ಆನೆಗಳಿಂದಲೂ ಯುಕ್ತವಾದ, ಇಮಾಂವಸುಧಾಂ ಈ ಭೂಮಿಯನ್ನು, ಪ್ರಶಾಸ್ತು - ಸಂರಕ್ಷಿಸಲಿ, ಅಯಂನರೇಂದ್ರಃ - ಈ ರಾಜನು, ಏತೇನ - ಈ ವರದ್ವಯಪ್ರದಾನವೇ ಹೇತುವಾಗಿ ಉಳ್ಳ, ಕಾರುಣ್ಯೇನ - ದಯೆಯಿಂದ, ಸಮಾಪ್ಲುತಃ - ಕೂಡಿ, ಶೋಕಸಂಕ್ಲಿಷ್ಟವದನಃ - ವ್ಯಸನದಿಂದ ಕಂಗೆಟ್ಟ ಮುಖವುಳ್ಳವನಾಗಿ, ತ್ವಾಂ - ನಿನ್ನನ್ನು, ನಿರೀಕ್ಷಿತುಂ - ನೋಡುವುದಕ್ಕೆ, ನಶಕ್ನೋತಿ - ಶಕ್ತನಾಗಿಲ್ಲವು. ॥ ೩೮-೩೯ ॥ ಹೇ ರಘುನಂದನ - ಎಲೈ ರಘುಕುಲಾನಂದಕರನೇ, ಹೇ ರಾಮ - ಎಲೈ ಶ್ರೀರಾಮನೇ, ನರೇಂದ್ರಸ್ಯ - ಅರಸಿನ, ಏತದ್ವಚನಂ- ಈ ಮಾತನ್ನು, ಕುರು - ನಡೆಯಿಸು, ಮಹತಾ ಮಹತ್ತರವಾದ, ಸತ್ಯೇನ - ಸತ್ಯದಿಂದ, ನರೇಶ್ವರಂ- ಅರಸನನ್ನು, ತಾರಯಸ್ವ - ಉದ್ಧರಿಸು. ॥ ೪೦ ॥ ಇತೀವ - ಹೀಗೆಯೇ, ತಸ್ಯಾಂ - ಆ ಕೈಕೇಯಿದೇವಿಯು, ಪರುಷಂ - ಕಠಿಣವಾಗಿ, ವದಂತ್ಯಾಂ - ಹೇಳುತ್ತಿರಲು, ರಾಮಃ-ಶ್ರೀರಾಮನು, ಶೋಕಂಚ - ವ್ಯಸನವನ್ನೂ ಕೂಡ, ನಪ್ರವಿವೇಶೈವ - ಹೊಗಲೇ ಇಲ್ಲ, ಮಹಾನುಭಾವಃ - ಮಹಾಮನಸ್ವಿಯಾದ, ರಾಜಾತು - ಅರಸನಾದರೆ, ಪುತ್ರವ್ಯಸನಾಭಿತಪ್ತಃ - ಪುತ್ರವಿಷಯಕವಾದ ವ್ಯಸನದಿಂದ ಸಂತಪಿಸುತ್ತ, ಪ್ರವಿವ್ಯಥೇ - ವ್ಯಸನಗೊಂಡನು. ॥ ೪೧ ॥

ಇತ್ಯಾರ್ಷೇ ಶ್ರೀರಾಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾದಶಸ್ಸರ್ಗಃ.

ರತ್ನಗಳಿಂದ ತುಂಬಿದುದಾಗಿಯೂ, ಕುದುರೆ, ಆನೆ, ರಥ ಮತ್ತು ಪದಾತಿಗಳಿಂದ ಕೂಡಿದುದಾಗಿಯೂ ಇರುವ ಈ ಭೂಮಂಡಲವನ್ನಾಳುತ್ತಿರಲಿ. ಈ ವಿಷಯವನ್ನು ನಿನಗೆ ಹೇಳಬೇಕಾಗಿದ್ದುದರಿಂದಲೇ ಮಹಾರಾಜನಾದ ದಶರಥನು ಶೋಕಾಕ್ರಾಂತನಾಗಿ ಕಂಗೆಟ್ಟ ಮುಖವುಳ್ಳವನಾಗಿರುವುದು. ಆದುದರಿಂದಲೇ ಈತನು ನಿನ್ನನ್ನು ನೋಡದಿರುವುದು. ॥೩೮-೩೯॥ ಎಲೈ ರಘುಕುಲಾನಂದಕರನಾದ ಶ್ರೀರಾಮನೆ! ಮಹಾರಾಜನ ಈ ಮಾತನ್ನು ಕೇಳಿ ಆತನನ್ನು ಸತ್ಯದಿಂದ ಉದ್ಧರಿಸುವವನಾಗು." ಹೀಗೆ ಕೈಕೇಯಿಯು ಮಹಾ ಕ್ರೂರವಾಗಿ ನುಡಿಯುತ್ತಿದ್ದರೂ, ಮಹಾತ್ಮನಾದ ಆ ಶ್ರೀರಾಮನು ಅಂತಸ್ತಾಪವನ್ನಾಗಲಿ, ಮುಖವಿವರ್ಣತೆಯನ್ನಾಗಲಿ, ಬಹಿರಂಗ ದುಃಖ ಸೂಚನೆಯನ್ನಾಗಲಿ ಹೊಂದದೆ ಪ್ರಸನ್ನ ಮುಖನಾಗಿಯೇ ಇದ್ದನು. ದಶರಥ ಮಹಾರಾಜನಾದರೋ ಪುತ್ರವ್ಯಸನದಿಂದ ಬಹಳವಾಗಿ ಸಂಕಟಪಡುತ್ತಿದ್ದನು. ॥೪೦-೪೧॥

ಇಂತಿದು ಕೈಕೇಯ್ಯೋಕ್ತ ಶ್ರೀರಾಮ ವನಗಮನ ವೃತ್ತಾಂತ ವರ್ಣನೆಯೆಂಬ
ಹದಿನೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನವಿಂಶಸ್ಸರ್ಗಃ.

ತದಪ್ರಿಯಮಮಿತ್ರಘ್ನೋ ವಚನಂ ಮರಣೋಪಮಂ ॥ ಶ್ರುತ್ವಾ ನವಿವ್ಯಥೇ ರಾಮಃ ಕೈಕೇಯೀಮಿದಮಬ್ರವೀತ್ ॥ ೧ ॥ ಏವಮಸ್ತು ಗಮಿಷ್ಯಾಮಿ ವನಂ ವಸ್ತುಮಹಂತ್ವಿತಃ ॥ ಜಟಾಜಿನಧರೋ ರಾಜ್ಞಃ ಪ್ರತಿಜ್ಞಾಮನುಪಾಲಯನ್ ॥ ೨ ॥ ಇದಂತುಜ್ಞಾತುಮಿಚ್ಛಾಮಿ ಕಿಮರ್ಥಂ ಮಾಂ ಮಹೀಪತಿಃ ॥ ನಾಭಿನಂದತಿ ದುರ್ಧರ್ಷೋ ಯಥಾಪೂರ್ವಮರಿಂದಮಃ ॥೩॥ ಮನ್ಯುರ್ನಚ ತ್ವಯಾ ಕಾರ್ಯೋ ದೇವೀ ಬ್ರೂಮಿ ತವಾಗ್ರತಃ ॥ ಯಾಸ್ಯಾಮಿ ಭವ ಸುಪ್ರೀತಾ ವನಂ ಚೀರ ಜಟಾಧರಃ ॥ ೪ ॥ ಹಿತೇನ ಗುರುಣಾ ಪಿತ್ರಾ

ಅಮಿತ್ರಘ್ನಃ - ಶತ್ರುಸಂಹಾರಕನಾದ, ರಾಮಃ - ಶ್ರೀರಾಮನು, ಮರಣೋಪಮಂ - (ಗೋ + ಮ) ಲೋಕದೃಷ್ಟಿಯಿಂದ ಮರಣಕ್ಕೆ ಸಮಾನವಾದ, ಅಪ್ರಿಯಂ-ಅಹಿತವಾದ, ತದ್ವಚನಂ-ಆ ಮಾತನ್ನು, ಶ್ರುತ್ವಾ - ಕೇಳಿ, ನವಿವ್ಯಥೇ - ವ್ಯಸನಪಡಲಿಲ್ಲ, ಕೈಕೇಯೀಂ-ಕೈಕೇಯೀದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಏವಂ - ಹಾಗೆಯೇ, ಅಸ್ತು - ಆಗಲಿ, ಅಹಂತು - ನಾನಾದರೆ, ಇತಃ - ಈ ಪಟ್ಟಣದಿಂದ, ವನಂ - ವನವನ್ನು ಕುರಿತು, ವಸ್ತುಂ - ಇರುವುದಕ್ಕೆ, ಜಟಾಜಿನಧರಃ-ಜಟೆಗಳನ್ನೂ ಕೃಷ್ಣಾಜಿನವನ್ನೂ ಧರಿಸಿ, ರಾಜ್ಞಃ-ಅರಸನ, ಪ್ರತಿಜ್ಞಾಂ - ಪ್ರತಿಜ್ಞೆಯನ್ನು, ಅನುಪಾಲಯನ್ - ಪಾಲಿಸುವವನಾಗಿ, ಗಮಿಷ್ಯಾಮಿ - ಹೋಗುವೆನು. ॥ ೨ ॥ ಇದಂತು - ಈ ವಿಷಯವನ್ನಾದರೆ, ಜ್ಞಾತುಂ - ತಿಳಿದುಕೊಳ್ಳಲು, ಇಚ್ಛಾಮಿ-ಅಪೇಕ್ಷಿಸುತ್ತೇನೆ, ಅರಿಂದಮಃ - ಶತ್ರುನಾಶಕನಾದ, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ, ಮಹೀಪತಿಃ - ರಾಜನು, ಮಾಂ - ನನ್ನನ್ನು ಕುರಿತು, ಯಥಾಪೂರ್ವಂ - ಹಿಂದಿನಂತೆ, ಕಿಮರ್ಥಂ-ಏತಕ್ಕೋಸುಗ, ನಾಭಿನಂದತಿ - ಸಂತೋಷಿಸುವದಿಲ್ಲ. ॥ ೩ ॥ ಹೇ ದೇವಿ - ಎಲೌ ತಾಯೇ, ತ್ವಯಾ - ನಿನ್ನಿಂದ, ಮನ್ಯುಃ - ಕೋಪವು, ನಕಾರ್ಯಃ - ಮಾಡತಕ್ಕುದಲ್ಲ, ತವ - ನಿನ್ನ, ಅಗ್ರತಃ-ಮುಂದೆ, ಬ್ರೂಮಿ - ಹೇಳುತ್ತೇನೆ, ಚೀರಜಟಾಧರಃ - ನಾರುಮಡಿಗಳನ್ನೂ ಜಡೆಗಳನ್ನೂ ಧರಿಸಿದವನಾಗಿ,

---

ಹಗೆಯರನ್ನು ಸದೆಬಡಿಯುವ ಆ ರಘುನಾಥನು, ಸಾವಿಗೆ ಸಮಾನವಾದ ಆ ಕೆಟ್ಟ ನುಡಿಗಳನ್ನು ಕೇಳಿ ಸ್ವಲ್ಪವಾದರೂ ದುಃಖಗೊಳ್ಳದೆ, ಕೈಕೇಯೀದೇವಿಯನ್ನು ಕುರಿತು, ಹೀಗೆಂದನು. "ಓ ಜನನಿಯೆ ! ನಿನ್ನ ಮಾತಿನಂತೆಯೇ ಆಗಲಿ ; ನಾನು ಜನಕನಾಜ್ಞೆಯಂತೆ ಜಟೆಗಳನ್ನೂ, ವ್ಯಾಘ್ರಾಜಿನವನ್ನೂ ಧರಿಸಿ ವನವಾಸ ಮಾಡಲು ತೆರಳುತ್ತೇನೆ. ಆದರೆ ಮಹಾರಾಜನು ಈ ರೀತಿಯೇಕೆ ಸಂತಪಿಸುತ್ತಿರುವನೆಂಬುದನ್ನರಿಯಲಪೇಕ್ಷಿಸುವೆನು. ತಾಯೆ ! ಕೋಪಗೊಳ್ಳಬೇಡ ; ನಿನ್ನ ಸಮಕ್ಷಮದಲ್ಲಿಯೆ ನಾರುಮಡಿಗಳನ್ನುಟ್ಟು, ಜಟಾಧಾರಿಯಾಗಿ ಖಂಡಿತವಾಗಿಯೂ ಅರಣ್ಯವನ್ನು ಹೋಗುವೆನು ; ಸಮಾಧಾನಚಿತ್ತವುಳ್ಳವಳಾಗು. ॥ ೧-೪ ॥

ಕೃತಜ್ಞೇನ ನೃಪೇಣಚ ॥ ನಿಯುಜ್ಯಮಾನೋ ವಿಸ್ರಬ್ಧಃ ಕಿನ್ನಕುರ್ಯಾಮಹಂ
ಪ್ರಿಯಂ ॥ ೫ ॥ ಅಳೀಕಂ ಮಾನಸಂತ್ವೇಕಂ ಹೃದಯಂ ದಹತೀವ ಮೇ ॥
ಸ್ವಯಂ ಯನ್ನಾಹಮಾಂ ರಾಜಾ ಭರತಸ್ಯಾಭಿಷೇಚನಂ ॥ ೬ ॥ ಅಹಂಹಿ
ಸೀತಾಂ ರಾಜ್ಯಂಚ ಪ್ರಾಣಾನಿಷ್ಟಾನ್ ಧನಾನಿಚ ॥ ಹೃಷ್ಟೋ ಭ್ರಾತ್ರೇ ಸ್ವಯಂ
ದದ್ಯಾಂ ಭರತಾಯಾ ಪ್ರಚೋದಿತಃ ॥ ೭ ॥ ಕಿಂಪುನರ್ಮನುಜೇಂದ್ರೇಣ ಸ್ವಯಂ
ಪಿತ್ರಾಪ್ರಚೋದಿತಃ॥ತವಚಪ್ರಿಯಕಾಮಾರ್ಥಂಪ್ರತಿಜ್ಞಾಮನುಪಾಲಯನ್॥೮॥

ವನಂ - ವನವನ್ನು ಕುರಿತು, ಯಾಸ್ಯಾಮಿ - ಹೋಗುತ್ತೇನೆ, ತ್ವಂ - ನೀನು, ಸುಪ್ರೀತಾ - ಸಂತುಷ್ಟಳಾದವಳು, ಭವ - ಆಗು. ॥ ೪ ॥ ಹಿತೇನ - ಹಿತಕರನಾದ, ಗುರುಣಾ - (ಗೋ) ಉಪದೇಶಕರ್ತನಾದ, ಪಿತ್ರಾ - ತಂದೆಯಾದ, ಕೃತಜ್ಞೇನ-ಮಾಡಿದ ಉಪಕಾರವನ್ನು ಎಣಿಸುವ, ನೃಪೇಣಚ-ರಾಜನೂ ಆದ ದಶರಥನಿಂದ, ನಿಯುಜ್ಯಮಾನಃ - ನಿಯಮಿಸಲ್ಪಟ್ಟು, ವಿಸ್ರಬ್ಧಃ - ವಿಶ್ವಾಸವಮಾಡಲ್ಪಟ್ಟ, ಅಹಂ - ನಾನು, ಕಿಂಪ್ರಿಯಂ - ಯಾವ ಇಷ್ಟವನ್ನು, ನಕುರ್ಯಾಂ - ಮಾಡಲಾರೆನು. ॥ ೫ ॥ ರಾಜಾ ಅರಸು, ಮಾಂ-ನನ್ನನ್ನು ಕುರಿತು, ಸ್ವಯಂ-ತಾನೆ, ಭರತಸ್ಯ-ಭರತನಿಗೆ, ಅಭಿಷೇಚನಂ - ಪಟ್ಟಾಭಿಷೇಕಮಾಡುವೆನೆಂದು, ನಾಹೇತಿಯತ್-ಹೇಳಲಿಲ್ಲವೆಂಬದಾವುದೋ, (ತತ್-ಅದು,) ಮೇ - ನನ್ನ, ಹೃದಯಂ - ಮನವನ್ನು, ದಹತೀವ - ದಹಿಸುವಂತೆ, ವರ್ತತೇ - ಇರುವದು. ॥ ೬ ॥ ಅಹಂಹಿ - ನಾನಾದರೋ, ಭ್ರಾತ್ರೇ - ತಮ್ಮನಾದ, ಭರತಾಯ - ಭರತನಿಗಾಗಿ, ಅಪ್ರಚೋದಿತಃ - ಮತ್ತೊಬ್ಬರಿಂದ ಪ್ರೇರಿಸಲ್ಪಡದೆ, ಹೃಷ್ಟಃ - ಸಂತೋಷಯುಕ್ತನಾಗಿ, ಸ್ವಯಂ-ನಾನೆ, (೧) ಸೀತಾಂ-ಸೀತಾದೇವಿಯನ್ನೂ, ರಾಜ್ಯಂಚ - ರಾಜ್ಯವನ್ನೂ, ಪ್ರಾಣಾನ್-ಪ್ರಾಣಗಳನ್ನೂ, ಇಷ್ಟಾನ್-ಪ್ರಿಯವಾದ, ಪದಾರ್ಥಗಳನ್ನೂ, ಧನಾನಿಚ - ದ್ರವ್ಯಗಳನ್ನೂ, ದದ್ಯಾಂ - ಕೊಡುವೆನು, ಮನುಜೇಂದ್ರೇಣ - ಅರಸಾದ, ಪಿತ್ರಾ - ತಂದೆಯಿಂದ, ಪ್ರಚೋದಿತಃ - ಪ್ರೇರಿಸಲ್ಪಟ್ಟವನಾಗಿ, ತವಚ - ನಿನಿಗೂ,

ಹಿತಕರನೂ, ಉಪದೇಶಕನೂ, ಕೃತಜ್ಞನೂ, ನಿಜ ಜನಕನೂ ಆದ ಮಹಾರಾಜನಿಂದ ನಿಯುಕ್ತನಾದ ನಾನು ಯಾವ ಕಾರ್ಯವನ್ನುತಾನೆ ಮಾಡದೆ ಇದ್ದೇನು? ಭರತನಿಗೆ ಯಾವ ರಾಜ್ಯಾಭಿಷೇಕವನ್ನುಮಾಡುತ್ತೇನೆಂದು ನನ್ನತಂದೆಯಾದೀ ರಾಯನು ತಾನಾಗಿಯೇ ನನಗೇಕೆ ಹೇಳಲಿಲ್ಲ? ಇದು ಮಾತ್ರ ನನ್ನ ಮನಸ್ಸಿಗೆ ಬಹಳ ಸಂಕಟವಾಗಿರುವುದು. ಜನನೀ! ಸಂಶಯಗೊಳ್ಳುವೆಯೇಕೆ? ಯಾರಿಂದಲೂ ಹೇಳಲ್ಪಡದೆಯೇ, ನಾನು ಭರತನಿಗೋಸ ಈ ರಾಜ್ಯವನ್ನೂ, ನನ್ನ ಪ್ರೀತಿ ಪಾತ್ರಳಾದ ಸೀತಾದೇವಿಯನ್ನೂ, ಪ್ರಾಣಗಳನ್ನೂ, ದ್ರವ್ಯವನ್ನೂ ಸಹ ಬಹಳವಾದ ಸಂತೋಷದಿಂದ ಬಿಡಲು ಸಿದ್ಧನಾಗಿಯೆ ಇರುವೆನು. ಇಂತಿರುವಲ್ಲಿ ಮಹಾರಾಜನಿಂದ ಪ್ರೇರಿತನಾಗಿ, ನಿನ್ನನ್ನು ಸಂತೋಷಗೊಳಿಸಲೋಸುಗ, ಜನಕನ ಪ್ರತಿಜ್ಞೆಯನ್ನು ಪರಿ

ಟ. (೧) "ಸೀತಾಂ ರಾಜ್ಯಂಚ..........ದದ್ಯಾಂ" ಎಂಬುದು ಶ್ರೀರಾಮಮೂರ್ತಿಯ ವಾಕ್ಯ. ಹೀಗೆ ಹೇಳಿರುವುದರಿಂದ ಶ್ರೀರಾಮನಿಗೆ ತಮ್ಮನಾದ ಭರತನಲ್ಲಿರುವ ನಿಷ್ಕಪಟವಾದ ವಾತ್ಸಲ್ಯವು ತೋರುತ್ತದೆ. "ದದ್ಯಾಂ" ಎಂಬೆಡೆಯಲ್ಲಿ ಆ ವಾತ್ಸಲ್ಯಕ್ಕಾಗಿ ಇವೆಲ್ಲವನ್ನು ತೊರೆಯುತ್ತೇನೆಂದು ಅಭಿಪ್ರಾಯವು. ವಾಚಕರು ಬೇರೆ ವಿಧವಾಗಿ ಭಾವಿಸಲಾಗದು.

ತದಾಶ್ವಾಸಯ ಹೀಮಂ ತ್ವಂ ಕಿನ್ನ್ವಿದಂ ಯನ್ಮಹೀಪತಿಃ ॥ ವಸುಧಾ
ಸಕ್ತ ನಯನೋ ಮಂದಮಶ್ರೂಣಿ ಮುಂಚತಿ ॥ ೯ ॥ ಗಚ್ಛಂತು ಚೈವಾನ
ಯಿತುಂ ದೂತಾಶ್ಶೀಘ್ರಜವೈರ್ಹಯೈಃ ॥ ಭರತಂ ಮಾತುಲಕುಲಾದದ್ಯೈವ
ನೃಪ ಶಾಸನಾತ್ ॥ ೧೦ ॥ ದಂಡಕಾರಣ್ಯಮೇಷೋಹಮಿತೋ ಗಚ್ಛಾಮಿ
ಸತ್ವರಃ ॥ ಅವಿಚಾರ್ಯ ಪಿತುರ್ವಾಕ್ಯಂ ಸಮಾವಸ್ತುಂ ಚತುರ್ದಶ ॥೧೧॥
ಸಾಹೃಷ್ಟಾ ತಸ್ಯ ತದ್ವಾಕ್ಯಂ ಶ್ರುತ್ವಾ ರಾಮಸ್ಯ ಕೈಕಯೀ ॥ ಪ್ರಸ್ಥಾನಂ ಶ್ರದ್ಧ
ಧಾನಾಹಿ ತ್ವರಯಾಮಾಸ ರಾಘವಂ ॥ ೧೨ ॥ ಏವಂ ಭವತು ಯಾಸ್ಯಂತಿ

ಪ್ರಿಯಕಾಮಾರ್ಥಂ - ಇಷ್ಟವಾಗಿರುವ ಕೋರಿಕೆಗಾಗಿ, ಪ್ರತಿಜ್ಞಾಂ - ಪ್ರತಿಜ್ಞೆಯನ್ನು, ಅನುಪಾಲಯೇ - ಪರಿಪಾಲಿಸುತ್ತೇನೆ, ಕಿಂಪುನಃ - ಏನು ಹೇಳತಕ್ಕದು. ॥ ೭-೮ ॥ ಯತ್-ಯಾವ ಕಾರಣ, ಮಹೀಪತಿಃ - ಅರಸು, ವಸುಧಾಸಕ್ತನಯನಃ - ನೆಲದಲ್ಲಿ ತಗಲಿದ ನೇತ್ರಗಳುಳ್ಳವನಾಗಿ, ಮಂದಂ - ಮೆಲ್ಲನೆ, ಅಶ್ರೂಣಿ - ಕಂಬನಿಗಳನ್ನು, ಮುಂಚತಿ - ಬಿಡುತ್ತಾನೆಯೋ, ಇದಂ - ಇದು, ಕಿಂನು - ಏನು, ತತ್ - ಆ ಕಾರಣ, ಇಮಂ - ಈತನನ್ನು, ಆಶ್ವಾಸಯ - ಸಮಾಧಾನಗೊಳಿಸು. ॥ ೯ ॥ ದೂತಾಃ - ಸೇವಕರು, ಮಾತುಲಕುಲಾತ್ - ಸೋದರಮಾವನ ಮನೆಯಿಂದ, ಭರತಂ - ಭರತನನ್ನು, ಆನಯಿತುಂ - ಕರೆದುಕೊಂಡು ಬರಲು, ಶೀಘ್ರಜವೈಃ - ವೇಗವಾದ ಸತ್ವವುಳ್ಳ, ಹಯೈಃ - ಕುದುರೆಗಳಿಂದ, ಅದ್ಯೈವ - ಈಗಲೆ, ನೃಪಶಾಸನಾತ್ - ರಾಜಾಜ್ಞೆಯಿಂದ, ಗಚ್ಛಂತು - ಹೋಗಲಿ, ॥ ೧೦ ॥ ಏಷೋಹಂ - ಈ ನಾನು, ಇತಃ - ಈ ಪಟ್ಟಣದಿಂದ, ಸತ್ವರಃ - ಜಾಗ್ರತೆಯಾಗಿ, ಪಿತುಃ- ತಂದೆಯ, ವಾಕ್ಯಂ - ವಚನವನ್ನು, ಅವಿಚಾರ್ಯ - ವಿಮರ್ಶಿಸದೆ, ಚತುರ್ದಶಸಮಾಃ - ಹದಿನಾಲ್ಕು ವರುಷಗಳು, ದಂಡಕಾರಣ್ಯಂ - ದಂಡಕಾರಣ್ಯದಲ್ಲಿ, ವಸ್ತುಂ - ಇರಲು, ಗಚ್ಛಾಮಿ - ಹೋಗುತ್ತೇನೆ. ॥ ೧೧ ॥ ಸಾಕೈಕಯೀ - ಆ ಕೈಕೇಯೀದೇವಿಯು, ತಸ್ಯರಾಮಸ್ಯ - ಆ ಶ್ರೀರಾಮನ, ತದ್ವಾಕ್ಯಂ- ಆ ಮಾತನ್ನು, ಶೃತ್ವಾ - ಕೇಳಿ, ಹೃಷ್ಟಾ - ಸಂತೋಷಗೊಂಡು, ಶ್ರದ್ಧಧಾನಾ - ಶ್ರದ್ಧೆಯುಳ್ಳವಳಾಗಿ, ರಾಘವಂ - ಶ್ರೀರಾಮನನ್ನು, ಪ್ರಸ್ಥಾನಂ - ಪ್ರಯಾಣವನ್ನು ಕುರಿತು, ತ್ವರಯಾಮಾಸ - ತ್ವರೆಗೊಳಿಸಿದಳು. ॥ ೧೨ ॥ ಏವಂ - ಈಪರಿಯಾಗಿ, ಭವತು - ಆಗಲು, ದೂತಾಃ - ದೂತರಾದ, ನರಾಃ - ಮನುಷ್ಯರು, ಮಾತುಲಕುಲಾತ್ - ಸೋದರಮಾವನ ಮನೆಯಿಂದ, ಭರತಂ - ಭರತನನ್ನು,

---

ಪಾಲಿಸುವುದರಲ್ಲಿ ಏನುತಾನೆ ಹೇಳತಕ್ಕದಿದೆ. ॥೫-೮॥ ಅಹಹ! ಮಹಾರಾಜನು ಹೀಗೇಕೆ ಕಂಬನಿಗಳನ್ನು ಸುರಿಸುತ್ತ ರೋದಿಸುತ್ತಿರುವನು. ಅಮ್ಮ ! ಈತನನ್ನು ಸಮಾಧಾನಗೊಳಿಸು. ಈ ಕ್ಷಣದಲ್ಲಿಯೇ, ರಾಜಾಜ್ಞೆಯಿಂದ ಭರತನನ್ನು ಕರೆತರಲು ದೂತರು ಶೀಘ್ರಗಾಮಿಗಳಾದ ಅಶ್ವಗಳಿಂದ ಕೇಕಯರಾಜನ ಪಟ್ಟಣಕ್ಕೆ ತೆರಳಲಿ. ॥ ೫-೧೦ ॥ ನಾನೂ ಸಹ ಯಾವ ವಿಷಯದಲ್ಲಿಯೂ ಚರ್ಚಿಸದೆ ರಾಜಾಜ್ಞೆಯಂತೆ ಹದಿನಾಲ್ಕು ಸಂವತ್ಸರಗಳ ಕಾಲ ದಂಡಕಾರಣ್ಯದಲ್ಲಿ ವಾಸ ಮಾಡಲು ಈ ದಿನವೇ ಹೊರಡುತ್ತೇನೆ.” ರಘುಕುಲಾನಂದಕರನಾದ ಶ್ರೀರಾಮಚಂದ್ರನೀರೀತಿ ನುಡಿಯಲು, ಆ ಕೇಕಯರಾಯನ ಮಗಳು ಮಹಾ ಸಂತೋಷಭರಿತಳಾಗಿ ಆತನ ವನಗಮನವನ್ನು ಕುರಿತು ತ್ವರೆಗೊಳಿಸುತ್ತ “ಎಲೈ ರಘುನಂದನನೆ ! ನೀನು

ದೂತಾಶ್ಶೀಘ್ರ ಜವೈರ್ಹಯೈಃ ॥ ಭರತಂ ಮಾತುಲಕುಲಾ ದುಪಾವರ್ತ ಯಿತುಂ ನರಾಃ ॥ ೧೩ ॥ ತವತ್ವಹಂ ಕ್ಷಮಂ ಮನ್ಯೇ ನೋತ್ಸುಕಸ್ಯ ವಿಳಂಬನಂ ॥ ರಾಮ ತಸ್ಮಾದಿತಶ್ಶೀಘ್ರಂ ವನಂ ತ್ವಂ ಗಂತು ಮರ್ಹಸಿ ॥ ೧೪ ॥ ವ್ರೀಡಾನ್ವಿತಸ್ಸ್ವಯಂ ಯಚ್ಚ ನೃಪಸ್ತ್ವಾಂ ನಾಭಿಭಾಷತೇ ॥ ನೈತತ್ಕಿಂಚಿ ನ್ನರಶ್ರೇಷ್ಠ ಮನ್ಯುರೇಷೋಪನೀಯತಾಂ ॥ ೧೫ ॥ ಯಾವತ್ವಂ ನ ವನಂ ಯಾತಃ ಪುರಾದಸ್ಮಾದಭಿತ್ವರ್ರ ॥ ಪಿತಾ ತಾವನ್ನತೇ ರಾಮ ಸ್ನಾಸ್ಯತೇ ಭೋಕ್ಷ್ಯತೇಪಿ ವಾ ॥ ೧೬ ॥ ಧಿಕ್ಕಷ್ಟಮಿತಿ ನಿಶ್ವಸ್ಯ ರಾಜಾ ಶೋಕ ಪರಿಪ್ಲುತಃ ॥ ಮೂರ್ಛಿತೋ ನ್ಯಪತತ್ತಸ್ಮಿನ್ ಪರ್ಯಂಕೇ ಹೇಮಭೂಷಿತೇ ॥೧೭॥

ಉಪಾವರ್ತಯಿತುಂ - ಹಿಂದಕ್ಕೆ ಕರೆದುಕೊಂಡು ಬರಲು, ಶೀಘ್ರಜವೈಃ - ಬಹುವೇಗವುಳ್ಳ, ಹಯೈಃ- ಅಶ್ವಗಳಿಂದ, ಯಾಸ್ಯಂತಿ - ಹೋಗುತ್ತಾರೆ. ॥ ೧೩ ॥ ಹೇ ರಾಮ-ಎಲೈ ಶ್ರೀರಾಮನೆ, ಅಹಂತು- ನಾನಾದರೆ, ಉತ್ಸುಕಸ್ಯ - ಗಮನೋತ್ಕಂಠತೆಯುಳ್ಳ, ತವ - ನಿನ್ನ, ವಿಳಂಬನಂ - ಸಾವಕಾಶವನ್ನು, ಕ್ಷಮಂ - ಯುಕ್ತವನ್ನಾಗಿ, ನಮನ್ಯೇ - ಎಣಿಸಲಾರೆನು,. ತಸ್ಮಾತ್ - ಆ ಕಾರಣ, ತ್ವಂ - ನೀನು, ಇತಃ - ಇಲ್ಲಿಂದ, ಶೀಘ್ರಂ - ಬೇಗನೆ, ವನಂ - ವನವನ್ನು ಕುರಿತು, ಗಂತುಂ - ಹೋಗುವದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೧೪ ॥ ನೃಪಃ - ರಾಜನು, ಸ್ವಯಂ - ತಾನು, ವ್ರೀಡಾನ್ವಿತಃ - ನಾಚಿಕೆಯಿಂದೊಡಗೂಡಿ, ತ್ವಾಂ - ನಿನ್ನನ್ನು ಕುರಿತು, ನಾಭಿಭಾಷತಇತಿಯತ್ - ಮಾತನಾಡುವ ದಿಲ್ಲವೆಂಬದಾವದೋ, ಏತತ್ - ಇದು, ನಕಿಂಚಿತ್ - ಪ್ರಯೋಜನವಿಲ್ಲ, ಹೇ ನರಶ್ರೇಷ್ಠ - ಎಲೈ ಪುರುಷಶ್ರೇಷ್ಠನೆ, ಏಷಮನ್ಯುಃ - ಈ ಕೋಪವು, ಅಪನೀಯತಾಂ - ಹೋಗಲಾಡಿಸಲ್ಪಡಲಿ. ॥ ೧೫ ॥ ಹೇ ರಾಮ - ಎಲೈ ಶ್ರೀರಾಮನೆ, ತ್ವಂ - ನೀನು, ಅಸ್ಮಾತ್ಪುರಾತ್ - ಈ ಪಟ್ಟಣದಿಂದ, ವನಂ - ವನವನ್ನು ಕುರಿತು, ಯಾವತ್ - ಎದುವರೆಗೆ, ಅಭಿತ್ವರ್ರ - ತ್ವರೆಯುಳ್ಳವನಾಗಿ, ನಯಾತಃ - ಹೋಗದಿರುವೆಯೋ, ತಾವತ್ - ಅಷ್ಟುಪರ್ಯಂತವು, ತೇಪಿತಾ - ನಿನ್ನ ತಂದೆಯು, ನಸ್ನಾಸ್ಯತೇ - ಸ್ನಾನಮಾಡುವುದಿಲ್ಲ, ನಭೋಕ್ಷ್ಯತೇಪಿವಾ - ಭೋಜನವನ್ನು ಮಾಡುವುದಿಲ್ಲ. ॥ ೧೬ ॥ ರಾಜಾ- ದಶರಥರಾಜನು, ಶೋಕಪರಿಪ್ಲುತಃ - ವ್ಯಸನದಿಂದ ಬಳಲಿ, ಧಿಕ್ - ನಿಂದಿಸು, ಕಷ್ಟಂ-ಕಷ್ಟವು, ಇತಿ- ಇಂತೆಂದು, ನಿಶ್ವಸ್ಯ - ನಿಟ್ಟುಸಿರುಬಿಟ್ಟು, ಮೂರ್ಛಿತಃ - ಪ್ರಜ್ಞೆತಪ್ಪಿ, ಹೇಮಭೂಷಿತೇ - ಭಂಗಾರದ ಕಟ್ಟುಗಳಿಂದ ಅಲಂಕೃತವಾದ, ತಸ್ಮಿನ್‌ಪರ್ಯಂಕೇ - ಆ ಮಂಚದಲ್ಲಿ, ನ್ಯಪತತ್ - ಬಿದ್ದನು. ॥೧೭॥

ಹೇಳಿದಂತೆ, ಭರತನನ್ನು ಕರೆತರಲು ದೂತರು ಬೇಗನೆ ಹೊರಡುತ್ತಾರೆ. ನೀನು ಅರಣ್ಯಕ್ಕೆ ತೆರಳಲು ಸಾವಕಾಶ ಮಾಡಬೇಡ. ಮಹಾರಾಜನು ಈ ವಿಷಯವನ್ನು ನಿನ್ನೊಡನೆ ಹೇಳಲು ನಾಚಿಕೆಗೊಂಡಿರುವನು. ಇಷ್ಟುಮಾತ್ರಕ್ಕೆ ಮಹಾರಾಜನು ನಿನ್ನೊಡನೆ ಮಾತನಾಡಲಿಲ್ಲ ವೆಂದು ಕೋಪಗೊಳ್ಳಬೇಡ. ನನ್ನ ನುಡಿಗಳನ್ನಾಲಿಸು ; ನೀನಿಲ್ಲಿಂದ ಹೊರಡುವವರೆಗೂ ನಿಮ್ಮ ತಂದೆಯಾದೀರಾಯನು ಸ್ನಾನ ಭೋಜನಾದಿಗಳನ್ನು ಮಾಡುವುದಿಲ್ಲ" ಎಂದು ಹೇಳಿದಳು. ॥ ೧೧-೧೬ ॥ ಕೇಕಯರಾಜ ನಂದಿನಿಯು ಹೀಗೆನ್ನಲು ದಶರಥ ಮಹಾರಾಯನು ವ್ಯಸನಾಕ್ರಾಂತ ಚಿತ್ತನಾಗಿ ಪ್ರಜ್ಞೆ ತಪ್ಪಿ ಮಂಚದಲ್ಲಿ ಬಿದ್ದನು. ಆಗ ಶ್ರೀರಾಮನು

ರಾಮೋಽಪ್ಯುತ್ಥಾಪ್ಯ ರಾಜಾನಂ ಕೈಕೇಯ್ಯಾಭಿಪ್ರಚೋದಿತಃ ॥ ಕಶಯೇವಾ
ಹತೋ ವಾಜೀ ವನಂ ಗಂತುಂ ಕೃತತ್ವರಃ ॥ ೧೮ ॥ ತದಪ್ರಿಯ ಮನಾ
ರ್ಯಾಯಾ ವಚನಂ ದಾರುಣೋದಯಂ ॥ ಶ್ರುತ್ವಾ ಗತವ್ಯಥೋ ರಾಮಃ
ಕೈಕೇಯೀಂ ವಾಕ್ಯಮಬ್ರವೀತ್ ॥ ೧೯ ॥ ನಾಹಮರ್ಥಪರೋ ದೇವೀ
ಲೋಕಮಾವಸ್ತು ಮುತ್ಸಹೇ ॥ ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮ
ಮಾಸ್ಥಿತಂ ॥ ೨೦ ॥ ಯದತ್ರ ಭವತಃ ಕಿಂಚಿಚ್ಛಕ್ಯಂ ಕರ್ತುಂ ಪ್ರಿಯಂ
ಮಯಾ ॥ ಪ್ರಾಣಾನಪಿ ಪರಿತ್ಯಜ್ಯ ಸರ್ವಥಾ ಕೃತಮೇವ ತತ್ ॥ ೨೧ ॥

ರಾಮೋಽಪಿ - ಶ್ರೀರಾಮನು ಸಹ, ರಾಜಾನಂ - ಅರಸನನ್ನು, ಉತ್ಥಾಪ್ಯ - ಎಬ್ಬಿಸಿ, ಕೈಕೇಯ್ಯಾ - ಕೈಕೇಯಿದೇವಿಯಿಂದ, ಅಭಿಪ್ರಚೋದಿತಃ-ಪ್ರೇರಿಸಲ್ಪಟ್ಟು, ಕಶಯಾ-ಚಾಟಿಯಿಂದ, ಹತಃ - ಹೊಡೆಯಲ್ಪಟ್ಟ, ವಾಜೀವ - ಕುದುರೆಯಂತೆ, ವನಂ - ವನವನ್ನು ಕುರಿತು, ಗಂತುಂ - ಹೋಗುವದಕ್ಕೆ, ಕೃತತ್ವರಃ - ಜಾಗ್ರತೆಯುಳ್ಳವನಾದನು. ॥ ೧೮ ॥ ರಾಮಃ - ಶ್ರೀರಾಮನು, ಅನಾರ್ಯಾಯಾಃ - ಮರ್ಯಾದಾಹೀನಳಾದ ಕೈಕೇಯಿಯ, ಅಪ್ರಿಯಂ - ಇಷ್ಟವಿಲ್ಲದ, ದಾರುಣೋದಯಂ - ಕ್ರೌರ್ಯವನ್ನು ಉಂಟುಮಾಡುವ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಗತವ್ಯಥಃ - ಶೋಕವಿಲ್ಲದವನಾಗಿ, ಕೈಕೇಯೀಂ - ಕೈಕೇಯಿಯನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧೯ ॥ ಹೇ ದೇವಿ - ಎಲೌ ತಾಯೆ, ಅಹಂ - ನಾನು, ಅರ್ಥಪರಃ - (ಮ) ದ್ರವ್ಯಾಪೇಕ್ಷೆಯುಳ್ಳವನಾಗಿ, ಲೋಕಂ - ಜನವನ್ನು, ಆವಸ್ತುಂ - ಸಂಗ್ರಹಿಸುವದಕ್ಕೆ, ನೋತ್ಸಹೇ - ಉದ್ಯುಕ್ತನಲ್ಲ, ಮಾಂ - ನನ್ನನ್ನು, ಕೇವಲಂ - ಬಹಳವಾಗಿ, ಋಷಿಭಿಃ - ಮುನಿಗಳೊಡನೆ, ತುಲ್ಯಂ - ಸದೃಶನನ್ನಾಗಿಯೂ, ಕೇವಲಂ - ಅತ್ಯಂತವಾಗಿ, ಧರ್ಮಂ - ಧರ್ಮವನ್ನು, ಆಸ್ಥಿತಂ - ಆಚರಿಸುವವನನ್ನಾಗಿ, ವಿದ್ಧಿ - ತಿಳಿದುಕೋ. ॥ ೨೦ ॥ ಅತ್ರಭವತಃ - ಪೂಜ್ಯನಾದ, ಪಿತುಃ - ತಂದೆಗೆ, ಮಯಾ - ನನ್ನಿಂದ, ಯತ್ಕಿಂಚಿತ್ - ಯಾವದೊಂದು, ಪ್ರಾಣಾನಪಿ - ಪ್ರಾಣಗಳನ್ನಾದರೂ, ಪರಿತ್ಯಜ್ಯ - ಬಿಟ್ಟು, ಕರ್ತುಂ - ಮಾಡುವುದಕ್ಕೆ, ಶಕ್ಯಂ - ಸಾಧ್ಯವಾಗಿ, ಅಸ್ತಿ - ಇದೆಯೋ, ತತ್ - ಅದನ್ನು, ಸರ್ವಥಾ - ಎಲ್ಲರೀತಿಯಲ್ಲಿಯೂ, ಕೃತಮೇವೇತಿ - ಮಾಡಲ್ಪಟ್ಟಿತೆಂದು, (ವಿದ್ಧಿ - ಅರಿತುಕೋ.) ॥ ೨೧ ॥ ಪಿತರಿ - ತಂದೆಯ, ಶುಶ್ರೂಷಾ - ಪಾದ

ಕಶಾ ಪ್ರಹಾರದಿಂದ ಬೆದರಿದ ಕುದುರೆಯಂತೆ ಚಕಿತನಾಗಿ, ಕೈಕೇಯಿಯಿಂದ ಹೊರಹೊರಡುವುದಕ್ಕೆ ಪ್ರೇರಿತನಾಗಿ ಆ ರಾಯನನ್ನು ಎಬ್ಬಿಸಿ, ಅತಿ ದಾರುಣವಾದ ಕೈಕೇಯಿಯ ನುಡಿಗಳನ್ನು ಕೇಳಿಯೂ ವ್ಯಸನಗೊಳ್ಳದೆ ಆಕೆಯನ್ನು ಕುರಿತು ಇಂತೆಂದನು. ॥ ೧೭-೧೯ ॥ "ಅಮ್ಮ! ಕೇಳು; ನಾನು ಸ್ವಾರ್ಥಪರನಾಗಿ ಜನರನ್ನು ಜತೆಗೂಳಿಸುವುದಿಲ್ಲ. ನನ್ನನ್ನು ಋಷಿಗಳಿಗೆ ಸಮಾನನಾದವನನ್ನಾಗಿಯೂ, ಬಹು ಧರ್ಮಿಷ್ಠನನ್ನಾಗಿಯೂ ತಿಳಿದವಳಾಗು. ಪೂಜ್ಯನಾದ ಮಹಾರಾಜನಿಗೋಸುಗ ಪ್ರಾಣಗಳನ್ನಾದರೂ ಬಿಡಲು ಸಿದ್ಧನಾಗಿದ್ದೇನೆ. ಅರಣ್ಯಕ್ಕೆ ತೆರಳುವ ಈ ಅಲ್ಪ ಕಾರ್ಯವನ್ನು ಮಾಡುವುದೊಂದು ಮಹತ್ತಾದುದೇ? ಜಗತ್ತಿನಲ್ಲಿ ತಾಯಿತಂದೆಗಳ ಸೇವೆಯನ್ನು ಮಾಡುವುದಕ್ಕಿಂತಲೂ, ಅವರು ಹೇಳಿದಂತೆ ನಡೆಯು

ನಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಂ ‖ ಯಥಾ ಪಿತರಿ ಶುಶ್ರೂಷಾ ತಸ್ಯ ವಾ ವಚನಕ್ರಿಯಾ ‖ ೨೨ ‖ ಅನುಕ್ತೋಽಪ್ಯತ್ರಭವತಾ ಭವತ್ಯಾ ವಚನಾದಹಂ ‖ ವನೇ ವತ್ಸ್ಯಾಮಿ ವಿಜನೇ ವರ್ಷಾಣೀಹ ಚತುರ್ದಶ ‖ ೨೩ ‖ ನನೂನಂ ಮಯಿ ಕೈಕೇಯಿ ಕಿಂಚದಾಶಂಸಸೇ ಗುಣಂ ‖ ಯದ್ರಾಜಾನಮವೋಚಸ್ತ್ವಂ ಮಮೇಶ್ವರತರಾ ಸತೀ ‖ ೨೪ ‖ ಯಾವನ್ಮಾತರಮಾಪೃಚ್ಛೇ ಸೀತಾಂ ಚಾನುನಯಾಮ್ಯಹಂ ‖ ತತೋಽದ್ಯೈವ ಗಮಿಷ್ಯಾಮಿ ದಂಡಕಾನಾಂ ಮಹದ್ವನಂ ‖ ೨೫ ‖ ಭರತಃ ಪಾಲಯೇದ್ರಾಜ್ಯಂ ಶುಶ್ರೂಷೇಚ್ಚ ಪಿತುರ್ಯಥಾ ‖ ತಥಾ ಭವತ್ಯಾ ಕರ್ತವ್ಯಂ ಸಹಿ ಧರ್ಮಸ್ಸನಾತನಃ ‖ ೨೬ ‖

ಸೇವೆಯೂ, ತಸ್ಯ - ಆತನ, ವಚನಕ್ರಿಯಾ - ಮಾತಿನಂತೆ ನಡೆವುದೂ, ಯಥಾ-ಹೇಗೋ, ಅತಃ - ಇದಕ್ಕಿಂತಲೂ, ಮಹತ್ತರಂ - ದೊಡ್ಡದಾದ, ಧರ್ಮಾಚರಣಂ - ಧರ್ಮಾನುಷ್ಠಾನವು, ಕಿಂಚಿತ್ - ಸ್ವಲ್ಪವಾದರೂ, ನಾಸ್ತಿ - ಇಲ್ಲ. ‖ ೨೨ ‖ ಇಹ - ಇಲ್ಲಿ, ಅತ್ರಭವತಾ - ಪೂಜ್ಯನಾದ ದಶರಥನಿಂದ, ಅನುಕ್ತೋಽಪಿ - ಹೇಳಲ್ಪಡದಿರುವನಾದರೂ, ಭವತ್ಯಾಃ - ನಿನ್ನ, ವಚನಾತ್ - ಮಾತಿನಿಂದ, ವಿಜನೇ - ನಿರ್ಜನವಾದ, ವನೇ - ಅರಣ್ಯದಲ್ಲಿ, ಚತುರ್ದಶವರ್ಷಾಣಿ - ಹದಿನಾಲ್ಕು ವರುಷಗಳು, ವತ್ಸ್ಯಾಮಿ - ವಾಸಮಾಡುವೆನು. ‖ ೨೩ ‖ ಹೇ ಕೈಕೇಯಿ - ಎಲೌ ಕೈಕೇಯಿಯೆ, ಮಯಿ - ನನ್ನಲ್ಲಿ, ಗುಣಂ - ಗುಣವನ್ನು, ಕಿಂಚಿದಪಿ - ಸ್ವಲ್ಪವಾದರೂ, ನಾಶಂಸಸೇ - ವಿಚಾರಿಸದೇಹೋದೆ, ಯತ್ - ಯಾವಕಾರಣ, ಮಮ - ನನಗೆ, ಈಶ್ವರತರಾಸತೀ - ಹೆಚ್ಚಾದ ಸ್ವಾಮಿನಿಯಾದವಳಾಗಿ, ತ್ವಂ - ನೀನು, ರಾಜಾನಂ - ದಶರಥರಾಜನನ್ನು ಕುರಿತು, ಅವೋಚಃ - ಹೇಳಿದೆಯೋ. ‖ ೨೪ ‖ ಮಾತರಂ - ತಾಯಿಯಾದ ಕೌಸಲ್ಯಾದೇವಿಯನ್ನು, ಯಾವತ್ - ಎದುವರಿಗೂ, ಆಪೃಚ್ಛೇ - ಕೇಳುವನೋ, ಸೀತಾಂಚ - ಸೀತಾದೇವಿಯನ್ನು, ಯಾವತ್ - ಎಷ್ಟುಪರ್ಯಂತವು, ಅನುನಯಾಮಿ - ಸಮ್ಮತಿಗೊಳಿಸುವನೋ, ತತಃ - ಬಳಿಕ, ಅದ್ಯೈವ - ಈ ದಿವಸದಲ್ಲಿಯೇ, ದಂಡಕಾನಾಂ- ದಂಡಕಗಳೆಂಬ ದೇಶಗಳ, ಮಹತ್ - ದೊಡ್ಡದಾದ, ವನಂ - ವನವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು. ‖ ೨೫ ‖ ಭರತಃ - ಭರತನು, ಯಥಾ - ಹೇಗೆ, ರಾಜ್ಯಂ - ರಾಜ್ಯವನ್ನು, ಪಾಲಯೇತ್ - ರಕ್ಷಿಸುವನೋ, ಪಿತುಃ - ತಂದೆಗೆ, ಯಥಾ - ಹೇಗೆ, ಶುಶ್ರೂಷೇಚ್ಚ - ಸೇವೆಯನ್ನು

ವುದಕ್ಕಿಂತಲೂ, ಮೀರಿದ ಧರ್ಮಾಚರಣೆಯು ಮತ್ತಾವುದು ತಾನೆ ಇರುವುದು? ಇದಲ್ಲದೆ ಮಹಾರಾಜನು ತಾನು ಪ್ರತ್ಯಕ್ಷವಾಗಿ ಆಜ್ಞಾಪಿಸದಿದ್ದರೂ, ನಿನ್ನಿಂದ ಆಜ್ಞಾಪಿಸಲ್ಪಟ್ಟು ಋಷಿಯಂತೆ ಹದಿನಾಲ್ಕು ವರ್ಷಗಳವರೆಗೂ ಅರಣ್ಯವಾಸಿಯಾಗುವೆನು. ಕೇಳೌ! ಕೈಕೇಯಿದೇವಿಯೆ! ನೀನು ನನ್ನನ್ನು ಶಿಕ್ಷಿಸುವುದಕ್ಕೆ ಸ್ವತಂತ್ರಳಾದರೂ, ನನ್ನ ಗುಣವನ್ನರಿಯದೆ ಈ ವಿಷಯದಲ್ಲಿ ಮಹಾರಾಜನಿಗೆ ಹೇಳಿದೆಯಲ್ಲ! ಚಿಂತೆಯಿಲ್ಲ. ನನ್ನ ತಾಯಿಯಾದ ಕೌಸಲ್ಯಾದೇವಿಯಿಂದ ಅಪ್ಪಣೆಯನ್ನು ಪಡೆದು, ಸೀತಾದೇವಿಯನ್ನು ಸಮಾಧಾನಗೊಳಿಸುವವರೆಗೂ ನಿಧಾನಿಸುವವಳಾಗು. ಆ ಬಳಿಕ ಈ ದಿನದಲ್ಲಿಯೆ ಮಹತ್ತರವಾದ ದಂಡಕಾರಣ್ಯವನ್ನು ಕುರಿತು ಹೊರಡುತ್ತೇನೆ. ನನ್ನ ತಮ್ಮನಾದ ಭರತನು ರಾಜ್ಯವನ್ನಾಳುತ್ತ, ಜನಕನನ್ನು

ಸರಾಮಸ್ಯ ವಚಶ್ಶ್ರುತ್ವಾ ಭೃಶಂ ದುಃಖಹತಃ ಪಿತಾ ॥ ಶೋಕಾದಶಕ್ನುವನ್
ಬಾಷ್ಪಂ ಪ್ರರುರೋದ ಮಹಾಸ್ವನಂ ॥ ೨೭ ॥ ವಂದಿತ್ವಾ ಚರಣೌ ರಾಮೋ
ವಿಸಂಜ್ಞಸ್ಯ ಪಿತು ಸ್ತಥಾ॥ಕೈಕೇಯ್ಯಾಶ್ಚಾಪ್ಯನಾರ್ಯಾಯಾ ನಿಷ್ಪಪಾತ ಮಹಾ
ದ್ಯುತಿಃ ॥ ೨೮ ॥ ಸರಾಮಃ ಪಿತರಂ ಕೃತ್ವಾ ಕೈಕೇಯೀಂಚ ಪ್ರದಕ್ಷಿಣಂ ॥
ನಿಷ್ಕ್ರಮ್ಯಾಂತಃಪುರಾತ್ತಸ್ಮಾ ತ್ಸ್ವಂ ದದರ್ಶ ಸುಹೃಜ್ಜನಂ ॥ ೨೯ ॥ ತಂ
ಬಾಷ್ಪ ಪರಿಪೂರ್ಣಾಕ್ಷಃ ಪೃಷ್ಠತೋನುಜಗಾಮಹ ॥ ಲಕ್ಷ್ಮಣಃ ಪರಮಃ
ಕ್ರುದ್ಧ ಸ್ಸುಮಿತ್ರಾನಂದ ವರ್ಧನಃ ॥ ೩೦ ॥ ಅಭಿಷೇಚನಿಕಂ ಭಾಂಡಂ
ಕೃತ್ವಾ ರಾಮಃ ಪ್ರದಕ್ಷಿಣಂ ॥ ಶನೈರ್ಜಗಾಮ ಸಾಪೇಕ್ಷೋ ದೃಷ್ಟಿಂ ತತ್ರಾ

ಮಾಡುವನೋ, ತಥಾ - ಹಾಗೆ, ಭವತ್ಯಾ - ನಿನ್ನಿಂದ, ಕರ್ತವ್ಯಂ - ಮಾಡತಕ್ಕದು, ಸಃ - ಆ ರಾಜ್ಯಪರಿಪಾಲನೆಯ, ಶುಶ್ರೂಷ - ಕೃತ್ಯವೆ, ಸನಾತನಃ - ಅನಾದಿಸಿದ್ಧವಾದ, ಧರ್ಮೋಹಿ - ಧರ್ಮ ವಷ್ಟೆ. ॥ ೨೬ ॥ ರಾಮಸ್ಯ - ಶ್ರೀರಾಮನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಭೃಶಂ - ಬಹಳವಾಗಿ, ದುಃಖಹತಃ - ದುಃಖಾಕ್ರಾಂತನಾಗಿ, ಸಪಿತಾ - ಆ ತಂದೆಯು, ಶೋಕಾತ್ - ಮನೋ ವ್ಯಥೆಯಿಂದ, ಬಾಷ್ಪಂ - ಕಂಬನಿಗಳನ್ನು, ನಿರೋದ್ಧುಂ - ತಡೆಯಲು, ಅಶಕ್ನುವನ್ - ಅಸಮರ್ಥ ನಾಗಿ, ಮಹಾಸ್ವನಂ - ಘಟ್ಟಿಯಾಗಿ, ಪ್ರರುರೋದ - ಅಳುತ್ತಿದ್ದನು. ॥ ೨೭ ॥ ರಾಮಃ - ಶ್ರೀರಾ ಮನು, ವಿಸಂಜ್ಞಸ್ಯ - ಪ್ರಜ್ಞೆತಪ್ಪಿದ, ತಥಾ - ಹಾಗೆ, ಅನಾರ್ಯಾಯಾಃ - ದುಷ್ಟಳಾದ, ಕೈಕೇ ಯ್ಯಾಶ್ಚ - ಕೈಕೇಯಿದೇವಿಯ, ಚರಣೌ - ಪಾದಗಳನ್ನು, ವಂದಿತ್ವಾ - ನಮಸ್ಕರಿಸಿ, ಮಹಾದ್ಯುತಿಃ- ಮಹಾ ತೇಜಸ್ಸುಳ್ಳವನಾಗಿ, ನಿಷ್ಪಪಾತ - ಹೊರಟನು. ॥ ೨೮ ॥ ಸರಾಮಃ - ಆ ಶ್ರೀರಾಮನು, ಪಿತರಂ - ತಂದೆಯನ್ನೂ, ಕೈಕೇಯೀಂಚ - ಕೈಕೇಯಿದೇವಿಯನ್ನೂ ಕುರಿತು, ಪ್ರದಕ್ಷಿಣಂ - ಪ್ರದ ಕ್ಷಿಣವನ್ನು, ಕೃತ್ವಾ - ಮಾಡಿ, ತಸ್ಮಾದಂತಃಪುರಾತ್ - ಆ ರಾಣಿವಾಸದಿಂದ, ನಿಷ್ಕ್ರಮ್ಯ ಹೊರಟು, ಸ್ವಂ - ತನ್ನ, ಸುಹೃಜ್ಜನಂ - ಸ್ನೇಹಿತರನ್ನು, ದದರ್ಶ - ಕಂಡನು, ಪರಮಕ್ರುದ್ಧಃ - ಬಹಳ ಕೋಪಿಷ್ಠನಾದ, ಸುಮಿತ್ರಾನಂದವರ್ಧನಃ - ಸುಮಿತ್ರಾದೇವಿಗೆ ಆನಂದಕರನಾದ, ಲಕ್ಷ್ಮಣಃ - ಲಕ್ಷ್ಮಣನು, ಬಾಷ್ಪಪರಿಪೂರ್ಣಾಕ್ಷಃ - ಕಂಬನಿಗಳಿಂದ ತುಂಬಿದ ಕಂಗಳುಳ್ಳವನಾಗಿ, ತಂ - ಆ ಶ್ರೀರಾಮನನ್ನು, ಪೃಷ್ಠತಃ - ಹಿಂದುಗಡೆ, ಅನುಜಗಾಮಹ - ಅನುಸರಿಸಿ ಬಂದನು. ॥ ೩೦ ॥ ರಾಮಃ - ಶ್ರೀರಾಮನು, ಅಭಿಷೇಚನಿಕಂ - ಅಭಿಷೇಕ ಸಂಬಂಧವಾದ, ಭಾಂಡಂ - ಸಾಮಗ್ರೀಗೆ,

ಹೇಗೆ ಸೇವಿಸಬೇಕೋ ಹಾಗೆ ಉಪದೇಶಿಸುವವಳಾಗು.” ॥ ೨೦-೨೬ ॥ ಶ್ರೀರಾಮಚಂದ್ರನೀ ರೀತಿ ನುಡಿಯಲು, ದಶರಥರಾಯನೀ ನುಡಿಗಳನ್ನು ಕೇಳಿ ದುಃಖವನ್ನಡಗಿಸಿಕೊಳ್ಳಲಾರದೆ ಕಂಬನಿಗಳನ್ನು ಸುರಿಸುತ್ತ ಭೋರನೆ ಅತ್ತನು. ಈ ರೀತಿ ಪ್ರಜ್ಞೆ ತಪ್ಪಿರುವ ತಂದೆಗೂ, ಜನನಿಯಾದ ಕೈಕೇಯಿದೇವಿಗೂ ನಮಸ್ಕಾರವಂಗೈದು ರಘುನಂದನನು ಆ ಅಂತಃಪುರದಿಂದ ಹೊರಹೊರಟು, ಸುಹೃಜ್ಜನರನ್ನು ನೋಡಿದವನಾದನು. ॥ ೨೭-೨೯ ॥ ಆ ಬಳಿಕ ಶ್ರೀರಾಮ ಮೂರ್ತಿಯು ತನ್ನ ಪಟ್ಟಾಭಿಷೇಕ ವಿಷಯದಲ್ಲಿ ಅನಾಸಕ್ತನಾದರೂ, ತನ್ನ ತಮ್ಮನಾದ ಭರತನಿಗೆ ಪಟ್ಟಾಭಿಷೇಕವಾಗಲೆಂದು ಬಯಸಿದವನಾಗಿ, ಅದಕ್ಕಾಗಿ ಸಿದ್ಧಗೊಳಿಸಿದ್ದ ಅಭಿ

ವಿಚಾರಯನ್ ॥ ೩೧ ॥ ನಚಾಸ್ಯ ಮಹತೀಂ ಲಕ್ಷ್ಮೀಂ ರಾಜ್ಯನಾಶೋಽಪಕರ್ಷತಿ ॥ ಲೋಕಕಾಂತಸ್ಯ ಕಾಂತತ್ವಾಚ್ಛೀತರಶ್ಮೇರಿವ ಕ್ಷಪಾ ॥ ೩೨ ॥ ನ ವನಂ ಗಂತುಕಾಮಸ್ಯ ತ್ಯಜತಶ್ಚ ವಸುಂಧರಾಂ ॥ ಸರ್ವಲೋಕಾತಿಗಸ್ಯೇವ ಲಕ್ಷ್ಯತೇ ಚಿತ್ತವಿಕ್ರಿಯಾ ॥ ೩೩ ॥ ಪ್ರತಿಷಿಧ್ಯ ಶುಭಂ ಛತ್ರಂ ವ್ಯಜನೇಚ

ಪ್ರದಕ್ಷಿಣಂ - (೧) ಪ್ರದಕ್ಷಿಣವನ್ನು, ಕೃತ್ವಾ - ಮಾಡಿ, ತತ್ರ - ಆ ಭರತಪಟ್ಟಾಭಿಷೇಕವಿಷಯದಲ್ಲಿ, (೨) ಸಾಪೇಕ್ಷಃ - ಅಪೇಕ್ಷೆಯುಳ್ಳವನಾಗಿ, ಶನೈಃ - ಮೆಲ್ಲಗೆ, ಜಗಾಮ - ತೆರಳಿದನು. ॥ ೩೧ ॥ ರಾಜ್ಯನಾಶನಃ - ರಾಜ್ಯಭ್ರಂಶವು, ಲೋಕಕಾಂತಸ್ಯ - ಲೋಕಾಭಿರಾಮನಾದ, ಅಸ್ಯ-ಈ ಶ್ರೀರಾಮನ, ಕಾಂತತ್ವಾತ್ - ಮನೋಹರತೆಯಿಂದ, ಮಹತೀಂ - ವಿಶೇಷವಾದ, ಲಕ್ಷ್ಮೀಂ - ಮುಖವಿಲಾಸವನ್ನು, ಸೀತರಶ್ಮೇಃ - ಚಂದ್ರನ, ಲಕ್ಷ್ಮೀಂ - ಕಾಂತಿಯನ್ನು, ಕ್ಷಪೇವ - ರಾತ್ರಿಯಂತೆ, ನಾಪಕರ್ಷತಿ - ಅಪಹರಿಸದೇಹೋಯಿತು. ॥ ೩೨ ॥ ವನಂ - ವನವನ್ನು ಕುರಿತು, ಗಂತುಕಾಮಸ್ಯ - ಹೋಗಲಿಚ್ಛೆಯುಳ್ಳ, ವಸುಂಧರಾಂ - ಭೂಮಿಯನ್ನು, ತ್ಯಜತಃ - ಬಿಡುತ್ತಿರುವ ಶ್ರೀರಾಮನಿಗೆ, ಸರ್ವಲೋಕಾತಿಗಸ್ಯೇವ - (ಗೋ) ಎಲ್ಲ ಲೋಕಗಳನ್ನೂ ಅತಿಕ್ರಮಿಸಿದ ಯೋಗಿಯಂತೆ, ಚಿತ್ತವಿಕ್ರಿಯಾ - ಮನೋವಿಕಾರವು, ನಲಕ್ಷ್ಯತೇ - ಕಾಣಲ್ಪಡಲಿಲ್ಲ. ॥ ೩೩ ॥ ಆತ್ಮವಾನ್ - ಮಹಾಧೈರ್ಯಶಾಲಿಯಾದ ಶ್ರೀರಾಮನು, ಶುಭಂ - ಮಂಗಳಕರವಾದ, ಛತ್ರಂ - ಛತ್ರವನ್ನು, ಸ್ವಲಂ

ಷೇಕ ಸಾಮಗ್ರಿಗಳಿಗೆ ಪ್ರದಕ್ಷಿಣವನ್ನು ಮಾಡಿ ಅದರಲ್ಲಿಯೇ ನೆಟ್ಟ ಕಂಗಳುಳ್ಳವನಾಗಿ ಮೆಲ್ಲ ಮೆಲ್ಲನೆ ಮುಂಬರಿದನು. ಲೋಕದಲ್ಲಿ ಎಲ್ಲರ ಮನವನ್ನೂ ಅಪಹರಿಸುವ ನಿಶಾನಾಥನಂತೆ ಎಲ್ಲರಿಗೂ ಆಹ್ಲಾದಕರನಾಗುವವರಿಂದ, ಈಗ ಆಗ ಹೋಗುವ ರಾಜ್ಯ ಭ್ರಂಶತೆಯು ಆ ಶ್ರೀರಾಮನ ಮುಖ ಕಾಂತಿಯನ್ನು ಎಷ್ಟು ಮಾತ್ರವೂ ಅಪಹರಿಸಲಿಲ್ಲವು. ವನವನ್ನು ಕುರಿತು ಪಯಣ ಬೆಳೆಸಲಪೇಕ್ಷಿಸುತ್ತಿರುವ ಮತ್ತು ರಾಜ್ಯವನ್ನು ತೊರೆಯುತ್ತಿರುವ ಆ ರಘುನಂದನನಿಗೆ ಸ್ವಲ್ಪವಾದರೂ ಚಿತ್ತವಿಕಾರವು ತೋರಲಿಲ್ಲ. ॥ ೩೧-೩೩ ॥ ಬಹಳವಾದ ತಿಳಿವಳಿಕೆ

(೧) ಟಿ. ಇಲ್ಲಿ "ಅಭಿಷೇಚನಿಕಂ ಭಾಂಡಂ ಪ್ರದಕ್ಷಿಣಂ ಕೃತ್ವಾ" ಎಂದು ಮೂಲವು. ಇಲ್ಲಿ ವಾಚಕರಿಗೆ ಸಂಶಯವೊಂದು ತಲೆದೋರಬಹುದು. ಅದು ಹೀಗೆ "ಶ್ರೀರಾಮನು ತನ್ನ ಅಭಿಷೇಕಕ್ಕಾಗಿ ಸಜ್ಜುಗೊಳಿಸಿದ್ದ ಸಾಮಗ್ರಿಗಳೆಲ್ಲವು ತನ್ನ ಪಾಲಿಗಿಲ್ಲದೆ ಹೋಯಿತಲ್ಲ! ಎಂಬ ದುಃಖದಿಂದಲೂ, ಯುವರಾಜ ಪದವಿಯಲ್ಲಿ ಆಸಕ್ತಿಯಿಂದಲೂ ಆ ಸಾಮಗ್ರಿಗಳನ್ನು ಪ್ರದಕ್ಷಿಣ ಪೂರ್ವಕವಾಗಿ ನಮಸ್ಕಾರವನ್ನು ಮಾಡಿದನು" ಎಂದು, ಹೀಗೆ ಶಂಕಿಸಲು ಎಳ್ಳಷ್ಟೂ ಆಸ್ಪದವಿಲ್ಲ. "ಪ್ರಶಸ್ತ ಮಾಂಗಳ್ಯ ದೇವತಾಯತನ ಚತುಷ್ಪಥಾದೀನ್ ಪ್ರದಕ್ಷಿಣ ಮಾವರ್ತಯೇತ್" ಎಂದು ಧರ್ಮ ಶಾಸ್ತ್ರಕಾರನ ವಚನ ರಚನೆಯುಂಟು. ಇದಕ್ಕೆಲ್ಲಿ ಭಂಗವುಂಟಾಗುವುದೋ ಎಂಬ ಭಯದಿಂದ ಸ್ವಯಂ ನಿರಪೇಕ್ಷನಾಗಿ ತಮ್ಮನಾದ ಭರತನಿಗೆ ನಿರ್ವಿಘ್ನವಾಗಿ ರಾಜ್ಯಾಭಿಷೇಕವು ನೆರವೇರಲೆಂದು ಅಭಿಷೇಕ ಸಾಮಗ್ರಿಗಳನ್ನು ಪ್ರದಕ್ಷಿಣ ಪೂರ್ವಕವಾಗಿ ನಮಸ್ಕರಿಸಿದನೆಂದು ಭಾವವು.

೨. ಟಿ. "ರಾಮಃ" ಎಂಬ ಪದಕ್ಕೆ ಭಗವಾನ್ ವಾಲ್ಮೀಕಿಯು "ಸಾಪೇಕ್ಷಃ" ಎಂಬ ವಿಶೇಷಣವನ್ನು ಕೊಟ್ಟಿರುವರು. ಇಲ್ಲಿನ ಸ್ವಾರಸ್ಯವೇನೆಂದರೆ: "ವನಗಮನದಲ್ಲಿ ಅಪೇಕ್ಷೆಯುಳ್ಳವನಾಗಿ" ಎಂದು ಒಂದರ್ಥ. "ರಾಜ್ಯಾಭಿಷೇಕದಲ್ಲಿ ಸಾಪೇಕ್ಷೆಯುಳ್ಳವನಾಗಿ" ಎಂದು ಮತ್ತೊಂದು ಅರ್ಥ. ಎರಡನೆಯ ಅರ್ಥವನ್ನು ಮಾಡುವಾಗ "ಅಪಗತಾ X ಈಕ್ಷಾ= ಅಪೇಕ್ಷಾ, ಅಪೇಕ್ಷಯಾ ಸಹಿತ ಸ್ಸಾಪೇಕ್ಷಾ" ಎಂದು ಸಮಾಸ.

ಸ್ವಲಂಕೃತೇ ॥ ವಿಸರ್ಜಯಿತ್ವಾ ಸ್ವಜನಂ ರಥಂ ಪೌರಾಂಸ್ತಥಾ ಜನಾನ್ ॥೩೪॥
ಧಾರಯನ್ ಮನಸಾ ದುಃಖಮಿಂದ್ರಿಯಾಣಿ ನಿಗೃಹ್ಯಚ ॥ ಪ್ರವಿವೇಶಾತ್ಮವಾನ್
ವೇಶ್ಮ ಮಾತುರಪ್ರಿಯಶಂಸಿವಾನ್ ॥ ೩೫ ॥ ಸರ್ವೋಽಹ್ಯಪಿ ಜನಶ್ಶ್ರೀಮಾನ್
ಶ್ರೀಮತಸ್ಸತ್ಯವಾದಿನಃ ॥ ನಾಲಕ್ಷಯತ ರಾಮಸ್ಯ ಕಿಂಚಿದಾಕಾರಮಾನನೇ
॥ ೩೬ ॥ ಉಚಿತಂಚ ಮಹಾಬಾಹುರ್ನಜಹೌ ಹರ್ಷಮಾತ್ಮನಃ ॥ ಶಾರದ
ಸ್ಸಮುದೀರ್ಣಾಂಶು ಶ್ಚಂದ್ರಸ್ತೇಜ ಇವಾತ್ಮಜಂ ॥ ೩೭ ॥ ವಾಚಾ
ಮಧುರಯಾ ರಾಮಸ್ಸರ್ವಂ ಸಮ್ಮಾನಯನ್ ಜನಂ ॥ ಭ್ರಾತುಸ್ಸಮೀಪಂ

ಕೃತೇ - ಚನ್ನಾಗಿ ಅಲಂಕರಿಸಲ್ಪಟ್ಟ, ವ್ಯಜನೇಚ - ಚಾಮರಗಳನ್ನೂ, ಪ್ರತಿಷಿಧ್ಯ - ತಡೆಮಾಡಿ, ಸ್ವಜನಂ - ತನ್ನ ಜನವನ್ನೂ, ರಥಂ - ರಥವನ್ನೂ, ತಥಾ - ಹಾಗೆಯೆ, ಪೌರಾನ್ - ಪಟ್ಟಣಿಗರಾದ, ಜನಾನ್-ಜನಗಳನ್ನೂ, ವಿಸರ್ಜಯಿತ್ವಾ-ತೊರೆದು, ಮನಸಾ-ಮನವಿಂದ, ದುಃಖಂ-(ಗೋ) ಸ್ನೇಹಿತರ ದುಃಖದಿಂಪುಟ್ಟಿದ ವ್ಯಸನವನ್ನು, ಧಾರಯನ್ - ತಡೆದುಕೊಂಡು, ಇಂದ್ರಿಯಾಣಿ-ಇಂದ್ರಿಯಗಳನ್ನು, ನಿಗೃಹ್ಯ - ಅಡಗಿಸಿ, ಮಾತುಃ - ತಾಯಿಗೆ, ಅಪ್ರಿಯಶಂಸಿವಾನ್ - ಪಟ್ಟಾಭಿಷೇಕಭಂಗವೆಂಬ ಅಹಿತವನ್ನು ಹೇಳಲಿಚ್ಛೆಯುಳ್ಳವನಾಗಿ, ವೇಶ್ಮ - ಜನನಿಯ ಅಂತಃಪುರವನ್ನು, ಪ್ರವೇಶ - ಹೊಕ್ಕನು. ॥ ೩೪-೩೫ ॥ ಶ್ರೀಮಾನ್ - ಸಂಪದ್ಯುಕ್ತವಾದ, ಸರ್ವಃ - ಸಮಸ್ತವಾದ, ಅಭಿಜನಃ ಸುತ್ತುಮುತ್ತಲಿರುವ ಜನವು, ಸತ್ಯವಾದಿನಃ - ಸತ್ಯವಾಗಿ ನುಡಿಯುತ್ತಿರುವ, ಶ್ರೀಮತಃ - ಸ್ವಭಾವಿಕವಾಗಿಯೇ ತೇಜೋವಂತನಾದ, ರಾಮಸ್ಯ - ಶ್ರೀರಾಮನ, ಆನನೇ - ಮುಖದಲ್ಲಿ, ಕಿಂಚಿತ್ - ಕೊಂಚವಾದರೂ, ಆಕಾರಂ - ವಿಕಾರವನ್ನು, ನಾಲಕ್ಷಯತ - ನೋಡಲಿಲ್ಲ. ॥ ೩೬ ॥ ಮಹಾಬಾಹುಃ - ಮಹಾಪರಾಕ್ರಮಿಯಾದ ಶ್ರೀರಾಮನು, ಶಾರದಃ - ಶರತ್ಕಾಲದಲ್ಲಿ ಹುಟ್ಟಿದ, ಸಮುದೀರ್ಣಾಂಶುಃ - ಉದ್ಬುದ್ಧವಾದ ಕಿರಣಗಳುಳ್ಳ, ಚಂದ್ರಃ - ಚಂದ್ರನು, ಆತ್ಮಜಂ - ತನ್ನಲ್ಲಿ ಹುಟ್ಟಿದ, ತೇಜಇವ - ಕಾಂತಿಯಂತೆ, ಆತ್ಮನಃ - ತನಗೆ, ಉಚಿತಂ - ಯೋಗ್ಯವಾದ, ಹರ್ಷಂ - ಸಂತೋಷವನ್ನು, ನಜಹೌ - ಬಿಡದೆಹೋದನು. ॥ ೩೭ ॥ ಮಹಾಯಶಾಃ - ಮಹಾಕೀರ್ತಿಮಂತನಾದ, ಧೀರಾತ್ಮಾ - ಧೈರ್ಯವಾದ ಮನವುಳ್ಳ, ರಾಮಃ - ಶ್ರೀರಾಮನು, ಭ್ರಾತುಃ - ಲಕ್ಷ್ಮಣನ, ಸಮೀಪಂ - ಬಳಿಯಲ್ಲಿ, ಮಧುರಯಾ - ಮನೋಹರವಾದ, ವಾಚಾ - ವಾಕ್ಕಿನಿಂದ, ಸರ್ವಂ - ಸಮಸ್ತರಾದ, ಜನಂ -

---

ಯುಳ್ಳ ಶ್ರೀರಾಮನು ಮಂಗಳಕರವಾದ ಬಿಳಿಗೊಡೆಯನ್ನು, ಚಾಮರವನ್ನೂ, ತೊರೆದು, ತನಗೆ ವ್ಯಸನವಿಲ್ಲದಿದ್ದರೂ, ತನ್ನ ಮಿತ್ರರಿಗೆ ಉಂಟಾಗಿರುವ ದುಃಖವನ್ನು, ತಾನು ಮನಸ್ಸಿನಲ್ಲಿಯೇ ಅಡಗಿಸಿಕೊಂಡು, ಇಂದ್ರಿಯಗಳನ್ನು ನಿಗ್ರಹಿಸಿ, ತಾಯಿಗೆ ಅಪ್ರಿಯವಾದ ವಾರ್ತೆಯನ್ನು ಹೇಳಲಪೇಕ್ಷೆಯುಳ್ಳವನಾಗಿ ಆಕೆಯ ಅಂತಃಪುರವನ್ನುಹೊಕ್ಕವನಾದನು.॥೩೪-೩೫॥ ಆಗ ಶ್ರೀರಾಮಚಂದ್ರನ ಗೆಳೆಯರೆಲ್ಲರೂ ಆತನ ಮುಖದಲ್ಲಿ ಸ್ವಲ್ಪವಾದರೂ ವಿಕಾರವೆಂಬುದನ್ನು ಕಾಣಲಿಲ್ಲವು. ಅದು ಸ್ವಾಭಾವಿಕವಾದುದೇ ಅಲ್ಲವೆ! ಏಕೆಂದರೆ; ಆ ರಘುರಾಮನು ಶರತ್ಕಾಲದ ಚಂದ್ರನು ತನ್ನ ತೇಜಸ್ಸನ್ನು ಹೇಗೆ ತೊರೆಯುವುದಿಲ್ಲವೋ, ಅಂತೆಯೇ ಕಾಂತಿಹೀನನಾಗದೆ ತಮ್ಮನಾದ ಲಕ್ಷ್ಮಣಸ್ವಾಮಿಯ ಸಮೀಪದಲ್ಲಿಯೇ ಮೃದು ಮಾತುಗಳಾಡಿ

ಧೀರಾತ್ಮಾ ಪ್ರವಿವೇಶ ಮಹಾಯಶಾಃ ॥ ೩೮ ॥ ತಂ ಗುಣೈಸ್ಸಮತಾಂ ಪ್ರಾಪ್ತೋ ಭ್ರಾತಾ ವಿಪುಲವಿಕ್ರಮಃ ॥ ಸೌಮಿತ್ರಿರನುವವ್ರಾಜ ಧಾರಯನ್ ದುಃಖಮಾತ್ಮಜಂ ॥ ೩೯ ॥

ಪ್ರವಿಶ್ಯ ವೇಶ್ಮಾತಿಭೃಶಂ ಮುದಾನ್ವಿತಂ
ಸಮೀಕ್ಷ್ಯ ತಾಂ ಚಾರ್ಥವಿಪತ್ತಿಮಾಗತಾಂ ॥
ನಚೈವ ರಾಮೋತ್ರ ಜಗಾಮ ವಿಕ್ರಿಯಾಂ
ಸುಹೃಜ್ಜನಸ್ಯಾತ್ಮವಿಪತ್ತಿಶಂಕಯಾ ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನವಿಂಶಸ್ಸರ್ಗಃ

ಜನಗಳನ್ನು, ಸಂಮಾನಯನ್ - ಬಹುಮತಿಮಾಡುತ್ತ, (ಅಂತಃಪುರಂ - ರಾಣಿವಾಸಸ್ಥಳವನ್ನು,) ಪ್ರವಿವೇಶ - ಹೊಕ್ಕನು. ॥ ೩೮ ॥ ಗುಣೈಃ - ಸೌಶೀಲ್ಯಾದಿ ಗುಣಗಳಿಂದ, ಸಮತಾಂ - ಸೌಮ್ಯವನ್ನು, ಪ್ರಾಪ್ತಃ - ಹೊಂದಿದ, ವಿಪುಲವಿಕ್ರಮಃ - ಬಹಳವಾದ ಪರಾಕ್ರಮವುಳ್ಳ, ಭ್ರಾತಾ - ತಮ್ಮನಾದ, ಸೌಮಿತ್ರಿಃ - ಲಕ್ಷ್ಮಣಸ್ವಾಮಿಯು, ಆತ್ಮಜಂ - ತನ್ನ ಮನಸ್ಸಿನಲ್ಲಿ ಹುಟ್ಟಿದ, ದುಃಖಂ - ವ್ಯಸನವನ್ನು, ಧಾರಯನ್ - ಮನದಲ್ಲಿಯೇ ಧರಿಸಿ, ತಂ - ಆ ಶ್ರೀರಾಮನನ್ನು, ಅನುವವ್ರಾಜ - ಅನುಸರಿಸಿದನು. ॥ ೩೯ ॥ ರಾಮಃ - ಶ್ರೀರಾಮನು, ಅತಿಭೃಶಂ - ಬಹಳವಾಗಿ, ಮುದಾ - ಸಂತೋಷದಿಂದ, ಅನ್ವಿತಂ - ಕೂಡಿಕೊಂಡಿರುವ, ವೇಶ್ಮ - ಕೌಸಲ್ಯಾದೇವಿಯ ಮನೆಯನ್ನು, ಪ್ರವಿಶ್ಯ - ಪ್ರವೇಶಿಸಿ, ಆಗತಾಂ - ಪ್ರಾಪ್ತವಾದ, ತಾಮರ್ಥವಿಪತ್ತಿಂಚ - ಆ ಅಭಿಷೇಕ ಪ್ರಯೋಜನ ವಿಘಾತರೂಪವಾಗಿರುವ ವಿಪತ್ತನ್ನೂ, ಸುಹೃಜ್ಜನಸ್ಯ - ಸ್ನೇಹಿತಜನರ, ಆತ್ಮವಿಪತ್ತಿಶಂಕಯಾ - ಪ್ರಾಣನಾಶಭೀತಿಯಿಂದ, ಅತ್ರ - ಈ ಅಂತಃಪುರದಲ್ಲಿ, ವಿಕ್ರಿಯಾಂ-ವಿಕಾರವನ್ನು, ನೈವಜಗಾಮ-ಹೊಂದದೇಹೋದನು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೆ ಏಕೋನವಿಂಶಸ್ಸರ್ಗಃ.

ಎಲ್ಲರಿಗೂ ಅವರವರ ಯೋಗ್ಯತಾನುಸಾರ ಬಹುಮಾನಗಳನ್ನು ಮಾಡುತ್ತ ಕೌಸಲ್ಯಾದೇವಿಯ ಅಂತಃಪುರವನ್ನು ಪ್ರವೇಶಿಸಿದವನಾದನು. ॥ ೩೬-೩೮ ॥ ಮಹಾ ಭುಜಬಲ ಪರಾಕ್ರಮಶಾಲಿಯಾದ ಲಕ್ಷ್ಮಣಮೂರ್ತಿಯು ಗುಣಗಳಿಂದ ಶ್ರೀರಾಮನಿಗೆ ಸಮಾನನಾಗಿ, ತನ್ನ ದುಃಖವನ್ನು ಅಡಗಿಸುತ್ತ ಅಣ್ಣನ ಹಿಂದುಗಡೆಯೇ ಅನುಸರಿಸಿ ನಡೆಯುತ್ತಿದ್ದನು. ಇಷ್ಟೆಯಲ್ಲದೆ ಮಹಾ ಸಂತೋಷಕರವಾದ ಆ ಕೌಸಲ್ಯಾದೇವಿಯ ಅಂತಃಪುರವನ್ನು ಪ್ರವೇಶಿಸಿದರೂ ಆ ರಘುರಾಮನು ತಾನು ದುಃಖಗೊಂಡರೆ ಮಿತ್ರರೆಲ್ಲರೂ ಅಸುಗಳನ್ನು ನೀಗುವರೆಂದು ಯೋಚಿಸಿ, ತನಗೆ ಒದಗಿ ಬಂದ ವಿಪತ್ತಿನಿಂದ ವಿಕಾರವನ್ನು ಹೊಂದಲೇ ಇಲ್ಲವು.॥೩೯-೪೦॥

ಇಂತಿದು ಶ್ರೀರಾಮಕೃತ ಕೌಸಲ್ಯಾಂತಃಪುರ ಪ್ರವೇಶ ಕಥಾಕಥನವೆಂಬ
ಹತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ವಿಂಶಸ್ಸರ್ಗಃ.

ತಸ್ಮಿಂಸ್ತು ಪುರುಷವ್ಯಾಘ್ರೇ ನಿಷ್ಕ್ರಾಮತಿ ಕೃತಾಂಜಲೌ ॥ ಆರ್ತಶಬ್ದೋ ಮಹಾನ್ ಜಜ್ಞೇ ಸ್ತ್ರೀಣಾಮಂತಃಪುರೇ ತದಾ ॥ ೧ ॥ ಕೃತ್ಯೇಷ್ವಚೋದಿತಃ ಪಿತ್ರಾ ಸರ್ವಸ್ಯಾಂತಃಪುರಸ್ಯ ಚ ॥ ಗತಿರ್ಯಶ್ಶರಣಂ ಚಾಪಿ ಸರಾಮೋದ್ಯ ಪ್ರವತ್ಸ್ಯತಿ ॥ ೨ ॥ ಕೌಸಲ್ಯಾಯಾಂ ಯಥಾಯುಕ್ತೋ ಜನನ್ಯಾಂ ವರ್ತತೇ ಸದಾ ॥ ತಥೈವ ವರ್ತತೇಽಸ್ಮಾಸು ಜನ್ಮಪ್ರಭೃತಿ ರಾಘವಃ ॥ ೩ ॥ ನಕ್ರುಧ್ಯತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ॥ ಕ್ರುದ್ಧಾನ್ ಪ್ರಸಾ

ಪುರುಷವ್ಯಾಘ್ರೇ - ಪುರುಷಶ್ರೇಷ್ಠನಾದ, ಕೃತಾಂಜಲೌ - ಬದ್ಧಾಂಜಲಿಯುಳ್ಳ, ತಸ್ಮಿನ್ - ಆ ಶ್ರೀರಾಮನು, ನಿಷ್ಕ್ರಾಮತಿಸತಿ - ಹೊರಟುಹೋದವನಾಗಲು, ತದಾ - ಆ ಕಾಲದಲ್ಲಿ, ಅಂತಃಪುರೇ - ಅಂತಃಪುರದಲ್ಲಿ, ಸ್ತ್ರೀಣಾಂ - ಸ್ತ್ರೀಯರ, ಮಹಾನ್ - ಬಹಳವಾದ, ಆರ್ತಶಬ್ದಃ - ದೀನಧ್ವನಿಯು, ಜಜ್ಞೇ - ಹುಟ್ಟಿತು. ॥ ೧ ॥ ಯಃ - ಯಾವ ಶ್ರೀರಾಮನು, ಪಿತ್ರಾ - ತಂದೆಯಿಂದ, ಅಚೋದಿತಏವ - ಪ್ರೇರಿತನಲ್ಲದಿದ್ದರೂ, ಸರ್ವಸ್ಯ-ಜನರೆಲ್ಲರ, (ಮತ್ತು) ಅಂತಃಪುರಸ್ಯಚ-ಅಂತಃಪುರಸ್ತ್ರೀಯರ, ಕೃತ್ಯೇಷು - ಕಾರ್ಯಗಳಲ್ಲಿ, ಪ್ರವರ್ತತೇ - (ಗೋ) ಆಸಕ್ತನಾಗುವನೋ, ಯಃ - ಯಾವ ಶ್ರೀರಾಮನು, ಗತಿಃ - ಗಮ್ಯಸ್ಥಾನವೋ, ಶರಣಂಚಾಪಿ - ರಕ್ಷಕನೋ, ಸರಾಮಃ - ಅಂತಹ ಶ್ರೀರಾಮನು, ಅದ್ಯ - ಈಗ, ಪ್ರವತ್ಸ್ಯತಿ - ಅರಣ್ಯಕ್ಕೆ ಪ್ರಯಾಣಮಾಡುತ್ತಾನೆ. ॥ ೨ ॥ ರಾಘವಃ - ಶ್ರೀರಾಮನು, ಜನ್ಮಪ್ರಭೃತಿ - ಹುಟ್ಟಿದಮೊದಲು, ಜನನ್ಯಾಂ-ತಾಯಿಯಾದ, ಕೌಸಲ್ಯಾಯಾಂ - ಕೌಸಲ್ಯಾದೇವಿಯಲ್ಲಿ, ಯಥಾ - ಹೇಗೆ, ಯುಕ್ತಃ - ಸಾವಧಾನಚಿತ್ತನಾಗಿ, ಸದಾ-ಸರ್ವಕಾಲದಲ್ಲಿಯೂ, ವರ್ತತೇ - ನಡೆದುಕೊಳ್ಳುತ್ತಾನೆಯೋ, ತಥೈವ-ಹಾಗೆಯೆ, ಅಸ್ಮಾಸು - ನಮ್ಮ ವಿಷಯದಲ್ಲಿಯೂ, ವರ್ತತೇ - ಇರುವನು. ॥ ೩ ॥ ಯಃ - ಯಾವಪುರುಷನು, ಅಭಿಶಪ್ತೋಽಪಿ - ಬಯ್ಯಲ್ಪಟ್ಟವನಾದರೂ, ಕ್ರೋಧನೀಯಾನಿ - ಕೋಪಕ್ಕೆ ಕಾರಣವಾದ ಕರ್ಮಗಳನ್ನು, ವರ್ಜಯನ್ - ಬಿಡುತ್ತ, ನಕ್ರುಧ್ಯತಿ - ಕುಪಿತನಾಗುವದಿಲ್ಲವೋ, ಕ್ರುದ್ಧಾನ್-ಕೋಪಿಷ್ಠರಾದ, ಸರ್ವಾನ್-ಎಲ್ಲರನ್ನೂ,

---

ಪುರುಷೋತ್ತಮನಾದ ಶ್ರೀರಾಮನು ಅಂಜಲಿಬದ್ಧನಾಗಿ ತೆರಳಿದವನಾಗಲು, ಅಂತಃಪುರದಲ್ಲಿ ಬಹಳವಾದ ರೋದನ ಧ್ವನಿಯುಂಟಾಯಿತು. “ಶ್ರೀರಾಮನು ಅಂತಃಪುರದವರ ಮತ್ತು ಎಲ್ಲರ ಕಾರ್ಯಗಳನ್ನೂ ತಂದೆಯಿಂದ ಪ್ರೇರಿತನಲ್ಲದೆಯೇ ಮಾಡುತ್ತಿದ್ದನು! ನಮ್ಮೆಲ್ಲರಿಗೂ ರಕ್ಷಕನಾಗಿಯೂ, ಗತಿಸ್ವರೂಪನಾಗಿಯೂ ಇದ್ದನು! ಇಷ್ಟೆಯಲ್ಲದೆ ಮನೋಹರವಾದ ಗುಣಗಳುಳ್ಳ ಶ್ರೀರಾಮನು ನಿಜ ಜನನಿಯಾದ ಕೌಸಲ್ಯಾದೇವಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದನೋ ಹಾಗೆಯೇ ತಾನು ಹುಟ್ಟಿದಂದಿನಿಂದ ನಮ್ಮನ್ನೂ ಅನುಸರಿಸುತ್ತಿದ್ದನು. ನಾವು ಕುಪಿತರಾದರೂ ಆತನು ಸ್ವಲ್ಪ ಮಾತ್ರವೂ

ದಯನ್ ಸರ್ವಾನ್ ಸ ಇತೋದ್ಯ ಪ್ರವತ್ಸ್ಯತಿ ॥ ೪ ॥ ಅಬುದ್ಧಿರ್ಬತ ನೋ
ರಾಜಾ ಜೀವಲೋಕಂ ಚರತ್ಯಯಂ ॥ ಯೋ ಗತಿಂ ಸರ್ವಭೂತಾನಾಂ ಪರಿ
ತ್ಯಜತಿ ರಾಘವಂ ॥ ೫ ॥ ಇತಿ ಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ ॥
ಪತಿಮಾಚುಕ್ರುಶುಸ್ಸರ್ವಾಸ್ಸಸ್ವರಂ ಚಾಪಿ ಚುಕ್ರುಶುಃ ॥ ೬ ॥ ಸ ಹಿ
ಚಾಂತಃಪುರೇ ಘೋರಮಾರ್ತಶಬ್ದಂ ಮಹೀಪತಿಃ ॥ ಪುತ್ರಶೋಕಾಭಿಸಂತಪ್ತ
ಶ್ಶ್ರುತ್ವಾ ವ್ಯಾಲೀಯತಾಸನೇ ॥ ೭ ॥ ರಾಮಸ್ತು ಭೃಶಮಾಯಸ್ತೋ
ನಿಶ್ಶ್ವಸನ್ನಿವ ಕುಂಜರಃ ॥ ಜಗಾಮ ಸಹಿತೋ ಭ್ರಾತ್ರಾ ಮಾತುರಂತಃಪುರಂ

ಪ್ರಸಾದಯನ್ - ಪ್ರಸನ್ನರಾದವರನ್ನಾಗಿ ಮಾಡುತ್ತ, ವರ್ತತೇ - ಇದ್ದಾನೆಯೋ, ಸಃ ಆ ಶ್ರೀರಾಮನು, ಇತಃ - ಈ ಪಟ್ಟಣದಿಂದ, ಅದ್ಯ - ಈಗಲೆ, ಪ್ರವತ್ಸ್ಯತಿ - ಪ್ರಯಾಣಮಾಡುವನು. ॥ ೪ ॥ ಯಃ - ಯಾವ ದಶರಥರಾಜನು, ಸರ್ವಭೂತಾನಾಂ - ಸಮಸ್ತ ಭೂತಗಳಿಗೂ, ಗತಿಂ - ಶರಣನಾದ, ರಾಘವಂ - ಶ್ರೀರಾಮನನ್ನು, ಪರಿತ್ಯಜತಿ - ಬಿಡುತ್ತಾನೆಯೋ, ಸಃ - ನಮ್ಮ, ಅಯಂರಾಜಾ - ಈ ಅರಸು, ಅಬುದ್ಧಿಃ - ಬುದ್ಧಿಹೀನನಾಗಿ, ಜೀವಲೋಕಂ - ಪ್ರಾಣಿ ಸಮುದಾಯವನ್ನು, ಚರತಿ - ಭಕ್ಷಿಸುತ್ತಾನೆ. ॥ ೫ ॥ ಇತಿ - ಈಪರಿಯಾಗಿ, ಸರ್ವಾಃ - ಸಮಸ್ತರಾದ, ತಾಮಹಿಷ್ಯಃ - ಆ ಪಟ್ಟದರಸಿಗಳು, ವಿವತ್ಸಾಃ - ಕರುಗಳಿಂದ ಹೀನವಾದ, ಧೇನವ ಇವ - ಆಕಳುಗಳಂತೆ, ಪತಿಂ - ಭೂಪತಿಯಾದ ದಶರಥನನ್ನು ಕುರಿತು, ಆಚುಕ್ರುಶುಃ - ಆಕ್ರೋಶಮಾಡಿದರು, ಸಸ್ವರಂ - ಕಂಠಸ್ವರದಿಂದ ಕೂಡಿ, ಚುಕ್ರುಶುಃ - ರೋದನಮಾಡಿದರು. ॥ ೬ ॥ ಸ ಮಹೀಪತಿಃ - ಆ ದಶರಥರಾಜನು, ಅಂತಃಪುರೇ - ಅಂತಃಪುರದಲ್ಲಿ, ಪುತ್ರಶೋಕಾಭಿಸಂತಪ್ತಃ - ಮಗನ ವಿಷಯವಾದ ವ್ಯಸನದಿಂದ ಪರಿತಪಿಸುತ್ತ, ಘೋರಂ - ಭಯಂಕರವಾದ, ಆರ್ತಶಬ್ದಂ - ದೀನಧ್ವನಿಯನ್ನು, ಶ್ರುತ್ವಾ - ಕೇಳಿ, ಆಸನೇ - ಪೀಠದಲ್ಲಿ, ವ್ಯಾಲೀಯತ - ಅವಿತುಕೊಂಡನು. ॥ ೭ ॥ ರಾಮಸ್ತು - ಶ್ರೀರಾಮನಾದರೆ, ಭೃಶಂ - ಬಹಳವಾಗಿ, ಆಯಸ್ತಃ - (ಗೋ) ಪರಮಖದಿಂದ ದುಃಖಾಕ್ರಾಂತನಾಗಿ, ಕುಂಜರ ಇವ - ಆನೆಯಂತೆ, ನಿಶ್ಶ್ವಸನ್ - ನಿಟ್ಟುಸುರಿಗಳನ್ನು ಬಿಡುತ್ತ, ಭ್ರಾತ್ರಾ - ತಮ್ಮನಾದ ಲಕ್ಷ್ಮಣನಿಂದ, ಸಹಿತಃ - ಕೂಡಿ, ವಶೀ - ಜಿತೇಂದ್ರಿಯನಾಗಿ, ಮಾತುರಂತಃಪುರಂ - ತಾಯಿಯ ಅಂತಃಪುರವನ್ನು

ಕೋಪಗೊಳ್ಳದೆ, ಕೋಪಗೊಳ್ಳುವ ಯಾವ ಕಾರ್ಯವೇ ಆಗಲಿ ಅದನ್ನು ಒದಲಿ ನಮ್ಮನ್ನೇ ಸಮಾಧಾನಗೊಳಿಸುತ್ತಿದ್ದನು! ಇಂತಹ ಶ್ರೀರಾಮನು ಈಗ ವನವನ್ನು ಕುರಿತು ತೆರಳುವನಲ್ಲ! ಬುದ್ಧಿಹೀನನಾದ ನಮ್ಮ ರಾಯನು ಸಕಲ ಭೂತಗಳಿಗೂ ಗತಿಯಾದ ಶ್ರೀರಾಮನನ್ನು ಕಳೆದುಕೊಂಡು ಜೀವರಾಶಿಗಳೆಲ್ಲವನ್ನೂ ಭಕ್ಷಿಸುತ್ತಾನೆ! ಅಕಟಕಟಾ!!" ಎಂಬೀ ಪ್ರಕಾರವಾಗಿ ಪಟ್ಟಮಹಿಷಿಯರೆಲ್ಲರೂ ಕರುಗಳನ್ನು ಕಾಣದ ಗೋವುಗಳು ಹಂಬಲಿಸುವಂತೆ, ದಶರಥರಾಜನನ್ನುದ್ದೇಶಿಸಿ ಘಟ್ಟಿಯಾಗಿ ರೋದಿಸಿದರು. ದಶರಥರಾಜನಾದರೋ, ಆ ಅಂತಃಪುರದ ಆರ್ತಶಬ್ದವನ್ನು ಕೇಳಿ ಪುತ್ರ ಶೋಕದಿಂದ ಪರಿತಪಿಸುತ್ತ, ತಾನಿದ್ದ ಪೀಠದಲ್ಲಿಯೇ ಅವಿತುಕೊಂಡವನಾದನು. ॥ ೧-೭ ॥ ಸ್ನೇಹಿತರ ದುಃಖವನ್ನು ಸೈರಿಸದೆ ಬಹಳ ಆಯಾಸಗೊಂಡ ಆ ರಘುನಂದನನು ಲಕ್ಷ್ಮಣಸ್ವಾಮಿಯಿಂದೊಡಗೂಡಿದವನಾಗಿ ಜನನಿಯ

ವಶೀ ॥ ೮ ॥ ಸೋಪಶ್ಯತ್ಪುರುಷಂ ತತ್ರ ವೃದ್ಧಂ ಪರಮ ಪೂಜಿತಂ ॥ ಉಪವಿಷ್ಟಂ ಗೃಹದ್ವಾರಿ ತಿಷ್ಠತಶ್ಚಾಪರಾನ್ ಬಹೂನ್ ॥ ೯ ॥ ದೃಷ್ಟ್ವೈವತು ತದಾ ರಾಮಂ ತೇ ಸರ್ವೇ ಸಹಸೋತ್ಥಿತಾಃ ॥ ಜಯೇನ ಜಯತಾಂ ಶ್ರೇಷ್ಠಂ ವರ್ಧಯಂತಿಸ್ಮ ರಾಘವಂ ॥ ೧೦ ॥ ಪ್ರವಿಶ್ಯ ಪ್ರಥಮಾಂ ಕಕ್ಷ್ಯಾಂ ದ್ವಿತೀಯಾಯಾಂ ದದರ್ಶ ಸಃ ॥ ಬ್ರಾಹ್ಮಣಾನ್ ವೇದಸಂಪನ್ನಾನ್ ವೃದ್ಧಾನ್ ರಾಜ್ಞಾಭಿ ಸತ್ಕೃತಾನ್ ॥ ೧೧ ॥ ಪ್ರಣಮ್ಯ ರಾಮಸ್ತಾನ್ ವಿಪ್ರಾನ್ ತೃತೀಯಾಯಾಂ ದದರ್ಶಸಃ ॥ ಸ್ತ್ರಿಯೋ ವೃದ್ಧಾಸ್ತಥಾಬಾಲಾ ದ್ವಾರರಕ್ಷಣ ತತ್ಪರಾನ್ ॥ ೧೨ ॥ ವರ್ಧಯಿತ್ವಾ ಪ್ರಹೃಷ್ಟಾಸ್ತಾಃ ಪ್ರವಿಶ್ಯಚ ಗೃಹಂ

ಕುರಿತು, ಜಗಾಮ - ತೆರಳಿದನು. ॥ ೮ ॥ ತತ್ರ - ಅಲ್ಲಿ, ಸಃ - ಆ ಶ್ರೀರಾಮನು, ಗೃಹದ್ವಾರಿ - ಮನೆಯ ಬಾಗಿಲಲ್ಲಿ, ಉಪವಿಷ್ಟಂ - ಕುಳಿತುಕೊಂಡಿರುವ, ಪರಮಪೂಜಿತಂ - ಬಹು ಮರ್ಯಾದೆಯನ್ನು ಹೊಂದಿದ, ವೃದ್ಧಂ - ಮುದುಕನಾದ, ಪುರುಷಂ - ದ್ವಾರಪಾಲಕನನ್ನು, ತಿಷ್ಠತಃ - ಅಲ್ಲಿರುವ, ಅಪರಾನ್ - ಮತ್ತೆ ಕೆಲವರಾದ, ಬಹೂನ್ - ಅನೇಕರನ್ನು, ಅಪಶ್ಯತ್ - ಕಂಡನು. ॥ ೯ ॥ ತೇಸರ್ವೇ - ಆ ದ್ವಾರಪಾಲಕರೆಲ್ಲರೂ, ರಾಮಂ-ಶ್ರೀರಾಮನನ್ನು, ದೃಷ್ಟ್ವೈವ-ನೋಡುತ್ತಲೆ, ತದಾ-ಆಗ, ಸಹಸಾ - ಶೀಘ್ರವಾಗಿ, ಉತ್ಥಿತಾಃ - ಎದ್ದು, ಜಯತಾಂ - ಜಯಿಸುವರೊಳಗೆ, ಶ್ರೇಷ್ಠಂ - ಮುಖ್ಯನಾದ, ರಾಘವಂ - ಶ್ರೀರಾಮನನ್ನು, ಜಯೇನ - ಜಯದಿಂದ, ವರ್ಧಯಂತಿಸ್ಮ - ವೃದ್ಧಿಗೊಳಿಸಿದರು. ॥ ೧೦ ॥ ಸಃ - ಶ್ರೀರಾಮನು, ಪ್ರಥಮಾಂಕಕ್ಷ್ಯಾಂ - ಮೊದಲನೆಯ ತೊಟ್ಟಿಯ ಮನೆಯನ್ನು, ಪ್ರವಿಶ್ಯ - ಪ್ರವೇಶಿಸಿ, ದ್ವಿತೀಯಾಯಾಂ - ಎರಡನೆಯ ತೊಟ್ಟಿಯಲ್ಲಿ, ರಾಜ್ಞಾ - ಅರಸನಿಂದ, ಅಭಿಸತ್ಕೃತಾನ್ - ಪೂಜಿಸಲ್ಪಟ್ಟ, ವೇದಸಂಪನ್ನಾನ್ - ವೇದಾಧ್ಯಯನ ಸಂಪನ್ನರಾದ, ವೃದ್ಧಾನ್ - ಮುದುಕರಾದ, ಬ್ರಾಹ್ಮಣಾನ್ - ಬ್ರಾಹ್ಮಣರನ್ನು, ದದರ್ಶ - ಕಂಡನು, ॥ ೧೧ ॥ ಸರಾಮಃ - ಆ ಶ್ರೀರಾಮನು, ತಾನ್‌ವಿಪ್ರಾನ್ - ಆ ಬ್ರಾಹ್ಮಣರನ್ನು ಕುರಿತು, ಪ್ರಣಮ್ಯ - ನಮಸ್ಕರಿಸಿ, ತೃತೀಯಾಯಾಂ - ಮೂರನೆಯ ತೊಟ್ಟಿಯಲ್ಲಿ, ದ್ವಾರರಕ್ಷಣತತ್ಪರಾಃ - ಬಾಗಿಲು ಕಾಯುವದರಲ್ಲಿ ಆಸಕ್ತರಾದ, ವೃದ್ಧಾಃ - ಮುದುಕಿಯರಾದ, ಸ್ತ್ರಿಯಃ-ಹೆಂಗಸರನ್ನು, ತಥಾ-ಹಾಗೆಯೇ, ಬಾಲಾಶ್ಚ-ಹುಡಿಗಿಯರನ್ನೂ ಸಹ, ದದರ್ಶ - ಕಂಡನು. ॥ ೧೨ ॥ ತಾಃಸ್ತ್ರಿಯಃ - ಆ ಸ್ತ್ರೀಯರು, ಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ವರ್ಧಯಿತ್ವಾ - ಜಯಜಯ ಎಂದು ಆಶೀರ್ವಾದ ಮಾಡಿ,

---

ಅಂತಃಪುರಕ್ಕೆ ದ್ವಾರ ಪ್ರದೇಶದಲ್ಲಿರುವ ಮುದುಕನೂ ಪೂಜ್ಯನೂ ಆದ ದ್ವಾರ ಪಾಲಕನನ್ನೂ ಇನ್ನೂ ಕೆಲವರನ್ನೂ ಕಂಡನು. ಅವರೆಲ್ಲರೂ ಬೇಗನೆ ಎದ್ದು "ಜಯಜಯ" ನಾದವನ್ನು ಮಾಡಿದವರಾದರು. ॥ ೮-೧೦ ॥ ಹೀಗೆ ಮೊದಲನೆಯ ತೊಟ್ಟಿಯನ್ನು ದಾಟಿದ ಶ್ರೀರಾಮಮೂರ್ತಿಯು ಎರಡನೆಯ ತೊಟ್ಟಿಯಲ್ಲಿ ವೇದವೇದಾಂಗ ಪಾರಂಗತರೂ, ವೃದ್ಧರೂ, ರಾಜಸನ್ಮಾನಿತರೂ ಆದ ವಿಪ್ರವರೇಣ್ಯರನ್ನು ಕಂಡವನಾದನು. ಆ ಬಳಿಕಲಾ ರಘುಪುಂಗವನು ಅವರೆಲ್ಲರನ್ನೂ ನಮಸ್ಕರಿಸಿ ಮೂರನೆಯ ತೊಟ್ಟಿಯನ್ನು ಸೇರಿ ಅಲ್ಲಿ ಸ್ತ್ರೀಯರನ್ನೂ, ವೃದ್ಧ ಕಂಚುಕಿಗಳನ್ನೂ, ಬಾಲಕರನ್ನೂ ನೋಡಿ, ಅವರೆಲ್ಲರನ್ನೂ ಗೌರವಿಸಿ

ಸ್ತ್ರಿಯಃ ॥ ನ್ಯವೇದಯಂತ ತ್ವರಿತಾ ರಾಮಮಾತುಃ ಪ್ರಿಯಂ ತದಾ ॥ ೧೩ ॥ ಕೌಸಲ್ಯಾಪಿ ತದಾ ದೇವೀ ರಾತ್ರಿಂ ಸ್ಥಿತ್ವಾ ಸಮಾಹಿತಾ ॥ ಪ್ರಭಾತೇತ್ವಕರೋತ್ಪೂಜಾಂ ವಿಷ್ಣೋಃ ಪುತ್ರಹಿತೈಷಿಣೀ ॥ ೧೪ ॥ ಸಾ ಕ್ಷೌಮವಸನಾ ಹೃಷ್ಟಾ ನಿತ್ಯಂ ವ್ರತ ಪರಾಯಣಾ ॥ ಅಗ್ನಿಂ ಜುಹೋತಿಸ್ಮ ತದಾ ಮಂತ್ರವತ್ಕೃತ ಮಂಗಳಾ ॥ ೧೫ ॥ ಪ್ರವಿಶ್ಯಚ ತದಾ ರಾಮೋ ಮಾತುರಂತಃಪುರಂ ಶುಭಂ ॥ ದದರ್ಶ ಮಾತರಂ ತತ್ರ ಹಾವಯಂತೀಂ ಹುತಾಶನಂ ॥ ೧೬ ॥ ದೇವ ಕಾರ್ಯನಿಮಿತ್ತಂ ಚ ತತ್ರಾಪಶ್ಯತ್ಸಮುದ್ಯತಂ ॥ ದಧ್ಯಕ್ಷತಂ ಘೃತಂಚೈವ

ಗೃಹಂಚ - ಮನೆಯನ್ನೂ ಸಹ, ಪ್ರವಿಶ್ಯಚ - ಪ್ರವೇಶಮಾಡಿ, ತ್ವರಿತಾಃ - ಬೇಗನೆ, ರಾಮಮಾತುಃ-ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಗೆ, ಪ್ರಿಯಂ - ಇಷ್ಟವಾದ ಮಾತನ್ನು, ನ್ಯವೇದಯಂತ - ತಿಳುಹಿದರು. ॥ ೧೩ ॥ ಕೌಸಲ್ಯಾದೇವ್ಯಪಿ - ಕೌಸಲ್ಯಾದೇವಿಯೂ ಸಹ, ತದಾ - ಆಗ, ರಾತ್ರಿಂ - ರಾತ್ರಿಯಲ್ಲಿ, ಸಮಾಹಿತಾ - ಸಮಾಧಾನ ಚಿತ್ತಳಾಗಿ, ಸ್ಥಿತ್ವಾ - ಇದ್ದು, ಪ್ರಭಾತೇತು - ಪ್ರಾತಃ ಕಾಲದಲ್ಲಿ ಆದರೆ, ಪುತ್ರಹಿತೈಷಿಣೀ - ಮಗನಿಗೆ ಹಿತವನ್ನು ಇಚ್ಛಿಸಿ, ವಿಷ್ಣೋಃ-ಶ್ರೀಮನ್ನಾರಾಯಣನ, ಪೂಜಾಂ - ಪೂಜೆಯನ್ನು, ಅಕರೋತ್ - ಮಾಡಿದಳು. ॥ ೧೪ ॥ ಕ್ಷೌಮವಸನಾ - ಪಟ್ಟುವಸ್ತ್ರವನ್ನುಟ್ಟವಳಾದ, ಹೃಷ್ಟಾ - ಸಂತೋಷಚಿತ್ತಳಾದ, ನಿತ್ಯಂ - ಯಾವಾಗಲೂ, ವ್ರತಪರಾಯಣಾ - ನಿಯಮದಲ್ಲಿ ಆಸಕ್ತಿಯುಳ್ಳವಳಾದ, ಸಾ - ಆ ಕೌಸಲ್ಯಾದೇವಿಯು, ಕೃತಮಂಗಳಾ - ಮಾಡಲ್ಪಟ್ಟ ಶುಭಗಳುಳ್ಳವಳಾಗಿ, ತದಾ - ಆ ಕಾಲದಲ್ಲಿ, ಅಗ್ನಿಂ - ಅಗ್ನಿಯನ್ನು, ಜುಹೋತಿಸ್ಮ - ಬ್ರಾಹ್ಮಣನಿಂದ ಹೋಮ ಮಾಡಿಸಿದಳಷ್ಟೆ. ॥ ೧೫ ॥ ತದಾ - ಆಗ, ರಾಮಃ - ಶ್ರೀರಾಮನು, ಶುಭಂ - ಶುಭಕರವಾದ, ಮಾತುಃ - ತಾಯಿಯ, ಅಂತಃಪುರಂ - ಅಂತಃಪುರವನ್ನು, ಪ್ರವಿಶ್ಯ - ಪ್ರವೇಶಿಸಿ, ತತ್ರ - ಆ ಅಂತಃಪುರದಲ್ಲಿ, ಹುತಾಶನಂ - ಅಗ್ನಿಯಲ್ಲಿ, ಹಾವಯಂತೀಂ - ಹೋಮ ಮಾಡಿಸುತ್ತಿರುವ, ಮಾತರಂ - ತಾಯಿಯಾದ ಕೌಸಲ್ಯಾದೇವಿಯನ್ನು, ದದರ್ಶ - ಕಂಡನು. ॥ ೧೬ ॥ ತತ್ರ - ಅಲ್ಲಿ, ದೇವಕಾರ್ಯನಿಮಿತ್ತಂಚ - ದೇವಕಾರ್ಯವೇ ಕಾರಣವಾಗಿ ಉಳ್ಳ, ಸಮುದ್ಯತಂ - ಸಿದ್ಧವಾಗಿರುವ ಪದಾರ್ಥ ಸಮೂಹವನ್ನು, ಅಪಶ್ಯತ್ - ಕಂಡನು. ॥ ೧೭ ॥ ರಘುನಂದನಃ - ಶ್ರೀ

ಸಂತೋಷಗೊಳಿಸಿದವನಾದನು. ಆಗ ಅಲ್ಲಿದ್ದ ಸ್ತ್ರೀಯರು ಜಾಗ್ರತೆಗೊಂಡವರಾಗಿ ಕೌಸಲ್ಯಾದೇವಿಯ ಬಳಿಗೈದಿ ಶ್ರೀರಾಮಾಗಮನವನ್ನು ಬಿನ್ನವಿಸಿದರು. ಕೌಸಲ್ಯಾದೇವಿಯಾದರೋ, ತನ್ನ ಮಗನಾದ ಶ್ರೀರಾಮನಿಗೆ ಹಿತವನ್ನು ಬಯಸಿದವಳಾಗಿ, ಸ್ವಸ್ಥಚಿತ್ತತೆಯಿಂದ ರಾತ್ರಿಯನ್ನು ಕಳೆದು ಬೆಳಗಿನ ವಿಷ್ಣು ಪೂಜೆಯನ್ನು ಮಾಡಿದಳು ; ಪಟ್ಟು ವಸ್ತ್ರವನ್ನುಟ್ಟು ಯಾವಾಗಲೂ ನಿಯಮಸ್ಥಳಾದ ಆಕೆಯು ಮಾಂಗಲ್ಯಾದಿಗಳನ್ನು ಮಾಡಿದವಳಾಗಿ, ಮಂತ್ರಪೂರ್ವಕವಾಗಿ ಹೋಮ ಮಾಡಿಸುತ್ತಿದ್ದಳು. ॥ ೧೧-೧೫ ॥ ಆಗಲಾ ಶ್ರೀರಾಮನು ಮಂಗಳಕರವಾದ ಜನನಿಯ ಅಂತಃಪುರವನ್ನು ಪ್ರವೇಶಿಸಿ ಅಗ್ನಿಯಲ್ಲಿ ಹೋಮ ಮಾಡಿಸುತ್ತಿರುವ ತನ್ನ ತಾಯಿಯಾದ ಕೌಸಲ್ಯಾದೇವಿಯನ್ನು ಕಂಡವನಾದನು ; ಅಲ್ಲಿಯಾದರೋ ದೇವತಾ ಪೂಜೆಗಾಗಿ ಇರಿಸಲ್ಪಟ್ಟದ್ದ, ಮೊಸರು, ಮಂಗಳಾಕ್ಷತೆ, ಘೃತ, ಭಕ್ಷ್ಯಗಳು,

ಮೋದಕಾನ್ ಹವಿಷಸ್ತಥಾ ‖ ೧೭ ‖ ಲಾಜಾನ್ ಮಾಲ್ಯಾನಿ ಶುಕ್ಲಾನಿ ಪಾಯಸಂ
ಕೃಸರಂ ತಥಾ ‖ ಸಮಿಧಃ ಪೂರ್ಣಕುಂಭಾಂಶ್ಚ ದದರ್ಶ ರಘುನಂದನಃ ‖೧೮‖
ತಾಂಶುಕ್ಲಕ್ಷೌಮಸಂವೀತಾಂ ವ್ರತಯೋಗೇನ ಕರ್ಶಿತಾಂ ‖ ತರ್ಪಯಂತೀಂ
ದದರ್ಶಾದ್ಭಿ ರ್ದೇವತಾಂ ದೇವ ವರ್ಣಿನೀಂ ‖ ೧೯ ‖ ಸಾಚಿರಸ್ಯಾತ್ಮಜಂ
ದೃಷ್ಟ್ವಾ ಮಾತೃನಂದನಮಾಗತಂ ‖ ಅಭಿಚಕ್ರಾಮ ಸಂಹೃಷ್ಟಾ (ಕಿಶೋರಂ
ಬಡಬಾ ಯಥಾ) ‖ ೨೦ ‖ ಸಮಾತರಮಭಿಕ್ರಾಂತಾಮುಪಸಂಗೃಹ್ಯ
ರಾಘವಃ ‖ ಪರಿಷ್ವಕ್ತಶ್ಚ ಬಾಹುಭ್ಯಾಮುಪಾಘ್ರಾತಶ್ಚ ಮೂರ್ಧನಿ ‖ ೨೧ ‖

ರಾಮನು, ದಧಿ - ಮೊಸರನ್ನೂ, ಅಕ್ಷತಂ-ಅಕ್ಷತೆಗಳನ್ನೂ, ಘೃತಂಚೈವ-ಆಜ್ಯವನ್ನೂ, ಮೋದಕಾನ್-ಭಕ್ಷ್ಯಗಳನ್ನೂ, ಹವಿಷಃ - ಹವಿರ್ದ್ರವ್ಯಗಳನ್ನೂ, ತಥಾ - ಹಾಗೆಯೆ, ಲಾಜಾನ್ - ಅರಳುಗಳನ್ನೂ, ಶುಕ್ಲಾನಿಮಾಲ್ಯಾನಿ - ಶ್ವೇತ ಕುಸುಮಗಳನ್ನೂ, ಪಾಯಸಂ - ಪಾಯಸವನ್ನೂ, ತಥಾ - ಹಾಗೆಯೆ, ಕೃಸರಂ - ತಿಲಾನ್ನವನ್ನೂ, ಸಮಿಧಃ-ಸಮಿತ್ತುಗಳನ್ನೂ, ಪೂರ್ಣಕುಂಭಾಂಶ್ಚ - ಉದಕಪೂರಿತವಾದ ಕಲಶಗಳನ್ನೂ, ದದರ್ಶ - ಕಂಡನು. ‖ ೧೮ ‖ ಶುಕ್ಲಕ್ಷೌಮಸಂವೀತಾಂ - ಬಿಳೀ ಪಟ್ಟೆವಸ್ತ್ರವನ್ನುಟ್ಟಿರುವ, ವ್ರತಯೋಗೇನ - ಉಪವಾಸ ವ್ರತಾದಿಗಳ ಸಂಬಂಧದಿಂದ, ಕರ್ಶಿತಾಂ - ಕೃಶೀಭಾವವನ್ನು ಹೊಂದಿದ, ದೇವತಾಂ - ದೇವತೆಯನ್ನು ಕುರಿತು, ಅದ್ಭಿಃ - ಉದಕದಿಂದ, ತರ್ಪಯಂತೀಂ - ತೃಪ್ತಿಗೊಳಿಸುತ್ತಿರುವ, ದೇವವರ್ಣಿನೀಂ - ದೇವತಾ ಸ್ತ್ರೀರೂಪದಂತೆ ರೂಪವುಳ್ಳ, ತಾಂ - ಆ ಕೌಸಲ್ಯಾದೇವಿಯನ್ನು, ದದರ್ಶ - ಕಂಡನು. ‖ ೧೯ ‖ ಸಾ - ಆ ಕೌಸಲ್ಯಾದೇವಿಯು, ಮಾತೃನಂದನಂ - ತಾಯಿಗೆ ಆನಂದಕರನಾದ, ಚಿರಸ್ಯ - ಬಹುಕಾಲಕ್ಕೆ, ಆಗತಂ - ಬಂದಿರುವ, ಆತ್ಮಜಂ - ಕುಮಾರನನ್ನು, ದೃಷ್ಟ್ವಾ - ಕಂಡು, ಸಂಹೃಷ್ಟಾ-ಸಂತೋಷಯುಕ್ತಳಾಗಿ, ಕಿಶೋರಂ-ಎಳೆ ಗುದುರೆಯನ್ನು ಕುರಿತು, ಬಡಬಾಯಥಾ-ಹೆಣ್ಣು ಕುದುರೆಯು ಬರುವಂತೆ, ಅಭಿಚಕ್ರಾಮ-ಅಭಿಮುಖವಾಗಿ ಬಂದಳು. ‖ ೨೦ ‖ ಸರಾಘವಃ - ಆ ಶ್ರೀರಾಮನು, ಅಭಿಕ್ರಾಂತಾಂ - ಎದುರಿಗೆ ಬರುತ್ತಿರುವ, ಮಾತರಂ - ತಾಯಿಯನ್ನು ಕುರಿತು, ಉಪಸಂಗೃಹ್ಯ - ನಮಸ್ಕರಿಸಿ, ಬಾಹುಭ್ಯಾಂ - ಭುಜಗಳಿಂದ, ಪರಿಷ್ವಕ್ತಶ್ಚ-ಆಲಿಂಗನಮಾಡಿಸಿಕೊಳ್ಳಲ್ಪಟ್ಟವನಾಗಿ, ಮೂರ್ಧನಿ - ಶಿರಸ್ಸಿನಲ್ಲಿ, ಉಪಾಘ್ರಾತಶ್ಚ - ಆಘ್ರಾಣವೂ

ಹೋಮ ಸಲಕರಣಗಳೂ, ಅರಳೂ, ಬಿಳಿತಾದ ಕುಸುಮಗಳೂ, ಪಾಯಸಗಳೂ, ತಿಲೋದನವೇ ಮೊದಲಾದ ವಿವಿಧಾನ್ನಗಳೂ, ಸಮಿತ್ತುಗಳೂ, ಪೂರ್ಣ ಕುಂಭಗಳೂ ಇರಿಸಲ್ಪಟ್ಟಿದ್ದವು. ಇವೆಲ್ಲವನ್ನೂ ನೋಡಿದ ಶ್ರೀರಾಮನು ಪಟ್ಟೆವಸ್ತ್ರವನ್ನುಟ್ಟು ವ್ರತ ನಿಯಮದಿಂದ ಕೃಶಿಸಿದವಳಾಗಿಯೂ, ಉದಕದಿಂದ ದೇವತೆಗಳಿಗೆ ಅರ್ಘ್ಯವನ್ನೀಯುತ್ತಿರುವವಳೂ, ದೇವ ಕನ್ನಿಕೆಗೆ ಸಮಾನಳಾದವಳೂ, ತನ್ನ ಜನನಿಯೂ ಆದ ಕೌಸಲ್ಯಾದೇವಿಯನ್ನು ನೋಡಿದನು. ಆಗಲಾ ಕೌಸಲ್ಯಾದೇವಿಯು ತಾಯಿಯನ್ನು ಸಂತೋಷಗೊಳಿಸುವ ಶ್ರೀರಾಮನನ್ನು ನೋಡಿ, ಬಲು ಬೇಗನೆ ಪೆಣ್ಗುದುರೆಯು ತನ್ನ ಮರಿಯ ಬಳಿಗೈದುವಂತೆ ಆತನ ಬಳಿ ಸಾರಿದಳು. ‖ ೧೬-೨೦ ‖ ಆಗಲಾ ಶ್ರೀರಾಮನು ತನ್ನ ಬಳಿಗೆ ಬರುತ್ತಿರುವ ಕೌಸಲ್ಯಾದೇವಿಯಿಂದ ಆಲಿಂಗಿಸಲ್ಪಟ್ಟವನೂ, ಆಘ್ರಾಣಿಸಲ್ಪಟ್ಟವನೂ ಆದನು. ಆ ಬಳಿಕ ಕೌಸಲ್ಯೆಯು

ತಮುವಾಚ ದುರಾಧರ್ಷಂ ರಾಘವಂ ಸುತಮಾತ್ಮನಃ ॥ ಕೌಸಲ್ಯಾ ಪುತ್ರವಾತ್ಸಲ್ಯಾದಿದಂ ಪ್ರಿಯಹಿತಂ ವಚಃ ॥ ೨೨ ॥ (ವೃದ್ಧಾನಾಂ ಧರ್ಮಶೀಲಾನಾಂ ರಾಜರ್ಷೀಣಾಂ ಮಹಾತ್ಮನಾಂ ॥ ಪ್ರಾಪ್ನುಹ್ಯಾಯುಶ್ಚ ಕೀರ್ತಿಂಚ ಧರ್ಮಂ ಚೋಪಹಿತಂ ಕುಲೇ) ॥ ೨೩ ॥ ಸತ್ಯಪ್ರತಿಜ್ಞಂ ಪಿತರಂ ರಾಜಾನಂ ಪಶ್ಯ ರಾಘವ ॥ ಅದ್ಯೈವ ಹಿ ತ್ವಾಂ ಧರ್ಮಾತ್ಮಾ ಯೌವರಾಜ್ಯೇಽಭಿಷೇಕ್ಷ್ಯತಿ ॥೨೪॥ ದತ್ತಮಾಸನಮಾಲಭ್ಯ ಭೋಜನೇನ ನಿಮಂತ್ರಿತಃ ॥ ಮಾತರಂ ರಾಘವಃ ಕಿಂಚಿತ್ ವ್ರೀಡಾತ್ ಪ್ರಾಂಜಲಿರಬ್ರವೀತ್ ॥ ೨೫ ॥ ಸಸ್ವಭಾವ ವಿನೀತಶ್ಚ

ಮಾಡಲ್ಪಟ್ಟನು. ॥ ೨೧ ॥ ಕೌಸಲ್ಯಾ - ಕೌಸಲ್ಯಾದೇವಿಯು, ಆತ್ಮನಃ - ತನ್ನ, ಸುತಂ - ಕುವರನಾದ, ದುರಾಧರ್ಷಂ - ತಿರಸ್ಕರಿಸಲಸಾಧ್ಯನಾದ, ತಂರಾಘವಂ - ಆ ಶ್ರೀರಾಮನನ್ನು ಕುರಿತು, ಪುತ್ರವಾತ್ಸಲ್ಯಾತ್ - ಮಗನಲ್ಲಿನ ಪ್ರೀತಿಯಿಂದ, ಪ್ರಿಯಹಿತಂ - ಇಷ್ಟವಾಗಿಯೂ ಕರ್ಣಶ್ರಾವ್ಯವಾಗಿಯೂ ಇರುವ, ಇದಂವಚಃ - ಈ ಮಾತನ್ನು, ಉವಾಚ - ಹೇಳಿದಳು. ॥ ೨೨ ॥ ವೃದ್ಧಾನಾಂ - ಮುದುಕರಾದ, ಧರ್ಮಶೀಲಾನಾಂ - ಧರ್ಮಿಷ್ಠರಾದ, ಮಹಾತ್ಮನಾಂ - ಮಹಾ ಮನಸ್ವಿಗಳಾದ, ರಾಜರ್ಷಿಣಾಂ - ರಾಜರ್ಷಿಗಳ, ಆಯುಶ್ಚ - ಆಯುಸ್ಸನ್ನೂ, ಕೀರ್ತಿಂಚ - ಯಶಸ್ಸನ್ನೂ, ಕುಲೇ - ವಂಶದಲ್ಲಿ, ಉಪಹಿತಂ - ಸಂಪಾದಿಸಲ್ಪಟ್ಟ, ಧರ್ಮಂಚ - ಧರ್ಮವನ್ನೂ, ಪ್ರಾಪ್ನುಹಿ - ಹೊಂದುವೆ. ॥ ೨೩ ॥ ಹೇ ರಾಘವ - ಎಲೈ ಶ್ರೀರಾಮನೆ! ಸತ್ಯಪ್ರತಿಜ್ಞಂ - ಸಫಲವಾದ ಪ್ರತಿಜ್ಞೆಯುಳ್ಳ, ಪಿತರಂ - ತಂದೆಯಾದ, ರಾಜಾನಂ - ಅರಸನನ್ನು, ಪಶ್ಯ - ನೋಡು, ಧರ್ಮಾತ್ಮಾ - ಧರ್ಮಿಷ್ಠನಾದ ರಾಜನು, ಅದ್ಯೈವ - ಈಗಲೆ, ತ್ವಾಂ - ನಿನ್ನನ್ನು, ಯೌವರಾಜ್ಯೇ- ಎರಡನೆಯ ಪ್ರಭುತ್ವದಲ್ಲಿ, ಅಭಿಷೇಕ್ಷ್ಯತಿ - ಪಟ್ಟಾಭಿಷೇಕ ಮಾಡುವನು. ॥ ೨೪ ॥ ರಾಘವಃ - ಶ್ರೀರಾಮನು, ದತ್ತಂ - ಕೊಡಲ್ಪಟ್ಟ, ಆಸನಂ - ಪೀಠವನ್ನು, ಆಲಭ್ಯ-ಸ್ಪರ್ಶಮಾಡಿ, ಭೋಜನೇನ- ಭೋಜನದಿಂದ, ನಿಮಂತ್ರಿತಃ - ನಿಯಮಿಸಲ್ಪಟ್ಟು, ಕಿಂಚಿತ್ - ಕೊಂಚವಾಗಿ, ವ್ರೀಡಾತ್ - ನಾಚಿಕೆಯಿಂದ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಮಾತರಂ - ಕೌಸಲ್ಯಾದೇವಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೫ ॥ ಸ್ವಭಾವವಿನೀತಃ - ಸ್ವಭಾವದಿಂದಲೇ ವಿನಯ

ಪುತ್ರವಾತ್ಸಲ್ಯದಿಂದಾಶ್ರೀರಾಮನನ್ನು ಕುರಿತು ಹಿತಕರವಾದೀ ನುಡಿಗಳನ್ನಾಡಿದಳು. “ಮಗನೇ! ಮಹಾತ್ಮರಾಗಿಯೂ, ಧರ್ಮಸ್ವಭಾವವುಳ್ಳವರಾಗಿಯೂ ವೃದ್ಧರಾಗಿಯೂ ಇರುವ ಈ ರಘುವಂಶದ ರಾಜರ್ಷಿಗಳು ಹೇಗೆ ಚಿರಾಯುಷ್ಮಂತರಾಗಿರುವರೋ, ಹಾಗೆ ನೀನೂ ಚಿರಾಯುವಾಗು! ಸಫಲ ಪ್ರತಿಜ್ಞೆಯುಳ್ಳ ಮಹಾರಾಜನ ಸನ್ನಿಧಿಗೆ ಹೋಗಿ ಆತನನ್ನು ಕಂಡು ಬರುವವನಾಗು. ಧರ್ಮಿಷ್ಠನಾದ ಮಹಾರಾಜನು ನಿನಗೀಗಲೇ ಯೌವರಾಜ್ಯಾಭಿಷೇಕವನ್ನು ಮಾಡಿಸುತ್ತಾನೆ. ಈ ಪೀಠದಲ್ಲಿ ಕುಳಿತುಕೋ! ಭೋಜನವನ್ನು ಮಾಡುವೆಯಂತೆ.” ಕೌಸಲ್ಯಾದೇವಿಯು ಹೀಗೆ ಹೇಳಿ ಭೋಜನಕ್ಕೆ ಕರೆಯಲು, ಸ್ವಾಭಾವಿಕವಾಗಿಯೇ ವಿನಯ ಗುಣಸಂಪನ್ನನಾದ ಶ್ರೀರಾಮಚಂದ್ರನು ಮಾತೆಯೆಂಬ ಗೌರವದಿಂದ ಆಕೆಗೆ ವಿಧೇಯನಾಗಿ ಸ್ವಲ್ಪವಾದ ನಾಚಿಕೆಯಿಂದೊಡಗೂಡಿ ಕೈಗಳನ್ನು ಜೋಡಿಸಿಕೊಂಡು

ಗೌರವಾಚ್ಚ ತದಾನತಃ ॥ ಪ್ರಸ್ಥಿತೋ ದಂಡಕಾರಣ್ಯಮಾಪ್ರಷ್ಟುಮುಪ
ಚಕ್ರಮೇ ॥ ೨೬ ॥ ದೇವಿ ನೂನಂ ನಜಾನೀಷೇ ಮಹದ್ಭಯ ಮುಪಸ್ಥಿತಂ ॥
ಇದಂ ತವಚ ದುಃಖಾಯ ವೈದೇಹ್ಯಾ ಲಕ್ಷ್ಮಣಸ್ಯಚ ॥ ೨೭ ॥ ಗಮಿಷ್ಯೇ
ದಂಡಕಾರಣ್ಯಂ ಕಿಮನೇನಾಸನೇನ ಮೇ ॥ ವಿಷ್ಟರಾಸನ ಯೋಗ್ಯೋಹಿ
ಕಾಲೋಽಯಂ ಮಾಮುಪಸ್ಥಿತಃ ॥ ೨೮ ॥ ಚತುರ್ದಶಹಿ ವರ್ಷಾಣಿ ವತ್ಸ್ಯಾಮಿ
ವಿಜನೇ ವನೇ ॥ ಮಧುಮೂಲಫಲೈರ್ಜೀವನ್ ಹಿತ್ವಾ ಮುನಿವದಾಮಿಷಂ॥೨೯॥

ಸಂಪನ್ನನಾದ, ಗೌರವಾಚ್ಚ - ಗುರುತ್ವದಿಂದಲೂ, ನತಃ - ನಮ್ರನಾಗಿ, ದಂಡಕಾರಣ್ಯಂ-ದಂಡಕಾರಣ್ಯವನ್ನು ಕುರಿತು, ಪ್ರಸ್ಥಿತಃ - ಪ್ರಯಾಣಮಾಡಿ, ಆಪ್ರಷ್ಟುಂ - ಅಪ್ಪಣೆಯನ್ನು ಕೇಳಲು, ಉಪಚಕ್ರಮೇ - ಪ್ರಾರಂಭಿಸಿದನು. ॥ ೨೬ ॥ ಹೇ ದೇವಿ - ಎಲೌ ತಾಯೆ, ಮಹದ್ಭಯಂ - ಮಹಾಭಯವು, ಉಪಸ್ಥಿತಂ - ಒದಗಿ ಬಂದಿರುವುದು, ತ್ವಂ - ನೀನು, ನಜಾನೀಷೇ - ಅರಿಯೆ, ನೂನಂ - ನಿಶ್ಚಯವು, ಇದಂ - ಈ ಕಾರ್ಯವು, ತವಚ - ನಿನಗೂ, ವೈದೇಹ್ಯಾ - ಸೀತಾದೇವಿಗೂ, ಲಕ್ಷ್ಮಣಸ್ಯಚ - ಲಕ್ಷ್ಮಣನಿಗೂ, ದುಃಖಾಯ - ದುಃಖಕ್ಕೋಸುಗ, ಭವತಿ - ಆಗುತ್ತದೆ. ॥ ೨೭ ॥ ದಂಡಕಾರಣ್ಯಂ - ದಂಡಕಾರಣ್ಯವನ್ನು ಕುರಿತು, ಗಮಿಷ್ಯೇ - ಹೋಗುವೆನು, ಮೇ - ನನಗೆ, ಅನೇನಆಸನೇನ- ಈ ಪೀಠದಿಂದ, ಕಿಂ - ಏನು ಪ್ರಯೋಜನವು, ಮಾಂ - ನನ್ನನ್ನು ಕುರಿತು, ವಿಷ್ಟರಾಸನಯೋಗ್ಯಃ, ವಿಷ್ಟರಾಸನ - (೧) ಋಷ್ಯಾಸನಕ್ಕೆ, ಯೋಗ್ಯಃ - ತಕ್ಕುದಾದ, ಅಯಂಕಾಲಃ - ಈ ಕಾಲವು, ಉಪಸ್ಥಿತಃ - ಪ್ರಾಪ್ತವಾಯಿತು. ॥ ೨೮ ॥ ಚತುರ್ದಶವರ್ಷಾಣಿ - ಹದಿನಾಲ್ಕು ವರುಷಗಳು, ಮಧುಮೂಲಫಲೈಃ - ಜೇನು ಮತ್ತು ಕಂದಮೂಲ ಫಲಗಳಿಂದ, ಜೀವನ್ - ಜೀವಿಸುತ್ತ, ಮುನಿವತ್- ಋಷಿಯಂತೆ, ಆಮಿಷಂ - ಪರಿಚಾರಕರಿಂದ ಪಕ್ವಮಾಡಲ್ಪಟ್ಟ ಮಾಂಸಾದಿಗಳನ್ನು, ಹಿತ್ವಾ-ಬಿಟ್ಟು, ವಿಜನೇ - ಜನರಹಿತವಾದ, ವನೇ - ದಂಡಕಾರಣ್ಯದಲ್ಲಿ, ವತ್ಸ್ಯಾಮಿ - ವಾಸಮಾಡುವೆನು. ॥ ೨೯ ॥ ಮಹಾರಾಜಃ - ಮಹಾರಾಜನು, ಭರತಾಯ - ಭರತನಿಗೆ, ಯೌವರಾಜ್ಯಂ - ಯುವ

ಆಕೆಯನ್ನು ಕುರಿತು, "ಎಲೌ ಜನನೀ! ಈಗ ಪ್ರಾಪ್ತವಾಗಿರುವ ಮಹತ್ತರವಾದ ಭಯವು ನಿನಗೆ ತಿಳಿಯದು. ಇದು ತಾಯಿಯಾದ ನಿನಗೂ, ಪ್ರಿಯಳಾದ ಸೀತಾದೇವಿಗೂ ಮತ್ತು ಲಕ್ಷ್ಮಣನಿಗೂ ವ್ಯಸನವನ್ನುಂಟುಮಾಡುವುದಾಗಿರುವುದು. ॥ ೨೧-೨೭ ॥ ನಾನು ದಂಡಕಾರಣ್ಯಕ್ಕೆ ಹೊರಡುವೆನು. ಈ ಆಸನದಿಂದ ನನಗೇನುತಾನೆ ಪ್ರಯೋಜನವಿರುವುದು? ಅಮ್ಮ! ದರ್ಭಾಸನದಲ್ಲಿ ಕುಳಿತುಕೊಳ್ಳುವ ಕಾಲವು ನನಗೆ ಒದಗಿ ಬಂದಿರುವುದಷ್ಟೆ? ಕೇಳು; ಈ ಪಕ್ವವಾದ ಮಾಂಸಾದ್ಯಾಹಾರಗಳನ್ನು ತೊರೆದು, ಮಧುಮೂಲ ಫಲಾದಿಗಳನ್ನು ಸೇವಿಸುತ್ತ. ಹದಿನಾಲ್ಕು ವರುಷಗಳ ಕಾಲ ದಂಡಕಾರಣ್ಯದಲ್ಲಿ ವಾಸ ಮಾಡುತ್ತೇನೆ. ನಮ್ಮ ಜನಕನಾದ ದಶರಥರಾಯನು ನನ್ನ ತಮ್ಮನಾದ ಭರತನಿಗೆ ಯೌವರಾಜ್ಯ ಪಟ್ಟಾಭಿ

ಟಿ. (೧) "ವಿಷ್ಟರಾಸನಃ" ಎಂದರೆ ಮುನಿಗಳು ಕುಳಿತುಕೊಳ್ಳಲು ಯೋಗ್ಯವಾದ ಇಪ್ಪತ್ತೈದು ದರ್ಭೆಗಳಿಂದ ಮಾಡಿದ ದರ್ಭಾಸನವು. "ಪಂಚಾಶದ್ಭಿರ್ಭವೇದ್ಬ್ರಹ್ಮ ತದರ್ಧಂ ವಿಷ್ಟರಃ" ಎಂದು ಸ್ಮೃತಿಕಾರನ ವಚನವು.

ಭರತಾಯ ಮಹಾರಾಜೋ ಯೌವರಾಜ್ಯಂ ಪ್ರಯಚ್ಛತಿ ॥ ಮಾಂಪುನರ್ದಂಡ
ಕಾರಣ್ಯೇ ವಿವಾಸಯತಿ ತಾಪಸಂ ॥ ೩೦ ॥ ಸಷಟ್ಚಾಷ್ಟೌಚ ವರ್ಷಾಣಿ
ವತ್ಸ್ಯಾಮಿ ವಿಜನೇವನೇ ॥ ಆಸೇವಮಾನೋ ವನ್ಯಾನಿ ಫಲಮೂಲೈಶ್ಚ
ವರ್ತಯನ್ ॥ ೩೧ ॥ (ಸಾನಿಕೃತ್ತೇವ ಸಾಲಸ್ಯ ಯಷ್ಟಿಃ ಪರಶುನಾ ವನೇ ॥
ಪಪಾತ ಸಹಸಾ ದೇವೀ ದೇವತೇವ ದಿವಶ್ಚ್ಯುತಾ) ॥ ೩೨ ॥ ತಾಮದುಃಖೋ
ಚಿತಾಂ ದೃಷ್ಟ್ವಾ ಪತಿತಾಂ ಕದಳೀಮಿವ ॥ ರಾಮಸ್ತೂತ್ಥಾಪಯಾಮಾಸ
ಮಾತರಂ ಗತಚೇತಸಾಂ ॥ ೩೩ ॥ ಉಪಾವೃತ್ಯೋತ್ಥಿತಾಂ ದೀನಾಂ (ಬಡ
ಬಾಮಿವ ವಾಹಿತಾಂ) ॥ ಪಾಂಸುಕುಂಠಿತಸರ್ವಾಂಗೀಂ ವಿಮಮರ್ಶಚ

ರಾಜತ್ವವನ್ನು, ಪ್ರಯಚ್ಛತಿ - ಕೊಡುತ್ತಾನೆ, ಮಾಂಪುನಃ - ನನ್ನನ್ನಾದರೆ, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ತಾಪಸಂ - ತಾಪಸನನ್ನಾಗಿ, ವಿವಾಸತಿ - ಹೊರಡಿಸುತ್ತಾನೆ. ॥ ೩೦ ॥ ಸಃ - ಅಂತಹ ನಾನು, ಷಟ್ಚಅಷ್ಟೌಚ - ಹದಿನಾಲ್ಕಾದ, ವರ್ಷಾಣಿ - ಸಂವತ್ಸರಗಳು, ವನ್ಯಾನಿ-ವನದಲ್ಲಿ ಹುಟ್ಟಿದ ಆಹಾರವನ್ನು, ಆಸೇವಮಾನಃ - ಭುಜಿಸುತ್ತ, (ಗೋ) ವನ್ಯಾನಿ - ವಾನಪ್ರಸ್ಥಾಶ್ರಮಕ್ಕೆ ಯೋಗ್ಯವಾದ ಕರ್ಮಗಳನ್ನು, ಆಸೇವಮಾನಃ - ಸೇವಿಸುತ್ತ, ಫಲಮೂಲೈಶ್ಚ - ಫಲಗಳಿಂದಲೂ, ವರ್ತಯನ್ - ಜೀವಿಸುತ್ತಿರುವನಾಗಿ, ವಿಜನೇ - ಜನರಹಿತವಾದ, ವನೇ - ಕಾಡಿನಲ್ಲಿ, ವತ್ಸ್ಯಾಮಿ - ಇರುವೆನು. ॥ ೩೧ ॥ ಸಾದೇವೀ - ಆ ಕೌಸಲ್ಯಾದೇವಿಯು, ವನೇ - ವನದಲ್ಲಿ, ಪರಶುನಾ - ಕೊಡಲಿಯಿಂದ, ನಿಕೃತ್ತಾ - ಕತ್ತರಿಸಲ್ಪಟ್ಟ, ಸಾಲಸ್ಯ - ಮದ್ದೀಮರದ, ಯಷ್ಟಿರಿವ - ರೆಂಬೆಯಂತೆ, ದಿವಃ - ಸ್ವರ್ಗದಿಂದ, ಚ್ಯುತಾ - ಜಾರಿದ, ದೇವತೇವ - ದೇವಾಂಗನೆಯಂತೆ, ಸಹಸಾ - ಜಾಗ್ರತೆಯಾಗಿ, ಪಪಾತ - ಬಿದ್ದಳು. ॥ ೩೨ ॥ ರಾಮಸ್ತು - ಶ್ರೀರಾಮನಾದರೆ, ಅದುಃಖೋಚಿತಾಂ - ದುಃಖಿಸಲು ಯೋಗ್ಯಳಲ್ಲದೆ, ಕದಳೀಮಿವ - ಬಾಳೆಯಗಿಡದಂತೆ, ಪತಿತಾಂ - ಬಿದ್ದಿರುವ, ಗತಚೇತಸಂ - ಪ್ರಜ್ಞೆತಪ್ಪಿದ, ತಾಂಮಾತರಂ - ಆ ತಾಯಿಯನ್ನು, ಉತ್ಥಾಪಯಾಮಾಸ - ಎಚ್ಚರಗೊಳಿಸಿದನು. ॥ ೩೩ ॥ ಉಪಾವೃತ್ಯ - ಹೊರಳಾಡಿ, ಉತ್ಥಿತಾಂ - ಮೇಲಕ್ಕೆ ಎದ್ದ, ವಾಹಿತಾಂ- ಬಹುಭಾರವನ್ನು ವಹಿಸಿದ, ದೀನಾಂ - ದೈನ್ಯವನ್ನು ಹೊಂದಿದ, ಬಡಬಾಮಿವ - ಹೆಣ್ಣು ಕುದುರೆ

ಷೇಕವನ್ನು ಮಾಡಿಸುತ್ತಾನೆ. ತಪಸ್ವಿಯಾದ ನನ್ನನ್ನಾದರೋ ಹದಿನಾಲ್ಕು ಸಂವತ್ಸರಗಳ ವರೆಗೂ ವನವಾಸ ಮಾಡಲು ದಂಡಕಾರಣ್ಯಕ್ಕೆ ಹೊರಡಿಸುತ್ತಾನೆ. ಆದುದರಿಂದಲೌ ಮಾತೆಯೆ ! ನಾನೀಗ ವಾನಪ್ರಸ್ಥಾಶ್ರಮಿಯಂತೆ ಕಂದಮೂಲಾದಿಗಳನ್ನು ಸೇವಿಸುತ್ತ ಹದಿನಾಲ್ಕು ಸಂವತ್ಸರಗಳ ಕಾಲ ವನವಾಸವನ್ನು ಮಾಡುತ್ತೇನೆ" ಎಂದು ಹೇಳಿದನು.॥೨೮-೩೧॥ ಶ್ರೀರಾಮನೀರೀತಿ ನುಡಿಯಲು ಕೌಸಲ್ಯಾದೇವಿಯು ಕತ್ತರಿಸಿದ ಮದ್ದೀಮರದಂತೆಯೂ, ಸ್ವರ್ಗಲೋಕ ಚ್ಯುತಳಾದ ಕಿನ್ನರಾಂಗನೆಯಂತೆಯೂ ಒಲು ಬೇಗನೆ ಮೂರ್ಛಿತಳಾಗಿ ನೆಲಕ್ಕೆ ಬಿದ್ದಳು. ಆಗಲಾ ರಾಮಚಂದ್ರನು ದುಃಖಿಸಲು ಯೋಗ್ಯಳಲ್ಲದ ತನ್ನ ತಾಯಿಯು, ಕಡಿದ ಬಾಳೆಯ ಮರದಂತೆ ನೆಲಕ್ಕೆ ಬಿದ್ದು ಪ್ರಜ್ಞೆಯಿಲ್ಲದಿರುವುದನ್ನು ಕಂಡು ಎಚ್ಚರಗೊಳಿಸಿದವನಾದನು; ॥೨೮-೩೩॥ ಹೀಗೆ ಆಕೆಯನ್ನು ಎಚ್ಚರಗೊಳಿಸಿ, ದೀನಳಾಗಿಯೂ, ಭಾರವನ್ನು ಹೊತ್ತ

ಪಾಣಿನಾ ॥ ೩೪ ॥ ಸಾರಾಘವ ಮುಪಾಸೀನ ಮಸುಖಾರ್ತಾ ಸುಖೋಚಿತಾ ॥ ಉವಾಚ ಪುರುಷವ್ಯಾಘ್ರಮುಪಶೃಣ್ವತಿ ಲಕ್ಷ್ಮಣೇ ॥ ೩೫ ॥ ಯದಿ ಪುತ್ರ ನಜಾಯೇಥಾ ಮಮ ಶೋಕಾಯ ರಾಘವ ॥ ನಸ್ಮದುಃಖಮತೋಭೂಯಃ ಪಶ್ಯೇಯಮಹಮಪ್ರಜಾ ॥ ೩೬ ॥ ಏಕಏವಹಿ ವಂಧ್ಯಾಯಾಶ್ಶೋಕೋ ಭವತಿ ಮಾನಸಃ ॥ ಅಪ್ರಜಾಸ್ಮೀತಿ ಸಂತಾಪೋ ನಹ್ಯನ್ಯಃ ಪುತ್ರ ವಿದ್ಯತೇ ॥೩೭॥ ನದೃಷ್ಟಪೂರ್ವಂ ಕಲ್ಯಾಣಂ ಸುಖಂವಾ ಪತಿಪೌರುಷೇ ॥ ಅಪಿ ಪುತ್ರೇಪಿ ಪಶ್ಯೇ

ಯಂತೆ, ಪಾಂಸುಕುಂಠಿತಸರ್ವಾಂಗೀಂ - ಧೂಳಿಗಳಿಂದ ವ್ಯಾಪ್ತವಾದ ಸರ್ವಾವಯವಗಳುಳ್ಳ ಆ ತಾಯಿಯನ್ನು, ಪಾಣಿನಾ - ಹಸ್ತದಿಂದ, ವಿಮಮರ್ಶ - ಸವರಿದನು. ॥ ೩೪ ॥ ಅಸುಖಾರ್ತಾ - ದುಃಖಾರ್ತಳಾದ, ಸುಖೋಚಿತಾ ಸುಖಕ್ಕೆ ಯೋಗ್ಯಳಾದ, ಸಾ-ಆ ಕೌಸಲ್ಯಾದೇವಿಯು, ಉಪಾಸೀನಂ-ಸೇವೆಮಾಡುತ್ತಿರುವ, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ರಾಘವಂ - ಶ್ರೀರಾಮನನ್ನುಕುರಿತು, ಲಕ್ಷ್ಮಣೇ - ಲಕ್ಷ್ಮಣನು, ಉಪಶೃಣ್ವತಿಸತಿ - ಕೇಳುತ್ತಿರಲು, ಉವಾಚ - ನುಡಿದಳು. ॥ ೩೫ ॥ ಹೇ ಪುತ್ರ - ಎಲೈ ಮಗನೆ, ಹೇ ರಾಘವ-ಎಲೈ ರಘುವಂಶೋತ್ಪನ್ನನೆ, ಮಮ-ನನಗೆ, ಶೋಕಾಯ - ವ್ಯಸನಕ್ಕೋಸುಗ, ತ್ವಂ - ನೀನು, ನಜಾಯೇಥಾಯದಿ - ಹುಟ್ಟದೆ ಇದ್ದಿದ್ದರೆ, ಅಪ್ರಜಾಃ - ವಂಧ್ಯಳಾದ, ಅಹಂ - ನಾನು, ಅತಃ - ಈ ದುಃಖಕ್ಕಿಂತಲೂ, ಭೂಯಃ - ಅಧಿಕವಾದ, ದುಃಖಂ - ವ್ಯಸನನನ್ನು, ನಪಶ್ಯೇಯಂಸ್ಮ - ನೋಡದೇ ಇರುತ್ತಿದ್ದನಲ್ಲವೆ. ॥ ೩೬ ॥ ಹೇ ಪುತ್ರ - ಎಲೈ ಮಗನೆ, ವಂಧ್ಯಾ - ಬಂಜೆಯಾದವಳಿಗೆ, ಅಪ್ರಜಾಸ್ಮೀತಿ-ಮಕ್ಕಳಿಲ್ಲದವಳಾಗಿರುವೆನೆಂಬ, ಸಂತಾಪಃ - ಸಂಕಟಕರವಾದ, ಮಾನಸಃ - ಮನಸ್ಸಿನಲ್ಲಿ ಹುಟ್ಟಿದ, ಶೋಕಃ - ವ್ಯಸನವು, ಏಕಏವ - ಒಂದೇ, ಭವತಿಹಿ - ಆಗುವದಷ್ಟೆ, ಅನ್ಯಃ - ಮತ್ತೊಂದು ವಿಧವಾದ ಸಂತಾಪವು, ನವಿದ್ಯತೇ - ಇರಲಾರದು. ॥ ೩೭ ॥ ಪತಿಪೌರುಷೇ, ಪತಿ - ಗಂಡನಿಗೆ, ಪೌರುಷೇಸತಿ - ರಾಗಾದಿಗಳು ಇರಲು, ಕಲ್ಯಾಣಂ - (ಗೋ) ಉತ್ತಮ ವಸ್ತ್ರಾಭರಣಧಾರಣಾದಿಗಳಿಂದುಂಟಾದ ಶುಭವು, ತಥಾ-ಹಾಗೆಯೇ, ಸುಖಂವಾ - (ಗೋ) ಪತಿಯಿಂದ ಗೌರವಿಸಲ್ಪಡುವ ಸುಖವಾದರೂ, ಮಯಾ - ನನ್ನಿಂದ, ನದೃಷ್ಟಪೂರ್ವಂ - ಪೂರ್ವದಲ್ಲಿ

ರುವ ಹೆಣ್ಣು ಮರೆಯಂತೆಯೂ ಆಗಿ, ಧೂಳಿನಿಂದ ವ್ಯಾಪ್ತವಾದ ಸರ್ವಾವಯವಗಳುಳ್ಳ ಆಕೆಯನ್ನು ತನ್ನ ಹಸ್ತದಿಂದ ಸವರಿದವನಾದನು. ಆಗ ಸುಖಾರ್ಹಳಾಗಿಯೂ, ದುಃಖಿಸಲನರ್ಹಳಾಗಿಯೂ ಇರುವ ಆ ಕೌಸಲ್ಯಾದೇವಿಯು ಬಳಿಯಲ್ಲಿಯೇ ಕುಳಿತಿರುವ ಶ್ರೀರಾಮನನ್ನು ಕುರಿತು, ಲಕ್ಷ್ಮಣಸ್ವಾಮಿಯು ಕೇಳುವ ಹಾಗೆ ಈ ಮುಂದೆ ಹೇಳುವ ನುಡಿಯನ್ನಾಡಿದಳು. ॥ ೩೪-೩೫ ॥ "ಎಲೈ ಮಗನೆ! ತಾಯಿಯಾದ ನನಗೆ ದುಃಖವನ್ನುಂಟುಮಾಡಲು ನನ್ನುದರದಲ್ಲೇಕೆ ಜನಿಸಿದೆಯೊ? ರಾಮ! ನೀನು ಹುಟ್ಟದಿದ್ದಿದ್ದರೆ ಬಂಜೆಯಾಗಿಯೇ ಇರುತ್ತಿದ್ದ ನಾನು ಇಂತಹ ವ್ಯಸನವನ್ನೇ ಕಾಣದಿರುತ್ತಿದ್ದೆನಲ್ಲ! ಬಂಜೆಯಾದವಳಿಗೆ ಮಕ್ಕಳಾಗಲಿಲ್ಲವೆಂಬ ದುಃಖವೊಂದು ಮಾತ್ರವಿರುತ್ತದೆಯೇ ಹೊರತು, ಬೇರೆ ಇನ್ನಾವ ಸಂಕಟವೂ ಇರುವುದಿಲ್ಲ. ವತ್ಸ ರಾಮಚಂದ್ರ! ಈ ಪತಿಯು ಕರಗ್ರಹಣ ಮಾಡಿದುದು ಮೊದಲುಗೊಂಡು ಇಂದಿನವರೆಗೂ, ಒಳ್ಳೆಯ ಆಭರಣಗಳನ್ನಾಗಲಿ, ಬೆಲೆ ಬಾಳುವ ವಸ್ತ್ರಗಳನ್ನಾಗಲಿ ನಾನು

ಯಮಿತಿ ರಾಮಾಸ್ಥಿತಂ ಮಯಾ ‖ ೩೮ ‖ ಸಾಬಹೂನ್ಯಮನೋಜ್ಞಾನಿ ವಾಕ್ಯಾನಿ ಹೃದಯಚ್ಛಿದಾಂ ‖ ಅಹಂ ಶ್ರೋಷ್ಯೇ ಸಪತ್ನೀನಾಮವರಾಣಾಂ ವರಾ ಸತೀ ‖ ೩೯ ‖ ಅತೋ ದುಃಖತರಂ ಕಿನ್ನು ಪ್ರಮದಾನಾಂ ಭವಿಷ್ಯತಿ ‖ ಮಮ ಶೋಕೋ ವಿಲಾಪಶ್ಚ ಯಾದೃಶೋಽಯಮನಂತಕಃ ‖ ೪೦ ‖ ತ್ವಯಿ ಸನ್ನಿಹಿತೇಽಪ್ಯೇವಮಹಮಾಸಂ ನಿರಾಕೃತಾ ‖ ಕಿಂಪುನಃ ಪ್ರೋಷಿತೇ ತಾತ ಧ್ರುವಂ ಮರಣಮೇವ ಮೇ ‖ ೪೧ ‖ ಅತ್ಯಂತ ನಿಗೃಹೀತಾಸ್ಮಿ ಭರ್ತುರ್ನಿತ್ಯ

ಅನುಭವಿಸಲ್ಪಡಲಿಲ್ಲ, ಹೇ ರಾಮ - ಎಲೈ ಶ್ರೀರಾಮನೆ, ಪುತ್ರೇಽಪಿ - ಮಗನು ಹುಟ್ಟಿದವನಾದರೆ, ಪಶ್ಯೇಯಂ - ಆ ಸೌಖ್ಯವನ್ನು ನೋಡುವೆನು, ಇತಿ - ಇಂತೆಂದು, ಮಯಾ - ನನ್ನಿಂದ, ಆಸ್ಥಿತಂ - ಇರಲ್ಪಟ್ಟಿತು. ‖ ೩೮ ‖ ಹೃದಯಚ್ಛಿದಾಂ - ಪತಿಯ ಹೃದಯವನ್ನು ಭೇದಿಸುತ್ತಿರುವ, ಅವರಾಣಾಂ - ಶ್ರೇಷ್ಠರಲ್ಲದಿರುವ, ಸಪತ್ನೀನಾಂ - ಸವತಿಯರ, ಅಮನೋಜ್ಞಾನಿ - ಇಂಪಾಗದಿರುವ, ಬಹೂನಿ - ಅನೇಕವಾದ, ವಾಕ್ಯಾನಿ - ಮಾತುಗಳನ್ನು, ಸಾಹಂ - ಅಂತಹ ನಾನು, ವರಾಸತೀ - ಜ್ಯೇಷ್ಠ ಪತ್ನಿಯಾದರೂ, ಶ್ರೋಷ್ಯೇ - ಕೇಳುವೆನು. ‖ ೩೯ ‖ ಅತಃ - ಇದಕ್ಕಿಂತಲು, ಪ್ರಮದಾನಾಂ - ಸ್ತ್ರೀಯರಿಗೆ, ದುಃಖತರಂ - ಅತಿಶಯವಾದ ದುಃಖವು, ಕಿಂನು - ಯೇನುತಾನೆ, ಭವಿಷ್ಯತಿ - ಆಗುವದು, ಮಮ - ನನಗೆ, ಶೋಕಃ - ವ್ಯಸನವೂ, ವಿಲಾಪಶ್ಚ - ಪ್ರಲಾಪವೂ, ಯಾದೃಶಃ - ಎಂಥದೋ, ಅಯಂ - ಈ ಶೋಕವು, ಅನಂತಕಃ - ಅಪಾರವಾಯಿತು. ‖ ೪೦ ‖ ಹೇ ತಾತ - ಎಲೈ ತಂದೆಯೆ, ತ್ವಯಿ - ನೀನು, ಸನ್ನಿಹಿತೇಽಪಿ - ಸಮೀಪವರ್ತಿಯಾಗಿರುವಾಗಲೆ, ಅಹಂ-ನಾನು, ಏವಂ-ಈಪರಿಯಾಗಿ, ನಿರಾಕೃತಾ-ನಿರಾಕರಿಸಲ್ಪಟ್ಟವಳು, ಆಸಂ-ಆಗಿರುವೆನು, ತ್ವಂ-ನೀನು, ಪ್ರೋಷಿತೇ ಸತಿ-ಹೊರಟು ಹೋದರೆ, ಕಿಂಪುನಃ - ಏನು ಹೇಳತಕ್ಕದು, ಮೇ - ನನಗೆ, ಮರಣಮೇವ-ಸಾವೇ, ಧ್ರುವಂ - ನಿಶ್ಚಯವು. ‖ ೪೧ ‖ ಅಹಂ - ನಾನು, ಭರ್ತುಃ - ಪತಿಯಿಂದ, ಅತ್ಯಂತನಿಗೃಹೀತಾ-ಬಹುವಾಗಿ ನಿರಾಕರಿಸಲ್ಪಟ್ಟು, ಅತಂತ್ರಿತಾ - ಯಃಕಶ್ಚನಳಾಗಿ ಮಾಡಲ್ಪಟ್ಟವಳು, ಅಸ್ಮಿ - ಆಗಿರುವೆನು, ಕೈಕೇಯ್ಯಾಃ - ಕೈಕೇಯೀದೇವಿಯ, ಪರಿವಾರೇಣ - ದಾಸೀಜನರೊಡನೆ, ಸಮಾವಾ -

---

ಕಾಣಲಿಲ್ಲವು. ಇಷ್ಟೆಯಲ್ಲದೆ ಪತಿಯ ಪ್ರೇಮವೆಂಬುದನ್ನಂತೂ ಕಾಣಲೇ ಕಾಣೆನು. ಮುಂದೆ ಮಗನುಂಟಾದರೆ ಸುಖವಾಗಿದ್ದೇನೆಂದು ಕೋರಿದ್ದೆ. ಅಯ್ಯೋ! ಮಹಾರಾಜನ ಪಟ್ಟದ ರಾಣಿಯಾಗಿಯೂ, ಉತ್ತಮಳಾಗಿಯೂ ಇದ್ದರೂ, ನಾನು ಮಹಾ ನೀಚರಾದ ಈ ಸವತಿಯರಿಂದ ಕೆಟ್ಟ ಮಾತುಗಳನ್ನು ಕೇಳಬೇಕಾಯಿತಲ್ಲ! ಹೆಂಗಸರಿಗೆ ಇದಕ್ಕಿಂತಲೂ ಅತಿಶಯವಾದ ದುಃಖವು ಮತ್ತೊಂದುಂಟೆ! ನನಗೆ ಪ್ರಾಪ್ತವಾಗಿರುವ ಸಂತಾಪ ಪ್ರಲಾಪಗಳನ್ನು ಹೇಳಲಸದಳವಾಗಿರುವುದು. ರಾಮ! ಮಗನಾದ ನೀನೆದುರಿಗಿರುವಾಗಲೇ ಈ ರೀತಿ ನಿರಾಕೃತಳಾಗಿರುವೆನಲ್ಲ! ಇನ್ನು ನೀನು ವನವಾಸಕ್ಕೆ ತೆರಳಿದ ಮೇಲೆ ನನ್ನನ್ನು ಕೇಳುವವರಾರು? ನನಗೆ ಮರಣವೇ ಸಂಭವಿಸುವುದು. ಇದರಲ್ಲೇನೂ ಸಂಶಯವಿಲ್ಲವು. ಪತಿಯಿಂದ ನಿರಾಕರಿಸಲ್ಪಟ್ಟು ಗಣನೆಗೆ ಬಾರದೆ ಹೋದೆ! ಕೈಕೇಯಿಯ ದಾಸಿಯರಿಗೆ ಸಮಾನಳಾಗಿಯೋ, ಅಥವ ಅವರಿಗಿಂತಲೂ ನೀಚವೃತ್ತಿಯವಳಾಗಿಯೋ ಆಗಬೇಕಾಗಿ ಬಂದಿತು!!

ಮತಂತ್ರಿತಾ ॥ ಪರಿವಾರೇಣ ಕೈಕೇಯ್ಯಾ ಸ್ಸಮಾವಾಪ್ಯಥವಾ ವರಾ ॥೪೨॥ ಯೋಹಿ ಮಾಂ ಸೇವತೇ ಕಶ್ಚಿದಥವಾಪ್ಯನುವರ್ತತೇ ॥ ಕೈಕೇಯ್ಯಾಃ ಪುತ್ರ ಮನ್ವೀಕ್ಷ್ಯ ಸಜನೋ ನಾಭಿಭಾಷತೇ ॥೪೩॥ ನಿತ್ಯಕ್ರೋಧತಯಾ ತಸ್ಯಾಃ ಕಥನ್ನು ಖರವಾದಿ ತತ್ ॥ ಕೈಕೇಯ್ಯಾ ವದನಂ ದ್ರಷ್ಟುಂ ಪುತ್ರ ಶಕ್ಷ್ಯಾಮಿ ದುರ್ಗತಾ ॥೪೪॥ ದಶಸಪ್ತಚ ವರ್ಷಾಣಿ ತವ ಜಾತಸ್ಯ ರಾಘವ ॥ ಆಸ್ಥಿತಾನಿ ಪ್ರಕಾಂಕ್ಷಂತ್ಯಾ ಮಯಾ ದುಃಖಪರಿಕ್ಷಯಂ ॥೪೫॥ ತದಕ್ಷಯಂ

ಸದೃಶಳಾಗಿಯೇ ಆಗಲಿ, ಅಥವಾ - ಹಾಗಲ್ಲದಿದ್ದರೆ, ಅವರಾವಾ-ಮತ್ತೂ ಕೊರತೆಯಾದವಳೇ ಆಗಲಿ, ಅಸ್ಮಿ - ಆಗಿರುವೆನು. ॥೪೨॥ ಯಃ ಕಶ್ಚಿತ್ - ಯಾವೊಬ್ಬ ಪುರುಷನು, ಮಾಂ - ನನ್ನನ್ನು, ಸೇವತೇ - ಸೇವಿಸುತ್ತಾನೆಯೋ, ಅಥವಾ - ಹಾಗಲ್ಲದಿದ್ದರೆ, ಅನುವರ್ತತೇಪಿ - ಅನುಸರಿಸುತ್ತಾನೆಯೋ, ಸಜನಃ - ಆ ಜನವು, ಕೈಕೇಯ್ಯಾಃ - ಕೈಕೇಯಿಯ, ಪುತ್ರಂ - ಮಗನನ್ನು, ಅನ್ವೀಕ್ಷ್ಯ- ಕಂಡು, ನಾಭಿಭಾಷತೇ - ಮಾತನಾಡುವದಿಲ್ಲ. ॥೪೩॥ ಹೇ ಪುತ್ರ - ಎಲೈ ಮಗನೆ, ನಿತ್ಯ ಕ್ರೋಧತಯಾ - ನಿರಂತರವು ಕೋಪವುಳ್ಳ ಸ್ವಭಾವದಿಂದ, ತಸ್ಯಾಃ ಕೈಕೇಯ್ಯಾಃ-ಆ ಕೈಕೇಯಿಯ, ಖರವಾದೀ - ಕ್ರೂರವಾಕ್ಯಗಳನ್ನೇ ನುಡಿಯುತ್ತಿರುವ, ತದ್ವಚನಂ - ಆ ಮಾತನ್ನು, ದ್ರಷ್ಟುಂ - ನೋಡುವದಕ್ಕೆ, ದುರ್ಗತಾ - ದುರ್ದಶೆಯನ್ನು ಹೊಂದಿದ ನಾನು, ಕಥಂಶಕ್ಷ್ಯಾಮಿ-ಹೇಗೆ ಸಮರ್ಥಳಾಗುವೆನು. ॥೪೪॥ ಹೇ ರಾಘವ - ಎಲೈ ಶ್ರೀರಾಮನೆ, ತವಜಾತಸ್ಯ - ನೀನು ಹುಟ್ಟಲು, ದಶಸಪ್ತಚ - (೧) ಹದಿನೇಳಾದ, ವರ್ಷಾಣಿ - ವರುಷಗಳು, ದುಃಖಪರಿಕ್ಷಯಂ - ದುಃಖನಾಶನವನ್ನು, ಪ್ರಕಾಂಕ್ಷಂತ್ಯಾ - ಬಯಸುತ್ತಿರುವ, ಮಯಾ - ನನ್ನಿಂದ, ಆಸ್ಥಿತಾನಿ - ಅನುಭವಿಸಲ್ಪಟ್ಟವು. ॥೪೫॥ ಹೇ ರಾಘವ - ಎಲೈ ಶ್ರೀರಾಮನೆ, ಅಕ್ಷಯಂ - ನಾಶರಹಿತವಾದ, ಮಹತ್-

ಅಕಟಕಟ!!! ನೀನು ವನವಾಸಕ್ಕೆ ತೆರಳಿದ ಮೇಲೆ, ಕೈಕೇಯಿಯು ಮಗನಾದ ಭರತನಿಗೆ ರಾಜ್ಯಾಭಿಷೇಕವಾದರೆ, ನನ್ನನ್ನು ಕೇಳುವವರಾರು ? ಅಥವ ಯಾರು ತಾನೆ ನನ್ನನ್ನು ಅನುಸರಿಸುತ್ತಾರೆ ? ಇಷ್ಟುಮಾತ್ರವಲ್ಲದೆ ಕೈಕೇಯಿದೇವಿಗೆ ನನ್ನಲ್ಲಿ ಕೋಪವಿರುವುದರಿಂದ ಆಕೆಯು ಯಾವಾಗಲೂ ನನ್ನನ್ನು ಕುರಿತು ಕಠಿಣವಾಗಿಯೇ ಮಾತನಾಡುತ್ತಿರುತ್ತಾಳೆ! ಇಂತಹ ಅವಳ ಮುಖವನ್ನು ನೋಡಿಕೊಂಡು ನಿರ್ಭಾಗ್ಯಳಾಗಿ ಭೂಮಿಯಮೇಲಿರುವುದು ತಾನೇ ಹೇಗೆ ! ॥೩೬-೪೪॥ ಶ್ರೀರಾಮ ! ನೀನು ಹುಟ್ಟಿ ಉಪನಯನವಾಗಿ ಹದಿನೇಳು ಸಂವತ್ಸರಗಳಾದುವು. ಇದುವರೆಗೂ ನನಗೆ ದುಃಖ ನಿವೃತ್ತಿಯಾಗುವುದೆಂದು ಕಾಲಹರಣ

ಟಿ. (೧) "ದಶಸಪ್ತಚ ವರ್ಷಾಣಿ ತವಜಾತಸ್ಯ ರಾಘವ" ಎಂಬದು ವಾಲ್ಮೀಕಿ ಮುನಿಯ ವಚನವು. ಹಿಂದೆ ದಶರಥರಾಯನು ವಿಶ್ವಾಮಿತ್ರ ಮುನಿಯನ್ನು ಕುರಿತು, "ಊನಷೋಡಶ ವರ್ಷೋಮೇ ರಾಮೋ ರಾಜೀವ ಲೋಚನಃ" ಎಂದು ಹೇಳಿದ್ದಾನೆ. ಹೀಗೆ ಹೇಳಿರುವುದರಿಂದ ಪೂರ್ವಾಪರ ವಿರುದ್ಧ ದೋಷವು ಸಂಪ್ರಾಪ್ತವಾಯಿತೆಂದು ವಾಚಕರು ಶಂಕಿಸಲು ಬಹಳವಾದ ಕಾರಣವಿರುವುದು. ಇದನ್ನು ಪರಿಹರಿಸುವುದೇ ಈಗಿನ ಕರ್ತವ್ಯವು. ಎಂದರೆ ಕೌಸಲ್ಯೆಯ ವಾಕ್ಯಾರ್ಥವು, "ನೀನು ಜನಿಸಿ ಹದಿನೇಳು ಸಂವತ್ಸರಗಳಾದುವು" ಎಂದು. ದಶರಥರಾಯನ ವಾಕ್ಯಾರ್ಥವು ರಾಮನಿಗೆ ಹನ್ನೆರಡು ವರುಷಗಳ ವಯಸ್ಸುಳ್ಳವನೆಂದು. ಮುಂದೆ ಸೀತಾದೇವಿಯು ಅನಸೂಯಾದೇವಿಯನ್ನು ಕುರಿತು ವಿವಾಹ

ಮಹದ್ದುಃಖಂ ನೋತ್ಸಹೇ ಸಹಿತುಂ ಪರಂ ॥ ವಿಪ್ರಕಾರಂ ಸಪತ್ನೀನಾಮೇವಂ ಜೀರ್ಣಾಪಿ ರಾಘವ ॥ ೪೬ ॥ ಅಪಶ್ಯಂತೀ ತವಮುಖಂ ಪರಿಪೂರ್ಣ ಶಶಿಪ್ರಭಂ ॥ ಕೃಪಣಾ ವರ್ತಯಿಷ್ಯಾಮಿ ಕಥಂ ಕೃಪಣ ಜೀವಿಕಾಂ ॥ ೪೭ ॥

ದೊಡ್ಡದಾದ, ತದ್ದುಃಖಂ - ಆ ದುಃಖವನ್ನೂ, ಸಪತ್ನೀನಾಂ-ಸವತಿಯರ, ವಿಪ್ರಕಾರಂ-(ಮ + ಗೋ) ನಿರಾಕರಣ ರೂಪವಾದ ಅಪಕಾರವನ್ನೂ ಸಹ, ಅಹಂ - ನಾನು, ಏವಂ-ಹೀಗೆ, ಜೀರ್ಣಾಪಿ-(ತ + ತಿ) ಸಪತ್ನೀ ಕಥೆಯಿಂದ ಬಲಕ್ಷಯವನ್ನು ಹೊಂದಿದವಳಾದರೂ, ಪರಂ-ಬಹಳವಾಗಿ, ಸಹಿತುಂ - ಸೈರಿಸುವದಕ್ಕೂ, ನೋತ್ಸಹೇ - ಉದ್ಯುಕ್ತಳಾಗಲಾರೆನು. ||೪೬|| ಕೃಪಣಾ-ದೀನಳಾದನಾನು, ಪರಿಪೂರ್ಣಶಶಿಪ್ರಭಂ - ಸಂಪೂರ್ಣಚಂದ್ರನ ಪ್ರಕಾಶದಂತೆ ಪ್ರಕಾಶವುಳ್ಳ, ತವ - ನಿನ್ನ, ಮುಖಂ - ಮುಖವನ್ನು, ಅಪಶ್ಯಂತೀ - ನೋಡದೆ, ಕೃಪಣಜೀವಿಕಾಂ - ದೈನ್ಯಜೀವನವನ್ನು, ಕಥಂವರ್ತಯಿಷ್ಯಾಮಿ - ಹೇಗೆ ತಾನೆ ಮಾಡುವೆನು. || ೪೭ || ದುರ್ಗತಯಾ - ಭಾಗ್ಯಹೀನಳಾದ, ಮಯಾ - ನನ್ನಿಂದ, ತ್ವಂ - ನೀನು, ಉಪವಾಸೈಶ್ಚ - ಉಪವಾಸಗಳಿಂದಲೂ, ಯೋಗೈಶ್ಚ-ದೇವತಾಧ್ಯಾನಗಳಿಂದಲೂ, ಜಪುಭಿಃ-

ವನ್ನು ಮಾಡಿದೆನು. ಹೀಗೆ ಮುದುಕಿಯೂ ಆಗಿ ಹೋದ ನಾನು, ಸವತಿಯರು ಮಾಡುತ್ತಿರುವ ನಿರಾಕರಣ ರೂಪವಾದ ಅಪಕಾರವನ್ನೂ, ನಿನ್ನಗಲಿಕೆಯೆಂಬ ದುಃಖವನ್ನೂ ಸಹ ಅನುಭವಿಸಿಕೊಂಡು ಇರಲಾರೆ. ಪೂರ್ಣಚಂದ್ರನಂತೆ ಹೊಳೆಯುತ್ತಿರುವ ನಿನ್ನ ಮುಖವನ್ನು ಕಾಣದೆ ದೀನಳೂ, ಕೃಪಣಳೂ ಆಗಿ, ಹೇಗೆ ತಾನೆ ಜೀವದಿಂದಿರಲಿ? ಅದೃಷ್ಟ

ವಾದ ಬಳಿಕ ಅಯೋಧ್ಯಾನಗರದಲ್ಲಿ ಹನ್ನೆರಡು ವರ್ಷಗಳ ಕಾಲವಿದ್ದುದಾಯಿತೆಂದೂ, ಹದಿಮೂರನೆಯ ವರುಷದಲ್ಲಿ ವನವಾಸ ಪ್ರಯಾಣವಾಯಿತೆಂದೂ, ಹೇಳಿರುವುದಲ್ಲದೆ, ಯತಿ ವೇಷಧರನಾದ ರಾವಣನನ್ನು ಕುರಿತು ಅದೇ ಸೀತಾದೇವಿಯೇ, "ನನ್ನ ಪತಿ ದೇವನು ಇಪ್ಪತ್ತೈದನೆಯ ವರುಷದಲ್ಲಿ ವನಗಮನ ಮಾಡಿದ"ನೆಂದೂ ಹೇಳಿರುವಳು. ಹೀಗಿರುವಲ್ಲಿ ಶ್ರೀರಾಮನಿಗೆ ಹದಿನೇಳು ವರುಷಗಳೆಂದು ಹೇಳಿರುವುದು ಸಮಂಜಸವೇ? ಎಂದು ಕೇಳಿದರೆ ಇದಕ್ಕೆ ಸಮಾಧಾನ ವಚನವು ಹೀಗೆ.

ಮಾತುರ್ಯದಗ್ರೇ ಜಾಯಂತೇ ದ್ವಿತೀಯಂ ಮೌಂಜಿಬಂಧನಾತ್ ।
ಅತ್ರಾಸ್ಯ ಮಾತಾ ಸಾವಿತ್ರೀ ಪಿತಾತ್ವಾಚಾರ್ಯ ಇಷ್ಯತೇ ॥
ಬ್ರಾಹ್ಮಣ ಕ್ಷತ್ರಿಯ ವಿಶಸ್ತಸ್ಮಾದೇತೇ ದ್ವಿಜಾತಯಃ ॥

(ಇದು ಸ್ಮೃತಿಕಾರನಾದ ಯಾಜ್ಞವಲ್ಕ್ಯನ ವಚನವು.)

ಆದುದರಿಂದ ಶ್ರೀರಾಮಚಂದ್ರನಿಗೆ ಗರ್ಭನವಮ ವರ್ಷದಲ್ಲಿ ಉಪನಯನವೂ, ಹನ್ನೆರಡನೆಯ ಸಂವತ್ಸರದಲ್ಲಿ ವಿವಾಹವೂ, ಇಪ್ಪತ್ತೈದನೆಯ ವರ್ಷದಲ್ಲಿ ವನಗಮನವೂ ಉಂಟಾಯಿತೆಂದು ತಿಳಿಯತಕ್ಕದು. ಎಂದ ಮೇಲೆ ಕೌಸಲ್ಯೆಯ ವಾಕ್ಯಾರ್ಥವು, ಉಪನಯನವಾದ ಬಳಿಕ ಹದಿನೇಳು ವರುಷಗಳು ಎಂದು ತಿಳಿಯಬೇಕು. ಹೀಗೆ ಹೇಳಿದರೆ, "ಶ್ರೀರಾಮನಿಗೆ ಇಪ್ಪತ್ತೆಂಟು ಸಂವತ್ಸರಗಳೆಂದು ತಿಳಿದು ಬರುವುದಲ್ಲ" ಎಂಬ ಸಂಶಯವು ತಲೆದೋರುವುದು. ಇದಕ್ಕೆ ಸಮಾಧಾನ:—ಕೌಸಲ್ಯಾ ವಾಕ್ಯದಲ್ಲಿ "ತವ ಜಾತಸ್ಯ" ಎಂದು ಹೇಳಿರುವುದು, "ಉಪನಯನಾನಂತರ ಜನ್ಮಾಪೇಕ್ಷೆಯಿಂದ" ಎಂದು ತಿಳಿಯಬೇಕು. ಮತ್ತೊಂದು ಸಮಾಧಾನವೇನೆಂದರೆ, "ಗರ್ಭೈಕಾದಶೇಷು ರಾಜನ್ಯಂ" ಎಂಬ ಕಡೆಯಲ್ಲಿ ಬಹುವಚನ ನಿರ್ದೇಶದಿಂದ ಹುಟ್ಟಿದ ಒಂಭತ್ತನೆಯ ವರ್ಷದಲ್ಲಿ ಉಪನಯನವೆಂದು ತಿಳಿಯತಕ್ಕದು. ಏವಂಚ ಶ್ರೀರಾಮನಿಗೆ ಇಪ್ಪತ್ತೈದು ವರ್ಷಗಳೆಂದೂ, ಕೌಸಲ್ಯಾ ವಾಕ್ಯವು ನಿರ್ದೋಷವಾದುದೆಂದೂ ಸಿದ್ಧವಾಯಿತು. (ಈ ಅಭಿಪ್ರಾಯಗಳು ಗೋವಿಂದರಾಜೀಯ, ತೀರ್ಥೀಯಾದಿಗಳ ಸಾರಾಂಶವು.)

(ಉಪವಾಸೈಶ್ಚ ಯೋಗೈಶ್ಚ ಬಹುಭಿಶ್ಚ ಪರಿಶ್ರಮೈಃ ॥ ದುಃಖಂ ಸಂವರ್ಧಿತೋ ಮೋಘಂ ತ್ವಂಹಿ ದುರ್ಗತಯಾ ಮಯಾ) ॥ ೪೮ ॥ ಸ್ಥಿರಂ ತು ಹೃದಯಂ ಮನ್ಯೇ ಮಮೇದಂ ಯನ್ನದೀರ್ಯತೇ॥ಪ್ರಾವೃಷೀವ ಮಹಾನದ್ಯಾ ಸ್ಸ್ಪೃಷ್ಟಂ ಕೂಲಂ ನವಾಂಭಸಾ ॥ ೪೯ ॥ ಮನ್ಯೈವ ನೂನಂ ಮರಣಂ ನವಿದ್ಯತೇ। ನಚಾವಕಾಶೋಽಸ್ತಿ ಯಮಕ್ಷಯೇ ಮಮ ॥ ಯದಂತಕೋಽದ್ಯೈವ ನ ಮಾಂ ಜಿಹೀರ್ಷತಿ। ಪ್ರಸಹ್ಯ ಸಿಂಹೋ ರುದತೀಂ ಮೃಗೀಮಿವ ॥ ೫೦ ॥ ಸ್ಥಿರಂ ಹಿ

ನಾನಾವಿಧವಾದ, ಪರಿಶ್ರಮೈಃ-ಶ್ರಮಗಳಿಂದಲೂ; ದುಃಖಂ ಕಷ್ಟವಾಗಿ, ಮೋಘಂ-ನಿಷ್ಪ್ರಯೋಜನವಾಗಿ, ಸಂವರ್ಧಿತಃ - ವೃದ್ಧಿಗೊಳಿಸಲ್ಪಟ್ಟವನಾದೆ. ||೪೮|| ಪ್ರಾವೃಷಿ-ವರ್ಷಾಕಾಲದಲ್ಲಿ, ಮಹಾನದ್ಯಾಃ-ಮಹಾ ನದಿಯ, ನವಾಂಭಸಾ - ಹೊಸ ನೀರಿಂದ, ಸ್ಪೃಷ್ಟಂ - ಸ್ಪರ್ಶಮಾಡಲ್ಪಟ್ಟ, ಕೂಲಮಿವ - ತೀರದಂತೆ, ಮಮ - ನನ್ನ, ಇದಂಹೃದಯಂ - ಈ ಎದೆಯು, ಯತ್ - ಯಾವ ಕಾರಣ, ನದೀರ್ಯತೆ - ಶೀಳಿಹೋಗಲಿಲ್ಲವೋ, ತತ್ - ಆ ಕಾರಣ, ಮಮ - ನನ್ನ, ಹೃದಯಂ - ಹೃದಯವು, ಸ್ಥಿರಮಿತಿ - ಶಾಶ್ವತವಾಗಿರುವದೆಂದು, ಮನ್ಯೇ - ಎಣಿಸುವೆನು, || ೪೯ || ಯತ್ - ಯಾವ ಕಾರಣ, ಅಂತಕಃ - ಯಮನು, ಅದ್ಯೈವ - ಈಗಲೆ, ಸಿಂಹಃ - ಸಿಂಹವು, ರುದತೀಂ - ಅಳುತ್ತಿರುವ, ಮೃಗೀಮಿವ - ಚಿಗುರಿಯನ್ನಂತೆ, ಪ್ರಸಹ್ಯ - ಬಲಾತ್ಕರಿಸಿ, ಮಾಂ - ನನ್ನನ್ನು, ನಜಿಹೀರ್ಷತಿ - ತೆಗದುಕೊಂಡು ಹೋಗುವದಿಲ್ಲವೋ, ತತ್ - ಆ ಕಾರಣ, ಮಮ - ನನಗೆ, ಮರಣಂ - ಮೃತಿಯು, ನವಿದ್ಯತಏವ - ಇಲ್ಲವೇ ಇಲ್ಲ, ನೂನಂ - ನಿಶ್ಚಯವು, ಮಮ-ನನಗೆ, ಯಮಕ್ಷಯೇ - ಯಮನ ಮನೆಯಲ್ಲಿ, ಅವಕಾಶಃ - ಸ್ಥಳವು, ನಾಸ್ತಿ - ಇಲ್ಲ. || ೫೦ || ಯತ್ - ಯಾವ ಕಾರಣ, ಮಮ - ನನ್ನ, ಹೃದಯಂ - ಎದೆಯೂ, ದೇಹಂಚ - ಶರೀರವೂ, ಅನೇನದುಃಖೇನ - ಇಂತಹ ದುಃಖದಿಂದ, ಅರ್ಪಿತಮಪಿ - ವ್ಯಾಪ್ತವಾದರೂ, ನಭಿದ್ಯತೇ - ಶೀಳಿಹೋಗಲಿಲ್ಲವೋ, ನಾವದೀರ್ಯತೇಚ - ತುಂಡು ತುಂಡುಗಳಾಗಿ ಬಿರಿದು ಹೋಗಲಿಲ್ಲವೋ, ತಸ್ಮಾತ್ - ಆ ಕಾರಣ, ಮಮ - ನನ್ನ, ಹೃದಯಂ - ಎದೆಯು, ದೇಹಂಚ - ದೇಹವೂ ಸಹ, ಆಯಸಂ - ಕಬ್ಬಿಣವಾಗಿ, ಸ್ಥಿರಂ - ಶಾಶ್ವತವಾದುದು, ಅಕಾಲೇ - ಕಾಲವಲ್ಲದ ಕಾಲದಲ್ಲಿ, ಮರಣಂ - ಮೃತಿಯು, ನವಿದ್ಯತೇ - ಇಲ್ಲವೆಂಬುದು,

---

ಹೀನಳಾದ ನಾನು ದೇವತಾ ಧ್ಯಾನಗಳನ್ನೂ, ಉಪವಾಸಾದಿ ವ್ರತಗಳನ್ನೂ ಮಾಡಿ ಬಹಳವಾದ ಶ್ರಮೆಯಿಂದ ನಿನ್ನನ್ನು ಬೆಳೆಸಿದೆ. ಇದೆಲ್ಲವೂ ವ್ಯರ್ಥವಾಗಿ ಹೋಯಿತು. ||೪೫-೪೮|| ಮಳೆಗಾಲದಲ್ಲಿ ಹೊಸ ನೀರಿನಿಂದ ನದಿಯ ದಡಗಳು ಶೀಳಿ ಹೋಗುವಂತೆ, ಈಗ ಒದಗಿರುವ ದುಃಖದಿಂಡ ನನ್ನೆದೆಯು ಒಡೆದು ಹೋಗಲಿಲ್ಲವಾಗಿ, ಇದು ಬಹು ಸ್ಥಿರವಾದುದೆಂದೆಣಿಸಿರುತ್ತೇನೆ. ಮೃಗರಾಜನು ಪ್ರಲಪಿಸುತ್ತಿರುವ ಚಿಗುರಿಯನ್ನು ತೆಗೆದುಕೊಂಡು ಹೋಗುವಂತೆ, ಯಮರಾಜನು ನನ್ನನ್ನು ಒಯ್ಯದಿರುವುದರಿಂದ ನನಗೆ ಮರಣವೇ ಇಲ್ಲವೇನೋ? ಅಥವ ನನಗಾ ಯಮಸದನದಲ್ಲಿ ಎಡೆಯಿಲ್ಲದಿರುವುದೇನೋ? ಅಕಟ! ಇಂತಹ ಅಸಹನೀಯವಾದ ವ್ಯಸನ ಕಾಲದಲ್ಲಿಯೂ ಸಹ ಒಡೆದು ಹೋಗದಿರುವ ನನ್ನ ಹೃದಯವೂ, ಶರೀರವೂ ಸಹ ಕಬ್ಬಿಣದಂತೆ ಮಹಾ ಕಠಿಣವಾಗಿರುವುದು. ಇದು ನಿಶ್ಚಯವಾದುದು!

ನೂನಂ ಹೃದಯಂ ಮಮಾಯಸಂ । ನಭಿದ್ಯತೇ ಯದ್ಭುವಿ ನಾವದೀರ್ಯತೇ ॥ ಅನೇನ ದುಃಖೇನ ಚ ದೇಹಮರ್ಪಿತಂ । ಧ್ರುವಂಹ್ಯಕಾಲೇ ಮರಣಂ ನವಿದ್ಯತೇ ॥ ೫೧ ॥ ಇದಂತು ದುಃಖಂ ಯದನರ್ಥಕಾನಿ ಮೇ । ವ್ರತಾನಿ ದಾನಾನಿಚ ಸಂಯಮಾಶ್ಚಹಿ ॥ ತಪಶ್ಚ ತಪ್ತಂ ಯದಪತ್ಯಕಾರಣಾ । ತ್ಸುನಿಷ್ಫಲಂ ಬೀಜಮಿವೋಪ್ತ ಮೂಷರೇ ॥ ೫೨ ॥ ಯದಿಹ್ಯಕಾಲೇ ಮರಣಂ ಸ್ವಯೇಚ್ಛಯಾ । ಲಭೇತ ಕಶ್ಚಿದ್ಗುರು ದುಃಖಕರ್ಶಿತಃ ॥ ಗತಾಹಮದ್ಯೈವ ಪರೇತಸಂಸದಂ । ವಿನಾತ್ವಯಾ ಧೇನುರಿವಾತ್ಮಜೇನವೈ ॥ ೫೩ ॥ ಅಥಾಪಿ ಕಿಂಜೀವಿತಮದ್ಯ ಮೇ ವೃಥಾ । ತ್ವಯಾ ವಿನಾ ಚಂದ್ರನಿಭಾನನಪ್ರಭ ॥ ಅನುವ್ರಜಿ

ಧ್ರುವಂ - ನಿಶ್ಚಯವು. ॥ ೫೧ ॥ ಯತ್ - ಯಾವ ಕಾರಣ, ಮೇ - ನನ್ನಿಂದ, ಅಪತ್ಯಕಾರಣಾತ್ - ಮಕ್ಕಳನಿಮಿತ್ತವಾಗಿ, ಕೃತಾನಿ - ಮಾಡಲ್ಪಟ್ಟ, ವ್ರತಾನಿ - ನಿಯಮಗಳೂ, ಅನರ್ಥಕಾನಿ- ನಿಷ್ಪ್ರಯೋಜನಗಳಾದ, ದಾನಾನಿ - ದಾನಗಳೂ, ಸಂಯಮಾಶ್ಚ - ದೇವತಾಧ್ಯಾನಗಳೂ, ತಪ್ತಂ- ತಪಿಸಲ್ಪಟ್ಟ, ತಪಶ್ಚ - ತಪವೂ, ಯತ್ - ಯಾವುದೋ, ತತ್ - ಅದು, ಊಷರೇ - ಚೌಳುಭೂಮಿಯಲ್ಲಿ, ಉಪ್ತಂ - ಬಿತ್ತಲ್ಪಟ್ಟ, ಬೀಜಮಿವ - ಬೀಜದಂತೆ, ಸರ್ವಂ - ಸಮಸ್ತವು, ಸುನಿಷ್ಫಲಂ - ನಿಷ್ಪ್ರಯೋಜನವಾದುದು, ಆಸೀತ್ - ಆಯಿತೋ, ಇದಂತು - ಇದಾದರೆ, ದುಃಖಂ - ವ್ಯಸನವು. ॥ ೫೨ ॥ ಕಶ್ಚಿತ್ - ಒಬ್ಬಾನೊಬ್ಬನು, ಗುರುದುಃಖಕರ್ಶಿತಃ - ಮಹತ್ತರವಾದ ವ್ಯಸನದಿಂದ ಕೃಶೀಭಾವವನ್ನು ಹೊಂದಿ, ಅಕಾಲೇ-ವೇಳೆಯಲ್ಲದ ವೇಳೆಯಲ್ಲಿ, ಸ್ವಯೇಚ್ಛಯಾ-ಸ್ವೇಚ್ಛೆಯಿಂದ, ಮರಣಂ-ಮೃತಿಯನ್ನು, ಲಭೇತಯದಿ - ಹೊಂದುವನೇ ಆದರೆ, ಅಹಂ - ನಾನು, ಆತ್ಮಜೇನ - ಕುಮಾರನಾದ, ತ್ವಯಾವಿನಾ - ನಿನ್ನ ವಿನಹಾ, ಧೇನುರಿವ-ಕರುವಿನಿಂದ ಹೀನವಾದ ಆಕಳಿನಂತೆ, ಅದ್ಯೈವ- ಈಗಲೆ, ಪರೇತಸಂಸದಂ - ಯಮನ ಮನೆಯನ್ನು, ಗತಾ - ಹೊಂದಿದವಳು, ಸ್ಯಾಂ - ಆದೇನು, ತತ್ - ಅದು, ನಲಭ್ಯತೇ - ಲಭಿಸುವದಿಲ್ಲ. ॥ ೫೩ ॥ ಹೇ ಚಂದ್ರನಿಭಾನನಪ್ರಭ - ಎಲೈ ಚಂದ್ರನಿಗೆ ಸಮಾನವಾದ ಮುಖಕಾಂತಿಯುಳ್ಳವನೆ, ಮೇ - ನನ್ನ, ಜೀವಿತಂ - ಬದುಕುವಿಕೆಯು, ತ್ವಯಾ ವಿನಾ - ನಿನ್ನವಿನಹಾ, ಕಿಂ - ಏನು ಪ್ರಯೋಜನವು, ವೃಥಾ - ವ್ಯರ್ಥವು, ಸುದುರ್ಬಲಾ - ಬಲಹೀನವಾದ, ಗೌಃ - ಆಕಳು, ವತ್ಸಮಿವ-ಕರುವನ್ನನುಸರಿಸುವಂತೆ, ಅನುಕಾಂಕ್ಷಯಾ - ಅನುಸರಣೇಚ್ಛೆಯಿಂದ, ತ್ವಯ್ಯೈವ - ನಿನ್ನ ಸಂಗಡಲೇ, ವನಂ - ಕಾಡನ್ನು, ಅನುವ್ರಜಿಷ್ಯಾಮಿ - ಅನುಸರಿಸಿ ಬರು

ಮಕ್ಕಳನ್ನು ಪಡೆಯಬೇಕೆಂದು ನಾನು ಮಾಡಿದ, ವ್ರತಗಳೂ, ದಾನ, ಧ್ಯಾನ, ಉಪವಾಸಗಳು, ಊಷರಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ ನಿಷ್ಫಲವಾಯಿತಲ್ಲ !! ॥೪೯-೫೨॥ ಸ್ವೇಚ್ಛೆಯಾಗಿ ಸಾವೆಂಬುದು ಸಂಭವಿಸುವುದಾದರೆ ಕರುವನ್ನಗಲಿದ ಆಕಳಿನಂತೆ ಮಗನಾದ ನಿನ್ನನ್ನಗಲಿದ ನಾನು ಈಗಲೇ ಅಸುವನ್ನು ನೀಗುತ್ತಿದ್ದೆನು. ಅಹಹ!! ಇದು ಆಗಲಾರದುದಾಗಿರುವುದು. ಚಂದ್ರನಂತೆ ಬೆಳಗುವ ಮುಖ ಕಾಂತಿಯುಳ್ಳ ಶ್ರೀರಾಮನೆ ! ನಿನ್ನನ್ನಗಲಿದ ನಾನು ಬದುಕಿ ಪ್ರಯೋಜನವೇನು? ಕರುವಿನಲ್ಲಿನ ವಾತ್ಸಲ್ಯದಿಂದ ಅದನ್ನನುಸರಿಸುವ ಗೋವಿ

ಷ್ಯಾಮಿ ಪನಂ ತ್ವಯ್ಯೈವ । ಗೌಸ್ಸುದುರ್ಬಲಾ ವತ್ಸಮಿವಾನು ಕಾಂಕ್ಷಯಾ॥೫೪॥

ಭೃಶಮಸುಖ ಮಮರ್ಷಿತಾ ತದಾ
ಬಹು ವಿಲಲಾಪ ಸಮೀಕ್ಷ್ಯ ರಾಘವಂ ॥
ವ್ಯಸನ ಮುಪನಿಶಾಮ್ಯ ಸಾ ಮಹ
ತ್ಸುತಮಿವ ಬದ್ಧಮವೇಕ್ಷ್ಯ ಕಿನ್ನರೀ ॥ ೫೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ವಿಂಶಸ್ಸರ್ಗಃ

ವೆನು. ॥೫೪॥ ಆ ಕೌಸಲ್ಯಾದೇವಿಯು, ಭೃಶಂ ಬಹಳವಾಗಿ, ಅಸುಖಂ - ದುಃಖವನ್ನು, ಅಮರ್ಷಿತಾ- ಸಹಿಸದೆ, ತದಾ - ಆ ವೇಳೆಯಲ್ಲಿ, ಬದ್ಧಂ - ಸತ್ಯಪಾಶ ಬದ್ಧನಾದ, ಸುತಂ - ಕುಮಾರನಾದ, ರಾಘವಂ - ಶ್ರೀರಾಮನನ್ನು, ಸಮೀಕ್ಷ್ಯ - ಕಂಡು, ಮಹತ್ - ದೊಡ್ಡದಾದ, ವ್ಯಸನಂ - ಮುಂದೆ ಬರತಕ್ಕದುಃಖವನ್ನು, ಉಪನಿಶಾಮ್ಯ - ಆಲೋಚಿಸಿ, ಬದ್ಧಂ - ಸೆರೆಗೊಳಿಸಲ್ಪಟ್ಟ, ಸುತಂ - ಕುಮಾರನನ್ನು, ಅವೇಕ್ಷ್ಯ - ಕಂಡು, ಕಿನ್ನರೀವ - ಕಿನ್ನರ ಸ್ತ್ರೀಯಂತೆ, ಬಹು - ನಾನಾವಿಧವಾಗಿ, ವಿಲಲಾಪ - ಅಳುತ್ತಿದ್ದಳು. ॥ ೫೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ವಿಂಶಸ್ಸರ್ಗಃ.

ನಂತೆ ನಾನು ನಿನ್ನನ್ನನುಸರಿಸಿ ಬರುತ್ತೇನೆ." ॥೫೩-೫೪॥ ಹೀಗೆ ಹೇಳಿದ ಕೌಸಲ್ಯಾದೇವಿಯು, ಕಿನ್ನರ ಸ್ತ್ರೀಯು ಬಂಧನದಲ್ಲಿ ಸಿಲುಕಿದ ತನ್ನ ಕುಮರನನ್ನು ಕಂಡು ಪ್ರಲಪಿಸುವಂತೆ, ಶ್ರೀರಾಮ ಮೂರ್ತಿಯನ್ನು ನೋಡಿ ದುಃಖವನ್ನು ಸೈರಿಸಲಾರದೆ ವಿಧವಿಧವಾಗಿ ಪ್ರಲಪಿಸಿದವಳಾದಳು. ॥ ೫೩-೫೫ ॥

ಇಂತಿದು ಕೌಸಲ್ಯಾ ಪ್ರಲಾಪ ಕಥಾಕಥನವೆಂಬ
ಇಪ್ಪತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕವಿಂಶಸ್ಸರ್ಗಃ.

ತಥಾತು ವಿಲಪಂತೀಂ ತಾಂ ಕೌಸಲ್ಯಾಂ ರಾಮಮಾತರಂ ॥ ಉವಾಚ ಲಕ್ಷ್ಮಣೋ ದೀನಸ್ತತ್ಕಾಲ ಸದೃಶಂ ವಚಃ ॥ ೧ ॥ ನರೋಚತೇ ಮಮಾಪ್ಯೇತ ದಾರ್ಯೇ ಯದ್ರಾಘವೋ ವನಂ ॥ ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯಾ ವಾಕ್ಯವಶಂ ಗತಃ ॥ ೨ ॥ ವಿಪರೀತಶ್ಚ ವೃದ್ಧಶ್ಚ ವಿಷಯೈಶ್ಚ ಪ್ರಧರ್ಷಿತಃ ॥ ನೃಪಃ ಕಿಮಿವ ನಬ್ರೂಯಾ ಚ್ಚೋದ್ಯಮಾನ ಸ್ಸಮನ್ಮಥಃ ॥ ೩ ॥ ನಾಸ್ಯಾಪರಾಧಂ ಪಶ್ಯಾಮಿ ನಾಪಿ ದೋಷಂ ತಥಾವಿಧಂ ॥ ಯೇನ ನಿರ್ವಾಸ್ಯತೇ

ತಥಾತು - ಈ ರೀತಿಯಾಗಿ, ವಿಲಪಂತೀಂ - ಪ್ರಲಾಪ ಮಾಡುತ್ತಿರುವ, ರಾಮಮಾತರಂ - ಶ್ರೀರಾಮನಿಗೆ ತಾಯಿಯಾದ, ತಾಂಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು ಕುರಿತು, ಲಕ್ಷ್ಮಣಃ - ಲಕ್ಷ್ಮಣನು, ದೀನಃ - ಪರಿತಪಿಸುತ್ತ, ತತ್ಕಾಲಸದೃಶಂ - ಆ ಕಾಲಕ್ಕೆ ತಕ್ಕದಾದ, ವಚಃ - ಮಾತನ್ನು, ಉವಾಚ - ಹೇಳಿದನು. ॥ ೧ ॥ ಹೇ ಆರ್ಯೇ - ಎಲೌ ಪೂಜ್ಯಳೇ, ರಾಘವಃ - ಶ್ರೀರಾಮನು, ಸ್ತ್ರಿಯಾ - ಕೈಕೇಯಿ ಎಂಬ ಹೆಂಗಸಿನ, ವಾಕ್ಯವಶಂ - ಮಾತಿನ ಸ್ವಾಧೀನತೆಯನ್ನು, ಗತಃ - ಹೊಂದಿ, ರಾಜ್ಯಶ್ರಿಯಂ - ರಾಜ್ಯೈಶ್ವರ್ಯವನ್ನು, ತ್ಯಕ್ತ್ವಾ - ಬಿಟ್ಟು, ವನಂ - ವನವನ್ನು ಕುರಿತು, ಗಚ್ಛೇದಿತಿಯತ್-ಹೋಗುವನೆಂಬುದು ಯಾವದುಂಟೋ, ತತ್-ಅದು, ಮಮಾಪಿ-ನನಗೂ, ನರೋಚತೇ - ಸಮ್ಮತವಿಲ್ಲ. ॥ ೨ ॥ ವಿಪರೀತಃ - ವ್ಯತ್ಯಸ್ತವಾದ ಬುದ್ಧಿಯುಳ್ಳ, ವೃದ್ಧಶ್ಚ - ಮುದುಕನಾದ, ವಿಷಯೈಃ - ಸ್ರಕ್ಚಂದನ, ವನಿತಾದಿ ವಿಷಯಗಳಿಂದ, ಧರ್ಷಿತಃ - ತಿರಸ್ಕರಿಸಲ್ಪಟ್ಟ, ಸಮನ್ಮಥಃ - ಮನ್ಮಥಾವಿಷ್ಟನಾದ, ಚೋದ್ಯಮಾನಃ - ಸ್ತ್ರೀಯಿಂದ ಪ್ರೇರಿತನಾಗಿರುವ, ನೃಪಃ - ಅರಸು, ಕಿಮಿವ - ಯಾವದನ್ನು ತಾನೇ, ನಬ್ರೂಯಾತ್ - ಹೇಳದಿದ್ದಾನು. ॥ ೩ ॥ ರಾಘವಃ - ಶ್ರೀರಾಮನು, ರಾಷ್ಟ್ರಾತ್ - ರಾಜ್ಯದಿಂದ, ವನವಾಸಾಯ - ವನವಾಸಕ್ಕೋಸುಗ, ಯೇನ - ಯಾವ ಕಾರಣ, ನಿರ್ವಾಸ್ಯತೇ - ಹೊರಡಿಸಲ್ಪಡುತ್ತಾನೆಯೋ, ತಥಾವಿಧಂ - ಅಂತಹ,

---

ಈ ರೀತಿ ವಿಲಾಪಿಸುತ್ತಿರುವ ಶ್ರೀರಾಮ ಮಾತೆಯಾದ ಕೌಸಲ್ಯಾದೇವಿಯನ್ನು ಕುರಿತು, ಲಕ್ಷ್ಮಣಸ್ವಾಮಿಯು ವಿಷಣ್ಣವದನನಾಗಿ ಆ ಕಾಲಕ್ಕೆ ತಕ್ಕಂತೆ ಈ ವಾಕ್ಯಗಳನ್ನು ಹೇಳಿದನದೆಂತೆನೆ. “ಅಮ್ಮಾ ! ಕೌಸಲ್ಯಾದೇವಿಯೆ !! ಅಣ್ಣನಾದ ಶ್ರೀರಾಮನು ಹೆಂಗಸಿನ ಮಾತಿಗೆ ಒಳಗಾಗಿ ವನಕ್ಕೆ ತೆರಳುವುದು ನನಗೂ ಸಮ್ಮತವಾಗಿಲ್ಲ. ವ್ಯತ್ಯಸ್ತ ಬುದ್ಧಿಯುಳ್ಳವನಾಗಿಯೂ, ವೃದ್ಧನಾಗಿಯೂ, ಸ್ರಕ್ಚಂದನ ವನಿತಾದಿ ವಿಷಯ ವ್ಯಾಪಾರಗಳಿಂದ ತಿರಸ್ಕೃತನಾಗಿಯೂ, ಮನ್ಮಥನ ಕೈವಶನಾಗಿಯೂ, ಸ್ತ್ರೀಯಿಂದ ಪ್ರೇರಿತನಾಗಿಯೂ ಇರುವ ನಮ್ಮ ಮಹಾರಾಜನು ಯಾವದನ್ನು ತಾನೆ ಹೇಳದಿದ್ದಾನು? ಯಾವ ಕಾರಣದಿಂದ ಶ್ರೀರಾಮನು ದೇಶದಿಂದ ಹೊರಡಿಸಲ್ಪಡುವನೋ, ಅಂತಹ ಯಾವ ಅಪರಾಧವು ತಾನೆ



Kausalya, Lakshman Calmed.

ಅಯೋಧ್ಯಾಕಾಂಡೇ ಏಕವಿಂಶಸ್ಸರ್ಗಃ.

ತಥಾ ತು ವಿಲಪಂತೀಂ ತಾಂ ಕೌಸಲ್ಯಾಂ ರಾಮಮಾತರಂ ॥ ಉವಾಚ ಲಕ್ಷ್ಮಣೋ ದೀನಸ್ತತ್ಕಾಲ ಸದೃಶಂ ವಚಃ ॥ ೧ ॥ ನರೋಚತೇ ಮಮಾಪ್ಯೇತ ದಾರ್ಯೇ ಯದ್ರಾಘವೋ ವನಂ ॥ ತ್ಯಕ್ತ್ವಾ ರಾಜ್ಯಶ್ರಿಯಂ ಗಚ್ಛೇತ್ ಸ್ತ್ರಿಯಾ ವಾಕ್ಯವಶಂ ಗತಃ ॥ ೨ ॥ ವಿಪರೀತಶ್ಚ ವೃದ್ಧಶ್ಚ ವಿಷಯೈಶ್ಚ ಪ್ರಧರ್ಷಿತಃ ॥ ನೃಪಃ ಕಿಮಿವ ನಬ್ರೂಯಾ ಚ್ಚೋದ್ಯಮಾನ ಸ್ಸಮನ್ಮಥಃ ॥ ೩ ॥ ನಾಸ್ಯಾಪರಾಧಂ ಪಶ್ಯಾಮಿ ನಾಪಿ ದೋಷಂ ತಥಾವಿಧಂ ॥ ಯೇನ ನಿರ್ವಾಸ್ಯತೇ

ತಥಾತು - ಈ ರೀತಿಯಾಗಿ, ವಿಲಪಂತೀಂ - ಪ್ರಲಾಪ ಮಾಡುತ್ತಿರುವ, ರಾಮಮಾತರಂ - ಶ್ರೀರಾಮನಿಗೆ ತಾಯಿಯಾದ, ತಾಂಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು ಕುರಿತು, ಲಕ್ಷ್ಮಣಃ - ಲಕ್ಷ್ಮಣನು, ದೀನಃ - ವಿಷಣ್ಣನಾಗಿ, ತತ್ಕಾಲಸದೃಶಂ - ಆ ಕಾಲಕ್ಕೆ ತಕ್ಕದಾದ, ವಚಃ - ಮಾತನ್ನು, ಉವಾಚ - ಹೇಳಿದನು. ॥ ೧ ॥ ಹೇ ಆರ್ಯೇ - ಎಲೌ ಪೂಜ್ಯಳೇ, ರಾಘವಃ - ಶ್ರೀರಾಮನು, ಸ್ತ್ರಿಯಾ - ಕೈಕೇಯಿ ಎಂಬ ಹೆಂಗಸಿನ, ವಾಕ್ಯವಶಂ - ಮಾತಿನ ಸ್ವಾಧೀನತೆಯನ್ನು, ಗತಃ - ಹೊಂದಿ, ರಾಜ್ಯಶ್ರಿಯಂ - ರಾಜ್ಯೈಶ್ವರ್ಯವನ್ನು, ತ್ಯಕ್ತ್ವಾ - ಬಿಟ್ಟು, ವನಂ - ವನವನ್ನು ಕುರಿತು, ಗಚ್ಛೇದಿತಿಯತ್ ಹೋಗುವನೆಂಬುದು ಯಾವದುಂಟೋ, ತತ್-ಅದು, ಮಮಾಪಿ-ನನಗೂ, ನರೋಚತೇ - ಸಮ್ಮತವಿಲ್ಲ. ॥ ೨ ॥ ವಿಪರೀತಃ - ವ್ಯತ್ಯಸ್ತವಾದ ಬುದ್ಧಿಯುಳ್ಳ, ವೃದ್ಧಶ್ಚ - ಮುದುಕನಾದ, ವಿಷಯೈಃ - ಸ್ರಕ್ಚಂದನ, ವನಿತಾದಿ ವಿಷಯಗಳಿಂದ, ಧರ್ಷಿತಃ - ತಿರಸ್ಕರಿಸಲ್ಪಟ್ಟ, ಸಮನ್ಮಥಃ - ಮನ್ಮಥಾಧೀನನಾದ, ಚೋದ್ಯಮಾನಃ - ಸ್ತ್ರೀಯಿಂದ ಪ್ರೇರಿತನಾಗಿರುವ, ನೃಪಃ - ಅರಸು, ಕಿಮಿವ - ಯಾವದನ್ನು ತಾನೇ, ನಬ್ರೂಯಾತ್ - ಹೇಳದಿದ್ದಾನು. ॥ ೩ ॥ ರಾಘವಃ - ಶ್ರೀರಾಮನು, ರಾಜ್ಯಾತ್ - ರಾಜ್ಯದಿಂದ, ವನವಾಸಾಯ - ವನವಾಸಕ್ಕೋಸುಗ, ಯೇನ - ಯಾವ ಕಾರಣ, ನಿರ್ವಾಸ್ಯತೇ - ಹೊರಡಿಸಲ್ಪಡುತ್ತಾನೆಯೋ, ತಥಾವಿಧಂ - ಅಂತಹ,

---

ಈ ರೀತಿ ವಿಲಾಪಿಸುತ್ತಿರುವ ಶ್ರೀರಾಮನ ಮಾತೆಯಾದ ಕೌಸಲ್ಯಾದೇವಿಯನ್ನು ಕುರಿತು, ಲಕ್ಷ್ಮಣಸ್ವಾಮಿಯು ವಿಷಣ್ಣವದನನಾಗಿ ಆ ಕಾಲಕ್ಕೆ ತಕ್ಕಂತೆ ಈ ವಾಕ್ಯಗಳನ್ನು ಹೇಳಿದನದೆಂತೆನೆ. " ಅಮ್ಮಾ ! ಕೌಸಲ್ಯಾದೇವಿಯೆ !! ಅಣ್ಣನಾದ ಶ್ರೀರಾಮನು ಹೆಂಗಸಿನ ಮಾತಿಗೆ ಒಳಗಾಗಿ ವನಕ್ಕೆ ತೆರಳುವುದು ನನಗೂ ಸಮ್ಮತವಾಗಿಲ್ಲ. ವ್ಯತ್ಯಸ್ತ ಬುದ್ಧಿಯುಳ್ಳವನಾಗಿಯೂ, ವೃದ್ಧನಾಗಿಯೂ, ಸ್ರಕ್ಚಂದನ ವನಿತಾದಿ ವಿಷಯ ವ್ಯಾಪಾರಗಳಿಂದ ತಿರಸ್ಕೃತನಾಗಿಯೂ, ಮನ್ಮಥನ ಕೈವಶನಾಗಿಯೂ, ಸ್ತ್ರೀಯಿಂದ ಪ್ರೇರಿತನಾಗಿಯೂ ಇರುವ ನಮ್ಮ ಮಹಾರಾಜನು ಯಾವದನ್ನು ತಾನೆ ಹೇಳದಿದ್ದಾನು? ಯಾವ ಕಾರಣದಿಂದ ಶ್ರೀರಾಮನು ದೇಶದಿಂದ ಹೊರಡಿಸಲ್ಪಡುವನೋ, ಅಂತಹ ಯಾವ ಅಪರಾಧವು ತಾನೆ



Kausalya, Lakshman Calmed.

Lakshmi Art Bombay, 8.

ರಾಷ್ಟ್ರಾದ್ವನವಾಸಾಯ ರಾಘವಃ ‖ ೪ ‖ (ಅಹಂ ಹನಿಷ್ಯೇ ಪಿತರಂ ವೃದ್ಧಂ ಕಾಮವಶಂ ಗತಂ ‖ ಸ್ತ್ರಿಯಾಯುಕ್ತಂ ಚ ನಿರ್ಲಜ್ಜಂ ಧರ್ಮಾಯುಕ್ತಂ ನೃಪಂ ಯಥಾ‖) ನತಂ ಪಶ್ಯಾಮ್ಯಹಂ ಲೋಕೇ ಪರೋಕ್ಷಮಪಿ ಯೋನರಃ ‖ ಸ್ವಮಿತ್ರೋಽಪಿ ನಿರಸ್ತೋಽಪಿ ಯೋಽಸ್ಯ ದೋಷಮುದಾಹರೇತ್ ‖ ೫ ‖ ದೇವಕಲ್ಪಮೃಜುಂ ದಾಂತಂ ರಿಪೂಣಾಮಪಿ ವತ್ಸಲಂ ‖ ಅವೇಕ್ಷಮಾಣಃ ಕೋಧರ್ಮಂ ತ್ಯಜೇತ್ಪುತ್ರಮಕಾರಣಾತ್ ‖ ೬ ‖ ತದಿದಂ ವಚನಂ ರಾಜ್ಞಃ ಪುನರ್ಬಾಲ್ಯಮುಪೇಯುಷಃ ‖ ಪುತ್ರಃ ಕೋಽಹೃದಯೇ ಕುರ್ಯಾದ್ರಾಜ್ಯವೃತ್ತಮನುಸ್ಮರನ್ ‖ ೭ ‖ ಯಾವದೇವ ನಜಾನಾತಿ ಕಶ್ಚಿದರ್ಥಮಿಮಂ ನರಃ ‖ ತಾವ

ದೋಷಮಪಿ - ಮಹಾ ಪಾತಕವನ್ನೇ ಆಗಲಿ, ನಪಶ್ಯಾಮಿ - ಕಾಣೆನು, ಅಸ್ಯ - ಈ ಶ್ರೀರಾಮನ, ಅಪರಾಧಂ - ರಾಜದ್ರೋಹವನ್ನೂ ಕೂಡ, ನಪಶ್ಯಾಮಿ - ಕಾಣಲಿಲ್ಲವು. ‖ ೪ ‖ ಅಹಂ-ನಾನು, ಕಾಮವಶಂಗತಂ ಮನ್ಮಥನ ಕೈವಶನಾದ, ವೃದ್ಧಂ-ಮುದುಕನಾದ, ಪಿತರಂ-ತಂದೆಯನ್ನು, ಸ್ತ್ರಿಯಾಯುಕ್ತಂ - ಹೆಂಗಸಿನಿಂದೊಡಗೂಡಿದ, ನಿರ್ಲಜ್ಜಂ-ನಾಚಿಕೆಯಿಲ್ಲದಿರುವ, ಧರ್ಮಾಯುಕ್ತಂಚ-ಧರ್ಮದಿಂದೊಡಗೂಡದ, ನೃಪಂಯಥಾ-ರಾಜನನ್ನು ಹೇಗೋ ಹಾಗೆ, ಹನಿಷ್ಯೇ - ಕೊಲ್ಲುತ್ತೇನೆ ಯೋನರಃ-ಯಾವ ಮನುಷ್ಯನು, ಸ್ವಮಿತ್ರೋಽಪಿ - ಮಹಾ ಶತ್ರುವಾದರೂ, ನಿರಸ್ತೋಽಪಿ - ಏನೋ ಒಂದು ಅಪರಾಧದಿಂದ ತಿರಸ್ಕರಿಸಲ್ಪಟ್ಟವನಾದರೂ, ಯಃಕಶ್ಚಿತ್ - ಯಾವನೊಬ್ಬನೂ, ಅಸ್ಯ - ಈ ಶ್ರೀರಾಮನ, ದೋಷಂ - ದೋಷವನ್ನು, ಉದಾಹರೇತ್ - ಹೇಳುವನೋ, ಪರೋಕ್ಷಮಪಿ - ಶ್ರೀರಾಮನು ಇದಿರಾಗಿಲ್ಲದ ಕಾಲದಲ್ಲಿ, ಉದಾಹರೇತ್-ಹೇಳುವನೋ, ತಂ - ಅಂತಹ ಮನುಷ್ಯನನ್ನು, ಅಹಂ - ನಾನು, ಲೋಕೇ - ಈ ಜಗತ್ತಿನಲ್ಲಿ, ನಪಶ್ಯಾಮಿ - ಕಾಣೆನು. ‖ ೫ ‖ ದೇವಕಲ್ಪಂ - ದೇವತಾ ಸಮಾನನಾದ, ಋಜುಂ - (ಗೋ + ಮ) ಕಾಯಕ, ವಾಚಕ, ಮಾನಸಿಕಗಳೆಂಬ ಕರಣತ್ರಯಗಳಿಂದಲೂ ಕೌಟಿಲ್ಯವಿಲ್ಲದ, ದಾಂತಂ - ಶಿಕ್ಷಿತನಾದ, ರಿಪೂಣಾಮಪಿ - ಶತೃಗಳಿಗೂ ಕೂಡ, ವತ್ಸಲಂ - ಪ್ರೀತಿಪಾತ್ರನಾದ, ಧರ್ಮಂ - ಧರ್ಮಸ್ವರೂಪನಾದ, ಪುತ್ರಂ - ಮಗನನ್ನು, (ಗೋ) ಪುತ್ರಂ - ಪುತ್ರನನ್ನೂ, ಧರ್ಮಂ - ಧರ್ಮವನ್ನೂ, ಅವೇಕ್ಷ್ಯಮಾಣಃ-ನೋಡುತ್ತಿರುವ, ಕಃ - ಯಾವ ಪುರುಷನು ತಾನೆ, ಅಕಾರಣಾತ್ - ಕಾರಣವಿಲ್ಲದೆ, ತ್ಯಜೇತ್ - ಪರಿತ್ಯಾಗ ಮಾಡಿಯಾನು. ‖ ೬ ‖ ತತ್ - ಆ ಕಾರಣ, ರಾಜ್ಯವೃತ್ತಂ - ರಾಜನೀತಿಯನ್ನು, ಅನುಸ್ಮರನ್ - ತಿಳಿದಿರುವ, ಕಃಪುತ್ರಃ - ಯಾವ ಮಗನು ತಾನೆ, ಪುನಃ - ಮತ್ತು, ಬಾಲ್ಯಂ - (ಗೋ + ಮ) ಕಾಮಪಾರವಶ್ಯವೆಂಬ ಬಾಲ್ಯವನ್ನು, ಉಪೇಯುಷಃ - ಹೊಂದಿರುವ, ರಾಜ್ಞಃ - ದಶರಥರಾಜನ, ಇದಂ ವಚನಂ - ಈ ಮಾತನ್ನು, ಹೃದಿ - ಮನಸ್ಸಿನಲ್ಲಿ, ಕುರ್ಯಾತ್ - ಮಾಡುವನು. ‖ ೭ ‖ ಯಾವದೇವ - ಎಷ್ಟರೊಳಗಾಗಿ,

---

ರಾಮನಲ್ಲುಂಟೋ ಅದನ್ನು ನಾನು ತಿಳಿದಿಲ್ಲವು. ‖ ೧-೪ ‖ ಎಲೈ ಶ್ರೀರಾಮನೆ ! ಕಾಮಾತುರನಾಗಿಯೂ, ಮುದುಕನಾಗಿಯೂ ಇರುವ ನಮ್ಮ ತಂದೆಯನ್ನು, ನಾಚಿಕೆಯಿಲ್ಲದೆಯೂ, ಧರ್ಮವಿಲ್ಲದೆಯೂ, ಸ್ತ್ರೀಯಿಂದೊಡಗೂಡಿಯೂ ಇರುವ ರಾಜನನ್ನು ಕೊಲ್ಲುವಂತೆ ಕೊಂದು ಬಿಡುವೆನು. ಹಗೆತನವಿದ್ದರೂ, ಅಪರಾಧದಿಂದ ತಿರಸ್ಕರಿಸಲ್ಪಟ್ಟವನಾದರೂ,

ದೇವ ಮಯಾ ಸಾರ್ಧಮಾತ್ಮಸ್ಥಂ ಕುರು ಶಾಸನಂ ॥ ೮ ॥ ಮಯಾ ಪಾರ್ಶ್ವೇ ಸ ಧನುಷಾ ತವಗುಪ್ತಸ್ಯ ರಾಘವ ॥ ಕಸ್ಸಮರ್ಥೋಽಧಿಕಂ ಕರ್ತುಂ ಕೃತಾಂತಸ್ಯೇವ ತಿಷ್ಠತಃ ॥ ೯ ॥ ನಿರ್ಮನುಷ್ಯಾ ಮಿಮಾಂಕೃತ್ಸ್ನಾ ಮಯೋಧ್ಯಾಂ ಮನುಜರ್ಷಭ ॥ ಕರಿಷ್ಯಾಮಿ ಶರೈಸ್ತೀಕ್ಷ್ಣೈರ್ಯದಿ ಸ್ಥಾಸ್ಯತಿ ವಿಪ್ರಿಯೇ॥೧೦॥ ಭರತಸ್ಯಾಥ ಪಕ್ಷ್ಯೋವಾ ಯೋವಾಸ್ಯ ಹಿತಮಿಚ್ಛತಿ ॥ ಸರ್ವಾನೇತಾನ್ವಧಿಷ್ಯಾಮಿ ಮೃದುರ್ಹಿ ಪರಿಭೂಯತೇ ॥ ೧೧ ॥ ಪ್ರೋತ್ಸಾಹಿತೋಽಯಂ ಕೈಕೇಯ್ಯಾ ಸದುಷ್ಟೋಯದಿ ನಃ ಪಿತಾ ॥ ಅಮಿತ್ರಭೂತೋ ನಿಸ್ಸಂಗಂ

ಇಮಂ ಅರ್ಥಂ - ಈ ಅರ್ಥವನ್ನು, ಕಶ್ಚಿನ್ನರಃ - ಯಾವ ಮನುಷ್ಯನೂ, ನಜಾನಾತಿ - ತಿಳಿಯುವದಿಲ್ಲವೋ, ತಾವದೇವ - ಅಷ್ಟರಲ್ಲಿಯೇ, ಮಯಾಸಾರ್ಧಂ - ನನ್ನೊಡಗೂಡಿ, ಶಾಸನಂ - ರಾಜ್ಯವನ್ನು, ಆತ್ಮಸ್ಥಂ - ತನ್ನ ಸ್ವಾಧೀನವನ್ನಾಗಿ, ಕುರು - ಮಾಡು. ॥ ೮ ॥ ಹೇ ರಾಘವ - ಎಲೈ ಶ್ರೀರಾಮನೆ, ಪಾರ್ಶ್ವೇ - ಪಾರ್ಶ್ವ ಭಾಗದಲ್ಲಿ, ಸಧನುಷಾ - ಧನುಸ್ಸಿನಿಂದೊಡಗೂಡಿದ, ಮಯಾ - ನನ್ನಿಂದ, ಗುಪ್ತಸ್ಯ - ರಕ್ಷಿಸಲ್ಪಟ್ಟ, ಕೃತಾಂತಸ್ಯೇವ - ಯಮನಂತೆ, ತಿಷ್ಠತಃ - ಇರುತ್ತಿರುವ, ತವ - ನಿನಗೆ, ಅಧಿಕಂ - ಹೆಚ್ಚಾದ ಪರಾಕ್ರಮವನ್ನು, ಕರ್ತುಂ - ಮಾಡಲು, ಕಃ - ಯಾವನು, ಸಮರ್ಥಃ - ಶಕ್ತನು. ॥ ೯ ॥ ಹೇ ಮನುಜರ್ಷಭ - ಎಲೈ ಮನುಷ್ಯ ಶ್ರೇಷ್ಠನೆ, ವಿಪ್ರಿಯೇ - ಪ್ರತಿಕೂಲ ಭಾಗದಲ್ಲಿ, ಸ್ಥಾಸ್ಯತಿಯದಿ - ನಿಂತುದೇ ಆದರೆ, ತೀಕ್ಷ್ಣೈಃ - ಕ್ರೂರಗಳಾದ, ಶರೈಃ - ಬಾಣಗಳಿಂದ, ಕೃತ್ಸ್ನಾಂ - ಸಮಸ್ತವಾದ, ಇಮಾಮಯೋಧ್ಯಾಂ - ಈ ಅಯೋಧ್ಯಾ ಪಟ್ಟಣವನ್ನು, ನಿರ್ಮನುಷ್ಯಾಂ - ನಿರ್ಜನವನ್ನಾಗಿ, ಕರಿಷ್ಯಾಮಿ - ಮಾಡುವೆನು. ॥ ೧೦ ॥ ಅಸ್ಯ ಭರತಸ್ಯ - ಈ ಭರತನಿಗೆ, ಪಕ್ಷ್ಯೋವಾ - ಸಹಾಯ ಭೂತನೇ ಆಗಲಿ, ಅಥವಾ-ಹಾಗಲ್ಲದಿದ್ದರೆ, ಯಃ-ಯಾವನು, ಅಸ್ಯ - ಈ ಭರತನಿಗೆ, ಹಿತಂ - ಇಷ್ಟವನ್ನು, ಇಚ್ಛತಿ - ಅಪೇಕ್ಷಿಸುವನೋ, ಏತಾನ್ಸರ್ವಾನ್ - ಇವರೆಲ್ಲರನ್ನೂ, ವಧಿಷ್ಯಾಮಿ - ಸಂಹಾರ ಮಾಡುವೆನು, ಮೃದುಃ - ಮಾರ್ದವವುಳ್ಳ ಮನುಷ್ಯನು, ಪರಿಭೂಯತೇಹಿ - ತಿರಸ್ಕರಿಸಲ್ಪಡುವನಷ್ಟೆ. ॥ ೧೧ ॥ ಕೈಕೇಯ್ಯಾ - ಕೈಕೇಯೀದೇವಿಯಿಂದ, ಪ್ರೋತ್ಸಾಹಿತಃ - ಎತ್ತಿ ಕಟ್ಟಲ್ಪಟ್ಟ, ಅಯಂ - ಈ, ನಃಪಿತಾ - ನಮ್ಮ ತಂದೆಯು, ಸದುಷ್ಟೋ

ಯಾವ ಪುರುಷನು ಶ್ರೀರಾಮನ ವಿಷಯದಲ್ಲಿ ದೋಷವನ್ನು ಹೇಳುತ್ತಾನೆಯೋ ಅಂತಹನು ಈ ಲೋಕದಲ್ಲಿಯೇ ಕಾಣುವುದಿಲ್ಲವು. ॥ ೫ ॥ ದೇವತಾ ಸದೃಶನಾಗಿಯೂ, ಕಪಟವಿಲ್ಲದವನಾಗಿಯೂ, ಗುರುಗಳಿಂದ ಚೆನ್ನಾಗಿ ಶಿಕ್ಷಿತನಾಗಿಯೂ, ಹಗೆಯರಿಗೂ ಪ್ರೀತಿಪಾತ್ರನಾಗಿಯೂ, ಧರ್ಮಸ್ವರೂಪನಾಗಿಯೂ ಇರುವ ಮಗನನ್ನು ಏನೊಂದೂ ಕಾರಣವಿಲ್ಲದೆ ಯಾವ ಪುರುಷನು ತಾನೆ ಬಿಟ್ಟುಬಿಡುತ್ತಾನೆ. ಆದುದರಿಂದ ರಾಜನೀತಿಯನ್ನು ತಿಳಿದಿರುವ ಯಾವ ಮಗನು ತಾನೆ ಮುದುಕನಾದರೂ ಹುಡುಗನಂತಿರುವ ರಾಜನಾದ ತಂದೆಯ ಮಾತುಗಳನ್ನು ಕೇಳುತ್ತಾನೆ. ಈ ವಿಷಯವನ್ನು ಎಲ್ಲರೂ ತಿಳಿಯುವುದರೊಳಗಾಗಿ ಈ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವವನಾಗು. ಎಲೈ ಶ್ರೀರಾಮನೆ! ನಿನ್ನ ಪಾರ್ಶ್ವ ಭಾಗದಲ್ಲಿ ಧನುರ್ಧಾರಿಯಾಗಿ ನನ್ನಿಂದ ಸಂರಕ್ಷಿಸ

ನಧ್ಯತಾಂ ಬಧ್ಯತಾಮಪಿ ||೧೨|| ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯ ಮಜಾನತಃ || ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂಭವತಿ ಶಾಸನಂ ||೧೩|| ಬಲಮೇಷ ಕಿಮಾಶ್ರಿತ್ಯ ಹೇತುಂಚ ಪುರುಷರ್ಷಭ || ದಾತುಮಿಚ್ಛತಿ ಕೈಕೇಯ್ಯೈ ರಾಜ್ಯಂ ಸ್ಥಿತಮಿದಂ ತವ ||೧೪|| ತ್ವಯಾ ಚೈವ ಮಯಾ ಚೈವ ಕೃತ್ವಾ ವೈರಮನುತ್ತಮಂ || ಕಾಸ್ಯ ಶಕ್ತಿ ಶ್ರಿಯಂ ದಾತುಂ ಭರತಾಯಾರಿ ಶಾಸನ ||೧೫|| ಅನುರಕ್ತೋಽಸ್ಮಿ ಭಾವೇನ ಭ್ರಾತರಂ ದೇವಿ ತತ್ವತಃ || ಸತ್ಯೇನ ಧನುಷಾಚೈವ ದತ್ತೇನೇಷ್ಟೇನ ತೇ ಶಪೇ ||೧೬|| ದೀಪ್ತ ಮಗ್ನಿ

ಯದಿ - ದುಷ್ಟರಿಂದೊಡಗೂಡಿದವನಾದರೆ, (ಗೋ) ದುಷ್ಟೋಯದಿ - ದೋಷಗ್ರಸ್ತನಾದರೆ, ಅಮಿತ್ರಭೂತಃ - ಶತ್ರು ರೂಪನಾದ ಆ ತಂದೆಯು, ಯದ್ವಾ - ಅಮಿತ್ರಭೂತಃ - ಶತೃಭೂತನಾದ, (ಸಃ - ಆ ತಂದೆಯು,) ನಿಸ್ಸಂಗಂ - ನಿರ್ವಿಚಾರವಾಗಿ, ವಧ್ಯತಾಂ - ಹೊಡೆಯಲ್ಪಡಲಿ, ಬಧ್ಯತಾಮಪಿ - ಬಂಧಿಸಲ್ಪಡಲಿ. ||೧೨|| ಅವಲಿಪ್ತಸ್ಯ - ಗರ್ವಿಷ್ಠನಾದ, (ಮ) ಕಾಮಾದಿಗಳಿಂದ ತಿರಸ್ಕೃತನಾದ, ಕಾರ್ಯಾಕಾರ್ಯಂ - ಕರ್ತವ್ಯಾಕರ್ತವ್ಯಗಳನ್ನು, ಅಜಾನತಃ - ತಿಳಿಯದಿರುವ, ಉತ್ಪಥಂ - ಸನ್ಮಾರ್ಗಾತಿಕ್ರಮಣವನ್ನು, ಪ್ರತಿಪನ್ನಸ್ಯ - ಹೊಂದಿರುವ, ಗುರೋರಪಿ - ಗುರುವಿಗೂ ಕೂಡ, ಸಾಧನಂ - ಶಿಕ್ಷೆಯು, ಕಾರ್ಯಂ - ಮಾಡತಕ್ಕದು, ಭವತಿ - ಆಗುತ್ತದೆ. ||೧೩|| ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೆ, ಏಷಃ - ಈ ರಾಜನು, ತವ - ನಿನಗೆ, ಸ್ಥಿತಂ - ಧರ್ಮದಿಂದ ಪ್ರಾಪ್ತವಾದ, ಇದಂ ರಾಜ್ಯಂ - ಈ ರಾಜ್ಯವನ್ನು, ಕಿಂಬಲಂ - ರಾಜಬಲವನ್ನೇ ಆಗಲಿ, ಹೇತುಂ - ವರದಾನರೂಪವಾದ ಕಾರಣವನ್ನೇ ಆಗಲಿ, ಆಶ್ರಿತ್ಯ - ಆಶ್ರಯಿಸಿ, ಕೈಕೇಯ್ಯೈ - ಕೈಕೇಯಿಾದೇವಿಗೆ, ದಾತುಂ - ಕೊಡಲು, ಇಚ್ಛತಿ-ಅಪೇಕ್ಷಿಸುತ್ತಾನೆ. ||೧೪|| ಹೇ ಅರಿಶಾಸನ-ಎಲೈ ಶತ್ರುಸಂಹಾರಕನೆ, ತ್ವಯಾಚೈವ - ನಿನ್ನೊಡನೆಯೂ, ಮಯಾಚೈವ - ನನ್ನೊಂದಿಗೂ, ಅನುತ್ತಮಂ - ಬಹಳವಾದ, ವೈರಂ - ದ್ವೇಷವನ್ನು, ಕೃತ್ವಾ - ಮಾಡಿ, ಶ್ರಿಯಂ - ರಾಜ್ಯಸಂಪತ್ತನ್ನು, ಭರತಾಯ - ಭರತನಿಗೆ, ದಾತುಂ - ಕೊಡಲು, ಅಸ್ಯ - ಈ ತಂದೆಗೆ, ಶಕ್ತಿಃ-ಸಾಮರ್ಥ್ಯವು, ಕಾ - ಯಲ್ಲಿಯದು. ||೧೫|| ಹೇ ದೇವಿ - ಎಲೌ ಕೌಸಲ್ಯಾದೇವಿಯೆ, ತತ್ವತಃ - ಯಥಾರ್ಥವಾಗಿಯೂ, ಅಹಂ - ನಾನು, ಭಾವೇನ - ಅಂತರಂಗಾಭಿಪ್ರಾಯದಿಂದ, ಭ್ರಾತರಂ - ಅಣ್ಣನಾದ

ಲ್ಪಡುತ್ತ, ಸಾಕ್ಷಾದ್ವಮುಸಂತಿರುವ ನನ್ನ ಮುಂಗಡೆ ಪೌರುಷವನ್ನು ತೋರಲು ಯಾರು ತಾನೆ ಸಮರ್ಥರಾದಾರು? ಎಲೈ ಪುರುಷೋತ್ತಮನಾದ ಶ್ರೀರಾಮನೆ! ಕೇಳು; ಯಾವನಾದರೇನು? ನಿನಗೆ ಅನಿಷ್ಟವನ್ನು ಮಾಡಲು ನಿಂತರೆ ಇಡೀ ಅಯೋಧ್ಯಾಪುರಿಯನ್ನೇ ತೀಕ್ಷ್ಣವಾದ ಅಂಬುಗಳಿಂದ ನಿರ್ಮಾನುಷವನ್ನಾಗಿ ಮಾಡುತ್ತೇನೆ. ||೯-೧೦|| ಭರತನ ಪಕ್ಷವನ್ನು ವಹಿಸಿದವನನ್ನಾಗಲಿ, ಅವನ ಹಿತವನ್ನು ಬಯಸುವ ಯಾರೇ ಆಗಲೀ ಅವರೆಲ್ಲರನ್ನೂ ವಧಿಸುತ್ತೇನೆ. ಲೋಕದಲ್ಲಿ ಮೃದು ಗುಣವುಳ್ಳವನು ಅವಮಾನಿಸಲ್ಪಡುವನಲ್ಲವೇ ? ಇದು ಮಾಡತಕ್ಕ ಕಾರ್ಯ, ಇದು ಮಾಡಬಾರದ ಕಾರ್ಯ ಎಂಬುದನ್ನರಿಯದೆ, ದುರ್ಮಾರ್ಗಾನುವರ್ತಿಯಾಗಿ ಗರ್ವಿತನಾಗಿರುವ ತಂದೆಯು ದಂಡಾರ್ಹನಾಗಿರುವನು. ಓ ಪುರುಷೋ

ಮರಣ್ಯಂ ವಾ ಯದಿ ರಾಮಃ ಪ್ರವೇಕ್ಷ್ಯತಿ ॥ ಪ್ರವಿಷ್ಟಂ ತತ್ರ ಮಾಂ ದೇವಿ ತ್ವಂ ಪೂರ್ವಮವಧಾರಯ ॥ ೧೭ ॥ ಹರಾಮಿ ವೀರ್ಯಾದ್ದುಃಖಂ ತೇ ತಮಸ್ಸೂರ್ಯ ಇವೋದಿತಃ ॥ ದೇವೀ ಪಶ್ಯತು ಮೇ ವೀರ್ಯಂ ರಾಘವಶ್ಚೈವ ಪಶ್ಯತು ॥ ೧೮ ॥ ಏತತ್ತು ವಚನಂ ಶ್ರುತ್ವಾ ಲಕ್ಷ್ಮಣಸ್ಯ ಮಹಾತ್ಮನಃ ॥ ಉವಾಚ ರಾಮಂ ಕೌಸಲ್ಯಾ ರುದಂತೀ ಶೋಕಲಾಲಸಾ ॥ ೧೯ ॥

ಶ್ರೀರಾಮನಲ್ಲಿಯೇ, ಅನುರಕ್ತಃ - ಅನುರಾಗವುಳ್ಳವನು, ಅಸ್ಮಿ - ಆಗಿರುವೆನು, ಸತ್ಯೇನ - ಸತ್ಯದಿಂದಲೂ, ಧನುಷಾಚೈವ - (೧) ಧನುಸ್ಸಿನಿಂದಲೂ, ದತ್ತೇನ - (ಗೋ) ಇಷ್ಟದೇವತಾರ್ಚನೆಯೇ ಮೊದಲಾದುವುಗಳಾದ ದತ್ತೇನ-ದಾನದಿಂದಲೂ, ಇಷ್ಟೇನ-ಯಜ್ಞಾದಿಕ್ರತು ದೇವತಾಕರ್ಮದಿಂದಲೂ, ತೇ-ನಿನಿಗೆ, ಶಪೇ - ಶಪಥಮಾಡುವೆನು. ॥ ೧೬ ॥ ಹೇ ದೇವಿ - ಎಲೌ ಕೌಸಲ್ಯಾದೇವಿಯೇ, ರಾಮಃ- ಶ್ರೀರಾಮನು, ದೀಪ್ತಂ - ಪ್ರಜ್ವಲಿಸುತ್ತಿರುವ, ಅಗ್ನಿಂ - ಅಗ್ನಿಯನ್ನೇ ಆಗಲಿ, ಪ್ರವೇಕ್ಷ್ಯತಿಯದಿ - ಪ್ರವೇಶಮಾಡುವವನೇ ಆದರೆ, ತತ್ರ - ಆ ವಿಷಯದಲ್ಲಿ, ತ್ವಂ - ನೀನು, ಮಾಂ - ನನ್ನನ್ನು, ಪೂರ್ವಂ - ಮೊದಲೆ, ಪ್ರವಿಷ್ಟಂ - ಹೋಗುವವನನ್ನಾಗಿ, ಅವಧಾರಯ - ತಿಳಿದುಕೋ. ॥ ೧೭ ॥ ಉದಿತಃ - ಆಗತಾನೆ ಹುಟ್ಟಿದ, ಸೂರ್ಯಃ - ಸೂರ್ಯನು. ತಮಇವ - ಕತ್ತಲಿನಂತೆ, ತೇ - ನಿನ್ನ, ದುಃಖಂ - ದುಃಖವನ್ನು, ವೀರ್ಯಾತ್ - ಪರಾಕ್ರಮದಿಂದ, ಹರಾಮಿ - ಹೋಗಲಾಡಿಸುವೆನು, ಮೇ - ನನ್ನ, ವೀರ್ಯಂತು - ಸಾಮರ್ಥ್ಯವನ್ನಾದರೂ, ದೇವೀ - ಕೌಸಲ್ಯಾದೇವಿಯು, ಪಶ್ಯತಿ - ನೋಡಲಿ, ರಾಘವಶ್ಚೈವ - ಶ್ರೀರಾಮನೂ, ಪಶ್ಯತು - ನೋಡಲಿ. ॥ ೧೮ ॥ ಮಹಾತ್ಮನಃ-ಮಹಾಧೈರ್ಯಶಾಲಿಯಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ಏತದ್ವಚನಂತು - ಈ ಮಾತನ್ನು, ಶ್ರುತ್ವಾ - ಕೇಳಿ, ಶೋಕಲಾಲಸಾ - ವ್ಯಸನಾಕ್ರಾಂತಳಾದ, ಕೌಸಲ್ಯಾ - ಕೌಸಲ್ಯಾದೇವಿಯು, ರುದಂತಿ - ಅಳುತ್ತ, ರಾಮಂ - ಶ್ರೀರಾಮನನ್ನು ಕುರಿತು, ಉವಾಚ - ಹೇಳಿದಳು. ॥ ೧೯ ॥ ಹೇ ಪುತ್ರ - ಎಲೈ ಮಗನೆ, ಏವಂವದತಃ - ಈರೀತಿ ನುಡಿಯುತ್ತಿರುವ, ತೇ ನಿನ್ನ, ಭ್ರಾತುಃ - ತಮ್ಮನಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ವಾಕ್ಯಂ - ವಾಕ್ಯವು, ತ್ವಯಾ - ನಿನ್ನಿಂದ, ಶ್ರುತಂ - ಕೇಳಲ್ಪಟ್ಟಿತೇ,

ತ್ತಮನೆ! ನಮ್ಮ ತಂದೆಯಾದೀ ರಾಯನು, ನ್ಯಾಯವಾಗಿ ನಿನಗೆ ಬರಬೇಕಾದ ರಾಜ್ಯವನ್ನು, ಯಾವ ಬಲವನ್ನಾಶ್ರಯಿಸಿ ಕೈಕೇಯಿಗೆ ಕೊಡಲಿಚ್ಛಿಸುವನು. ಎಲೈ ಶತ್ರುಂಜಯನಾದ ಶ್ರೀರಾಮಚಂದ್ರನೇ, ನಿನ್ನೊಡನೆಯೂ, ನನ್ನೊಡನೆಯೂ ವೈರವನ್ನು ಮಾಡಿ ಭರತನಿಗೆ ಈ ರಾಜ್ಯೈಶ್ವರ್ಯವನ್ನು ಕೊಡಲು ನಮ್ಮ ತಂದೆಯಾದ ದಶರಥರಾಯನಿಗೆ ಶಕ್ತಿಯೆಲ್ಲಿಯದು? ॥ ೧೧-೧೫ ॥ ಎಲೌ ಕೌಸಲ್ಯಾದೇವಿಯೆ! ನಾನು ಕಾಯಾ ವಾಚಾ ಮನಸಾ ಶ್ರೀರಾಮ ಮೂರ್ತಿಯಲ್ಲಿಯೇ ಅನುರಕ್ತನಾಗಿದ್ದೇನೆ. ಈ ವಿಷಯದಲ್ಲಿ ಇದೋ, ಸತ್ಯದಿಂದಲೂ, ಧನುಸ್ಸಿನಿಂದಲೂ, ನಾನು ಗೈದಿರುವ ದಾನಾದಿಗಳಿಂದಲೂ ಶಪಥ ಮಾಡುತ್ತೇನೆ.

ಟಿ. (೧) (ಮು+ಭಾ+ಬೋ) ಶಾಸ್ತ್ರತಃ ತಮ್ಮನು ಅಣ್ಣನಿಗೆ ನಡೆದುಕೊಳ್ಳಬೇಕಾದ ರೀತಿಯಿಂದಲೂ, ಕ್ಷತ್ರಿಯನಿಗೆ ಮುಖ್ಯ ಪದಾರ್ಥವಾದ ಧನುಸ್ಸಿನಿಂದಲೂ, ನಾನು ಮಾಡಿರುವ ದೇವತಾರಾಧನಾದಿಗಳಿಂದಲೂ, ವೇದ ಪ್ರಮಾಣ್ಯವಾದ ಯಾಗಾದಿ ಕ್ರತುಗಳಿಂದಲೂ, ಶಪಥಮಾಡುತ್ತೇನೆ.

ಭ್ರಾತು ಸ್ತೇ ವದತಃ ಪುತ್ರ ಲಕ್ಷ್ಮಣಸ್ಯ ಶ್ರುತಂ ತ್ವಯಾ ॥ ಯದತ್ರಾನಂತರಂ ಕಾರ್ಯಂ ಕುರುಷ್ವ ಯದಿ ರೋಚತೇ ॥ ೨೦ ॥ ನಚಾಧರ್ಮ್ಯಂ ವಚಃ ಶ್ರುತ್ವಾ ಸಪತ್ನ್ಯಾ ಮಮ ಭಾಷಿತಂ ॥ ವಿಹಾಯ ಶೋಕ ಸಂತಪ್ತಾಂ ಗಂತು ಮರ್ಹಸಿ ಮಾಮಿತಃ ॥ ೨೧ ॥ ಧರ್ಮಜ್ಞ ಯದಿ ಧರ್ಮಿಷ್ಠೋ ಧರ್ಮಂ ಚರಿತುಮಿಚ್ಛಸಿ ॥ ಶುಶ್ರೂಷ ಮಾಮಿಹಸ್ಥಸ್ತ್ವಂ ಚರ ಧರ್ಮಮನು ತ್ತಮಂ ॥ ೨೨ ॥ ಶುಶ್ರೂಷುರ್ಜನನೀಂ ಪುತ್ರ ಸ್ಸ್ವಗೃಹೇ ನಿಯತೋ ವಸ೯ ॥ ಪರೇಣ ತಪಸಾ ಯುಕ್ತಃ ಕಾಶ್ಯಪಸ್ತ್ರಿದಿವಂಗತಃ ॥ ೨೩ ॥

ತವ - ನಿನಗೆ, ಅತ್ರ - ಈ ವಿಷಯದಲ್ಲಿ, ಅನಂತರಂ - ಬಳಿಕ, ಯತ್ಕಾರ್ಯಂ - ಯಾವದು ಮಾಡತಕ್ಕುದೋ, ತತ್ - ಅದರಂತೆ, ರೋಚತೇಯದಿ - ಸಮ್ಮತವಾದುದೇ ಆದರೆ, ತತ್ - ಆ ಕಾರ್ಯವನ್ನು, ಕುರುಷ್ವ - ಮಾಡು. ॥ ೨೦ ॥ ಮಮ - ನನ್ನ, ಸಪತ್ನ್ಯಾ - ಸವತಿಯಿಂದ, ಭಾಷಿತಂ - ಹೇಳಲ್ಪಟ್ಟ, ಅಧರ್ಮ್ಯಂ - ಧರ್ಮಪ್ರಧಾನವಿಲ್ಲದಿರುವ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಶೋಕಸಂತಪ್ತಾಂ - ವ್ಯಸನದಿಂದ ಮಗ್ನಿಹೋಗುತ್ತಿರುವ, ಮಾಂ - ನನ್ನನ್ನು, ವಿಹಾಯ - ಬಿಟ್ಟು, ಇತಃ - ಇಲ್ಲಿಂದ, ಗಂತುಂ - ಹೋಗಲು, ನಾರ್ಹಸಿ - ಅರ್ಹನಾಗ ಬೇಡ. ॥ ೨೧ ॥ ಹೇ ಧರ್ಮಜ್ಞ-ಎಲೈ ಧರ್ಮವನ್ನು ತಿಳಿದವನೇ ! ತ್ವಂ ನೀನು, ಧರ್ಮಿಷ್ಠಃಸ೯-(೧) ಧರ್ಮಿಷ್ಠನಾಗಿ, ಧರ್ಮಂ - ಧರ್ಮವನ್ನು, ಚರಿತುಂ - ಮಾಡಲು, ಇಚ್ಛಸಿಯದಿ - ಅಪೇಕ್ಷಿಸುವೆಯೆ, ಆದರೇ, ಇಹಸ್ಥಃ - ಇಲ್ಲಿರುವನಾಗಿ, ಅನುತ್ತಮಂ - ಶ್ರೇಷ್ಠವಾದ, ಧರ್ಮಂ - ಧರ್ಮವನ್ನು, ಚರ - ಅನುಷ್ಠಾನಮಾಡು, ಮಾಂ - ನನ್ನನ್ನು, ಶುಶ್ರೂಷ - ಸೇವೆಮಾಡು ॥ ೨೨ ॥ ಕಾಶ್ಯಪಃ - ಕಶ್ಯಪೋತ್ಪನ್ನನಾದ, ಪುತ್ರಃ - ಮಗನು, ಜನನೀಂ - ತಾಯಿಯನ್ನು, ಶುಶ್ರೂಷುಃ - ಸೇವೆಮಾಡುತ್ತ, ಸ್ವಗೃಹೇ - ತನ್ನ ಮನೆಯಲ್ಲಿ, ನಿಯತಃ - ನಿಷ್ಠಾಪರನಾಗಿ, ವಸ೯ - ಇರುತ್ತ, ಪರೇಣತಪಸಾ - ಬಹಳವಾದ ತಪಸ್ಸಿನಿಂದ, ಯುಕ್ತಃ - ಕೂಡಿ, ತ್ರಿದಿವಂ - ಸ್ವರ್ಗವನ್ನು, ಗತಃ-

ಒಂದು ವೇಳೆ ನಮ್ಮಣ್ಣನಾದ ರಘುರಾಮನು ಅಗ್ನಿಯನ್ನೋ ಅರಣ್ಯವನ್ನೋ ಪ್ರವೇಶಿಸುವವನಾದರೆ, ನಾನು ಆತನಿಗಿಂತ ಮೊದಲೇ ಪ್ರವೇಶ ಮಾಡುವವನಾಗುತ್ತೇನೆ. ಇದನ್ನು ಚೆನ್ನಾಗಿ ತಿಳಿದವಳಾಗು. ತಾಯೇ ಕೇಳು, ಆಗತಾನೇ ಉದಯಿಸಿದ ಭಾಸ್ಕರನು ಅಂಧಕಾರವನ್ನು ಹೋಗಲಾಡಿಸುವಂತೆ, ನಾನು ನಿನ್ನ ದುಃಖವನ್ನು ನನ್ನ ಪರಾಕ್ರಮದಿಂದ ಹೋಗಲಾಡಿಸುತ್ತೇನೆ. ನನ್ನ ಪೌರುಷವನ್ನು, ಕೌಸಲ್ಯಾದೇವಿಯೂ, ನಮ್ಮಣ್ಣನಾದ ಶ್ರೀರಾಮನೂ ನೋಡುವವರಾಗಲಿ." ॥ ೧೬-೧೯ ॥ ಇಂತು ನುಡಿದ ಮಹಾತ್ಮನಾದ ಲಕ್ಷ್ಮಣಸ್ವಾಮಿಯ ನುಡಿಗಳನ್ನು ಕೇಳಿ ಶ್ರೀರಾಮಚಂದ್ರನ ತಾಯಿಯಾದ ಕೌಸಲ್ಯಾದೇವಿಯು

ಟಿ. (೧) ಏಧ್ಯೋ ಮಾತಾಗರೀಯಸೀ "ಎಂಬ ಧರ್ಮವನ್ನು ಮನಸ್ಸಿನಲ್ಲಿಟ್ಟುಕೊಂಡು ಪಿತೃವಾಕ್ಯ ಪರಿಪಾಲನಾ ರೂಪ ಧರ್ಮವನ್ನು ಆಚರಿಸಿಕೊಂಡಿರು" ಎಂಬುದೇ ಕೌಸಲ್ಯಾದೇವಿಯ ವಾಕ್ಯಾರ್ಥವು. ಧರ್ಮಜ್ಞನಾದವನು ಈ ಉಭಯ ಧರ್ಮಗಳನ್ನೂ ಆಚರಿಸಬೇಕೆಂಬುದೇ ಧರ್ಮರಹಸ್ಯವು. ಇದು **ಮಹೇಶ್ವರ ತೀರ್ಥ** ವ್ಯಾಖ್ಯಾನ.

ಯಥೈವ ರಾಜಾ ಪೂಜ್ಯಸ್ತೇ ಗೌರವೇಣ ತಥಾಸ್ಮ್ಯಹಂ ॥ ತ್ವಾಂ ನಾಹಮನುಜಾನಾಮಿ ನಗಂತವ್ಯ ಮಿತೋವನಂ ॥ ೨೪ ॥ ತ್ವದ್ವಿಯೋಗಾನ್ನಮೇ ಕಾರ್ಯಂ ಜೀವಿತೇನ ಸುಖೇನವಾ ॥ ತ್ವಯಾಸಹ ಮಮಶ್ರೇಯಸ್ತೃಣಾನಾಮಪಿ ಭಕ್ಷಣಂ ॥ ೨೫ ॥ ಯದಿ ತ್ವಂ ಯಾಸ್ಯಸಿ ವನಂ ತ್ಯಕ್ತ್ವಾ ಮಾಂ ಶೋಕಲಾಲಸಾಂ ॥ ಅಹಂ ಪ್ರಾಯಮಿಹಾಸಿಷ್ಯೇ ನಹಿ ಶಕ್ಷ್ಯಾಮಿ ಜೀವಿತುಂ ॥೨೬॥ ತತಸ್ತ್ವಂ ಪ್ರಾಪ್ಸ್ಯಸೇ ಪುತ್ರ ನಿರಯಂ ಲೋಕ ವಿಶ್ರುತಂ ॥ ಬ್ರಹ್ಮಹತ್ಯಾ

ಹೊಂದಿದನು. ॥ ೨೩ ॥ ಯಥಾ - ಹೇಗೆ, ರಾಜಾ - ಅರಸು, ಗೌರವೇಣ - ಗೌರವದಿಂದ, ತೇ-ನಿನಿಗೆ, ಪೂಜ್ಯಃ - ಪೂಜನೀಯನೋ, ತಥಾ - ಹಾಗೆಯೇ, ಅಹಮಪಿ - ನಾನೂ, ಪೂಜ್ಯಾಽಿ-ಪೂಜ್ಯಳಷ್ಟೇ, ಅಹಂ - ನಾನು, ತ್ವಾಂ - ನಿನ್ನನ್ನು, ನಾಭಿಜಾನಾಮಿ - ಸಮ್ಮತಿಸಲಾರೆನು, ಇತಃ-ಇಲ್ಲಿಂದ, ವನಂ - ವನವನ್ನು ಕುರಿತು, ನಗಂತವ್ಯಂ - ಹೋಗತಕ್ಕದಲ್ಲಾ. ॥ ೨೪ ॥ ತ್ವದ್ವಿಯೋಗಾತ್ - ನಿನ್ನಗಲಿಕೆಯಿಂದ, ಮೇ - ನನಗೆ, ಜೀವಿತೇನ - ಬದುಕುವಿಕೆಯಿಂದಲೇ ಆಗಲಿ, ಸುಖೇನವಾ - ವಿಷಯಸುಖದಿಂದಲೇ ಆಗಲಿ, ಕಾರ್ಯಂ - ಯಾವ ಪ್ರಯೋಜನವು, ನ - ಇಲ್ಲವು, ತ್ವಯಾಸಹ - ನಿನ್ನೊಡನೆ, ಮಮ - ನನಗೆ, ತೃಣಾನಾಂ - ಹುಲ್ಲುಗಳ, ಭಕ್ಷಣಮಪಿ - ತಿನ್ನುವಿಕೆಯೂ ಕೂಡ, ಶ್ರೇಯಃ - ಒಳ್ಳೆಯದು. ॥ ೨೫ ॥ ತ್ವಂ - ನೀನು, ಶೋಕಲಾಲಸಾಂ - ವ್ಯಸನಾಕ್ರಾಂತಳಾದ, ಮಾಂ - ನನ್ನನ್ನು, ತ್ಯಕ್ತ್ವಾ - ಬಿಟ್ಟು, ವನಂ - ವನವನ್ನು ಕುರಿತು, ಯಾಸ್ಯಸಿಯದಿ - ಹೋಗುವೆಯಾದರೆ, ಅಹಂ - ನಾನು, ಇಹ - ಇಲ್ಲಿ, ಪ್ರಾಯಂ - ಅನಶನ ವ್ರತವನ್ನು, ಆಶಿಷ್ಯೇ - ಆಚರಿಸುವೆನು, ಜೀವಿತುಂ - ಬದುಕುವದುಕ್ಕೆ, ನಶಕ್ಷ್ಯಾಮಿಹಿ - ಸಮರ್ಥಳಾಗಲಾರೆನಷ್ಟೆ. ॥ ೨೬ ॥ ಹೇ ಪುತ್ರ - ಎಲೈ ಮಗನೆ, ತತಃ - ಬಳಿಕ, ತ್ವಂ-ನೀನು, ಸರಿತಾಂ-ನದಿಗಳಿಗೆಲ್ಲಾ, ಪತಿಃ - ಪತಿಯಾದ, ಸಮುದ್ರಃ - ಸಮುದ್ರನು, ಅಧರ್ಮಾತ್ - ಅಧರ್ಮದಿಂದ, ಬ್ರಹ್ಮಹತ್ಯಾಮಿವ - ಬ್ರಹ್ಮಹತ್ಯೆಯನ್ನಂತೆ, ಲೋಕವಿಶ್ರುತಂ - ಲೋಕಪ್ರಸಿದ್ಧವಾದ, ನಿರಯಂ -

ನಿಜ ಕುವರನನ್ನು ಕುರಿತು ಹೀಗೆಂದಳು. “ಮಗುವೆ! ಲಕ್ಷ್ಮಣನಾಡಿದ ಮಾತುಗಳನ್ನು ಕೇಳಿದೆಯಾ? ಆ ನುಡಿಗಳು ನಿನಗೆ ಇಷ್ಟವಾದುವುಗಳಾದರೆ ಮುಂದೆ ಮಾಡಬೇಕಾದ ಕಾರ್ಯವನ್ನು ಮಾಡುವವನಾಗು. ನನ್ನ ಸವತಿಯಾದ ಕೈಕೇಯಿಯ ಅಧರ್ಮಯುಕ್ತವಾದ ನುಡಿಗಳನ್ನು ಕೇಳಿ ದುಃಖಿತಳಾಗಿರುವ ನನ್ನನ್ನು ತೊರೆದು ವನವಾಸಕ್ಕಾಗಿ ಹೊರಡಬೇಡ. ಎಲೈ ಧರ್ಮಜ್ಞನಾದ ರಾಮಭದ್ರನೇ! ಧರ್ಮಿಷ್ಠನಾಗಿ, ಧರ್ಮವನ್ನಾಚರಿಸಬೇಕೆಂಬ ಅಪೇಕ್ಷೆಯು ನಿನಗಿರುವುದಾದರೆ, ನೀನಿಲ್ಲಿಯೇ ಇದ್ದುಕೊಂಡು ಉತ್ತಮೋತ್ತಮವಾದ ಮಾತೃಸೇವೆಯೆಂಬ ಧರ್ಮವನ್ನಾಚರಿಸುತ್ತಿರು. ಶ್ರೀರಾಮ! ಕೇಳು; ಕಶ್ಯಪಪುತ್ರನು, ಜನನಿಯ ಸೇವೆಯನ್ನು ಮಾಡುತ್ತ ಗೃಹದಲ್ಲಿಯೇ ಇದ್ದುಕೊಂಡು, ಮಹಾತಪೋವಂತನಾಗಿ ಸ್ವರ್ಗವನ್ನು ಪಡೆದನು. ಇದಲ್ಲದೆ ಮಹಾರಾಜನು ಹೇಗೆ ನಿನಗೆ ಗುರುವಾಗಿರುವನೋ ಹಾಗೆಯೇ, ನಾನೂ ನಿನಗೆ ಪೂಜನೀಯಳಾಗಿರುವೆನು. ನಾನು, ನೀನು

ಮಿವಾಧರ್ಮಾತ್ಸಮುದ್ರಸ್ಸರಿತಾಂಪತಿಃ || ೨೭ || ವಿಲಪಂತೀಂ ತದಾ
ದೀನಾಂ ಕೌಸಲ್ಯಾಂ ಜನನೀಂ ತತಃ || ಉವಾಚ ರಾಮೋ ಧರ್ಮಾತ್ಮಾ ವಚನಂ
ಧರ್ಮಸಂಹಿತಂ || ೨೮ || ನಾಸ್ತಿ ಶಕ್ತಿಃ ಪಿತುರ್ವಾಕ್ಯಂ ಸಮತಿ ಕ್ರಮಿತುಂ
ಮಮ || ಪ್ರಸಾದಯೇತ್ವಾಂ ಶಿರಸಾ ಗಂತು ಮಿಚ್ಛಾಮ್ಯಹಂ ವನಂ || ೨೯ ||
ಋಷಿಣಾಚ ಪಿತುರ್ವಾಕ್ಯಂ ಕುರ್ವತಾ ವ್ರತಚಾರಿಣಾ || ಗೌರ್ಹತಾ ಜಾನತಾ
ಧರ್ಮಂ ಕಂಡುನಾಪಿ ವಿಪಶ್ಚಿತಾ || ೩೦ || ಅಸ್ಮಾಕಂಚ ಕುಲೇ ಪೂರ್ವಂ
ಸಗರಸ್ಯಾಜ್ಞಯಾ ಪಿತುಃ || ಖನದ್ಭಿ ಸ್ಸಾಗರೈ ರ್ಭೂಮಿ ಮವಾಪ್ತ ಸ್ಸುಮಹಾನ್
ವಧಃ || ೩೧ || ಜಾಮದಗ್ನ್ಯೇನ ರಾಮೇಣ ರೇಣುಕಾ ಜನನೀ ಸ್ವಯಂ ||

ನರಕವನ್ನು, ಪ್ರಾಪ್ಸ್ಯಸಿ - ಹೊಂದುವೆ. || ೨೭ || ತತಃ - ಬಳಿಕ, ಧರ್ಮಾತ್ಮಾ - ಧರ್ಮಿಷ್ಠನಾದ, ರಾಮಃ - ಶ್ರೀರಾಮನು, ತಥಾ - ಆರೀತಿ, ವಿಲಪಂತೀಂ - ಅಳುತ್ತಿರುವ, ದೀನಾಂ - ಪರಿತಪ್ತಳಾದ, ಜನನೀಂ - ತಾಯಿಯಾದ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಧರ್ಮಸಂಹಿತಂ - ಧರ್ಮ ಸಮ್ಮತವಾದ, ವಚನಂ - ಮಾತನ್ನು, ಉವಾಚ - ಹೇಳಿದನು. || ೨೮ || ಪಿತುಃ - ತಂದೆಯ, ವಾಕ್ಯಂ - ಮಾತನ್ನು, ಸಮತಿಕ್ರಮಿತುಂ - ಅತಿಕ್ರಮಿಸಲು, ಮಮ - ನನಗೆ, ಶಕ್ತಿಃ - ಸಾಮರ್ಥ್ಯವು, ನಾಸ್ತಿ - ಇಲ್ಲ, ತ್ವಾಂ - ನಿನ್ನನ್ನು, ಶಿರಸಾ - ಮಂಡೆಯಿಂದ, ಪ್ರಸಾದಯೇ - ಕ್ಷಮಿಸೆಂದು ಪ್ರಾರ್ಥಿಸುತ್ತೇನೆ, ಅಹಂ - ನಾನು, ವನಂ - ಅರಣ್ಯವನ್ನು ಕುರಿತು, ಗಂತುಂ - ಹೋಗುವದಕ್ಕೆ - ಇಚ್ಛಾಮಿ - ಬಯಸುತ್ತೇನೆ. || ೨೯ || ವ್ರತಚಾರಿಣಾ - ನಿಯಮನಿಷ್ಠನಾದ, ಪಿತುಃ - ತಂದೆಯ, ವಾಕ್ಯಂ - ಮಾತನ್ನು, ಕುರ್ವತಾ - ಮಾಡುತ್ತಿರುವ, ವಿಪಶ್ಚಿತಾ - ವಿದ್ವಾಂಸನಾದ, ಕಂಡುನಾಋಷಿಣಾ - ಕಂಡುವೆಂಬ ಋಷಿಯಿಂದ, ಧರ್ಮಂ - ಧರ್ಮವನ್ನು, ಜಾನತಾಪಿ - ತಿಳಿದವನಾದರೂ, ಗೌಃ - ಗೋವು, ಹತಾ - ಹೊಡಿಯಲ್ಪಟ್ಟಿತು. || ೩೦ || ಪೂರ್ವಂ - ಹಿಂದೆ, ಅಸ್ಮಾಕಂ - ನಮ್ಮ, ಕುಲೇಚ - ಕುಲದಲ್ಲಿಯೂ, ಪಿತುಃ - ತಂದೆಯ, ಆಜ್ಞಯಾ - ಆಜ್ಞೆಯಿಂದ, ಭೂಮಿಂ - ನೆಲವನ್ನು, ಖನದ್ಭಿಃ - ಅಗಿಯುತ್ತಿರುವ, ಸಾಗರೈಃ - ಸಗರಪುತ್ರರಿಂದ, ಸುಮಹಾನ್ - ದೊಡ್ಡದಾದ, ವಧಃ - ಸಂಹಾರವು, ಅವಾಪ್ತಃ - ಹೊಂದಲ್ಪಟ್ಟಿತು. || ೩೧ || ಪಿತುಃ ತಂದೆಯ,

ಅರಣ್ಯಕ್ಕೆ ಹೋಗುವುದನ್ನು ಸಮ್ಮತಿಸುವುದಿಲ್ಲ. ಆದುದರಿಂದ ನೀನು ವನಕ್ಕೆ ತೆರಳದಿರು. ನಿನ್ನನ್ನಗಲಿ ನಾನು ಬದುಕುವುದರಿಂದ ಏನೊಂದೂ ಪ್ರಯೋಜನವಿಲ್ಲ. ನಿನ್ನೊಡನಿದ್ದು ತೃಣಗಳನ್ನಾದರೂ ಭುಜಿಸಿಕೊಂಡಿರುವುದು ನನಗೆ ಶ್ರೇಯಸ್ಕರ. ಶೋಕಸಂತಪ್ತಳಾದ ನನ್ನನ್ನು ಬಿಟ್ಟು ನೀನು ಅರಣ್ಯ ಗಮನವನ್ನು ಮಾಡುವೆಯಾದರೆ ನಾನು ಬೇರೆ ಬದುಕುವುದಿಲ್ಲ. ಪ್ರಾಯೋಪವೇಶವನ್ನು ಮಾಡಿ ಪ್ರಾಣಗಳನ್ನೊದರುವೆನು. ಆಗ ನೀನು, ಸರಿತ್ಪತಿಯಾದ ಸಮುದ್ರನು ಬ್ರಹ್ಮಹತ್ಯಾ ದೋಷವನ್ನು ಹೊಂದಿದಂತೆ, ಮಾತೃಹತ್ಯಾ ದೋಷವನ್ನು ಪಡೆದು ನರಕಕ್ಕೆ ಹೋಗುವೆ." || ೨೦-೨೭ || ಈ ಪ್ರಕಾರವಾಗಿ ವಿಧವಿಧದಿಂದ ಪ್ರಲಾಪಿಸುತ್ತಿರುವ ಕೌಸಲ್ಯಾದೇವಿಯನ್ನು ಕುರಿತು, ಮಹಾ ಧರ್ಮಿಷ್ಠನಾದ ಶ್ರೀರಾಮನು ಧರ್ಮಯುಕ್ತವಾದ ಈ ಮಾತನ್ನು ಹೇಳಿದನು. "ಎಲಾ ಜನನಿಯೆ! ತಂದೆಯ

ಕೃತ್ತಾ ಪರಶುನಾರಣ್ಯೇ ಪಿತುರ್ವಚನ ಕಾರಿಣಾ ॥ ೩೨ ॥ ಏತೈರನ್ಯೈಶ್ಚ ಬಹುಭಿ ರ್ದೇವಿ ದೇವಸಮೈಃ ಕೃತಂ ॥ ಪಿತುರ್ವಚನ ಮಕ್ಲೀಬಂ ಕರಿಷ್ಯಾಮಿ ಪಿತುರ್ಹಿತಂ ॥ ೩೩ ॥ ನಖಲ್ವೇತನ್ಮಯೈಕೇನ ಕ್ರಿಯತೇ ಪಿತೃಶಾಸನಂ ॥ ಏತೈರಪಿ ಕೃತಂ ದೇವಿ ಯೇ ಮಯಾ ತವಕೀರ್ತಿತಾಃ ॥ ೩೪ ॥ ಸಾಹಂ ಧರ್ಮಮಪೂರ್ವಂ ತೇ ಪ್ರತಿಕೂಲಂ ಪ್ರವರ್ತಯೇ ॥ ಪೂರ್ವೈರಯ ಮಭಿ

ವಚನಕಾರಿಣಾ - ಮಾತನ್ನು ನಡೆಯಿಸುತ್ತಿರುವ, ಜಾಮದಗ್ನ್ಯೇನ - ಜಮದಗ್ನಿ ಋಷಿಪುತ್ರನಾದ, ರಾಮೇಣ - ಪರಶುರಾಮನಿಂದ, ಜನನೀ - ತಾಯಿಯಾದ, ರೇಣುಕಾ - ರೇಣುಕಾದೇವಿಯು, ಸ್ವಯಂ - ತಾನು, ಪರಶುನಾ - ಗಂಡುಗೊಡಲಿಯಿಂದ, ಅರಣ್ಯೇ - ಅರಣ್ಯದಲ್ಲಿ, ಕೃತ್ತಾ - ಕತ್ತರಿಸಲ್ಪಟ್ಟಳು. ॥ ೩೨ ॥ ಹೇ ದೇವಿ-ಎಲೌ ತಾಯೆ, ದೇವಸಮೈಃ-ದೇವತೆಗಳಿಗೆ ಸಮಾನರಾದ, ಏತೈಃ - ಇವರಿಂದಲೂ, ಅನ್ಯೈಶ್ಚ - ಮತ್ತೆ ಕೆಲವರಾದ, ಬಹುಭಿಃ - ಬಹು ಜನರಿಂದ, ಪಿತುಃ - ತಂದೆಯ, ವಚನಂ - ಮಾತನ್ನು, ಅಕ್ಲೀಬಂ - ಭಯವಿಲ್ಲದಂತೆ, ಕೃತಂ - ಮಾಡಲ್ಪಟ್ಟಿತು, ಪಿತುಃ-ತಂದೆಯ, ಹಿತಂ - ಇಷ್ಟವನ್ನು, ಕರಿಷ್ಯಾಮಿ - ಮಾಡುವೆನು. ॥ ೩೩ ॥ ಏತತ್ - ಈ, ಪಿತೃಶಾಸನಂ - ತಂದೆಯ ಆಜ್ಞೆಯು, ಮಯಾ - ನನ್ನಿಂದ, ಏಕೇನ - ಒಬ್ಬನಿಂದಲೆ, ನಕ್ರಿಯತೇ-ಮಾಡಲ್ಪಡಲಿಲ್ಲ, ತವ - ನಿನಗೆ, ಯೇ - ಯಾರು, ಕೀರ್ತಿತಾಃ - ಹೇಳಲ್ಪಟ್ಟರೋ, ಹೇ ದೇವಿ - ಎಲೌ ತಾಯೆ, ಏತೈರಪಿ - ಇವರಿಂದಲೂ, ಕೃತಂ - ಮಾಡಲ್ಪಟ್ಟಿತು. ॥ ೩೪ ॥ ಅಹಂ - ನಾನು, ತೇ - ನಿನಗೆ, ಪ್ರತಿಕೂಲಂ - ವ್ಯತಿರಿಕ್ತನಾಗಿ, ಅಪೂರ್ವಂ - ನೂತನವಾದ, ಧರ್ಮ-ಧರ್ಮವನ್ನು, ನಪ್ರವರ್ತಯೇ-

---

ಮಾತುಗಳನ್ನು ಮೀರಲು ನನಗೆ ಶಕ್ತಿ ಸಾಲದು. ನಿನ್ನ ಕಾಲಿಗೆ ಬಿದ್ದು ಬೇಡುತ್ತೇನೆ. ವನಗಮನ ಮಾಡಲಿಚ್ಛೆಯುಳ್ಳವನಾಗಿರುವೆನು. ಸಮ್ಮತಿಸುವವಳಾಗು. ಕೇಳೆಲೌ ಮಾತೆಯೆ! ವಿದ್ವಾಂಸನೂ, ಧರ್ಮವೇತ್ತನೂ, ಋಷಿಯೂ, ನಿಯಮಾಚರಣೆಯನ್ನು ಮಾಡುತ್ತಿರುವವನೂ ಆದರೂ ಕಂಡುಮಹರ್ಷಿಯು ಜನಕನಾಣತಿಯಿಂದ ಗೋಹತ್ಯೆಯನ್ನು ಮಾಡಿದನು. ಇದಲ್ಲದೆ ಈ ನಮ್ಮ ವಂಶದಲ್ಲಿಯೇ, ಹಿಂದೆ ಸಗರ ಚಕ್ರವರ್ತಿಯ ಆಜ್ಞೆಯಿಂದ ಆತನ ಅರವತ್ತು ಸಾವಿರ ಮಂದಿ ಕುವರರೂ ಭೂಖನನಮಂಗೈದು ಕಪಿಲ ಮುನಿಯಿಂದ ವಧೆಯನ್ನೈದಿದರು. ॥ ೨೮-೩೧ ॥ ಮಾತ್ರವಲ್ಲದೆ ಪಿತೃವಾಕ್ಯ ಪರಿಪಾಲನೆಯನ್ನು ಮಾಡುತ್ತಿರುವ ಜಮದಗ್ನಿ ಪುತ್ರನಾದ ಪರಶುರಾಮನು ಸಾಕ್ಷಾಜ್ಜನನಿಯಾದ ರೇಣುಕಾದೇವಿಯನ್ನು ಗಂಡುಗೊಡಲಿಯಿಂದ ಹೊಡೆದುಬಿಟ್ಟನು. ದೇವಿ! ದೇವತೆಗಳಿಗೆ ಸಮಾನರಾದ ಇವರಿಂದಲೂ, ಇನ್ನೂ ಕೆಲವರಿಂದಲೂ ತಂದೆಯಾಜ್ಞೆಯು ನಿರ್ಭಯವಾಗಿ ಆಚರಿಸಲ್ಪಟ್ಟಿರುವುದು. ಆದುದರಿಂದ ನಾನು ತಂದೆಗೆ ಯಾವುದು ಹಿತವಾಗಿರುವುದೋ ಅದನ್ನು ಮಾಡುತ್ತೇನೆ, ಕೇಳು. ನನ್ನಿಂದ ಮಾತ್ರವೇ ಈ ಪಿತ್ರಾಜ್ಞೆಯು ಮಾಡಲ್ಪಡಲಿಲ್ಲ. ನಾನುದಹರಿಸಿದವರೆಲ್ಲರೂ ಮಾಡಿರುತ್ತಾರೆ. ನಾನು ನಿನಗೆ ಪ್ರತಿಕೂಲವಾಗಿ, ಹೊಸದಾದ ಧರ್ಮವನ್ನಾಚರಿಸುವುದಿಲ್ಲವು. ಪಿತೃವಾಕ್ಯ ಪರಿಪಾಲನಾ ರೂಪವಾದ ಈ ಧರ್ಮವು ಪೂರ್ವಿಕರಿಂದಲೇ ಆಚರಿಸಲ್ಪಟ್ಟುದು. ಆದಕಾರಣ ನಾನು ಪಿತೃ ವಾಕ್ಯ ಪರಿಪಾಲನಾ ರೂಪವಾದ ಈ ಕಾರ್ಯ

ಪ್ರೇತೋ ಗತೋ ಮಾರ್ಗೋಽನುಗಮ್ಯತೇ || ೩೫ || ತದೇತತ್ತು ಮಯಾ ಕಾರ್ಯಂ ಕ್ರಿಯತೇ ಭುವಿನಾನ್ಯಥಾ || ಪಿತುರ್ಹಿ ವಚನಂ ಕುರ್ವನ್ನಕಶ್ಚಿನ್ನಾಮ ಹೀಯತೇ || ೩೬ || ತಾಮೇವಮುಕ್ತ್ವಾ ಜನನೀಂ ಲಕ್ಷ್ಮಣಂ ಪುನರಬ್ರವೀತ್ || ವಾಕ್ಯಂ ವಾಕ್ಯವಿದಾಂ ಶ್ರೇಷ್ಠಃ ಶ್ರೇಷ್ಠ ಸ್ಸರ್ವ ಧನುಷ್ಮತಾಂ||೩೭|| ತವ ಲಕ್ಷ್ಮಣ ಜಾನಾಮಿ ಮಯಿ ಸ್ನೇಹಮನುತ್ತಮಂ || ವಿಕ್ರಮಂ ಚೈವ ಸತ್ವಂಚ ತೇಜಶ್ಚ ಸು ದುರಾಸದಂ || ೩೮ || ಮಮ ಮಾತು ರ್ಮಹದ್ದುಃಖ ಮತುಲಂ ಶುಭಲಕ್ಷಣ || ಅಭಿಪ್ರಾಯಮವಿಜ್ಞಾಯ ಸತ್ಯಸ್ಯಚ ಶಮ

ಅನುಷ್ಠಾನಮಾಡಿದವನಲ್ಲ. ಅಯಂಮಾರ್ಗಃ - ಈ ಮಾರ್ಗವು, ಪೂರ್ವೈಃ - ಹಿಂದಿನವರಿಂದ, ಅಭಿಪ್ರೇತಃ - ಇಷ್ಟವಾಗಿ, ಗತಃ - ಹೊಂದಲ್ಪಟ್ಟಿತು, ಮಯಾ - ನನ್ನಿಂದ, ಅನುಗಮ್ಯತೇ - ಅನುಸರಿಸಲ್ಪಡುತ್ತದೆ. || ೩೫ || ತತ್ - ಆಕಾರಣ, ಕಾರ್ಯಂ-ಮಾಡತಕ್ಕ, ಏತತ್ - ಈ ಪಿತೃವಾಕ್ಯಕರಣವು, ಮಯಾ - ನನ್ನಿಂದ, ಕ್ರಿಯತೇ - ಮಾಡಲ್ಪಡುತ್ತದೆ, ಅನ್ಯಥಾ - ಮತ್ತೊಂದು ಬಗೆಯಾಗಿ, ನ - ಇಲ್ಲ, ಭುವಿ - ನೆಲದಲ್ಲಿ, ಪಿತುಃ - ತಂದೆಯ, ವಚನಂ - ಮಾತನ್ನು, ಕುರ್ವನ್ - ನಡಿಸುತ್ತಿರುವ, ಕಶ್ಚಿತ್ - ಯಾವನಾದರೂ, ನಹೀಯತೇನಾಮ - ಕೆಟ್ಟುಹೋಗುವದಿಲ್ಲವಷ್ಟೆ. || ೩೬ || ವಾಕ್ಯವಿದಾಂ - ವಾಕ್ಯಾರ್ಥಜ್ಞಾನವುಳ್ಳವರಲ್ಲಿ, ಶ್ರೇಷ್ಠಃ - ಅಗ್ರೇಸರನಾದ, ಸರ್ವಧನುಷ್ಮತಾಂ, ಸರ್ವ - ಸಮಸ್ತರಾದ, ಧನುಷ್ಮತಾಂ - ಧನುರ್ಧಾರಿಗಳಲ್ಲಿ, ಶ್ರೇಷ್ಠಃ - ಮುಖ್ಯನಾದ ಶ್ರೀರಾಮನು, ತಾಂಜನನೀಂ - ಆ ತಾಯಿಯನ್ನು ಕುರಿತು, ಏವಂ - ಹೀಗೆ, ಉಕ್ತ್ವಾ - ಹೇಳಿ, ಪುನಃ - ಮತ್ತೂ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. || ೩೭ || ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೆ, ತವ - ನಿನಗೆ, ಮಯಿ-ನನ್ನ ವಿಷಯದಲ್ಲಿ, ಅನುತ್ತಮಂ - ಸರ್ವೋತ್ತಮವಾದ, ಸ್ನೇಹಂ - ಪ್ರೀತಿಯನ್ನು, ತೇ - ನಿನ್ನ, ವಿಕ್ರಮಂಚ - ಪರಾಕ್ರಮವನ್ನೂ, ಸತ್ವಂಚ - ಸಾಮರ್ಥ್ಯವನ್ನೂ, ಸುದುರಾಸದಂ - ಹೊಂದಲಸಾಧ್ಯವಾದ, ತೇಜಶ್ಚ - (ಗೋ) ಅಂತಸ್ಸಾರವನ್ನೂ, ಜಾನಾಮಿ - ತಿಳಿದಿದ್ದೇನೆ. || ೩೮ || ಹೇ ಶುಭಲಕ್ಷಣ - ಎಲೈ ಮಂಗಳಕರವಾದ ಲಕ್ಷಣಗಳುಳ್ಳವನೆ, ಸತ್ಯಸ್ಯ - ಸತ್ಯದ, ಶಮಸ್ಯಚ - ಶಾಂತಿಗುಣದ, ಅಭಿಪ್ರಾಯಂ - ರಹಸ್ಯವನ್ನು, ಅವಿಜ್ಞಾಯ - ತಿಳಿಯದೆ, ಮಮ - ನನ್ನ, ಮಾತುಃ - ತಾಯಿ

ವನ್ನು ಮಾಡುವೆನೇ ಹೊರತು, ಮತ್ತೊಂದು ರೀತಿಯಾಗಿ ಮಾಡಲಾರೆನು. ಲೋಕದಲ್ಲಿ ಪಿತೃ ವಾಕ್ಯ ಪರಿಪಾಲನೆಯನ್ನು ಮಾಡುವ ಯಾವನೊಬ್ಬನೂ ಕೆಡುವುದಿಲ್ಲ." ಶ್ರೀರಾಮನು ತಾಯಿಯನ್ನು ಕುರಿತು ಈ ರೀತಿಯಾಗಿ ಹೇಳಿ ವಾಕ್ಯಜ್ಞರಲ್ಲಿ ಉತ್ತಮನಾದ ಲಕ್ಷ್ಮಣನನ್ನು ಕುರಿತು ಹೀಗೆ ಹೇಳಿದನು || ೩೨-೩೩ || ಎಲೈ ಲಕ್ಷ್ಮಣ ಸ್ವಾಮಿಯೆ! ನನ್ನ ವಿಷಯದಲ್ಲಿ ನಿನಗುಂಟಾಗಿರುವ ಸ್ನೇಹವನ್ನೂ, ಪರಾಕ್ರಮವನ್ನೂ, ಸಾಮರ್ಥ್ಯವನ್ನೂ, ಹೊಂದಲಸದಳವಾದ ಅಂತಸ್ಸಾರವನ್ನೂ ತಿಳಿದಿರುವೆನು. ಎಲೈ ಶುಭ ಲಕ್ಷಣಸಂಪನ್ನನಾದ ಲಕ್ಷ್ಮಣನೆ! ಸತ್ಯ, ಧರ್ಮ ಇವುಗಳ ರಹಸ್ಯವನ್ನರಿಯದೆ ನಮ್ಮ ಜನನಿಗೆ ಸಂಭವಿಸಿರುವ ಮಹತ್ತರವಾದ ದುಃಖವನ್ನೂ, ನಿನ್ನ ಸಂತಾಪವನ್ನೂ ಅರಿತಿರುವೆನು. ಲೋಕದಲ್ಲಿ ಧರ್ಮ

ಸ಼್ಚ ॥ ೪೯ ॥ (ಧರ್ಮೋಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಂ) ॥ ಧರ್ಮಸಂಶ್ರಿತಮೇತಚ್ಚ ಪಿತುರ್ವಚನ ಮುತ್ತಮಂ ॥ ೪೦ ॥ ಸಂಶ್ರುತ್ಯ ಚ ಪಿತುರ್ವಾಕ್ಯಂ ಮಾತುರ್ವಾ ಬ್ರಾಹ್ಮಣಸ್ಯವಾ ॥ ನಕರ್ತವ್ಯಂ ವೃಥಾ ವೀರ ಧರ್ಮಮಾಶ್ರಿತ್ಯ ತಿಷ್ಠತಾ ॥ ೪೧ ॥ ಸೋಽಹಂ ನಶಕ್ಷ್ಯಾಮಿ ಪಿತುರ್ನಿಯೋಗ ಮತಿವರ್ತಿತುಂ ॥ ಪಿತುರ್ಹಿ ವಚನಾದ್ವೀರ ಕೈಕೇಯ್ಯಾಹಂ ಪ್ರಚೋದಿತಃ ॥ ೪೨ ॥ ತದೇನಾಂ ವಿಸೃಜಾನಾರ್ಯಾಂ ಕ್ಷತ್ರಧರ್ಮಾಶ್ರಿತಾಂ ಮತಿಂ ॥ ಧರ್ಮಮಾಶ್ರಯ ಮಾತೈಕ್ಷ್ಣ್ಯಂ ಮದ್ಬುದ್ಧಿ ರನುಗಮ್ಯ

ಯಾದ ಕೌಸಲ್ಯಾದೇವಿಯ, ಮಹದ್ದುಃಖಂ - ಬಹಳವಾದ ವ್ಯಸನವು, ಅತುಲಂ - ಸಮಾನವಿಲ್ಲದ್ದು. ॥ ೪೯ ॥ ಲೋಕೇ - ಲೋಕದಲ್ಲಿ, ಧರ್ಮಃ - ಧರ್ಮವು, ಪರಮಃ - (ಗೋ × ಮ) ಸಕಲ ಪುರುಷಾರ್ಥಗಳಲ್ಲಿ ಶ್ರೇಷ್ಠವಾದುದಷ್ಟೆ, ಧರ್ಮೇ - ಧರ್ಮದಲ್ಲಿ, ಸತ್ಯಂ - ಸತ್ಯವು, ಪ್ರತಿಷ್ಠಿತಂ - ಸ್ಥಾಪಿತವಾಗಿರುವುದು. ಏತಚ್ಚ - ಈ, ಉತ್ತಮಂ - ಸರ್ವೋತ್ತಮವಾದ, ಪಿತುಃ - ತಂದೆಯ, ವಚನಂ - ಮಾತನ್ನು, ಧರ್ಮಸಂಶ್ರಿತಂ - ಧರ್ಮವನ್ನೇ ಆಶ್ರಯಿಸಿರುವ ಕಾರಣದಿಂದ, ಕರಿಷ್ಯೇ-ಮಾಡುವೆನು. ॥ ೪೦ ॥ ಹೇ ವೀರ - ಎಲೈ ಶೂರನೆ, ಧರ್ಮಂ - ಧರ್ಮವನ್ನು, ಆಶ್ರಿತ್ಯ - ಆಶ್ರಯಿಸಿ, ತಿಷ್ಠತಾ - ಇರುವ ಪುರುಷನಿಂದ, ಪಿತುಃ - ತಂದೆಗೇ ಆಗಲಿ, ಮಾತುರ್ವಾ - ತಾಯಿಗೇ ಆಗಲಿ, ಬ್ರಾಹ್ಮಣಸ್ಯವಾ - ಬ್ರಾಹ್ಮಣನಿಗೇ ಆಗಲಿ, ವಾಕ್ಯಂ ಮಾತನ್ನು, ಸಂಶ್ರುತ್ಯ - ಪ್ರತಿಜ್ಞೆಮಾಡಿ, ವೃಥಾ - ವ್ಯರ್ಥವಾಗಿ, ನಕರ್ತವ್ಯಂ - ಮಾಡಕೂಡದಷ್ಟೆ ॥ ೪೧ ॥ ಸೋಽಹಂ - ಅಧರ್ಮವನ್ನರಿತ ನಾನು, ಪಿತುಃ - ತಂದೆಯ, ನಿಯೋಗಂ - ಆಜ್ಞೆಯನ್ನು, ಅತಿವರ್ತಿತುಂ-ಅತಿಕ್ರಮಿಸಲು, ನಶಕ್ಷ್ಯಾಮಿ - ಸಮರ್ಥನಾಗಲಾರೆನು, ಹಿ - ಯಾವಕಾರಣ, ಹೇ ವೀರ - ಎಲೈ ಶೂರನೆ, ಪಿತುಃ - ತಂದೆಯ, ವಚನಾತ್ - ಮಾತಿನಂತೆ, ಅಹಂ - ನಾನು, ಕೈಕೇಯ್ಯಾ - ಕೈಕೆಯಿದೇವಿಯಿಂದ, ಪ್ರಚೋದಿತಃ - ಪ್ರೇರೇಪಿತನಾಗಿರುವೆನೋ. ॥ ೪೨ ॥ ತತ್ - ಆಕಾರಣ, ಅನಾರ್ಯಾ-ಅಪೂಜ್ಯವಾದ, ಕ್ಷತ್ರಧರ್ಮಾಶ್ರಿತಾಂ - ಕ್ಷಾತ್ರಧರ್ಮವನ್ನು ಆಶ್ರಯಿಸಿರುವ, ಏನಾಂಮತಿಂ - ಈ ಬುದ್ಧಿಯನ್ನು, ವಿಸೃಜ - ಬಿಟ್ಟುಬಿಡು, ಧರ್ಮಂ - ಧರ್ಮವನ್ನು, ಆಶ್ರಯ - ಆಶ್ರಯಿಸು, ತೈಕ್ಷ್ಣ್ಯಂ -

---

ವೆಂಬುದು ಮಹಾ ಶ್ರೇಷ್ಠವಾದುದು. ಧರ್ಮದಲ್ಲಿಯೇ ಸತ್ಯವು ಪ್ರತಿಷ್ಠಿತವಾಗಿರುವುದು. ತಂದೆಯ ವಾಕ್ಯವು ಧರ್ಮಯುಕ್ತವಾದುದು. ಆದುದರಿಂದ ನಾನಿದನ್ನೇ ಮಾಡುತ್ತೇನೆ. ॥ ೩೪-೪೦ ॥ ಎಲೈ ಶೂರನಾದ ಲಕ್ಷ್ಮಣನೆ! ಕೇಳು; ಧರ್ಮಿಷ್ಠನಾದವನು, ಮಾತಾಪಿತೃಗಳ ವಾಕ್ಯವನ್ನಾಗಲಿ, ಬ್ರಾಹ್ಮಣನ ವಾಕ್ಯವನ್ನಾಗಲಿ, ಮಾಡುತ್ತೇನೆಂದು ಶಪಥಮಾಡಿ ನಿಷ್ಫಲವಾದುದನ್ನಾಗಿ ಮಾಡಬಾರದು. ಆದುದರಿಂದ ನಾನು ತಂದೆಯ ಅಪ್ಪಣೆಯನ್ನು ಮೀರಲಾರೆನು. ಏಕೆಂದರೆ, ನಾನು ಜನಕನಾಣತಿಯಂತೆ ಜನನಿಯಾದ ಕೈಕೇಯಿಯಿಂದ ಪ್ರೇರಿತನಾಗಿರುವೆನು. ಆದುದರಿಂದ ನೀನು ಕ್ಷತ್ರ ಧರ್ಮಯುಕ್ತವಾದುದೂ, ಅನರ್ಹವಾದುದೂ ಆದ ಈ ಬುದ್ಧಿಯನ್ನುಳಿದು ಧರ್ಮವನ್ನಾಶ್ರಯಿಸಿ ನನ್ನ ಬುದ್ಧಿಯನ್ನು ಅನುವರ್ತಿಸು. ಕ್ರೌರ್ಯವನ್ನು ಹೊಂದಬೇಡ" ಶ್ರೀರಾಮನೀರೀತಿ ಲಕ್ಷ್ಮಣನಿಗೆ ಸಮಾ

ತಾಂ ‖ ೪೩ ‖ ತಮೇವಮುಕ್ತ್ವಾ ಸೌಹಾರ್ದಾ ದ್ಭ್ರಾತರಂ ಲಕ್ಷ್ಮಣಾ ಗ್ರಜಃ ‖ ಉವಾಚ ಭೂಯಃ ಕೌಸಲ್ಯಾಂ ಪ್ರಾಂಜಲಿಃ ಶಿರಸಾನತಃ ‖ ೪೪ ‖ ಅನುಮನ್ಯಸ್ವ ಮಾಂ ದೇವಿ ಗಮಿಷ್ಯಂತ ಮಿತೋವನಂ ‖ ಶಾಪಿತಾಸಿ ಮಮ ಪ್ರಾಣೈಃ ಕುರು ಸ್ವಸ್ತ್ಯಯನಾನಿ ಮೇ ‖ ೪೫ ‖ ತೀರ್ಣಪ್ರತಿಜ್ಞಶ್ಚ ವನಾ ತ್ಪುನರೇಷ್ಯಾ ಮ್ಯಹಂ ಪುರೀಂ ‖ ಯಯಾತಿರಿವ ರಾಜರ್ಷಿಃ ಪುರಾ ಹಿತ್ವಾ ಪುನರ್ದಿವಂ ‖ ೪೬ ‖ ಶೋಕ ಸ್ಸಂಧಾರ್ಯತಾಂ ಮಾತ ರ್ಹೃದಯೇ ಸಾಧು ಮಾಶುಚಃ ‖ ವನವಾಸಾದಿಹೈಷ್ಯಾಮಿ ಪುನಃ ಕೃತ್ವಾ ಪಿತುರ್ವಚಃ ‖ ೪೭ ‖ ತ್ವಯಾ ಮಯಾಚ ವೈದೇಹ್ಯಾ ಲಕ್ಷ್ಮಣೇನ ಸುಮಿತ್ರಯಾ ‖

ಕ್ರೂರಭಾವವನ್ನು, ಮಾಶ್ರಯ - ಆಶ್ರಯಿಸಬೇಡ, ಮದ್ಬುದ್ಧಿಃ ನನ್ನ ಬುದ್ಧಿಯು, ಅನುಗಮ್ಯತಾಂ- ಅನುಸರಿಸಲ್ಪಡಲಿ. ‖ ೪೩ ‖ ಲಕ್ಷ್ಮಣಾಗ್ರಜಃ - ಶ್ರೀರಾಮನು, ಸೌಹಾರ್ದಾತ್ - ಸ್ನೇಹಭಾವ ದಿಂದ, ಭ್ರಾತರಂ - ತಮ್ಮನಾದ, ತಂ - ಆ ಲಕ್ಷ್ಮಣಸ್ವಾಮಿಯನ್ನು ಕುರಿತು, ಏವಂ - ಈಪರಿ, ಉಕ್ತ್ವಾ - ಹೇಳಿ, ಭೂಯಃ - ಮತ್ತು, ಪ್ರಾಂಜಲಿಃ - ಅಂಜಲಿ ಬದ್ಧನಾಗಿ, ಶಿರಸಾ - ಮಂಡೆ ಯಿಂದ, ನತಃ - ನಮ್ರನಾಗಿ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಉವಾಚ - ಹೇಳಿ ದನು. ‖ ೪೪ ‖ ಹೇ ದೇವಿ - ಎಲೌ ತಾಯೆ, ಇತಃ - ಇಲ್ಲಿಂದ, ವನಂ - ವನವನ್ನು ಕುರಿತು, ಗಮಿಷ್ಯಂತಂ - ಹೋಗುತ್ತಿರುವ, ಮಾಂ - ನನ್ನನ್ನು, ಅನುಮನ್ಯಸ್ವ - ಸಮ್ಮತಿಸು, ಮಮ-ನನ್ನ, ಪ್ರಾಣೈಃ - ಪ್ರಾಣಗಳೊಡನೆ, ಶಾಪಿತಾಸಿ - ಶಪಿಸಲ್ಪಟ್ಟವಳಾಗಿರುವೆ, ಮೇ - ನನಗೆ, ಸ್ವಸ್ತ್ಯಯ ನಾನಿ - ಆಶೀರ್ವಾದಗಳನ್ನು, ಕುರು - ಮಾಡು. ‖ ೪೫ ‖ ಅಹಂ - ನಾನು, ತೀರ್ಣಪ್ರತಿಜ್ಞಶ್ಚ, ತೀರ್ಣ - ದಾಟಲ್ಪಟ್ಟ, ಪ್ರತಿಜ್ಞಶ್ಚ - ಪ್ರತಿಜ್ಞೆಯುಳ್ಳವನಾಗಿ, ಪುರಾ - ಪೂರ್ವದಲ್ಲಿ, ರಾಜರ್ಷಿಃ - ರಾಜರ್ಷಿಯಾದ, ಯಯಾತಿಃ - ಯಯಾತಿರಾಯನು, ದಿವಂ - ಸ್ವರ್ಲೋಕವನ್ನು, ಹಿತ್ವಾ - ಬಿಟ್ಟು ಪುನಃ - ಮತ್ತು, ದಿವಮಿವ - ಸ್ವರ್ಗದಂತೆ, ವನಾತ್ - ವನದಿಂದ ಪುನಃ - ಮತ್ತು, ಪುರೀಂ - ಪಟ್ಟಣವನ್ನು ಕುರಿತು, ಏಷ್ಯಾಮಿ - ಬರುವೆನು. ‖ ೪೬ ‖ ಹೇ ಮಾತಃ - ಎಲೌ ತಾಯೇ, ಶೋಕಃ - ದುಃಖವು, ಹೃದಯೇ - ಮನದಲ್ಲಿ, ಸಂಧಾರ್ಯತಾಂ-ಚನ್ನಾಗಿ ಅಡಗಿಸಲ್ಪಡಲಿ, ಸಾಧು- ಬಹಳವಾಗಿ, ಮಾಶುಚಃ - ಪ್ರಲಪಿಸದಿರು, ಪಿತುಃ - ತಂದೆಯ, ವಚಃ - ಮಾತನ್ನು, ಕೃತ್ವಾ ನೆರವೇರಿಸಿ, ವನವಾಸಾತ್ - ಅರಣ್ಯವಾಸದಿಂದ, ಇಹ - ಇಲ್ಲಿಗೆ, ಪುನಃ - ಮತ್ತು, ಏಷ್ಯಾಮಿ - ಬರುವೆನು. ‖ ೪೭ ‖ ತ್ವಯಾ-ನಿನ್ನಿಂದಲೂ, ಮಯಾ-ನನ್ನಿಂದಲೂ, ವೈದೇಹ್ಯಾಚ-ಸೀತಾದೇವಿ

ಧಾನವನ್ನು ಹೇಳಿ, ಜನನಿಯಾದ ಕೌಸಲ್ಯಾದೇವಿಯನ್ನು ಕುರಿತು ಮತ್ತೂ ಹೇಳತೊಡಗಿ ದನು. ‖ ೪೧-೪೪ ‖ “ ಎಲೈ ದೇವಿಯೆ ! ನಾನು ವನವನ್ನು ಕುರಿತು ತೆರಳುತ್ತೇನೆ, ಸಮ್ಮ ತಿಸುವವಳಾಗು. ನನ್ನಾಣೆ ನನಗಾಶೀರ್ವಾದವನ್ನು ಮಾಡು, ಅಪ್ಪಣೆಯನ್ನು ಕೊಡು, ಹಿಂದೆ ಯಯಾತಿರಾಯನು ಸ್ವರ್ಗದಿಂದ ಚ್ಯುತನಾಗಿ ಪುನಃ ಸ್ವರ್ಗವನ್ನು ಸೇರಿದಂತೆ ನಾನು ವನವಾಸವನ್ನು ಮಾಡಿಕೊಂಡು ಮರಳಿ ಹಿಂತಿರುಗುತ್ತೇನೆ. ನೀನು ಚಿಂತಿಸಬೇಡ, ವ್ಯಸನ ವನ್ನು ತೊರೆಯುವವಳಾಗು, ಜನಕನಪ್ಪಣೆಯನ್ನು ನೆರವೇರಿಸಿ ಜಾಗ್ರತೆಯಾಗಿ ಹಿಂತಿರುಗಿ

ಪಿತುರ್ನಿಯೋಗೇ ಸ್ಥಾತವ್ಯಮೇಷಧರ್ಮಸ್ಸನಾತನಃ ॥ ೪೮ ॥ ಅಂಬ ಸಂಹೃತ್ಯ ಸಂಭಾರಾನ್ ದುಃಖಂ ಹೃದಿ ನಿಗೃಹ್ಯಚ ॥ ವನವಾಸಕೃತಾ ಬುದ್ಧಿರ್ಮಮ ಧರ್ಮ್ಯಾನುವರ್ತ್ಯತಾಂ ॥ ೪೯ ॥ ಏತದ್ವಚಸ್ತಸ್ಯ ನಿಶಮ್ಯ ಮಾತಾ ಸುಧರ್ಮ್ಯಮವ್ಯಗ್ರಮವಿಕ್ಲಬಂಚ ॥ ಮೃತೇವ ಸಂಜ್ಞಾಂ ಪ್ರತಿಲಭ್ಯ ದೇವೀ ಸಮೀಕ್ಷ್ಯ ರಾಮಂ ಪುನರಿತ್ಯುವಾಚ ॥ ೫೦ ॥ ಯಥೈವ ತೇ ಪುತ್ರ ಪಿತಾ ತಥಾಹಂ ಗುರುಸ್ಸ್ವಧರ್ಮೇಣ ಸುಹೃತ್ತಯಾಚ ॥ ನತ್ವಾನುಜಾನಾಮಿ ನಮಾಂ

ಯಿಂದಲೂ, ಲಕ್ಷ್ಮಣೇನ-ಲಕ್ಷ್ಮಣನಿಂದಲೂ, ಸುಮಿತ್ರಯಾಚ-ಸುಮಿತ್ರಾದೇವಿಯಿಂದಲೂ, ಪಿತುಃ-ತಂದೆಯ, ನಿಯೋಗೇ - ಆಜ್ಞೆಯಲ್ಲಿ, ಸ್ಥಾತವ್ಯಂ - ಇರತಕ್ಕದು, ಏಷಃ - ಇದು, ಸನಾತನಃ - ಅನಾದಿಯಾಗಿ ಬಂದ, ಧರ್ಮಃ - ಧರ್ಮವು. ॥ ೪೮ ॥ ಹೇ ಅಂಬ-ಎಲೌ ತಾಯೆ, ಸಂಭಾರಾನ್-ಪೂಜಾದ್ರವ್ಯಗಳನ್ನು, ಸಂಹೃತ್ಯ - ಬಿಟ್ಟು, (ಗೊ + ಮ) ಸಂಭಾರಾನ್ - ಪಟ್ಟಾಭಿಷೇಕ ಸಾಮಗ್ರಿಗಳನ್ನು, ಸಂಹೃತ್ಯ - ಬಿಟ್ಟು, ದುಃಖಂ - ದುಃಖವನ್ನು, ಹೃದಿ - ಮನಸ್ಸಿನಲ್ಲಿ, ನಿಗೃಹ್ಯ - ನಿಗ್ರಹಿಸಿ, ವನವಾಸಕೃತಾ - ವನವಾಸಕ್ಕೋಸುಗ ಮಾಡಲ್ಪಟ್ಟ, ಧರ್ಮ್ಯಾಂ - ಧರ್ಮ ಪ್ರಧಾನವಾದ, ಮಮ - ನನ್ನ, ಬುದ್ಧಿಃ - ಬುದ್ಧಿಯು, ಅನುವರ್ತ್ಯತಾಂ - ಅನುಸರಿಸಲ್ಪಡಲಿ. ॥ ೪೯ ॥ ಮಾತಾ - ತಾಯಿಯಾದ, ದೇವೀ - ಕೌಸಲ್ಯಾದೇವಿಯು, ತಸ್ಯ - ಆ ಶ್ರೀರಾಮನ, ಸುಧರ್ಮ್ಯಂ - ಧರ್ಮ ಪ್ರಧಾನವಾದ, ಅವ್ಯಗ್ರಂ - ಧೈರ್ಯಯುಕ್ತವಾದ, ಅವಿಕ್ಲಬಂಚ - ಭಯವಿಲ್ಲದಿರುವ, ಏತದ್ವಚಃ-ಈ ಮಾತನ್ನು, ನಿಶಮ್ಯ - ಕೇಳಿ, ಮೃತೇವ - ಮೂರ್ಛಾಕ್ರಾಂತಳಾದಂತಿದ್ದು, ಪುನಃ - ಮತ್ತೆ, ಸಂಜ್ಞಾಂ - ಪ್ರಜ್ಞೆಯನ್ನು, ಪ್ರತಿಲಭ್ಯ - ಹೊಂದಿ, ರಾಮಂ - ಶ್ರೀರಾಮನನ್ನು, ಸಮೀಕ್ಷ್ಯ - ಕಂಡು, ಇತಿ - ಈರೀತಿ, ಉವಾಚ - ಹೇಳಿದಳು. ॥ ೫೦ ॥ ಹೇ ಪುತ್ರ - ಎಲೈ ಮಗನೆ, ತೇ - ನಿನಗೆ, ಪಿತಾ - ತಂದೆಯು, ಯಥೈವ - ಹೇಗೆಯೋ, ಅಹಂ - ನಾನು, ತಥೈವ - ಹಾಗೆಯೆ, ಸ್ವಧರ್ಮೇಣ - ಸ್ವಕೀಯವಾದ ಧರ್ಮದಿಂದ, ಸುಹೃತ್ತಯಾಚ - ಸ್ನೇಹಭಾವದಿಂದಲೂ, ಗುರುಃ

ಬರುತ್ತೇನೆ, ಈ ನನ್ನ ನುಡಿಗೆ ವ್ಯತಿರಿಕ್ತವಾಗಿ ನುಡಿಯಬೇಡ. ನೀನೂ, ನಾನೂ, ಸೀತಾದೇವಿಯೂ, ಲಕ್ಷ್ಮಣನೂ, ಸುಮಿತ್ರಾದೇವಿಯೂ, ಮಹಾರಾಜನ ಆಜ್ಞೆಯಂತೆ ನಡೆದುಕೊಳ್ಳಬೇಕು, ಇದೇ ನಮಗೆ ಮುಖ್ಯತಮವಾದ ಧರ್ಮವು. ॥ ೪೫-೪೮ ॥ ಜನನೀ! ದುಃಖವನ್ನಡಗಿಸಿಕೊಂಡು ಯೌವರಾಜ್ಯಾಭಿಷೇಕ ಸಾಮಗ್ರಿಗಳನ್ನು ಬಿಟ್ಟು, ವನವಾಸಕ್ಕೋಸುಗ ನಿಶ್ಚಿತವಾದುದೂ, ಧಾರ್ಮಿಕವಾದುದೂ ಆದ ನನ್ನ ಬುದ್ಧಿ ತತ್ವವನ್ನು ಅನುಸರಿಸುವವಳಾಗು." ಈ ಪ್ರಕಾರವಾಗಿ ಹೇಳಿದ ಶ್ರೀರಾಮನ ನುಡಿಗಳನ್ನು ಕೇಳಿ ಕೌಸಲ್ಯಾದೇವಿಯು ಮೃತಳಾದವಳಂತೆ ಮೂರ್ಛಿತಳಾಗಿ ಬಿದ್ದು, ಪುನಃ ಪ್ರಜ್ಞೆಯನ್ನು ಪಡೆದು, ಶ್ರೀರಾಮನನ್ನು ಕುರಿತು ಹೀಗೆಂದಳು; "ಮಗನೆ! ನಿನಗೆ ತಂದೆಯು ಹೇಗೆ ಗುರುವೋ ಹಾಗೆಯೇ ನಾನೂ ಸಹ ಗುರುವಾಗಿರುವೆನು. ಈ ರೀತಿ ಪ್ರಲಪಿಸುತ್ತಿರುವ ನನ್ನನ್ನು ತೊರೆದು ನೀನು ಅರಣ್ಯವಾಸಕ್ಕೆ ತೆರಳಲು ನಾನು ಅಪ್ಪಣೆಯನ್ನು ಕೊಡಲಾರೆನು. ಕೇಳು; ನಿನ್ನ ವಿನಹ ನನಗೆ ಬದುಕುವಿಕೆಯಿಂದಲಾಗಲಿ, ದಾಸದಾಸೀ ಜನರಿಂದಲಾಗಲಿ,

ವಿಹಾಯ ಸುದುಃಖಿತಾ ಮರ್ಹಸಿ ಗಂತುಮೇವಂ ॥ ೫೧ ॥ ಕಿಂಜೀವಿತೇ
ನೇಹ ವಿನಾತ್ವಯಾ ಮೇ ಲೋಕೇನವಾ ಕಿಂ ಸ್ವಧಯಾಮೃತೇನ ॥ ಶ್ರೇಯೋ
ಮುಹೂರ್ತಂ ತವಸನ್ನಿಧಾನಂ ಮಮೇಹ ಕೃತ್ಸ್ನಾದಪಿ ಜೀವಲೋಕಾತ್॥೫೨॥
ನರೈರಿವೋಲ್ಕಾಭಿ ರಪೋಹ್ಯಮಾನೋ ಮಹಾಗಜೋಧ್ವಾನ ಮನುಪ್ರವಿಷ್ಟಃ ॥
ಭೂಯಃ ಪ್ರಜಜ್ವಾಲ ವಿಲಾಪಮೇವಂ ನಿಶಮ್ಯ ರಾಮಃ ಕರುಣಂ ಜನನ್ಯಾಃ
॥ ೫೩ ॥ ಸಮಾತರಂ ಚೈವ ವಿಸಂಜ್ಞಕಲ್ಪಾ ಮಾರ್ತಂಚ ಸೌಮಿತ್ರಿ ಮಭಿ

ಗುರುವಾಗಿರುವೆ, ತ್ವಾಂ - ನಿನ್ನನ್ನು ಕುರಿತು, ಅಹಂ - ನಾನು, ನಜಾನಾಮಿ - ಸಮ್ಮತಿಸಲಾರೆನು, ಸುದುಃಖಿತಾಂ - ಬಹಳ ವ್ಯಸನಗೊಂಡ, ಮಾಂ - ನನ್ನನ್ನು, ವಿಹಾಯ - ಬಿಟ್ಟು, ಏವಂ - ಹೀಗೆ, ಗಂತುಂ - ಹೋಗಲು, ನಾರ್ಹಸಿ - ಯೋಗ್ಯನಾಗಬೇಡ. ॥ ೫೧ ॥ ಇಹ - ಈಗ, ಮೇ - ನನಗೆ, ತ್ವಯಾವಿನಾ - ನಿನ್ನನ್ನುಳಿದು, ಇಹ - ಈ ಲೋಕದಲ್ಲಿ, ಜೀವಿತೇನ - ಪ್ರಾಣದಿಂದಿರುವಿಕೆಯಿಂದ, ಕಿಂ - ಏನು ಪ್ರಯೋಜನವು, ಲೋಕೇನ - ಇತರ ಬಂಧುಜನರಿಂದ, ಕಿಂ - ಏನು, ಸ್ವಧಯಾವಾ - (ಗೋ) ಪಿತೃಲೋಕದಲ್ಲಿ ಸಿದ್ಧವಾದ ಸ್ವಧಾಕಾರದಿಂದ, ಕಿಂ - ಏನು, ಅಮೃತೇನವಾ - ದೇವತೆಗಳಿಗಾಹಾರಭೂತವಾದ ಅಮೃತದಿಂದತಾನೇ, ಕಿಂ - ಏನು, (ಮ × ತಿ) ಅಮೃತೆನವಾ - ಮೋಕ್ಷದಿಂದ ತಾನೇ, ಕಿಂ - ಏನು, ಮಮ - ನನಗೆ, ಇಹ - ಈ ಲೋಕದಲ್ಲಿ, ಕೃತ್ಸ್ನಾತ್ - ಸಮಸ್ತವಾದ, ಜೀವಲೋಕಾದಪಿ - ಜೀವರಾಶಿಗಳಿಗಿಂತಲೂ, ತವ - ನಿನ್ನ, ಸನ್ನಿಧಾನಂ - ಸಾಮೀಪ್ಯವು, ಮುಹೂರ್ತಂ - ಮುಹೂರ್ತಕಾಲವಾದರೂ, ಶ್ರೇಯಃ - ದೊಡ್ಡದಾದ ಪುರುಷಾರ್ಥವು. ॥ ೫೨ ॥ ನರೈಃ - (ಗೋ) ಗಜಗ್ರಾಹಿಗಳಾದ ಮನುಷ್ಯರಿಂದ, ಉಲ್ಕಾಭಿಃ - ಕೊಳ್ಳಿಗಳಿಂದ, ಅಪೋಹ್ಯಮಾನಃ - ತಳ್ಳಲ್ಪಟ್ಟ, (ಮ) ತಡೆಮಾಡಲ್ಪಟ್ಟ, ಅಧ್ವಾನಂ - ಮಾರ್ಗವನ್ನು, ಅನುಪ್ರವಿಷ್ಟಃ - ಅನುಸರಿಸಿ ಹೋಗುತ್ತಿರುವ, (ಗೋ)[ಧ್ವಾಂತಮಿತಿಪಾಠೆ-ಧ್ವಾಂತಂ-ಗಾಢಾಂಧಕಾರವನ್ನು,] ಅನುಪ್ರವಿಷ್ಟಃ-ಪ್ರವೇಶಿಸಿದ, ಮಹಾಗಜ ಇವ - ದೊಡ್ಡ ಆನೆಯಂತೆ, ರಾಮಃ - ಶ್ರೀರಾಮನು, ಜನನ್ಯಾಃ-ತಾಯಿಯ, ಕರುಣಂ-ದೀನವಾದ, ಏನಂವಿಲಾಪಂ - ಈ ಪ್ರಲಾಪರೂಪವಾದ ರೋದನಧ್ವನಿಯನ್ನು, ನಿಶಮ್ಯ - ಕೇಳಿ, ಭೂಯಃ - ಮತ್ತು, ಪ್ರಜಜ್ವಾಲ - ಕೋಪಿಷ್ಠನಾದನು, (ಮ) ರಾಮಃ - ಶ್ರೀರಾಮನು, ಭೂಯಃ-ಮತ್ತು, ಪ್ರಜಜ್ವಾಲ - ಪರಿತಾಪವನ್ನು ಹೊಂದಿದನು. ॥ ೫೩ ॥ ಸಃ - ಆ ಶ್ರೀರಾಮನು, ಧರ್ಮೇ-

---

ತಂದೆಗೆ ಪ್ರೀತಿಕರವಾದ ಸ್ವಧೆಯೆಂಬುದರಿಂದಲಾಗಲಿ, ಕೊನೆಗೆ ಮೋಕ್ಷದಿಂದಲೇ ಆಗಲಿ ಯಾವ ವಿಧವಾದ ಪ್ರಯೋಜನವೂ ಇಲ್ಲವು. ಈ ಜಗತ್ತಿನಲ್ಲಿ ಎಲ್ಲ ಜೀವರಾಶಿಗಳಿಗಿಂತಲೂ, ಮುಹೂರ್ತ ಕಾಲವಾದರೂ ನಿನ್ನ ಸನ್ನಿಧಾನವಿರುತ್ತಿದ್ದರೆ ಅದೇ ನನಗೆ ಪರಮ ಪುರುಷಾರ್ಥವು." ಈ ರೀತಿ ವಿಲಪಿಸುತ್ತಿರುವ ನಿಜ ಮಾತೆಯಾದ ಕೌಸಲ್ಯಾದೇವಿಯ ದೀನಾಲಾಪಗಳನ್ನು ಕೇಳಿದ ಶ್ರೀರಾಮ ಮೂರ್ತಿಯು, ಗಜಗ್ರಾಹಿಗಳಾದ ಮನುಷ್ಯರಿಂದ ಕೊಡಲಿಗಳಿಂದ ತಿವಿಯಲ್ಪಟ್ಟು ದಾರಿಗೆ ಬಂದ ಮದ್ದಾನೆಯಂತೆ ಬಹಳವಾದ ಸಂತಾಪವನ್ನು ಹೊಂದಿ, ಮೂರ್ಛಿತಳಾದವಳಂತೆ ಬಿದ್ದಿರುವ ಆಕೆಯನ್ನೂ ಪರಿತಪಿಸುತ್ತಿರುವ ಲಕ್ಷ್ಮಣಸ್ವಾಮಿಯನ್ನೂ ಕುರಿತು, ಧರ್ಮ ಪ್ರಧಾನವಾದ ನುಡಿಗಳನ್ನಾಡಿದನು. ಅಂತಹ ಸಂಕಟ

ಪ್ರತಪ್ತಂ ॥ ಧರ್ಮೇ ಸ್ಥಿತೋ ಧರ್ಮ್ಯ ಮುವಾಚ ವಾಕ್ಯಂ ಯಥಾ ಸ ಏವಾರ್ಹತಿ ತತ್ರ ವಕ್ತುಂ ॥ ೫೪ ॥ ಅಹಂಹಿ ತೇ ಲಕ್ಷ್ಮಣ ನಿತ್ಯಮೇವ ಜಾನಾಮಿ ಭಕ್ತಿಂಚ ಪರಾಕ್ರಮಂ ಚ ॥ ಮಮತ್ವಭಿಪ್ರಾಯಮಸನ್ನಿರೀಕ್ಷ್ಯ ಮಾತ್ರಾ ಸಹಾಭ್ಯರ್ದಸಿ ಮಾಂ ಸುದುಃಖಂ ॥ ೫೫ ॥ ಧರ್ಮಾರ್ಥ ಕಾಮಾಃ ಖಲು ತಾತ ಲೋಕೇ ಸಮೀಕ್ಷಿತಾ ಧರ್ಮ ಫಲೋದಯೇಷು ॥ ತೇ ತತ್ರ ಸರ್ವೇ

ಧರ್ಮದಲ್ಲಿ, ಸ್ಥಿತಃ - ಸ್ಥಿರಭಾವವಂ ಹೊಂದಿ, ವಿಸಂಜ್ಞಕಲ್ಪಾಂ - ಪ್ರಜ್ಞೆತಪ್ಪಿದವಳಂತಿರುವ, ಮಾತರಂ - ತಾಯಿಯನ್ನು, ಅಭಿಪ್ರತಪ್ತಂ - ಮತ್ತೂ ಸಂಕಟಬೀಳುತ್ತಿರುವ, ಆರ್ತಂ - ದೀನನಾದ, ಸೌಮಿತ್ರಿಂಚೈವ - ಲಕ್ಷ್ಮಣಸ್ವಾಮಿಯನ್ನೂ ಕುರಿತು, ಧರ್ಮ್ಯಂ-ಧರ್ಮ ಪ್ರಧಾನವಾದ, ವಾಕ್ಯಂ - ವಚನವನ್ನು, ತತ್ರ-(ಗೋ) ಆ ಧರ್ಮ ಸಂಕಟಕಾಲದಲ್ಲಿ, ಸಏವ - (೧) ಆ ಶ್ರೀರಾಮನೇ, ವಕ್ತುಂ- ಹೇಳಲು, ಯಥಾ - ಹೇಗೆ, ಅರ್ಹತಿ - ಯೋಗ್ಯನಾಗುವನೋ, ತಥಾ-ಹಾಗೆ, ಉವಾಚ - ಹೇಳಿದನು. ॥ ೫೪ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಅಹಂ - ನಾನು, ತೇ-ನಿನ್ನ, ಭಕ್ತಿಂಚ-ಭಕ್ತಿಯನ್ನು, ನಿತ್ಯಂ - ನಿರಂತರವೂ, ಪರಾಕ್ರಮಂಚ - ಪರಾಕ್ರಮವನ್ನೂ, ಜಾನಾಮ್ಯೇವ - ತಿಳಿದೇ ಇರುವೆನು, ಕಿಂತು - ಆದರೆ, ಮಮ - ನನ್ನ, ಅಭಿಪ್ರಾಯಂ - ಅಭಿಪ್ರಾಯವನ್ನು, ಅಸನ್ನಿರೀಕ್ಷ್ಯ - ಚನ್ನಾಗಿ ತಿಳಿದುಕೊಳ್ಳದೆ, ಮಾತ್ರಾಸಹ - ತಾಯಿಯೊಡನೆ, ಸುದುಃಖಂ - ಧರ್ಮಸಂಕಟ ಬೀಳುತ್ತಿರುವ, ಮಾಂ - ನನ್ನನ್ನು, ಅಭ್ಯರ್ದಸಿ - ಮತ್ತೂ ದುಃಖಗೊಳಿಸುತ್ತಿರುವೆ. ॥ ೫೫ ॥ ಹೇ ತಾತ-ಎಲೈ ಲಕ್ಷ್ಮಣನೇ, ಧರ್ಮಫಲೋದಯೇಷು, ಧರ್ಮ - ಧರ್ಮಕ್ಕೆ, ಫಲ - (ಗೊ) ಫಲಭೂತಗಳಾದ ಸುಖಾದಿಗಳ, ಉದಯೇಷು - ಪ್ರಾಪ್ತಿಕಾಲಗಳಲ್ಲಿ, ಯೇ - ಯಾವ, ಧರ್ಮಾರ್ಥಕಾಮಾಃ - ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳು ಮೂರೂ, ಲೋಕೇ - ಲೋಕದಲ್ಲಿ, ಸಮೀಕ್ಷಿತಾಃಖಲು - ಸುಖಹೇತುಗಳಾಗಿ ಕಾಣಲ್ಪಡುತ್ತವೋ, ಸರ್ವೇ - ಸಮಸ್ತಗಳಾದ, ತೇ - ಆ ಧರ್ಮಾರ್ಥಕಾಮಗಳೆಂಬ ಮೂರೂ, ತತ್ರ - ಆ ಧರ್ಮದಲ್ಲಿಯೇ, ಅಸಂಶಯಂ - ನಿಸ್ಸಂಶಯವಾಗಿ, ವಶ್ಯಾ -

ಕಾಲದಲ್ಲಿ ಅಂತಹ ಧರ್ಮ ವಾಕ್ಯಗಳನ್ನು ಹೇಳಲು ಮತ್ತೊಬ್ಬರಿಂದಾಗಲಾರದು.॥೪೯-೫೪॥ ಲಕ್ಷ್ಮಣ! ಸದಾ ಕಾಲದಲ್ಲಿಯೂ ನಿನಗೆ ನನ್ನಲ್ಲಿರುವ ಭಕ್ತಿಯನ್ನೂ, ಪರಾಕ್ರಮವನ್ನೂ ತಿಳಿದಿರುವೆನು. ನನ್ನ ಅಭಿಪ್ರಾಯವನ್ನು ತಿಳಿಯದೆ ನೀನು ಕೌಸಲ್ಯಾದೇವಿಯೊಡಗೂಡಿ ನನ್ನನ್ನು ದುಃಖಗೊಳಿಸುತ್ತ ಬೆದರಿಸುತ್ತಿರುವೆ. ಧರ್ಮ ಫಲ ಭೂತವಾದ ಸುಖಾದಿಗಳುಂಟಾಗುವುದರಲ್ಲಿ ಧರ್ಮಾರ್ಥ ಕಾರ್ಯಗಳೇ ಕಾರಣವಾಗಿರುವುವಲ್ಲದೆ, ಧರ್ಮದಲ್ಲಿಯೇ ಸಂಶಯ ರಹಿತವಾದುದಾಗಿಯೂ, ಸ್ವಾಧೀನಳಾಗಿಯೂ, ಪ್ರಿಯತಮಳಾಗಿಯೂ ಇರುವ

ಟಿ. (೧) ಸತ್ಯ ರಹಸ್ಯವನ್ನು ಪ್ರತಿಪಾದಿಸಿ,, ಶಮದ ತತ್ವವನ್ನು ಪ್ರತಿಪಾದಿಸುತ್ತಾರೆ. "ಅನಾರ್ಯಾಂ" "ತಂದೆಯನ್ನಾದರೂ ಕೊಂದು ರಾಜ್ಯಭಾರವನ್ನು ಮಾಡುತ್ತೇನೆ" ಎಂಬ ದುಷ್ಟಬುದ್ಧಿಯನ್ನು ತ್ಯಜಿಸಿ ಶಾಂತಿಯನ್ನು ಆಶ್ರಯಿಸುವವನಾಗು. ಇದು ಶೂರನ ಧರ್ಮವು. "ಈ ಧರ್ಮವು ಪ್ರತಿಕಕ್ಷಿಯಾದ ಶತ್ರುವಿನಲ್ಲಿ ಮಾತ್ರ ಅನುಷ್ಠೇಯವು, ಗುರುವೂ ತಂದೆಯೂ ಆದವನಲ್ಲಿ ಈ ಧರ್ಮವನ್ನುಳಿದು ಶಾಂತಭಾವವನ್ನು ವಹಿಸಬೇಕು. ಇದೇ ನೀನೀಗ ಆಚರಿಸಬೇಕಾದ ಮುಖ್ಯ ಧರ್ಮವು." ಎಂಬುದೇ ರಾಮವಾಕ್ಯ ಸ್ವಾರಸ್ಯವು. **(ಗೋವಿಂದರಾಜೀಯ)**

ಸ್ಯುರಸಂಶಯಂ ಮೇ ಭಾರ್ಯೇವ ವಶ್ಯಾಭಿಮತಾ ಸುಪುತ್ರಾ ॥ ೩೬ ॥
ಯಸ್ಮಿಂಸ್ತು ಸರ್ವೇ ಸ್ಯುರಸನ್ನಿವಿಷ್ಟಾ ಧರ್ಮೋ ಯತಸ್ಸ್ಯಾತ್ ತದುಪಕ್ರ
ಮೇತ ॥ ದ್ವೇಷ್ಯೋ ಭವತ್ಯರ್ಥಪರೋಹಿ ಲೋಕೇ ಕಾಮಾತ್ಮತಾ ಖಲ್ವಪಿ ನಪ್ರ
ಶಸ್ತಾ ॥ ೩೭ ॥ ಗುರುಶ್ಚ ರಾಜಾಚ ಪಿತಾಚ ವೃದ್ಧಃ ಕ್ರೋಧಾ ತ್ಪ್ರಹರ್ಷಾ
ದ್ಯದಿವಾಪಿ ಕಾಮಾತ್ ॥ ಯದ್ವ್ಯಾದಿಶೇತ್ಕಾರ್ಯಮವೇಕ್ಷ್ಯ ಧರ್ಮಂ ಕಸ್ತ
ನ್ನಕುರ್ಯಾ ದನೃಶಂಸವೃತ್ತಿಃ ॥ ೩೮ ॥ ಸವೈ ನಶಕ್ನೋಮಿ ಪಿತುಃಪ್ರತಿಜ್ಞಾ

ಸ್ವಾಧೀನಳಾದ, ಅಭಿಮತಾ - ಇಷ್ಟಳಾದ, ಸುಪುತ್ರಾ - ಒಳ್ಳೇಯ ಮಕ್ಕಳನ್ನು ಹೆತ್ತ, ಭಾರ್ಯೇವ - ಹೆಂಡತಿಯಂತೆ, ಸ್ಯುಃ - ಆಗುವವು, ಅಸಂಶಯಂ - ನಿಸ್ಸಂಶಯವು, ಇತಿ - ಇಂತೆಂದು, ಮೇ - ನನ್ನ, ಮತಂ - ಮತವು. ||೩೬|| ಯಸ್ಮಿನ್ - ಯಾವಕರ್ಮದಲ್ಲಿ, ಸರ್ವೇ - ಸಮಸ್ತವಾದ ಧರ್ಮಾರ್ಥಕಾಮುಗಳು ಮೂರು, ಅಸನ್ನಿವಿಷ್ಟಾಃ - ಇಲ್ಲದವುಗಳಾಗಿ, ಸ್ಯುಃ - ಆಗುವವೋ, ತತ್ - ಅಂತಹ ಕರ್ಮವನ್ನು, ನೋಪಕ್ರಮೇತ - ಪ್ರಾರಂಭಿಸಬಾರದು, ಯತಃ - ಯಾವ ಕರ್ಮದಿಂದ, ಧರ್ಮಃ - ಧರ್ಮವು, ಸ್ಯಾತ್ - ಆಗುವದೋ, ತತ್ - ಅದನ್ನು, ಉಪಕ್ರಮೇತ - ಆರಂಭ ಮಾಡತಕ್ಕದು, ಲೋಕೇ - ಲೋಕದಲ್ಲಿ, ಅರ್ಥಪರಃ - ಅರ್ಥದಲ್ಲಿಯೇ ಆಸಕ್ತನಾದ ಪುರುಷನು, ದ್ವೇಷ್ಯಃ - ದ್ವೇಷಿಸತಕ್ಕವನು, ಭವತಿ - ಆಗುತ್ತಾನೆ, ಕಾಮಾತ್ಮತಾ - (ಮ + ಗೋ) ಯಾವಾಗಲೂ ಕಾಮದಲ್ಲಿಯೇ ಮನವಿರುವಿಕೆಯು, ಪ್ರಶಸ್ತಾ - ಪ್ರಶಸ್ತವಾದುದು, ನ - ಅಲ್ಲ. || ೩೭ || ಗುರುಶ್ಚ - ಗುರುವೂ, ರಾಜಾಚ - ಅರಸನೂ, ವೃದ್ಧಶ್ಚ - ಮುದುಕನೂ, ಪಿತಾಚ-ತಂದೆಯು, ಕ್ರೋಧಾತ್-ಕೋಪದಿಂದಲೇ ಆಗಲಿ, ಪ್ರಹರ್ಷಾತ್-ಅಧಿಕ ಸಂತೋಷದಿಂದಲೇ ಆಗಲಿ, ಯದಿವಾಪಿ - ಹಾಗಲ್ಲದಿದ್ದರೆ, ಕಾಮಾತ್ - ಕಾಮದಿಂದಲೇ ಆಗಲಿ, ಯತ್ಕಾರ್ಯಂ - ಯಾವ ಕಾರ್ಯವನ್ನು, ವ್ಯಾದಿಶೇತ್ - ಆಜ್ಞಾಪಿಸುವನೋ, ಅನೃಶಂಸವೃತ್ತಿಃ - (ಗೋ) ಘಾತಕ ವಿಲ್ಲದಿರುವ ಮನೋವೃತ್ತಿಯುಳ್ಳ, ಕಃ - ಯಾವ ಪುರುಷನು, ಧರ್ಮಂ - ಧರ್ಮವನ್ನು, ಅವೇಕ್ಷ್ಯ - ಕಂಡು, ತತ್ - ಆ ಕಾರ್ಯವನ್ನು, ನಕುರ್ಯಾತ್ - ಮಾಡುವುದಿಲ್ಲ. || ೩೮ || ಸವೈ - ಅಂತಹ

ಪತ್ನಿಯಂತೆ, ಧರ್ಮಾರ್ಥ ಕಾಮುಗಳ ಅನುಷ್ಠಾನವು ಅವಶ್ಯಾನುಷ್ಠೇಯವಾಗಿರುವುದೆಂದು ನನಗೆ ತೋರುತ್ತದೆ. || ೩೫-೩೬ || ಯಾವ ಕಾರ್ಯದಲ್ಲಿ ಧರ್ಮಾರ್ಥ ಕಾಮಗಳಿರುವುದಿಲ್ಲವೋ ಆ ಕಾರ್ಯವನ್ನುಪಕ್ರಮಿಸಬಾರದು. ಯಾವ ಕಾರ್ಯವು ಧರ್ಮ ಪ್ರಧಾನವಾಗಿರುವುದೋ, ಅಂತಹ ಕಾರ್ಯವನ್ನೇ ಮಾಡುತ್ತಿರಬೇಕು. ಈ ಜಗತ್ತಿನಲ್ಲಿ ಅರ್ಥದಲ್ಲಿಯೇ ನೆಟ್ಟ ಮನಸ್ಸುಳ್ಳ ಪುರುಷನು, ಎಲ್ಲ ಪ್ರಾಣಿಗಳಲ್ಲಿಯೂ ಶತ್ರುವಾಗಿರುತ್ತಾನೆ. ಕಾಮಾಸಕ್ತವಾಗಿಯೇ ಇರುವ ಮನಸ್ಸು ಒಳ್ಳೆಯದಲ್ಲ. ಗುರುವಾಗಿಯೂ, ರಾಜನಾಗಿಯೂ ಇರುವ ತಂದೆಯು, ರೋಷದಿಂದಲೋ, ಹರ್ಷದಿಂದಲೋ, ಅಥವ ಕಾಮದಿಂದಲೋ, ಯಾವ ಕಾರ್ಯವನ್ನು ಆಜ್ಞಾಪಿಸುತ್ತಾನೆಯೋ, ಅಂತಹ ಕಾರ್ಯವನ್ನು ದುಷ್ಟನಲ್ಲದಿರುವ ಯಾವ ಪುರುಷನು ತಾನೆ ಮಾಡದಿರುತ್ತಾನೆ? ಹಾಗೆ ಮಾಡದಿರುವನು ಕೇವಲ ಘಾತಕನೆಂದೇ ತಿಳಿವವನಾಗು. || ೩೭-೩೮ || ಈ ತತ್ವವನ್ನರಿತಿರುವ ನಾನು ಈ ಪ್ರತಿಜ್ಞೆಯನ್ನು

ಮಿಮಾಮಕರ್ತುಂ ಸಕಲಾಂ ಯಥಾವತ್ ॥ ಸಹ್ಯಾವಯೋಸ್ತಾತ ಗುರುರ್ನಿ
ಯೋಗೇ ದೇವ್ಯಾಶ್ಚ ಭರ್ತಾ ಸಗತಿಸ್ಸಧರ್ಮಃ ॥ ೫೯ ॥ ತಸ್ಮಿನ್ ಪುನರ್ಜೀ
ವತಿ ಧರ್ಮರಾಜೇ ವಿಶೇಷತಸ್ಸ್ವೇ ಪಥಿ ವರ್ತಮಾನೇ ॥ ದೇವೀ ಮಯಾ
ಸಾರ್ಧಮಿತೋಽಪಗಚ್ಛೇತ್ಕಥಂ ಸ್ವಿದನ್ಯಾ ವಿಧವೇವ ನಾರೀ ॥ ೬೦ ॥ ಸಾಽನು
ಮನ್ಯಸ್ವ ವನಂ ವ್ರಜಂತಂ ಕುರುಷ್ವ ನಃ ಸ್ವಸ್ತ್ಯಯನಾನಿ ದೇವಿ ॥ ಯಥಾ

ನಾದರೆ, ಇಮಾಂ - ಈ, ಸಕಲಾಂ - ಸಮಸ್ತವಾದ, ಪಿತುಃ - ತಂದೆಯ, ಪ್ರತಿಜ್ಞಾಂ - ಪ್ರತಿಜ್ಞೆಯನ್ನು, ಯಥಾವತ್ - ಹೇಳಿದಂತೆ, ಅಕರ್ತುಂ - ಮಾಡದಿರುವದಕ್ಕೆ, ನಶಕ್ನೋಮಿ - ಸಮರ್ಥನಾಗಲಾರೆನು, ಹೇ ತಾತ - ಎಲೈ ತಂದೆಯೇ, ಆವಯೋಃ-ನಮಗೆ, ಸಃ-ಆ ತಂದೆಯು, ನಿಯೋಗೇ-ಆಜ್ಞೆ ಮಾಡುವದರಲ್ಲಿ, ಗುರುಃ - ಸಮರ್ಥನು, ದೇವ್ಯಾಶ್ಚ - ಕೌಸಲ್ಯಾದೇವಿಗೂ, ಭರ್ತಾ - (ಗೋ) ಭರಣಶೀಲನಾದ ಪತಿಯು, ಸಃ - ಆ ತಂದೆಯೇ, ಗತಿಃ - ಶರಣನು, ಸಃ - ಆತನೇ, ಧರ್ಮಃ - (ಮ) ಶ್ರೇಯಸ್ಸಾಧನವು, (ಗೋ) ಸಗತಿಃ - ಆ ದಶರಥರಾಯನಿಂದ ಸದ್ಗತಿಯುಳ್ಳವಳು, ಸಃ - ಆ ದಶರಥರಾಯನೊಡನೆ ಸಹವಾಸವೇ, ಧರ್ಮಃ - ಈ ಕೌಸಲ್ಯಾದೇವಿಗೆ ಧರ್ಮವು. ॥ ೫೯ ॥ ಧರ್ಮರಾಜೇ-ಧರ್ಮಪ್ರಭುವಾದ, ವಿಶೇಷತಃ - ವಿಶೇಷವಾಗಿ, ಸ್ವೇ - ಸ್ವಕೀಯವಾದ, ಪಥಿ - ಮಾರ್ಗದಲ್ಲಿ, (ಗೋ) ಪೂರ್ವ ರಾಜರ ಪರಂಪರಾ ಪ್ರಾಪ್ತ ಮಾರ್ಗದಲ್ಲಿ, ವರ್ತಮಾನೇ - ಇರುತ್ತಿರುವ, ತಸ್ಮಿನ್ ಪುನಃ - ಆ ಗಂಡನಾದ ದಶರಥರಾಯನು, ಜೀವತಿ - ಬದುಕಿರಲು, ದೇವೀ - ಕೌಸಲ್ಯಾದೇವಿಯು, ಮಯಾಸಾರ್ಧಂ - ನನ್ನೊಡನೆ, ಅನ್ಯಾ - ಮತ್ತೊಬ್ಬಳಾದ, ವಿಧವಾ - ಭರ್ತೃಹೀನಳಾದ, ನಾರೀವ-ಸ್ತ್ರೀಯಂತೆ, ಇತಃ - ಇಲ್ಲಿಂದ, ಕಥಂಚಿತ್ - ಹೇಗೆತಾನೆ, ಅಪಗಚ್ಛೇತ್ - ಹೊರಡುವಳು. ॥೬೦॥ ಸಾ - ಮುತ್ತೈದೆಯಾದ ನೀನು, ವನಂ - ವನವನ್ನು ಕುರಿತು, ವ್ರಜಂತಂ - ಹೋಗುತ್ತಿರುವ, ಮಾಂ - ನನ್ನನ್ನು, ಅನುಮನ್ಯಸ್ವ - ಕಳುಹಿಸು, ಹೇ ದೇವಿ - ಎಲೌ ತಾಯಿಯೇ, ಸಮಾಪ್ತೇ - (ಮ) ಹದಿನಾಲ್ಕು ವರುಷಗಳವರೆಗೂ ಆಚರಿಸತಕ್ಕ ವ್ರತವು ಪರಿಸಮಾಪ್ತಿಯಾಗಲು, ಯಥಾ-ಹೇಗೆ, ಪುನಃ - ಮತ್ತು, ಆವ್ರಜೇಯಂ - ಬರುವೆನೋ, ತಥಾ - ಹಾಗೆ, ನಃ - ನಮಗೆ, ಸ್ವಸ್ತ್ಯಯನಾನಿ -

ಜನಕನಾಣತಿಯಂತೆ ಮಾಡದಿರಲು ಎಂದಿಗೂ ಸಮರ್ಥನಾಗಲಾರೆನು. ಲಕ್ಷ್ಮಣ ! ನಿನಗೂ ನನಗೂ ಆಜ್ಞೆ ಮಾಡಲು ಜನಕನಾದ ದಶರಥ ಭೂಮೀಶ್ವರನು ಸಮರ್ಥನಾಗಿಯೇ ಇರುವನಲ್ಲದೆ, ಸ್ವತಂತ್ರನಾಗಿಯೂ ಇರುವನು. ಕೌಸಲ್ಯಾದೇವಿಗೂ ಸಹ ಭರಣಶೀಲನಾಗಿರುವವನೂ ಆ ತಂದೆಯೇ ಆಗಿರುವನು. ಜನಕನಾದ ದಶರಥರಾಯನೇ ನಮ್ಮೆಲ್ಲರಿಗೂ ಗತಿಯಾಗಿರುವನು. ಇಷ್ಟೆಯಲ್ಲದೆ ಈ ನಮ್ಮ ತಾಯಿಯಾದ ಕೌಸಲ್ಯಾದೇವಿಗೆ ಶ್ರೇಯಸ್ಸಾಧನ ಧರ್ಮವೂ, ಪರಮ ಧರ್ಮವೂ ಆತನೇ ಆಗಿರುವನು. ॥ ೫೯ ॥ ಧರ್ಮ ಪ್ರಭುವಾಗಿ, ಮುಖ್ಯವಾಗಿ, ತನ್ನ ಧರ್ಮವಾದ ಕ್ಷತ್ರ ಧರ್ಮದಲ್ಲಿರುವ ನಮ್ಮ ತಂದೆಯಾದ ದಶರಥರಾಯನು ಜೀವಂತನಾಗಿಯೇ ಇರುವಾಗ, ಈ ನಮ್ಮ ಜನನಿಯಾದ ಕೌಸಲ್ಯಾದೇವಿಯು, ಪತಿಹೀನಳಾದವಳಂತೆ ನನ್ನ ಸಂಗಡ ಇಲ್ಲಿಂದ ಹೊರಡುವುದು ಯುಕ್ತವಾದುದಲ್ಲ. ॥ ೬೦ ॥ ಅಮ್ಮ ! ಕೇಳು, ಅಂತಹ ಸುಮಂಗಲಿಯಾದ ನೀನು ವನವನ್ನು

ಸಮಾಪ್ತೇ ಪುನರಾವ್ರಜೇಯಂ ಯಥಾಹಿ ಸತ್ಯೇನ ಪುನರ್ಯಯಾತಿಃ ॥ ೬೧ ॥
ಯಶೋಹ್ಯಹಂ ಕೇವಲರಾಜ್ಯಕಾರಣಾ ನ್ನಪೃಷ್ಠತಃ ಕರ್ತುಮಲಂ ಮಹೋದಯಂ ॥ ಅದೀರ್ಘಕಾಲೇನತು ದೇವಿ ಜೀವಿತೇ ವೃಣೇಽವರಾಮದ್ಯ ಮಹೀ ಮಧರ್ಮತಃ ॥ ೬೨ ॥

ಪ್ರಸಾದಯನ್ನರವೃಷಭ ಸ್ಸಮಾತರಂ
ಪರಾಕ್ರಮಾ ಜ್ಜಿಗಮಿಷುರೇವ ದಂಡಕಾಃ ॥

ಶುಭಪ್ರಾಪ್ತಿ ರೂಪವಾದ ಪ್ರಾರ್ಥನೆಯನ್ನು, ಕುರುಷ್ವ - ಮಾಡು, ಯಯಾತಿಃ - ಯಯಾತಿ ರಾಜನು, ಸತ್ಯೇನ - ಸತ್ಯದಿಂದ, ಪುನಃ - ಮತ್ತು, ಸ್ವರ್ಗಂ - ಸ್ವರ್ಗವನ್ನು, ಯಥಾ - ಹೇಗೆ, ಅಗಚ್ಛತ್ - ಹೊಂದಿದನೋ, ತಥಾ - ಹಾಗೆ, ಆವ್ರಜೇಯಂಹಿ - ಬರುವೆನಷ್ಟೆ. ॥ ೬೧ ॥ ಅಹಂ- ನಾನು, ಕೇವಲ ರಾಜ್ಯ ಕಾರಣಾತ್ - ಧರ್ಮರಹಿತವಾದ ರಾಜ್ಯಭಾರ ಮಾತ್ರವೆಂಬ ಕಾರಣದಿಂದ, ಮಹೋದಯಂ - ಭಾಗ್ಯೋದಯವನ್ನು ಕೊಡುತ್ತಿರುವ, ಯಶಃ - ಕೀರ್ತಿಯನ್ನು, ಪೃಷ್ಠತಃ - ಹಿಂದುಗಡೆ, ಕರ್ತುಂ - ನಿರಾಕರಿಸಲು, ನಾಲಂಹಿ - ಸಮರ್ಥನಾಗಲಾರೆನಷ್ಟೆ, ಕಿಂತು - ಆದರೆ, ಜೀವಿತೇ - ಪ್ರಾಣವು, ಅದೀರ್ಘ ಕಾಲೇಸತಿ - ಬಹು ಕಾಲವಿಲ್ಲದಿರುವುದಾಗಿರಲು, ಅವರಾಂ - ತುಚ್ಛವಾದ, ಮಹೀಂ - ರಾಜ್ಯವನ್ನು, ಅಧರ್ಮತಃ - ಅಧರ್ಮದಿಂದ, ಅದ್ಯ - ಈಗ, ನವೃಣೇ - ಅಪೇಕ್ಷಿಸಲಾರೆನು. ॥ ೬೨ ॥ ನರವೃಷಭಃ - ಮನುಷ್ಯ ಶ್ರೇಷ್ಠನಾದ, ಸಃ - ಆ ಶ್ರೀರಾಮನು, ಮಾತರಂ - ತಾಯಿಯನ್ನು, ಪ್ರಸಾದಯನ್ - ಪ್ರಸನ್ನಳನ್ನಾಗಿ ಮಾಡುತ್ತ, ಪರಾಕ್ರಮಾತ್-ಶೌರ್ಯ ದಿಂದ, ದಂಡಕಾನೇವ - ದಂಡಕಾರಣ್ಯವನ್ನೇ ಕುರಿತು, ಜಿಗಮಿಷುಃ - ಹೋಗಬೇಕೆಂಬ ಇಚ್ಛೆಯುಳ್ಳವನಾಗಿ, ಅಥ-ಬಳಿಕ, ಅನುಜಂ-ತಮ್ಮನಾದ ಲಕ್ಷ್ಮಣನನ್ನು ಕುರಿತು, ದರ್ಶನಂ-(ಗೋ + ಮ)

ಕುರಿತು ತೆರಳುತ್ತಿರುವ ನನ್ನನ್ನು ಸಂತೋಷದಿಂದ ಕಳುಹಿಸಿ ಕೊಡು. ಹದಿನಾಲ್ಕು ವರುಷಗಳು ಮುಗಿಯುತ್ತಲೆ, ಪುನಃ ನಗರಿಗೆ ಬರುವಂತೆ ನನ್ನನ್ನಾಶೀರ್ವದಿಸು. ಯಯಾತಿ ರಾಜನು ಸ್ವರ್ಗಭ್ರಷ್ಟನಾಗಿ, ಧರ್ಮ ಮಾರ್ಗಾನುವರ್ತನೆಯಿಂದ ಪುನಃ ಸ್ವರ್ಗವನ್ನು ಹೇಗೆ ಹೊಂದಿದನೋ ಹಾಗೆಯೇ ನಾನೂ ಸಹ ಹದಿನಾಲ್ಕು ಸಂವತ್ಸರಗಳ ವನವಾಸವು ಮುಗಿಯುತ್ತಲೇ ಪಟ್ಟಣವನ್ನು ಸೇರುತ್ತೇನೆ. ನಾನು ಧರ್ಮ ರಹಿತವಾದ ಈ ರಾಜ್ಯಾಭಿಷೇಕವೆಂಬ ಕಾರಣದಿಂದ, ಮಹದುತ್ತಮವಾದ ಫಲವನ್ನುಂಟುಮಾಡುವ ಕೀರ್ತಿಯನ್ನು ಕೆಡಿಸಿಕೊಳ್ಳುವುದು ನ್ಯಾಯವಲ್ಲ. ಏಕೆಂದರೆ, ಲೋಕದಲ್ಲಿ ಮನುಷ್ಯನ ಪ್ರಾಣಗಳು ಬಹಳ ಕಾಲವಿರಲಾರವು, ಆದಕ್ಕಿಂತಲೂ ಅಶಾಶ್ವತವಾದ ಈ ರಾಜ್ಯಭಾರವನ್ನು ನಾನು ಅಧರ್ಮದಿಂದ ವಹಿಸಲಾರೆ." ಶ್ರೀರಾಮಚಂದ್ರನೀರೀತಿಯಾಗಿ ಹೇಳಿ ತನ್ನ ತಾಯಿಯನ್ನು ಪ್ರಾರ್ಥಿಸುತ್ತ, ಸ್ವಸಾಮರ್ಥ್ಯದಿಂದಲೇ ದಂಡಕಾರಣ್ಯಕ್ಕೆ ತೆರಳಲಪೇಕ್ಷೆಯುಳ್ಳವನಾಗಿ

ಅಥಾನುಜಂ ಭೃಶಮನುಶಾಸ್ಯ ದರ್ಶನಂ
ಚಕಾರ ತಾಂ ಹೃದಿ ಜನನೀಂ ಪ್ರದಕ್ಷಿಣಂ ॥ ೬೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕವಿಂಶಸ್ಸರ್ಗಃ.

ಸ್ವಾಭಿಮತವಾದ ಧರ್ಮ ರಹಸ್ಯವನ್ನು, ಅನುಶಾಸ್ಯ - ಉಪದೇಶ ಮಾಡಿ, ತಾಂಜನನೀಂ - ಆ ತಾಯಿಯನ್ನು, ಹೃದಿ - ಮನಸ್ಸಿನಲ್ಲಿ, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಚಕಾರ - ಮಾಡಿದನು. ॥ ೬೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕವಿಂಶಸ್ಸರ್ಗಃ.

ಲಕ್ಷ್ಮಣನಿಗೆ ತನ್ನ ಅಭಿಮತವಾದ ಧರ್ಮವನ್ನುಪದೇಶಿಸಿ, ತಾಯಿಗೆ ತನ್ನ ಮನಸ್ಸಿನಲ್ಲಿಯೇ ಪ್ರದಕ್ಷಿಣ ಪೂರ್ವಕ ವಂದನೆಗಳನ್ನರ್ಪಿಸಿದನು. ॥ ೬೧-೬೩ ॥

ಇಂತಿದು ಶ್ರೀರಾಮಚಂದ್ರಕೃತ ಕೌಸಲ್ಯಾ ಲಕ್ಷ್ಮಣ ಸಾಂತ್ವನ ರೀತಿವಿವರಣವೆಂಬ
ಇಪ್ಪತ್ತೊಂದನೆಯ ಸರ್ಗವು ಸಂಪೂರ್ಣವಾದುದು.

ಅಯೋಧ್ಯಾಕಾಂಡೇ ದ್ವಾವಿಂಶಸ್ಸರ್ಗಃ.

ಅಥತಂ ವ್ಯಥಯಾ ದೀನಂ ಸವಿಶೇಷ ಮಮರ್ಷಿತಂ ॥ ಶ್ವಸಂತಮಿವ ನಾಗೇಂದ್ರಂ ರೋಷ ವಿಸ್ಫಾರಿತೇಕ್ಷಣಂ ॥ ೧ ॥ ಆಸಾದ್ಯ ರಾಮ ಸ್ಸೌಮಿತ್ರಿಂ ಸುಹೃದಂ ಭ್ರಾತರಂ ಪ್ರಿಯಂ ॥ ಉವಾಚೇದಂ ಸ ಧೈರ್ಯೇಣ ಧಾರಯ್ನ್ ಸತ್ವಮಾತ್ಮವಾನ್ ॥ ೨ ॥ ನಿಗೃಹ್ಯ ರೋಷಂ ಶೋಕಂಚ ಧೈರ್ಯಮಾಶ್ರಿತ್ಯ ಕೇವಲಂ ॥ ಅವಮಾನಂ ನಿರಸ್ಯೇಮಂ ಗೃಹೀತ್ವಾ ಹರ್ಷಮುತ್ತಮಂ ॥೩॥ ಉಪಕ್ಲೃಪ್ತಂ ಹಿ ಯತ್ಕಿಂಚಿ ದಭಿಷೇಕಾರ್ಥಮದ್ಯ ಮೇ ॥ ಸರ್ವಂ ವಿಸರ್ಜಯ

ಅಥ - ಬಳಿಕ, ಆತ್ಮವಾನ್ - ಧೈರ್ಯಶಾಲಿಯಾದ, ಸರಾಮಃ - ಆ ಶ್ರೀರಾಮನು, ವ್ಯಥಯಾ - ವ್ಯಸನದಿಂದ, ದೀನಂ - ಖಿನ್ನನಾದ, ಸವಿಶೇಷಂ - ಬಹಳವಾಗಿ, ಅಮರ್ಷಿತಂ-ಕೋಪ ಗೊಂಡ, ನಾಗೇಂದ್ರಮಿವ - ಶ್ರೇಷ್ಠವಾದ ಸರ್ಪದಂತೆ, ಶ್ವಸಂತಂ - ನಿಟ್ಟುಸಿರು ಬಿಡುತ್ತಿರುವ, ರೋಷವಿಸ್ಫಾರಿತೇಕ್ಷಣಂ - ಕೋಪದಿಂದ ಪಸರಿಸಿದ ಕಂಗಳುಳ್ಳ, ಸುಹೃದಂ - ಸ್ನೇಹಿತನಾದ, ಭ್ರಾತರಂ - ತಮ್ಮನಾದ, ಪ್ರಿಯಂ - ಇಷ್ಟನಾದ, ಸೌಮಿತ್ರಿಂ - ಲಕ್ಷ್ಮಣನನ್ನು, ಆಸಾದ್ಯ - ಹೊಂದಿ, ಧೈರ್ಯೇಣ - ಧೈರ್ಯದಿಂದ, ಸತ್ವಂ - ಬಲವನ್ನು, ಧಾರಯ್ನ್ - ಧರಿಸಿ, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೨ ॥ ರೋಷಂ - ಕ್ರೋಧವನ್ನೂ, ಶೋಕಂಚ - ದುಃಖ ವನ್ನೂ, ನಿಗೃಹ್ಯ - ತಡೆದು, ಕೇವಲಂ - ಮುಖ್ಯವಾಗಿ, ಧೈರ್ಯಂ - ಧೀರತೆಯನ್ನು, ಆಶ್ರಿತ್ಯ - ಹೊಂದಿ, ಇಮಮವಮಾನಂ - ತಂದೆಯು ಮಾಡಿದ ಈ ಅವಮಾನವನ್ನು, ನಿರಸ್ಯ - ಹೋಗಲಾಡಿಸಿ, ಉತ್ತಮಂ - ಸರ್ವೋತ್ತಮವಾದ, ಹರ್ಷಂ - ಸಂತೋಷವನ್ನು, ಗೃಹೀತ್ವಾ - ಪಡೆದು, ಅದ್ಯ - ಈಗ, ಮೇ - ನನಗೆ, ಅಭಿಷೇಕಾರ್ಥಂ - ಅಭಿಷೇಕನಿಮಿತ್ತವಾಗಿ, ಉಪಕ್ಲೃಪ್ತಂ - ಸಂಪಾದಿಸಲ್ಪಟ್ಟ, ಯತ್ಕಿಂಚಿತ್ - ಯಾವದೊಂದು ಉಂಟೋ, ತತ್ಸರ್ವಂ - ಅದೆಲ್ಲವನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ವಿಸರ್ಜಯ - ಬಿಟ್ಟುಬಿಡು, ನಿರತ್ಯಯಂ - ನಿರ್ವಿಘ್ನವಾಗಿ, ಕಾರ್ಯಂ - ವನವಾಸಕ್ಕೆ ತಕ್ಕ ಕೆಲಸ

ಆ ಬಳಿಕ ಮಹಾ ಬುದ್ಧಿಶಾಲಿಯಾದ ಶ್ರೀರಾಮನು ದುಃಖದಿಂದ ದೀನನಾಗಿಯೂ ಬಹಳವಾದ ರೋಷವುಳ್ಳವನಾಗಿಯೂ, ಸರ್ಪಾಧಿಪನಂತೆ ನಿಟ್ಟುಸಿರುಗಳನ್ನು ಬಿಡುತ್ತಿರುವವನಾಗಿಯೂ, ಕೋಪದಿಂದ ಕಿಡಿಯುಗಳುತ್ತ, ಕೆಂಪಾಗಿರುವ ಕಂಗಳುಳ್ಳವನಾಗಿಯೂ, ಪ್ರೀತಿಪಾತ್ರನಾಗಿಯೂ ಇರುವ ಅನುಜನಾದ ಲಕ್ಷ್ಮಣಮೂರ್ತಿಯನ್ನು ಕುರಿತು ಹೀಗೆಂದನು. "ಎಲೈ ಲಕ್ಷ್ಮಣನೆ! ರೋಷವನ್ನು ಬಿಡು; ಮುಖ್ಯವಾಗಿ ಧರ್ಮವನ್ನಾಶ್ರಯಿಸು; ಈ ಅವಮಾನವನ್ನು ಸಹಿಸು; ಸಂತೋಷವನ್ನು ಹೊಂದು; ಈಗ ನನ್ನ ಅಭಿಷೇಕಕ್ಕೋಸುಗ ಸಂಪಾದಿಸಲ್ಪಟ್ಟಿರುವ ಸಾಮಗ್ರಿಗಳನ್ನು ತೊರೆದು ವನವಾಸ ಯೋಗ್ಯವಾದ ಕಾರ್ಯಗಳನ್ನು ಜಾಗ್ರತೆಯಾಗಿ ಮಾಡುವವನಾಗು. ಇಷ್ಟೆಯಲ್ಲದೆ ನನ್ನ ರಾಜ್ಯಾಭಿಷೇಕ ನಿಮಿತ್ತವಾಗಿ

ಕ್ಷಿಪ್ರಂ ಕುರು ಕಾರ್ಯಂ ನಿರತ್ಯಯಂ ॥ ೪ ॥ ಸೌಮಿತ್ರೇ ಯೋಽಭಿಷೇಕಾರ್ಥೇ ಮಮ ಸಂಭಾರ ಸಂಭ್ರಮಃ ॥ ಅಭಿಷೇಕ ನಿವೃತ್ತ್ಯರ್ಥೇ ಸೋಽಸ್ತು ಸಂಭಾರ ಸಂಭ್ರಮಃ ॥ ೫ ॥ ಯಸ್ಯಾಮದಭಿಷೇಕಾರ್ಥೇ ಮಾನಸಂ ಪರಿತಪ್ಯತೇ ॥ ಮಾತಾ ಮೇ ಸಾಯಥಾ ನಸ್ಯಾತ್ಸವಿಶಂಕಾ ತಥಾ ಕುರು ॥ ೬ ॥ ತಸ್ಯಾಶ್ಶಂಕಾಮಯಂ ದುಃಖಂ ಮುಹೂರ್ತಮಪಿ ನೋತ್ಸಹೇ ॥ ಮನಸಿ ಪ್ರತಿಸಂಜಾತಂ ಸೌಮಿತ್ರೇಽಹಮುಪೇಕ್ಷಿತುಂ ॥ ೭ ॥ ನ ಬುದ್ಧಿ ಪೂರ್ವಂ ನಾಬುದ್ಧಂ ಸ್ಮರಾಮೀಹ ಕದಾಚನ ॥ ಮಾತೄಣಾಂ ವಾ ಪಿತುರ್ವಾಽಹಂ

ವನ್ನು, ಕುರು - ಮಾಡು. ॥ ೪ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಮಮ - ನನ್ನ, ಅಭಿಷೇಕಾರ್ಥೇ - ಪಟ್ಟಾಭಿಷೇಕನಿಮಿತ್ತವಾಗಿ, ಸಂಭಾರಸಂಭ್ರಮಃ - ಸಾಮಗ್ರಿಯನ್ನು ಸಂಪಾದನೆ ಮಾಡಬೇಕೆಂಬ ಉತ್ಸಾಹವು, ಯಃ - ಯಾವದುಂಟೋ, ಸಃ - ಅದು, ಅಭಿಷೇಕನಿವೃತ್ತ್ಯರ್ಥೇ - ಪಟ್ಟಾಭಿಷೇಕವನ್ನು ಬಿಡಲು, ಸಂಭಾರಸಂಭ್ರಮಃ - (ಗೋ + ಮ + ತಿ) ವನವಾಸೋಚಿತ ಸಾಮಗ್ರಿ ಸಂಪಾದನೆಯಲ್ಲಿ ಉತ್ಸಾಹರೂಪವಾದುದು, ಅಸ್ತು - ಆಗಲಿ. ॥ ೫ ॥ ಮದಭಿಷೇಕಾರ್ಥೇ - ನನ್ನ ಅಭಿಷೇಕನಿಮಿತ್ತವಾಗಿ, ಯಸ್ಯಾಃ - ಯಾವ ಕೌಸಲ್ಯಾದೇವಿಯ, ಮಾನಸಂ - ಮನಸ್ಸು, ಪರಿತಪ್ಯತೇ - ವಿಘ್ನಬಂದಿತಲ್ಲ ಎಂಬದಾಗಿ ಸಂತಾಪಗೊಂಡಿರುವುದೋ, ಸಾ-ಅಂತಹ, ಮೇ ಮಾತಾ-ನನ್ನ ತಾಯಿಯು, ಯಥಾ - ಹೇಗೆ, ಸವಿಶಂಕಾ - ಸಂಶಯಸ್ಥಳು, ನಸ್ಯಾತ್ - ಆಗಲಾರಳೋ, ತಥಾ - ಹಾಗೆ, ಕುರು - ಮಾಡು, (ಗೋ) ಮದಭಿಷೇಕಾರ್ಥೇ - ನನ್ನ ಅಭಿಷೇಕರೂಪ ಪ್ರಯೋಜನ ವಿಷಯವಾಗಿ, ಯಸ್ಯಾಃ - ಯಾವ ಕೈಕೆಯೀದೇವಿಯ, ಮಾನಸಂ - ಮನವು, ಪರಿತಪ್ಯತೇ - ಸಂಕಟ ಬೀಳುತ್ತಿರುವುದೋ, ಸಾ - ಅಂತಹ, ಮೇ - ನನ್ನ, ಮಾತಾ - ತಾಯಿಯಾದ ಕೈಕೇಯೀ ದೇವಿಯು, ಯಥಾ - ಹೇಗೆ, ಸವಿಶಂಕಾ - ಭಯದಿಂದಕೂಡಿದವಳು, ನಸ್ಯಾತ್ - ಆಗದಿರುವಳೋ, ತಥಾ - ಹಾಗೆ, ಕುರು - ಮಾಡು. ॥ ೬ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ತಸ್ಯಾಃ-(ಮ) ಆ ಕೌಸಲ್ಯಾದೇವಿಯ, (ಗೋ) ತಸ್ಯಾಃ - ಕೈಕೆಯೀದೇವಿಯ, ಮನಸಿ - ಮನಸ್ಸಿನಲ್ಲಿ, ಪ್ರತಿಸಂಜಾತಂ - ಹುಟ್ಟಿರುವ, ಶಂಕಾಮಯಂ - (ಮ) ಸಂಶಯರೂಪವಾದ, (ಗೋ) ಶಂಕಾಮಯಂ - ಭಯರೂಪವಾದ, ದುಃಖಂ - ದುಃಖವನ್ನು, ಉಪೇಕ್ಷಿತುಂ - ಅಲಕ್ಷ್ಯಮಾಡಲು, ಅಹಂ - ನಾನು, ಮುಹೂರ್ತಮಪಿ - ಮುಹೂರ್ತಕಾಲವಾದರೂ, ನೋತ್ಸಹೇ - ಸಹಿಸಲಾರೆನು. ॥ ೭ ॥ ಮಾತೃಣಾಂವಾ - ತಾಯಂದಿರಿಗೇ ಆಗಲಿ, ಪಿತುರ್ವಾ - ತಂದೆಗೇ ಆಗಲಿ, ಅಹಂ - ನಾನು, ಅಲ್ಪಂ-ಸ್ವಲ್ಪ

ಯಾವ ಉತ್ಸಾಹವಿದ್ದಿತೋ, ಅದೇ ಉತ್ಸಾಹವು ವನವಾಸಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಗೊಳಿಸುವುದರಲ್ಲಿಯೂ ಇರುವುದಾಗಲಿ. ॥ ೧-೫ ॥ ಕೇಳಯ್ಯಾ ಲಕ್ಷ್ಮಣನೆ! ನನ್ನ ಯೌವರಾಜ್ಯ ಪಟ್ಟಾಭಿಷೇಕ ವಿಷಯದಲ್ಲಿ ಯಾವ ಕೈಕೇಯೀದೇವಿಯ ಮನವು ಸಂತಪಿಸುತ್ತಿರುವುದೋ, ಅಂತಹ ತಾಯಿಯಾದ ಆಕೆಯ ಮನಸ್ಸು ಸಂದೇಹಿಸದಿರುವಂತೆ ಮಾಡುವವನಾಗು. ಆಕೆಯ ಮನದಲ್ಲಿ ಜನಿಸುವ ಸಂಶಯ ವಿಕಾರವಾದ ದುಃಖವನ್ನು ನಾನು ಕ್ಷಣಮಾತ್ರವಾದರೂ ನೋಡಲಾರೆನೆಂಬುದನ್ನು ತಿಳಿವವನಾಗು. ಲಕ್ಷ್ಮಣ! ನಾನು

ಕೃತಮಲ್ಪಂ ಚ ವಿಪ್ರಿಯಂ ॥ ೮ ॥ ಸತ್ಯಸ್ಸತ್ಯಾಭಿಸಂಧಶ್ಚ ನಿತ್ಯಂ ಸತ್ಯಪರಾ
ಕ್ರಮಃ ॥ ಪರಲೋಕ ಭಯಾದ್ಭೀತೋ ನಿರ್ಭಯೋಽಸ್ತು ಪಿತಾ ಮಮ ॥ ೯ ॥
ತಸ್ಯಾಪಿಹಿ ಭವೇದಸ್ಮಿನ್ ಕರ್ಮಣ್ಯಪ್ರತಿಸಂಹೃತೇ ॥ ನಿತ್ಯಂ ನೇತಿ ಮನಸ್ತಾಪ
ಸ್ತಸ್ಯತಾಪಸ್ತಪೇಚ್ಚ ಮಾಂ ॥ ೧೦ ॥ ಅಭಿಷೇಕ ವಿಧಾನಂತು ತಸ್ಮಾತ್ಸಂ
ಹೃತ್ಯ ಲಕ್ಷ್ಮಣ ॥ ಅನ್ವಗೇವಾಹಮಿಚ್ಛಾಮಿ ವನಂ ಗಂತುಮಿತಃ ಪುನಃ॥೧೧॥
ಮಮ ಪ್ರವ್ರಾಜನಾದದ್ಯ ಕೃತಕೃತ್ಯಾ ನೃಪಾತ್ಮಜಾ ॥ ಸುತಂ ಭರತಮವ್ಯಗ್ರ

ಮಾದ, ವಿಪ್ರಿಯಂ - ಇಷ್ಟವಿಲ್ಲದುದನ್ನು, ಇಹ - ಈಗ, ಕದಾಚನ - ಯಾವಾಗಲಾದರೂ, ಬುದ್ಧಿ ಪೂರ್ವಂ - ಬುದ್ಧಿ ಪೂರ್ವಕವಾಗಿಯೇ ಆಗಲಿ, ಅಬುದ್ಧಂ - ತಿಳಿಯದೆ ಆಗಲಿ, ನಸ್ಮರಾಮಿ - ಜ್ಞಾಪಕಹೊಂದಲಿಲ್ಲ, ನಕೃತಂ - ಮಾಡಲ್ಪಡಲೂ ಇಲ್ಲ. ॥ ೮ ॥ ಸತ್ಯಃ - ಸತ್ಯ ವಚನವುಳ್ಳ, ಸತ್ಯಾಭಿಸಂಧಃ - ಸತ್ಯ ಪ್ರತಿಜ್ಞೆಯುಳ್ಳ, ನಿತ್ಯಂ - ನಿರಂತರವೂ, ಸತ್ಯ ಪರಾಕ್ರಮಃ - ಸತ್ಯವಾದ ಪರಾಕ್ರಮವುಳ್ಳ, ಭೀತಃ - ಭಯಗೊಂಡ, ಮಮ - ನನ್ನ, ಪಿತಾ - ತಂದೆಯು, ಪರಲೋಕ ಭಯಾತ್ - ಪರಲೋಕ ಭಯದಿಂದ, ನಿರ್ಭಯಃ - ಭಯರಹಿತನು, ಅಸ್ತು - ಆಗಲಿ. ॥ ೯ ॥ ಅಸ್ಮಿನ್‌ಕರ್ಮಣಿ - ಈ ಪಟ್ಟಾಭಿಷೇಕರೂಪ ಕಾರ್ಯವು, ಅಪ್ರತಿಸಂಹೃತೇ - ಬಿಡಲ್ಪಡದಿರಲು, ತಸ್ಯಾಪಿ - ಆ ತಂದೆಗೂ, ಸತ್ಯಂ - ಸತ್ಯ ವಚನವು, ನೇತಿ - ಆಗದೇ ಹೋಯಿತೆಂದು, ಮನಸ್ತಾಪಃ- ಮನಸ್ಸಂಕಟವು, ಭವೇತ್ - ಆದೀತು,. ತಸ್ಯ - ಆ ತಂದೆಯ, ತಾಪಃ - ಸಂಕಟವು, ಮಾಂ - ನನ್ನನ್ನು, ತಪೇತ್ - ತಪಿಸುವಂತೆ ಮಾಡೀತು. ॥ ೧೦ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ತಸ್ಮಾತ್ - ಆಕಾರಣ, ಅಭಿಷೇಕವಿಧಾನಂತು - ಪಟ್ಟಾಭಿಷೇಕ ಮಾಡುವಿಕೆಯನ್ನಾದರೆ, ಸಂಹೃತ್ಯ - ಪರಿತ್ಯಜಿಸಿ, ಅನ್ವಗೇವ - ಕೂಡಲೆ, ಅಹಂ - ನಾನು, ಇತಃ - ಈ ಪಟ್ಟಣದಿಂದ, ವನಂಪುನಃ - ವನವನ್ನು ಕುರಿತು, ಗಂತುಂ - ಹೋಗಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೧೧ ॥ ಅದ್ಯ - ಈಗಲೇ, ಮಮ - ನನ್ನ, ಪ್ರವ್ರಾಜನಾತ್ - ಪ್ರಯಾಣದಿಂದ, ಕೃತಕೃತ್ಯಾ - ಕೃತಾರ್ಥಳಾದ, ನೃಪಾತ್ಮಜಾ - ಕೈಕೇಯಿದೇವಿಯು, ಸುತಂ - ಕುಮಾರನಾದ, ಭರತಂ - ಭರತನನ್ನು, ಅವ್ಯಗ್ರಂ-

---

ತಾಯಂದಿರಿಂದಾಗಲಿ, ತಂದೆಯಾದ ದಶರಥರಾಯನಿಗಾಗಲಿ, ಅಪ್ರಿಯವನ್ನು, ಬುದ್ಧಿ ಪೂರ್ವಕವಾಗಿಯೋ, ತಿಳಿಯದೆಯೋ, ಹೇಗಾದರೂ ಮಾಡಲಿಲ್ಲ, ಚಿಂತಿಸುವುದೂ ಇಲ್ಲ. ಇದಲ್ಲದೆ ಸತ್ಯ ಪ್ರತಿಜ್ಞೆಯುಳ್ಳವನಾಗಿಯೂ, ಸತ್ಯ ವಾಕ್ಯವುಳ್ಳವನಾಗಿಯೂ, ಸತ್ಯವಾದ ಪರಾಕ್ರಮವುಳ್ಳವನಾಗಿಯೂ, ಭಯಗೊಂಡಿರುವವನಾಗಿಯೂ ಇರುವ ನಮ್ಮ ತಂದೆಯು ಪರಲೋಕ ಭಯವನ್ನು ತ್ಯಜಿಸಿ ನಿರ್ಭಯನಾಗಿರಲಿ. ಈ ಪಟ್ಟಾಭಿಷೇಕ ಕಾರ್ಯವು ಬಿಡಲ್ಪಡದಿದ್ದರೆ, ಮಹಾರಾಜನಿಗೆ "ಸತ್ಯವಚನವು ಭ್ರಷ್ಟವಾಗಿಹೋಯಿತಲ್ಲ" ಎಂಬ ಸಂಕಟವುಂಟಾಗುವುದು. ಅದು ನನ್ನನ್ನು ತಪಿಸುವಂತೆ ಮಾಡುತ್ತದೆ. ಆದಕಾರಣ ಅಭಿ ಷೇಕ ಸಂಭಾರವನ್ನು ಬಿಟ್ಟು ಜಾಗ್ರತೆಯಾಗಿ ಅರಣ್ಯವನ್ನು ತೆರಳಬೇಕೆಂದು ಅಪೇಕ್ಷಿಸುತ್ತೇನೆ. ನಾನು ವನವಾಸಕ್ಕೆ ಹೊರಡುವುದರಿಂದ ಆ ಕೈಕೇಯಿದೇವಿಯು ಕೃತಕೃತ್ಯಳಾಗುವಳು. ಅಲ್ಲದೆ ತನ್ನಮಗನಿಗೆ ರಾಜ್ಯದಲ್ಲಿ ಯೌವರಾಜ್ಯಾಭಿಷೇಕವನ್ನು ಮಾಡಿಸುತ್ತಾಳೆ. ಇಷ್ಟೆಯಲ್ಲದೆ

ಮಭಿಷೇಚಯಿತಾ ತತಃ ॥ ೧೨ ॥ ಮಯಿ ಚೀರಾಜಿನಧರೇ ಜಟಾಮಂಡಲ ಧಾರಿಣೀ ॥ ಗತೇಽರಣ್ಯಂ ಚ ಕೈಕೇಯ್ಯಾ ಭವಿಷ್ಯತಿ ಮನಸ್ಸುಖಂ ॥ ೧೩ ॥ ಬುದ್ಧಿಃ ಪ್ರಣೀತಾ ಯೇನೇಯಂ ಮನಶ್ಚ ಸು ಸಮಾಹಿತಂ॥ ತಂತು ನಾರ್ಹಾಮಿ ಸಂಕ್ಲೇಷ್ಟುಂ ಪ್ರವ್ರಜಿಷ್ಯಾಮಿ ಮಾಚಿರಂ ॥ ೧೪ ॥ ಕೃತಾಂತ ಸ್ತ್ವೇವ ಸೌಮಿತ್ರೇ ದ್ರಷ್ಟವ್ಯೋ ಮತ್ಪ್ರವಾಸನೇ ॥ ರಾಜ್ಯಸ್ಯ ಚ ವಿತೀರ್ಣಸ್ಯ ಪುನ ರೇವ ನಿವರ್ತನೇ ॥ ೧೫ ॥ ಕೈಕೇಯ್ಯಾಃ ಪ್ರತಿಪತ್ತಿರ್ಹಿ ಕಥಂ ಸ್ಯಾನ್ಮಮ ಪೀಡನೇ ॥ ಯದಿಭಾವೋ ನದೈವೋಽಯಂ ಕೃತಾಂತವಿಹಿತೋಭವೇತ್ ॥೧೬॥

ಪ್ರಯಾಸವಿಲ್ಲದೆ, ತತಃ - ಬಳಿಕ, ಅಭಿಷೇಚಯಿತಾ - ಅಭಿಷೇಕ ಮಾಡಿಸುವಳು. ॥ ೧೨ ॥ ಚೀರಾಜಿನಧರೇ - ನಾರುಮಡಿಗಳನ್ನೂ ಕೃಷ್ಣಾಜಿನವನ್ನೂ ಧರಿಸಿರುವ, ಜಟಾಮಂಡಲಧಾರಿಣಿ - ಜಡೆಮುಡಿಯನ್ನು ಧರಿಸಿರುವ, ಮಯಿ - ನಾನು, ಅರಣ್ಯಂ - ಅರಣ್ಯವನ್ನು ಕುರಿತು, ಗತೇ - ಹೋಗಲು, ಕೈಕೇಯ್ಯಾಃ - ಕೈಕೆಯಿದೇವಿಯ, ಮನಃ - ಮನವು, ಸುಖಂ - ಸುಖವಾಗಿ, ಭವಿಷ್ಯತಿ - ಆಗುವದು. ॥ ೧೩ ॥ ಯೇನ - ಯಾವ ನನ್ನಿಂದ, ಇಯಂ ಬುದ್ಧಿಃ - ಈ ವನವಾಸ ಮಾಡಬೇಕೆಂಬ ಬುದ್ಧಿಯು, ಪ್ರಣೀತಾ - ಶಿಕ್ಷಿತವಾಯಿತೋ, ಮನಶ್ಚ-ಮನವೂ, ಸುಸಮಾಹಿತಂ- ಸ್ಥಿರವಾಗಿಮಾಡಲ್ಪಟ್ಟಿತೋ, ತಂತು - ಅಂತಹ ನನ್ನನ್ನು, ಸಂಕ್ಲೇಷ್ಟುಂ - ಕ್ಲೇಶಗೊಳಿಸಲು, ನಾರ್ಹಾಮಿ - ಯೋಗ್ಯನಾಗಲಾರೆ, ಮಾಚಿರಂ - ಜಾಗ್ರತೆಯಾಗಿ, ಪ್ರವ್ರಜಿಷ್ಯಾಮಿ - ಪ್ರಯಾಣ ಮಾಡುತ್ತೇನೆ. ॥ ೧೪ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಕೃತಾಂತಸ್ತ್ವೇವ - ದೈವವೇ, ಮತ್ಪ್ರವಾಸನೇ - ನನ್ನ ವನವಾಸದಲ್ಲಿ, ವಿತೀರ್ಣಸ್ಯ - ಕೊಡಲ್ಪಟ್ಟ, ರಾಜ್ಯಸ್ಯ - ರಾಜ್ಯದ, ಪುನರೇವ - ಮತ್ತೂ, ನಿವರ್ತನೇ - ಹಿಂತಿರುಗುವಿಕೆಯಲ್ಲಿಯೂ, ದ್ರಷ್ಟವ್ಯಃ - ಕಾರಣವೆಂದು ತಿಳಿದು ಕೊಳ್ಳತಕ್ಕದು. ॥ ೧೫ ॥ ದೈವಃ - ಕೈಕೇಯಿದೇವಿಯ ಸಂಬಂಧವಾದ, ಅಯಂಭಾವಃ - ಈ ವನವಾಸಾಭಿಪ್ರಾಯವು, ಕೃತಾಂತವಿಹಿತಃ - ದೈವದಿಂದ ಮಾಡಲ್ಪಟ್ಟದು, ನಭವೇದ್ಯದಿ - ಆಗದೇ ಹೋದರೆ, ಕೈಕೇಯ್ಯಾಃ - ಕೈಕೇಯಿದೇವಿಯ, ಪ್ರತಿಪತ್ತಿಃ - ನಿಶ್ಚಯವು, ಮಮ - ನನ್ನ, ಪೀಡನೇ- ಬಾಧಿಸುವಿಕೆಯಲ್ಲಿ, ಕಥಂಸ್ಯಾತ್ - ಹೇಗಾಗುವದು. ॥ ೧೬ ॥ ಹೇ ಸೌಮ್ಯ - ಎಲೈ ಕೋಪ

ನಾನು ನಾರು ಮಡಿಗಳನ್ನುಟ್ಟು ಕೃಷ್ಣಾಜಿನವನ್ನು ಧರಿಸಿ ವನವಾಸಕ್ಕೆ ತೆರಳಿದರೆ, ಆಕೆಯ ಮನಸ್ಸಿಗೆಸುಖವುಂಟಾಗುತ್ತದೆ. ಲಕ್ಷ್ಮಣ ! ಧರ್ಮಯುಕ್ತವಾದ ಈ ಬುದ್ಧಿಯು ಯಾವ ನನ್ನಿಂದ ಚೆನ್ನಾಗಿ ಶಿಕ್ಷಿಸಲ್ಪಟ್ಟು ಸ್ಥಿರಗೊಳಿಸಲಾಯಿತೋ, ಅಂತಹ ನನ್ನನ್ನು ಕ್ಲೇಶಗೊಳಿಸು ವುದಕ್ಕೆ ನಾನು ಸಮರ್ಥನಾಗಲಾರೆನು. ಆದುದರಿಂದ ನಾನು ಈಗ ವನವನ್ನು ಕುರಿತು ಜಾಗ್ರತೆಯಾಗಿ ಹೊರಡುತ್ತೇನೆ. ॥೬ ೧೪॥ ಎಲೈ ಲಕ್ಷ್ಮಣನೇ ! ನಾನು ರಾಜ್ಯಭ್ರಷ್ಟನಾಗಿ ಅರಣ್ಯಕ್ಕೆ ತೆರಳುವುದಕ್ಕೂ, ಪುನಃ ರಾಜ್ಯವನ್ನು ಹೊಂದುವುದಕ್ಕೂ, ದೈವವು ಕಾರಣ ವಾಗಿರುವುದು. ಕಾಲವು ಹೀಗೆ ಒದಗದಿದ್ದರೆ, ಕೈಕೇಯಿದೇವಿಗೆ ಈ ವಿಘವಾದ ಬುದ್ಧಿ ಯುಂಟಾಗಿ ನನಗೆ ವನವಾಸವು ಪ್ರಾಪ್ತನಾಗುತಿದ್ದಿತೇ ? ಜನನಿಯರೆಲ್ಲರಲ್ಲಿಯೂ ಒಂದೇ ವಿಧವಾದ ವಿಶ್ವಾಸವು ನನ್ನಲ್ಲಿ ಹೇಗಿರುವುದೋ, ಹಾಗೆಯೆ, ಆ ಕೈಕೇಯಿ

ಜಾನಾಸಿಹಿ ಯಥಾಸೌಮ್ಯ ನಮಾತೃಷು ಮಮಾಂತರಂ ‖ ಭೂತಪೂರ್ವಂ ವಿಶೇಷೋವಾ ತಸ್ಯಾ ಮಯಿ ಸುತೇಪಿವಾ ‖ ೧೭ ‖ ಸೋಭಿಷೇಕ ನಿವೃತ್ಯರ್ಥೈಃ ಪ್ರವಾಸಾರ್ಥೈಶ್ಚ ದುರ್ವಚೈಃ ‖ ಉಗ್ರೈರ್ವಾಕ್ಯೈರಹಂ ತಸ್ಯಾ ನಾನ್ಯದ್ದೈವಾತ್ಸಮರ್ಥಯೇ ‖ ೧೮ ‖ ಕಥಂ ಪ್ರಕೃತಿಸಂಪನ್ನಾ ರಾಜಪುತ್ರೀ ತಥಾಗುಣಾ ‖ ಬ್ರೂಯಾತ್ಸಾ ಪ್ರಾಕೃತೇವಸ್ತ್ರೀ ಮತ್ಪೀಡಾಂ ಭರ್ತೃ ಸನ್ನಿಧೌ ‖ ೧೯ ‖ ಯದಚಿಂತ್ಯಂತು ತದ್ದೈವಂ ಭೂತೇಷ್ವಪಿ ನಹನ್ಯತೇ ‖

ರಹಿತನೇ, ಮಾತೃಷು - ತಾಯಿಯರಲ್ಲಿ, ಮೇ - ನನಗೆ, ಅಂತರಂ - ಭೇದವು, ಯಥಾ - ಹೇಗೆ, ನಭೂತಪೂರ್ವಂ - ಎಂದಿಗೂ ಪೂರ್ವದಲ್ಲಿ ಇಲ್ಲವೋ, ತಥಾ-ಹಾಗೆ, ಜಾನಾಸಿಹಿ - ತಿಳಿದಿರುವೆಯಷ್ಟೆ, ತಸ್ಯಾಅಪಿ - ಆ ಕೈಕೇಯಿಗೂ ಕೂಡ, ಮಯಿವಾ - ನನ್ನಲ್ಲಿ ಆಗಲಿ, ವಿಶೇಷಃ - ಭೇದವು, ಯಥಾನಭೂತಪೂರ್ವಃ - ಹೇಗೆ ಎಂದಿಗೂ ಪೂರ್ವದಲ್ಲಿ ಇರಲಿಲ್ಲವೋ, ತಥಾ - ಹಾಗೆ, ಜಾನಾಸಿಹಿ - ಅರಿತಿರುವೆಯಷ್ಟೆ, ಸಃ - ಅಂತಹ ನಾನು, ಅಭಿಷೇಕನಿವೃತ್ಯರ್ಥೈಃ, ಅಭಿಷೇಕ - ಪಟ್ಟಾಭಿಷೇಕದ, ನಿವೃತ್ತಿ - ಹೋಗಲಾಡಿಸುವದೇ, ಅರ್ಥೈಃ - ಪ್ರಯೋಜನವಾಗಿ ಉಳ್ಳ, ಪ್ರವಾಸಾರ್ಥೈಃ - ವನ ಪ್ರಯೋಜನವಾಗಿ ಉಳ್ಳ, ದುರ್ವಚೈಃ - ಹೇಳಲಸಾಧ್ಯವಾದ, ಉಗ್ರೈಃ - ಭಯಂಕರವಾದ, ತಸ್ಯಾಃ - ಆ ಕೈಕೇಯಿದೇವಿಯ, ವಾಕ್ಯೈಃ - ಮಾತುಗಳಿಂದ, ಅಹಂ - ನಾನು, ದೈವಾತ್ - ದೈವ ಕ್ಕಿಂತಲೂ, ಅನ್ಯತ್ - ಮತ್ತೊಂದನ್ನು, ನಸಮರ್ಥಯೇ - ನಿಶ್ಚಯಿಸಲಾರೆನು. ‖ ೧೮ ‖ ಪ್ರಕೃತಿಸಂಪನ್ನಾ, ಪ್ರಕೃತಿ - ಸಾಧುಸ್ವಭಾವದಿಂದ, ಸಂಪನ್ನಾ - ಕೂಡಿರುವ, ರಾಜಪುತ್ರೀ - ರಾಜ ಕನ್ಯೆಯಾದ, ತಥಾಗುಣಾಂ - ಅಂತಹ ದಯಾದಾಕ್ಷಿಣ್ಯಾದಿ ಗುಣಗಳುಳ್ಳ, ಸಾಕೈಕೇಯೀ - ಆ ಕೈಕೇಯಿಯು, ಪ್ರಾಕೃತಾ - (ಗೋ) ದಯಾದಾಕ್ಷಿಣ್ಯಾದಿ ವರ್ಜಿತಳಾದ, ಸ್ತ್ರೀವ - ಸ್ತ್ರೀಯಂತೆ, ಭರ್ತೃಸನ್ನಿಧೌ - ತನ್ನ ಗಂಡನ ಸಮೀಪದಲ್ಲಿ, ಮತ್ಪೀಡಾಂ - ನನಗೆ ಬಾಧಾಕರವಾದ ಮಾತನ್ನು, ಕಥಂಬ್ರೂಯಾತ್ - ಹೇಗೆ ಹೇಳುವಳು. ‖ ೧೯ ‖ ಯತ್ - ಯಾವ ದೈವವು, ಅಚಿಂತ್ಯಂ -

ದೇವಿಯೂ ಸಹ, ತನ್ನ ಮಗನಾದ ಭರತನಲ್ಲಿಯೂ, ನನ್ನಲ್ಲಿಯೂ ಭೇದ ಬುದ್ಧಿಯನ್ನು ಎಂದಿಗೂ ಮಾಡದಿರುವುದು ನಿನಗೆ ತಿಳಿದಿರುವುದಲ್ಲವೆ? ಅಷ್ಟು ಪ್ರೀತಿಯಾಗಿದ್ದ ಕೈಕೇಯಿಯು ನನ್ನ ಪಟ್ಟಾಭಿಷೇಕ ವಿಘಾತ ಕಾರಣವುಳ್ಳವುಗಳಾಗಿಯೂ, ವನವಾಸವೇ ಪ್ರಯೋಜನ ವಾಗುಳ್ಳವುಗಳಾಗಿಯೂ, ಹೇಳಲಸದಳವಾದುವುಗಳಾಗಿಯೂ ಇರುವ ಅತಿ ಭಯಂಕರವಾದ ಅಂತಹ ಕೆಟ್ಟಮಾತುಗಳನ್ನು ನುಡಿವಳೆ? ಇದೆಲ್ಲವೂ ದೈವಗತಿಯಿಂದ ಸಂಭವಿಸಿದುವೇ ಹೊರ್ತು ಮತ್ತಾವ ವಿಧದಿಂದಲೂ ಸಂಭವಿಸಲಿಲ್ಲವು. ಏಕೆಂದರೆ, ಸಾಧು ಸ್ವಭಾವವುಳ್ಳ ವಳಾಗಿಯೂ, ರಾಜ ಪುತ್ರಿಯಾಗಿಯೂ, ಅಮೂಲ್ಯವಾದ ದಯಾ ದಾಕ್ಷಿಣ್ಯಾದಿ ಗುಣಗಳುಳ್ಳ ವಳಾಗಿಯೂ ಇರುವ ಆ ಕೈಕೇಯೀದೇವಿಯು ಪತಿಯ ಸಮ್ಮುಖದಲ್ಲಿಯೇ ದಯಾ ಶೂನ್ಯಳಾದ ಮೂರ್ಖ ಸ್ತ್ರೀಯಂತೆ ನನಗೆ ಬಾಧೆಯುಂಟುಮಾಡುವ ಮಾತನ್ನು ಹೇಗೆತಾನೆ ಹೇಳಿದಳು? ಹಾಹಾ! ದೈವಗತಿಯು ಚಿಂತಿಸಲಸದಳವಾದುದು! ಇದನ್ನು ಯಾರೂ ಮೀರಲಾರರು. ಅಷ್ಟು ಗುಣವತಿಯಾದ ಕೈಕೇಯೀದೇವಿಯ ವಿಷಯದಲ್ಲಿಯೂ, ನನ್ನ

ವ್ಯಕ್ತಂ ಮಯಿಚ ತಸ್ಯಾಂಚ ಪತಿತೋಹಿ ವಿಪರ್ಯಯಃ ॥ ೨೦ ॥ ಕಶ್ಚಿದ್ದೈವೇನ ಸೌಮಿತ್ರೇ ಯೋದ್ಧು ಮುತ್ಸಹತೇ ಪುಮಾನ್ ॥ ಯಸ್ಯ ನಗ್ರಹಣಂ ಕಿಂಚಿತ್ಕರ್ಮಣೋಽನ್ಯತ್ರ ದೃಶ್ಯತೇ ॥ ೨೧ ॥ ಸುಖದುಃಖೇ ಭಯಕ್ರೋಧೌ ಲಾಭಾಲಾಭೌ ಭವಾಭವೌ ॥ ಯಚ್ಚಕಿಂಚಿ ತ್ತಥಾಭೂತಂ ನನುದೈವಸ್ಯ ಕರ್ಮ ತತ್ ॥ ೨೨ ॥ ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿತಾಃ ॥ ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಶ್ಯಂ ತೇ ಕಾಮಮನ್ಯುಭಿಃ ॥ ೨೩ ॥

ಚಿಂತಿಸಲಸಾಧ್ಯವಾದ ಪ್ರಭಾವವುಳ್ಳುದೋ, ತದ್ದೈವಂ - ಆ ದೈವವು, ಭೂತೇಷ್ವಪಿ - ಸಕಲ ಭೂತಗಳಲ್ಲಿಯೂ, ನಹನ್ಯತೇ - ಹೊಡಿಯಲ್ಪಡುವದಿಲ್ಲ, ವ್ಯಕ್ತಂ - ಸ್ಪಷ್ಟವು, ಮಯಿಚ - ನನ್ನಲ್ಲಿಯೂ, ತಸ್ಯಾಂಚ - ಆ ಕೈಕೆಯಿಯಲ್ಲಿಯೂ, ವೈಪರೀತ್ಯಂ (ಗೋ + ಮ + ತಿ) ಗತರಾಜ್ಯ ಭ್ರಂಶವೂ, ಮತ್ತು ಪೂರ್ವಸ್ಥಿತವಾತ್ಸಲ್ಯಾದಿ ನಿವೃತ್ತಿಯೂ ಎಂಬ ಎರಡು ರೂಪವಾದ ವೈಪರೀತ್ಯವು, ಪತಿತೋಹಿ - ಪ್ರಾಪ್ತವಾಯಿತಷ್ಟೆ, (ಗೋ × ಮ) ಇದು ದೈವದಿಂದ ಆಯಿತೇ ಹೊರ್ತು ಮತ್ತು ಬೇರೆಯಲ್ಲವು. ॥ ೨೦ ॥ ಹೇ ಸೌಮಿತ್ರೇ - ಎಲೈ ಸುಮಿತ್ರಾಪುತ್ರನಾದ ಲಕ್ಷ್ಮಣನೇ, ಯಸ್ಯ - ಯಾವ ದೈವದ, ಗ್ರಹಣಂ - ಜ್ಞಾನವು, ಕರ್ಮಣಃ - ಕರ್ಮ ಫಲಕ್ಕಿಂತಲೂ, ಅನ್ಯತ್ರ - ಮತ್ತೊಂದು ಸ್ಥಳದಲ್ಲಿ, ನದೃಶ್ಯತೇ - ಕಾಣುವದಿಲ್ಲವೋ, ತೇನ ದೈವೇನ - ಅಂತಹ ದೈವದಿಂದ, ಕಃಪುಮಾನ್ - ಯಾವ ಪುರುಷನು, ಯೋದ್ಧುಂ - ಕಲಹಮಾಡಲು, ಉತ್ಸಹತೇ - ಉದ್ಯುಕ್ತನಾಗುವನು. ॥ ೨೧ ॥ ಸುಖದುಃಖೇ - ಸುಖದುಃಖಗಳೂ, ಭಯಕ್ರೋಧೌ - ಭಯರೋಷಗಳೂ, ಲಾಭಾಲಾಭೌ - ಲಾಭವು ಅಲಾಭವೆಂಬ ಎರಡೂ, ಭವಾಭವೌ - ಬಂಧಮೋಕ್ಷಗಳೆಂಬ ಎರಡೂ, ಯಚ್ಚಕಿಂಚಿತ್ - ಯಾವದೊಂದೂ, ತಥಾಭೂತಂ - (ಗೋ) ಅಂತಹ ಅಚಿಂತ್ಯವಾದ ಕಾರಣವುಳ್ಳುದಾಗಿ, ಅಸ್ತಿ - ಇರುವುದೋ, ತತ್ಸರ್ವಂ - ಅದೆಲ್ಲವೂ, ದೈವಸ್ಯ - ದೈವದ, ಕರ್ಮನನು - ವ್ಯಾಪಾರವಲ್ಲವೆ. ॥ ೨೨ ॥ ಉಗ್ರತಪಸಃ - ಭಯಂಕರವಾದ ತಪಸ್ಸುಳ್ಳ, ಋಷಯೋಽಪಿ - ಋಷಿಗಳೂ ದೈವೇನ - ದೈವದಿಂದ, ಅಭಿಪ್ರಪೀಡಿತಾಃ - ಬಹಳ ಬಾಧಿತರಾಗಿ, ತೀವ್ರಾನ್ - ತೀಕ್ಷ್ಣಗಳಾದ, ನಿಯಮಾನ್ - ವ್ರತಗಳನ್ನು, ಉತ್ಸೃಜ್ಯ - ತೊರೆದು, ಕಾಮಮನ್ಯುಭಿಃ - ಕಾಮಕ್ರೋಧಗಳಿಂದ, ಭ್ರಶ್ಯಂತೇ-ಭ್ರಷ್ಟರಾಗುತ್ತಾರೆ. ॥ ೨೩ ॥ ಇಹ - ಈ ಲೋಕದಲ್ಲಿ, ಆರಬ್ಧಂ - ಪ್ರಾರಂಭಿಸಲ್ಪಟ್ಟ ಕಾರ್ಯವು, ಆರಂಭಂ-ಪ್ರಯತ್ನ

ವಿಷಯದಲ್ಲಿಯೂ ಎಂತಹ ವಿಪರೀತ ಭಾವವು ಸಂಪ್ರಾಪ್ತವಾಯಿತು! ಇದೆಲ್ಲವೂ ದೈವ ವಿಲಾಸದಿಂದಾದುದೇ ಹೊರ್ತು ಇನ್ನಾವುದರಿಂದಲೂ ಅಲ್ಲವು. ॥ ೧೫-೨೦ ॥ ಓ ಲಕ್ಷ್ಮಣನೆ! ಯಾವ ದೈವಜ್ಞಾನವು, ಕರ್ಮ ಫಲಕ್ಕಿಂತಲೂ ಮತ್ತೊಂದು ಕಡೆ ಕಾಣುವುದಿಲ್ಲವೋ, ಅಂತಹ ದೈವದೊಡನೆ ಕಲಹಮಾಡಲು ಯಾವ ಪುರುಷನು ತಾನೆ ಹೋಗುತ್ತಾನೆ. ಸುಖ ದುಃಖಗಳೂ, ಭಯ ಕೋಪಗಳೂ, ಬಂಧ ಮೋಕ್ಷಗಳೂ ಇವುಗಳಲ್ಲಿ ಪ್ರತಿಯೊಂದೂ ಚಿಂತಿಸಲಸವಳವಾದ ಕಾರಣಗಳುಳ್ಳುದಾಗಿ ದೈವವ್ಯಾಪಾರವಾಗಿಯೇ ಇರುವುದಷ್ಟೆ? ಮಹಾ ತಪೋಗರಿಷ್ಠರಾದ ಮುನಿವರೇಣ್ಯರೂ ಸಹ ದೈವದಿಂದ ಬಾಧಿತರಾಗಿ, ಮಹಾ ಪ್ರಯಾಸಕರವಾದ ನಿಯಮಗಳನ್ನು ಬಿಟ್ಟು, ಕಾಮ, ಕ್ರೋಧಾದಿಗಳಿಂದ ಭ್ರಷ್ಟರಾಗಿ

ಅಸಂಕಲ್ಪಿತ ಮೇವೇಹ ಯದಕಸ್ಮಾ ತ್ಪ್ರವರ್ತತೇ ॥ ನಿವೃತ್ಯಾರಂಭ ಮಾರಬ್ಧಂ ನನುದೈವಸ್ಯ ಕರ್ಮತತ್ ॥ ೨೪ ॥ ಏತಯಾ ತತ್ವಯಾ ಬುದ್ಧ್ಯಾ ಸಂಸ್ತಭ್ಯಾತ್ಮಾನಮಾತ್ಮನಾ ॥ ವ್ಯಾಹತೇಪ್ಯಭಿಷೇಕೇ ಮೇ ಪರಿತಾಪೋ ನವಿದ್ಯತೇ ॥ ೨೫ ॥ ತಸ್ಮಾದಪರಿತಾಪಸ್ಸಂಸ್ತ್ವಮಪ್ಯನುವಿಧಾಯ ಮಾಂ ॥ ಪ್ರತಿಸಂಹಾರಯ ಕ್ಷಿಪ್ರಮಾಭಿಷೇಚನಕೀಂ ಕ್ರಿಯಾಂ ॥ ೨೬ ॥ ಏಭಿರೇವ ಘಟೈಸ್ಸರ್ವೈರಭಿಷೇಚನ ಸಂಭೃತೈಃ ॥ ಮಮ ಲಕ್ಷ್ಮಣ ತಾಪಸ್ಯೇ ವ್ರತಸ್ನಾನಂ ಭವಿಷ್ಯತಿ ॥ ೨೭ ॥ ಅಥವಾ ಕಿಂ ಮಮೈತೇನ ರಾಜದ್ರವ್ಯಮಯೇನತು ॥ ಉದ್ಧೃತಂ ಮೇ ಸ್ವಯಂ ತೋಯಂ ವ್ರತಾದೇಶಂ ಕರಿಷ್ಯತಿ ॥ ೨೮ ॥

ವನ್ನು, ನಿವೃತ್ಯ - ಹೋಗಲಾಡಿಸಿ, ಅಸಂಕಲ್ಪಿತಂ - ಯೋಚಿಸದಿರುವ, ಯತ್ಕಾರ್ಯಂ - ಯಾವ ಕಾರ್ಯವು, ಅಕಸ್ಮಾತ್ - ಪ್ರಯತ್ನವಿಲ್ಲದೆ, ಪ್ರವರ್ತತೇ - ನಡೆಯುವುದೋ, ತತ್ - ಅದು, ದೈವಸ್ಯ - ದೈವದ, ಕರ್ಮನನು - ಕಾರ್ಯವಷ್ಟೆ. ॥ ೨೪ ॥ ತತ್ವಯಾ - ಯಥಾರ್ಥವಾದ, ಏತಯಾಬುದ್ಧ್ಯಾ - ಈ ಬುದ್ಧಿಯಿಂದ, ಆತ್ಮಾನಂ - ಅಂತಃಕರಣವನ್ನು, ಆತ್ಮನಾ - ತನ್ನಿಂದಲೇ, ಸಂಸ್ತಭ್ಯ - ನಿಶ್ಚಲವಾಗಿಮಾಡಿ, ಮೇ - ನನಗೆ, ಅಭಿಷೇಕೇ - ಪಟ್ಟಾಭಿಷೇಕವು, ವ್ಯಾಹತೇಸತ್ಯಪಿ, ಹೊಡೆಯಲ್ಪಟ್ಟದಾದರೂ, ಪರಿತಾಪಃ - ಸಂತಾಪವು, ನವಿದ್ಯತೇ - ಇಲ್ಲ, ತಸ್ಮಾತ್ - ಆ ಕಾರಣ, ತ್ವಮಪಿ - ನೀನೂ, ಅಪರಿತಾಪಸ್ಸ - ಸಂತಾಪವಿಲ್ಲದವನಾಗಿ, ಮಾಂ - ನನ್ನನ್ನು, ಅನುವಿಧಾಯ- ಅನುವರ್ತಿಸಿ, ಕ್ಷಿಪ್ರಂ - ಜಾಗ್ರತೆಯಾಗಿ, ಅಭಿಷೇಚನಕೀಂ - ಅಭಿಷೇಚನ ಪ್ರಯೋಜನವಾದ, ಕ್ರಿಯಾಂ - ಕರ್ಮವನ್ನು, ಪ್ರತಿಸಂಹರ - ನಿಲ್ಲಿಸು. ॥ ೨೫-೨೬ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಅಭಿಷೇಚನಸಂಭೃತೈಃ - ಅಭಿಷೇಕಾರ್ಥವಾಗಿ ಸಂಪಾದಿಸಲ್ಪಟ್ಟ, ಸರ್ವೈಃ - ಸಮಸ್ತವಾದ, ಏಭಿರೇವಘಟೈಃ - ಈ ಘಟಗಳಲ್ಲಿರುವ ಉದಕಗಳಿಂದಲೇ, ಮಮ - ನನಗೆ, ತಾಪಸ್ಯೇ - ಋಷಿ ಯೋಗ್ಯವಾದ ಕರ್ಮದಲ್ಲಿ, ವ್ರತಸ್ನಾನಂ - ನಿಯಮಸ್ನಾನವು, ಭವಿಷ್ಯತಿ - ಆಗುತ್ತದೆ. ॥ ೨೭ ॥ ಅಥವಾ - ಹಾಗಲ್ಲದಿದ್ದರೆ, (೧) ರಾಜದ್ರವ್ಯಮಯೇನ - ರಾಜದ್ರವ್ಯವೇ ಪ್ರಚುರವಾಗುಳ್ಳ, ಏತೇನ -

---

ಹೋಗುತ್ತಾರೆ. ಈ ಲೋಕದಲ್ಲಿ ಆರಂಭಿಸಿದ ಕಾರ್ಯವಾವುದೋ ಅದನ್ನು ಕೆಡಿಸಿ, ಅಕಸ್ಮಾತ್ತಾಗಿ ಬೇರೊಂದು ಸಂಭವಿಸುವುದು ಪ್ರಾರಬ್ಧಕ್ಕೆ ಅಧೀನವಾದುದಲ್ಲವೆ ? ಈ ತತ್ವ ಬುದ್ಧಿಯಿಂದ ಮನವನ್ನು ಸ್ಥಿರಗೊಳಿಸಿಕೊಂಡಿರುವ ನನಗೆ ಯೌವರಾಜ್ಯಾಭಿಷೇಕ ವಿಘ್ನ ದಿಂದ ಸ್ವಲ್ಪ ಮಾತ್ರವೂ ಸಂತಾಪವುಂಟಾಗುವುದಿಲ್ಲ. ಆದುದರಿಂದ ನೀನೂ ಸಹ ಪರಿತಪಿಸದೆ ನನ್ನನ್ನನುವರ್ತಿಸಿ, ಅಭಿಷೇಕ ಫಲರೂಪವಾದ ಉದ್ಯೋಗವನ್ನುಳಿದು ಶಾಂತನಾಗು. ಈಗ ಪಟ್ಟಾಭಿಷೇಕಕ್ಕೋಸುಗ ಸಂಪಾದಿಸಿರುವ ಈ ಕಲಶೋದಕಗಳಿಂದಲೇ ನನಗೆ ಋಷಿ ಯೋಗ್ಯವಾದ ಕರ್ಮದಲ್ಲಿ ನಿಯಮಸ್ನಾನವಾಗುವುದು. ಅಥವ ರಾಜದ್ರವ್ಯವೇ ಮೂಲ ಕಾರಣವುಳ್ಳ ಈ ಸಾಮಗ್ರಿಯಿಂದ ನನಗೇನು ಪ್ರಯೋಜನವು. ನನ್ನಿಂದ ಸೇದಿಕೊಳ್ಳಲ್ಪಟ್ಟ ಉದಕವೇ ನನಗೆ ವ್ರತನಿಯಮವನ್ನು ಮಾಡಿಸುವುದು. ॥೨೧-೨೮॥ ಎಲೈ ಲಕ್ಷ್ಮಣನೆ!

ಟಿ. (೧) ಇಲ್ಲಿ "ರಾಜದ್ರವ್ಯೈನ" ಎಂಬ ಪಾಠಾಂತರ ವುಂಟೆಂದು **ಗೋವಿಂದರಾಜರು** ಬರೆಯುತ್ತಾರೆ.

ಮಾಚ ಲಕ್ಷ್ಮಣ ಸಂತಾಪಂ ಕಾರ್ಷೀರ್ಲಕ್ಷ್ಮ್ಯಾಂ ವಿಪರ್ಯಯೇ ॥ ರಾಜ್ಯಂ ವಾ ವನವಾಸೋವಾ ವನವಾಸೋ ಮಹೋದಯಃ ॥ ೨೯ ॥

ನಲಕ್ಷ್ಮಣಾಸ್ಮಿನ್ ಖಲುಕರ್ಮ ವಿಘ್ನೇ
ಮಾತಾ ಯವೀಯಸ್ಯತಿ ಶಂಕನೀಯಾ ॥
ದೈವಾಭಿಪನ್ನಾಹಿ ವದತ್ಯನಿಷ್ಟಂ
ಜಾನಾಸಿ ದೈವಂಚ ತಥಾ ಪ್ರಭಾವಂ ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾವಿಂಶಸ್ಸರ್ಗಃ.

ಈ ಸಾಮಗ್ರಿಯಿಂದ, ಮಮ - ನನಗೆ, ಕಿಂ - ಯೇನು ಪ್ರಯೋಜನವು, ಮೇ - ನನಗೆ, ಸ್ವಯಂ - ತನ್ನಷ್ಟಕ್ಕೆ ತಾನೇ, ಉದ್ಧೃತಂ - ಸೇದಿಕೊಳ್ಳಲ್ಪಟ್ಟ, ತೋಯಂ - ಉದಕವು, ವ್ರತಾದೇಶಂ - ವ್ರತನಿಯಮವನ್ನು, ಕರಿಷ್ಯತಿ - ಮಾಡಿಸುವದು. ॥ ೨೮ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಲಕ್ಷ್ಮ್ಯಾಃ - ರಾಜಲಕ್ಷ್ಮಿಯ, ವಿಪರ್ಯಯೇ - ವ್ಯತ್ಯಾಸ ವಿಷಯದಲ್ಲಿ, ಸಂತಾಪಂ - ಅನುತಾಪ ವನ್ನು, ಮಾಕಾರ್ಷೀಃ - ಮಾಡಬೇಡ, ರಾಜ್ಯಂವಾ - ರಾಜ್ಯವಾದರೆ ಏನು, ವನವಾಸೋವಾ - ವನ ವಾಸವಾದರೆ ಏನು, ತತ್ರ - ಆ ಎರಡರಲ್ಲಿ, ವನವಾಸಃ - ವನವಾಸವು, ಮಹೋದಯಃ - (೧) ಬಹಳ ಅಭ್ಯುದಯಕ್ಕೆ ಸಾಧನವಾದುದು. ॥ ೨೯ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಅಸ್ಮಿನ್ ಕರ್ಮವಿಘ್ನೇ - ಈ ಪಟ್ಟಾಭಿಷೇಕ ರೂಪವ್ಯಾಪಾರವಾದೀ ವಿಷಯದಲ್ಲಿ, ಯವೀಯಸೀ - ಕನಿಷ್ಠ ಳಾದ, ಮಾತಾ - ತಾಯಿಯಾದ ಕೈಕೇಯಿಯು, ನಾತಿಶಂಕನೀಯಾ - ಆಕ್ಷೇಪಣೆಮಾಡತಕ್ಕವಳಲ್ಲ, ಹಿ - ಯಾವ ಕಾರಣ, ದೈವಾಭಿಪನ್ನಾ - ದೈವದಿಂದ ಪ್ರೇರೇಪಿಸಲ್ಪಟ್ಟವಳಾಗಿ, ಅನಿಷ್ಟಂ - ಇಷ್ಟ ವಿಲ್ಲದಿರುವ ವಚನವನ್ನು, ವದತಿ - ಹೇಳಿದಳೋ, ದೈವಂಚ - ದೈವವನ್ನು, ತಥಾ ಪ್ರಭಾವಂ - ಅಂತಹ ಮಹಾತ್ಮ್ಯವುಳ್ಳುದನ್ನಾಗಿ, ಜಾನಾಸಿ - ತಿಳಿದೇ ಇರುವೆಯಷ್ಟೆ. ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾವಿಂಶಸ್ಸರ್ಗಃ.

ರಾಜ್ಯ ಲಕ್ಷ್ಮಿಯ ವಿಪರ್ಯವನ್ನು ಕುರಿತು ಚಿಂತಿಸಬೇಡ. ರಾಜ್ಯವಾದರೇನು? ವನವಾಸವಾದರೇನು? ಯಾವುದಾದರೂ ಸರಿಯೆ! ಈ ಎರಡರಲ್ಲಿ ವನವಾಸವೇ ಅಭ್ಯುದ ಯಕ್ಕೆ ಕಾರಣವಾದುದು. ಈ ಪಟ್ಟಾಭಿಷೇಕ ವಿಘ್ನದಲ್ಲಿ ನಮ್ಮ ಚಿಕ್ಕ ತಾಯಿಯು ಯಾವ ಶಂಕೆಯಿಂದ, ದೈವ ಪ್ರೇರಿತಳಾಗಿ ಅಪ್ರಿಯವಾದ ನುಡಿಗಳನ್ನು ಹೇಳಿದಳೋ, ಆ ಕಾರಣದಿಂದ ಆಕೆಯು ಆಕ್ಷೇಪಣೆಗೆ ಗುರಿಯಾಗಲಾರಳು, ದೈವ ಮಹಿಮೆಯನ್ನು ತಿಳಿದಿ ರುವೆಯಷ್ಟೆ? ॥ ೨೯-೩೦ ॥

ಇಂತಿದು ಶ್ರೀರಾಮಕೃತ ಲಕ್ಷ್ಮಣ ಸಾಂತ್ವನ ಕಥಾ ಕಥನವೆಂಬ
ಇಪ್ಪತ್ತೆರಡನೆಯ ಸರ್ಗವು ಸಂಪೂರ್ಣವಾದುದು.

ಟ. (೧) "ಮಹೋದಯಃ" ಇಲ್ಲಿ ಈ ಶಬ್ದ ಸ್ವಾರಸ್ಯ ವಿಷಯದಲ್ಲಿ ವ್ಯಾಖ್ಯಾನಕಾರರ ಅಭಿಪ್ರಾಯವು ಹೀಗೆ. "ವನವಾಸವೇ ನಮಗೆ ಅಭ್ಯುದಯವನ್ನುಂಟುಮಾಡುತ್ತದೆ" ಎಂಬ ರಾಮ ವಾಕ್ಯವು, ಮುಂದಾಗಬೇಕಾದ ರಾವಣಾದಿಗಳ ಸಂಹಾರವೂ ಅಲ್ಲದೆ ಲಕ್ಷ್ಮಣ ಸ್ವಾಮಿಗೆ ತನ್ನ ಅವತಾರದ ಪ್ರಯೋಜನವೂ ಸೂಚಿಸಲ್ಪಟ್ಟಿತೆಂದು ಕೆಲವರ ಅಭಿಪ್ರಾಯವು.

ಅಯೋಧ್ಯಾಕಾಂಡೇ ತ್ರಯೋವಿಂಶಸ್ಸರ್ಗಃ.

ಇತಿ ಬ್ರುವತಿ ರಾಮೇತು ಲಕ್ಷ್ಮಣೋ ಧಶ್ಶಿರಾ ಮುಹುಃ ॥ ಶ್ರುತ್ವಾ ಮಧ್ಯಂ ಜಗಾಮೇವ ಮನಸಾ ದುಃಖ ಹರ್ಷಯೋಃ ॥ ೧ ॥ ತದಾತು ಬಧ್ವಾ ಭ್ರುಕುಟೀಂ ಭ್ರುವೋರ್ಮಧ್ಯೇ ನರರ್ಷಭಃ ॥ ನಿಶಶ್ವಾಸ ಮಹಾಸರ್ಪೋ ಬಿಲಸ್ಥ ಇವರೋಷಿತಃ ॥ ೨ ॥ ತಸ್ಯ ದುಷ್ಪ್ರತಿವೀಕ್ಷ್ಯಂ ತದ್ಭ್ರುಕುಟೀ ಸಹಿತಂ ತದಾ ॥ ಬಭೌ ಕ್ರುದ್ಧಸ್ಯ ಸಿಂಹಸ್ಯ ಮುಖಸ್ಯ ಸದೃಶಂ ಮುಖಂ ॥೩॥ ಅಗ್ರಹಸ್ತಂ ವಿಧೂನ್ವಂಸ್ತು ಹಸ್ತಿಹಸ್ತಮಿವಾತ್ಮನಃ ॥ ತಿರ್ಯಗೂರ್ಧ್ವಂ ಶರೀರೇಚ ಪಾತಯಿತ್ವಾ ಶಿರೋಧರಾಂ ॥ ೪ ॥ ಅಗ್ರಾಕ್ಷ್ಣಾ ವೀಕ್ಷಮಾ

ರಾಮೇ - ಶ್ರೀರಾಮನು, ಇತಿ-ಈ ಪರಿಯಾಗಿ, ಬ್ರುವತಿ - ಹೇಳಲು, ಲಕ್ಷ್ಮಣಃ - ಲಕ್ಷ್ಮಣ ಸ್ವಾಮಿಯು, ಅಧಶ್ಶಿರಾಃ - ತಗ್ಗಿದ ತಲೆಯುಳ್ಳವನಾಗಿ, ಶ್ರುತ್ವಾ - ಕೇಳಿ, ಮನಸಾ - ಮನಸ್ಸಿನಿಂದ, ಮುಹುಃ - ಬಾರಿಬಾರಿಗೂ, ದುಃಖಹರ್ಷಯೋಃ - ದುಃಖ ಸಂತೋಷಗಳ, ಮಧ್ಯಂ - ಮಧ್ಯಪ್ರದೇಶವನ್ನು, ಜಗಾಮೇವ - ಹೊಂದಿದವನಂತಿದ್ದನು. ॥ ೧ ॥ ತದಾ - ಆಗ, ನರರ್ಷಭಃ - ಪುರುಷ ಶ್ರೇಷ್ಠನಾದ ಲಕ್ಷ್ಮಣನು, ಭ್ರುವೋಃ - ಕಣ್ಣುಬ್ಬುಗಳ, ಮಧ್ಯೇ-ಮಧ್ಯದಲ್ಲಿ, ಭ್ರುಕುಟೀಂ -ಹುಬ್ಬುಗಳ ಮುಡಿಯನ್ನು, ಬಧ್ವಾ-ಕಟ್ಟಿಕೊಂಡು, ಬಿಲಸ್ಥಃ-(ಗೋ) ಪೇಟಿಕಾರಂಧ್ರದಲ್ಲಿರುವ, ರೋಷಿತಃ-ಕೋಪಾಕ್ರಾಂತವಾದ, ಮಹಾಸರ್ಪಇವ - ದೊಡ್ಡ ಹಾವಿನಂತೆ, ನಿಶಶ್ವಾಸ - ನಿಟ್ಟುಸುರನ್ನು ಬಿಟ್ಟನು. ॥ ೨ ॥ ತದಾ - ಆಗ, ಕ್ರುದ್ಧಸ್ಯ - ಕೋಪಿಷ್ಠನಾದ, ತಸ್ಯ - ಆ ಲಕ್ಷ್ಮಣನ, ಭ್ರುಕುಟೀಸಹಿತಂ - ಕಣ್ಣುಬ್ಬುಗಳ ಮುಡಿಯಿಂದ ಕೂಡಿಕೊಂಡಿರುವ, ದುಷ್ಪ್ರತೀಕ್ಷ್ಯಂ-ನೋಡಲಸಾಧ್ಯವಾದ, ತನ್ಮುಖಂ-ಆ ಮುಖವು, ಸಿಂಹಸ್ಯ - ಸಿಂಹದ, ಮುಖಸ್ಯ-ಮುಖಕ್ಕೆ, ಸದೃಶಂ ಸಮಾನವಾಗಿ, ಬಭೌ-ಹೊಳೆಯುತ್ತಿದ್ದಿತು. ॥ ೩ ॥ ಆತ್ಮನಃ - ತನ್ನ, ಹಸ್ತಿಹಸ್ತಮಿವಸ್ಥಿತಂ - ಆನೆಯಸೊಂಡಿಲನಂತಿರುವ, ಅಗ್ರಹಸ್ತಂ - ಮುಂಗೈಯನ್ನು, ವಿಧೂನ್ವನ್ - ಕೊಡಹುತ್ತ, ಶಿರೋಧರಾಂ - ಕಂಠವನ್ನು, ಶರೀರೇ-ಶರೀರದಲ್ಲಿ, ತಿರ್ಯಗೂರ್ಧ್ವಂ-ಅಡ್ಡವಾಗಿಯೂ ಮೇಲಕ್ಕೂ, ಪಾತಯಿತ್ವಾ-ತಿರುಗಿಸಿ, ಅಗ್ರಾಕ್ಷ್ಣಾ-ಕೊನೆಗಣ್ಣಿನಿಂದ, ತಿರ್ಯಕ್ - ಅಡ್ಡವಾಗಿ, ವೀಕ್ಷಮಾಣಃ - ನೋಡುತ್ತ, ಭ್ರಾತರಂ - ಅಣ್ಣನಾದ ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥ ೪ ॥ ಧರ್ಮದೋಷಪ್ರಸಂಗೇನ-

---

ಶ್ರೀರಾಮನೀರೀತಿ ಹೇಳಲು, ಲಕ್ಷ್ಮಣನು ತಲೆ ಬಗ್ಗಿಸಿಕೊಂಡು, ದುಃಖ ಮತ್ತು ಸಂತೋಷಗಳ ಮಧ್ಯ ಪ್ರದೇಶವನ್ನು ಹೊಂದಿದವನಾಗಿ, ಕಣ್ಣುಬ್ಬುಗಳನ್ನು ಗಂಟಿಕ್ಕಿ, ಬಿಲ ದಲ್ಲಿರುವ ರೋಷವುಳ್ಳ ಮಹಾ ಸರ್ಪದಂತೆ ನಿಟ್ಟುಸಿರುಗಳನ್ನು ಬಿಡುತ್ತಿದ್ದನು. ಆ ಸಮ ಯದಲ್ಲಿ ಆತನ ಮುಖವು ಮಹಾ ಕೋಪವುಳ್ಳ ಸಿಂಹದಂತೆ ಅತಿ ಭಯಂಕರವಾಗಿದ್ದಿತು. ಆನೆಯ ಸೊಂಡಲಿನಂತಿರುವ ತನ್ನ ಮುಂಗೈಯನ್ನು ತಿರುವುತ್ತಲೂ, ಅಡ್ಡವಾಗಿಯೂ,

ಣಸ್ತು ತಿರ್ಯಗ್ ಭ್ರಾತರಮಬ್ರವೀತ್ ॥ ಅಸ್ಥಾನೇ ಸಂಭ್ರಮೋಯಸ್ಯ ಜಾತೋಽಯಂ ಸುಮಹಾನಯಂ ॥ ೫ ॥ ಧರ್ಮ ದೋಷಪ್ರಸಂಗೇನ ಲೋಕಸ್ಯಾನತಿಶಂಕಯಾ ॥ ಕಥಂ ಹ್ಯೇತದಸಂಭ್ರಾಂತ ಸ್ತ್ವದ್ವಿಧೋ ವಕ್ತು ಮರ್ಹತಿ ॥ ೬ ॥ ಯಥಾ ದೈವಮಶೌಂಡೀರಂ ಶೌಂಡೀರ ಕ್ಷತ್ರಿಯರ್ಷಭ ॥ ಕಿಂನಾಮ ಕೃಪಣಂ ದೈವಮಶಕ್ತಮಭಿಶಂಸಸಿ ॥ ೭ ॥ ಪಾಪಯೋಸ್ತೇ ಕಥಂ ನಾಮ ತಯೋಃಶ್ಶಂಕಾ ನವಿದ್ಯತೇ ॥ ಸಂತಿ ಧರ್ಮೋಪಧಾಃ ಶ್ಲಕ್ಷ್ಣಾ

(ಗೋ + ಮ) ಪಿತೃವಾಕ್ಯ ಪರಿಪಾಲನವೆಂಬ ಧರ್ಮವನ್ನು ಪರಿಪಾಲನಮಾಡದೆ ಹೋದುದರಿಂದಾದ ದೋಷದ, ಪ್ರಸಂಗೇನ - ವ್ಯಾಜದಿಂದ, ಲೋಕಸ್ಯ - ಜನರ, ಅನತಿಶಂಕಯಾ-ಸಂಶಯ ಹುಟ್ಟದಿರ ಲೆಂಬುದರಿಂದ, ಯಸ್ಯ - ಯಾವ ನಿನಗೆ, ಸುಮಹಾನ್ - ದೊಡ್ಡದಾದ, ಸಂಭ್ರಮಃ - ವನಕ್ಕೆ ಹೋಗಬೇಕೆಂಬ ಅವಸರವು, ಜಾತಃ - ಹುಟ್ಟಿತೋ, ಅಯಂ - ಇದು, ಅಸ್ಥಾನೇ - ಅಯುಕ್ತವು. ॥ ೫ ॥ ಹೇ ಶೌಂಡೀರ - ಎಲೈ ಸಮರ್ಥನಾದವನೇ, ಹೇ ಕ್ಷತ್ರಿಯರ್ಷಭ - ಎಲೈ ಕ್ಷತ್ರಿಯ ಶ್ರೇಷ್ಠನೇ, ಅಶೌಂಡೀರಂ - ಸಾಮರ್ಥ್ಯವಿಲ್ಲದಿರುವ, ದೈವಂ - ದೈವವನ್ನು, ಯಥಾ - ಹೇಗೆ, ತ್ವಂ - ನೀನು, ವದಸಿ - ಹೇಳುವೆಯೋ, ಏತತ್ - ಈ ಮಾತನ್ನು, ಅಸಂಭ್ರಾಂತಃ - ಭ್ರಾಂತನಾಗಿ ರುವ, ತ್ವದ್ವಿಧಃ - ನಿನ್ನಂತಹ ಕ್ಷತ್ರಿಯನು, ವಕ್ತುಂ - ಹೇಳಲು, ಕಥಂ - ಹೇಗೆ, ಅರ್ಹತಿ - ಯೋಗ್ಯನಾಗುತ್ತಾನೆ. ॥ ೬ ॥ ಕೃಪಣಂ - ದೀನವಾದ, ಅಶಕ್ತಂ - ಅಸಮರ್ಥವಾದ, ದೈವಂ - ದೈವವೆಂಬ ಪದಾರ್ಥವನ್ನು, ಕಿಂನಾಭಿಶಂಸಸಿ - ಏನೆಂದು ಸ್ತೋತ್ರ ಮಾಡುತ್ತೀಯೆ, ತೇ - ನಿನಗೆ, ಪಾಪಯೋಃ - ಪಾಪಾತ್ಮರಾದ, ತಯೋಃ-ಆ ಕೈಕೇಯಿಯಾ ದಶರಥರಾಜರ ವಿಷಯದಲ್ಲಿ, ಪಾಪಶಂಕಾ- ಪಾಪಿಷ್ಠರೆಂಬ ಸಂಶಯವು, ಕಥಂನಾಮ - ಹೇಗೆತಾನೆ, ನವಿದ್ಯತೇ - ಹುಟ್ಟುವದಿಲ್ಲ. ॥ ೭ ॥ ಧರ್ಮಾತ್ಮನ್ - ಎಲೈ ಧರ್ಮವೇ ಸ್ವಭಾವವುಳ್ಳವನೆ! ಧರ್ಮೋಪಧಾಃ - ಧರ್ಮವೇ ವ್ಯಾಜವಾಗಿಯು, ಶ್ಲಕ್ಷ್ಣಾಃ - (ಗೋ + ಮ + ತಿ) ಧರ್ಮಾಚರಣೆಯೆಂಬ ಕಂಚುಕದಿಂದಸ್ವದೋಷವನ್ನಾಚ್ಛಾದನಮಾಡಿ ಕೊಂಡಿರುವ ಜನರು, ಲೋಕೇ - ಲೋಕದಲ್ಲಿ, ಸಂತಿ - ಇರುತ್ತಾರೆ, ಹೇ ಧರ್ಮಾತ್ಮನ್ - ಎಲೈ ಧರ್ಮೈಕಸ್ವಭಾವವುಳ್ಳವನೇ, ಶಾಠ್ಯಾತ್ - (ತಿ + ಮ) ಗೂಢವಾಗಿ ಅಪ್ರಿಯಕಾರಿಗಳಾದುದರಿಂದ, ಸ್ವಾರ್ಥಂ - ಸ್ವಪ್ರಯೋಜನವನ್ನು, ಪರಿಜಿಹೀರ್ಷತೋಃ - ಕಳೆದುಕೊಳ್ಳಲಪೇಕ್ಷೆಯುಳ್ಳ, ತಯೋಃ - ಆ ಕೈಕೇಯಿಯಾ ದಶರಥರ, ಸುಚರಿತಂ - (ಗೋ) ಚನ್ನಾಗಿ ಆಲೋಚಿಸಲ್ಪಟ್ಟ ಕಾರ್ಯವನ್ನು, ಕಿಂನ

ಮೇಲ್ಗಡೆಯೂ, ಶರೀರದಲ್ಲಿಯೂ ಸಹ ತನ್ನ ಕೊರಳನ್ನು ತೂಗುತ್ತಲೂ, ಕೊನೆಗಣ್ಣೋಟ ದಿಂದ ಅಡ್ಡಡ್ಡವಾಗಿ ನೋಡುತ್ತಲೂ ಇರುವ ಆ ಲಕ್ಷ್ಮಣನು ಶ್ರೀರಾಮನನ್ನು ಕುರಿತು ಹೀಗೆಂದನು. ॥ ೧-೫ ॥ ಅಣ್ಣಾ! ಧರ್ಮ ಲೋಪಗಳ ಪ್ರಸಾಪದಿಂದಲೂ, ಜನರೆಲ್ಲರೂ ಸಂದೇಹಿಸದಿರಬೇಕೆಂಬುದರಿಂದಲೂ, ನಿನಗೆ ಯಾವ ಮಹಾ ಸಂಭ್ರಮವು ಹುಟ್ಟಿತೋ, ಅದು ಅಯುಕ್ತವಾದುದು. ಎಲೈ ಕ್ಷತ್ರಿಯ ಶ್ರೇಷ್ಠನೆ! ಸಾಮರ್ಥ್ಯವಿಲ್ಲದಿರುವ ದೈವ ವನ್ನು ನೀನು ಹೇಗೆ ಹೇಳುವೆಯೋ, ಹಾಗೆ ನನ್ನಂತಹ ಜಾಗರೂಕನಾದ ಪುರುಷನು ಯಾವನೂ ಹೇಳಲಾರನು. ದೀನವಾಗಿಯೂ, ಶಕ್ತಿಹೀನವಾಗಿಯೂ, ಧರ್ಮಾಚರಣೆ

ಧರ್ಮಾರ್ತ್ಮ ಕಿಂನಬುಧ್ಯಸೇ ॥ ೮ ॥ ತಯೋಸ್ಸುಚರಿತಂ ಸ್ವಾರ್ಥಂ ಶಾಠ್ಯಾತ್ಪರಿಜಿಹೀರ್ಷತೋಃ ॥ ಯದಿನೈವಂ ವ್ಯವಸಿತಂ ಸ್ಯಾದ್ಧಿ ಪ್ರಾಗೇವ ರಾಘವ॥೯॥ ತಯೋಃ ಪ್ರಾಗೇವ ದತ್ತಶ್ಚ ಸ್ಯಾದ್ವರಃ ಪ್ರಕೃತಶ್ಚಸಃ ॥ ಲೋಕವಿದ್ವಿಷ್ಟಮಾರಬ್ಧಂ ತ್ವದನ್ಯಸ್ಯಾಭಿಷೇಚನಂ ॥ ೧೦ ॥ ನೋತ್ಸಹೇ ಸಹಿತುಂ ವೀರ ತತ್ರ ಮೇ ಕ್ಷಂತುಮರ್ಹಸಿ ॥ ಯೇನೇಯಮಾಗತಾದ್ವೈಧಂ ತವಬುದ್ಧಿರ್ಮಹಾಮತೇ ॥ ೧೧ ॥ ಸಹಿ ಧರ್ಮೋ ಮಮದ್ವೇಷ್ಯಃ ಪ್ರಸಂಗಾದ್ಯಸ್ಯ ಮುಹ್ಯಸಿ ॥ ಕಥಂ ತ್ವಂ ಕರ್ಮಣಾ ಶಕ್ತಃ ಕೈಕೇಯೀ ವಶವರ್ತಿನಃ ॥ ೧೨ ॥

ಬುಧ್ಯಸೇ - ಏತಕ್ಕೆ ತಿಳಿಯದೇಹೋದೆ. ॥ ೮ ॥ ಹೇ ರಾಘವ - ಎಲೈ ಶ್ರೀರಾಮನೆ, ಪ್ರಾಗೇವ - ಅಭಿಷೇಕಕ್ಕಿಂತಲೂ ಮೊದಲೇ, ಏವಂ - ಈ ಪ್ರಕಾರದಿಂದ, ತಯೋಃ - ಆ ಕೈಕೇಯೀ ದಶರಥರ, ವ್ಯವಸ್ಥಿತಂ - ನಿಶ್ಚಯವು, ನಸ್ಯಾದ್ಯದಿ - ಇಲ್ಲದೇಹೋದರೆ, ತದಾ - ಆ ಕಾಲದಲ್ಲಿ, ಪ್ರಕೃತಃ - ಮೊದಲೇ ಪ್ರಸಕ್ತವಾದ, ಸವರಃ - ಆ ವರವು, ದತ್ತಸ್ಯಾತ್ - ಕೊಟ್ಟದ್ದೇ ಆಗುತ್ತಿದ್ದಿತು. ॥ ೯ ॥ ಹೇ ವೀರ - ಎಲೈ ಶೂರನೇ, ಆರಬ್ಧಂ - ಆರಂಭಿಸಲ್ಪಟ್ಟ, ತ್ವದನ್ಯಸ್ಯ - ನಿನ್ನನ್ನು ಬಿಟ್ಟು ಮತ್ತೊಬ್ಬನಾದ ಚಿಕ್ಕವನಿಗೆ, ಅಭಿಷೇಚನಂ - ರಾಜ್ಯಾಭಿಷೇಕವು, ಲೋಕವಿದ್ವಿಷ್ಟಂ - ಲೋಕ ಜನರಲ್ಲಿ, ವಿದ್ವಿಷ್ಟಂ - ವಿರುದ್ಧವಾದುದಾದಕಾರಣ, ಸಹಿತುಂ - ಸಹಿಸುವುದಕ್ಕೆ, ನೋತ್ಸಹೇ - ಉದ್ಯುಕ್ತನಾಗಲಾರೆನು, ಮೇ - ನನ್ನ, ತತ್ರ - ಆ ಅಸಹನವಿಷಯದಲ್ಲಿ, ಕ್ಷಂತುಂ - ಕ್ಷಮಿಸುವದಕ್ಕೆ, ಅರ್ಹಸಿ - ಯೋಗ್ಯನಾಗು, ॥ ೧೦ ॥ ಹೇ ಮಹಾಮತೇ - ಎಲೈ ಮಹಾ ಬುದ್ಧಿಯುಳ್ಳವನೇ, ತವ - ನಿನ್ನ, ಬುದ್ಧಿಃ - ಬುದ್ಧಿಯು, ಯೇನ - (ಗೋ + ತಿ) ಯಾವ ಪಿತೃವಾಕ್ಯ ಪರಿಪಾಲನ ರೂಪ ಧರ್ಮದಿಂದ, ದ್ವೈಧಂ - ಭೇದವನ್ನು, ಆಗತಾ - ಹೊಂದಿತೋ, ಯಸ್ಯ - ಯಾವ ಧರ್ಮದ, ಪ್ರಸಂಗಾತ್ - ಪ್ರಸ್ತಾವದಿಂದ, ಮುಹ್ಯಸಿ - (ಮ) ಮಾಡದೇಹೋದರೆ ಧರ್ಮಭ್ರಷ್ಟನಾಗುವೆನೆಂಬ ಭ್ರಾಂತಿಯನ್ನು ಪಡೆದಿರುವೆಯೋ, ಸಧರ್ಮಃ - ಆ ಧರ್ಮವು, ಮಮ - ನನಗೆ, ದ್ವೇಷ್ಯೋಹಿ - ದ್ವೇಷವಿಷಯವಷ್ಟೆ. ॥ ೧೧ ॥ ಕರ್ಮಣಾ - ಪುರುಷವ್ಯಾಪಾರದಿಂದ, ಶಕ್ತಃ - ಸಮರ್ಥನಾದ, ತ್ವಂ - ನೀನು, ಕೈಕೇಯೀ ವಶವರ್ತಿನಃ-ಕೈಕೇಯಿಗೆ ಸ್ವಾಧೀನನಾದ, ಪಿತುಃ - ತಂದೆಯ, ಅಧರ್ಮಿಷ್ಠಂ - ಧರ್ಮ

ಯೆಂಬ ಕವಚದಿಂದ ತಮ್ಮ ದೋಷಗಳನ್ನು ಮರೆ ಮಾಡುವವರಾಗಿಯೂ ಇರುವ ಜನರು ಬಹು ಮಂದಿ ಇರುವರು. ಅಂತಹ ಇವರು ಅಪ್ರಿಯಕಾರಿಗಳಾದುದರಿಂದ ನಮ್ಮ ಪ್ರಯೋಜನ ವಿಘಾತಿಗಳಾದ ಕೈಕೇಯೀ ದಶರಥರೆಂಬ ಅವರೀರ್ವರ ಆಲೋಚನೆಯನ್ನು ಏಕೆ ತಿಳಿಯದಿರುವೆ? ಈ ಅಭಿಷೇಕ ವಿಘ್ನವನ್ನು ಮಾಡಬೇಕೆಂಬ ನಿಶ್ಚಯವು ಅವರಿಗಿಲ್ಲದಿದ್ದರೆ, ಈಗ ಒದಗಿ ಬಂದಿರುವ ವರವು ಮೊದಲೇ ಕೊಡಲ್ಪಡುತ್ತಿದ್ದಿತೆಂದು ತಿಳಿಯುತ್ತೇನೆ. ॥೯-೧೦॥ ಎಲೈ ಶೂರನೇ! ಕೇಳು; ನಿನ್ನ ವಿನಹ ಮತ್ತೊಬ್ಬನಿಗೆ ಪಟ್ಟಾಭಿಷೇಕವಾಗುವುದು ಲೋಕ ವಿರುದ್ಧವು. ಆದುದರಿಂದ ನಾನದನ್ನು ಸಹಿಸಲಾರೆನು. ಈ ವಿಷಯದಲ್ಲಿ ಮಾತ್ರ ನನ್ನನ್ನು ಕ್ಷಮಿಸುವವನಾಗು. ಪಿತೃವಾಕ್ಯ ಪರಿಪಾಲನಾ ರೂಪವಾದ ಯಾವ ಧರ್ಮದಿಂದ ನಿನ್ನ ಬುದ್ಧಿಯು ಭೇದಿಸಿತೋ, ಮತ್ತು ಯಾವ ಧರ್ಮದಿಂದ ನೀನು ಮೋಹಿತನಾದೆಯೋ,

ಕರಿಷ್ಯಸಿ ಪಿತುರ್ವಾಕ್ಯಮಧರ್ಮಿಷ್ಠಂ ವಿಗರ್ಹಿತಂ ‖ ಯದ್ಯಯಂ ಕಿಲ್ಬಿಷಾ ದ್ಭೇದಃ ಕೃತೋಪ್ಯೇವಂ ನಗೃಹ್ಯತೇ ‖ ೧೩ ‖ ಜಾಯತೇ ತತ್ರ ಮೇ ದುಃಖಂ ಧರ್ಮಸಂಗಶ್ಚ ಗರ್ಹಿತಃ ‖ ಮನಸಾಪಿ ಕಥಂ ಕಾಮಂ ಕುರ್ಯಾಸ್ತ್ವಂ ಕಾಮ ವೃತ್ತಯೋಃ ‖ ೧೪ ‖ ತಯೋಸ್ತ್ವಹಿತಯೋರ್ನಿತ್ಯಂ ಶತ್ರ್ವೋಃ ಪಿತ್ರಭಿಧಾ ನಯೋಃ ‖ ಯದ್ಯಪಿ ಪ್ರತಿಪತ್ತಿಸ್ತೇ ದೈವೀಚಾಪಿ ತಯೋರ್ಮತಂ ‖ ೧೫ ‖ ತಥಾಪ್ಯುಪೇಕ್ಷಣೀಯಂ ತೇ ನಮೇ ತದಪಿ ರೋಚತೇ ‖ ವಿಕ್ಲಬೋ ವೀರ್ಯ

ವಲ್ಲದಿರುವ, ವಿಗರ್ಹಿತಂ - ನಿಂದಿತವಾದ, ವಾಕ್ಯಂ - ಮಾತನ್ನು, ಕಥಂಕರಿಷ್ಯಸಿ-ಹೇಗೆಮಾಡುತ್ತೀ. ‖ ೧೨ ‖ ಅಯಂ - ಈ ವ್ಯತ್ಯಾಸವು, ಕಿಲ್ಬಿಷಾತ್ - ಸುಳ್ಳಾದವರ ಕಲ್ಪನೆಯಿಂದ, ಕೃತೋಪಿ - ಮಾಡಲ್ಪಟ್ಟುದಾದರೂ, ಏವಂ - ಹೀಗೆ, ನಗೃಹ್ಯತೇಯದಿ - ಗ್ರಹಿಸಲ್ಪಡದೆ ಇದ್ದರೆ, ತತ್ರ - ಆ ಗ್ರಹಿಸಲ್ಪಡದಿರುವ ವಿಷಯದಲ್ಲಿ, ಮೇ - ನನಗೆ, ದುಃಖಂ - ವ್ಯಸನವು, ಜಾಯತೇ - ಆಗುತ್ತದೆ, ಧರ್ಮಸಂಗಶ್ಚ - ಇಂತಹ ಧರ್ಮಸಂಗ್ರಹಣವು, ಗರ್ಹಿತಃ - ನಿಂದಿತವು. ‖ ೧೩ ‖ ಕಾಮವೃತ್ತ ಯೋಃ - ಕಾಮಾಸಕ್ತರಾದ, ಅಹಿತಯೋಃ - ನಿನ್ನಲ್ಲಿ ಪ್ರೇಮವಿಲ್ಲದಿರುವ, ಪಿತ್ರಭಿಧಾನಯೋಃ - ತಾಯಿ ತಂದೆಗಳೆಂಬ ಹೆಸರುಗಳುಳ್ಳ, ನಿತ್ಯಂ - ನಿರಂತರವು, ಶತ್ರ್ವೋಃ - ಶತ್ರುಗಳಾದ, ತಯೋಃ - ಆ ಕೈಕೇಯೀ ದಶರಥರಾಯರ, ಕಾಮಂ - ಸಂಕಲ್ಪವನ್ನು, ತ್ವಂ - ನೀನು, ಮನಸಾಪಿ - ಮನಸ್ಸಿ ನಿಂದಲೂ, ಕಥಂಕುರ್ಯಾಃ - ಹೇಗೆಮಾಡುವೆ. ‖ ೧೪ ‖ ಯದ್ಯಪಿ - ಆದರೆ, ತಯೋಃ - ಆ ಕೈಕೇಯೀ ದಶರಥರಾಯರ, ಪ್ರತಿಪತ್ತಿಃ - ಅಭಿಷೇಕ ವಿಘಾತವಿಷಯವಾದ ಬುದ್ಧಿಯು, ದೈವೀ - ದೈವಾಧೀನವಾದುದು, ಇತಿ - ಎಂದು, ತೇ - ನಿನ್ನ, ಮತಂ - ಮತವು, ಉಪೇಕ್ಷಣೀಯಂ - ಉಪೇಕ್ಷೆಮಾಡತಕ್ಕುದು, ಮೇ - ನನಗೆ, ತದಪಿ - ಅದೂ, ನರೋಚತೇ - ಸಮ್ಮತವಲ್ಲ. ‖ ೧೫ ‖ ವಿಕ್ಲಬಃ - ಭಯಶೀಲನಾಗಿಯೂ, ವೀರ್ಯಹೀನಶ್ಚ - ಪರಾಕ್ರಮರಹಿತನಾಗಿಯೂ ಇರುವನು,

ಆ ಧರ್ಮವು ನನಗೆ ದ್ವೇಷನೀಯವಾಗಿಯೇ ಇರುವುದು. ಕೈಕೇಯಿಯ ಸ್ತ್ರೈವಶನಾದ ದಶರಥರಾಯನಿಗೆ ಪ್ರತೀಕಾರವನ್ನು ಮಾಡುವುದಕ್ಕೆ ನೀನು ಸಮರ್ಥನಾಗಿದ್ದರೂ, ಅಧರ್ಮವಾಗಿಯೂ, ನಿಂದಿತವಾಗಿಯೂ ಇರುವ ಆತನ ನುಡಿಗಳನ್ನು ಹೇಗೆತಾನೆ ಮಾಡುತ್ತೀಯೆ. ಎಲೈ ಶ್ರೀರಾಮನೆ ! ಈ ನಿನ್ನ ಅಭಿಷೇಕವಿಘಾತ ರೂಪವಾದ ಸಂಕಟವು ಸುಳ್ಳುವರವನ್ನುಂಟಾಗಿದ್ದರೂ ನೀನು ತಿಳಿಯಲಾರೆಯಷ್ಟೆ ? ಈ ವಿಷಯದಲ್ಲಿ ನನಗೆ ಬಹಳ ಸಂಕಟವಾಗಿರುವುದು. ಇಂತಹ ದುರ್ಗುಣಗಳುಳ್ಳ ಧರ್ಮ ಪ್ರಸ್ತಾಪವು ಬಲು ನಿಂದಿತ ವಾದುದು. ಮಾತಾ ಪಿತೃಗಳೆಂದು ಹೆಸರುಳ್ಳವರಾಗಿ ಶತ್ರುಗಳಾದ, ಕಾಮ ವೃತ್ತಿಯುಳ್ಳ ಅವರಿಬ್ಬರ ಕೋರಿಕೆಯನ್ನು ನೀನು ಮನಸ್ಸಿನಿಂದಲಾದರೂ ಹೇಗೆ ನೆರವೇರಿಸುತ್ತೀಯೆ ? ಆದರೆ, ಕೈಕೇಯೀ ದಶರಥರಿಗೆ ಉಂಟಾಗಿರುವ ಈ ಬುದ್ಧಿಯು ದೈವದಿಂದುಂಟಾದುದೆಂದು ನಿನ್ನ ಅಭಿಪ್ರಾಯವು. ಹೇಗಾದರೂ ಆಗಲಿ ಈ ಅಭಿಪ್ರಾಯವನ್ನು ಬಿಟ್ಟುಬಿಡು. ಅದು ನನಗೆ ಇಷ್ಟವಾಗಿಲ್ಲ, ಏಕೆಂಬೆಯೋ ? ಕೇಳು; ಭಯ ಶೀಲನಾಗಿಯೂ, ಸಾಮರ್ಥ್ಯ ವಿಲ್ಲ ದವನಾಗಿಯೂ ಇರುವ ಪುರುಷನು ದೈವವನ್ನು ಹಿಂಬಾಲಿಸಬೇಕು. ವೀರರೂ ಯುಕ್ತಾ

ಹೀನೋಯಸ್ಸದೈವಮನುವರ್ತತೇ ॥ ೧೬ ॥ ವೀರಾ ಸ್ಸಂಭಾವಿತಾತ್ಮಾನೋ ನದೈವಂ ಪರ್ಯುಪಾಸತೇ ॥ ದೈವಂ ಪುರುಷಕಾರೇಣ ಯಸ್ಸಮರ್ಥಃ ಪ್ರಬಾಧಿತುಂ ॥ ೧೭ ॥ ನದೈವೇನ ವಿಪನ್ನಾರ್ಥಃ ಪುರುಷ ಸ್ಸೋವಸೀದತಿ ॥ ದ್ರಕ್ಷ್ಯಂತಿ ತ್ವದ್ಯ ದೈವಸ್ಯ ಪೌರುಷಂ ಪುರುಷಸ್ಯಚ ॥ ೧೮ ॥ ದೈವಮಾನುಷಯೋಃರದ್ಯ ವ್ಯಕ್ತಾವ್ಯಕ್ತಿ ರ್ಭವಿಷ್ಯತಿ ॥ ಅದ್ಯ ಮತ್ಪೌರುಷಹತಂ ದೈವಂ ದ್ರಕ್ಷ್ಯಂತಿ ವೈ ಜನಾಃ ॥೧೯॥ ಯದ್ದೈವಾದಾಹತಂ ತೇದ್ಯದೃಷ್ಟಂ ರಾಜ್ಯಾಭಿಷೇಚನಂ ॥

ಯಃ - ಯಾವನೋ, ಸಃ - ಆ ಪುರುಷನು, ದೈವಂ - ದೈವವನ್ನು, ಅನುವರ್ತತೇ - ಅನುಸರಿಸುತ್ತಾನೆ, ಸಂಭಾವಿತಾತ್ಮನಃ - ಜನರಿಂದ ಶ್ಲಾಘನೆಮಾಡಲ್ಪಟ್ಟ ಧೈರ್ಯವುಳ್ಳ, ವೀರಾಃ - ಶೂರರು, ದೈವಂ - ದೈವವೆಂಬ ಪದಾರ್ಥವನ್ನು, ನಪರ್ಯುಪಾಸತೇ - ಸೇವಿಸುವದಿಲ್ಲ. ॥ ೧೬ ॥ ಯಃ - ಯಾವ ಪುರುಷನು, ಪುರುಷಕಾರೇಣ - ಪೌರುಷದಿಂದ, ದೈವಂ - ದೈವವನ್ನು, ಪ್ರಬಾಧಿತುಂ - ಬಾಧಿಸುವದಕ್ಕೆ, ಸಮರ್ಥಃ - ಸಮರ್ಥನೋ, ಸಪುರುಷಃ - ಆ ಪುರುಷನು, ದೈವೇನ - ದೈವಾಧೀನದಿಂದ, ವಿಪನ್ನಾರ್ಥಃ - ವಿಘಟಿತವಾದ ಪ್ರಯೋಜನವುಳ್ಳವನಾದರೂ, ನಾವಸೀದತಿ - ವ್ಯಸನಬೀಳುವದಿಲ್ಲ. ॥ ೧೭ ॥ ಅದ್ಯ - ಈಗ, ದೈವಸ್ಯ - ದೈವದ, ಪುರುಷಸ್ಯಚ - ಪುರುಷನ, ಪೌರುಷಂ - ಪರಾಕ್ರಮವನ್ನು, ದ್ರಕ್ಷ್ಯಂತಿ - ನೋಡುತ್ತಾರೆ, ಅದ್ಯ- ಈಗಲೇ, ದೈವಮಾನುಷಯೋಃ- ದೇವಮನುಷ್ಯರ, ವ್ಯಕ್ತಿಃ - ಪ್ರಾಬಲ್ಯದೌರ್ಬಲ್ಯವಿವೇಕವು, ವ್ಯಕ್ತಾ - ಸ್ಪಷ್ಟವಾದುದು, ಭವಿಷ್ಯತಿ - ಆಗುವದು. ॥ ೧೮ ॥ ಅದ್ಯ - ಈಗ, ತೇ - ನಿನಗೆ, ದೃಷ್ಟಂ - ಕಾಣಲ್ಪಟ್ಟ, ಯತ್ - ಯಾವ, ರಾಜ್ಯಾಭಿಷೇಚನಂ - ರಾಜ್ಯದ ಪಟ್ಟಾಭಿಷೇಕವು, ದೈವಾತ್ - ದೈವದಿಂದ, ಆಹತಂ - ವಿಘ್ನಮಾಡಲ್ಪಟ್ಟಿತೋ, ಅದ್ಯ - ಈಗ, ಮತ್ಪೌರುಷಹತಂ, ಮತ್ - ನನ್ನ, ಪೌರುಷ - ಪರಾಕ್ರಮದಿಂದ, ಹತಂ- ಹೊಡೆಯಲ್ಪಟ್ಟ, ದೈವಂ - ದೈವವನ್ನು, ಜನಾಃ - ಜನರು, ದ್ರಕ್ಷ್ಯಂತಿ - ನೋಡುತ್ತಾರೆ, (ಯದ್ವಾ ತೇ - ನಿನಗೆ,) ಅದ್ಯ - ಈಗ, ಯತ್ - ಯಾವ, ರಾಜ್ಯಾಭಿಷೇಚನಂ - ರಾಜ್ಯಪಟ್ಟಾಭಿಷೇಕವು, ಯದ್ದೈವಾತ್ - ಯಾವ ದೈವದಿಂದ, ಆಹತಂ - ಹೊಡೆಯಲ್ಪಟ್ಟುದಾಗಿ, ದೃಷ್ಟಂ - ಕಾಣಲ್ಪಟ್ಟಿರುವುದೋ, ತದ್ದೈವಂ - ಅಂತಹ ದೈವವನ್ನು, ಮತ್ಪೌರುಷಹತಂ ನನ್ನ ಪುರುಷಪ್ರಯತ್ನದಿಂದ ನಿರಾಕೃತವನ್ನಾಗಿ, ಜನಾಃ - ಜನರು, ದ್ರಕ್ಷ್ಯಂತಿವೈ - ನೋಡುತ್ತಾರೆಯಷ್ಟೆ. ॥ ೧೯ ॥

ಯುಕ್ತನನ್ನು ಅರಿತವರೂ ಆದ ಬುದ್ಧಿವಂತರು ದೈವವನ್ನನುಸರಿಸುವುದಿಲ್ಲ. ॥ ೧೧-೧೬ ॥ ಯಾವ ಪುರುಷನು ಪೌರುಷದಿಂದ ದೈವವನ್ನು ಪೀಡಿಸಲು ಸಮರ್ಥನಾಗಿರುವನೋ, ಅಂತಹನು ದೈವಾಧೀನದಿಂದ ವಿಘ್ನವು ಸಂಭವಿಸಿದ ಕಾರ್ಯಗಳುಳ್ಳವನಾದರೂ ಯೋಚಿಸುವುದಿಲ್ಲ. ಈಗಲಾದರೋ, ದೈವಶಕ್ತಿಯನ್ನೂ, ಪುರುಷನ ಸಾಮರ್ಥ್ಯವನ್ನೂ ಎಲ್ಲರೂ ನೋಡಿರುವರು; ಇವೆರಡರಲ್ಲಿ ಯಾವುದು ಬಲವಾದುದೋ ಅದೇ ಸ್ಪಷ್ಟಪಡುವುದು. ಈಗ ನಿನ್ನ ಯೌವರಾಜ್ಯ ಪಟ್ಟಾಭಿಷೇಕವು ಯಾವ ದೈವದಿಂದ ಹೊಡೆಯಲ್ಪಟ್ಟುದಾಗಿ ಕಾಣುತ್ತಿರುವುದೋ ಅಂತಹ ದೈವವು ನನ್ನ ಪರಾಕ್ರಮದಿಂದ ನಿರಾಕರಿಸಲ್ಪಟ್ಟುದನ್ನಾಗಿ ಜನರೆಲ್ಲರೂ ನೋಡುವವರಾಗಲಿ. ಮದಹತ್ತಿ, ಅಂಕುಶಕ್ಕೂ ಸಹ ಮಣಿಯದೆ, ಸರಪಣಿಯನ್ನು

ಅತ್ಯಂಕುಶ ಮಿವೋದ್ದಾಮಂ ಗಜಂ ಮದಬಲೋದ್ಧತಂ ‖ ೨೦ ‖ ಪ್ರಧಾವಿತ ಮಹಂ ದೈವಂ ಪೌರುಷೇಣ ನಿವರ್ತಯೇ ‖ ಲೋಕಪಾಲಾ ಸ್ಸಮಸ್ತಾಸ್ತೇ ನಾದ್ಯ ರಾಮಾಭಿಷೇಚನಂ ‖ ೨೧ ‖ ನಚಕೃತ್ಸ್ನಾ ಸ್ತ್ರಯೋಲೋಕಾ ವಿಹನ್ಯುಃ ಕಿಂ ಪುನಃ ಪಿತಾ ‖ ಯೈರ್ವಿವಾಸ ಸ್ತವಾರಣ್ಯೇ ಮಿಥೋ ರಾಜ್ಞ ಸಮರ್ಥಿತಃ ‖ ೨೨ ‖ ಅರಣ್ಯೇ ತೇನಿವತ್ಸ್ಯಂತಿ ಚತುರ್ದಶ ಸಮಾಸ್ತಥಾ ‖ ಅಹಂ ತದಾಶಾಂ ಛೇತ್ಸ್ಯಾಮಿ ಪಿತುಸ್ತಸ್ಯಾಶ್ಚ ಯಾ ತವ ‖ ೨೩ ‖ ಅಭಿಷೇಕ ವಿಘಾತೇನ ಪುತ್ರರಾಜ್ಯಾಯ ವರ್ತತೇ ‖ ಮದ್ಬಲೇನ ವಿರುದ್ಧಾಯ ನಸ್ಯಾ

ಅತ್ಯಂಕುಶಂ - ಅಂಕುಶಾಯುಧವನ್ನು ಅತಿಕ್ರಮಿಸಿರುವ, ಉದ್ದಾಮಂ - ಕಾಲುಸಂಕೋಲೆಗಳನ್ನು, ತಪ್ಪಿಸಿಕೊಂಡಿರುವ, ಮದಬಲೋದ್ಧತಂ - ಮದೋದ್ರೇಕದಿಂದ ಉಚ್ಛೃಂಖಲವಾದ, ಪ್ರಧಾವಿತಂ - ಇದುರಾಗಿ ಓಡಿಬರುತ್ತಿರುವ ಗಜಮಿವ - ಗಜವನ್ನಂತೆ, ದೈವಂ - ದೈವವನ್ನು, ಅಹಂ - ನಾನು, ಪೌರುಷೇಣ - ಪರಾಕ್ರಮದಿಂದ, ನಿವರ್ತಯೇ - ಹಿಂತಿರಗಿಸುತ್ತೇನೆ. ‖ ೨೦ ‖ ಹೇ ರಾಮ - ಎಲೈ ಶ್ರೀರಾಮನೆ, ಅದ್ಯ - ಈಗ, ಸಮಸ್ತಾಃ - ಸಮಸ್ತರಾದ, ಲೋಕಪಾಲಾಃ - ಲೋಕಪಾಲಕರೂ, ತೇ - ನಿನಗೆ, ಅಭಿಷೇಚನಂ - ಪಟ್ಟಾಭಿಷೇಚನವನ್ನು, ನವಿಹನ್ಯುಃ - ವಿಘ್ನಮಾಡಲಾರರು, ಕೃತ್ಸ್ನಾಃ - ಸಮಸ್ತವಾದ, ತ್ರಯೋಲೋಕಾಃ - ಮೂರುಲೋಕಗಳೂ, ತೇ - ನಿನ್ನ, ಅಭಿಷೇಚನಂ- ಪಟ್ಟಾಭಿಷೇಕವನ್ನು, ನವಿಹನ್ಯುಃ - ಕೊಡಿಯಲಾರವು, ಪಿತಾ - ತಂದೆಯಾದವನೊಬ್ಬನೇ, ಕಿಂಪುನಃ- ಏನು ಹೇಳತಕ್ಕದು. ‖ ೨೧ ‖ ಹೇ ರಾಜ್ಞ - ಎಲೈ ಅರಸೆ, ತವ - ನಿನಿಗೆ, ಅರಣ್ಯೇ - ಅರಣ್ಯದಲ್ಲಿ, ವಿವಾಸಃ - ಪ್ರಯಾಣವು, ಯೈಃ - ಯಾರಿಂದ, ಮಿಥಃ - ಅನ್ಯೋನ್ಯವಾಗಿ, ಸಮರ್ಥಿತಃ - ಸಾಧಿಸಲ್ಪಟ್ಟರುವುದೋ, ತೇ - ಅವರೆಲ್ಲರೂ, ಅರಣ್ಯೇ ಅರಣ್ಯದಲ್ಲಿ, ತಥಾ - ಹಾಗೆಯೇ, ಚತುರ್ದಶ ಸಮಾಃ - ಹದಿನಾಲ್ಕು ವರುಷಗಳು, ನಿವತ್ಸ್ಯಂತಿ - ಇರುವರು. ‖ ೨೨ ‖ ತತ್ - ಆಕಾರಣ, ಯಾ - ಯಾವ ಆಶೆಯು, ಅಭಿಷೇಕವಿಘಾತೇನ-ಪಟ್ಟಾಭಿಷೇಕದ ವಿಘ್ನದಿಂದಲೂ, ಪುತ್ರರಾಜ್ಯಾಯ- ಪುತ್ರನಿಗೆ ರಾಜ್ಯಕ್ಕೋಸುಗ, ವರ್ತತೇ - ಇದೆಯೋ, ಅಹಂ - ನಾನು, ಪಿತುಃ - ತಂದೆಯ, ತಸ್ಯಾಶ್ಚ - ಆ ಕೈಕೇಯಿದೇವಿಯ, ತಾಮಾಶಾಂ - ಆ ಆಶೆಯನ್ನು, ಛೇತ್ಸ್ಯಾಮಿ - ಕತ್ತರಿಸಿ ಹಾಕುತ್ತೇನೆ. ‖ ೨೩ ‖ ಮದ್ಬಲೇನ, ಮತ್-ನನ್ನ, ಬಲೇನ - ಪರಾಕ್ರಮದಿಂದ, ನಿರುದ್ಧಾಯ-

---

ಕಿತ್ತಿಕೊಂಡು ಎದುರಾಗಿ ಓಡಿ ಬರುವ ಆನೆಯಂತೆ, ಇದಿರಾಗುತ್ತಿರುವ ದೈವವನ್ನು ಪೌರುಷದಿಂದ ಹಿಂತಿರುಗಿಸುವೆನು. ‖೧೭-೨೦‖ ಎಲೈ ಶ್ರೀರಾಮನೆ! ಈಗ ಲೋಕ ಪಾಲಕರೂ, ಸಮಸ್ತ ಜನರೂ, ಇವರಲ್ಲಿ ಯಾರೂ ನಿನ್ನ ಪಟ್ಟಾಭಿಷೇಕಕ್ಕೆ ವಿಘ್ನವನ್ನಾಚರಿಸುವುದಿಲ್ಲವು. ತಂದೆಯಾದ ದಶರಥರಾಯನೊಬ್ಬನೇ ಈರೀತಿ ಮಾಡುತ್ತಿರುವನು. ಈ ವಿಷಯದಲ್ಲಿ ಹೇಳಬೇಕಾದುದೇನು ತಾನೇ ಇರುವುದು. ನಿನಗೆ ಈ ವನವಾಸವು ಯಾರಿಂದ ಆಜ್ಞಾಪಿಸಲ್ಪಟ್ಟತೋ, ಅವರು ಹದಿನಾಲ್ಕು ಸಂವತ್ಸರಗಳು ವನದಲ್ಲಿರಲಿ, ಯಾವ ತಾಯಿ ತಂದೆಗಳ ಆಶೆಯು ನಿನ್ನ ಪಟ್ಟಾಭಿಷೇಕ ವಿಘಾತದಿಂದ ಮಗನಿಗೆ ರಾಜ್ಯ ಪದವಿಯನ್ನು ಕೊಡಿಸಬೇಕೆಂಬುದಾಗಿರುವುದೋ, ಆ ಆಶೆಯನ್ನು ನಾನು ಖಂಡಿಸುತ್ತೇನೆ. ಶತ್ರುಗಳಿಗೆ

ದ್ದೈವಬಲಂ ತಥಾ ॥ ಪ್ರಭವಿಷ್ಯತಿ ದುಃಖಾಯ ಯಥೋಗ್ರಂ ಪೌರುಷಂ ಮಮ ॥ ೨೪ ॥ ಊರ್ಧ್ವಂ ವರ್ಷಸಹಸ್ರಾಂತೇ ಪ್ರಜಾಪಾಲ್ಯಮನಂತರಂ ॥ ಆರ್ಯಪುತ್ರಾಃ ಕರಿಷ್ಯಂತಿ ವನವಾಸಂ ಗತೇ ತ್ವಯಿ ॥ ೨೫ ॥ ಪೂರ್ವ ರಾಜರ್ಷಿ ವೃತ್ತ್ಯಾಹಿ ವನವಾಸೋ ವಿಧೀಯತೇ ॥ ಪ್ರಜಾ ನಿಕ್ಷಿಪ್ಯ ಪುತ್ರೇಷು ಪುತ್ರವತ್ಪರಿಪಾಲನೇ ॥ ೨೬ ॥ ಸಚೇದ್ರಾಜ್ಯನ್ಯನೇಕಾಗ್ರೇ ರಾಜ್ಯ ವಿಭ್ರಮ ಶಂಕಯಾ ॥ ನೈವಮಿಚ್ಛಸಿ ಧರ್ಮಾತ್ಮ ರಾಜ್ಯಂ ರಾಮ ತ್ವಮಾತ್ಮನಿ ॥೨೭॥ ಪ್ರತಿಜಾನೇಚ ತೇ ವೀರ ಮಾಭೂವಂ ವೀರಲೋಕಭಾಕ್ ॥ ರಾಜ್ಯಂಚ

ವಿರುದ್ಧವಾದ, ಜನಾಯ - ಜನಕ್ಕೋಸುಗ, ಮಮ - ನನ್ನ, ಉಗ್ರಂ - ಭಯಂಕರವಾದ, ಪೌರುಷಂ - ಶೌರ್ಯವು, ಯಥಾ - ಹೇಗೆ, ದುಃಖಾಯ - ದುಃಖಕ್ಕೋಸುಗ, ಪ್ರಭವಿಷ್ಯತಿ - ಸಮರ್ಥವಾಗುತ್ತದೆಯೋ, ತಥಾ - ಹಾಗೆ, ದೈವಬಲಂ - ದೈವಬಲವು, ನಸ್ಯಾತ್ - ಆಗಲಾರದು. ॥ ೨೪ ॥ ಊರ್ಧ್ವಂ - ಚಿರಕಾಲಾನಂತರದಲ್ಲಿ, ವರ್ಷಸಹಸ್ರಾಂತೇ, ವರ್ಷ - ವರುಷಗಳ, ಸಹಸ್ರ-ಸಹಸ್ರಗಳ, ಅಂತೇ - ಕಳೆಯುವ ಕಾಲದಲ್ಲಿ, ತ್ವಯಿ - ನೀನು, ವನವಾಸಂ - ವನದಲ್ಲಿ ವಾಸವನ್ನು, (ವಾನಪ್ರಸ್ಥಾಶ್ರಮವನ್ನು) ಗತೇಸತಿ - ಹೊಂದಿದವನಾಗಲು, ಆರ್ಯಪುತ್ರಾಃ-ಪೂಜ್ಯನಾದ ನಿನ್ನ ಮಕ್ಕಳು, ಅನಂತರಂ - ಆ ಬಳಿಕ, ಪ್ರಜಾಪಾಲ್ಯಂ, ಪ್ರಜಾ - ಪ್ರಜೆಗಳ, ಪಾಲ್ಯಂ - ಪಾಲನೆಯನ್ನು, ಕರಿಷ್ಯಂತಿ - ಮಾಡುವರು. ॥ ೨೫ ॥ ಪುತ್ರೇಷು - ಮಕ್ಕಳಲ್ಲಿ, ಪ್ರಜಾಃ - ಪ್ರಜೆಗಳು, ಪುತ್ರವತ್-ಮಕ್ಕಳಂತೆ, ಪರಿಪಾಲನೇ - ಸಂರಕ್ಷಣ ವಿಷಯದಲ್ಲಿ, ನಿಕ್ಷಿಪ್ಯ - ಇರಿಸಿ, ಪೂರ್ವರಾಜರ್ಷಿವೃತ್ತ್ಯಾ, ಪೂರ್ವ - ಪ್ರಾಚೀನರಾದ, ರಾಜರ್ಷಿ - ರಾಜರ್ಷಿಗಳ, ವೃತ್ತ್ಯಾ - ಆಚಾರದಿಂದ, ವನವಾಸಃ - ವನವಾಸವು, ವಿಧೀಯತೇ - ವಿಧಿಸಲ್ಪಡುತ್ತದೆಯಷ್ಟೆ. ॥ ೨೬ ॥ ಹೇ ಧರ್ಮಾತ್ಮ ಎಲೈ ಧರ್ಮಿಷ್ಠನೆ, ಹೇ ರಾಮ - ಎಲೈ ಶ್ರೀರಾಮನೇ, ಸತ್ವಂ - ಅಂತಹ ನೀನು, ರಾಜನಿ - ಅರಸನಾಗಿ, ಅನೇಕಾಗ್ರೇ - ಚಪಲಚಿತ್ತನಾಗಲು, ರಾಜ್ಯವಿಭ್ರಮಶಂಕಯಾ, ರಾಜ್ಯ - ರಾಜ್ಯಭಾರದ, ವಿಭ್ರಮ-ಚ್ಯುತಿಯಿಂದ ಉಂಟಾದ, ಶಂಕಯಾ - ಭಯದಿಂದ, ಆತ್ಮನಿ-ನಿನ್ನ ಮನಸ್ಸಿನಲ್ಲಿ, ಏನಂ ರಾಜ್ಯಂ ಈ ರಾಜ್ಯವನ್ನು, ನೇಚ್ಛಸಿಚೇತ್ - ಇಚ್ಛಿಸದೇಹೋದರೆ, ಅಹಂ - ನಾನು, ತವ - ನಿನ್ನ, ರಾಜ್ಯಂ - ರಾಜ್ಯವನ್ನು, ವೇಲಾ - ಧಡವು, ಸಾಗರಮಿವ - ಸಮುದ್ರವನ್ನಂತೆ, ರಕ್ಷೇಯಂ - ಸಂರಕ್ಷಿಸುವೆನು, ಹೇ ವೀರ -

ಉಗ್ರವಾದ ನನ್ನ ಪೌರುಷವು ಹೇಗೆ ದುಃಖಕರವಾಗಿರುವುದೋ, ಹಾಗೆ ದೈವವು ಮಾಡುವುದಕ್ಕೆ ಸಮರ್ಥವಾಗಲಾರದು; ಅನೇಕ ಸಂವತ್ಸರ ಸಹಸ್ರಗಳು ರಾಜ್ಯ ಪದವಿಯನ್ನನುಭವಿಸಿದ ಮೇಲೆ ನೀನು ವಾನಪ್ರಸ್ಥಾಶ್ರಮವನ್ನು ಹೊಂದಿದರೆ, ಆಗ ನಿನ್ನ ಕುವರರು ಪ್ರಜಾ ಪರಿಪಾಲನೆಯನ್ನು ಮಾಡುತ್ತಾರೆ. ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸಿರೆಂದು ಕುವರರಿಗೊಪ್ಪಿಸಿ ಪೂರ್ವ ರಾಜರ್ಷಿಗಳಂತೆ, ವನವಾಸ ಮಾಡುವುದು ಯುಕ್ತವಾದುದು. ॥ ೨೧-೨೬ ॥ ಎಲೈ ಧರ್ಮಾತ್ಮನಾದ ಶ್ರೀರಾಮ ಮೂರ್ತಿಯೆ ! ನಮ್ಮ ತಂದೆಯಾದ ದಶರಥರಾಜನು ಚಪಲಚಿತ್ತನಾಗಲು, ರಾಜ್ಯಭ್ರಂಶವುಂಟಾಗುವುದೆಂಬ ಭೀತಿಯಿಂದ ನೀನು ಮನದಿಂದಪೇಕ್ಷಿಸದಿದ್ದರೆ, ದಡವು ಸಮುದ್ರವನ್ನು ತಡೆದು ಪಾಲಿಸು

ತವರಕ್ಷೇಯಮಹಂ ವೇಲೇವ ಸಾಗರಂ ॥ ೨೮ ॥ ಮಂಗಳೈ ರಭಿಷಿಂಚಸ್ವ ತತ್ರ ತ್ವಂ ವ್ಯಾಪೃತೋ ಭವ ॥ ಅಹಮೇಕೋ ಮಹೀಪಾಲಾನಲಂ ವಾರಯಿತುಂ ಬಲಾತ್ ॥ ೨೯ ॥ ನಶೋಭಾರ್ಥಾವಿಮೌ ಬಾಹೂ ನಧನುರ್ಭೂಷಣಾಯ ಮೇ ॥ ನಾಸಿರಾಬಂಧನಾರ್ಥಾಯ ನಶರಾ ಸ್ತಂಭ ಹೇತವಃ ॥ ೩೦ ॥ ಅಮಿತ್ರದಮನಾರ್ಥಂ ಮೇ ಸರ್ವಮೇತಚ್ಚತುಷ್ಟಯಂ ॥ ನಚಾಹಂ ಕಾಮಯೇತ್ಯರ್ಥಂ ಯಸ್ಸ್ಯಾಚ್ಛತ್ರುರ್ಮತೋ ಮಮ ॥ ೩೧ ॥ ಅಸಿನಾ ತೀಕ್ಷ್ಣಧಾರೇಣ ವಿದ್ಯುಚ್ಚಲಿತ ವರ್ಚಸಾ ॥ ಪ್ರಗೃಹೀತೇನ ವೈ ಶತ್ರುಂ ವಜ್ರಿಣಂವಾ

ಎಲೈ ಶೂರನೆ! ಅನ್ಯಥಾ - ಹಾಗೆ ಮಾಡದೆಹೋದರೆ, ವೀರಲೋಕಭಾಕ್ - ವೀರಲೋಕವನ್ನು ಹೊಂದಿರುವವನು, ಮಾಭೂವಂ-ಆಗದೇ ಹೋಗುವೆನು, ತೇ-ನಿನ್ನನ್ನು ಕುರಿತು, ಪ್ರತಿಜಾನೇ ಶಪಥ ಮಾಡುತ್ತೇನೆ. ॥ ೨೮ ॥ ಮಂಗಳೈಃ - ಶುಭಕರವಾದ ಸಮುದ್ರ ನದೀಜಲಾದಿಗಳಿಂದ, ಅಭಿಷಿಂಚಸ್ವ - ಅಭಿಷೇಕಮಾಡಿಕೋ, ತತ್ರ - ಆ ಅಭಿಷೇಕವ್ಯಾಪಾರದಲ್ಲಿ, ತ್ವಂ - ನೀನು, ವ್ಯಾಪೃತಃ-ಆಸಕ್ತಚಿತ್ತನು, ಭವ - ಆಗಿರು, ಅಹಂ - ನಾನು, ಏಕಃ - ಒಬ್ಬನೇ, ಮಹೀಪಾಲಾನ್ - ಅರಸರೆಲ್ಲರನ್ನೂ, ಬಲಾತ್-ಸಾಮರ್ಥ್ಯದಿಂದ, ವಾರಯಿತುಂ - ನಿಗ್ರಹಿಸುವದಕ್ಕೆ, ಅಲಂ - ಸಮರ್ಥನಾಗಿರುವೆನು. ॥ ೨೯ ॥ ಮೇ - ನನ್ನ, ಇಮೌಬಾಹೂ - ಈ ಭುಜಗಳು, ಶೋಭಾರ್ಥೌ - ಅಲಂಕಾರವೇ ಪ್ರಯೋಜನವಾಗಿ ಉಳ್ಳವುಗಳು, ನ - ಅಲ್ಲವು, ಧನುಃ - ಧನುಸ್ಸು, ಮೇ - ನನಗೆ, ಭೂಷಣಾಯ-ಅಲಂಕಾರಕ್ಕೆ, ನ - ಅಲ್ಲ, ಅಸಿಃ - ಖಡ್ಗವು, ಆಬಂಧನಾರ್ಥಾಯ - ಅಲಂಕಾರಕ್ಕೋಸುಗ, ನ - ಅಲ್ಲ, ಶರಾಃ - ಬಾಣಗಳು, ಸ್ತಂಭಹೇತವಃ-ಸುಮ್ಮನೇ ಇರುವುದಕ್ಕೆ ಕಾರಣಗಳು, ನ-ಅಲ್ಲ. ॥೩೦॥ ಸರ್ವಂ-ಸಮಸ್ತವಾದ, ಏತಚ್ಚತುಷ್ಟಯಂ-ಈ ಬಾಹು, ಧನುಸ್ಸು, ಖಡ್ಗ, ಬಾಣಗಳೆಂಬ ನಾಲ್ಕೂನು, ಮೇ - ನನಗೆ, ಅಮಿತ್ರದಮನಾರ್ಥಂ - ಶತ್ರುನಿಗ್ರಹವೇ ಪ್ರಯೋಜನವಾಗುಳ್ಳುದು. ॥ ೩೧ ॥ ಯಃ - ಯಾವ ಪುರುಷನು, ಮಮ - ನನಗೆ, ಶತ್ರುಃ - ಶತ್ರುವಾಗಿ, ಮತಃ - ಇಷ್ಟನಾದವನು, ಸ್ಯಾತ್ - ಆಗುವೆನೋ, ಅಹಂ - ನಾನು, ತೀಕ್ಷ್ಣಧಾರೇಣ - ತೀಕ್ಷ್ಣವಾದ ಹದವುಳ್ಳ, ತಂಶತ್ರುಂ-ಅಂತಹ ಶತ್ರುವನ್ನು, ನಕಾಮಯೇ - ಸಮವಾಗಿ ಎಣಿಸಲಾರೆನು, ವಜ್ರಿಣಂವಾ - ದೇವೇಂದ್ರನನ್ನಾದರೂ, ಅತ್ಯರ್ಥಂ - ಬಹುತರವಾಗಿ, ನಕಲ್ಪಯೇ - ಸಮವಾಗಿ ಎಣಿಸಲಾರೆನು. ॥ ೩೨ ॥ ಮೇ-

---

ವಂತೆ, ರಾಜ್ಯವನ್ನು ನಾನು ಸಂರಕ್ಷಿಸುವೆನು. ಹಾಗೆ ಮಾಡದಿದ್ದರೆ, ನನಗೆ ಕ್ಷತ್ರಿಯ ವೀರನಿಗುಂಟಾಗುವ ವೀರ ಲೋಕವು ದೊರಕದಿರಲಿ. ಇದೇ ನನ್ನ ಪ್ರತಿಜ್ಞೆಯು. ನೀನು ಮಂಗಳೋದಕದಿಂದ ಅಭಿಷೇಕವನ್ನು ಮಾಡಿಕೊ; ರಾಜ್ಯದಲ್ಲಿ ಮನಸಿಡು; ನಾನೊಬ್ಬನೇ ಸ್ವಸಾಮರ್ಥ್ಯದಿಂದ ಅರಸರೆಲ್ಲರನ್ನೂ ನಿಗ್ರಹಿಸಲು ಸಮರ್ಥನಾಗಿರುವೆನು. ಈ ಭುಜಗಳೂ, ಈ ಧನುಸ್ಸೂ, ಖಡ್ಗ, ಬಾಣಗಳೂ ಇವೆಲ್ಲವೂ ಶತ್ರುಗಳನ್ನು ಸದೆಬಡಿವುದಕ್ಕಲ್ಲದೆ ಕೇವಲ ಅಲಂಕಾರಾರ್ಥವಾಗಿರುವುವುಗಳಲ್ಲ. ॥೨೭-೩೧॥ ನಿನಗೆ ಶತ್ರುವಾದವನು ಇಂದ್ರನಾದರೂ ಲಕ್ಷ್ಯ ಮಾಡುವುದಿಲ್ಲವೆಂದು ತಿಳಿ; ಮಿಂಚಿನಂತೆ ಹೊಳೆಯುತ್ತಿರುವ ತೀಕ್ಷ್ಣವಾದ ಖಡ್ಗದಿಂದ ಖಂಡಿಸಿಬಿಡುವೆನು; ನನ್ನ ಖಡ್ಗದಿಂದ ಕತ್ತರಿಸಿ ಅರಿಯಲ್ಪಟ್ಟ ಆನೆ,

ನಕಲ್ಪಯೇ ॥ ೩೨ ॥ ಖಡ್ಗ ನಿಷ್ಪೇಷ ನಿಷ್ಪಿಷ್ಟೈ ರ್ಗಹನಾ ದುಶ್ಚರಾಚ ಮೇ ॥ ಹಸ್ತ್ಯಶ್ವ ನರಹಸ್ತೋರು ಶಿರೋಭಿರ್ಭವಿತಾ ಮಹೀ ॥ ೩೩ ॥ ಖಡ್ಗಧಾರಾಹತಾ ಮೇದ್ಯ ದೀಪ್ಯಮಾನಾ ಇವಾದ್ರಯಃ ॥ ಪತಿಷ್ಯಂತಿ ದ್ವಿಪಾ ಭೂಮೌ ಮೇಘಾ ಇವ ಸವಿದ್ಯುತಃ ॥ ೩೪ ॥ ಬದ್ಧ ಗೋಧಾಂಗುಳಿತ್ರಾಣೇ ಪ್ರಗೃಹೀತ ಶರಾಸನೇ ॥ ಕಥಂ ಪುರುಷ ಮಾನೀಸ್ಯಾ ತ್ಪುರುಷಾಣಾಂ ಮಯಿ ಸ್ಥಿತೇ ॥ ೩೫ ॥ ಬಹುಭಿಶ್ಚೈಕಮತ್ಯಸ್ಯನ್ನೇಕೇನಚ ಬಹೂರ್ ಜನಾನ್ ॥ ವಿನಿಯೋಕ್ಷ್ಯಾಮ್ಯಹಂ ಬಾಣಾನ್ ನೃವಾಜಿ ಗಜಮರ್ಮಸು ॥ ೩೬ ॥ ಅದ್ಯ

ನನ್ನ, ಖಡ್ಗನಿಷ್ಪೇಷನಿಷ್ಪಿಷ್ಟೈಃ, ಖಡ್ಗ - ಖಡ್ಗದಿಂದ, ನಿಷ್ಪೇಷ - ಅರಿಯುವಿಕೆಯಿಂದ, ನಿಷ್ಪಿಷ್ಟೈಃ - ಅರಿಯಲ್ಪಟ್ಟ, ಹಸ್ತ್ಯಶ್ವನರಹಸ್ತೋರುಶಿರೋಭಿಃ, ಹಸ್ತಿ - ಆನೆಗಳ, ಅಶ್ವ - ಕುದುರೆಗಳ, ನರ - ಮನುಷ್ಯರ, ಹಸ್ತ - ಸೊಂಡಿಲಗಳಿಂದ, ಊರು - ಊರು ಪ್ರದೇಶಗಳಿಂದಲೂ, ಶಿರೋರಭಿಃ - ಶಿರಸ್ಸುಗಳಿಂದಲೂ, ಗಹನಾ - ಪ್ರವೇಶಿಸಲಸದಳವಾಗಿ, ದುಶ್ಚರಾ-ಸಂಚರಿಸಲಸಾಧ್ಯವಾದುದಾಗಿ, ಮಹೀ - ಭೂಮಿಯು, ಭವಿತಾ - ಆಗುವದು. ॥ ೩೩ ॥ ಮೇ - ನನ್ನ, ಖಡ್ಗಧಾರಾಹತಾಃ, ಖಡ್ಗಧಾರಾ-ಖಡ್ಗದಹದದಿಂದ, ಹತಾಃ-ಹೊಡಿಯಲ್ಪಟ್ಟ, ಅದ್ರಯಇವ-ಬೆಟ್ಟಗಳಂತೆ, ದೀಪ್ಯಮಾನಾಃ - ಹೊಳೆಯುತ್ತಿರುವ, ದ್ವಿಪಾಃ - ಆನೆಗಳು, ಸವಿದ್ಯುತಃ - ಮಿಂಚುಗಳಿಂದೊಡಗೂಡಿದ, ಮೇಘಾಇವ - ಮೇಘಗಳಂತೆ, ಅದ್ಯ - ಈಗ, ಭೂಮೌ - ನೆಲದಲ್ಲಿ, ಪತಿಷ್ಯಂತಿ-ಬಿದ್ದುಹೋಗುತ್ತವೆ, ಬದ್ಧಗೋಧಾಂಗುಳಿತ್ರಾಣೇ, ಬದ್ಧ - ಕಟ್ಟಲ್ಪಟ್ಟ, ಗೋಧಾಂಗುಳಿತ್ರಾಣೇ - ಬೆರಳು ಚೀಲಗಳುಳ್ಳ, ಪ್ರಗೃಹೀತಶರಾಸನೇ, ಪ್ರಗೃಹೀತ - ಹಿಡಿದುಕೊಳ್ಳಲ್ಪಟ್ಟ, ಶರಾಸನೇ - ಧನುಸ್ಸುಳ್ಳ, ಮಯಿ - ನಾನು, ಸ್ಥಿತೇಸತಿ - ನಿಂತರೆ, ಪುರುಷಾಣಾಂ - ಪುರುಷರೊಳಗೆ, ಪುರುಷಮಾನೀ - ನಾನು ಪುರುಷನೆಂದು ಎಣಿಸುವವನು, ಕಥಂಸ್ಯಾತ್ - ಹೇಗಾಗುವನು. ॥ ೩೫ ॥ ಬಹುಭಿಃ - ಅನೇಕ ಬಾಣಗಳಿಂದ, ಏಕಂ - ಒಬ್ಬನನ್ನು, ಅತ್ಯಸ್ಯನ್ - ಹೊಡಿಯುತ್ತಲೂ, ಏಕೇನ-ಒಂದು ಬಾಣದಿಂದ, ಬಹೂರ್ಜನಾನ್ - ಅನೇಕರನ್ನು, ಅತ್ಯಸ್ಯನ್ - ಹೊಡಿಯುತ್ತಲೂ, ಅಹಂ - ನಾನು, ನೃವಾಜಿಗಜಮರ್ಮಸು, ನೃ - ಮನುಷ್ಯರ, ವಾಜಿ - ಕುದುರೆಗಳ, ಗಜ - ಆನೆಗಳ, ಮರ್ಮಸು - ಮರ್ಮಸ್ಥಾನಗಳಲ್ಲಿ, ಬಾಣಾನ್ - ಬಾಣಗಳನ್ನು, ವಿನಿಯೋಕ್ಷ್ಯಾಮಿ - ಬಿಡುತ್ತೇನೆ. ॥ ೩೬ ॥ ಹೇ ಪ್ರಭೋ - ಎಲೈ ಸ್ವಾಮಿಯೇ; ಅದ್ಯ - ಈಗ, ಮೇ - ನನ್ನ, ಅಸ್ತ್ರಪ್ರಭಾವಸ್ಯ - ಅಸ್ತ್ರ

ಕುದುರೆ, ಮನುಷ್ಯರು, ಸೊಂಡಿಲು, ತೊಡೆ, ಶಿರಸ್ಸುಗಳಿಂದ ಈ ಭೂತಳವೆಲ್ಲವೂ ಸಂಚರಿಸಲಸದಳವಾಗುವುದು. ನನ್ನ ಕತ್ತಿಯ ಹದದಿಂದ ಹೊಡೆಯಲ್ಪಟ್ಟು, ಬೆಟ್ಟಗಳಂತೆ ಹೊಳೆಯುತ್ತಿರುವ ಆನೆಗಳು ಮಿಂಚುಗಳಿಂದೊಡಗೂಡಿದ ಮೇಘಗಳಂತೆ ಕೆಳಕ್ಕುರುಳುವುವು, ಇಷ್ಟೆಯಲ್ಲದೆ ನಾನು ಕೋದಂಡಪಾಣಿಯಾಗಿ ಕೈ ಚೀಲಗಳನ್ನು ಕಟ್ಟಿಕೊಂಡು ಸಮರಾಂಗಣದಲ್ಲಿ ನಿಂತುದೇ ಆದರೆ, ನಾನು ಗಂಡೆಂದು ಯಾವ ಪುರುಷನು ತಾನೆ ಇದಿರಿಗೆ ಬಂದು ನಿಲ್ಲುವನು. ಒಂದುವೇಳೆ ಯಾರಾದರೂ ನಿಂತುಕೊಂಡರೆ, ಅನೇಕ ಬಾಣಗಳಿಂದೊಬ್ಬನನ್ನು ಹೊಡಿಯುತ್ತಲೂ, ನಿಡಿಗೋಲಿನಿಂದ ಅನೇಕರನ್ನು ಕೊಲ್ಲುತ್ತಲೂ, ಮನುಷ್ಯ

ಮೇಸ್ತ್ರ ಪ್ರಭಾವಸ್ಯ ಪ್ರಭಾವಃ ಪ್ರಭವಿಷ್ಯತಿ ॥ ರಾಜ್ಞಶ್ಚಾ ಪ್ರಭುತಾಂ ಕರ್ತುಂ ಪ್ರಭುತ್ವಂ ತವಚ ಪ್ರಭೋ ॥ ೩೭ ॥ ಅದ್ಯ ಚಂದನಸಾರಸ್ಯ ಕೇಯೂರಾಮೋಕ್ಷಣಸ್ಯಚ ॥ ವಸೂನಾಂಚ ವಿಮೋಕ್ಷಸ್ಯ ಸುಹೃದಾಂ ಪಾಲನಸ್ಯಚ ॥೩೮॥ ಅನುರೂಪಾವಿಮೌ ಬಾಹೂ ರಾಮ ಕರ್ಮ ಕರಿಷ್ಯತಃ ॥ ಅಭಿಷೇಚನ ವಿಘ್ನಸ್ಯ ಕರ್ತೄಣಾಂ ತೇ ನಿವಾರಣೇ ॥ ೩೯ ॥

ಬ್ರವೀಹಿ ಕೋಽದ್ಯೈವ ಮಯಾ ವಿಯುಜ್ಯತಾಂ
ತವಾಸುಹೃತ್ಪ್ರಾಣಯಶಃ ಸುಹೃಜ್ಜನೈಃ ॥
ಯಥಾ ತವೇಯಂ ವಸುಧಾ ವಶೇ ಭವೇ
ತ್ತಥೈವ ಮಾಂ ಶಾಧಿ ತವಾಸ್ಮಿ ಕಿಂಕರಃ ॥ ೪೦ ॥

ಮಹಾತ್ಮ್ಯದ, ಪ್ರಭಾವಃ - ಪ್ರತಾಪವು, ರಾಜ್ಞಶ್ಚ - ಅರಸರಿಗೆ, ಅಪ್ರಭುತಾಂ - ಅನಾಥತ್ವವನ್ನೂ, ತವ - ನಿನಗೆ, ಪ್ರಭುತ್ವಂಚ - ಪ್ರಭುತ್ವವನ್ನೂ, ಕರ್ತುಂ - ಉಂಟುಮಾಡಲು, ಪ್ರಭವಿಷ್ಯತಿ-ಸಮರ್ಥವಾಗುವದು. ॥ ೩೭ ॥ ಹೇ ರಾಮ - ಎಲೈ ಶ್ರೀರಾಮನೆ, ಚಂದನಸಾರಸ್ಯ - ಶ್ರೀಗಂಧ ಲೇಪನಕ್ಕೆ, ಕೇಯೂರಾಮೋಕ್ಷಣಸ್ಯಚ - ಅಂಗದಗಳ ಬಂಧನಕ್ಕೂ, ವಸೂನಾಂ - ದ್ರವ್ಯಗಳ, ವಿಮೋಕ್ಷಸ್ಯ - ತ್ಯಾಗಕ್ಕೆ, ಸುಹೃದಾಂ - ಸ್ನೇಹಿತರ, ಪಾಲನಸ್ಯಚ - ಪರಿಪಾಲನೆಗೂ, ಅನುರೂಪೌ-ಸಮಾನಗಳಾದ, ಇಮೌಬಾಹೂ - ಈ ಬಾಹುಗಳು, ತೇ - ನಿನಗೆ, ಅಭಿಷೇಚನವಿಘ್ನಸ್ಯ - ಪಟ್ಟಾಭಿಷೇಕಕ್ಕೆ ವಿಘ್ನವನ್ನು, ಕರ್ತೄಣಾಂ - ಮಾಡಿದವರ, ನಿವಾರಣೇ - ನಿಗ್ರಹದ, ಕರ್ಮ - ಕರ್ಮವನ್ನು, ಕರಿಷ್ಯತಃ - ಮಾಡುತ್ತವೆ. ॥ ೩೮ ೩೯ ॥ ಮಯಾ-ನನ್ನಿಂದ, ಕಃ-ಯಾವ, ತವ-ನಿನ್ನ, ಅಸುಹೃತ್ - ಶತ್ರುವು, ಪ್ರಾಣಯಶಸ್ಸುಹೃಜ್ಜನೈಃ, ಪ್ರಾಣ - ಪ್ರಾಣಗಳಿಂದಲೂ, ಯಶಃ - ಕೀರ್ತಿಯಿಂದಲೂ, ಸುಹೃಜ್ಜನೈಃ - ಸ್ನೇಹಿತರಿಂದಲೂ, ವಿಯುಜ್ಯತಾಂ-ಬಿಡಿಸಲ್ಪಡಲಿ, ಪ್ರಬ್ರೂಹಿ-ಹೇಳು, ಇಯಂವಸುಧಾ - ಈ ಭೂಮಿಯು, ಯಥಾ - ಹೇಗೆ, ತವ - ನಿನ್ನ, ವಶೇ - ಸ್ವಾಧೀನದಲ್ಲಿ, ಭವೇತ್ - ಆಗುವದೋ, ತಥೈವ - ಹಾಗೆಯೇ, ಮಾಂ - ನನ್ನನ್ನು, ಶಾಧಿ - ಆಜ್ಞಾಪಿಸುವ, ತವ - ನಿನಗೆ, ಕಿಂಕರಃ - ಚಾಕರನು, ಅಸ್ಮಿ - ಆಗಿರುವೆನು. ॥ ೪೦ ॥ ರಾಘವವಂಶವರ್ಧನಃ -

---

ರನ್ನೂ, ಕುದುರೆಗಳನ್ನೂ, ಆನೆಗಳನ್ನೂ ಕುಟ್ಟಿ ಬಿಸುಡುವೆನು. ॥ ೩೨-೩೭ ॥ ಎಲೈ ಪ್ರಭುವೆ! ಇದೀಗ ನನ್ನ ಅಸ್ತ್ರ ಪ್ರಭಾವವು, ರಾಜನಿಗೆ ಅನಾಥಭಾವವನ್ನೂ, ಅಣ್ಣನಾದ ನಿನಗೆ ಪ್ರಭುಭಾವವನ್ನೂ ಕೊಡಲು ಸಮರ್ಥವಾಗಿರುವುದು. ಚಂದನ ಗಂಧವನ್ನು ಲೇಪಿಸಿಕೊಳ್ಳುವುದಕ್ಕೂ, ಬಾಹುಜಿಗೆಗಳನ್ನಿಡುವುದಕ್ಕೂ, ತ್ಯಾಗಕ್ಕೂ, ಸ್ನೇಹಿತರನ್ನು ಪರಿಪಾಲಿಸುವುದಕ್ಕೂ ಅನುರೂಪವಾಗಿಯೇ ಇರುವ ಈ ನನ್ನ ಬಾಹುದ್ವಯಗಳು, ಈಗ ಅಭಿಷೇಕ ವಿಘ್ನವನ್ನು ಮಾಡುವವರ ನಿಗ್ರಹವನ್ನು ಮಾಡುತ್ತವೆಯೆಂಬುದನ್ನು ನೋಡು. ಶತ್ರುವಾದ ಯಾವ ಪುರುಷನು ಪ್ರಾಣಗಳಿಂದಲೂ, ಯಶಸ್ಸಿನಿಂದಲೂ, ಮಿತ್ರಜನರಿಂದಲೂ ಬಿಡಿಸಲ್ಪಡಬೇಕಾದರೆ ಈಗಲೇ ಹೇಳು. ಈ ಭೂಮಂಡಲವು ನಿನ್ನ ಸ್ವಾಧೀನದಲ್ಲಿ ಹೇಗಿರುವುದೋ ಹಾಗೆ, ನನಗೆ ಆಜ್ಞಾಪಿಸುವವನಾಗು. ॥ ೩೮-೪೦ ॥ ಲಕ್ಷ್ಮಣಸ್ವಾಮಿ ಈರೀತಿ ಹೇಳಲು ರಘುಕುಲ

ವಿಮೃಜ್ಯ ಬಾಷ್ಪಂ ಪರಿಸಾಂತ್ವ್ಯ ಚಾಸಕೃ
ತ್ಸಲಕ್ಷ್ಮಣಂ ರಾಘವ ವಂಶವರ್ಧನಃ ॥
ಉವಾಚ ಪಿತ್ರ್ಯೇ ವಚನೇ ವ್ಯವಸ್ಥಿತಂ
ನಿಬೋಧ ಮಾಮೇಷ ಹಿ ಸೌಮ್ಯ ಸತ್ಪಥಃ ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋವಿಂಶಸ್ಸರ್ಗಃ.

ರಘುವಂಶೋತ್ಪನ್ನರ ಕುಲವನ್ನು ವೃದ್ಧಿಗೊಳಿಸುತ್ತಿರುವ, ಸಃ - ಆ ಶ್ರೀರಾಮನು, ಬಾಷ್ಪಂ - ಕಣ್ಣೀರನ್ನು, ವಿಮೃಜ್ಯ - ಒರಸಿಕೊಂಡು, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು, ಅಸಕೃತ್ - ಬಾರಿಬಾರಿಗೂ, ಪರಿಸಾಂತ್ವ್ಯಚ - ಸಮಾಧಾನಗೊಳಿಸಿ, ಹೇ ಸೌಮ್ಯ - ಎಲೈ ಸೌಮ್ಯನೇ, ಮಾಂ - ನನ್ನನ್ನು, ಪಿತ್ರ್ಯೇ - ತಂದೆಯ ಸಂಬಂಧವಾದ, ವಚನೇ - ಮಾತಿನಲ್ಲಿ, ವ್ಯವಸ್ಥಿತಂ - ಇರುವವನಾಗಿ, ನಿಬೋಧ - ತಿಳಿದುಕೋ, ಏಷಃ - ಇದು, ಸತ್ಪಥೋಹಿ - ಸನ್ಮಾರ್ಗವಷ್ಟೆ, ಇತಿ-ಇಂತೆಂದು, ಉವಾಚ - ಹೇಳಿದನು. ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋವಿಂಶಸ್ಸರ್ಗಃ

ವನ್ನು ವೃದ್ಧಿಗೊಳಿಸುವವನಾದ ಶ್ರೀರಾಮ ಮೂರ್ತಿಯು ಕಂಬನಿಗಳನ್ನು ಸುರಿಸುತ್ತ, ಅಡಿಗಡಿಗೂ ಲಕ್ಷ್ಮಣನನ್ನು ಸಮಾಧಾನ ಗೊಳಿಸಿ “ ಅಯ್ಯಾ ಲಕ್ಷ್ಮಣನೆ ! ನಾನು ಜನಕನಾಜ್ಞೆಯಲ್ಲಿರುವೆನು. ಹೀಗಿರುವುದು ಧರ್ಮವೆಂದು ತಿಳಿ ” ಎಂದು ನುಡಿದನು. ॥ ೪೧ ॥

ಇಂತಿದು ಲಕ್ಷ್ಮಣನ ಪ್ರತೀಕಾರೋಕ್ತಿ ನಿರೂಪಣವೆಂಬ
ಇಪ್ಪತ್ತಮೂರನೆಯ ಸರ್ಗವು ಸಂಪೂರ್ಣವಾದುದು.

ಅಯೋಧ್ಯಾಕಾಂಡೇ ಚತುರ್ವಿಂಶಸ್ಸರ್ಗಃ.

ತಂ ಸಮೀಕ್ಷ್ಯತ್ವವಹಿತಂ ಪಿತು ರ್ನಿರ್ದೇಶ ಪಾಲನೇ ॥ ಕೌಸಲ್ಯಾ ಬಾಷ್ಪಸಂರುದ್ಧಾ ವಚೋ ಧರ್ಮಿಷ್ಠ ಮಬ್ರವೀತ್ ॥ ೧ ॥ ಅದೃಷ್ಟ ದುಃಖೋ ಧರ್ಮಾತ್ಮಾ ಸರ್ವಭೂತ ಪ್ರಿಯಂವದಃ ॥ ಮಯಿ ಜಾತೋ ದಶರಥಾತ್ಕಥ ಮುಂಛೇನ ವರ್ತಯೇತ್ ॥ ೨ ॥ ಯಸ್ಯ ಭೃತ್ಯಾಶ್ಚ ದಾಸಾಶ್ಚ ಮೃಷ್ಟಾನ್ಯ ನ್ನಾನಿ ಭುಂಜತೇ ॥ ಕಥಂ ಸಂಭೋಕ್ಷ್ಯತೇ ನಾಥೋ ವನೇ ಮೂಲಫಲಾ ನ್ಯಯಂ ॥ ೩ ॥ ಕಏತ ಚ್ಛ್ರದ್ದಧೇಚ್ಛ್ರುತ್ವಾ ಕಸ್ಯವಾ ನಭವೇದ್ಭಯಂ ॥ ಗುಣವಾನ್ ದಯಿತೋ ರಾಜ್ಞಾ ರಾಘವೋ ಯದ್ವಿವಾಸ್ಯತೇ ॥ ೪ ॥ ನೂನಂತು

ಕೌಸಲ್ಯಾ - ಕೌಸಲ್ಯಾದೇವಿಯು, ಪಿತುಃ - ತಂದೆಯ, ನಿರ್ದೇಶಪಾಲನೇ - ಆಜ್ಞಾ ವಚನದ ರಕ್ಷಣೆಯಲ್ಲಿ, ಅವಹಿತಂ - ಸಾವಧಾನ ಚಿತ್ತನಾದ, ತಂ - ಆ ಶ್ರೀರಾಮನನ್ನು, ಸಮೀಕ್ಷ್ಯ- ಕಂಡು, ಬಾಷ್ಪಸಂರುದ್ಧಾ ಸತೀ - ಕಂಣೀರುಳ್ಳವಳಾಗಿ, ಧರ್ಮಿಷ್ಠಂ - ಧರ್ಮ ಪ್ರಧಾನವಾದ, ವಚಃ - ಮಾತನ್ನು, ಅಬ್ರವೀತ್ - ನುಡಿದಳು. ॥ ೧ ॥ ಅದೃಷ್ಟದುಃಖಃ - ಕಾಣಲ್ಪಡದಿರುವ ದುಃಖವುಳ್ಳ, ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳ, ಸರ್ವಭೂತಪ್ರಿಯಂವದಃ - ಎಲ್ಲ ಭೂತಗ ಳಿಗೂ ಇಷ್ಟವಾಗಿ ಮಾತನಾಡುತ್ತಿರುವ, ಭವಾನ್ - ನೀನು, ಮಯಿ - ನನ್ನಲ್ಲಿ, ದಶರಥಾತ್ - ದಶರಥರಾಯನಿಂದ, ಜಾತಃ - ಹುಟ್ಟಿ, ಕಥಂ - ಹೇಗೆ, ಉಂಛೇನ - ಉಂಛ ವೃತ್ತಿಯಿಂದ, ವರ್ತಯೇತ್ - ಜೀವನಮಾಡುವೆ. ॥ ೨ ॥ ಯಸ್ಯ - ಯಾವನ, ಭೃತ್ಯಾಶ್ಚ - ಸೇವಕರೂ, ದಾಸಾಶ್ಚ - ಚಾಕರಿಮಾಡುವವರೂ, ಮೃಷ್ಟಾನಿ - ಷಡ್ರಸೋಪೇತವಾದ, ಅನ್ನಾನಿ - ಅನ್ನಗಳನ್ನು, ಭುಂಜತೇ - ಭೋಜನಮಾಡುತ್ತಾರೆಯೋ, ನಾಥಃ - ಧೊರೆಯಾದ, ಸೋಯಂ - ಆ ಶ್ರೀರಾಮನು, ವನೇ - ವನದಲ್ಲಿ, ಮೂಲಫಲಾನಿ - ಕಂದಮೂಲಗಳನ್ನು, ಕಥಂಭೋಕ್ಷ್ಯತೇ - ಹೇಗೆ ಭುಂಜಿಸು ವನು. ॥ ೩ ॥ ಗುಣವಾನ್ - ಗುಣವಂತನಾದ, ದಯಿತಃ - ಪ್ರೀತಿ ಪಾತ್ರನಾದ, ರಾಘವಃ - ಶ್ರೀರಾಮನು, ರಾಜ್ಞಾ - ಅರಸನಿಂದ, ವಿವಾಸ್ಯತಇತಿಯತ್ - ಹೊರಡಿಸಲ್ಪಡುತ್ತಾನೆಂಬದು ಯಾವ

ತಂದೆಯಾಡಿದ ನುಡಿಗಳನ್ನು ಪರಿಪಾಲಿಸುವುದರಲ್ಲಿ ಬದ್ಧಾದರನಾದ ಶ್ರೀರಾಮ ಚಂದ್ರನನ್ನು ಕುರಿತು ಕೌಸಲ್ಯಾದೇವಿಯು ಬಾಷ್ಪಗದ್ಗದ ಭರಿತಳಾಗಿ ಈ ನುಡಿಯನ್ನಾಡಿ ದಳು. “ ಎಲೈ ಮಗುವೆ ! ಹುಟ್ಟಿದಂದಿನಿಂದ ದುಃಖಗಳನ್ನೇ ಕಾಣದೆ, ದಶರಥ ಮಹಾ ರಾಜನಿಂದ ನನ್ನಲ್ಲಿ ಜನಿಸಿ, ಸಕಲ ಭೂತಗಳಿಗೂ ಹಿತವನ್ನೇ ಕೋರುತ್ತಿರುವ ನೀನು ಕೇವಲ ಉಂಛವೃತ್ತಿಯನ್ನವಲಂಬಿಸಿ ಅರಣ್ಯದಲ್ಲಿ ಹೇಗೆ ಜೀವಿಸುತ್ತೀಯೆ ! ಅಕಟ, ನಿನ್ನ ಭೃತ್ಯರೂ ದಾಸರೂ ಇವರೇ ಮೊದಲಾದವರೆಲ್ಲರೂ ಮೃಷ್ಟಾನ್ನವನ್ನು ಭುಜಿಸುತ್ತಾರೆ. ಇಂತಿರುವಲ್ಲಿ ಇವರೆಲ್ಲರಿಗೂ ಸ್ವಾಮಿಯಾದ ನೀನು ಕಗ್ಗಾಡಿನಲ್ಲಿ ಕಂದಮೂಲ ಫಲಾದಿಗಳನ್ನು ಹೇಗೆ

ಬಲವಾನ್ ಲೋಕೇ ಕೃತಾಂತ ಸ್ಸರ್ವಮಾದಿಶನ್ ‖ ಲೋಕೇ ರಾಮಾಭಿ ರಾಮಸ್ತ್ವಂ ವನಂ ಯತ್ರ ಗಮಿಷ್ಯಸಿ ‖ ೫ ‖ ಅಯಂತು ಮಾಮಾತ್ಮಭವ ಸ್ತವಾದರ್ಶನ ಮಾರುತಃ ‖ ವಿಲಾಪದುಃಖ ಸಮಿಧೋ ರುದಿತಾಶ್ರು ಹುತಾ ಹುತಿಃ ‖ ೬ ‖ ಚಿಂತಾಬಾಷ್ಪ ಮಹಾಧೂಮ ಸ್ತವಾದರ್ಶನ ಚಿತ್ತಜಃ ‖ ಕರ್ಶಯಿತ್ವಾ ಭೃಶಂ ಪುತ್ರ ನಿಶ್ವಾಸಾಯಾಸ ಸಂಭವಃ ‖ ೭ ‖ ತ್ವಯಾ

ದುಂಟೋ, ಏತತ್ - ಇದನ್ನು, ಕಃ - ಯಾವನು, ಶ್ರದ್ದಧೇತ್ - ನಂಬುವನು, ಶ್ರುತ್ವಾಪ - ಕೇಳಿಯಾದರೂ, ಕಸ್ಯ - ಯಾರಿಗೆ, ಭಯಂ - ಭಯವು, ನಭವೇತ್ - ಆಗದೇಹೋದೀತು. ‖ ೪ ‖ ಲೋಕೇ - ಲೋಕದಲ್ಲಿ, ಸರ್ವಂ - ಸಮಸ್ತ ಸುಖ ದುಃಖಾದಿಗಳನ್ನು, ಆದಿಶನ್ - ಕೊಡುತ್ತಿರುವ, ಕೃತಾಂತಃ - ದೈವವು, ಬಲವಾನ್ - ಬಲಿಷ್ಠವು, ನೂನಂ - ನಿಶ್ಚಯವು, ಯತ್ರ - ಯಾವ ದೈವ ವಿಷಯದಲ್ಲಿ, ಹೇ ರಾಮ - ಎಲೈ ಶ್ರೀರಾಮನೇ, ಲೋಕೇ - ಲೋಕದಲ್ಲಿ, ಅಭಿರಾಮಃ - ಮನೋಹರನಾದ, ತ್ವಂ - ನೀನು, ವನಂ - ವನವನ್ನು ಕುರಿತು, ಗಮಿಷ್ಯಸಿಯದಿ - ಹೋಗುತ್ತೀಯೋ. ‖ ೫ ‖ ಹೇ ಪುತ್ರ - ಎಲೈ ಮಗನೇ, ಆತ್ಮಭವಃ - ನನ್ನ ದೇಹದಲ್ಲಿ ಹುಟ್ಟಿದ, ತವ - ನಿನ್ನ, ಅದರ್ಶನ - ನೋಡುವಿಕೆಯಿಲ್ಲದೆ ಹೋಗುವಿಕೆಯೆಂಬ, ಮಾರುತಃ - ಗಾಳಿಯುಳ್ಳ, ವಿಲಾಪದುಃಖ ಸಮಿಧಃ, ವಿಲಾಪ - ಅಳುವಿಕೆಯು, ದುಃಖ - ದುಃಖಗಳೇ, ಸಮಿಧಃ - ಸಮಿತ್ತುಗಳಾಗುಳ್ಳ, ರುದಿತಾಶ್ರುಹುತಾಹುತಿಃ - ಕಣ್ಣೀರುಗಳೆಂಬ ಹೋಮಮಾಡಲ್ಪಟ್ಟ ಆಜ್ಯಾಹುತಿಗಳುಳ್ಳ, ಚಿಂತಾಬಾಷ್ಪಮಹಾಧೂಮಃ, ಚಿಂತಾ - ಯೋಚನೆಯಿಂದ ಹುಟ್ಟಿದ, ಬಾಷ್ಪ - ಉಷ್ಣವೆಂಬ, ಮಹಾಧೂಮಃ - ದೊಡ್ಡ ಹೊಗೆಯುಳ್ಳ, ತವಾದರ್ಶನಚಿತ್ತಜಃ, ತವ - ನಿನ್ನ, ಅದರ್ಶನ - ದರ್ಶನವಿಲ್ಲದಿರುವಿಕೆಯಿಂದ, ಚಿತ್ತಜಃ - ಮನಸ್ಸಿನಲ್ಲಿಯೇ ಹುಟ್ಟಿದ, ನಿಶ್ವಾಸಾಯಾಸಸಂಭವಃ, ನಿಶ್ವಾಸ - ನಿಟ್ಟುಸಿರುಗಳ, ಆಯಾಸ - ಆವೃತ್ತಿಯಿಂದ, ಸಂಭವಃ - ವೃದ್ಧಿಗೊಂಡಿರುವ, ಮಹಾನ್ - ದೊಡ್ಡದಾದ, ಅತುಲಃ - ಸಮಾನವಿಲ್ಲದಿರುವ, ಶೋಕಾಗ್ನಿಃ - ದುಃಖಾಗ್ನಿಯು, ಭೃಶಂ - ಬಹಳವಾಗಿ, ಮಾಂ - ನನ್ನನ್ನು, ಕರ್ಶಯಿತ್ವಾ - ಸವೆಯುವಿಕೆಯನ್ನು ಹೊಂದಿಸಿ, ಇಹ - ಈಗ, ತ್ವಯಾ -

---

ತಾನೆ ತಿನ್ನುತ್ತೀಯೆ ! ರಾಮ !! ಗುಣವಂತನೂ, ಪ್ರೀತಿಪಾತ್ರನೂ ಆಗಿರುವ ನಿನ್ನನ್ನು ದಶರಥ ಮಹೀಪಾಲನು ಹೊರಹೊಡಿಸುವನು ! ಇದನ್ನು ಯಾರು ತಾನೆ ನಂಬುವರು ? ಅಥವ ಈ ಮಾತನ್ನು ಕೇಳಿ ಭಯ ಪಡದಿರುತ್ತಾರೆಯೆ ? ಹಾ ! ಲೋಕದಲ್ಲಿ ದೈವವೇ ಸುಖ ದುಃಖಾದಿಗಳನ್ನುಂಟು ಮಾಡುತ್ತಿರುವುದೆಂಬುದು ನಿಜ !! ಮನಸ್ಸಂತೋಷವನ್ನುಂಟು ಮಾಡುತ್ತಿರುವ ನೀನು ಅರಣ್ಯವಾಸಕ್ಕೆ ತೆರಳುವುದು ಇದಕ್ಕೆ ನಿದರ್ಶನವಲ್ಲವೆ ? ‖ ೧-೫ ‖ ಮಗುವೆ ! ನಿನ್ನನ್ನು ನೋಡದಿರುವಿಕೆಯೆಂಬ ಗಾಳಿಯುಳ್ಳುದಾಗಿಯೂ, ವನವಾಸಕ್ಕೆ ಹೊರಡುವಿಕೆಯಿಂದುಂಟಾದ ದುಃಖ ಸಮಿತ್ತುಗಳುಳ್ಳುದಾಗಿಯೂ, ರೋದನದಿಂದ ಹುಟ್ಟಿದ ಕಂಬನಿಗಳೆಂಬ ಹೋಮವಂಗ್ನೆದ ಆಜ್ಯಾಹುತಿಯುಳ್ಳುದಾಗಿಯೂ, ಚಿಂತಾ ಜನ್ಯವಾದ ಮಹದುಷ್ಣವೆಂಬ ಧೂಮವುಳ್ಳುದಾಗಿಯೂ, ನೀನು ಕಾಣದಿರುವಿಕೆಯಿಂದ ಮನಸ್ಸಿನಲ್ಲಿಯೇ ಹುಟ್ಟಿದುದಾಗಿಯೂ, ನಿಟ್ಟುಸಿರು ಬಿಡುವಿಕೆಯಿಂದ ಸಂಭವಿಸಿದುದಾಗಿಯೂ

ವಿಹೀನಾಮಿಹಮಾಂ ಶೋಕಾಗ್ನಿರತುಲೋ ಮಹಾನ್ ॥ ಪ್ರಧಕ್ಷ್ಯತಿ ಯಥಾ
ಕಕ್ಷಂ ಚಿತ್ರಭಾನುರ್ಹಿಮಾತ್ಯಯೇ ॥ ೮ ॥ ಯಥಾಹಿ ಧೇನುಸ್ಸ್ವಂ ವತ್ಸಂ
ಗಚ್ಛಂತಮನುಗಚ್ಛತಿ ॥ ಅಹಂತ್ವಾನುಗಮಿಷ್ಯಾಮಿ ಯತ್ರ ಪುತ್ರ ಗಮಿ
ಷ್ಯಸಿ ॥ ೯ ॥ ತಥಾ ನಿಗದಿತಂ ಮಾತ್ರಾ ತದ್ವಾಕ್ಯಂ ಪುರುಷರ್ಷಭಃ ॥
ಶ್ರುತ್ವಾ ರಾಮೋಽಬ್ರವೀದ್ವಾಕ್ಯಂ ಮಾತರಂ ಭೃಶದುಃಖಿತಾಂ ॥ ೧೦ ॥
ಕೈಕೇಯ್ಯಾ ವಂಚಿತೋ ರಾಜಾ ಮಯಿಚಾರಣ್ಯ ಮಾಶ್ರಿತೇ ॥ ಭವತ್ಯಾಚ
ಪರಿತ್ಯಕ್ತೋ ನನೂನಂ ವರ್ತಯಿಷ್ಯತಿ ॥ ೧೧ ॥ ಭರ್ತುಃ ಪುನಃ ಪರಿ
ತ್ಯಾಗೋ ನೃಶಂಸಃ ಕೇವಲಂ ಸ್ತ್ರಿಯಃ ॥ ಸಭವತ್ಯಾ ನಕರ್ತವ್ಯೋ ಮನಸಾಪಿ

ನಿನ್ನಿಂದ, ವಿಹೀನಾಂ - ಹೀನಳಾದ, ಮಾಂ - ನನ್ನನ್ನು, ಹಿಮಾತ್ಯಯೇ - ಹೇಮಂತಋತುವು ಕಳೆದುಹೋಗಲು, ಚಿತ್ರಭಾನುಃ - ಅಗ್ನಿಯು, ಕಕ್ಷಂಯಥಾ - ಬೇಲಿಯನ್ನಂತೆ, ಮಾಂ-ನನ್ನನ್ನು, ಪ್ರದಕ್ಷ್ಯತಿ - ಸುಡುತ್ತದೆ. ||೬-೮|| ಧೇನುಃ - ಆಕಳು, ಗಚ್ಛಂತಂ - ಓಡಿಹೋಗುತ್ತಿರುವ, ಸ್ವಂ - ತನ್ನ ಸಂಬಂಧಿಯಾದ, ವತ್ಸಂ - ಕರುವನ್ನು, ಯಥಾಹಿ - ಹೇಗಾದರೆ, ಅನುಗಚ್ಛತಿ - ಅನುಸರಿಸಿ ಹೋಗುವದೋ, ಹೇ ಪುತ್ರ - ಎಲೈ ಮಗನೆ, ತ್ವಂ - ನೀನು, ಯತ್ರ - ಯಾವ ಸ್ಥಳದಲ್ಲಿ, ಗಮಿಷ್ಯಸಿ - ಹೋಗುವಿಯೋ, ತತ್ರ - ಅಲ್ಲಿ, ಅಹಂ - ನಾನು, ತಥಾ - ಹಾಗೆ, ತ್ವಾಂ - ನಿನ್ನನ್ನು, ಅನುಗಮಿಷ್ಯಾಮಿ - ಅನುಸರಿಸಿ - ಬರುತ್ತೇನೆ. ||೯|| ಪುರುಷರ್ಭಃ - ಪುರುಷಶ್ರೇಷ್ಠನಾದ, ರಾಮಃ - ಶ್ರೀರಾಮನು, ತಥಾ - ಹಾಗೆ, ಮಾತ್ರಾ - ತಾಯಿಯಿಂದ, ನಿಗದಿತಂ - ಹೇಳಲ್ಪಟ್ಟ, ತದ್ವಾಕ್ಯಂ - ಆ ಮಾತನ್ನು, ಶೃತ್ವಾ - ಕೇಳಿ, ಭೃಶದುಃಖಿತಾಂ - ಬಹಳ ದುಃಖಿತಳಾದ, ಮಾತರಂ - ತಾಯಿಯನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ||೧೦|| ಕೈಕೇಯ್ಯಾ - ಕೈಕೇಯಿದೇವಿಯಿಂದ, ವಂಚಿತಃ - ವಂಚಿಸಲ್ಪಟ್ಟ, ರಾಜಾ - ಅರಸು, ಮಯಿಚ - ನಾನು, ಅರಣ್ಯಂ - ಅರಣ್ಯವನ್ನು, ಆಶ್ರಿತೇಸತಿ - ಆಶ್ರಯಿಸಿದರೆ, ಭವತ್ಯಾ - ನಿನ್ನಿಂದ, ಪರಿತ್ಯಕ್ತಶ್ಚ - ಪರಿತ್ಯಾಗಮಾಡಲ್ಪಟ್ಟ, ನವರ್ತಯಿಷ್ಯತಿ - ಜೀವಿಸಲಾರನು, ನೂನಂ - ನಿಶ್ಚಯವು. ||೧೧|| ಸ್ತ್ರಿಯಃ - ಹೆಂಗಸಿಗೆ, ಭರ್ತುಃ - ಗಂಡನ, ಪರಿತ್ಯಾಗಃ - ತ್ಯಜಿಸುವಿಕೆಯು, ಕೇವಲಂ - ಬಹಳವಾಗಿ, ನೃಶಂಸಃ - ಪಾಪಹೇತುವಾದ ಘಾತಕ ಕರ್ಮವಷ್ಟೆ, ವಿಗರ್ಹಿತಃ - ನಿಂದಿತವಾದ,

---

ಮಹತ್ತರವಾದ ಶೋಕವೆಂಬ ಬೆಂಕಿಯು, ನನ್ನನ್ನು ಕೃಶಗಳನ್ನಾಗಿಮಾಡಿ, ಶಿಶಿರ ಋತುವಿನಲ್ಲಿ ಅಗ್ನಿಯು ಮುಳ್ಳು ಬೇಲಿಗಳನ್ನು ಸುಡುವಂತೆ ಸುಡುತ್ತಿರುವುದು. ಆದುದರಿಂದ ಗೋವು ತನ್ನ ಕರುವನ್ನು ಅನುಸರಿಸಿಹೋಗುವಂತೆ ನಿನ್ನನ್ನನುಸರಿಸಿ ಬರುತ್ತೇನೆ." ಇಂತು ನುಡಿದ ನಿಜ ಜನನಿಯಾದ ಕೌಸಲ್ಯಾದೇವಿಯ ನುಡಿಗಳನ್ನು ಕೇಳಿ, ಕಾಕುತ್ಸ್ಥರಾಮನಾಕೆಯನ್ನು ಕುರಿತು ಹೀಗೆಂದನು ||೬-೧೧|| ಎಲೌ ಜನನಿಯೆ ! ನಾನು ವನವಾಸಿಯಾಗಿ, ನೀನು ದಶರಥರಾಯನನ್ನಗಲಿದರೆ, ಆತನು ಕಿರೀ ಹೆಂಡತಿಯಾದ ಕೈಕೇಯಿದೇವಿಯಿಂದ ವಂಚಿತನಾಗಿ ಜೀವಿಸಲಾರನು. ಇದಲ್ಲದೆ ಹೆಂಗಸರು ಗಂಡನನ್ನಗಲುವುದು ಪರಮ ನೀಚವಾದುದು. ಇಂತಹುದನ್ನು ನೀನೆಂದಿಗೂ ಮಾಡಬೇಡ. ನಮ್ಮ ಜನಕನು

ವಿಗರ್ಹಿತಃ ॥ ೧೨ ॥ ಯಾವಜ್ಜೀವತಿ ಕಾಕುತ್ಸ್ಥಃ ಪಿತಾ ಮೇ ಜಗತೀಪತಿಃ ॥ ಶುಶ್ರೂಷಾ ಕ್ರಿಯತಾಂ ತಾವತ್ಸಹಿ ಧರ್ಮಸ್ಸನಾತನಃ ॥ ೧೩ ॥ ಏವಮುಕ್ತಾತು ರಾಮೇಣ ಕೌಸಲ್ಯಾ ಶುಭದರ್ಶನಾ ॥ ತಥೇತ್ಯುವಾಚ ಸುಪ್ರೀತಾ ರಾಮಮಕ್ಲಿಷ್ಟಕಾರಿಣಂ ॥ ೧೪ ॥ ಏವಮುಕ್ತಸ್ತು ವಚನಂ ರಾಮೋ ಧರ್ಮಭೃತಾಂ ವರಃ ॥ ಭೂಯಸ್ತಾಮಬ್ರವೀದ್ವಾಕ್ಯಂ ಮಾತರಂ ಭೃಶ ದುಃಖಿತಾಂ ॥ ೧೫ ॥ ಮಯಾಚೈವ ಭವತ್ಯಾಚ ಕರ್ತವ್ಯಂ ವಚನಂ ಪಿತುಃ ॥ ರಾಜಾ ಭರ್ತಾ ಗುರುಶ್ಶ್ರೇಷ್ಠ ಸ್ಸರ್ವೇಷಾಮೀಶ್ವರಃ ಪ್ರಭುಃ ॥ ೧೬ ॥ ಇಮಾ

ಸಃ - ಅಂತಹ ಕೆಲಸವು, ಭವತ್ಯಾ - ನಿನ್ನಿಂದ, ಮನಸಾಪಿ - ಮನಸ್ಸಿನಿಂದಲೂ, ನಕರ್ತವ್ಯಃ - ಮಾಡತಕ್ಕುದಲ್ಲ. ॥ ೧೨ ॥ ಮೇ - ನನ್ನ, ಪಿತಾ - ತಂದೆಯಾದ, ಜಗತೀಪತಿಃ - ಭೂಪತಿಯಾದ, ಕಾಕುತ್ಸ್ಥಃ-ಕಕುತ್ಸ್ಥವಂಶೋತ್ಪನ್ನನಾದ ದಶರಥರಾಯನು, ಯಾವತ್-ಎಷ್ಟರವರೆಗೂ, ಜೀವತಿ - ಬದುಕಿರುತ್ತಾನೆಯೋ, ತಾವತ್ - ಅಷ್ಟರವರೆಗೂ, ಶುಶ್ರೂಷಾ - ಸೇವೆಯು, ಕ್ರಿಯತಾಂ - ಮಾಡಲ್ಪಡಲಿ, ಸಃ - ಆ ಶುಶ್ರೂಷಾರೂಪವಾದ, ಧರ್ಮಃ - ಧರ್ಮವು, ಸನಾತನೋಹಿ-ಅನಾದಿಯಾಗಿ ಬಂದಿರುವದಷ್ಟೆ. ॥ ೧೩ ॥ ರಾಮೇಣ - ಶ್ರೀರಾಮನಿಂದ, ಏವಂ - ಹೀಗೆ, ಉಕ್ತಾ - ಹೇಳಲ್ಪಟ್ಟ, ಶುಭದರ್ಶನಾ - ಧರ್ಮಬುದ್ಧಿಯುಳ್ಳ, ಕೌಸಲ್ಯಾ - ಕೌಸಲ್ಯಾದೇವಿಯು, ಅಕ್ಲಿಷ್ಟಕಾರಿಣಂ - ಕ್ಲೇಶವಿಲ್ಲದ ಕಾರ್ಯವನ್ನು ನಡೆಯಿಸುತ್ತಿರುವ, ರಾಮಂ-ಶ್ರೀರಾಮನನ್ನು ಕುರಿತು, ಸುಪ್ರೀತಾ - ಸಂತುಷ್ಟಳಾಗಿ, ತಥೇತಿ - ಹಾಗೆಯೇ ಆಗಲೆಂದು, ಉವಾಚ - ಹೇಳಿದಳು. ॥ ೧೪ ॥ ಧರ್ಮಭೃತಾಂ - ಧರ್ಮಿಷ್ಠರೊಳಗೆ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ಏವಂ-ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟವನಾಗಿ, ಭೃಶದುಃಖಿತಾಂ - ಬಹಳ ದುಃಖವನ್ನು ಹೊಂದಿದ, ತಾಂ ಮಾತರಂ - ಆ ತಾಯಿಯನ್ನು ಕುರಿತು, ವಾಕ್ಯಂ - ಹೇಳತಕ್ಕ, ವಚನಂ - ಮಾತನ್ನು, ಭೂಯಃ - ಮತ್ತೂ, ಅಬ್ರವೀತ್ - ನುಡಿದನು. ॥ ೧೫ ॥ ಹಿ - ಯಾವ ಕಾರಣ, ಸಃ - ಆ ದಶರಥರಾಯನು, ಸರ್ವೇಷಾಂ - ಸಮಸ್ತರಾದ ನಮ್ಮಗಳಿಗೆ, ರಾಜಾ - ಅರಸನೇ, ಭರ್ತಾ-ಸಂರಕ್ಷಣಕರ್ತನೂ, ಗುರುಃ-ಮಂತ್ರೋಪದೇಶ ಕರ್ತನಾದವನೂ, ಶ್ರೇಷ್ಠಃ - ಗುಣಶ್ರೇಷ್ಠನೂ, ಈಶ್ವರಃ - ಸ್ವಾಮಿಯಾದವನೂ, ಪ್ರಭುಃ - ನಿಗ್ರಹಾನುಗ್ರಹಸಮರ್ಥನೂ ಆಗಿರುವನೋ, ತಸ್ಮಾತ್ - ಆಕಾರಣ, ಪಿತುಃ - ಅಂತಹ ತಂದೆಯಾದ ದಶರಥರಾಯನ, ವಚನಂ - ಮಾತು, ಮಯಾಚೈವ - ನನ್ನಿಂದಲೂ, ಭವತ್ಯಾಚ - ನಿನ್ನಿಂದಲೂ, ಕರ್ತವ್ಯಂ - ಮಾಡತಕ್ಕುದು. ॥ ೧೬ ॥ ಮಹಾರಣ್ಯೇ - ಗೊಂಡಾರಣ್ಯದಲ್ಲಿ,

---

ಜೀವಂತನಾಗಿರುವವರೆವಿಗೂ ನೀನಾತನ ಶುಶ್ರೂಷೆಯನ್ನು ಮಾಡಿಕೊಂಡಿರುವುದೇ ಪರಮ ಧರ್ಮವು. “ ಈರೀತಿ ಶ್ರೀರಾಮನಿಂದ ಹೇಳಲ್ಪಟ್ಟ ಕೌಸಲ್ಯಾದೇವಿಯು, ಸಂತೋಷ ಮನಸ್ಕಳಾಗಿ ಹಾಗೆಯೇ ಆಗಲೆಂದು ಹೇಳಿದಳು. ಹೀಗೆ ಕೌಸಲ್ಯಾದೇವಿಯು ಶ್ರೀರಾಮನ ವನವಾಸಕ್ಕೆ ಸಮ್ಮತಿಯನ್ನಿತ್ತು ಮತ್ತೂ ವ್ಯಸನಾಕ್ರಾಂತಳಾಗಲು ಶ್ರೀರಾಮ ಮೂರ್ತಿಯು ಆಕೆಯನ್ನು ಕುರಿತು ಮರಳಿಂತೆಂದನು. ॥ ೧೨-೧೫ ॥ ಅಮ್ಮ ! ನಾವಿಬ್ಬರೂ ತಂದೆಯ ಅಪ್ಪಣೆಗೆ ಬದ್ಧರಾಗಿರಬೇಕು. ಆತನೇ ಭೂಮಂಡಲಕ್ಕೊಡೆಯನು; ನಮ್ಮೆಲ್ಲರನ್ನೂ ಪೋಷಿ

ನಿತು ಮಹಾರಣ್ಯೇ ವಿಹೃತ್ಯ ನವಪಂಚಚ ॥ ವರ್ಷಾಣಿ ಪರಮಪ್ರೀತಃ ಸ್ಥಾಸ್ಯಾಮಿ ವಚನೇ ತವ ॥ ೧೭ ॥ ಏವಮುಕ್ತ್ವಾ ಪ್ರಿಯಂ ಪುತ್ರಂ ಬಾಷ್ಪ ಪೂರ್ಣಾನನಾ ತದಾ ॥ ದುಃಖಾನ್ಯಸಹಮಾನಾ ಸಾ ಕೌಸಲ್ಯಾ ರಾಮ ಮಬ್ರವೀತ್ ॥ ೧೮ ॥ ಆಸಾಂ ರಾಮ ಸಪತ್ನೀನಾಂ ವಸ್ತುಂ ಮಧ್ಯೇ ನ ಮೇ ಕ್ಷಮಂ॥ನಯ ಮಾಮಪಿ ಕಾಕುತ್ಸ್ಥ ವನಂ ವನ್ಯಾಂ ಮೃಗೀಂ ಯಥಾ ॥೧೯॥ ಯದಿ ತೇ ಗಮನೇ ಬುದ್ಧಿಃ ಕೃತಾ ಪಿತುರಪೇಕ್ಷಯಾ ॥ ತಾಂ ತಥಾ ರುದತೀಂ ರಾಮೋ ರುದನ್ ವಚನ ಮಬ್ರವೀತ್ ॥ ೨೦ ॥ ಜೀವಂ ತ್ಯಾಹಿ ಸ್ತ್ರಿಯೋ ಭರ್ತಾ ದೈವತಂ ಪ್ರಭುರೇವಚ ॥ ಭವತ್ಯಾ ಮಮಚೈವಾದ್ಯ

ನವಪಂಚಚ - ಹದಿನಾಲ್ಕು ಸಂಖ್ಯೆಯುಳ್ಳ, ಇಮಾನಿವರ್ಷಾಣಿ - ಈ ಸಂವತ್ಸರಗಳು, ವಿಹೃತ್ಯ - ವಿವಾಸಮಾಡಿ, ಪರಮಪ್ರೀತಃ - ಬಹಳ ಸಂತೋಷಗೊಂಡು, ತವ - ನಿನ್ನ, ವಚನೇ - ಮಾತಿನಂತೆ, ಸ್ಥಾಸ್ಯಾಮಿ - ಇರುತ್ತೇನೆ. ॥ ೧೭ ॥ ಏವಂ - ಈಪರಿಯಾಗಿ, ಉಕ್ತ್ವಾ - ಹೇಳಲ್ಪಟ್ಟ, ಪುತ್ರ ವತ್ಸಲಾ - ಮಗನಲ್ಲಿ ವಾತ್ಸಲ್ಯವುಳ್ಳ, ಕೌಸಲ್ಯಾ - ಕೌಸಲ್ಯಾದೇವಿಯು, ತದಾ - ಆಗ, ಬಾಷ್ಪ ಪೂರ್ಣಾನನಾ, ಬಾಷ್ಪ - ಕಣ್ಣೀರಿನಿಂದ, ಪೂರ್ಣ - ತುಂಬಿದ, ಆನನಾ - ಮುಖವುಳ್ಳವಳಾಗಿ, ತದಾ - ಆಗ, ಪರಮಾರ್ತಾ - ಬಹಳ ಪರಿತಪ್ತಳಾಗಿ, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು ಕುರಿತು, ಉವಾಚ - ಹೇಳಿದಳು. ॥ ೧೮ ॥ ಹೇ ರಾಮ - ಎಲೈ ಶ್ರೀರಾಮನೆ, ಆಸಾಂಸಪತ್ನೀ ನಾಂ - ಈ ಸವತಿಯರ, ಮಧ್ಯೇ - ಮಧ್ಯದಲ್ಲಿ, ವಸ್ತುಂ - ಇರಲು, ಮೇ - ನನಗೆ, ನಕ್ಷಮಂ - ಯೋಗ್ಯವಲ್ಲ, ಪಿತುಃ - ತಂದೆಯ, ಅಪೇಕ್ಷಯಾ - ಇಚ್ಛೆಯಿಂದ, ತೇ - ನಿನಗೆ, ಗಮನೇ - ಅರಣ್ಯ ಗಮನದಲ್ಲಿ, ಬುದ್ಧಿರ್ಯದಿ - ಬುದ್ಧಿಹುಟ್ಟಿದುದೇ ಆದರೆ, ಹೇ ಕಾಕುತ್ಸ್ಥ - ಎಲೈ ಶ್ರೀರಾಮನೆ, ವನ್ಯಾಂ - ವನದಲ್ಲಿ ಹುಟ್ಟಿದ, ಮೃಗೀಂಯಥಾ - ಮೃಗದಂತೆ, ಮಾಮಪಿ - ನನ್ನನ್ನೂ, ವನಂ - ವನವನ್ನು, ನಯ - ಹೊಂದಿಸು. ॥ ೧೯ ॥ ತಥಾ - ಹಾಗೆಯೆ, ರುದತೀಂ - ರೋದನೆಮಾಡುತ್ತಿರುವ, ತಾಂ - ಆ ಕೌಸಲ್ಯಾದೇವಿಯನ್ನು ಕುರಿತು, ರಾಮಃ - ಶ್ರೀರಾಮನು, ರುದನ್ - ಅಳುತ್ತ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨೦ ॥ ಹಿ-ಯಾವ ಕಾರಣ, ಜೀವಂತ್ಯಾಃ- ಬದುಕಿರುವ, ಸ್ತ್ರಿಯಃ - ಹೆಂಗಸಿರಿಗೆ, ಭರ್ತೈವ - ಗಂಡನೇ, ದೈವತಂ - ದೇವರು, ಪ್ರಭುಶ್ಚ -

---

ಸುವವನು; ಗುರುವೂ ಆತನೇ; ಆತನೇ ಪ್ರಭುವಾಗಿಯೂ ಇರುವನು. ಹದಿನಾಲ್ಕು ಸಂವತ್ಸರಗಳ ಕಾಲ ಅರಣ್ಯವಾಸವನ್ನುಮಾಡಿ, ಮರಳಿ ಇಲ್ಲಿಗೆ ಬಂದು ಸಂತೋಷಚಿತ್ತನಾಗಿ ನಿನ್ನಾಜ್ಞಾಧಾರಕನಾಗಿರುತ್ತೇನೆ. " ಶ್ರೀರಾಮನು ಈರೀತಿ ನುಡಿಯಲು, ಪುತ್ರಪ್ರೇಮತೆಯುಳ್ಳ ಕೌಸಲ್ಯೆಯು ಬಹಳವಾಗಿ ಖತಿಗೊಂಡು ಆತನನ್ನು ಕುರಿತು " ರಾಮಚಂದ್ರ ! ನೀನರಣ್ಯವಾಸಕ್ಕೆ ತೆರಳಿದರೆ ನಾನೀ ಸವತಿಯರ ಮಧ್ಯದಲ್ಲಿರಲಾರೆನು. ನೀನು ನಿಮ್ಮ ತಂದೆಯ ಆಜ್ಞೆಯಂತೆ ತೆರಳಬೇಕಾದರೆ ವನದಲ್ಲಿರುವ ಚಿಗುರಿಯನ್ನಂತೆ ನನ್ನನ್ನೂ ನಿನ್ನೊಡನೆ ಕರೆದುಕೊಂಡು ಹೋಗು " ಎಂದಳು. ಆಗ ಶ್ರೀರಾಮನಿಂತೆಂದನು. ॥ ೧೭-೨೦ ॥ " ಎಲೌ ತಾಯೆ ! ಚಿಂತಿಸುವೆಯೇಕೆ ? ಬದುಕಿರುವ ಹೆಂಗಸಿಗೆ ಪತಿಯೇ ಪರದೈವವೂ,

ರಾಜಾ ಪ್ರಭವತಿ ಪ್ರಭುಃ ॥ ೨೧ ॥ ನಹ್ಯನಾಥಾ ವಯಂ ರಾಜ್ಞಾ ಲೋಕ ನಾಥೇನ ಧೀಮತಾ ॥ ಭರತಶ್ಚಾಪಿ ಧರ್ಮಾತ್ಮಾ ಸರ್ವಭೂತ ಪ್ರಿಯಂವದಃ ॥ ೨೨ ॥ ಭವತೀ ಮನುವರ್ತೇತ ಸಹಿ ಧರ್ಮರತಸ್ಸದಾ ॥ ಯಥಾ ಮಯಿತು ನಿಷ್ಕ್ರಾಂತೇ ಪುತ್ರಶೋಕೇನ ಪಾರ್ಥಿವಃ ॥ ೨೩ ॥ ಶ್ರಮಂ ನಾವಾಪ್ನು ಯಾತ್ಕಿಂಚಿದಪ್ರಮತ್ತಾ ತಥಾ ಕುರು ॥ ದಾರುಣಶ್ಚಾಪ್ಯಯಂ ಶೋಕೋ ಯಥೈನಂ ನ ವಿನಾಶಯೇತ್॥೨೪॥ರಾಜ್ಞೋ ವೃದ್ಧಸ್ಯ ಸತತಂ ಹಿತಂ ಚರ ಸಮಾಹಿತಾ ॥ ವ್ರತೋಪವಾಸ ನಿರತಾ ಯಾನಾರೀ ಪರಮೋತ್ತಮಾ ॥ ೨೫ ॥ ಭರ್ತಾರಂ

ಸ್ವಾಮಿಯೂ ಆಗಿರುವನೋ, ತಸ್ಮಾತ್ - ಆ ಕಾರಣದಿಂದ, ಭವತ್ಯಾಃ-ನಿನಗೂ, ಮಮಚ-ನನಗೂ, ಅದ್ಯ - ಈಗ, ರಾಜೈವ - ಅರಸನೇ, ಪ್ರಭುಃ - ಸಮರ್ಥನಾದವನಾಗಿ, ಪ್ರಭವತಿ - ಸ್ವಾಮಿಯಾಗಿರುವನು. ॥ ೨೧ ॥ ವಯಂ - ನಾವು, ಲೋಕನಾಥೇನ - ಜನರಿಗೆಲ್ಲ ಸ್ವಾಮಿಯಾದ, ಧೀಮತಾ - ಬುದ್ಧಿವಂತನಾದ, ರಾಜ್ಞಾ - ಅರಸಿನಿಂದ, ಅನಾಥಾಃ - ಸ್ವಾಮಿಯಿಲ್ಲದವರು, ನಹಿ - ಅಲ್ಲವಷ್ಟೆ, ಧರ್ಮಾತ್ಮಾ - ಧರ್ಮಿಷ್ಠನಾದ, ಭರತಶ್ಚಾಪಿ - ಭರತನೂ, ಸರ್ವಭೂತಪ್ರಿಯಂವದಃ - ಸರ್ವ ಪ್ರಾಣಿಗಳಿಗೂ ಹಿತವನ್ನು ಹೇಳುವವನಾಗಿರುವನು, ಸಃ - ಆ ಭರತನು, ಸದಾ - ಯಾವಾಗಲೂ, ಧರ್ಮತಃ- ಧರ್ಮವಲ್ಲಿಯೇ ಆಸಕ್ತನಾದಕಾರಣ, ಭವತೀಂ - ನಿನ್ನನ್ನು, ಅನುವರ್ತೇತಹಿ - ಅನುಸರಿಸುವನಷ್ಟೆ. ॥ ೨೨ ॥ ಮಯಿತು - ನಾನಾದರೆ, ನಿಷ್ಕ್ರಾಂತೇಸತಿ - ಹೊರಟು ಹೋಗಲು, ಪಾರ್ಥಿವಃ-ಅರಸು, ಪುತ್ರಶೋಕೇನ - ಪುತ್ರವಿರಹದಿಂದ ಹುಟ್ಟಿದ ವ್ಯಸನದಿಂದ, ಶ್ರಮಂ - ಆಯಾಸವನ್ನು, ಯಥಾ - ಹೇಗೆ, ಕಿಂಚಿತ್ - ಸ್ವಲ್ಪವಾದರೂ, ನಾವಾಪ್ನುಯಾತ್ - ಹೊಂದದಿರುವನೋ, ತಥಾ - ಹಾಗೆ, ಅಪ್ರಮತ್ತಾ - ಜಾಗರೂಕಳಾಗಿ, ಕುರು - ಮಾಡು. ॥ ೨೩ ॥ ದಾರುಣಃ - ಕ್ರೂರವಾದ, ಅಯಂಶೋಕಃ - ಈ ಪುತ್ರವ್ಯಸನವು, ಯಥಾ - ಹೇಗೆ, ಏನಮಪಿ - ಈ ಅರಸನನ್ನು, ನವಿನಾಶಯೇತ್ - ನಾಶವನ್ನು ಹೊಂದಿಸದಿರುವದೋ, ವೃದ್ಧಸ್ಯ - ಮುದುಕನಾದ, ರಾಜ್ಞಃ - ಅರಸನಿಗೆ, ಸಮಾಹಿತಾ-ಸಮಾಧಾನಚಿತ್ತಳಾಗಿ, ಸತತಂ-ನಿರಂತರವೂ, ಹಿತಂ-ಹಿತವನ್ನು, ಚರ-ಉಂಟುಮಾಡು. ॥೨೪॥ ವ್ರತೋಪವಾಸನಿರತಾ, ವ್ರತ-ವ್ರತಗಳಲ್ಲಿಯೂ, ಉಪವಾಸ-ಉಪವಾಸಗಳಲ್ಲಿಯೂ, ನಿರತಾ- ಆಸಕ್ತಳಾದ, ಯಾನಾರೀ - ಯಾವ ಹೆಂಗಸು, ಪರಮೋತ್ತಮಾ - ಬಹಳ ಶ್ರೇಷ್ಠಳಾದರೂ,

---

ಪ್ರಭುವೂ ಆಗಿರುವನು. ಆದಕಾರಣ ನಿನಗೂ ನನಗೂ ಪ್ರಭುವಾದವನು ದಶರಥ ರಾಯನೇ ! ಪ್ರಜಾನಾಥನಾದ ಆ ರಾಯನಿರುವಾಗ ನಾವು ಅನಾಥರು ಹೇಗೆ ತಾನೆ ಆದೇವು? ಅಲ್ಲದೆ, ಧರ್ಮಾತ್ಮನಾದವನೂ, ಹಿತವಾಕ್ಯಗಳನ್ನೇ ಆಡುವನೂ ಆದ ಭರತನು ನಿನ್ನನ್ನನುಸರಿಸುವನು. ಆತನು ಮಹಾ ಧರ್ಮಿಷ್ಠನು. ನಾನು ಅರಣ್ಯವಾಸಕ್ಕೆ ತೆರಳಿದರೆ ಮಹಾರಾಜನು ಪುತ್ರಶೋಕ ತಪ್ತನಾಗದಂತೆ ಮಾಡುವವಳಾಗು. ಮಹಾ ಭಯಂಕರವಾದ ಈ ದುಃಖವು ಆತನನ್ನು ನಾಶಗೊಳಿಸದಂತೆ ಸಾವಧಾನ ಮನಸ್ಕಳಾಗಿ ಆತನಿಗೆ ಹಿತವನ್ನುಂಟುಮಾಡುತ್ತಿರು. ಯಾವ ಉತ್ತಮ ಸ್ತ್ರೀಯು ವ್ರತೋಪವಾಸಗಳಲ್ಲಿ ಆಸಕ್ತಳಾಗಿದ್ದರೂ ಪತಿಯನ್ನು ಅನುಸರಿಸುವುದಿಲ್ಲವೋ ಅಂತಹಳು ನರಕಭಾಜನಳಾಗುವಳು. ಯಾವ ಸ್ತ್ರೀಯು

ನಾನುವರ್ತೇತ ಸಾತು ಪಾಪಗತಿರ್ಭವೇತ್ ॥ ಭರ್ತುಶ್ಶುಶ್ರೂಷಯಾ ನಾರೀ ಲಭತೇ ಸ್ವರ್ಗಮುತ್ತಮಂ ॥೨೬॥ ಅಪಿ ಯಾ ನಿರ್ನಮಸ್ಕಾರಾ ನಿವೃತ್ತಾ ದೇವಪೂಜನಾತ್ ॥ ಶುಶ್ರೂಷಾಮೇವ ಕುರ್ವೀತ ಭರ್ತುಃ ಪ್ರಿಯ ಹಿತೇ ರತಾ ॥ ೨೭ ॥ ಏಷಧರ್ಮಃ ಪುರಾ ದೃಷ್ಟೋ ಲೋಕೇ ವೇದೇ ಶ್ರುತ ಸ್ಸ್ಮೃತಃ ॥ ಅಗ್ನಿಕಾರ್ಯೇಷು ಚ ಸದಾ ಸುಮನೋಭಿಸ್ತು ದೇವತಾಃ ॥ ೨೮ ॥ ಪೂಜ್ಯಾಸ್ತೇ ಮತ್ಕೃತೇ ದೇವಿ ಬ್ರಾಹ್ಮಣಾಶ್ಚೈವ ಸುವ್ರತಾಃ ॥ ಏವಂ ಕಾಲಂ ಪ್ರತೀಕ್ಷಸ್ವ ಮಮಾಗಮನ ಕಾಂಕ್ಷಿಣೀ ॥ ೨೯ ॥ ನಿಯತಾ ನಿಯತಾಹಾರಾ

ಭರ್ತಾರಂ - ಗಂಡನನ್ನು, ನಾನುವರ್ತೇತ - ಅನುಸರಿಸುವುದಿಲ್ಲವೋ, ಸಾ-ಆ ಹೆಂಗಸು, ಪಾಪಗತಿಃ- ನರಕವನ್ನು ಕುರಿತು ಹೋಗುವವಳು, ಭವೇತ್ - ಆಗುವಳು. ॥ ೨೫ ॥ ಯಾ-ಯಾವ ಹೆಂಗಸು, ನಿರ್ನಮಸ್ಕಾರಾ - ನಮಸ್ಕಾರವನ್ನು ಮಾಡದಿರುವಳೋ, ದೇವಪೂಜನಾತ್ - ದೇವರ ಪೂಜೆಯಿಂದ, ನಿವೃತ್ತಾ - ವಿಮುಖಳೋ, ಸನಾರ್ಯಪಿ - ಅಂತಹ ಹೆಂಗಸು ಸಹ, ಭರ್ತುಃ - ಗಂಡನ, ಶುಶ್ರೂಷಯಾ - ಸೇವೆಯಿಂದ, ಉತ್ತಮಂ - ಸರ್ವೋತ್ತಮವಾದ, ಸ್ವರ್ಗಂ - ಸ್ವರ್ಗಲೋಕವನ್ನು, ಲಭ್ಯತೇ - ಹೊಂದುವಳು. ॥ ೨೬ ॥ ಪ್ರಿಯಹಿತೇ - ಗಂಡನಿಗೆ ಹಿತವನ್ನುಂಟುಮಾಡುವದರಲ್ಲಿ, ರತಾ - ಆಸಕ್ತಳಾದ ಹೆಂಗಸು, ಭರ್ತುಃ - ಗಂಡನಿಗೆ, ಶುಶ್ರೂಷಾಮೇವ - ಶುಶ್ರೂಷೆಯನ್ನೇ, ಕುರ್ವೀತ - ಮಾಡಬೇಕು, ಏಷಃ - ಈ ಪತಿಸೇವಾರೂಪವಾದ, ಧರ್ಮಃ - ಧರ್ಮವು, ಪುರಾ - ಪೂರ್ವದಲ್ಲಿ, ಲೋಕೇ - ಲೋಕದಲ್ಲಿ, ದೃಷ್ಟಃ - ನೋಡಲ್ಪಟ್ಟಿಥೆ, ವೇದೇ - ವೇದದಲ್ಲಿ, ಶೃತಃ - ಹೇಳಲ್ಪಟ್ಟಿರುವುದು, ಸ್ಮೃತಃ - ಸ್ಮೃತಿಗಳಿಂದ ಹೇಳಲ್ಪಟ್ಟಿರುವುದು. ॥ ೨೭ ॥ ಹೇ ದೇವಿ - ಎಲೈ ತಾಯೆ, ಅಗ್ನಿಕಾರ್ಯೇಷು - ಶಾಂತ್ಯಾದಿ ಕರ್ಮಕಾಲಗಳಲ್ಲಿಯೂ, ದೇವತಾಃ - ದೇವತೆಗಳು, ಸುಮನೋಭಿಃ - ಪುಷ್ಪಗಳಿಂದ, ತೇ - ನಿನ್ನಿಂದ, ಮತ್ಕೃತೇ - ನನ್ನ ನಿಮಿತ್ತವಾಗಿ, ಸುವ್ರತಾಃ - ಒಳ್ಳೆಯ ನಿಯಮನಿಷ್ಠರಾದ, ಬ್ರಾಹ್ಮಣಾಶ್ಚೈವ - ಬ್ರಾಹ್ಮಣರೂ, ಪೂಜ್ಯಾಃ - ಪೂಜೆಮಾಡತಕ್ಕವರು. ॥ ೨೮ ॥ ಮಮ - ನನ್ನ, ಆಗಮನಾಕಾಂಕ್ಷಿಣೀ - ಆಗಮನವನ್ನು ಪ್ರಾರ್ಥಿಸುತ್ತಿರುವಳಾದ, ತ್ವಂ - ನೀನು, ನಿಯತಾ - ನಿಷ್ಠಳಾಗಿ, ನಿಯತಾಹಾರಾ - ಕ್ಲೃಪ್ತವಾದ ಆಹಾರವುಳ್ಳವಳಾಗಿ, ಭರ್ತೃಶುಶ್ರೂಷಣೇ - ಪತಿಯಸೇವೆಯಲ್ಲಿ, ರತಾ - ಆಸಕ್ತಳಾಗಿಯೂ, ಏವಂ - ಹೀಗೆ, ಕಾಲಂ -

---

ದೇವರನ್ನು ಪೂಜಿಸಿ ನಮಸ್ಕಾರ ಮಾಡದಿದ್ದರೂ, ಪತಿದೇವನನ್ನು ಸೇವಿಸಿಕೊಂಡಿರುವಳೋ ಆಕೆಯು ಸ್ವರ್ಗವನ್ನು ಪಡೆಯುತ್ತಾಳೆ. ಆದುದರಿಂದ ಕುಲಾಂಗನೆಯಾದವಳು ಪತಿಗೆ ಹಿತವನ್ನು ಕೋರುತ್ತ ಆತನ ಸೇವೆಯನ್ನೇ ಮಾಡುತ್ತಿರಬೇಕು. ಈ ಧರ್ಮವು ಲೋಕದಲ್ಲಿ ಎಲ್ಲರಿಂದಲೂ ತಿಳಿಯಲಾಗಿದೆ; ವೇದ ಪ್ರತಿಪಾದ್ಯವಾಗಿರುವುದು ; ಸ್ಮೃತಿಗಳಿಂದ ಹೇಳಲ್ಪಟ್ಟುದೂ ಆಗಿರುವುದು. ॥ ೨೦-೨೭ ॥ ಎಲೌ ತಾಯೆ ! ನನ್ನ ಪುನರಾಗಮನಕ್ಕಾಗಿ ಶಾಂತ್ಯಾದಿ ಕರ್ಮಗಳನ್ನು ಮಾಡುತ್ತ ಯಾವಾಗಲೂ ದೇವ ಬ್ರಾಹ್ಮಣರನ್ನು ಪೂಜಿಸುತ್ತಿರು ಹೀಗೆ ನನ್ನ ಆಗಮನವನ್ನು ನಿರೀಕ್ಷಿಸುತ್ತ ನಿಯಮಪರಳಾಗಿಯೂ, ನಿಯತಾಹಾರವುಳ್ಳವಳಾಗಿಯೂ, ಪತಿ ಸೇವಾಸಕ್ತಳಾಗಿಯೂ ಇರತ್ತ ಕಾಲವನ್ನು ಕಳೆಯುತ್ತಿರು.

ಭರ್ತೃಶುಶ್ರೂಷಣೇ ರತಾ ‖ ಪ್ರಾಪ್ಸ್ಯಸೇ ಪರಮಂ ಕಾಮಂ ಮಯಿ ಪ್ರತ್ಯಾಗತೇ ಸತಿ ‖ ೩೦ ‖ ಯದಿ ಧರ್ಮಭೃತಾಂ ಶ್ರೇಷ್ಠೋ ಧಾರಯಿಷ್ಯತಿ ಜೀವಿತಂ ‖ ಏವಮುಕ್ತಾತು ರಾಮೇಣ ಬಾಷ್ಪಪರ್ಯಾಕುಲೇಕ್ಷಣಾ ‖ ೩೧ ‖ ಕೌಸಲ್ಯಾ ಪುತ್ರಶೋಕಾರ್ತಾ ರಾಮಂ ವಚನಮಬ್ರವೀತ್ ‖ ಗಮನೇ ಸುಕೃತಾಂ ಬುದ್ಧಿಂ ನ ತೇ ಶಕ್ನೋಮಿ ಪುತ್ರಕ ‖ ೩೨ ‖ ವಿನಿವರ್ತಯಿತುಂ ವೀರ ನೂನಂ ಕಾಲೋ ದುರತ್ಯಯಃ ‖ ಗಚ್ಛಪುತ್ರ ತ್ವಮೇಕಾಗ್ರೋ ಭದ್ರಂ ತೇಸ್ತು ಸದಾ ವಿಭೋ ‖ ೩೩ ‖ ಪುನಸ್ತ್ವಯಿ ನಿವೃತ್ತೇತು ಭವಿಷ್ಯಾಮಿ ಗತಕ್ಲಮಾ ‖ ಪ್ರತ್ಯಾಗತೇ ಮಹಾಭಾಗೇ ಕೃತಾರ್ಥೇ ಚರಿತವ್ರತೇ ‖ ೩೪ ‖ ಪಿತುರಾ

ಸಮಯವನ್ನು, ಪ್ರತೀಕ್ಷಸ್ವ - ನಿರೀಕ್ಷಿಸು. ‖ ೨೯ ‖ ಧರ್ಮಭೃತಾಂ - ಧರ್ಮಿಷ್ಠರೊಳಗೆ, ಶ್ರೇಷ್ಠಃ - ಶ್ರೇಷ್ಠನಾದ ದಶರಥರಾಯನು, ಜೀವಿತಂ - ಪ್ರಾಣವನ್ನು, ಧಾರಯಿಷ್ಯತಿಯದಿ - ಧರಿಸಿದವನಾದರೆ, ಮಯಿ - ನಾನು, ಪ್ರತ್ಯಾಗತೇಸತಿ - ತಿರಿಗಿಬರಲು, ಪರಮಂ - ಬಹಳವಾದ, ಕಾಮಂ- ಕೋರಿಕೆಯನ್ನು, ಪ್ರಾಪ್ಸ್ಯಸೇ - ಹೊಂದುವೆ. ‖ ೩೦ ‖ ಏವಂ - ಹೀಗೆ, ರಾಮೇಣ - ಶ್ರೀರಾಮನಿಂದ, ಉಕ್ತಾ - ಹೇಳಲ್ಪಟ್ಟ, ಕೌಸಲ್ಯಾ - ಕೌಸಲ್ಯಾದೇವಿಯು, ಬಾಷ್ಪಪರ್ಯಾಕುಲೇಕ್ಷಣಾ - ಕಣ್ಣೀರಿನಿಂದ ವ್ಯಾಕುಲವಾದ ನೇತ್ರಗಳುಳ್ಳವಳಾಗಿ, ಶೋಕಾರ್ತಾ - ದುಃಖ ಪರಿತಪ್ತಳಾಗಿ, ರಾಮಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದಳು. ‖ ೩೧ ‖ ಹೇ ಪುತ್ರಕ - ಎಲೈ ಮಗುವೆ, ಹೆವೀರ - ಎಲೈ ಶೂರನೇ, ತೇ - ನಿನಗೆ, ಗಮನೇ - ಗಮನದಲ್ಲಿ, ಸುಕೃತಾಂ - ನಿಶ್ಚಯಿಸಲ್ಪಟ್ಟ, ಬುದ್ಧಿಂ - ಬುದ್ಧಿಯನ್ನು, ವಿನಿವರ್ತಯಿತುಂ-ಹಿಂತಿರುಗಿಸುವದಕ್ಕೆ, ನಶಕ್ನೋಮಿ- ಸಮರ್ಥಳಾಗಲಾರೆನು, ಕಾಲಃ - ಕಾಲವು, ದುರತ್ಯಯಃ - ಅತಿಕ್ರಮಿಸಲಸಾಧ್ಯವು, ನೂನಂ - ನಿಶ್ಚಯವು. ‖ ೩೨ ‖ ಹೇ ಪುತ್ರ - ಎಲೈ ಮಗನೇ, ತ್ವಂ - ನೀನು, ಏಕಾಗ್ರಃ - ಏಕಾಗ್ರಚಿತ್ತನಾಗಿ, ಗಚ್ಛ - ಹೋಗು, ಹೇ ವಿಭೋ - ಎಲೈ ಸಮರ್ಥನೇ, ಸದಾ - ನಿರಂತರವು, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ತ್ವಯಿ - ನೀನು, ಪುನಃ - ಮತ್ತು, ನಿವೃತ್ತೇತುಸತಿ - ಹಿಂತಿರಿಗಿ ಬಂದವನಾಗಲು, ಗತಕ್ಲಮಾ - ಗಳಿತವಾದ ಶ್ರಮವುಳ್ಳವಳು, ಭವಿಷ್ಯಾಮಿ - ಆಗುವೆನು. ‖ ೩೩ ‖ ಮಹಾ ಭಾಗೇ - ಮಹಾ ಪುಣ್ಯಶಾಲಿಯಾದ, ಕೃತಾರ್ಥೇ - ಕೃತಪ್ರಯೋಜನನಾದ, ಚರಿತವ್ರತೇ - ಆಚರಿಸಲ್ಪಟ್ಟ ವ್ರತವುಳ್ಳವನಾದ, ತ್ವಯಿ - ನೀನು, ಪಿತುಃ-ತಂದೆಯ, ಆನೃಣ್ಯತಾಂ-

---

ನಾನು ವನವಾಸದಿಂದ ಹಿಂತಿರುಗಿ ಬರುವವರೆವಿಗೂ ಮಹಾರಾಜನು ಜೀವಿಸಿದರೆ ನಿನ್ನ ಇಷ್ಟಾರ್ಥವನ್ನು ಪಡೆಯುತ್ತಿಯೆ" ಶ್ರೀರಾಮಮೂರ್ತಿಯಾಡಿದ ಈ ನುಡಿಗಳನ್ನು ಕೇಳಿ ಕೌಸಲ್ಯಾದೇವಿಯು ಪುತ್ರ ಶೋಕದಿಂದ ದುಃಖಿತಳಾಗಿ ಶ್ರೀರಾಮಚಂದ್ರನನ್ನು ಕುರಿತು ಹೀಗೆಂದಳು. ‖೨೮-೩೧‖ "ಎಲೈ ರಾಮಚಂದ್ರನೆ ! ವನಗಮನಕ್ಕೆ ಸಿದ್ಧನಾಗಿರುವ ನಿನ್ನನ್ನು ಹಿಂತಿರುಗಿಸಲು ನಾನು ಅಸಮರ್ಥಳಾಗಿರುವೆನು ; ಕಾಲವಾದರೋ ಉಲ್ಲಂಘಿಸಲಸದಳವಾಗಿರುವುದು. ಸ್ವಸ್ಥಮನಸ್ಕನಾಗಿ ತೆರಳುವವನಾಗು, ನಿನಗೆ ಮಂಗಳವಾಗಲಿ. ನೀನು ಪುನಃ ಪಟ್ಟಣಕ್ಕೆ ಬಂದೆಯಾದರೆ ನಾನು ದುಃಖಹೀನಳಾಗುತ್ತೇನೆ, ಮಹಾ ಪುಣ್ಯಶಾಲಿ

ನೃಣ್ಯತಾಂ ಪ್ರಾಪ್ತೇ ತ್ವಯಿ ಲಪ್ಸ್ಯೇ ಪರಂಸುಖಂ ॥ ಕೃತಾಂತಸ್ಯ ಗತಿಃ ಪುತ್ರ ದುರ್ವಿಭಾವ್ಯಾ ಸದಾ ಭುವಿ ॥ ೩೫ ॥ ಯಸ್ತ್ವಾಂ ಸಂಚೋದಯತಿ ಮೇ ವಚ ಆಚ್ಛಿದ್ಯ ರಾಘವ ॥ ಗಚ್ಛೇದಾನೀಂ ಮಹಾಬಾಹೋ ಕ್ಷೇಮೇಣ ಪುನರಾಗತಃ ॥ ೩೬ ॥ ನಂದಯಿಷ್ಯಸಿ ಮಾಂ ಪುತ್ರ ಸಾಮ್ನಾ ವಾಕ್ಯೇನ ಚಾರುಣಾ ॥ ಅಪೀದಾನೀಂ ಸಕಾಲಸ್ಸ್ಯಾದ್ವನಾತ್ಪ್ರತ್ಯಾಗತಂ ಪುನಃ ॥ ಯತ್ತ್ವಾಂ ಪುತ್ರಕ ಪಶ್ಯೇಯಂ ಜಟಾವಲ್ಕಲ ಧಾರಿಣಂ ॥ ೩೭ ॥

ತಥಾಹಿ ರಾಮಂ ವನವಾಸ ನಿಶ್ಚಿತಂ
ಸಮೀಕ್ಷ್ಯ ದೇವೀ ಪರಮೇಣ ಚೇತಸಾ ॥

ಋಣಪರಿಹಾರವನ್ನು, ಪ್ರಾಪ್ತೇ - ಹೊಂದಿ, ಪ್ರತ್ಯಾಗತೇಸತಿ - ಬಂದವನಾಗಲು, ಪರಂ - ಬಹಳವಾಗಿ, ಸುಖಂ - ಸುಖವನ್ನು, ಲಪ್ಸ್ಯೇ - ಹೊಂದುವೆ. || ೩೪ || ಹೇ ರಾಘವ - ಎಲೈ ಶ್ರೀರಾಮನೇ, ಯಃ - ಯಾವ ದೇವರು, ಮೇ - ನನ್ನ, ವಚಃ - ಮಾತನ್ನು, ಆಚ್ಛಿದ್ಯ - ಹೋಗಲಾಡಿಸಿ, ತ್ವಾಂ - ನಿನ್ನನ್ನು, ಸಂಚೋದಯತಿ - ಪ್ರೇರಣೆಮಾಡಿತೋ, ಹೇ ಪುತ್ರ - ಎಲೈ ಮಗನೇ, ತಸ್ಯಕೃತಾಂತಸ್ಯ - ಅಂತಹ ದೈವದ, ಗತಿಃ - ಗತಿಯು, ಭುವಿ - ಭೂಲೋಕದಲ್ಲಿ, ಸದಾ - ನಿರಂತರವು, ದುರ್ವಿಭಾವ್ಯಾ - ಊಹಿಸಲಸಾಧ್ಯವಾಗಿದೆ. || ೩೫ || ಹೇ ಮಹಾಬಾಹೋ - ಎಲೈ ಮಹಾ ಭುಜಪರಾಕ್ರಮಶಾಲಿಯೇ, ಇದಾನೀಂ - ಈಗ, ಗಚ್ಛ - ಹೋಗು, ಕ್ಷೇಮೇಣ - ಕ್ಷೇಮದಿಂದ, ಪುನಃ - ಮತ್ತು, ಆಗತಃ - ಬರುವೆ, ಹೇ ಪುತ್ರ - ಎಲೈ ಮಗನೇ, ಚಾರುಣಾ - ಮನೋಹರವಾದ, ವಾಕ್ಯೇನ - ಮಾತಿನಿಂದ, ಮಾಂ - ನನ್ನನ್ನು, ನಂದಯಿಷ್ಯಸಿ - ಸಂತೋಷಗೊಳಿಸುವೆ. || ೩೬ || ಹೇ ಪುತ್ರಕ - ಎಲೈ ಮಗನೇ, ಯತ್ - ಯಾವ ಕಾಲದಲ್ಲಿ, ಪುನಃ - ಮತ್ತು, ವನಾತ್ - ವನದಿಂದ, ಪ್ರತ್ಯಾಗತಂ - ಹಿಂತಿರಗಿಬಂದ, ಜಟಾವಲ್ಕಲಧಾರಿಣಂ - ಜಡೆಗಳನ್ನೂ ನಾರುವಸ್ತ್ರಗಳನ್ನೂ ಧರಿಸಿರುವ, ತ್ವಾಂ - ನಿನ್ನನ್ನು, ಪಶ್ಯೇಯಂ - ನೋಡುವೆನೋ, ಸಕಾಲಃ - ಆ ಕಾಲವು, ಇದಾನೀಮಪಿ - ಈಗಲೇ, ಸ್ಯಾತ್ - ಆಗಲಿ. || ೩೭ || ದೇವೀ - ಕೌಸಲ್ಯಾದೇವಿಯು, ತಥಾ - ಆಪರಿಯಾಗಿ, ವನವಾಸನಿಶ್ಚಿತಂ - ನಿಶ್ಚಯಿಸಲ್ಪಟ್ಟ ವನವಾಸವುಳ್ಳ, ರಾಮಂ - ಶ್ರೀರಾಮನನ್ನು, ಸಮೀಕ್ಷ್ಯ - ಕಂಡು, ಪರಮೇಣ - ಉತ್ಕೃಷ್ಟವಾದ ಮನಸಾ - ಆದರಣೆಯಿಂದ ಯುಕ್ತವಾದ ಮನಸ್ಸಿನಿಂದ, ರಾಮಂ - ಶ್ರೀರಾಮನನ್ನು ಕುರಿತು, ಸ್ವಸ್ತ್ಯಯನಾಭಿ

ಯಾದ ನೀನು ಪಿತೃವಾಕ್ಯಪರಿಪಾಲನಾರೂಪವಾದ ವ್ರತವನ್ನಾಚರಿಸಿ, ಕೃತಾರ್ಥನಾಗಿ, ಪಿತೃಋಣವನ್ನು ತೀರಿಸಿ, ಹಿಂತಿರುಗಿ ಬಂದು ಸುಖವನ್ನು ಪಡೆಯುವೆ. ಎಲೈ ಕುಮಾರನೆ! ಯಾವ ದೈವವು ನನ್ನ ಮಾತನ್ನು ಭೇದಿಸಿ, ನಿನ್ನನ್ನು ವನಕ್ಕೆ ಹೊರಡಿಸುವುದೋ, ಅಂತಹ ದೈವವು ಸದಾ ಕಾಲವೂ ಚಿಂತಿಸಲಸದಳವಾಗಿರುವುದು. ಆದುದರಿಂದ ನೀನೀಗ ವನಕ್ಕೆ ತೆರಳಿ ಕ್ಷೇಮವಾಗಿ ಹಿಂತಿರುಗಿ ಬಂದು ನನ್ನನ್ನು ಸಂತೋಷಗೊಳಿಸು. ಜಟೆಗಳನ್ನೂ, ನಾರುಮಡಿಗಳನ್ನೂ ಧರಿಸಿದವನಾಗಿ ಹಿಂತಿರುಗಿ ಬರುವ ನಿನ್ನನ್ನು ಯಾವ ಸಮಯದಲ್ಲಿ ಕಾಣುತ್ತೇನೆಯೋ ಅಂತಹ ಸಮಯವು ಈಗಲೇ ಬರುವುದಾಗಲಿ" ಎಂಬೀ ಪ್ರಕಾರವಾಗಿ ಆ

ಉವಾಚ ರಾಮಂ ಶುಭಲಕ್ಷಣಂ ವಚೋ
ಬಭೂವ ಚ ಸ್ವಸ್ತ್ಯಯನಾಭಿಕಾಂಕ್ಷಿಣೀ ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ವಿಂಶಸ್ಸರ್ಗಃ.

ಕಾಂಕ್ಷಿಣೀ - ಮಂಗಳವನ್ನೇ ಕೋರುವದಕ್ಕೆ ಸ್ವಭಾವವುಳ್ಳವಳು, ಬಭೂವ-ಆದಳು, ಶುಭಲಕ್ಷಣಂ-ಶುಭಸೂಚಕವಾದ, ವಚಃ - ಮಾತನ್ನು, ಉವಾಚ - ಹೇಳಿದಳು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ವಿಂಶಸ್ಸರ್ಗಃ.

ಕೌಸಲ್ಯಾದೇವಿಯು ಶುಭ ವಾಕ್ಯಗಳನ್ನಾಡಿ, ವನವಾಸಕ್ಕೆ ಸಿದ್ಧನಾಗಿ ಹೊರಡಲಪೇಕ್ಷೆಯುಳ್ಳ ಶ್ರೀರಾಮಮೂರ್ತಿಯನ್ನು ಆಶೀರ್ವದಿಸಲಿಚ್ಛಿಸಿದಳು. ॥ ೩೭-೩೮ ॥

ಇಂತಿದು ಕೌಸಲ್ಯಾ ಕೃತ ಶ್ರೀರಾಮ ವನವಾಸಾನುಮೋದನವೆಂಬ
ಇಪ್ಪತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚವಿಂಶಸ್ಸರ್ಗಃ.

ಸಾಪನೀಯ ತಮಾಯಾಸಮುಪಸ್ಪೃಶ್ಯ ಜಲಂ ಶುಚಿ ॥ ಚಕಾರ ಮಾತಾ ರಾಮಸ್ಯ ಮಂಗಳಾನಿ ಮನಸ್ವಿನೀ ॥ ೧ ॥ ನಶಕ್ಯಸೇ ಪಾರಯಿತುಂ ಗಚ್ಛೇದಾನೀಂ ರಘೂತ್ತಮ ॥ ಶೀಘ್ರಂ ಚ ವಿನಿವರ್ತಸ್ವ ವರ್ತಸ್ವಚ ಸತಾಂ ಕ್ರಮೇ ॥ ೨ ॥ ಯಂ ಪಾಲಯಸಿ ಧರ್ಮಂ ತ್ವಂ ಧೃತ್ಯಾ ಚ ನಿಯಮೇನಚ ॥ ಸವೈ ರಾಘವ ಶಾರ್ದೂಲ ಧರ್ಮಸ್ತ್ವಾಮಭಿರಕ್ಷತು ॥ ೩ ॥ ಯೇಭ್ಯಃ ಪ್ರಣಮಸೇ ಪುತ್ರ ಚೈತ್ಯೇಷ್ವಾಯತನೇಷುಚ ॥ ತೇಚ ತ್ವಾಮಭಿರಕ್ಷಂತು

ಮಾತಾ - ತಾಯಿಯಾದ, ಸಾ - ಆ ಕೌಸಲ್ಯಾದೇವಿಯು, ಮನಸ್ವಿನೀ - ಒಳ್ಳೆಯ ಮನವುಳ್ಳವಳಾಗಿ, ತಂ ಆಯಾಸಂ - ಆ ಶೋಕದಿಂದ ಹುಟ್ಟಿದ ಆಯಾಸವನ್ನು, ಅಪನೀಯ - ಹೋಗಲಾಡಿಸಿ, ಶುಚಿ - ಪರಿಶುದ್ಧವಾದ, ಜಲಂ - ಉದಕವನ್ನು, ಉಪಸ್ಪೃಶ್ಯ - ಸ್ಪರ್ಶದಿಂದ ಶುದ್ಧಾಚಮನಮಾಡಿ, ರಾಮಸ್ಯ - ಶ್ರೀರಾಮನಿಗೆ, ಮಂಗಳಾನಿ - ಮಂಗಳಾ ಶಾಸನಗಳನ್ನು, ಚಕಾರ - ಮಾಡಿದಳು. ॥ ೧ ॥ ಹೇ ರಘೂತ್ತಮ - ಎಲೈ ರಘುವಂಶೋತ್ಪನ್ನರಾಜರಲ್ಲಿ ಶ್ರೇಷ್ಠನೇ, ವಾರಯಿತುಂ - ತಡೆಮಾಡುವದಕ್ಕೆ, ನಶಕ್ಯಸೇ - ಸಮರ್ಥಳಾಗದೇಹೋದೆ, ಇದಾನೀಂ - ಈಗ, ಗಚ್ಛ - ಹೊರಡು, ಶೀಘ್ರಂ - ಜಾಗ್ರತೆಯಾಗಿ, ವಿನಿವರ್ತಸ್ವ - ಹಿಂತಿರುಗು, ಸತಾಂ - ಸತ್ಪುರುಷರ, ಕ್ರಮೇ - ಮಾರ್ಗದಲ್ಲಿ, ವರ್ತಸ್ವಚ - ಇರು. ॥ ೨ ॥ . ಹೇ ರಾಘವಶಾರ್ದೂಲ - ಎಲೈ ರಘುವಂಶ ಶ್ರೇಷ್ಠನಾದವನೆ, ತ್ವಂ - ನೀನು, ಧೃತ್ಯಾ - ಪ್ರೀತಿಯಿಂದಲೂ, (ಗೋ) ಧೃತ್ಯಾ - ಧೈರ್ಯದಿಂದಲೂ, ನಿಯಮೇನ - ನಿಯಮದಿಂದಲೂ, ಯಂ ಧರ್ಮಂ - ಯಾವ ಧರ್ಮವನ್ನು, ಪಾಲಯಸಿ - ರಕ್ಷಣೆಮಾಡುತ್ತೀಯೊ, ಸಃ - ಅಂತಹ ಪ್ರಸಿದ್ಧವಾದ, ಧರ್ಮೋವೈ - ಧರ್ಮವೇ ಆದರೆ, ತ್ವಂ - ನಿನ್ನನ್ನು, ಅಭಿರಕ್ಷತು - ಎಲ್ಲಾ ಕಡೆಯಲ್ಲಿಯೂ ಸಂರಕ್ಷಿಸಲಿ. ॥ ೩ ॥ ಹೇ ಪುತ್ರ - ಎಲೈ ಮಗನೆ, ಚೈತ್ಯೇಷು - ಚತುಷ್ಪಥಗಳಲ್ಲಿಯೂ, ಆಯತನೇಷು - ದೇವಾಲಯಗಳಲ್ಲಿಯೂ, ಯೇಭ್ಯಃ - ಯಾವ ದೇವತೆಗಳಿಗೋಸ್ಕರ, ಪ್ರಣಮಸೇ - ನಮಸ್ಕರಿಸುತ್ತೀಯೋ, ತೇಚ-

---

ಶ್ರೀರಾಮ ಜನನಿಯಾದ ಕೌಸಲ್ಯಾದೇವಿಯು ಆಯಾಸವನ್ನು ತೊರೆದು, ಆಚಮನವನ್ನು ಮಾಡಿ, ಶ್ರೀರಾಮ ಮೂರ್ತಿಗೆ ಮಂಗಳಾಶಾಸನಮಂ ಗೈದವಳಾದಳು. "ಎಲೈ ರಘುವಂಶೋತ್ಪನ್ನನಾದ ಶ್ರೀರಾಮನೆ! ವನ ಪ್ರಯಾಣೋತ್ಸುಕನಾದ ನಿನ್ನನ್ನು ತಡೆ ಮಾಡಲಾಗದು. ಆದುವರಿಂದಲೇ ನೀನು ವನಕ್ಕೆ ತೆರಳಿ ಜಾಗ್ರತೆಯಾಗಿ ಹಿಂತಿರುಗಿ ಬರುವವನಾಗು. ಸತ್ಪುರುಷರ ಸಂಪ್ರದಾಯವನ್ನೇ ಅನುಸರಿಸುತ್ತಿರು. ಓ ರಘುಕುಲತಿಲಕ! ನೀನು ಧೈರ್ಯದಿಂದಲೂ, ನಿಯಮದಿಂದಲೂ ಯಾವ ಧರ್ಮವನ್ನು ಪರಿಪಾಲಿಸುತ್ತಿರುವೆಯೋ ಅದೇ ಧರ್ಮವು ನಿನ್ನನ್ನು ಸಂರಕ್ಷಿಸಲಿ! ಮಗನೆ! ಚತುಷ್ಪಥಗಳಲ್ಲಿಯೂ, ದೇವಾ

ವನೇ ಸಹ ಮಹರ್ಷಿಭಿಃ ॥ ೪ ॥ ಯಾನಿ ದತ್ತಾನಿ ತೇಸ್ತ್ರಾಣಿ ವಿಶ್ವಾಮಿತ್ರೇಣ ಧೀಮತಾ ॥ ತಾನಿ ತ್ವಾಮಭಿರಕ್ಷಂತು ಗುಣೈಸ್ಸಮುದಿತಂ ಸದಾ॥೫॥ ಪಿತೃ ಶುಶ್ರೂಷಯಾ ಪುತ್ರ ಮಾತೃಶುಶ್ರೂಷಯಾ ತಥಾ ॥ ಸತ್ಯೇನಚ ಮಹಾಬಾಹೋ ಚಿರಂ ಜೀವಾಽಭಿರಕ್ಷಿತಃ ॥ ೬ ॥ ಸಮಿತ್ಕುಶ ಪವಿತ್ರಾಣಿ ವೇದ್ಯಶ್ಚಾಯತನಾನಿಚ ॥ ಸ್ಥಂಡಿಲಾನಿ ವಿಚಿತ್ರಾಣಿ ಶೈಲಾ ವೃಕ್ಷಾಃ ಕ್ಷುಪಾ ಹ್ರದಾಃ॥ ಪತಂಗಾಃ ಪನ್ನಗಾ ಸ್ಸಿಂಹಾ ಸ್ತ್ವಾಂ ರಕ್ಷಂತು ನರೋತ್ತಮ ॥ ೭ ॥ ಸ್ವಸ್ತಿ ಸಾಧ್ಯಾಶ್ಚ ವಿಶ್ವೇಚ ಮರುತಶ್ಚ ಮಹರ್ಷಯಃ ॥ ಸ್ವಸ್ತಿ ಧಾತಾ ವಿಧಾತಾಚ ಸ್ವಸ್ತಿಪೂಷಾ ಭಗೋಽರ್ಯಮಾ ॥ ೮ ॥ ಲೋಕಪಾಲಾಶ್ಚ ತೇ ಸರ್ವೇ ವಾಸವ

ಆ ದೇವತೆಗಳೂ, ವನೇ - ವನದಲ್ಲಿ, ಮಹರ್ಷಿಭಿಸ್ಸಹ - ಮಹಾತ್ಮರಾದ ಋಷಿಗಳಿಂದೊಡಗೂಡಿದ, ತ್ವಾಂ - ನಿನ್ನನ್ನು, ಅಭಿರಕ್ಷಂತು - ಸಂರಕ್ಷಿಸಲಿ. ॥ ೪ ॥ ಧೀಮತಾ - ಜ್ಞಾನಸಂಪನ್ನನಾದ, ವಿಶ್ವಾಮಿತ್ರೇಣ - ವಿಶ್ವಾಮಿತ್ರನಿಂದ, ತೇ - ನಿನಗೆ, ಯಾನ್ಯಸ್ತ್ರಾಣಿ - ಯಾವ ಅಸ್ತ್ರಗಳು, ದತ್ತಾನಿ- ಕೊಡಲ್ಪಟ್ಟವೋ, ತಾನಿ - ಆ ಅಸ್ತ್ರಗಳು, ಗುಣೈಃ - ಸದ್ಗುಣಗಳಿಂದ, ಸಮುದಿತಂ - ಶ್ರೇಷ್ಠನಾದ, ತ್ವಾಂ - ನಿನ್ನನ್ನು, ಸದಾ - ನಿರಂತರವು, ಅಭಿರಕ್ಷಂತು - ಸಂರಕ್ಷಿಸಲಿ. ॥ ೫ ॥ ಹೇ ಪುತ್ರ - ಎಲೈ ಮಗನೆ, ಹೇ ಮಹಾಬಾಹೋಃ - ಎಲೈ ಮಹಾಭುಜಶಾಲಿಯೆ, ಪಿತೃಶುಶ್ರೂಷಯಾ, ಪಿತೃ - ತಂದೆಯ, ಶುಶ್ರೂಷಯಾ - ಸೇವೆಯಿಂದಲೂ, ತಥಾ - ಹಾಗೆಯೆ, ಮಾತೃಶುಶ್ರೂಷಯಾ - ಮಾತೃ ಸೇವೆಯಿಂದಲೂ, ಸತ್ಯೇನಚ - ಸತ್ಯದಿಂದಲೂ, ಅಭಿರಕ್ಷಿತಃ - ಸಂರಕ್ಷಿತನಾಗಿ, ಚಿರಂ - ಬಹು ಕಾಲ, ಜೀವ - ಬದುಕಿರು. ॥ ೬ ॥ ಹೇ ನರೋತ್ತಮ - ಎಲೈ ಶ್ರೀರಾಮನೆ, ಸಮಿತ್ಕುಶ ಪವಿತ್ರಾಣಿ, ಸಮಿತ್ - ಪಲಾಶಾದಿ ಸಮಿತ್ತುಗಳೂ, ಕುಶ-ದರ್ಭೆಗಳೂ, ಪವಿತ್ರಾಣಿ - ಪವಿತ್ರಗಳೂ, ವೇದಶ್ಚ - ಅಗ್ನಿಕುಂಡಗಳೂ, ಆಯತನಾನಿಚ - ದೇವಾಲಯಗಳೂ, ವಿಚಿತ್ರಾಣಿ - ನಾನಾ ಬಗೆಗಳಾದ, ಸ್ಥಂಡಿಲಾನಿಚ - ದೇವ ಪೂಜಾಸ್ಥಳಗಳೂ, ಶೈಲಾಃ - ಬೆಟ್ಟಗಳೂ, ವೃಕ್ಷಾಃ - ಗಿಡಗಳೂ, ಕ್ಷುಪಾಃ - ಕುರುಚಾಗಿರುವ ಕೊಂಬೆಗಳೂ, ಹ್ರದಾಃ - ಸರೋವರಗಳೂ, ಪತಂಗಾಃ - ಪಕ್ಷಿಗಳೂ, ಪನ್ನಗಾಃ - ಸರ್ಪಗಳೂ, ಸಿಂಹಾಃ - ಸಿಂಹಗಳೂ, ತ್ವಾಂ - ನಿನ್ನನ್ನು, ರಕ್ಷಂತು - ಸಂರಕ್ಷಿಸಲಿ. ॥ ೭ ॥ ಸಾಧ್ಯಾಶ್ಚ - ಸಾಧ್ಯರೂ, ವಿಶ್ವೇಚ - ವಿಶ್ವೇದೇವತೆಗಳೂ, ಮರುತಶ್ಚ - ಸಪ್ತಮರುತ್ತುಗಳೂ, ಮಹರ್ಷಯಶ್ಚ - ಮಹರ್ಷಿಗಳೂ, ತೇ - ನಿನಗೆ, ಸ್ವಸ್ತಿ - ಕ್ಷೇಮವನ್ನು, ಕುರ್ವಂತು - ಮಾಡಲಿ. ॥ ೮ ॥ ಧಾತಾ - ಕರ್ಮಪ್ರಧಾನನಾದ ವಿಷ್ಣುವೂ, ವಿಧಾತಾಚ - ಸೃಷ್ಟಿಕರ್ತನಾದ

ಲಯಗಳಲ್ಲಿಯೂ, ಯಾವ ಯಾವ ದೇವತೆಗಳನ್ನು ವಂದಿಸುತ್ತಿರುವೆಯೋ ಆ ದೇವತೆಗಳೂ, ಮಹಾ ಬುದ್ಧಿಶಾಲಿಯಾದ ಕೌಶಿಕ ಮುನಿಯು ನಿನಗಿತ್ತ ಅಸ್ತ್ರಗಳೂ, ಋಷಿಗಳೊಡನೆ ವನವಾಸವಂ ಗೈವ ನಿನ್ನನ್ನು ಕಾಪಾಡಲಿ! ॥ ೧-೫ ॥ ಎಲೈ ಮಹಾ ಭುಜಬಲಪರಾಕ್ರಮಶಾಲಿಯೆ! ಮಾತಾಪಿತೃ ಸೇವೆಯಿಂದಲೂ, ಸತ್ಯ ಧರ್ಮಗಳಿಂದಲೂ ಸಂರಕ್ಷಿಸಲ್ಪಟ್ಟು ಬಹು ಕಾಲ ಬದುಕುವವನಾಗು! ಎಲೈ ಪುರುಷೋತ್ತಮನೇ! ಸಮಿತ್ತು, ಕುಶ, ದೇವಾಲಯ, ಸ್ಥಂಡಿಲ, ಗಿರಿ, ವೃಕ್ಷ, ಶಾಖೆಗಳೂ, ಸರೋವರಗಳೂ, ಖಗ, ಭುಜಗ, ಸಿಂಹಗಳೂ,

ಪ್ರಮುಖಾಸ್ತಥಾ ॥ ಋತವಶ್ಚೈವ ಪಕ್ಷಾಶ್ಚ ಮಾಸಾಸ್ಸಂವತ್ಸರಾಃ ಕ್ಷಪಾಃ ॥ ೯ ॥ ದಿನಾನಿಚ ಮುಹೂರ್ತಾಶ್ಚ ಸ್ವಸ್ತಿಕುರ್ವಂತು ತೇ ಸದಾ ॥ ಸ್ಮೃತಿರ್ಧೃತಿಶ್ಚ ಧರ್ಮಶ್ಚ ಪಾಂತು ತ್ವಾಂ ಪುತ್ರ ಸರ್ವತಃ ॥ ೧೦ ॥ ಸ್ಕಂಧಶ್ಚ ಭಗವಾನ್ ದೇವಸ್ಸೋಮಶ್ಚ ಸ ಬೃಹಸ್ಪತಿಃ॥ಸಪ್ತರ್ಷಯೋ ನಾರದಶ್ಚ ತೇ ತ್ವಾಂ ರಕ್ಷಂತು ಸರ್ವತಃ ॥ ೧೧ ॥ ಯಾಶ್ಚಾಪಿ ಸರ್ವತಸ್ಸಿದ್ಧಾ ದಿಶಶ್ಚ ಸ ದಿಗೀಶ್ವರಾಃ ॥ ಸ್ತುತಾ ಮಯಾ ವನೇ ತಸ್ಮಿನ್ ಪಾಂತು ತ್ವಾಂ ಪುತ್ರನಿತ್ಯಶಃ ॥ ೧೨ ॥ ಶೈಲಾ

ಬ್ರಹ್ಮನೂ, ತೇ - ನಿನಗೆ, ಸ್ವಸ್ತಿ - ಕ್ಷೇಮವನ್ನು, ಕರೋತು - ಮಾಡಲಿ, ಪೂಷಾ - ಪೂಷನೆಂಬ ಸೂರ್ಯನು, ಭಗಃ - ಭಗನೆಂಬ ದೇವತೆಯು, ಅರ್ಯಮಾ - ಅರ್ಯನೆಂಬ ಈ ಮೂವರೂ ದ್ವಾದಶಾದಿತ್ಯರಲ್ಲಿ ಸೇರಿದವರು (ಇವರು,) ಸ್ವಸ್ತಿ - ಕ್ಷೇಮವನ್ನು, ಕುರ್ವಂತು - ಮಾಡಲಿ, ತಥಾ - ಹಾಗೆಯೆ, ವಾಸವಪ್ರಮುಖಾಃ - ಇಂದ್ರನೇ ಮೊದಲಾಗುಳ್ಳ, ಸರ್ವೇ - ಸಮಸ್ತ, ತೇ - ಪ್ರಸಿದ್ಧರಾದ, ಲೋಕಪಾಲಾಶ್ಚ - ದಿಕ್ಪಾಲಕರೂ, ಋತವಶ್ಚೈವ - ವಸಂತಾದಿ ಋತುಗಳೂ, ಪಕ್ಷಾಶ್ಚ - ಪಕ್ಷಗಳೂ, ಮಾಸಾಃ - ತಿಂಗಳುಗಳೂ, ಸಂವತ್ಸರಾಃ - ಸಂವತ್ಸರಗಳೂ, ಕ್ಷಪಾಃ - ರಾತ್ರಿಗಳೂ, ದಿನಾನಿಚ - ಹಗಲುಗಳೂ, ಮುಹೂರ್ತಾಶ್ಚ - ಮುಹೂರ್ತ ಕಾಲಗಳೂ, ಸದಾ - ನಿರಂತರವೂ, ತೇ- ನಿನಗೆ, ಸ್ವಸ್ತಿ - ಕ್ಷೇಮವನ್ನು, ಕುರ್ವಂತು - ಮಾಡಲಿ. ॥ ೧೦ ॥ ಹೇ ಪುತ್ರ - ಎಲೈ ಮಗನೆ, ಸ್ಮೃತಿಃ - ಧ್ಯಾನವು, ಧೃತಿಃ - ಧಾರಣಾಯೋಗವು, ಧರ್ಮಶ್ಚ - ಶೃತಿಸ್ಮೃತಿಗಳಿಂದ ಹೇಳಲ್ಪಟ್ಟ ಧರ್ಮವು, ತ್ವಾಂ - ನಿನ್ನನ್ನು, ಸರ್ವತಃ - ಸರ್ವ ಕಾಲದಲ್ಲಿಯೂ, ಸರ್ವತಃ - ಎಲ್ಲೆಡೆಗಳಲ್ಲಿಯೂ, ತ್ವಾಂ - ನಿನ್ನನ್ನು, ಪಾತು ರಕ್ಷಿಸಲಿ, ಸ್ಕಂಧಃ - (ಮ) ಕುಮಾರಸ್ವಾಮಿಯು, (ಗೋ) ಸ್ಕಂದಃ - ಸನತ್ಕುಮಾರನು, ಭಗವಾನ್ - ಪೂಜ್ಯನಾದ, ಸೋಮೋದೇವಶ್ಚ - (ಗೋ + ತ) ಚಂದ್ರನೂ, (ಮ) ಭಗವಾನ್ - ಪೂಜ್ಯನಾದ, ಸೋಮಃ - ಪಾರ್ವತೀ ಸಮೇತನಾದ, ದೇವಶ್ಚ - ಪರಮೇಶ್ವರನೂ, ಸಃ - ಆ ಪ್ರಸಿದ್ಧನಾದ, ಬೃಹಸ್ಪತಿಃ - ಬೃಹಸ್ಪತಿಯೂ, ಸಪ್ತರ್ಷಯಃ - ಕಶ್ಯಪಾದಿ ಸಪ್ತಋಷಿಗಳೂ, ನಾರದಶ್ಚ - ನಾರದ ಋಷಿಯೂ, ತೇ - ಅವರೆಲ್ಲರೂ, ತ್ವಾಂ - ನಿನ್ನನ್ನು, ಸರ್ವತಃ - ಸರ್ವ ದೇಶಗಳಲ್ಲಿಯೂ, ರಕ್ಷಂತು - ಸಂರಕ್ಷಿಸಲಿ. ॥ ೧೧ ॥ ಯಾದಿಶಃ - ಯಾವ ದಿಕ್ಕುಗಳೂ, ಸರ್ವತಃ - ಸರ್ವ ಪ್ರದೇಶಗಳಲ್ಲಿ, ಸಿದ್ಧಾಃ - ಇರುತ್ತವೋ, ತಾಃ - ಅಂತಹ ಸದಿಗೀಶ್ವರಾಃ - ದಿಕ್ಪತಿಗಳಿಂದೊಡಗೂಡಿದ, ತಾಃದಿಶಶ್ಚ - ಆ ದಿಕ್ಕುಗಳೂ, ಹೇ ಪುತ್ರ - ಎಲೈ ಮಗನೆ, ಮಯಾ - ನನ್ನಿಂದ, ಸ್ತುತಾಃ- ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವರಾಗಿ, ತ್ವಾಂ - ನಿನ್ನನ್ನು, ನಿತ್ಯಶಃ - ನಿರಂತರವೂ, ಪಾಂತು - ರಕ್ಷಿಸಲಿ. ॥ ೧೨ ॥ ಶೈಲಾಃ - ಕುಲಪರ್ವತಗಳೂ, ಸರ್ವೇ - ಸಮಸ್ತಗಳಾದ, ಸಮುದ್ರಾಶ್ಚ -

---

ಸಾಧ್ಯರೂ, ವಿಶ್ವೇದೇವತೆಗಳೂ, ಸಪ್ತಮರುತ್ತುಗಳೂ, ಮಹರ್ಷಿಗಳೂ, ಕರ್ಮ ಪ್ರಧಾನನಾದ ನಾರಾಯಣನೂ, ಸೃಷ್ಟಿಕರ್ತನಾದ ಬ್ರಹ್ಮನೂ, ಭಗವಾನ್ ಸೂರ್ಯನೂ, ಇಂದ್ರನೇ ಮೊದಲಾದ ದಿಕ್ಪಾಲಕರೂ, ವಸಂತಾದಿ ಋತುಗಳೂ, ಪಕ್ಷ, ಮಾಸಗಳೂ, ಸಂವತ್ಸರಗಳೂ, ಹಗಲಿರುಳುಗಳೂ, ಮುಹೂರ್ತಗಳೂ ನಿನಗೆ ಕ್ಷೇಮವನ್ನುಂಟುಮಾಡಲಿ ! ॥ ೬-೧೦ ॥ ಇಷ್ಟೆಯಲ್ಲದೆ, ಧ್ಯಾನವೂ, ಧಾರಣಯೋಗವೂ, ಧರ್ಮವೂ, ಷಣ್ಮುಖನೂ, ಸನತ್ಕುಮಾರನೂ, ಚಂದ್ರನೂ, ಉಮಾರಮಣನಾದ ಪರಮೇಶ್ವರನೂ, ಬೃಹಸ್ಪತಿಯೂ, ಸಪ್ತರ್ಷಿ

ಸ್ಸರ್ವೇ ಸಮುದ್ರಾಶ್ಚ ರಾಜಾ ವರುಣ ಏವಚ ॥ ದ್ಯೌರಂತರಿಕ್ಷಂ ಪೃಥಿವೀ ನದ್ಯಸ್ಸರ್ವಾ ಸ್ತಥೈವಚ ॥ ೧೩ ॥ ನಕ್ಷತ್ರಾಣಿ ಚ ಸರ್ವಾಣಿ ಗ್ರಹಾಶ್ಚ ಸಹ ದೇವತಾಃ ॥ ಅಹೋರಾತ್ರೇ ತಥಾ ಸಂಧ್ಯೇ ಪಾಂತು ತ್ವಾಂ ವನಮಾಶ್ರಿತಂ ॥ ೧೪ ॥ ಋತವಶ್ಚೈವ ಷಟ್ಪುಣ್ಯಾ ಮಾಸಾ ಸ್ಸಂವತ್ಸರಾ ಸ್ತಥಾ ॥ ಕಲಾಶ್ಚ ಕಾಷ್ಠಾಶ್ಚ ತಥಾ ತವ ಶರ್ಮ ದಿಶಂತು ತೇ ॥೧೫॥ ಮಹಾವನೇ ವಿಚರತೋ ಮುನಿವೇಷಸ್ಯ ಧೀಮತಃ ॥ ತವಾದಿತ್ಯಾಶ್ಚ ದೈತ್ಯಾಶ್ಚ ಭವಂತು ಸುಖದಾ ಸದಾ ॥ ೧೬ ॥ ರಾಕ್ಷಸಾನಾಂ ಪಿಶಾಚಾನಾಂ ರೌದ್ರಾಣಾಂ ಕ್ರೂರಕರ್ಮಣಾಂ ॥

ಕಡಲುಗಳೂ, ವರುಣೋ ರಾಜಾಚ - ವರುಣನೆಂಬ ರಾಜನೂ, ದ್ಯೌಃ - ಆಕಾಶಾಭಿಮಾನಿ ದೇವತೆಯೂ, ಅಂತರಿಕ್ಷಂ - ಅಂತರಿಕ್ಷವೂ, ಪೃಥಿವೀ-ನೆಲವೂ, ತಥೈವ - ಹಾಗೆಯೇ, ಸರ್ವಾಃ - ಸಮಸ್ತಗಳಾದ, ನದ್ಯಶ್ಚ - ನದಿಗಳೂ, ಸರ್ವಾಣಿ - ಸಮಸ್ತಗಳಾದ, ನಕ್ಷತ್ರಾಣಿ - ನಕ್ಷತ್ರಗಳೂ ಸಹ, ದೇವತಾಃ - ದೇವತೆಗಳಿಂದೊಡಗೂಡಿದ, ಗ್ರಹಾಶ್ಚ - ಸೂರ್ಯಾದಿ ಗ್ರಹಗಳೂ, ಅಹೋರಾತ್ರೇ - ಅಹೋರಾತ್ರಿಗಳೂ, ತಥಾ - ಹಾಗೆಯೇ, ಸಂಧ್ಯೇ - ಪ್ರಾತಸ್ಸಂಧ್ಯಸಾಯಂಸಂಧ್ಯಗಳೂ, ವನಂ - ಕಾಡನ್ನು, ಆಶ್ರಿತಂ - ಆಶ್ರಯಿಸಿರುವ, ತ್ವಾಂ - ನಿನ್ನನ್ನು, ಪಾಂತು - ಕಾಪಾಡಲಿ. ॥ ೧೪ ॥ ಪುಣ್ಯಾಃ - ಪುಣ್ಯಕರಗಳಾದ, ಷಡೃತವಶ್ಚೈವ - ವಸಂತಾದಿ ಆರು ಋತುಗಳೂ, ಮಾಸಾಃ - ಚೈತ್ರ ವೈಶಾಖಾದಿ ಹನ್ನೆರಡು ಮಾಸಗಳೂ, ತಥಾ - ಹಾಗೆಯೆ, ಸಂವತ್ಸರಾಃ - ಪ್ರಭವವಿಭವಾದಿ ಸಂವತ್ಸರಗಳೂ, ಕಲಾಃ - ಕ್ಷಣಾರ್ಧಗಳೂ, ಕಾಷ್ಠಾಶ್ಚ - ಕ್ಷಣೈಕದೇಶಗಳೂ, ತವ - ನಿನಗೆ, ತೇ - ಅವರೆಲ್ಲರೂ, ಶರ್ಮ - ಶಾಂತಿಯನ್ನು, ದಿಶಂತು - ಕೊಡಲಿ. ॥ ೧೫ ॥ ಮಹಾವನೇ - ಮಹದರಣ್ಯದಲ್ಲಿ, ವಿಚರತಃ - ಸಂಚರಿಸುತ್ತಿರುವ, ಮುನಿವೇಷಸ್ಯ - ಋಷಿವೇದಂತೆ ವೇಷವುಳ್ಳ, ಧೀಮತಃ - ಬುದ್ಧಿಶಾಲಿಯಾದ, ತವ - ನಿನಗೆ, ಆದಿತ್ಯಾಶ್ಚ - ದ್ವಾದಶಾದಿತ್ಯರೂ, ದೈತ್ಯಾಶ್ಚ - ರಾಕ್ಷಸಭೇದಗಳೂ, ಸದಾ - ಯಾವಾಗಲೂ, ಸುಖದಾಃ - ಸುಖವನ್ನು ಕೊಡತಕ್ಕವುಗಳು, ಭವಂತು - ಆಗಲಿ. ॥ ೧೬ ॥ ಹೇ ಪುತ್ರಕ - ಎಲೈ ಮಗನೆ, ತೇ - ನಿನಗೆ, ರಾಕ್ಷಸಾನಾಂ - ರಾಕ್ಷಸರಿಂದಲೂ, ಪಿಶಾಚಾನಾಂ - ಪಿಶಾಚಗಳಿಂದಲೂ, ರೌದ್ರಾಣಾಂ - ಭಯಂಕರಗಳಾದ,

---

ಗಳೂ, ದಿಶದಿಶೆಗಳೂ, ಗಿರಿಗಳೂ, ಸಮುದ್ರಗಳೂ, ವರುಣನೂ, ಆಕಾಶಾಭಿಮಾನದೇವತೆಯೂ, ಭೂಮ್ಯಂತರಿಕ್ಷಗಳೂ, ನದಿಗಳೂ, ನಕ್ಷತ್ರಗಳೂ, ನವಗ್ರಹಗಳೂ, ಅಹೋರಾತ್ರಿಗಳ ಅಭಿಮಾನ ದೇವತೆಗಳೂ, ಪ್ರಾತಸ್ಸಾಯಂ ಸಂಧ್ಯೆಗಳೂ ನನ್ನಿಂದ ಸ್ತುತಿಸಲ್ಪಟ್ಟು ವನವಾಸಿಯಾದ ನಿನ್ನನ್ನು ಪರಿಪಾಲಿಸಲಿ. ಷಡೃತುಗಳಿಗೂ, ಸಂವತ್ಸರಗಳಿಗೂ ಅಭಿಮಾನ ದೇವತೆಗಳಾದವರೂ, ಕಲೆಯೂ, ಕಾಷ್ಠೆಯೂ, ಎಂಬ ಕಾಲ ವಿಶೇಷಗಳೂ ನಿನಗೆ ಮಂಗಳವನ್ನುಂಟುಮಾಡಲಿ. ॥ ೧೧-೧೫ ॥ ಮುನಿ ವೇಷಧರನಾಗಿ ಅರಣ್ಯದಲ್ಲಿ ಸಂಚರಿಸುವ ನಿನಗೆ ದ್ವಾದಶಾದಿತ್ಯರೂ, ದೈತ್ಯರೂ ಸುಖವನ್ನು ಕೊಡುವವರಾಗಲಿ. ಮಗನೆ! ಭಯಂಕರರಾದ ರಾಕ್ಷಸ ಪಿಶಾಚಗಳ ಸಂಬಂಧವಾದ ಭೀತಿಯು ನಿನಗುಂಟಾಗದಿರಲಿ. ಕಾಡಿನಲ್ಲಿರುವ ಕಪಿಗಳೂ, ವೃಶ್ಚಿಕಗಳೂ, ಕಾಡುನೊಣ, ಸೊಳ್ಳೆ, ಸರ್ಪ, ಕ್ರಿಮಿಗಳೂ, ಗಜ, ಸಿಂಹ, ವ್ಯಾಘ್ರ,

ಕ್ರವ್ಯಾದಾನಾಂ ಚ ಸರ್ವೇಷಾಂ ಮಾಭೂತ್ಪುತ್ರಕ ತೇ ಭಯಂ ॥ ೧೭ ॥ ಪ್ಲವಗಾ ವೃಶ್ಚಿಕಾ ದಂಶಾ ಮಶಕಾಶ್ಚೈವ ಕಾನನೇ ॥ ಸರೀಸೃಪಾಶ್ಚ ಕೀಟಾಶ್ಚ ಮಾಭೂರ್ವ ಗಹನೇ ತವ ॥ ೧೮ ॥ ಮಹಾದ್ವಿಪಾಶ್ಚ ಸಿಂಹಾಶ್ಚ ವ್ಯಾಘ್ರಾ ಋಕ್ಷಾಶ್ಚ ದಂಷ್ಟ್ರಿಣಃ ॥ ಮಹಿಷಾ ಶೃಂಗಿಣೋ ರೌದ್ರಾ ನತೇ ದ್ರುಹ್ಯಂತು ಪುತ್ರಕ ॥ ೧೯ ॥ ನೃಮಾಂಸ ಭೋಜನಾ ರೌದ್ರಾ ಯೇಚಾನ್ಯೇ ಸತ್ವ ಜಾತಯಃ ॥ ಮಾಚತ್ವಾಂ ಹಿಂಸಿಷುಃ ಪುತ್ರ ಮಯಾ ಸಂಪೂಜಿತಾ ಸ್ತ್ವಿಹ ॥ ೨೦ ॥ ಆಗಮಾಸ್ತೇ ಶಿವಾಸ್ಸಂತು ಸಿಧ್ಯಂತು ಚ ಪರಾಕ್ರಮಾಃ ॥ ಸರ್ವ ಸಂಪತ್ತಯೇ ರಾಮ ಸ್ವಸ್ತಿಮಾನ್ ಗಚ್ಛ ಪುತ್ರಕ ॥ ೨೧ ॥ ಸ್ವಸ್ತಿ ತೇ ಸ್ತ್ವಂ ತರಿಕ್ಷೇಭ್ಯಃ ಪಾರ್ಥಿವೇಭ್ಯಃ ಪುನಃ ಪುನಃ ॥ ಸರ್ವೇಭ್ಯಶ್ಚೈವ ದೇವೇಭ್ಯೋ

ಕ್ರೂರಕರ್ಮಣಾಂ - ಉಗ್ರವ್ಯಾಪಾರವುಳ್ಳ, ಸರ್ವೇಷಾಂ - ಸಮಸ್ತರಾದ, ಕ್ರವ್ಯಾದಾನಾಂ - ಮಾಂಸ ಭಕ್ಷಕರಿಂದಲೂ, ತೇ - ನಿನಗೆ, ಭಯಂ - ಭಯವು, ಮಾಭೂತ್ - ಆಗದಿರಲಿ. ॥ ೧೭ ॥ ಪ್ಲವಗಾಃ - ವಾನರರೂ, ವೃಶ್ಚಿಕಾಃ - ಚೇಳುಗಳೂ, ದಂಶಾಃ - ಕಾಡು ನೊಣಗಳು, ಮಶಕಾಶ್ಚ - ಸೊಳ್ಳೆಗಳೂ, ಕಾನನೇ - ಅರಣ್ಯದಲ್ಲಿ, ಮಾಭೂರ್ವ - ತೊಂದರೆ ಪಡಿಸುವುವು ಆಗದಿರಲಿ, ಗಹನೇ - ಅರಣ್ಯದಲ್ಲಿ, ಸರೀಸೃಪಾಶ್ಚ-ಸರ್ಪಗಳೂ, ಕೀಟಾಶ್ಚ-ಕ್ರಿಮಿಗಳೂ, ವ್ಯಾಘ್ರಾಶ್ಚ-ಹುಲಿಗಳೂ, ತವ-ನಿನಗೆ, ಮಾಭೂರ್ವ-ಹಿಂಸೆ ಮಾಡದಿರಲಿ. ॥ ೧೮ ॥ ಮಹಾದ್ವಿಪಾಶ್ಚ-ದೊಡ್ಡ ಆನೆಗಳೂ, ಸಿಂಹಾಶ್ಚ - ಸಿಂಹ ಗಳೂ, ವ್ಯಾಘ್ರಾಃ-ಹುಲಿಗಳೂ, ದಂಷ್ಟ್ರಿಣಃ-ಕೋರೆಹಲ್ಲುಗಳುಳ್ಳ, ಋಕ್ಷಾಶ್ಚ-ಕರಡಿಗಳೂ, ರೌದ್ರಾಃ-ಭಯಂಕರಗಳಾದ, ಮಹಿಷಾಃ - ಕಾಡೆಮ್ಮೆ ಕಾಡು ಕೋಣಗಳೂ, ಹೇ ಪುತ್ರ-ಎಲೈ ಮಗನೇ, ತೇ - ನಿನಗೆ, ನದ್ರುಹ್ಯಂತು - ದ್ರೋಹಮಾಡದಿರಲಿ. ॥ ೧೯ ॥ ರೌದ್ರಾಃ - ಭಯಂಕರಗಳಾದ, ನೃಮಾಂಸಭೋಜನಾಃ - ಮನುಷ್ಯರ ಮಾಂಸವೇ ಭೋಜನವಾಗುಳ್ಳ, ಸತ್ವಜಾತಯಃ - ಜಂತುಭೇದಗಳು, ಅನ್ಯೇಚ - ಮತ್ತೆ ಕೆಲವು, ಯೇ - ಯಾವುವೋ, ತೇ - ಅವು, ಹೇ ಪುತ್ರ - ಎಲೈ ಮಗುವೆ, ಇಹ - ಇಲ್ಲಿ, ಮಯಾ - ನನ್ನಿಂದ, ಪೂಜಿತಾಃ - ಪೂಜಿಸಲ್ಪಟ್ಟು, ತ್ವಾಂ - ನಿನ್ನನ್ನು, ಮಾಚ ಹಿಂಸಿಷುಃ - ಹಿಂಸೆಮಾಡದಿರಲಿ. ॥ ೨೦ ॥ ಹೇ ರಾಮ - ಎಲೈ ಶ್ರೀರಾಮನೆ, ತೇ - ನಿನಗೆ, ಆಗಮಾಃ - ಮಾರ್ಗಗಳು, ಶಿವಾಃ - ಶುಭಕರಗಳು, ಸಂತು - ಆಗಲಿ, ಪರಾಕ್ರಮಾಃ - ಪರಾಕ್ರಮ ಗಳು, ಸರ್ವಸಂಪತ್ತಯೇ - ಎಲ್ಲ ಉಪಪತ್ತಿಗಳಿಗೂ, ಸಂತು - ಸಫಲಗಳಾಗಲಿ, ಹೇ ಪುತ್ರಕ-ಎಲೈ ಮಗನೆ, ಸ್ವಸ್ತಿಮಾನ್ - ಕ್ಷೇಮವಂತನಾಗಿ, ಗಚ್ಛ - ಹೋಗು. ॥ ೨೧ ॥ ಅಂತರಿಕ್ಷೇಭ್ಯಃ - ಅಂತರಿಕ್ಷಚಾರಿಗಳಾದ ದೇವತೆಗಳಿಂದ, ತೇ - ನಿನಗೆ, ಸ್ವಸ್ತಿ - ಕ್ಷೇಮವು, ಪಾರ್ಥಿವೇಭ್ಯಶ್ಚ -

---

ಕರಡಿಗಳೂ, ಕೊಂಬುಗಳುಳ್ಳ ಕ್ರೂರಗಳಾದ ಕಾಡು ಕೋಣಗಳೂ, ಮನುಷ್ಯ ಮಾಂಸವನ್ನು ಭಕ್ಷಣ ಮಾಡುವ ಇತರ ಜಂತುಗಳೂ, ನನ್ನಿಂದ ಪೂಜಿತಗಳಾಗಿ ನಿನ್ನನ್ನು ಹಿಂಸಿಸದಿರಲಿ. ॥೧೬-೨೦॥ ಕುಮಾರನೆ! ಮಾರ್ಗಗಳೆಲ್ಲ ನಿನಗೆ ಮಂಗಳಕರಗಳಾಗಲಿ; ನಿನ್ನ ಪರಾಕ್ರಮಗಳೂ ಸಕಲ ಸಂಪತ್ತುಗಳೂ ಸಫಲವಾದುವುಗಳಾಗಿರಲಿ; ಕ್ಷೇಮವಾಗಿ ಹೊರಡುವವನಾಗು. ಇದ ಲ್ಲದೆ, ಗಗನ ಸಂಚಾರಿಗಳಾದ ದೇವತೆಗಳಿಂದಲೂ, ಭೂಮಿಯಲ್ಲಿರುವ ದೇವತೆಗಳಿಂದಲೂ,

ಯೇಚ ತೇ ಪರಿಪಂಥಿನಃ ||೨೨|| ಗುರು ಸ್ಸೋಮಶ್ಚ ಸೂರ್ಯಶ್ಚ ಧನದೋಥ
ಯಮಸ್ತಥಾ || ಪಾಂತು ತ್ವಾಮರ್ಚಿತಾ ರಾಮ ದಂಡಕಾರಣ್ಯ ವಾಸಿನಂ ||೨೩||
ಅಗ್ನಿರ್ವಾಯುಸ್ತಥಾ ಧೂಮೋ ಮಂತ್ರಾಶ್ಚ ರ್ಷಿಮುಖಾ ಚ್ಚ್ಯುತಾಃ || ಉಪ
ಸ್ಪರ್ಶನ ಕಾಲೇತು ಪಾಂತು ತ್ವಾಂ ರಘುನಂದನ || ೨೪ || ಸರ್ವಲೋಕಪ್ರಭು
ರ್ಬ್ರಹ್ಮಾ ಭೂತಭರ್ತಾ ತಥರ್ಷಯಃ || ಯೇಚ ಶೇಷಾ ಸ್ಸುರಾಸ್ತೇ ತ್ವಾಂ
ರಕ್ಷಂತು ವನವಾಸಿನಂ || ೨೫ || ಇತಿ ಮಾಲ್ಯೈ ಸ್ಸುರಗಣಾ ಗಂಧೈಶ್ಚಾಪಿ
ಯಶಸ್ವಿನೀ || ಸ್ತುತಿಭಿ ಶ್ಚಾನುರೂಪಾಭಿ ರಾನರ್ಚಾಯತ ಲೋಚನಾ || ೨೬ ||

ಪೃಥ್ವೀವರ್ತಿಗಳಾದ ದೇವತೆಗಳಿಂದಲೂ, ಪುನಃಪುನಃ - ಬಾರಿಬಾರಿಗೂ, ಸರ್ವೇಭ್ಯಃ - ಸಮಸ್ತರಾದ, ದೇವೇಭ್ಯಶ್ಚ - ದೇವತೆಗಳಿಂದಲೂ, ತೇ - ನಿನಗೆ, ಪರಿಪಂಥಿನಃ - ಶತ್ರುಗಳು, ಯೇ - ಯಾರೋ, ತೇಭ್ಯಶ್ಚ - ಅವರಿಂದಲೂ, ತೇ - ನಿನಗೆ, ಸ್ವಸಿ - ಕ್ಷೇಮವು, ಅಸ್ತು - ಆಗಲಿ. || ೨೨ || ಹೇ ರಾಮ - ಎಲೈ ಶ್ರೀರಾಮನೆ, ಗುರುಃ - ಬೃಹಸ್ಪತಿಯು, ಸೋಮಶ್ಚ - ಚಂದ್ರನು, ಸೂರ್ಯಶ್ಚ - ಸೂರ್ಯನೂ, ಅಥ - ಬಳಿಕ, ಧನದಶ್ಚ - ಕುಬೇರನೂ, ತಥಾ - ಹಾಗೆಯೆ, ಯಮಃ - ಯಮನು, ಅರ್ಚಿತಾಃ - ಪೂಜಿಸಲ್ಪಟ್ಟು, ದಂಡಕಾರಣ್ಯವಾಸಿನಂ - ದಂಡಕಾರಣ್ಯದಲ್ಲಿ ವಾಸಮಾಡು ತ್ತಿರುವ, ತ್ವಾಂ - ನಿನ್ನನ್ನು, ಪಾಂತು - ಸಂರಕ್ಷಿಸಲಿ. || ೨೩ || ಹೇ ರಘುನಂದನ - ಎಲೈ ಶ್ರೀರಾಮನೆ, ಅಗ್ನಿಃ - ಅಗ್ನಿಯು, ವಾಯುಃ - ವಾಯುವೂ, ತಥಾ - ಹಾಗೆಯೆ, ಋಷಿಮುಖಾತ್ - ಋಷಿಗಳ ಮುಖದಿಂದ, ಚ್ಯುತಾಃ - ಹೊರಟು ಬರುತ್ತಿರುವ, ಮಂತ್ರಾಶ್ಚ - ಮಂತ್ರಗಳೂ, ಉಪಸ್ಪರ್ಶನಕಾಲೇ - ಆಚಮನಕಾಲದಲ್ಲಿ, ತ್ವಾಂ - ನಿನ್ನನ್ನು, ಪಾಂತು - ಸಂರಕ್ಷಿಸಲಿ. || ೨೪ || ಸರ್ವಲೋಕಪ್ರಭುಃ, ಸರ್ವ - ಸಮಸ್ತವಾದ, ಲೋಕ - ಲೋಕಗಳಿಗೆ, ಪ್ರಭುಃ - ಸ್ವಾಮಿಯಾದ, ಬ್ರಹ್ಮಾ - ಚತುರ್ಮುಖ ಬ್ರಹ್ಮನು, ಭೂತಭರ್ತಾ - (ಮ) ಭೂತ - ಪ್ರಮಥಗಣಗಳಿಗೆ, ಭರ್ತಾ - ಅಧಿಪತಿಯಾದ ಶಿವನು, (ಗೋ) ಭೂತಭರ್ತಾ - ಶ್ರೀ ಮಹಾವಿಷ್ಣುವು, ತಥಾ - ಹಾಗೆಯೆ, ಋಷಯಶ್ಚ - ಋಷಿಗಳೂ, ಶೇಷಾಃ - ಮಿಕ್ಕ, ಸುರಾಃ - ದೇವತೆಗಳೂ, ಯೇ - ಯಾರೋ, ತೇ - ಅವರೂ, ವನವಾಸಿನಂ - ವನವಾಸಮಾಡುತ್ತಿರುವ, ತ್ವಾಂ - ನಿನ್ನನ್ನು, ರಕ್ಷಂತು - ಸಂರಕ್ಷಿಸಲಿ. || ೨೫ || ಆಯತಲೋಚನಾ - ವಿಸ್ತಾರವಾದ ನೇತ್ರಗಳುಳ್ಳ, ಯಶಸ್ವಿನೀ - ಕೀರ್ತಿವಂತಳಾದ ಕೌಸಲ್ಯಾದೇವಿಯು, ಇತಿ - ಈಪರಿಯಾಗಿ, ಮತ್ವಾ - ತಿಳಿದು, ಸುರಗಣಾ - ದೇವತಾ ಸಮೂಹ

ಶತ್ರುಗಳಿಂದಲೂ ನಿನಗೆ ಕ್ಷೇಮವುಂಟಾಗಲಿ! ಗುರುವೂ, ಚಂದ್ರನೂ, ಸೂರ್ಯನೂ, ಕುಬೇರನೂ, ಯಮನೂ ನನ್ನಿಂದ ಪೂಜಿತರಾಗಿ, ದಂಡಕಾರಣ್ಯವಾಸಿಯಾದ ನಿನ್ನನ್ನು ಪಾಲಿಸುತ್ತಿರಲಿ. ಓ ರಘುನಂದನನೆ! ಅಗ್ನಿಯೂ, ವಾಯುವೂ, ಹೋಮ ಧೂಮವೂ, ಋಷಿಮುಖೋಚ್ಚರಿತವಾದ ಮಹಾ ಮಂತ್ರಗಳೂ, ಆಚಮನಕಾಲದಲ್ಲಿ ನಿನ್ನನ್ನು ಸಂರಕ್ಷಿಸಲಿ. ಸಕಲ ಲೋಕ ಪ್ರಭುವಾದ ನಾಲ್ಮುಗನೂ, ಪ್ರಮಥ ಗಣಾಧಿಪತಿಯಾದ ಪರಮಶಿವನೂ, ಮಹಾ ಮುನಿಗಳೂ, ಇತರ ದೇವತೆಗಳೂ ವನವಾಸಿಯಾದ ನಿನ್ನನ್ನು ರಕ್ಷಿಸಿಕೊಂಡಿರಲಿ." || ೨೫ || ಎಂಬೀ ಪ್ರಕಾರವಾಗಿ ಶ್ರೀರಾಮಮೂರ್ತಿಯನ್ನಾಶೀರ್ವದಿಸಿದ ಕೌಸಲ್ಯಾ

ಜ್ವಲನಂ ಸಮುಪಾದಾಯ ಬ್ರಾಹ್ಮಣೇನ ಮಹಾತ್ಮನಾ ॥ ಹಾವಯಾಮಾಸ ವಿಧಿನಾ ರಾಮ ಮಂಗಳ ಕಾರಣಾತ್ ॥ ೨೭ ॥ ಘೃತಂ ಶ್ವೇತಾನಿ ಮಾಲ್ಯಾನಿ ಸಮಿಧಶ್ಶ್ವೇತ ಸರ್ಷಪಾ ॥ ಉಪಸಂಪಾದಯಾಮಾಸ ಕೌಸಲ್ಯಾ ಪರಮಾಂಗನಾ ॥ ೨೮ ॥ ಉಪಾಧ್ಯಾಯ ಸ್ಸವಿಧಿನಾ ಹುತ್ವಾ ಶಾಂತಿ ಮನಾಮಯಂ ॥ ಹುತಹವ್ಯಾವಶೇಷೇಣ ಬಾಹ್ಯಂ ಬಲಿಮಕಲ್ಪಯತ್ ॥ ೨೯ ॥ ಮಧು ದಧ್ಯಕ್ಷತ ಘೃತೈ ಸ್ಸ್ವಸ್ತಿವಾಚ್ಯ ದ್ವಿಜಾಂಸ್ತತಃ ॥ ವಾಚಯಾಮಾಸ ರಾಮಸ್ಯ ವನೇ

ಗಳನ್ನು, ಗಂಧೈಶ್ಚಾಪಿ - ಗಂಧಗಳಿಂದಲೂ, ಮಾಲ್ಯೈಃ - ಪುಷ್ಪಮಾಲಿಕೆಗಳಿಂದಲೂ, ಅನುರೂಪಾಭಿಃ - ಸಮಾನಗುಣವುಳ್ಳ, ಸ್ತುತಿಭಿಶ್ಚ - ಸ್ತೋತ್ರಗಳಿಂದಲೂ, ಆನರ್ಚ - ಪೂಜೆಮಾಡಿದಳು. ॥ ೨೬ ॥ ಜ್ವಲನಂ - ಅಗ್ನಿಯನ್ನು, ಸಮುಪಾದಾಯ - ತೆಗೆದುಕೊಂಡು ಬಂದು, ಮಹಾತ್ಮನಾ - ದೊಡ್ಡ ಮನಸ್ಸುಳ್ಳ, ಬ್ರಾಹ್ಮಣೇನ - ಬ್ರಾಹ್ಮಣನಿಂದ, ರಾಮಮಂಗಳಕಾರಣಾತ್, ರಾಮ - ಶ್ರೀರಾಮನಿಗೆ, ಮಂಗಳ - ಶುಭವಾಗಬೇಕೆಂಬ, ಕಾರಣಾತ್ - ಹೇತುವಿನಿಂದ, ವಿಧಿನಾ - ಶಾಸ್ತ್ರೋಕ್ತ ವಿಧಿಯಿಂದ, ಹಾವಯಾಮಾಸ - ಹೋಮ ಮಾಡಿಸಿದಳು. ॥ ೨೭ ॥ ಪರಮಾಂಗನಾ - ಉತ್ತಮ ಸ್ತ್ರೀಯಾದ, ಕೌಸಲ್ಯಾ - ಕೌಸಲ್ಯಾದೇವಿಯು, ಘೃತಂ - ಆಜ್ಯವನ್ನು, ಶ್ವೇತಾನಿ - ಬೆಳ್ಳಗಿರುವ, ಮಲ್ಯಾನಿ - ಪುಷ್ಪಗಳನ್ನು, ಸಮಿಧಃ - ಸಮಿತ್ತುಗಳನ್ನು, ಶ್ವೇತಸರ್ಷಪಾ - ಬಿಳಿ ಸಾಸುವೆ ಕಾಳುಗಳನ್ನು, ಹೋಮಾಯ - ಹೋಮಕ್ಕೋಸುಗ, ಉಪಸಂಪಾದಯಾಮಾಸ - ತರಿಸಿದಳು. ॥ ೨೮ ॥ ಸ ಉಪಾಧ್ಯಾಯಃ-ಆ ಉಪಾಧ್ಯಾಯನಾದ ಬ್ರಾಹ್ಮಣನು, ವಿಧಿನಾ-ಶಾಸ್ತ್ರದಲ್ಲಿ ಹೇಳಿರುವ ವಿಧಿಯಿಂದ, ಶಾಂತಿಂ - ಸರ್ವೋಪದ್ರವಪರಿಹಾರಶಾಂತಿಯನ್ನು, ಅನಾಮಯಂ - ಆರೋಗ್ಯವನ್ನುದ್ದೇಶಿಸಿ, ಹುತ್ವಾ - ಹೋಮಮಾಡಿ, ಹುತಹವ್ಯಾವಶೇಷೇಣ, ಹುತ - ಹೋಮಮಾಡಲ್ಪಟ್ಟ, ಹವ್ಯ - ಹವಿರ್ದ್ರವ್ಯಗಳ, ಅವಶೇಷೇಣ - ಮಿಕ್ಕ ಪದಾರ್ಥದಿಂದ, ಬಾಹ್ಯಂ - ಹೊರಗಡೆ ಮಾಡತಕ್ಕ, ಬಲಿಂ - ಬಲಿಯನ್ನು, ಅಕಲ್ಪಯತ್ - ಮಾಡಿದನು. ॥ ೨೯ ॥ ಮಧುದಧ್ಯಕ್ಷತಘೃತೈಃ - ಜೇನುತುಪ್ಪದಿಂದಲೂ, ಮಸರಿನಿಂದಲೂ, ಅಕ್ಷತೆಗಳಿಂದಲೂ, ಆಜ್ಯದಿಂದಲೂ, ದ್ವಿಜಾತಯಃ - ಬ್ರಾಹ್ಮಣರನ್ನು, ಸ್ವಸ್ತಿ - ಪುಣ್ಯಾಹವನ್ನು, ವಾಚ್ಯ - ಮಾಡಿಸಿ, ರಾಮಸ್ಯ - ಶ್ರೀರಾಮನಿಗೆ, ವನೇ - ವನದಲ್ಲಿ, ಸ್ವಸ್ತ್ಯಯನಕ್ರಿಯಾಃ - ಶುಭವಾಗಲೆಂಬ ಸೂಚಕವಾದ ಕರ್ಮವನ್ನು ಪ್ರತಿಪಾದಿಸುವ ಮಂತ್ರಗಳನ್ನು

ದೇವಿಯು ಪೂಮಾಲಿಕೆಗಳಿಂದಲೂ, ಗಂಧಗಳಿಂದಲೂ, ಅನುರೂಪಗಳಾದ ಸ್ತುತಿ ನಿಚಯಗಳಿಂದಲೂ, ದೇವತೆಗಳನ್ನು ಸ್ತುತಿಸಿ, ತನ್ನ ಮಗನಿಗೆ ಮಂಗಳವುಂಟಾಗಲೋಸುಗ, ಅಗ್ನಿ ಪ್ರತಿಷ್ಠೆಯಂಗೈದು, ಘೃತವನ್ನೂ, ಶ್ವೇತ ಕುಸುಮಗಳನ್ನೂ, ಸಮಿತ್ತುಗಳನ್ನೂ, ಶ್ವೇತ ಸರ್ಷಪ (ಬಿಳಿ ಸಾಸುವೆ) ಗಳನ್ನೂ ತಂದು ಬ್ರಾಹ್ಮಣನಿಂದ ಹೋಮವಂಗೈಸಿದವಳಾದಳು. ಆ ಉಪಾಧ್ಯಾಯನು ಸರ್ವೋಪದ್ರವ ಶಾಂತಿಯನ್ನೂ, ಆರೋಗ್ಯ ಭಾಗ್ಯವನ್ನೂ ಕುರಿತು ಶಾಸ್ತ್ರೋಕ್ತವಾಗಿ ಹೋಮ ಮಾಡಿ, ಆ ಹೋಮ ಶೇಷ ಪದಾರ್ಥಗಳಿಂದ ಬಾಹ್ಯ ಬಲಿಯನ್ನು ಮಾಡಿದನು. ಆ ಸಮಯದಲ್ಲಿ ವಿಪ್ರನು, ಮಧು, ದಧಿಲಾಜಗಳಿಂದ ಪುಣ್ಯಾಹವಂಗೈದು, ಅರಣ್ಯವಾಸಿಯಾಗುವ ಶ್ರೀರಾಮನಿಗೆ ಮಂಗಳ ಸೂಚಕಗಳಾದ ಮಂತ್ರಗಳನ್ನು

ಸ್ವಸ್ತ್ಯಯನ ಕ್ರಿಯಾಃ ‖ ೩೦ ‖ ತತಸ್ತಸ್ಮೈ ದ್ವಿಜೇಂದ್ರಾಯ ರಾಮಮಾತಾ ಯಶಸ್ವಿನೀ ‖ ದಕ್ಷಿಣಾಂ ಪ್ರದದೌ ಕಾಮ್ಯಾಂ ರಾಘವಂ ಚೇದಮಬ್ರವೀತ್ ‖ ೩೧ ‖ ಯನ್ಮಂಗಳಂ ಸಹಸ್ರಾಕ್ಷೇ ಸರ್ವದೇವ ನಮಸ್ಕೃತೇ ‖ ವೃತ್ರನಾಶೇ ಸಮಭವ ತ್ತತ್ತೇ ಭವತು ಮಂಗಳಂ ‖ ೩೨ ‖ ಯನ್ಮಂಗಳಂ ಸುಪರ್ಣಸ್ಯ ವಿನತಾಽಕಲ್ಪಯತ್ಪುರಾ ‖ ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಂಗಳಂ ‖ ೩೩ ‖ ಅಮೃತೋತ್ಪಾದನೇ ದೈತ್ಯಾನ್ ಘ್ನತೋ ವಜ್ರಧರಸ್ಯ ಯತ್ ‖ ಅದಿತಿರ್ಮಂಗಳಂ ಪ್ರಾದಾತ್ತತ್ತೇ ಭವತು ಮಂಗಳಂ ‖ ೩೪ ‖ ತ್ರೀನ್ವಿ ಕ್ರಮಾನ್ ಪ್ರಕ್ರಮತೋ ವಿಷ್ಣೋ ರಮಿತ ತೇಜಸಃ ‖ ಯದಾ ಸೀನ್ಮಂ

ವಾಚಾಯಾಮಾಸ - ಹೇಳಿಸಿದಳು. ‖ ೩೦ ‖ ತತಃ - ಬಳಿಕ, ಯಶಸ್ವಿನೀ - ಕೀರ್ತಿವಂತಳಾದ, ರಾಮಮಾತಾ - ಶ್ರೀರಾಮನ ತಾಯಿಯು, ತಸ್ಮೈದ್ವಿಜೇಂದ್ರಾಯ - ಹೋಮಮಾಡಿದ ಆ ಬ್ರಾಹ್ಮಣನಿಗೆ, ಕಾಮ್ಯಾಂ - ಇಷ್ಟವಾದ, ದಕ್ಷಿಣಾಂ - ದಕ್ಷಿಣೆಯನ್ನು, ಪ್ರದದೌ - ಕೊಟ್ಟಳು, ರಾಘವಂ- ಶ್ರೀ ರಾಮುನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ಹೇಳಿಯೂ ಹೇಳಿದಳು. ‖ ೩೧ ‖ ವೃತ್ರನಾಶೇ - ವೃತ್ರಾಸುರನು ನಾಶವಾಗಲು, ಸರ್ವದೇವನಮಸ್ಕೃತೇ - ಸಮಸ್ತ ದೇವತೆಗಳಿಂದ, ಪೂಜಿಸಲ್ಪಟ್ಟ, ಸಹಸ್ರಾಕ್ಷೇ - ದೇವೇಂದ್ರನಿಗೆ, ಯತ್ ಮಂಗಳಂ - ಯಾವ ಮಂಗಳವು, ಸಮಭವತ್ - ಆಯಿತೋ, ತನ್ಮಂಗಳಂ - ಆ ಶುಭವು, ತೇ - ನಿನಗೆ, ಭವತು - ಆಗಲಿ. ‖ ೩೨ ‖ ಪುರಾ - ಪೂರ್ವದಲ್ಲಿ, ವಿನತಾ - ವಿನತಾದೇವಿಯು, ಅಮೃತಂ - ಅಮೃತವನ್ನು, ಪ್ರಾರ್ಥಯಾನಸ್ಯ - ಪ್ರಾರ್ಥನೆಮಾಡುತ್ತಿರುವ, ಸುಪರ್ಣಸ್ಯ - ಗರುಡನಿಗೆ, ಯನ್ಮಂಗಳಂ - ಯಾವ ಶುಭವನ್ನು, ಅಕಲ್ಪಯತ್ - ಕಲ್ಪಿಸಿದಳೋ, ತನ್ಮಂಗಳಂ - ಅಂತಹ ಶುಭವು, ತೇ-ನಿನಗೆ, ಭವತು - ಆಗಲಿ. ‖ ೩೩ ‖ ಅಮೃತೋತ್ಪಾದನೇ - ಅಮೃತವು ಹುಟ್ಟಿದಕಾಲದಲ್ಲಿ, ದೈತ್ಯಾನ್ - ರಾಕ್ಷಸರನ್ನು, ಘ್ನತಃ - ಹೊಡೆಯುತ್ತಿರುವ, ವಜ್ರಧರಸ್ಯ - ದೇವೇಂದ್ರನಿಗೆ, ಅದಿತಿಃ - ಅದಿತಿದೇವಿಯು, ಯನ್ಮಂಗಳಂ - ಯಾವ ಮಂಗಳವನ್ನು, ಪ್ರಾದಾತ್ - ಕೊಟ್ಟಳೋ, ತತ್ - ಆ ಮಂಗಳವು, ತೇ - ನಿನಗೆ, ಭವತು - ಆಗಲಿ, ‖ ೩೪ ‖ ತ್ರೀನ್ - ಮೂರಾದ, ವಿಕ್ರಮಾನ್ - ಪಾದನ್ಯಾಸಗಳನ್ನು, ಪ್ರಕ್ರಮತಃ - ಇಡುತ್ತಿರುವ, ಅಮಿತತೇಜಸಃ - ಅಪಾರ ಪರಾಕ್ರಮಶಾಲಿಯಾದ, ವಿಷ್ಣೋಃ - ಶ್ರೀ ಮಹಾವಿಷ್ಣುವಿಗೆ, ಯನ್ಮಂಗಳಂ - ಯಾವ ಮಂಗಳವು, ಆಸೀತ್ - ಆಯಿತೋ,

---

ಹೇಳುವಂತೆ ಮಾಡಿ, ಬಳಿಕಲಾತನು ಕಾಂಕ್ಷಿಸಿದ ದಕ್ಷಿಣೆಯನ್ನಿತ್ತು ನಿಜ ಕುವರನಾದ ರಘುರಾಮುನನ್ನು ಕುರಿತು ಹೀಗೆಂದಳು.. ‖ ೩೧ ‖ "ಎಲೈ ಶ್ರೀರಾಮನೆ! ವೃತ್ರಾಸುರ ಸಂಹಾರ ಕಾಲದಲ್ಲಿ ಸಕಲ ದಿವಿಜರಿಂದ ವಂದಿತನಾದ ದೇವೇಂದ್ರನಿಗೆ ಯಾವ ಮಂಗಳವುಂಟಾಯಿತೋ, ಪೂರ್ವದಲ್ಲಿ ವಿನತಾದೇವಿಯು ಅಮೃತವನ್ನಪೇಕ್ಷಿಸಿದ ತನ್ನ ಮಗನಾದ ಗರುಡನಿಗೆ ಯಾವ ಮಂಗಳವನ್ನು ಕಲ್ಪಿಸಿದಳೋ, ಅಮೃತಾ ಸ್ವಾದನ ಸಮಯದಲ್ಲಿ ರಾಕ್ಷಸರನ್ನೊಕ್ಕಲಿಕ್ಕುತ್ತಿರುವ ದೇವೇಂದ್ರನಿಗೆ ಅದಿತೀದೇವಿಯು ಯಾವ ಮಂಗಳವನ್ನುಂಟುಮಾಡಿದಳೋ, ಮಾತ್ರವಲ್ಲದೆ, ತ್ರಿವಿಕ್ರಮಾವತಾರವನ್ನು ವಹಿಸಿದ ಶ್ರೀ ಮಹಾ ವಿಷ್ಣುವಿಗೆ ಯಾವ

ಗಳಂ ರಾಮ ತ್ವತ್ತೇ ಭವತು ಮಂಗಳಂ ॥ ೩೫ ॥ ಋತವ ಸ್ಸಾಗರಾ ದ್ವೀಪಾ ವೇದಾ ಲೋಕಾ ದಿಶಶ್ಚ ತೇ ॥ ಮಂಗಳಾನಿ ಮಹಾಬಾಹೋ ದಿಶಂತು ಶುಭ ಮಂಗಳಾಃ ॥ ೩೬ ॥ ಇತಿ ಪುತ್ರಸ್ಯ ಶೇಷಾಶ್ಚ ಕೃತ್ವಾ ಶಿರಸಿ ಭಾಮಿನೀ ॥ ಗಂಧೈಶ್ಚಾಪಿ ಸಮಾಲಭ್ಯ ರಾಮ ಮಾಯತಲೋಚನಾ ॥ ೩೭ ॥ ಓಷಧೀಂ ಚಾಪಿ ಸಿದ್ಧಾರ್ಥಾಂ ವಿಶಲ್ಯಕರಣೀಂ ಶುಭಾಂ ॥ ಚಕಾರ ರಕ್ಷಾಂ ಕೌಸಲ್ಯಾ ಮಂತ್ರೈ ರಭಿಜಜಾಪಚ ॥ ೩೮ ॥ ಉವಾಚಾಭಿಪ್ರಹೃಷ್ಟೇವ ಸಾ ದುಃಖ ವಶವರ್ತಿನೀ ॥ ವಾಙ್ಮಾತ್ರೇಣ ನಭಾವೇನ ವಾಚಾ ಸಂಸಜ್ಜ ಮಾನಯಾ ॥೩೯॥ ಆನಮ್ಯ ಮೂರ್ಧ್ನಿ ಚಾಘ್ರಾಯ ಪರಿಷ್ವಜ್ಯ ಯಶಸ್ವಿನೀ ॥ ಅವದತ್ಪುತ್ರ

ತತ್ - ಆ ಮಂಗಳವು, ತೇ - ನಿನಗೆ, ಭವತು - ಆಗಲಿ. ॥ ೪೪ ॥ ಶುಭಮಂಗಳಾಃ - ಶುಭಗಳಿಗೂ ಶುಭಕರಂಗಳಾದ, ಋತವಃ - ಷಡೃತುಗಳು, ಸಾಗರಾಃ - ಸಮುದ್ರಗಳು, ದ್ವೀಪಾಃ - ದ್ವೀಪಗಳು, ವೇದಾಃ - ಚತುರ್ವೇದಗಳು, ಲೋಕಾಃ - ಚತುರ್ದಶಲೋಕಗಳು, ದಿಶಶ್ಚ - ದಶದಿಕ್ಕುಗಳೂ, ಹೇ ಮಹಾಬಾಹೋ - ಎಲೈ ಮಹಾಭುಜ ಪರಾಕ್ರಮಶಾಲಿಯೆ, ತೇ - ನಿನಗೆ, ಮಂಗಳಾನಿ, ಮಂಗಳಗಳನ್ನು, ದಿಶಂತು - ಕೊಡಲಿ. ॥ ೩೬ ॥ ಆಯತಲೋಚನಾ - ದೀರ್ಘವಾದ ನೇತ್ರಗಳುಳ್ಳ, ಭಾಮಿನೀ - ಕೌಸಲ್ಯಾದೇವಿಯು, ಇತಿ - ಈಪರಿಯಾಗಿ, ಪುತ್ರಸ್ಯ - ಮಗನ, ಶಿರಸಿ - ಶಿರಸ್ಸಿನಲ್ಲಿ, ಶೇಷಾಃ - ಮಂತ್ರಾಕ್ಷತೆಗಳನ್ನು, ಕೃತ್ವಾ - ಮಾಡಿ, ಗಂಧೈಶ್ಚಾಪಿ - ಗಂಧಗಳಿಂದಲೂ, ರಾಮಂ - ಶ್ರೀರಾಮನನ್ನು, ಸಮಾಲಭ್ಯ - ಲೇಪನಮಾಡಿ, ಕೌಸಲ್ಯಾ - ಕೌಸಲ್ಯಾದೇವಿಯು, ಸಿದ್ಧಾರ್ಥಂ - ದೃಷ್ಟವಾದ ಫಲವುಳ್ಳ, ಶುಭಾಂ - ಶುಭಕರವಾಗಿ, ವಿಶಲ್ಯಕರಣೀಂ - ವಿಶಲ್ಯಕರಣೀ ಎಂಬ, ಓಷಧೀಂ - ಮೂಲಿಕೆಯನ್ನು, ಮಂತ್ರೈಃ - ಮಂತ್ರಗಳಿಂದ, ರಕ್ಷಾಂ - ರಕ್ಷಾಬಂಧನವನ್ನಾಗಿ, ಚಕಾರ - ಮಾಡಿದಳು, ಅಭಿಜಜಾಪಚ - ಮಂತ್ರಜಪವನ್ನೂ ಮಾಡಿದಳು. ॥ ೩೮ ॥ ಸಾ - ಆ ಕೌಸಲ್ಯಾದೇವಿಯು, ದುಃಖವಶವರ್ತಿನೀ - ಮನದಲ್ಲಿ ದುಃಖಾಕ್ರಾಂತಳಾದರೂ, ವಾಙ್ಮಾತ್ರೇಣ - ವಾಙ್ಮಾತ್ರದಿಂದ, ಅತಿ ಪ್ರಹೃಷ್ಟೇವ - ಬಹಳ ಸಂತೋಷಗೊಂಡವಳಂತೆ ನಟಿಸುತ್ತ, ಅಸಂಸಜ್ಜಮಾನಯಾ - ಸ್ಪಷ್ಟವಾಗಿ ಹೊರಡದಿರುವ, ವಾಚಾ - ಮಾತಿನಿಂದ, ಉವಾಚ - ಹೇಳಿದಳು, ಭಾವೇನ - ಮನೋಭಿಪ್ರಾಯದಿಂದ, ನೋವಾಚ - ಹೇಳಲಿಲ್ಲವು. ॥ ೩೯ ॥ ಯಶಸ್ವಿನೀ- ಕೀರ್ತಿವಂತಳಾದ ಕೌಸಲ್ಯಾದೇವಿಯು, ಆನಮ್ಯ - ಬಗ್ಗಿಸಿ, ಮೂರ್ಧ್ನಿ - ಶಿರಸ್ಸಿನಲ್ಲಿ, ಆಘ್ರಾಯ-

---

ಶುಭವು ಸಂಭವಿಸಿತೋ ಅವೆಲ್ಲವೂ ನಿನಗೆ ಉಂಟಾಗುವುದಾಗಲಿ ॥೩೫॥ ಎಲೈ ಮಹಾ ಭುಜ ಬಲಪರಾಕ್ರಮಶಾಲಿಯೆ! ಶುಭಕರವಾದ ಋತುಗಳೂ, ಸಮುದ್ರಗಳೂ, ದ್ವೀಪಗಳೂ, ವೇದಗಳೂ,ಲೋಕಗಳೂ,ದಶದಿಶೆಗಳೂ ನಿನಗೆ ಮಂಗಳವನ್ನೀಯುವುವಾಗಲಿ." ಕೌಸಲ್ಯಾದೇವಿಯು ಈ ರೀತಿ ನುಡಿದು ಮಗನ ಮಂಡೆಯುಲ್ಲಿ ಮಂತ್ರಾಕ್ಷತೆಗಳನ್ನಿಟ್ಟು, ಗಂಧವನ್ನು ಪೂಸಿ, ಪ್ರತ್ಯಕ್ಷ ಫಲವುಳ್ಳದೂ, ಶುಭಕರವಾದುದೂ ಆದ ವಿಶಲ್ಯಕರಣಿಯೆಂಬ ಮೂಲಿಕೆಯನ್ನು ರಕ್ಷಾಮಂತ್ರಗಳಿಂದಭಿಮಂತ್ರಿಸಿ, ನಿಜಕರದಿಂದಲೇ, ಆ ಮಂತ್ರವನ್ನು ಪುನಃ ಪುನಃ ಪಠಿಸಿ ಶ್ರೀರಾಮನಿಗೆ ಕಟ್ಟಿ, ಅಪಾರ ದುಃಖಿತಳಾದರೂ, ಮಹಾ ಸಂತೋಷಭರಿತಳಾದವ

ಸಿದ್ಧಾರ್ಥೋ ಗಚ್ಛ ರಾಮ ಯಥಾ ಸುಖಂ ॥೪೦॥ ಅರೋಗಂ ಸರ್ವ ಸಿದ್ಧಾರ್ಥ ಮಯೋಧ್ಯಾಂ ಪುನರಾಗತಂ ॥ ಪಶ್ಯಾಮಿ ತ್ವಾಂ ಸುಖಂ ವತ್ಸ ಸುಸ್ಥಿತಂ ರಾಜವರ್ತ್ಮನಿ ॥೪೧॥ ಪ್ರಣಷ್ಟ ದುಃಖಸಂಕಲ್ಪಾ ಹರ್ಷ ವಿದ್ಯೋತಿತಾನನಾ ॥ ದ್ರಕ್ಷ್ಯಾಮಿ ತ್ವಾಂ ವನಾತ್ಪ್ರಾಪ್ತಂ ಪೂರ್ಣಚಂದ್ರ ಮಿವೋದಿತಂ ॥೪೨॥ ಭದ್ರಾಸನಗತಂ ರಾಮ ವನವಾಸಾದಿಹಾಗತಂ ॥ ದ್ರಕ್ಷ್ಯಾಮಿ ಚ ಪುನಸ್ತ್ವಾಂತು ತೀರ್ಣವಂತಂ ಪಿತುರ್ವಚಃ ॥೪೩॥ ಮಂಗಳೈ ರುಪ ಸಂಪನ್ನೋ ವನವಾಸಾದಿಹಾಗತಃ ॥ ವಧ್ವಾ ಮಮಚ ನಿತ್ಯಂ ತ್ವಂ ಕಾಮಾ

ಆಘ್ರಾಣಿಸಿ, ಪರಿಷ್ವಜ್ಯಚ - ಅಪ್ಪಿಕೊಂಡು, ಹೇ ರಾಮ - ಎಲೈ ರಾಮನೇ, ಹೇ ಪುತ್ರ - ಎಲೈ ಮಗುವೆ, ಸಿದ್ಧಾರ್ಥಃ, ಸಿದ್ಧ - ಪ್ರಾಪ್ತವಾದ, ಅರ್ಥಃ - ಪ್ರಯೋಜನವುಳ್ಳವನಾಗಿ, ಯಥಾಸುಖಂ-ಸುಖವಾಗಿ, ಗಚ್ಛ - ಹೋಗು ಎಂದು, ಅವದತ್ - ನುಡಿದಳು. ॥೪೦॥ ಹೇ ವತ್ಸ - ಎಲೈ ಬಾಲನೆ, ಆರೋಗಂ - ರೋಗರಹಿತವಾಗಿ, ಸರ್ವಸಿದ್ಧಾರ್ಥಂ, (ಗೋ) ಸರ್ವ - ಸಮಸ್ತವಾದ, ಸಿದ್ಧ - ನಿಷ್ಪನ್ನವಾದ, ಅರ್ಥಂ - ಪ್ರಯೋಜನವುಳ್ಳ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪುನಃ - ಮತ್ತು, ಆಗತಂ - ಬಂದ, ತ್ವಾಂ - ನಿನ್ನನ್ನು, ಸುಖಂ - ಸುಖವಾಗಿ, ರಾಜವರ್ತ್ಮನಿ - ರಾಜವೀಧಿಯಲ್ಲಿ, ಸುಸ್ಥಿತಂ - ಇರುವವನನ್ನಾಗಿ, ಪಶ್ಯಾಮಿ - ನೋಡುತ್ತೇನೆ. ॥೪೧॥ ಪ್ರಣಷ್ಟದುಃಖಸಂಕಲ್ಪಾ, ಪ್ರಣಷ್ಟ - ನಾಶವನ್ನುಹೊಂದಿದ, ದುಃಖ - ದುಃಖಕರವಾದ, ಸಂಕಲ್ಪಾ-ಮಾನಸವ್ಯಾಪಾರವುಳ್ಳವಳಾಗಿ, ಹರ್ಷವಿದ್ಯೋತಿತಾನನಾ, ಹರ್ಷ - ಸಂತೋಷದಿಂದ, ವಿದ್ಯೋತಿತ-ಪ್ರಕಾಶಿಸಲ್ಪಟ್ಟ, ಆನನಾ - ಮುಖವುಳ್ಳವಳಾಗಿ, ಉದಿತಂ - ಹುಟ್ಟಿದ, ಪೂರ್ಣಚಂದ್ರಮಿವ-ಪೂರ್ಣಚಂದ್ರನಂತೆ, ವನಾತ್ - ವನದಿಂದ, ಪ್ರಾಪ್ತಂ - ಬಂದಿರುವ, ತ್ವಾಂ - ನಿನ್ನನ್ನು, ದ್ರಕ್ಷ್ಯಾಮಿ - ನೋಡುವೆನು. ॥೪೨॥ ಹೇ ರಾಮ - ಎಲೈ ಶ್ರೀರಾಮನೆ, ವನವಾಸಾತ್, ವನ-ವನದಲ್ಲಿ, ವಾಸಾತ್ - ವಾಸವನ್ನು ಮುಗಿಸಿ, ಇಹ - ಇಲ್ಲಿಗೆ, ಆಗತಂ - ಬಂದಿರುವ, ಪಿತುಃ-ತಂದೆಯ, ವಚಃ - ಆಜ್ಞೆಯನ್ನು, ತೀರ್ಣವಂತಂ - ದಾಟಿದ, ಭದ್ರಾಸನಗತಂ, ಭದ್ರಾಸನ-ಸಿಂಹಾಸನವನ್ನು, ಗತಂ - ಹೊಂದಿದ, ತ್ವಾಂ - ನಿನ್ನನ್ನು, ಪುನಃ - ಮತ್ತು, ದ್ರಕ್ಷ್ಯಾಮಿ - ನೋಡುವೆನು. ॥೪೩॥ ವನವಾಸಾತ್ - ವನವಾಸದಿಂದ, ಇಹ - ಇಲ್ಲಿಗೆ, ಆಗತಃ - ಬಂದು, ಮಂಗಳೈಃ - (ಗೋ) ಮಂಗಳಾರ್ಥಗಳಾದ ರಾಜೋಚಿತ ವಸ್ತ್ರಾಭರಣಗಳಿಂದ, ಉಪಸಂಪನ್ನಃ - ಕೂಡಿದ, ತ್ವಂ - ನೀನು, ವಧ್ವಾಃ - ಹೆಂಡತಿಯಾದ ಸೀತಾದೇವಿಗೂ, ಮಮಚ - ನನಿಗೂ, ನಿತ್ಯಂ - ನಿರಂತ

ಳಂತೆ, ಮನಃಪೂರ್ವಕದಿಂದ ಸಾಧ್ಯವಲ್ಲದಿದ್ದರೂ, ವಾಙ್ಮಾತ್ರದಿಂದ ಮಗನಾದ ಶ್ರೀರಾಮನನ್ನು ಕುರಿತು ಹೀಗೆ ಹೇಳಿದಳು." ಮಗನೆ! ಕ್ಷೇಮವಾಗಿ ತೆರಳು; ರೋಗವಿಲ್ಲದೆ ಲಭಿಸುವ ಪ್ರಯೋಜನವುಳ್ಳವನಾಗಿ ಮರಳಿ, ಅಯೋಧ್ಯಾಪುರಕ್ಕೆ ಬಂದು ರಾಜವೀಥಿಯಲ್ಲಿ ನಿಂತಿರುವ ನಿನ್ನನ್ನು ನೋಡಿ, ದುಃಖರಹಿತಳೂ, ಸಂತೋಷದಿಂದ ಕಂಗೊಳಿಸುವ ಮುಖಕಾಂತಿಯುಳ್ಳವಳೂ ಆಗಿ, ವನದಿಂದ ಹಿಂತಿರುಗಿ ಬಂದ ನಿನ್ನನ್ನು, ಉದಯಚಂದ್ರನನ್ನು ನೋಡುವಂತೆ ನೋಡಿ ಸುಖಿಯಾಗುವೆನು. ॥೪೨॥ ಓ ರಾಮಾ! ತಂದೆಯ ಆಜ್ಞಾ

ಸಂವರ್ಧ ಯಾಹಿ ಭೋಃ ||೪೪|| ಮಯಾರ್ಚಿತಾ ದೇವಗಣಾ ಶ್ಶಿವಾದಯೋ ಮಹರ್ಷಯೋ ಭೂತ ಮಹಾಸುರೋರಗಾಃ || ಅಭಿಪ್ರಯಾತಸ್ಯ ವನಂ ಚಿರಾಯ ತೇ ಹಿತಾನಿ ಕಾಂಕ್ಷಂತು ದಿಶಶ್ಚ ರಾಘವ ||೪೫|| ಇತೀವ ಚಾಶ್ರು ಪ್ರತಿಪೂರ್ಣ ಲೋಚನಾ ಸಮಾಪ್ಯಚ ಸ್ವಸ್ತ್ಯಯನಂ ಯಥಾವಿಧಿ || ಪ್ರದ ಕ್ಷಿಣಂ ಚೈವ ಚಕಾರ ರಾಘವಂ ಪುನಃ ಪುನಶ್ಚಾಪಿ ನಿಪೀಡ್ಯ ಸಸ್ವಜೇ || ೪೬ ||

ತಥಾಚ ದೇವ್ಯಾ ಸಕೃತ ಪ್ರದಕ್ಷಿಣೋ
ನಿಪೀಡ್ಯ ಮಾತುಶ್ಚರಣೌ ಪುನಃ ಪುನಃ ||

ರವು, ಕಾಮಾ೯ - ಕೋರಿಕೆಗಳನ್ನು, ಸಂವರ್ಧ - ಸಂಪಾದಿಸಿಕೊಡು, ಭೋಃ - ಎಲೈ ಶ್ರೀರಾಮನೆ, ಯಾಹಿ - ಹೋಗಿಬಾ. || ೪೪ || ಮಯಾ - ನನ್ನಿಂದ, ಅರ್ಚಿತಾಃ-ಪೂಜಿಸಲ್ಪಟ್ಟ, ಶಿವಾದಯಃ, ಶಿವ - ಪರಮೇಶ್ವರನೇ, ಆದಯಃ - ಮೊದಲಾದ, ದೇವಗಣಾಃ - ದೇವತಾಸಮೂಹಗಳೂ, ಭೂತ ಮಹಾಸುರೋರಗಾಃ - ಭೂತಗಳು ದೈತ್ಯರು ಸರ್ಪಗಳೂ, ದಿಶಶ್ಚ - ದಿಕ್ಕುಗಳೂ, ವನಂ - ವನವನ್ನು ಕುರಿತು, ಚಿರಾಯ - ಬಹುಕಾಲ, ಅಭಿಪ್ರಯಾತಸ್ಯ - ಪ್ರಯಾಣಮಾಡಿದ, ತೇ - ನಿನಗೆ, ಹಿತಾನಿ- ಹಿತವನ್ನು, ಕಾಂಕ್ಷಂತು - ಕೋರಲಿ. || ೪೫ || ಇತೀವಚ - ಈಪರಿಯಾಗಿ, ಅಶ್ರುಪೂರ್ಣಲೋಚನಾ, ಅಶ್ರು - ಕಣ್ಣೀರಿನಿಂದ, ಪ್ರತಿಪೂರ್ಣ - ತುಂಬಿದ, ಲೋಚನಾ-ನೇತ್ರಗಳುಳ್ಳ ಆ ಕೌಸಲ್ಯಾ ದೇವಿಯು, ಸ್ವಸ್ತ್ಯಯನಂ - ಕ್ಷೇಮಕರವಾದ ಆಶೀರ್ವಾದವನ್ನು, ಯಥಾವಿಧಿ - ಶಾಸ್ತ್ರೋಕ್ತವಾಗಿ, ಸಮಾಪ್ಯ - ಪೂರ್ತಿಗೊಳಿಸಿ, ರಾಘವಂ - ಶ್ರೀರಾಮನನ್ನು ಕುರಿತು, ಪ್ರದಕ್ಷಿಣಂಚೈವ - ಪ್ರದಕ್ಷಿಣ ವನ್ನೂ, ಚಕಾರ - ಮಾಡಿದಳು, ಪುನಶ್ಚಾಪಿ - ಬಾರಿಬಾರಿಗೂ, ನಿಪೀಡ್ಯ - ಹಿಡಿದುಕೊಂಡು, ಸಸ್ವಜೇ - ಅಪ್ಪಿಕೊಂಡಳು. || ೪೬ || ಸ್ವಯಾ - ತನ್ನ ಸಂಬಂಧವಾದ, ಶ್ರಿಯಾ - ಸಂಪತ್ತಿ ನಿಂದ, ಪ್ರಜ್ವಲಿತಃ - ದೇದಿಪ್ಯಮಾನನಾದ, ಮಹಾಯಶಾಃ - ಮಹಾ ಕೀರ್ತಿವಂತನಾದ, ಸಃ - ಪ್ರಸಿದ್ಧನಾದ, ಸ ರಾಘವಃ - ಆ ಶ್ರೀರಾಮನು, ತಥಾ - ಆಪರಿಯಾಗಿ, ದೇವ್ಯಾ - ಕೌಸಲ್ಯಾದೇವಿ

ವಚನವನ್ನು ಪರಿಪಾಲಿಸಿ, ವನವಾಸದಿಂದ ಹಿಂತಿರುಗಿ ಬಂದು, ಸಿಂಹಾಸನದಲ್ಲಿ ಕುಳಿತಿರುವ ನಿನ್ನನ್ನು ಪುನಃ ನೋಡುವೆನು. ಮಗನೆ! ಈಗಳಿಲ್ಲಿಂದ ತೆರಳಿ, ವನವಾಸವಂಗೈದು, ಮರಳಿ ಬಂದು ಮಂಗಳಾರ್ಥವೂ, ರಾಜಯೋಗ್ಯವೂ ಆದ ಶುಭ ವಸ್ತ್ರಗಳನ್ನುಟ್ಟು, ಸೀತಾದೇವಿಗೂ, ನನಗೂ ನಿರಂತರವೂವಸ್ತ್ರಾಭರಣಗಳನ್ನು ಸಂಪಾದಿಸಿ ಕೊಡುವವನಾಗು. ಎಲೈ ರಘು ವಂಶೋತ್ಪನ್ನನೆ! ನನ್ನಿಂದ ಪೂಜಿತರಾದ ತ್ರ್ಯಂಬಕನಾದಿಯಾದ ದೇವ ಸಮೂಹವೂ, ಮಹ ರ್ಷಿಗಳೂ, ಭೂತಗಳೂ, ಮಹಾ ರಾಕ್ಷಸರೂ, ನಾಗದೇವತೆಗಳೂ ವನವನ್ನು ಕುರಿತು ತೆರಳಿ ಬಹು ಕಾಲ ಪ್ರಯಾಣ ಮಾಡುವ ನಿನಗೆ ಕ್ಷೇಮವನ್ನೀಯಲಿ" || ೪೫ || ಎಂಬೀ ಪ್ರಕಾರ ವಾಗಿ ರಾಮ ಜನನಿಯಾದ ಆ ಕೌಸಲ್ಯೆಯು ಆಶೀರ್ವಾದವನ್ನು ಮಾಡಿ, ಕಂಬನಿಗಳಿಂದ ತುಂಬಿದ ಕಂಗಳುಳ್ಳವಳಾಗಿ, ಶ್ರೀರಾಮನಿಗೆ ಮಂಗಳವುಂಟಾಗಲೋಸುಗ ದೇವತೆಗಳಿಗೆ ಪ್ರದಕ್ಷಿಣ ಪೂರ್ವಕ ನಮಸ್ಕಾರವಂಗೈದು, ನಿಜ ಕುವರನನ್ನು, ಬಾರಿಬಾರಿಗೂ, ಪಿಡಿದಪ್ಪಿ

ಜಗಾಮ ಸೀತಾ ನಿಲಯಂ ಮಹಾಯಶಾ
ಸ್ಸರಾಘವಃ ಪ್ರಜ್ವಲಿತ ಸ್ಸ್ವಯಾ ಶ್ರಿಯಾ ‖ ೪೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚವಿಂಶಸ್ಸರ್ಗಃ.

ಯಿಂದ, ಕೃತಪ್ರದಕ್ಷಿಣಃ, ಕೃತ - ಮಾಡಲ್ಪಟ್ಟ, ಪ್ರದಕ್ಷಿಣಃ - ರಕ್ಷಾರ್ಥವಾದ ಪ್ರದಕ್ಷಿಣವುಳ್ಳವನಾಗಿ, ಮಾತುಃ - ತಾಯಿಯ, ಚರಣೌ - ಪಾದಗಳನ್ನು, ಪುನಃಪುನಃ - ಬಾರಿಬಾರಿಗೂ, ನಿಪೀಡ್ಯ - ಹಿಡಿದು ನಮಸ್ಕರಿಸಿ, ಸೀತಾನಿಲಯಂ - ಸೀತಾದೇವಿಯ ಮನೆಯನ್ನು ಕುರಿತು, ಜಗಾಮ - ತೆರಳಿದನು. ‖ ೪೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ. ಪಂಚವಿಂಶಸ್ಸರ್ಗಃ.

ಕೊಂಡವಳಾದಳು. ಇಂತು ತಾಯಿಯಿಂದ ರಕ್ಷೆಯಿಡಲ್ಪಟ್ಟ ಶ್ರೀರಾಮನು ಆಕೆಯ ಪಾದಗಳಿಗೆ ಬಾರಿಬಾರಿಗೂ ನಮಸ್ಕಾರವಂಗೈದು ನಿಜ ದೇಹ ಕಾಂತಿಯಿಂದ ರಾರಾಜಿಸುತ್ತ, ಸೀತಾದೇವಿಯ ಅರಮನೆಯನ್ನು ಕುರಿತು ತೆರಳಿದವನಾದನು. ‖ ೪೭ ‖

ಇಂತಿದು ಕೌಸಲ್ಯಾಕೃತ ಶ್ರೀರಾಮಾಶೀರ್ವಾದಕರಣ ವೃತ್ತಾಂತವೆಂಬ
ಇಪ್ಪತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಡ್ವಿಂಶಸ್ಸರ್ಗಃ.

ಅಭಿವಾದ್ಯಚ ಕೌಸಲ್ಯಾಂ ರಾಮ ಸ್ಸಂಪ್ರಸ್ಥಿತೋ ವನಂ ॥ ಕೃತ ಸ್ವಸ್ತ್ಯಯನೋ ಮಾತ್ರಾ ಧರ್ಮಿಷ್ಠೇ ವರ್ತ್ಮನಿ ಸ್ಥಿತಃ ॥ ೧ ॥ ವಿರಾಜಯನ್ ರಾಜಸುತೋ ರಾಜಮಾರ್ಗಂ ನರೈರ್ವೃತಂ ॥ ಹೃದಯಾನ್ಯಾ ಮಮಂಥೇವ ಜನಸ್ಯ ಗುಣವತ್ತಯಾ ॥ ೨ ॥ ವೈದೇಹೀ ಚಾಪಿ ತತ್ಸರ್ವಂ ನಶುಶ್ರಾವ ತಪಸ್ವಿನೀ॥ ತದೇವ ಹೃದಿ ತಸ್ಯಾಶ್ಚ ಯೌವರಾಜ್ಯಾ ಭಿಷೇಚನಂ ॥ ೩ ॥ ದೇವ ಕಾರ್ಯಂ ಸ್ವಯಂ ಕೃತ್ವಾ ಕೃತಜ್ಞಾ ಹೃಷ್ಟ ಚೇತನಾ ॥ ಅಭಿಜ್ಞಾ ರಾಜಧರ್ಮಾಣಾಂ

ರಾಮಃ - ಶ್ರೀರಾಮನು, ವನಂ - ವನವನ್ನು ಕುರಿತು, ಸಂಪ್ರಸ್ಥಿತಃ - ಪ್ರಯಾಣಮಾಡಿ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ಮಾತ್ರಾ - ತಾಯಿಯಿಂದ, ಕೃತಸ್ವಸ್ತ್ಯಯನಃ, ಕೃತ - ಮಾಡಲ್ಪಟ್ಟ, ಸ್ವಸ್ತ್ಯಯನಃ - ಆಶೀರ್ವಾದಗಳುಳ್ಳವನಾಗಿ, ಧರ್ಮಿಷ್ಠೇ - ಧರ್ಮಕರವಾದ, ವರ್ತ್ಮನಿ - ಮಾರ್ಗದಲ್ಲಿ, ಸ್ಥಿತಃ - ಇರುವವನಾಗಿ, ನರೈಃ - ಮನುಷ್ಯರಿಂದ, ವೃತಂ - ಸುತ್ತಿವರೆಯಲ್ಪಟ್ಟ, ರಾಜಮಾರ್ಗಂ - ರಾಜವೀಧಿಯನ್ನು, ವಿರಾಜಯನ್ - ಹೊಳೆಯುತ್ತಿರುವಂತೆ ಮಾಡುತ್ತ, ರಾಜಸುತಃ - ರಾಜಪುತ್ರನಾದಕಾರಣ, ಗುಣವತ್ತಯಾಚ - (ಗೋ) ಸತ್ಯವಾದಿತ್ವ ಪ್ರಿಯವಾದಿತ್ವಾದಿಗುಣಗಳುಳ್ಳದರಿಂದ, ಜನಸ್ಯ-ಜನರ, ಹೃದಯಾನಿ - ಮನಗಳನ್ನು, ಆಮಮಂಥೇವ - ಆಕುಲವಾಗಿ ಮಾಡಿದಂತೆ ಇದ್ದನು. ॥೨॥ ತಪಸ್ವಿನೀ-(ಗೋ) ರಾಮಾಭಿಷೇಕಾರ್ಥವಾಗಿ ವ್ರತೋಪವಾಸದಲ್ಲಿ ಧರ್ಮಿಷ್ಠಳಾದ, ವೈದೇಹೀಚಾಪಿ - ಸೀತಾದೇವಿಯೂ, ಸರ್ವಂ - ಸಮಸ್ತವಾದ, ತತ್ - ಆ ಪಟ್ಟಾಭಿಷೇಕ ವಿಘ್ನಪ್ರಸ್ತಾಪವನ್ನು, ನಶುಶ್ರಾವ - ಕೇಳಲೇ ಇಲ್ಲ, ತಸ್ಯಾಃ - ಆ ಸೀತಾದೇವಿಯ, ಹೃದಿ - ಮನದಲ್ಲಿ, ತತ್ ಯೌವರಾಜ್ಯಾಭಿಷೇಚನಮೇವ - ಆ ಯೌವರಾಜ್ಯ ಪಟ್ಟಾಭಿಷೇಕವೇ, ಅಸ್ತಿ - ಇತ್ತು. ॥ ೩ ॥ ಕೃತಜ್ಞಾ - (ಮ) ಪಟ್ಟದರಾಣಿಯರಿಂದ ಮಾಡುವ ರಾಜೋಪಚಾರಗಳನ್ನು ತಿಳಿದಿರುವ, ರಾಜಧರ್ಮಾಣಾಂ - ರಾಜ ಧರ್ಮಗಳನ್ನು, ಅಭಿಜ್ಞಾ - ತಿಳಿದಿ

ರಾಜಪುತ್ರನಾದ ಶ್ರೀರಾಮನು ಕೌಸಲ್ಯಾದೇವಿಯನ್ನು ನಮಸ್ಕರಿಸಿ, ಆಕೆಯಿಂದ ಆಶೀರ್ವಾದವನ್ನು ಪಡೆದು, ಧರ್ಮಮಾರ್ಗದಲ್ಲಿರುವನಾಗಿ, ಜನಗಳಿಂದ ನಿಬಿಡಿತವಾದ ರಾಜ ಬೀದಿಯನ್ನು ಹೊಳೆವಂತೆ ಮಾಡುತ್ತ, ವನವನ್ನು ಕುರಿತು ಪ್ರಯಾಣ ಮಾಡಿ ಜನಗಳ ಹೃದಯವನ್ನು ವ್ಯಾಕುಲವನ್ನಾಗಿ ಮಾಡುವಂತಿದ್ದನು. ॥ ೨ ॥ ರಾಮಾಭಿಷೇಕಾರ್ಥವಾಗಿ ಉಪವಾಸಾದಿ ನಿಯಮವಿಶಿಷ್ಟಳಾದ ಸೀತಾದೇವಿಯು ಆ ಅಭಿಷೇಕ ವಿಘಾತವನ್ನು ಕೇಳಲಿಲ್ಲ. ಆದುದರಿಂದ ಆಕೆಯ ಮನದಲ್ಲಿ ಆ ಯೌವರಾಜ್ಯಪಟ್ಟಾಭಿಷೇಕವಾಗುವದೆಂದೇ ನೆಲೆಗೊಂಡಿದ್ದಿತು. ॥ ೩ ॥ ರಾಜಧರ್ಮಗಳನ್ನರಿತಿರುವ ಆಕೆಯು ದೇವತಾ ಪೂಜೆಯನ್ನು ತಾನೇ ಮಾಡಿ ಪಟ್ಟದರಸಿಯರಿಂದ ಮಾಡಲ್ಪಡುವ ರಾಜೋಪ

ರಾಜಪುತ್ರಂ ಪ್ರತೀಕ್ಷತೇ ॥ ೪ ॥ ಪ್ರವಿವೇಶಾಥ ರಾಮಸ್ತು ಸ್ವಂ ವೇಶ್ಮ ಸುವಿಭೂಷಿತಂ ॥ ಪ್ರಹೃಷ್ಟ ಜನಸಂಪೂರ್ಣಂ ಹ್ರಿಯಾ ಕಿಂಚಿ ದವಾಙ್ಮುಖಃ ॥ ೫ ॥ ಅಥ ಸೀತಾ ಸಮುತ್ಪತ್ಯ ವೇಪಮಾನಾ ಚ ತಂ ಪತಿಂ ॥ ಅಪಶ್ಯ ಚ್ಛೋಕಸಂತಪ್ತಂ ಚಿಂತಾ ವ್ಯಾಕುಲಿತೇಂದ್ರಿಯಂ ॥ ೬ ॥ ತಾಂ ದೃಷ್ಟ್ವಾ ಸಹಿಧರ್ಮಾತ್ಮಾ ನಶಶಾಕ ಮನೋಗತಂ ॥ ತಂ ಶೋಕಂ ರಾಘವಸ್ಸೋಢುಂ ತತೋ ವಿಕೃತತಾಂ ಗತಃ ॥ ೭ ॥ ವಿವರ್ಣ ವದನಂ ದೃಷ್ಟ್ವಾ ತಂ ಪ್ರಸ್ವಿನ್ನ ಮಮರ್ಷಣಂ ॥ ಆಹ ದುಃಖಾಭಿ ಸಂತಪ್ತಾ ಕಿಮಿದಾನೀ ಮಿದಂ ಪ್ರಭೋ॥೮॥

ಮಾಡಿ, ರಾಜಪುತ್ರಂ - ಶ್ರೀರಾಮನನ್ನು, ಪ್ರತೀಕ್ಷತೇ - ಇದುರು ನೋಡುತ್ತಿದ್ದಳು. ॥ ೪ ॥ ಅಥ - ಬಳಿಕ, ರಾಮಸ್ತು - ಶ್ರೀರಾಮನು, ಹ್ರಿಯಾ - ಲಜ್ಜೆಯಿಂದ, ಕಿಂಚಿತ್ - ಸ್ವಲ್ಪ, ಅವಾಙ್ಮುಖಃ - ತಗ್ಗಿದ ಮುಖವುಳ್ಳವನಾಗಿ, ಪ್ರಹೃಷ್ಟಜನಸಂಪೂರ್ಣಂ, ಪ್ರಹೃಷ್ಟ - ಸಂತೋಷಗೊಂಡ, ಜನ - ಜನರಿಂದ, ಸಂಪೂರ್ಣಂ - ತುಂಬಿರುವ, ಸುವಿಭೂಷಿತಂ - ಚೆನ್ನಾಗಿ ಅಲಂಕರಿಸಲ್ಪಟ್ಟ, ಸ್ವಂ - ತನ್ನ, ವೇಶ್ಮ - ಮನೆಯನ್ನು, ಪ್ರವಿವೇಶ - ಹೊಕ್ಕನು. ॥ ೫ ॥ ಅಥ - ಬಳಿಕ, ಸೀತಾ- ಸೀತಾದೇವಿಯು, ಸಮುತ್ಪತ್ಯ - ಎದ್ದು, ಚಿಂತಾವ್ಯಾಕುಲಿತೇಂದ್ರಿಯಂ - ಚಿಂತೆಯಿಂದ ಕದಡಿದ ಮನವುಳ್ಳ, ಶೋಕಸಂತಪ್ತಂ - ವ್ಯಸನದಿಂದ ಪರಿತಪ್ತನಾದ, ತಂಪತಿಂ-ಆ ಪತಿಯನ್ನು, ಅಪಶ್ಯತ್- ನೋಡಿ, ವೇಪಮಾನಾಚ - ನಡುಗುತ್ತಿದ್ದಳು. ॥ ೬ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಸರಾಘವಃ - ಆ ಶ್ರೀರಾಮನು, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಮನೋಗತಂ - ಮನಸ್ಸಿನಲ್ಲಿರುವ, ತಂಶೋಕಂ - ಆ ವ್ಯಸನವನ್ನು, ಸೋಢುಂ - ಸಹಿಸುವದಕ್ಕೆ, ನಶಶಾಕ - ಸಮರ್ಥನಾಗದೇಹೋದನು, ತತಃ - ಬಳಿಕ, ವಿಕೃತತಾಂ - ವಿಸ್ತರಿಸಲ್ಪಟ್ಟ ದುಃಖವನ್ನು, ಗತಃ - ಹೊಂದಿದನು. ॥ ೭ ॥ ವಿವರ್ಣವದನಂ, ವಿವರ್ಣ - ಕಾಂತಿಹೀನವಾದ, ವದನಂ - ಮುಖವುಳ್ಳ, ಪ್ರಸ್ವಿನ್ನಂ - ಸ್ವೇದಯುಕ್ತನಾದ, ಅಮರ್ಷಣಂ - ಸಂಜಾತ ದುಃಖವುಳ್ಳ, ತಂ-ಆ ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಹೇ ಪ್ರಭೋ - ಎಲೈ ಸ್ವಾಮಿಯೇ, ಇದಾನೀಂ - ಈ ಸಮಯದಲ್ಲಿ, ಇದಂ - ಈ ದುಃಖವು, ಕಿಂ - ಏನು, ಇತಿ - ಇಂತೆಂದು, ದುಃಖಾಭಿಸಂತಪ್ತಾ - ದುಃಖದಿಂದ ಪರಿತಪ್ತಳಾಗಿ, ಆಹ - ಹೇಳಿದಳು. ॥ ೮ ॥ ಹೇ ರಾಘವ - ಎಲೈ ಶ್ರೀರಾಮನೆ, ಬಾರ್ಹ

ಚಾರಗಳನ್ನು ತಿಳಿದಿರುವಳಾದ ಕಾರಣ ಮಹಾ ಸಂತೋಷಚಿತ್ತಳಾಗಿ ರಾಜಪುತ್ರನನ್ನು ನಿರೀಕ್ಷಿಸುತ್ತಿದ್ದಳು. ॥ ೪ ॥ ಬಳಿಕ ಶ್ರೀರಾಮನು, ಲಜ್ಜೆಯಿಂದ ಸ್ವಲ್ಪವಾಗಿ ತಲೆ ಬಗ್ಗಿಸಿಕೊಂಡ ಸಂತುಷ್ಟರಾದ ಜನಗಳಿಂದ ತುಂಬಿರುವದೂ, ಚನ್ನಾಗಿ ಅಲಂಕರಿಸಲ್ಪಟ್ಟದೂ ಆದ ತನ್ನ ಮಂದಿರವನ್ನು ಪ್ರವೇಶಿಸಿದನು. ॥ ೫ ॥ ಅನಂತರ ಸೀತಾದೇವಿಯು ಎದ್ದು ನಿಂತುಕೊಂಡು ಶೋಕದಿಂದ ಸಂತಪಿಸುತ್ತ, ಚಿಂತೆಯಿಂದ ಕಲುಷಿತವಾದ ಇಂದ್ರಿಯಗಳುಳ್ಳ ಪತಿಯನ್ನು ಕಂಡು ನಡುಗುತ್ತಿದ್ದಳು. ॥ ೬ ॥ ಧರ್ಮಾತ್ಮನಾದ ಆ ಶ್ರೀರಾಮನು ಆ ದೇವಿಯನ್ನು ನೋಡಿ ಮನೋಭಿಪ್ರಾಯವನ್ನು ಹೇಳಲಿಲ್ಲ. ಬಳಿಕ ಆ ವ್ಯಸನವನ್ನು ತಾಳದೆ ವಿಕಾರವನ್ನು ಹೊಂದಿದನು. ॥ ೭ ॥ ಆಗ ಸೀತಾದೇವಿಯು ಕಂಗೆಟ್ಟಮುಖವುಳ್ಳ ಆ ಶ್ರೀರಾಮನನ್ನು ಕಂಡು ದುಃಖಿತಳಾಗಿ

ಅದ್ಯ ಬಾರ್ಹಸ್ಪತಶ್ಶ್ರೀಮಾನ್ ಯುಕ್ತಃ ಪುಷ್ಯೋನುರಾಘವ ॥ ಪ್ರೋಚ್ಯತೇ ಬ್ರಾಹ್ಮಣೈಃ ಪ್ರಾಜ್ಞೈಃ ಕೇನತ್ವಮಸಿ ದುರ್ಮನಾಃ ॥ ೯ ॥ ನತೇ ಶತಶಲಾಕೇನ ಜಲಫೇನ ನಿಭೇನಚ ॥ ಆವೃತಂ ವದನಂ ವಲ್ಗು ಛತ್ರೇಣಾಪಿ ವಿರಾಜತೇ ॥ ೧೦ ॥ ವ್ಯಜನಾಭ್ಯಾಂ ಚ ಮುಖ್ಯಾಭ್ಯಾಂ ಶತಪತ್ರ ನಿಭೇಕ್ಷಣಂ ॥ ಚಂದ್ರ ಹಂಸಪ್ರಕಾಶಾಭ್ಯಾಂ ವೀಜ್ಯತೇ ನ ತವಾನನಂ ॥೧೧॥ ವಾಗ್ಮಿನೋ ವಂದಿನ ಶ್ಚಾಪಿ ಪ್ರಹೃಷ್ಟಾ ಸ್ತ್ವಾಂ ನರರ್ಷಭ ॥ ಸ್ತುವಂತೋ ನಾತ್ರ ದೃಶ್ಯಂತೇ ಮಂಗಳೈ ಸ್ಸೂತ ಮಾಗಧಾಃ ॥ ೧೨ ॥ ನತೇಕ್ಷೌದ್ರಂ ಚ ದಧಿಚ ಬ್ರಾಹ್ಮಣಾ

ರುವ ಆ ಸೀತಾದೇವಿಯು, ದೇವಕಾರ್ಯಂ-ದೇವತಾ ಪೂಜೆಯನ್ನು, ಸ್ವಯಂ-ತಾನಾಗಿಯೇ, ಕೃತ್ವಾ- ಸ್ಪತಃ - ಬೃಹಸ್ಪತಿದೇವತಾಕವಾದ, ಪುಷ್ಯಃ - ಪುಷ್ಯನಕ್ಷತ್ರವು, ಪ್ರಾಜ್ಞೈಃ - ತಿಳಿದವರಾದ, ಬ್ರಾಹ್ಮಣೈಃ - ಬ್ರಾಹ್ಮಣರಿಂದ, ಶ್ರೀಮಾನ್ - ಸಂಪತ್ಕರವಾದುದಾಗಿ, ಅದ್ಯ - ಈಗ, ಉಕ್ತಃ - ಹೇಳಲ್ಪಟ್ಟದೆಯೆಂದು, ಪ್ರೋಚ್ಯತೇ - ಹೇಳಲ್ಪಡುತ್ತಿದೆ, ತ್ವಂ - ನೀನು, ಕೇನ - ಯಾವ ಕಾರಣ, ದುರ್ಮನಾಃ - ದುಃಖಿತವಾದ ಮನಸ್ಸುಳ್ಳವನು, ಅಸಿ - ಆಗಿರುವೆ. ॥ ೯ ॥ ತೇ - ನಿನ್ನ, ವಲ್ಗು - ಮನೋಹರವಾದ, ವದನಂ - ಮುಖವು, ಶತಶಲಾಕೇನ-ನೂರು ಶಲಾಕೆಗಳುಳ್ಳ, ಜಲಫೇನ ನಿಭೇನಚ, ಜಲ - ನೀರಿನಲ್ಲಿಯ, ಫೇನ - ನೊರೆಗೆ, ನಿಭೇನ - ಸಮಾನವಾದ, ಛತ್ರೇಣಾಪಿ - ಛತ್ರ ದಿಂದಲೂ, ಆವೃತಂ - ಸುತ್ತಲ್ಪಟ್ಟುದಾಗಿ, ನವಿರಾಜತೇಪಿ - ಏಕೆ ಪ್ರಕಾಶಮಾನವಾಗಲಿಲ್ಲ. ॥೧೦॥ ಶತಪತ್ರನಿಭೇಕ್ಷಣಂ - ಕಮಲಗಳಿಗೆ ಸಮಾನವಾದ ನೇತ್ರಗಳುಳ್ಳ, ತವ - ನಿನ್ನ, ಆನನಂ - ಮುಖವು, ಚಂದ್ರಹಂಸಪ್ರಕಾಶಾಭ್ಯಾಂ, ಚಂದ್ರ - ಚಂದ್ರನ, ಹಂಸ - ಹಂಸಪಕ್ಷಿಯು, ಪ್ರಕಾಶಾಭ್ಯಾಂ - ಕಾಂತಿಯುತೆ ಕಾಂತಿಯುಳ್ಳ, ಮುಖ್ಯಾಭ್ಯಾಂ-ರಾಜರಿಗೆ ಅವಶ್ಯಕವಾಗಿರುವ, ವ್ಯಜನಾಭ್ಯಾಂ- ಚಾಮರಗಳಿಂದ, ನವೀಜ್ಯತೇಪಿ - ಏಕೆ ಬೀಸಲ್ಪಡಲಿಲ್ಲ. ॥ ೧೧ ॥ ಹೇ ನರರ್ಷಭ - ಎಲೈ ನರ ಶ್ರೇಷ್ಠನೆ, ವಾಗ್ಮಿನಃ- ವಕ್ತೃಗಳಾದ, ಪ್ರಹೃಷ್ಟಾಃ - ಸಂತೋಷಗೊಂಡ, ವಂದಿನಃ - ಸ್ತುತಿಪಾಠ ಕರೂ, ಸೂತಮಾಗಧಾಶ್ಚ, ಸೂತ - ಪುರಾಣಕಥೆಗಳನ್ನು ಹೇಳುವವರೂ, ಮಾಗಧಾಶ್ಚ - ವಂಶ ಪರಂಪರೆಯನ್ನು ಸ್ತೋತ್ರಮಾಡುವವರೂ, ಮಂಗಳೈಃ - ಶುಭಕರಗಳಾದ ಸ್ತೋತ್ರಗಳಿಂದ, ತ್ವಾಂ- ನಿನ್ನನ್ನು, ಸ್ತುವಂತಃ - ಸ್ತೋತ್ರಮಾಡುವರಾಗಿ, ಅತ್ರ - ಈ ಅಂತಃಪುರದಲ್ಲಿ, ನದೃಶ್ಯಂತೇಪಿ - ಏಕೆ ಕಾಣಿಸಲಿಲ್ಲ. ॥ ೧೨ ॥ ವೇದಪಾರಗಾಃ - ವೇದಪಾರಂಗತರಾದ, ಬ್ರಾಹ್ಮಣಾಃ - ಬ್ರಾಹ್ಮ

“ಎಲೈ ಸ್ವಾಮಿಯೇ ! ಈ ಸಮಯದಲ್ಲಿ ಚಿಂತಿಸುತ್ತಿರುವೆಯೇಕೆ ? ಈಗ ಬೃಹಸ್ಪತಿ ದೇವತಾಕವಾದ ಪುಷ್ಯನಕ್ಷತ್ರವು ಪಟ್ಟಾಭಿಷೇಕಕ್ಕೆ ಯುಕ್ತವಾಗಿರುವದೆಂದು ಬ್ರಾಹ್ಮಣೋತ್ತಮರಿಂದ ಹೇಳಲ್ಪಟ್ಟಿರುವುದಲ್ಲವೆ ? ನೀನು ಯಾವ ಹೇತುವಿನಿಂದ ಮನಗೆಟ್ಟವನಾಗಿರುವೆ ? ನೂರು ಸಲಾಕುಗಳುಳ್ಳುದಾಗಿಯೂ, ನೀರಿನ ನೊರೆಯಂತೆ ಶುಭ್ರವರ್ಣವುಳ್ಳುದಾಗಿಯೂ ಇರುವ, ಶ್ವೇತಛತ್ರದಿಂದ ನಿನ್ನ ಮುಖವು ಹೊಳೆಯುವದಿಲ್ಲ, ಇದಲ್ಲದೆ ಉತ್ತಮವಾದ ಚಂದ್ರನಿಗೂ, ಹಂಸಪಕ್ಷಿಗೂ ಸಮಾನವಾದ ಚಾಮರಗಳಿಂದ, ಕಮಲದಂತೆ ಕಂಗಳುಳ್ಳ ನಿನ್ನ ಮುಖವು, ಬೀಸಲ್ಪಡುವದಿಲ್ಲವೇಕೆ ? ಎಲೈ ಪುರುಷ ಶ್ರೇಷ್ಠನೇ ! ವಾಚಾಳಿಗಳಾದ ಸ್ತುತಿಪಾಠಕರೂ, ಪುರಾಣೇತಿಹಾಸಗಳನ್ನು ಹೇಳುವ

ವೇದಪಾರಗಾಃ ॥ ಮೂರ್ಧ್ನಿ ಮೂರ್ಧಾಭಿಷಿಕ್ತಸ್ಯ ದದತಿಸ್ಮ ವಿಧಾನತಃ ॥೧೩॥ ನತ್ವಾಂ ಪ್ರಕೃತಯ ಸ್ಸರ್ವಾ ಶ್ಶ್ರೇಣೀ ಮುಖ್ಯಾಶ್ಚ ಭೂಷಿತಾಃ ॥ ಅನುವ್ರಜಿತುಮಿಚ್ಛಂತಿ ಪೌರ ಜಾನಪದಾಸ್ತಥಾ ॥ ೧೪ ॥ ಚತುರ್ಭಿ ರ್ವೇಗಸಂಪನ್ನೈ ರ್ಹಯೈಃ ಕಾಂಚನಭೂಷಿತೈಃ ॥ ಮುಖ್ಯಃ ಪುಷ್ಯರಥೋ ಯುಕ್ತಃ ಕಿನ್ನಗಚ್ಛತಿ ತೇಗ್ರತಃ ॥ ೧೫ ॥ ನಹಸ್ತೀಚಾಗ್ರತ ಶ್ಶ್ರೀಮಾಂಸ್ತವ ಲಕ್ಷಣಪೂಜಿತಃ ॥ ಪ್ರಯಾಣೇ ಲಕ್ಷ್ಯತೇ ಭೂಯಃ ಕೃಷ್ಣಮೇಘ ಗಿರಿಪ್ರಭಃ ॥ ೧೬ ॥ ನಚ ಕಾಂಚನ ಚಿತ್ರಂತೇ ಪಶ್ಯಾಮಿ ಪ್ರಿಯದರ್ಶನ ॥ ಭದ್ರಾಸನಂ ಪುರಸ್ಕೃತ್ಯ ಯಾಂತಂ ವೀರಪುರಸ್ಸರಂ ॥ ೧೭ ॥ ಅಭಿಷೇಕೋ ಯಥಾ ಸಜ್ಜಃ ಕಿಮಿ

ಕೊಡಿಸಲಿಲ್ಲವೇಕೆ. ॥ ೧೩ ॥ ಸರ್ವಾಃ - ಸಮಸ್ತರಾದ, ಪ್ರಕೃತಯಃ - ಮಂತ್ರಿಗಳೂ, ಶ್ರೇಣೀ ಮುಖ್ಯಾಶ್ಚ - ಬೀದಿಬೀದಿಗಳಲ್ಲಿ ಮುಖ್ಯರಾದ, ಪೌರಜಾನಪದಾಃ - ಪಟ್ಟಣಸ್ಥರೂ ದೇಶವಾಸಿಗಳೂ, ತ್ವಾಂ - ನಿನ್ನನ್ನು, ಅನುವ್ರಜಿತುಂ - ಅನುಸರಿಸಿ ಬರಲು, ನೇಚ್ಛಂತಿ - ಇಚ್ಛಿಸುವದಿಲ್ಲವೇಕೆ. ॥ ೧೪ ॥ ಕಾಂಚನಭೂಷಿತೈಃ, ಕಾಂಚನ - ಚಿನ್ನದಮುಖರುಜ್ಜುಗಳಿಂದ, ಭೂಷಿತೈಃ - ಅಲಂಕೃತಗಳಾದ, ವೇಗಸಂಪನ್ನೈಃ - ವೇಗದಿಂದ ಕೂಡಿದ, ಚತುರ್ಭಿಃ - ನಾಲ್ಕಾದ, ಅಶ್ವೈಃ - ಕುದುರೆಗಳಿಂದ, ಯುಕ್ತಃ - ಕೂಡಿರುವ, ಮುಖ್ಯಃ - ಮುಖ್ಯವಾದ, ಪುಷ್ಯರಥಃ - ಗ್ರಾಮದಲ್ಲಿ ಸಂಚಾರ ಮಾಡುವ ರಥವು, ತೇ - ನಿನ್ನ, ಅಗ್ರತಃ - ಮುಂಗಡೆ, ಕಿಂನಗಚ್ಛತಿ - ಏಕೆ ಬರಲಿಲ್ಲ. ॥ ೧೫ ॥ ಹೇ ವೀರ - ಎಲೈ ಶೂರನೇ, ಕೃಷ್ಣಮೇಘಗಿರಿಪ್ರಭಃ, ಕೃಷ್ಣ - ಕಪ್ಪಾಗಿರುವ, ಮೇಘ - ಮೇಘದ, ಗಿರಿ - ಬೆಟ್ಟದಂತೆ, ಪ್ರಭಃ - ಹೊಳೆಯುತ್ತಿರುವ, ಲಕ್ಷಣಪೂಜಿತಃ - ಪಟ್ಟ ಲಕ್ಷಣಗಳಿಂದ ಪೂಜಿಸಲ್ಪಟ್ಟ, ಶ್ರೀವರ್ಾ - ಸಂಪದ್ಯುಕ್ತವಾದ, ಹಸ್ತೀಚ - ಆನೆಯೂ, ತವ - ನಿನ್ನ, ಪ್ರಯಾಣೇ - ಪಯಣ ಕಾಲದಲ್ಲಿ, ಅಗ್ರತಃ - ಮುಂದುಗಡೆ, ನಲಕ್ಷ್ಯತೇಚ - ಏತಕ್ಕೆ ಕಾಣುವುದಿಲ್ಲ. ॥ ೧೬ ॥ ಹೇ ಪ್ರಿಯದರ್ಶನ - ಎಲೈ ಜನರಿಗೆ ಆನಂದಕರವಾದ ನೋಟವುಳ್ಳವನೆ, ಕಾಂಚನಚಿತ್ರಂ, ಕಾಂಚನ- ಚಿನ್ನದ ಮಯವಾದ, ಚಿತ್ರಂ - ನಾನಾ ಬಣ್ಣಗಳುಳ್ಳ, ಭದ್ರಾಸನಂ - ಭದ್ರಾಸನವನ್ನು, ವೀರಪುರಸ್ಕೃತಂ, ವೀರ - ವೀರ ಪುರುಷರಿಂದ, ಪುರಸ್ಕೃತಂ - ಧರಿಸಲ್ಪಟ್ಟವನ್ನಾಗಿ, ಪುರಸ್ಕೃತ್ಯ - ಮುಂದೆಮಾಡಿಕೊಂಡು, ತೇ - ನಿನ್ನಿಂದ, ನಯಾತಂಚ - ಏಕೆ ಬರುವಿಕೆಯಾಗಲಿಲ್ಲ. ॥ ೧೭ ॥

ವರೂ, ವಂಶಾವಳಿಯನ್ನು ಹೊಗಳುವರೂ, ನಿನ್ನನ್ನು ಸ್ತುತಿಸುತ್ತ ಈ ಅಂತಃಪುರದಲ್ಲಿ ಏಕೆ ಕಾಣಿಸಲಿಲ್ಲ, ಇದಲ್ಲದೆ ವೇದಪಾರಂಗತರಾದ ಬ್ರಾಹ್ಮಣರು ಪಟ್ಟಾಭಿಷಿಕ್ತನಾದ ನಿನ್ನ ಮಂಡೆಯಲ್ಲಿ ಕ್ಷೌದ್ರದಧಿಗಳಿಂದ ಅಭಿಷೇಕವನ್ನೇಕೆ ಮಾಡಲಿಲ್ಲ, ಹಾಗೆಯೇ ಮಂತ್ರಿಗಳೂ, ಬೀದಿ ಬೀದಿಗಳಲ್ಲಿಯೂ ಮುಖಂಡರಾದ ಪಟ್ಟಣಸ್ಥರೂ, ದೇಶವಾಸಿಗಳೂ, ನಿನ್ನ ಹಿಂದುಗಡೆ ಏತಕ್ಕೋಸುಗ ಬರಲಿಚ್ಛಿಸುವದಿಲ್ಲ ? ಸುವರ್ಣವಿಕಾರವಾದ ಮುಖರಜ್ಜುಗಳಿಂದ ಅಲಂಕರಿಸಲ್ಪಟ್ಟ ಬಲುವೇಗವುಳ್ಳ ನಾಲ್ಕು ಕುದುರೆಗಳನ್ನು ಕಟ್ಟಿದ ಗ್ರಾಮಸಂಚಾರಯೋಗ್ಯವಾದ ರಥವು ನಿನ್ನ ಮುಂದುಗಡೆ ಬರಲಿಲ್ಲವೇಕೆ. ॥ ೧೫ ॥ ಎಲೈ ಶೂರನೇ ! ಕಾಲಮೇಘಕ್ಕೂ, ಪರ್ವತಕ್ಕೂ, ಸಮಾನವಾದ ಪಟ್ಟದಾನೆಯು ನಿನ್ನ ಮುಂಗಡೆ ಏಕೆ ಕಾಣಲಿಲ್ಲ. ॥ ೧೬ ॥ ಎಲೈ ಪ್ರಿಯವಾದ ದರ್ಶನವುಳ್ಳವನೇ ! ಸುವರ್ಣವಿಕಾರವಾದ ಭದ್ರಾಸನವನ್ನು ಪುರುಷರಿಂದ ತೆಗಿಸಿಕೊಂಡು ಏಕೆ ಆಗಮನವಾಗ

ದಾನೀಮಿದಂ ತವ ॥ ಅಪೂರ್ವ ಮುಖವರ್ಣಶ್ಚ ನಪ್ರಹೃಷ್ಟಶ್ಚ ಲಕ್ಷ್ಯತೇ॥೧೮॥ ಇತೀವ ವಿಲಪಂತೀಂ ತಾಂ ಪ್ರೋವಾಚ ರಘುನಂದನಃ ॥ ಸೀತೇ ತತ್ರಭವಾಂಸ್ತಾತಃ ಪ್ರವ್ರಾಜಯತಿ ಮಾಂ ವನಂ ॥ ೧೯ ॥ ಕುಲೇಮಹತಿ ಸಂಭೂತೇ ಧರ್ಮಜ್ಞೇ ಧರ್ಮಚಾರಿಣಿ ॥ ಶೃಣು ಜಾನಕಿ ಯೇನೇದಂ ಕ್ರಮೇಣಾ ಭ್ಯಾಗತಂ ಮಮ ॥ ೨೦ ॥ ರಾಜ್ಞಾ ಸತ್ಯಪ್ರತಿಜ್ಞೇನ ಪಿತ್ರಾ ದಶರಥೇನಚ ॥ ಕೈಕೇಯ್ಯೈ ಮಮ ಮಾತ್ರೇತು ಪುರಾದತ್ತೌ ಮಹಾವರೌ ॥ ೨೧ ॥ ತಯಾದ್ಯ

ಣರು, ಮೂರ್ಧಾಭಿಷಿಕ್ತಸ್ಯ - ಪಟ್ಟಾಭಿಷಿಕ್ತನಾದ, ತೇ - ನಿನ್ನ, ಮೂರ್ಧ್ನಿ ಶಿರಸ್ಸಿನಲ್ಲಿ, ಕ್ಷೌದ್ರಂ- ಜೇನುತುಪ್ಪವನ್ನು, ದಧಿಚ - ಮೊಸರನ್ನು, ವಿಧಾನತಃ - ಶಾಸ್ತ್ರೋಕ್ತವಿಧಿಯಿಂದ, ನದದತಿಸ್ಮ - ಅಭಿಷೇಕಃ - ಪಟ್ಟಾಭಿಷೇಕವು, ಯಥಾ - ಹೇಗೆ, ಸದ್ಯಃ - ಸನ್ನದ್ಧವಾಗಿರುವುದೋ, ತಥಾ - ಹಾಗೆಯೆ, ತವ - ನಿನಗೆ, ಇದಾನೀಂ - ಈಗ, ಇದಂ - ಈ ವ್ಯಸನವು, ಕಿಂ - ಏನು, ಅಪೂರ್ವ ಮುಖವರ್ಣಶ್ಚ, ಅಪೂರ್ವ - ಪೂರ್ವದಲ್ಲಿ ಇಲ್ಲದಿರುವ, ಮುಖವರ್ಣಶ್ಚ - ಮುಖವರ್ಣವೂ, ನಲಕ್ಷ್ಯತೇ - ಕಾಣಲ್ಪಡುವದಿಲ್ಲ. ॥ ೧೮ ॥ ರಘುನಂದನಃ - ಶ್ರೀರಾಮನು, ಇತೀವ- ಈಪರಿಯಾಗಿಯೇ, ವಲಪಂತೀಂ - ವಿಲಾಪಮಾಡುತ್ತಿರುವ, ತಾಂ - ಆ ಸೀತಾದೇವಿಯನ್ನು ಕುರಿತು, ಪ್ರೋವಾಚ - ಹೇಳಿದನು, ಹೇ ಸೀತೇ - ಎಲೌ ಸೀತೆಯೆ, ತತ್ರಭವಾನ್ - ಪೂಜ್ಯನಾದ, ತಾತಃ - ತಂದೆಯು, ಮಾಂ - ನನ್ನನ್ನು, ವನಂ - ವನವನ್ನು ಕುರಿತು, ಪ್ರವ್ರಾಜಯತಿ - ಹೊರಡಿಸುತ್ತಾನೆ. ॥ ೧೯ ॥ ಮಹತಿಕುಲೇ - ಮಹಾಕುಲದಲ್ಲಿ, ಹೇ ಸಂಭೂತೇ - ಹುಟ್ಟಿದವಳೆ, ಹೇ ಧರ್ಮಜ್ಞೇ - ಎಲೌ ಧರ್ಮವನ್ನರಿತವಳೆ, ಧರ್ಮಚಾರಿಣಿ - ಧರ್ಮವನ್ನಾಚರಿಸುವಳೆ, ಹೇ ಜಾನಕಿ - ಎಲೌ ಜನಕರಾಜನ ಮಗಳೆ, ಯೇನ - ಯಾವ ಕಾರಣ, ಮಮ - ನನಗೆ, ಕ್ರಮೇಣ - ಕ್ರಮವಾಗಿ, ಇದಂ - ಈ ವನಪ್ರಯಾಣವು, ಅಭ್ಯಾಗತಂ - ಬಂದಿರುವುದೋ, ತತ್ - ಅದನ್ನು, ಶೃಣು - ಕೇಳು. ॥ ೨೦ ॥ ಸತ್ಯಪ್ರತಿಜ್ಞೇನ - ಸಫಲವಾದ ಪ್ರತಿಜ್ಞೆಯುಳ್ಳ, ಪಿತ್ರಾ - ತಂದೆಯಾದ, ದಶರಥೇನರಾಜ್ಞಾ - ದಶರಥರಾಯನಿಂದ, ಪುರಾ - ಪೂರ್ವದಲ್ಲಿ, ಮಮ - ನನ್ನ, ಮಾತ್ರೇ - ಚಿಕ್ಕತಾಯಿಯಾದ, ಕೈಕೇಯ್ಯೈತು - ಕೈಕೇಯಿದೇವಿಗೋಸ್ಕರ, ಮಹಾವರೌ - ದೊಡ್ಡವರಗಳು, ದತ್ತೌ - ಕೊಡಲ್ಪಟ್ಟವು. ॥ ೨೧ ॥ ನೃಪೋದ್ಯತೇ - ಅರಸನಿಂದ ಪ್ರಯತ್ನಮಾಡಲ್ಪಟ್ಟ, ಮಮ - ನನಗೆ,

ಲಿಲ್ಲ. ॥ ೧೭ ॥ ಯೌವರಾಜ್ಯಪಟ್ಟಾಭಿಷೇಕವು ಒದಗಿದ್ದರೂ, ಈ ವ್ಯಸನವೇತರಿಂದಾದುದೋ? ಎಂದಿಗೂ ಇಲ್ಲದಿರುವ ಮುಖವಿವರ್ಣವು ಕಾಣುವದಲ್ಲ ?" ಎಂದು ಸೀತಾದೇವಿಯು ವಿಲಾಪವಂಗೈಯುತ್ತಿರಲು, ಶ್ರೀರಾಮನು "ಎಲೌ ದೇವಿಯೇ! ಪೂಜ್ಯನಾದ ಜನಕನು ನನ್ನನ್ನು ಅರಣ್ಯಕ್ಕೆ ಕಳುಹಿಸುವನು. ॥ ೧೯ ॥ ಸತ್ಕುಲದಲ್ಲಿ ಹುಟ್ಟಿದವಳೂ, ಧರ್ಮವನ್ನರಿತವಳೂಆಗಿರುವ ಎಲೌ ಜನಕರಾಜನಂದಿನಿಯೇ ! ನನಗೆ ಕ್ರಮವಾಗಿ ಒದಗಿರುವ ಈ ವನಪ್ರಯಾಣವಿಷಯವನ್ನು ಹೇಳುವೆನು ಕೇಳು. ॥ ೨೦ ॥ ಸತ್ಯವಾದ ಪ್ರತಿಜ್ಞೆಯುಳ್ಳವನೂ, ಒಡೆಯನೂ ಆಗಿರುವ ನಮ್ಮ ಜನಕನು ಪೂರ್ವಕಾಲದಲ್ಲಿ ಕೈಕೇಯೀದೇವಿಗೆ ಎರಡು ವರಗಳನ್ನು ಕೊಟ್ಟಿದ್ದನು, ಈಗ ನನಗೆ ಯೌವರಾಜ್ಯಪಟ್ಟಾಭಿಷೇಕವನ್ನು

ಮಮಸಜ್ಜೇಸ್ಮಿ ನ್ನಭಿಷೇಕೇ ನೃಪೋದ್ಯತೇ ॥ ಪ್ರಚೋದಿತ ಸ್ಸ ಸಮಯೋ ಧರ್ಮೇಣ ಪ್ರತಿನಿರ್ಜಿತಃ ॥೨೨॥ ಚತುರ್ದಶಹಿ ವರ್ಷಾಣಿ ವಸ್ತವ್ಯಂ ದಂಡಕೇ ಮಯಾ ॥ ಪಿತ್ರಾ ಮೇ ಭರತಶ್ಚಾಪಿ ಯೌವರಾಜ್ಯೇ ನಿಯೋಜಿತಃ ॥೨೩॥ ಸೋಹಂತ್ವಾಮಾಗತೋ ದ್ರಷ್ಟುಂ ಪ್ರಸ್ಥಿತೋ ವಿಜನಂ ವನಂ ॥ ಭರತಸ್ಯ ಸಮೀಪೇತು ನಾಹಂ ಕಥ್ಯಃ ಕದಾಚನ ॥೨೪॥ ಋದ್ಧಿಯುಕ್ತಾಹಿ ಪುರುಷಾ ನ ಸಹಂತೇ ಪರಸ್ತವಂ ॥ ತಸ್ಮಾ ನ್ನ ತೇ ಗುಣಾಃ ಕಥ್ಯಾ ಭರತಸ್ಯಾಗ್ರತೋ ಮಮ ॥೨೫॥ ನಾಪಿ ತ್ವಂ ತೇನ ಭರ್ತವ್ಯಾ ವಿಶೇಷೇಣ ಕದಾಚನ ॥

ಅಸ್ಮಿನ್ನಭಿಷೇಕೇ - ಈ ಅಭಿಷೇಕವು, ಸದ್ಯೇಸತಿ - ಸನ್ನದ್ಧವಾಗಲು, ತಯಾ - (ಮ + ತಿ) ಆ ಕೈಕೇಯಿದೇವಿಯಿಂದ, ಅದ್ಯ-ಈಗ, ಸಸಮಯಃ-ಆ ವರದಾನ ಕಾಲವು, ಪ್ರಚೋದಿತಃ-ಪ್ರೇರೇಪಿಸಲ್ಪಟ್ಟಿತು, ಧರ್ಮೇಣ - ಧರ್ಮದಿಂದ, ಪ್ರತಿನಿರ್ಜಿತಃ - ಸ್ವಾಧೀನಮಾಡಿಕೊಳ್ಳಲ್ಪಟ್ಟಿತು, (ಗೋ) ತಯಾ - ಆ ಕೈಕೇಯಿದೇವಿಯಿಂದ, ಅದ್ಯ - ಈಗ, ಪ್ರಚೋದಿತಃ - ಪ್ರೇರೇಪಿಸಲ್ಪಟ್ಟವನಾಗಿ, ಸಸಮಯಃ - ಶಪಥದಿಂದ ಕೂಡಿದ ಅರಸು, ಧರ್ಮೇಣ - ಧರ್ಮದಿಂದ, ಪ್ರತಿನಿರ್ಜಿತಃ - ಸ್ವಾಧೀನನಾಗಿ ಮಾಡಿಕೊಳ್ಳಲ್ಪಟ್ಟನು. ॥ ೨೨ ॥ ಮಯಾ - ನನ್ನಿಂದ, ದಂಡಕೇ - ದಂಡಕಾರಣ್ಯದಲ್ಲಿ, ಚತುರ್ದಶವರ್ಷಾಣಿ - ಹದಿನಾಲ್ಕು ವರ್ಷಗಳು, ವಸ್ತವ್ಯಂಹಿ - ಇರತಕ್ಕುದಷ್ಟೆ, ಮೇ - ನನ್ನ, ಪಿತ್ರಾ - ತಂದೆಯಿಂದ, ಭರತಶ್ಚಾಪಿ - ಭರತನೂ ಕೂಡ, ಯೌವರಾಜ್ಯೇ - ಯೌವರಾಜ್ಯವೆಂಬ ಎರಡನೆಯ ಪ್ರಭುತ್ವದಲ್ಲಿ, ನಿಯೋಜಿತಃ - ಇರಿಸಲ್ಪಟ್ಟನು, ಸೋಹಂ - ಅಂತಹ ನಾನು, ವಿಜನಂ - ಜನರಹಿತವಾದ, ವನಂ - ವನವನ್ನು ಕುರಿತು, ಪ್ರಸ್ಥಿತಃ - ಪ್ರಯಾಣಮಾಡುವವನಾಗಿ, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವದಕ್ಕೆ, ಆಗತಃ - ಬಂದೆನು. ॥ ೨೩ ॥ ಭರತಸ್ಯ - ಭರತನ, ಸಮೀಪೇತು - ಸಮೀಪದಲ್ಲಾದರೆ, ಅಹಂ - ನಾನು, ಕದಾಚನ - ಎಂದಿಗೂ, ನಕಥ್ಯಃ- ಸ್ತೋತ್ರಮಾಡಲ್ಪಡತಕ್ಕವನಲ್ಲ. ॥ ೨೪ ॥ ಹಿ - ಯಾವಕಾರಣ, ಋದ್ಧಿಯುಕ್ತಾಃ-ಐಶ್ವರ್ಯದಿಂದ ಕೂಡಿದ, ಪುರುಷಾಃ - ಪುರುಷರು, ಪರಸ್ತವಂ - ಪರಕೀಯರ ಸ್ತೋತ್ರವನ್ನು, ನಸಹಂತೇ - ಸಹಿಸುವುದಿಲ್ಲ, ಮಮ - ನನ್ನ, ಗುಣಾಃ - ಗುಣಗಳು, ಭರತಸ್ಯ - ಭರತನ, ಅಗ್ರತಃ - ಮುಂದುಗಡೆ, ತೇ - ನಿನ್ನಿಂದ, ನಕಥ್ಯಾಃ - ಹೇಳತಕ್ಕುದಲ್ಲ. ॥ ೨೫ ॥ ತ್ವಮಪಿ - ನೀನೂ, ತೇನ - ಆ

ಮಾಡಬೇಕೆಂದು ಯತ್ನಿಸಿದನು. ಈ ಸಮಯದಲ್ಲಿ ಆ ಕೈಕೇಯಿದೇವಿಯು ಹಿಂದೆ ತನಗೆ ನಮ್ಮ ಪೂಜ್ಯ ಪಾದನಿತ್ತಿದ್ದ ವರಗಳನ್ನು ಕೇಳಿದಳು. ನಾನು ಹದಿನಾಲ್ಕು ಸಂವತ್ಸರಗಳು ವನದಲ್ಲಿರುವುದೂ, ಭರತನಿಗೆ ಯೌವರಾಜ್ಯಾಭಿಷೇಕವಾಗುವುದೂ ಆ ವರಗಳ ಪ್ರಯೋಜನವು. ಮಹಾರಾಜನು ಆ ವರಗಳನ್ನು ಸಫಲಗೊಳಿಸಲೋಸುಗ ನನ್ನನ್ನು ವನಕ್ಕೆ ಕಳುಹಿ, ಭರತನಿಗೆ ರಾಜ್ಯಾಭಿಷೇಕವಂಗೈಯುತ್ತಾನೆ. ಆತನ ಆಣತಿಯಂತೆ ವನವಾಸಕ್ಕೆ ತೆರಳಲುದ್ಯಮಿಸಿ, ಪ್ರಿಯ ಸತಿಯಾದ ನಿನ್ನನ್ನು ಕಾಣಲೋಸುಗ ಬಂದೆನು. ಭರತನ ಮುಂಗಡೆ ನನ್ನನ್ನೆಂದಿಗೂ ಹೊಗಳಬೇಡ. ಐಶ್ವರ್ಯವಂತರು ಪರಸ್ತುತಿಯನ್ನು ಸಹಿಸುವುದಿಲ್ಲ. ಇದಲ್ಲದೆ ಆತನ ಸಮೀಪದಲ್ಲಿ ಸಾಮಾನ್ಯರಾದ ಬಂಧುಗಳು ವಾಸಿಸುವಂತೆ, ನೀನು ವಿಶೇಷವಾದ

ಅನುಕೂಲತಯಾ ಶಕ್ಯಂ ಸಮೀಪೇತ್ವಸ್ಯ ವರ್ತಿತುಂ ॥ ೨೬ ॥ ತಸ್ಮೈ ದತ್ತಂ ನೃಪತಿನಾ ಯೌವರಾಜ್ಯಂ ಸನಾತನಂ ॥ ಸಪ್ರಸಾದ್ಯ ಸ್ತ್ವಯಾ ಸೀತೇ ನೃಪ ತಿಶ್ಚ ವಿಶೇಷತಃ ॥ ೨೭ ॥ ಅಹಂ ಚಾಪಿ ಪ್ರತಿಜ್ಞಾಂ ತಾಂ ಗುರೋಸ್ಸಮನು ಪಾಲಯನ್ ॥ ವನಮದ್ಯೈವ ಯಾಸ್ಯಾಮಿ ಸ್ಥಿರಾಭವ ಮನಸ್ವಿನೀ ॥ ೨೮ ॥ ಯಾತೇಚ ಮಯಿ ಕಲ್ಯಾಣಿ ವನಂ ಮುನಿ ನಿಷೇವಿತಂ ॥ ವ್ರತೋಪವಾಸ ರತಯಾ ಭವಿತವ್ಯಂ ತ್ವಯಾನಘೇ ॥ ೨೯ ॥ ಕಾಲ್ಯಮುತ್ಥಾಯ ದೇವಾನಾಂ

ಭರತನಿಂದ, ಕದಾಚನ - ಎಂದಿಗೂ, ವಿಶೇಷೇಣ - ವಿಶೇಷವಾಗಿ, ನಭರ್ತವ್ಯಾ - ಭರಿಸುವವಳಲ್ಲ, ಅಸ್ಯ - ಈ ಭರತನ, ಸಮೀಪೇ - ಸಮೀಪದಲ್ಲಿ, ಅನುಕೂಲತಯಾ - ಅನುಕೂಲ್ಯದಿಂದ, ವರ್ತಿತುಂ- ಇರುವದಕ್ಕೆ, ಶಕ್ಯಂ - ಸಾಧ್ಯವು. ॥ ೨೬ ॥ ನೃಪತಿನಾ - ಅರಸಾದ ದಶರಥರಾಯನಿಂದ, ತಸ್ಮೈ - ಆ ಭರತನಿಗೆ, ಸನಾತನಂ - ಬಹುಕಾಲದಿಂದ ಬಂದ, ಯೌವರಾಜ್ಯಂ - ಎರಡನೆಯ ಪ್ರಭುತ್ವವು, ದತ್ತಂ - ಕೊಡಲ್ಪಟ್ಟಿತು, ಹೇ ಸೀತೇ - ಎಲೌ ಸೀತೆಯೇ, ತ್ವಯಾ - ನಿನ್ನಿಂದ, ಸಃ - ಆ ಭರತನು, ವಿಶೇಷತಃ - ವಿಶೇಷವಾಗಿ, ನೃಪತಿಃ - ಅರಸನಾದಕಾರಣ, ಪ್ರಸಾದ್ಯಃ - ಪ್ರಸನ್ನನಾಗಿ ಮಾಡಿಕೊಳ್ಳತಕ್ಕವನು. ॥ ೨೭ ॥ ಅಹಂಚಾಪಿ - ನಾನೂ, ಗುರೋಃ - ತಂದೆ ಯಾದ ದಶರಥರಾಯನ, ತಾಂಪ್ರತಿಜ್ಞಾಂ - ಆ ಪ್ರತಿಜ್ಞೆಯನ್ನು, ಸಮನುಪಾಲಯನ್ - ಪರಿಪಾಲಿ ಸುತ್ತ, ಅದ್ಯೈವ - ಈಗಲೇ, ವನಂ - ವನವನ್ನು ಕುರಿತು, ಯಾಸ್ಯಾಮಿ - ಹೋಗುವೆನು, ಮನಸ್ವಿನೀ - ದೃಢವಾದ ಮನಸ್ಸುಳ್ಳವಳಾಗಿ, ಮಯಿ-ನನ್ನಲ್ಲಿ, ಸ್ಥಿರಾ-ಅಚಂಚಲವಾದ ಬುದ್ಧಿಯುಳ್ಳ ವಳು, ಭವ - ಆಗು. ॥ ೨೮ ॥ ಹೇ ಕಲ್ಯಾಣಿ - ಎಲೌ ಶುಭಕರಳೆ, ಹೇ ಅನಘೇ - ಎಲೌ ದೋಷರಹಿತಳೇ, ಮಯಿ - ನಾನು, ಮುನಿನಿಷೇವಿತಂ - ಋಷಿಗಳಿಂದ ಸೇವಿಸಲ್ಪಟ್ಟ, ವನಂ - ಅರಣ್ಯ ವನ್ನು ಕುರಿತು, ಯಾತೇ - ಹೊರಟುಹೋಗಲು, ತ್ವಯಾ - ನಿನ್ನಿಂದ, ವ್ರತೋಪವಾಸ ಪರಯಾ - ವ್ರತಗಳಲ್ಲಿಯೂ, ಉಪವಾಸನಿಯಮದಲ್ಲಿ ಆಸಕ್ತಳಾಗಿಯೂ, ಭವಿತವ್ಯಂ - ಇರತ ಕ್ಕದು. ॥ ೨೯ ॥ ಕಾಲ್ಯಂ - ಪ್ರಾತಃಕಾಲದಲ್ಲಿ, ಉತ್ಥಾಯ - ಎದ್ದು, ದೇವಾನಾಂ - ದೇವತೆಗಳ, ಪೂಜಾಂ - ಪೂಜೆಯನ್ನು, ಯಥಾವಿಧಿ - ವಿಧ್ಯುಕ್ತವಾಗಿ, ಕೃತ್ವಾ - ಮಾಡಿ, ಮಮ - ನನ್ನ, ಪಿತಾ - ತಂದೆಯಾದ, ನರೇಶ್ವರಃ - ರಾಜನಾದ, ದಶರಥಃ - ದಶರಥರಾಯನು, ವಂದಿತವ್ಯಃ -

ಅಶನವಸನಾಭರಣಾದಿಗಳನ್ನಪೇಕ್ಷಿಸದೆ ಇರಬೇಕಲ್ಲದೆ ಪ್ರತಿಕೂಲಚಾರಿಣಿಯಾಗ ಬಾರದು. ಏಕೆಂಬೆಯೋ ? ಕೇಳು ; ಆತನಿಗೆ ನಮ್ಮ ತಂದೆಯು ಪರಂಪರಾಗತ ವಾದ ಯುವರಾಜ ಪದವಿಯನ್ನು ಕೊಡುತ್ತಾನೆ. ಆದಕಾರಣ ನೀನಾತನಿಗೆ ವಿರೋಧವಾಗಿ ನಡೆಯಬೇಡ. ನಾನೂ ನನ್ನ ತಂದೆಯ ಅಪ್ಪಣೆಯನ್ನು ನೆರವೇರಿಸ ಲೋಸುಗ ವನವನ್ನು ಕುರಿತು ತೆರಳುತ್ತೇನೆ. ನೀನು ನಿಶ್ಚಲಚಿತ್ತಳಾಗಿರು. ಎಲೌ ನಿಷ್ಪಾಪಳೆ ! ನಾನು ಮುನಿಗಳಿಂದ ಸೇವಿಸಲ್ಪಟ್ಟ ಅರಣ್ಯಕ್ಕೆ ತೆರಳಿದರೆ, ನೀನು ವ್ರತೋಪವಾಸಗಳನ್ನು ಮಾಡುತ್ತ, ಪ್ರಾತಃಕಾಲದಲ್ಲೆದ್ದು ಶಾಸ್ತ್ರೋಕ್ತವಾಗಿ ದೇವತಾ ಪೂಜೆಯನ್ನು ಮಾಡಿ, ಪ್ರತಿ ದಿನವೂ ನಮ್ಮ ಜನಕನಾದ ದಶರಥರಾಯನನ್ನು ನಮಸ್ಕರಿಸು

ಕೃತ್ವಾ ಪೂಜಾಂ ಯಥಾವಿಧಿ ॥ ವಂದಿತವ್ಯೋ ದಶರಥಃ ಪಿತಾ ಮಮ ನರೇ
ಶ್ವರಃ ॥ ೩೦ ॥ ಮಾತಾಚ ಮಮ ಕೌಸಲ್ಯಾ ವೃದ್ಧಾ ಸಂತಾಪ ಕರ್ಶಿತಾ ॥
ಧರ್ಮಮೇವಾಗ್ರತಃ ಕೃತ್ವಾ ತ್ವತ್ತ ಸ್ಸಂಮಾನಮರ್ಹತಿ ॥ ೩೧ ॥ ವಂದಿತ
ವ್ಯಾಶ್ಚ ತೇ ನಿತ್ಯಂ ಯಾ ಶ್ಶೇಷಾ ಮಮ ಮಾತರಃ ॥ ಸ್ನೇಹಪ್ರಣಯ
ಸಂಭೋಗೈ ಸ್ಸಮಾ ಹಿ ಮಮ ಮಾತರಃ ॥ ೩೨ ॥ ಭ್ರಾತೃ ಪುತ್ರ ಸಮೌ
ಚಾಪಿ ದ್ರಷ್ಟವ್ಯೌ ಚ ವಿಶೇಷತಃ ॥ ತ್ವಯಾ ಭರತ ಶತ್ರುಘ್ನೌ ಪ್ರಾಣೈಃ ಪ್ರಿಯ
ತರೌ ಮಮ ॥ ೩೩ ॥ ವಿಪ್ರಿಯಂ ನಚಕರ್ತವ್ಯಂ ಭರತಸ್ಯ ಕದಾಚನ ॥
ಸಹಿ ರಾಜಾ ಪ್ರಭುಶ್ಚೈವ ದೇಶಸ್ಯ ಚ ಕುಲಸ್ಯಚ ॥ ೩೪ ॥ ಆರಾಧಿತಾಶ್ಚ

ನಮಸ್ಕಾರಮಾಡಲ್ಪಡಬೇಕು. ॥ ೩೦ ॥ ಮಮ - ನನ್ನ, ಮಾತಾ - ತಾಯಿಯಾದ, ವೃದ್ಧಾ - ವೃದ್ಧಳಾದ, ಸಂತಾಪ - ಪುತ್ರವಿಯೋಗದಿಂದ ಹುಟ್ಟಿದ ಸಂತಾಪದಿಂದ, ಕರ್ಶಿತಾ - ಕೃಶೀಭೂತಳಾದ, ಕೌಸಲ್ಯಾ - ಕೌಸಲ್ಯಾದೇವಿಯು, ತ್ವತ್ತಃ - ನಿನ್ನಿಂದ, ಧರ್ಮಮೇ - ಧರ್ಮವನ್ನೇ, ಅಗ್ರತಃ - ಮುಂಗಡೆ, ಕೃತ್ವಾ - ಮಾಡಿ, ಸಮ್ಮಾನಂ - ಬಹುಮಾನವನ್ನು ಕುರಿತು, ಅರ್ಹತಿ - ಯೋಗ್ಯಳಾಗಿರುವಳು. ॥ ೩೧ ॥ ಶೇಷಾಃ - ಮಿಕ್ಕ, ಮಮ - ನನ್ನ, ಮಾತರಃ - ತಾಯಿಯರೂ, ಯಾಃ - ಯಾರೋ, ತಾಃ - ಅವರು, ತೇ - ನಿನ್ನಿಂದ, ನಿತ್ಯಂ - ನಿರಂತರವು, ವಂದಿತವ್ಯಾಶ್ಚ - ವಂದನೆ ಮಾಡಿಸಿಕೊಳ್ಳತಕ್ಕವರು, ಮಮ - ನನ್ನ, ಮಾತರಃ - ತಾಯಿಯರು, ಸ್ನೇಹಪ್ರಣಯ ಸಂಭೋಗೈಃ, ಸ್ನೇಹ - ಪ್ರೀತಿಯಿಂದಲೂ, ಪ್ರಣಯ - ಸೌಹಾರ್ದದಿಂದಲೂ, ಸಂಭೋಗೈಃ - ಪರಿಪಾಲನೆಯಿಂದಲೂ, ಸಮಾಹಿ - ಸಮಾನರಷ್ಟೆ? ॥ ೩೨ ॥ ಭ್ರಾತೃಪುತ್ರಸಮೌ, ಭ್ರಾತೃ - ತಮ್ಮನೊಡನೆಯೂ, ಪುತ್ರ - ಮಗನೊಡನೆಯೂ, ಸಮೌ - ಸಮಾನರಾದ, ಮಮ - ನನಗೆ, ಪ್ರಾಣೈಃ - ಪ್ರಾಣಗಳಿಗಿಂತಲೂ, ಪ್ರಿಯತರೌ - ಅತ್ಯಂತ ಪ್ರೀತಿಪಾತ್ರರಾದ, ಭರತಶತ್ರುಘ್ನೌ - ಭರತಶತ್ರುಘ್ನರು, ತ್ವಯಾ - ನಿನ್ನಿಂದ, ವಿಶೇಷತಃ - ವಿಶೇಷವಾಗಿ, ದ್ರಷ್ಟವ್ಯೌ - ನೋಡತಕ್ಕವರು. ॥ ೩೩ ॥ ಹಿ - ಯಾವಕಾರಣ, ಸಃ - ಆ ಭರತನು, ದೇಶಸ್ಯ - ಈ ದೇಶಕ್ಕೂ, ಕುಲಸ್ಯಚ - ವಂಶಕ್ಕೂ, ರಾಜಾ - ಅರಸನೋ, ಪ್ರಭುಶ್ಚೈವ - ಪ್ರಾಭವವುಳ್ಳವನೋ, ತಸ್ಮಾತ್ - ಆ ಕಾರಣ ಭರತಸ್ಯ - ಭರತನಿಗೆ, ಕದಾಚನ - ಒಂದಾನೊಂದು ಕಾಲದಲ್ಲಿಯೂ, ವಿಪ್ರಿಯಂ - ಸಮ್ಮತವಿಲ್ಲದ ಕಾರ್ಯವು, ನಕಾರ್ಯಾ - ಮಾಡತಕ್ಕುದಲ್ಲ. ॥ ೩೪ ॥ ರಾಜಾನಃ - ಅರಸರು, ಶೀಲೇನ -

---

ತ್ತಿರು. ॥ ೩೦ ॥ ವಾರ್ಧಕ್ಯವನ್ನು ಹೊಂದಿದವಳೂ, ನನ್ನ ವನವಾಸದಿಂದ ಸಂತಾಪವನ್ನು ಪಡೆದವಳೂ ಆದ ನಮ್ಮ ಜನನಿಯಾದ ಕೌಸಲ್ಯಾದೇವಿಯು ನಿನ್ನಿಂದ ಸೇವೆಯನ್ನು ಪಡೆಯಲು ಅರ್ಹಳಾಗಿದ್ದಾಳೆ. ಪ್ರಿಯಳೆ! ಇಷ್ಟೆಯಲ್ಲದೆ ನಮ್ಮ ತಾಯಿಯರಾದ ಸುಮಿತ್ರಾ, ಕೈಕೇಯಿಯರನ್ನೂ, ಏಕರೀತಿಯಿಂದ ಕಾಣುತ್ತ, ಪ್ರೀತಿ ವಿಶ್ವಾಸಗಳಿಂದ ಸಂತೋಷಗೊಳಿಸಿ ವಂದಿಸುತ್ತಿರು. ನನ್ನ ಪ್ರಾಣಗಳಿಗಿಂತಲೂ ಅಧಿಕರಾದ ಭರತ ಶತ್ರುಘ್ನರನ್ನು ಏಕರೀತಿಯಿಂದ ಕಾಣುತ್ತಿರಬೇಕು. ಭರತನಿಗೆ ಎಂದಿಗಾದರೂ ಕೆಟ್ಟುದನ್ನು ಮಾಡಬೇಡ. ಏಕೆಂದರೆ, ಆತನು ನಮ್ಮ ಕುಲಕ್ಕೂ, ಈ ದೇಶಕ್ಕೂ ರಾಜನಾಗುವನು. ರಾಜರು ಸದ್ವೃತ್ತಿ

ಶೀಲೇನ ಪ್ರಯತ್ನೈಶ್ಚೋಪಸೇವಿತಾಃ ॥ ರಾಜಾನಸ್ಸಂಪ್ರಸೀದಂತಿ ಪ್ರಕುಪ್ಯಂತಿ ವಿಪರ್ಯಯೇ ॥ ೩೫ ॥ ಔರಸಾನಪಿ ಪುತ್ರಾನ್ಹಿ ತ್ಯಜಂತ್ಯಹಿತಕಾರಿಣಃ ॥ ಸಮರ್ಥಾನ್ ಸಂಪ್ರಗೃಹ್ಣಂತಿ ಜನಾನಪಿ ನರಾಧಿಪಾಃ ॥ ೩೬ ॥ ಸಾತ್ವಂ ವಸೇಹ ಕಲ್ಯಾಣಿ ರಾಜ್ಞಸ್ಸಮನುವರ್ತಿನೀ ॥ ಭರತಸ್ಯ ರತಾ ಧರ್ಮೇ ಸತ್ಯವ್ರತ ಪರಾಯಣಾ ॥ ೩೭ ॥

ಅಹಂ ಗಮಿಷ್ಯಾಮಿ ಮಹಾವನಂ ಪ್ರಿಯೇ
ತ್ವಯಾಹಿ ವಸ್ತವ್ಯ ಮಿಹೈವ ಭಾಮಿನಿ ॥

ಸದ್ವೃತ್ತಿಯಿಂದ, ಪ್ರಯತ್ನೈಶ್ಚ - ಆಲಸ್ಯಪರಿತ್ಯಾಗಾದಿ ಪ್ರಯತ್ನಗಳಿಂದಲೂ, ಉಪಸೇವಿತಾಃ - ಸೇವಿಸಲ್ಪಡುವರಾಗಿ, ಆರಾಧಿತಾಃ - ಪೂಜಿಸಲ್ಪಡುತ್ತ, ಸಂಪ್ರಸೀದಂತಿಹಿ - ಪ್ರಸನ್ನರಾಗುತ್ತಾರೆಯಷ್ಟೆ, ವಿಪರ್ಯಯೇ - ಇದು ತಪ್ಪಿದರೆ, ಪ್ರಕುಪ್ಯಂತಿ - ಕೋಪಿಸುವರು. ॥ ೩೫ ॥ ನರಾಧಿಪಾಃ- ಅರಸರು, ಅಹಿತಕಾರಿಣಃ - ಅಪ್ರಿಯವನ್ನು ಮಾಡುವಂತಹ, ಔರಸಾನಪಿ - ತಮ್ಮ ಹೊಟ್ಟೆಯಲ್ಲಿ ಹುಟ್ಟಿದ, ಪುತ್ರಾನಪಿ - ಮಕ್ಕಳನ್ನೂ, ತ್ಯಜಂತಿಹಿ - ತ್ಯಾಗಮಾಡುತ್ತಾರೆಯಷ್ಟೆ, ಸಮರ್ಥಾನ್ - ಕಾರ್ಯಸಮರ್ಥರಾದ, ಜನಾನಪಿ - ಜನರನ್ನೂ, ಸಂಪ್ರಗೃಹ್ಣಂತಿ - ಸಂಗ್ರಹಮಾಡಿಕೊಳ್ಳುತ್ತಾರೆ. ॥ ೩೬ ॥ ಹೇ ಕಲ್ಯಾಣಿ - ಎಲೌ ಶುಭಕರಳೇ, ಸಾತ್ವಂ - ಅಂತಹ ನೀನು (ಇದೆಲ್ಲವನ್ನೂ ತಿಳಿದಿರುವ ನೀನು,) ರಾಜ್ಞಃ - ಅರಸಾದ, ಭರತಸ್ಯ - ಭರತನಿಗೂ, ಸಮನುವರ್ತಿನೀ - ಅನುಸರಣೆಯನ್ನು ಮಾಡಿಕೊಂಡಿರುವಳಾಗಿ, ಧರ್ಮೇ - ಧರ್ಮದಲ್ಲಿ, ರತಾ - ಆಸಕ್ತಳಾಗಿ, ಸತ್ಯವ್ರತಪರಾಯಣಾ, ಸತ್ಯ - ಸಫಲವಾದ, ವ್ರತ - ನಿಯಮದಲ್ಲಿ, ಪರಾಯಣಾ - ಆಸಕ್ತಳಾಗಿ, ಇಹ- ಇಲ್ಲಿಯೇ, ವಸ - ಇರು. ॥ ೩೭ ॥ ಹೇ ಪ್ರಿಯೇ - ಎಲೌ ಪ್ರಿಯಳೇ, ಅಹಂ - ನಾನು, ಮಹಾವನಂ - ಮಹದರಣ್ಯವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಹೇ ಭಾಮಿನಿ - ಎಲೌ ಸ್ತ್ರೀಯೇ, ತ್ವಯಾ - ನಿನ್ನಿಂದ, ಇಹೈವ - ಇಲ್ಲಿಯೇ, ವಸ್ತವ್ಯಂಹಿ - ಇರತಕ್ಕುದಷ್ಟೆ, ತ್ವಂ - ನೀನು, ಕಸ್ಯಚಿತ್ - ಯಾವ ಪುರುಷನಿಗೂ, ಯಥಾ - ಹೇಗೆ, ವ್ಯಳೀಕಂ - ಅಪ್ರಿಯವನ್ನು, ನಕುರುಷೇ -

---

ಯಿಂದಲೂ, ಜಾಗರೂಕತೆಯಿಂದ ಕಾರ್ಯಗಳನ್ನು ಮಾಡುವುದರಿಂದಲೂ ಪ್ರಸನ್ನರಾಗುತ್ತಾರೆ. ಹಾಗಿಲ್ಲದಿದ್ದರೆ ಕೋಪಗೊಂಡು ತಮ್ಮ ಮಕ್ಕಳಾದರೂ ದಾಕ್ಷಿಣ್ಯವನ್ನು ತೋರದೆ ತೊರೆಯುತ್ತಾರೆ; ಅವರು ಸಮರ್ಥರಾದವರನ್ನು ಪರಿಗ್ರಹಿಸುತ್ತಾರೆ. ಆದುದರಿಂದ ನೀನು ಸತ್ಯದಿಂದಲೂ, ನಿಯಮದಿಂದಲೂ ಧರ್ಮದಲ್ಲಿ ಆಸಕ್ತಿಯುಳ್ಳವಳಾಗಿ ರಾಜನಾಗುವ ಭರತನನ್ನನುಸರಿಸಿ ಇಲ್ಲಿಯೇ ಇದ್ದುಕೊಂಡಿರು. ಎಲೌ ಪ್ರಿಯಳೆ! ನಾನು ಗೊಂಡಾರಣ್ಯ

ಯಥಾವ್ಯಳೀಕಂ ಕುರುತೇ ನಕಸ್ಯಚಿ
ತ್ತಥಾ ತ್ವಯಾ ಕಾರ್ಯಮಿದಂ ವಚೋಮಮ ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡ್ವಿಂಶಸ್ಸರ್ಗಃ.

ಮಾಡದಿರುವೆಯೋ, ತಥಾ - ಹಾಗೆಯೇ, ತ್ವಯಾ - ನಿನ್ನಿಂದ, ಮಮ - ನನ್ನ, ಇದಂವಚಃ - ಈ ಮಾತು, ಕಾರ್ಯಂ - ಮಾಡತಕ್ಕದು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೆ ಷಡ್ವಿಂಶಸ್ಸರ್ಗಃ.

ವನ್ನು ಕುರಿತು ತೆರಳುತ್ತೇನೆ. ನೀನಿಲ್ಲಿಯೇ ಇದ್ದುಕೊಂಡು, ಯಾರಿಗೂ ಅಪಕಾರವನ್ನೆಣಿಸದೆ, ನನ್ನ ವಚನದಂತೆ ನಡೆನವಳಾಗು. ॥ ೩೧-೩೮ ॥

ಇಂತಿದು ಶ್ರೀರಾಮ ಕೃತ ಸೀತಾ ಸಾಂತ್ವನ ವೃತ್ತಾಂತ ಕಥನವೆಂಬ
ಇಪ್ಪತ್ತಾರನೆಯ ಸರ್ಗವು ಮುಗಿದುದು.

ಅಯೋಧ್ಯಾಕಾಂಡೇ ಸಪ್ತವಿಂಶಸ್ಸರ್ಗಃ.

ಏವಮುಕ್ತಾತು ವೈದೇಹೀ ಪ್ರಿಯಾರ್ಹಾ ಪ್ರಿಯವಾದಿನೀ ॥ ಪ್ರಣಯಾದೇವ ಸಂಕ್ರುದ್ಧಾ ಭರ್ತಾರ ಮಿದಮಬ್ರವೀತ್ ॥ ೧ ॥ ಕಿಮಿದಂ ಭಾಷಸೇ ವೀರ ವಾಕ್ಯಂ ಲಘುತಯಾ ಧ್ರುವಂ ॥ ತ್ವಯಾ ಯದಪಹಾಸ್ಯಂ ಮೇ ಶ್ರುತ್ವಾ ನರವರೋತ್ತಮ ॥೨॥ (೧) (ವೀರಾಣಾಂ ರಾಜಪುತ್ರಾಣಾಂ ಶಸ್ತ್ರಾಸ್ತ್ರ ವಿದುಷಾಂ ನೃಪ ॥ ಅನರ್ಹ ಮಯಶಸ್ಯಂಚ ನಶ್ರೋತವ್ಯಂ ತ್ವಯೇರಿತಂ) ಆರ್ಯಪುತ್ರ ಪಿತಾ ಮಾತಾ ಭ್ರಾತಾ ಪುತ್ರ ಸ್ತಥಾಸ್ನುಷಾ ॥ ಸ್ವಾನಿ ಪುಣ್ಯಾನಿ ಭುಂಜಾನಾ ಸ್ಸ್ವಂಸ್ವಂ ಭಾಗ್ಯಮುಪಾಸತೇ ॥ ೩ ॥ ಭರ್ತುರ್ಭಾಗ್ಯಂ ತು ಭಾರ್ಯೈಕಾ

ಏವಂ - ಈಪರಿಯಾಗಿ, ಉಕ್ತಾ-ಹೇಳಲ್ಪಟ್ಟ, ಪ್ರಿಯವಾದಿನೀ ಇಷ್ಟವನ್ನೇ ಹೇಳುತ್ತಿರುವ, ಪ್ರಿಯಾರ್ಹಾ-ಪ್ರಿತಿಸಲುಯೋಗ್ಯಳಾದ, ವೈದೇಹೀ-ಸೀತಾದೇವಿಯು, ಪ್ರಣಯಾದೇವ-ವಿಶ್ವಾಸದಿಂದಲೇ, ಸಂಕೃದ್ಧಾ-ಕೋಪಿಷ್ಠಳಾಗಿ, ಭರ್ತಾರಂ-ಗಂಡನಾದ ಶ್ರೀರಾಮನನ್ನು ಕುರಿತು, ಇದಂ-ಈ ಮಾತನ್ನು, ಅಬ್ರವೀತ್ - ನುಡಿದಳು. ॥ ೧ ॥ ಹೇ ರಾಮ - ಎಲೈ ಶ್ರೀರಾಮನೇ, ಲಘುತಯಾ - ನಿಸ್ಸಾರವಾಗುವಿಕೆಯಿಂದ, ಧೃವಂ - ನಿಶ್ಚಯಿಸಿದ, ಇದಂವಾಕ್ಯಂ - ಈ ಮಾತನ್ನು, ಕಿಂಭಾಷಸೇ - ಏಕೆ ಮಾತನಾಡುತ್ತೀಯೆ, ಹೇ ನರವರಾತ್ಮಜ - ಎಲೈ ರಾಜಶ್ರೇಷ್ಠನ ಮಗನಾದವನೇ, ತ್ವಯಾ-ನಿನ್ನಿಂದ ಉಕ್ತವಾದ, ಯತ್ - ಯಾವ, ವಾಕ್ಯಂ - ಮಾತನ್ನು, ಶೃತ್ವಾ - ಕೇಳಿ, ಮೇ - ನನಗೆ, ಅಪಹಾಸ್ಯಂ - ಹಾಸ್ಯಮಾಡತಕ್ಕದಾಗಿ, ಭವತಿ - ಆಗುತ್ತದೆಯೋ. ॥ ೨ ॥ ಹೇ ಆರ್ಯಪುತ್ರ - ಎಲೈ ರಾಜಪುತ್ರನೇ, ಪಿತಾ - ತಂದೆಯು, ಭ್ರಾತಾ - ಅಣ್ಣನು, ಪುತ್ರಃ - ಮಗನು, ತಥಾ - ಹಾಗೆಯೇ, ಸ್ನುಷಾ - ಸೊಸೆಯು, ಸ್ವಾನಿ - ತಮ್ಮ, ಪುಣ್ಯಾನಿ-ಪುಣ್ಯಫಲಗಳನ್ನು, ಭುಂಜಾನಾಃ - ಅನುಭವಿಸುತ್ತ, ಸ್ವಂ ಸ್ವಂ - ತಮ್ಮ ತಮ್ಮ ಸಂಬಂಧವಾದ, ಭಾಗ್ಯಂ - ಪುಣ್ಯಫಲವನ್ನು, (ಗೋ) ಶುಭಾಶುಭ ರೂಪಭಾಗ್ಯವನ್ನು, ಉಪಾಸತೇ - ಅನುಷ್ಠಾನ ಮಾಡುತ್ತಾರೆ. ॥ ೩ ॥ ಹೇ ಪುರುಷ

ಮಧುರವಾದ ನುಡಿಗಳನ್ನಾಡಲು ಯೋಗ್ಯಳೂ, ಪ್ರಿಯ ವಾಕ್ಯಗಳನ್ನು ನುಡಿಯುತ್ತಿರುವಳೂ ಆದ ಸೀತಾದೇವಿಯು, ಶ್ರೀರಾಮನಿಂದೀರೀತಿ ನುಡಿಯಲ್ಪಟ್ಟು, ವಿಶ್ವಾಸದಿಂದಲೇ ಕೋಪವನ್ನು ತಾಳಿ, ಪತಿ ದೇವನನ್ನು ಕುರಿತು ಹೀಗೆಂದಳು. ರಾಜಪುತ್ರನಾದ ಶ್ರೀರಾಮನೆ! ಯಾವ ಮಾತನ್ನು ಕೇಳಿದರೆ ಹೆಂಗಸಾದ ನನಗೂ ಹಾಸ್ಯ ಭಾವವು ತೋರುವುದೋ ಅಂತಹ ಮಾತನ್ನು ಶೂರನಾದ ನೀನು ಸುಲಭವಾಗಿ ಹೇಳುವೆಯೇಕೆ? ಲೋಕದಲ್ಲಿ, ತಾಯಿ, ತಂದೆ, ಅಣ್ಣ, ತಮ್ಮ, ಮಕ್ಕಳು, ಮತ್ತು ಸೊಸೆಯರೂ ತಮ್ಮ ತಮ್ಮ

ಟಿ. (೧) ಇದು ಅಧಿಕ ಪಾಠ. ವ್ಯಾಖ್ಯಾನಕಾರರು ಈ ಶ್ಲೋಕದ ಕಡೆಗೆ ಲಕ್ಷ್ಯ ಕೊಟ್ಟಿರುವುದಿಲ್ಲ.

ಪ್ರಾಪ್ನೋತಿ ಪುರುಷರ್ಷಭ ॥ ಅತಶ್ಚೈವಾಹ ಮಾದಿಷ್ಟಾ ವನೇ ವಸ್ತವ್ಯಮಿ
ತ್ಯಪಿ ॥೪॥ ನ ಪಿತಾ ನಾತ್ಮಜೋ ನಾತ್ಮಾ ನ ಮಾತಾ ನ ಸಖೀಜನಃ ॥ ಇಹ
ಪ್ರೇತ್ಯ ಚ ನಾರೀಣಾಂ ಪತಿರೇಕೋ ಗತಿಸ್ಸದಾ ॥೫॥ ಯದಿ ತ್ವಂ ಪ್ರಸ್ಥಿತೋ
ದುರ್ಗಂ ವನಮದ್ಯೈವ ರಾಘವ॥ಅಗ್ರತ ಸ್ತೇ ಗಮಿಷ್ಯಾಮಿ ಮೃದ್ನಂತೀ ಕುಶ
ಕಂಟಕಾ ॥೬॥ ಈರ್ಷ್ಯಾ ರೋಷೌ ಬಹಿಷ್ಕೃತ್ಯ ಭುಕ್ತಶೇಷ ಮಿವೋದಕಂ ॥

ರ್ಷಭ - ಎಲೈ ಪುರುಷಶ್ರೇಷ್ಠನೆ, ಭರ್ತುಃ - ಗಂಡನ, ಭಾಗ್ಯಂತು - ಶುಭಾಶುಭ ರೂಪವಾದ ಕರ್ಮ ಫಲವನ್ನು, ಭಾರ್ಯೈಕಾ - ಒಬ್ಬಳಾದ ಹೆಂಡತಿಯು ಮಾತ್ರವೇ, ಪ್ರಾಪ್ನೋತಿ - ಹೊಂದುತ್ತಾಳೆ, ಅತಃ - ಈ ಕಾರಣದಿಂದಲೇ, ಅಹಮಪಿ - ನಾನೂ, ವನೇ - ವನದಲ್ಲಿ, ವಸ್ತವ್ಯಮಿತಿ - ಇರತಕ್ಕು ದೆಂದು, ಆದಿಷ್ಟಾ - ಆಜ್ಞಾಪಿಸಲ್ಪಟ್ಟಿರುವೆನು. ॥೪॥ ಪಿತಾ - ತಂದೆಯು, ನ - ಇಲ್ಲ, ಆತ್ಮಜಃ - ಕುವರನು, ನ - ಅಲ್ಲ, ಆತ್ಮಾ - ತಾನು, ನ - ಅಲ್ಲ, ಮಾತಾ - ತಾಯಿಯು, ನ-ಅಲ್ಲ, ಸಖೀಜನಃ - ಸ್ನೇಹಿತಜನವು, ನ - ಅಲ್ಲ, ಇಹ - ಇಲ್ಲಿ, ಪ್ರೇತ್ಯ - ಸತ್ತರೂ, ನಾರೀಣಾಂ - ಸ್ತ್ರೀಯರಿಗೆ, ಪತಿಃ - ಪತಿಯು, ಏಕಃ - ಒಬ್ಬನೇ, ಗತಿಃ - ಶರಣವು. ॥೫॥ ಹೇ ರಾಘವ - ಎಲೈ ಶ್ರೀರಾಮನೇ, ತ್ವಂ - ನೀನು, ದುರ್ಗಂ - ಹೋಗುವದಕ್ಕೆ ಅಶಕ್ಯವಾದ, ವನಂ - ವನವನ್ನು ಕುರಿತು, ಅದ್ಯೈವ - ಈಗಲೇ, ಪ್ರಸ್ಥಿತೋಯದಿ - ಪ್ರಯಾಣಮಾಡುವೆಯಾದರೆ, ತೇ - ನಿನ್ನ, ಅಗ್ರತಃ - ಮುಂಗಡೆ, ಕುಶಕಂಟಕಾ - ಕುಶರೂಪವಾದ ಮುಳ್ಳುಗಳನ್ನು, ಮೃದ್ನಂತೀ - ಕಿತ್ತು ಹಾಕುತ್ತ, ಗಮಿಷ್ಯಾಮಿ - ಹೋಗುವೆನು. ॥೬॥ ಹೇ ವೀರ - ಎಲೈ ಶೂರನೆ, ವಿಸ್ರಬ್ಧಃ - ನಂಬಿಕೆಯುಳ್ಳವನಾಗಿ, ಭುಕ್ತಶೇಷಂ - ಕುಡಿದುನಿಂತ, ಉದಕಮಿವ - ನೀರಿನಂತೆ, ಈರ್ಷ್ಯಾ ರೋಷೌ, ಈರ್ಷ್ಯಾ - (೧) "ನಾನು ಬರುತ್ತೇನೆಂದು ಹೇಳುತ್ತಾಳಲ್ಲ" ಎಂಬ ಅಸೂಯೆಯನ್ನೂ, ರೋಷೌ - (೨) "ನನ್ನ ಮಾತನ್ನು ಉಲ್ಲಂಘಿಸುತ್ತಾಳಲ್ಲ" ಎಂಬ ರೋಷವನ್ನೂ, ಬಹಿಷ್ಕೃತ್ಯ -

ಪುಣ್ಯ ಫಲಗಳನ್ನನುಭವಿಸುತ್ತಾ, ಶುಭಾ ಶುಭ ಕರ್ಮಗಳನ್ನಾಚರಿಸುತ್ತಾರೆ; ಪತ್ನಿಯಾದವ ಳೊಬ್ಬಳು ಮಾತ್ರ ಪತಿಯ ಭಾಗ್ಯವನ್ನನುಭವಿಸುವಳು. ಆದುದರಿಂದ ನೀನು ಯಾರಿಂದ ವನವಾಸ ಮಾಡಲು ಆಜ್ಞಾಪಿತನಾಗಿರುವೆಯೋ ಅವರಿಂದಲೇ ನಾನೂ ವನವಾಸ ಮಾಡ ಬೇಕೆಂದು ಆಜ್ಞಾಪಿತಳಾಗಿದೇನೆ. ಎಲೈ ರಘುವಂಶೋತ್ಪನ್ನನೆ! ಸ್ತ್ರೀಯಾದವಳಿಗೆ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಪತಿಯೇ ಗತಿಯು; ತಾಯಿತಂದೆಗಳೂ, ಮಗನೂ, ತಾನೂ, ಸಖೀ ಜನರೂ ಯಾರೂ ಆಗುವುದಿಲ್ಲ. ನೀನು ಹೊಗಲಸದಳವಾದ ಅರಣ್ಯಕ್ಕೆ ತೆರಳಿದರೆ, ಕುಶ ರೂಪವಾದ ಮುಳ್ಳುಗಳನ್ನು ಸವರುತ್ತ, ನಿನ್ನ ಮುಂಗಡೆ ನಾನೀ

ಟಿ. (೧) "ಈರ್ಷ್ಯಾ - ನಗರದಲ್ಲಿ ಅನುಭವಿಸುತ್ತಿರುವ ಮೃಷ್ಟಾನ್ನಗಳನ್ನೂ, ಸುಖಗಳನ್ನೂ ಒದರಿ ಫಲ ಮೂಲಾಶನಳಾಗುತ್ತೇನೆಂದು ಹೇಳುವವಳಲ್ಲ?" ಎಂಬ ಅಸೂಯೆಯನ್ನೂ,

ಟಿ. (೨) ರೋಷೌ - ನಾನು ಹಿಂತಿರುಗಿಸಿದರೂ, ತಾನು ಸ್ತ್ರೀಯಾಗಿದ್ದರೂ, ನನ್ನೊಡನೆ ಅರಣ್ಯಕ್ಕೆ ಹೋಗುತ್ತೇನೆಂದು ಹೇಗೆ ಹೇಳಿದಳು? ಎಂಬ ರೋಷವನ್ನೂ,

ಇದು **ಗೋವಿಂದರಾಜೀಯ** ಮತ್ತು **ಮಹೇಶ್ವರ ತೀರ್ಥರ** ವ್ಯಾಖ್ಯಾನಾರ್ಥಗಳು.

ನಯ ಮಾಂ ವೀರ ವಿಸ್ರಬ್ಧಃ ಪಾಪಂ ಮಯಿ ನವಿದ್ಯತೇ ॥ ೭ ॥
ಪ್ರಾಸಾದಾಗ್ರೈ ರ್ವಿಮಾನೈರ್ವಾ ವೈಹಾಯಸ ಗತೇನವಾ ॥ ಸರ್ವಾವಸ್ಥಾ
ಗತಾ ಭರ್ತುಃ ಪಾದಚ್ಛಾಯಾ ವಿಶಿಷ್ಯತೇ ॥ ೮ ॥ ಅನುಶಿಷ್ಟಾಸ್ಮಿ ಮಾತ್ರಾಚ
ಪಿತ್ರಾಚ ವಿವಿಧಾಶ್ರಯಂ ॥ ನಾಸ್ಮಿ ಸಂಪ್ರತಿ ವಕ್ತವ್ಯಾ ವರ್ತಿತವ್ಯಂ ಯಥಾ
ಮಯಾ ॥ ೯ ॥ ಅಹಂ ದುರ್ಗಂ ಗಮಿಷ್ಯಾಮಿ ವನಂ ಪುರುಷ ವರ್ಜಿತಂ ॥
ನಾನಾ ಮೃಗಗಣಾಕೀರ್ಣಂ ಶಾರ್ದೂಲ ವೃಕ ಸೇವಿತಂ ॥ ೧೦ ॥ ಸುಖಂ

ತಿರಸ್ಕರಿಸಿ, ಮಾಂ - ನನ್ನನ್ನು, ನಯ - ಕರೆದುಕೊಂಡುಹೋಗು, ಮಯಿ - ನನ್ನಲ್ಲಿ, ಪಾಪಂ - ಪಾಪಕರ್ಮವು, ನವಿದ್ಯತೇ - ಕಾಣುವುದಿಲ್ಲ. ॥ ೭ ॥ ಪ್ರಾಸಾದಾಗ್ರೈಃ - ಉಪ್ಪರಿಗೆಗಳ ಅಗ್ರ ಭಾಗಗಳಿಗಿಂತಲೂ, ವಿಮಾನೈರ್ವಾ - ದೇವತಾರೋಹಣ ಯೋಗ್ಯವಾದ ವಿಮಾನಗಳಿಗಿಂತಲೂ, ವೈಹಾಯಸಗತೇನವಾ - ಅಣಿಮಾದ್ಯಷ್ಟೈಶ್ವರ್ಯದಿಂದ ಪ್ರಾಪ್ತವಾದ ಅಂತರಿಕ್ಷಗಮನಕ್ಕಿಂತಲೂ, ಸರ್ವಾವಸ್ಥಾಗತಾ - ಸಮಸ್ತ ದುಃಖಾವಸ್ಥೆಯನ್ನು ಹೊಂದಿದ್ದಾದರೂ, ಭರ್ತುಃ - ಗಂಡನ, ಪಾದ ಚ್ಛಾಯಾ - ಪಾದಸೇವೆಯು, ವಿಶಿಷ್ಯತೇ - ಅಧಿಕವಾಗುತ್ತದೆ. ॥ ೮ ॥ ಮಯಾ - ನನ್ನಿಂದ, ಯಥಾವರ್ತಿತವ್ಯಂ - ಹೇಗೆ ಇರತಕ್ಕದ್ದೋ, ತಥಾ - ಹಾಗೆಯೇ, ಮಾತ್ರಾ - ತಾಯಿಯಿಂದಲೂ, ಪಿತ್ರಾಚ - ತಂದೆಯಿಂದಲೂ, ವಿವಿಧಾಶ್ರಯಂ ನಾನಾ ಪ್ರಕಾರವಾಗಿ, (ಗೋ + ತಿ) ವಿವಿಧಾಶ್ರಯಂ, ವಿವಿಧ - ನಾನಾ ವಿಧಗಳಾದ ಬ್ರಹ್ಮಕ್ಷತ್ರಾದಿವರ್ಣಗಳ, ಆಶ್ರಯಂ - ಆಶ್ರಯಿಸತಕ್ಕ ಆಚಾರವನ್ನು, ಅನುಶಿಷ್ಟಾ - ಶಿಕ್ಷಿಸಲ್ಪಟ್ಟವಳು, ಅಸ್ಮಿ - ಆಗಿರುವೆನು, ಸಂಪ್ರತಿ - ಈಗ, ವಕ್ತವ್ಯಾ-ಶಿಕ್ಷಣೀಯಳು, ನಾಸ್ಮಿ - ಆಗಲಾರವು. ॥ ೯ ॥ ಅಹಂ - ನಾನು, ಪುರುಷವರ್ಜಿತಂ-ಪುರುಷರಿಂದ ವರ್ಜಿಸಲ್ಪಟ್ಟ, ನಾನಾಮೃಗಗಣಾಕೀರ್ಣಂ - ಅನೇಕ ಜಗೆಗಳಾದ ಮೃಗಗಳ ತಂಡಗಳಿಂದ ವ್ಯಾಪ್ತವಾದ, ಶಾರ್ದೂಲ ವೃಕಸೇವಿತಂ, ಶಾರ್ದೂಲ - ವ್ಯಾಘ್ರಗಳಿಂದಲೂ, ವೃಕ - ತೋಳಗಳಿಂದಲೂ, ಸೇವಿತಂ - ಆಶ್ರಯಿ ಸಲ್ಪಟ್ಟ, ದುರ್ಗಂ - ಪ್ರವೇಶಿಸಲಸಾಧ್ಯವಾದ, ವನಂ - ವನವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು. ॥ ೧೦ ॥ ವನೇ - ವನದಲ್ಲಿ, ಪಿತುಃ - ತಂದೆಯ, ಭವನೇಯಥಾ - ಮನೆಯಲ್ಲಿ

ಗಲೇ ಹೋದಮತ್ತೇನೆ. ಕುಡಿದುಳಿದ ನೀರನ್ನು ತೊರೆಯುವಂತೆ, ಅಸೂಯೆ, ರೋಷ ಇವು ಗಳನ್ನು ತೊರೆದು, ನಂಬಿಕೆಯಿಂದ ನನ್ನನ್ನು ನಿನ್ನೊಡನೆ ಕರೆದುಕೊಂಡು ಹೋಗು. ನನ್ನಲ್ಲಿ ಸ್ವಲ್ಪವೂ ದೋಷವಿಲ್ಲ. ಉಪ್ಪರಿಗೆಯ ಮೇಲಿರುವುದಕ್ಕಿಂತಲೂ, ವಿಮಾನದಲ್ಲಿ ಕುಳಿತು ಗಗನದಲ್ಲಿ ಹೋಗುವುದಕ್ಕಿಂತಲೂ, ಎಷ್ಟು ಕಷ್ಟಗಳನ್ನು ಹೊಂದಿದರೂ, ಪತಿ ದೇವನ ಪಾದ ಸೇವೆಯೇ ಅಧಿಕವೆನಿಸುತ್ತದೆ. ನಾನು ಯಾವ ರೀತಿಯಿಂದಿರಬೇಕೋ, ಆ ರೀತಿ ನಮ್ಮ ತಾಯಿ ತಂದೆಗಳಿಂದ ಅನೇಕ ವಿಧಗಳಲ್ಲಿ ಶಿಕ್ಷಿತಳಾಗಿದೇನೆ. ಆದುದರಿಂದ ಈಗ ಹೊಸದಾಗಿ ಶಿಕ್ಷಿಸಲ್ಪಡಬೇಕಾದುದೇನೂ ಇರುವುದಿಲ್ಲ. ಜನರಹಿತವಾಗಿಯೂ, ನಾನಾ ವಿಧಗಳಾದ ಮೃಗ ತಂಡಗಳಿಂದ ವ್ಯಾಪ್ತವಾದುದಾಗಿಯೂ, ಹುಲಿಗಳಿಂದಲೂ, ತೋಳ ಗಳಿಂದಲೂ ಕೂಡಿರುದಾಗಿಯೂ, ಹೊಗಲಸಾಧ್ಯವಾದುದಾಗಿಯೂ ಇರುವ ಅರಣ್ಯವನ್ನು ಕುರಿತು ನಿನ್ನೊಡನೆ ಬಂದು ಪಾತಿವ್ರತ್ಯವನ್ನು ಮಾತ್ರ ಅಪೇಕ್ಷಿಸಿ, ಜಗತ್ತ್ರಯವನ್ನೇ ಲಕ್ಷ್ಯ



Sita's Appeal.

Lakshmi Art Bombay, 8.

ವನೇ ನಿವತ್ಸ್ಯಾಮಿ ಯಥೈವ ಭವನೇ ಪಿತುಃ ॥ ಅಚಿಂತಯಂತೀ ತ್ರೀಁ ಲೋಕಾಂ ಶ್ಚಿಂತಯಂತೀ ಪತಿವ್ರತಂ ॥ ೧೧ ॥ ಶುಶ್ರೂಷಮಾಣಾ ತೇ ನಿತ್ಯಂ ನಿಯತಾ ಬ್ರಹ್ಮಚಾರಿಣೀ ॥ ಸಹ ರಂಸ್ಯೇ ತ್ವಯಾ ವೀರ ವನೇಷು ಮಧು ಗಂಧಿಷು ॥ ೧೨ ॥ ತ್ವಂಹಿ ಶಕ್ತೋ ವನೇ ಕರ್ತುಂ ರಾಮ ಸಂಪರಿಪಾಲನಂ॥ ಅನ್ಯಸ್ಯಾಪಿ ಜನಸ್ಯೇಹ ಕಿಂಪುನರ್ಮಮ ಮಾನದ ॥ ೧೩ ॥ ಸಹತ್ವಯಾ ಗಮಿಷ್ಯಾಮಿ ವನಮದ್ಯ ನಸಂಶಯಃ ॥ ನಾಹಂ ಶಕ್ಯಾ ಮಹಾಭಾಗ ನಿವರ್ತ ಯಿತು ಮುದ್ಯತಾ ॥ ೧೪ ॥ ಫಲಮೂಲಾಶನಾ ನಿತ್ಯಂ ಭವಿಷ್ಯಾಮಿ ನ ಸಂ

ಯಿದ್ದಂತೆ, ಸುಖಂ - ಸುಖವಾಗಿ, ತ್ರೀಁಲ್ಲೋಕಾಁ - ಮೂರು ಲೋಕಗಳನ್ನು, ಅಚಿಂತ ಯಂತೀ - ಆಲೋಚಿಸದೇ, ಪತಿವ್ರತಂ - ಪಾತಿವ್ರತ್ಯವನ್ನು, ಚಿಂತಯಂತೀ - ಅಪೇಕ್ಷಿಸುತ್ತ, ನಿವತ್ಸ್ಯಾಮಿ - ಇರುತ್ತೇನೆ. ॥ ೧೧ ॥ ಹೇ ವೀರ - ಎಲೈ ಶೂರನೆ, ನಿಯತಾ - ನಿಯಮ ಸಂಪ ನ್ನಳಾಗಿ, ಬ್ರಹ್ಮಚಾರಿಣೀ - ಕಾಮಭೋಗಾದಿ ವರ್ಜಿತಳಾಗಿ, ತೇ - ನಿನಗೆ, ನಿತ್ಯಂ - ನಿರಂತರವು, ಶುಶ್ರೂಷಮಾಣಾ - ಶುಶ್ರೂಷೆಯನ್ನು ಮಾಡುತ್ತ, ಮಧುಗಂಧಿಷು, ಮಧು - ಮಕರಂದರಸಗಳ, ಗಂಧಿಷು - ವಾಸನೆಗಳುಳ್ಳ, ವನೇಷು - ವನಗಳಲ್ಲಿ, ತ್ವಯಾಸಹ - ನಿನ್ನೊಡನೆ, ರಂಸ್ಯೇ - ವಿಹರಿ ಸುತ್ತಾ ಇರುತ್ತೇನೆ. ॥ ೧೨ ॥ ಹೇ ಮಾನದ - ಎಲೈ ಮಾನದಾಯಕನೇ, ಹೇ ರಾಮ - ಎಲೈ ಶ್ರೀರಾಮನೇ, ತ್ವಂ - ನೀನು, ಹಿ - ಯಾವಕಾರಣ, ಅನ್ಯಸ್ಯಾಪಿಜನಸ್ಯ - ಇತರ ಜನಕ್ಕೂ ಕೂಡ, ವನೇ - ವನದಲ್ಲಿ, ಸಂಪರಿಪಾಲನಂ - ಸಂರಕ್ಷಿಸುವಿಕೆಯನ್ನು, ಕರ್ತುಂ - ಮಾಡಲು, ಶಕ್ತಃ - ಸಮರ್ಥನೋ, (ತಸ್ಮಾತ್ - ಆಕಾರಣ,) ಮಮ - ನನ್ನೊಬ್ಬಳ, ಪರಿಪಾಲನೇ- ರಕ್ಷಣೆಯ ವಿಷಯದಲ್ಲಿ, ಕಿಂಪುನಃ - ಏನು ಹೇಳತಕ್ಕದು. ॥ ೧೩ ॥ ಅದ್ಯ - ಈಗ, ತ್ವಯಾ ಸಹ - ನಿನ್ನೊಡನೆ, ವನಂ - ಅರಣ್ಯವನ್ನು ಕುರಿತು, ಗಮಿಷ್ಯಾಮಿ - ಬರುವೆನು, ಸಂಶಯಃ - ಸಂದೇಹವು, ನ - ಇಲ್ಲ, ಹೇ ಮಹಾಭಾಗ - ಎಲೈ ಪುಣ್ಯಶಾಲಿಯೇ, ಉದ್ಯತಾ - ಪ್ರಯಾಣೋದ್ಯು ಕ್ತಳಾದ, ಅಹಂ - ನಾನು, ನಿವರ್ತಯಿತುಂ - ಹಿಂತಿರುಗಿಸಲೋಸುಗ, ನಶಕ್ಯಾ - ಅರ್ಹಳಲ್ಲ. ॥ ೧೪ ॥ ನಿತ್ಯಂ - ನಿರಂತರವು, ಫಲಮೂಲಾಶನಾ - ಫಲ ಕಂದಮೂಲಗಳೇ, ಅಶನಾ - ಆಹಾರ

ವಿಡದೆ ತವರು ಮನೆಯಲ್ಲಿರುವಂತಿರುತ್ತೇನೆ. ಎಲೈ ನಾಥನೆ! ಇಷ್ಟೆಯಲ್ಲದೆ, ನಿನ್ನೊಡನೆ ಆ ಅರಣ್ಯದಲ್ಲಿದ್ದುಕೊಂಡು ಸುಖವಾಗಿ ನಿನಗೆ ಸೇವೆ ಮಾಡುತ್ತ, ನಿಯಮಯುಕ್ತಳಾ ಗಿಯೂ, ಕಾಮಾದಿ ಭೋಗಗಳ ಬಯಕೆಗಳಿಲ್ಲದವಳಾಗಿಯೂ ಇರುತ್ತ, ಪುಷ್ಪಪರಾಗದ ವಾಸನೆಯುಳ್ಳ ವನದಲ್ಲಿ ನಿನ್ನೊಡನೆ ವಿಹರಿಸುತ್ತೇನೆ. ॥ ೧-೧೨ ॥ ಎಲೈ ಮಾನದಾಯ ಕನೆ! ನೀನು ವನದಲ್ಲಿಯೇ ಇತರರನ್ನು ಸಂರಕ್ಷಿಸಲು ಸಮರ್ಥನಾಗಿರುವೆ; ಎಂದ ಮೇಲೆ ನಿನ್ನ ಪ್ರಿಯ ಪತ್ನಿಯಾದ ನನ್ನೊಬ್ಬಳನ್ನು ಕಾಪಾಡುವುದರಲ್ಲಿ ಹೇಳಬೇಕಾದುದೇನಿರುವುದು? ಆದುದರಿಂದ, ಏನಾದರೂ ಆಗಲಿ, ನಾನು ನಿನ್ನೊಡನೆ ಬರುವುದೇ ಸರಿ; ನನ್ನನ್ನು ಹಿಂದಿರು ಗಿಸಬೇಡ. ನಿನ್ನೊಡನೆಯೇ ಇದ್ದುಕೊಂಡು, ಫಲ ಮೂಲಗಳನ್ನು ಭುಜಿಸುತ್ತ ಇರುವ ನಾನು ನಿನಗೆ ದುಃಖವನ್ನುಂಟುಮಾಡುವುದಿಲ್ಲ. ಬುದ್ಧಿಶಾಲಿಯಾಗಿಯೂ, ನಾಥನಾಗಿಯೂ

ಶಯಃ ॥ ನ ತೇ ದುಃಖಂ ಕರಿಷ್ಯಾಮಿ ನಿವಸಂತೀ ತ್ವಯಾ ಸಹ ॥ ೧೫ ॥ ಇಚ್ಛಾಮಿ ಸರಿತಶ್ಶೈಲಾ‌ನ್ ಪಲ್ವಲಾನಿ ವನಾನಿಚ॥ದ್ರಷ್ಟುಂ ಸರ್ವತ್ರ ನಿರ್ಭೀತಾ ತ್ವಯಾ ನಾಥೇನ ಧೀಮತಾ ॥ ೧೬ ॥ ಹಂಸ ಕಾರಂಡವಾಕೀರ್ಣಾಃ ಪದ್ಮಿನೀಸ್ಸಾಧು ಪುಷ್ಪಿತಾಃ ॥ ಇಚ್ಛೇಯಂ ಸುಖಿನೀ ದ್ರಷ್ಟುಂ ತ್ವಯಾ ವೀರೇಣ ಸಂಗತಾ ॥ ೧೭ ॥ ಅಭಿಷೇಕಂ ಕರಿಷ್ಯಾಮಿ ತಾಸು ನಿತ್ಯಂ ಯತವ್ರತಾ ॥ ಸಹತ್ವಯಾ ವಿಶಾಲಾಕ್ಷ ರಂಸ್ಯೇ ಪರಮ ನಂದಿನೀ ॥ ೧೮ ॥ ಏವಂ ವರ್ಷ ಸಹಸ್ರಾಣಾಂ ಶತಂವಾಽಹಂ ತ್ವಯಾ ಸಹ ॥ ವ್ಯತಿಕ್ರಮಂ ನವೇತ್ಸ್ಯಾಮಿ

ವುಳ್ಳವಳು, ಭವಿಷ್ಯಾಮಿ - ಆಗುವೆನು, ನಸಂಶಯಃ - ಸಂದೇಹವಿಲ್ಲ, ತ್ವಯಾಸಹ - ನಿನ್ನೊಡನೆ, ನಿವಸಂತೀ - ಇರುತ್ತ, ತೇ - ನಿನಗೆ, ದುಃಖಂ - ವ್ಯಸನವನ್ನು, ನಕರಿಷ್ಯಾಮಿ - ಮಾಡುವುದಿಲ್ಲ. ॥ ೧೫ ॥ ಧೀಮತಾ - ಬುದ್ಧಿಶಾಲಿಯಾದ, ನಾಥೇನ - ಪತಿಯಾದ, ತ್ವಯಾ - ನಿನ್ನೊಡನೆ, ಸರ್ವತ್ರ - ಎಲ್ಲೆಡೆಗಳಲ್ಲಿಯೂ, ನಿರ್ಭೀತಾ - ಭಯವಿಲ್ಲದವಳಾಗಿ, ಸರಿತಃ - ನದಿಗಳನ್ನೂ, ಶೈಲಾ‌ನ್ - ಬೆಟ್ಟಗಳನ್ನೂ; ಪಲ್ವಲಾನಿ - ಸರೋವರಗಳನ್ನೂ, ವನಾನಿ - ವನಗಳನ್ನೂ, ದ್ರಷ್ಟುಂ - ನೋಡಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೧೬ ॥ ವೀರೇಣ - ಶೂರನಾದ, ತ್ವಯಾ - ನಿನ್ನಿಂದ, ಸಂಗತಾ - ಕೂಡಿ, ಸುಖಿನೀ - ಸುಖವುಳ್ಳವಳಾಗಿ, ಹಂಸಕಾರಂಡವಾಕೀರ್ಣಾಃ, ಹಂಸ-ಹಂಸಪಕ್ಷಿಗಳಿಂದಲೂ, ಕಾರಂಡವ - ನೀರು ಕೋಳಿಗಳಿಂದಲೂ, ಆಕೀರ್ಣಾಃ - ವ್ಯಾಪ್ತಗಳಾದ, ಸಾಧು - ಚನ್ನಾಗಿ, ಪುಷ್ಪಿತಾಃ - ಹೂ ಮೊಳೆತ, ಪದ್ಮಿನೀಃ - ಕಮಲಸರೋವರಗಳನ್ನು, ದ್ರಷ್ಟುಂ - ನೋಡಲು, ಇಚ್ಛಾಮಿ - ಬಯಸುತ್ತೇನೆ. ॥ ೧೭ ॥ ಯತವ್ರತಾ, ಯತ - ನಿಯತವಾದ, ವ್ರತಾ - ನಿಯಮವುಳ್ಳವಳಾಗಿ, ತಾಸು - ಆ ಪದ್ಮಸರೋವರಗಳಲ್ಲಿ, ಅಭಿಷೇಕಂ - ಸ್ನಾನವನ್ನು, ನಿತ್ಯಂ - ನಿರಂತರವು, ಕರಿಷ್ಯಾಮಿ - ಮಾಡುವೆನು, ಹೇ ವಿಶಾಲಾಕ್ಷ - ಎಲೈ ವಿಸ್ತಾರವಾದ ನೇತ್ರಗಳುಳ್ಳವನೇ, ತ್ವಯಾಸಹ - ನಿನ್ನೊಡನೆ, ಪರಮನಂದಿನೀ - ಬಹಳ ಸಂತೋಷವುಳ್ಳವಳಾಗಿ, ರಂಸ್ಯೇ - ವಿಹಾರಮಾಡಿಕೊಂಡಿರುತ್ತೇನೆ. ॥ ೧೮ ॥ ಏವಂ-ಈಪರಿಯಾಗಿ, ವರ್ಷಸಹಸ್ರಾಣಾಂ, ಸಹಸ್ರವರ್ಷಗಳ, ಶತಂವಾ - ನೂರಾದರೂ, ತ್ವಯಾಸಹ - ನಿನ್ನೊಡನೆ, ವ್ಯತಿಕ್ರಮಂ - ಕಳದು ಹೋದಂತಹುದನ್ನಾಗಿ, ನವೇತ್ಸ್ಯಾಮಿ - ತಿಳಿಯುವದಿಲ್ಲ, ತ್ವಯಾವಿನಾ - ನಿನ್ನ ಹೊರ್ತು,

---

ಇರುವ ನಿನ್ನೊಡನೆ ಎಲ್ಲೆಲ್ಲಿಯೂ, ಭಯವಿಲ್ಲದೆ ನದಿಗಳನ್ನೂ, ಸರೋವರಗಳನ್ನೂ, ಬೆಟ್ಟಗಳನ್ನೂ, ವನಗಳನ್ನೂ, ಹಂಸಪಕ್ಷಿಗೆಳಿಂದಲೂ, ನೀರು ಕೋಳಿಗೆಳಿಂದಲೂ ಕೂಡಿದ, ಮನೋಹರವಾಗಿ ಅರಳಿದ ಕಮಲಗಳುಳ್ಳ ಸರಸ್ಸುಗಳನ್ನೂ ನೋಡಲಪೇಕ್ಷಿಸುತ್ತೇನೆ. ಎಲೈ ವಿಶಾಲಾಕ್ಷನೇ! ನಿಯತವಾದ ನಿಯಮವುಳ್ಳವಳಾಗಿ, ಆ ತೀರ್ಥಗಳಲ್ಲಿ ಸ್ನಾನವಂಗೈದು, ಮಹಾ ಸಂತೋಷವುಳ್ಳವಳಾಗಿ ನಿನ್ನೊಡನೆ ವಿಹರಿಸುತ್ತೇನೆ. ಈ ರೀತಿ ನಿನ್ನೊಡನೆ ಇದ್ದುದೇ ಆದರೆ, ಹದಿನಾಲ್ಕು ವರುಷಗಳ ಲೆಕ್ಕವೇನು; ಒಂದು ಲಕ್ಷ ವರುಷಗಳನ್ನಾದರೂ ಕ್ಷಣಮಾತ್ರದಂತೆ ಕಳೆದುಬಿಡುತ್ತೇನೆ. ನಿನ್ನ ಹೊರ್ತು ನನಗೆ ಸ್ವರ್ಗವೂ ಕೂಡ ರುಚಿಸುವುದಿಲ್ಲ. ಆದುದರಿಂದ ನಾನು ಮೃಗಗಳಿಂದಲೂ, ವಾನರಗಳಿಂದಲೂ, ಆನೆಗಳಿಂ

ಸ್ವರ್ಗೋಽಪಿ ನಹಿ ಮೇ ಮತಃ ॥ ೧೯ ॥ ಸ್ವರ್ಗೇಽಪಿ ಚ ವಿನಾ ವಾಸೋ ಭವಿತಾ ಯದಿ ರಾಘವ ॥ ತ್ವಯಾ ಮಮ ನರವ್ಯಾಘ್ರ ನಾಹಂ ತಮಪಿ ರೋಚಯೇ ॥ ೨೦ ॥ ಅಹಂ ಗಮಿಷ್ಯಾಮಿ ವನಂ ಸುದುರ್ಗಮಂ ಮೃಗಾಯುತಂ ವಾನರ ವಾರಣೈರ್ಯುತಂ ॥ ವನೇ ನಿವತ್ಸ್ಯಾಮಿ ಯಥಾ ಪಿತುರ್ಗೃಹೇ ತವೈವ ಪಾದಾವುಪಗೃಹ್ಯ ಸಂಯತಾ ॥ ೨೧ ॥ ಅನನ್ಯ ಭಾವಾ ಮನುರಕ್ತ ಚೇತಸಂ

ಸ್ವರ್ಗೋಽಪಿ - ಸ್ವರ್ಗವೂ, ಮೇ - ನನಗೆ, ನಮತಃ - ಇಷ್ಟವಲ್ಲ. ॥ ೧೯ ॥ ಹೇ ರಾಘವ - ಎಲೈ ಶ್ರೀರಾಮನೆ, ಸ್ವರ್ಗೇಽಪಿ - ಸ್ವರ್ಗಲೋಕದಲ್ಲಿಯೂ, ತ್ವಯಾವಿನಾ - ನಿನ್ನನ್ನು ಬಿಟ್ಟು, ಮಮ - ನನಗೆ, ವಾಸಃ - ವಾಸವು, ಭವಿತಾಯದಿ - ಆದುದೇ ಆದರೆ, ಹೇ ನರವ್ಯಾಘ್ರ-ಎಲೈ ನರಶ್ರೇಷ್ಠನೇ, ಅಹಂ - ನಾನು, ತಮಪಿ - ಅದನ್ನೂ ಕೂಡ, ನರೋಚಯೇ - ಸಮ್ಮತಿಸಲಾರೆನು. ॥ ೨೦ ॥ ಅಹಂ - ನಾನು, ಮೃಗಾಯುತಂ - ಮೃಗಗಳಿಂದ ಕೂಡಿಕೊಂಡಿರುವ, ವಾನರವಾರಣೈಃ - (೧) ಕಪಿಗಳಿಂದಲೂ ಗಜಗಳಿಂದಲೂ, ಯುತಂ - ಕೂಡಿಕೊಂಡಿರುವ, ಸುದುರ್ಗಮಂ - ಹೋಗುವದಕ್ಕೆ ಅಸಾಧ್ಯವಾದ, ವನಂ - ವನವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಪಿತುಃ - ತಂದೆಯ, ಗೃಹೇ - ಮನೆಯಲ್ಲಿ, ಯಥಾ - ಹೇಗೆ, ನಿವತ್ಸ್ಯಾಮಿ - ಇರುತ್ತೇನೆಯೋ, ತಥೈವ - ಹಾಗೆಯೇ, ಪಾದೌ - ಪಾದಗಳನ್ನು, ಉಪಗೃಹ್ಯ - ಹಿಡಿದುಕೊಂಡು, ಸಂಯತಾ - ನಿಯಮನಿಷ್ಠಳಾಗಿ, ವನೇ - ವನದಲ್ಲಿ, ನಿವತ್ಸ್ಯಾಮಿ - ಇರುತ್ತೇನೆ.॥ ೨೧ ॥ ಅನನ್ಯಭಾವಾಂ - (೨) (ಗೋ + ಮ) ಮತ್ತೊಬ್ಬ

ದಲೂ ನಿಬಿಡೀಕೃತವಾದುದೂ, ಅತಿ ದುರ್ಗಮವಾದುದೂ ಆದ ಅರಣ್ಯವನ್ನು ಕುರಿತು ಬಂದು, ಅಲ್ಲಿ ನಿನ್ನ ಪಾದ ಸೇವೆಯನ್ನು ಮಾಡುತ್ತ, ತವರು ಮನೆಯಲ್ಲಿರುವಂತೆ ಸುಖವಾಗಿರುತ್ತೇನೆ. ಎಲೈ ಪ್ರಾಣಪ್ರಿಯನೆ! ಪತಿ ದೇವನಾದ ನಿನ್ನ ವಿನಾ ಮತ್ತೋರ್ವನಲ್ಲಿ ಅಭಿಪ್ರಾಯವಿಲ್ಲದವಳಾಗಿಯೂ, ನಿನ್ನಲ್ಲಿಯೇ ಅನುರಾಗಯುಕ್ತವಾದ ಚಿತ್ತವೃತ್ತಿಯುಳ್ಳವಳೂ, ನಿನ್ನಿಂದ ವಿಯೋಗವನ್ನು ಹೊಂದಿದರೆ ಆ ಕ್ಷಣದಲ್ಲಿಯೇ ಮೃತಿಯನ್ನೈದುವವಳೂ

ಟಿ. (೧) "ಮೃಗಾಯುತಂ ವಾನರ ವಾರಣೈರ್ಯುತಂ" ಸಾಮಾನ್ಯಾರ್ಥವು ವಿದಿತವಾಗಿಯೇ ಇರುವುದು, ಆದರೆ ಇಲ್ಲಿ ಹೀಗೆ ತಿಳಿಯತಕ್ಕುದು? "ವನದಲ್ಲಿ ಮಾರೀಚನೆಂಬುವನು ಮಾಯಾ ಮೃಗ ವೇಷವನ್ನು ಧರಿಸಿ ಬರುತ್ತಾನೆ. ಆಗ ಆ ಮೃಗ ನಿಮಿತ್ತವಾಗಿ ನಮ್ಮಿರ್ವರಿಗೂ ಅಗಲಿಕೆಯುಂಟಾಗುವುದು; ಪುನಃ ಜೊತೆಗೂಳಿಸುವವರಾರು? ನೀನು ನನ್ನನ್ನಗಲಿ ಬದುಕುವುದು ತಾನೇ ಹೇಗೆ," ಎಂದು ಚಿಂತಿಸುತ್ತಿರುವ ಶ್ರೀರಾಮ ಮೂರ್ತಿಯನ್ನು ಕುರಿತು ಸೀತಾದೇವಿಯು "ವಾನರ ವಾರಣೈಃ" ಎಂಬ ಪದದಿಂದ "ನಾನು ವನವಾಸದಲ್ಲಿದ್ದರೂ, ರಾವಣನಿಂದ ಸೆಳದೊಯ್ಯಲ್ಪಟ್ಟು ಅಶೋಕವನ ವಾಸವನ್ನು ಮಾಡುತ್ತೇನೆ, ಆಗ (ಸುಗ್ರೀವನೇ ಮೊದಲಾದ) ವಾನರ ಶ್ರೇಷ್ಠರು ನನ್ನನ್ನು ನಿನ್ನೊಡಗೂಡಿಸುತ್ತಾರೆ; ಬಳಿಕ ನಾನು ಪೂರ್ವದಂತೆ ನಿನ್ನ ಪಾದ ಸೇವೆಯನ್ನು ಮಾಡಿಕೊಂಡಿರುತ್ತೇನೆ" ಎಂದು ಹೇಳುತ್ತಾಳೆ.

ಈ ರೀತಿ ಗೋವಿಂದರಾಜರು ಈ ಪದಗಳ ಅರ್ಥ ಸ್ವಾರಸ್ಯವನ್ನು ಒಕ್ಕಣಿಸಿದರು. "ವಾಲ್ಮೀಕಿಯ ಹೃದಯವೂ ಹೀಗೆಯೇ ಇರಬಹುದೆ?" ಎಂಬ ಸಂಶಯವು ಮಾತ್ರ ನಮಗುಂಟು, "ವಾರಣ ವಾನರೈರ್ಯುತಂ" ಎಂಬ ಪಾಠಾಂತರವೂ ಇದೆ.

ಟಿ. (೨) ಈ ಶ್ಲೋಕದಲ್ಲಿನ ಪರಮಾರ್ಥ = ದಶಕಂಠನಿಂದಪಹೃತಳಾಗುವಳಾದರೂ, ನಿನ್ನಲ್ಲಿಯೇ ನ್ಯಸ್ತಚಿತ್ತಳಾದ, ನಿನ್ನ ವಿರಹವನ್ನು ತಾಳಲಾರದೆ, ಕೊರಳಿಗೆ ಜಡೆಯನ್ನು ಬಿಗಿದು ಮರಣೋದ್ಯುಕ್ತಳಾಗುವ ನನ್ನನ್ನು, ಆಂಜ

ತ್ವಯಾ ವಿಮುಕ್ತಾಂ ಮರಣಾಯ ನಿಶ್ಚಿತಾಂ ॥ ನಯಸ್ವ ಮಾಂ ಸಾಧು
ಕುರುಷ್ವ ಯಾಚನಾಂ ನ ತೇ ಮಯಾತೋ ಗುರುತಾ ಭವಿಷ್ಯತಿ ॥ ೨೨ ॥
ತಥಾ ಬ್ರುವಾಣಾ ಮಪಿಧರ್ಮ ವತ್ಸಲೋ
ನಚಸ್ಮ ಸೀತಾಂ ನೃವರೋ ನಿನೀಷತಿ ॥
ಉವಾಚ ಚೈನಾಂ ಬಹುಸನ್ನಿವರ್ತನೇ
ವನೇ ನಿವಾಸಸ್ಯ ಚ ದುಃಖಿತಾಂ ಪ್ರತಿ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತವಿಂಶಸ್ಸರ್ಗಃ.

ಪುರುಷನಲ್ಲಿ ಅಭಿಪ್ರಾಯವಿಲ್ಲದವಳಾದ, ಅನುರಕ್ತಚೇತಸಂ - ನಿನ್ನಲ್ಲಿಯೇ ಅನುರಾಗಯುಕ್ತವಾದ ಮನಸ್ಸುಳ್ಳ, ತ್ವಯಾ - ನಿನ್ನಿಂದ, ವಿಯುಕ್ತಾ - ವಿರಹಿತಳಾದರೆ, ಮರಣಾಯ - ಸಾಯುವದಕ್ಕೆ, ನಿಶ್ಚಿತಾಂ - ನಿಶ್ಚಯವುಳ್ಳ, ಮಾಂ - ನನ್ನನ್ನು, ನಯಸ್ವ - ಕರೆದುಕೊಂಡು ಹೋಗು, ಯಾಚಾನಾಂ - ನನ್ನ ಪ್ರಾರ್ಥನೆಯನ್ನು, ಸಾಧು - ಸಫಲವನ್ನಾಗಿ, ಕುರುಷ್ವ - ಮಾಡು, ತೇ - ನಿನಗೆ, ಅತಃ - ಈ ಕರೆದುಕೊಂಡು ಹೋಗುವುದರಿಂದ, ಗುರುತಾ - ಭಾರವು, ಮಯಾ-ನನ್ನಿಂದ, ನಭವಿಷ್ಯತಿ - ಆಗುವುದಿಲ್ಲ. ॥ ೨೨ ॥ ಧರ್ಮವತ್ಸಲಃ - ಧರ್ಮದಲ್ಲಿ ವಾತ್ಸಲ್ಯವುಳ್ಳ, ನೃವರಃ- ಮನುಷ್ಯ ಶ್ರೇಷ್ಠನಾದ ಶ್ರೀರಾಮನು, ತಥಾ - ಆಪರಿಯಾಗಿ, ಬ್ರುವಾಣಾಮಪಿ - ಹೇಳುತ್ತಿರುವಳಾದರೂ, ಏನಾಂಸೀತಾ - ಈ ಸೀತಾದೇವಿಯನ್ನು, ನನಿನೀಷತಿ - ಕರೆದುಕೊಂಡು ಹೋಗುವದಕ್ಕೆ ಇಚ್ಛಿಸಲಿಲ್ಲವು, ವನೇ - ವನದಲ್ಲಿ, ನಿವಾಸಸ್ಯ - ಇರುವದಕ್ಕೆ, ದುಃಖಿತಾಂಪ್ರತಿ - ವನವಾಸವು ದುಃಖಕರವೆಂದು ತಿಳಿಸುವಿಕೆಯನ್ನು ಕುರಿತು, ಸನ್ನಿವರ್ತನೇ - ಹಿಂತಿರಿಗಿಸುವ ವಿಷಯದಲ್ಲಿ, ಬಹು- ಅನೇಕ ಪ್ರಕಾರವಾಗಿ, ಉವಾಚ - ಹೇಳಿದನು. ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತವಿಂಶಸ್ಸರ್ಗಃ.

ಆಗಿರುವ ನನ್ನನ್ನು ನಿನ್ನೊಡನೆಯೇ ಕರೆದುಕೊಂಡು ವನವಾಸಕ್ಕೆ ತೆರಳು, ಈ ನನ್ನ ಪ್ರಾರ್ಥನೆಯನ್ನು ಸಫಲವಾದುದನ್ನಾಗಿ ಮಾಡು." ॥ ೧೩-೨೨ ॥ ಎಂಬೀ ಪ್ರಕಾರವಾಗಿ ವಿಧವಿಧವಾಗಿ ಬೇಡುತ್ತಿದ್ದರೂ, ಧರ್ಮದಲ್ಲಿಯೇ ವಾತ್ಸಲ್ಯವುಳ್ಳ ಆ ಶ್ರೀರಾಮಮೂರ್ತಿಯು ಆಕೆಯನ್ನು ಕರೆದುಕೊಂಡು ಹೋಗಲು ಇಷ್ಟವಿಲ್ಲದೆ, ಆಕೆಯನ್ನು ಪಟ್ಟಣದಲ್ಲಿಯೇ ನಿಲ್ಲಿಸಲೋಸುಗ ವನದಲ್ಲಿರುವ ಕಷ್ಟಗಳೆಲ್ಲವನ್ನೂ ಹೇಳಲುಪಕ್ರಮಿಸಿದನು. ॥ ೨೩ ॥

ಇಂತಿದು ಸೀತಾದೇವಿ ಕೃತ ವನಗಮನ ಯಾಚನಾ ವೃತ್ತಾಂತ ವಿವರಣವೆಂಬ
ಇಪ್ಪತ್ತೇಳನೆಯ ಸರ್ಗವು ಸಮಾಪ್ತವಾದುದು.

ನೇಯನನ್ನು ಕಳುಹುವಿಕೆಯಿಂದ ಕರೆಯಿಸಿಕೊಳ್ಳುವೆಯಷ್ಟೆ? ಆದುದರಿಂದ ನನ್ನನ್ನೀಗ ನಿನ್ನೊಡನೆ ಕರೆದುಕೊಂಡು ಹೋಗು. ಹಿಂದೆ ರಾವಣ ಸಂಹಾರ ವಿಚಾರದಲ್ಲಿ ದೇವತೆಗಳು ಮಾಡಿದ ಯಾಚನೆಯನ್ನು ಸಫಲಗೊಳಿಸು.

ಗೋವಿಂದರಾಜೀಯಂ.

ಅಯೋಧ್ಯಾಕಾಂಡೇ ಅಷ್ಟಾವಿಂಶಸ್ಸರ್ಗಃ.

ಸಏವಂ ಬ್ರುವತೀಂ ಸೀತಾಂ ಧರ್ಮಜ್ಞೋ ಧರ್ಮವತ್ಸಲಃ ॥ ನ ನೇತುಂ ಕುರುತೇ ಬುದ್ಧಿಂ ವನೇ ದುಃಖಾನಿ ಚಿಂತಯನ್ ॥ ೧ ॥ ಸಾಂತ್ವಯಿತ್ವಾ ಪುನಸ್ತಾಂತು ಬಾಷ್ಪ ದೂಷಿತ ಲೋಚನಾಂ ॥ ನಿವರ್ತನಾರ್ಥೇ ಧರ್ಮಾತ್ಮಾ ವಾಕ್ಯಮೇತ ದುವಾಚಹ ॥ ೨ ॥ ಸೀತೇ ಮಹಾಕುಲೀನಾಽಸಿ ಧರ್ಮೇಚ ನಿರತಾ ಸದಾ ॥ ಇಹಾಚರಸ್ವ ಧರ್ಮಂ ತ್ವಂ ಮಾ ಯಥಾ ಮನಸಸ್ಸುಖಂ ॥ ೩ ॥ ಸೀತೇ ಯಥಾ ತ್ವಾಂ ವಕ್ಷ್ಯಾಮಿ ತಥಾ ಕಾರ್ಯಂ ತ್ವಯಾಬಲೇ ॥ ವನೇ

ಧರ್ಮಜ್ಞಃ - ಧರ್ಮವನ್ನು ತಿಳಿದಿರುವ, ಧರ್ಮವತ್ಸಲಃ - ಧರ್ಮದಲ್ಲಿ ವಾತ್ಸಲ್ಯವುಳ್ಳ, ಸಃ - ಆ ಶ್ರೀರಾಮನು, ವನೇ - ವನದಲ್ಲಿ, ದುಃಖಾನಿ - ದುಃಖಗಳನ್ನು, ಚಿಂತಯನ್ - ಆಲೋಚಿಸುತ್ತ, ಏವಂ - ಈಪರಿಯಾಗಿ, ಬೃವತೀಂ - ಹೇಳುತ್ತಿರುವ, ಸೀತಾಂ - ಸೀತಾದೇವಿಯನ್ನು, ನೇತುಂ - ಕರೆದುಕೊಂಡು ಹೋಗುವದಕ್ಕೆ, ಬುದ್ಧಿಂ - ಮನಸ್ಸನ್ನು, ನಕುರುತೇ - ಮಾಡಲಿಲ್ಲ. ॥ ೧ ॥ ಧರ್ಮಾತ್ಮಾ - ಧರ್ಮದಲ್ಲೇ ಮನವುಳ್ಳ ಆ ಶ್ರೀರಾಮನು, ಬಾಷ್ಪದೂಷಿತಲೋಚನಾಂ, ಬಾಷ್ಪ - ಕಣ್ಣೀರಿನಿಂದ, ದೂಷಿತ - ವ್ಯಾಪ್ತವಾದ, ಲೋಚನಾಂ - ನೇತ್ರಗಳುಳ್ಳ, ತಾಂ - ಆ ಸೀತಾದೇವಿಯನ್ನು, ಸಾಂತ್ವಯಿತ್ವಾ - ಸಮಾಧಾನಗೊಳಿಸಿ, ನಿವರ್ತನಾರ್ಥೇ - ಹಿಂತಿರುಗಿಸುವ ವಿಷಯದಲ್ಲಿ, ಪುನಃ - ಮತ್ತು, ಏತದ್ವಾಕ್ಯಂ - ಈ ಮಾತನ್ನು, ಉವಾಚ - ಹೇಳಿದನಷ್ಟೆ. ॥ ೨ ॥ ಹೇ ಸೀತೆ - ಎಲೌ ಸೀತಾದೇವಿಯೆ, ಮಹಾಕುಲೀನಾ - ದೊಡ್ಡ ಕುಲದಲ್ಲಿ ಹುಟ್ಟಿದವಳು, ಅಸಿ - ಆಗಿರುವೆ, ಧರ್ಮೇಚ - ಧರ್ಮದಲ್ಲಿಯೂ, ಸದಾ - ಯಾವಾಗಲೂ, ನಿರತಾ - ಆಸಕ್ತಳಾಗಿ, ತ್ವಂ- ನೀನು, ಇಹ - ಇಲ್ಲಿಯೇ, ಸ್ವಧರ್ಮಂ - ನಿನ್ನ ಧರ್ಮವನ್ನು, ಆಚರ - ಆಚರಿಸು, ಮನಸಃ - ಮನಸ್ಸಿಗೆ, ಯಥಾ - ಹೇಗೆ, (ಮ) ಸುಖಂ - ಸುಖವು, ಭವತಿ - ಆಗುತ್ತದೆಯೋ, ತದಾ - ಹಾಗೆಯೇ, ಮಾಚರ - ಮಾಡಬೇಡ, (ಗೋ) ಮಾಂ - ನನ್ನನ್ನುದ್ದೇಶಿಸಿ, ಧರ್ಮಂ - ಧರ್ಮವನ್ನು, ಆಚರ - ಆಚರಿಸು. ॥ ೩ ॥ ಹೇ ಸೀತೆ - ಎಲೌ ಸೀತಾದೇವಿಯೆ, ಹಿ - ಯಾವಕಾರಣ, ವನೇ - ವನದಲ್ಲಿ, ಬಹವಃ - ಬಹಳವಾದ, ದೋಷಾಃ - ದೋಷಗಳುಂಟೊ, ತಾನ್ ಆ ದೋಷಗಳನ್ನು,

---

ಧರ್ಮದಲ್ಲಿಯೇ ಆಸಕ್ತಿಯುಳ್ಳ ಶ್ರೀರಾಮನು ವನದಲ್ಲಿರುವ ಕಷ್ಟಗಳನ್ನಾಲೋಚಿಸಿದನನಾಗಿ, ತನ್ನೊಡನೆ ಕಾಡಿಗೆ ಬರುತ್ತೇನೆಂದು ಹೇಳುತ್ತಿರುವ ನಿಜಪತ್ನಿಯಾದ ಸೀತಾದೇವಿಯನ್ನು ಕರೆದುಕೊಂಡು ಹೋಗಲಿಷ್ಟವಿಲ್ಲದೆ, ಕಂಬನಿ ತುಂಬಿ ಕಲುಷಿತವಾದ ಕಂಗಳುಳ್ಳ ಆಕೆಯನ್ನು ಸಮಾಧಾನಗೊಳಿಸುತ್ತ ಹೀಗೆಂದನು. "ಎಲೌ ಸೀತಾದೇವಿಯೆ! ಸತ್ಕುಲ ಪ್ರಸೂತಳೂ, ಧರ್ಮದಲ್ಲಿ ಆಸಕ್ತಿಯುಳ್ಳವಳೂ ಆಗಿರುವೆ. ನೀನಿಲ್ಲಿಯೇ ಇದ್ದುಕೊಂಡು ನನಗೋಸುಗ ಧರ್ಮವನ್ನಾಚರಿಸುತ್ತಿರು. ನನ್ನ ಮಾತನ್ನಾಲಿಸಿ, ನಾನು ಹೇಳಿ

ದೋಷಾಹಿ ಬಹವೋ ವದತ ಸ್ತಾನ್ನಿಬೋಧಮೇ ॥ ೪ ॥ ಸೀತೇ ವಿಮುಚ್ಯತಾಮೇಷಾ ವನವಾಸಕೃತಾ ಮತಿಃ ॥ ಬಹುದೋಷಂ ಹಿ ಕಾಂತಾರಂ ವನಮಿತ್ಯಭಿಧೀಯತೇ ॥ ೫ ॥ ಹಿತಬುದ್ಧ್ಯಾ ಖಲು ವಚೋ ಮಯೈತದಭಿಧೀಯತೇ ॥ ಸದಾ ಸುಖಂ ನಜಾನಾಮಿ ದುಃಖಮೇವ ಸದಾ ವನಂ ॥ ೬ ॥ ಗಿರಿನಿರ್ಝರ ಸಂಭೂತಾ ಗಿರಿಕಂದರ ವಾಸಿನಾಂ ॥ ಸಿಂಹಾನಾಂ ನಿನದಾ ದುಃಖಾ ಶ್ರ್ಯೋತುಂ ದುಃಖಮತೋ ವನಂ ॥ ೭ ॥ ಕ್ರೀಡಮಾನಾಶ್ಚ ವಿಸ್ರಬ್ಧಾ ಮತ್ತಾ ಶ್ಶೂನ್ಯೇ ಮಹಾಮೃಗಾಃ ॥ ದೃಷ್ಟ್ವಾ ಸಮಭಿವರ್ತಂತೇ

ಮೇ - ನನ್ನಿಂದ, ನಿಬೋಧ - ತಿಳಿದುಕೋ, ತ್ವಾಂ - ನಿನ್ನನ್ನು ಕುರಿತು, ಯಥಾ - ಹೇಗೆ, ವಕ್ಷ್ಯಾಮಿ - ಹೇಳುವನೊ, ಹೇ ಅಬಲೇ - ಎಲೌ ದುರ್ಬಲಳೇ, (ಗೋ) - ಎಲೌ ಸ್ತ್ರೀಯೆ, ತ್ವಯಾ - ನಿನ್ನಿಂದ, ತಥಾ - ಹೇಗೆ, ಕಾರ್ಯಂ - ಮಾಡತಕ್ಕದು. ॥ ೪ ॥ ಹೇ ಸೀತೇ - ಏಲೌ ಸೀತಾದೇವಿಯೆ, ಹಿ - ಯಾವಕಾರಣ, ಬಹುದೋಷಂ - ಅನೇಕ ದೋಷಗಳುಳ್ಳ, ಕಾಂತಾರಂ- ಅರಣ್ಯವು, ವನಮಿತಿ - ವನವೆಂದು, ಅಭಿಧೀಯತೇ - ಹೇಳಲ್ಪಡುತ್ತದೆಯೋ, ತಸ್ಮಾತ್-ಆಕಾರಣ, ವನವಾಸಕೃತಾ, ವನವಾಸ - ವನಪ್ರಯಾಣಾರ್ಥವಾಗಿ, ಕೃತಾ - ಮಾಡಲ್ಪಟ್ಟ, ಏಷಾಮತಿಃ - ಈ ಬುದ್ಧಿಯು, ವಿಮುಚ್ಯತಾಂ - ಬಿಡಲ್ಪಡಲಿ. ॥ ೫ ॥ ಮಯಾ - ನನ್ನಿಂದ, ಏತದ್ವಚಃ - ಈ ಮಾತು, ಹಿತಬುಧ್ಯಾ - ನಿನಗೆ ಹಿತವಾಗಲಿ ಎಂಬ ಬುದ್ಧಿಯಿಂದ, ಅಭಿಧೀಯತೇ - ಹೇಳಲ್ಪಡುತ್ತದೆ, ಸದಾ - ನಿರಂತರವೂ, ಸುಖಂ - ಸುಖವನ್ನು, ನಜಾನಾಮಿ - ಕಾಣೆನು, ವನಂ - ವನವು, ಸದಾ - ನಿರಂತರವೂ, ದುಃಖಮೇವ - ದುಃಖಕರವಾದುದೇ. ॥ ೬ ॥ ಗಿರಿನಿರ್ಝರಸಂಭೂತಾಃ, ಗಿರಿ - ಬೆಟ್ಟಗಳ, ನಿರ್ಝರ - ಬೆಟ್ಟದ ಜೌಗಿನಪ್ರವಾಹಗಳಲ್ಲಿ, ಸಂಭೂತಾಃ - ಹುಟ್ಟಿರುವ, ಗಿರಿಕಂದರ ವಾಸಿನಾಂ, ಗಿರಿ - ಬೆಟ್ಟಗಳ, ಕಂದರ - ಗುಹೆಗಳಲ್ಲಿ, ವಾಸಿನಾಂ - ವಾಸಮಾಡುತ್ತಿರುವ, ಸಿಂಹಾನಾಂ - ಸಿಂಹಗಳ, ನಿನದಾಃ - ಧ್ವನಿಗಳು, ಶ್ರೋತುಂ - ಕೇಳುವದಕ್ಕೆ, ದುಃಖಾಃ - ದುಃಖಕರಗಳಾದಂಥವು, ಅತಃ - ಈ ಕಾರಣದ, ವನಂ - ವನವು, ದುಃಖಂ - ದುಃಖಕರವಾದುದು. ॥ ೭ ॥ ಹೇ ಸೀತೆ - ಎಲೌ ಸೀತಾದೇವಿಯೆ, ಶೂನ್ಯೇ - ನಿರ್ಮಾನುಷ ಪ್ರದೇಶದಲ್ಲಿ, ಕ್ರೀಡಮಾನಾಃ - ವಿಹರಿಸುತ್ತಿರುವ, ವಿಸ್ರಬ್ಧಾಃ - ಪರಸ್ಪರ ವಿಶ್ವಾಸವುಳ್ಳ, ಮತ್ತಾಃ - ಮದವೇರಿದ, ಮಹಾಮೃಗಾಃ - ದೊಡ್ಡ ಮೃಗಗಳಾದ ಸಿಂಹ ಶಾರ್ದೂಲಾದಿಗಳು,(ನಮ್ಮನ್ನು)ದೃಷ್ಟ್ವಾ-ಕಂಡು,ಸಮಭಿವರ್ತಂತೆ-ಹೊಡೆ

ದಂತೆ ಮಾಡು. ಕೇಳು; ಅರಣ್ಯದಲ್ಲಿ ಅನೇಕ ದೋಷಗಳಿರುವುವು. ಆದುದರಿಂದ ನನ್ನೊಡನೆ ಬರಬೇಕೆಂಬ ಈ ಬುದ್ಧಿಯನ್ನು ದೂರ ಮಾಡು. ಏಕೆಂಬೆಯೋ? ಹೇಳುತ್ತೇನೆ; ಕೇಳು. ಅನೇಕ ದೋಷಗಳುಳ್ಳುದಾದುದರಿಂದ ಕಾಂತಾರವು ವನವೆಂದು ಕರೆಯಲ್ಪಡುವುದು. ಅಲ್ಲದೆ ಅರಣ್ಯದಲ್ಲಿ ಯಾವಾಗಲೂ ದುಃಖವೇ ಹೊರ್ತು ಸುಖವೆಂಬುದಿಲ್ಲ. ಬೆಟ್ಟಗಳಿಂದ ಹುಟ್ಟಿದ ಪ್ರವಾಹಗಳ ಘೋಷ, ಗಿರಿಗಹ್ವರಗಳಲ್ಲಿರುವ ಮೃಗರಾಜರ ಆರ್ಭಟಗಳು ಇವು ಅರಣ್ಯದಲ್ಲಿ ಕೇಳಿದರೆ ಕರ್ಣಕಠೋರವಾಗಿರುವುದು ಮಾತ್ರವಲ್ಲದೆ ನಿರ್ಜನ ಪ್ರದೇಶಗಳಲ್ಲಿ ಏನೊಂದೂ ಭಯವಿಲ್ಲದೆ ಕ್ರೀಡಿಸುತ್ತಿರುವ, ಮದವೇರಿದ ಸಿಂಹ ಶಾರ್ದೂ

ಸೀತೇ ದುಃಖಮತೋ ವನಂ ॥೮॥ ಸಗ್ರಾಹಾ ಸ್ಸರಿತಶ್ಚೈವ ಪಂಕವತ್ಯ
ಸ್ಸುದುಸ್ತರಾಃ ॥ ಮತ್ತೈರಪಿ ಗಜೈರ್ನಿತ್ಯ ಮತೋದುಃಖತರಂ ವನಂ ॥೯॥
ಲತಾ ಕಂಟಕ ಸಂಕೀರ್ಣಾಃ ಕೃಕವಾಕೂಪ ನಾದಿತಾಃ ॥ ನಿರಪಾಶ್ಚ ಸುದು
ರ್ಗಾಶ್ಚ ಮಾರ್ಗಾ ದುಃಖ ಮತೋ ವನಂ ॥೧೦॥ ಸುಪ್ಯತೇ ಪರ್ಣ
ಶಯ್ಯಾಸು ಸ್ವಯಂ ಭಗ್ನಾಸು ಭೂತಲೇ ॥ ರಾತ್ರಿಷು ಶ್ರಮಖಿನ್ನೇನ ತಸ್ಮಾ
ದ್ದುಃಖತರಂ ವನಂ ॥೧೧॥ ಅಹೋರಾತ್ರಂಚ ಸಂತೋಷಃ ಕರ್ತವ್ಯೋ
ನಿಯತಾತ್ಮನಾ ॥ ಫಲೈ ರ್ವೃಕ್ಷಾವಪತಿತೈ ಸ್ಸೀತೇ ದುಃಖಮತೋ ವನಂ॥೧೨॥

ಯುವದಕ್ಕೆ ಅಟ್ಟಿಕೊಂಡು ಬರುತ್ತವೆ, ಅತಃ - ಈಕಾರಣ, ವನಂ - ವನವು, ದುಖಂ - ದುಃಖಕರವಾದುದು. ॥೮॥ ಸಗ್ರಾಹಾಃ - ನೆಗಳುಗಳಿಂದೊಡಗೂಡಿದ, ಸರಿತಶ್ಚೈವ - ನದಿಗಳೂ, ಪಂಕವತ್ಯಃ - ಬಹು ಕೆಸರುಳ್ಳವುಗಳಾದ ಕಾರಣ, ದುಸ್ತರಾಃ - ದಾಟುವದಕ್ಕೆ ಅವಶ್ಯಕವಾದವುಗಳು, ಮತ್ತೈಃ - ಮದವೇರಿದ, ಗಜೈರಪಿ - ಆನೆಗಳಿಂದಲೂ, ನಿತ್ಯಂ - ನಿರಂತರವೂ, ಉಪಲಕ್ಷಿತಾಃ - ಕೂಡಿಕೊಂಡಿರುತ್ತವೆ, ಅತಃ - ಈಕಾರಣ, ವನಂ - ವನವು, ದುಃಖತರಂ - ಬಹಳ ದುಃಖಕರವಾದುದು. ॥೯॥ ಲತಾಕಂಟಕಸಂಕೀರ್ಣಾಃ, ಲತಾ - ಬಳ್ಳಿಗಳಿಂದಲೂ, ಕಂಟಕ - ಮುಳ್ಳುಗಳಿಂದಲೂ, ಸಂಕೀರ್ಣಾಃ - ತುಂಬಿರುವ, ಕೃಕವಾಕೂಪನಾದಿತಾಃ, ಕೃಕವಾಕು - ಕಾಡು ಕೋಳಿಗಳಿಂದ, ಉಪನಾದಿತಾಃ - ಧ್ವನಿಗೊಳಿಸಲ್ಪಟ್ಟ, ನಿರಪಾಃ - ನೀರಿಲ್ಲದಿರುವ, ಮಾರ್ಗಾಃ - ಹಾದಿಗಳು, ಸುದುರ್ಗಾಶ್ಚ - ಹೆಜ್ಜೆಯಿಡುವದಕ್ಕೆ ಅಸಾಧ್ಯಗಳು, ಅತಃ - ಇದರಿಂದ, ವನಂ - ವನವು, ದುಃಖಂ-ದುಃಖಕರವು. ॥೧೦॥ ಯಸ್ಮಾತ್ - ಯಾವ ಕಾರಣ, ಭೂತಲೇ - ನೆಲದಲ್ಲಿ, ಸ್ವಯಂ - ತನ್ನಷ್ಟಕ್ಕೆ ತಾನೆ, ಭಾಗ್ನಾಸು - ಮುರಿದುಹೋದ, ಪರ್ಣಶಯ್ಯಾಸು - ಎಲೆಗಳ ಹಾಸಿಗೆಯಲ್ಲಿ, ರಾತ್ರಿಷು - ರಾತ್ರಿಗಳಲ್ಲಿ. ಶ್ರಮಖಿನ್ನೇನ, ಶ್ರಮ - ಆಯಾಸದಿಂದ, ಖಿನ್ನೇನ - ಬಳಲಿಹೋದವನಿಂದ, ಸುಪ್ಯತೇ - ನಿದ್ರೆಮಾಡಲ್ಪಡುತ್ತದೆಯೋ, ತಸ್ಮಾತ್ - ಆಕಾರಣ, ವನಂ - ವನವು, ದುಃಖತರಂ - ಬಹಳ ದುಃಖಕರವಾದುದು. ॥೧೧॥ ಅಹೋರಾತ್ರಂ - ಹಗಲು ರಾತ್ರಿಗಳಲ್ಲಿಯೂ, ವೃಕ್ಷಾವಪತಿತೈಃ, ವೃಕ್ಷ - ಗಿಡಗಳಿಂದ, ಅವಪತಿತೈಃ - ಕೆಳಗೆ ಬಿದ್ದಿರುವ, ಫಲೈಃ - ಹಣ್ಣು

ಲಾದಿಗಳು ನಮ್ಮನ್ನು ಕಂಡೊಡನೆಯೇ ಅಟ್ಟಿಸಿಕೊಂಡು ಬರುತ್ತವೆ. ॥೧-೮॥ ಅರಣ್ಯದಲ್ಲಿರುವ ನದಿಗಳಾದರೋ, ಕೆಸರಿನಿಂದೊಡಗೂಡಿ, ಮೊಸಳೆಗಳಿಂದಲೂ, ಆನೆಗಳಿಂದಲೂ ತುಂಬಿರುತ್ತವೆ. ಅಲ್ಲಿರುವ ಮಾರ್ಗಗಳೆಲ್ಲಿ ಲತೆಗಳಿಂದಲೂ, ಮುಳ್ಳುಗಳಿಂದಲೂ ಕೂಡಿದುದಾಗಿರುತ್ತವೆ. ಕಾಡು ಕೋಳಿಗಳಿಂದ ಶಬ್ದಾಯಮಾನವಾಗಿಯೂ, ಜಲರಹಿತವಾಗಿಯೂ, ಪ್ರವೇಶಿಸಲಸದಳವಾಗಿಯೂ, ಇರುವುದಾದುದರಿಂದ ವನಗಮನವು ಮಹಾ ಪ್ರಯಾಸಕರವಾದುದು. ॥೯-೧೦॥ ಇದಲ್ಲದೆ ರಾತ್ರಿಕಾಲಗಳಲ್ಲಿ ಗಿಡಗಳ ಕೆಳಭಾಗದಲ್ಲಿ ಉದುರಿದ ಎಲೆಗಳ ಮೇಲೆಯೇ ಮಲಗಬೇಕಾಗುವುದು. ಅಹರ್ನಿಶವೂ, ಯಾವ ಪದಾರ್ಥವನ್ನೂ ಅಪೇಕ್ಷಿಸದೆ ವೃಕ್ಷಗಳಿಂದುದುರಿದ ಫಲಗಳನ್ನೂ ಸಂತೋಷದಿಂದ ಭುಜಿಸಿ ತೃಪ್ತಿಯನ್ನು ಪಡೆಯಬೇಕು. ಇಷ್ಟೆಯಲ್ಲದೆ ಶಕ್ತ್ಯಾನುಸಾರವಾಗಿ ಉಪವಾಸಗಳನ್ನು ಮಾಡುತ್ತ,

ಉಪವಾಸಶ್ಚ ಕರ್ತವ್ಯೋ ಯಥಾ ಪ್ರಾಣೇನ ಮೈಥಿಲೀ ॥ ಜಟಾಭಾರಶ್ಚ ಕರ್ತವ್ಯೋ ವಲ್ಕಲಾಂಬರ ಧಾರಿಣಾ ॥ ೧೩ ॥ ದೇವತಾನಾಂ ಪಿತೄಣಾಂಚ ಕರ್ತವ್ಯಂ ವಿಧಿಪೂರ್ವಕಂ ॥ ಪ್ರಾಪ್ತಾನಾಮತಿಥೀನಾಂಚ ನಿತ್ಯಶಃ ಪ್ರತಿಪೂಜನಂ ॥ ೧೪ ॥ ಕಾರ್ಯಸ್ತ್ರಿರಭಿಷೇಕಶ್ಚ ಕಾಲೇಕಾಲೇಚ ನಿತ್ಯಶಃ ॥ ಚರತಾ ನಿಯಮೇನೈವ ತಸ್ಮಾದ್ದುಃಖತರಂ ವನಂ ॥ ೧೫ ॥ ಉಪಹಾರಶ್ಚ ಕರ್ತವ್ಯಃ ಕುಸುಮೈಸ್ಸ್ವಯಮಾಹೃತೈಃ ॥ ಆರ್ಷೇಣ ವಿಧಿನಾ ವೇದ್ಯಾಂ ಬಾಲೇ ದುಃಖಮತೋ ವನಂ ॥ ೧೬ ॥ ಯಥಾ ಲಬ್ಧೇನ ಸಂತೋಷಃ

ಗಳಿಂದ. ನಿಯತಾತ್ಮನಾ, ನಿಯತ - ನಿಗ್ರಹಿಸಲ್ಪಟ್ಟ, ಆತ್ಮನಾ - ಮನಸ್ಸುಳ್ಳವನಿಂದ, ಸಂತೋಷಃ- ಭೋಜನ ತೃಪ್ತಿಯು, ಕರ್ತವ್ಯಃ - ಮಾಡತಕ್ಕದು, ಅತಃ - ಈಕಾರಣ, ಹೇ ಸೀತೆ - ಎಲೌ ಸೀತಾದೇವಿಯೆ, ವನಂ - ವನವು, ದುಃಖಂ - ದುಃಖಕರವಾದುದು. ॥ ೧೨ ॥ ಹೇ ಮೈಥಿಲಿ - ಎಲೌ ಜನಕರಾಯನಮಗಳೆ, ಯಥಾಪ್ರಾಣೇನ - ಯಥಾ ಶಕ್ತಿಯಿಂದ, ಉಪವಾಸಶ್ಚ - ಉಪವಾಸವೂ, ಕರ್ತವ್ಯಃ - ಮಾಡತಕ್ಕದು, ವಲ್ಕಲಾಂಬರಧಾರಿಣಾ, ವಲ್ಕಲಾಂಬರ - ನಾರುವಸ್ತ್ರಗಳನ್ನು, ಧಾರಿಣಾ - ಧರಿಸಿದವನಿಂದ, ಜಟಾಭಾರಶ್ಚ - ಜಡೆಗಳತಂಡವೂ, ಕರ್ತವ್ಯಃ - ಮಾಡಿಕೊಳ್ಳತಕ್ಕದು. ॥ ೧೩ ॥ ದೇವತಾನಾಂ - ದೇವತೆಗಳಿಗೂ, ಪಿತೄಣಾಂಚ - ಪಿತೃಗಳಿಗೂ, ಪ್ರಾಪ್ತಾನಾಂ - ಬರುತ್ತಿರುವ, ಅತಿಥೀನಾಂಚ - ಅತಿಥಿಗಳಿಗೂ, ನಿತ್ಯಶಃ - ನಿರಂತರವೂ, ವಿಧಿಪೂರ್ವಕಂ - ಯಥಾ ಶಾಸ್ತ್ರ ಪ್ರಕಾರವಾಗಿ, ಪ್ರತಿಪೂಜನಂ - ಸತ್ಕಾರವು, ಕರ್ತವ್ಯಂ - ಮಾಡತಕ್ಕದು. ॥ ೧೪ ॥ ನಿತ್ಯಶಃ - ನಿರಂತರವೂ, ನಿಯಮೇನೈವ - ನಿಯಮದಿಂದಲೇ, ಚರತಾ - ಸಂಚಾರಮಾಡುತ್ತಿರುವನಿಂದ, ಕಾಲೇಕಾಲೇ - ಪ್ರಾತಃಕಾಲ ಸಾಯಂಕಾಲಾದಿಗಳಲ್ಲಿ, ತ್ರಿಃ-ಮೂರಾವರ್ತಿಯು, ಅಭಿಷೇಕಃ- ಸ್ನಾನವು, ಕಾರ್ಯಃ - ಮಾಡತಕ್ಕದು, ತಸ್ಮಾತ್ - ಅದುದರಿಂದ, ವನಂ - ವನವು, ದುಃಖತರಂ- ಬಹಳ ದುಃಖಕರವಾದುದು. ॥ ೧೫ ॥ ಹೇ ಬಾಲೇ - ಎಲೌ ಹುಡಿಗಿಯೆ, ವೇದ್ಯಾಂ - ಅಗ್ನಿ ಹೋತ್ರವೇದಿಕೆಯಲ್ಲಿ, ಆರ್ಷೇಣ - ಋಷಿಪ್ರೋಕ್ತವಾದ, ವಿಧಿನಾ - ವಾನಪ್ರಸ್ಥಾಶ್ರಮಿಗಳಿಗೆ ಉಚಿತವಾದ, ವಿಧಿನಾ - ವಾನಪ್ರಸ್ಥಾಶ್ರಮಗಳಿಗೆ ಉಚಿತವಾದ ವಿಧಾನದಿಂದ, ಸ್ವಯಂ - ತನ್ನಿಂದಲೆ, ಆಹೃತೈಃ - ತರಲಲ್ಪಟ್ಟ, ಕುಸುಮೈಃ - ಹೂಗಳಿಂದ, ಉಪಹಾರಃ - ಬಲಿಯು, ಕರ್ತವ್ಯಃ - ಮಾಡತಕ್ಕದು, ಅತಃ - ಇದರಿಂದ, ವನಂ - ವನವು, ದುಃಖಂ - ದುಃಖಕರವಾದುದು. ॥ ೧೬ ॥

ಜೆಡೆಗಳನ್ನೂ, ನಾರುವಸ್ತ್ರಗಳನ್ನೂ ಧರಿಸಿ, ದೇವ, ಪಿತೃ, ಅತಿಥಿ ಇವರ ಪೂಜೆಯನ್ನು ಪ್ರತಿದಿನವೂ ಮಾಡುತ್ತ, ನಿಯಮದಿಂದ ತ್ರಿಷವಣ ಸ್ನಾನಗಳನ್ನು ಮಾಡಿ, ತನ್ನಿಂದಲೇ ತರಲ್ಪಟ್ಟ ಹೂಗಳಿಂದ ವಾನಪ್ರಸ್ಥಾಶ್ರಮಕ್ಕೆ ಯೋಗ್ಯವಾದ ರೀತಿಯಿಂದ ವೇದಿಕೆಯಲ್ಲಿ ಅರ್ಚನೆಯಂ ಗೈಯುತ್ತ, ಎಷ್ಟು ಸಿಕ್ಕಿದರೆ ಅಷ್ಟರಿಂದಲೇ ತೃಪ್ತಿಯನ್ನು ಪಡೆದು ಇರಬೇಕಾದುದರಿಂದ ವನವಾಸವು ಬಹು ಕಷ್ಟವಾದುದಾಗಿರುವುದು. ಇಷ್ಟು ಮಾತ್ರವಲ್ಲದೆ ಅತಿಯಾದ ಗಾಳಿ, ಭಯಂಕರವಾದ ಕಗ್ಗತ್ತಲೆ, ಬಹಳವಾದ ಹಶಿವು, ಬಹಳವಾದ ಭಯ, ಇವೆಲ್ಲವನ್ನೂ ವನವಾಸಮಾಡುವರು ಅನುಭವಿಸ ಬೇಕಾಗುವುದು. ವಿಧವಿಧವಾದ ದುಷ್ಟ ಸರ್ಪ

ಕರ್ತವ್ಯಸ್ತೇನ ಮೈಥಿಲಿ ॥ ಯತಾಹಾರ್ಯೈ ರ್ವನಚರೈ ರ್ನಿತ್ಯಂ ದುಃಖಮತೋ ವನಂ ॥ ೧೭ ॥ ಅತೀವ ವಾತಾ ಸ್ತಿಮಿರಂ ಬುಭುಕ್ಷಾ ಚಾತ್ರ ನಿತ್ಯಶಃ ॥ ಭಯಾನಿಚ ಮಹಾತ್ಯತ್ರ ತತೋ ದುಃಖತರಂ ವನಂ ॥ ೧೮ ॥ ಸರೀಸೃಪಾಶ್ಚ ಬಹವೋ ಬಹುರೂಪಾಶ್ಚ ಭಾಮಿನಿ ॥ ಚರಂತಿ ಪೃಥಿವೀಂ ದರ್ಪಾ ತ್ತತೋ ದುಃಖತರಂ ವನಂ ॥ ೧೯ ॥ ನದೀ ನಿಲಯನಾ ಸ್ಸರ್ಪಾ ನದೀ ಕುಟಿಲ ಗಾಮಿನಃ ॥ ತಿಷ್ಠಂತ್ಯಾವೃತ್ಯ ಪಂಥಾನಂ ತತೋ ದುಃಖತರಂ ವನಂ ॥ ೨೦ ॥ ಪತಂಗಾ ವೃಶ್ಚಿಕಾಃ ಕೀಟಾ ದಂಶಾಶ್ಚ ಮಶಕೈಸ್ಸಹ ॥ ಬಾಧಂತೇ ನಿತ್ಯ ಮಬಲೇ ಸರ್ವಂ ದುಃಖಮತೋ ವನಂ ॥ ೨೧ ॥ ದ್ರುಮಾಃ ಕಂಟಕಿನಶ್ಚೈವ

ಯಥಾಲಬ್ಧೇನ - ಎಷ್ಟು ದೊರಿಯುತ್ತದೆಯೋ, ತೇನ - ಅಷ್ಟರಿಂದಲೇ, ಯತಾಹಾರ್ಯೈಃ, ಯತ - ಮಿಶ್ರವಾಗಿ ಮಾಡಲ್ಪಟ್ಟ, ಆಹಾರೈಃ - ಭೋಜನವುಳ್ಳ, ವನಚರೈಃ - ವನದಲ್ಲಿ ಸಂಚಾರಮಾಡುತ್ತಿರು ವರಿಂದ, ನಿತ್ಯಂ - ನಿರಂತರವೂ, ಸಂತೋಷಃ - ತೃಪ್ತಿಯು, ಕರ್ತವ್ಯಃ - ಮಾಡಿಕೊಳ್ಳತಕ್ಕದು, ಹೇ ಮೈಥಿಲಿ - ಎಲೌ ಜನಕರಾಯನಮಗಳೇ, ಅತಃ - ಈಕಾರಣ, ವನಂ - ವನವು, ದುಖಂ - ವ್ಯಸನಕರವಾದುದು. ॥ ೧೭ ॥ ಅತ್ರ - ಈ ವನದಲ್ಲಿ, ಅತೀವ - ಬಹಳವಾಗಿ, ವಾತಾಃ - ಗಾಳಿಯೂ, ತಿಮಿರಂ - ಕತ್ತಲೂ, ನಿತ್ಯಶಃ - ನಿರಂತರವೂ, ಬುಭುಕ್ಷಾಚ - ಹಸಿವೂ, ಭವತಿ - ಆಗುತ್ತದೆ, ಅತ್ರ - ಈ ವನದಲ್ಲಿ, ಮಹಾತ್ - ಮಹತ್ತರವಾದ, ಭಯಾನಿ - ಸಿಂಹ ಚೋರಾದಿ ಭಯಗಳು, ಭವಂತಿ - ಆಗುತ್ತವೆ, ತತಃ - ಆಕಾರಣ, ವನಂ - ವನವು, ದುಃಖತರಂ - ದುಃಖಕರ ವಾದುದು. ॥೧೮॥ ಹೇ ಭಾಮಿನಿ - ಎಲೌ ಸ್ತ್ರೀಯೆ, ಬಹುರೂಪಾಃ - (ಗೋ) ಬಹು ಉದ್ದವಾಗಿರುವ ಆಕಾರಗಳುಳ್ಳ, ಬಹವಃ - ಅನೇಕಗಳಾದ, ಸರೀಸೃಪಾಶ್ಚ - ಸರ್ಪಗಳೂ, ದರ್ಪಾತ್ - ಗರ್ವದಿಂದ, ಪೃಥಿವೀಂ - ನೆಲದಲ್ಲಿ, ಚರಂತಿ - ಸಂಚರಿಸುತ್ತವೆ, ತತಃ - ಆದುದರಿಂದ, ವನಂ - ವನವು, ದುಃಖ ತರಂ - ಸಂಕಟಕರವಾದುದು. ॥ ೧೯ ॥ ಸರ್ಪಾಃ - ಸರ್ಪಗಳು, ನದೀನಿಲಯನಾಃ - ಹೊಳೆಗಳಲ್ಲಿ ಅವಿತು ಕೊಂಡಿರುತ್ತವೆ, ನದೀ ಕುಟಿಲಗಾಮಿನಃ, ನದೀಃ - ನದಿಗಳಲ್ಲಿ, ಕುಟಿಲಗಾಮಿನಃ - ವಕ್ರ ವಕ್ರವಾಗಿ ಹೋಗುತ್ತಿರುತ್ತವೆ, ಪಂಥಾನಂ - ಮಾರ್ಗದಲ್ಲಿ, ಆವರ್ತ್ಯ - ಸುತ್ತು ಹಾಕಿಕೊಂಡು, ತಿಷ್ಠಂತಿ - ಇರುತ್ತವೆ. ತತಃ - ಅದರಿಂದ, ವನಂ - ವನವು, ದುಃಖತರಂ - ಬಹಳ ವ್ಯಸನಕರವಾದುದು. ॥ ೨೦ ॥ ಹೇ ಅಬಲೇ - ಎಲೌ ಸ್ತ್ರೀಯೆ, ಪತಂಗಾಃ - ಪತಂಗದ ಹುಳ ಗಳು, ವೃಶ್ಚಿಕಾಃ - ಚೇಳುಗಳೂ, ಕ್ರೀಟಾಃ - ಇನ್ನೂ ವನದಲ್ಲಿ ಇರತಕ್ಕ ಹುಳಗಳೂ, ದಂಶಾಶ್ಚ - ಕಾಡುನೊಣಗಳೂ, ಮಶಕೈಸ್ಸಹ - ಸೊಳ್ಳೆಗಳಿಂದಕೂಡಿ, ನಿತ್ಯಂ - ನಿರಂತರವೂ, ಬಾಧಂತೇ - ದುಃಖಗೊಳಿಸುತ್ತವೆ, ಅತಃ - ಇದರಿಂದ, ಸರ್ವಂ - ಸಮಸ್ತವಾದ, ವನಂ - ವನವು, ದುಃಖಂ - ದುಃಖಕರವಾದುದು. ॥ ೨೧ ॥ ಹೇ ಭಾಮಿನಿ - ಎಲೌ ಸ್ತ್ರೀಯೆ, ಕಂಟಕಿನಶ್ಚೈವ - ಮುಳ್ಳು

ಗಳೂ, ಜಲಜಂತುಗಳೂ ಸಹ ಮಾರ್ಗಕ್ಕೆ ಅಡ್ಡಲಾಗಿ ಮಲಗಿರುತ್ತವೆ. ಪಕ್ಷಿಗಳೂ, ಚೇಳು ಗಳೂ, ಅನೇಕ ಬಗೆಯಾದ ಹುಳುಗಳೂ, ಕಾಡು ನೊಣಗಳೂ, ಕಾಡು ಸೊಳ್ಳೆಗಳೂ, ವಿಧವಿಧವಾಗಿ ಬಾಧೆಗೊಳಿಸುತ್ತವೆ. ಗಿಡಗಳ ಮುಳ್ಳುಗಳೂ, ತೀಕ್ಷ್ಣಗಳಾದ ಅಗ್ರಭಾಗಗ

ಕುಶಕಾಶಾಶ್ಚ ಭಾಮಿನಿ ॥ ವನೇ ವ್ಯಾಕುಲ ಶಾಖಾಗ್ರಾ ಸ್ತೇನ ದುಃಖತರಂ ವನಂ ॥ ೨೨ ॥ ಕಾಯಕ್ಲೇಶಾಶ್ಚ ಬಹವೋ ಭಯಾನಿ ವಿವಿಧಾನಿಚ ॥ ಅರಣ್ಯ ವಾಸೇ ವಸತೋ ದುಃಖಮೇವ ತತೋ ವನಂ ॥ ೨೩ ॥ ಕ್ರೋಧ ಲೋಭೌ ವಿಮೋಕ್ತವ್ಯೌ ಕರ್ತವ್ಯಾ ತಪಸೇ ಮತಿಃ ॥ ನಭೇತ್ತವ್ಯಂ ಚ ಭೇತ್ತವ್ಯೇ ನಿತ್ಯಂ ದುಃಖಮತೋ ವನಂ ॥ ೨೪ ॥ ತದಲಂ ತೇ ವನಂ ಗತ್ವಾ ಕ್ಷಮಂ ನಹಿ ವನಂ ತವ ॥ ವಿಮೃಶನ್ನಿಹ ಪಶ್ಯಾಮಿ ಬಹು ದೋಷತರಂ ವನಂ ॥ ೨೫ ॥

ವನಂತು ನೇತುಂ ನಕೃತಾ ಮತಿಸ್ತದಾ
ಬಭೂವ ರಾಮೇಣ ಯದಾ ಮಹಾತ್ಮನಾ ॥

ಗಳುಳ್ಳ, ದ್ರುಮಾಃ - ಗಿಡಗಳೂ, ಕುಶಕಾಶಾಶ್ಚ - ದರ್ಭೆ ಮತ್ತೂ ಜಂಡುಹುಲ್ಲುಗಳೂ, ವನೇ-ವನದಲ್ಲಿ, ವ್ಯಾಕುಲಶಾಖಾಗ್ರಾಃ, ವ್ಯಾಕುಲ - ವಿಸ್ತಾರವಾದ, ಶಾಖಾಗ್ರಾಃ - ಕೊಂಬೆಗಳ ಕೊನೆಗಳುಳ್ಳವುಗಳು, ತೇನ - ಅದರಿಂದ, ವನಂ - ವನವು, ದುಃಖತರಂ - ದುಃಖಕರವಾದುದು. ॥ ೨೨ ॥ ಅರಣ್ಯವಾಸೇ - ವನವಾಸದಲ್ಲಿ, ವಸತಃ - ಇರುತ್ತಿರುವ ಪುರುಷನಿಗೆ, ಕಾಯಕ್ಲೇಶಾಶ್ಚ - ದೇಹಶ್ರಮಗಳು, ಬಹವಃ - ಬಹಳವಾದವು, ಭಯಾನಿ - ಭಯಗಳೂ, ವಿವಿಧಾನಿಚ - ನಾನಾ ಬಗೆಗಳಾಗಿವೆ, ತತಃ - ಆದರಿಂದ, ವನಂ - ವನವು, ದುಃಖಮೇವ - ದುಃಖಕರವಾದುದೇಸರಿ. ॥ ೨೩ ॥ ಕ್ರೋಧಲೋಭೌ - ಕ್ರೋಧ, ವಿಷಯಾಸಕ್ತಿ ಇವೆರಡೂ, ವಿಮೋಕ್ತವ್ಯೌ - ಬಿಡತಕ್ಕವುಗಳು, ತಪಸೇ - ತಪಸ್ಸಿಗೋಸುಗ, ಮತಿಃ - ಬುದ್ಧಿಯು, ಕರ್ತವ್ಯಾ - ಮಾಡತಕ್ಕದು, ಭೇತ್ತವ್ಯೇ - ಭಯಪಡುವ ಸ್ಥಳದಲ್ಲಿ, ನಭೇತ್ತವ್ಯಂ - ಅಂಜಿಕೊಳ್ಳತಕ್ಕದಲ್ಲ, ಅತಃ - ಈಕಾರಣ, ವನಂ - ವನವು, ನಿತ್ಯಂ - ಯಾವಾಗಲೂ, ದುಃಖಂ - ದುಃಖಕರವಾದುದು. ॥ ೨೪ ॥ ತತ್ - ಆಕಾರಣ, ವನಂ - ವನವನ್ನು ಕುರಿತು, ಗತ್ವಾ - ಹೋಗಿ, ತೇ - ನಿನಗೆ, ಅಲಂ - ಸಾಕು, ತವ - ನಿನಗೆ, ವನಂ - ವನವಾಸವು, ನಕ್ಷಮಂಹಿ - ಯೋಗ್ಯವಲ್ಲವಷ್ಟೆ, ಇಹ - ಈಗ, ವಿಮೃಶನ್ - ಆಲೋಚಿಸುತ್ತ, ವನಂ - ವನವನ್ನು, ಬಹುದೋಷತರಂ - ಬಹಳ ದೋಷಗಳುಳ್ಳುದನ್ನಾಗಿ, ಪಶ್ಯಾಮಿ - ಕಾಣುತ್ತೇನೆ. ॥ ೨೫ ॥ ಯದಾ - ಯಾವ ಕಾಲದಲ್ಲಿ, ಮಹಾತ್ಮನಾ - ಮಹಾಧೈರ್ಯಶಾಲಿಯಾದ, ರಾಮೇಣ - ಶ್ರೀರಾಮನಿಂದ, ವನಂ - ವನವನ್ನು ಕುರಿತು, ನೇತುಂ - ಕರೆದುಕೊಂಡು ಹೋಗುವದಕ್ಕೆ, ಮತಿಃ - ಬುದ್ಧಿಯು, ನಕೃತಾ - ಮಾಡಲ್ಪಡಲಿಲ್ಲವೋ, ತದಾ - ಆಗ, ತಸ್ಯ - ಆ ಶ್ರೀರಾ

ಳುಳ್ಳ ದರ್ಭೆಗಳೂ ಬಹು ಬಾಧೆಯನ್ನಿಡುತ್ತವೆ. ಅಲ್ಲದೆ ಅರಣ್ಯದಲ್ಲಿರುವವರಿಗೆ ಬಗೆ ಬಗೆಯಾದ ಕಾಯಕ್ಲೇಶಗಳೂ, ಮಹತ್ತರವಾದ ಭೀತಿಯೂ ಉಂಟಾಗುತ್ತದೆ. ॥೧೧-೨೩॥ ಕ್ರೋಧಲೋಭಗಳನ್ನು ತ್ಯಜಿಸಿ, ತಪಸ್ಸಿನಲ್ಲಿ ಮತಿಯಿಟ್ಟು, ಹೆದರಬೇಕಾದ ವಿಷಯಗಳಲ್ಲಿ ಹೆದರದೆ ಇರಬೇಕಾದುದರಿಂದ ವನಪ್ರಯಾಣವು ನಿನಗೆ ಯೋಗ್ಯವಾದುದಲ್ಲ. ಈ ಬುದ್ಧಿಯನ್ನು ಬಿಟ್ಟುಬಿಡು. ನಾನೀ ಕಷ್ಟಗಳೆನ್ನೆಲ್ಲ ಚನ್ನಾಗಿ ವಿಮರ್ಶಿಸಿ ತಿಳಿದುಕೊಂಡಿರುತ್ತೇನೆ. ॥ ೨೪-೨೫ ॥ ಈ ಪ್ರಕಾರ ಮಹಾನುಭಾವನಾದ ಶ್ರೀರಾಮಚಂದ್ರನು ಸೀತಾದೇವಿ

ನತಸ್ಯ ಸೀತಾ ವಚನಂ ಚಕಾರ ತತ್
ತತೋ ಬ್ರವೀ ದ್ರಾಮಮಿದಂ ಸುದುಃಖಿತಾ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾವಿಂಶಸ್ಸರ್ಗಃ.

ಮನ, ತತ್ವಚನಂ - ಆ ಮಾತನ್ನು, ಸೀತಾ - ಸೀತಾದೇವಿಯು, ನಚಕಾರ - ಅಂಗೀಕರಿಸಲಿಲ್ಲ, ತತಃ - ಬಳಿಕ, ಸುದುಃಖಿತಾ - ಬಹಳವಾಗಿ ದುಃಖಾಕ್ರಾಂತಳು, ಬಭೂವ - ಆದಳು, ರಾಮಂ - ಶ್ರೀರಾಮನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದಳು. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾವಿಂಶಸ್ಸರ್ಗಃ.

ಯನ್ನು ಕರೆದುಕೊಂಡುಹೋಗಲು ಮನವಿಲ್ಲದವನಾದನೋ, ಆಗಲಾಕೆಯು ಆತನ ನುಡಿಗಳನ್ನಂಗೀಕರಿಸದೆ ಮಹಾ ದುಃಖವುಳ್ಳವಳಾಗಿ ಆತನನ್ನು ಕುರಿತು ಈ ರೀತಿ ಹೇಳಿದಳು. ॥೨೬॥

ಇಂತಿದು ಶ್ರೀರಾಮ ಗದಿತ ವನದೋಷ ವರ್ಣನವೆಂಬ
ಇಪ್ಪತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನತ್ರಿಂಶಸ್ಸರ್ಗಃ.

ಏತತ್ತು ವಚನಂ ಶ್ರುತ್ವಾ ಸೀತಾ ರಾಮಸ್ಯ ದುಃಖಿತಾ ॥ ಪ್ರಸಕ್ತಾಶ್ರುಮುಖೀ ಮಂದಮಿದಂ ವಚನ ಮಬ್ರವೀತ್ ॥ ೧ ॥ ಯೇ ತ್ವಯಾ ಕೀರ್ತಿತಾ ದೋಷಾ ವನೇ ವಸ್ತವ್ಯತಾಂ ಪ್ರತಿ ॥ ಗುಣಾನೀತ್ಯೇವ ತಾನ್ವಿದ್ಧಿ ತವಸ್ನೇಹ ಪುರಸ್ಕೃತಾ ॥ ೨ ॥ ಮೃಗಾ ಸ್ಸಿಂಹಾ ಗಜಾಶ್ಚೈವ ಶಾರ್ದೂಲಾ ಶ್ಶರಭಾ ಸ್ತಥಾ ॥ ಪಕ್ಷಿಣ ಸ್ಸೃಮರಾಶ್ಚೈವ ಯೇಚಾನ್ಯೇ ವನಚಾರಿಣಃ ॥೩॥ ಅದೃಷ್ಟ ಪೂರ್ವ ರೂಪತ್ವಾ ತ್ಸರ್ವೇ ತೇ ತವ ರಾಘವ ॥ ರೂಪಂ ದೃಷ್ಟ್ವಾ

ಸೀತಾ - ಸೀತಾದೇವಿಯು, ರಾಮಸ್ಯ - ಶ್ರೀರಾಮನ, ಏತದ್ವಚನಂತು - ಈ ಮಾತನ್ನಾದರೆ, ಶೃತ್ವಾ - ಕೇಳಿ, ದುಃಖಿತಾ - ವ್ಯಸನಗೊಂಡವಳಾಗಿ, ಪ್ರಸಕ್ತಾಶ್ರುಮುಖೀ, ಪ್ರಸಕ್ತ-ಸಂಬಂಧಿಸಲ್ಪಟ್ಟ, ಅಶ್ರು - ಕಂಬನಿಗಳುಳ್ಳ, ಮುಖೀ - ಮುಖವುಳ್ಳವಳಾಗಿ, ಮಂದಂ - ಮೆಲ್ಲಗೆ, ಇದಂ ವಚನಂ - ಈ ಮಾತನ್ನು ಅಬ್ರವೀತ್ - ನುಡಿದಳು. ||೧|| ತ್ವಯಾ - ನಿನ್ನಿಂದ, ವನೇ - ವನದಲ್ಲಿ, ವಸ್ತವ್ಯತಾಂಪ್ರತಿ-ವಾಸಮಾಡುವುದನ್ನು ಕುರಿತು, ಯೇದೋಷಾಃ-ಯಾವ ದೋಷಗಳು, ಕೀರ್ತಿತಾಃ-ಹೇಳಲ್ಪಟ್ಟವೋ, ತಾ-ಆ ದೋಷಗಳನ್ನು, ತವ-ನಿನ್ನ, ಸ್ನೇಹಪುರಸ್ಕೃತಾ, ಸ್ನೇಹ - ಸ್ನೇಹದಿಂದ, ಪುರಸ್ಕೃತಾ - ಮಾರ್ಯಾದಿತವಾದ, ಗುಣಾನೀತ್ಯೇವ - ಗುಣಗಳನ್ನಾಗಿಯೇ, ವಿದ್ಧಿ - ತಿಳಿದುಕೋ. ||೨|| ಮೃಗಾಃ - ಮೃಗಗಳೂ, ಸಿಂಹಾಃ - ಸಿಂಹಗಳೂ, ಗಜಾಶ್ಚೈವ - ಆನೆಗಳೂ, ಶಾರ್ದೂಲಾಃ-ಹುಲಿಗಳೂ, ಶರಭಾಃ - ಶರಭಗಳೆಂಬ ಮೃಗ ಜಾತಿಗಳೂ, ತಥಾ - ಹಾಗೆಯೇ, ಪಕ್ಷಿಣಃ - ಪಕ್ಷಿಗಳು, ಸೃಮರಾಶ್ಚೈವ - ಅರಣ್ಯದೆಲ್ಲೆಡೆಯಲ್ಲಿಯೂ ಸಂಚರಿಸುವ ಮೃಗಗಳೂ, ಅನ್ಯೇ - ಮತ್ತೆ ಕೆಲವಾದ, ವನಚಾರಿಣಃ - ವನದಲ್ಲಿ ಸಂಚಾರ ಮಾಡುವವುಗಳು, ಯೇ - ಯಾವವೋ, ಹೇ ರಾಘವ - ಎಲೈ ಶ್ರೀರಾಮನೆ, ತೇ ಸರ್ವೇ - ಅವುಗಳೆಲ್ಲ, ತವ - ನೀನು, ಅದೃಷ್ಟಪೂರ್ವ ರೂಪತ್ವಾತ್ - ಎಂದಿಗೂ ನೋಡದಿರುವ ಸೌಂದರ್ಯವುಳ್ಳವನಾದುದರಿಂದ, ರೂಪಂ - ರೂಪವನ್ನು, ದೃಷ್ಟ್ವಾ - ಕಂಡು, ಅಪಸರ್ಪೇಯುಃ - ಓಡಿಹೋಗುವವು, ಸರ್ವೇ - ಸಮಸ್ತರು, ಭಯೇ - ಭಯ

ಈ ರೀತಿ ಸೀತಾದೇವಿಯು ಶ್ರೀರಾಮಮೂರ್ತಿಯಿಂದುಕ್ತವಾದ ಮಾತುಗಳನ್ನು ಕೇಳಿ ಮಹಾ ದುಃಖಿತಳೂ, ಕಂಬನಿಗಳಿಂದ ತುಂಬಿದ ಮುಖವುಳ್ಳವಳೂ ಆಗಿ ಆತನನ್ನು ಕುರಿತು ಮೆಲ್ಲಮೆಲ್ಲನೆ ಹೇಳತೊಡಗಿದಳು. “ ಆರ್ಯಪುತ್ರನೆ! ವನವಾಸವನ್ನುದ್ದೇಶಿಸಿ ನೀನಾವ ದೋಷಗಳನ್ನು ಹೇಳಿದೆಯೋ, ಅವೆಲ್ಲವನ್ನೂ ಗುಣಗಳನ್ನಾಗಿಯೇ ಭಾವಿಸುವವನಾಗು. ಅರಣ್ಯವಾಸಿಗಳಾದ ಶರಭ, ಸಿಂಹ, ಶಾರ್ದೂಲಗಳೂ, ಗಜಗಳೂ, ಚಮರೀ ಮೃಗಗಳೂ, ಪಕ್ಷಿಗಳೂ ಸಹ, ಯಾವಾಗಲೂ ನೋಡದಿರುವ ನಿನ್ನ ರೂಪವನ್ನು ಕಂಡು ಬೆದರಿ, ಪಲಾಯನ ಸೂಕ್ತವನ್ನು ಪಠಿಸುತ್ತವೆ. ಆದುದರಿಂದ ನಾನು ಹಿರಿಯರ ಅಣತಿಯಂತೆ

ಪಸರ್ಪೇಯುಃ ಭರ್ಯೇ ಸರ್ವೇಹಿ ಬಿಭ್ಯತಿ ॥ ೪ ॥ ತ್ವಯಾಚ ಸಹ ಗಂತವ್ಯಂ
ಮಯಾ ಗುರುಜನಾಜ್ಞಯಾ ॥ ತ್ವದ್ವಿಯೋಗೇನ ಮೇ ರಾಮ ತ್ಯಕ್ತವ್ಯಮಿಹ
ಜೀವಿತಂ ॥ ೫ ॥ ನಚ ಮಾಂ ತ್ವತ್ಸಮೀಪಸ್ಥಾ ಮಪಿಶಕ್ನೋತಿ ರಾಘವ ॥
ಸುರಾಣಾ ಮೀಶ್ವರಶ್ಶಕ್ರಃ ಪ್ರಧರ್ಷಯಿತುಮೋಜಸಾ ॥ ೬ ॥ ಪತಿಹೀನಾತು
ಯಾ ನಾರೀ ನಸಾಶಕ್ಷ್ಯತಿ ಜೀವಿತುಂ ॥ ಕಾಮಮೇವಂ ವಿಧಂ ರಾಮ ತ್ವಯಾ
ಮಮ ವಿದರ್ಶಿತಂ ॥ ೭ ॥ ಅಥಚಾಪಿ ಮಹಾಪ್ರಾಜ್ಞ ಬ್ರಾಹ್ಮಣಾನಾಂ
ಮಯಾ ಶ್ರುತಂ ॥ ಪುರಾ ಪಿತೃಗೃಹೇ ಸತ್ಯಂ ವಸ್ತವ್ಯಂ ಕಿಲ ಮೇ ವನೇ ॥೮॥

ಹೇತುಗಳಲ್ಲಿ, ಬಿಭ್ಯತಿಹಿ - ಹೆದರುತ್ತಾರೆಯಷ್ಟೆ. ॥ ೪ ॥ ಹೇ ರಾಮ - ಎಲೈ ಶ್ರೀರಾಮನೆ, ಮಯಾ - ನನ್ನಿಂದ, ಗುರುಜನಾಜ್ಞಯಾ - ದೊಡ್ಡವರ ಅಪ್ಪಣೆಯಿಂದ, ತ್ವಯಾಸಹಚ - ನಿನ್ನೊಡನೆ, ಗಂತವ್ಯಂ - ಬರತಕ್ಕದು, ತ್ವದ್ವಿಯೋಗೇನಚ - ನಿನ್ನ ವಿರಹದಿಂದ, ಮೇ - ನನ್ನ, ಜೀವಿತಂ - ಪ್ರಾಣವು, ಇಹ - ಈ ಮನೆಯಲ್ಲಿ, ತ್ಯಕ್ತವ್ಯಂ - ತ್ಯಾಗ ಮಾಡತಕ್ಕದು. ॥ ೫ ॥ ಹೇ ರಾಘವ - ಎಲೈ ಶ್ರೀರಾಮನೆ, ತ್ವತ್ಸಮೀಪಸ್ಥಾಂ - ನಿನ್ನ ಸಮೀಪದಲ್ಲಿರುವ, ಮಾಂ - ನನ್ನನ್ನು, ಸುರಾಣಾಂ - ದೇವತೆಗಳಿಗೆ, ಈಶ್ವರೋಪಿ - ಸ್ವಾಮಿಯಾದರೂ, ಶಕ್ರಶ್ಚ - ದೇವೇಂದ್ರನು, ಓಜಸಾ - ಪರಾಕ್ರಮದಿಂದ, ಪ್ರಧರ್ಷಯಿತುಂ - ತಿರಸ್ಕರಿಸುವದಕ್ಕೆ, ನಶಕ್ನೋತಿ-ಸಮರ್ಥನಾಗಲಾರನು. ॥ ೬ ॥ ಯಾನಾರೀತು - ಯಾವ ಸ್ತ್ರೀಯಾದರೆ, ಪತಿಹೀನಾ - ಗಂಡನಿಂದರಹಿತಳಾದವಳೋ, ಸಾ - ಆ ಸ್ತ್ರೀಯು, ಜೀವಿತುಂ - ಬದುಕುವದಕ್ಕೆ, ನಶಕ್ಷ್ಯತಿ - ಸಮರ್ಥಳಾಗುವದಿಲ್ಲ, ಹೇ ರಾಮ - ಎಲೈ ಶ್ರೀರಾಮನೆ, ತ್ವಯಾ - ನಿನ್ನಿಂದ, ಏವಂ ವಿಧಂ - ಈ ಬಗೆಯಾದ ಮಾತು, ಕಾಮಂ - ಅತ್ಯಂತವಾಗಿ, ಮಮ - ನನಗೆ, ವಿದರ್ಶಿತಂ - ಉಪದೇಶ ಮಾಡಲ್ಪಟ್ಟಿದೆ. ॥ ೭ ॥ ಅಥಚಾಪಿ-ಇಷ್ಟೇ ಅಲ್ಲ, ಹೇ ಮಹಾ ಪ್ರಾಜ್ಞ-ಎಲೈ ವಿಶೇಷ ಪ್ರಜ್ಞಾವಂತನೆ, ಮಯಾ - ನನ್ನಿಂದ, ಪುರಾ - ಪೂರ್ವದಲ್ಲಿ, ಪಿತೃಗೃಹೇ - ತಾಯಿಯ ಮನೆಯಲ್ಲಿ, ಬ್ರಾಹ್ಮಣಾನಾಂ - ಸಾಮುದ್ರಿಕಾ ಶಾಸ್ತ್ರಜ್ಞರಾದ ಬ್ರಾಹ್ಮಣರಿಂದ, ವನೇ - ವನದಲ್ಲಿ, ಮಯಾ - ನನ್ನಿಂದ, ವಸ್ತವ್ಯಂಕಿಲೇತಿ - ಇರತಕ್ಕುದೆಂದು, ಸತ್ಯಂ - ಯಥಾರ್ಥವಾಗಿ, ಶ್ರುತಂ - ಕೇಳಲ್ಪಟ್ಟಿತು. ॥ ೮ ॥ ಹೇ ಮಹಾಬಲ-ಎಲೈ ಬಹು ಪರಾಕ್ರಮಿಯೇ, ಲಕ್ಷಣಿಭ್ಯಃ - ಸಾಮುದ್ರಿಕ ಲಕ್ಷಣಗಳನ್ನು ತಿಳಿದಿರುವ, ದ್ವಿಜಾತಿಭ್ಯಃ-

---

ನಿನ್ನೊಡನೆ ಬಂದೇ ಬರುತ್ತೇನೆ. ನೀನು ನನ್ನನ್ನಗಲಿದರೆ ಇಲ್ಲಿಯೇ ಪ್ರಾಣಗಳನ್ನು ತೊರೆಯುತ್ತೇನೆ. ನಿನ್ನ ಸಮೀಪದಲ್ಲಿರುವಾಗ ನನ್ನನ್ನು ಹೆದರಿಸಲು, ಸುರಾಧಿಪನಾದ ದೇವೇಂದ್ರನಿಗೂ ಕೂಡ ಶಕ್ತಿ ಸಾಲದು. ಆದರೆ ಪತಿಹೀನಳಾದ ಸ್ತ್ರೀಯು ಪ್ರಾಣದಿಂದಿರಲಾರಳು, ಎಂಬಿವೇ ಮೊದಲಾದ ವಾಕ್ಯಗಳನ್ನು ನೀನೇ ನನಗೆ ಉಪದೇಶ ಮಾಡಿರುವೆಯಲ್ಲವೆ? ಎಲೈ ಮಹಾ ಮತಿವಂತನೆ! ಹಿಂದೆ ನಾನು ತವರು ಮನೆಯಲ್ಲಿರುವಾಗ, ಸಾಮುದ್ರಿಕಾ ಶಾಸ್ತ್ರಜ್ಞರಾದ ವಿಪ್ರರು ನನ್ನ ಕೈಯನ್ನು ನೋಡಿ ನಾನು ವನವಾಸ ಮಾಡುತ್ತೇನೆಂದು ಖಂಡಿತವಾಗಿಯೂ ಹೇಳಿರುತ್ತಾರೆ. ಅದರಂತೆ ನಾನೂ ಅರಣ್ಯದಲ್ಲಿರಬೇಕೆಂದೇ ಬಯಸುತ್ತಿರುವೆನು. ಇದಂತಿರಲಿ; ಹೇಗಾದರೂ ಅರಣ್ಯವಾಸವು ಮಾಡಬೇಕಾಗಿರುವುದಲ್ಲವೆ?

ಲಕ್ಷಣಿಭ್ಯೋ ದ್ವಿಜಾತಿಭ್ಯ ಶ್ಶ್ರುತ್ವಾಽಹಂ ವಚನಂ ಪುರಾ ॥ ವನವಾಸ ಕೃತೋತ್ಸಾಹಾ ನಿತ್ಯಮೇವ ಮಹಾಬಲ ॥ ೯ ॥ ಅದೇಶೋ ವನವಾಸಸ್ಯ ಪ್ರಾಪ್ತವ್ಯ ಸ್ಸಮಯಾ ಕಿಲ ॥ ಸಾತ್ವಯಾ ಸಹತತ್ರಾಹಂ ಯಾಸ್ಯಾಮಿ ಪ್ರಿಯ ನಾನ್ಯಥಾ ॥ ೧೦ ॥ ಕೃತಾದೇಶಾ ಭವಿಷ್ಯಾಮಿ ಗಮಿಷ್ಯಾಮಿ ಸಹತ್ವಯಾ ॥ ಕಾಲ ಶ್ಚಾಯಂ ಸಮುತ್ಪನ್ನ ಸ್ಸತ್ಯವಾಗ್ಭವತು ದ್ವಿಜಃ ॥ ೧೧ ॥ ವನವಾಸೇಭಿ ಜಾನಾಮಿ ದುಃಖಾನಿ ಬಹುಧಾ ಕಿಲ ॥ ಪ್ರಾಪ್ಯಂತೇ ನಿಯತಂ ವೀರ ಪುರುಷೈರಕೃತಾತ್ಮಭಿಃ ॥೧೨॥ ಕನ್ಯಯಾಚ ಪಿತುರ್ಗೇಹೇ ವನವಾಸ ಶ್ಶ್ರುತೋ ಮಯಾ ॥ ಭಿಕ್ಷಿಣ್ಯಾ ಸ್ಸಾಧುವೃತ್ತಾಯಾ ಮಮ ಮಾತು ರಿಹಾಗ್ರತಃ ॥೧೩॥

ಬ್ರಾಹ್ಮಣರಿಂದ, ಪುರಾ - ಪೂರ್ವದಲ್ಲಿ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅಹಂ - ನಾನು, ನಿತ್ಯಂ - ನಿರಂತರವೂ, ವನವಾಸಕೃತೋತ್ಸಾಹೈವ, ವನವಾಸ - ಅರಣ್ಯವಾಸದಲ್ಲಿ, ಕೃತ - ಮಾಡಲ್ಪಟ್ಟ, ಉತ್ಸಾಹೈವ - ಸಂತೋಷವುಳ್ಳವಳೇ ಆಗಿರುತ್ತೇನೆ. ॥ ೯ ॥ ಹೇ ಪ್ರಿಯ - ಎಲೈ ಪ್ರಿಯನೆ! ವನವಾಸಸ್ಯ-ವನವಾಸದ, ಸಃ ಆದೇಶಃ - ಆ ಉಪದೇಶವು, ಮಯಾ-ನನ್ನಿಂದ, ಪ್ರಾಪ್ತವ್ಯಃಕಿಲ-(೧) ಹೊಂದತಕ್ಕುದಷ್ಟೇ, ಸಾ - ಅಂತಹ ನಾನು, ತ್ವಯಾಸಃ - ನಿನ್ನೊಡಗೂಡಿ, ಯಾಸ್ಯಾಮಿ - ಬರುವೆನು, ಅನ್ಯಥಾ - ಮತ್ತೊಂದು ಬಗೆಯಾಗಿ, ನ - ಇಲ್ಲ. ॥ ೧೦ ॥ ಕೃತಾದೇಶಾ, ಕೃತ - ಮಾಡಲ್ಪಟ್ಟ, ಆದೇಶಾ - ಆಜ್ಞೆಯುಳ್ಳವಳು, ಭವಿಷ್ಯಾಮಿ-ಆಗುವೆನು, ತ್ವಯಾಸಹ - ನಿನ್ನೊಡನೆ, ಗಮಿಷ್ಯಾಮಿ - ಬರುವೆನು, ಅಯಂಕಾಲಶ್ಚ - ಈ ಕಾಲವೂ, ಸಮುತ್ಪನ್ನಃ - ಪ್ರಾಪ್ತವಾಯಿತು, ದ್ವಿಜಃ - ಬ್ರಾಹ್ಮಣನು, ಸತ್ಯವಾಕ್ - ಸಫಲವಾದ ಮಾತುಳ್ಳವನು, ಭವತು - ಆಗಲಿ. ॥ ೧೧ ॥ ವನವಾಸೇ - ವನದಲ್ಲಿರುವ ಕಾಲದಲ್ಲಿ, ಬಹುಧಾ - ಬಹು ಪ್ರಕಾರವಾಗಿ, ದುಃಖಾನಿ - ದುಃಖಗಳನ್ನು, ಅಭಿಜಾನಾಮಿಕಿಲ-ತಿಳಿದುಕೊಂಡಿರುವೆನಷ್ಟೆ, ಹೇ ವೀರ - ಎಲೈ ಶೂರನೇ, ಅಕೃತಾತ್ಮಭಿಃ-ಜಿತೇಂದ್ರಿಯರಲ್ಲದಿರುವ, ಪುರುಷೈಃ - ಪುರುಷರಿಂದ, ಪ್ರಾಪ್ಯಂತೇ - ಹೊಂದಲ್ಪಡುತ್ತವೆ, ನಿಯತಂ-ನಿಶ್ಚಯವು. ॥೧೨॥ ಕನ್ಯಯಾ - ಅವಿವಾಹಿತಳಾದ, ಮಯಾ - ನನ್ನಿಂದ, ಪಿತುಃ-ತಂದೆಯ, ಗೇಹೇ-ಮನೆಯಲ್ಲಿ, ಮಮ - ನನ್ನ, ಮಾತುಃ - ತಾಯಿಯ, ಅಗ್ರತಃ - ಮುಂಗಡೆ, ಸಾಧು ವೃತ್ತಾಯಾಃ -

ಎಲೈ ಪ್ರಿಯನೆ! ಬ್ರಾಹ್ಮಣರು ಹೇಳಿದ ನುಡಿಯು ಸತ್ಯವಾದುದು. ಅದಕ್ಕೆ ಕಾಲವೂ ಒದಗಿರುವುದು. ಆಣತಿಯಾದರೆ ನಿನ್ನೊಡನೆಯೇ ಬರುತ್ತೇನೆ. ॥ ೧-೧೦ ॥ ವನವಾಸ ಮಾಡುವಾಗ ಕಷ್ಟಗಳೊದಗುವುದೆಂಬುದನ್ನು ತಿಳಿದೇ ಇರುವೆನು. ಜಿತೇಂದ್ರಿಯರಲ್ಲದವರು ಅವುಗಳನ್ನು ಕಷ್ಟಗಳೆಂದು ಭಾವಿಸುತ್ತಾರೆ. ನಾನು ಮಾತ್ರ ಹಾಗೆ ಭಾವಿಸುವುದಿಲ್ಲ. ಓ ಸ್ವಾಮಿಯೆ! ನಾನು ಕನ್ನಿಕೆಯಾಗಿ ನಮ್ಮ ತಂದೆಯ ಮನೆಯಲ್ಲಿರುವಾಗಲೇ, ನಮ್ಮ

"ಮಯಾ ಪ್ರಾಪ್ತವ್ಯಃ ಕಿಲ" ಎಂಬ ಕಡೆಯಲ್ಲಿ ಸೀತಾವಾಕ್ಯಾರ್ಥವು ಹೀಗೆ. ಲಲಾಟ ಲಿಖಿತವನ್ನು ಮಿಾರಲಾಗುವುದಿಲ್ಲವಲ್ಲವೆ? ನನ್ನ ಹಣೆಯಲ್ಲೆಂತೂ ಆ ರೀತಿ ಬರೆದಿದೆ. ಅಂತಹ ನಾನು ನಿನ್ನೊಡನೆ ಬರುತ್ತೇನೆ. ಕೇವಲ ಸ್ವೇಚ್ಛೆಯಾಗಿ ಹೊರಡುವುದಿಲ್ಲ. (**ಇದು ಗೋವಿಂದರಾಜೀಯ.**)

ಪ್ರಸಾದಿತಶ್ಚ ವೈ ಪೂರ್ವಂ ತ್ವಂ ಮೇ ಬಹುವಿಧಂ ಪ್ರಭೋ ॥ ಗಮನಂ ವನವಾಸಸ್ಯ ಕಾಂಕ್ಷಿತಂ ಹಿ ಸಹ ತ್ವಯಾ ॥ ೧೪ ॥ ಕೃತಕ್ಷಣಾಹಂ ಭದ್ರಂ ತೇ ಗಮನಂ ಪ್ರತಿ ರಾಘವ ॥ ವನವಾಸಸ್ಯ ಶೂರಸ್ಯ ಚರ್ಯಾಹಿ ಮಮ ರೋಚತೇ ॥ ೧೫ ॥ ಶುದ್ಧಾತ್ಮನ್ ಪ್ರೇಮಭಾವಾದ್ಧಿ ಭವಿಷ್ಯಾಮಿ ವಿಕಲ್ಮಷಾ ॥ ಭರ್ತಾರ ಮನುಗಚ್ಛಂತೀ ಭರ್ತಾಹಿ ಮಮ ದೈವತಂ ॥ ೧೬ ॥ ಪ್ರೇತ್ಯ ಭಾವೇಪಿ ಕಲ್ಯಾಣ ಸ್ಸಂಗಮೋ ಮೇ ಸಹತ್ವಯಾ ॥ ೧೭ ॥ ಶ್ರುತಿರ್ಹಿ ಶ್ರೂಯತೇ ಪುಣ್ಯಾ ಬ್ರಾಹ್ಮಣಾನಾಂ ತಪಸ್ವಿನಾಂ ॥ ಇಹಲೋಕೇಚ ಪಿತೃಭಿ

ಮಹಾ ಕರ್ಮಠಳಾದ, ಭಿಕ್ಷಿಣ್ಯಾಃ-ಭಿಕ್ಷಾರ್ಥವಾಗಿ ಬಂದಿರುವ, ತಾಪಸ್ಯಾಃ-ತಪಸ್ವಿನಿಯ, ಸಕಾಶಾತ್-ದೆಶೆಯಿಂದ, ವನವಾಸಃ - ಅಟವಿಯಲ್ಲಿರುವಿಕೆಯು, ಶ್ರುತಃ - ಕೇಳಲ್ಪಟ್ಟಿತು, ಹೇ ಪ್ರಭೋ - ಎಲೈ ಸ್ವಾಮಿಯೇ, ಪೂರ್ವಂ - ಮೊದಲೆ, ತ್ವಂವೈ - ನೀನಾದರೆ, ಬಹು ವಿಧಂ - ಬಹು ಬಗೆಯಾಗಿ, ಪ್ರಸಾದಿತಶ್ಚ - ಪ್ರಸನ್ನನಾಗಿ ಮಾಡಲ್ಪಟ್ಟೆ, ವನವಾಸಸ್ಯ, ವನೇ - ವನದಲ್ಲಿ, ವಾಸಸ್ಯ - ವಾಸಕ್ಕೋಸುಗ, ತ್ವಯಾಸಹ - ನಿನ್ನೊಡನೆ, ಗಮನಂ - ಪ್ರಯಾಣವು, ಕಾಂಕ್ಷಿತಂಹಿ - ಕೋರಲ್ಪಟ್ಟಿರುವುದಷ್ಟೆ. ॥ ೧೩-೧೪ ॥ ಹೇ ರಾಘವ - ಎಲೈ ಶ್ರೀರಾಮನೇ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ಅಹಂ - ನಾನು, ಕೃತಕ್ಷಣಾ - ಸಮಯವನ್ನು ನಿರೀಕ್ಷಿಸಿಕೊಂಡಿರುವೆನು, ವನವಾಸಸ್ಯ, ವನ - ವನದಲ್ಲಿ, ವಾಸಸ್ಯ - ವಾಸ ಮಾಡುತ್ತಿರುವ, ಶೂರಸ್ಯ - ವೀರನಾದ, ತವ - ನಿನ್ನ, ಚರ್ಯಾ - ಶಿಶ್ರೂಷೆಯು, ಮಮ - ನನಗೆ, ರೋಚತೇಹಿ - ಸಮ್ಮತವಾದುದಷ್ಟೆ. ॥ ೧೫ ॥ ಹೇ ಶುದ್ಧಾತ್ಮನ್ - ಪರಿಶುದ್ಧವಾದ ಮನಸ್ಸುಳ್ಳವನೇ, ಪ್ರೇಮಭಾವಾತ್ - ಪ್ರೇಮಾತಿಶಯದಿಂದ, ಭರ್ತಾರಂ - ಗಂಡನಾದ ನಿನ್ನನ್ನು, ಅನುಗಚ್ಛಂತೀ - ಅನುಸರಿಸಿ ಬರುತ, ವಿಕಲ್ಮಷಾ - ಪಾಪರಹಿತಳು, ಭವಿಷ್ಯಾಮಿ - ಆಗುವೆನು, ಮಮ - ನನಗೆ, ಭರ್ತಾ - ಗಂಡನು, ದೈವತಂಹಿ - ದೇವತಾಸ್ವರೂಪನಷ್ಟೆ. ॥ ೧೬ ॥ ಮೇ - ನನ್ನ, ಪ್ರೇತ್ಯಭಾವೇಪಿ - ಪರಲೋಕದಲ್ಲಿಯೂ ಕೂಡ, ತ್ವಯಾಸಹ - ನಿನ್ನೊಡನೆ, ಸಂಗಮಃ - ಸಹಗಮನವು, ಕಲ್ಯಾಣಃ - ಶುಭಕರವು. ॥ ೧೭ ॥ ಹೇ ಮಹಾಮತೇ - ಎಲೈ ಬುದ್ಧಿಶಾಲಿಯೇ, ಇಹಲೋಕೇ - ಈ ಭೂಲೋಕದಲ್ಲಿ, ಪಿತೃಭಿಃ-ತಾಯಿ ತಂದೆಗಳಿಂದ, ಯಾಸ್ತ್ರೀ - ಯಾವ ಕನ್ನಿಕೆಯು, ಯಸ್ಯ - ಯಾವ ಪುರುಷನಿಗೆ, ಅದ್ಭಿಃ - ಉದಕ

ತಾಯಿಯ ಸಮಕ್ಷಮದಲ್ಲಿ ಭಿಕ್ಷಿಣಿಯಾದ ಒಬ್ಬ ಹೆಂಗಸಿನಿಂದ ನನಗೆ ವನವಾಸ ಯೋಗವುಂಟೆಂದು ಕೇಳಿರುತ್ತೇನೆ. ನಿನ್ನೊಡಗೂಡಿ ಬರಬೇಕೆಂದು ಅಂದಿನಿಂದಲೂ ಅಪೇಕ್ಷಿಸುತ್ತ, ಸಮಯವನ್ನು ನಿರೀಕ್ಷಿಸಿಕೊಂಡಿರುತ್ತೇನೆ. ವನವಾಸಿಯಾದ ನಿನ್ನನ್ನು ಸೇವಿಸುವುದು ನನಗೆ ಬಹಳ ಸಮ್ಮತವಾಗಿರುವುದು. ॥ ೧೧-೧೫ ॥ ಎಲೈ ಶುದ್ಧಾಂತರಂಗವುಳ್ಳವನೆ! ವಿಶ್ವಾಸಾತಿಶಯದಿಂದ ಪತಿ ದೇವನಾದ ನಿನ್ನನ್ನುಸೇವಿಸುತ್ತ ಪಾಪವನ್ನುಪರಿಹರಿಸಿಗೊಳ್ಳುವ ಸ್ತ್ರೀಯರಿಗೆ ಪತಿಯೇ ದೈವವು; ನಾನು ಮೃತಿಯನ್ನೈದಿದರೂ ನಿನ್ನೊಡನೆ ಸಹಗಮನ ಮಾಡುವುದು ಶ್ರೇಯಸ್ಕರವಾದುದು. ಕೇಳು. ಈ ಲೋಕದಲ್ಲಿ ಯಾವ ಕನ್ನಿಕೆಯು ಮಾತಾಪಿತೃಗಳಿಂದ ಯಾವ ಪುರುಷನಿಗೆ ಕೊಡಲ್ಪಡುವಳೋ, ಆ ಕನ್ನಿಕೆಯು ಪಾತಿವ್ರತ್ಯ

ರ್ಯಾಸ್ತ್ರೀ ಯಸ್ಯ ಮಹಾಮತೇ ॥ ಅದ್ಭಿರ್ದತ್ತಾ ಸ್ವಧರ್ಮೇಣ ಪ್ರೇತ್ಯಭಾವೇಽಪಿ ತಸ್ಯ ಸಾ ॥ ೧೮ ॥ ಏವಮಸ್ಮಾತ್ಸ್ವಕಾಂ ನಾರೀಂ ಸುವೃತ್ತಾಂ ಹಿ ಪತಿವ್ರತಾಂ ॥ ನಾಭಿರೋಚಯಸೇ ನೇತುಂ ತ್ವಂ ಮಾಂ ಕೇನೇಹ ಹೇತುನಾ ॥೧೯॥ ಭಕ್ತಾಂ ಪತಿವ್ರತಾಂ ದೀನಾಂ ಮಾಂ ಸಮಾಂ ಸುಖದುಃಖಯೋಃ ॥ ನೇತುಮರ್ಹಸಿ ಕಾಕುತ್ಸ್ಥ ಸಮಾನ ಸುಖದುಃಖಿನೀಂ ॥ ೨೦ ॥ ಯದಿಮಾಂ ದುಃಖಿತಾಮೇವಂ ವನಂ ನೇತುಂ ನಚೇಚ್ಛಸಿ ॥ ವಿಷಮಗ್ನಿಂ ಜಲಂ ವಾಹಮಾಸ್ಥಾಸ್ಯೇ ಮೃತ್ಯು ಕಾರಣಾತ್ ॥ ೨೧ ॥ ಏವಂ ಬಹುವಿಧಂ ತಂ ಸಾ ಯಾಚತೇ

ಧಾರಾಪುರಸ್ಸರವಾಗಿ, ದತ್ತಾ - ಕೊಡಲ್ಪಡುತ್ತಾಳೆಯೋ, ಸಾ - ಆ ಹೆಂಗಸು, ಸ್ವಧರ್ಮೇಣ - ಪತಿವ್ರತಾ ಧರ್ಮದಿಂದ, ಪ್ರೇತ್ಯಭಾವೇಽಪಿ - ಮೃತಪಟ್ಟ ಬಳಿಕ ಮತ್ತೊಂದು ಜನ್ಮದಲ್ಲಿಯೂ, ತಸ್ಯ - ಅವನಿಗೇನೇ, ಭವತಿ - ಹೆಂಡತಿಯಾಗುತ್ತಾಳೆ, ಇತಿ - ಇಂತೆಂದು, ಯಶಸ್ವಿನಾಂ - ಕೀರ್ತಿವಂತರಾದ, ಬ್ರಾಹ್ಮಣಾನಾಂ - ಬ್ರಾಹ್ಮಣರಿಂದ, ಪುಣ್ಯಾ - ಪುಣ್ಯಕರವಾದ, ಶ್ರುತಿಃ - ವೇದವಾಕ್ಯವು, ಶ್ರೂಯತೇಽಹಿ - ಕೇಳಲ್ಪಟ್ಟಿರುವುದಷ್ಟೆ. ॥ ೧೮ ॥ ಏವಂ - ಹೀಗಿದ್ದರೂ, ಅಸ್ಮಾತ್ - ಈ ಪಟ್ಟಣದಿಂದ, ಸ್ವಕಾಂ - ಸ್ವಕೀಯಳಾದ, ನಾರೀಂ - ಹೆಂಡತಿಯಾದ, ಸುವೃತ್ತಾಂ - ಒಳ್ಳೆಯ ಸ್ವಭಾವವುಳ್ಳ, ಪತಿವ್ರತಾಂ - ಪತಿವ್ರತೆಯಾದ, ಮಾಂ - ನನ್ನನ್ನು, ತ್ವಂ - ನೀನು, ಇಹ - ಈಗ, ಕೇನಹೇತುನಾ - ಯಾವ ಕಾರಣದಿಂದ, ನೇತುಂ - ಕರೆದುಕೊಂಡು ಹೋಗುವದಕ್ಕೆ, ನಾಭಿರೋಚಯಸೇಽಹಿ - ಸಮ್ಮತಿಸಲಾರೆ. ॥ ೧೯ ॥ ಹೇ ಕಾಕುತ್ಸ್ಥ - ಎಲೈ ಶ್ರೀರಾಮನೆ, ಭಕ್ತಾಂ - ಭಕ್ತಳಾದ, ಪತಿವ್ರತಾಂ - ಪತಿವ್ರತೆಯಾದ, ದೀನಾಂ - ಬರಬೇಕೆಂಬ ಸಂಕಟವುಳ್ಳ, ಸುಖದುಃಖಯೋಃ - ಸುಖದುಃಖಗಳಲ್ಲಿ, ಸಮಾಂ - ಸಮಬುದ್ಧಿಯುಳ್ಳ, ಸಮಾನಸುಖದುಃಖಿನೀಂ, ಸಮಾನ - ಸರಿಯಾದ, ಸುಖದುಃಖಿನೀಂ - ಸಂತೋಷಕಷ್ಟಗಳುಳ್ಳ, ಮಾಂ - ನನ್ನನು, ನೇತುಂ - ಕರೆದುಕೊಂಡು ಹೋಗುವದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೨೦ ॥ ಏವಂ - ಈಪರಿಯಾಗಿ, ದುಃಖಿತಾಂ - ವ್ಯಸನಪಡುತ್ತಿರುವ, ಮಾಂ - ನನ್ನನ್ನು ಕುರಿತು, ನೇತುಂ - ಕರೆದುಕೊಂಡು ಹೋಗಲು, ನೇಚ್ಛಸಿಯದಿ - ಇಷ್ಟಪಡದೇ ಹೋದರೆ, ಅಹಂ - ನಾನು, ಮೃತ್ಯುಕಾರಣಾತ್-ಮರಣನಿಮಿತ್ತವಾಗಿ, ವಿಷಂ - ವಿಷವನ್ನು, ಆಸ್ಥಾಸ್ಯೇ - ತೆಗದುಕೊಳ್ಳುತ್ತೇನೆ,

---

ದಿಂದ ಮೃತಿಯನ್ನೈದಿದರೂ, ಇನ್ನೊಂದು ಜನ್ಮದಲ್ಲಿಯೂ ಆತನಿಗೇ ಸತಿಯಾಗುವಳೆಂದು ಬ್ರಾಹ್ಮಣರಿಂದ ಶ್ರುತಿಯು ಕೇಳಲ್ಪಡುತ್ತಿರುವುದಲ್ಲವೆ? ಹೀಗಿರಲು ನಿನಗೆ ನಿಜ ಸತಿಯಾಗಿಯೂ, ಪತಿವ್ರತೆಯಾಗಿಯೂ, ಸತ್ಸ್ವಭಾವವುಳ್ಳವಳಾಗಿಯೂ ಇರುವ ನನ್ನನ್ನು ನಿನ್ನೊಡನೆ ಕರೆದುಕೊಂಡು ಹೋಗಲು ಸಮ್ಮತಿಸಲಾರೆಯೇಕೆ? ಭಕ್ತಳಾಗಿಯೂ, ಪತಿಯೇ ದೈವವೆಂದು ನಂಬಿದವಳಾಗಿಯೂ, ಪತಿಯಾದ ನಿನ್ನ ಸುಖದುಃಖಗಳನ್ನು ಸಮವಾಗಿ ಅನುಭವಿಸುತ್ತಿರುವವಳಾಗಿಯೂ ಇರುವ ನನ್ನನ್ನು ಕರೆದುಕೊಂಡು ಹೋಗು. ಇಲ್ಲದಿದ್ದರೆ ವಿಷವನ್ನಾದರೂ ಪಾನ ಮಾಡುತ್ತೇನೆ; ಅಥವ ಬೆಂಕಿಯಲ್ಲಾದರೂ ಧುಮ್ಮಿಕ್ಕುವೆನು. ಅದೂ ಅಲ್ಲದಿದ್ದರೆ ನೀರಿನಲ್ಲಾದರೂ ಬಿದ್ದುಹೋಗುವೆನು. ॥ ೧೬-೨೧ ॥

ಗಮನಂ ಪ್ರತಿ ॥ ನಾನುಮೇನೇ ಮಹಾಬಾಹು ಸ್ತಾಂ ನೇತುಂ ವಿಜನಂ ವನಂ ॥ ೨೨ ॥ ಏವಮುಕ್ತಾತು ಸಾ ಚಿಂತಾಂ ಮೈಥಿಲೀ ಸಮುಪಾಗತಾ ॥ ಸ್ನಾಪಯಂತೀವ (೧) ಗಾಮುಷ್ಣೈ ರಶ್ರುಭಿ ರ್ನಯನಚ್ಯುತೈಃ ॥ ೨೩ ॥ ಚಿಂತಯಂತೀ ತಥಾ ತಾಂತು ನಿವರ್ತಯಿತು ಮಾತ್ಮವಾನ್ ॥ ತಾಮ್ರೋಷ್ಠೀ ಸ ತದಾ ಸೀತಾಂ ಕಾಕುತ್ಸ್ಥೋ ಬಹ್ವಸಾಂತ್ವಯತ್ ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನತ್ರಿಂಶಸ್ಸರ್ಗಃ.

ಏವಂ - ಈಪರಿಯಾಗಿ, ಸಾ - ಆ ಸೀತಾದೇವಿಯು, ತಂ - ಆ ಶ್ರೀರಾಮನನ್ನು, ಗಮನಂಪ್ರತಿ - ಪ್ರಯಾಣವನ್ನುದ್ದೇಶಿಸಿ, ಬಹುವಿಧಂ - ಬಹುಬಗೆಯಾಗಿ, ಯಾಚತೇ - ಪ್ರಾರ್ಥಿಸಿದಳು, ಮಹಾಬಾಹುಃ - ಮಹಾಭುಜಪರಾಕ್ರಮ ಶಾಲಿಯಾದ ಶ್ರೀರಾಮನು, ತಾಂ - ಆ ಸೀತಾದೇವಿಯನ್ನು, ವಿಜನಂ - ಜನರಹಿತವಾದ, ವನಂ - ವನವನ್ನು ಕುರಿತು, ನೇತುಂ - ಕರದುಕೊಂಡು ಹೋಗಲು, ನಾನುಮೇನೆ - ಸಮ್ಮತಿಸದೇ ಹೋದನು. ॥ ೨೧-೨೨ ॥ ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟ, ಸಾಮೈಥಿಲೀತು - ಆ ಸೀತಾದೇವಿಯಾದರೆ, ನಯನಚ್ಯುತೈಃ - ಕಂಗಳಿಂದ ಸುರಿಯುತ್ತಿರುವ, ಉಷ್ಣೈಃ - ಬಿಸಿಯಾಗಿರುವ, ಅಶ್ರುಭಿಃ - ಕಂಬನಿಗಳಿಂದ, ಗಾಂ - ನೆಲವನ್ನು, ಸ್ನಾಪಯಂತೀವ - ನೆನಸುತ್ತಾಳೆಯೋ ಎಂಬಂತಿರುವಳಾಗಿ, ಚಿಂತಾಂ - ಆಲೋಚನೆಯನ್ನು, ಸಮುಪಾಗತಾ - ಹೊಂದಿದವಳಾದಳು. ॥ ೨೩ ॥ ಆತ್ಮವಾನ್ - ಧೈರ್ಯಶಾಲಿಯಾದ, ಸಕಾಕುತ್ಸ್ಥಃ - ಆ ಶ್ರೀರಾಮನು, ತಥಾ - ಆ ಪರಿಯಾಗಿ, ಚಿಂತಯಂತೀಂ - ಆಲೋಚಿಸುತ್ತಿರುವ, ತಾಮ್ರೋಷ್ಠೀಂ - ಕೆಂದುಟಿಗಳುಳ್ಳ, ತಾಂಸೀತಾಂ - ಆ ಸೀತಾದೇವಿಯನ್ನು, ತದಾ - ಆಕಾಲದಲ್ಲಿ, ನಿವರ್ತಯಿತುಂ - ಹಿಂತಿರುಗಿಸಲು, ಬಹು - ನಾನಾ ಬಗೆಯಾಗಿ, ಅಸಾಂತ್ವಯತ್ - ಸಮಾಧಾನಗೊಳಿಸಿದನು. ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನತ್ರಿಂಶಸ್ಸರ್ಗಃ.

ಎಂಬೀ ಪ್ರಕಾರವಾಗಿ ಮಹಾ ಪತಿವ್ರತೆಯಾದ ಸೀತಾದೇವಿಯು ಹೇಳುತ್ತಿದ್ದರೂ, ಮಹಾ ಭುಜಬಲ ಪರಾಕ್ರಮವಂತನಾದ ಆ ಶ್ರೀರಾಮನು ಆಕೆಯನ್ನು ಕರೆದುಕೊಂಡು ಹೋಗಲು ಸಮ್ಮತಿಸದೇ ಹೋದನು. ಆಗಲಾ ಸೀತಾದೇವಿಯು ಬಿಸಿಯಾದ ಕಣ್ಣೀರಿನಿಂದ ಭೂಮಿಯನ್ನು ನೆನಿಸುವಳೋ ಎಂಬಂತೆ ವಿಲಪಿಸುತ್ತ ಚಿಂತಿಸುತ್ತಿದ್ದಳು. ಆಗಲಾ ರಾಮಮೂರ್ತಿಯು ಕೆಂದುಟಿಗಳುಳ್ಳ ಆಕೆಯನ್ನು ಬಹಳವಾಗಿ ಸಂತೈಸಿದನು. ॥ ೨೨-೨೪ ॥

ಇಂತಿದು ಸೀತಾದೇವಿ ಕೃತ ವನಗಮನ ಯಾಚನಾ ವರ್ಣನವೆಂಬ
ಇಪ್ಪತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಟಿ. (೧) "ಕುಚಾವುಷ್ಣೈಃ" ಎಂಬ ಅಧಿಕ ಪಾಠವೂ ಉಂಟು.

ಅಯೋಧ್ಯಾಕಾಂಡೇ ತ್ರಿಂಶಸ್ಸರ್ಗಃ.

ಸಾಂತ್ವ್ಯಮಾನಾತು ರಾಮೇಣ ಮೈಥಿಲೀ ಜನಕಾತ್ಮಜಾ ॥ ವನವಾಸ ನಿಮಿತ್ತಾಯ ಭರ್ತಾರ ಮಿದಮಬ್ರವೀತ್ ॥ ೧ ॥ ಸಾ ತಮುತ್ತಮಸಂವಿಗ್ನಾ ಸೀತಾ ವಿಪುಲ ವಕ್ಷಸಂ ॥ ಪ್ರಣಯಾ ಚ್ಚಾಭಿಮಾನಾಚ್ಚ ಪರಿಚಿಕ್ಷೇಪ ರಾಘವಂ ॥ ೨ ॥ ಕಿಂತ್ವಾ ಮನ್ಯತ ವೈದೇಹಃ ಪಿತಾ ಮೇ ಮಿಥಿಲಾಧಿಪಃ ॥ ರಾಮ

ರಾಮೇಣ - ಶ್ರೀರಾಮನಿಂದ, ಸಾಂತ್ವ್ಯಮಾನಾ - ಸಮಾಧಾನಗೊಳಿಸಲ್ಪಟ್ಟ, ಜನಕಾತ್ಮಜಾ - ಜನಕರಾಯನ ಮಗಳಾದ, ವೈಥಿಲೀ - ಸೀತಾದೇವಿಯು, ವನವಾಸನಿಮಿತ್ತಾಯ - ವನವಾಸಾನುಮತಿಗೋಸುಗ, ಭರ್ತಾರಂ - ಗಂಡನಾದ ಶ್ರೀರಾಮನನ್ನು ಕುರಿತು, ಇಂ - ಈಮಾತನ್ನು, ಅಬ್ರವೀತ್ - ನುಡಿದಳು. ॥ ೧ ॥ ಉತ್ತಮಸಂವಿಗ್ನಾ, ಉತ್ತಮ - ಬಹಳವಾಗಿ, ಸಂವಿಗ್ನಾ - ಭಯಗೊಂಡವಳಾದ, ಸಾಸೀತಾ - ಆ ಸೀತಾದೇವಿಯು, ವಿಪುಲವಕ್ಷಸಂ - ವಿಸ್ತಾರವಾದ ವಕ್ಷಸ್ಥಲವುಳ್ಳ, ತಂರಾಘವಂ - ಆ ಶ್ರೀರಾಮನನ್ನು, ಪ್ರಣಯಾಚ್ಚ - ಸ್ನೇಹದಿಂದಲೂ, ಅಭಿಮಾನಾಚ್ಚ - (ಮ) ನನ್ನವನೆಂಬ ಅಭಿಮಾನದಿಂದಲೂ, ಅಭಿಮಾನಾಚ್ಚ-(ಗೋ) ಪ್ರಣಯಕೋಪದಿಂದಲೂ, ಪರಿಕ್ಷೇಪ-ಹೀಯಾಳಿಸಿದಳು. ॥ ೨ ॥ ಹೇ ರಾಮ - ಎಲೈ ಶ್ರೀರಾಮನೇ, ತ್ವಾಂ - ನಿನ್ನನ್ನು, ಪುರುಷವಿಗ್ರಹಂ - (೧) ಆಕಾರಮಾತ್ರದಿಂದ ಪುರುಷನಾದ ನಿನ್ನನ್ನು, ಜಾಮಾತರಂ - ಅಳಿಯನನ್ನಾಗಿ,

---

ಶ್ರೀರಾಮಚಂದ್ರನು ಸೀತಾದೇವಿಯನ್ನು ಸಮಾಧಾನಗೊಳಿಸಿದ ಬಳಿಕ ಆಕೆಯು ವಿಶಾಲವಕ್ಷಸ್ಕನಾದ ಆತನನ್ನು, ಪತಿಯೆಂಬ ಸ್ನೇಹಾಧಿಕ್ಯದಿಂದಲೂ, ಪ್ರಣಯ ಕೋಪದಿಂದಲೂ ಈ ರೀತಿ ಹೀಯ್ಯಾಳಿಸಿದಳು. "ಎಲೈ ಸ್ವಾಮಿಯಾದ ಶ್ರೀರಾಮನೆ! ತತ್ವಜ್ಞನೂ, ಮಿಥಿಲಾಧಿಪನೂ, ನಮ್ಮ ತಂದೆಯೂ ಆದ ಜನಕರಾಯನು ನಿನ್ನನ್ನು ಆಕಾರಮಾತ್ರದಿಂದ ಪುರುಷರೂಪನಾದ ಸ್ತ್ರೀಯೆಂದರಿಯದೆ ಅಳಿಯನನ್ನಾಗಿ ಭಾವಿಸಿದನೇನು?

ಈ ಶ್ಲೋಕದಲ್ಲಿನ ಸ್ವಾರಸ್ಯಾರ್ಥಗಳು:—

ಟಿ. (೧) ಎಲೈ ರಾಮಚಂದ್ರನೇ. ನಮ್ಮ ತಂದೆಯಾದ ಜನಕರಾಯನು ನನ್ನನ್ನು ಬಿಟ್ಟು ನೀನು ವನವಾಸಕ್ಕೆ ಹೋದುದನ್ನು ಕೇಳಿದರೆ "ಅಯ್ಯೋ! ಯಾವಳೋ ಒಬ್ಬಳು ಪುರುಷ ವೇಷವನ್ನು ಧರಿಸಿ ನನ್ನ ಮಗಳನ್ನು ವಿವಾಹ ಮಾಡಿಕೊಂಡಳಲ್ಲ" ಎಂದು ತಿಳಿದುಕೊಳ್ಳುತ್ತಾನೆ. "ಹೇ ರಾಮ!" ಎಂಬ ಸಂಬೋಧನೆಯ ಸ್ವಾರಸ್ಯವು ಹೀಗೆ, "ಸೌಂದರ್ಯ ಮಾತ್ರದಿಂದಲೇ ಇತರರನ್ನು ಭ್ರಾಂತರನ್ನಾಗಿ ಮಾಡುವವನೇ!" ಎಂದು. ಕರ್ಮಪ್ರಧಾನನೂ ಎಂದೆಂದಿಗೂ ಪತ್ನಿಯನ್ನಗಲದವನೂ, ನಮ್ಮ ತಂದೆಯೂ ಆದ ವೈದೇಹನು ನನ್ನೊಬ್ಬಳನ್ನು ರಕ್ಷಿಸಲು ಶಕ್ತಿಯಿಲ್ಲದೆ ವನವಾಸಕ್ಕೆ ಹೊರಟು ಹೋದ ನಿನ್ನನ್ನು ತಿಳಿದರೆ "ಶ್ರೀರಾಮನು ಅಂತಃ ಸ್ತ್ರೀ ಸ್ವಭಾವವುಳ್ಳವನು; ಹೊರಗೆ ಮಾತ್ರ ಪುರುಷಾಕಾರವಾಗಿ ತೋರುತ್ತಾನೆ" ಎಂದು ತಿಳಿದೇ ತಿಳಿಯುತ್ತಾನೆ." "ಸ್ತ್ರಿಯಂ ಪುರುಷ ವಿಗ್ರಹಂ" ಎಂಬ ಕಡೆಯಲ್ಲಿ ಹಿಂದೆ ಮಾಡಿದ ಮೋಹಿನೀ ರೂಪ ಧಾರಣೆಯನ್ನು ಸೀತೆಯು ಸೂಚಿಸುತ್ತಾಳೆಂದು ಕೆಲವರು ಹೇಳುತ್ತಾರೆ.

(ಇದು ಗೋವಿಂದರಾಜರದು.)

"ಎಲೈ ಶ್ರೀರಾಮನೇ! ಮಹಾ ಜ್ಞಾನಿಯೂ, ನನ್ನ ತಂದೆಯೂ ಆದ ಜನಕರಾಯನು ನೀನು ಆಕಾರ ಮಾತ್ರ

ಜಾಮಾತರಂ ಪ್ರಾಪ್ಯ ಸ್ತ್ರಿಯಂ ಪುರುಷವಿಗ್ರಹಂ ॥ ೩ ॥ ಅನೃತಂ ಬತ ಲೋಕೋಽಯ ಮಜ್ಞಾನಾ ದ್ಯದ್ಧಿ ವಕ್ಷ್ಯತಿ ॥ ತೇಜೋ ನಾಸ್ತಿ ಪರಂ ರಾಮೇ ತಪತೀವ ದಿವಾಕರೇ ॥ ೪ ॥ ಕಿಂಹಿ ಕೃತ್ವಾ ವಿಷಣ್ಣ ಸ್ತ್ವಂ ಕುತೋವಾ

ಪ್ರಾಪ್ಯ - ಹೊಂದಿ, ಮೇ - ನನ್ನ, ಪಿತಾ - ತಂದೆಯಾದ, ಮಿಥಿಲಾಧಿಪಃ - ಮಿಥಿಲಾಪಟ್ಟಣದ ರಾಜನಾದ, ವೈದೇಹಃ - ಜನಕರಾಯನು, ಕಿಮಮನ್ಯತ - ಏನೆಂದು ತಿಳಿದುಕೊಂಡನೋ? ಅಯಂಲೋಕಃ - (ಗೋ) ಈ ಮನುಷ್ಯಲೋಕವು, ತಪತಿ - ತಪಿಸುತ್ತಿರುವ, ದಿವಾಕರಇವ - ಸೂರ್ಯನಲ್ಲಿರುವಂತೆ, ರಾಮೇ - ಶ್ರೀರಾಮನಲ್ಲಿ, ತೇಜಃ - ತೇಜಸ್ಸು, ಪರಂ - ಅತ್ಯಂತವಾಗಿ, ಅಸ್ತೀತಿ - ಉಂಟಾಗಿರುವುದೆಂದು, ಅಜ್ಞಾನಾತ್ - ಅವಿಚಾರದಿಂದ, ಯತ್ - ಯಾವುದನ್ನು, ವಕ್ಷ್ಯತಿ - ಹೇಳುವದೋ, ತತ್ - ಅದು, ಅನೃತಂ - ಸುಳ್ಳು, ನಾಸ್ತ್ಯೇವ-ಇಲ್ಲವೇ ಇಲ್ಲ, (ಗೋ) ಅಯಂಲೋಕಃ - ಈ ಜನವು, ತಪತಿ - ತಪಿಸುತ್ತಿರುವ, ದಿವಾಕರಇವ - ಸೂರ್ಯನಲ್ಲಿಯಂತೆ, ರಾಮೇ - ಶ್ರೀರಾಮನಲ್ಲಿ, ಪರಂತೇಜಃ - ಉತ್ಕೃಷ್ಟವಾದ ಪರಾಕ್ರಮವು, ನಾಸ್ತೀತಿ - ಇಲ್ಲವೆಂದು, ಅಜ್ಞಾನಾತ್ - ಅವಿವೇಕದಿಂದ, ಅನೃತಂ - ಸುಳ್ಳುಮಾತನ್ನು, ವಕ್ಷ್ಯತಿಯತ್ - ಹೇಳುತ್ತದೆಯೆಂಬುದು ಯಾವದುಂಟೋ, ತತ್ - ಅದು, ಬತ - ಕಷ್ಟವು. ॥ ೩-೪ ॥ ಯತ್-

---

ಅಯೋನಿಜೆಯಾದ ನನ್ನನ್ನು ಮಗಳನ್ನಾಗಿ ಪಡೆದು ನೀನೇ ಪುರುಷೋತ್ತಮನಾದ ನಾರಾಯಣ ಮೂರ್ತಿಯೆಂದರಿತು ನಿನಗೆ ಕೊಟ್ಟು ಮದುವೆಯನ್ನು ಮಾಡಿದನಲ್ಲವೆ? ದಿನಕರನಂತೆ ಪ್ರಕಾಶಿಸುತ್ತ ತೇಜೋಮಯನಾಗಿರುವ ನಿನ್ನಲ್ಲಿ ಪೌರುಷವಿಲ್ಲವೆಂದು ತಿಳಿವಳಿಕೆಯಿಲ್ಲದೆ ಹೇಳಿದರೆ ಅದು ಸುಳ್ಳಲ್ಲದೆ ನಿಜವಾಗುವುದಿಲ್ಲ. ಎಲೈ ರಾಮಮೂರ್ತಿಯೆ! ನೀನೇನಾದರೂ

ದಿಂದ ಪುರುಷನಾಗಿ ಕಾಣುತ್ತ ಸ್ತ್ರೀಯಾಗಿಯೇ ಇರುವೆಯೆಂದು ತಿಳಿದನೇ? ಹಾಗೆ ತಿಳಿಯಲಿಲ್ಲ. ತಿಳಿದಿದ್ದರೆ ನನ್ನನ್ನು ನಿನಗೆ ಕೊಡುತ್ತಲೇ ಇರಲಿಲ್ಲ" ಎಂದು ಭಾವಾರ್ಥವು. ಅಥವ

ಸಏವ ವಾಸುದೇವೋ ಯಂ ಸಾಕ್ಷಾತ್ಪುರುಷ ಉಚ್ಯತೇ ॥
ಸ್ತ್ರೀ ಪ್ರಾಯಮೇತತ್ಸರ್ವಂ ಜಗದ್ಬ್ರಹ್ಮ ಪುರಸ್ಸರಂ ॥

ಎಂಬ ವಿಷ್ಣು ಪುರಾಣೋಕ್ತಿಯಂತೆ ನಿನ್ನನ್ನುಳಿದು ಪುರುಷಾಕಾರವಾಗಿ ಕಾಣುತ್ತಿರುವ ಇಡೀ ಜಗತ್ತನ್ನೇ ಸ್ತ್ರೀ ಪ್ರಾಯವನ್ನಾಗಿಯೇ ತಿಳಿದುಕೊಂಡಿರುತ್ತಾನೆ. ಆತನು ಹೀಗೆ ತಿಳಿದು ಭ್ರಾಂತನಾಗಿ ಹೋದನಲ್ಲ! ಅಥವ

ರಾಮಜ - ಅಮಾತರಂ - ಪ್ರಾಪ್ಯ - ಸ್ತ್ರಿಯಂ - ಪುರುಷ ವಿಗ್ರಹಂ, ಎಂದು ಪದಚ್ಛೇದವು. ಇದಕ್ಕೆ ಅರ್ಥ ವಿವೇಚನವು ಹೀಗೆ. ಹೇ ರಾಮಜ! ಎಲೈ ಆನಂದಿಸಲು ಜನಿಸಿದವನೇ? ಹೇ ಪುರುಷ - ಎಲೈ ಕ್ರೀಡಾರ್ಥವಾಗಿ ಅವತರಿಸಿದ ಪರಮ ಪುರುಷನೇ! ಅಮಾತರಂ - ತಾಯಲ್ಲದ, ಮಲತಾಯಿಯಾದ ಕೈಕೇಯಿಯನ್ನು. ಪ್ರಾಪ್ಯ - ಉದ್ದೇಶಿಸಿ ನನ್ನ ತಂದೆಯಾದ ಜನಕರಾಯನು ಕಲಹವನ್ನು, ಇದು ಗಮ್ಯಾರ್ಥ. ಅಮನ್ಯತಕಿಂ-ತಿಳಿದುಕೊಂಡನೇನು? ಹಾಗೆ ತಿಳಿದುಕೊಳ್ಳಲೇ ಇಲ್ಲ. ಹೀಗಿದ್ದರೂ ನನ್ನನ್ನು ಬಿಟ್ಟು ನೀನು ವನಕ್ಕೆ ಹೋಗಲು ಯೋಗ್ಯನಾಗಬೇಡ ಎಂದು ಭಾವವು. ಯದ್ವಾ

"ರಾಮಾಜಾಮಾತರಂ" ಎಂಬುದು ಒಂದೇ ಪದ. ಪುರುಷ ವಿಗ್ರಹಂ - ಭಕ್ತರನ್ನು ಅನುಗ್ರಹಿಸುವ, ರಾಮಾಜಾಮಾತರಂ. "ರಮಂತೋ ಯೋಗಿನೋಽನಂತೇ" ಎಂಬ ಶ್ರುತ್ಯನುಸಾರವಾಗಿ ಆನಂದರೂಪನಾದ ನಿನ್ನನ್ನು ಹೊಂದಿ, ಪುತ್ರ ಮಿತ್ರ ಕಳತ್ರಾದಿಗಳನ್ನು ಸತ್ಯವೆಂದು ತಿಳಿದನೇ? ಮಿಥ್ಯವೆಂದೇ ತಿಳಿದನು. ಈ ರೀತಿ ಸರ್ವಾನಂದಕರನಾದ ನೀನು ನನ್ನನ್ನೇಕೆ ದುಃಖಗೊಳಿಸುತ್ತೀಯೆ. (**ಇದು ಮಹೇಶ್ವರ ತೀರ್ಥರ ವ್ಯಾಖ್ಯಾನ.**)

ಭಯಮಸ್ತಿ ತೇ ‖ ಯತ್ಪರಿತ್ಯಕ್ತು ಕಾಮಸ್ತ್ವಂ ಮಾಮನನ್ಯ ಪರಾಯಣಾಂ ‖ ೫ ‖ ದ್ಯುಮತ್ಸೇನ ಸುತಂ ವೀರ ಸತ್ಯವಂತ ಮನುವ್ರತಾಂ ‖ ಸಾವಿತ್ರೀ ಮಿವ ಮಾಂ ವಿದ್ಧಿ ತ್ವಮಾತ್ಮ ವಶವರ್ತಿನೀಂ ‖ ೬ ‖ ನತ್ವಹಂ ಮನಸಾ ಪ್ಯನ್ಯಂ ದ್ರಷ್ಟಾಸ್ಮಿ ತ್ವದೃತೇನಘ ‖ ತ್ವಯಾ ರಾಘವ ಗಚ್ಛೇಯಂ ಯಥಾನ್ಯಾ ಕುಲಪಾಂಸಿನೀ ‖ ೭ ‖ ಸ್ವಯಂ ತು ಭಾರ್ಯಾಂ ಕೌಮಾರೀಂ ಚಿರಮಧ್ಯು

ಯಾವಕಾರಣ, ತ್ವಂ - ನೀನು, ಅನನ್ಯಪರಾಯಣಾಂ - ಮತ್ತೊಬ್ಬಪುರುಷನಲ್ಲಿ ಎಂದಿಗೂ ಆಸಕ್ತಳಲ್ಲದಿರುವ ಮಹಾ ಪತಿವ್ರತೆಯಾದ, ಮಾಂ - ನನ್ನನ್ನು, ಪರಿತ್ಯಕ್ತುಕಾಮಃ - ತ್ಯಾಗಮಾಡುವದಕ್ಕೆ ಇಚ್ಛೆಯುಳ್ಳವನಾಗಿರುವೆಯೋ ಅಂತಹ, ಕಿಂಹಿ - ಯಾವ ಕಾರ್ಯವನ್ನು, ಕೃತ್ವಾ - ಮಾಡಿ, ವಿಷಣ್ಣಃ - ವಿಷಾದಗೊಂಡವನಾಗಿರುವೆ, ತೇನ - ನಿನಗೆ, ಭಯಂವಾ - ಭಯವಾದರೂ, ಯತಃ - ಯಾವ ಕಾರಣದಿಂದ, ಅಸ್ತಿ - ಇರುವುದು. ‖ ೫ ‖ ಹೇ ವೀರ - ಎಲೈ ಶೂರನೇ, ದ್ಯುಮತ್ಸೇನ ಸುತಂ - ದ್ಯುಮತ್ಸೇನನ ಕುವರನಾದ, ಸತ್ಯವಂತಂ - ಸತ್ಯವಂತನನ್ನು, ಅನುವ್ರತಾಂ - ಅನುಸರಿಸಿ ನಿಯಮನಿಷ್ಠಳಾದ, ಸಾವಿತ್ರೀಮಿವ - ಸಾವಿತ್ರೀದೇವಿಯಂತೆ, ಮಾಂ-ನನ್ನನ್ನು, ಆತ್ಮವಶವರ್ತಿನೀಂ, ಆತ್ಮ - ನಿನಗೆ, ವಶವರ್ತಿನೀಂ - ಸ್ವಾಧೀನವಲ್ಲಿರುವಳನ್ನಾಗಿ, ವಿದ್ಧಿ - ತಿಳಿದುಕೋ. ‖ ೬ ‖ ಹೇ ಅನಘ - ಎಲೈ ನಿರ್ದುಷ್ಟನೇ, ಹೇ ರಾಘವ - ಎಲೈ ಶ್ರೀರಾಮನೇ, ಅನ್ಯಾ - ಮತ್ತೊಬ್ಬಳಾದ, ಕುಲಪಾಂಸಿನೀ - ವ್ಯಭಿಚಾರಿಯು, ಯಥಾ - ಹೇಗೆ, ಅನ್ಯಂ - ಮತ್ತೊಬ್ಬ ಪುರುಷನನ್ನು, ಪಶ್ಯತಿ- ನೋಡುತ್ತಾಳೆಯೋ, ತಥಾ - ಹಾಗೆಯೇ, ಅಹಂ - ನಾನು, ತ್ವದೃತೇ - ನಿನ್ನನ್ನುಳಿದು, ಅನ್ಯಂ- ಮತ್ತೊಬ್ಬ ಪುರುಷನನ್ನು, ಮನಸಾಪಿ - ಮನಸ್ಸಿನಿಂದಲೂ, ನದ್ರಷ್ಟಾಸ್ಮಿ - ನೋಡಿದವಳಲ್ಲ, ತ್ವಯಾ- ನಿನ್ನೊಡನೆ, ಗಚ್ಛೇಯಂ - ಬರುತ್ತೇನೆ. ‖ ೭ ‖ ಹೇ ರಾಮ - ಎಲೈ ಶ್ರೀರಾಮನೇ, ಕೌಮಾರೀಂ - (ಗೋ) ಬಾಲ್ಯದಲ್ಲಿ ವಿವಾಹಿತಳಾದ, ಚಿರಂ-ಬಹು ಕಾಲದಿಂದ, ಅಧ್ಯುಷಿತಾಂ-ಜತೆಯಲ್ಲಿಯೇ ವಾಸ ಮಾಡುತ್ತಿರುವ, ಭಾರ್ಯಾಂ - ಸಂರಕ್ಷಣೀಯಳಾದ, ಸತೀಂ - ಪತಿವ್ರತೆಯಾದ, ಮಾಂ - ನನ್ನನ್ನು, ಶೈಲೂಷಇವ - ಹೆಂಡತಿಯಿಂದ ಜೀವನ ಮಾಡುವ ಜಾಯಾಜೀವಿಯಂತೆ, ಪರೇಭ್ಯಃ -

ಮಾಡಬಾರದ ಕೆಲಸವನ್ನು ಮಾಡಿ ವಿಷಣ್ಣನಾಗಿರುವೆಯಾ ? ಅಂತಹ ಭೀತಿಯು ನಿನಗೆ ಬಂದುದೆಲ್ಲಿಂದ ? ಬೇರೊಂದು ಶರಣ್ಯಸ್ಥಾನವಿಲ್ಲವೆಂದರಿತುಕೊಂಡು ನಿನ್ನಲ್ಲಿಯೇ ಆಸಕ್ತಳಾದ ನನ್ನನ್ನು ಬಿಟ್ಟುಹೋಗಲು ಅಪೇಕ್ಷಿಸುತ್ತಿರುವೆಯೇಕೆ ? ಎಲೈ ಶೂರನೆ ! ಹಿಂದೆ ದ್ಯುಮತ್ಸೇನರಾಯನ ಕುವರನಾದ ಸತ್ಯವಂತನನ್ನು ಸಾವಿತ್ರೀದೇವಿಯು ಅನುಸರಿಸಿ ಪತಿವ್ರತೆಯೆಂದು ಹೇಗೆ ಎನಿಸಿಕೊಂಡಳೋ, ಅಂತೆಯೇ ನಿನ್ನೊಡನೆ ಅನುಸರಿಸಿ ಬರುವ ನನ್ನನ್ನು ಮಹಾ ಪತಿವ್ರತೆಯೆಂದರಿಯುವವನಾಗು. ಎಲೈ ನಿರ್ದೋಷನೆ ! ವೇಶ್ಯಾಂಗನೆಯಂತೆ ನಾನು ಮನದಿಂದಲಾದರೂ ಮತ್ತೊಬ್ಬನನ್ನು ನೋಡಿದವಳಲ್ಲ. ಆದುದರಿಂದ ಪತಿವ್ರತೆಯಾದ ಸ್ತ್ರೀಯಂತೆ ನಾನೂ ನಿನ್ನೊಡನೆಯೇ ಬರುತ್ತೇನೆ. ಎಲೈ ನಾಥನೆ ! ಕೌಮಾರಾವಸ್ಥೆಯಲ್ಲಿಯೇ ವಿವಾಹಿತಳಾದವಳೂ, ಬಹುಕಾಲದಿಂದಲೂ ನಿನ್ನೊಡನೆಯೇ ಇದ್ದುಕೊಂಡಿರುವಳೂ, ಧರ್ಮಪತ್ನಿಯೂ ಆದ ನನ್ನನ್ನು ಜಾಯಾಜೀವಿಯಂತೆ ಇತರ

ಷಿತಾಂ ಸತೀಂ ‖ ಶೈಲೂಷ ಇವ ಮಾಂ ರಾಮ ಪರೇಭ್ಯೋ ದಾತುಮಿಚ್ಛಸಿ‖೮‖ ಯಸ್ಯ ಪಥ್ಯಂಚ ರಾಮಾತ್ಥ ಯಸ್ಯಚಾರ್ಥೇಽವರುಧ್ಯಸೇ ‖ ತ್ವಂ ತಸ್ಯ ಭವ ವಶ್ಯಶ್ಚ ವಿಧೇಯಶ್ಚ ಸದಾನಘ ‖೯‖ ಸಮಾಮನಾದಾಯ ವನಂ ನ ತ್ವಂ ಪ್ರಸ್ಥಾತು ಮರ್ಹಸಿ ‖ ತಪೋವಾ ಯದಿವಾರಣ್ಯಂ ಸ್ವರ್ಗೋವಾ ಮೇ ಸಹ ತ್ವಯಾ ‖೧೦‖ ನಚ ಮೇ ಭವಿತಾ ತತ್ರ ಕಶ್ಚಿತ್ಪಥಿ ಪರಿಶ್ರಮಃ ‖ ಪೃಷ್ಠತ ಸ್ತವಗಚ್ಛಂತ್ಯಾ ವಿಹಾರ ಶಯನೇಷ್ವಿವಾ ‖೧೧‖ ಕುಶಕಾಶ ಶರೇಷೀಕಾ

ಮತ್ತೊಬ್ಬರಿಗೆ, ದಾತುಂ - ಕೊಡಲು, ಇಚ್ಛಸಿ - ಅಪೇಕ್ಷಿಸುವೆ, (ಮ) ಹೇ ರಾಮ - ಎಲೈ ಶ್ರೀರಾಮನೇ, ಭಾರ್ಯಾಂ - ಸಂರಕ್ಷಣೆಗೆ ಯೋಗ್ಯಳಾದ, ಸತೀಂ - ಅನಶ್ವರವಾದ, ಚಿರಂ - ಪಿತೃಪಿತಾಮಹಾದಿಗಳಕಾಲದಿಂದ, ಅಧ್ಯುಷಿತಾಂ - ರಕ್ಷಿಸಲ್ಪಟ್ಟ, ಕೌಮಾರೀಂ - ಕುಮಾರರ ವಯಸ್ಸುಳ್ಳ ನಿನ್ನಿಂದ ಹೊಂದತಕ್ಕವಳಾದ, ಮಾಂ - ರಾಜ್ಯಲಕ್ಷ್ಮಿಯನ್ನು, ಶೈಲೂಷಇವ - ವೇಷ ಧಾರಿಯಂತೆ, ಪರೇಭ್ಯಃ - ಇತರರಿಗೆ, ದಾತುಂ - ಕೊಡಲು, ಇಚ್ಛಸಿ - ಬಯಸುವೆ. ‖೮‖ ಹೇ ರಾಮ - ಎಲೈ ಶ್ರೀರಾಮನೆ, ಯಸ್ಯ - ಯಾವಜನಕ್ಕೆ, ಪಥ್ಯಂ - ಹಿತವನ್ನು, ಆತ್ಥ - ಹೇಳಿ ದೆಯೋ, ಯಸ್ಯ - ಯಾವಜನದ, ಅರ್ಥೇ - ನಿಮಿತ್ತವಾಗಿ, ಅವರುಧ್ಯಸೇ - ಕ್ಲೇಶಗೊಳಿಸುವೆಯೋ, ಹೇ ಅನಘ - ಎಲೈ ದೋಷರಹಿತನೆ, ತ್ವಂ - ನೀನು, ತಸ್ಯ - ಆಜನಕ್ಕೆ, ವಶ್ಯಃ - ಸ್ವಾಧೀನನಾದ ವನು, ಸದಾ - ನಿರಂತರವೂ, ವಿಧೇಯಶ್ಚ - ಕೈಕೆಳಗಿರುವವನು, ಭವ - ಆಗು. ‖೯‖ ಸಃ - ಅಂತಹ ನೀನು, ಮಾಂ - ನನ್ನನ್ನು, ಅನಾದಾಯ - ಕರೆದುಕೊಳ್ಳದೆ, ವನಂ - ವನವನ್ನು ಕುರಿತು, ಪ್ರಸ್ಥಾತುಂ - ಪ್ರಯಾಣಮಾಡಲು, ನಾರ್ಹಸಿ - ಅರ್ಹನಾಗಬೇಡ, ಮೇ - ನನಗೆ, ತ್ವಯಾಸಹ - ನಿನ್ನೊಡನೆ, ತಪೋವಾ-ತಪವೇಆಗಲಿ, ಯದಿವಾ ಹಾಗಾಗದೇ ಹೋದರೆ, ಅರಣ್ಯಂವಾ-ಅರಣ್ಯವೇ ಆಗಲಿ, ಸ್ವರ್ಗೋವಾ - ಸ್ವರ್ಗವೇಆಗಲಿ, ಸ್ಯಾತ್ - ಉಂಟಾಗಲಿ. ‖೧೦‖ ತವ - ನಿನ್ನ, ಪೃಷ್ಠತಃ - ಹಿಂದುಗಡೆ, ಗಚ್ಛಂತ್ಯಾಃ - ಹೋಗುತ್ತಿರುವ, ಮೇ - ನನಗೆ, ತತ್ರ - ಆ ಅರಣ್ಯದಲ್ಲಿ, ಪಥಿ - ಮಾರ್ಗದಲ್ಲಿ, ವಿಹಾರಶಯನೇಷ್ವಿವಾ, ವಿಹಾರ - ಉದ್ಯಾನವನ ಸಂಚಾರದಲ್ಲಿಯೂ, ಶಯನೇಷ್ವಿವಾ - ಮಲಗಿರುವಕಾಲಗಳಲ್ಲಿರುವಂತೆ, ಕಶ್ಚಿತ್ಪರಿಶ್ರಮಃ-ಯಾವ ಶ್ರಮೆಯೂ, ನಭವಿತಾ- ಆಗಲಾರದು. ‖೧೧‖ ಮಾರ್ಗೇ - ದಾರಿಯಲ್ಲಿ, ಕುಶ - ದರ್ಭೆಗಳು, ಕಾಶ - ಜಂಡು ಹುಲ್ಲು

ರಿಗೆ ಕೊಡಲಪೇಕ್ಷಿಸ ಬೇಡ ; ಇದು ನಿನಗೆ ತಕ್ಕುದಲ್ಲ. ಯಾವ ಭರತನ ವಿಷಯವಾಗಿ ಹಿತವನ್ನು ನುಡಿದೆಯೋ, ಯಾವ ಭರತನ ಯೌವರಾಜ್ಯಕ್ಕೋಸುಗ ತಂದೆಯ ಆಣತಿಯಲ್ಲಿ ನ್ಯಸ್ತಚಿತ್ತನಾದಯೋ, ಆತನ ಇಷ್ಟಾನುಸಾರ ಯಾವಾಗಲೂ, ಆತನ ಅಧೀನದಲ್ಲಿ ನೀನಿರು. ನಾನು ನಿನ್ನಧೀನಳಾಗಿ ನಿನ್ನ ಸೇವೆಯಲ್ಲಿರುತ್ತೇನೆ. ಆದುದರಿಂದ ನೀನು ನನ್ನನ್ನು ಕರೆದುಕೊಂಡು ತೆರಳದೆ ವನವಾಸಕ್ಕೆಹೋಗಲು ಅರ್ಹನಾಗದಿರು. ಎಲೈ ಪ್ರಾಣನಾಥನೆ ! ಆರಣ್ಯವಾಸವಾಗಲಿ, ತಪವಾಗಲಿ, ದೇವಲೋಕವಾಗಲಿ, ಯಾವು ದಾದರೂ ನಾನು ನಿನ್ನ ಸಂಗಡಲೇ ಇರಬೇಕು. ‖ ೧-೧೧ ‖ ಆದುದರಿಂದ ನೀನು ನನ್ನನ್ನು ಕರೆದುಕೊಂಡು ಹೋಗದೆ, ವನವಾಸಕ್ಕೆ ತೆರಳಲು ಅರ್ಹನಲ್ಲವು. ನಿನ್ನೊಡನೆ ಕಾಡು

ಯೇಚ ಕಂಟಕಿನೋ ದ್ರುಮಾಃ ॥ ತೂಲಾಜಿನ ಸಮಸ್ಪರ್ಶಾ ಮಾರ್ಗೇ ಮಮ ಸಹ ತ್ವಯಾ ॥ ೧೨ ॥ ಮಹಾ ವಾತಸಮುದ್ಧೂತಂ ಯನ್ಮಾ ಮುಪಕರಿಷ್ಯತಿ ॥ ರಜೋ ರಮಣ ತನ್ಮನ್ಯೇ ಪರಾರ್ಥ್ಯಮಿವ ಚಂದನಂ ॥ ೧೩ ॥ ಶಾಡ್ವಲೇಷು ಯಥಾಶಿಶ್ಯೇ ವನಾಂತೇ ವನಗೋಚರ ॥ ಕುಥಾಸ್ತರಣ ತಲ್ಪೇಷು ಕಿಂಸ್ಯಾತ್ಸುಖತರಂ ತತಃ ॥ ೧೪ ॥ ಪತ್ರಂ ಮೂಲಂ ಫಲಂ ಯತ್ತ್ವ ಮಲ್ಪಂವಾ ಯದಿವಾ ಬಹು ॥ ದಾಸ್ಯಸಿ ಸ್ವಯಮಾಹೃತ್ಯ ತನ್ಮೇಽಮೃತರಸೋಪಮಂ ॥ ೧೫ ॥ ನಮಾತು ರ್ನಪಿತು ಸ್ತತ್ರ ಸ್ಮರಿಷ್ಯಾಮಿ ನವೇಶ್ಮನಃ ॥ ಆರ್ತವಾನ್ಯುಪ

ಗಳು, ಶರ-ತೃಣವಿಶೇಷಗಳು,(ಹುಚ್ಚುಕಬ್ಬು,) ಇಷೀಕಾಃ-ಮುಳ್ಳುಗಿಡಗಳೂ, ಕಂಟಕಿನಃ-ಮುಳ್ಳುಗಳುಳ್ಳ, ದ್ರುಮಾಶ್ಚ- ವೃಕ್ಷಗಳೂ, ಯೇ - ಯಾವದುಂಟೋ, ತೇ - ಅವುಗಳು, ತ್ವಯಾಸಹ - ನಿನ್ನೊಡಗೂಡಿರುವ, ಮಮ - ನನಗೆ, ತೂಲಾಜಿನಸಮಸ್ಪರ್ಶಾಃ, ತೂಲ - ಬೀಜವಿಲ್ಲದಹತ್ತಿಗೂ, ಅಜಿನ - ಕೃಷ್ಣಾಜಿನಗಳಿಗೂ, ಸಮ - ಸಮಾನವಾದ, ಸ್ಪರ್ಶಾಃ - ಸ್ಪರ್ಶೆಯುಳ್ಳವುಗಳು, ಭವಂತಿ - ಆಗುತ್ತವೆ. ॥ ೧೨ ॥ ಹೇ ರಾಮ - ಎಲೈ ಶ್ರೀರಾಮನೆ, ಮಹಾವಾತಸಮುದ್ಧೂತಂ, ಮಹಾವಾತ - ಚಂಡಮಾರುತದಿಂದ, ಸಮುದ್ಧೂತಂ - ಹಾರಿಸಲ್ಪಟ್ಟ, ಯದ್ರಜಃ - ಯಾವಧೂಳಿಯು, ಮಾಂ - ನನ್ನನ್ನು, ಪರಾರ್ಥ್ಯಂ - ಶ್ರೇಷ್ಠವಾದ, ಚಂದನಂ - ಶ್ರೀಗಂಧದಂತೆ, ಮನ್ಯೇ - ತಿಳಿದಿದ್ದೇನೆ. ॥ ೧೩ ॥ ಹೇ ವನಗೋಚರ - ವನದಲ್ಲಿಯೇ ದೃಷ್ಟಿಯುಳ್ಳವನೇ, ವನಾಂತೇ - ವನಮಧ್ಯದಲ್ಲಿ, ಶಾಡ್ವಲೇಷು - ಹಸಿಹುಲ್ಲುಗಳಲ್ಲಿ, ತ್ವಯಾಸಹ - ನಿನ್ನೊಡನೆ, ಯಥಾ - ಹೇಗೆ, ಶಿಶ್ಯೇ - ಮಲಗುವೆನೋ, ತತಃ - ಅದಕ್ಕಿಂತಲೂ, ಕುಥಾಸ್ತರಣತಲ್ಪೇಷು, ಕುಥಾ - ಚಿತ್ರಕಂಬಳಿಗಳ, ಆಸ್ತರಣ - ಪಟ್ಟುವಸ್ತ್ರಗಳೇ ಹೊದಿಕೆಗಳಾಗಿಯುಳ್ಳ, ತಲ್ಪೇಷು - ಹಾಸಿಗೆಗಳಲ್ಲಿ, ಸುಖತರಂ - ಅತಿಶಯವಾದ ಸುಖವು, ಸ್ಯಾತ್ಕಿಂ - ಆಗುವದೇನು. ॥ ೧೪ ॥ ಪತ್ರಂ - ಪರ್ಣವೇಆಗಲಿ, ಮೂಲಂ - ಕಂದಮೂಲವೇಆಗಲಿ, ಫಲಂ - ಫಲವೇಆಗಲಿ, ತ್ವಂ - ನೀನು, ಯತ್ - ಯಾವುದನ್ನು, ಅಲ್ಪಂವಾ - ಸ್ವಲ್ಪವನ್ನೇಆಗಲಿ, ಯದಿವಾ - ಹಾಗಲ್ಲದೆಹೋದರೆ, ಬಹುವಾ - ಬಹಳವಾಗಲಿ, ತ್ವಂ - ನೀನು, ಆಹೃತ್ಯ - ತಂದು, ದಾಸ್ಯಸಿ - ಕೊಡುತ್ತೀಯೋ, ತತ್ - ಅದು, ಮೇ - ನನಗೆ, ಅಮೃತರಸೋಪಮಂ, ಅಮೃತ - ಅಮೃತದ, ರಸ - ರಸಕ್ಕೆ, ಉಪಮಂ - ಸಮಾನವಾದುದು. ॥ ೧೫ ॥ ತತ್ರ -

---

ಮಾರ್ಗಗಳಲ್ಲಿ ಪ್ರಯಾಣಮಾಡುತ್ತಿರುವ ನನಗೆ, ಉದ್ಯಾನವನಗಳಲ್ಲಿ ಸಂಚರಿಸುವಂತೆ ಯಾವ ಆಯಾಸವೂ ತೋರುವುದಿಲ್ಲ. ಇಷ್ಟೆಯಲ್ಲದೆ ಆ ದಾರಿಗಳಲ್ಲಿರುವ, ದರ್ಭೆಗಳೂ, ಜಂಡುಹುಲ್ಲುಗಳೂ, ಇತರ ತೃಣವಿಶೇಷಗಳೂ, ಮುಳ್ಳುಗಳೂ, ಮುಳ್ಳುಗಿಡಗಳೂ, ಹತ್ತಿಯಂತೆಯೂ, ಕೃಷ್ಣಾಜಿನದಂತೆಯೂ, ನನಗೆ ಮೃದುವಾಗಿರುತ್ತವೆ, ಮತ್ತು ಭಯಂಕರವಾದ ಬಿರುಗಾಳಿಯಿಂದೇಳುವ ಕೆಂಧೂಳಿಯು ನನ್ನ ಮೈಯನ್ನಾವರಿಸಿದರೂ ನಿನ್ನೊಡನಿರುವ ನಾನು ಅದನ್ನು ಶ್ರೇಷ್ಠವಾದ ಶ್ರೀಗಂಧವೆಂದರಿಯುತ್ತೇನೆ. ಎಲೈ ವನಗಮನನ್ಯಸ್ತಚಿತ್ತನೆ! ನಿನ್ನೊಡಗೂಡಿ ಆ ಕಾಡಿನಲ್ಲಿ ಎಳೆಹುಲ್ಲಿನ ಮೇಲೆ ಮಲಗಿದರೂ, ಶ್ರೇಷ್ಠವಾದ ರನ್ನಗಂಬಳಿಯ ಮೇಲೆ ಮಲಗಿದಂತೆ ಸುಖವಾಗಿಯೇ ಇರು

ಭುಂಜಾನಾ ಪುಷ್ಪಾಣಿ ಚ ಫಲಾನಿಚ ॥ ೧೬ ॥ ನಚ ತತ್ರ ಗತಃ ಕಿಂಚಿ ದ್ರಷ್ಟು
ಮರ್ಹಸಿ ವಿಪ್ರಿಯಂ॥ಮತ್ಕೃತೇ ನಚ ತೇ ಶೋಕೋ ನಭವಿಷ್ಯಾಮಿ ದುರ್ಭರಾ
॥ ೧೭ ॥ ಯಸ್ತ್ವಯಾಸಹ ಸಸ್ಸ್ವರ್ಗೋ ನಿರಯೋ ಯಸ್ತ್ವಯಾ ವಿನಾ ॥
ಇತಿ ಜಾನ್ ಪರಾಂ ಪ್ರೀತಿಂ ಗಚ್ಛ ರಾಮ ಮಯಾ ಸಹ ॥ ೧೮ ॥ ಅಥಮಾ
ಮೇವ ಮವ್ಯಗ್ರಾಂ ವನಂ ನೈವ ನಯಿಷ್ಯಸಿ ! ವಿಷಮದ್ಯೈವ ಪಾಸ್ಯಾಮಿ
ಮಾವಿಶಂ ದ್ವಿಷತಾಂ ವಶಂ ॥ ೧೯ ॥ ಪಶ್ಚಾದಪಿ ಹಿ ದುಃಖೇನ ಮಮ ನೈವಾಸ್ತಿ
ಜೀವಿತಂ ॥ ಉಜ್ಝಿತಾಯಾ ಸ್ತ್ವಯಾ ನಾಥ ತದೈವ ಮರಣಂ ವರಂ ॥ ೨೦ ॥

ಆ ವನದಲ್ಲಿ, ಆರ್ತವಾನಿ - ಆಯಾಯ ಋತುಗಳಲ್ಲಿ ಹುಟ್ಟಿದ, ಪುಷ್ಪಾಣಿ - ಹೂವುಗಳನ್ನು, ಫಲಾನಿಚ - ಫಲಗಳನ್ನು, ಉಪಭುಂಜಾನಾ - ಭಕ್ಷಿಸುತ್ತ, ಮಾತುಃ - ತಾಯಿಯನ್ನೂ, ನಸ್ಮರಿಷ್ಯಾಮಿ - ಸ್ಮರಿಸಲಾರೆನು, ಪಿತುಃ - ತಂದೆಯನ್ನೂ, ನ - ಸ್ಮರಿಸಲಾರೆನು, ವೇಶ್ಮನಃ - ಮನೆಗಳನ್ನೂ, ನ - ಸ್ಮರಿಸಲಾರೆನು. ॥ ೧೬ ॥ ತತ್ರ - ಆ ಅರಣ್ಯದಲ್ಲಿ, ಗತಃ - ಹೋಗುತ್ತಿರುವ, ತ್ವಂ - ನೀನು, ಕಿಂಚಿತ್ - ಸ್ವಲ್ಪವಾದರೂ, ವಿಪ್ರಿಯಂ - ಅಹಿತಕಾರ್ಯವನ್ನು, ದ್ರಷ್ಟುಂ - ನೋಡುವದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ, ಮತ್ಕೃತೇ - ನನಗೋಸುಗ, ತೇ - ನಿನಗೆ, ಶೋಕಃ - ವ್ಯಸನವು, ನ - ಇಲ್ಲ, ದುರ್ಭರಾ - ಭರಿಸಲಸಾಧ್ಯಳು, ನಭವಿಷ್ಯಾಮಿ - ಆಗಲಾರೆನು. ॥೧೭॥ ತ್ವಯಾಸಹ- ನಿನ್ನೊಡನೆ, ಯಃ - ಯಾವ ಇರುವಿಕೆಯೋ, ಸಃ - ಅದು, ಸ್ವರ್ಗಃ - ಸ್ವರ್ಗವು, ತ್ವಯಾವಿನಾ - ನಿನ್ನ ವಿನಾಯಿಸಿ, ಯಃ - ಯಾವ ವಾಸವುಂಟೋ, ಸಃ - ಅದು, ನಿರಯಃ - ನರಕವು, ಹೇ ರಾಮ- ಎಲೈ ಶ್ರೀರಾಮನೆ, ಇತಿ - ಇಂತೆಂದು, ಜಾನ್ - ತಿಳಿದು, ಮಯಾಸಹ - ನನ್ನೊಡನೆ, ಪರಾಂ - ಬಹಳವಾದ, ಪ್ರೀತಿಂ - ವಿಶ್ವಾಸವನ್ನು, ಜಾನ್ - ತಿಳಿದವನಾಗಿ, ಗಚ್ಛ - ಹೊರಡು. ॥ ೧೮ ॥ ಅಥ - ಅನಂತರದಲ್ಲಿ, ಏವಂ - ಈಪರಿಯಾಗಿ, ಅವ್ಯಗ್ರಾಂ - ಏಕಾಗ್ರಚಿತ್ತಳಾದ ನನ್ನನ್ನು, ವನಂ- ವನವನ್ನು ಕುರಿತು, ನೈವನಯಿಷ್ಯಸಿ - ಕರೆದುಕೊಂಡು ಹೋಗದೇಹೋಗುವಿಯೋ, ಅದ್ಯೈವಂ - ಈಗಲೇ, ವಿಷಂ - ವಿಷವನ್ನು, ಪಾಸ್ಯಾಮಿ - ಕುಡಿಯುತ್ತೇನೆ, ದ್ವಿಷತಾಂ - ಶತ್ರುಗಳ, ವಶಂ - ಸ್ವಾಧೀನವನ್ನು, ಮಾವಿಶಂ - ಪ್ರವೇಶಿಸಲಾರೆನು. ॥ ೧೯ ॥ ಪಶ್ಚಾದಪಿ - ನಿನ್ನ ಗಮನಾನಂತರದಲ್ಲಿಯೂ, ಹಿ - ಯಾವ ಕಾರಣದಿಂದ, ದುಃಖೇನ - ದುಃಖದಿಂದ, ಮಮ - ನನ್ನ, ಜೀವಿತಂ -

ತ್ತದೆಯಲ್ಲದೆ ಮತ್ತೆ ಬೇರೆಯಲ್ಲವು. ಓ ಪ್ರಾಣನಾಥ ! ಪತ್ರವೇ ಆಗಲಿ, ಕಂದಮೂಲವೇ ಆಗಲಿ, ಫಲವೇ ಆಗಲಿ, ಯಾವುದೇ ಆದರೂ, ಸ್ವಲ್ಪವೋ, ಬಹಳವೋ, ನೀನೆಷ್ಟು ತಂದುಕೊಟ್ಟರೆ ಅದೇ ನನಗೆ ಅಮೃತರಸೋಪಮವಾಗಿರುತ್ತದೆ. ನಾನು ನಿನ್ನ ಸಮೀಪದಲ್ಲಿದ್ದುಕೊಂಡು ಆವನದಲ್ಲಿ ಫಲ ಪುಷ್ಪಗಳನ್ನು ಭುಜಿಸುತ್ತಲಿದ್ದರೆ, ತಾಯಿ, ತಂದೆ, ಮನೆ ಮೊದಲಾದುವುಗಳನ್ನು ಸ್ಮರಿಸುವುದೇ ಇಲ್ಲವು. ನನ್ನನ್ನು ನಿನ್ನೊಡನೆ ಕರೆದುಕೊಂಡು ಹೋದರೆ ನಿನಗೆ ಯಾವ ವಿಧದಲ್ಲಿಯೂ ತೊಂದರೆಯನ್ನೀಯುವುದಿಲ್ಲ, ಎಲೈ ಪ್ರಭುವೆ ! ಪತಿದೇವನಾದ ನಿನ್ನೊಡನಿರುವಿಕೆಯೇ ಸ್ವರ್ಗ; ನಿನ್ನನ್ನಗಲುವುದೇ ನರಕ; ಇದನ್ನು ನೀನರಿತು ನನ್ನೊಡನೆಯೇ ತೆರಳುವವನಾಗು. ಈ ರೀತಿ ಏಕಾಗ್ರಚಿತ್ತವುಳ್ಳವ

ಇಮಂಹಿ ಸಹಿತುಂ ಶೋಕಂ ಮುಹೂರ್ತಮಪಿ ನೋತ್ಸಹೇ ॥ ಕಿಂಪುನ ರ್ದಶವರ್ಷಾಣಿ ತ್ರೀಣಿ ಚೈಕಂ ಚ ದುಃಖಿತಾ ॥ ೨೧ ॥ ಇತಿಸಾ ಶೋಕಸಂ ತಪ್ತಾ ವಿಲಪ್ಯ ಕರುಣಂ ಬಹು ॥ ಚುಕ್ರೋಶ ಪತಿಮಾಯಸ್ತಾ ಭೃಶಮಾಲಿಂಗ್ಯ ಸಸ್ವರಂ ॥ ೨೨ ॥ ಸಾವಿದ್ಧಾ ಬಹುಭಿರ್ವಾಕ್ಯೈ ರ್ದಿಗ್ಧೈರಿವ ಗಜಾಂಗನಾ ॥ ಚಿರಸನ್ನಿಯತಂ ಬಾಷ್ಪಂ ಮುಮೋಚಾಗ್ನಿ ಮಿವಾರಣಿಃ ॥ ೨೩ ॥ ತಸ್ಯಾ ಸ್ಸ್ಫಟಿಕ ಸಂಕಾಶಂ ವಾರಿ ಸಂತಾಪ ಸಂಭವಂ ॥ ನೇತ್ರಾಭ್ಯಾಂ ಪರಿಸುಸ್ರಾವ

ಪ್ರಾಣವು, ನೈವಾಸ್ತಿ - ಇರುವದಿಲ್ಲವೋ, ತಸ್ಮಾತ್ - ಆಕಾರಣ, ಹೇ ನಾಥ - ಎಲೈ ಸ್ವಾಮಿಯೆ, ತ್ವಯಾ - ನಿನ್ನಿಂದ, ಉಜ್ಝಿತಾಯಾಃ - ತ್ಯಾಗಮಾಡಲ್ಪಟ್ಟ ನನಗೆ, ತದೈವ - ತತ್ಕ್ಷಣದಲ್ಲಿಯೇ, ಮರಣಂ - ಮರಣವು, ವರಂ - ಶ್ರೇಷ್ಠವು. ॥ ೨೦ ॥ ಹಿ - ಯಾವ ಕಾರಣ, ಮುಹೂರ್ತಮಪಿ - ಎರಡು ಘಳಿಗೆ ಕಾಲವಾದರೂ, ಇಮಂಶೋಕಂ - ಈ ದುಃಖವನ್ನು, ಸಹಿತುಂ - ಸಹಿಸುವಕ್ಕೆ, ನೋತ್ಸಹೇ - ಸಮರ್ಥಳಾಗಲಾರೆನು, ದುಃಖಿತಾ - ವ್ಯಸನಗೊಂಡು, ದಶವರ್ಷಾಣಿ - ಹತ್ತು ವರುಷ ಗಳು ಮತ್ತು, ಏಕಂಚ - ಒಂದೂನು (೧೪ ವರುಷಗಳು) ಕಿಂಪುನಃ - ಮತ್ತೇನು ಹೇಳತಕ್ಕದು. ॥ ೨೧ ॥ ಇತಿ - ಈಪರಿಯಾಗಿ, ಬಹು - ಬಹಳವಾಗಿ, ಕರುಣಾ - ದೀನವಾಗಿ, ವಿಲಪ್ಯ - ವಿಲ ಪಿಸಿ, ಶೋಕಸಂತಪ್ತಾ, ಶೋಕ - ವ್ಯಸನದಿಂದ, ಸಂತಪ್ತಾ - ಪರಿತಪಿಸುತ್ತ, ಆಯಸ್ತಾ - ಆಯಾ ಸಗೊಂಡ, ಭೃಶಂ - ಬಹಳವಾಗಿ, ಪತಿಂ - ಪತಿಯನ್ನು, ಆಲಿಂಗ್ಯ - ಅಪ್ಪಿಕೊಂಡು, ಸಸ್ವರಂ - ಸ್ವರದಿಂದ ಕೂಡಿದಂತೆ, ಚುಕ್ರೋಶ - ಅಳುತಿದ್ದಳು. ॥ ೨೨ ॥ ಸಾ - ಆ ಸೀತಾದೇವಿಯು, ಬಹುಭಿಃ - ಅನೇಕ, ವಾಕ್ಯೈಃ - ಮಾತುಗಳಿಂದ, ದಿಗ್ಧೈಃ - ವಿಷದಿಂದ ಲೇಪನಮಾಡಲ್ಪಟ್ಟ ಬಾಣ ಗಳಿಂದ, ಗಜಾಂಗನೇವ - ಹೆಣ್ಣಾನೆಯಂತೆ, ವಿದ್ಧಾ - ಹೊಡೆಯಲ್ಪಟ್ಟು, ಅರಣಿಃ - ಅರಣಿಯು, ಅಗ್ನಿಮಿವ - ಅಗ್ನಿಯನ್ನಂತೆ, ಚಿರಸನ್ನಿಯತಂ - ಬಹುಕಾಲದಿಂದ ತಡೆಯಲ್ಪಟ್ಟ, ಬಾಷ್ಪಂ - ಕಂಬನಿಯನ್ನು, ಮುಮೋಚ - ಬಿಟ್ಟಳು. ॥ ೨೩ ॥ ತಸ್ಯಾಃ-ಆ ಸೀತಾದೇವಿಯ, ನೇತ್ರಾಭ್ಯಾಂ- ಕಣ್ಣುಗಳಿಂದ, ಸಂತಾಪಸಂಭವಂ, ಸಂತಾಪ - ಸಂಕಟದಿಂದ, ಸಂಭವಂ - ಹುಟ್ಟಿದ, ಸ್ಫಟಿಕ ಸಂಕಾಶಂ - ಸ್ಫಟಿಕಮಣಿಗೆ ಸಮಾನವಾದ, ವಾರಿ - ಉದಕವು, ಪಂಕಜಾಭ್ಯಾಂ - ಕಮಲಗಳಿಂದ,

ಳಾದ ನನ್ನನ್ನು ಕರೆದುಕೊಳ್ಳದೆ ತೆರಳಿದವನಾದರೆ ವಿಷಪಾನವನ್ನು ಮಾಡುತ್ತೇನೆಯಲ್ಲದೆ ಹಗೆಯರ ವಶಳಾಗಲಾರೆನು. ನೀನು ತೆರಳಿದರೆ ನನ್ನ ಪ್ರಾಣಗಳುಳಿಯಲಾರವು. ಆದುದ ರಿಂದ ನಿನ್ನಿಂದ ತೊರೆಯಲ್ಪಡುವ ಉತ್ತರ ಕ್ಷಣದಲ್ಲಿಯೇ ನಾನು ಮೃತಳಾಗುತ್ತೇನೆ. ನಿನ್ನನ್ನಗಲಿ ಒಂದು ಮುಹೂರ್ತವಾದರೂ ಈ ದುಃಖವನ್ನು ಸೈರಿಸಲಾರೆನು. ಹೀಗಿರುವಲ್ಲಿ ಹದಿನಾಲ್ಕು ಸಂವತ್ಸರಗಳು ದುಃಖಿಸುತ್ತ ಜೀವದಿಂದ ಹೇಗಿರಲಿ" ಎಂಬಂತೆ ಶೋಕಾ ಕ್ರಾಂತಳಾಗಿ ಸಂತಪಿಸುತ್ತ ಶ್ರೀರಾಮನನ್ನಪ್ಪಿಕೊಂಡು ಬಹಳವಾಗಿ ರೋದಿಸಿ ವಿಷದಲ್ಲಿ ನೋಯಿಸಿದ ಬಾಣಾಹತವಾದ ಹೆಣ್ಣಾನೆಯಂತೆ, ಶ್ರೀರಾಮ ವಾಕ್ಯಗಳೆಂಬ ಬಾಣಗಳಿಂದ ವಿದ್ಧಳಾಗಿ, ಅರಣಿಯು ಬೆಂಕಿಯನ್ನು ಬಿಡುವಂತೆ ಬಿಸಿಯಾದ ಕಂಬನಿಗಳನ್ನು ಸುರಿಸಿದಳು. ಸ್ಫಟಿಕೋಪಮವಾದ ಆ ಸೀತಾದೇವಿಯ ಕಣ್ಣೀರು ಕಮಲಗಳಿಂದ ಉದಕವು ಸ್ರವಿಸು

ಪಂಕಜಾಭ್ಯಾಮಿವೋದಕಂ ॥ ೨೪ ॥ ತಚ್ಚೈವಾಮಲ ಚಂದ್ರಾಭಂ ಮುಖಮಾಯತ ಲೋಚನಂ ॥ ಪರ್ಯಶುಷ್ಯತ ಬಾಷ್ಪೇಣ ಜಲೋದ್ಧೃತ ಮಿವಾಂಬುಜಂ ॥ ೨೫ ॥ ತಾಂ ಪರಿಷ್ವಜ್ಯ ಬಾಹುಭ್ಯಾಂ ವಿಸಂಜ್ಞಾಮಿವ ದುಃಖಿತಾಂ ॥ ಉವಾಚ ವಚನಂ ರಾಮಃ ಪರಿವಿಶ್ವಾಸಯಂ ಸ್ತಥಾ ॥ ೨೬ ॥ ನ ದೇವಿ ತವ ದುಃಖೇನ ಸ್ವರ್ಗಮಪ್ಯಭಿರೋಚಯೇ ॥ ನಹಿ ಮೇಽಸ್ತಿ ಭಯಂ ಕಿಂಚಿತ್ಸ್ವಯಂಭೋರಿವ ಸರ್ವತಃ ॥ ೨೭ ॥ ತವ ಸರ್ವಮಭಿಪ್ರಾಯ ಮವಿಜ್ಞಾಯ ಶುಭಾನನೇ ॥ ವಾಸಂ ನರೋಚಯೇಽರಣ್ಯೇ ಶಕ್ತಿಮಾನಪಿ

ಉದಕಮಿವ - ನೀರಿನಂತೆ, ಪರಿಸುಸ್ರಾವ - ಸುರಿಯುತ್ತಿತ್ತು. ॥ ೨೪ ॥ ಅಮಲಚಂದ್ರಾಭಂ, ಅಮಲ - ಕಳಂಕವಿಲ್ಲದ, ಚಂದ್ರ - ಚಂದ್ರನ, ಆಭಂ - ಕಾಂತಿಯಂತೆ ಕಾಂತಿಯುಳ್ಳ, ಆಯತ ಲೋಚನಂ, ಆಯತ - ವಿಸ್ತಾರವಾದ, ಲೋಚನಂ - ನೇತ್ರಗಳುಳ್ಳ, ತಚ್ಚ ಮುಖಂ - ಆ ಮುಖವು, ಜಲೋದ್ಧೃತಂ, ಜಲ - ನೀರನಿಂದ, ಉದ್ಧೃತಂ - ಹೊರಗೆಹಾಕಲ್ಪಟ್ಟ, ಅಂಬುಜಮಿವ - ತಾವರೆ ಹುವ್ವಿನಂತೆ, ಬಾಷ್ಪೇಣ - ಕಣ್ಣೀರಿನಿಂದ, ಪರ್ಯಶುಷ್ಯತ - ಬತ್ತಿಹೋಯಿತು. ॥ ೨೫ ॥ ರಾಮಃ - ಶ್ರೀರಾಮನು, ವಿಸಂಜ್ಞಾಮಿವ - ಪ್ರಜ್ಞೆಯಿಲ್ಲದವಳಂತೆ, ದುಃಖಿತಾಂ - ವ್ಯಸನಗೊಂಡಿರುವ, ತಾಂ - ಆ ಸೀತಾದೇವಿಯನ್ನು, ಬಾಹುಭ್ಯಾಂ - ಭುಜಗಳಿಂದ, ಪರಿಷ್ವಜ್ಯ - ಅಪ್ಪಿಕೊಂಡು, ತಥಾ - ಹಾಗೆಯೇ, ಪರಿವಿಶ್ವಾಸಯನ್ - ಸಮಾಧಾನಗೊಳಿಸುತ್ತ, ವಚನಂ - ಮಾತನ್ನು, ಉವಾಚ - ಹೇಳಿದನು. ॥ ೨೬ ॥ ಹೇ ದೇವಿ - ಎಲೌ ಸೀತಾದೇವಿಯೆ, ತವ - ನಿನ್ನ, ದುಃಖೇನ - ವ್ಯಸನದಿಂದ, ಸ್ವರ್ಗಮಪಿ ಸ್ವರ್ಗಲೋಕವನ್ನೂ, ನಾಭಿರೋಚಯೇ - ಸಮ್ಮತಿಸಲಾರೆನು, ಸ್ವಯಂಭೋರಿವ-ಬ್ರಹ್ಮದೇವನಂತೆ, ಮೇ - ನನಗೂ, ಸರ್ವತಃ - ಎಲ್ಲೆಡೆಗಳಲ್ಲಿಯೂ, ಕಿಂಚಿತ್ - ಸ್ವಲ್ಪವಾದರೂ, ಭಯಂ - ಭಯವು, ನಹಿ - ಇಲ್ಲವಷ್ಟೆ. ॥ ೨೭ ॥ ಹೇ ಶುಭಾನನೇ - ಎಲೌ ಶುಭಕರವಾದ ಮುಖವುಳ್ಳವಳೇ, ತವ - ನಿನ್ನ, ಸರ್ವಂ - ಸಮಸ್ತವಾದ, ಅಭಿಪ್ರಾಯಂ - ಇಷ್ಟಾರ್ಥವನ್ನು, ಅವಿಜ್ಞಾಯ-ತಿಳಿಯದೆ, ರಕ್ಷಣೇ - ಕಾಪಾಡುವಿಕೆಯಲ್ಲಿ, ಶಕ್ತಿಮಾನಪಿ - ಸಾಮರ್ಥ್ಯವಂತನಾದರೂ,

ವಂತೆ ಸುರಿಯುತ್ತಿದ್ದಿತು. ಆಗ ಚಂದ್ರನಂತೆ ಬಹು ಪ್ರಕಾಶಮಾನವೂ, ವಿಸ್ತಾರವಾದ ನೇತ್ರಗಳುಳ್ಳದೂ ಆದ ಆಕೆಯ ಮುಖವು ಜಲದಿಂದ ಹೊರಗೆ ತೆಗೆದ ಕಮಲದಂತೆ ಶುಷ್ಕವಾದುದಾಯಿತು. ॥ ೧೧-೨೫ ॥ ಆಗ ಶ್ರೀರಾಮಚಂದ್ರನು ಮನಕರಗಿ ಆ ದೇವಿಯನ್ನಪ್ಪಿಕೊಂಡು ಸಂತವಿಡುತ್ತ ಆಕೆಯನ್ನು ಕುರಿತು ಹೀಗೆಂದನು. " ಎಲೌ ದೇವಿಯೇ ! ನಿನ್ನ ದುಃಖದಿಂದ ನಾನು ಸ್ವರ್ಗವನ್ನಾದರೂ ಬಯಸುವುದಿಲ್ಲ. ಎಲ್ಲೆಡೆಗಳಲ್ಲಿಯೂ ಬ್ರಹ್ಮನಿಗೆ ಯಾವ ರೀತಿ ಭಯವಿಲ್ಲವೋ, ಆರೀತಿ ನನಗೂ ಭಯವೆಂಬುದಿಲ್ಲ. ಎಲೌ ಶುಭಾನನೆಯೆ! ನಾನು ನಿನ್ನನ್ನು ರಕ್ಷಿಸುವುದರಲ್ಲಿ ಸಮರ್ಥನಾದರೂ ನಿನ್ನಭಿಪ್ರಾಯವನ್ನು ತಿಳಿಯದೆ ವನವಾಸವು ಕಷ್ಟವಾದುದೆಂದು ಹೇಳಿದೆನು. ಗೊಂಡಾರಣ್ಯದಲ್ಲಿಯಾದರೂ ನಿನ್ನನ್ನು ಸಂರಕ್ಷಿಸಲು ನಾನು ಸಮರ್ಥನಾಗಿರುವೆನೆಂಬುದನ್ನರಿವವಳಾಗು. ಎಲೌ ಜನಕನಂದಿನಿಯೆ! ಆಲಿಸು ; ನೀನು ನನ್ನೊಡನೆ ವನವಾಸವಂ ಗೈಯ್ಯಲೋಸುಗವೇ ಸೃಜಿಸಲ್ಪಟ್ಟಿರಬಹುದು.

ರಕ್ಷಣೇ ‖ ೨೮ ‖ ಯತ್ಸೃಷ್ಟಾಸಿ ಮಯಾಸಾರ್ಧಂ ವನವಾಸಾಯ ಮೈಥಿಲಿ ‖ ನವಿಹಾತುಂ ಮಯಾ ಶಕ್ಯಾ ಕೀರ್ತಿರಾತ್ಮವತಾ ಯಥಾ ‖ ೨೯ ‖ ಧರ್ಮಸ್ತು ಗಜನಾಸೋರು ಸದ್ಭಿರಾಚರಿತಃ ಪುರಾ ‖ ತಂಚಾಹ ಮನುವರ್ತೇಽದ್ಯ ಯಥಾ ಸೂರ್ಯಂ ಸುವರ್ಚಲಾ ‖ ೩೦ ‖ ನಖಲ್ವಹಂ ನಗಚ್ಛೇಯಂ ವನಂ ಜನಕ ನಂದಿನಿ ‖ ವಚನಂ ತನ್ನಯತಿ ಮಾಂ ಪಿತು ಸ್ಸತ್ಯೋಪಬೃಂಹಿತಂ ‖ ೩೧ ‖

ಅರಣ್ಯೇ-ಕಾಡಿನಲ್ಲಿ, ವಾಸಂ - ವಾಸವನ್ನು, ನರೋಚಯೇ-ಸಮ್ಮತಿಸಲಾರೆನು. ‖೨೮‖ ಹೇ ಮೈಥಿಲಿ-ಎಲೌ ಸೀತಾದೇವಿಯೇ, ಯತ್-ಯಾವಕಾರಣ,ಮಯಾಸಾರ್ಧಂ-ನನ್ನೊಡನೆ, ವನವಾಸಾಯ-ವನವಾಸಕ್ಕೆ, ಸೃಷ್ಟಾ - ನಿರ್ಮಿಸಲ್ಪಟ್ಟವಳು, ಅಸಿ - ಆಗಿರುವೆಯೋ, ತತ್ - ಆ ಕಾರಣ, ಆತ್ಮವತಾ-ಆತ್ಮಜ್ಞಾನಿಯಾದ ಯೋಗಿಯಿಂದ, ಕೀರ್ತಿರ್ಯಥಾ - ಕೀರ್ತಿಯಂತೆ, ಮಯಾ - ನನ್ನಿಂದ, ವಿಹಾತುಂ - ತ್ಯಜಿಸಲು, ನಶಕ್ಯಾ - ಅರ್ಹಳಲ್ಲ. ‖ ೨೯ ‖ ಹೇ ಗಜನಾಸೋರು-ಎಲೈ ಆನೆಯ ಸೊಂಡಿಲನಂತೆ ತೊಡೆಗಳುಳ್ಳವಳೆ, ಧರ್ಮಃ - ಈ ವಾನಪ್ರಸ್ಥಧರ್ಮವು, ಪುರಾ - ಪೂರ್ವದಲ್ಲಿ, ಸದ್ಭಿಃ - ಸತ್ಪುರುಷರಿಂದ, ಆಚರಿತಃ - ಆಚರಿಸಲ್ಪಟ್ಟಿದ್ದು, ತಂ - ಅದೇ ಧರ್ಮವನ್ನು. ಅಹಂಚ - ನಾನೂ, ಅದ್ಯ-ಈಗ, ಅನುವರ್ತೇ - ಅನುಸರಿಸುತ್ತೇನೆ, ತ್ವಂ - ನೀನು, ಸೂರ್ಯಂ - ಸೂರ್ಯನನ್ನು, ಸುವರ್ಚಲಾ ಯಥಾ - ಸುವರ್ಚಲಾದೇವಿಯಂತೆ, ಮಾಂ - ನನ್ನನ್ನು, ಅನುವರ್ತಸ್ವ - ಅನುಸರಿಸು. (೧) ‖ ೩೦ ‖ ಹೇ ಜನಕನಂದಿನಿ - ಎಲೌ ಸೀತಾದೇವಿಯೆ, ಅಹಂ - ನಾನು, ವನಂ - ವನವನ್ನು ಕುರಿತು, ನಗಚ್ಛೇಯಮಿತಿನ - ಹೋಗುವದಿಲ್ಲವೆಂದಲ್ಲ, ಪಿತುಃ - ತಂದೆಯ, ಸತ್ಯೋಪಬೃಂಹಿತಂ, ಸತ್ಯ - ಸತ್ಯದಿಂದ, ಉಪಬೃಂಹಿತಂ - ದೃಢವಾಗಿ ಮಾಡಲ್ಪಟ್ಟ, ತದ್ವಚನಂ - ಆ ಮಾತು, ಮಾಂ-ನನ್ನನ್ನು, ವನಂ - ವನವನ್ನು, ನಯತಿ - ಹೊಂದಿಸುತ್ತದೆ. ‖ ೩೧ ‖ ಹೇ ಸುಶ್ರೋಣಿ - ಎಲೌ

ಮಹಾ ಯೋಗಿಗೆ ಸಂಪ್ರಾಪ್ತವಾದ ಕೀರ್ತಿಯು ಹೇಗೆ ಬಿಡಲಾಗುವುದಿಲ್ಲವೋ, ಅಂತೆಯೇ ಇಂತಹ ಪ್ರಿಯ ಪತ್ನಿಯಾದ ನಿನ್ನನ್ನು ಬಿಡಲು ನನಗಾಗುವುದಿಲ್ಲ. ಎಲೌ ಗಜಕರೋಪಮವಾದ ಊರು ಪ್ರದೇಶಗಳುಳ್ಳವಳೆ ! ಪೂರ್ವೀಕರಾದ ರಾಜರ್ಷಿಗಳು ಸತಿಯರಿಂದೊಡಗೂಡಿ ವಾನಪ್ರಸ್ಥಾಶ್ರಮವನ್ನು ಕೈಕೊಳ್ಳುತ್ತೇನೆ. ನೀನೂ ಸಹ ಹಿಂದಿನವರು ನಡೆದ ಧರ್ಮ ಸರಣಿಯನ್ನವಲಂಬಿಸಿದೆ ; ದೇವಿ ! ಛಾಯಾದೇವಿಯು ದಿನಮಣಿಯನ್ನು ಹಿಂಬಾಲಿಸುವಂತೆ ತಂದೆಯ ನಿರೂಪದಿಂದ ವನಕ್ಕೆ ತೆರಳುತ್ತಿರುವ ನನ್ನೊಡನೆ ಬರುವವಳಾಗು. ಓ ಜನಕರಾಯನ ಮಗಳೆ ! ನಾನೊಂದುವೇಳೆ ವನವಾಸಕ್ಕೆ ಹೋಗದಿದ್ದರೂ, ಸತ್ಯಪಾಶಬದ್ಧನಾದ ನಮ್ಮ ಜನಕನ ವಚನವು ನನ್ನನ್ನು ಅರಣ್ಯಕ್ಕೊಯ್ಯುವುದು. ಆದುದರಿಂದ

ಟಿ. (೧) " ಪತ್ನೀ ಸಹಿತವಾಗಿ ವನವಾಸಕ್ಕೆ ಹೊರಡುವಿಕೆಯು ಕೇವಲ ಅನುರಾಗದಿಂದ ಸಂಭವಿಸಿದುದಲ್ಲ. ಇದು ಶಿಷ್ಟಾಚಾರದಿಂದ ಸಂಪ್ರಾಪ್ತವಾದುದು. ಎಂದು ಭಾವವು " ಇಲ್ಲಿ " ಯಥಾ ಸೂರ್ಯಂ ಸುವರ್ಚಲಾ " ಎಂದು ಭಿನ್ನಲಿಂಗಗಳಿಗೆ ಉಪಮಾನಭಾವವು ಋಷಿ ಪ್ರೋಕ್ತವಾದುದರಿಂದ ಸಾಧುವಾಗಿಯೇ ಇರುವುದು. (**ಗೋವಿಂದರಾಜೀಯ.**) **ಮಹೇಶ್ವರ ತೀರ್ಥರು** "ಸದ್ಭಿಃ" ಎಂಬ ಪದಕ್ಕೆ "ಸಪತ್ನೀಕರಾದ" ಎಂದು ಅರ್ಥ ಮಾಡಿದ್ದಾರೆ.

ಏಷಧರ್ಮಸ್ಸು ಸುಶ್ರೋಣಿ ಪಿತುರ್ಮಾತುಶ್ಚ ವಶ್ಯತಾ ॥ ಅತಶ್ಚ ತಂವ್ಯತಿ
ಕ್ರಮ್ಯ ನಾಹಂ ಜೀವಿತು ಮುತ್ಸಹೇ ॥ ೩೨ ॥ ಅಸ್ವಾಧೀನಂ ಕಥಂ ದೈವಂ
ಪ್ರಕಾರೈ ರಭಿರಾಧ್ಯತೇ ॥ ಸ್ವಾಧೀನಂ ಸಮತಿಕ್ರಮ್ಯ ಮಾತರಂ ಪಿತರಂ ಗುರುಂ
॥ ೩೩ ॥ ಯತ್ತ್ರಯಂ ತತ್ತ್ರಯೋ ಲೋಕಾಃ ಪವಿತ್ರಂ ತತ್ಸಮಂ ಭುವಿ ॥
ನಾನ್ಯದಸ್ತಿ ಶುಭಾಪಾಂಗೇ ತೇನೇದ ಮಭಿರಾಧ್ಯತೇ ॥ ೩೪ ॥ ನ ಸತ್ಯಂ ದಾನ
ಮಾನೌವಾ ನಯಜ್ಞಾಶ್ಚಾಪ್ತ ದಕ್ಷಿಣಾಃ ॥ ತಥಾ ಬಲಕರಾ ಸ್ಸೀತೇ ಯಥಾ

ಸೀತಾದೇವಿಯೆ, ಪಿತುಃ - ತಂದೆಗೂ, ಮಾತುಶ್ಚ - ತಾಯಿಗೂ, ವಶ್ಯತಾ - ಸ್ವಾಧೀನತೆಯಾವ ದುಂಟೊ, ಏಷಃ - ಇದು, ಧರ್ಮಸ್ತು - ಧರ್ಮವೇ ; ಅತಃ - ಈಕಾರಣ, ತಂ - ಆ ಧರ್ಮವನ್ನು, ಅತಿಕ್ರಮ್ಯ - ಉಲ್ಲಂಘಿಸಿ, ಅಹಂ - ನಾನು, ಜೀವಿತುಂ - ಬದುಕಲು, ನೋತ್ಸಹೇ - ಉದ್ಯುಕ್ತ ನಾಗಲಾರೆನು. ॥ ೩೨ ॥ ಸ್ವಾಧೀನಂ - ವಶವಾದ, ಮಾತರಂ - ತಾಯಿಯನ್ನೂ, ಪಿತರಂ - ತಂದೆ ಯನ್ನೂ, ಗುರುಂ - ಗುರುವೆಂಬ, ದೈವಂ - ದೈವವನ್ನೂ, ಸಮತಿಕ್ರಮ್ಯ-ಅತಿಕ್ರಮಿಸಿ, ಅಸ್ವಾಧೀ ನಂ - ಸ್ವತಂತ್ರವಾದ, ದೈವಂ - ದೇವತೆಯು, ಪ್ರಕಾರೈಃ - ಪ್ರಾರ್ಥನಾಬಗೆಗಳಿಂದ, ಕಥಂ - ಹೇಗೆ, ಅಭಿರಾಧ್ಯತೇ - ಆರಾಧಿಸಲಾಗುತ್ತದೆ. ॥ ೩೩ ॥ ಹೇ ಶುಭಾಪಾಂಗೇ - ಶುಭಕರವಾದ ಕಟಾಕ್ಷ ಗಳುಳ್ಳವಳೆ, ಯತ್ - ಯಾವ, ತ್ರಯಂ - ಮಾತಾ ಪಿತೃ ಗುರುಗಳೆಂಬ ಮೂರುಂಟೋ, ತತ್-ಅದು, ತ್ರಯಃ - ಮೂರಾದ, ಲೋಕಾಃ - ಲೋಕಗಳು, ಭುವಿ - ಭೂಲೋಕದಲ್ಲಿ, ತತ್ಸಮಂ - ಆ ಮಾತಾ ಪಿತೃಗಳಿಗೆ, ಸಮಂ - ಸಮಾನವಾದ, ಪವಿತ್ರಂ - (ಗೋ) ಪವಿತ್ರಕರವಾದ, ಅನ್ಯತ್-ಮತ್ತೊಂದು ವಸ್ತುವು, ನಾಸ್ತಿ ಇಲ್ಲ, (ಮ) ತತ್ಸಮಂ, (೧) ತತ್ ಆ ಮಾತಾ ಪಿತೃ ಗುರುತ್ರಯಕ್ಕೆ, ಸಮಂ-ಸಮಾ ನವಾದ, ಪವಿತ್ರಂ, ಪವಿ - ಮಹಾ ಭಯಂಕರವಾದ ಸಂಸಾರದಿಂದ, ತ್ರಂ - ಸಂರಕ್ಷಣೆಮಾಡುತ್ತಿ ರುವ, ಅನ್ಯತ್ - ಮತ್ತೊಂದುವಸ್ತುವು, ನ - ಇಲ್ಲವೋ, ತೇನ - ಆಕಾರಣ, ಇದಂ - ಈ ತ್ರಯ ವೂ, ಅಭಿರಾಧ್ಯತೇ - ಆರಾಧನೆಮಾಡಲ್ಪಡುತ್ತದೆ. ॥ ೩೪ ॥ ಹೇ ಸೀತೇ-ಎಲೌ ಸೀತಾದೇವಿಯೇ, ಪಿತಾ - ಇಷ್ಟಕರವಾದ, ಪಿತುಃ - ತಂದೆಯ, ಸೇವಾ - ಸೇವೆಯು, ಬಲಕರೀ - ಬಲಿಷ್ಠವಾದುದೋ, ತಥಾ - ಹಾಗೆಯೇ, ದಾನಮಾನಂವಾ, ದಾನ - ಸತ್ಪಾತ್ರದಾನವು, ಮಾನಂವಾ - ಬಹುಮತಿಯೇ

ತಂದೆತಾಯಿಗಳ ಮಾತನ್ನು ಪರಿಪಾಲಿಸುವುದೇ ಧರ್ಮವು. ಈ ಕಾರಣ ನಾನವರ ವಚನವನ್ನು ಮೀರಿ ಜೀವಿಸಲಾರೆ. ॥ ೨೬-೩೨ ॥ ಎಲೌ ದೇವಿಯೆ ! ತನ್ನ ಮುಂದಿ ರುವ ತಾಯಿ, ತಂದೆ, ಗುರುಗಳೆಂಬೀ ಮೂವರನ್ನತಿಕ್ರಮಿಸುವವನು ಕಣ್ಣಿಗೆ ಕಾಣದಿರುವ ದೇವತಾರಾಧನೆಯನ್ನು ಹೇಗೆತಾನೆ ಮಾಡಿಯಾನು ? ಕೇಳು, ಮಾತಾ ಪಿತೃ ಗುರುಗಳೆಂಬ ಮೂವರೂ ಮೂರು ಲೋಕಗಳು. ಈ ಲೋಕದಲ್ಲಿ ಇವಕ್ಕೆ ಸಮಾನವಾದುದೂ, ಪರಿ ಶುದ್ಧವಾದುದೂ, ಆಗಿರುವುದಾವುದೂ ಇಲ್ಲ. ಆದುದರಿಂದ ಈ ಲೋಕದಲ್ಲಿ ತಾಯಿ,

ಟಿ. (೧) "ಭುವಿತತ್ಸಮಂ ಪವಿತ್ರಮನ್ಯನ್ನಾಸ್ತಿ" ಎಂಬ ಕಡೆ "ಗಗನಂ ಗಗನಾಕಾರಂ" ಎಂಬಂತೆ ಮತ್ತೊಂದು ಉಪಮಾನವೇ ಇಲ್ಲ.

ಸೇನಾ ಪಿತುರ್ಹಿತಾ ॥ ೩೫ ॥ ಸ್ವರ್ಗೋ ಧನಂವಾ ಧಾನ್ಯಂವಾ ವಿದ್ಯಾಪುತ್ರಾ ಸ್ಸುಖಾನಿಚ ॥ ಗುರುವೃತ್ತ್ಯ ನುರೋಧೇನ ನಕಿಂಚಿದಪಿ ದುರ್ಲಭಂ ॥ ೩೬ ॥ ದೇವಗಂಧರ್ವ ಗೋ ಲೋಕಾ೯ ಬ್ರಹ್ಮಲೋಕಾಂ ಸ್ತಥಾಪರಾ೯ ॥ ಪ್ರಾಪ್ನು ವಂತಿ ಮಹಾತ್ಮಾನೋ ಮಾತಾಪಿತೃ ಪರಾಯಣಾಃ ॥ ೩೭ ॥ ಸ ಮಾಂ ಪಿತಾ ಯಥಾ ಶಾಸ್ತಿ ಸತ್ಯ ಧರ್ಮಪಥೇ ಸ್ಥಿತಃ ॥ ತಥಾ ವರ್ತಿತು ಮಿಚ್ಛಾಮಿ ಸಹಿ ಧರ್ಮ ಸ್ಸನಾತನಃ ॥ ೩೮ ॥ ಮಮ ಸನ್ಮಾಮತಿ ಸ್ಸೀತೇ ತ್ವಾಂ ನೇತುಂ

ಆಗಲಿ, ನಬಲತರಾಃ - ಬಲವನ್ನು ಕೊಡುವಂತಹುದಲ್ಲ, ಆಪ್ತದಕ್ಷಿಣಾಃ, ಆಪ್ತ - ಹೊಂದಲ್ಪಟ್ಟ, ದಕ್ಷಿಣಾಃ - ದಕ್ಷಿಣೆಗಳುಳ್ಳ, ಯಜ್ಞಾಶ್ಚ - ಯಜ್ಞಗಳೂ, ತಥಾ - ಹಾಗೆ, ಬಲಕರಾಃ - ಇಹಲೋಕ ಪರಲೋಕಗಳಿಗೆ ಸಾಧಕಗಳು, ನ - ಅಲ್ಲ. ॥ ೩೫ ॥ ಸ್ವರ್ಗಃ - ಸ್ವರ್ಗವು, ಧನಂವಾ - ದ್ರವ್ಯವೇ ಆಗಲಿ, ಧಾನ್ಯಂವಾ - ನೆಲ್ಲೇ ಮೊದಲಾಗುಳ್ಳ ಧಾನ್ಯವೇ ಆಗಲಿ, ಪುತ್ರಾಃ - ಮಕ್ಕಳೇ ಆಗಲಿ, ವಿದ್ಯಾವಾ - ವಿದ್ಯಗಳೇ ಆಗಲಿ, ಸುಖಾನಿಚ - ಸುಖಗಳೂ, ಗುರುವೃತ್ಯನುರೋಧೇನ, (ಗೋ) ಗುರು- ಮಾತಾ ಪಿತೃ ಗುರುಗಳ, ವೃತ್ತಿ - ಶುಶ್ರೂಷೆಯು, (ಮ) ವೃತ್ತಿ - ಚಿತ್ತವೃತ್ತಿಯು, ಅನುರೋಧೇನ - ಅನುಸರಣೆಯಿಂದ, ಸಿಧ್ಯಂತಿ - ಸಿದ್ಧಿಸುತ್ತವೆ, ಕಿಂಚಿದಪಿ - ಯಾವದೂ, ದುರ್ಲಭಂ - ದುರ್ಲಭ ವಾದುದು, ನ - ಅಲ್ಲ. ॥ ೩೬ ॥ ಮಾತಾಪಿತೃಪರಾಯಣಾಃ, ಮಾತಾಪಿತೃ - ತಾಯಿತಂದೆಗಳ, ಪರಾಯಣಾಃ - ಸೇವೆಯಲ್ಲಿ ಆಸಕ್ತರಾದ, ಮಹಾತ್ಮಾನಃ - ದೃಢವಾದ ಮನಸ್ಸುಳ್ಳ ಪುರುಷರು, ದೇವಗಂಧರ್ವಗೋಲೋಕಾ೯, ದೇವ - ದೇವತೆಗಳ, ಗಂಧರ್ವ - ಗಂಧರ್ವರ, ಗೋ - ಗೋವುಗಳ, ಲೋಕಾ೯ - ಲೋಕಗಳನ್ನೂ, ತಥಾ - ಹಾಗೆಯೇ, ಪರಾ೯ - ಶ್ರೇಷ್ಠಗಳಾದ ಬ್ರಹ್ಮಲೋಕಗಳನ್ನೂ, ಪ್ರಾಪ್ನುವಂತಿ - ಹೊಂದುತ್ತಾರೆ. ॥ ೩೭ ॥ ಸತ್ಯಧರ್ಮಪಥೇ, ಸತ್ಯ - ಸತ್ಯಪ್ರಧಾನವಾದ, ಧರ್ಮಪಥೇ - ಧರ್ಮಮಾರ್ಗದಲ್ಲಿ, ಸ್ಥಿತಃ - ಇರುತ್ತಿರುವ, ಸಪಿತಾ - ಆ ತಂದೆಯು, ಮಾಂ - ನನ್ನನ್ನು ಕುರಿತು, ಯಥಾ - ಹೇಗೆ, ಶಾಸ್ತಿ - ಆಜ್ಞಾಪಿಸುತ್ತಾನೆಯೋ, ತಥಾ - ಹಾಗೆ, ವರ್ತಿತುಂ- ನಡೆಯಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಸಃ - ಅದೇ, ಸನಾತನಃ - ಅನಾದಿಯಾದ, ಧರ್ಮೋಹಿ - ಧರ್ಮವಷ್ಟೆ. ॥ ೩೮ ॥ ಹೇ ಸೀತೇ - ಎಲೌ ಸೀತಾದೇವಿಯೇ, ಮಮ - ನನ್ನ, ಮತಿಃ -

ತಂದೆ, ಗುರುಗಳಿಗೆ ಸಮಾನವಾದ ದೈವವು ಬೇರೊಂದಿಲ್ಲವು. ಈ ಕಾರಣದಿಂದೆಲೌ ಜನಕ ನಂದಿನಿಯೆ! ನಾನು ನನ್ನ ತಾಯಿ ತಂದೆಗಳ ವಚನವನ್ನು ಪರಿಪಾಲಿಸುತ್ತಿರುವೆನು. ಸತ್ಯವೂ, ಸತ್ಪಾತ್ರದಾನವೂ, ಬಹುಮಾನವೂ ಯಾವುವೂ ಕೂಡ ಇವುಗಳಿಗಿಂತ ಅತಿಶಯವಾದುದಲ್ಲ. ಬ್ರಾಹ್ಮಣ ಸತ್ಕಾರವೂ, ವಿವಿಧ ದಕ್ಷಿಣೆಗಳೂ ತಾಯಿ ತಂದೆಗಳ ಸೇವೆಗೆ ಸರಿದೂಗಲಾರವು. ಸ್ವರ್ಗವಾದರೂ, ಧನಧಾನ್ಯಗಳಾದರೂ ಸಮಸ್ತ ವಿದ್ಯೆಗಳಾದರೂ, ಪುತ್ರಸಂತಾನವಾದರೂ, ಮಾತಾ ಪಿತೃ ಗುರುಗಳನ್ನನುಸರಿಸುವವನಿಗೆ ಲಭಿಸುವುದೇನೂ ಅತಿಶಯವಾದುದಲ್ಲ. ಇದಲ್ಲದೆ, ಮಾತಾ ಪಿತೃಗಳನ್ನನುಸರಿಸುವ ಪುಣ್ಯಾತ್ಮರು, ದೇವಲೋಕ, ಗಂಧರ್ವಲೋಕ, ಬ್ರಹ್ಮಲೋಕವೇ ಮೊದಲಾದ ಪುಣ್ಯಲೋಕಗಳನ್ನು ಪಡೆಯುತ್ತಾರೆ. ಎಲೌ ಪ್ರಿಯಳೆ! ಧರ್ಮ ಮಾರ್ಗದಲ್ಲಿಯೂ, ಸತ್ಯದಲ್ಲಿಯೂ ನ್ಯಸ್ತಚಿತ್ತನಾದ ನಮ್ಮ ತಂದೆಯು ಯಾವರೀತಿ

ದಂಡಕಾವನಂ॥ವಸಿಷ್ಯಾಮೀತಿ ಸಾ ತ್ವಂ ಮಾಮನುಯಾತುಂ ಸು ನಿಶ್ಚಿತಾ॥೩೯॥ ಸಾಹಿ ಸೃಷ್ಟಾಽನವದ್ಯಾಂಗೀ ವನಾಯ ಮದಿರೇಕ್ಷಣೇ ॥ ಅನುಗಚ್ಛಸ್ವ ಮಾಂ ಭೀರು ಸಹ ಧರ್ಮಚರೀ ಭವ ॥ ೪೦ ॥ ಸರ್ವಥಾ ಸದೃಶಂ ಸೀತೇ ಮಮ ಸ್ವಸ್ಯ ಕುಲಸ್ಯಚ ॥ ವ್ಯವಸಾಯ ಮತಿಕ್ರಾಂತಾ ಕಾಂತೇ ತ್ವಮತಿ ಶೋಭನಂ ॥ ೪೧ ॥ ಆರಭಸ್ವ ಶುಭಶ್ರೋಣಿ ವನವಾಸ ಕ್ಷಮಾಃ ಕ್ರಿಯಾಃ ॥ ನೇದಾನೀಂ ತ್ವದೃತೇ ಸೀತೇ ಸ್ವರ್ಗೋಽಪಿ ಮಮ ರೋಚತೇ ॥ ೪೨ ॥ ಬ್ರಾಹ್ಮಣೇಭ್ಯಶ್ಚ

ಬುದ್ಧಿಯು, ತ್ವಾಂ ನಿನ್ನನ್ನು, ದಂಡಕಾವನಂ-ದಂಡಕಾರಣ್ಯವನ್ನು ಕುರಿತು, ನೇತುಂ-ಕರೆದುಕೊಂಡು ಹೋಗಲು, ಸನ್ನಾ-ಕ್ಷೀಣವಾಗಿತ್ತು, ಸಾತ್ವಂ-ಅಂತಹ ನೀನು, ವಸಿಷ್ಯಾಮೀತಿ - ದಂಡಕಾರಣ್ಯದಲ್ಲಿ ರುವೆನೆಂದು, ಮಾಂ - ನನ್ನನ್ನು ಕುರಿತು, ಅನುಯಾತುಂ - ಅನುಸರಿಸಿಬರಲು, ಸುನಿಶ್ಚಿತಾ - ನಿಶ್ಚಯಿಸಲ್ಪಟ್ಟೆ. ॥ ೩೯ ॥ ಹೇ ಮದಿರೇಕ್ಷಣೆ - ಮದಯುಕ್ತವಾದ ನೇತ್ರಗಳುಳ್ಳವಳೇ, ಅನವದ್ಯಾಂಗೀ - ನಿರ್ದೋಷವಾದ ಶರೀರವುಳ್ಳ, ಸಾ - ಅಂತಹ ನೀನು, ಹಿ - ಯಾವಕಾರಣ, ವನಾಯ - ವನವಾಸಕ್ಕೆ, ದೈವೇನ - ದೈವದಿಂದ, ಸೃಷ್ಟಾ - ನಿಯಮಿಸಲ್ಪಟ್ಟೆಯೋ, ತತ್ - ಆಕಾರಣ, ಹೇ ಭೀರು - ಎಲೌ ಭಯಶೀಲಳೇ, ಮಾಂ - ನನ್ನನ್ನು, ಅನುಗಚ್ಛಸ್ವ - ಅನುಸರಿಸಿಬಾ, ಸಹಧರ್ಮಚರೀ - ಒಡಗೂಡಿ ಧರ್ಮಾನುಷ್ಠಾನಮಾಡುವಳು, ಭವ - ಆಗು. ॥ ೪೦ ॥ ಹೇ ಕಾಂತೇ - ಎಲೌ ಪ್ರಿಯಳೇ, ಹೇ ಸೀತೇ - ಎಲೌ ಸೀತೆಯೇ, ಸ್ವಸ್ಯ - ನಿನಗೂ, ಕುಲಸ್ಯ - ವಂಶಕ್ಕೂ, ಸರ್ವಥಾ - ಎಲ್ಲರೀತಿಗಳಲ್ಲಿಯೂ, ಸದೃಶಂ - ಯೋಗ್ಯವಾದ, ಅತಿಶೋಭನಂ - ಅತಿಶ್ಲಾಘ್ಯವಾದ, ವ್ಯವಸಾಯಂ - ವನವಾಸಗಮನ ಪ್ರಯತ್ನವನ್ನು, ತ್ವಂ - ನೀನು, ಅತಿಕ್ರಾಂತಾ - ಬಹಳವಾಗಿ ಹೊಂದಿದೆ. ॥ ೪೧ ॥ ಹೇ ಶುಭಶ್ರೋಣಿ - ಎಲೌ ಶುಭಕರವಾದ ಶ್ರೋಣಿಗಳುಳ್ಳವಳೇ, ವನವಾಸ ಕ್ಷಮಾಃ, ವನವಾಸ - ವನವಾಸಕ್ಕೆ, ಕ್ಷಮಾಃ - ಯೋಗ್ಯಗಳಾದ, ಕ್ರಿಯಾಃ - ಯಾತ್ರಾ ದಾನಾದಿ ರೂಪಕರ್ಮಗಳನ್ನು, ಆರಭಸ್ವ - ಆರಂಭಮಾಡು, ಹೇ ಸೀತೇ - ಎಲೌ ಸೀತಾದೇವಿಯೆ, ತ್ವದೃತೇ - ನಿನ್ನವಿನಹ, ಮಮ - ನನಗೆ, ಇದಾನೀಂ - ಈಗ, ಸ್ವರ್ಗೋಽಪಿ - ಸ್ವರ್ಗವೂ, ನರೋಚತೇ - ರುಚಿಸುವುದಿಲ್ಲ. ॥ ೪೨ ॥ ಆಶಂಸಮಾನೇಭ್ಯಃ - ಯಾಚನೆಮಾಡುವ, ಭಿಕ್ಷುಕೇಭ್ಯಶ್ಚ - ಭಿಕ್ಷ

ಆಜ್ಞಾಪಿಸುವನೋ ಆರೀತಿ ನಡೆದುಕೊಳ್ಳುವೆನು. ಇದೇ ಅನಾದಿಸಿದ್ಧವಾದ ಧರ್ಮವು. ದೇವಿ ! ದಂಡಕಾರಣ್ಯಕ್ಕೆ ನಿನ್ನನ್ನು ಕರೆದುಕೊಂಡು ಹೋಗಲು ನನಗೆ ಮನವಿರಲಿಲ್ಲ. ಆದರೆ ನೀನೇ ನನ್ನನ್ನನುಸರಿಸಿ ಬರಬೇಕೆಂದು ನಿಶ್ಚಯಿಸಿದೆ. ವನವಾಸಕ್ಕೋಸುಗವೇ ಸೃಜಿಸಲ್ಪಟ್ಟ ರುವೆಯಾದುದರಿಂದ ನನ್ನನ್ನನುಸರಿಸಿ ನನ್ನೊಡನೆಯೇ ಧರ್ಮವನ್ನು ಅನುಷ್ಠಾನಮಾಡುವವ ಳಾಗು. ॥ ೩೩-೪೦ ॥ ಓ ಪ್ರಿಯಳೆ ! ನೀನು ಸದ್ವಂಶದಲ್ಲಿ ಜನಿಸಿದೆ. ಸತ್ಕುಲ ಪ್ರಸೂತನಾದ ನನ್ನ ಕರವಿಡಿದೆ. ಆದುದರಿಂದ ನನ್ನ ಯೌವರಾಜ್ಯಾಭಿಷೇಕಕ್ಕಾಗಿ ಮಾಡುವ ಪ್ರಯತ್ನಗಳನ್ನು ನಿಲ್ಲಿಸಿ, ವನವಾಸಕ್ಕೆ ತೆರಳುವ ಯತ್ನವನ್ನು ಮಾಡು. ನಿನ್ನನ್ನು ಬಿಟ್ಟು ನನಗೆ ಸ್ವರ್ಗವು ದೊರಕಿದರೂ ಅದು ನನಗೆ ಇಷ್ಟವಾದುದಲ್ಲ. ಆದುದರಿಂದೆಲೌ ದೇವಿಯೆ ! ವನವಾಸಕ್ಕೆ ಯೋಗ್ಯವಾದ ದಾನಾದಿ ಕರ್ಮಗಳನ್ನಾರಂಭಿಸು. ಯಾಚಕರಾದ

ರತ್ನಾನಿ ಭಿಕ್ಷುಕೇಭ್ಯಶ್ಚ ಭೋಜನಂ ॥ ದೇಹಿ ಚಾಶಂಸಮಾನೇಭ್ಯ ಸ್ಸಂತ್ವರಸ್ವ ಚ ಮಾಚಿರಂ ॥ ೪೩ ॥ ಭೂಷಣಾನಿ ಮಹಾರ್ಹಾಣಿ ವರವಸ್ತ್ರಾಣಿ ಯಾನಿಚ ॥ ರಮಣೀಯಾಶ್ಚ ಯೇ ಕೇಚಿತ್ ಕ್ರೀಡಾರ್ಥಾಶ್ಚಾ ಪ್ಯುಪಸ್ಕರಾಃ ॥ ೪೪ ॥ ಶಯನೀಯಾನಿ ಯಾನಾನಿ ಮಮಚಾನ್ಯಾನಿ ಯಾನಿಚ ॥ ದೇಹಿ ಸ್ವಭೃತ್ಯ ವರ್ಗಸ್ಯ ಬ್ರಾಹ್ಮಣಾನಾಮನಂತರಂ ॥ ೪೫ ॥ ಅನುಕೂಲಂತು ಸಾ ಭರ್ತುರ್ಜ್ಞಾತ್ವಾ ಗಮನ ಮಾತ್ಮನಃ ॥ ಕ್ಷಿಪ್ರಂ ಪ್ರಮುದಿತಾ ದೇವೀ ದಾತು ಮೇವೋಪಚಕ್ರಮೇ ॥ ೪೬ ॥

ತತಃ ಪ್ರಹೃಷ್ಟಾ ಪ್ರತಿ ಪೂರ್ಣ ಮಾನಸಾ
ಯಶಸ್ವಿನೀ ಭರ್ತುರವೇಕ್ಷ್ಯ ಭಾಷಿತಂ ॥

ಬೇಡುವವರಿಗೆ, ಭೋಜನಂ - ಭೋಜನವನ್ನು, ಬ್ರಾಹ್ಮಣೇಭ್ಯಶ್ಚ - ಬ್ರಾಹ್ಮಣರಿಗೆ, ರತ್ನಾನಿ - ರತ್ನಗಳನ್ನು, ದೇಹಿ - ಕೊಡು, ಸಂತ್ವರಸ್ವ - ಜಾಗ್ರತೆಮಾಡು, ಮಾಚಿರಂ - ಸಾವಕಾಶವನ್ನು ಮಾಡಬೇಡ. ॥ ೪೩ ॥ ಮಹಾರ್ಹಾಣಿ - ಅಮೂಲ್ಯಗಳಾದ, ಭೂಷಣಾನಿ - ಒಡವೆಗಳನ್ನೂ, ವರವಸ್ತ್ರಾಣಿ, ವರ-ಶ್ರೇಷ್ಠವಾದ, ವಸ್ತ್ರಾಣಿ-ವಸ್ತ್ರಗಳನ್ನೂ, ಯಾನಿ-ಯಾವುವುಗಳೋ, ರಮಣೀಯಾಃ-ಮನೋಹರಗಳಾದ, ಕ್ರೀಡಾರ್ಥಾಶ್ಚ - ಆಡುವ ನಿಮಿತ್ತವಾಗಿಮಾಡಲ್ಪಟ್ಟ, ಉಪಸ್ಕರಾಅಪಿ-ಭಂಗಾರದ ಬೊಂಬೆಗಳೇ ಮೊದಲಾದ ಸಾಮಗ್ರಿಗಳು, ಯೇ - ಯಾವುವುಗಳೋ, ಶಯನೀಯಾನಿ-ಮಲಗುವ ಮನೆಗೆ ಯೋಗ್ಯವಾದ ಪದಾರ್ಥಗಳೂ, ಯಾನಾನಿ - ವಾಹನಗಳೂ, ಅನ್ಯಾನಿ - ಮತ್ತೆಕೆಲವಾದ, ಮಮ - ನನ್ನ, ವಸ್ತೂನಿ - ವಸ್ತುಗಳು, ಯಾನಿ - ಯಾವುವುಂಟೋ, ತಾನಿ - ಅವುಗಳನ್ನೂ, ಬ್ರಾಹ್ಮಣಾನಾಂ - ಬ್ರಾಹ್ಮಣರಿಗೆ, ಅನಂತರಂ - ಆದಬಳಿಕ, ಸ್ವಭೃತ್ಯವರ್ಗಸ್ಯ, ಸ್ವ-ಸ್ವಕೀಯರಾದ, ಭೃತ್ಯ - ಸೇವಕರ, ವರ್ಗಸ್ಯ - ಸಮೂಹಕ್ಕೆ, ದೇಹಿ - ಕೊಟ್ಟುಬಿಡು. ॥ ೪೪-೪೫ ॥ ಸಾದೇವಿ - ಆ ಸೀತಾದೇವಿಯು, ಆತ್ಮನಃ - ತನ್ನ, ಗಮನಂ - ಗಮನವನ್ನು, ಭರ್ತುಃ - ಗಂಡನಿಗೆ, ಅನುಕೂಲಂ - ಅನುಕೂಲವನ್ನಾಗಿ, ಜ್ಞಾತ್ವಾ - ತಿಳಿದು, ಪ್ರಮುದಿತಾ - ಸಂತೋಷಗೊಂಡವಳಾಗಿ, ಕ್ಷಿಪ್ರಂ - ಜಾಗ್ರತೆಯಾಗಿ, ದಾತುಮೇವ - ಕೊಡುವದಕ್ಕೋಸುಗವೇ, ಉಪಚಕ್ರಮೇ - ಆರಂಭ ಮಾಡಬೇಕೆಂದು ಯೋಚಿಸಿದಳು. ॥ ೪೬ ॥ ತತಃ - ಬಳಿಕ, ಪ್ರಹೃಷ್ಟಾ - ಸಂತೋಷಗೊಂಡ, ಪ್ರತಿಪೂರ್ಣಮಾನಸಾ, ಪ್ರತಿಪೂರ್ಣ- ಸಂಪೂರ್ಣವಾದ, ಮಾನಸಾ - ಮನೋರಥವುಳ್ಳ, ಯಶಸ್ವಿನೀ- ಕೀರ್ತಿವಂತಳಾದ, ಮನಸ್ವಿನೀ - ಒಳ್ಳೆಯಮನಸ್ಸುಳ್ಳ, ಅಂಗನಾ-ಪತಿವ್ರತೆಯಾದ ಸೀತಾದೇವಿಯು, ಭರ್ತುಃ - ಗಂಡನ, ಭಾಷಿತಂ - ಮಾತನ್ನು, ಅವೇಕ್ಷ್ಯ - ಆಲೋಚಿಸಿ, ಧರ್ಮಭೃತಾಂ - ಸ್ವಧರ್ಮ

ಭಿಕ್ಷುಕರಿಗೆ ಭೋಜನವನ್ನೂ, ವಿಪ್ರರಿಗೆ ರತ್ನ, ವಸ್ತ್ರಾದಿಗಳನ್ನೂ, ಶ್ರೇಷ್ಠಗಳಾದ ಆಭರಣಗಳನ್ನೂ, ನಮ್ಮ ಭೃತ್ಯವರ್ಗದವರಿಗೆ ಕ್ರೀಡಾರ್ಥವಾಗಿ ಮಾಡಲ್ಪಟ್ಟ ಪದಾರ್ಥಗಳನ್ನೂ, ಶಯನಾಗಾರದಲ್ಲಿರುವ ಉತ್ತಮ ವಸ್ತುಗಳನ್ನೂ, ವಾಹನಗಳನ್ನೂ ಇತರ ಪದಾರ್ಥಗಳನ್ನೂ ಕೊಡುವವಳಾಗು." ಶ್ರೀರಾಮನು ಈರೀತಿ ನುಡಿದಮೇಲೆ ಸೀತಾದೇವಿಯು ಆತನು ತನ್ನನ್ನೂ ಕರೆದುಕೊಂಡು ಹೋಗುವನೆಂದು ಮಹಾ ಸಂತೋಷವುಳ್ಳವಳಾದಳು. ಆ

ಧನಾನಿ ರತ್ನಾನಿಚ ದಾತುಮಂಗನಾ
ಪ್ರಚಕ್ರಮೇ ಧರ್ಮಭೃತಾಂ ಮನಸ್ವಿನೀ ‖ ೪೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಂಶಸ್ಸರ್ಗಃ.

ಶೀಲರಾದ ಬ್ರಾಹ್ಮಣರಿಗೆ, ಧನಾನಿ - ಧನಗಳನ್ನೂ, ರತ್ನಾನಿಚ - ರತ್ನಗಳನ್ನೂ, ದಾತುಂ - ಕೊಡುವದಕ್ಕೆ, ಪ್ರಚಕ್ರಮೇ - ಉಪಕ್ರಮಿಸಿದಳು. ‖ ೪೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಂಶಸ್ಸರ್ಗಃ.

ಬಳಿಕ ಕೀರ್ತಿವಂತಳೂ, ಮಹಾ ಮನಸ್ಕಳಾದವಳೂ, ಪತಿವ್ರತೆಯೂ ಆದ ಸೀತಾದೇವಿಯು ಧನ ರತ್ನಾದಿಗಳನ್ನು ಕೊಡಲುಪಕ್ರಮಿಸಿದವಳಾದಳು. ‖ ೪೧-೪೭ ‖

ಇಂತಿದು ಶ್ರೀರಾಮಕೃತ ಸೀತಾನುಸರಣ ಯಾಚನಾಂಗೀಕಾರ ವಿವರಣವೆಂಬ
ಮೂವತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕತ್ರಿಂಶಸ್ಸರ್ಗಃ.

ಏವಂ ಶ್ರುತ್ವಾತು ಸಂವಾದಂ ಲಕ್ಷ್ಮಣಃ ಪೂರ್ವಮಾಗತಃ ॥
ಬಾಷ್ಪಪರ್ಯಾಕುಲಮುಖಃ ಶೋಕಂ ಸೋಢು ಮಶಕ್ನುವನ್ ॥ ೧ ॥ ಸಭ್ರಾತು
ಶ್ಚರಣೌ ಗಾಢಂ ನಿಪೀಡ್ಯ ರಘುನಂದನಃ ॥ ಸೀತಾ ಮುವಾಚಾತಿಯಶಾ
ರಾಘವಂ ಚ ಮಹಾವ್ರತಂ ॥ ೨ ॥ ಯದಿ ಗಂತುಂ ಕೃತಾ ಬುದ್ಧಿರ್ವನಂ
ಮೃಗ ಗಜಾಯುತಂ॥ಅಹಂ ತ್ವಾನು ಗಮಿಷ್ಯಾಮಿ ವನಮಗ್ರೇ ಧನುರ್ಧರಃ ॥೩॥
ಮಯಾ ಸಮೇತೋಽರಣ್ಯಾನಿ ಬಹೂನಿ ವಿಚರಿಷ್ಯಸಿ ॥ ಪಕ್ಷಿಭಿರ್ಮೃಗ

ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ಪೂರ್ವಂ - (ಗೋ) ಸೀತಾರಾಮ ಸಂವಾದಾತ್ಪೂರ್ವದಲ್ಲಿಯೇ, ಆಗತಃ - ಬಂದವನಾದಕಾರಣ, ಏವಂ - ಈಪರಿಯಾಗಿ, ಸಂವಾದಂತು - ಸೀತಾರಾಮ ಸಂವಾದವನ್ನು, ಶ್ರುತ್ವಾ - ಕೇಳಿ, ಬಾಷ್ಪಪರ್ಯಾಕುಲಮುಖಃ, ಬಾಷ್ಪ - ಕಂಬನಿಗಳಿಂದ, ಪರ್ಯಾಕುಲ - ತುಂಬಿದ, ಮುಖಃ - ಮುಖವುಳ್ಳವನಾಗಿ, ಶೋಕಂ - ವ್ಯಸನವನ್ನು, ಸೋಢುಂ - ಸಹಿಸುವದಕ್ಕೆ, ಅಶಕ್ನುವನ್ - ಅಸಮರ್ಥನಾಗಿ, ಅತಿಯಶಾಃ - ಬಹಳ ಕೀರ್ತಿವಂತನಾದ, ರಘುನಂದನಃ - ರಘುವಂಶಜನಾದ, ಸಃ - ಆ ಲಕ್ಷ್ಮಣನು, ಭ್ರಾತುಃ - ಅಣ್ಣನ, ಚರಣೌ - ಪಾದಗಳನ್ನು, ಗಾಢಂ - ದೃಢವಾಗಿ, ನಿಪೀಡ್ಯ - ಹಿಡಿದುಕೊಂಡು, ಮಹಾವ್ರತಂ - ಮಹಾ ಪುಣ್ಯಕರವ್ರತವುಳ್ಳ, ರಾಘವಂ - ಶ್ರೀರಾಮನನ್ನೂ, ಸೀತಾಂಚ - ಸೀತಾದೇವಿಯನ್ನೂ ಕುರಿತು, ಉವಾಚ - ಹೇಳಿದನು. ॥ ೧-೨ ॥ ಮೃಗಗಜಾಯುತಂ - ಮೃಗಗಳಿಂದಲೂ ಆನೆಗಳಿಂದಲೂ ಕೂಡಿಕೊಂಡಿರುವ, ವನಂ - ವನವನ್ನು ಕುರಿತು, ಗಂತು - ಹೋಗುವದಕ್ಕೆ, ಬುದ್ಧಿಃ - ಬುದ್ಧಿಯು, ಕೃತಾಯದಿ-ಮಾಡಲ್ಪಟ್ಟಿದ್ದೇ ಆದರೆ, ಅಹಂ - ನಾನು, ವನಂ - ವನದ, ಅಗ್ರೇ - ಮುಂಗಡೆಯಲ್ಲಿ, ಧನುರ್ಧರಃ - ಧನುರ್ಧಾರಿಯಾಗಿ, ತ್ವಾಂ - ನಿನ್ನನ್ನು ಕುರಿತು, ಅನುಗಮಿಷ್ಯಾಮಿ - ಅನುಸರಿಸಿ ಬರುವೆನು, ಮಯಾ - ನನ್ನಿಂದ, ಸಮೇತಃ - ಕೂಡಿ, ಸಮಂತತಃ - ಎಲ್ಲೆಡೆಯಲ್ಲಿಯೂ, ಪಕ್ಷಿಭಿಃ - ಹಕ್ಕಿಗಳಿಂದಲೂ, ಮೃಗಯೂಥೈಶ್ಚ - ಮೃಗಗಳ ತಂಡಗಳಿಂದಲೂ, ಸಂಘುಷ್ಟಾನಿ - ಧ್ವನಿಗೊಳಿಸುತ್ತಿರುವ, ಬಹೂನಿ-

---

ಮಹಾ ಕೀರ್ತಿವಂತನಾದ ಲಕ್ಷ್ಮಣಸ್ವಾಮಿಯು ಈ ಮಾತುಗಳು ನಡೆವುದಕ್ಕೆ ಹಿಂದೆಯೇ, ಕೌಸಲ್ಯಾದೇವಿಯ ಗೃಹದಿಂದ ರಾಮನೊಡನೆಯೇ ಬಂದಿದ್ದನಾದ ಕಾರಣ, ಆ ಸೀತಾರಾಮರ ಸಂವಾದವನ್ನು ಕೇಳಿ ಮುಖಗೆಟ್ಟವನಾಗಿ ದುಃಖವನ್ನು ಸೈರಿಸಲಾರದೆ ಅಣ್ಣನಾದ ಶ್ರೀರಾಮನ ಮತ್ತು ಸೀತಾದೇವಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಹೀಗೆಂದನು. " ಅಣ್ಣಾ ! ನೀವು ಗಜಗಳಿಂದಲೂ, ಚಿಗರೆಗಳಿಂದಲೂ ನಿಬಿಡೀಕೃತವಾದ ಅರಣ್ಯಕ್ಕೆ ತೆರಳಲು ಯತ್ನಿಸಿದುದೇ ಆದರೆ, ನಾನು ಕೋದಂಡಪಾಣಿಯಾಗಿ ನಿಮ್ಮನ್ನನುಸರಿಸಿ ಬರುತ್ತೇನೆ. ಓ ರಘುನಂದನ ! ಪಕ್ಷಿಗಳಿಂದಲೂ ಮೃಗಗಳಿಂದಲೂ

ಧೈಶ್ಚ ಸಂಘುಷ್ಟಾನಿ ಸಮಂತತಃ ॥೪॥ ನದೇವಲೋಕಾಕ್ರಮಣಂ ನಾಮರತ್ವ
ಮಹಂ ವೃಣೇ ॥ ಐಶ್ವರ್ಯಂ ವಾಪಿ ಲೋಕಾನಾಂ ಕಾಮಯೇ ನ ತ್ವಯಾ
ವಿನಾ ॥ ೫ ॥ ಏವಂ ಬ್ರುವಾಣ ಸ್ಸೌಮಿತ್ರಿ ರ್ವನವಾಸಾಯ ನಿಶ್ಚಿತಃ ॥
ರಾಮೇಣ ಬಹುಭಿಸ್ಸಾಂತ್ವೈ ರ್ನಿಷಿದ್ಧಃ ಪುನ ರಬ್ರವೀತ್ ॥ ೬ ॥ ಅನು
ಜ್ಞಾತೋಸ್ಮಿ ಭವತಾ ಪೂರ್ವಮೇವ ಯದಸ್ಮ್ಯಹಂ ॥ ಕಿಮಿದಾನೀಂ ಪುನರಿದಂ
ಕ್ರಿಯತೇ ಮೇ ನಿವಾರಣಂ ॥ ೭ ॥ ಯದರ್ಥಂ ಪ್ರತಿಷೇಧೋ ಮೇ ಕ್ರಿಯತೇ

ಬಹಳವಾದ, ಅರಣ್ಯಾನಿ - ಅರಣ್ಯಗಳಲ್ಲಿ, ವಿಚರಿಷ್ಯಸಿ - ಸಂಚಾರಮಾಡುವೆ. ॥೩-೪॥ ಅಹಂ-ನಾನು, ತ್ವಯಾವಿನಾ - ನಿನ್ನನ್ನು ಬಿಟ್ಟು, ದೇವಲೋಕಾಕ್ರಮಣಂ - ದೇವಲೋಕಪ್ರಾಪ್ತಿಯನ್ನು, ನಕಾಮಯೇ - ಕೋರುವುದಿಲ್ಲ, ಅಮರತ್ವಂ - ದೇವತ್ವವನ್ನು, ಅಹಂ - ನಾನು, ನವೃಣೇ - ವರಿಸುವನಲ್ಲ, ಲೋಕಾನಾಂ - ಲೋಕಗಳ, ಐಶ್ವರ್ಯಂವಾ - ಪ್ರಭುತ್ವವನ್ನೇಆಗಲಿ, ನಕಾಮಯೇ - ಬೇಡುವನಲ್ಲ. ॥ ೫ ॥ ಏವಂ - ಈಪರಿಯಾಗಿ, ಬ್ರುವಾಣಃ-ಹೇಳುತ್ತಿರುವನಾಗಿ, ವನವಾಸಾಯ-ವನವಾಸಕ್ಕೋಸುಗ, ನಿಶ್ಚಿತಃ - ಸಂಜಾತನಿಶ್ಚಯವುಳ್ಳ, ಸೌಮಿತ್ರಿಃ - ಲಕ್ಷ್ಮಣನು, ರಾಮೇಣ - ಶ್ರೀರಾಮನಿಂದ, ಬಹುಭಿಃ - ಅನೇಕಬಗೆಗಳಾದ, ಸಾಂತ್ವೈಃ - ಸಮಾಧಾನ ವಚನಗಳಿಂದ, ಷಿನಿದ್ಧಃ-ಅಡ್ಡಗಿಸಲ್ಪಟ್ಟು, ಪುನಃ - ಮತ್ತು, ಅಬ್ರವೀತ್ - ನುಡಿದನು. ॥ ೬ ॥ ಯತ್ - ಯಾವ ಕಾರಣ, ಪೂರ್ವಮೇವ - (ಗೋ+ಮ) ಕೌಸಲ್ಯಾದೇವಿಯ ಸಂವಾದಕಾಲದಲ್ಲಿಯೇ, ಭವತಾ - ನಿನ್ನಿಂದ, ಅಹಂ - ನಾನು, ಅನುಜ್ಞಾತಶ್ಚ - ಸಮ್ಮತಿಸಲ್ಪಟ್ಟವನು, ಅಸ್ಮಿ - ಆಗಿರುವೆನೋ, ಇದಾನೀಂ - ಈಗ, ಪುನಃ - ಮತ್ತು, ಮೇ - ನನ್ನ, ನಿವಾರಣಂ - ವನವಾಸಕ್ಕೆ ಬರಬೇಡವೆಂಬ ತಡೆಯು, ಕ್ರಿಯತೇ - ಮಾಡಲ್ಪಡುತ್ತೆ, ಇದಂ - ಇದು, ಕಿಂ - ಏನು. ॥ ೭ ॥ ಹೇ ಅನಘ - ಎಲೈ ನಿರ್ದೋಷನೇ, ಗಂತುಂ - ಹೊರಡುವದಕ್ಕೆ, ಇಚ್ಛತಃ - ಅಪೇಕ್ಷಿಸುತ್ತಿರುವ, ಮೇ - ನನ್ನ, ಪ್ರತಿಷೇಧಃ - ನಿಷೇಧವು, ಯದರ್ಥಂ - ಏತಕ್ಕೋಸುಗ, ಕ್ರಿಯತೇ - ಮಾಡಲ್ಪಡುತ್ತದೆಯೋ, ಏತತ್ - ಅದನ್ನು, ವಿಜ್ಞಾತುಂ - ತಿಳಿದುಕೊಳ್ಳಲು, ಇಚ್ಛಾಮಿ - ಬಯಸುತ್ತೇನೆ, ಮಮ - ನನಗೆ,

---

ವ್ಯಾಪ್ತವಾದ ಅರಣ್ಯದಲ್ಲಿ ನಿನ್ನೊಡಗೂಡಿ ಎಲ್ಲೆಡೆಗಳಲ್ಲಿಯೂ ಸಂಚರಿಸುವೆನು. ನಿನ್ನನ್ನು ಬಿಟ್ಟು ನಾನು ಸ್ವರ್ಗವನ್ನಾಗಲಿ, ದೇವತ್ವವನ್ನಾಗಲಿ, ಐಶ್ವರ್ಯವನ್ನೇ ಆಗಲಿ ಬಯಸುವುದಿಲ್ಲ." ಲಕ್ಷ್ಮಣನೀರೀತಿ ನುಡಿಯಲು ಶ್ರೀರಾಮನು ಆತನನ್ನು ವಿಧವಿಧವಾಗಿ ಸಮಾಧಾನಗೊಳಿಸಿ ನಿಲ್ಲಿಸಲು, ಆತನು ಅಣ್ಣನನ್ನು ಕುರಿತು ಮತ್ತಿಂತೆಂದನು. ॥ ೧-೬ ॥ "ಪ್ರಭುವೆ! ಕೌಸಲ್ಯಾದೇವಿಯೂ ನೀನೂ ಮಾತನಾಡುತ್ತಿರುವಾಗಲೇ ನನ್ನ ಹೊರಡುವಿಕೆಗೆ ನೀನು ಸಮ್ಮತಿಯನ್ನಿತ್ತಿಯಲ್ಲವೆ? ಈಗ ನೀನು ನನ್ನನ್ನೇಕೆ ತಡೆಮಾಡುತ್ತಿರುವೆ? ನಿನ್ನೊಡನೆ ಹೊರಡಲಪೇಕ್ಷಿಸುತ್ತಿರುವ ನನ್ನನ್ನು ನೀನು ತಡೆಮಾಡುವುದನ್ನು ನೋಡಿದರೆ ನನಗೆ ಸಂದೇಹವಾಗುತ್ತಿರುವುದು. ಇದರ ಕಾರಣವನ್ನು ತಿಳಿಯಲಿಚ್ಛಿಸುತ್ತೇನೆ ; ದಯವಿಟ್ಟು ಹೇಳುವವನಾಗು," ಲಕ್ಷ್ಮಣನಿಂತೆನಲು, ಮುಂದೆ ಹೊರಡಲು ಸಿದ್ಧನಾಗಿರುವ

ಗಂತು ಮಿಚ್ಛತಃ || ಏತದಿಚ್ಛಾಮಿ ವಿಜ್ಞಾತುಂ ಸಂಶಯೋಹಿ ಮಮಾನಘ||೮|| ತತೋ ಬ್ರವೀನ್ಮಹಾತೇಜಾ ರಾಮೋ ಲಕ್ಷ್ಮಣ ಮಗ್ರತಃ || ಸ್ಥಿತಂ ಪ್ರಾಗ್ಗಾಮಿನಂ ವೀರಂ ಯಾಚಮಾನಂ ಕೃತಾಂಜಲಿಂ ||೯|| ಸ್ನಿಗ್ಧೋ ಧರ್ಮರತೋ ವೀರ ಸ್ಸತತಂ ಸತ್ಪಥೇ ಸ್ಥಿತಃ || ಪ್ರಿಯಃ ಪ್ರಾಣಸಮೋ ವಶ್ಯೋ ಭ್ರಾತಾಚಾಸಿ ಸಖಾಚ ಮೇ ||೧೦|| ಮಯಾದ್ಯ ಸಹ ಸೌಮಿತ್ರೇ ತ್ವಯಿ ಗಚ್ಛತಿ ತದ್ವನಂ||ಕೋ ಭವಿಷ್ಯತಿ ಕೌಸಲ್ಯಾಂ ಸುಮಿತ್ರಾಂ ವಾ ಯಶಸ್ವಿನೀಂ||೧೧|| ಅಭಿವರ್ಷತಿ ಕಾಮೈರ್ಯಃ ಪರ್ಜನ್ಯಃ ಪೃಥಿವೀ ಮಿವ || ಸ ಕಾಮಪಾಶ ಪರ್ಯಸ್ತೋ ಮಹಾತೇಜಾ ಮಹೀಪತಿಃ ||೧೨|| ಸಾಹಿ ರಾಜ್ಯಮಿದಂ

ಸಂಶಯೋಹಿ - ಸಂದೇಹವಷ್ಟೆ. ||೮|| ತತಃ - ಬಳಿಕ, ಮಹಾತೇಜಾಃ - ಮಹಾ ಪರಾಕ್ರಮಶಾಲಿಯಾದ, ರಾಮಃ - ಶ್ರೀರಾಮನು, ಅಗ್ರತಃ - ಮುಂಗಡೆ, ಸ್ಥಿತಂ - ಇರುವ, ಪ್ರಾಗ್ಗಾಮಿನಂ - ಮುಂದುಹೋಗಬೇಕೆಂಬ ಇಚ್ಛೆಯುಳ್ಳ, ವೀರಂ - ಶೂರನಾದ, ಯಾಚಮಾನಂ - ಪ್ರಾರ್ಥಿಸುತ್ತಿರುವ, ಕೃತಾಂಜಲಿಂ - ಬದ್ಧಾಂಜಲಿಯುಳ್ಳ, ಲಕ್ಷ್ಮಣಂ-ಲಕ್ಷ್ಮಣನನ್ನು ಕುರಿತು, ಅಬ್ರವೀತ್-ನುಡಿದನು, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ತ್ವಂ - ನೀನು, ಮೇ - ನನಗೆ, ಸ್ನಿಗ್ಧಃ - ಪ್ರೀತಿಪಾತ್ರನು, ಅಸಿ - ಆಗಿರುವೆ, ಧರ್ಮರತಃ - ಧರ್ಮದಲ್ಲಿಯೇ ಆಸಕ್ತನು, ಸತತಂ - ನಿರಂತರವೂ, ವೀರಃ - ಶೂರನು, ಸತ್ಪಥೇ - ಸನ್ಮಾರ್ಗದಲ್ಲಿ, ಸ್ಥಿತಃ - ಇರುತ್ತಿರುವನೂ, ಪ್ರಿಯಃ - ಇಷ್ಟನೂ, ಪ್ರಾಣಸಮಃ-ನನ್ನ ಪ್ರಾಣಕ್ಕೆ ಸಮಾನನಾದವನೂ,ವಶ್ಯಃ-ಸ್ವಾಧೀನನೂ,ಭ್ರಾತಾಚ ಒಡಹುಟ್ಟಿದವನೂ, ಸಖಾಚ - ಸಮಸುಖದುಃಗಳುಳ್ಳವನೂ, ಅಸಿ - ಆಗಿರುವೆ. ||೯-೧೦|| ಅದ್ಯ-ಈಗ, ಮಯಾಸಹ-ನನ್ನೊಡನೆ, ತ್ವಯಿ - ನೀನು, ತದ್ವನಂ - ಆ ವನವನ್ನು ಕುರಿತು, ಗಚ್ಛತಿಸತಿ - ಹೊರಟರೆ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಯಶಸ್ವಿನೀಂ - ಕೀರ್ತಿವಂತಳಾದ, ಸುಮಿತ್ರಾಂವಾ-ಸುಮಿತ್ರಾದೇವಿಯನ್ನೂ, ಕಃ - ಯಾವನು, ಭವಿಷ್ಯತಿ - ಸಂರಕ್ಷಿಸುವನು. ||೧೧|| ಯಃ - ಯಾವ ದಶರಥರಾಯನು, ಕಾಮೈಃ - ಎಲ್ಲವಿಧವಾದ ಇಷ್ಟಾರ್ಥಗಳಿಂದ, ಪರ್ಜನ್ಯಃ - ಪರ್ಜನ್ಯನು, ಪೃಥಿವೀಮಿವ - ಭೂಮಿಯನ್ನಂತೆ, ಅಭಿವರ್ಷತಿ - ವರ್ಷದಿಂದ ಸಂರಕ್ಷಣೆ ಮಾಡುತ್ತಾನೆಯೋ, ಮಹಾತೇಜಾಃ - ಮಹಾ ಬಲಪರಾಕ್ರಮಶಾಲಿಯಾದ, ಸ ಮಹೀಪತಿಃ - ಆ ದಶರಥರಾಯನು, ಕಾಮಪಾಶಪರ್ಯಸ್ತಃ, ಕಾಮ ಪಾಶ - (ಗೋ + ಮ) ಕೈಕೇಯಿದೇವಿಯಲ್ಲಿ ಅಭಿಲಾಷ ರೂಪವಾದ ಪಾಶದಿಂದ, ಪರ್ಯಸ್ತಃ - ಕಟ್ಟಲಟ್ಟನು. ||೧೨|| ಹಿ - ಯಾವಕಾರಣ, ಅಶ್ವಪತೇಃ - ಅಶ್ವ

ಆತನನ್ನು ಕುರಿತು ಶ್ರೀರಾಮನೀರೀತಿ ನುಡಿದನು. ||೭-೯|| "ಎಲೈ ಅನುಜನೆ! ಪ್ರಿಯನಾಗಿಯೂ, ಧರ್ಮದಲ್ಲಿ ಆಸಕ್ತಿಯುಳ್ಳವನಾಗಿಯೂ, ಶೂರನಾಗಿಯೂ, ನಿರಂತರವೂ ಸನ್ಮಾರ್ಗಾನುವರ್ತಿಯಾಗಿಯೂ, ತಮ್ಮನಾಗಿಯೂ, ವಿಧೇಯನಾಗಿಯೂ ಇರುವೆ. ಇದನ್ನು ನಾನು ತಿಳಿದು ಕೊಂಡಿರುತ್ತೇನೆ. ಆದರೆ ನೀನು ನನ್ನೊಡನೆ ವನಕ್ಕೆ ತೆರಳಿದವನಾದರೆ, ಕೌಸಲ್ಯಾ, ಸುಮಿತ್ರಾದೇವಿಯರನ್ನು ಪರಿಪಾಲಿಸುವವರಾರು ? ಪರ್ಜನ್ಯದೇವನು ಭೂಮಂಡಲವನ್ನು ಪರಿಪಾಲಿಸುವಂತೆ ಯಾವ ನಮ್ಮ ದಶರಥಭೂಪಾಲನು ರಕ್ಷಿಸುತ್ತಿ

ಪ್ರಾಪ್ಯ ನೃಪಸ್ಯಾ ಶ್ವಪತೇಸ್ಸುತಾ || ದುಃಖಿತಾನಾಂ ಸಪತ್ನೀನಾಂ ನಕರಿಷ್ಯತಿ ಶೋಭನಂ || ೧೩ || ನಸ್ಮರಿಷ್ಯತಿ ಕೌಸಲ್ಯಾಂ ಸುಮಿತ್ರಾಂ ಚ ಸುದುಃಖಿತಾಂ || ಭರತೋ ರಾಜ್ಯಮಾಸಾದ್ಯ ಕೈಕೇಯ್ಯಾಂ ಪರ್ಯವಸ್ಥಿತಃ || ೧೪ || ತಾಮಾರ್ಯಾಂ ಸ್ವಯಮೇವೇಹ ರಾಜಾನುಗ್ರಹಣೇ ನ ವಾ || ಸೌಮಿತ್ರೇ ಭರ ಕೌಸಲ್ಯಾ ಮುಕ್ತಮರ್ಥ ಮಿಮಂ ಚರ || ೧೫ || ಏವಂ ಮಮುಚ ತೇ ಭಕ್ತಿರ್ಭವಿಷ್ಯತಿ ಸುದರ್ಶಿತಾ || ಧರ್ಮಜ್ಞ ಗುರುಪೂಜಾಯಾಂ ಧರ್ಮಶ್ಚಾಪ್ಯತುಲೋ ಮಹಾನ್ || ೧೬ || ಏವಂ ಕುರುಷ್ವ ಸೌಮಿತ್ರೇ ಮತ್ಕೃತೇ

ಪತಿಯಾದ, ನೃಪಸ್ಯ - ಕೇಕಯರಾಜನ, ಸಾಸುತಾ - ಆ ಮಗಳು, ಇದಂರಾಜ್ಯಂ - ಈ ರಾಷ್ಟ್ರವನ್ನು, ಪ್ರಾಪ್ಯ - ಹೊಂದಿ, ದುಃಖಿನಾಂ - ದುಃಖಿತರಾದ, ಸಪತ್ನೀನಾಂ - ಸವತಿಯರೆಲ್ಲರಿಗೂ, ಶೋಭನಂ - ಶುಭವನ್ನು, ನಕರಿಷ್ಯತಿ - ಮಾಡಲಾರಳು. || ೧೩ || ಭರತಃ - ಭರತನು, ರಾಜ್ಯಂ-ರಾಜ್ಯವನ್ನು, ಆಸಾದ್ಯ - ಸ್ವಾಧೀನಪಡಿಸಿಕೊಂಡು, ಕೈಕೇಯ್ಯಾಂ ಕೈಕೇಯಿಯಲ್ಲಿ, ಪರ್ಯವಸ್ಥಿತಃ-ಅಧೀನನಾಗಿ, ಸುದುಃಖಿತಾಂ-ಅಧಿಕವಾಗಿ ದುಃಖಗೊಂಡಿರುವ, ಕೌಸಲ್ಯಾಂ-ಕೌಸಲ್ಯಾದೇವಿಯನ್ನೂ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ನಸ್ಮರಿಷ್ಯತಿ - ಎಣಿಸಲಾರನು. || ೧೪ || ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಆರ್ಯಾಂ - ಪೂಜ್ಯಳಾದ, ತಾಂಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು, ಇಹ - ಈಗ, ಸ್ವಯಮೇವ - ಸ್ವಸಾಮರ್ಥ್ಯದಿಂದಲಾಗಲಿ, ರಾಜಾನುಗ್ರಹಣೇನವಾ-ರಾಜಪ್ರಸಾದದಿಂದಲೇಆಗಲಿ, ಭರ - ಸಂರಕ್ಷಣೆಮಾಡು, ಉಕ್ತಂ - ಹೇಳಲ್ಪಟ್ಟ, ಇಮಮರ್ಥಂ - ಈ ಅರ್ಥವನ್ನು, ಚರ - ನಡಿಸು. || ೧೫ || ಹೇ ಧರ್ಮಜ್ಞ - (ಗೋ) ಎಲೈ ಭಕ್ತಿರೂಪಧರ್ಮವನ್ನು ತಿಳಿದವನೇ, ಏವಂ - ಈಪರಿಯಾಗಿ, ತೇ - ನಿನ್ನ, ಭಕ್ತಿಃ - ಭಕ್ತಿಯು, ಮಮುಚ-ನನಗೂ, ಸುದರ್ಶಿತಾ - ತೋರಿಸಲ್ಪಟ್ಟುದು, ಭವಿಷ್ಯತಿ - ಆಗುವದು, ಗುರುಪೂಜಾಯಾಂ, ಗುರು-ಮಾತ್ರಾದಿ ಗುರುಜನಗಳ, ಪೂಜಾಯಾಂ - ಪೂಜೆಯು, ಕೃತಾಯಾಂ - ಮಾಡಲ್ಪಟ್ಟರೆ, ಅತುಲಃ - ಸಮಾನವಿಲ್ಲದಿರುವ, ಧರ್ಮಶ್ಚ - ಧರ್ಮವೂ, ಮಹಾನ್ - ಬಹಳವಾಗಿದೆ. || ೧೬ || ಹೇ ಸೌಮಿತ್ರೇ -

---

ದ್ದನೋ, ಆತನು ಕಾಮಪಾಶಬದ್ಧನಾಗಿರುವನಲ್ಲವೆ ? ಆ ಕೇಕಯರಾಜ ಕುವರಿಯಾದರೋ, ಭರತನಮೂಲಕ ಈ ರಾಜ್ಯವನ್ನು ಪಡೆದು, ಸಪತಿಯರಾದ ನಿನ್ನ ಮತ್ತು ನನ್ನ ಜನನಿಯರಿಗೆ ಒಳ್ಳೆಯದನ್ನು ಮಾಡುವಳೆಂದೆಣಿಸಿರುವೆಯಾ ? ಇದಲ್ಲದೆ ಭರತನು ರಾಜ್ಯಾಭಿಷಿಕ್ತನಾಗಿ ತನ್ನ ತಾಯಿಯಾದ ಕೈಕೇಯಿಯ ಮಾತುಗಳನ್ನು ಕೇಳಿಕೊಂಡು ಕೌಸಲ್ಯಾ ಸುಮಿತ್ರೆಯರನ್ನು ಲಕ್ಷ್ಯಕ್ಕೆ ತರುವುದಿಲ್ಲ. ಆದಕಾರಣ ನೀನು ದಶರಥರಾಯನ ಅಪ್ಪಣೆಯಿಂದಲಾದರೂ ನಿಜ ಜನನಿಯರಾದ ಕೌಸಲ್ಯಾ, ಸುಮಿತ್ರೆಯರನ್ನು ಸಂರಕ್ಷಿಸಿಕೊಂಡಿರುವನಾಗು. ಇದು ನಿನಗೆ ಧರ್ಮವಾಗಿರುವುದು. || ೧೦-೧೫ || ನೀನೀರೀತಿ ಮಾಡಿದರೆ ನಿನಗೆ ನನ್ನಲ್ಲಿರುವ ಭಕ್ತಿಯು ತೋರಿದಂತಾಗುವುದು. ಮಗನಾದವನಿಗೆ ತಾಯಿ ತಂದೆಗಳ ಸೇವೆಯೇ ಮಹಾ ಧರ್ಮವು. ಆದುದರಿಂದ ನೀನು ನನ್ನನ್ನುದ್ದೇಶಿಸಿ ತಾಯಿ ತಂದೆಗಳ

ರಘುನಂದನ ॥ ಅಸ್ಮಾಭಿರ್ವಿಪ್ರಹೀಣಾಯಾ ಮಾತುರ್ನೋ ನಭವೇತ್ಸುಖಂ ॥ ೧೭ ॥ ಏವಮುಕ್ತಸ್ತು ರಾಮೇಣ ಲಕ್ಷ್ಮಣಃ ಶ್ಲಕ್ಷ್ಣಯಾ ಗಿರಾ ॥ ಪ್ರತ್ಯುವಾಚ ತದಾ ರಾಮಂ ವಾಕ್ಯಜ್ಞೋ ವಾಕ್ಯಕೋವಿದಂ ॥ ೧೮ ॥ ತವೈವ ತೇಜಸಾ ವೀರ ಭರತಃ ಪೂಜಯಿಷ್ಯತಿ ॥ ಕೌಸಲ್ಯಾಂಚ ಸುಮಿತ್ರಾಂಚ ಪ್ರಯತೋ ನಾತ್ರಸಂಶಯಃ ॥ ೧೯ ॥ (ಯದಿತುಷ್ಯೋ ನರಕ್ಷೇತ ಭರತೋ ರಾಜ್ಯ ಮುತ್ತಮಂ ॥ ಪ್ರಾಪ್ಯ ದುರ್ಮನಸಾ ವೀರ ಗರ್ವೇಣಚ ವಿಶೇಷತಃ ॥

ಎಲೈ ಸುಮಿತ್ರಾದೇವಿಯ ಮಗನೇ, ಹೇ ರಘುನಂದನ - ಎಲೈ ಲಕ್ಷ್ಮಣನೇ, ಅಸ್ಮಾಭಿಃ - ನಮ್ಮಗಳಿಂದ, ವಿಪ್ರಹೀಣಾಯಾಃ - ವಿರಹಿತಳಾದ, ನಃ - ನಮ್ಮ, ಮಾತುಃ - ತಾಯಿಗೆ, ಸುಖಂ-ಸುಖವು, ನಭವೇತ್ - ಆಗಲಾರದು, ತತ್ - ಆಕಾರಣ, ಮತ್ಕೃತೇ - ನನಗೋಸುಗ, ಏವಂ ಈಪರಿಯಾಗಿ, ಕುರುಷ್ವ - ಮಾಡು. ॥ ೧೭ ॥ ಏವಂ - ಹೀಗೆ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ವಾಕ್ಯಜ್ಞಃ - ವಾಕ್ಯಾರ್ಥಜ್ಞನಾದ, ಲಕ್ಷ್ಮಣಸ್ತು - ಲಕ್ಷ್ಮಣನಾದರೆ, ಶ್ಲಕ್ಷ್ಣಯಾ - ಮೃದುವಾದ, ಗಿರಾ - ಮಾತಿನಿಂದ, ತದಾ - ಆ ಕಾಲದಲ್ಲಿ, ವಾಕ್ಯಕೋವಿದಂ, ವಾಕ್ಯ - ಮಾತುಗಳಲ್ಲಿ, ಕೋವಿದಂ - ಪಂಡಿತನಾದ, ರಾಮಂ - ಶ್ರೀರಾಮನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೧೮ ॥ ಹೇ ವೀರ - ಎಲೈ ಶೂರನೇ, ಭರತಃ - ಭರತನು, ತವ - ನಿನ್ನ, ತೇಜಸೈವ - ತೇಜಸ್ಸಿನಿಂದಲೇ, ಪ್ರಯತಃ - ಏಕಾಗ್ರಚಿತ್ತನಾಗಿ, ಕೌಸಲ್ಯಾಂಚ - ಕೌಸಲ್ಯಾದೇವಿಯನ್ನು, ಸುಮಿತ್ರಾಂಚ - ಸುಮಿತ್ರಾದೇವಿಯನ್ನು ಸಹ, ಪೂಜಯಿಷ್ಯತಿ - ಪೂಜೆಮಾಡುತ್ತಾನೆ, ಅತ್ರ - ಈ ಅರ್ಥದಲ್ಲಿ, ಸಂಶಯಃ - ಸಂದೇಹವು, ನ - ಇಲ್ಲ. ॥ ೧೯ ॥ ಯಸ್ಯಾಃ-ಯಾವ ಕೌಸಲ್ಯಾದೇವಿಯ, ಪ್ರಸಾದಾತ್ - ಅನುಗ್ರಹದಿಂದ, ಉಪಜೀವಿನಾಂ - ಆಶ್ರಿತರಿಗೆ, ಗ್ರಾಮಾಣಾಂ- ಗ್ರಾಮಗಳ, ಸಹಸ್ರಂ - ಸಹಸ್ರವು, ಸಂಪ್ರಾಪ್ತಂ - ಬಂದಿರುವುದೋ, ಆರ್ಯಾ - ಪೂಜ್ಯಳಾದ, ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಸಹಸ್ರಮಪಿ - ಸಹಸ್ರ ಸಂಖ್ಯಾಕರಾದ, ಮದ್ವಿಧಾ - ನಮ್ಮಂತಹರನ್ನು, ಬಿಭೃಯಾತ್ - ಸಂರಕ್ಷಣೆಮಾಡುವಳು. ॥ ೨೦ ॥

ಸೇವೆಯನ್ನು ಮಾಡಿಕೊಂಡು ಇಲ್ಲಿಯೇ ಸುಖವಾಗಿರು. ನಾವಿಬ್ಬರೂ ವನಕ್ಕೆ ತೆರಳಿದರೆ ಕೌಸಲ್ಯಾ, ಸುಮಿತ್ರೆಯರೀರ್ವರಿಗೂ ಸುಖ ಉಂಟಾಗಲಾರದು.” ಶ್ರೀರಾಮನು ಈರೀತಿ ನುಡಿಯಲು, ಲಕ್ಷ್ಮಣಸ್ವಾಮಿಯು ಅತಿ ವಿನಯದಿಂದೊಡಗೂಡಿ, ಮೃದು ಮಧುರವಾದ ವಚನಗಳಿಂದ ಆತನನ್ನು ಕುರಿತು ಹೀಗೆ ಹೇಳಿದನು. “ಎಲೈ ಶೂರನಾದ ಶ್ರೀರಾಮನೆ! ನಿನ್ನ ಪ್ರಭಾವದಿಂದ ಭರತನೇ ಕೌಸಲ್ಯಾದೇವಿಯನ್ನೂ, ಸುಮಿತ್ರಾದೇವಿಯನ್ನೂ ಸಂರಕ್ಷಿಸುತ್ತಾನೆ. ಇದರಲ್ಲಿ ಸಂಶಯವಿಲ್ಲವು. ಒಂದುವೇಳೆ ಆ ಭರತನು ರಾಜ್ಯವನ್ನು ಪಡೆದು ಮಹಾ ಗರ್ವಿತನಾಗಿ ಅವರನ್ನು ಸಂರಕ್ಷಿಸದಿದ್ದರೆ ದುರ್ಬುದ್ಧಿಯೂ, ಕ್ರೂರಿಯೂ ಆದ ಅವನನ್ನೂ, ಅವನ ಕಡೆಯವರನ್ನೂ ವಧಿಸುತ್ತೇನೆ. ಇದಂತಿರಲಿ, ಕೌಸಲ್ಯೆ ಯೇನು ಸಾಮಾನ್ಯಳೆ! ಆಕೆಯನ್ನು ಭರತನೇನು ರಕ್ಷಿಸತಕ್ಕುದಿದೆ? ಎಲೈ ಪೂಜ್ಯನೇ! ಭರತನು ಆಕೆಯನ್ನು ರಕ್ಷಿಸದಿದ್ದರೆ ಆಕೆಯು ನಮ್ಮಂತಹ ಸಾವಿರ ಮಂದಿಯನ್ನು ಸಂರಕ್ಷಿಸಬಲ್ಲಳು; ಆಕೆಗೆ

ತಮಹಂ ದುರ್ಮತಿಂ ಕ್ರೂರಂ ವಧಿಷ್ಯಾಮಿ ನ ಸಂಶಯಃ ॥ ತತ್ಪಕ್ಷಾನಪಿ ತಾರ್ನ್
ಸರ್ವಾರ್ನ್ ತ್ರೈಲೋಕ್ಯಮಪಿ ಕಿನ್ನು ಮೇ ॥ (೧)) ಕೌಸಲ್ಯಾ ಬಿಭೃಯಾದಾರ್ಯಾ
ಸಹಸ್ರಮಪಿ ಮದ್ವಿಧಾರ್ನ್ ॥ ಯಸ್ಯಾ ಸ್ಸಹಸ್ರಂ ಗ್ರಾಮಾಣಾಂ ಸಂಪ್ರಾಪ್ತ
ಮುಪಜೀವನಂ ॥ ೨೦ ॥ ತದಾತ್ಮ ಭರಣೇ ಚೈವ ಮಮ ಮಾತು ಸ್ತಥೈ
ವಚ ॥ ಪರ್ಯಾಪ್ತಾ ಮದ್ವಿಧಾನಾಂಚ ಭರಣಾಯ ಯಶಸ್ವಿನೀ ॥ ೨೧ ॥
ಕುರುಷ್ವ ಮಾಮನುಚರಂ ವೈಧರ್ಮ್ಯಂ ನೇಹ ವಿದ್ಯತೇ ॥ ಕೃತಾರ್ಥೋಽಹಂ
ಭವಿಷ್ಯಾಮಿ ತವಚಾರ್ಥಃ ಪ್ರಕಲ್ಪತೇ ॥ ೨೨ ॥ ಧನುರಾದಾಯ ಸಶರಂ

ತತ್ - ಆ ಕಾರಣ, ಯಶಸ್ವಿನೀ - ಕೀರ್ತಿವಂತಳಾದ ಕೌಸಲ್ಯಾದೇವಿಯು, ಆತ್ಮಭರಣೇಚೈವ - ತನ್ನ ಸಂರಕ್ಷಣೆಯಲ್ಲಿಯೂ, ಮಮ - ನನ್ನ, ಮಾತುಶ್ಚ - ತಾಯಿಯಾದ ಸುಮಿತ್ರಾದೇವಿಯ, ಭರಣಾಯ - ಪೋಷಣೆಗೋಸುಗವೂ, ತಥೈವ - ಹಾಗೆಯೆ, ಮದ್ವಿಧಾನಾಂಚ - ನನ್ನಂತಹರ, ಭರಣಾಯಚ - ಸಂರಕ್ಷಣೆಗೋಸುಗವೂ, ಪರ್ಯಾಪ್ತಾ - ಸಮರ್ಥಳು. ॥ ೨೧ ॥ ಮಾಂ ನನ್ನನ್ನು, ಅನುಚರಂ - ಸೇವಕನನ್ನಾಗಿ, ಕುರುಷ್ವ - ಮಾಡು, ಇಹ - ಇಲ್ಲಿ, ವೈಧರ್ಮ್ಯಂ - ಧರ್ಮಕ್ಕೆ ನ್ಯೂನತೆಯು, ನವಿದ್ಯತೇ - ಕಾಣುವುದಿಲ್ಲ, ಅಹಂ - ನಾನು, ಕೃತಾರ್ಥಃ - ಕೃತಾರ್ಥನು, ಭವಿಷ್ಯಾಮಿ - ಆಗುವೆನು, ತವ - ನಿನ್ನ, ಅರ್ಥಶ್ಚ - ಅರ್ಥವೂ, ಪ್ರಕಲ್ಪತೇ - ಆಗುತ್ತದೆ. (೨) ॥೨೨॥

ಉಂಬಳಿಯಾಗಿ ಸಾವಿರ ಗ್ರಾಮಗಳೇ ಇರುವವು; ಅವುಗಳಿಂದಾ ಕೌಸಲ್ಯಾದೇವಿಯು ತನ್ನನ್ನು ರಕ್ಷಿಸಿಕೊಳ್ಳುವುದಲ್ಲದೆ, ನಮ್ಮಂತಹರನೇಕರನ್ನೂ ರಕ್ಷಿಸುವಳು. ನಮ್ಮ ತಾಯಿಯಾದ ಸುಮಿತ್ರಾದೇವಿಗೂ ಹೀಗೆಯೇ ಜೀವನಾರ್ಥವಾಗಿ ಸಾವಿರ ಗ್ರಾಮಗಳಿರುವುವು. ನೀನೀ ವಿಷಯದಲ್ಲಿ ಚಿಂತಿಸಬೇಡ. ॥ ೧೬-೨೧ ॥ ನಾನು ಯಾವಾಗಲೂ ನಿನ್ನನ್ನೇ ಅನುಸರಿಸುತ್ತೇನೆಂಬುದನ್ನು ತಿಳಿದವನಾಗು. ಹೀಗಾದರೆ, ನಾನು ಕೃತಾರ್ಥನಾಗುತ್ತೇನೆ, ಇದ

ಟಿ. (೧) ಇದು ಅಧಿಕ ಪಾಠಕ್ಕೆ ಸೇರಿದುದು. ಇದಕ್ಕೆ ವ್ಯಾಖ್ಯಾನವಿಲ್ಲವೆಂದು ತಿಳಿಯಬೇಕು.

ಟಿ. (೨) ಈ ರೀತಿಯಾಗಿ ಶ್ರೀರಾಮಮೂರ್ತಿಯು ನುಡಿದ ವಾಕ್ಯಕ್ಕೆ ಪರಿಹಾರ ವಾಕ್ಯವನ್ನಾಡಿ, ಕೈಂಕರ್ಯವನ್ನು ಪ್ರಚುರಗೊಳಿಸುತ್ತಾನೆ. ಮಾಂ - ಶೇಷಭೂತನಾದ ನನ್ನನ್ನು, ಅನುಚರಂ-ಶೇಷತ್ವಕ್ಕನುಗುಣವಾದ ಕೈಂಕರ್ಯದಿಂದೊಡಗೂಡಿದವನನ್ನಾಗಿ, ಕುರುಷ್ವ - ಮಾಡು, ಹಾಗೆ ಮಾಡಿದರೂ ನಿನಗೇ ಪ್ರಯೋಜನಕರವಾಗುತ್ತದೆ. ವೈಧರ್ಮ್ಯಂ ನೇಹ ವಿದ್ಯತೆ - ಅನುಚರನನ್ನಾಗಿ ಮಾಡಿದ ಮೇಲೆ ಸೇವ್ಯ, ಸೇವಕ, ಧರ್ಮರಾಹಿತ್ಯವಿರುವುದಿಲ್ಲ. ನೀನು ನನಗೆ ಸ್ವಾಮಿಯಾದುದರಿಂದ ನಿನ್ನ ಸೇವೆಯನ್ನು ಮಾಡಿಯೇ ಮಾಡುತ್ತೇನೆ. ಹೀಗೆ ಮಾಡಿದರೆ ನನ್ನ ಸೇವಕ ಧರ್ಮವೂ ಸಂಪೂರ್ಣವಾಗುತ್ತದೆ. ಸ್ವಾಭಾವಿಕವಾಗಿ ನನ್ನಲ್ಲಿ ಶೇಷತ್ವವಿರುವುದರಿಂದ, ನಿನಗೂ ಇದರಿಂದ ಪ್ರಯೋಜನವುಂಟು. ನಾನು ನಿನಗೆ ಬೇಕಾದ ಫಲ ಮೂಲಾದಿಗಳನ್ನೊದಗಿಸಿ ಕೊಡುವುದರಿಂದ, (**ಇದು ಗೋವಿಂದರಾಜರದು.**)

ವೈಧರ್ಮ್ಯಂ ನೇಹ ವಿದ್ಯತೇ-ನಿನ್ನ ವಾಕ್ಯವನ್ನುಲ್ಲಂಘಿಸಿ ತಾಯಿಯರನ್ನು ಪೋಷಿಸದ ಅಧರ್ಮವು ಇರುವುದಿಲ್ಲ. ಏಕೆಂದರೆ ಕೌಸಲ್ಯೆಗೆ ಬೇಕಾದಷ್ಟು ಜೀವನಾರ್ಥವಿರುವುದಾದುದರಿಂದ "ಜ್ಯೇಷ್ಠ ಭ್ರಾತಾ ಪಿತೃ ಸಮಃ" ಎಂದಿರುವುದರಿಂದ ನಿನ್ನ ಸೇವೆಯಿಂದ ಕೃತಾರ್ಥನಾಗುತ್ತೇನೆ. ನಿನಗೂ ಪ್ರಯೋಜನವುಂಟು. ಏಕೆಂದರೆ ನಾನು ನಿನಗೆ ಫಲ ಮೂಲಾದಿಗಳನ್ನು ಒದಗಿಸಿ ಕೊಟ್ಟು ನಿನ್ನ ಶುಶ್ರೂಷೆಯನ್ನು ಮಾಡುತ್ತೇನೆ. (**ಮಹೇಶ್ವರ ತೀರ್ಥೀಯ.**)

ಖನಿತ್ರ ಪಿಟಕಾ ಧರಃ ॥ ಅಗ್ರತಸ್ತೇ ಗಮಿಷ್ಯಾಮಿ ಪಂಥಾನ ಮನುದರ್ಶಯನ್
॥ ೨೩ ॥ ಆಹರಿಷ್ಯಾಮಿ ತೇ ನಿತ್ಯಂ ಮೂಲಾನಿಚ ಫಲಾನಿಚ ॥ ವನ್ಯಾನಿ
ಯಾನಿ ಚಾನ್ಯಾನಿ ಸ್ವಾಹಾರಾಣಿ ತಪಸ್ವಿನಾಂ ॥ ೨೪ ॥ ಭವಾಂಸ್ತು ಸಹ
ವೈದೇಹ್ಯಾ ಗಿರಿಸಾನುಷು ರಂಸ್ಯತೇ ॥ ಅಹಂ ಸರ್ವಂ ಕರಿಷ್ಯಾಮಿ ಜಾಗ್ರತ
ಸ್ಸ್ವಪತಶ್ಚ ತೇ ॥ ೨೫ ॥ ರಾಮಸ್ತ್ವನೇನ ವಾಕ್ಯೇನ ಸುಪ್ರೀತಃ ಪ್ರತ್ಯುವಾಚ
ತಂ ॥ ವ್ರಜಾಪೃಚ್ಛಸ್ವ ಸೌಮಿತ್ರೇ ಸರ್ವಮೇವ ಸುಹೃಜ್ಜನಂ ॥ ೨೬ ॥
ಯೇಚ ರಾಜ್ಞೋ ದದೌ ದಿವ್ಯೇ ಮಹಾತ್ಮಾ ವರುಣ ಸ್ಸ್ವಯಂ ॥ ಜನಕಸ್ಯ

ಸಶರಂ - ಬಾಣಗಳಿಂದೊಡಗೂಡಿದ, ಧನುಃ - ಧನುಸ್ಸನ್ನು, ಆದಾಯ - ತೆಗೆದುಕೊಂಡು, ಖನಿತ್ರ ಪಿಟಕಾಧರಃ - ಗುದ್ದಲಿಯನ್ನೂ ಮಂಕರಿಯನ್ನೂ ಧರಿಸಿದವನಾಗಿ, ತೇ-ನಿನಗೆ, ಪಂಥಾನಂ - ಮಾರ್ಗವನ್ನು, ಅನುದರ್ಶಯನ್ - ತೋರಿಸುತ್ತ, ಅಗ್ರತಃ - ಮುಂದುಗಡೆ, ಗಮಿಷ್ಯಾಮಿ - ಹೋಗುವೆನು. ॥ ೨೩ ॥ ವನ್ಯಾನಿ - ವನದಲ್ಲಿ ಹುಟ್ಟಿದ, ಅನ್ಯಾನಿ - ಮತ್ತೆ ಕೆಲವಾದ, ಮೂಲಾನಿ - ಕಂದಮೂಲಗಳು, ಫಲಾನಿ - ಫಲಗಳು, ತಪಸ್ವಿನಾಂ - ಋಷಿಗಳಿಗೆ, ಸ್ವಾಹಾರಾಣಿ - ಆಹಾರಗಳಾದಂಥಾವವು, ಯಾನಿ - ಯಾವುಗಳೋ, ತಾನಿ - ಅವುಗಳನ್ನು, ನಿತ್ಯಂ - ನಿರಂತರವೂ, ತೇ-ನಿನಗೆ, ಆಹರಿಷ್ಯಾಮಿ - ತಂದುಕೊಡುವೆನು. ॥ ೨೪ ॥ ಭವಾಂಸ್ತು - ನೀನಾದರೆ, ವೈದೇಹ್ಯಾಸಹ - ಸೀತಾದೇವಿಯೊಡನೆ, ಗಿರಿಸಾನುಷು - ಬೆಟ್ಟದ ಕಿಬ್ಬಿಗಳಲ್ಲಿ, ರಂಸ್ಯತೇ - ವಿಹಾರ ಮಾಡು, ಅಹಂ - ನಾನು, ಜಾಗ್ರತಃ - ಎಚ್ಚರಿಕೆಯಾಗಿರುವ, ಸ್ವಪತಶ್ಚ - ನಿದ್ದೆ ಹೋಗುತ್ತಿರುವ, ತೇ - ನಿನ್ನ, ಸರ್ವಂ - ಸಮಸ್ತ ಕಾರ್ಯವನ್ನು, ಕರಿಷ್ಯಾಮಿ - ಮಾಡುವೆನು. ॥ ೨೫ ॥ ರಾಮಸ್ತು - ಶ್ರೀರಾಮನಾದರೆ, ಅನೇನವಾಕ್ಯೇನ - ಈ ಮಾತಿನಿಂದ, ಸುಪ್ರೀತಃ - ಸಂತೋಷಗೊಂಡವನಾಗಿ, ತಂ - ಆ ಲಕ್ಷ್ಮಣನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರವನ್ನು ಹೇಳಿದನು, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ವ್ರಜ - ಹೊರಡು, ಸರ್ವಮೇವ - ಸಮಸ್ತವಾದ, ಸುಹೃಜ್ಜನಂ - ಸ್ನೇಹಿತ ಜನವನ್ನು, ಆಪೃಚ್ಛಸ್ವ - ಕೇಳು, ಜನಕಸ್ಯರಾಜ್ಞಃ - ಜನಕರಾಯನ, ಮಹಾ ಯಜ್ಞೇ - ದೊಡ್ಡ ಯಜ್ಞದಲ್ಲಿ, ಮಹಾತ್ಮಾ - ಮಹಾ ಮನಸ್ವಿಯಾದ, ವರುಣಃ - ವರುಣನು, ಸ್ವಯಂ - ತಾನಾಗಿಯೇ, ರೌದ್ರದರ್ಶನೇ - ಭಯಂಕರವಾದ ನೋಡುವಿಕೆಯುಳ್ಳ, ಯೇ - ಯಾವ, ದಿವ್ಯೇ - ದೇವತಾಸಂಬಂಧ

ರಿಂದ ನಿನಗೂ ಪ್ರಯೋಜನವುಂಟು. ಅಣ್ಣಾ ! ನಾನು ಕೋದಂಡಪಾಣಿಯಾಗಿ, ಗುದ್ದಲಿಯನ್ನೂ, ಮಂಕರಿಯನ್ನೂ ಹೊತ್ತು ದಾರಿಯನ್ನು ಬಿಡಿಸಿ ನಿನಗೆ ತೋರುತ್ತ ಮುಂಬರಿಯುವೆನು. ಪ್ರತಿದಿನವೂ ನಿನಗೆ ಫಲಮೂಲಾದಿಗಳನ್ನೂ ಇತರ ವಸ್ತುಗಳನ್ನೂ ತಂದುಕೊಡುತ್ತೇನೆ. ನೀನು ಸೀತೆಯೊಡಗೂಡಿ ಗಿರಿಗಳ ಜರತೆಗಳಲ್ಲಿ ವಿಹರಿಸುತ್ತಿರು. ನೀನು ಎಚ್ಚರದಿಂದಿರುವಾಗಲೂ, ನಿದ್ರಿಸುತ್ತಿರುವಾಗಲೂ ನಾನು ಕಾದುಕೊಂಡಿರುತ್ತೇನೆ" ಲಕ್ಷ್ಮಣಸ್ವಾಮಿಯು ಹೀಗೆನ್ನಲು ಶ್ರೀರಾಮನು ಸಂತುಷ್ಟನಾಗಿ ಅವನನ್ನು ಕುರಿತು "ಲಕ್ಷ್ಮಣ ! ಬೇಗನೆ ಹೊರಟು ಸ್ನೇಹಿತರೆಲ್ಲರನ್ನೂ ಸಮ್ಮತಿಗೊಳಿಸು. ಹಿಂದೆ ಜನಕರಾಯನ ಯಾಗದಲ್ಲಿ ಮಹಾತ್ಮನಾದ ವರುಣನು, ದೇವಯೋಗ್ಯವಾದುದೂ, ಅತಿ ಭಯಂಕರವಾ

ಮಹಾ ಯಜ್ಞೇ ಧನುಷೀ ರೌದ್ರ ದರ್ಶನೇ ॥ ೨೭ ॥ ಅಭೇದ್ಯಕವಚೇ ದಿವ್ಯೇ ತೂಣೀಚಾಕ್ಷಯ ಸಾಯಕೌ ॥ ಆದಿತ್ಯವಿಮಲೌ ಚೋಭೌ ಖಡ್ಗೌ ಹೇಮ ಪರಿಷ್ಕೃತೌ ॥ ೨೮ ॥ ಸತ್ಕೃತ್ಯ ನಿಹಿತಂ ಸರ್ವ ಮೇತದಾಚಾರ್ಯ ಸದ್ಮನಿ॥ ಸತ್ವಮಾಯುಧಮಾದಾಯ ಕ್ಷಿಪ್ರಮಾವ್ರಜ ಲಕ್ಷ್ಮಣ ॥ ೨೯ ॥ ಸ ಸುಹೃಜ್ಜನ ಮಾಮಂತ್ರ್ಯ ವನವಾಸಾಯ ನಿಶ್ಚಿತಃ ॥ ಇಕ್ಷ್ವಾಕು ಗುರುಮಾಗಮ್ಯ ಜಗ್ರಾಹಾಯುಧ ಮುತ್ತಮಂ ॥ ೩೦ ॥ ತದ್ದಿವ್ಯಂ ರಾಜಶಾರ್ದೂಲ ಸ್ಸತ್ಕೃತಂ ಮಾಲ್ಯಭೂಷಿತಂ ॥ ರಾಮಾಯ ದರ್ಶಯಾಮಾಸ ಸೌಮಿತ್ರಿ ಸ್ಸರ್ವಮಾ

ವಾದ, ಯೇ ಧನುಷೀ - ಯಾವ ಧನುಸ್ಸುಗಳನ್ನು, ದದೌ - ಕೊಟ್ಟನೋ, ತೇ - ಆ ಧನಸ್ಸುಗಳು, ದಿವ್ಯೇ - ಮನೋಹರವಾದ, ಅಭೇದ್ಯಕವಚೇ, ಅಭೇದ್ಯ - ಭೇದಿಸಲಸಾಧ್ಯಗಳಾದ, ಕವಚೇ-ಕವಚ ಗಳು, ಅಕ್ಷಯಸಾಯಕೌ, ಅಕ್ಷಯ - ಯಾವಾಗಲೂ ತುಂಬಿರುವ, ಸಾಯಕೌ - ಬಾಣಗಳುಳ್ಳ, ತೂಣೀಚ - ಚೀಲಗಳು, ಆದಿತ್ಯವಿಮಲೌ, ಆದಿತ್ಯ - ಸೂರ್ಯನಂತೆ, ವಿಮಲೌ - ನಿರ್ಮಲವಾದ, ಹೇಮಪರಿಷ್ಕೃತೌ, ಹೇಮ - ಭಂಗಾರದ ಹಿಡಿಯಿಂದ, ಪರಿಷ್ಕೃತೌ - ಅಲಂಕರಿಸಲ್ಪಟ್ಟ, ಉಭೌ - ಎರಡಾದ, ಖಡ್ಗೌಚ - ಖಡ್ಗಗಳೂ, ಸತ್ಕೃತ್ಯ - ಪೂಜೆಮಾಡಿ, ಆಚಾರ್ಯಸದ್ಮನಿ - ಪುರೋಹಿತರ ಮನೆಯಲ್ಲಿ, ಏತತ್ಸರ್ವಂ - ಇದೆಲ್ಲವೂ, ನಿಹಿತಂ - ಇರಿಸಲ್ಪಟ್ಟಿದೆ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣ ನೇ, ಸತ್ವಂ - ಆ ನೀನು, ಆಯುಧಂ - ಆಯುಧಗಳನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಆದಾಯ- ತೆಗದುಕೊಂಡು, ಆವ್ರಜ - ಹೊರಟುಬಾ. ॥ ೨೯ ॥ ಸಃ - ಆ ಲಕ್ಷ್ಮಣನು, ಸುಹೃಜ್ಜನಂ - ಸ್ನೇಹಿತಜನವನ್ನು, ಆಮಂತ್ರ್ಯ - ಆಲೋಚಿಸಿ, ವನವಾಸಾಯ - ವನವಾಸಕ್ಕೋಸುಗ, ನಿಶ್ಚಿತಃ - ನಿಶ್ಚಯವುಳ್ಳವನಾಗಿ, ಇಕ್ಷ್ವಾಕುಗುರುಂ - ಇಕ್ಷ್ವಾಕುವಂಶದರಾಜರಿಗೆ ಗುರುವಾದ ವಸಿಷ್ಠಋಷಿ ಯನ್ನು ಕುರಿತು, ಆಗಮ್ಯ - ಬಂದು, ಉತ್ತಮಂ - ಉತ್ತಮವಾದ, ಆಯುಧಂ - ಆಯುಧಗ ಳನ್ನು, ಜಗ್ರಾಹ - ತೆಗೆದುಕೊಂಡನು. ॥ ೩೦ ॥ ರಾಜಶಾರ್ದೂಲಃ - ರಾಜ ಶ್ರೇಷ್ಠ ನಾದ, ಸೌಮಿತ್ರಿಃ - ಲಕ್ಷ್ಮಣನು, ಮಾಲ್ಯಭೂಷಿತಂ - ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟ, ಸತ್ಕೃತಂ ಚನ್ನಾಗಿ ಪೂಜಿಸಲ್ಪಟ್ಟ, ದಿವ್ಯಂ-ಮನೋಹರವಾದ, ಸರ್ವಂ ಸಮಸ್ತವಾದ, ಆಯುಧಂ - ಆಯುಧಗಳನ್ನು, ರಾಮಾಯ - ಶ್ರೀರಾಮನಿಗೆ, ದರ್ಶಯಾಮಾಸ - ತೋರಿಸಿದನು. ॥ ೩೧ ॥

ದುದೂ ಆವ ಯಾವ ಧನುರ್ದ್ವಯವನ್ನೂ, ಅಭೇದ್ಯವಾದ ಕವಚಗಳನ್ನೂ, ಅಕ್ಷಯವಾದ ಬಾಣಗಳುಳ್ಳ ಬತ್ತಳಿಕೆಗಳನ್ನೂ, ಸೂರ್ಯನಂತೆ ಹೊಳೆವ ಖಡ್ಗಗಳನ್ನೂ ಕೊಟ್ಟದ್ದನೋ, ಅವುಗಳೆಲ್ಲವನ್ನೂ ಪುರೋಹಿತನ ಮನೆಯಲ್ಲಿರಿಸಿರುವೆನು. ಅವುಗಳನ್ನು ತೆಗೆದುಕೊಂಡು ಬರುವವನಾಗು" ಎಂದನು. ಆಗಲಾ ಲಕ್ಷ್ಮಣನು ವನವಾಸಕ್ಕೋಸುಗ ನಿಶ್ಚಿತನಾಗಿ ಇಕ್ಷ್ವಾಕು ಕುಲ ಗುರುಗಳಾದ ವಸಿಷ್ಠರ ಮನೆಗೆ ತೆರಳಿ, ದೇವತಾಸಂಬಂಧವಾದುದಾಗಿಯೂ ಹೂಗಳಿಂದ ಪೂಜಿಸಲ್ಪಟ್ಟುದಾಗಿಯೂ ಇರುವ ಶ್ರೇಷ್ಠಗಳಾದ ಆ ಆಯುಧಗಳನ್ನು ತೆಗೆದು ಕೊಂಡು, ಸ್ನೇಹಿತರಿಗೆ ಹೇಳಿದವನಾಗಿ, ಶ್ರೀ ರಾಮಮೂರ್ತಿಯ ಬಳಿಸಾರಿ ಆ ಆಯುಧಗಳೆಲ್ಲ ವನ್ನೂ ತೋರಿದವನಾದನು. ॥ ೨೭-೩೧ ॥ ಆಗಲಾ ರಘುನಾಥನು ಲಕ್ಷ್ಮಣನನ್ನು

ಯುಧಂ ॥ ೩೧ ॥ ತಮುವಾಚಾತ್ಮವಾನ್ ರಾಮಃ ಪ್ರೀತ್ಯಾ ಲಕ್ಷ್ಮಣಮಾಗತಂ ॥ ಕಾಲೇತ್ವಮಾಗತಃ ಸೌಮ್ಯ ಕಾಂಕ್ಷಿತೇ ಮಮ ಲಕ್ಷ್ಮಣ ॥ ೩೨ ॥ ಅಹಂ ಪ್ರದಾತುಮಿಚ್ಛಾಮಿ ಯದಿದಂ ಮಾಮಕಂ ಧನಂ ॥ ಬ್ರಾಹ್ಮಣೇಭ್ಯ ಸ್ತಪಸ್ವಿಭ್ಯ ಸ್ತ್ವಯಾಸಹ ಪರಂತಪ ॥ ೩೩ ॥ ವಸಂತೀಹ ದೃಢಂ ಭಕ್ತ್ಯಾ ಗುರುಷು ದ್ವಿಜಸತ್ತಮಾಃ ॥ ತೇಷಾಮಪಿಚ ಮೇ ಭೂಯ ಸ್ಸರ್ವೇಷಾಂ ಚೋಪಜೀವಿನಾಂ ॥ ೩೪ ॥

ವಸಿಷ್ಠಪುತ್ರಂತು ಸುಯಜ್ಞಮಾರ್ಯಂ
ತ್ವಮಾನಯಾಶು ಪ್ರವರಂ ದ್ವಿಜಾನಾಂ ॥

ಆತ್ಮವಾನ್ - ಜ್ಞಾನಿಯಾದ, ರಾಮಃ - ಶ್ರೀರಾಮನು, ಪ್ರೀತ್ಯಾ - ಸಂತೋಷದಿಂದ, ಆಗತಂ - ಬಂದ, ತಂ - ಆ ಲಕ್ಷ್ಮಣನನ್ನು ಕುರಿತು, ಉವಾಚ - ಹೇಳಿದನು, ಹೇ ಸೌಮ್ಯ-ಎಲೈ ಸೌಮ್ಯನೇ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಮಮ - ನನ್ನಿಂದ, ಕಾಂಕ್ಷಿತೇ - ನಿರೀಕ್ಷಿಸಲ್ಪಟ್ಟ, ಕಾಲೇ - ಕಾಲದಲ್ಲಿ, ತ್ವಂ - ನೀನು, ಆಗತಃ - ಬಂದೆ. ॥ ೩೨ ॥ ಅಹಂ - ನಾನು, ಮಾಮಕಂ - ನನ್ನ ಸಂಬಂಧವಾದ, ಧನಂ - ಧನವು, ಯತ್ - ಯಾವುದೋ, ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಇದಂಧನಂ - ಈ ಧನವನ್ನು, ತ್ವಯಾಸಹ - ನಿನ್ನೊಡನೆ, ತಪಸ್ವಿಭ್ಯಃ - ತಪೋವಂತರಾದ, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ಪ್ರದಾತುಂ - ಕೊಡಲು, ಇಚ್ಛಾಮಿ-ಅಪೇಕ್ಷಿಸುತ್ತೇನೆ. ॥ ೩೩ ॥ ಇಹ - ಈಗ, ಗುರುಷು - ನಮ್ಮ ಆಚಾರ್ಯರಲ್ಲಿ, ದೃಢಂ - ದೃಢವಾಗಿ, ಭಕ್ತ್ಯಾ - ಭಕ್ತಿಯಿಂದ, ದ್ವಿಜಸತ್ತಮಾಃ - ಬ್ರಾಹ್ಮಣಶ್ರೇಷ್ಠರು, ವಸಂತಿ - ಇರುತ್ತಾರೆ, ತೇಷಾಮಪಿ - ಅವರಿಗೂ, ಸರ್ವೇಷಾಂ - ಸಮಸ್ತರಾದ, ಉಪಜೀವಿನಾಂಚ - ನಮ್ಮನ್ನೇ ನಂಬಿಕೊಂಡು ಜೀವನಮಾಡುವವರಿಗೆ, ಮೇ - ನನ್ನ, ಧನಂ - ಧನವನ್ನು ಭೂಯಃ - ಹೆಚ್ಚಾಗಿ, ದಾತುಂ - ಕೊಡುವದಕ್ಕೆ, ಇಚ್ಛಾಮಿ - ಇಷ್ಟಪಡುತ್ತೇನೆ. ॥ ೩೪ ॥ ವಸಿಷ್ಠಪುತ್ರಂ - ವಸಿಷ್ಠಋಷಿಯ ಮಗನಾದ, ದ್ವಿಜಾನಾಂ - ಬ್ರಾಹ್ಮಣರೊಳಗೆ, ಪ್ರವರಂ - ಶ್ರೇಷ್ಠನಾದ, ಆರ್ಯಂ - ಪೂಜ್ಯನಾದ, ಸುಯಜ್ಞಂ - ಸುಯಜ್ಞಋಷಿಯನ್ನು, ತ್ವಂತು - ನೀನು, ಆಶು - ಜಾಗ್ರತೆಯಾಗಿ, ಆನಯ - ಕರೆದುಕೊಂಡು ಬಾ, ಸಮಸ್ತಾನ್ - ಸಮಸ್ತರಾದ, ಶಿಷ್ಯಾನ್ - ಶಿಷ್ಯರನ್ನು, ಅಪರಾನ್ - ಮತ್ತೆ ಕೆಲವರಾದ, ದ್ವಿಜಾತೀನ್ -

---

ಕುರಿತು, “ಓ ಲಕ್ಷ್ಮಣ ! ಒಳ್ಳೆಯ ಸಮಯದಲ್ಲಿ ಬಂದವನಾದೆ; ನಾನು ನಿನ್ನನ್ನೇ ನೆನಸಿಕೊಂಡಿದ್ದೆನು. ಎಲೈ ಶತ್ರುಸಂಹಾರಕನೆ ! ನನ್ನ ಸಂಬಂಧವಾದ ಯಾವತ್ತೂ ದ್ರವ್ಯವನ್ನು ನಿನ್ನೊಡಗೂಡಿ, ತಪಸ್ವಿಗಳಾದ ವಿಪ್ರವರೇಣ್ಯರಿಗೆ ದಾನಮಾಡಲಪೇಕ್ಷಿಸುತ್ತೇನೆ. ಆ ಬ್ರಾಹ್ಮಣರು ಆಚಾರ್ಯರಾದ ವಸಿಷ್ಠರಲ್ಲಿ ಭಕ್ತಿಯುಳ್ಳವರಾಗಿರುವರು. ಅವರಿಗೂ, ನಮ್ಮನ್ನು ನಂಬಿದ ಇತರರಿಗೂ ವಿಶೇಷವಾಗಿ ದ್ರವ್ಯವನ್ನು ಕೊಡಬೇಕು. ಆದುದರಿಂದ ಬ್ರಾಹ್ಮಣೋತ್ತಮನಾಗಿಯೂ, ಪೂಜ್ಯನಾಗಿಯೂ, ವಸಿಷ್ಠಮುನಿ ಕುವರನಾಗಿಯೂ ಇರುವ

ಅಭಿಪ್ರಯಾಸ್ಯಾಮಿ ವನಂ ಸಮಸ್ತಾ
ನಭ್ಯರ್ಚ್ಯ ಶಿಷ್ಟಾನಪರಾನ್ ದ್ವಿಜಾತೀನ್ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕತ್ರಿಂಶಸ್ಸರ್ಗಃ.

ಬ್ರಾಹ್ಮಣರನ್ನೂ, ಅಭ್ಯರ್ಚ್ಯ - ಪೂಜೆಮಾಡಿ, ವನಂ - ವನವನ್ನು ಕುರಿತು, ಅಭಿಪ್ರಯಾಸ್ಯಾಮಿ - ಪ್ರಯಾಣಮಾಡುವೆನು. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕತ್ರಿಂಶಸ್ಸರ್ಗಃ.

ಸುಯಜ್ಞ ಮುನಿಯನ್ನೂ, ಇತರರನ್ನೂ ಬೇಗನೆ ಕರೆತರುವವನಾಗು. ಅವರೆಲ್ಲರನ್ನೂ ಚನ್ನಾಗಿ ಪೂಜಿಸಿ ಅರಣ್ಯಕ್ಕೆ ತೆರಳುತ್ತೇನೆ" ಎಂದನು. ॥ ೨೨-೩೫ ॥

ಇಂತಿದು ಶ್ರೀರಾಮಕೃತ ಲಕ್ಷ್ಮಣಾನುಸರಣ ಯಾಚನಾಂಗೀಕಾರ ವಿವರಣವೆಂಬ
ಮೂವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಾತ್ರಿಂಶಸ್ಸರ್ಗಃ.

ತತ ಶ್ಶಾಸನಮಾಜ್ಞಾಯ ಭ್ರಾತು ಶ್ಶುಭತರಂ ಪ್ರಿಯಂ || ಗತ್ವಾ ಸ ಪ್ರವಿವೇಶಾಶು ಸುಯಜ್ಞಸ್ಯ ನಿವೇಶನಂ ||೧|| ತಂ ವಿಪ್ರಮಗ್ನ್ಯಗಾರಸ್ಥಂ ವಂದಿತ್ವಾ ಲಕ್ಷ್ಮಣೋಬ್ರವೀತ್ || ಸಖೇಭ್ಯಾಗಚ್ಛ ಪಶ್ಯತ್ವಂ ವೇಶ್ಮ ದುಷ್ಕರ ಕಾರಿಣಃ ||೨|| ತತಸ್ಸಂಧ್ಯಾ ಮುಪಾಸ್ಯಾಶು ಗತ್ವಾ ಸೌಮಿತ್ರಿಣಾ ಸಹ || ಜುಷ್ಟಂ ತತ್ಪ್ರಾವಿಶಲ್ಲಕ್ಷ್ಮ್ಯಾ ರಮ್ಯಂ ರಾಮ ನಿವೇಶನಂ ||೩|| ತಮಾಗತಂ ವೇದವಿದಂ ಪ್ರಾಂಜಲಿ ಸ್ಸೀತಯಾಸಹ || ಸುಯಜ್ಞ ಮಭಿಚಕ್ರಾಮ ರಾಘವೋಗ್ನಿಮಿವಾರ್ಚಿತಂ ||೪|| ಜಾತರೂಪಮಯೈ ರ್ಮುಖ್ಯೈ

ತತಃ - ಬಳಿಕ, ಸಃ - ಆ ಲಕ್ಷ್ಮಣನು, ಭ್ರಾತುಃ - ಅಣ್ಣನ, ಶುಭತರಂ - ಬಹಳ ಮಂಗಳಕರವಾದ, ಪ್ರಿಯಂ - ಇಷ್ಟವಾದ, ಶಾಸನಂ - ಅಪ್ಪಣೆಯನ್ನು, ಆಜ್ಞಾಯ-ತಿಳಿದು, ಗತ್ವಾ-ಹೋಗಿ, ಆಶು - ಜಾಗ್ರತೆಯಾಗಿ, ಸುಯಜ್ಞಸ್ಯ - ಸುಯಜ್ಞನ, ನಿವೇಶನಂ - ಮನೆಯನ್ನು, ಪ್ರವಿವೇಶ-ಹೊಕ್ಕನು. ||೧|| ಲಕ್ಷ್ಮಣಃ-ಲಕ್ಷ್ಮಣನು, ಅಗ್ನ್ಯಗಾರಸ್ಥಂ-ಅಗ್ನಿಯು ಮನೆಯಲ್ಲಿರುವ, ತಂವಿಪ್ರಂ - ಆ ಬ್ರಾಹ್ಮಣನನ್ನು ಕುರಿತು, ವಂದಿತ್ವಾ - ನಮಸ್ಕರಿಸಿ, ಹೇ ಸಖೇ - ಎಲೈ ಸ್ನೇಹಿತನೇ, ತ್ವಂ - ನೀನು, ದುಷ್ಕರಕಾರಿಣಃ - ಅಸಾಧ್ಯಕಾರ್ಯವನ್ನು ಮಾಡುತ್ತಿರುವ ಶ್ರೀರಾಮನ, ವೇಶ್ಮ - ಮನೆಯನ್ನು ಕುರಿತು, ಅಭ್ಯಾಗಚ್ಛ - ಬಾ, ತತ್ಕರ್ಮ - ಆ ಕಾರ್ಯವನ್ನು, ಪಶ್ಯ-ನೋಡು. ||೨|| ತತಃ - ಬಳಿಕ, ಸಂಧ್ಯಾಂ - ಸಂಧ್ಯೆಯನ್ನು, ಉಪಾಸ್ಯ - ಉಪಾಸನೆಮಾಡಿ, ಸೌಮಿತ್ರಿಣಾ ಸಹ - ಲಕ್ಷ್ಮಣನೊಡನೆ, ಆಶು - ಜಾಗ್ರತೆಯಾಗಿ, ಗತ್ವಾ - ಹೊರಟು, ಲಕ್ಷ್ಮ್ಯಾ - ಲಕ್ಷ್ಮೀದೇವಿಯಿಂದ, ಜುಷ್ಟಂ - ವ್ಯಾಪ್ತವಾದ, ರಮ್ಯಂ - ಮನೋಹರವಾದ, ತತ್ - ಆ, ರಾಮನಿವೇಶನಂ - ಶ್ರೀರಾಮನ ಮನೆಯನ್ನು, ಪ್ರಾವಿಶತ್ - ಹೊಕ್ಕನು. ||೩|| ರಾಘವಃ - ಶ್ರೀರಾಮನು, ಆಗತಂ - ಬಂದ, ವೇದವಿದಂ - ವೇದಶಾಸ್ತ್ರಜ್ಞನಾದ, ತಂಸುಯಜ್ಞಂ - ಆ ಸುಯಜ್ಞಋಷಿಯನ್ನು ಕುರಿತು, ಸೀತಯಾಸಹ - ಸೀತಾದೇವಿಯೊಡನೆ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಅರ್ಚಿತಂ - ಪೂಜಿಸಲ್ಪಟ್ಟ, ಅಗ್ನಿಮಿವ - ಅಗ್ನಿಯನ್ನಂತೆ, ಅಭಿಚಕ್ರಾಮ - ಇದುರಾಗಿ ಬಂದನು. ||೪||

ಆ ಬಳಿಕ ಲಕ್ಷ್ಮಣಸ್ವಾಮಿಯು ಶುಭಕರವಾದ ಶ್ರೀರಾಮನ ನುಡಿಗಳನ್ನು ಕೇಳಿ, ಆತನ ಅಪ್ಪಣೆಯಂತೆ, ಸುಯಜ್ಞಮುನಿಯ ಮನೆಗೆ ತೆರಳಿ ಅಗ್ನ್ಯಗಾರದಲ್ಲಿರುವ ಆತನನ್ನು ಕಂಡು ನಮಸ್ಕರಿಸಿ, “ಮಿತ್ರನೆ! ಅಸದಳವಾದ ಕಾರ್ಯವನ್ನು ಮಾಡುತ್ತಿರುವ ನಮ್ಮಣ್ಣನಾದ ಶ್ರೀರಾಮನ ಮನೆಗೆ ಬಂದು ಆ ಕಾರ್ಯವನ್ನು ನೋಡು” ಎಂದನು. ಲಕ್ಷ್ಮಣನಿಂತೆನಲಾಸುಯಜ್ಞನು ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು, ಲಕ್ಷ್ಮಣನೊಡಗೂಡಿ, ಮಹದೈಶ್ವರ್ಯ ಸಮನ್ವಿತವಾಗಿ ಬೆಳಗುತ್ತಿರುವ ಶ್ರೀರಾಮನರಮನೆ

ರಂಗದೈಃ ಕುಂಡಲೈ ಶ್ಶುಭೈಃ ॥ ಸ ಹೇಮಸೂತ್ರೈ ರ್ಮಣಿಭಿಃ ಕೇಯೂರೈ ರ್ವಲಯೈರಪಿ ॥ ಅನ್ಯೈಶ್ಚ ರತ್ನೈ ರ್ಬಹುಭಿಃ ಕಾಕುತ್‌ಸ್ಥ ಪ್ರತ್ಯಪೂಜಯತ್ ॥ ೫ ॥ ಸುಯಜ್ಞಂ ಸ ತದೋವಾಚ ರಾಮಸ್ಸೀತಾ ಪ್ರಚೋದಿತಃ ॥ ೬ ॥ ಹಾರಂಚ ಹೇಮಸೂತ್ರಂಚ ಭಾರ್ಯಾಯೈ ಸೌಮ್ಯ ಹಾರಯ ॥ ರಶನಾಂ ಚಾಧುನಾ ಸೀತಾ ದಾತುಮಿಚ್ಛತಿ ತೇ ಸಖೇ ॥ ೭ ॥ ಅಂಗದಾನಿಚ ಚಿತ್ರಾಣಿ ಕೇಯೂರಾಣಿ ಶುಭಾನಿಚ ॥ ಪ್ರಯಚ್ಛತಿ ಸಖೇ ತುಭ್ಯಂ ಭಾರ್ಯಾಯೈ ಗಚ್ಛತೀ ವನಂ ॥ ೮ ॥ ಪರ್ಯಂಕಮಗ್ರ್ಯಾಸ್ತರಣಂ ನಾನಾರತ್ನ ವಿಭೂಷಿತಂ॥

ಕಾಕುತ್ಸ್ಥಃ - ಶ್ರೀರಾಮನು, ಜಾತರೂಪಮಯೈಃ - ಭಂಗಾರದ, ಮುಖ್ಯೈಃ - ಶ್ರೇಷ್ಠಗಳಾದ ಅಂಗದಗಳಿಂದ, ಶುಭೈಃ - ಮಂಗಳಕರವಾದ, ಕುಂಡಲೈಃ - ಕರ್ಣಾಭರಣಗಳಿಂದಲೂ, ಸಹೇಮ ಸೂತ್ರೈಃ - ಚಿನ್ನದ ದಾರಗಳಿಂದೊಡಗೂಡಿದ, ಮಣಿಭಿಃ - ರತ್ನಗಳಿಂದಲೂ, ಕೇಯೂರೈಃ - ಸೂಕ್ಷ್ಮವಾದ ಅಂಗದಗಳಿಂದಲೂ, (ಅಂದರೆ ಪೌಂಚಿಗಳಿಂದ) ವಲಯೈರಪಿ - ಕಡಗಗಳಿಂದಲೂ, ಅನ್ಯೈಃ - ಮತ್ತೆ ಕೆಲವಾದ, ಬಹುಭಿಃ - ಅನೇಕ, ರತ್ನೈಃ - ರತ್ನಗಳಿಂದ, ಪ್ರತ್ಯಪೂಜಯತ್ - ಮರ್ಯಾದಿಸಿದನು. ॥ ೫ ॥ ತದಾ - ಆಕಾಲದಲ್ಲಿ, ಸರಾಮಃ - ಆ ಶ್ರೀರಾಮನು, ಸೀತಾ ಪ್ರಚೋದಿತಃ - ಸೀತಾದೇವಿಯಿಂದ ಪ್ರೇರಿತನಾಗಿ, ಸುಯಜ್ಞಂ-ಸುಯಜ್ಞನನ್ನು ಕುರಿತು, ಉವಾಚ- ಹೇಳಿದನು. ॥ ೬ ॥ ಹೇ ಸೌಮ್ಯ - ಎಲೈ ಸೌಮ್ಯನೆ, ಹಾರಂಚ - ಹಾರವನ್ನೂ, ಹೇಮಸೂ ತ್ರಂಚ) ಭಂಗಾರದ ಸೂತ್ರವನ್ನೂ, ರಶನಾಂಚ - ಓಡ್ಯಾಣವನ್ನೂ, ಸೀತಾ - ಸೀತಾದೇವಿಯು, ಹೇ ಸಖೇ - ಎಲೈ ಸ್ನೇಹಿತನೇ, ತೇ - ನಿನಗೆ, ದಾತುಂ - ಕೊಡಲು, ಇಚ್ಛತಿ - ಬಯಸುತ್ತಾಳೆ, ಸರ್ವಂ - ಸಮಸ್ತವಾದ, ಏತತ್ - ಈ ಆಭರಣಗಳನ್ನು, ಭಾರ್ಯಾಯೈ - ನಿನ್ನ ಹೆಂಡತಿಗೆ, ಹಾರಯ - ತೆಗದುಕೊಂಡುಹೋಗಿಕೊಡು. ॥ ೭ ॥ ವಿಚಿತ್ರಾಣಿ - ನಾನಾ ಬಣ್ಣಗಳಾದ, ಶುಭಾನಿ-ಮಂಗಳಕರಗಳಾದ, ಕೇಯೂರಾಣಿ - ಬಾಜೀಬಂದುಗಳನ್ನೂ, ಅಂಗದಾನಿ ಅಂಗದಗಳನ್ನೂ, ವನಂ - ವನವನ್ನು ಕುರಿತು, ಗಚ್ಛತೀ - ಹೋಗುತ್ತಿರುವಳಾಗಿ, ಹೇ ಸಖೇ - ಎಲೈ ಸ್ನೇಹಿತನೇ, ತುಭ್ಯಂ - ನಿನಗೆ, ಭಾರ್ಯಾಯೈ - ಹೆಂಡತಿಗೋಸುಗ, ಪ್ರಯಚ್ಛತಿ - ಕೊಡುತ್ತಾಳೆ. ॥ ೮ ॥ ವೈದೇಹೀ - ಸೀತಾದೇವಿಯು, ನಾನಾರತ್ನವಿಭೂಷಿತಂ, ನಾನಾ - ಅನೇಕ ಬಗೆಗಳಾದ, ರತ್ನ -

---

ಯನ್ನು ಪ್ರವೇಶಿಸಿದನು. ಆಗ ಶ್ರೀರಾಮನು ಸೀತೆಯೊಡಗೂಡಿ ಕೈಗಳನ್ನು ಜೋಡಿಸಿ ಕೊಂಡು, ಯಜ್ಞ ಪುರುಷನನ್ನಿದಿರ್ಗೊಳ್ಳುವಂತೆ ಆ ವಿಪ್ರೋತ್ತಮನನ್ನಿದಿರ್ಗೊಂಡು, ಬಂಗಾರದ ಬಾಹುಜಿಗೆಗಳನ್ನೂ, ಕರ್ಣಕುಂಡಲಗಳನ್ನೂ, ಸುವರ್ಣ ಸೂತ್ರಗಳನ್ನೂ, ರತ್ನ ಗಳೇ ಮೊದಲಾದ ಅನೇಕ ಆಭರಣಗಳನ್ನೂ ಕೊಟ್ಟು, ಸೀತಾದೇವಿಯಿಂದ ಪ್ರೇರಿತನಾಗಿ ಆತನನ್ನು ಕುರಿತು, “ ಓ ಮಿತ್ರನೆ ! ವನಪ್ರಯಾಣ ಮಾಡಿಕೊಂಡಿರುವ ಸೀತಾದೇವಿಯು, ಈ ಹಾರವನ್ನೂ, ಸುವರ್ಣ ಸೂತ್ರವನ್ನೂ, ಓಡ್ಯಾಣವನ್ನೂ, ಬಾಜೀಬಂದುಗಳನ್ನೂ ಕೊಡಲಿಚ್ಛಿಸುವಳು. ನೀನಿವುಗಳನ್ನು ತೆಗೆದುಕೊಂಡು ಹೋಗಿ ನಿನ್ನ ಹೆಂಡತಿಗೆ ಕೊಡು. ಇದಲ್ಲದೆ, ಉತ್ತಮವಾದ ಆಸ್ತರಣವುಳ್ಳುದಾಗಿಯೂ, ವಿವಿಧ ರತ್ನಾಲಂಕೃತವಾದುದಾ

ತಮಪೀಚ್ಛತಿ ವೈದೇಹೀ ಪ್ರತಿಷ್ಠಾಪಯಿತುಂ ತ್ವಯಿ ॥೯॥ ನಾಗಶ್ಶತ್ರುಂಜಯೋ ನಾಮ ಮಾತುಲೋಯಂ ದದೌ ಮಮ ॥ ತಂ ತೇ ಗಜಸಹಸ್ರೇಣ ದದಾಮಿ ದ್ವಿಜಪುಂಗವ॥೧೦॥ಇತ್ಯುಕ್ತ ಸ್ಸಹಿ ರಾಮೇಣ ಸುಯಜ್ಞಃ ಪ್ರತಿಗೃಹ್ಯ ತತ್ ॥ ರಾಮ ಲಕ್ಷ್ಮಣ ಸೀತಾನಾಂ ಪ್ರಯುಯೋಜಾಶಿಷ ಶ್ಶುಭಾಃ ॥೧೧॥ ಅಥ ಭ್ರಾತರಮವ್ಯಗ್ರಂ ಪ್ರಿಯಂ ರಾಮಃ ಪ್ರಿಯಂವದಃ ॥ ಸೌಮಿತ್ರಿಂ ತಮುವಾಚೇದಂ ಬ್ರಹ್ಮೇವ ತ್ರಿದಶೇಶ್ವರಂ ॥೧೨॥ ಅಗಸ್ತ್ಯಂ ಕೌಶಿಕಂ ಚೈವ ತಾವುಭೌ ಬ್ರಾಹ್ಮಣೋತ್ತಮೌ ॥ ಅರ್ಚಯಾಹೂಯ ಸೌಮಿತ್ರೇ ರತ್ನೈ

ರತ್ನಗಳಿಂದ, ವಿಭೂಷಿತಂ - ಅಲಂಕರಿಸಲ್ಪಟ್ಟ, ಅಗ್ರ್ಯಾಸ್ತರಣಂ, ಅಗ್ರ್ಯ - ಶ್ರೇಷ್ಠವಾದ, ಆಸ್ತರಣಂ - ಹಾಸಿಗೆಯುಳ್ಳ, ತಂಪರ್ಯಂಕಮಪಿ - ಆ ಮಂಚವನ್ನೂ, ತ್ವಯಿ - ನಿನ್ನಲ್ಲಿ, ಪ್ರತಿಷ್ಠಾಪಯಿತುಂ - ಇರಿಸುವದಕ್ಕೆ, ಇಚ್ಛತಿ - ಅಪೇಕ್ಷಿಸುತ್ತಾಳೆ. ॥೯॥ ಹೇ ದ್ವಿಜಪುಂಗವ-ಎಲೈ ಬ್ರಾಹ್ಮಣಶ್ರೇಷ್ಠನೇ, ಮಾತುಲಃ - (ಗೋ) ಸೋದರಮಾವನು, ಮಮ ನನಗೆ, ಯಂ-ಯಾವ ಗಜವನ್ನ, ದದೌ - ಕೊಟ್ಟನೊ, ಅಸೌ - ಇದು, ಶತ್ರುಂಜಯೋನಾಮ - ಶತ್ರುಂಜಯವೆಂದು ಪ್ರಸಿದ್ಧವಾದ, ನಾಗಃ - ಗಜವು. ತಂ - ಆ ಗಜವನ್ನು, ಗಜಸಹಸ್ರೇಣ - ಬೇರೇಗಜಸಹಸ್ರದಿಂದೊಡಗೂಡಿದುದನ್ನಾಗಿ, ತೇ - ನಿನಗೆ, ದದಾಮಿ - ಕೊಡುತ್ತೇನೆ, ರಾಮೇಣ - ಶ್ರೀರಾಮನಿಂದ, ಇತಿ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಸಸುಯಜ್ಞಃ - ಆ ಸುಯಜ್ಞಋಷಿಯು, ತತ್ - ಅದನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ರಾಮಲಕ್ಷ್ಮಣಸೀತಾನಾಂ - ರಾಮನಿಗೂ ಲಕ್ಷ್ಮಣನಿಗೂ ಸೀತಾದೇವಿಗೂ, ಶುಭಾಃ - ಶುಭಕರಗಳಾದ, ಆಶಿಷಃ - ಆಶೀರ್ವಾದಗಳನ್ನು, ಪ್ರಯುಯೋಜಃ - ಪ್ರಯೋಗಮಾಡಿದನು. ॥೧೦ ೧೧॥ ಅಥ - ಬಳಿಕ, ಪ್ರಿಯಂವದಃ - ಪ್ರಿಯವಾದಿಯಾದ, ರಾಮಃ-ಶ್ರೀರಾಮನು, ಬ್ರಹ್ಮಾ-ಬ್ರಹ್ಮದೇವರು, ತ್ರಿದಶೇಶ್ವರಮಿವ - ದೇವೇಂದ್ರನಂತೆ, ಪ್ರಿಯಂ - ಇಷ್ಟನಾದ, ಅವ್ಯಗ್ರಂ - ಸಾವಧಾನಚಿತ್ತನಾದ, ಭ್ರಾತರಂ - ತಮ್ಮನಾದ, ತಂಸೌಮಿತ್ರಿಂ - ಆ ಲಕ್ಷ್ಮಣನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥೧೨॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಅಗಸ್ತ್ಯಂ - ಅಗಸ್ತ್ಯಋಷಿಯೂ, ಕೌಶಿಕಂಚೈವ - ವಿಶ್ವಾಮಿತ್ರನೂ ಎಂಬ, ತೌಬ್ರಾಹ್ಮಣೋತ್ತಮೌ - ಆ ಬ್ರಾಹ್ಮಣಶ್ರೇಷ್ಠರಿಬ್ಬರನ್ನೂ, ಆಹೂಯ - ಕರೆದು, ರತ್ನೈಃ -

---

ಗಿಯೂ ಇರುವ ಪರ್ಯಂಕವನ್ನೂ ಕೂಡ ಕೊಡಲಪೇಕ್ಷಿಸುತ್ತಾಳೆ. ಎಲೈ ವಿಪ್ರೋತ್ತಮ! ಶತ್ರುಂಜಯವೆಂಬ ಈ ಗಜಶ್ರೇಷ್ಠವನ್ನು ನಮ್ಮ ಮಾವನವರು ನನಗೆ ಕೊಟ್ಟಿದ್ದರು. ಇದರೊಡನೆ ಇನ್ನೂ ಸಾವಿರ ಗಜಗಳನ್ನು ನಿನಗೆ ಕೊಡುತ್ತೇನೆ" ಎಂದನು. ॥೯-೧೦॥ ಆಗ ಸುಗಯಜ್ಞನಿವೆಲ್ಲವನ್ನೂ ಪ್ರತಿಗ್ರಹಿಸಿ ಶ್ರೀರಾಮ ಲಕ್ಷ್ಮಣರಿಗೂ, ಸೀತಾದೇವಿಗೂ ಚ್ಯುತಿಯಿಲ್ಲದ ಆಶೀರ್ವಾದವಂ ಗೈದನಾದನು. ಆ ಬಳಿಕ ಶ್ರೀರಾಮನು, ನಾಲ್ಮುಗನು ಇಂದ್ರನನ್ನು ಕುರಿತು ನುಡಿವಂತೆ ಲಕ್ಷ್ಮಣಸ್ವಾಮಿಯನ್ನು ಕುರಿತು, "ಎಲೈ ಸುಮಿತ್ರಾತನಯನೆ! ಬ್ರಾಹ್ಮಣೋತ್ತಮರಾದ ಅಗಸ್ತ್ಯ ವಿಶ್ವಾಮಿತ್ರರನ್ನು ಕರೆಯಿಸಿ, ಪೈರುಗಳನ್ನು ಉದಕದಿಂದ ತೃಪ್ತಿಗೊಳಿಸುವಂತೆ ಬಹು ರತ್ನಗಳಿಂದ ತೃಪ್ತಿಗೊಳಿಸು. ಎಲೈ ಭುಜಪರಾ

ಸ್ಸಸ್ಯಮಿವಾಂಬುಭಿಃ ॥೧೩॥ ತರ್ಪಯಸ್ವ ಮಹಾಬಾಹೋ ಗೋ ಸಹಸ್ರೈಶ್ಚ ಮಾನದ ॥ ಸುವರ್ಣೈ ರಜತೈಶ್ಚೈವ ಮಣಿಭಿಶ್ಚ ಮಹಾಧನೈಃ ॥೧೪॥ ಕೌಸಲ್ಯಾಂಚಯ ಆಶೀರ್ಭಿ ರ್ಭಕ್ತಃ ಪರ್ಯುಪತಿಷ್ಠತಿ ॥ ಆಚಾರ್ಯಸ್ತೈತ್ತಿರೀಯಾಣಾ ಮಭಿರೂಪಶ್ಚ ವೇದವಿತ್ ॥೧೫॥ ತಸ್ಯ ಯಾನಂಚ ದಾಸೀಶ್ಚ ಸೌಮಿತ್ರೇ ಸಂಪ್ರದಾಪಯ ॥ ಕೌಶೇಯಾನಿಚ ವಸ್ತ್ರಾಣಿ ಯಾವತ್ತುಷ್ಯತಿ ಸ ದ್ವಿಜಃ ॥೧೬॥ ಸೂತಶ್ಚಿತ್ರರಥಶ್ಚಾರ್ಯ ಸ್ಸಚಿವ ಸ್ಸುಚಿರೋಷಿತಃ ॥

ರತ್ನಗಳಿಂದ, ಸಸ್ಯಂ - ಪೈರುಗಳನ್ನು, ಅಂಬುಭಿರಿವ - ಉದಕಗಳಿಂದಲಂತೆ, ಅರ್ಚಯ - ಪೂಜಿಸು. ॥೧೩॥ ಹೇ ಮಹಾಬಾಹೋ - ಎಲೈ ಮಹಾಭುಜಪರಾಕ್ರಮಶಾಲಿಯೇ, ಹೇ ಮಾನದ - ಎಲೈ ಬಹು ಮಾನಪ್ರದಾಯಕನೇ, ಗೋ ಸಹಸ್ರೈಃ - ಸಹಸ್ರ ಗೋವುಗಳಿಂದಲೂ, ಸುವರ್ಣೈಃ - ಭಂಗಾರದ ನಾಣ್ಯಗಳಿಂದಲೂ, ರಜತೈಶ್ಚೈವ - ಬೆಳ್ಳಿಯನಾಣ್ಯಗಳಿಂದಲೂ, ಮಹಾಧನೈಃ - ಬಹು ದ್ರವ್ಯ ಸಾಧ್ಯಗಳಾದ, ಮಣಿಭಿಶ್ಚ - ರತ್ನಗಳಿಂದಲೂ, ತರ್ಪಯಸ್ವ - ತೃಪ್ತಿಗೊಳಿಸು. ॥೧೪॥ ತೈತ್ತಿರಿಯಾಣಾಂ - ತೈತ್ತಿರಿಯ ಶಾಖಾಧ್ಯೇತೃಗಳಿಗೆ, ಆಚಾರ್ಯಃ-ಅಧ್ಯಾಪಕನಾದ, ಅಭಿರೂಪಶ್ಚ-ಯೋಗ್ಯನಾದ, ವೇದವಿತ್ - ವೇದಾರ್ಥವನ್ನುತಿಳಿದ, ಯಃ - ಯಾವ ಬ್ರಾಹ್ಮಣನು, ಭಕ್ತಃ - ವಿಶ್ವಾಸವುಳ್ಳವನಾಗಿ, ಕೌಸಲ್ಯಾಂಚ - ಕೌಸಲ್ಯಾದೇವಿಯನ್ನೂ, ಆಶೀರ್ಭಿಃ - ಆಶೀರ್ವಾದಗಳಿಂದ, ಪರ್ಯುಪತಿಷ್ಠತಿ - ಆಶ್ರಯಿಸಿದ್ದಾನೆಯೋ, ತಸ್ಯ - ಆ ಬ್ರಾಹ್ಮಣನಿಗೆ, ಯಾನಂಚ - ವಾಹನವನ್ನೂ, ದಾಸೀಶ್ಚ - ದಾಸೀಸ್ತ್ರೀಯನ್ನೂ, ಸಂಪ್ರದಾಪಯ-ಕೊಡಿಸು, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಸದ್ವಿಜಃ - ಆ ಬ್ರಾಹ್ಮಣನು, ಯಾವತ್ - ಎಷ್ಟುದ್ರವ್ಯದಿಂದ, ತುಷ್ಯತಿ - ಸಂತುಷ್ಟನಾಗುವನೋ, ತಾವತ್ - ಅಷ್ಟುದ್ರವ್ಯವನ್ನು, ಕೌಶೇಯಾನಿ - ರೇಶ್ಮೆಯ, ವಸ್ತ್ರಾಣಿಚ - ವಸ್ತ್ರಗಳನ್ನೂ, (ಸಂಪ್ರದಾಪಯ - ಕೊಡಿಸು.) ॥೧೬॥ ಆರ್ಯಸಚಿವಃ, ಆರ್ಯ - ಪೂಜ್ಯನಾದ ದಶರಥರಾಯನಿಗೆ, ಸಚಿವಃ - ಮಂತ್ರಿಯಾದ, ಚಿತ್ರರಥಶ್ಚ - ಚಿತ್ರರಥನೆಂಬ, ಸೂತಃ - ಸಾರಥಿಯು, ಸುಚಿರೋಷಿತಃ - ಬಹುಕಾಲದಿಂದಿರುವನು, ಏನಂ - ಈ ಚಿತ್ರರಥನನ್ನು, ಮಹಾರ್ಹೈಃ - ಅಮೂಲ್ಯಗಳಾದ, ರತ್ನೈಃ - ರತ್ನಗಳಿಂದಲೂ, ವಸ್ತ್ರೈಃ - ವಸ್ತ್ರಗಳಿಂದಲೂ, ತಥಾ-ಹಾಗೆಯೇ, ಧನೈಶ್ಚ-ಧನಗಳಿಂದಲೂ, ಸರ್ವಾಭಿಃ - ಸಮಸ್ತಗಳಾದ, ಪಶುಕಾಭಿಶ್ಚ - ಮೇಕೆಯೇ ಮೊದಲಾದ ಪಶುಗಳಿಂ

ಕ್ರಮಿಯೂ, ಮಾನಪ್ರದಾಯಕನೂ ಆದ ಲಕ್ಷ್ಮಣನೆ! ಅನೇಕ ಗೋವುಗಳಿಂದಲೂ, ಸುವರ್ಣ ರಜಿತ ನಾಣ್ಯಗಳಿಂದಲೂ, ಅಮೂಲ್ಯಗಳಾದ ರತ್ನಗಳಿಂದಲೂ ಅವರನ್ನು ತೃಪ್ತಿಗೊಳಿಸು. ತೈತ್ತರೀಯ ಶಾಖಾಧ್ಯಾಪಕನೂ, ಯೋಗ್ಯನೂ, ವೇದಜ್ಞನೂ, ನಮ್ಮ ತಾಯಿಯಾದ ಕೌಸಲ್ಯಾದೇವಿಗೆ ಆಶೀರ್ವಾದಮಂಮಾಡಿ ಕಾದುಕೊಂಡಿರುವನೂ ಆದ ಆ ಬ್ರಾಹ್ಮಣನಿಗೆ ಆತನು ಕೇಳಿದಷ್ಟು ದ್ರವ್ಯವನ್ನೂ, ರಥವನ್ನೂ, ದಾಸಿಯರನ್ನೂ, ಬೆಲೆಬಾಳುವ ಪಟ್ಟೆ ವಸ್ತ್ರಗಳನ್ನೂ ಕೊಡುವವನಾಗು. ಪೂಜ್ಯನಾದ ದಶರಥರಾಯನಿಗೆ ಮಂತ್ರಿಯಾಗಿ ಬಹು ಕಾಲದಿಂದಲೂ ಇರುವ ಚಿತ್ರರಥನಿಗೆ ಬಹು ಬೆಲೆಯುಳ್ಳ ರತ್ನಗಳನ್ನೂ, ವಸ್ತ್ರಗಳನ್ನೂ, ದ್ರವ್ಯಗಳನ್ನೂ ಅನೇಕ ಗೋವುಗಳನ್ನೂ ಕೊಟ್ಟು ಸಂತೋಷಗೊಳಿಸು. ಇಷ್ಟೆಯಲ್ಲದೆ

ತೋಷಯೈನಂ ಮಹಾರ್ಹೈಶ್ಚ ರತ್ನೈರ್ವಸ್ತ್ರೈರ್ಧನೈಸ್ತಥಾ ॥ ೧೭ ॥ ಪಶು
ಕಾಭಿಶ್ಚ ಸರ್ವಾಭಿ ರ್ಗವಾಂ ದಶಶತೇನಚ ॥ ಯೇಚೇಮೇ ಕಠಕಾಲಾಪಾ
ಬಹವೋ ದಂಡಮಾಣವಾಃ ॥ ೧೮ ॥ ನಿತ್ಯಂ ಸ್ವಾಧ್ಯಾಯಶೀಲತ್ವಾ ನ್ನಾನ್ಯತ್ಕು
ರ್ವಂತಿ ಕಿಂಚನ ॥ ಅಲಸಾಸ್ಸ್ವಾದುಕಾಮಾಶ್ಚ ಮಹತಾಂಚಾಪಿ ಸಮ್ಮತಾಃ ॥೧೯॥
ತೇಷಾಮಶೀತಿ ಯಾನಾನಿ ರತ್ನಪೂರ್ಣಾನಿ ದಾಪಯ ॥ ಶಾಲಿವಾಹಸಹಸ್ರಂಚ
ದ್ವೇಶತೇ ಭದ್ರಕಾಂಸ್ತಥಾ ॥ ೨೦ ॥ ವ್ಯಂಜನಾರ್ಥಂ ಚ ಸೌಮಿತ್ರೇ ಗೋ
ಸಹಸ್ರ ಮುಪಾಕುರು ॥ ಮೇಖಲೀನಾಂ ಮಹಾಸಂಘಃ ಕೌಸಲ್ಯಾಂ ಸಮುಪ

ದಲೂ, ಗವಾಂ - ಗೋವುಗಳ, ದಶಶತೇನಚ - ಸಹಸ್ರದಿಂದಲೂ, ತೋಷಯ - ಸಂತೋಷಗೊಳಿಸು. ||೧೭|| ಕಠಕಾಲಾಪಾಃ, ಕಠ-ಕಠಪ್ರೋಕ್ತವಾದ ಶಾಖಾಧ್ಯಯನ ಮಾಡುವರು, ಕಾಲಾಪಾಃ-ಕಲಾಪ ಪ್ರೋಕ್ತವಾದ ಶಾಖಾಧ್ಯಾಯಿಗಳು, ದಂಡಮಾಣವಾಃ, ದಂಡ - ಪಾಲಾಶ ದಂಡಧಾರಿಗಳಾದ, ಮಾಣವಾಃ - ಬ್ರಹ್ಮಚಾರಿಗಳು, ಬಹವಃ - ಬಹು ಮಂದಿಯು, ಯೇ - ಯಾರುಂಟೋ, ಇಮೇ - ಇವರು, ನಿತ್ಯಂಸ್ವಾಧ್ಯಾಯಶೀಲತ್ವಾತ್, ನಿತ್ಯಂ - ಅವಿಚ್ಛಿನ್ನವಾಗಿ, ಸ್ವಾಧ್ಯಾಯಶೀಲತ್ವಾತ್ - ಅಧ್ಯಯನ ಮಾಡುವರಾದುದರಿಂದ, ಅನ್ಯತ್ - ಮತ್ತೊಂದಾದ, ಕಿಂಚನ, ಯಾವ ಕಾರ್ಯವನ್ನೂ, ನಕುರ್ವಂತಿ - ಮಾಡುವವರಲ್ಲ, ಅಲಸಾಃ - ಆಲಸ್ಯವುಳ್ಳವರು, ಸ್ವಾದುಕಾಮಾಶ್ಚ - ರುಚಿಯಾಗಿ ಭೋಜನವನ್ನು ಅಪೇಕ್ಷಿಸುವರು, ಮಹತಾಂಚಾಪಿ - ದೊಡ್ಡವರಿಗೂ, ಸಮ್ಮತಾಃ - ಇಷ್ಟರು, ತೇಷಾಂ - ಅವರಿಗೆ, ರತ್ನಪೂರ್ಣಾನಿ, ರತ್ನ - ರತ್ನಗಳಿಂದ ತುಂಬಿದ, ಅಶೀತಿಯಾನಾನಿ - ಎಂಭತ್ತು ವಾಹನಗಳನ್ನು, ದಾಪಯ - ಕೊಡಿಸು, ಶಾಲಿವಾಹಸಹಸ್ರಂಚ, ಶಾಲಿ - ನೆಲ್ಲು ಗಳಿಂದ ಕೂಡಿದ, ವಾಹಸಹಸ್ರಂ - ಸಾವಿರ ಎತ್ತುಗಳನ್ನೂ, ದ್ವೇಶತೇ - ಇನ್ನೂರು ಸಂಖ್ಯೆಯುಳ್ಳ, ಭದ್ರಕಾನ್ - ಉಳುವ ಎತ್ತುಗಳನ್ನೂ, ತಥಾ - ಹಾಗೆಯೆ, ವ್ಯಂಜನಾರ್ಥಂಚ - ಹಾಲು, ತುಪ್ಪ, ಮೊಸರು ಮೊದಲಾದವುಗಳ ನಿಮಿತ್ತವಾಗಿ, ಗೋ ಸಹಸ್ರಂ - ಸಹಸ್ರ ಗೋವುಗಳನ್ನು, ಉಪಾಕುರು- ಸಮರ್ಪಿಸು. || ೧೯-೨೦ || ಮೇಖಲೀನಾಂ-ಮೌಂಜೀಬದ್ಧರಾದ ಬ್ರಹ್ಮಚಾರಿಗಳ, ಮಹಾಸಂಘಃ- ದೊಡ್ಡ ಗುಂಪು, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಸಮುಪಸ್ಥಿತಃ - ಆಶ್ರಯಿಸಿಕೊಂಡಿರುವುದು,

ಕಠಪ್ರೋಕ್ತವಾದ ಶಾಖಾಧ್ಯಾಯಿಗಳು, ಕಲಾಪಮುನೀಶ್ವರನಿಂದ ಹೇಳಲ್ಪಟ್ಟ ಶಾಖೆಯನ್ನು ಅಧ್ಯಯನ ಮಾಡುವವರು, ಪಲಾಶದಂಡಧಾರಿಗಳಾದ ಬ್ರಹ್ಮಚಾರಿಗಳು ಇವರೆಲ್ಲರೂ ಸದಾ ಕಾಲದಲ್ಲಿಯೂ ಅಧ್ಯಯನಮಾಡುತ್ತಿರುವವರಾದುದರಿಂದ ಬೇರೊಂದು ಕೆಲಸವನ್ನು ಮಾಡು ವುದಿಲ್ಲ. ಬಹಳವಾದ ಆಲಸ್ಯವುಳ್ಳವರಾಗಿ ರುಚಿಕರವಾದ ಭೋಜನದಲ್ಲಿಷ್ಟವುಳ್ಳವರಾಗಿ ಮಹಾತ್ಮರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಇವರೆಲ್ಲರಿಗೂ ರತ್ನಯುಕ್ತವಾದ ಎಂಭತ್ತು ವಾಹನಗಳನ್ನೂ, ನೆಲ್ಲುಮೂಟೆಗಳಿಂದ ಕೂಡಿದ ಸಾವಿರ ಎತ್ತುಗಳನ್ನೂ, ಇನ್ನೂರು ಉಳುವ ಎತ್ತುಗಳನ್ನೂ, ಹಾಲು, ತುಪ್ಪ, ಮೊಸರುಗಳಿಗಾಗಿ ಸಹಸ್ರ ಗೋವುಗ ಳನ್ನೂ ಸಮರ್ಪಿಸುವವನಾನು. ॥ ೧೭-೨೦ ॥ ಇದಲ್ಲದೆ ಮೌಂಜಿಗಳನ್ನು ಕಟ್ಟಿಕೊಂಡಿ ರುವ ಅನೇಕಮಂದಿ ಬ್ರಹ್ಮಚಾರಿಗಳು ನಮ್ಮ ಜನನಿಯಾದ ಕೌಸಲ್ಯಾದೇವಿಯನ್ನು ಆಶ್ರ

ಸ್ಥಿತಃ ॥ ೨೧ ॥ ತೇಷಾಂ ಸಹಸ್ರಂ ಸೌಮಿತ್ರೇ ಪ್ರತ್ಯೇಕಂ ಸಂಪ್ರದಾಪಯ ॥
ಅಂಬಾ ಯಥಾಚ ಸಾನಂದೇ ತ್ಕೌಸಲ್ಯಾ ಮಮ ದಕ್ಷಿಣಾಂ ॥ ೨೨ ॥ ತಥಾ
ದ್ವಿಜಾತೀಂಸ್ತಾನ್ಸರ್ವಾ ಲಕ್ಷ್ಮಣಾರ್ಚಯ ಸರ್ವಶಃ॥ತತಸ್ಸಪುರುಷವ್ಯಾಘ್ರ
ಸ್ತದ್ಧನಂ ಲಕ್ಷ್ಮಣ ಸ್ಸ್ವಯಂ ॥ ೨೩ ॥ ಯಥೋಕ್ತಂ ಬ್ರಾಹ್ಮಣೇಂದ್ರಾಣಾ
ಮದದಾ ದ್ಧನದೋ ಯಥಾ ॥ ಅಥಾಬ್ರವೀದ್ಬಾಷ್ಪಗಳಾಂ ಸ್ತಿಷ್ಠತ ಶ್ಚೋಪ
ಜೀವಿನಃ ॥ ೨೪ ॥ ಸಂಪ್ರದಾಯ ಬಹುದ್ರವ್ಯ ಮೇಕೈಕಸ್ಯೋಪಜೀವನಂ ॥
ಲಕ್ಷ್ಮಣಸ್ಯಚ ಯದ್ವೇಶ್ಮ ಗೃಹಂಚ ಯದಿದಂ ಮಮ ॥ ೨೫ ॥ ಅಶೂನ್ಯಂ
ಕಾರ್ಯಮೇಕೈಕಂ ಯಾವದಾಗಮನಂ ಮಮ॥ಇತ್ಯುಕ್ತ್ವಾ ದುಃಖಿತಂ ಸರ್ವಂ

ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ತೇಷಾಂ - ಅವರಿಗೆ, ಪ್ರತ್ಯೇಕಂ - ಬೇರೆಬೇರೆ, ಸಹಸ್ರಂ - ಸಾವಿರ ಆಕಳುಗಳನ್ನು, ಅಂಬಾ - ತಾಯಿಯಾದ, ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಮಮ- ನನ್ನ, ದಕ್ಷಿಣಾಂ - ದಕ್ಷಿಣೆಯನ್ನು, ಯಥಾಚ - ಹೇಗೆ, ನಂದೇತ್ - ಸಂತೋಷಿಸುವಳೋ, ತಥಾ - ಹಾಗೆ, ಸಂಪ್ರದಾಪಯ - ಕೊಡಿಸು, ತಥಾ - ಹಾಗೆಯೇ, ಸರ್ವಾ - ಸಮಸ್ತರಾದ, ತಾನ್‌ದ್ವಿಜಾತೀ - ಆ ಬ್ರಾಹ್ಮಣರನ್ನು, ಸರ್ವಶಃ - ಎಲ್ಲ ರೀತಿಗಳಲ್ಲಿಯೂ, ಅರ್ಚಯ - ಪೂಜೆ ಮಾಡು. ॥ ೨೧-೨೨ ॥ ತತಃ - ಬಳಿಕ, ಪುರುಷವ್ಯಾಘ್ರಃ - ಪುರುಷ ಶ್ರೇಷ್ಠನಾದ, ಲಕ್ಷ್ಮಣಃ - ಲಕ್ಷ್ಮಣನು, ಯಥೋಕ್ತಂ - ಶ್ರೀರಾಮನು ಹೇಳಿದಂತೆ, ಬ್ರಾಹ್ಮಣೇಂದ್ರಾಣಾಂ - ಬ್ರಾಹ್ಮಣ ಶ್ರೇಷ್ಠರಿಗೆ, ಧನದೋಯಥಾ - ಕುಬೇರನಂತೆ, ಸ್ವಯಂ - ತಾನಾಗಿಯೇ, ತದ್ಧನಂ - ಆ ದ್ರವ್ಯ ವನ್ನು, ಅದದಾತ್ - ಕೊಟ್ಟನು. ॥ ೨೩ ॥ ಅಥ - ಬಳಿಕ, ಬಾಷ್ಪಕಳಾ - ಕಂಬನಿಗಳನ್ನು ಬಿಡುತ್ತ, ತಿಷ್ಠತಃ - ನಿಂತಿರುವ, ಉಪಜೀವಿನಃ - ಸೇವಕರನ್ನು ಕುರಿತು, ಏಕೈಕಸ್ಯ - ಒಬ್ಬೊಬ್ಬ ನಿಗೆ, ಬಹುದ್ರವ್ಯಂ - ಬಹಳ ಧನವನ್ನು, ಉಪಜೀವನಂ - ಜೀವನವನ್ನುದ್ದೇಶಿಸಿ, ಸಂಪ್ರದಾಯ - ಕೊಟ್ಟು, ಅಬ್ರವೀತ್ - ನುಡಿದನು, ॥ ೨೪ ॥ ಲಕ್ಷ್ಮಣಸ್ಯಚ - ಲಕ್ಷ್ಮಣನ, ವೇಶ್ಮ-ಮನೆಯು, ಯತ್ - ಯಾವುದೋ, ಮಮ - ನನ್ನ, ಗೃಹಂಚ - ಮನೆಯು, ಯತ್ - ಯಾವದೋ, ಇದಂ- ಈ ಮನೆಯು, ಭವದ್ಭಿಃ - ನಿಮ್ಮಿಂದ, ಏಕೈಕಂ - ಪ್ರತ್ಯೇಕ ಪ್ರತ್ಯೇಕವಾಗಿ, ಮಮ - ನನ್ನ, ಯಾವದಾಗಮನಂ - ಬರುವಪರಿಯಂತವೂ, ಅಶೂನ್ಯಂ - ಸಂಪೂರ್ಣವಾದುದಂತೆ, ಕಾರ್ಯಂ - ಮಾಡತಕ್ಕದು, ಇತಿ - ಈಪರಿಯಾಗಿ, ದುಃಖಿತಂ - ದುಃಖಗೊಂಡಿರುವ, ಉಪಜೀವಿನಂ - ಸೇವಕ ರಾದ, ಸರ್ವಂಜನಂ - ಸಮಸ್ತ ಜನವನ್ನೂ ಕುರಿತು, ಉಕ್ತ್ವಾ - ಹೇಳಿ, ಧನಾಧ್ಯಕ್ಷಂ - ಧನಪತಿ

ಯಿಸಿಕೊಂಡಿರುವರು. ಅವರೆಲ್ಲರಿಗೂ ಸಾವಿರ ಸಾವಿರ ಗೋವುಗಳನ್ನು ಕೊಡುವವನಾಗು. ನನ್ನ ಜನನಿಯಾದ ಆ ದೇವಿಯು ನಾನಿತ್ತ ದಕ್ಷಿಣೆಯನು ನೋಡಿ ಸಂತೋಷಿಸುವ ಹಾಗೆ ಬ್ರಾಹ್ಮಣರೆಲ್ಲರಿಗೂ ದಕ್ಷಿಣೆಗಳನ್ನಿತ್ತು ಪೂಜಿಸುವವನಾಗು'' ಎಂದು ನುಡಿದವನಾದನು. ಆಗ ಪುರುಷಶ್ರೇಷ್ಠನಾದ ಲಕ್ಷ್ಮಣನು ತಾನೇ ಆ ಧನವನ್ನು ತೆಗೆದುಕೊಂಡು ಅಣ್ಣನಾದ ಶ್ರೀರಾ ಮನು ಹೇಳಿದಂತೆ ವಿಪ್ರವರೇಣ್ಯರೆಲ್ಲರಿಗೂ ದಾನಮಾಡಿದವನಾದನು. ॥೨೧-೨೩॥ ಆ ಬಳಿಕ ಶ್ರೀರಾಮನು ತನ್ನವನವಾಸವನ್ನುಕುರಿತು ಕಂಬನಿದುಂಬಿ ವಿಸ್ವರಕಂಠವುಳ್ಳ ಸೇವಕರಲ್ಲಿ ಪ್ರತಿ

ಜನಂ ತಮುಪಜೀವಿನಂ ‖ ೨೬ ‖ ಉವಾಚೇದಂ ಧನಾಧ್ಯಕ್ಷಂ ಧನಮಾನೀಯತಾಮಿತಿ ‖ ೨೬ ‖ ತತೋಽಸ್ಯ ಧನಮಾಜಹ್ರುಸ್ಸರ್ವಮೇವೋಪಜೀವಿನಃ ‖ ೨೭ ‖ ಸರಾಶಿಸ್ಸುಮಹಾಂಸ್ತತ್ರ ದರ್ಶನೀಯೋ ಹ್ಯದೃಶ್ಯತ ‖ ೨೭ ‖ ತತಸ್ಸ ಪುರುಷವ್ಯಾಘ್ರಸ್ತದ್ಧನಂ ಸಹಲಕ್ಷ್ಮಣಃ ‖ ದ್ವಿಜೇಭ್ಯೋ ಬಾಲವೃದ್ಧೇಭ್ಯಃ ಕೃಪಣೇಭ್ಯೋಽಹ್ಯದಾಪಯತ್ ‖ ೨೮ ‖ ತತ್ರಾಸೀತ್ಪಿಂಗಲೋ ಗಾರ್ಗ್ಯಸ್ತ್ರಿಜಟೋ ನಾಮ ವೈ ದ್ವಿಜಃ ‖ ಉಞ್ಛವೃತ್ತಿರ್ವನೇ ನಿತ್ಯಂ ಫಾಲಕುದ್ದಾಲಲಾಂಗಲೀ ‖ ೨೯ ‖ ತಂ ವೃದ್ಧಂ ತರುಣೀ ಭಾರ್ಯಾ ಬಾಲಾನಾದಾಯ

ಯನ್ನು ಕುರಿತು, ಧನಂ - ದ್ರವ್ಯವು, ಆನೀಯತಾಮಿತಿ - ತರಲ್ಪಡಲೆಂದು, ಇದಂ - ಈ ಮಾತನ್ನು, ಉವಾಚ - ಹೇಳಿದನು. ‖ ೨೬ ‖ ತತಃ - ಬಳಿಕ, ಉಪಜೀವಿನಃ - ಚಾಕರರು, ಅಸ್ಯ - ಈ ಶ್ರೀರಾಮನಿಗೆ, ಸರ್ವಮೇವ - ಸಮಸ್ತವಾದ, ಧನಂ - ಧನವನ್ನು, ಆಜಹ್ರುಃ - ತೆಗೆದುಕೊಂಡು ಬಂದರು. ‖ ೨೭ ‖ ಸುಮಹಾನ್-ಬಹಳವಾದ, ಸರಾಶಿಃ - ಆ ಧನರಾಶಿಯು, ತತ್ರ - ಆ ಮನೆಯಲ್ಲಿ, ದರ್ಶನೀಯಃ-ನೋಡತಕ್ಕದಾಗಿ, ಅದೃಶ್ಯತಹಿ - ಕಾಣಲ್ಪಟ್ಟಿತಷ್ಟೆ. ‖ ೨೭ ‖ ತತಃ-ಬಳಿಕ, ಪುರುಷವ್ಯಾಘ್ರಃ-ಪುರುಷಶ್ರೇಷ್ಠನಾದ, ಸಃ - ಆ ಶ್ರೀರಾಮನು, ಸಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿ, ತದ್ಧನಂ - ಆ ಧನವನ್ನು, ಬಾಲವೃದ್ಧೇಭ್ಯಃ - ಬಾಲರೂ ವೃದ್ಧರೂ, ಕೃಪಣೇಭ್ಯಃ - ದರಿದ್ರರೂ ಆದ, ದ್ವಿಜೇಭ್ಯಃ - ಬ್ರಾಹ್ಮಣರಿಗೆ, ಅದಾಪಯದ್ಧಿ - ಕೊಡಿಸಿದನಷ್ಟೆ. ‖ ೨೮ ‖ ತತ್ರ - ಆ ಕಾಲದಲ್ಲಿ, ಪಿಂಗಳಃ - ಕೆಂಪಾದ ಕೇಶಗಳುಳ್ಳ, ಗಾರ್ಗ್ಯಃ - ಗರ್ಗಋಷಿಯ ವಂಶೋತ್ಪನ್ನನಾದ, ತ್ರಿಜಟೋ ನಾಮ - ತ್ರಿಜಟನೆಂದು ಪ್ರಸಿದ್ಧನಾದ, ದ್ವಿಜಃ - ಬ್ರಾಹ್ಮಣನು, ಉಂಛವೃತ್ತಿಃ, ಉಂಛ-ಒಂದೊಂದು ಕಾಳಾಗಿ ಆರಿಸಿದ ಧಾನ್ಯದಿಂದ, ವೃತ್ತಿಃ - ಜೀವನವುಳ್ಳವನಾಗಿ, ವನೇ - ವನದಲ್ಲಿ, ನಿತ್ಯಂ-ನಿರಂತರವೂ, ಫಾಲಕುದ್ದಾಲಲಾಂಗಲೀ, ಫಾಲ - ಗೊಡ್ಲಿ, ಕುದ್ದಾಲ - ಗುದ್ದಲಿ, ಲಾಂಗಲೀ - ದೋಟಿ ಎಂಬ ಆಯುಧಗಳುಳ್ಳವನಾಗಿ, ಆಸೀತ್ - ಇದ್ದನು. ‖ ೨೯ ‖ ವೃದ್ಧಂ - ವೃದ್ಧನಾದ, ತಂ

ಯೊಬ್ಬರಿಗೂ, ಜೀವಿಕೆಗಾಗಿ ಬಹು ದ್ರವ್ಯವನಿತ್ತು, "ಎಲೈ ಸೇವಕರಿರಾ! ಲಕ್ಷ್ಮಣನ ಮತ್ತು ನನ್ನ ಮನೆಗಳನ್ನು ಯಾರೂ ಇಲ್ಲದಂತೆ ಮಾಡದೆ ನಾನು ಹಿಂತಿರುಗಿ ಬರುವವರೆವಿಗೆ ಪ್ರತಿಯೊಬ್ಬರೂ ಕಾದುಕೊಂಡಿರುವವರಾಗಿರಿ" ಎಂದು ಆಜ್ಞಾಪಿಸಿ, ಆ ಬಳಿಕ ಕೋಶಾಧಿಪತಿಯನ್ನು ಕುರಿತು ಧನವನ್ನುತಾರೆಂದು ಆಜ್ಞಾಪಿಸಿದನು. ಆಗಲಾ ಸೇವಕರು ಭಂಡಾರದ ಧನವೆಲ್ಲವನ್ನೂ ತಂದು ಆತನ ಮುಂದೆ ಸುರಿಯಲು, ಅದು ದೊಡ್ಡರಾಶಿಯಾಗಿ, ನೋಡಲು ಬಹು ರಮ್ಯವಾಗಿದ್ದಿತು. ಬಳಿಕ ಪುರುಷೋತ್ತಮನಾದ ಶ್ರೀರಾಮಮೂರ್ತಿಯು ಲಕ್ಷ್ಮಣನೊಡಗೂಡಿ ಆ ಧನವೆಲ್ಲವನ್ನೂ ಆಬಾಲವೃದ್ಧರಿಗೂ, ದರಿದ್ರರಿಗೂ, ವಿಪ್ರರಿಗೂ ದಾನಮಾಡಿದವನಾದನು. ‖ ೨೬-೨೮ ‖ ಇದೇ ಸಮಯದಲ್ಲಿ ಕೆಂಗೂದಲುಗಳುಳ್ಳವನಾಗಿ, ಗರ್ಗಋಷಿಯ ಮನೆತನದಲ್ಲಿ ಜನಿಸಿದ ತ್ರಿಜಟನೆಂಬ ವಿಪ್ರೋತ್ತಮನೊಬ್ಬನಿದ್ದನು. ಯುವತಿಯಾದ ಆತನ ಹೆಂಡತಿಯು ವೃದ್ಧಪತಿಯಾದ ಆತನನ್ನು ಕುರಿತು, ದಾರಿದ್ರ್ಯದಿಂದ ಬಾಧಿತ

ದಾರಕಾನ್ ॥ ಅಬ್ರವೀ ದ್ಬ್ರಾಹ್ಮಣಂ ವಾಕ್ಯಂ ದಾರಿದ್ರ್ಯೇಣಾಭಿಪೀಡಿತಾ॥೩೦॥
ಅಪಾಸ್ಯ ಫಾಲಂ ಕುದ್ದಾಲಂ ಕುರುಷ್ವ ವಚನಂ ಮಮ ॥ ರಾಮಂ ದರ್ಶಯ
ಧರ್ಮಜ್ಞಂ ಯದಿ ಕಿಂಚಿದವಾಪ್ಸ್ಯಸಿ ॥೩೧॥ ಸ ಭಾರ್ಯಾ ವಚನಂ
ಶ್ರುತ್ವಾ ಶಾಟೀ ಮಾಚ್ಛಾದ್ಯ ದುಶ್ಛದಾಂ ॥ ಸಪ್ರಾತಿಷ್ಠತ ಪಂಥಾನಂ ಯತ್ರ
ರಾಮನಿವೇಶನಂ ॥೩೨॥ ಭೃಗ್ವಂಗಿರಸ್ಸಮಂ ದೀಪ್ತ್ಯಾ ತ್ರಿಜಟಂ ಜನ
ಸಂಸದಿ ॥ ಆಪಂಚಮಾಯಾಃ ಕಕ್ಷ್ಯಾಯಾ ನೈನಂ ಕಶ್ಚಿದವಾರಯತ್ ॥೩೩॥
ಸರಾಜಪುತ್ರಮಾಸಾದ್ಯ ತ್ರಿಜಟೋ ವಾಕ್ಯಮಬ್ರವೀತ್ ॥ ನಿರ್ಧನೋ ಬಹು

ಬ್ರಾಹ್ಮಣಂ-ಆ ಬ್ರಾಹ್ಮಣನನ್ನು ಕುರಿತು, ದಾರಿದ್ರ್ಯೇಣ-ಬಡತನದಿಂದ, ಅಭಿಪೀಡಿತಾ-ವಿಶೇಷವಾಗಿ ಬಾಧಿಸಲ್ಪಟ್ಟ, ತರುಣೀ - ತಾರುಣ್ಯವುಳ್ಳ, ಭಾರ್ಯಾ - ಹೆಂಡತಿಯು, ಬಾಲಾನ್ - ಹುಡುಗರಾದ, ದಾರಕಾನ್ - ಮಕ್ಕಳನ್ನು, ಆದಾಯ - ಕರೆದುಕೊಂಡುಬಂದು, ವಾಕ್ಯಂ - ಮಾತನ್ನು, ಅಬ್ರವೀತ್- ನುಡಿದಳು. ॥೩೦॥ ಫಾಲಂ - ಗೊಡ್ಲಿಯನ್ನು, ಕುದ್ದಾಲಂ-ಗುದ್ದಲಿಯನ್ನು, ಅಪಾಸ್ಯ-ಬಿಸಟು, ಮಮ - ನನ್ನ, ವಚನಂ - ಮಾತನ್ನು, ಕುರುಷ್ವ - ನಡೆಯಿಸು, ಧರ್ಮಜ್ಞಂ - ಧರ್ಮಜ್ಞನಾದ, ರಾಮಂ - ಶ್ರೀರಾಮನನ್ನು, ದರ್ಶಯಯದಿ - ಮಕ್ಕಳುಸಹಿತವಾಗಿ ನಿನ್ನನ್ನು ತೋರಿಸಿಕೊಂಡವನಾದರೆ, ಕಿಂಚಿತ್ - ಏನಾದರೂ ದ್ರವ್ಯವನ್ನು, ಅವಾಪ್ಸ್ಯಸಿ - ಹೊಂದುವೆ. ॥೩೧॥ ಸಃ - ಆ ಬ್ರಾಹ್ಮಣನು, ಭಾರ್ಯಾವಚನಂ - ಹೆಂಡತಿಯ ಮಾತನ್ನು, ಶ್ರುತ್ವಾ - ಕೇಳಿ, ದುಶ್ಛದಾಂ - ಹೊದಿಯುವದಕ್ಕೆ ಅನರ್ಹವಾದ, (ಹರಕಾದ) ಶಾಟೀಂ-ಬಟ್ಟೆಯನ್ನು, ಆಚ್ಛಾದ್ಯ-ಹೊದ್ದುಕೊಂಡು, ಯತ್ರ - ಯಾವ ಸ್ಥಳದಲ್ಲಿ, ರಾಮನಿವೇಶನಂ - ರಾಮನ ಅರಮನೆಯು, ಅಸ್ತಿ - ಇರುವುದೋ, ತತ್ರ - ಆ ಪ್ರದೇಶದ, ಪಂಥಾನಂ - ಮಾರ್ಗದಲ್ಲಿ, ಪ್ರಾತಿಷ್ಠತ - ಹೊರಟನು. ॥೩೨॥ ದೀಪ್ತ್ಯಾ - ತೇಜಸ್ಸಿನಿಂದ, ಭೃಗ್ವಂಗಿರಸ್ಸಮಂ - ಭೃಗು ಋಷಿಗೂ ಅಂಗಿರಸ್ಸೆಂಬ ಋಷಿಗೂ ಸಮಾನನಾದ, ಏನಂತ್ರಿಜಟಂ - ಈ ತ್ರಿಜಟನೆಂಬ ಬ್ರಾಹ್ಮಣನನ್ನು, ಜನಸಂಸದಿ - ಜನ ಸಂಘದಲ್ಲಿ, ಆಪಂಚಮಾಯಾಃಕಕ್ಷ್ಯಾಯಾಃ - ಮನೆಯ ಐದನೇ ತೊಟ್ಟಿಯವರಿವಿಗೂ, ಕಶ್ಚಿತ್ - ಯಾವನೊಬ್ಬನೂ, ನಾವಾರಯತ್ - ತಡೆಮಾಡಲಿಲ್ಲ. ॥೩೩॥ ಸತ್ರಿಜಟಃ - ಆ ತ್ರಿಜಟನು ರಾಜಪುತ್ರಂ - ರಾಜಕುವರನಾದ ಶ್ರೀರಾಮನನ್ನು, ಆಸಾದ್ಯ - ಹೊಂದಿ, ಹೇ ರಾಜಪುತ್ರ - ಎಲೈ ರಾಜನಮಗನೇ, ಹೇ ಮಹಾಯಶಃ - ಎಲೈ ಮಹಾ ಕೀರ್ತಿವಂತನೇ, ಅಹಂ - ನಾನು,

---

ಳಾಗಿ " ಓ ಪ್ರಾಣನಾಥನೆ ! ಆಲಿಸು; ಈ ಗುದ್ದಲಿ ಪಿಕಾಸಿಗಳನ್ನು ತೆಗೆದೊಗೆದು ಶ್ರೀರಾಮಮೂರ್ತಿಯನ್ನು ಈ ಸಂದರ್ಭದಲ್ಲಿ ಕಾಣುವೆಯಾದರೆ ಆತನು ನಮ್ಮ ದರಿದ್ರವು ನೀಗುವಂತೆ ಏನನ್ನಾದರೂ ಕೊಡುತ್ತಾನೆ." ಎಂದು ಹೇಳಿದಳು. ಆಗ ಮಹಾ ಕೀರ್ತಿವಂತನಾದ ಆ ತ್ರಿಜಟನು ಹರಕು ಬಟ್ಟೆಯನ್ನುಟ್ಟು ಶ್ರೀರಾಮನರಮನೆಗೆ ಬಂದವನಾದನು. ಭೃಗ್ವಂಗಿರಸ್ಸುಗಳಂತೆ ಮಹಾ ತೇಜಸ್ವಿಯಾದ ಆ ತ್ರಿಜಟಮುನಿಯನ್ನು ನೋಡಿ ಆ ಜನಸಮೂಹದಲ್ಲಿ ಐದನೆಯ ತೊಟ್ಟಿಯವರೆವಿಗೆ ಯಾರೂ ತಡೆಯಲಿಲ್ಲ. ಆಗಲಾತನು ಶ್ರೀರಾಮನನ್ನು ಕಂಡು "ಎಲೈ ಕೀರ್ತಿವಂತನಾದ ಶ್ರೀರಾಮಚಂದ್ರನೆ ! ನಾನು ಬಹು ಮಕ್ಕಳೊಂದಿಗ; ಮಹಾ ದರಿದ್ರನಾಗಿ

ಪುತ್ರೋಽಸ್ಮಿ ರಾಜಪುತ್ರ ಮಹಾಯಶಃ ॥ ಉಂಛವೃತ್ತಿರ್ವನೇನಿತ್ಯಂ ಪ್ರತ್ಯವೇಕ್ಷಸ್ವ ಮಾಮಿತಿ ॥ ೩೯ ॥ ತಮುವಾಚ ತತೋ ರಾಮಃ ಪರಿಹಾಸ ಸಮನ್ವಿತಂ ॥ ಗವಾಂ ಸಹಸ್ರಮಪ್ಯೇಕಂ ನತು ವಿಶ್ರಾಣಿತಂ ಮಯಾ ॥ ಪರಿಕ್ಷಿಪಸಿ ದಂಡೇನ ಯಾವತ್ತಾವದವಾಪ್ಸ್ಯಸಿ ॥ ೩೬ ॥ ಸ ಶಾಟೀಂ ತ್ವರಿತಃ ಕಟ್ಯಾಂ ಸಂಭ್ರಾಂತಃ ಪರಿವೇಷ್ಟ್ಯತಾಂ ॥ ಆವಿಧ್ಯ ದಂಡಂ ಚಿಕ್ಷೇಪ ಸರ್ವಪ್ರಾಣೇನ ವೇಗಿತಃ ॥ ೩೭ ॥ ಸತೀರ್ತ್ವಾ ಸರಯೂಪಾರಂ ದಂಡಸ್ತಸ್ಯ ಕರಾಚ್ಚ್ಯುತಃ ॥

ಬಹುಪುತ್ರಃ - ಬಹು ಮಕ್ಕಳುಳ್ಳವನು, ನಿರ್ಧನಃ - ಧನಹೀನನು, ನಿತ್ಯಂ - ನಿರಂತರವೂ, ವನೇ - ವನದಲ್ಲಿ, ಉಂಛವೃತ್ತಿಃ - ಒಂದೊಂದುಕಾಳನ್ನೇ ಆದುಕೊಂಡು ಜೀವನವಮಾಡುವನು, ಅಸ್ಮಿ - ಆಗಿರುವೆನು, ಮಾಂ - ನನ್ನನ್ನು, ಪ್ರತ್ಯವೇಕ್ಷಸ್ವ - (ಗೋ) ಕಟಾಕ್ಷಿಸಿನೋಡು, ಇತಿ- ಇಂತೆಂಬ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೩೪-೩೫ ॥ ತತಃ - ಬಳಿಕ, ರಾಮಃ - ಶ್ರೀರಾಮನು, ತಂ - ಆ ತ್ರಿಜಟನನ್ನು ಕುರಿತು, ಮಯಾ - ನನ್ನಿಂದ, ಗವಾಂ - ಆಕಳುಗಳ, ಏಕಂ ಸಹಸ್ರಮಪಿ - ಒಂದುಸಹಸ್ರವೂ ಕೂಡ, ನವಿಶ್ರಾಣಿತಂ - ಕೊಡಲ್ಪಡಲಿಲ್ಲ, ತತ್ - ಆ ಕಾರಣ, ದಂಡೇನ - ದಂಡದಿಂದ, ಯಾವತ್ - ಎಷ್ಟುಪರಿಯಂತರವೂ, ಪರಿಕ್ಷಿಪಸಿ - ಎತ್ತಿಹಾಕುವೆಯೋ, ತಾವತ್ - ಅಷ್ಟುಪರಿಯಂತವೂ ಇರುವ, (ಗೋವುಗಳ ಗುಂಪನ್ನು,) ಅವಾಪ್ಸ್ಯಸಿ - ಹೊಂದುವೆ, ಇತಿ - ಇಂತೆಂದು, ಪರಿಹಾಸಸಮನ್ವಿತಂ - ಅಪಹಾಸ್ಯದಿಂದ ಕೂಡಿದ ಮಾತನ್ನು, ಉವಾಚ - ಹೇಳಿದನು. ॥ ೩೬ ॥ ಸಃ - ಆ ಬ್ರಾಹ್ಮಣನು, ತ್ವರಿತಂ - ಜಾಗ್ರತೆಯಾಗಿ, ಕಟ್ಯಾಂ - ಕಟಿಪ್ರದೇಶದಲ್ಲಿ, ತಾಂಶಾಟೀಂ - ಆ ಶಾಟಿಯನ್ನು, ಪರಿವೇಷ್ಟ್ಯ - ಸುತ್ತಿಕೊಂಡು, ಸಂಭ್ರಾಂತಃ - ಸುತ್ತುತಿರುಗಿದವನಾಗಿ, ದಂಡಂ - ಕೋಲನ್ನು, ಆವಿಧ್ಯ - ತಿರುಗಿಸಿ, ಸರ್ವಪ್ರಾಣೇನ - ಸಮಸ್ತ ತ್ರಾಣೆಯಿಂದ, ವೇಗಿತಃ - ವೇಗವುಳ್ಳವನಾಗಿ, ಚಿಕ್ಷೇಪ - ಎಸೆದನು. ॥ ೩೭ ॥ ಸದಂಡಃ - ಆ ದಂಡವು, ತಸ್ಯ - ಆ ತ್ರಿಜಟನ, ಕರಾತ್ - ಕೈಯಿಂದ, ಚ್ಯುತಃ - ಜಾರಿ, ಸರಯೂಪಾರಂ - ಸರಯೂನದಿಯ ತೀರವನ್ನು, ತೀರ್ತ್ವಾ - ದಾಂಟಿ, ಬಹುಸಾಹಸ್ರೇ - ಅನೇಕ ಸಹಸ್ರಗಳಾದ, ಗೋವ್ರಜೇ - ಗೋವುಗಳ ಗುಂಪಿನಲ್ಲಿ, ಉಕ್ಷಣಸನ್ನಿಧೌ - ವೃಷಭಗಳ ಸಮೀಪದಲ್ಲಿ, ಪಪಾತ -

---

ದ್ದೇನೆ; ಉಂಛವೃತ್ತಿಯನ್ನವಲಂಬಿಸಿ ಅರಣ್ಯದಲ್ಲಿ ವಾಸ ಮಾಡಿಕೊಂಡಿರುವೆನು. ಈಗ ವೃದ್ಧನಾಗಿರುವೆನಾದುದರಿಂದ ಆ ವೃತ್ತಿಯೂ ಕಷ್ಟವಾಗಿರುವುದು. ನನ್ನನ್ನು ನೋಡು" ಎಂದು ಹೇಳಿದನು. ಆಗಲಾ ರಘುನಂದನನು ಪರಿಹಾಸದಿಂದಾ ವಿಪ್ರನನ್ನು ಕುರಿತು, "ಬ್ರಾಹ್ಮಣೋತ್ತಮ! ಇತ್ತ ನೋಡು: ಸಹಸ್ರ ಗೋವುಗಳಿರುವುವು; ಇದರಲ್ಲಿ ಒಂದನ್ನೂ ದಾನ ಮಾಡಿಲ್ಲ. ನೀನು ದಂಡವನ್ನು ತೆಗೆದುಕೊಂಡು ಅವುಗಳ ಕಡೆಗೆ ಎಸೆಯುವವನಾಗು. ಅದು ಎಷ್ಟು ದೂರದವರೆವಿಗೆ ಹೋಗುವುದೋ ಅಷ್ಟು ಪರ್ಯಂತವಿರುವ ಗೋವುಗಳನ್ನು ನೀನೇ ತೆಗೆದುಕೊಳ್ಳುವವನಾಗು" ಎಂದನು. ಶ್ರೀರಾಮನಿಂತೆನಲು ಆ ತ್ರಿಜಟ ಮುನಿಯು ಬಲು ಜಾಗ್ರತೆಯಾಗಿ ಬಟ್ಟೆಯನ್ನು ಬಿಗಿದು ಕಟ್ಟಿ, ದಂಡವನ್ನು ಗರ್ರನೆ ತಿರುಹಿ ಶಕ್ತಿಯನ್ನೆಲ್ಲ ಬಿಟ್ಟು ಎಸೆಯಲು ಅದು ಸರಯೂ ನದಿಯನ್ನು ದಾಂಟ

ಗೋವ್ರಜೇ ಬಹು ಸಾಹಸ್ರೇ ಪಪಾತೋಕ್ಷಣಸನ್ನಿಧೌ ॥ ೩೮ ॥ ತಂ ಪರಿಷ್ವಜ್ಯ ಧರ್ಮಾತ್ಮಾ ಆತಸ್ಮಾತ್ಸರಯೂತಟಾತ್ ॥ ಆನಯಾಮಾಸ ತಾಗೋಪೈಸ್ತ್ರಿಜಟಾಯಾಶ್ರಮಂ ಪ್ರತಿ ॥ ೩೯ ॥ ಉವಾಚಚ ತತೋ ರಾಮಸ್ತಂ ಗಾರ್ಗ್ಯಮಭಿಸಾಂತ್ವಯನ್ ॥ ಮನ್ಯುರ್ನಖಲು ಕರ್ತವ್ಯಃ ಪರಿಹಾಸೋಹ್ಯಯಂ ಮಮ॥ ಇದಂಹಿ ತೇಜಸ್ತವ ಯದ್ದುರತ್ಯಯಂ ತದೇವ ಜಿಜ್ಞಾಸಿತುಮಿಚ್ಛತಾ ಮಯಾ॥ ಇಮಂಭವಾ ನರ್ಥಮಭಿಪ್ರಚೋದಿತೋ ವೃಣೀಷ್ವ ಕಿಂಚೇದಪರಂ ವ್ಯವಸ್ಯತಿ ॥ ಬ್ರವೀಮಿ ಸತ್ಯೇನ ನತೇಽಸ್ತಿ ಯಂತ್ರಣಾ ಧನಂಹಿ ಯದ್ಯನ್ಮಮ ವಿಪ್ರಕಾರ

ಬಿದ್ದಿತು. ॥ ೩೮ ॥ ಧರ್ಮಾತ್ಮಾ - ಧರ್ಮಿಷ್ಠನಾದ ಶ್ರೀರಾಮನು, ತಂ - ಆ ಬ್ರಾಹ್ಮಣನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಆತಸ್ಮಾತ್ಸರಯೂತಟಾತ್ - ಆ ಸರಯೂನದಿಯ ತೀರದಪರಿಯಂತವೂ, ತಾಃ - ಆ ಆಕಳುಗಳನ್ನು, ತ್ರಿಜಟಾಯ - ತ್ರಿಜಟನಿಗೋಸುಗ, ಆಶ್ರಮಂಪ್ರತಿ - ಆಶ್ರಮವನ್ನು ಕುರಿತು, ಗೋಪೈಃ - ಗೋಪಾಲಕರಿಂದ, ಆನಯಾಮಾಸ - ಕಳುಹಿಕೊಟ್ಟನು. ॥ ೩೯ ॥ ತತಃ - ಬಳಿಕ, ರಾಮಃ - ಶ್ರೀರಾಮನು, ಗಾರ್ಗ್ಯಂ - ಗರ್ಗವಂಶೋತ್ಪನ್ನನಾದ, ತಂ - ಆ ತ್ರಿಜಟನನ್ನು, ಅಭಿಸಾಂತ್ವ್ಯ - ಸಮಾಧಾನಗೊಳಿಸಿ, ಹಿ - ಯಾವ ಕಾರಣ, ಮಮ - ನನ್ನ, ಅಯಂ - ಈ ಮಾತು, ಪರಿಹಾಸಃ - ಪರಿಹಾಸವೋ, ತಸ್ಮಾತ್ - ಆ ಕಾರಣ, ಮನ್ಯುಃ - ಕೋಪವು, ನಕರ್ತವ್ಯಃಖಲು - ಮಾಡತಕ್ಕುದಲ್ಲವಷ್ಟೆ. ॥ ೪೦ ॥ ಹಿ - ಯಾವ ಕಾರಣ, ತೇ - ನಿನ್ನ, ಯತ್ತೇಜಃ- ಯಾವ ಶಕ್ತಿಯು, ದುರತ್ಯಯಂ - ಅತಿಕ್ರಮಿಸಲಸಾಧ್ಯವಾದುದೋ, ತದಿದಮೇವ - ಈ ಸಾಮರ್ಥ್ಯವನ್ನೇ, ಜಿಜ್ಞಾಸಿತುಂ - ತಿಳಿದುಕೊಳ್ಳುವದಕ್ಕೆ, ಇಚ್ಛತಾ - ಅಪೇಕ್ಷಿಸುತ್ತಿರುವ, ಮಯಾ - ನನ್ನಿಂದ, ಭವಾ - ನೀನು, ಇಮಮರ್ಥಂ - ಈ ದಂಡಪ್ರಕ್ಷೇಪಣ ರೂಪಾರ್ಥವನ್ನು ಕುರಿತು, ಅಭಿಪ್ರಚೋದಿತಃ - ಪ್ರೇರೇಪಿಸಲ್ಪಟ್ಟೆ, ಕಿಂಚ - ಇಷ್ಟುಮಾತ್ರವಲ್ಲ, ಅಪರಂ - ಮತ್ತೊಂದಾದ, ಕಿಂ - ಯಾವದನ್ನಾದರೂ, ವ್ಯವಸ್ಯತಿಚೇತ್-ಅಪೇಕ್ಷೆಯುಳ್ಳವನಾದರೆ, ತತ್-ಅದನ್ನು, ವೃಣೀಷ್ವ - ಬೇಡಿಕೋ. ॥ ೪೧ ॥ ಸತ್ಯೇನ - ಯಥಾರ್ಥದಿಂದ, ಬ್ರವೀಮಿ - ಹೇಳುತ್ತೇನೆ, ಹಿ - ಯಾವ ಕಾರಣದಿಂದ, ಮಮ - ನನ್ನ; ಧನಂ - ಧನವು, ಯತ್ - ಯಾವದೋ, ತತ್ - ಅದು, ವಿಪ್ರಕಾರಣಾತ್ - ಬ್ರಾಹ್ಮಣರ ನಿಮಿತ್ತವಾಗಿಯೇ, ಅತಃ - ಈ ಕಾರಣ, ತೇ - ನಿನಗೆ, ಯಂತ್ರಣಾ -

ಗೋ ಸಮೂಹದಲ್ಲಿರುವ ಎತ್ತುಗಳ ಬಳಿಯಲ್ಲಿ ಬಿದ್ದಿತು. ॥ ೩೮ ॥ ಆಗ ಧರ್ಮಾತ್ಮನಾದ ಶ್ರೀರಾಮನು ಆತನನ್ನಾಲಿಂಗಿಸಿಕೊಂಡು ಸರಯೂ ತೀರದವರೆವಿಗೂ ನಿಂತಿದ್ದ ಆ ಗೋ ವೃಂದವನ್ನು ಗೋಪಾಲಕರಿಂದ ತರಿಸಿ ಆತನಮನೆಗೆ ಕಳುಹಿ ಆತನನ್ನು ಸಮಾಧಾನಗೊಳಿಸಿ, “ ಎಲೈ ಋಷಿ ಶ್ರೇಷ್ಠನೆ ! ನಾನು ಪರಿಹಾಸವನ್ನು ಮಾಡಿದೆನೇ ಹೊರ್ತು ಮತ್ತೇನೂ ಇಲ್ಲ. ಆದುದರಿಂದ ನೀನು ಕೋಪಗೊಳ್ಳಬೇಡ. ಅಪಾರವಾದ ನಿನ್ನ ಸತ್ವವನ್ನರಿಯಲು ಈ ಕೆಲಸವನ್ನು ಮಾಡಿಸಿದೆನು. ನಿನಗಿನ್ನೇನು ಬೇಕೋ ಅದನ್ನು ಕೇಳುವವನಾಗು. ಈ ವಿಷಯದಲ್ಲಿ ಸಂಕೋಚಪಡಬೇಡ. ನಿಜವಾಗಿ ನನ್ನ ಧನವೆಲ್ಲವೂ ಬ್ರಾಹ್ಮಣರಿಗೋಸುಗವಾಗಿಯೇ ಇರುವುದು. ನಿನ್ನಂತಹ ಸತ್ಪಾತ್ರರಾದವ

ಣಾತ್ ॥ ಭವತ್ಸು ಸಮ್ಯಕ್ಪ್ರತಿಪಾದನೇನ ತನ್ಮಯಾರ್ಜಿತಂ ಪ್ರೀತಿಯಶಸ್ಕರಂ ಭವೇತ್ ॥ ೪೨ ॥ ತತಸ್ಸಭಾರ್ಯಃ ತ್ರಿಜಟೋ ಮಹಾಮುನಿ ರ್ಗವಾಮನೀಕಂ ಪ್ರತಿಗೃಹ್ಯ ಮೋದಿತಃ ॥ ಯಶೋ ಬಲಪ್ರೀತಿ ಸುಖೋಪಬೃಂಹಿಣೀ ಸ್ತದಾಶಿಷಃ ಪ್ರತ್ಯವದ ನ್ಮಹಾತ್ಮನಃ ॥ ೪೩ ॥ ಸಚಾಪಿ ರಾಮಃ ಪ್ರತಿಪೂರ್ಣಮಾನಸೋ ಮಹದ್ಧನಂ ಧರ್ಮಬಲೈ ರುಪಾರ್ಜಿತಂ ॥ ನಿಯೋಜಯಾಮಾಸ ಸುಹೃಜ್ಜನೇ ಚಿರಾದ್ಯಥಾರ್ಹ ಸಂಮಾನವಚಃ ಪ್ರಚೋದಿತಃ ॥ ೪೪ ॥

ದ್ವಿಜಸ್ಸುಹೃದ್ಭೃತ್ಯ ಜನೋಥವಾ ತದಾ
ದರಿದ್ರಭಿಕ್ಷಾಚರಣಶ್ಚ ಯೋಭವೇತ್ ॥

ಸಂಕೋಚವು, ನಾಸ್ತಿ - ಆಗಬೇಡ, ಭವತ್ಸು - ನಿಮ್ಮಂತಹರಿಗೆ, ಸಮ್ಯಕ್ - ಚನ್ನಾಗಿ, ಪ್ರತಿಪಾದನೇನ - ಕೊಡುವುದರಿಂದ, ಮಯಾ - ನನ್ನಿಂದ, ಆರ್ಜಿತಂ - ಸಂಪಾದಿಸಲ್ಪಟ್ಟ, ತತ್ - ಆ ಧನವು, ಪ್ರೀತಿಯಶಸ್ಕರಂ - ಪ್ರೀತಿಕರವಾಗಿಯೂ ಯಶಸ್ಕರವಾಗಿಯೂ, ಭವೇತ್ - ಆಗುವದು. ॥ ೪೨ ॥ ತತಃ - ಬಳಿಕ, ತ್ರಿಜಟಃ - ತ್ರಿಜಟನೆಂಬ, ಮಹಾಮುನಿಃ - ಮಹಾ ಮುನಿಯು, ಸಭಾರ್ಯಃ - ಹೆಂಡತಿಯರಿಂದೊಡಗೂಡಿ, ಗವಾಂ - ಗೋವುಗಳ, ಅನೀಕಂ - ಗುಂಪನ್ನು, ಪ್ರತಿಗೃಹ್ಯ - ತೆಗದುಕೊಂಡು, ಮೋದಿತಃ - ಸಂತೋಷಿಸಿ, (ಗೋ) ತೃಪ್ತನಾಗಿ, ಮಹಾತ್ಮನಃ - ಮಹಾ ಮನಸ್ವಿಯಾದ ಶ್ರೀರಾಮನಿಗೆ, ಯಶೋಬಲಪ್ರೀತಿಸುಖೋಪಬೃಂಹಣೀಃ, ಯಶಃ - ಕೀರ್ತಿಯನ್ನು, ಬಲ - ದೇಹತ್ರಾಣವನ್ನು, ಪ್ರೀತಿ - ಸಂತೋಷವನ್ನು, ಸುಖ - ಸುಖವನ್ನು, ಉಪಬೃಂಹಣೀಃ - ವೃದ್ಧಿಗೊಳಿಸುತಿರುವ, ಆಶಿಷಃ - ಆಶೀರ್ವಾದವನ್ನು, ಪ್ರತ್ಯವದತ್ - ಹೇಳಿದನು. ॥ ೪೩ ॥ ಸರಾಮಶ್ಚಾಪಿ - ಆ ಶ್ರೀರಾಮನೂ ಕೂಡ, ಪ್ರತಿಪೂರ್ಣಮಾನಸಃ, ಪ್ರತಿಪೂರ್ಣ - ತುಂಬಿದ, ಮಾನಸಃ - ಮನವುಳ್ಳವನಾಗಿ, ಧರ್ಮಬಲೈಃ - ಧರ್ಮಪ್ರಯುಕ್ತ ಪರಾಕ್ರಮಗಳಿಂದ, ಉಪಾರ್ಜಿತಂ- ಸಂಪಾದಿಸಲ್ಪಟ್ಟ, ಮಹದ್ಧನಂ - ಬಹಳವಾದ ಧನವನ್ನು, ಸುಹೃಜ್ಜನೇ - ಮಿತ್ರರ ವಿಷಯದಲ್ಲಿ, ಯಥಾರ್ಹಸಮ್ಮಾನವಚಃಪ್ರಚೋದಿತಃ - ಪ್ರೇರೇಪಿಸಲ್ಪಟ್ಟ ಯಥಾಯೋಗ್ಯವಾದ ಗೌರವವಚನಗಳುಳ್ಳವನಾಗಿ, ಅಚಿರಾತ್ - ಜಾಗ್ರತೆಯಾಗಿ, ನಿಯೋಜಯಾಮಾಸ - ವಿನಿಯೋಗವಮಾಡಿಸಿದನು. ॥ ೪೪ ॥ ತದಾ - ಆ ಕಾಲದಲ್ಲಿ, ದ್ವಿಜಃ - ಬ್ರಾಹ್ಮಣನೇ ಆಗಲಿ, ಸುಹೃತ್-ಸ್ನೇಹಿತನೇ ಆಗಲಿ, (ಅಥವಾ - ಹಾಗಲ್ಲದಿದ್ದರೆ,) ಭೃತ್ಯಜನಃ - ಸೇವಕಜನವೇ ಆಗಲಿ, ದರಿದ್ರಭಿಕ್ಷಾಚರಣಶ್ಚ, ದರಿದ್ರ - ದರಿದ್ರನು, ಭಿಕ್ಷಾಚರಣಶ್ಚ - ಭಿಕ್ಷಾರ್ಥವಾಗಿ ಸಂಚರಿಸುವನು, ಯಃ - ಯಾವನು,

---

ರಿಗೆ ದಾನ ಮಾಡುವುದರಿಂದ ನನ್ನ ಸಂಪಾದನೆಯು ಸಾರ್ಥಕವಾಗುವುದು. ಆದುದರಿಂದ ನಿನಗೆ ಬೇಕಾದ ಪದಾರ್ಥವನ್ನು ಕೇಳುವವನಾಗು" ಎಂದು ಹೇಳಿದನು. ॥ ೪೨ ॥ ಆಗಲಾ ತ್ರಿಜಟನು ಸತಿಯಿಂದೊಡಗೂಡಿ ಆ ಗೋಸಮೂಹವನ್ನು ಪ್ರತಿಗ್ರಹಿಸಿ ಮಹಾ ಸಂತೋಷವುಳ್ಳವನಾಗಿ ಮಹಾತ್ಮನಾದ ಶ್ರೀರಾಮಮೂರ್ತಿಗೆ ಯಶಸ್ಸು, ಪ್ರೀತಿ, ಸುಖ, ಮತ್ತು ವೃದ್ಧಿಗಳನ್ನುಂಟುಮಾಡುತ್ತಿರುವ ಆಶೀರ್ವಾದವನ್ನು ನಾಡಿ ತೆರಳಿದವನಾದನು. ಶ್ರೀರಾಮನೂ ಕೂಡ ಪೂರ್ಣ ಮನೋರಥನಾಗಿ ಧರ್ಮಯುಕ್ತವಾದ ಪರಾಕ್ರಮದಿಂದಲೇ

ನತತ್ರ ಕಶ್ಚಿನ್ನ ಬಭೂವ ತರ್ಪಿತೋ
ಯಥಾರ್ಹ ಸಮ್ಮಾನನ ದಾನ ಸಂಭ್ರಮೈಃ || ೪೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾತ್ರಿಂಶಸ್ಸರ್ಗಃ.

ಅಭವತ್ - ಆದನೋ, ತತ್ರ - ಆ ಜನರಲ್ಲಿ, ಕಶ್ಚಿತ್ - ಒಬ್ಬನೂ, ಯಥಾರ್ಹಸಮ್ಮಾನನದಾನ ಸಂಭ್ರಮೈಃ, ಯಥಾರ್ಹ - ಯಥಾಯೋಗ್ಯವಾದ, ಸಮ್ಮಾನನೆ - ಬಹುಮಾನದಿಂದಲೂ, ದಾನ - ದಾನದ, ಸಂಭ್ರಮೈಃ - ತ್ವರೆಯಿಂದಲೂ, ತರ್ಪಿತಃ - ತೃಪ್ತಿಗೊಂಡವನು, ನಬಭೂವೇತಿನ - ಆಗಲಿಲ್ಲವೆಂಬುದಿಲ್ಲ. || ೪೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾತ್ರಿಂಶಸ್ಸರ್ಗಃ.

ಅಪಾರ ದ್ರವ್ಯವನ್ನು ಅವರವರ ಯೋಗ್ಯತಾನುಗುಣವಾಗಿ ಮರ್ಯಾದಾರ್ಥಗಳಾದ ವಚನಗಳನ್ನು ಹೇಳಿ ಸ್ನೇಹಿತರಿಗೂ ಸಹ ದಾನ ಮಾಡಿದವನಾದನು. || ೪೫ ||

ಇಂತಿದು ಶ್ರೀರಾಮ ಲಕ್ಷ್ಮಣ ಸೀತಾದೇವಿ ಕೃತ ದಾನ ವಿತರಣ ವಿವರಣವೆಂಬ
ಮೂವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಯಸ್ತ್ರಿಂಶಸ್ಸರ್ಗಃ.

ದತ್ವಾತು ಸಹವೈದೇಹ್ಯಾ ಬ್ರಾಹ್ಮಣೇಭ್ಯೋ ಧನಂ ಬಹು ॥ ಜಗ್ಮತುಃ ಪಿತರಂ ದ್ರಷ್ಟುಂ ಸೀತಯಾ ಸಹ ರಾಘವೌ ॥೧॥ ತತೋ ಗೃಹೀತೇ ದುಷ್ಪ್ರೇಕ್ಷ್ಯೇ ತ್ವಶೋಭೇತಾಂ ತದಾಯುಧೇ ॥ ಮಾಲಾದಾಮಭಿ ರಾಬದ್ಧೇ ಸೀತಯಾ ಸಮಲಂಕೃತೇ ॥೨॥ ತತಃ ಪ್ರಾಸಾದಹರ್ಮ್ಯಾಣಿ ವಿಮಾನ ಶಿಖರಾಣಿಚ॥ಅಧಿರುಹ್ಯ ಜನಶ್ಶ್ರೀಮಾ ನುದಾಸೀನೋ ವ್ಯಲೋಕಯತ್ ॥೩॥ ನಹಿ ರಥ್ಯಾಸ್ಸ್ಮ ಶಕ್ಯಂತೇ ಗಂತುಂ ಬಹುಜನಾಕುಲಾಃ ॥ ಆರುಹ್ಯ ತಸ್ಮಾತ್ಪ್ರಾ

ರಾಘವೌ - ಶ್ರೀರಾಮಲಕ್ಷ್ಮಣರು, ವೈದೇಹ್ಯಾಸಹ-ಸೀತಾದೇವಿಯೊಡನೆ, ಬ್ರಾಹ್ಮಣೇಭ್ಯಃ-ಬ್ರಾಹ್ಮಣರಿಗೋಸುಗ, ಬಹು - ಬಹಳವಾದ, ಧನಂ - ದ್ರವ್ಯವನ್ನು, ದತ್ವಾತು - ಕೊಟ್ಟು, ಪುನಃ - ಮತ್ತು, ಪಿತರಂ - ತಂದೆಯಾದ ದಶರಥರಾಯನನ್ನು, ದ್ರಷ್ಟುಂ - ನೋಡಲು, ಸೀತಯಾಸಹ - ಸೀತಾದೇವಿಯೊಡನೆ, ಜಗ್ಮತುಃ - ತೆರಳಿದರು. ॥೧॥ ತತಃ-ಬಳಿಕ, ಗೃಹೀತೇ - ಧರಿಸಲ್ಪಟ್ಟ, ಮಾಲಾದಾಮಭಿಃ, ಮಾಲಾ - ಪುಷ್ಪಮಾಲಿಕೆಗಳಿಂದಲೂ, ದಾಮಭಿಃ - ರತ್ನಹಾರಗಳಿಂದಲೂ, ಆಬದ್ಧೇ - ಕಟ್ಟಲ್ಪಟ್ಟ, ಸೀತಯಾ - ಸೀತಾದೇವಿಯಿಂದ, ಸಮಲಂಕೃತೇ - ಅಲಂಕಾರಮಾಡಲ್ಪಟ್ಟ, ತದಾಯುಧೇ, ತತ್ - ಆ ರಾಮಲಕ್ಷ್ಮಣರ, ಆಯುಧೇ - ಧನಸ್ಸುಗಳು, ದುಷ್ಪ್ರೇಕ್ಷ್ಯೇ - ನೋಡಲ ಸಾಧ್ಯಗಳಾಗಿ, ಅಶೋಭೇತಾಂ - ಹೊಳೆಯುತ್ತಿದ್ದುವು. ॥೨॥ ತತಃ - ಅನಂತರದಲ್ಲಿ, ಶ್ರೀಮಾ - ಸಂಪದ್ಯುಕ್ತವಾದ, ಜನಃ - ಜನವು, ಪ್ರಾಸಾದಹರ್ಮ್ಯಾಣಿ, ಪ್ರಾಸಾದ - ಉಪ್ಪರಿಗೆಗಳನ್ನು, ಹರ್ಮ್ಯಾಣಿ - ಹಣಗಾರರ ಮನೆಗಳನ್ನು, ವಿಮಾನಶಿಖರಾಣಿಚ, ವಿಮಾನ - (ಗೋ) ಏಳು ಉಪ್ಪರಿಗೆಗಳುಳ್ಳ ರಾಜಗೃಹಗಳ, ಶಿಖರಾಣಿ - ಅಗ್ರಭಾಗಗಳನ್ನು, ಅಧಿರುಹ್ಯ - ಏರಿ, ಉದಾಸೀನಃ - ಉತ್ಕಂಠವಿಲ್ಲದುದಾಗಿ, ವ್ಯಲೋಕಯತ್ - ನೋಡಿತು. ॥೩॥ ಹಿ - ಯಾವ ಕಾರಣ, ಬಹುಜನಾಕುಲಾಃ - ಬಹಳ ಜನರಿಂದ ತುಂಬಿರುವ, ರಥ್ಯಾಃ - ರಾಜಮಾರ್ಗಗಳು, ಗಂತುಂ - ಹೋಗುವುದಕ್ಕೆ, ನಶಕ್ಯಂತೇಸ್ಮ - ಸಾಧ್ಯವಾದುವುಗಳಲ್ಲವೋ, ತಸ್ಮಾತ್ - ಆ ಕಾರಣ, ಪ್ರಾಸಾದಾ -

---

ಈ ರೀತಿ ಶ್ರೀರಾಮ ಲಕ್ಷ್ಮಣರು ಸೀತಾದೇವಿಯೊಡಗೂಡಿ ವಿಪ್ರೋತ್ತಮರಾದವರಿಗೆ ಅಪಾರವಾದ ದ್ರವ್ಯಗಳನ್ನಿತ್ತು ತಂದೆಯಾದ ದಶರಥರಾಯನನ್ನು ನೋಡಲು ತೆರಳಿದವರಾದರು. ಆಗ ರಾಮ ಲಕ್ಷ್ಮಣರಿಂದ ಧರಿಸಿದ್ದ ಆ ಧನುಶ್ಶ್ರೇಷ್ಠಗಳು, ಕುಸುಮ ಮಾಲಿಗಳಿಂದಲಂಕೃತವಾದುದಾಗಿಯೂ, ವಿವಿಧ ರತ್ನ ನಿಚಯಗಳಿಂದ ನಿಬಿಡೀಕೃತವಾದುದಾಗಿಯೂ, ಸೀತಾದೇವಿಯ ಸಾನ್ನಿಧ್ಯದಿಂದ ಶೋಭಾಯಮಾನವಾದುದಾಗಿಯೂ ಇದ್ದುವು. ಆ ಬಳಿಕ ಆ ಅಯೋಧ್ಯಾ ನಗರವಾಸಿಗಳೆಲ್ಲರೂ ರಾಜವೀಥಿಗಳಲ್ಲಿ ತುಂಬಿದ್ದರಾದುದರಿಂದ, ಉರಿಪ್ಪಗೆಗಳ ಮೇಲೆಯೂ, ಏಳುಪ್ಪರಿಗೆಗಳನ್ನೊಳಗೊಂಡು ವಿಮಾನಗಳೆನಿಸುವ ಶ್ರೀಮಂತರ

ಸಾರ್ಧಂ ದೀನಾಃ ಪಶ್ಯಂತಿ ರಾಘವಂ ॥ ೪ ॥ ಪದಾತಿಂ ವರ್ಜಿತಚ್ಛತ್ರಂ ರಾಮಂ ದೃಷ್ಟ್ವಾ ಜನಾಸ್ತದಾ ॥ ಊಚುರ್ಬಹುವಿಧಾ ವಾಚಃ ಶೋಕೋಪಹತಚೇತಸಃ ॥ ೫ ॥ ಯಂ ಯಾಂತಮನುಯಾತಿಸ್ಮ ಚತುರಂಗಬಲಂ ಮಹತ್ ॥ ತಮೇಕಂ ಸೀತಯಾಸಾರ್ಧಮನುಯಾತಿಸ್ಮ ಲಕ್ಷ್ಮಣಃ ॥ ೬ ॥ ಐಶ್ವರ್ಯಸ್ಯ ರಸಜ್ಞಸ್ಸನ್ ಕಾಮಿನಾಂಚೈವ ಕಾಮದಃ ॥ ನೇಚ್ಛತ್ಯೇವಾನೃತಂ ಕರ್ತುಂ ಪಿತರಂ ಧರ್ಮಗೌರವಾತ್ ॥ ೭ ॥ ಯಾ ನಶಕ್ಯಾ ಪುರಾದ್ರಷ್ಟುಂ

ರಾಜರಮನೆಗಳನ್ನು, ಅಧಿರುಹ್ಯ - ಹತ್ತಿ, ದೀನಾಃ - ದೈನ್ಯವುಳ್ಳವರಾಗಿ, ರಾಘವಂ - ಶ್ರೀರಾಮನನ್ನು, ಪಶ್ಯಂತಿಸ್ಮ - ನೋಡಿದರಷ್ಟೆ. ॥ ೪ ॥ ತದಾ - ಆ ಕಾಲದಲ್ಲಿ, ಜನಾಃ - ಜನರು, ಪದಾತಿಂ - ಪಾದಚಾರಿಯಾದ, ವರ್ಜಿತಚ್ಛತ್ರಂ, ವರ್ಜಿತ - ಬಿಡಲ್ಪಟ್ಟ, ಛತ್ರಂ - ಛತ್ರವುಳ್ಳ, ರಾಮಂ - ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಶೋಕೋಪಹತಚೇತಸಃ, ಶೋಕ - ವ್ಯಸನದಿಂದ, ಉಪಹತ - ಹೊಡಿಯಲ್ಪಟ್ಟ, ಚೇತಸಃ - ಮನವುಳ್ಳವರಾಗಿ, ಬಹುವಿಧಾಃ - ನಾನಾ ಬಗೆಗಳಾದ, ವಾಚಃ - ಮಾತುಗಳನ್ನು, ಊಚುಃ-ಹೇಳಿದರು. ॥ ೫ ॥ ಯಾಂತಂ - ಹೋಗುತ್ತಿರುವ, ಯಂ- ಯಾವ ಶ್ರೀರಾಮನನ್ನು, ಮಹತ್ - ದೊಡ್ಡದಾದ, ಚತುರಂಗಬಲಂ, ಚತುರಂಗ - ನಾಲ್ಕು ಅಂಗಗಳುಳ್ಳ, ಬಲಂ - ಸೈನ್ಯವು, ಅನುಯಾತಿಸ್ಮ - ಅನುಸರಿಸಿಹೋಗುತ್ತದೆಯೋ, ಏಕಂ - ಒಬ್ಬನಾದ, ತಂ - ಅಂತಹ ಶ್ರೀರಾಮನನ್ನು, ಸೀತಯಾಸಾರ್ಧಂ - ಸೀತಾದೇವಿಯೊಡನೆ, ಲಕ್ಷ್ಮಣಃ-ಲಕ್ಷ್ಮಣನು, ಅನುಯಾತಿಸ್ಮ - ಅನುಸರಿಸಿ ಬಂದನು. ॥ ೬ ॥ ಐಶ್ವರ್ಯಸ್ಯ - ಐಶ್ವರ್ಯದ, ರಸಜ್ಞಃ - ಸಂಪಾದನೆಯ ಸುಖವನ್ನು ತಿಳಿದಿರುವ, ಸನ್ - ಸತ್ಪುರುಷನಾದ ಶ್ರೀರಾಮನು, ಕಾಮಿನಾಂಚೈವ - ಅರ್ಥವನ್ನು ಕೋರುವ ಜನರಿಗೆ, ಕಾಮದಃ - ಇಷ್ಟವಾದ ಧನವನ್ನು ಕೊಟ್ಟವನಾಗಿ, ಪಿತರಂ - ತಂದೆಯಾದ ದಶರಥರಾಯನನ್ನು, ಧರ್ಮಗೌರವಾತ್ - (ಮ + ಗೋ) ಪಿತೃಶುಶ್ರೂಷಾವಚನಕರಣಾದಿ ರೂಪಧರ್ಮ ವಿಷಯಕವಾದ ಗೌರವದಿಂದ, ಅನೃತಂ - ಸುಳ್ಳುಮಾತುಳ್ಳವನನ್ನಾಗಿ, ಕರ್ತುಂ - ಮಾಡಲು, ನೇಚ್ಛತ್ಯೇವ - ಇಚ್ಛಿಸಲೇ ಇಲ್ಲವು. ॥ ೭ ॥ ಪುರಾ - ಪೂರ್ವದಲ್ಲಿ, ಯಾ - ಯಾವ

ಮನೆಗಳ ಮೇಲೆಯೂ ನಿಂತುಕೊಂಡು ಉತ್ಕಂಠತೆಯಿಂದ ದೈನ್ಯವುಳ್ಳವರಾಗಿ ಶ್ರೀರಾಮನ ಬರುವಿಕೆಯನ್ನು ಕಂಡವರಾದರು. ಆಗಲಾ ಪುರನಿವಾಸಿಗಳು ಕಾಲ್ನಡಿಗೆಯಿಂದಲೇ ನಡೆದುಕೊಂಡು ಶ್ವೇತಛತ್ರವಿಲ್ಲದೆಯೇ ಬರುತ್ತಿರುವ ಆ ಶ್ರೀರಾಮನನ್ನು ಕಂಡು ದುಃಖಾಕ್ರಾಂತರಾಗಿ ಈ ರೀತಿ ಮಾತನಾಡಿಕೊಂಡರು. ॥ ೫ ॥ "ಶ್ರೀರಾಮಚಂದ್ರನು ಯಾವಾಗ ಹೊರಹೊರಟರೂ ಚತುರಂಗಬಲವು ಆತನನ್ನು ಅನುಸರಿಸುತ್ತಿದ್ದಿತು. ಈಗ ಹಾಗಿಲ್ಲದೆ, ಲಕ್ಷ್ಮಣ ಸೀತೆಯರು ಮಾತ್ರ, ಅವನನ್ನು ಹಿಂಬಾಲಿಸುತ್ತಿರುವರಲ್ಲ! ಇದೇನಿರಬಹುದು? ದ್ರವ್ಯಾರ್ಜನೆಯ ಮಾರ್ಗವನ್ನರಿತ ರಘುರಾಮನು ದ್ರವ್ಯಾಪೇಕ್ಷಿಗಳ ಅಭಿಮತದಂತೆಲ್ಲ. ಅಪಾರವಾದ ದ್ರವ್ಯವನ್ನು ದಾನ ಮಾಡಿ, ಧರ್ಮನಿರತನಾಗಿ, ತಂದೆಯನ್ನು ಸತ್ಯಪ್ರತಿಜ್ಞೆಯುಳ್ಳವನನ್ನಾಗಿಯೇ ಮಾಡಬೇಕೆಂದು ಬಯಸುತ್ತಿರುವನಲ್ಲ? ಹಿಂದೆ ಗಗನ ಸಂಚಾರಿಗಳಾದ ದೇವತೆಗಳಿಂದಲೂ, ಭೂತಗಳಿಂದಲೂ ಸಹ ನೋಡಲಶಕ್ಯಳಾದ ಸೀತಾದೇವಿಯನ್ನು

ಭೂತೈ ರಾಕಾಶಗೈರಪಿ || ತಾಮದ್ಯ ಸೀತಾಂ ಪಶ್ಯಂತಿ ರಾಜಮಾರ್ಗೇ ಗತಾ ಜನಾಃ || ೮ || ಅಂಗರಾಗೋಚಿತಾಂ ಸೀತಾಂ ರಕ್ತಚಂದನ ಸೇವಿನೀಂ || ವರ್ಷಮುಷ್ಣಂಚ ಶೀತಂಚ ನೇಷ್ಯಂತ್ಯಾಶು ವಿವರ್ಣತಾಂ || ೯ || ಅದ್ಯ ನೂನಂ ದಶರಥ ಸ್ಸತ್ವಮಾವಿಶ್ಯ ಭಾಷತೇ || ನಹಿ ರಾಜಾ ಪ್ರಿಯಂ ಪುತ್ರಂ ನಿವಾಸಯಿತು ಮಿಚ್ಛತಿ || ೧೦ || ನಿರ್ಗುಣಸ್ಯಾಪಿ ಪುತ್ರಸ್ಯ ಕಥಂ ಸ್ಯಾದ್ವಿಪ್ರವಾಸನಂ||ಕಿಂ ಪುನರ್ಯಸ್ಯ ಲೋಕೋಯಂ ಜಿತೋ ವೃತ್ತೇನ ಕೇವಲಂ ||೧೧||

ಸೀತಾದೇವಿಯು, ಆಕಾಶಗೈಃ - ಆಕಾಶಗಾಮಿಗಳಾದ, ಭೂತೈರಪಿ - ಪೃಥಿವಿ, ಅಪ್ಪು, ತೇಜಸ್ಸೇಮೊದಲಾದ ಪಂಚಭೂತಗಳಿಂದಲೂ ಸಹ, ದ್ರಷ್ಟುಂ - ನೋಡಲು, ನಶಕ್ಯಾ - ಸಾಧ್ಯಳಲ್ಲವೋ, ಸಾ - ಅಂತಹಳು, ರಾಜಮಾರ್ಗಗತಾಃ, ರಾಜಮಾರ್ಗ-ರಾಜವೀಥಿಯಲ್ಲಿ, ಗತಾಃ-ಹೋಗುತ್ತಿರುವ, ಜನಾಃ-ಜನರು, ತಾಂಸೀತಾಂ - ಅಂತಹ ಸೀತೆಯನ್ನು, ಪಶ್ಯಂತಿ - ಕಾಣುತ್ತಾರೆ. || ೮ || ಅಂಗರಾಗೋಚಿತಾಂ, ಅಂಗರಾಗ - ಅಂಗಲೇಪನಕ್ಕೆ, ಉಚಿತಾಂ - ಯೋಗ್ಯಳಾದ, ರಕ್ತಚಂದನಸೇವಿನೀಂ - ರಕ್ತ ಚಂದನವನ್ನು ಸೇವಿಸುತ್ತಿರುವ, ಸೀತಾಂ - ಸೀತಾದೇವಿಯನ್ನು, ವರ್ಷಂ - ಮಳೆಯು, ಉಷ್ಣಂ-ಬಿಸಿಲೂ, ಸೀತಂಚ - ಥಂಡಿಯೂ, ಆಶು - ಜಾಗ್ರತೆಯಾಗಿ, ವಿವರ್ಣತಾಂ - ವಿಕಾರವನ್ನು, ನೇಷ್ಯಂತಿ - ಹೊಂದಿಸುತ್ತವೆ, ಅದ್ಯ - ಈಗ, ದಶರಥಃ - ದಶರಥರಾಯನು, ಸತ್ವಂ-ಪಿಶಾಚವನ್ನು, ಆವಿಶ್ಯ - ಹೊಂದಿ, ಭಾಷತೇ - ಮಾತನಾಡುತ್ತಾನೆ, ನೂನಂ - ನಿಶ್ಚಯವು, ರಾಜಾ - ಅರಸು, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು, ವಿವಾಸಯಿತುಂ - ಅರಣ್ಯಕ್ಕೆ ಹೊರಡಿಸಲು, ನೇಚ್ಛತಿಹಿ - ಇಚ್ಛಿಸುವದಿಲ್ಲವಷ್ಟೆ. || ೯-೧೦ || ನಿರ್ಗುಣಸ್ಯಾಪಿ - ಗುಣರಹಿತನಾದರೂ, ಪುತ್ರಸ್ಯ-ಮಗನ, ವಿಪ್ರವಾಸನಂ - ಹೊರಡಿಸುವಿಕೆಯು, ಕಥಂಸ್ಯಾತ್ - ಹ್ಯಾಗಾದೀತು, ಯಸ್ಯ - ಯಾವ ಶ್ರೀರಾಮನ, ವೃತ್ತೇನ - ನಡತೆಯಿಂದ, ಅಯಂಲೋಕಃ - ಈ ಲೋಕವು, ಕೇವಲಂ - ಅತ್ಯಂತವಾಗಿ, ಜಿತಃ - ಜಯಿಸಲ್ಪಟ್ಟಿರುವುದೋ, ತಸ್ಯ - ಅಂತಹ ಮಗನ ವಿಷಯದಲ್ಲಿ, ಕಿಂಪುನಃ - ಏನು ಹೇಳತಕ್ಕದು, ಅನೃಶಂಸ್ಯಂ - ಅಹಿಂಸಕತ್ವವು, ಅನುಕ್ರೋಶಃ - ದಯೆಯು, ಶೃತಂ - ಶಾಸ್ತ್ರ

ಇದೀಗ ರಾಜವೀಥಿಯಲ್ಲಿರುವ ಸಾಮಾನ್ಯಜನರೆಲ್ಲರೂ ನೋಡುತ್ತಿರುವರಲ್ಲ ! ಇದಕ್ಕಿಂತಲೂ ದುಃಖವಿನ್ನೊಂದುಂಟೆ? ಅಕಟಕಟ! ಅಂಗಲೇಪನಕ್ಕರ್ಹವಾದ ರಕ್ತಚಂದನಗಳನ್ನು ಮೈಗೆ ಸವರಿಕೊಂಡು ಸುಖದಿಂದ್ದೀಕೆಯನ್ನೀಗ, ಶೀತೋಷ್ಣಗಳು ವಿಕಾರವನ್ನು ಹೊಂದಿಸುತ್ತಿರುವುವು! ಅಯ್ಯೋ ! ನಮ್ಮೊಡೆಯನಾದ ದಶರಥ ಮಹೀಪಾಲನು ಮುದ್ದುಗುವರನಾದ ಶ್ರೀರಾಮನನ್ನು ಅರಣ್ಯಕ್ಕಟ್ಟಲೆಂದಿಗೂ ಅಪೇಕ್ಷಿಸುವುದಿಲ್ಲ! ಅಂತಹನೀಗ ಆತನನ್ನು ವನವಾಸಕ್ಕೆ ತೆರಳೆಂಬ ನುಡಿಯನ್ನಾಡುವನಾದುದರಿಂದ ಅವನು ಪಿಶಾಚದಿಂದಾವೃತನಾಗಿ ಮಾತನಾಡುತ್ತಾನೆ! ಅಹಹ! ಜಗತ್ತಿನಲ್ಲಿ ಯಾವ ತಂದೆಯೂ ಮಗನೆಂಬವನು ದುಷ್ಟನಾದರೂ ಅವನನ್ನಗಲುವುದಿಲ್ಲವು. ಇಂತಿರುವಲ್ಲಿ ಇಡೀ ಭೂಮಂಡಲವೇ ಮೆಚ್ಚುವಂತೆ ಮಾಡುವ ಗುಣಸಮುದಾಯವಂತನಾದ ಶ್ರೀರಾಮನ ವಿಷಯದಲ್ಲೇನು ತಾನೆ ಹೇಳತಕ್ಕುದಿರುವುದು. || ೮-೧೧ || ಅಹಿಂಸೆ, ದಯೆ, ಶಾಸ್ತ್ರಜನ್ಯಜ್ಞಾನ, ಸತ್ಸ್ವ

ಆನೃಶಂಸ್ಯ ಮನುಕ್ರೋಶ ಶ್ಶ್ರುತಂ ಶೀಲಂ ದಮಶ್ಶಮಃ ॥ ರಾಘವಂ
ಶೋಭಯಂತ್ಯೇತೇ ಷಡ್ಗುಣಾಃ ಪುರುಷೋತ್ತಮಂ ॥ ೧೨ ॥ ತಸ್ಮಾ
ತ್ತಸ್ಯೋಪಘಾತೇನ ಪ್ರಜಾಃ ಪರಮಪೀಡಿತಾಃ ॥ ಔದಕಾನೀವ ಸತ್ವಾನಿ
ಗ್ರೀಷ್ಮೇ ಸಲಿಲ ಸಂಕ್ಷಯಾತ್ ॥ ೧೩ ॥ ಪೀಡಯಾ ಪೀಡಿತಂ ಸರ್ವಂ
ಜಗದಸ್ಯ ಜಗತ್ಪತೇಃ ॥ ಮೂಲಸ್ಯೈವೋಪಘಾತೇನ ವೃಕ್ಷಃ ಪುಷ್ಪ
ಫಲೋಪಗಃ ॥ ೧೪ ॥ ಮೂಲಂ ಹ್ಯೇಷ ಮನುಷ್ಯಾಣಾಂ ಧರ್ಮಸಾರೋ
ಮಹಾದ್ಯುತಿಃ ॥ ಪುಷ್ಪಂ ಫಲಂಚ ಪತ್ರಂಚ ಶಾಖಾಶ್ಚಾಸ್ಯೇತರೇ ಜನಾಃ ॥೧೫॥

ಜನ್ಯಜ್ಞಾನವು, ಶೀಲಂ - ಸತ್ಸ್ವಭಾವವು, ದಮಃ-ಇಂದ್ರಿಯನಿಗ್ರಹವು, (೧) ಶಮಃ-ಶಾಂತಿಯು, ಏತೇ - ಈ, ಷಡ್ಗುಣಾಃ - ಆರುಗುಣಗಳು, ಪುರುಷೋತ್ತಮಂ - ಪುರುಷಶ್ರೇಷ್ಠನಾದ, ರಾಘವಂ - ಶ್ರೀರಾಮನನ್ನು, ಶೋಭಯಂತಿ - ಪ್ರಕಾಶಿಸುವಂತೆ ಮಾಡುತ್ತವೆ. ॥ ೧೧-೧೨ ॥ ತಸ್ಮಾತ್ - ಆ ಕಾರಣ, ತಸ್ಯ - ಆ ಶ್ರೀರಾಮನ, ಉಪಘಾತೇನ - ಹಿಂಸೆಯಿಂದ, ಪ್ರಜಾಃ - ಪ್ರಜೆಗಳು, ಗ್ರೀಷ್ಮೇ - ಗ್ರೀಷ್ಮ ಋತುವಿನಲ್ಲಿ, ಸಲಿಲಸಂಕ್ಷಯಾತ್, ಸಲಿಲ - ನೀರಿನ, ಸಂಕ್ಷಯಾತ್ - ಶೋಷಣೆಯಿಂದ, ಔದಕಾನಿ - ನೀರಿನಲ್ಲಿರುವ, ಸತ್ವಾನೀವ - ಜಂತುಗಳಂತೆ, ಪರಮಪೀಡಿತಾಃ - ಬಹಳ ಬಾಧೆಗೊಂಡವರು, ಭವಂತಿ - ಆಗುತ್ತಾರೆ. ॥ ೧೩ ॥ ಸರ್ವಂ - ಸಮಸ್ತವಾದ, ಜಗತ್ - ಲೋಕವು, ಜಗತ್ಪತೇಃ - ಲೋಕಾಧಿಪತಿಯಾದ, ಅಸ್ಯ - ಈ ಶ್ರೀರಾಮನ, ಪೀಡಯಾ - ಬಾಧೆಯಿಂದ, ಮೂಲಸ್ಯ - ಬುಡದ, ಉಪಘಾತೇನ - ಹಿಂಸೆಯಿಂದ, ಪುಷ್ಪಫಲೋಪಗಃ - ಹೂವೊಳಿದು ಫಲಿಸಿರುವ, ವೃಕ್ಷಇವ - ಗಿಡದಂತೆ, ಪೀಡಿತಂ - ಬಾಧಿಸಲ್ಪಡುತ್ತದೆ. ॥ ೧೪ ॥ ಧರ್ಮಸಾರಃ - ಧರ್ಮವೇ ದೃಢವಾಗುಳ್ಳ, ಮಹಾದ್ಯುತಿಃ - ಮಹಾ ಪ್ರಕಾಶವಂತನಾದ, ಏಷಃ - ಈ ಶ್ರೀರಾಮನು, ಹಿ - ಯಾವ ಕಾರಣ, ಮನುಷ್ಯಾಣಾಂ - ಮನುಜರಿಗೆ, ಮೂಲಂಹಿ - ಬುಡಸ್ಥಾನಾಪನ್ನನಷ್ಟೆ, ಅಸ್ಯ - ಈ ಶ್ರೀರಾಮನಿಗೆ, ಇತರೇಜನಾಃ - ಇತರ ಜನರು, ಪತ್ರಂ - ಪರ್ಣಗಳು, ಫಲಂ-ಫಲವೂ, ಪುಷ್ಪಂ - ಪುಷ್ಪಗಳು, ಶಾಖಾಶ್ಚ - ಕೊಂಬೆಗಳೂ, ಭವಂತಿ - ಆಗುತ್ತಾರೆ. ॥ ೧೫ ॥ ರಾಘವಃ-

---

ಭಾವ, ಜಿತೇಂದ್ರಿಯತ್ವ, ಶಾಂತಿ ಎಂಬೀ ಷಡ್ಗುಣೈಶ್ವರ್ಯವೂ ಶ್ರೀರಾಮನಲ್ಲಿಯೇ ಪ್ರತಿಭಾಸಮಾನವಾಗಿ ಹೊಳೆಯುತ್ತಿವೆ. ಆದುದರಿಂದ ಜಗತ್ಪತಿಯಾದ ಆತನಿಗೆ ಒದಗಿದ ದುಃಖದಿಂದ ಪ್ರಜೆಗಳೆಲ್ಲರೂ, ಬೇಸಿಗೆಯಲ್ಲಿ ನೀರಿಂಗಲು ಜಲ ಜಂತುಗಳು, ಕಂಗೆಡುವಂತೆಯೂ, ಕತ್ತರಿಸಲ್ಪಟ್ಟ ಬೇರುಗಳುಳ್ಳ ಫಲಭರಿತವಾದ ವೃಕ್ಷಗಳಂತೆಯೂ ನೆಲಕ್ಕುರುಳಿ ಬಾಧೆ ಪಡುತ್ತಾರೆ. ಧರ್ಮವನ್ನೇ ದೃಢವಾಗಿ ಅವಲಂಬಿಸಿರುವ ಶ್ರೀರಾಮನು ಜಗತ್ತಿಗೆಲ್ಲ

ಟಿ. (೧) "ಶಮಶ್ಚಿತ್ತ ಪ್ರಶಾಂತಿಸ್ಯಾತ್ ದಮ ಇಂದ್ರಿಯ ನಿಗ್ರಹಃ" ಎಂಬ ವಚನದಂತೆ "ದಮ" ವೆಂದರೆ "ಇಂದ್ರಿಯನಿಗ್ರಹವೆಂತಲೂ", "ಶಮಃ" ಎಂದರೆ "ಚಿತ್ತಪ್ರಶಾಂತಿ" ಎಂದೂ ಅರ್ಥ ಮಾಡಲಾಯಿತು.

(ಇದು ಗೋವಿಂದರಾಜೀಯ.)

ಮಹೇಶ್ವರ ತೀರ್ಥರು "ಶ್ರುತಂ" ಎಂಬೆಡೆಯಲ್ಲಿ "ಅನುಷ್ಠಾನ ಪರ್ಯವಸಾಯಿಯಾದ ಶಾಸ್ತ್ರಾಧ್ಯಯನ" ಎಂದರ್ಥ ಮಾಡಿ, ಆದುದರಿಂದಲೇ "ಶೀಲಂ - ಸತ್ಸ್ವಭಾವಃ" ಎಂದರ್ಥ ಮಾಡಿದ್ದಾರೆ.

ತೇ ಲಕ್ಷ್ಮಣಇವ ಕ್ಷಿಪ್ರಂ ಸಪತ್ನ್ಯಃ ಸ್ಸಹಬಾಂಧವಾಃ || ಗಚ್ಛಂತ ಮನುಗಚ್ಛಾಮೋ ಯೇನ ಗಚ್ಛತಿ ರಾಘವಃ ||೧೬|| ಉದ್ಯಾನಾನಿ ಪರಿತ್ಯಜ್ಯ ಕ್ಷೇತ್ರಾಣಿಚ ಗೃಹಾಣಿಚ || ಏಕದುಃಖಸುಖಾ ರಾಮಮನುಗಚ್ಛಾಮ ಧಾರ್ಮಿಕಂ ||೧೭|| ಸಮುದ್ಧೃತ ನಿಧಾನಾನಿ ಪರಿಧ್ವಸ್ತಾ ಜಿರಾಣಿಚ || ಉಪಾತ್ತ ಧನಧಾನ್ಯಾನಿ ಹೃತಸಾರಾಣಿ ಸರ್ವಶಃ ||೧೮|| ರಜಸಾಭ್ಯವ ಕೀರ್ಣಾನಿ ಪರಿತ್ಯಕ್ತಾನಿ ದೈವತೈಃ || ಮೂಷಕೈಃ ಪರಿಧಾವದ್ಭಿ ರುದ್ಬಿಲೈ ರಾವೃತಾನಿಚ ||೧೯|| ಅಪೇತೋದಕ ಧೂಮಾನಿ ಹೀನ ಸಂಮಾರ್ಜನಾ

ಶ್ರೀರಾಮನು, ಯೇನ - ಯಾವ ಮಾರ್ಗದಿಂದ, ಗಚ್ಛತಿ - ಹೋಗುತ್ತಾನೋ, ತೇ - ಅಂತಹ ನಾವು, ಸಪತ್ನ್ಯಃ - ಪತ್ನೀಸಮೇತರಾಗಿ, ಸಹಬಾಂಧವಾಃ - ಬಂಧು ಜನಗಳಿಂದ ಕೂಡಿ, ಲಕ್ಷ್ಮಣ ಇವ - ಲಕ್ಷ್ಮಣನಂತೆ, ಗಚ್ಛಂತಂ - ಹೋಗುತ್ತಿರುವನನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಅನುಗಚ್ಛಾಮಃ - ಅನುಸರಿಸಿಹೋಗುವ. ||೧೬|| ಉದ್ಯಾನಾನಿ - ಉದ್ಯಾನವನಗಳನ್ನೂ, ಕ್ಷೇತ್ರಾಣಿ-ಜಮಿೀನುಗಳನ್ನೂ, ಗೃಹಾಣಿಚ - ಮನೆಗಳನ್ನೂ, ಪರಿತ್ಯಜ್ಯ - ಬಿಟ್ಟು, ಏಕದುಃಖಸುಖಾಃ-ಸಮಾನ ಸುಖದುಃಖಗಳುಳ್ಳವರಾಗಿ, ಧಾರ್ಮಿಕಂ ಧರ್ಮಿಷ್ಠನಾದ, ರಾಮಂ-ಶ್ರೀರಾಮನನ್ನು, ಅನುಗಚ್ಛಾಮ-ಅನುಸರಿಸಿಹೋಗುವ. ||೧೭|| ಸಮುದ್ಧೃತನಿಧಾನಾನಿ, ಸಮುದ್ಧೃತ - ಶೇಖರಿಸಲ್ಪಟ್ಟ, ನಿಧಾನಾನಿ - ನಿಕ್ಷೇಪಗಳುಳ್ಳ, ಪರಿಧ್ವಸ್ತಾಜಿರಾಣಿಚ, ಪರಿಧ್ವಸ್ತ - ಧ್ವಂಸಗೊಳಿಸಿದ, ಅಜಿರಾಣಿಚ-ಅಂಗಗಳುಳ್ಳ, ಉಪಾತ್ತಧನಧಾನ್ಯಾನಿ, ಉಪಾತ್ತ - ಸಂಪಾದಿಸಲ್ಪಟ್ಟ, ಧನಧಾನ್ಯಾನಿ - ಧನಧಾನ್ಯಗಳುಳ್ಳ, ಸರ್ವಶಃ - ಎಲ್ಲರೀತಿಗಳಲ್ಲಿಯೂ, ಹೃತಸಾರಾಣಿ, ಹೃತ - ಅಪಹರಿಸಲ್ಪಟ್ಟ, ಸಾರಾಣಿ - ಅಂತಸ್ಸಾರಗಳುಳ್ಳ, ರಜಸಾ - ಧೂಳಿಗಳಿಂದ, ಅಭ್ಯವಕೀರ್ಣಾನಿ - ವ್ಯಾಪ್ತಗಳಾದ, ದೈವತೈಃ - ದೇವತೆಗಳಿಂದ, ಪರಿತ್ಯಕ್ತಾನಿ - ತ್ಯಜಿಸಲ್ಪಟ್ಟ, ಉದ್ಬಿಲೈಃ - ಭೇದಿಸಲ್ಪಟ್ಟ ರಂಧ್ರಗಳುಳ್ಳ, ಪರಿಧಾವದ್ಭಿಃ - ಓಡಾಡುತ್ತಿರುವ, ಮೂಷಕೈಃ - ಇಲಿಗಳಿಂದ, ಆವೃತಾನಿಚ - ಸುತ್ತಿಕೊಳ್ಳಲ್ಪಟ್ಟ, ಅಪೇತೋದಕಧೂಮಾನಿ, ಅಪೇತ-ಇಂಗಿಹೋದ, ಉದಕ-ಉದಕಸೇಚನಗಳೂ, ಧೂಮಾನಿ-ಧೂಮಗಳೂ ಉಳ್ಳ, ಹೀನಸಮ್ಮಾರ್ಜನಾನಿಚ, ಹೀನ - ರಹಿತವಾದ, ಸಂಮಾರ್ಜನಾನಿಚ - ಗುಡಿಸುವಿಕೆಯುಳ್ಳ,

ಮೂಲಾಧಾರನಾಗಿರುವನು. ಇತರರೆಲ್ಲರೂ ಆ ಮೂಲ ವೃಕ್ಷದ ಶಾಖೆಗಳಾಗಿಯೂ, ಎಲೆಗಳಾಗಿಯೂ, ಹೂಗಳಾಗಿಯೂ, ಫಲಗಳಾಗಿಯೂ ಇರುವರು. ಆದುದರಿಂದ ನಾವೆಲ್ಲರೂ ಪತ್ನೀ ಸಮೇತರಾಗಿ, ಬಂಧುಗಳೊಡಗೂಡಿ ರಾಮನು ಹೋಗುವ ಮಾರ್ಗದಲ್ಲಿಯೇ ಲಕ್ಷ್ಮಣನಂತೆ ಉದ್ಯಾನ ವನಗಳನ್ನೂ, ಕ್ಷೇತ್ರಗಳನ್ನೂ, ಮನೆಗಳನ್ನೂ ತ್ಯಜಿಸಿ ಸಮಾನವಾದ ದುಃಖವುಳ್ಳವರಾಗಿ ಆ ಧರ್ಮಾತ್ಮನನ್ನನುಸರಿಸಿ ಹೋಗುವ! ||೧೬-೧೭|| ಕಿತ್ತೊಗೆಯಲ್ಪಟ್ಟ ನಿಕ್ಷೇಪಗಳುಳ್ಳುದಾಗಿಯೂ, ಧ್ವಂಸಿಸಲ್ಪಟ್ಟ ಅಂಗಣಗಳುಳ್ಳುದಾಗಿಯೂ, ಬರಿದಾಗಿ ಮಾಡಲಟ್ಟ ಧನಧಾನ್ಯಗಳ ಕಣಜಗಳುಳ್ಳುದಾಗಿಯೂ, ನಿಸ್ಸಾರವಾದುದಾಗಿಯೂ, ಧೂಳಿಗಳಿಂದ ವ್ಯಾಪ್ತವಾದುದಾಗಿಯೂ, ದೇವತಾ ಶೂನ್ಯವಾದುದಾಗಿಯೂ, ರಂಧ್ರಗಳನ್ನು ಕೊರೆದು ಸ್ವತಂತ್ರವಾಗಿ ಸಂಚರಿಸುತ್ತಿರುವ ಮೂಷಕಗಳಿಂದ ಕೂಡಿದುದಾಗಿಯೂ,

ನಿಚ ‖ ಪ್ರಣಷ್ಟ ಬಲಿಕರ್ಮೇಜ್ಯಾಮಂತ್ರ ಹೋಮ ಜಪಾನಿಚ ‖ ೨೦ ‖ ದುಷ್ಕಾಲೇನೇವ ಭಗ್ನಾನಿ ಭಿನ್ನಭಾಜನವಂತಿಚ ‖ ಅಸ್ಮತ್ತ್ಯಕ್ತಾನಿ ವೇಶ್ಮಾನಿ ಕೈಕೇಯೀ ಪ್ರತಿಪದ್ಯತಾಂ ‖ ೨೧ ‖ ವನಂ ನಗರಮೇವಾಸ್ತು ಯೇನ ಗಚ್ಛತಿ ರಾಘವಃ ‖ ಅಸ್ಮಾಭಿಶ್ಚ ಪರಿತ್ಯಕ್ತಂ ಪುರಂ ಸಂಪದ್ಯತಾಂ ವನಂ ‖ ೨೨ ‖ ಬಿಲಾನಿ ದಂಷ್ಟ್ರಿಣಸ್ಸರ್ವೇ ಸಾನೂನಿ ಮೃಗಪಕ್ಷಿಣಃ ‖ ತ್ಯಜಂತ್ವಸ್ಮದ್ಭಯಾದ್ಭೀತಾ ಗಜಾಸ್ಸಿಂಹಾ ವನಾನ್ಯಪಿ ‖ ೨೩ ‖ ಅಸ್ಮತ್ತ್ಯಕ್ತಂ ಪ್ರಪದ್ಯಂತಾಂ ಸೇವ್ಯಮಾನಂ ತ್ಯಜಂತು ಚ ‖ ೨೪ ‖ ತೃಣಮಾಂಸ ಫಲಾದಾನಾಂ ದೇಶಂ

ಪ್ರಣಷ್ಟಬಲಿಕರ್ಮೇಜ್ಯಾಮಂತ್ರಹೋಮಜಪಾನಿಚ, ಪ್ರಣಷ್ಟ - ಹೋಗಲಾಡಿಸಲ್ಪಟ್ಟ, ಬಲಿ - ಪೂಜೆಗಳೂ, ಕರ್ಮ - ಕರ್ಮಗಳೂ, ಇಜ್ಯಾ - ಯಾಗಗಳು, ಮಂತ್ರ - ಯಾಗಮಂತ್ರಗಳೂ, ಹೋಮ - ಹೋಮಗಳೂ, ಜಪಾನಿಚ - ಮಂತ್ರಜಪಗಳೂ ಉಳ್ಳ, ದುಷ್ಕಾಲೇನ - ರಾಜಕ್ಷೋಭಾದಿ ದುಷ್ಟ ಕಾಲದಿಂದ, ಭಗ್ನಾನೀವ - ಮುರಿಯಲ್ಪಟ್ಟವುಗಳಂತೆ, ಭಿನ್ನಭಾಜನವಂತಿಚ, ಭಿನ್ನ-ಮುರಿದು ಹೋದ, ಭಾಜನವಂತಿಚ - ಪಾತ್ರೆಗಳುಳ್ಳ, ಅಸ್ಮತ್ಯಕ್ತಾನಿ, ಅಸ್ಮತ್ - ನಮ್ಮಿಂದ, ತ್ಯಕ್ತಾನಿ - ಬಿಡಲ್ಪಟ್ಟ, ವೇಶ್ಮಾನಿ - ಮನೆಗಳನ್ನು, ಕೈಕೇಯೀ - ಕೈಕೇಯೀದೇವಿಯು, ಪ್ರತಿಪದ್ಯತಾಂ - ಹೊಂದಲಿ. ‖ ೧೮-೨೧ ‖ ವನಂ - ವನವು, ನಗರಮೇವ - ಪಟ್ಟಣವೇ, ಅಸ್ತು-ಆಗಲಿ, ಯೇನ-ಯಾವ ವನದಿಂದ, ರಾಘವಃ - ಶ್ರೀರಾಮನು, ಗಚ್ಛತಿ - ಹೋಗುವನೋ, ಅಸ್ಮಾಭಿಶ್ಚ - ನಮ್ಮಿಂದ, ಪರಿತ್ಯಕ್ತಂ - ಬಿಡಲ್ಪಟ್ಟ, ಪುರಂ - ಪಟ್ಟಣವು, ವನಂ - ವನವೇ, ಸಂಪದ್ಯತಾಂ - ಆಗಿಹೋಗಲಿ. ‖ ೨೨ ‖ ದಂಷ್ಟ್ರಿಣಃ - ಕೋರೆಹಲ್ಲುಗಳುಳ್ಳ ಹಂದಿಗಳೇ ಮೊದಲಾದ, ಸರ್ವೇ - ಸಮಸ್ತ ಮೃಗಗಳೂ, ಬಿಲಾನಿ - ಗುಹೆಗಳನ್ನು, ತ್ಯಜಂತು - ಬಿಡಲಿ, ಮೃಗಪಕ್ಷಿಣಃ - ಮೃಗಗಳೂ ಪಕ್ಷಿಗಳೂ, ಸಾನೂನಿ - ಜರತೆಗಳನ್ನೂ, ತ್ಯಜಂತು - ಬಿಡಲಿ, ಅಸ್ಮದ್ಭಯಾತ್ - ನಮ್ಮ ಭಯದಿಂದ, ಭೀತಾಃ-ಭಯಗೊಂಡ, ಗಜಾಃ - ಆನೆಗಳೂ, ಸಿಂಹಾಃ - ಕೇಸರಿಗಳೂ, ವನಾನ್ಯಪಿ - ವನಗಳನ್ನೂ, ತ್ಯಜಂತು - ಬಿಡಲಿ. ‖ ೨೩ ‖ ಅಸ್ಮತ್ತ್ಯಕ್ತಂ-ನಮ್ಮಿಂದ ಬಿಡಲ್ಪಟ್ಟ ಪ್ರದೇಶವನ್ನು,ಪ್ರಪದ್ಯಂತಾಂ-ಹೊಂದಲಿ, ಸೇವ್ಯಮಾನಂ - ಸೇವಿಸಲ್ಪಟ್ಟುದನ್ನು, ತ್ಯಜಂತುವೈ - ಬಿಡಲಿ. ‖ ೨೪ ‖ ತೃಣ

ನೀರು ಹೊಗೆಯಿಂದ ತ್ಯಜಿಸಲ್ಪಟ್ಟುದಾಗಿಯೂ, ಸಂಮಾರ್ಜನ ರಹಿತವಾಗಿಯೂ, ಪೂಜೆ, ಕರ್ಮ, ಯಜ್ಞ, ಹೋಮ ಮಂತ್ರಗಳಿಲ್ಲದುದಾಗಿಯೂ, ಮುರುಕು ಪಾತ್ರೆಗಳುಳ್ಳುದಾಗಿಯೂ ಇರುವ ನಮ್ಮ ಮನೆಗಳನ್ನು ನಾವು ತೊರೆದರೆ, ಆ ಕೈಕೇಯಿಯೇ ಅವುಗಳೆಲ್ಲವನ್ನೂ ತೆಗೆದುಕೊಳ್ಳಲಿ. ‖ ೧೮-೨೧ ‖ ಶ್ರೀರಾಮಮೂರ್ತಿಯು ವಾಸಮಾಡುವ ಅರಣ್ಯವೇ ಪಟ್ಟಣವಾಗಲಿ. ನಮ್ಮಿಂದ ತ್ಯಜಿಸಲ್ಪಟ್ಟ ಈ ಪಟ್ಟಣವೇ ಅರಣ್ಯವಾಗಲಿ. ಕಾಡುಹಂದಿಗಳೇ ಮೊದಲಾದುವೂ, ಮೃಗಪಕ್ಷ್ಯಾದಿಗಳೂ ನಮ್ಮ ಭಯದಿಂದ ಗುಹೆಗಳನ್ನೂ, ಜರತೆಗಳನ್ನೂ, ವನಗಳನ್ನೂ ಬಿಟ್ಟು ನಮ್ಮಿಂದ ಬಿಡಲ್ಪಟ್ಟ ಈ ಅರಣ್ಯವನ್ನು ಸೇರಲಿ. ಹುಲ್ಲುಗಳನ್ನೂ, ಮಾಂಸಗಳನ್ನೂ, ಫಲಗಳನ್ನೂ ಭುಜಿಸುತ್ತಿರುವ ಪ್ರದೇಶವನ್ನು ಮೃಗಗಳೂ, ಹಕ್ಕಿಗಳೂ ಸೇರಲಿ. ಇಂತಹವುಗಳನ್ನೆಲ್ಲ ಆ ಕೈಕೇಯಿಯು ತನ್ನ ಮಗನೊಡಗೂಡಿ

ವ್ಯಾಳ ಮೃಗದ್ವಿಜಂ ॥ ಪ್ರಪದ್ಯತಾಂ ಹಿ ಕೈಕೇಯೀ ಸಪುತ್ರಾ ಸಹಬಾಂಧವೈಃ॥ ರಾಘವೇಣ ವನೇ ಸರ್ವೇ ಸಹ ವತ್ಸ್ಯಾಮ ನಿರ್ವೃತಾಃ ॥ ೨೫ ॥ ಇತ್ಯೇವಂ ವಿವಿಧಾ ವಾಚೋ ನಾನಾಜನ ಸಮೀರಿತಾಃ ॥ ಶುಶ್ರಾವ ರಾಮಃ ಶ್ರುತ್ವಾಚ ನವಿಚಕ್ರೇಽಸ್ಯಮಾನಸಂ ॥ ೨೬ ॥ ಸತು ವೇಶ್ಮ ಪಿತುರ್ದೂರಾತ್ ಕೈಲಾಸ ಶಿಖರಪ್ರಭಂ ॥ ಅಭಿಚಕ್ರಾಮ ಧರ್ಮಾತ್ಮಾ ಮತ್ತ ಮಾತಂಗ ವಿಕ್ರಮಃ ॥೨೭॥ ವಿನೀತ ವೀರಪುರುಷಂ ಪ್ರವಿಶ್ಯತು ನೃಪಾಲಯಂ ॥ ದದರ್ಶಾವಸ್ಥಿತಂ ದೀನಂ ಸುಮಂತ್ರ ಮವಿದೂರತಃ ॥ ೨೮ ॥ ಪ್ರತೀಕ್ಷಮಾಣೋಽಪಿ ಜನಂ ತದಾರ್ತ

ಮಾಂಸಫಲಾದಾನಾಂ, ತೃಣ - ತೃಣಗಳನ್ನೂ, ಮಾಂಸ - ಮಾಂಸಗಳನ್ನೂ, ಫಲ - ಫಲಗಳನ್ನೂ, ಆದಾನಾಂ - ಭಕ್ಷಣೆಮಾಡುತ್ತಿರುವವರ, ದೇಶಂ - ಪ್ರದೇಶವನ್ನು, ವ್ಯಾಳಮೃಗದ್ವಿಜಂ, ವ್ಯಾಳ - ಸರ್ಪಗಳೂ, ಮೃಗ - ಮೃಗಗಳೂ, ದ್ವಿಜಂ - ಪಕ್ಷಿಗಳೂ ಉಳ್ಳದ್ದನ್ನಾಗಿ, ಕೈಕೇಯೀ - ಕೈಕೇಯೀ ದೇವಿಯು, ಸಪುತ್ರಾ - ಮಗನಿಂದೊಡಗೂಡಿ, ಬಾಂಧವೈಸ್ಸಹ - ಬಂಧು ಜನರೊಡನೆ, ಪ್ರಪದ್ಯ ತಾಂಹಿ - ಹೊಂದಲಿ, ಸರ್ವೇ - ಸಮಸ್ತರಾದ ನಾವು, ರಾಘವೇಣಸಹ - ಶ್ರೀರಾಮನೊಡನೆ, ನಿರ್ವೃತಾಃ - ಸುಖಿತರಾಗಿ, ವನೇ - ವನದಲ್ಲಿ, ಸಹವತ್ಸ್ಯಾಮಃ - ಕೂಡಿರೋಣ. ॥ ೨೫ ॥ ರಾಮಃ - ಶ್ರೀರಾಮನು, ಇತ್ಯೇವಂ - ಈಪರಿಯಾಗಿ, ನಾನಾಜನಸಮೀರಿತಾಃ - ಅನೇಕ ಜನರಿಂದ ಹೇಳಲ್ಪಟ್ಟ, ವಿವಿಧಾಃ - ನಾನಾ ಬಗೆಗಳಾದ, ವಾಚಃ - ಮಾತುಗಳನ್ನು, ಶುಶ್ರಾವ - ಕೇಳಿದರೂ, ಅಸ್ಯ - ಈ ಶ್ರೀರಾಮನ, ಮಾನಸಂ - ಮನಸ್ಸನ್ನು, ನವಿಚಕ್ರೇ - ವಿಕಾರವನ್ನು ಹೊಂದಿಸಲಿಲ್ಲ. ॥ ೨೬ ॥ ಮತ್ತಮಾತಂಗವಿಕ್ರಮಃ - ಮದವೇರಿದ ಆನೇಯತೆರದಿ ಗಮಿಸುತ್ತಿರುವ, ಧರ್ಮಾತ್ಮಾ- ಧರ್ಮಿಷ್ಠನಾದ, ಸಃ - ಶ್ರೀರಾಮನು, ಕೈಲಾಸಶಿಖರಪ್ರಭಂ - ಕೈಲಾಸದಶಿಖರದಂತೆ ಕಾಂತಿಯುಳ್ಳ, ಪಿತುಃ - ತಂದೆಯ, ವೇಶ್ಮ - ಮನೆಯನ್ನು ಕುರಿತು, ದೂರಾತ್ - ದೂರದಿಂದ, ಅಭಿಚಕ್ರಾಮ - ನಡೆದು ಬಂದನು. ॥ ೨೭ ॥ ವಿನೀತವೀರಪುರುಷಂ, ವಿನೀತ - ಹೋಗಲಾಡಿಸಲ್ಪಟ್ಟ, ವೀರ ಪುರುಷಂ - ಶೂರಪುರುಷರುಳ್ಳ, ನೃಪಾಲಯಂ - ಅರಮನೆಯನ್ನು, ಪ್ರವಿಶ್ಯ - ಹೊಕ್ಕು, ಅವಿದೂರತಃ - ಸಮೀಪದಲ್ಲಿ, ಅವಸ್ಥಿತಂ - ಕುಳಿತುಕೊಂಡಿರುವ, ದೀನಂ - ದೀನನಾದ, ಸುಮಂತ್ರಂ - ಸುಮಂತ್ರನನ್ನು, ದದರ್ಶ - ಕಂಡನು. ॥ ೨೮ ॥ ತದಾ - ಆ ಕಾಲದಲ್ಲಿ, ಅನಾರ್ತರೂಪಃ -

---

ಹೊಂದುವಳಾಗಲಿ. ನಾವೆಲ್ಲರೂ, ಶ್ರೀರಾಮನೊಡನೆ ಅರಣ್ಯಕ್ಕೆ ಹೋಗಿ ಸುಖದಿಂದಿರೋಣ. ॥ ೨೨-೨೫ ॥ ಇಂತು ನುಡಿಯುತ್ತಿರುವ ಪುರಜನರ ನುಡಿಗಳನ್ನು ಶ್ರೀರಾಮನು ಕೇಳಿ ಏನೊಂದೂ ವಿಕಾರವನ್ನು ಹೊಂದದೆ, ಕೈಲಾಸಗಿರಿಯಂತೆ ಮಹದುನ್ನತವಾದ ತನ್ನ ತಂದೆಯ ಅರಮನೆಯನ್ನು ಕುರಿತು ಕಾಲ್ನಡಿಗೆಯಿಂದಲೇ ಬಂದವನಾಗಿ, ಶೂರರಿಂದ ರಹಿತವಾದ ಆತನ ಗೃಹವನ್ನು ಒಳಹೊಕ್ಕು ಸಮೀಪದಲ್ಲಿಯೇ ಕುಳಿತುಕೊಂಡಿರುವ ದೀನನಾದ ಸುಮಂತ್ರನನ್ನು ಕಂಡನು. ಆಗಲಾ ರಾಮಮೂರ್ತಿಯು ದುಃಖಹೀನವಾದ ಆಕಾರವುಳ್ಳವನಾಗಿ, ದೈನ್ಯವನ್ನುಹೊಂದಿದ ಅಲ್ಲಿನ ಜನರನ್ನು ನೋಡಿದರೂ ನಸುನಗೆಯುಳ್ಳವನಾಗಿಯೇ ಇರುತ್ತಾ, ತಂದೆಯ ಆಜ್ಞೆಯನ್ನು ನೆರವೇರಿಸಲು ಬಯಸಿ ಆತನನ್ನು ಕಾಣಲು

ಮನಾರ್ತರೂಪಃ ಪ್ರಹಸನ್ನಿವಾಥ ॥ ಜಗಾಮ ರಾಮಃ ಪಿತರಂ ದಿದೃಕ್ಷುಃ
ಪಿತುರ್ನಿದೇಶಂ ವಿಧಿವಚ್ಚಿಕೀರ್ಷುಃ ॥ ೨೯ ॥ ತತ್ಪೂರ್ವ ಮೈಕ್ಷ್ವಾಕು
ಸುತೋ ಮಹಾತ್ಮಾ ರಾಮೋ ಗಮಿಷ್ಯನ್ವನ ಮಾರ್ತರೂಪಂ ॥ ವ್ಯತಿಷ್ಠತ
ಪ್ರೇಕ್ಷ್ಯ ತದಾ ಸುಮಂತ್ರಂ ಪಿತು ರ್ಮಹಾತ್ಮಾ ಪ್ರತಿಹಾರಣಾರ್ಥಂ ॥ ೩೦ ॥

ಪಿತುರ್ನಿದೇಶೇನತು ಧರ್ಮ ವತ್ಸಲೋ
ವನಪ್ರವೇಶೇ ಕೃತಬುದ್ಧಿ ನಿಶ್ಚಯಃ ॥
ಸ ರಾಘವಃ ಪ್ರೇಕ್ಷ್ಯ ಸುಮಂತ್ರ ಮಬ್ರವೀತ್
ನಿವೇದಯ ಸ್ವಾಗಮನಂ ನೃಪಾಯ ಮೇ ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯಸ್ತ್ರಿಂಶಸ್ಸರ್ಗಃ.

ದುಃಖವಿಲ್ಲದಿರುವ ಆಕಾರವುಳ್ಳ, ರಾಮಃ - ಶ್ರೀರಾಮನು, ಆರ್ತಂ - ದೀನವಾದ, ಜನಂ - ಜನವನ್ನು, ಪ್ರತೀಕ್ಷಮಾಣೋಪಿ - ನೋಡುತ್ತಿರುವನಾದರೂ, ಪ್ರಹಸನ್ನಿವ - ನಗುತ್ತಿರುವನಂತೆ, ಪಿತರಂ - ತಂದೆಯಾದ ದಶರಥರಾಯನನ್ನು, ದಿದೃಕ್ಷುಃ - ನೋಡಲಿಚ್ಛೆಯುಳ್ಳವನಾಗಿ, ಪಿತುಃ - ತಂದೆಯ, ನಿದೇಶಂ - ಆಜ್ಞೆಯನ್ನು, ವಿಧಿವತ್ - ಯಥಾ ಶಾಸ್ತ್ರವಾಗಿ, ಚಿಕೀರ್ಷುಃ - ಮಾಡುವದಕ್ಕೆ ಇಚ್ಛೆಯುಳ್ಳವನಾಗಿ, ಜಗಾಮ - ತೆರಳಿದನು. ॥ ೨೯ ॥ ಇಕ್ಷ್ವಾಕಸುತಃ - ಇಕ್ಷ್ವಾಕು ಮಹಾರಾಯನ ವಂಶಕ್ಕೆ ಮಗನಾದ, ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ರಾಮಃ - ಶ್ರೀರಾಮನು, ವನಂ - ವನವನ್ನು ಕುರಿತು, ಗಮಿಷ್ಯ - ಹೋಗುತ್ತ, ತತ್ಪೂರ್ವಂ - ಆ ವನಪ್ರಯಾಣ ಮೊದಲುಗೊಂಡು, ಆರ್ತರೂಪಂ - ದೀನವಾದ ಸ್ವರೂಪವುಳ್ಳ, ಸುಮಂತ್ರಂ - ಸುಮಂತ್ರನನ್ನು, ತದಾ - ಆ ಕಾಲದಲ್ಲಿ, ಪ್ರೇಕ್ಷ್ಯ - ಕಂಡು, ಪಿತುಃ - ತಂದೆಗೆ, ಪ್ರತಿಹಾರಣಾರ್ಥಂ - ತನ್ನಾಗಮನವನ್ನು ತಿಳಿಸುವನಿಮಿತ್ತ, ವ್ಯತಿಷ್ಠತ - ನಿಂತನು. ॥ ೩೦ ॥ ಧರ್ಮವತ್ಸಲಃ - ಧರ್ಮದಲ್ಲಿ ವಾತ್ಸಲ್ಯವುಳ್ಳ, ಸರಾಘವಃ - ಆ ಶ್ರೀರಾಮನು, ಪಿತುಃ - ತಂದೆಯ, ನಿದೇಶೇನ - ಆಜ್ಞಾವಚನದಿಂದ, ವನಪ್ರವೇಶೇ - ವನವಾಸದಲ್ಲಿ, ಕೃತಬುದ್ಧಿನಿಶ್ಚಯಃ, ಕೃತ - ಮಾಡಲ್ಪಟ್ಟ, ಬುದ್ಧಿನಿಶ್ಚಯಃ - ನಿಶ್ಚಯಬದ್ಧಿಯುಳ್ಳವನಾಗಿ, ಸುಮಂತ್ರಂ - ಸುಮಂತ್ರನನ್ನು, ಪ್ರೇಕ್ಷ್ಯ - ಕಂಡು, ಮೇ - ನನ್ನ, ಆಗಮನಂ - ಬರುವಿಕೆಯನ್ನು, ನೃಪಾಯ - ರಾಜನಿಗೆ, ನಿವೇದಯಸ್ವ-ತಿಳಿಸು, (ಇತಿ-ಇಂತೆಂದು, ಅಬವೀತ್ - ನುಡಿದನು.) ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯಸ್ತ್ರಿಂಶಸ್ಸರ್ಗಃ.

ಹೊರಟನು. ಆಗ ಹಿಂದೆಯೇ ಶ್ರೀರಾಮನು ಅರಣ್ಯಕ್ಕೆ ತೆರಳುವನೆಂದು ತಿಳಿದು ದುಃಖಿಸುತ್ತಿರುವ ಸುಮಂತ್ರನನ್ನು ಕುರಿತು ಶ್ರೀರಾಮನು “ ಎಲೈ ಸುಮಂತ್ರನೆ ! ತಂದೆಯಾಣತಿಯಂತೆ ವನವಾಸವಂ ಗೈಯ್ಯಬೇಕೆಂದು ನಿಶ್ಚಯಿಸಿಕೊಂಡಿರುವೆನು. ಅದಕ್ಕಾಗಿಯೇ ಈಗ ನಾನು ಬಂದಿರುವುದು ಈ ವಿಷಯವನ್ನು ನಮ್ಮ ತಂದೆಯವರಿಗೆ ತಿಳಿಸುವವನಾಗು.” ಎಂದು ಹೇಳಿದನು. ॥ ೨೬-೩೧ ॥

ಇಂತಿದು ಶ್ರೀರಾಮನು ಜನಕನಾಣತಿಗಾಗಿ ಆತನರಮನೆಗೆ ಬಿಜಯಂಗೈದ ವೃತ್ತಾಂತವನ್ನೊಸಗುವ ಮೂವತ್ತಮೂರನೆಯ ಅಧ್ಯಾಯವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುಸ್ತ್ರಿಂಶಸ್ಸರ್ಗಃ.

ತತಃ ಕಮಲಪತ್ರಾಕ್ಷ ಶ್ಶ್ಯಾಮೋ ನಿರುದರೋ ಮಹಾನ್ || ಉವಾಚ ರಾಮ ಸ್ತಂಸೂತಂ ಪಿತುರಾಖ್ಯಾಹಿ ಮಾಮಿತಿ || ೧ || ಸ ರಾಮ ಪ್ರೇಷಿತಃ ಕ್ಷಿಪ್ರಂ ಸಂತಾಪ ಕಲುಷೇಂದ್ರಿಯಃ || ಪ್ರವಿಶ್ಯ ನೃಪತಿಂ ಸೂತೋ ನಿಶ್ವಸಂತಂ ದದರ್ಶಹ || ೨ || ಉಪರಕ್ತ ಮಿವಾದಿತ್ಯಂ ಭಸ್ಮಚ್ಛನ್ನ ಮಿವಾನಲಂ || ತಟಾಕಮಿವ ನಿಸ್ತೋಯ ಮಪಶ್ಯ ಜ್ಜಗತೀಪತಿಂ || ೩ || ಆಲೋಕ್ಯತು ಮಹಾ ಪ್ರಾಜ್ಞಃ ಪರಮಾಕುಲ ಚೇತಸಂ || ರಾಮಮೇವಾನುಶೋಚಂತಂ ಸೂತಃ ಪ್ರಾಂಜಲಿ ರಾಸದತ್ || ೪ || ತಂ ವರ್ಧಯಿತ್ವಾ ರಾಜಾನಂ ಸೂತಃ

ತತಃ - ಬಳಿಕ, ಕಮಲಪತ್ರಾಕ್ಷಃ - ಕಮಲದಳಗಳಂತೆ ನೇತ್ರಗಳುಳ್ಳ, ಶ್ಯಾಮಃ - ನೀಲ ಮೇಘಶ್ಯಾಮನಾದ, ನಿರುದರಃ - ಸೂಕ್ಷ್ಮವಾದ ಮಧ್ಯಪ್ರದೇಶವುಳ್ಳ, ಮಹಾನ್ - ಮಹಾತ್ಮನಾದ, ರಾಮಃ - ಶ್ರೀರಾಮನು, ತಂಸೂತಂ - ಆ ಸುಮಂತ್ರನನ್ನು ಕುರಿತು, ಮಾಂ - ನನ್ನನ್ನು, ಪಿತುಃ - ತಂದೆಗೆ, ಆಖ್ಯಾಹೀತಿ - ಹೇಳೆಂದು, ಉವಾಚ - ಹೇಳಿದನು. || ೧ || ಸಸೂತಃ-ಆ ಸುಮಂತ್ರನು, ರಾಮ ಪ್ರೇಷಿತಃ - ಶ್ರೀರಾಮನಿಂದ ಪ್ರೇರಿತನಾಗಿ, ಸಂತಾಪಕಲುಷೇಂದ್ರಿಯಃ - ಸಂಕಟದಿಂದ ವ್ಯಾಕುಲಗಳಾದ ಇಂದ್ರಿಯಗಳುಳ್ಳವನಾಗಿ, ಕ್ಷಿಪ್ರಂ - ಬೇಗನೆ, ಪ್ರವಿಶ್ಯ - ಹೊಕ್ಕು, ನಿಶ್ವಸಂತಂ - ನಿಟ್ಟುಸಿರಿತ್ತಿರುವ, ನೃಪತಿಂ - ರಾಜನನ್ನು, ದದರ್ಶಹ - ಕಂಡನಷ್ಟೆ. || ೨ || ಉಪರಕ್ತಂ - ರಾಹುಗ್ರಸ್ತನಾದ, ಆದಿತ್ಯಮಿವ - ಸೂರ್ಯನಂತಿರುವ, ಭಸ್ಮಚ್ಛನ್ನಂ - ಬೂದಿಮುಚ್ಚಿದ, ಅನಲಮಿವ - ಅಗ್ನಿಯಂತಿರುವ, ಜಗತೀಪತಿಂ - ಪೃಥ್ವೀಪತಿಯಾದ ದಶರಥರಾಯನನ್ನು, ಅಪಶ್ಯತ್ - ಕಂಡನು. || ೩ || ಮಹಾ ಪ್ರಾಜ್ಞಃ - ಮಹಾ ಪ್ರಜ್ಞಾವಂತನಾದ, ಸೂತಃ - ಸುಮಂತ್ರನು, ಪರಮಾಕುಲ ಚೇತಸಂ - ಬಹಳವಾಗಿ ಕದಡಿಹೋದ ಮನಸ್ಸುಳ್ಳ, ರಾಮಮೇವ - ಶ್ರೀರಾಮನನ್ನೇ ಕುರಿತು, ಅನುಶೋಚಂತಂ - ಅಳುತ್ತಿರುವ, ತಂ - ಆ ದಶರಥರಾಯನನ್ನು ಕುರಿತು, ಪ್ರಾಂಜಲಿಃ - ಅಂಜಲಿ ಬದ್ಧನಾಗಿ, ಅಸದತ್ - ಸಮೀಪವರ್ತಿಯಾದನು. || ೪ || ಸೂತಃ - ಸುಮಂತ್ರನು, ತಂ

ಕಮಲ ಪತ್ರಗಳಂತೆ ನೇತ್ರಗಳುಳ್ಳವನಾಗಿಯೂ, ನೀಲಮೇಘಶ್ಯಾಮಲನಾಗಿಯೂ ಇರುವ ಮಹಾತ್ಮನಾದ ಶ್ರೀರಾಮನು ತನ್ನಾಗಮನವನ್ನು ತಂದೆಗೆ ತಿಳಿಸೆಂದು ನುಡಿದವನಾಗಲು, ಆ ಸುಮಂತ್ರನಾತನಿಂದ ಪ್ರೇರಿತನಾಗಿ ಸಂತಾಪದಿಂದ ವ್ಯಾಕುಲವಾದ ಇಂದ್ರಿಯಗಳುಳ್ಳವನಾಗಿ, ಜಾಗ್ರತೆಯಾಗಿ ಹೊರಟು, ನಿಟ್ಟುಸಿರುಗಳನ್ನು ಬಿಡುತ್ತ, ರಾಹುಗ್ರಸ್ತನಾದ ಸೂರ್ಯನಂತೆಯೂ, ಬೂದಿ ಮುಚ್ಚಿದ ಕೆಂಡದಂತೆಯೂ, ಇಂಗಿಹೋದ ಜಲವುಳ್ಳ ತಟಾಕದಂತೆಯೂ ಇರುವ, ಪ್ರಭುವಾದ ಆ ದಶರಥರಾಯನನ್ನು ಕಂಡು, ಖತಿಯಾಂತ ಮನೋವೃತ್ತಿಯುಳ್ಳವನಾಗಿ, ಕೈಗಳನ್ನು ಜೋಡಿಸಿಕೊಂಡು ಜಯಾಶಿಷಗಳನ್ನು ಹೇಳಿ

ಪೂರ್ವಂ ಜಯಾಶಿಷಾ ॥ ಭಯವಿಕ್ಲಬಯಾ ವಾಚಾ ಮಂದಯಾ ಶ್ಲಕ್ಷ್ಣ
ಮಬ್ರವೀತ್ ॥೫॥ ಅಯಂ ಸ ಪುರುಷವ್ಯಾಘ್ರೋ ದ್ವಾರಿ ತಿಷ್ಠತಿ ತೇ ಸುತಃ ॥
ಬ್ರಾಹ್ಮಣೇಭ್ಯೋ ಧನಂ ದತ್ವಾ ಸರ್ವಂ ಚೈವೋಪಜೀವಿನಾಂ ॥೬॥ ಸತ್ವಾ
ಪಶ್ಯತು ಭದ್ರಂ ತೇ ರಾಮ ಸ್ಸತ್ಯಪರಾಕ್ರಮಃ ॥ ಸರ್ವಾನ್ ಸುಹೃದ ಆಪೃಚ್ಛ್ಯ
ತ್ವಾಮಿದಾನೀಂ ದಿದೃಕ್ಷತೇ ॥೭॥ ಗಮಿಷ್ಯತಿ ಮಹಾರಣ್ಯಂ ತಂ ಪಶ್ಯ
ಜಗತೀಪತೇ ॥ ವೃತಂ ರಾಜಗುಣೈ ಸ್ಸರ್ವೈರಾದಿತ್ಯ ಮಿವರಶ್ಮಿಭಿಃ ॥೮॥
ಸ ಸತ್ಯವಾದೀ ಧರ್ಮಾತ್ಮಾ ಗಾಂಭೀರ್ಯಾ ತ್ಸಾಗರೋಪಮಃ ॥ ಆಕಾಶ ಇವ

ರಾಜಾನಂ - ಆ ಅರಸನನ್ನು, ಪೂರ್ವಂ - ಮೊದಲು, ಜಯಾಶಿಷಾ - ಜಯಾಶೀರ್ವಚನದಿಂದ, ವರ್ಧಯಿತ್ವಾ - ವೃದ್ಧಿಗೊಳಿಸಿ, ಭಯ ವಿಕ್ಲಬಯಾ, ಭಯ - ಭೀತಿಯಿಂದ, ವಿಕ್ಲಬಯಾ - ವ್ಯಾಕುಲಾಕ್ಷರಗಳುಳ್ಳ, ಮಂದಯಾ - ಮೆಲ್ಲಮೆಲ್ಲಗಿರುವ, ವಾಚಾ - ಮಾತಿನಿಂದ, ಶ್ಲಕ್ಷ್ಣಂ-ಮೃದುವಾಗಿ, ಅಬ್ರವೀತ್ - ನುಡಿದನು. ॥೫॥ ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ, ತೇ - ನಿನಗೆ, ಸುತಃ - ಕುವರನಾದ, ಸೋಽಯಂ - ಅಂತಹ ಶ್ರೀರಾಮನು, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೂ, ಉಪಜೀವಿನಾಂಚೈವ - ಆಶ್ರಿತರಿಗೂ, ಸರ್ವಂ - ಸಮಸ್ತವಾದ, ಧನಂ - ಧನವನ್ನು, ದತ್ವಾ - ಕೊಟ್ಟು, ದ್ವಾರೇ - ಬಾಗಿಲಲ್ಲಿ, ತಿಷ್ಠತಿ - ನಿಂತಿರುತ್ತಾನೆ. ॥೬॥ ಸತ್ಯಪರಾಕ್ರಮಃ - ಸತ್ಯದಿಂದ ಪರಾಕ್ರಮಶಾಲಿಯಾದ, ಸರಾಮಃ - ಆ ಶ್ರೀರಾಮನು, ಸರ್ವಾನ್ - ಸಮಸ್ತರಾದ, ಸುಹೃದಃ - ಸ್ನೇಹಿತರನ್ನು, ಆಪೃಚ್ಛ್ಯ - ಕೇಳಿ, ತ್ವಾಂ - ನಿನ್ನನ್ನು, ಇದಾನೀಂ - ಈಗ, ದಿದೃಕ್ಷತೇ-ನಿರೀಕ್ಷಿಸಿಕೊಂಡಿದಾನೆ, ಸಃ - ಆ ಶ್ರೀರಾಮನು, ಪಶ್ಯತು - ನೋಡಲಿ, ತೇ - ನಿನಗೆ, ಭದ್ರಂ - ಮಂಗಳವು, ಅಸ್ತು - ಆಗಲಿ. ॥೭॥ ಮಹಾರಣ್ಯಂ - ದೊಡ್ಡ ಅರಣ್ಯವನ್ನು ಕುರಿತು, ಗಮಿಷ್ಯತಿ - ಹೋಗುವನು, ಹೇ ಜಗತೀಪತೇ - ಎಲೈ ಪೃಥ್ವೀಪತಿಯೇ, ರಶ್ಮಿಭಿಃ - ಕಿರಣಗಳಿಂದ, ಆದಿತ್ಯಮಿವ - ಸೂರ್ಯನಂತೆ, ಸರ್ವೈಃ - ಸಮಸ್ತವಾದ, ರಾಜಗುಣೈಃ - ರಾಜಗುಣಗಳಿಂದ, ವೃತಂ - ತುಂಬಿರುವ, ತಂ - ಆ ಶ್ರೀರಾಮನನ್ನು, ಪಶ್ಯ - ನೋಡು. ॥೮॥ ಸತ್ಯವಾದೀ - ಸಫಲವಾದ ವಾಕ್ಯವುಳ್ಳ, ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳ, ಗಾಂಭೀರ್ಯಾತ್-ಗಂಭೀರತೆಯಿಂದ, ಸಾಗರೋಪಮಃ-

---

ಸಮೀಪವನ್ನು ಸಾರಿ, ಪ್ರಭುವೆಂಬ ಭಯದಿಂದ ವ್ಯತ್ಯಸ್ತವಾದ ಅಕ್ಷರಗಳುಳ್ಳಂತೆ ಮೆಲ್ಲಮೆಲ್ಲನೆ ಬಹು ಮೃದುವಾಗಿ ಹೀಗೆಂದನು. ॥೧-೫॥ “ಪ್ರಭುವೆ! ನಿನ್ನ ಕುಮಾರನೂ, ಪುರುಷೋತ್ತಮನೂ ಆದ ಶ್ರೀರಾಮನು ಬ್ರಾಹ್ಮಣರಿಗೂ, ತನ್ನಾಶ್ರಿತರಿಗೂ ಬಹಳವಾದ ದಾನಮಾನಗಳನ್ನಿತ್ತು, ಸ್ನೇಹಿತರೆಲ್ಲರಿಗೂ ತನ್ನ ಅರಣ್ಯಗಮನವನ್ನು ಹೇಳಿ ಸಂತೈಸಿ, ಈಗ ನಿನ್ನನ್ನು ನೋಡಲಪೇಕ್ಷಿಸುತ್ತಾನೆ. ಆತನೀಗ ಅರಣ್ಯಕ್ಕೆ ತೆರಳುತ್ತಾನೆ. ಕಿರಣಗಳಿಂದ ಸೂರ್ಯನು ಕೂಡಿಕೊಂಡಿರುವಂತೆ ನಮ್ಮ ಶ್ರೀರಾಮನು ಅನಂತಕಲ್ಯಾಣ ಗುಣಗಳಿಂದ ಕೂಡಿಕೊಂಡಿರುವನು. ಇಂತಹನನ್ನು ನೋಡುವವನಾಗು.” ॥೬-೮॥ ಸುಮಂತ್ರ, ನಿಂತೆನಲು ಸತ್ಯಪ್ರತಿಜ್ಞೆಯುಳ್ಳವನಾಗಿಯೂ, ಧರ್ಮದಲ್ಲಿಯೇ ನ್ಯಸ್ತಚಿತ್ತತೆಯುಳ್ಳವನಾಗಿಯೂ, ಸಮುದ್ರದಂತೆ ಗಾಂಭೀರ್ಯವುಳ್ಳವನಾಗಿಯೂ, ಆಕಾಶದಂತೆ ನಿರ್ಮಲನಾ

ನಿಷ್ಪಂಕೋ ನರೇಂದ್ರಃ ಪ್ರತ್ಯುವಾಚ ತಂ ॥ ೯ ॥ ಸುಮಂತ್ರಾನಯ ಮೇ ದಾರಾ೯ ಯೇ ಕೇಚಿದಿಹ ಮಾಮಕಾಃ ॥ ದಾರೈಃ ಪರಿವೃತ ಸ್ಸರ್ವೈ ರ್ದ್ರಷ್ಟು ಮಿಚ್ಛಾಮಿ ಧಾರ್ಮಿಕಂ ॥ ೧೦ ॥ ಸೋಂತಃಪುರಂ ಪ್ರವಿಶ್ಯಾಶು ಸ್ತ್ರಿಯಸ್ತಾ ವಾಕ್ಯ ಮಬ್ರವೀತ್ ॥ ಆರ್ಯಾಹ್ವಯತಿ ವೋ ರಾಜಾ ಗಮ್ಯತಾಂ ತತ್ರ ಮಾಚಿರಂ ॥ ೧೧ ॥ ಏವಮುಕ್ತಾಃ ಸ್ತ್ರಿಯಸ್ಸರ್ವಾ ಸ್ಸುಮಂತ್ರೇಣ ನೃಪಾ ಜ್ಞಯಾ ॥ ಪ್ರಚಕ್ರಮು ಸ್ತದ್ಭವನಂ ಭರ್ತುರಾಜ್ಞಾಯ ಶಾಸನಂ ॥ ೧೨ ॥ ಅರ್ಧಸಪ್ತಶತಾ ಸ್ತಾಸ್ತು ಪ್ರಮದಾ ಸ್ತಾಮ್ರಲೋಚನಾಃ ॥ ಕೌಸಲ್ಯಾಂ ಪರಿ

ಕಡಲಿಗೆ ಸಮಾನನಾದ, ಆಕಾಶಇವ - ಆಕಾಶದಂತೆ, ನಿಷ್ಪಂಕಃ - ನಿರ್ಮಲವಾದ, ಸನರೇಂದ್ರಃ - ಆ ದಶರಥರಾಯನು, ತಂ - ಆ ಸುಮಂತ್ರನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥ ೯ ॥ ಹೇ ಸುಮಂತ್ರ - ಎಲೈ ಸುಮಂತ್ರನೇ, ಇಹ - ಈ ಅಂತಃಪುರದಲ್ಲಿ, ಮಾಮಕಾಃ - ನನ್ನ ಸಂಬಂಧಿಗಳಾದ, ಕೇಚಿತ್ - ಕೆಲವರು, ದಾರಾಃ - ಹೆಂಡತಿಯರು, ಯೇ - ಯಾರು ಇರುವರೋ, ಮೇ - ನನ್ನ, ತಾ೯ದಾರಾ೯ - ಆ ಹೆಂಡತಿಯರನ್ನು, ಆನಯ - ಕರೆದುಕೊಂಡುಬಾ, ಸರ್ವೈಃ - ಸಮಸ್ತರಾದ, ದಾರೈಃ - ಹೆಂಡತಿಯರಿಂದ, ಪರಿವೃತಃ - ಪರಿವೃತನಾಗಿ, ಧಾರ್ಮಿಕಂ - ಧರ್ಮಿಷ್ಠನಾದ ಶ್ರೀರಾಮನನ್ನು, ದ್ರಷ್ಟುಂ - ನೋಡುವದಕ್ಕೆ, ಇಚ್ಛಾಮಿ - ಬಯಸುತ್ತೇನೆ. ॥ ೧೦ ॥ ಸಃ - ಆ ಸುಮಂತ್ರನು, ಅಂತಃಪುರಂ - ಅಂತಃಪುರವನ್ನು ಕುರಿತು, ಆಶು - ಜಾಗ್ರತೆಯಾಗಿ, ಪ್ರವಿಶ್ಯ - ಹೊಕ್ಕು, ತಾಸ್ತ್ರಿಯಃ - ಆ ಹೆಂಗಸರನ್ನು ಕುರಿತು, ಆರ್ಯಾಃ - ಪೂಜ್ಯನಾದ, ರಾಜಾ- ಅರಸು, ವಃ - ನಿಮ್ಮನ್ನು, ಆಹ್ವಯತಿ - ಕರೆಯುತ್ತಾನೆ, ತತ್ರ - ಅಲ್ಲಿ, ಗಮ್ಯತಾಂ - ಹೋಗಲ್ಪಡಲಿ, ಮಾಚಿರಂ - ಸಾವಕಾಶವಾಗದಿರಲಿ, ಇತಿ - ಇಂತೆಂದು, ವಾಕ್ಯಂ - ಮಾತನ್ನು, ಅಬ್ರವೀತ್- ನುಡಿದನು. ॥ ೧೧ ॥ ಸರ್ವಾಃ - ಸಮಸ್ತರಾದ, ಸ್ತ್ರಿಯಃ - ಹೆಂಗಸರು, ಸುಮಂತ್ರೇಣ - ಸುಮಂತ್ರನಿಂದ, ನೃಪಾಜ್ಞಯಾ - ರಾಜಾಜ್ಞೆಯಿಂದ, ಏವಮುಕ್ತಾಃ - ಈಪರಿಯಾಗಿ ಹೇಳಲ್ಪಟ್ಟವರಾಗಿ, ಭರ್ತುಃ - ಗಂಡನ, ಶಾಸನಂ - ಆಜ್ಞೆಯನ್ನು, ಆಜ್ಞಾಯ - ತಿಳಿದುಕೊಂಡು, ತದ್ಭವನಂ- ಆ ರಾಜ ಗೃಹವನ್ನು ಕುರಿತು, ಪ್ರಚಕ್ರಮುಃ - ನಡದು ಬಂದರು. ॥ ೧೨ ॥ ಅಥ - ಬಳಿಕ, ತಾಮ್ರಲೋಚನಾಃ - ರಕ್ತಾಕ್ಷಿಯರಾದ, ಅರ್ಧಸಪ್ತಶತಾಃ - ಮುನ್ನೂರೈವತ್ತು ಸಂಖ್ಯೆಯುಳ್ಳ, ತಾಃ ಪ್ರಮದಾಃ - ಆ ಸ್ತ್ರೀಯರು, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಪರಿವಾರ್ಯ - ಸುತ್ತುವರೆದು,

---

ಗಿಯೂ ಇರುವ ಆ ದಶರಥರಾಯನು ಸುಮಂತ್ರನನ್ನು ಕುರಿತು, "ಸುಮಂತ್ರ ! ನನ್ನ ಪತ್ನಿಯರೆಲ್ಲರನ್ನೂ ಕರೆದುಕೊಂಡು ಬರುವವನಾಗು. ನಾನಿವರೆಲ್ಲರಿಂದಲೂ ಕೂಡಿದವನಾಗಿ ನನ್ನ ಮುದ್ದುಗುವರನಾದ ಶ್ರೀರಾಮನನ್ನು ನೋಡಲು ಅಪೇಕ್ಷಿಸುತ್ತೇನೆ" ಎಂದು ಹೇಳಿದನು. ॥ ೯-೧೦ ॥ ಆಗಲಾ ಸುಮಂತ್ರನು ಜಾಗ್ರತೆಯಾಗಿ ತೆರಳಿ ಆ ಅಂತಃಪುರವನ್ನು ಕುರಿತು, "ಓ ! ಆರಸಿಯರೆ ! ನಮ್ಮೊಡೆಯನಾದ ದಶರಥಭೂಪಾಲನು ನಿಮ್ಮೆಲ್ಲರನ್ನೂ ಕಾಣಲಪೇಕ್ಷಿಸುತ್ತಾನೆ" ಎಂದು ಹೇಳಿದನು. ಆಗಲಾ ರಕ್ತಾಕ್ಷಿಯರಾದ ಮುನ್ನೂರೈವತ್ತುಮಂದಿ ಸ್ತ್ರೀಯರು ಪಟ್ಟಮಹಿಷಿಯಾದ ಕೌಸಲ್ಯಾದೇವಿಯನ್ನು ಸುತ್ತುವರೆದು

ನ್ನಾರ್ಯೋಥ ಶನೈರ್ಜಗ್ಮುರ್ಧೃತವ್ರತಾಃ ॥ ೧೩ ॥ ಆಗತೇಷುಚ ದಾರೇಷು ಸಮವೇಕ್ಷ್ಯ ಮಹೀಪತಿಃ ॥ ಉವಾಚ ರಾಜಾ ತಂ ಸೂತಂ ಸುಮಂತ್ರಾನಯ ಮೇ ಸುತಂ ॥ ೧೪ ॥ ಸುಮಂತ್ರೋ ರಾಮಮಾದಾಯ ಲಕ್ಷ್ಮಣಂ ಮೈಥಿಲೀಂ ತದಾ ॥ ಜಗಾಮಾಭಿಮುಖಸ್ತೂರ್ಣಂ ಸಕಾಶಂ ಜಗತೀಪತೇಃ ॥ ೧೫ ॥ ಸ ರಾಜಪುತ್ರಮಾಯಾಂತಂ ದೃಷ್ಟ್ವಾ ದೂರಾತ್ಕೃತಾಂಜಲಿಂ ॥ ಉತ್ಪಪಾತಾಸನಾ ತ್ತೂರ್ಣಮಾರ್ತಃ ಸ್ತ್ರೀಜನ ಸಂವೃತಃ ॥ ೧೬ ॥ ಸೋಭಿದುದ್ರಾವ ವೇಗೇನ ರಾಮಂ ದೃಷ್ಟ್ವಾ ವಿಶಾಂಪತಿಃ ॥ ತಮಸಂಪ್ರಾಪ್ಯ ದುಃಖಾರ್ತಃ ಪಪಾತ ಭುವಿ ಮೂರ್ಛಿತಃ ॥ ೧೭ ॥ ತಂ ರಾಮೋ ಭ್ಯಪತತ್ ಕ್ಷಿಪ್ರಂ

ಧೃತ ವ್ರತಾಃ, ಧೃತ - ಧರಿಸಲ್ಪಟ್ಟ, ವ್ರತಾಃ - ನಿಯಮವುಳ್ಳವರಾಗಿ, ಶನೈಃ - ಮೆಲ್ಲಮೆಲ್ಲನೆ, ಜಗ್ಮುಃ - ತೆರಳಿದರು. ॥ ೧೩ ॥ ಮಹೀಪತಿಃ - ಪೃಥ್ವೀಪತಿಯಾದ, ರಾಜಾ - ದಶರಥರಾಯನು, ದಾರೇಷು - ಹೆಂಡತಿಯರು, ಆಗತೇಷುಚ - ಬಂದವರಾಗಲು, ತಂಸೂತಂ - ಆ ಸುಮಂತ್ರನನ್ನು, ಸಮವೇಕ್ಷ್ಯ - ಕಂಡು, ಹೇ ಸುಮಂತ್ರ - ಎಲೈ ಸುಮಂತ್ರನೇ, ಮೇ - ನನ್ನ, ಸುತಂ - ಕುವರನನ್ನು, ಆನಯ - ಕರೆದುಕೊಂಡುಬಾ, ಇತಿ - ಇಂತೆಂದು, ಉವಾಚ - ಹೇಳಿದನು. ॥ ೧೪ ॥ ಸುಮಂತ್ರಃ - ಸುಮಂತ್ರನು, ತದಾ - ಆಗ, ರಾಮಂ - ಶ್ರೀರಾಮನನ್ನು, ಲಕ್ಷ್ಮಣಂ - ಲಕ್ಷ್ಮಣನನ್ನೂ, ಮೈಥಿಲೀಂ - ಸೀತಾದೇವಿಯನ್ನೂ, ಆದಾಯ-ಕರೆದುಕೊಂಡು, ತೂರ್ಣಂ-ಜಾಗ್ರತೆಯಾಗಿ, ಜಗತೀಪತೇಃ - ದಶರಥರಾಯನ, ಸಕಾಶಂ - ಸಮೀಪವನ್ನು ಕುರಿತು, ಅಭಿಮುಖಃ - ಇದುರಾಗಿ, ಜಗಾಮ - ಬಂದನು. ॥ ೧೫ ॥ ಸಃ - ಆ ದಶರಥರಾಯನು, ಆಯಾಂತಂ - ಬರುತ್ತಿರುವ, ಕೃತಾಂಜಲಿಂ - ಬದ್ಧಾಂಜಲಿಪುಟವುಳ್ಳ, ರಾಜಪುತ್ರಂ-ಶ್ರೀರಾಮನನ್ನು, ದೂರಾತ್-ದೂರದಿಂದಲೇ, ದೃಷ್ಟ್ವಾ - ಕಂಡು, ಆರ್ತಃ - ದೀನನಾಗಿ, ಸ್ತ್ರೀಜನಸಂವೃತಃ - ಸ್ತ್ರೀಜನರಿಂದ ಪರಿವೃತನಾಗಿ, ಆಸನಾತ್ - ಪೀಠದಿಂದ, ತೂರ್ಣಂ - ಜಾಗ್ರತೆಯಾಗಿ, ಉತ್ಪಪಾತ - ಮೇಲಕ್ಕೆದ್ದನು. ॥ ೧೬ ॥ ಸವಿಶಾಂಪತಿಃ-ಆ ರಾಜನಾದ ದಶರಥರಾಯನು,ರಾಮಂ-ಶ್ರೀರಾಮನನ್ನು,ದೃಷ್ಟ್ವಾ-ಕಂಡು, ವೇಗೇನ-ಬೇಗನೆ, ಅಭಿದುದ್ರಾವ - ಓಡಿಬಂದನು, ತಂ - ಆ ಶ್ರೀರಾಮನನ್ನು, ಅಸಂಪ್ರಾಪ್ಯ - ಹೊಂದದೇನೆ, ದುಃಖಾರ್ತಃ - ದುಃಖದಿಂದ ದೀನನಾಗಿ, ಭುವಿ - ನೆಲದಲ್ಲಿ, ಮೂರ್ಛಿತಃ - ಮೂರ್ಛಾಕ್ರಾಂತನಾಗಿ, ಪಪಾತ - ಬಿದ್ದನು, ॥೧೭॥ ಮಹಾರಥಃ - ಮಹಾರಥಿಕನಾದ, ರಾಮಃ - ಶ್ರೀರಾಮನು, ಲಕ್ಷ್ಮಣಶ್ಚ-

---

ಕೊಂಡು ಒಡೆಯನನ್ನು ನೋಡಲು ಬಂದವರಾದರು. ಆ ಬಳಿಕ ದಶರಥರಾಯನು ಮಂತ್ರಿಶ್ರೇಷ್ಠನಾದ ಸುಮಂತ್ರನನ್ನು ಕುರಿತು, "ಎಲೈ ಸುಮಂತ್ರನೆ! ಈಗ ನನ್ನ ಮಗನಾದ ಶ್ರೀರಾಮನನ್ನು ಒಳಕ್ಕೆ ಬರಮಾಡುವವನಾಗು" ಎಂದು ನಿರೂಪಿಸಿದನು. ಆಗ ಸುಮಂತ್ರನು ಆ ಸೀತಾ ರಾಮ ಲಕ್ಷ್ಮಣರನ್ನು ಬೇಗನೆ ಕರೆತಂದನು. ॥ ೧೧-೧೫ ॥ ಆ ಬಳಿಕ ದೂರದಲ್ಲಿಯೇ ಕೈಮುಗಿದುಕೊಂಡು ಬರುತ್ತಲಿದ್ದ ಶ್ರೀರಾಮನನ್ನು ಕಂಡ ದಶರಥರಾಯನು ಸಿಂಹಾಸನದಿಂದೆದ್ದು, ಆರ್ತರಾದ ಹೆಂಗಳಿಂದೊಡಗೂಡಿ, ಬಲು ಬೇಗನೆ ಓಡಿಬಂದು ದುಃಖಪೀಡಿತನಾಗಿ ಜಾಗ್ರತೆಯಾಗಿ ನೆಲಕ್ಕುರುಳಿ ಮೂರ್ಛೆಗೊಳ್ಳಲು, ಮಹಾ ರಥಿಕನಾದ

ಲಕ್ಷ್ಮಣಶ್ಚ ಮಹಾರಥಃ ‖ ವಿಸಂಜ್ಞಮಿವ ದುಃಖೇನ ಸಶೋಕಂ ನೃಪತಿಂ ತದಾ ‖ ೧೮ ‖ ಸ್ತ್ರೀಸಹಸ್ರನಿನಾದಶ್ಚ ಸಂಜಜ್ಞೇ ರಾಜವೇಶ್ಮನಿ ‖ ಹಾ ಹಾ ರಾಮೇತಿ ಸಹಸಾ ಭೂಷಣ ಧ್ವನಿಮೂರ್ಛಿತಃ ‖ ೧೯ ‖ ತಂ ಪರಿಷ್ವಜ್ಯ ಬಾಹುಭ್ಯಾಂ ತಾವುಭೌ ರಾಮಲಕ್ಷ್ಮಣೌ ‖ ಪರ್ಯಂಕೇ ಸೀತಯಾ ಸಾರ್ಧಂ ರುದಂತ ಸ್ಸಮವೇಶಯರ್ನ ‖ ೨೦ ‖ ಅಥ ರಾಮೋ ಮುಹೂರ್ತೇನ ಲಬ್ಧ ಸಂಜ್ಞಂ ಮಹೀಪತಿಂ ‖ ಉವಾಚ ಪ್ರಾಂಜಲಿ ರ್ಭೂತ್ವಾ ಶೋಕಾರ್ಣವ ಪರಿಪ್ಲುತಂ ‖೨೧‖ ಆಪೃಚ್ಛೇ ತ್ವಾಂ ಮಹಾರಾಜ ಸರ್ವೇಷಾ ಮೀಶ್ವರೋಽಸಿ ನಃ ‖ ಪ್ರಸ್ಥಿತಂ ದಂಡಕಾರಣ್ಯಂ ಪಶ್ಯ ತ್ವಂ ಕುಶಲೇನ ಮಾಂ ‖ ೨೨ ‖ ಲಕ್ಷ್ಮಣಂ

ಲಕ್ಷ್ಮಣನೂ, ದುಃಖೇನ - ಶೋಕದಿಂದ, ವಿಸಂಜ್ಞಮಿವ - ಪ್ರಜ್ಞೆತಪ್ಪಿದವನಂತಿರುವ, ಸಶೋಕಂ - ವ್ಯಸನದಿಂದೊಡಗೂಡಿದ, ತಂನೃಪತಿಂ - ಆ ದಶರಥರಾಯನನ್ನು ಕುರಿತು, ತದಾ-ತತ್ಕ್ಷಣದಲ್ಲಿ, ಕ್ಷಿಪ್ರಂ - ಜಾಗ್ರತೆಯಾಗಿ, ಅಭ್ಯಪತತ್ - ಓಡಿಬಂದರು. ‖ ೧೮ ‖ ರಾಜವೇಶ್ಮನಿ - ಆ ರಾಜಗೃಹದಲ್ಲಿ, ಹಾಹಾ - ಕಷ್ಟವು, ರಾಮೇತಿ - ರಾಮರಾಮಾಎಂದು, ಸಹಸಾ-ಜಾಗ್ರತೆಯಾಗಿ, ಸ್ತ್ರೀಸಹಸ್ರನಿನಾದಶ್ಚ, ಸ್ತ್ರೀಸಹಸ್ರ - ಸಾವಿರಾರುಹೆಂಗಳ, ನಿನಾದಶ್ಚ-ಧ್ವನಿಯೂ, ಭೂಷಣಧ್ವನಿಮೂರ್ಛಿತಃ, ಭೂಷಣಧ್ವನಿ - ಒಡಿವೆಗಳ ಧ್ವನಿಯಿಂದ, ಮೂರ್ಛಿತಃ - ಕೂಡಿದುದಾಗಿ, ಸಂಜಜ್ಞೇ - ಹುಟ್ಟಿತು. ‖೧೯‖ ತಾವುಭೌ - ಆ ಇಬ್ಬರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರು, ಸೀತಯಾಸಾರ್ಧಂ - ಸೀತಾದೇವಿಯೊಡನೆ, ತಂ - ಆ ದಶರಥರಾಯನನ್ನು, ಬಾಹುಭ್ಯಾಂ - ಭುಜಗಳಿಂದ, ಪರಿಷ್ವಜ್ಯ-ಅಪ್ಪಿಕೊಂಡು, ರುದಂತಃ - ರೋದನಮಾಡುತ್ತಿರುವರಾಗಿ, ಪರ್ಯಂಕೇ-ಮಂಚದಲ್ಲಿ, ಸಮವೇಶಯರ್ನ-ಇರಿಸಿದರು. ‖ ೨೦ ‖ ಅಥ - ಬಳಿಕ, ರಾಮಃ - ಶ್ರೀರಾಮನು, ಮುಹೂರ್ತೇನ - ಎರಡುಘಳಿಗೆ ಕಾಲದಿಂದಲೇ, ಲಬ್ಧಸಂಜ್ಞಂ, ಲಬ್ಧ - ಹೊಂದಲ್ಪಟ್ಟ, ಸಂಜ್ಞಂ - ಪ್ರಜ್ಞೆಯುಳ್ಳ, ಶೋಕಾರ್ಣವಪರಿಪ್ಲುತಂ-ಶೋಕವೆಂಬ ಸಮುದ್ರದಲ್ಲಿ ಮುಳುಗಿರುವ, ಮಹೀಪತಿಂ-ರಾಜನಾದ ದಶರಥನನ್ನು, ಕುರಿತು, ಪ್ರಾಂಜಲಿಃ - ಅಂಜಲಿಬದ್ಧನು, ಭೂತ್ವಾ - ಆಗಿ, ಉವಾಚ - ಹೇಳಿದನು. ‖ ೨೧ ‖ ಹೇ ಮಹಾರಾಜ - ಎಲೈ ಮಹಾರಾಜನೇ, ನಃ - ನಮಗೆ, ಸರ್ವೇಷಾಂ - ನಮ್ಮೆಲ್ಲರಿಗೂ, ಈಶ್ವರಃ - ನಿಯಾಮಕನು, ಅಸಿ - ಆಗಿರುವೆ, ತ್ವಾಂ - ನಿನ್ನನ್ನು, ಆಪೃಚ್ಛೇ - ಕೇಳುತ್ತೇನೆ,

---

ಶ್ರೀರಾಮನು ಲಕ್ಷ್ಮಣನೊಡಗೂಡಿ ಶೋಕಾಕ್ರಾಂತನಾಗಿ ಪ್ರಜ್ಞೆ ತಪ್ಪಿದ ತಂದೆಯನ್ನು ಸಂತೈಸಲು ಆತನ ಬಳಿ ಸಾರಿದವನಾದನು. ‖ ೧೬-೧೮ ‖ ಆ ಸಮಯದಲ್ಲಿ ರಾಜಾಂತಃ ಪುರದ ಸ್ತ್ರೀಯರೆಲ್ಲರೂ "ಹಾ! ಹಾ!! ರಾಮಚಂದ್ರ" ಎಂದು ಆರ್ತಧ್ವನಿಯನ್ನು ಮಾಡಿದರು. ಆಗಲಾ ಹೆಂಗಳ ಆಭರಣ ಧ್ವನಿಗಳು ವಿಶೇಷವಾಗಿ ಕೇಳಬರುತ್ತಲಿದ್ದುವು. ಆ ಬಳಿಕ ರಾಮ ಲಕ್ಷ್ಮಣ ಸೀತೆಯರು ದಶರಥಮಹಾರಾಜನನ್ನು ಅಪ್ಪಿಕೊಂಡು ರೋದಿಸುತ್ತ ಮಂಚದ ಮೇಲೆ ಮಲಗಿಸಿದವರಾದರು. ಎರಡು ಕ್ಷಣಗಳಾದ ಮೇಲೆ ಶ್ರೀರಾಮನು ಪ್ರಜ್ಞೆ ಹೊಂದಿ ದುಃಖಸಾಗರದಲ್ಲಿ ಮುಳುಗಿದ್ದ ಆ ರಾಯನನ್ನು ಕುರಿತು, "ಓ ತಂದೆಯೇ! ನೀನು ನಮ್ಮೆಲ್ಲರಿಗೂ ನಿಯಾಮಕನಾಗಿರುವೆ. ಆದುದರಿಂದ ನಿನ್ನಪ್ಪಣೆಯನ್ನು ಕೇಳು

ಚಾನುಜಾನೀಹಿ ಸೀತಾಚಾನ್ವೇತಿ ಮಾಂ ವನಂ || ಕಾರಣೈರ್ಬಹುಭಿಸ್ತಥ್ಯೈ ರ್ವಾರ್ಯಮಾಣೌ ನಚೇಚ್ಛತಃ || ೨೩ || ಅನುಜಾನೀಹಿ ಸರ್ವಾನ್ನಶ್ಶೋಕ ಮುತ್ಸೃಜ್ಯ ಮಾನದ || ಲಕ್ಷ್ಮಣಂ ಮಾಂಚ ಸೀತಾಂಚ ಪ್ರಜಾಪತಿರಿವ ಪ್ರಜಾಃ || ೨೪ || ಪ್ರತೀಕ್ಷಮಾಣಮವ್ಯಗ್ರ ಮನುಜ್ಞಾಂ ಜಗತೀಪತೇಃ || ಉವಾಚ ರಾಜಾ ಸಂಪ್ರೇಕ್ಷ್ಯ ವನವಾಸಾಯ ರಾಘವಂ || ೨೫ || ಅಹಂ ರಾಘವ ಕೈಕೇಯ್ಯಾ ವರದಾನೇನ ಮೋಹಿತಃ || ಅಯೋಧ್ಯಾಯಾಸ್ತ್ವಮೇ ವಾದ್ಯ ಭವರಾಜಾ ನಿಗೃಹ್ಯ ಮಾಂ || ೨೬ || ಏವಮುಕ್ತೋ ನೃಪತಿನಾ

ದಂಡಕಾರಣ್ಯಂ - ದಂಡಕಾರಣ್ಯವನ್ನು ಕುರಿತು, ಪ್ರಸ್ಥಿತಂ - ಪ್ರಯಾಣಮಾಡುತ್ತಿರುವ, ಮಾಂ - ನನ್ನನ್ನು, ಕುಶಲೇನ - ಕ್ಷೇಮದಿಂದ, ತ್ವಂ - ನೀನು, ಪಶ್ಯ-ನೋಡು. || ೨೨ || ಲಕ್ಷ್ಮಣಂಚ- ಲಕ್ಷ್ಮಣನನ್ನು ಕುರಿತು, ಅನುಜಾನೀಹಿ - ಅಪ್ಪಣೆಯನ್ನು ಕೊಡು, ಸೀತಾಚ - ಸೀತಾದೇವಿಯೂ, ಮಾಂ - ನನ್ನನ್ನುದ್ದೇಶಿಸಿ, ವನಂ - ವನವನ್ನು ಕುರಿತು, ಅನ್ವೇತಿ - ಅನುಸರಿಸಿ ಬರುತ್ತಾಳೆ, ತೌ - ಆ ಸೀತಾಲಕ್ಷ್ಮಣರಿಬ್ಬರೂ, ತಥ್ಯೈಃ - ಯಥಾರ್ಥಗಳಾದ, ಬಹುಭಿಃ - ಅನೇಕ ಬಗೆಗಳಾದ, ಕಾರಣೈಃ - ಹೇತುಗಳಿಂದ, ವಾರ್ಯಮಾಣೌ - ತಡೆಮಾಡಲ್ಪಟ್ಟವರಾದರೂ, ನಚೇಚ್ಛತಃ - ಇಷ್ಟಪಡ ಲಿಲ್ಲ. || ೨೩ || ಹೇ ಮಾನದ - ಎಲೈ ಮಾನವನ್ನು ಕೊಡುವನೆ, ಶೋಕಂ - ವ್ಯಸನವನ್ನು, ಉತ್ಸೃಜ್ಯ - ಬಿಟ್ಟು, ಪ್ರಜಾಪತಿಃ - ಬ್ರಹ್ಮನು, ಪ್ರಜಾಇವ - ಪ್ರಜೆಗಳನ್ನಂತೆ, ಲಕ್ಷ್ಮಣಂ - ಲಕ್ಷ್ಮಣನನ್ನೂ, ಮಾಂಚ - ನನ್ನನ್ನೂ, ಸೀತಾಂಚ - ಸೀತಾದೇವಿಯನ್ನೂ, ಸರ್ವಾ - ಸಮಸ್ತ ರಾದ, ನಃ - ನಮ್ಮನ್ನು ಕುರಿತು, ಅನುಜಾನೀಹಿ - ಅಪ್ಪಣೆಯನ್ನು ಕೊಡು. || ೨೪ || ಜಗತೀ ಪತೇಃ - ಪೃಥ್ವೀಪತಿಯಾದ ದಶರಥರಾಯನ, ಅನುಜ್ಞಾಂ - ಸಮ್ಮತಿಯನ್ನು, ಪ್ರತೀಕ್ಷಮಾಣಂ - ನಿರೀಕ್ಷಿಸುತ್ತಿರುವ, ವನವಾಸಾಯ - ಅರಣ್ಯವಾಸಕ್ಕೋಸುಗ, ಅವ್ಯಗ್ರಂ - ಸಾವಧಾನ ಚಿತ್ತನಾದ, ರಾಘವಂ - ಶ್ರೀರಾಮನನ್ನು, ಸಂಪ್ರೇಕ್ಷ್ಯ - ಕಂಡು, ರಾಜಾ - ದಶರಥರಾಯನು, ಉವಾಚ - ಹೇಳಿದನು. || ೨೫ || ಹೇ ರಾಘವ - ಎಲೈ ಶ್ರೀರಾಮನೇ, ಅಹಂ - ನಾನು, ಕೈಕೇಯ್ಯಾಃ - ಕೈಕೇಯೀದೇವಿಯ, ವರದಾನೇನ - ವರಪ್ರದಾನದಿಂದ, ಮೋಹಿತಃ - ಭ್ರಾಂತನಾದೆನು, ಅದ್ಯ - ಈಗ, ಮಾಂ - ನನ್ನನ್ನು, ನಿಗೃಹ್ಯ - ಸಂಹರಿಸಿ, ತ್ವಮೇವ-ನೀನೇ, ಅಯೋಧ್ಯಾಯಾಃ-ಅಯೋಧ್ಯಾ ಪಟ್ಟಣಕ್ಕೆ, ರಾಜಾ - ರಾಜನಾಗಿ, ಭವ - ಆಗು. || ೨೬ || ಏವಂ - ಹೀಗೆ, ನೃಪತಿನಾ -

---

ತ್ತೇನೆ. ದಂಡಕಾರಣ್ಯಕ್ಕೆ ಹೋಗಲು ಸಿದ್ಧನಾಗಿರುವ ನನ್ನನ್ನು ಕಟಾಕ್ಷಿಸಿ ನೋಡುವವ ನಾಗು. ಲಕ್ಷ್ಮಣಸ್ವಾಮಿಯೂ, ಈ ಜನಕರಾಜನಂದಿನಿಯೂ, ನನ್ನೊಡನೆ ಬರಕೂಡ ದೆಂದೆಷ್ಟು ವಿಧದಿಂದ ಹೇಳಿದರೂ ಕೇಳದೆ, ನನ್ನನ್ನು ಹಿಂಬಾಲಿಸಿ ನನ್ನೊಡನೆಯೇ ಅರಣ್ಯಕ್ಕೆ ಹೊರಟು ನಿಂತಿರುವರು. ಎಲೈ ಮಾನದಾತನೆ! "ಮಗನು ವನವಾಸಕ್ಕೆ ಹೊರಡುವನಲ್ಲ! ಎಂಬ ದುಃಖವನ್ನು ದೂರಮಾಡಿ ನಮಗೆ ಅನುಜ್ಞೆಯನ್ನೀಯುವವನಾಗು" ಎಂದು ಹೇಳಿ ದನು. ಈ ಪ್ರಕಾರವಾಗಿ ನುಡಿದು ತಂದೆಯ ಅಪ್ಪಣೆಯನ್ನು ನಿರೀಕ್ಷಿಸುತ್ತಿರುವ ಶ್ರೀ ರಾಮಮೂರ್ತಿಯನ್ನು ನೋಡಿ ದಶರಥರಾಯನು, "ಓ ರಘುಕುಲೋತ್ಪನ್ನನೆ! ನಾನು

ರಾಮೋ ಧರ್ಮಭೃತಾಂ ವರಃ ॥ ಪ್ರತ್ಯುವಾಚಾಂಜಲಿಂ ಕೃತ್ವಾ ಪಿತರಂ ವಾಕ್ಯ
ಕೋವಿದಃ ॥ ೨೭ ॥ ಭವಾನ್ ವರ್ಷಸಹಸ್ರಾಯುಃ ಪೃಥಿವ್ಯಾ ನೃಪತೇಪತಿಃ ॥
ಅಹಂ ತ್ವರಣ್ಯೇ ವತ್ಸ್ಯಾಮಿ ನ ಮೇ ಕಾರ್ಯಂ ತ್ವಯಾನೃತಂ ॥ ೨೮ ॥ ನವ
ಪಂಚಚ ವರ್ಷಾಣಿ ವನವಾಸೇ ವಿಹೃತ್ಯತೇ ॥ ಪುನಃ ಪಾದೌ ಗ್ರಹೀಷ್ಯಾಮಿ
ಪ್ರತಿಜ್ಞಾಂತೇ ನರಾಧಿಪ ॥ ೨೯ ॥ ರುದನ್ನಾರ್ತಃ ಪ್ರಿಯಂ ಪುತ್ರಂ ಸತ್ಯ
ಪಾಶೇನ ಸಂಯುತಃ ॥ ಕೈಕೇಯ್ಯಾ ಚೋದ್ಯಮಾನಸ್ತು ಮಿಥೋ ರಾಜಾ
ತಮಬ್ರವೀತ್ ॥೩೦॥ ಶ್ರೇಯಸೇ ವೃದ್ಧಯೇ ತಾತ ಪುನರಾಗಮನಾಯಚ ॥

ದಶರಥರಾಯನಿಂದ, ಉಕ್ತಃ - ಹೇಳಲ್ಪಟ್ಟ, ವಾಕ್ಯಕೋವಿದಃ - ಮಾತನಾಡುವುದರಲ್ಲಿ ಚತುರನಾದ, ಧರ್ಮಭೃತಾಂ - ಧರ್ಮಿಷ್ಠರಲ್ಲಿ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ಅಂಜಲಿಂ ಕೃತ್ವಾ - ಕೈಜೋಡಿಸಿಕೊಂಡು, ಪಿತರಂ-ತಂದೆಯಾದ ದಶರಥರಾಯನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥ ೨೭ ॥ ಹೇ ನೃಪತೇ - ಎಲೈ ದೊರೆಯೇ, ಭವಾನ್ - ನೀನು, ವರ್ಷ ಸಹಸ್ರಾಯುಃ - ಸಾವಿರಾರು ವರುಷಗಳಿಂದ, ಪೃಥಿವ್ಯಾಃ - ಭೂಮಿಗೆ, ಪತಿಃ - ಒಡೆಯನು, ಅಹಂತು - ನಾನಾದರೆ, ಅರಣ್ಯೇ - ವನದಲ್ಲಿ, ವತ್ಸ್ಯಾಮಿ - ಇರುತ್ತೇನೆ, ಮೇ - ನನ್ನ ನಿಮಿತ್ತ ವಾಗಿ, ತ್ವಯಾ - ನಿನ್ನಿಂದ, ಅನೃತಂ - ಅಬದ್ಧವು, ನಕಾರ್ಯಂ - ಮಾಡಿಯತಕ್ಕದಲ್ಲ. ॥ ೨೮ ॥ ಹೇ ನರಾಧಿಪ - ಎಲೈ ಅರಸೆ, ವನವಾಸೇ - ಅರಣ್ಯವಾಸದಲ್ಲಿ, ನವಪಂಚಚವರ್ಷಾಣಿ - ಹದಿನಾಲ್ಕು ವರುಷಗಳು, ವಿಹೃತ್ಯ - ವಿಹಾರವನ್ನು ಮಾಡಿ, ಪ್ರತಿಜ್ಞಾಂತೇ, ಪ್ರತಿಜ್ಞಾ - ಪ್ರತಿಜ್ಞೆಯ, ಅಂತೇ- ತುದಿಯಲ್ಲಿ, ಪುನಃ - ಮತ್ತು, ತೇ - ನಿನ್ನ, ಪಾದೌ - ಚರಣಗಳನ್ನು, ಗ್ರಹೀಷ್ಯಾಮಿ - ಹಿಡಿದು ಕೊಳ್ಳುವೆನು. ॥ ೨೯ ॥ ಆರ್ತಃ - ದೀನನಾದ, ರಾಜಾ - ದಶರಥರಾಯನು, ರುದನ್ - ರೋದನ ಮಾಡುತ್ತ, ಕೈಕೇಯ್ಯಾ - ಕೈಕೇಯಿದೇವಿಯಿಂದ, ಮಿಥಃ - ರಹಸ್ಯವಾಗಿ, ಚೋದ್ಯಮಾನಸ್ತು - ಪ್ರೇರೇಪಿಸಲ್ಪಟ್ಟವನಾಗಿ, ಸತ್ಯಪಾಶೇನ - ಸತ್ಯವೆಂಬ ಹಗ್ಗದಿಂದ, ಸಂಯುತಃ - ಬದ್ಧನಾಗಿ, ಪ್ರಿಯಂ - ಇಷ್ಟನಾದ, ಪುತ್ರಂ - ಮಗನಾದ, ತಂ - ಆ ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥ ೩೦ ॥ ಹೇ ತಾತ - ಎಲೈ ತಂದೆಯೆ, ಶ್ರೇಯಸೇ - (ಗೋ) ಪರಲೋಕ ಹಿತ

ಕೈಕೇಯಿಗೆ ಕೊಟ್ಟ ವರಗಳಿಂದ ಭ್ರಾಂತನಾಗಿ ಹೋಗಿದ್ದೇನೆ. ಶ್ರೀರಾಮ ! ಈಗ ನೀನು ನನ್ನನ್ನು ನಿಗ್ರಹಿಸಿ ಈ ಅಯೋಧ್ಯಾನಗರಿಗೆ ರಾಜನಾಗು" ಎಂದು ಹೇಳಿದನು. ॥೧೯-೨೭॥ ಇಂತು ನುಡಿದ ದಶರಥ ಮಹೀಪಾಲನ ನುಡಿಗಳನ್ನು ಕೇಳಿ, ಧರ್ಮಾತ್ಮನೂ, ಮಾತನಾಡು ವುದರಲ್ಲಿ ಚತುರನೂ ಆದ ಶ್ರೀರಾಮಮೂರ್ತಿಯು ಕೈಗಳನ್ನು ಜೋಡಿಸಿಕೊಂಡು, "ತಂದೆಯೆ ! ತಂದೆಯೆ !! ನೀನು ಸಾವಿರಾರು ವರ್ಷಗಳಿಂದಲೂ ಈ ಭೂಮಂಡಲಕ್ಕೆ ರಾಜನಾಗಿರುವೆ. ಇಂತಹ ನಿನ್ನನ್ನು ಸುಳ್ಳುಗಾರನನ್ನಾಗಿ ಮಾಡಲು ನಾನೆಂದಿಗೂ ಅಪೇ ಕ್ಷಿಸುವುದಿಲ್ಲ. ನಾನು ಅರಣ್ಯದಲ್ಲಿ ವಾಸ ಮಾಡುತ್ತೇನೆ. ತಾತ ! ಹದಿನಾಲ್ಕು ವರ್ಷ ಗಳ ಕಾಲ ಅರಣ್ಯದಲ್ಲಿ ವಿಹರಿಸಿಕೊಂಡಿದ್ದು ಆ ಬಳಿಕ ಪುನಃ ನಗರಿಗೆ ಬಂದು ನಿನ್ನ ಪಾದ ಸೇವೆಯನ್ನು ಮಾಡಿಕೊಂಡಿರುತ್ತೇನೆ" ಎಂದು ನುಡಿದನು. ಇಂತು ನುಡಿದ ಶ್ರೀರಾಮ

ಗಚ್ಛಸ್ವಾರಿಷ್ಟ ಮವ್ಯಗ್ರಃ ಪಂಥಾನ ಮಕುತೋ ಭಯಂ ॥ ೩೧ ॥ ನಹಿ
ಸತ್ಯಾತ್ಮನ ಸ್ತಾತ ಧರ್ಮಾಭಿಮನಸಸ್ತವ ॥ ವಿನಿವರ್ತಯಿತುಂ ಬುದ್ಧಿ
ಶ್ಶಕ್ಯತೇ ರಘುನಂದನ ॥ ೩೨ ॥ ಅದ್ಯತ್ವಿದಾನೀಂ ರಜನೀಂ ಪುತ್ರ ಮಾಗಚ್ಛ
ಸರ್ವಥಾ ॥ ಏಕಾಹ ದರ್ಶನೇನಾಪಿ ಸಾಧುತಾವಚ್ಚರಾಮ್ಯಹಂ ॥ ೩೩ ॥
ಮಾತರಂ ಮಾಂಚ ಸಂಪಶ್ಯ ನ್ವಸೇಮಾ ಮದ್ಯಶರ್ವರೀಂ ॥ ತರ್ಪಿತ ಸ್ಸರ್ವ
ಕಾಮೈಸ್ತ್ವಂ ಶ್ವಃ ಕಾಲೇ ಸಾಧಯಿಷ್ಯಸಿ ॥ ೩೪ ॥ ದುಷ್ಕರಂ ಕ್ರಿಯತೇ ಪುತ್ರ
ಸರ್ವಥಾ ರಾಘವ ತ್ವಯಾ॥ಮತ್ಪ್ರಿಯಾರ್ಥಂ ಪ್ರಿಯಾಂ ಸ್ತ್ಯಕ್ತ್ವಾ ಯದ್ಯಾಸಿ

ಕ್ಕೋಸುಗ, ವೃದ್ಧಯೇ - (ಗೋ) ಇಹಲೋಕಾಭ್ಯುದಯಕ್ಕೋಸುಗ, ಅವ್ಯಗ್ರಃ - ಜಾಗರೂಕನಾಗಿ, ಪುನರಾಗಮನಾಯಚ - ಹಿಂತಿರುಗಿ ಬರಲು, ಅರಿಷ್ಟಂ - ಶುಭಕರವಾದ, ಅಕುತೋಭಯಂ - ಯಾರಿಂದಲೂ ಭಯವಿಲ್ಲದ, ಪಂಥಾನಂ - ಮಾರ್ಗದಲ್ಲಿ, ಗಚ್ಛಸ್ವ - ಹೋಗು. ॥ ೩೧ ॥ ಹೇ ತಾತ - ಎಲೈ ತಂದೆಯೆ, ಹೇ ರಘುನಂದನ - ಎಲೈ ರಘುಕುಲಾನಂದಕರನೆ, ಧರ್ಮಾಭಿಮನಸಃ - ಧರ್ಮದಲ್ಲಿಯೇ ಉದ್ಯುಕ್ತವಾದ ಮನವುಳ್ಳ, ಸತ್ಯಾತ್ಮನಃ - ಸತ್ಯವಂತನಾದ, ತವ - ನಿನ್ನ, ಬುದ್ಧಿಃ - ಪ್ರಜ್ಞೆಯು, ವಿನಿವರ್ತಯಿತುಂ - ಹಿಂತಿರಗಿಸಲು, ನಶಕ್ಯತೇಹಿ - ಆಗುವದಿಲ್ಲವಷ್ಟೆ. ॥ ೩೨ ॥ ಹೇ ಪುತ್ರ - ಎಲೈ ಮಗನೆ, ಅದ್ಯತು - ಈಗಲಾದರೆ, ಇದಾನೀಂರಜನೀಂ - ಈ ರಾತ್ರಿಯಲ್ಲಿ, ಸರ್ವಥಾ - ಏನಾದರೂ, ಮಾಗಚ್ಛ - ಹೋಗಬೇಡ, ಏಕಾಹದರ್ಶನೇನಾಪಿ - ಒಂದು ದಿನವಾದರೂ ನಿನ್ನನ್ನು ನೋಡುವದರಿಂದ, ಅಹಂ - ನಾನು, ಸಾಧುತಾವತ್ - ಸುಖವನ್ನಾದರೂ, ಚರಾಮಿ - ಅನುಭವಿಸುವೆನು. ॥ ೩೩ ॥ ಅದ್ಯ - ಈಗ, ಸರ್ವಕಾಮೈಃ, ಸರ್ವ - ಸಮಸ್ತಗಳಾದ, ಕಾಮೈಃ - ಕೋರಿಕೆಗಳಿಂದ, ತರ್ಪಿತಃ - ತೃಪ್ತನಾಗಿ, ಅದ್ಯ - ಈಗ, ಮಾತರಂ - ತಾಯಿಯನ್ನೂ, ಮಾಂಚ - ನನ್ನನ್ನೂ, ಸಂಪಶ್ಯ - ನೋಡುತ್ತ, ತ್ವಂ - ನೀನು, ಇಮಾಂಚಶರ್ವರೀಂ - ಈ ರಾತ್ರಿಯಲ್ಲಿ, ವಸ - ಇರು, ಶ್ವಃಕಾಲೇ - ನಾಳಿನ ಪ್ರಾತಃಕಾಲದಲ್ಲಿ, ಸಾಧಯಿಷ್ಯಸಿ - ಹೋಗುವೆ. ॥ ೩೪ ॥ ಹೇ ಪುತ್ರ - ಎಲೈ ಮಗನೆ, ಯತ್ - ಯಾವ ಕಾರಣ, ಮತ್ಪ್ರಿಯಾರ್ಥಂ - ನನ್ನ ಪ್ರೀತಿಗಾಗಿ, ಪ್ರಿಯಾಂ - ಇಷ್ಟರನ್ನೆಲ್ಲಾ, (ಗೋ) ನಿನಗೆ ಇಷ್ಟವಾದ ಸುಖಕರ ಪದಾರ್ಥಗಳನ್ನೆಲ್ಲ,

ನನ್ನು ನೋಡಿ ಆ ದಶರಥರಾಯನು ಅಳುತ್ತ, ಆರ್ತನಾಗಿ, ಕೈಕೇಯಿಯಿಂದ ರಹಸ್ಯದಿಂದಲೇ ಪ್ರೇರಿತನಾಗಿ ಆತನನ್ನು ಕುರಿತು, “ಓ ಶ್ರೀರಾಮನೆ! ಪರಲೋಕದ ಶ್ರೇಯಸ್ಸಿಗಾಗಿಯೂ, ಇಹಲೋಕದ ಅಭಿವೃದ್ಧಿಗಾಗಿಯೂ, ಜಾಗರೂಕತೆಯುಳ್ಳವನಾಗಿ ಮರಳಿ ಹಿಂತಿರುಗಿ ಬರುವವನಾಗು: ನೀನು ಹೋಗುವ ಮಾರ್ಗಗಳು ಯಾವದೊಂದು ತೊಂದರೆಯೂ, ಭಯವೂ, ಇಲ್ಲದೆ ಮಂಗಳಕರಗಳಾಗಿರಲಿ. ಎಲೈ ರಘುನಂದನನೆ! ಸತ್ಯವಂತನಾಗಿಯೂ, ಧರ್ಮದಲ್ಲಿಯೇ ಆಸಕ್ತಿಯುಳ್ಳವನಾಗಿಯೂ ಇರುವ ನಿನ್ನ ವನವಾಸ ಸಂಕಲ್ಪವನ್ನು ಹಿಂತಿರುಗಿಸುವುದಕ್ಕಾಗುವುದಿಲ್ಲ. ಆದರೆ ಈಗ ಮಾತ್ರ ಪ್ರಯಾಣ ಮಾಡಬೇಡ. ಈ ರಾತ್ರಿ ಇಲ್ಲಿಯೇ ಇರುವವನಾಗು. ಇಂದಾದರೂ ನಿನ್ನನ್ನು ನೋಡಿ ಸುಖಿಯಾಗುತ್ತೇನೆ. ಆದುದರಿಂದ ಈ ಒಂದು ರಾತ್ರಿಯಲ್ಲಿಯಾದರೂ, ಈ ನನ್ನನ್ನೂ, ನಿನ್ನ

ವಿಜನಂ ವನಂ ॥ ೩೫ ॥ ನಚೈತನ್ಮೇ ಪ್ರಿಯಂ ಪುತ್ರ ಶಪೇ ಸತ್ಯೇನ ರಾಘವ ॥ ಛನ್ನಯಾ ಸ್ಖಲಿತ ಸ್ತ್ವಸ್ಮಿಸ್ತ್ರಿಯಾ ಛನ್ನಾಗ್ನಿ ಕಲ್ಪಯಾ ॥ ೩೬ ॥ ವಂಚನಾ ಯಾತು ಲಬ್ಧಾಮೇ ತಾಂತ್ವಂ ನಿಸ್ತರ್ತು ಮಿಚ್ಛಸಿ ॥ ಅನಯಾ ವೃತ್ತಸಾದಿನ್ಯಾ ಕೈಕೇಯ್ಯಾಭಿ ಪ್ರಚೋದಿತಃ ॥ ೩೭ ॥ ನಚೈತದಾಶ್ಚರ್ಯತಮಂ ಯತಂ ಜ್ಯೇಷ್ಠ ಸ್ಸುತೋ ಮಮ ॥ ಅಪಾನೃತ ಕಥಂ ಪುತ್ರ ಪಿತರಂ ಕರ್ತುಮಿಚ್ಛಸಿ ॥ ೩೮ ॥ ಅಥ ರಾಮ ಸ್ತಥಾ ಶ್ರುತ್ವಾ ಪಿತುರಾರ್ತಸ್ಯ ಭಾಷಿತಂ ॥ ಲಕ್ಷ್ಮಣೇನ

ತ್ಯಕ್ತ್ವಾ - ಬಿಟ್ಟು, ವಿಜನಂ - ಜನರಹಿತವಾದ, ವನಂ - ವನವನ್ನು ಕುರಿತು, ಯಾಸಿ - ಹೋಗುತ್ತೀಯೊ, ತತ್ - ಆ ಕಾರಣ, ಹೇ ರಾಘವ - ಎಲೈ ಶ್ರೀರಾಮನೆ, ತ್ವಯಾ - ನಿನ್ನಿಂದ, ಸರ್ವಥಾ-ಎಲ್ಲ ರೀತಿಗಳಲ್ಲಿಯೂ, ದುಷ್ಕರಂ - ಅಸಾಧ್ಯಕಾರ್ಯವು, ಕ್ರಿಯತೇ - ಮಾಡಲಾಯಿತು. ॥ ೩೫ ॥ ಹೇ ಪುತ್ರ - ಎಲೈ ಮಗನೆ, ಏತತ್ - ನಿನ್ನನ್ನು ಕಳುಹಿಸುವಿಕೆಯು, ಮೇ - ನನಗೆ, ನಪ್ರಿಯಂ - ಇಷ್ಟವಿಲ್ಲ, ಸತ್ಯೇನ - ಯಥಾರ್ಥವಾಗಿ, ಶಪೇ - ಶಪಥಮಾಡುವೆನು, ಹೇ ರಾಘವ - ಎಲೈ ಶ್ರೀರಾಮನೆ, ಅಸ್ಮಿನ್ - ಈ ವಿಷಯದಲ್ಲಿ, ಛನ್ನಯಾ - ಗೂಢಾಪಕಾರಿಯಾದ, ಛನ್ನಾಗ್ನಿಕಲ್ಪಯಾ-ಬೂದಿ ಮುಚ್ಚಿದ ಬೆಂಕಿಗೆ ಸಮಾನಳಾದ, ಸ್ತ್ರಿಯಾ - ಈ ಹೆಂಗಸಿನಿಂದ, ಚಲಿತಃ - ಕದಡಲ್ಪಟ್ಟವನಾದ. ॥ ೩೬ ॥ ಮೇ - ನನ್ನಿಂದ, ಯಾ ವಂಚನಾತು - ಯಾವ ಮೋಸವು, ಲಬ್ಧಾಃ-ಹೊಂದಲ್ಪಟ್ಟಿತೋ, ತಾಂ - ಅದನ್ನು, ವೃತ್ತಸಾದಿನ್ಯಾ - ಕುಲವೃತ್ತಿಯನ್ನು ನಾಶಮಾಡುತ್ತಿರುವ, ಅನಯಾಕೈಕೇಯ್ಯಾ - ಈ ಕೈಕೇಯಿಯಿಂದ, ಅಭಿಪ್ರಚೋದಿತಃ - ಪ್ರೇರಿತನಾದ, ತ್ವಂ - ನೀನು, ನಿಸ್ತರ್ತುಂ - ದಾಟುವದಕ್ಕೆ, ಇಚ್ಛಸಿ - ಅಪೇಕ್ಷಿಸಿರುವೆ. ॥ ೩೭ ॥ ಹೇ ಪುತ್ರ - ಎಲೈ ಮಗನೆ, ಮಮ - ನನ್ನ, ಜ್ಯೇಷ್ಠಸ್ಸುತಃ - ಜ್ಯೇಷ್ಠ ಪುತ್ರನಾದ, ತ್ವಂ - ನೀನು, ಪಿತರಂ - ತಂದೆಯನ್ನು, ಅಪಾನೃತಕಥಂ - ಹೋಗಲಾಡಿಸಿದ ಅಸತ್ಯಪ್ರಸ್ತಾಪವುಳ್ಳವನನ್ನಾಗಿ, ಕರ್ತುಂ - ಮಾಡುವದಕ್ಕೆ, ಇಚ್ಛಸೀತಿಯತ್ - ಇಚ್ಛಿಸಿರುವೆಯೆಂಬುದು ಯಾವದುಂಟೋ, ಏತತ್ - ಇದು, ಆಶ್ಚರ್ಯತಮಂನ-ಅತಿ ಆಶ್ಚರ್ಯಕರವಾದುದಲ್ಲ. ॥ ೩೮ ॥ ಅಥ - ಬಳಿಕ, ರಾಮಃ - ಶ್ರೀರಾಮನು, ತಥಾ - ಆ ಪರಿಯಾಗಿ, ಆರ್ತಸ್ಯ - ಸಂಕಟಗೊಂಡಿರುವ, ಪಿತುಃ - ತಂದೆಯ, ಭಾಷಿತಂ - ಮಾತನ್ನು,

ತಾಯಿಯನ್ನೂ ನೋಡುತ್ತಿದ್ದು, ನಾಳೆಯ ಪ್ರಾತಃಕಾಲದಲ್ಲಿ ಪ್ರಯಾಣವಂ ಮಾಡುವವನಾಗು. ಎಲೈ ರಾಮಚಂದ್ರನೆ !! ನನಗೋಸುಗ ನೀನು ನಿನ್ನ ಪ್ರಿಯತಮರನ್ನೊದಲಿ ಅರಣ್ಯವನ್ನು ಹೊಂದಿ ಅಸದಳವಾದ ಕಾರ್ಯವನ್ನು ಮಾಡುತ್ತಿರುವೆಯಲ್ಲ ! ಮಗನೆ ! ಕೇಳು ; ನಾನು ನಿನ್ನನ್ನು ಅರಣ್ಯಕ್ಕೆ ಕಳುಹಲು ಎಷ್ಟು ಮಾತ್ರವೂ ಬಯಸಿದವನಲ್ಲ. ಬೂದಿ ಮುಚ್ಚಿದ ಬೆಂಕಿಯಂತೆ, ಅಂತರಂಗದಲ್ಲಿಯೇ ಕೆಟ್ಟುದನ್ನು ಮಾಡುತ್ತಿರುವ ಈ ಕೈಕೇಯಿಯಿಂದ ಈ ರೀತಿ ಚಂಚಲ ಚಿತ್ತನಾಗಿರುವೆನು. ಆಕೆಯ ಈ ಭಾವವನ್ನೀಗತಾನೆ ನಾನು ತಿಳಿದವನಾದೆನು. ಕುಲಧರ್ಮಗಳನ್ನು ನಾಶಗೊಳಿಸುತ್ತಿರುವ ಈ ದುಷ್ಟೆಯಿಂದ ಪ್ರೇರಿತನಾಗಿರುವ ನಾನು ನನ್ನ ಪ್ರತಿಜ್ಞೆಯನ್ನು ಮೀರಿ ಜನರ ಅಪವಾದಕ್ಕೆ ಈಡಾಗದಂತೆ ಮಾಡುತ್ತಿರುವೆಯಲ್ಲ ! ಇದು ಅತ್ಯಾಶ್ಚರ್ಯಕರವಾದುದು ” ಎಂದು ನಿರೂಪಿಸಿದನು. ॥೨೮-೩೮॥

ಸಹಭ್ರಾತ್ರಾ ದೀನೋ ವಚನ ಮಬ್ರವೀತ್ ॥ ೪೯ ॥ ಪ್ರಾಪ್ಸ್ಯಾಮಿ ಯಾನದ್ಯ ಗುಣಾರ್ ಕೋ ಮೇ ಶ್ವಸ್ತಾರ್ ಪ್ರದಾಸ್ಯತಿ ॥ ಅಪಕ್ರಮಣಮೇವಾತ ಸ್ಸರ್ವ ಕಾಮ್ಯೈ ರಹಂ ವೃಣೇ ॥ ೪೦ ॥ ಇಯಂ ಸರಾಷ್ಟ್ರಾ ಸಜನಾ ಧನಧಾನ್ಯ ಸಮಾ ಕುಲಾ ॥ ಮಯಾ ನಿಸೃಷ್ಟಾ ವಸುಧಾ ಭರತಾಯ ಪ್ರದೀಯತಾಂ ॥ ೪೧ ॥ ವನವಾಸಕೃತಾ ಬುದ್ಧಿ ರ್ನಚ ಮೇದ್ಯ ಚಲಿಷ್ಯತಿ ॥ ಯ ಸ್ತುಷ್ಟೇನ ವರೋ ದತ್ತಃ ಕೈಕೇಯ್ಯೈ ವರದ ತ್ವಯಾ ॥ ೪೨ ॥ ದೀಯತಾಂ ನಿಖಿಲೇನೈವ

ಶ್ರುತ್ವಾ - ಕೇಳಿ, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ದೀನಃ - ದೈನ್ಯವುಳ್ಳವನಾಗಿ, ವಚನಂ - ವಾಕ್ಯವನ್ನು, ಅಬ್ರವೀತ್ - ಹೇಳಿದನು. ॥ ೪೯ ॥ ಅದ್ಯ - ಈಗ, ಯಾರ್ಗುಣಾರ್ - ಯಾವ ಪಿತೃವಾಕ್ಯಪರಿಪಾಲನಾದಿ ರೂಪಗುಣಗಳನ್ನು, ಪ್ರಾಪ್ಸ್ಯಾಮಿ - ಹೊಂದುವನೋ, ಕಃ - ಯಾವನು, ಶ್ವಃ - ನಾಳೆ, ಮೇ - ನನಗೆ, ತಾರ್ - ಅಂತಹ ಗುಣಗಳನ್ನು, ಪ್ರದಾಸ್ಯತಿ - ಕೊಡುವನು, ಅತಃ - ಈ ಕಾರಣ, ಅಹಂ - ನಾನು, ಸರ್ವಕಾಮ್ಯೈಃ - ಸಮಸ್ತವಾದ ಕೋರಿಕೆಗಳಿಗೆ ಪ್ರತಿನಿಧಿಯಾದಂತೆ, ಅಪಕ್ರಮಣಮೇವ - ವನವಾಸವನ್ನು ಕುರಿತು ಹೊರಟು ಹೋಗೋಣವನ್ನೇ, ವೃಣೇ - ವರಿಸುತ್ತೇನೆ. ॥ ೪೦ ॥ ಸರಾಷ್ಟ್ರಾ - ರಾಜ್ಯದಿಂದೊಡಗೂಡಿದ, ಸಜನಾ - ಜನಭರಿತವಾದ, ಧನಧಾನ್ಯಸಮಾಕುಲಾ - ಧನದಿಂದಲೂ ಧಾನ್ಯದಿಂದಲೂ ತುಂಬಿರುವ, ಇಯಂವಸುಧಾ - ಈ ಭೂಮಿಯು, ಮಯಾ - ನನ್ನಿಂದ, ನಿಸೃಷ್ಟಾ - ಬಿಡಲ್ಪಟ್ಟಿತು, ಭರತಾಯ- ಭರತನಿಗೋಸುಗ, ಪ್ರದೀಯತಾಂ - ಕೊಡಲ್ಪಡಲಿ. ॥ ೪೧ ॥ ಹೇ ವರದ - ಎಲೈ ವರಪ್ರದಾಯ ಕನೆ! ತುಷ್ಟೇನ - ಸಂತುಷ್ಟನಾದ, ತ್ವಯಾ - ನಿನ್ನಿಂದ, ಕೈಕೇಯ್ಯೈ - ಕೈಕೇಯಿಯಾದೇವಿಗೆ, ಯೋವರಃ - ಯಾವ ವರವು, ದತ್ತಃ - ಕೊಡಲ್ಪಟ್ಟಿತೋ, ಸಃ - ಅಂತಹ ವರವು, ನಿಖಿಲೇನ - ಏನೊಂದೂ ತಡೆಯಿಲ್ಲದೆ, ದೀಯತಾಂ-ಕೊಡಲ್ಪಡಲಿ, ಹೇ ಪಾರ್ಥಿವ - ಎಲೈ ಅರಸೆ, ತ್ವಂ-ನೀನು, ಸತ್ಯಃ - ಸತ್ಯವಚನವುಳ್ಳವನು, ಭವ - ಆಗು, ಅದ್ಯ - ಈಗ, ಮೇ - ನನ್ನ, ವನವಾಸಕೃತಾ, ವನವಾಸ - ವನವಾಸದಲ್ಲಿ, ಕೃತಾ - ಮಾಡಲ್ಪಟ್ಟ, ಬುದ್ಧಿಶ್ಚ - ಬುದ್ಧಿಯೂ, ನಚಲಿಷ್ಯತಿ - ಬೇರ್ಪಡುವುದಿಲ್ಲ. ॥ ೪೨ ॥ ಅಹಂ - ನಾನು, ಭವತಃ - ನಿನ್ನ, ನಿದೇಶಂ - ಆಜ್ಞೆಯನ್ನು,

ಆ ಬಳಿಕ ಈ ರೀತಿಯಾಗಿ ಗೋಳಿಡುತ್ತಿರುವ ತಂದೆಯ ನುಡಿಗಳನ್ನು ಕೇಳಿ, ಲಕ್ಷ್ಮಣ ಸ್ವಾಮಿಯೊಡಗೂಡಿದವನಾಗಿ, "ಮಹಾರಾಜನೆ! ಪಿತೃವಾಕ್ಯ ಪರಿಪಾಲನೆಯನ್ನು ಮಾಡ ಬೇಕೆಂಬ ಪರಿಣತೆಯನ್ನು ಹೊಂದಿರುವ ಈ ನನ್ನ ಬುದ್ಧಿಯು ನಾಳಿನವರೆಗೂ ಇರು ವುದೋ, ಇಲ್ಲವೋ ಎಂಬುವನ್ನು ಹೇಳಲಾಗದು. ನಾಳೆ ನನ್ನ ಮನವು ಬೇರೆಯಾದರೆ ಮಾಡತಕ್ಕುದೇನು ? ಆದುವರಿಂದ ಈಗಲೇ ರಾಜ್ಯಶ್ರೀಯಿಂದಲೂ, ಜನಗಳಿಂದಲೂ, ಧಾನ್ಯಗಳಿಂದಲೂ ನಿಬಿಡೀಕೃತವಾದ ಈ ರಾಜ್ಯವಂತೊರೆದು ಅರಣ್ಯಕ್ಕೆ ತೆರಳು ತ್ತೇನೆ. ಈ ರಾಜ್ಯ ಸಂಪದವು ನನ್ನನುಜನಾದ ಭರತನಿಗೆ ಕೊಡಲ್ಪಡಲಿ. ಈ ನನ್ನ ಬುದ್ಧಿಯು ಈಗ ಬೇರೆಯಾಗುವುದೇ ಇಲ್ಲವು. ಓ ತಂದೆಯೇ ! ನೀನು ಹಿಂದೆ ಸಂತುಷ್ಟನಾಗಿ ನಿನ್ನ ಪ್ರಿಯ ಪತ್ನಿಯಾದ ಕೈಕೇಯಿಗೆ ವರಗಳನ್ನಿತ್ತೆ,

ಸತ್ಯಸ್ತ್ವಂ ಭವ ಪಾರ್ಥಿವ ॥ ಅಹಂ ನಿದೇಶಂ ಭವತೋ ಯಥೋಕ್ತ ಮನುಪಾಲಯನ್ ॥ ೪೩ ॥ ಚತುರ್ದಶ ಸಮಾವತ್ಸ್ಯೇ ವನೇ ವನಚರೈ ಸ್ಸಹ ॥ ಮಾವಿಮರ್ಶೋ ವಸುಮತೀ ಭರತಾಯ ಪ್ರದೀಯತಾಂ ॥ ೪೪ ॥ ನಹಿ ಮೇ ಕಾಂಕ್ಷಿತಂ ರಾಜ್ಯಂ ಸುಖಮಾತ್ಮನಿ ವಾಪ್ರಿಯಂ ॥ ಯಥಾನಿದೇಶಂ ಕರ್ತುಂ ವೈ ತವೈವ ರಘುನಂದನ ॥ ೪೫ ॥ ಅಪಗಚ್ಛತು ತೇ ದುಃಖಂ ಮಾಭೂರ್ಬಾಷ್ಪ ಪರಿಪ್ಲುತಃ ॥ ನಹಿಕ್ಷುಭ್ಯತಿ ದುರ್ಧರ್ಷ ಸ್ಸಮುದ್ರ ಸ್ಸರಿತಾಂಪತಿಃ ॥ ೪೬ ॥ ನೈವಾಹಂ ರಾಜ್ಯ ಮಿಚ್ಛಾಮಿ ನಸುಖಂ ನಚ ಮೈಥಿಲೀಂ ॥ ನೈವ ಸರ್ವಾನಿಮಾನ್ ಕಾಮಾನ್ ನಸ್ವರ್ಗಂ ನೈವ ಜೀವಿತಂ ॥ ೪೭ ॥ ತ್ವಾಮಹಂ

ಯಥೋಕ್ತಂ - ಉಕ್ತ ಪ್ರಕಾರವಾಗಿ, ಅನುಪಾಲಯನ್ - ಪರಿಪಾಲನಮಾಡುತ್ತ, ಚತುರ್ದಶಸಮಾಃ- ಹದಿನಾಲ್ಕು ಸಂವತ್ಸರಗಳು, ವನೇ - ವನದಲ್ಲಿ, ವನಚರೈಸ್ಸಹ - ಋಷಿಗಳೊಡನೆ, ವತ್ಸ್ಯೇ - ಇರುತ್ತೇನೆ, ವಸುಮತೀ - ಭೂಮಿಯು, ಭರತಾಯ - ಭರತನಿಗೆ, ಪ್ರದೀಯತಾಂ - ಕೊಡಲ್ಪಡಲಿ, ವಿಮರ್ಶಃ - ವಿಚಾರವು, ಮಾಸ್ತು - ಬೇಡ. ॥೪೩-೪೪॥ ಹೇ ರಘುನಂದನ - ಎಲೈ ರಘುಕುಲಾನಂದಕರನೆ, ತವ - ನಿನ್ನ, ನಿದೇಶಂ - ಆಜ್ಞೆಯನ್ನು, ಕರ್ತುಂ - ಮಾಡುವದಕ್ಕೆ, ಯಥೈವ - ಹೇಗೆ, ಕಾಂಕ್ಷಿತಂ - ಕೋರಲ್ಪಡುತ್ತದೆಯೋ, ತಥಾ - ಹಾಗೆ, ಮೇ - ನನ್ನಿಂದ, ರಾಜ್ಯಂ - ರಾಜ್ಯವು, ಆತ್ಮನಿವಾ - ನನ್ನ ದೇಹವಿಷಯದಲ್ಲಾದರೂ, ಸುಖಂ - ಸುಖವೇ ಆಗಲಿ, ಪ್ರಿಯಂ - ಇಷ್ಟವೇ ಆಗಲಿ, ನಕಾಂಕ್ಷಿತಂಹಿ - ಅಪೇಕ್ಷಿಸಲ್ಪಡುವದಿಲ್ಲವಷ್ಟೆ. ॥ ೪೫ ॥ ತೇ - ನಿನ್ನ, ದುಃಖಂ - ವ್ಯಸನವು, ಅಪಗಚ್ಛತು - ದೂರ ಸರಿಯಲಿ, ಬಾಷ್ಪಪರಿಪ್ಲುತಃ - ಕಂಬನಿಗಳಿಂದ ವ್ಯಾಪ್ತನಾದವನು, ಮಾಭೂಃ - ಆಗಬೇಡ, ದುರ್ಧರ್ಷಃ - ತಿರಸ್ಕರಿಸಲಸಾಧ್ಯವಾದ, ಸರಿತಾಂ - ನದಿಗಳಿಗೆ, ಪತಿಃ - ಅಧಿಪತಿಯಾದ, ಸಮುದ್ರಃ - ಸಮುದ್ರನು, ನಕ್ಷುಭ್ಯತಿಹಿ - ಕ್ಷೋಭೆಗೊಳ್ಳುವುದಿಲ್ಲ. ॥ ೪೬ ॥ ಅಹಂ - ನಾನು, ರಾಜ್ಯಂ - ಕೋಶವನ್ನು, ನೇಚ್ಛಾಮ್ಯೇವ - ಇಚ್ಛಿಸುವದೇ ಇಲ್ಲವು, ಸುಖಂ - ಸುಖವನ್ನು, ನೇಚ್ಛಾಮಿ - ಕೋರುವದಿಲ್ಲ, ಮೈಥಿಲೀಂಚ - ಸೀತಾದೇವಿಯನ್ನು, ನ - ಕೋರುವದಿಲ್ಲ, ಸರ್ವಾನ್ - ಸಮಸ್ತಗಳಾದ, ಇಮಾನ್ಕಾಮಾನ್ - ಈ ಭೋಗಾದಿಗಳನ್ನು, ನೈವ- ಕೋರುವದೇ ಇಲ್ಲವು, ಸ್ವರ್ಗಂ - ಸ್ವರ್ಗವನ್ನು, ನೇಚ್ಛಾಮಿ - ಇಚ್ಛಿಸುವದಿಲ್ಲ, ಜೀವಿತಂ - ಪ್ರಾಣವನ್ನು, ನೈವ - ಕೋರುವದಿಲ್ಲ. ॥ ೪೭ ॥ ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೆ, ಕಿಂತು-

ಆದನ್ನೀಗ ಸಲ್ಲಿಸಿ ಸತ್ಯವಂತನೆನಿಸು. ನಾನು ನಿನ್ನಾಣತಿಯಂತೆ ಹದಿನಾಲ್ಕು ವರ್ಷಗಳವರೆವಿಗೂ ಅರಣ್ಯದಲ್ಲಿ ಋಷಿಗಳೊಡನೆ ವಾಸಮಾಡುತ್ತೇನೆ ಈ ಭೂಮಂಡಲವನ್ನು ಭರತನಿಗೆ ಕೊಡುವವನಾಗು. ಈ ವಿಷಯದಲ್ಲಿ ಚರ್ಚೆಯುಬೇಡ; ನನಗೆ ನಿನ್ನಪ್ಪಣೆಯಲ್ಲಿರುವ ಪ್ರೇಮವು ನನ್ನ ದೇಹವಿಷಯದಲ್ಲಿಯಾಗಲಿ, ರಾಜ್ಯದಲ್ಲಿಯಾಗಲಿ, ಇತರ ಯಾವುದರಲ್ಲೇ ಆಗಲಿ ಇರುವುದಿಲ್ಲವೆಂಬುದನ್ನು ತಿಳಿವವನಾಗು. ಚಿಂತಿಸುವೆಯೇಕೆ ? ಈ ವ್ಯಸನವನ್ನು ತ್ಯಜಿಸು ! ಕಂಬನಿಯಿಡಬೇಡ ! ಸಾಗರನು ಸೊರಗುವುದುಂಟೆ ? ಮಹಾರಾಜನೆ ! ಗಾಂಭೀರ್ಯವಂತನಾದ ನೀನು ಸೊರಗಬಾರದು. ನೀನು ಸತ್ಯವಂತನಾಗಿರ

ಸತ್ಯಮಿಚ್ಛಾಮಿ ನಾನೃತಂ ಪುರುಷರ್ಷಭ ‖ ಪ್ರತ್ಯಕ್ಷಂ ತವ ಸತ್ಯೇನ ಸುಕೃತೇನ ಚ ತೇ ಶಪೇ ‖ ೪೮ ‖ ನಚ ಶಕ್ಯಂ ಮಯಾ ತಾತ ಸ್ಥಾತುಂ ಕ್ಷಣಮಪಿ ಪ್ರಭೋ ‖ ನಶೋಕಂ ಧಾರಯಸ್ವೈನಂ ನಹಿ ಮೇಽಸ್ತಿ ವಿಪರ್ಯಯಃ ‖೪೯‖ ಅರ್ಥಿತೋಹ್ಯಸ್ಮಿ ಕೈಕೇಯ್ಯಾ ವನಂಗಚ್ಛೇತಿ ರಾಘವ ‖ ಮಯಾಚೋಕ್ತಂ ವ್ರಜಾಮೀತಿ ತತ್ಸತ್ಯ ಮನುಪಾಲಯೇ ‖ ೫೦ ‖ ಮಾಚೋತ್ಕಂಠಾಂ ಕೃಥಾ ದೇವ ವನೇ ರಂಸ್ಯಾಮಹೇ ವಯಂ ‖ ಪ್ರಶಾಂತ ಹರಿಣಾಕೀರ್ಣೇ ನಾನಾ ಶಕುನ ನಾದಿತೇ ‖ ೫೧ ‖ ಪಿತಾಹಿ ದೈವತಂ ತಾತ ದೇವತಾನಾಮಪಿಸ್ಮೃತಂ‖

ಇಷ್ಟೆಯಲ್ಲದೆ, ಅಹಂ - ನಾನು, ತ್ವಾಂ - ನಿನ್ನನ್ನು, ಸತ್ಯಂ - ಸತ್ಯ ವಚನವುಳ್ಳವನನ್ನಾಗಿ, ಇಚ್ಛಾಮಿ - ಬಯಸುವೆನು, ಅನೃತಂ - ಅಸತ್ಯ ವಚನವುಳ್ಳವನನ್ನಾಗಿ, ನೇಚ್ಛಾಮಿ - ಕೋರುವದಿಲ್ಲ, ತವ - ನಿನ್ನ, ಪ್ರತ್ಯಕ್ಷಂ - ಎದುರಾಗಿ, ಸತ್ಯೇನ - ಸತ್ಯದಿಂದಲೂ, ಸುಕೃತೇನಚ - ಸುಕೃತದಿಂದಲೂ, ತೇ - ನಿನಗೆ, ಶಪೇ - ಶಪಥವಮಾಡುವೆನು. ‖ ೪೮ ‖ ಹೇ ತಾತ - ಎಲೈ ತಂದೆಯೆ! ಕ್ಷಣಂ - ಕ್ಷಣಕಾಲವಾದರೂ, ಸ್ಥಾತುಂ - ಇರುವದಕ್ಕೆ, ಮಯಾ - ನನ್ನಿಂದ, ನಶಕ್ಯಂ - ಆಗಲಾರದು, ಹೇ ಪ್ರಭೋ - ಎಲೈ ಸ್ವಾಮಿಯೇ, ಏನಂಶೋಕಂ - ಈ ವ್ಯಸನವನ್ನು, ನಧಾರಯಸ್ವ - ಧರಿಸಬೇಡ, ಮೇ - ನನಗೆ, ವಿಪರ್ಯಯಃ - ವನಗಮನಬುದ್ಧಿ ವ್ಯತ್ಯಾಸವು, ನಾಸ್ತಿಹಿ - ಇಲ್ಲವಷ್ಟೆ. ‖ ೪೯ ‖ ಹೇ ರಾಘವ - ಎಲೈ ರಘುವಂಶೋದ್ಭವನೇ, ಹಿ - ಯಾವ ಕಾರಣ, ಕೈಕೇಯ್ಯಾ - ಕೈಕೇಯಿಯಿಂದ, ವನಂಗಚ್ಛೇತಿ-ವನವನ್ನು ಕುರಿತು ಹೋಗೆಂದು, ಅರ್ಥಿತಃ - ಯಾಚಿಸಲ್ಪಟ್ಟವನು, ಅಸ್ಮಿ - ಆದೆನೋ, ಮಯಾಚ - ನನ್ನಿಂದಲೂ, ವ್ರಜಾಮೀತಿ - ಹೋಗುವೆನೆಂದು, ಉಕ್ತಂ - ಹೇಳಲ್ಪಟ್ಟಿತೋ, ತತ್ - ಆ ಕಾರಣ, ಸತ್ಯಂ - ಸತ್ಯವನ್ನು, ಅನುಪಾಲಯೇ - ಪರಿಪಾಲನ ಮಾಡುತ್ತೇನೆ. ‖ ೫೦ ‖ ಹೇ ದೇವ - ಎಲೈ ಸ್ವಾಮಿಯೆ, ಉತ್ಕಂಠಾಂ - ನನ್ನಲ್ಲಿ ಕುತೂಹಲವನ್ನು, (ಗೋ) - ವ್ಯಥೆಯನ್ನು, ಮಾಕೃಥಾಃ - ಮಾಡಬೇಡ, ವಯಂ - ನಾವು, ಪ್ರಶಾಂತ ಹರಿಣಾಕೀರ್ಣೇ, ಪ್ರಶಾಂತ - ಶಾಂತಗುಣವುಳ್ಳ, ಹರಿಣಾ - ಚಿಗುರಿಗಳಿಂದ, ಆಕೀರ್ಣೇ - ತುಂಬಿರುವ, ನಾನಾ ಶಕುನ ನಾದಿತೇ, ನಾನಾ - ಅನೇಕ ಬಗೆಗಳಾದ, ಶಕುನ - ಪಕ್ಷಿಗಳಿಂದ, ನಾದಿತೇ - ಧ್ವನಿಗೊಳಿಸುತ್ತಿರುವ, ವನೇ - ವನದಲ್ಲಿ, ರಂಸ್ಯಾಮಹೇ - ವಿಹರಿಸುತ್ತೇವೆ. ‖ ೫೧ ‖

ಬೇಕೆಂದು ನಾನು ಬಯಸುತ್ತೇನೆಯಲ್ಲದೆ, ಈ ರಾಜ್ಯವನ್ನೂ, ಇತರ ಸುಖವನ್ನೂ, ಇಷ್ಟವಾದ ಪದಾರ್ಥಗಳನ್ನೂ, ಕೊನೆಗೆ ನನ್ನ ಪ್ರಿಯತಮೆಯಾದ ಈ ಸೀತಾದೇವಿಯನ್ನೂ ಬಯಸುವುದಿಲ್ಲವು. ಎಲೈ ತಂದೆಯೆ ! ಅಳದಿರು. ನನಗೆ ವನವಾಸ ಮಾಡಬೇಕೆಂಬ ಬುದ್ಧಿಯು ಅಳಿದು ಹೋಗುವುದಿಲ್ಲ. ಎಲೈ ಜನಕನೆ ! ಕೈಕೇಯಿಯು ನನ್ನನ್ನು ವನವಾಸಕ್ಕೆ ಹೋಗೆಂದು ಹೇಳಿದಾಗಲೆ, ನಾನು ಹೋಗುತ್ತೇನೆಂದು ಆಕೆಯ ವಚನವನ್ನಂಗೀಕರಿಸಿದೆನು. ಆಕೆಗೆ ಮಾತು ಕೊಟ್ಟೆನಾದುದರಿಂದ ಅದನ್ನು ನಡಿಸಿಯೇ ತೀರುತ್ತೇನೆ; ಇದರಲ್ಲಿ ಸ್ವಲ್ಪ ಮಾತ್ರವೂ ಸಂಶಯವಿಲ್ಲ. ಒಂದು ಕ್ಷಣ ಕಾಲವೂ ಇಲ್ಲಿ ನಿಲ್ಲಲಾರೆನು. ಇದು ಖಂಡಿತವು; ನನಗೋಸುಗ ನೀನು ವ್ಯಥೆಗೊಳ್ಳಬೇಡ. ನಾನು ಶಮ ಪ್ರಧಾನವುಳ್ಳ ಹರಿಣ

ತಸ್ಮಾದ್ದೈವತಮಿತ್ಯೇವ ಕರಿಷ್ಯಾಮಿ ಪಿತುರ್ವಚಃ ‖ ೫೨ ‖ ಚತುರ್ದಶ ಸು ವರ್ಷೇಷು ಗತೇಷು ನರಸತ್ತಮ ‖ ಪುನರ್ದ್ರಕ್ಷ್ಯಸಿ ಮಾಂ ಪ್ರಾಪ್ತಂ ಸಂತಾಪೋಽಯಂ ವಿಮುಚ್ಯತಾಂ ‖೫೩‖ ಯೇನ ಸಂಸ್ತಂಭನೀಯೋಽಯಂ ಸರ್ವೋ ಬಾಷ್ಪಗಳೋ ಜನಃ ‖ ಸ ತ್ವಂ ಪುರುಷ ಶಾರ್ದೂಲ ಕಿಮರ್ಥಂ ವಿಕ್ರಿಯಾಂ ಗತಃ ‖ ೫೪ ‖ ಪುರಂ ಸರಾಷ್ಟ್ರಂಚ ಮಹೀಚ ಕೇವಲಾ ಮಯಾ ನಿಸೃಷ್ಟಾ ಭರತಾಯ ದೀಯತಾಂ ‖ ಅಹಂ ನಿದೇಶಂ ಭವತೋಽನುಪಾಲಯನ್ ವನಂ

ಹೇ ತಾತ - ಎಲೈ ತಂದೆಯೆ, ಹಿ - ಯಾವ ಕಾರಣ, ಪಿತಾ - ತಂದೆಯು, ದೇವತಾನಾಮಪಿ - ದೇವತೆಗಳಿಗೂ, ದೈವತಂ - ದೇವತೆಯೆಂದು, ಸ್ಮೃತಂ - ಸ್ಮೃತಿಗಳಲ್ಲಿ ಹೇಳಲ್ಪಟ್ಟಿರುವುದೋ, ತಸ್ಮಾತ್ - ಆ ಕಾರಣ, ದೈವತಮಿತ್ಯೇವ - ದೇವತೆಯೇ ಎಂದು ತಿಳಿದು, ಪಿತುಃ - ತಂದೆಯ, ವಚಃ - ಮಾತನ್ನು, ಕರಿಷ್ಯಾಮಿ - ಮಾಡುವೆನು. ‖ ೫೨ ‖ ಹೇ ನರಸತ್ತಮ - ಎಲೈ ನರ ಶ್ರೇಷ್ಠನೆ, ಚತುರ್ದಶಸು - ಹದಿನಾಲ್ಕಾದ, ವರ್ಷೇಷು - ಸಂವತ್ಸರಗಳು, ಗತೇಷು - ಕಳೆದ ಮೇಲೆ, ಪುನಃ - ಮತ್ತು, ಪ್ರಾಪ್ತಂ - ಹಿಂತಿರುಗಿ ಬಂದ, ಮಾಂ - ನನ್ನನ್ನು, ದ್ರಕ್ಷ್ಯಸಿ - ನೋಡುವೆ, ಅಯಂ ಸಂತಾಪಃ - ಈ ಸಂಕಟವು, ವಿಮುಚ್ಯತಾಂ - ಬಿಡಲ್ಪಡಲಿ. ‖ ೫೩ ‖ ಯೇನ - ಯಾವ ನಿನ್ನಿಂದ, ಬಾಷ್ಪಗಳಃ - ಕಣ್ಣೀರಿನಿಂದ ಕೂಡಿದ ಕಂಠಸ್ವರವುಳ್ಳ, ಸರ್ವಃ-ಸಮಸ್ತ ವಾದ, ಅಯಂಜನಃ - ಈ ಸ್ತ್ರೀಜನವು, ಸಂಸ್ತಂಭನೀಯಃ - ತಡೆಮಾಡತಕ್ಕದೋ, ಹೇ ಪುರುಷ ಶಾರ್ದೂಲ - ಎಲೈ ಪುರುಷಶ್ರೇಷ್ಠನೆ, ಸತ್ವಂ - ಅಂತಹ ನೀನು, ಕಿಮರ್ಥಂ - ಏತಕ್ಕೋಸುಗ, ವಿಕ್ರಿಯಾಂ - ಮನೋವಿಕಾರವನ್ನು, ಗತಃ - ಹೊಂದಿರುವೆ. ‖ ೫೪ ‖ ಮಯಾ - ನನ್ನಿಂದ, ನಿಸೃಷ್ಟಂ - ಬಿಡಲ್ಪಟ್ಟ, ಸರಾಷ್ಟ್ರಂ - ರಾಜ್ಯದಿಂದೊಡಗೂಡಿದ, ಪುರಂ - ಪಟ್ಟಣವು, ಭರತಾಯ- ಭರತನಿಗೆ, ದೀಯತಾಂ - ಕೊಡಲ್ಪಡಲಿ, ಮಯಾ - ನನ್ನಿಂದ, ನಿಸೃಷ್ಟಾ - ಬಿಡಲ್ಪಟ್ಟ, ಕೇವಲಾ- ಮುಖ್ಯವಾದ, ಮಹೀಚ - ರಾಜ್ಯವು, ಭರತಾಯ - ಭರತನಿಗೆ, ದೀಯತಾಂ - ಕೊಡಲ್ಪಡಲಿ, ಅಹಂ - ನಾನು, ಭವತಃ - ನಿನ್ನ, ನಿದೇಶಂ - ಆಜ್ಞೆಯನ್ನು, ಅನುಪಾಲಯನ್ - ರಕ್ಷಿಸುತ್ತ,

ನಿಚಯಗಳಿಂದ ನಿಬಿಡೀಕೃತವಾದುದೂ, ವಿವಿಧ ಪಕ್ಷಿ ಸಂಘಗಳಿಂದ ಶಬ್ದಾಯಮಾನವಾದುದೂ ಆದ ಅಟವಿಗಳಲ್ಲಿ ವಿಹರಿಸುತ್ತೇನೆ. ಓ ಜನಕನೆ! ತಂದೆಯೇ ದೇವತೆಯೆಂಬುದನ್ನು ನಾನು ಕೇಳಿದ್ದೇನೆ. ಆದುದರಿಂದ ನಿನ್ನ ನುಡಿಯನ್ನು, ದೇವತಾ ವಾಕ್ಯವೆಂದು ವಿಶ್ವಾಸಿಸಿ, ಹದಿನಾಲ್ಕು ಸಂವತ್ಸರಗಳವರೆಗೂ ಅರಣ್ಯವಾಸವನ್ನು ಮಾಡಿ ಹಿಂತಿರುಗಿ ಬರುತ್ತೇನೆ. ಆಗ ನೀನು ನನ್ನನ್ನು ನೋಡಿ ಸಂತೋಷಗೊಳ್ಳುತ್ತೀಯೆ, ಈ ಪರಿತಾಪವನ್ನು ತ್ಯಜಿಸು, ನಿನ್ನಾಣತಿಯನ್ನು ಪರಿಪಾಲಿಸಿ ಪುನಃ ಬರುತ್ತೇನೆ. ನರನಾಥ! ಕೇಳು; ನೀನು ಸಂಕಟಪಟ್ಟರೆ ಪ್ರಜೆಗಳೆಲ್ಲರೂ ದುಃಖಿಸುತ್ತಾರೆ. ಹೀಗಿರಲು ನೀನು ವ್ಯಥೆಗೊಳ್ಳುವುದೇಕೆ? ಇದೋ! ಈ ಭೂಮಿಯನ್ನು ನಾನು ತ್ಯಜಿಸುತ್ತೇನೆ. ಭರತನಿಗೀರಾಜ್ಯವನ್ನು ಕೊಡು. ನಾನು ನಿನ್ನಾಜ್ಞೆಯನ್ನು ಪರಿಪಾಲಿಸಿ ಬರುತ್ತೇನೆ. ನನ್ನಿಂದ ತ್ಯಜಿಸಲ್ಪಟ್ಟುದೂ, ಗಿರಿ ನಗರ ನಿವಹಗಳಿಂದಲು, ಅರಣ್ಯಗಳಿಂದಲೂ ತುಂಬಿದುದೂ, ನಿರ್ಭಯವಾದ ಸೀಮಾ

ಗಮಿಷ್ಯಾಮಿ ಚಿರಾಯ ಸೇವಿತುಂ ‖ ೫೫ ‖ ಮಯಾ ನಿಸೃಷ್ಟಾಂ ಭರತೋ ಮಹೀಮಿಮಾಂ ಸ ಶೈಲ ಷಂಡಾಂ ಸ ಪುರಾಂ ಸ ಕಾನನಾಂ‖ಶಿವಾಂ ಸು ಸೀಮಾ ಮನುಶಾಸ್ತು ಕೇವಲಂ ತ್ವಯಾ ಯದುಕ್ತಂ ನೃಪತೇ ತಥಾಸ್ತು ತತ್ ‖ ೫೬ ‖ ನ ಮೇ ತಥಾ ಪಾರ್ಥಿವ ಧೀಯತೇ ಮನೋ ಮಹತ್ಸು ಕಾಮೇಷು ನಚಾತ್ಮನಃ ಪ್ರಿಯೇ ‖ ಯಥಾ ನಿದೇಶೇ ತವಶಿಷ್ಟಸಂಮತೇ ವ್ಯಪೈತು ದುಃಖಂ ತವ ಮತ್ಕೃತೇಽನಘ ‖ ೫೭ ‖ ತದದ್ಯ ನೈವಾನಘ ರಾಜ್ಯಮವ್ಯಯಂ ನ ಸರ್ವ ಕಾಮಾ ನ್ನ ಸುಖಂ ನ ಮೈಥಿಲೀಂ ‖ ನ ಜೀವಿತಂ ತ್ವಾಮನೃತೇನ ಯೋಜಯರ್ಯ

ವನಂ - ವನವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಚಿರಾಯ-ಸಾವಕಾಶದಿಂದ, ಸೇವಿತುಂ-ನಿನ್ನ ಸೇವೆಮಾಡುವದಕ್ಕೆ, ಆಗಮಿಷ್ಯಾಮಿ - ಬರುತ್ತೇನೆ. ‖ ೫೫ ‖ ಮಯಾ - ನನ್ನಿಂದ, ನಿಸೃಷ್ಟಾಂ - ಬಿಡಲ್ಪಟ್ಟ, ಸಶೈಲಷಂಡಾಂ - ಬೆಟ್ಟಗಳ ಗುಂಪುಗಳಿಂದೊಡಗೂಡಿದ, ಸಪುರಾಂ - ಪಟ್ಟಣಗಳಿಂದ ಕೂಡಿರುವ, ಸಕಾನನಾಂ - ಅರಣ್ಯಗಳಿಂದೊಡಗೂಡಿದ, ಶಿವಾಂ - ಶುಭಕರವಾದ, ಸುಸೀಮಾಂ - ಸಮಿಾಚೀನವಾದ ಎಲ್ಲೆಕಟ್ಟುಗಳುಳ್ಳ, ಇಮಾಂಮಹೀಂ - ಈ ಭೂಮಂಡಲವನ್ನು, ಭರತಃ - ಭರತನು, ಅನುಶಾಸ್ತು - ಆಳಲಿ, ತ್ವಯಾ - ನಿನ್ನಿಂದ, ಕೇವಲಂ - ಮುಖ್ಯವಾಗಿ, ಯತ್ - ಯಾವ ಮಾತು, ಉಕ್ತಂ - ಹೇಳಲಾಯಿತೋ, ಹೇ ನೃಪತೇ - ಎಲೈ ಅರಸೆ! ತತ್ - ಅದು, ತಥಾಸ್ತು - ಹಾಗೆಯೇ ಆಗಲಿ. ‖ ೫೬ ‖ ಹೇ ಪಾರ್ಥಿವ - ಎಲೈ ಪೃಥ್ವೀಪತಿಯೇ! ಮೇ - ನನ್ನ, ಮನಃ - ಮನಸ್ಸು, ಶಿಷ್ಟಸಂಮತೇ - ಸತ್ಪುರುಷರಿಗೆ ಇಷ್ಟವಾದ, ತವ - ನಿನ್ನ, ನಿದೇಶೇ - ಆಜ್ಞೆಯಲ್ಲಿ, ಯಥಾ - ಹೇಗೆ, ಧೀಯತೇ - ಇರಿಸಲ್ಪಡುತ್ತದೆಯೋ, ಮಹತ್ಸು - ದೊಡ್ಡವುಗಳಾದ, ಕಾಮೇಷು - ಕೋರಿಕೆಗಳಲ್ಲಿ, ಆತ್ಮನಃ - ನನಗೆ, ಪ್ರಿಯೇಚ - ಇಷ್ಟವಾದ ಪದಾರ್ಥಗಳಲ್ಲಿಯೂ, ಮನಃ - ಮನಸ್ಸು, ತಥಾ - ಹಾಗೆಯೇ, ನಧೀಯತೇ - ಇರಿಸಲ್ಪಡುವದಿಲ್ಲ, ಹೇ ಅನಘ - ಎಲೈ ನಿರ್ದೋಷನೆ, ಮತ್ಕೃತೇ - ನನ್ನ ನಿಮಿತ್ತವಾದ, ದುಃಖಂ - ವ್ಯಸನವು, ವ್ಯಪೈತು - ಹೋಗಲಿ. ‖ ೫೭ ‖ ಹೇ ಅನಘ - ಎಲೈ ನಿರ್ದೋಷನೇ, ತತ್ - ಆ ಕಾರಣ, ತ್ವಾಂ - ನಿನ್ನನ್ನು, ಅದ್ಯ - ಈಗ, ಅನೃತೇನ - ಅಸತ್ಯದಿಂದ, ಯೋಜಯರ್ಯ - ಸೇರಿಸಿ, ಅವ್ಯಯಂ - ನಾಶರಹಿತವಾದ, ರಾಜ್ಯಂ - ಕೋಶವನ್ನು, ನವೃಣೀಯೆ - ಬೇಡಲಾರೆನು, ಸರ್ವಕಾಮಾ್ - ಎಲ್ಲ

ಪ್ರದೇಶಗಳುಳ್ಳದಾಗಿಯೂ, ಇರುವ ಈ ಅಯೋಧ್ಯಾ ರಾಜ್ಯವನ್ನು ನೀನು ನುಡಿದಂತೆ ಭರತನು ಸಂರಕ್ಷಿಸಲಿ. ಸನ್ಮಾರ್ಗಗಾಮಿಗಳಾದ ಎಲ್ಲರಿಗೂ ಪಥ್ಯವಾದ ನಿನ್ನ ಮಾತಿನಲ್ಲಿ, ನನಗಿರುವ ವಿಶ್ವಾಸವು ಮತ್ತಾವುದರಲ್ಲಿಯೂ ಇರುವುದಿಲ್ಲ. ಈ ಆಧಿಪತ್ಯಕ್ಕೆ ನಾನು ಕೈ ಚಾಚಿದರೆ, ದೇವತಾ ಪ್ರಾಯನಾದ ನಿನಗೆ "ಅನೃತವಾದೀ" ಎಂಬ ಅಪಕೀರ್ತಿ ಬರುತ್ತದೆ, ಅದು ನನಗೆ ಎಷ್ಟುಮಾತ್ರವೂ ಇಷ್ಟವಿಲ್ಲ. ಈ ರಾಜ್ಯವು ನನಗೆ ಬೇಡ; ಯಾವ ಕೋರಿಕೆಗಳೂ ನನಗೆ ಬೇಡ; ಸುಖವನ್ನೂ ತೊರೆಯುತ್ತೇನೆ; ಕೊನೆಗೆ ನನ್ನ ಪ್ರಿಯತಮೆಯಾದ ಸೀತೆಯನ್ನೂ ಅಗಲುತ್ತೇನೆ, ತಂದೆಯೇ! ಹೆಚ್ಚೇನು? ಇವೆಲ್ಲಕ್ಕಿಂತಲೂ ಹೆಚ್ಚಿನದಾದ ನನ್ನ ಪ್ರಾಣವನ್ನೇ ಬಿಟ್ಟುಬಿಡುತ್ತೇನೆ. ಇಷ್ಟೆಲ್ಲವೂ ಏಕೆ? ನಿನ್ನ ಸತ್ಯವ್ರತವು ಸಫಲ

ವೃಣೇಯಹ ಸತ್ಯಂ ವ್ರತಮಸ್ತು ತೇ ತಥಾ ||೫೮|| ಫಲಾನಿ ಮೂಲಾನಿ ಚ ಭಕ್ಷಯರ್ನ್ ವನೇ ಗಿರೀಂಶ್ಚ ಪಶ್ಯನ್ ಸರಿತ ಸ್ಸರಾಂಸಿಚ || ವನಂ ಪ್ರವಿಶ್ಯೈವ ವಿಚಿತ್ರ ಪಾದಪಂ ಸುಖೀ ಭವಿಷ್ಯಾಮಿ ತವಾಸ್ತು ನಿರ್ವೃತಿಃ ||೫೯|| ಏವಂ ಸರಾಜಾ ವ್ಯಸನಾಭಿಪನ್ನ ಶ್ಶೋಕೇನ ದುಃಖೇನ ಚ ತಾಮ್ಯಮಾನಃ || ಆಲಿಂಗ್ಯ ಪುತ್ರಂ ಸು ವಿನಷ್ಟ ಸಂಜ್ಞೋ ಮೋಹಂ ಗತೋ ನೈವ ಚಿಚೇಷ್ಟ ಕಿಂಚಿತ್||೬೦||

ದೇವ್ಯಸ್ತತ ಸ್ಸಂರುರುದು ಸ್ಸಮೇತಾ
ಸ್ತಾಂ ವರ್ಜಯಿತ್ವಾ ನರದೇವಪತ್ನೀಂ ||

ಕೋರಿಕೆಗಳನ್ನು, ನ - ಕೋರಲಾರೆನು, ಸುಖಂ - ಸುಖವನ್ನು, ನ-ಅಪೇಕ್ಷಿಸಲಾರೆನು, ಮೈಥಿಲೀಂ-ಸೀತಾದೇವಿಯನ್ನು, ನ - ಬಯಸಲಾರೆನು, ಜೀವಿತಂ - ಪ್ರಾಣವನ್ನು, ನ - ಇಚ್ಛಿಸುವದಿಲ್ಲ, ತಥಾ-ಹಾಗೆಯೇ, ತೇ - ನಿನ್ನ, ವ್ರತಂ - ವ್ರತವು, ಸತ್ಯಂ - ಸಫಲವಾದದ್ದು, ಅಸ್ತು - ಆಗಲಿ. || ೫೮ || ಫಲಾನಿ - ಫಲಗಳನ್ನೂ, ಮೂಲಾನಿ - ಕಂದ ಮೂಲಗಳನ್ನೂ, ಭಕ್ಷಯರ್ನ್ - ತಿನ್ನುತ್ತ, ವನೇ - ವನದಲ್ಲಿ, ಗಿರೀಂಶ್ಚ - ಬೆಟ್ಟಗಳನ್ನೂ, ಸರಿತಃ - ಹೊಳೆಗಳನ್ನೂ ಸರಾಂಸಿಚ-ಸರೋವರಗಳನ್ನೂ, ಪಶ್ಯನ್-ನೋಡುತ್ತ, ವಿಚಿತ್ರ ಪಾದಪಂ, ವಿಚಿತ್ರ - ಆಶ್ಚರ್ಯಕರವಾದ, ಪಾದಪಂ-ಗಿಡಗಳುಳ್ಳ, ವನಮೇವ-ಆರಣ್ಯವನ್ನೇ, ಪ್ರವಿಶ್ಯ - ಪ್ರವೇಶಿಸಿ, ಸುಖೀ - ಸಂತೋಷವುಳ್ಳವನು, ಭವಿಷ್ಯಾಮಿ - ಆಗುವೆನು, ತವ - ನಿನಗೆ, ನಿರ್ವೃತಿಃ - ಸುಖವು, ಅಸ್ತು - ಆಗಲಿ. || ೫೯ || ಏವಂ - ಈಪರಿಯಾಗಿ, ವ್ಯಸನಾಭಿಪನ್ನಃ, ವ್ಯಸನ - ಶೋಕದಿಂದ, ಅಭಿಪನ್ನಃ - ಕೂಡಿದ, ಸರಾಜಾ - ಆ ದಶರಥ ರಾಯನು, ಶೋಕೇನ - ದೇಹದ ಚರ್ಮವನ್ನು ಉರಿಯುವ ಹಾಗೆ ಮಾಡತಕ್ಕ ವ್ಯಸನದಿಂದಲೂ, ದುಃಖೇನ - ಮನೋವ್ಯಥೆಯಿಂದಲೂ, ತಾಮ್ಯಮಾನಃ - ಬಳಲಿ, ಪುತ್ರಂ - ಮಗನನ್ನು, ಆಲಿಂಗ್ಯ - ಅಪ್ಪಿಕೊಂಡು, ಸುವಿನಷ್ಟ ಸಂಜ್ಞಃ, ಸುವಿನಷ್ಟ - ಬಹುವಾಗಿ ನಷ್ಟವಾದ, ಸಂಜ್ಞಃ - ಪ್ರಜ್ಞೆಯುಳ್ಳವನಾಗಿ, ಮೋಹಂ - ಮೂರ್ಛೆಯನ್ನು, ಗತಃ - ಹೊಂದಿ, ಕಿಂಚಿತ್ - ಕೊಂಚವಾದರೂ, ನೈವಚಿಚೇಷ್ಟ - ಕೈಕಾಲುಗಳೇ ಅಲ್ಲಾಡಿಸಲಿಲ್ಲ. || ೬೦ || ತತಃ - ಬಳಿಕ, ದೇವ್ಯಃ - ರಾಜ ಸ್ತ್ರೀಯರೆಲ್ಲರೂ, ಸಮೇತಾಃ - ಗುಂಪುಗೂಡಿ, ನರದೇವ ಪತ್ನೀಂ, ನರದೇವ - ದಶರಥ ರಾಯನ, ಪತ್ನೀಂ - ಕಿರೀಹೆಂಡತಿಯಾದ, ತಾಂ - ಆ ಕೈಕೇಯಿದೇವಿಯನ್ನು, ವರ್ಜಯಿತ್ವಾ -

ವಾಗುವುದಕ್ಕೆ ; ಅದು ಸಫಲವಾಗಲಿ, ನಾನು ಅರಣ್ಯದಲ್ಲಿ ಗಿರಿ, ನದಿ, ಸರೋವರಗಳನ್ನು ನೋಡುತ್ತ, ಫಲ ಮೂಲಗಳನ್ನು ಭುಂಜಿಸುತ್ತ ಸಂತೋಷವಾಗಿರುತ್ತೇನೆ. ನೀನು ಚಿಂತಿಸಬೇಡ" ಎಂದು ನುಡಿದನು. || ೫೮-೫೯ || ಇಂತೆಂದ ಮುದ್ದು ಕುವರನಾದ ಶ್ರೀರಾಮನ ನುಡಿಗಳನ್ನು ಕೇಳಿ, ನರಪಾಲನಾದ ದಶರಥರಾಯನು ದುಃಖಾಕ್ರಾಂತನಾಗಿ, ಮನೋವ್ಯಥೆಯಿಂದ ಸಂತಪಿಸುತ್ತ, ಆತನನ್ನಪ್ಪಿಕೊಂಡು ಮೂರ್ಛೆಯೊಂದಿ ನೆಲಕ್ಕೆ

ರುದರ್ತ ಸುಮಂತ್ರೋಽಪಿ ಜಗಾಮ ಮೂರ್ಛಾಂ
ಹಾಹಾ ಕೃತಂ ತತ್ರ ಬಭೂವ ಸರ್ವಂ ॥ ೬೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಸ್ತ್ರಿಂಶಸ್ಸರ್ಗಃ.

ಬಿಟ್ಟು, ಸಂರುರುದುಃ - ಚನ್ನಾಗಿ ಅಳುತ್ತಿದ್ದರು, ಸುಮಂತ್ರೋಽಪಿ - ಸುಮಂತ್ರನೂ, ರುದರ್ತ - ಅಳುತ್ತ, ಮೂರ್ಛಾಂ - ಮೂರ್ಛೆಯವನ್ನು, ಜಗಾಮ - ಹೊಂದಿದನು, ತತ್ರ - ಆ ಅಂತಃಪುರದಲ್ಲಿ, ಸರ್ವಂ - ಸಮಸ್ತ ಜನಸಂಘವೂ, ಹಾಹಾಕೃತಂ - "ಹಾಹಾ" ಎಂಬ ಶಬ್ದವನ್ನು ಮಾಡುತ್ತಿರುವದು, ಬಭೂವ - ಆಯಿತು. ॥ ೬೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಸ್ತ್ರಿಂಶಸ್ಸರ್ಗಃ.

ಬಿದ್ದನು. ಆಗ ರಾಜಸ್ತ್ರೀಯರಲ್ಲಿ ಕೈಕೇಯಿಯನ್ನುಳಿದು ಮಿಕ್ಕವರೆಲ್ಲರೂ ಗುಂಪುಗೂಡಿ ಬಹಳವಾಗಿ ರೋದಿಸುತ್ತಿದ್ದರು. ಮಂತ್ರೀಶನಾದ ಸುಮಂತ್ರನೂ ಮೋಹಗೊಂಡನು. ಅಂತಃಪುರವೆಲ್ಲ "ಹಾಹಾ!!" ಕಾರದಿಂದ ತುಂಬಿತು. ॥ ೬೦-೬೧ ॥

ಇಂತಿದು ದಶರಥ ವಿಲಾಪವಿಧಾನ ಕಥನವೆಂಬ ಮುವತ್ತನಾಲ್ಕನೆಯ ಸರ್ಗವು
ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚತ್ರಿಂಶಸ್ಸರ್ಗಃ.

ತತೋ ನಿರ್ಧೂಯ ಸಹಸಾ ಶಿರೋ ನಿಶ್ವಸ್ಯ ಚಾಸಕೃತ್ ‖ ಪಾಣೌ ಪಾಣಿಂ ವಿನಿಷ್ಪಿಷ್ಯ ದಂತಾ೯ ಕಟಕಟಾಪ್ಯಚ ‖ ೧ ‖ ಲೋಚನೇ ಕೋಪ ಸಂರಕ್ತೇ ವರ್ಣಂ ಪೂರ್ವೋಚಿತಂ ಜಹತ್ ‖ ಕೋಪಾಭಿಭೂತ ಸ್ಸಹಸಾ ಸಂತಾಪ ಮಶುಭಂ ಗತಃ ‖ ೨ ‖ ಮನಸ್ಸಮೀಕ್ಷಮಾಣಶ್ಚ ಸೂತೋ ದಶ ರಥಸ್ಯ ಸಃ ‖ ಕಂಪಯನ್ನಿವ ಕೈಕೇಯ್ಯಾ ಹೃದಯಂ ವಾಕ್ಯಶೈ ಶ್ಶಿತೈಃ ‖ ೩ ‖ ವಾಕ್ಯವಜ್ರೈ ರನುಪಮೈರ್ನಿರ್ಭಿಂದನ್ನಿವ ಚಾಶುಭೈಃ ‖ ಕೈಕೇಯ್ಯಾ ಸ್ಸರ್ವ ಮರ್ಮಾಣಿ ಸುಮಂತ್ರಃ ಪ್ರತ್ಯಭಾಷತ ‖ ೪ ‖ ಯಸ್ಯಾ ಸ್ತವಪತಿಸ್ತ್ಯಕ್ತೋ

ತತಃ - ಬಳಿಕ, ಸಹಸಾ - ಜಾಗ್ರತೆಯಾಗಿ, ಶಿರಃ - ಮಂಡೆಯನ್ನು, ನಿರ್ಧೂಯ-ತೂಗಿಸಿ, ಅಸಕೃತ್-ಬಾರಿಬಾರಿಗೂ, ನಿಶ್ವಸ್ಯ-ನಿಟ್ಟುಸಿರುಬಿಟ್ಟು, ಪಾಣೌ-ಕೈಯಿಂದ, ಪಾಣಿಂ ಕೈಯನ್ನು, ವಿನಿಷ್ಪಿಷ್ಯ-ಹಿಸುಕಿ, ದಂತಾ೯-ಹಲ್ಲುಗಳನ್ನು, ಕಟಕಟಾಪ್ಯ-ಕಟಕಟನೆ ಕಡಿದು, ಸುಮಂತ್ರಃ-ಸುಮಂತ್ರನು, ಲೋಚನೇ - ನೇತ್ರಗಳನ್ನು, ಕೋಪಸಂರಕ್ತೇ - ಕೋಪದಿಂದ ಕೆಂಪಗೆ, ಕೃತ್ವಾ - ಮಾಡಿ, ಪೂರ್ವೋಚಿತಂ - ಮೊದಲಿದ್ದ ಸ್ವಾಭಾವಿಕವಾದ, ವರ್ಣಂ - ಬಣ್ಣವನ್ನು, ಜಹತ್ - ಬಿಟ್ಟು, ಸಹಸಾ - ಜಾಗ್ರತೆಯಾಗಿ, ಕೋಪಾಭಿ ಭೂತಃ, ಕೋಪ - ಕ್ರೋಧದಿಂದ, ಅಭಿಭೂತಃ - ತಿರಸ್ಕೃತನಾಗಿ, ಅಶುಭಂ - ಅಮಂಗಳವಾದ, ಸಂತಾಪಂ - ಸಂಕಟವನ್ನು, ಗತಃ - ಹೊಂದಿದನು. ‖ ೧-೨ ‖ ಸಸೂತಃ - ಆ ಸುಮಂತ್ರನು, ದಶರಥಸ್ಯ - ದಶರಥರಾಯನ, ಮನಃ - ಮನವನ್ನು, ಸಮೀಕ್ಷಮಾಣಶ್ಚ - ನೋಡಿ, ಶಿತೈಃ - ತೀಕ್ಷ್ಣಗಳಾದ, ವಾಕ್ಯಶೈಃ - ಮಾತುಗಳೆಂಬ ಬಾಣಗಳಿಂದ, ಕೈಕೇಯ್ಯಾಃ - ಕೈಕೇಯಿದೇವಿಯ, ಹೃದಯಂ - ಹೃದಯವನ್ನು, ಕಂಪಯನ್ನಿವ - ನಡುಗುವಂತೆ ಮಾಡುತ್ತ, ಅನುಪಮೈಃ - ಸಮಾನರಹಿತಳಾದ, ಅಶುಭೈಃ - ಅಮಂಗಳವಾದ, ವಾಕ್ಯವಜ್ರೈಃ - ಮಾತುಗಳೆಂಬ ವಜ್ರಾಯುಧದಿಂದ, ಕೈಕೇಯ್ಯಾಃ - ಕೈಕೇಯಿದೇವಿಯ, ಸರ್ವಮರ್ಮಾಣಿ - ಸಮಸ್ತ ಮರ್ಮಗಳನ್ನೂ, ನಿರ್ಭಿಂದನ್ನಿವ - ಭೇದಿಸುತ್ತಿರುವನಂತೆ, ಪ್ರತ್ಯಭಾಷತ - ಮಾತನಾಡಿದನು. ‖ ೩-೪ ‖ ಯಸ್ಯಾಸ್ತ್ವವ - ಯಾವ ನಿನ್ನಿಂದ, ಸರ್ವಸ್ಯ - ಸಮಸ್ತವಾದ, ಸ್ಥಾವರ

ಆ ಮೇಲೆ ಮಂತ್ರಿಶ್ರೇಷ್ಠನಾದ ಸುಮಂತ್ರನು ಮೂರ್ಛೆತಿಳಿದೆದ್ದು, ದಶರಥ ಮಹೀಪಾಲನ ದುಃಖವನ್ನು ನೋಡಿ, ತಾನೂ ದುಃಖಪೀಡಿತನಾಗಿ, ಬಹಳವಾದ ಕೋಪವನ್ನು ತಾಳಿ, ನಿಟ್ಟುಸಿರುಗಳನ್ನು ಬಿಡುತ್ತ, ಅಂಗೈಯಿಂದ ಅಂಗೈಯನ್ನು ಹಿಸುಕಿಕೊಂಡು, ಕಟಕಟನೆ ಹಲ್ಲುಗಳನ್ನು ಕಡಿದು, ಕೆಂಪಡರಿದ ನಯನಗಳುಳ್ಳವನಾಗಿ, ಪೂರ್ವದಲ್ಲಿದ್ದ ಮುಖದ ರಂಗನ್ನು ತೊರೆದು, ಪ್ರಭುವಿನ ಮನವನ್ನು ತಿಳಿದು, ವಾಗ್ಬಾಣಗಳಿಂದ ಆ ಕೈಕೇಯಿಯ ಹೃದಯವನ್ನು ಭೇದಿಸುವನೋ ಎಂಬಂತೆ, ಮಹಾ ತೀಕ್ಷ್ಣವಾದ ಮರ್ಮೋದ್ಘಾಟನ ವಾಕ್ಯಗಳನ್ನು ಈ ರೀತಿ ನುಡಿದನು. ‖ ೧-೪ ‖ " ಎಲೌ ಕೈಕೇಯಿದೇವಿಯೆ ! ನಿನ್ನ

ರಾಜಾ ದಶರಥ ಸ್ಸ್ವಯಂ॥ಭರ್ತಾ ಸರ್ವಸ್ಯ ಜಗತಃ ಸ್ಥಾವರಸ್ಯ ಚರಸ್ಯಚ ॥೫॥
ನಹ್ಯಕಾರ್ಯತಮಂ ಕಿಂಚಿ ತ್ತವ ದೇವೀಹವಿ ದ್ಯತೇ ॥ ಪತಿಘ್ನೀಂ
ತ್ವಾಮಹಂ ಮನ್ಯೇ ಕುಲಘ್ನೀಮಪಿ ಚಾಂತತಃ ॥ ೬ ॥ ಯನ್ಮಹೇಂದ್ರ ಮಿವಾ
ಜಯ್ಯಂ ದುಷ್ಪ್ರಕಂಪ್ಯ ಮಿವಾಚಲಂ ॥ ಮಹೋದಧಿ ಮಿವಾಕ್ಷೋಭ್ಯಂ
ಸಂತಾಪಯಸಿ ಕರ್ಮಭಿಃ ॥ ೭ ॥ ಮಾವಮಂಸ್ಥಾ ದಶರಥಂ ಭರ್ತಾರಂ
ವರದಂ ಪತಿಂ ॥ ಭರ್ತುರಿಚ್ಛಾಹಿ ನಾರೀಣಾಂ ಪುತ್ರಕೋಟ್ಯಾ ವಿಶಿಷ್ಯತೇ ॥೮॥

ಸ್ಯಚರಸ್ಯಚ - ಸ್ಥಾವರ ಜಂಗಮಾತ್ಮಕವಾದ, ಜಗತಃ - ಜಗತ್ತಿಗೆ, ಭರ್ತಾ - ಸಂರಕ್ಷಕನೂ, ಪತಿಃ- ಗಂಡನೂ ಆದ, ದಶರಥೋರಾಜಾ - ದಶರಥ ರಾಜನು, ತ್ಯಕ್ತಃ - ತೊರೆಯಲ್ಪಟ್ಟನೋ, ಹೇ ದೇವಿ- ಎಲೌ ಕೈಕೇಯಿಯೇ, ತಸ್ಯಾಃ - ಅಂತಹ, ತವ - ನಿನಗೆ, ಇಹ - ಈ ಲೋಕದಲ್ಲಿ, ಅಕಾರ್ಯ ತಮಂ - ಇನ್ನೂ ಮಾಡಬಾರದ ಕೆಲಸವು, ಕಿಂಚಿತ್ - ಯಾವದೂ, ನವಿದ್ಯತೇಹಿ - ಇಲ್ಲವಷ್ಟೆ. ॥ ೫ ॥ ಅಹಂ - ನಾನು, ತ್ವಾಂ - ನಿನ್ನನ್ನು, ಪತಿಘ್ನೀಂ - ಗಂಡನನ್ನು ಕೊಲ್ಲುವವಳನ್ನಾಗಿ, ಅಂತತಃ - ಕಡೆಗೂ, ಕುಲಘ್ನೀಮಪಿಚ - ಕುಲವನ್ನು ನಾಶಮಾಡುವಳನ್ನಾಗಿಯೂ, ಮನ್ಯೇ - ಎಣಿ ಸುತ್ತೇನೆ, ಯತ್ - ಯಾವ ಕಾರಣ, ಮಹೇಂದ್ರಮಿವ - ದೇವೇಂದ್ರನಂತೆ, ಅಜಯ್ಯಂ-ಜಯಿಸಲ ಸಾಧ್ಯನಾದ, ಅಚಲಮಿವ - ಪರ್ವತದಂತೆ, ದುಷ್ಪ್ರಕಂಪ್ಯಂ - ಚಲಿಸಲಸಾಧ್ಯವಾದ, ಮಹೋ ದಧಿಮಿವ - ಮಹಾ ಸಮುದ್ರದಂತೆ, ಅಕ್ಷೋಭ್ಯಂ - ಕ್ಷೋಭಿಸಲಸಾಧ್ಯನಾದ, ಪತಿಂ - ಗಂಡ ನನ್ನು, ಕರ್ಮಭಿಃ - ದುರ್ವ್ಯಾಪಾರಗಳಿಂದ, ಸಂತಾಪಯಸಿ - ಸಂಕಟಗೊಳಿಸುತ್ತೀಯೋ. ॥ ೬-೭ ॥ ಭರ್ತಾರಂ - ಸಂರಕ್ಷಕರ್ತನಾದ, ವರದಂ - ವರಪ್ರದಾಯಕನಾದ, ಪತಿಂ - ಗಂಡನಾದ, ದಶರಥಂ- ದಶರಥರಾಯನನ್ನು, ಮಾವಮಂಸ್ಥಾಃ - ಅವಮಾನಗೊಳಿಸಬೇಡ, ನಾರೀಣಾಂ - ಸ್ತ್ರೀಯರಿಗೆ, ಭರ್ತುಃ - ಗಂಡನ, ಇಚ್ಛಾ - ಮನೋರಥವು, ಪುತ್ರಕೋಟ್ಯಾಃ, ಪುತ್ರ-ಮಕ್ಕಳ, ಕೋಟ್ಯಾಃ-ಕೋಟಿ ಗಿಂತಲೂ, ವಿಶಿಷ್ಯತೇ - ಮೀರಿದುದಾಗಿರುವದು, ನೃಪಕ್ಷಯೇ - ರಾಜನಾಶವಾಗಲು, ಪುತ್ರಾಃ - ಮಕ್ಕಳು, ಯಥಾವಯಃ - ವಯಸ್ಸನ್ನನುಸರಿಸಿ, ರಾಜ್ಯಾಣಿ - ಕೋಶಗಳನ್ನು, ಪ್ರಾಪ್ನುವಂತಿ-

---

ಪತಿಯಾದ ದಶರಥರಾಯನನ್ನು ಅವಮಾನಗೊಳಿಸಿ, ಚರಾಚರಾತ್ಮಕವಾದ ಇಡೀ ಜಗತ್ತಿಗೇ ಸ್ವಾಮಿಯಾದ ಆತನ ನುಡಿಗಳನ್ನು ಉಲ್ಲಂಘಿಸುತ್ತಿರುವೆ! ಎಂದ ಮೇಲೆ ನಿನಗೆ ಭಯವೆಂಬುದು ಇಲ್ಲವೆಂದೇ ತೋರುವುದು. ಮಹೇಂದ್ರನಂತೆ ದುರ್ಜೇಯನಾಗಿಯೂ, ಬೆಟ್ಟದಂತೆ ಅಪ್ರಕಂಪ್ಯನಾಗಿಯೂ, ಸಮುದ್ರರಾಜನಂತೆ ಕ್ಷೋಭೆಗೊಳ್ಳದಿರುವನಾಗಿಯೂ, ಇರುವ ಈ ನಿನ್ನ ಪತಿಯನ್ನು ಸಂಕಟಗೊಳಿಸುವೆಯಾದುದರಿಂದ ನೀನು ಪತಿಮಾರಕಳು. ಕುಲಘಾತಕಿಯು ; ಹೀಗೆ ನಾನು ತಿಳಿದಿದ್ದೇನೆ. ವರದಾಯಕನಾದ ನಿನ್ನ ಪತಿಗೆ ಅವಮಾನವನ್ನು ಮಾಡಬೇಡ ! ಗಂಡನೆಂಬುವನು ಕೋಟಿ ಪುತ್ರರಿಗಿಂತಲೂ ಮಿಗಿಲೆನಿಸುವನು. ರಾಜನು ಮೃತಿಯೊಂದಿದರೆ ರಾಜಪುತ್ರರು ಜ್ಯೇಷ್ಠಾನು ಕ್ರಮದಿಂದ ರಾಜ್ಯವನ್ನು ಪಡೆಯುತ್ತಾರೆ. ಕೈಕೇಯಿ ! ಇಕ್ಷ್ವಾಕುರಾಯರ ವಂಶದಲ್ಲಿ ರಾಜನು ವೃದ್ಧನಾದಮೇಲೆ ಯೌವರಾಜ್ಯವನ್ನು ಜ್ಯೇಷ್ಠ ಪುತ್ರನಿಗಿತ್ತು ತಾನು ವಾನಪ್ರಸ್ಥಾಶ್ರಮವನ್ನು ಕೈಕೊಳ್ಳುವುದು

ಯಥಾ ವಯೋಹಿ ರಾಜ್ಯಾನಿ ಪ್ರಾಪ್ನುವಂತಿ ನೃಪಕ್ಷಯೇ || ಇಕ್ಷ್ವಾಕು ಕುಲ ನಾಥೇಸ್ಮಿಂ ಸ್ತಲ್ಲೋಪಯಿತು ಮಿಚ್ಛಸಿ || ೯ || ರಾಜಾ ಭವತು ತೇ ಪುತ್ರೋ ಭರತಶ್ಶಾಸ್ತು ಮೇದಿನೀಂ || ವಯಂ ತತ್ರ ಗಮಿಷ್ಯಾಮೋ ಯತ್ರ ರಾಮೋ ಗಮಿಷ್ಯತಿ || ೧೦ || ನಹಿ ತೇ ವಿಷಯೇ ಕಶ್ಚಿದ್ಬ್ರಾಹ್ಮಣೋ ವಸ್ತುಮರ್ಹತಿ|| ತಾದೃಶಂ ತ್ವಮಮರ್ಯಾದ ಮದ್ಯ ಕರ್ಮ ಚಿಕೀರ್ಷಸಿ || ೧೧ || ಆಶ್ಚರ್ಯ ಮಿವ ಪಶ್ಯಾಮಿ ಯಸ್ಯಾಸ್ತೇ ವೃತ್ತಮೀದೃಶಂ || ಆಚರಂತ್ಯಾ ನವಿವೃತಾ ಸದ್ಯೋ ಭವತಿ ಮೇದಿನೀ || ೧೨ || ಮಹಾ ಬ್ರಹ್ಮರ್ಷಿ ಸೃಷ್ಟಾವಾ ಜ್ವಲಂತೋ ಭೀಮದರ್ಶನಾಃ||ಧಿಗ್ವಾಗ್ದಂಡಾ ನ ಹಿಂಸಂತಿ ರಾಮ ಪ್ರವ್ರಾಜನೇ ಸ್ಥಿತಾಂ||೧೩||

ಹೊಂದುತ್ತಾರೆ, ಇಕ್ಷ್ವಾಕು ಕುಲ ನಾಥೇ, ಇಕ್ಷ್ವಾಕು - ಇಕ್ಷ್ವಾಕು ಮಹಾರಾಯನ, ಕುಲ - ವಂಶಕ್ಕೆ, ನಾಥೇ - ಸ್ವಾಮಿಯಾದ, ಅಸ್ಮಿ - ಈ ದಶರಥನಲ್ಲಿ, ತತ್ - ಆ ಕುಲಕ್ರಮಾಗತ ಆಚಾರವನ್ನು, ಲೋಪಯಿತುಂ - ಲೋಪವಮಾಡುವದಕ್ಕೆ, ಇಚ್ಛಸಿ - ಇಚ್ಛಿಸುತ್ತೀಯೆ. || ೮-೯ || ತೇ - ನಿನ್ನ, ಪುತ್ರಃ - ಮಗನಾದ, ಭರತಃ - ಭರತನು, ರಾಜ - ಅರಸು, ಭವತು - ಆಗಲಿ, ಮೇದಿನೀಂ - ಭೂಮಿಯನ್ನು, ಶಾಸ್ತು - ಸಂರಕ್ಷಣೆಮಾಡಲಿ, ರಾಮಃ - ಶ್ರೀರಾಮನು, ಯತ್ರ - ಯಾವ ಸ್ಥಳದಲ್ಲಿ, ಗಮಿಷ್ಯತಿ - ಹೋಗುವನೋ, ತತ್ರ - ಅಲ್ಲಿ, ವಯಂ-ನಾವೆಲ್ಲರೂ, ಗಮಿಷ್ಯಾಮಃ ಹೊರಟು ಹೋಗುತ್ತೇವೆ. ||೧೦|| ತೇ-ನಿನ್ನ, ವಿಷಯೇ-ದೇಶದಲ್ಲಿ, ಕಶ್ಚಿತ್-ಒಬ್ಬ, ಬ್ರಾಹ್ಮಣಃ-ಬ್ರಾಹ್ಮಣನಾದರೂ, (ಗೋ-ಸತ್ಪುರುಷರು) ವಸ್ತುಂ - ಇರುವದಕ್ಕೆ,ನಾರ್ಹತಿ - ಯೋಗ್ಯನ(ವ)ಲ್ಲ, ಅದ್ಯ - ಈಗ, ತ್ವಂ - ನೀನು, ತಾದೃಶಂ - ಅಂತಹ, ಅಮರ್ಯಾದಂ - ಮಾನವಿಲ್ಲದ, ಕರ್ಮ - ಕಾರ್ಯವನ್ನು, ಚಿಕೀರ್ಷಸಿ - ಮಾಡಲಿಚ್ಛಿಸುತ್ತೀಯೆ, ಯಸ್ಯಾಃ - ಯಾವ, ಈದೃಶಂ - ಇಂತಹ, ವೃತ್ತಂ - ನಡತೆಯನ್ನು, ಆಚರಂತ್ಯಾಃ - ನಡಿಸುತ್ತಿರುವ, ತೇ - ನಿನ್ನ, ಮೇದಿನೀ - ಭೂಮಿಯು, ಸದ್ಯಃ - ತತ್ ಕ್ಷಣದಲ್ಲಿಯೇ, ವಿವೃತ್ತಾ - ಸೀಳಿಹೋದುದು, ನಭವತಿ-ಆಗಲಿಲ್ಲವೋ, ತತ್-ಅದನ್ನು, ಆಶ್ಚರ್ಯಮಿವ - ಆಶ್ಚರ್ಯದಂತೆ, ಪಶ್ಯಾಮಿ - ಕಾಣುತ್ತೇನೆ. ||೧೧-೧೨|| ಮಹಾಬ್ರಹ್ಮರ್ಷಿಸೃಷ್ಟಾಃ, ಮಹಾ - ದೊಡ್ಡವರಾದ, ಬ್ರಹ್ಮರ್ಷಿ - ವಸಿಷ್ಠಾದಿ ಋಷಿಗಳಿಂದ, ಸೃಷ್ಟಾಃ-ಪ್ರಯೋಗ ಮಾಡಲ್ಪಟ್ಟ

ಮಾಡಿಕೆಯೂ, ಧರ್ಮವೂ ಆಗಿರುತ್ತದೆ. ಈ ನಿಯಮವನ್ನು ನಿನ್ನ ಪತಿಯಾದ ಈ ದಶರಥರಾಜನಲ್ಲಿ ಅಳಿಸಿಬಿಟ್ಟಿರುವೆ. ಒಳ್ಳೆಯದು ; ನಿನ್ನ ಮನೋರಥವೇ ನೆರವೇರಲಿ; ನಿನ್ನ ಮಗನಾದ ಭರತನೇ ಈ ರಾಜ್ಯದಲ್ಲಿ ಬಾಳಲಿ; ನಾವೆಲ್ಲರೂ ಶ್ರೀರಾಮ ಮಾರ್ಗಾನುವರ್ತಿಗಳಾಗುತ್ತೇವೆ.||೫-೧೦||ನೀನು ಲೋಕದಲ್ಲಿ ಯಾರೂ ಮಾಡದ ದುಷ್ಕರ್ಮವನ್ನು ಮಾಡುತ್ತಿರುವೆ; ಇಂತಹ ರಾಜ್ಯದಲ್ಲಿ ಬ್ರಾಹ್ಮಣರಿರುವುದು ಯೋಗ್ಯವಲ್ಲ. ಕ್ಷಣಮಾತ್ರದಲ್ಲಿ ಶ್ರೀರಾಮಮೂರ್ತಿಗೆ ನ್ಯಾಯವಾಗಿ ಬರಬೇಕಾದ ಯೌವರಾಜ್ಯ ಪದವಿಯನ್ನು ತಪ್ಪಿಸಿ ಭರತನಿಗೆ ಬರುವಂತೆ ಮಾಡಿದೆ. ಈಗ ಭರತನಿಗೆ ಪಟ್ಟಾಭಿಷೇಕವಾಗಿ ಶ್ರೀರಾಮನು ಅರಣ್ಯಕ್ಕೆ ತೆರಳಿದರೆ ಬ್ರಹ್ಮರ್ಷಿಗಳೆಲ್ಲರೂ ನಿನ್ನನ್ನು "ಛೀ ! ಛೀ !!" ಎನ್ನುತ್ತಾರೆ. ಅವರು ಹೀಗೆ ನಿನ್ನನ್ನು ನಿಂದಿಸಿದರೆ ಅದು ನಿನಗೆ ಶ್ರೇಯಸ್ಕರವೆ ? ಅಯ್ಯೋ! ಇಂತಹ ದುರ್ವ್ಯಾಪಾರವನ್ನು

ಆಮ್ರಂ ಛಿತ್ವಾ ಕುಠಾರೇಣ ನಿಂಬಂ ಪರಿಚರೇತ್ತು ಯಃ ॥ ಯಶ್ಚೈನಂ ಪಯಸಾ ಸಿಂಚೇನ್ನೈವಾಸ್ಯ ಮಧುರೋ ಭವೇತ್ ॥೧೪॥ ಅಭಿಜಾತ್ಯಂಹಿ ತೇ ಮನ್ಯೇ ಯಥಾ ಮಾತು ಸ್ತಥೈವಚ ॥ ನಹಿ ನಿಂಬಾ ತ್ಸ್ರವೇತ್ ಕ್ಷೌದ್ರಂ ಲೋಕೇ ನಿಗದಿತಂ ವಚಃ ॥೧೫॥ ತವಮಾತುರಸದ್ಗ್ರಾಹ ಮಿದಂ ಪೂರ್ವಂ ಯಥಾ ಶ್ರುತಂ ॥ ಪಿತುಸ್ತೇ ವರದಃ ಕಶ್ಚಿದ್ದದೌ ವರಮನುತ್ತಮಂ ॥೧೬॥ ಸರ್ವಭೂತ ರುತಂ ತಸ್ಮಾತ್ಸಂಜಜ್ಞೇ ವಸುಧಾಧಿಪಃ ॥ ತೇನ ತಿರ್ಯ

ಜ್ವಲಂತಃ - ತೀಕ್ಷ್ಣವಾದ, ಭೀಮದರ್ಶನಾಃ - ಭಯಂಕರವಾದ ನೋಡುವಿಕೆಯುಳ್ಳ, ಧಿಗ್ವಾಗ್ದಂಡಾಃ, ಧಿಕ್ - ನಿಂದಿಸು ಎಂಬ, ವಾಗ್ದಂಡಾಃ - ವಾಕ್ಪಾರುಷ್ಯಗಳು, ರಾಮಪ್ರವಾಜನೇ, ರಾಮ - ಶ್ರೀರಾಮನ, ಪ್ರವ್ರಾಜನೇ - ಹೊರಡಿಸುವದರಲ್ಲಿ, ಸ್ಥಿತಾಂ - ನಿಂತಿರುವ ನಿನ್ನನ್ನು, ನಹಿಂಸಂತಿವಾ-ಹಿಂಸೆಮಾಡುವದಿಲ್ಲವೆ. ||೧೩|| ಯಃ-ಯಾವನು, ಆಮ್ರಂ-ಮಾವಿನಗಿಡವನ್ನು, ಕುಠಾರೇಣ-ಗೊಡ್ಲಿಯಿಂದ, ಛಿತ್ವಾ - ಛೇದಿಸಿ, ನಿಂಬಂ - ಬೇವಿನ ಗಿಡವನ್ನು, ಪರಿಚರೇತ್ - ಸೇವೆ ಮಾಡುವನೋ, ಯಶ್ಚ - ಯಾವ ಪುರುಷನು, ಪಯಸಾ - ಹಾಲಿನಿಂದ, ಏನಂ - ಈ ಬೇವಿನ ಗಿಡವನ್ನು, ಸಿಂಚೇತ್ - ಅಭಿಷೇಕ ಮಾಡುವನೋ, ಅಸ್ಯ - ಆ ಪುರುಷನಿಗೆ, ಮಧುರಃ - ಮಧುರ ರಸವುಳ್ಳುದು, ನಭವೇದೇನ - ಆಗಲಾರದಷ್ಟೆ. ||೧೪|| ತೇ - ನಿನ್ನ, ಅಭಿಜಾತ್ಯಂ - ಕುಲಪ್ರಸೂತತ್ವವನ್ನು, ಮಾತುರ್ಯಥಾ - ನಿನ್ನ ತಾಯಿಯದು ಹೇಗೋ, ತಥೈವ - ಹಾಗೆಯೇ, ಇತಿ - ಇಂತೆಂದು, ಮನ್ಯೇಹಿ - ತಿಳಿದಿರುವೆನು, ನಿಂಬಾತ್ - ಬೇವಿನ ಫಲದಿಂದ, ಕ್ಷೌದ್ರಂ-ಜೇನುತುಪ್ಪವು, ನಸ್ರವೇದ್ಧಿ-ಸುರಿಯುವದಿಲ್ಲವಷ್ಟೆ, ಇತಿ - ಇಂತೆಂದು, ಲೋಕೇ - ಲೋಕದಲ್ಲಿ, ವಚಃ - ಮಾತು, ನಿಗದಿತಂಹಿ-ಹೇಳಲ್ಪಟ್ಟಿದೆಯಷ್ಟೆ. ||೧೫|| ತವ - ನಿನ್ನ, ಮಾತುಃ - ತಾಯಿಯ, ಅಸದ್ಗ್ರಾಹಂ - ದುಷ್ಕಾರ್ಯಾಭಿ ನಿವೇಶವು, ಯಥಾ - ಹೇಗೆ, ಪೂರ್ವಂ - ಪೂರ್ವದಲ್ಲಿ, ಶೃತಂ - ಕೇಳಲ್ಪಟ್ಟಿದೆಯೋ, ತಥಾ - ಹಾಗೆಯೇ, ಇದಂ - ಇದು, ತೇ - ನಿನ್ನ, ಪಿತುಃ - ತಂದೆಗೆ, ವರದಃ - ವರಪ್ರದಾಯಕನಾದ, ಕಶ್ಚಿತ್ - ಒಬ್ಬ ಯೋಗೀಶ್ವರನು, ಅನುತ್ತಮಂ - ಸರ್ವೋತ್ತಮವಾದ, ವರಂ - ವರವನ್ನು, ದದೌ - ಕೊಟ್ಟನು. ||೧೬|| ವಸುಧಾಧಿಪಃ - ಕೇಕಯರಾಜನು, ತಸ್ಮಾತ್ - ಆ ಯೋಗಿಯ ವರದಾನದಿಂದ, ಸರ್ವಭೂತರುತಂ, ಸರ್ವ - ಸಮಸ್ತಗಳಾದ, ಭೂತ - ಜಂತುಗಳ, ರುತಂ -

ನಡೆಯಿಸುತ್ತಿರುವ ಈ ನಿನ್ನ ಭೂಮಿಯು ಏಕೆ ಶೀಳಿಹೋಗಲಿಲ್ಲ. ಇದು ಬಹಳ ಆಶ್ಚರ್ಯವು. ಹುಂ! ಲೋಕದಲ್ಲಿ ಮಾವಿನ ಮರವನ್ನು ಕಡಿದು, ಬೇವಿನ ಮರವನ್ನು ಹಾಲು ಹಾಕಿ ಬೆಳೆಸಿದರೆ ಅದರಲ್ಲಿರುವ ಕಹಿಯು ನಾಶವಾಗಿ ಸಿಹಿ ಹುಟ್ಟುವುದುಂಟೆ? ಇದಂತಿರಲಿ; ನಿನ್ನ ತಾಯಿಯ ದುರ್ಬುದ್ಧಿಯನ್ನು ನಾನು ಕೇಳಿದ್ದೇನೆ. ಆ ತಾಯಿಯ ಮಗಳೇ ನೀನು; ಕೇಳೌ ಕೈಕೇಯಿ! ಹಿಂದೆ ನಿನ್ನ ತಂದೆಯಾದ ಕೇಕಯ ನರಪಾಲನು ತಪಸ್ಸು ಮಾಡುತ್ತಿರಲು ಒಬ್ಬ ಯೋಗೀಶ್ವರನು ಉತ್ತಮವಾದೊಂದು ವರವನ್ನು ದಯಪಾಲಿಸಿದ್ದನು. ಅದರಿಂದಾರಾಯನು ತಿರ್ಯಕ್ ಜಂತುಗಳಾದ ಸಮಸ್ತ ಪ್ರಾಣಿಗಳ ಮಾತುಗಳೆಲ್ಲವನ್ನೂ ತಿಳಿಯುತ್ತಿದ್ದನು. ||೬-೧೭|| ಆ ಮೇಲೆ ಒಂದು ದಿನ ಹಾಸಿಗೆಯ ಮೇಲೆ ಕುಳಿತಿರುವಾಗ

ಗ್ಗತಾನಾಂಚ ಭೂತಾನಾಂ ವಿದಿತಂ ವಚಃ ॥ ೧೭ ॥ ತತೋ ಜೃಂಭಸ್ಯ ಶಯನೇ ವಿರುತಾದ್ಭೂರಿ ವರ್ಚಸಃ ॥ ಪಿತುಸ್ತೇ ವಿದಿತೋ ಭಾವಸ್ಸತತ್ರ ಬಹುಧಾ ಹಸತ್ ॥ ೧೮ ॥ ತತ್ರ ತೇ ಜನನೀ ಕ್ರುದ್ಧಾ ಮೃತ್ಯುಪಾಶ ಮಭೀಪ್ಸತೀ ॥ ಹಸತೇ ನೃಪತೇ ಸೌಮ್ಯ ಜಿಜ್ಞಾಸಾಮೀತಿ ಚಾಬ್ರವೀತ್ ॥ ೧೯ ॥ ನೃಪಶ್ಚೋವಾಚ ತಾಂ ದೇವೀಂ ದೇವಿ ಶಂಸಾಮಿ ತೇ ಯದಿ॥ತತೋ ಮೇ ಮರಣಂ ಸದ್ಯೋ ಭವಿಷ್ಯತಿ ನಸಂಶಯಃ ॥ ೨೦ ॥ ಮಾತಾ ತೇ ಪಿತರಂ ದೇವಿ ತತಃ ಕೇಕಯ ಮಬ್ರವೀತ್ ॥ ಶಂಸ ಮೇ ಜೀವವಾ ಮಾವಾ ನಮಾಮುಪಹಸಿ

ಮಾತನ್ನು, ಸಂಜಜ್ಞೇ - ತಿಳಿದುಕೊಂಡನು, ತೇನ - ಆ ರಾಯನಿಂದ, ತಿರ್ಯಗ್ಗತಾನಾಂ - ತಿರ್ಯಗ್ಜಂತುಗಳಾದ, ಭೂತಾನಾಂ - ಪ್ರಾಣಿಗಳ, ವಚಃ - ಮಾತು, ವಿದಿತಂ - ತಿಳಿಯಲ್ಪಟ್ಟಿತು. ॥೧೭॥ ತತಃ - ಬಳಿಕ, ಶಯನೇ - ಹಾಸಿಗೆಯಲ್ಲಿ, ಜೃಂಭಸ್ಯ - ಇರುವಿನ, ವಿರುತಾತ್ - ಮಾತಿನಿಂದ, ಭೂರಿವರ್ಚಸಃ - ಬಹಳ ತೇಜೋವಂತನಾದ, ತೇಪಿತುಃ - ನಿನ್ನ ತಂದೆಗೆ, ಭಾವಃ - ಅಭಿಪ್ರಾಯವು, ವಿದಿತಃ - ತಿಳಿಯಲ್ಪಟ್ಟಿತು, ಸಃ - ಆ ಕೇಕಯರಾಯನು, ತತ್ರ - ಆ ಶಯನಗೃಹದಲ್ಲಿ, ಬಹುಧಾ - ಬಹಳವಾಗಿ, ಆಹಸತ್ - ನಕ್ಕನು. ॥ ೧೮ ॥ ತತ್ರ - ಆ ನಗುವ ವಿಷಯದಲ್ಲಿ, ತೇ ನಿನ್ನ, ಜನನೀ - ತಾಯಿಯು, ಕೃದ್ಧಾ - ಕೋಪಿಷ್ಠಳಾಗಿ, ಮೃತ್ಯುಪಾಶಂ - ಯಮ ಪಾಶವನ್ನು, ಅಭೀಪ್ಸತೀ - ಕೋರುತ್ತ, ಹೇ ನೃಪತೇ - ಎಲೈ ಅರಸೆ, ಹೇ ಸೌಮ್ಯ - ಎಲೈ ಸೌಮ್ಯನೇ, ತೇ - ನಿನ್ನ, ಹಾಸಂ - ಅಪಹಾಸ್ಯರೂಪವಾದ ನಗುವಿಕೆಯನ್ನು, ಜಿಜ್ಞಾಸಾಮೀತಿ - ತಿಳಿಯಲಿಚ್ಛೈಸುತ್ತೇನೆಂದು, ಅಬ್ರವೀತ್ - ನುಡಿದಳು. ॥ ೧೯ ॥ ನೃಪಶ್ಚ - ಕೇಕಯರಾಯನೂ, ತಾಂದೇವೀಂ - ಆ ಪಟ್ಟದರಾಣಿಯನ್ನು ಕುರಿತು, ಹೇ ದೇವಿ - ಎಲೌ ದೇವಿಯೇ, ತೇ - ನಿನಗೆ, ಶಂಸಾಮಿಯದಿ - ಹೇಳಿದವನೇ ಆದರೆ, ತತಃ - ಅದರಿಂದಲೇ, ಮೇ - ನನಗೆ, ಸದ್ಯಃ - ಈಗಲೇ, ಮರಣಂ - ಮರಣವು, ಭವಿಷ್ಯತಿ - ಆಗುವದು, ನಸಂಶಯಃ - ಸಂಶಯವಿಲ್ಲ, ಇತಿ - ಇಂತೆಂದು, ಉವಾಚ - ಹೇಳಿದನು. ॥ ೨೦ ॥ ಹೇ ದೇವಿ - ಎಲೌ ಕೈಕೇಯಿಯೇ, ತತಃ - ಬಳಿಕ, ತೇ ಮಾತಾ - ನಿನ್ನ ತಾಯಿಯು, ಕೇಕೆಯಂ - ಕೇಕೆಯರಾಯನನ್ನು ಕುರಿತು, ಸಃ - ಆ ನೀನು, ಮಾಂ - ನನ್ನನ್ನು, ಅಪಹಸಿಷ್ಯಸಿ - ಅಪಹಾಸ್ಯಮಾಡಿದೆ, ಜೀವವಾ - ಬದುಕಿಯಾದರೂ ಬದಕು,

ಇರುವೆಗಳು ಮಾತನಾಡಿಕೊಳ್ಳಲು, ಅದರ ಅಭಿಪ್ರಾಯವನ್ನು ತಿಳಿದು ಆ ರಾಯನು ಬಹಳವಾಗಿ ನಕ್ಕನು. ಇದನ್ನು ನೋಡಿದ ನಿನ್ನ ತಾಯಿಯು ಕೋಪಗೊಂಡು ಮಹಾರಾಜನನ್ನು ಕುರಿತು, "ಪ್ರಿಯನೆ ! ನೀನು ನನ್ನನ್ನು ಅಪಹಾಸ್ಯಮಾಡಲು ಕಾರಣವೇನು ? ಅದನ್ನು ನನಗೆ ತಿಳಿಯ ಹೇಳು" ಎಂದಳು. ॥ ೧೮-೧೯ ॥ ಆಗಲಾರಾಯನು, "ಪ್ರಿಯೆ ! ನಾನು ನಿನ್ನನ್ನು ಪರಿಹಾಸ್ಯಮಾಡಲಿಲ್ಲ, ಬೇರೊಂದು ಕಾರಣದಿಂದ ನಕ್ಕೆನು. ಆ ಕಾರಣವನ್ನು ನಿನ್ನೊಡನೆ ಹೇಳಿದರೆ ನನಗೆ ಮರಣವುಂಟಾಗುತ್ತದೆ. ಇದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು" ಎಂದನು. ಆ ಬಳಿಕ ನಿನ್ನ ತಾಯಿಯು, ಆ ರಾಯನನ್ನು ಕುರಿತು, "ಎಲೈ ಒಡೆಯನೆ ! ಅದೇನಾದರೂ ಆಗಲಿ, ಅದನ್ನು ನನಗೆ ಹೇಳು. ನೀನು ಬದುಕಲಾದರೂ

ಷ್ಯಸಿ ॥ ೨೧ ॥ ಪ್ರಿಯಯಾಚ ತಥೋಕ್ತಸ್ಸರ್ ಕೇಕಯಃ ಪೃಥಿವೀಪತಿಃ ॥ ತಸ್ಮೈ ತಂ ವರದಾಯಾರ್ಥಂ ಕಥಯಾಮಾಸ ತತ್ವತಃ ॥ ೨೨ ॥ ತತಸ್ಸ ವರದ ಸ್ಸಾಧೂ ರಾಜಾನಂ ಪ್ರತ್ಯಭಾಷತ ॥ ಮ್ರಿಯತಾಂ ಧ್ವಂಸತಾಂ ವೇಯಂ ಮಾಕೃಥಾ ಸ್ತ್ವಂ ಮಹೀಪತೇ ॥ ೨೩ ॥ ಸತಚ್ಛೃತ್ವಾ ವಚಸ್ತಸ್ಯ ಪ್ರಸನ್ನ ಮನಸೋ ನೃಪಃ ॥ ಮಾತರಂ ತೇ ನಿರಸ್ಯಾಶು ವಿಜಹಾರ ಕುಬೇರವತ್ ॥೨೪॥ ತಥಾ ತ್ವಮಪಿ ರಾಜಾನಂ ದುರ್ಜನಾ ಚರಿತೇ ಪಥಿ ॥ ಅಸದ್ಗ್ರಾಹ ಮಿಮಂ

ಮಾಜೀವವಾ - ಸತ್ತಾದರೂ ಹೋಗು, ಮೇ - ನನಗೆ, ಶಂಸ - ಹೇಳು. ॥ ೨೧ ॥ ಪ್ರಿಯಯಾ - ಹೆಂಡತಿಯಿಂದ, ತಥಾ - ಆ ಪರಿಯಾಗಿ, ಉಕ್ತಸ್ಸರ್ - ಹೇಳಲ್ಪಟ್ಟವನಾಗಲು, ಪೃಥಿವೀಪತಿಃ - ಭೂಪತಿಯಾದ, ಕೇಕಯಃ - ಕೇಕಯರಾಯನು, ತಮರ್ಥಂ - ಆ ನಿರ್ಬಂಧವಚನವನ್ನು, ವರ ದಾಯ - ತನಗೆ ವರವನ್ನುಕೊಟ್ಟ, ತಸ್ಮೈ - ಆ ಯೋಗಿಗೆ, ತತ್ವತಃ - ಯಥಾರ್ಥವಾಗಿ, ಕಥಯಾ ಮಾಸ - ಹೇಳಿದನು. ॥ ೨೨ ॥ ತತಃ - ಬಳಿಕ, ವರದಃ - ವರಪ್ರದಾಯಕನಾದ, ಸಾಧುಃ - ಸಾಧುವಾದ, ಸಃ - ಆ ಯೋಗಿಯು, ರಾಜಾನಂ - ಅರಸನನ್ನು ಕುರಿತು, ಹೇ ಮಹೀ ಪತೇ - ಎಲೈ ರಾಜನೆ, ಇಯಂ - ಇವಳು, ಮ್ರಿಯ್ಯತಾಂ - ಮೃತಿಯನ್ನಾದರೂ ಹೊಂದಲಿ, ಧ್ವಂಸತಾಂವಾ - ನಿಗ್ರಹಿಸಿ ಹೊರಟುಹೋಗಲಿ, (ಗೋ) ತನ್ನ ಅಧಿಕಾರದಿಂದ ಪ್ರಚ್ಯುತಳಾಗಲಿ, ತ್ವಂ - ನೀನು, ಮಾಕೃಥಾಃ - ಅವಳ ಮಾತಿನಂತೆ ಮಾಡಬೇಡ, (ಇತಿ - ಇಂತೆಂದು, ಪ್ರತ್ಯಭಾಷತ- ಉತ್ತರಕೊಟ್ಟನು.) ॥ ೨೩ ॥ ಸನೃಪಃ - ಆ ಕೇಕಯರಾಜನು, ತಸ್ಯ - ಆ ಯೋಗಿಯ, ತದ್ವಚಃ - ಆ ಮಾತನ್ನು, ಶೃತ್ವಾ - ಕೇಳಿ, ಪ್ರಸನ್ನಮನಸಃ - ನಿರ್ಮಲವಾದ ಮನಸ್ಸುಳ್ಳವನಾಗಿ, ತೇ - ನಿನ್ನ, ಮಾತರಂ - ತಾಯಿಯನ್ನು, ಆಶು-ಜಾಗ್ರತೆಯಾಗಿ, ನಿರಸ್ಯ - ಹೊರಡಿಸಿ, ಕುಬೇರ ವತ್ - ಕುಬೇರನಂತೆ, ವಿಜಹಾರ - ವಿಹರಿಸಿದನು. ॥ ೨೪ ॥ ಹೇ ಪಾಪದರ್ಶಿನಿ - ಎಲೌ ಪಾಪಿಷ್ಠಳೇ, ತಥಾ - ಹೀಗೆ, ದುರ್ಜನಾಚರಿತೇ - ದುರ್ಮಾರ್ಗದಲ್ಲಿ, (ಸ್ಥಿತಾ - ಇರುತ್ತಿರುವ,) ತ್ವಮಪಿ - ನೀನೂ, ಇಮಂರಾಜಾನಂ - ಈ ದಶರಥರಾಜನನ್ನು, ಅಸದ್ಗ್ರಹಂ - ಕೆಟ್ಟ ಅಭಿನಿವೇಶ

ಬದುಕು; ಸಾಯಲಾದರೂ ಸಾಯಿ; ನೀನು ನನ್ನನ್ನು ಅಪಹಾಸ್ಯಮಾಡ ಬಹುದೆ ? ಹೇಳು" ಎಂದು ನಿರ್ಬಂಧಗೊಳಿಸಿದಳು. ಆಗ ನಿನ್ನ ತಂದೆಯಾದ ಕೇಕಯರಾಜನು ತನ್ನ ಹೆಂಡತಿಯ ನಿರ್ಬಂಧಕ್ಕೊಳಗಾಗಿ, ಈ ವಿಷಯವನ್ನು ವರಪ್ರದಾತೃವಾದ ಆ ಯೋಗೀಶ್ವರನಿಗೆ ತಿಳುಹಿ ದನು. ಆ ಯೋಗಿಯು ಅರಸನನ್ನು ಕುರಿತು, " ರಾಜನೆ ! ಈಕೆಯು ಮರಣವನ್ನಾದರೂ ಹೊಂದಲಿ; ನಿಗ್ರಹಿಸಿಹೋದರೂ ಹೋಗಲಿ; ಏನಾದರೂ ಆಗಲಿ, ನೀನೀ ರಹಸ್ಯವನ್ನು ಹೇಳಬೇಡ " ಎಂದನು. ಈ ಮಾತನ್ನು ಕೇಳಿದ ನಿನ್ನ ಜನಕನಾದ ಕೇಕಯರಾಜನು ನಿನ್ನ ತಾಯಿಯನ್ನು ಹೊರಹೊರಡಿಸಿ ಕುಬೇರನಂತೆ ಸಂತೋಷದಿಂದ ರಾಜ್ಯವಾಳಿಕೊಂಡಿದ್ದನು. ॥ ೨೦-೨೪ ॥ ಆದುದರಿಂದೆಲೌ ಕೈಕೇಯಿಯೆ ! " ನೀನು ಕೂಡ ನಿನ್ನ ತಾಯಿಯಂತೆ, ಮಾಡಬಾರದ ಕೃತ್ಯವನ್ನು ಬೇಕಾಗಿ ಮಾಡಬೇಡ; ನಿನ್ನ ಪತಿಯಾದ ದಶರಥ ರಾಯನಮಾತನ್ನು ಕೇಳು. ನಿನಗೆ ಶ್ರೇಯಸ್ಸುಂಟಾಗುತ್ತದೆ. ಲೋಕದಲ್ಲಿ ಗಂಡು

ಮೋಹಾತ್ಕುರುಷೇ ಪಾಪದರ್ಶಿನೀ ॥ ೨೫ ॥ ಸತ್ಯಶ್ಚಾದ್ಯ ಪ್ರವಾದೋಽಯಂ ಲೌಕಿಕಃ ಪ್ರತಿಭಾತಿ ಮೇ ॥ ಪಿತೄರ್ನ್ ಸಮನುಜಾಯಂತೇ ನರಾ ಮಾತರ ಮಂಗನಾಃ ॥ ೨೬ ॥ ನೈವಂ ಭವ ಗೃಹಾಣೇದಂ ಯದಾಹ ವಸುಧಾಧಿಪಃ॥ ಭರ್ತುರಿಚ್ಛಾಮುಪಾಸ್ವೇಹ ಜನಸ್ಯಾಸ್ಯ ಗತಿರ್ಭವ ॥ ೨೭ ॥ ಮಾ ತ್ವಂ ಪ್ರೋತ್ಸಾಹಿತಾ ಪಾಪೈ ರ್ದೇವರಾಜ ಸಮಪ್ರಭಂ ॥ ಭರ್ತಾರಂ ಲೋಕಭರ್ತಾರ ಮಸದ್ಧರ್ಮ ಮುಪಾದಧಾಃ ॥ ೨೮ ॥ ನಹಿ ಮಿಥ್ಯಾ ಪ್ರತಿಜ್ಞಾತಂ ಕರಿಷ್ಯತಿ ತವಾನಘಃ ॥ ಶ್ರೀಮಾನ್ ದಶರಥೋ ರಾಜಾ ದೇವಿ ರಾಜೀವಲೋಚನಃ ॥೨೯॥

ವುಳ್ಳವಳನ್ನಾಗಿ, ಮೋಹಾತ್ - ಅಜ್ಞಾನದಿಂದ, ಕುರುಷೇ - ಮಾಡುತ್ತೀಯೆ. ॥ ೨೫ ॥ ನರಾಃ - ಗಂಡುಮಕ್ಕಳು, ಪಿತೄರ್ನ್ - ತಂದೆಗಳನ್ನು, ಸಮನುಜಾಯಂತೇ - ಅನುಸರಿಸಿ ಹುಟ್ಟುವರು, ಅಂಗನಾಃ - ಹೆಣ್ಣುಮಕ್ಕಳು, ಮಾತರಂ - ತಾಯಿಯನ್ನು, ಸಮನುಜಾಯಂತೇ - ಅನುಸರಿಸಿ ಹುಟ್ಟುವರು, (ಇತಿ-ಇಂತೆಂದು,) ಲೌಕಿಕಃ - ಲೋಕದಲ್ಲಿರುವ, ಅಯಂಪ್ರವಾದಃ - ಈವಾರ್ತೆಯು, ಅದ್ಯ - ಈಗ, ಸತ್ಯಃ - ಯಥಾರ್ಥವು, ಇತಿ - ಇಂತೆಂದು, ಮೇ - ನನಗೆ, ಪ್ರತಿಭಾತಿ - ತೋರು ತ್ತದೆ. ॥ ೨೬ ॥ ವಸುಧಾಧಿಪಃ - ದಶರಥಮಹಾರಾಯನು, ಯತ್ ಯಾವಮಾತನ್ನು, ಆಹ - ಹೇಳಿದನೋ, ಇದಂ - ಹೀಗೆಂದು, ಗೃಹಾಣ - ಗ್ರಹಿಸು, ಏವಂ ತಾಯಿಯಂತೆ ಕೆಟ್ಟಕಾರ್ಯವನ್ನು ಮಾಡುವಳು, ನಭವ - ಆಗಬೇಡ, ಭರ್ತುಃ - ಪತಿಯಾದ ದಶರಥರಾಯನ, ಇಚ್ಛಾಂ - ಕೋರಿಕೆ ಯನ್ನು, ಉಪಾಸ್ಯ - ಹೊಂದಿರು, ಅದ್ಯ - ಈಗ, ಅಸ್ಯಜನಸ್ಯ - ಈ ಪುರವಾಸಿಗಳಿಗೆ, ಗತಿಃ - ಶರಣ್ಯಳು, ಭವ-ಆಗು. ॥೨೭॥ ತ್ವಂ-ನೀನು, ಪಾಪೈಃ ಪಾಪಿಷ್ಠರಿಂದ, ಪ್ರೋತ್ಸಾಹಿತಾ- ಎತ್ತಿಕಟ್ಟಲಟ್ಟವಳಾಗಿ, ದೇವರಾಜಸಮಪ್ರಭಂ - ಇಂದ್ರನಿಗೆ ಸಮಾನನಾದ, ಲೋಕಭರ್ತಾರಂ, ಲೋಕ - ನಾಯಕನಾದ, ಭರ್ತಾರಂ - ಪತಿಯನ್ನು, ಅಸದ್ಧರ್ಮಂ - ಕನಿಷ್ಠನಿಗೆ ಅಭಿಷೇಕವನ್ನು ಮಾಡಿ ಜ್ಯೇಷ್ಠನಿಗೆ ವನವಾಸವನ್ನು ಮಾಡಿಸಿದುದೆಂಬ ಅಧರ್ಮಕ್ಕೆ ಈಡಾಗುವ ಹಟವನ್ನು, ಮೋಪಾ ದಧಾಃ - ಹಿಡಿಯಬೇಡ. ॥ ೨೮ ॥ ಹೇದೇವಿ - ಎಲೌ ಕೈಕೇಯಿಯೇ, ಅನಘಃ - ನಿರ್ದೋಷಿಯಾದ, ಶ್ರೀಮಾನ್ - ಸಂಪದ್ಯುಕ್ತನಾದ, ರಾಜೀವಲೋಚನಃ - ಕೆಂದಾವರೆಯಂತೆ ಕಣ್ಣು ಗಳುಳ್ಳ, ರಾಜಾ - ಅರಸಾದ, ದಶರಥಃ - ದಶರಥರಾಯನು, ತವ - ನಿನಗೆ, ಪ್ರತಿಜ್ಞಾತಂ-ಪ್ರತಿಜ್ಞೆ ಮಾಡಿ ಕೊಟ್ಟುದನ್ನು, ಮಿಥ್ಯಾ - ಸುಳ್ಳಾಗಿ, ನಕರಿಷ್ಯತಿಹಿ - ಮಾಡುವದಿಲ್ಲವಷ್ಟೆ. ॥ ೨೯ ॥ ವಸುಧಾಧಿಪಃ - ದಶರಥರಾಯನು, ತವ - ನಿನಗೆ, ಪ್ರತಿಜ್ಞಾತಂ - ಪ್ರತಿಜ್ಞೆಮಾಡಿಕೊಟ್ಟುದನ್ನು, ಮಿಥ್ಯಾ - ಸುಳ್ಳಾಗಿ, ನಕರಿಷ್ಯತಿಹಿ - ಮಾಡುವದಿಲ್ಲವಷ್ಟೆ. ॥ ೩೦ ॥ ಜ್ಯೇಷ್ಠಃ - ದೊಡ್ಡಮಗ

ಮಕ್ಕಳು ತಂದೆಯನ್ನೂ, ಹೆಣ್ಣುಮಕ್ಕಳು ತಾಯಿಯನ್ನೂ ಅನುಸರಿಸಿ ಹುಟ್ಟುತ್ತಾರೆ" ಎಂದು ಹೇಳಿದ ಮಾತು ಯಥಾರ್ಥವಾಗಿರುವುದು. ಕೈಕೇಯಿ ! ನೀನೀರೀತಿ ಮುಷ್ಕರ ವನ್ನು ಹಿಡಿಯಬೇಡ. ಮಹಾರಾಜನ ನುಡಿಗಳನ್ನು ಗ್ರಹಿಸಿ ನಮ್ಮೆಲ್ಲರನ್ನೂ ಕಾಪಾಡು, ಪಾಪಿಗಳ ಬೋಧನೆಗಳಿಗೆ ಒಳಗಾಗಿ ಪತಿಯನ್ನು ಅಧರ್ಮಕ್ಕೆ ತಳ್ಳಬೇಡ. ॥ ೨೫-೨೮ ॥ ದೇವಿ ! ನಿರ್ದೋಷನೂ, ಸಂಪದ್ಯುಕ್ತನೂ, ಪುಂಡರೀಕಾಕ್ಷನೂ ಆದ ನಮ್ಮೊಡೆಯನು

ಜ್ಯೇಷ್ಠೋ ವದಾನ್ಯಃ ಕರ್ಮಣ್ಯಸ್ಸ್ವಧರ್ಮ ಪರಿರಕ್ಷಿತಾ ॥ ರಕ್ಷಿತಾ ಜೀವ
ಲೋಕಸ್ಯ ಬ್ರೂಹಿ ರಾಮೋಽಭಿಷಿಚ್ಯತಾಂ ॥ ೩೦ ॥ ಪರಿವಾದೋಹಿ ತೇ ದೇವಿ
ಮಹಾನ್ ಲೋಕೇ ಚರಿಷ್ಯತಿ ॥ ಯದಿ ರಾಮೋ ವನಂ ಯಾತಿ ವಿಹಾಯ
ಪಿತರಂ ನೃಪಂ ॥ ೩೧ ॥ ಸರಾಜ್ಯಂ ರಾಘವಃ ಪಾತು ಭವ ತ್ವಂ ವಿಗತಜ್ವರಾ॥
ನಹಿ ತೇ ರಾಘವಾದನ್ಯಃ ಕ್ಷಮಃ ಪುರವರೇ ವಸೇತ್ ॥ ೩೨ ॥ ರಾಮೋಹಿ
ಯೌವರಾಜ್ಯಸ್ಥೋ ರಾಜಾ ದಶರಥೋ ವನಂ ॥ ಪ್ರವೇಕ್ಷ್ಯತಿ ಮಹೇಷ್ವಾಸಃ
ಪೂರ್ವವೃತ್ತ ಮನುಸ್ಮರನ್ ॥ ೩೩ ॥ ಇತಿ ಸಾಂತ್ವೈಶ್ಚ ತೀಕ್ಷ್ಣೈಶ್ಚ ಕೈಕೇಯಿಂ

ನಾದ, ವದಾನ್ಯಃ - ವಾಚಾಳನಾದ, ಕರ್ಮಣ್ಯಃ - ಕರ್ಮದಲ್ಲಿ ಸಾಧುವಾದ, ಸ್ವಧರ್ಮಪರಿರಕ್ಷಿತಾ - ತನ್ನಧರ್ಮಕ್ಕೆ ರಕ್ಷಕನಾದ, ಜೀವಲೋಕಸ್ಯ - ಪ್ರಾಣಿವರ್ಗಕ್ಕೆ, ರಕ್ಷಿತಾ - ರಕ್ಷಾಕರ್ತನಾದ, ಬಲೀ - ಬಲವಂತನಾದ, ರಾಮಃ - ಶ್ರೀರಾಮನು, ಅಭಿಷಿಚ್ಯತಾಂ-ಪಟ್ಟಾಭಿಷೇಕಮಾಡಲ್ಪಡಲಿ, (ಇತಿಬ್ರೂಹಿ - ಇಂತೆಂದು ಹೇಳು.) ॥ ೩೦ ॥ ಹೇ ದೇವಿ - ಎಲೌ ಅರಸಿ! ರಾಮಃ - ಶ್ರೀರಾಮನು, ಪಿತರಂ - ತಂದೆಯಾದ, ನೃಪಂ - ರಾಜನನ್ನು, ವಿಹಾಯ - ಬಿಟ್ಟು, ವನಂ - ಅರಣ್ಯವನ್ನು ಕುರಿತು, ಯಾತಿಯದಿ - ಹೋದವನಾದರೆ, ತೇ - ನಿನಗೆ, ಲೋಕೇ - ಲೋಕದಲ್ಲಿ, ಮಹಾನ್ - ಮಹತ್ತರವಾದ, ಪರಿವಾದಃ - ನಿಂದೆಯು, ಚರಿಷ್ಯತಿಹಿ - ಉಂಟಾಗುವದಷ್ಟೆ. ॥ ೩೧ ॥ ಸರಾಘವಃ - ಆ ಶ್ರೀರಾಮನು, ರಾಜ್ಯಂ - ರಾಜ್ಯವನ್ನು, ಪಾತು - ಪರಿಪಾಲಿಸಲಿ, ತ್ವಂ - ನೀನು, ವಿಗತಜ್ವರಾ - ಸಂತಾಪವಿಲ್ಲದವಳು, ಭವ - ಆಗು, ಹಿ - ಯಾವ ಕಾರಣ, ತೇ - ನಿನ್ನ, ಪುರವರೇ - ಪಟ್ಟಣದಲ್ಲಿ, ಕ್ಷಮಃ - ಅರ್ಹನಾಗಿ, ರಾಘವಾತ್ - ಶ್ರೀರಾಮನಿಗಿಂತಲೂ, ಅನ್ಯಃ - ಮತ್ತೊಬ್ಬನು, ನವಸೇತ್ - ಇರಬಾರದೋ, (ಗೋ) ರಾಘವಾತ್ - ಶ್ರೀರಾಮನಿಗಿಂತಲೂ, ಅನ್ಯಃ - ಮತ್ತೊಬ್ಬನು, ಪುರವರೇ - ಪಟ್ಟಣದಲ್ಲಿ ರಾಜನಾಗಿರುವದು, ತೇ - ನಿನಗೆ, ನಕ್ಷಮೋಹಿ - ಯುಕ್ತವಲ್ಲವಷ್ಟೆ. ॥ ೩೨ ॥ ರಾಮೋಹಿ-ಶ್ರೀರಾಮನಾದರೆ, ಯೌವರಾಜ್ಯಸ್ಥೋ - ಯೌವರಾಜ್ಯದಲ್ಲಿ ಇರುವನಾಗಲು, ಮಹೇಷ್ವಾಸಃ - ಮಹಾ ಧನುರ್ಧಾರಿಯಾದ, ದಶರಥೋರಾಜಾ - ದಶರಥರಾಜನು, ಪೂರ್ವವೃತ್ತಂ - ಕುಲಕ್ರಮದಿಂದ ಬಂದ ನಡತೆಯನ್ನು, ಅನುಸ್ಮರನ್ - ಅನುಸರಿಸಿ, ವನಂ - ವನವನ್ನು, ಪ್ರವೇಕ್ಷ್ಯತಿ - ಪ್ರವೇಶಿಸುವನು, ಇತಿ-ಇಂತೆಂದು, ರಾಜಸಂಸದಿ - ರಾಜಸಭೆಯಲ್ಲಿ, ಸುಮಂತ್ರಃ - ಸುಮಂತ್ರನು, ಕೃತಾಂಜಲಿಃ - ಅಂಜಲಿಬದ್ಧನಾಗಿ,

---

ನಿನಗೆ ಮಾತುಕೊಟ್ಟು, ಅದನ್ನು ಸುಳ್ಳನ್ನಾಗಿಮಾಡುವುದಿಲ್ಲ. ಬೇರೊಂದು ವಿಧದಲ್ಲಿ ನಿನಗೆ ಸಂತೋಷವನ್ನುಂಟುಮಾಡಿಯೇ ತೀರುತ್ತಾನೆ. ಜ್ಯೇಷ್ಠನೂ, ಬಲಿಷ್ಠನೂ ಆದ ಶ್ರೀರಾಮನು ಪಟ್ಟಾಭಿಷಿಕ್ತನಾಗಲಿ. ಆತನು ವಾಚಾಳಿಯಾಗಿ, ಸ್ವಕರ್ಮ ನಿಷ್ಠತೆಯಿಂದ, ತನ್ನ ಧರ್ಮವನ್ನು ರಕ್ಷಿಸಿಕೊಂಡು ಪ್ರಾಣಿಗಳೆಲ್ಲವನ್ನೂ ಪರಿಪಾಲಿಸುತ್ತಾನೆ. ಹೀಗೆಂದು ಮಹಾರಾಜನಿಗೆ ಹೇಳು. ಇಲ್ಲವಾದರೆ ನಿನಗೆ ಮಹತ್ತರವಾದ ಅವಮಾನವುಂಟಾಗುವುದು. ರಾಮನು ರಾಜ್ಯವನ್ನಾಳಲಿ; ಈ ಅಯೋಧ್ಯಾನಗರದಲ್ಲಿ ರಾಮನನ್ನಳಿದು ರಾಜನಾಗಲು ಯಾರೂ ಯೋಗ್ಯರಲ್ಲ. ಹೀಗಾದರೆ ಮಹಾರಾಜನು ಕುಲಸಂಪ್ರದಾಯವನ್ನು ಅನುಸರಿಸಿ

ರಾಜ ಸಂಸದಿ ॥ ಸುಮಂತ್ರಃ ಕ್ಷೋಭಯಾಮಾಸ ಭೂಯ ಏವ ಕೃತಾಂಜಲಿಃ ॥೩೪॥ ನೈವ ಸಾ ಕ್ಷುಭ್ಯತೇ ದೇವೀ ನಚಸ್ಮ ಪರಿದೂಯತೇ ॥ ನಚಾಸ್ಯಾ ಮುಖ ವರ್ಣಸ್ಯ ವಿಕ್ರಿಯಾ ಲಕ್ಷ್ಯತೇ ತದಾ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚತ್ರಿಂಶಸ್ಸರ್ಗಃ.

ಸಾಂತ್ವೈಃ - ಸಮಾಧಾನಪೂರ್ವಕವಾದ ಮಾತುಗಳಿಂದಲೂ, ತೀಕ್ಷ್ಣೈಃ - ಕ್ರೂರವಾದ ಮಾತುಗಳಿಂದಲೂ, ಕೈಕೇಯೀಂ - ಕೈಕೇಯೀದೇವಿಯನ್ನು, ಭೂಯಃ - ಬಹಳವಾಗಿ, ಕ್ಷೋಭಯಾಮಾಸ - ಕ್ಷೋಭೆಗೊಳಿಸಿದನು. ॥ ೩೪ ॥ ಸಾದೇವೀ - ಆ ಕೈಕೇಯಿಯು, ನಕ್ಷುಭ್ಯತೇ - ಕ್ರೂರ ಮಾತುಗಳಿಂದ ವಿಕಾರವನ್ನು ಹೊಂದಲಿಲ್ಲ, ನಪರಿದೂಯತೇಸ್ಮ - ಸಮಾಧಾನ ವಚನಗಳಿಂದ ಸಂತಪ್ತಳಾಗಲಿಲ್ಲ, ತದಾ - ಆ ಕಾಲದಲ್ಲಿ, ಅಸ್ಯಾಃ - ಈ ಕೈಕೇಯಿಯ, ಮುಖವರ್ಣಸ್ಯ - ಮುಖ ವರ್ಣದ, ವಿಕ್ರಿಯಾ - ವಿಕಾರವು, ನಲಕ್ಷ್ಯತೇ - ಕಾಣಲ್ಪಡಲಿಲ್ಲ. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚತ್ರಿಂಶಸ್ಸರ್ಗಃ.

ತಾನು ವನಕ್ಕೆ ತೆರಳುವನು.'' ಈರೀತಿ ಆ ಸುಮಂತ್ರನು ಕೈಗಳನ್ನು ಜೋಡಿಸಿಕೊಂಡು ಆಸ್ಥಾನದಲ್ಲಿಯೇ ಆ ಕೈಕೇಯಿಯನ್ನು ಕುರಿತು, ಹಿತವಾಕ್ಯಗಳನ್ನೂ, ನಿಷ್ಠೂರ ವಚನಗಳನ್ನೂ ಹೇಳಿ ಹೀಯ್ಯಾಳಿಸಿದರೂ ಆ ದೇವಿಯು ಸ್ವಲ್ಪವಾದರೂ ಮನಗರಗದೆಯೂ, ಮುಖಕಾಂತಿಗುಂದದೆಯೂ ಇದ್ದುಬಿಟ್ಟಳು. ॥ ೨೯-೩೫ ॥

ಇಂತಿದು ಸುಮಂತ್ರ ಕೃತ ಹಿತೋಪದೇಶಕರಣ ವೃತ್ತಾಂತ
ವಿವರಣವೆಂಬ ಮುವತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಟ್ತ್ರಿಂಶಸ್ಸರ್ಗಃ.

ತತಸ್ಸುಮಂತ್ರ ಮೈಕ್ಷ್ವಾಕಃ ಪೀಡಿತೋತ್ರ ಪ್ರತಿಜ್ಞಯಾ || ಸ ಬಾಷ್ಪ ಮತಿ ನಿಶ್ವಸ್ಯ ಜಗಾದೇದಂ ಪುನರ್ವಚಃ ||೧|| ಸೂತ! ರತ್ನ ಸು ಸಂಪೂರ್ಣಾ ಚತುರ್ವಿಧ ಬಲಾ ಚಮೂಃ || ರಾಘವಸ್ಯಾನುಯಾತ್ರಾರ್ಥಂ ಕ್ಷಿಪ್ರಂ ಪ್ರತಿ ವಿಧೀಯತಾಂ || ೨ || ರೂಪಾಜೀವಾಶ್ಚ ವಾದಿನ್ಯೋ ವಣಿಜಶ್ಚ ಮಹಾ ಜನಾಃ || ಶೋಭಯಂತು ಕುಮಾರಸ್ಯ ವಾಹಿನೀಂ ಸು ಪ್ರಸಾರಿತಾಃ || ೩ || ಯೇಚೈನಮುಪಜೀವಂತಿ ರಮತೇ ಯೈಶ್ಚ ವೀರ್ಯತಃ || ತೇಷಾಂ ಬಹು

ತತಃ - ಅನಂತರದಲ್ಲಿ, ಐಕ್ಷ್ವಾಕಃ - ಇಕ್ಷ್ವಾಕು ವಂಶೋತ್ಪನ್ನನಾದ ದಶರಥರಾಯನು, ಅತ್ರ - ಈ ವರದಾನ ವಿಷಯದಲ್ಲಿ, ಪ್ರತಿಜ್ಞಯಾ - ಪ್ರತಿಜ್ಞೆಯಿಂದ, ಪೀಡಿತಃ - ಬಾಧಿತನಾಗಿ, ಅತಿ ನಿಶ್ವಸ್ಯ-ಬಹಳವಾಗಿ ನಿಟ್ಟುಸಿರನ್ನು ಬಿಟ್ಟು, ಸಬಾಷ್ಪಂ-ಕಣ್ಣೀರಿನಿಂದೊಡಗೂಡಿದ, ಸುಮಂತ್ರಂ-ಸಾರಥಿಯಾದ ಸುಮಂತ್ರನನ್ನು ಕುರಿತು, ಪುನಃ - ಮತ್ತು, ಇದಂ ವಚಃ - ಈ ಮಾತನ್ನು, ಜಗಾದ-ಹೇಳಿದನು. ||೧|| ಹೇ ಸೂತ - ಎಲೈ ಸಾರಥಿಯೇ, ರತ್ನಸುಸಂಪೂರ್ಣಾಂ - ರತ್ನಗಳಿಂದ ತುಂಬಿದ, ಚತುರ್ವಿಧಬಲಾಃ - ರಥ, ಕುದುರೆ, ಪಾದಚಾರಿಗಳೆಂಬ ನಾಲ್ಕು ವಿಧವಾದ ಸೈನ್ಯವುಳ್ಳ, ಚಮೂಃ - ಸೇನೆಯು, ರಾಘವಸ್ಯ - ಶ್ರೀರಾಮನ, ಅನುಯಾತ್ರಾರ್ಥಂ - ಅನುಸರಿಸಿ ಪ್ರಯಾಣ ಮಾಡಲು, ಕ್ಷಿಪ್ರಂ - ಜಾಗ್ರತೆಯಾಗಿ, ಪ್ರತಿವಿಧೀಯತಾಂ - ಆಜ್ಞಾಪಿಸಲ್ಪಡಲಿ. || ೨ || ವಾದಿನ್ಯಃ-ವಾದ್ಯ ವಿಶೇಷದಿಂದ ಕೂಡಿ, ರೂಪಾಜೀವಾಶ್ಚ - ವೇಶ್ಯಾ ಸ್ತ್ರೀಯರೂ, ವಣಿಜಶ್ಚ - ವರ್ತಕರೂ, ಮಹಾಜನಾಃ - ಬ್ರಾಹ್ಮಣರೂ, ಸುಪ್ರಸಾರಿತಾಃ-ಹೊರಟ, ಕುಮಾರಸ್ಯ - ಮಗನಾದ ಶ್ರೀರಾಮನ, ವಾಹಿನೀಂ-ಸೈನ್ಯವನ್ನು, ಶೋಭಯಂತು-ಪ್ರಕಾಶಿಸುವಂತೆ ಮಾಡಲಿ. ||೩|| ಯೇ-ಯಾರು, ಏನಂ-ಈ ಶ್ರೀರಾಮನನ್ನು, ಉಪಜೀವಂತಿ - ಅನುಸರಿಸಿ ಜೀವನ ಮಾಡುವರೋ, ಯೈಶ್ಚ - ಯಾರ ಸಂಗಡ, ವೀರ್ಯತಃ - ಸಾಮರ್ಥ್ಯದಿಂದ, ರಮತೇ - ಕ್ರೀಡಿಸುತ್ತಾನೆಯೋ, ತೇಷಾಂ - ಅವರಿಗೆ, ಬಹು -

---

ಸುಮಂತ್ರನೀರೀತಿ ನುಡಿದು ಸುಮ್ಮನಾದ ಮೇಲೆ ದಶರಥರಾಯನು ತಾನು ಮಾಡಿದ ವರದಾನ ವಿಷಯದಲ್ಲಿ, ತಾನು ಮಾಡಿದ ಪ್ರತಿಜ್ಞೆಯಿಂದ ಪರಿಪೀಡಿತನಾಗಿ ನಿಟ್ಟುಸಿರುಗಳನ್ನು ಬಿಡುತ್ತ, ಕಂಬನಿಗೂಡಿದ ಕಂಗಳುಳ್ಳವನಾಗಿ, ಆ ಸುಮಂತ್ರನನ್ನು ಕುರಿತು, “ ಎಲೈ ಸಾರಥಿಯೆ ! ಶ್ರೀರಾಮನು ಕಾಡಿಗೆ ಹೋಗುತ್ತಾನೆ. ರತ್ನಗಳಿಂದೊಡಗೂಡಿದ ಗಜ, ತುರಗ, ರಥ, ಪದಾತಿಗಳೆಂಬ ಚತುರಂಗಬಲವು ಆತನನ್ನನುಸರಿಸಿ ತೆರಳಬೇಕೆಂದು ಆಜ್ಞಾಪಿಸಲ್ಪಡಲಿ. ಇಂಪಾದ ನುಡಿಗಳನ್ನಾಡುವ, ಚತುರತೆ, ಎಲ್ಲರೂ ಮೋಹಗೊಳ್ಳುವ ಲಾವಣ್ಯ, ಇವುಗಳನ್ನೊಳಗೊಂಡ ವೇಶ್ಯೆಯರೂ, ಆಯುಧಧಾರಿಗಳಾದ ಪುರಜನರೂ, ವೈಶ್ಯರೂ, ಆ ಸೈನ್ಯವನ್ನು ಬಳಸಿ ಹೊರಡುವವರಾಗಲಿ; ಶ್ರೀರಾಮಮೂರ್ತಿಯನ್ನವಲಂಬಿಸಿ

ಧನಂ ದತ್ವಾ ತಾನಪ್ಯತ್ರ ನಿಯೋಜಯ ॥ ೪ ॥ ಆಯುಧಾನಿ ಚ ಮುಖ್ಯಾನಿ ನಾಗರಾಃ ಶಕಟಾನಿ ಚ ॥ ಅನುಗಚ್ಛಂತು ಕಾಕುತ್ಸ್ಥಂ ವ್ಯಾಧಾಶ್ಚಾರಣ್ಯಗೋಚರಾಃ ॥ ೫ ॥ ನಿಘ್ನನ್ ಮೃಗಾನ್ ಕುಂಜರಾಂಶ್ಚ ಪಿಬಂಶ್ಚಾರಣ್ಯಕಂ ಮಧು ॥ ನದೀಶ್ಚ ವಿವಿಧಾಃ ಪಶ್ಯನ್ನರಾಜ್ಯಂ ಸಂಸ್ಮರಿಷ್ಯತಿ ॥ ೬ ॥ ಧಾನ್ಯಕೋಶಶ್ಚ ಯಃಕಶ್ಚಿದ್ಧನಕೋಶಶ್ಚ ಮಾಮಕಃ ॥ ತೌ ರಾಮಮನುಗಚ್ಛೇತಾಂ ವಸಂತಂ ವಿಜನೇ ವನೇ ॥ ೭ ॥ ಯಜನ್ ಪುಣ್ಯೇಷು ದೇಶೇಷು ವಿಸೃಜಂಶ್ಚಾಪ್ತದಕ್ಷಿಣಾಃ ॥ ಋಷಿಭಿಶ್ಚ ಸಮಾಗಮ್ಯ ಪ್ರವತ್ಸ್ಯತಿ ಸುಖಂ ವನೇ ॥ ೮ ॥

ಬಹಳವಾದ, ಧನಂ - ದ್ರವ್ಯವನ್ನು, ದತ್ವಾ - ಕೊಟ್ಟು, ತಾನಪಿ - ಅವರನ್ನೂ, ಅತ್ರ - ಈ ಸೈನ್ಯದಲ್ಲಿ, ನಿಯೋಜಯ - ಸೇರಿಸು. ॥ ೪ ॥ ಮುಖ್ಯಾನಿ - ಮುಖ್ಯಗಳಾದ, ಆಯುಧಾನಿ - ಆಯುಧಗಳೂ, ನಾಗರಾಶ್ಚ - ಪುರಜನರೂ, ಶಕಟಾನಿ - ಸಾಮಾನು ಭಂಡಿಗಳೂ, ಅರಣ್ಯಗೋಚರಾಃ - ಅರಣ್ಯವಾಸಿಗಳಾದ, ವ್ಯಾಧಾಶ್ಚ - ಬೇಡರೂ, ಕಾಕುತ್ಸ್ಥಂ - ಶ್ರೀರಾಮನನ್ನು, ಅನುಗಚ್ಛಂತು - ಅನುಸರಿಸಿ ಹೋಗಲಿ. ॥ ೫ ॥ ಮೃಗಾಂಶ್ಚ - ಮೃಗಗಳನ್ನೂ, ಕುಂಜರಾನ್ - ಕಾಡಾನೆಗಳನ್ನೂ, ನಿಘ್ನನ್ - ಹೊಡೆಯುತ್ತ, ಆರಣ್ಯಕಂ - ಅರಣ್ಯದಲ್ಲಿ ಹುಟ್ಟಿದ, ಮಧು-ಜೇನುತುಪ್ಪವನ್ನು, ಪಿಬಂಶ್ಚ - ಪಾನಮಾಡುತ್ತ, ವಿವಿಧಾಃ - ನಾನಾ ಬಗೆಗಳಾದ, ನದೀಶ್ಚ - ನದಿಗಳನ್ನೂ, ಪಶ್ಯನ್ - ನೋಡುತ್ತ, ರಾಜ್ಯಂ - ರಾಜ್ಯವನ್ನು, ನಸಂಸ್ಮರಿಷ್ಯತಿ - ಸ್ಮರಿಸುವದಿಲ್ಲ. ॥ ೬ ॥ ಮಾಮಕಃ - ನನ್ನ ಸಂಬಂಧವಾದ, ಧಾನ್ಯಕೋಶಶ್ಚ - ಧಾನ್ಯದ ಮನೆಯು, ಯಃಕಶ್ಚಿತ್ - ಯಾವದುಂಟೋ, ಧನಕೋಶಶ್ಚ - ಧನದ ಮನೆಯು, ಯಃಕಶ್ಚಿತ್ - ಯಾವದುಂಟೋ, ತೌ - ಅವೆರಡೂ, ವಿಜನೇ - ಜನರಹಿತವಾದ, ವನೇ - ಕಾಡಿನಲ್ಲಿ, ರಾಮಂ - ಶ್ರೀರಾಮನನ್ನು, ಅನುಗಚ್ಛೇತಾಂ - ಅನುಸರಿಸಿ ಹೋಗಲಿ. ॥ ೭ ॥ ಪುಣ್ಯೇಷು - ಪುಣ್ಯಕರಗಳಾದ, ದೇಶೇಷು - ಪ್ರದೇಶಗಳಲ್ಲಿ, ಯಜನ್ - ಯಜ್ಞ ಮಾಡುತ್ತ, ಆಪ್ತದಕ್ಷಿಣಾಃ - ಯಥೋಕ್ತ ದಕ್ಷಿಣೆಗಳನ್ನು, ವಿಸೃಜಂಶ್ಚ - ಕೊಡುತ್ತ, ವನೇ - ವನದಲ್ಲಿ, ಋಷಿಭಿಶ್ಚ - ಋಷಿಗಳೊಡನೆ, ಸಮಾಗಮ್ಯ - ಸೇರಿ, ಸುಖಂ - ಸುಖವಾಗಿ, ಪ್ರವತ್ಸ್ಯತಿ - ಇರಲಿ. ॥೮॥ ಮಹಾಬಾಹುಃ - ಮಹಾ ಭುಜಬಲಪರಾಕ್ರಮಶಾಲಿಯಾದ, ಸಭರತಃ - ಆ ಭರತನು,

---

ಕೊಂಡು ಯಾರ್ಯಾರು ಜೀವಿಕೆಯನ್ನು ಕಲ್ಪಿಸಿಕೊಂಡಿರುವರೋ, ಅವರೆಲ್ಲರಿಗೂ ಅಪಾರವಾದ ದ್ರವ್ಯವನ್ನಿತ್ತು ರಾಮನೊಡನೆ ಹೋಗಲು ಗುಂಪುಗೂಡಿಸುವವನಾಗು; ಮುಖ್ಯ ಮುಖ್ಯಗಳಾದ ದಿವ್ಯಾಯುಧಗಳನ್ನೂ, ಭಂಡಿಗಳನ್ನೂ ತೆಗೆದುಕೊಂಡು, ವ್ಯಾಧರೇ ಮೊದಲಾದ ಪುರವಾಸಿಗಳೆಲ್ಲರೂ ಶ್ರೀರಾಮನನ್ನು ಹಿಂಬಾಲಿಸಲಿ; ಹೀಗಾದರೆ ನನ್ನ ಮುದ್ದು ಕುಮಾರನಾದ ಶ್ರೀರಾಮನು ಕಾಡಿನಲ್ಲಿ, ಮೃಗಗಳನ್ನೂ, ಆನೆಗಳನ್ನೂ, ಬೇಟೆಯಾಡುತ್ತ, ಮಧುವನ್ನಾಸ್ವಾದಿಸುತ್ತ, ವಿವಿಧ ನದ ನದಿಗಳನ್ನು ನೋಡುತ್ತ ಈ ಅಯೋಧ್ಯಾನಗರವನ್ನು ಸ್ಮರಿಸುವುದೇ ಇಲ್ಲವು. ॥ ೧-೬ ॥ ಶ್ರೀರಾಮನು ನನ್ನ ಭಂಡಾರದಲ್ಲಿರುವ ಯಾವತ್ತೂ ಧನ ಧಾನ್ಯಗಳನ್ನು ತೆಗೆದುಕೊಂಡು ಹೋಗಿ, ಪುಣ್ಯಕ್ಷೇತ್ರಗಳಲ್ಲಿ ಯಾಗ ಯಜನಾದಿಗಳನ್ನು ಮಾಡುತ್ತ, ಪಾತ್ರರಾದವರಿಗೆ ಬಹುವಿಧ ಭೂರಿದಕ್ಷಿಣೆಗಳನ್ನು ಕೊಡುತ್ತ, ಋಷಿಗಳೊ

ಭರತ ಸ್ಸ ಮಹಾಬಾಹು ರಯೋಧ್ಯಾಂ ಪಾಲಯಿಷ್ಯತಿ || ಸರ್ವಕಾಮೈ ಸ್ಸಹ ಶ್ರೀಮಾ್ ರಾಮ ಸ್ಸಂಸಾಧ್ಯತಾ ಮಿತಿ || ೯ || ಏವಂ ಬ್ರುವತಿ ಕಾಕುತ್‌ಸ್ಥೇ ಕೈಕೇಯ್ಯಾ ಭಯಮಾಗತಂ || ಮುಖಂ ಚಾಪ್ಯಾಗಮಚ್ಛೋಷಂ ಸ್ವರಶ್ಚಾಪಿ ನ್ಯರುಧ್ಯತ || ೧೦ || ಸಾ ವಿಷಣ್ಣಾ ಚ ಸಂತ್ರಸ್ತಾ ಮುಖೇನ ಪರಿಶುಷ್ಯತಾ || ರಾಜಾನ ಮೇವಾಭಿಮುಖೀ ಕೈಕೇಯೀ ವಾಕ್ಯ ಮಬ್ರವೀತ್ || ೧೧ || ರಾಜ್ಯಂ ಗತಜನಂ ಸಾಧೋ ಪೀತಮಂಡಾಂ ಸುರಾಮಿವ || ನಿರಾಸ್ವಾದ್ಯತಮಂ ಶೂನ್ಯಂ ಭರತೋ ನಾಭಿಪತ್ಸ್ಯತೇ || ೧೨ || ಕೈಕೇಯ್ಯಾಂ ಮುಕ್ತ ಲಜ್ಜಾಯಾಂ

ಅಯೋಧ್ಯಾಂ - ಅಯೋಧ್ಯಾ ಪಟ್ಟಣವನ್ನು, ಪಾಲಯಿಷ್ಯತಿ - ಪಾಲಿಸುವನು, ಶ್ರೀಮಾ್ - ಸಂಪದ್ಯುಕ್ತನಾದ, ರಾಮಃ - ಶ್ರೀರಾಮನು, ಸರ್ವಕಾಮೈಸ್ಸಹ - ಸರ್ವಾರ್ಥಗಳಿಂದ, ಸಂಸಾಧ್ಯತಾಂ - ಪ್ರಯಾಣ ಮಾಡಿಸಲ್ಪಡಲಿ. || ೯ || ಇತ್ಯೇವಂ - ಈ ಪರಿಯಾಗಿ, ಕಾಕುತ್‌ಸ್ಥೇ - ಕಕುತ್‌ಸ್ಥ ವಂಶೋತ್ಪನ್ನನಾದ ದಶರಥನು, ಬ್ರುವತಿಸತಿ - ಹೇಳಲು, ಕೈಕೇಯ್ಯಾಃ - ಕೈಕೇಯೀದೇವಿಗೆ, ಭಯಂ - ಭಯವು, ಆಗತಂ - ಪ್ರಾಪ್ತವಾಯಿತು, ಮುಖಂಚಾಪಿ - ಮುಖವೂ, ಶೋಷಂ - ಬಳಲಿಕೆಯನ್ನು, ಅಗಮತ್ - ಹೊಂದಿತು, ಸ್ವರಶ್ಚಾಪಿ - ಕಂಠಸ್ವರವೂ, ನ್ಯರುಧ್ಯತ - ವಿಸ್ವರವಾಗಿ ಮಾಡಲ್ಪಟ್ಟಿತು. || ೧೦ || ಸಾಕೈಕೇಯೀ - ಆ ಕೈಕೇಯೀದೇವಿಯು, ಸಂತ್ರಸ್ತಾ - ಭಯಗೊಂಡು, ಪರಿಶುಷ್ಯತಾ - ಬತ್ತಿಹೋದ, ಮುಖೇನ - ವದನದಿಂದ, ವಿಷಣ್ಣಾಚ - ವ್ಯಸನಗೊಂಡು, ರಾಜಾನಮೇವ - ದಶರಥರಾಯನನ್ನೇ ಕುರಿತು, ಅಭಿಮುಖೀ - ಎದುರಿಸಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. || ೧೧ || ಹೇ ಸಾಧೋ - ಎಲೈ ಸತ್ಪುರುಷನೇ, ಪೀತಮಂಡಾಂ, ಪೀತ - ಪಾನ ಮಾಡಲ್ಪಟ್ಟ, ಮಂಡಾಂ - ಮದ್ಯದಸ್ಥಿರಾಂಶವುಳ್ಳ, ಸುರಾಮಿವ - ಮದ್ಯದಂತೆ, ನಿರಾಸ್ವಾದ್ಯತಮಂ - ಅನುಭವಿಸುವದಕ್ಕೆ ಅಯೋಗ್ಯವಾದ, ಶೂನ್ಯಂ-ಧನಧಾನ್ಯಗಳಿಂದ ಶೂನ್ಯವಾದ, ಗತಜನಂ-ವರ್ಜಿತವಾದ ಜನಗಳುಳ್ಳ, ರಾಜ್ಯಂ - ಪಟ್ಟಣವನ್ನು, ಭರತಃ - ಭರತನು, ನಾಭಿಪತ್ಸ್ಯತೇ-ಹೊಂದಲಾರನು. || ೧೨ || ಮುಕ್ತಲಜ್ಜಾಯಾಂ - ಬಿಡಲ್ಪಟ್ಟ ನಾಚಿಕೆಯುಳ್ಳ, ಕೈಕೇಯ್ಯಾಂ-ಕೈಕೇಯೀದೇವಿಯು, ಅತಿದಾರುಣಂ - ಅತಿಕ್ರೂರವಾದ ಮಾತನ್ನು, ವದತ್ಯಾಂ - ಹೇಳುತ್ತಿರಲು, ದಶರಥಃ

ಡನೆ ಸುಖವಾಗಿರಲಿ ! ಈ ಕೈಕೇಯಿಯ ಮಗನಾದ ಭರತನು ಈ ಅಯೋಧ್ಯಾನಗರಿಯನ್ನು ಸುಖವಾಗಿ ಆಳುತ್ತಿರಲಿ" ಎಂದು ಹೇಳಿದನು. ದಶರಥರಾಜನು ಹೀಗೆನ್ನುತ್ತಲೆ, ಕೈಕೇಯೀದೇವಿಗೆ ಭೀತಿಯುಂಟಾಗಿ ಮುಖಬತ್ತಿ, ಕಂಠಸ್ವರವು ವಿಕಾರವಾಯಿತು. ||೮-೧೦|| ಆಗ ದುಃಖಿತಳೂ, ಭಯಗೊಂಡವಳೂ, ಕುಗ್ಗಿದ ಕಂಠಸ್ವರವುಳ್ಳವಳೂ, ಬತ್ತಿಹೋದ ಮುಖವುಳ್ಳವಳೂ ಆದ ಆ ಕೈಕೇಯಿಯು ಆ ರಾಯನ ಇದಿರಾಗಿಯೇ ಬಂದು ನಿಂತುಕೊಂಡು ಆತನನ್ನುಕುರಿತು,"ಓ ಸಾಧುಸ್ವಭಾವವುಳ್ಳ ಮಹಾರಾಜನೆ! ಸಾರ ವಿಹೀನವಾದ ಮತ್ತು ಶೂನ್ಯವಾದ ಮದ್ಯ ಭಾಂಡವನ್ನಾಸಾದಿಸುವಂತೆ ಜನರಹಿತವಾದ ಈ ಪಟ್ಟಣವನ್ನು ನನ್ನ ಮಗನಾದ ಭರತನಾಳಿ ಪ್ರಯೋಜನವೇನು?" ಎಂದು ಏನೊಂದೂ ನಾಚಿಕೆಯಿಲ್ಲದೆ,ಕೇಳಿದವರ ಕರ್ಣಕ್ಕೆ ಕಠೋರವಾದ ಇನ್ನೂ ಅನೇಕ ನುಡಿಗಳನ್ನಾಡಿದಳು. ಆಗ ದಶರಥರಾಯನು ಆಕೆಯನ್ನು

ವದಂತ್ಯಾಮತಿದಾರುಣಂ ॥ ರಾಜಾ ದಶರಥೋ ವಾಕ್ಯ ಮುವಾಚಾಯತ ಲೋಚನಾಂ ॥ ೧೩ ॥ ವಹಂತಂ ಕಿಂತುದಸಿ ಮಾಂ ನಿಯುಜ್ಯ ಧುರಿ ಮಾಹಿತೇ ॥ ಅನಾರ್ಯೇ ಕೃತ್ಯಮಾರಬ್ಧಂ ಕಿನ್ನಪೂರ್ವ ಮುಪಾರುಧಃ ॥ ೧೪ ॥ ತಸ್ಯೈತತ್ಕ್ರೋಧ ಸಂಯುಕ್ತ ಮುಕ್ತಂ ಶ್ರುತ್ವಾ ವರಾಂಗನಾ ॥ ಕೈಕೇಯೀ ದ್ವಿಗುಣಂ ಕ್ರುದ್ಧಾ ರಾಜಾನ ಮಿದಮಬ್ರವೀತ್ ॥ ೧೫ ॥ ತವೈವ ವಂಶೇ ಸಗರೋ ಜ್ಯೇಷ್ಠಪುತ್ರ ಮುಪಾರುಧತ್ ॥ ಅಸಮಂಜ ಇತಿಖ್ಯಾತಂ ತಥಾಯಂ ಗಂತು ಮರ್ಹತಿ ॥ ೧೬ ॥ ಏವಮುಕ್ತೋ ಧಿಗಿತ್ಯೇವ ರಾಜಾ ದಶರಥೋ

ರಾಜಾ - ದಶರಥರಾಯನು, ಆಯತಲೋಚನಾಂ - ವಿಸ್ತಾರವಾದ ನೇತ್ರಗಳುಳ್ಳ ಕೈಕೇಯೀದೇವಿಯನ್ನು ಕುರಿತು, ವಾಕ್ಯಂ - ವಚನವನ್ನು, ಉವಾಚ - ಹೇಳಿದನು. ॥ ೧೩ ॥ ಹೇ ಅಹಿತೇ - ಎಲೈ ಶತ್ರುವಾದವಳೇ, ಧುರಿ - (ಗೋ) ರಾಮವಿವಾಸನ, ಭರತರಾಜ್ಯಪರಿಪಾಲನರೂಪ ಮಹಾಭಾರದಲ್ಲಿ, ನಿಯುಜ್ಯ - ಆಜ್ಞಾಪಿಸಿ, ವಹಂತಂ - ವಹಿಸಲಾರದ ಭಾರವನ್ನೂ ಕೂಡ ವಹಿಸಿದಂತಹ, ಮಾಂ - ನನ್ನನ್ನು, ಕಿಂತುದಸಿ - ಏಕೆ ಚುಚ್ಚುತ್ತೀಯೆ, ಹೇ ಅನಾರ್ಯೇ - ಎಲೇ ದುಷ್ಟಳೇ, ಆರಬ್ಧಂ-ಆರಂಭಿಸಲ್ಪಟ್ಟ, ಕೃತ್ಯಂ - (ಮ) ಧನ, ಧಾನ್ಯರಾಶಿಗಳಿಂದ ಸಮೇತವಾದ ಸೈನ್ಯಪ್ರಯಾಣರೂಪವಾದ ಕಾರ್ಯವನ್ನು,ಪೂರ್ವಂ-ಮೊದಲು ವರಗಳನ್ನುಕೇಳುವ ಕಾಲದಲ್ಲಿ, ಕಿನ್ನೋಪಾರುಧಃ-ಏಕೆ ತಡೆಮಾಡದೇ ಹೋದೆ. ॥೧೪॥ ವರಾಂಗನಾ-ವರವನ್ನಾಂತವಳಾದ, ಕೈಕೇಯೀ - ಕೈಕೇಯಿಯು, ತಸ್ಯ - ಆ ದಶರಥನ, ಕ್ರೋಧಸಂಯುಕ್ತಂ - ಕೋಪದಿಂದ ಕೂಡಿರುವ, ಏತದುಕ್ತಂ - ಈ ಮಾತನ್ನು, ಶ್ರುತ್ವಾ - ಕೇಳಿ, ದ್ವಿಗುಣಂ - ಇಮ್ಮಡಿಯಾಗಿ, ಕ್ರುದ್ಧಾ - ಕೋಪಗೊಂಡು, ರಾಜಾನಂ-ಅರಸನನ್ನು ಕುರಿತು, ಇದಂ - ಮಾತನ್ನು, ಅಬ್ರವೀತ್ - ನುಡಿದಳು. ॥ ೧೫ ॥ ತವ - ನಿನ್ನ, ವಂಶಏವ - ಕುಲದಲ್ಲಿಯೇ, ಸಗರಃ - ಸಗರಚಕ್ರವರ್ತಿಯು, ಅಸಮಂಜ ಇತಿ - ಅಸಮಂಜನೆಂದು, ಖ್ಯಾತಂ - ಪ್ರಸಿದ್ಧನಾದ, ಜ್ಯೇಷ್ಠಪುತ್ರಂ - ದೊಡ್ಡಮಗನನ್ನು, ಯಥಾ - ಹೇಗೆ, ಉಪಾರುಧತ್ - ಅರಣ್ಯಕ್ಕೆ ಕಳುಹಿಸಿಕೊಟ್ಟನೋ, ತಥಾ - ಹಾಗೆ, ಅಯಂ - ಈ ಶ್ರೀರಾಮನು, ಗಂತುಂ - ಹೋಗಲು, ಅರ್ಹತಿ - ಯೋಗ್ಯನಾಗಲಿ. ॥ ೧೬ ॥ ಏವಮುಕ್ತಃ - ಈರೀತಿ ಹೇಳಲ್ಪಟ್ಟ, ದಶರಥೋ ರಾಜಾ - ದಶರಥರಾಯನು, ಧಿಗಿತ್ಯೇವ - ಛೆ ! ಛೀ ! ಎಂದು, ಅಬ್ರವೀತ್ - ನುಡಿದನು, ಸರ್ವಃ -

---

ಕುರಿತು " ಎಲೆಗೆ ! ಶತ್ರುಭೂತಳಾದವಳೆ ! ಹೊರಲಸದಳವಾದ ರಾಮವಿವಾಸವೆಂಬ ಹೊರೆಯನ್ನು ನನ್ನ ತಲೆಯ ಮೇಲೆ ಹೊರಿಸಿ, ಅದನ್ನು ಹೊರಲಾರದೆ ಸಂಕಟಪಡುತ್ತಿರುವ ನನ್ನನ್ನು ಕಠಿಣತರವಾದ ಆ ನಿನ್ನ ವಾಗ್ಬಾಣದಿಂದ ತಿವಿಯುತ್ತಿರುವೆಯೇಕೆ ? ನೀಚಳೆ! ಇದಕ್ಕೆಮೊದಲೇ ಈ ಮಾತನ್ನೇಕೆ ಹೇಳಲಿಲ್ಲ ? " ಎಂದನು. ॥ ೧೧-೧೪ ॥ ಆ ವರಾಂಗನೆಯಾದ ಕೈಕೇಯೀದೇವಿಯು, ಕೋಪಯುಕ್ತನಾದ ದಶರಥರಾಯನ ಈ ನುಡಿಗಳನ್ನು ಕೇಳಿ ತಾನೂ ಎರಡರಷ್ಟು ಕೋಪಗೊಂಡು, ಆತನನ್ನು ಕುರಿತು " ಎಲೈ ರಾಜನೆ ! ನಿನ್ನ ವಂಶದಲ್ಲಿಯೇ ಸಗರನೆಂಬ ರಾಯನು ತನ್ನ ಮಗನಾದ ಅಸಮಂಜನೆಂಬುವನನ್ನು ಕಾಡಿಗಟ್ಟಲಿಲ್ಲವೆ ! ಅಂತೆಯೇ ಶ್ರೀರಾಮನೀಗ ಅರಣ್ಯಕ್ಕೆ ತೆರಳಲಿ ! " ಎಂದು ಹೇಳಿ ಬಿಟ್ಟಳು. ಆಗ

ಬ್ರವೀತ್ ‖ ವ್ರೀಡಿತಶ್ಚ ಜನಸ್ಸರ್ವ ಸ್ಸಾಚ ತನ್ನಾವಬುಧ್ಯತ ‖ ೧೭ ‖ ತತ್ರ ವೃದ್ಧೋ ಮಹಾಮಾತ್ರ ಸ್ಸಿದ್ಧಾರ್ಥೋನಾಮ ನಾಮತಃ ‖ ಶುಚಿರ್ಬಹು ಮತೋ ರಾಜ್ಞಃ ಕೈಕೇಯಿಮಿದಮಬ್ರವೀತ್ ‖ ೧೮ ‖ ಅಸಮಂಜೋ ಗೃಹೀತ್ವಾತು ಕ್ರೀಡತಃ ಪಥಿ ದಾರಕಾ ‖ ಸರಯ್ವಾಃ ಪ್ರಕ್ಷಿಪನ್ನಪ್ಸು ರಮತೇ ತೇನ ದುರ್ಮತಿಃ ‖ ೧೯ ‖ ತಂ ದೃಷ್ಟ್ವಾ ನಾಗರಾಸ್ಸರ್ವೇ ಕ್ರುದ್ಧಾ ರಾಜಾನ ಮಬ್ರುವನ್ ‖ ಅಸಮಂಜಂ ವೃಣೀಷ್ವೈಕ ಮಸ್ಮಾನ್ವಾ ರಾಷ್ಟ್ರವರ್ಧನ‖೨೦‖ ತಾನುವಾಚ ತತೋ ರಾಜಾ ಕಿನ್ನಿಮಿತ್ತಮಿದಂ ಭಯಂ ‖ ತಾಶ್ಚಾಪಿ ರಾಜ್ಞಾ ಸಂಪೃಷ್ಟಾ ವಾಕ್ಯಂ ಪ್ರಕೃತಯೋ ಬ್ರುವನ್ ‖ ೨೧ ‖ ಕ್ರೀಡತ ಸ್ತ್ವೇಷ

ಸಮಸ್ತವಾದ, ಜನಃ - ಜನವು, ವ್ರೀಡಿತಶ್ಚ - ನಾಚಿಕೆಗೊಂಡಿತು, ಸಾಚ - ಆ ಕೈಕೆಯಿಯೂ, ತತ್ - ಅದನ್ನು, ನಾವಬುಧ್ಯತ - ಅರಿಯದೆಹೋದಳು. ‖ ೧೭ ‖ ತತ್ರ - ಆಗ, ರಾಜ್ಞಃ- ರಾಜನಿಗೆ, ಬಹುಮತಃ - ಬಹಳ ಇಷ್ಟನಾದ, ವೃದ್ಧಃ - ಮುದುಕನಾದ, ಶುಚಿಃ - ಪರಿಶುದ್ಧನಾದ, ನಾಮತಃ - ಹೆಸರಿನಿಂದ, ಸಿದ್ಧಾರ್ಥೋನಾಮ - ಸಿದ್ಧಾರ್ಥನೆಂದು ಪ್ರಸಿದ್ಧನಾದ, ಮಹಾಮಾತ್ರಃ - ಮಹಾಮಂತ್ರಿಯು, ಕೈಕೇಯಿಂ - ಕೈಕೇಯಿದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ‖ ೧೮ ‖ ದುರ್ಮತಿಃ - ದುಷ್ಟಬುದ್ಧಿಯುಳ್ಳವನಾಗಿ, ಅಸಮಂಜಸ್ತು - ಅಸಮಂಜನಾದರೆ, ಪಥಿ - ದಾರಿಯಲ್ಲಿ, ಕ್ರೀಡಿತಃ - ಆಡುತ್ತಿರುವ, ದಾರಕಾ - ಹುಡುಗರನ್ನು, ಸರಯ್ವಾಃ - ಸರಯೂನದಿಯ, ಅಪ್ಸು - ನೀರಿನಲ್ಲಿ, ಪ್ರಕ್ಷಿಪ್ಯ - ಎತ್ತಿಹಾಕಿ, ತೇನ - ಆ ಪ್ರಕ್ಷೇಪಣಜನ್ಯಶಬ್ದದಿಂದ, ರಮತೇ - ಸಂತೋಷದಿಂದ ನಗುತ್ತಿದ್ದನು. ‖ ೧೯ ‖ ಸರ್ವೇ - ಸಮಸ್ತರಾದ, ನಾಗರಾಃ - ನಗರವಾಸಿಗಳು, ತಂ - ಆ ಅಸಮಂಜನನ್ನು, ದೃಷ್ಟ್ವಾ - ನೋಡಿ, ಕ್ರುದ್ಧಾಃ - ಕೋಪಗೊಂಡು, ರಾಜಾನಂ - ಅರಸನನ್ನು ಕುರಿತು, ಹೇ ರಾಷ್ಟ್ರವರ್ಧನ - ಎಲೈ ರಾಜ್ಯ ಪರಿಪಾಲಕನೆ! ಏಕಂ - ಒಬ್ಬನಾದ, ಅಸಮಂಜಂ - ಅಸಮಂಜನನ್ನಾದರೂ, ಅಸ್ಮಾನ್ವಾ - ನಮ್ಮನ್ನಾದರೂ, ವೃಣೀಷ್ವ - ಕೋರುವವನಾಗು, ಇತಿ - ಇಂತೆಂದು, ಅಬ್ರುವನ್ - ನುಡಿದರು. ‖ ೨೦ ‖ ತತಃ - ಬಳಿಕ, ರಾಜಾ - ಸಗರರಾಯನು, ತಾನ್ - ಆ ಪ್ರಜೆಗಳನ್ನು ಕುರಿತು, ಇದಂಭಯಂ - ಈ ಭಯವು, ಕಿಮರ್ಥಂ - ಏತಕ್ಕೋಸುಗವೆಂದು, ಉವಾಚ-ಕೇಳಿದನು, ರಾಜ್ಞಾ - ಸಗರರಾಯನಿಂದ, ಸಂಪೃಷ್ಟಾಃ - ಕೇಳಲ್ಪಟ್ಟು, ತಾಃಪ್ರಕೃತಯೋಪಿ - ಆ ಪ್ರಜೆಗಳೂ, ವಾಕ್ಯಂ - ಮಾತನ್ನು, ಅಬ್ರುವನ್ - ನುಡಿದರು. ‖ ೨೧ ‖ ಏಷಃ - ಈ ಅಸಮಂಜನು, ಕ್ರೀಡತಃ-

---

ದಶರಥನು ಆ ಮಾತನ್ನು ಕೇಳಲಾರದೆ "ಛೀ! ಛೀ!!" ಎಂದು ಹೇಳಿದನು. ಆ ಸಭೆಯಲ್ಲಿದ್ದ ಜನರೆಲ್ಲರೂ ನಾಚಿಕೆಗೊಂಡರು. ಕೈಕೇಯಿಯು ಮಾತ್ರ ಅದನ್ನು ತಿಳಿಯದಿದ್ದಳು. ಅವಳ ಭಾವಪಥದಲ್ಲಿ ಯಾವುದೊಂದು ವಿಕಾರವೂ ತಲೆದೋರಲಿಲ್ಲ. ಆಗ ಆ ಸಭೆಯಲ್ಲಿ ಸಿದ್ಧಾರ್ಥನೆಂಬ ವೃದ್ಧ ಮಂತ್ರಿಯು ಆ ಕೈಕೇಯಿಯನ್ನು ಕುರಿತು, "ಎಲೌ ದೇವಿಯೆ! ನೀನು "ಸಗರರಾಯನು ತನ್ನ ಜ್ಯೇಷ್ಠ ಕುಮಾರನಾದ ಅಸಮಂಜನನ್ನು ಕಾಡಿಗೆ ಕಳುಹಿದಂತೆ ಶ್ರೀರಾಮನನ್ನು ಅರಣ್ಯಕ್ಕೆ ಕಳುಹು" ಎಂದು ಹೇಳಿದೆ! ಆ ಅಸಮಂಜನ ವೃತ್ತಾಂತವನ್ನು ಕೇಳಿರುವೆಯಾ? ಕೇಳು; ಹೇಳುತ್ತೇನೆ. ದುರ್ಬುದ್ಧಿಯುಳ್ಳ ಆ ಅಸಮಂಜನು ದಾರಿಯಲ್ಲಿ ಕ್ರೀಡಿಸುತ್ತಿರುವ ಮಕ್ಕಳನ್ನು ಹಿಡಿದುಕೊಂಡುಹೋಗಿ ಸರಯೂ

**ನಃಪುತ್ರಾನ್ ಬಾಲಾನುದ್ಭ್ರಾಂತ ಚೇತನಃ ॥ ಸರಯ್ವಾಂ ಪ್ರಕ್ಷಿಪನ್ಮೌರ್ಖ್ಯಾ
ದತುಲಾಂ ಪ್ರೀತಿ ಮಶ್ನುತೇ ॥ ೨೨ ॥ ಸ ತಾಸಾಂ ವಚನಂ ಶ್ರುತ್ವಾ ಪ್ರಕೃ
ತೀನಾಂ ನರಾಧಿಪಃ ॥ ತಂ ತತ್ಯಾಜಾಹಿತಂ ಪುತ್ರಂ ತೇಷಾಂ ಪ್ರಿಯ ಚಿಕೀ
ರ್ಷಯಾ ॥ ೨೩ ॥ ತಂ ಯಾನಂ ಶೀಘ್ರಮಾರೋಪ್ಯ ಸಭಾರ್ಯಂ ಸಪರಿ
ಚ್ಛದಂ ॥ ಯಾವಜ್ಜೀವಂ ವಿವಾಸ್ಯೋಯ ಮಿತಿಸ್ವಾ ನನ್ವಶಾತ್ ಪಿತಾ ॥೨೪॥
ಸಫಾಲ ಪಿಟಕಂ ಗೃಹ್ಯ ಗಿರಿದುರ್ಗಾಣ್ಯಲೋಳಯತ್ ॥ ದಿಶಸ್ಸರ್ವಾ ಸ್ತ್ವನು
ಚರನ್ ಸ ಯಥಾ ಪಾಪಕರ್ಮಕೃತ್ ॥ ೨೫ ॥ ಇತ್ಯೇವಮುತ್ಯಜ ದ್ರಾಜಾ ಸಗ**

ಬೀದಿಯಲ್ಲಿ ಆಡುತ್ತಿರುವ, ನಃ - ನಮ್ಮ, ಬಾಲಾನ್ - ಮಕ್ಕಳನ್ನು, ಸರಯ್ವಾಂ - ಸರಯೂ ನದಿ
ಯಲ್ಲಿ, ಪ್ರಕ್ಷಿಪನ್ - ಎತ್ತಿಹಾಕಿ, ಮೌರ್ಖ್ಯಾತ್ - ಮುಷ್ಕರದಿಂದ, ಉದ್ಭ್ರಾಂತಚೇತನಃ -
ಉನ್ಮತ್ತ ಬುದ್ಧಿಯುಳ್ಳವನಾಗಿ, ಅತುಲಾಂ - ಸಮಾನವಿಲ್ಲದ, ಪ್ರೀತಿಂ - ಸಂತೋಷವನ್ನು, ಅಶ್ನು
ತೇ - ಅನುಭವಿಸುತ್ತಾನೆ. ॥ ೨೨ ॥ ಸನರಾಧಿಪಃ - ಆ ಸಗರರಾಯನು, ತಾಸಾಂಪ್ರಕೃತೀನಾಂ-
ಆ ಪ್ರಜೆಗಳ, ವಚನಂ - ಮಾತನ್ನು, ಶೃತ್ವಾ - ಕೇಳಿ, ತೇಷಾಂ - ಆ ಪ್ರಜೆಗಳಿಗೆ, ಪ್ರಿಯಚಿಕೀರ್ಷ
ಯಾ - ಇಷ್ಟವನ್ನು ಮಾಡಲಿಚ್ಛೆಯಿಂದ, ಅಹಿತಂ - ಶತ್ರುವಾದ, ತಂಪುತ್ರಂ - ಆ ಮಗನನ್ನು,
ತತ್ಯಾಜ - ತ್ಯಾಗಮಾಡಿದನು. ॥ ೨೩ ॥ ಪಿತಾ - ತಂದೆಯಾದ ಸಗರರಾಯನು, ತಂ - ಆ
ಮಗನನ್ನು, ಸಭಾರ್ಯಂ - ಹೆಂಡತಿಯಿಂದೊಡಗೂಡಿದವನನ್ನಾಗಿ, ಸಪರಿಚ್ಛದಂ - ಉಪಕರಣ
ಸಾಮುಗ್ರಿಗಳಿಂದ, ಯಾನಂ - ರಥವನ್ನು, ಶೀಘ್ರಂ - ಜಾಗ್ರತೆಯಾಗಿ, ಆರೋಪ್ಯ-ಏರಿಸಿ, ಅಯಂ-
ಈ ಅಸಮಂಜನು, ಯಾವಜ್ಜೀವಂ - ಜೀವವಂತನಾಗಿರುವವರೆಗೂ, ವಿವಾಸ್ಯಃ - ಅರಣ್ಯವಾಸ
ಮಾಡತಕ್ಕದು, ಇತಿ - ಇಂತೆಂದು, ಸ್ವಾನ್ - ತನ್ನ ಅಧಿಕಾರಿಗಳನ್ನು ಕುರಿತು, ಅನ್ವಶಾತ್ -
ಆಜ್ಞಾಪಿಸಿದನು. ॥ ೨೪ ॥ ಸಃ - ಆ ಅಸಮಂಜನು, ಸಫಾಲಪಿಟಕಂ, ಸಫಾಲ - ಗುದ್ದಲಿ
ಯಿಂದೊಡಗೂಡಿದ, ಪಿಟಕಂ - ಮಂಕರಿಯನ್ನು, ಗೃಹ್ಯ - ತೆಗದುಕೊಂಡು, ಸರ್ವಾಃ - ಸಮಸ್ತಗ
ಳಾದ, ದಿಶಃ - ದಿಕ್ಕುಗಳಲ್ಲಿ, ಅನುಚರನ್ - ಸಂಚರಿಸುತ್ತ, ಯಥಾಪಾಪಕರ್ಮಕೃತ್ - ಪೂರ್ವದಲ್ಲಿ
ಹೇಗೋ ಹಾಗೆ ಪಾಪಕರ್ಮಗಳನ್ನು ಮಾಡುತ್ತ, ಗಿರಿದುರ್ಗಾಣಿ - ಬೆಟ್ಟಗಳನ್ನು, ಅಲೋಳಯತ್-
ಅಗೆದನು. ॥ ೨೫ ॥ ಸುಧಾರ್ಮಿಕಃ - ಮಹಾ ಧರ್ಮಿಷ್ಠನಾದ, ಸಗರೋರಾಜಾ - ಸಗರ

ನದಿಯಲ್ಲಿ ಹಾಕಿ ಅವರು ಮುಳುಗುವುದನ್ನು ನೋಡಿ ನಗುತ್ತಿದ್ದನು. ಈತನ ದುರುಳತನ
ವನ್ನು ನೋಡಿದ ಪ್ರಜೆಗಳೆಲ್ಲರೂ ಗುಂಪುಗೂಡಿ ಸಗರರಾಯನಿಗೆ ಮೊರೆಯಿಟ್ಟು ಆತನಿಗೆ
“ ಪ್ರಜೆಗಳು ಬೇಕೋ ? ಅಲ್ಲದೆ ದುಷ್ಟನೂ, ದುರ್ಮಾಗನೂ ಆದ ಮಗನಿರಬೇಕೋ ? ”
ಎಂದು ಕೇಳಿದರು. ಆಗಲಾ ರಾಯನು ಅಸಮಂಜನೇನು ಮಾಡಿದನೆಂದು ಕೇಳಿದನು.
ಅದಕ್ಕೆ ಪ್ರಜೆಗಳು “ ಪ್ರಭುವೆ ! ಅಸಮಂಜನು ನಮ್ಮ ಮಕ್ಕಳನ್ನು ಹಿಡಿದು, ಕಾಲುಗಳನ್ನು
ತಿರುಗಿಸಿ, ಸರಯೂ ನದಿಯಲ್ಲಿ ಹಾಕಿ ಅವರು ಮುಳುಗಿಹೋದರೆ ದಡದಲ್ಲಿ ನಿಂತು ‘ಕಿಲಕಿಲನೆ’
ನಗುತ್ತಾನೆ. ಇದೇ ಅವನು ಮಾಡುವ ರಂಪು” ಎಂದು ಬಿನ್ನವಿಸಿದರು. ಆ ಬಳಿಕ ಧರ್ಮಾತ್ಮ
ನಾದ ಸಗರ ಭೂಪಾಲನು ಈ ರೀತಿ ನುಡಿದ ಜನಗಳ ಮಾತನ್ನು ಕೇಳಿ, ತಲೆದೂಗಿ, ತನ್ನ

ರೋಽನ್ಯೈ ಸು ಧಾರ್ಮಿಕಃ ॥ ರಾಮಃ ಕಿಮಕರೋತ್ಪಾಪಂ ಯೇನೈವ ಮುಪರು ಧ್ಯತೇ ॥ ೨೬ ॥ ನಹಿ ಕಂಚನ ಪಶ್ಯಾಮೋ ರಾಘವಸ್ಯಾಗುಣಂ ವಯಂ ॥ ದುರ್ಲಭೋಹ್ಯಸ್ಯ ನಿರಯ ಶ್ಶಶಾಂಕಸ್ಯೇವ ಕಲ್ಮಷಂ ॥ ೨೭ ॥ ಅಥವಾ ದೇವಿ ದೋಷಂ ತ್ವಂ ಕಂಚಿತ್ ಪಶ್ಯಸಿ ರಾಘವೇ ॥ ತಮದ್ಯಬ್ರೂಹಿ ತತ್ವೇನ ತತೋ ರಾಮೋ ವಿವಾಸ್ಯತಾಂ ॥ ೨೮ ॥ ಅದುಷ್ಟಸ್ಯಹಿ ಸಂಗತ್ಯಾ ಸತ್ಪಥೇ ನಿರತ ಸ್ಯಚ ॥ ನಿರ್ದಹೇದಪಿ ಶಕ್ರಸ್ಯ ದ್ಯುತಿಂ ಧರ್ಮ ನಿರೋಧನಾತ್ ॥ ೨೯ ॥ ತದಲಂ ದೇವಿ ರಾಮಸ್ಯ ಶ್ರಿಯಾ ವಿಹತಯಾ ತ್ವಯಾ ॥ ಲೋಕತೋಽಪಿ ಹಿತೇ ರಕ್ಷ್ಯಃ ಪರಿವಾದ ಶ್ಶುಭಾನನೇ ॥೩೦॥ ಶ್ರುತ್ವಾತು ಸಿದ್ಧಾರ್ಥ ವಚೋ

ರಾಯನು, ಇತ್ಯೇವಂ - ಈಪರಿಯಾಗಿ, ಪುತ್ರಂ - ಮಗನನ್ನು, ಅತ್ಯಜತ್ - ತ್ಯಾಗವಮಾಡಿದನು, ರಾಮಃ - ಶ್ರೀರಾಮನು, ಯೇನ-ಯಾವಪಾಪದಿಂದ, ಏವಂ-ಈಪರಿಯಾಗಿ, ಉಪರುಧ್ಯತೇ-ಹೊರಡಿಸ ಲ್ಪಡುತ್ತಾನೋ, ತತ್ಪಾಪಂ - ಅಂತಹ ಪಾಪವನ್ನು, ಕಿಮಕರೋತ್-ಏನುಮಾಡಿದ್ದಾನೆ? ॥೨೬॥ ಹಿ- ಯಾವಕಾರಣ, ವಯಂ-ನಾವು, ರಾಘವಸ್ಯ-ಶ್ರೀರಾಮನಿಗೆ, ಕಂಚನ-ಯಾವದೊಂದಾದ, ಅಗುಣಂ- ದುರ್ಗುಣವನ್ನು, ನಪಶ್ಯಾಮಃ-ನೋಡಲಿಲ್ಲವೋ, ಅಸ್ಯ-ಈ ಶ್ರೀರಾಮನಿಗೆ, ಶಶಾಂಕಸ್ಯ-ಚಂದ್ರನಿಗೆ, ಕಲ್ಮಷಮಿವ - ಕಳಂಕದಂತೆ, ನಿರಯಃ - ಪಾಪಸಾಧನವಾದ ದೋಷವು, ದುರ್ಲಭೋಹಿ - ದುರ್ಲಭ ವಷ್ಟೆ. ॥ ೨೭ ॥ ಹೇ ದೇವಿ - ಎಲೌ ಕೈಕೇಯಿಯಾದೇವಿಯೇ, ಅಥವಾ - ಹಾಗಲ್ಲದೆ, ತ್ವಂ-ನೀನು, ರಾಘವೇ - ಶ್ರೀರಾಮನಲ್ಲಿ, ಕಂಚಿತ್ - ಒಂದಾದರೂ, ದೋಷಂ - ದೋಷವನ್ನು, ಪಶ್ಯಸಿ - ಕಂಡಿ ರುವೆಯಾ? ತಂ - ಆ ದೋಷವನ್ನು, ಅದ್ಯ - ಈಗ, ತತ್ವೇನ - ಯಥಾರ್ಥದಿಂದ, ಬ್ರೂಹಿ - ಹೇಳು, ತತಃ - ಬಳಿಕ, ರಾಮಃ - ಶ್ರೀರಾಮನು, ವಿವಾಸ್ಯತಾಂ - ಹೊರಡಿಸಲ್ಪಡಲಿ. ॥ ೨೮ ॥ ಹಿ-ಯಾವ ಕಾರಣ, ಸತ್ಪಥೇ - ಸನ್ಮಾರ್ಗದಲ್ಲಿ, ನಿರತಸ್ಯ - ಆಸಕ್ತನಾದ, ಅದುಷ್ಟಸ್ಯ - ದೋಷರಹಿತನಾದ ಪುರುಷನ, ಸಂತ್ಯಾಗಃ - ಪರಿತ್ಯಾಗವು, ಧರ್ಮನಿರೋಧನಾತ್, ಧರ್ಮ - ಧರ್ಮ ಕಾರ್ಯದ, ನಿರೋಧನಾತ್ - ತಡೆಯಿಂದ, ಶಕ್ರಸ್ಯಾಪಿ - ದೇವೇಂದ್ರನಿಗೂ, ದ್ಯುತಿಂ - ಐಶ್ವರ್ಯವನ್ನು, ನಿರ್ದ ಹೇತ್ - ಸುಟ್ಟುಹಾಕೀತು. ॥ ೨೯ ॥ ತತ್ - ಆ ಕಾರಣ, ಹೇ ದೇವಿ - ಎಲೌ ಕೈಕೇಯಿಯಾದೇವಿಯೆ, ತ್ವಯಾ - ನಿನ್ನಿಂದ, ನಿಹತಯಾ - ಹೊಡೆಯಲ್ಪಟ್ಟ, ರಾಮಸ್ಯ - ಶ್ರೀರಾಮನ, ಶ್ರಿಯಾ - ಸಂಪತ್ತಿನಿಂದ, ಅಲಂ - ಸಾಕು, ಹೇ ಶುಭಾನನೇ - ಎಲೌ ಸುಮುಖಿಯೇ, ಲೋಕತಃ - ಲೋಕದಲ್ಲಿ, ಪರಿವಾದಃ - ಅಪವಾದವು, ತೇ - ನಿನ್ನಿಂದ, ರಕ್ಷ್ಯೋಹಿ - ಪರಿಹಾರ ಮಾಡಿ ಕೊಳ್ಳತಕ್ಕದಷ್ಟೆ. ॥ ೩೦ ॥ ಸಿದ್ಧಾರ್ಥ ವಚಃ, ಸಿದ್ಧಾರ್ಥನ, ಮಾತನ್ನು, ಶ್ರುತ್ವಾ - ಕೇಳಿ,

---

ಮಂತ್ರಿಯನ್ನು ಕರೆದು ಆ ಅಸಮಂಜನನ್ನು ಆತನ ಭಾರ್ಯೆಯೊಡನೆ ರಥವನ್ನೇರಿಸಿ ಊರಿಂ ದಾಚೆಗೆ ಹೊರಡಿಸಿದನು. ಆಗಲಾತನು ಗುದ್ದಲಿಯನ್ನೂ, ಮಂಕರಿಯನ್ನೂ ತೆಗೆದು ಕೊಂಡು ಬೆಟ್ಟ ಗುಟ್ಟಗಳಲ್ಲಿ ಪಾಪಿಯಂತೆ ಅಲೆದಾಡುತ್ತಿದ್ದನು. ಈರೀತಿ ಸಗರನು ದುರ್ವ್ಯಾಪಾರಿಯಾದ ತನ್ನ ಜ್ಯೇಷ್ಠ ಕುವರನನ್ನು ತ್ಯಜಿಸಿದನು. ನಮ್ಮ ಶ್ರೀರಾಮನು ಹೀಗೆ ಯಾವ ಪಾಪವನ್ನು ಮಾಡಿದ್ದಾನೆ ? ಯಾವ ಅಪರಾಧವನ್ನು ಈತನಲ್ಲಿ ಉದ್ಘಾಟಿಸಿ

ರಾಜಾ ಶ್ರಾಂತತರ ಸ್ವನಃ ॥ ಶೋಕೋಪಹತಯಾ ವಾಚಾ ಕೈಕೇಯೀ ಮಿದ ಮಬ್ರವೀತ್ ॥ ೩೧ ॥ ಏತದ್ವಚೋ ನೇಚ್ಛಸಿ ಪಾಪವೃತ್ತೇ ಹಿತಂ ನಜಾ ನಾಸಿ ಮಮಾತ್ಮನೋ ವಾ ॥ ಆಸ್ಥಾಯ ಮಾರ್ಗಂ ಕೃಪಣಂ ಕುಚೇಷ್ಟಾ ಚೇಷ್ಟಾ ಹಿ ತೇ ಸಾಧು ಪಥಾದಪೇತಾ ॥ ೩೨ ॥

ಅನುವ್ರಜಿಷ್ಯಾ ಮ್ಯಹಮದ್ಯ ರಾಮಂ
ರಾಜ್ಯಂ ಪರಿತ್ಯಜ್ಯ ಸುಖಂ ಧನಂ ಚ ॥

ರಾಜಾತು - ಅರಸಾದರೆ, ಶ್ರಾಂತತರಸ್ವನಃ - ಕುಗ್ಗಿಹೋದ ಧ್ವನಿಯುಳ್ಳವನಾಗಿ, ಶೋಕೋಪ ಹತಯಾ, ಶೋಕ - ಅಳುವಿಕೆಯಿಂದ, ಉಪಹತಯಾ - ಹೊಡೆಯಲ್ಪಟ್ಟ, ವಾಚಾ - ಮಾತಿನಿಂದ, ಕೈಕೇಯೀಂ - ಕೈಕೇಯೀದೇವಿಯನ್ನು ಕುರಿತು, ಇದಂ ಈ ಮಾತನ್ನು, ಅಬ್ರವೀತ್ ನುಡಿದನು. ॥ ೩೧ ॥ ಹೇ ಪಾಪವೃತ್ತೇ - ಎಲೌ ಪಾಪಕರವಾದ ನಡೆವಳಿಕೆಯುಳ್ಳವಳೇ, ಏತದ್ವಚಃ - ಈ ಸಿದ್ಧಾರ್ಥನ ಮಾತನ್ನು, ನೇಚ್ಛಸಿ - ಒಪ್ಪದೇ ಇರುವೆ, ಮಮಾತ್ಮನೋವಾ - ನನ್ನ ಸಂಬಂಧ ವಾಗಿ, ಹಿತಂ - ಹಿತವನ್ನು, ನಜಾನಾಸಿ - ತಿಳಿಯುವುದಿಲ್ಲ, ಕೃಪಣಂ - ದುಷ್ಟವಾದ, ಮಾರ್ಗಂ - ಮಾರ್ಗವನ್ನು, ಆಸ್ಥಾಯ - ಹೊಂದಿ, ತೇ - ನಿನ್ನ, ಕುಚೇಷ್ಟಾ - ಕುತ್ಸಿತ ವ್ಯಾಪಾರವು ಯಾವುದೋ, ಸಾಚೇಷ್ಟಾ - ಆ ವ್ಯಾಪಾರವು, ಸಾಧುಪಥಾತ್ - ಸನ್ಮಾರ್ಗದಿಂದ, ಅಪೇತಾಹಿ - ಬಿಡಲ್ಪಟ್ಟಿರುವುದಷ್ಟೆ. ॥ ೩೨ ॥ ಅಹಂ - ನಾನು, ಅದ್ಯ - ಈಗ, ರಾಜ್ಯಂ - ರಾಜ್ಯವನ್ನೂ, ಸುಖಂ- ಸುಖವನ್ನೂ, ಧನಂಚ - ದ್ರವ್ಯವನ್ನೂ, ಪರಿತ್ಯಜ್ಯ - ಬಿಟ್ಟು, ರಾಮಂ - ಶ್ರೀರಾಮನನ್ನು, ಅನು ವ್ರಜಿಷ್ಯಾಮಿ - ಅನುಸರಿಸಿ ಹೋಗುವೆನು, ತ್ವಂ - ನೀನು, ರಾಜ್ಞಾ - ರಾಜನಾದ, ಭರತೇನ

ಹೊರಗಟ್ಟಬೇಕು? ಅಂತಹ ದುರ್ಗುಣಗಳಾವುವೂ ಈತನಲ್ಲಿ ಕಾಣುವುದಿಲ್ಲವಲ್ಲ! ಕೈಕೇಯಿ! ಶ್ರೀರಾಮನಲ್ಲಿ ಕಳಂಕವಿರುವುದೆಂದು ಹೇಳಿದರೆ, ಚಂದ್ರನಲ್ಲಿ ಕಳಂಕ ವಿರುವುದೆಂದು ಹೇಳುವಂತೆ ಮಿಥ್ಯಾಪವಾದವೇ ಸರಿ. ಹಾಗೊಂದುವೇಳೆ ಈತ ನಲ್ಲಿ ದುರ್ಗುಣಗಳಿದ್ದರೆ ಮರೆಮಾಚದೆ ಹೇಳು; ಹೊರಡಿಸಿಬಿಡೋಣ. ದೇವಿ! ಸತ್ಪುರುಷನನ್ನು ಹೊರಡಿಸಿದರೆ ಇಂದ್ರನ ಐಶ್ವರ್ಯವಾದರೂ ಭಸ್ಮೀಭೂತವಾಗುವದು. ಆದುದರಿಂದ ನೀನೀ ಮುಷ್ಕರವನ್ನು ತೊರೆ; ನಿನಗೀಮಾತನ್ನಾಡಲು ನಾಚಿಕೆ ಇಲ್ಲವೆ?" ಎಂದು ನುಡಿದನು. ॥ ೧೫-೩೦ ॥ ಈರೀತಿ ನುಡಿದ ಸಿದ್ಧಾರ್ಥನ ಮಾತನ್ನು ಕೇಳಿ ಮಹಾರಾಜನಾದ ದಶರಥನು, "ಪಾಪಿ! ವೃದ್ಧನಾದ ಸಿದ್ಧಾರ್ಥನ ನುಡಿಯೂ ನಿನಗೆ ರುಚಿಸಲಿಲ್ಲವೆ? ಎಲೆಗೆ! ನನ್ನ ಹಿತವನ್ನು ನೋಡದಿದ್ದರೂ ಒಳ್ಳಿತು; ನಿನ್ನ ಹಿತವನ್ನಾದರೂ ನೋಡಿಕೊಳ್ಳಬಾರದೆ? ಅಯ್ಯೋ! ನೀಚಳೆ! ನಿನ್ನ ಚೇಷ್ಟೆಯು ಬಲು ಕುತ್ಸಿತವಾದುದು. ಶ್ರೀರಾಮನು ಅರಣ್ಯಕ್ಕೆ ಹೊರಟುಹೋದ ಮೇಲೆ ನನಗಿಲ್ಲಿ ಕೆಲಸವೇನು? ನಾನು ಈ ರಾಜ್ಯವನ್ನೂ, ಈ ಸಮಸ್ತ ಸುಖಗಳನ್ನೂ ತ್ಯಜಿಸಿ ಆತನ ಸಂಗಡಲೇ ವನವನ್ನೈದುತ್ತೇನೆ,

ಸಹೈವ ರಾಜ್ಞಾ ಭರತೇನ ಚ ತ್ವಂ
ಯಥಾ ಸುಖಂ ಭುಙ್ಕ್ಷ್ವ ಚಿರಾಯ ರಾಜ್ಯಂ ॥ ೩೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ತ್ರಿಂಶಸ್ಸರ್ಗಃ.

ಸಹೈವ - ಭರತನೊಡನೆಯೇ, ಯಥಾ ಸುಖಂ - ಸುಖವಾಗಿ, ರಾಜ್ಯಂ - ರಾಜ್ಯವನ್ನು, ಚಿರಾಯ - ಬಹು ಕಾಲವು, ಭುಂಕ್ಷ್ವ - ಅನುಭವಿಸು. ॥ ೩೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ತ್ರಿಂಶಸ್ಸರ್ಗಃ.

ನೀನು ನಿನ್ನ ಮಗನಾದ ಭರತನೊಡಗೂಡಿ ರಾಜ್ಯಸುಖವನ್ನನುಭವಿಸಿಕೊಂಡಿರು " ಎಂದು ನುಡಿದವನಾದನು. ॥ ೩೩ ॥

ಇಂತಿದು ವೃದ್ಧಮಂತ್ರಿಯಾದ ಸಿದ್ಧಾರ್ಥ ಕೃತ ನೀತಿ ಕಥನ ವೃತ್ತಾಂತ ವರ್ಣನವೆಂಬ ಮುವತ್ತಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತತ್ರಿಂಶಸ್ಸರ್ಗಃ.

ಮಹಾಮಾತ್ರ ವಚಶ್ಶ್ರುತ್ವಾ ರಾಮೋ ದಶರಥಂ ತದಾ ॥ ಅಭ್ಯ ಭಾಷತ ವಾಕ್ಯಂತು ವಿನಯಜ್ಞೋ ವಿನೀತವತ್ ॥೧॥ ತ್ಯಕ್ತಭೋಗಸ್ಯ ಮೇ ರಾಜನ್ ವನೇ ವನ್ಯೇನ ಜೀವತಃ ॥ ಕಿಂ ಕಾರ್ಯಮನುಯಾತ್ರೇಣ ತ್ಯಕ್ತ ಸಂಗಸ್ಯ ಸರ್ವತಃ ॥ ೨ ॥ ಯೋಹಿ ದತ್ವಾ ದ್ವಿಪಶ್ರೇಷ್ಠಂ ಕಕ್ಷ್ಯಾಯಾಂ ಕುರುತೇ ಮನಃ ॥ ರಜ್ಜುಸ್ನೇಹೇನ ಕಿಂ ತಸ್ಯ ತ್ಯಜತಃ ಕುಂಜರೋತ್ತಮಂ॥೩॥

ಮಹಾ ಮಾತ್ರವಚಃ, ಮಹಾಮಾತ್ರ - ಸಿದ್ಧಾರ್ಥನೆಂಬ ಮಂತ್ರಿಯ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ವಿನಯಜ್ಞಃ - ವಿನಯವನ್ನು ತಿಳಿದಿರುವ, ರಾಮಃ - ಶ್ರೀರಾಮನು, ತದಾ - ಆಗ, ದಶರಥಂ - ದಶರಥರಾಯನನ್ನು ಕುರಿತು, ವಿನೀತವತ್ - ನಮ್ರನಾಗಿ, ಅಭ್ಯಭಾಷತ - ನುಡಿದನು. ॥ ೧ ॥ ಹೇ ರಾಜನ್ - ಎಲೈ ಅರಸೆ, ತ್ಯಕ್ತಭೋಗಸ್ಯ, ತ್ಯಕ್ತ - ಬಿಡಲ್ಪಟ್ಟ, ಭೋಗಸ್ಯ - ರಾಜೋಪಯುಕ್ತವಾದ ಸುಖಗಳುಳ್ಳ, ವನೇ - ಕಾಡಿನಲ್ಲಿ, ವನ್ಯೇನ - ವನದಲ್ಲಿ ಹುಟ್ಟಿದ ಕಂದಮೂಲಗಳಿಂದ, ಜೀವತಃ - ಜೀವನ ಮಾಡುತ್ತಿರುವ, ಸರ್ವತಃ - ಸರ್ವ ವಿಷಯದಲ್ಲಿಯೂ, ತ್ಯಕ್ತಸಂಗಸ್ಯ, ತ್ಯಕ್ತ - ಬಿಡಲ್ಪಟ್ಟ, ಸಂಗಸ್ಯ - ವಿಷಯ ಸಂಗವುಳ್ಳ, ಮೇ - ನನಗೆ, ಅನುಯಾತ್ರೇಣ - ಅನುಸರಿಸಿ ಬರುವ ಬಲದಿಂದ, ಕಿಂಕಾರ್ಯಂ - ಏನು ಪ್ರಯೋಜನವು. ॥ ೨ ॥ ಯೋಹಿ - ಯಾವ ಪುರುಷನಾದರೆ, ದ್ವಿಪಶ್ರೇಷ್ಠಂ - ಶ್ರೇಷ್ಠವಾದ ಗಜವನ್ನು, ದತ್ವಾ-ಕೊಟ್ಟು, ಕಕ್ಷ್ಯಾಯಾಂ - ಆನೆಯನ್ನು ಕಟ್ಟುವ ಹಗ್ಗದಲ್ಲಿ, ಮನಃ-ಮನಸ್ಸನ್ನು, ಕುರುತೇ - ಮಾಡುತ್ತಾನೆಯೋ, ತಸ್ಯ-ಅಂತಹ, ಕುಂಜರೋತ್ತಮಂ - ಶ್ರೇಷ್ಠವಾದ ಆನೆಯನ್ನು, ತ್ಯಜತಃ - ಬಿಟ್ಟ ಪುರುಷನಿಗೆ, ರಜ್ಜುಸ್ನೇಹೇನ - ಗಜಬಂಧನ ಹಗ್ಗದ ವಿಶ್ವಾಸದಿಂದ, ಕಿಂ - ಏನು. ॥ ೩ ॥ ಹೇ ಸತಾಂ ಶ್ರೇಷ್ಠ - ಎಲೈ

ಆ ಮೇಲೆ ಸಕಲ ನೀತಿಶಾಸ್ತ್ರಗಳ ತಿರುಳನ್ನು ಬಹು ಚನ್ನಾಗಿ ತಿಳಿದಿರುವ ಶ್ರೀರಾಮಮೂರ್ತಿಯು, ಮಂತ್ರಿಪುಂಗವನಾದ ಸಿದ್ಧಾರ್ಥನ ನುಡಿಗಳನ್ನು ಕೇಳಿ, ದಶರಥರಾಯನನ್ನು ಕುರಿತು ಬಹು ವಿಧೇಯಭಾವದಿಂದ "ಮಹಾರಾಜ! ಸಮಸ್ತ ಸುಖಗಳನ್ನೂ ತೊರೆದು, ಅರಣ್ಯದಲ್ಲಿ ದೊರೆವ ಕಂದಮೂಲ ಫಲಾದಿಗಳನ್ನು ಭುಂಜಿಸುವ ನನಗೆ ಈ ಚತುರಂಗ ಬಲದಿಂದೇನು ಪ್ರಯೋಜನವು? ಆನೆಯನ್ನು ದಾನಮಾಡಿದ ಮಾನವನು ಅದರ ಸರಪಣಿಯ ಮೇಲೆ ಆಸೆಪಟ್ಟು, ಅದನ್ನು ಹೊರುವಂತೆ, ಸಕಲ ಸಂಪತ್ಸುಖ ಸಂದಾಯಕವಾದ ಈ ರಾಜ್ಯವನ್ನೇ ಬಿಟ್ಟು ಕಾಡಿಗೆ ಹೋಗುವ ನನಗೆ ಈ ಧನ, ಕನಕ, ವಾಹನಾದಿ ಸಾಮಗ್ರಿಗಳಿಂದೇನು ತಾನೆ ಪ್ರಯೋಜನವು? ಜನಕನೆ! ಹಾಗೆ ರಾಜ್ಯವನ್ನು ತೊರೆದು ಯಾವ ಪ್ರಯೋಜನವೂ ಇಲ್ಲದ ಆ ಸಾಮಗ್ರಿಗಳನ್ನಪೇಕ್ಷಿಸಲು ನಾನೇನು ಮೂಢನೆ ? ನಾನು ಧರ್ಮಗಳನ್ನು ತಿಳಿದಿದ್ದೇನೆ. ಇದೋ! ನೀನು ನನಗೆ ಕೊಡಬೇಕೆಂದಿರುವ ರಾಜ್ಯವನ್ನೂ,

ತಥಾ ಮಮ ಸತಾಂ ಶ್ರೇಷ್ಠ ಕಿಂ ಧ್ವಜಿನ್ಯಾ ಜಗತ್ಪತೇ ॥ ಸರ್ವಾಣ್ಯೇವಾ
ನುಜಾನಾಮಿ ಚೀರಾಣ್ಯೇವಾನಯಂತು ಮೇ ॥ ೪ ॥ ಖನಿತ್ರ ಪಿಟಕೇ ಚೋಭೇ
ಸಮಾನಯತ ಗಚ್ಛತಃ ॥ ಚತುರ್ದಶ ವನೇ ವಾಸಂ ವರ್ಷಾಣಿ ವಸತೋ
ಮಮ ॥ ೫ ॥ ಅಥ ಚೀರಾಣಿ ಕೈಕೇಯೀ ಸ್ವಯಮಾಹೃತ್ಯ ರಾಘವಂ ॥
ಉವಾಚ ಪರಿಧತ್ಸ್ವೇತಿ ಜನೌಘೇ ನಿರಪತ್ರಪಾ ॥ ೬ ॥ ಸ ಚೀರೇ ಪುರುಷ
ವ್ಯಾಘ್ರಃ ಕೈಕೇಯ್ಯಾಃ ಪ್ರತಿಗೃಹ್ಯ ತೇ ॥ ಸೂಕ್ಷ್ಮವಸ್ತ್ರಮವಕ್ಷಿಪ್ಯ ಮುನಿವಸ್ತ್ರಾ
ಣ್ಯವಸ್ತ್ರಹ ॥ ೭ ॥ ಲಕ್ಷ್ಮಣಶ್ಚಾಪಿ ತತ್ರೈವ ವಿಹಾಯ ವಸನೇ ಶುಭೇ ॥

ಸತ್ಪುರುಷ ಶ್ರೇಷ್ಠನೆ, ಹೇ ಜಗತ್ಪತೇ - ಎಲೈ ಲೋಕಾಧಿಪತಿಯೇ, ತಥಾ - ಹಾಗೆಯೇ, ಮಮ - ನನಗೆ, ಧ್ವಜಿನ್ಯಾ - ಸೈನ್ಯದಿಂದ, ಕಿಂ - ಏನು ಪ್ರಯೋಜನ, ಸರ್ವಾಣ್ಯೇವ - ಸಮಸ್ತವಾದ ಪದಾರ್ಥಗಳನ್ನು, ಅನುಜಾನಾಮಿ - ಭರತನಿಗೋಸ್ಕರ ಸಮ್ಮತಿಸಿದ್ದೇನೆ, ಮೇ - ನನಗೆ, ಚೀರಾಣ್ಯೇವ - ನಾರುಮಡಿಗಳನ್ನೇ, ಆನಯಂತು - ತರಿಸಲಿ. ॥ ೪ ॥ ವನೇ - ವನದಲ್ಲಿ, ಚತುರ್ದಶ ವರ್ಷಾಣಿ- ಹದಿನಾಲ್ಕು ವರುಷಗಳೂ, ವಾಸಂ - ವಾಸವನ್ನು, ವಸತಃ - ಮಾಡಲಿಕ್ಕಾಗಿ, ಗಚ್ಛತಃ - ಹೋಗುತ್ತಿರುವ, ಮಮ - ನನಗೆ, ಉಭೇ-ಎರಡಾದ, ಖನಿತ್ರಪಿಟಕೇ - ಗುದ್ದಲೀ, ಮಂಕರಿಗಳನ್ನೂ, ಸಮಾನಯತ - ತಂದುಕೊಡಿರಿ. ॥ ೫ ॥ ಅಥ - ಬಳಿಕ, ಕೈಕೇಯೀ - ಕೈಕೇಯೀದೇವಿಯು, ಚೀರಾಣಿ- ನಾರುಮಡಿಗಳನ್ನು, ಸ್ವಯಂ - ತಾನೇ, ಆಹೃತ್ಯ - ತೆಗೆದುಕೊಂಡು ಬಂದು, ಜನೌಘೇ - ಜನಗಳ ಗುಂಪಿನಲ್ಲಿ, ನಿರಪತ್ರಪಾ - ನಾಚಿಕೆಯಿಲ್ಲದೆ, ರಾಘವಂ - ಶ್ರೀರಾಮನನ್ನು ಕುರಿತು, ಪರಿಧತ್ಸ್ವ - ಧರಿಸಯ್ಯಾ, ಇತಿ - ಎಂದು, ಉವಾಚ - ಹೇಳಿದಳು. ॥ ೬ ॥ ಪುರುಷವ್ಯಾಘ್ರಃ - ಪುರುಷ ಶ್ರೇಷ್ಠನಾದ, ಸಃ - ಆ ಶ್ರೀರಾಮನು, ಕೈಕೇಯ್ಯಾಃ - ಕೈಕೇಯೀದೇವಿಯಿಂದ, ಮುನಿವಸ್ತ್ರಾಣಿ - ಋಷಿಗಳಿಗೆ ಯೋಗ್ಯವಾದ ನಾರುಮಡಿಗಳನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಸೂಕ್ಷ್ಮ ವಸ್ತ್ರಂ - ದುಕೂಲವನ್ನು, ಅವಕ್ಷಿಪ್ಯ - ತೆಗೆದುಹಾಕಿ, ತೇ ಚೀರೆ - ಉಡುವ ಮತ್ತು ಹೊದಿಯುವ ಆ ನಾರುಮಡಿಗಳೆರಡನ್ನು, ಅವಸ್ತ್ರಹ - ಧರಿಸಿದನು. ॥೭॥ ಲಕ್ಷ್ಮಣಶ್ಚಾಪಿ - ಲಕ್ಷ್ಮಣನು ಕೂಡ, ತತ್ರೈವ - ಅಲ್ಲಿಯೇ, ಶುಭೇ - ಶುಭಕರವಾದ, ವಸನೇ - ವಸ್ತ್ರಗಳನ್ನು, ವಿಹಾಯ - ತೊರೆದು, ಪಿತುಃ - ತಂದೆಯ,

---

ಅದಕ್ಕೆ ಸಂಬಂಧಪಟ್ಟ ಸಕಲ ವಸ್ತು ನಿಚಯುವನ್ನೂ, ಕೈಕೇಯೀ ಭರತರ ಭೋಗಕ್ಕಾಗಿ ತೊರೆದು ಬಿಟ್ಟದ್ದೇನೆ. ಹದಿನಾಲ್ಕು ವರ್ಷಗಳು ವನವಾಸವನ್ನು ಮಾಡುವ ನನಗೆ ಋಷಿಗಳಿಗೆ ಯೋಗ್ಯವಾದ ವಲ್ಕಲಗಳನ್ನೂ, ಗುದ್ದಲಿ ಮತ್ತು ಮಂಕರಿಗಳನ್ನೂ ತರಿಸಿಕೊಡು" ಎಂದು ಹೇಳಿದನು. ॥ ೧-೫ ॥ ಆ ಮಾತನ್ನು ಕೇಳಿ ಕೈಕೇಯಿದೇವಿಯು ಬಹು ಬೇಗನೆ ನಾರುಮಡಿಗಳನ್ನು ತರಿಸಿ, ಪತಿಯಾದ ದಶರಥರಾಜನಿದಿರಿನಲ್ಲಿಯೇ, ಏನೊಂದೂ ಲಜ್ಜೆಯಿಲ್ಲದೆ ಅವುಗಳನ್ನುಟ್ಟುಕೊಳ್ಳಬೇಕೆಂದು ಶ್ರೀರಾಮನನ್ನುಕುರಿತು ಹೇಳಿದಳು. ಆಗ ಶ್ರೀರಾಮನು "ಮಹಾ ಪ್ರಸಾದ" ವೆಂದು, ಕೈಕೇಯಿಯಿಂದ ಆ ನಾರುಮಡಿಗಳನ್ನು ತೆಗೆದುಕೊಂಡು, ತಾನುಟ್ಟಿರುವ ನವರು ಬಟ್ಟೆಗಳನ್ನು ತೆಗೆದೊಗೆದು ಋಷಿಯೋಗ್ಯವಾದ ಆ ನಾರುಮಡಿಗಳನ್ನುಟ್ಟನು. ಈ ರೀತಿ ರಾಮಮೂರ್ತಿಯು ನಾರುಮಡಿಗಳನ್ನುಟ್ಟ ತರುವಾಯ, ಲಕ್ಷ್ಮಣ

ತಾಪಸಾಚ್ಛಾದನೇ ಚೈವ ಜಗ್ರಾಹ ಪಿತುರಗ್ರತಃ ॥ ೮ ॥ ಅಥಾತ್ಮ ಪರಿಧಾನಾರ್ಥಂ ಸೀತಾ ಕೌಶೇಯವಾಸಿನೀ ॥ ಸಮೀಕ್ಷ್ಯ ಚೀರಂ ಸಂತ್ರಸ್ತಾ ಪೃಷತೀ ವಾಗುರಾಮಿವ ॥ ೯ ॥ ಸಾ ವ್ಯಪತ್ರತಮಾಣೇವ ಪ್ರಗೃಹ್ಯಚ ಸುದುರ್ಮನಾಃ ॥ ಕೈಕೇಯ್ಯಾಃ ಕುಶಚೀರೇ ತೇ ಜಾನಕೀ ಶುಭಲಕ್ಷಣಾ ॥ ೧೦ ॥ ಅಶ್ರುಸಂಪೂರ್ಣ ನೇತ್ರಾಚ ಧರ್ಮಜ್ಞಾ ಧರ್ಮದರ್ಶಿನೀ ॥ ಗಂಧರ್ವ ರಾಜಪ್ರತಿಮಂ ಭರ್ತಾರಮಿದ ಮಬ್ರವೀತ್ ॥೧೧॥ ಕಥಂನು ಚೀರಂ ಬಧ್ನಂತಿ ಮುನಯೋ ವನವಾಸಿನಃ ॥ ಇತಿಹ್ಯಕುಶಲಾ ಸೀತಾ ಸಾ ಮುಮೋಹ ಮುಹುರ್ಮುಹುಃ ॥ ೧೨ ॥ ಕೃತ್ವಾ ಕಂಠೇಚ ಸಾ ಚೀರಮೇಕಮಾದಾಯ ಪಾಣಿನಾ ॥ ತಸ್ಥೌ

ಅಗ್ರತಃ - ಮುಂಗಡೆ, ತಾಪಸಾಚ್ಛಾದನೇ - ಋಷಿಗಳ ವಸ್ತ್ರಗಳನ್ನು, ಜಗ್ರಾಹ - ತೆಗೆದುಕೊಂಡನು. ॥ ೮ ॥ ಅಥ - ಬಳಿಕ, ಕೌಶೇಯವಾಸಿನೀ - ಪಟ್ಟೆಸೀರೆಯನ್ನುಟ್ಟಿರುವ, ಸೀತಾ - ಸೀತಾದೇವಿಯು, ಆತ್ಮಪರಿಧಾನಾರ್ಥಂ - ತನಗೆ ಉಟ್ಟುಕೊಳ್ಳಲು, ಚೀರಂ - ನಾರುಮಡಿಯನ್ನು, ಸಮೀಕ್ಷ್ಯ-ಕಂಡು, ಪೃಷತೀ - ಚಿಗುರಿಯು, ವಾಗುರಾಮಿವ - ಬಲೆಯನ್ನಂತೆ, ಸಂತ್ರಸ್ತಾ - ಭಯಗೊಂಡಳು ॥ ೯ ॥ ಶುಭಲಕ್ಷಣಾ - ಮಂಗಳಕರವಾದ ಲಕ್ಷಣಗಳುಳ್ಳ, ಜಾನಕೀ - ಜನಕರಾಯನ ಮಗಳಾದ, ಸಾ - ಆ ಸೀತಾದೇವಿಯು, ತೇಕುಶಚೀರೇ - ಆ ನಾರುಮಡಿಗಳನ್ನು, ಪ್ರಗೃಹ್ಯ - ಪರಿಗ್ರಹಿಸಿ, ವ್ಯಪತ್ರಪಮಾಣಾ - ನಾಚಿಕೆಗೊಂಡು, ಸುದುರ್ಮನಾಇವ - ರಾಮನಿಗೆ ನಾರುಮಡಿಯ ಧಾರಣೆಯಿಂದ ದುಃಖಾಕ್ರಾಂತವಾದ ಮನವುಳ್ಳವಳಾಗಿ, ॥ ೧೦ ॥ ಅಶ್ರುಸಂಪೂರ್ಣ ನೇತ್ರಾಚ, ಅಶ್ರು-ಕಂಬನಿಗಳಿಂದ, ಸಂಪೂರ್ಣ - ತುಂಬಿದ, ನೇತ್ರಾಚ - ಕಣ್ಣುಗಳುಳ್ಳವಳಾಗಿ, ಧರ್ಮಜ್ಞಾ - ಧರ್ಮವನ್ನು ತಿಳಿದವಳಾದ ಕಾರಣ, ಧರ್ಮದರ್ಶಿನೀ - (ಗೋ + ಮ) ಪಾತಿವ್ರತ್ಯ ಧರ್ಮವನ್ನು ತೋರಿಸುತ್ತ, ಗಂಧರ್ವ ರಾಜಪ್ರತಿಮಂ - ಗಂಧರ್ವ ರಾಜನಾದ ಚಿತ್ರರಥನಿಗೆ ಸಮಾನನಾದ, ಭರ್ತಾರಂ - ಗಂಡನಾದ ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದಳು. ॥ ೧೧ ॥ ವನವಾಸಿನಃ - ವನವಾಸಿಗಳಾದ, ಮುನಯಃ - ಋಷಿಗಳು, ಚೀರಂ - ನಾರು ವಸ್ತ್ರವನ್ನು, ಕಥನ್ನುಬಧ್ನಂತಿ - ಹೇಗೆ ಉಟ್ಟುಕೊಳ್ಳುವರು? ಇತಿ - ಇಂತೆಂದು, ಸಾಸೀತಾ - ಆ ಸೀತಾದೇವಿಯು, ಅಕುಶಲಾ - ಮುಗ್ಧಳಾಗಿ, ಮುಹುರ್ಮುಹುಃ - ಬಾರಿಬಾರಿಗೂ, ಮುಮೋಹ - ಭ್ರಾಂತಳಾದಳು. ॥೧೨॥ ಸಾಜನಕಾ

ಸ್ವಾಮಿಯು ತಾನು ಧರಿಸಿದ್ದ ದುಕೂಲಗಳನ್ನು ಬಿಚ್ಚಿಟ್ಟು, ನಾರುಬಟ್ಟೆಯನ್ನು ಹೊದ್ದುಕೊಂಡನು. ॥೬-೮॥ ಅನಂತರದಲ್ಲಿ ಸೀತಾರಮಣಿಯು ತಾನುಟ್ಟದ್ದ ಪಟ್ಟೆವಸ್ತ್ರಗಳನ್ನು ತೆಗೆದಿಟ್ಟು, ಉಟ್ಟುಕೊಳ್ಳಬೇಕಾದ ನಾರು ಸೀರೆಯನ್ನು ಕಂಡು, ಹುಲ್ಲೆಮರಿಯು ಬಲೆಯನ್ನು ನೋಡಿ ಬೆದರುವಂತೆ ಕಂಗೆಟ್ಟು, ಕಂಬನಿದುಂಬಿದ ಕಂಗಳುಳ್ಳವಳಾಗಿ, ಆ ಸೀರೆಯನ್ನು ಕೈಕೇಯಿಯಿಂದ ತೆಗೆದುಕೊಂಡು ನಾಚಿ, ಧರ್ಮಜ್ಞಳಾದುದರಿಂದ ಪಾತಿವ್ರತ್ಯ ಧರ್ಮವನ್ನು ಪ್ರಕಟಿಸುತ್ತ, ಗಂಧರ್ವ ರಾಜನಂತಿರುವ ಶ್ರೀರಾಮನನ್ನು ಕುರಿತು. "ಪ್ರಾಣಕಾಂತ! ವನವಾಸಿಗಳಾದ ಋಷಿಪತ್ನಿಯರು ನಾರು ಸೀರೆಗಳನ್ನುಡುವ ರೀತಿಯೆಂತು?" ಎಂದು ಹೇಳಿ, ತಿಳಿಯದೆ ಅಡಿಗಡಿಗೂ ಭ್ರಾಂತಳಾಗಿ, ಆ ರಾಜಸಭೆಯಲ್ಲಿ ಲಜ್ಜೆಹೊಂದಿ ಒಂದು



Bark-garment on Sita.

Lakshmi Art Bombay, 8.

ಹ್ಯಕುಶಲಾ ತತ್ರ ವ್ರೀಳಿತಾ ಜನಕಾತ್ಮಜಾ ॥ ೧೩ ॥ ತಸ್ಯಾಸ್ತತ್ ಕ್ಷಿಪ್ರಮಾ ಗಮ್ಯ ರಾಮೋ ಧರ್ಮಭೃತಾಂ ವರಃ॥ಚೀರಂ ಬಬಂಧ ಸೀತಾಯಾಃ ಕೌಶೇಯ ಸ್ಯೋಪರಿ ಸ್ವಯಂ ॥ ೧೪ ॥ ರಾಮಂ ಪ್ರೇಕ್ಷ್ಯತು ಸೀತಾಯಾ ಬಧ್ನಂತಂ ಚೀರಮುತ್ತಮಂ ॥ ಅಂತಃಪುರಗತಾ ನಾರ್ಯೋ ಮುಮುಚು ರ್ವಾರಿ ನೇತ್ರಜಂ ॥ ೧೫ ॥ ಊಚುಶ್ಚ ಪರಮಾಯಸ್ತಾ ರಾಮಂ ಜ್ವಲಿತ ತೇಜಸಂ ॥ ವತ್ಸ ನೈವಂ ನಿಯುಕ್ತೇಯಂ ವನವಾಸೇ ಮನಸ್ವಿನೀ ॥ ೧೬ ॥ ಪಿತು ರ್ವಾಕ್ಯಾನುರೋಧೇನ ಗತಸ್ಯ ವಿಜನಂ ವನಂ ॥ ತಾವದ್ದರ್ಶನ ಮಸ್ಯಾಂ ನ ಸ್ಸಫಲಂ ಭವತು ಪ್ರಭೋ ॥ ೧೭ ॥ ಲಕ್ಷ್ಮಣೇನ ಸಹಾಯೇನ ವನಂ ಗಚ್ಛಸ್ವ

ತ್ಮಜಾ - ಆ ಸೀತಾದೇವಿಯು, ತತ್ರ - ಆ ಜನಮಧ್ಯದಲ್ಲಿ, ವ್ರೀಳಿತಾ - ಲಜ್ಜೆಗೊಂಡು, ಪಾಣಿನಾ- ಹಸ್ತದಿಂದ, ಏಕಂಚೀರಂ - ಒಂದು ಸೀರೆಯನ್ನು, ಕಂಠೇ - ಕಂಠದಲ್ಲಿ, ಕೃತ್ವಾ - ಧರಿಸಿ, ಅಕು ಶಲಾ - ಸಂಕಟಗೊಂಡು, ತಸ್ಥೌಹಿ - ನಿಂತಳಷ್ಟೆ. ॥ ೧೩ ॥ ಧರ್ಮಭೃತಾಂ - ಧರ್ಮಿಷ್ಠರಲ್ಲಿ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ಕ್ಷಿಪ್ರಂ - ಜಾಗ್ರತೆಯಾಗಿ, ಆಗಮ್ಯ - ಬಂದು, ತಸ್ಯಾಸ್ಸೀತಾಯಾಃ - ಆ ಸೀತಾದೇವಿಗೆ, ಕೌಶೇಯಸ್ಯ - ಪಟ್ಟೆಸೀರೆಯ, ಉಪರಿ - ಮೇಲ್ಭಾಗದಲ್ಲಿ, ಸ್ವಯಂ - ತಾನಾಗಿಯೇ, ತಚ್ಚೀರಂ - ಆ ನಾರುಮಡಿಯನ್ನು, ಬಬಂಧ - ಉಡಿಸಿದನು. ॥ ೧೪ ॥ ಸೀತಾಯಾಃ - ಸೀತಾದೇವಿಗೆ, ಉತ್ತಮಂ - ಸರ್ವೋತ್ತಮವಾದ, ಚೀರಂ - ನಾರುಮಡಿಯನ್ನು, ಬಧ್ನಂತಂ - ಉಡಿಸುತ್ತಿರುವ, ರಾಮಂ - ಶ್ರೀರಾಮನನ್ನು, ಪ್ರೇಕ್ಷ್ಯ - ಕಂಡು, ಅಂತಃಪುರಗತಾಃ - ಅಂತಃಪುರದಲ್ಲಿರುವ, ನಾರ್ಯಃ - ಹೆಂಗಳು, ನೇತ್ರಜಂವಾರಿ - ಕಣ್ಣೀರನ್ನು, ಮುಮುಚುಃ - ಬಿಟ್ಟರು. ॥ ೧೫ ॥ ಪರಂ - ಬಹಳವಾಗಿ, ಆಯಸ್ತಾಃ-ವ್ಯಸನದಿಂದ ಶ್ರಮೆಪಡುತ್ತ, ಜ್ವಲಿತ ತೇಜಸಂ - ಹೊಳೆಯುತ್ತಿರುವ ಮುಖಕಾಂತಿಯುಳ್ಳ, ರಾಮಂ-ಶ್ರೀರಾಮನನ್ನು ಕುರಿತು, ಊಚುಶ್ಚ- ಹೇಳಿಯೂ ಹೇಳಿದರು, ಹೇ ವತ್ಸ - ಎಲೈ ಶ್ರೀರಾಮನೆ, ಮನಸ್ವಿನೀ - ನಿರ್ದೋಷಿಯಾದ, ಇಯಂ- ಈ ಸೀತಾದೇವಿಯು, ವನವಾಸೇ - ಅರಣ್ಯಗಮನದಲ್ಲಿ, ಏವಂ - ಹೀಗೆ, ನನಿಯುಕ್ತಾ - ನಿಯಮಿ ಸಲ್ಪಡಲಿಲ್ಲ. ॥ ೧೬ ॥ (ಗೋ) ಹೇ ಪ್ರಭೋ - ಎಲೈ ಸ್ವಾಮಿಯೇ, ಪಿತುಃ - ತಂದೆಯ, ವಾಕ್ಯಾನುರೋಧೇನ - ವಚನಾನುಸಾರ, ವಿಜನಂ - ಜನವರ್ಜಿತವಾದ, ವನಂ - ವನವನ್ನು ಕುರಿತು, ಗತಸ್ಯ - ಹೋದ, ತವ - ನಿನ್ನ, ದರ್ಶನಂ - ನೋಡುವಿಕೆಯು, ತಾವತ್ - ನಿನ್ನ ಆಗಮನ

ಸೀರೆಯನ್ನು ಕಂಠಕ್ಕೆ ಸುತ್ತಿಕೊಂಡು ನಿಂತುಬಿಟ್ಟಳು.॥೯-೧೩॥ಆಗ ಮಹಾ ಧರ್ಮಿಷ್ಠನಾದ ಶ್ರೀರಾಮನು ಬಹು ಬೇಗನೆ ಆಕೆಯ ಬಳಿಸಾರಿ, ಆಕೆಯುಟ್ಟಿದ್ದ ಪಟ್ಟೆಸೀರೆಯ ಮೇಲೆಯೇ ಆ ನಾರು ಸೀರೆಯನ್ನುಡಿಸಿದನು. ॥೧೪॥ ಈ ರೀತಿ ಸೀತಾದೇವಿಗೆ ನಾರುಮಡಿಗಳನ್ನುಡಿಸುತ್ತಿ ರುವ ಶ್ರೀರಾಮನನ್ನು ಕುರಿತು ಅಂತಃಪುರದ ಹೆಂಗಳೆಲ್ಲರೂ, ಕಣ್ಣೀರಿಡುತ್ತ, ಪಲುವಿಧ ದಿಂದ ಸಂಕಟಪಟ್ಟು ಆತನನ್ನು ಕುರಿತು, “ಓ ಶ್ರೀರಾಮಚಂದ್ರನೆ! ಮಹಾ ಮನಸ್ವಿನಿ ಯಾದೀ ಸೀತಾದೇವಿಯು ನಿನ್ನೊಡನೆ ಅರಣ್ಯಕ್ಕೆ ತೆರಳಬೇಕೆಂದು ಮಹಾರಾಜನ ಆಜ್ಞೆಯಾಗ ಲಿಲ್ಲ! ತಂದೆಯಾಣತಿಯಂತೆ ನೀನು ಅರಣ್ಯಕ್ಕೆಹೋಗು! ನೀನು ಹಿಂತಿರುಗಿ ಬರುವವರೆ

ಪುತ್ರಕ ॥ ನೇಯಮರ್ಹತಿ ಕಲ್ಯಾಣೀ ವಸ್ತುಂ ತಾಪಸವದ್ವನೇ ॥ ೧೮ ॥ ಕುರು ನೋ ಯಾಚನಾಂ ಪುತ್ರ ಸೀತಾ ತಿಷ್ಠತು ಭಾಮಿನೀ ॥ ಧರ್ಮನಿತ್ಯಸ್ಸ್ವಯಂ ಸ್ಥಾತುಂ ನಹೀದಾನೀಂ ತ್ವಮಿಚ್ಛಸಿ ॥ ೧೯ ॥ ತಾಸಾಮೇವಂ ವಿಧಾ ವಾಚಃ ಶೃಣ್ವನ್ ದಶರಥಾತ್ಮಜಃ ॥ ಬಬಂಧೈವ ತದಾ ಚೀರಂ ಸೀತಯಾ ತುಲ್ಯಶೀಲಯಾ ॥ ೨೦ ॥ ಚೀರೇ ಗೃಹೀತೇತು ತದಾ ಸಮೀಕ್ಷ್ಯ ನೃಪತೇ ರ್ಗುರುಃ॥

ಪರ್ಯಂತವೂ, ಅಸ್ಯಾಂ - ಈ ಸೀತಾದೇವಿಯಲ್ಲಿ, ನಃ - ನಮಗೆ, ಸಫಲಂ - ಸಫಲವಾದುದು, ಭವತು - ಆಗಲಿ, (ಮ) ಪಿತುಃ - ತಂದೆಯ, ವಾಕ್ಯಾನುರೋಧೇನ - ವಚನಾನುಸರಣದಿಂದ, ವಿಜನಂ - ಜನರಹಿತವಾದ, ವನಂ - ವನವನ್ನು ಕುರಿತು, ಗತಸ್ಯ - ಹೋದ, ತವ - ನಿನ್ನ ಸಂಬಂಧವಾದ, ಅಸ್ಯಾಃ - ಈ ಸೀತಾದೇವಿಯ, ದರ್ಶನಂ - ದರ್ಶನವು, ನಃ - ನಮಗೆ, ಸಫಲಂ-ಪ್ರಯೋಜನಕಾರಿಯಾದುದು, ಭವತು - ಆಗಲಿ, ಅಸ್ಯಾಃ - ಈ ಸೀತಾದೇವಿಯ, ದರ್ಶನಂ - ದರ್ಶನದಿಂದ, ತವ - ನೀನು, ವನಂಗತಸ್ಯಸತಃ-ವನವನ್ನುಹೊಂದಿರುವ, ನಃ - ನಮ್ಮ, ಜೀವಿತಂ ಜನ್ಮವು, ಸಫಲಂ ಭವತು - ಫಲಕಾರಿಯಾಗಲಿ. ‖ ೧೭ ‖ ಹೇ ಪುತ್ರಕ - ಎಲೈ ಮಗನೆ, ಸಹಾಯೇನ - ಸಹಾಯಭೂತನಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ವನಂ - ವನವನ್ನು ಕುರಿತು, ಗಚ್ಛಸ್ವ - ಹೋಗು, ಕಲ್ಯಾಣೀ - ಶುಭಕರಳಾದ, ಇಯಂ - ಈ ಸೀತಾದೇವಿಯು, ವನೇ - ವನದಲ್ಲಿ, ತಾಪಸವತ್ - ಋಷಿಪತ್ನಿಯಂತೆ, ವಸ್ತುಂ - ಇರಲು, ನಾರ್ಹತಿ - ಯೋಗ್ಯಳಲ್ಲ. ‖ ೧೮ ‖ ಹೇ ಪುತ್ರ - ಎಲೈ ಮಗನೇ, ಹಿ - ಯಾವ ಕಾರಣ, ಧರ್ಮನಿತ್ಯಃ - ಧರ್ಮದಲ್ಲಿಯೇ ಯಾವಾಗಲೂ ಮತಿಯುಳ್ಳ, ತ್ವಂ-ನೀನು, ಸ್ವಯಂ - ನಾನು, ಸ್ಥಾತುಂ - ಇರಲು, ಇದಾನೀಂ - ಈಗ, ನೇಚ್ಛಸಿ - ಅಪೇಕ್ಷಿಸದೇ ಇರುವೆಯೋ, ತಸ್ಮಾತ್ - ಆ ಕಾರಣ, ಭಾಮಿನೀ - ಹೆಂಗಸಾದ, ಸೀತಾ - ಸೀತಾದೇವಿಯು, ತಿಷ್ಠತು - ಇಲ್ಲಿಯೇ ಇರಲೀ, ನಃ - ನಮ್ಮ, ಯಾಚನಾಂ - ಬೇಡುವಿಕೆಯನ್ನು, ಕುರು - ಸಾರ್ಥಕಗೊಳಿಸು, ದಶರಥಾತ್ಮಜಃ - ಶ್ರೀರಾಮನು, ತಾಸಾಂ - ಆ ಅಂತಃಪುರಸ್ತ್ರೀಯರ, ಏವಂವಿಧಾಃ - ಈಪರಿಯಾದ, ವಾಚಃ - ಮಾತುಗಳನ್ನು, ಶೃಣ್ವನ್ - ಕೇಳುತ್ತ, ತುಲ್ಯಶೀಲಯಾ - ಸಮಾನಸ್ವಭಾವವುಳ್ಳ, ಸೀತಯಾ - ಸೀತಾದೇವಿಗೆ, ತದಾ - ಆ ಕಾಲದಲ್ಲಿ, ಚೀರಂ - ನಾರುಸೀರೆಯನ್ನು, ಬಂಬಂಧೈವ - ಉಡಿಸಿಯೇ ಬಿಟ್ಟನು. ‖ ೨೦ ‖ ತದಾ - ಆಗ, ನೃಪತೇಃ - ಅರಸನಿಗೆ, ಗುರುಃ-ಕುಲಗುರುವಾದ, ವಸಿಷ್ಠಃ - ವಸಿಷ್ಠಋಷಿಯು, ಚೀರೇ - ನಾರುಸೀರೆಗಳು, ಗೃಹೀತೇ - ಗ್ರಹಿಸ

ವಿಗೂ ಈಕೆಯನ್ನು ನೋಡುತ್ತಿರುವುದರಿಂದ ನಮ್ಮ ಕಂಗಳು ಸಫಲತೆಯನ್ನು ಹೊಂದಲಿ! ಮಗನೆ! ಮಂಗಳಕರಳಾದೀಕೆಯು ತಪಸ್ವಿಗಳಂತೆ ಅರಣ್ಯದಲ್ಲಿ ವಾಸಮಾಡಲು ಯೋಗ್ಯಳಲ್ಲವು! ನೀನು ಲಕ್ಷ್ಮಣನೊಡಗೂಡಿ ಅರಣ್ಯಕ್ಕೆಹೋಗು. ವತ್ಸ!! ನಮ್ಮ ಪ್ರಾರ್ಥನೆಯನ್ನು ಸಫಲಗೊಳಿಸು. ಸೀತಾದೇವಿಯು ಇಲ್ಲಿಯೇ ಇರಲಿ! ನೀನು ಧರ್ಮಗಳೆಲ್ಲವನ್ನೂ ತಿಳಿದಿರುವೆಯಾದುದರಿಂದ ನೀನಿಲ್ಲಿ ನಿಲ್ಲಲಾರೆ!" ಎಂದು ಹೇಳಿದರು. ‖೧೭-೧೯‖ ಶ್ರೀರಾಮಮೂರ್ತಿಯು ಹೀಗೆ ನುಡಿದ ಆ ಅಂತಃಪುರ ಸ್ತ್ರೀಯರ ಮಾತುಗಳನ್ನು ಕೇಳಿದರೂ ಅದಕ್ಕೆ ಗಮನ ಕೊಡದೆ ತನ್ನ ಸತೀ ಮಣಿಗೆ ವಲ್ಕಲವನ್ನುಡಿಸಿಯೇ ಬಿಟ್ಟನು. ಹೀಗೆ ಶ್ರೀರಾಮನು

ನಿವಾರ್ಯ ಸೀತಾಂ ಕೈಕೇಯೀಂ ವಸಿಷ್ಠೋ ವಾಕ್ಯಮಬ್ರವೀತ್ ॥೨೧॥ ಅತಿಪ್ರವೃತ್ತೇ ದುರ್ಮೇಧೇ ಕೈಕೇಯೀ ಕುಲಪಾಂಸನಿ॥ವಂಚಯಿತ್ವಾಚ ರಾಜಾನಂ ಸಪ್ರಮಾಣೇವ ತಿಷ್ಠಸಿ ॥ ೨೨ ॥ ನ ಗಂತವ್ಯಂ ವನಂ ದೇವ್ಯಾ ಸೀತಯಾ ಶೀಲವರ್ಜಿತೇ ॥ ಅನುಷ್ಠಾಸ್ಯತಿ ರಾಮಸ್ಯ ಸೀತಾ ಪ್ರಕೃತಮಾಸನಂ ॥ ೨೩ ॥ ಆತ್ಮಾಹಿ ದಾರಾ ಸ್ಸರ್ವೇಷಾಂ ದಾರಸಂಗ್ರಹ ವರ್ತಿನಾಂ ॥ ಆತ್ಮೇಯಮಿತಿ ರಾಮಸ್ಯ ಪಾಲಯಿಷ್ಯತಿ ಮೇದಿನೀಂ ॥ ೨೪ ॥ ಅಥಯಾಸ್ಯತಿ ವೈದೇಹೀ ವನಂ ರಾಮೇಣ ಸಂಗತಾ ॥ ವಯಮಪ್ಯನುಯಾಸ್ಯಾಮಃ ಪುರಂ ಚೇದಂ

ಲ್ಪಟ್ಟದಾಗಲು, ಸಮೀಕ್ಷ್ಯ - ಅದನ್ನು ಕಂಡು, ಸೀತಾಂ - ಸೀತಾದೇವಿಯನ್ನು, ನಿವಾರ್ಯ - ನಾರುಮಡಿಯನ್ನುಡಬೇಡವೆಂದು ತಡೆಮಾಡಿ, ಕೈಕೇಯೀಂ - ಕೈಕೇಯೀದೇವಿಯನ್ನು ಕುರಿತು, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು. ॥ ೨೧ ॥ ಹೇ ಅತಿಪ್ರವೃತ್ತೇ - ಎಲೌ ಮರ್ಯಾದೆಯನ್ನು ಮೀರುವವಳೇ! ಹೇ ದುರ್ಮೇಧೇ-ಎಲೆ ದುರ್ಬುದ್ಧಿಯುಳ್ಳವಳೇ, ಹೇ ಕೈಕೇಯಿ- ಎಲೌ ಕೇಕಯರಾಜನಮಗಳೇ, ಹೇ ಕುಲಪಾಂಸನಿ - ಎಲೌ ಕುಲದೂಷಕಳೇ, ರಾಜಾನಂ - ಅರಸನನ್ನು, ವಂಚಯಿತ್ವಾ - ಮೋಸಮಾಡಿ, ಸಪ್ರಮಾಣೇವ - ಸದ್ವೃತ್ತಿಯುಳ್ಳವಳಂತೆ, ತಿಷ್ಠಸಿ - ಇರುತ್ತಿರುವೆಯಲ್ಲ! ಹೇ ಶೀಲವರ್ಜಿತೇ - ದುರ್ಗುಣವನ್ನವಲಂಬಿಸಿದವಳೇ ! ಸೀತಯಾದೇವ್ಯಾ - ಸೀತಾದೇವಿಯಿಂದ, ವನಂ - ವನವನ್ನು ಕುರಿತು, ನಗಂತವ್ಯಂ - ಹೋಗತಕ್ಕುದಲ್ಲ, ಸೀತಾ - ಸೀತಾದೇವಿಯು, ರಾಮಸ್ಯ - ಶ್ರೀರಾಮನ, ಪ್ರಕೃತಂ - ಈಗ ಪ್ರಸಕ್ತವಾದ, ಆಸನಂ - ಪದವಿಯನ್ನು, ಅನುಷ್ಠಾಸ್ಯತಿ - ಅನುಭವಿಸುತ್ತಾಳೆ. ॥ ೨೩ ॥ ಹಿ - ಯಾವ ಕಾರಣ, ಸರ್ವೇಷಾಂ - ಸಮಸ್ತರಾದ, ದಾರಸಂಗ್ರಹವರ್ತಿನಾಂ - ಹೆಂಡತಿಯಿಂದ ಕೂಡಿರುವರಿಗೆ, ದಾರಾಃ - ಹೆಂಡತಿಯೇ, ಆತ್ಮಾ - ಶರೀರವೇ ಆಗಿದ್ದಾಳೆಯೋ, ತಸ್ಮಾತ್ - ಆ ಕಾರಣ, ರಾಮಸ್ಯ - ಶ್ರೀರಾಮನಿಗೆ, ಇಯಂ- ಈ ಸೀತಾದೇವಿಯು, ಆತ್ಮೇತಿ - ಶರೀರರೂಪಳಾದ ಕಾರಣದಿಂದ, ಮೇದಿನೀಂ - ಭೂಮಿಯನ್ನು, ಪಾಲಯಿಷ್ಯತಿ - ರಕ್ಷಣೆಮಾಡುವಳು. ॥ ೨೪ ॥ ಅಥ - ಬಳಿಕ, ವೈದೇಹೀ - ಸೀತಾದೇವಿಯು, ರಾಮೇಣ - ಶ್ರೀರಾಮನಿಂದ, ಸಂಗತಾ - ಕೂಡಿ, ವನಂ - ವನವನ್ನು ಕುರಿತು, ಯಾಸ್ಯತಿ -

---

ಸೀತಾದೇವಿಗೆ ನಾರು ಸೀರೆಯನ್ನುಡಿಸಲು, ರಾಜ ಗುರುವಾದ ವಸಿಷ್ಠ ಮುನಿಯು ಅದನ್ನು ತಡೆದು ಕೈಕೇಯಿಯನ್ನು ಕುರಿತು ಇಂತೆಂದನು. ॥ ೨೦-೨೧ ॥ "ಎಲೆಗೆ, ದುಷ್ಟಳೆ! ಮರ್ಯಾದಾರಹಿತಳೆ ! ಮಹಾರಾಜನನ್ನು ವಂಚಿಸಿ, ಒಳ್ಳೆಯ ನಡತೆಯುಳ್ಳವಳಂತೆ ನಾಚಿಕೆಯಿಲ್ಲದೆ ಇಲ್ಲಿಯೇ ನಿಂತಿರುವೆಯಲ್ಲ! ಛಿ! ಛೀ!! ಕುಲ ನಾಶಕಳೆ!! ನಿನ್ನ ದುಷ್ಕೃತ್ಯಕ್ಕೆ ಎಲ್ಲೆಯೇ ಇಲ್ಲವಲ್ಲ! ಸೀತಾದೇವಿಗೆ ನಾರುಮಡಿಯನ್ನು ಕೊಟ್ಟೆಯಲ್ಲ! ಈ ದೇವಿಯು ಅರಣ್ಯಕ್ಕೇಕೆ ತೆರಳಬೇಕು? ಈಕೆಯು ಈ ಅಯೋಧ್ಯಾನಗರದಲ್ಲಿಯೇ ಇದ್ದುಕೊಂಡು, ದಶರಥ ಮಹೀಪಾಲನು ಶ್ರೀರಾಮಮೂರ್ತಿಗೆ ಕೊಟ್ಟ ರಾಜ್ಯವನ್ನಾಳಿಕೊಂಡು ಸುಖವಾಗಿರಲಿ. ಗೃಹಸ್ಥರಿಗೆ ಲೋಕದಲ್ಲಿ ಪತ್ನಿಯೆಂಬವಳು ಅರ್ಧ ಶರೀರಿಣಿಯಾಗಿರುವುದರಿಂದ, ಸೀತಾ ರಮಣಿಯು ತಾನೇ ಶ್ರೀರಾಮನೆಂದುಕೊಂಡು ರಾಜ್ಯವನ್ನಾಳಲಿ; ॥೨೨-೨೪॥

ಗಮಿಷ್ಯತಿ ॥ ೨೫ ॥ ಅಂತಪಾಲಾಶ್ಚ ಯಾಸ್ಯಂತಿ ಸದಾರೋ ಯತ್ರ ರಾಘವಃ ॥ ಸಹೋಪಜೀವ್ಯಂ ರಾಷ್ಟ್ರಂಚ ಪುರಂಚ ಸಪರಿಚ್ಛದಂ ॥ ೨೬ ॥ ಭರತಶ್ಚ ಸ ಶತ್ರುಘ್ನಶ್ಚೀರವಾಸಾ ವನೇಚರಃ ॥ ವನೇ ವಸಂತಂ ಕಾಕುತ್ಸ್ಥಮನುವತ್ಸ್ಯತಿ ಪೂರ್ವಜಂ ॥ ೨೭ ॥ ತತಶ್ಶೂನ್ಯಾಂ ಗತಜನಾಂ ವಸುಧಾಂ ಪಾದಪೈಸ್ಸಹ ॥ ತ್ವಮೇಕಾ ಶಾಧಿ ದುರ್ವೃತ್ತಾ ಪ್ರಜಾನಾಮಹಿತೇ ಸ್ಥಿತಾ ॥ ೨೮ ॥ ನಹಿ ತದ್ಭವಿತಾ ರಾಷ್ಟ್ರಂ ಯತ್ರ ರಾಮೋ ನ ಭೂಪತಿಃ ॥ ತದ್ವನಂ ಭವಿತಾ

ಹೋಗುತ್ತಾಳೆ, ವಯಮಪಿ-ನಾವೂ, ಅನುಯಾಸ್ಯಾಮಃ-ಅನುಸರಿಸಿಹೋಗುತ್ತೇವೆ, ಇದಂಪುರಂಚ-ಈ ಪಟ್ಟಣವೂ, ಗಮಿಷ್ಯತಿ-ಹೋಗುವದು. ॥೨೫॥ ಯತ್ರ-ಯಾವ ಸ್ಥಳದಲ್ಲಿ, ರಾಘವಃ-ಶ್ರೀರಾಮನು, ಸದಾರಃ - ಹೆಂಡತಿಯಿಂದೊಡಗೂಡಿ, ಯಾಸ್ಯಂತಿ - ಹೋಗುವನೋ, ತತ್ರ-ಅಲ್ಲಿ, ಅಂತಪಾಲಾಶ್ಚ-ರಾಷ್ಟ್ರಾಂತಪಾಲಕರಾದ ಉಕ್ಕಡದ ಜನರು, (ಯಾಸ್ಯಂತಿ - ಹೋಗುವರು,) ಸಹೋಪಜೀವ್ಯಂ - (ಗೋ) ಎಲ್ಲರಿಂದ ಉಪಜೀವ್ಯನಾದ ದಶರಥರಾಜನಿಂದೊಡಗೂಡಿ, ರಾಷ್ಟ್ರಂಚ - ದೇಶವೂ, ಸಪರಿಚ್ಛದಂ-ಉಪಕರಣದಿಂದೊಡಗೂಡಿದ, ಪುರಂಚ ಪಟ್ಟಣವೂ, (ಯಾಸ್ಯತಿ-ಹೋಗುತ್ತದೆ,) ಭರತಶ್ಚ-ಭರತನು, ಸಶತ್ರುಘ್ನಃ-ಶತ್ರುಘ್ನಸಹಿತನಾಗಿ, ಚೀರವಾಸಾಃ ನಾರುಮಡಿಯನ್ನುಟ್ಟವನಾಗಿ, ವನೇಚರಃ-ವನಚರನಾಗಿ, ವನೇ - ವನೇದಲ್ಲಿ, ವಸಂತಂ - ವಾಸಮಾಡುತ್ತಿರುವ, ಪೂರ್ವಜಂ - ಅಣ್ಣನಾದ, ಕಾಕುತ್ಸ್ಥಂ - ಶ್ರೀರಾಮನನ್ನು, ಅನುವತ್ಸ್ಯತಿ - ಅನುಸರಿಸಿರುತ್ತಾನೆ. ॥ ೨೭ ॥ ತತಃ-ಬಳಿಕ, ಶೂನ್ಯಾಂ - ಬರಿದಾದ, ಗತಜನಾಂ - ಜನವರ್ಜಿತವಾದ, ವಸುಧಾಂ - ನೆಲವನ್ನು, ತ್ವಮೇಕಾ - ನೀನೊಬ್ಬಳೇ, ಪ್ರಜಾನಾಂ - ಜನಗಳಿಗೆಲ್ಲಾ, ಅಹಿತೇ - ಅರಿಷ್ಟದಲ್ಲಿ, ಸ್ಥಿತಾ - ಇರುತ್ತ, ದುರ್ವೃತ್ತಾ - ದುರ್ವ್ಯಾಪಾರಿಯಾಗಿ, ಪಾದಪೈಸ್ಸಹ - ಗಿಡಗಳೊಡನೆ, ಶಾಧಿ - ಪರಿಪಾಲನೆಮಾಡು. ॥ ೨೮ ॥ ಯತ್ರ - ಯಾವದೇಶದಲ್ಲಿ, ರಾಮಃ - ಶ್ರೀರಾಮನು, ಭೂಪತಿಃ - ಅರಸಾಗಿ, ನ - ಇಲ್ಲವೋ, ತತ್ - ಆ ಪ್ರದೇಶವು, ರಾಷ್ಟ್ರಂ - ರಾಜ್ಯವು, ನಭವಿತಾ - ಆಗಲಾರದಷ್ಟೆ, ಯತ್ರ - ಯಾವ ಪ್ರದೇಶದಲ್ಲಿ, ರಾಮಃ - ಶ್ರೀರಾಮನು, ನಿವತ್ಸ್ಯತಿ - ಇರುತ್ತಾನೆಯೋ, ತದ್ವನಂ-ಆ ವನವು,

---

ಒಂದುವೇಳೆ ಸೀತಾದೇವಿಯೂ ರಾಮನೊಡನೆ ಅರಣ್ಯಕ್ಕೆ ತೆರಳಿದರೆ ನಾವೊಬ್ಬರೂ ಈ ಪಟ್ಟಣದಲ್ಲಿರುವುದಿಲ್ಲವೆಂದು ತಿಳಿ. ನಾವೆಲ್ಲರೂ ಸೀತಾರಾಮರಿರುವ ಕಡೆಯೇ ಇರುತ್ತೇವೆ. ಕೈಕೇಯಿ! ಕೇಳು! ಉಕ್ಕಡದವರೂ, ಪ್ರಜೆಗಳೂ, ದೇಶವಾಸಿಗಳೂ, ಕೊನೆಗೆ ಮಹಾರಾಜನೂ, ಶ್ರೀರಾಮನಿರುವ ಸ್ಥಳದಲ್ಲಿಯೇ ವಾಸ ಮಾಡುತ್ತಾರೆ. ಸದ್ಗುಣಸಂಪನ್ನನಾದ ಭರತನು ಈ ಸಮಾಚಾರವನ್ನು ಕೇಳಿದೊಡನೆಯೇ ತಾನೂ ವಲ್ಕಲಗಳನ್ನು ಧರಿಸಿ ಕಾಡಿಗೆ ಹೋಗುತ್ತಾನೆ. ಹೀಗಾದ ಮೇಲೆ ನೀನೊಬ್ಬಳೇ, ಸರ್ವಜನ ಶೂನ್ಯವಾದ ಈ ಅಯೋಧ್ಯಾ ಪಟ್ಟಣವನ್ನು ಆಳಿಕೊಂಡಿರು. ಆಗ ಎಲ್ಲೆಲ್ಲಿಯೂ ವೃಕ್ಷಗಳು ಮಾತ್ರವಿರುತ್ತವೆ; ನಿನ್ನ ಮನಸ್ಸು ಬಂದಂತೆ ಇರಬಹುದು. ರಾಮನಿಲ್ಲದ ಪ್ರದೇಶವೇ ಅರಣ್ಯವಾಗುತ್ತದೆ. ಆತನಿರುವ ಸ್ಥಳವೇ ಪಟ್ಟಣವಾಗುತ್ತದೆ. ॥೨೫-೨೯॥ ಭರತನು ದಶರಥರಾಯನಿಗೆ ಜನಿಸಿದವನು. ಆತನು ದುಷ್ಟಳಾದ ನಿನ್ನನ್ನೆಂದಿಗೂ ಅನುಸರಿಸುವುದಿಲ್ಲ ಆದುದರಿಂದ ಅವನು ಧರ್ಮಚರಿತು,

ರಾಷ್ಟ್ರಂ ಯತ್ರ ರಾಮೋ ನಿವತ್ಸ್ಯತಿ ॥ ೨೯ ॥ ನಹ್ಯದತ್ತಾಂ ಮಹೀಂ ಪಿತ್ರಾ ಭರತ ಶ್ಶಾಸ್ತು ಮರ್ಹತಿ ॥ ತ್ವಯಿವಾ ಪುತ್ರವದ್ವಸ್ತುಂ ಯದಿ ಜಾತೋ ಮಹೀ ಪತೇಃ ॥ ೩೦ ॥ ಯದ್ಯಪಿ ತ್ವಂ ಕ್ಷಿತಿತಲಾ ದ್ಗಗನಂ ಚೋತ್ಪತಿಷ್ಯಸಿ ॥ ಪಿತೃ ವಂಶ ಚರಿತ್ರಜ್ಞ ಸ್ಸೋಽನ್ಯಥಾ ನ ಕರಿಷ್ಯತಿ ॥ ೩೧ ॥ ತತ್ತ್ವಯಾ ಪುತ್ರ ಗರ್ಧಿನ್ಯಾ ಪುತ್ರಸ್ಯ ಕೃತಮಪ್ರಿಯಂ ॥ ಲೋಕೇಹಿ ಸ ನ ವಿದ್ಯೇತ ಯೋ ನ ರಾಮಮನುವ್ರತಃ ॥ ೩೨ ॥ ದ್ರಕ್ಷ್ಯಸ್ಯದ್ಯೈವ ಕೈಕೇಯಿ ಪಶುವ್ಯಾಳ ಮೃಗ ದ್ವಿಜಾನ್ ॥ ಗಚ್ಛತ ಸ್ಸಹ ರಾಮೇಣ ಪಾದಪಾಂಶ್ಚ ತದುನ್ಮುಖಾನ್ ॥ ೩೩ ॥

ರಾಷ್ಟ್ರಂ - ರಾಜ್ಯವು, ಭವಿತಾ - ಆಗುವದು. ॥ ೨೯ ॥ ಭರತಃ - ಭರತನು, ಮಹೀಪತೇಃ - ರಾಜನಿಗೆ, ಜಾತೋಯದಿ - ಹುಟ್ಟಿದವನೇ ಆದರೆ, ಪಿತ್ರಾ - ತಂದೆಯಿಂದ, ಅದತ್ತಾಂ - ಮನಃ ಪೂರ್ತಿಯಾಗಿ ಕೊಡಲ್ಪಡದಿರುವ, ಮಹೀಂ - ಭೂಮಿಯನ್ನು, ಶಾಸ್ತುಂ - ಸಂರಕ್ಷಿಸಲು, ನಾರ್ಹತಿ- ಯೋಗ್ಯನಾಗಲಾರನು, ತ್ವಯಿವಾ - ನಿನ್ನಲ್ಲಿತಾನೇ, ಪುತ್ರವತ್ - ಮಗನಂತೆ, ವಸ್ತುಂ - ಇರಲು, ನಾರ್ಹತಿ - ಯೋಗ್ಯನಾಗಲಾರನು. ॥ ೩೦ ॥ ತ್ವಂ - ನೀನು, ಕ್ಷಿತಿತಲಾತ್ - ನೆಲದಿಂದ, ಗಗನಂಚ - ಅಂತರಿಕ್ಷವನ್ನು ಕುರಿತು, ಉತ್ಪತಿಷ್ಯಸಿಚಯದಿ - ನೆಗೆದವಳಾದರೂ, ಪಿತೃವಂಶಚರಿತ್ರ ಜ್ಞಃ, ಪಿತೃ - ಪಿತೃ ಪಿತಾಮಹಾದಿಗಳ, ವಂಶ - ಕುಲದ, ಚರಿತ್ರ-ಚರಿತ್ರೆಯನ್ನು, ಜ್ಞಃ-ತಿಳಿದಿರುವ, ಸಃ - ಆ ಭರತನು, ಅನ್ಯಥಾ - ಮತ್ತೊಂದುಬಗೆಯಾಗಿ, ನಕರಿಷ್ಯತಿ - ಮಾಡಲಾರನು. ॥ ೩೧ ॥ ತತ್ - ಆ ಕಾರಣ, ಪುತ್ರಗರ್ಧಿನ್ಯಾ - ಮಗನಲ್ಲಿ ಅಭಿಮಾನವುಳ್ಳ, ತ್ವಯಾ - ನಿನ್ನಿಂದ, ಪುತ್ರಸ್ಯ - ಮಗನಿಗೆ, ಅಪ್ರಿಯಂ - ಅನಿಷ್ಟವು, ಕೃತಂ - ಮಾಡಲ್ಪಟ್ಟಿತು, ಯೋಹಿ - ಯಾವ ಪುರುಷನಾದರೆ, ರಾಮಂ - ಶ್ರೀರಾಮನನ್ನು, ನಾನುವ್ರತಃ - ಅನುಸರಿಸಿಹೋಗುವದಿಲ್ಲವೋ, ಸಃ - ಆ ಪುರುಷನು, ಲೋಕೇ - ಲೋಕದಲ್ಲಿ, ನವಿದ್ಯೇತ - ಇರಲಾರನು. ॥ ೩೨ ॥ ಹೇ ಕೈಕೇಯಿ-ಎಲೌ ಕೈಕೇಯಿ ದೇವಿಯೇ, ಅದ್ಯೈವ - ಈಗಲೇ, ರಾಮೇಣಸಹ - ಶ್ರೀರಾಮನೊಡನೆ, ಗಚ್ಛತಃ - ಹೋಗುತ್ತಿರುವ, ಪಶುವ್ಯಾಳಮೃಗದ್ವಿಜಾನ್-ಪಶುಗಳನ್ನೂ, ಸರ್ಪಗಳನ್ನೂ, ಮೃಗಗಳನ್ನೂ, ಪಕ್ಷಿಗಳನ್ನೂ, ಪಾದಪಾಂಶ್ಚ- ಗಿಡಗಳನ್ನೂ, ತದುನ್ಮುಖಾನ್ - ಆ ಶ್ರೀರಾಮನಹಿಂದೆ ಹೋಗುವದರಲ್ಲಿ ಉದ್ಯುಕ್ತಗಳನ್ನಾಗಿ, ದ್ರಕ್ಷ್ಯಸಿ - ನೋಡುವೆ. ॥ ೩೩ ॥ ಅಥ - ಮೊದಲು, ಹೇ ದೇವಿ - ಎಲೌ ಕೈಕೇಯಿದೇವಿಯೇ,

---

ಮನಃಪೂರ್ವಕವಾಗಿ ಕೊಡದಿರುವ ಈ ರಾಜ್ಯವನ್ನು ಕೈಕೊಳ್ಳುವುದೇ ಇಲ್ಲ. ಇಷ್ಟೆಯಲ್ಲದೆ ಅವನು ನಿನ್ನ ಮಾತಿನಂತೆ ಎಂದಿಗೂ ನಡೆದುಕೊಳ್ಳಲಾರನು. ಇದನ್ನು ಚೆನ್ನಾಗಿ ತಿಳಿ. ಹೆಚ್ಚೇನು? ನೀನು ಭೂಮಿಯಿಂದ ಆಕಾಶಕ್ಕೆ ನೆಗೆದು ಬಿದ್ದರೂ, ಇಕ್ಷ್ವಾಕು ವಂಶದ ಚರಿತ್ರೆಯನ್ನು ಬಲ್ಲ ಧರ್ಮಾತ್ಮನಾದ ಭರತನು ತಂದೆಯಾದ ದಶರಥ ಮಹೀಪಾಲನ ಆಣತಿ ಯನ್ನು ಮೀರುವುದೇ ಇಲ್ಲ. ಆದುದರಿಂದೆಲೌ ಕೈಕೇಯಿಯೇ! ಮಗನಲ್ಲಿ ಪ್ರೀತಿಯುಳ್ಳವ ಳಾದರೂ, ಅವನಿಗೆ ಅನಿಷ್ಟವನ್ನೇ ಕೋರುತ್ತಿರುವೆಯಲ್ಲ! ಇಷ್ಟೆಯಲ್ಲದೆ ಈ ಭೂಮಂಡಲ ದಲ್ಲಿ ಶ್ರೀರಾಮಭದ್ರನನ್ನನುಸರಿಸದಿರುವ ರಾಜ್ಯವೇ ಇಲ್ಲ. ಆತನನ್ನನುಸರಿಸದಿರುವ ಮಾನ ವನೇ ಇಲ್ಲ. ಅದನ್ನು ನೀನೀಗಲೇ ನೋಡುತ್ತೀಯೆ! ಪಶು ಪಕ್ಷ್ಯಾದಿ ಸಮಸ್ತ ಪ್ರಾಣಿ

ಅಥೋತ್ತಮಾನ್ಯಾಭರಣಾನಿ ದೇವಿ ದೇಹಿ ಸ್ನುಷಾಯೈ ವ್ಯಪನೀಯ ಚೀರಂ ॥
ನಚೀರಮಸ್ಯಾ ಪ್ರವಿಧೀಯತೇತಿ ನ್ಯವಾರಯತ್ತದ್ವಸನಂ ವಸಿಷ್ಠಃ ॥ ೩೪ ॥
ಏಕಸ್ಯ ರಾಮಸ್ಯ ವನೇ ನಿವಾಸ ಸ್ತ್ವಯಾ ವೃತಃ ಕೇಕಯರಾಜಪುತ್ರಿ ॥
ವಿಭೂಷಿತೇಯಂ ಪ್ರತಿಕರ್ಮನಿತ್ಯಾ ವಸತ್ವರಣ್ಯೇ ಸಹರಾಘವೇಣ ॥ ೩೫ ॥
ಯಾನೈಶ್ಚ ಮುಖ್ಯೈಃ ಪರಿಚಾರಕೈಶ್ಚ ಸು ಸಂವೃತಾ ಗಚ್ಛತು ರಾಜಪುತ್ರೀ ॥
ವಸ್ತ್ರೈಶ್ಚ ಸರ್ವೈ ಸ್ಸಹಿತೈರ್ವಿಧಾನೈ ರ್ನೇಯಂ ವೃತಾ ತೇ ವರಸಂಪ್ರ ದಾನೇ ॥ ೩೬ ॥

ಚೀರಂ - ನಾರುಸೀರೆಯು, ಅಸ್ಯಾಃ - ಈ ಸೀತಾದೇವಿಗೆ, ನಪ್ರವಿಧೀಯತೆ - ವಿಧಿಸಲ್ಪಡಲಿಲ್ಲ, ಇತಿ - ಈ ಹೇತುವಿನಿಂದ, ಚೀರಂ - ನಾರುಸೀರೆಯನ್ನು, ವ್ಯಪನೀಯ-ತೆಗೆದುಹಾಕಿ, ಸ್ನುಷಾಯೈ - ಸೊಸೆಯಾದ ಸೀತಾದೇವಿಗೆ, ಉತ್ತಮಾನಿ - ಉತ್ಕೃಷ್ಟವಾದ, ಆಭರಣಾನಿ - ಒಡಿವೆಗಳನ್ನು, ದೇಹಿ- ಕೊಡು, ಇತಿ - ಇಂತೆಂದು, ತದ್ವಸನಂ-ಆ ನಾರುಸೀರೆಯನ್ನು, ವಸಿಷ್ಠಃ ವಸಿಷ್ಠಋಷಿಯು, ನ್ಯವಾರಯತ್ - ನಿಷೇಧಿಸಿದನು. ॥ ೩೪ ॥ ಹೇ ಕೇಕಯರಾಜಪುತ್ರಿ - ಎಲೌ ಕೇಕಯರಾಯನ ಮಗಳೇ, ಏಕಸ್ಯರಾಮಸ್ಯ - ಶ್ರೀರಾಮನೊಬ್ಬನಿಗೆ, ವನೇ - ವನದಲ್ಲಿ, ವಾಸಃ - ಇರುವಿಕೆಯು, ತ್ವಯಾ - ನಿನ್ನಿಂದ, ಯತ್ - ಯಾವ ಕಾರಣ, ವೃತಃ - ವರಿಸಲ್ಪಟ್ಟಿತೋ, ತತ್ - ಆ ಕಾರಣ, ವಿಭೂಷಿತಾ- ಅಲಂಕಾರಗಳುಳ್ಳ, ಇಯಂ - ಈ ಸೀತಾದೇವಿಯು, ರಾಘವೇಣಸಹ - ಶ್ರೀರಾಮನೊಡನೆ, ಪ್ರತಿಕರ್ಮನಿತ್ಯಾ, ಪ್ರತಿಕರ್ಮ - ಅಲಂಕಾರವೇ, ನಿತ್ಯಾ - ನಿರಂತರವೂ ಉಳ್ಳವಳಾಗಿ, ಅರಣ್ಯೇ - ವನದಲ್ಲಿ, ವಸತು - ಇರಲಿ. ॥ ೩೫ ॥ ಹೇ ರಾಜಪುತ್ರಿ - ಎಲೌ ಅರಸನ ಮಗಳೇ, ತೇ - ನಿನ್ನಿಂದ, ವರಸಂಪ್ರದಾನೇ - ವರಪ್ರದಾನಕಾಲದಲ್ಲಿ, ಇಯಂ - ಈ ಸೀತಾದೇವಿಯು, ನವೃತಾ - ವರಿಸಲ್ಪಡಲಿಲ್ಲ, ತಸ್ಮಾತ್ - ಆ ಕಾರಣ, ಮುಖ್ಯೈಃ - ಮುಖ್ಯಗಳಾದ, ಯಾನೈಶ್ಚ - ವಾಹನಗಳಿಂದಲೂ, ಪರಿಚಾರಕೈಶ್ಚ - ಪರಿಚಾರಕರಿಂದಲೂ, ಸರ್ವೈಃ - ಸಮಸ್ತಗಳಾದ, ವಸ್ತ್ರೈಶ್ಚ - ವಸ್ತ್ರಗಳಿಂದಲೂ, ಸಹಿತೈಃ - ಸೇರಿರುವ, ವಿಧಾನೈಃ - ಉಪಕರಣಗಳಿಂದ, ಸಂವೃತಾ - ಕೂಡಿದವಳಾಗಿ, ಗಚ್ಛತು - ಹೋಗಲಿ. ॥ ೩೬ ॥ ಅಪ್ರತಿಮಪ್ರಭಾವೇ - ಅಸದೃಶವಾದ ಮಾಹಾತ್ಮ್ಯವುಳ್ಳ,

ಗಳೂ ಶ್ರೀರಾಮಮೂರ್ತಿಯನ್ನನುಸರಿಸಿ ಹೋಗುತ್ತವೆ. ಕೈಕೇಯಿ! ಈಗ ಈ ಸೀತಾದೇವಿಗೆ ಈ ನಾರುಮಡಿಯನ್ನು ತೆಗೆದುಹಾಕಿ ಉತ್ತಮವಾದ ವಸ್ತ್ರವನ್ನುಡಿಸಿ ಒಡಿವೆಗಳನ್ನು ತೊಡಿಸಿ ಅಲಂಕಾರ ಮಾಡು.'' ಎಂದು ಆ ನಾರು ಸೀರೆಯುಡುವುದನ್ನು ನಿರೋಧಿಸಿ ಆ ಕೈಕೇಯಿಯನ್ನು ಕುರಿತು ಮತ್ತಿಂತೆಂದನು. ॥೩೦-೩೪॥ "ಎಲೈ ರಾಜಪುತ್ರಿಯೆ! ನೀನು ರಾಮನೊಬ್ಬನಿಗೆ ವನವಾಸವನ್ನು ಬೇಡಿದೆ! ಆದುದರಿಂದ ಈ ಸೀತಾದೇವಿಯು ಪ್ರತಿದಿನವೂ ದಿವ್ಯಾಲಂಕಾರಭೂಷಿತೆಯಾಗಿ ಶ್ರೀರಾಮನೊಡನೆ ಅರಣ್ಯದಲ್ಲಿರಲಿ. ನೀನು ವರವನ್ನು ಕೇಳುವಾಗ ಸೀತಾದೇವಿಯು ಈ ರೀತಿ ಅರಣ್ಯಕ್ಕೆ ತೆರಳಬೇಕೆಂದು ಕೇಳಲಿಲ್ಲ. ಆದುದರಿಂದೀಕೆಯು ಉತ್ತಮ ವಾಹನಗಳಿಂದಲೂ, ಪರಿಚಾರಿಕೆಯರಿಂದಲೂ, ವಸ್ತ್ರವೇ ಮೊದಲಾದ ಇತರ ವಸ್ತುಗಳಿಂದಲೂ ತೆರಳಲಿ'' ಹೀಗೆ ರಾಜ ಗುರುವಾದ ವಸಿಷ್ಠ ಮುನೀಶ್ವರನು

ತಸ್ಮಿಂಸ್ತಥಾ ಜಲ್ಪತಿ ವಿಪ್ರಮುಖ್ಯೇ
ಗುರೌ ನೃಪಸ್ಯಾ ಪ್ರತಿಮಪ್ರಭಾವೇ ||
ನೈವಸ್ಮಸೀತಾ ವಿನಿವೃತ್ತಭಾವಾ
ಪ್ರಿಯಸ್ಯ ಭರ್ತುಃ ಪ್ರತಿಕಾರಕಾಮಾ || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತ್ರಿಂಶಸ್ಸರ್ಗಃ.

ನೃಪಸ್ಯ - ದಶರಥರಾಯನಿಗೆ, ಗುರೌ - ಆಚಾರ್ಯನಾದ, ವಿಪ್ರಮುಖ್ಯೇ - ಬ್ರಾಹ್ಮಣ ಶ್ರೇಷ್ಠನಾದ, ತಸ್ಮಿನ್-ಆ ವಸಿಷ್ಠಋಷಿಯು, ತಥಾ-ಆಪರಿಯಾಗಿ, ಜಲ್ಪತಿಸತಿ-ಆಗ್ರಹದಿಂದಹೇಳಲು, ಸೀತಾ-ಸೀತಾದೇವಿಯು, ಭರ್ತುಃ - ಪಾಲಕನಾದ, ಪ್ರಿಯಸ್ಯ - ಪ್ರೀತಿಪಾತ್ರನಾದ ಶ್ರೀರಾಮನ, ಪ್ರತಿಕಾರಕಾಮಾ, ಪ್ರತಿಕಾರ - ಅನುವರ್ತನವನ್ನು, ಕಾಮಾ - ಕೋರುತ್ತಿರುವಳಾಗಿ, ವಿನಿವೃತ್ತಭಾವಾ, ವಿನಿವೃತ್ತ - ವನವಾಸದಿಂದ ಹಿಂತಿರುಗಿದ, ಭಾವಾ - ಅಭಿಪ್ರಾಯವುಳ್ಳವಳು, ನೈವಸ್ಮ - ಆಗಲೀ ಇಲ್ಲವು. || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತ್ರಿಂಶಸ್ಸರ್ಗಃ.

ನಿರೂಪಿಸಿದರೂ ಸೀತಾದೇವಿಯು ಪತ್ಯನುಸರಣೆಯನ್ನೇ ಬಯಸಿ ವನಗಮನಾಭಿಪ್ರಾಯವನ್ನು ತೊರೆಯಲಿಲ್ಲ. || ೩೫-೩೭ ||

ಇಂತಿದು ವಸಿಷ್ಠಮುನಿ ಕೃತ ಸೀತಾಧೃತವಲ್ಕಲ ನಿರಾಕರಣ ಕಥಾಕಥನವೆಂಬ
ಮೂವತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟತ್ರಿಂಶಸ್ಸರ್ಗಃ.

ತಸ್ಯಾಂ ಚೀರಂ ವಸಾನಾಯಾಂ ನಾಥವತ್ಯಾಮನಾಥವತ್ ॥ ಪ್ರಚು ಕ್ರೋಶ ಜನಸ್ಸರ್ವೋ ಧಿಕ್ತ್ವಾಂ ದಶರಥಂ ತ್ವಿತಿ ॥೧॥ ತೇನ ತತ್ರ ಪ್ರಣಾದೇನ ದುಃಖಿತ ಸ್ಸಮಹೀಪತಿಃ ॥ ಚಿಚ್ಛೇದ ಜೀವಿತೇ ಶ್ರದ್ಧಾಂ ಧರ್ಮೇ ಯಶಸಿ ಚಾತ್ಮನಃ ॥ ೨ ॥ ಸನಿಶ್ಶ್ವಸ್ಯೋಷ್ಣ ಮೈಕ್ಷ್ವಾಕ ಸ್ತಾಂ ಭಾರ್ಯಾಮಿದ ಮಬ್ರವೀತ್ ॥ ಕೈಕೇಯಿ ಕುಶಚೀರೇಣ ನ ಸೀತಾ ಗಂತು ಮರ್ಹತಿ ॥ ೩ ॥ ಸುಕುಮಾರೀಚ ಬಾಲಾಚ ಸತತಂಚ ಸುಖೋಚಿತಾ ॥ ನೇಯಂ ವನಸ್ಯ

ತಸ್ಯಾಂ - ಆ ಸೀತಾದೇವಿಯು, ನಾಥವತ್ಯಾಂ - ಗಂಡನುಳ್ಳವಳಾದರೂ, ಅನಾಥವತ್ - ಗತಿಯಿಲ್ಲದವಳಂತೆ, ಚೀರಂ ನಾರುಮಡಿಯನ್ನು, ವಸಾನಾಯಾಂ-ಉಡಲು, ಸರ್ವಃ - ಸಮಸ್ತವಾದ, ಜನಃ - ಅಂತಃಪುರದ ಜನವು, ತ್ವಾಂ - ನಿನ್ನನ್ನು, ಧಿಕ್ - ನಿಂದಿಸು ಎಂದು, ದಶರಥಂ - ದಶರಥ ಮಹಾರಾಯನನ್ನು ಕುರಿತು, ಪ್ರಚುಕ್ರೋಶ ಆಕ್ರೋಶಮಾಡಿತು. ॥ ೧ ॥ ತತ್ರ - ಆ ಅಂತಃ ಪುರದಲ್ಲಿ, ಸ ಮಹೀಪತಿಃ - ಆ ದಶರಥ ಮಹಾರಾಯನು, ತೇನಪ್ರಣಾದೇನ - ಆ ಧ್ವನಿಯಿಂದ, ದುಃಖಿತಃ - ದುಃಖಾಕ್ರಾಂತನಾಗಿ, ಆತ್ಮನಃ - ತನ್ನ, ಜೀವಿತೇ - ಪ್ರಾಣದಲ್ಲಿಯೂ, ಧರ್ಮೇ - ಧರ್ಮದಲ್ಲಿಯೂ, ಯಶಸಿಚ - ಕೀರ್ತಿಯಲ್ಲಿಯೂ, ಶ್ರದ್ಧಾಂ - ವಿಶ್ವಾಸವನ್ನೂ, ಚಿಚ್ಛೇದ - ಕತ್ತರಿಸಿದನು. ॥ ೨ ॥ ಐಕ್ಷ್ವಾಕಃ - ಇಕ್ಷ್ವಾಕುವಂಶೋತ್ಪನ್ನನಾದ, ಸಃ - ಆ ದಶರಥರಾಯನು, ಉಷ್ಣಂ - ಬಿಸಿಯಾಗಿ, ನಿಶ್ಶ್ವಸ್ಯ - ನಿಟ್ಟುಸಿರುಬಿಟ್ಟು, ತಾಂಭಾರ್ಯಾಂ - ಹೆಂಡತಿಯಾದ ಕೈಕೇಯಿಯಾ ದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ಹೇ ಕೈಕೇಯಿಯಾ - ಎಲೌ ಕೈಕೇಯಿಯೇ, ಸೀತಾ - ಸೀತಾದೇವಿಯು, ಕುಶಚೀರೇಣ-ನಾರುಮಡಿಯನ್ನುಟ್ಟು, ಗಂತುಂ- ಹೋಗುವದಕ್ಕೆ, ನಾರ್ಹತಿ - ಯೋಗ್ಯಳಲ್ಲ. ॥ ೩ ॥ ಸುಕುಮಾರೀ - ಬಹಳ ಮೃದುವಾದ ಶರೀರ ವುಳ್ಳವಳು, ಬಾಲಾಚ - ಹುಡುಗಿಯೂ ಆದ ಈಕೆಯು, ಸತತಂ - ನಿರಂತರವು, ಸುಖೋಚಿತಾ - ಸುಖಕ್ಕೆ ಅರ್ಹಳು, ಇಯಂ - ಈ ಸೀತಾದೇವಿಯು, ವನಸ್ಯ - ವನಕ್ಕೆ, ಯೋಗ್ಯಾ - ಅರ್ಹಳು,

---

ಆ ಬಳಿಕ ಸೀತಾದೇವಿಯು ಪತಿವಂತಳಾದರೂ, ಗತಿಯಿಲ್ಲದವಳಂತೆ ನಾರು ಸೀರೆಯನ್ನುಟ್ಟವಳಾಗಲು, ಅಂತಃಪುರದಲ್ಲಿರುವ ಜನರೆಲ್ಲರೂ ದಶರಥರಾಯನನ್ನುದ್ದೇಶಿಸಿ, "ಛಿ! ಛಿ!! ಇವನ ಜನ್ಮವನ್ನು ಸುಡಬೇಕು" ಎಂದು ನಿಂದಿಸುತ್ತ ಅಳುತ್ತಿದ್ದರು. ಆಗ ದಶರಥರಾಯನು ಆ ರೋದನ ಧ್ವನಿಯನ್ನು ಕೇಳಿ, "ಅಕಟ! ನಾನು ಬದುಕಿ ಫಲವೇನು? ನನಗೆ ಅಪಕೀರ್ತಿ, ಅಧರ್ಮ, ಇವೆರಡೂ ಘಟಿಸಿತಲ್ಲವೆ?" ಎಂದು ನಿಟ್ಟುಸಿರನ್ನು ಬಿಡುತ್ತ, ತನ್ನ ಹೆಂಡತಿಯಾದ ಕೈಕೇಯಿಯನ್ನು ಕುರಿತು, "ಎಲೌ ಕೈಕೇಯಿಯೆ! ಕೋಮ ಲಾಂಗಿಯಾದ ಸೀತಾದೇವಿಯು ನಾರು ಸೀರೆಯನ್ನುಟ್ಟು ಅರಣ್ಯಕ್ಕೆ ಹೋಗುವುದು ತಕ್ಕು

ಯೋಗ್ಯೇತಿ ಸತ್ಯಮಾಹ ಗುರುರ್ಮಮ ॥ ೪ ॥ ಇಯಂಹಿ ಕಸ್ಯಾಪಕರೋತಿ ಕಿಂಚಿತ್ತಪಸ್ವಿನೀ ರಾಜವರಸ್ಯ ಕನ್ಯಾ ॥ ಯಾಚೀರಮಾಸಾದ್ಯ ಜನಸ್ಯ ಮಧ್ಯೇ ಸ್ಥಿತಾ ವಿಸಂಜ್ಞಾ ಶ್ರಮಣೀವ ಕಾಚಿತ್ ॥ ೫ ॥ ಚೀರಾಣ್ಯಪಾಸ್ಯಾ ಜ್ಜನಕಸ್ಯ ಕನ್ಯಾ ನೇಯಂ ಪ್ರತಿಜ್ಞಾ ಮಮ ದತ್ತಪೂರ್ವಾ ॥ ಯಥಾಸುಖಂ ಗಚ್ಛತು ರಾಜಪುತ್ರೀ ವನಂ ಸಮಗ್ರಾ ಸಹ ಸರ್ವ ರತ್ನೈಃ ॥ ೬ ॥ ಅಜೀವನಾರ್ಹೇಣ ಮಯಾ ನೃಶಂಸಾ ಕೃತಾ ಪ್ರತಿಜ್ಞಾ ನಿಯಮೇನ ತಾವತ್ ॥ ತ್ವಯಾಹಿ

ನೇತಿ - ಅಲ್ಲವೆಂದು, ಮಮ - ನನ್ನ, ಗುರುಃ - ಗುರುವಾದ ವಸಿಷ್ಠಋುಷಿಯು, ಸತ್ಯಂ - ಸತ್ಯ ವಚನವನ್ನು, ಆಹ - ಹೇಳಿದನು. ॥ ೪ ॥ ಹಿ - ಯಾವ ಕಾರಣ, ಜನಸ್ಯ - ಜನದ, ಮಧ್ಯೇ - ಮಧ್ಯದಲ್ಲಿ, ಯಾ - ಯಾವ ಸೀತಾದೇವಿಯು, ಚೀರಂ - ನಾರುಸೀರೆಯನ್ನು, ಆಸಾದ್ಯ - ಹೊಂದಿ, ಶ್ರಮಣೀ - ದೇಹಶ್ರಮ ಬೀಳುತ್ತಿರುವ, ಕಾಚಿತ್‌ತಪಸ್ವಿನೀವ - ಯಃಕಶ್ಚನಳಾದ ತಾಪಸಳಂತೆ, ವಿಸಂಜ್ಞಾ - ಪ್ರಜ್ಞಾಹೀನಳಾಗಿ, ಸ್ಥಿತಾ - ನಿಂತಳೋ, ಇಯಂ - ಈ, ರಾಜವರಸ್ಯ - ಜನಕ ರಾಯನ, ಕನ್ಯಾ - ಪುತ್ರಿಯಾದ ಸೀತಾದೇವಿಯು, ಕಸ್ಯ - ಯಾವನಿಗೆ, ಕಿಂಚಿತ್ - ಯಾವ ಅಪ ರಾಧವನ್ನು, ಅಪಕರೋತಿ - ಮಾಡಿದಾಳೆ. ॥ ೫ ॥ ಜನಕಸ್ಯ - ಜನಕರಾಯನ, ಕನ್ಯಾ - ಮಗ ಳಾದ, ಇಯಂ - ಈ ಸೀತಾದೇವಿಯು, ಚೀರಾಣಿ - ನಾರುಸೀರೆಗಳನ್ನು, ಅಪಾಸ್ಯಾತ್ - ಬಿಟ್ಟು ಬಿಡಲಿ, ಇಯಂಪ್ರತಿಜ್ಞಾ - ಈ ಪ್ರತಿಜ್ಞೆಯು, ಮಮ - ನನ್ನಿಂದ, ದತ್ತಪೂರ್ವಾನ - ಪೂರ್ವದಲ್ಲಿ ಕೊಡಲ್ಪಡಲಿಲ್ಲ, ರಾಜಪುತ್ರೀ - ಸೀತಾದೇವಿಯು, ಸರ್ವರತ್ನೈಸ್ಸಹ - ಸಮಸ್ತ ರತ್ನಾಭರಣಗಳಿಂದ, ಸಮಗ್ರಾ - ತುಂಬಿದವಳಾಗಿ, ವನಂ - ವನವನ್ನು ಕುರಿತು, ಯಥಾಸುಖಂ - ಸುಖವನ್ನತಿಕ್ರಮಿಸ ದಂತೆ, ಗಚ್ಛತು - ಹೋಗಲಿ. ॥ ೬ ॥ ಅಜೀವನಾರ್ಹೇಣ - ಬದುಕಲಾಗದಿರುವ, ಮಯಾ - ನನ್ನಿಂದ, ನೃಶಂಸಾ - ಕ್ರೂರವಾದ, ಪ್ರತಿಜ್ಞಾ - ಪ್ರತಿಜ್ಞೆಯು, ನಿಯಮೇನ - ಶಪಥದಿಂದ, ಕೃತಾ - ಮಾಡಲ್ಪಟ್ಟಿತು, ತ್ವಯಾ - ನಿನ್ನಿಂದ, ಬಾಲ್ಯಾತ್ - ಬಾಲಭಾವದಿಂದ, ಯತ್ - ಯಾವ ವರದ್ವಯವು, ಪ್ರತಿಪನ್ನಂ - ಅಂಗೀಕರಿಸಲ್ಪಟ್ಟಿತೋ, ತತ್ - ಆ ವರದ್ವಯವು, ಆತ್ಮಪುಷ್ಪಂ - ತನ್ನಲ್ಲಿಯೇ ಹುಟ್ಟಿದ ಪುಷ್ಪವು, ವೇಣುಮಿವ-ಬಿದಿರನ್ನಂತೆ, ಮಾಂ - ನನ್ನನ್ನು, ದಹೇತ್ - ಸುಡು

ದಲ್ಲ." ಮೃದುವಾದ ಶರೀರವುಳ್ಳವಳಾಗಿಯೂ, ಸುಕುಮಾರಿಯಾಗಿಯೂ, ಯಾವಾಗಲೂ ಸುಖವನ್ನು ಅನುಭವಿಸಲು ಯೋಗ್ಯಳಾಗಿಯೂ ಇರುವ ಈಕೆಯು ವನವಾಸವನ್ನು ಮಾಡ ಬಾರದು. ಈಕೆಯು ಅದಕ್ಕೆ ಅರ್ಹಳಲ್ಲ!" ಎಂದು ಹೇಳಿದ ನಮ್ಮ ಗುರು ವಾಕ್ಯವು ನಿಶ್ಚಯವಾದುದು. ಎಲೆಗೆ! ಜನಕ ಭೂಪಾಲನ ಮಗಳಾಗಿ ಜನಿಸಿ, ರಾಜನಾದ ನನ್ನ ಸೊಸೆಯಾಗಿ ಈ ಜಾನಕಿಯು ಇಷ್ಟು ಜನ ಸೇರಿರುವ ಸಭೆಯಲ್ಲಿ ನಾರು ಸೀರೆಯನ್ನುಡಲು ಮಾಡಿದ ಅಪರಾಧವು ತಾನೆ ಏನು? ತಪ್ಪು ಮಾಡಿದ ತಾಪಸ ಸ್ತ್ರೀಯಂತೆ ಈಕೆಯು ನಾರು ಮಡಿಯುಟ್ಟು ಸಭೆಯಲ್ಲೇಕೆ ನಿಲ್ಲಬೇಕು? ಈಕೆಯು ಸರ್ವಾಭರಣ ಭೂಷಿತೆಯಾಗಿ ತೆರ ಳಲಿ. ನಾನು ನಿನಗೆ ಮಾತು ಕೊಡುವಾಗ ಸೀತಾದೇವಿಯೂ ಈ ರೀತಿ ಅರಣ್ಯಕ್ಕೆ ಹೋಗ ಬೇಕೆಂದು ಹೇಳಲಿಲ್ಲ. ಆದುದರಿಂದ ಈ ದೇವಿಯು ರತ್ನಖಚಿತವಾದ ದಿವ್ಯಾಭರಣಗಳಿಂದ

ಬಾಲ್ಯಾತ್ ಪ್ರತಿಪನ್ನಮೇತ ತ್ತನ್ಮಾಂ ದಹೇದ್ವೇಣುಮಿವಾತ್ಮಪುಷ್ಪಂ ॥ ೭ ॥ ರಾಮೇಣ ಯದಿ ತೇ ಪಾಪೇ ಕಿಂಚಿತ್ ಕೃತ ಮಶೋಭನಂ ॥ ಅಪಕಾರಂ ಕಮಿಹ ತೇ ವೈದೇಹ್ಯಾ ದರ್ಶಿತೋಧಮೇ ॥ ೮ ॥ ಮೃಗೀವೋತ್ಫುಲ್ಲ ನಯನಾ ಮೃದುಶೀಲಾ ತಪಸ್ವಿನೀ ॥ ಅಪಕಾರಂ ಕಮಿಹತೇ ಕರೋತಿ ಜನಕಾತ್ಮಜಾ॥೯॥ ನನು ಪರ್ಯಾಪ್ತ ಮೇತತ್ತೇ ಪಾಪೇ ರಾಮ ವಿವಾಸನಂ ॥ ಕಿಮೇಭಿಃ ಕೃಪಣೈ ರ್ಭೂಯಃ ಪಾತಕೈರಪಿ ತೇ ಕೃತೈಃ ॥ ೧೦ ॥ ಪ್ರತಿಜ್ಞಾತಂ ಮಯಾ ತಾವ ತ್ತ್ವಯೋಕ್ತಂ ದೇವಿ ಶೃಣ್ವತಾ ॥ ರಾಮಂ ಯದಭಿಷೇಕಾಯ ತ್ವಮಿಹಾಗತ

ವದು, (ಗೋ + ಮ) ತ್ವಯಾಹಿ - ನಿನ್ನಿಂದಲಾದರೆ, ಬಾಲ್ಯಾತ್ - ಅಜ್ಞಾನದ ದೆಶೆಯಿಂದ, ಏತತ್ - ಸೀತಾವನವಾಸವೂ, ಪ್ರತಿಪನ್ನಂ - ನಿಶ್ಚಯಿಸಲ್ಪಟ್ಟಿತು, ತದೇತತ್ - ಆ ಈ ಸೀತಾ ಪ್ರವಾಸವು, ಮಾಂ - ನನ್ನನ್ನು, ದಹೇತ್ - ಸುಡುವದು. ॥ ೭ ॥ ಹೇ ಪಾಪೇ - ಎಲೌ ಪಾಪಿಷ್ಠಳೇ, ತೇ - ನಿನಗೆ, ರಾಮೇಣ - ಶ್ರೀರಾಮನಿಂದ, ಕಿಂಚಿತ್ - ಸ್ವಲ್ಪವಾದ, ಅಶೋಭನಂ - ಪಾಪವು, ಕೃತಂಯದಿ - ಮಾಡಲ್ಪಟ್ಟದೇ ಆದರೆ, ಹೇ ಅಧಮೇ - ಎಲೌ ನೀಚಳೇ, ಇಹ - ಈಗ, ವೈದೇಹ್ಯಾ - ಸೀತಾದೇವಿಯಿಂದ, ಕೋಪಕಾರಃ - ಯಾವ ಅಪಕಾರವು, ದರ್ಶಿತಃ - ತೋರಲ್ಪಟ್ಟಿತು. ॥ ೮ ॥ ಮೃದುಶೀಲಾ - ಮೃದುಸ್ವಭಾವವುಳ್ಳ, ಮೃಗೀವ - ಚಿಗುರಿಯಂತೆ, ಉತ್ಫುಲ್ಲನಯನಾ - ವಿಕಸಿತವಾದ ನೇತ್ರಗಳುಳ್ಳ, ತಪಸ್ವಿನೀ - ದೀನಳಾದ, ಜನಕಾತ್ಮಜಾ-ಸೀತಾದೇವಿಯು, ಇಹ - ಈಗ, ತೇ - ನಿನಗೆ, ಕಿಮಪಕಾರಂ - ಯಾವ ಅಪಕಾರವನ್ನು, ಕರೋತಿ - ಮಾಡಿದಾಳೆ. ॥ ೯ ॥ ಹೇ ಪಾಪೇ - ಎಲೌ ಪಾಪಕೃತ್ಯವುಳ್ಳವಳೇ, ತೇ - ನಿನಗೆ, ರಾಮವಿವಾಸನಂ - ಶ್ರೀರಾಮನ ಹೊರಡಿಸುವಿಕೆಯಿಂದ ಹುಟ್ಟಿದ, ಏತತ್ - ಈ ಪಾಪವೇ, ಪರ್ಯಾಪ್ತಂನನು - ಸಾಕಾಗಿರುವದಲ್ಲವೇ, ತೇ - ನಿನ್ನಿಂದ, ಭೂಯಃ - ಮತ್ತು, ಕೃತೈಃ - ಮಾಡಲ್ಪಟ್ಟ, ಕೃಪಣೈಃ - ಕ್ಷುದ್ರಗಳಾದ, ಏಭಿಃಪಾತಕೈಃ - ಈ ಪಾಪಗಳಿಂದ, ಕಿಂ - ಏನು ಪ್ರಯೋಜನವು. ॥ ೧೦ ॥ ಅಭಿಷೇಕಾಯ - ಪಟ್ಟಾಭಿಷೇಕಕ್ಕೆ, ಇಹ - ಇಲ್ಲಿಗೆ, ಆಗತಂ - ಬಂದ, ರಾಮಂ - ಶ್ರೀರಾಮನನ್ನು ಕುರಿತು, ತ್ವಂ - ನೀನು, ಯತ್-ಯಾವ ವನವಾಸಕ್ಕೆ ಹೋಗೆಂಬ ಮಾತನ್ನು, ಅಬ್ರವೀತ್-ನುಡಿದೆಯೋ, ಹೇದೇವಿ-

ಅಲಂಕೃತಳಾಗಿ ಅರಣ್ಯಕ್ಕೆ ಸುಖವಾಗಿ ತೆರಳುವವಳಾಗಲಿ. ಬದುಕಲಾರದ ನಾನು ನಿನಗೆ ಕೊಡಬಾರದ ವರವನ್ನು ಕೊಟ್ಟೆನು ; ಆ ವರದ್ವಯವು ನನ್ನನ್ನು ಸುಡುತ್ತಿರುವುದು ; ಬಿದಿರಿನಲ್ಲಿ ಹುಟ್ಟಿದ ಹೂವು ಅದನ್ನೇ ಬತ್ತಿಸುವಂತೆ, ನಿನಗೆ ನಾನು ಕೊಟ್ಟ ವರದ್ವಯವು ನನ್ನನ್ನೇ ಬತ್ತಿಸುತ್ತಿರುವುದು. ಪಾಪೀ ! ಶ್ರೀರಾಮನು ನಿನಗೆ ಮಾಡಿದ ಅಪರಾಧವೇನು? ನೀಚಳೇ ! ಸೀತಾದೇವಿಯು ತಾನೆ ನಿನಗೇನಪಕಾರ ಮಾಡಿದಳು ? ಚಿಗುರೆಯ ಕಂಗಳಂತೆ ವಿಶಾಲವಾದ ನಯನಗಳುಳ್ಳವಳೂ, ಮೃದುವಾದ ಸ್ವಭಾವವುಳ್ಳವಳೂ, ದೀನಳೂ ಆದ ಈಕೆಯು ಯಾರಿಗೇ ಆಗಲಿ ಅಪಕಾರವನ್ನು ಮಾಡುವ ಹಾಗಿದ್ದಾಳೆಯೇ ? ಎಲೌ ಪಾಪಿಷ್ಠಳೆ ! ಶ್ರೀರಾಮನನ್ನು ಅರಣ್ಯಕ್ಕೆ ಹೊರಡಿಸುವ ಪಾಪವೊಂದೇ ಸಾಲದೆ? ಎಲೆಗೆ, ಈ ದುಷ್ಕೃತ್ಯಗಳನ್ನು ಮಾಡುವುದರಿಂದ ನಿನಗೇನು ಪ್ರಯೋಜನವಿದೆ? ನೀನು ಶ್ರೀರಾಮನ

ಮಬ್ರವೀತ್ ॥೧೧॥ ತತ್ತ್ವೇತತ್ ಸಮತಿಕ್ರಮ್ಯ ನಿರಯಂ ಗಂತು
ಮಿಚ್ಛಸಿ ॥ ಮೈಥಿಲೀಮಪಿ ಯಾಹಿತ್ವ ಮೀಕ್ಷಸೇ ಚೀರವಾಸಿನೀಂ ॥೧೨॥
ಇತೀವ ರಾಜಾ ವಿಲಪನ್ಮಹಾತ್ಮಾ ಶೋಕಸ್ಯ ನಾಂತಂ ಸದದರ್ಶ ಕಿಂಚಿತ್ ॥
ಭೃಶಾತುರತ್ವಾಚ್ಚ ಪಪಾತ ಭೂಮೌ ತೇನೈವ ಪುತ್ರವ್ಯಸನೇ ನಿಮಗ್ನಃ ॥೧೩॥
ಏವಂ ಬ್ರುವಂತಂ ಪಿತರಂ ರಾಮ ಸ್ಸಂಪ್ರಸ್ಥಿತೋ ವನಂ ॥ ಅವಾಕ್ಛಿರ ಸಮಾ
ಸೀನ ಮಿದಂ ವಚನ ಮಬ್ರವೀತ್ ॥೧೪॥ ಇಯಂ ಧಾರ್ಮಿಕ ಕೌಸಲ್ಯಾ
ಮಮ ಮಾತಾ ಯಶಸ್ವಿನೀ ॥ ವೃದ್ಧಾ ಚಾ ಕ್ಷುದ್ರಶೀಲಾಚ ನಚ ತ್ವಾಂ ದೇವ

ಎಲೌ ಕೈಕೇಯಿ, ತ್ವಯಾ - ನಿನ್ನಿಂದ, ಉಕ್ತಂ - ಹೇಳಲ್ಪಟ್ಟ, ತತ್ - ಆ ಮಾತನ್ನು, ಶೃಣ್ವತಾ- ಕೇಳುತ್ತಿರುವ, ಮಯಾ - ನನ್ನಿಂದ, ತಾವತ್ - ಅಷ್ಟೇ, ಪ್ರತಿಜ್ಞಾತಂ - ಪ್ರತಿಜ್ಞೆಮಾಡಲ್ಪಟ್ಟಿತು. ತತ್ವೇತತ್ - ಆ ಈ ಮಾತನ್ನು, ಸಮತಿಕ್ರಮ್ಯ - ಅತಿಕ್ರಮಿಸಿ, ಹಿ - ಯಾವ ಕಾರಣ, ತ್ವಂ - ನೀನು, ಚೀರವಾಸಿನೀಂ - ನಾರುಮಡಿಗಳನ್ನುಟ್ಟಿರುವ, ಮೈಥಿಲೀಮಪಿ - ಸೀತಾದೇವಿಯನ್ನು, ಈಕ್ಷಸೇ - ನೋಡುತ್ತೀಯೋ, ಸಾತ್ವಂ - ಅಂತಹ ನೀನು, ನಿರಯಂ - ನರಕವನ್ನು ಕುರಿತು, ಗಂತುಂ - ಹೋಗುವದಕ್ಕೆ, ಇಚ್ಛಸಿ - ಅಪೇಕ್ಷಿಸುತ್ತೀಯೆ. ॥೧೨॥ ಇತೀವ - ಈಪರಿಯಾಗಿ, ಮಹಾತ್ಮಾ - ಮಹಾಮನವುಳ್ಳ, ಸರಾಜಾ - ಆ ದಶರಥರಾಯನು, ವಿಲಪ್ನ - ಪ್ರಲಪಿಸುತ್ತ, ಶೋಕಸ್ಯ - ವ್ಯಸನದ, ಅಂತಂ - ಪಾರವನ್ನು, ಕಿಂಚಿತ್ - ಸ್ವಲ್ಪವಾದರೂ, ನದದರ್ಶ - ಕಾಣಲಿಲ್ಲ, ತೇನೈವ - ಆ ದುಃಖದಿಂದಲೇ, ಭೃಶಾತುರತ್ವಾತ್ - ಬಹಳವಾಗಿ ಬಳಲಿದವನಾದದರಿಂದ, ಪುತ್ರ ವ್ಯಸನೇ - ಪುತ್ರವಿರಹಜನ್ಯತಾಪದಲ್ಲಿ, ನಿಮಗ್ನಃ - ಮುಳುಗಿ, ಭೂಮೌ - ನೆಲದಲ್ಲಿ, ಪಪಾತ - ಬಿದ್ದನು. ॥೧೩॥ ರಾಮಃ - ಶ್ರೀರಾಮನು, ವನಂ - ವನವನ್ನು ಕುರಿತು, ಸಂಪ್ರಸ್ಥಿತಃ - ಹೊರಟು, ಏವಂ - ಈಪರಿಯಾಗಿ, ಬ್ರುವಂತಂ - ಮಾತಾಡುತ್ತಿರುವ, ಅವಾಕ್ಛಿರಸಂ - ಬಗ್ಗಿದ ಶಿರಸ್ಸುಳ್ಳವನಾಗಿ, ಆಸೀನಂ - ಕುಳಿತುಕೊಂಡಿರುವ, ಪಿತರಂ - ತಂದೆಯನ್ನು ಕುರಿತು, ಇದಂ ವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೧೪॥ ಹೇ ಧಾರ್ಮಿಕ - ಎಲೈ ಧರ್ಮಿಷ್ಠನೇ, ಹೇ ದೇವ - ಎಲೈ ಸ್ವಾಮಿಯೇ, ಯಶಸ್ವಿನೀ - ಕೀರ್ತಿವಂತಳಾದ, ವೃದ್ಧಾಚ - ಮುದುಕಿಯೂ ಆದ, ಅಕ್ಷುದ್ರಶೀಲಾಚ - ಕ್ಷುದ್ರಸ್ವಭಾವವಲ್ಲದವಳಾದ, ಮಮ - ನನ್ನ, ಮಾತಾ -

---

ಪಟ್ಟಾಭಿಷೇಕವನ್ನು ನಿಲ್ಲಿಸಿ ಆತನನ್ನು ಅರಣ್ಯಕ್ಕೆ ಕಳುಹಬೇಕೆಂದು ಬೇಡಿಕೊಂಡೆ? ನಾನದಕ್ಕೆ ಅಂಗೀಕರಿಸಿದೆನು. ನಿನಗೆ ಮಾತನ್ನು ಕೊಟ್ಟುಬಿಟ್ಟೆ! ನೀನಾತನ ವನವಾಸ ಮಾತ್ರದಿಂದಲೇ ಸಂತೋಷಪಡು. ಆ ಮಾತನ್ನು ಮೀರಿ ಈಗಲೀ ಸೀತಾದೇವಿಗೂ ನಾರು ಸೀರೆಯನ್ನುಡಿಸಿ ಅದನ್ನು ನೋಡಲಪೇಕ್ಷಿಸಿ ನರಕದಲ್ಲಿ ಬೀಳಬೇಕೆಂದು ಅಪೇಕ್ಷಿಸುವೆಯಲ್ಲ! ಬೇಡ; ಬೇಡ!!" ಎಂದು ಹೇಳಿ, ಘಟ್ಟಿಯಾಗಿ ಕೂಗುತ್ತಲೂ, ಅಳುತ್ತಲೂ, ದುಃಖದ ಪಾರವನ್ನು ಕಾಣದೆ ಪುತ್ರವ್ಯಸನದಲ್ಲಿ ಮುಳುಗಿ ನೆಲದಲ್ಲಿ ಬಿದ್ದನು. ॥೧-೧೩॥ ಇಂತು ನುಡಿಯುತ್ತಿರುವ ಆ ರಾಯನನ್ನು ತೊರೆದು, ಶ್ರೀರಾಮನು ವನಕ್ಕೆಂದು ಹೊರಹೊರಟವನಾಗಿ ಆತನನ್ನು ಕುರಿತು, "ಓ ಜನಕನೆ! ನೀನು ಧರ್ಮ ರಹಸ್ಯಗಳೆಲ್ಲವನ್ನು ಬಲ್ಲವನಾ

ಗರ್ಹತೇ ‖ ೧೫ ‖ ಮಯಾ ವಿಹೀನಾಂ ವರದ ಪ್ರಪನ್ನಾಂ ಶೋಕಸಾಗರಂ ‖ ಅದೃಷ್ಟಪೂರ್ವ ವ್ಯಸನಾಂ ಭೂಯಃ ಸ್ಸಂಮಂತು ಮರ್ಹಸಿ ‖ ೧೬ ‖ ಪುತ್ರ ಶೋಕಂ ಯಥಾನರ್ಛೇ ತ್ತ್ವಯಾ ಪೂಜ್ಯೇನ ಪೂಜಿತಾ ‖ ಮಾಂಹಿ ಸಂಚಿಂತ ಯಂತೀ ಸಾ ತ್ವಯಿ ಜೀವೇ ತ್ತಪಸ್ವಿನೀ ‖ ೧೭ ‖

ಇಮಾಂ ಮಹೇಂದ್ರೋಪಮ ಜಾತಗರ್ಧಿನೀಂ
ತಥಾ ವಿಧಾತುಂ ಜನನೀಂ ಮಹಾರ್ಹಸಿ ‖
ಯಥಾವನಸ್ಥೇ ಮಯಿ ಶೋಕಕರ್ಶಿತಾ
ನಜೀವಿತ ನ್ಯಸ್ಯಯಮಕ್ಷಯಂ ವ್ರಜೇತ್ ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟತ್ರಿಂಶಸ್ಸರ್ಗಃ.

ತಾಯಿಯಾದ, ಇಯಂಕೌಸಲ್ಯಾ - ಈ ಕೌಸಲ್ಯಾದೇವಿಯು, ತ್ವಾಂ - ನಿನ್ನನ್ನು, ನಗರ್ಹತೇಚ - ನಿಂದಿಸಿದವಳಲ್ಲ. ‖ ೧೫ ‖ ಹೇ ವರದ - ಎಲೈ ವರಪ್ರದಾಯಕನೇ, ಮಯಾ - ನನ್ನಿಂದ, ವಿಹೀನಾಂ - ವಿರಹಿತಳಾದ, ಶೋಕಸಾಗರಂ - ದುಃಖಸಮುದ್ರವನ್ನು, ಪ್ರಪನ್ನಾಂ - ಹೊಂದಿರುವ, ಅದೃಷ್ಟಪೂರ್ವವ್ಯಸನಾಂ - ಪೂರ್ವದಲ್ಲಿ ಎಂದಿಗೂ ನೋಡದಿರುವ ವ್ಯಸನವುಳ್ಳ ಈ ಕೌಸಲ್ಯೆಯನ್ನು, ಭೂಯಃ - ಬಹಳವಾಗಿ, ಸಂಮಂತುಂ - ಬಹುಮಾನಮಾಡಲು, ಅರ್ಹಸಿ - ಯೋಗ್ಯನಾಗು. ‖ ೧೬ ‖ ಸಾ - ಆ ಕೌಸಲ್ಯಾದೇವಿಯು, ತಪಸ್ವಿನೀ - ದೀನಳಾದ ಕಾರಣ, ಪೂಜ್ಯೇನ - ಪೂಜ್ಯ ನಾದ, ತ್ವಯಾ - ನಿನ್ನಿಂದ, ಪೂಜಿತಾ - ಪೂಜಿಸಲ್ಪಟ್ಟು, ಯಥಾ - ಹೇಗೆ, ಪುತ್ರಶೋಕಂ - ಪುತ್ರವಿಷಯವಾದ ವ್ಯಸನವನ್ನು, ನಚ್ಛೇತ್ - ಹೊಂದದಿರುವಳೋ, ಮಾಂ - ನನ್ನನ್ನು, ಸಂಚಿಂತಯಂತೀ - ಧ್ಯಾನಮಾಡುತ್ತ, ತ್ವಯಿ - ನಿನ್ನಲ್ಲಿ, ಜೀವೇತ್ - ಬದುಕುವಳೋ. ‖ ೧೭ ‖ ಹೇ ಮಹೇಂದ್ರೋಪಮ - ಎಲೈ ದೇವೇಂದ್ರನಿಗೆ ಸದೃಶನೇ, ಮಯಿ - ನಾನು, ವನಸ್ಥೇ - ವನದಲ್ಲಿ ರಲು, ಶೋಕಕರ್ಶಿತಾ, ಶೋಕ - ವ್ಯಸನದಿಂದ, ಕರ್ಶಿತಾ - ಬಳಲಿ, ಜೀವಿತಂ - ಪ್ರಾಣವನ್ನು, ನ್ಯಸ್ಯ - ತ್ಯಾಗಮಾಡಿ, ಯಮಕ್ಷಯಂ - ಯಮಪುರವನ್ನು ಕುರಿತು, ಯಥಾ - ಹೇಗೆ, ನವ್ರಜೇತ್- ಹೊಂದದಿರುವಳೋ, ಜಾತಗರ್ಧಿನೀಂ, ಜಾತ - ಹುಟ್ಟಿದ, ಗರ್ಧಿನೀಂ - ಪುತ್ರದರ್ಶನವೆಂಬ ಅಭಿಲಾ ಷೆಯುಳ್ಳ, ಮಮ - ನನ್ನ, ಜನನೀಂ - ತಾಯಿಯಾದ, ಇಮಾಂ - ಈ ಕೌಸಲ್ಯಾದೇವಿಯನ್ನು, ತಥಾ - ಹಾಗೆ, ವಿಧಾತುಂ - ಸಂರಕ್ಷಿಸಲು, ಅರ್ಹಸಿ - ಯೋಗ್ಯನಾಗು. ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟತ್ರಿಂಶಸ್ಸರ್ಗಃ.

ಗಿರುವೆ. ಆದುದರಿಂದ ಮಹಾ ಪತಿವ್ರತೆಯೂ, ಮುದುಕಿಯೂ, ಸದಾಚಾರ ಸಂಪನ್ನೆಯೂ, ಯಾವಾಗಲೂ ಪುತ್ರ ವಿಯೋಗವನ್ನು ಕಾಣದಿರುವವಳೂ, ನಿನ್ನನ್ನೇ ನಂಬಿಕೊಂಡಿರುವವಳೂ ಆದ ನಮ್ಮ ತಾಯಿಯಾದ ಕೌಸಲ್ಯೆಯನ್ನು ಸಮಾಧಾನಗೊಳಿಸುತ್ತ ಸಂರಕ್ಷಿಸುತ್ತಿರು. ಆ ದೇವಿಯು ದೀನಳಾಗಿರುವುದರಿಂದ, ಪೂಜ್ಯನಾದ ನೀನಾಕೆಯನ್ನು ಸಮಾಧಾನಗೊಳಿಸುತ್ತ, ಪುತ್ರ ಶೋಕವನ್ನು ತೊರೆದು, ನನ್ನನ್ನು ನೆನೆಯುತ್ತ, ನಿನ್ನಲ್ಲಿ ಜೀವ ಉಳಿಸಿಕೊಂಡಿರುವ ಹಾಗೆ ಮಾಡು. ‖ ೧೪-೧೭ ‖ ಎಲೈ ರಾಜೇಂದ್ರನೆ! ನಾನು ಕಾಡಿಗೆ ಹೋದರೆ, ನನ್ನ ತಾಯಿಯಾದ ಕೌಸಲ್ಯಾದೇವಿಯು ಮರಣವನ್ನು ಹೊಂದದಿರುವಂತೆ ಮನ್ನಿಸಿ ಕಾಪಾಡು" ಎಂದು ಹೇಳಿದನು. ‖ ೧೮ ‖

ಇಂತಿದು ದಶರಥ ಮಹೀಪಾಲ ಕೃತ ಕೈಕೇಯಿಮಾ ಮುಷ್ಕರ ಗರ್ಹಣ ವೃತ್ತಾಂತವೆಂಬ ಮೂವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನಚತ್ವಾರಿಂಶಸ್ಸರ್ಗಃ.

ರಾಮಸ್ಯತು ವಚಶ್ಶ್ರುತ್ವಾ ಮುನಿವೇಷಧರಂಚ ತಂ ॥ ಸಮೀಕ್ಷ್ಯ ಸಹಭಾರ್ಯಾಭೀ ರಾಜಾ ವಿಗತ ಚೇತನಃ ॥ ೧ ॥ ನೈವ ದುಃಖೇನ ಸಂತಪ್ತಃ ಪ್ರತ್ಯವೈಕ್ಷತ ರಾಘವಂ ॥ ನಚೈವ ಮಭಿಸಂಪ್ರೇಕ್ಷ್ಯ ಪ್ರತ್ಯಭಾಷತ ದುರ್ಮನಾಃ ॥ ೨ ॥ ಸಮುಹೂರ್ತಮಿವಾಸಂಜ್ಞೋ ದುಃಖಿತಶ್ಚ ಮಹೀಪತಿಃ ॥ ವಿಲಲಾಪ ಮಹಾಬಾಹೂ ರಾಮಮೇವಾ ನುಚಿಂತಯನ್ ॥ ೩ ॥ ಮನ್ಯೇ ಖಲು ಮಯಾಪೂರ್ವಂ ವಿವತ್ಸಾ ಬಹವಃ ಕೃತಾಃ ॥ ಪ್ರಾಣಿನೋ ಹಿಂಸಿತಾವಾಪಿ ತಸ್ಮಾದಿದ ಮುಪಸ್ಥಿತಂ ॥ ೪ ॥ ನತ್ವೇವಾನಾಗತೇ ಕಾಲೇ ದೇಹಾಚ್ಚ್ಯವತಿ

ರಾಮಸ್ಯ - ಶ್ರೀರಾಮನ, ವಚಸ್ತು - ಮಾತನ್ನು, ಶೃತ್ವಾ - ಕೇಳಿ, ರಾಜಾ - ದಶರಥ ರಾಯನು, ಮುನಿವೇಷಧರಂ - ಋಷಿವೇಷವನ್ನು ಧರಿಸಿರುವ, ತಂ-ಆ ಶ್ರೀರಾಮನನ್ನು, ಸಮೀಕ್ಷ್ಯ- ಕಂಡು, ಭಾರ್ಯಾಭಿಸ್ಸಹ - ಹೆಂಡತಿಯರೊಡನೆ, ವಿಗತಚೇತನಃ - ಪ್ರಜ್ಞೆತಪ್ಪಿದವನಾದನು. ॥ ೧ ॥ ದುಃಖೇನ - ವ್ಯಸನದಿಂದ, ಸಂತಪ್ತಃ - ಸಂಕಟಬಿಳುತ್ತ, ರಾಘವಂ - ಶ್ರೀರಾಮನನ್ನು, ನಪ್ರತ್ಯ ವೈಕ್ಷತೈವ - ನೋಡಲೇ ಇಲ್ಲವು, ದುರ್ಮನಾಃ - ದುಃಖಾಕ್ರಾಂತವಾದ ಮನವುಳ್ಳವನಾಗಿ, ಏನಂ - ಈ ಶ್ರೀರಾಮನನ್ನು, ಅಭಿಸಂಪ್ರೇಕ್ಷ್ಯ - ಕಂಡು, ನಪ್ರಭಾಷತ - ಮಾತನಾಡಲಿಲ್ಲ. ॥ ೨ ॥ ಮಹಾಬಾಹುಃ - ಮಹಾಭುಜಪರಾಕ್ರಮಶಾಲಿಯಾದ, ಸಮಹೀಪತಿಃ - ಆ ದಶರಥರಾಯನು, ಮುಹೂರ್ತಂ - ಎರಡು ಘಳಿಗೆಕಾಲ, ಅಸಂಜ್ಞೇವ - ಪ್ರಜ್ಞೆಯಿಲ್ಲದಂತಿರುವನಾಗಿ, ರಾಮಮೇವ - ಶ್ರೀರಾಮನನ್ನೇ, ಅನುಚಿಂಯನ್ - ಧ್ಯಾನಮಾಡುತ್ತ, ದುಃಖಿತಶ್ಚ - ದುಃಖಗೊಂಡು, ವಿಲಲಾಪ - ವಿರೋದಿಸಿದನು. ॥ ೩ ॥ ಮಯಾ - ನನ್ನಿಂದ, ಪೂರ್ವಂ - ಪೂರ್ವಜನ್ಮದಲ್ಲಿ, ಬಹವಃ - ಬಹು ಮಂಧಿಜನರು, ವಿವತ್ಸಾಃ - ಮಕ್ಕಳಿಲ್ಲದವರಾಗಿ, ಕೃತಾಃ - ಮಾಡಲ್ಪಟ್ಟರು, ಪ್ರಾಣಿನಃ - ಪ್ರಾಣಿಗಳೂ, ಹಿಂಸಿತಾವಾಪಿ - ಕೊಲ್ಲಲ್ಪಟ್ಟವೋ ಏನೋ, ತಸ್ಮಾತ್ - ಅದರಿಂದ, ಇದಂ - ಈ ದುಃಖವು, ಉಪಸ್ಥಿತಂ - ಪ್ರಾಪ್ತವಾಯಿತು, ಇತಿ - ಇಂತೆಂದು, ಮನ್ಯೇಖಲು - ತಿಳಿದಿದ್ದೇನಷ್ಟೆ. ॥ ೪ ॥ ಕಾಲೇ - ಕಾಲವು, ಅನಾಗತೇಸತಿ - ಬಾರದೇಹೋದರೆ, ದೇಹಾತ್ - ಶರೀರದಿಂದ,

---

ಆ ಬಳಿಕ ಶ್ರೀರಾಮನು ನುಡಿದ ಮಾತುಗಳನ್ನು ಕೇಳಿ ದಶರಥರಾಜನು ಸ್ತ್ರೀಯ ರಿಂದೊಡಗೂಡಿದವನಾಗಿ, ಮುನಿ ವೇಷಧಾರಿಯಾದ ಆತನನ್ನು ಕಂಡು, ಅತಿಯಾದ ದುಃಖ ದಿಂದ ಬಲಗುಂದಿ ಆತನನ್ನು ನೋಡುವುದಕ್ಕೂ, ಆತನೊಡನೆ ಮಾತನಾಡುವುದಕ್ಕೂ ದಿಕ್ಕು ತೋರದೆ ಮುಹೂರ್ತ ಕಾಲವಿದ್ದು ಮರಳಿ ಎಚ್ಚೆತ್ತು, ಮಹಾ ದುಃಖಿತನಾಗಿ, "ರಾಮ ; ರಾಮ !!" ಎಂದು ಆತನನ್ನೇ ಚಿಂತಿಸುತ್ತ ಈ ರೀತಿ ಪ್ರಲಾಪಿಸಿದನು. "ಅಯ್ಯೋ ! ನಾನು ಜನ್ಮಾಂತರದಲ್ಲಿ ಅನೇಕ ತಂದೆ ಮಕ್ಕಳನ್ನಗಲಿಸಿದೆನೋ ; ಏನೊ ! ಎಷ್ಟು ಪ್ರಾಣಿ

ಜೀವಿತಂ || ಕೈಕೇಯ್ಯಾ ಕ್ಲಿಶ್ಯಮಾನಸ್ಯ ಮೃತ್ಯುರ್ಮಮ ನವಿದ್ಯತೇ || ೫ ||
ಯೋಽಹಂ ಪಾವಕ ಸಂಕಾಶಂ ಪಶ್ಯಾಮಿ ಪುರತಸ್ಸ್ಥಿತಂ || ವಿಹಾಯ ವಸನೇ
ಸೂಕ್ಷ್ಮೇ ತಾಪಸಾಚ್ಛಾದ್ಯಮಾತ್ಮಜಂ || ೬ || ಏಕಸ್ಯಾಃ ಖಲು ಕೈಕೇಯ್ಯಾಃ
ಕೃತೇಯಂ ಕ್ಲಿಶ್ಯತೇ ಜನಃ || ಸ್ವಾರ್ಥೇ ಪ್ರಯತಮಾನಾಯಾ ಸ್ಸಂಶ್ರಿತ್ಯ
ನಿಕೃತಿಂ ತ್ವಿಮಾಂ || ೭ || ಏವಮುಕ್ತ್ವಾತು ವಚನಂ ಬಾಷ್ಪೇಣ ಪಿಹಿತೇಂ
ದ್ರಿಯಃ || ರಾಮೇತಿ ಸಕೃದೇವೋಕ್ತ್ವಾ ವ್ಯಾಹರ್ತುಂ ನಶಶಾಕಹ || ೮ ||

ಜೀವಿತಂ - ಪ್ರಾಣವು, ನಚ್ಯವತ್ಯೇವ - ಹೋಗುವುದಿಲ್ಲವಷ್ಟೆ, ಯಃ - ಯಾವ, ಅಹಂ - ನಾನು, ಸೂಕ್ಷ್ಮೇ - ಸೂಕ್ಷ್ಮಗಳಾದ, ವಸನೇ - ದುಕೂಲಗಳನ್ನು, ವಿಹಾಯ-ಬಿಟ್ಟು, ತಾಪಸಾಚ್ಛಾದ್ಯಂ - ಋಷಿಗಳ ಹೊದಿಕೆಯನ್ನು ಹೊದ್ದಿರುವ, ಪುರತಃ - ಮುಂಗಡೆ, ಸ್ಥಿತಂ - ನಿಂತಿರುವ, ಪಾವಕಸಂಕಾಶಂ - ಯಜ್ಞಪುರುಷನಿಗೆ ಸರಿಯಾದ, ಆತ್ಮಜಂ - ಕುವರನನ್ನು, ಪಶ್ಯಾಮಿ-ನೋಡುತ್ತಿದ್ದೇನೆಯೋ, ತಸ್ಯ - ಅಂತಹ, ಕೈಕೇಯ್ಯಾ-ಕೈಕೇಯಿದೇವಿಯಿಂದ, ಕ್ಲಿಶ್ಯಮಾನಸ್ಯ-ಕ್ಲೇಶಗೊಳಿಸಲ್ಪಡುತ್ತಿರುವ, ಮಮ - ನನಗೆ, ಮೃತ್ಯುಃ - ಮರಣವು, ನವಿದ್ಯತೇ - ಇಲ್ಲವೇನೋ, || ೬ || ಇಮಾಂ - ಈ, ನಿಕೃತಿಂ - ವಂಚನೆಯನ್ನು, ಸಂಶ್ರಿತ್ಯ - ಆಶ್ರಯಿಸಿ, ಸ್ವಾರ್ಥೇ - ಸ್ವಕಾರ್ಯದಲ್ಲಿ, ಪ್ರಯತಮಾನಾಯಾಃ - ಧುರಂಧರಳಾದ, ಏಕಸ್ಯಾ - ಒಬ್ಬಳಾದ, ಕೈಕೇಯ್ಯಾಃಕೃತೇ-ಕೈಕೇಯಿಯ ನಿಮಿತ್ತವಾಗಿ, ಅಯಂಜನಃ - ಈ ಜನ್ಮವು, ಕ್ಲಿಶ್ಯತೇಖಲು - ಕ್ಲೇಶಗೊಳ್ಳುವುದಲ್ಲವೆ? || ೭ || ಏವಂ - ಈಪರಿಯಾಗಿ, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ಬಾಷ್ಪೇಣ - ಕಂಬನಿಗಳಿಂದ, ಪಿಹಿತೇಂದ್ರಿಯಃ - ಮುಚ್ಚಲ್ಪಟ್ಟ ಕಂಗಳುಳ್ಳವನಾಗಿ, ಹೇ ರಾಮೇತಿ - ಶ್ರೀರಾಮಾ ಎಂದು, ಸಕೃದೇವ - ಒಂದೇ ಆವರ್ತಿ, ಉಕ್ತ್ವಾ - ಹೇಳಿ, ವ್ಯಾಹರ್ತುಂ - ಪುನಃ ಮಾತನಾಡುವದಕ್ಕೆ, ನಶಶಾಕಹ - ಸಮರ್ಥನಾಗಲಿಲ್ಲವಷ್ಟೆ, || ೮ || ಸಮಹೀಪತಿಃ - ಆ ದಶರಥರಾಯನು, ಮುಹೂರ್ತಾತ್ - ಮುಹೂರ್ತಮಾತ್ರದಲ್ಲಿ, ಸಂಜ್ಞಾಂ - ಪ್ರಜ್ಞೆಯನ್ನು, ಪ್ರತಿಲಭ್ಯ - ಹೊಂದಿ, ಅಶ್ರುಪೂರ್ಣಾಭ್ಯಾಂ -

ಗಳನ್ನು ಹಿಂಸಿಸಿದೆನೊ? ಅದುದರಿಂದಲೇ ನನಗೀಗತಿಯುಂಟಾಯಿತು! ಅಕಟಕಟ! ಈ ಕೈಕೇಯಿಯಿಂದ ನನಗೆ ಮರಣವಾದರೂ ಒದಗಬಾರದೆ? ಅದೂ ಆಗದಲ್ಲ! ಅಯ್ಯೋ!! ಯಾವ ನಾನು, ಪೀತಾಂಬರಗಳನ್ನುಡಲು ಯೋಗ್ಯನೂ, ಅಗ್ನಿಯಂತೆ ಜಾಜ್ವಲ್ಯಮಾನವಾದ ತೇಜಸ್ಸುಳ್ಳವನೂ ಆದ, ನನ್ನ ಮುದ್ದುಗುವರನಾದ ಶ್ರೀರಾಮನು ನಾರು ಬಟ್ಟೆಗಳುಡುವುದನ್ನು ನೋಡಿದೆನೊ, ಅಂತಹ ನನಗೆ ಈ ದುಷ್ಟೆಯಾದ ಕೈಕೇಯಿಯಿಂದ ಇನ್ನೂ ಮೃತಿಯೊದಗದಿರುವುದಲ್ಲ! ಏನು ಮಾಡಲಿ!! ಅಕಟ! ಈ ಕೈಕೇಯಿದೇವಿಯು ತನ್ನ ಸುಖಕ್ಕಾಗಿ ಶ್ರೀರಾಮನನ್ನು ಕಾಡಿಗೆ ಕಳುಹಬೇಕೆಂದು ಮಾಡಿದ ಪ್ರಯತ್ನವು ಸಮಸ್ತ ಪ್ರಾಣಿಗಳ ಸಂತಾಪಕ್ಕೂ ಕಾರಣವಾಯಿತು.'' ಎಂದು ಚಿಂತಿಸಿದ ದಶರಥರಾಯನು ಕಂಬನಿದುಂಬಿದ ಕಂಗಳುಳ್ಳವನಾಗಿ ಘಟ್ಟಿಯಾಗಿ ಅಳುತ್ತ, "ರಾಮ! ರಾಮ!!" ಎಂದು ಕೂಗಿಕೊಂಡು, ಪುನಃ ಮಾತನಾಡಲು ಶಕ್ತಿ ಸಾಲದೆ ಮೂರ್ಛೆಯೊಂದಿ ಸ್ವಲ್ಪ ಕಾಲವಾದ ಮೇಲೆ ಪ್ರಜ್ಞೆ ಹೊಂದಿ ಮಂತ್ರಿಮುಖ್ಯನಾದ ಸುಮಂತ್ರನನ್ನು ಕರೆದು, "ಎಲೈ ಸುಮಂತ್ರನೆ?

ಸಂಜ್ಞಾಂತು ಪ್ರತಿಲಭ್ಯೈವ ಮುಹೂರ್ತಾತ್ಸಮಹೀಪತಿಃ ॥ ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಸುಮಂತ್ರ ಮಿದಮಬ್ರವೀತ್ ॥೯॥ ಔಪವಾಹ್ಯಂ ರಥಂ ಯುಕ್ತ್ವಾ ತ್ವಮಾಯಾಹಿ ಹಯೋತ್ತಮೈಃ ॥ ಪ್ರಾಪಯೈನಂ ಮಹಾಭಾಗ ಮಿತೋ ಜನಪದಾತ್ಪರಂ ॥೧೦॥ ಏವಂ ಮನ್ಯೇ ಗುಣವತಾಂ ಗುಣಾನಾಂ ಫಲಮುಚ್ಯತೇ ॥ ಪಿತ್ರಾ ಮಾತ್ರಾಚ ಯತ್ಸಾಧು ರ್ವೀರೋ ನಿರ್ವಾಸ್ಯತೇ ವನಂ ॥ ೧೧ ॥ ರಾಜ್ಞೋ ವಚನಮಾಜ್ಞಾಯ ಸುಮಂತ್ರ ಶ್ಶೀಘ್ರ ವಿಕ್ರಮಃ ॥ ಯೋಜಯಿತ್ವಾ ಯಯೌ ತತ್ರ ರಥಮಶ್ವೈರಲಂಕೃತಂ ॥ ೧೨ ॥ ತಂ ರಥಂ ರಾಜಪುತ್ರಾಯ ಸೂತಃ ಕನಕಭೂಷಿತಂ ॥ ಆಚಚಕ್ಷೇಂಜಲಿಂ ಕೃತ್ವಾ ಯುಕ್ತಂ

ಕಣ್ಣೀರಿಂದ ತುಂಬಿರುವ, ನೇತ್ರಾಭ್ಯಾಂ - ಕಂಗಳಿಂದ, ಉಪಲಕ್ಷಿತಃ - ಕೂಡಿ, ಸುಮಂತ್ರಂ - ಸುಮಂತ್ರನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ||೯|| ತ್ವಂ-ನೀನು, ಔಪವಾಹ್ಯಂ - ಕುಳಿತುಕೊಳ್ಳುವದಕ್ಕೆ ಯೋಗ್ಯವಾದ, ರಥಂ-ರಥವನ್ನು, ಹಯೋತ್ತಮೈಃ-ಉತ್ತಮವಾದ ಕುದುರೆಗಳಿಂದ, ಯುಕ್ತ್ವಾ - ಕಟ್ಟಿ, ಆಯಾಹಿ - ತೆಗೆದುಕೊಂಡುಬಾ, ಮಹಾಭಾಗಂ-ಮಹಾ ಪುಣ್ಯವಂತನಾದ, ಏನಂ ಈ ಶ್ರೀರಾಮನನ್ನು, ಇತೋಜನಪದಾತ್ - ಈ ದೇಶದಿಂದ, ಪರಂ - ಆಚೆ ಇರುವ ಪ್ರದೇಶವನ್ನು, ಪ್ರಾಪಯ - ಹೊಂದಿಸು. ‖ ೧೦ ‖ ಯತ್ - ಯಾವ ಕಾರಣ, ವೀರಃ - ಶೂರನಾದ, ಸಾಧುಂ-ಸತ್ಪುರುಷನಾದ ಶ್ರೀರಾಮನು, ಪಿತ್ರಾ-ತಂದೆಯಿಂದಲೂ, ಮಾತ್ರಾಚ-ತಾಯಿಯಿಂದಲೂ, ವನಂ - ವನವನ್ನು ಕುರಿತು, ನಿರ್ವಾಸ್ಯತೇ - ಹೊರಡಿಸಲ್ಪಡುತ್ತಾನೆಯೋ, ತತ್ - ಆ ಕಾರಣ, ಗುಣವತಾಂ - ಗುಣಶಾಲಿಗಳಾದವರ, ಗುಣಾನಾಂ - ಗುಣಗಳಿಗೆ, ಏವಂ - ಈಪರಿಯಾಗಿ, ಫಲಂ - ಪ್ರಯೋಜನವು, ಉಚ್ಯತೇ ಶಾಸ್ತ್ರದಿಂದ ಹೇಳಲ್ಪಡುತ್ತದೆ, ಇತಿ-ಇಂತೆಂದು, ಮನ್ಯೇ - ನೆನಸಿದೇನೆ. ‖ ೧೧ ‖ ಸುಮಂತ್ರಃ - ಸುಮಂತ್ರನು, ರಾಜ್ಞಃ - ದಶರಥರಾಯನ, ವಾಕ್ಯಂ - ವಚನವನ್ನು, ಆಜ್ಞಾಯ - ತಿಳಿದು, ಶೀಘ್ರವಿಕ್ರಮಃ - ಜಾಗ್ರತೆಯಾಗಿ ಹೋಗಿ, ರಥಂ- ರಥವನ್ನು, ಅಶ್ವೈಃ - ಕುದುರೆಗಳಿಂದ, ಅಲಂಕೃತಂ - ಅಲಂಕರಿಸಲ್ಪಟ್ಟದನ್ನಾಗಿ, ಯೋಜಯಿತ್ವಾ - ಕಟ್ಟಿ, ತತ್ರ - ಆ ಅಂತಃಪುರದಲ್ಲಿ, ಆಯಯೌ - ಬಂದನು. ‖ ೧೨ ‖ ಸೂತಃ - ಸಾರಥಿಯಾದ ಸುಮಂತ್ರನು, ರಾಜಪುತ್ರಾಯ - ಶ್ರೀರಾಮನಿಗೆ, ಅಂಜಲಿಂ - ಅಂಜಲಿಯನ್ನು, ಕೃತ್ವಾ -

---

ಉತ್ತಮಾಶ್ವಗಳನ್ನು ಕಟ್ಟದ ರಥದಲ್ಲಿ, ಶ್ರೀರಾಮನನ್ನು ಕೂಡಿಸಿಕೊಂಡು, ಈ ದೇಶದ ಎಲ್ಲೆಯವರೆವಿಗೂ ಬಿಟ್ಟು ಬರುವವನಾಗು. ಅಯ್ಯೋ ! ಲೋಕದಲ್ಲಿ ತಂದೆಯ ಮಾತಿಗಾಗಿ ಸಕಲೈಶ್ವರ್ಯವನ್ನು ತ್ಯಜಿಸುವರುಂಟೆ! ಅಲ್ಲದೆ ಲೋಕದಲ್ಲಿ ಗುಣಶಾಲಿಗಳಿಗೆ ಈ ರೀತಿಯಾಗಿಯೇ ಫಲವು ದೊರೆಯುತ್ತೆಂದು ತಿಳಿಯುತ್ತೇನೆ. ಮಹಾ ಸಾಧು ಶೀಲವುಳ್ಳ ಶ್ರೀರಾಮನು ತಾಯಿತಂದೆಗಳಿಂದಲೇ ಕಾಡಿಗೆ ಹೊರಡಿಸಲ್ಪಡುವನಲ್ಲವೆ ! ಅಯ್ಯೋ ! ರಾಮನು ಎಷ್ಟು ಗುಣಾಢ್ಯನು !!" ಎಂದು ಹೇಳಿದನು. ‖ ೮-೧೧ ‖ ಹೀಗೆಂದ ಒಡೆಯನ ಮಾತುಗಳನ್ನು ಕೇಳಿದ ಸುಮಂತ್ರನು ಜಾಗ್ರತೆಯಾಗಿ ರಥಕ್ಕೆ ಕುದುರೆಗಳನ್ನು ಕಟ್ಟಿ ಹೊಡೆದುಕೊಂಡು ಬಂದು, ಸುವರ್ಣಾಲಂಕೃತವಾದ ಆ ರಥವನ್ನು ಶ್ರೀರಾಮನ ಮುಂಗಡೆ

ಪರಮ ವಾಜಿಭಿಃ ॥ ೧೩ ॥ ರಾಜಾ ಸತ್ವರಮಾಹೂಯ ವ್ಯಾಪೃತಂ ವಿತ್ತ ಸಂಚಯೇ ॥ ಉವಾಚ ದೇಶಕಾಲಜ್ಞಂ ನಿಶ್ಚಿತಂ ಸರ್ವತಶ್ಶುಚಿಂ ॥ ೧೪ ॥ ವಾಸಾಂಸಿ ಚ ಮಹಾರ್ಹಾಣಿ ಭೂಷಣಾನಿ ವರಾಣಿಚ ॥ ವರ್ಷಾಣ್ಯೇತಾನಿ ಸಂಖ್ಯಾಯ ವೈದೇಹ್ಯಾಃ ಕ್ಷಿಪ್ರಮಾನಯ ॥ ೧೫ ॥ ನರೇಂದ್ರೇಣೈವ ಮುಕ್ತಸ್ತು ಗತ್ವಾ ಕೋಶಗೃಹಂ ತತಃ ॥ ಪ್ರಾಯಚ್ಛತ್ಸರ್ವಮಾಹೃತ್ಯ ಸೀತಾಯೈ ಸಮ ಮೇವ ತತ್ ॥ ೧೬ ॥ ಸಾ ಸುಜಾತಾ ಸುಜಾತಾನಿ ವೈದೇಹೀ ಪ್ರಸ್ಥಿತಾವನಂ॥

ಮಾಡಿ, ಕನಕಭೂಷಿತಂ - ಚಿನ್ನದಿಂದ ಅಲಂಕೃತವಾದ, ಪರಮವಾಜಿಭಿಃ - ಉತ್ತಮವಾದ ಕುದುರೆಗಳಿಂದ, ಯುಕ್ತಂ-ಕೂಡಿದ, ರಥಂ-ರಥವನ್ನು, ಆಚಚಕ್ಷೇ-ತಂದಿರುವೆನೆಂದು ತಿಳಿಸಿದನು. ॥೧೩॥ ರಾಜಾ - ದಶರಥರಾಯನು, ದೇಶಕಾಲಜ್ಞಂ - ದೇಶವನ್ನೂ ಕಾಲವನ್ನೂ ತಿಳಿದಿರುವ, ನಿಶ್ಚಿತಂ - ನಿಶ್ಚಯವುಳ್ಳ, ಸರ್ವತಃ - ಎಲ್ಲ ಕಡೆಯಲ್ಲಿಯೂ, ಶುಚಿಂ - ಶುದ್ಧ ಮನಸ್ಕನಾದ, ವಿತ್ತಸಂಚಯೇ-ಧನವನ್ನು ಸಂಗ್ರಹಿಸುವದರಲ್ಲಿ, ವ್ಯಾಪೃತಂ - ಅಧಿಕಾರಿಯಾದವನನ್ನು, ಸತ್ವರಂ - ಜಾಗ್ರತೆಯಾಗಿ, ಆಹೂಯ - ಕರೆದು, ಉವಾಚ - ಹೇಳಿದನು. ॥ ೧೪ ॥ ವೈದೇಹ್ಯಾಃ - ಸೀತಾದೇವಿಗೆ, ಏತಾನಿ ವರ್ಷಾಣಿ - ಈ ವನವಾಸ ವರುಷಗಳನ್ನು, ಸಂಖ್ಯಾಯ - ಲೆಕ್ಕಮಾಡಿ, ಮಹಾರ್ಹಾಣಿ - ಅಮೂಲ್ಯಗಳಾದ, ವಾಸಾಂಸಿಚ - ವಸ್ತ್ರಗಳನ್ನೂ, ವರಾಣಿ - ಶ್ರೇಷ್ಠಗಳಾದ, ಭೂಷಣಾನಿ - ಆಭರಣಗಳನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ಆನಯ - ತೆಗದುಕೊಂಡುಬಾ. ॥ ೧೫ ॥ ನರೇಂದ್ರೇಣ - ಅರಸನಿಂದ, ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಧನಾಧ್ಯಕ್ಷಸ್ತು-ಕೋಶಧ್ಯಕ್ಷನಾದರೆ, ತತಃ-ಬಳಿಕ, ಕೋಶಗೃಹಂ - ಬೊಕ್ಕಸದಮನೆಯನ್ನು ಕುರಿತು, ಗತ್ವಾ - ಹೋಗಿ, ಸರ್ವಂ - ಸಮಸ್ತವನ್ನು, ಅಹೃತ್ಯ - ತೆಗದುಕೊಂಡು ಬಂದು, ಸಮಮೇವ - ಹೆಚ್ಚುಕಡಿಮೆ ಇಲ್ಲದಂತೆಯೇ, ತತ್ - ಆ ವಸ್ತ್ರಭೂಷಣಜಾಲವನ್ನು, ಸೀತಾಯೈ - ಸೀತಾದೇವಿಗೆ, ಪ್ರಾಯಚ್ಛತ್ - ಕೊಟ್ಟನು. ॥ ೧೬ ॥ ಸುಜಾತಾ - ಸುಂದರಳಾದ, ಸುಜಾತಾ - (ಗೋ + ಮ) ಅಯೋನಿಜಳಾದ, ಸಾವೈದೇಹೀ - ಆ ಸೀತಾದೇವಿಯು, ವನಂ - ವನವನ್ನು ಕುರಿತು, ಪ್ರಸ್ಥಿತಾ - ಹೊರಟವಳಾಗಿ, ಸುಜಾತಾನಿ - ಸುಕುಮಾರಗಳಾದ, (ಗೋ) ಶಾಸ್ತ್ರೋಕ್ತಲಕ್ಷಣಗಳಿಂದ ಯುಕ್ತವಾದ, ಗಾತ್ರಾಣಿ - ಅವಯವಗಳನ್ನು, ವಿಚಿತ್ರೈಃ - ನಾನಾ ಬಣ್ಣಗಳಾದ, ತೈರ್ವಿಭೂಷಣೈಃ-ಆ ಒಡವೆಗಳಿಂದ, ಭೂಷಯಾಮಾಸ-

ನಿಲ್ಲಿಸಿ ಅಂಜಲಿಬದ್ಧನಾಗಿ "ರಥವು ಸಿದ್ಧವಾಗಿದೆ" ಎಂದರಿಕೆ ಮಾಡಿದನು. ಆಗ ಕಾಲ ದೇಶ ವರ್ತಮಾನಗಳನ್ನು ಚೆನ್ನಾಗಿ ತಿಳಿದಿರುವ ದಶರಥರಾಯನು ಕೋಶಾಧಿಪನನ್ನು ಕರೆದು, "ಅಯ್ಯಾ ಪ್ರಧಾನಿಯೆ! ನೀನು ಶುದ್ಧಾಂತಃಕರಣವುಳ್ಳವನು; ದೇಶಕಾಲಗಳನ್ನರಿತಿರುವವನು, ಆದುದರಿಂದ ಸೀತಾದೇವಿಗೆ ಹದಿನಾಲ್ಕು ವರ್ಷಗಳ ಪರ್ಯಂತವೂ ಉಟ್ಟು ತೊಟ್ಟುಕೊಳ್ಳಲು ಸಾಕಾದ ಅನೇಕ ವಸ್ತ್ರಾಭರಣಗಳನ್ನು ತೆಗೆದುಕೊಡು" ಎಂದು ಆಜ್ಞಾಪಿಸಿದನು. ಒಡೆಯನಿರೀತಿ ಅಣತಿಯಿಯಲು, ಆ ಕೋಶಾಧಿಪತಿಯು ಅವೆಲ್ಲವನ್ನೂ ತೆಗೆದುಕೊಂಡು ಬಂದು ಸೀತಾದೇವಿಗೆ ಕೊಟ್ಟವನಾದನು. ಆ ಬಳಿಕ ಮಹಾ ಲಾವಣ್ಯವತಿಯಾದ ಸೀತಾದೇವಿಯು ಅರಣ್ಯಕ್ಕೆ ಹೋಗಲು ಸಿದ್ಧಳಾಗಿ, ಸಲ್ಲಕ್ಷಣ ಲಕ್ಷಿತನಾದ ಅವಯವಗಳನ್ನು

ಭೂಷಯಾಮಾಸ ಗಾತ್ರಾಣಿ ತೈರ್ವಿಚಿತ್ರೈರ್ವಿಭೂಷಣೈಃ ॥ ೧೭ ॥ ವ್ಯರಾಜಯತ ವೈದೇಹೀ ವೇಶ್ಮ ತತ್ಸುವಿಭೂಷಿತಾ ॥ ಉದ್ಯತೋಂಶುಮತಃ ಕಾಲೇ ಖಂ ಪ್ರಭೇವ ವಿವಸ್ವತಃ ॥ ೧೮ ॥ ತಾಂ ಭುಜಾಭ್ಯಾಂ ಪರಿಷ್ವಜ್ಯ ಶ್ವಶ್ರೂರ್ವಚನಮಬ್ರವೀತ್ ॥ ಅನಾಚರಂತೀಂ ಕೃಪಣಂ ಮೂರ್ಧ್ನ್ಯುಪಾಘ್ರಾಯ ಮೈಥಿಲೀಂ ॥೧೯॥ ಅಸತ್ಯ ಸ್ಸರ್ವ ಲೋಕೇಸ್ಮಿನ್ ಸತತಂ ಸತ್ಕೃತಾಃ ಪ್ರಿಯೈಃ ॥ ಭರ್ತಾರಂ ನಾನುಮನ್ಯಂತೇ ವಿನಿಪಾತಗತಂ ಸ್ತ್ರಿಯಃ ॥ ೨೦ ॥ ಏಷಸ್ವಭಾವೋ ನಾರೀಣಾ ಮನುಭೂಯ ಪುರಾಸುಖಂ ॥ ಅಲ್ಪಾಮಪ್ಯಾಪದಂ ಪ್ರಾಪ್ಯ ದುಷ್ಯಂತಿ ಪ್ರಜಹಂತ್ಯಪಿ ॥ ೨೧ ॥ ಅಸತ್ಯ ಶೀಲಾ ವಿಕೃತಾ ದುರ್ಗ್ರಾಹ್ಯ

ಅಲಂಕರಿಸಿಕೊಂಡಳು. ॥೧೭॥ ವೈದೇಹೀ-ಸೀತಾದೇವಿಯು, ಸುವಿಭೂಷಿತಾ-ಚನ್ನಾಗಿ ಅಲಂಕೃತಳಾಗಿ, ಕಾಲೇ - ಪ್ರಾತಃಕಾಲದಲ್ಲಿ, ಉದ್ಯತಃ - ಉದಯವನ್ನು ಹೊಂದಿದ, ಅಂಶುಮತಃ - ಕಿರಣಗಳುಳ್ಳ, ವಿವಸ್ವತಃ - ಸೂರ್ಯನ, ಪ್ರಭಾ - ಕಾಂತಿಯು, ಖಮಿವ - ಅಂತರಿಕ್ಷವನ್ನಂತೆ, ತದ್ವೇಶ್ಮ-ಆ ಮನೆಯನ್ನು, ವ್ಯರಾಜಯತ - ಪ್ರಕಾಶವನ್ನಾಗಿಮಾಡಿದಳು. ॥ ೧೮ ॥ ಶ್ವಶ್ರೂಃ - ಅತ್ತೆಯಾದ ಕೌಸಲ್ಯಾದೇವಿಯು, ಕೃಪಣಂ - ಕ್ಷುದ್ರವ್ಯಾಪಾರವನ್ನು, ಅನಾಚರಂತೀಂ - ಆಚರಿಸದಿರುವ, ತಾಂವೈಥಿಲೀಂ - ಆ ಸೀತಾದೇವಿಯನ್ನು, ಭುಜಾಭ್ಯಾಂ - ಬಾಹುಗಳಿಂದ, ಪರಿಷ್ವಜ್ಯ - ಅಪ್ಪಿಕೊಂಡು, ಮೂರ್ಧ್ನಿ - ಮುಂಡೆಯಲ್ಲಿ, ಉಪಾಘ್ರಾಯ - ಆಘ್ರಾಣಿಸಿ, ವಚನಂ - ಮಾತನ್ನು, ಅಬ್ರವೀತ್ - ನುಡಿದಳು. ॥ ೧೯ ॥ ಅಸ್ಮಿನ್‌ಸರ್ವಲೋಕೇ - ಈ ಸಮಸ್ತ ಲೋಕದಲ್ಲಿಯೂ, ಅಸತ್ಯಃ - ದುಷ್ಟೆಯರಾದ, ಸ್ತ್ರಿಯಃ - ಸ್ತ್ರೀಯರು, ಸತತಂ - ಯಾವಾಗಲೂ, ಪ್ರಿಯೈಃ - ಗಂಡಂದರಿಂದ, ಸತ್ಕೃತಾಃ - ವಸ್ತ್ರಭೂಷಣಾದಿಗಳಿಂದ ಲಾಲನೆಮಾಡಲ್ಪಟ್ಟರೂ, ವಿನಿಪಾತಗತಂ, ವಿನಿಪಾತ-ಸ್ವಸ್ಥಾನಚ್ಯುತಿಯನ್ನು, ಗತಂ - ಹೊಂದಿರುವ, ಭರ್ತಾರಂ - ಗಂಡನನ್ನು, ನಾನುಮನ್ಯಂತೇ - ಗಣನೆಮಾಡುವದಿಲ್ಲ. ॥ ೨೦ ॥ ಪುರಾ - ಪೂರ್ವದಲ್ಲಿ, ಸುಖಂ - ಸುಖವನ್ನು, ಅನುಭೂಯ - ಅನುಭವಿಸಿ, ಅಲ್ಪಾಮಪಿ - ಅತ್ಯಲ್ಪವಾದ, ಪದಂ - ಸ್ಥಾನವನ್ನು, ಪ್ರಾಪ್ಯ - ಹೊಂದಿದಿರೂ, ದುಷ್ಯಂತಿ - ದೂಷಿಸುತ್ತಾರೆ, ಪ್ರಜಹಂತ್ಯಪಿ - ಬಿಡಲೂ ಬಿಡುತ್ತಾರೆ, ಏಷಃ - ಇದು, ನಾರೀಣಾಂ-ಸ್ತ್ರೀಯರಿಗೆ, ಸ್ವಭಾವಃ - ನಡೆವಳಿಕೆಯು. ॥ ೨೧ ॥ ಅಸತ್ಯಶಿಲಾಃ - ಅಸತ್ಯವಾದ ಸ್ವಭಾವವುಳ್ಳ,

ವಿಚಿತ್ರವಾದ ಆ ಒಡಿವೆಗಳಿಂದಲಂಕರಿಸಿದವಳಾದಳು. ಆಗಲಾಕೆಯು ಪ್ರದೋಷ ಕಾಲದಲ್ಲುದಯಿಸಿದ ಚಂದ್ರ ಪ್ರಭೆಯು ಅಂತರಿಕ್ಷವನ್ನು ಕಂಗೊಳಿಸುವ ಹಾಗೆ, ಅರಮನೆಯನ್ನೆಲ್ಲ ಬೆಳಗಿಸಿದಳು. ॥ ೧೭-೧೮ ॥ ಆ ಸಮಯದಲ್ಲಿ ರಾಮಮಾತೆಯಾದ ಕೌಸಲ್ಯಾದೇವಿಯು, ಸೊಸೆಯಾದ ಆ ಸೀತಾದೇವಿಯನ್ನು ಪಿಡಿದೆಳೆದಾಲಿಂಗಿಸಿಕೊಂಡು ಶಿರಸ್ಸನ್ನಾಘ್ರಾಣಿಸಿ, ಆಕೆಯನ್ನು ಕುರಿತು ಇಂತೆಂದಳು. “ ಅಮ್ಮಾ ! ಜಾನಕಿಯೆ, ಲೋಕದಲ್ಲಿ ಹೆಂಗಸರು ಯಾವಾಗಲೂ ತಮ್ಮ ಪತಿಗಳಿಂದ, ವಸ್ತ್ರ ಭೂಷಣಾದಿಗಳಿಂದ ಸತ್ಕೃತರಾಗುತ್ತಾರೆ, ಒಂದು ವೇಳೆ ಪತಿಗೆ ಚ್ಯುತಿಯುಂಟಾದರೆ ಅದನ್ನವರು ಲೆಕ್ಕಿಸುವುದಿಲ್ಲ. ಇವರು ಪುರುಷರಿಂದ ಮೊದಲು ಅನೇಕ ಸತ್ಕಾರಗಳನ್ನು ಪಡೆದಿದ್ದರೂ, ಸ್ವಲ್ಪವಾದ ಕಷ್ಟವು ಬಂದರೆ, ಅವರನ್ನೇ ದೂಷಿಸು

ಹೃದಯಾಸ್ಸದಾ ॥ ಯುವತ್ಯಃ ಪಾಪಸಂಕಲ್ಪಾಃ ಕ್ಷಣಮಾತ್ರಾದ್ವಿರಾಗಿಣಃ ॥ ೨೨ ॥ ನ ಕುಲಂ ನ ಕೃತಂ ವಿದ್ಯಾಂ ನ ದತ್ತಂ ನಾಪಿ ಸಂಗ್ರಹಂ ॥ ಸ್ತ್ರೀಣಾಂ ಗೃಹ್ಣಾತಿ ಹೃದಯಮನಿತ್ಯಹೃದಯಾಹಿ ತಾಃ ॥ ೨೩ ॥ ಸಾಧ್ವೀನಾಂ ಹಿ ಸ್ಥಿತಾನಾಂತು ಶೀಲೇ ಸತ್ಯೇ ಶ್ರುತೇ ದಮೇ ॥ ಸ್ತ್ರೀಣಾಂ ಪವಿತ್ರಂ ಪರಮಂ ಪತಿರೇಕೋ ವಿಶಿಷ್ಯತೇ ॥ ೨೪ ॥ ಸತ್ವಯಾ ನಾವಮಂತವ್ಯಃ ಪುತ್ರಃ ಪ್ರವ್ರಾಜಿತೋ ಮಮ ॥ ತವದೈವತಮಸ್ತ್ವೇಷ ನಿರ್ಧನಸ್ಸಧನೋಪಿ ವಾ ॥ ೨೫ ॥

ಯುವತ್ಯಃ - ಯುವತಿಯರು, ಸದಾ - ನಿರಂತರವು, ವಿಕೃತಾಃ - ವಂಚನೆಯುಳ್ಳವರು, ದುರ್ಗ್ರಾಹ್ಯ ಹೃದಯಾಃ, ದುರ್ಗ್ರಾಹ್ಯ - ತಿಳಿದುಕೊಳ್ಳುವದಕ್ಕೆ ಅಸಾಧ್ಯವಾದ, ಹೃದಯಾಃ - ಮನಸ್ಸುಳ್ಳವರು, ಪಾಪಸಂಕಲ್ಪಾಃ - ಪಾಪಮಾಡುವದರಲ್ಲಿಯೇ ಬುದ್ಧಿಯುಳ್ಳವರು, ಕ್ಷಣಮಾತ್ರಾತ್-ಕ್ಷಣಮಾತ್ರದಲ್ಲಿ, ವಿರಾಗಿಣಃ - ವೈರಾಗ್ಯವುಳ್ಳವರು. ॥ ೨೨ ॥ ಹಿ - ಯಾವ ಕಾರಣ, ತಾಃ - ಆ ಸ್ತ್ರೀಯರು, ಅನಿತ್ಯಹೃದಯಾಃ - ಚಂಚಲವಾದ ಮನಸ್ಸುಳ್ಳವರೂ, ತಸ್ಮಾತ್ - ಆ ಕಾರಣ, ಸ್ತ್ರೀಣಾಂ - ಹೆಂಗಸರ, ಹೃದಯಂ - ಮನಸ್ಸು, ಕುಲಂ - ಕುಲವನ್ನು, ನಗೃಹ್ಣಾತಿ - ಎಣಿಸುವದಿಲ್ಲ, ವಿದ್ಯಾಂ - ವಿದ್ಯೆಯನ್ನು, ನ - ಎಣಿಸುವದಿಲ್ಲ, ದತ್ತಂ - ದಾನವನ್ನು, ನಗೃಹ್ಣಾತಿ - ಎಣಿಸುವದಿಲ್ಲ. ಸಂಗ್ರಹಮಪಿ - ಪಾಣಿಗ್ರಹಣವನ್ನೂ. ನಗೃಹ್ಣಾತಿ - ಎಣಿಸುವದಿಲ್ಲ. ॥ ೨೩ ॥ ಶೀಲೇ - ಒಳ್ಳೇಸ್ವಭಾವದಲ್ಲಿಯೂ, ಸತ್ಯೇ - ಸತ್ಯದಲ್ಲಿಯೂ, ಶ್ರುತೇ - ಗುರುಜನೋಪದಿಷ್ಟವಾಕ್ಯದಲ್ಲಿಯೂ, ದಮೇ - ಶಾಂತಿಯಲ್ಲಿಯೂ, ಸ್ಥಿತಾನಾಂ - ಇರುತ್ತಿರುವ, ಸಾಧ್ವೀನಾಂ - ಪತಿವ್ರತೆಗಳಾದ, ಸ್ತ್ರೀಣಾಂ - ಸ್ತ್ರೀಯರಿಗೆ, ಪರಮಂಪವಿತ್ರಂ - ಪರಮಪಾವನನಾದ, ಪತಿಃ - ಗಂಡನು, ಏಕಃ - ಒಬ್ಬನೇ, ವಿಶಿಷ್ಯತೇಹಿ - ಹೆಚ್ಚಾದವನಷ್ಟೆ. ॥ ೨೪ ॥ ಪ್ರವ್ರಾಜಿತಃ - ವನವನ್ನು ಕುರಿತು ಹೊರಡಿಸಲ್ಪಟ್ಟ, ಮಮ - ನನ್ನ, ಪುತ್ರಃ - ಮಗನಾದ, ಸಃ - ಆ ನಿನ್ನ ಗಂಡನು, ತ್ವಯಾ - ನಿನ್ನಿಂದ, ನಾವಮಂತವ್ಯಃ - ಅವಮಾನಮಾಡಲ್ಪಡತಕ್ಕವನಲ್ಲ, ಏಷಃ - ಈ ಶ್ರೀರಾಮನು, ನಿರ್ಧನಃ - ಧನರಹಿತನಾದರೂ, ಸಧನೋಪಿವಾ - ಧನಿಕನಾದರೂ, ತವ - ನಿನಗೆ, ದೈವತಂ - ದೇವತಾಸ್ವರೂಪನು, ಅಸ್ತು - ಆಗಲಿ. ॥ ೨೫ ॥ ಸೀತಾ - ಸೀತಾದೇವಿಯು, ಧರ್ಮಾರ್ಥಸಂಹಿತಂ - ಧರ್ಮಾರ್ಥ

ತ್ತಾರೆ; ಇಷ್ಟೆಯಲ್ಲ! ಆ ಪುರುಷನನ್ನು ತೊರೆದೂ ಬಿಡುತ್ತಾರೆ. ಹೆಂಗಸರು ಬಹಳವಾದ ಸುಳ್ಳನ್ನಾಡುತ್ತಾರೆ; ಬಹಳ ವಂಚಕರು; ತಮ್ಮ ಅಂತರಂಗವನ್ನೆಂದಿಗೂ ಹೊರಸೂಸುವುದಿಲ್ಲ. ಯುವತಿಯರಾದವರು ಪಾಪ ಬುದ್ಧಿಯುಳ್ಳವರಾಗಿ, ಒಂದು ಕ್ಷಣಮಾತ್ರದಲ್ಲಿಯೇ ವೈರಾಗ್ಯವನ್ನು ತೋರಿಸಿಬಿಡುತ್ತಾರೆ. ಇಷ್ಟೇ ಅಲ್ಲ; ಚಂಚಲಚಿತ್ತೆಯರಾದ ಈ ಹೆಂಗಸರು ಕುಲಶೀಲಗಳನ್ನೂ, ತಮಗೆ ಮಾಡಿದ ಉಪಕಾರವನ್ನೂ, ವಿವಿಧವಾಗಿ ಬೋಧಿಸಿದ ವಿದ್ಯೆಯನ್ನೂ, ಕೊನೆಗೆ ಪಾಣಿಗ್ರಹಣವನ್ನೂ ತೃಣವನ್ನಾಗಿ ಕಾಣುತ್ತಾರೆ. ಆದುದರಿಂದೆಲೌ, ಸದ್ಗುಣಶಾಲಿಯಾದ ಸೀತಾದೇವಿಯೆ! ಸತ್ಯದಲ್ಲಿಯೂ, ಹಿರಿಯರು ಹೇಳಿದ ಮಾತಿನಲ್ಲಿಯೂ, ಶಾಂತಿಯಲ್ಲಿಯೂ, ನಿರಂತರವಿರುತ್ತಿರುವ ಕುಲಸ್ತ್ರೀಯರಿಗೆ ಪತಿಯೇ ಪರದೈವವು. ಆ ಪತಿವ್ರತೆಯರು ತಮ್ಮ ಪತಿಗಳನ್ನು ಪರಮ ಪಾವನನೆಂದೆಣಿಸುತ್ತಾರೆ. ದೇವಿ!

ವಿಜ್ಞಾಯ ವಚನಂ ಸೀತಾ ತಸ್ಯಾ ಧರ್ಮಾರ್ಥ ಸಂಹಿತಂ ॥ ಕೃತಾಂಜಲಿ
ರುವಾಚೇದಂ ಶ್ವಶ್ರೂಮಭಿಮುಖೇ ಸ್ಥಿತಾಂ ॥ ೨೬ ॥ ಕರಿಷ್ಯೇ ಸರ್ವಮೇವಾಹ
ಮಾರ್ಯಾ ಯದನುಶಾಸ್ತಿ ಮಾಂ ॥ ಅಭಿಜ್ಞಾಸ್ಮಿ ಯಥಾಭರ್ತುರ್ವರ್ತಿತವ್ಯಂ
ಶ್ರುತಂ ಚ ಮೇ ॥ ೨೭ ॥ ನಮಾ ಮಸಜ್ಜನೇನಾರ್ಯಾ ಸಮಾನಯಿತು
ಮರ್ಹತಿ ॥ ಧರ್ಮಾದ್ವಿಚಲಿತುಂ ನಾಹಮಲಂ ಚಂದ್ರಾದಿವ ಪ್ರಭಾ ॥ ೨೮ ॥
ನಾತಂತ್ರೀ ವಾದ್ಯತೇ ವೀಣಾ ನಾಚಕ್ರೋ ವರ್ತತೇ ರಥಃ ॥ ನಾಪತಿಸ್ಸುಖ
ಮೇಧೇತ ಯಾಸ್ಯಾದಪಿ ಶತಾತ್ಮಜಾ ॥ ೨೯ ॥ ಮಿತಂ ದದಾತಿ ಹಿ ಪಿತಾ

ಗಳಿಂದ ಕೂಡಿರುವ, ತಸ್ಯಾಃ - ಆ ಕೌಸಲ್ಯಾದೇವಿಯು, ವಚನಂ - ಮಾತನ್ನು, ವಿಜ್ಞಾಯ - ತಿಳಿದು, ಕೃತಾಂಜಲಿಃ - ಅಂಜಲಿಬದ್ಧಳಾಗಿ, ಅಭಿಮುಖೇ - ಇದುರಾಗಿ, ಸ್ಥಿತಾಂ - ನಿಂತಿರುವ, ಶ್ವಶ್ರೂಂ - ಅತ್ತೆಯಾದ ಕೌಸಲ್ಯಾದೇವಿಯನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದಳು. ॥ ೨೬ ॥ ಆರ್ಯಾ - ಪೂಜ್ಯಳಾದ ನೀನು, ಮಾಂ - ನನ್ನನ್ನು ಕುರಿತು, ಯತ್ - ಯಾವದನ್ನು, ಅನುಶಾಸ್ತಿ - ಆಜ್ಞಾಪಿಸಿದೆಯೋ, ಅಹಂ - ನಾನು, ತತ್ಸರ್ವಂ - ಆ ಸಮಸ್ತವನ್ನೂ, ಕರಿಷ್ಯೇ- ಮಾಡುತ್ತೇನೆ, ಮೇ - ನನ್ನಿಂದ, ಭರ್ತುಃ - ಗಂಡನಿಗೆ, ಯಥಾ - ಹೇಗೆ, ವರ್ತಿತವ್ಯಂ - ನಡು ಕೊಳ್ಳತಕ್ಕದೋ, ತಥಾ - ಹಾಗೆ, ಶ್ರುತಂ - ಕೇಳಲ್ಪಟ್ಟಿಧೆ, ಅಭಿಜ್ಞಾ - ತಿಳಿದವಳು, ಅಸ್ಮಿ - ಆಗಿ ಧೇನೆ. ॥ ೨೭ ॥ ಆರ್ಯಾ - ಪೂಜ್ಯಳಾದ ನೀನು, ಮಾಂ - ನನ್ನನ್ನು, ಅಸಜ್ಜನೇನ - ದುಷ್ಟ ಜನರೊಡನೆ, ಸಮಾನಯಿತುಂ - ಸಮಾನವಾಗಿ ಎಣಿಸುವುದಕ್ಕೆ, ನಾರ್ಹತಿ - ಯೋಗ್ಯಳಾಗಬೇಡ, ಅಹಂ - ನಾನು, ಚಂದ್ರಾತ್ - ಚಂದ್ರನೊಡನೆ, ಪ್ರಭೇವ - ಕಾಂತಿಯಂತೆ, ಧರ್ಮಾತ್ - ಧರ್ಮಕ್ಕಾಗಿ, ವಿಚಲಿತುಂ - ಕಲಿಸುವದಕ್ಕೆ, ನಾಲಂ - ಸಮರ್ಥಳಲ್ಲ. ॥ ೨೮ ॥ ವೀಣಾ - ವೀಣೆಯು, ಅತಂತ್ರೀ - ತಂತಿಗಳಿಲ್ಲದೆ, ನವಾದ್ಯತೇ - ಬಾರಿಸಲಾಗುವುದು, ಅಚಕ್ರಃ - ಚಕ್ರಗಳಿಲ್ಲದ, ರಥಃ - ರಥವು, ನವರ್ತತೇ - ತಿರುಗುವದಿಲ್ಲ, ಯಾ - ಯಾವ ಹೆಂಗಸು, ಶತಾತ್ಮಜಾ - ನೂರುಮಂದಿ ಮಕ್ಕಳುಳ್ಳವಳು, ಸ್ಯಾತ್ - ಆಗುವಳೋ, ಸಾ - ಅಂತಹವಳೂ ಕೂಡ, ಅಪತಿಃ - ಪತಿಹೀನಳಾದರೆ, ಸುಖಂ - ಸುಖವನ್ನು, ನೈಧೇತ - ಹೊಂದಲಾರಳು. ॥ ೨೯ ॥ ಪಿತಾ -

---

ಕಾಡಿಗೆ ಹೊರಡಿಸಲ್ಪಟ್ಟ ನನ್ನಮಗನೂ, ನಿನ್ನ ಪತಿಯೂ ಆದ ಶ್ರೀರಾಮಚಂದ್ರನಿಗೆ ಯಾವಾಗಲೇ ಆಗಲಿ ಅವಮನ್ನಣೆಯನ್ನು ಮಾಡಬೇಡ. ಈತನು ಧನಹೀನನಾದರೂ, ಧನವಂತನಾದರೂ, ಹೇಗಾದರೂ ನಿನಗೆ ದೈವಸ್ವರೂಪನಾಗಿರುವನು" ಎಂದು ಹೇಳಿದಳು. ॥೧೯-೨೫॥

ಈ ರೀತಿ ಧರ್ಮಾರ್ಥ ಸಾಧನ ಪರವಾದ ಅತ್ತೆಯ ಮಾತುಗಳನ್ನು ಕೇಳಿ ಸೀತಾದೇವಿಯು ಆಕೆಯ ಬಳಿ ಸಾರಿ ಕೈ ಮುಗಿದುಕೊಂಡು ಆಕೆಯನ್ನು ಕುರಿತು, "ಪೂಜ್ಯಳೆ! ನಿನ್ನಾಜ್ಞೆಯಂತೆಯೇ ನಡೆದುಕೊಳ್ಳುತ್ತೇನೆ. ಲೋಕದಲ್ಲಿ ಪತಿವ್ರತೆಯಾದವಳು ತನ್ನ ಪತಿಯು ಹೇಳಿದಂತೆ ಕೇಳಿಕೊಂಡಿರಬೇಕೆಂಬ ವಿಷಯವನ್ನು ನಾನು ಕೇಳಿರುತ್ತೇನೆ. ಪೂಜ್ಯಳಾದ ನೀನು ನನ್ನನ್ನು ದುಷ್ಟ ಸ್ತ್ರೀಯರಿಗೆ ಸಮಾನಳಾದವಳನ್ನಾಗಿ ತಿಳಿದುಕೊಳ್ಳಬೇಡ! ಚಂದ್ರಕಾಂತಿಯು ಆ ಚಂದ್ರನನ್ನು ಹೇಗೆ ಅಗಲುವುದಿಲ್ಲವೊ, ಹಾಗೆ ನಾನು ಧರ್ಮಮಾರ್ಗ

ಮಿತಂ ಮಾತಾ ಮಿತಂ ಸುತಃ ॥ ಅಮಿತಸ್ಯಹಿ ದಾತಾರಂ ಭರ್ತಾರಂ ಕಾ ನಪೂಜಯೇತ್ ॥ ೩೦ ॥ ಸಾಹಮೇವಂ ಗತಾ ಶ್ರೇಷ್ಠಾ ಶ್ರುತಧರ್ಮ ಪರಾಪರಾ ॥ ಆರ್ಯೇ ಕಿಮವಮನ್ಯೇಹಂ ಸ್ತ್ರೀಣಾಂ ಭರ್ತಾಹಿ ದೈವತಂ ॥೩೧॥ ಸೀತಾಯಾ ವಚನಂ ಶ್ರುತ್ವಾ ಕೌಸಲ್ಯಾ ಹೃದಯಂಗಮಂ ॥ ಶುದ್ಧ ಸತ್ವಾ ಮುಮೋ

ತಂದೆಯು, ಮಿತಂ - ಐಹಿಕೋಪಯುಕ್ತವಾದುದನ್ನು, ದದಾತಿ - ಕೊಡುವನು, ಮಾತಾ - ತಾಯಿಯು, ಮಿತಂ - ಮಿತವಾದ ಪದಾರ್ಥವನ್ನು, ದದಾತಿ - ಕೊಡುತ್ತಾಳೆ, ಸುತಃ - ಕುವರನು, ಮಿತಂ - ಮಿತವಾದ ವಸ್ತುವನ್ನು, ದದಾತಿ - ಕೊಡುತ್ತಾನೆ, ಅಮಿತಸ್ಯಚ - ಪಾರವಿಲ್ಲದ ಐಹಿಕಾಮುಷ್ಮಿಕ ಪದಾರ್ಥಗಳನ್ನು, ದಾತಾರಂ - ಕೊಡುತ್ತಿರುವ, ಭರ್ತಾರಂ - ಗಂಡನನ್ನು, ಕಾ - ಯಾವ ಸ್ತ್ರೀಯು, ನಪೂಜಯೇತ್ - ಪೂಜೆಮಾಡಲಾರಳು. ॥ ೩೦ ॥ ಏವಂಗತಾ - ಈಪರಿಯಾಗಿ ಪಾತಿವ್ರತ್ಯಧರ್ಮವನ್ನು ತಿಳಿದುಕೊಂಡಿರುವ, ಶ್ರೇಷ್ಠಾಶೃತಧರ್ಮಪರಾವರಾ, ಶ್ರೇಷ್ಠಾ - ನನಗಿಂತಲೂ ದೊಡ್ಡವರಾದ ತಾಯಿಯರೇಮೊದಲಾದವರಿಂದ, ಶೃತ - ಕೇಳಲ್ಪಟ್ಟ, ಧರ್ಮಪರಾವರಾ - (ಗೋ) ಸಾಮಾನ್ಯವಿಶೇಷಧರ್ಮಗಳುಳ್ಳವಳಾಗಿ, ಅಹಂ - ನಾನು, ಹೇ ಆರ್ಯೇ - ಎಲೌ ಪೂಜ್ಯಳೆ, ಕಿಮವಮನ್ಯೇ - ಏಕೆ ಅವಮಾನವಾಡುವೆನು, ಸ್ತ್ರೀಣಾಂ - ಹೆಂಗಸರಿಗೆ, ಭರ್ತಾ - ಗಂಡನು, ದೈವತಂಹಿ - ದೇವತಾಸ್ವರೂಪನಷ್ಟೆ. ॥ ೩೧ ॥ ಶುದ್ಧಸತ್ವಾ - ಶುದ್ಧ ಸತ್ವಗುಣಪ್ರಧಾನಳಾದ, ಕೌಸಲ್ಯಾ - ಕೌಸಲ್ಯಾದೇವಿಯು, ಹೃದಯಂಗಮಂ - ಮನೋರಂಜಕವಾದ, ಸೀತಾಯಾಃ - ಸೀತಾದೇವಿಯ, ವಚನಂ - ಮಾತನ್ನು, ಶೃತ್ವಾ - ಕೇಳಿ, ಸಹಸಾ - ಜಾಗ್ರತೆಯಾಗಿ, ದುಃಖಹರ್ಷಜಂ - ಶ್ರೀರಾಮನಿಗೆ ಅರಣ್ಯಗಮನಪ್ರಯುಯುಕ್ತ ದುಃಖದಿಂದಲೂ ಸೀತಾದೇವಿಯ ಪಾತಿವ್ರತ್ಯ ಧರ್ಮಶ್ರವಣದಿಂದ ಹುಟ್ಟಿದ ಸಂತೋಷದಿಂದಲೂ ಹುಟ್ಟಿದ, ಅಶೃ - ಕಂಬನಿಯನ್ನು, ಮುಮೋಚ -

---

ವನ್ನು ಬಿಡುವುದಿಲ್ಲ, ವೀಣೆಯು ತಂತಿಗಳಿಲ್ಲದೆ ಧ್ವನಿಗೈಯ್ಯುವುದಿಲ್ಲ ; ಚಕ್ರಗಳಿಲ್ಲದೆ ರಥವು ತಿರುಗುವುದಿಲ್ಲ, ಯಾವಳೇ ಆಗಲಿ, ನೂರು ಮಕ್ಕಳ ತಾಯಿಯಾದರೂ ಪತಿಯೊಬ್ಬನಿಲ್ಲದಿದ್ದರೆ ಸುಖ ಪಡಲಾರಳು. ಲೋಕದಲ್ಲಿ ತಂದೆಯಾದವನು ಉಪಯುಕ್ತವಾದ ಅನೇಕ ವಸ್ತುಗಳನ್ನು ಕೊಡುತ್ತಾನೆ. ತಾಯಿಯು ಮಿತವಾದ ಪದಾರ್ಥವನ್ನು ಕೊಡುವಳು. ಕುಮಾರನೂ ಸಹ ಹೀಗೆಯೆ ಕೆಲವು ಪದಾರ್ಥವನ್ನು ಕೊಡುತ್ತಾನೆ ; ಗಂಡನಾದರೋ, ಅಪಾರವಾದ ಐಹಿಕಾ ಮುಷ್ಮಿಕ ಸೌಖ್ಯ ರಾಶಿಯನ್ನೇ ಕೊಡುತ್ತಾನೆ. ಇಂತಹ ಪತಿ ದೇವನನ್ನು ಯಾವ ಹೆಂಗಸು ತಾನೆ ಮನ್ನಣೆ ಮಾಡಲಾರಳು ? ಹೀಗೆ ಪಾತಿವ್ರತ್ಯ ಧರ್ಮವನ್ನರಿತವಳೂ, ಹಿರಿಯರಿಂದ ಸಾಮಾನ್ಯ ವಿಶೇಷ ಧರ್ಮಗಳನ್ನು ತಿಳಿದುಕೊಂಡಿರುವಳೂ ಆದ ನಾನು, ನನ್ನ ಪತಿಯನ್ನು ಅವಮಾನಗೊಳಿಸುತ್ತೀನೆಯೇ ? ಎಂದಿಗೂ ಇಲ್ಲ ! ಸ್ತ್ರೀಯರಿಗೆ ಪತಿಯೇ ಪರದೈವವು'' ಎಂದಳು. ॥೨೬-೩೧॥ ಸೀತಾ ರಮಣಿಯು ಹೀಗೆನ್ನಲು ಶುದ್ಧ ಸತ್ವವೇ ಪ್ರಧಾನವಾದ ಗುಣವುಳ್ಳ ಕೌಸಲ್ಯಾದೇವಿಯು ಮನಕಿಂಪಾಗಿರುವ ಆಕೆಯ ಮಾತನ್ನು ಕೇಳಿ, ಶ್ರೀರಾಮನಿಗೆ ವನವಾಸವುಂಟಾಯಿತೆಂಬ ದುಃಖದಿಂದಲೂ, ಸೀತಾದೇವಿಯು ಬಿತ್ತರಿಸಿದ ಪತಿವ್ರತಾ ಧರ್ಮವನ್ನು ಕೇಳಿದುದರಿಂದ ಉಂಟಾದ ಆನಂದದಿಂ

ಚಾಶ್ರು ಸಹಸಾ ದುಃಖ ಹರ್ಷಜಂ ॥ ೩೨ ॥ ತಾಂ ಪ್ರಾಂಜಲಿರಭಿಕ್ರಮ್ಯ ಮಾತೃಮಧ್ಯೇತಿ ಸತ್ಕೃತಾಂ ॥ ರಾಮಃ ಪರಮ ಧರ್ಮಾತ್ಮಾ ಮಾತರಂ ವಾಕ್ಯ ಮಬ್ರವೀತ್ ॥ ೩೩ ॥ ಅಂಬ ಮಾದುಃಖಿತಾಭೂ ಸ್ತ್ವಂ ಪಶ್ಯತ್ವಂ ಪಿತರಂ ಮಮ ॥ ಕ್ಷಯೋಹಿ ವನವಾಸಸ್ಯ ಕ್ಷಿಪ್ರಮೇವ ಭವಿಷ್ಯತಿ ॥ ೩೪ ॥ ಸುಪ್ತಾಯಾ ಸ್ತೇ ಗಮಿಷ್ಯಂತಿ ನವವರ್ಷಾಣಿ ಪಂಚಚ ॥ ಸಾ ಸಮಗ್ರಮಿಹಪ್ರಾಪ್ತಂ ಮಾಂ ದ್ರಕ್ಷ್ಯಸಿ ಸುಹೃದ್ವೃತಂ ॥ ೩೫ ॥ ಏತಾವದಭಿನೀತಾರ್ಥ ಮುಕ್ತ್ವಾ ಸ ಜನನೀಂ ವಚಃ ॥ ತ್ರಯಶ್ಶತ ಶತಾರ್ಧಾಹಿ ದದರ್ಶಾವೇಕ್ಷ್ಯ ಮಾತರಃ ॥ ೩೬ ॥ ತಾಶ್ಚಾಪಿ ಸ ತಥೈವಾರ್ತಾ ಮಾತೄರ್ದಶರಥಾತ್ಮಜಃ ॥ ಧರ್ಮ

ಬಿಟ್ಟಳು. ॥ ೩೨ ॥ ಪರಮಧರ್ಮಾತ್ಮಾ - ಬಹಳ ಧರ್ಮಿಷ್ಠನಾದ, ರಾಮಃ - ಶ್ರೀರಾಮನು, ಮಾತೃಮಧ್ಯೇ - ತಾಯಿಯರಮುಂದುಗಡೆ, ಅತಿಸತ್ಕೃತಾಂ - ಬಹು ಪೂಜ್ಯಳಾದ, ತಾಂಮಾತರಂ- ಆ ಕೌಸಲ್ಯಾದೇವಿಯನ್ನು, ಅಭಿಕ್ರಮ್ಯ - ಪ್ರದಕ್ಷಿಣನಮಸ್ಕಾರಮಾಡಿ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು. ॥ ೩೩ ॥ ಹೇ ಅಂಬ - ಎಲೌ ತಾಯಿಯೇ, ತ್ವಂ - ನೀನು, ದುಃಖಿತಾ - ದುಃಖಗೊಂಡವಳು, ಮಾಭೂಃ - ಆಗಬೇಡ, ಮಮ - ನನ್ನ, ಪಿತರಂ - ತಂದೆಯನ್ನು, ತ್ವಂ - ನೀನು, ಪಶ್ಯ - ನೋಡು, ವನವಾಸಸ್ಯ - ವನವಾಸವನ್ನು, ಕ್ಷಯಃ - ಕಳಿಯೋಣವು, ಕ್ಷಿಪ್ರಮೇವ - ಜಾಗ್ರತೆಯಾಗಿ, ಭವಿಷ್ಯತಿಹಿ - ಆಗುವದಷ್ಟೆ. ॥ ೩೪ ॥ ತೇ - ನೀನು, ಸುಪ್ತಾಯಾಸ್ಸತ್ಯಾಃ - ಮಲಗಿರುವಹಾಗೆಯೇ, ನವವರ್ಷಾಣಿಪಂಚಚ - ಹದಿನಾಲ್ಕುವರುಷಗಳು, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ಗಮಿಷ್ಯಂತಿ - ಕಳದುಹೋಗುವವು, ಸಾ - ಅಂತಹ ನೀನು, ಸಮಗ್ರಂ - ಸಂಪೂರ್ಣ ಮನೋರಥವುಳ್ಳ, ಇಹ - ಇಲ್ಲಿ, ಪ್ರಾಪ್ತಂ - ಬಂದಿರುವ, ಸುಹೃದ್ವೃತಂ, ಸುಹೃತ್ - ಸ್ನೇಹಿತರಿಂದ, ವೃತಂ - ಸುತ್ತು ವರೆಯಲ್ಪಟ್ಟ, ಮಾಂ - ನನ್ನನ್ನು, ದ್ರಕ್ಷ್ಯಸಿ - ನೋಡುವೆ. ॥ ೩೫ ॥ ಸಃ - ಆ ಶ್ರೀರಾಮನು, ಜನನೀಂ - ತಾಯಿಯನ್ನು ಕುರಿತು, ಅಭಿನೀತಾರ್ಥಂ - ನಿಶ್ಚಿತವಾದ ಅರ್ಥವುಳ್ಳ, ಏತಾವತ್ - ಇಷ್ಟುಮಾತ್ರ, ವಚಃ - ಮಾತನ್ನು, ಉಕ್ತ್ವಾ - ಹೇಳಿ, ತ್ರಯಶ್ಶತಶತಾರ್ಧಾಃ-ಮುನ್ನೂರೈವತ್ತು ಸಂಖ್ಯೆಯುಳ್ಳ, ಮಾತರಃ- ತಾಯಿಯರನ್ನು, ಅವೇಕ್ಷ್ಯ - ಕಂಡು, ದದರ್ಶಹಿ - ನೋಡಿದನಷ್ಟೆ. ॥ ೩೬ ॥ ದಶರಥಾತ್ಮಜಃ-

ದಲೂ ಜನಿಸಿದ ಕಂಬನಿಗಳನ್ನುಸುರಿಸಿದಳು. ॥ ೩೨ ॥ ಈ ಸಮಯದಲ್ಲಿ ಶ್ರೀರಾಮಮೂರ್ತಿಯು ಜನನಿಯರ ಮಧ್ಯೆ ಮಹಾ ಪೂಜನೀಯಳಾದ ತನ್ನ ಜನನಿಯಾದ ಕೌಸಲ್ಯಾದೇವಿಯನ್ನು ಕುರಿತು, “ಜನನೀ ! ನೀನು ದುಃಖಿತಳಾಗಿರುವೆಯೆಂಬುದನ್ನು ನಾನು ಬಲ್ಲೆ ! ಆದರೂ ಜನಕನನ್ನು ಸಂತವಿಡು; ಒಂದು ರಾತ್ರಿಯೋಪಾದಿಯಲ್ಲಿ, ಹದಿನಾಲ್ಕು ವರ್ಷಗಳೆಂಬ ವನವಾಸ ಕಳೆದು ಹೋಗುವುದು. ಆಗ ನೀನು ಸಂಪೂರ್ಣ ಮನೋರಥನಾಗಿ ನಿನ್ನ ಸನ್ನಿಧಿಗೆ ಸ್ನೇಹಿತರೊಡಗೂಡಿ ಬರುವ ನನ್ನನ್ನು ನೋಡಿ ಆನಂದಿಸುವೆ” ಎಂದು ಹೇಳಿ, ಅಲ್ಲಿಯೇ ನೆರೆದಿದ್ದ ಮುನ್ನೂರೈವತ್ತು ಮಂದಿ ಮಲತಾಯಿಯರನ್ನೂ ಕಂಡು ಕೈ ಮುಗಿದುಕೊಂಡು ಅವರನ್ನು ಕುರಿತು, “ಎಲೌ ತಾಯಿಗಳಿರಾ ! ನಾನು ನಿಮ್ಮೆಲ್ಲರನ್ನೂ ಕೇಳಿ

ಯುಕ್ತಮಿದಂ ವಾಕ್ಯಂ ನಿಜಗಾದ ಕೃತಾಂಜಲಿಃ ॥ ೩೭ ॥ ಸಂವಾಸಾತ್ಪರುಷಂ ಕಿಂಚಿದಜ್ಞಾನಾದ್ವಾಪಿ ಯತ್ಕೃತಂ ॥ ತನ್ಮೇ ಸಮನುಜಾನೀತ ಸರ್ವಾಶ್ಚಾ ಮಂತ್ರಯಾಮಿ ವಃ ॥ ೩೮ ॥ ವಚನಂ ರಾಘವಸ್ಯೈತ ದ್ಧರ್ಮಯುಕ್ತಂ ಸಮಾಹಿತಂ ॥ ಶುಶ್ರುವು ಸ್ತಾಃ ಸ್ತ್ರಿಯಸ್ಸರ್ವಾ ಶೋಕೋಪಹತಚೇತಸಃ ॥ ೩೯ ॥ ಜಜ್ಞೇಥ ತಾಸಾಂ ಸನ್ನಾದಃ ಕ್ರೌಂಚೀನಾಮಿವ ನಿಸ್ವನಃ ॥ ಮಾನವೇಂದ್ರಸ್ಯ ಭಾರ್ಯಾಣಾಮೇವಂ ವದತಿ ರಾಘವೇ ॥ ೪೦ ॥

ದಶರಥರಾಯನ ಪುತ್ರನಾದ, ಸಃ - ಆ ಶ್ರೀರಾಮನು, ತಥೈವ - ಆ ಕೌಸಲ್ಯಾದೇವಿಯಂತೆ, ಆರ್ತಾಃ - ದೀನರಾದ, ತಾಃಮಾತೄಶ್ಚಾಪಿ ಆ ತಾಯಿಯರನ್ನು ಕುರಿತು, ಕೃತಾಂಜಲಿಃ - ಅಂಜಲಿಬದ್ಧನಾಗಿ, ಧರ್ಮಯುಕ್ತಂ - ಧರ್ಮದೊಡಗೂಡಿದ, ಇದಂವಾಕ್ಯಂ - ಈ ಮಾತನ್ನು, ಜಗಾದ - ಹೇಳಿದನು. ॥ ೩೭ ॥ ಸರ್ವಾಃ - ಸಮಸ್ತರಾದ, ವಃ - ನಿಮ್ಮನ್ನು, ಆಮಂತ್ರಯಾಮಿ - ಅಪ್ಪಣೆಕೇಳುವೆನು, ಸಂವಾಸಾತ್ - ಚಿರಪರಿಚಯದಿಂದ, ಅಜ್ಞಾನಾದ್ವಾಪಿ - ತಿಳುವಳಿಕೆ ಇಲ್ಲದ ಕಾರಣದಿಂದಲಾದರೂ ಸರಿಯೇ, ಮೇ ನನ್ನಿಂದ, ಯತ್ - ಯಾವುದು, ಕೃತಂ - ಮಾಡಲ್ಪಟ್ಟಿರುವುದೋ, ತತ್ - ಅದನ್ನು, ಸಮನುಜಾನೀತ - ಕ್ಷಮಿಸಿರುವೆವೆಂದು ಅಪ್ಪಣೆಕೊಡಿರಿ. ॥ ೩೮ ॥ ಸರ್ವಾಃ - ಸಮಸ್ತರಾದ, ತಾಸ್ತ್ರಿಯಃ - ಆ ಹೆಂಗಸರು, ರಾಘವಸ್ಯ - ಶ್ರೀರಾಮನ, ಧರ್ಮಯುಕ್ತಂ- ಧರ್ಮದಿಂದಕೂಡಿರುವ, ಸಮಾಹಿತಂ - ಸಮಾಧಾನಕರವಾದ, ಏತತ್‌ವಚನಂ - ಈ ಮಾತನ್ನು, ಶುಶ್ರುವುಃ - ಕೇಳಿದರು, ಶೋಕೋಪಹತಚೇತಸಃ - ವ್ಯಸನದಿಂದ ಹೊಡಿಯಲ್ಪಟ್ಟ ಮನಸ್ಸುಳ್ಳವರಾದರು. ॥ ೩೯ ॥ ಅಥ - ಬಳಿಕ, ರಾಘವೇ - ಶ್ರೀರಾಮನು, ಏವಂವದತಿಸತಿ - ಈಪರಿ ಹೇಳಲು, ಕ್ರೌಂಚೀನಾಂ - ಕ್ರೌಂಚಸ್ತ್ರೀಪಕ್ಷಿಗಳ, ನಿಸ್ವನ್ವಿವ - ಧ್ವನಿಯಂತೆ, ಮಾನವೇಂದ್ರಸ್ಯ - ದಶರಥರಾಯನ, ಭಾರ್ಯಾಣಾಂ - ಹೆಂಡತಿಯರಾದ, ತಾಸಾಂ - ಆ ಸ್ತ್ರೀಯರ, ಸನ್ನಾದಃ - ರೋದನಧ್ವನಿಯು, ಜಜ್ಞೇ - ಹುಟ್ಟಿತು. ॥ ೪೦ ॥ ಯತ್ - ಯಾವ, ದಶರಥವೇಶ್ಮ - ದಶರಥರಾಯನ ಮನೆಯು, ಪುರಾ - ಪೂರ್ವದಲ್ಲಿ, ಮುರಜಪಣವಮೇಘಘೋಷವತ್, ಮುರುಜ - ಮೃದಂಗಗಳ, ಪಣವ-ಢಕ್ಕೆಗಳ,ಮೇಘ-ಮೇಘವೆಂಬ ವಾದ್ಯದ,ಘೋಷವತ್-ಧ್ವನಿಯುಳ್ಳದ್ದು,ಅಭೂವ-ಆಯಿತೋ,

ಕೊಳ್ಳುತ್ತೇನೆ. ನಾನು ಅತಿ ಪರಿಚಯುದಿಂದಲಾಗಲಿ, ತಿಳಿಯದೆಯಾಗಲಿ ಯಾವ ಅಪರಾಧವನ್ನಾದರೂ ಮಾಡಿದ್ದರೆ ಅದನ್ನು ಕ್ಷಮಿಸಿ ಆಶೀರ್ವದಿಸಬೇಕೆಂದು ಬೇಡುತ್ತೇನೆ" ಎಂದು ಹೇಳಿದನು. ಧರ್ಮಯುಕ್ತವಾದ ಶ್ರೀರಾಮನ ಈ ನುಡಿಗಳನ್ನು ಕೇಳಿ ಕೈಕೇಯಿಯಾದೇವಿಯು ವಿನಹ ಮಿಕ್ಕ ಅವರೆಲ್ಲರೂ ಶೋಕಾಕ್ರಾಂತರಾಗಿ ಬಹಳವಾಗಿ ರೋದಿಸಿದರು. ॥ ೩೩-೩೯ ॥ ರಘುನಂದನನಂತು ನುಡಿದವನಾಗಲು ಆ ಅಂತಃಪುರ ಸ್ತ್ರೀಯರ ರೋದನಧ್ವನಿಯು ಕ್ರೌಂಚಪಕ್ಷಿಗಳ ಶಬ್ದದಂತೆ ಧ್ವನಿಗೊಳ್ಳುತ್ತಿದ್ದಿತು. ಆಗ ಯಾವ ದಶರಥಭೂಪಾಲನ ಅರಮನೆಯು ಪಟಹ, ನಿಸ್ಸಾಳ, ಭೇರಿಯೇ ಮೊದಲಾದ ವಾದ್ಯ ಧ್ವನಿಗಳಿಂದ ಗಂಭೀರ ಧ್ವನಿಪೂರಿತವಾಗಿದ್ದಿತೋ, ಅದೇ ಅರಮನೆಯು ಈಗ ಮನೋವ್ಯಥೆಯುಳ್ಳದಾಗಿಯೂ, ಬಹಳವಾದ ದುಃಖಭರಿತವಾ

ಮುರಜ ಪಣವ ಮೇಘ ಘೋಷವತ್
ದಶರಥ ವೇಶ್ಮ ಬಭೂವ ಯತ್ಪುರಾ ॥
ವಿಲಪಿತ ಪರಿದೇವನಾಕುಲಂ
ವ್ಯಸನಗತಂ ತದಭೂ ತ್ಸುದುಃಖಿತಂ ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಚತ್ವಾರಿಂಶಸ್ಸರ್ಗಃ.

ತತ್-ಆ ಮನೆಯು, ವ್ಯಸನಗತಂ-ಮನೋವ್ಯಥೆಯನ್ನು ಹೊಂದಿದುದಾಗಿ, ಸುದುಃಖಿತಂ-ಬಹಳವಾದ ದುಃಖವುಳ್ಳದಾಗಿ, ವಿಲಪಿತಪರಿದೇವನಾಕುಲಂ, ವಿಲಪಿತ - ವಿಲಾಪಧ್ವನಿಗಳಿಂದಲೂ, ಪರಿದೇವನ-ರೋದನಧ್ವನಿಗಳಿಂದಲೂ, ಆಕುಲಂ - ವ್ಯಾಪ್ತವಾದುದು, ಬಭೂವ - ಆಯಿತು. ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕ್ಯಾಂಡೇ ಏಕೋನಚತ್ವಾರಿಂಶಸ್ಸರ್ಗಃ.

ಗಿಯೂ, ವಿಲಾಪ ಧ್ವನಿಗಳಿಂದ ಶ್ರೀರಾಮನ ಗುಣಗಳನ್ನು ವಿಧವಿಧವಾಗಿ ವರ್ಣಿಸಿಕೊಂಡು ರೋದಿಸುವುದರಿಂದ ವ್ಯಾಪ್ತವಾದುದಾಗಿಯೂ ಆಯಿತು. ॥ ೪೧ ॥

ಇಂತಿದು ಕೌಸಲ್ಯೋಕ್ತ ಸೀತಾ ವಿಸ್ತೃತ ಪತಿವ್ರತಾ ಧರ್ಮ ಕಥನ
ವೃತ್ತಾಂತ ವಿವರಣವೆಂಬ ಮೂವತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತ್ವಾರಿಂಶಸ್ಸರ್ಗಃ.

ಅಥ ರಾಮಶ್ಚ ಸೀತಾಚ ಲಕ್ಷ್ಮಣಶ್ಚ ಕೃತಾಂಜಲಿಃ ॥ ಉಪಸಂಗೃಹ್ಯ ರಾಜಾನಂ ಚಕ್ರುರ್ದೀನಾಃ ಪ್ರದಕ್ಷಿಣಂ ॥ ೧ ॥ ತಂ ಚಾಪಿ ಸಮನುಜ್ಞಾಪ್ಯ ಧರ್ಮಜ್ಞ ಸ್ಸೀತಯಾ ಸಹ ॥ ರಾಘವಃ ಶೋಕಸಂಮೂಢೋ ಜನನೀ ಮಭ್ಯ ವಾದಯತ್ ॥ ೨ ॥ ಅನ್ವಕ್ಷಂ ಲಕ್ಷ್ಮಣೋ ಭ್ರಾತುಃ ಕೌಸಲ್ಯಾ ಮಭ್ಯವಾದ ಯತ್ ॥ ಅಥ ಮಾತುಸ್ಸುಮಿತ್ರಾಯಾ ಜಗ್ರಾಹ ಚರಣೌ ಪುನಃ ॥ ೩ ॥ ತಂ ವಂದಮಾನಂ ರುದತೀ ಮಾತಾ ಸೌಮಿತ್ರಿ ಮಬ್ರವೀತ್ ॥ ಹಿತಕಾಮಾ

ಅಥ - ಬಳಿಕ, ರಾಮಶ್ಚ - ಶ್ರೀರಾಮನೂ, ಸೀತಾಚ - ಸೀತಾದೇವಿಯೂ, ಕೃತಾಂಜಲಿಃ - ಅಂಜಲಿಬದ್ಧನಾದ, ಲಕ್ಷ್ಮಣಶ್ಚ - ಲಕ್ಷ್ಮಣಸ್ವಾಮಿಯೂ, ದೀನಾಃ - (ಗೋ + ಮ) ಮಾತಾಪಿತೃ ಶುಶ್ರೂಷೆಯು ತಪ್ಪಿಹೋಯಿತಲ್ಲ ಎಂದು ವ್ಯಸನಗೊಂಡು, ರಾಜಾನಂ - ದಶರಥರಾಯನಿಗೆ, ಉಪಸಂಗೃಹ್ಯ - ವಂದನಾದಿಗಳನ್ನು ಮಾಡಿ, ಪ್ರದಕ್ಷಿಣಂ - ಪ್ರದಕ್ಷಿಣವನ್ನೂ, ಚಕ್ರುಃ-ಮಾಡಿದರು. ॥ ೧ ॥ ಧರ್ಮಜ್ಞಃ - ಧರ್ಮವನ್ನರಿತ, ರಾಘವಃ - ಶ್ರೀರಾಮನು, ಸೀತಯಾಸಹ - ಸೀತಾದೇವಿ ಯೊಡನೆ, ಶೋಕಸಂಮೂಢಃ - ಶೋಕದಿಂದ ಭ್ರಾಂತನಾಗಿ, ತಂಚಾಪಿ - ಆ ದಶರಥರಾಯನನ್ನೂ, ಸಮನುಜ್ಞಾಪ್ಯ - ಸಮ್ಮತಿಯಿಂದ ಅಪ್ಪಣೆ ತೆಗದುಕೊಂಡು, ಜನನೀಂ - ತಾಯಿಯಾದ ಕೌಸಲ್ಯಾ ದೇವಿಯನ್ನೂ, ಅಭಿವಾದಯತ್ - ನಮಸ್ಕರಿಸಿದನು. ॥ ೨ ॥ ಲಕ್ಷ್ಮಣಃ-ಲಕ್ಷ್ಮಣನು, ಭ್ರಾತುಃ- ಅಣ್ಣನ, ಅನ್ವಕ್ಷಂ - ಹಿಂದುಗಡೆಯೇ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಅಭ್ಯವಾದ ಯತ್ - ನಮಸ್ಕರಿಸಿದನು, ಅಥ - ಬಳಿಕ, ಮಾತುಃ - ತಾಯಿಯಾದ, ಸುಮಿತ್ರಾಯಾಃ-ಸುಮಿತ್ರಾ ದೇವಿಯ, ಚರಣೌಪುನಃ - ಮತ್ತೆ ಪಾದಗಳನ್ನೂ, ಜಗ್ರಾಹ-ಗ್ರಹಿಸಿದನು. ॥೩॥ ವಂದಮಾನಂ- ನಮಸ್ಕರಿಸುತ್ತಿರುವ, ಸೌಮಿತ್ರಿಂ - ಸುಮಿತ್ರಾ ಪುತ್ರನಾದ, ಮಹಾ ಬಾಹುಂ - ಮಹಾ ಭುಜಪರಾ ಕ್ರಮಿಯಾದ, ಲಕ್ಷ್ಮಣಂ - ಲಕ್ಷ್ಮಣನನ್ನು, ಮೂರ್ಧ್ನಿ - ಶಿರಸ್ಸಿನಲ್ಲಿ, ಉಪಾಘ್ರಾಯ - ಆಘ್ರಾಣ ಮಾಡಿ, ಹಿತಕಾಮಾ - ಹಿತವನ್ನು ಅಪೇಕ್ಷಿಸುತ್ತಿರುವ, ಮಾತಾ - ತಾಯಿಯಾದ ಸುಮಿತ್ರಾ

ಆ ಬಳಿಕ ಶ್ರೀರಾಮಮೂರ್ತಿಯು, ಲಕ್ಷ್ಮಣ ಸೀತೆಯರೂ, ಕೈ ಮುಗಿದುಕೊಂಡು ದಶರಥರಾಯನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದರು. ॥೧॥ ಆಮೇಲೆ ಶ್ರೀರಾಮನು ಆತನಿಂದ ಅಣತಿಯನ್ನುಪಡೆದು ದುಃಖದಿಂದ ಭ್ರಾಂತನಾಗಿ ಸೀತಾಸಮೇತನಾಗಿ ನಿಜ ಜನನಿ ಯಾದ ಕೌಸಲ್ಯಾದೇವಿಗೆ ವಂದನೆಯನ್ನು ಮಾಡಿದನು.॥೨॥ಆಗ ಲಕ್ಷ್ಮಣಸ್ವಾಮಿಯು ಆತನ ಸಮ್ಮುಖದಲ್ಲಿಯೇ ಆ ಕೌಸಲ್ಯಾದೇವಿಗೆ ನಮಸ್ಕಾರವನ್ನು ಮಾಡಿ ತನ್ನತಾಯಿಯಾದ ಸುಮಿ ತ್ರೆಯ ಪಾದಗಳಿಗೆರಗಿದನು.॥೩॥ಆಗ ತನಗೆ ವಂದನೆ ಮಾಡುತ್ತಿರುವ ತನ್ನಕುಮಾರನಾದ, ಮಹಾಭುಜಬಲಪರಾಕ್ರಮಿಯಾದ ಲಕ್ಷ್ಮಣನನ್ನು ಆಲಿಂಗಿಸಿ ಶಿರವನ್ನಾಘ್ರಾಣಿಸಿ, ಆ ಸುಮಿತ್ರಾ

ಮಹಾಬಾಹುಂ ಮೂರ್ಧ್ನ್ಯುಪಾಘ್ರಾಯ ಲಕ್ಷ್ಮಣಂ ॥ ೪ ॥ (೧) ಸೃಷ್ಟಸ್ತ್ವಂ ವನವಾಸಾಯ ಸ್ವನುರಕ್ತಸ್ಸುಹೃಜ್ಜನೇ ॥ ರಾಮೇ ಪ್ರಮಾದಂ ಮಾಕಾರ್ಷೀಃ

ದೇವಿಯು, ರುದತೀ - ಅಳುತ್ತ, ಅಬ್ರವೀತ್ - ನುಡಿದಳು. ॥ ೪ ॥ ಹೇ ಪುತ್ರ - ಎಲೈ ಮಗನೆ, ಸುಹೃಜ್ಜನೇ - ಸ್ನೇಹಿತರಲ್ಲಿ, ಸ್ವನುರಕ್ತಃ - ಅಮಿತಾನುರಾಗವುಳ್ಳ, ತ್ವಂ - ನೀನು, ವನವಾಸಾಯ - ವನವಾಸಕ್ಕೆ, ಸೃಷ್ಟಃ - ಬ್ರಹ್ಮದೇವರಿಂದ ಸೃಜಿಸಲ್ಪಟ್ಟು, ಗಚ್ಛತಿ - ಪ್ರಯಾಣ

ದೇವಿಯು ಆತನಿಗೆ ಹಿತವನ್ನು ಕೋರುತ್ತ ಹೀಗೆ ಹೇಳಿದಳು. ॥೪॥ "ಮಗನೆ! ಪೂರ್ವದಲ್ಲಿ ನಿನ್ನನ್ನು ಸೃಜಿಸಿದ ಚತುರ್ಮುಖನು, ನೀನು ನಿಮ್ಮಣ್ಣನೊಡನೆ ವನವಾಸಕ್ಕೆ ತೆರಳುವುದ ಕ್ಕಾಗಿಯೇ ಸೃಜಿಸಿದ್ದಾನೆಂದು ತಿಳಿ. ನೀನು ಸಾಮಾನ್ಯವಾಗಿ ಮಿತ್ರರಲ್ಲಿ ಬಹಳ ಅನು

ಈ ಶ್ಲೋಕದಲ್ಲಿನ ವಿಶೇಷಾರ್ಥಗಳು.

(೧) ಭ್ರಾತರಿ – ಅಣ್ಣನಾದ ಶ್ರೀರಾಮನು, ಗಚ್ಛತಿಸತಿ–ಸೀತಾದೇವಿಯೊಡನೆ ಪುಷ್ಪಿತವಾದ ಅರಣ್ಯವನ್ನು ನೋಡು ವುದರಲ್ಲಿಯೇ ಪರವಶನಾಗಿ ಹೋಗುತ್ತಿರಲು, ಪ್ರಮಾದಂ – ಅಜಾಗರೂಕತೆಯನ್ನು, ಮಾಕಾರ್ಷೀಃ – ಮಾಡಬೇಡ, ಸುಹೃಜ್ಜನೇ – ನಿನಗೆ ಪರಮ ಮಿತ್ರನಾದ, ರಾಮೇ – ಶ್ರೀರಾಮನಲ್ಲಿ, ಸ್ವನುರಕ್ತಃ – ಅಪಾರವಾದ ಪ್ರೇಮೆಯುಳ್ಳ, ತ್ವಂ – ನೀನು, ವನವಾಸಾಯ – ಆ ಶ್ರೀರಾಮನೊಡನೆ ವನದಲ್ಲಿ ವಾಸ ಮಾಡಲು, ಸೃಷ್ಟಃ – ಸೃಜಿಸಲ್ಪಟ್ಟಿರುವೆ. (ಇಲ್ಲಿ, "ಸೃಷ್ಟಃ" ಎಂಬ ಕಡೆ ಮತ್ತೊಂದಭಿಪ್ರಾಯ:—ಲಕ್ಷ್ಮಣ! ಶ್ರೀರಾಮಮೂರ್ತಿಯು ಲೋಕ ಸಂರಕ್ಷಣಾರ್ಥ ವಾಗಿ ಕೌಸಲ್ಯಾ ಗರ್ಭದಲ್ಲಿ ದೈವಿಕವಾಗಿ ಹೇಗೆ ಜನಿಸಿದನೋ, ಹಾಗೆ ನೀನೂ ಸಹ ಆ ಮಹಾನುಭಾವನನ್ನು ಅನುಸರಿಸಲು ನನ್ನುದರದಲ್ಲಿ ಜನಿಸಿರುವೆ. ಆದುದರಿಂದ ನೀನು ಆತನು ಮಾಡುವ ವನಗಮನ ಸೌಂದರ್ಯಾವಲೋಕನದಿಂದ ರಕ್ಷಣ ಕರ್ಮದಲ್ಲಿ ಪ್ರಮಾದವನ್ನು ಮಾಡದೆ ಜಾಗರೂಕನಾಗಿರು. ಅಥವ, ಶ್ರೀರಾಮಾನುವರ್ತನಕ್ಕಾಗಿಯೇ ಹುಟ್ಟಿರುವ ನೀನು ಆತನೇ ವನಕ್ಕೆ ತೆರಳುತ್ತಿರುವಾಗ ನೀನೇ ಅಯೋಧ್ಯಾಪಟ್ಟಣದಲ್ಲಿರಬಾರದು, ನೀನೂ ಆತನೊಡನೆ ತೆರಳುವವನಾಗು.)

(ಇದು **ಗೋವಿಂದರಾಜರ** ವ್ಯಾಖ್ಯಾನವು.)

ತನಿಶ್ಲೋಕೀಕಾರರು ಅರ್ಥವನ್ನು ಹೀಗೆ ಪ್ರತಿಪಾದಿಸುತ್ತಾರೆ.

ಸೃಷ್ಟಸ್ತ್ವಂ – ಅಯ್ಯಾ, ಲಕ್ಷ್ಮಣನೇ! ನೀನು ನಿರಪೇಕ್ಷನಾಗಿ ಶ್ರೀರಾಮಚರಣಾಸಕ್ತನಲ್ಲವೆ? ಈ ವಿಷಯ ದಲ್ಲಿ ನಾನು ಹೇಳತಕ್ಕುದೇನಿದೆ? (ಅಥವ) ಕೈಂಕರ್ಯವನ್ನು ಸಾಧಿಸುವುದರಲ್ಲಿ ನೀನು ಆದಿಶೇಷನಾಗಿರುವೆ. ರಾಮ ನೊಡನೆ ನೀನೂ ವನವಾಸಕ್ಕೆ ಹೊರಟವನೇ ಆದರೆ ನಾನು ನಿನ್ನನ್ನು ಹೆತ್ತಿದ್ದಕ್ಕೆ ಸಾರ್ಥಕವಾಗುತ್ತದೆ. ಶ್ರೀರಾಮನ ವನವಾಸ ಸಹಾಯಕ್ಕಾಗಿಯೇ ಅಲ್ಲವೆ, ನಿನ್ನನ್ನು ನಾನು ಹೆತ್ತಿದ್ದು? "ನೀನು ಸಾಮಾನ್ಯವಾಗಿ ಸ್ನೇಹಿತರಾದವರಲ್ಲಿ ಬಹಳ ವಾತ್ಸಲ್ಯವುಳ್ಳವನು" ಎಂದ ಮೇಲೆ ಪ್ರಭುವಾದ ಶ್ರೀರಾಮನಲ್ಲಿ ಮತ್ತೆ ಬೇರೇ ಹೇಳಬೇಕೇ? ಆದುದರಿಂದ "ಆತನನ್ನು ಅನುಸರಿಸಿ ಹೋಗೆಂದು" ನಾನೇನೂ ಹೇಳಬೇಕಾಗಿಲ್ಲ. ಆದರೆ ಹೇಳತಕ್ಕ ವಿಷಯವೊಂದಿದೆ, ಅದೇನೆಂ ಬೆಯೋ ಹೇಳುತ್ತೇನೆ, ಕೇಳು. ಶ್ರೀರಾಮಾಗಮನ ವಿಷಯದಲ್ಲಿ ಲಕ್ಷ್ಯವನ್ನು ಮಾತ್ರವಿಟ್ಟು, ರಕ್ಷಣ ವಸ್ತುವಿನಲ್ಲಿ ಅಜಾಗರೂಕತೆಯನ್ನು ಮಾಡಬೇಡ.

ಮಹೇಶ್ವರ ತೀರ್ಥರು:—"ಅಯ್ಯಾ, ಲಕ್ಷ್ಮಣನೇ! ನೀನು ಮಿತ್ರ ವರ್ಗದವರಲ್ಲಿ ಅತ್ಯಂತ ಪ್ರೀತಿಯುಕ್ತ ನಾಗಿದ್ದರೂ, ಶ್ರೀರಾಮಮೂರ್ತಿಯೊಡನೆ ವನವಾಸ ಮಾಡುವದಕ್ಕಾಗಿಯೇ ನನ್ನಿಂದ ಆಜ್ಞಪ್ತನಾಗಿದ್ದೀಯೆ, ಅಂತಹ ನೀನು ಆತನೊಡನೆ ತೆರಳುವವನಾಗು. ರಾಮ ಸೇವೆಯಲ್ಲಿ ಅಲಕ್ಷ್ಯವನ್ನು ಎಂದಿಗೂ ಮಾಡಬೇಡ" ಎಂದು ಅರ್ಥ ಬರೆಯುತ್ತಾರೆ.

ಪುತ್ರ ಭ್ರಾತರಿ ಗಚ್ಛತಿ ॥ ೫ ॥ ವ್ಯಸನೀವಾ ಸಮೃದ್ಧೋವಾ ಗತಿರೇಷ ತವಾನಘ ॥ ಏಷಲೋಕೇ ಸತಾಂ ಧರ್ಮೋ ಯಜ್ಜ್ಯೇಷ್ಠ ವಶಗೋ ಭವೇತ್ ॥೬॥ ಇದಂ ಹಿ ವೃತ್ತಮುಚಿತಂ ಕುಲಸ್ಯಾಸ್ಯ ಸನಾತನಂ॥ದಾನಂ ದೀಕ್ಷಾಚ ಯಜ್ಞೇಷು ತನುತ್ಯಾಗೋ ಮೃತೇಷುಚ ॥ ೭ ॥ (೧) ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ

ಮಾಡುತ್ತಿರುವ, ಭ್ರಾತರಿ - ಅಣ್ಣನಾದ, ರಾಮೇ - ಶ್ರೀರಾಮನಲ್ಲಿ, ಪ್ರಮಾದಂ - ಬುದ್ಧಿಭ್ರಂಶ ರೂಪ ಮೋಹವನ್ನು, ಮಾಕಾರ್ಷೀಃ - ಮಾಡಬೇಡ. ॥ ೫ ॥ ಹೇ ಅನಘ - ಎಲೈ ನಿರ್ದೋಷನೆ, ತವ - ನಿನಗೆ, ಏಷಃ - ಈ ಶ್ರೀರಾಮನು, ವ್ಯಸನೀವಾ - ದುಃಖಗೊಂಡವನೇ ಆಗಲಿ, ಸಮೃದ್ಧೋವಾ- ಐಶ್ವರ್ಯವಂತನೇ ಆಗಲಿ, ಗತಿಃ - ಶರಣವು, ಜ್ಯೇಷ್ಠವಶಗಃ - ಹಿರಿಯಣ್ಣನ ಸ್ವಾಧೀನನಾಗಿ, ಭವೇದಿಯತ್ - ಇರಬೇಕೆಂಬುದಾವದೋ, ಏಷಃ - ಇದು, ಲೋಕೇ - ಲೋಕದಲ್ಲಿ, ಸತಾಂ - ಸತ್ಪುರುಷರ, ಧರ್ಮಃ - ಧರ್ಮವು. ॥ ೬ ॥ ಇದಂವೃತ್ತಂ - ಈ ನಿನ್ನ ನಡತೆಯು, ಅಸ್ಯ ಕುಲಸ್ಯ - ಈ ವಂಶಕ್ಕೆ, ಸನಾತನಂ - ಅನಾದಿಯಾಗಿ ಬಂದಿರುವದು, ಉಚಿತಂ - ಯೋಗ್ಯವಾಗಿರುವದು, ಯಜ್ಞೇಷು - ಯಾಗಗಳಲ್ಲಿ, ದಾನಂ - ದಕ್ಷಿಣಾದಾನವು, ಮೃಧೇಷು - ಯುದ್ಧಗಳಲ್ಲಿ, ತನುತ್ಯಾಗಃ - ಶರೀರತ್ಯಾಗವೂ, ಅಸ್ಯಕುಲಸ್ಯ - ಈ ಕುಲಕ್ಕೆ, ಉಚಿತಃ - ಯೋಗ್ಯವಾದ, ಧರ್ಮಃ - ಧರ್ಮವು. ॥ ೭ ॥ ರಾಮಂ - ಶ್ರೀರಾಮನನ್ನು, ದಶರಥಂ - ದಶರಥಮಹಾರಾಯನನ್ನಾಗಿ,

ರಾಗವುಳ್ಳವನು. ಶ್ರೀರಾಮನು ಮಿತ್ರನು ಮಾತ್ರವಲ್ಲದೆ ನಿಮ್ಮಣ್ಣನೂ ಆಗಿದ್ದಾನೆ. ಆದುದರಿಂದ ನೀನಾತನೊಡನೆ ವನಕ್ಕೆ ಹೋಗು ; ಶ್ರೀರಾಮಮೂರ್ತಿಯ ವಿಷಯದಲ್ಲೆಂದಿಗೇ ಆಗಲಿ ಪ್ರಮಾದವನ್ನಾಚರಿಸೀಯೆ? ಬಹಳ ಜಾಗರೂಕನಾಗಿರು. ನೀನು ನಿರ್ದೋಷಿಯು ; ಆದರೂ ನಾನು ನಿನಗೆ ಹೇಳುತ್ತೇನೆ. ದುಃಖಪಟ್ಟವನಾದರೂ, ದರಿದ್ರನಾದರೂ, ಐಶ್ವರ್ಯವಂತನಾದರೂ, ಶ್ರೀರಾಮನೇ ನಿನಗೆ ಗತಿಯೆಂಬುದನ್ನು ಚೆನ್ನಾಗಿ ತಿಳಿ. ಲೋಕದಲ್ಲಿ ಕಿರಿಯನು ಹಿರಿಯಣ್ಣನನ್ನನುಸರಿಸುವುದೇ ಧರ್ಮವು. ಈಗ ನೀನು ಆಚರಿಸುತ್ತಿರುವ ಈ ಜ್ಯೇಷ್ಠಾನುವರ್ತನವೂ, ಯಾಗ ಕಾಲಗಳಲ್ಲಿ ಭೂರಿದಕ್ಷಿಣೆಗಳನ್ನು ಕೊಡುವುದೂ, ಪ್ರಾಣಗಳ ಮೇಲಣ ಆಶೆಯಿಲ್ಲದೆ ಕಾಳೆಗಗಳಲ್ಲಿ ನುಗ್ಗುವಿಕೆಯೂ, ಈ ಇಕ್ಷ್ವಾಕು ಮನೆತನದ ಪರಂಪರಾಗತವಾದ ಧರ್ಮವೆಂದು ತಿಳಿ. ॥೫-೭॥ ಲಕ್ಷ್ಮಣ! ಶ್ರೀರಾಮಚಂದ್ರನನ್ನು

(೧) "ರಾಮಂ ದಶರಥಂ ವಿದ್ಧಿ":—"ರಾಮಂ - ರಾಮನನ್ನು, ದಶತಿ - ಮತ್ಸ್ಯ ಕಚ್ಛಪೋರಗಾದೀನ್ ದಂಷ್ಟ್ರ ವ್ಯಾಪಾರ ವಿಷಯಾನ್ ಕರೋತೀತಿ ದಶಃ ಪಕ್ಷೀ" ಎಂದರೆ, ಗರುಡನೇ ರಥವನ್ನಾಗುಳ್ಳ ವಿಷ್ಣುವನ್ನಾಗಿ ತಿಳಿ; ಜನಕಾತ್ಮಜಾಂ - ಸೀತಾದೇವಿಯನ್ನು, ಮಾಂ - ಆದಿಲಕ್ಷ್ಮಿಯೆಂದು, ವಿದ್ಧಿ - ತಿಳಿದುಕೋ, ಅಟವೀಂ -- ಅರಣ್ಯವನ್ನು, ಅಯೋಧ್ಯಾಂ - ಅಜ್ಞಾನಿಗಳಿಂದ ಹೊಂದಲಸದಳವಾದ ವೈಕುಂಠ ನಗರಿಯೆಂದು ತಿಳಿ. (ಅಥವ) "ರಾಮಂ ದಶರಥಂಚ ವಿದ್ಧಿ", "ಮಾಂ ಜನಕಾತ್ಮಜಾಂಚ ವಿದ್ಧಿ", "ಅಯೋಧ್ಯಾಂ ಅಟವೀಂಚ ವಿದ್ಧಿ" ಎಂದು ಅನ್ವಯವನ್ನು ಮಾಡಿಕೊಂಡರೆ, ಅಯ್ಯಾ, ಲಕ್ಷ್ಮಣನೇ! ರಾಮ ದಶರಥರಲ್ಲಿರುವ ತಾರತಮ್ಯವನ್ನು ವಿಚಾರಿಸಿ ನೋಡು; ನನ್ನನ್ನೂ ಸೀತಾದೇವಿಯನ್ನೂ ಗುಣಗಳಿಂದ ಯಾರು ಅಧಿಕರೆಂಬುದನ್ನು ವಿಮರ್ಶಿಸು; ನಾನು ನಿನ್ನ ಶ್ರೇಯಸ್ಸನ್ನು ಬಹಳವಾಗಿ ಬಯಸುತ್ತೇನೆಂದು ನೀನು ತಿಳಿದಿದ್ದೀಯೆ. ಹಾಗೆ ತಿಳಿಯಬೇಡ, ಸೀತಾದೇವಿಯೇ ನಿನಗೆ ಶ್ರೇಯಸ್ಸನ್ನು ಕೋರುವವಳೆಂಬುದನ್ನು ಚನ್ನಾಗಿ

ಜನಕಾತ್ಮಜಾಂ॥ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾ ಸುಖಂ॥೮॥

ವಿದ್ಧಿ - ತಿಳಿದುಕೋ, (ಅಂದರೆ ತಂದೆಯನ್ನಾಗಿ ತಿಳಿ) ಜನಕಾತ್ಮಜಾಂ - ಸೀತಾದೇವಿಯನ್ನು, ಮಾಂ - ನನ್ನನ್ನಾಗಿ, ವಿದ್ಧಿ - ಅರಿ, ಅಟವೀಂ - ಅರಣ್ಯವನ್ನು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನಾಗಿ, ವಿದ್ಧಿ - ತಿಳಿ, ಹೇ ತಾತ - ಎಲೈ ತಂದೆಯೇ, ಯಥಾಸುಖಂ - ಸುಖವಾಗಿ, ಗಚ್ಛ - ಹೋಗು. ॥೮॥ ಸಾ ಸುಮಿತ್ರಾ - ಆ ಸುಮಿತ್ರಾದೇವಿಯು, ಸಂಸಿದ್ಧಂ -

ತಂದೆಯಾದ ದಶರಥರಾಯನೆಂದು ತಿಳಿ; ಸೀತಾದೇವಿಯನ್ನು ನನ್ನನ್ನೇ ಎಂದು ಅರಿವವನಾಗು; ಅರಣ್ಯವನ್ನು ಅಯೋಧ್ಯಾ ನಗರಿಯಂತೆಯೇ ಭಾವಿಸು; ಸೀತಾರಾಮರನ್ನೇನೆಂದು ತಿಳಿದಿರುವೆ? ಶ್ರೀರಾಮನು ಸಾಕ್ಷಾದ್ಗರುಡ ವಾಹನನಾದ ಮಹಾವಿಷ್ಣುವು; ಸೀತಾದೇವಿಯೇ ಆದಿಲಕ್ಷ್ಮಿಯು; ಇವರ ಸಾನ್ನಿಧ್ಯವು ಮಹಾ ವೈಕುಂಠ ಪುರವೆಂದೇ ತಿಳಿವವ

ತಿಳಿವವನಾಗು. ಲಕ್ಷ್ಮಣ! ಈ ಅಯೋಧ್ಯಾ ಪಟ್ಟಣವನ್ನೂ, ನೀವು ಈಗ ಹೊರಟಿರುವ ಅರಣ್ಯವನ್ನೂ ಪರ್ಯಾಲೋಚಿಸು. ಈ ಪಟ್ಟಣಕ್ಕಿಂತಲೂ ಅರಣ್ಯವೇ ನಿನ್ನ ಕೈಂಕರ್ಯ ಸಾಧನೆಗೆ ಏಕಾಂತ ಸ್ಥಾನತೆಯಿಂದ ಪರಮ ಶ್ರೇಷ್ಠವೆನಿಸುವದು. (ಮತ್ತೊಂದಭಿಪ್ರಾಯ):—"ದಶರಥಂ ರಾಮಂ ವಿದ್ಧಿ" - ದಶರಥರಾಯನನ್ನು ವಿರಾಮ ಹೊಂದಿದವನನ್ನಾಗಿ ತಿಳಿ, "ಈ ರೀತಿ ದಶರಥರಾಯನು ಉಪರತನಾದ ಮೇಲೆ ಕೈಕೇಯಿಯಿಂದ ವಿವಾಸಿತಳಾದ ನಾನು ನನ್ನ ತಂದೆಯ ಮನೆಗೆ ಹೋಗುತ್ತೇನೆ" ಎಂಬ ಅರ್ಥವು "ಜನಕಾತ್ಮಜಾಂ ಮಾಂ ವಿದ್ಧಿ" ಎಂಬುದರಿಂದ ತಿಳಿದು ಬರುತ್ತದೆ. "ನೀವೆಲ್ಲರೂ ಅರಣ್ಯಕ್ಕೆ ತೆರಳಿದರೆ, ಜನರಹಿತವಾದೀ ಅಯೋಧ್ಯಾ ಪಟ್ಟಣವು ಅರಣ್ಯದಂತೆ ಭಯಂಕರವಾಗುತ್ತದೆ,"

(ಇದು **ಗೋವಿಂದರಾಜರ** ವ್ಯಾಖ್ಯಾನ ಸಾರವು.)

ತನಿ ಶ್ಲೋಕೀಕಾರರ ಅರ್ಥ ಸ್ವಾರಸ್ಯವು.

"ಅಯ್ಯಾ, ಲಕ್ಷ್ಮಣನೆ! ಉಪಾಧಿ ಸಹಿತನಾದ ದಶರಥರಾಯನಲ್ಲಿರುವ ಪಿತೃ ವಾತ್ಸಲ್ಯವನ್ನು ತೊರೆದು, ಉಪಾಧಿ ರಹಿತನಾದ ಶ್ರೀರಾಮನಲ್ಲಿ ಅನಿತರ ಸಾಧಾರಣವಾದ ಪಿತೃ ಸ್ನೇಹವನ್ನು ತಾಳುವವನಾಗು" ಎಂಬುದು "ರಾಮಂ ದಶರಥಂ ವಿದ್ಧಿ" ಎಂಬುದರ ಅಭಿಪ್ರಾಯ. "ಮಾಂ ವಿದ್ಧಿ ಜನಕಾತ್ಮಜಾಂ:—ನಾನು ನಿನ್ನ ಜನನಿಯು; ಸೋಪಾಧಿಕಳಾಗಿರುವೆನು. ಜನಕಾತ್ಮಜೆಯಾದರೋ ನಿರುಪಾಧಿಕ ಜನನಿಯು (ಜಗನ್ಮಾತೆಯು). ಆಕೆಯಲ್ಲಿ ಅನುಪಮಾನವಾದ ಭಕ್ತಿಯನ್ನು ತೋರುವವನಾಗು" ಎಂದರ್ಥ. "ಅಯೋಧ್ಯಾಂ ಅಟವೀಂ ವಿದ್ಧಿ" ಸೋಪಾಧಿಕವಾದ "ಈ ಅಯೋಧ್ಯಾ ಪಟ್ಟಣದಲ್ಲಿನ ಆಸೆಯನ್ನು ಳಿದು, ನಿರುಪಾಧಿಕವೂ, ರಾಮನಿವಾಸತ್ವೇನ ಪ್ರಾಪ್ಯೈಕ ಸ್ಥಾನವೂ ಆದ ಅರಣ್ಯದಲ್ಲಿ ಪ್ರೀತಿಯನ್ನು ಹೊಂದು" ಎಂದು ಅಭಿಪ್ರಾಯ. (ಅಥವ) ರಾಮನನ್ನು ದಶರಥ ಸಮಾನನನ್ನಾಗಿ ತಿಳಿ. "ಜ್ಯೇಷ್ಠ ಭ್ರಾತಾ ಪಿತೃ ಸಮಃ" ಎಂಬುದರಿಂದ. ಜಾನಕಿಯನ್ನು ಮಾತೃ ಸಮಾನಳೆಂದರಿಯುವನಾಗು. (ಅಥವ) ರಾಮನನ್ನು ದಶರಥನಿಗೆ ಸಮಾನವಾದ ಗುಣವುಳ್ಳವನೆಂದು ತಿಳಿ. "ಗುಣೈರ್ದಶರಥೋಪಮಃ" ಎಂದು ಹೇಳಿರುವುದರಿಂದ. ಮಹಾ ಗುಣಸಂಪನ್ನೆಯಾದ ಸೀತಾದೇವಿಯನ್ನು ನನ್ನಂತೆಯೇ ಸೇವಿಸಲ್ಪಡತಕ್ಕವಳೆಂದು ತಿಳಿವವನಾಗು. ರಮಣೀಯವಾದ ವಸ್ತು ಸಂಪನ್ನತೆಯಿರುವುದರಿಂದ ಅರಣ್ಯವು ಈ ಅಯೋಧ್ಯಾ ಪಟ್ಟಣಕ್ಕಿಂತಲೂ ಭೋಗ್ಯತಮವಾದುದೆಂದು ತಿಳಿವವನಾಗು. "ರಾಮಂ ದಶರಥಂ ವಿದ್ಧಿ" ಶ್ರೀರಾಮನನ್ನು ದಶರಥನಂತೆ ಸ್ತ್ರೀ ಪರವಶನೆಂದರಿಯುವವನಾಗು. (ಇದು ಮಾಯಾ ಮೃಗ ವಿಚಾರದಲ್ಲಿ ಸ್ಪಷ್ಟವಾಗುವುದು.)

ತನಿ ಶ್ಲೋಕೀಕಾರರ ಅನೇಕಾರ್ಥ ಸ್ವಾರಸ್ಯಗಳಲ್ಲಿ ಇನ್ನೊಂದು ಅರ್ಥ ಮಾತ್ರ ಬರೆದು ವಿರಮಿಸುತ್ತೇವೆ. "ರಾಮಂ ದಶರಥಂ ವಿದ್ಧಿ" ರಾಮನು "ಪದಾತಿ" ಎಂದು ತಿಳಿಯಬೇಡ, ದಶರಥಂ - ಪುಷ್ಪಕವೇ ಮೊದಲಾದ ಅನೇಕ ರಥಗಳಲ್ಲಿ ಕುಳಿತು ಸಂಚರಿಸುವವನನ್ನಾಗಿ, ವಿದ್ಧಿ - ತಿಳಿದುಕೊ, "ಮಾಂ ವಿದ್ಧಿ ಜನಕಾತ್ಮಜಾಂ", ನಾನು ಹೇಗೆ ದಶರಥ

ಲಕ್ಷ್ಮಣಂ ತ್ವೇವಮುಕ್ತ್ವಾ ಸಾ ಸಂಸಿದ್ಧಂ ಪ್ರಿಯ ರಾಘವಂ ||

ಪ್ರಯಾಣದಲ್ಲಿ ನಿಶ್ಚಯಬುದ್ಧಿಯುಳ್ಳ, ಪ್ರಿಯರಾಘವಂ, ಪ್ರಿಯ-ಅತಿ ವಿಶ್ವಾಸಪಾತ್ರನಾದ, ರಾಘವಂ-ಶ್ರೀರಾಮನೊಡನೆ ಇರುವ, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು ಕುರಿತು, ಏವಂ - ಈಪರಿಯಾಗಿ, ಉಕ್ತ್ವಾ - ಹೇಳಿ, ಪುನಃಪುನಃ - ಬಾರಿಬಾರಿಗೂ, ಗಚ್ಛಗಚ್ಛೇತಿ - ಹೋಗು ಹೋಗೆಂದು, ಉವಾಚ - ಹೇಳಿದಳು. || ೯ || ತತಃ - ಬಳಿಕ, ವಿನೀತಃ - ನಮ್ರನಾದ, ವಿನಯಜ್ಞಃ - ವಿನಯವನ್ನು ತಿಳಿದಿರುವ, ಮಾತಲಿಃ - ಮಾತಲಿಯು, ವಾಸವಂಯಥಾ - ದೇವೇಂದ್ರನನ್ನಂತೆ,

---

ನಾಗು. ದಶರಥ ಮಹೀಪಾಲನ ನುಡಿಯು ನೀತಿಯೆಂದೇ ಭಾವಿಸು; ನೀವೀಗ ಅರಣ್ಯಕ್ಕೆ ತೆರಳುತ್ತೀರಿ. ನಿಮ್ಮ ವಿಯೋಗ ದುಃಖದಿಂದ ದಶರಥರಾಯನು ಉಳಿಯುವುದಿಲ್ಲ. ಆಗ ನಾನು ಇಲ್ಲಿರುವುದಿಲ್ಲ; ನನ್ನ ತಂದೆಯ ಮನೆಯನ್ನು ಸೇರುತ್ತೇನೆ. ಈ ಅಯೋಧ್ಯಾ ಪಟ್ಟಣವು ಕಾಡಾಗುವುದು. ರಾಮನಿರುವ ಅರಣ್ಯವೇ ಪಟ್ಟಣವಾಗುತ್ತದೆ. ಮಗುವೆ! ನೀನಿದೆಲ್ಲವನ್ನೂ ಚೆನ್ನಾಗಿ ಪರ್ಯಾಲೋಚಿಸಿಕೊಂಡು ಸುಖವಾಗಿ ಹೋಗಿ ಬಾ; ನಿನಗೆ ಮಂಗಳವಾಗಲಿ!!" || ೮ || ಆ ಬಳಿಕ ಮಂತ್ರಿ ಪುಂಗವನಾದ ಸುಮಂತ್ರನು ಶ್ರೀರಾಮನ ಬಳಿ ಸಾರಿ ಕೈ ಮುಗಿದುಕೊಂಡು ಇಂದ್ರ, ಸಾರಥಿಯಾದ ಮಾತಲಿಯು ತನ್ನೊಡೆಯನಿಗೆ

ನೊಡನೆ ರಥದಲ್ಲಿ ಕುಳಿತು ಸಂಚರಿಸುತ್ತಿದ್ದನೋ ಹಾಗೆಯೇ ಸೀತಾದೇವಿಯು ಶ್ರೀರಾಮನೊಡನೆ ಸಂಚರಿಸಲು ಅರ್ಹಳೆಂದು ತಿಳಿ.

"ಲಕ್ಷ್ಮಣ! ಶ್ರೀರಾಮಮೂರ್ತಿಯ ಸೇವೆಯು ನಿನಗೆ ದೊರಕಿತು, ನಿನ್ನಂತಹ ಪುಣ್ಯವಂತರಿನ್ನಾರಾದರೂ ಉಂಟೆ?" ಎಂಬ ಆಶಯವನ್ನು ಹೃದಯದಲ್ಲಿಟ್ಟುಕೊಂಡು, "ತಾತ" ಎಂಬ ಸಂಬೋಧನೆಯು ನಿವೇಶಿತವಾಗಿರುವುದು. "ಶ್ರೀರಾಮನು ಯಾವ ಯಾವ ಮಾರ್ಗದಲ್ಲಿ ಹೋಗುತ್ತಾನೆಯೋ ಆಯಾಯ ಮಾರ್ಗದಲ್ಲಿ ಆತನನ್ನನುಸರಿಸಿ ನೀನು ಹೊರಟರೆ ಕೈಕೇಯಿಗೆ ಬಂದ ಅಪಕೀರ್ತಿಯು ನನಗೆಂದಿಗೂ ಬರುವುದಿಲ್ಲ. ಆದುದರಿಂದ ನನಗೆ ಅಪಕೀರ್ತಿಯನ್ನು ತಾರದಿರುವುದು ನಿನ್ನ ಕರ್ತವ್ಯ. ಇದನ್ನು ನೀನರಿತು ಸುಖವಾಗಿ ಹೋಗಿ ಬಾ" ಎಂಬುದು "ಯಥಾ ಸುಖಂ ಗಚ್ಛ" ಎಂಬುದರ ಅಭಿಪ್ರಾಯ.

ಮಹೇಶ್ವರ ತೀರ್ಥರು:—"ಶ್ರೀರಾಮನನ್ನು ಸಾಕ್ಷಾದ್ಭಗವತ್ಸ್ವರೂಪನೆಂದೂ, ಸೀತಾದೇವಿಯು ಆದಿ ಲಕ್ಷ್ಮಿಯೆಂದೂ ತಿಳಿದುಕೋ" ಎಂಬ ವಿಶೇಷಾರ್ಥವನ್ನು ಮಾತ್ರ ಬರೆದಿರುತ್ತಾರೆ.

ತಿಲಕಕಾರರಲ್ಲಿ ಹೆಚ್ಚಿನ ವಿಷಯಗಳೇನೂ ಇಲ್ಲ:—

ನಮ್ಮ ಅಭಿಪ್ರಾಯ:—

ಸುಮಿತ್ರಾ ವಾಕ್ಯ ನಿರೂಪಣದಲ್ಲಿ ಇಷ್ಟೇ ಸ್ವಾರಸ್ಯ:—ಏನೆಂದರೆ, ಶ್ರೀರಾಮನಲ್ಲಿ ನಿಜ ಕುವರನಿಗಿಂತಲೂ ಅಧಿಕ ವಾತ್ಸಲ್ಯವುಳ್ಳ ಸುಮಿತ್ರೆಯು, "ಲಕ್ಷ್ಮಣ! ರಾಮನು ನಿನಗೆ ತಂದೆಗೆ ಸಮಾನನು, ಸೀತಾದೇವಿಯು ನನ್ನ ಸಮಾನಳು, ಇವರನ್ನು ಸೇವಿಸುವುದು ನಿನ್ನ ಕರ್ತವ್ಯ. ಮಗುವೇ! ನಾನು ಹೇಳಿದ ಈ ನಿಜ ತತ್ವವನ್ನು ಮನಸ್ಸಿನಲ್ಲಿ ಧಾರಣೆ ಮಾಡಿಕೊಂಡು ಜಿತೇಂದ್ರಿಯನಾಗಿ ಶ್ರೀ ಸೀತಾರಾಮರನ್ನು ಜಗನ್ಮಾತಾ ಪಿತೃಗಳೆಂದರಿತು ಸೇವೆ ಮಾಡುತ್ತ ಸುಖವಾಗಿ ಹೋಗಿ ಬಾ" ಎಂದು ಮಾತ್ರ. ನಾನಾರ್ಥಗಳನ್ನು ಬರೆಯಲು ಹೊರಟರೆ ರಾಮಾಯಣಾದ್ಯಂತವನ್ನೂ ಅನ್ವಯಿಸಿಕೊಂಡು ನಿರೂಪಿಸಬಹುದು.

"ರಾಮಂ ದಶರಥಂ ವಿದ್ಧಿ" ಎಂಬ ಶ್ಲೋಕವಾದ ಮೇಲೆ "ಲಕ್ಷ್ಮಣಂ **ತ್ವೇವಮುಕ್ತ್ವಾಸಾ**" ಎಂಬ

ಸುಮಿತ್ರಾ (೧) ಗಚ್ಛ ಗಚ್ಛೇತಿ ಪುನಃ ಪುನ ರುವಾಚ ತಂ ||೯|| ತತ ಸ್ಸುಮಂತ್ರಃ ಕಾಕುತ್ಸ್ಥಂ ಪ್ರಾಂಜಲಿರ್ವಾಕ್ಯ ಮಬ್ರವೀತ್ || ವಿನೀತೋ ವಿನಯಜ್ಞಶ್ಚ ಮಾತಲಿರ್ವಾಸವಂ ಯಥಾ ||೧೦|| ರಥಮಾರೋಹ ಭದ್ರಂ ತೇ ರಾಜಪುತ್ರ ಮಹಾಯಶಃ || ಕ್ಷಿಪ್ರಂ ತ್ವಾಂ ಪ್ರಾಪಯಿಷ್ಯಾಮಿ ಯತ್ರ ಮಾಂ ರಾಮ ವಕ್ಷ್ಯಸಿ ||೧೧|| ಚತುರ್ದಶಹಿ ವರ್ಷಾಣಿ ವಸ್ತವ್ಯಾನಿ ವನೇ ತ್ವಯಾ ||

ಸುಮಂತ್ರಃ - ಸುಮಂತ್ರನು, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು. || ೧೦ || ಹೇ ಮಹಾಯಶಃ - ಎಲೈ ಮಹಾ ಕೀರ್ತಿವಂತನೇ, ಹೇ ರಾಜಪುತ್ರ - ಎಲೈ ರಾಜಕುವರನೆ, ಹೇ ರಾಮ - ಎಲೈ ಶ್ರೀರಾಮನೇ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ಕ್ಷಿಪ್ರಂ - ಜಾಗ್ರತೆಯಾಗಿ, ರಥಂ - ರಥವನ್ನು, ಆರೋಹ - ಹತ್ತುವನಾಗು, ಯತ್ರ - ಯಾವ ಪ್ರದೇಶವಿಷಯವಾಗಿ, ಮಾಂ - ನನ್ನನ್ನು, ವಕ್ಷ್ಯಸಿ - ಹೇಳುತ್ತೀಯೊ, ತತ್ರ - ಆ ದೇಶವನ್ನು, ತ್ವಾಂ - ನಿನ್ನನ್ನು, ಪ್ರಾಪಯಿಷ್ಯಾಮಿ - ಹೊಂದಿಸುವೆನು. || ೧೧ || ದೇವ್ಯಾ - ಕೈಕೇಯಿದೇವಿಯಿಂದ, ಯಾನಿ - ಎಷ್ಟುವರುಷಗಳು, ವನೇ - ವನದಲ್ಲಿ, ವಸ್ತವ್ಯಾನೀತಿ - ಇರತಕ್ಕದೆಂದು, ಚೋದಿತಃ - ಪ್ರೇರಿತ

ಬನಿಸವಂಗ್ನೆಸಂತೆ, ಆತನನ್ನು ಕುರಿತು, "ಎಲೈ ಮಹಾ ಕೀರ್ತಿವಂತನಾದ ಶ್ರೀರಾಮನೆ! ರಥಾರೂಢನಾಗು; ಶೀಘ್ರವಾಗಿ ನಿನ್ನನ್ನು ಅರಣ್ಯಕ್ಕೆ ಕರೆದುಕೊಂಡು ಹೋಗಿ ನೀನು ಕಳುಹಿಸುವ ಸ್ಥಳದಿಂದ ಹಿಂತಿರುಗಿ ಬರುತ್ತೇನೆ. ನಿನ್ನ ತಾಯಿಯಾದ ಕೈಕೇಯಿದೇವಿಯು ಹೇಳಿದ ಪ್ರಕಾರ ಹದಿನಾಲ್ಕು ವರುಷಗಳ ವನವಾಸಕ್ಕೆ ಪ್ರಾರಂಭ ಮಾಡು" ಎಂದು ಹೇಳಿದನು.

ಶ್ಲೋಕವನ್ನು ಹೇಳಿಕೊಳ್ಳಬೇಕೆಂದು **ಮಹೇಶ್ವರ ತೀರ್ಥರ** ಅಭಿಪ್ರಾಯ. ನಮಗೂ ಇದು ಸೂಕ್ತವಾಗಿ ಕಾಣುತ್ತೆ. ಏಕೆಂದರೆ, "ಗಚ್ಛ ಗಚ್ಛೇತಿ ಪುನಃ ಪುನಃ ಉವಾಚ ತಂ" ಎಂಬ ಸುಮಿತ್ರಾ ವಾಕ್ಯವು ಲಕ್ಷ್ಮಣನಿಗೆ ಮಾಡಿದ ಉಪದೇಶಕ್ಕೆ ಕೊನೆಯದೆಂದು ಝುಟಿತಿ ಪ್ರತಿಭಾಸವಾಗುತ್ತದೆ.

ತನಿ ಶ್ಲೋಕೀ ಮತ್ತು **ಗೋವಿಂದರಾಜೀಯರುಗಳ** ಅಭಿಮತವು ಈಗಿರುವ ಅನುಕ್ರಮಣಿಕೆಯೇ ಸಾಧುವೆಂದು.

---

(೧) "ಗಚ್ಛ ಗಚ್ಛೇತಿ ಪುನಃ ಪುನರುವಾಚ" ಎಂಬ ಕಡೆ ಉತ್ಸಾಹ ಶೀಲೆಯಾದ ಸುಮಿತ್ರೆಯು ಯಾವ ವಿಧವಾದ ಹೃದಯ ಕಲ್ಮಷವೂ ಇಲ್ಲದೆ, ಮಗನನ್ನು ಹೋಗಿ ಬಾರೆಂದು ಹೇಳಿದಳೆಂಬ ಅಭಿಪ್ರಾಯವು ತೋರುತ್ತದೆ. ಇದರಿಂದ ಆಕೆಗೆ ಶ್ರೀರಾಮಮೂರ್ತಿಯಲ್ಲಿದ್ದ ನಿರತಿಶಯವಾದ ಪ್ರೇಮೆಯು ವಿದಿತವಾಗುವುದು.

"ಗಚ್ಛಗಚ್ಛ" ಎಂಬ ದ್ವಿರುಕ್ತಿಯಿಂದ ಸುಮಿತ್ರಾದೇವಿಗೂ ಶ್ರೀರಾಮನ ಸಂಗಡ ಪ್ರಯಾಣ ಮಾಡಬೇಕೆಂಬ ಆದರಣೆಯು ಸೂಚಕವಾಯಿತು. ಆದರಿಂದಲೇ ಪುನಃ ಪುನಃ – ಬಾರಿಬಾರಿಗೂ, (ನಾನೆಂತೂ ರಾಮನ ಸಂಗಡ ಬಂದು ಕೃತಾರ್ಥಳಾಗಲಾರೆಂಬ ಭಾವವು ಸೂಚಕವಾಯಿತು). ಮತ್ತು ಲಕ್ಷ್ಮಣನಿಗೆ ಪಿತೃ, ಮಾತೃ, ಪಟ್ಟಣ ಇವುಗಳ ಸ್ಮರಣೆ ಬಂದ ಕಾಲದಲ್ಲಿ ಮನಶ್ಚಾಂಚಲ್ಯ ಉಂಟಾದೀತೆಂದು ಆಲೋಚಿಸಿ ಸುಮಿತ್ರೆಯು ಅದಕ್ಕೆ ಪ್ರತಿನಿಧಿಯಾಗಿ ಲಕ್ಷ್ಮಣನಿಗೆ ಉಪದೇಶ ಮಾಡುತ್ತಾಳೆ.

ತಾನ್ಯುಪಕ್ರಮಿತವ್ಯಾನಿ ಯಾನಿ ದೇವ್ಯಾಸಿ ಚೋದಿತಃ ||೧೨|| ತಂ ರಥಂ ಸೂರ್ಯಸಂಕಾಶಂ ಸೀತಾ ಹೃಷ್ಟೇನ ಚೇತಸಾ || ಆರುರೋಹ ವರಾರೋಹಾ ಕೃತ್ವಾಲಂಕಾರ ಮಾತ್ಮನಃ ||೧೩|| ಅಥೋಜ್ವಲನ ಸಂಕಾಶಂ ಚಾಮೀಕರ ವಿಭೂಷಿತಂ || ತಮಾರುರುಹತು ಸ್ತೂರ್ಣಂ ಭ್ರಾತರೌ ರಾಮಲಕ್ಷ್ಮಣೌ ||೧೪|| ವನವಾಸಂಹಿ ಸಂಖ್ಯಾಯ ವಾಸಾಂಸ್ಯಾಭರಣಾನಿಚ || ಭರ್ತಾರ ಮನುಗಚ್ಛಂತ್ಯೈ ಸೀತಾಯೈ ಶ್ವಶುರೋ ದದೌ ||೧೫|| ತಥೈವಾಯುಧ ಜಾಲಾನಿ ಭ್ರಾತೃಭ್ಯಾಂ ಕವಚಾನಿಚ || ರಥಮಧ್ಯೇ ಪ್ರತಿನ್ಯಸ್ಯ ಸ ಚರ್ಮ ಕಠಿನಂ ಚ ತತ್ ||೧೬|| ಸೀತಾ ತೃತೀಯಾ ನಾರೂಢಾ ದೃಷ್ಟ್ವಾ ಧೃಷ್ಟ ಮಚೋದ

ನಾದವನು, ಅಸಿ - ಆಗಿರುವೆಯೋ, ತಾನಿ - ಅಂತಹ, ಚತುರ್ದಶವರ್ಷಾಣಿ - ಆ ಹದಿನಾಲ್ಕುವರುಷಗಳು, ತ್ವಯಾ - ನಿನ್ನಿಂದ, ಉಪಕ್ರಮಿತವ್ಯಾನಿ - ಈಗಲೇ ಆರಂಭಿಸತಕ್ಕವುಗಳು, ಇತಿ - ಇಂತೆಂದು, ಅಬ್ರವೀತ್ - ನುಡಿದನು. ||೧೨|| ವರಾರೋಹಾ - ಶ್ರೇಷ್ಠ ಸ್ತ್ರೀಯಾದ, ಸೀತಾ - ಸೀತಾದೇವಿಯು, ಆತ್ಮನಃ-ತನಗೆ, ಅಲಂಕಾರಂ-ಅಲಂಕಾರವನ್ನು, ಕೃತ್ವಾ-ಮಾಡಿಕೊಂಡು,ಹೃಷ್ಟೇನ-ಹರ್ಷಯುಕ್ತವಾದ, ಚೇತಸಾ - ಮನಸ್ಸಿನಿಂದ, ಸೂರ್ಯಸಂಕಾಶಂ - ಸೂರ್ಯನಿಗೆ ಸಮಾನವಾದ, ತಂರಥಂ ಆ ರಥವನ್ನು, ಆರುರೋಹ - ಏರಿದಳು. ||೧೩|| ಅಥ - ಬಳಿಕ, ಭ್ರಾತರೌ - ಅಣ್ಣತಮ್ಮಂದಿರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರಿಬ್ಬರೂ, ಚಾಮೀಕರವಿಭೂಷಿತಂ - ಚಿನ್ನದಿಂದ ಅಲಂಕೃತವಾದ, ಜ್ವಲನಸಂಕಾಶಂ - ಅಗ್ನಿಗೆ ಸಮಾನವಾದ, ತಂ ಆ ರಥವನ್ನು, ತೂರ್ಣಂ-ಜಾಗ್ರತೆಯಾಗಿ, ಆರುರುಹತುಃ - ಏರಿದರು. ||೧೪|| ಶ್ವಶುರಃ - ಮಾವನಾದ ದಶರಥರಾಯನು, ವನವಾಸಂ - ವನವಾಸಕ್ಕೆ ಸಾಕಾಗುವಷ್ಟು, ವಾಸಾಂಸಿ - ವಸ್ತ್ರಗಳನ್ನೂ, ಆಭರಣಾನಿಚ-ಒಡವೆಗಳನ್ನೂ, ಸಂಖ್ಯಾಯ - ಎಣಿಸಿ, ಭರ್ತಾರಂ - ಗಂಡನನ್ನು, ಅನುಗಚ್ಛಂತ್ಯೈ - ಅನುಸರಿಸಿ ಹೋಗುವ, ಸೀತಾಯೈ - ಸೀತಾದೇವಿಗೆ, ದದೌ - ಕೊಟ್ಟನು. ||೧೫|| ತಥೈವ - ಹಾಗೆಯೇ, ಸುಮಂತ್ರಃ - ಸುಮಂತ್ರನು, ಭ್ರಾತೃಭ್ಯಾಂ - ಅಣ್ಣತಮ್ಮಂದಿರಗೋಸುಗ, ಆಯುಧಜಾಲಾನಿ - ಆಯುಧತಂಡಗಳನ್ನೂ, ಕವಚಾನಿಚ - ಕವಚಗಳನ್ನೂ, ಸಚರ್ಮ - ಚರ್ಮದಿಂದೊಡಗೂಡಿದ, ತತ್ಕಠಿನಂ - ಆ ಖನಿತ್ರಪಿಕಟಗಳನ್ನೂ, ರಥಮಧ್ಯೇ ರಥದ ಮಧ್ಯದಲ್ಲಿ, ಪ್ರತಿನ್ಯಸ್ಯ - ಇರಿಸಿ, ಸೀತಾತೃತೀಯಾ - ಸೀತಾದೇವಿಯೇ ಮೂರನೆಯವಳಾಗುಳ್ಳ ಆ ಮೂವರನ್ನೂ, ಆರೂಢಾ -

||೯-೧೨|| ಆಗ ಸೀತಾದೇವಿಯು ವಿವಿಧಾಲಂಕಾರಭೂಷಿತೆಯಾಗಿ ಮಹಾ ಸಂತೋಷದಿಂದ, ದಿನಕರನಂತೆ ಬೆಳಗುತ್ತಲಿದ್ದ ಆ ರಥವನ್ನೇರಿದಳು. ಆ ಬಳಿಕ ಸಹೋದರರಾದ ರಾಮಲಕ್ಷ್ಮಣರು, ಯಜ್ಞೇಶ್ವರನಿಗೆ ಸಮಾನವಾಗಿಯೂ, ಸುವರ್ಣದಿಂದಲಂಕೃತವಾದುದಾಗಿಯೂ ಇರುವ ಆ ರಥವನ್ನು ಜಾಗ್ರತೆಯಾಗಿ ಏರಿದವರಾದರು.||೧೩-೧೪||ಆ ಸಮಯದಲ್ಲಿ ದಶರಥ ಮಹೀಪಾಲನು ಪತಿದೇವನನ್ನನುಸರಿಸಿ ಹೋಗುತ್ತಿರುವ ಸೀತಾದೇವಿಗೆ ಹದಿನಾಲ್ಕುವರುಷಗಳವರೆವಿಗೂ ಸಾಕಾಗುವ ವಸ್ತ್ರಭೂಷಣಾದಿಗಳನ್ನಿತ್ತನು.||೧೫||ಆ ಬಳಿಕ ಸುಮಂತ್ರನು ಆ ಶ್ರೀರಾಮ ಲಕ್ಷ್ಮಣರ ಕವಚಗಳನ್ನೂ, ದಿವ್ಯಾಯುಧಗಳನ್ನೂ ರಥಮಧ್ಯದಲ್ಲಿರಿಸಿ, ವಾಯು



Rama's Departure.

ಯತ್ ‖ ಸುಮಂತ್ರಸ್ಸಂಮತಾನಶ್ವಾನ್ ವಾಯುವೇಗ ಸಮಾನ್ ಜವೇ ‖ ೧೭ ‖
ಪ್ರತಿಯಾತೇ ಮಹಾರಣ್ಯಂ ಚಿರ ರಾತ್ರಾಯ ರಾಘವೇ ‖ ಬಭೂವ ನಗರೇ
ಮೂರ್ಛಾ ಬಲಮೂರ್ಛಾ ಜನಸ್ಯಚ ‖ ೧೮ ‖ ತತ್ಸಮಾಕುಲ ಸಂಭ್ರಾಂತಂ
ಮತ್ತ ಸಂಕುಪಿತ ದ್ವಿಪಂ ‖ ಹಯ ಶಿಂಜಿತ ನಿರ್ಘೋಷಂ ಪುರಮಾಸೀನ್ಮಹಾ
ಸ್ವನಂ ‖ ೧೯ ‖ ತತಸ್ಸಬಾಲವೃದ್ಧಾ ಸಾ ಪುರೀ ಪರಮ ಪೀಡಿತಾ ‖ ರಾಮ
ಮೇವಾಭಿದುದ್ರಾವ ಘರ್ಮಾರ್ತಾ ಸಲಿಲಂ ಯಥಾ ‖ ೨೦ ‖ ಪಾರ್ಶ್ವತಃ
ಪೃಷ್ಠತಶ್ಚಾಪಿ ಲಂಬಮಾನಾ ಸ್ತದುನ್ಮುಖಾಃ ‖ ಬಾಷ್ಪಪೂರ್ಣ ಮುಖಾಸ್ಸರ್ವೇ
ತಮೂಚು ರ್ಭೃಶನಿಸ್ವನಾಃ ‖ ೨೧ ‖ ಸಂಯಚ್ಛ ವಾಜಿನಾಂ ರಶ್ಮೀನ್ ಸೂತ

ಏರಿದವರನ್ನಾಗಿ, ದೃಷ್ಟ್ವಾ - ಕಂಡು, ಜವೇ - ವೇಗದಲ್ಲಿ, ವಾಯುವೇಗಸಮಾನ್ - ವಾಯುವೇಗಕ್ಕೆ ಸಮಾನಗಳಾದ, ಸಂಮತಾನ್ - ತನಗಿಷ್ಟವಾದ, ಅಶ್ವಾನ್ - ಕುದುರೆಗಳನ್ನು, ಧೃಷ್ಟಃ - ಧೈರ್ಯವಾಗಿ, ಅಚೋದಯತ್ - ನಡೆಯಿಸಿದನು. ‖೧೬-೧೭‖ ರಾಘವೇ-ಶ್ರೀರಾಮನು, ಮಹಾರಣ್ಯಂ - ಗೊಂಡಾರಣ್ಯವನ್ನು ಕುರಿತು, ಪ್ರತಿಯಾತೇ - ಹೊರಟುಹೋಗುತ್ತಿರಲು, ನಗರೇ - ಪಟ್ಟಣದಲ್ಲಿರುವ ಜನರಿಗೂ, ಜನಸ್ಯಚ - ದೇಶಾಂತರದಿಂದ ಬಂದಿರುವ ಜನಕ್ಕೂ, ಮೂರ್ಛಾ - ಮೂರ್ಛಾವಸ್ಥೆಯು, ಚಿರರಾತ್ರಾಯ - ಬಹಳ ಕಾಲ, ಬಭೂವ - ಆಯಿತು. ‖ ೧೮ ‖ ತತ್ಪುರಂ - ಆ ಪಟ್ಟಣವು, ಸಮಾಕುಲಸಂಭ್ರಾಂತಂ - ಅಂತಃಕರಣ ಕ್ಷೋಭೆಯಿಂದಲೂ, ಬಾಹ್ಯೇಂದ್ರಿಯ ಕ್ಷೋಭೆಯಿಂದಲೂ ಕೂಡಿದುದಾಗಿ, ಮತ್ತಸಂಕುಪಿತದ್ವಿಪಂ, ಮತ್ತ - ವ್ಯಸನದಿಂದ, ಸಂಕುಪಿತ - ಕೋಪಯುಕ್ತವಾದ, ದ್ವಿಪಂ - ಆನೆಗಳುಳ್ಳುದಾಗಿಯು, ಹಯಶಿಂಜಿತನಿರ್ಘೋಷಂ, ಹಯ-ಅಶ್ವಗಳ, ಶಿಂಜಿತ - ಪಾದಾಭರಣಗಳ ಧ್ವನಿಗಳೆಂಬ, ನಿರ್ಘೋಷಂ - ಧ್ವನಿಯುಳ್ಳುದಾದಕಾರಣ, ಮಹಾಸ್ವನಂ - ಮಹಾ ಧ್ವನಿಯುಳ್ಳುದು, ಆಸೀತ್ - ಆಯಿತು. ‖ ೧೯ ‖ ತತಃ - ಬಳಿಕ, ಸಬಾಲವೃದ್ಧಾ - ಬಾಲವೃದ್ಧರಿಂದೊಡಗೂಡಿದ, ಸಾಪುರೀ - ಆ ಪಟ್ಟಣದ ಜನವು, ಘರ್ಮಾರ್ತಾ - ಗ್ರೀಷ್ಮ ಕಾಲದಲ್ಲಿ ನೀರಡಿಕೆಯಿಂದ ಕಂಗೆಟ್ಟ ಜನವು, ಸಲಿಲಂಯಥಾ - ನೀರನ್ನಂತೆ, ಪರಮಪೀಡಿತಾ - ಬಹಳ ದುಃಖಿತವಾಗಿ, ರಾಮಮೇವ - ಶ್ರೀರಾಮನನ್ನೇ, ಅಭಿದುದ್ರಾವ - ಅನುಸರಿಸಿ ಓಡಿತು. ‖ ೨೦ ‖ ಪಾರ್ಶ್ವತಃ - ಪಕ್ಕಗಳಲ್ಲಿಯೂ, ಪೃಷ್ಠತಶ್ಚ - ಹಿಂದುಗಡೆಯಲ್ಲಿಯೂ, ಲಂಬಮಾನಾಃ - ಆಶ್ರಯಿಸಿದವರಾಗಿ, ತದುನ್ಮುಖಾಃ - ಆ ರಥದಮೇಲೆ ಅಭಿಮುಖರಾದ, ಸರ್ವೇ - ಸಮಸ್ತ ಜನರೂ, ಬಾಷ್ಪಪೂರ್ಣಮುಖಾಃ - ಕಂಬನಿಗಳಿಂದ ತುಂಬಿರುವ ಮುಖವುಳ್ಳವರಾಗಿ, ಭೃಶನಿಸ್ವನಾಃ - ಬಹಳವಾಗಿ ಕೂಗುತ್ತ, ತಂ - ಆ ಸಾರಥಿಯನ್ನು ಕುರಿತು, ಊಚುಃ - ಹೇಳಿದರು, ‖ ೨೧ ‖ ಹೇ ಸೂತ - ಎಲೈ ಸಾರಥಿಯೇ, ವಾಜಿನಾಂ - ಕುದುರೆಗಳ, ರಶ್ಮೀನ್ - ಕಡಿವಾಣ

ವಿನಂತೆ ತೀವ್ರ ವೇಗವುಳ್ಳ ಕುದುರೆಗಳನ್ನು ತುರುಬಿದನು.‖೧೬-೧೭‖ ರಘುಕುಲಾನಂದಕರನಾದ ಶ್ರೀರಾಮಮೂರ್ತಿಯು ಹದಿನಾಲ್ಕು ಸಂವತ್ಸರಗಳ ವನವಾಸಕ್ಕಾಗಿ ತೆರಳಲು, ಪುರಜನರೂ, ದೇಶಿಗರೂ, ಸೇನೆಯವರೂ ಪ್ರಜ್ಞೆ ತಪ್ಪಿದವರಾದರು.‖೧೮‖ ಆ ಸಮಯದಲ್ಲಿ ಆ ಪಟ್ಟಣದಲ್ಲಿ ಮುಂದುಗೆಟ್ಟ ಪ್ರಜೆಗಳ ರೋದನದಿಂದಲೂ, ಮದ ಸೊಕ್ಕಿ ಕೋಪಗೊಂಡ ಗಜಶ್ರೇಷ್ಠಗಳ

ಯಾಹಿ ಶನೈಶ್ಶನೈಃ ‖ ಮುಖಂ ದ್ರಕ್ಷ್ಯಾಮ ರಾಮಸ್ಯ ದುರ್ದರ್ಶಂ ನೋ ಭವಿ
ಷ್ಯತಿ ‖ ೨೨ ‖ ಆಯಸಂ ಹೃದಯಂ ನೂನಂ ರಾಮಮಾತು ರಸಂಶಯಂ ‖
ಯದ್ದೇವ ಗರ್ಭ ಪ್ರತಿಮೇ ವನಂ ಯಾತಿ ನಭಿದ್ಯತೇ ‖ ೨೩ ‖ ಕೃತಕೃತ್ಯಾ
ಹಿ ವೈದೇಹೀ ಛಾಯೇವಾನುಗತಾ ಪತಿಂ ‖ ನ ಜಹಾತಿ ರತಾ ಧರ್ಮೇ ಮೇರು
ಮರ್ಕಪ್ರಭಾ ಯಥಾ ‖ ೨೪ ‖ ಅಹೋ ಲಕ್ಷ್ಮಣ! ಸಿದ್ಧಾರ್ಥ ಸ್ಸತತಂ
ಪ್ರಿಯವಾದಿನಂ ‖ ಭ್ರಾತರಂ ದೇವಸಂಕಾಶಂ ಯಸ್ತ್ವಂ ಪರಿಚರಿಷ್ಯಸಿ ‖೨೫‖

ಗಳನ್ನು, ಸಂಯಚ್ಛ - ಬಿಗಿಮಾಡು, ಶನೈಶ್ಶನೈಃ - ಮೆಲ್ಲಮೆಲ್ಲಗೆ, ಯಾಹಿ - ಹೋಗು, ರಾಮಸ್ಯ-ಶ್ರೀರಾಮನ, ಮುಖಂ - ಮುಖವನ್ನು, ದ್ರಕ್ಷ್ಯಾಮಃ - ನೋಡುತ್ತೇವೆ, ಸಃ - ನಮಗೆ, ದುರ್ದರ್ಶಂ-ನೋಡುವದಕ್ಕೆ ಅಸಾಧ್ಯನು, ಭವಿಷ್ಯತಿ - ಆಗುವನು. ‖ ೨೨ ‖ ದೇವಗರ್ಭಪ್ರತಿಮೇ - ದೇವ ಕುಮಾರ ಸಮಾನನಾದ ಶ್ರೀರಾಮನು, ವನಂ - ವನವನ್ನು ಕುರಿತು, ಯಾತಿಸತಿ - ಹೋಗುತ್ತಿರಲು, ಯತ್ - ಯಾವ ಕೌಸಲ್ಯಾ ಹೃದಯವು, ನಭಿದ್ಯತೇ - ಭೇದಿಸಿಹೋಗಲಿಲ್ಲವೋ, ತತ್ - ಅಂತಹ, ರಾಮಮಾತುಃ - ಶ್ರೀರಾಮನ ತಾಯಿಯು, ಹೃದಯಂ - ಎದೆಯು, ಆಯಸಂ - ಕಬ್ಬಿಣದ ವಿಕಾರ ವಾದುದು, ನೂನಂ - ನಿಶ್ಚಯವು, ಅಸಂಶಯಂ - ಸಂಶಯವಿಲ್ಲ. ‖ ೨೩ ‖ ವೈದೇಹೀ - ಸೀತಾ ದೇವಿಯು, ಕೃತಕೃತ್ಯಾ - ಕೃತಾರ್ಥಳು. ಹಿ - ಯಾವ ಕಾರಣ, ಯಾ - ಯಾವ ಸೀತಾದೇವಿಯು, ಧರ್ಮೇ - ಧರ್ಮದಲ್ಲಿ, ನಿರತಾ - ಆಸಕ್ತಳಾಗಿ, ಮೇರುಂ - ಮೇರುಪರ್ವತವನ್ನು, ಅರ್ಕಪ್ರಭಾ ಯಥಾ - ಸೂರ್ಯಕಾಂತಿಯಂತೆ, ಪತಿಂ - ಗಂಡನನ್ನು, ಅನುಗತಾ - ಅನುಸರಿಸಿ, ನಜ ಹಾತಿ - ಬಿಡಲಿಲ್ಲವೋ. ‖ ೨೪ ‖ ಅಹೋ - ಆಶ್ಚರ್ಯವು, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಯಸ್ತ್ವಂ - ಯಾವ ನೀನು, ಪ್ರಿಯವಾದಿನಂ - ಇಂಪಾಗಿ ಮಾತನಾಡುತ್ತಿರುವ, ದೇವ ಸಂಕಾಶಂ - ದೇವತೆಗಳಿಗೆ ಸಮಾನನಾದ, ಭ್ರಾತರಂ - ಅಣ್ಣನಾದ ಶ್ರೀರಾಮನನ್ನು, ಸತತಂ - ನಿರಂತರವೂ, ಪರಿಚರಿಷ್ಯಸಿ - ಸೇವೆಮಾಡುತ್ತೀಯೋ, ಸಃ - ಅಂತಹ ನೀನು, ಸಿದ್ಧಾರ್ಥಃ - ಕೃತಾರ್ಥನು. ‖ ೨೫ ‖ ಏನಂ - ಈ ಶ್ರೀರಾಮನನ್ನು, ಅನುಗಚ್ಛಸೀತಿಯತ್ - ಅನುಸರಿಸಿ

ಘೀಂಕಾರಗಳಿಂದಲೂ, ಕುದುರೆಗಳ ಹೇಷಾರವದಿಂದಲೂ, ಮಹಾ ಘೋರವಾದ ಧ್ವನಿಯುಂಟಾಯಿತು.‖೧೯-೨೨‖ ಈ ರೀತಿ ಆ ಅಯೋಧ್ಯೆಯ ಆಬಾಲವೃದ್ಧರೂ ವ್ಯಸನಗೊಂಡು, ಶ್ರೀರಾಮನು ರಥಾರೂಢನಾಗಿ ಹೋಗುತ್ತಿರಲು, ಆತನನ್ನೇ ನೋಡುತ್ತ, ಪಾರ್ಶ್ವಗಳಲ್ಲಿಯೂ, ಹಿಂದುಗಡೆಯಲ್ಲಿಯೂ, ಕಂಬನಿಗಳನ್ನು ಸುರಿಸುತ್ತ, ಬಿಸಿಲಿನ ಬೇಗೆಯಿಂದ ಕಂಗೆಟ್ಟ ಜನರು ನೀರನ್ನು ಹುಡುಕಿಕೊಂಡು ಹೋಗುವಂತೆ, ಆತನ ಹಿಂದೆಯೇ ಹೋಗಿ ಸಾರಥಿಯಾದ ಸುಮಂತ್ರನನ್ನು ಕುರಿತು, “ಅಪ್ಪಾ, ಸುಮಂತ್ರನೆ! ರಥವನ್ನು ಮೆಲ್ಲಮೆಲ್ಲನೆ ನಡೆಯಿಸು; ಶ್ರೀರಾಮನ ಮುಖವನ್ನೀಕ್ಷಿಸುವೆವು. ಇನ್ನು ನಮಗೆ ಈ ಮಹಾನುಭಾವನ ದರ್ಶನವುಂಟಾಗಲಾರದು. ಅಕಟಕಟ! ಈತನ ಜನನಿಯಾದ ಕೌಸಲ್ಯೆಯ ಎದೆಯು ಉಕ್ಕಿನ ಎದೆಯಾಗಿರಬೇಕು! ದೇವಕುಮಾರ ಸದೃಶನಾದ ಶ್ರೀರಾಮನು ಅರಣ್ಯಕ್ಕೆ ತೆರಳುತ್ತಿದ್ದರೂ ಆ ಎದೆಯು ಒಡೆದು ಹೋಗದಿರುವುದಲ್ಲ!! ಅಹಹ! ಸೀತಾದೇವಿಯು ಎಷ್ಟು

ಮಹತ್ಯೇಷಾಹಿ ತೇ ಸಿದ್ಧಿ ರೇಷ ಚಾಭ್ಯುದಯೋ ಮಹಾರ್ || ಏಷ ಸ್ವರ್ಗಸ್ಯ ಮಾರ್ಗಶ್ಚ ಯದೇನಮನುಗಚ್ಛಸಿ || ೨೬ || ಏವಂ ವದಂತ ಸ್ತೇ ಸೋಢುಂ ನಶೇಕು ರ್ಬಾಷ್ಪಮಾಗತಂ || ನರಾಸ್ತ ಮನುಗಚ್ಛಂತಃ ಪ್ರಿಯ ಮಿಕ್ಷ್ವಾಕು ನಂದನಂ || ೨೭ || ಅಥ ರಾಜಾ ವೃತಸ್ಸ್ತ್ರೀಭಿ ರ್ದೀನಾಭಿ ರ್ದೀನಚೇತನಃ || ನಿರ್ಜಗಾಮ ಪ್ರಿಯಂ ಪುತ್ರಂ ದ್ರಕ್ಷ್ಯಾಮೀತಿ ಬ್ರುವರ್ನ್ ಗೃಹಾತ್ || ೨೮ || ಶುಶ್ರುವೇ ಚಾಗ್ರತಃ ಸ್ತ್ರೀಣಾಂ ರುದಂತೀನಾಂ ಮಹಾಸ್ವನಃ || ಯಥಾ ನಾದಃ

ಹೋಗುವೆ ಎಂಬುವದು ಯಾವದುಂಟೋ, ಏಷಾ - ಇದೇ, ತೇ - ನಿನಗೆ, ಮಹತೀಸಿದ್ಧಿರ್ಹಿ - ಮಹಾತಪಸ್ಸಿಗೆ ಫಲವೇ ಅಲ್ಲವೆ? ಏಷಃ ಇದು, ಮಹಾರ್-ದೊಡ್ಡದಾದ, ಅಭ್ಯುದಯಶ್ಚ - ಶ್ರೇಯಸ್ಕರವಾದ ವ್ಯಾಪಾರವು, ಏಷಃ - ಇದೇ, ತೇ - ನಿನಗೆ, ಸ್ವರ್ಗಸ್ಯ - ಸ್ವರ್ಗಕ್ಕೆ, ಮಾರ್ಗಃ - ಮಾರ್ಗವು. || ೨೬ || ಏವಂ - ಈ ಪರಿಯಾಗಿ, ವದಂತಃ - ಹೇಳುತ್ತಿರುವ, ತೇನರಾಃ - ಆ ಪಟ್ಟಣದ ಜನರು, ಇಕ್ಷ್ವಾಕುನಂದನಂ - ಇಕ್ಷ್ವಾಕು ವಂಶಕ್ಕೆ ಆನಂದಕರನಾದ, ಪ್ರಿಯಂ - ಇಷ್ಟನಾದ, ತಂ - ಆ ಶ್ರೀರಾಮನನ್ನು, ಅನುಗಚ್ಛಂತಃ - ಅನುಸರಿಸಿ ಹೋಗುತ್ತ, ಆಗತಂ - ಕಣ್ಣುಗಳಿಂದ ಬರುತ್ತಿರುವ, ಬಾಷ್ಪಂ - ಕಂಬನಿಯನ್ನು, ಸೋಢುಂ - ಸಹಿಸಲು, ನಶೇಕುಃ - ಸಮರ್ಥರಾಗದೆ ಹೋದರು. || ೨೭ || ಅಥ - ಬಳಿಕ, ದೀನಚೇತನಃ - ಪರಿತಪ್ತವಾದ ಬುದ್ಧಿಯುಳ್ಳ, ರಾಜಾ - ದಶರಥರಾಯನು, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು, ದ್ರಕ್ಷ್ಯಾಮೀತಿ - ನೋಡುವೆನೆಂದು, ಬ್ರುವರ್ - ಹೇಳುತ್ತ, ದೀನಾಭಿಃ - ದೈನ್ಯವಾಗಿರುವ, ಸ್ತ್ರೀಭಿಃ - ಸ್ತ್ರೀಯರಿಂದ, ವೃತಃ - ಪರಿವೃತನಾಗಿ, ಗೃಹಾತ್ - ಮನೆಯಿಂದ, ನಿರ್ಜಗಾಮ - ಹೊರಹೊರಟನು. || ೨೮ || ಮಹತೀ - ದೊಡ್ಡದಾದ, ಕುಂಜರೇ - ಆನೆಯು, ಬದ್ಧೇಸತಿ - ಕಟ್ಟಲ್ಪಡಲು, ಕರೇಣೂನಾಂ - ಹೆಣ್ಣಾನೆಗಳ, ನಾದೋಯಥಾ - ಧ್ವನಿಯಂತೆ, ರುದಂತೀನಾಂ - ಅಳುತ್ತಿರುವ, ಸ್ತ್ರೀಣಾಂ -

---

ಮಾನ್ಯಳು? ತನ್ನ ಪತಿಯು ನೆಳಲಿನಂತೆ ಆತನೊಡನೆ ತೆರಳುತ್ತಿರುವಳು ! ಸೂರ್ಯಪ್ರಭೆಯು ಮೇರುಪರ್ವತವನ್ನು ಬಿಟ್ಟು ತೊಲಗದಂತೆ, ಈ ದೇವಿಯು ಧರ್ಮಮಾರ್ಗವನ್ನೆಂದಿಗೂ ಬಿಡುವವಳಲ್ಲ ! ಓ ಲಕ್ಷ್ಮಣಸ್ವಾಮಿಯೆ ! ನೀನೇ ಧನ್ಯನು ; ಸಾಕ್ಷಾತ್ ದೇವತಾ ಸ್ವರೂಪನು, ಜನರೆಲ್ಲರಲ್ಲಿಯೂ ವಿನಯಸಮನ್ವಿತನಾಗಿ ಪ್ರಿಯೋಕ್ತಿಗಳನ್ನೇ ನುಡಿಯುತ್ತಿರುವ ನಿಮ್ಮಣ್ಣನಾದ ಶ್ರೀರಾಮನನ್ನು ಎಡೆಬಿಡದೆ ಸೇವೆ ಮಾಡುವುದರಿಂದ ನೀನು ಕೃತಾರ್ಥನು. ಆತನ ಸೇವೆಯೇ ನಿನಗೆ ಸರ್ವಕಾರ್ಯಸಿದ್ಧಿಯನ್ನೂ, ಮಹತ್ತರವಾದ ಶ್ರೇಯಸ್ಸನ್ನೂ ಉಂಟುಮಾಡುತ್ತದೆ. ಆತನನ್ನೆಡಬಿಡದಿರುವುದೇ ನಿನಗೆ ಸ್ವರ್ಗಸಾಧನವು" ಎಂದು ಘಟ್ಟಿಯಾಗಿ ಕೂಗುತ್ತ, ಶ್ರೀರಾಮನನ್ನು ಹಿಂಬಾಲಿಸಿ ಆತನ ವಿರಹದಿಂದುಂಟಾದ ದುಃಖದಿಂದ, ಪ್ರವಾಹದಂತೆ ಸುರಿಯುತ್ತಿದ್ದ ಕಣ್ಣೀರನ್ನು ತಡೆಯಲು ಸಾಧ್ಯರಾಗದೆ ಹೋದರು. || ೨೩-೨೮ || ಆ ಬಳಿಕ ದಶರಥರಾಜನು ಸ್ತ್ರೀಯರಿಂದೊಡಗೂಡಿ ಪ್ರಿಯ ಪುತ್ರನಾದ ಶ್ರೀರಾಮನನ್ನು ಕಾಣುವೆನೆಂದು ಹೇಳುತ್ತ ಮನೆಯಿಂದ ಹೊರಹೊರಟು, ಕಾಡಿನಲ್ಲಿರುವ ಗಂಡಾನೆಯನ್ನು ಹಿಡಿದು ಬಂಧಿಸಲು ಹೆಣ್ಣಾನೆಗಳು ರೋದಿಸುವಂತೆ, ಮುಂಗಡೆ ಅಳುತ್ತ

ಕರೇಣೂನಾಂ ಬದ್ಧೇ ಮಹತಿ ಕುಂಜರೇ ॥ ೨೯ ॥ ಪಿತಾಹಿ ರಾಜಾ ಕಾಕುತ್ಸ್ಥ ಶ್ರೀವರ್ಮಾ ಸನ್ನಸ್ತದಾ ಭವತ್ ॥ ಪರಿಪೂರ್ಣಶಶೀ ಕಾಲೇ ಗ್ರಹೇಣೋಪಪ್ಲುತೋ ಯಥಾ ॥ ೩೦ ॥ ಸಚ ಶ್ರೀಮಾನಚಿಂತ್ಯಾತ್ಮಾ ರಾಮೋ ದಶರಥಾತ್ಮಜಃ ॥ ಸೂತಂ ಸಂಚೋದಯಾಮಾಸ ತ್ವರಿತಂ ವಾಹ್ಯತಾಮಿತಿ ॥ ೩೧ ॥ ರಾಮೋ ಯಾಹೀತಿ ಸೂತಂ ತಂ ತಿಷ್ಠೇತಿ ಸಜನಸ್ತದಾ ॥ ಉಭಯಂ ನಾಶಕತ್ಸೂತಃ ಕರ್ತುಮಧ್ವನಿ ಚೋದಿತಃ ॥ ೩೨ ॥ ನಿರ್ಗಚ್ಛತಿ ಮಹಾಬಾಹೌ ರಾಮೇ ಪೌರಜನಾಶ್ರುಭಿಃ ॥ ಪತಿತೈ ರಭ್ಯವಹಿತಂ ಪ್ರಶಶಾಮ ಮಹೀ

ಹೆಂಗಳ, ಮಹಾಸ್ವನಃ - ಅದ್ಭುತಧ್ವನಿಯು, ಅಗ್ರತಃ - ಮುಂಭಾಗದಲ್ಲಿ, ಶುಶ್ರುವೇ - ಕೇಳಲ್ಪಟ್ಟಿತು, ಪಿತಾ - ತಂದೆಯಾದ, ಶ್ರೀವರ್ಮಾ - ಸಂಪದ್ಯುಕ್ತನಾದ, ಕಾಕುತ್ಸ್ಥಃ - ಕಕುತ್ಸ್ಥವಂಶೋತ್ಪನ್ನನಾದ, ರಾಜಾ - ದಶರಥರಾಯನು, ಕಾಲೇ - ಪರ್ವಕಾಲದಲ್ಲಿ, ಗ್ರಹೇಣ - ರಾಹುಗ್ರಹದಿಂದ, ಉಪಪ್ಲುತಃ - ಉಪದ್ರವಗೊಳಿಸಲ್ಪಟ್ಟ, ಪರಿಪೂರ್ಣಶಶೀಯಥಾ - ಹುಣ್ಣಿಮೆಯ ಚಂದ್ರನಂತೆ, ತದಾ - ಆಗ, ಸನ್ನಃ - ಕ್ಷೀಣವಾದ ತೇಜಸ್ಸುಳ್ಳವನು, ಅಭವತ್ - ಆದನು. ॥ ೩೦ ॥ ಅಚಿಂತ್ಯಾತ್ಮಾ - ಚಿಂತಿಸಲಸಾಧ್ಯವಾದ ಧೈರ್ಯವುಳ್ಳ, ದಶರಥಾತ್ಮಜಃ - ದಶರಥರಾಯನಿಗೆ ಕುವರನಾದ, ಶ್ರೀವರ್ಮಾ - ಸಂಪದ್ಯುಕ್ತನಾದ, ಸರಾಮಶ್ಚ - ಆ ಶ್ರೀರಾಮನು, ತ್ವರಿತಂ-ಜಾಗ್ರತೆಯಾಗಿ, ವಾಹ್ಯತಾಮಿತಿ - ರಥವನ್ನು ನಡಿಯಿಸೆಂದು, ಸೂತಂ - ಸಾರಥಿಯನ್ನು, ಸಂಚೋದಯಾಮಾಸ - ಪ್ರೇರಿಸಿದನು. ॥ ೩೧ ॥ ರಾಮಃ - ಶ್ರೀರಾಮನು, ಯಾಹಿ - ಹೊರಡು ಎಂದು, ಅಬ್ರವೀತ್ - ನುಡಿದನು, ತಿಷ್ಠೇತಿ - ನಿಲ್ಲೂ ಎಂದು, ಸಜನಃ - ಆ ಜನವು, ತದಾ - ಆಕಾಲದಲ್ಲಿ, ತಂಸೂತಂ-ಆ ಸಾರಥಿಯನ್ನು ಕುರಿತು, ಅಬ್ರವೀತ್-ನುಡಿಯಿತು, ಸೂತಃ ಸಾರಥಿಯು, ಅಧ್ವನಿ - ಮಾರ್ಗದಲ್ಲಿ, ಚೋದಿತಃ - ಪ್ರೇರೇಪಿಸಲ್ಪಟ್ಟವನಾಗಿ, ಉಭಯಂ - ಎರಡು ಕಾರ್ಯವನ್ನು, ಕರ್ತುಂ-ಮಾಡಲು, ನಾಶಕತ್ - ಸಮರ್ಥನಾಗದೆಹೋದನು. ॥ ೩೨ ॥ ಮಹಾಬಾಹೌ - ಮಹಾಭುಜಪರಾಕ್ರಮಶಾಲಿಯಾದ, ರಾಮೇ - ಶ್ರೀರಾಮನು, ನಿರ್ಗಚ್ಛತಿ - ಹೊರಡುತ್ತಿರಲು, ಮಹೀರಜಃ, ಮಹೀ - ಭೂಮಿಯ, ರಜಃ - ಧೂಳಿಯು, ಪತಿತೈಃ-ಶ್ರವಿಸುತ್ತಿರುವ, ಪೌರಜನಾಶ್ರುಭಿಃ, ಪೌರಜನ-ಪಟ್ಟಣಿಗರ, ಅಶ್ರುಭಿಃ - ಕಂಬನಿಗಳಿಂದ, ಅಭ್ಯವಹಿತಂ - ನೆನಿಯಿಸಲ್ಪಟ್ಟುದಾಗಿ, ಪ್ರಶಶಾಮ -

---

ರುವ ಹೆಂಗಳ ರೋದನ ಧ್ವನಿಯನ್ನು ಕೇಳಿ, ಪರ್ವಕಾಲದಲ್ಲಿ ರಾಹುವಿನಿಂದ ಗ್ರಸ್ತನಾದ ಚಂದ್ರನಂತೆ ಕಳೆಗುಂದಿದ ಮುಖವುಳ್ಳವನಾದನು. ಆಗ ಊಹಿಸಲಸದಳವಾದ ಧೈರ್ಯವುಳ್ಳವನೂ, ಮಹಾ ಕಾಂತಿಯುತನೂ, ದಶರಥರಾಜ ಕುವರನೂ ಆದ ಶ್ರೀರಾಮನು ಸಾರಥಿಯಾದ ಸುಮಂತ್ರನನ್ನು ಕುರಿತು, ರಥವನ್ನು ಬೇಗನೆ ನಡೆಯಿಸಬೇಕೆಂದು ಹೇಳಿದನು. ಅದನ್ನು ಕೇಳಿದ ಮಹಾ ಜನರು ರಥವನ್ನು ನಿಲ್ಲಿಸಬೇಕೆಂದು ಹೇಳಿದರು. ಹೀಗೆ ಶ್ರೀರಾಮನು “ನಡೆ ನಡೆ” ಎಂಬುದಾಗಿಯೂ, ಮಹಾ ಜನರು “ನಿಲ್ಲು ನಿಲ್ಲು” ಎಂಬುದಾಗಿಯೂ ಹೇಳುತ್ತಿರಲು, ಸಾರಥಿಯಾದ ಸುಮಂತ್ರನಿಗೆ ಯಾವುದನ್ನು ಮಾಡಬೇಕೆಂಬುದೇ ತೋರಲಿಲ್ಲವು. ಆಗ ಅಕ್ಕಪಕ್ಕಗಳಲ್ಲಿಯೂ, ಹಿಂದುಮುಂದುಗಡೆಯಲ್ಲಿಯೂ

ರಜಃ ||೩೩|| ರುದಿತಾಶ್ರು ಪರಿಕ್ಲಿನ್ನಂ ಹಾಹಾಕೃತಮಚೇತನಂ || ಪ್ರಯಾಣೇ ರಾಘವಸ್ಯಾಸೀತ್ಪುರಂ ಪರಮಪೀಡಿತಂ || ೩೪ || ಸುಸ್ರಾವ ನಯನೈಃ ಸ್ತ್ರೀಣಾ ಮಸ್ರಮಾಯಾಸ ಸಂಭವಂ || ಮೀನಸಂಕ್ಷೋಭ ಚಲಿತೈಸ್ಸಲಿಲಂ ಪಂಕಜೈರಿವ || ೩೫ || ದೃಷ್ಟ್ವಾತು ನೃಪತಿಶ್ಶ್ರೀಮಾ ನೇಕಚಿತ್ತಂ ಗತಂ ಪುರಂ || ನಿಪಪಾತೈವ ದುಃಖೇನ ಹತಮೂಲಇವ ದ್ರುಮಃ || ೩೬ || ತತೋ ಹಲಹಲಾ ಶಬ್ದೋ ಜಜ್ಞೇ ರಾಮಸ್ಯ ಪೃಷ್ಠತಃ || ನರಾಣಾಂ ಪ್ರೇಕ್ಷ್ಯ ರಾಜಾನಂ ಸೀದಂತಂ ಭೃಶದುಃಖಿತಂ || ೩೭ || ಹಾ ರಾಮೇತಿ ಜನಾಃ ಕೇಚಿ

ಶಾಂತವಾಯಿತು. || ೩೩ || ರಾಘವಸ್ಯ - ಶ್ರೀರಾಮನ, ಪ್ರಯಾಣೇ - ಪ್ರಯಾಣ ಕಾಲದಲ್ಲಿ, ರುದಿತಾಶೃತಿಪರಿಕ್ಲಿನ್ನಂ, ರುದಿತ - ರೋದನದಿಂದ ಹುಟ್ಟಿದ, ಅಶೃ-ಕಂಬನಿಗಳಿಂದ, ಪರಿಕ್ಲಿನ್ನಂ - ನೆನಿಸಲ್ಪಟ್ಟ, ಹಾಹಾಕೃತಂ - ಹಾಹಾ ಎಂಬ ಧ್ವನಿಯನ್ನು ಮಾಡುತ್ತಿರುವ, ಅಚೇತನಂ - ಪ್ರಜ್ಞೆ ಯಿಲ್ಲದ, ಪುರಂ - ಪಟ್ಟಣವು, ಪರಮಪೀಡಿತಂ - ಬಹಳ ದುಃಖಿತವಾದುದು, ಆಸೀತ್ - ಆಯಿತು. || ೩೪ || ಸ್ತ್ರೀಣಾಂ - ಹೆಂಗಸರ, ನಯನೈಃ - ನೇತ್ರಗಳಿಂದ, ಆಯಾಸಸಂಭವಂ - ವ್ಯಸನದಿಂದ ಹುಟ್ಟಿದ, ಅಸ್ರಂ - ನೇತ್ರೋದಕವು, ಮೀನಸಂಕ್ಷೋಭಚಲಿತೈಃ, ಮೀನ - ಮತ್ಸ್ಯಗಳ, ಸಂಕ್ಷೋಭ - ಸಂಮರ್ದದಿಂದ, ಚಲಿತೈಃ - ಕದಲುತ್ತಿರುವ, ಪಂಕಜೈಃ - ಕಮಲಗಳಿಂದ, ಸಲಿಲಮಿವ - ಸುರಿಯುತ್ತಿರುವ ನೀರಿನಂತೆ, ಸುಸ್ರಾವ - ಸುರಿಯುತ್ತಿದ್ದಿತು. || ೩೫ || ಶ್ರೀಮಾ೯ - ಸಂಪದ್ಯುಕ್ತನಾದ, ನೃಪತಿಃ - ದಶರಥರಾಯನು, ಏಕಚಿತ್ತಗತಂ - ಒಂದೇಮನಸ್ಸಿನಿಂದ ಹೋಗುತ್ತಿರುವ, ಪುರಂ - ಪಟ್ಟಣಸ್ಥಜನವನ್ನು, ದೃಷ್ಟ್ವಾ - ಕಂಡು, ದುಃಖೇನ - ದುಃಖದಿಂದ, ಹತಮೂಲಃ - ಹೊಡಿಯಲ್ಪಟ್ಟ ಬುಡವುಳ್ಳ, ದೃಮಇವ - ಗಿಡದಂತೆ, ನಿಪಪಾತೈವ - ಬಿದ್ದುಹೋದನು. || ೩೬ || ತತಃ - ಬಳಿಕ, ರಾಮಸ್ಯ - ಶ್ರೀರಾಮನ, ಪೃಷ್ಠತಃ - ಹಿಂದುಗಡೆ, ಸೀದಂತಂ - ಪರಿತಪಿಸುತ್ತಿರುವ, ಭೃಶದುಃಖಿತಂ - ಬಹಳ ದುಃಖಗೊಂಡ, ರಾಜಾನಂ - ದಶರಥ ರಾಯನನ್ನು, ಪ್ರೇಕ್ಷ್ಯ - ಕಂಡು, ನರಾಣಾಂ - ಮನುಷ್ಯರ, ಹಲಹಲಾಶಬ್ದಃ - ಕೋಲಾಹಲ ಧ್ವನಿಯು, ಜಜ್ಞೇ - ಹುಟ್ಟಿತು. || ೩೭ || ಕೇಚಿಜ್ಜನಾಃ - ಕೆಲಜನರು, ಹಾರಾಮೇತಿ - ಎಲೈ

ಬರುತ್ತಿದ್ದ ಜನರ ನೇತ್ರಜನ್ಯವಾದ ವಾರಿಧಾರೆಗಳಿಂದ ದಾರಿಯಲ್ಲಿನ ಧೂಳಿಯು ಅಡಗಿ ಹೋಯಿತು; ಪುರಜನರ ಕಂಬನಿಗಳಿಂದ ಭೂಮಿಯು ಕೆಸರಾಗುತ್ತಿರಲು, ಇಡೀ ಅಯೋಧ್ಯಾ ಪಟ್ಟಣವೇ ಕಂಗೆಡುತ್ತಿದ್ದಿತು. ಕೊಳದಲ್ಲಿನ ಮೀನುಗಳ ಹೊಡೆತದಿಂದ ಕಮಲಗಳಿಂದ ನೀರು ಸುರಿವಂತೆ, ರಾಮನ ಹಿಂದುಗಡೆ ಓಡಿ ಬರುತ್ತಿದ್ದ ಸ್ತ್ರೀಯರ ಕಣ್ಣುಗಳಲ್ಲಿ ನೀರು ಸುರಿಯುತ್ತಲಿದ್ದಿತು. || ೨೯-೩೫ || ಆಸಮಯದಲ್ಲಿ ದಶರಥರಾಯನು ಆ ಶ್ರೀರಾಮನಲ್ಲಿಯೇ ನೆಟ್ಟಮನವುಳ್ಳವರಾದ ಆ ಪುರಜನರನ್ನು ಕಂಡು, ಬುಡ ಒಡೆದ ಮರದಂತೆ, ದುಃಖದಿಂದ ನೆಲಕ್ಕುರುಳಿದನು. ಆಗ ಶ್ರೀರಾಮನ ಹಿಂದುಗಡೆಯಲ್ಲಿ ಬರುತ್ತಿದ್ದ ಜನರು ದಶರಥ ರಾಯನ ದುಃಖವನ್ನು ನೋಡಿ, "ಅಯ್ಯೋ ! ಶ್ರೀರಾಮನೆ !" ಎಂದೂ, "ಕೌಸಲ್ಯಾದೇವಿಯೆ ! ಇನ್ನೇನು ಗತಿ" ಎಂದು ಕೂಗುತ್ತಿದ್ದರು. ಆ ಸಮಯದಲ್ಲಿ ಶ್ರೀರಾಮನು

ದ್ರಾಮಮಾತೇತಿ ಚಾಪರೇ || ಅಂತಃಪುರಂ ಸಮೃದ್ಧಂಚ ಕ್ರೋಶಂತಃ ಪರ್ಯದೇವಯನ್ || ೩೮ || ಅನ್ವೀಕ್ಷಮಾಣೋ ರಾಮಸ್ತು ವಿಷಣ್ಣಂ ಭ್ರಾಂತಚೇತಸಂ || ರಾಜಾನಂ ಮಾತರಂಚೈವ ದದರ್ಶಾನುಗತೌ ಪಥಿ || ೩೯ || ಸಬದ್ಧ ಇವ ಪಾಶೇನ ಕಿಶೋರೋ ಮಾತರಂ ಯಥಾ || ಧರ್ಮಪಾಶೇನ ಸಂಕ್ಷಿಪ್ತಃ ಪ್ರಕಾಶಂ ನಾಭ್ಯುದೈಕ್ಷತ || ೪೦ || ಪದಾತಿನೌ ಚ ಯಾನಾರ್ಹೌ ಅದುಃಖಾರ್ಹೌ ಸುಖೋಚಿತೌ || ದೃಷ್ಟ್ವಾ ಸಂಚೋದಯಾಮಾಸ ಶೀಘ್ರಂ ಯಾಹೀತಿ ಸಾರಥಿಂ || ೪೧ || ನಹಿ ತತ್ಪುರುಷವ್ಯಾಘ್ರೋ ದುಃಖದಂ ದರ್ಶನಂ ಪಿತುಃ || ಮಾತುಶ್ಚ ಸಹಿತುಂ ಶಕ್ತ ಸ್ತೋತ್ರಾರ್ದಿತ ಇವ

ರಾಮನೇ ! ಎಲೈ ರಾಮನೇ ! ಎಂಬುದುನ್ನೂ, ರಾಮಮಾತಾ - ಕೌಸಲ್ಯಾದೇವಿಯೆ, ಇತಿ - ಇಂತೆಂದು, ಅಪರೇಚ - ಮತ್ತೆ ಕೆಲಬರ, ಕ್ರೋಶಂತಃ - ಕೂಗುತ್ತಿರುವುದನ್ನೂ, ಸಮೃದ್ಧಂ - ತುಂಬಿರುವ, ಅಂತಃಪುರಂ - ಅಂತಃಪುರದಲ್ಲಿ, ಪರ್ಯದೇವಯನ್ - ಅಳುತ್ತಿದ್ದರು. || ೩೮ || ರಾಮಸ್ತು - ಶ್ರೀರಾಮನಾದರೆ, ವಿಷಣ್ಣಂ - ವಿಷಯುಕ್ತವಾದ, ಭ್ರಾಂತಚೇತಸಂ - ಭ್ರಾಂತಿಯುಕ್ತವಾದ ಮನಸ್ಸುಳ್ಳ, ರಾಜಾನಂ - ಅರಸನನ್ನು, ಮಾತರಂಚೈವ - ತಾಯಿಯನ್ನು, ಪಥಿ - ಮಾರ್ಗದಲ್ಲಿ, ಅನುಗತೌ - ಹಿಂದೆಬರುತ್ತಿರುವ, ಉಭೌ - ಇಬ್ಬರನ್ನು, ಅನ್ವೀಕ್ಷ್ಯಮಾಣಃ - ಹಿಂತಿರುಗಿನೋಡುತ್ತ, ದದರ್ಶ - ಕಂಡನು. || ೩೯ || ಪಾಶೇನ - ಹಗ್ಗದಿಂದ, ಬದ್ಧಃ - ಕಟ್ಟಲ್ಪಟ್ಟ, ಕಿಶೋರಃ - ಕುದುರೆ ಮರಿಯು, ಮಾತರಮಿವ - ತಾಯಿಯನ್ನಂತೆ, ಧರ್ಮಪಾಶೇನ - ಧರ್ಮವೆಂಬ ಪಾಶದಿಂದ, ಸಂಕ್ಷಿಪ್ತಃ - ಕಟ್ಟಲ್ಪಟ್ಟವನಾಗಿ, ಸಃ - ಆ ಶ್ರೀರಾಮನು, ಯಥಾಪ್ರಕಾಶಂ - ಪ್ರಕಾಶವಾದಂತೆ, ನಾಭ್ಯುದೈಕ್ಷತ - ನೋಡದೆಹೋದನು. || ೪೦ || ಯಾನಾರ್ಹೌ-ವಾಹನಕ್ಕರ್ಹರಾದ, ಅದುಃಖಾರ್ಹೌ - ದುಃಖಕ್ಕೆ ಯೋಗ್ಯರಲ್ಲದ, ಸುಖೋಚಿತೌ-ಸುಖಕ್ಕೆಯೋಗ್ಯರಾದ, ಪದಾತಿನೌ - ಪಾದಚಾರಿಗಳಾದ ತಾಯಿತಂದೆಗಳನ್ನು, ದೃಷ್ಟ್ವಾ - ಕಂಡು, ಶೀಘ್ರಂ - ಜಾಗ್ರತೆಯಾಗಿ, ಯಾಹಿ - ಹೋಗು, ಇತಿ - ಇಂತೆಂದು, ಸಾರಥಿಂ - ಸಾರಥಿಯನ್ನು, ಸಂಚೋದಯಾಮಾಸ - ಪ್ರೇರಣೆಮಾಡಿದನು. || ೪೧ || ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ ಶ್ರೀರಾಮನು, ತೋತ್ರ - ಅಂಕುಶದಿಂದ, ಅರ್ದಿತಃ - ಹೊಡಿಯಲ್ಪಟ್ಟ, ದ್ವಿಪಇವ - ಆನೆಯಂತೆ, ದುಃಖಜಂ - ದುಃಖಾಕರವಾದ, ಪಿತುಃ - ತಂದೆಯ, ಮಾತುಶ್ಚ - ತಾಯಿಯ, ತದ್ದರ್ಶನಂ - ಆ

ತನ್ನನ್ನೇ ಅನುಸರಿಸಿ ದಾರಿಯಲ್ಲಿ ಬರುತ್ತಿರುವವನಾಗಿಯೂ, ಕಳವಳಗೊಂಡ ಮನವುಳ್ಳವನಾಗಿಯೂ, ಮಹಾ ದುಃಖಿತನಾಗಿಯೂ ಇರುವ ತಂದೆಯನ್ನು, ಧರ್ಮಪಾಶ ಬದ್ಧನಾಗಿ, ಕುದುರೆಯ ಮರಿಯು ಕಟ್ಟುಹಾಕಲ್ಪಟ್ಟ ತನ್ನ ತಾಯಿಯನ್ನಂತೆ ಹಿಂತಿರುಗಿ ವಾರೆಯಾಗಿ ನೋಡಿದನೇ ಹೊರ್ತು, ಪ್ರಕಾಶವಾಗಿ ನೋಡದೇ ಹೋದನು. || ೩೯-೪೦|| ವಾಹನಗಳಲ್ಲಿ ಕುಳಿತುಕೊಳ್ಳಲು ಅರ್ಹರಾಗಿಯೂ, ದುಃಖಕ್ಕೆಯೋಗ್ಯರಲ್ಲದವರಾಗಿಯೂ, ಸುಖಾರ್ಹರಾಗಿಯೂ, ಕಾಲ್ನಡಿಗೆಯಿಂದಲೇ ನಡೆದುಕೊಂಡು ಬರುತ್ತಿರುವವರಾಗಿಯೂ ಇರುವ ತಾಯಿ ತಂದೆಗಳನ್ನು ಕಂಡು ಆ ದುಃಖವನ್ನು ತಾಳದೆ, ಆ ಶ್ರೀರಾಮಮೂರ್ತಿಯು

ದ್ವಿಪಃ ||೪೨|| ಪ್ರತ್ಯಗಾರ ಮಿವಾಯಾಂತೀ ವತ್ಸಲಾ ವತ್ಸಕಾರಣಾತ್ || ಬದ್ಧ ವತ್ಸಾಯಥಾ ಧೇನೂ ರಾಮಮಾತಾ ಭ್ಯಧಾವತ || ೪೩ || ತಥಾ ರುದಂತೀಂ ಕೌಸಲ್ಯಾಂ ರಥಂ ತಮನುಧಾವತೀಂ || ಕ್ರೋಶಂತೀಂ ರಾಮರಾಮೇತಿ ಹಾ ಸೀತೇ ಲಕ್ಷ್ಮಣೇತಿ ಚ || ೪೪ || ರಾಮ ಲಕ್ಷ್ಮಣ ಸೀತಾರ್ಥಂ ಸ್ರವಂತೀಂ ವಾರಿ ನೇತ್ರಜಂ || ಅಸಕೃತ್ಪ್ರೈಕ್ಷತ ತದಾ ನೃತ್ಯಂತೀಮಿವ ಮಾತರಂ || ೪೫ || ತಿಷ್ಠೇತಿ ರಾಜಾ ಚುಕ್ರೋಶ ಯಾಹಿಯಾಹೀತಿ ರಾಘವಃ || ಸುಮಂತ್ರಸ್ಯ ಬಭೂವಾತ್ಮಾ ಚಕ್ರಯೋರಿವ ಚಾಂತರಾ || ೪೬ || ನಾಶ್ರೌಷ

ನೋಡುವಿಕೆಯನ್ನು, ಸಹಿತುಂ - ಸಹಿಸಲು, ನಶಕ್ನೋಮಿ - ಸಮರ್ಥನಾಗಲಿಲ್ಲವಷ್ಟೆ. || ೪೨ || ಅಗಾರಂಪ್ರತಿ - ಮನೆಯನ್ನು ಕುರಿತು, ವತ್ಸಕಾರಣಾತ್ - ಕರುವಿಗೋಸುಗ, ಆಯಾಂತೀ - ಬರುತ್ತಿರುವ, ಬದ್ಧವತ್ಸಾ, ಬದ್ಧ - ಕಟ್ಟಲ್ಪಟ್ಟ, ವತ್ಸಾ - ಕರುವುಳ್ಳ, ಧೇನುರ್ಯಥಾ - ಆಕಳಂತೆ, ರಾಮಮಾತಾ - ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯು, ವತ್ಸಲಾ - ವಾತ್ಸಲ್ಯವುಳ್ಳವಳಾಗಿ, ಅಭ್ಯಧಾವತ್ - ಓಡಿಬಂದಳು. || ೪೩ || ತಥಾ - ಹಾಗೆಯೇ, ರುದಂತೀ - ರೋದನಮಾಡುತ್ತಿರುವ, ತಂರಥಂ - ಆ ರಥವನ್ನು ಕುರಿತು, ಅನುಧಾವತೀಂ - ಅನುಸರಿಸಿ ಓಡಿಬರುತ್ತಿರುವ, ಹಾ - ಕಷ್ಟವು, ರಾಮರಾಮೇತಿ - ರಾಮ ರಾಮಾ ಎಂದೂ, ಹಾ ಸೀತೆ - ಎಲೌ ಸೀತಾದೇವಿಯೆ ಎಂದೂ, ಹಾ ಲಕ್ಷ್ಮಣೇತಿಚ - ಹಾ ಲಕ್ಷ್ಮಣನೇ ಎಂದೂ, ಕ್ರೋಶತೀಂ - ಕೂಗುತ್ತಿರುವ, ರಾಮ ಲಕ್ಷ್ಮಣ ಸೀತಾರ್ಥಂ - ರಾಮ ಲಕ್ಷ್ಮಣ ಸೀತಾದೇವಿಯರಿಗೋಸುಗ, ನೇತ್ರಜಂ - ಕಣ್ಣುಗಳಿಂದ ಹುಟ್ಟಿದ, ವಾರಿ - ಉದಕವನ್ನು, ಸ್ರವಂತೀಂ - ಸುರಿಯುತ್ತಿರುವ, ನೃತ್ಯಂತೀಮಿವ - ಕುಣಿಯುತ್ತಿರುವಳೆಂಬಂತಿರುವ, ತಾಂ ಮಾತರಂ - ಆ ತಾಯಿಯನ್ನು, ಸಃ - ಆ ಶ್ರೀರಾಮನು, ಅಸಕೃತ್ - ಬಾರಿಬಾರಿಗೂ, ಪ್ರೇಕ್ಷತ-ಕಂಡನು. ||೪೪-೪೫|| ರಾಜಾ - ದಶರಥರಾಯನು, ತಿಷ್ಠೇತಿ - ನಿಲ್ಲು ನಿಲ್ಲೆಂದು, ಚುಕ್ರೋಶ - ಕೂಗಿದನು, ಯಾಹಿಯಾಹೀತಿ - ನಡೆ ನಡೆ ಎಂದು, ರಾಘವಃ - ಶ್ರೀರಾಮನು, ಚುಕ್ರೋಶ - ಕೂಗಿದನು, ಸುಮಂತ್ರಸ್ಯ - ಸುಮಂತ್ರನ, ಆತ್ಮಾ - ಮನಸ್ಸು, ಚಕ್ರಯೋಃ - ಭಂಡಿ ಚಕ್ರಗಳ, ಅಂತರಾ - ಮಧ್ಯದಲ್ಲಿರುವ, ಪುರುಷಇವ - ಪುರುಷನಂತೆ, ಬಭೂವ - ಆಯಿತು. || ೪೬ || ದುಃಖಸ್ಯ - ದುಃಖದ, ಚಿರಂ - ಚಿರಕಾಲ ಅನು

ಸಾರಥಿಯನ್ನು ಕುರಿತು, "ಎಲೈ ಸುಮಂತ್ರನೆ ! ಈ ದುಃಖವನ್ನು ನಾನು ನೋಡಲಾರೆನು. ಜಾಗ್ರತೆಯಾಗಿ ರಥವನ್ನು ನಡೆಯಿಸು !" ಎಂದು ಹೇಳಿದನು. ಮನೆಯಲ್ಲಿ ಕರುವನ್ನು ಹಸುವಿನೊಡನೆ ಕಳುಹದೆ, ಹಸುವೊಂದನ್ನೇ ಮೇಯುವುದಕ್ಕೆ ಕಳುಹಿದರೆ, ಆ ಹಸುವು ಕರುವನ್ನು ನೆನೆದು ಓಡಿ ಬರುವಂತೆ, ಆ ರಾಮ ಮಾತೆಯಾದ ಕೌಸಲ್ಯೆಯು "ಅಯ್ಯೋ ರಾಮನೆ ! ಎಲೈ ಲಕ್ಷ್ಮಣನೆ ! ಅಮ್ಮಾ ! ಸೀತಾದೇವಿಯೇ !! ಹೋಗಬೇಡಿರಿ; ನಿಲ್ಲಿ" ಎಂದು ಕೂಗಿಕೊಂಡು ಓಡಿಬರುತ್ತಲೂ, ಸಂಕಟಪಡುತ್ತಲೂ ಇದ್ದುದನ್ನು ನೋಡಿದ ಶ್ರೀರಾಮನು ಆಕೆಯನ್ನು ಬಾರಿಬಾರಿಗೂ ನೋಡಿದವನಾದನು. ||೪೧-೪೫|| ಆ ಬಳಿಕ ದಶರಥರಾಯನು ಸುಮಂತ್ರನನ್ನು ಕುರಿತು, ರಥವನ್ನು ನಿಲ್ಲಿಸೆಂದು ನುಡಿಯಲು, ಅದನ್ನು

ಮಿತಿರಾಜಾನ ಮುಪಾಲಬ್ಧೋಪಿ ವಕ್ಷ್ಯಸಿ ॥ ಚಿರಂ ದುಃಖಸ್ಯ ಪಾಪಿಷ್ಠ ಮಿತಿ ರಾಮಸ್ತಮಬ್ರವೀತ್ ॥ ೪೭ ॥ ರಾಮಸ್ಯ ಸವಚಃ ಕುರ್ವ ನ್ನನುಜ್ಞಾಪ್ಯಚ ತಂಜನಂ ॥ ವ್ರಜತೋಽಪಿ ಹಯಾ ಶೀಘ್ರಂ ಚೋದಯಾಮಾಸ ಸಾರಥಿಃ ॥ ೪೮ ॥ ನ್ಯವರ್ತತ ಜನೋ ರಾಜ್ಞೋ ರಾಮಂ ಕೃತ್ವಾ ಪ್ರದಕ್ಷಿಣಂ ॥ ಮನ ಸಾಪ್ಯಶ್ರುವೇಗೈಶ್ಚ ನನ್ಯವರ್ತತ ಮಾನುಷಂ ॥ ೪೯ ॥ ಯಮಿಚ್ಛೇತ್ಪುನರಾ

ಭವವು, ಪಾಪಿಷ್ಠಂ - ಅತಿ ದುಸ್ಸಹವು, ಇತಿ ಕೃತ್ವಾ - ಎಂದಾಲೋಚಿಸಿ, ಉಪಾಲಬ್ಧೋಪಿ - ನನ್ನ ಮಾತು ನೀನೆಂತು ತೆಗದುಹಾಕಿದೇ ಎಂದು ನಿಂದಿಸಲ್ಪಟ್ಟವನಾದರೂ, ನಾಶ್ರೌಷಮಿತಿ-ನಾನು ನಿಮ್ಮ ಮಾತನ್ನು ಕೇಳಲಿಲ್ಲವೆಂದು, ವಕ್ಷ್ಯಸಿ - ಹೇಳುವಿಯಂತೆ, ಅತಃ - ಆದುದರಿಂದ, ಯಾಹಿ - ನಡೆ, ಇತಿ - ಇಂತೆಂದು, ರಾಮಃ - ಶ್ರೀರಾಮನು, ತಂ - ಆ ಸುಮಂತ್ರನನ್ನು ಕುರಿತು, ಅಬ್ರವೀತ್ - ನುಡಿದನು. ॥ ೪೭ ॥ ಸಸಾರಥಿಃ - ಆ ಸುಮಂತ್ರನು, ರಾಮಸ್ಯ - ಶ್ರೀರಾಮನ, ವಚಃ - ಮಾತನ್ನು, ಕುರ್ವ - ನಡೆಯಿಸುವವನಾಗಿ, ತಂಜನಂ - ಆ ಜನವನ್ನು, ಅನುಜ್ಞಾಪ್ಯಚ - ಸಂಮತ ಗೊಳಿಸಿ, ಶೀಘ್ರಂ - ಜಾಗ್ರತೆಯಾಗಿ, ವ್ರಜತೋಪಿ - ಹೋಗುತ್ತಿದ್ದರೂ, ಹಯಾ - ಕುದುರೆ ಗಳನ್ನು, ಚೊದಯಾಮಾಸ - ತುರುಬಿದನು. ॥ ೪೮ ॥ ರಾಜ್ಞಃ - ದಶರಥರಾಜನ, ಜನಃ - ಅಂತಃಪುರ ಜನವು, ರಾಮಂ - ಶ್ರೀರಾಮನನ್ನು ಕುರಿತು, ಪ್ರದಕ್ಷಿಣಂ - ಪ್ರದಕ್ಷಿಣವನ್ನು ಮಾಡಿ, ನ್ಯವರ್ತತ - ದೇಹದಿಂದ ಹಿಂದಕ್ಕೆ ತಿರುಗಿ ಬಂತು, ಮನಸಾಪಿ - ಮನಸ್ಸಿನಿಂದಲೂ, ಅಶ್ರುವೇಗೈಶ್ಚ - ಕಂಬನಿಗಳ ವೇಗದಿಂದಲೂ, ನನ್ಯವರ್ತತ - ಹಿಂತಿರುಗಲಿಲ್ಲ, ಮಾನುಷಂಚ - ಪೌರಜನರ ಸಮೂ ಹವು, ದೇಹೇನ - ದೇಹದಿಂದಲೂ, ಮನಸಾಪಿ - ಮನಸ್ಸಿನಿಂದಲೂ, ಅಶ್ರುವೇಗೈಶ್ಚ - ಕಂಬನಿಗಳ ವೇಗದಿಂದಲೂ, ನನ್ಯವರ್ತತ ಹಿಂತಿರುಗಲಿಲ್ಲ. ॥ ೪೯ ॥ ಪುನಃ - ಮತ್ತು, ಆಯಾಂತಂ - ತಿರುಗಿ ಬರುತ್ತಿರುವ, ಯಂ - ಯಾವ ಪುರುಷನನ್ನು, ಜನಃ - ಜನವು, ಇಚ್ಛೇತ್ - ಅಪೇಕ್ಷಿಸುವುದೋ, ಏನಂ - ಅಂತಹ ಪುರುಷನನ್ನು, ದೂರಂ - ಬಹು ದೂರ, ನಾನುವ್ರಜೇತ್ - ಅನುಸರಿಸಿ ಹೋಗ

ಕೇಳಿದ ಶ್ರೀರಾಮನು ಶ್ರೀಘ್ರವಾಗಿ ರಥವನ್ನು ನಡಿಯಿಸಬೇಕೆಂದು ಆಜ್ಞಾಪಿಸಿದನು. ಆಗಲಾ ಸುಮಂತ್ರನು "ದಶರಥರಾಯನ ಅಪ್ಪಣೆಯನ್ನು ನೆರವೇರಿಸಬೇಕೋ, ರಘುರಾಮನ ಅಪ್ಪಣೆಯನ್ನು ನಡೆಯಿಸಬೇಕೋ?" ಎಂಬ ಸಂಶಯಗ್ರಸ್ತನಾಗಿರಲು ಶ್ರೀರಾಮನು, "ಎಲೈ ಸುಮಂತ್ರನೆ! ದಶರಥರಾಯನು ಬೆನ್ನಿಡಿದು ನಿನ್ನನ್ನು ಕೂಗುವುದನ್ನು ಕೇಳಿಸಿ ಕೊಳ್ಳದೆಯೇ ರಥವನ್ನು ನಡಿಸು. ಬಂಧುಜನರ ಈ ವ್ಯಸನವನ್ನು ಬಹಳ ಕಾಲ ನನ್ನಿಂದ ನೋಡಲಾಗುವುದಿಲ್ಲ" ಎಂದನು. ಆಗ ಸಾರಥಿಯಾದ ಸುಮಂತ್ರನು ಶ್ರೀರಾಮನ ಅಪ್ಪಣೆ ಯನ್ನು ನಡೆಯಿಸುವವನಾಗಿ, ಜನಗಳನ್ನು ನಿಲ್ಲಿರೆಂದು ಸಮಾಧಾನಗೊಳಿಸಿ ಕುದುರೆಗಳು ಬೇಗನೆ ಹೋಗುತ್ತಿದ್ದರೂ ಅವುಗಳನ್ನು ತುರುಬಿದನು. ಆ ಸಮಯದಲ್ಲಿ ರಾಜಾಂತಃಪುರದ ಜನರೆಲ್ಲರೂ ಶ್ರೀರಾಮನಿಗೆ ಪ್ರದಕ್ಷಿಣೆಯಂಗೈದು, ತನುಮನಗಳಿಂದಲೂ, ಕಂಬನಿಗಳಿಂ ದಲೂ ಹಿಂತಿರುಗಲೇ ಇಲ್ಲವು. ಆಗ ಮಂತ್ರಿಗಳು ದಶರಥರಾಯನನ್ನು ಕುರಿತು, ಮಹಾ ರಾಜ! ಲೋಕದಲ್ಲಿ ಜನರು ಯಾವ ಪುರುಷನು ಪುನಃ ಬರಬೇಕೆಂದು ಅಪೇಕ್ಷಿಸುವರೋ,

ಯಾಂತಂ ನೈನಂ ದೂರಮನುವ್ರಜೇತ್ ॥ ಇತ್ಯಮಾತ್ಯಾ ಮಹಾರಾಜ
ಮೂಚುರ್ದಶರಥಂ ವಚಃ ॥ ೫೦ ॥

ತೇಷಾಂ ವಚ ಸ್ಸರ್ವಗುಣೋಪಪನ್ನಂ
ಪ್ರಸ್ವಿನ್ನಗಾತ್ರಃ ಪ್ರವಿಷಣ್ಣರೂಪಃ ॥
ನಿಶಮ್ಯ ರಾಜಾ ಕೃಪಣ ಸ್ಸಭಾರ್ಯೋ
ವ್ಯವಸ್ಥಿತ ಸ್ತಂ ಸುತಮೀಕ್ಷಮಾಣಃ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತ್ವಾರಿಂಶಸ್ಸರ್ಗಃ.

ಬಾರದು, ಇತಿ - ಇಂತೆಂದು, ಅಮಾತ್ಯಾಃ - ಮಂತ್ರಿಗಳು, ಮಹಾರಾಜಂ - ಮಹಾರಾಜನಾದ, ದಶರಥಂ - ದಶರಥರಾಯನನ್ನು ಕುರಿತು, ವಚಃ - ಮಾತನ್ನು, ಊಚುಃ - ಹೇಳಿದರು. ॥ ೫೦ ॥ ತೇಷಾಂ - ಆ ಮಂತ್ರಿಗಳ, ಸರ್ವ ಗುಣೋಪಪನ್ನಂ - ಸಮಸ್ತ ಗುಣಗಳಿಂದಲೂ ಕೂಡಿರುವ, ವಚಃ- ಮಾತನ್ನು, ನಿಶಮ್ಯ - ಕೇಳಿ, ಪ್ರವಿಷಣ್ಣರೂಪಃ - ವ್ಯಸನಗೊಂಡ ಆಕಾರವುಳ್ಳವನಾಗಿ, ಪ್ರಸ್ವಿನ್ನ ಗಾತ್ರಃ - ಸ್ವೇದಯುಕ್ತವಾದ ಶರೀರವುಳ್ಳ, ಕೃಪಣಃ - ದೀನನಾದ, ರಾಜಾ - ದಶರಥರಾಯನು, ಸಭಾರ್ಯಃ - ಹೆಂಡರಿಂದೊಡಗೂಡಿ, ತಂಸುತಂ - ಆ ಮಗನನ್ನು, ಈಕ್ಷಮಾಣಃ - ನೋಡುತ್ತ, ವ್ಯವಸ್ಥಿತಃ - ನಿಂತನು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತ್ವಾರಿಂಶಸ್ಸರ್ಗಃ.

ಅಂತಹನೊಡನೆ ಬಹು ದೂರ ಹಿಂಬಾಲಿಸಿ ಹೋಗಬಾರದು" ಎಂದರು. ದಶರಥರಾಯನು ಗುಣಯುಕ್ತವಾದ ಈ ಮಾತನ್ನು ಕೇಳಿ, ಮೈ ಬೆವರಿ, ದೀನನೂ, ಕಳವಳಗೊಂಡ ಮನ ವುಳ್ಳವನೂ ಆಗಿ, ಹೆಂಡತಿಯರಿಂದೊಡಗೂಡಿ ಮಗನಾದ ಶ್ರೀರಾಮನನ್ನೇ ನೋಡುತ್ತ ಸ್ತಂಭೀಭೂತನಾಗಿ ನಿಂತಿದ್ದನು. ॥ ೪೬-೫೧ ॥

ಇಂತಿದು ಶ್ರೀರಾಮ ಕೃತ ವನಗಮನ ಪ್ರಯಾಣ ವೃತ್ತಾಂತ ಕಥನವೆಂಬ
ನಲವತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಚತ್ವಾರಿಂಶಸ್ಸರ್ಗಃ.

ತಸ್ಮಿಂಸ್ತು ಪುರುಷವ್ಯಾಘ್ರೇ ವಿನಿರ್ಯಾತಿ ಕೃತಾಂಜಲೌ ॥ ಆರ್ತ ಶಬ್ದೋಥ ಸಂಜಜ್ಞೇ ಸ್ತ್ರೀಣಾಮಂತಃಪುರೇ ಮಹಾನ್ ॥ ೧ ॥ ಅನಾಥಸ್ಯ ಜನಸ್ಯಾಸ್ಯ ದುರ್ಬಲಸ್ಯ ತಪಸ್ವಿನಃ ॥ ಯೋ ಗತಿ ಶ್ಶರಣಂ ಚಾಸೀ ತ್ಸನಾಥಃ ಕ್ವನು ಗಚ್ಛತಿ? ॥ ೨ ॥ ನಕ್ರುಧ್ಯ ತ್ಯಭಿಶಪ್ತೋಽಪಿ ಕ್ರೋಧನೀಯಾನಿ ವರ್ಜಯನ್ ॥ ಕ್ರುದ್ಧಾನ್ ಪ್ರಸಾದಯನ್ ಸರ್ವಾನ್ ಸಮದುಃಖಃ ಕ್ವಗಚ್ಛತಿ? ॥ ೩ ॥ ಕೌಸಲ್ಯಾಯಾಂ ಮಹಾತೇಜಾ ಯಥಾ ಮಾತರಿ ವರ್ತತೇ ॥ ತಥಾ

ಪುರುಷವ್ಯಾಘ್ರೇ - ಪುರುಷಶ್ರೇಷ್ಠನಾದ, ತಸ್ಮಿಂಸ್ತು - ಆ ಶ್ರೀರಾಮನಾದವರೆ, ಕೃತಾಂಜಲೌ, ಕೃತ - ಮಾಡಲ್ಪಟ್ಟ, ಅಂಜಲೌ - ಅಂಜಲಿಯುಳ್ಳವನಾಗಿ, ವಿನಿರ್ಯಾತಿ - ಹೊರಡುತ್ತಿರಲು, ಅಥ - ಬಳಿಕ, ಅಂತಃಪುರೇ - ಅಂತಃಪುರದಲ್ಲಿ, ಸ್ತ್ರೀಣಾಂ - ಹೆಂಗಳ, ಮಹಾನ್ - ದೊಡ್ಡದಾದ, ಆರ್ತಶಬ್ದಃ - ದೀನಧ್ವನಿಯು, ಸಂಜಜ್ಞೇ - ಹುಟ್ಟಿತು. ॥ ೧ ॥ ಅನಾಥಸ್ಯ - ನಾಥರಹಿತವಾದ, ದುರ್ಬಲಸ್ಯ - ಬಲಹೀನವಾದ, ತಪಸ್ವಿನಃ - ದೈನ್ಯವುಳ್ಳ, ಅಸ್ಯಜನಸ್ಯ - ಈ ಜನಕ್ಕೆ, ಯಃ - ಯಾವ ಪುರುಷನು, ಗತಿಃ - ಪ್ರಾಪ್ಯಸ್ಥಾನವಾಗಿ, ಶರಣಂಚ-ಸಂರಕ್ಷಣಕರ್ತನು, ಆಸೀತ್-ಆಗಿದ್ದನೋ, ಸನಾಥಃ - ಅಂತಹ ಸ್ವಾಮಿಯು, ಕ್ವನುಗಚ್ಛತಿ - ಎಲ್ಲಿಹೋಗುತ್ತಾನೆ. ॥ ೨ ॥ ಅಭಿಶಪ್ತೋಽಪಿ - ನಿಂದಿತನಾದರೂ, ನಕ್ರುಧ್ಯತಿ - ಕೋಪಮಾಡುವದಿಲ್ಲ, ಕ್ರೋಧನೀಯಾನಿ - ಕೋಪಕ್ಕೆಕಾರಣಗಳನ್ನು, ವರ್ಜಯನ್ - ತ್ಯಜಿಸುತ್ತ, ಕ್ರುದ್ಧಾನ್ - ಕೋಪಗೊಂಡ, ಸರ್ವಾನ್-ಸಮಸ್ತರನ್ನೂ, ಪ್ರಸಾದಯನ್-ಸಮಾಧಾನಗೊಳಿಸುತ್ತ, ಸಮದುಃಖಃ-ಸಮಾನವಾದ ದುಃಖವುಳ್ಳವನಾಗಿರುವ, (ಸರಾಮಃ-ಅಂತಹ ಶ್ರೀರಾಮನು) ಕ್ವಗಚ್ಛತಿ-ಎಲ್ಲಿಹೋಗುತ್ತಾನೆ. ॥೩॥ ಮಹಾತೇಜಾಃ-ಮಹಾಪರಾಕ್ರಮಶಾಲಿಯಾದ, ಯಃ-ಯಾವ ಶ್ರೀರಾಮನು, ಮಾತರಿ-ತಾಯಿಯಾದ, ಕೌಸಲ್ಯಾಯಾಂ ಕೌಸಲ್ಯಾ

ಶ್ರೀರಾಮಚಂದ್ರನು ತಾಯಿಯರಿಂದ ಪರಿವೇಷ್ಟಿತನಾದ ದಶರಥರಾಯನಿಗೆ ವಂದನೆಯನ್ನು ಮಾಡಿ ಅರಣ್ಯಕ್ಕೆ ಪ್ರಯಾಣ ಮಾಡಿದ ಬಳಿಕ, ಅಂತಃಪುರದಲ್ಲಿದ್ದ ಸ್ತ್ರೀಯರು ಅನೇಕ ವಿಧವಾಗಿ ರೋದಿಸುತ್ತಿದ್ದರು. "ಅಕಟಕಟ! ನಾಥನಿಲ್ಲದೆ ಶಕ್ತಿ ಗುಂದಿ, ಶೋಕವಾಂತು ಪರಿತಪಿಸುತ್ತಿರುವ ಈ ಅಂತಃಪುರ ಜನಕ್ಕೆ ಗತಿಪ್ರದಾತನಾದ ಶ್ರೀರಾಮನು ಈಗ ಎಲ್ಲಿಗೆ ಹೋಗುವನು! ತಾಪಸ ವೇಷವನ್ನು ಧರಿಸಿ ಕಾಡಿಗೆ ಹೋಗುವ ಶ್ರೀರಾಮಮೂರ್ತಿಗೆ ರಕ್ಷಕರಾರು? ಮಹಾತ್ಮನಾದ ಆತನು ತನ್ನನ್ನು ನಿಂದಿಸಿದರೂ ಯಾರ ಮೇಲೆಯೂ ಕುಪಿತನಾಗುವುದಿಲ್ಲ. ಮತ್ತೊಬ್ಬರ ಕ್ರೋಧಕ್ಕೆ ಕಾರಣವಾದ ನುಡಿಗಳನ್ನಾಡುವುದಿಲ್ಲ. ಯಾರಾದರೂ ಮತಿಯಿಲ್ಲದೆ ಕೋಪವಾಂತರೆ, ಅವರ ಸುಖದುಃಖಗಳನ್ನು ತನ್ನದೆಂದೇ ಭಾವಿಸಿ ಅವರನ್ನು ಸಮಾಧಾನಗೊಳಿಸಿ ಕೋಪೋಪಶಾಂತಿಯನ್ನುಂಟುಮಾಡು

ಯೋ ವರ್ತತೇಽಸ್ಮಾಸು ಮಹಾತ್ಮಾ ಕ್ವನುಗಚ್ಛತಿ? ॥ ೪ ॥ ಕೈಕೇಯ್ಯಾ ಕ್ಲಿಶ್ಯಮಾನೇನ ರಾಜ್ಞಾ ಸಂಚೋದಿತೋ ವನಂ ॥ ಪರಿತ್ರಾತಾ ಜನಸ್ಯಾಸ್ಯ ಜಗತಃ ಕ್ವನುಗಚ್ಛತಿ? ॥ ೫ ॥ ಅಹೋ! ನಿಶ್ಚೇತನೋ ರಾಜಾ ಜೀವಲೋಕಸ್ಯ ಸಂಪ್ರಿಯಂ ॥ ಧರ್ಮ್ಯಂ ಸತ್ಯವ್ರತಂ ರಾಮಂ ವನವಾಸೇ ಪ್ರವತ್ಸ್ಯತಿ ॥ ೬ ॥ ಇತಿಸರ್ವಾ ಮಹಿಷ್ಯಸ್ತಾ ವಿವತ್ಸಾ ಇವ ಧೇನವಃ॥ ರುರುದುಶ್ಚೈವ ದುಃಖಾರ್ತಾ ಸ್ಸಸ್ವರಂಚ ವಿಚುಕ್ರುಶುಃ ॥ ೭ ॥ ಸತಮಂತಃಪುರೇ ಘೋರ ಮಾರ್ತಶಬ್ದಂ

ದೇವಿಯಲ್ಲಿ, ಯಥಾ - ಹೇಗೆ, ವರ್ತತೇ - ಇರುವನೋ, ತಥಾ - ಹಾಗೆ, ಅಸ್ಮಾಸು - ನಮ್ಮಲ್ಲಿಕೂಡ, ವರ್ತತೇ-ಇರುವನು, ಸಮಹಾತ್ಮಾ - ಅಂತಹ ಮಹಾಪುರುಷನು, ಕ್ವನುಗಚ್ಛತಿ-ಎಲ್ಲಿಹೋಗುತ್ತಾನೆ. ॥ ೪ ॥ ಕೈಕೇಯ್ಯಾ - ಕೈಕೇಯಿದೇವಿಯಿಂದ, ಕ್ಲಿಶ್ಯಮಾನೇನ - ವ್ಯಸನಗೊಳಿಸಲ್ಪಟ್ಟ, ರಾಜ್ಞಾ- ಅರಸಿನಿಂದ, ವನಂ - ವನವನ್ನು ಕುರಿತು, ಸಂಚೋದಿತಃ - ಕಳುಹಿಸಲ್ಪಟ್ಟ, ಅಸ್ಯಜನಸ್ಯ - ಈ ಜನಕ್ಕೂ, ಜಗತಃ - ಲೋಕಗಳಿಗೂ, ಪರಿತ್ರಾತಾ - ಸಂರಕ್ಷಣಕರ್ತನಾದ ಶ್ರೀರಾಮನು, ಕ್ವನು ಗಚ್ಛತಿ - ಎಲ್ಲಿ ಹೋಗುತ್ತಾನೆ, ಅಹೋ - ಆಶ್ಚರ್ಯವು. ॥ ೫ ॥ ನಿಶ್ಚೇತನಃ - ಚೈತನ್ಯವಿಲ್ಲ ದಿರುವ, ರಾಜಾ - ಅರಸು, ಜೀವಲೋಕಸ್ಯ - ಪ್ರಾಣಿಸಮುದಾಯಕ್ಕೆ, ಸಂಪ್ರಿಯಂ - ಬಹಳ ಇಷ್ಟನಾದ, ಧರ್ಮ್ಯಂ - ಧರ್ಮಪ್ರಧಾನನಾದ, ಸತ್ಯವ್ರತಂ - ಸತ್ಯವಂತನಾದ, ರಾಮಂ-ಶ್ರೀರಾಮ ನನ್ನು, ವನವಾಸೇ - ವನವಾಸವಿಷಯವಾಗಿ, ಪ್ರವತ್ಸ್ಯತಿ - ವಾಸಮಾಡುವನಲ್ಲವೆ. ॥ ೬ ॥ ಇತಿ - ಇಂತೆಂದು, ಸರ್ವಾಃ - ಸಮಸ್ತರಾದ, ತಾಃಮಹಿಷ್ಯಃ - ಆ ಪಟ್ಟದ ರಾಣಿಗಳು, ವಿವತ್ಸಾಃ - ಕರುಗಳಿಲ್ಲದ, ಧೇನವಇವ - ಆಕಳುಗಳಂತೆ, ದುಃಖಾರ್ತಾಃ - ದುಃಖಗೊಂಡು, ರುರುದುಶ್ಚೈವ, ರೋದನಮಾಡಿದರು, ಸಸ್ವರಂಚ - ಸ್ವರದಿಂದೊಡಗೂಡಿದವರಂತೆ, ವಿಚುಕ್ರುಶುಃ - ಆಕ್ರೋಶ ವನ್ನು ಮಾಡಿದರು. ॥ ೭ ॥ ಸಃಮಹೀಪತಿಃ - ಆ ದಶರಥರಾಯನು, ಪುತ್ರಶೋಕಾಭಿಸಂತಪ್ತಃ, ಪುತ್ರಶೋಕ - ಪುತ್ರವ್ಯಸನದಿಂದ, ಅಭಿಸಂತಪ್ತಃ - ಬಹು ದುಃಖಗೊಂಡು, ಅಂತಃಪುರೇ - ಅಂತಃ ಪುರದಲ್ಲಿ, ಘೋರಂ - ಭಯಂಕರವಾದ, ಆರ್ತಶಬ್ದಂ - ಆ ದೀನಧ್ವನಿಯನ್ನು, ಶೃತ್ವಾ - ಕೇಳಿ,

ತ್ತಿದ್ದನಲ್ಲ! ಆತನು ತನ್ನ ಜನನಿಯಾದ ಕೌಸಲ್ಯಾದೇವಿಯಲ್ಲಿ ಯಾವ ವಿಧವಾದ ಪ್ರೀತಿ ವಿಶ್ವಾಸಗಳನ್ನು ಪ್ರಕಟಸುತ್ತಿದ್ದನೋ, ಅದೇ ಪ್ರೀತಿ ವಿಶ್ವಾಸಗಳನ್ನು ನಮ್ಮಲ್ಲಿಯೂ ತೋರುತ್ತಿದ್ದನಲ್ಲ! ಇಂತಹ ಗುಣಗಣಭೂಷಿತನಾದ ರಘುರಾಮನನ್ನು ಆ ಕೈಕೇಯಿಯ ಮಾತುಗಳಿಗೆ ಮರುಳಾದ ನಮ್ಮ ದಶರಥ ಭೂಪಾಲನು ಅರಣ್ಯಕ್ಕೆ ಕಳುಹಿದನಲ್ಲವೆ? ಶ್ರೀರಾಮನು ಹದಿನಾಲ್ಕು ಲೋಕಗಳಿಗೆ ಮಾತ್ರವಲ್ಲದೆ ಈ ಸಮಸ್ತ ಜನಕ್ಕೂ ಸ್ವಾಮಿಯು. ಅಕಟ! ದಶರಥರಾಯನೆಂದರೆ, ಮಹಾ ಸತ್ಯಸಂಧನು ; ಎಲ್ಲ ಪ್ರಾಣಿಗಳಿಗೂ ಏಕೆ, ಈ ಲೋಕಕ್ಕೇ ಪ್ರಿಯವನ್ನುಂಟುಮಾಡುವವನು. ಇಂತಹನು ಮಹಾ ಕೀರ್ತಿವಂತನಾದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿ ದುಃಖಿಸಿ ಚೈತನ್ಯಹೀನನಾದವನಲ್ಲವೆ?'' ಎಂಬೀ ಪ್ರಕಾರ ವಾಗಿ ರಾಣೀವಾಸದ ಜನರೆಲ್ಲರೂ ರೋದಿಸುತ್ತಿದ್ದರು. ॥ ೧-೭ ॥ ಆಗ ಪುತ್ರ ವ್ಯಸನ ಕರ್ಶಿತನಾಗಿ ಸಂತಪಿಸುತ್ತಿರುವ ಆ ದಶರಥ ಮಹಾರಾಜನು ಈ ಹೆಂಗಳ ಪ್ರಲಾಪವನ್ನು

ಮಹೀಪತಿಃ ॥ ಪುತ್ರಶೋಕಾಭಿಸಂತಪ್ತಃ ಶ್ರುತ್ವಾ ಚಾಸೀತ್ಸು ದುಃಖಿತಃ ॥೮॥ ನಾಗ್ನಿಹೋತ್ರಾಣ್ಯಹೂಯಂತ ನಾಪಚರ್ನ್ ಗೃಹಮೇಧಿನಃ ॥ ಅಕುರ್ವನ್ನ ಪ್ರಜಾಃ ಕಾರ್ಯಂ ಸೂರ್ಯಶ್ಚಾಂತರಧೀಯತ ॥೯॥ ವ್ಯಸೃಜನ್ ಕಬಳಾನ್ನಾಗಾ ಗಾವೋ ವತ್ಸಾನ್ನಪಾಯಯನ್ ॥ ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥೧೦॥ ತ್ರಿಶಂಕು ರ್ಲೋಹಿತಾಂಗಶ್ಚ ಬೃಹಸ್ಪತಿ

ಸುದುಃಖಿತಃ - ಬಹಳ ದುಃಖವುಳ್ಳವನು, ಆಸೀತ್ - ಆದನು. ॥೮॥ ಅಗ್ನಿಹೋತ್ರಾಣಿ - ಅಗ್ನಿ ಹೋತ್ರಗಳನ್ನು, ನಾಹೂಯಂತ (೧) - ಹೋಮಮಾಡಲಿಲ್ಲ, ಗೃಹಮೇಧಿನಃ - ಗೃಹಸ್ಥಾಶ್ರಮಿಗಳು, ನಾಪಚನ್ - ಪಾಕತತ್ಪರರಾಗಲಿಲ್ಲ, ಪ್ರಜಾಃ - ಪ್ರಜೆಗಳು, ಕಾರ್ಯಂ - ಸ್ವಸ್ವಕಾರ್ಯಗಳನ್ನು, ನಾಕುರ್ವನ್ - ಮಾಡಲಿಲ್ಲ, ಸೂರ್ಯಶ್ಚ - ಸೂರ್ಯನೂ, ಅಂತರಧೀಯತ - ಅಂತರ್ಧಾನವನ್ನು ಹೊಂದಿದನು. ॥೯॥ ನಾಗಾಃ - ಆನೆಗಳು, ಕಬಳಾನ್ - ಗ್ರಾಸಗಳನ್ನು, ವ್ಯಸೃಜನ್ - ಬಿಟ್ಟುವು, ಗಾವಃ - ಆಕಳುಗಳು, ವತ್ಸಾನ್ - ಕರುಗಳನ್ನು, ನಪಾಯಯನ್ - ಪಾನಮಾಡಿಸಲಿಲ್ಲ, ಜನನೀ - ತಾಯಿಯು, ಪ್ರಥಮಜಂ - ಮೊದಲು ಹುಟ್ಟಿದ, ಪುತ್ರಂ - ಜ್ಯೇಷ್ಠಪುತ್ರನನ್ನು, ಲಬ್ಧ್ವಾ-ಹೊಂದಿಯೂ, (೨) ನಾಭ್ಯನಂದತ - ಸಂತೋಷಪಡಲಿಲ್ಲ. ॥೧೦॥

ಕೇಳಿ ಮತ್ತಷ್ಟು ವ್ಯಸನಗೊಂಡವನಾದನು. ಆ ಸಮಯದಲ್ಲಿ ಆ ಅಯೋಧ್ಯಾ ಪಟ್ಟಣದಲ್ಲಿ **ಅನೇಕ ಅದ್ಭುತಗಳಾದುವು.** ಪಟ್ಟಣದ ಸೋಮಯಾಜಿಗಳೆಲ್ಲರೂ ಶ್ರೀರಾಮನ ವನಗಮನ **ದಿಂದ ಮಹಾ** ದುಃಖಿತರಾಗಿ ಅಗ್ನಿ ಹೋತ್ರಗಳನ್ನು ತ್ಯಜಿಸಿದರು ; ಗೃಹಸ್ಥರು ಪಾಪಕರಣ **ತತ್ಪರರಾಗಲಿಲ್ಲ ;** ಪ್ರಜೆಗಳಲ್ಲಿ ಪ್ರತಿಯೊಬ್ಬನೂ, ಯಾವ ಕೆಲಸವನ್ನೂ ಮಾಡದೆ, **ಕರ್ತವ್ಯತಾ** ಮೂಢನಾಗಿ ಹೋದನು. ಸೂರ್ಯನೂ ಕೂಡ ಆ ದುಃಖವನ್ನು ಸೈರಿಸಲಾರದೆ

(೧) "ನಾಹೂಯಂತ" ಎಂಬ ಕಡೆ ಹೀಗೆ ತಾತ್ಪರ್ಯ ; ಅಗ್ನಿತ್ರಯಗಳ ಅಂತರ್ಧಾನದಿಂದಲೂ, ಹೋತೃಗಳ ಅಪಾರ ವ್ಯಸನದಿಂದಲೂ ಅವರು ಹೋಮ ಮಾಡಲಿಲ್ಲ. "ಸೂರ್ಯಶ್ಚಾಂತರಧೀಯತ" ಸೂರ್ಯನು ತೇಜೋವಿಹೀನನಾದನು ಎಂದು ಮಾತ್ರ ಅರ್ಥ. (**ಇದು ಗೋವಿಂದರಾಜರದು.**)

ತನಿ ಶ್ಲೋಕೀಕಾರರು "ಸೂರ್ಯಶ್ಚಾಂತರಧೀಯತ" ಎಂಬ ಪದಕ್ಕೆ ಹೆಚ್ಚು ಸ್ವಾರಸ್ಯವನ್ನು "ಶ್ರೀರಾಮಮೂರ್ತಿಯ ಅರಣ್ಯ ಗಮನದಿಂದ ಶೋಕಾಕ್ರಾಂತನಾದ ಸೂರ್ಯನು, ದಿನಶೇಷವಿದ್ದರೂ ಅಸ್ತಂಗತನಾದನು" ಎಂಬ ಅರ್ಥದಿಂದ ಹೇಳಿದ್ದಾರೆ.

(೨) ಈ ಶ್ಲೋಕದಲ್ಲಿ ಅರ್ಥ ವಿವರಣೆಯಲ್ಲಿ **ತನಿ ಶ್ಲೋಕೀ**ಕಾರರ ಮತ, "ಜನನೀ ನಾಭ್ಯನಂದತ" "ಉತ್ಸವೇಷುಚ ಸರ್ವೇಷು ಪಿತೇವ ಪರಿತಷ್ಯತಿ" ಎಂದು ಹೇಳಿರುವ ಹಾಗೆ, "ಯಾವ ಮಹಾತ್ಮನು ಪುತ್ರ ಜನನಾರಭ್ಯ ತಂದೆಯಂತೆ ತೊಡೆಯ ಮೇಲೆ ಕೂಡಿಸಿಕೊಂಡು ಲಾಲಿಸುತ್ತಿದ್ದನೋ ಅಂತಹ ಶ್ರೀರಾಮನೇ ವನವನ್ನು ಕುರಿತು ಹೋಗುತ್ತಿರಲು ಈ ಮಕ್ಕಳಿಂದೇನು ಪ್ರಯೋಜನ" ಎಂದು, ನಿಜ ಕುವರರಿಗೆ ಹಾಲು ಕೊಡುವುದನ್ನು ತ್ಯಜಿಸಿದರು. "ಪ್ರಥಮಜಂ – ನಾಭ್ಯನಂದತ" ಗುಣಶಾಲಿಯೂ, ಜ್ಯೇಷ್ಠನೂ ಆದ ಶ್ರೀರಾಮನಲ್ಲವೆ ವನಕ್ಕೆ ಹೊರಡಿಸಲ್ಪಟ್ಟುದು ? ಹೀಗಿರುವಾಗ ಈ ಮಗುವಿಗೇನು ಗತಿ ? ದಶರಥರಾಯನು ಅರವತ್ತು ಸಾವಿರ ವರುಷಗಳವರೆವಿಗೂ ಅಪುತ್ರವಂತನಾಗಿದ್ದು ಈಗ ಮಕ್ಕಳನ್ನು ಪಡೆದರೂ ಆ ಮಕ್ಕಳಲ್ಲಿ ಜ್ಯೇಷ್ಠ ಕುವರನು ವನಕ್ಕೆ ಹೊರಡಿಸಲ್ಪಟ್ಟನು. ಬಹಳ ಕಾಲ ವ್ರತೋಪವಾಸಾದಿಗಳಿಂದ ಲಬ್ಧನಾದ ನನ್ನ ಮಗನೇನಾಗುತ್ತಾನೋ ಎಂಬ ಶಂಕೆಯಿಂದ ಪ್ರಥಮ ಸಂತಾನವನ್ನು ಪಡೆದ ತಾಯಿಯು

ಬುಧಾವಪಿ ॥ ದಾರುಣಾಃ ಸೋಮಮಭ್ಯೇತ್ಯ ಗ್ರಹಾಃ ಸ್ಸರ್ವೇ ವ್ಯವಸ್ಥಿತಾಃ ॥ ೧೧ ॥ ನಕ್ಷತ್ರಾಣಿ ಗತಾರ್ಚೀಂಷಿ ಗ್ರಹಾಶ್ಚ ಗತತೇಜಸಃ ॥ ವಿಶಾಖಾಸ್ತು ಸಧೂಮಾಶ್ಚ ನಭಸಿ ಪ್ರಚಕಾಶಿರೇ ॥ ೧೨ ॥ ಕಾಳಿಕಾನಿಲ ವೇಗೇನ ಮಹೋದಧಿರಿವೋತ್ಥಿತಃ ॥ ರಾಮೇ ವನಂ ಪ್ರವ್ರಜಿತೇ ನಗರಂ ಪ್ರಚಚಾಲ ತತ್ ॥ ೧೩ ॥ ದಿಶಃ ಪರ್ಯಾಕುಲಾ ಸ್ಸರ್ವಾ ಸ್ತಿಮಿರೇಣೇವ ಸಂವೃತಾಃ ॥ ನಗ್ರಹೋ ನಾಪಿ

(೩) ತ್ರಿಶಂಕುಃ - ನಕ್ಷತ್ರರೂಪನಾದ ತ್ರಿಶಂಕುವೂ, ಲೋಹಿತಾಂಗಶ್ಚ - ಅಂಗಾರಕನೂ, ಬೃಹಸ್ಪತಿ ಬುಧಾವಪಿ-ಬೃಹಸ್ಪತಿ ಬುಧರೆಂಬ, ಸರ್ವೇಗ್ರಹಾಃ - ಸಮಸ್ತ ಗ್ರಹಗಳೂ, ದಾರುಣಾಃ - ಕ್ರೂರರಾಗಿ, ಸೋಮಂ - ಚಂದ್ರನಿಗೆ, ಅಭ್ಯೇತ್ಯ - ಇದುರಾಗಿಬಂದು, ವ್ಯವಸ್ಥಿತಾಃ - ನಿಂತವು. ||೧೧|| ನಕ್ಷತ್ರಾಣಿ - ನಕ್ಷತ್ರಗಳು, ಗತಾರ್ಚೀಂಷಿ - ಗತವಾದ ತೇಜಸ್ಸುಳ್ಳವುಗಳು, ಗ್ರಹಾಶ್ಚ - ಗ್ರಹಗಳೂ, ಗತಚೇತಸಃ - ತೇಜೋವಿಹೀನಗಳಾದುವು, ನಭಸಿ - ಅಂತರಿಕ್ಷದಲ್ಲಿ, ವಿಶಾಖಾಸ್ತು - ವಿಶಾಖಾ ನಕ್ಷತ್ರಗಳಾದರೆ, ಸಧೂಮಾಃ - ಧೂಮಗಳಿಂದೊಡಗೂಡಿದವುಗಳಾಗಿ, ಪ್ರಚಕಾಶಿರೇ - ಪ್ರಕಾಸುತ್ತಿದ್ದವು. || ೧೨ || ಕಾಳಿಕಾನಿಲವೇಗೇನ, ಕಾಳಿಕಾ - ಮೇಘಜಾಲದ, ಅನಿಲ - ವಾಯುವಿನ, ವೇಗೇನ - ವೇಗದಿಂದ, ಉತ್ಥಿತಃ - ಮೇಲಕ್ಕೆದ್ದಿರುವ, ಮಹೋದಧಿರಿವ - ಕಡಲಿನಂತೆ, ರಾಮೇ - ಶ್ರೀರಾಮನು, ವನಂ - ವನವನ್ನು ಕುರಿತು, ಪ್ರವ್ರಜಿತೇಸತಿ - ಹೊರಟುಹೋಗಲು, ತನ್ನಗರಂ - ಆ ಪಟ್ಟಣವು, ಪ್ರಚಚಾಲ - ಕದಲಿತು. || ೧೩ || ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳು, ತಿಮಿರೇಣ - ಗಾಢಾಂಧಕಾರದಿಂದ, ಸಂವೃತಾಇವ - ಆವರಿಸಲ್ಪಟ್ಟಂತೆ, ಪರ್ಯಾಕುಲಾಃ - ವ್ಯಾಕುಲಗಳಾಯಿತು, ಗ್ರಹಾಃ - ನವಗ್ರಹಗಳು, ನ - ಕಾಣಿಸಲಿಲ್ಲವು, ನಕ್ಷತ್ರಂ - ಅಶ್ವಿನ್ಯಾದಿ

ಅಸ್ತಂಗತನಾದನು. ಆನೆಗಳು ಮೇವನ್ನು ಬಿಟ್ಟುವು; ಗೋವುಗಳು ಕರುಗಳಿಗೆ ಹಾಲು ಕೊಡುವುದನ್ನು ತ್ಯಜಿಸಿದುವು. ತಾಯಿಯಾದವಳು ಚೊಚ್ಚಲು ಗಂಡು ಮಗುವನ್ನು ಎತ್ತಿಕೊಳ್ಳಲು ಇಚ್ಛಿಸಲಿಲ್ಲವು. ತ್ರಿಶಂಕು, ಅಂಗಾರಕ, ಬೃಹಸ್ಪತಿ, ಮತ್ತು ಬುಧ ಎಂಬ ಗ್ರಹಗಳು ಮಹಾ ಕ್ರೂರ ಭಾವವನ್ನು ಹೊಂದಿ ಚಂದ್ರನನ್ನು ಸುತ್ತುವರೆದುವು. ನಭೋಮಂಡಲದಲ್ಲಿ ರಾರಾಜಿಸುವ ಇಡೀ ನಕ್ಷತ್ರ ರಾಜಿಯೇ ಕಾಂತಿ ಗುಂದಿತು. ಹೆಚ್ಚೇನು? ಆದಿತ್ಯಾದಿ ನವಗ್ರಹಗಳೇ ತೇಜೋಹೀನವಾಗಿ ಹೋದುವು; ಅಲ್ಲಲ್ಲಿದ್ದ ಅಗ್ನಿ ಜ್ವಾಲೆಗಳು ಹೊಗೆಯಿಂದಾವೃತವಾಗಿ ಮಂಕಾಗಿ ಹೋದುವು. ಶ್ರೀರಾಮಮೂರ್ತಿಯು ವನವನ್ನು ಕುರಿತು ತೆರಳಿದವನಾಗಲು ಆ ಅಯೋಧ್ಯಾ ವಾಸಿಗಳು ಮೇಘಗಳ ವೇಗದಿಂದಲೂ, ವಾಯು

ಸಂತೋಷಪಡಲೇ ಇಲ್ಲ.

"ವ್ಯಸೃಜ್ಜ" ಎಂಬ ಕಡೆ ರಾಮನು ಎಲ್ಲರಲ್ಲಿಯೂ ಆತ್ಮಸ್ವರೂಪನಾಗಿರುವುದರಿಂದ ಅವನು ದುಃಖಿಸಿದರೆ ಎಲ್ಲರಿಗೂ ದುಃಖವುಂಟಾಗುತ್ತದೆ. ಆದುದರಿಂದಲೇ ಈ ರಾಮಾಯಣದಲ್ಲಿ ಪ್ರತಿಪಾದಿತವಾಗಿರುವ ಸಮಸ್ತ ವಿಷಯಗಳೂ ವಾಸ್ತವವಾದುದೆಂದು ತಿಳಿದುಕೊಳ್ಳಬೇಕು. ಎಂದು **ಮಹೇಶ್ವರ ತೀರ್ಥರು** ಬರೆಯುತ್ತಾರೆ.

(೧) ತ್ರಿಶಂಕುವು ಗ್ರಹ ಕೂಟಕ್ಕೆ ಸೇರದಿದ್ದರೂ "ಛತ್ರಿಣೋ ಗಚ್ಛಂತಿ" ಎಂಬ ವ್ಯಪದೇಶದಂತೆ ಸಂಬಂಧದಿಂದ ಗ್ರಹ ಸಮುದಾಯಕ್ಕೆ ಸೇರಿಸಲ್ಪಟ್ಟಿದ್ದಾನೆ. **(ಇದು ಗೋವಿಂದರಾಜರದು.)**

ನಕ್ಷತ್ರಂ ಪ್ರಚಕಾಶೇ ನ ಕಿಂಚನ ‖ ೧೪ ‖ ಅಕಸ್ಮಾನ್ನಾಗರಃ ಸರ್ವೋ ಜನೋ ದೈನ್ಯಮುಪಾಗಮತ್ ‖ ಆಹಾರೇವಾ ವಿಹಾರೇವಾ ನಕಶ್ಚಿದಕರೋನ್ಮನಃ ‖ ೧೫ ‖ ಶೋಕಪರ್ಯಾಯಸಂತಪ್ತಸ್ಸತತಂ ದೀರ್ಘಮುಚ್ಛ್ವಸನ್‖ ಅಯೋಧ್ಯಾಯಾಂ ಜನಸ್ಸರ್ವಶ್ಶುಶೋಚ ಜಗತೀಪತಿಂ ‖ ೧೬ ‖ ಬಾಷ್ಪಪರ್ಯಾಕುಲಮುಖೋ ರಾಜಮಾರ್ಗಗತೋ ಜನಃ ‖ ನಹೃಷ್ಟೋ ಲಕ್ಷ್ಯತೇ ಕಶ್ಚಿತ್ಸರ್ವಶ್ಶೋಕಪರಾಯಣಃ ‖ ೧೭ ‖ ನ ವಾತಿ ಪವನಶ್ಶೀತೋ ನ ಶಶೀ ಸೌಮ್ಯದರ್ಶನಃ ‖ ನ ಸೂರ್ಯಸ್ತಪತೇ ಲೋಕಂ ಸರ್ವಂ ಪರ್ಯಾಕುಲಂ

ನಕ್ಷತ್ರಗಳು, ಕಿಂಚನ - ಸ್ವಲ್ಪವಾದರೂ, ನಪ್ರಚಕಾಶೇ - ಪ್ರಕಾಶಿಸಲಿಲ್ಲ, ಅಕಸ್ಮಾತ್ - ಕಾರಣವಿಲ್ಲದೆ, ನಾಗರಃ - ನಗರದಲ್ಲಿ ಹುಟ್ಟಿದ, ಸರ್ವೋಜನಃ - ಸಮಸ್ತ ಜನವು, ದೈನ್ಯಂ - ದೀನತ್ವವನ್ನು, ಉಪಾಗಮತ್ - ಹೊಂದಿತು, ಕಶ್ಚಿತ್ - ಯಾವ ಮನುಷ್ಯನೂ, ಆಹಾರೇವಾ - ಭೋಜನದಲ್ಲಿಯೇ ಆಗಲೀ, ವಿಹಾರೇವಾ - ವಿಲಾಸದಲ್ಲಿಯೇ ಆಗಲೀ, ಮನಃ - ಮನಸ್ಸನ್ನು, ನಾಕರೋತ್- ಮಾಡಲಿಲ್ಲ. ‖೧೪-೧೫‖ ಸತತಂ - ಯಾವಾಗಲೂ, ಶೋಕಪರ್ಯಾಯಸಂತಪ್ತಃ - ವ್ಯಸನಪರಂಪರೆಯಿಂದ ಸಂಕಟಗೊಂಡುದಾಗಿ, ದೀರ್ಘಂ - ಬಹಳವಾಗಿ, ಉಚ್ಛ್ವಸನ್ - ನಿಟ್ಟುಸುರುಬಿಡುವುದಾಗಿ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿನ, ಸರ್ವಃಜನಃ - ಸಮಸ್ತ ಜನವು, ಜಗತೀಪತಿಂ - ಪೃಥ್ವೀಪತಿಯಾದ ಶ್ರೀರಾಮನನ್ನು ಕುರಿತು, ಶುಶೋಚ - ದುಃಖಗೊಂಡಿತು. ‖ ೧೬ ‖ ಬಾಷ್ಪಪರ್ಯಾಕುಲಮುಖಃ, ಬಾಷ್ಪ - ಕಂಬನಿಗಳಿಂದ, ಪರ್ಯಾಕುಲ - ವ್ಯಾಪ್ತವಾದ, ಮುಖಃ - ಮುಖವುಳ್ಳ, ರಾಜಮಾರ್ಗಗತಃ - ರಾಜವೀಥಿಯಲ್ಲಿ ಹೋಗುತ್ತಿರುವ, ಕಶ್ಚಿಜ್ಜನಃ - ಯಾವ ಜನವು, ಹೃಷ್ಟಃ - ಸಂತೋಷಗೊಂಡುದಾಗಿ, ನಲಕ್ಷ್ಯತೇ - ಕಾಣಲ್ಪಡಲಿಲ್ಲ, ಸರ್ವಃ - ಸಮಸ್ತ ಜನವು, ಶೋಕಪರಾಯಣಃ - ಶೋಕವೇ ಮುಖ್ಯವಾಗುಳ್ಳವರಾದರು. ‖ ೧೭ ‖ ಶೀತಃ - ಥಣ್ಣಗಿರುವ, ಪವನಃ - ಘಾಳಿಯು, ನವಾತಿ - ಬೀಸಲಿಲ್ಲ, ಶಶೀ - ಚಂದ್ರನು, ಸೌಮ್ಯದರ್ಶನಃ - ಪ್ರಸನ್ನವಾದ ನೋಟವುಳ್ಳವನು, ನ - ಅಲ್ಲದೇಹೋದನು, ಸೂರ್ಯಃ - ಸೂರ್ಯನು, ಲೋಕಂ - ಲೋಕವನ್ನು, ನತಪತೇ - ತಪಿಸಲಿಲ್ಲ, ಸರ್ವಂಜಗತ್ - ಲೋಕವೆಲ್ಲ, ಪರ್ಯಾಕುಲಂ - ಶೋಕಪೀಡಿತ

ವೇಗದಿಂದಲೂ ಉಕ್ಕಿ ಹೋಗುವ ಸಮುದ್ರದಂತೆ ಚಲಿಸಿಹೋದರು. ಆಗ, ಗ್ರಹಗಳೂ ನಕ್ಷತ್ರಗಳೂ ಯಾವುವೂ ಅಂಬರತಲದಲ್ಲಿ ಕಾಣಿಸದೇ ಹೋದುವು. ಆ ಕ್ಷಣವೇ ಪ್ರಜೆಗಳೆಲ್ಲರೂ ದುಃಖಪೀಡಿತರಾಗಿ ಆಹಾರ ವಿಹಾರಗಳಲ್ಲಿ ಮನವಿಡದೆ ಸಂತತ ಶೋಕ ಪರಂಪರೆಯಿಂದ ಸಂತಪಿಸುತ್ತಿದ್ದರು. ಇಷ್ಟು ಮಾತ್ರವಲ್ಲದೆ ಶ್ರೀರಾಮನಲ್ಲಿಯೇ ಅಧಿಕತರ ವಿಶ್ವಾಸವನ್ನು ಹೊಂದಿದ್ದ ಆ ಪ್ರಜೆಗಳು ದುಃಖದಿಂದ ನಿಟ್ಟುಸಿರು ಬಿಡುತ್ತ ಆ ರಾಮನನ್ನೇ ಕುರಿತು ವ್ಯಸನ ಪಡುತ್ತಿದ್ದರು. ‖ ೮-೧೬ ‖ ರಾಜವೀಥಿಯಲ್ಲಿನ ಜನರೆಲ್ಲರೂ ಕಂಬನಿ ದುಂಬಿದ ಮುಖವುಳ್ಳವರಾಗಿ ಸಂತೋಷ ಶೂನ್ಯರಾಗಿ ಹೋದರು. ಆ ಸಮಯದಲ್ಲಿ ವಾಯುವು ಶೀತಳವಾಗಿ ಬೀಸಲಿಲ್ಲ. ಚಂದ್ರನು ಭಯಂಕರಾಕಾರನಾಗಿ ತೋರಿದನು. ಸೂರ್ಯ ಭಗವಂತನು ಮಂದರಶ್ಮಿಯುಳ್ಳವನಾದನು. ಹೆಚ್ಚೇನು, ಇಡೀ ಜಗತ್ತೇ

ಜಗತ್ ||೧೮|| ಅನರ್ಥಿನ ಸ್ಸುತಾಃ ಸ್ತ್ರೀಣಾಂ ಭರ್ತಾರೋ ಭ್ರಾತರ ಸ್ತಥಾ || ಸರ್ವೇ ಸರ್ವಂ ಪರಿತ್ಯಜ್ಯ ರಾಮಮೇವಾ ನ್ವಚಿಂತಯರ್ನ || ೧೯ || ಯೇತು ರಾಮಸ್ಯ ಸುಹೃದ ಸ್ಸರ್ವೇ ತೇ ಮೂಢಚೇತಸಃ||ಶೋಕಭಾರೇಣ ಚಾಕ್ರಾಂತಾ ಶ್ಶಯನಂ ನಜಹು ಸ್ತಥಾ || ೨೦ ||

ವಾದುದು, ಆಸೀತ್ - ಆಯಿತು. || ೧೮ || ಸುತಾಃ - ಮಕ್ಕಳು, ಸ್ತ್ರೀಣಾಂ - ಜನನಿಯರಿಗೆ, (೧) ಅನರ್ಥಿನಃ - ಅಪೇಕ್ಷೆಯುಳ್ಳವರಾಗಲಿಲ್ಲ, ಭರ್ತಾರಃ - ಗಂಡಂದಿರೂ, ಸ್ತ್ರೀಣಾಂ - ಭಾರ್ಯೆಯರೂ, ಅನರ್ಥಿನಃ - ಅಪೇಕ್ಷೆಯುಳ್ಳವರಾಗಲಿಲ್ಲ, ತಥಾ - ಹಾಗೆ, ಭ್ರಾತರಃ - ಅಣ್ಣತಮ್ಮಂದಿರು, ಸ್ತ್ರೀಣಾಂ - ಅಕ್ಕತಂಗಿಯರಾದ ಸ್ತ್ರೀಯರಿಗೆ, ಅನರ್ಥಿನಃ - ಅನ್ನಪಾನಾದಿಗಳಿಗೋಸುಗ, ಪ್ರಾರ್ಥನಮಾಡಿದವರಾಗಲಿಲ್ಲ, ಸರ್ವೇ - ಎಲ್ಲರೂ, ಸರ್ವಂ - ಸಮಸ್ತವನ್ನು, ಪರಿತ್ಯಜ್ಯ - ಪರಿತ್ಯಾಗವಮಾಡಿ, ರಾಮಮೇವ - ಶ್ರೀರಾಮನನ್ನೇ, ಅನ್ವಚಿಂತಯರ್ನ - ಧ್ಯಾನವಮಾಡುತ್ತಿದ್ದರು. || ೧೯ || ಯೇ-ಯಾರು, ರಾಮಸ್ಯತು - ಶ್ರೀರಾಮನಿಗೆ, ಸಹೃದಃ - ಸ್ನೇಹಿತರೋ, ತೇಸರ್ವೇ - ಅವರೆಲ್ಲರೂ, ಮೂಢಚೇತಸಃ - ಇತಿಕರ್ತವ್ಯತಾಮೂಢವಾದ ಮನವುಳ್ಳವರಾಗಿ, ಶೋಕಭಾರೇಣ - ಶೋಕಾತಿಶಯದಿಂದ, ಆಕ್ರಾಂತಾಶ್ಚ - ವ್ಯಾಪ್ತರಾಗಿ, ತದಾ - ಆ ಕಾಲದಲ್ಲಿ, ಶಯನಂ - ಮೂರ್ಛೆಯಿಂದ ಮಲಗುವಿಕೆಯನ್ನು, ನಜಹುಃ - ಬಿಡಲೇ ಇಲ್ಲವು. || ೨೦ || ತತಸ್ತು - ಆ ಬಳಿಕ, ಪುರಂದರೇಣ - ದೇವೇಂದ್ರನಿಂದ, ರಹಿತಾ - ಬಿಡಲ್ಪಟ್ಟ, ಸಪರ್ವತಾ - ಬೆಟ್ಟಗಳಿಂದೊಡಗೂಡಿದ, ಮಹೀವ - ನೆಲದಂತೆ, ಮಹಾತ್ಮನಾ - ಮಹಾತ್ಮನಾದ ಶ್ರೀರಾಮನಿಂದ, ರಹಿತಾ - ವಿರಹಿತಳಾದ, ಸನಾಗಯೋಧಾಶ್ವಗಣಾ - ಆನೆಗಳೂ ಭಟರೂ ಕುದುರೆಗಳ ಸಮೂಹದಿಂದೊಡಗೂಡಿದ, ಅಯೋಧ್ಯಾ - ಆಯೋಧ್ಯಾ

ವ್ಯಾಕುಲವಾದುದಾಯಿತು. ಆ ವೇಳೆಯಲ್ಲಿ ಮಕ್ಕಳು ಜನನೀ ಜನಕರನ್ನು ಬಯಸಲಿಲ್ಲ. ಪತಿಗಳು, ಸತಿಯರನ್ನು ಕೋರಲಿಲ್ಲ, ಅಣ್ಣತಮ್ಮಂದಿರು ಅಕ್ಕತಂಗಿಯರನ್ನು ಪ್ರೀತಿಸಲಿಲ್ಲ. ಹೀಗೆ ಎಲ್ಲರೂ ಎಲ್ಲ ವಿಷಯಗಳನ್ನೂ ತ್ಯಜಿಸಿ ಶ್ರೀರಾಮನೊಬ್ಬನನ್ನೇ ಚಿಂತಿಸುತ್ತಿದ್ದರು. || ೧೭-೧೯ || ಇಷ್ಟೆಯಲ್ಲದೆ, ಶ್ರೀರಾಮನ ಸ್ನೇಹಿತರೆಲ್ಲರೂ, ಪ್ರಜ್ಞೆ ತಪ್ಪಿ, ಅತಿಯಾದ ದುಃಖದಿಂದ ಆಕ್ರಮಿತರಾಗಿ ಶಯನವನ್ನು ಹೊಂದಲೇ ಇಲ್ಲವು. || ೨೦ || ಆ ಬಳಿಕ,

---

(೧) ಈ ಶ್ಲೋಕದಲ್ಲಿ **ಮಹೇಶ್ವರ ತೀರ್ಥರು** ಬಹು ಸೊಗಸಾದ ಅರ್ಥವನ್ನು ಹೊರಗೆಡಿವಿದ್ದಾರೆ. ಅದು ಹೀಗೆ!—"ವನವನ್ನು ಕುರಿತು ಹೊರಡುತ್ತಿರುವ ಶ್ರೀರಾಮಮೂರ್ತಿಯನ್ನು ಆತನ ತಾಯಿಯಾದ ಕೌಸಲ್ಯಾದೇವಿಯು ತಡೆಯಲಿಲ್ಲವಲ್ಲ! ಹೀಗಿರುವಾಗ ತಾಯಿಯರಿಂದೇನು ಪ್ರಯೋಜನ" ಎಂದು ಮಕ್ಕಳು ತಾಯಿಯರನ್ನು ತೊರೆದರು. ಗಂಡಂದಿರು ಕೈಕೇಯಿಯು ತನ್ನ ಪತಿಯಾದ ದಶರಥರಾಯನಿಗೆ ಕೊಟ್ಟ ತೊಂದರೆಯನ್ನು ನೋಡಿ "ಹೆಂಡತಿಯರಿದ್ದು ಪ್ರಯೋಜನವೇನು ?" ಎಂದು ಸತಿಯರನ್ನು ತೊರೆದರು. ಹೆಂಡತಿಯರು ಕೂಡ ಸತೀ ಮಣಿಯಾದ ಕೌಸಲ್ಯಾದೇವಿಯನ್ನು ಉಪೇಕ್ಷೆಮಾಡಿ ಜ್ಯೇಷ್ಠ ಕುವರನಾದ ಶ್ರೀರಾಮನನ್ನು ಅರಣ್ಯಕ್ಕಟ್ಟಿದ ದಶರಥ ಭೂಪಾಲನನ್ನು ನೋಡಿ ಗಂಡಂದಿರು ಹೀಗೆಯೇ ಎಂದರಿತು ಅವರನ್ನು ತೊರೆದರು. ಅಣ್ಣಂದಿರೂ ಸಹ ಭರತನು ರಾಮರಾಜ್ಯಾಪಹಾರಕ್ಕೆ ಕಾರಣನಾದುದನ್ನು ತಿಳಿದು ತಮ್ಮಂದಿರನ್ನೊದಲಿದರು. ಹೀಗೆ ಎಲ್ಲರು, ಎಲ್ಲರನ್ನೂ ತೊರೆದು ಶ್ರೀರಾಮನನ್ನು ಹಿಂಬಾಲಿಸಿದರು.

ತತಸ್ತ್ವಯೋಧ್ಯಾ ರಹಿತಾ ಮಹಾತ್ಮನಾ
ಪುರಂದರೇಣೇವ ಮಹೀ ಸಪರ್ವತಾ ॥
ಚಚಾಲ ಘೋರಂ ಭಯಶೋಕ ಪೀಡಿತಾ
ಸನಾಗ ಯೋಧಾಶ್ವ ಗಣಾ ನನಾದಚ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಚತ್ವಾರಿಂಶಸ್ಸರ್ಗಃ.

ಪಟ್ಟಣವು, ಭಯಶೋಕಪೀಡಿತಾ - ಭಯದಿಂದಲೂ, ವ್ಯಸನದಿಂದಲೂ ಪೀಡಿಸಲ್ಪಟ್ಟುದಾಗಿ, ಚಚಾಲ- ಗಡಗಡನೆ ನಡುಗಿಹೋಯಿತು, ನನಾದಚ - ದೀನಧ್ವನಿಯನ್ನೂ ಮಾಡಿತು. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಚತ್ವಾರಿಂಶಸ್ಸರ್ಗಃ.

ಆ ಅಯೋಧ್ಯಾ ನಗರವು, ದೇವೇಂದ್ರ ವರ್ಜಿತವಾದ ಭೂಮಂಡಲದಂತೆ, ವ್ಯಸನದಿಂದಲೂ, ಭೀತಿಯಿಂದಲೂ ಪೀಡಿತವಾಗಿ ಗಡಗಡನೆ ನಡುಗಿ ದೀನಧ್ವನಿಭರಿತವಾಯಿತು. ॥ ೨೧ ॥

ಇಂತಿದು ಶ್ರೀರಾಮ ವನಗಮನಾನಂತರ ಪ್ರಾಪ್ತಾಪಶಕುನ ವೃತ್ತಾಂತ ಕಥನವೆಂಬ
ನಲವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿಚತ್ವಾರಿಂಶಸ್ಸರ್ಗಃ.

ಯಾವತ್ತು ನಿರ್ಯತಸ್ತಸ್ಯ ರಜೋ ರೂಪ ಮದೃಶ್ಯತ॥ ನೈವೇಕ್ಷ್ವಾಕು ವರಸ್ತಾವತ್ ಸಂಜಹಾರಾತ್ಮ ಚಕ್ಷುಷೀ ॥ ೧ ॥ ಯಾವದ್ರಾಜಾ ಪ್ರಿಯಂ ಪುತ್ರಂ ಪಶ್ಯತ್ಯತ್ಯಂತ ಧಾರ್ಮಿಕಂ ॥ ತಾವದ್ವ್ಯವರ್ಧತೇ ವಾಸ್ಯ ಧರಣ್ಯಾಂ ಪುತ್ರದರ್ಶನೇ ॥ ೨ ॥ ನಪಶ್ಯತಿ ರಜೋಪ್ಯಸ್ಯ ಯದಾ ರಾಮಸ್ಯ ಭೂಮಿಪಃ ॥ ತದಾರ್ತಶ್ಚ ವಿಷಣ್ಣಶ್ಚ ಪಪಾತ ಧರಣೀತಲೇ ॥ ೩ ॥ ತಸ್ಯ ದಕ್ಷಿಣ ಮನ್ವಾಗಾ ತ್ಕೌಸಲ್ಯಾ ಬಾಹುಮಂಗನಾ ॥ ವಾಮಂ ಚಾಸ್ಯಾ ನ್ವಗಾತ್ಪಾರ್ಶ್ವಂ ಕೈಕೇಯಿಾ

ನಿರ್ಯತಃ - ಹೊರಡುತ್ತಿರುವ, ತಸ್ಯ - ಆ ಶ್ರೀರಾಮನ ರಥಸಂಬಂಧಿಯಾದ, ರಜೋ ರೂಪಂ - ಧೂಳಿಯ ಆಕಾರವು, ಯಾವತ್ - ಎಷ್ಟುಪರಿಯಂತ, ಅದೃಶ್ಯತ - ಕಾಣುತ್ತಿತ್ತೋ, ಇಕ್ಷ್ವಾಕುವರಃ - ಇಕ್ಷ್ವಾಕುವಂಶಸ್ಥರಲ್ಲಿ ಶ್ರೇಷ್ಠನಾದ ದಶರಥರಾಯನು, ತಾವತ್ - ಅಷ್ಟುಪರಿಯಂತ, ಆತ್ಮಚಕ್ಷುಷೀ - ತನ್ನ ನೇತ್ರಗಳನ್ನು, ನೈವಸಂಜಹಾರ - ಉಪಸಂಹಾರವಮಾಡಿಕೊಳ್ಳಲಿಲ್ಲ. ||೧|| ರಾಜಾ - ದಶರಥರಾಯನು, ಪ್ರಿಯಂ - ಇಷ್ಟನಾದ, ಅತ್ಯಂತಧಾರ್ಮಿಕಂ - ಮಹಾ ಧರ್ಮಿಷ್ಠನಾದ, ಪುತ್ರಂ - ಮಗನನ್ನು, ಯಾವತ್ - ಎಷ್ಟುಪರ್ಯಂತವೂ, ರಜೋದ್ವಾರೇಣ - ಧೂಳಿಯ ದ್ವಾರದಿಂದ, ಪಶ್ಯತಿ - ನೊಡುತ್ತಿದ್ದನೋ, ತಾವತ್ - ಅಷ್ಟುಪರ್ಯಂತವೂ, ಅಸ್ಯ - ಈ ದಶರಥರಾಯನ, ಧರಣ್ಯಾಂ - ನೆಲದಲ್ಲಿ, ಪುತ್ರದರ್ಶನೇ, ಪುತ್ರ - ಮಗನ, ದರ್ಶನೇ - ನೋಡುವಿಕೆಯ ವಿಷಯದಲ್ಲಿ, ವ್ಯವರ್ಧತೇವ - ವೃದ್ಧಿಗೊಂಡಿತೋ ಎಂಬಂತಿತ್ತು. || ೨ || ಭೂಮಿಪಃ - ದಶರಥ ರಾಯನು, ಯದಾ - ಯಾವ ಕಾಲದಲ್ಲಿ, ಅಸ್ಯರಾಮಸ್ಯ - ಈ ಶ್ರೀರಾಮನ ಸಂಬಂಧಿಯಾದ, ರಜೋಪಿ - ಧೂಳಿಯನ್ನು ಕೂಡ, ನಪಶ್ಯತಿ - ಕಾಣಲಿಲ್ಲವೋ, ತದಾ - ಆ ಕಾಲದಲ್ಲಿ, ಆರ್ತಶ್ಚ - ದುಃಖಿತನಾಗಿ, ವಿಷಣ್ಣಶ್ಚ - ವ್ಯಸನಗೊಂಡು, ಧರಣೀತಲೇ - ಭೂಪ್ರದೇಶದಲ್ಲಿ, ಪಪಾತ-ಬಿದ್ದನು. || ೩ || ಅಂಗನಾ - ಸ್ತ್ರೀಯಾದ, ಕೌಸಲ್ಯಾ - ಕೌಸಲ್ಯಾದೇವಿಯು, ತಸ್ಯ - ಆ ದಶರಥರಾಯನ, ದಕ್ಷಿಣಂಬಾಹುಂ - ಬಲಭಾಗದಭುಜವನ್ನು, ಅನ್ವಾಗಾತ್ - ಹಿಡಿದುಕೊಂಡಳು, ಭರತಪ್ರಿಯಾ,

---

ಇಕ್ಷ್ವಾಕು ವಂಶೋದ್ಭವನಾದ ದಶರಥ ಮಹೀಪಾಲನು ಶ್ರೀರಾಮನ ವನ ಪ್ರಯಾಣದಲ್ಲಿ ಧೂಳಿಯು ಕಾಣಿಸುವವರೆಗೂ ಆತನನ್ನು ನೋಡುತ್ತಲೇ ಇದ್ದನು. ಆತನು ಎದುವರೆಗೂ ಶ್ರೀರಾಮಮೂರ್ತಿಯನ್ನು ನೋಡುತ್ತಿದ್ದನೋ, ಅದುವರೆಗೂ ಆತನಿಗೆ ಮಗನನ್ನು ನೋಡಬೇಕೆಂಬ ಅಭಿಲಾಷೆಯು ವೃದ್ಧಿ ಹೊಂದುತ್ತಲೇ ಇದ್ದಿತು. ಯಾವಾಗ ಶ್ರೀರಾಮಮೂರ್ತಿಯ - ವನ ಪ್ರಯಾಣದಿಂದುಂಟಾದ ಧೂಳಿಯು ಕಾಣದೆ ಹೋಯಿತೋ, ಆಗ ಆ ದಶರಥನು ಮೂರ್ಛೆಯೊಂದಿ ಭೂಮಿಯಲ್ಲಿ ಬಿದ್ದನು. ಆ ಸಮಯದಲ್ಲಿ ಆತನ ಜ್ಯೇಷ್ಠ ಪತ್ನಿಯಾದ ಕೌಸಲ್ಯಾದೇವಿಯು ಆತನ ಬಲ ತೋಳನು

ಭರತಪ್ರಿಯಾ ॥ ೪ ॥ ತಾಂ ನಯೇನಚ ಸಂಪನ್ನೋ ಧರ್ಮೇಣ ವಿನಯೇನಚ ॥ ಉವಾಚ ರಾಜಾ ಕೈಕೇಯೀಂ ಸಮೀಕ್ಷ್ಯ ವ್ಯಥಿತೇಂದ್ರಿಯಃ ॥ ೫ ॥ ಕೈಕೇಯಿ ಮಾ ಮಮಾಂಗಾನಿ ಸ್ಪ್ರಾಕ್ಷೀಸ್ತ್ವಂ ದುಷ್ಟಚಾರಿಣಿ ॥ ನಹಿ ತ್ವಾಂ ದ್ರಷ್ಟುಮಿಚ್ಛಾಮಿ ನ ಭಾರ್ಯಾ ನ ಚ ಬಾಂಧವೀ ॥ ೬ ॥ ಯೇಚ ತ್ವಾಮನುಜೀವಂತಿ ನಾಹಂ ತೇಷಾಂ ನ ತೇ ಮಮ ॥ ಕೇವಲಾರ್ಥಪರಾಂ ಹಿ ತ್ವಾಂ ತ್ಯಕ್ತಧರ್ಮಾಂ ತ್ಯಜಾಮ್ಯಹಂ ॥ ೭ ॥ ಅಗೃಹ್ಣಾಂ ಯಚ್ಚ ತೇ ಪಾಣಿಮಗ್ನಿಂ ಪರ್ಯಣಯಂಚ ಯತ್ ॥ ಅನುಜಾನಾಮಿ ತತ್ಸರ್ವ ಮಸ್ಮಿನ್ ಲೋಕೇ ಪರ

ಭರತ - ಭರತನೇ. ಪ್ರಿಯಾ - ಇಷ್ಟಳಾಗುಳ್ಳ, ಕೈಕೇಯೀ - ಕೈಕೇಯೀದೇವಿಯು, ಅಸ್ಯ - ಈ ದಶರಥರಾಯನ, ವಾಮಂಪಾರ್ಶ್ವಂ - ಎಡಭಾಗವನ್ನು, ಅನ್ವಗಾತ್ - ಹಿಡಿದುಕೊಂಡಳು. ॥ ೪ ॥ ನಯೇನ - ನೀತಿಯಿಂದಲೂ, ಧರ್ಮೇಣ - ಧರ್ಮದಿಂದಲೂ, ವಿನಯೇನಚ - ಸದಾಚಾರದಿಂದಲೂ, ಸಂಪನ್ನಃ - ಕೂಡಿರುವ, ರಾಜಾ - ದಶರಥರಾಯನು, ವ್ಯಥಿತೇಂದ್ರಿಯಃ - ದುಃಖಿತವಾದ ಮನವುಳ್ಳವನಾಗಿ, ತಾಂಕೈಕೇಯೀಂ - ಆ ಕೈಕೇಯಿಯನ್ನು, ಸಮೀಕ್ಷ್ಯ - ಕಂಡು, ಉವಾಚ-ಹೇಳಿದನು. ॥ ೫ ॥ ಹೇ ಕೈಕೇಯಿ - ಎಲೌ ಕೇಕಯರಾಯನಮಗಳೇ, ದುಷ್ಟಚಾರಿಣೀ - ದುರ್ವ್ಯಾಪಾರಳಾದ, ತ್ವಂ - ನೀನು, ಮಮ - ನನ್ನ, ಅಂಗಾನಿ - ಅವಯವಗಳನ್ನು, ಮಾಸ್ಪ್ರಾಕ್ಷೀಃ - ಮುಟ್ಟಬೇಡ, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವದಕ್ಕೆ, ನೇಚ್ಛಾಮಿ - ಇಚ್ಛಿಸುವದಿಲ್ಲ, ತ್ವಂ - ನೀನು, ಭಾರ್ಯಾ - ಹೆಂಡತಿಯು, ನ - ಅಲ್ಲ, ಬಾಂಧವೀಚ - ಸಂಬಂಧಿಯೂ, ನ - ಅಲ್ಲ. ॥ ೬ ॥ ಯೇ - ಯಾರು, ತ್ವಾಂ - ನಿನ್ನನ್ನು, ಅನುಜೀವಂತಿ - ಅನುಸರಿಸಿ ಜೀವನಮಾಡುವರೋ, ಅಹಂ - ನಾನು, ತೇಷಾಂ - ಅವರ ಸಂಬಂಧಿಯೂ, ನ - ಅಲ್ಲ, ತೇ - ಅವರು, ಮಮ - ನನ್ನ ಸಂಬಂಧಿಗಳೂ, ನ - ಅಲ್ಲ, ಕೇವಲಾರ್ಥಪರಾಂ - ಅರ್ಥದಲ್ಲಿಮಾತ್ರ ವ್ಯಾಸಕ್ತಳಾದ, ತ್ಯಕ್ತಧರ್ಮಾಂ, ತ್ಯಕ್ತ-ಬಿಡಲ್ಪಟ್ಟ, ಧರ್ಮಾಂ - ರಾಜಧರ್ಮವುಳ್ಳ, ತ್ವಾಂ - ನಿನ್ನನ್ನು, ಅಹಂ - ನಾನು, ತ್ಯಜಾಮಿ - ಬಿಡುತ್ತೇನೆ. ॥ ೭ ॥ ತೇ - ನಿನ್ನ, ಪಾಣಿಂ - ಹಸ್ತವನ್ನು, ಅಗೃಹ್ಣಾಮೀತಿಯತ್ - "ಪರಿಗ್ರಹಿಸಿದೆ" ಎಂಬುದು ಯಾವದುಂಟೋ, ಅಗ್ನಿಂ - ಅಗ್ನಿಯನ್ನು, ಪರ್ಯಣಯಂಚೇತಿಯತ್-ಪ್ರದಕ್ಷಿಣೆ

ಹಿಡಿದುಕೊಂಡಳು. ಆಮೇಲೆ ಕಿರೀ ಹೆಂಡತಿಯಾದ ಕೈಕೇಯೀದೇವಿಯು ಆತನ ಎಡತೋಳನ್ನು ಹಿಡಿದುಕೊಳ್ಳಲು ಬಂಗಳು. ಆ ಸಮಯದಲ್ಲಿ ಮಹಾರಾಜನಾದ ದಶರಥನು, ಆಕೆಯನ್ನು ನೋಡಿ ಧರ್ಮದಿಂದಲೂ, ವಿನಯದಿಂದಲೂ ಕೂಡಿದವನಾಗಿ, ಆಕೆಯನ್ನು ಕುರಿತು ಹೀಗೆಂದನು. "ಎಲೌ ಕೈಕೇಯಿಯೆ! ನೀನೆನ್ನ ಶರೀರವನ್ನು ಮುಟ್ಟಬೇಡ; ನೀನು ನನಗೆ ಹೆಂಡತಿಯೂ ಅಲ್ಲ; ನೆಂಟಳು ಮೊದಲೇ ಅಲ್ಲ, ನಾನು ನಿನ್ನ ಮುಖಾವಲೋಕನವನ್ನೂ ಮಾಡುವುದಿಲ್ಲ. ಇಷ್ಟೆಯಲ್ಲದೆ ನಿನ್ನನ್ನು ಅನುಸರಿಸಿ ಜೀವಿಸುತ್ತಿರುವ ಯಾರೊಬ್ಬರಿಗೂ ನಾನು ಬಂಧುವಲ್ಲವೆಂಬುದನ್ನು ನೀನೀಗ ತಿಳಿ. ದೇವಿ! ಧರ್ಮಮಾರ್ಗ ಬಹಿಷ್ಕೃತಳಾಗಿ ಕೇವಲ ಅರ್ಥದಲ್ಲಿಯೇ ಮುಖ್ಯ ತಾತ್ಪರ್ಯವುಳ್ಳ ನಿನ್ನನ್ನು ನಾನು ತ್ಯಜಿಸುತ್ತೇನೆ. ನಿನ್ನ ಪಾಣಿಗ್ರಹಣವನ್ನು ಮಾಡಿ, ಅಗ್ನಿ ಪ್ರದಕ್ಷಿಣವನ್ನು ಮಾಡಿದೆನೆಂಬು

ತ್ರಚ ॥ ೮ ॥ ಭರತಶ್ಚೇತ್ ಪ್ರತೀತಸ್ಸ್ಯಾದ್ರಾಜ್ಯಂ ಪ್ರಾಪ್ಯೇದ ಮವ್ಯಯಂ ॥ ಯನ್ಮೇ ಸದದ್ಯಾತ್ ಪಿತ್ರರ್ಥಂ ಮಾಂ ಮಾ ತದ್ದತ್ತ ಮಾಗಮತ್ ॥ ೯ ॥ ಅಥ ರೇಣು ಸಮುಧ್ವಸ್ತಂ ತಮುತ್ಥಾಪ್ಯ ನರಾಧಿಪಂ ॥ ನ್ಯವರ್ತತ ತದಾ ದೇವೀ ಕೌಸಲ್ಯಾ ಶೋಕಕರ್ಶಿತಾ ॥ ೧೦ ॥ ಹತ್ವೇವ ಬ್ರಾಹ್ಮಣಂ ಕಾಮಾತ್ಸ್ಪೃಷ್ಟ್ವಾಗ್ನಿಮಿವ ಪಾಣಿನಾ ॥ ಅನ್ವತಪ್ಯತ ಧರ್ಮಾತ್ಮಾ ಪುತ್ರಂ ಸಂಚಿಂತ್ಯ ತಾಪಸಂ ॥ ೧೧ ॥ ನಿವೃತ್ತ್ಯೈವ ನಿವೃತ್ತ್ಯೈವ ಸೀದತೋ ರಥವರ್ತ್ಮಸು ॥ ರಾಜ್ಞೋ ನಾತಿ

ಮಾಡಿದ್ದೇನೆಂಬುದು ಯಾವದುಂಟೋ, ತತ್ಸರ್ವಂ - ಆ ಸಮಸ್ತ ಕರ್ಮವನ್ನು, ಅಸ್ಮಿಂಲೋಕೇ - ಈ ಲೋಕದಲ್ಲಿಯೂ, ಪರತ್ರಚ - ಪರಲೋಕದಲ್ಲಿಯೂ, ಅನುಜಾನಾಮಿ - ಬಿಟ್ಟುಬಿಡುತ್ತೇನೆ. ॥ ೮ ॥ ಭರತಃ - ಭರತನು, ಅವ್ಯಯಂ - ನಾಶರಹಿತವಾದ, ಇದಂರಾಜ್ಯಂ - ಈ ರಾಜ್ಯವನ್ನು, ಪ್ರಾಪ್ಯ - ಹೊಂದಿ, ಪ್ರತೀತಸ್ಸ್ಯಾಚ್ಚೇತ್ - ಸಂತುಷ್ಟನಾದವನಾದರೆ, (ತತಃ - ನನ್ನ ಮರಣಾನಂತರದಲ್ಲಿ,) ಸಃ - ಆ ಭರತನು, ಮೇ - ನನಗೆ, ಪಿತ್ರರ್ಥಂ - ತಂದೆಗೋಸುಗ, ಯದ್ದದ್ಯಾತ್ - ಯಾವದನ್ನು ಕೊಡುವನೋ, ತದ್ದತ್ತಂ - ಆ ಕೊಟ್ಟಂತಹುದು, ಮಾಂ - ನನ್ನನ್ನು, ಮಾಗಮತ್ - ಹೊಂದ ಬೇಡ. ॥ ೯ ॥ ಅಥ - ಬಳಿಕ, ರೇಣುಸಮುಧ್ವಸ್ತಂ - ಕೊಡಲ್ಪಟ್ಟ ಧೂಳಿಯುಳ್ಳ, ತಂನರಾಧಿಪಂ - ಆ ದಶರಥರಾಯನನ್ನು, ಸಮುತ್ಥಾಪ್ಯ - ಎಬ್ಬಿಸಿ, ತದಾ - ಆಗ, ಕೌಸಲ್ಯಾದೇವೀ - ಕೌಸಲ್ಯಾದೇವಿಯು, ಶೋಕಕರ್ಶಿತಾ - ವ್ಯಸನದಿಂದ ಕೃಶೀಭೂತಳಾಗಿ, ತದಾ - ಆ ಕಾಲದಲ್ಲಿ, ನ್ಯವರ್ತತ - ಹಿಂತಿರುಗಿದಳು. ॥ ೧೦ ॥ ಧರ್ಮಾತ್ಮಾ - ಧರ್ಮಿಷ್ಠನಾದ ದಶರಥರಾಯನು, ಬ್ರಾಹ್ಮಣಂ - ಬ್ರಾಹ್ಮಣನನ್ನು, ಕಾಮಾತ್ - ಬುದ್ಧಿಪೂರ್ವಕವಾಗಿ, ಹತ್ವೇವ - ಹೊಡದಂತೆ, ಪಾಣಿನಾ - ಹಸ್ತನನ್ನು, ಅಗ್ನಿಂ - ಅಗ್ನಿಯನ್ನು, ಸ್ಪೃಷ್ಟ್ವೇವ - ಸ್ಪರ್ಶಮಾಡಿದಂತೆ, ತಾಪಸಂ - ಋಷಿವೇಷಧಾರಿಯಾದ, ಪುತ್ರಂ - ಮಗನನ್ನು, ಸಂಚಿಂತ್ಯ - ಧ್ಯಾನಮಾಡಿ, ಅನ್ವತಪ್ಯತ - ಪರಿತಪಿಸಿದನು. ॥ ೧೧ ॥ ರಥವರ್ತ್ಮಸು - ರಾಜಮಾರ್ಗಗಳಲ್ಲಿ. ನಿವೃತ್ತ್ಯೈವ ನಿವೃತ್ತ್ಯೈವ - ಹಿಂದಕ್ಕೆ ತಿರುಗಿ ತಿರುಗಿ, ಸೀದತಃ - ಅಳುತ್ತಿರುವ, ರಾಜ್ಞಃ - ದಶರಥರಾಯನ, ರೂಪಂ - ರೂಪವು, ಗ್ರಸ್ತಸ್ಯ - ರಾಹುಕೇತುಗಳಿಂದ ಗ್ರಹಿಸಲ್ಪಟ್ಟ, ಅಂಶುಮತೋಯಥಾ - ಸೂರ್ಯನಂತೆ, ನಾತಿಬಭೌ-

---

ದನ್ನು, ಇಹಪರ ಲೋಕಗಳೆರಡರಲ್ಲಿಯೂ ಬಿಟ್ಟುಬಿಡುತ್ತೇನೆ. ಧಾರ್ಮಿಕ ದೃಷ್ಟಿಯಿಂದ ಜ್ಯೇಷ್ಠನಿಗೆ ಸಲ್ಲಬೇಕಾದ ಈ ನಾಶರಹಿತವಾದ ರಾಜ್ಯವನ್ನು ಭರತನು ಪಡೆದು ಸಂತೋಷಿಸುವವನಾದರೆ, ನಾನು ಮೃತನಾದ ಮೇಲೆ, ಪಿತೃ ಪ್ರೀತಿಯಾಗಿ ಆತನು ನನಗೆ ಏನೇ ಕೊಟ್ಟರೂ ಅದು ನನ್ನನ್ನು ಹೊಂದದಿರಲಿ;" ದಶರಥನೀರೀತಿ ನುಡಿದ ಮೇಲೆ ಕೌಸಲ್ಯಾದೇವಿಯು ಆತನನ್ನೆಬ್ಬಿಸಿ, ಧೂಳನ್ನು ಕೊಡಹಿ, ದುಃಖಾಕ್ರಾಂತಳಾಗಿ ಆತನನ್ನು ತನ್ನ ಅರಮನೆಗೆ ಕರೆದುಕೊಂಡು ಹೋದಳು. ॥೧-೧೦॥ ಆ ಬಳಿಕ ಮಹಾರಾಜನು, ಮನಃಪೂರ್ವಕವಾಗಿ ಬ್ರಹ್ಮಹತ್ಯೆಯನ್ನು ಮಾಡಿದವನಂತೆಯೂ, ಬೆಂಕಿಯನ್ನು ಬೇಕಾಗಿ ಸ್ವಹಸ್ತದಿಂದ ಮುಟ್ಟಿದವನಂತೆಯೂ, ತಪಸ್ವಿಯಂತೆ ಅರಣ್ಯಕ್ಕೆ ಹೊರಟು ಹೋದ ನಿಜ ಕುವರನಾದ ಶ್ರೀರಾಮಮೂರ್ತಿಯನ್ನು ಅಡಿಗಡಿಗ್ಗೂ, ಚಿಂತಿಸಿ ಚಿಂತಿಸಿ ಸಂತಪಿಸುತ್ತಿದ್ದನು.

ಬಭೌ ರೂಪಂ ಗ್ರಸ್ತಸ್ಯಾಂಶುಮತೋ ಯಥಾ॥೧೨॥ವಿಲಲಾಪ ಚ ದುಃಖಾರ್ತಃ ಪ್ರಿಯಂ ಪುತ್ರ ಮನುಸ್ಮರ೯ ॥ ನಗರಾಂತ ಮನುಪ್ರಾಪ್ತಂ ಬುಧ್ವಾ ಪುತ್ರ ಮಥಾಬ್ರವೀತ್ ॥ ೧೩ ॥ ವಾಹನಾನಾಂಚ ಮುಖ್ಯಾನಾಂ ವಹತಾಂ ತಂ ಮಮಾತ್ಮಜಂ ॥ ಪದಾನಿ ಪಥಿ ದೃಶ್ಯಂತೇ ಸ ಮಹಾತ್ಮಾ ನ ದೃಶ್ಯತೇ ॥೧೪॥ ಯಸ್ಸುಖೇಷೂಪಧಾನೇಷು ಶೇತೇ ಚಂದನರೂಷಿತಃ ॥ ವೀಜ್ಯಮಾನೋ ಮಹಾರ್ಹಾಭಿಃ ಸ್ತ್ರೀಭಿ ರ್ಮಮ ಸುತೋತ್ತಮಃ ॥ ೧೫ ॥ ಸ ನೂನಂ ಕ್ವಚಿ ದೇವಾದ್ಯ ವೃಕ್ಷಮೂಲ ಮುಪಾಶ್ರಿತಃ ॥ ಕಾಷ್ಟಂವಾ ಯದಿವಾ ಶ್ಮಾನ ಮುಥಾ

ಬಹಳ ಪ್ರಕಾಶಿಸಲಿಲ್ಲ. ॥ ೧೨ ॥ ದುಃಖಾರ್ತಃ - ವ್ಯಸನದಿಂದ ದೀನನಾದ ದಶರಥರಾಯನು, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು, ಅನುಸ್ಮರ೯ - ಸ್ಮರಿಸುತ್ತಿರುವವನಾಗಿ, ಪುತ್ರಂ - ಮಗನನ್ನು, ನಗರಾಂತಂ - ಪಟ್ಟಣದ ತುದಿಯನ್ನು, ಅನುಪ್ರಾಪ್ತಂ - ಸೇರಿದವನನ್ನಾಗಿ, ಬುಧ್ವಾ- ತಿಳಿದು, ಅಥ - ಬಳಿಕ, ಅಬ್ರವೀತ್ - ನುಡಿದನು. ॥ ೧೩ ॥ ಪಥಿ - ಮಾರ್ಗದಲ್ಲಿ, ಮಮ - ನನ್ನ, ಆತ್ಮಜಂ - ಕುವರನಾದ, ತಂ - ಆ ಶ್ರೀರಾಮನನ್ನು, ವಹತಾಂ - ಹೊತ್ತಿರುವ, ಮುಖ್ಯಾನಾಂ - ಶ್ರೇಷ್ಠಗಳಾದ, ವಾಹನಾನಾಂ - ಕುದುರೆಗಳ, ಪದಾನಿ - ಹೆಜ್ಜೆಗಳು, ದೃಶಂತೇ - ಕಾಣಲ್ಪಡುತ್ತವೆ, ಮಹಾತ್ಮಾ - ಮಹಾತ್ಮನಾದ, ಸಃ - ಆ ಶ್ರೀರಾಮನು, ನದೃಶ್ಯತೇ - ಕಾಣಲ್ಪಡುವದಿಲ್ಲ. ॥ ೧೪ ॥ ಯಃ - ಯಾವ, ಮಮ - ನನ್ನ, ಸುತೋತ್ತಮಃ - ಉತ್ತಮನಾದ ಮಗನು, ಮಹಾರ್ಹಾಭಿಃ - ಶ್ರೇಷ್ಠರಾದ, ಸ್ತ್ರೀಭಿಃ - ಸಖಿಯರಿಂದ, ವೀಜ್ಯಮಾನಃ - ಬೀಸಲ್ಪಟ್ಟವನಾಗಿ, ಚಂದನ ರೂಷಿತಃ - ಶ್ರೀಗಂಧದಿಂದ ಲೇಪನಮಾಡಲ್ಪಟ್ಟವನಾಗಿ, ಸುಖೇಷು-ಮೃದುಗಳಾದ, ಉಪಧಾನೇಷು- ದಿಂಬುಗಳಿಂದೊಗೂಡಿದ ಹಾಸಿಗೆಗಳಲ್ಲಿ, ಶೇತೇ - ಮಲಗುತ್ತಿದ್ದನೋ, ಸಃ - ಆ ಶ್ರೀರಾಮನು, ಅದ್ಯ - ಈಗ, ಕ್ವಚಿದೇವ - ಎಲ್ಲೋ ಒಂದು ಸ್ಥಳದಲ್ಲಿ, ವೃಕ್ಷಮೂಲಂ - ಗಿಡದಮೂಲವನ್ನು, ಉಪಾಶ್ರಿತಃ - ಆಶ್ರಯಿಸಿದ, ಕಾಷ್ಟಂವಾ - ಕಟ್ಟಿಗೆಯನ್ನಾಗಲಿ, ಯದಿವಾ - ಅಲ್ಲದೇಹೋದರೆ, ಅಶ್ಮಾನಂವಾ - ಕಲ್ಲನ್ನೇ ಆಗಲಿ, ಉಪಾಧಾಯ - ತಲೆದಿಂಬನ್ನಾಗಿ ಮಾಡಿಕೊಂಡು, ಶಯಿಷ್ಯತೇ -

---

ಶ್ರೀರಾಮನು ಹೋದ ರಾಜಮಾರ್ಗವನ್ನು ತಿರುತಿರುಗಿ ನೋಡಿ ನೋಡಿ ದುಃಖಿಸುತ್ತಿರುವ ಮಹಾರಾಜನ ರೂಪವು ರಾಹುಪೀಡಿತವಾದ ಚಂದ್ರನಂತೆ ಪ್ರಕಾಶಿಸುತ್ತಿರಲಿಲ್ಲವು. ಆಗಲಾ ರಾಯನು ನಗರಾಂತ್ಯವನ್ನು ಹೊಂದಿದ ಪ್ರಿಯ ಪುತ್ರನಾದ ಶ್ರೀರಾಮನನ್ನು ಸ್ಮರಿಸಿ ಸ್ಮರಿಸಿ ದುಃಖಗೊಂಡು ಈ ರೀತಿ ಪ್ರಲಪಿಸಿದನು. ॥ ೧೧-೧೩ ॥ ನನ್ನ ಕುವರನನ್ನು ಹೊರು ತ್ತಿರುವ ಅಶ್ವಾದಿಗಳ ಪದಚಿನ್ಹೆಗಳೀ ರಾಜಮಾರ್ಗದಲ್ಲಿ ಕಾಣುತ್ತಿರುವುವು. ಆ ಮಹಾತ್ಮ ನೆಲ್ಲಿಗೆ ಹೋದನೋ, ಕಾಣಲಿಲ್ಲವಲ್ಲ ! ಅಯ್ಯೋ ! ಯಾವ ನನ್ನ ಕುಮಾರನಾದ ಶ್ರೀರಾಮನು, ಸುಖಕರವಾದ ಹಂಸತೂಲಿಕಾತಲ್ಪದಲ್ಲಿ ಚಂದನ ಗಂಧಾನುಲಿಪ್ತನಾಗಿ, ಉತ್ತಮ ಸ್ತ್ರೀ ರತ್ನಗಳ ವ್ಯಜನಗಳಿಂದ ವೀಜಿತನಾಗಿ ನಿದ್ರಿಸುತ್ತಿದ್ದನೋ, ಅಂತಹ ನನ್ನ ಕುಮಾರನು ವೃಕ್ಷ ಮೂಲವನ್ನಾಶ್ರಯಿಸಿ, ಕಟ್ಟಿಗೆಯನ್ನೋ, ಕಲ್ಲು ಗುಂಡನ್ನೋ ತಲೆಯು

ಧಾಯ ಶಯಿಷ್ಯತೇ ॥ ೧೬ ॥ ಉತ್ಥಾಸ್ಯತಿಚ ಮೇದಿನ್ಯಾಃ ಕೃಪಣಃ ಪಾಂಸು ಕುಂಠಿತಃ ॥ ವಿನಿಶ್ವಸನ್ ಪ್ರಸ್ರವಣಾತ್ಕರೇಣೂನಾಮಿವರ್ಷಭಃ ॥ ೧೭ ॥ ದ್ರಕ್ಷ್ಯಂತಿ ನೂನಂ ಪುರುಷಾ ದೀರ್ಘಬಾಹುಂ ವನೇ ಚರಾಃ ॥ ರಾಮಮು ತ್ಥಾಯ ಗಚ್ಛಂತಂ ಲೋಕನಾಥ ಮನಾಥವತ್ ॥ ೧೮ ॥ ಸಾನೂನಂ ಜನಕ ಸ್ಯೇಷ್ಟಾ ಸುತಾ ಸುಖ ಸದೋಚಿತಾ ॥ ಕಂಟಕಾಕ್ರಮಣಾಕ್ರಾಂತಾ ವನಮದ್ಯ ಗಮಿಷ್ಯತಿ ॥ ೧೯ ॥ ಅನಭಿಜ್ಞಾ ವನಾನಾಂ ಸಾ ನೂನಂ ಭಯ ಮುಪೈ ಷ್ಯತಿ ॥ ಶ್ವಾಪದಾ ನರ್ದಿತಂ ಶ್ರುತ್ವಾ ಗಂಭೀರಂ ರೋಮಹರ್ಷಣಂ ॥೨೦॥

ಮಲಗುವನಷ್ಟೆ. ॥ ೧೬ ॥ ಕೃಪಣಃ - ದರಿದ್ರನಾಗಿ, ಪಾಂಸುಕುಂಠಿತಃ, ಪಾಂಸು - ಧೂಳಿಗಳಲ್ಲಿ, ಕುಂಠಿತಃ - ಹೊರಳಾಡಿ, ವಿನಿಶ್ವಸನ್-ನಿಟ್ಟುಸುರು ಬಿಡುತ್ತಿರುವ, ಕರೇಣೂನಾಂ-ಹೆಣ್ಣಾನೆಗಳೊಳಗೆ, ಋಷಭಃ-ಶ್ರೇಷ್ಠವಾದ ಆನೆಯು, ಪ್ರಸ್ರವಣಾದಿವ-ಜರೀಪ್ರದೇಶದಿಂದ ಹೇಗೋ ಹಾಗೆ, ಮೇದಿನ್ಯಾಃ-ನೆಲದಿಂದ, ಉತ್ಥಾಸ್ಯತಿ-ನಿದ್ರೆಯಿಂದ ಎಚ್ಚರಗೊಳ್ಳುತ್ತಾನೆ. ॥೧೭॥ ವನೇಚರಾಃ-ವನಸಂಬಂಧಗಳಾದ, ಪುರುಷಾಃ - ಮನುಷ್ಯರು, ಅನಾಥವತ್ - ದರಿದ್ರರಂತೆ, ಉತ್ಥಾಯ - ಎಚ್ಚರಗೊಂಡು, ಗಚ್ಛಂತಂ-ಹೋಗುತ್ತಿರುವ, ದೀರ್ಘಬಾಹುಂ - ಉದ್ದವಾದ ಭುಜಗಳುಳ್ಳ, ಲೋಕನಾಥಂ - ಲೋಕಸ್ವಾಮಿಯಾದ, ರಾಮಂ - ಶ್ರೀರಾಮನನ್ನು, ದ್ರಕ್ಷ್ಯಂತಿ - ನೋಡುವರು, ನೂನಂ - ನಿಶ್ಚಯವು. ॥೧೮॥ ಜನಕಸ್ಯ - ಜನಕಮಹಾರಾಯನಿಗೆ, ಇಷ್ಟಾ - ಇಷ್ಟಳಾದ, ಸುತಾ - ಕುವರಿಯಾದ, ಸುಖಸದೋಚಿತಾ - ನಿರಂತರವೂ ಸುಖಕ್ಕೆ ಯೋಗ್ಯಳಾದ, ಸಾ - ಆ ಸೀತಾದೇವಿಯು, ಅದ್ಯ - ಈಗ, ಕಂಟಕಾಕ್ರಮಣಾಕ್ರಾಂತಾ, ಕಂಟಕಾ - ಮುಳ್ಳುಗಳಲ್ಲಿ, ಆಕ್ರಮಣ - ಸಂಚಾರದಿಂದ. ಆಕ್ರಾಂತಾ - ಬಾಧಿತಳಾಗಿ, ವನಂ - ವನದಲ್ಲಿ, ಗಮಿಷ್ಯತಿ - ಹೋಗುವಳು. ॥ ೧೯ ॥ ವನಾನಾಂ - ವನದುಃಖಗಳನ್ನು, ಅನಭಿಜ್ಞಾ - ಅರಿಯದಿರುವ, ಸಾ - ಆ ಸೀತಾದೇವಿಯು, ಗಂಭೀರಂ - ಘನವಾದ, ರೋಮಹರ್ಷಣಂ - ರೋಮಾಂಚವನ್ನುಂಟುಮಾಡುವ, ಶ್ವಾಪದಾನರ್ದಿತಂ, ಶ್ವಾಪದ - ನಾಯಿ, ಹುಲಿ ಮೊದಲಾದ ದುಷ್ಟಮೃಗಗಳ, ಆನರ್ದಿತಂ - ಧ್ವನಿಯನ್ನು, ಶ್ರುತ್ವಾ - ಕೇಳಿ, ಭಯಂ - ಭೀತಿಯನ್ನು, ಉಪೈಷ್ಯತಿ - ಹೊಂದುವಳು. ॥ ೨೦ ॥ ಹೇ ಕೈಕೇಯಿ - ಎಲೌ ಕೈಕೇಯಿಯಾದೇವಿಯೆ, ತ್ವಂ -

---

ಕೆಳಗಿಟ್ಟುಕೊಂಡು, ಧೂಳಿನಿಂದ ವ್ಯಾಪ್ತನಾಗಿ ಮಲಗೇಳುವನು. ॥ ೧೪ - ೧೬ ॥ ನೀರು ತುಂಬಿದ, ಬಿದ್ದು ಮೈಯನ್ನು ಕೆಸರು ಮಾಡಿಕೊಂಡು ಏಳುವ ಮದ್ದಾನೆಯಂತೆ ಯಾವುದೋ ಒಂದು ಆಜಾನುಬಾಹುವೂ, ನನ್ನ ಮುದ್ದು ಕುವರನೂ ಆದ ಶ್ರೀರಾಮನನ್ನು ಅರಣ್ಯವಾಸಿಗಳಾದ ಪುರುಷರೆಲ್ಲರೂ ನೋಡುವರಲ್ಲವೆ! ಅಕಟಕಟ; ಲೋಕನಾಥನಾದ ರಘುರಾಮನೀಗ ಅನಾಥನಂತೆ ಅರಣ್ಯವಾಸಿಗಳಿಂದ ಕಾಣಲ್ಪಡುವನಲ್ಲವೆ! ಅಯ್ಯೋ! ಜನಕರಾಯನ ಮೋಹದ ಕುವರಿಯೂ, ಅನೇಕ ಸುಖಗಳನ್ನನುಭವಿಸಿದವಳೂ ಆದ ಸೀತಾದೇವಿಯು ಕಲ್ಲುಮುಳ್ಳುಗಳನ್ನು ತುಳಿದುಕೊಂಡು ಅರಣ್ಯದಲ್ಲಿ ಸಂಚರಿಸುವಳಲ್ಲ! ಒಂದು ದಿನವಾದರೂ ಆ ದೇವಿಯು ಅರಣ್ಯವನ್ನು ನೋಡಿಲ್ಲವಾದುದರಿಂದ ಕಾಡಿನಲ್ಲಿರುವ, ತೋಳಗಳೇ ಮೊದಲಾದ ಕ್ರೂರ ಮೃಗಗಳ ಧ್ವನಿಯನ್ನು ಕೇಳಿ ಭಯಪಡುತ್ತಾಳೆ. ಇಂತಹ

ಸಕಾಮಾ ಭವ ಕೈಕೇಯಿ ವಿಧವಾ ರಾಜ್ಯಮಾವಸ ॥ ನಹಿ ತಂ ಪುರುಷ ವ್ಯಾಘ್ರಂ ವಿನಾ ಜೀವಿತು ಮುತ್ಸಹೇ ॥ ೨೧ ॥ ಇತ್ಯೇವಂ ವಿಲಪನ್ ರಾಜಾ ಜನೌಘೇನಾಭಿಸಂವೃತಃ ॥ ಅಪಸ್ನಾತ ಇವಾರಿಷ್ಟಂ ಪ್ರವಿವೇಶ ಪುರೋತ್ತಮಂ ॥೨೨॥ ಶೂನ್ಯ ಚತ್ವರ ವೇಶ್ಮಾಂ ತಾಂ ಸಂವೃತಾಪಣ ದೇವತಾಂ ॥ ಕ್ಲಾಂತ ದುರ್ಬಲ ದುಃಖಾರ್ತಾಂ ನಾತ್ಯಾಕೀರ್ಣ ಮಹಾಪಥಾಂ ॥ ೨೩ ॥ ತಾಮವೇಕ್ಷ್ಯ ಪುರೀಂ ಸರ್ವಾಂ ರಾಮಮೇವಾ ನುಚಿಂತಯನ್ ॥ ವಿಲಪನ್ ಪ್ರಾವಿಶ ದ್ರಾಜಾ ಗೃಹಂ ಸೂರ್ಯ ಇವಾಂಬುದಂ ॥ ೨೪ ॥ ಮಹಾ ಹ್ರದ

ನೀನು, ಸಕಾಮಾ - ನೆರವೇರಿದ ಕೋರಿಕೆಯುಳ್ಳವಳು, ಭವ - ಆಗು, ವಿಧವಾ - ಗಂಡನಿಲ್ಲದವಳಾಗಿ, ರಾಜ್ಯಂ - ರಾಜ್ಯಭಾರವನ್ನು, ಆವಸ - ಮಾಡು, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ತಂವಿನಾ - ಆ ಶ್ರೀರಾಮನನ್ನುಳಿದು, ಜೀವಿತುಂ - ಬದುಕಲು, ನೋತ್ಸಹೇ - ಶಕ್ತನಾಗಲಾರೆನು. ॥ ೨೧ ॥ ಇತ್ಯೇವಂ - ಈಪರಿಯಾಗಿ, ವಿಲಪನ್ - ಅಳುತ್ತಿರುವ, ರಾಜಾ - ದಶರಥರಾಯನು, ಜನೌಘೇನ - ಅಂತಃಪುರ ಸ್ತ್ರೀಜನಸಂಘದಿಂದ, ಅಭಿಸಂವೃತಃ - ಸುತ್ತು ವರೆಯಲ್ಪಟ್ಟು, ಅಪಸ್ನಾತ ಇವ - ಸೂತಕಸ್ನಾನಮಾಡಿದವನಂತೆ, ಅರಿಷ್ಟಂ - ಮಲಿನವಾಗಿರುವ, ಪುರೋತ್ತಮಂ - ಉತ್ತಮವಾದ ಪಟ್ಟಣವನ್ನು, ಪ್ರವಿವೇಶ - ಹೊಕ್ಕನು. ॥ ೨೨ ॥ ಶೂನ್ಯಚತ್ವರವೇಶ್ಮಾಂತಾಂ, ಶೂನ್ಯ - ಬರಿದಾಗಿರುವ, ಚತ್ವರ - ಅಂಗಳಗಳ, ವೇಶ್ಮ - ಮನೆಗಳ, ಅಂತಾಂ - ಮಧ್ಯಪ್ರದೇಶವುಳ್ಳ, ಸಂವೃತಾಪಣದೇವತಾಂ, ಸಂವೃತ - ಮುಚ್ಚಲ್ಪಟ್ಟ, ಆಪಣದೇವತಾಂ - ಅಂಗಡಿಗಳೂ, ದೇವಾಲಯಗಳೂ ಉಳ್ಳ, ಕ್ಲಾಂತದುರ್ಬಲದುಃಖಾರ್ತಾಂ, ಕ್ಲಾಂತ - ಬಳಲಿದ, ದುರ್ಬಲ - ಬಲಹೀನರಾದ, ದುಃಖಾರ್ತಾಂ - ದುಃಖಗೊಂಡ ಜನರುಳ್ಳ, ನಾತ್ಯಾಕೀರ್ಣ - ಬಹಳ ತುಂಬದಿರುವ, ಮಹಾಪಥಾಂ- ದೊಡ್ಡಮಾರ್ಗಗಳುಳ್ಳ, ಸರ್ವಾಂ - ಸಮಸ್ತವಾದ, ತಾಂಪುರೀಂ - ಆ ಪಟ್ಟಣವನ್ನು, ಪ್ರೇಕ್ಷ್ಯ - ಕಂಡು, ರಾಜಾ - ದಶರಥರಾಯನು, ವಿಲಪನ್ - ಅಳುತ್ತ, ರಾಮಮೇವ - ಶ್ರೀರಾಮನನ್ನೇ, ಅನುಚಿಂತಯನ್ - ಆಲೋಚಿಸುತ್ತ, ಸೂರ್ಯಃ - ಸೂರ್ಯನು, ಅಂಬುದಮಿವ - ಮೇಘವನ್ನಂತೆ,

ಕೋಮಲಾಂಗಿಯನ್ನು ನೀನು ವನಕ್ಕೆ ಕಳುಹಿಸಿದೆ. “ಎಲೆಗೆ, ಕೈಕೇಯಿದೇವಿಯೆ !! ನಿನ್ನ ಮನದಾಸೆಯು ಇದೀಗ ನೆರವೇರಿತು. ನೀನು ವಿಧವೆಯಾಗಿ ಈ ಅಯೋಧ್ಯಾ ರಾಜ್ಯವನ್ನಾಳಿಕೊಂಡಿರು. ಶ್ರೀರಾಮಮೂರ್ತಿಯನ್ನು ಕಾಣದೆ ನಾನೊಂದುಕ್ಷಣಕಾಲವಾದರೂ ಜೀವಿಸಿರಲಾರೆನು” ಇಂತು ನುಡಿದ ದಶರಥರಾಯನು ಮೃತಾಶೌಚ ಸ್ನಾನವನ್ನು ಮಾಡಿ ಅಮಂಗಳವಾದ ಗೃಹವನ್ನು ಹೊಗುವಂತೆ, ಜನಗಳೊಡಗೂಡಿ, ಪುರಪ್ರವೇಶವನ್ನು ಮಾಡಿ, ಚೌಬೀದಿಗಳು ಜನಸಂಚಾರ ಶೂನ್ಯವಾಗಿದ್ದುದನ್ನೂ, ಆ ಪಣವೀಥಿಗಳಲ್ಲಿ ಅಂಗಡೀ ಬಾಗಿಲುಗಳೆಲ್ಲ ಮುಚ್ಚಲ್ಪಟ್ಟದ್ದುದನ್ನೂ, ಬಹಳವಾದ ದುಃಖದಿಂದ ಬಳಲಿ ಬೆಂಡಾಗಿ, ಬಲಗುಂದಿ ಪ್ರಲಪಿಸುತ್ತಿದ್ದ ಜನರನ್ನೂ, ಜನಸಮ್ಮರ್ದರಹಿತವಾದ ರಾಜಮಾರ್ಗಗಳನ್ನೂ ನೋಡಿ, ಶ್ರೀರಾಮನನ್ನೆ ಚಿಂತಿಸುತ್ತ ಸೂರ್ಯನು ಅಂಬರತಲವನ್ನು ಹೊಗುವಂತೆ ನಿಜಮಂದಿರವನ್ನು ಹೊಕ್ಕವನಾದನು. ॥೧೭-೨೪॥ ಆ ಬಳಿಕ ದಶರಥ ಮಹಾರಾಜನು ಗರುಡನಿಂದ ಚುಚ್ಚ

ಮಿವಾ ಕ್ಷೋಭ್ಯಂ ಸುಪರ್ಣೇನ ಹೃತೋರಗಂ || ರಾಮೇಣ ರಹಿತಂ ವೇಶ್ಮ ವೈದೇಹ್ಯಾ ಲಕ್ಷ್ಮಣೇನಚ || ೨೫ || ಅಥ ಗದ್ಗದ ಶಬ್ದಸ್ತು ವಿಲಪ ನ್ಮನುಜಾಧಿಪಃ || ಉವಾಚ ಮೃದು ಮಂದಾರ್ಥಂ ವಚನಂ ದೀನಮಸ್ವರಂ ||೨೬|| ಕೌಸಲ್ಯಾಯಾ ಗೃಹಂ ಶೀಘ್ರಂ ರಾಮಮಾತು ರ್ನಯಂತು ಮಾಂ || ನಹ್ಯನ್ಯತ್ರ ಮಮಾಶ್ವಾಸೋ ಹೃದಯಸ್ಯ ಭವಿಷ್ಯತಿ || ೨೭ || ಇತಿಬ್ರುವಂತಂ ರಾಜಾನ ಮನಯ ರ್ದ್ವಾರದರ್ಶಿನಃ || ಕೌಸಲ್ಯಾಯಾ ಗೃಹಂ ತತ್ರ ನ್ಯವೇಶ್ಯಂತ ವಿನೀತವತ್ || ೨೮ || ತತ ಸ್ತಸ್ಯ ಪ್ರವಿಷ್ಟಸ್ಯ ಕೌಸಲ್ಯಾಯಾ ನಿವೇ

ಗೃಹಂ - ಮನೆಯನ್ನು, ಪ್ರಾವಿಶತ್ - ಹೊಕ್ಕನು, ಸುಪರ್ಣೇನ - ಗರುಡನಿಂದ, ಹೃತೋರಗಂ, ಹೃತ - ಅಪಹರಿಸಲ್ಪಟ್ಟ, ಉರಗಂ - ಸರ್ಪವುಳ್ಳ, ಮಹಾಹ್ರದಮಿವ - ಸರ್ಪಗಳವಾಸಸ್ಥಾನವಾದ ದೊಡ್ಡಹಳ್ಳದಂತೆ, ಅಕ್ಷೋಭ್ಯಂ - ಕ್ಷೋಭಿಸಲಸಾಧ್ಯವಾದ, ರಾಮೇಣ - ಶ್ರೀರಾಮನಿಂದ, ವೈದೇಹ್ಯಾ - ಸೀತಾದೇವಿಯಿಂದ, ಲಕ್ಷ್ಮಣೇನಚ - ಲಕ್ಷ್ಮಣನಿಂದಲೂ, ರಹಿತಂ - ಶೂನ್ಯವಾದ, ವೇಶ್ಮ - ಮನೆಯನ್ನು, ಪ್ರಾವಿಶತ್ - ಹೊಕ್ಕನು. || ೨೪-೨೫ || ಅಥ - ಬಳಿಕ, ಗದ್ಗದಶಬ್ದಃ- ಗದ್ಗದಧ್ವನಿಯುಳ್ಳವನಾಗಿ, ವಿಲಪನ್ - ಅಳುತ್ತಿರುವ, ಮನುಜಾಧಿಪಃ - ದಶರಥರಾಯನು, ಮೃದು- ಮೆಲ್ಲಗೆ ಹೇಳಲ್ಪಟ್ಟ. ಮಂದಾರ್ಥಂ - ಸ್ಪಷ್ಟವಲ್ಲದಿರುವ ಅರ್ಥವುಳ್ಳ, ದೀನಂ - ಶೋಕದಿಂದ ಕೂಡಿರುವ, ಅಸ್ವರಂ - ಶುದ್ಧವಾದ ಕಂಠಸ್ವರವಿಲ್ಲದಿರುವ, ವಚನಂ - ಮಾತನ್ನು, ಉವಾಚ - ಹೇಳಿದನು. || ೨೬ || ಮಾಂ - ನನ್ನನ್ನು, ಶೀಘ್ರಂ - ಜಾಗ್ರತೆಯಾಗಿ, ರಾಮಮಾತುಃ - ಶ್ರೀರಾಮನಿಗೆ ತಾಯಿಯಾದ, ಕೌಸಲ್ಯಾಯಾಃ - ಕೌಸಲ್ಯಾದೇವಿಯ, ಗೃಹಂ - ಮನೆಯನ್ನು ಕುರಿತು, ನಯಂತು - ಕರೆದುಕೊಂಡುಹೋಗಿ, ಅನ್ಯತ್ರ - ಮತ್ತೊಂದು ಮನೆಯಲ್ಲಿ, ಮಮ - ನನ್ನ, ಹೃದಯಸ್ಯ - ಮನಸ್ಸಿಗೆ, ಆಶ್ವಾಸಃ - ಸಮಾಧಾನವು, ನಭವಿಷ್ಯತಿಹಿ - ಆಗುವದಿಲ್ಲವಷ್ಟೆ. || ೨೭ || ದ್ವಾರದರ್ಶಿನಃ - ದ್ವಾರಪಾಲಕರು, ಇತಿ - ಈಪರಿಯಾಗಿ, ಬ್ರುವಂತಂ - ಹೇಳಿದ, ರಾಜಾನಂ - ದಶರಥರಾಯನನ್ನು, ಕೌಸಲ್ಯಾಯಾಃ - ಕೌಸಲ್ಯಾದೇವಿಯ, ಗೃಹಂ - ಮನೆಯನ್ನು ಕುರಿತು, ಅನಯನ್ - ಕರದುಕೊಂಡುಹೋದರು, ತತ್ರ - ಆ ಮನೆಯಲ್ಲಿ, ವಿನೀತವತ್ - ವಿನೀತರಾಗಿ, ನ್ಯವೇಶ್ಯಂತ - ಇದ್ದರು. || ೨೮ || ಕೌಸಲ್ಯಾಯಾಃ - ಕೌಸಲ್ಯಾದೇವಿಯ, ನಿವೇಶನಂ - ಮನೆಯನ್ನು, ಪ್ರವಿಷ್ಟಸ್ಯ - ಪ್ರವೇಶಮಾಡಿರುವ, ತಸ್ಯ - ಆ ದಶರಥರಾಯನ, ಮನಃ - ಮನವು,

---

ಲ್ಪಟ್ಟ ಸರ್ಪವುಳ್ಳ ದೊಡ್ಡ ಹಳ್ಳದಂತೆ ಕ್ಷೋಭಿಸಲಸದಳವಾದುದೂ, ಶ್ರೀರಾಮ, ಲಕ್ಷ್ಮಣ ಸೀತೆಯರಿಂದ ರಹಿತವಾದುದೂ ಆದ ಅರಮನೆಯನ್ನು ಪ್ರವೇಶಿಸಿ, ವಿಸ್ವರವೂ, ದೈನ್ಯಯುತವೂ, ಅಸ್ಪಷ್ಟವೂ, ಮೃದುವೂ ಆದ ನುಡಿಯಿಂದ ಅಲ್ಲಿದ್ದ ದ್ವಾರಪಾಲಕರನ್ನು ಕುರಿತು, "ಅಯ್ಯಾ ದ್ವಾರಪಾಲಕರಿರಾ! ನನ್ನನ್ನು ಬೇಗನೆ ಕೌಸಲ್ಯಾದೇವಿಯ ಅಂತಃಪುರಕ್ಕೆ ಕರೆದುಕೊಂಡು ಹೋಗಿರಿ. ನನಗೆ ಮತ್ತಾವ ಸ್ಥಳದಲ್ಲಿಯೂ ಮನಸ್ಸಿಲ್ಲ!" ಎಂದು ಹೇಳಿದನು. ಆಗಲಾ ದ್ವಾರಪಾಲಕರು ಮಹಾ ವಿನಯದಿಂದೊಡಗೂಡಿದವರಾಗಿ ಕೌಸಲ್ಯಾದೇವಿಯ ಮನೆಗೆ ಆ ರಾಯನನ್ನು ಕರೆದುಕೊಂಡು ಹೋದರು. || ೨೫-೨೮ || ಆ ಬಳಿ

ಶನಂ ॥ ಅಧಿರುಹ್ಯಾಪಿ ಶಯನಂ ಬಭೂವ ಲುಳಿತಂ ಮನಃ ॥೨೯॥
ಪುತ್ರದ್ವಯವಿಹೀನಂಚ ಸ್ನುಷಯಾಪಿ ವಿವರ್ಜಿತಂ ॥ ಅಪಶ್ಯದ್ಭವನಂ
ರಾಜಾ ನಷ್ಟಚಂದ್ರಮಿವಾಂಬರಂ ॥೩೦॥ ತಚ್ಚ ದೃಷ್ಟ್ವಾ ಮಹಾರಾಜೋ
ಭುಜಮುದ್ಯಮ್ಯ ವೀರ್ಯವಾನ್ ॥ ಉಚ್ಚೈಸ್ಸ್ವರೇಣ ಚುಕ್ರೋಶ ಹಾರಾಘವ
ಜಹಾಸಿ ಮಾಂ ॥೩೧॥ ಸುಖಿತಾ ಬತ ತಂ ಕಾಲಂ ಜೀವಿಷ್ಯಂತಿ ನರೋ
ತ್ತಮಾಃ ॥ ಪರಿಷ್ವಜಂತೋ ಯೇ ರಾಮಂ ದ್ರಕ್ಷ್ಯಂತಿ ಪುನರಾಗತಂ ॥೩೨॥
ಅಥ ರಾತ್ರ್ಯಾಂ ಪ್ರವೃತ್ತಾಯಾಂ ಕಾಳರಾತ್ರ್ಯಾಮಿವಾತ್ಮನಃ ॥ ಅರ್ಧರಾತ್ರೇ

ಶಯನಂ - ಹಾಸಿಗೆಯನ್ನು, ಅಧಿರುಹ್ಯಾಪಿ - ಏರಿದರೂ, ಲುಳಿತಂ - ಸಂತಾಪಗೊಂಡುದು, ಬಭೂವ- ಆಯಿತು. ॥ ೨೯ ॥ ರಾಜಾ - ದಶರಥರಾಯನು, ಪುತ್ರದ್ವಯವಿಹೀನಂಚ, ಪುತ್ರದ್ವಯ - ಇಬ್ಬರು ಮಕ್ಕಳಿಂದಲೂ, ವಿಹೀನಂಚ - ಹೀನವಾದ, ಸ್ನುಷಯಾಪಿ - ಸೊಸೆಯಿಂದಲೂ, ವಿವರ್ಜಿತಂ - ಬಿಡಲ್ಪಟ್ಟ, ಭವನಂ - ಮನೆಯನ್ನು, ನಷ್ಟಚಂದ್ರಂ, ನಷ್ಟ - ಕಾಣದಿರುವ, ಚಂದ್ರಂ - ಚಂದ್ರನುಳ್ಳ, ಅಂಬರಮಿವ - ಅಂತರಿಕ್ಷದಂತೆ, ಅಪಶ್ಯತ್ - ಕಂಡನು. ॥ ೩೦ ॥ ವೀರ್ಯವಾನ್ - ಪರಾಕ್ರಮಶಾಲಿಯಾದ, ಮಹಾರಾಜಃ - ದಶರಥರಾಯನು, ತಚ್ಚ - ಆ ಮನೆಯನ್ನು, ದೃಷ್ಟ್ವಾ - ಕಂಡು, ಭುಜಂ - ಭುಜವನ್ನು, ಉದ್ಯಮ್ಯ - ಮೇಲಕ್ಕೆತ್ತಿ, ಹಾಹಾ - ಕಷ್ಟವು, ಹೇ ರಾಘವ - ಎಲೈ ಶ್ರೀರಾಮನೇ, ಮಾಂ - ನನ್ನನ್ನು, ಜಹಾಸಿ - ಬಿಟ್ಟುಹೋದೆಯಾ ! ಇತಿ - ಇಂತೆಂದು, ಉಚ್ಚೈಸ್ಸ್ವರೇಣ - ಘಟ್ಟಿಯಾದ ಧ್ವನಿಯಿಂದ, ಚುಕ್ರೋಶ - ಕೂಗಿದನು. ॥ ೩೧ ॥ ಯೇನರೋತ್ತಮಾಃ - ಯಾವ ಮನುಷ್ಯಶ್ರೇಷ್ಠರೂ, ತಂಕಾಲಂ - ಅಷ್ಟುಕಾಲ ಪರಿಯಂತ, (ಅಂದರೆ ಶ್ರೀರಾಮನ ಆಗಮನಕಾಲ ಪರಿಯಂತ) ಜೀವಿಷ್ಯಂತಿ - ಬದುಕಿರುವರೋ, ತೇ - ಅವರು, ಸುಖಿತಾಃ - ಸುಖವುಳ್ಳವರಾಗಿ, ಪುನರಾಗತಂ - ಹಿಂತಿರಗಿ ಬಂದ, ರಾಮಂ - ಶ್ರೀರಾಮನನ್ನು, ಪರಿಷ್ವಜಂತಃ - ಅಪ್ಪಿಕೊಂಡು, ದ್ರಕ್ಷ್ಯಂತಿ - ನೋಡುವರು. ॥ ೩೨ ॥ ಅಥ - ಬಳಿಕ, ಆತ್ಮನಃ- ತನಗೆ, ಕಾಳರಾತ್ರ್ಯಾಮಿವ - ಪ್ರಳಯಕಾಲದ ರಾತ್ರಿಯಂತೆ, ರಾತ್ರ್ಯಾಂ - ರಾತ್ರಿಯು, ಪ್ರವೃ

ಕಲಾ ರಾಜೇಂದ್ರನು ಕೌಸಲ್ಯಾದೇವಿಯ ಅಂತಃಪುರವನ್ನು ಹೊಕ್ಕು ಹಂಸತೂಲಿಕಾತಲ್ಪದ ಮೇಲೆ ಕುಳಿತಿದ್ದರೂ ಆತನ ಮನಸ್ಸು ಸಂತಪಿಸುತ್ತಲೇ ಇದ್ದಿತು. ಆಗಲಾ ರಾಯನು, ರಾಮಲಕ್ಷ್ಮಣರಿಂದಲೂ, ಸೊಸೆಯಾದ ಸೀತಾದೇವಿಯಿಂದಲೂ ವಿರಹಿತವಾದ ಆ ಮನೆಯನ್ನು, ಚಂದ್ರಶೂನ್ಯವಾದ ಅಂಬರವನ್ನಂತೆ ನೋಡಿ, ದುಃಖವನ್ನು ಸೈರಿಸಲಾರದೆ ಕೈಗಳನ್ನು ಮೇಲಕ್ಕೆ ಚಾಚಿ, “ಅಯ್ಯೋ! ರಾಮನೆ! ನನ್ನನ್ನು ಬಿಟ್ಟು ಕಾಡಿಗೆ ಹೋದೆಯಾ !!” ಎಂದು ಹೇಳಿ ಸಂಕಟಪಡುತ್ತ ಪುನಃ, “ಹುಂ! ನನಗಂತೂ ಹಿಂತಿರುಗಿ ಬರುವ ಶ್ರೀರಾಮನನ್ನು ನೋಡುವ ಭಾಗ್ಯವಿಲ್ಲ. ಪುರುಷ ಶ್ರೇಷ್ಠರಾದವರು ಶ್ರೀರಾಮನು ಬರುವವರೆವಿಗೂ ಸುಖವಾಗಿ ಜೀವಿಸಿಕೊಂಡಿದ್ದು ಆತನು ಬಂದ ಮೇಲೆ, ಆತನನ್ನು ಬಿಗಿದಪ್ಪಿಕೊಂಡು ನೋಡುತ್ತಾರೆ” ಎಂದನು. ॥ ೨೯-೩೨ ॥ ತನ್ನ ಪ್ರಳಯಕ್ಕೆ ರಾತ್ರಿಯಂತಿರುವ ಅರ್ಧ ರಾತ್ರಿಯು ಪ್ರಾಪ್ತವಾಗಲು, ಆ ರಾಯನು ತನ್ನ ಜ್ಯೇಷ್ಠ ಮಹಿಷಿಯಾದ ಕೌಸಲ್ಯಾ

ದಶರಥಃ ಕೌಸಲ್ಯಾ ಮಿದಮಬ್ರವೀತ್ ॥ ೩೩ ॥ (೧) ರಾಮಂ ಮೇಽನುಗತಾ ದೃಷ್ಟಿ ರದ್ಯಾಪಿ ನನಿವರ್ತತೇ ॥ ನ ತ್ವಾ ಪಶ್ಯಾಮಿ ಕೌಸಲ್ಯೇ ಸಾಧು ಮಾಂ ಪಾಣಿನಾ ಸ್ಪೃಶ ॥ ೩೪ ॥

ತ್ಯಾಯಾಂ - ಪ್ರಾಪ್ತವಾಗಲು, ಅರ್ಧರಾತ್ರೇ - ಅರ್ಧರಾತ್ರಿಯ ಕಾಲದಲ್ಲಿ, ದಶರಥಃ - ದಶರಥ ರಾಯನು, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೩೩ ॥ ಹೇ ಕೌಸಲ್ಯೇ - ಎಲೌ ಕೌಸಲ್ಯಾದೇವಿಯೇ, ರಾಮಂ - ಶ್ರೀರಾಮನನ್ನು, ಅನುಗತಾ - ಅನುಸರಿಸಿಹೋದ, ಮೇ - ನನ್ನ, ದೃಷ್ಟಿಃ - ಚಕ್ಷುರಿಂದ್ರಿಯವು, ಅದ್ಯಾಪಿ-ಈಗಲೂ, ನನಿವರ್ತತೇ - ಹಿಂತಿರುಗಲಿಲ್ಲ, (ಅತಏವ - ಆದುದರಿಂದಲೇ,) ತ್ವಾ - ನಿನ್ನನ್ನು, ನಪಶ್ಯಾಮಿ - ನೋಡುತ್ತಿಲ್ಲ, ಮಾಂ - ನನ್ನನ್ನು, ಪಾಣಿನಾ - ಹಸ್ತದಿಂದ, ಸಾಧು - ಚೆನ್ನಾಗಿ, ಸ್ಪೃಶ - ಸ್ಪರ್ಶ ಮಾಡು. ॥೩೪॥ ದೇವೀ - ಕೌಸಲ್ಯೆಯು, ಶಯನೇ - ಹಾಸಿಗೆಯಲ್ಲಿ, ತಂರಾಮಮೇವ - ಆ

ದೇವಿಯನ್ನು ಕುರಿತು, "ಎಲೌ ದೇವಿಯೆ! ಶ್ರೀರಾಮಮೂರ್ತಿಯನ್ನನುಸರಿಸಿ ಹೊರಟು ಹೋದ ನನ್ನ ದೃಷ್ಟಿಯು ಈಗಲೂ ಹಿಂತಿರುಗಲಿಲ್ಲವು. ನೀನು ನನ್ನ ಕಣ್ಣಿಗೆ ಕಾಣುವುದೇ ಇಲ್ಲ. ಆದುದರಿಂದ ನನ್ನನ್ನು ನಿನ್ನ ಕೈಯಿಂದ ಮುಟ್ಟುವವಳಾಗು" ಎಂದು ನುಡಿದನು.

ಟಿ. (೧) ಈ ಶ್ಲೋಕಕ್ಕೆ **ತನಿ ಶ್ಲೋಕೀ**ಕಾರರು ಬಹಳವಾದ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಅದರಲ್ಲಿ ಮುಖ್ಯವಾದ ಒಂದೆರಡು ಸ್ವಾರಸಿಕಾರ್ಥಗಳನ್ನು ಮಾತ್ರ ಇಲ್ಲಿ ಹೇಳಲುಜ್ಜುಗಿಸುತ್ತೇವೆ.

"ರಾಮಂ ಅನುಗತಾ ಮೇ ದೃಷ್ಟಿ.......ನನಿವರ್ತತೆ" ಇಲ್ಲಿನ ಭಾವವು ಹೀಗೆ. ಎಲೌ ಕೌಸಲ್ಯಾದೇವಿಯೆ! ಗುಣಸಾಗರನಾದ ಶ್ರೀರಾಮನನ್ನು ಅನುಸರಿಸಿ ಹೊರಟ ನನ್ನ ದೃಷ್ಟಿಯು ಇನ್ನೂ ಹಿಂತಿರುಗಿಲ್ಲ. ಸಮುದ್ರವನ್ನು ಸೇರಿದ ಪದಾರ್ಥವು ಮತ್ತೆ ಬರುವುದುಂಟೆ? ಬರಲಾರದು; "ಸಮುದ್ರ ಇವ ಗಾಂಭೀರ್ಯೇ ಗುಣಾನಾಮಾಕರೋ ಮಹಾನ್" ಎಂದು ಸಮುದ್ರ ಸ್ಥಾನವನ್ನು ಶ್ರೀರಾಮನಿಗೆ ಕೊಟ್ಟಿರುವುದರಿಂದ ಈ ಭಾವವು ಸೂಚಿತವಾಗುತ್ತದೆ. "ಆ ಶ್ರೀರಾಮನ ದರ್ಶನವಿಲ್ಲದಿರುವ ಈ ಕಾಲದಲ್ಲಿ ಆತನ ಜನನಿಯಾದ ನಿನ್ನನ್ನು ಕಾಣಲು ಬಯಸಿದರೂ ಆತ ನನ್ನನುಸರಿಸಿ ಹೊರಟ ನನ್ನ ದೃಷ್ಟಿಯು ಇನ್ನೂ ಹಿಂತಿರುಗಲಿಲ್ಲ" ಎಂಬುದೇ "ಅದ್ಯಾಪಿ ನನಿವರ್ತತೇ" ಎಂಬ ಪದದ ಸ್ವಾರಸ್ಯವು. ಎಲೌ ದೇವಿಯೆ! ಶ್ರೀರಾಮನ ಮುಖ ದರ್ಶನವಿಲ್ಲದೆ ಕೈಕೇಯಿದೇವಿಯ ಮುಖವನ್ನು ನೋಡುವಿಕೆಯಿಂದುಂಟಾದ ಪಾಪವನ್ನು ಕಳೆದುಕೊಳ್ಳಲು ನಿನ್ನ ಮುಖವನ್ನಾದರೂ ನೋಡೋಣವೆಂದರೆ, ಆ ರಘು ರಾಮನನ್ನು ಅನುಸರಿಸಿ ಹೋದ ದೃಷ್ಟಿಯೇ ಹಿಂತಿರುಗಲಿಲ್ಲವಲ್ಲ! ಎಂದು ತಾತ್ಪರ್ಯವು. "ಮಾಂ - ಸಾಧು ಪಾಣಿನಾಸ್ಪೃಶ":—ರೂಪಗ್ರಾಹಕೇಂದ್ರಿಯವು ಚಕ್ಷುಸ್ಸು, ಅದು ರಾಮನೊಡನೆ ಹೊರಟುಹೋಯಿತು. ತ್ವಗಿಂದ್ರಿಯವೂ ಆತನನ್ನನುಸರಿಸಿ ಹೋಯಿತೋ ಇಲ್ಲವೋ ಎಂಬುದನ್ನು ನೋಡು. ಕೈಯಿಂದ ಚೆನ್ನಾಗಿ ಸ್ಪರ್ಶ ಮಾಡು. ರಾಮಸ್ಪರ್ಶನ ಭಾಗ್ಯವಿಲ್ಲದಿದ್ದರೂ, ಆತನ ತಾಯಿಯಾದ ನಿನ್ನ ಸ್ಪರ್ಶನ ಭಾಗ್ಯವಾದರೂ ಈ ತ್ವಗಿಂದ್ರಿಯಕ್ಕುಂಟಾಗಲಿ.

ಮಹೇಶ್ವರ ತೀರ್ಥರು ಈ ಶ್ಲೋಕದ ಭಾವವನ್ನು ಹೀಗೆ ಪ್ರತಿಪಾದಿಸುತ್ತಾರೆ.

"ರಮಂತೇ ಯೋಗಿನೋಽನಂತೇ" ಎಂಬ ಶ್ರುತ್ಯನುಸಾರವಾಗಿ ಪರಬ್ರಹ್ಮಮೂರ್ತಿಯಾದ ಶ್ರೀರಾಮನನ್ನು ಅನುಸರಿಸಿ ಹೊರಟುಹೋದ ದೃಷ್ಟಿಯು ಇನ್ನೂ ಹಿಂತಿರುಗಲಿಲ್ಲ. "ನ ಸ ಪುನರಾವರ್ತತೇ" ಎಂದು ಹೇಳಿರುವ ಹಾಗೆ ಪರಬ್ರಹ್ಮನಲ್ಲಿ ನೆಟ್ಟ ದೃಷ್ಟಿಯು ಹಿಂತಿರುಗುವುದೇ ಇಲ್ಲ.

ತಂ ರಾಮಮೇವಾನುವಿಚಿಂತಯಂತಂ
ಸಮೀಕ್ಷ್ಯ ದೇವೀ ಶಯನೇ ನರೇಂದ್ರಂ ॥
ಉಪೋಪವಿಶ್ಯಾಧಿಕಮಾರ್ತರೂಪಾ
ವಿನಿಶ್ವಸಂತೀ ವಿಲಲಾಪ ಕೃಚ್ಛ್ರಂ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಚತ್ವಾರಿಂಶಸ್ಸರ್ಗಃ.

ಶ್ರೀರಾಮನನ್ನೇ, ಅನುಚಿಂತಯಂತಂ - ಧ್ಯಾನಮಾಡುತ್ತಿರುವ, ನರೇಂದ್ರಂ - ದಶರಥರಾಯನನ್ನು, ಸಮೀಕ್ಷ್ಯ - ಕಂಡು, ಉಪೋಪವಿಶ್ಯ - ಸಮೀಪದಲ್ಲಿ ಕುಳಿತು, ಅಧಿಕಂ - ಹೆಚ್ಚಾಗಿ, ಆರ್ತರೂಪಾ- ದೀನಸ್ವಭಾವವುಳ್ಳವಳಾಗಿ, ನಿಶ್ವಸಂತೀ - ನಿಟ್ಟುಸಿರುಬಿಡುತ್ತ, ಕೃತ್ಸ್ನಂ - ಕಷ್ಟವಾಗಿ, ವಿಲಲಾಪ - ಪ್ರಲಾಪಮಾಡಿದಳು. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಚತ್ವಾರಿಂಶಸ್ಸರ್ಗಃ.

ಆಗಲಾ ಕೌಸಲ್ಯಾದೇವಿಯು ಶ್ರೀರಾಮನನ್ನೇ ಚಿಂತಿಸುತ್ತಿರುವ ಆ ರಾಯನನ್ನು ಕಂಡು ನಿಟ್ಟುಸಿರುಗಳನ್ನು ಬಿಡುತ್ತ, ಆತನ ಬಳಿಗೈದಿ, ಸಮೀಪದಲ್ಲಿಯೇ ಕುಳಿತು ಬಹಳವಾಗಿ ಪ್ರಲಪಿಸಿದಳು. ॥ ೩೩-೩೫ ॥

ಇಂತಿದು ದಶರಥರಾಜ ಪ್ರಲಾಪ ವಿವರಣವೆಂಬ ನಲವತ್ತೆರಡನೆಯ ಸರ್ಗವು
ಸಮಾಪ್ತವಾದುದು.

"ಚಕ್ಷುರಿಂದ್ರಿಯವು ರಾಮನನ್ನು ಹೊಂದಿದಂತೆ ಇತರ ಎಲ್ಲ ಇಂದ್ರಿಯಗಳೂ ಆ ಮೂರ್ತಿಯನ್ನೇ ಹೊಂದುವ ಭಾಗ್ಯವನ್ನು ಹೊಂದಿದ್ದರೆ ನನಗಿಂತಲೂ ಧನ್ಯತಮರು ಈ ಲೋಕದಲ್ಲಿ ಯಾರೂ ಇಲ್ಲವೆಂದೇ ಹೇಳಬಹುದು" ಎಂಬ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ದಶರಥರಾಯನು ಎಲ್ಲ ಇಂದ್ರಿಯಗಳನ್ನೂ ಹಾಗೆ ಪ್ರಾರ್ಥಿಸುತ್ತ, ಮೊದಲು ತ್ವಗಿಂದ್ರಿಯಕ್ಕೆ ಆ ಭಾಗ್ಯವುಂಟಾಯಿತೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಲು, "ಸ್ಪರ್ಶ ಮಾಡಿ ನೋಡು" ಎಂದು ಹೇಳಿದನು.

ಇಲ್ಲಿ ವಾಚಕರಿಗೆ ಒಂದು ಸಂಶಯವು ತಲೆದೋರಬಹುದು. "ಕೌಸಲ್ಯಾ ದಶರಥರು ಜ್ಞಾನಿಗಳಾಗಿದ್ದಿದ್ದರೆ ರಾಮತತ್ವವನ್ನು ತಿಳಿದಿದ್ದರೂ ಗೋಳಿಡುತ್ತಿದ್ದರೆ? ಸಂತೋಷವಾಗಿಯೇ ಇರುತ್ತಿದ್ದರಲ್ಲವೆ? ಇವರಿಬ್ಬರೂ ದುಃಖ ಪಡುತ್ತಿರುವುದು ಕೇವಲ ಅಸಂಗತ; ಮತ್ತು ರಾಮತತ್ವ ಪರವಾದ ಇವರ ಸಂವಾದವು ಅರ್ಥವಿಲ್ಲದುದು" ಎಂದು. ಇದಕ್ಕೆ ಸಮಾಧಾನ ಹೀಗೆ:—ತತ್ವವನ್ನು ಹೊರಗೆಡುಹುವುದು ವಾಲ್ಮೀಕಿಯ ತಾತ್ಪರ್ಯ. ಆತನು ಶ್ರೀರಾಮನ ಶ್ರೇಷ್ಠತೆಯನ್ನೂ, ಪರಬ್ರಹ್ಮ ಪರತ್ವವನ್ನೂ ಪುನಃ ಪುನಃ ಹೇಳತೊಡಗುತ್ತಾನೆ. ಇಲ್ಲಿ ದಶರಥ ವಾಕ್ಯ ರೂಪದಲ್ಲಿ ಸ್ವೋದ್ದಿಷ್ಟ ಶ್ರೀರಾಮಪರತ್ವೋದ್ಘಾಟನೆಯನ್ನು ಮಾಡಿದ್ದಾನೆ. ಇದೇ ಇಲ್ಲಿನ ರಹಸ್ಯವು.

ಅಯೋಧ್ಯಾಕಾಂಡೇ ತ್ರಿಚತ್ವಾರಿಂಶಸ್ಸರ್ಗಃ.

ತತಸ್ಸಮೀಕ್ಷ್ಯ ಶಯನೇ ಸನ್ನಂ ಶೋಕೇನ ಪಾರ್ಥಿವಂ ॥ ಕೌಸಲ್ಯಾ ಪುತ್ರಶೋಕಾರ್ತಾ ತಮುವಾಚ ಮಹೀಪತಿಂ ॥ ೧ ॥ ರಾಘವೇ ನರ ಶಾರ್ದೂಲೇ ವಿಷಂ ಕ್ಷಿಪ್ತ್ವಾ ವಿಜಿಹ್ಮತಾಂ ॥ ವಿಚರಿಷ್ಯತಿ ಕೈಕೇಯೀ ನಿರ್ಮುಕ್ತೇವಹಿ ಪನ್ನಗೀ ॥ ೨ ॥ ವಿವಾಸ್ಯ ರಾಮಂ ಸುಭಗಾ ಲಬ್ಧಕಾಮಾ ಸಮಾಹಿತಾ ॥ ತ್ರಾಸಯಿಷ್ಯತಿ ಮಾಂ ಭೂಯೋ ದುಷ್ಟಾಹಿರಿವ ವೇಶ್ಮನಿ ॥ ೩ ॥ ಅಥಸ್ಮ ನಗರೇ ರಾಮಶ್ಚರ್ರ ಭೈಕ್ಷಂ ಗೃಹೇ ವಸೇತ್ ॥ ಕಾಮಕಾರೋ ವರಂ

ತತಃ - ಬಳಿಕ, ಪುತ್ರಶೋಕಾರ್ತಾ, ಪುತ್ರ - ಮಗನ, ಶೋಕ - ವ್ಯಸನದಿಂದ, ಆರ್ತಾ - ಪರಿತಪ್ತಳಾದ, ಕೌಸಲ್ಯಾ - ಕೌಸಲ್ಯಾದೇವಿಯು, ಶಯನೇ - ಹಾಸಿಗೆಯಲ್ಲಿ, ಶೋಕೇನ - ದುಃಖ ದಿಂದ, ಸನ್ನಂ-ಕ್ಷೀಣಗತಿಯನ್ನು ಹೊಂದಿದ, ಪಾರ್ಥಿವಂ - ರಾಜನಾದದಶರಥನನ್ನು, ಸಮೀಕ್ಷ್ಯ - ಕಂಡು, ತಂಮಹೀಪತಿಂ - ಆ ದಶರಥರಾಯನನ್ನು ಕುರಿತು, ಉವಾಚ - ಹೇಳಿದಳು. ॥ ೧ ॥ ಕೈಕೇಯೀ - ಕೈಕೇಯಿದೇವಿಯು, ನರಶಾರ್ದೂಲೇ - ಮನುಷ್ಯಶ್ರೇಷ್ಠನಾದ, ರಾಘವೇ - ಶ್ರೀರಾಮ ನಲ್ಲಿ, ವಿಜಿಹ್ಮತಾಂ - ಕೌಟಿಲ್ಯರೂಪವಾದ, ವಿಷಂ - ವಿಷವನ್ನು, ಕ್ಷಿಪ್ತ್ವಾ - ಹಾಕಿ, ನಿರ್ಮುಕ್ತಾ - ಪೊರೆಯಿಂದ ಬಿಡಲ್ಪಟ್ಟ, ಪನ್ನಗೀವ - ಸರ್ಪದಂತೆ, ವಿಚರಿಷ್ಯತಿಹಿ - ಸಂಚರಿಸುವಳಷ್ಟೆ. ॥ ೨ ॥ ಸುಭಗಾ - ಸುಂದರಳಾದ, ಲಬ್ಧಕಾಮಾ - ಹೊಂದಲ್ಪಟ್ಟ ಕೋರಿಕೆಯುಳ್ಳ ಆ ಕೈಕೇಯಿಯು, ರಾಮಂ - ಶ್ರೀರಾಮನನ್ನು, ವಿವಾಸ್ಯ - ಹೊರಡಿಸಿ, ಸಮಾಹಿತಾ - ಸಮಾಧಾನಚಿತ್ತಳಾಗಿ, ವೇಶ್ಮನಿ- ಗೃಹದಲ್ಲಿ, ದುಷ್ಟಾಹಿರಿವ - ಕೆಟ್ಟ ಸರ್ಪದಂತೆ, ಮಾಂ - ನನ್ನನ್ನು, ಭೂಯಃ - ಮತ್ತು, ತ್ರಾಸ ಯಿಷ್ಯತಿ - ಹೆದರಿಸುತ್ತಾಳೆ. ॥ ೩ ॥ ಅಥ - ಬಳಿಕ, ವರಂ - ಶ್ರೇಷ್ಠನಾದ, ಮಮ - ನನ್ನ, ಆತ್ಮಜಂ - ಕುವರನನ್ನು, ದಾಸಂ - ದಾಸನನ್ನಾಗಿ, ಭರತಸ್ಯ - ಭರತನಿಗೆ, ದಾತುಮಪಿ - ಕೊಡು ವದಕ್ಕೂ, ಕಾಮಕಾರಸ್ಸ್ಯಾ - ಸಮ್ಮತವಷ್ಟೆ, ರಾಮಃ - ಶ್ರೀರಾಮನು, ನಗರೇ - ಪಟ್ಟಣದಲ್ಲಿ,

---

ಆ ಬಳಿಕ ಕೌಸಲ್ಯಾದೇವಿಯು ಪುತ್ರ ಶೋಕದಿಂದ ಕಂಗೆಟ್ಟು, ದುಃಖಪೀಡಿತ ನಾಗಿ ಮಂಚದ ಮೇಲೆ ಮಲಗಿದ್ದ ಮಹಾರಾಜನನ್ನು ಕುರಿತು ಹೀಗೆಂದಳು. “ ಒಡೆಯನೆ ! ಕೈಕೇಯಿದೇವಿಯು ಶ್ರೀರಾಮನ ವಿಷಯದಲ್ಲಿ ಕುಟಿಲತೆಯಿಂದ ವಿಷವನ್ನು ಕಾರಿ, ಹೊರೆಗಳೆದ ಹಾವಿನಂತೆ ತಿರುಗುತ್ತಿರುವಳು. ಶ್ರೀರಾಮನನ್ನು ವನಕ್ಕೆ ಹೊರಡಿಸಿ ತನ್ನ ಆಶೆಯನ್ನು ನೆರವೇರಿಸಿಕೊಂಡು ದುಷ್ಟ ಸರ್ಪದಂತೆ ನನ್ನನ್ನೀಗ ಹೆದರಿಸುವುದಕ್ಕಿರುವಳು. ನನ್ನ ಮಗನಾದ ಶ್ರೀರಾಮನಿಗೆ ಪಟ್ಟವನ್ನು ಕಟ್ಟದೆ, ಭರತನಿಗೆ ರಾಜ್ಯಾಭಿಷೇಕವನ್ನು ಮಾಡಿ, ಆಕೆಯು ತೃಪ್ತಳಾಗಿದ್ದಿದ್ದರೆ, ನನ್ನ ಮಗನು ಈ ಅಯೋಧ್ಯಾನಗರದಲ್ಲಿ ಭಿಕ್ಷ ವನ್ನಾದರೂ ಎತ್ತಿಕೊಂಡು ಸುಖವಾಗಿರುತ್ತಿದ್ದನು ! ಅದೂ ಇಲ್ಲದಂತೆ ಮಾಡಿ, ಆತನನ್ನು

ದಾತುಮಪಿ ದಾಸಂ ಮಮಾತ್ಮಜಂ ॥ ೪ ॥ ಪಾತಯಿತ್ವಾತು ಕೈಕೇಯ್ಯಾ
ರಾಮಂ ಸ್ಥಾನಾ ದ್ಯಥೇಷ್ಟತಃ ॥ ಪ್ರದಿಷ್ಟೋ ರಕ್ಷಸಾಂ ಭಾಗಃ ಪರ್ವಣೀವಾ
ಹಿತಾಗ್ನಿನಾ ॥ ೫ ॥ ಗಜರಾಜ ಗತಿರ್ವೀರೋ ಮಹಾಬಾಹು ರ್ಧನುರ್ಧರಃ॥
ವನಮಾವಿಶತೇ ನೂನಂ ಸಭಾರ್ಯಸ್ಸಹ ಲಕ್ಷ್ಮಣಃ ॥ ೬ ॥ ವನೇತ್ವದೃಷ್ಟ
ದುಃಖಾನಾಂ ಕೈಕೇಯ್ಯಾನುಮತೇ ತ್ವಯಾ ॥ ತ್ಯಕ್ತಾನಾಂ ವನವಾಸಾಯ

ಭೈಕ್ಷಂ-ಭಿಕ್ಷಾನ್ನವನ್ನಾದರೂ, ಚರ್ರ-ಭಕ್ಷಿಸುತ್ತ, ಗೃಹೇ-ಮನೆಯಲ್ಲಿ, ವಸೇತ್-ಇರುವನು, (ಗೋ॰)
(ರಾಮಃ-ಶ್ರೀರಾಮನು, ನಗರೇ-ಪಟ್ಟಣದಲ್ಲಿ, ಭೈಕ್ಷಂ-ಭಿಕ್ಷಾಚರಣವನ್ನು ಕುರಿತು, ಚರ್ರ-ಸಂಚರಿ
ಸುತ್ತ, ಗೃಹೇ-ಮನೆಯಲ್ಲಿ, ವಸೇತ್-ಇರುವನು, ಮಮ ನನ್ನ, ಆತ್ಮಜಂ-ಕುಮಾರನನ್ನು, ಭರತಸ್ಯ-
ಭರತನಿಗೆ, ದಾಸಂ-ಚಾಕರನನ್ನಾಗಿ, ದಾತುಂ-ಕೊಡುವದಕ್ಕೆ, ಕಾಮಕಾರಃ-ಇಚ್ಛೆಯು, ಪರಂಸ್ಮ
ಶ್ರೇಷ್ಠವಷ್ಟೆ.) ॥ ೪ ॥ ರಾಮಂ - ಶ್ರೀರಾಮನನ್ನು, ಸ್ಥಾನಾತ್ - ತನ್ನ ಸ್ಥಾನದಿಂದ, ಯಥೇಷ್ಟತಃ -
ಸ್ವೇಚ್ಛೆಯಾಗಿ, ಪಾತಯಿತ್ವಾ - ಕೆಡುಹಿ, ಭಾಗಃ - ಶ್ರೀರಾಮನಿಗೆ ಕೊಡತಕ್ಕ ರಾಜ್ಯಭಾಗವು, ಕೈಕೇ
ಯ್ಯಾಸ್ತು - ಕೈಕೇಯಿದೇವಿಗೆ, ಆಹಿತಾಗ್ನಿನಾ - ಅಗ್ನಿಹೋತ್ರವನ್ನಿಟ್ಟುಕೊಂಡವನಿಂದ, ಪರ್ವಣಿ-
ಪರ್ವಕಾಲದಲ್ಲಿ, ಪ್ರದಿಷ್ಟಃ - ಕೊಡಲ್ಪಟ್ಟ, ಭಾಗಃ - ಹವಿರ್ಭಾಗವು, ರಕ್ಷಸಾಮಿವ - ರಾಕ್ಷಸರಿಗಂತೆ,
ಪ್ರದಿಷ್ಟಃ - ಕೊಡಲ್ಪಟ್ಟಿತು. ॥ ೫ ॥ ಗಜರಾಜಗತಿಃ - ಗಜಶ್ರೇಷ್ಠದಂತೆ ಗಮನಶೀಲನಾದ,
ವೀರಃ - ಶೂರನಾದ, ಧನುರ್ಧರಃ - ಕೋದಂಡಧಾರಿಯಾದ, ಸಭಾರ್ಯಃ - ಭಾರ್ಯೆಯಿಂದೊಡ
ಗೂಡಿದ ಶ್ರೀರಾಮನು, ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿ, ವನಂ - ಅರಣ್ಯವನ್ನು, ನೂನಂ-
ನಿಶ್ಚಯವಾಗಿ, ಆವಿಶತೇ - ಪ್ರವೇಶಿಸುತ್ತಾನೆ. ॥ ೬ ॥ ಕೈಕೇಯ್ಯಾನುಮತೇ - ಕೈಕೇಯಿ
ದೇವಿಯ ಇಷ್ಟದಲ್ಲಿರುವ, ತ್ವಯಾ - ನಿನ್ನಿಂದ, ವನವಾಸಾಯ - ವನವಾಸಕ್ಕೋಸುಗ, ತ್ಯಕ್ತಾನಾಂ-
ಬಿಡಲ್ಪಟ್ಟ, ಅದೃಷ್ಟದುಃಖಾನಾಂ - ಎಂದಿಗೂ ವ್ಯಸನವನ್ನು ಕಾಣದಿರುವ ರಾಮಾದಿಗಳಿಗೆ, ವನೇತು-
ಅರಣ್ಯದಲ್ಲಾದರೆ, ಕಾನ್ವವಸ್ಥಾ - ಯಾವ ದೆಶೆಯು, ಭವಿಷ್ಯತಿ - ಆಗುವದೋ, ರತ್ನಹೀನಾಃ -
ಉತ್ತಮವಸ್ತುಗಳಿಂದ ರಹಿತರಾದ, ತರುಣಾಃ - ಯೌವನಸ್ಥರಾದ, ತೇ - ಆ ಮೂವರೂ, ಫಲ
ಕಾಲೇ - ರಾಜ್ಯಭೋಗಾನುಭವ ಕಾಲದಲ್ಲಿ, ವಿವಾಸಿತಾಃ - ಹೊರಡಿಸಲ್ಪಟ್ಟವರಾದಕಾರಣ,

---

ಸ್ಥಾನಭ್ರಷ್ಟನನ್ನಾಗಿಸಿ, ಆತನಿಗೆ ಸಲ್ಲುವ ರಾಜ್ಯವನ್ನೂ ಕೈಕೇಯಿಗೆ ಕೊಟ್ಟು, ಪರ್ವ ಕಾಲದಲ್ಲಿ ಆಹಿತಾಗ್ನಿಗಳು ದೇವತೆಗಳಿಗೆ ಕೊಡುವ ಹವಿರ್ಭಾಗವನ್ನು ರಾಕ್ಷಸರಿಗೆ ಕೊಡುವಂತೆ, ಆ ನನ್ನ ಮಗನನ್ನು ರಾಕ್ಷಸರ ಪಾಲು ಮಾಡಿದೆ. ಇದು ಬಹಳ ಅನ್ಯಾಯ ವಾದುದು ! ॥ ೧-೫ ॥ ಮದ್ದಾನೆಯ ಗಮನದಂತೆ ಗಮನವುಳ್ಳವನೂ, ಮಹಾ ಭುಜ ಬಲಪರಾಕ್ರಮಶಾಲಿಯೂ, ಕೋದಂಡಪಾಣಿಯೂ ಆದ ಶ್ರೀರಾಮನು ಲಕ್ಷ್ಮಣ ಸೀತೆಯ ರೊಡಗೂಡಿ ಅರಣ್ಯವನ್ನು ಪ್ರವೇಶಿಸುವನಲ್ಲ! ಅಕಟ! ಒಂದು ದಿನವಾದರೂ ವನವಾಸ ದುಃಖವನ್ನರಿಯದ ಅವರು, ಕೈಕೇಯಿದೇವಿಯ ಪ್ರೀತಿಗೋಸುಗವೂ, ಅವಳಿಗೆ ಕೊಟ್ಟ ಮಾತಿಗೆ ತಪ್ಪಬಾರದೆಂಬ ನಿಯಮಕ್ಕೋಸುಗವೂ ನಿನ್ನಿಂದ ವನಕ್ಕೆ ಕಳುಹಲ್ಪಟ್ಟರು. ಅವರ ಗತಿಯೇನಾಗುವುದೋ? ತಿಳಿಯದಲ್ಲ! ಯೌವನಸ್ಥರಾದ ರಾಮ, ಲಕ್ಷ್ಮಣ, ಸೀತೆಯರು, ಸುಖವನ್ನನುಭವಿಸುವ ಕಾಲದಲ್ಲಿ ಅರಣ್ಯಕ್ಕೆ ಕಳುಹಲ್ಪಟ್ಟು, ದ್ರವ್ಯಹೀನರೂ, ಕೃಪಣರೂ

ಕಾನ್ತವಸ್ಥಾ ಭವಿಷ್ಯತಿ ॥ ೭ ॥ ತೇ ರತ್ನಹೀನಾ ಸ್ತರುಣಾಃ ಫಲಕಾಲೇ ವಿವಾ
ಸಿತಾಃ ॥ ಕಥಂ ವತ್ಸ್ಯಂತಿ ಕೃಪಣಾಃ ಫಲಮೂಲೈಃ ಕೃತಾಶನಾಃ ॥ ೮ ॥
ಅಪೀದಾನೀಂ ಸಕಾಲಸ್ಸ್ಯಾ ನ್ಮಮ ಶೋಕಕ್ಷಯ ಶ್ಶಿವಃ ॥ ಸಭಾರ್ಯಂ
ಯತ್ಸಹಭ್ರಾತ್ರಾ ಪಶ್ಯೇಯಮಿಹ ರಾಘವಂ ॥ ೯ ॥ ಸುಪ್ತ್ವೇವೋಪಸ್ಥಿತೌ
ವೀರೌ ಕದಾಯೋಧ್ಯಾಂ ಗಮಿಷ್ಯತಃ ॥ ಯಶಸ್ವಿನೀ ಹೃಷ್ಟಜನಾ ಸೂಚ್ಛ್ರಿತ
ಧ್ವಜಮಾಲಿನೀ ॥ ೧೦ ॥ ಕದಾ ಪ್ರೇಕ್ಷ್ಯ ನರವ್ಯಾಘ್ರೌ ವರಣ್ಯಾತ್ಪುನರಾ
ಗತೌ ॥ ನಂದಿಷ್ಯತಿ ಪುರೀ ಹೃಷ್ಟಾ ಸಮುದ್ರಇವ ಪರ್ವಣಿ ॥ ೧೧ ॥ ಕದಾ

ಕೃಪಣಾಃ - ದೈನ್ಯವುಳ್ಳವರಾಗಿ, ಫಲಮೂಲೈಃ - ಹಣ್ಣುಗಳಿಂದಲೂ ಕಂದಮೂಲಗಳಿಂದಲೂ, ಕೃತಾಶನಾಃ-ಮಾಡಲ್ಪಟ್ಟ ಆಹಾರವುಳ್ಳವರಾಗಿ, ಕಥಂವತ್ಸ್ಯಂತಿ - ಹೇಗೆ ಇರುತ್ತಾರೆ. ಸಭಾರ್ಯಂ-ಹೆಂಡತಿಯಿಂದೊಡಗೂಡಿದ, ರಾಘವಂ - ಶ್ರೀರಾಮನನ್ನು, ಭ್ರಾತ್ರಾಸಹ - ತಮ್ಮನೊಡನೆ, ಯತ್-ಯಾವ ಕಾಲದಲ್ಲಿ, ಇಹ - ಈ ಪಟ್ಟಣದಲ್ಲಿ, ಪಶ್ಯೇಯಂ - ನೋಡುವೆನೋ, ಮಮ - ನನ್ನ, ಶೋಕಕ್ಷಯಃ - ವ್ಯಸನವನ್ನು ನಾಶಮಾಡುತ್ತಿರುವ, ಶಿವಃ - ಮಂಗಳಕರವಾದ, ಸಕಾಲಃ - ಆ ವೇಳೆಯು, ಇದಾನೀಮಪಿ - ಈಗಲೇ, ಸ್ಯಾತ್ - ಬರಲಿ ॥೭-೯॥ (ಯಾ - ಯಾವ ಅಯೋಧ್ಯಾ ಪಟ್ಟಣವು,) ಯಶಸ್ವಿನೀ - ಕೀರ್ತಿಯುಳ್ಳದೋ, ಹೃಷ್ಟಜನಾ - ಸಂತೋಷವಾದ ಜನವುಳ್ಳದೋ, ಸೂಚ್ಛ್ರಿತಧ್ವಜಮಾಲಿನೀ - ಮೇಲಕ್ಕೆತ್ತಿಕಟ್ಟಲ್ಪಟ್ಟ ಧ್ವಜಪಙ್ತಿಗಳುಳ್ಳದೋ, (ತಾಮಯೋಧ್ಯಾಂ-ಅಂಥಾ ಅಯೋಧ್ಯಾಪಟ್ಟಣವನ್ನು ಕುರಿತು,) ವೀರೌ - ಶೂರರಾದ ರಾಮಲಕ್ಷ್ಮಣರು, ಸುಪ್ತ್ವಾ - ಮಲಗಿ, ಉಪಸ್ಥಿತಾವಿವ - ಎಚ್ಚೆತ್ತವರಂತೆ, ಕದಾ - ಯಾವಾಗ, ಗಮಿಷ್ಯತಃ - ಬರುವರೋ. ॥ ೧೦ ॥ ಪುರೀ - ಪಟ್ಟಣಿಗರು, ಅರಣ್ಯಾತ್ - ವನದಿಂದ, ಪುನಃ - ಮತ್ತು, ಆಗತೌ - ಬಂದಿರುವ, ನರವ್ಯಾಘ್ರೌ - ಮನುಷ್ಯಶ್ರೇಷ್ಠರಾದವರನ್ನು, ಪ್ರೇಕ್ಷ್ಯ - ಕಂಡು, ಪರ್ವಣಿ - ದರ್ಶಕಾಲದಲ್ಲಿ, ಸಮುದ್ರಇವ - ಕಡಲಿನಂತೆ, ಕದಾ - ಯಾವಾಗ, ಹೃಷ್ಟಾ - ಸಂತುಷ್ಟರಾಗಿ, ನಂದಿಷ್ಯತಿ -

---

ಆಗಿ, ಫಲ ಮೂಲಗಳಿಂದ ಹೊಟ್ಟೆ ಹೊರೆದುಕೊಂಡು ಹೇಗೆತಾನೆ ಜೀವಿಸಿರುವರು? ಅಯ್ಯೋ! ನನ್ನ ಶೋಕವನ್ನು ಕೊನೆ ಮುಟ್ಟಿಸುವ ಕಾಲವು ಈಗಲೇ ಒದಗೀತೆ? ಹೆಂಡತಿಯಾದ ಸೀತಾದೇವಿಯಿಂದಲೂ, ತಮ್ಮನಾದ ಲಕ್ಷ್ಮಣನಿಂದಲೂ ಒಡಗೂಡಿದ ನನ್ನ ಮಗನಾದ ಶ್ರೀರಾಮಮೂರ್ತಿಯನ್ನು ಯಾವಾಗ ಕಾಣುವೆನೊ? ಯಾವ ಈ ಅಯೋಧ್ಯಾ ನಗರವು, ಕೀರ್ತಿಯುಳ್ಳದಾಗಿಯೂ, ಸಂತೋಷಚಿತ್ತರಾದ ಜನರುಳ್ಳದಾಗಿಯೂ, ಎತ್ತಿ ಕಟ್ಟಲ್ಪಟ್ಟ ಧ್ವಜಗಳುಳ್ಳದಾಗಿಯೂ ಇರುವುದೋ, ಇಂತಹ ಅಯೋಧ್ಯಾ ನಗರವನ್ನು ಕುರಿತು ಮಲಗಿದ್ದು ಎಚ್ಚರಗೊಂಡವರಂತೆ ಅವರು ಯಾವಾಗ ಬರುತ್ತಾರೆಯೊ? ಈ ಅಯೋಧ್ಯಾ ನಗರವೆಲ್ಲ, ಅರಣ್ಯದಿಂದ ಹಿಂತಿರುಗಿ ಬಂದ ಪುರುಷ ಪುಂಗವರಾದ ಅವರೀರ್ವರನ್ನೂ ನೋಡಿ, ಪರ್ವಕಾಲದಲ್ಲ ಸಮುದ್ರವು ಉಕ್ಕುವಂತೆ, ಸಂತೋಷದಿಂದ ಯಾವಾಗ ಹಿಗ್ಗುವುದೋ? ॥ ೭-೧೦ ॥ ಮಹಾ ಭುಜಬಲಪರಾಕ್ರಮಿಯಾದ ಶ್ರೀರಾಮನು, ವೃಷಭವು ಗೋವನ್ನು ಕರೆದುಕೊಂಡು ಬರುವಂತೆ, ಸೀತಾದೇವಿಯನ್ನು ರಥದಲ್ಲಿ ಕುಳ್ಳಿರಿಸಿ

ಯೋಧ್ಯಾಂ ಮಹಾಬಾಹುಃ ಪುರೀಂ ವೀರಃ ಪ್ರವೇಕ್ಷ್ಯತಿ ॥ ಪುರಸ್ಕೃತ್ಯ ರಥೇ ಸೀತಾಂ ವೃಷಭೋ ಗೋವಧೂಮಿವ ॥ ೧೨ ॥ ಕದಾ ಪ್ರಾಣಿಸಹಸ್ರಾಣಿ ರಾಜಮಾರ್ಗೇ ಮಮಾತ್ಮಜೌ ॥ ಲಾಜೈರವಕಿರಿಷ್ಯಂತಿ ಪ್ರವಿಶಂತಾವರಿಂದಮೌ ॥ ೧೩ ॥ ಪ್ರವಿಶಂತೌ ಕದಾಯೋಧ್ಯಾಂ ದ್ರಕ್ಷ್ಯಾಮಿ ಶುಭಕುಂಡಲೌ॥ ಉದಗ್ರಾಯುಧ ನಿಸ್ತ್ರಿಂಶೌ ಸಶೃಂಗಾವಿವ ಪರ್ವತೌ ॥ ೧೪ ॥ ಕದಾ ಸುಮನಸಃ ಕನ್ಯಾ ದ್ವಿಜಾತೀನಾಂ ಫಲಾನಿಚ ॥ ಪ್ರದಿಶಂತ್ಯಃ ಪುರೀಂ ಹೃಷ್ಟಾಃ ಕರಿಷ್ಯಂತಿ ಪ್ರದಕ್ಷಿಣಂ ॥ ೧೫ ॥ ಕದಾ ಪರಿಣತೋ ಬುದ್ಧ್ಯಾ ವಯಸಾಚಾ

ಸಂತೋಷಗೊಳಿಸುವರು? ॥ ೧೧ ॥ ಮಹಾಬಾಹುಃ - ಮಹಾಭುಜಪರಾಕ್ರಮಿಯಾದ, ವೀರಃ - ಶೂರನಾದ ಶ್ರೀರಾಮನು, ಗೋವಧೂಂ - ಗೋವಧುವನ್ನು, ವೃಷಭಇವ - ವೃಷಭದಂತೆ, ಸೀತಾಂ - ಸೀತಾದೇವಿಯನ್ನು, ರಥೇ - ರಥದಲ್ಲಿ, ಪುರಸ್ಕೃತ್ಯ - ಮುಂದಿರಿಸಿಕೊಂಡು, ಕದಾ - ಯಾವಾಗ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವೇಕ್ಷ್ಯತಿ - ಹೊಂದುವನು? ॥ ೧೨ ॥ ಪ್ರಾಣಿಸಹಸ್ರಾಣಿ - ಸಹಸ್ರಾರು ಜೀವರಾಶಿಗಳು, ರಾಜಮಾರ್ಗೇ - ರಾಜವೀಥಿಯಲ್ಲಿ, ಪ್ರವಿಶಂತೌ - ಮನೆಯನ್ನು ಹೊಗುತ್ತಿರುವ, ಅರಿಂದಮೌ - ಶತ್ರುಸಂಹಾರಕರಾದ, ಮಮಾತ್ಮಜೌ - ನನ್ನ ಮಕ್ಕಳನ್ನು, ಲಾಜೈಃ - ಅರಳುಗಳಿಂದ, ಕದಾ - ಯಾವಾಗ, ಅವಕಿರಿಷ್ಯಂತಿ - ಎರಚುವರು? ॥ ೧೩ ॥ ಉದಗ್ರಾಯುಧನಿಸ್ತ್ರಿಂಶೌ, ಉದಗ್ರ - ಉತ್ಕೃಷ್ಟವಾದ, ಆಯುಧ - ಧನುಸ್ಸೂ, ನಿಸ್ತ್ರಿಂಶೌ - ಖಡ್ಗವೂ ಉಳ್ಳವರಾದ ಕಾರಣ, ಸಶೃಂಗೌ-ಶಿಖರಸಹಿತವಾದ, ಪರ್ವತಾವಿವಸ್ಥಿತೌ-ಬೆಟ್ಟಗಳಂತಿರುವ, ಶುಭಕುಂಡಲೌ - ಮಂಗಳಕರವಾದ ಹತ್ತುಕಡಕುಗಳುಳ್ಳ ಮಕ್ಕಳನ್ನು, ಕದಾ - ಯಾವಾಗ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು. ಪ್ರವಿಶಂತೌ - ಹೊಕ್ಕವರನ್ನಾಗಿ, ಪ್ರಕ್ಷ್ಯಾಮಿ - ನೋಡುವೆನು. ॥ ೧೪ ॥ ಕನ್ಯಾದ್ವಿಜಾತೀನಾಂ, ಕನ್ಯಾ - ಹುಡುಗಿಯರ, ದ್ವಿಜಾತೀನಾಂ - ಬ್ರಾಹ್ಮಣರ, ಸುಮನಸಃ - ಹುವ್ವುಗಳನ್ನೂ, ಫಲಾನಿಚ - ಫಲಗಳನ್ನೂ, ಪ್ರದಿಶಂತಃ - ಗ್ರಹಿಸುತ್ತ, ಹೃಷ್ಟಾಃ - ಸಂತೋಷಚಿತ್ತರಾಗಿ, ಪುರೀಂ - ಪಟ್ಟಣವನ್ನು, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕದಾ - ಯಾವಾಗ, ಕರಿಷ್ಯಂತಿ - ಮಾಡುವರು? ॥ ೧೫ ॥ ಬುಧ್ಯಾ - ಮತಿಯಿಂದ, ಪರಿಣತಃ -

ಕೊಂಡು ಅಯೋಧ್ಯೆಯನ್ನು ಯಾವಾಗ ಪ್ರವೇಶಿಸುತ್ತಾನೆಯೊ? ರಾಜಮಾರ್ಗದಲ್ಲಿ ಉತ್ಸವದಿಂದ ಬರುತ್ತಿರುವ ಶತ್ರುಸಂಹಾರಕರಾದ ನನ್ನ ಮಕ್ಕಳನ್ನು ನೋಡಿ, ಈ ಆಯೋಧ್ಯಾಪಟ್ಟಣದ ಜನರು ಸಂತೋಷ ಸಂಭ್ರಮಗಳಿಂದ ಯಾವಾಗ ಅರಳು ಕಾಳುಗಳನ್ನೆರಚುವರೊ? ಅಹಹ! ಉತ್ತಮವಾದ ಧನುಸ್ಸು, ಖಡ್ಗಗಳನ್ನೊಳಗೊಂಡು, ಶಿಖರಗಳಿಂದೊಡಗೂಡಿದ ಪರ್ವತಗಳಂತಿರುವವರೂ, ಶೋಭಾಯಮಾನವಾದ ಕರ್ಣ ಕುಂಡಲ ಸಮನ್ವಿತರೂ ಆದ ಅವರೀರ್ವರೂ ಪುರ ಪ್ರವೇಶ ಮಾಡುವುದನ್ನು ಯಾವಾಗ ನೋಡುತ್ತೇನೆಯೊ? ಅಕ್ಕಟ! ಆ ನನ್ನ ಮುದ್ದುಗುವರರು, ಕನ್ನಿಕೆಯರೀಯುವ ಹೂಗಳನ್ನೂ, ಬ್ರಾಹ್ಮಣರೀಯುವ ಫಲಗಳನ್ನೂ, ಗೃಹಿಸುತ್ತ ಪುರ ಪ್ರದಕ್ಷಣವನ್ನಾವಾಗ ಮಾಡುತ್ತಾರೆಯೋ? ಬುದ್ಧಿಯಲ್ಲಿ ವೃದ್ಧನೂ, ವಯಸ್ಸಿನಲ್ಲಿ ದೇವತೆಗಳಂತೆ ಹೊಳೆಯುತ್ತಿರುವವನೂ, ಧರ್ಮವನ್ನರಿತಿರು

ಮರಪ್ರಭಃ ‖ ಅಭ್ಯುಪೈಷ್ಯತಿ ಧರ್ಮಜ್ಞ ಸ್ತ್ರಿವರ್ಷ ಇವ ಮಾಂ ಲಲನ್ ‖೧೬‖
ನಿಸ್ಸಂಶಯಂ ಮಯಾ ಮನ್ಯೇ ಪುರಾ ವೀರ ಕದರ್ಯಯಾ ‖ ಪಾತುಕಾ
ಮೇಷು ವತ್ಸೇಷು ಮಾತೄಣಾಂ ಶಾತಿತಾಃ ಸ್ತನಾಃ ‖ ೧೭ ‖ ಸಾಹಂ
ಗೌರಿವ ಸಿಂಹೇನ ವಿವತ್ಸಾ ವತ್ಸಲಾ ಕೃತಾ ‖ ಕೈಕೇಯ್ಯಾ ಪುರುಷವ್ಯಾಘ್ರ
ಬಾಲವತ್ಸೇವ ಗೌರ್ಬಲಾತ್ ‖ ೧೮ ‖ ಅಪಿ ತಾವದ್ಗುಣೈರ್ಜುಷ್ಟಂ ಸರ್ವ
ಶಾಸ್ತ್ರ ವಿಶಾರದಂ‖ಏಕಪುತ್ರಾ ವಿನಾ ಪುತ್ರಮಹಂ ಜೀವಿತು ಮುತ್ಸಹೇ ‖೧೯‖

ವೃದ್ಧನಾದ, ವಯಸಾಚ - ವಯಸ್ಸಿನಿಂದಲೂ, ಅಮರಪ್ರಭಃ - ದೇವತೆಗಳ ಪ್ರಕಾಶದಂತೆ ಪ್ರಕಾಶವುಳ್ಳ, ಧರ್ಮಜ್ಞಃ - ಧರ್ಮವನ್ನು ತಿಳಿದ ಶ್ರೀರಾಮನು, ತ್ರಿವರ್ಷ ಇವ - ಮೂರು ವರುಷದ ಹುಡುಗನಂತೆ, ಮಾಂ - ನನ್ನನ್ನು, ಲಲನ್ - ಲಲ್ಲೆಗೈಯುತ್ತ, ಕದಾ - ಯಾವಾಗ, ಅಭ್ಯುಪೈಷ್ಯತಿ - ಬರುವನು. ‖ ೧೬ ‖ ಹೇ ವೀರ - ಎಲೈ ಶೂರಪುರುಷನೇ, ಕದರ್ಯಾ - ನೀಚಳಾದ, ಮಯಾ- ನನ್ನಿಂದ, ಪುರಾ - ಪೂರ್ವಜನ್ಮದಲ್ಲಿ, ವತ್ಸೇಷು - ಹುಡುಗರು, ಪಾತುಕಾಮೇಷು - ಸ್ತನ್ಯಪಾನವನ್ನು ಮಾಡಬೇಕೆಂಬ ಕೋರಿಕೆಯುಳ್ಳವರಾಗಲು, ಮಾತೄಣಾಂ - ತಾಯಿಯರ, ಸ್ತನಾಃ - ಸ್ತನಗಳು, ಶಾತಿತಾಃ - ಬಿಡಿಸಲ್ಪಟ್ಟುವುಗಳಾದವೋ ಏನೋ, ಇತಿ - ಇಂತೆಂದು, ಮನ್ಯೇ - ಎಣಿಸಿಧೇನೆ. ‖ ೧೭ ‖ ಹೇ ಪುರುಷವ್ಯಾಘ್ರ - ಎಲೈ ಮನುಜಶ್ರೇಷ್ಠನೇ, ಬಾಲವತ್ಸಾ, ಬಾಲ - ಎಳೆಯದಾಗಿರುವ, ವತ್ಸಾ - ಕರುವುಳ್ಳ, ಗೌರಿವ - ಆಕಳಂತೆ, ವತ್ಸಲಾ - ವಾತ್ಸಲ್ಯವುಳ್ಳ, ಸಾಹಂ - ಆ ನಾನು, ಸಿಂಹೇ - ಕೇಸರಿಯಿಂದ, ಗೌರಿವ - ಆಕಳಂತೆ, ಬಲಾತ್-ಬಲಾತ್ಕಾರದಿಂದ, ಕೈಕೇಯ್ಯಾ- ಕೈಕೇಯಿಾದೇವಿಯಿಂದ, ವಿವತ್ಸಾ - ಕಂದನಿಲ್ಲದವಳಾಗಿ, ಕೃತಾ - ಮಾಡಲ್ಪಟ್ಟೆನು. ‖ ೧೮ ‖ ತಾವದ್ಗುಣೈಃ - ಪ್ರಪಂಚದೊಳಗೆ ಎಷ್ಟುಗುಣಗಳುಂಟೋ ಅಷ್ಟುಗುಣಗಳಿಂದಲೂ, ಜುಷ್ಟಂ - ವ್ಯಾಪ್ತನಾದ, ಸರ್ವಶಾಸ್ತ್ರವಿಶಾರದಂ - ಸಮಸ್ತ ಶಾಸ್ತ್ರಗಳಲ್ಲಿ ಸಮರ್ಥನಾದ, ಪುತ್ರಂ ವಿನಾ - ಮಗನನ್ನುಳಿದು, ಏಕಪುತ್ರಾ - ಒಬ್ಬನೇಒಬ್ಬ ಮಗನುಳ್ಳ, ಅಹಂ - ನಾನು, ಜೀವಿತುಂ - ಬದುಕುವದಕ್ಕೆ, ನೋತ್ಸಹೇಹಿ - ಉದ್ಯುಕ್ತಳಾಗಲಾರೆನಷ್ಟೆ. ‖ ೧೯ ‖ ಮಹಾಬಾಹುಂ - ಮಹಾ

ವನನೂ ಆದ ಶ್ರೀರಾಮಚಂದ್ರನು ಮೂರು ವರ್ಷದ ಬಾಲಕನಂತೆ ತಾಯಿಯಾದ ನನ್ನಲ್ಲಿ ಲಾಲನೆಯನ್ನು ಹುಟ್ಟಿಸುತ್ತ ಯಾವಾಗ ಬರುತ್ತಾನೆ? ‖ ೧೧-೧೬ ‖ ಎಲೈ ಶೂರನೆ! ನೀಚಳಾದ ನನ್ನಿಂದ, ಪೂರ್ವಜನ್ಮದಲ್ಲಿ ಎಷ್ಟು ಮಂದಿ ಹುಡುಗರು ತಾಯಿಯ ಸ್ತನ್ಯ ಪಾನ ಮಾಡುತ್ತಿರುವಾಗ ಆ ತಾಯಿಯರ ಸ್ತನ್ಯಗಳನ್ನು ಬಿಡಿಸಲ್ಪಟ್ಟರೊ? ಎಳೆಗರುವುಳ್ಳ ಆಕಳಿನಂತೆ ಮಗನಲ್ಲಿ ಬಲು ವಾತ್ಸಲ್ಯವುಳ್ಳ ನಾನು, ಸಿಂಹದಿಂದ, ಆ ಆಕಳು ಕಳೆದು ಹೋದ ಕರುವುಳ್ಳದಾಗಿ ಮಾಡಲ್ಪಡುವಂತೆ, ನಾನು ಕಂದನಿಲ್ಲದವಳಾಗಿ ಮಾಡಲ್ಪಟ್ಟೆನು! ಏಕಪುತ್ರವತಿಯಾದ ನಾನು, ಪ್ರಪಂಚದ ಸಕಲ ಸದ್ಗುಣಗಳಿಂದೊಡಗೂಡಿದವನೂ, ಸಕಲ ಶಾಸ್ತ್ರವೇತ್ತನೂ ಆದ ಆ ಮಗನನ್ನಗಲಿ ಜೀವಿಸಲಾರೆನು. ಮಹಾ ಲಕ್ಷಣ ಲಕ್ಷಿತವಾದ ಭುಜದ್ವಯ ಸಮನ್ವಿತನೂ, ಮಹಾ ಸಾಮರ್ಥ್ಯಶಾಲಿಯೂ, ಪ್ರಿಯ ಪುತ್ರನೂ ಆದ ಆ ಶ್ರೀರಾಮನನ್ನಗಲಿ, ಜೀವಿಸಲು ನನಗೆ ಸಾಮರ್ಥ್ಯವಿಲ್ಲ, ಎಲೈ ರಾಜಶ್ರೇಷ್ಠನೆ! ಪುತ್ರ

ನಹಿ ಮೇ ಜೀವಿತೇ ಕಿಂಚಿತ್ಸಾಮರ್ಥ್ಯ ಮಿಹಕಲ್ಪ್ಯತೇ ॥ ಅಪಶ್ಯಂತ್ಯಾಃ ಪ್ರಿಯಂ ಪುತ್ರಂ ಮಹಾಬಾಹುಂ ಮಹಾಬಲಂ ॥ ೨೦ ॥

ಅಯಂಹಿ ಮಾಂ ದೀಪಯತೇ ಸಮುತ್ಥಿತ
ಸ್ತನೂಜಶೋಕ ಪ್ರಭವೋ ಹುತಾಶನಃ ॥
ಮಹೀಮಿಮಾಂ ರಶ್ಮಿಭಿ ರುತ್ತಮಪ್ರಭೋ
ಯಥಾ ನಿದಾಘೇ ಭಗವಾನ್ ದಿವಾಕರಃ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಚತ್ವಾರಿಂಶಸ್ಸರ್ಗಃ.

ಭುಜಗಳುಳ್ಳ, ಮಹಾಬಲಂ - ಬಹಳ ಸಾಮರ್ಥ್ಯವಂತನಾದ, ಪ್ರಿಯಂ - ಇಷ್ಟನಾದ, ಪುತ್ರಂ - ಮಗನನ್ನು, ಅಪಶ್ಯಂತಃ - ನೋಡದಿರುವ, ಮೇ - ನನ್ನ, ಜೀವಿತೇ - ಬದುಕುವ ವಿಷಯದಲ್ಲಿ, ಸಾಮರ್ಥ್ಯಂ - ಶಕ್ತಿಯು, ಇಹ - ಈಗ, ಕಿಂಚಿತ್ - ಕೊಂಚವಾದರೂ, ನಕಲ್ಪ್ಯತೇಹಿ - ಕಲ್ಪಿಸಲ್ಪಡಲಿಲ್ಲವಷ್ಟೆ. ॥ ೨೦ ॥ ಹೇ ಉತ್ತಮಪ್ರಭೋ - ಎಲೈ ಉತ್ತಮನಾದ ಸ್ವಾಮಿಯೆ, ತನೂಜಶೋಕಪ್ರಭವಃ - ಪುತ್ರವಿಷಯಕ ವ್ಯಸನದಿಂದಹುಟ್ಟಿದ, ಅಯಂಹುತಾಶನಃ - ಈ ಅಗ್ನಿಯು, ನಿದಾಘೇ - ಗ್ರೀಷ್ಮಕಾಲದಲ್ಲಿ, ಸಮುತ್ಥಿತಃ - ಉದಯವಾದ, ಭಗವಾನ್ - ಪೂಜ್ಯನಾದ, ದಿವಾಕರಃ- ಸೂರ್ಯನು, ರಶ್ಮಿಭಿಃ - ಕಿರಣಗಳಿಂದ, ಇಮಾಂಮಹೀಂಯಥಾ - ಈ ಭೂಮಿಯನ್ನಂತೆ, ಮಾಂ - ನನ್ನನ್ನು, ದೀಪಯತೇಹಿ - ಸುಡುತ್ತದಷ್ಟೆ. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಚತ್ವಾರಿಂಶಸ್ಸರ್ಗಃ.

ವಿಷಯುಕವಾದ ವ್ಯಸನದಿಂದುಂಟಾದ ಈ ಸಂತಾಪವು, ಗ್ರೀಷ್ಮಕಾಲದಲ್ಲಿ ಉದಯಿಸಿದ ಸೂರ್ಯನು ಭೂಮಿಯನ್ನು ಸುಡುವಂತೆ ನನ್ನನ್ನು ಸುಡುತ್ತಿರುವುದು." ಎಂಬೀ ಪ್ರಕಾರವಾಗಿ ಆ ಕೌಸಲ್ಯಾದೇವಿಯು ಹೇಳಿ ಪ್ರಲಾಪಿಸಿದಳು. ॥ ೧೭-೨೧ ॥

ಇಂತಿದು ಕೌಸಲ್ಯಾ ಪ್ರಲಾಪ ಕಥಾಕಥನವೆಂಬ ನಲವತ್ತಮೂರನೆಯ ಸರ್ಗವು
ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುಶ್ಚತ್ವಾರಿಂಶಸ್ಸರ್ಗಃ.

ವಿಲಪಂತೀಂ ತಥಾ ತಾಂತು ಕೌಸಲ್ಯಾಂ ಪ್ರಮದೋತ್ತಮಾಂ ॥ ಇದಂ ಧರ್ಮೇ ಸ್ಥಿತಾ ಧರ್ಮ್ಯಂ ಸುಮಿತ್ರಾ ವಾಕ್ಯ ಮಬ್ರವೀತ್ ॥ ೧ ॥ ತವಾರ್ಯೇ ಸದ್ಗುಣ್ಯೈ ರ್ಯುಕ್ತಃ ಪುತ್ರ ಸ್ಸ ಪುರುಷೋತ್ತಮಃ ॥ ಕಿಂ ತೇ ವಿಲಪಿತೇನೈವಂ ಕೃಪಣಂ ರುದಿತೇನವಾ ॥ ೨ ॥ ಯಸ್ತವಾರ್ಯೇ ಗತಃ ಪುತ್ರ ಸ್ತ್ಯಕ್ತ್ವಾ

ಧರ್ಮೇ - ಸ್ವಧರ್ಮದಲ್ಲಿ, ಸ್ಥಿತಾ - ಇರುವ, ಸುಮಿತ್ರಾ - ಸುಮಿತ್ರಾದೇವಿಯು, ತಥಾ-ಆಪರಿಯಾಗಿ, ವಿಲಪಂತೀಂ - ದುಃಖಪಡುತ್ತಿರುವ, ಪ್ರಮದೋತ್ತಮಾಂ - ಸ್ತ್ರೀಯರಲ್ಲಿ ಉತ್ತಮಳಾದ, ತಾಂಕೌಸಲ್ಯಾಂತು - ಆ ಕೌಸಲ್ಯಾದೇವಿಯನ್ನು ಕುರಿತು, ಧರ್ಮ್ಯಂ - ಧರ್ಮಪ್ರಧಾನವಾದ, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದಳು. ॥ ೧ ॥ ಹೇ ಆರ್ಯೇ - ಎಲೌ ಪೂಜ್ಯಳೇ, ಸದ್ಗುಣ್ಯೈಃ - ಕಲ್ಯಾಣಗುಣಗಳಿಂದ, ಯುಕ್ತಃ - ಕೂಡಿರುವ, ತವ - ನಿನ್ನ, ಸಪುತ್ರಃ - ಆ ಮಗನು, ಪುರುಷೋತ್ತಮಃ - ಪುರುಷಶ್ರೇಷ್ಠನು, ಏವಂ - ಹೀಗೆ, ತೇ - ನಿನ್ನ, ವಿಲಪಿತೇನ - ಪ್ರಲಾಪದಿಂದಲೂ, ಕೃಪಣಂ - ದೈನ್ಯವುಳ್ಳ, ರುದಿತೇನವಾ - ರೋದನದಿಂದಲೂ, ಕಿಂ - ಏನು ಪ್ರಯೋಜನ. ॥ ೨ ॥ ಹೇ ಆರ್ಯೇ - ಎಲೌ ಪೂಜ್ಯಳೇ, ಮಹಾಬಲಃ - ಮಹಾ ಪರಾಕ್ರಮಶಾಲಿಯಾದ, ತವ - ನಿನ್ನ, ಯಃಪುತ್ರಃ - ಯಾವ ಮಗನು, ಮಹಾತ್ಮಾನಂ - ಮಹಾ ಪುಣ್ಯವಂತನಾದ, ಪಿತರಂ - ತಂದೆಯನ್ನು, ಸತ್ಯವಾದಿನಂ - ಯಥಾರ್ಥವಚನವುಳ್ಳವನನ್ನಾಗಿ, ಸಾಧು - ಚನ್ನಾಗಿ, ಕುರ್ವನ್ - ಮಾಡುತ್ತ, ರಾಜ್ಯಂ - ರಾಜ್ಯವನ್ನು, ತ್ಯಕ್ತ್ವಾ - ಬಿಟ್ಟು, ಗತಃ - ಹೊರಟುಹೋದನೋ, ಶಿಷ್ಟೈಃ-ಶಿಷ್ಟರಿಂದ, ಆಚರಿತೇ - ಆಚರಿಸಲ್ಪಟ್ಟ, ಪ್ರೇತ್ಯಫಲೋದಯೇ-ಆ ಮುಷ್ಮಿಕಫಲೋತ್ಪತ್ತಿಯುಳ್ಳ, ಧರ್ಮೇ - (೧) ಧರ್ಮದಲ್ಲಿ, ಸಮ್ಯಕ್-ಚನ್ನಾಗಿ, ಸ್ಥಿತಃ - ಇರುವ, ಶ್ರೇಷ್ಠಃ-

---

ಸಚ್ಚರಿತ್ರೆಯುಳ್ಳವಳೂ, ಮಹಾ ಧರ್ಮಿಷ್ಠಳೂ ಆದ ಸುಮಿತ್ರಾದೇವಿಯು ಈ ರೀತಿಯಾಗಿ ವಿಲಪಿಸುತ್ತಿರುವ, ಶ್ರೇಷ್ಠ ಸ್ತ್ರೀಯಾದ ಕೌಸಲ್ಯಾದೇವಿಯನ್ನು ಕುರಿತು ಧರ್ಮಕ್ಕನುಸಾರವಾದ ಈ ನುಡಿಗಳನ್ನಾಡಿದಳು. “ಓ ಪೂಜ್ಯಳೆ! ನಿನ್ನ ಮಗನು ಸದ್ಗುಣಸಂಪನ್ನನು ಮಾತ್ರವಲ್ಲದೆ ಪುರುಷೋತ್ತಮನೂ ಅಹುದು; ಇಂತಹನಿಗೆ ಭಯವೇನು? ನೀನು ಹಂಬಲಿಸಿ ಅಳುವುದರಿಂದೇನು ಪ್ರಯೋಜನ! ಶ್ರೀರಾಮನು ಮಹಾ ಪರಾಕ್ರಮಶಾಲಿಯು; ತನ್ನ ಜನಕನಾದ ದಶರಥ ಮಹೀಪಾಲನ ಆಜ್ಞೆಯನ್ನು ಮೀರಬಾರದೆಂಬುದೇ ಆತನ ಸತ್ಯ ಪ್ರತಿಜ್ಞೆಯು. ಅದನ್ನು ನೆರವೇರಿಸಲೋಸುಗ ರಾಜ್ಯವನ್ನು ತೊರೆದು, ಶಿಷ್ಟ

ಟಿ. (೧) “ಧರ್ಮೇಸ್ಥಿತ ಶ್ಶ್ರೇಷ್ಠಃ” ಎಂಬೆಡೆಯಲ್ಲಿ “ಶ್ರೀರಾಮನು ರಾಜ ಧರ್ಮಗಳನ್ನು ಚನ್ನಾಗಿ ತಿಳಿದವನು. ಶ್ರೇಷ್ಠನೂ ಆಗಿರುವನು. “ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ” ಎಂಬ ಗೀತಾ ವಚನದಂತೆ ತನ್ನ ಪ್ರಜೆಗಳಿಗೆ ಧರ್ಮವನ್ನಾಚರಿಸಿ ಮೇಲ್ಪಂಕ್ತಿಯಾಗಿರುವ ಮಹಾತ್ಮನು. “ಯದ್ವೃತ್ತಾಃ ಸಂತಿರಾಜಾನಸ್ತದ್ವೃತ್ತಾ ಸ್ಸಂತಿಹಿ ಪ್ರಜಾಃ” ಎಂಬ ತತ್ವವನ್ನು ತಿಳಿದವನು” ಎಂದಭಿಪ್ರಾಯ.

ರಾಜ್ಯಂ ಮಹಾಬಲಃ ॥ ಸಾಧು ಕುರ್ವನ್ ಮಹಾತ್ಮಾನಂ ಪಿತರಂ ಸತ್ಯವಾದಿನಂ ॥ ೩ ॥ ಶಿಷ್ಟೈ ರಾಚರಿತೇ ಸಮ್ಯಕ್ಛಶ್ವತ್ಪ್ರೇತ್ಯ ಫಲೋದಯೇ ॥ ರಾಮೋ ಧರ್ಮೇ ಸ್ಥಿತಶ್ಶ್ರೇಷ್ಠೋ ನ ಸ ಶೋಚ್ಯಃ ಕದಾಚನ ॥ ೪ ॥ ವರ್ತತೇ ಚೋತ್ತಮಾಂ ವೃತ್ತಿಂ ಲಕ್ಷ್ಮಣೋಸ್ಮಿನ್ ಸದಾನಘಃ ॥ ದಯಾವಾನ್ ಸರ್ವ ಭೂತೇಷು ಲಾಭಸ್ತಸ್ಯ ಮಹಾತ್ಮನಃ ॥ ೫ ॥ ಅರಣ್ಯವಾಸೇ ಯದ್ದುಃಖಂ ಜಾನತೀ ವೈ ಸುಖೋಚಿತಾ ॥ ಅನುಗಚ್ಛತಿ ವೈದೇಹೀ ಧರ್ಮಾತ್ಮಾನಂ ತವಾತ್ಮಜಂ ॥ ೬ ॥ ಕೀರ್ತಿಭೂತಾಂ ಪತಾಕಾಂ ಯೋ ಲೋಕೇ ಭ್ರಮಯತಿ

ಉತ್ತಮನಾದ, ಸರಾಮಃ - ಆ ಶ್ರೀರಾಮನು, ಕದಾಚನ - ಯಾವಾಗಲೂ, ಶಶ್ವತ್-ಬಾರಿಬಾರಿಗೂ, ನಶೋಚ್ಯಃ - ಶೋಕಿಸತಕ್ಕವನಲ್ಲ. ॥ ೪ ॥ ಅನಘಃ - ನಿರ್ದೋಷನಾದ, ಸರ್ವಭೂತೇಷು - ಸಮಸ್ತ ಭೂತಗಳಲ್ಲಿಯೂ, ದಯಾವಾನ್-ದಯಾವಂತನಾದ, ಲಕ್ಷ್ಮಣಃ (೧) - ಲಕ್ಷ್ಮಣಸ್ವಾಮಿಯು, ಅಸ್ಮಿನ್ - ಈ ಶ್ರೀರಾಮನಲ್ಲಿ, ಉತ್ತಮಾಂ - ಸರ್ವೋತ್ತಮವಾದ, ವೃತ್ತಿಂ - (ಗೋ) ತಂದೆಗೆ ಸಮಾನನೆಂಬ ಬುದ್ಧಿಯಿಂದ ಶುಶ್ರೂಷಾವ್ಯಾಪಾರವನ್ನು, ಸದಾ - ನಿರಂತರವು, ವರ್ತತೇ - ಮಾಡುತ್ತಾನೆ, ಮಹಾತ್ಮನಃ - ಮಹಾ ಪುಣ್ಯವಂತನಾದ, ತಸ್ಯ - ಆ ಲಕ್ಷ್ಮಣನಿಗೆ, ಲಾಭಃ-(ಇದೇ) ಪರಮ ಲಾಭವು. ॥ ೫ ॥ ಅರಣ್ಯವಾಸೇ - ವನವಾಸದಲ್ಲಿ, ಯತ್ - ಯಾವ, ದುಃಖಂ - ವ್ಯಸನವು, ಅಸ್ತಿ - ಇರುವುದೋ, ತತ್ - ಆ ದುಃಖವನ್ನು, ಜಾನತೀ - ತಿಳಿದವಳಾಗಿ, ಸುಖೋಚಿತಾ - ಸುಖಕ್ಕೆಯೋಗ್ಯಳಾದ, ವೈದೇಹೀ - ಸೀತಾದೇವಿಯು, ಧರ್ಮಾತ್ಮಾನಂ - ಧರ್ಮದಲ್ಲಿಯೇ ಮನವುಳ್ಳ, ತವ - ನಿನ್ನ, ಆತ್ಮಜಂ - ಕುವರನನ್ನು, ಅನುಗಚ್ಛತಿ - ಅನುಸರಿಸಿಯೇ ಹೋಗುತ್ತಾಳೆ ॥ ೬ ॥ ಯಃಪ್ರಭುಃ - ಯಾವ ಸ್ವಾಮಿಯಾದ ಶ್ರೀರಾಮನು, ಲೋಕೇ - ಜಗತ್ತಿನಲ್ಲಿ, ಕೀರ್ತಿ

ರಾದವರು ನಡೆಯುವ ಮಾರ್ಗದಲ್ಲಿ ನಡೆಯುತ್ತ, ಇಹಪರ ಸಾಧನಕರವಾದ ಧರ್ಮವನ್ನು ಅನುಷ್ಠಾನ ಮಾಡುತ್ತಿರುವನು. ಇಂತಹ ನಿನ್ನ ಮಗನಾದ ಶ್ರೀರಾಮನ ವಿಷಯವಾಗಿ ನೀನೆಂದಿಗೂ ದುಃಖಪಡತಕ್ಕುದಲ್ಲವೆಂಬುದನ್ನು ತಿಳಿ. ಸರ್ವ ಭೂತಗಳಲ್ಲಿಯೂ ದಯೆಯುಳ್ಳವನೂ, ಪಾಪವಿಹೀನನೂ ಆದ ಲಕ್ಷ್ಮಣ ಸ್ವಾಮಿಯು ಶ್ರೀರಾಮಮೂರ್ತಿಯ ವಿಷಯದಲ್ಲಿ ಪರಮೋತ್ಕೃಷ್ಟವಾದ ಸೇವೆ, ಸತ್ಕಾರಗಳನ್ನು ಮಾಡಿಕೊಂಡಿರುವನು. ಇದಕ್ಕಿಂತಲೂ ಶ್ರೀರಾಮನಿಗೆ ಹೆಚ್ಚಿನ ಸುಖವು ಮತ್ತೊಂದುಂಟೆ! ಸರ್ವ ಕಾಲಗಳಲ್ಲಿಯೂ ಸುಖಪಡುವುದಕ್ಕೇ ಅರ್ಹಳಾಗಿರುವ ಸೀತಾ ರಮಣಿಯು, ಅರಣ್ಯವಾಸ ಸುಖದುಃಖಗಳನ್ನರಿತವಳಾದರೂ, ಸ್ತ್ರೀಯರಿಗೆ ಬಹು ಮುಖ್ಯವಾದ ಪತಿವ್ರತಾ ಧರ್ಮವನ್ನೇ ಅನುಸರಿಸಿದವಳಾಗಿ, ಧರ್ಮಮಾರ್ಗಾವಲಂಬಿಯಾದ ನಿನ್ನ ಕುವರನನ್ನೇ ಅನುಸರಿಸಿ ಹೊರಟಿರುವಳಲ್ಲವೆ? ॥೧-೬॥

ಟಿ. (೧) (ಗೋ) ಶೇಷಸ್ವರೂಪ ಕೈಂಕರ್ಯಯುಕ್ತನಾದ ಲಕ್ಷ್ಮಣನನ್ನು ಕುರಿತು ಶೋಕಿಸಬೇಡ, ಅವನು ತನ್ನ ಕರ್ತವ್ಯವನ್ನು ಮಾಡುತ್ತಾನೆ. (ಮ) ಪಿತೃ ಸಮಾನತ್ವೇನ ಸೇವೆ ಮಾಡುವ ಲಕ್ಷ್ಮಣನನ್ನು ಕುರಿತು ಏನೂ ಶೋಕಿಸಬೇಕಾಗಿಲ್ಲ.

ಪ್ರಭುಃ ॥ ಧರ್ಮಸತ್ಯ ವ್ರತಧನಃ ಕಿಂ ನಪ್ರಾಪ್ತ ಸ್ತವಾತ್ಮಜಃ ॥ ೭ ॥ ವ್ಯಕ್ತಂ ರಾಮಸ್ಯ ವಿಜ್ಞಾಯ ಶೌಚಂ ಮಾಹಾತ್ಮ್ಯ ಮುತ್ತಮಂ ॥ ನಗಾತ್ರ ಮಂಶುಭಿ ಸ್ಸೂರ್ಯಸ್ಸಂತಾಪಯಿತು ಮರ್ಹತಿ ॥ ೮ ॥ ಶಿವಸ್ಸರ್ವೇಷು ಕಾಲೇಷು ಕಾನನೇಭ್ಯೋ ವಿನಿಸ್ಸೃತಃ ॥ ರಾಘವಂ ಯುಕ್ತ ಶೀತೋಷ್ಣ ಸ್ಸೇವಿಷ್ಯತಿ

ಭೂತಾಂ (೧) - ಕೀರ್ತಿಸ್ವರೂಪವಾದ, ಪತಾಕಾಂ - ಧ್ವಜವನ್ನು, ಭ್ರಮಯತಿ - ತಿರುಗಿಸುವನೋ, ಧರ್ಮಸತ್ಯವ್ರತಧನಃ, (ವ) ಧರ್ಮ - ಧರ್ಮವು, ಸತ್ಯ - ಸತ್ಯವು, ವ್ರತ - ನಿಯಮವು, (ಗೋ) ಆಶ್ರಿತಾಪರಿತ್ಯಾಗರೂಪವಾದ ವ್ರತವೇ, ಧನಃ - ಧನವಾಗುಳ್ಳ, ತವ - ನಿನ್ನ, ಆತ್ಮಜಃ - ಕುವರನಾದ, ಸಃ - ಆ ಶ್ರೀರಾಮನು, ಕಿಂ - ಯಾವ ಶ್ರೇಯಸ್ಸನ್ನು, ನಪ್ರಾಪ್ತಃ - ಹೊಂದುವನಾಗುವದಿಲ್ಲ? ॥ ೭ ॥ (೨) ಸೂರ್ಯಃ - ಸೂರ್ಯನು, ರಾಮಸ್ಯ-ಶ್ರೀರಾಮನ, ಶೌಚಂ-ಕಳೆದುಹೋದ ಪಾಪರೂಪ ಶುಚಿತ್ವವನ್ನು. ಉತ್ತಮಂ-ಉತ್ಕೃಷ್ಟವಾದ, ಮಾಹಾತ್ಮ್ಯಂ - (ಗೋ) ಸರ್ವನಿಯಂತೃತ್ವವನ್ನು, ವ್ಯಕ್ತಂ - ಸ್ಪಷ್ಟವಾಗಿ, ವಿಜ್ಞಾಯ - ತಿಳಿದು, ಗಾತ್ರಂ - ಆ ಶ್ರೀರಾಮನ ಶರೀರವನ್ನು, ಅಂಶುಭಿಃ - ಕಿರಣಗಳಿಂದ, ಸಂತಾಪಯಿತುಂ - ಸಂಕಟಗೊಳಿಸುವದಕ್ಕೆ, ನಾರ್ಹತಿ - ಯೋಗ್ಯನಾಗುವದಿಲ್ಲ. ॥ ೮ ॥ ಸರ್ವೇಷುಕಾಲೇಷು - ಪ್ರಾತಃಕಾಲ ಸಾಯಂಕಾಲಗಳಲ್ಲಿ, ಕಾನನೇಭ್ಯಃ-ಅರಣ್ಯದಲ್ಲಿರುವ ಗಿಡಗಳಿಂದ, ವಿನಿಸ್ಸೃತಃ - ಹೊರಟು ಬರುತ್ತಿರುವ, ಯುಕ್ತಶೀತೋಷ್ಣಃ - ಮಿತವಾದ ಶೀತವೂ ಉಷ್ಣವೂ ಉಳ್ಳ, ಸುಖಃ - ಸುಖಕರವಾದ, ಶಿವಃ - ಶುಭಕರವಾದ,

ಧರ್ಮದಲ್ಲಿಯೂ, ಸತ್ಯದಲ್ಲಿಯೂ ಆಸಕ್ತನಾಗಿ, ಮಹಾ ಬಲಿಷ್ಠನೂ, ಕೀರ್ತಿ ಧ್ವಜವನ್ನು ಇಡೀ ಜಗತ್ತಿನಲ್ಲೆಲ್ಲ ತಿರುಗಿಸುತ್ತಲಿರುವ ನಿನ್ನ ಮಗನಾದ ಶ್ರೀರಾಮನಿಗೆ ಯಾವುದು ತಾನೆ ಕೈಗೂಡುವುದಿಲ್ಲ. ಶ್ರೀರಾಮಚಂದ್ರನ ಪರಿಶುದ್ಧತೆಯನ್ನೂ, ಸರ್ವೋತ್ತಮವಾದ ಮಾಹಾತ್ಮ್ಯವನ್ನೂ ಅರಿತು, ಸಾಕ್ಷಾದ್ದಿನಮಣಿಯೂ ಕೂಡ, ಅತ್ಯುಗ್ರವಾದ ತನ್ನ ಕಿರಣಗಳಿಂದಾತನನ್ನು ಭಾಧಿಸುವುದಿಲ್ಲವೆಂಬುದನ್ನು ತಿಳಿವವಳಾಗು. ಇದಲ್ಲದೆ ಮಹಾತ್ಮನಾದೀತನನ್ನು ವನಗಳೆಲ್ಲವೂ ಷಡೃತುಗಳಿಗನುಗುಣವಾದ ಫಲಗಳಿಂದ ಸೇವಿಸುತ್ತವೆಯೆಂಬುದರಲ್ಲಿ ಸಂಶಯವಿಲ್ಲವು. ವಾಯುದೇವನು ಶೈತ್ಯ, ಸೌರಭ್ಯ, ಮಾಂದ್ಯಗಳೆಂಬ ಮೂರೂ ಗುಣಗಳಿಂದೊಡಗೂಡಿದವನಾಗಿ ಮನಸ್ಸಿಗೆ ಹಿತಕರವಾಗಿಯೂ, ತಂಪಾಗಿಯೂ, ಮೃದುವಾಗಿಯೂ, ಪರಿಮಳಯುಕ್ತವಾಗಿಯೂ ಬೀಸತೊಡಗುವನು. ರಾತ್ರಿಯ ಕಾಲಗಳಲ್ಲಿ ಸುಖವಾಗಿ ಪವಳಿಸಿರುವ ಶ್ರೀರಾಮಮೂರ್ತಿಯನ್ನು ಕುಮುದಿನೀ ಪತಿಯಾದ

ಟಿ. (೧) "ಕೀರ್ತಿಭೂತಾಂ ಪತಾಕಾಂ ಭ್ರಮಯತಿ ಪ್ರಭುಃ" ಇಲ್ಲಿ "ತಸ್ಯ ನಾಮ ಮಹದ್ಯಶಃ" ಎಂಬ ಶ್ರುತ್ಯರ್ಥವು ತೋರಲಾಗಿದೆ.

ಟಿ. (೨) "ಸಕಲ ದೇವತೆಗಳೂ ಶ್ರೀರಾಮನ ಆಜ್ಞಾಕಾರಿಗಳೆಂದು ನಿರೂಪಿಸುತ್ತಾಳೆ. ಶ್ರೀರಾಮನ ಅಪಾರ ಮಹಿಮೆಯನ್ನು ತಿಳಿದು ಸೂರ್ಯನು ಆತನನ್ನು ಬಾಧೆಗೊಳಿಸುವುದಿಲ್ಲ" ಎಂದು ಇಲ್ಲಿನ ಅಭಿಪ್ರಾಯ. ಅರ್ಥಾತ್ "ಭೀಷೋದೇತಿ ಸೂರ್ಯಃ" ಎಂಬ ಶ್ರುತ್ಯರ್ಥವು ಹೇಳಲ್ಪಟ್ಟಿದೆ.

ಸುಖೋ ನಿಲಃ ॥೯॥ ಶಯಾನಮನಘಂ ರಾತ್ರೌ ಪಿತೇವಾಭಿ ಪರಿಷ್ವಜನ್॥ ರಶ್ಮಿಭಿ ಸ್ಸಂಸ್ಪೃಶನ್ ಶೀತೈ ಶ್ಚಂದ್ರಮಾಹ್ಲಾದಯಿಷ್ಯತಿ ॥೧೦॥ ದದೌ ಚಾಸ್ತ್ರಾಣಿ ದಿವ್ಯಾನಿ ಯಸ್ಮೈ ಬ್ರಹ್ಮಾ ಮಹೌಜಸೇ ॥ ದಾನವೇಂದ್ರಂ ಹತಂ ದೃಷ್ಟ್ವಾ ತಿಮಿಧ್ವಜ ಸುತಂ ರಣೇ ॥೧೧॥ ಸ ಶೂರಃ ಪುರುಷವ್ಯಾಘ್ರ ಸ್ಸ್ವಬಾಹುಬಲಮಾಶ್ರಿತಃ ॥ ಅಸಂತ್ರಸ್ತೋಽಪ್ಯರಣ್ಯಸ್ಥೋ ವೇಶ್ಮನೀವ ನಿವ ತ್ಸ್ಯತಿ ॥೧೨॥ ಯಸ್ಯೇಷು ಪಥಮಾಸಾದ್ಯ ವಿನಾಶಂ ಯಾಂತಿ ಶತ್ರವಃ ॥

ಅನಿಲಃ(೧) - ಮಂದಮಾರುತವು, ರಾಘವಂ-ಶ್ರೀರಾಮನನ್ನು, ಸೇವಿಷ್ಯತಿ-ಸೇವಿಸುವದು. ॥೯॥ ರಾತ್ರೌ-ರಾತ್ರಿಯಲ್ಲಿ, ಚಂದ್ರಮಾಃ(೨) - ಚಂದ್ರನು, ಶಯಾನಂ-ಪವಳಿಸಿರುವ, ಅನಘಂ-ಪಾಪರಹಿತನಾದ ಶ್ರೀರಾಮನನ್ನು, ಪಿತೇವ - ತಂದೆಯಂತೆ, ಅಭಿಪರಿಷ್ವಜನ್ - ಅಪ್ಪಿಕೊಂಡು, ಶೀತೈಃ - ತಣ್ಣಗಿರುವ, ರಶ್ಮಿಭಿಃ-ಕಿರಣಗಳಿಂದ,ಸಂಸ್ಪೃಶನ್-ಸ್ಪರ್ಶಮಾಡುತ್ತ,ಹ್ಲಾದಯಿಷ್ಯತಿ-ಸಂತೋಷಗೊಳಿಸುತ್ತಾನೆ. ॥೧೦॥ ರಣೇ - ಕಾಳಗದಲ್ಲಿ, ತಿಮಿಧ್ವಜಸುತಂ, (೩) ತಿಮಿಧ್ವಜ - ಶಂಬರಾಸುರನ, ಸುತಂ - ಕುವರನಾದ, ತಂ ದಾನವೇಂದ್ರಂ-ಆ ರಾಕ್ಷಸರಾಜನನ್ನು, ಹತಂ-ಸಂಹೃತನನ್ನಾಗಿ, ದೃಷ್ಟ್ವಾ - ಕಂಡು, ಬ್ರಹ್ಮಾ-ಬ್ರಹ್ಮನು, ಮಹೌಜಸೇ - ಮಹಾಪರಾಕ್ರಮಶಾಲಿಯಾದ, ಯಸ್ಮೈ - ಯಾವ ಶ್ರೀರಾಮನಿಗೆ, ದಿವ್ಯಾನಿ - ದೇವಸಂಬಂಧವಾದ, ಅಸ್ತ್ರಾಣಿ - ಅಸ್ತ್ರಗಳನ್ನು, ದದೌ ಚ - ಕೊಟ್ಟನೋ. ॥೧೧॥ ಶೂರಃ - ವೀರನಾದ, ಸಃಪುರುಷವ್ಯಾಘ್ರಃ - ಅಂತಹ ಶ್ರೀರಾಮನು, ಸ್ವಬಾಹುಬಲಂ - ತನ್ನ ಭುಜ ಪರಾಕ್ರಮವನ್ನ, ಆಶ್ರಿತಃ - ಹೊಂದಿ, ಅರಣ್ಯಸ್ಥೋಽಪಿ - ವನದಲ್ಲಿ ಇದ್ದರೂ, ಅಸಂತ್ರಸ್ತಃ - ಭಯ ವಿಲ್ಲದವನಾಗಿ, ವೇಶ್ಮನೀವ - ಮನೆಯಲ್ಲಿರುವಂತೆಯೇ, ನಿವತ್ಸ್ಯತಿ - ಇರುವನು. (೪) ॥೧೨॥

ಚಂದ್ರಮನು, ತಂದೆಯು ನಿಜಕರ ಯುಗ್ಮದಿಂದ ನಿಜ ಕುಮಾರನನ್ನಪ್ಪಿಕೊಳ್ಳುವಂತೆ, ಶೀತಳ ವಾದ ತನ್ನ ಕಿರಣಗಳಿಂದ ಸ್ಪರ್ಶ ಮಾಡುತ್ತ ಸಂತೋಷಗೊಳಿಸುತ್ತಾನೆ. ॥೬-೧೦॥ ತಿಮಿ ಧ್ವಜರಾಯನ ಕುಮಾರನನ್ನು ರಣರಂಗದಲ್ಲಿ ಗೆದ್ದಾಗ ಚತುರ್ಮುಖ ಬ್ರಹ್ಮನು, ಮಹಾ ತೇಜಸ್ವಿಯಾದ ಯಾವ ಮಹಾ ಪುರುಷನಿಗೆ ದಿವ್ಯಾಸ್ತ್ರಗಳನ್ನಿತ್ತನೋ, ಅಂತಹ ಶೂರಾಗ್ರಣಿ ಯಾದ ಶ್ರೀರಾಮನು ತನ್ನ ಭುಜಬಲದಿಂದಲೇ, ವನದಲ್ಲಿ ಈ ನಮ್ಮ ಅರಮನೆಯಲ್ಲಿರುವಂತೆ ನಿರ್ಭಯನಾಗಿರುತ್ತಾನೆ. ಯಾವ ಮಹಾತ್ಮನ ಬಾಣ ಮಾರ್ಗಕ್ಕೆ ಸಿಕ್ಕಿ ಶತ್ರುಗಳೆಲ್ಲರೂ ಹತ

ಟಿ. (೧) "ಭೀಷಾಸ್ಮಾದ್ವಾತಃ ಪವತೇ" ಎಂದು ಶ್ರುತಿಯಿದೆ.

ಟಿ. (೨) ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ" ಎಂಬ ಶ್ರುತ್ಯ ರ್ಥವೇ ಇದು.

ಟಿ. (೩) "ವೈಜಯಂತಮಿತಿಖ್ಯಾತಂ ಪುರಂ ಯತ್ರ ತಿಮಿಧ್ವಜಃ । ಸ ಶಂಬರ ಇತಿ ಖ್ಯಾತೋ ಶತಮಾಯೋ ಮಹಾ ಸುರಃ ॥" ಇಂತಹ ಶಂಬರಾಸುರನ ಮಗನೇ ರಾಮನಿಂದ ಹತನಾದುದು.

ಟಿ. (೪) "ಯದಾವ್ರಜತಿ ಸಂಗ್ರಾಮಂ ಗ್ರಾಮಾರ್ಥಂ ನಗರಸ್ಯವಾ । ಗತ್ವಾ ಸೌಮಿತ್ರಿ ಸಹಿತಃ ನಾವಿಜಿತ್ಯ ನಿವರ್ತತೇ ॥

ಇಂತಹ ರಾಮನು ಅರಣ್ಯದಲ್ಲಿದ್ದರೂ ನಗರದಲ್ಲಿದ್ದಂತೆಯೇ ಸುಖವಾಗಿರುತ್ತಾನೆ" ಎಂಬು ಇಲ್ಲಿನ ಭಾವ.

ಕಥಂ ನ ಪೃಥಿವೀ ತಸ್ಯ ಶಾಸನೇ ಸ್ಥಾತು ಮರ್ಹತಿ ॥ ೧೩ ॥ ಯಾಶ್ರೀ ಶ್ಶೌರ್ಯಂಚ ರಾಮಸ್ಯ ಯಾಚ ಕಲ್ಯಾಣ ಸತ್ವತಾ ॥ ನಿವೃತ್ತಾರಣ್ಯ ವಾಸಸ್ಸಃ ಕ್ಷಿಪ್ರಂ ರಾಜ್ಯ ಮವಾಪ್ಸ್ಯತಿ ॥ ೧೪ ॥ ಸೂರ್ಯಸ್ಯಾಪಿ ಭವೇತ್ಸೂರ್ಯೋ ಹ್ಯಗ್ನೇ ರಗ್ನಿಃ ಪ್ರಭೋಃ ಪ್ರಭುಃ ॥ ಶ್ರಿಯಶ್ಶ್ರೀಶ್ಚ ಭವೇದಗ್ರ್ಯಾ ಕೀರ್ತಿಃ ಕೀರ್ತ್ಯಾಃ ಕ್ಷಮಾ ಕ್ಷಮಾ ॥ ೧೫ ॥ ದೈವತಂ ದೇವತಾನಾಂಚ ಭೂತಾನಾಂ

ಯಸ್ಯ - ಯಾವ ಶ್ರೀರಾಮನ, ಇಷುಪಥಂ - ಬಾಣಮಾರ್ಗವನ್ನು, ಆಸಾದ್ಯ - ಹೊಂದಿ, ಶತ್ರವಃ- ಹಗೆಗಳು, ವಿನಾಶಂ - ನಾಶವನ್ನು, ಯಾಂತಿ - ಹೊಂದುವರೋ, ತಸ್ಯ - ಅಂತಹ ಶ್ರೀರಾಮನ, ಶಾಸನೇ - ಆಜ್ಞೆಯಲ್ಲಿ, ಪೃಥಿವೀ - ಭೂಮಿಯು, ಸ್ಥಾತುಂ - ನಿಲ್ಲುವದಕ್ಕೆ, ಕಥಂನಾರ್ಹತಿ - ಹೇಗೆ ಯೋಗ್ಯವಲ್ಲ. (೧) ||೧೩|| ರಾಮಸ್ಯ-ಶ್ರೀರಾಮನ, ಶ್ರೀಃ-ಸರ್ವಲಕ್ಷಣ ಸಂಪದವು, ಯಾ- ಯಾವುದೋ, ಶೌರ್ಯಂ - ಗೆಲ್ಲತಕ್ಕ ಸ್ವಭಾವವು, ಯತ್ - ಯಾವುದೋ, ಕಲ್ಯಾಣಸತ್ವತಾ - ಪ್ರಶಸ್ತವಾದ ಬಲವುಂಟಾಗುವಿಕೆಯು, ಯಾ - ಯಾವುದೋ, (ಏತೈಃ - ಇವುಗಳಿಂದ,) ಸರಾಮಃ - ಆ ಶ್ರೀರಾಮನು, ನಿವೃತ್ತಾರಣ್ಯವಾಸಃ, ನಿವೃತ್ತ - ನೆರವೇರಿಸಲ್ಪಟ್ಟ, ಅರಣ್ಯವಾಸಃ - ವನವಾಸವುಳ್ಳ ವನಾಗಿ, ರಾಜ್ಯಂ - ರಾಜ್ಯವನ್ನು, ಅವಾಪ್ಸ್ಯತಿ - ಹೊಂದುವನು. || ೧೪ || ಸೂರ್ಯಸ್ಯಾಪಿ - ಸಮಸ್ತ ಜಗತ್ತಿಗೂ ಪ್ರಕಾಶಕರನಾದ ಸೂರ್ಯನಿಗೂಕೂಡ, ಸೂರ್ಯಃ - ಪ್ರಕಾಶಕನು, ಅಗ್ನೇಃ - ಯಜ್ಞೇಶ್ವರನಿಗೆ, ಅಗ್ನಿಃ - ದಾಹಕನಾಗಿರುವನು, ಪ್ರಭೋಃ - ಸ್ವಾಮಿಯಾದವನಿಗೂ ಕೂಡ, ಪ್ರಭುಃ - ನಿಯಾಮಕನು, ಶ್ರಿಯಃ - ಸಂಪತ್ತಿಗೂ ಕೂಡ, ಶ್ರೀಃ - ಸಂಪತ್ಸ್ವರೂಪನುಗಿರುವನು, ಕೀರ್ತ್ಯಾಃ - ಯಶಸ್ಸಿಗೆ, ಅಗ್ರ್ಯ - ಪ್ರಾಶಸ್ತ್ಯವಾದ, ಕೀರ್ತಿಃ - ಯಶಸ್ಸಾಗಿರುವನು, ಕ್ಷಮಾ ಕ್ಷಮಾ - ಸಮಸ್ತಕ್ಕೂ ಆಧಾರಭೂತವಾದ ಭೂಮಿಗೂ ಕೂಡ ಆಧಾರಪ್ರಾಯನು, ದೈವತಾನಾಂಚ- ದೇವತೆಗಳಿಗೂ ಕೂಡ, ದೈವತಂ - ದೇವತಾಸ್ವರೂಪನು, ಭೂತಾನಾಂಚ - ಭೂತಗಳಿಗೂ ಕೂಡ,

---

ರಾಗಿರುವರೋ, ಅಂತಹ ಗಂಡುಗಲಿಯಾದ ನಿನ್ನ ಮಗನ ಅಧೀನದಲ್ಲಿ ಈ ಭೂಮಂಡಲವು ಇರದಿದ್ದರೆ ಇನ್ನಾವನ ಅಧೀನದಲ್ಲಿದ್ದೀತು? || ೧೧-೧೩ || ಶ್ರೀರಾಮಮೂರ್ತಿಯಲ್ಲಿ ಅನುಪಮಾನವಾದ ತೇಜಸ್ಸೂ, ಶೌರ್ಯವೂ, ಅನಂತಕಲ್ಯಾಣ ಗುಣಗಳೂ ಇರುವುದರಿಂದ ಆತನು ವನವಾಸವನ್ನು ತೀರಿಸಿಕೊಂಡು ಬಂದ ಬಳಿಕ ಈ ಅಯೋಧ್ಯಾ ರಾಜ್ಯಾಧಿಪತ್ಯವನ್ನು ಹೊಂದಿಯೇ ಹೊಂದುತ್ತಾನೆ. ಸೂರ್ಯನಿಗೆ ಸೂರ್ಯನೂ, ಅಗ್ನಿಗೆ ಅಗ್ನಿಯೂ, ಪ್ರಭು ವಿಗೆ ಪ್ರಭುವೂ, ಸಂಪತ್ತಿಗೆ ಸಂಪತ್ಸ್ವರೂಪನೂ, ದೇವತೆಗಳಿಗೆಲ್ಲ ದೇವತಾ ಸ್ವರೂಪನೂ, ಭೂತಗಳಿಗೆಲ್ಲ ಮಹದ್ಭೂತನೂ ಆಗಿರುವ ಶ್ರೀರಾಮಮೂರ್ತಿಗೆ ಈ ದೇಶದಲ್ಲಿಯೇ ಆಗಲಿ, ಪಟ್ಟಣದಲ್ಲಿಯೇ ಆಗಲಿ ಯಾವ ದುರ್ಗುಣಗಳಾದರೂ ಉಂಟೆ? ಯಾವ ರಘುರಾಮನು ಅರಣ್ಯವನ್ನು ಕುರಿತು ಹೊರಟವನಾಗಲು ಇಡೀ ಅಯೋಧ್ಯಾಪುರನಿವಾಸಿಗಳೆಲ್ಲರೂ ಶೋಕ

ಟಿ. (೧) ಭರತನು ರಾಜ್ಯದಲ್ಲಿ ರೂಢಮೂಲನಾಗುವುದರಿಂದ ರಾಮನಿಗೆ ಇನ್ನು ರಾಜ್ಯದಾಶೆಯುಂಟೆ?" ಎಂದು ಕೌಸಲ್ಯಾದೇವಿಯು ಚಿಂತಿಸಿಯಾಳೆಂದು ಈ ಮಾತನ್ನು ಹೇಳಿದ್ದಾಳೆ.

ಭೂತಸತ್ತಮಃ ॥ ತಸ್ಯ ಕೇಹ್ಯಗುಣಾ ದೇವಿ ರಾಷ್ಟ್ರೇ ವಾಪ್ಯಥವಾ ಪುರೇ॥೧೬॥
ಪೃಥಿವ್ಯಾ ಸಹ ವೈದೇಹ್ಯಾ ಶ್ರಿಯಾಚ ಪುರುಷರ್ಷಭಃ ॥ ಕ್ಷಿಪ್ರಂ ತಿಸೃಭಿರೇತಾಭಿ
ಸ್ಸಹರಾಮೋ ಭಿಷೇಕ್ಷ್ಯತಿ ॥೧೭॥ ದುಃಖಜಂ ವಿಸೃಜಂ ತ್ಯಾಸ್ರಂ ನಿಷ್ಕ್ರ
ಮಂತ ಮುದೀಕ್ಷ್ಯಯಂ ॥ ಅಯೋಧ್ಯಾಯಾಂ ಜನಾ ಸ್ಸರ್ವೇ ಶೋಕ ವೇಗ
ಸಮಾಹತಾಃ ॥೧೮॥ ಕುಶ ಚೀರ ಧರಂ ದೇವಂ ಗಚ್ಛಂತ ಮಪರಾಜಿತಂ ॥

ಭೂತಸತ್ತಮಃ - ಮಹದ್ಭೂತನಾಗಿರುವನೂ, ತಸ್ಯ - ಹೀಗಿರುವ ಶ್ರೀರಾಮನಿಗೆ, ರಾಷ್ಟ್ರೇ - ದೇಶದಲ್ಲಾಗಲೀ, ಅಥವ, ಪುರೇವ - ಪಟ್ಟಣದಲ್ಲೇ ಆಗಲಿ, ಅಗುಣಾಃ - ದುರ್ಗುಣಗಳು, ಕೇ-ಯಾವವು, ಅಂದರೆ - ಯಾವುದೂ ಇಲ್ಲ. (೧) ॥೧೬॥ ಯಂ ಯಾವ ಶ್ರೀರಾಮನನ್ನು, ನಿಷ್ಕ್ರಮಂತಂ - ಪಟ್ಟಣದಿಂದಾಚೆಗೆ ಹೊರಡುವವನನ್ನಾಗಿ, ಉದೀಕ್ಷ್ಯ - ಕಂಡು, ಅಯೋಧ್ಯಾಯಾಂ - ಅಯೋಧ್ಯಾ ಪಟ್ಟಣದಲ್ಲಿ, ಸರ್ವೇ - ಸಮಸ್ತರಾದ, ಜನಾಃ - ಜನರು, ಶೋಕವೇಗಸಮಾಹತಾಃ - ಶೋಕಾತಿಶಯದಿಂದ ಹೊಡೆಯಲ್ಪಟ್ಟರೋ, ಪುರುಷರ್ಷಭಃ - ಪುರುಷಶ್ರೇಷ್ಠನಾದ, ಸರಾಮಃ - ಆ ಶ್ರೀರಾಮನು, ದುಃಖಜಂ - ಶೋಕದಿಂದ ಹುಟ್ಟಿದ, ಅಸ್ರಂ - ಕಂಬನಿಯನ್ನು, ವಿಸೃಜಂತ್ಯಾ - ಬಿಡುತ್ತಿರುವ, ಪೃಥಿವ್ಯಾ - ಭೂಮಿಯಿಂದಲೂ, ವೈದೇಹ್ಯಾ - ಸೀತಾದೇವಿಯೊಡನೆಯೂ, ಶ್ರಿಯಾಚ - ವಿಜಯಲಕ್ಷ್ಮಿಯೊಡನೆಯೂ, ಏತಾಭಿಸ್ತಿಸೃಭಿಸ್ಸಹ - ಈ ಮೂವರಿಂದಲೂ ಒಡಗೂಡಿ, ಕ್ಷಿಪ್ರಂ - ಜಾಗ್ರತೆಯಾಗಿ, ಅಭಿಷೇಕ್ಷ್ಯತಿ - ಪಟ್ಟಾಭಿಷಿಕ್ತನಾಗುವನು. ॥೧೭-೧೮॥ ಕುಶಚೀರಧರಂ, ಕುಶ - ದರ್ಭೆಗಳನ್ನೂ, ಚೀರ - ನಾರುಮಡಿಯನ್ನೂ, ಧರಂ - ಧರಿಸಿದವನಾದರೂ, ದೇವಂ - ದೇದೀಪ್ಯನಾಗಿ, ಗಚ್ಛಂತಂ - ಹೋಗುತ್ತಿರುವ, ಅಪರಾಜಿತಂ - ಪರಾಜಯ

ಪೀಡಿತರಾದರೋ, ಅಂತಹ ಪುರುಷ ಶ್ರೇಷ್ಠನಾದ ಆತನ ವಿಷಯದಲ್ಲಿ ನೀನು ಚಿಂತಿಸಬೇಡ. ಆ ಮಹಾತ್ಮನು, ಭೂಮಿಯಿಂದಲೂ, ಸೀತಾದೇವಿಯಿಂದಲೂ, ವಿಜಯಲಕ್ಷ್ಮಿಯಿಂದಲೂ ಒಡಗೂಡಿದವನಾಗಿ ಬಹು ಶೀಘ್ರವಾಗಿಯೇ ಅಭಿಷಿಕ್ತನಾಗುತ್ತಾನೆ. ಅಯೋಧ್ಯಾಪಟ್ಟಣದ ಜನನಿವಹವೆಲ್ಲ, ಪಟ್ಟಣವನ್ನು ತೊರೆದು, ಕುಶಚೀರಗಳನ್ನುಟ್ಟು ವನವಾಸಕ್ಕೆ ಹೊರಟ ಶ್ರೀರಾಮನನ್ನು ಕಂಡು, ದುಃಖದಿಂದ ಕಂಬನಿಗಳನ್ನು ಬಿಡುತ್ತಿರಲು, ನಾರುಮಡಿಯನ್ನುಟ್ಟು, ತಪಸ್ವಿನಿಯಂತೆ ಆತನ ಹಿಂದೆ ಹೋದ ಸೀತಾದೇವಿಯಂತೆ ರಾಜ್ಯಲಕ್ಷ್ಮಿಯೂ

ಟಿ. (೧) ಇಲ್ಲಿ ಅತಿ ರಹಸ್ಯವಾದ ಶ್ರುತ್ಯರ್ಥವು ಪ್ರತಿಪಾದಿತವಾಗಿದೆ. "ತಮೇವ ಭಾಂತಮನು ಭಾತಿ ಸರ್ವಂ" ಎಂಬ ಶ್ರುತ್ಯರ್ಥವೇ ಈ ಶ್ಲೋಕದ ತಾತ್ಪರ್ಯವು. "ಸೂರ್ಯಸ್ಯಾಪಿ ಭವೇತ್ಸೂರ್ಯಃ" ಇಲ್ಲಿ ಪರಬ್ರಹ್ಮಮೂರ್ತಿಯಾದ ಶ್ರೀರಾಮನು ಸವಿತೃಮಂಡಲ ಮಧ್ಯವರ್ತಿಯಾಗಿ ಸೂರ್ಯನಿಗೆ ಸೂರ್ಯನಾಗಿದ್ದಾನೆ ಎಂದು ಭಾವ. ಇಲ್ಲಿನ ಪರಮಾರ್ಥವೇನೆಂದರೆ, "ಸ್ಫಟಿಕ ಮತ್ತು ಕನ್ನಡಿಯೊಳಗಿನ ದೀಪದಂತೆ ಪ್ರಕಾಶಗೊಳಿಸುತ್ತಾನೆ" ಎಂದು ಇದಕ್ಕೆ "ಸ್ಫಟಿಕ ಮುಕುರಾಂತಸ್ಥಿತ ದೀಪನ್ಯಾಯ" ಎಂದು ಹೆಸರು. "ಅಗ್ನೇರಗ್ನಿಃ" "ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ" ಎಂದು ಹೇಳಿರುವುದರಿಂದ ಅಗ್ನಿಯ ದಾಹಕತ್ವ ಗುಣವೂ ಆವನ ಸಂಕಲ್ಪಕ್ಕೆ ಅಧೀನವೆಂದು ತಾತ್ಪರ್ಯ. "ಕ್ಷಮಾ ಕ್ಷಮಾ" ಇಲ್ಲಿ ಭೂಮಿಗೆ ಆಧಾರಭೂತನಾದವನು ಎಂದು ಅರ್ಥ ವಿವೇಚನೆ. "ಯಸ್ಮಿನ್ದ್ಯೌಃ ಪೃಥಿವೀ ಚಾಂತರಿಕ್ಷಂ" ಎಂದು ಶ್ರುತಿ ಪ್ರಮಾಣವಿರುತ್ತದೆ. "ದೇವತಾನಾಂಚ ದೈವತಂ" ಇದು "ತಂ ದೇವತಾನಾಂ ಪರಮಂಚ ದೈವತಂ" ಎಂಬ ಶ್ರುತಿಯ ಪ್ರತಿಬಿಂಬ.

ಸೀತೇವಾನುಗತಾ ಲಕ್ಷ್ಮೀ ಸ್ತಸ್ಯ ಕಿನ್ನಾಮ ದುರ್ಲಭಂ ॥೧೯॥ ಧನು ರ್ಗ್ರಹವರೋ ಯಸ್ಯ ಬಾಣಖಡ್ಗಾಸ್ತ್ರಭೃತ್ಸ್ವಯಂ ॥ ಲಕ್ಷ್ಮಣೋ ವ್ರಜತಿ ಹ್ಯಗ್ರೇ ತಸ್ಯ ಕಿಂನಾಮ ದುರ್ಲಭಂ ॥೨೦॥ ನಿವೃತ್ತ ವನವಾಸಂ ತಂ ದೃಷ್ಟ್ವಾಸಿ ಪುನರಾಗತಂ ॥ ಜಹಿ ಶೋಕಂಚ ಮೋಹಂಚ ದೇವಿ ತಸ್ಯಂ ಬ್ರವೀಮಿ ತೇ ॥೨೧॥ ಶಿರಸಾ ಚರಣಾವೇತೌ ವಂದಮಾನ ಮನಿಂದಿತೇ ॥ ಪುನ ರ್ದ್ರಕ್ಷ್ಯಸಿ ಕಲ್ಯಾಣಿ ಪುತ್ರಂ ಚಂದ್ರ ಮಿವೋದಿತಂ ॥೨೨॥ ಪುನಃ ಪ್ರವಿಷ್ಟಂ ದೃಷ್ಟ್ವಾ ತಮಭಿಷಿಕ್ತಂ ಮಹಾಶ್ರಿಯಂ ॥ ಸಮುತ್ಸ್ರಕ್ಷ್ಯಸಿ ನೇತ್ರಾಭ್ಯಾಂ

ವನ್ನು ಹೊಂದದಿರುವ ಶ್ರೀರಾಮುನನ್ನು, ಲಕ್ಷ್ಮೀರಿವಸ್ಥಿತಾ - ಲಕ್ಷ್ಮೀದೇವಿಯಂತಿರುವ, ಸೀತಾ - ಸೀತಾದೇವಿಯು, ಅನುಗತಾ - ಅನುಸರಿಸಿಹೋದಳೋ. ॥೧೯॥ ಯಸ್ಯ - ಯಾವ ಶ್ರೀರಾಮನ ಮುಂದುಗಡೆ, ಧನುರ್ಗ್ರಹವರಃ - ಶೂರರೊಳಗೆ ಶ್ರೇಷ್ಠನಾದ, ಬಾಣಖಡ್ಗಾಸ್ತ್ರಭೃತ್ - ಸರಳುಗಳನ್ನೂ, ಖಡ್ಗಗಳನ್ನೂ, ಅಸ್ತ್ರಗಳನ್ನೂ ಧರಿಸಿರುವ, ಲಕ್ಷ್ಮಣಃ - ಲಕ್ಷ್ಮಣನು, ಸ್ವಯಂ - ತಾನು, ವ್ರಜತಿ - ಹೋಗುವನೋ, ತಸ್ಯ - ಅಂಥಾ ಶ್ರೀರಾಮನಿಗೆ, ಕಿನ್ನಾಮದುರ್ಲಭಂ-ಅಸಾಧ್ಯವೆಂಬುದು ಯಾವುದು? ॥೨೦॥ ಹೇ ದೇವೀ - ಎಲೌ ಅರಸಿಯೇ, ನಿವೃತ್ತವನವಾಸಂ, ನಿವೃತ್ತ - ನೆರವೇರಿಸಲ್ಪಟ್ಟ, ವನವಾಸಂ - ಅರಣ್ಯವಾಸವುಳ್ಳ, ತಂ - ಆ ಶ್ರೀರಾಮುನನ್ನು, ಪುನಃ - ಮತ್ತು, ಆಗತಂ-ಬಂದವನನ್ನಾಗಿ, ದೃಷ್ಟ್ವಾ-ನೋಡತಕ್ಕವಳು, ಅಸಿ-ಆಗಿರುವೆಯೋ, (ಆದುದರಿಂದ) ಶೋಕಂಚ-ದುಃಖವನ್ನೂ, ಮೋಹಂಚ - ಮೋಹವನ್ನೂ ಕೂಡ, ಜಹಿ - ಜಯಿಸು, ತೇ - ನಿನಗೆ, ಸತ್ಯಂ - ಯಥಾರ್ಥವಾಗಿ, ಬ್ರವೀಮಿ - ಹೇಳುತ್ತೇನೆ. ॥೨೧॥ ಹೇ ಅನಿಂದಿತೇ - ಎಲೌ ನಿರ್ದೋಷಳೇ, ಹೇ ಕಲ್ಯಾಣಿ - ಎಲೌ ಸುಂದರವಂತಳೇ, ಶಿರಸಾ - ಮಂಡೆಯಿಂದ, ಏತೌಚರಣೌ - ಈ ಪರಿದೃಶ್ಯಮಾನವಾದ ಪಾದಗಳನ್ನು ಕುರಿತು, ವಂದಮಾನಂ - ನಮಸ್ಕರಿಸುತ್ತಿರುವ, ಪುತ್ರಂ - ಮಗನನ್ನು, ಉದಿತಂ - ಉದಯಿಸಿರುವ, ಚಂದ್ರಮಿವ - ಚಂದ್ರನನ್ನಂತೆ, ಪುನಃ - ಮತ್ತು, ದ್ರಕ್ಷ್ಯಸಿ - ನೋಡುವೆ. ॥೨೨॥ ಪುನಃ - ಮತ್ತು, ಪ್ರವಿಷ್ಟಂ - ಪ್ರವೇಶಿಸಿದ, ಅಭಿಷಿಕ್ತಂ - ಪಟ್ಟಾಭಿಷಿಕ್ತನಾದ ಕಾರಣ, ಮಹಾಶ್ರಿಯಂ - ಮಹಾ ರಾಜಲಕ್ಷ್ಮಿಯುಳ್ಳ, ತಂ - ಆ ಶ್ರೀರಾಮುನನ್ನು, ದೃಷ್ಟ್ವಾ - ಕಂಡು, ನೇತ್ರಾಭ್ಯಾಂ - ಕಣ್ಣುಗಳಿಂದ, ಆನಂದಜಂ - ಸಂತೋಷದಿಂದ ಹುಟ್ಟಿದ,

ಆತನೊಡನೆಯೇ ಹೊರಟಳು. ॥೧೮-೧೯॥ ಬಿಲ್ಲಂಬುಗಳನ್ನೂ, ಖಡ್ಗವನ್ನೂ ಧರಿಸಿದ ಲಕ್ಷ್ಮಣಸ್ವಾಮಿಯು ಅಗ್ನಿಸ್ವರೂಪನಾಗಿ ಆತನ ಮುಂದೆ ಹೊರಟಿದ್ದಾನೆ. ಇಂತಹ ಶ್ರೀರಾಮಮೂರ್ತಿಗೆ ಇದಿರಾಗುವವರು ಈ ಲೋಕದಲ್ಲಾರಾದರೂ ಉಂಟೆ? ವನವಾಸದಿಂದ ಹಿಂತಿರುಗಿ ಬಂದ ರಘುವೀರನನ್ನು ನೀನು ನೋಡುತ್ತೀಯೆ; ಈ ಶೋಕ ಮೋಹಗಳನ್ನು ತೊರೆ; ನನ್ನ ಮಾತನ್ನು ಸತ್ಯವೆಂದೆಣಿಸು. ಓ ಪೂಜ್ಯಳೆ! ಶಿರಸ್ಸಿನಿಂದ ವಂದನೆಯಂ ಗೈಯ್ಯುತ್ತಿರುವ ಆ ಶ್ರೀರಾಮನು ಹುಣ್ಣಿಮೆಯಲ್ಲಿ ಉದಯಿಸಿದ ಚಂದ್ರನಂತೆ ನಿನಗೆ ಕಾಣುತ್ತಾನೆ. ಅದನ್ನು ನೀನು ನೋಡುತ್ತೀಯೆ. ಪುರ ಪ್ರವೇಶವನ್ನು ಮಾಡಿ, ಪಟ್ಟಾಭಿಷಿಕ್ತನಾಗಿ ಮಹದೈಶ್ವರ್ಯ ಸಮನ್ವಿತನಾಗಿರುವ ಆ ಶ್ರೀರಾಮಮೂರ್ತಿಯನ್ನು ಕಂಡು ಆನಂದಬಾಷ್ಪಗಳನ್ನು ಸುರಿಸು

ಕ್ಷಿಪ್ರಮಾನಂದಜಂ ಪಯಃ ॥ ೨೩ ॥ ಮಾ ಶೋಕೋ ದೇವಿ ದುಃಖಂವಾ ನರಾಮೇ ದೃಶ್ಯತೇಽಶಿವಂ ॥ ಕ್ಷಿಪ್ರಂ ದ್ರಕ್ಷ್ಯಸಿ ಪುತ್ರಂ ತ್ವಂ ಸಸೀತಂ ಸಹ ಲಕ್ಷ್ಮಣಂ ॥ ೨೪ ॥ ತ್ವಯಾ ಶೇಷೋ ಜನಶ್ಚೈವ ಸಮಾಶ್ವಾಸ್ಯೋ ಯದಾ ನಘೇ ॥ ಕಿಮಿದಾನೀ ಮಿದಂ ದೇವಿ ಕರೋಷಿ ಹೃದಿ ವಿಕ್ಲಬಂ ॥ ೨೫ ॥ ನಾರ್ಹಾ ತ್ವಂ ಶೋಚಿತುಂ ದೇವಿ ಯಸ್ಯಾಸ್ತೇ ರಾಘವ ಸ್ಸುತಃ ॥ ನಹಿ ರಾಮಾತ್ಪರೋ ಲೋಕೇ ವಿದ್ಯತೇ ಸತ್ಪಥೇ ಸ್ಥಿತಃ ॥ ೨೬ ॥ ಅಭಿವಾದಯ ಮಾನಂ ತಂ ದೃಷ್ಟ್ವಾ ಸ ಸುಹೃದಂ ಸುತಂ ॥ ಮುದಾಶ್ರು ಮೋಕ್ಷಸೇ ಕ್ಷಿಪ್ರಂ ಮೇಘ

ಪಯಃ - ಉದಕವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಸಮುತ್ಸ್ರಕ್ಷ್ಯಸಿ - ಬಿಡುವೆ. ॥ ೨೩ ॥ ಹೇ ದೇವೀ - ಎಲೌ ಅರಸಿಯೇ, ರಾಮೇ - ಶ್ರೀರಾಮನವಿಷಯದಲ್ಲಿ, ಅಶಿವಂ - ಅಶುಭವು, ನದೃಶ್ಯತೇ - ಕಾಣುವುದಿಲ್ಲ, ಶೋಕಃ - ಪ್ರಲಾಪಮುಂತಾದು, ದುಃಖಂವಾ - ಮನೋವ್ಯಥೆಯಾಗಲೀ, ಮಾ - ಮಾಡಬಾರದು, ಕ್ಷಿಪ್ರಂ - ಜಾಗ್ರತೆಯಾಗಿ, ತ್ವಂ - ನೀನು, ಸಸೀತಂ - ಜಾನಕೀ ಸಹಿತನಾದ, ಸಹಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ಪುತ್ರಂ - ಮಗನನ್ನು, ದ್ರಕ್ಷ್ಯಸಿ - ನೋಡುವೆ. ॥ ೨೪ ॥ ಹೇ ದೇವಿ - ಎಲೌ ತಾಯೇ, ಹೇ ಅನಘೇ - ಎಲೌ ದೋಷವಿಲ್ಲದವಳೇ, ಯದಾ - ಯಾವ ವ್ಯಸನಸಂಭವಿಸಿದರೂ, ತ್ವಯಾ - ನಿನ್ನಿಂದ, ಶೇಷಃ - ಉಳಿದ, ಜನಶ್ಚೈವ - ಜನವೆಲ್ಲ, ಸಮಾಶ್ವಾಸ್ಯಃ - ಸಮಾಧಾನ ಪಡಿಸತಕ್ಕದು, ಇದಾನೀಂ - ಈಗ, ಇದಂವಿಕ್ಲಬಂ - ಈ ಚಪಲಚಿತ್ತತೆಯನ್ನು, ಹೃದಿ - ಮನದಲ್ಲಿ, ಕಿಂಕರೋಷಿ - ಏಕೆಮಾಡುವೆ. ॥ ೨೫ ॥ ಹೇ ದೇವಿ- ಎಲೌ ತಾಯಿಯೆ, ಯಸ್ಯಾಸ್ತೇ - ಯಾವ ನಿನಗೆ, ರಾಘವಃ - ಶ್ರೀರಾಮನು, ಸುತಃ - ಕುವರನೋ, ತ್ವಂ - ಅಂತಹ ನೀನು, ಶೋಚಿತುಂ - ದುಃಖಿಸಲು, ನಾರ್ಹಾ - ಯೋಗ್ಯಳಲ್ಲ, ಲೋಕೇ - ಜಗತ್ತಿನಲ್ಲಿ, ರಾಮಾತ್ - ಶ್ರೀರಾಮನಿಗಿಂತಲೂ, ಪರಃ - ಮತ್ತೊಬ್ಬನು, ಸತ್ಪಥೇ - ಸನ್ಮಾರ್ಗದಲ್ಲಿ, ಸ್ಥಿತಃ - ಇರುವನು, ನವಿದ್ಯತೇಹಿ - ಕಾಣುವದಿಲ್ಲವಷ್ಟೆ. ॥ ೨೬ ॥ ಅಭಿವಾದಯಮಾನಂ - ನಮಸ್ಕರಿಸುತ್ತಿರುವ, ಸಸುಹೃದಂ - ಸ್ನೇಹಿತರಿಂದೊಡಗೂಡಿದ, ತಂಸುತಂ - ಆ ನಿನ್ನ ಮಗನನ್ನು, ದೃಷ್ಟ್ವಾ - ಕಂಡು, ವಾರ್ಷಿಕೀ - ವರ್ಷಾಕಾಲದಲ್ಲಿರುವ, ಮೇಘಲೇಖೇವ - ಮೇಘಪಙ್ಕ್ತಿಯಂತೆ, ಕ್ಷಿಪ್ರಂ - ಜಾಗ್ರತೆಯಾಗಿ, ಮುದಾ - ಸಂತೋಷದಿಂದ, ಅಶ್ರು - ಕಂಬನಿಯನ್ನು, ಮೋಕ್ಷ್ಯಸೇ -

ತ್ತೀಯೆ. ಚಿಂತಿಸಬೇಡ. ಶ್ರೀರಾಮನ ವಿಷಯದಲ್ಲಿ ಅಮಂಗಳವೆಂಬುದಾವುದೂ ಕಾಣುವುದಿಲ್ಲ. ಆದುದರಿಂದ ನಿನ್ನೀ ಪ್ರಲಾಪವನ್ನೂ, ಮನೋವ್ಯಥೆಯನ್ನೂ ನಿಲ್ಲಿಸುವವಳಾಗು. ನೀನು ಸೀತಾ ಸಹಿತನಾಗಿಯೂ, ಲಕ್ಷ್ಮಣ ಸಮೇತನಾಗಿಯೂ ಇರುವ ನಿನ್ನ ಮಗನನ್ನು ಖಂಡಿತವಾಗಿಯೂ ಜಾಗ್ರತೆಯಾಗಿ ನೋಡುತ್ತೀಯೆ. ಎಲೌ ಮಹಾರಾಣಿಯೆ! ನೀನು ಜ್ಯೇಷ್ಠ ಮಹಿಷಿಯು; ನೀನು ಎಲ್ಲರನ್ನೂ ಸಮಾಧಾನಗೊಳಿಸಬೇಕು. ॥ ೨೦-೨೫ ॥ ಇಂತಹ ನೀನೇ ದುಃಖಪಡುತ್ತಿರುವೆಯಲ್ಲ. ಆಶ್ಚರ್ಯ! ಈ ಜಗತ್ತಿನಲ್ಲಿ ನಿನ್ನ ಕುಮಾರನಂತಹ ಸನ್ಮಾರ್ಗಪ್ರವರ್ತಕನು ಮತ್ತೊಬ್ಬನಿರುವುದಿಲ್ಲ. ಇಂತಹ ಪುತ್ರರತ್ನನನ್ನು ಪಡೆದ ನೀನು ಅಳುವುದು ಯುಕ್ತವಾಗಿರುವುದೆ? ದುಃಖಿಸಬೇಡ; ಸಮಾಧಾನವನ್ನು ಹೊಂದು.

ಲೇಖೇವ ವಾರ್ಷಿಕೀ ॥ ೨೭ ॥ ಪುತ್ರಸ್ತೇ ವರದಃ ಕ್ಷಿಪ್ರಮಯೋಧ್ಯಾಂ ಪುನರಾಗತಃ ॥ ಪಾಣಿಭ್ಯಾಂ ಮೃದುಪೀನಾಭ್ಯಾಂ ಚರಣೌ ಪೀಡಯಿಷ್ಯತಿ॥೨೮॥ ಅಭಿವಾದ್ಯ ನಮಸ್ಯಂತಂ ಶೂರಂ ಸಸುಹೃದಂ ಸುತಂ ॥ ಮುದಾಸ್ರೈಃ ಪ್ರೋಕ್ಷ್ಯಸಿ ಪುನರ್ಮೇಘರಾಜಿ ರಿವಾಚಲಂ ॥ ೨೯ ॥

ಆಶ್ವಾಸಯಂತೀ ವಿವಿಧೈಶ್ಚ ವಾಕ್ಯೈ
ರ್ವಾಕ್ಯೋಪಚಾರೇ ಕುಶಲಾನವದ್ಯಾ ॥
ರಾಮಸ್ಯ ತಾಂ ಮಾತರ ಮೇವಮುಕ್ತ್ವಾ
ದೇವೀ ಸುಮಿತ್ರಾ ವಿರರಾಮ ರಾಮಾ ॥ ೩೦ ॥

ಬಿಡುವೆ. ॥ ೨೭ ॥ ವರದಃ - ವರದಾಯಕನಾದ, ತೇಪುತ್ರಃ - ನಿನ್ನ ಮಗನು, ಕ್ಷಿಪ್ರಂ - ತ್ವರೆಯಾಗಿ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪುನರಾಗತಃ - ಹಿಂತಿರುಗಿಬಂದು, ಮೃದುಪೀನಾಭ್ಯಾಂ - ಮೃದುವಾಗಿಯೂ ಪುಷ್ಟವಾಗಿಯೂ ಇರುವ, ಪಾಣಿಭ್ಯಾಂ - ಕೈಗಳಿಂದ, ಚರಣೌ - ಪಾದಗಳನ್ನು, ಪೀಡಯಿಷ್ಯತಿ - ಒತ್ತುವನು. ॥ ೨೮ ॥ ಅಭಿವಾದ್ಯನಮಸ್ಯಂತಂ- ಪ್ರವರೋಚ್ಚಾರಣಪೂರ್ವಕವಾಗಿ ನಮಸ್ಕರಿಸುತ್ತಿರುವ, ಶೂರಂ - ವೀರನಾದ, ಸಸುಹೃದಂ-ಸ್ನೇಹಿತ ರಿಂದೊಡಗೂಡಿದ, ಸುತಂ - ಕುವರನನ್ನು, ಅಚಲಂ - ಪರ್ವತವನ್ನು, ಮೇಘರಾಜಿರಿವ - ಮೇಘಗಳ ಪಙ್ತ್ತಿಯಂತೆ, ಮುದಾಸ್ರೈಃ - ಆನಂದಬಾಷ್ಪಗಳಿಂದ, ಪ್ರೋಕ್ಷ್ಯಸಿ - ಪ್ರೋಕ್ಷಿಸುವಿ. ॥ ೨೯ ॥ ವಾಕ್ಯೋಪಚಾರೇ - ವಾಕ್ಯರೂಪವಾದ ಉಪಚಾರದಲ್ಲಿ, ಕುಶಲಾ - ಚತುರಳಾದ, ಅನವದ್ಯಾ - ನಿರ್ದೋಷಳಾದ, ರಾಮಾ - ಸಂತೋಷಕರಳಾದ, ಸುಮಿತ್ರಾದೇವೀ - ಸುಮಿತ್ರಾದೇವಿಯು, ವಿವಿಧೈಃ - ನಾನಾಬಗೆಗಳಾದ, ವಾಕ್ಯೈಶ್ಚ - ಮಾತುಗಳಿಂದಲೂ, ಆಶ್ವಾಸಯಂತೀ - ಸಮಾಧಾನ ಗೊಳಿಸುತ್ತ, ರಾಮಸ್ಯ - ಶ್ರೀರಾಮನ, ತಾಂಮಾತರಂ - ಆ ತಾಯಿಯನ್ನು ಕುರಿತು, ಏವಂ - ಹೀಗೆಂದು, ಉಕ್ತ್ವಾ - ಹೇಳಿ, ವಿರರಾಮ - ಸುಮ್ಮನಾದಳು. ॥ ೩೦ ॥ ತಲ್ಲಕ್ಷ್ಮಣಮಾತೃ ವಾಕ್ಯಂ - ಆ ಸುಮಿತ್ರಾದೇವಿಯ ವಾಕ್ಯವನ್ನು, ನಿಶಮ್ಯ - ಕೇಳಿ, ನರದೇವಪತ್ನ್ಯಾಃ - ಮಹಾ ರಾಜನಪತ್ನಿಯಾದ, ರಾಮಸ್ಯಮಾತುಃ - ಶ್ರೀರಾಮನ ತಾಯಿಯಾದ ಕೌಸಲ್ಯಾದೇವಿಯ, ಶರೀರೇ -

---

ನಮಸ್ಕರಿಸುತ್ತಲೂ, ಮಿತ್ರರಿಂದೊಡಗೂಡಿಯೂ ಇರುವ ನಿನ್ನ ಮಗನನ್ನು ಕಂಡು, ವರ್ಷಾ ಕಾಲದಲ್ಲಿ ಮೇಘ ವೃಂದವು ಮಳೆಯನ್ನು ಸುರಿಸುವಂತೆ ಪುತ್ರವಾತ್ಸಲ್ಯವುಳ್ಳ ನೀನು ಆನಂ ದಾಶ್ರುಗಳನ್ನು ಸುರಿಸುತ್ತೀಯೆ. ವರದನಾದ ನಿನ್ನ ಮಗನು ವನದಿಂದ ಜಾಗ್ರತೆಯಾಗಿ ಹಿಂತಿರುಗಿ ಬಂದು ಕೋಮಲವಾದ ತನ್ನ ಕೈಗಳಿಂದ ನಿನ್ನ ಪಾದಸೇವೆಯನ್ನು ಮಾಡು ತ್ತಾನೆ. ಸ್ನೇಹಿತರೊಡಗೂಡಿ ನಿನಗೆ ವಂದನೆಗಳನ್ನರ್ಪಿಸುತ್ತಿರುವ ಆ ಶ್ರೀರಾಮನನ್ನು ನೋಡಿ ಮೇಘವು ಪರ್ವತದಲ್ಲಿ ಮಳೆಗರೆಯುವಂತೆ ಆನಂದಬಾಷ್ಪಗಳನ್ನು ಸುರಿಸುತ್ತೀಯೆ." ಈ ಪ್ರಕಾರವಾಗಿ ವಾಗ್ರೂಪವಾದ ಉಪಚಾರದಲ್ಲಿ ನಿಪುಣಳೂ, ದೋಷರಹಿತಳೂ, ಸಂತೋಷ ಕರಳೂ ಆಗಿರುವ ಸುಮಿತ್ರಾದೇವಿಯು ವಿವಿಧಗಳಾದ ಚತುರ ವಾಕ್ಕುಗಳಿಂದ ಆ ಕೌಸಲ್ಯಾ ದೇವಿಯನ್ನು ಸಮಾಧಾನಗೊಳಿಸಿದಳು. ಆ ಬಳಿಕ ಸುಮಿತ್ರಾದೇವಿಯು ನುಡಿದ ಆ ಹಿತ

ನಿಶಮ್ಯ ತಲ್ಲಕ್ಷ್ಮಣ ಮಾತೃವಾಕ್ಯಂ
ರಾಮಸ್ಯ ಮಾತು ರ್ನರದೇವಪತ್ನ್ಯಾಃ ||
ಸದ್ಯಶ್ಶರೀರೇ ವಿನನಾಶ ಶೋಕ
ಶ್ಶರದ್ಗತೋ ಮೇಘ ಇವಾಲ್ಪತೋಯಃ || ೩೧ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಶ್ಚತ್ವಾರಿಂಶಸ್ಸರ್ಗಃ.

ಶರೀರದಲ್ಲಿ, ಶೋಕಃ - ವ್ಯಸನವು, ಶರದ್ಗತಃ - ಶರದೃತುವನ್ನು ಹೊಂದಿದ, ಅಲ್ಪತೋಯಃ - ಸ್ವಲ್ಪೋದಕವುಳ್ಳ, ಮೇಘಇವ - ಮೋಡದಂತೆ, ಸದ್ಯಃ - ತತ್ಕ್ಷಣದಲ್ಲಿ, ವಿನನಾಶ - ನಾಶವಾಯಿತು. || ೩೧ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಶ್ಚತ್ವಾರಿಂಶಸ್ಸರ್ಗಃ.

ವಾಕ್ಯಗಳನ್ನು ಆಲಿಸಿದ ಕೌಸಲ್ಯಾದೇವಿಯ ಶೋಕವು, ಶರತ್ಕಾಲದಲ್ಲಿನ ಮೇಘವು ಕ್ಷಣಮಾತ್ರದಲ್ಲಿಯೇ ಜಲಹೀನವಾಗುವಂತೆ, ಆಕೆಯ ಶರೀರದಲ್ಲಿಯೇ ತಂಗಿಹೋಯಿತು. ||೨೬-೩೧||

ಇಂತಿದು ಸುಮಿತ್ರಾ ಕೃತ ಕೌಸಲ್ಯಾ ಸಮಾಶ್ವಾಸನ ವಿಧಾನ ಕಥಾಕಥನವೆಂಬ
ನಲವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚಚತ್ವಾರಿಂಶಸ್ಸರ್ಗಃ.

ಅನುರಕ್ತಾ ಮಹಾತ್ಮಾನಂ ರಾಮಂ ಸತ್ಯ ಪರಾಕ್ರಮಂ ॥ ಅನುಜಗ್ಮುಃ ಪ್ರಯಾಂತಂ ತಂ ವನವಾಸಾಯ ಮಾನವಾಃ ॥ ೧ ॥ ನಿವರ್ತಿತೇಪಿಚ ಬಲಾತ್ಸುಹೃದ್ವರ್ಗೇಣ ಚ ರಾಜನಿ ॥ ನೈವ ತೇ ಸಂನ್ಯವರ್ತಂತ ರಾಮಸ್ಯಾನುಗತಾ ರಥಂ ॥ ೨ ॥ ಅಯೋಧ್ಯಾ ನಿಲಯಾನಾಂಹಿ ಪುರುಷಾಣಾಂ ಮಹಾಯಶಾಃ ॥ ಬಭೂವ ಗುಣಸಂಪನ್ನಃ ಪೂರ್ಣಚಂದ್ರ ಇವಪ್ರಿಯಃ ॥ ೩ ॥ ಸ ಯಾಚ್ಯಮಾನಃ ಕಾಕುತ್ಸ್ಥ ಸ್ಸ್ವಾಭಿಃ ಪ್ರಕೃತಿಭಿ ಸ್ತದಾ ॥ ಕುರ್ವಾಣಃ ಪಿತರಂ ಸತ್ಯಂ ವನಮೇವಾ ನ್ವಪದ್ಯತ ॥ ೪ ॥ ಅವೇಕ್ಷಮಾಣ ಸ್ಸಸ್ನೇಹಂ ಚಕ್ಷುಷಾ ಪ್ರಪಿ

ಅನುರಕ್ತಾಃ - ಅನುರಾಗವುಳ್ಳ, ಮಾನವಾಃ - ಮನುಷ್ಯರು, ವನವಾಸಾಯ - ಅರಣ್ಯವಾಸಕ್ಕೆ, ಪ್ರಯಾಂತಂ - ಹೋಗುತ್ತಿರುವ, ಮಹಾತ್ಮಾನಂ-ಮಹಾಸ್ವಭಾವವುಳ್ಳ, ಸತ್ಯಪರಾಕ್ರಮಂ-ಆ ಶ್ರೀರಾಮನನ್ನು, ಅನುಜಗ್ಮುಃ - ಅನುಸರಿಸಿ ತೆರಳಿದರು. ॥ ೧ ॥ ಸುಹೃದ್ವರ್ಗೇ - ರಾಜನಿಗೆ ಸ್ನೇಹಿತರಾದ ಅಂತಃಪುರದ ಜನವು, ರಾಜನಿಚ - ಮಂತ್ರಿಸಹಿತನಾದ ಅರಸನೂ ಕೂಡ, ಬಲಾತ್ - ಬಲಾತ್ಕಾರದಿಂದ, ನಿವರ್ತಿತೇಪಿ - ಹಿಂತಿರಿಗಿದವನಾದರೂ, ತೇ - ಆ ಪಟ್ಟಣದ ಜನರು, ರಾಮಸ್ಯ - ಶ್ರೀರಾಮನ, ರಥಂ - ತೇರನ್ನು, ಅನುಗತಾಃ - ಅನುಸರಿಸಿದವರಾಗಿ, ನೈವಸನ್ನ್ಯವರ್ತಂತ - ಹಿಂತಿರುಗಲೇಯಿಲ್ಲ. ॥ ೨ ॥ ಗುಣಸಂಪನ್ನಃ - ಗುಣಗಳಿಂದಕೂಡಿರುವ, ಮಹಾಯಶಾಃ - ಅತಿಕೀರ್ತಿವಂತನಾದ ಶ್ರೀರಾಮನು, ಅಯೋಧ್ಯಾನಿಲಯಾನಾಂ - ಅಯೋಧ್ಯಾ ಪಟ್ಟಣದಲ್ಲಿರುವ, ಪುರುಷಾಣಾಂ - ಮನುಷ್ಯರಿಗೆ, ಪೂರ್ಣಚಂದ್ರಇವ - ಪೂರ್ಣಿಮಾಚಂದ್ರನಂತೆ, ಪ್ರಿಯಃ - ಇಷ್ಟನಾದವನು, ಬಭೂವಹಿ - ಆದವನಷ್ಟೆ. ॥ ೩ ॥ ತದಾ - ಆ ಕಾಲದಲ್ಲಿ, ಸಕಾಕುತ್ಸ್ಥಃ - ಆ ಶ್ರೀರಾಮನು, ಸ್ವಾಭಿಃ - ಸ್ವಕೀಯರಾದ, ಪ್ರಕೃತಿಭಿಃ - ಜನರಿಂದ, ಯಾಚ್ಯಮಾನಃ - ಹಿಂತಿರುಗೆಂದು ಪ್ರಾರ್ಥಿಸಲ್ಪಟ್ಟರೂ, ಪಿತರಂ - ತಂದೆಯನ್ನು, ಸತ್ಯಂ - ಸತ್ಯವಂತನನ್ನಾಗಿ, ಕುರ್ವಾಣಃ - ಮಾಡುವವನಾಗಿ, ವನಮೇವ - ಅರಣ್ಯವನ್ನೇ, ಅನ್ವಪದ್ಯತ - ಹೊಂದಿದನು. ॥ ೪ ॥ ರಾಮಃ - ಶ್ರೀರಾಮನು, ತಾಃಪ್ರಜಾಃ - ಆ ಪ್ರಜೆಗಳನ್ನು, ಸ್ವಾಃ - ಸ್ವಕೀಯರಾದ, ಪ್ರಜಾಃ - ಮಕ್ಕಳನ್ನಂತೆ, ಸ್ನೇಹೇನ - ಸ್ನೇಹಭಾವದಿಂದ ಕೂಡಿದ, ಚಕ್ಷುಷಾ - ಕಣ್ಣಿನಿಂದ,

---

ಆ ಬಳಿಕ ಸತ್ಯದಲ್ಲಿಯೂ, ಪರಾಕ್ರಮದಲ್ಲಿಯೂ, ನ್ಯಸ್ತಚಿತ್ತನಾದ ಶ್ರೀರಾಮಮೂರ್ತಿಯಲ್ಲಿ ಅನುರಾಗಯುಕ್ತರಾದ ಪುರಜನರೆಲ್ಲರೂ ವನವಾಸಕ್ಕಾಗಿ ತೆರಳುತ್ತಿರುವ ಆತನನ್ನು ಅನುಸರಿಸಿ ಹೊರಟರು. ಆತನ ಸ್ನೇಹಿತರು ಎಷ್ಟು ತಡೆದಾಗ್ಯೂ ಆತನನ್ನೇ ಅನುಸರಿಸಿ ತೆರಳುತ್ತಿದ್ದರು. ಮಹಾ ಕೀರ್ತಿವಂತನೂ, ಸದ್ಗುಣಶಾಲಿಯೂ ಆದ ಶ್ರೀರಾಮನು ಅಯೋಧ್ಯಾಪಟ್ಟಣದ ಸಮಸ್ತ ಪ್ರಜೆಗಳಿಗೂ ಪೂರ್ಣಚಂದ್ರನಂತೆ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದನು ; ತನ್ನ ಪ್ರಜೆಗಳು ವನ ಪ್ರಯಾಣ ಮಾಡಕೂಡದೆಂದು ಎಷ್ಟು

ಬನ್ನಿವ||ಉವಾಚ ರಾಮ ಸ್ಸ್ನೇಹೇನ ತಾಃ ಪ್ರಜಾ ಸ್ಸ್ವಾಃ ಪ್ರಜಾ ಇವ ||೫|| ಯಾ ಪ್ರೀತಿ ರ್ಬಹುಮಾನಶ್ಚ ಮಯ್ಯಯೋಧ್ಯಾ ನಿವಾಸಿನಾಂ || ಮತ್ಪ್ರಿಯಾರ್ಥಂ ವಿಶೇಷೇಣ ಭರತೇ ಸಾ ನಿವೇಶ್ಯತಾಂ ||೬|| ಸ ಹಿ ಕಲ್ಯಾಣಚಾರಿತ್ರಃ ಕೈಕೇಯ್ಯಾನಂದವರ್ಧನಃ || ಕರಿಷ್ಯತಿ ಯಥಾವದ್ವಃ ಪ್ರಿಯಾಣಿಚ ಹಿತಾನಿಚ ||೭|| ಜ್ಞಾನವೃದ್ಧೋ ವಯೋ ಬಾಲೋ ಮೃದುರ್ವೀರ್ಯಗುಣಾನ್ವಿತಃ || ಅನುರೂಪ ಸ್ಸಯೋ ಭರ್ತಾ ಭವಿಷ್ಯತಿ ಭಯಾಪಹಃ ||೮||

ಪ್ರಪಿಬನ್ನಿವ - ಪಾನಮಾಡುತ್ತಾನೋ ಎಂಬಂತೆ, ಸಸ್ನೇಹಂ - ಪ್ರೀತಿಯಿಂದೊಡಗೂಡಿ, ಅವೇಕ್ಷ್ಯಮಾಣಃ - ನೋಡುತ್ತ, ಉವಾಚ - ಹೇಳಿದನು. ||೫|| ಅಯೋಧ್ಯಾನಿವಾಸಿನಾಂ ಅಯೋಧ್ಯಾಪಟ್ಟಣವಾಸಿಗಳಾದನಿಮಗೆ, ಮಯಿ - ನನ್ನಲ್ಲಿ, ಪ್ರೀತಿಃ - ವಿಶ್ವಾಸವು, ಯಾ - ಯಾವುದೋ, ಬಹುಮಾನಶ್ಚ - ಬಹುಮಾನವು, ಯಾ - ಯಾವುದೊ, ಸಾ - ಅದು, ಮತ್ಪ್ರಿಯಾರ್ಥಂ - ನನಗೆ ಸಂತೋಷವನ್ನುಂಟುಮಾಡಲು, ವಿಶೇಷೇಣ - ವಿಶೇಷವಾಗಿ, ಭರತೇ - ಭರತನಲ್ಲಿ, ನಿವೇಶ್ಯತಾಂ - ಇರಿಸಲ್ಪಡಲಿ. ||೬|| ಕಲ್ಯಾಣಚಾರಿತ್ರಃ - ಶುಭಕರವಾದ ನಡತೆಯುಳ್ಳ, ಕೈಕೇಯ್ಯಾನಂದವರ್ಧನಃ - ಕೈಕೇಯಿಯ ಆನಂದವನ್ನು ವೃದ್ಧಿಗೊಳಿಸುತ್ತಿರುವ, ಸಃ - ಆ ಭರತನು, ವಃ - ನಿಮಗೆ, ಪ್ರಿಯಾಣಿ - ಇಹಲೋಕದಲ್ಲಿ ಪ್ರಿಯಕರವಾದ ಐಶ್ವರ್ಯಾದಿಗಳನ್ನೂ, ಹಿತಾನಿಚ - ಪರಲೋಕಾರ್ಥವಾಗಿ ಅನುಷ್ಠೇಯವರ್ಣಾಶ್ರಮ ಧರ್ಮಗಳನ್ನೂ, ಯಥಾವತ್-ವಿಧಿವತ್ತಾಗಿ, ಕರಿಷ್ಯತಿಹಿ - ಮಾಡುವನಷ್ಟೆ. ||೭|| ಜ್ಞಾನವೃದ್ಧಃ - ಜ್ಞಾನದಲ್ಲಿ ವೃದ್ಧನಾಗಿರುವ, ವಯೋಬಾಲಃ - ವಯಸ್ಸಿನಲ್ಲಿ ಬಾಲಕನಾದ, ಮೃದುಃ - ಮಾರ್ದವಸ್ವಭಾವವುಳ್ಳ, ವೀರ್ಯಗುಣಾನ್ವಿತಃ, ವೀರ್ಯ - ಸಾಮರ್ಥ್ಯವೆಂಬ, ಗುಣ - ಗುಣದಿಂದ, ಅನ್ವಿತಃ - ಕೂಡಿರುವ, ಸಃ - ಆ ಭರತನು, (ವಃ - ನಿಮಗೆ,) ಅನುರೂಪಃ - ಅನುಗುಣನಾದ, ಭರ್ತಾ - ಪ್ರಭುವಾದವನಾಗಿ, ಭಯಾಪಹಃ - ಸಮಸ್ತ ಭಯಗಳನ್ನು ಅಪಹರಿಸುವನು, ಭವಿಷ್ಯತಿ - ಆಗುವನು. ||೮|| ಹಿ-

---

ಬಗೆಯಾಗಿ ಪ್ರಾರ್ಥಿಸುತ್ತಿದ್ದರೂ, ಆತನು ತನ್ನ ತಂದೆಯನ್ನು ಸತ್ಯಪ್ರತಿಜ್ಞೆಯುಳ್ಳವನನ್ನಾಗಿ ಮಾಡುತ್ತ ವನವನ್ನೇ ಕುರಿತು ತೆರಳಿದವನಾದನು. ಆಗಲಾ ರಘುರಾಮನು ತನ್ನ ಪ್ರಜೆಗಳನ್ನು ವಿಶ್ವಾಸದಿಂದ ಕಾಣುತ್ತ ಸ್ನೇಹಭಾವದಿಂದವರನ್ನು ಕುರಿತು ಹೀಗೆಂದನು. ||೧-೫|| "ಎಲೈ ಪ್ರಜೆಗಳಿರಾ! ಅಯೋಧ್ಯಾನಿವಾಸಿಗಳಾದ ನೀವೆಲ್ಲರೂ ನನ್ನಲ್ಲಿ ಬಹಳವಾದ ಪ್ರೀತಿಯನ್ನು ಹೊಂದಿರುವಿರಿ. ಇದೇ ಪ್ರೀತಿಯನ್ನು ಭರತನಲ್ಲಿ ವಿಶೇಷವಾಗಿ ಇಟ್ಟಿರಬೇಕೆಂದು ಹೇಳುತ್ತೇನೆ. ಕೈಕೇಯಿಯ ಆನಂದವನ್ನು ವೃದ್ಧಿಗೊಳಿಸುತ್ತಿರುವ ಆ ಭರತನು ಸದ್ಗುಣಸಂಪನ್ನನು. ಆತನು ನಿಮಗಾವ ರೀತಿಯಲ್ಲಿ ಹಿತವನ್ನುಂಟುಮಾಡಬೇಕೋ ಆ ರೀತಿಯಲ್ಲಿಯೇ ನಡೆದುಕೊಳ್ಳುತ್ತಾನೆ. ಆತನು ಜ್ಞಾನದಲ್ಲಿ ವೃದ್ಧನು; ವಯಸ್ಸಿನಲ್ಲಿ ಹುಡುಗನು; ಮೃದು ನುಡಿಯುಳ್ಳವನು; ಮಹಾ ಪರಾಕ್ರಮಶಾಲಿಯು. ಆತನು ನಿಮಗನುಗುಣವಾದ ಒಡೆಯನಾಗಿ ನಿಮ್ಮ ಭಯವನ್ನು ನಿವಾರಣೆ ಮಾಡುತ್ತಾನೆ. ಇಂತಹ ಗುಣಶಾಲಿಯಾದ ಭರತನಿಗೆ ಪ್ರಭುತ್ವ ಮಾಡುವವನಿಗೆ ಯಾವ ಯಾವ ಗುಣಗಳಿರಬೇಕೋ ಆ

ಸಹಿ ರಾಜಗುಣೈ ರ್ಯುಕ್ತೋ ಯುವರಾಜ ಸ್ಸಮೀಕ್ಷಿತಃ ॥ ಅಪಿಚಾಪಿ ಮಯಾ ಶಿಷ್ಟೈಃ ಕಾರ್ಯಂ ವೋ ಭರ್ತೃ ಶಾಸನಂ ॥ ೯ ॥ ನ ಚ ತಪ್ಯೇದ್ಯಥಾ ಚಾಸೌ ವನವಾಸಂ ಗತೇ ಮಯಿ ॥ ಮಹಾರಾಜ ಸ್ತಥಾ ಕಾರ್ಯೋ ಮಮ ಪ್ರಿಯ ಚಿಕೀರ್ಷಯಾ ॥ ೧೦ ॥ ಯಥಾ ಯಥಾ ದಾಶರಥಿ ರ್ಧರ್ಮಮೇವಾ ಸ್ಥಿತೋ ಭವತ್॥ತಥಾ ತಥಾ ಪ್ರಕೃತಯೋ ರಾಮಂ ಪತಿಮಕಾಮಯನ್॥೧೧॥ ಬಾಷ್ಪೇಣ ಪಿಹಿತಂ ದೀನಂ ರಾಮ ಸ್ಸೌಮಿತ್ರಿಣಾ ಸಹ ॥ ಚಕರ್ಷೇವ ಗುಣೈ

ಯಾವ ಕಾರಣ, ರಾಜಗುಣೈಃ - ಪ್ರಭುತ್ವಮಾಡುವವನಿಗೆ ಸದೃಶವಾದ ಗುಣಗಳಿಂದ, ಯುಕ್ತಃ - ಕೂಡಿ, ಸಃ - ಆ ಭರತನು, ವಃ - ನಿಮಗೆ, ಯುವರಾಜಃ - ಯೌವರಾಜ್ಯಪಟ್ಟಾಭಿಷಿಕ್ತನಾಗಿ, ಸಮೀಕ್ಷಿತಃ - ಕಾಣಲ್ಪಟ್ಟನು, ಅಪಿಚ - ಇಷ್ಟುಮಾತ್ರವೇ ಅಲ್ಲ, ಮಯಾಚ - ನನ್ನಿಂದಲೂ, ಶಿಷ್ಟೈಃ - ಮಿಕ್ಕತಮ್ಮಂದರಿಂದಲೂ, ಭರ್ತೃಶಾಸನಂ - ಧೊರೆಯ ಆಜ್ಞೆಯು, ಕಾರ್ಯಂ ಮಾಡತಕ್ಕದು. ॥ ೯ ॥ ಮಯಿ - ನಾನು, ವನವಾಸಂ - ಅರಣ್ಯವಾಸವನ್ನು, ಗತೇ - ಹೊಂದಿದವನಾಗಲು, ಮಹಾರಾಜಃ - ಮಹಾರಾಜನಾದ, ಅಸೌಚ - ಈ ಭರತನೂ, ಯಥಾ - ಹೇಗೆ, ನತಪ್ಯೇತ್ - ಸಂಕಟಬೀಳದಿರುವನೋ, ತಥಾ - ಹಾಗೆ, ಮಮಪ್ರಿಯಚಿಕೀರ್ಷಯಾ, ಮಮ - ನನಗೆ, ಪ್ರಿಯ - ಇಷ್ಟವನ್ನು, ಚಿಕೀರ್ಷಯಾ - ಮಾಡಲಿಚ್ಛೆಯಿಂದ, ಕಾರ್ಯಃ - ಮಾಡತಕ್ಕವನು. ॥ ೧೦ ॥ ದಾಶರಥಿಃ - ಶ್ರೀರಾಮನು, ಯಥಾಯಥಾ - ಹೇಗೆಹೇಗೆ, ಧರ್ಮಮೇವ - ಧರ್ಮವನ್ನೇ, ಅಸ್ಥಿತಃ - ಆಶ್ರಯಿಸಿದವನು, ಅಭವತ್ - ಆದನೋ, ತಥಾತಥಾ - ಹಾಗೆಹಾಗೆ, ಪ್ರಕೃತಯಃ - ಪ್ರಜೆಗಳು, ರಾಮಂ - ಶ್ರೀರಾಮನನ್ನು, ಪತಿಂ - ದೊರೆಯನ್ನಾಗಿ, ಅಕಾಮಯರ್ - ಕೋರಿದರು. ॥ ೧೧ ॥ ರಾಮಃ - ಶ್ರೀರಾಮನು, ಸೌಮಿತ್ರಿಣಾಸಹ - ಲಕ್ಷ್ಮಣಸ್ವಾಮಿಯೊಡನೆ, ಬಾಷ್ಪೇಣ - ಕಂಬನಿಯಿಂದ, ಪಿಹಿತಂ - ಆಚ್ಛಾದಿತವಾದ, ದೀನಂ - ಪರಿತಪಿಸುತ್ತಿರುವ, ಪುರನಿವಾಸಿನಂ - ಅಯೋಧ್ಯಾಪಟ್ಟಣದಲ್ಲಿ ವಾಸವಾಗಿರುವ, ಜನಂ - ಜನವನ್ನು, ಗುಣೈಃ - ಸ್ವಗುಣಗಳೆಂಬ ಪಾಶಗಳಿಂದ,

ಗುಣಗಳೆಲ್ಲವೂ ಇರುತ್ತವೆ. ಈತನು ಮಹಾರಾಜನಾದ ದಶರಥನಿಂದ ಯೌವರಾಜ್ಯದಲ್ಲಿ ಅಭಿಷಿಕ್ತನಾಗಿದ್ದಾನೆ; ನಾನು ಅರಣ್ಯ ವಾಸಕ್ಕಾಗಿ ಕಳುಹಲ್ಪಟ್ಟಿರುವೆನು. ಇಂತಹ ನಾನು ಗುರುವಿನ ಅಪ್ಪಣೆಯನ್ನು ಎಂದಿಗೇ ಆಗಲಿ ಮೀರಬಾರದೆಂಬ ಧರ್ಮವು ನಿಮಗೆ ಗೊತ್ತಿಲ್ಲವೆ? ಆದುದರಿಂದ ನಾನು ನಿಮಗಿಷ್ಟುಮಾತ್ರ ಹೇಳುತ್ತೇನೆ. ನಾನು ವನವಾಸಕ್ಕೆ ಹೋದ ಬಳಿಕ ನಮ್ಮ ತಂದೆಯಾದ ಮಹಾರಾಜನು ಸಂತಾಪಗೊಳ್ಳದಂತೆ ಮಾಡುವುದು ಭರತನ ಕರ್ತವ್ಯವಾಗಿರುವುದು. ಆತನು ಆ ರೀತಿ ನಡೆದುಕೊಳ್ಳುವಂತೆ ಮಾಡುವುದು ನಿಮ್ಮ ಕರ್ತವ್ಯವಾಗಿರುವುದು. ಅದರಂತೆ ಮಾಡಿರಿ" ॥ ೬-೧೦ ॥ ಈ ರೀತಿ ಆ ಶ್ರೀರಾಮನು ಧರ್ಮಮಾರ್ಗವನ್ನನುಸರಿಸಿ ಹೇಗೆ ಹೇಗೆ ಉಪದೇಶಿಸ ಹೊರಟನೋ ಹಾಗೆ ಹಾಗೆ, ಪ್ರಜೆಗಳೆಲ್ಲರೂ ಆತನೇ ರಾಜನಾಗಿರಬೇಕೆಂದು ಕೋರಿದರು. ಲಕ್ಷ್ಮಣನೊಡಗೂಡಿದ ಶ್ರೀರಾಮನು ಕಣ್ಣೀರನ್ನು ಸುರಿಸುತ್ತ, ದೀನರಾಗಿರುವ ಆ ಪಟ್ಟಣಿಗರನ್ನು ತನ್ನ ಸದ್ಗುಣರೂಪ ರಜ್ಜುವಿ

ಬಧ್ವಾ ಜನಂ ಪುರನಿವಾಸಿನಂ ||೧೨|| ತೇ ದ್ವಿಜಾ ಸ್ತ್ರಿವಿಧಂ ವೃದ್ಧಾ ಜ್ಞಾನೇನ ವಯಸೌಜಸಾ || ವಯಃ ಪ್ರಕಂಪ ಶಿರಸೋ ದೂರಾದೂಚುರಿದಂ ವಚಃ ||೧೩|| ವಹಂತೋ ಜವನಾ ರಾಮಂ ಭೋಭೋ ಜಾತ್ಯಾ ಸ್ತುರಂಗಮಾಃ || ನಿವರ್ತಧ್ವಂ ನಗಂತವ್ಯಂ ಹಿತಾ ಭವತ ಭರ್ತರಿ ||೧೪|| ಕರ್ಣವಂತಿಹಿ ಭೂತಾನಿ ವಿಶೇಷೇಣ ತುರಂಗಮಾಃ || ಯೂಯಂ ತಸ್ಮಾನ್ನಿವರ್ತಧ್ವಂ ಯಾಚನಾಂ ಪ್ರತಿವೇದಿತಾಃ ||೧೫|| ಧರ್ಮತ ಸ್ಸ ವಿಶುದ್ಧಾತ್ಮಾ ವೀರ ಶ್ಶುಭ ದೃಢವ್ರತಃ || ಉಪವಾಹ್ಯಸ್ತು ವೋ ಭರ್ತಾ ನಾಪವಾಹ್ಯಃ ಪುರಾ

ಬಧ್ವಾ - ಕಟ್ಟಿ, ಚಕರ್ಷೇನ - ಸೆಳೆದನೋ ಎಂಬಂತಿದ್ದನು. ||೧೨|| ಜ್ಞಾನೇನ - ಜ್ಞಾನದಿಂದಲೂ, ವಯಸಾ - ವಯಸ್ಸಿನಿಂದಲೂ, ಓಜಸಾ - ತಪೋಬಲದಿಂದಲೂ, ತ್ರಿವಿಧಂ - ಮೂರು ಬಗೆಯಲ್ಲಿಯೂ, ವೃದ್ಧಾಃ - ಮುದುಕರಾದ, ತೇದ್ವಿಜಾಃ - ಆ ಬ್ರಾಹ್ಮಣರು, ವಯಃಪ್ರಕಂಪಶಿರಸಃ, ವಯಃ - ವಯಸ್ಸಿನಿಂದ, ಪ್ರಕಂಪ - ಚಲಿಸುತ್ತಿರುವ, ಶಿರಸಃ - ಮುಂಡೆಯುಳ್ಳವರಾಗಿ, ದೂರಾತ್ - ದೂರದಿಂದಲೇ, ಇದಂವಚಃ - ಈ ಮಾತನ್ನು, ಊಚುಃ - ಹೇಳಿದರು. ||೧೩|| ಭೋಭೋ ತುರಂಗಮಾಃ - ಎಲೈ ಎಲೈ ಕುದುರೆಗಳೇ, ಯೂಯಂ - ನೀವು, ಜಾತ್ಯಾಃ - ಒಳ್ಳೇಜಾತಿಯಲ್ಲಿ ಹುಟ್ಟಿದವರು, ಜವನಾಃ - ವೇಗಶಾಲಿಗಳು, ರಾಮಂ - ಶ್ರೀರಾಮನನ್ನು, ವಹಂತಃ - ಹೊತ್ತುಕೊಂಡು, ನಿವರ್ತಧ್ವಂ - ಹಿಂದಕ್ಕೆತಿರುಗಿರಿ, ನಗಂತವ್ಯಂ - ಮುಂದೆಹೋಗತಕ್ಕದಲ್ಲ, ಭರ್ತರಿ - ನಿಮ್ಮ ಧಣಿಯವಿಷಯದಲ್ಲಿ, ಹಿತಾಃ - ಹಿತಕಾರಿಗಳು, ಭವತ - ಆಗಿರಿ. ||೧೪|| ಭೂತಾನಿ - ಭೂತಗಳು, ಕರ್ಣವಂತಿಹಿ - ಕಿವಿಗಳುಳ್ಳವುಗಳು, ತೇಷು - ಆ ಭೂತಗಳಲ್ಲಿ, ತುರಂಗಮಾಃ - ಅಶ್ವಗಳು, ವಿಶೇಷೇಣ - ಬಹಳವಾಗಿ, (ಕರ್ಣವಂತಿ-ಶ್ರೋತ್ರೇಂದ್ರಿಯಗಳುಳ್ಳವುಗಳು,) ತಸ್ಮಾತ್ - ಆ ಕಾರಣ, ಯೂಯಂ - ನೀವು, ಯಾಚನಾಂ - ನಮ್ಮ ಪ್ರಾರ್ಥನಾವಚನವನ್ನು, ಪ್ರತಿವೇದಿತಾಃ - ತಿಳಿದು, ನಿವರ್ತಧ್ವಂ - ಹಿಂತಿರುಗಿರಿ. ||೧೫|| ಧರ್ಮತಃ - ಧರ್ಮದಿಂದ, ವಿಶುದ್ಧಾತ್ಮಾ - ನಿರ್ಮಲಾಂತಃಕರಣವುಳ್ಳ, ವೀರಃ - ಶೂರನಾದ, ಶುಭದೃಢವ್ರತಃ, ಶುಭ - ಶುಭಕರವಾದ, ದೃಢ - ಚಲಿಸಲಸಾಧ್ಯವಾದ, ವ್ರತಃ - ಸತ್ಯವ್ರತವುಳ್ಳ, ವಃ - ನಿಮಗೆ, ಭರ್ತಾ - ಧೊರೆಯಾದ, ಸಃ - ಆ

ನಿಂದ ಬಿಗಿದು ಕಟ್ಟಿ ಸೆಳೆದೊಯ್ದನೋ ಎಂಬಂತಿದ್ದನು. ಜ್ಞಾನದಿಂದಲೂ,ತಪಸ್ಸಿನಿಂದಲೂ, ವಯಸ್ಸಿನಿಂದಲೂ ವೃದ್ಧರಾದ ಬ್ರಾಹ್ಮಣರು ಮುದಿತನದಿಂದ ನಡುಗುತ್ತಿರುವ ಮಂಡೆಗಳುಳ್ಳವರಾಗಿ ಆ ಶ್ರೀರಾಮಮೂರ್ತಿಯ ರಥಕ್ಕೆ ಕಟ್ಟಿರುವ ಅಶ್ವಗಳನ್ನು ಕುರಿತು ಹೀಗೆ ಹೇಳಿದರು. "ಓ ಅಶ್ವಗಳಿರಾ! ನೀವು ಒಳ್ಳೆಯ ಜಾತಿಯಲ್ಲಿ ಹುಟ್ಟಿದವರು; ಮಹಾ ವೇಗಸಂಪನ್ನರಾದವರು; ಶ್ರೀರಾಮನ ರಥವನ್ನು ಎಳೆದುಕೊಂಡು ಹಿಂತಿರುಗಿರಿ! ಮುಂದಕ್ಕೆ ಹೆಜ್ಜೆಯನ್ನಿಡಬೇಡಿರಿ! ಪ್ರಭುವಾದ ಶ್ರೀರಾಮನ ವಿಷಯದಲ್ಲಿ ಹಿತವನ್ನುಂಟುಮಾಡಿರಿ; ಭೂತಗಳೆಲ್ಲವೂ ಕಿವಿಗಳುಳ್ಳವು. ಅವುಗಳಲ್ಲಿ ಅಶ್ವಗಳು ತೀಕ್ಷ್ಣವಾದ ಶ್ರವಣೇಂದ್ರಿಯಗಳುಳ್ಳವು. ಆದುದರಿಂದ ನೀವು ನಮ್ಮ ಪ್ರಾರ್ಥನೆಗಳನ್ನು ತಿಳಿದು ಹಿಂದಿರುಗಿರಿ. ||೧೧-೧೫|| ಧರ್ಮದಿಂದ ಪರಿಶುದ್ಧನಾದ ಅಂತಃಕರಣವುಳ್ಳ, ವೀರನೂ, ದೃಢವಾದ ವ್ರತವುಳ್ಳವನೂ, ನಿಮಗೆ

ದ್ವನಂ ॥ ೧೬ ॥ ಏವಮಾರ್ತಾ ಪ್ರಲಾಪಾಂಸ್ತಾನ್ ವೃದ್ಧಾ ನ್ಪ್ರಲಪತೋ ದ್ವಿಜಾನ್ ॥ ಅವೇಕ್ಷ್ಯ ಸಹಸಾ ರಾಮೋ ರಥಾದವತತಾರಹ ॥ ೧೭ ॥ ಪದ್ಭ್ಯಾ ಮೇವ ಜಗಾಮಾಥ ಸ ಸೀತ ಸ್ಸಹ ಲಕ್ಷ್ಮಣಃ ॥ ಸನ್ನಿಕೃಷ್ಟ ಪದನ್ಯಾಸೋ ರಾಮೋ ವನಪರಾಯಣಃ ॥ ೧೮ ॥ ದ್ವಿಜಾತೀಂಸ್ತು ಪದಾತೀಂಸ್ತಾನ್ ರಾಮ ಶ್ಚಾರಿತ್ರ ವತ್ಸಲಃ ॥ ನಶಶಾಕ ಘೃಣಾಚಕ್ಷುಃ ಪರಿಮೋಕ್ತುಂ ರಥೇನ ಸಃ ॥೧೯॥ ಗಚ್ಛಂತಮೇವ ತಂ ದೃಷ್ಟ್ವಾ ರಾಮಂ ಸಂಭ್ರಾಂತ ಚೇತಸಃ ॥ ಊಚುಃ ಪರಮ

ಶ್ರೀರಾಮನು, ಪುರೇ - ಪಟ್ಟಣದಲ್ಲಿ, ಉಪವಾಹ್ಯಃ - ಪಟ್ಟಣಸಮೀಪಕ್ಕೆ ಹೊಂದಿಸತಕ್ಕವನು, ಪುರಾತ್ - ಪಟ್ಟಣದಿಂದ, ವನಂ - ಅರಣ್ಯವನ್ನು, ನಾಪವಾಹ್ಯಃ - ಕರೆದುಕೊಂಡು ಹೋಗತಕ್ಕವ ನಲ್ಲ. ॥ ೧೬ ॥ ರಾಮಃ - ಶ್ರೀರಾಮನು, ಏವಂ - ಈಪರಿಯಾಗಿ, ಆರ್ತಪ್ರಲಾಪಾನ್, ಆರ್ತ - ದೀನವಾದ, ಪ್ರಲಾಪಾನ್ - ಮಾತುಗಳನ್ನು, ವೃಥಾ - ವ್ಯರ್ಥವಾಗಿ, ಪ್ರಲಪತಃ - ಆಡುತ್ತಿರುವ, ತಾನ್ದ್ವಿಜಾನ್ - ಆ ಬ್ರಾಹ್ಮಣರನ್ನು, ಅವೇಕ್ಷ್ಯ - ಕಂಡು, ಸಹಸಾ - ಜಾಗ್ರತೆಯಾಗಿ, ರಥಾತ್ - ರಥದಿಂದ, ಅವತತಾರಹ - (೧) ಇಳಿದನಷ್ಟೆ. ॥೧೭॥ ಅಥ - ಬಳಿಕ, ವನಪರಾಯಣಃ-ವನದಲ್ಲಿಯೇ ಆಸಕ್ತಿಯುಳ್ಳ, ರಾಮಃ - ಶ್ರೀರಾಮನು, ಸಸೀತಃ - ಸೀತಾಸಮೇತನಾಗಿ, ಸಹಲಕ್ಷ್ಮಣಃ - ಲಕ್ಷ್ಮಣ ನೊಡಗೂಡಿ, ಸನ್ನಿಕೃಷ್ಟಪದನ್ಯಾಸಃ, ಸನ್ನಿಕೃಷ್ಟ - ಸಮೀಪವರ್ತಿಯಾದ, ಪದ - ಪಾದಗಳ, ನ್ಯಾಸಃ - ನಡಿಗೆಯುಳ್ಳವನಾಗಿ, ಪದ್ಭ್ಯಾಮೇವ - ಪಾದಗಳಿಂದಲೇ, ಜಗಾಮ - ತೆರಳಿದನು. ॥ ೧೮ ॥ ಚಾರಿತ್ರವತ್ಸಲಃ, ಚಾರಿತ್ರ - ಸಚ್ಚರಿತ್ರೆಯಲ್ಲಿ, ವತ್ಸಲಃ - ವಾತ್ಸಲ್ಯವುಳ್ಳ, ಸರಾಮಃ - ಆ ಶ್ರೀರಾಮನು, ಘೃಣಾಚಕ್ಷುಃ - ದಯೆಯಿಂದ ಯುಕ್ತವಾದ ನೇತ್ರಗಳುಳ್ಳವನಾಗಿ, ಪದಾತೀನ್ - ಪಾದಚಾರಿಗಳಾದ, ತಾನ್ದ್ವಿಜಾತೀನ್ - ಆ ಬ್ರಾಹ್ಮಣರನ್ನು, ರಥೇನ - ರಥದಿಂದ, ಪರಿಮೋಕ್ತುಂ - ಹಿಂತಿರುಗಿಸಲು, ನಶಶಾಕ - ಸಮರ್ಥನಾಗಲಿಲ್ಲ. ॥ ೧೯ ॥ ಗಚ್ಛಂತಮೇವ - ಪಾದಚಾರಿಯಾ ಗಿಯೇ ಮುಂದೆಹೋಗುತ್ತಿರುವ, ತಂರಾಮಂ - ಆ ಶ್ರೀರಾಮನನ್ನು, ದೃಷ್ಟ್ವಾ-ಕಂಡು, ಸಂಭ್ರಾಂತ

ಒಡೆಯನಾದವನೂ ಆದ ಶ್ರೀರಾಮನು ಪಟ್ಟಣವನ್ನು ಸೇರಲರ್ಹನಲ್ಲದೆ ಅರಣ್ಯಕ್ಕೆ ಹೋಗ ಲೆಂದಿಗೂ ಅರ್ಹನಲ್ಲವು. ಇದನ್ನು ಚೆನ್ನಾಗಿ ತಿಳಿಯಿರಿ!" ವೃದ್ಧ ವಿಪ್ರೋತ್ತಮರೀರೀತಿ ಯಾಗಿ ಕೂಗಿಕೊಳ್ಳುತ್ತಿರಲು, ರಘುನಂದನನು ಅದನ್ನು ಕೇಳಿ ಪಾದಚಾರಿಗಳಾದ ಆ ವಿಪ್ರರನ್ನು ನೋಡಿ ಬೇಗನೆ ರಥದಿಂದಿಳಿದು, ಲಕ್ಷ್ಮಣ ಸೀತೆಯರೊಡಗೂಡಿ, ಮೆಲ್ಲಮೆಲ್ಲನೆ ಹೆಜ್ಜೆಯಿಡುತ್ತ, ವನವಾಸದಲ್ಲಿಯೇ ನ್ಯಸ್ತಚಿತ್ತನಾಗಿ ನಡೆಯ ತೊಡಗಿದನು. ಸಚ್ಚಾರಿತ್ರ ಸಂಪನ್ನನಾದ ಶ್ರೀರಾಮಮೂರ್ತಿಯು ಮಹಾ ದಯಾ ಸಂಪನ್ನನಾದುದರಿಂದ ಪಾದಚಾರಿಗಳಾದ ಆ ಮುದಿ ಹಾರುವರನ್ನು ಹಿಂತಿರುಗಿಸಲು

ಟಿ. (೧) "ಹಂಸ ಶುಕ್ಲ ಶಿರೋರುಹೈಃ – ಮಹೀಪತನ ಪಾಂಸುಲೈಃ – ನಃಯಾಚಿತಃ ನಿವರ್ತಸ್ವ" ಎಂದು ಮುಂದಕ್ಕೆ ಹೇಳುತ್ತಾರೆ. ಇಂತಹ ವೃದ್ಧ ವಿಪ್ರರ ಮಾತನ್ನು ತೆಗೆದು ಹಾಕಿದರೆ ದೋಷ ಭಾಗಿಯಾಗುವೆನೆಂದೂಹಿಸಿದ ರಘುವರನು ರಥದಿಂದಿಳಿದನು. ಅವರ ಮಾತಿನಂತೆ ನಡೆದುಕೊಂಡರೆ ತಂದೆಯು ಸತ್ಯ ಪ್ರತಿಜ್ಞಾ ಭಂಗ ದೋಷ ಒದಗುವು ದೆಂದು ತಿಳಿದು ಆತನು ಮೆಲ್ಲಮೆಲ್ಲನೆ ಮುಂಬರಿದನು, ಎಂಬುದೇ ಇಲ್ಲಿನ ಸ್ವಾರಸಿಕಾರ್ಥವು.

ಸಂತಪ್ತಾ ರಾಮಂ ವಾಕ್ಯಮಿದಂ ದ್ವಿಜಾಃ ॥ ೨೦ ॥ ಬ್ರಾಹ್ಮಣ್ಯಂ ಸರ್ವಮೇತತ್ತ್ವಾಂ ಬ್ರಹ್ಮಣ್ಯ ಮನುಗಚ್ಛತಿ ॥ ದ್ವಿಜಸ್ಕಂಧಾಧಿ ರೂಢಾಸ್ತ್ವಾಮಗ್ನಯೋಪ್ಯನುಯಾಂತ್ಯಮೀ ॥ ೨೧ ॥ ವಾಜಪೇಯ ಸಮುತ್ಥಾನಿ ಛತ್ರಾಣ್ಯೇತಾನಿ ಪಶ್ಯನಃ ॥ ಪೃಷ್ಠತೋ ನುಪ್ರಯಾತಾನಿ ಮೇಘಾನಿವ ಜಲಾತ್ಯಯೇ ॥ ೨೨ ॥ ಅನವಾಪ್ತಾತಪತ್ರಸ್ಯ ರಶ್ಮಿಸಂತಾಪಿ ತಸ್ಯ ತೇ ॥ ಏಭಿಶ್ಛಾಯಾಂ ಕರಿಷ್ಯಾಮಸ್ವೈಶ್ಛತ್ರೈ ರ್ವಾಜಪೇಯಿಕೈಃ ॥ ೨೩ ॥ ಯಾ ಹಿ ನಸ್ಸತತಂ ಬುದ್ಧಿಃ ವೇದಮಂತ್ರಾ ನುಸಾರಿಣೀ॥ತ್ವತ್ಕೃತೇ ಸಾಕೃತಾ ವತ್ಸ ವನವಾಸಾ ನುಸಾರಿಣೀ॥೨೪॥

ಚೇತಸಃ - ಭ್ರಾಂತಚಿತ್ತರಾಗಿ, ಪರಮಸಂತಪ್ತಾಃ - ಬಹಳ ಸಂಕಟವುಳ್ಳ, ತೇದ್ವಿಜಾಃ-ಆ ಬ್ರಾಹ್ಮಣರು, ರಾಮಂ - ಶ್ರೀರಾಮನನ್ನು ಕುರಿತು, ಇದಂವಾಕ್ಯಂ - ಈ ಮಾತನ್ನು, ಊಚುಃ - ಹೇಳಿದರು. ॥ ೨೦ ॥ ಬ್ರಹ್ಮಣ್ಯಂ - ಬ್ರಾಹ್ಮಣಪ್ರಿಯನಾದ, ತ್ವಾಂ - ನಿನ್ನನ್ನು, ಸರ್ವಂ - ಸಮಸ್ತವಾದ, ಏತದ್ಬ್ರಾಹ್ಮಣ್ಯಂ - ಈ ಬ್ರಾಹ್ಮಣ ಸಮುದಾಯವು, ಅನುಗಚ್ಛತಿ - ಅನುಸರಿಸಿ ಬರುತ್ತದೆ, ಅಮೀ - ಈ, ಅಗ್ನಯೋಪಿ - ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳೆಂಬ ಮೂರು ಅಗ್ನಿಗಳು, ದ್ವಿಜಸ್ಕಂಧಾಧಿರೂಢಾಃ, ದ್ವಿಜ - ಬ್ರಾಹ್ಮಣರ, ಸ್ಕಂಧ - ಭುಜಗಳನ್ನು, ಅಧಿರೂಢಾಃ-(ಗೋ + ಮ) ಅರಣಿ ರೂಪವಾಗಿ ಏರಿದವುಗಳಾಗಿ, ತ್ವಾಂ - ನಿನ್ನನ್ನು, ಅನುಯಾಂತಿ-ಅನುಸರಿಸಿಬರುತ್ತವೆ. ॥೨೧॥ ವಾಜಪೇಯಸಮುತ್ಥಾನಿ, ವಾಜಪೇಯ - ವಾಜಪೇಯ ಕ್ರತುವಿನಲ್ಲಿ, ಸಮುತ್ಥಾನಿ-ವಿಧ್ಯುಕ್ತವಾಗಿ ಬಂದಿರುವ, ನಃ - ನಮ್ಮ, ಜಲಾತ್ಯಯೇ - ಶರದೃತುವಿನಲ್ಲಿ, ಮೇಘಾನಿವ ಮೇಘಗಳಂತೆ, ಪೃಷ್ಠತಃ-ಹಿಂಭಾಗದಲ್ಲಿ, ಅನುಪ್ರಯಾತಾನಿ - ಅನುಸರಿಸಿಬರುತ್ತಿರುವ, ನಃ - ನಮ್ಮ, ಏತಾನಿಛತ್ರಾಣಿ - ಈ ಛತ್ರಗಳನ್ನು, ಪಶ್ಯ - ನೋಡು. ॥ ೨೨ ॥ ಅನವಾಪ್ತಾತಪತ್ರಸ್ಯ, ಅನವಾಪ್ತ - ಹೊಂದದೆ ಇರುವ, ಆತಪತ್ರಸ್ಯ - ಶ್ವೇತಚ್ಛತ್ರವುಳ್ಳ, ರಶ್ಮಿಸಂತಾಪಿತಸ್ಯ - ಸೂರ್ಯಕಿರಣಗಳಿಂದ ಪರಿತಪ್ತನನ್ನಾಗಿ ಮಾಡಲ್ಪಟ್ಟ, ತೇ - ನಿನಗೆ, ವಾಜಪೇಯಿಕೈಃ - ವಾಜಪೇಯಾಖ್ಯ ಕ್ರತುವನಲ್ಲಿ ಬಂದಿರುವ, ಏಭಿಃ - ಈ, ಸ್ವೈಃ - ಸ್ವಕೀಯಗಳಾದ, ಛತ್ರೈಃ - ಛತ್ರಗಳಿಂದ, ಛಾಯಾಂ - ನೆರಳನ್ನು, ಕರಿಷ್ಯಾಮಃ - ಮಾಡುವೆವು. ॥ ೨೩ ॥ ಹೇ ವತ್ಸ - ಎಲೈ ಮಗುವೆ, ಸತತಂ - ನಿರಂತರವು, ನಃ - ನಮ್ಮ, ಯಾಬುದ್ಧಿಃ - ಯಾವ ಬುದ್ಧಿಯು, ವೇದಮಂತ್ರಾನುಸಾರಿಣೀ - ವೇದಮಂತ್ರಗಳನ್ನು ಅನುಸರಿಸಿ, ಅಸ್ತಿ - ಇಥೆಯೋ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ಸಾ-ಆ ಬುದ್ಧಿಯೇ, ವನವಾಸಾನುಸಾರಿಣೀ-

---

ಶಕ್ತಸಾಲದವನಾದನು. ಆಗಲಾ ವಿಪ್ರರು ಪಾದಚಾರಿಯಾಗಿಯೇ ಹೋಗುತ್ತಿರುವ ಶ್ರೀರಾಮನನ್ನು ನೋಡಿ ಅವನನ್ನು ಕುರಿತು ಹೀಗೆಂದರು. ॥ ೧೬-೨೦ ॥ "ಓ ರಘುನಂದನ ! ಈ ವಿಪ್ರ ಸಮೂಹವು, ವಿಪ್ರ ಪ್ರಿಯನಾದ ನಿನ್ನನ್ನು ಹಿಂಬಾಲಿಸಿ ಬರುತ್ತಿರುವುದು. ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಅಗ್ನಿತ್ರಯಗಳೂ ಈ ಬ್ರಾಹ್ಮಣರ ಹೆಗಲುಗಳ ಮೇಲೆಯೇ ಇದ್ದುಕೊಂಡು ಹಿಂಪಟ್ಟಬಂದಿರುವುವು. ವಾಜಪೇಯ ಕ್ರತುವಿನಲ್ಲಿ ವಿಧ್ಯುಕ್ತವಾಗಿ ಪ್ರಾಪ್ತವಾಗಿರವ, ಮೇಘೋಪಮಯುವಾಗಿ ನಮ್ಮ ಹಿಂದುಗಡೆ ಇರುವ ಈ ಛತ್ರಿಗಳನ್ನು ಈಕ್ಷಿಸುವವನಾಗು. ಯುವರಾಜನಾದ ನಿನಗೆ ಶ್ವೇತ

ಹೃದಯೇಷ್ವವತಿಷ್ಠಂತಿ ವೇದಾ ಯೇ ನಃ ಪರಂ ಧನಂ ‖ ವತ್ಸ್ಯಂತ್ಯಪಿ ಗೃಹೇ
ಷ್ವೇವ ದಾರಾಶ್ಚಾರಿತ್ರ ರಕ್ಷಿತಾಃ ‖ ೨೫ ‖ ನ ಪುನರ್ನಿಶ್ಚಯಃ ಕಾರ್ಯಸ್ತ್ವ
ದ್ಗತಾ ಸುಕೃತಾ ಮತಿಃ ‖ ತ್ವಯಿ ಧರ್ಮವ್ಯಪೇಕ್ಷೇತು ಕಿಂ ಸ್ಯಾದ್ಧರ್ಮ ಮಪೇ
ಕ್ಷಿತಂ ‖ ೨೬ ‖ ಯಾಚಿತೋ ನೋ ನಿವರ್ತಸ್ವ ಹಂಸಶುಕ್ಲ ಶಿರೋರುಹೈಃ ‖
ಶಿರೋಭಿ ರ್ನಿಭೃತಾ ಚಾರ ಮಹೀಪತನ ಪಾಂಸುಲೈಃ ‖ ೨೭ ‖ ಬಹೂನಾಂ
ವಿತತಾ ಯಜ್ಞಾ ದ್ವಿಜಾನಾಂ ಯ ಇಹಾಗತಾಃ ‖ ತೇಷಾಂ ಸಮಾಪ್ತಿ

ಅರಣ್ಯವಾಸವನ್ನು ಕುರಿತು ಅನುಸರಿಸಿದುದಾಗಿ, ಕೃತಾ - ಮಾಡಲ್ಪಟ್ಟಿತು. ‖ ೨೪ ‖ ನಃ - ನಮಗೆ, ಪರಂ - ಸರ್ವೋತ್ಕೃಷ್ಟವಾದ, ಧನಂ - ಧನಪ್ರಾಯಗಳಾಗಿ, ಯೇವೇದಾಃ - ಯಾವ ವೇದಗಳಿರುವವೋ, ತೇ ಆ ವೇದಗಳು, ಹೃದಯೇಷು - ನಮ್ಮ ಮನಸ್ಸುಗಳಲ್ಲಿ, ಅವತಿಷ್ಠಂತಿ - ಇರುತ್ತವೆ, ದಾರಾಃ - ಹೆಂಡತಿಯರು, ಚಾರಿತ್ರರಕ್ಷಿತಾಃ, ಚಾರಿತ್ರ - ಪಾತಿವ್ರತ್ಯದಿಂದ, ರಕ್ಷಿತಾಃ - ರಕ್ಷಿಸಲ್ಪಟ್ಟು, ಗೃಹೇಷ್ವೇವ - ಮನೆಗಳಲ್ಲಿಯೇ, ವತ್ಸ್ಯಂತಿ - ಇರುವರು. ‖೨೫‖ ತ್ವದ್ಗತಾ - ನಿನ್ನನ್ನು ಹಿಂದಕ್ಕೆ ತಿರುಗಿಸುವದರಲ್ಲಿ, ಮತಿಃ - ಬುದ್ಧಿಯು, ಸುಕೃತಾ - ನಿಶ್ಚಯಿಸಲ್ಪಟ್ಟಿತು, ಪುನಃ - ಮತ್ತು, ನಿಶ್ಚಯಃ - ನಿಶ್ಚಯವು, ನಕಾರ್ಯಃ - ಮಾಡತಕ್ಕದಲ್ಲ, ತ್ವಯಿ - ನೀನು, ಧರ್ಮವ್ಯಪೇಕ್ಷೇತು - ಬ್ರಾಹ್ಮಣ ಪ್ರಾರ್ಥನಾರೂಪ ಧರ್ಮದಲ್ಲಿ ಹೋದಂತಹ ಅಪೇಕ್ಷೆಯುಳ್ಳವನಾದರೆ, ಕಿಂಧರ್ಮಂ - ಯಾವ ಧರ್ಮವು, ಅಪೇಕ್ಷಿತಂ - ಅಪೇಕ್ಷಿಸಲ್ಪಟ್ಟದುದು, ಸ್ಯಾತ್ - ಆದೀತು. ‖೨೬‖ ಹೇ ನಿಭೃತಾಚಾರ-ಎಲೈ ನಿಶ್ಚಂಚಲವಾದ ಧರ್ಮಾನುಷ್ಠಾನವುಳ್ಳವನೇ, ಮಹೀಪತನ ಪಾಂಸುಲೈಃ, ಮಹೀ - ನೆಲದಲ್ಲಿ, ಪತನ - ಬೀಳುವಿಕೆಯಿಂದ, ಪಾಂಸುಲೈಃ - ಧೂಳಿಗಳುಳ್ಳ, ಹಂಸ ಶುಕ್ಲ ಶಿರೋರುಹೈಃ, ಹಂಸ - ಹಂಸಪಕ್ಷಿಗಳಂತೆ, ಶುಕ್ಲ - ಬೆಳ್ಳಗಿರುವ, ಶಿರೋರುಹೈಃ - ತಲೆಕೂದಲುಗಳುಳ್ಳ, ನಃ - ನಮ್ಮ. ಶಿರೋಭಿಃ - ಮಂಡೆಗಳಿಂದ, ಯಾಚಿತಃ - ಪ್ರಾರ್ಥಿತನಾಗಿ, ನಿವರ್ತಸ್ವ - ಹಿಂತಿರುಗಿಬಾ. ‖ ೨೭ ‖ ಯೇ - ಯಾರು, ಇಹ - ಇಲ್ಲಿ, ಆಗತಾಃ - ಬಂದಿರುವರೋ, ತೇಷಾಂ- ಅಂತಹ, ಬಹೂನಾಂ - ಅನೇಕ, ದ್ವಿಜಾನಾಂ - ಬ್ರಾಹ್ಮಣರ, ಯಜ್ಞಾಃ - ಯಾಗಗಳು, ವಿತತಾಃ - ವಿಸ್ತಾರವಾದ ಸಾಮಗ್ರಿಗಳುಳ್ಳವುಗಳು, ತೇಷಾಂ - ಆ ಯಜ್ಞಗಳ, ಸಮಾಪ್ತಿಃ - ಪೂರ್ತಿಯು,

---

ಛತ್ರವು ಈಗಿಲ್ಲದಿರುವುದರಿಂದ ಇವುಗಳಿಂದ ನಿನಗೆ ನೆರಳನ್ನುಂಟುಮಾಡುತ್ತವೆ. ವತ್ಸನೆ ! ನಿರಂತರವೂ ವೇದಮಂತ್ರಗಳಲ್ಲಿಯೇ ಆಸಕ್ತವಾಗಿರುವ ನಮ್ಮ ಚಿತ್ತವೃತ್ತಿಯು, ವನವಾಸದಿಂದ ನಿನ್ನನ್ನು ನಿವೃತ್ತನನ್ನಾಗಿಮಾಡಲು ದೃಢವಾಗಿದೆ. ‖ ೨೧-೨೫ ‖ ನಮ್ಮೆಲ್ಲರಿಗೂ ಐಶ್ವರ್ಯದಂತಿರುವ ಯಾವ ವೇದಗಳಿರುವುವೋ, ಅವು ನಮ್ಮ ಮನೋಗೃಹದಲ್ಲಿಯೇ ಇರುತ್ತವೆ. ಪಾತಿವ್ರತ್ಯದಿಂದಲೇ ಸಂರಕ್ಷಿತರಾದ ನಮ್ಮ ಸತಿಯರು ನಮ್ಮ ಮನೆಗಳಲ್ಲಿಯೇ ಇರುತ್ತಾರೆ. ನಮ್ಮ ಮನಸ್ಸಾದರೋ ವನವಾಸವಿಷಯದಲ್ಲಿ ಕಲತ ಸಂಕಲ್ಪನಾದ ನಿನ್ನನ್ನು ಹಿಂತಿರುಗಿಸುವುದರಲ್ಲಿ ದೃಢವಾಗಿದೆ. ನೀನು ಬ್ರಾಹ್ಮಣರಾದ ನಮ್ಮ ಪ್ರಾರ್ಥನಾರೂಪ ಧರ್ಮವನ್ನು ನೆರವೇರಿಸಬೇಕು. ಇದಕ್ಕಿಂತಲೂ ನಿನಗೆ ಹೆಚ್ಚಿನದಾದ ಅನುಷ್ಠೇಯ ಧರ್ಮವಿಲ್ಲ. ನಿಶ್ಚಂಚಲವಾದ ನಿಯಮವುಳ್ಳ ಓ ಶ್ರೀರಾಮಮೂರ್ತಿಯೆ ! ನೆಲದುದ್ದದ

ರಾಯತ್ತಾ ತವ ವತ್ಸ ನಿವರ್ತನೇ ||೨೮|| ಭಕ್ತಿಮಂತಿ ಹಿ ಭೂತಾನಿ ಜಂಗಮಾ ಜಂಗಮಾನಿಚ || ಯಾಚಮಾನೇಷು ರಾಮ ತ್ವಂ ಭಕ್ತಿಂ ಭಕ್ತೇಷು ದರ್ಶಯ || ೨೯ || ಅನುಗಂತು ಮಶಕ್ತಾಸ್ತ್ವಾಂ ಮೂಲೈ ರುದ್ಧತ ವೇಗಿನಃ || ಉನ್ನತಾ ವಾಯುವೇಗೇನ ವಿಕ್ರೋಶಂತೀವ ಪಾದಪಾಃ || ೩೦ || ನಿಶ್ಚೇಷ್ಟಾಹಾರ ಸಂಚಾರಾ ವೃಕ್ಷೈಕ ಸ್ಥಾನ ವಿಷ್ಠಿತಾಃ || ಪಕ್ಷಿಣೋಪಿ ಪ್ರಯಾಚಂತೇ ಸರ್ವ

ಹೇ ವತ್ಸ - ಎಲೈ ಬಾಲಕನೆ, ತವ - ನಿನ್ನ, ನಿವರ್ತನೇ - ಹಿಂತಿರುಗಿಸುವಲ್ಲಿ, ಆಯತಾ - ಅಧೀನ ವಾಗಿದೆ. || ೨೮ || ಹೇ ರಾಮ - ಎಲೈ ಶ್ರೀರಾಮನೇ, ಹಿ - ಯಾವ ಕಾರಣ, ಜಂಗಮಾಜಂಗ ಮಾನಿ - ಚರಾಚರಾತ್ಮಕವಾದ, ಭೂತಾನಿ - ಪ್ರಾಣಿಗಳು, ಭಕ್ತಿಮಂತಿ - ನಿನ್ನಲ್ಲಿ ಭಕ್ತಿವುಳ್ಳವುಗ ಳಾಗಿವೆಯೋ, ತ್ವಂ - ಅಂತಹ ನೀನು, ಯಾಚಮಾನೇಷು - ಪ್ರಾರ್ಥನಾಪೂರ್ವಕವಾಗಿ ಬೇಡಿಕೊಳ್ಳು ತ್ತಿರುವ, ಭಕ್ತೇಷು - ಭಕ್ತರಲ್ಲಿ, ಭಕ್ತಿಂ - ವಿಶ್ವಾಸವನ್ನು, ದರ್ಶಯ - ತೋರಿಸು. || ೨೯ || ಮೂಲೈಃ - ಬುಡಗಳಿಂದ, ಉದ್ಧತವೇಗಿನಃ, ಉದ್ಧತ - ಹೊಡಿಯಲ್ಪಟ್ಟ, ವೇಗಿನಃ - ವೇಗವುಳ್ಳ, ಪಾದಪಾಃ - ಗಿಡಗಳು, ತ್ವಾಂ - ನಿನ್ನನ್ನು, ಅನುಗಂತುಂ - ಅನುಸರಿಸಿ ಬರುವದಕ್ಕೆ, ಅಶಕ್ತಾಃ - ಶಕ್ತಿಯಿಲ್ಲದವುಗಳಾಗಿ, ಉನ್ನತಾಃ - ದೊಡ್ಡವುಗಳಾಗಿ, ವಾಯುವೇಗೇನ - ಗಾಳಿಯ ವೇಗದಿಂದ, ವಿಕ್ರೋಶಂತೀವ - ಕೂಗುತ್ತವೋ ಎಂಬಂತಿವೆ. || ೩೦ || ನಿಶ್ಚೇಷ್ಟಾಹಾರಸಂಚಾರಃ - ಕಳೆದು ಹೋದ ಚಲನದಿಂದ ಆಹಾರಾರ್ಥವಾಗಿರುವ, ಸಂಚಾರಾಃ - ಸಂಚಾರಗಳುಳ್ಳವುಗಳಾಗಿ, ವೃಕ್ಷೈಕ ಸ್ಥಾನವಿಷ್ಠಿತಾಃ, ವೃಕ್ಷ - ಗಿಡಗಳೆಂಬ, ಏಕಸ್ಥಾನ - ಒಂದೇ ಸ್ಥಾನದಲ್ಲಿ, ವಿಷ್ಠಿತಾಃ - ಕುಳಿತಿರುವ, ಪಕ್ಷಿಣೋಪಿ - ಹಕ್ಕಿಗಳೂ, ಸರ್ವಭೂತಾನುಕಂಪನಂ, ಸರ್ವ - ಸಮಸ್ತಗಳಾದ, ಭೂತ - ಪ್ರಾಣಿಗ ಳಲ್ಲಿ, ಅನುಕಂಪನಂ - ದಯೆಯುಳ್ಳ ನಿನ್ನನ್ನು ಕುರಿತು, ಪ್ರಯಾಚಂತೇ - ಪ್ರಾರ್ಥನ ಮಾಡುತ್ತವೆ. || ೩೧ || ಏವಂ - ಈಪರಿಯಾಗಿ, ತೇಷಾಂದ್ವಿಜಾತೀನಾಂ - ಆ ಬ್ರಾಹ್ಮಣರು,

---

ಗಡ್ಡಗಳುಳ್ಳವರಾದುದರಿಂದ ಆ ಗಡ್ಡಗಳು ನೆಲದ ಧೂಳಿನಿಂದ ಮುಚ್ಚಲ್ಪಟ್ಟುವಾಗಿಯೂ, ನೆರತ ಕೂದಲುಗಳುಳ್ಳವುಗಳಾಗಿಯೂ ಇರುವುವು. ಇಂತಹ ಮುಂಡೆಗಳುಳ್ಳ ನಮ್ಮಿಂದ ಪ್ರಾರ್ಥಿತನಾದ ನೀನು ಹಿಂತಿರುಗುವವನಾಗು. ಇಲ್ಲಿ ನಿನ್ನನ್ನನುಸರಿಸಿ ಬಂದಿರುವ ಈ ವಿಪ್ರರ ಯಾಗ, ಮತ್ತು ಯಾಗ ಸಂಭಾರಗಳು ನಿನ್ನನ್ನು ಹಿಂತಿರುಗಿಸುವ ಕಾರ್ಯದಲ್ಲಿ ಆಸಕ್ತವಾಗಿವೆ. ಶ್ರೀರಾಮಚಂದ್ರ! ಚರಾಚರ ರೂಪವಾದ ಭೂತಗಳು ನಿನ್ನಲ್ಲಿ ಭಕ್ತಿ ಯುಳ್ಳವುಗಳಾಗಿವೆ. ಭಕ್ತಿಯಿಂದ ಬೇಡುತ್ತಿರುವ ಭಕ್ತರಾದ ನಮ್ಮಲ್ಲಿ ದಯೆಯನ್ನು ತೋರು. ವೃಕ್ಷಗಳು ಭೂಮಿಯಲ್ಲಿ ನೆಡಲ್ಪಟ್ಟ ಬೇರುಗಳುಳ್ಳವಾದ ಕಾರಣ ಬಂಧಿತ ವೇಗವುಳ್ಳವಾಗಿ ನಿನ್ನನ್ನು ಹಿಂಬಾಲಿಸಲು ಶಕ್ತಿಯಿಲ್ಲದೆ, ಮಹಾ ವಾತದಿಂದ ಮೊರೆಯಿ ಡುತ್ತಿರುವುವೋ ಎಂಬಂತಿವೆ! ಹಕ್ಕಿಗಳೂ ಸಹ ಗತಚಲನಾಹಾರವುಳ್ಳವಾಗಿ ಗಿಡಗಳ ಪೊಟರೆಗಳಲ್ಲಿ ನಿಂತು ಸರ್ವಭೂತ ದಯಾಪರನಾದ ನಿನ್ನನ್ನು ಹಿಂತಿರುಗೆಂದು ಬೇಡುತ್ತಿ ವೆಯೋ ಎಂಬಂತೆ ಕೂಗುತ್ತಿರುವುವು. ದಯೆತೋರು!" ಎಂಬೀ ಪ್ರಕಾರವಾಗಿ ವೃದ್ಧ ಬ್ರಾಹ್ಮಣರು ಬೇಡುತ್ತಿರಲು ತಮಸಾನದಿಯೂ ಸಹ ಶ್ರೀರಾಮಮೂರ್ತಿಯನ್ನು ಹಿಂತಿ

ಭೂತಾನುಕಂಪನಂ ॥ ೩೦ ॥ ಏವಂ ವಿಕ್ರೋಶತಾಂ ತೇಷಾಂ ದ್ವಿಜಾತೀನಾಂ ನಿವರ್ತನೇ ॥ ದದೃಶೇ ತಮಸಾ ತತ್ರ ವಾರಯಂತೀವ ರಾಘವಂ ॥ ೩೧ ॥

ತತಸ್ಸುಮಂತ್ರೋಪಿ ರಥಾದ್ವಿಮುಚ್ಯ
ಶ್ರಾಂತಾನ್ ಹಯಾನ್ ಸಂಪರಿವರ್ತ್ಯ ಶೀಘ್ರಂ ॥
ಪೀತೋದಕಾಂ ಸ್ತೋಯಪರಿಪ್ಲುತಾಂಗಾ
ನಚಾರಯದ್ವೈ ತಮಸಾ ವಿದೂರೇ ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಚತ್ವಾರಿಂಶಸ್ಸರ್ಗಃ.

ನಿವರ್ತನೇ - ಹಿಂತಿರುಗಿಸಲು, ವಿಕ್ರೋಶತಾಂಸತಾಂ - ಕೂಗುತ್ತಿರುವರಾಗಿಯೇ, ತತ್ರ - ಆ ಮಾರ್ಗದಲ್ಲಿ, ರಾಘವಂ - ಶ್ರೀರಾಮನನ್ನು, ವಾರಯಂತೀವ - ತಡೆಮಾಡುತ್ತದೆಯೋ ಎಂಬಂತೆ, ತಮಸಾ-ತಮಸಾನದಿಯು, ದದೃಶೇ - ಕಾಣಲ್ಪಟ್ಟಿತು. ॥ ೩೧ ॥ ತತಃ - ಬಳಿಕ, ಸುಮಂತ್ರೋಪಿ - ಸುಮಂತ್ರನೂ, ಶ್ರಾಂತಾನ್ - ಬಳಲಿದ, ಹಯಾನ್ - ಕುದುರೆಗಳನ್ನು, ರಥಾತ್ - ರಥದಿಂದ, ವಿಮುಚ್ಯ - ಬಿಚ್ಚಿ, ಶೀಘ್ರಂ - ಜಾಗ್ರತೆಯಾಗಿ, ಸಂಪರಿವರ್ತ್ಯ - ಪರಿವರ್ತನಮಾಡಿಸಿ, ತೋಯಪರಿಪ್ಲುತಾಂಗಾನ್, ತೋಯ - ನೀರಿನಿಂದ, ಪರಿಪ್ಲುತ - ನೆನಸಲ್ಪಟ್ಟ, ಅಂಗಾನ್ - ಅವಯವಗಳುಳ್ಳ, ಪೀತೋದಕಾನ್, ಪೀತ - ಪಾನಮಾಡಲ್ಪಟ್ಟ, ಉದಕಾನ್ - ಉದಕಗಳುಳ್ಳ, ತಾನ್ - ಆ ಕುದುರೆಗಳನ್ನು, ತಮಸಾವಿದೂರೇ, ತಮಸಾ - ತಮಸಾನದಿಯ, ಅವಿದೂರೇ - ಸಮೀಪದಲ್ಲಿ, ಅಚಾರಯತ್-ಹುಲ್ಲುಮೇಯಿಸಿದನು. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಚತ್ವಾರಿಂಶಸ್ಸರ್ಗಃ.

ರುಗಿಸುವುದೋ ಎಂಬಂತೆ ಕಾಣಿಸಿತು. ॥ ೨೬-೩೧ ॥ ಆಗ ಸುಮಂತ್ರನು ತಮಸಾನದಿಯ ಸಮೀಪದಲ್ಲಿ ರಥವನ್ನು ನಿಲ್ಲಿಸಿ ದೂರಪ್ರಯಾಣದಿಂದ ಬಳಲಿದ ಕುದುರೆಗಳನ್ನು ರಥದಿಂದ ಬಿಚ್ಚಿ, ನೀರನ್ನು ಕುಡಿಸಿ, ಹುಲ್ಲುಮೇಯಿಸಿ ವಿಶ್ರಾಂತಿಗೊಳಿಸಿದನು. ॥ ೩೨ ॥

ಇಂತಿದು ಶ್ರೀರಾಮ ಕೃತ ತಮಸಾಪ್ರಾಪಣ ವೃತ್ತಾಂತ ಕಥನವೆಂಬ
ನಲವತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಟ್ಚತ್ವಾರಿಂಶಸ್ಸರ್ಗಃ.

ತತಸ್ತು ತಮಸಾ ತೀರಂ ರಮ್ಯಮಾಶ್ರಿತ್ಯ ರಾಘವಃ|| ಸೀತಾಮುದ್ವೀಕ್ಷ್ಯ ಸೌಮಿತ್ರಿಮಿದಂ ವಚನ ಮಬ್ರವೀತ್ ||೧|| ಇಯಮದ್ಯ ನಿಶಾ ಪೂರ್ವಾ ಸೌಮಿತ್ರೇ ಪ್ರಹಿತಾ ವನಂ|| ವನವಾಸಸ್ಯ ಭದ್ರಂ ತೇ ಸನೋತ್ಕಂಠಿತು ಮರ್ಹಸಿ ||೨|| ಪಶ್ಯ ಶೂನ್ಯಾನ್ಯರಣ್ಯಾನಿ ರುದಂತೀವ ಸಮಂತತಃ || ಯಥಾ ನಿಲಯಮಾಯದ್ಭಿ ರ್ನಿಲೀನಾನಿ ಮೃಗದ್ವಿಜೈಃ ||೩|| ಅದ್ಯಾಯೋಧ್ಯಾತು ನಗರೀ ರಾಜಧಾನೀ ಪಿತುರ್ಮಮ || ಸ ಸ್ತ್ರೀಪುಂಸಾ ಗತಾನಸ್ಮಾ ಛೋಕ್ಷ್ಯತಿ

ತತಸ್ತು - ಆ ಬಳಿಕ, ರಾಘವಃ - ಶ್ರೀರಾಮನು, ರಮ್ಯಂ - ಮನೋಹರವಾದ, ತಮಸಾತೀರಂ - ತಮಸಾನದಿಯ ದಡವನ್ನು, ಆಶ್ರಿತ್ಯ - ಹೊಂದಿ, ಸೀತಾಂ - ಸೀತಾದೇವಿಯನ್ನು, ಉದ್ವೀಕ್ಷ್ಯ - ನೋಡಿ, ಸೌಮಿತ್ರಿಂ - ಲಕ್ಷ್ಮಣನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ||೧|| ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ವನವಾಸಸ್ಯ - ವನವಾಸಕ್ಕೆ, ಪೂರ್ವಾ ಮೊದಲಾದ, ಅದ್ಯ - ಈಗ, ಇಯಂನಿಶಾ - ಈ ರಾತ್ರಿಯು, ಪ್ರಹಿತಾ - ಸಂಪ್ರಾಪ್ತವಾಗಿದೆ, ಸಃ - ಅಂತಹ ನೀನು, ವನಂ - ವನವನ್ನು ಕುರಿತು, ಉತ್ಕಂಠಿತುಂ - ಸೀತೆಯನ್ನು ನೋಡಿ ಇಂತಹ ವನವನ್ನು ಕುರಿತು, ಈ ಸೀತಾದೇವಿಯು ಹೇಗೆ ನಡೆದುಬರುತ್ತಾಳೆಂಬ ಯೋಚನೆಯನ್ನು ಹೊಂದಲು, ನಾರ್ಹಸಿ-ಯೋಗ್ಯನಾಗಬೇಡ. ||೨|| ಶೂನ್ಯಾನಿ - ಜನರಹಿತಗಳಾದ, ಅರಣ್ಯಾನಿ - ಅರಣ್ಯಗಳು, ಸಮಂತತಃ - ಎಲ್ಲೆಡೆಗಳಲ್ಲಿಯೂ, ರುದಂತೀವ - ರೋದನಮಾಡುತ್ತವೋ ಎಂಬಂತೆ, ಯಥಾನಿಲಯಂ - ಯಥಾಸ್ಥಾನವನ್ನು ಕುರಿತು, ಆಯದ್ಭಿಃ - ಬರುತ್ತಿರುವ, ಮೃಗದ್ವಿಜೈಃ - ಮೃಗಗಳಿಂದಲೂ ಹಕ್ಕಿಗಳಿಂದಲೂ, ನಿಲೀನಾನಿ - ವ್ಯಾಪ್ತಗಳಾಗಿವೆ. ||೩|| ಅದ್ಯ - ಈಗ, ಮಮ-ನನ್ನ, ಪಿತುಃ - ತಂದೆಗೆ, ರಾಜಧಾನೀ - ಪ್ರಧಾನ ನಗರವಾದ, ಅಯೋಧ್ಯಾನಗರೀತು - ಅಯೋಧ್ಯಾ

ಆ ಮೇಲೆ ಶ್ರೀರಾಮನು ಮನೋರಂಜಕವಾದ ತಮಸಾನದಿಯ ತೀರವನ್ನು ಹೊಂದಿ ಸೀತಾದೇವಿಯನ್ನು ನೋಡಿ, ಲಕ್ಷ್ಮಣಸ್ವಾಮಿಯನ್ನು ಕುರಿತು, "ಲಕ್ಷ್ಮಣ! ನಿನಗೆ ಮಂಗಳವಾಗಲಿ; ವನವಾಸಕ್ಕೆ ಮೊದಲನೆಯದಾದ ಈ ರಾತ್ರಿಯು ಪ್ರಾಪ್ತವಾಗಿರುವುದು. ಭೋಗಾರ್ಹವಾದ ಅರಮನೆಯಲ್ಲಿ ಸುಖದಿಂದಿದ್ದ ಸುಕುಮಾರಿಯಾದ ಸೀತಾದೇವಿಯು ಈ ಅರಣ್ಯದಲ್ಲಿ ಕಾಲ್ನಡಿಗೆಯಿಂದ ಹೇಗೆತಾನೆ ಬರುತ್ತಾಳೆಂದು ಯೋಚಿಸಬೇಡ! ಶೂನ್ಯವಾಗಿಯೂ, ತೇಜೋಹೀನವಾಗಿಯೂ ಇರುವ ಈ ಅರಣ್ಯವನ್ನು ನೋಡು. ಅಲ್ಲಲ್ಲಿ ಮೃಗಪಕ್ಷಿಗಳು ತಮ್ಮ ತಮ್ಮ ಸ್ಥಾನಗಳನ್ನು ಸೇರುತ್ತಿವೆ. ಪಕ್ಷಿಗಳ ಧ್ವನಿಗಳಿಂದ ಈ ವನವು ರೋದನಮಾಡುತ್ತಿರುವಂತಿರುವುದೋ ಎಂಬಂತೆ ಭಯಂಕರವಾಗಿದೆ. ನಮ್ಮ

ನಸಂಶಯಃ ‖ ೪ ‖ ಅನುರಕ್ತಾಹಿ ಮನುಜಾ ರಾಜಾನಂ ಬಹುಭಿರ್ಗುಣೈಃ ‖ ತ್ವಾಂಚ ಮಾಂಚ ನರವ್ಯಾಘ್ರ ಶತ್ರುಘ್ನ ಭರತೌ ತಥಾ ‖ ೫ ‖ ಪಿತರಂ ಚಾನುಶೋಚಾಮಿ ಮಾತರಂಚ ಯಶಸ್ವಿನೀಂ ‖ ಅಪಿವಾಂಧೌ ಭವೇತಾಂತು ರುದಂತೌ ತಾವಭೀಕ್ಷ್ಣಶಃ ‖ ೬ ‖ ಭರತಃ ಖಲು ಧರ್ಮಾತ್ಮಾ ಪಿತರಂ ಮಾತರಂಚ ಮೇ ‖ ಧರ್ಮಾರ್ಥ ಕಾಮಸಹಿತೈರ್ವಾಕ್ಯೈ ರಾಶ್ವಾಸಯಿಷ್ಯತಿ ‖ ೭ ‖ ಭರತಸ್ಯಾನೃಶಂಸತ್ವಂ ವಿಚಿಂತ್ಯಾಹಂ ಪುನಃ ಪುನಃ ‖ ನಾನು ಶೋಚಾಮಿ ಪಿತರಂ ಮಾತರಂ ಚಾಪಿ ಲಕ್ಷ್ಮಣ ‖ ೮ ‖ ತ್ವಯಾ ಕಾರ್ಯಂ

ಪಟ್ಟಣವಾದರೆ, ಸಸ್ತ್ರೀಪುಂಸಾ - ಸ್ತ್ರೀಪುರುಷರಿಂದೊಡಗೂಡಿ, ಆಗರ್ತಾ - ಹೊರಟುಬಂದ, ಅಸ್ಮಾನ್- ನಮ್ಮನ್ನು ಕುರಿತು, ಶೋಚಿಷ್ಯತಿ - ದುಃಖಿಸುತ್ತದೆ, ನಸಂಶಯಃ - ಇದಕ್ಕೆ ಸಂದೇಹವಿಲ್ಲ. ‖೪‖ ಹೇ ನರವ್ಯಾಘ್ರ - ಎಲೈ ಮನುಜಶ್ರೇಷ್ಠನೇ, ಮನುಜಾಃ - ಮನುಷ್ಯರು, ಬಹುಭಿಃ - ಅನೇಕವಾದ, ಗುಣೈಃ - ಗುಣಗಳಿಂದ, ರಾಜಾನಂ - ಒಡೆಯನನ್ನೂ, ತ್ವಾಂಚ - ನಿನ್ನನ್ನೂ, ತಥಾ - ಹಾಗೆಯೇ, ಶತ್ರುಘ್ನಭರತೌ - ಶತ್ರುಘ್ನಭರತರನ್ನು ಕುರಿತು, ಅನುರಕ್ತಾಹಿ - ಅನುರಾಗವುಳ್ಳವರಷ್ಟೆ. ‖ ೫ ‖ ಅಭೀಕ್ಷ್ಣಶಃ - ಬಾರಿಬಾರಿಗೂ, ರುದಂತೌ - ಅಳುತ್ತಿರುವ, ತೌ - ಆ ತಾಯಿತಂದೆಗಳು, ಅಂಧೌ - ರೋದನವಶದಿಂದ ಅಂಧರಾದವರು, ಭವೇತಾಂವಾಪಿ - ಆಗುವರೋ ಏನೋ, ಇತಿ - ಇಂತೆಂದು, ಪಿತರಂ - ತಂದೆಯನ್ನೂ, ಯಶಸ್ವಿನೀ - ಕೀರ್ತಿವಂತಳಾದ, ಮಾತರಂಚಾಪಿ - ತಾಯಿಯನ್ನೂ ಕುರಿತು, ಅನುಶೋಚಾಮಿ - ವ್ಯಸನಪಡುತ್ತೇನೆ. ‖ ೬ ‖ ಧರ್ಮಾತ್ಮಾ - ಧರ್ಮಿಷ್ಠನಾದ, ಭರತಃ - ಭರತನು, ಪಿತರಂ - ತಂದೆಯಾದ ದಶರಥರಾಯನನ್ನೂ, ಮೇ - ನನ್ನ, ಮಾತರಂಚ - ತಾಯಿಯನ್ನೂ, ಧರ್ಮಾರ್ಥಕಾಮಸಹಿತೈಃ - ಧರ್ಮದಿಂದಲೂ, ಅರ್ಥದಿಂದಲೂ, ಕಾಮದಿಂದಲೂ ಕೂಡಿರುವ, ವಾಕ್ಯೈಃ - ಮಾತುಗಳಿಂದ, ಆಶ್ವಾಸಯಿಷ್ಯತಿಖಲು - ಸಮಾಧಾನಗೊಳಿಸುವನಷ್ಟೆ. ‖ ೭ ‖ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಭರತಸ್ಯ - ಭರತನ, ಆನೃಶಂಸತ್ವಂ-ಘಾತಕತನವಿಲ್ಲ ದಿರುವಿಕೆಯನ್ನು, ಅಹಂ - ನಾನು, ಪುನಃ ಪುನಃ - ಬಾರಿಬಾರಿಗೂ, ವಿಚಿಂತ್ಯ - ಆಲೋಚಿಸಿ, ಪಿತರಂ - ತಂದೆಯನ್ನೂ, ಮಾತರಂಚಾಪಿ - ತಾಯಿಯನ್ನೂ ಕುರಿತು, ನಾನುಶೋಚಾಮಿ - ದುಃಖಿ

ತಂದೆಯಾದ ದಶರಥರಾಯನ ರಾಜಧಾನಿಯಾದ ಅಯೋಧ್ಯಾನಗರವು ನಮ್ಮನ್ನು ಕುರಿತು ದುಃಖಿಸುತ್ತಲೇ ಇರುವುದು. ಈ ವಿಷಯದಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಆ ಪಟ್ಟಣದಲ್ಲಿರುವ ಜನಗಳೆಲ್ಲರೂ, ತಮ್ಮೊಡೆಯನಾದ ದಶರಥರಾಜನ ವಿಷಯದಲ್ಲಿಯೂ, ನನ್ನಲ್ಲಿಯೂ, ನಿನ್ನಲ್ಲಿಯೂ, ಭರತನಲ್ಲಿಯೂ ಅತಿಶಯವಾದ ಪ್ರೀತಿಯನ್ನುಳ್ಳವರಾಗಿರು ವರು. ‖ ೧-೫ ‖ ಅಡಿಗಡಿಗೂ ಅಳುತ್ತಿರುವ ಆ ತಂದೆತಾಯಿಗಳಿಬ್ಬರಿಗೂ ಅತ್ತತ್ತು ಬೇಸತ್ತು ಕುರುಡರಾಗಿಹೋಗುತ್ತಾರಲ್ಲ ! ಎಂದು ವ್ಯಸನಪಡುತ್ತೇನೆ. ಆದರೆ ಧರ್ಮಿ ಷ್ಠನಾದ ಭರತನು, ದಶರಥ ಮಹಾರಾಜನನ್ನೂ, ನನ್ನ ತಾಯಿಯಾದ ಕೌಸಲ್ಯಾದೇವಿ ಯನ್ನೂ, ಧರ್ಮದಿಂದಲೂ, ಅರ್ಥದಿಂದಲೂ, ಕಾಮದಿಂದಲೂ ಒಡಗೂಡಿರುವ ಮಾತುಗ ಳಿಂದ ಸಮಾಧಾನಗೊಳಿಸುತ್ತಾನೆ. ಅದನ್ನು ಯೋಚಿಸಿ ಅವರಿಗಾಗಿ ಯೋಚನೆಮಾಡು

ನರವ್ಯಾಘ್ರ ಮಾಮನುಪ್ರಜತಾ ಕೃತಂ ॥ ಅನ್ವೇಷ್ಟವ್ಯಾಹಿ ವೈದೇಹ್ಯಾ ರಕ್ಷಣಾರ್ಥೇ ಸಹಾಯತಾ ॥೯॥ ಅದ್ಭಿರೇವತು ಸೌಮಿತ್ರೇ ವತ್ಸ್ಯಾಮ್ಯದ್ಯ ನಿಶಾಮಿಮಾಂ ॥ ಏತದ್ಧಿ ರೋಚತೇ ಮಹ್ಯಂ ವನ್ಯೇಪಿ ವಿವಿಧೇ ಸತಿ ॥೧೦॥ ಏವಮುಕ್ತ್ವಾತು ಸೌಮಿತ್ರಿಂ ಸುಮಂತ್ರಮಪಿ ರಾಘವಃ ॥ ಅಪ್ರಮತ್ತ ಸ್ತ್ವಮಶ್ವೇಷು ಭವ ಸಾಮ್ಯೇತ್ಯುವಾಚಹ ॥೧೧॥ ಸೋಽಶ್ವಾ ಸುಮಂತ್ರ ಸ್ಸಂಯಮ್ಯ ಸೂರ್ಯೇಽಸ್ತಂಸಮುಪಾಗತೇ ॥ ಪ್ರಭೂತ ಯವಸಾ ಕೃತ್ವಾ ಬಭೂವ ಪ್ರತ್ಯನಂತರಃ ॥೧೨॥ ಉಪಾಸ್ಯತು ಶಿವಾಂ ಸಂಧ್ಯಾಂ ದೃಷ್ಟ್ವಾ ರಾತ್ರಿ

ಸುವದಿಲ್ಲ. ॥೮॥ ಹೇ ನರವ್ಯಾಘ್ರ-ಎಲೈ ಪುರುಷಶ್ರೇಷ್ಠನೇ, ಮಾಂ - ನನ್ನನ್ನು, ಅನುವ್ರಜತಾ-ಅನುಸರಿಸಿಬರುತ್ತಿರುವ, ತ್ವಯಾ-ನಿನ್ನಿಂದ, ಕಾರ್ಯಂ-ಮಾಡತಕ್ಕ ಕೆಲಸವು ,ಕೃತಂ-ಮಾಡಲ್ಪಟ್ಟೀ ಇದೆ, ಹಿ - ಯಾವ ಕಾರಣ, ವೈದೇಹ್ಯಾಃ-ಸೀತಾದೇವಿಯ, ರಕ್ಷಣಾರ್ಥೇ-ಸಂರಕ್ಷಣಾರ್ಥವಾಗಿ,ಸಹಾಯತಾ - ಸಹಾಯಕರ್ಮವು, ಅನ್ವೇಷ್ಟವ್ಯಾ-ಹುಡುಕತಕ್ಕದ್ದೋ !೯॥ ಹೇಸೌಮಿತ್ರೇ-ಎಲೈ ಲಕ್ಷ್ಮಣನೇ, ಅದ್ಯ-ಈಗ, ಇಮಾಂನಿಶಾಂ-ಈರಾತ್ರಿಯಲ್ಲಿ,ಅದ್ಭಿರೇವತು-ಉದಕಮಾತ್ರದಿಂದಲೇ,ವತ್ಸ್ಯಾಮಿ-ಇರುವೆನು, ವನ್ಯೇ - ವನದಲ್ಲಿ ಹುಟ್ಟಿದ, ವಿವಿಧೇಸತಿ - ನಾನಾ ವಿಧವಾದ ವಸ್ತುಗಳಿದ್ದರೂ, ಏತದ್ಧಿ-ಇದೇ, ಮಹ್ಯಂ - ನನಗೆ, ರೋಚತೇ - ರುಚಿಸುವುದು. ॥೧೦॥ ರಾಘವಸ್ತು - ಶ್ರೀರಾಮನಾದರೆ, ಸೌಮಿತ್ರಿಂ - ಲಕ್ಷ್ಮಣನನ್ನೂ, ಸುಮಂತ್ರಮಪಿ - ಸುಮಂತ್ರನನ್ನೂ ಕುರಿತು, ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಹೇ ಸೌಮ್ಯ - ಎಲೈ ಸೌಮ್ಯನಾದ ಸುಮಂತ್ರನೇ, ತ್ವಂ - ನೀನು, ಅಶ್ವೇಷು - ಕುದುರೆಗಳ ವಿಷಯದಲ್ಲಿ, ಅಪ್ರಮತ್ತಃ - ಜಾಗರೂಕನು, ಭವ-ಆಗು,ಇತಿ-ಇಂತೆಂದು, ಉವಾಚಹ - ಹೇಳಿದನಷ್ಟೆ. ॥೧೧॥ ಸೂರ್ಯೇ - ಸೂರ್ಯನು, ಅಸ್ತಂ - ಅಸ್ತಮಾನವನ್ನು, ಸಮುಪಾಗತೇ - ಹೊಂದಲು, ಸಸುಮಂತ್ರಃ - ಆ ಸುಮಂತ್ರನು, ಅಶ್ವಾ - ಕುದುರೆಗಳನ್ನು, ಸಂಯಮ್ಯ - ಕಟ್ಟಿ, ಪ್ರಭೂತಯವಸಾ, ಪ್ರಭೂತ - ಅಧಿಕವಾದ, ಯವಸಾ-ಗ್ರಾಸಗಳುಳ್ಳವುಗಳನ್ನಾಗಿ, ಕೃತ್ವಾ - ಮಾಡಿ, ಪ್ರತ್ಯನಂತರಃ - ಸಮೀಪದಲ್ಲಿರುವವನು, ಬಭೂವ - ಆದನು. ॥೧೨॥

ವುದಿಲ್ಲ. ಓ ಪುರುಷ ಪುಂಗವನಾದ ಲಕ್ಷ್ಮಣಮೂರ್ತಿಯೆ ! ನನ್ನನ್ನನುಸರಿಸಿ ಬಂದಿರುವ ನೀನು, ಸೀತಾದೇವಿಯನ್ನು ಸಂರಕ್ಷಿಸುವ ವಿಷಯದಲ್ಲಿ ಸಹಾಯಕನಾಗಿರು. ಇಂದಿನ ರಾತ್ರಿ ನಾನು ಕೇವಲ ಉದಕಾಹಾರ ಮಾತ್ರದಿಂದಿರುತ್ತೇನೆ. " ಎಂದು ಹೇಳಿ ಸುಮಂತ್ರನನ್ನು ಕುರಿತು, " ಅಯ್ಯಾ ಸುಮಂತ್ರನೆ ! ನೀನು ಕುದುರೆಗಳ ವಿಷಯದಲ್ಲಿ ಜಾಗರೂಕನಾಗಿರು " ಎಂದು ಮಾತ್ರ ನುಡಿದವನಾದನು. ॥ ೬-೧೦ ॥ ಆ ಬಳಿಕಲಾ ಸುಮಂತ್ರನು ಸೂರ್ಯಾಸ್ತಮಯವಾದ ಬಳಿಕ ಕುದುರೆಗಳಿಗೆ ಹುಲ್ಲುಮೇಯಿಸಿ, ಕಟ್ಟಿಹಾಕಿ ಶ್ರೀರಾಮ ಸನ್ನಿಧಿಗೈತಂದು, ಲಕ್ಷ್ಮಣನೊಡಗೂಡಿ, ಸಂಧ್ಯಾದೇವತೆಯನ್ನುಪಾಸಿಸಿ, ರಘುಪುಂಗವನಿಗೆ ಹಾಸಿಗೆಯನ್ನು ಹಾಸಿದವನಾದನು. ಬಳಿಕ ಶ್ರೀರಾಮನು, ತಮಸಾತೀರದಲ್ಲಿ ಚಿಗುರುಗಳಿಂದ ಮಾಡಲ್ಪಟ್ಟ ಹಾಸಿಗೆಯನ್ನು ನೋಡಿ, ಸೀತಾರಮಣಿಯೊಡಗೂಡಿ ಆ ಹಾಸಿಗೆಯಲ್ಲಿ ಕುಳಿತುಕೊಂಡನು. ಲಕ್ಷ್ಮಣನು ಈರೀತಿ ಭಾರ್ಯಾ ಸಮೇತನಾಗಿ

ಮುಪಸ್ಥಿತಾಂ ॥ ರಾಮಸ್ಯ ಶಯನಂ ಚಕ್ರೇ ಸೂತ ಸ್ಸೌಮಿತ್ರಿಣಾ ಸಹ ॥೧೩॥ ತಾಂ ಶಯ್ಯಾಂ ತಮಸಾತೀರೇ ವೀಕ್ಷ್ಯ ವೃಕ್ಷದಳೈಃ ಕೃತಾಂ ॥ ರಾಮ ಸ್ಸೌಮಿತ್ರಿಣಾ ಸಾರ್ಧಂ ಸಭಾರ್ಯ ಸ್ಸಂವಿವೇಶಹ ॥೧೪॥ ಸಭಾರ್ಯಂ ಸಂಪ್ರಸುಪ್ತಂ ತಂ ಭ್ರಾತರಂ ವೀಕ್ಷ್ಯ ಲಕ್ಷ್ಮಣಃ ॥ ಕಥಯಾಮಾಸ ಸೂತಾಯ ರಾಮಸ್ಯ ವಿವಿಧಾ೯ ಗುಣಾ೯ ॥೧೫॥ ಜಾಗ್ರತೋ ಹ್ಯೇವ ತಾಂ ರಾತ್ರಿಂ ಸೌಮಿತ್ರೇ ರುದಿತೋ ರವಿಃ ॥ ಸೂತಸ್ಯ ತಮಸಾ ತೀರೇ ರಾಮಸ್ಯ ಬ್ರುವತೋ ಗುಣಾ೯ ॥೧೬॥ ಗೋಕುಲಾಕುಲ ತೀರಾಯಾ ಸ್ತಮಸಾಯಾ ವಿದೂರತಃ ॥ ಅವಸತ್ತತ್ರ ತಾಂ ರಾತ್ರಿಂ ರಾಮಃ ಪ್ರಕೃತಿಭಿ ಸ್ಸಹ ॥೧೭॥ ಉತ್ಥಾಯಚ

ಸೂತಸ್ತು - ಸಾರಥಿಯಾದರೆ, ಸೌಮಿತ್ರಿಣಾಸಹ - ಲಕ್ಷ್ಮಣನೊಡನೆ, ಶಿವಾಂ - ಶುಭಕರವಾದ, ಸಂಧ್ಯಾ - ಸಂಧ್ಯಾದೇವಿಯನ್ನು, ಉಪಾಸ್ಯ - ಧ್ಯಾನಿಸಿ, ಉಪಸ್ಥಿತಾಂ - ಪ್ರಾಪ್ತವಾದ, ರಾತ್ರಿಂ - ರಾತ್ರಿಯನ್ನು, ದೃಷ್ಟ್ವಾ - ಕಂಡು, ರಾಮಸ್ಯ - ಶ್ರೀರಾಮನಿಗೆ, ಶಯನಂ - ಹಾಸಿಗೆಯನ್ನು, ಚಕ್ರೇ- ಮಾಡಿಕೊಟ್ಟನು. ॥೧೩॥ ರಾಮಃ - ಶ್ರೀರಾಮನು, ತಮಸಾತೀರೇ - ತಮಸಾನದಿಯ ದಡದಲ್ಲಿ, ವೃಕ್ಷದಳೈಃ - ಗಿಡಗಳ ಚಿಗುರುಗಳಿಂದ, ಕೃತಾಂ - ಮಾಡಲ್ಪಟ್ಟ, ತಾಂಶಯ್ಯಾಂ - ಆ ಹಾಸಿಗೆಯನ್ನು, ದೃಷ್ಟ್ವಾ - ಕಂಡು, ಸೌಮಿತ್ರಿಣಾಸಾರ್ಧಂ - ಲಕ್ಷ್ಮಣನಿಂದಲೂ, ಸಭಾರ್ಯಃ - ಭಾರ್ಯೆಯಿಂದೊಡಗೂಡಿ, ಸಂವಿವೇಶಹ - ಕುಳಿತುಕೊಂಡನಷ್ಟೆ. ॥೧೪॥ ಲಕ್ಷ್ಮಣಃ - ಲಕ್ಷ್ಮಣನು, ಸಭಾರ್ಯಂ - ಪತ್ನೀ ಸಹಿತನಾಗಿ, ಸಂಪ್ರಸುಪ್ತಂ - ಮಲಗಿರುವ, ತಂಭ್ರಾತರಂ - ಆ ಅಣ್ಣನನ್ನು, ವೀಕ್ಷ್ಯ - ಕಂಡು, ರಾಮಸ್ಯ - ಶ್ರೀರಾಮನ, ವಿವಿಧಾ೯ - ನಾನಾ ವಿಧಗಳಾದ, ಗುಣಾ೯ - ಗುಣಗಳನ್ನು, ಸೂತಾಯ - ಸಾರಥಿಯಾದ ಸುಮಂತ್ರನಿಗೆ, ಕಥಯಾಮಾಸ- ಹೇಳಿದನು. ॥೧೫॥ ತಮಸಾತೀರೇ - ತಮಸಾ ನದಿಯ ದಡದಲ್ಲಿ, ತಾಂರಾತ್ರಿಂ - ಆ ರಾತ್ರಿಯಲ್ಲಿ, ಸೂತಸ್ಯ - ಸಾರಥಿಗೆ, ರಾಮಸ್ಯ - ಶ್ರೀರಾಮನ, ಗುಣಾ೯ - ಸೌಶೀಲ್ಯಾದಿ ಗುಣಗಳನ್ನು, ಬ್ರುವತಃ - ಹೇಳುತ್ತಿರುವ, ಸೌಮಿತ್ರೇಃ-ಲಕ್ಷ್ಮಣನು, ಜಾಗ್ರತಃ - ಎಚ್ಚರಿಕೆಯಾಗಿರುವಾಗಲೆ, ರವಿಃ- ಸೂರ್ಯನು, ಉದಿತಃ - ಉದಯಿಸಿದನು. ॥೧೬॥ ರಾಮಃ - ಶ್ರೀರಾಮನು, ಗೋಕುಲಾಕುಲತೀರಾಯಾಃ, ಗೋಕುಲ - ಗೋವ್ರಜದಿಂದ, ಆಕುಲ - ವ್ಯಾಕುಲವಾದ, ತೀರಾಯಾಃ - ದಡವುಳ್ಳ, ತಮಸಾಯಾಃ - ತಮಸಾ ನದಿಯ, ಅವಿದೂರತಃ - ಸಮೀಪದಲ್ಲಿರುವ, ತತ್ರ - ಆ ಪ್ರದೇಶದಲ್ಲಿ, ಪ್ರಕೃತಿಭಿಸ್ಸಹ - ಜನಗಳೊಡನೆ, ತಾಂರಾತ್ರಿಂ - ಆ ರಾತ್ರಿಯಲ್ಲಿ, ಅವಸತ್ ಇದ್ದನು. ॥೧೭॥

ಮಲಗಿರುವ ಶ್ರೀರಾಮನನ್ನು ಕಂಡು, ಆತನ ಗುಣಗಳನ್ನು ಸಾರಥಿಯಾದ ಸುಮಂತ್ರನೊಡನೆ ಹೇಳಿದವನಾದನು. ॥೧೧-೧೫॥ ಈರೀತಿ ಲಕ್ಷ್ಮಣಸ್ವಾಮಿಯು ಸುಮಂತ್ರನೊಡನೆ ಶ್ರೀರಾಮಗುಣಾನುವಾದವನ್ನು ಮಾಡುತ್ತಿರಲು ಆ ರಾತ್ರಿಯು ಕಳೆದು ಭಗವಾ೯ ಭಾಸ್ಕರನುದಯಿಸಿದನು. ಈ ರೀತಿಯಾಗಿ ಶ್ರೀರಾಮಮೂರ್ತಿಯು ಗೋಸಂಘದಿಂದ ವ್ಯಾಕುಲವಾದ ತೀರವುಳ್ಳ ತಮಸಾನದೀ ಸಮೀಪದಲ್ಲಿ ಆ ರಾತ್ರಿ ಸುಖವಾಗಿದ್ದು ಎಚ್ಚರಗೊಂಡವನಾಗಿ ಅಲ್ಲಿಯೇ ಸುಖ ಸುಪ್ತರಾಗಿದ್ದ ಜನಗಳನ್ನು ಕಂಡು ಲಕ್ಷ್ಮಣನನ್ನು ಕುರಿತು,

ಮಹಾತೇಜಾಃ ಪ್ರಕೃತೀ ಸ್ತಾನಿ ಶಾಮ್ಯಚ ॥ ಅಬ್ರವೀದ್ಭ್ರಾತರಂ ರಾಮೋ ಲಕ್ಷ್ಮಣಂ ಪುಣ್ಯಲಕ್ಷಣಂ ॥ ೧೮ ॥ ಅಸ್ಮದ್ವ್ಯಪೇಕ್ಷಾನ್ ಸೌಮಿತ್ರೇ ನಿರಪೇಕ್ಷಾನ್ ಗೃಹೇಷ್ವಪಿ ॥ ವೃಕ್ಷಮೂಲೇಷು ಸಂಸುಪ್ತಾನ್ ಪಶ್ಯ ಲಕ್ಷ್ಮಣ ಸಾಂಪ್ರತಂ ॥ ೧೯ ॥ ಯಥೈತೇ ನಿಯಮಂ ಪೌರಾಃ ಕುರ್ವಂತ್ಯಸ್ಮನ್ನಿವರ್ತನೇ ॥ ಅಪಿ ಪ್ರಾಣಾನ್ನಶಿಷ್ಯಂತಿ ನತು ತ್ಯಕ್ಷ್ಯಂತಿ ನಿಶ್ಚಯಂ ॥ ೨೦ ॥ ಯಾವದೇವತು ಸಂಸುಪ್ತಾ ಸ್ತಾವದೇವ ವಯಂ ಲಘು ॥ ರಥಮಾರುಹ್ಯ ಗಚ್ಛಾಮಃ ಪಂಥಾನಮಕುತೋ ಭಯಂ ॥ ೨೧ ॥ ಅತೋ ಭೂಯೋಽಪಿ

ಮಹಾತೇಜಾಃ - ಅತಿ ತೇಜಸ್ವಿಯಾದ, ರಾಮಃ - ಶ್ರೀರಾಮನು, ಉತ್ಥಾಯಚ - ಎದ್ದು, ತಾಃ - ಆ ನಿದ್ದೆ ಹೋಗುತ್ತಿರುವ, ಪ್ರಕೃತೀಶ್ಚ - ಜನಗಳನ್ನೂ, ನಿಶಾಮ್ಯ - ಕಂಡು, ಪುಣ್ಯಲಕ್ಷಣಂ - ಪುಣ್ಯಕರವಾದ ಗುರುತುಗಳುಳ್ಳ, ಭ್ರಾತರಂ - ತಮ್ಮನಾದ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೮ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಅಸ್ಮದ್ವ್ಯಪೇಕ್ಷಾನ್ - ಅಸ್ಮತ್ - ನಮ್ಮನ್ನು, ವ್ಯಪೇಕ್ಷಾನ್ - ಬಹಳವಾಗಿ ಅಪೇಕ್ಷಿಸುತ್ತಿರುವರಾದ ಕಾರಣ, ಗೃಹೇಷ್ವಪಿ - ಮನೆಗಳಲ್ಲಿಯೂ, ನಿರಪೇಕ್ಷಾನ್ - ಅಪೇಕ್ಷೆಯಿಲ್ಲದಿರುವ, ವೃಕ್ಷಮೂಲೇಷು - ಮರಗಳ ಕೆಳಗೆ, ಸಾಂಪ್ರತಂ - ಈಗ, ಸಂಸುಪ್ತಾನ್ - ಮಲಗಿರುವರನ್ನು, ಪಶ್ಯ - ನೋಡು. ॥ ೧೯ ॥ ಯಥಾ - ಹೇಗೆ ನಾವು ಇವರನ್ನು ಹಿಂತಿರಿಗಿಸುವದರಲ್ಲಿ ನಿಯಮವನ್ನು ಮಾಡುತ್ತೇವೆಯೋ, ತಥಾ - ಹಾಗೆ, ಏತೇಪೌರಾಃ - ಈ ಪಟ್ಟಣಸ್ಥರು, ಅಸ್ಮನ್ನಿವರ್ತನೇ - ನಮ್ಮನ್ನು ಹಿಂತಿರಿಗಿಸುವಿಕೆಯಲ್ಲಿ, ನಿಯಮಂ - ನಿಯಮವನ್ನು, ಕುರ್ವಂತಿ - ಮಾಡುತ್ತಾರೆ, ಪ್ರಾಣಾನಪಿ - ಪ್ರಾಣಗಳನ್ನಾದರೂ, ನಶಿಷ್ಯಂತಿ - ನಾಶ ಮಾಡಿಕೊಳ್ಳುವರು, ನಿಶ್ಚಯಂ - ನಮ್ಮನ್ನು ಹಿಂತಿರುಗಿಸಬೇಕೆಂಬ ನಿಶ್ಚಯವನ್ನು, ನತುತ್ಯಕ್ಷ್ಯಂತಿ - ಬಿಡುವದೇ ಇಲ್ಲ. ॥ ೨೦ ॥ ಕಿಂತು - ಮತ್ತೇನೆಂದರೆ, ಯಾವದೇವ - ಎಷ್ಟು ಪರ್ಯಂತ, ಸಂಸುಪ್ತಾಃ - ಮಲಗಿರುವರೋ, ತಾವದೇವ - ಅಷ್ಟರೊಳಗೆ, ವಯಂ - ನಾವು, ಲಘು - ಸುಲಭವಾಗಿ, ರಥಂ - ರಥವನ್ನು, ಆರುಹ್ಯ - ಏರಿ, ಅಕುತೋಭಯಂ - ನಿರ್ಭಯವಾಗಿ, ಪಂಥಾನಂ - ದಾರಿಯಲ್ಲಿ, ಗಚ್ಛಾಮಃ - ತೆರಳೋಣ. ॥ ೨೧ ॥ ಮಾಂ - ಎನ್ನನ್ನು, ಅನು

ಎಲೈ ಲಕ್ಷ್ಮಣನೆ ! ತಮ್ಮ ಮನೆಗಳಲ್ಲಿಯೂ ಕೂಡ ಅಪೇಕ್ಷೆಯನ್ನಿಡದೆ ನಮ್ಮಲ್ಲಿ ವಿಶ್ವಾಸವುಳ್ಳವರಾಗಿ ಈಗೆ ಗಿಡಗಳ ಕೆಳಗೆ ಮಲಗಿಕೊಂಡಿರುವ ಈ ಜನಗಳನ್ನು ನೋಡು. ನಾವು ಇವರನ್ನು ಹಿಂತಿರುಗಿಸುವುದರಲ್ಲಿ ಎಷ್ಟು ಆಸಕ್ತಿಯುಳ್ಳವರಾಗಿರುವೆವೋ, ಇವರೂ ನಮ್ಮನ್ನು ಪಟ್ಟಣಕ್ಕೆ ಹಿಂತಿರುಗಿಸುವುದರಲ್ಲಿ ಅಷ್ಟೇ ಆಸಕ್ತಿಯುಳ್ಳವರಾಗಿದ್ದಾರೆ. ಇವರು ಪ್ರಾಣಗಳನ್ನಾದರೂ ತ್ಯಜಿಸುವರೇ ಹೊರ್ತು ಅವರು ಹಿಡಿದಿರುವ ಮುಷ್ಕರವನ್ನು ಬಿಡುವುದಿಲ್ಲ. ಆದುದರಿಂದ ಇವರೆಲ್ಲರೂ ನಿದ್ರಿಸುತ್ತಿರುವಾಗಲೆ, ನಾವು ಬೇಗನೆ ರಥವನ್ನೇರಿಕೊಂಡು ಏನೊಂದೂ ಭಯವಿಲ್ಲದೆ ಮುಂದಕ್ಕೆ ಪಯಣವನ್ನು ಬೆಳೆಯಿಸೋಣ. ಈಗೇ ಈ ಪ್ರಜೆಗಳಲ್ಲಿ ನಮ್ಮಲ್ಲಿ ಬಹಳವಾದ ವಿಶ್ವಾಸವುಳ್ಳ ಕೆಲವರು ಮರದಡಿಯನ್ನಾಶ್ರಯಿಸಿರುವರೇ ಹೊರ್ತು ನಿದ್ದೆಮಾಡುತ್ತಿಲ್ಲ. ಆದಕಾರಣ ನಾವು ತೆರಳೋಣ. ರಾಜಕುಮಾರರು

ನೇದಾನೀ ಮಿಕ್ಷ್ವಾಕು ಪುರವಾಸಿನಃ ॥ ಸ್ವಪೇಯುರನುರಕ್ತಾ ಮಾಂ ವೃಕ್ಷ ಮೂಲಾನಿ ಸಂಶ್ರಿತಾಃ ॥ ೨೨ ॥ ಪೌರಾ ಹ್ಯಾತ್ಮಕೃತಾ ದುಃಖಾದ್ವಿಪ್ರ ಮೋಚ್ಯಾ ನೃಪಾತ್ಮಜೈಃ ॥ ನತು ಖಲ್ವಾತ್ಮನಾ ಯೋಜ್ಯಾ ದುಃಖೇನ ಪುರ ವಾಸಿನಃ ॥ ೨೩ ॥ ಅಬ್ರವೀಲ್ಲಕ್ಷ್ಮಣೋ ರಾಮಂ ಸಾಕ್ಷಾದ್ಧರ್ಮಮಿವ ಸ್ಥಿತಂ ॥ ರೋಚತೇ ಮೇ ತಥಾ ಪ್ರಾಜ್ಞ ಕ್ಷಿಪ್ರ ಮಾರುಹ್ಯತಾಮಿತಿ ॥ ೨೪ ॥ ಅಥ ರಾಮೋಽಬ್ರವೀ ಚ್ಛ್ರೀಮಾನ್ ಸುಮಂತ್ರಂ ಯುಜ್ಯತಾಂ ರಥಃ॥ಗಮಿಷ್ಯಾಮಿ ತತೋಽರಣ್ಯಂ ಗಚ್ಛಶೀಘ್ರಮಿತಃ ಪ್ರಭೋ ॥ ೨೫ ॥ ಸೂತಸ್ತತಸ್ತ್ವರಿತ

ರಕ್ತಾಃ - ಅನುಸರಿಸಿರುವ, ಇಕ್ಷ್ವಾಕು ಪುರವಾಸಿನಃ - ಅಯೋಧ್ಯಾಪಟ್ಟಣದ ವಾಸಿಗಳಾದ ಇವರು, ಇದಾನೀಮೇವ - ಈಗಲೇ, ಭೂಯೋಪಿ - ಮತ್ತು, ವೃಕ್ಷಮೂಲಾನಿ - ಗಿಡದ ಬುಡಗಳನ್ನು, ಸಂಶ್ರಿತಾಃ - ಆಶ್ರಯಿಸಿ, ನಸ್ವಪೇಯುಃ - ನಿದ್ದೆ ಹೋಗುವದಿಲ್ಲ, ಅತಃ - ಈ ಕಾರಣದಿಂದ, (ಗಚ್ಛಾಮಃ - ಹೊರಡೋಣ). ॥ ೨೨ ॥ ನೃಪಾತ್ಮಜೈಃ - ರಾಜಪುತ್ರರಿಂದ, ಆತ್ಮಕೃತಾತ್ - ತನ್ನ ನಿಮಿತ್ತವಾಗಿ ಉಂಟಾದ, ದುಃಖಾತ್ - ವ್ಯಸನದಿಂದ, ಪೌರಾಃ - ಪಟ್ಟಣಸ್ಥರು, ವಿಪ್ರಮೋಚ್ಯಾಹಿ - ಬಿಡಲ್ಪಡತಕ್ಕವರಷ್ಟೆ, ಆತ್ಮನಾ - ನಮಗುಂಟಾದ, ದುಃಖೇನ - ವ್ಯಸನದಿಂದ, ಪುರವಾಸಿನಸ್ತು - ಪಟ್ಟಣಸ್ಥರಾದರೆ, ನಯೋಜ್ಯಾಃಖಲು - ಸೇರಿಸತಕ್ಕವರಲ್ಲ. ॥ ೨೩ ॥ ಲಕ್ಷ್ಮಣಃ - ಲಕ್ಷ್ಮಣನು, ಸಾಕ್ಷಾತ್ - ಪ್ರತ್ಯಕ್ಷವಾಗಿ, ಧರ್ಮಮಿವಸ್ಥಿತಂ - ಧರ್ಮದಂತಿರುವ, ರಾಮಂ - ಶ್ರೀರಾಮುನನ್ನು ಕುರಿತು, ಹೇ ಪ್ರಾಜ್ಞ - ಎಲೈ ತಿಳಿವಳಿಕೆಯುಳ್ಳವನೇ, ಮೇ - ನನಗೆ, ತಥಾ - ಹಾಗೆಯೇ, ರೋಚತೇ - ತೋರುತ್ತದೆ, ಕ್ಷಿಪ್ರಂ - ಜಾಗ್ರತೆಯಾಗಿ, (ರಥಂ - ತೇರನ್ನು) ಆರುಹ್ಯತಾಂ - ಏರೋಣವಾಗಲಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೨೪ ॥ ಅಥ - ಬಳಿಕ, ರಾಮಃ - ಶ್ರೀರಾಮನು, ಹೇ ಪ್ರಭೋ - ಎಲೈ ಸಮರ್ಥನಾದ ಸುಮಂತ್ರನೇ, ಶ್ರೀಮಾನ್ - ಸಂಪದ್ಯುಕ್ತವಾದ, ರಥಃ - ರಥವು, ಯುಜ್ಯತಾಂ - ಕಟ್ಟಲ್ಪಡಲಿ, ಇತಃ - ಇಲ್ಲಿಂದ, ಶೀಘ್ರಂ - ಜಾಗ್ರತೆಯಾಗಿ, ಗಚ್ಛ - ರಥವನ್ನು ಕಟ್ಟುವದಕ್ಕೆ ಹೋಗು, ತತಃ - ಬಳಿಕ, ಅರಣ್ಯಂ - ಅರಣ್ಯವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, (ಇತಿ - ಇಂತೆಂದು,) ಸುಮಂತ್ರಂ - ಸುಮಂತ್ರನನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೫ ॥ ಸೂತಃ - ಸಾರಥಿಯು, ತತಃ - ಬಳಿಕ, ಸತ್ವರಿತಃ - ತ್ವರೆಯಿಂದೊಡಗೂಡಿ, ಸ್ಯಂದನಂ - ರಥವನ್ನು, ತೈರ್ಹಯೋತ್ತಮೈಃ - ಆ ಉತ್ತಮಾಶ್ವ

ತಮ್ಮಿಂದ ದುಃಖಹೊಂದಿದ ಪ್ರಜೆಗಳನ್ನು ತಾವೇ ಸಂತವಿಡಬೇಕು. ಹಾಗೆ ಸಂತವಿಡಲು ನಾವು ಇವರಿಗೆ ದುಃಖವನ್ನುಂಟುಮಾಡಿದವರಲ್ಲ !" ಎಂದು ನುಡಿದನು. ॥ ೧೬-೨೩ ॥ ಆಗ ಲಕ್ಷ್ಮಣನು ಸಾಕ್ಷಾದ್ಧರ್ಮಮೂರ್ತಿಯಂತಿರುವ ಶ್ರೀರಾಮುನ ನುಡಿಗಳನ್ನು ಕೇಳಿ, "ಓ ಮಹಾ ಬುದ್ಧಿಶಾಲಿಯಾದ ಸಹೋದರನೆ ! ನೀನು ನುಡಿದುದು ಯುಕ್ತವಾಗಿದೆಯೆಂದೇ ತೋರುವುದು." ಎಂದನು. ಲಕ್ಷ್ಮಣನಿಂತೆನಲು ಶ್ರೀರಾಮಮೂರ್ತಿಯು ಸಾರಥಿಯಾದ ಸುಮಂತ್ರನನ್ನು ಕುರಿತು, "ಸುಮಂತ್ರ ! ರಥವನ್ನು ಸಜ್ಜಿಗೊಳಿಸು" ಎಂದು ನಿರೂಪಿಸಿದನು. ಶ್ರೀರಾಮುನಾಣತಿಯಾದೊಡನೆಯೆ, ಸುಮಂತ್ರನು ರಥಕ್ಕೆ

ಸ್ಸ್ಯಂದನಂ ತೈರ್ಹಯೋತ್ತಮೈಃ ॥ ಯೋಜಯಿತ್ವಾಥ ರಾಮಾಯ ಪ್ರಾಂಜಲಿಃ ಪ್ರತ್ಯವೇದಯತ್ ॥ ೨೬ ॥ ಅಯಂ ಯುಕ್ತೋ ಮಹಾಬಾಹೋ ರಥಸ್ತೇ ರಥಿನಾಂ ವರ ॥ ತ್ವಮಾರೋಹಸ್ವ ಭದ್ರಂ ತೇ ಸಸೀತಸ್ಸಹಲಕ್ಷ್ಮಣಃ ॥ ೨೭ ॥ ತಂ ಸ್ಯಂದನಮಧಿಷ್ಠಾಯ ರಾಘವಸ್ಸಪರಿಚ್ಛದಃ ॥ ಶೀಘ್ರಗಾಮಾಕುಲಾವರ್ತಾಂ ತಮಸಾಮತರನ್ನದೀಂ ॥ ೨೮ ॥ ಸ ಸಂತೀರ್ಯ ಮಹಾಬಾಹುಶ್ಶ್ರೀಮಾನ್ ಶಿವಮಕಂಟಕಂ ॥ ಪ್ರಾಪದ್ಯತ ಮಹಾಮಾರ್ಗಮಭಯಂ ಭಯದರ್ಶಿನಾಂ ॥ ೨೯ ॥ ಮೋಹನಾರ್ಥಂ ತು ಪೌರಾಣಾಂ ಸೂತಂ ರಾಮೋಽಬ್ರವೀದ್ವಚಃ ॥ ಉದಙ್ಮುಖಃ ಪ್ರಯಾಹಿತ್ವಂ ರಥಮಾ

ಗಳಿಂದ, ಯೋಜಯಿತ್ವಾ - ಸೇರಿಸಿ, ಅಥ - ಬಳಿಕ, ರಾಮಾಯ - ಶ್ರೀರಾಮನಿಗೆ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಪ್ರತ್ಯವೇದಯತ್ - ತಿಳುಹಿದನು. ॥ ೨೬ ॥ ಹೇ ಮಹಾಬಾಹೋ - ಎಲೈ ಮಹಾ ಭುಜಬಲಪರಾಕ್ರಮಿಯೇ, ರಥಿನಾಂ - ರಥವಂತರೊಳಗೆ, ವರ - ಶ್ರೇಷ್ಠನೇ, ತೇ - ನಿನ್ನ, ಅಯಂರಥಃ - ಈ ರಥವು, ಯುಕ್ತಃ - ಸನ್ನದ್ಧವಾಗಿದೆ, ತ್ವಂ - ನೀನು, ಸಸೀತಃ - ಸೀತಾ ಸಹಿತನಾಗಿ, ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿ, ಆರೋಹಸ್ವ - ಏರು, ತೇ - ನಿನಗೆ, ಭದ್ರಂ - ಶುಭವಾಗಲಿ. ॥ ೨೭ ॥ ರಾಘವಃ - ಶ್ರೀರಾಮನು, ಸಪರಿಚ್ಛದಃ - ಧನುಸ್ಸು, ಕವಚವೇ ಮುಂತಾದ ಲಕ್ಷಣಗಳುಳ್ಳವನಾಗಿ, ತಂಸ್ಯಂದನಂ - ಆ ರಥದಲ್ಲಿ, ಅಧಿಷ್ಠಾಯ - ಕುಳಿತುಕೊಂಡು, ಶೀಘ್ರಗಾಂ- ಬೇಗನೆಹೋಗುತ್ತಿರುವ, ಆಕುಲಾವರ್ತಾಂ - ವ್ಯಾಕುಲವಾದ ಸುಳಿಗಳುಳ್ಳ, ತಮಸಾಂನದೀಂ - ತಮಸಾನದಿಯಲ್ಲಿ, ಅತರತ್ - ಇಳಿದನು. ॥ ೨೮ ॥ ಶ್ರೀಮಾನ್ - ಸಂಪದ್ಯುಕ್ತನಾದ, ಮಹಾಬಾಹುಃ - ಮಹಾಭುಜಪರಾಕ್ರಮಿಯಾದ, ಸಃ - ಆ ಶ್ರೀರಾಮನು, ಸಂತೀರ್ಯ - ಇಳಿದು, ಶಿವಂ- ಶುಭಕರವಾದ, ಅಕಂಟಕಂ - ಮುಳ್ಳುಗಳಿಲ್ಲದಿರುವ, ಭಯದರ್ಶಿನಾಂ - ಭೀತಿಗೊಳ್ಳುವವರಿಗೆ, ಅಭಯಂ - ಭಯವಿಲ್ಲದಿರುವ, ಮಹಾಮಾರ್ಗಂ - ದೊಡ್ಡದಾರಿಯನ್ನು, ಪ್ರಾಪದ್ಯತ-ಹೊಂದಿದನು. ॥ ೨೯ ॥ ರಾಮಃ - ಶ್ರೀರಾಮನು, ಪೌರಾಣಾಂ - ಪಟ್ಟಣಸ್ಥರ, ಮೋಹನಾರ್ಥಂ - ಭ್ರಾಂತಿಗೋಸುಗ, ಹೇ ಸಾರಥೇ - ಎಲೈ ಸಾರಥಿಯೇ, ತ್ವಂ - ನೀನು, ರಥಂ - ರಥದಲ್ಲಿ, ಆಸ್ಥಾಯ - ಕುಳಿತುಕೊಂಡು, ಉದಙ್ಮುಖಃ - ಉತ್ತರಾಭಿಮುಖವಾಗಿ, ಪ್ರಯಾಹಿ - ತೆರಳು, ಮುಹೂರ್ತಂ - ಸ್ವಲ್ಪಕಾಲವು, ತ್ವರಿತಂ - ಜಾಗ್ರತೆಯಾಗಿ, ಗತ್ವಾ - ಹೋಗಿ, ಪುನಃ - ಮತ್ತು, ರಥಂ - ರಥ

ಕುದುರೆಗಳನ್ನು ಬಿಗಿದು, ರಘುನಂದನನಿದ್ದೆಡೆಗೆ ಬಂದು ಕೈಮುಗಿದುಕೊಂಡು, "ಎಲೈ ಶ್ರೀರಾಮನೆ ! ರಥವು ಸಿದ್ಧವಾಗಿದೆ. ಲಕ್ಷ್ಮಣ ಸೀತೆಯರೊಡಗೂಡಿ ಜಾಗ್ರತೆಯಾಗಿ ತೆರಳುವವನಾಗು. ನಿನಗೆ ಮಂಗಳವಾಗಲಿ" ಎಂದನು. ॥ ೨೪ ೨೭ ॥ ಆ ಬಳಿಕ ಶ್ರೀರಾಮನು ಸಾಮಗ್ರಿಗಳಿಂದೊಡಗೂಡಿದವನಾಗಿ ಆ ರಥದಲ್ಲಿ ಕುಳಿತುಕೊಂಡು ತಮಸಾ ನದಿಯನ್ನು ದಾಂಟಿ ರಥದಿಂದಿಳಿದು, ಮಂಗಳಕರವಾಗಿಯೂ, ನಿಷ್ಕಂಟಕವಾಗಿಯೂ ಇರುವ ಮಹಾ ಮಾರ್ಗವನ್ನುಹೊಂದಿ ಸುಮಂತ್ರನನ್ನು ಕುರಿತು, "ಎಲೈ ಸಾರಥಿಯೆ ! ಪಟ್ಟಣಿಗರಿಗೆ ನಮ್ಮ ದಾರಿಯು ಕಾಣದೆ ಭ್ರಾಂತಿಯುಂಟಾಗಲೋಸುಗ ಉತ್ತರಾಭಿ

ಸ್ಥಾಯ ಸಾರಥೇ ॥ ೩೦ ॥ ಮುಹೂರ್ತಂ ತ್ವರಿತಂ ಗತ್ವಾ ನಿವರ್ತಯ ರಥಂ ಪುನಃ ॥ ಯಥಾ ನವಿದ್ಯುಃ ಪೌರಾ ಮಾಂ ತಥಾ ಕುರು ಸಮಾಹಿತಃ ॥ ೩೧ ॥ ರಾಮಸ್ಯ ವಚನಂ ಶ್ರುತ್ವಾ ತಥಾ ಚಕ್ರೇ ಸ ಸಾರಥಿಃ ॥ ಪ್ರತ್ಯಾಗಮ್ಯ ಚ ರಾಮಸ್ಯ ಸ್ಯಂದನಂ ಪ್ರತ್ಯವೇದಯತ್ ॥ ೩೨ ॥ ತೌ ಸಂಪ್ರಯುಕ್ತಂ ತು ರಥಂ ಸಮಾಸ್ಥಿತೌ ತದಾ ಸ ಸೀತೌ ರಘುವಂಶ ವರ್ಧನೌ ॥ ಪ್ರಚೋದಯಾಮಾಸ ತತಸ್ತುರಂಗಮಾ ಸ ಸಾರಥಿ ರ್ಯೇನ ಪದಾ ತಪೋವನಂ ॥ ೩೩ ॥

ತತಸ್ಸಮಾಸ್ಥಾಯ ರಥಂ ಮಹಾರಥ
ಸ್ಸಸಾರಥಿ ರ್ದಾಶರಥಿರ್ವನಂ ಯಯೌ ॥

ವನ್ನು, ನಿವರ್ತಯ - ಹಿಂತಿರಿಗಿಸು, ಪೌರಾಃ - ಪಟ್ಟಣಸ್ಥರು, ಯಥಾ - ಹೇಗೆ, ಮಾಂ - ನನ್ನನ್ನು, ನವಿದುಃ - ತಿಳಿಯಲಾರರೋ, ತಥಾ - ಹಾಗೆ, ಸಮಾಹಿತಃ - ಜಾಗರೂಕನಾಗಿ, ಕುರು - ಮಾಡು, ಇತಿ - ಇಂತೆಂದು, ಸೂತಂ - ಸಾರಥಿಯನ್ನು ಕುರಿತು, ವಚಃ - ಮಾತನ್ನು, ಅಬ್ರವೀತ್ - ನುಡಿದನು. ॥ ೩೧ ॥ ರಾಮಸ್ಯ - ಶ್ರೀರಾಮನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಸಸಾರಥಿಃ- ಆ ಸುಮಂತ್ರನು, ತಥಾ - ಹಾಗೆಯೇ, ಚಕ್ರೇ - ಮಾಡಿದನು, ಸ್ಯಂದನಂ - ರಥವನ್ನು, ಪ್ರತ್ಯಾಗಮ್ಯಚ - ಮಾರ್ಗಾಂತರದಿಂದ ತಿರುಗಿಸಿಕೊಂಡು ಬಂದು, ರಾಮಸ್ಯ - ಶ್ರೀರಾಮನಿಗೆ, ಪ್ರತ್ಯವೇದಯತ್ - ತಿಳಿಸಿದನು. ॥ ೩೨ ॥ ತತಃ - ಬಳಿಕ, ರಘುವಂಶವರ್ಧನೌ, ರಘುವಂಶ - ರಘುಮಹಾರಾಯನ ವಂಶವನ್ನು, ವರ್ಧನೌ - ವೃದ್ಧಿಗೊಳಿಸುತ್ತಿರುವ, ತೌ - ರಾಮ ಲಕ್ಷ್ಮಣರು, ಸಸೀತೌ - ಸೀತೆಯಿಂದೊಡಗೂಡಿ, ತದಾ - ಆಗ, ಸಂಪ್ರಯುಕ್ತಂ - ತರಲ್ಪಟ್ಟ, ರಥಂತು - ರಥವನ್ನಾದರೆ, ಸಮಾಸ್ಥಿತೌ - ಏರಿದರು, ತತಃ - ಬಳಿಕ, ಯೇನಪಥಾ - ಯಾವ ಮಾರ್ಗದಿಂದ, ತಪೋವನಂ - ತಪೋವನವು, ಗಮ್ಯತೇ - ಹೊಂದಲ್ಪಡುತ್ತದೋ, ತತಃ - ಆ ಮಾರ್ಗದಲ್ಲಿ, ಸಸಾರಥಿಃ - ಆ ಸುಮಂತ್ರನು, ತುರಂಗಮಾ - ಕುದುರೆಗಳನ್ನು, ಪ್ರಚೋದಯಾಮಾಸ-ನಡೆಯಿಸಿದನು. ॥೩೩॥ ತತಃ-ಬಳಿಕ, ಮಹಾರಥಃ - ಮಹಾರಥಿಕನಾದ, ದಾಶರಥಿಃ-ಶ್ರೀರಾಮನು, ಸಸಾರಥಿಃ- ಸಾರಥಿಯಿಂದೊಡಗೂಡಿ, ರಥಂ - ರಥದಲ್ಲಿ, ಸಮಾಸ್ಥಾಯ - ಕುಳಿತುಕೊಂಡು, ಪ್ರಯಾಣ ಮಾಂಗಲ್ಯನಿಮಿತ್ತದರ್ಶನಾತ್, ಪ್ರಯಾಣ - ಪ್ರಯಾಣ ಕಾಲದಲ್ಲಿ, ಮಾಂಗಲ್ಯ - ಮಂಗಳ ಸೂಚಕವಾದ, ನಿಮಿತ್ತ - ಶಕುನಗಳ, ದರ್ಶನಾತ್ - ನೋಡುವಿಕೆಯಿಂದ, ರಥಂ - ರಥವನ್ನು, ಉದ

ಮುಖವಾಗಿ ರಥವನ್ನು ತುರುಬಿ ಪುನಃ ಹಿಂತಿರುಗಿಸುವವನಾಗು" ಎಂದು ನುಡಿದನು. ಆ ಸಾರಥಿಯು ಅಂತೆಯೇ ಮಾಡಿದನು. ಆ ಬಳಿಕ ಶ್ರೀರಾಮ, ಲಕ್ಷ್ಮಣ, ಸೀತೆಯರು ರಥದಲ್ಲಿ ಕುಳಿತುಕೊಂಡವರಾಗಲು, ಆ ಸುಮಂತ್ರನು ತಪೋವನಮಾರ್ಗದ ಕಡೆಗೆ ಕುದುರೆಗಳನ್ನು ತುರುಬಿದವನಾದನು. ಬಳಿಕ ಮಹಾ ರಥಿಕನಾದ ಶ್ರೀರಾಮನು ಸಾರಥಿಯಾದ

ಉದಙ್ಮುಖಂ ತಂತು ರಥಂ ಚಕಾರ ಸಃ
ಪ್ರಯಾಣ ಮಾಂಗಲ್ಯ ನಿಮಿತ್ತ ದರ್ಶನಾತ್ ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೆ ಷಟ್ಚತ್ವಾರಿಂಶಸ್ಸರ್ಗಃ

ಙ್ಮುಖಂ - ಉತ್ತರಾಭಿಮುಖವನ್ನಾಗಿ, ಚಕಾರ - ಮಾಡಿದನು, ತತಃ - ಬಳಿಕ, ವನಂ - ವನವನ್ನು ಕುರಿತು, ಯಯೌ - ತೆರಳಿದನು. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಚತ್ವಾರಿಂಶಸ್ಸರ್ಗಃ.

ಸುಮಂತ್ರನೊಡಗೂಡಿ ಪ್ರಯಾಣ ಮಂಗಳಕ್ಕೋಸುಗ ಮೂಡಲು ಕಡೆಗಿದಿರಾಗಿಹೋಟು, ಹಿಂತಿರುಗಿ ವನವನ್ನು ಕುರಿತು ಪ್ರಯಾಣವನ್ನು ಬೆಳೆಯಿಸಿದವನಾದನು. ॥ ೨೮-೩೪ ॥

ಇಂತಿದು ಶ್ರೀರಾಮ ಕೃತ ಸ್ನಾನುಸೃತ ಪ್ರಜಾತ್ಯಾಗ ಪೂರ್ವಕ ವನಪ್ರಯಾಣ
ಕಥನವೆಂಬ ನಲವತ್ತಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತಚತ್ವಾರಿಂಶಸ್ಸರ್ಗಃ.

ಪ್ರಭಾತಾಯಾಂತು ಶರ್ವರ್ಯಾಂ ಪೌರಾಸ್ತೇ ರಾಘವಂ ವಿನಾ ॥
ಶೋಕೋಪಹತ ನಿಶ್ಚೇಷ್ಟಾ ಬಭೂವು ಹತಚೇತಸಃ ॥ ೧ ॥ ಶೋಕ
ಜಾಶ್ರು ಪರಿದ್ಯೂನಾ ವೀಕ್ಷಮಾಣಾ ಸ್ತತಸ್ತತಃ ॥ ಆಲೋಕಮಪಿ ರಾಮಸ್ಯ
ನ ಪಶ್ಯಂತಿಸ್ಮ ದುಃಖಿತಾಃ ॥ ೨ ॥ ತೇ ವಿಷಾದಾರ್ತವದನಾ ರಹಿತಾ ಸ್ತೇನ
ಧೀಮತಾ ॥ ಕೃಪಣಾಃ ಕರುಣಾ ವಾಚೋ ವದಂತಿಸ್ಮ ಮನಸ್ವಿನಃ ॥ ೩ ॥
ಧಿಗಸ್ತು ಖಲು ನಿದ್ರಾಂ ತಾಂ ಯಯಾಪಹೃತ ಚೇತಸಃ ॥ ನಾದ್ಯ ಪಶ್ಯಾಮಹೇ

ಶರ್ವರ್ಯಾಂತು - ರಾತ್ರಿಯಾದರೆ, ಪ್ರಭಾತಾಯಾಂಸತ್ಯಾಂ - ಬೆಳಗಾಗುತ್ತಿರಲು, ತೇಪೌರಾಃ - ಆ ಪ್ರಜೆಗಳು, ರಾಘವಂವಿನಾ - ಶ್ರೀರಾಮನನ್ನಗಳಿದು, ಹತಚೇತಸಃ - ಭಗ್ನಮನಸ್ಸುಳ್ಳವರಾಗಿ, ಶೋಕೋಪಹತನಿಶ್ಚೇಷ್ಟಾಃ, ಶೋಕ - ವ್ಯಸನದಿಂದ, ಉಪಹತ - ಹೊಡೆಯಲ್ಪಟ್ಟವರಾದ ಕಾರಣ, ನಿಶ್ಚೇಷ್ಟಾಃ - ಸ್ತಬ್ಧರಾದವರು, ಬಭೂವುಃ - ಆದರು. ॥ ೧ ॥ ಶೋಕಜಾಶ್ರುಪರಿದ್ಯೂನಾಃ, ಶೋಕಜಾಶ್ರು - ಕಂಬನಿಗಳಿಂದ, ಪರಿದ್ಯೂನಾಃ - ಪರಿತಪಿಸುತ್ತಿರುವರಾಗಿ, ತತಸ್ತತಃ - ಅಲ್ಲಲ್ಲಿ, ವೀಕ್ಷಮಾಣಾಃ - ನೋಡುತ್ತ, ರಾಮಸ್ಯ - ಶ್ರೀರಾಮನ, ಆಲೋಕಮಪಿ - ದರ್ಶನಕ್ಕೆ ಸಾಧ್ಯವಾದ ಧೂಳಿಯನ್ನು ಕೂಡ, ನಪಶ್ಯಂತಿಸ್ಮ - ಕಾಣದೇಹೋದರು, ತತಃ - ಬಳಿಕ, ದುಃಖಿತಾಃ - ವ್ಯಸನಗೊಂಡರು. ॥ ೨ ॥ ಮನಸ್ವಿನಃ - ಮಹಾ ಮನಸ್ಸುಳ್ಳವರಾದ ಕಾರಣ, ವಿಷಾದಾರ್ತವದನಾಃ, ವಿಷಾದ - ದುಃಖದಿಂದ, ಆರ್ತ - ಕಂಗೆಟ್ಟ, ವದನಾಃ - ಮುಖಗಳುಳ್ಳ, ತೇ - ಅವರು, ಧೀಮತಾ - ಬುದ್ಧಿವಂತನಾದ, ತೇನ - ಆ ಶ್ರೀರಾಮನಿಂದ, ರಹಿತಾಃ - ಹೀನರಾದ ಕಾರಣ, ಕೃಪಣಾಃ - ದೀನರಾಗಿ, ಕರುಣಾಃ - ದೈನ್ಯವಾದ, ವಾಚಃ - ವಾಕ್ಯಗಳನ್ನು, ವದಂತಿಸ್ಮ - ಹೇಳಿದರಷ್ಟೆ. ॥ ೩ ॥ ಯಯಾ - ಯಾವ ನಿದ್ರೆಯಿಂದ, ಅಪಹೃತಚೇತಸಃ - ಅಪಹರಿಸಲ್ಪಟ್ಟ ಚೈತನ್ಯವುಳ್ಳವರಾಗಿ, ಅದ್ಯ - ಈಗ, ಪೃಥೂರಸ್ಕಂ - ವಿಸ್ತಾರವಾದ ವಕ್ಷಸ್ಥಳವುಳ್ಳ, ಮಹಾಭುಜಂ - ಮಹಾ ಲಕ್ಷಣ ಲಕ್ಷಿತವಾದ ಭುಜಗಳುಳ್ಳ, ರಾಮಂ - ಶ್ರೀರಾಮನನ್ನು, ನಪಶ್ಯಾ

ಆ ಬಳಿಕ ಬೆಳಗಾಗಲು ತಮಸಾನದಿಯ ತೀರದಲ್ಲಿ ಮಲಗಿದ್ದ ಅಯೋಧ್ಯಾನಗರವಾಸಿಗಳೆಲ್ಲರೂ ಎಚ್ಚೆತ್ತು ಶ್ರೀರಾಮನನ್ನಗಲಿ ಶೋಕದಿಂದ ಕೈಕಾಲುಗಳನ್ನು ಕೂಡ ಕದಲಿಸಲು ಶಕ್ತಿಯಿಲ್ಲದೆ, ಕುಗ್ಗಿದ ಚೈತನ್ಯವುಳ್ಳವರಾಗಿ, ವ್ಯಸನದಿಂದ ಹುಟ್ಟಿದ ಕಂಬನಿಗಳಿಂದ ಕಂಗೆಟ್ಟ ಮುಖಕಾಂತಿಯುಳ್ಳವರಾಗಿ, ಸುತ್ತುಮುತ್ತಲೂ ನೋಡುತ್ತಲಿದ್ದರು. ಮಹಾ ಬುದ್ಧಿಶಾಲಿಯಾದ ಶ್ರೀರಾಮನಿಂದೀ ರೀತಿ ತೊರೆಯಲ್ಪಟ್ಟ ಆ ಪ್ರಜೆಗಳು ವಿಷಾದದಿಂದ ಸಂತಪಿಸುತ್ತ ಈರೀತಿ ವಿಲಪಿಸಿದರು. " ಅಕಟಕಟ ! ಈ ನಿದ್ರೆಯನ್ನು ನಿಂದಿಸಬೇಕು ! ಈ ನಿದ್ರೆಯಿಂದಲೇ ಅಲ್ಲವೆ ವಿಶಾಲ ವಕ್ಷಸ್ಕನೂ, ಮಹಾ ಭುಜಬಲ

ರಾಮಂ ಪೃಥೂರಸ್ಕಂ ಮಹಾಭುಜಂ ॥ ೪ ॥ ಕಥಂ ನಾಮ ಮಹಾಬಾಹು ಸ್ಸತಥಾ ವಿತಥಕ್ರಿಯಃ ॥ ಭಕ್ತಂ ಜನಂ ಪರಿತ್ಯಜ್ಯ ಪ್ರವಾಸಂ ರಾಘವೋ ಗತಃ ॥ ೫ ॥ ಯೋನಸ್ಸದಾ ಪಾಲಯತಿ ಪಿತಾ ಪುತ್ರಾನಿವೌರಸಾನ್ ॥ ಕಥಂ ರಘೂಣಾಂ ಸಶ್ರೇಷ್ಠ ಸ್ತ್ಯಕ್ತ್ವಾ ನೋ ವಿಪಿನಂ ಗತಃ ॥ ೬ ॥ ಇಹೈವ ನಿಧನಂ ಯಾಮೋ ಮಹಾಪ್ರಸ್ಥಾನ ಮೇವವಾ ॥ ರಾಮೇಣ ರಹಿತಾನಾಂಹಿ ಕಿಮರ್ಥಂ ಜೀವಿತಂ ಹಿ ನಃ ॥ ೭ ॥ ಸಂತಿ ಶುಷ್ಕಾಣಿ ಕಾಷ್ಠಾನಿ ಪ್ರಭೂತಾನಿ ಮಹಾಂತಿಚ ॥ ತೈಃ ಪ್ರಜ್ವಾಲ್ಯ ಚಿತಾಂ ಸರ್ವೇ ಪ್ರವಿಶಾಮೋಽಥ ಪಾವಕಂ ॥ ೮ ॥ ಕಿಂ ವಕ್ಷ್ಯಾಮೋ ಮಹಾಬಾಹು ರನಸೂಯಃ

ಮಹೇ - ಕಾಣದೆಹೋದೆವೋ, ತಾಂನಿದ್ರಾಂ - ಆ ನಿದ್ರೆಯನ್ನು, ಧಿಗಸ್ತುಖಲು - ನಿಂದಿಸಲೇಬೇಕು. ॥ ೪ ॥ ಮಹಾಬಾಹುಃ - ಮಹಾ ಭುಜಪರಾಕ್ರಮಶಾಲಿಯಾದ, ಅವಿತಥಕ್ರಿಯಃ - ಅಮೋಘವಾದ ಕಾರ್ಯಗಳುಳ್ಳ, ರಾಘವಃ - ಶ್ರೀರಾಮನು, ಭಕ್ತಂಜನಂ-ಭಕ್ತಜನರಾದ ನಮ್ಮನ್ನು, ಪರಿತ್ಯಜ್ಯ - ಬಿಟ್ಟು, ಪ್ರವಾಸಂ - ಅದರ್ಶನವನ್ನು, ಕಥಂಗತಃ - ಹೇಗೆಹೊಂದಿದನು, ಪಿತಾ - ತಂದೆಯು, ಔರಸಾನ್ - ಹೊಟ್ಟೆಯಲ್ಲಿ ಹುಟ್ಟಿದ, ಪುತ್ರಾನಿವ - ಮಕ್ಕಳನ್ನಂತೆ, ಯಃ - ಯಾವ ಶ್ರೀರಾಮನು, ಸದಾ - ನಿರಂತರವೂ, ನಃ - ನಮ್ಮನ್ನು, ಪಾಲಯತಿ-ರಕ್ಷಿಸುತ್ತಿದ್ದನೋ, ರಘೂಣಾಂ-ರಘುವಂಶಸ್ಥರೊಳಗೆ, ಶ್ರೇಷ್ಠಃ - ಉತ್ತಮನಾದ, ಸಃ - ಆ ಶ್ರೀರಾಮನು, ನಃ - ನಮ್ಮನ್ನು, ತ್ಯಕ್ತ್ವಾ - ಬಿಟ್ಟು, ಕಥಂ - ಹೇಗೆ, ವಿಪಿನಂ - ಅರಣ್ಯವನ್ನು, ಗತಃ - ಹೊಂದಿದನು. ॥ ೫-೬ ॥ ಇಹೈವ - ಇಲ್ಲಿಯೇ, ನಿಧನಂ - ಪ್ರಾಯೋಪವೇಶದಿಂದ ಮೃತಿಯನ್ನಾಗಲೀ, ಮಹಾಪ್ರಸ್ಥಾನಮೇವವಾ - ಮರಣದೀಕ್ಷಾಪೂರ್ವಕವಾಗಿ ಉತ್ತರಾಭಿಮುಖಗಮನವನ್ನಾಗಲಿ, ಯಾಮಃ - ಹೋಗೋಣ, ರಾಮೇಣ - ಶ್ರೀರಾಮನಿಂದ, ರಹಿತಾನಾಂ - ಹೀನರಾದ, ನಃ - ನಮಗೆ, ಜೀವಿತಂಹಿ - ಬದುಕುವಿಕೆಯೂ, ಕಿಮರ್ಥಂಹಿ - ಏತಕ್ಕೋ. ॥ ೭ ॥ ಶುಷ್ಕಾಣಿ - ಒಣಗಿರುವ, ಮಹಾಂತಿ - ದೊಡ್ಡವಾಗಿರುವ, ಕಾಷ್ಠಾನಿ - ಸೌದೆಗಳು, ಪ್ರಭೂತಾನಿ - ಅಧಿಕವಾಗಿ, ಸಂತಿ - ಇವೆ, ತೈಃ - ಅವುಗಳಿಂದ, ಚಿತಾಂ - ಚಿತಿಯನ್ನು, ಪ್ರಜ್ವಾಲ್ಯ - ಉರಿಯುವಂತೆಮಾಡಿ, ಅಥ - ಬಳಿಕ, ಸರ್ವೇ- ಎಲ್ಲರೂ, ಪಾವಕಂ - ಅಗ್ನಿಯನ್ನು, ಪ್ರವಿಶಾಮಃ - ಪ್ರವೇಶಿಸೋಣ. ॥ ೮ ॥ ಮಹಾಬಾಹುಃ -

---

ಭೂಷಿತನೂ ಆದ ಶ್ರೀರಾಮನನ್ನು ನಾವು ಕಾಣದೆ ಹೋದೆವು ? ಮಹಾ ಲಕ್ಷಣ ಲಕ್ಷಿತವಾದ ತೋಳಗಳುಳ್ಳ ಆ ರಘುನಂದನನು ವ್ಯರ್ಥವಾಗದಿರುವ ಕಾರ್ಯಗಳನ್ನೇ ಮಾಡುವವನಾದರೂ, ಭಕ್ತರಾದ ನಮ್ಮನ್ನು ತೊರೆದು ವನಕ್ಕೆ ಗಮಿಸಿದನಲ್ಲವೆ ! ತಂದೆಯು ಮಕ್ಕಳನ್ನು ಸಂರಕ್ಷಿಸುವಂತೆ ಯಾವ ಮಹಾತ್ಮನು ನಮ್ಮೆಲ್ಲರನ್ನೂ ಪರಿಪಾಲಿಸುತ್ತಿದ್ದನೋ, ಅಂತಹ ರಘುಕುಲ ತಿಲಕನು ನಮ್ಮೆಲ್ಲರನ್ನೂ ತೊರೆದು ವನವನ್ನು ಕುರಿತು ತೆರಳಿದನು. ಆತನನ್ನಗಲಿ ನಾವು ಬದುಕಿ ಪ್ರಯೋಜನವೇನು. ಆದುದರಿಂದ ನಾವೆಲ್ಲರೂ ಪ್ರಾಯೋಪವೇಶನದಿಂದಿಲ್ಲಿಯೇ ಮರಣವನ್ನು ಹೊಂದುವುದನ್ನಾಗಲಿ, ಮರಣದೀಕ್ಷೆಯನ್ನು ಮಾಡಿಕೊಂಡು, ಮೂಡಲುಕಡೆ ಪಯಣವನ್ನಾಗಲಿ ಮಾಡೋಣ. ಇದಾಗದಿದ್ದರೆ, ಈ ತಮಸಾ

ಪ್ರಿಯಂ ವದಃ ॥ ನೀತ ಸ್ಸರಾಘವೋಽಸ್ಮಾಭಿ ರಿತಿವಕ್ತುಂ ಕಥಂ ಕ್ಷಮಂ ॥ ೯ ॥ ಸಾನೂನಂ ನಗರೀ ದೀನಾ ದೃಷ್ಟ್ವಾಸ್ಮಾನ್ ರಾಘವಂ ವಿನಾ ॥ ಭವಿಷ್ಯತಿ ನಿರಾನಂದಾ ಸ ಸ್ತ್ರೀ ಬಾಲ ವಯೋಧಿಕಾ ॥ ೧೦ ॥ ನಿರ್ಯಾತಾಸ್ತೇನವೀರೇಣ ಸಹನಿತ್ಯಂ ಜಿತಾತ್ಮನಾ ॥ ವಿಹೀನಾಸ್ತೇನ ಚ ಪುನಃ ಕಥಂ ದ್ರಕ್ಷ್ಯಾಮ ತಾಂ ಪುರೀಂ ॥ ೧೧ ॥ ಇತೀವ ಬಹುಧಾ ವಾಚೋ ಬಾಹುಮುದ್ಯಮ್ಯ ತೇ ಜನಾಃ ॥ ವಿಲಪಂತಿಸ್ಮ ದುಃಖಾರ್ತಾ ವಿವತ್ಸಾ ಇವ ಧೇನವಃ ॥ ೧೨ ॥ ತತೋ ಮಾರ್ಗಾನುಸಾರೇಣ ಗತ್ವಾ ಕಿಂಚಿತ್‌ಕ್ಷಣಂ ಪುನಃ ॥

ಮಹಾಭುಜಪರಾಕ್ರಮಿಯಾದ, ಅನಸೂಯಃ - ಅಸೂಯೆಯಿಲ್ಲದಿರುವ, ಪ್ರಿಯಂವದಃ - ಪ್ರಿಯವಾದ ಮಾತುಗಳನ್ನು ಹೇಳುತ್ತಿರುವ, ಸರಾಘವಃ - ಆ ಶ್ರೀರಾಮನು, ಅಸ್ಮಾಭಿಃ - ನಮ್ಮಿಂದ, (ವನಂ - ವನವನ್ನು,) ನೀತಃ - ಹೊಂದಿಸಲ್ಪಟ್ಟನು, ಇತಿ - ಇಂತೆಂತೆಂದು, ಜನಾನ್ - ಜನಗಳನ್ನು ಕುರಿತು, ವಕ್ಷ್ಯಾಮಃಕಿಂ - ಹೇಳೋಣವೇನು, ವಕ್ತುಂ - ಹೇಳುವದಕ್ಕೆ, ಕಥಂ - ಹೇಗೆ, ಕ್ಷಮಂ - ಯೋಗ್ಯವು. ॥ ೯ ॥ ಸಸ್ತ್ರೀಬಾಲವಯೋಧಿಕಾ - ಸ್ತ್ರೀಯರಿಂದಲೂ, ಹುಡುಗರಿಂದಲೂ, ಮುದುಕರಿಂದಲೂ ತುಂಬಿದ, ಸಾ - ಅಯೋಧ್ಯಾಪಟ್ಟಣವು, ರಾಘವಂವಿನಾ - ಶ್ರೀರಾಮನ ವಿನಹ, ಅಸ್ಮಾನ್ - ನಮ್ಮನ್ನು, ದೃಷ್ಟ್ವಾ - ಕಂಡು, ದೀನಾ - ದೈನ್ಯವುಳ್ಳುದಾಗಿ, ನಿರಾನಂದಾ - ಸಂತೋಷರಹಿತವಾದುದು, ಭವಿಷ್ಯತಿ - ಆಗುವದು. ॥ ೧೦ ॥ ನಿತ್ಯಂ - ನಿರಂತರವೂ, ಜಿತಾತ್ಮನಾ - ಜಿತವಾದ ಮನಸ್ಸುಳ್ಳ, ತೇನವೀರೇಣಸಹ - ಆ ಶೂರನ ಸಂಗಡ, ನಿರ್ಯಾತಾಃ - ಹೊರಟು ಬಂದ ನಾವು, ತೇನಚ - ಆತನಿಂದಲೇ, ವಿಹೀನಾಃ - ರಹಿತರಾಗಿ, ತಾಂಪುರೀಂ - ಆ ಪಟ್ಟಣವನ್ನು, ಪುನಃ - ಮತ್ತು, ಕಥಂದ್ರಕ್ಷ್ಯಾಮಃ - ಹೇಗೆತಾನೆ ನೋಡೋಣ, ಇತೀವ-ಇಂತೆಂದು, ತೇಜನಾಃ - ಆ ಜನರು, ಬಾಹುಂ - ಭುಜವನ್ನು, ಉದ್ಯಮ್ಯ - ಎತ್ತಿಕೊಂಡು, ಬಹುಧಾಃ - ನಾನಾವಿಧವಾದ, ವಾಚಃ - ಮಾತುಗಳನ್ನು, (ಊಚುಃ - ಹೇಳಿದರು,) ವಿವತ್ಸಾಃ - ಕರುಗಳಿಲ್ಲದಿರುವ, ಧೇನವಇವ - ಆಕಳುಗಳಂತೆ, ದುಃಖಾರ್ತಾಃ - ದುಃಖಪೀಡಿತರಾಗಿ, ವಿಲಪಂತಿಸ್ಮ - ಅಳುತ್ತಿದ್ದರಷ್ಟೆ. ॥ ೧೨ ॥ ತತಃ - ಬಳಿಕ, ಮಾರ್ಗಾನುಸಾರೇಣ - ರಥ ಮಾರ್ಗದ ಅನುಸರಣೆಯಿಂದ,

---

ತೀರದಲ್ಲಿರುವ ಒಣಗಿದ ಕಾಷ್ಠಗಳನ್ನು ತೆಗೆದುಕೊಂಡು ಬಂದು ಅಗ್ನಿಪ್ರಜ್ವಲನೆಯನ್ನುಮಾಡಿ ಆ ಅಗ್ನಿಕುಂಡದಲ್ಲಿ ಧುಮ್ಮಿಕ್ಕೋಣವೆ? ಮಹಾ ಭುಜಪರಾಕ್ರಮ ಶಾಲಿಯೂ, ಅಸೂಯೆಯಿಲ್ಲದವನೂ, ಪ್ರಿಯವಾಕ್ಕುಗಳನ್ನು ನುಡಿಯುತ್ತಿರುವವನಾಗಿಯೂ ಇರುವ, ಆ ರಘುಕುಲರಾಮನನ್ನು ಕರೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟು ಬಂದೆವೆಂದು ಅಯೋಧ್ಯಾವಾಸಿಗಳಿಗೆ ತಿಳಿಸೋಣವೆ? ಹೀಗೆ ಹೇಳಲು ಹೇಗೆತಾನೆ ಸಾಧ್ಯವಾದೀತು? ಇದಾಗುವ ಕೆಲಸವೇ ಅಲ್ಲ. ಆತನಿಲ್ಲದೆ ನಾವು ಪಟ್ಟಣಕ್ಕೆ ಹೋದರೆ ಎಲ್ಲರೂ ಬಹಳವಾಗಿ ಗೋಳಿಡುತ್ತಾರೆ. ಆಬಾಲ ವೃದ್ಧ ಸ್ತ್ರೀಯರಾದಿಯಾಗಿ ಅಯೋಧ್ಯಾ ವಾಸಿಗಳೆಲ್ಲರೂ ಶ್ರೀರಾಮನನ್ನಗಲಿದು ಹಿಂತಿರುಗಿದ ನಮ್ಮನ್ನು ನೋಡಿ ದೈನ್ಯವುಳ್ಳವರಾಗಿ ಪ್ರಲಪಿಸುತ್ತಾರೆ. ನಿರಂತರವೂ ಜಿತಮನಸ್ಕನಾದ ಆ ಶೂರನೊಡನೆ ಊರಿಂದ ಹೊರಹೊರಟ ನಾವು ಆತನನ್ನೇ

ಮಾರ್ಗನಾಶಾ ದ್ವಿಷಾದೇನ ಮಹತಾ ಸಮಭಿಪ್ಲುತಾಃ ॥ ೧೩ ॥ ರಥಸ್ಯ ಮಾರ್ಗನಾಶೇನ ನ್ಯವರ್ತಂತ ಮನಸ್ವಿನಃ ॥ ಕಿಮಿದಂ ಕಿಂ ಕರಿಷ್ಯಾಮೋ ದೈವೇನೋಪಹತಾ ಇತಿ ॥ ೧೪ ॥ ತತೋ ಯಥಾಗತಾ ನೈವ ಮಾರ್ಗೇಣ ಕ್ಲಾಂತಚೇತಸಃ ॥ ಅಯೋಧ್ಯಾಮಗಮನ್ ಸರ್ವೇ ಪುರೀಂ ವ್ಯಥಿತಸಜ್ಜನಾಂ ॥ ೧೫ ॥ ಆಲೋಕ್ಯ ನಗರೀಂ ತಾಂಚ ಕ್ಷಯ ವ್ಯಾಕುಲ ಮಾನಸಾಃ ॥ ಆವರ್ತಯಂತ ತೇ ಶ್ರೂಣಿ ನಯನೈ ಶ್ಯೋಕಪೀಡಿತೈಃ ॥ ೧೬ ॥ ಏಷಾ ರಾಮೇಣ ನಗರೀ ರಹಿತಾ ನಾತಿಶೋಭತೇ ॥ ಆಪಗಾ ಗರುಡೇನೈವ ಹ್ರದಾದು

ಕಿಂಚಿತ್ಕ್ಷಣಂ - ಕೊಂಚ ಕಾಲವು, ಗತ್ವಾ - ಹೋಗಿ, ಮಾರ್ಗನಾಶಾತ್ - ರಥ ಮಾರ್ಗದ ಅದರ್ಶನದಿಂದ, ಮಹತಾ - ಮಹತ್ತರವಾದ, ವಿಷಾದೇನ - ದುಃಖದಿಂದ, ಪುನಃ - ಮತ್ತು, ಸಂಪ್ಲುತಾಃ - ವ್ಯಾಕುಲರಾದರು. ॥ ೧೩ ॥ ರಥಸ್ಯ - ರಥದ, ಮಾರ್ಗನಾಶೇನ - ಮಾರ್ಗನಾಶನವೆಂಬ ಹೇತುವಿನಿಂದ, ದೈವೇನ - ದೈವದಿಂದ, ಉಪಹತಾಃ - ಹೊಡೆಯಲ್ಪಟ್ಟವು, ಇತಿ-ಇಂತೆಂದು, ಪ್ರಲಪಂತಃ - ಕೂಗುತ್ತ, ಕಿಮಿದಂ - ಇನ್ನುಮೇಲೆ, ಕಿಂಕರಿಷ್ಯಾಮಃ - ಏನು ಮಾಡೋಣ?, ಇತಿ-ಇಂತೆಂದು, ಮನಸ್ವಿನಃ - ಆ ಶ್ರೀರಾಮನಲ್ಲಿಯೇ ಮನಸ್ಸುಳ್ಳವರಾಗಿ, ನ್ಯವರ್ತಂತ - ಹಿಂತಿರುಗಿದರು. ॥ ೧೪ ॥ ತತಃ - ಬಳಿಕ, ಸರ್ವೇ - ಎಲ್ಲರೂ, ಕ್ಲಾಂತಚೇತಸಃ - ಬಳಲಿದ ಮನಸ್ಸುಳ್ಳವರಾಗಿ, ಯಥಾಗತೇನ - ತಾವು ಬಂದ, ಮಾರ್ಗೇಣೈವ - ಮಾರ್ಗದಿಂದಲೇ, ವ್ಯಥಿತಸಜ್ಜನಾಂ - ದುಃಖಿತರಾದ ಸತ್ಪುರುಷರುಳ್ಳ, ಅಯೋಧ್ಯಾಂಪುರೀಂ-ಅಯೋಧ್ಯಾಪಟ್ಟಣವನ್ನು ಕುರಿತು, ಅಗಮನ್ - ಬಂದರು. ॥ ೧೫ ॥ ತೇ - ಅವರು, ತಾಂನಗರೀಂಚ - ಆ ಪಟ್ಟಣವನ್ನೂ ಕೂಡ, ಆಲೋಕ್ಯ - ಕಂಡು, ಕ್ಷಯವ್ಯಾಕುಲಮಾನಸಾಃ, ಕ್ಷಯ - ಮನೆಯನ್ನು ಕುರಿತು, ವ್ಯಾಕುಲ - ದುಃಖಿಸುತ್ತಾ ಹೋಗಬೇಕೆಂಬ, ಮಾನಸಾಃ - ಮನಸ್ಸುಳ್ಳವರಾಗಿ, ಶೋಕಪೀಡಿತೈಃ - ದುಃಖದಿಂದ ಬಾಧಿತವಾದ, ನಯನೈಃ - ಕಣ್ಣುಗಳಿಂದ, ಅಶ್ರೂಣಿ - ಕಂಬನಿಗಳನ್ನು, ಆವರ್ತಯಂತ - ಸುರಿಸಿದರು. ॥ ೧೬ ॥ ರಾಮೇಣ-ಶ್ರೀರಾಮನಿಂದ, ರಹಿತಾ-ಹೀನವಾದ, ಏಷಾನಗರೀ-ಈ ಪಟ್ಟಣವು, ಗರುಡೇನ-ಗರುಡನಿಂದ, ಹ್ರದಾತ್ - ಮಡುವಿನದೆಶೆಯಿಂದ, ಉದ್ಧೃತಪನ್ನಗಾ - ಎತ್ತಿಹಾಕಲ್ಪಟ್ಟ ಸರ್ಪವುಳ್ಳ, ಆಪಗೇವ -

---

ಅಗಲಿ ಪುನಃ ಪಟ್ಟಣವನ್ನು ನೋಡುವುದು ತಾನೆ ಹೇಗೆ?" ಎಂಬೀ ಪ್ರಕಾರವಾಗಿ ಆ ಪ್ರಜೆಗಳೆಲ್ಲರೂ ಬಾಹುಗಳನ್ನು ಮೇಲಕ್ಕೆತ್ತಿಕೊಂಡು ವಿಧ ವಿಧವಾಗಿ ಪ್ರಲಾಪಿಸುತ್ತ ಕರುಗಳಿಲ್ಲದ ಗೋವುಗಳಂತೆ ದುಃಖಾಕ್ರಾಂತರಾಗಿ ಅಳುತ್ತ, ರಥಮಾರ್ಗವನ್ನನುಸರಿಸಿ ಸ್ವಲ್ಪದೂರಹೋಗಿ ಆ ದಾರಿಯು ಕಣ್ಣಿಗೆ ಕಾಣದೆಹೋಗಲು ಮಹಾ ಸಂಕಟದಿಂದ ಬೇಸತ್ತರು. ಈ ರೀತಿ ರಥಮಾರ್ಗವು ಕಾಣದೆ, ಆ ಪ್ರಜೆಗಳು ದೈವಾಹತರಾಗಿ, "ಮುಂದೇನು ಮಾಡೋಣ!" ಎಂದು ಕೂಗುತ್ತ ಬಹಳವಾಗಿ ಬಳಲಿದವರಾಗಿ ಅದೇ ಮಾರ್ಗದಿಂದಲೇ ಹಿಂತಿರುಗಿ ಊರಿಗೆ ಬಂದು ಅಯೋಧ್ಯಾ ನಗರವನ್ನು ಕಂಡು ದುಃಖಿಸುತ್ತ ಮನೆಗಳಿಗೆ ಹೋಗಬೇಕೆಂಬ ಮನವುಳ್ಳವರಾಗಿ ಕಂಬನಿಗಳನ್ನು ಸುರಿಸಿದರು. ॥ ೧-೧೬ ॥ ಆಗಲಾ ಪಟ್ಟಣವು ಶ್ರೀರಾಮಮೂರ್ತಿಯಿಂದ ರಹಿತವಾಗಿ, ಗರುಡನಿಂದೆಸೆಯಲ್ಪಟ್ಟ ಮಡುವಿ

ದ್ಧೃತ ಪನ್ನಗಾ ॥ ೧೭ ॥ ಚಂದ್ರಹೀನಮಿವಾಕಾಶಂ ತೋಯಹೀನ ಮಿವಾರ್ಣವಂ ॥ ಅಪಶ್ಯನ್ನಿಹ ತಾನಂದಂ ನಗರಂ ತೇವಿಚೇತಸಃ ॥ ೧೮ ॥

ತೇ ತಾನಿ ವೇಶ್ಮಾನಿ ಮಹಾಧನಾನಿ
ದುಃಖೇನ ದುಃಖೋಪಹತಾ ವಿಶಂತಃ ॥
ನೈವಪ್ರಜಜ್ಞು ಸ್ಸ್ವಜನಂ ಜನಂವಾ-
ನಿರೀಕ್ಷಮಾಣಾಃ ಪ್ರವಿನಷ್ಟ ಹರ್ಷಾಃ ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಚತ್ವಾರಿಂಶಸ್ಸರ್ಗಃ

ನದಿಯಂತೆ, ನಾತಿಶೋಭತೇ - ಬಹಳವಾಗಿ ಹೊಳೆಯುವದಿಲ್ಲ ॥ ೧೭ ॥ ತೇ - ಅವರು, ವಿಚೇತಸಃ - ಪ್ರಜ್ಞೆಯಿಲ್ಲದವರಾಗಿ. ಚಂದ್ರಹೀನಂ - ಚಂದ್ರನಿಲ್ಲದಿರುವ, ಆಕಾಶಮಿವಸ್ಥಿತಂ - ಆಕಾಶದಂತಿರುವ, ತೋಯಹೀನಂ - ನೀರಿಲ್ಲದಿರುವ, ಅರ್ಣವಮಿವಸ್ಥಿತಂ - ಕಡಲಿನಂತಿರುವ, ನಿಹತಾನಂದಂ - ಹೊಡೆಯಲ್ಪಟ್ಟ ಸಂತೋಷವುಳ್ಳ, ನಗರಂ - ಪಟ್ಟಣವನ್ನು, ಅಪಶ್ಯ - ಕಂಡರು. ॥ ೧೮ ॥ ತೇ- ಆ ಪಟ್ಟಣಸ್ಥರು, ಮಹಾಧನಾನಿ - ಅಮೂಲ್ಯವಾದ, ತಾನಿವೇಶ್ಮಾನಿ - ಆ ಮನೆಗಳನ್ನು, ವಿಶಂತಃ- ಹೊಕ್ಕವರಾದರು, ದುಃಖೇನ - ವ್ಯಸನದಿಂದ ಕೂಡಿರುವ, ಸ್ವಜನಂ - ತಮ್ಮ ಜನವನ್ನಾದರೂ, ಜನಂ - ಇತರ ಜನಗಳನ್ನಾದರೂ, ನಿರೀಕ್ಷಮಾಣಾಃ - ನೋಡುತ್ತ, ಪ್ರವಿನಷ್ಟಹರ್ಷಾ - ಗತ ಸಂತೋಷವುಳ್ಳವರಾಗಿ, ದುಃಖೋಪಹತಾಸ್ಸಂತಃ - ದುಃಖದಿಂದ ಹೊಡೆಯಲ್ಪಟ್ಟವರಾಗಿ, ನೈವ ಪ್ರಜಜ್ಞುಃ - ತನ್ನದು, ಇತರರದು ಎಂಬ ವಿವೇಚನೆಯನ್ನು ತಿಳಿಯದೆ ಹೋದರು. ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಚತ್ವಾರಿಂಶಸ್ಸರ್ಗಃ.

ನಲ್ಲಿ ಸರ್ಪವುಳ್ಳ ನದಿಯಂತೆ ತೇಜೋವಿಹೀನವಾಯಿತು. ಶ್ರೀರಾಮನ ಹಿಂದುಗಡೆ ಹೋಗಿದ್ದ ಪ್ರಜೆಗಳೆಲ್ಲರೂ ಪ್ರಜ್ಞೆಯಿಲ್ಲದವರಾಗಿ, ಚಂದ್ರನಿಲ್ಲದ ಆಕಾಶದಂತೆಯೂ, ನೀರಿಲ್ಲದಿರುವ ಸಮುದ್ರದಂತೆಯೂ ಸಂತೋಷಶೂನ್ಯವಾದ ಆ ಪಟ್ಟಣವನ್ನು ಕಂಡು, ಬಹು ಬೆಲೆಯುಳ್ಳ ತಮ್ಮ ತಮ್ಮ ಮನೆಗಳನ್ನು ಹೊಕ್ಕು ವ್ಯಸನದಿಂದ ತಮ್ಮ ನೆಂಟರನ್ನೂ, ಇತರ ಜನಗಳನ್ನೂ ನೋಡುತ್ತ, ಶೋಕಾಕ್ರಾಂತರಾಗಿ “ ಇದು ತಮ್ಮದು, ಅದು ಇತರರದು ” ಎಂಬುದನ್ನೇ ತಿಳಿಯದೆ ಭ್ರಾಂತರಾಗಿಹೋದರು. ॥ ೧೭-೧೯ ॥

ಇಂತಿದು ಶ್ರೀರಾಮಾನುಸೃತ ಪ್ರಜಾನಿರ್ವನ ವೃತ್ತಾಂತ ವಿವರಣವೆಂಬ
ನಲವತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ.

ತೇಷಾಮೇವಂ ವಿಷಣ್ಣಾನಾಂ ಪೀಡಿತಾನಾ ಮತೀವಚ ॥ ಬಾಷ್ಪ ವಿಪ್ಲುತ ನೇತ್ರಾಣಾಂ ಸಶೋಕಾನಾಂ ಮುಮೂರ್ಷಯಾ ॥ ೧ ॥ ಅನು ಗಮ್ಯ ನಿವೃತ್ತಾನಾಂ ರಾಮಂ ನಗರವಾಸಿನಾಂ ॥ ಉದ್ಗತಾನೀವ ಸತ್ವಾನಿ ಬಭೂವು ರಮನಸ್ವಿನಾಂ ॥ ೨ ॥ ಸ್ವಂಸ್ವಂ ನಿಲಯಮಾಗಮ್ಯ ಪುತ್ರದಾರೈ ಸ್ಸಮಾಹೃತಾಃ ॥ ಅಶ್ರೂಣಿ ಮುಮುಚು ಸ್ಸರ್ವೇ ಬಾಷ್ಪೇಣ ಪಿಹಿತಾ ನನಾಃ ॥ ೩ ॥ ನಚಾಹೃಷ್ಯ ನ್ನಚಾನೋರ್ದ ವಣಿಜೋ ನಪ್ರಸಾರಯರ್ಯ ॥ ನಚಾಶೋಭಂತ ಪಣ್ಯಾನಿ ನಾಪಚರ್ಣ ಗೃಹಮೇಧಿನಃ ॥ ೪ ॥ ನಷ್ಟಂ ದೃಷ್ಟ್ವಾ

ಏವಂ - ಹೀಗೆ, ವಿಷಣ್ಣಾನಾಂ - ವ್ಯಸನಗೊಂಡ, ಅತೀವ - ಬಹಳವಾಗಿ, ಪೀಡಿತಾನಾಂ- ಬಾಧಿತರಾದ, ಬಾಷ್ಪವಿಪ್ಲುತನೇತ್ರಾಣಾಂ - ಕಂಬನಿಗಳಳಿಂದ ಕಲುಷವಾದ ನೇತ್ರಗಳುಳ್ಳ, ಮುಮೂ ರ್ಷಯಾ - ಸಾಯಲಿಚ್ಛೆಯಿಂದ, ರಾಮಂ - ಶ್ರೀರಾಮನನ್ನು, ಅನುಗಮ್ಯ - ಅನುಸರಿಸಿಹೋಗಿ, ನಿವೃತ್ತಾನಾಂ - ಹಿಂತಿರುಗಿದವರಾದ ಕಾರಣ, ಅಮನಸ್ವಿನಾಂ - ಮನಗೆಟ್ಟವರಾದ, ತೇಷಾಂ ನಗರವಾಸಿನಾಂ - ಆ ಪಟ್ಟಣಸ್ಥರ, ಸತ್ವಾನಿ - ಪ್ರಾಣಗಳು, ಉದ್ಗತಾನೀವ - ಹೊರಟುಬಂದವೋ ಎಂಬಂತೆ, ಬಭೂವುಃ - ಆದವು. ॥ ೧-೨ ॥ ಸರ್ವೇ - ಎಲ್ಲರೂ, ಸ್ವಂಸ್ವಂ - ತಮ್ಮ ತಮ್ಮ, ನಿಲಯಂ - ಮನೆಯನ್ನು ಕುರಿತು, ಆಗಮ್ಯ - ಬಂದು, ಪುತ್ರದಾರೈಃ, ಪುತ್ರ - ಮಕ್ಕಳಿಂದಲೂ, ದಾರೈಃ - ಹೆಂಡತಿಯರಿಂದಲೂ, ಸಮಾಹೃತಾಃ - ಸೇರಿದವರಾಗಿ, ಬಾಷ್ಪೇಣ - ಕಂಬನಿಗಳಿಂದ, ಪಿಹಿತಾನನಾಃ - ಆಚ್ಛಾದಿತವಾದ ಮುಖವುಳ್ಳವರಾಗಿ, ಅಶ್ರೂನಿ - ಕಂಬನಿಗಳನ್ನು, ಮುಮುಚುಃ - ಬಿಟ್ಟರು, ವಣಿಜಃ - ವರ್ತಕರು, ನಚಾಹೃಷ್ಯರ್ - ಹೊರಗಡೆ ಸಂತೋಷಿಸಲಿಲ್ಲ, ನಚಾನೋರ್ದಾ - ಅಂತಃ ಸಂತೋಷಿಸಲಿಲ್ಲ, ಪಣ್ಯಾನಿ - ಅಂಗಡಿಗಳನ್ನು, ನಪ್ರಸಾರಯರ್ಯ - ತೆರೆಯಲಿಲ್ಲ, ನಚಾ ಶೋಭಂತ - ಅಲಂಕಾರಮಾಡಲಿಲ್ಲ, ಗೃಹಮೇಧಿನಃ - ಗೃಹಸ್ಥರು, ನಾಪಚರ್ಣ - ಅಡಿಗೆಮಾಡಲಿಲ್ಲ. ॥ ೩-೪ ॥ ನಷ್ಟಂ - ಹೋದಪದಾರ್ಥವನ್ನು, ದೃಷ್ಟ್ವಾ - ಕಂಡು, ನಾಭ್ಯನಂರ್ದ - ಸಂತೋಷಿಸ

ಹೀಗೆ ಪರಿತಾಪಗೊಳ್ಳುತ್ತಿರುವವರಾಗಿಯೂ, ದುಃಖಪೀಡಿತರಾಗಿಯೂ, ಕಂಬನಿ ಗಳಿಂದ ಕಲುಷಿತವಾದ ಕಂಗಳುಳ್ಳವರಾಗಿಯೂ, ಪ್ರಾಣದ ಮೇಲಣ ಆಸೆಯನ್ನು ತೊರೆದವ ರಾಗಿಯೂ, ಮನ ನೊಂದವರಾಗಿಯೂ ಇರುವ ಆ ಪುರವಾಸಿಗಳ ಪ್ರಾಣಗಳು ಹೊರ ಹೊರಡುವುವೋ ಎಂಬಂತಾಯಿತು. ಪಟ್ಟಣಿಗರು ತಮ್ಮ ತಮ್ಮ ಮನೆಗಳನ್ನು ಸೇರಿ, ಸ್ತ್ರೀ ಪುತ್ರ ಸಮೇತರಾಗಿ ಕಂಬನಿಗಳನ್ನು ಸುರಿಸುತ್ತಿದ್ದರು. ವರ್ತಕರೆಲ್ಲರೂ ಅಂತಸ್ಸಂತೋಷ, ಬಹಿಸ್ಸಂತೋಷಗಳನ್ನು ಕಾಣದೆ, ಅಂಗಡಿಗಳನ್ನೂ ತೆಗೆಯದೆಯೂ ಕಳೆದು ಹೋಪ ಪದಾರ್ಥಗಳನ್ನೂ, ಅಪಾರವಾದ ಲಾಭಗಳನ್ನೂ ಕಂಡು, ಸಂತೋಷಪಡದೆಯೂ ಇದ್ದರು.

ನಾಭ್ಯನಂದರ್ತ ವಿಪುಲಂ ವಾ ಧನಾಗಮಂ ॥ ಪುತ್ರಂ ಪ್ರಥಮಜಂ ಲಬ್ಧ್ವಾ ಜನನೀ ನಾಭ್ಯನಂದತ ॥ ೫ ॥ ಗೃಹೇ ಗೃಹೇ ರುದಂತ್ಯಶ್ಚ ಭರ್ತಾರಂ ಗೃಹಮಾಗತಂ॥ವ್ಯಗರ್ಹಯಂತ ದುಃಖಾರ್ತಾ ವಾಗ್ಭಿ ಸ್ತೋತ್ರೈರಿವ ದ್ವಿಪಾನ್ ॥೬॥ ಕಿನ್ನು ತೇಷಾಂ ಗೃಹೈಃ ಕಾರ್ಯಂ ಕಿಂ ದಾರೈಃ ಕಿಂ ಧನೇನವಾ ॥ ಪುತ್ರೈರ್ವಾ ಕಿಂ ಸುಖೈ ರ್ವಾಪಿ ಯೇ ನಪಶ್ಯಂತಿ ರಾಘವಂ ॥ ೭ ॥ ಏಕಸ್ಸತ್ಪುರುಷೋ ಲೋಕೇ ಲಕ್ಷ್ಮಣ ಸ್ಸಹಸೀತಯಾ ॥ ಯೋನುಗಚ್ಛತಿ ಕಾಕುತ್ಸ್ಥಂ ರಾಮಂ ಪರಿಚರ್ರ ವನೇ ॥ ೮ ॥ ಆಪಗಾಃ ಕೃತಪುಣ್ಯಾಸ್ತಾಃ ಪದ್ಮಿನ್ಯಶ್ಚ ಸರಾಂಸಿಚ ॥ ಯೇಷು ಸ್ನಾಸ್ಯತಿ ಕಾಕುತ್ಸ್ಥೋ ವಿಗಾಹ್ಯ ಸಲಿಲಂ ಶುಚಿ ॥ ೯ ॥ ಶೋಭ

ಲಿಲ್ಲ, ವಿಪುಲಂ - ವಿಸ್ತಾರವಾದ, ಧನಾಗಮಂ - ಧನಲಾಭವನ್ನು, ದೃಷ್ಟ್ವಾ - ಕಂಡು, ನಾಭ್ಯನಂದರ್ತ - ಸಂತೋಷಿಸಲಿಲ್ಲ, ಪ್ರಥಮಜಂ - ಮೊದಲು ಹುಟ್ಟಿದ, ಪುತ್ರಂ - ಮಗನನ್ನು, ಲಬ್ಧ್ವಾ - ಪಡೆದು, ನಾಭ್ಯನಂದತ - ಸಂತೋಷಿಸಲಿಲ್ಲ, ಗೃಹೇಗೃಹೇ - ಮನೆಮನೆಯಲ್ಲಿಯೂ, ದುಃಖಾರ್ತಾಃ - ವ್ಯಸನದಿಂದ ಬಾಧಿತರಾದ ಕಾರಣ, ರುದಂತ್ಯಃ - ಅಳುತ್ತಿರುವರಾಗಿ, ಗೃಹಮಾಗತಂ - ಮನೆಗೆ ಬಂದ, ಪತಿಂ - ಗಂಡನನ್ನು, ತೋತ್ರೈಃ - ತಿವಿಗೋಲಿನಿಂದ, ದ್ವಿಪಾನಿವ - ಆನೆಗಳನ್ನಂತೆ, ವಾಗ್ಭಿಃ - ಮಾತುಗಳಿಂದ, ವ್ಯಗರ್ಹಯಂತ - ನಿಂದಿಸಿದರು. ॥ ೫-೬ ॥ ಯೇ - ಯಾರು, ರಾಘವಂ - ಶ್ರೀರಾಮನನ್ನು, ನಪಶ್ಯಂತಿ - ನೋಡುವದಿಲ್ಲವೋ, ತೇಷಾಂ - ಅವರಿಗೆ, ಗೃಹೈಃ - ಮನೆಗಳಿಂದ, ಕಿನ್ನು - ಏನುಪ್ರಯೋಜನವು, ದಾರೈಃ - ಹೆಂಡತಿಯರಿಂದ, ಕಿಂಕಾರ್ಯಂ - ಏನು ಪ್ರಯೋಜನ, ಧನೇನವಾ - ದ್ರವ್ಯದಿಂದಲಾದರೂ, ಕಿಂ - ಏನು ಪ್ರಯೋಜನವು, ಪುತ್ರೈರ್ವಾ - ಮಕ್ಕಳಿಂದಲಾದರೂ, ಕಿಂ - ಏನು ಪ್ರಯೋಜನವು, ಸುಖೈರ್ವಾ - ಸುಖಗಳಿಂದಲೂ, ಕಿಂ - ಏನು ಪ್ರಯೋಜನವು. ॥ ೭ ॥ ಯಃ - ಯಾವ ಲಕ್ಷ್ಮಣನು, ಕಾಕುತ್ಸ್ಥಂ - ಕಕುತ್ಸ್ಥವಂಶೋತ್ಪನ್ನನಾದ, ರಾಮಂ - ಶ್ರೀರಾಮನನ್ನು, ವನೇ - ಅರಣ್ಯದಲ್ಲಿ, ಪರಿಚರ್ರ - ಸೇವಿಸುತ್ತ, ಅನುಗಚ್ಛತಿ - ಅನುಸರಿಸಿಹೋಗುವನೋ, ಸಲಕ್ಷ್ಮಣಃ - ಆ ಲಕ್ಷ್ಮಣನು, ಸೀತಯಾಸಹ - ಸೀತಾದೇವಿಯೊಡನೆ, ಏಕಏವ - ಒಬ್ಬನೇ, ಲೋಕೇ - ಲೋಕದಲ್ಲಿ, ಸತ್ಪುರುಷಃ - ಒಳ್ಳೆಯ ಮನುಷ್ಯನು. ॥ ೮ ॥ ಏಷು - ಯಾವ ತೀರ್ಥಗಳಲ್ಲಿ, ಕಾಕುತ್ಸ್ಥಃ - ಶ್ರೀರಾಮನು, ಶುಚಿ - ಪರಿಶುದ್ಧವಾದ, ಸಲಿಲಂ - ಉದಕವನ್ನು, ವಿಗಾಹ್ಯ - ಪ್ರವೇಶಿಸಿ, ಸ್ನಾಸ್ಯತಿ - ಸ್ನಾನಮಾಡುವನೋ, ತಾಃಆಪಗಾಃ - ಆ ನದಿ

ತಾಯಿಯಾದವಳು ಚೊಚ್ಚಲು ಮಗನನ್ನು ಕಂಡು ಆನಂದಿಸಲಿಲ್ಲ. ॥ ೧-೫ ॥ ಇಷ್ಟೆಯಲ್ಲದೆ ಆ ಪಟ್ಟಣದಲ್ಲಿನ ಮನೆಮನೆಯ ಹೆಂಗಸರೆಲ್ಲರೂ ವ್ಯಸನದಿಂದ ಪೀಡಿತರಾಗಿ, ಆನೆಗಳನ್ನು ಅಂಕುಶಗಳಿಂದ ತಿವಿಯುವಂತೆ ತಮ್ಮ ವಲ್ಲಭರನ್ನು ಕಠಿಣ ವಾಕ್ಯಗಳಿಂದೀರೀತಿ ನಿಂದಿಸಿದರು. “ ಶ್ರೀರಾಮನನ್ನು ಕಾಣದ ಜನರಿಗೆ, ಈ ಮನೆಯಿಂದಲೂ, ಈ ಮನೆಯಲ್ಲಿರುವ ಪದಾರ್ಥಗಳಿಂದಲೂ, ಪುತ್ರ ಧನಾದಿಗಳಿಂದಲೂ ಏನು ಪ್ರಯೋಜನ? ಲೋಕದಲ್ಲಿ ಸತ್ಪುರುಷನೆಂದರೆ ಲಕ್ಷ್ಮಣನೊಬ್ಬನೇ ಸರಿ. ಶ್ರೀರಾಮಮೂರ್ತಿಯನ್ನನುಸರಿಸಿ ಹೋಗಿ ಅರಣ್ಯದಲ್ಲಿ ಆತನ ಸೇವೆ ಸತ್ಕಾರಗಳನ್ನು ಮಾಡುವನಾದುದರಿಂದಾತನೇ ಕೃತಾರ್ಥನು;

ಯಿಷ್ಯಂತಿ ಕಾಕುತ್‌ಸ್ಥ ಮಟವ್ಯೋ ರಮ್ಯಕಾನನಾಃ ॥ ಆಪಗಾಶ್ಚ ಮಹಾನೂಪಾ ಸ್ಸಾನುಮಂತಶ್ಚ ಪರ್ವತಾಃ ॥ ೧೦ ॥ ಕಾನನಂವಾಪಿ ಶೈಲಂವಾ ಯಂ ರಾಮೋ ಧಿಗಮಿಷ್ಯತಿ ॥ ಪ್ರಿಯಾತಿಥಿಮಿವ ಪ್ರಾಪ್ತಂ ನೈನಂ ಶಕ್ಷ್ಯಂತ್ಯನರ್ಚಿತುಂ ॥೧೧॥ ವಿಚಿತ್ರ ಕುಸುಮಾಪೀಡಾ ಬಹುಮಂಜರಿ ಧಾರಿಣಃ ॥ ರಾಘವಂ ದರ್ಶಯಿ ಷ್ಯಂತಿ ನಗಾ ಭ್ರಮರಶಾಲಿನಃ ॥ ೧೨ ॥ ಅಕಾಲೇ ಚಾಪಿ ಮುಖ್ಯಾನಿ ಪುಷ್ಪಾಣಿ ಚ ಫಲಾನಿಚ ॥ ದರ್ಶಯಿಷ್ಯಂ ತ್ಯನುಕ್ರೋಶಾ ದ್ಗಿರಯೋ ರಾಮ ಮಾಗತಂ ॥ ೧೩ ॥ ಪ್ರಸ್ರವಿಷ್ಯಂತಿಹಿ ತೋಯಾನಿ ವಿಮಲಾನಿ ಮಹೀಧರಾಃ॥

ಗಳೂ, ಪದ್ಮಿನ್ಯಶ್ಚ - ತಾವರೆಗಳುಳ್ಳ ಕೆರೆಗಳೂ, ಸರಾಂಸಿಚ - ಸರೋವರಗಳೂ, ಕೃತಪುಣ್ಯಾಃ - ಮಾಡಲ್ಪಟ್ಟ ಪುಣ್ಯವುಳ್ಳವುಗಳು. ॥ ೯ ॥ ರಮ್ಯಕಾನನಾಃ - ಮನೋಹರವಾದ ವೃಕ್ಷಸಮುದಾಯ ಗಳುಳ್ಳ, ಅಟವ್ಯಃ - ಅರಣ್ಯಗಳು, ಮಹಾನೂಪಾಃ - ಚವುಳುಭೂಮಿಗಳೂ, ಆಪಗಾಶ್ಚ - ನದಿಗಳೂ, ಸಾನುಮಂತಃ - ಜರಿಗಳುಳ್ಳ, ಪರ್ವತಾಶ್ಚ - ಬೆಟ್ಟಗಳೂ, ಕಾಕುತ್‌ಸ್ಥಂ - ಶ್ರೀರಾಮನನ್ನು, ಶೋಭಯಿಷ್ಯಂತಿ - ಕಂಗೊಳಿಸುವಂತೆ ಮಾಡುವವು. ॥ ೧೦ ॥ ರಾಮಃ - ಶ್ರೀರಾಮನು, ಕಾನನಂವಾ- ಅರಣ್ಯವನ್ನೇ ಆಗಲಿ, ಶೈಲಂವಾ - ಪರ್ವತವನ್ನೇ ಆಗಲಿ, ಯಂ - ಯಾವದನ್ನು ಕುರಿತು, ಅಧಿಗ ಮಿಷ್ಯತಿ - ಹೋಗುವನೋ, ಪ್ರಾಪ್ತಂ - ಬಂದ, ಪ್ರಿಯಾತಿಥಿಮಿವ - ಇಷ್ಟನಾದ ಅತಿಥಿಯನ್ನಂತೆ, ಏನಂ - ಈ ಶ್ರೀರಾಮನನ್ನು, ಅನರ್ಚಿತುಂ - ಪೂಜೆಮಾಡದೆ ಇರುವದಕ್ಕೆ, ನಶಕ್ಷ್ಯಂತಿ - ಸಮರ್ಥ ವಾಗಲಾರವು. ॥ ೧೧ ॥ ವಿಚಿತ್ರಕುಸುಮಾಪೀಡಾಃ - ನಾನಾವಿಧವಾದ ಪುಷ್ಪಗಳೇ ಶಿರೋಭೂಷಣ ವಾಗಿವುಳ್ಳ, ಬಹುಮಂಜರಿಧಾರಿಣಃ - ಅನೇಕ ಗೊಂಚಲುಗಳನ್ನು ಧರಿಸಿರುವ, ಭ್ರಮರಶಾಲಿನಃ - ದುಂಬಿಗಳಿಂದೊಪ್ಪುತ್ತಿರುವ, ನಗಾಃ - ವೃಕ್ಷಗಳು, ರಾಘವಂ - ಶ್ರೀರಾಮನನ್ನು, ದರ್ಶಯಿಷ್ಯಂತಿ - ತೋರಿಸುತ್ತವೆ. ॥ ೧೨ ॥ ಅಕಾಲೇಚಾಪಿ - ಅಕಾಲದಲ್ಲಿಯೂ ಕೂಡ, ಮುಖ್ಯಾನಿ - ಉತ್ತಮ ವಾದ, ಪುಷ್ಪಾಣಿಚ - ಹೂವುಗಳೂ, ಫಲಾನಿಚ - ಹಣ್ಣುಗಳೂ, ಅನುಕ್ರೋಶಾತ್ - ದಯೆಯಿಂದ, ಗಿರಯಃ - ಪರ್ವತಗಳೂ, ಆಗತಂ - ತಮ್ಮೆಡೆಗೆಬಂದ, ರಾಮಂ - ಶ್ರೀರಾಮನನ್ನು, ದರ್ಶಯಿಷ್ಯತಿ- ತೋರಿಸುತ್ತವೆ. ॥೧೩॥ ಮಹೀಧರಾಃ - ಬೆಟ್ಟಗಳು, ವಿಮಲಾನಿ - ನಿರ್ಮಲವಾದ, ತೋಯಾನಿ -

ಪತಿಯೇ ಪರದೈವವೆಂದರಿತು ಆತನೊಡನೆ ತೆರಳಿದ ಸೀತಾದೇವಿಯೊಬ್ಬಳೇ ಪತಿವ್ರತೆಯು. ಕೃತಾರ್ಥಳೂ ಅಹುದು. ಶ್ರೀರಾಮನು ಉದಕವನ್ನು ಪ್ರವೇಶಿಸಿ ಸ್ನಾನವಂಗೈಯುವ ನದಿ ಗಳೂ, ಕಮಲ ಸರೋವರಗಳೂ ಪುಣ್ಯತಮವಾದುವುಗಳಾಗುತ್ತವೆ. ಇವು ಮಾತ್ರವಲ್ಲದೆ ಮನೋಹರವಾದ ವೃಕ್ಷ ಸಮೂಹಗಳುಳ್ಳ ವನಗಳೂ, ಚೌಳು ಭೂಮಿಯಲ್ಲಿರುವ ನದಿ ಗಳೂ, ಜರತೆಗಳುಳ್ಳ ಪರ್ವತಗಳೂ ಶ್ರೀರಾಮನನ್ನು ಕಂಗೊಳಿಸುವಂತೆ ಮಾಡುತ್ತವೆ. ಮಹಾತ್ಮನಾದ ಶ್ರೀರಾಮನು ಅರಣ್ಯಕ್ಕಾಗಲಿ, ಪರ್ವತಗಳಿಗಾಗಲಿ, ಎಲ್ಲಿಗೇ ಹೊರಟರೂ, ಅವುಗಳೆಲ್ಲ ಅತಿಥಿಯಾಗಿ ಬಂದಿರುವ ಆತನನ್ನು ಮನ್ನಿಸದಿರಲಾವು. ॥ ೬-೧೧ ॥ ಶ್ರೀ ರಾಮನು ವಾಸಿಸುವ ವನಗಳಲ್ಲಿ, ಸಕಲ ವೃಕ್ಷಗಳೂ, ಕುಸುಮಿತಗಳಾಗಿರುತ್ತವೆ. ಇದರಿಂದ ಶ್ರೀರಾಮನುಕೀರ್ತಿಯು ವಾಸಿಸುವ ಠಾವು ವ್ಯಕ್ತವಾಗುತ್ತದೆ. ಆ ಕಾಲದಲ್ಲಿ

ನಿದರ್ಶಯಂತೋ ವಿವಿಧಾನ್ ಭೂಯಶ್ಚಿತ್ರಾಂಶ್ಚ ನಿರ್ಝರಾನ್ ‖೧೪‖
ಪಾದಪಾಃ ಪರ್ವತಾಗ್ರೇಷು ರಮಯಿಷ್ಯಂತಿ ರಾಘವಂ ‖ ಯತ್ರ ರಾಮೋ
ಭಯಂ ನಾತ್ರ ನಾಸ್ತಿ ತತ್ರ ಪರಾಭವಃ ‖೧೫‖ ಸಹಿ ಶೂರೋ ಮಹಾ
ಬಾಹುಃ ಪುತ್ರೋ ದಶರಥಸ್ಯಚ ‖ ಪುರಾಭವತಿ ನೋ ದೂರಾದನುಗಚ್ಛಾಮ
ರಾಘವಂ ‖೧೬‖ ಪಾದಚ್ಛಾಯಾ ಸುಖಾಭರ್ತುಸ್ತಾದೃಶಸ್ಯ ಮಹಾ
ತ್ಮನಃ ‖ ಸಹಿ ನಾಥೋ ಜನಸ್ಯಾಸ್ಯ ಸಗತಿಸ್ಸಪರಾಯಣಂ ‖೧೭‖ ವಯಂ
ಪರಿಚರಿಷ್ಯಾಮ ಸ್ಸೀತಾಂ ಯೂಯಂತು ರಾಘವಂ ‖ ಇತಿಪೌರ ಸ್ತ್ರಿಯೋ

ಉದಕಗಳನ್ನು, ಪ್ರವಿಷ್ಯಂತಿ - ಸ್ರವಿಸುತ್ತವೆ, ಭೂಯಃ - ಮತ್ತು, ಚಿತ್ರಾನ್ - ನಾನಾವಿಧವಾದ, ನಿರ್ಝರಾನ್ - ಪ್ರವಾಹರೂಪವಾಗಿರುವ, ವಿವಿಧಾನ್ - ರೀತಿಗಳನ್ನು, ನಿದರ್ಶಯಂತಃ - ತೋರಿಸುತ್ತವೆ. ‖೧೪‖ ಪಾದಪಾಃ - ವೃಕ್ಷಗಳು, ಪರ್ವತಾಗ್ರೇಷು - ಗಿರಿಶೃಂಗಗಳಲ್ಲಿ, ರಾಘವಂ - ಶ್ರೀರಾಮನನ್ನು, ರಮಇಷ್ಯಂತಿ ಸಂತೋಷಪಗೊಳಿಸುತ್ತವೆ. ಯತ್ರ - ಎಲ್ಲಿ, ರಾಮಃ-ಶ್ರೀರಾಮನು, ಅಸ್ತಿ - ಇರುವನೋ, ತತ್ರ - ಅಲ್ಲಿ, ಭಯಂ - ಭೀತಿಯು, ನಾಸ್ತಿ - ಇಲ್ಲ, ಅತ್ರ - ಇಲ್ಲಿ, ಪರಾಭವಃ - ಪರಾಜಯವು, ನಾಸ್ತಿ - ಇಲ್ಲ. ‖೧೫‖ ಶೂರಃ - ವೀರನಾದ, ಮಹಾಬಾಹುಃ - ಮಹಾಭುಜಪರಾಕ್ರಮಿಯಾದ, ದಶರಥಸ್ಯ - ದಶರಥರಾಯನಿಗೆ, ಪುತ್ರಃ - ಮಗನಾದ, ಸಹಿ - ಆ ಶ್ರೀರಾಮನಾದರೆ, ನಃ - ನಮಗೆ, ದೂರಾತ್ - ದೂರದಲ್ಲಿರುವನು, ಭವತಿ - ಆಗುವನೋ, ಪುರಾ - ಅದಕ್ಕಿಂತಲೂ ಮುಂಚಿತವಾಗಿ, ರಾಘವಂ - ಶ್ರೀರಾಮನನ್ನು, ಅನುಗಚ್ಛಾಮ - ಅನುಸರಿಸಿ ಹೋಗೋಣ. ‖೧೬‖ ಮಹಾತ್ಮನಃ - ಮಹಾಮನಸ್ವಿಯಾದ, ಭರ್ತುಃ - ಪತಿಯ, ಪಾದಚ್ಛಾಯಾ - ಪಾದಸೇವೆಯು, ಸುಖಾ - ಸುಖಕರವಾದುದು, ಹಿ - ಯಾವ ಕಾರಣ, ಸಃ - ಆತನು, ಅಸ್ಯಜನಸ್ಯ - ಈ ನಮಗೆ, ನಾಥಃ - ಸ್ವಾಮಿಯೋ, ಸಃ - ಆತನೇ, ಗತಿಃ - ಶರಣವೋ, ಸಃ - ಆತನೇ, ಪರಾಯಣಂ - ಆಧಾರಭೂತನು. ‖೧೭‖ ವಯಂ - ಸ್ತ್ರೀಯರಾದನಾವು, ಸೀತಾಂ - ಸೀತಾದೇವಿಯನ್ನು, ಪರಿಚರಿಷ್ಯಾಮಃ - ಸೇವಿಸುತ್ತೇವೆ, ಯೂಯಂತು - ನೀವಾದರೆ, ರಾಘವಂ - ಶ್ರೀರಾಮನನ್ನು, ಪರಿಚರಿಷ್ಯಥ - ಸೇವಿಸಿರಿ, ಇತಿ - ಇಂತೆಂದು, ಪೌರಸ್ತ್ರಿಯಃ - ಪಟ್ಟಣಸ್ಥರಾದ ಹೆಂಗಸರು, ದುಃಖಾರ್ತಾಃ - ವ್ಯಸನಬಾಧಿತರಾಗಿ, ಭರ್ತೄನ್ - ಪತಿಗಳನ್ನು ಕುರಿತು, ತತ್ರಾತ್ -

ಪುಷ್ಪಗಳೂ, ಫಲಗಳೂ, ವೃಕ್ಷಗಳೂ ದಯೆಯೊಂದಿ ಶ್ರೀರಾಮಮೂರ್ತಿಯನ್ನು ತೋರಿಸುತ್ತವೆ. ಇವು ಮಾತ್ರವಲ್ಲದೆ ಬೆಟ್ಟಗಳು ನಿರ್ಮಲೋದಕಗಳುಳ್ಳ ಮಹದಾಶ್ಚರ್ಯಕರವಾದ ವಿವಿಧ ನದನದಿಗಳನ್ನು ಪ್ರವಹಿಸುವಂತೆ ಮಾಡುತ್ತವೆ. ಇಂತಹ ಶೂರನೂ, ಮಹಾ ಭುಜಬಲಪರಾಕ್ರಮಿಯೂ ಆದ ದಶರಥರಾಜ ಕುಮಾರನು ನಮಗೆ ದೂರವಾಗುವುದರೊಳಗಾಗಿ ಆತನನ್ನನುಸರಿಸಿ ಹೋಗೋಣ. ಆ ಮಹಾನುಭಾವನು ನಮ್ಮೆಲ್ಲರಿಗೂ ಸ್ವಾಮಿಯಾಗಿರುವನಾದುದರಿಂದ ಆತನ ಪಾದಸೇವೆಯೇ ನಮಗೆ ಸುಖಮಯವಾಗಿರುತ್ತದೆ. ಪುರುಷರಾದ ನೀವೆಲ್ಲರೂ ಶ್ರೀರಾಮನ ಸೇವೆ ಸತ್ಕಾರಗಳನ್ನು ಮಾಡಿರಿ. ಸ್ತ್ರೀಯರಾದ ನಾವು ಸೀತಾದೇವಿಯನ್ನು ಸೇವಿಸುತ್ತೇವೆ.” ಈ ರೀತಿ ಅಯೋಧ್ಯಾನಗರದ ಹೆಂಗಸರು ತಮ್ಮ ಪತಿ

ಭರ್ತುರ್ದುಃಖಾರ್ತಾ ಸ್ತತ್ರದಬ್ರುವನ್ ॥ ೧೮ ॥ ಯುಷ್ಮಾಕಂ ರಾಘವೋ ರಣ್ಯೇ ಯೋಗಕ್ಷೇಮಂ ವಿಧಾಸ್ಯತಿ ॥ ಸೀತಾ ನಾರೀ ಜನಸ್ಯಾಸ್ಯ ಯೋಗಕ್ಷೇಮಂ ಕರಿಷ್ಯತಿ ॥ ೧೯ ॥ ಕೋನ್ವನೇನಾಪ್ರತೀತೇನ ಸೋತ್ಕಂಠಿತ ಜನೇನಚ ॥ ಸಂಪ್ರಿಯೇತಾ ಮನೋಜ್ಞೇನ ವಾಸೇನ ಹೃತಚೇತಸಾ ॥ ೨೦ ॥ ಕೈಕೇಯ್ಯಾ ಯದಿಚೇದ್ರಾಜ್ಯಂ ಸ್ಯಾದಧರ್ಮ್ಯ ಮನಾಥವತ್ ॥ ನಹಿ ನೋ ಜೀವಿತೇನಾರ್ಥಃ ಕುತಃ ಪುತ್ರೈಃ ಕುತೋ ಧನೈಃ ॥ ೨೧ ॥ ಯಯಾ ಪುತ್ರಶ್ಚ ಭರ್ತಾಚ ತ್ಯಕ್ತಾವೈಶ್ವರ್ಯ ಕಾರಣಾತ್ ॥ ಕಂ ಸಾ ಪರಿಹರೇದನ್ಯಂ ಕೈಕೇಯೀ ಕುಲ

ಆಯಾ ಮಾತುಗಳನ್ನು, ಅಬ್ರುವನ್ - ನುಡಿದರು. ॥ ೧೮ ॥ ಅರಣ್ಯೇ - ಕಾಡಿನಲ್ಲಿ, ರಾಘವಃ - ಶ್ರೀರಾಮನು, ಯುಷ್ಮಾಕಂ - ನಿಮ್ಮ, ಯೋಗಕ್ಷೇಮಂ, ಯೋಗ - ಪಡೆಯದೆಯಿರುವ ದ್ರವ್ಯ ಪ್ರಾಪ್ತಿಯನ್ನು, ಕ್ಷೇಮಂ - ಪಡೆದ ದ್ರವ್ಯರಕ್ಷಣೆಯನ್ನು, ವಿಧಾಸ್ಯತಿ - ಮಾಡುವನು, ಸೀತಾ - ಸೀತಾದೇವಿಯು, ಅಸ್ಯನಾರೀಜನಸ್ಯ - ಈ ಹೆಣ್ಣು ಜನಕ್ಕೆ, ಯೋಗಕ್ಷೇಮಂ - ಯೋಗಕ್ಷೇಮ ವಿಚಾರಣೆಯನ್ನು, ಕರಿಷ್ಯತಿ - ಮಾಡುವಳು. ॥ ೧೯ ॥ ಅಪ್ರತೀತೇನ - ಅಸುಖವಾದ, ಅನು ನೋಜ್ಞೇನ - ಮನೋಹರವಾಗದಿರುವ, ಸೋತ್ಕಂಠಿತಜನ - ಉತ್ಕಂಠೆಯುಳ್ಳ ಜನರಿಂದೊಡಗೂಡಿದ, ಹೃತಚೇತಸಾ, ಹೃತ - ಅಪಹರಿಸಲ್ಪಟ್ಟ, ಚೇತಸಾ-ಮನಸ್ಸುಳ್ಳ, ಅನೇನವಾಸೇನ - ಈ ಅಯೋಧ್ಯಾ ಪುರದಲ್ಲಿರೋಣದರಿಂದ, ಕೋನುಸಂಪ್ರಿಯೇತ - ಯಾವನುತಾನೆ ಸಂತೋಷಿಸಿಯಾನು ॥ ೨೦ ॥ ಕೈಕೇಯ್ಯಾಃ - ಕೈಕೇಯಿದೇವಿಗೆ, ರಾಜ್ಯಂಯದಿ - ರಾಜ್ಯವಾದರೆ, ಅಧರ್ಮ್ಯಂ - ಅಧರ್ಮವುಳ್ಳದು, ಅನಾಥವತ್ - ಧೊರೆಯಿಲ್ಲದುದು, ಸ್ಯಾತ್ - ಆಗುವದೋ, ನಃ - ನಮಗೆ, ಜೀವಿತೇ - ಬದುಕುವಿಕೆಯಲ್ಲಿ, ಅರ್ಥಃ - ಪ್ರಯೋಜನವು, ನಹಿ - ಇಲ್ಲವೇ ಇಲ್ಲ, ಪುತ್ರೈಃ - ಮಕ್ಕಳಿಂದ, ಕುತಃ - ಪ್ರಯೋಜನವೆಲ್ಲಿಯದು, ಧನೈಃ - ಧನಗಳಿಂದ, ಕುತಃ - ಏನು ಪ್ರಯೋಜನವು. ॥ ೨೧ ॥ ಯಯಾ - ಯಾವ ಕೈಕೇಯಿಯಿಂದ, ಪುತ್ರಶ್ಚ - ಮಗನೂ, ಭರ್ತಾಚ - ಪತಿಯೂ, ಐಶ್ವರ್ಯ ಕಾರಣಾತ್ - ಸಂಪತ್ತಿಗಾಗಿ, ತ್ಯಕ್ತಾವಿ - ಬಿಡಲ್ಪಟ್ಟರೋ, ಕುಲಪಾಂಸನೀ - ಕುಲನಾಶಕಳಾದ,

---

ಗಳನ್ನು ಕುರಿತು ಹೇಳಿದ-ದಲ್ಲದೆ, ದಶರಥರಾಯನನ್ನುದ್ದೇಶಿಸಿ ಮತ್ತಿಂತೆಂದರು. ॥ ೧೮ ॥ "ದಶರಥರಾಜ ಕುಮಾರನಾದ ಶ್ರೀರಾಮನು ನಿಮ್ಮ ಯೋಗಕ್ಷೇಮವನ್ನು ನೋಡಿ ಕೊಳ್ಳುತ್ತಾನೆ. ಆತನ ಹೆಂಡತಿಯಾದ ಸೀತಾದೇವಿಯು ಹೆಂಗಸರಾದ ನಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಾಳೆ. ಸುಖವಿಲ್ಲದುದಾಗಿಯೂ, ಮನಸ್ಸಿಗೆ ಶಾಂತಿಕರ ವಾಗಿಲ್ಲದಿರುವುದಾಗಿಯೂ, ಶ್ರೀರಾಮನನ್ನನುಸರಿಸಬೇಕೆಂಬ ಉತ್ಕಂಠತೆಯುಳ್ಳ ಜನರಿಂ ದೊಡಗೂಡಿದುದಾಗಿಯೂ, ಅಪಹೃತವಾದ ಮನವುಳ್ಳುದುದಾಗಿಯೂ ಇರುವ ಈ ಆಯೋಧ್ಯೆಯಲ್ಲಿರುವುದರಿಂದ ಯಾವನು ತಾನೆ ಸಂತೋಷಪಟ್ಟಾನು? ॥೧೯-೨೦॥ ಈ ದೊರೆತನವು ಕೈಕೇಯಿಯು ಅಧೀನವಾದರೆ ರಾಜ್ಯವು, ಧರ್ಮಶೂನ್ಯವೂ, ಅನಾಥವೂ ಆಗುತ್ತದೆ. ಆಗ ನಮಗೆ ಈ ಮಕ್ಕಳಿಂದಲೂ, ಧನ ಕನಕ ವಾಹನಾದಿಗಳಿಂದಲೂ ಯಾವ ಪ್ರಯೋಜನವು ತಾನೆ ಆಗುತ್ತದೆ? ಕುಲ ಘಾತಕಿಯಾದ ಯಾವ ಕೈಕೇಯಿಯು ಐಶ್ವರ್ಯ

ಸಾಂಸನೀ ॥೨೨॥ ಕೈಕೇಯ್ಯಾ ನ ವಯಂ ರಾಜ್ಯೇ ಭೃತಕಾನಿ ವಸೇಮಹಿ॥ ಜೀವಂತ್ಯಾ ಜಾತು ಜೀವಂತ್ಯಃ ಪುತ್ರೈರಪಿ ಶಪಾಮಹೇ ॥೨೩॥ ಯಾ ಪುತ್ರಂ ಪಾರ್ಥಿವೇಂದ್ರಸ್ಯ ಪ್ರವಾಸಯತಿ ನಿರ್ಘೃಣಾ ॥ ಕಸ್ತಾಂ ಪ್ರಾಪ್ಯ ಸುಖಂ ಜೀವೇ ದಧರ್ಮ್ಯಾಂ ದುಷ್ಟಚಾರಿಣೀಂ ॥ ೨೪ ॥ ಉಪದ್ರುತಮಿದಂ ಸರ್ವಮನಾ ಲಂಬ ಮನಾಯಕಂ ॥ ಕೈಕೇಯ್ಯಾಹಿ ಕೃತೇ ಸರ್ವಂ ವಿನಾಶಮುಪಯಾ ಸ್ಯತಿ ॥ ೨೫ ॥ ನಹಿ ಪ್ರವ್ರಜಿತೇ ರಾಮೇ ಜೀವಿಷ್ಯತಿ ಮಹೀಪತಿಃ ॥ ಮೃತೇ ದಶರಥೇ ವ್ಯಕ್ತಂ ವಿಲಾಪ ಸ್ತದನಂತರಂ ॥೨೬॥ ತೇ ವಿಷಂ ಪಿಬತಾಲೋಡ್ಯ

ಸಾಕೈಕೇಯಿಸಾ - ಆ ಕೈಕೇಯಿದೇವಿಯು, ಅನ್ಯಂ - ಮತ್ತೊಬ್ಬ, ಕಂ - ಯಾವ ಪುರುಷನನ್ನು, ಪರಿಹರೇತ್ - ಬಿಟ್ಟಾಳು. ॥ ೨೨ ॥ ವಯಂ - ನಾವು, ಜೀವಂತ್ಯಾಃ - ಬದುಕುತ್ತಿರುವ, ಕೈಕೇಯ್ಯಾಃ - ಕೈಕೇಯಿದೇವಿಯ, ರಾಜ್ಯೇ - ರಾಜ್ಯದಲ್ಲಿ, ಭೃತಕಾಃ - ಸೇವಕರಾಗಿ, ಜೀವಂತ್ಯಃ- ಬದುಕುವವರಾಗಿ, ಜಾತು - ಯಾವ ಕಾಲದಲ್ಲಿಯೂ, ನವಸೇಮಹಿ-ಇರಬಾರದು, ಇತಿ - ಇಂತೆಂದು ಪುತ್ರೈರಪಿ - ಮಕ್ಕಳಿಂದಲೂ, ಶಪಾಮಹೆ - ಶಪಥವನ್ನು ಮಾಡುತ್ತೇವೆ. ॥ ೨೩ ॥ ನಿರ್ಘೃಣಾ - ದಯೆಯಿಲ್ಲದಿರುವ, ಯಾ - ಯಾವ ಕೈಕೇಯಿಯು, ಪಾರ್ಥಿವೇಂದ್ರಸ್ಯ - ಮಹಾರಾಜನ, ಪುತ್ರಂ- ಮಗನನ್ನು, ಪ್ರವಾಸಯತಿ - ಹೊರಹೊರಡಿಸುವಳೋ, ತಾಂ - ಅಂತಹ, ಅಧರ್ಮ್ಯಾಂ - ಧರ್ಮ ಬಾಹಿತಳಾದ, ದುಷ್ಟಚಾರಿಣೀಂ - ಕೆಟ್ಟನಡತೆಯುಳ್ಳವಳನ್ನು, ಪ್ರಾಪ್ಯ - ಹೊಂದಿ, ಕಃ-ಯಾವನು, ಸುಖಂ - ಸುಖವಾಗಿ, ಜೀವೇತ್ - ಬದುಕಿಯಾನು. ॥ ೨೪ ॥ ಇದಂಸರ್ವಂ - ಇದೆಲ್ಲವೂ, ಉಪಧೃತಂ - ಸನ್ನಿಹಿತವಾಯಿತು, ಸರ್ವಂ - ಸಮಸ್ತವೂ, ಅನಾಲಂಬಂ - ಆಧಾರವಿಲ್ಲದುದಾ ಗಿಯೂ, ಅನಾಯಕಂ - ಸ್ವಾಮಿರಹಿತವಾಗಿಯೂ, ಕೈಕೇಯ್ಯಾಃ - ಕೈಕೇಯಿದೇವಿಯ, ಕೃತೇ - ನಿಮಿತ್ತವಾಗಿ, ವಿನಾಶಂ - ನಾಶವನ್ನು, ಉಪಯಾಸ್ಯತಿಹಿ - ಹೊಂದುವದಷ್ಟೆ. ॥ ೨೫ ॥ ರಾಮೇ- ಶ್ರೀರಾಮನು, ಪ್ರವ್ರಜಿತೇಸತಿ - ಹೊರಟುಹೋಗಲು, ಮಹೀಪತಿಃ - ರಾಜನು, ನಜೀವಿಷ್ಯತಿ - ಬದುಕಿರಲಾರನು, ದಶರಥೇ - ದಶರಥರಾಜನು, ಮೃತೇ-ಮರಣವನ್ನು ಹೊಂದಿದರೆ, ತದನಂತರಂ - ಆ ಬಳಿಕ, ವಿಲಾಪಃ - ರೋದನವು, ವ್ಯಕ್ತಂ - ಸ್ಪಷ್ಟವು. ॥ ೨೬ ॥ ಕ್ಷೀಣಪುಣ್ಯಾಃ - ಅಲ್ಪ

ನಿಮಿತ್ತದಿಂದ, ಪ್ರಿಯ ಪುತ್ರನಾದ ಶ್ರೀರಾಮನನ್ನೂ, ಗಂಡನಾದ ದಶರಥರಾಜನನ್ನೂ ತ್ಯಜಿಸಿದಳೋ, ಅಂತಹ ಪಾಪಿ ಕೈಕೇಯಿಯು ಇನ್ನಾರನ್ನು ತಾನೆ ಬಿಟ್ಟಾಳು? ಛೀ, ಛೆ! ಈ ದುಷ್ಟಳು ಜೀವಂತಳಾಗಿರುವಾಗ ನಮ್ಮ ಮಕ್ಕಳ ಸಾಕ್ಷಿಯಾಗಿಯೂ, ಇವಳ ರಾಜ್ಯ ದಲ್ಲಿರಬಾರದು. ದಯಾ ಶೂನ್ಯಳಾದ ಯಾವ ಈ ಕೈಕೇಯಿಯು ಮಹಾರಾಜನ ಜ್ಯೇಷ್ಠ ಕುವರನನ್ನು ಹೊರಹೊರಡಿಸಿದಳೋ, ಅಂತಹ ದುಷ್ಟಳಾದ ಇವಳ ರಾಜ್ಯದಲ್ಲಿ ಯಾರುತಾನೆ ಸುಖದಿಂದಿರಲಾದೀತು? ಹಾ! ಹಾ!! ಈ ಕೈಕೇಯಿಯ ನಿಮಿತ್ತವಾಗಿ, ಯಾರಿಗೂ ಗೊತ್ತಿಲ್ಲಷ್ಟೇ ಅನಾಯಕವಾಗಿಯೂ, ಆಧಾರವಿಲ್ಲದೆಯೂ ಇವೆಲ್ಲ ಸಂಭವಿಸಿ ಎಲ್ಲ ಕೆಲಸ ಗಳೂ ನಾಶವಾದುವಲ್ಲ! ಶ್ರೀರಾಮನು ಅರಣ್ಯಕ್ಕೆ ಪ್ರೇಷಿತನಾದ ಮೇಲೆ ಆತನ ತಂದೆಯಾದ ದಶರಥರಾಯನು ಜೀವದಿಂದುಳಿಯಲಾರನು? ಮಹಾರಾಜನು ಪುತ್ರ ವ್ಯಸನದಿಂದ ಮರಣ

ಕ್ಷೀಣಪುಣ್ಯಾ ಸ್ಸುದುರ್ಗತಾಃ ॥ ರಾಘವಂ ವಾ ನುಗಚ್ಛಧ್ವ ಮಶ್ರುತಿಂವಾಪಿ ಗಚ್ಛತ ॥ ೨೭ ॥ ಮಿಥ್ಯಾ ಪ್ರವಜಿತೋ ರಾಮಸ್ಸಸೀತ ಸ್ಸಹಲಕ್ಷ್ಮಣಃ ॥ ಭರತೇ ಸನ್ನಿವಿಷ್ಟಾಸ್ಸ್ಮ ಸೌನಿಕೇ ಪಶವೋ ಯಥಾ ॥ ೨೮ ॥ ಪೂರ್ಣಚಂದ್ರಾನನಃ ಶ್ಯಾಮೋ ಗೂಢಜತ್ರು ರರಿಂದಮಃ ॥ ಆಜಾನುಬಾಹುಃ ಪದ್ಮಾಕ್ಷೋ ರಾಮೋ ಲಕ್ಷ್ಮಣ ಪೂರ್ವಜಃ ॥೨೯॥ ಪೂರ್ವಾಭಿಭಾಷೀ ಮಧುರ ಸ್ಸತ್ಯವಾದೀ ಮಹಾಬಲಃ ॥ ಸೌಮ್ಯ ಸ್ಸರ್ವಸ್ಯ ಲೋಕಸ್ಯ ಚಂದ್ರವತ್ಪ್ರಿಯದರ್ಶನಃ ॥೩೦॥

ಪುಣ್ಯರಾದ, ಸುದುರ್ಗತಾಃ - ದುಃಖಾವಸ್ಥೆಯನ್ನುಹೊಂದಿದ, ತೇ - ಪುರುಷರಾದ ನೀವುಗಳು, (ಸಸ್ತ್ರೀಕಾಃ - ಸ್ತ್ರೀಯರಿಂದೊಡಗೂಡಿ,) ವಿಷಂ - ವಿಷಯವನ್ನು, ಆಲೋಡ್ಯ - ಅರೆದು, ಪಿಬತ - ಪಾನಮಾಡಿರಿ, ಅಥವಾ - ಹಾಗಲ್ಲದಿದ್ದರೆ, ರಾಘವಂ - ಶ್ರೀರಾಮನನ್ನು, ಅನುಗಚ್ಛಧ್ವಂ - ಅನುಸರಿಸಿರಿ, ಅಶ್ರುತಿಂವಾಪಿ - ನಿಮ್ಮ ಹೆಸರಿಲ್ಲದೆ ಇರುವ ದೈವವನ್ನಾದರೂ, ಗಚ್ಛತ - ಹೊಂದಿರಿ. ॥ ೨೭ ॥ ರಾಮಃ - ಶ್ರೀರಾಮನು, ಸಸೀತಃ - ಜನಕಪುತ್ರಿಯಿಂದೊಡಗೂಡಿ, ಸಹಲಕ್ಷ್ಮಣಃ - ಸೌಮಿತ್ರಿಸಹಿತನಾಗಿ, ಮಿಥ್ಯಾ - ಇಲ್ಲದವ್ಯಾಜ್ಯವನ್ನು ಹುಡುಕಿ, ಪ್ರವ್ರಜಿತಃ - ಹೊರಡಿಸಲ್ಪಟ್ಟವನು, ಅಭೂತ್ - ಆದನು, ಸೌನಿಕೇ - ಪಶುಗಳನ್ನು ಕೊಲ್ಲುವಸ್ಥಳದಲ್ಲಿ, ಪಶವಃ - ಪಶುಗಳು, ಯಥಾ - ಹೇಗೋ, ತಥಾ - ಹಾಗೆ, ಭರತೇ - ಭರತನಲ್ಲಿ, ಸನ್ನಿವಿಷ್ಟಾಃ - ಇರಿಸಲ್ಪಟ್ಟವರು, ಸ್ಮಃ - ಆದೆವು. ॥ ೨೮ ॥ ಪೂರ್ಣಚಂದ್ರಾನನಃ - ಕಳೆದುಂಬಿದ ಚಂದ್ರನಂತೆ, ಶ್ಯಾಮಃ - ನೀಲಮೇಘಶ್ಯಾಮನಾದ, ಗೂಢಜತ್ರುಃ - ಸ್ಪಷ್ಟವಾಗಿ ಕಾಣಿಸದಿರುವ ಹೆಗಲುಗಳ ಸಂಧಿಪ್ರದೇಶವುಳ್ಳ, ಅರಿಂದಮಃ - ಶತ್ರುಸಂಹಾರಕನಾದ, ಆಜಾನುಬಾಹುಃ - ಮೊಣಕಾಲಿನವರಿಗೂ ಭುಜಗಳುಳ್ಳ, ಪದ್ಮಾಕ್ಷಃ - ಕಮಲದಂತೆ ಕಣ್ಣುಗಳುಳ್ಳ, ರಾಮಃ - ಸಂತೋಷಕರನಾದ, ಲಕ್ಷ್ಮಣಪೂರ್ವಜಃ - ಲಕ್ಷ್ಮಣನಿಗೆ ಅಣ್ಣನಾದ, ಪೂರ್ವಾಭಿಭಾಷೀ - ವಿಶ್ವಾಸದಿಂದ ಮೊದಲೇ ಮಾತನಾಡಿಸುವ, ಮಧುರಃ - ಮನೋಹರನಾದ, ಸತ್ಯವಾದೀ - ಯಥಾರ್ಥವನ್ನು ಹೇಳುವ, ಮಹಾಬಲಃ - ಅತಿಬಲಿಷ್ಠನಾದ, ಸರ್ವಸ್ಯ - ಸಮಸ್ತವಾದ, ಲೋಕಸ್ಯ - ಜನರಿಗೆ, ಸೌಮ್ಯಃ - ಕ್ರೌರ್ಯವಿಲ್ಲದಿರುವ, ಚಂದ್ರವತ್-ಚಂದ್ರನಂತೆ, ಪ್ರಿಯದರ್ಶನಃ - ಇಂಪಾದ ನೋಟವುಳ್ಳ, ಪುರುಷಶಾರ್ದೂಲಃ - ನರಶ್ರೇಷ್ಠನಾದ, ಮತ್ತಮಾತಂಗ

ವನ್ನು ಹೊಂದಿದರೆ ಇಡೀ ಅಯೋಧ್ಯಾನಗರವೇ ವಿಲಾಪಮಯವಾಗುತ್ತದೆ! ಕ್ಷೀಣ ಪುಣ್ಯರಾದ ನೀವು ನಿಮ್ಮ ಸ್ತ್ರೀಯರೊಡಗೂಡಿ ವಿಷವನ್ನಾದರೂ ಅರೆದು ಕುಡಿಯಿರಿ! ಹಾಗಿಲ್ಲದಿದ್ದರೆ ಶ್ರೀರಾಮಮೂರ್ತಿಯನ್ನಾದರೂ ಹಿಂಬಾಲಿಸಿರಿ ! ಅದೂ ಆಗದಿದ್ದರೆ ಗುರ್ತು ಕಾಣದ ದೇಶಕ್ಕಾದರೂ ಹೊರಟುಹೋಗಿರಿ! ಅಯ್ಯೋ! ಶ್ರೀರಾಮಮೂರ್ತಿಯು ಅಸತ್ಯವಾದ ವರದಾನದಿಂದ, ಲಕ್ಷ್ಮಣ ಸೀತೆಯರೊಡನೆ ಹೊರಡಿಸಲ್ಪಟ್ಟನು! ಅಕಟ!! ಪುಣ್ಯಹೀನರಾದ ನಾವು ಪಶುಗಳನ್ನು ವಧಿಸುವ ಸ್ಥಳದಲ್ಲಿ ಪಶುಗಳನ್ನು ಕೂಡುವಂತೆ ಈ ಭರತನ ಕೈವಶರಾದೆವು. ಹುಣ್ಣಿಮೆಯ ಚಂದ್ರನಂತೆ ಆನಂದ ಸಂದಾಯಕವಾದ ಮು... ತ್ರನನೂ, ನೀಲಮೇಘಶ್ಯಾಮನೂ, ಸ್ಪಷ್ಟವಾಗಿ ಕಾಣದಿರುವ ಹೆಗಲುಗಳ ಸಂಧಿ ಪ್ರದೇಶಗಳುಳ್ಳವನೂ, ಶತ್ರುನಾಶಕನೂ, ದೀರ್ಘ ಬಾಹುವೂ, ಕಮಲಾಕ್ಷನೂ, ಲಕ್ಷ್ಮಣಾಗ್ರಜನೂ. ಇತರರು

ನೂನಂ ಪುರುಷಶಾರ್ದೂಲೋ ಮತ್ತಮಾತಂಗವಿಕ್ರಮಃ ॥ ಶೋಭಯಿಷ್ಯತ್ಯ ರಣ್ಯಾನಿ ವಿಚರನ್ ಸ ಮಹಾರಥಃ ॥ ೩೧ ॥ ತಾಸ್ತಥಾ ವಿಲಪಂತ್ಯಸ್ತು ನಗರೇ ನಾಗರಸ್ತ್ರಿಯಃ ॥ ಚುಕ್ರುಶು ರ್ದುಃಖಸಂತಪ್ತಾ ಮೃತ್ಯೋರಿವ ಭಯಾಗಮೇ ॥ ೩೨ ॥ ಇತ್ಯೇವಂ ವಿಲಪಂತೀನಾಂ ಸ್ತ್ರೀಣಾಂ ವೇಶ್ಮಸು ರಾಘವಂ॥ ಜಗಾಮಾಸ್ತಂ ದಿನಕರೋ ರಜನೀಚಾಭ್ಯವರ್ತತ ॥ ೩೩ ॥ ನಷ್ಟಜ್ವಲನ ಸಂಪಾತಾ ಪ್ರಶಾಂತಾಧ್ಯಾಯ ಸತ್ಕಥಾ ॥ ತಿಮಿರೇಣಾಭಿಲಿಪ್ತೇವ ತದಾ ಸಾ ನಗರೀ ಬಭೌ ॥ ೩೪ ॥ ಉಪಶಾಂತ ವಣಿಕ್ಪಣ್ಯಾ ನಷ್ಟಹರ್ಷಾ ನಿರಾಶ್ರಯಾ॥ ಅಯೋಧ್ಯಾ ನಗರೀ ಚಾಸೀನ್ನಷ್ಟ ತಾರಮಿವಾಂಬರಂ ॥ ೩೫ ॥

ವಿಕ್ರಮಃ - ಮದವೇರಿದ ಆನೆಯಂತೆ ಸಂಚಾರವುಳ್ಳ, ಮಹಾರಥಃ - ಮಹಾರಥಿಕನಾದ, ಸಃ - ಆ ಶ್ರೀರಾಮನು, ವಿಚರನ್ - ಸಂಚರಿಸುತ್ತ, ಅರಣ್ಯಾನಿ - ಕಾಡುಗಳನ್ನು, ಶೋಭಯಿಷ್ಯತಿ - ಕಂಗೊಳಿಸುವನಂತೆ ಮಾತನಾಡುತ್ತಾನೆ. ॥ ೨೯-೩೧ ॥ ತಥಾ - ಆಪರಿಯಾಗಿ, ನಗರೇ - ಪಟ್ಟಣದಲ್ಲಿ, ವಿಲಪಂತ್ಯಃ - ಅಳುತ್ತಿರುವ, ತಾನಾಗರಸ್ತ್ರಿಯಸ್ತು-ಆ ಪುರವಾಸಿಗಳಾದ ಸ್ತ್ರೀಯರಾದರೆ, ಮೃತ್ಯೋಃ- ಮೃತ್ಯುವಿನಿಂದ, ಭಯಾಗಮೇ - ಭಯವುಂಟಾದ ಕಾಲದಲ್ಲಿ, ದುಃಖಸಂತಪ್ತಾಇವ - ದುಃಖದಿಂದ ಸಂತಪಿಸುತ್ತಿರುವರಂತೆ, ಚುಕ್ರುಶುಃ - ಅಳುತ್ತಿದ್ದರು, ವೇಶ್ಮಸು - ಮನೆಗಳಲ್ಲಿ, ಇತಿ - ಇಂತೆಂದು, ಸ್ತ್ರೀಣಾಂ - ಹೆಂಗಳು, ರಾಘವಂ - ಶ್ರೀರಾಮನನ್ನು ಕುರಿತು, ಏವಂ - ಈಪರಿಯಾಗಿ, ವಿಲಪಂತೀನಾಂ - ಅಳುತ್ತಿರಲು, ದಿನಕರಃ - ಸೂರ್ಯನು, ಅಸ್ತಂ - ಅಸ್ತಮಾನವನ್ನು, ಜಗಾಮ - ಹೊಂದಿದನು, ರಜನೀಚಾಪಿ - ರಾತ್ರಿಯೂ, ಅಭ್ಯವರ್ತತ - ಪ್ರಾಪ್ತವಾಯಿತು. ॥ ೩೨-೩೩ ॥ ನಷ್ಟ ಜ್ವಲನಸಂಪಾತಾ, ನಷ್ಟ - ಗತವಾದ, ಜ್ವಲನ - ಅಗ್ನಿಯ, ಸಂಪಾತಾ - ಪ್ರಣಯನವುಳ್ಳ, ಪ್ರಶಾಂತಾಧ್ಯಾಯಸತ್ಕಥಾ, ಪ್ರಶಾಂತ - ನಿಂತುಹೋದ, ಅಧ್ಯಾಯ - ವೇದಗಳು, ಸತ್ಕಥಾ - ಪುರಾಣಾದಿಗಳೂವುಳ್ಳ, ಸಾನಗರೀ - ಆ ಪಟ್ಟಣವೂ, ತಿಮಿರೇಣ - ಕತ್ತಲಿನಿಂದ, ಅಭಿಲಿಪ್ತೇವ - ಲೇಪನಮಾಡಲ್ಪಟ್ಟಂತೆ, ತದಾ - ಆಗ, ಬಭೌ - ಹೊಳೆಯುತ್ತಿದ್ದಿತು. ॥ ೩೪ ॥ ಉಪಶಾಂತ ವಣಿಕ್ಪಣ್ಯಾ, ಉಪಶಾಂತ ನಷ್ಟವಾದ, ವಣಿಕ್ - ವರ್ತಕರ, ಪಣ್ಯಾ - ವ್ಯಾಪಾರವುಳ್ಳ, ನಷ್ಟ

ಮಾತನಾಡಿಸುವುದಕ್ಕೆ ಮೊದಲೇ ಅವರ ಕ್ಷೇಮವನ್ನು ಕೇಳಿ ಮಾತನಾಡಿಸುವವನೂ, ಮನೋಹರನೂ, ಸತ್ಯವನ್ನೇ ನುಡಿವವನೂ, ಬಲಶಾಲಿಯೂ, ಸೌಮ್ಯನೂ, ಚಂದ್ರನಂತೆ ಜನಗಳಿಗೆ ಆನಂದವನ್ನುಂಟುಮಾಡುವವನೂ, ಮತ್ತಗಜಗಾಮಿಯೂ, ಮಹಾ ರಥಿಕನೂ, ಪುರುಷ ಶ್ರೇಷ್ಠನೂ ಆದ ಶ್ರೀರಾಮನು ಅರಣ್ಯಗಳನ್ನು ಹೊಳೆಯುವಂತೆ ಮಾಡುತ್ತಾನೆ." ಎಂಬೀ ಪ್ರಕಾರವಾಗಿ ರೋದಿಸುತ್ತಿರುವ ಆ ಹೆಂಗಸರು, ಮೃತ್ಯು ಭೀತಿಯುಂಟಾದಾಗ ದುಃಖಿಸುವಂತೆ ಮನೆಮನೆಯಲ್ಲಿಯೂ ದುಃಖಿಸುತ್ತಿದ್ದರು. ಆಗ ಸೂರ್ಯ ಭಗವಂತನು ಅಸ್ತಾಚಲಪರ್ವತವನ್ನುಹೊಂದಿದನಾಗಲು, ರಾತ್ರಿಯಾಯಿತು. ॥೩೩॥ ಆಗ ಅಯೋಧ್ಯಾ ಪಟ್ಟಣವು ನಷ್ಟವಾದ ಅಗ್ನಿಯುಳ್ಳುದಾಗಿಯೂ, ನಿಂತುಹೋದ, ಅಧ್ಯಯನ, ಸತ್ಕಥೆ ಇವುಗಳುಳ್ಳುದಾಗಿಯೂ, ಕಗ್ಗತ್ತಲೆಯಿಂದ ವ್ಯಾಪ್ತವಾದಂತೆಯೂ ಆಗಿ ಹೊಳೆಯುತ್ತಿದ್ದಿತು.

ತಥಾ ಸ್ತ್ರಿಯೋ ರಾಮನಿಮಿತ್ತಮಾತುರಾ
ಯಥಾ ಸುತೇ ಭ್ರಾತರಿ ವಾ ವಿವಾಸಿತೇ ||
ವಿಲಪ್ಯ ದೀನಾ ರುರುದು ರ್ವಿಚೇತಸ
ಸ್ಸುತೈರ್ಹಿ ತಾಸಾಮಧಿಕೋಹಿ ಸೋಭವತ್ || ೩೬ ||
ಪ್ರಶಾಂತ ಗೀತೋತ್ಸವ ನೃತ್ತವಾದನಾ
ವ್ಯಪಾಸ್ತ ಹರ್ಷಾ ಪಿಹಿತಾಪಣೋದಯಾ ||
ತದಾಹ್ಯಯೋಧ್ಯಾ ನಗರೀ ಬಭೂವ ಸಾ
ಮಹಾರ್ಣವ ಸ್ಸಂಕ್ಷಿಪಿತೋದಕೋ ಯಥಾ || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ.

ಹರ್ಷಾ - ಗತಸಂತೋಷವುಳ್ಳ, ನಿರಾಶ್ರಯಾ - ಆಧಾರಶೂನ್ಯವಾದ, ಅಯೋಧ್ಯಾನಗರೀಚ - ಅಯೋಧ್ಯಾಪಟ್ಟಣವೂ, ನಷ್ಟತಾರಂ - ನಕ್ಷತ್ರಗಳಿಲ್ಲದಿರುವ, ಅಂಬರಮಿವ - ಅಂತರಿಕ್ಷದಂತೆ, ಆಸೀತ್ - ಆಯಿತು. || ೩೫ || ಹಿ - ಯಾವ ಕಾರಣ, ಸಃ - ಆ ಶ್ರೀರಾಮನು, ಸುತೈಃ - ಮಕ್ಕಳಿಗಿಂತಲೂ, ತಾಸಾಂ - ಆ ಸ್ತ್ರೀಯರಿಗೆ, ಅಧಿಕಃ - ಅತಿಶಯನಾದನನು, ಅಭವತ್ - ಆದನೋ, ಅತಃ - ಇದರಿಂದ, ಸ್ತ್ರಿಯಃ - ಹೆಂಗಳು, ಸುತೇ - ಕುಮಾರನಾಗಲೀ, ಭ್ರಾತರಿವಾ - ತಮ್ಮನಾಗಲೀ, ವಿವಾಸಿತೇಸತಿ - ಪ್ರವಾಸವನ್ನುಹೊಂದಲು, ಯಥಾ - ಹೇಗೋ, ತಥಾ - ಹಾಗೆ, ರಾಮನಿಮಿತ್ತಂ - ಶ್ರೀರಾಮನ ನಿಮಿತ್ತವಾಗಿ, ಆತುರಾಃ - ಆರ್ತರಾದಕಾರಣ, ದೀನಾಃ - ದುಃಖವುಳ್ಳವರಾಗಿ, ವಿಲಪ್ಯ - ಅತ್ತು, ವಿಚೇತಸಃ - ಮೈಮರೆತವರಾಗಿ, ರುರುದುಃ - ಅಳುತ್ತಿದ್ದರು. || ೩೬ || ತದಾ - ಆ ಕಾಲದಲ್ಲಿ, ಪ್ರಶಾಂತಗೀತೋತ್ಸವನೃತ್ತವಾದನಾ - ಪ್ರಶಾಂತ ನಿಂತುಹೋದ, ಗೀತ - ಗಾನವು, ಉತ್ಸವ - ಸಂತೋಷವು, ನೃತ್ತ - ನಾಟ್ಯವು, ವಾದನಾ - ವಾದ್ಯಗಳೂ ಉಳ್ಳ, ವ್ಯಪಾಸ್ತ ಹರ್ಷಾ - ಹೋಗಲಾಡಿಸಲ್ಪಟ್ಟ ಸಂತೋಷವುಳ್ಳ, ಪಿಹಿತಾಪಣೋದಯಾ, ಪಿಹಿತ - ಮುಚ್ಚಲ್ಪಟ್ಟ, ಆಪಣೋದಯಾ - ಅಂಗಡಿಯ ಪದಾರ್ಥಗಳುಳ್ಳ, ಸಾ ಅಯೋಧ್ಯಾನಗರೀ - ಆ ಅಯೋಧ್ಯಾ ಪಟ್ಟಣವು, ಸಂಕ್ಷಿಪಿತೋದಕಃ - ಕ್ಷೀಣವಾದ ಜಲವುಳ್ಳ, ಮಹಾರ್ಣವೋಯಥಾ - ಸಮುದ್ರದಂತೆ, ಬಭೂವ - ಆಯಿತು. || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ.

ಪ್ರಶಾಂತವಾದ ವರ್ತಕರ ವ್ಯಾಪಾರವುಳ್ಳದಾಗಿಯೂ, ಆನಂದಶೂನ್ಯವಾಗಿಯೂ ಇರುವ ಆ ಅಯೋಧ್ಯಾ ನಗರವು, ನಕ್ಷತ್ರಗಳಿಲ್ಲದಿರುವ ಅಂಬರತಲದಂತಾಗಿದ್ದಿತು. ಅಲ್ಲಿನ ಜನಗಳಿಗೆ ಶ್ರೀರಾಮನು ಮಕ್ಕಳಿಗಿಂತಲೂ ಪ್ರಿಯಂಕರನಾಗಿದ್ದುದರಿಂದ ಹೆಂಗಸರೆಲ್ಲರೂ ಶ್ರೀರಾಮನ ಅರಣ್ಯ ಗಮನದಿಂದ ಅಣ್ಣತಮ್ಮಂದಿರನ್ನಗಲಿ ದುಃಖಿಸುವಂತೆ, ಶೋಕಾಕ್ರಾಂತರಾಗಿ ಶೋದಿಸುತ್ತಿದ್ದರು. || ೩೬ || ಆ ವೇಳೆಯಲ್ಲಿ ಅಯೋಧ್ಯಾ ಪಟ್ಟಣವು ನಿಂತುಹೋದ, ಗಾನ, ನಾಟ್ಯ, ವಚನಗಳುಳ್ಳದಾಗಿಯೂ, ಗತಸಂತೋಷವುಳ್ಳದಾಗಿಯೂ, ಮುಚ್ಚಲ್ಪಟ್ಟ ಅಂಗಡಿಗಳುಳ್ಳದಾಗಿಯೂ ಆಗಿ ಕ್ಷೋಭೆಗೊಳಿಸಿದ ಸಮುದ್ರದಂತಿದ್ದಿತು. || ೩೭ ||

ಇಂತಿದು ಅಯೋಧ್ಯಾಪುರ ಸ್ತ್ರೀ ಜನ ಕೃತ ನಿಜ ಪುರುಷ ನಿಂದಾ ವಿಧಾನ ಕಥನವೆಂಬ ನಲವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನಪಂಚಾಶಸ್ಸರ್ಗಃ.

ರಾಮೋಽಪಿ ರಾತ್ರಿಶೇಷೇಣ ತೇನೈವ ಮಹದಂತರಂ ‖ ಜಗಾಮ ಪುರುಷ ವ್ಯಾಘ್ರಃ ಪಿತುರಾಜ್ಞಾ ಮನುಸ್ಮರ್ರ ‖ ೧ ‖ ತಥೈವ ಗಚ್ಛತಸ್ತಸ್ಯ ವ್ಯಪಾಯಾ ದ್ರಜನೀ ಶಿವಾ ‖ ಉಪಾಸ್ಯ ಸ ಶಿವಾಂ ಸಂಧ್ಯಾಂ ವಿಷಯಾಂತಂ ವ್ಯಗಾಹತ‖೨‖ ಗ್ರಾಮಾ‌ರ್ ವಿಕೃಷ್ಟ ಸೀಮಾಂತಾರ್ ಪುಷ್ಪಿತಾನಿ ವನಾನಿಚ ‖ ಪಶ್ಯನ್ನತಿಯಯೌ ಶೀಘ್ರಂ ಶನೈರಿವ ಹಯೋತ್ತಮೈಃ ‖ ೩ ‖ ಶೃಣ್ವರ್ ವಾಚೋ ಮನುಷ್ಯಾಣಾಂ ಗ್ರಾಮಸಂವಾಸ ವಾಸಿನಾಂ ‖ ರಾಜಾನಂ ಧಿಗ್ದಶರಥಂ ಕಾಮಸ್ಯ ವಶಮಾ

ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ, ರಾಮೋಽಪಿ - ಶ್ರೀರಾಮನು ಸಹ, ಪಿತುಃ - ತಂದೆಯ, ಆಜ್ಞಾಂ - ಅಪ್ಪಣೆಯನ್ನು, ಅನುಸ್ಮರ್ರ - ಸ್ಮರಿಸುತ್ತ, ತೇನೈವರಾತ್ರಿಶೇಷೇಣ - ಆ ಮಿಕ್ಕರಾತ್ರಿಯಲ್ಲಿಯೆ, ಮಹದಂತರಂ - ಬಹುದೂರದೇಶವನ್ನು ಕುರಿತು, ಜಗಾಮ - ತೆರಳಿದನು. ‖ ೧ ‖ ತಥೈವ - ಹಾಗೆಯೆ, ತಸ್ಯ - ಆ ಶ್ರೀರಾಮನು, ಗಚ್ಛತಃ - ಹೋಗುತ್ತಿರಲು, ಶಿವಾ - ಶುಭಕರವಾದ, ರಜನೀ - ರಾತ್ರಿಯು, ವ್ಯಪಾಯಾತ್ - ಕಳೆದುಹೋಯಿತು, ಸಃ-ಆ ಶ್ರೀರಾಮನು, ಶಿವಾಂ - ಶುಭಕರವಾದ, ಸಂಧ್ಯಾಂ - ಸಂಧ್ಯಾಭಿಮಾನಿದೇವತೆಯನ್ನು, ಉಪಾಸ್ಯ - ಉಪಾಸನೆ ಮಾಡಿ, ವಿಷಯಾಂತಂ - ಉತ್ತರಕೋಸಲದೇಶದ ತುದಿಯನ್ನು, ವ್ಯಗಾಹತ - ಹೊಕ್ಕನು. ‖ ೨ ‖ ವಿಕೃಷ್ಟಸೀಮಾಂತಾರ್, ವಿಕೃಷ್ಟ - ವಿಶೇಷವಾಗಿ ಉತ್ತಲ್ಪಟ್ಟ, ಸೀಮಾಂತಾರ್ - ಹೊಲಗಳುಳ್ಳ; ಗ್ರಾಮಾರ್ - ಊರುಗಳನ್ನೂ, ಪುಷ್ಪಿತಾನಿ - ಹುವ್ವಗಳುಳ್ಳ, ವನನಾನಿಚ - ವನಗಳನ್ನು ಸಹ, ಪಶ್ಯ್ರ - ನೋಡುತ್ತ, ಶನೈರಿವ - ಮೆಲ್ಲನೆ, ಹಯೋತ್ತಮೈಃ - ಅಶ್ವಶ್ರೇಷ್ಠಗಳಿಂದ, ಶೀಘ್ರಂ - ಜಾಗ್ರತೆಯಾಗಿ, ಗ್ರಾಮಸಂವಾಸವಾಸಿನಾಂ, ಗ್ರಾಮ - ದೊಡ್ಡಪಾಳೆಯಗಳಲ್ಲಿಯೂ, ಸಂವಾಸ - ಸಣ್ಣ ಹಳ್ಳಿಗಳಲ್ಲಿಯೂ, ವಾಸಿನಾಂ - ನೆಲಗೊಂಡಿರುವ, ಮನುಷ್ಯಾಣಾಂ - ಮನುಷ್ಯರ, ವಾಚಃ - ಮಾತುಗಳನ್ನು, ಶೃಣ್ವರ್ - ಕೇಳುತ್ತ, ಅತಿಯಯೌ - ಬೇಗನೆ ನಡೆದನು. ‖ ೩ ‖ ಕಾಮಸ್ಯ - ಮದನನಿಗೆ, ವಶಂ - ಸ್ವಾಧೀನತೆಯನ್ನು, ಆಸ್ಥಿತಂ - ಹೊಂದಿರುವ, ದಶರಥಂರಾಜಾನಂ - ದಶರಥ ರಾಜನನ್ನು, ಧಿಕ್ - ಬಿಡು, ಹಾ - ಕಷ್ಟವು, ಅದ್ಯ - ಈಗ, ಪಾಪಾನುಬಂಧಿನೀ - ಪಾಪಿಗಳಿಂದ

ದಶರಥಮಹೀಪಾಲನ ಪ್ರಿಯ ನಂದನನಾದ ಶ್ರೀರಾಮಮೂರ್ತಿಯು ತಂದೆಯಾಣತಿಯನ್ನು ಸ್ಮರಿಸುತ್ತ, ಆ ಬೆಳಗಿನ ಝಾಮದಲ್ಲಿಯೇ ಬಹುದೂರ ಪ್ರಯಾಣಮಾಡಿ, ಪ್ರಾತಃಕಾಲವಾಗಲು ಸಂಧ್ಯಾ ದೇವತೆಯನ್ನು ಅರ್ಚಿಸಿ, ಅಯೋಧ್ಯಾ ರಾಜ್ಯದ ಸೀಮಾ ಪ್ರದೇಶಗಳನ್ನು ಹೊಂದಿ, ಉತ್ತಲ್ಪಟ್ಟ ಸರಹದ್ದುಗಳುಳ್ಳ ಗ್ರಾಮಗಳನ್ನೂ ಸಂಜಾತ ಪುಷ್ಪಗಳುಳ್ಳ ಉದ್ಯಾನವನಗಳನ್ನೂ ನೋಡುತ್ತ, ಮೆಲ್ಲ ಮೆಲ್ಲನೆಯೇ ಹೋಗುತ್ತಿರುವ ಕುದುರೆಗಳಿಂದ ಬೇಗನೆ ತೆರಳಿದವನಾದನು. ಆಗಲಾ ಹಳ್ಳಿಗಳಲ್ಲಿರುವ ಜನಗಳು ಬಗೆ ಬಗೆ

ಸ್ಥಿತಂ ॥ ೪ ॥ ಹಾ ನೃಶಂಸಾದ್ಯ ಕೈಕೇಯಿೀ ಪಾಪಾ ಪಾಪಾನುಬಂಧಿನೀ ॥ ತೀಕ್ಷ್ಣಾ ಸಂಭಿನ್ನಮರ್ಯಾದಾ ತೀಕ್ಷ್ಣಕರ್ಮಣಿ ವರ್ತತೇ ॥ ೫ ॥ ಯಾ ಪುತ್ರಮೀದೃಶಂ ರಾಜ್ಞಃ ಪ್ರವಾಸಯತಿ ಧಾರ್ಮಿಕಂ ॥ ವನವಾಸೇ ಮಹಾಪ್ರಾಜ್ಞಂ ಸಾನುಕ್ರೋಶಂ ಜಿತೇಂದ್ರಿಯಂ ॥ ೬ ॥ ಕಥಂ ನಾಮ ಮಹಾಭಾಗಾ ಸೀತಾ ಜನಕನಂದಿನೀ ॥ ಸದಾ ಸುಖೇಷ್ವಭಿರತಾ ದುಃಖಾನ್ಯನುಭವಿಷ್ಯತಿ ॥ ೭ ॥ ಅಹೋ ದಶರಥೋ ರಾಜಾ ನಿಸ್ನೇಹಸ್ಸ್ವಸುತಂ ಪ್ರಿಯಂ ॥ ಪ್ರಜಾನಾಮನಘಂ ರಾಮಂ ಪರಿತ್ಯಕ್ತುಮಿಹೇಚ್ಛತಿ ॥ ೮ ॥ ಏತಾ ವಾಚೋ ಮನುಷ್ಯಾಣಾಂ ಗ್ರಾಮಸಂವಾಸವಾಸಿನಾಂ ॥ ಶೃಣ್ವನ್ನತಿಯಯೌ ವೀರಃ

ಸಂಬಂಧವುಳ್ಳ, ಪಾಪಾ - ಸ್ವಯಂ ಪಾಪಿಷ್ಠಳಾದ, ನೃಶಂಸಾ - ಘಾತಕಳಾದ, ತೀಕ್ಷ್ಣಾ - ಕ್ರೂರಳಾದ, ಸಂಭಿನ್ನಮರ್ಯಾದಾ - ಭೇದಿಸಲ್ಪಟ್ಟ ಮರ್ಯಾದೆಯುಳ್ಳ, ಕೈಕೇಯೀ - ಕೈಕೇಯೀದೇವಿಯು, ತೀಕ್ಷ್ಣಕರ್ಮಣಿ - ಕ್ರೂರವಾದ ವ್ಯಾಪಾರದಲ್ಲಿ, ವರ್ತತೇ - ನಿಂತಳು. ॥ ೫ ॥ ಯಾ - ಯಾವ ಕೈಕೇಯಿಯು, ರಾಜ್ಞಃ - ಅರಸನ, ಪುತ್ರಂ - ಮಗನಾದ, ಈದೃಶಂಧಾರ್ಮಿಕಂ - ಇಂತಹ ಧರ್ಮಿಷ್ಠನಾದ, ಮಹಾಪ್ರಾಜ್ಞಂ - ಮಹಾಪಂಡಿತನಾದ, ಸಾನುಕ್ರೋಶಂ - ದಯೆಯಿಂದೊಡಗೂಡಿದ, ಜಿತೇಂದ್ರಿಯಂ - ಇಂದ್ರಿಯನಿಗ್ರಹವಂತನಾದ ಶ್ರೀರಾಮನನ್ನು, ವನವಾಸೇ - ವನವಾಸವಿಷಯವಾಗಿ, ಪ್ರವಾಸಯತಿ - ಹೊರಡಿಸುತ್ತಾಳೆಯೋ. ॥ ೬ ॥ ಮಹಾಭಾಗಾ - ಮಹಾಪುಣ್ಯಶಾಲಿಯಾದ, ಜನಕನಂದಿನೀ - ಜನಕರಾಯನಮಗಳಾದ, ಸದಾ - ನಿರಂತರವು, ಸುಖೇಷು - ಸುಖಗಳಲ್ಲಿ, ಅಭಿರತಾ - ಆಸಕ್ತಳಾದ, ಸೀತಾ - ಸೀತಾದೇವಿಯು, ದುಃಖಾನಿ - ಕಷ್ಟಗಳನ್ನು, ಕಥಂನಾಮ - ಹೇಗೆತಾನೆ, ಅನುಭವಿಷ್ಯತಿ - ಅನುಭವಿಸುವಳು. ॥ ೭ ॥ ಅಹೋ - ಆಶ್ಚರ್ಯವು, ದಶರಥೋರಾಜಾ - ದಶರಥರಾಜನು, ನಿಸ್ನೇಹಃ - ಸ್ನೇಹವಿಲ್ಲದವನಾಗಿ, ಪ್ರಜಾನಾಂ- ಜನಗಳಿಗೆ, ಪ್ರಿಯಂ - ಹಿತಕರನಾದ, ಅನಘಂ - ನಿರ್ದೋಷನಾದ, ಸ್ವಸುತಂ - ತನ್ನ ಮಗನಾದ, ರಾಮಂ - ಶ್ರೀರಾಮನನ್ನು, ಇಹ - ಈಗ, ಪರಿತ್ಯಕ್ತುಂ - ಬಿಡುವದಕ್ಕೆ, ಇಚ್ಛತಿ - ಇಚ್ಛಿಸುತ್ತಾನೆ. ॥ ೮ ॥ ಕೋಸಲೇಶ್ವರಃ - ಕೋಸಲದೇಶಾಧೀಶ್ವರನಾದ, ವೀರಃ - ಶೂರನಾದ

ಗಳಾದ ಮಾತುಗಳನ್ನೀರೀತಿಯಾಡಿದರು. “ ಕಾಮಪರವಶನಾದ ನಮ್ಮ ರಾಯನು ಮಹಾ ಕೆಟ್ಟವನು ! ಮಹಾಕಷ್ಟ ! ಅಹಹ !! ಪಾಪಿಯಾದ ಕೈಕೇಯೀದೇವಿಯು ಇನ್ನೂ ಕೆಟ್ಟವಳು. ಇವಳು ಕ್ರೂರಳೂ ಕಠಿಣಕಾರ್ಯಗಳಲ್ಲಿ ಉಜ್ಜುಗಿಸುವವಳೂ ಆಗಿದ್ದಾಳೆ. ಮಹಾ ಪುಣ್ಯವತಿಯೂ, ನಿರಂತರ ಸುಖಾನುಭವಯೋಗ್ಯಳೂ ಆದ ಜನಕರಾಜನಂದಿನಿಯಾದ ಸೀತಾದೇವಿಯು ಈ ಕಾನನ ದುಃಖಗಳನ್ನು ಹೇಗೆತಾನೆ ಸಹಿಸಿಯಾಳು? ಇದು ಬಹಳ ಆಶ್ಚರ್ಯಕರವಾದುದು ! ದಶರಥರಾಯನಿಗೆ ತನ್ನ ಮಗನಲ್ಲಿ ವಿಶ್ವಾಸವಿಲ್ಲವೇ ಇಲ್ಲ. ಎಲ್ಲ ಜನಗಳಿಗೂ ಸಂತೋಷಕರನಾಗಿರುವ, ದೋಷ ಲೇಶವೂ ಇಲ್ಲದಿರುವ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸುವನಲ್ಲವೆ? ಇದು ಬಹಳ ಅನ್ಯಾಯ !! ” ಈರೀತಿ ಮಾತನಾಡುತ್ತಿರುವ ಜನಗಳ ಮಾತುಗಳನ್ನು ಕೇಳುತ್ತ ಮುಂಬರಿವ ಶ್ರೀರಾಮನು ಕೋಸಲದೇಶಗಳನ್ನು

ಕೋಸಲಾನ್ ಕೋಸಲೇಶ್ವರಃ ॥ ೯ ॥ ತತೋ ವೇದಶ್ರುತಿಂ ನಾಮ ಶಿವವಾರಿ ವಹಾಂ ನದೀಂ ॥ ಉತ್ತೀರ್ಯಾಭಿಮುಖಃ ಪ್ರಾಯಾ ದಗಸ್ತ್ಯಾಧ್ಯುಷಿತಾಂ ದಿಶಂ ॥ ೧೦ ॥ ಗತ್ವಾತು ಸುಚಿರಂ ಕಾಲಂ ತತಶ್ಶಿವಜಲಾಂ ನದೀಂ ॥ ಗೋಮತೀಂ ಗೋಯುತಾನೂಪಾಮತರ ತ್ಸಾಗರಂಗಮಾಂ ॥ ೧೧ ॥ ಗೋಮತೀಂ ಚಾಪ್ಯತಿಕ್ರಮ್ಯ ರಾಘವ ಶ್ಶೀಘ್ರಗೈ ರ್ಹಯೈಃ ॥ ಮಯೂರ ಹಂಸಾಭಿರುತಾಂ ತತಾರ ಸ್ಯಂದಿಕಾಂ ನದೀಂ ॥ ೧೨ ॥ ಸಮಹೀಂ ಮನುನಾ ರಾಜ್ಞಾ ದತ್ತಾಮಿಕ್ಷ್ವಾಕವೇ ಪುರಾ ॥ ಸ್ಫೀತಾಂ ರಾಷ್ಟ್ರಾವೃತಾಂ ರಾಮೋ ವೈದೇಹೀ ಮನ್ವದರ್ಶಯತ್ ॥ ೧೩ ॥ ಸೂತ ಇತ್ಯೇವಚಾಭಾಷ್ಯ ಸಾರಥಿಂ

ಶ್ರೀರಾಮನು, ಗ್ರಾಮಸಂವಾಸವಾಸಿನಾಂ - ಅಗ್ರಹಾರಗಳಲ್ಲಿಯೂ ಹಳ್ಳಿಗಳಲ್ಲಿಯೂ ವಾಸಿಸುತ್ತಿರುವ, ಮನುಷ್ಯಾಣಾಂ - ಮನುಷ್ಯರ, ಏತಾ ವಾಚಃ - ಈ ಮಾತುಗಳನ್ನು, ಶೃಣ್ವನ್ - ಕೇಳುತ್ತ, ಕೋಸಲಾನ್ - ಉತ್ತರಕೋಸಲ ದೇಶಗಳನ್ನು, ಅತಿಯಯೌ - ದಾಟಿಹೋದನು. ॥ ೯ ॥ ತತಃ- ಬಳಿಕ, ಶಿವವಾರಿವಹಾಂ - ಶುಭಕರವಾದ ಉದಕದಿಂದ ಪ್ರವಹಿಸುತ್ತಿರುವ, ವೇದಶ್ರುತಿಂ - ವೇದ ಶ್ರುತಿಯೆಂಬ, ನದೀಂ - ಹೊಳೆಯನ್ನು, ಉತ್ತೀರ್ಯ - ದಾಟಿ, ಅಗಸ್ತ್ಯಾಧ್ಯುಷಿತಾಂ - ಅಗಸ್ತ್ಯ ಮುನಿಯಿಂದ ಅಧಿಷ್ಠಿಸಲ್ಪಟ್ಟ, ದಿಶಂ - ದಕ್ಷಿಣದಿಕ್ಕನ್ನು ಕುರಿತು, ಅಭಿಮುಖಃ - ಇದಿರಾಗಿ, ಪ್ರಾಯಾತ್ - ಹೊರಟನು. ॥ ೧೦ ॥ ತತಃ - ಬಳಿಕ, ಸಚಿರಂಕಾಲಂ - ಬಹುಕಾಲವು, ಗತ್ವಾ - ಹೋಗಿ, ಶಿವಜಲಾಂ - ಶುಭಕರವಾದ ಉದಕವುಳ್ಳ, ಗೋಯುತಾನೂಪಾಂ, ಗೋ - ಗೋವುಗಳಿಂದ, ಯುತ - ಕೂಡಿರುವ, ಅನೂಪಾಂ - ಜಲಪ್ರಾಯಭೂಮಿಯುಳ್ಳ, ಸಾಗರಂಗಮಾಂ-ಸ್ವತಂತ್ರವಾಗಿ ಸಮುದ್ರಗಾಮಿನಿಯಾದ, ಗೋಮತೀಂ - ಗೋಮತಿಯೆಂಬ ನದಿಯನ್ನು, ಅತರತ್ - ದಾಟಿದನು. ॥ ೧೧ ॥ ರಾಘವಃ - ಶ್ರೀರಾಮನು, ಶೀಘ್ರಗೈಃ - ಬೇಗನೆಹೋಗುತ್ತಿರುವ, ಹಯೈಃ - ಕುದುರೆಗಳಿಂದ, ಗೋಮತೀಂಚಾಪಿ - ಗೋಮತೀ ನದಿಯನ್ನೂ, ಅತಿಕ್ರಮ್ಯ - ಅತಿಕ್ರಮಿಸಿ, ಮಯೂರಹಂಸಾಭಿರುತಾಂ - ನವಿಲುಗಳಿಂದಲೂ, ಹಂಸಪಕ್ಷಿಗಳಿಂದಲೂ, ಶಬ್ದಾಯಮಾನವಾದ, ಸ್ಯಂದಿಕಾಂನದೀಂ - ಸ್ಯಂದಿಕಾಯೆಂಬ ನದಿಯನ್ನು, ತತಾರ - ದಾಟಿದನು. ॥ ೧೨ ॥ ಸಃ ರಾಮಃ - ಆ ಶ್ರೀರಾಮನು, ಪುರಾ - ಪೂರ್ವದಲ್ಲಿ, ಮನುನಾರಾಜ್ಞಾ - ಮನುಚಕ್ರವರ್ತಿಯಿಂದ, ಇಕ್ಷ್ವಾಕವೇ - ಇಕ್ಷ್ವಾಕುಮಹಾರಾಜನಿಗೆ, ದತ್ತಾಂ - ಕೊಡಲ್ಪಟ್ಟ, ಸ್ಫೀತಾಂ - ಸಮೃದ್ಧವಾದ,

---

ದಾಟಿದನು. ॥ ೧-೯ ॥ ಆ ಮೇಲೆ ಆತನು ವೇದಶ್ರುತಿಯೆಂದು ಪ್ರಸಿದ್ಧವಾದ, ನಿರ್ಮಲೋದಕದ ಮಹಾ ನದಿಯನ್ನು ದಾಟಿ, ದಕ್ಷಿಣ ದಿಕ್ಕಿಗಭಿಮುಖವಾಗಿ ತೆರಳಿ ಬಹಳ ದೂರ ಪ್ರಯಾಣಮಾಡಿ, ಶುಭೋದಕವುಳ್ಳ ಗೋಮತೀ ನದಿಯನ್ನು ದಾಟಿ, ನವಿಲುಗಳಿಂದಲೂ, ಹಂಸಪಕ್ಷಿಗಳಿಂದಲೂ ನಿಬಿಡಿತವಾದ ಸ್ಯಂದಿಕಾನದೀ ತರಣವಂಗೈದು, ಹಿಂದೆ ವೈವಸ್ವತ ಮನುವು ಇಕ್ಷ್ವಾಕುರಾಯನಿಗೆ ಕೊಟ್ಟಿದ್ದ ಫಲವತ್ತಾದ ದೇಶಗಳುಳ್ಳ ಸೀಮೆಯನ್ನು ಸೀತಾದೇವಿಗೆ ತೋರಿಸಿ, ಸಾರಥಿಯನ್ನು ಕುರಿತು ಹೀಗೆಂದನು. ಮದಸಿದ ಹಂಸಪಕ್ಷಿಯ ಸ್ವರದಂತೆ ಮಹಾ ಗಂಭೀರವಾದ ಸ್ವರದಿಂದ ಕೂಡಿದ ಪುರುಷೋತ್ತಮನಾದ ಶ್ರೀರಾಮನು

ತಮಭೀಕ್ಷ್ಣಶಃ ॥ ಹಂಸಮತ್ತ ಸ್ವರಶ್ಶ್ರೀಮಾನುವಾಚ ಪುರುಷರ್ಷಭಃ ॥೧೪॥ ಕದಾಹಂ ಪುನರಾಗಮ್ಯ ಸರಯ್ವಾಃ ಪುಷ್ಪಿತೇ ವನೇ ॥ ಮೃಗಯಾಂ ಪರ್ಯಟಿಷ್ಯಾಮಿ ಮಾತ್ರಾ ಪಿತ್ರಾಚ ಸಂಗತಃ ॥೧೫॥ ರಾಜರ್ಷೀಣಾಂ ಹಿ ಲೋಕೇಸ್ಮಿ ರತ್ಯರ್ಥಂ ಮೃಗಯಾ ವನೇ ॥ ಕಾಲೇವೃತಾಂ ತಾಂ ಮನುಜೈರ್ಧನ್ವಿನಾ ಮಭಿಕಾಂಕ್ಷಿತಾಂ ॥ ೧೬ ॥ ನಾತ್ಯರ್ಥ ಮಭಿಕಾಂಕ್ಷಾಮಿ ಮೃಗಯಾಂ ಸರಯೂವನೇ ॥ ರತಿರ್ಹ್ಯೇಷಾತುಲಾ ಲೋಕೇ ರಾಜರ್ಷಿ ಗಣಸಮ್ಮತಾ ॥ ೧೭ ॥

ರಾಷ್ಟ್ರಾವೃತಾಂ - ದೇಶದಿಂದೊಡಗೂಡಿದ, ಮಹೀಂ - ನೆಲವನ್ನು, ವೈದೇಹೀಂ - ಸೀತಾದೇವಿಗೆ, ಅನ್ವದರ್ಶಯತ್ - ತೋರಿದನು. ॥ ೧೩ ॥ ಹಂಸಮತ್ತಸ್ವರಃ - ಹಂಸಪಕ್ಷಿಯಂತೆ ಮದಯುಕ್ತ ಧ್ವನಿಯುಳ್ಳ, ಶ್ರೀಮಾನ್ - ಸಂಪದ್ಯುಕ್ತನಾದ, ಪುರುಷರ್ಷಭಃ - ಪುರುಷಶ್ರೇಷ್ಠನಾದ ಶ್ರೀರಾಮನು, ಸೂತಇತ್ಯೇವ-ಸೂತನೆಂದಮಾತ್ರ, ತಂಸಾರಥಿಂ-ಆ ಸಾರಥಿಯನ್ನು, ಅಭೀಕ್ಷ್ಣಶಃ-ಅತಿಶಯವಾಗಿ, ಆಭಾಷ್ಯ - ಕರೆದು, ಉವಾಚ - ಹೇಳಿದನು. ॥ ೧೪ ॥ ಅಹಂ - ನಾನು, ಕದಾ - ಯಾವಾಗ, ಪುನರಾಗಮ್ಯ - ಮತ್ತೆಬಂದು, ಮಾತ್ರಾ - ತಾಯಿಯೊಡನೆಯೂ, ಪಿತ್ರಾಚ - ತಂದೆಯೊಡನೆಯೂ, ಸಂಗತಃ - ಕೂಡಿ, ಸರಯ್ವಾಃ - ಸರಯೂನದಿಯ, ಪುಷ್ಪಿತೇ - ಸಂಜಾತಪುಷ್ಪಗಳುಳ್ಳ, ವನೇ - ವನದಲ್ಲಿ, ಮೃಗಯಾಂ - ಬೇಟೆಯನಿಮಿತ್ತವಾಗಿ, ಪರ್ಯಟಿಷ್ಯಾಮಿ - ತಿರುಗುವೆನೋ. ॥ ೧೫ ॥ ಹಿ - ಯಾವ ಕಾರಣ, ಅಸ್ಮಿಲೋಕೇ - ಈ ಲೋಕದಲ್ಲಿ, ರಾಜರ್ಷೀಣಾಂ - ಅರಸರಿಗೆ, ವನೇ - ಕಾಡಿನಲ್ಲಿ, ಮೃಗಯಾ - ಬೇಟೆಯು, ರತ್ಯರ್ಥಂ - ವಿಹಾರಾರ್ಥವಾಗಿ, ಅಸ್ತಿ - ಇರುವುದೋ. ॥ ೧೫ ॥ ಕಾಲೇ - ಶ್ರಾದ್ಧಾದಿಕಾಲಗಳಲ್ಲಿ, ಮನುಜೈಃ - ಮನುಷ್ಯರಿಂದ, ವೃತಾಂ - ವರಿಸಲ್ಪಟ್ಟ, ಧನ್ವಿನಾಂ - ಧನುರ್ಧಾರಿಗಳಿಂದ, ಅಭಿಕಾಂಕ್ಷಿತಾಂ - ಅಪೇಕ್ಷಿಸಲ್ಪಟ್ಟ, ಮೃಗಯಾಂ - ಬೇಟೆಯನ್ನು, ಸರಯೂವನೇ - ಸರಯೂತೀರದಲ್ಲಿರುವ ವನದಲ್ಲಿ, ನಾತ್ಯರ್ಥಂ - ಕೊಂಚವಾಗಿ, ಅಭಿಕಾಂಕ್ಷಾಮಿ - ಅಪೇಕ್ಷಿಸುವೆನು. ॥ ೧೬ ॥ ಲೋಕೇ - ಜಗತ್ತಿನಲ್ಲಿ, ಏಷಾರತಿಃ - ಈ ವಿಹಾರವು, ರಾಜರ್ಷಿಗಣಸಂಮತಾ - ರಾಜರ್ಷಿಗಳ ಸಮೂಹಕ್ಕೆ ಸಮ್ಮತವಾದುದು. ॥ ೧೭ ॥ ಐಕ್ಷ್ವಾಕಃ - ಇಕ್ಷ್ವಾಕುವಂಶೋತ್ಪನ್ನನಾದ, ಸಃ - ಆ ಶ್ರೀರಾಮನು, ತಂಸೂತಂ - ಆ ಸುಮಂತನನ್ನು ಕುರಿತು, ತಂತಮರ್ಥಂ - ಆಯಾ ಅರ್ಥವನ್ನು, ಅಭಿಪ್ರೇತ್ಯ - ಜ್ಞಾಪಿಸಿಕೊಂಡು, ಮಧುರಯಾ - ಮನೋ

ಸುಮಂತ್ರನನ್ನು ಕುರಿತು, "ಎಲೈ ಸುಮಂತ್ರನೆ ! ನಾನು ವನವಾಸವನ್ನು ಮುಗಿಸಿಕೊಂಡು ಪುನಃ ಅಯೋಧ್ಯಾ ನಗರಕ್ಕೆ ಬಂದು, ಸರಯೂನದಿಯ ತೀರದಲ್ಲಿರುವ ಹೂ ಬಿಟ್ಟಿದ ಉದ್ಯಾನ ವನಗಳಲ್ಲಿ ತಂದೆ ತಾಯಿಯರೊಡಗೂಡಿ ಬೇಟೆಯನ್ನಾವಗಾಡುವೆನೊ? ವನದಲ್ಲಿ ಬೇಟೆಯಾಡುವುದು ರಾಜರ್ಷಿಗಳಿಗೆ ಸಮ್ಮತವಾದುದು. ಶ್ರಾದ್ಧಾದಿ ಕಾಲಗಳಲ್ಲಿ ಸದಾಚಾರ ಪರರಿಂದ ಸ್ವೀಕೃತವಾದುದೂ, ಬಿಲ್ಲುಗಾರರಿಗೆ ಹಿತಕರವಾದುದೂ ಆದ ಮೃಗಯಾ ವಿಹಾರವನ್ನು ನಾನು ಬಯಸುತ್ತೇನೆ. ಲೋಕದಲ್ಲಿ ಈ ಮೃಗಯಾ ವಿಹಾರವು

ಸತಮಧ್ವಾನ ಮೈಕ್ಷ್ವಾಕ ಸ್ಸೂತಂ ಮಧುರಯಾ ಗಿರಾ ‖ ತಂ ತಮರ್ಥಮಭಿ
ಪ್ರೇತ್ಯ ಯಯೌ ವಾಕ್ಯಮುದೀರಯನ್ ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಪಂಚಾಶಸ್ಸರ್ಗಃ.

ಹರವಾದ, ಗಿರಾ - ವಾಕ್ಕಿನಿಂದ, ವಾಕ್ಯಂ - ಮಾತನ್ನು, ಉದೀರಯನ್ - ಹೇಳುತ್ತ, ಅಧ್ವಾನಂ - ಮಾರ್ಗವನ್ನು, ಯಯೌ - ತೆರಳಿದನು. ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಪಂಚಾಶಸ್ಸರ್ಗಃ.

ರಾಜರ್ಷಿಗಳಿಗೆ ಸಮ್ಮತವಾದುದು, ” ಎಂದು ಮಧುರವಾಗಿ ಹೇಳುತ್ತ ಮುಂ ಬರಿದನು. ‖ ೧೦-೧೮ ‖

ಇಂತಿದು ಶ್ರೀರಾಮ ಕೃತ ಕೋಸಲದೇಶೋಪವನಾಗಮನ ವೃತ್ತಾಂತ ಕಥನವೆಂಬ
ನಲವತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚಾಶಸ್ಸರ್ಗಃ.

ವಿಶಾಲಾನ್ ಕೋಸಲಾನ್ ರಮ್ಯಾನ್ ಯಾತ್ವಾ ಲಕ್ಷ್ಮಣಪೂರ್ವಜಃ ||
ಅಯೋಧ್ಯಾಭಿಮುಖೋ ಧೀಮಾನ್ ಪ್ರಾಂಜಲಿ ರ್ವಾಕ್ಯ ಮಬ್ರವೀತ್ || ೧ ||
ಆಪೃಚ್ಛೇತ್ವಾಂ ಪುರಿಶ್ರೇಷ್ಠೇ ಕಾಕುತ್ಸ್ಥ ಪರಿಪಾಲಿತೇ || ದೈವತಾನಿಚ
ಯಾನಿ ತ್ವಾಂ ಪಾಲಯಂತ್ಯಾವಸಂತಿಚ || ೨ || ನಿವೃತ್ತವನವಾಸಸ್ತ್ವಾ
ಮನೃಣೋ ಜಗತೀಪತೇಃ || ಪುನರ್ದ್ರಕ್ಷ್ಯಾಮಿ ಮಾತ್ರಾಚ ಪಿತ್ರಾಚ ಸಹ
ಸಂಗತಃ || ೩ || ತತೋ ರುಧಿರ ತಾಮ್ರಾಕ್ಷೋ ಭುಜಮುದ್ಯಮ್ಯ ದಕ್ಷಿಣಂ||

ಲಕ್ಷ್ಮಣಪೂರ್ವಜಃ - ಲಕ್ಷ್ಮಣಾಗ್ರಜನಾದ, ಧೀಮಾನ್ - ಬುದ್ಧಿವಂತನಾದ ಶ್ರೀರಾಮನು, ವಿಶಾಲಾನ್ - ಕೋಸಲದೇಶಗಳನ್ನು, ಯಾತ್ವಾ - ಕಳೆದು, ಅಯೋಧ್ಯಾಭಿಮುಖಃ - ಅಯೋಧ್ಯಾಪಟ್ಟಣಕ್ಕೆ ಅಭಿಮುಖನಾಗಿ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್- ನುಡಿದನು. || ೧ || ಕಾಕುತ್ಸ್ಥಪರಿಪಾಲಿತೇ - ದಶರಥನಿಂದ ಪರಿಪಾಲಿಸಲ್ಪಟ್ಟದ್ದ, ಹೇ ಪುರಿ - ಎಲೈ ಪಟ್ಟಣವೆ, ಹೇ ಶ್ರೇಷ್ಠೇ - ಎಲೈ ಉತ್ತಮವಾದುದೆ, ಯಾನಿದೈವತಾನಿ - ಯಾವ ದೇವತೆಗಳು, ತ್ವಾಂ - ನಿನ್ನನ್ನು, ಪಾಲಯಂತಿ - ಪರಿಪಾಲಿಸುತ್ತವೋ, ಆವಸಂತಿಚ - ನಿನ್ನಲ್ಲಿಯೇ ವಾಸಿಸುತ್ತವೋ, ತಾನಿ - ಆ ದೇವತೆಗಳನ್ನು, ತ್ವಾಂ - ನಿನ್ನನ್ನೂ, ಆಪೃಚ್ಛೇ - ಅಪ್ಪಣೆಬೇಡುತ್ತೇನೆ. || ೨ || ನಿವೃತ್ತವನವಾಸಃ - ನೆರವೇರಿಸಲ್ಪಟ್ಟ ವನವಾಸವುಳ್ಳವನಾಗಿ, ಜಗತೀಪತೇಃ - ಮಹಾರಾಜನ, ಅನೃಣಃ - ಋಣಪರಿಹಾರವನ್ನು ಮಾಡಿಕೊಡು, ಮಾತ್ರಾ - ತಾಯಿಯಿಂದಲೂ, ಪಿತ್ರಾಚಸಹ - ತಂದೆಯಿಂದಲೂ ಸಹ, ಸಂಗತಃ - ಸೇರಿದವನಾಗಿ, ತ್ವಾಂ - ನಿನ್ನನ್ನು, ಪುನಃ - ಮತ್ತೆ, ದ್ರಕ್ಷ್ಯಾಮಿ - ನೋಡುವೆನು. || ೩ || ತತಃ - ಬಳಿಕ, ರುಧಿರತಾಮ್ರಾಕ್ಷಃ - ರಕ್ತದಂತೆ ಕೆಂಗಣ್ಣುಗಳುಳ್ಳ, ದೀನಃ - ದೈನ್ಯವುಳ್ಳ ಶ್ರೀರಾಮನು, ಅಶ್ರುಪೂರ್ಣಮುಖಃ - ಕಂಬನಿಗಳಿಂದ ತುಂಬಿದ ಮುಖವುಳ್ಳವನಾಗಿ, ದಕ್ಷಿಣಂಭುಜಂ - ಬಲಗೈಯನ್ನು, ಉದ್ಯಮ್ಯ - ಎತ್ತಿ, ಜಾನ

ಆ ಬಳಿಕ ಶ್ರೀರಾಮನು ವಿಸ್ತಾರವಾದ ಕೋಸಲ ದೇಶವನ್ನು ದಾಟಿ, ಅಯೋಧ್ಯಾಪಟ್ಟಣಕ್ಕಭಿಮುಖವಾಗಿ ಕೈಮುಗಿದುಕೊಂಡು, "ಎಲೈ ಪಟ್ಟಣ ಶ್ರೇಷ್ಠವೆ! ಇಕ್ಷ್ವಾಕುರಾಯರಿಂದ ಪಾಲಿತವಾದ ನಿನ್ನನ್ನು ಪ್ರಾರ್ಥಿಸುತ್ತೇನೆ. ನಿನ್ನಲ್ಲಿರುವ ದೇವತೆಗಳೆಲ್ಲರೂ ನಿನ್ನನ್ನು ಪರಿಪಾಲಿಸುತ್ತಾರೆ. ನಾನು ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿಕೊಂಡು, ನನ್ನ ತಂದೆಯಾದ ದಶರಥರಾಯನನ್ನು ಋಣವಿಮುಕ್ತನನ್ನಾಗಿ ಮಾಡಿ, ನಿನ್ನನ್ನೂ, ನನ್ನ ಜನನೀ ಜನಕರನ್ನೂ ನೋಡುತ್ತೇನೆ." ಎಂದು ನುಡಿದನು. ಆ ಬಳಿಕ ರಕ್ತದಂತೆ ಕೆಂಪಾದ ಕಂಗಳುಳ್ಳ ಶ್ರೀರಾಮನು ತನ್ನನ್ನು ನೋಡಬೇಕೆಂದು ಬಂದಿದ್ದ ಆ ಕೋಸಲ ದೇಶದ ಹಳ್ಳಿಗರನ್ನು ಕುರಿತು, ಭುಜಗಳನ್ನು ಮೇಲಕ್ಕೆತ್ತಿಕೊಂಡು, ಕಣ್ಣೀರಿ

ಅಶ್ರುಪೂರ್ಣಮುಖೋ ದೀನೋ ಬ್ರವೀಜ್ಜಾನಪದಂ ಜನಂ ‖ ೪ ‖ ಅನು
ಕ್ರೋಶೋ ದಯಾಚೈವ ಯಥಾರ್ಹಂ ಮಯಿ ವಃ ಕೃತಃ ‖ ಚಿರಂ ದುಃಖಸ್ಯ
ಪಾಪೀಯೋ ಗಮ್ಯತಾ ಮರ್ಥಸಿದ್ಧಯೇ ‖ ೫ ‖ ತೇಭಿವಾದ್ಯ ಮಹಾತ್ಮಾನಂ
ಕೃತ್ವಾಚಾಪಿ ಪ್ರದಕ್ಷಿಣಂ ‖ ವಿಲಪಂತೋ ನರಾ ಘೋರಂ ವ್ಯತಿಷ್ಠಂತ ಕ್ವಚಿ
ತ್ಕ್ವಚಿತ್ ‖ ೬ ‖ ತಥಾ ವಿಲಪತಾಂ ತೇಷಾ ಮತೃಪ್ತಾನಾಂಚ ರಾಘವಃ ‖
ಅಚಕ್ಷು ರ್ವಿಷಯಂ ಪ್ರಾಯಾ ದ್ಯಥಾರ್ಕಃ ಕ್ಷಣದಾಮುಖೇ ‖ ೭ ‖ ತತೋ
ಧಾನ್ಯಧನೋಪೇತಾ ದಾನಶೀಲ ಜನಾ ಶಿವಾ ‖ ಅಕುತಶ್ಚಿದ್ಭಯಾ
ರಮ್ಯಾಂ ಚೈತ್ಯ ಯೂಪ ಸಮಾವೃತಾ ‖ ೮ ‖ ಉದ್ಯಾನಾಮ್ರ ವಣೋ

ಪದಂ - ದೇಶದಿಂದ ಬಂದಿರುವ, ಜನಂ - ಮನುಷ್ಯರನ್ನು ಕುರಿತು, ಅಬ್ರವೀತ್ - ನುಡಿದನು. ‖ ೪ ‖ ಅನುಕ್ರೋಶಃ - ಆದರಣೆಯು, ದಯಾ - ಕರುಣೆಯು, ಯಥಾರ್ಹಂ - ಯಥಾ ಯೋಗ್ಯವಾಗಿ, ವಃ - ನಿಮ್ಮಿಂದ, ಕೃತಃ - ಮಾಡಲ್ಪಟ್ಟಿತು, ದುಃಖಸ್ಯ - ವ್ಯಸನದ, ಚಿರಂ - ಬಹುಕಾಲಾನುಭವವು, ಪಾಪೀಯಃ - ಪಾಪಿಷ್ಠವಾದದ್ದು, ಅರ್ಥಸಿದ್ಧಯೇ - ನಿಮ್ಮ ನಿಮ್ಮ ಮನೆಯಲ್ಲಿನ ಕಾರ್ಯಕ್ಕೆ, ಗಮ್ಯತಾಂ - ಹೋಗಲ್ಪಡಲಿ. ‖ ೫ ‖ ತೇನರಾಃ - ಆ ದೇಶವಾಸಿಗಳಾದ ಜನರು, ಮಹಾತ್ಮಾನಂ - ಮಹಾಮನಸ್ವಿಯಾದ ಶ್ರೀರಾಮನನ್ನು, ಪ್ರದಕ್ಷಿಣಂ - ಪ್ರದಕ್ಷಿಣನನ್ನು, ಕೃತ್ವಾ - ಮಾಡಿ, ಅಭಿವಾದ್ಯ - ನಮಸ್ಕರಿಸಿ, ವಿಲಪಂತಃ - ಅಳುತ್ತ, ಕ್ವಚಿತ್ಕ್ವಚಿತ್ - ಅಲ್ಲಲ್ಲಿ, ವ್ಯತಿಷ್ಠಂತ- ನಿಂತರು, ರಾಘವಃ - ಶ್ರೀರಾಮನು, ವಿಲಪತಾಂ - ಅಳುತ್ತಿರುವ, ಅತೃಪ್ತಾನಾಂ - ನೋಡುವ ವಿಷಯದಲ್ಲಿ ತೃಪ್ತರಾಗದಿರುವ, ತೇಷಾಂ - ಆ ಪ್ರಜೆಗಳಿಗೆ, ಕ್ಷಣದಾಮುಖೇ - ಸಾಯಂಕಾಲದಲ್ಲಿ, ಅರ್ಕೋಯಥಾ - ಸೂರ್ಯನಂತೆ, ಅಚಕ್ಷುರ್ವಿಷಯಂ - ಕಣ್ಣಿಗೆ ಕಾಣಿಸದಂತೆ, ಪ್ರಾಯಾತ್ - ಹೊರಟನು. ‖ ೭ ‖ ತತಃ - ಬಳಿಕ, ಧಾನ್ಯಧನೋಪೇತಾ - ಧಾನ್ಯಗಳಿಂದಲೂ, ದ್ರವ್ಯದಿಂದಲೂ ಕೂಡಿರುವ, ದಾನಶೀಲಜನಾ - ದಾತೃಗಳಾದ ಜನಗಳುಳ್ಳ, ಶಿವಾ - ಶುಭಕರವಾದ, ಅಕುತಶ್ಚಿದ್ಭಯಾ - ಎಂದಿಗೂ ಭಯವಿಲ್ಲದಿರುವ, ರಮ್ಯಾ - ಮನೋಹರವಾದ, ಚೈತ್ಯಯೂಪಸಮಾವೃತಾ - ದೇವಸ್ಥಾನಗಳಿಂದಲೂ, ಯೂಪಸ್ತಂಭಗಳಿಂದಲೂ ಯುಕ್ತವಾದ, ಉದ್ಯಾನಾಮ್ರವಣೋಪೇತಾ-ಹುವ್ವಿನ ತೋಟಗಳಿಂದಲೂ, ಮಾವಿನ ತೋಟಗಳಿಂದಲೂ ಯುಕ್ತವಾದ, ಸಂಪನ್ನ

ಡುತ್ತ, "ಎಲೈ ಪ್ರಜೆಗಳಿರಾ ! ನೀವು ನನ್ನಲ್ಲಿ ದಯಾಪೂರ್ವಕ ದೃಷ್ಟಿಯನ್ನಿಟ್ಟು ಅನುಗ್ರಹ ಮಾಡಿದಿರಿ ! ಅನುಭವಿಸುತ್ತಿರುವ ದುಃಖವು ಬಹಳಕಾಲವಿರಲಾರದು; ನೀವು ನನ್ನನ್ನು ನೋಡುತ್ತಿರುವುದರಿಂದ ದುಃಖವು ವೃದ್ಧಿಹೊಂದುತ್ತದೆ. ಆದುದರಿಂದ ನೀವು ನಿಮ್ಮ ಕಾರ್ಯಗಳಿಗೆ ತೆರಳಿರಿ" ಎಂದು ನುಡಿದನು. ಇಂತು ನುಡಿದ ಶ್ರೀರಾಮನ ನುಡಿಗಳನ್ನು ಕೇಳಿದ ಆ ಜನರು ಮಹಾತ್ಮನಾದ ಶ್ರೀರಾಮನಿಗೆ ನಮಸ್ಕಾರವನ್ನು ಮಾಡಿ ಅಲ್ಲಲ್ಲಿ ಗುಂಪುಗೂಡಿ ಗೋಳಿಸುತ್ತಿದ್ದರು. ಇವರೀರೀತಿ ತೃಪ್ತಿಯಿಲ್ಲದೆ ಅಳುತ್ತಿರಲು, ಶ್ರೀರಾಮನು ಇವರ ಕಣ್ಣಿಗೆ ಕಾಣಿಸದೆ ಸಂಧ್ಯಾಕಾಲದಲ್ಲಿ ಸೂರ್ಯನಂತೆ ಮರೆಯಾಗಿಹೋದನು. ‖ ೧-೭ ‖ ಆ ಬಳಿಕಲಾ ರಘುರಾಮನು ಎಲ್ಲಿ ನೋಡಿದರೂ ಧನ ಧಾನ್ಯಗಳಿಂದ ತುಂಬಿದುದಾಗಿಯೂ,

ಪೇತಾಂ ಸಂಪನ್ನ ಸಲಿಲಾಶಯಾಂ ॥ ತುಷ್ಟಪುಷ್ಟಜನಾಕೀರ್ಣಾಂ ಗೋಕುಲಾಕುಲ ಸೇವಿತಾಂ ॥ ೯ ॥ ಲಕ್ಷಣೀಯಾ ನ್ನರೇಂದ್ರಾಣಾಂ ಬ್ರಹ್ಮಘೋಷಾಭಿನಾದಿತಾಂ ॥ ರಥೇನ ಪುರುಷವ್ಯಾಘ್ರಃ ಕೋಸಲಾನತ್ಯವರ್ತತ ॥ ೧೦ ॥ ಮಧ್ಯೇನಮುದಿತಂ ಸ್ಫೀತಂ ರಮ್ಯೋದ್ಯಾನಸಮಾಕುಲಂ ॥ ರಾಜ್ಯಂ ಭೋಗ್ಯಂ ನರೇಂದ್ರಾಣಾಂ ಯಯೌ ಧೃತಿಮತಾಂ ವರಃ ॥ ೧೧ ॥ ತತಸ್ತ್ರಿಪಥಗಾಂ ದಿವ್ಯಾಂ ಶಿವತೋಯಾಮಶೈವಲಾಂ ॥ ದದರ್ಶ ರಾಘವೋ ಗಂಗಾಂ ಪುಣ್ಯಾಮೃಷಿನಿಷೇವಿತಾಂ ॥ ೧೨ ॥ ಆಶ್ರಮೈ ರವಿದೂರಸ್ಥೈ ಶ್ರೀಮದ್ಭಿ ಸ್ಸಮ

ಸಲಿಲಾಶಯಾಂ - ತುಂಬಿದ ನೀರಿನ ಸರೋವರಗಳುಳ್ಳ, ತುಷ್ಟಪುಷ್ಟಜನಾಕೀರ್ಣಾಂ, ತುಷ್ಟ - ಸಂತೋಷಯುಕ್ತರಾದ, ಪುಷ್ಟ - ಪೋಷಿತರಾದ, ಜನ - ಮನುಷ್ಯರಿಂದ, ಆಕೀರ್ಣಾಂ - ತುಂಬಿರುವ, ಗೋಕುಲಾಕುಲಸೇವಿತಾಂ - ಗೋಬೃಂದಗಳಿಂದ ಸೇವಿಸಲ್ಪಟ್ಟ, ನರೇಂದ್ರಾಣಾಂ - ಅರಸರಿಗೆ, ಲಕ್ಷಣೀಯಾಂ - ನೋಡಲರ್ಹವಾದ, ಬ್ರಹ್ಮಘೋಷಾಭಿನಾದಿತಾಂ - ವೇದಘೋಷದಿಂದ ಧ್ವನಿಗೊಳಿಸುತ್ತಿರುವ, ಕೋಸಲಾಂ - ಕೋಸಲದೇಶಗಳನ್ನು, ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ ಶ್ರೀರಾಮನು, ರಥೇನ - ತೇರಿನಿಂದ, ಅತ್ಯವರ್ತತ - ದಾಟಿದನು. ॥ ೮-೧೦ ॥ ಧೃತಿಮತಾಂ - ಧೈರ್ಯಶಾಲಿಗಳಲ್ಲಿ, ವರಃ - ಶ್ರೇಷ್ಠನಾದ ಶ್ರೀರಾಮನು, ಮುದಿತಂ - ಸಂತೋಷಯುಕ್ತವಾದ, ಸ್ಫೀತಂ - ಸಮೃದ್ಧವಾದ, ರಮ್ಯೋದ್ಯಾನಸಮಾಕುಲಂ - ಮನೋಹರವಾದ ತೋಟಗಳಿಂದ ವ್ಯಾಪ್ತವಾದ, ನರೇಂದ್ರಾಣಾಂ - ಅರಸರಿಗೆ, ಭೋಗ್ಯಂ - ಭೋಗಾರ್ಹವಾದ, ರಾಜ್ಯಂ - ರಾಜ್ಯದ, ಮಧ್ಯೇನ - ಮಧ್ಯಮಾರ್ಗದಿಂದ, ಯಯೌ - ತೆರಳಿದನು. ॥ ೧೧ ॥ ತತಃ - ಬಳಿಕ, ರಾಘವಃ- ಶ್ರೀರಾಮನು, ದಿವ್ಯಾಂ - ದೇವತಾಸಂಬಂಧವಾದ, ಶಿವತೋಯಾಂ - ಶುಭಕರವಾದ ಉದಕವುಳ್ಳ, ಅಶೈವಲಾಂ - ಹಾವುಚಿಬಳ್ಳಿಗಳಿಲ್ಲದಿರುವ, ತ್ರಿಪಥಗಾಂ - ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಮಾರ್ಗಗಳಲ್ಲಿ ಹೋಗುತ್ತಿರುವ, ಪುಣ್ಯಾಂ - ಪುಣ್ಯಕರವಾದ, ಋಷಿನಿಷೇವಿತಾಂ - ಮುನಿಗಳಿಂದ ಸೇವಿಸಲ್ಪಡುತ್ತಿರುವ, ಅವಿದೂರಸ್ಥೈಃ - ಸಮೀಪದಲ್ಲಿರುವ, ಶ್ರೀಮದ್ಭಿಃ - ಕಾಂತಿಯುಕ್ತವಾದ,

ದಾನಶೀಲರೂ, ಸರ್ವಾಭರಣ ಭೂಷಿತರೂ, ಸೌಮ್ಯರೂಪರೂ ಆದ ಜನನಿವಹದಿಂದ ಕಿಕ್ಕಿರಿದುದಾಗಿಯೂ; ನಿರ್ಭಯವೂ, ಮನೋಹರವೂ, ಚೈತ್ಯ ಯೂಪಸ್ತಂಭ ವಿರಾಜಿತವೂ ಆದ, ಮಾವಿನ ತೋಪುಗಳಿಂದೊಡಗೂಡಿದ ಉದ್ಯಾನ ವನಗಳಿಂದಲೂ, ಸಮೃದ್ಧವಾದ ನೀರ್ಗಾಲುವೆಗಳಿಂದಲೂ, ಗೋಕುಲ ವೃಂದದಿಂದಲೂ ಉಪರಂಜಿತವಾದುದೂ; ಬ್ರಹ್ಮಘೋಷದಿಂದ ಶಬ್ದಾಯಮಾನವಾದುದೂ; ರಾಜರಿಗೆ ಭೋಗ್ಯಸ್ಥಾನವೂ, ಆದ ಆ ಕೋಸಲ ದೇಶವನ್ನು ಕಳೆದು ಅಲ್ಲಿಯೇ ಪ್ರವಹಿಸುತ್ತಿದ್ದ ಮನೋಹರವಾದ ಗಂಗಾ ನದಿಯನ್ನು ಕಂಡನು. ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಜಗತ್ತ್ರಯಗಳಲ್ಲಿಯೂ ಪ್ರವಾಹವುಳ್ಳುದಾಗಿ, ದಿವ್ಯತರವಾದ, ಶುಭೋದಕವುಳ್ಳ, ಪುಣ್ಯಕರವಾಗಿ ಋಷಿಗಳಿಂದ ಸೇವಿಸಲ್ಪಟ್ಟುದೂ, ತೀರದಲ್ಲಿರುವ ರಮ್ಯಾಶ್ರಮಾಲಂಕೃತವಾದುದೂ, ತ್ರಿಕಾಲಗಳಲ್ಲಿ ಸಂತಸಪಾಂತ ಅಪ್ಸರೆಯರಿಂದ ಸೇವಿಸಲ್ಪಟ್ಟುದೂ, ಕಮಲನಿಚಯಗಳಿಂದ ಮಂಗಳಕರವಾದುದೂ

ಲಂಕೃತಾಂ ‖ ಕಾಲೇಪ್ಸರೋಭಿ ರ್ಹೃಷ್ಟಾಭಿ ಸ್ಸೇವಿತಾಂಭೋಹ್ರದಾಂ ಶಿವಾಂ ‖ ೧೩ ‖ ದೇವದಾನವ ಗಂಧರ್ವೈಃ ಕಿನ್ನರೈ ರುಪಶೋಭಿತಾಂ ‖ ನಾಗ ಗಂಧರ್ವ ಪತ್ನೀಭಿ ಸ್ಸೇವಿತಾಂ ಸತತಂ ಶಿವಾಂ ‖ ೧೪ ‖ ದೇವಾಕ್ರೀಡ ಶತಾಕೀರ್ಣಾಂ ದೇವೋದ್ಯಾನ ಶತಾಯುತಾಂ ‖ ದೇವಾರ್ಥ ಮಾಕಾಶಗಮಾಂ ವಿಖ್ಯಾತಾಂ ದೇವಪದ್ಮಿನೀಂ ‖ ೧೫ ‖ ಜಲಾಘಾತಾಟ್ಟಹಾಸೋಗ್ರಾಂ ಫೇನ ನಿರ್ಮಲ ಹಾಸಿನೀಂ ‖ ಕ್ವಚಿದ್ವೇಣೀಕೃತಜಲಾಂ ಕ್ವಚಿದಾವರ್ತ ಶೋಭಿತಾಂ ‖ ೧೬ ‖ ಕ್ವಚಿತ್ಸ್ತಿಮಿತ ಗಂಭೀರಾಂ ಕ್ವಚಿದ್ವೇಗ ಜಲಾಕುಲಾಂ ‖ ಕ್ವಚಿ

ಆಶ್ರಮೈಃ-ಆಶ್ರಮಗಳಿಂದ, ಸಮಲಂಕೃತಾಂ ಚನ್ನಾಗಿ ಅಲಂಕರಿಸಲ್ಪಟ್ಟ, ಕಾಲೇ-ಕ್ರೀಡಾಕಾಲದಲ್ಲಿ, ಹೃಷ್ಟಾಭಿಃ-ಸಂತೋಷಚಿತ್ತರಾದ, ಅಪ್ಸರೋಭಿಃ-ಅಪ್ಸರಸ್ತ್ರೀಯರಿಂದ, ಸೇವಿತಾಂ-ಸೇವಿಸಲ್ಪಡುತ್ತಿರುವ, ಅಂಭೋಹ್ರದಾಂ - ನೀರಿನ ಮಡುವುಳ್ಳ, ಶಿವಾಂ-ಶುಭಕರವಾದ, ದೇವದಾನವ ಗಂಧರ್ವೈಃ-ದೇವ, ರಾಕ್ಷಸ, ಗಂಧರ್ವರಿಂದಲೂ, ಕಿನ್ನರೈಃ - ಕಿನ್ನರರಿಂದಲೂ, ಉಪಶೋಭಿತಾಂ-ಕಂಗೊಳಿಸುತ್ತಿರುವ, ನಾಗಗಂಧರ್ವಪತ್ನೀಭಿಃ-ಸರ್ಪಗಳಿಗೂ ಗಂಧರ್ವರಿಗೂ ಪತ್ನಿಗಳಾದವರಿಂದ, ಸೇವಿತಾಂ - ಸೇವಿಸಲ್ಪಡು ತ್ತಿರುವ, ಸತತಂ-ನಿರಂತರವೂ, ಶಿವಾಂ-ಶುಭಕರವಾದ, ದೇವಾಕ್ರೀಡಶತಾಕೀರ್ಣಾಂ, ದೇವ-ದೇವತೆ ಗಳ, ಆಕ್ರೀಡ-ಕ್ರೀಡಾಪರ್ವತಗಳ, ಶತ-ನೂರರಿಂದ, ಆಕೀರ್ಣಾಂ-ತುಂಬಿರುವ, ದೇವೋದ್ಯಾನಶತಾ ಯುತಾಂ-ದೇವೋದ್ಯಾನಗಳ ನೂರಾರಿಂದ ಕೂಡಿರುವ, ದೇವಾರ್ಥಂ - ದೇವತೆಗಳ ಪ್ರಯೋಜನಾರ್ಥ ವಾಗಿ, ಆಕಾಶಗಮಾಂ-ಅಂತರಿಕ್ಷದಲ್ಲಿ ಹೋಗುತ್ತಿರುವ, ವಿಖ್ಯಾತಾಂ-ಪ್ರಸಿದ್ಧವಾದ, ದೇವಪದ್ಮಿನೀಂ-ದೇವಯೋಗ್ಯವಾದ ಸುವರ್ಣಕಮಲಗಳುಳ್ಳ, (ಗೋ - ದೇವಪದ್ಮಿನಿಯೆಂದು ಹೆಸರುಗೊಂಡ,) ಗಂಗಾಂ - ಗಂಗಾನದಿಯನ್ನು, ದದರ್ಶ - ಕಂಡನು. ‖ ೧೫ ‖ ಜಲಾಘಾತಾಟ್ಟಹಾಸೋಗ್ರಾಂ, ಜಲ - ಉದಕದ, ಆಘಾತ - ಬೀಳುವಿಕೆಯ, ಅಟ್ಟಹಾಸ - ಸಿಂಹನಾದದಿಂದ, ಉಗ್ರಾಂ - ಭಯಂ ಕರವಾದ, ಫೇನನಿರ್ಮಲಹಾಸಿನೀಂ, ಫೇನ - ನೊರೆಯಿಂದ, ನಿರ್ಮಲ - ನಿರ್ಮಲವಾಗಿ, ಹಾಸಿನೀಂ-ನಗುತ್ತಿರುವ, ಕ್ವಚಿತ್ - ಕೆಲಕಡೆ, ವೇಣೀಕೃತಜಲಾಂ - ಜಡೆಯಂತೆಮಾಡಲ್ಪಟ್ಟ ಉದಕವುಳ್ಳ, ಕ್ವಚಿತ್ - ಕೆಲವು ಕಡೆಯಲ್ಲಿ, ಆವರ್ತಶೋಭಿತಾಂ - ಸುಳಿಗಳಿಂದ ಕಂಗೊಳಿಸುತ್ತಿರುವ, ಕ್ವಚಿತ್ -

---

ದೇವ, ದಾನವ, ಗಂಧರ್ವ, ಕಿನ್ನರರಿಂದುಪಶೋಭಿತವಾದುದೂ, ನಾಗ, ಗಂಧರ್ವ ಪತ್ನಿಯ ರಿಂದ ಸಂತತವೂ ಸೇವಿಸಲ್ಪಟ್ಟುದೂ, ದೇವತೆಗಳು ವಿಹರಿಸಲು ಯೋಗ್ಯವಾದುದೂ, ನೂರಾರು ಪರ್ವತಗಳಿಂದಲೂ, ನೂರಾರು ದೇವೋದ್ಯಾನಗಳಿಂದಲೂ ಶೋಭಿಸುತ್ತಿರು ವುದೂ, ದೇವತೆಗಳಿಗೋಸ್ಕರ ಆಕಾಶವನ್ನು ಹೊಂದಿ ದೇವಪದ್ಮಿನಿಯೆಂದು ಹೆಸರುಗೊಂ ಡುದೂ, ತೆರೆಗಳ ಪರಸ್ಪರ ಸಂಘಟ್ಟನದಿಂದುಂಟಾದ ಘೋಷವೆಂಬ ಕೋಲಾಹಲ ಧ್ವನಿ ಯುಳ್ಳುದೂ, ನೊರೆಗಳಿಂದ ನಸುನಗೆಯುಳ್ಳುದೂ, ಒಂದು ಕಡೆ ಜಟಾಕಾರವಾದ ಪ್ರವಾಹ ವುಳ್ಳುದೂ, ಮತ್ತೊಂದು ಕಡೆ ಸುಳಿಗಳಿಂದ ಕೂಡಿದುದೂ, ಇನ್ನೊಂದು ಕಡೆ ನಿಶ್ಚಲೋ ದಕವುಳ್ಳುದೂ, ಮಗದೊಂದು ಕಡೆ ಅತ್ಯುಗ್ರವಾಗಿ ಪ್ರವಹಿಸುತ್ತಿರುವ ಜಲವುಳ್ಳುದೂ, ಕೆಲವೆಡೆಗಳಲ್ಲಿ ಗಂಭೀರ ಧ್ವನಿಯುಳ್ಳುದೂ, ಕೆಲವೆಡೆಗಳಲ್ಲಿ ಭಯಂಕರ ಧ್ವನಿಯುಳ್ಳುದೂ,

ದ್ಗಂಭೀರ ನಿರ್ಘೋಷಾಂ ಕ್ವಚಿದ್ಭೈರವ ನಿಸ್ವನಾಂ ॥ ೧೭ ॥ ದೇವಸಂಘಾ ಪ್ಲುತಜಲಾಂ ನಿರ್ಮಲೋತ್ಪಲ ಶೋಭಿತಾಂ ॥ ಕ್ವಚಿದಾಭೋಗ ಪುಳಿನಾಂ ಕ್ವಚಿನ್ನಿರ್ಮಲ ವಾಲುಕಾಂ ॥ ೧೮ ॥ ಹಂಸ ಸಾರಸ ಸಂಘುಷ್ಟಾಂ ಚಕ್ರವಾಕೋಪ ಕೂಜಿತಾಂ ॥ ಸದಾಮತ್ತೈಶ್ಚ ವಿಹಗೈ ರಭಿಸನ್ನಾದಿತಾಂತರಾಂ ॥೧೯॥ ಕ್ವಚಿತ್ತೀರರುಹೈ ರ್ವೃಕ್ಷೈ ರ್ಮಾಲಾಭಿರಿವ ಶೋಭಿತಾಂ ॥ ಕ್ವಚಿ ತ್ಫುಲ್ಲೋತ್ಪಲಚ್ಛನ್ನಾಂ ಕ್ವಚಿತ್ಪದ್ಮ ವನಾಕುಲಾಂ ॥ ೨೦ ॥ ಕ್ವಚಿತ್ಕುಮುದಷಂಡೈಶ್ಚ ಕುಟ್ಮಲೈ ರುಪಶೋಭಿತಾಂ ॥ ನಾನಾಪುಷ್ಪ ರಜೋಧ್ವಸ್ತಾಂ ಸಮದಾಮಿವಚ ಕ್ವಚಿತ್ ॥ ೨೧ ॥ ವ್ಯಪೇತ ಮಲಸಂಘಾತಾಂ ಮಣಿನಿರ್ಮಲ ದರ್ಶನಾಂ ॥

ಕೆಲವು ಪ್ರದೇಶಗಳಲ್ಲಿ, ಸ್ತಿಮಿತಗಂಭೀರಾಂ, ಸ್ತಿಮಿತ - ನೆಲಸಿರುವುದರಿಂದ, ಗಂಭೀರಾಂ - ಗಾಂಭೀರ್ಯವುಳ್ಳ, ಕ್ವಚಿತ್ - ಕೆಲವು ಕಡೆಯಲ್ಲಿ, ವೇಗಜಲಾಕುಲಾಂ - ತ್ವರೆಯಾಗಿಹೋಗುವ ಜಲದಿಂದ ವ್ಯಾಕುಲವಾದ, ಕ್ವಚಿತ್ - ಕೆಲವು ಕಡೆಯಲ್ಲಿ, ಗಂಭೀರನಿರ್ಘೋಷಾಂ - ಗಂಭೀರವಾದ ಶಬ್ದವುಳ್ಳ, ಕ್ವಚಿತ್ - ಕೆಲವು ಸ್ಥಳಗಳಲ್ಲಿ, ಭೈರವನಿಸ್ವನಾಂ - ಭಯಂಕರವಾದ ಘೋಷವುಳ್ಳ, ದೇವಸಂಘಾಪ್ಲುತಜಲಾಂ - ದೇವಗಣಗಳಿಂದ ತೋಯಿಸಲ್ಪಟ್ಟ ಉದಕವುಳ್ಳ, ನಿರ್ಮಲೋತ್ಪಲಶೋಭಿತಾಂ - ಸ್ವಚ್ಛವಾದ ನೈದಿಲೆಗಳಿಂದ ಕಂಗೊಳಿಸುತ್ತಿರುವ, ಕ್ವಚಿತ್ - ಕೆಲವು ಪ್ರದೇಶಗಳಲ್ಲಿ, ಆಭೋಗ ಪುಲಿನಾಂ - ವಿಸ್ತಾರವಾದ ಮರಳುಗಳುಳ್ಳ, ಕ್ವಚಿತ್ - ಕೆಲವು ಸ್ಥಳಗಳಲ್ಲಿ, ನಿರ್ಮಲವಾಲುಕಾಂ - ಸ್ವಚ್ಛವಾದ ಮರಳುಳ್ಳ, ಹಂಸಸಾರಸಸಂಘುಷ್ಟಾಂ - ಹಂಸಪಕ್ಷಿಗಳಿಂದಲೂ ಸಾರಸಹಕ್ಕಿಗಳಿಂದಲೂ ಶಬ್ದಾಯಮಾನವಾದ, ಚಕ್ರವಾಕೋಪಶೋಭಿತಾಂ - ಕೋಕಿಲಪಕ್ಷಿಗಳಿಂದ ಕಂಗೊಳಿಸುತ್ತಿರುವ, ಕ್ವಚಿತ್ - ಕೆಲವು ಪ್ರದೇಶದಲ್ಲಿ, ಫುಲ್ಲೋತ್ಪಲಚ್ಛನ್ನಾಂ - ಅರಳಿದ ನೈದಿಲೆಗಳಿಂದ ತುಂಬಿರುವ, ಕ್ವಚಿತ್ - ಕೆಲವು ಪ್ರದೇಶಗಳಲ್ಲಿ, ಪದ್ಮವನಾಕುಲಾಂ - ತಾವರೆಬಳ್ಳಿಗಳಿಂದ ವ್ಯಾಕುಲವಾದ, ಕ್ವಚಿತ್ - ಕೆಲಕಡೆಯಲ್ಲಿ, ಕುಮುದಷಂಡೈಶ್ಚ, ಕುಮುದ - ಬಿಳೀನೈದಿಲೆಗಳ, ಷಂಡೈಶ್ಚ - ತಂಡಗಳಿಂದಲೂ, ಕುಟ್ಮಲೈಃ - ಮೊಗ್ಗುಗಳಿಂದಲೂ, ಉಪಶೋಭಿತಾಂ - ಕಂಗೊಳಿಸುತ್ತಿರುವ, ನಾನಾ

ದೇವತಾ ಸಮೂಹಗಳ ಮುಳುಗುವಿಕೆಯಿಂದ ಮೇಲಕ್ಕೆರಚಲ್ಪಟ್ಟ ಜಲವುಳ್ಳದೂ, ಚೆಂಗಣಿಗಲು ಪುಷ್ಪವುಳ್ಳದೂ, ಕೆಲವೆಡೆಗಳಲ್ಲಿ ಉನ್ನತವಾದ ಮರಳು ದಿಣ್ಣೆಗಳುಳ್ಳದೂ, ಒಂದು ದಿಕ್ಕಿನಲ್ಲಿ ಹಂಸ, ಸಾರಸ, ಚಕ್ರವಾಕವೇ ಮೊದಲಾದ ಮದ ಸೊಕ್ಕಿದ ಪಕ್ಷಿಗಳ ಧ್ವನಿಗಳಿಂದ ಮನೋಹರವಾದುದೂ, ಮತ್ತೊಂದು ದಿಕ್ಕಿನಲ್ಲಿ ತೀರಗಳಲ್ಲಿ ಸಾಲಾಗಿ ಹೂ ಮೊಳೆತ ಮರಗಳಿಂದಲೂ, ಪುಷ್ಪ ಮಾಲಿಕೆಗಳಿಂದಲೂ ಅಲಂಕೃತವಾದಂತಿರುವುದೂ, ಒಂದು ದಿಕ್ಕಿನಲ್ಲಿ ಕಮಲಗಳಿಂದ ಮನೋಹರವಾಗಿ ಇನ್ನೊಂದು ದಿಕ್ಕಿನಲ್ಲಿ ಕುಸುಮ ಪರಾಗಗಳಿಂದಲೂ, ಕುಂಕುಮದಿಂದಲೂ ಲೇಪಿಸಲ್ಪಟ್ಟ ಶರೀರವುಳ್ಳದೋ ಎಂಬಂತಿರುವುದೂ, ಸಕಲ ಪ್ರಾಣಿಗಳ ಪಾಪ ಸಮೂಹವನ್ನು ಪರಿಹರಿಸುವುದೂ, ಸ್ಫಟಿಕ ಮಣಿಯಂತೆ ನಿರ್ಮಲವಾದ ಉದಕವುಳ್ಳದೂ, ದಿಗ್ಗಜಗಳಂತೆ ಮದ ಸೊಕ್ಕಿದ ಕಾಡಾನೆಗಳಿಂದ ಮನೋಹರವಾದುದೂ,

ದಿಶಾಗಜೈರ್ವನಗಜೈರ್ಮತ್ತೈಶ್ಚ ವರವಾರಣೈಃ ॥ ೨೨ ॥ ದೇವೋಪವಾ
ಹ್ಯೈಶ್ಚ ಮುಹು ಸ್ಸನ್ನಾದಿತ ವನಾಂತರಾಂ ॥ ಪ್ರಮದಾಮಿವ ಯತ್ನೇನ
ಭೂಷಿತಾಂ ಭೂಷಣೋತ್ತಮೈಃ ॥ ೨೩ ॥ ಫಲೈಃ ಪುಷ್ಪೈಃ ಕಿಸಲಯೈ
ರ್ವೃತಾಂ ಗುಲ್ಮೈ ರ್ದ್ವಿಜೈಸ್ತಥಾ ॥ ಶಿಂಶುಮಾರೈಶ್ಚ ನಕ್ರೈಶ್ಚ ಭುಜಂಗೈಶ್ಚ
ನಿಷೇವಿತಾಂ ॥ ೨೪ ॥ ವಿಷ್ಣುಪಾದಚ್ಯುತಾಂ ದಿವ್ಯಾಮಪಾಪಾಂ ಪಾಪನಾ
ಶಿನೀಂ ॥ ತಾಂ ಶಂಕರ ಜಟಾಜೂಟಾ ದ್ಭ್ರಷ್ಟಾಂ ಸಾಗರ ತೇಜಸಾ ॥ ೨೫ ॥

ಪುಷ್ಪರಜೋಧ್ವಸ್ತಾಂ - ನಾನಾವಿಧವಾದ ಹೂಗಳಧೂಳಿಗಳಿಂದ ಕೊಡಹಲ್ಪಟ್ಟುದಾದ ಕಾರಣ, ಕ್ವಚಿತ್ - ಕೆಲವು ಕಡೆಯಲ್ಲಿ, ಸಮುದಾಮಿವಸ್ಥಿತಾಂ - ಮದಯುಕ್ತವಾದಂತಿರುವ, ವ್ಯಪೇತಮಲ ಸಂಘಾತಾಂ - ಗತವಾದ ಕೊಳೆಗಳ ಸಮೂಹವುಳ್ಳ, ಮಣಿನಿರ್ಮಲದರ್ಶನಾಂ - ರತ್ನಗಳಿಂದ ಸ್ವಚ್ಛವಾದ ನೋಟವುಳ್ಳ, ದಿಶಾಗಜೈಃ - ದಿಗ್ಗಜಗಳಿಂದಲೂ, ವನಗಜೈಃ - ಕಾಡಾನೆಗಳಿಂದಲೂ, ಮತ್ತೈಃ-ಮದವೇರಿದ, ದೇವೋಪವಾಹ್ಯೈಶ್ಚ - ದೇವತೆಗಳು ಕೂಡುವ, ವರವಾರಣೈಶ್ಚ - ಉತ್ತಮವಾದ ಆನೆಗಳಿಂದಲೂ, ಮುಹುಃ - ಬಾರಿಬಾರಿಗೂ, ಸನ್ನಾದಿತವನಾಂತರಾಂ - ಶಬ್ದಾಯಮಾನವಾದ ವನ ಮಧ್ಯಪ್ರದೇಶಗಳುಳ್ಳ, ಭೂಷಣೋತ್ತಮೈಃ - ಉತ್ತಮವಾದ ಒಡವೆಗಳಿಂದಲೂ, ಯತ್ನೇನ - ಪ್ರಯತ್ನದಿಂದಲೂ, ಭೂಷಿತಾಂ - ಅಲಂಕರಿಸಲ್ಪಟ್ಟ, ಪ್ರಮದಾಮಿವಸ್ಥಿತಾಂ - ಸ್ತ್ರೀಯಂತಿರುವ, ಫಲೈಃ - ಹಣ್ಣುಗಳಿಂದಲೂ, ಪುಷ್ಪೈಃ - ಹುವ್ವುಗಳಿಂದಲೂ, ಕಿಸಲಯೈಃ - ಚಿಗುರುಗಳಿಂದಲೂ, ಗುಲ್ಮೈಃ - ಪೊದೆಗಳಿಂದಲೂ, ತಥಾ - ಹಾಗೆಯೇ, ದ್ವಿಜೈಃ - ಹಕ್ಕಿಗಳಿಂದಲೂ, ವೃತಾಂ - ಯುಕ್ತವಾದ, ಶಿಂಶುಮಾರೈಃ - ಜಲಕಪಿಗಳಿಂದಲೂ, ನಕ್ರೈಶ್ಚ - ನೆಗಳುಗಳಿಂದಲೂ, ಭುಜಂಗೈಶ್ಚ-ಹಾವುಗಳಿಂದಲೂ, ನಿಷೇವಿತಾಂ - ಸೇವಿಸಲ್ಪಟ್ಟ, ವಿಷ್ಣುಪಾದಚ್ಯುತಾಂ - ಶ್ರೀಮನ್ನಾರಾಯಣನ ಪಾದದಿಂದ ಜಾರಿದ, ದಿವ್ಯಾಂ - ದೇವತಾಸಂಬಂಧವಾದ, ಅಪಾಪಾಂ - ಪಾಪವಿಲ್ಲದಿರುವ, ಪಾಪ ನಾಶಿನೀಂ - ಇತರರ ಪಾತಕಗಳನ್ನು ಹೋಗಲಾಡಿಸುತ್ತಿರುವ, ತಾಂ - ಪ್ರಸಿದ್ಧವಾದ, ಶಂಕರ ಜಟಾಜೂಟಾತ್ - ಈಶ್ವರನ ಜಡೆಮುಡಿಯಿಂದ, ಸಾಗರತೇಜಸಾ - ಸಮುದ್ರದ ತೇಜೋವಿಶೇಷದಿಂದ, ಭ್ರಷ್ಟಾಂ - ಜಾರಿದ, ಸಮುದ್ರಮಹಿಷೀಂ - ಸಮುದ್ರನಿಗೆ ಪಟ್ಟದರಸಿಯಾದ, ಸಾರಸ

ಎತ್ತ ನೋಡಿದರೂ ಸ್ನಾನಾರ್ಥವಾಗಿ ಬಂದ ದೇವತಾ ಸಮೂಹಗಳಿಂದೊಡಗೂಡಿದುದೂ, ಎತ್ತ ನೋಡಿದರೂ ಹೂ ಗೊಂಚಲುಗಳುಳ್ಳ ವೃಕ್ಷಗಳೆಂಬ ಆಭರಣಗಳಿಂದಲಂಕೃತಳಾದ ಸ್ತ್ರೀಯಂತಿರುವುದೂ, ಚಿಗುರೊಡೆದ ಲತಾಮಂಟಪಗಳಿಂದುಪಶೋಭಿತವಾದುದೂ, ಶಿಂಶುಮಾರ, ಜಲಗಜ, ಜಲ ಸರ್ಪಗಳಿಂದ ತುಂಬಿ ತುಳುಕಾಡುತ್ತಿರುವುದೂ, ಸಗರರಾಜ ಕುವರರ ಮುಕ್ತಿಗೋಸುಗ ಭಗೀರಥ ರಾಯನಿಂದ ಸ್ವತಪಸ್ಸಾಮರ್ಥ್ಯದಿಂದ ಸ್ವರ್ಗದಿಂದಿಳಿದು, ಪಾರ್ವತೀ ವಲ್ಲಭನ ಜಟಾ ಮುಕುಟದಲ್ಲಡಗಿಸಿ, ಸಮಸ್ತ ಪ್ರಾಣಿಗಳ ಪಾಪಗಳನ್ನೂ ನಾಶ ಮಾಡುತ್ತಾ, ಸಾಕ್ಷಾದ್ವಿಷ್ಣುವಿನ ಪಾದೋದ್ಭವವಾದುದೂ, ಸಮುದ್ರರಾಜ ಮಹಿಷಿಯೂ, ಸಾರಸ ಮತ್ತು ಕ್ರೌಂಚ ಪಕ್ಷಿಗಳ ಧ್ವನಿಗಳಿಂದ ಶಬ್ದಾಯಮಾನವಾದುದೂ ಆದ ಗಂಗಾನದಿಯನ್ನು ಶ್ರೀರಾಮನು ಶೃಂಗಿಬೇರ ಪುರಕ್ಕೆ ಹೋಗುವವನಾಗಿ ನುಡಿದನು.॥೮-೨೫॥

ಸಮುದ್ರಮಹಿಷೀಂ ಗಂಗಾಂ ಸಾರಸ ಕ್ರೌಂಚ ನಾದಿತಾಂ ॥ ಆಸಸಾದ ಮಹಾ ಬಾಹು ಶ್ಶೃಂಗಿಬೇರಪುರಂ ಪ್ರತಿ ॥ ೨೬ ॥ ತಾಮೂರ್ಮಿ ಕಲಿತಾವರ್ತಾ ಮನ್ವವೇಕ್ಷ್ಯ ಮಹಾರಥಃ ॥ ಸುಮಂತ್ರ ಮಬ್ರವೀತ್ಸೂತ ಮಿಹೈವಾದ್ಯ ವಸಾ ಮಹೇ ॥ ೨೭ ॥ ಅವಿದೂರಾದಯಂ ನದ್ಯಾ ಬಹುಪುಷ್ಪ ಪ್ರವಾಳವಾ ॥ ಸುಮಹಾ ನಿಂಗುದೀವೃಕ್ಷೋ ವಸಾಮೋತ್ರೈವ ಸಾರಥೇ ॥೨೮॥ ದ್ರಕ್ಷ್ಯಾಮ ಸ್ಸರಿತಾಂ ಶ್ರೇಷ್ಠಾಂ ಸಮ್ಮಾನ್ಯ ಸಲಿಲಾಂ ಶಿವಾಂ ॥ ದೇವ ದಾನವ ಗಂಧರ್ವ ಮೃಗಮಾನುಷ ಪಕ್ಷಿಣಾಂ ॥ ೨೯ ॥ ಲಕ್ಷ್ಮಣಶ್ಚ ಸುಮಂತ್ರಶ್ಚ ಬಾಢಮಿ ತ್ಯೇವ ರಾಘವಂ ॥ ಉಕ್ತ್ವಾತಮಿಂಗುದೀವೃಕ್ಷಂ ತದೋಪಯಯುಯತು

ಕ್ರೌಂಚನಾದಿತಾಂ - ಸಾರಸಹಕ್ಕಿಗಳಿಂದಲೂ, ಕೋಕಿಲಹಕ್ಕಿಗಳಿಂದಲೂ ಶಬ್ದಾಯಮಾನವಾದ, ಗಂಗಾಂ - ಗಂಗಾನದಿಯನ್ನು, ಮಹಾಬಾಹುಃ - ಮಹಾಭುಜಪರಾಕ್ರಮಿಯಾದ ಶ್ರೀರಾಮನು, ಶೃಂಗಿಬೇರಪುರಂಪ್ರತಿ - ಶೃಂಗಬೇರಪಟ್ಟಣವನ್ನು ಕುರಿತು, ಗಚ್ಛನ್ - ಹೋಗುತ್ತ, ಆಸಸಾದ - ಹೊಂದಿದನು ॥ ೧೬-೨೬ ॥ ಮಹಾರಥಃ - ಮಹಾರಥಿಕನಾದ ಶ್ರೀರಾಮನು, ಊರ್ಮಿಕಲಿತಾ ವರ್ತಾಂ, ಊರ್ಮಿ - ತೆರೆಗಳಿಂದ, ಕಲಿತ - ಸೇರಿದ, ಆವರ್ತಾಂ - ಸುಳಿಗಳುಳ್ಳ, ತಾಂ - ಆ ಗಂಗಾನದಿಯನ್ನು, ಅನ್ವವೇಕ್ಷ್ಯ - ಹೊಂದಿ, ಸೂತಂ - ಸಾರಥಿಯಾದ, ಸುಮಂತ್ರಂ - ಸುಮಂತ್ರ ನನ್ನು ಕುರಿತು, ಅದ್ಯ - ಈಗ, ಇಹೈವ - ಇಲ್ಲಿಯೇ, ವಸಾಮಹೇ - ಇರೋಣ, ಹೇ ಸಾರಥೇ - ಎಲೈ ಸೂತನೇ! ನದ್ಯಾಃ - ನದಿಗೆ, ಅವಿದೂರಾತ್ - ಸಮೀಪದಲ್ಲಿ, ಬಹುಪುಷ್ಪಪ್ರವಾಳವಾ-ಅಧಿಕ ವಾದ ಪುಷ್ಪಗಳೂ ಚಿಗುರುಗಳೂ ಉಳ್ಳ, ಸುಮಹಾನ್ - ದೊಡ್ಡದಾದ, ಅಯಮಿಂಗುದೀವೃಕ್ಷಃ - ಈಗಾರೇ ಗಿಡವು, ಅಸ್ತಿ - ಇದೆ, ಅತ್ರೈವ - ಇಲ್ಲಿಯೇ, ವಸಾಮಃ - ಇರೋಣ, ಸರಿತಾಂ - ನದಿಗ ಳೊಳಗೆ, ಶ್ರೇಷ್ಠಾಂ - ಉತ್ತಮವಾದ, ಸಂಮಾನ್ಯಸಲಿಲಾಂ - ಬಹುಮತಿಸತಕ್ಕ ಉದಕವುಳ್ಳ, ದೇವದಾನವಗಂಧರ್ವ ಮೃಗಮಾನುಷಪಕ್ಷಿಣಾ-ದೇವತೆಗಳೂ, ರಕ್ಕಸರೂ, ಗಂಧರ್ವರೂ, ಮೃಗಗಳೂ, ಮನುಷ್ಯರೂ, ಹಕ್ಕಿಗಳೂವುಳ್ಳ, ಶಿವಾಂ - ಶುಭಕರವಾದ ಗಂಗಾನದಿಯನ್ನು, ದ್ರಕ್ಷ್ಯಾಮಃ - ನೋಡೋಣ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೨೭-೨೯ ॥ ಲಕ್ಷ್ಮಣಶ್ಚ - ಲಕ್ಷ್ಮಣನೂ, ಸುಮಂತ್ರಶ್ಚ - ಸುಮಂತ್ರನೂ, ಬಾಢಮಿತ್ಯೇವ - ಹಾಗೆಯೇ ಆಗಲೆಂದು, ರಾಘವಂ-

ಆ ಬಳಿಕ ಶ್ರೀರಾಮನು ತೆರೆಗಳಿಂದ ಮಿಶ್ರಿತವಾದ ಪ್ರವಾಹವುಳ್ಳ ಆ ನದಿಯನ್ನು ನೋಡಿ ಸುಮಂತ್ರನನ್ನು ಕುರಿತು, "ಎಲೈ ಸುಮಂತ್ರನೆ! ನಾವು ಈ ಹೊತ್ತು ಈ ಗಂಗಾತೀರ ದಲ್ಲಿಯೇ ಇರೋಣ ; ಇಲ್ಲಿ ಮೊಗ್ಗೊಡೆದು, ಹೂ ಮೊಳೆತು, ಫಲಭರಿತವಾದ ಇಂಗಳದ ವೃಕ್ಷವಿರುವುದು. ಈ ಮರದಡಿಯಲ್ಲಿದ್ದು, ದೇವ ದಾನವ ಗಂಧರ್ವರಿಗೂ, ಮೃಗ ಪಕ್ಷಿ ಗಳಿಗೂ, ಮಾನವರಿಗೂ, ಮುಕ್ತಿಪ್ರದವಾದ ಈ ಗಂಗಾ ಸೇವೆಯನ್ನು ಮಾಡೋಣ" ಎಂದು ಹೇಳಿದನು. ಅಗ ಲಕ್ಷ್ಮಣ ಸ್ವಾಮಿಯೂ, ಸಾರಥಿಯಾದ ಸುಮಂತ್ರನೂ, ಹಾಗೆಯೇ ಆಗಲೆಂದು ರಥವನ್ನು ಆ ಇಂಗಳದ ಗಿಡದೆಡೆಗೆ ನಡಿಸಿದರು. ॥ ೨೬-೩೦ ॥ ಇಕ್ಷ್ವಾಕು ಕುಲಾನಂದಕರನಾದ ಶ್ರೀರಾಮನು ರಮ್ಯವಾಗಿರುವ ಆ ಮರವನ್ನು ಕಂಡು, ಸತಿಯಾದ

ಹಯೈಃ ॥ ೩೦ ॥ ರಾಮೋಭಿಯಾಯ ತಂ ರಮ್ಯಂ ವೃಕ್ಷ ಮಿಕ್ಷ್ವಾಕು
ನಂದನಃ ॥ ರಥಾದವಾತರತ್ತಸ್ಮಾತ್ಸಭಾರ್ಯಸ್ಸಹಲಕ್ಷ್ಮಣಃ ॥ ೩೧ ॥
ಸುಮಂತ್ರೋಽಪ್ಯವತೀರ್ಯಾಸ್ಮಾನ್ಮೋಚಯಿತ್ವಾ ಹಯೋತ್ತಮಾನ್ ॥ ವೃಕ್ಷ
ಮೂಲಗತಂ ರಾಮಮುಪತಸ್ಥೇ ಕೃತಾಂಜಲಿಃ ॥ ೩೨ ॥ ತತ್ರ ರಾಜಾ
ಗುಹೋ ನಾಮ ರಾಮಸ್ಯಾತ್ಮ ಸಮಸ್ಸಖಾ ॥ ನಿಷಾದಜಾತ್ಯೋ ಬಲವಾಂ
ಸ್ಥಪತಿಶ್ಚೇತಿ ವಿಶ್ರುತಃ ॥೩೩॥ ಸ ಶ್ರುತ್ವಾ ಪುರುಷವ್ಯಾಘ್ರಂ ರಾಮಂ ವಿಷಯ
ಮಾಗತಂ ॥ ವೃದ್ಧೈಃ ಪರಿವೃತೋಽಮಾತ್ಯೈ ಜ್ಞಾತಿಭಿಶ್ಚಾಭ್ಯುಪಾಗತಃ ॥೩೪॥

ಶ್ರೀರಾಮನನ್ನು ಕುರಿತು, ಉಕ್ತ್ವಾ - ಹೇಳಿ, ತದಾ - ಆಗ, ಹಯೈಃ - ಕುದುರೆಗಳಿಂದ, ತಮಿಂಗು ದೀವೃಕ್ಷಂ - ಗಾರೆಗಿಡದ, ಉಪಯಯತುಃ - ಸಮೀಪಕ್ಕೆಹೋದರು. ॥ ೩೦ ॥ ಇಕ್ಷ್ವಾಕು ನಂದನಃ - ಇಕ್ಷ್ವಾಕುವಂಶಕ್ಕೆ ಸಂತೋಷಕರನಾದ, ರಾಮಃ - ಶ್ರೀರಾಮನು, ರಮ್ಯಂ - ಮನೋ ಹರವಾದ, ತಂವೃಕ್ಷಂ - ಆ ಮರವನ್ನು, ಅಭಿಯಾಯ - ಹೊಂದಿ, ಸಭಾರ್ಯಃ - ಸೀತಾದೇವಿ ಯೊಡಗೂಡಿ, ಸಲಕ್ಷ್ಮಣಃ - ಲಕ್ಷ್ಮಣನೊಡನೆ, ತಸ್ಮಾದ್ರಥಾತ್ - ಆ ರಥದಿಂದ, ಅವಾತರತ್ - ಇಳಿದನು ॥ ೩೧ ॥ ಸುಮಂತ್ರೋಽಪಿ - ಸುಮಂತ್ರನೂ ಕೂಡ, ಅವತೀರ್ಯ - ಇಳಿದು, ಅಸ್ಮಾತ್ - ಈ ರಥದಿಂದ, ಹಯೋತ್ತಮಾನ್ - ಶ್ರೇಷ್ಠಗಳಾದ ಆ ಕುದುರೆಗಳನ್ನು, ಮೋಚಯಿತ್ವಾ- ಬಿಡಿಸಿ, ಕೃತಾಂಜಲಿಃ - ಅಂಜಲಿಬದ್ಧನಾಗಿ, ವೃಕ್ಷಮೂಲಗತಂ - ಗಿಡದ ಬುಡದಲ್ಲಿರುವ, ರಾಮಂ- ಶ್ರೀರಾಮನ, ಉಪತಸ್ಥೇ - ಸಮೀಪದಲ್ಲಿ ನಿಂತನು. ॥ ೩೨ ॥ ತತ್ರ - ಅಲ್ಲಿ, ರಾಮಸ್ಯ - ಶ್ರೀರಾಮನಿಗೆ, ಆತ್ಮಸಮಃ - ಪ್ರಾಣಪ್ರಾಯನಾದ, ಸಖಾ - ಸ್ನೇಹಿತನಾದ, ನಿಷಾದಜಾತ್ಯಃ - ಬೇಡರ ಜಾತಿಯವನಾದ, ಬಲವಾನ್ - ಬಲಿಷ್ಠನಾದ, ಸ್ಥಪತಿಶ್ಚೇತಿ - ನಿಷಾದಾಧಿಪತಿಯೆಂದು, ವಿಶ್ರುತಃ-ಪ್ರಸಿದ್ಧನಾದ, ಗುಹೋನಾಮ ಗುಹನೆಂಬಹೆಸರುಳ್ಳ, ರಾಜಾ-ಅರಸು, (ಅವಸತ್-ಇದ್ದನು.) ॥ ೩೩ ॥ ಸಃ - ಅವನು, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ರಾಮಂ - ಶ್ರೀರಾಮನನ್ನು, ವಿಷಯಂ - ತನ್ನ ದೇಶವನ್ನು ಕುರಿತು, ಆಗತಂ - ಬಂದವನನ್ನಾಗಿ, ಶ್ರುತ್ವಾ - ಕೇಳಿ, ವೃದ್ಧೈಃ - ಮುದುಕರಾದ, ಅಮಾತ್ಯೈಃ - ಮಂತ್ರಿಗಳಿಂದಲೂ, ಜ್ಞಾತಿಭಿಶ್ಚ-ದಾಯಾದಿಗಳಿಂದಲೂ, ಪರಿವೃತಃ- ಸುತ್ತುವರೆಯಲ್ಪಟ್ಟವನಾಗಿ, ಅಭ್ಯುಪಾಗತಃ - ಬಂದನು. ॥ ೩೪ ॥ ತತಃ - ಬಳಿಕ, ಸರಾಮಃ -

---

ಸೀತಾದೇವಿಯಿಂದಲೂ ಲಕ್ಷ್ಮಣನಿಂದಲೂ ಒಡಗೂಡಿ ರಥದಿಂದಿಳಿದನು. ಆಗ ಸುಮಂ ತ್ರನು ರಥದಿಂದಿಳಿದು ಕುದುರೆಗಳನ್ನು ಬಿಚ್ಚಿ ಆ ಮರದಡಿಯಲ್ಲಿ ಕುಳಿತಿರುವ ಶ್ರೀರಾಮ ಮೂರ್ತಿಯ ಬಳಿಗೈದಿ ಕೈ ಮುಗಿದುಕೊಂಡು ನಿಂತನು. ಅಲ್ಲಿ ಶ್ರೀರಾಮನಿಗೆ ಪ್ರಿಯ ಸ್ನೇಹಿತನಾದ ಬೇಡರ ಜಾತಿಯವನಾದ, ಮಹಾ ಬಲಶಾಲಿಯಾದ ನಿಷಾದಾಧಿಪನೆಂದು ಹೆಸರುಗೊಂಡ ಗುಹನೆಂಬುವನೊಬ್ಬನಿದ್ದನು. ಆತನು ಪುರುಷ ಪುಂಗವನಾದ ಶ್ರೀರಾಮನು ತನ್ನ ದೇಶಕ್ಕೆ ಬಂದಿರುವನೆಂಬ ಸಂಗತಿಯನ್ನು ಕೇಳಿ, ವೃದ್ಧ ಮಂತ್ರಿಗಳಿಂದಲೂ, ಬಂಧು ಗಳಿಂದಲೂ ಪರಿವೃತನಾಗಿ ಶ್ರೀರಾಮನಿದ್ದೆಡೆಗೆ ಬಂದವನಾದನು. ಆ ಬಳಿಕ ಶ್ರೀರಾಮನು ದೂರದಲ್ಲಿ ನಿಂತಿರುವ ನಿಷಾದಾಧಿಪನಾದ ಗುಹನನ್ನು ಕಂಡು, ಲಕ್ಷ್ಮಣನೊಡಗೂಡಿ ಆತ

ತತೋ ನಿಷಾದಾಧಿಪತಿಂ ದೃಷ್ಟ್ವಾ ದೂರಾದವಸ್ಥಿತಂ ॥ ಸಹ ಸೌಮಿತ್ರಿಣಾ ರಾಮ ಸ್ಸಮಾಗಚ್ಛದ್ಗುಹೇನಸಃ ॥ ೩೫ ॥ ತಮಾರ್ತ ಸ್ಸಂಪರಿಷ್ವಜ್ಯ ಗುಹೋ ರಾಘವ ಮಬ್ರವೀತ್ ॥ ಯಥಾ ಯೋಧ್ಯಾ ತಥೇಯಂ ತೇ ರಾಮ ಕಿಂಕರವಾ ಣಿ ತೇ ॥ ಈದೃಶಂಹಿ ಮಹಾಬಾಹೋ ಕಃಪ್ರಾಪ್ಸ್ಯ ತ್ಯತಿಥಿಂ ಪ್ರಿಯಂ॥೩೬॥ ತತೋ ಗುಣವದನ್ನಾದ್ಯ ಮುಪಾದಾಯ ಪೃಥಗ್ವಿಧಂ ॥ ಅರ್ಘ್ಯಂಚೋ ಪಾನ ಯತ್ ಕ್ಷಿಪ್ರಂ ವಾಕ್ಯಂಚೇದ ಮುವಾಚಹ ॥ ೩೭ ॥ ಸ್ವಾಗತಂ ತೇ ಮಹಾ ಬಾಹೋ ತವೇಯಮಖಿಲಾ ಮಹೀ ॥ ವಯಂ ಪ್ರೇಷ್ಯಾ ಭವಾ೯ ಭತಾ೯ ಸಾಧು ರಾಜ್ಯಂ ಪ್ರಶಾಧಿ ನಃ ॥ ಭಕ್ಷ್ಯಂ ಭೋಜ್ಯಂ ಚ ಪೇಯಂಚ ಲೇಹ್ಯಂ

ಆ ರಾಮನು, ದೂರಾತ್ - ದೂರದಲ್ಲಿ, ಅವಸ್ಥಿತಂ ನಿಂತಿರುವ, ನಿಷಾದಾಧಿಪತಿಂ - ಗುಹನನ್ನು, ದೃಷ್ಟ್ವಾ - ಕಂಡು, ಸೌಮಿತ್ರಿಣಾಸಹ - ಲಕ್ಷ್ಮಣನೊಡನೆ, ಗುಹೇನ - ಗುಹನಸಂಗಡ, ಸಮಾಗಚ್ಛತ್ - ಸೇರಿದವನಾದನು, ಗುಹಃ - ಗುಹನು, ಆರ್ತಃ - (ಗೋ + ಮ) ಶ್ರೀರಾಮನು ಧರಿಸಿರುವ ನಾರು ಮಡಿಗಳನ್ನು ನೋಡಿದುದರಿಂದ ಸಂತಪ್ತನಾಗಿ, ತಂರಾಘವಂ - ಆ ಶ್ರೀರಾಮನನ್ನು, ಸಂಪರಿಷ್ವಜ್ಯ - ಚನ್ನಾಗಿ ಅಪ್ಪಿಕೊಂಡು, ಹೇ ರಾಮ - ಎಲೈ ರಾಮನೇ, ತೇ - ನಿನಗೆ, ಅಯೋಧ್ಯಾ - ಅಯೋಧ್ಯಾಪಟ್ಟಣವು, ಯಥಾ - ಹೇಗೋ, ಇಯಂ - ಈ ಶೃಂಗಬೇರಪುರವು, ತಥಾ - ಹಾಗೆಯೆ, ತೇ - ನಿನಗೆ, ಕಿಂಕರವಾಣಿ - ಯಾವ ಕೆಲಸವನ್ನುಮಾಡಿಕೊಡಲಿ, ಹೇ ಮಹಾಬಾಹೋ - ಎಲೈ ಮಹಾಭುಜಪರಾಕ್ರಮಿಯೇ, ಈದೃಶಂ - ಇಂತಹ, ಪ್ರಿಯಂ - ಇಷ್ಟನಾದ, ಅತಿಥಿಂ - ಅತಿಥಿಯನ್ನು, ಕೋಽಪಿ - ಯಾವ ಪುರುಷನುತಾನೆ, ಪ್ರಾಪ್ಸ್ಯತಿ - ಹೊಂದುವನೋ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೩೫-೩೬ ॥ ತತಃ - ಬಳಿಕ, ಗುಣವತ್ - ಬಹುಗುಣಗಳುಳ್ಳ, ಬಹುವಿಧಂ - ನಾನಾವಿಧವಾದ, ಅನ್ನಾದ್ಯಂ - ಅನ್ನಮುಂತಾದವುಗಳನ್ನು, ಉಪಾದಾಯ - ತೆಗದುಕೊಂಡುಬಂದು, ಅರ್ಘ್ಯಂಚ - ಅರ್ಘ್ಯವನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ಉಪಾನಯತ್ - ತರಿಸಿದನು, ಹೇ ಮಹಾಬಾಹೋ - ಎಲೈ ಮಹಾಭುಜಗಳುಳ್ಳವನೇ, ತೇ - ನಿನಗೆ, ಸ್ವಾಗತಂ - ಸುಖಾಗಮನವೇ, ಅಖಿಲಾ - ಸಮಸ್ತವಾದ, ಇಯಂಮಹೀ - ಈ ಭೂಮಿಯು, ತವ - ನಿನ್ನದು, ವಯಂ - ನಾವು, ಪ್ರೇಕ್ಷ್ಯಾಃ - ಚಾಕರರು, ಭವಾ೯ - ನೀನು, ಭತಾ೯ - ಸಂರಕ್ಷಣ ಕರ್ತನು,

ನೊಡಗೂಡಿದನು. ಆಗ ಗುಹನು ಶ್ರೀರಾಮನು ಧರಿಸಿರುವ ನಾರುಮಡಿಗಳನ್ನು ನೋಡಿ ಸಂತಪಿಸುತ್ತ ಆತನನ್ನಪ್ಪಿಕೊಂಡು, "ಎಲೈ ಶ್ರೀರಾಮನೆ! ನಿನಗೆ ಅಯೋಧ್ಯಾ ರಾಜ್ಯದಲ್ಲಿ ಯಾವ ಸ್ವಾತಂತ್ರ್ಯವಿರುವುದೋ ಅದೇ ಸ್ವಾತಂತ್ರ್ಯವು ಈ ನನ್ನ ಪಟ್ಟಣದಲ್ಲಿಯೂ ಇರುವುದು. ನಿನಗಾಗಿ ಈಗ ನಾನೇನು ಮಾಡಬೇಕು; ನಿನ್ನಂತಹ ಪ್ರಿಯನಾದ ಅತಿಥಿಯು ಯಾರಿಗೆತಾನೆ ಲಭಿಸುವನು." ಎಂದು ನುಡಿದು, ರಸಭರಿತವಾದ ಅನ್ನಾದಿಗಳನ್ನೂ, ಅರ್ಘ್ಯವನ್ನೂ ತರಿಸಿಕೊಟ್ಟು ಹಿ ಗೆಂದನು. "ಎಲೈ ಮಹಾ ಭುಜಬಲಪರಾಕ್ರಮವುಳ್ಳವನೆ! ನಿನಗೆ ಸುಖಾಗಮನವೆ? ಇದೋ ಈ ಭೂಮಿಯೇ ನಿನ್ನದು: ನಾವೆಲ್ಲರೂ ನಿನ್ನ ಸೇವಕರು. ನಮ್ಮನ್ನು ನೀನು ಪರಿಪಾಲಿಸು; ನಮ್ಮ ರಾಜ್ಯವನ್ನು ಸ್ವೀಕರಿಸು; ಭಕ್ಷ್ಯಭೋಜ್ಯವಿದಿಕೊ;

ಚೇದಮುಪಸ್ಥಿತಂ ॥ ೩೯ ॥ ಶಯನಾನಿಚ ಮುಖ್ಯಾನಿ ವಾಜಿನಾಂ ಖಾದನಂ ಚ ತೇ ॥ ಗುಹಮೇವಂ ಬ್ರುವಾಣಂತು ರಾಘವಃ ಪ್ರತ್ಯುವಾಚಹ ॥ ೪೦ ॥ ಅರ್ಚಿತಾಶ್ಚೈವ ಹೃಷ್ಟಾಶ್ಚ ಭವತಾ ಸರ್ವಥಾ ವಯಂ ॥ ಪದ್ಭ್ಯಾಮಭಿಗಮಾಶ್ಚೈವ ಸ್ನೇಹಸಂದರ್ಶನೇನ ಚ ॥ ಅಪಿ ತೇ ಕುಶಲಂ ರಾಷ್ಟ್ರೇ ಮಿತ್ರೇಷುಚ ಧನೇಷುಚ ॥ ೪೨ ॥ ಯತ್ತ್ವಿದಂ ಭವತಾಂ ಕಿಂಚಿತ್ಪ್ರೀತ್ಯಾ ಸಮಭಿ

ನಃ - ನಮ್ಮ, ರಾಜ್ಯಂ - ರಾಜ್ಯವನ್ನು, ಸಾಧು - ಚನ್ನಾಗಿ, ಪ್ರಶಾಧಿ - ಸ್ವೀಕರಿಸು, ಇದಂಭಕ್ಷ್ಯಂ-ಭಕ್ಷ್ಯವು, ಭೋಜ್ಯಂ - ಭುಜಿಸತಕ್ಕ ಅನ್ನಾದಿಗಳು, ಪೇಯಂ - ಪಾನಮಾಡತಕ್ಕ ಪದಾರ್ಥವು, ಲೇಹ್ಯಂಚ - ನಂಜಿಕೊಳ್ಳುವ ಪದಾರ್ಥವು, ಉಪಸ್ಥಿತಂ - ತರಲ್ಪಟ್ಟಿದೆ, ಮುಖ್ಯಾನಿ - ಉತ್ತಮವಾದ, ಶಯಾನಿಚ - ಹಾಸಿಗೆಗಳೂ, ತೇ - ನಿನ್ನ, ವಾಜಿನಾಂ - ಕುದುರೆಗಳ, ಖಾದನಂ - ಹುಲ್ಲು, ಸಮುಪಸ್ಥಿತಂ - ಸಿದ್ಧವಾಗಿದೆ, (ಸರ್ವಂ - ಸಮಸ್ತವನ್ನೂ,) ಅನುಗೃಹಾಣ - ಅನುಗ್ರಹಿಸು, (ಇತಿ - ಹೀಗೆ, ಇದಂವಾಕ್ಯಂ - ಈ ಮಾತನ್ನು, ಉವಾಚ - ಹೇಳಿದನಷ್ಟೆ.) ॥ ೩೯-೪೦ ॥ ರಾಘವಸ್ತು - ಶ್ರೀರಾಮನಾದರೆ, ಏವಂ - ಈಪರಿಯಾಗಿ, ಬ್ರುವಾಣಂ - ಹೇಳುತ್ತಿರುವ, ಗುಹಂ - ಗುಹನನ್ನು ಕುರಿತು, ಪದ್ಭ್ಯಾಂ - ಕಾಲುಗಳಿಂದ, ಅಭಿಗಮಾಚ್ಚೈವಾ - ನಡೆದುಕೊಂಡು ಬಂದುದರಿಂದಲೂ, ಸ್ನೇಹಸಂದರ್ಶನೇನಚ - ಸ್ನೇಹವನ್ನು ತೋರಿಸೋಣದರಿಂದಲೂ, ಸರ್ವಥಾ - ಎಲ್ಲ ರೀತಿಯಿಂದಲೂ, ವಯಂ - ನಾವು, ಭವತಾ - ನಿನ್ನಿಂದ, ಅರ್ಚಿತಾಶ್ಚೈವ - ಪೂಜಿಸಲ್ಪಟ್ಟಿದ್ದೇವೆ, ಹೃಷ್ಟಾಶ್ಚ - ಸಂತುಷ್ಟರೂ ಆದೆವು, (ಇತಿ - ಇಂತೆಂದು,) ಪ್ರತ್ಯುವಾಚಹ - ಪ್ರತ್ಯುತ್ತರಕೊಟ್ಟನು. ॥ ೪೦-೪೧ ॥ ಸಾಧು - ಚನ್ನಾಗಿ, ಪೀನಾಭ್ಯಾಂ - ಬಲೆತಿರುವ, ಭುಜಾಭ್ಯಾಂ - ತೋಳುಗಳಿಂದ, ಪೀಡಯನ್ - ಹಿಡಿದುಕೊಂಡವನಾಗಿ, ಹೇ ಗುಹ - ಎಲೈ ಗುಹನೇ, ತ್ವಾಂ - ನಿನ್ನನ್ನು, ಬಾಂಧವೈಸ್ಸಹ - ನೆಂಟರೊಡನೆ, ಆರೋಗ್ಯಂ - ರೋಗವಿಲ್ಲದವನನ್ನಾಗಿ, ಪಶ್ಯಾಮಹಿ - ಕಂಡೆವಷ್ಟೆ, ತೇ - ನಿನ್ನ, ರಾಷ್ಟ್ರೇ - ದೇಶದಲ್ಲಿಯೂ, ಧನೇಷುಚ - ದ್ರವ್ಯವಿಷಯವಾಗಿಯೂ, ಕುಶಲಮಪಿ - ಕ್ಷೇಮವೇ ಏನು. ॥ ೪೨ ॥ ಭವತಾ - ನಿನ್ನಿಂದ, ಪ್ರೀತ್ಯಾ - ವಿಶ್ವಾಸದಿಂದ, ಕಿಂಚಿತ್-ಸ್ವಲ್ಪವಾದ, ಯದಿದಂ - ಯಾವ ಇದು, ಸಮಭಿಕಲ್ಪಿತಂ - ಕೊಡಲ್ಪಟ್ಟಿತೋ, ತತ್ಸರ್ವಂ - ಅದನ್ನೆಲ್ಲ, ಅನುಜಾನಾಮಿ - ಚನ್ನಾಗಿಮಾಡಲ್ಪಟ್ಟಿತೆಂದು ತಿಳಿಯುತ್ತೇನೆ, ಪ್ರತಿಗ್ರಹೇ - ಸ್ವೀಕಾರ

ಇವು ಪಾನ ದ್ರವ್ಯಗಳು; ಇವು ವ್ಯಂಜನಗಳು; ಉತ್ತಮವಾದ ಶಯ್ಯೆಗಳಿವು; ಕುದುರೆಗಳಿಗೆ ಹುಲ್ಲಿದು; ಇವೆಲ್ಲ ಸಿದ್ಧವಾಗಿವೆ, ಇದನ್ನು ಸ್ವೀಕರಿಸಿ ಅನುಗ್ರಹಿಸು." ಹೀಗೆ ಹೇಳುತ್ತಿರುವ ಗುಹನನ್ನು ಕುರಿತು ಶ್ರೀರಾಮನು, "ಎಲೈ ಮಿತ್ರನೆ! ನೀನು ಕಾಲ್ನಡಿಗೆಯಿಂದ ನನ್ನನ್ನು ಕಾಣಲು ಬಂದುದರಿಂದಲೂ, ನಿನ್ನ ಸ್ನೇಹ ಪ್ರದರ್ಶನದಿಂದಲೂ, ಎಲ್ಲ ರೀತಿಗಳಿಂದಲೂ ಪೂಜಿತರಾಗಿದ್ದೇವೆ. ಸಂತಸವಾಂತವರೂ ಆಗಿರುವೆವು." ಎಂದು ಹೇಳಿ ಭುಜಗಳಿಂದಾತನನ್ನಪ್ಪಿಕೊಂಡು, "ಓ ಗುಹನೆ! ನೆಂಟರೊಡಗೂಡಿ ಆರೋಗ್ಯವಾಗಿರುವ ನಿನ್ನನ್ನು ನಾವು ನೋಡಿದೆವಲ್ಲವೆ? ನಿನ್ನ ದೇಶವು ಸುಭಿಕ್ಷವಾಗಿರುವುದೆ? ನಿನ್ನ ಸ್ನೇಹಿತರೆಲ್ಲರೂ ಕ್ಷೇಮದಿಂದಿರುವರಷ್ಟೆ? ಐಶ್ವರ್ಯಾದಿಗಳ ವಿಷಯದಲ್ಲಿಯೂ ನಿನಗೆ ಕೊರತೆ

ಕಲ್ಪಿತಂ ॥ ಸರ್ವಂ ತದನುಜಾನಾಮಿ ನಹಿವರ್ತೇ ಪ್ರತಿಗ್ರಹೇ ॥ ೪೩ ॥ ಕುಶ ಚೀರಾಜಿನಧರಂ ಫಲಮೂಲಾಶನಂ ಚ ಮಾಂ ॥ ವಿದ್ಧಿ ಪ್ರಣಿಹಿತಂ ಧರ್ಮೇ ತಾಪಸಂ ವನಗೋಚರಂ ॥ ೪೪ ॥ ಅಶ್ವಾನಾಂ ಖಾದನೇ ನಾಹ ಮರ್ಥೀ ನಾನ್ಯೇನ ಕೇನಚಿತ್ ॥ ಏತಾವತಾತ್ರ ಭವತಾ ಭವಿಷ್ಯಾಮಿ ಸುಪೂಜಿತಃ ॥ ೪೫ ॥ ಏತೇಹಿ ದಯಿತಾ ರಾಜ್ಞಃ ಪಿತುರ್ದಶರಥಸ್ಯ ಮೇ ॥ ಏತೈಸ್ಸುವಿಹಿತೈ ರಶ್ವೈ ರ್ಭವಿಷ್ಯಾಮ್ಯಹ ಮರ್ಚಿತಃ ॥ ೪೬ ॥ ಅಶ್ವಾನಾಂ ಪ್ರತಿಪಾನಂ ಚ ಖಾದನಂಚೈವ ಸೋಽನ್ವಶಾತ್ ॥ ಗುಹಸ್ತತ್ರೈವ ಪುರುಷಾಂಸ್ತ್ವರಿತಂ ದೀಯತಾಮಿತಿ ॥ ೪೭ ॥ ತತಶ್ಚೀರೋತ್ತರಾಸಂಗ ಸ್ಸಂಧ್ಯಾಮನ್ವಾಸ್ಯ

ದಲ್ಲಿ, ನವರ್ತೇ - ಇರುವವನಲ್ಲ. ॥ ೪೩ ॥ ಕುಶಚೀರಾಜಿನಧರಂ - ದರ್ಭೆಗಳನ್ನೂ, ನಾರುಮಡಿಗಳನ್ನೂ, ಕೃಷ್ಣಾಜಿನವನ್ನೂ ಧರಿಸಿರುವ, ಮಾಂಚ - ನನ್ನನ್ನೂ, ಫಲಮೂಲಾಶಿನಂ - ಹಣ್ಣುಗಳನ್ನೂ ಕಂದಮೂಲಗಳನ್ನೂ ಭುಂಜಿಸುತ್ತಿರುವವನಾಗಿ, ಧರ್ಮೇ - ಪಿತೃವಾಕ್ಯಪರಿಪಾಲನರೂಪ ಧರ್ಮದಲ್ಲಿ, ಪ್ರಣಿಹಿತಂ - ಸಾವಧಾನಚಿತ್ತನನ್ನಾಗಿಯೂ, ವನಗೋಚರಂ - ವನಸಂಚಾರಕ್ಕೆ ವಿಷಯನಾದ, ತಾಪಸಂ - ತಾಪಸನನ್ನಾಗಿಯೂ, ವಿದ್ಧಿ - ಅರಿತುಕೋ. ॥ ೪೪ ॥ ಅಹಂ-ನಾನು, ಅಶ್ವಾನಾಂ-ಕುದುರೆಗಳ, ಖಾದನೇನ - ಗ್ರಾಸದಿಂದ, ಅರ್ಥೀ - ಪ್ರಯೋಜನವುಳ್ಳವನು, ಅನ್ಯೇನ - ಇತರವಾದ, ಕೇನಚಿತ್ - ಯಾವುದರಿಂದಲೂ, ನಾರ್ಥೀ - ಪ್ರಯೋಜನವುಳ್ಳವನಲ್ಲ, ಅತ್ರ - ಈ ಸಮಯದಲ್ಲಿ, ಭವತಾ - ನಿನ್ನಿಂದ, ಏತಾವತಾ - ಇಷ್ಟುಮಾತ್ರದಿಂದಲೇ, ಸುಪೂಜಿತಃ - ಪೂಜಿಸಲ್ಪಟ್ಟವನು, ಭವಿಷ್ಯಾಮಿ - ಆಗುವೆನು. ॥ ೪೫ ॥ ಮೇ - ನನ್ನ, ಪಿತುಃ - ತಂದೆಯಾದ, ದಶರಥಸ್ಯರಾಜ್ಞಃ - ದಶರಥರಾಯನಿಗೆ ಏತೇ - ಈ ಕುದುರೆಗಳು, ದಯಿತಾಹಿ - ಇಷ್ಟವಾದುವಷ್ಟೆ, ಸುವಿಹಿತೈಃ - ಚೆನ್ನಾಗಿ ಪೋಷಿಸಲ್ಪಟ್ಟ, ಏತೈರಶ್ವೈಃ - ಈ ಕುದುರೆಗಳಿಂದ, ಅಹಂ - ನಾನು, ಅರ್ಚಿತಃ - ಪೂಜಿಸಲ್ಪಟ್ಟವನು, ಭವಿಷ್ಯಾಮಿ - ಆಗುವೆನು. ॥ ೪೬ ॥ ಸಗುಹಃ - ಆ ಗುಹನು, ತತ್ರೈವ - ತತ್‌ಕ್ಷಣದಲ್ಲಿಯೇ, ಪುರುಷಾನ್ - ಭೃತ್ಯರನ್ನು ಕುರಿತು, ಅಶ್ವಾನಾಂ - ಕುದುರೆಗಳಿಗೆ,

---

ಯಿಲ್ಲವಷ್ಟೆ. ನೀನು ವಿಶ್ವಾಸದಿಂದ ತಂದಿತ್ತಿರುವ ಈ ಪದಾರ್ಥಗಳೆಲ್ಲವನ್ನೂ ನಿನಗೇ ಪ್ರತಿಯಾಗಿ ಕೊಟ್ಟಿರುವೆನು. ನಾನೀಗ ಪ್ರತಿಗ್ರಹ ಪರಾಙ್ಮುಖನು, ಧರ್ಭೆ, ನಾರುಮಡಿ, ಕೃಷ್ಣಾಜಿನಗಳನ್ನು ಧರಿಸಿರುವ ನನ್ನನ್ನು ಫಲಮೂಲಗಳನ್ನು ಭುಜಿಸುತ್ತ, ಪಿತೃವಾಕ್ಯ ಪರಿಪಾಲನಾ ವಿಷಯದಲ್ಲಿ ನ್ಯಸ್ತಮನಸ್ಕನನ್ನಾಗಿಯೂ, ವನಸಂಚಾರ ಗೋಚರನಾಗಿರುವ ತಾಪಸನನ್ನಾಗಿಯೂ ತಿಳಿದುಕೊ, ಕುದುರೆಗಳ ಗ್ರಾಸ ಮಾತ್ರದಿಂದ ನಾನು ಸಂತುಷ್ಟನಾಗಿದ್ದೇನೆ. ನನಗಿನ್ನಾವುದೂ ಬೇಕಾಗಿಲ್ಲ. ಈಗ ಇಷ್ಟುಮಾತ್ರ ಸಾಕಾಗಿದೆ. ನನ್ನ ಜನಕನಾದ ದಶರಥರಾಯನಿಗೆ ಈ ಕುದುರೆಗಳಲ್ಲಿ ಬಹಳ ಪ್ರೀತಿಯುಂಟು. ಇವುಗಳು ತೃಪ್ತಿ ಹೊಂದಿಸಲ್ಪಟ್ಟುವಾದರೆ ನಾನು ಪೂಜಿತನಾದಂತೆಯೇ ಭಾವಿಸುತ್ತೇನೆ" ಎಂದು ಹೇಳಿದನು. ॥೩೬-೪೬॥ ಆ ಬಳಿಕ ಗುಹನು ಆ ಕ್ಷಣದಲ್ಲಿಯೇ ಭೃತ್ಯರಿಗಾಜ್ಞಾಪಿಸಿ ಕುದುರೆಗಳಿಗೆ ಹಾಲು ಮುಂತಾ

ಪಶ್ಚಿಮಾಂ ॥ ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಂ ॥೪೮॥ ತಸ್ಯ ಭೂಮೌ ಶಯಾನಸ್ಯ ಪಾದೌ ಪ್ರಕ್ಷಾಳ್ಯ ಲಕ್ಷ್ಮಣಃ ॥ ಸಭಾರ್ಯಸ್ಯ ತತೋಭ್ಯೇತ್ಯ ತಸ್ಥೌ ವೃಕ್ಷಮುಪಾಶ್ರಿತಃ ॥ ೪೯ ॥ ಗುಹೋಪಿ ಸಹಸೂತೇನ ಸೌಮಿತ್ರಿಮನುಭಾಷಯನ್ ॥ ಅನ್ವಜಾಗ್ರತ್ತತೋ ರಾಮಮಪ್ರಮತ್ತೋ ಧನುರ್ಧರಃ ॥ ೫೦ ॥

ತಥಾ ಶಯಾನಸ್ಯ ತತೋಸ್ಯ ಧೀಮತೋ
ಯಶಸ್ವಿನೋ ದಾಶರಥೇರ್ಮಹಾತ್ಮನಃ ॥

ಪ್ರತಿಪಾನಂ - ಹಾಲು ಮುಂತಾದವುಗಳು, ಖಾದನಂಚ - ಹುಲ್ಲು ಸಹ, ತ್ವರಿತಂ - ಜಾಗ್ರತೆಯಾಗಿ, ದೀಯತಾಂ - ಕೊಡಲ್ಪಡಲಿ, ಇತಿಚ - ಇಂತೆಂದು, ಅನ್ವಶಾತ್ - ಆಜ್ಞಾಪಿಸಿದನು. ॥ ೪೭ ॥ ತತಃ - ಬಳಿಕ, ಚೀರೋತ್ತರಾಸಂಗಃ, ಚೀರ - ನಾರುಮಡಿಯೇ, ಉತ್ತರಾಸಂಗಃ - ಹೊದಿಕೆ ವಸ್ತ್ರವುಳ್ಳವನಾಗಿ, ಪಶ್ಚಿಮಾಂಸಂಧ್ಯಾಂ - ಸಾಯಂ ಸಂಧ್ಯೆಯನ್ನು, ಅನ್ವಾಸ್ಯ - ಉಪಾಸಿಸಿ, ಲಕ್ಷ್ಮಣೇನ - ಲಕ್ಷ್ಮಣನಿಂದ, ಸ್ವಯಂ - ತಾನೇ, ಆಹೃತಂ - ತರಲ್ಪಟ್ಟ, ಜಲಮೇವ - ಉದಕವನ್ನೇ, ಭೋಜ್ಯಂ - ಆಹಾರವನ್ನಾಗಿ, ಆದದೇ - ಗ್ರಹಿಸಿದನು. ॥ ೪೮ ॥ ಲಕ್ಷ್ಮಣಃ - ಲಕ್ಷ್ಮಣನು, ಪಾದೌ - ಕಾಲುಗಳನ್ನು, ಪ್ರಕ್ಷಾಳ್ಯ - ತೊಳದು, ಸಭಾರ್ಯಸ್ಯ - ಭಾರ್ಯಾಸಹಿತನಾಗಿ, ತಸ್ಯ - ಆ ಶ್ರೀರಾಮನು, ಭೂಮೌ - ನೆಲದಲ್ಲಿ, ಶಯಾನಸ್ಯ - ಮಲಗಲು, ತತಃ - ಬಳಿಕ, ಅಭ್ಯೇತ್ಯ - ಗುಹನಿಗೆ ಇದುರಾಗಿಬಂದು, ವೃಕ್ಷಂ - ಗಿಡವನ್ನು, ಉಪಾಶ್ರಿತಃ - ಆಶ್ರಯಿಸಿ, ತಸ್ಥೌ - ನಿಂದನು. ॥ ೪೯ ॥ ತತಃ - ಬಳಿಕ, ಗುಹೋಪಿ - ಗುಹನೂಕೂಡ, ಸೂತೇನಸಹ - ಸುಮಂತ್ರನೊಡನೆ, ಸೌಮಿತ್ರಿಂ - ಲಕ್ಷ್ಮಣನನ್ನು, ಅನುಭಾಷಯನ್-ರಾಮನಗುಣಗಳನ್ನುದ್ದೇಶಿಸಿ ಮಾತನಾಡಿಸುತ್ತ, ರಾಮಂ - ಶ್ರೀರಾಮನನ್ನು, ಅಪ್ರಮತ್ತಃ - ಜಾಗರೂಕನಾಗಿ, ಅನ್ವಜಾಗ್ರತ್ - ಕಾದುಕೊಂಡಿದ್ದನು. ॥ ೫೦ ॥ ತತಃ - ಬಳಿಕ, ಧೀಮತಃ - ಬುದ್ಧಿವಂತನಾದ, ಯಶಸ್ವಿನಃ - ಕೀರ್ತಿವಂತನಾದ, ಮಹಾತ್ಮನಃ - ಮಹಾನುಭಾವನಾದ, ಅದೃಷ್ಟದುಃಖಸ್ಯ - ದುಃಖವನ್ನು ಕಾಣದಿರುವ, ಸುಖೋಚಿತಸ್ಯ - ಸುಖಕ್ಕೆ ಅರ್ಹನಾದ, ದಾಶರಥೇಃ - ಶ್ರೀರಾಮನು, ತಥಾ - ಆಪರಿ

ದವುಗಳನ್ನೂ, ಹುಲ್ಲನ್ನೂ ಕೊಡಿಸಿದವನಾದನು. ಬಳಿಕಲಾ ಶ್ರೀರಾಮನು ನಾರುಮಡಿಯೇ ಅಂಗವಸ್ತ್ರವುಳ್ಳವನಾಗಿ ಸಾಯಂ ಸಂಧ್ಯೆಯನ್ನುಪಾಸಿಸಿ, ಲಕ್ಷ್ಮಣನು ತಂದ ಉದಕವನ್ನು ಪರಿಗ್ರಹಿಸಿದನು. ॥ ೪೭-೪೮॥ ಆಗ ಲಕ್ಷ್ಮಣನು ಕಾಲುಗಳನ್ನು ತೊಳೆದುಕೊಂಡು, ಹೆಂಡತಿಯೊಡಗೂಡಿ ಭೂಮಿಯ ಮೇಲೆಯೇ ಮಲಗಿದ್ದ ಶ್ರೀರಾಮನನ್ನು ನೋಡಿ ಗುಹನಬಳಿಗೈದಿ ಬಂದು ಮರದಡಿಯಲ್ಲಿ ನಿಂತವನಾದನು. ಆಗ ಗುಹನೂ ಕೂಡ ಸುಮಂತ್ರ ಲಕ್ಷ್ಮಣರೊಡನೆ ಶ್ರೀರಾಮನ ಗುಣಾವಳಿಗಳನ್ನುದ್ದೇಶಿಸಿ ಮಾತನಾಡುತ್ತ, ಧನುರ್ಧಾರಿಯಾಗಿ ಜಾಗರೂಕನಾಗಿ ಕಾದುಕೊಂಡಿದ್ದನು. ಬಳಿಕ ಬುದ್ಧಿವಂತನೂ,

ಅದೃಷ್ಟ ದುಃಖಸ್ಯ ಸುಖೋಚಿತಸ್ಯ ಸಾ
ತದಾ ವ್ಯತೀಯಾಯ ಚಿರೇಣ ಶರ್ವರೀ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಶಸ್ಸರ್ಗಃ.

ಯಾಗಿ, ಶಯಾನಸ್ಯ - ಮಲಗಲು, ತದಾ - ಆ ಕಾಲದಲ್ಲಿ, ಸಾಶರ್ವರೀ - ಆ ರಾತ್ರಿಯು, ಚಿರೇಣ-ಬಹುಕಾಲವಾಗಿ, ವ್ಯತೀಯಾಯ - ಕಳೆದುಹೋಯಿತು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಶಸ್ಸರ್ಗಃ.

ಕೀರ್ತಿವಂತನೂ, ಸುಖಾರ್ಹನೂ, ದಶರಥರಾಜ ಕುಮಾರನೂ ಆದ ಶ್ರೀರಾಮನು ಆ ರೀತಿ ಮಲಗಿದವನಾಗಲು, ರಾತ್ರಿಯು ಬಹು ಕಾಲದಂತೆ ಕಳೆಯಿತು. ॥ ೪೯-೫೧ ॥

ಇಂತಿದು ಗುಹಕೃತ ಶ್ರೀರಾಮಸೇವಾ ವೃತ್ತಾಂತ ಕಥಾಕಥನವೆಂಬ
ಐವತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಪಂಚಾಶಸ್ಸರ್ಗಃ.

ತಂ ಜಾಗ್ರತ ಮದಂಭೇನ ಭ್ರಾತುರರ್ಥಾಯ ಲಕ್ಷ್ಮಣಂ ॥ ಗುಹ ಸ್ಸಂತಾಪ ಸಂಯುಕ್ತೋ ರಾಘವಂ ವಾಕ್ಯ ಮಬ್ರವೀತ್ ॥ ೧ ॥ ಇಯಂ ತಾತ ಸುಖಾ ಶಯ್ಯಾ ತ್ವದರ್ಥ ಮುಪಕಲ್ಪಿತಾ ॥ ಪ್ರತ್ಯಾಶ್ವಸಿಹಿ ಸಾಧ್ವಸ್ಯಾಂ ರಾಜಪುತ್ರ ಯಥಾ ಸುಖಂ ॥ ೨ ॥ ಉಚಿತೋಽಯಂ ಜನಸ್ಸರ್ವಃ ಕ್ಲೇಶಾನಾಂ ತ್ವಂ ಸುಖೋಚಿತಃ ॥ ಗುಪ್ತ್ಯರ್ಥಂ ಜಾಗರಿಷ್ಯಾಮಃ ಕಾಕುತ್ಸ್ಥಸ್ಯ ವಯಂ ಶಿವಾಂ ॥ ೩ ॥ ನಹಿ ರಾಮಾತ್ ಪ್ರಿಯತಮೋ ಮಮಾಸ್ತಿ ಭುವಿ ಕಶ್ಚನ ॥

ಭ್ರಾತುಃ - ಅಣ್ಣನ, ಅರ್ಥಾಯ - ಸೇವೆಗೋಸ್ಕರ, ಅದಂಭೇನ - ವಿಶ್ವಾಸದಿಂದ, ಜಾಗ್ರತಂ - ಎಚ್ಚರಿಕೆಯಾಗಿರುವ, ರಾಘವಂ - ರಘುವಂಶೋತ್ಪನ್ನನಾದ, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು ಕುರಿತು, ಗುಹಃ - ಗುಹನು, ಸಂತಾಪಸಂಯುಕ್ತಃ - ರಾಮನದರುಶನದಿಂದ ಹುಟ್ಟಿದ ಸಂತಾಪದಿಂದ ಪೀಡಿತನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಹೇ ತಾತ - ಎಲೈ ತಂದೆಯೇ, ಇಯಂಶಯ್ಯಾ - ಈ ಹಾಸಿಗೆಯು, ಸುಖಾ - ಸುಖಕರವಾಗಿರುವಂತೆ, ತ್ವದರ್ಥಂ - ನಿನಗೋಸ್ಕರ, ಉಪಕಲ್ಪಿತಾ - ನಿಯಮಿಸಲ್ಪಟ್ಟಿರುವುದು, ಹೇ ರಾಜಪುತ್ರ - ಎಲೈ ಅರಸನ ಮಗನೇ, ಅಸ್ಯಾಂ - ಈ ಹಾಸಿಗೆಯಲ್ಲಿ, ಯಥಾಸುಖಂ - ಸುಖವಾಗಿ, ಸಾಧು - ಚನ್ನಾಗಿ, ಪ್ರತ್ಯಾಶ್ವಸಿಹಿ - ವಿಶ್ರಮಿಸಿಕೊ. ॥ ೨ ॥ ಸರ್ವಃ - ಸಮಸ್ತರಾದ, ಅಯಂಜನಃ - ಈ ಕಾಡಿನಲ್ಲಿರುವ ಜನವು, (ಅಂದರೆ - ನಾನು,) ಕ್ಲೇಶಾನಾಂ - ಕಷ್ಟಗಳಿಗೆ, ಉಚಿತಃ - ಅರ್ಹರಾದವರು, ತ್ವಂ- ನೀನು, ಸುಖೋಚಿತಃ - ಸುಖಾರ್ಹನು, ವಯಂ-ನಾವು, ಕಾಕುತ್ಸ್ಥಸ್ಯ-ಶ್ರೀರಾಮನ, ಗುಪ್ತ್ಯರ್ಥಂ- ಸಂರಕ್ಷಣಾರ್ಥವಾಗಿ, ನಿಶಾಂ - ರಾತ್ರಿಯಲ್ಲಿ, ಜಾಗರಿಷ್ಯಾಮಃ - ಎಚ್ಚರಗೊಂಡಿರುತ್ತೇವೆ. ॥ ೩ ॥ ರಾಮಾತ್ - ಶ್ರೀರಾಮನಿಗಿಂತಲೂ, ಪ್ರಿಯತಮಃ - ಪ್ರೀತಿಪಾತ್ರನಾದವನು, ಮಮ - ನನಗೆ, ಭುವಿ - ಭೂಮಿಯಲ್ಲಿ, ಕಶ್ಚನ - ಯಾವನೂ, ನಾಸ್ತಿ - ಇಲ್ಲ, ಏತತ್ - ಇದನ್ನು, ಸತ್ಯಂ - ಸತ್ಯವಾಗಿ, ಬ್ರವೀಮಿ - ಹೇಳುತ್ತೇನೆ, ಅಹಂ - ನಾನು, ಸತ್ಯೇನೈವಚ - ಸತ್ಯದಿಂದಲೇ, ತೇ - ನಿನಗೆ,

---

ಅಗ್ರಜನ ಸೇವೆಗೋಸುಗ ಬಹು ವಿಶ್ವಾಸದಿಂದೆಚ್ಚರಗೊಂಡಿರುವ ರಘುವಂಶೋತ್ಪನ್ನನಾದ ಆ ಲಕ್ಷ್ಮಣನನ್ನು ಕುರಿತು, ಗುಹನು ಸಂತಪಿಸುತ್ತ ಈ ಮಾತನ್ನಾಡಿದನು. “ ಓ ತಂದೆಯೆ ! ಬಹು ಮೃದುವಾಗಿರುವ ಈ ಹಾಸಿಗೆಯು ನಿನಗೋಸುಗ ಅಣಿಗೊಳಿಸಲ್ಪಟ್ಟಿರುವುದು. ಇದರ ಮೇಲೆ ಸುಖವಾಗಿ ಮಲಗುವವನಾಗು. ಈ ಕಾಡಿನಲ್ಲಿ ವಾಸಮಾಡುತ್ತಿರುವ ನಾವು ಕಷ್ಟಪಡಲು ಯೋಗ್ಯರಾಗಿದ್ದೇವೆ; ನೀನು ಸುಖಪಡತಕ್ಕವನು. ನಾವಿಬ್ಬರೂ ಶ್ರೀರಾಮ ರಕ್ಷಣಾರ್ಥವಾಗಿ ಎಚ್ಚೆತ್ತಿರೋಣ. ಈ ಭೂಮಂಡಲದಲ್ಲಿ ನನಗೆ ರಾಮನಿಗಿಂತಲೂ ಪ್ರೀತಿಪಾತ್ರನಾದವನಾರೂ ಇರುವುದಿಲ್ಲವು. ಇದು ನಿಜವಾದುದು ;

ಬ್ರವೀಮ್ಯೇ ತದಹಂ ಸತ್ಯಂ ಸತ್ಯೇನೈವಚ ತೇ ಶಪೇ ॥ ೪ ॥ ಅಸ್ಯ ಪ್ರಸಾದಾದಾಶಂಸೇ ಲೋಕೇಽಸ್ಮಿನ್ ಸುಮಹದ್ಯಶಃ ॥ ಧರ್ಮಾವಾಪ್ತಿಂ ಚ ವಿಪುಲಾಮರ್ಥಕಾಮೌ ಚ ಪುಷ್ಕಲೌ ॥ ೫ ॥ ಸೋಽಹಂ ಪ್ರಿಯಸಖಂ ರಾಮಂ ಶಯಾನಂ ಸಹಸೀತಯಾ ॥ ರಕ್ಷಿಷ್ಯಾಮಿ ಧನುಷ್ಪಾಣಿಸ್ಸರ್ವತೋ ಜ್ಞಾತಿಭಿಸ್ಸಹ ॥ ೬ ॥ ನಮೇ ಸ್ತ್ಯವಿದಿತಂ ಕಿಂಚಿದ್ವನೇಽಸ್ಮಿಂಶ್ಚರತಸ್ಸದಾ ॥ ಚತುರಂಗಂಹ್ಯಪಿ ಬಲಂ ಸುಮಹತ್ಪ್ರಸಹೇಮಹಿ ॥ ೭ ॥ ಲಕ್ಷ್ಮಣಸ್ತಂ ತದೋವಾಚ ರಕ್ಷ್ಯಮಾಣಾಸ್ತ್ವಯಾನಘ ॥ ನಾತ್ರ ಭೀತಾ ವಯಂ ಸರ್ವೇ ಧರ್ಮಮೇವಾನುಪಶ್ಯತಾ ॥ ೮ ॥ ಕಥಂ ದಾಶರಥೌ ಭೂಮೌ ಶಯಾನೇ ಸಹಸೀತಯಾ ॥ ಶಕ್ಯಾ ನಿದ್ರಾ

ಶಪೇ - ಪ್ರಮಾಣಮಾಡುತ್ತೇನೆ. ॥ ೪ ॥ ಅಸ್ಯ - ಈ ಶ್ರೀರಾಮನ, ಪ್ರಸಾದಾತ್ - ಕಟಾಕ್ಷದಿಂದ, ಅಸ್ಮಿನ್ಲೋಕೇ - ಈ ಲೋಕದಲ್ಲಿ, ಸುಮಹತ್ - ಮಹತ್ತರವಾದ, ಯಶಃ - ಕೀರ್ತಿಯನ್ನು, ವಿಪುಲಾಂ - ವಿಸ್ತಾರವಾದ, ಧರ್ಮಾವಾಪ್ತಿಂಚ - ಧರ್ಮಪ್ರಾಪ್ತಿಯನ್ನು, ಪುಷ್ಕಲೌ - ಅಧಿಕವಾದ, ಅರ್ಥಕಾಮೌ - ಅರ್ಥಕಾಮಗಳನ್ನು, ಆಶಂಸೇ - ಪ್ರಾರ್ಥಿಸುತ್ತೇನೆ. ॥ ೫ ॥ ಸೋಽಹಂ - ಅಂತಹ ನಾನು, ಪ್ರಿಯಸಖಂ - ಪ್ರಿಯಸ್ನೇಹಿತನಾದ, ಸೀತಯಾಸಹ - ಸೀತಾದೇವಿಯೊಡನೆ, ಶಯಾನಂ - ಮಲಗಿರುವ, ರಾಮಂ - ಶ್ರೀರಾಮನನ್ನು, ಜ್ಞಾತಿಭಿಸ್ಸಹ - ದಾಯಾದಿಗಳಿಂದೊಡಗೂಡಿ, ಧನುಷ್ಪಾಣಿಃ - ಧನುಸ್ಸನ್ನು ಹಿಡಿದವನಾಗಿ, ಸರ್ವತಃ - ಎಲ್ಲ ಕಡೆಯಲ್ಲಿಯೂ, ರಕ್ಷಿಷ್ಯಾಮಿ - ಕಾದುಕೊಂಡಿರುವೆನು. ॥ ೬ ॥ ಅಸ್ಮಿನ್ವನೇ - ಈ ಕಾಡಿನಲ್ಲಿ, ಸದಾ - ನಿರಂತರವು, ಚರತಃ - ತಿರುಗುತ್ತಿರುವ, ಮೇ - ನನಗೆ, ಅವಿದಿತಂ - ತಿಳಿಯದೇ ಇರುವದು, ನಾಸ್ತಿ - ಇಲ್ಲ, ಚತುರಂಗಂ - ನಾಲ್ಕು ಅಂಗಗಳುಳ್ಳ, ಮಹತ್ - ಮಹತ್ತರವಾದ, ಬಲಮಪಿ - ಶತ್ರುಗಳ ಸೈನ್ಯವನ್ನು, ಪ್ರಸಹೇಮಹಿ - ಸಹಿಸುವೆನು. ॥ ೭ ॥ ತದಾ - ಆ ಕಾಲದಲ್ಲಿ, ಲಕ್ಷ್ಮಣಃ - ಲಕ್ಷ್ಮಣನು, ತಂ - ಆ ಗುಹನನ್ನು ಕುರಿತು, ಹೇ ಅನಘ - ಎಲೈ ಪೂಜ್ಯನೇ, ಧರ್ಮಮೇವ-ಧರ್ಮವನ್ನೇ, ಅನುಪಶ್ಯತಾ- ನೋಡುತ್ತಿರುವ, ತ್ವಯಾ - ನಿನ್ನಿಂದ, ರಕ್ಷ್ಯಮಾಣಾಃ - ಸಂರಕ್ಷಿಸಲ್ಪಡುತ್ತಿರುವ, ವಯಂಸರ್ವೇ- ನಾವೆಲ್ಲರೂ, ಅತ್ರ - ಇಲ್ಲಿ, ನಭೀತಾಃ - ಭಯಪಡಲಿಲ್ಲ. ॥ ೮ ॥ ದಾಶರಥೌ - ದಶರಥಪುತ್ರ

ಸತ್ಯವಾಗಿಯೂ ಹೇಳುತ್ತೇನೆ. ಈತನ ಕಟಾಕ್ಷವೀಕ್ಷಣ ಮಾತ್ರದಿಂದಲೇ ನಾನು ಮಹತ್ತರವಾದ ಕೀರ್ತಿಯನ್ನೂ, ಧರ್ಮ ಪ್ರಾಪ್ತಿಯನ್ನೂ, ಅಧಿಕ ತರವಾದ ಅರ್ಥ ಕಾಮಗಳನ್ನೂ ಬಯಸುತ್ತಿರುವೆನು. ॥ ೧-೫ ॥ ಇಂತಹ ನಾನು ಪ್ರಿಯಮಿತ್ರನಾದೀ ಶ್ರೀರಾಮಮೂರ್ತಿಯು ಸೀತಾ ಸಮೇತನಾಗಿ ಮಲಗಿರುವಾಗ, ಬಂಧುಗಳೊಡಗೂಡಿ ಕೋದಂಡಪಾಣಿಯಾಗಿ ಕಾದುಕೊಂಡಿರುತ್ತೇನೆ. ಈ ವನದಲ್ಲಿ ಯಾವಾಗಲೂ ಸಂಚಾರ ಮಾಡುತ್ತಲೇ ಇರುವ ನನಗೆ ಇಲ್ಲಿನ ವಿಷಯಗಳು ತಿಳಿಯದೇ ಇಲ್ಲ. ಚತುರಂಗ ಬಲವುಳ್ಳ ಶತ್ರುಗಳ ಸೇನೆಯನ್ನು ಸಹ ಒತ್ತರಿಸುತ್ತೇವೆ" ಆಗ, ಗುಹನು ನುಡಿದ ಮಾತನ್ನು ಕೇಳಿ ಲಕ್ಷ್ಮಣಸ್ವಾಮಿಯು ಅವನನ್ನು ಕುರಿತು, "ಎಲೈ ಪೂಜ್ಯನೆ! ಧರ್ಮವನ್ನನುಸರಿಸುವ ನಿನ್ನಿಂದ ರಕ್ಷಿತರಾದ ನಾವು ಯಾವುದಕ್ಕೂ ಭಯಪಡಲಿಲ್ಲವು. ದಶರಥ ಪುತ್ರರಾದ ನಾವು ಸೀತಾ

ಮಯಾ ಲಬ್ಧುಂ ಜೀವಿತಂವಾ ಸುಖಾನಿವಾ ॥೯॥ ಯೋ ನ ದೇವಾಸುರೈ ಸ್ಸರ್ವೈಃ ಶಕ್ಯಃ ಪ್ರಸಹಿತುಂ ಯುಧಿ ॥ ತಂ ಪಶ್ಯ ಸುಖ ಸಂಸುಪ್ತಂ ತೃಣೇಷು ಸಹ ಸೀತಯಾ ॥೧೧॥ ಯೋ ಮಂತ್ರತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ॥ ಏಕೋ ದಶರಥಸ್ಯೇಷ್ಟಃ ಪುತ್ರ ಸ್ಸದೃಶಲಕ್ಷಣಃ ॥೧೧॥ ಅಸ್ಮಿನ್ ಪ್ರವ್ರಾಜಿತೇ ರಾಜಾ ನಚಿರಂ ವರ್ತಯಿಷ್ಯತಿ ॥ ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ॥೧೨॥ ವಿನದ್ಯ ಸುಮಹಾನಾದಂ ಶ್ರಮೇಣೋ

ರಾದ ನಾವು, ಸೀತಯಾಸಹ - ಸೀತಾದೇವಿಯೊಡನೆ, ಭೂಮೌ - ನೆಲದಲ್ಲಿ, ಕಥಂಶಯಾನೇ - ಹೇಗೆ ಮಲಗುವದು, ಮಯಾ - ನನ್ನಿಂದ, ನಿದ್ರಾ - ನಿದ್ರೆಯು, ಲಬ್ಧುಂ - ಹೊಂದಲು, ಕಥಂ - ಹೇಗೆ, ಶಕ್ಯಾ - ಸಾಧ್ಯವಾಗುವುದು, ಜೀವಿತಂವಾ - ಬದುಕುವಿಕೆಯೇ ಆಗಲಿ, ಸುಖಾನಿವಾ - ಸುಖಗಳೇ ಆಗಲಿ, (ಕಥಂಶಕ್ಯಾನಿ - ಹೇಗೆ ಸಾಧ್ಯವಾಗುವವು.) ॥೯॥ ಯಃ - ಯಾವ ಶ್ರೀರಾಮನು, ಸರ್ವೈಃ - ಸಮಸ್ತರಾದ, ದೇವಾಸುರೈಃ - ದೇವರಾಕ್ಷಸರಿಂದ, ಯುಧಿ - ಕಾಳಗದಲ್ಲಿ, ಪ್ರಸಹಿತುಂ - ಸೈರಿಸುವದಕ್ಕೆ, ನಶಕ್ಯಃ - ಸಮರ್ಥನಲ್ಲವೋ, ತಂ - ಅಂತಹ ಶ್ರೀರಾಮನನ್ನು, ತೃಣೇಷು - ಹುಲ್ಲುಗಳಲ್ಲಿ, ಸೀತಯಾಸಹ - ಸೀತಾದೇವಿಯೊಡನೆ, ಸುಖಸಂಸುಪ್ತಂ - ಸುಖವಾಗಿ ಮಲಗಿದವನನ್ನಾಗಿ, ಪಶ್ಯ - ನೋಡು. ॥೧೦॥ ಯಃ - ಯಾವ ಶ್ರೀರಾಮನು, ಮಂತ್ರತಪಸಾ, ಮಂತ್ರ-ಗಾಯತ್ರ್ಯಾದಿ ಮಂತ್ರಗಳಿಂದಲೂ, ತಪಸಾ-ಕೃಛ್ರಾದಿ ತಪಗಳಿಂದಲೂ, ವಿವಿಧೈಃ-ನಾನಾವಿಧಗಳಾದ, ಪರಾಕ್ರಮೈಃ, ಪರ - (ಗೋ) ಮಹಾತ್ಮರ, ಆಕ್ರಮೈಃ - ಆಗಮನಗಳಿಂದಲೂ, (ಅಂದರೆ - ಆಶೀರ್ವಾದಗಳಿಂದಲೂ,) ಲಬ್ಧಃ-ಹೊಂದಲ್ಪಟ್ಟನೋ, ಏಷಃ-ಅಂತಹ ಈತನು, ದಶರಥಸ್ಯ - ದಶರಥರಾಯನಿಗೆ, ಇಷ್ಟಃಪುತ್ರಃ - ಪ್ರೀತಿಪಾತ್ರನಾದ ಪುತ್ರನು, ಸದೃಶಲಕ್ಷಣಃ - ಸಮಾಧಾನವಾದ ಲಕ್ಷಣಗಳುಳ್ಳವನು. ॥೧೧॥ ಅಸ್ಮಿನ್ - ಈ ಶ್ರೀರಾಮನು, ಪ್ರವ್ರಾಜಿತೇ - ಹೊರಟುಬರಲು, ರಾಜಾ - ದಶರಥರಾಜನು, ಚಿರಂ - ಬಹುಕಾಲ, ನವರ್ತಯಿಷ್ಯತಿ - ಇರಲಾರನು, ಮೇದಿನೀ - ಭೂಮಿಯು, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ವಿಧವಾ - ನಾಥನಿಲ್ಲದುದು, ಭವಿಷ್ಯತಿ - ಆಗುವದು. ॥೧೨॥ ಸುಮಹಾನಾದಂ - ಮಹಾಧ್ವನಿಯುಳ್ಳಂತೆ, ವಿನದ್ಯ - ಕೂಗಿ, ಶ್ರಮೇಣ - ಆಯಾಸ

ದೇವಿಯೊಡನೆ ನೆಲದ ಮೇಲೆ ಮಲಗುವುದೆಂತು? ನನಗೆ ನಿದ್ರೆಯು ಬರುವುದಿಲ್ಲ; ಹೇಗೆ ತಾನೆ ಜೀವಿಸಲಿ. ಸುಖವು ತಾನೆ ಲಭಿಸುವುದೆಂತು? ಯಾವ ನಮ್ಮಣ್ಣನಾದ ಶ್ರೀರಾಮನು ಸಮಸ್ತರಾದ ದೇವಾಸುರರಿಂದಲೂ ರಣರಂಗದಲ್ಲಿ ಎದುರಿಸಲಾಗಲಾರನೋ, ಅಂತಹನು ಸತೀ ಮಣಿಯಾದ ಸೀತಾದೇವಿಯೊಡಗೂಡಿ ಈ ಹುಲ್ಲಿನ ಮೇಲೆ ಸುಖವಾಗಿ ಮಲಗಿರುವುದನ್ನು ನೋಡಿದೆಯಾ? ॥೬-೧೦॥ ಗಾಯತ್ರಿಯೇ ಮೊದಲಾದ ಮಂತ್ರ ಜಪದಿಂದಲೂ, ಕೃಚ್ಛ ಚಾಂದ್ರಾಯಣಾದಿ ವ್ರತಗಳಿಂದಲೂ ನಾನಾ ವಿಧಗಳಾದ ಹಿರಿಯರ ಆಶೀರ್ವಾದಗಳಿಂದಲೂ ಪಡೆಯಲ್ಪಟ್ಟ ಈ ಶ್ರೀರಾಮನೊಬ್ಬನೇ ನಮ್ಮ ತಂದೆಯಾದ ಮಹಾರಾಜ ದಶರಥನಿಗೆ ಪ್ರೀತಿಪಾತ್ರನಾದ ಮಗನು. ತಂದೆಗೆ ಸಮಾನವಾದ ಲಕ್ಷಣಗಳುಳ್ಳವನು. ಈತನು ಹೊರಟು ಬರಲು ಮಹಾರಾಜನು ಬಹಳ ಕಾಲ ಜೀವದಿಂದಿರಲಾರನು. ಭೂಮಿಯು

ಪರತಾ ಸ್ಸ್ತ್ರಿಯಃ ॥ ನಿರ್ಘೋಷೋಪರತಂ ಚಾತೋ ಮನ್ಯೇ ರಾಜನಿವೇಶನಂ ॥ ೧೩ ॥ ಕೌಸಲ್ಯಾಚೈವ ರಾಜಾಚ ತಥೈವ ಜನನೀ ಮಮ ॥ ನಾಶಂಸೇ ಯದಿ ಜೀವಂತಿ ಸರ್ವೇ ತೇ ಶರ್ವರೀ ಮಿಮಾಂ ॥ ೧೪ ॥ ಜೀವೇದಪಿಹಿ ಮೇ ಮಾತಾ ಶತ್ರುಘ್ನಸ್ಯಾನ್ವವೇಕ್ಷಯಾ ॥ ತದ್ದುಃಖಂ ಯತ್ತು ಕೌಸಲ್ಯಾ ವೀರಸೂ ರ್ವಿನಶಿಷ್ಯತಿ ॥ ೧೫ ॥ ಅನುರಕ್ತ ಜನಾಕೀರ್ಣಾ ಸುಖಾ ಲೋಕ ಪ್ರಿಯಾವಹಾ ॥ ರಾಜವ್ಯಸನ ಸಂಸೃಷ್ಟಾ ಸಾ ಪುರೀ ವಿನಶಿಷ್ಯತಿ ॥ ೧೬ ॥ ಕಥಂ ಪುತ್ರಂ ಮಹಾತ್ಮಾನಂ ಜ್ಯೇಷ್ಠಂ ಸುತಮಪಶ್ಯತಃ ॥ ಶರೀರಂ ಧಾರಯಿ

ದಿಂದ, ಸ್ತ್ರಿಯಃ - ಹೆಂಗಸರು, ಉಪರತಾಃ - ವಿರಾಮವನ್ನು ಹೊಂದಿದವರು, ಭವಿಷ್ಯಂತಿ - ಆಗುವರು, ಅತಃ - ಈ ಕಾರಣದಿಂದ, ರಾಜನಿವೇಶನಂ - ಅರಮನೆಯು, ನಿರ್ಘೋಷೋಪರತಂ - ವಿರಾಮವನ್ನು ಹೊಂದಿದ ಶಬ್ದವುಳ್ಳದು, ಭವಿಷ್ಯತಿ - ಆಗುವದು, ಇತಿ - ಇಂತೆಂದು, ಮನ್ಯೇ - ಎಣಿಸುತ್ತೇನೆ. ॥ ೧೪ ॥ ಕೌಸಲ್ಯಾಚ - ಕೌಸಲ್ಯಾದೇವಿಯೂ, ರಾಜಾಚ - ದಶರಥರಾಜನೂ, ತಥೈವಚ - ಹಾಗೆಯೆ, ಮಮಜನನೀ - ನನ್ನ ತಾಯಿಯೂ, ತೇಸರ್ವೇ - ಅವರೆಲ್ಲರೂ, ಜೀವಂತಿ- ಬದುಕುವರೆಂದು, ನಶಂಸೇ - ಹೇಳಲಾರೆನು, ಯದಿಜೀವಂತಿ - ಬದುಕಿದವರಾದರೆ, ಇಮಾಂ - ಇದನ್ನು, ಶರ್ವರೀಮೇವ - ರಾತ್ರಿಯನ್ನಾಗಿಯೇ, ಆಶಂಸೇ - ಹೇಳುವೆನು. ॥ ೧೪ ॥ ಮೇ ಮಾತಾ - ನನ್ನ ತಾಯಿಯಾದ ಸುಮಿತ್ರಾದೇವಿಯು, ಶತ್ರುಘ್ನಸ್ಯ - ಶತ್ರುಘ್ನನ, ಅನ್ವವೇಕ್ಷಯಾ- ಇಚ್ಛೆಯಿಂದ, ಜೀವೇದಪಿ - ಬದುಕಿಯಾಳು, ವೀರಸೂಃ - ವೀರಪುತ್ರನನ್ನು ಹೆತ್ತ, ಕೌಸಲ್ಯಾ - ಕೌಸಲ್ಯಾದೇವಿಯು, ವಿನಶಿಷ್ಯತೀತಿಯತ್ - ನಾಶವಾಗುವಳೆಂಬುವದುಯಾವುದೋ, ತತ್ - ಅದು, ಮೇ-ನನಗೆ, ದುಃಖಂ - ವ್ಯಸನವು. ॥ ೧೫ ॥ ಅನುರಕ್ತಜನಾಕೀರ್ಣಾ - ಅನುರಾಗವುಳ್ಳ ಜನರಿಂದ ತುಂಬಿರುವ, ಸುಖಾ - ಸುಖಕರವಾದ, ಲೋಕಪ್ರಿಯಾವಹಾ - ಜನರಿಗೆಲ್ಲಾ ಪ್ರೀತಿಯನ್ನುಂಟು ಮಾಡುತ್ತಿರುವ, ಸಾಪುರೀ - ಆ ಅಯೋಧ್ಯಾಪಟ್ಟಣವು, ರಾಜವ್ಯಸನಸಂಸೃಷ್ಟಾ - ಅರಸನ ದುಃಖದಿಂದ ಕೂಡಿ, ವಿನಶಿಷ್ಯತಿ - ನಾಶವಾಗುವದು. ॥ ೧೬ ॥ ಮಹಾತ್ಮಾನಂ - ಮಹಾಮನಸ್ವಿಯಾದ, ಪುತ್ರಂ - ಪುನ್ನಾಮಕನರಕದಿಂದ ಬಿಡುಗಡೆಯನ್ನು ಮಾಡುತ್ತಿರುವ, ಜ್ಯೇಷ್ಠಂಸುತಂ - ಹಿರಿಯ ಮಗನನ್ನು, ಅಪಶ್ಯತಃ - ನೋಡದಿರುವ, ಮಹಾತ್ಮನಃ - ಮಹಾಮನಸ್ವಿಯಾದ, ರಾಜ್ಞಃ -

---

ನಾಥನಿಲ್ಲದುದಾಗುವುದು; ಓ ತಂದೆಯೇ! ಕೇಳು; ಹೆಂಗಸರೆಲ್ಲರೂ ನಾಥನ ವಿರಹ ದುಃಖದಿಂದ ಮಹಾ ಧ್ವನಿಯುಳ್ಳಂತೆ ಅಳುತ್ತ, ಅತ್ಯಾಯಾಸಗೊಂಡು ವಿರಾಮವನ್ನು ಹೊಂದುತ್ತಾರೆ. ಇದರಿಂದ ದಶರಥರಾಯನ ಅರಮನೆಯೆಲ್ಲವೂ ಶಬ್ದ ಶೂನ್ಯವಾದುದಾಗುತ್ತದೆ. ದಶರಥರಾಯನೂ, ರಾಮ ಜನನಿಯಾದ ಕೌಸಲ್ಯಾದೇವಿಯೂ, ನನ್ನ ತಾಯಿಯಾದ ಸುಮಿತ್ರಾದೇವಿಯೂ ಜೀವದಿಂದಿರುತ್ತಾರೆಯೋ, ಇಲ್ಲವೋ ಎಂಬುದನ್ನು ಹೇಳಲಾರೆ. ॥ ೧೧-೧೩ ॥ ಒಂದು ವೇಳೆ ಜೀವದಿಂದುಳಿದರೆ ಈಗ ಒದಗಿರುವ ವ್ಯಸನವನ್ನೊಂದು ರಾತ್ರಿಯೆಂದು ಮಾತ್ರ ಹೇಳುತ್ತೇನೆ. ನನ್ನ ಜನನಿಯಾದ ಸುಮಿತ್ರೆಯು ನನ್ನ ತಮ್ಮನಾದ ಶತ್ರುಘ್ನನನ್ನು ನೋಡಿಕೊಂಡಾದರೂ ಜೀವದಿಂದಿರಬಹುದು. ವೀರ ಪುತ್ರ

ಷ್ಯಂತಿ ಪ್ರಾಣಾ ರಾಜ್ಞೋ ಮಹಾತ್ಮನಃ ॥೧೭॥ ವಿನಷ್ಟೇ ನೃಪತೌ ಪಶ್ಚಾತ್ಕೌಸಲ್ಯಾ ವಿನಶಿಷ್ಯತಿ ॥ ಅನಂತರಂಚ ಮಾತಾಪಿ ಮಮ ನಾಶಮುಪೈಷ್ಯತಿ ॥೧೮॥ ಅತಿಕ್ರಾಂತ ಮತಿಕ್ರಾಂತ ಮನವಾಪ್ಯ ಮನೋರಥಂ ॥ ರಾಜ್ಯೇ ರಾಮಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥೧೯॥ ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇಭ್ಯುಪಸ್ಥಿತೇ ॥ ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಂ ॥೨೦॥ ರಮ್ಯಚತ್ವರ ಸಂಸ್ಥಾನಾಂ ಸುವಿಭಕ್ತ

ದಶರಥರಾಜನ, ಪ್ರಾಣಾಃ - ಪ್ರಾಣಗಳು, ಶರೀರಂ - ದೇಹವನ್ನು, ಕಥಂಧರಿಷ್ಯಂತಿ - ಹೇಗೆ ಧರಿಸುತ್ತವೆ. ॥೧೭॥ ನೃಪತೌ - ರಾಜನು, ವಿನಷ್ಟೇಸತಿ - ಮೃತಿಯನ್ನು ಹೊಂದಿದವನಾಗಲು, ಪಶ್ಚಾತ್ - ಅನಂತರದಲ್ಲಿ, ಕೌಸಲ್ಯಾ - ಕೌಸಲ್ಯಾದೇವಿಯು, ವಿನಶಿಷ್ಯತಿ - ನಶಿಸಿಹೋಗುವಳು, ಅನಂತರಂಚ - ಆ ಬಳಿಕ, ಮಮಮಾತಾಪಿ - ನನ್ನ ತಾಯಿಯೂ, ವಿನಾಶಂ - ನಾಶವನ್ನು, ಉಪೈಷ್ಯತಿ - ಹೊಂದುವಳು. ॥೧೮॥ ಮೇಪಿತಾ - ನನ್ನ ತಂದೆಯು, ರಾಜ್ಯೇ - ರಾಜ್ಯದಲ್ಲಿ, ರಾಮಂ - ಪುನಹ ಊರಿಗೆ ಬಂದ ಶ್ರೀರಾಮನನ್ನು, ಅನಿಕ್ಷಿಪ್ಯ - ಇರಿಸದೆ, ಮನೋರಥಂ - ಇಷ್ಟವನ್ನು, ಅನವಾಪ್ಯ - ಹೊಂದದೆ, ವಿನಶಿಷ್ಯತಿ - ನಾಶವಾಗುವನು, ಅತಿಕ್ರಾಂತಮತಿಕ್ರಾಂತಂ - ಕಳೆದುಹೋಯಿತು ಕಳೆದುಹೋಯಿತು. ॥೧೯॥ ತಸ್ಮಿನ್ಕಾಲೇ - ಆ ಅವಸಾನಕಾಲವು, ಅಭ್ಯುಪಸ್ಥಿತೇಸತಿ - ಪ್ರಾಪ್ತವಾಗಲು, ವೃತಂ - ಮೃತನಾದ, ಭೂಮಿಪಂ - ರಾಜನಾದ, ಪಿತರಂ - ತಂದೆಯನ್ನು ಕುರಿತು, ಸರ್ವೇಷು - ಸಮಸ್ತವಾದ, ಪ್ರೇತಕಾರ್ಯೇಷು - ಪ್ರೇತಕೃತ್ಯಗಳ ವಿಷಯದಲ್ಲಿ, ಯೇ - ಯಾರು, ಸಂಸ್ಕರಿಷ್ಯಂತಿ - ಸಂಸ್ಕಾರವನ್ನು ಮಾಡುವರೋ, ತೇ - ಅವರು, ಸಿದ್ಧಾರ್ಥಾಃ - ಭಾಗ್ಯವಂತರು. ॥೨೦॥ ರಮ್ಯಚತ್ವರಸಂಸ್ಥಾನಾಂ, ರಮ್ಯ - ಮನೋಹರವಾದ,

ನನ್ನ ಹೆತ್ತು ಆತನು ವನಕ್ಕೆ ಹೋಗುವುದನ್ನು ಸಹಿಸಲಾರದೆ ಕೌಸಲ್ಯಾದೇವಿಯು ಜೀವದಿಂದುಳಿಯಲಾರಳಲ್ಲ! ಎಂಬುದೇ ನನ್ನ ಚಿಂತೆಯು. ಅನುರಾಗ ಪೂರ್ಣರಾದ ಜನರಿಂದ ತುಂಬಿರುವ, ಸುಖಕರವೂ ಜನರಿಗೆ ಸಂತೋಷವನ್ನುಂಟುಮಾಡುವುದೂ ಆದ, ಅಯೋಧ್ಯಾ ಪಟ್ಟಣವು ಅರಸನ ದುಃಖದಿಂದ ಕೂಡಿದುದಾಗಿ ನಾಶವೈದುವುದು. ಮಹಾ ಮನಸ್ವಿಯಾದವನೂ, ಪುನ್ನಾಮಕ ನರಕದಿಂದುದ್ಧಾರ ಮಾಡುವವನೂ, ಜ್ಯೇಷ್ಠ ಪುತ್ರನೂ ಆದ ಶ್ರೀರಾಮನನ್ನು ಕಾಣದೆ ಮಹಾರಾಜನ ಪ್ರಾಣಗಳು ಶರೀರವನ್ನು ಹೇಗೆತಾನೆ ಹೊತ್ತುಕೊಂಡಿರುತ್ತವೆ? ರಾಜನು ಮರಣವನ್ನು ಹೊಂದಿದರೆ, ಕೌಸಲ್ಯಾದೇವಿಯು ಉಳಿಯುವುದಿಲ್ಲ. ತಕ್ಷಣದಲ್ಲಿಯೇ ನಮ್ಮ ತಾಯಿಯಾದ ಸುಮಿತ್ರಾದೇವಿಯೂ ನಾಶವನ್ನು ಹೊಂದುತ್ತಾಳೆ. ನಮ್ಮ ತಂದೆಯು ರಾಜ್ಯದಲ್ಲಿ ಶ್ರೀರಾಮನನ್ನು ರಾಜ್ಯಾಧಿಕಾರಿಯನ್ನಾಗಿಡದೆ, ತನ್ನಾಶೆಯನ್ನು ನೆರವೇರಿಸಿಕೊಳ್ಳದೆ ಮೃತನಾಗುತ್ತಾನೆ. ಆಗುವುದೆಲ್ಲ ಆಗಿಹೋಯಿತು. ನಮ್ಮ ತಂದೆಗೆ ಅವಸಾನ ಕಾಲವು ಪ್ರಾಪ್ತವಾಗಲು, ಮೃತನಾದ ಆತನ ಸಮಸ್ತ ಪ್ರೇತ ಕೃತ್ಯಗಳನ್ನು ಮಾಡುವವರೇ ಪುಣ್ಯವಂತರು. ॥೧೬-೨೦॥ ಮನೋಹರವಾದ ಅಂಶಗಳ

ಮಹಾಪಥಾಂ ॥ ಹರ್ಮ್ಯಪ್ರಾಸಾದ ಸಂಪನ್ನಾಂ ಗಣಿಕಾವರ ಶೋಭಿತಾಂ॥೨೧॥ ರಥಾಶ್ವ ಗಜಸಂಬಾಧಾಂ ತೂರ್ಯನಾದ ನಿನಾದಿತಾಂ ॥ ಸರ್ವ ಕಲ್ಯಾಣ ಸಂಪೂರ್ಣಾಂ ಹೃಷ್ಟಪುಷ್ಟ ಜನಾಕುಲಾಂ ॥ ೨೨ ॥ ಆರಾಮೋದ್ಯಾನ ಸಂಪನ್ನಾಂ ಸಮಾಜೋತ್ಸವ ಶಾಲಿನೀಂ ॥ ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ ॥ ೨೩ ॥ ಅಪಿ ಜೀವೇದ್ದಶರಥೋ ವನವಾಸಾ ತ್ಪುನರ್ವಯಂ ॥ ಪ್ರತ್ಯಾಗಮ್ಯ ಮಹಾತ್ಮಾನ ಮಪಿ ಪಶ್ಯೇಮ ಸುವ್ರತಂ ॥ ೨೪ ॥ ಅಪಿ ಸತ್ಯ ಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಂ ॥ ನಿವೃತ್ತೇ ವನವಾಸೇಸ್ಮಿ

ಚತ್ವರ - ಅಂಗಣಗಳ, ಸಂಸ್ಥಾನಾಂ - ಕಟ್ಟುವಿಕೆಗಳುಳ್ಳ, ಸುವಿಭಕ್ತಮಹಾಪಥಾಂ - ಚನ್ನಾಗಿ ವಿಭಾಗಿಸಲ್ಪಟ್ಟ ರಾಜಬೀದಿಗಳುಳ್ಳ, ಹರ್ಮ್ಯಪ್ರಾಸಾದಸಂಪನ್ನಾಂ, ಹರ್ಮ್ಯ - ಸಾಹುಕಾರರ ಮನೆಗಳಿಂದಲೂ, ಪ್ರಾಸಾದ - ಅರಮನೆಗಳಿಂದಲೂ, ಸಂಪನ್ನಾಂ ಕೂಡಿರುವ, ಗಣಿಕಾವರಶೋಭಿತಾಂ ಉತ್ತಮ ವೇಶ್ಯಾಸ್ತ್ರೀಯರಿಂದ ಕಂಗೊಳಿಸುತ್ತಿರುವ, ರಥಾಶ್ವಗಜಸಂಬಾಧಾಂ - ರಥಗಳಿಂದಲೂ, ಕುದುರೆಗಳಿಂದಲೂ, ಆನೆಗಳಿಂದಲೂ ತುಂಬಿರುವ, ಹೃಷ್ಟಪುಷ್ಟಜನಾಕುಲಾಂ, ಹೃಷ್ಟ - ಸಂತೋಷಚಿತ್ತರಾದ, ಪುಷ್ಟ - ಚನ್ನಾಗಿ ಪೋಷಿಸಲ್ಪಟ್ಟ, ಜನ - ಜನಗಳಿಂದ, ಆಕುಲಾಂ - ವ್ಯಾಪ್ತವಾದ, ಆರಾಮೋದ್ಯಾನಸಂಪನ್ನಾಂ, ಆರಾಮ - ಫಲವೃಕ್ಷಗಳಿಂದ ನಿಬಿಡಿತವಾದ ತೋಟಗಳಿಂದ ತುಂಬಿದ, ಉದ್ಯಾನ - ಹೂವಿನತೋಟಗಳಿಂದಲೂ, ಸಂಪನ್ನಾಂ - ಕೂಡಿರುವ. ಸಮಾಜೋತ್ಸವಶಾಲಿನೀಂ, ಸಮಾಜೋತ್ಸವ - ಉತ್ಸವ ಸಮೂಹಗಳಿಂದ, ಶಾಲಿನೀಂ - ಒಪ್ಪುತ್ತಿರುವ, ಮಮಪಿತುಃ - ನನ್ನ ತಂದೆಯ, ರಾಜಧಾನೀಂ - ಪ್ರಧಾನಪಟ್ಟಣದಲ್ಲಿ, ಭರತಾದಯಃ - ಭರತನೇಮೊದಲಾದವರು, ಸುಖಿತಾಃ - ಸುಖವಂತರಾಗಿ, ವಿಚರಿಷ್ಯಂತಿ - ಸಂಚಾರಮಾಡುವರು. ॥ ೨೧-೨೩ ॥ ದಶರಥಃ - ದಶರಥರಾಜನು, ಜೀವೇದಪಿ - ಬದುಕಿದ್ದವನಾದರೆ, ವಯಂ - ನಾವು, ವನವಾಸಾತ್ - ಅರಣ್ಯವಾಸದಿಂದ, ಪ್ರತ್ಯಾಗಮ್ಯ - ಹಿಂತಿರುಗಿಬಂದು, ಸುವ್ರತಂ - ಮಹಾನಿಯಮವುಳ್ಳ, ಮಹಾತ್ಮಾನಮಪಿ - ಮಹಾಮನಸ್ಸುಳ್ಳ ದಶರಥನನ್ನೂ ಕೂಡ, ಪುನಃ - ಮತ್ತು, ಪಶ್ಯೇಮ - ನೋಡೋಣ. ॥ ೨೪ ॥ ಸತ್ಯಪ್ರತಿಜ್ಞೇನ - ಸಫಲವಾದ ಪ್ರತಿಜ್ಞೆಯುಳ್ಳ, ಅಸ್ಮಿನ್ವನವಾಸೇ - ಈ ಅರಣ್ಯವಾಸವು, ನಿವೃತ್ತೇಸತಿ - ನೆರವೇರಿಸಲ್ಪಟ್ಟದಾಗಲು, ಕುಶಲಿನಾ - ಕ್ಷೇಮವಂತನಾದ, ಸತ್ಯಪ್ರತಿಜ್ಞೇನ

ಕಟ್ಟಡಗಳುಳ್ಳದಾಗಿಯೂ, ಗಜಗಳಿಂದ ತುಂಬಿರುದಾಗಿ, ತುತೂರಿಗಳ ಧ್ವನಿಗಳಿಂದ ಶಬ್ದಾಯಮಾನವಾದುದಾಗಿಯೂ, ಸಮಸ್ತ ಶುಭ ಲಕ್ಷಣಗಳಿಂದ ತುಂಬಿರುವುದಾಗಿಯೂ, ಸಂತಸ ಸ್ವಾಂತರಾದವರೂ, ಚೆನ್ನಾಗಿ ಪೋಷಿಸಲ್ಪಟ್ಟವರಾಗಿಯೂ ಇರುವ ಜನಗಳಿಂದ ವ್ಯಾಪ್ತವಾದುದಾಗಿಯೂ, ಫಲ ವೃಕ್ಷಗಳಿಂದ ನಿಬಿಡೀಕೃತವಾದ ತೋಟಗಳಿಂದಲೂ ಹೂತೋಟಗಳಿಂದಲೂ ಕೂಡಿರುವುದಾಗಿಯೂ, ಉತ್ಸವ ತಂಡಗಳಿಂದ ರಾರಾಜಿಸುತ್ತಿರುವುದಾಗಿಯೂ ಇರುವ ದಶರಥರಾಜನ ರಾಜಧಾನಿಯಾದ ಅಯೋಧ್ಯಾಪಟ್ಟಣದಲ್ಲಿ, ಭರತನೇ ಮೊದಲಾದವರೆಲ್ಲರೂ ಮಹಾ ದುಃಖಿತರಾಗಿ ಸಂಚರಿಸುತ್ತಾರೆ. ಮಹಾರಾಜನು ಜೀವಿಸಿದ್ದರೆ, ನಾವು ಅರಣ್ಯದಿಂದ ಹಿಂತಿರುಗಿ ಊರಿಗೆ ಹೋಗಿ ಮಹಾ ವ್ರತಪರಾಯಣನಾದ

ನ್ನಯೋಧ್ಯಾಂ ಪ್ರವಿಶೇಮಹಿ ॥ ೨೫ ॥ ಪರಿದೇವಯಮಾನಸ್ಯ ದುಃಖಾರ್ತಸ್ಯ ಮಹಾತ್ಮನಃ ॥ ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥೨೬॥

ತಥಾಹಿ ಸತ್ಯಂ ಬ್ರುವತಿ ಪ್ರಜಾಹಿತೇ
ನರೇಂದ್ರ ಪುತ್ರೇ ಗುರು ಸೌಹೃದಾ ದ್ಗುಹಃ ॥
ಮುಮೋಚ ಬಾಷ್ಪಂ ವ್ಯಸನಾಭಿಪೀಡಿತೋ
ಜ್ವರಾತುರೋ ನಾಗಇವ ವ್ಯಥಾತುರಃ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಪಂಚಾಶಸ್ಸರ್ಗಃ.

ಸಾರ್ಧಂ - ಸಫಲವಾದ ಪ್ರತಿಜ್ಞೆಯುಳ್ಳ ಶ್ರೀರಾಮನ ಸಂಗಡ, ವಯಂ - ನಾವು, ಅಪಿಪ್ರವಿಶೇಮಹಿ- ಪ್ರವೇಶಿಸುವೆವೇ ? ॥ ೨೫ ॥ ದುಃಖಾರ್ತಸ್ಯ - ಶೋಕದಿಂದಪೀಡಿತನಾದ ಕಾರಣ, ಪರಿದೇವಯಮಾನಸ್ಯ - ಪ್ರಲಾಪವನಾಡುತ್ತಿರುವ, ಮಹಾತ್ಮನಃ - ಮಹಾಮನಸ್ವಿಯಾದ, ರಾಜಪುತ್ರಸ್ಯ - ಲಕ್ಷ್ಮಣನೂ, ತಿಷ್ಠತಸ್ಸತಃ - ಎದ್ದಿರುವಾಗಲೇ, ಸಾಶರ್ವರೀ - ಆ ರಾತ್ರಿಯು, ಅತ್ಯವರ್ತತ - ಕಳೆದುಹೋಯಿತು. ॥ ೨೬ ॥ ಪ್ರಜಾಹಿತೇ - ಪ್ರಜೆಗಳಿಗೆಲ್ಲಾ ಹಿತಕರನಾದ, ನರೇಂದ್ರಪುತ್ರೇ - ರಾಜಕುಮಾರನಾದ ಲಕ್ಷ್ಮಣನು, ಗುರುಸೌಹೃದಾ, ಗುರು-(ಗೋ)ಗುರುವಾದ ಶ್ರೀರಾಮನಲ್ಲಿ, ಸೌಹೃದಾತ್ - ಸ್ನೇಹದಿಂದ, ತಥಾ - ಹಾಗೆ, ಸತ್ಯಂ - ಯಥಾರ್ಥವಾಗಿ, ಬ್ರುವತಿ - ಹೇಳಲು, ಗುಹಃ - ಗುಹನು, ಸ್ನೇಹದಿಂದ, ವ್ಯಸನಾಭಿಪೀಡಿತಃ - ವ್ಯಸನದಿಂದ ಬಾಧಿತನಾದ ಕಾರಣ, ಜ್ವರಾತುರಃ - ಸಂಕಟದಿಂದ ಪೀಡಿತವಾದ, ನಾಗಇವ - ಆನೆಯಂತೆ, ಬಾಷ್ಪಂ - ಕಂಬನಿಯನ್ನು, ಮುಮೋಚ - ಬಿಟ್ಟನು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಪಂಚಾಶಸ್ಸರ್ಗಃ.

ಆತನನ್ನು ಕಾಣುವೆವು. ಸಫಲವಾದ ಪ್ರತಿಜ್ಞೆಯುಳ್ಳ ಈ ವನವಾಸವು ತೀರಲು, ಕ್ಷೇಮವಂತನಾಗಿ, ಪ್ರತಿಜ್ಞೆಯನ್ನು ಪಾಲಿಸಿದ ಶ್ರೀರಾಮನೊಡನೆ ನಾವು ಪಟ್ಟಣ ಪ್ರವೇಶ ಮಾಡುವುವೆ?" ಎಂದು ಹೇಳಿದನು. ಶೋಕದಿಂದ ಪೀಡಿತನಾಗಿ ಸಂತಪಿಸುತ್ತಿರುವ ಮಹಾತ್ಮನೂ, ರಾಜಪುತ್ರನೂ ಆದ ಲಕ್ಷ್ಮಣನಿರೀತಿ ಎಚ್ಚೆತ್ತು ಮಾತನಾಡುತ್ತಿರುವಾಗಲೆ ಆ ರಾತ್ರಿಯು ಕಳೆದು ಪ್ರಾತಃಕಾಲವಾಯಿತು. ಸಮಸ್ತ ಜನಗಳಿಗೂ ಪ್ರಿಯಕರನಾದ ಆ ಲಕ್ಷ್ಮಣಸ್ವಾಮಿಯು ಅಣ್ಣನಾದ ಶ್ರೀರಾಮನಲ್ಲಿ ಸ್ನೇಹದಿಂದ ಯಥಾರ್ಥವಾದ ವಿಷಯಗಳನ್ನು ಕುರಿತು ಆ ರೀತಿ ಹೇಳುತ್ತಿರಲು, ಗುಹನು ಗುರುವಾದ ಶ್ರೀರಾಮಮೂರ್ತಿಯಲ್ಲಿನ ವಿಶ್ವಾಸದಿಂದ ಪೀಡಿತನಾಗಿ ಜ್ವರಾತುರನಾಗಿ ಸಂಕಟದಿಂದ ಪೀಡಿಸಲ್ಪಟ್ಟ ಗಜಶ್ರೇಷ್ಠದಂತೆ ಕಂಬನಿಗಳನ್ನು ಬಿಟ್ಟನು. ॥ ೨೦-೨೭ ॥

ಇಂತಿದು ಲಕ್ಷ್ಮಣೋಕ್ತ ಅಯೋಧ್ಯಾಪಟ್ಟಣದ ಭವಿಷ್ಯದ್ವೃತ್ತಾಂತ ಕಥಾಕಥನವೆಂಬ ಐವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿಪಂಚಾಶಸ್ಸರ್ಗಃ.

ಪ್ರಭಾತಾಯಾಂತು ಶರ್ವರ್ಯಾಂ ಪೃಥುವಕ್ಷಾ ಮಹಾಯಶಾಃ ॥ ಉವಾಚ ರಾಮ ಸ್ಸೌಮಿತ್ರಿಂ ಲಕ್ಷ್ಮಣಂ ಶುಭಲಕ್ಷಣಂ ॥ ೧ ॥ ಭಾಸ್ಕರೋದಯ ಕಾಲೋಽಯಂ ಗತಾ ಭಗವತೀ ನಿಶಾ ॥ ಅಸೌತು ಕೃಷ್ಣೋ ವಿಹಗಃ ಕೋಕಿಲ ಸ್ತಾತ ಕೂಜತಿ ॥ ಬರ್ಹಿಣಾನಾಂಚ ನಿರ್ಘೋಷಃ ಶ್ರೂಯತೇ ನದತಾಂ ವನೇ ॥ ತರಾಮ ಜಾಹ್ನವೀಂ ಸೌಮ್ಯ ಶೀಘ್ರಗಾಂ ಸಾಗರಂಗಮಾಂ ॥ ೨ ॥ ವಿಜ್ಞಾಯ ರಾಮಸ್ಯ ವಚಸ್ಸೌಮಿತ್ರಿ ರ್ಮಿತ್ರನಂದನಃ ॥ ಗುಹಮಾ

ಶರ್ವರ್ಯಾಂತು - ರಾತ್ರಿಯಾದರೆ, ಪ್ರಭಾತಾಯಾಂ - ಬೆಳಗಾಗಲು, ಪೃಥುವಕ್ಷಾಃ - ವಿಸ್ತಾರವಾದ ಎದೆಯುಳ್ಳ, ಮಹಾಯಶಾಃ - ಮಹಾಕೀರ್ತಿವಂತನಾದ, ರಾಮಃ - ಶ್ರೀರಾಮನು, ಸೌಮಿತ್ರಿಂ - ಸುಮಿತ್ರಾಪುತ್ರನಾದ, ಶುಭಲಕ್ಷಣಂ - ಶುಭಕರವಾದ ಲಕ್ಷಣಗಳುಳ್ಳ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಹೇ ತಾತ - ಎಲೈ ತಂದೆಯೇ, ಅಯಂ - ಇದು, ಭಾಸ್ಕರೋದಯಕಾಲಃ - ಸೂರ್ಯನುದಯಿಸುವ ಕಾಲವು, ಕೃಷ್ಣಃ - ಕಪ್ಪಾಗಿರುವ, ಅಸೌಕೋಕಿಲಃ - ಈ ಕೋಗಿಲೆಯೆಂಬ, ವಿಹಗಃ - ಹಕ್ಕಿಯು, ಕೂಜತಿ - ಕೂಗುತ್ತದೆ, ವನೇ - ಅರಣ್ಯದಲ್ಲಿ, ನದತಾಂ - ಧ್ವನಿಗೊಂಡಿರುವ, ಬರ್ಹಿಣಾನಾಂ - ನವಿಲುಗಳ, ನಿರ್ಘೋಷಶ್ಚ - ಶಬ್ದವೂ, ಶ್ರೂಯತೇ - ಕೇಳಲ್ಪಡುತ್ತದೆ, ಹೇ ಸೌಮ್ಯ - ಎಲೈ ಕೋಪರಹಿತನೇ, ಸಾಗರಂಗಮಾಂ - ಸಮುದ್ರವನ್ನು ಕುರಿತು ಸ್ವತಂತ್ರವಾಗಿ ಸರಿಯುತ್ತಿರುವ, ಶೀಘ್ರಗಾಂ - ತ್ವರಿತಗಾಮಿನಿಯಾದ, ಜಾಹ್ನವೀಂ-ಗಂಗಾನದಿಯನ್ನು, ತರಾಮ-ದಾಟೋಣ, ಇತಿ - ಇಂತೆದು, ಉವಾಚ - ನುಡಿದನು. ॥ ೧-೨ ॥ ಮಿತ್ರನಂದನಃ - ಸ್ನೇಹಿತರನ್ನು ಸಂತೋಷಗೊಳಿಸುತ್ತಿರುವ, ಸಸೌಮಿತ್ರಿಃ - ಆ ಲಕ್ಷ್ಮಣನು, ರಾಮಸ್ಯ - ಶ್ರೀರಾಮನ, ವಚಃ - ಮಾತನ್ನು, ವಿಜ್ಞಾಯ - ತಿಳಿದು, ಗುಹಂ - ಗುಹನನ್ನೂ, ಸೂತಂಚ - ಸಾರಥಿಯಾದ ಸುಮಂತ್ರನನ್ನೂ, ಆಮಂತ್ರ್ಯ - ಕರೆದು, ಭ್ರಾತುಃ - ಅಣ್ಣನ, ಅಗ್ರತಃ - ಮುಂಗಡೆ, ಅತಿಷ್ಠತ್-

---

ಈ ಪ್ರಕಾರವಾಗಿ ರಾತ್ರಿಯು ಕಳೆದು ಬೆಳಗಾಗಲು, ವಿಶಾಲ ವಕ್ಷಸ್ಕನೂ, ಮಹಾ ಕೀರ್ತಿವಂತನೂ ಆದ ಶ್ರೀರಾಮನು, ಸುಮಿತ್ರಾ ಪುತ್ರನೂ, ಶುಭ ಲಕ್ಷಣಲಕ್ಷಿತನೂ, ಆದ ಲಕ್ಷ್ಮಣಸ್ವಾಮಿಯನ್ನು ಕುರಿತು, "ಎಲೈ ಸೌಮಿತ್ರಿಯೆ! ಇದೋ! ಭಗವಾನ್ ಸೂರ್ಯ ದೇವನು ಮೂಡುವ ಕಾಲ ಒದಗಿರುವುದು. ಕೃಷ್ಣ ಕೋಗಿಲೆಯು ಮನೋಹರವಾದ "ಕು ಹೂ" ನಾದವನ್ನು ಮಾಡುತ್ತಿರುವುದು. ಈ ಅರಣ್ಯದಲ್ಲಿ ಸಂತಸವಾಂತು ಕುಣಿಕುಣಿದಾಡುವ ಮಯೂರಗಳ ಕೇಕಾರವವು ಕೇಳಿಬರುತ್ತಲಿರುವುದು. ಈಗಲೇ ನಾವೀ ಸಮುದ್ರಗಾಮಿನಿಯಾದ ಗಂಗಾ ನದಿಯನ್ನು ದಾಂಟುವ!" ಎಂದು ಹೇಳಿದನು. ಅಣ್ಣಾ ದೇವ ನಿಂತೆನಲು, ಮಿತ್ರರನ್ನಾನಂದಗೊಳಿಸುವ ಆ ಲಕ್ಷ್ಮಣನು ಸಾರಥಿಯಾದ ಸುಮಂತ್ರನನ್ನೂ,

ಮಂತ್ರ್ಯ ಸೂತಂಚ ಸೋತಿಷ್ಠ ದ್ಭ್ರಾತುರಗ್ರತಃ ॥ ೪ ॥ ಸತು ರಾಮಸ್ಯ ವಚನಂ ನಿಶಮ್ಯ ಪ್ರತಿಗೃಹ್ಯಚ ॥ ಸ್ಥಪತಿ ಸ್ತೂರ್ಣಮಾಹೂಯ ಸಚಿವಾ ನಿದ ಮಬ್ರವೀತ್ ॥ ೫ ॥ ಅಸ್ಯ ವಾಹನ ಸಂಯುಕ್ತಾಂ ಕರ್ಣಗ್ರಾಹವತೀಂ ಶುಭಾಂ ॥ ಸುಪ್ರತಾರಾಂ ದೃಢಾಂ ತೀರ್ಥೇ ಶೀಘ್ರಂ ನಾವ ಮುಪಾಹರ ॥೬॥ ತಂ ನಿಶಮ್ಯ ಮಹಾದೇಶಂ ಗುಹಾಮಾತ್ಯ ಗಣೋಮಹಾನ್ ॥ ಉಪೋಹ ರುಚಿರಾಂ ನಾವಂ ಗುಹಾಯ ಪ್ರತ್ಯವೇದಯತ್ ॥ ೭ ॥ ತತ ಸ್ಸಪ್ರಾಂಜಲಿ ರ್ಭೂತ್ವಾ ಗುಹೋ ರಾಘವ ಮಬ್ರವೀತ್ ॥ ಉಪಸ್ಥಿತೇಯಂ ನೌ ರ್ದೇವ ಭೂಯಃ ಕಿಂ ಕರವಾಣಿತೇ ॥ ೮ ॥ ತತಾಮರ ಸುತಪ್ರಖ್ಯ ತರ್ತುಂ ಸಾಗರ

ನಿಂತನು, ಸಸ್ಥಪತಿಸ್ತು - ಆ ಗುಹನಾದರೆ, ರಾಮಸ್ಯ - ಶ್ರೀರಾಮನ, ವಚನಂ - ಮಾತನ್ನು, ನಿಶಮ್ಯ - ಕೇಳಿ, ಪ್ರತಿಗೃಹ್ಯಚ - ಅಭಿಪ್ರಾಯವನ್ನೂ ತಿಳದುಕೊಂಡು, ತೂರ್ಣಂ - ಜಾಗ್ರತೆಯಾಗಿ, ಸಚಿವಾನ್ - ಮಂತ್ರಿಗಳನ್ನು, ಆಹೂಯ - ಕರೆದು, ಆಸ್ಯವಾಹನಸಂಯುಕ್ತಾಂ, ಅಸ್ಯವಾಹನ - ಹಡಗು ನಡೆಯಿಸುವ ಗಡೆಯಿಂದ, ಸಂಯುಕ್ತಾಂ ಕೂಡಿಕೊಂಡಿರುವ, (ಗೋ) ಅಸ್ಯ-ಆ ಶ್ರೀರಾಮನಿಗೆ, ವಾಹನಸಂಯುಕ್ತಾಂ - ತೀರವನ್ನು ಹೊಂದಿಸುವದಕ್ಕೆ ಅರ್ಹವಾದ ಗಡೆ ಮುಂತಾದವುಗಳಿಂದ ಕೂಡಿರುವ, ಕರ್ಣಗ್ರಾಹವತೀಂ - ಹಡಗು ನಡೆಸುವವರಲ್ಲಿ, ಸುಪ್ರತಾರಾಂ - ಚನ್ನಾಗಿ ದಾಟುವದಕ್ಕೆ ಸಮರ್ಥವಾದ, ದೃಢಾಂ - ಚನ್ನಾಗಿ ಕಟ್ಟಿರುವ, ಶುಭಾಂ - ಶುಭಕರವಾದ, ನಾವಂ - ಹಡಗನ್ನು, ತೀರ್ಥೇ - ಇಳಿಯುವ ಮಾರ್ಗದಲ್ಲಿ, ಉಪಾಹರ - ತೆಗದುಕೊಂಡುಬಾ, ಇತಿ - ಇಂತೆಂದು, ಸಚಿವಗಣಂ - ಮಂತ್ರಿಸಮೂಹವನ್ನು ಕುರಿತು, ಅಬ್ರವೀತ್ - ನುಡಿದನು ॥ ೪-೬ ॥ ಮಹಾನ್ - ಮಹತ್ತರವಾದ, ಗುಹಾಮಾತ್ಯಗಣಃ - ಗುಹನ ಮಂತ್ರಿಗಳ ಸಮೂಹವು, ತಂಮಹಾದೇಶಂ - ಆ ಮಹನೀಯನ ಆಜ್ಞೆಯನ್ನು, ನಿಶಮ್ಯ-ಕೇಳಿ, ರುಚಿರಾಂ - ಮನೋಹರವಾದ, ನಾವಂ-ಹಡುಗನ್ನು, ಉಪೋಹ್ಯ - ಸಮೀಪಕ್ಕೆ ತೆಗದುಕೊಂಡು ಬಂದು, ಗುಹಾಯ - ಗುಹನಿಗೆ, ಪ್ರತ್ಯವೇದಯತ್- ಬಿನ್ನವಿಸಿತು. ॥ ೭ ॥ ತತಃ - ಬಳಿಕ, ಸಗುಹಃ - ಆ ಗುಹನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ರಾಘವಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು, ಇಯಂನೌಃ - ಈ ನಾವೆಯು, ಉಪಸ್ಥಿತಾ - ಬಂದಿದೆ, ಹೇ ದೇವ - ಎಲೈ ಸ್ವಾಮಿಯೇ, ತೇ - ನಿನಗೆ, ಭೂಯಃ - ಮತ್ತು, ಕಿಂಕರವಾಣಿ - ಏನುಮಾಡಲಿ? ॥ ೮ ॥ ಹೇ ಅಮರಸುತಪ್ರಖ್ಯ - ಎಲೈ ದೇವತಾ

ಮಿತ್ರ ಶ್ರೇಷ್ಠನಾದ ಗುಹನನ್ನೂ ಕರೆದು ಅಗ್ರಜನ ಮುಂಗಡೆ ನಿಂತವನಾದನು. ಆಗಲಾ ಗುಹನು ಶ್ರೀರಾಮನಾಡಿದ ಮಾತನ್ನು ಕೇಳಿ ಅಭಿಪ್ರಾಯವನ್ನರಿತು, ಬೇಗನೆ ತನ್ನ ಮಂತ್ರಿಗಳನ್ನು ಕರೆದು, “ಶ್ರೀರಾಮಮೂರ್ತಿಯನ್ನು ಆಚಿನ ದಡಕ್ಕೆ ಕರೆದುಕೊಂಡು ಹೋಗಲು ಸಾಮರ್ಥ್ಯವುಳ್ಳದೂ, ಮಂಗಳಕರವಾದುದೂ ಆದ ನಾವೆಯನ್ನು ಇಳಿಯುವ ನದೀ ಮಾರ್ಗಕ್ಕೆ ತೆಗೆದುಕೊಂಡು ಬರುವವರಾಗಿರಿ” ಎಂದು ಆಜ್ಞಾಪಿಸಿದನು. ॥ ೧-೬ ॥ ಆ ಸಮಯದಲ್ಲಿ ಆ ಮಂತ್ರಿತಳೆಲ್ಲರೂ ತಮ್ಮ ಸ್ವಾಮಿಯಾದ ಗುಹನಾಣತಿಯನ್ನು ಕೇಳಿ ಮನೋಹರವಾದ ನಾವೆಯೊಂದನ್ನು ಸಜ್ಜಗೊಳಿಸಿ ಆ ವಿಷಯವನ್ನು ಗುಹನಿಗೆ ಬಿನ್ನವಿಸಿ

ಗಾಂ ನದೀಂ ‖ ನೌರಿಯಂ ಪುರುಷವ್ಯಾಘ್ರ ತಾಂ ತ್ವಮಾರೋಹ ಸುವ್ರತ ‖೯‖ ಅಥೋವಾಚ ಮಹಾತೇಜಾ ರಾಮೋ ಗುಹಮಿದಂ ವಚಃ ‖ ಕೃತಕಾಮೋಸ್ಮಿ ಭವತಾ ಶೀಘ್ರ ಮಾರೋಪ್ಯತಾಮಿತಿ ‖೧೦‖ ತತಃ ಕಲಾಪಾ‌ನ್ ಸನ್ನಹ್ಯ ಖಡ್ಗೌ ಬಧ್ವಾಚ ಧನ್ವಿನೌ ‖ ಜಗ್ಮತು ರ್ಯೇನ ತೌ ಗಂಗಾಂ ಸೀತಯಾಸಹ ರಾಘವೌ ‖೧೧‖ ರಾಮಮೇವತು ಧರ್ಮಜ್ಞ ಮುಪಗಮ್ಯ ವಿನೀತವತ್‖ ಕಿಮಹಂ ಕರವಾಣೀತಿ ಸೂತಃ ಪ್ರಾಂಜಲಿ ರಬ್ರವೀತ್ ‖೧೨‖ ತತೋ

ಪುತ್ರನಿಗೆ ಸಮಾನನಾದವನೇ, ಹೇ ಪುರುಷವ್ಯಾಘ್ರ - ಎಲೈ ನರಶ್ರೇಷ್ಠನೇ, ಸಾಗರಗಾಂ-ಸಮುದ್ರವನ್ನು ಕುರಿತು ಹೋಗುತ್ತಿರುವ, ನದೀಂ - ಗಂಗಾನದಿಯನ್ನು, ತರ್ತುಂ - ದಾಟುವುದಕ್ಕೆ, ಇಯಂ ನೌಃ - ಈ ನಾವೆಯು, (ಪ್ರಾಪ್ತಾ - ಬಂದಿರುವುದು,) ಹೇ ಸುವ್ರತ - ಎಲೈ ಒಳ್ಳೆಯನಿಯಮವುಳ್ಳವನೆ, ತ್ವಾಂ - ನೀನು, ತಾಂ - ಆ ಹಡಗನ್ನು, ಆರೋಹ - ಏರು. ‖೯‖ ಅಥ - ಬಳಿಕ, ಮಹಾತೇಜಾಃ - ಮಹಾ ತೇಜಸ್ವಿಯಾದ, ರಾಮಃ - ಶ್ರೀರಾಮನು, ಗುಹಂ - ಗುಹನನ್ನು ಕುರಿತು, ಭವತಾ - ನಿನ್ನಿಂದ, ಕೃತಕಾಮಃ - ಮಾಡಲ್ಪಟ್ಟ ಇಷ್ಟವುಳ್ಳವನು, ಅಸ್ಮಿ - ಆಗಿದ್ದೇನೆ, ಶೀಘ್ರಂ - ಜಾಗ್ರತೆಯಾಗಿ, ಆರೋಪ್ಯತಾಂ - ಏರಲ್ಪಡಲಿ, ಇತಿ - ಇಂತೆಂದು, ಇದಂವಚಃ - ಈ ಮಾತನ್ನು, ಉವಾಚ - ಹೇಳಿದನು. ‖೧೦‖ ತತಃ - ಬಳಿಕ, ತೌರಾಘವೌ - ಆ ರಾಮ ಲಕ್ಷ್ಮಣರು, ಕಲಾಪಾನ್ - ಸರಳು ಬತ್ತಳಿಕೆಗಳನ್ನು, ಸನ್ನಾಹ್ಯ - ಕವಚಗಳನ್ನು ತೊಟ್ಟುಕೊಂಡು, ಖಡ್ಗೌ - ಕತ್ತಿಗಳನ್ನು, ಬದ್ಧ್ವಾ - ಕಟ್ಟಿಕೊಂಡು, ಧನ್ವಿನೌ - ಧನುರ್ಧಾರಿಗಳಾಗಿ, ಸೀತಯಾಸಹ - ಸೀತಾದೇವಿಯೊಡನೆ, ಯೇನ - ಯಾವ ಕಾರಣ, ಗಂಗಾಂ - ಗಂಗಾನದಿಯನ್ನು ಕುರಿತು, ಜಗ್ಮತುಃ - ತೆರಳಿದರೋ, ತಸ್ಮಾತ್ - ಆ ಕಾರಣ, ಸೂತಃ - ಸಾರಥಿಯಾದ ಸುಮಂತ್ರನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಧರ್ಮಜ್ಞಂ - ಧರ್ಮಗಳನ್ನರಿತಿರುವ, ರಾಮೇವ - ಶ್ರೀರಾಮನನ್ನೇ ಕುರಿತು, ಉಪಾಗಮ್ಯ - ಬಂದು, ವಿನೀತವತ್ - ವಿಧೇಯನಾಗಿ, ಅಹಂ - ನಾನು, ಕಿಂಕರವಾಣಿ - ಏನು ಮಾಡಲಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ‖೧೧-೧೨‖ ತತಃ-ಬಳಿಕ, ದಾಶರಥಿಃ-

ದರು. ಆ ಬಳಿಕ ಗುಹನು ಕೈಗಳನ್ನು ಜೋಡಿಸಿಕೊಂಡು ಶ್ರೀರಾಮಮೂರ್ತಿಯನ್ನು ಕುರಿತು, “ಓ ಪ್ರಭುವೆ! ಇನ್ನು ನಾನು ಮಾಡಬೇಕಾದ ಕಾರ್ಯವೇನು? ಇದೋ ಈ ಗಂಗಾ ನದಿಯನ್ನು ದಾಟಲು ನಾವೆಯು ಸಿದ್ಧವಾಗಿರುವುದು. ಇದರಲ್ಲಿ ಕುಳಿತುಕೊಳ್ಳುವವನಾಗು,” ಎಂದು ವಿಜ್ಞಾಪಿಸಿಕೊಂಡನು. ಆಗೆ ಶ್ರೀರಾಮನು “ಎಲೈ ಮಿತ್ರನೆ! ನನ್ನಿಷ್ಟವು ನೆರವೇರಿತು. ನಿನ್ನಿಂದ ನಾವು ಸಮಸ್ತ ಸತ್ಕಾರಗಳನ್ನು ಪಡೆದು ತೃಪ್ತರಾಗಿದ್ದೇವೆ. ಈಗ ನಮ್ಮನ್ನು ನಾವೆಗೇರಿಸು.” ಎಂದು ಹೇಳಿದನು. ‖೭-೧೦‖ ಆ ಬಳಿಕ ಶ್ರೀರಾಮ ಲಕ್ಷ್ಮಣರು ಸರಳು ಬತ್ತಳಿಕೆಗಳನ್ನೂ, ಖಡ್ಗಗಳನ್ನೂ ತೆಗೆದುಕೊಂಡು, ಕವಚಗಳನ್ನು ತೊಟ್ಟು ಧನುರ್ಧಾರಿಗಳೂ ಆಗಿ ಸೀತಾದೇವಿಯೊಡಗೂಡಿ ಗಂಗಾ ನದೀ ಸಮೀಪವನ್ನು ಸೇರಿದರು. ಆ ಸಮಯದಲ್ಲಿ ಸಾರಥಿಯಾದ ಸುಮಂತ್ರನು ಕೈಗಳನ್ನು ಜೋಡಿಸಿಕೊಂಡು, ಧರ್ಮಜ್ಞನಾದ ಶ್ರೀರಾಮನ ಬಳಿಗೈದಿ ನಮ್ರಭಾವದಿಂದ “ಎಲೈ



The crossing of Ganga.

Lakshmi Art, Bombay 8.

ಬ್ರವೀ ದ್ದಾಶರಥಿ ಸ್ಸುಮಂತ್ರಂ ಸ್ಪೃಶ್ಯ ಕರೇಣೋತ್ತಮ ದಕ್ಷಿಣೇನ ॥ ಸುಮಂತ್ರ ಶೀಘ್ರಂ ಪುನರೇವ ಯಾಹಿ ರಾಜ್ಞ ಸ್ಸಕಾಶೇ ಭವ ಚಾಪ್ರಮತ್ತಃ ॥ ೧೩ ॥ ನಿವರ್ತಸ್ವೇತ್ಯುವಾಚೈನ ಮೇತಾವದ್ಧಿ ಕೃತಂ ಮಮ ॥ ರಥಂ ವಿಹಾಯ ಪದ್ಭ್ಯಾಂತು ಗಮಿಷ್ಯಾಮಿ ಮಹಾವನಂ ॥ ೧೪ ॥ ಆತ್ಮಾನಂ ತ್ವಭ್ಯನುಜ್ಞಾತ ಮವೇಕ್ಷ್ಯಾರ್ತ ಸ್ಸ ಸಾರಥಿಃ ॥ ಸುಮಂತ್ರಃ ಪುರುಷವ್ಯಾಘ್ರ ಮೈಕ್ಷ್ವಾಕ ಮಿದಮಬ್ರವೀತ್ ॥ ೧೫ ॥ ನಾತಿಕ್ರಾಂತಮಿದಂ ಲೋಕೇ ಪುರುಷೇಣೇಹ ಕೇನಚಿತ್॥ತವ ಸಭ್ರಾತೃಭಾರ್ಯಸ್ಯ ವಾಸಃ ಪ್ರಾಕೃತವದ್ವನೇ ॥ ೧೬ ॥ ನ ಮನ್ಯೇ ಬ್ರಹ್ಮಚರ್ಯೇಽಸ್ತಿ ಸ್ವಧೀತೇವಾ ಫಲೋದಯಃ ॥

ಶ್ರೀರಾಮನು, ದಕ್ಷಿಣೇನಭುಜೇನ - ಬಲಗೈಯಿಂದ, ಸುಮಂತ್ರಂ - ಸುಮಂತ್ರನನ್ನು, ಸ್ಪೃಶ್ಯ - ಹಿಡಿದುಕೊಂಡು, ಹೇ ಉತ್ತಮ - ಎಲೈ ಶ್ರೇಷ್ಠನೆ, ಹೇ ಸುಮಂತ್ರ - ಎಲೈ ಸಾರಥಿಯೆ, ಪುನಃ - ಮತ್ತು, ಶೀಘ್ರಮೇವ - ಜಾಗ್ರತೆಯಾಗಿಯೆ, ಯಾಹಿ - ಹೋಗು, ರಾಜ್ಞಃ - ಒಡೆಯನ, ಸಕಾಶೇ- ಸಮೀಪದಲ್ಲಿ, ಅಪ್ರಮತ್ತಶ್ಚ - ಜಾಗರೂಕನಾಗಿಯೂ ಇರುವವನು, ಭವ - ಆಗು, ಇತಿ-ಇಂತೆಂದು, ಅಬ್ರವೀತ್ - ನುಡಿದನು. ॥ ೧೩ ॥ ಮಮ - ನನಗೆ, ಏತಾವತ್ - ಇದುವರೆವಿಗೂ, ಕೃತಂ - ಸಾರಥ್ಯವು ಮಾಡಲ್ಪಟ್ಟಿತು, ರಥಂ - ರಥವನ್ನು, ವಿಹಾಯ - ಬಿಟ್ಟು, ಪದ್ಭ್ಯಾಂತು - ಕಾಲುಗಳಿಂದಲೇ, ಮಹಾವನಂ - ದೊಡ್ಡಕಾಡನ್ನು ಕುರಿತು, ಗಮಿಷ್ಯಾಮಿ - ಹೋಗುತ್ತೇನೆ, ನಿವರ್ತಸ್ವ - ಹಿಂತಿರುಗು, ಇತಿ - ಇಂತೆಂದು, ಉವಾಚ - ಹೇಳಿದನು. ॥ ೧೪ ॥ ಸಾರಥಿಃ - ಸಾರಥಿಯಾದ, ಸಸುಮಂತ್ರಃ - ಆ ಸುಮಂತ್ರನು, ಆತ್ಮಾನಂತು - ತನ್ನನ್ನಾದರೆ, ಅಭ್ಯನುಜ್ಞಾತಂ - ಹಿಂದಕ್ಕೆ ತೆರಳೆಂದು ಆಜ್ಞಾಪಿಸಲ್ಪಟ್ಟವನನ್ನಾಗಿ, ಅವೇಕ್ಷ್ಯ - ಕಂಡು, ಪುರುಷವ್ಯಾಘ್ರಂ - ಮನುಜಶ್ರೇಷ್ಠನಾದ, ಐಕ್ಷ್ವಾಕಂ - ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಶ್ರೀರಾಮನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೫ ॥ ಸಭ್ರಾತೃಭಾರ್ಯಸ್ಯ - ತಮ್ಮನಿಂದಲೂ ಪತ್ನಿಯಿಂದಲೂ ಒಡಗೂಡಿದ, ತವ - ನಿನಗೂಕೂಡ, ಪ್ರಾಕೃತವತ್ - ಪಾಮರನಂತೆ, ವನೇ-ವನದಲ್ಲಿ, ವಾಸಃ - ಇರೋಣವು, (ಯದಾಕೃತಂ - ಯಾವಾಗ ಮಾಡಲ್ಪಟ್ಟಿತೋ, ತದಾ - ಆಗ,) ಇದಂ - ದೈವದಿಂದಮಾಡಲ್ಪಟ್ಟ ಈ ಕಾರ್ಯವು, ಇಹಲೋಕೇ - ಈ ಜಗತ್ತಿನಲ್ಲಿ, ಕೇನಚಿತ್ಪುರುಷೇಣ - ಯಾವ ಮನುಷ್ಯನಿಂದಲೂ, ನಾತಿಕ್ರಾಂತಂ - ಉಲ್ಲಂಘಿಸತಕ್ಕುದಲ್ಲ, (ಗೋ) ತವ - ನಿನಗೂಕೂಡ,

---

ಶ್ರೀರಾಮನೆ ! ಇನ್ನು ನಾನು ಮಾಡಬೇಕಾಗಿರುವ ಸೇವೆಯೇನು ! " ಎಂದು ಕೇಳಿದನು. ಆಗ ಶ್ರೀರಾಮನು ಆ ಸಾರಥಿಯನ್ನು ಬಲಗೈಯಿಂದ ಮೈಸವರಿ ಹಿಡಿದುಕೊಂಡು, " ಎಲೈ ಸಾರಥಿಯೆ ! ನೀನು ಜಾಗ್ರತೆಯಾಗಿ ಹಿಂತಿರುಗಿ ಹೋಗಿ ಮಹಾರಾಜನ ಸಮೀಪದಲ್ಲಿ ಆತನ ಸೇವೆಗಾಗಿ ಬಹು ಜಾಗರೂಕನಾಗಿರು. ನನಗಿದುವರೆಗೂ ಸಾರಥ್ಯಮಾಡಲಾಯಿತು. ಇನ್ನು ನಾನು ಕಾಲ್ನಡಿಗೆಯಿಂದಲೇ ಅರಣ್ಯಕ್ಕೆ ಹೋಗುತ್ತೇನೆ," ಎಂದು ಹೇಳಿದನು. ಶ್ರೀರಾಮಮೂರ್ತಿಯ ಅಪ್ಪಣೆಯನ್ನು ತಿಳಿದ ಸುಮಂತ್ರನು ಆತನನ್ನು ಕುರಿತು, "ಓ ರಾಮಚಂದ್ರನೆ! ಸೀತಾ ಲಕ್ಷ್ಮಣ ಸಮೇತನಾದ ನಿನಗೆ ವನವಾಸವು ಪ್ರಾಪ್ತವಾದುದು

ಮಾರ್ದವಾರ್ಜವಯೋರ್ವಾಪಿ ತ್ವಾಂ ಚೇದ್ವ್ಯಸನಮಾಗತಂ ॥೧೭॥ ಸಹ ರಾಘವ ವೈದೇಹ್ಯಾ ಭ್ರಾತ್ರಾಚೈವ ವನೇ ವರ್ಸ ॥ ತ್ವಂ ಗತಿಂ ಪ್ರಾಪ್ಸ್ಯಸೆ ವೀರ ತ್ರಿಲೋಕಾಂಸ್ತು ಜಯನ್ನಿವ ॥೧೮॥ ವಯಂ ಖಲು ಹತಾ ರಾಮ ಯೇತ್ವಯಾಪ್ಯುಪವಂಚಿತಾಃ ॥ ಕೈಕೇಯ್ಯಾ ವಶಮೇಷ್ಯಾಮಃ ಪಾಪಾಯಾ ದುಃಖಭಾಗಿನಃ ॥೧೯॥ ಇತಿ ಬ್ರುವನ್ನಾತ್ಮ ಸಮಂ ಸುಮಂ ತ್ರಸ್ಸಾರಥಿ ಸ್ತದಾ ॥ ದೃಷ್ಟ್ವಾ ದೂರ ಗತಂ ರಾಮಂ ದುಃಖಾರ್ತೋ ರುರುದೇ

ವನವಾಸಃ - ಅರಣ್ಯವಾಸವು, ಕೃತಇತಿಯತ್ - ಮಾಡಲ್ಪಟ್ಟಿತೆಂಬದ್ಯಾವದೋ, ತದಿದಂ - ಅಂಥಾ ಇದು, ಇಹಲೋಕೇ - ಈ ಲೋಕದಲ್ಲಿ, ಕೇನಚಿತ್ಪುರುಷೇಣ - ಯಾವ ನರನಿಂದಲೂ, ನಾತಿಕ್ರಾಂತಂ - ಅಂಗೀಕಾರಮಾಡತಕ್ಕದಲ್ಲ. ॥೧೬॥ ತ್ವಾಂ - ನಿನ್ನನ್ನು, ವ್ಯಸನಂ - ದುಃಖವು, ಆಗತಂಚೇತ್ - ಹೊಂದಿದುದಾದರೆ, ಬ್ರಹ್ಮಚರ್ಯೇ - ಬ್ರಹ್ಮಚರ್ಯಾಶ್ರಮದಲ್ಲಿಯೇ ಆಗಲಿ, ಸ್ವಧೀತೇವಾ - ನಿಯಮವಾಗಿ ಅಧ್ಯಯನಮಾಡುವವರಲ್ಲಿಯೇ ಆಗಲಿ, ಮಾರ್ದವಾರ್ಜವಯೋರ್ವಾಪಿ, ಮಾರ್ದವ - ವಾತ್ಸಲ್ಯದಲ್ಲಿಯೂ, ಆರ್ಜವಯೋರ್ವಾಪಿ - ಅಕೌಟಿಲ್ಯದಲ್ಲಿಯೇ ಆಗಲಿ, ಫಲೋದಯಃ - ಫಲಪ್ರಾಪ್ತಿಯು, ನಾಸ್ತೀತಿ - ಇಲ್ಲವೆಂದು, ಮನ್ಯೇ - ಎಣಿಸುತ್ತೇನೆ. ॥೧೭॥ ಹೇ ವೀರ - ಎಲೈ ಶೂರನೇ, ಹೇ ರಾಘವ - ಎಲೈ ಶ್ರೀರಾಮನೆ, ತ್ವಂ - ನೀನು, ವೈದೇಹ್ಯಾ - ಸೀತಾದೇವಿಯೊಡನೆಯೂ, ಭ್ರಾತ್ರಾಚಸಹ - ಲಕ್ಷ್ಮಣನೊಡನೆಯೂ, ವನೇ - ಅರಣ್ಯದಲ್ಲಿ, ವರ್ಸ - ಇರುತ್ತ, ತ್ರಿಲೋಕಾಂಸ್ತು - ಮೂರು ಲೋಕಗಳನ್ನಾದರೆ, ಜಯನ್ನಿವ - ಜಯಿಸುವನಂತೆ, ಗತಿಂ - ಒಳ್ಳೆಯಪದವಿಯನ್ನು, ಪ್ರಾಪ್ಸ್ಯಸೇ - ಹೊಂದುವೆ, ಹೇ ರಾಮ - ಎಲೈ ಶ್ರೀರಾಮನೆ, ಯೇ - ಯಾರು, ತ್ವಯಾ - (ರಾತ್ರಿಯಕಾಲದಲ್ಲಿ) ನಿನ್ನಿಂದಲೂ ಕೂಡ, ಉಪವಂಚಿತಾಃ-ಸಮೀಪದಲ್ಲಿಯೇ ವಂಚಿಸಲ್ಪಟ್ಟವರಾದ ಕಾರಣ, ದುಃಖಭಾಗಿನಃ - ವ್ಯಸನಾಕ್ರಾಂತರಾಗಿ, ಪಾಪಾಯಾಃ - ಪಾಪಿಷ್ಠಳಾದ, ಕೈಕೇಯ್ಯಾಃ - ಕೈಕೇಯಿದೇವಿಯ, ವಶಂ - ಸ್ವಾಧೀನವನ್ನು, ಏಷ್ಯಾಮಃ - ಹೊಂದುವೆವೋ, ತೇವಯಂ - ಅಂತಹ ನಾವುಗಳು, ಹತಾಃಖಲು - ಸತ್ತನರಾದೆವಷ್ಟೆ. ॥೧೯॥ ಸಾರಥಿಃ - ಸಾರಥಿಯಾದ, ಸುಮಂತ್ರಃ - ಸುಮಂತ್ರನು, ಇತಿ - ಈಪರಿಯಾಗಿ, ಬ್ರುವನ್ - ಹೇಳುತ್ತ, ದೂರ

ದೈವಾಧೀನವಾದುದಲ್ಲದೆ ಮತ್ತೆ ಬೇರೆಯಲ್ಲವು. ಶಾಂತಚಿತ್ತನಾಗಿ ಮಾತಾ ಪಿತೃಗಳ ಸೇವೆಯನ್ನು ಮಾಡಿಕೊಂಡು ಸತ್ಯಸಂಧನಾಗಿ ನಡೆದುಕೊಂಡಿದ್ದ ನಿನಗೆ ಈ ತೆರದ ದುಃಖವುಂಟಾದ ಬಳಿಕ ಬ್ರಹ್ಮಚರ್ಯಾಶ್ರಮದಲ್ಲಿ ಬಹು ನಿಷ್ಠೆಯಿಂದಿರುವವರಿಗೆ ಫಲವಿಲ್ಲವೆಂದೇ ಹೇಳಬೇಕಾಗುವುದು. ಎಲೈ ಶೂರನಾದ ಶ್ರೀರಾಮನೆ ! ಸೀತಾದೇವಿಯಿಂದಲೂ, ಲಕ್ಷ್ಮಣ ದೇವನಿಂದಲೂ ಒಡಗೂಡಿದ ನೀನು ವನವಾಸವನ್ನು ಮಾಡುತ್ತ ಜಗತ್ತ್ರಯವನ್ನೇ ಜಯಿಸುವಂತೆ ಸದ್ಗತಿಯನ್ನು ಪಡೆಯುತ್ತೀಯೆ. ॥೧೮॥ ನಿನ್ನಿಂದ ವಂಚಿತರಾಗಿ, ಭಾಗ್ಯಹೀನರೂ, ದುಃಖಾಕ್ರಾಂತರೂ ಆದ ನಾವು ಆ ಪಾಪಿ ಕೈಕೇಯಿಯ ಕೈಗೆ ಸಿಕ್ಕಿ ನರಳಬೇಕಾಯಿತಲ್ಲವೆ ! " ಎಂದು ಸಂತಪಿಸಿದನು. ಈ ರೀತಿಯಾಗಿ ಹೇಳುತ್ತ ಸಾರಥಿಯಾದ ಸುಮಂತ್ರನು ಬಹುದೂರ ಪ್ರಯಾಣ ಮಾಡಿದ ಪ್ರಾಣ ಪ್ರಿಯನಾದ ಶ್ರೀರಾಮನನ್ನು

ಚಿರಂ ‖ ೨೦ ‖ ತತಸ್ತು ವಿಗತೇ ಬಾಷ್ಪೇ ಸೂತಂ ಸ್ಪೃಷ್ಟೋದಕಂ ಶುಚಿಂ ‖ ರಾಮಸ್ತು ಮಧುರಂ ವಾಕ್ಯಂ ಪುನಃ ಪುನರುವಾಚ ತಂ ‖ ೨೧ ‖ ಇಕ್ಷ್ವಾಕೂಣಾಂ ತ್ವಯಾ ತುಲ್ಯಂ ಸುಹೃದಂ ನೋಪಲಕ್ಷಯೇ ‖ ಯಥಾ ದಶರಥೋ ರಾಜಾ ಮಾಂ ನಶೋಚೇತ್ತಥಾ ಕುರು ‖ ೨೨ ‖ ಶೋಕೋಪಹತ ಚೇತಾಶ್ಚ ವೃದ್ಧಶ್ಚ ಜಗತೀಪತಿಃ‖ಕಾಮಭಾರಾವಸನ್ನಶ್ಚ ತಸ್ಮಾದೇತದ್ಬ್ರವೀಮಿ ತೇ ‖೨೩‖ ಯದ್ಯದಾಜ್ಞಾಪಯೇತ್ಕಿಂಚಿ ತ್ಸಮಹಾತ್ಮಾ ಮಹೀಪತಿಃ ‖ ಕೈಕೇಯ್ಯಾಃ ಪ್ರಿಯ ಕಾಮಾರ್ಥಂ ಕಾರ್ಯಂ ತದವಿಕಾಂಕ್ಷಯಾ ‖ ೨೪ ‖ ಏತದರ್ಥಂ ಹಿ

ಗತಂ - ಬಹುದೂರ ತೆರಳಿದ, ಆತ್ಮಸಮಂ - ಪ್ರಾಣಸದೃಶನಾದ, ರಾಮಂ ಶ್ರೀರಾಮನನ್ನು, ದೃಷ್ಟ್ವಾ-ಕಂಡು, ದುಃಖಾರ್ತಃ - ವ್ಯಸನದಿಂದ ಪೀಡಿತನಾಗಿ, ಚಿರಂ - ಬಹುಕಾಲ, ರುರುದೇ - ಅತ್ತನು. ‖೨೦‖ ಬಾಷ್ಪೇ - ಕಂಬನಿಯು, ವಿಗತೇಸತಿ - ಬತ್ತಿಹೋಗಲು, ತತಃ - ಬಳಿಕ, ಸ್ಪೃಷ್ಟೋದಕಂ - ಆಚಮನವನ್ನು ಮಾಡಿದವನಾದ ಕಾರಣ, ಶುಚಿಂ - ಪರಿಶುದ್ಧನಾದ, ತಂ - ಆ ಸುಮಂತ್ರನನ್ನು ಕುರಿತು, ರಾಮಸ್ತು - ಶ್ರೀರಾಮನು, ಪುನಃಪುನಃ - ಬಾರಿಬಾರಿಗೂ, ಮಧುರಂವಾಕ್ಯಂ - ಸವಿಮಾತನ್ನು, ಉವಾಚ - ಹೇಳಿದನು. ‖ ೨೧ ‖ ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶಸ್ಥರಿಗೆ, ತ್ವಯಾ - ನಿನ್ನೊಡನೆ, ತುಲ್ಯಂ - ಸಮಾನನಾದ, ಸುಹೃದಂ-ಸ್ನೇಹಿತನನ್ನು, ನೋಪಲಕ್ಷಯೇ-ಕಾಣೆನು, ದಶರಥೋರಾಜಾ - ದಶರಥರಾಜನು, ಮಾಂ - ನನ್ನನ್ನು ಕುರಿತು, ನಶೋಚೇತ್-ದುಃಖಿಸದಿರುವ, ತಥಾ - ಹಾಗೆ, ಕುರು - ಮಾಡು. ‖ ೨೨ ‖ ಯತ್ - ಯಾವ ಕಾರಣದಿಂದ, ಜಗತೀಪತಿಃ - ಭೂಪತಿಯಾದ ದಶರಥರಾಜನು, ಶೋಕೋಪಹತಚೇತಾಶ್ಚ - ವ್ಯಸನಾಕ್ರಾಂತನೋ, ವೃದ್ಧಶ್ಚ - ಮುದುಕನೋ, ಕಾಮಭಾರಾವಸನ್ನಶ್ಚ - ಕಾಮೋದ್ರೇಕದಿಂದ ಪೀಡಿತನೋ, ತಸ್ಮಾತ್-ಆ ಕಾರಣ, ಏತತ್ - ಈ ಮಾತನ್ನು, ಬ್ರವೀಮಿ - ಹೇಳುತ್ತೇನೆ. ‖ ೨೩ ‖ ಮಾಹಾತ್ಮಾ-ಮಹಾಮನಸ್ವಿಯಾದ, ಮಹೀಪತಿಃ - ರಾಜನು, ಕೈಕೇಯ್ಯಾಃ - ಕೈಕೇಯಿದೇವಿಯ, ಪ್ರಿಯಕಾಮಾರ್ಥಂ - ಇಷ್ಟಕ್ಕೋಸುಗ, ಕಿಂಚಿತ್ - ಸ್ವಲ್ಪವಾದರೂ, ಯದ್ಯತ್ - ಯಾವ ಯಾವುದನ್ನು, ಆಜ್ಞಾಪಯೇತ್ - ಅಪ್ಪಣೆಕೊಡುವನೋ, ತತ್ - ಅದು, ಅವಿಕಾಂಕ್ಷಯಾ - ಆದರಣೆಯಿಂದ, ಕಾರ್ಯಂ -

---

ಕಂಡು ದುಃಖಾಕ್ರಾಂತನಾಗಿ ಬಹುಕಾಲ ರೋದಿಸಿದನು. ಆ ಬಳಿಕ ರೋದನವನ್ನು ನಿಲ್ಲಿಸಿ ಆಚಮನ ಮಾಡಿ ಪರಿಶುದ್ಧನಾದ ಆ ಸುಮಂತ್ರನನ್ನು ಕುರಿತು, ಶ್ರೀರಾಮನು ಈ ರೀತಿ ಹೇಳಿದನು. “ ಎಲೈ ಸಾರಥಿಯೆ ! ಇಕ್ಷ್ವಾಕು ರಾಯನವಂಶದಲ್ಲಿಜನಿಸಿದ ಅರಸರಿಗೆ ನಿನ್ನ ಸಮಾನರಾದ ಸ್ನೇಹಿತರು ಮತ್ತಾರೂ ಇರುವುದಿಲ್ಲ. ದಶರಥರಾಯನು ನನ್ನ ವಿಷಯದಲ್ಲಿ ಸಂಕಟ ಬೀಳದಿರುವಂತೆಮಾಡುವುದು ನಿನ್ನ ಕರ್ತವ್ಯವು; ಆ ರೀತಿ ಮಾಡುವವನಾಗು. ಮಹಾರಾಜನಾದ ನಮ್ಮ ತಂದೆಯು, ಶೋಕಾಕ್ರಾಂತನಾಗಿಯೂ, ವೃದ್ಧನಾಗಿಯೂ, ಕಾಮಬಾಧೆಯಿಂದ ಪೀಡಿತನಾಗಿಯೂ ಇರುವನಾದ ಕಾರಣ ಹೀಗೆ ಹೇಳುತ್ತೇನೆ. ‖ ೧೯-೨೩ ‖ ಮಹಾನುಭಾವನೂ, ಮಹಾರಾಜನೂ ಆದ ದಶರಥರಾಯನು ಕೈಕೇಯಿದೇವಿಗೆ ಪ್ರಿಯವನ್ನುಂಟುಮಾಡಲೋಸುಗ, ಯಾವ ಕಾರ್ಯವನ್ನು ಮಾಡೆಂದು

ರಾಜ್ಯಾನಿ ಪ್ರಶಾಸಂತಿ ನರೇಶ್ವರಾಃ ॥ ಏತೇಷಾಂ ಸರ್ವಕೃತ್ಯೇಷು ಮನೋ ನಪ್ರತಿಹನ್ಯತೇ ॥ ೨೫ ॥ ಯದ್ಯಥಾ ಸ ಮಹಾರಾಜೋ ನಾಳೀಕ ಮಧಿಗಚ್ಛತಿ ॥ ನಚ ತಾಮ್ಯತಿ ದುಃಖೇನ ಸುಮಂತ್ರ! ಕುರು ತತ್ತಥಾ ॥ ೨೬ ॥ ಅದೃಷ್ಟ ದುಃಖಂ ರಾಜಾನಂ ವೃದ್ಧ ಮಾರ್ಯಂ ಜಿತೇಂದ್ರಿಯಂ ॥ ಬ್ರೂಯಾಸ್ತ್ವ ಮಭಿವಾದ್ಯೈವ ಮಮಹೇತೋ ರಿದಂ ವಚಃ ॥ ೨೭ ॥ ನೈವಾಹ ಮನುಶೋಚಾಮಿ ಲಕ್ಷ್ಮಣೋ ನಚ ಮೈಥಿಲೀ ॥ ಅಯೋಧ್ಯಾಯಾ ಶ್ಚ್ಯುತಾಶ್ಚೇತಿ ವನೇ ವತ್ಸ್ಯಾಮಹೇತಿಚ ॥ ೨೮ ॥ ಚತುರ್ದಶಸು ವರ್ಷೇಷು ನಿವೃತ್ತೇಷು ಪುನಃಪುನಃ ॥ ಲಕ್ಷ್ಮಣಂ ಮಾಂಚ ಸೀತಾಂಚ ದ್ರಕ್ಷ್ಯಸಿ ಕ್ಷಿಪ್ರ ಮಾಗತಾನ್ ॥ ೨೯ ॥ ಏವ

ಮಾಡತಕ್ಕದು. ॥ ೨೪ ॥ ಏಷಾಂ - ಇವರ, ಮನಃ - ಮನಸ್ಸು, ಸರ್ವಕೃತ್ಯೇಷು - ಎಲ್ಲ ಕಾರ್ಯಗಳಲ್ಲಿಯೂ, ನಪ್ರತಿಹನ್ಯತೇತಿಯತ್-ಹೊಡೆಯಲ್ಪಡುವದಿಲ್ಲವೆಂಬುದಾವದೋ, ಏತದರ್ಥಂ - ಇದಕ್ಕೋಸುಗ, ನರೇಶ್ವರಾಃ - ಅರಸರು, ರಾಜ್ಯಾನಿ - ರಾಜ್ಯಗಳನ್ನು, ಪ್ರಶಾಸಂತಿಹಿ - ಸಂರಕ್ಷಣೆ ಮಾಡುತ್ತಾರೆಯಷ್ಟೆ. ॥ ೨೫ ॥ ಹೇ ಸುಮಂತ್ರ - ಎಲೈ ಸುಮಂತ್ರನೇ, ತಥಾ - ಹಾಗೆ, ನಾಧಿಗಚ್ಛತಿ - ಹೊಂದುವದಿಲ್ಲವೋ, ದುಃಖೇನಚ - ದುಃಖದಿಂದಲೂ, ನತಾಮ್ಯತಿ - ಬಳಲುವದಿಲ್ಲವೋ, ತಥಾ - ಹಾಗೆ, ಕುರು - ಮಾಡು. ॥ ೨೬ ॥ ಅದೃಷ್ಟದುಃಖಂ - ನೋಡದಿರುವ ವ್ಯಸನವುಳ್ಳ, ರಾಜಾನಂ - ಅರಸನಾದ, ವೃದ್ಧಂ - ಮುದುಕನಾದ, ಆರ್ಯಂ - ಪೂಜ್ಯನಾದ, ಜಿತೇಂದ್ರಿಯಂ - ಜಯಿಸಲ್ಪಟ್ಟ ಇಂದ್ರಿಯಗಳುಳ್ಳ ನಮ್ಮ ತಂದೆಯನ್ನು ಕುರಿತು, ತ್ವಂ - ನೀನು, ಮಮಹೇತೋಃ - ನನ್ನ ನಿಮಿತ್ತವಾಗಿ, ಅಭಿವಾದ್ಯೈವ - ನಮಸ್ಕರಿಸಿ, ಇದಂವಚಃ - ಈ ಮಾತನ್ನು, ಬ್ರೂಯಾಃ - ಹೇಳು. ॥ ೨೭ ॥ ಅಯೋಧ್ಯಾಯಾಃ - ಅಯೋಧ್ಯಾಪಟ್ಟಣದಿಂದ, ಚ್ಯುತಾಶ್ಚೇತಿ - ಬಂದೆವೆಂಬುದಾಗಿಯೂ, ವನೇ - ಅರಣ್ಯದಲ್ಲಿ, ವತ್ಸ್ಯಾಮಹೇತಿಚ - ಇರುವೆವೆಂಬದಾಗಿಯೂ, ಅಹಂ - ನಾನು, ನೈವಶೋಚಾಮಿ-ವ್ಯಸನಪಡುವುದಿಲ್ಲ, ಲಕ್ಷ್ಮಣಃ - ಲಕ್ಷ್ಮಣನೂ, (ನಶೋಚತ್ಯೇವ ದುಃಖಿಸುವುದಿಲ್ಲ,) ಮೈಥಿಲೀಚ - ಸೀತಾದೇವಿಯೂ, ನೈವಶೋಚತಿ-ದುಃಖಿಸುವುದೇ ಇಲ್ಲವು. ॥೨೮॥ ಚತುರ್ದಶಸು- ಹದಿನಾಲ್ಕಾದ, ವರ್ಷೇಷು - ಸಂವತ್ಸರಗಳು, ನಿವೃತ್ತೇಷು - ಕಳೆಯಲು, ಕ್ಷಿಪ್ರಂ - ಬೇಗನೆ, ಆಗತಾನ್ - ಬಂದ, ಲಕ್ಷ್ಮಣಂ - ಲಕ್ಷ್ಮಣನನ್ನೂ, ಮಾಂಚ - ನನ್ನನ್ನೂ, ಸೀತಾಂಚ - ಸೀತಾದೇವಿ

ಆಜ್ಞಾಪಿಸುವನೋ, ಆ ಕಾರ್ಯವನ್ನು ಯಾವುದೊಂದೂ ಶಂಕೆಯಿಲ್ಲದೆ ಮಾಡತಕ್ಕದು. ಲೋಕದಲ್ಲಿ ತಮಗೆ ಬೇಕಾದ ಹಿತಕಾರ್ಯಗಳೆಲ್ಲವನ್ನು ನೆರವೇರಿಸಿಕೊಂಡು ತೃಪ್ತಿಯನ್ನೊಂದಬೇಕೆಂಬ ಬಯಕೆಯಿಂದಲೇ ಅಲ್ಲವೆ ರಾಜರು ರಾಜ್ಯವನ್ನು ಪರಿಪಾಲಿಸುವುದು? ಆದುದರಿಂದ ಮಹಾರಾಜನೂ, ನಮ್ಮ ತಂದೆಯೂ ಆದ, ಆ ರಾಯನ ವಾಕ್ಯವು ಅಸತ್ಯವಾಗದಿರುವಂತೆಯೂ, ದುಃಖಾಕ್ರಾಂತವಾಗದಿರುವಂತೆಯೂ ಮಾಡುವವನಾಗು. ಈವರೆಗೆ ಎಂದಿಗೂ ದುಃಖವನ್ನು ಕಾಣದ, ಮಹಾರಾಜನೂ, ವೃದ್ಧನೂ, ಪೂಜ್ಯನೂ, ಜಿತೇಂದ್ರಿಯನೂ ಆಗಿರುವ ನಮ್ಮ ಜನಕನಿಗೆ ವಂದನೆಯಂಗೈದು ಈ ಮಾತನ್ನು ಹೇಳು:—"ಲಕ್ಷ್ಮಣ ಸೀತೆಯರೂ, ನಾನೂ ಅಯೋಧ್ಯಾಪಟ್ಟಣವನ್ನು ಬಿಟ್ಟು, ಅರಣ್ಯದಲ್ಲಿರುವುದೆಂದು ವ್ಯಸನಗೊ

ಮುಕ್ತ್ವಾತು ರಾಜಾನಂ ಮಾತರಂಚ ಸುಮಂತ್ರ ಮೇ ॥ ಅನ್ಯಾಶ್ಚ ದೇವೀ
ಸ್ಸಹಿತಾಃ ಕೈಕೇಯೀಂಚ ಪುನಃಪುನಃ ॥ ೩೦ ॥ ಆರೋಗ್ಯಂ ಬ್ರೂಹಿ ಕೌಸಲ್ಯಾ
ಮಥ ಪಾದಾಭಿವಂದನಂ ॥ ಸೀತಾಯಾ ಮಮ ಚಾರ್ಯಸ್ಯ ವಚನಾ ಲ್ಲಕ್ಷ್ಮಣ
ಸ್ಯಚ ॥ ೩೧ ॥ ಬ್ರೂಯಾಶ್ಚಹಿ ಮಹಾರಾಜಂ ಭರತಂ ಕ್ಷಿಪ್ರಮಾನಯ ॥
ಆಗತಶ್ಚಾಪಿ ಭರತಃ ಸ್ಥಾಪ್ಯೋ ನೃಪಮತೇ ಪದೇ ॥ ೩೨ ॥ ಭರತಂಚ ಪರಿ

ಯನ್ನೂ, ಪುನಃಪುನಃ-ಬಾರಿಬಾರಿಗೂ, ದ್ರಕ್ಷ್ಯಸಿ-ನೋಡುವೆ, ಹೇ ಸುಮಂತ್ರ-ಎಲೈ ಸುಮಂತ್ರನೇ, ಏವಂ - ಹೀಗೆ, ರಾಜಾನಂ - ಅರಸನನ್ನು ಕುರಿತು, ಉಕ್ತ್ವಾ - ಹೇಳಿ, ಮೇ - ನನ್ನ, ಮಾತರಂಚ - ತಾಯಿಯನ್ನೂ, ಸಹಿತಾಃ - ಕೌಸಲ್ಯಾದೇವಿಯಿಂದೊಡಗೂಡಿದ, ಅನ್ಯಾದೇವೀಶ್ಚ - ಇತರ ತಾಯಿಯರನ್ನು, ಕೈಕೇಯೀಂಚ - ಕೈಕೇಯಿದೇವಿಯನ್ನೂ ಕುರಿತು, ಪುನಃಪುನಃ - ಬಾರಿ ಬಾರಿಗೂ, ಆರೋಗ್ಯಂ - ಕ್ಷೇಮವನ್ನು, ಬ್ರೂಹಿ - ಹೇಳು, ಅಥ - ಬಳಿಕ, ಕೌಸಲ್ಯಾಂ - ಕೌಸಲ್ಯಾ ದೇವಿಯನ್ನು ಕುರಿತು, ಆರೋಗ್ಯಂ - ಕ್ಷೇಮವನ್ನು, ಸೀತಾಯಾಃ-ಸೀತಾದೇವಿಯ, ಆರ್ಯಸ್ಯ (೧) - ಲಕ್ಷ್ಮಣನಿಗೆ ಜ್ಯೇಷ್ಠನಾದ, ಮಮ - ನನ್ನ, ಲಕ್ಷ್ಮಣಸ್ಯಚ - ಲಕ್ಷ್ಮಣನ, ಅಭಿವಂದನಂ ನಮಸ್ಕಾರ ವನ್ನೂ, ಮಮವಚನಾತ್ - ನನ್ನಮಾತಿನಂತೆ, ಬ್ರೂಹಿ - ಹೇಳು. ॥ ೨೯-೩೧ ॥ ಭರತಂ - ಭರ ತನನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಆನಯ - ಕರೆಯಿಸು, ಇತಿ - ಇಂತೆಂದು, ಮಹಾರಾಜಂ - ಮಹಾರಾಜನನ್ನು ಕುರಿತು, ಬ್ರೂಯಾಶ್ಚಹಿ - ಹೇಳುವೆಯಷ್ಟೆ, ಆಗತಃ - ಬಂದ, ಭರತೋಽಪಿ - ಭರತನೂ ಕೂಡ, ನೃಪಮತೇ - ರಾಜನಿಗೆ ಇಷ್ಟವಾದ, ಪದೇ-ಸ್ಥಾನದಲ್ಲಿ, ಸ್ಥಾಪ್ಯಃ ನಿಲ್ಲಿಸತಕ್ಕವನು, ಭರತಂಚ - ಭರತನನ್ನೂ ಕೂಡ, ಪರಿಷ್ವಜ್ಯ - ಅಪ್ಪಿಕೊಂಡು, ಯೌವರಾಜ್ಯೇ - ಯೌವ ರಾಜ್ಯದಲ್ಲಿ, ಅಭಿಷಿಚ್ಯಚ - ಪಟ್ಟಾಭಿಷೇಕವನ್ನು ಮಾಡಿ, (ಸ್ಥಿತಂ - ಇರುವ,) ತ್ವಾಂ - ನಿನ್ನನ್ನು,

ಳ್ಳುವುದಿಲ್ಲವು. ಹದಿನಾಲ್ಕು ಸಂವತ್ಸರಗಳು ಕಳೆಯುತ್ತಲೇ ಪುನಃನಗರಕ್ಕೆಬರುವ ನಮ್ಮನ್ನು, ನೋಡಿ ಆನಂದಿಸುವೆ." ಎಲೈ ಸುಮಂತ್ರನೆ! ಮಹಾರಾಜನಿಗೀರೀತಿ ಹೇಳಿ ಕೌಸ ಲ್ಯೆಯೇ ಮೊದಲಾದ ನನ್ನ ತಾಯಿಯರಿಗೆ ನನ್ನ ಕ್ಷೇಮವನ್ನರುಹಿ, ನನ್ನ ಮತ್ತು ಸೀತಾ ಲಕ್ಷ್ಮಣರ ವಂದನೆಗಳನ್ನವರಿಗೆ ತಿಳುಹಿಸು. ॥ ೨೪ ೩೧ ॥ ಈ ಮಾತನ್ನು ನಮ್ಮ ತಂದೆಗೂ ಹೇಳಿ ಭರತನನ್ನು ಕರೆಯಿಸೆಂದು ಹೇಳುವವನಾಗು. ಆ ರೀತಿ ಭರತನನ್ನು ಕರೆಯಿಸಿ ರಾಜೋ ಚಿತಸ್ಥಾನವಾದ ಸಿಂಹಾಸನದಲ್ಲಿ ನಿಲ್ಲಿಸಲ್ಪಡತಕ್ಕುದೆಂದು ತಿಳುಹಿಸು. ಹೀಗೆ ಭರತನಿಗೆ ಯುವರಾಜ ಪದವಿಯನ್ನಿತ್ತು, ಆತನನ್ನಾಲಿಂಗಿಸಿ, ನಾವು ಅರಣ್ಯಕ್ಕೆ ತೆರಳಿದೆವೆಂಬ ದುಃಖ ವನ್ನು ದೂರ ಮಾಡಿಕೊಳ್ಳಬೇಕೆಂದು ನಮ್ಮ ತಂದೆಯಾದ ದಶರಥರಾಯನಿಗೆ ತಿಳುಹು.

(೧) ಟಿ. ಗೋ "ಆರ್ಯಸ್ಯ ಲಕ್ಷ್ಮಣಸ್ಯ ವಚನಾತ್" ಎಂಬ ಕಡೆಯಲ್ಲಿ "ಆರ್ಯಸ್ಯ" ಎಂಬ ಪದವು ಶಾಸ್ತ್ರ ವಿಹಿತ ಜ್ಯೇಷ್ಠಾನುವರ್ತಿತ್ವರೂಪ ಧರ್ಮಾಚರಣೆಯು ಲಕ್ಷ್ಮಣನಲ್ಲಿ ಸಂಪೂರ್ಣವಾಗಿ ನೆಲೆಗೊಂಡಿದ್ದುದರಿಂದ ಹೇಳಲ್ಪ ಟ್ಟಿರುವುದು. "ಆರೋಗ್ಯಂ ಬ್ರೂಹಿ ಕೌಸಲ್ಯಾ ಮಥಪಾದಾಭಿವಂದನಂ" ಇಲ್ಲಿ ಕೌಸಲ್ಯೆಗೆ ಮಾತ್ರ ಪಾದಾಭಿವಂದನವು ಹೇಳಲಾಗಿದೆ. ಇತರ ತಾಯಂದಿರಗೆ ಪಾದಾಭಿವಂದನವು ನಿಷೇಧಿಸಲ್ಪಟ್ಟಿದೆ. "ಆಚಾರ್ಯವದಾಚಾರ್ಯದಾರೇಷು ವೃತ್ತಿಃ, ಪಾದಸಂವಾಹನವರ್ಜಂ" ಎಂದು ಸ್ಮೃತಿವಚನವುಂಟು. (ಮ) "ಆರ್ಯಸ್ಯ" ವಿದ್ವಾಂಸನಾದ ಎಂದರ್ಥ. ...ಗೆ

ಷ್ವಜ್ಯ ಯೌವರಾಜ್ಯೇಽಭಿಷಿಚ್ಯಚ ॥ ಅಸ್ಮತ್ಸಂತಾಪಜಂ ದುಃಖಂ ನತ್ವಾಮಭಿ
ಭವಿಷ್ಯತಿ ॥ ೩೩ ॥ ಭರತಶ್ಚಾಪಿ ವಕ್ತವ್ಯೋ ಯಥಾ ರಾಜನಿ ವರ್ತಸೇ ॥
ತಥಾ ಮಾತೃಷು ವರ್ತೇಥಾ ಸ್ಸರ್ವಾ ಸ್ವೇವಾ ವಿಶೇಷತಃ ॥ ೩೪ ॥ ಯಥಾಚ
ತವ ಕೈಕೇಯಿೀ ಸುಮಿತ್ರಾಚ ವಿಶೇಷತಃ ॥ ತಥೈವ ದೇವೀ ಕೌಸಲ್ಯಾ ಮಮ
ಮಾತಾ ವಿಶೇಷತಃ ॥ ೩೫ ॥ ತಾತಸ್ಯ ಪ್ರಿಯಕಾಮೇನ ಯೌವರಾಜ್ಯ ಮಪೇ
ಕ್ಷತಾ ॥ ಲೋಕಯೋ ರುಭಯೋಶ್ಶಕ್ಯಂ ತ್ವಯಾ ಯತ್ಸುಖ ಮೇಧಿತುಂ ॥೩೬॥

ಅಸ್ಮತ್ಸಂತಾಪಜಂ - ನಮ್ಮ ದುಃಖದಿಂದುಂಟಾದ, ದುಃಖಂ - ವ್ಯಸನವು, ನಾಭಿಭವಿಷ್ಯತಿ - ತಿರಸ್ಕರಿಸಲಾರದು, ಇತಿ - ಇಂತೆಂದು, ಬ್ರೂಯಾಃ - ಹೇಳು. ॥ ೩೨-೩೩ ॥ ಭರತಶ್ಚಾಪಿ - ಭರತನೂ ಕೂಡ, ವಕ್ತವ್ಯಃ - ಹೇಳತಕ್ಕವನು, ಯಥಾ - ಹೇಗೆ, ರಾಜನಿ-ಧೊರೆಯಲ್ಲಿ, ವರ್ತಸೇ-ಇರುವೆಯೋ, ತಥಾ - ಹಾಗೆ, ಸರ್ವಾಸು - ಸಮಸ್ತರಾದ, ಮಾತೃಷು - ತಾಯಿಯರಲ್ಲಿ, ಅವಿಶೇಷತಏವ - ತಾರತಮ್ಯವಿಲ್ಲದವನಂತೆಯೇ, ವರ್ತೇಥಾಃ - ಇರು, ತವ-ನಿನಗೆ, ಕೈಕೇಯೀ-ಕೈಕೇಯೀದೇವಿಯು, ಯಥಾ - ಹೇಗೆಯೋ, ಸುಮಿತ್ರಾಚ - ಸುಮಿತ್ರಾದೇವಿಯೂ ಕೂಡ, ವಿಶೇಷತಃ - ಅತಿಶಯವಾಗಿ, ಯಥಾ - ಹೇಗೆಯೋ, ತಥೈವ - ಹಾಗೆಯೇ, ಮಮಮಾತಾ - ನನ್ನ ತಾಯಿಯಾದ, ದೇವೀ - ಕೌಸಲ್ಯಾದೇವಿಯು, ವಿಶೇಷತಃ - ಅತಿಶಯವಾಗಿ, (ದ್ರಷ್ಟವ್ಯಾ - ನೋಡತಕ್ಕವಳು,) ತಾತಸ್ಯ - ತಂದೆಗೆ, ಪ್ರಿಯಕಾಮೇನ - ಇಷ್ಟವನ್ನು ಕೋರುವುದರಿಂದ, ಯೌವರಾಜ್ಯಂ - ಯೌವರಾಜ್ಯವನ್ನು, ಅಪೇಕ್ಷತಾ - ಇಚ್ಛಿಸುತ್ತಿರುವ, ತ್ವಯಾ - ನಿನ್ನಿಂದ, ಉಭಯೋಃ - ಇಹಪರಗಳಾದ, ಲೋಕಯೋಃ - ಲೋಕಗಳ, ಸುಖಂ - ಜನಗಳಿಗೆ ಸುಖವನ್ನು, ಏಧಿತುಂ - ವೃದ್ಧಿಗೊಳಿಸುವುದಕ್ಕೆ, ಶಕ್ಯಂ - ಸಾಧ್ಯವು, (ಗೋ) ಯೌವರಾಜ್ಯಂ - ಯೌವರಾಜ್ಯವನ್ನು, ಅಪೇಕ್ಷತಾ - ಇಚ್ಛಿಸುತ್ತಿರುವ, ತ್ವಯಾ - ನಿನ್ನಿಂದ, ಉಭಯುರ್ಲೋಕಯೋಃ - ಇಹಲೋಕ ಪರಲೋಕಗಳಲ್ಲಿ, ತಾತಸ್ಯ - ತಂದೆಯಾದ ದಶರಥರಾಯನಿಗೆ, ಸುಖಂ - ಸುಖವನ್ನು, ಏಧಿತುಂ - ವೃದ್ಧಿಗೊಳಿಸುವದಕ್ಕೆ, ಶಕ್ಯಂ- ಸಾಧ್ಯವು. ॥ ೩೪-೩೬ ॥ ರಾಮೇಣ - ಶ್ರೀರಾಮನಿಂದ, ನಿವರ್ತ್ಯಮಾನಃ - ಹಿಂತಿರುಗಿಸಲ್ಪಟ್ಟ,

ಇಷ್ಟೆಯಲ್ಲದೆ ಯುವರಾಜ ಪದವೀಧರನಾಗುವ ಭರತನಿಗೀರೀತಿ ತಿಳುಹು ; "ಎಲೈ ಭರತನೆ! ನೀನು ಮಹಾರಾಜನ ವಿಷಯದಲ್ಲಿ ಯಾವ ರೀತಿಯಾಗಿ ನಡೆದುಕೊಳ್ಳುವೆಯೋ, ಅದೇ ರೀತಿಯಲ್ಲಿ ತಾಯಿಯರಲ್ಲೆಲ್ಲ ಯಾವ ವಿಧವಾದ ತಾರತಮ್ಯ ಬುದ್ಧಿಯನ್ನೂ ತೋರದೆ ಏಕರೀತಿಯಿಂದ ನಡೆದುಕೊಳ್ಳುವವನಾಗು. ನಿನ್ನತಾಯಿಯಾದ ಕೈಕೇಯಿಗಿಂತಲೂ ಲಕ್ಷ್ಮಣ ಜನನಿಯಾದ ಸುಮಿತ್ರಾದೇವಿಯು ವಿಶೇಷವಾಗಿ ಗೌರವಿಸಲ್ಪಡತಕ್ಕವಳು ; ಈಕೆಗಿಂತಲೂ ನನ್ನ ತಾಯಿಯಾದ ಕೌಸಲ್ಯಾದೇವಿಯು ಹೆಚ್ಚಾಗಿ ಗೌರವಿಸಲ್ಪಡತಕ್ಕವಳು. ತಂದೆಗೆ ಸಂತೋಷವನ್ನುಂಟುಮಾಡಲೋಸುಗ ಯೌವರಾಜ್ಯವನ್ನು ಹೊಂದುವವನಾಗು. ಇದರಿಂದ ನೀನು ತಂದೆಗೆ ಇಹಪರ ಲೋಕಗಳೆರಡರಲ್ಲಿಯೂ ಸುಖವನ್ನುಂಟುಮಾಡುವವನಾಗುತ್ತೀಯೆ." ॥ ೩೨-೩೬ ॥ ಶ್ರೀರಾಮನಿಂತು ನುಡಿದು ಅಯೋಧ್ಯೆಗೆ ಹಿಂತಿರುಗೆಂದು ಆ ಸುಮಂತ್ರನಿಗೆ ಹೇಳಲು, ಆತನು ದುಃಖಾಕ್ರಾಂತನಾಗಿ ಆ ಶ್ರೀರಾಮನ ಮಾತುಗಳೆಲ್ಲವನ್ನೂ

ನಿವರ್ತ್ಯಮಾನೋ ರಾಮೇಣ ಸುಮಂತ್ರ ಶ್ಶೋಕಕರ್ಶಿತಃ ॥ ತತ್ಸರ್ವಂ
ವಚನಂ ಶ್ರುತ್ವಾ ಸ್ನೇಹಾತ್ಕಾಕುತ್‌ಸ್ಥ ಮಬ್ರವೀತ್ ॥ ೩೭ ॥ ಯದಹಂ
ನೋಪಚಾರೇಣ ಬ್ರೂಯಾಂ ಸ್ನೇಹಾದ ವಿಕ್ಲಬಃ ॥ ಭಕ್ತಿಮಾನಿತಿ ತತ್ತಾವ
ದ್ವಾಕ್ಯಂ ತ್ವಂ ಕ್ಷಂತು ಮರ್ಹಸಿ ॥ ೩೮ ॥ ಕಥಂಹಿ ತ್ವದ್ವಿಹೀನೋಽಹಂ ಪ್ರತಿ
ಯಾಸ್ಯಾಮಿ ತಾಂ ಪುರೀಂ ॥ ತವತಾವ (೧) ದ್ವಿಯೋಗೇನ ಪುತ್ರಶೋಕಾಕುಲಾ
ಮಿವ ॥ ೩೯ ॥ ಸರಾಮಮಪಿ ತಾವನ್ಮೇ ರಥಂ ದೃಷ್ಟ್ವಾ ತದಾ ಜನಃ ॥ ವಿನಾ
ರಾಮಂ ರಥಂ ದೃಷ್ಟ್ವಾ ವಿದೀರ್ಯೇತಾಪಿ ಸಾ ಪುರೀ ॥ ೪೦ ॥ ದೈನ್ಯಂಹಿ

ಸುಮಂತ್ರಃ - ಸುಮಂತ್ರನು, ಶೋಕಕರ್ಶಿತಃ, ಶೋಕ - ವ್ಯಸನದಿಂದ, ಕರ್ಶಿತಃ - ಬತ್ತಿದವನಾಗಿ, ಸರ್ವಂ - ಸಮಸ್ತವಾದ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಸ್ನೇಹಾತ್ - ವಿಶ್ವಾಸ ದಿಂದ, ಕಾಕುತ್‌ಸ್ಥಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥ ೩೭ ॥ ಅಹಂ - ನಾನು, ಅವಿಕ್ಲಬಃ - ದೃಢವಾಗಿ, ಯತ್ - ಯಾವ ಮಾತನ್ನು, ಬ್ರೂಯಾಂ - ಹೇಳಿದೆನೋ, ತತ್- ಅದು, ಉಪಚಾರೇಣ - ಸೇವಾಧರ್ಮದಿಂದ, ನಬ್ರೂಯಾಂ - ಹೇಳಲಿಲ್ಲ, ಕಿಂತು - ಮತ್ತೇನಂದರೆ, ಸ್ನೇಹಾತ್ - ಸ್ನೇಹದಿಂದ, ಬ್ರೂಯಾಂ - ಹೇಳಿದೆನು, ತದ್ವಾಕ್ಯಂ - ಆ ಮಾತನ್ನು, ತ್ವಂತಾವತ್- ನೀನಾದರೆ, ಭಕ್ತಿಮಾನಿತಿ - ಭಕ್ತಿಯುಳ್ಳವನೆಂದು, ಕ್ಷಂತುಂ - ಸೈರಿಸುವದಕ್ಕೆ, ಅರ್ಹಸಿ - ಯೋಗ್ಯ ನಾಗು. ॥ ೩೮ ॥ ತವ - ನಿನ್ನ, ವಿಯೋಗೇನತಾವತ್ - ಅಗಲುವಿಕೆಯಿಂದಲೇ, ಪುತ್ರಶೋಕಾ ಕುಲಾಮಿವಸ್ಥಿತಾಂ, ಪುತ್ರಶೋಕ-ಮಗನ ವಿಯೋಗದಿಂದುಂಟಾದ ದುಃಖದಿಂದ, ಆಕುಲಾಮಿವಸ್ಥಿತಾಂ- ವ್ಯಾಕುಲವಾದಂತಿರುವ, ತಾಂಪುರೀಂ - ಆ ಪಟ್ಟಣವನ್ನು ಕುರಿತು, ಅಹಂ - ನಾನು, ತ್ವದ್ವಿಹೀನಃ - ನಿನ್ನಿಂದ ರಹಿತನಾಗಿ, ಕಥಂಹಿ - ಹೇಗೆತಾನೆ, ಪ್ರತಿಯಾಸ್ಯಾಮಿ - ಹಿಂದಕ್ಕೆಹೋಗಲಿ ॥ ೩೯ ॥ ಸರಾಮಂ - ರಾಮನಿಂದೊಡಗೂಡಿದ, ರಥಂ - ರಥವನ್ನು, ತದಾತಾವತ್ - ಆ ಕಾಲದಲ್ಲಾದರೆ, (ಅಂದರೆ ನಾವು ಹೊರಟುಬರುವ ವೇಳೆಯಲ್ಲಿ) ಜನಃ - ಜನವು, ಪುರೀಚ-ಆ ಪಟ್ಟಣವೂ, ದೃಷ್ಟ್ವಾ- ಕಂಡು, ಇದಾನೀಂ - ಈಗ, ರಾಮಂವಿನಾ - ಶ್ರೀರಾಮನನ್ನುಳಿದಿರುವ, ರಥಂ-ತೇರನ್ನು, ದೃಷ್ಟ್ವಾ-

ಕೇಳಿ ಸ್ನೇಹಭಾವದಿಂದಾರಾಮನನ್ನು ಕುರಿತು ಹೀಗೆಂದನು. "ಓ ರಘುಕುಲೋತ್ತಮಾ! ನಾನು ಸ್ನೇಹದಿಂದ ಉಪಚಾರವಿಲ್ಲದೆ ಹೇಳಿದರೂ, ಭಕ್ತನು ಹೇಳುತ್ತಿರುವನೆಂದೆಣಿಸಿ ಕ್ಷಮಿಸುವವನಾಗು! ಎಲೈ ಶ್ರೀರಾಮನೆ! ನಿನ್ನನ್ನಿಲ್ಲಿ ತೊರೆದು ನೀನಿಲ್ಲದೆ, ಪುತ್ರವಿಯೋಗ ದಿಂದ ಅಳುತ್ತಿರುವುದೋ ಎಂಬಂತಿರುವ ಅಯೋಧ್ಯಾಪಟ್ಟಣಕ್ಕೆ ನಾನೊರ್ವನೇ ಎಂತು ಹೋಗಲಿ? ಆಗ ಅಯೋಧ್ಯಾನಗರವಾಸಿಗಳೆಲ್ಲರೂ ನಿನ್ನನ್ನೇರಿಸಿಕೊಂಡು ಬಂದ ಈ ರಥ ವನ್ನು ನೋಡಿದರು! ಈಗ ನಿನ್ನಿಂದ ಹೀನವಾದ ಈ ರಥವನ್ನು ನೋಡಿದರೆ ಅವರ ಹೃದ ಯವು ಪಟಪಟನೆ ಸೀಳಿ ಹೋಗದಿರುವುದೆ? ಶೂನ್ಯವಾದ ಆ ರಥವನ್ನು ನೋಡಿ ಇಡೀ

(೧) ಟಿ. "ತವತಾತ" ಎಂದು ಪಾಠ ಭೇದವಿದೆ. ಅರ್ಥ:—"ತಾತ" ಎಂಬ ಪದಕ್ಕೆ "ಎಲೈ ತಂದೆಯೆ!" ಎಂದರ್ಥ ಅಥವ ಸುಮಂತ್ರನು ವೃದ್ಧನಾದುದರಿಂದ "ಮಗುವೆ!" ಎಂದಾದರೂ ಸಂಬೋಧಿಸಿರಬಹುದೆಂದು ತೋರುತ್ತದೆ.

ನಗರೀ ಗಚ್ಛೇದ್ದೃಷ್ಟ್ವಾ ಶೂನ್ಯಮಿಮಂ ರಥಂ || ಸೂತಾವಶೇಷಂ ಸ್ವಂ ಸೈನ್ಯಂ ಹತವೀರಮಿವಾಹವೇ || ೪೧ || ದೂರೇಪಿ ನಿವಸಂತಂ ತ್ವಾಂ ಮಾನಸೇನಾಗ್ರತಃ ಸ್ಥಿತಂ || ಚಿಂತಯಂತ್ಯೋದ್ಯ ನೂನಂ ತ್ವಾಂ ನಿರಾಹಾರಾಃ ಕೃತಾಃ ಪ್ರಜಾಃ || ೪೨ || ದೃಷ್ಟಂ ತದ್ಧಿ ತ್ವಯಾ ರಾಮ ಯಾದೃಶಂ ತ್ವತ್ಪ್ರವಾಸನೇ || ಪ್ರಜಾನಾಂ ಸಂಕುಲಂ ವೃತ್ತಂ ತ್ವಚ್ಛೋಕಕ್ಲಾಂತಚೇತಸಾಂ || ೪೩ || ಆರ್ತನಾದೋಹಿ ಯಃ ಪೌರೈರ್ಮುಕ್ತಸ್ತ್ವದ್ವಿಪ್ರವಾಸನೇ || ಸರಥಂ ಮಾಂ

ಕಂಡು, ವಿದೀರ್ಯೇತಾಪಿ - ವ್ಯಸನದಿಂದ ಸೀಳಿಹೋಗುವದೋ ಏನೋ. || ೪೦ || ಆಹವೇ - ಕಾಳಗದಲ್ಲಿ, ಹತವೀರಂ - ಕೊಲ್ಲಲ್ಪಟ್ಟ ಶೂರನುಳ್ಳ, ಸೂತಾವಶೇಷಂ - ಸೂತನಿಂದ ಉಳಿದಿರುವ, ರಥಂ - ರಥವನ್ನು, ದೃಷ್ಟ್ವಾ - ಕಂಡು, ಸ್ವಂಸೈನ್ಯಮಿವ - ತನ್ನ ಸೇನೆಯಂತೆ, ಸಾನಗರೀ - ಆ ಅಯೋಧ್ಯಾಪಟ್ಟಣವು, ಶೂನ್ಯಂ - ನಿನ್ನಿಂದ ರಹಿತವಾದ, ಇಮಂರಥಂ - ಈ ತೇರನ್ನು, ದೃಷ್ಟ್ವಾ - ಕಂಡು, ದೈನ್ಯಂ - ದೀನಭಾವವನ್ನು, ಗಚ್ಛೇದ್ಧಿ - ಹೊಂದುವದಷ್ಟೆ. || ೪೧ || ಅಗ್ರತಃ - ಮುಂಗಡೆ, ಸ್ಥಿತಂ - ಇರುವ, (ಅಂದರೆ ವನಪ್ರಯಾಣೋನ್ಮುಖನಾದ ಕಾರಣ) ದೂರೇಪಿ - ದೂರದಲ್ಲಿ, ನಿವಸಂತಂ - ವಾಸಿಸುತ್ತಿರುವ, ತ್ವಾಂ - ನಿನ್ನನ್ನು, ಮಾನಸೇನ - ಮನಸ್ಸಿನಿಂದ, ಚಿಂತಯಂತ್ಯಃ - ಆಲೋಚಿಸುತ್ತಿರುವ, ಪ್ರಜಾಃ - ಪ್ರಜೆಗಳು, ನಿರಾಹಾರಾಃ - ಆಹಾರವಿಲ್ಲದವರಾಗಿ, ಕೃತಾಃ - ಮಾಡಲ್ಪಟ್ಟರು, ಅದ್ಯ - ಈಗ, ತ್ವಾಂ-ವನವನ್ನುಹೊಂದಿದ ನಿನ್ನನ್ನು ಕೇಳಿ, (ಮರಿಸ್ಯಂತಿ-ಸಾಯುವರು,) (ಗೋ) ಪ್ರಜಾಃ - ಜನಗಳು, ದೂರೇ - ದೂರದಲ್ಲಿ, ನಿವಸಂತಮಪಿ - ಇರುವರಾದರೂ, ತ್ವಾಂ - ನಿನ್ನನ್ನು, ಮಾನಸೇನ - ಮನದಿಂದ, ಅಗ್ರತಃ - ಇದಿರಾಗಿ, ಸ್ಥಿತಂ - ಇರುವ, ತ್ವಾಂ - ನಿನ್ನನ್ನಾಗಿ, ಚಿಂತಯಂತ್ಯಃ - ನೋಡುತ್ತ, ನಿರಾಹಾರಾಃಕೃತಾಃ - ಆಹಾರವಿಲ್ಲದವರಾಗಿ ಮಾಡಲ್ಪಟ್ಟರು. || ೪೨ || ಹೇ ರಾಮ - ಎಲೈ ಶ್ರೀರಾಮನೇ, ತ್ವಚ್ಛೋಕಕ್ಲಾಂತಚೇತಸಾಂ - ನಿನ್ನ ವ್ಯಸನದಿಂದ ಬಳಲಿದ ಮನಸುಳ್ಳ, ಪ್ರಜಾನಾಂ - ಜನಗಳಿಗೆ, ತ್ವತ್ಪ್ರವಾಸನೇ - ನಿನ್ನ ವನವಾಸ ಪ್ರಯಾಣಕಾಲದಲ್ಲಿ, ಯಾದೃಶಂ - ಯಾವ, ಸಂಕುಲಂ - ಕ್ಷೋಭೆಯು, ವೃತ್ತಂ-ಆಯಿತೋ, ತತ್ - ಅಂತಹ ದುಃಖವು, ತ್ವಯಾ - ನಿನ್ನಿಂದ, ದೃಷ್ಟಂಹಿ - ನೋಡಲ್ಪಟ್ಟಿತಷ್ಟೆ. || ೪೩ || ತ್ವದ್ವಿಪ್ರವಾಸನೇ, ತ್ವತ್ - ನಿನ್ನ, ವಿಪ್ರವಾಸನೇ - ಪ್ರಸ್ಥಾನಕಾಲದಲ್ಲಿ, ಯಃ - ಯಾವ, ಆರ್ತನಾದಃ - ದೀನಧ್ವನಿಯು, ಪೌರೈಃ - ಪಟ್ಟಣಸ್ಥರಿಂದ, ಮುಕ್ತಃ - ಬಿಡಲ್ಪಟ್ಟಿತೋ, ಸರಥಂ -

---

ಅಯೋಧ್ಯಾನಗರವೇ ದೈನ್ಯಭಾವವನ್ನು ಹೊಂದುವುದು ! ಅಥವ ರಣಾಂಗಣದಲ್ಲಿ ಹತ ಶೂರನುಳ್ಳುದಾಗಿಯೂ, ಸೂತಮಾತ್ರಾವಶಿಷ್ಟವಾಗಿಯೂ ಇರುವ ರಥದಂತೆ, ನಾನು ಮಾತ್ರವಿರುವ ಆ ರಥವನ್ನು ನೋಡಿ ಜನರು ದೈನ್ಯವನ್ನು ಹೊಂದದಿರುವರೆ? ರಾಮ ! ನೀನು ದೂರದಲ್ಲಿದ್ದರೂ, ಮನಸ್ಸಿನಲ್ಲಿ ನಿನ್ನನ್ನೇ ಧ್ಯಾನ ಮಾಡಿಕೊಂಡು ಅಯೋಧ್ಯಾನಗರದ ಪ್ರಾಣಿಗಳೆಲ್ಲರೂ ಆಹಾರವನ್ನು ತೊರೆದಿರುವರು ; ಈಗ ನೀನು ಅರಣ್ಯವನ್ನು ಸೇರಿದೆಯೆಂಬುದನ್ನವರು ಕೇಳಿದರೆ ನಿನ್ನಗಲಿಕೆಯಿಂದುಂಟಾದ ದುಃಖದಿಂದವರೆಲ್ಲರೂ ಅಲ್ಲಲ್ಲಿ ಗುಂಪುಗೂಡಿ ರೋದನ ಮಾಡುತ್ತಾರೆ; ಇದನ್ನು ನೀನು ನೋಡಿಯೇ ಇರುವೆಯಲ್ಲವೆ? ನೀನು

ನಿಶಾಮ್ಯೈವ ಕುರ್ಯುರ್ಶ್ಶತಗುಣಂ ತತಃ ॥ ೪೪ ॥ ಅಹಂ ಕಿಂಚಾಪಿ ವಕ್ಷ್ಯಾಮಿ ದೇವೀಂ ತವ ಸುತೋ ಮಯಾ ॥ ನೀತೋಽಸೌ ಮಾತುಲಕುಲಂ ಸಂತಾಪಂ ಮಾಕೃಥಾ ಇತಿ ॥ ೪೫ ॥ ಅಸತ್ಯಮಪಿ ನೈವಾಹಂ ಬ್ರೂಯಾಂ ವಚನ ಮೀದೃಶಂ॥ಕಥಮಪ್ರಿಯ ಮೇವಾಹಂ ಬ್ರೂಯಾಂ ಸತ್ಯ ಮಿದಂ ವಚಃ ॥೪೬॥ ಮಮ ತಾವನ್ನಿಯೋಗಸ್ಥಾ ಸ್ತ್ವದ್ಬಂಧುಜನ ವಾಹಿನಃ ॥ ಕಥಂ ರಥಂ ತ್ವಯಾ ಹೀನಂ ಪ್ರವಕ್ಷ್ಯಂತಿ ಹಯೋತ್ತಮಾಃ ॥ ೪೭ ॥ ತನ್ನಶಕ್ಷ್ಯಾಮ್ಯಹಂ ಗಂತು ಮಯೋಧ್ಯಾಂ ತ್ವದೃತೇಽನಘ ॥ ವನವಾಸಾನುಯಾನಾಯ ಮಾಮನುಜ್ಞಾತು

ನಿನ್ನಿಂದ ವರ್ಜಿತವಾದ ರಥದಿಂದೊಡಗೂಡಿದ, ಮಾಂ - ನನ್ನನ್ನು, ನಿಶಾಮ್ಯೈವ - ಕಾಣುತ್ತಲೇ, ತತಃ - ಆ ಪೂರ್ವದಲ್ಲಿಮಾಡಿದ ರೋದನಕ್ಕಿಂತಲೂ, ಶತಗುಣಂ - ನೂರರಷ್ಟು, ಕುರ್ಯುಃ - ಮಾಡುವರು. ॥ ೪೪ ॥ ಕಿಂಚ - ಇಷ್ಟುಮಾತ್ರವಲ್ಲದೆ, ಅಹಂ - ನಾನು, ದೇವೀಂ - ಕೌಸಲ್ಯಾದೇವಿಯನ್ನು ಕುರಿತು, ತವ - ನಿನ್ನ, ಅಸೌಸುತಃ - ಈ ಮಗನು, ಮಯಾ ನನ್ನಿಂದ, ಮಾತುಲಕುಲಂ - ಸೋದರಮಾವನಮನೆಯನ್ನು, ನೀತಃ-ಹೊಂದಿಸಲ್ಪಟ್ಟನು, ಸಂತಾಪಂ-ಸಂಕಟವನ್ನು, ಮಾಕೃಥಾ ಇತಿ-ಮಾಡಬೇಡವೆಂದು, ವಕ್ಷ್ಯಾಮಿ - ಹೇಳಲೇ, ಈದೃಶಂ - ಇಂತಹ, ಅಸತ್ಯಮಪಿ - ಸುಳ್ಳಾದ, ವಚನಂ - ಮಾತನ್ನು, ಅಹಂ - ನಾನು, ನೈವಬ್ರೂಯಾಂ - ಹೇಳಲೇ ಹೇಳಲಾರೆನು, ಅಪ್ರಿಯಂ - ಅನಿಷ್ಟವಾದ, ಸತ್ಯಂ - ಯಥಾರ್ಥವಾದ, ಇದಂವಚಃ - ಈ ಮಾತನ್ನು, ಕಥಂ ಹೇಗೆ, ಬ್ರೂಯಾಂ-ಹೇಳಲಿ. ॥ ೪೫-೪೬ ॥ ಮಮ - ನನ್ನ, ನಿಯೋಗಸ್ಥಾಃ - ಅಧೀನದಲ್ಲಿರುವ, ತ್ವದ್ಬಂಧುಜನವಾಹಿನಃ-ನಿನ್ನನ್ನೂ ನಿನ್ನ ಬಂಧುಗಳಾದ ಸೀತಾಲಕ್ಷ್ಮಣರನ್ನೂ ವಹಿಸುತ್ತಿರುವ, ಹಯೋತ್ತಮಾಃ - ಉತ್ತಮವಾದ ಈ ಕುದುರೆಗಳು, ತ್ವಯಾ - ನಿನ್ನಿಂದ, ಹೀನಂ-ವರ್ಜಿತವಾದ, ರಥಂ - ರಥವನ್ನು, ಕಥಂ-ಹೇಗೆ, ಪ್ರವಕ್ಷ್ಯಂತಿ - ವಹಿಸುವವು. ॥ ೪೭ ॥ ಹೇ ಅನಘ - ಎಲೈ ಪೂಜ್ಯನೇ, ಅಹಂ - ನಾನು, ತತ್ - ಆ ಕಾರಣ, ತ್ವದೃತೇ - ನಿನ್ನ ವಿನಾ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಗಂತುಂ - ಹೋಗುವದಕ್ಕೆ, ನಶಕ್ಷ್ಯಾಮಿ - ಸಮರ್ಥನಾಗಲಾರೆನು, ವನವಾಸಾನುಯಾನಾಯ - ಅರಣ್ಯವಾಸಕ್ಕೆ ಅನುಸರಿಸಿಬರುವದಕ್ಕೆ, ಮಾಂ - ನನ್ನನ್ನು, ಅನುಜ್ಞಾತಂ - ಸಮ್ಮತಿಸಲು, ಅರ್ಹಸಿ-

---

ಅರಣ್ಯಕ್ಕೆ ಹೊರಟು ಬಂದ ಬಳಿಕ ಪ್ರಜೆಗಳ ಆರ್ತನಾದವು ಸ್ವಲ್ಪಮಟ್ಟಿಗೆ ನಿಂತಿರುವುದು; ನಾನು ಮರಳಿ ಅಯೋಧ್ಯೆಗೆ ಹೋದರೆ, ರಥದಲ್ಲಿ ಒಬ್ಬಂಟಿಗನಾಗಿರುವ ನನ್ನನ್ನು ನೋಡಿ ಅವರೆಲ್ಲರೂ ಮೊದಲಿಗಿಂತ ನೂರಷ್ಟು ಹೆಚ್ಚಾಗಿ ಗೋಳಿಡುತ್ತಾರೆ. ನಾನು ಪಟ್ಟಣಕ್ಕೆ ಹಿಂತಿರುಗಿ ಹೋಗಿ, ನಿನ್ನ ವಿಷಯವನ್ನು ಕೇಳುವ ಪ್ರಜೆಗಳಿಗೇನೆಂದು ಹೇಳಲಿ! ನಿನ್ನ ತಾಯಿಯಾದ ಕೌಸಲ್ಯಾದೇವಿಯು ನಿನ್ನ ವೃತ್ತಾಂತವನ್ನು ಕೇಳಿದರೆ ಆಗ ನಾನು ಏನೆಂದು ಹೇಳಲಿ? "ತಾಯೆ! ನಿನ್ನ ಮಗನಾದ ಶ್ರೀರಾಮನನ್ನು ಸೋದರಮಾವನ ಮನೆಯಲ್ಲಿಬಿಟ್ಟು ಬಂದೆನು" ಎಂದು ಹೇಳಲೆ? ಇಲ್ಲವೆ ವನಕ್ಕೆ ಕಳುಹಿಸಿ ಬಂದೆನೆಂದು ಹೇಳಿ ಆ ದೇವಿಗೆ ವ್ಯಥೆಯುಂಟು ಮಾಡಲೆ? ಸುಳ್ಳನ್ನು ಹೇಳಲಾದೀತೆ? ಏನು ಮಾಡಲಿ; ನನ್ನ ಕೈಗೆ ಸಿಕ್ಕಿ, ನಿನ್ನನ್ನೂ, ಸೀತಾದೇವಿಯನ್ನೂ, ಲಕ್ಷ್ಮಣಸ್ವಾಮಿಯನ್ನೂ ವಹಿಸುವ ಈ ಅಶ್ವ ಶ್ರೇಷ್ಠಗಳು

ಮರ್ಹಸಿ ‖ ೪೮ ‖ ಯದಿ ಮೇ ಯಾಚಮಾನಸ್ಯ ತ್ಯಾಗಮೇವ ಕರಿಷ್ಯಸಿ ‖ ಸರಥೋಗ್ನಿಂ ಪ್ರವೇಕ್ಷ್ಯಾಮಿ ತ್ಯಕ್ತಮಾತ್ರ ಇಹ ತ್ವಯಾ ‖ ೪೯ ‖ ಭವಿಷ್ಯಂತಿ ವನೇ ಯಾನಿ ತಪೋ ವಿಘ್ನಕರಾಣಿ ತೇ ‖ ರಥೇನ ಪ್ರತಿಬಾಧಿಷ್ಯೇ ತಾನಿ ಸತ್ವಾನಿ ರಾಘವ ‖ ೫೦ ‖ ತ್ವತ್ಕೃತೇನ ಮಯಾವಾಪ್ತಂ ರಥಚರ್ಯಾಕೃತಂ ಸುಖಂ ‖ ಆಶಂಸೇ ತ್ವತ್ಕೃತೇನಾಹಂ ವನವಾಸಕೃತಂ ಸುಖಂ ‖ ೫೧ ‖ ಪ್ರಸೀದೇಚ್ಛಾಮಿ ತೇಽರಣ್ಯೇ ಭವಿತುಂ ಪ್ರತ್ಯನಂತರಃ ‖ ಪ್ರೀತ್ಯಾಭಿಹಿತ ಮಿಚ್ಛಾಮಿ

ಯೋಗ್ಯನಾಗು. ‖ ೪೮ ‖ ಯಾಚಮಾನಸ್ಯ - ಬೇಡುತ್ತಿರುವ, ಮೇ - ನನ್ನ, ತ್ಯಾಗಮೇವ - ಅಗಲುವಿಕೆಯನ್ನೇ, ಕರಿಷ್ಯಸಿಯದಿ - ಮಾಡುವನೇ ಆದರೆ, ತ್ವಯಾ - ನಿನ್ನಿಂದ, ತ್ಯಕ್ತಮಾತ್ರಃ- ಬಿಡಲ್ಪಟ್ಟವನಾಗಿ, ಸರಥಃ - ರಥದಿಂದೊಡಗೂಡಿ, ಇಹ - ಇಲ್ಲಿ, ಅಗ್ನಿಂ - ಅಗ್ನಿಯನ್ನು, ಪ್ರವೇಕ್ಷ್ಯಾಮಿ - ಪ್ರವೇಶವಮಾಡುವೆನು. ‖ ೪೯ ‖ ವನೇ - ಅರಣ್ಯದಲ್ಲಿ, ತೇ - ನಿನಗೆ, ಯಾನಿ - ಯಾವುವು, ತಪೋವಿಘ್ನಕರಾಣಿ - ತಪಸ್ಸಿಗೆ ಅಂತರಾಯವನ್ನುಂಟುಮಾಡುವವು, ಭವಿಷ್ಯಂತಿ - ಆಗುವವೋ, ಹೇ ರಾಘವ - ಎಲೈ ಶ್ರೀರಾಮನೆ, ತಾನಿಸತ್ವಾನಿ - ಆ ಜಂತುಗಳನ್ನು, ರಥೇನ - ರಥಸಾಧನದಿಂದ, ಪ್ರತಿಬಾಧಿಷ್ಯೇ - ಪೀಡಿಸುವೆನು. ‖ ೫೦ ‖ ತ್ವತ್ಕೃತೇ - ನಿನಗೋಸುಗ, ರಥಚರ್ಯಾಕೃತಂ, ರಥಚರ್ಯಾ - (ಗೋ + ಮ) ಪಟ್ಟಾಭಿಷಿಕ್ತನಾದ ನಿನ್ನ ರಥಸಂಚಾರದಿಂದ, ಕೃತಂ- ಮಾಡಲ್ಪಟ್ಟ, ಸುಖಂ-ಸುಖವು, ಮಯಾ-ನನ್ನಿಂದ, ನಾವಾಪ್ತಂ - ಹೊಂದಲ್ಪಡಲಿಲ್ಲ, ತ್ವತ್ಕೃತೇನ- ನಿನಗೆ ಸಹಾಯವನ್ನು ಮಾಡುವುದರಿಂದ, ಅಹಂ - ನಾನು, ವನವಾಸಕೃತಂ - ವನವಾಸದಿಂದ ಮಾಡಲ್ಪಟ್ಟ, ಸುಖಂ - ಸುಖವನ್ನು, ಆಶಂಸೇ - ಇಚ್ಛಿಸುತ್ತೇನೆ, (ಗೋ + ಮ) ತ್ವತ್ಕೃತೇನ, ತ್ವತ್ - ನಿನ್ನಿಂದ, ಕೃತೇನ - ಮಾಡಲ್ಪಟ್ಟ ಅನುಗ್ರಹದಿಂದ, ರಥಚರ್ಯಾಕೃತಂ - ರಥನಡೆಯಿಸುವಿಕೆಯಿಂದ ಮಾಡಲ್ಪಟ್ಟ, ಸುಖಂ - ಸುಖವು, ಮಯಾ - ನನ್ನಿಂದ, ಅವಾಪ್ತಂ - ಹೊಂದಲ್ಪಟ್ಟಿತು. ‖ ೫೧ ‖ ಅರಣ್ಯೇ - ಕಾಡಿನಲ್ಲಿ, ತೇ - ನಿನ್ನ, ಪ್ರತ್ಯನಂತರಂ - ಸಮೀಪದಲ್ಲಿರುವವನು, ಭವಿತುಂ - ಆಗುವ

ನಿನ್ನನ್ನುಳಿದ ಈ ರಥವನ್ನೂ ನನ್ನನ್ನೂ ಹೇಗೆತಾನೆ ವಹಿಸುತ್ತವೆ? ಸನ್ಮಿತ್ರನಾದ ನಿನ್ನನ್ನು ಳಿದು ಒಬ್ಬಂಟಿಗನಾಗಿಯೇ ನಗರಕ್ಕೆ ಹಿಂತಿರುಗುವ ನನ್ನನ್ನು ಈ ಕುದುರೆಗಳು ಹೇಗೆತಾನೆ ಹೊರುತ್ತವೆ? ಆದುದರಿಂದೆಲೈ ಪೂಜ್ಯನೆ! ನಾನು ನಿನ್ನ ಹೊರತು ನಗರಕ್ಕೆ ತೆರಳುವುದಿಲ್ಲವು. ನಿನ್ನ ಸಂಗಡಲೇ ಬರುವುದಕ್ಕೆ ಅಪ್ಪಣೆಯನ್ನು ಕೊಡು, ಬಹು ವಿಧವಾಗಿ ಬೇಡುವ ನನ್ನನ್ನು ತೊರೆದು ನೀನು ತೆರಳಿದೆಯಾದರೆ ನಾನಿಲ್ಲಿಯೇ ರಥ ಸಹಿತನಾಗಿ ಅಗ್ನಿಪ್ರವೇಶವನ್ನು ಮಾಡುತ್ತೇನೆ. ಎಲೈ ಶ್ರೀರಾಮನೆ! ನಿನ್ನ ವನವಾಸಕ್ಕೆ ವಿಘ್ನ ಮಾಡುವ ಪ್ರಾಣಿಗಳೊಡನೆ ರಥಾರೂಢನಾಗಿ ಯುದ್ಧ ಮಾಡುತ್ತೇನೆ. ನಿನ್ನ ದಯೆಯಿಂದ ನೀನೇರಿದ್ದ ಈ ರಥವನ್ನು ನಡೆಯಿಸಿ ಆ ಸುಖವನ್ನು ಹೊಂದಿದೆನು; ಇನ್ನುಮೇಲೆ ನಿನ್ನ ದಯೆಯಿಂದ ನಿನ್ನೊಡನೆ ಅರಣ್ಯವಾಸವನ್ನು ಮಾಡಿ ನಿನಗೆ ಶುಶ್ರೂಷೆಯನ್ನು ಮಾಡುವುದರಿಂದುಂಟಾದ ಸುಖವನ್ನನುಭವಿಸಲು ಅಪೇಕ್ಷಿಸುತ್ತೇನೆ. ‖ ೩೭-೫೧ ‖ ನಾನೀಕಾಡಿನಲ್ಲಿ ನಿನ್ನೊಡನಿರಬೇಕೆಂದು ಬಯಸುತ್ತೇನೆ. ಆದುದರಿಂದ “ನೀನು ನನ್ನೊಡನೆಯೇ ಇರು” ಎಂದು ನೀನು ಹೇಳಿದರೆ

ಭವ ಮೇ ಪ್ರತ್ಯನಂತರಃ ॥ ೫೨ ॥ ಇಮೇ ಚಾಪಿ ಹಯಾ ವೀರ ಯದಿ ತೇ
ವನವಾಸಿನಃ ॥ ಪರಿಚರ್ಯಾಂ ಕರಿಷ್ಯಂತಿ ಪ್ರಾಪ್ಸ್ಯಂತಿ ಪರಮಾಂ ಗತಿಂ॥೫೩॥
ತವ ಶುಶ್ರೂಷಣಂ ಮೂರ್ಧ್ನಾ ಕರಿಷ್ಯಾಮಿ ವನೇ ವಸನ್ ॥ ಅಯೋಧ್ಯಾಂ
ದೇವಲೋಕಂವಾ ಸರ್ವಥಾ ಪ್ರಜಹಾಮ್ಯಹಂ ॥ ೫೪ ॥ ನಹಿ ಶಕ್ಯಾ ಪ್ರವೇಷ್ಟುಂ
ಸಾ ಮಯಾಽಯೋಧ್ಯಾ ತ್ವಯಾ ವಿನಾ ॥ ರಾಜಧಾನೀ ಮಹೇಂದ್ರಸ್ಯ ಯಥಾ
ದುಷ್ಕೃತ ಕರ್ಮಣಾ ॥ ೫೫ ॥ ವನವಾಸೇ ಕ್ಷಯಂ ಪ್ರಾಪ್ತೇ ಮಮೈಷಹಿ
ಮನೋರಥಃ ॥ ಯದನೇನ ರಥೇನೈವ ತ್ವಾಂ ವಹೇಯಂ ಪುರೀಂ ಪುನಃ ॥೫೬॥

ದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಪ್ರಸೀದ - ಪ್ರಸನ್ನನಾಗಿ, ಮೇ - ನನ್ನ, ಪ್ರತ್ಯನಂತರಃ - ಸಮೀಪದಲ್ಲಿರುವವನು, ಭವ - ಆಗು, ಇತಿ - ಇಂತೆಂದು, ಪ್ರೀತ್ಯಾ - ವಿಶ್ವಾಸದಿಂದ, ಅಭಿಹಿತಂ - ಹೇಳುವಿಕೆಯನ್ನು, ಇಚ್ಛಾಮಿ - ಕೋರುವೆನು. ॥ ೫೨ ॥ ಹೇ ವೀರ - ಎಲೈ ಶೂರನೆ! ಇಮೇ ಹಯಾಶ್ಚಾಪಿ - ಈ ಕುದುರೆಗಳೂ, ವನವಾಸಿನಃ - ವನದಲ್ಲಿ ವಾಸಮಾಡುತ್ತಿರುವ, ತೇ - ನಿನಗೆ, ಪರಿಚರ್ಯಾಂ - ಸೇವೆಯನ್ನು, ಕರಿಷ್ಯಂತಿಯದಿ - ಮಾಡುವುವುಗಳೇ ಆದರೆ, ಪರಮಾಂ - ಉತ್ಕೃಷ್ಟವಾದ, ಗತಿಂ - ಸದ್ಗತಿಯನ್ನು, ಪ್ರಾಪ್ಸ್ಯಂತಿ - ಹೊಂದುವವು. ॥ ೫೩ ॥ ವನೇ - ಅರಣ್ಯದಲ್ಲಿ, ವಸನ್ - ಇರುತ್ತ, ಮೂರ್ಧ್ನಾ - ಶಿರಸ್ಸಿನಿಂದ, ತವ - ನಿನ್ನ, ಶುಶ್ರೂಷಣಂ - ಸೇವೆಯನ್ನು, ಕರಿಷ್ಯಾಮಿ - ಮಾಡುವೆನು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನೂ, ದೇವಲೋಕಂವಾ - ಸ್ವರ್ಗಲೋಕವನ್ನಾದರೂ, ಅಹಂ - ನಾನು, ಸರ್ವಥಾ - ಎಲ್ಲ ರೀತಿಗಳಲ್ಲಿಯೂ, ಪ್ರಜಹಾಮಿ - ಬಿಡುತ್ತೇನೆ. ॥ ೫೪ ॥ ಮಯಾ - ನನ್ನಿಂದ, ತ್ವಯಾವಿನಾ - ನಿನ್ನ ವಿನಹ, ಸಾಅಯೋಧ್ಯಾ - ಆ ಅಯೋಧ್ಯಾಪಟ್ಟಣವು, ಮಹೇಂದ್ರಸ್ಯ - ದೇವೇಂದ್ರನ, ರಾಜಧಾನೀ - ಮುಖ್ಯಪಟ್ಟಣವು, ದುಷ್ಕೃತಕರ್ಮಣೇವ - ಪಾಪಿಷ್ಠನಿಲ್ಲದ, ಮಯಾ - ನನ್ನಿಂದ, ಪ್ರವೇಷ್ಟುಂ - ಪ್ರವೇಶಿಸುವದಕ್ಕೆ, ನಶಕ್ಯಾಹಿ - ಸಾಧ್ಯವಲ್ಲವಷ್ಟೆ. ॥ ೫೫ ॥ ವನವಾಸೇ - ಅರಣ್ಯವಾಸ ಕಾಲವು, ಕ್ಷಯಂ - ಕಳೆಯುವಿಕೆಯನ್ನು, ಪ್ರಾಪ್ತೇ - ಹೊಂದಿದ್ದಾಗಲು, ಅನೇನರಥೇನ - ಈ ರಥದಿಂದ, ಪುರೀಂ - ಅಯೋಧ್ಯೆಯನ್ನು ಕುರಿತು, ಪುನಃ - ಮರಳಿ, ತ್ವಾಂ - ನಿನ್ನನ್ನು, ವಹೇಯಮಿತಿಯತ್ - ಹೊಂದಿಸುವೆ

ಅದನ್ನು ಕೇಳಿ ಆನಂದಿಸಲಪೇಕ್ಷಿಸುತ್ತಿರುವೆನು. ಆದುದರಿಂದೆಲೈ ಶ್ರೀರಾಮನೆ! ಪ್ರಸನ್ನನಾಗು. ನನ್ನಿಷ್ಟವನ್ನು ನೆರವೇರಿಸುವವನಾಗು; ನಿನ್ನ ಸಮೀಪದಲ್ಲಿಯೇ ಇರುತ್ತೇನೆ; ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ; ದಯೆ ತೋರು! ಓ ಶೂರನಾದ ಶ್ರೀರಾಮಚಂದ್ರನೆ! ಈ ಕುದುರೆಗಳು ವನವಾಸಿಯಾದ ನಿನ್ನ ಸೇವೆಯನ್ನು ಮಾಡುತ್ತಿದ್ದರೆ ಉತ್ತಮಗತಿಯನ್ನು ಹೊಂದುತ್ತವೆ! ನಾನಾದರೋ, ನಿನ್ನೊಡನೆ ಈ ಅರಣ್ಯದಲ್ಲಿಯೇ ಇರುತ್ತ ನಿನ್ನ ಶುಶ್ರೂಷೆಯನ್ನು ಮಾಡುತ್ತ, ಪಟ್ಟಣವನ್ನಾಗಲಿ, ಅಷ್ಟೇಕೆ; ಕೊನೆಗೆ ಸ್ವರ್ಗವನ್ನೇ ಆಗಲಿ ಬಯಸೆನು. "ಪಾಪಿಯು ಸ್ವರ್ಗವನ್ನು ಕುರಿತು ಹೇಗೆ ಹೋಗಲಾರನೋ," ಅಂತು ನಾನು ನಿನ್ನ ಹೊರತು ಪಟ್ಟಣವನ್ನು ಪ್ರವೇಶಿಸಲಾರೆನು. ಈ ಅರಣ್ಯವಾಸವು ಸಮಾಪ್ತಿಯಾಗಲು ನಾವೆಲ್ಲರೂ ಇದೇ ರಥದಲ್ಲಿಯೇ ಕುಳಿತು ಅಯೋಧ್ಯೆಯನ್ನು ಸೇರೋಣ! ಇದೇ ನನಗೆ

ಚತುರ್ದಶಹಿ ವರ್ಷಾಣಿ ಸಹಿ ತಸ್ಯ ತ್ವಯಾ ವನೇ ॥ ಕ್ಷಣಭೂತಾನಿ ಯಾಸ್ಯಂತಿ
ಶತಸಂಖ್ಯಾನ್ಯತೋನ್ಯಥಾ ॥ ೫೭ ॥ ಭೃತ್ಯವತ್ಸಲ ! ತಿಷ್ಠಂತಂ ಭರ್ತೃ ಪುತ್ರ
ಗತೇ ಪಥಿ ॥ ಭಕ್ತಂ ಭೃತ್ಯಂ ಸ್ಥಿತಂ ಸ್ಥಿತ್ಯಾಂ ತ್ವಂ ನ ಮಾಂ ಹಾತು ಮರ್ಹಸಿ
॥ ೫೮ ॥ ಏವಂ ಬಹುವಿಧಂ ದೀನಂ ಯಾಚಮಾನಂ ಪುನಃಪುನಃ ॥ ರಾಮೋ
ಭೃತ್ಯಾನುಕಂಪೀತು ಸುಮಂತ್ರ ಮಿದಮಬ್ರವೀತ್ ॥ ೫೯ ॥ ಜಾನಾಮಿ
ಪರಮಾಂ ಭಕ್ತಿಂ ಮಯಿ ತೇ ಭರ್ತೃವತ್ಸಲ ॥ ಶೃಣುಚಾಪಿ ಯದರ್ಥಂ ತ್ವಾಂ
ಪ್ರೇಷಯಾಮಿ ಪುರೀಮಿತಃ ॥ ೬೦ ॥ ನಗರೀಂ ತ್ವಾಂ ಗತಂ ದೃಷ್ಟ್ವಾ ಜನನೀ

ನೆಂಬುವದು ಯಾವದುಂಟೋ, ಏಷಃ - ಇದೇ, ಮಮ - ನನ್ನ, ಮನೋರಥೋಹಿ - ಮನೋರಥವಷ್ಟೆ. ||೫೬|| ವನೇ-ಅರಣ್ಯದಲ್ಲಿ, ತ್ವಯಾಸಹ - ನಿನ್ನೊಡಗೂಡಿರುವ ನನಗೆ, ಚತುರ್ದಶಹಿವರ್ಷಾಣಿ-ಹದಿನಾಲ್ಕು ವರುಷಗಳು, ಕ್ಷಣಭೂತಾನಿ - ಕ್ಷಣಪ್ರಾಯಗಳಾಗಿ, ಯಾಸ್ಯಂತಿ - ಕಳೆದುಹೋಗುತ್ತವೆ, ಅತಃ - ಆದುದರಿಂದ, ಅನ್ಯಥಾ - ಹಾಗಲ್ಲದಿದ್ದರೆ, ಶತಸಂಖ್ಯಾನಿ - ನೂರು ವರುಷಗಳಾಗಿಯೇ, (ಭವಂತಿ - ಆಗುತ್ತವೆ.) || ೫೭ || ಹೇ ಭೃತ್ಯವತ್ಸಲ - ಎಲೈ ಸೇವಕರಲ್ಲಿ ವಾತ್ಸಲ್ಯವುಳ್ಳವನೇ, ಭರ್ತೃಪುತ್ರಗತೇ - ಪ್ರಭುವಿನಮಗನಿಂದ, ಗತೇ - ಹೊಂದಲ್ಪಟ್ಟ, ಪಥಿ - ಮಾರ್ಗದಲ್ಲಿ, ತಿಷ್ಠಂತಂ-ಇರುತ್ತಿರುವ, ಭಕ್ತಂ - ಭಕ್ತಿಯುಳ್ಳ, ಭೃತ್ಯಂ - ಸೇವಕನಾದ, ಸ್ಥಿತ್ಯಾಂ - (ಗೋ+ಮ) ರಾಜನಲ್ಲಿಯೂ, ರಾಜಕಾರ್ಯದಲ್ಲಿಯೂ, ಹೇಗೆ ಇರತಕ್ಕದೋ ಅಂತಹ ರೀತಿಯಲ್ಲಿ, ಸ್ಥಿತಂ - ಇರುತ್ತಿರುವ, ಮಾಂ - ನನ್ನನ್ನು, ಹಾತುಂ - ತ್ಯಜಿಸಲು, ನಾರ್ಹಸಿ - ಯೋಗ್ಯನಾಗಬೇಡ. ||೫೮|| ಭೃತ್ಯಾನುಕಂಪೀ - ಸೇವಕರಲ್ಲಿ ದಯಾಶಾಲಿಯಾದ, ರಾಮಃ - ಶ್ರೀರಾಮನು, ಏವಂ - ಈರೀತಿ, ಬಹುವಿಧಂ-ಬಹುಬಗೆಯಾಗಿ, ಯಾಚಮಾನಂ - ಬೇಡಿಕೊಳ್ಳುತ್ತಿರುವ, ಪುನಃಪುನಃ - ಬಾರಿಬಾರಿಗೂ, ದೀನಂ - ಪರಿತಪ್ತನಾದ, ಸುಮಂತ್ರಂ - ಸುಮಂತ್ರನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. || ೫೯ || ಹೇ ಭರ್ತೃವತ್ಸಲ - ಎಲೈ ರಾಜಭಕ್ತಿಯುಳ್ಳವನೇ, ಮಯಿ-ನನ್ನಲ್ಲಿರುವ, ತೇ - ನಿನ್ನ, ಪರಮಾಂ - ಬಹಳವಾದ, ಭಕ್ತಿಂ-ಭಕ್ತಿಯನ್ನು, ಜಾನಾಮಿ-ತಿಳಿದಿರುವೆನು, ತ್ವಾಂ - ನಿನ್ನನ್ನು, ಇತಃ - ಇಲ್ಲಿಂದ, ಪುರೀಂ - ಪಟ್ಟಣವನ್ನು ಕುರಿತು, ಯದರ್ಥಂ - ಯಾವ ನಿಮಿತ್ತವಾಗಿ, ಪ್ರೇಷಯಾಮಿ - ಕಳುಹಿಸುತ್ತೇನೆಯೋ, ತಚ್ಚಾಪಿ - ಅದನ್ನೂ ಕೂಡ, ಶೃಣು - ಕೇಳು,

ಇಷ್ಟವಾದುದು. ವನದಲ್ಲಿ ನಿನ್ನೊಡನೆಯೇ ಸಂಚರಿಸುವ ನನಗೆ ಈ ಹದಿನಾಲ್ಕು ವರುಷಗಳೆಂಬುದು ಹದಿನಾಲ್ಕು ಕ್ಷಣಗಳಾಗಿ ಕಳೆದುಹೋಗುವುವು. ಹಾಗಲ್ಲದೆ ನಿನ್ನನ್ನುಳಿದು ನಾನು ಪಟ್ಟಣಕ್ಕೆತೆರಳಿದರೆ ಆ ಕಾಲವು ನನ್ನ ಭಾಗಕ್ಕೆ ನೂರು ಸಂವತ್ಸರಗಳಾಗಿಯೇ ಪರಿಣಮಿಸುತ್ತದೆ. ಎಲೈ ಸೇವಕರಲ್ಲಿ ವಾತ್ಸಲ್ಯವುಳ್ಳ ಶ್ರೀರಾಮನೆ! ಪ್ರಭುಕುವರನಾದ ನಿನ್ನನ್ನು ಹಿಂಬಾಲಿಸಿರುವ ಸೇವಕನೂ,ರಾಜನಲ್ಲಿಯೂ, ರಾಜಕಾರ್ಯಗಳಲ್ಲಿಯೂ ನಡೆಯಬೇಕಾದ ರೀತಿರಂಗಳನ್ನರಿತಿರುವವನೂ ಆದ ನನ್ನನ್ನು ತೊರೆಯಬೇಡ" ಎಂಬೀ ಪ್ರಕಾರವಾಗಿ ಬೇಡಿಕೊಳ್ಳುತ್ತಿರುವ ಸುಮಂತ್ರನ ನುಡಿಗಳನ್ನು ಕೇಳಿ, ಭೃತ್ಯವತ್ಸಲನಾದ ಶ್ರೀರಾಮನು ಆತನನ್ನು ಕುರಿತು, "ಎಲೈ ರಾಜಭಕ್ತಿ ಸಂಪನ್ನನಾದ ಸುಮಂತ್ರನೇ! ನನ್ನಲ್ಲಿ ನಿನಗೆ ಬಹಳವಾದ ಭಕ್ತಿಯಿರುವು

ಮೇ ಯವೀಯಸೀ ‖ ಕೈಕೇಯಿಾ ಪ್ರತ್ಯಯಂ ಗಚ್ಛೇದಿತಿ ರಾಮೋ ವನಂಗತಃ ‖ ೬೧ ‖ ಪರಿತುಷ್ಟಾಹಿ ಸಾ ದೇವೀ ವನವಾಸಂ ಗತೇ ಮಯಿ ‖ ರಾಜಾನಂ ನಾತಿಶಂಕೇತ ಮಿಥ್ಯಾವಾದೀತಿ ಧಾರ್ಮಿಕಂ ‖ ೬೨ ‖ ಏಷ ಮೇ ಪ್ರಥಮಃ ಕಲ್ಪೋ ಯದಂಬಾ ಮೇ ಯವೀಯಸೀ ‖ ಭರತಾ ರಕ್ಷಿತಂ ಸ್ಫೀತಂ ಪುತ್ರರಾಜ್ಯಮವಾಪ್ನುಯಾತ್ ‖ ೬೩ ‖ ಮಮ ಪ್ರಿಯಾರ್ಥಂ ರಾಜ್ಞಶ್ಚ ಸರಥ ಸ್ತ್ವಂ ಪುರೀಂ ವ್ರಜ ‖ ಸಂದಿಷ್ಟಶ್ಚಾಸಿ ಯಾನರ್ಥಾಂ ಸ್ತಾಂಸ್ತಾನ್ ಬ್ರೂಯಾ ಸ್ತಥಾ ತಥಾ ‖ ೬೪ ‖ ಇತ್ಯುಕ್ತ್ವಾ ವಚನಂ ಸೂತಂ ಸಾಂತ್ವಯಿತ್ವಾ ಪುನಃಪುನಃ ‖

ನಗರೀಂ - ಪಟ್ಟಣವನ್ನು ಕುರಿತು, ಗತಂ - ಹೋದ, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ರಾಮಃ - ಶ್ರೀರಾಮನು, ವನಂ-ಅರಣ್ಯವನ್ನು ಕುರಿತು, ಗತಇತಿ-ಹೊದನೆಂದು, ಮೇ-ನನ್ನ, ಯವೀಯಸಿಜನನೀ - ಕಿರಿತಾಯಿಯಾದ, ಕೈಕೇಯಿಾ - ಕೈಕೇಯಿಾದೇವಿಯು, ಪ್ರತ್ಯಯಂ - ನಂಬಿಕೆಯನ್ನು, ಗಚ್ಛೇತ್ - ಹೊಂದುವಳು. ‖ ೬೧ ‖ ಮಯಿ - ನಾನು, ವನವಾಸಂ - ಅರಣ್ಯವಾಸವನ್ನು ಕುರಿತು, ಗತೇಸತಿ - ಪ್ರಯಾಣಮಾಡಿದವನಾಗಲು, ಪರಿತುಷ್ಟಾ - ಸಂತೋಷಗೊಂಡ, ಸಾದೇವೀ - ಆ ಕೈಕೇಯಿಾದೇವಿಯು, ಧಾರ್ಮಿಕಂ - ಧರ್ಮಿಷ್ಠನಾದ, ರಾಜಾನಂ - ದಶರಥರಾಯನನ್ನು ಕುರಿತು, ಮಿಥ್ಯಾವಾದೀತಿ - ಸುಳ್ಳುಗಾರನೆಂದು, ನಾತಿಶಂಕೇತ - ಶಂಕಿಸಲಾರಳು. ‖ ೬೨ ‖ ಮೇ - ನನ್ನ, ಯವಿಯಸೀ - ಕನಿಷ್ಠಳಾದ, ಅಂಬಾ - ತಾಯಿಯು, ಭರತಾರಕ್ಷಿತಂ, ಭರತ - ಭರತನಿಂದ, ಆರಕ್ಷಿತಂ - ಸಂರಕ್ಷಿಸಲ್ಪಟ್ಟ, ಸ್ಫೀತಂ - ವೃದ್ಧಿಗೊಂಡ, ಪುತ್ರರಾಜ್ಯಂ - ಮಗನ ರಾಜ್ಯವನ್ನು, ಅವಾಪ್ನುಯಾದಿತಿಯತ್ - ಹೊಂದಿದವಳಾಗುವಳೆಂಬವದು ಯಾವದುಂಟೋ, ಏಷಃ-ಇದು, ಮೇ - ನನಗೆ, ಪ್ರಥಮಃಕಲ್ಪಃ - ಮುಖ್ಯವು. ‖ ೬೩ ‖ ಮಮ - ನನಗೂ, ರಾಜ್ಞಶ್ಚ - ಅರಸನಿಗೂ, ಪ್ರಿಯಾರ್ಥಂ - ಇಷ್ಟವನ್ನುಂಟುಮಾಡಲು, ತ್ವಂ - ನೀನು, ಸರಥಃ - ರಥದಿಂದೊಡಗೂಡಿ, ಪುರೀಂ - ಪಟ್ಟಣವನ್ನು ಕುರಿತು, ವಜ್ರ - ಹೋಗು, ಯಾನರ್ಥಾಂ - ಯಾವ ಯಾವ ಅರ್ಥಗಳನ್ನು, ಸಂದಿಷ್ಟಶ್ಚ - ಆಜ್ಞಾಪಿಸಲ್ಪಟ್ಟವನು, ಅಸಿ - ಆಗಿರುವೆಯೋ, ತಾಂಸ್ತಾನ್ - ಆಯಾಯ ಅರ್ಥಗಳನ್ನು, ತಥಾತಥಾ - ಹಾಗೆ ಹಾಗೆ, ಬ್ರೂಯಾಃ - ಹೇಳು. ‖ ೬೪ ‖ ಇತಿ - ಹೀಗೆ, ವಚನಂ -

---

ದೆಂಬದನ್ನು ನಾನು ಬಲ್ಲೆ. ನಿನ್ನನ್ನು ಹಿಂದಕ್ಕೆ ಕಳುಹಲು ಕಾರಣವಿರುವುದು; ಹೇಳುತ್ತೇನೆ ಕೇಳು. ನೀನು ಪುನಃ ಅಯೋಧ್ಯಾಪಟ್ಟಣಕ್ಕೆ ಹೋದರೆ ನಮ್ಮ ಚಿಕ್ಕಮ್ಮನಾದ ಕೈಕೇಯಿಾದೇವಿಯು, ವನದಿಂದ ಹಿಂತಿರುಗಿ ಬಂದ ನಿನ್ನನ್ನು ನೋಡುತ್ತಲೇ ನಾನು ಅರಣ್ಯಕ್ಕೆಹೋದೆನೆಂದು ದೃಢವಾಗಿ ನಂಬುತ್ತಾಳೆ; ನಾನು ವನದಲ್ಲಿದ್ದರೆ ಸಂತೋಷಿಸಿ ಧರ್ಮಿಷ್ಠನಾದ ಮಹಾರಾಜನನ್ನು ಮಿಥ್ಯಾವಾದಿಯೆಂದು ಶಂಕಿಸಲಾರಳು. ‖೫೨-೬೨‖ ನೀನು ನಮ್ಮನ್ನು ಬಿಡದೆ ನಮ್ಮ ಜೊತೆಯಲ್ಲಿಯೇ ಇದ್ದುಬಿಟ್ಟರೆ ಆಕೆಯು ತನ್ನ ಮಗನಾದ ಭರತನಿಗೆ ದೊರೆತನವು ಬರಲಿಲ್ಲವೆಂದು ತಿಳಿಯುತ್ತಾಳೆ, ನೀನು ನಮ್ಮನ್ನಗಲಿದು ಅಯೋಧ್ಯೆಗೆ ತೆರಳಿದೆಯಾದರೆ, ನಿನ್ನನ್ನು ನೋಡಿದ ಆಕೆಯು ತನ್ನ ಮಗನಾದ ಭರತನಿಂದ ಚೆನ್ನಾಗಿ ಪರಿಪಾಲಿಸಲ್ಪಟ್ಟ ಪುತ್ರರಾಜ್ಯವನ್ನು ಹೊಂದಿ, ವೃದ್ಧಿಯೊಂದಿದ ನದಿಯಂತೆ ಆನಂದಿಸುತ್ತಾಳೆ. ಆ ನನ್ನ ಚಿಕ್ಕತಾಯಿಯು ಇಂತಹ ಆನಂದವನ್ನು ಹೊಂದುವುದೇ ನನ್ನ ಮುಖ್ಯಸಂಕಲ್ಪವಾಗಿರು

ಗುಹಂ ವಚನ ಮಕ್ಲೀಬೋ ರಾಮೋ ಹೇತುಮದಬ್ರವೀತ್ ॥ ೬೫ ॥ ನೇದಾನೀಂ ಗುಹ ಯೋಗ್ಯೋಽಯಂ ವಾಸೋ ಮೇ ಸಜನೇ ವನೇ ॥ ಅವಶ್ಯಂ ಹ್ಯಾಶ್ರಮೇ ವಾಸಃ ಕರ್ತವ್ಯ ಸ್ತದ್ಗತೋ ವಿಧಿಃ ॥ ೬೬ ॥ ಸೋಽಹಂ ಗೃಹೀತ್ವಾ ನಿಯಮಂ ತಪಸ್ವಿ ಜನಭೂಷಣಂ ॥ ಹಿತಕಾಮಃ ಪಿತುರ್ಭೂಯಃ ಸ್ಸೀತಾಯಾ ಲಕ್ಷ್ಮಣಸ್ಯಚ ॥೬೭॥ ಜಟಾಃ ಕೃತ್ವಾ ಗಮಿಷ್ಯಾಮಿ ನ್ಯಗ್ರೋಧಕ್ಷೀರಮಾನಯ ॥

ಮಾತನ್ನು, ಉಕ್ತ್ವಾ - ಹೇಳಿ, ಸೂತಂ - ಸಾರಥಿಯಾದ ಸುಮಂತ್ರನನ್ನು, ಪುನಃಪುನಃ - ಬಾರಿ ಬಾರಿಗೂ, ಸಾಂತ್ವಯಿತ್ವಾ - ಸಮಾಧಾನಗೊಳಿಸಿ, ಅಕ್ಲೀಬಃ - ಶೂರನಾದ, ರಾಮಃ - ಶ್ರೀರಾಮನು, ಗುಹಂ - ಗುಹನನ್ನು ಕುರಿತು, ಹೇತುಮತ್ - ಯುಕ್ತಿಯಿಂದೊಡಗೂಡಿದ, ವಚನಂ - ಮಾತನ್ನು, ಅಬ್ರವೀತ್ - ನುಡಿದನು, ಹೇ ಗುಹ - ಎಲೈ ಗುಹನೇ, ಮೇ - ನನಗೆ, ಸಜನೇ - ಜನರಿಂದೊಡಗೂಡಿದ, ವನೇ - ಅರಣ್ಯದಲ್ಲಿ, ಇದಾನೀಂ - ಈಗ, ವಾಸಃ - ಇರುವಿಕೆಯು, ನಯೋಗ್ಯಃ-ಯೋಗ್ಯವಲ್ಲವು, ಆಶ್ರಮೇ - ಪರ್ಣಶಾಲೆಯಲ್ಲಿ, ಅವಶ್ಯಂ - ಅವಶ್ಯವಾಗಿ, ವಾಸಃ - ನಿವಾಸವು, ಕರ್ತವ್ಯಶ್ಚ-ಮಾಡತಕ್ಕದು, ತದ್ಗತಃ - ತದ್ವಿಷಯವಾದ, ವಿಧಿಃ - ಮಾತಾಪಿತೃಗಳಾಜ್ಞಾವಚನವು, ಸೋಽಹಂ - ಆ ನಾನು, ಪಿತುಃ - ತಂದೆಗೆ, ಹಿತಕಾಮಃ - ಹಿತಕರನಾಗಿ, ಭೂಯಃ - ಮತ್ತು, ತಪಸ್ವಿಜನಭೂಷಣಂ, ತಪಸ್ವಿಜನ - ಋಷಿಜನಕ್ಕೆ, ಭೂಷಣಂ - ಅಲಂಕಾರವಾದ, ನಿಯಮಂ - ಮೌನವ್ರತವನ್ನು, ಗೃಹೀತ್ವಾ - ಹಿಡಿದವನಾಗಿ, ಸೀತಾಯಾಃ - ಸೀತಾದೇವಿಯು, ಲಕ್ಷ್ಮಣಸ್ಯಚ - ಲಕ್ಷ್ಮಣನಿಗೂ, ಭೂಯಃ - ಮತ್ತೂ, ಹಿತಕಾಮಃ - ಹಿತವನ್ನಪೇಕ್ಷಿಸುವವನಾಗಿ, ಜಟಾಃ - ಜಡೆಗಳನ್ನು, ಕೃತ್ವಾ - ಮಾಡಿ, ಗಮಿಷ್ಯಾಮಿ - ಹೋಗುವೆನು, ನ್ಯಗ್ರೋಧಕ್ಷೀರಂ - ಆಲದಗಿಡದ ಹಾಲನ್ನು, ಆನಯ - ತರಿಸು. ॥೬೫-೬೭॥ ಗುಹಃ - ಗುಹನು, ರಾಜಪುತ್ರಾಯ - ರಾಜಕುವರನಾದ ಶ್ರೀರಾಮನಿಗೆ, ತತ್

ವ್ರವರಿಂದ ನಿನ್ನನ್ನು ಹಿಂತಿರುಗಿ ಹೋಗೆಂದು ಹೇಳುತ್ತಿದ್ದೇನೆ. ಆದುದರಿಂದೆಲೈ ಸುಮಂತ್ರನೆ! ನನಗೂ ನಮ್ಮ ತಂದೆಯಾದ ದಶರಥನಿಗೂ ಪ್ರಿಯವನ್ನುಟುಂಮಾಡಲೋಸುಗ ನೀನೀಗಲೇ ಅಯೋಧ್ಯೆಗೆ ತೆರಳುವವನಾಗು. ನಿನ್ನಲ್ಲಿ ನಾನು ಯಾವ ಯಾವ ಮಾತುಗಳನ್ನು ಆರಾರನ್ನುದ್ದೇಶಿಸಿ ಹೇಳಿದೆನೋ ಅವೆಲ್ಲವನ್ನೂ ಅವರವರಿಗೆ ಹೇಳುವವನಾಗು," ಇಂತು ಶ್ರೀರಾಮನು ಸುಮಂತ್ರನಿಗೆ ಹೇಳಿ ಪುನಃ ಆತನನ್ನು ಕುರಿತು ವಿವಿಧರೀತಿಗಳಿಂದ ಸಮಾಧಾನವನ್ನು ಹೇಳಿದನು. ಆ ಬಳಿಕ ಮಹಾ ಧೈರ್ಯಶಾಲಿಯಾದ ಆ ಶ್ರೀರಾಮಚಂದ್ರನು, ಗುಹನನ್ನುನೋಡಿ (೧) ಹೇತುಗರ್ಭವಿಶೇಷಣಗಳಿಂದೊಡಗೂಡಿದ ಈ ಮಾತುಗಳನ್ನಾಡಿದನು. "ಎಲೈ ಗುಹನೆ! ನಾನೀಗ ಜನರುವಾಸಿಸುವ ಈ ಪ್ರದೇಶದಲ್ಲಿರುವುದುಚಿತವಲ್ಲವು. ಋಷಿಗಳಿಗೆ ತಕ್ಕುದಾದ ಆಶ್ರಮದಲ್ಲಿರುವುದು ಯೋಗ್ಯವಾದುದಲ್ಲವೆ? ನಮ್ಮ ಜನಕನಾದ ದಶರಥರಾಯನ ಆಜ್ಞೆಯೂ ಸಹ ಆಶ್ರಮದಲ್ಲಿಯೇ ಇರಬೇಕೆಂದಲ್ಲವೆ? ಆದುದರಿಂದ ನಾನು ತಪಸ್ವಿಗಳಿಗುಚಿತವಾದ ವ್ರತವನ್ನೂ ನಿಯಮಪೂರ್ವಕವಾಗಿ ಧರಿಸಿದೆನು. ಅಲ್ಲದೆ ನಾನೀಗ ಸೀತಾ

(೧) ಟಿ. ಹಿಂದೆ ಗುಹನು ಶ್ರೀರಾಮಮೂರ್ತಿಯನ್ನು ಕುರಿತು ಆಡಿದ ಉಪಚಾರೋಕ್ತಿಗಳಿಗೆಲ್ಲ ಸಮಂಜಸವಾದ ಉತ್ತರಗಳು ಈ ವಾಕ್ಯದಲ್ಲಿ ಪ್ರತಿಪಾದಿತವಾಗಿರುವುದರಿಂದ "ಹೇತುಗರ್ಭವಿಶೇಷಗಳಿಂದೊಡಗೂಡಿದ" ಎಂಬ ವಿಶೇಷಣವು ಕೊಡಲಾಗಿದೆ.

ತತ್ಕ್ಷೀರಂ ರಾಜಪುತ್ರಾಯ ಗುಹಃ ಕ್ಷಿಪ್ರಮುಪಾಹರತ್ ॥ ೬೮ ॥ ಲಕ್ಷ್ಮಣಸ್ಯಾತ್ಮನಶ್ಚೈವ ರಾಮಸ್ತೇನಾ ಕರೋಜ್ಜಟಾಃ ॥ ದೀರ್ಘಬಾಹು ರ್ನರ ವ್ಯಾಘ್ರೋ ಜಟಿಲತ್ವ ಮಧಾರಯತ್ ॥ ೬೯ ॥ ತೌ ತದಾ ಚೀರವಸನೌ ಜಟಾಮಂಡಲ ಧಾರಿಣೌ ॥ ಅಶೋಭೇತಾ ಮೃಷಿಸಮೌ ಭ್ರಾತರೌ ರಾಮ ಲಕ್ಷ್ಮಣೌ ॥ ೭೦ ॥ ತತೋ ವೈಖಾನಸಂ ಮಾರ್ಗ ಮಾಸ್ಥಿತ ಸ್ಸಹಲಕ್ಷ್ಮಣಃ ॥ ವ್ರತಮಾದಿಷ್ಟವಾ‌ನ್ ರಾಮ ಸ್ಸಖಾಯಂ ಗುಹ ಮಬ್ರವೀತ್ ॥ ೭೧ ॥ ಅಪ್ರ ಮತ್ತೋ ಬಲೇ ಕೋಶೇ ದುರ್ಗೇ ಜನಪದೇ ತಥಾ॥ಭವೇಥಾ ಗುಹ ರಾಜ್ಯಂ ಹಿ

ಕ್ಷೀರಂ - ಆ ಆಲದಮರದಹಾಲನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಉಪಾಹರತ್ - ತರಿಸಿಕೊಟ್ಟನು ರಾಮಃ - ಶ್ರೀರಾಮನು, ತೇನ - ಆ ಹಾಲಿನಿಂದ, ಲಕ್ಷ್ಮಣಸ್ಯ - ಲಕ್ಷ್ಮಣನಿಗೂ, ಆತ್ಮನಶ್ಚ-ತನಗೂ, ಜಟಾಃ - ಜಟೆಗಳನ್ನು, ಅಕರೋತ್ - ಮಾಡಿಕೊಂಡನು. ॥ ೬೮ ॥ ದೀರ್ಘಬಾಹುಃ, ದೀರ್ಘ - ಉದ್ದವಾದ, ಬಾಹುಃ - ಭುಜಗಳುಳ್ಳ, ನರವ್ಯಾಘ್ರಃ - ನರಶ್ರೇಷ್ಠನಾದ ಶ್ರೀರಾಮನು, ಜಟಿಲತ್ವಂ- ಜಟಾಧಾರಿತ್ವವನ್ನು, ಅಧಾರಯತ್ - ಧರಿಸಿದನು. ॥ ೬೯ ॥ ತದಾ - ಆಗ, ಚೀರವಸನೌ - ನಾರುಮಡಿಗಳನ್ನು ಧರಿಸಿರುವ, ಜಟಾಮಂಡಲಧಾರಿಣೌ - ಜಡೆಗಳ ಸುತ್ತುಗಳನ್ನು ಧರಿಸಿರುವ, ಭ್ರಾತರೌ - ಅಣ್ಣತಮ್ಮಂದಿರಾದ, ತೌರಾಮಲಕ್ಷ್ಮಣೌ - ಆ ರಾಮ ಲಕ್ಷ್ಮಣರು, ಋಷಿಸಮೌ - ಋಷಿಗಳಿಗೆ ಸಮಾನರಾಗಿ, ಅಶೋಭೇತಾಂ - ಹೊಳೆಯುತ್ತಿದ್ದರು. ॥ ೭೦ ॥ ತತಃ - ಬಳಿಕ, ರಾಮಃ - ಶ್ರೀರಾಮನು, ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿ, ವೈಖಾನಸಂ - ವೈಖಾನಸ ಋಷಿ ಪ್ರೋಕ್ತವಾದ, ಮಾರ್ಗಂ - ವಾನಪ್ರಸ್ಥಧರ್ಮವನ್ನು, ಆಸ್ಥಿತಃ - ಹೊಂದಿದವನಾಗಿ, ವ್ರತಂ - ನಿಯಮವನ್ನು, ಆದಿಷ್ಟವಾನ್ - ಅಂಗೀಕರಿಸಿದನು. ॥ ೭೧ ॥ ಹೇ ಗುಹ - ಎಲೈ ಗುಹನೇ, ಹಿ - ಯಾವ ಕಾರಣ, ರಾಜ್ಯಂ - ರಾಜ್ಯವು, ದುರಾರಕ್ಷತಮಂ - ರಕ್ಷಿಸಲು ಬಹು ಕಷ್ಟವಾದುದೋ, ಮತಂ - ಇಷ್ಟವಾಗಿರುವುದೋ, ತತ್ - ಆ ಕಾರಣ, ಬಲೇ - ಚತುರಂಗಸಮೇತವಾದ ಸೈನ್ಯದ ಲ್ಲಿಯೂ, ಕೋಶೇ - ಅರ್ಥಸಂಗ್ರಾಹಕವಾದ ಕೋಶದಲ್ಲಿಯೂ, ದುರ್ಗೇ - ಕೋಟೆಮುಂತಾದ ದುರ್ಗ

ದೇವಿಗೂ, ಲಕ್ಷ್ಮಣಸ್ವಾಮಿಗೂ ಹಿತವನ್ನು ಕೋರುವವನಾಗಿ ಜಡೆಗಳನ್ನು ಧರಿಸಿಕೊಂಡು ಮುಂಬರಿಯುತ್ತೇನೆ. ಆದುದರಿಂದ ಆಲದಮರದ ಹಾಲನ್ನು ತರಿಸುವವನಾಗು.”॥೬೩-೬೭॥ ಶ್ರೀರಾಮನೀರೀತಿ ಹೇಳಲು ಆ ಗುಹನು ಬಹು ಬೇಗನೆ ಆಲದಹಾಲನ್ನು ತೆಗೆದುಕೊಂಡು ಬಂದವನಾದನು. ಆಗಲಾ ರಾಮಮೂರ್ತಿಯು ಮೊದಲು ಲಕ್ಷ್ಮಣಸ್ವಾಮಿಗೆ ಜಟೆಗಳನ್ನು ಮಾಡಿ ತಾನೂ ಜಟಾಧಾರಿಯಾದನು. ಆ ಸಮಯದಲ್ಲಿ ಆ ರಾಮ ಲಕ್ಷ್ಮಣರೀರ್ವರೂ, ನಾರುಮಡಿಗಳನ್ನುಟ್ಟು, ಜಟಾಮಂಡಲಗಳನ್ನು ಧರಿಸಿರಲು ಋಷಿಗಳಂತೆ ಕಂಗೊಳಿಸು ತ್ತಿದ್ದರು. ಈರೀತಿ ಋಷಿವೇಷವನ್ನು ಧರಿಸಿದ ಶ್ರೀರಾಮನು, ಆ ಮೇಲೆ ಲಕ್ಷ್ಮಣನೊಡಗೂಡಿ ದವನಾಗಿ ವೈಖಾನಸವ್ರತವೆಂಬ ವಾನಪ್ರಸ್ಥವ್ರತವನ್ನಂಗೀಕರಿಸಿ, ಮಿತ್ರನಾದ ಗುಹನನ್ನು ನೋಡಿ, “ಅಯ್ಯಾ ಗುಹನೆ! ರಾಜ್ಯಪರಿಪಾಲನೆಯೆಂಬುದು ಕಷ್ಟತರವಾದಕೆಲಸವು. ಆದುದ ರಿಂದ ನೀನು ಚತುರಂಗಬಲದ ವಿಷಯದಲ್ಲಿಯೂ, ಧನಾಗಾರವಿಷಯದಲ್ಲಿಯೂ, ದುರ್ಗಗಳ

ದುರಾರಕ್ಷತಮಂ ಮತಂ ‖ ೭೨ ‖ ತತಸ್ತಂ ಸಮನುಜ್ಞಾಯ ಗುಹ ಮಿಕ್ಷ್ವಾಕು ನಂದನಃ ‖ ಜಗಾಮ ತೂರ್ಣಮವ್ಯಗ್ರ ಸ್ಸಭಾರ್ಯ ಸ್ಸಹಲಕ್ಷ್ಮಣಃ ‖ ೭೩ ‖ ಸತುದೃಷ್ಟ್ವಾ ನದೀ ತೀರೇ ನಾವ ಮಿಕ್ಷ್ವಾಕು ನಂದನಃ ‖ ತಿತೀರ್ಷು ಶ್ಶೀಘ್ರ ಗಾಂ ಗಂಗಾ ಮಿದಂ ಲಕ್ಷ್ಮಣ ಮಬ್ರವೀತ್ ‖ ೭೪ ‖ ಆರೋಹ ತ್ವಂ ನರ ವ್ಯಾಘ್ರ ಸ್ಥಿತಾಂ ನಾವ ಮಿಮಾಂ ಶನೈಃ ‖ ಸೀತಾಂ ಚಾರೋಪಯಾನ್ವಕ್ಷಂ ಪರಿಗೃಹ್ಯ ಮನಸ್ವಿನೀಂ ‖ ೭೫ ‖ ಸಭ್ರಾತು ಶ್ಶಾಸನಂ ಶ್ರುತ್ವಾ ಸರ್ವ ಮಪ್ರತಿ ಕೂಲಯನ್ ‖ ಆರೋಪ್ಯ ಮೈಥಿಲೀಂ ಪೂರ್ವ ಮಾರುರೋಹಾತ್ಮವಾಂ

ಸ್ಥಾನಗಳಲ್ಲಿಯೂ, ತಥಾ - ಹಾಗೆಯೇ, ಜನಪದೇ - ದೇಶದಲ್ಲಿಯೂ, ಅಪ್ರಮತ್ತಃ - ಜಾಗರೂಕ ನಾಗಿ, ಭವೇಥಾಃ - ಇರುವವನಾಗು, ಇತಿ - ಎಂದು, ಸಖಾಯಂ - ಸ್ನೇಹಿತನಾದ, ಗುಹಂ - ಗುಹ ನನ್ನು ಕುರಿತು, ಅಬ್ರವೀತ್ - ನುಡಿದನು. ‖ ೭೨ ‖ ತತಃ - ಬಳಿಕ, ವ್ಯಗ್ರಃ - ವನಗಮನ ಕಾರ್ಯದಲ್ಲಿ ನಿರತನಾದ, ಇಕ್ಷ್ವಾಕುನಂದನಃ - ಇಕ್ಷ್ವಾಕುವಂಶೋತ್ಪನ್ನನಾದ ಶ್ರೀರಾಮನು, ತಂ ಗುಹಂ - ಆ ಗುಹನನ್ನು, ಸಂಜ್ಞಾಯ - ಸಮ್ಮತಿಗೊಳಿಸಿ, ಸಭಾರ್ಯಃ - ಭಾರ್ಯಾ ಸಮೇತನಾಗಿ, ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿದ, ತೂರ್ಣಂ - ಜಾಗ್ರತೆಯಾಗಿ, ಜಗಾಮ - ಹೊರಟನು. ‖ ೭೩ ‖ ಸಇಕ್ಷ್ವಾಕುನಂದನಃ - ಆ ಶ್ರೀರಾಮನು, ಶೀಘ್ರಗಾಂ - ವೇಗದಿಂದ ಪ್ರವಹಿಸುತ್ತಿರುವ, ಗಂಗಾಂ - ಗಂಗಾನದಿಯನ್ನು, ತಿತೀರ್ಷುಃ - ದಾಟಲಿಚ್ಛೆಯುಳ್ಳವನಾಗಿ, ನದೀತೀರೇ - ಗಂಗಾನದಿಯ ತೀರದಲ್ಲಿ, ನಾವಂತು - ನಾವೆಯನ್ನು, ದೃಷ್ಟ್ವಾ - ಕಂಡು, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ‖ ೭೪ ‖ ಹೇ ನರವ್ಯಾಘ್ರ - ಎಲೈ ಪುರುಷ ಶ್ರೇಷ್ಠನೇ, ತ್ವಂ - ನೀನು, ಸ್ಥಿತಾಂ - ನಿಂತಿರುವ, ಇಮಾಂನಾವಂ - ಈ ನಾವೆಯನ್ನು, ಶನೈಃ - ಮೆಲ್ಲನೆ, ಆರೋಹ - ಏರು, ಅನ್ವಕ್ಷಂ - ಪೂರ್ವದಲ್ಲಿಯೇ, ಮನಸ್ವಿನೀಂ - ಆರೋಹಣೇ ಚ್ಛೆಯುಳ್ಳ, ಸೀತಾಂಚ - ಸೀತಾದೇವಿಯನ್ನು, ಪರಿಗೃಹ್ಯ - ಹಿಡಿದುಕೊಂಡು, ಆರೋಪಯ-ಏರಿಸು. ‖ ೭೫ ‖ ಆತ್ಮವಾನ್ - ಮಹಾಮನಸ್ವಿಯಾದ, ಸಃ - ಆ ಲಕ್ಷ್ಮಣನು, ಭ್ರಾತುಃ - ಅಣ್ಣನ, ಶಾಸನಂ - ಆಜ್ಞೆಯನ್ನು, ಸರ್ವಂ - ಸಮಸ್ತವನ್ನು, ಶ್ರುತ್ವಾ - ಕೇಳಿ, ಅಪ್ರತಿಕೂಲಯನ್ - ಪ್ರತಿಕೂಲ ವಾಗಿ ನುಡಿಯದವನಾಗಿ, ಪೂರ್ವಂ - ಮೊದಲು; ವೈದೇಹೀಂ - ಸೀತಾದೇವಿಯನ್ನು, ಆರೋಪ್ಯ -

ವಿಷಯದಲ್ಲಿಯೂ, ರಾಜ್ಯದಲ್ಲಿಯೂ ಬಹು ಜಾಗ್ರತೆಯಿಂದ ನಡೆದುಕೊಳ್ಳಬೇಕು" ಎಂದು ಹೇಳಿದನು. ಆ ಬಳಿಕ ಶ್ರೀರಾಮನು ಗುಹನಿಗೆ ಹೋಗಿಬಾರೆಂದು ಹೇಳಿ ಸ್ವಲ್ಪವಾದರೂ ಸಂತಾಪವನ್ನು ಹೊಂದಿದವನಾಗಿ, ಸೀತಾಲಕ್ಷ್ಮಣರೊಡಗೂಡಿ ಬೇಗನೆ ಪ್ರಯಾಣಮಾಡಿದನು. ಹಾಗೆ ಪ್ರಯಾಣ ಬೆಳಸಿದ ಶ್ರೀರಾಮನು ವೇಗವಾಗಿ ಪ್ರವಹಿಸುವ ಗಂಗಾನದಿಯನ್ನು ದಾಂಟ ಲಿಚ್ಛಿಸಿದವನಾಗಿ ಆ ನದಿಯ ತೀರದಲ್ಲಿದ್ದ ನಾವೆಯನ್ನು ನೋಡಿ ಲಕ್ಷ್ಮಣನನ್ನು ಕುರಿತು, "ಎಲೈ ಪುರುಷಶ್ರೇಷ್ಠನಾದ ಲಕ್ಷ್ಮಣನೆ! ನೀನು ಮೊದಲು ಈ ನಾವೆಯನ್ನು ಹತ್ತಿ ಆಮೇಲೆ ಸೀತಾದೇವಿಯನ್ನು ಮೆಲ್ಲನೆ ನಾವೆಗೇರಿಸುವವನಾಗು" ಎಂದು ಹೇಳಿದನು. ‖ ೭೦-೭೫ ‖ ಇಂತು ನುಡಿದ ಶ್ರೀರಾಮಮೂರ್ತಿಯ ನುಡಿಗಳನ್ನು ಕೇಳಿ ಮಹಾ ಬುದ್ಧಿಶಾಲಿಯೂ, ಜಿತೇಂದ್ರಿಯನೂ ಆದ ಲಕ್ಷ್ಮಣಸ್ವಾಮಿಯು ಅಣ್ಣನಾದ ಆತನ ಅಭಿಪ್ರಾಯವನ್ನರಿತು,

ಸ್ತತಃ ॥ ೭೬ ॥ ಅಥಾರುರೋಹ ತೇಜಸ್ವೀ ಸ್ವಯಂ ಲಕ್ಷ್ಮಣ ಪೂರ್ವಜಃ ॥
ತತೋ ನಿಷಾದಾಧಿಪತಿ ರ್ಗುಹೋ ಜ್ಞಾತೀ ನ ಚೋದಯತ್ ॥ ೭೭ ॥ ರಾಘ
ವೋಽಪಿ ಮಹಾತೇಜಾ ನಾವಮಾರುಹ್ಯ ತಾಂ ತತಃ ॥ ಬ್ರಹ್ಮವತ್ ಕ್ಷತ್ರವ
ಚ್ಚೈವ ಜಜಾಪ ಹಿತಮಾತ್ಮನಃ ॥ ೭೮ ॥ ಆಚಮ್ಯ ಚ ಯಥಾಶಾಸ್ತ್ರಂ ನದೀಂ
ತಾಂ ಸಹ ಸೀತಯಾ ॥ ಪ್ರಾಣಮತ್ ಪ್ರೀತಿಸಂಹೃಷ್ಟೋ ಲಕ್ಷ್ಮಣ ಶ್ಚಾಮಿತ
ಪ್ರಭಃ ॥ ೭೯ ॥ ಅನುಜ್ಞಾಯ ಸುಮಂತ್ರಂಚ ಸಬಲಂ ಚೈವ ತಂ ಗುಹಂ॥
ಆಸ್ಥಾಯ ನಾವಂ ರಾಮಸ್ತು ಚೋದಯಾಮಾಸ ನಾವಿಕಾ ॥ ೮೦ ॥

ನಾವೆಗೇರಿಸಿ, ತತಃ - ಬಳಿಕ, ಆರುರೋಹ - ತಾನಾ ನಾವೆಯನ್ನು ಹತ್ತಿದನು. ॥ ೭೬ ॥ ಅಥ - ಬಳಿಕ, ತೇಜಸ್ವೀ - ತೇಜೋವಂತನಾದ, ಲಕ್ಷ್ಮಣಪೂರ್ವಜಃ - ಲಕ್ಷ್ಮಣಾಗ್ರಜನಾದ ಶ್ರೀರಾಮನು, ಸ್ವಯಂ - ತಾನು, ಆರುರೋಹ - ಹತ್ತಿದನು, ತತಃ - ಬಳಿಕ, ನಿಷಾದಾಧಿಪತಿಃ - ಬೇಡರಿಗೆಲ್ಲಾ ರಾಜನಾದ, ಗುಹಃ - ಗುಹನು, ಜ್ಞಾತೀನ್ - ಜ್ಞಾತಿಗಳನ್ನು, ಅಚೋದಯತ್ - ಆಜ್ಞಾಪಿಸಿದನು. ॥ ೭೭ ॥ ಮಹಾತೇಜಾಃ - ಮಹಾ ತಪಸ್ಸಾಮರ್ಥ್ಯವುಳ್ಳ, ರಾಘವೋಽಪಿ - ಶ್ರೀರಾಮನೂ, ತಾಂ ನಾವಂ - ಆ ನಾವೆಯನ್ನು, ಆರುಹ್ಯ - ಏರಿ, ಆತ್ಮನಃ - ತನಗೆ, ಹಿತಂ-ಹಿತಕರವಾದ, ಬ್ರಹ್ಮವತ್-ಬ್ರಾಹ್ಮಣನಿಗೆ ಯೋಗ್ಯವಾದ, ಕ್ಷತ್ರವತ್ - ಕ್ಷತ್ರಿಯನಿಗೆ ಯೋಗ್ಯವಾದ, ಮಂತ್ರಂ - ಮಂತ್ರವನ್ನು, ಜಜಾಪ - ಜಪಮಾಡಿದನು. ॥ ೭೮ ॥ ಪ್ರೀತಿಸಂಹೃಷ್ಟಃ - ಸಂತೋಷಗೊಂಡ ಶ್ರೀರಾಮನು, ಯಥಾಶಾಸ್ತ್ರಂ - ಶಾಸ್ತ್ರಾನುಸಾರವಾಗಿ, ಆಚಮ್ಯಚ - ಆಚಮನವನ್ನೂ ಮಾಡಿ, ಸೀತಯಾಸಹ - ಸೀತಾದೇವಿಯೊಡನೆ, ತಾಂನದೀಂ - ಆ ಗಂಗಾನದಿಯನ್ನು, ಪ್ರಾಣಮತ್ - ವಂದಿಸಿದನು, ಅಮಿತಪ್ರಭಃ, ಅಮಿತ - ಅಪಾರವಾದ, ಪ್ರಭಃ - ಪ್ರಭಾವವುಳ್ಳ, ಲಕ್ಷ್ಮಣಶ್ಚ - ಲಕ್ಷ್ಮಣಸ್ವಾಮಿಯೂ, ಪ್ರಾಣಮತ್ - ನಮಸ್ಕರಿಸಿದನು. ॥೭೯॥ ರಾಮಸ್ತು - ಶ್ರೀರಾಮನಾದರೆ, ಸುಮಂತ್ರಂ-ಸುಮಂತ್ರನನ್ನು, ಅನುಜ್ಞಾಯ - ಸಮ್ಮತಿಸಿ, ಸಬಲಂ - ಸೈನ್ಯಸಮೇತನಾದ, ತಂಗುಹಂಚೈವ - ಆ ಗುಹನನ್ನು, ಸಮಾಜ್ಞಾಯ - ಸಮ್ಮತಿಗೊಳಿಸಿ, ನಾವಂ - ನಾವೆಯಲ್ಲಿ, ಆಸ್ಥಾಯ - ಕುಳಿತುಕೊಂಡು, ನಾವಿಕಾನ್ - ನಾವೆನಡಿಸುವವರನ್ನು ಕುರಿತು, ಚೋದಯಾಮಾಸ - ನಾವೆನಡಿಸಲು ಪ್ರೇರಿಸಿ

ಅದಕ್ಕೆ ವಿರೋಧ ಬಾರದಂತೆ ಸೀತಾದೇವಿಯನ್ನು ಮೊದಲು ನಾವೆಗೆ ಹತ್ತಿಸಿ, ತಾನು ನಾವೆಯನ್ನೇರಿದವನಾದನು. ಆ ಬಳಿಕ ಮಹಾ ತೇಜಸ್ವಿಯಾದ ಲಕ್ಷ್ಮಣಾಗ್ರಜನು ಆ ನಾವೆಯನ್ನೇರಿದನು. ಹೀಗೆ ರಾಮ ಲಕ್ಷ್ಮಣ ಸೀತೆಯರು ನಾವೆಯನ್ನೇರಿದ ಬಳಿಕ ನಿಷಾದಾಧಿಪನಾದ ಗುಹನು ತನ್ನ ಬಂಧುಗಳಿಗೆ ನಾವೆಯನ್ನು ನಡಿಸಲು ಆಣತಿಯಿತ್ತವನಾದನು. ಆಗ ಮಹಾ ತೇಜೋವಂತನಾದ ಶ್ರೀರಾಮನು ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ ಜಪಿಸಲ್ಪಡುವ ನಾವಾರೋಹಣ ಮಂತ್ರವನ್ನು ತನ್ನ ಹಿತಕ್ಕಾಗಿ ಜಪಿಸಿದವನಾದನು. ಮತ್ತೆಯಾ ಶ್ರೀರಾಮಮೂರ್ತಿಯು ಆಚಮನವನ್ನುಮಾಡಿ ಗಂಗಾದೇವಿಗೆ ವಂದನೆಯಂಗೈದು, ಸುಮಂತ್ರನಿಗೆ ಅಯೋಧ್ಯೆಗೆ ತೆರಳಲಾಣತಿಯಿತ್ತು, ಗುಹನನ್ನು ಸಮ್ಮತಿಗೊಳಿಸಿ ನಾವಿಕರನ್ನು ನಾವೆ ನಡಿಸಲು ಪ್ರೇರಿಸಿದನು. ॥ ೭೬-೮೦ ॥ ಮಂಗಳಕರವಾದಾ ನಾವೆಯು ನಾವಿಕರ

ತತಸ್ತೈ ಶ್ಚೋದಿತಾ ಸಾ ನೌಃ ಕರ್ಣಧಾರ ಸಮಾಹಿತಾ ॥ ಶುಭಸ್ಫ್ಯವೇಗಾಭಿ ಹತಾ ಶೀಘ್ರಂ ಸಲಿಲ ಮತ್ಯಗಾತ್ ॥ ೮೧ ॥ ಮಧ್ಯಂತು ಸಮನುಪ್ರಾಪ್ಯ ಭಾಗೀರಥ್ಯಾ ಸ್ತ್ವನಿಂದಿತಾ ॥ ವೈದೇಹೀ ಪ್ರಾಂಜಲಿ ರ್ಭೂತ್ವಾ ತಾಂ ನದೀ ಮಿದ ಮಬ್ರವೀತ್ ॥ ೮೨ ॥ ಪುತ್ರೋ ದಶರಥಸ್ಯಾಯಂ ಮಹಾರಾಜಸ್ಯ ಧೀಮತಃ ॥ ನಿದೇಶಂ ಪಾರಯಿತ್ವೇಮಂ ಗಂಗೇ ತ್ವದಭಿರಕ್ಷಿತಃ ॥ ೮೩ ॥ ಚತುರ್ದಶಹಿ ವರ್ಷಾಣಿ ಸಮಗ್ರಾಣ್ಯುಷ್ಯ ಕಾನನೇ ॥ ಭ್ರಾತ್ರಾ ಸಹ ಮಯಾ ಚೈವ ಪುನಃ ಪ್ರತ್ಯಾಗಮಿಷ್ಯತಿ ॥ ೮೪ ॥ ತತ ಸ್ತ್ವಾಂ ದೇವಿ! ಸುಭಗೇ! ಕ್ಷೇಮೇಣ ಪುನರಾ

ದನು. ॥ ೮೦ ॥ ತತಃ-ಬಳಿಕ, ತೈಃ - ಆ ಗುಹನ ಸಂಬಂಧಿಗಳಿಂದ, ಚೋದಿತಾ-ತಳ್ಳಲ್ಪಟ್ಟ, ಕರ್ಣ ಧಾರಸ್ಸಮಾಹಿತಾ - ಸನ್ನದ್ಧದ ನಾವೆನಡಿಸುವವನುಳ್ಳ. ಶುಭಸ್ಫ್ಯವೇಗಾಭಿಹತಾ, ಶುಭ - ಮಂಗಳಕ ರವಾದ, ಸ್ಫ್ಯ - ನೀರಿನಲ್ಲಿ ಹೋಗುವ ದೋಣ್ಣೆಯ, ವೇಗ - ವೇಗದಿಂದ, ಅಭಿಹತಾ - ಹೊಡೆಯ ಲ್ಪಟ್ಟ, ಸಾನೌಃ - ಆ ನಾವೆಯು, ಶೀಘ್ರಂ - ಜಾಗ್ರತೆಯಾಗಿ, ಸಲಿಲಂ - ನೀರಿನಲ್ಲಿ, ಅತ್ಯಗಾತ್- ಹೊರಡಿತು. ॥ ೮೧ ॥ ಅನಿಂದಿತಾ - ದೋಷರಹಿತಳಾದ, ವೈದೇಹೀ - ಸೀತಾದೇವಿಯು, ಭಾಗೀ ರಥ್ಯಾಃ - ಗಂಗಾನದಿಯ, ಮಧ್ಯಂತು - ಮಧ್ಯಪ್ರದೇಶವನ್ನಾದರೆ, ಸಮನುಪ್ರಾಪ್ಯ - ಹೊಂದಿ, ಪ್ರಾಂಜಲಿಃ - ಅಂಜಲಿಬದ್ಧಳು, ಭೂತ್ವಾ - ಆಗಿ, ತಾಂನದೀಂ - ಆ ನದಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದಳು. ॥ ೮೨ ॥ ಹೇ ಗಂಗೇ - ಎಲೌ ಭಾಗೀರಥಿಯೇ, ಧೀಮತಃ - ಬುದ್ಧಿಶಾಲಿಯಾದ, ಮಹಾರಾಜಸ್ಯ - ಮಹಾರಾಜನಾದ, ದಶರಥಸ್ಯ - ದಶರಥರಾಯ ನಿಗೆ, ಪುತ್ರಃ - ಮಗನಾದ, ಅಯಂ - ಈ ಶ್ರೀರಾಮನು, ತ್ವದಭಿರಕ್ಷಿತಃ-ನಿನ್ನಿಂದ ಸಂರಕ್ಷಿತನಾಗಿ, ಇಮಂನಿದೇಶಂ - ಈ ತಂದೆಯ ಆಜ್ಞೆಯನ್ನು, ಪಾರಯಿತ್ವಾ - ಪೂರ್ತಿಗೊಳಿಸಿ, ಭ್ರಾತ್ರಾಸಹ-ತಮ್ಮ ನೊಡನೆ, ಮಯಾಚೈವ - ನನ್ನಿಂದೊಡಗೂಡಿ, ಚತುರ್ದಶವರ್ಷಾಣಿ - ಹದಿನಾಲ್ಕು ವರುಷಗಳು; ಸಮಗ್ರಾಣಿ - ಸಂಪೂರ್ಣಗಳನ್ನಾಗಿ, ಕಾನನೇ - ಅರಣ್ಯದಲ್ಲಿ, ಉಷ್ಯ - ಇದ್ದು, ಯದಾ - ಯಾವ ಕಾಲದಲ್ಲಿ, ಪ್ರತ್ಯಾಗಮಿಷ್ಯತಿ - ಹಿಂತಿರುಗಿಬರುವನೋ, ತತಃ - ಬಳಿಕ, ಹೇ ಸುಭಗೇ - ಎಲೌ ಶುಭ ಕರಳೇ, ಹೇ ಗಂಗೇ - ಎಲೌ ಗಂಗಾದೇವಿಯೇ, ಕ್ಷೇಮೇಣ-ಕ್ಷೇಮದಿಂದ, ಪ್ರಮುದಿತಾ-ಸಂತೋಷ

ಜಳವೆಯ ವೇಗದಿಂದ ತಳ್ಳಲ್ಪಟ್ಟುದಾಗಿ ಬಹು ಬೇಗನೆ ನಡಿಯಿತು. ಆಗ ಕಳಂಕರಹಿತಳಾದ ಸೀತಾದೇವಿಯು ಗಂಗಾನದಿಯ ಮಧ್ಯಪ್ರದೇಶದಲ್ಲಿ ಕೈಮುಗಿದು ನಿಂತುಕೊಂಡು ಆ ಗಂಗಾನದಿಯನ್ನು ಕುರಿತು, "ಎಲೌ ಗಂಗಾದೇವಿಯೆ! ಮಹಾ ಪ್ರಜ್ಞಾವಂತನಾದವನೂ, ಪೂಜ್ಯನೂ ಆದ ದಶರಥ ಮಹಾರಾಜನ ಪುತ್ರನಾದ ಈ ಶ್ರೀರಾಮಮೂರ್ತಿಯು ನಿನ್ನಿಂದ ರಕ್ಷಿತನಾಗಿ, ತಂದೆಯಾಣತಿಯಂತೆ ಹದಿನಾಲ್ಕು ಸಂವತ್ಸರಗಳ ವನವಾಸವನ್ನು ಕಳೆದು ತಮ್ಮನಾದ ಲಕ್ಷ್ಮಣನಿಂದಲೂ, ಸತಿಯಾದ ನನ್ನಿಂದಲೂ ಕೂಡಿ ಹಿಂತಿರುಗಿ ಬಂದಾಗ ನಿನ್ನನ್ನು ಪುನಃ ಕಾಣಿಸಿಕೊಳ್ಳುವನು. ಮಂಗಳಪ್ರದಾಯಕಿಯಾದ ಓ ಗಂಗಾದೇವಿಯೆ! ಜನನಿಯೆ! ನಾನು ಕ್ಷೇಮವಾಗಿ ಹಿಂತಿರುಗಿ ಬಂದ ಸಮಯದಲ್ಲಿ ಮಹಾ ಸಂತೋಷದಿಂದ ನಿನ್ನನ್ನು ಪೂಜಿಸುತ್ತೇನೆ. ಓ ದೇವಿಯೆ! ನೀನು ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳ

ಗತಾ ॥ ಯಕ್ಷ್ಯೇ ಪ್ರಮುದಿತಾ ಗಂಗೇ! ಸರ್ವಕಾಮ ಸಮೃದ್ಧಿನೀ ॥೮೫॥
ತ್ವಂ ಹಿ ತ್ರಿಪಥಗಾ ದೇವಿ ಬ್ರಹ್ಮಲೋಕಂ ಸಮೀಕ್ಷಸೇ ॥ ಭಾರ್ಯಾ ಚೋದಧಿ
ರಾಜಸ್ಯ ಲೋಕೇಽಸ್ಮಿನ್ ಸಂಪ್ರದೃಶ್ಯಸೇ ॥೮೬॥ ಸಾ ತ್ವಾಂ ದೇವಿ! ನಮ
ಸ್ಯಾಮಿ ಪ್ರಶಂಸಾಮಿ ಚ ಶೋಭನೇ ॥ ಪ್ರಾಪ್ತರಾಜ್ಯೇ ನರವ್ಯಾಘ್ರೇ ಶಿವೇನ
ಪುನರಾಗತೇ ॥೮೭॥ ಗವಾಂ ಶತಸಹಸ್ರಾಣಿ ವಸ್ತ್ರಾಣ್ಯನ್ನಂಚ ಪೇಶಲಂ ॥
ಬ್ರಾಹ್ಮಣೇಭ್ಯಃ ಪ್ರದಾಸ್ಯಾಮಿ ತವಪ್ರಿಯ ಚಿಕೀರ್ಷಯಾ ॥೮೮॥ ಸುರಾ
ಘಟ ಸಹಸ್ರೇಣ ಮಾಂಸಭೂತೋದನೇನಚ ॥ ಯಕ್ಷ್ಯೇ ತ್ವಾಂ ಪ್ರಯತಾ

ಗೊಂಡವಳಾಗಿ, ಪುನರಾಗತಾ - ಹಿಂತಿರುಗಿ ಬಂದವಳಾಗಿ, ಸರ್ವಕಾಮಸಮೃದ್ಧಿನೀ - ಸಮಸ್ತ ಕೋರಿಕೆಗಳುಳ್ಳವಳಾಗಿ, ತ್ವಾಂ - ನಿನ್ನನ್ನು, ಯಕ್ಷ್ಯೇ-ಪೂಜಿಸುವೆನು. ॥೮೪-೮೫॥ ಹೇ ದೇವಿ-ಎಲೌ ಗಂಗಾದೇವಿಯೇ, ಹಿ - ಯಾವ ಕಾರಣ, ತ್ವಂ - ನೀನು, ತ್ರಿಪಥಗಾ - ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಮಾರ್ಗಗಳಾಗಿ ಹೋಗುತ್ತ, ಬ್ರಹ್ಮಲೋಕಂ - ಬ್ರಹ್ಮಲೋಕವನ್ನು, ಸಮೀಕ್ಷಸೇ - ನೋಡುವೆಯೋ, ಉದಧಿರಾಜಸ್ಯ - ಸಮುದ್ರರಾಜನಿಗೆ, ಭಾರ್ಯಾಚ - ಹೆಂಡತಿಯೂ ಆಗಿ, ಅಸ್ಮಿಲ್ಲೋಕೇ - ಈ ಲೋಕದಲ್ಲಿ, ಸಂಪ್ರದೃಶ್ಯಸೇ - ಕಾಣಲ್ಪಡುವೆ. ॥೮೬॥ ಹೇ ದೇವಿ - ಎಲೌ ಗಂಗಾಮಾತೆಯೇ, ಸಾ - ಅಂತಹ ನಾನು, ತ್ವಾಂ-ನಿನ್ನನ್ನು, ನಮಸ್ಯಾಮಿ-ನಮಸ್ಕರಿಸುತ್ತೇನೆ, ಹೇ ಶೋಭನೇ ಎಲೌ ಶುಭಕರಳೇ, ತ್ವಾಂ-ನಿನ್ನನ್ನು, ಪ್ರಶಂಸಾಮಿಚ - ಹೊಗಳಲೂ ಹೊಗಳುತ್ತೇನೆ, ನರವ್ಯಾಘ್ರೇ - ಪುರುಷಶ್ರೇಷ್ಠನಾದ ಶ್ರೀರಾಮನು, ಶಿವೇನ-ಕ್ಷೇಮದಿಂದ, ಪುನಃ-ಮತ್ತು, ಆಗತೇ - ಬಂದು, ಪ್ರಾಪ್ತರಾಜ್ಯೇ - ರಾಜ್ಯವನ್ನು ಹೊಂದಿದರೆ, ತವಪ್ರಿಯಚಿಕೀರ್ಷಯಾ, ತವ - ನಿನಗೆ, ಪ್ರಿಯಚಿಕೀರ್ಷಯಾ - ಪ್ರೀತಿಯನ್ನುಂಟುಮಾಡಲಿಚ್ಛೆಯಿಂದ, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ಶತಸಹಸ್ರಾಣಿ - ಲಕ್ಷಸಂಖ್ಯೆಯುಳ್ಳ, ಗವಾಂ - ಗೋವುಗಳನ್ನೂ, ವಸ್ತ್ರಾಣಿ-ವಸ್ತ್ರಗಳನ್ನೂ, ಪೇಶಲಂ-ಮೃದುವಾದ, ಅನ್ನಂಚ - ಅನ್ನವನ್ನೂ, ಪ್ರದಾಸ್ಯಾಮಿ-ಕೊಡುವೆನು. ॥೮೭-೮೮॥ ಹೇ ದೇವೀ-ಎಲೌ ಗಂಗಾದೇವಿಯೇ, ಪುರೀಂ - ಪಟ್ಟಣವನ್ನು ಕುರಿತು, ಪುನಃ - ಮತ್ತು, ಆಗತಾ - ಬಂದು ಪ್ರಯತಾ - ಪರಿಶುದ್ಧಳಾಗಿ, ತ್ವಾಂ - ನಿನ್ನನ್ನು, ಸುರಾಘಟಸಹಸ್ರೇಣ - ಮದ್ಯಕುಂಭ

ಲ್ಲಿರುವೆ ಮಾಡುದರಿಂದಲೇ ಬ್ರಹ್ಮಲೋಕವನ್ನೀಕ್ಷಿಸುತ್ತಿರುವೆ? ಸಮುದ್ರರಾಜನ ಪಟ್ಟದರಸಿಯಾಗಿ ಈ ಲೋಕದಲ್ಲಿ ಕಾಣಲ್ಪಡುತ್ತಿರುವೆಯಲ್ಲವೆ? ಜನನೀ! ಅಂತಹ ನಿನ್ನನ್ನು, ರಾಜಾಧಿರಾಜನ ಸೊಸೆಯಾದ ನಾನು ನಮಸ್ಕರಿಸುತ್ತೇನೆ! ಪುರುಷಪುಂಗವನಾದ ಶ್ರೀರಾಮನು ಕ್ಷೇಮದಿಂದ ಹಿಂತಿರುಗಿ ಬಂದು ರಾಜ್ಯವನ್ನಾಳುವಾಗ, ನಿನ್ನ ಪ್ರೀತಿಗೋಸುಗ ಬ್ರಾಹ್ಮಣರಿಗೆ ಅನೇಕ ಸಹಸ್ರ ಗೋವುಗಳನ್ನು ದಾನಮಾಡುತ್ತೇನೆ; ಉತ್ತಮೋತ್ತಮವಾದ ವಸ್ತ್ರಗಳನ್ನೀಯುವೆನು; ಇಷ್ಟುಮಾತ್ರವಲ್ಲದೆ ಮೃಷ್ಟಾನ್ನ ಭರಿತವಾದ ಸಮಾರಾಧನೆಯನ್ನೂ ಮಾಡುತ್ತೇನೆ! ಓ ಗಂಗಾದೇವಿಯೆ! ನಾನು ಕ್ಷೇಮವಾಗಿ ಪಟ್ಟಣಕ್ಕೆ ಬಂದ ಮೇಲೆ ಪರಿಶುದ್ಧವಾದ ಮನಸ್ಸಿನಿಂದ, ಸಾವಿರ ಕೊಡಗಳ ಮದ್ಯವನ್ನೂ, ಮಾಂಸದ ರಾಶಿಗಳನ್ನೂ ನಿನಗಾಗಿ ಸಮರ್ಪಿಸುತ್ತೇನೆ. ಇಷ್ಟೆಯಲ್ಲದೆ ಇನ್ನೂ ಅನೇಕ ವಿಧವಾಗಿ ನಿನ್ನನ್ನು,

ದೇವಿ! ಪುರೀಂ ಪುನರುಪಾಗತಾ ॥ ೮೯ ॥ ಯಾನಿ ತ್ವತ್ತೀರವಾಸೀನಿ ದೈವ ತಾನಿ ವಸಂತಿಚ ॥ ತಾ ಸ್ಸರ್ವಾಣಿ ಯಕ್ಷ್ಯಾಮಿ ತೀರ್ಥಾನ್ಯಾಯತನಾನಿಚ ॥ ೯೦ ॥ ಪುನರೇವ ಮಹಾಬಾಹು ರ್ಮಯಾ ಭ್ರಾತ್ರಾಚ ಸಂಗತಃ ॥ ಅಯೋಧ್ಯಾಂ ವನವಾಸಾತ್ತು ಪ್ರವಿಶತ್ವನಘೋನಘೇ ॥ ೯೧ ॥ ತಥಾ ಸಂಭಾಷಮಾಣಾ ಸಾ ಸೀತಾ ಗಂಗಾ ಮನಿಂದಿತಾ ॥ ದಕ್ಷಿಣಾ ದಕ್ಷಿಣಂ ತೀರಂ ಕ್ಷಿಪ್ರ ಮೇವಾ ಭ್ಯುಪಾಗಮತ್ ॥ ೯೨ ॥ ತೀರಂತು ಸಮನುಪ್ರಾಪ್ಯ ನಾವಂ ಹಿತ್ವಾ

ಸಹಸ್ರಗಳಿಂದಲೂ, ಮಾಂಸಭೂತೌದನೇನಚ-ಮಾಂಸರೂಪವಾದ ಅನ್ನದಿಂದಲೂ, ತ್ವಾಂ-ನಿನ್ನನ್ನು, ಯಕ್ಷ್ಯಾಮಿ - ಪೂಜಿಸುವೆನು. ॥ ೮೯ ॥ ತ್ವತ್ತೀರವಾಸೀನಿ - ನಿನ್ನ ತೀರದಲ್ಲಿರುವ, ಯಾನಿದೈವತಾನಿ - ಯಾವ ದೇವತೆಗಳು, ವಸಂತಿ - ವಾಸಿಸುವರೋ, ಸರ್ವಾಣಿ - ಸಮಸ್ತರಾದ, ತಾನಿ - ಆ ದೇವತೆಗಳನ್ನು, ತೀರ್ಥಾನಿ - ತೀರ್ಥಗಳನ್ನೂ, ಆಯತನಾನಿಚ-ದೇವಾಲಯಗಳನ್ನೂ, ಯಕ್ಷ್ಯಾಮಿ- ಪೂಜಿಸುವೆನು. ॥ ೯೦ ॥ ಹೇ ಅನಘೇ - ಎಲೌ ದೋಷಪರಿಹಾರಕಳೆ, ಮಹಾಬಾಹುಃ - ಮಹಾ ಭುಜಶಾಲಿಯಾದ, ಅನಘಃ - ಕುಂದಿಲ್ಲದ ಶ್ರೀರಾಮನು, ಮಯಾ - ನನ್ನೊಡನೆಯೂ, ಭ್ರಾತ್ರಾಚ- ತಮ್ಮನೊಡನೆಯೂ, ಸಂಗತಃ - ಕೂಡಿದವನಾಗಿ, ವನವಾಸಾತ್ತು - ವನವಾಸದಿಂದ, ಪುನರೇವ - ಮತ್ತು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವಿಶತು - ಪ್ರವೇಶಮಾಡಲಿ. ॥ ೯೧ ॥ ಅನಿಂದಿತಾ-ನಿರ್ದೋಷಳಾದ, ದಕ್ಷಿಣಾ-ಸರ್ವಭೂತ ದಯಾಪರಳಾದ, ಸಾಸೀತಾ-ಆ ಸೀತಾದೇವಿಯು, ಗಂಗಾಂ - ಗಂಗಾನದಿಯನ್ನು ಕುರಿತು, ತಥಾ - ಆರೀತಿ, ಸಂಭಾಷಮಾಣಾ - ಮಾತನಾಡುತ್ತ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ದಕ್ಷಿಣಂತೀರಂ - ದಕ್ಷಿಣತೀರವನ್ನು ಕುರಿತು, ಅಭ್ಯುಪಾಗಮತ್ - ಬಂದಳು. ॥ ೯೨ ॥ ಪರಂತಪಃ - ಶತ್ರುಸಂಹಾರಕನಾದ, ನರರ್ಷಭಃ - ನರಶ್ರೇಷ್ಠನಾದ ಶ್ರೀರಾಮನು, ತೀರಂತು - ದಡವನ್ನು, ಸಮನುಪ್ರಾಪ್ಯ - ಹೊಂದಿ, ನಾವಂ - ನಾವೆಯನ್ನು, ಹಿತ್ವಾ- ತೊರೆದು, ಭ್ರಾತ್ರಾ - ತಮ್ಮನಿಂದಲೂ, ವೈದೇಹ್ಯಾಸಹ - ಸೀತಾದೇವಿಯೊಡನೆಯೂ ಕೂಡಿದವನಾಗಿ,

ಪೂಜಿಸುತ್ತೇನೆ. ಇದೂ ಅಲ್ಲದೆ ನಿನ್ನ ಪ್ರದೇಶಪಲ್ಲಿ ವಾಸಿಸುವ ಸಕಲ ದೇವತೆಗಳನ್ನೂ, ತೀರ್ಥಗಳನ್ನೂ ಸಹ ಪೂಜಿಸುತ್ತೇನೆ. ನಿಷ್ಪಾಪಳಾದ ಎಲೌ ಗಂಗಾದೇವಿಯೆ! ನಿಷ್ಕಲ್ಮಷನೂ, ಮಹಾ ಬಾಹುವೂ ಆದ ಶ್ರೀರಾಮನು ನನ್ನೊಡನೆಯೂ, ತಮ್ಮನಾದ ಲಕ್ಷ್ಮಣ ಸ್ವಾಮಿಯೊಡನೆಯೂ ವನವಾಸವನ್ನು ಮಾಡಿ ಪುನಃ ಅಯೋಧ್ಯಾಪಟ್ಟಣಕ್ಕೆ ಕ್ಷೇಮವಾಗಿ ಹಿಂತಿರುಗುವಂತೆ ಆಶೀರ್ವದಿಸುವವಳಾಗು" ಎಂದು ಅನೇಕ ವಿಧವಾಗಿ ಪ್ರಾರ್ಥಿಸಿದಳು. ॥ ೮೧-೯೧ ॥ ಈ ರೀತಿ ಪ್ರಾರ್ಥಿಸುತ್ತಿರುವಾಗಲೇ ದಕ್ಷಿಣ ತೀರವನ್ನೈದಿದಳು. ಹೀಗೆ ತೀರಕ್ಕೆ ಬಂದ ಕೂಡಲೇ ಪುರುಷೋತ್ತಮನಾದ ಶ್ರೀರಾಮನು ನಾವೆಯಿಂದ ಸೀತಾ ಲಕ್ಷ್ಮಣರೊಂದಿಗೆ ಇಳಿದವನಾಗಿ, ಸುಮಿತ್ರಾನಂದವರ್ಧಕನಾದ ಲಕ್ಷ್ಮಣಸ್ವಾಮಿಯನ್ನು ಕುರಿತು, "ಎಲೈ ಲಕ್ಷ್ಮಣನೆ! ನೀನಿನ್ನುಮೇಲೆ ಜನಗಳಿರುವ ಸ್ಥಳಗಳಾಗಲಿ, ಜನಗಳಿಲ್ಲದಿರುವ ಸ್ಥಳಗಳಾಗಲಿ, ಬಹಳ ಜಾಗ್ರತೆಯಾಗಿ ನಮ್ಮನ್ನು ಸಂರಕ್ಷಿಸುತ್ತಿರಬೇಕು. ಇದುವರೆಗೂ ನಾವು ನೋಡದಿರುವ ನಿರ್ಜನವಾದ ಅರಣ್ಯದಲ್ಲಿ ಸಂಚರಿಸುತ್ತೇವೆಯಷ್ಟೆ? ಆದುದರಿಂದ

ನರರ್ಷಭಃ ॥ ಪ್ರಾತಿಷ್ಠತ ಸಹಭ್ರಾತ್ರಾ ವೈದೇಹ್ಯಾಚ ಪರಂತಪಃ ॥ ೯೩ ॥
ಅಥಾಬ್ರವೀ ನ್ಮಹಾಬಾಹು ಸ್ಸುಮಿತ್ರಾನಂದ ವರ್ಧನಂ ॥ ಭವ ಸಂರಕ್ಷಣಾ
ರ್ಥಾಯ ಸಜನೇ ವಿಜನೇಪಿವಾ ॥ ೯೪ ॥ ಅವಶ್ಯಂ ರಕ್ಷಣಂ ಕಾರ್ಯ
ಮದೃಷ್ಟೇ ವಿಜನೇ ವನೇ ॥ ಅಗ್ರತೋ ಗಚ್ಛ ಸೌಮಿತ್ರೇ ಸೀತಾ ತ್ವಾಮನು
ಗಚ್ಛತು ॥ ೯೫ ॥ ಪೃಷ್ಠತೋಹಂ ಗಮಿಷ್ಯಾಮಿ ತ್ವಾಂಚ ಸೀತಾಂಚ ಪಾಲಯನ್॥
ಅನ್ಯೋನ್ಯಸ್ಯೇಹ ನೋ ರಕ್ಷಾ ಕರ್ತವ್ಯಾ ಪುರುಷರ್ಷಭ ! ॥ ೯೬ ॥ ನಹಿ
ತಾವದತಿಕ್ರಾಂತಾ ಸುಕರಾ ಕಾಚನ ಕ್ರಿಯಾ ॥ ಅದ್ಯ ದುಃಖಂತು ವೈದೇಹೀ

ಪ್ರಾತಿಷ್ಠತ - ಹೊರಟನು. ॥ ೯೩ ॥ ಅಥ - ಬಳಿಕ, ಮಹಾಬಾಹುಃ - ಮಹಾ ಭುಜಪರಾಕ್ರಮ ಶಾಲಿಯಾದ ಶ್ರೀರಾಮನು, ಸುಮಿತ್ರಾನಂದವರ್ಧನಂ-ಸುಮಿತ್ರಾದೇವಿಗೆ ಸಂತೋಷಕರನಾದ ಲಕ್ಷ್ಮಣನನ್ನು ಕುರಿತು, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಸಜನೇ - ಜನದಿಂದೊಡಗೂಡಿದುದೇ ಆಗಲಿ, ವಿಜನೇಪಿವಾ - ಜನರಹಿತವಾದುದೇ ಆಗಲಿ, ಸಂರಕ್ಷಣಾರ್ಥಾಯ-ಸಂರಕ್ಷಣರೂಪ ಪ್ರಯೋಜನಕ್ಕೋಸುಗ, ಭವ - ಸಿದ್ಧನಾಗು, ಅದೃಷ್ಟೇ - ಎಂದಿಗೂ ನೋಡಲ್ಪಡದಿರುವ, ವಿಜನೇ-ಜನರಹಿತನಾದ, ವನೇ - ಅರಣ್ಯದಲ್ಲಿ, ರಕ್ಷಣಂ - ರಕ್ಷಣೆಯು, ಅವಶ್ಯಂ - ಅವಶ್ಯಕವಾಗಿ, ಕಾರ್ಯಂ - ಮಾಡತಕ್ಕುದು, ತ್ವಂ - ನೀನು, ಅಗ್ರತಃ - ಮುಂದುಗಡೆ, ಗಚ್ಛ - ಹೋಗು, ಸೀತಾ - ಸೀತಾದೇವಿಯು, ತ್ವಾಂ - ನಿನ್ನನ್ನು, ಅನುಗಚ್ಛತಿ - ಅನುಸರಿಸಿ ಬರುತ್ತಾಳೆ, ಅಹಂ - ನಾನು, ತ್ವಾಂಚ - ನಿನ್ನನ್ನೂ, ಸೀತಾಂಚ - ಸೀತಾದೇವಿಯನ್ನೂ, ಪಾಲಯನ್ - ರಕ್ಷಿಸುತ್ತ, ಪೃಷ್ಠತಃ - ಹಿಂಭಾಗದಲ್ಲಿ, ಗಮಿಷ್ಯಾಮಿ - ಬರುವೆನು, ಪುರುಷರ್ಷಭ - ಎಲೈ ಪುರುಷಶ್ರೇಷ್ಠನೇ, ಇಹ - ಈಗ, ನಃ - ನಮಗೆ, ಅನ್ಯೋನ್ಯಸ್ಯ - ಒಬ್ಬರಿಗೊಬ್ಬರ, ರಕ್ಷಾ - ಸಂರಕ್ಷಣೆಯು, ಕರ್ತವ್ಯಾ - ಮಾಡತಕ್ಕುದು, ಕಾಚನಕ್ರಿಯಾ - ಯಾವ ಕೆಲಸವೂ, ಅತಿಕ್ರಾಂತಾ - ಅತಿಕ್ರಮಿಸಿದ ಕಾಲವುಳ್ಳುದಾಗಿ, ನಸುಕರಾಹಿ - ಸುಲಭವಾಗಿ ಮಾಡತಕ್ಕುದಲ್ಲವಷ್ಟೆ, ಅದ್ಯ - ಈಗ, ವೈದೇಹೀತು - ಸೀತಾದೇವಿಯಾದರೆ, ವನವಾಸಸ್ಯ - ವನವಾಸದ, ದುಃಖಂ - ದುಃಖವನ್ನು, ವೇತ್ಸ್ಯತಿ-ತಿಳಿಯುವಳು, ಪ್ರಣಷ್ಟ

ನೀನು ಬಹು ಜಾಗ್ರತೆಯಿಂದ ನಮ್ಮನ್ನು ರಕ್ಷಿಸಬೇಕು, ವತ್ಸ ಲಕ್ಷ್ಮಣ !! ನೀನು ಮುಂದೆ ನಡೆ; ನಿನ್ನ ಹಿಂದೆ ಸೀತಾದೇವಿಯು ನಡಿಯಲಿ ; ನಾನು ನಿನ್ನನ್ನೂ, ಸೀತಾದೇವಿಯನ್ನೂ ಸಂರಕ್ಷಿಸುತ್ತ ನಿಮ್ಮ ಹಿಂದೆ ಬರುತ್ತೇನೆ. ಪುರುಷ ಶ್ರೇಷ್ಠನಾದ ಓ ಲಕ್ಷ್ಮಣಮೂರ್ತಿಯೆ ! ಈ ವನದಲ್ಲಿ ನಾವು ಒಬ್ಬರನ್ನೊಬ್ಬರು ರಕ್ಷಿಸಿಕೊಂಡಿರಬೇಕು. ಯಾವ ಕೆಲಸವೇ ಆಗಲಿ ಕೆಟ್ಟುಹೋದಮೇಲೆ ಸರಿಪಡಿಸಲಾಗುವುದಿಲ್ಲವೆಂಬುದು ಪ್ರಾಜ್ಞನಾದ ನಿನಗೆ ತಿಳಿಯದೆ? ಆದುದರಿಂದ ಮೊದಲೇ ನಾವು ಜಾಗ್ರತೆಯಿಂದಿರತಕ್ಕುದು ಯೋಗ್ಯವಲ್ಲವೆ? ಈಗೆ ಸೀತಾದೇವಿಗೂ ವನವಾಸದ ದುಃಖವು ಮನೋಗೋಚರವಾಗುತ್ತದೆ! ಈಗಲೇ ಸೀತಾದೇವಿಯು, ನಿರ್ಜನವಾದ ನದಿಗಳನ್ನೂ, ಪೈರು ಮೊಳೆಯದ ಗದ್ದೆಗಳನ್ನೂ, ತೋಟಗಳಿಲ್ಲದ ನದಿಗಳನ್ನೂ, ಹಳ್ಳತಿಟ್ಟೆಗಳಿರುವ ಮಾರ್ಗಗಳನ್ನೂ ಒಳಗೊಂಡಿರುವಅರಣ್ಯಪ್ರದೇಶದಲ್ಲಿ ಸಂಚರಿಸುತ್ತಾಳೆ. ಆದುದರಿಂದ ಈಕೆಯು ವನವಾಸ ದುಃಖವನ್ನೀಗ ತಿಳಿಯುತ್ತಾಳೆ" ಎಂದು

ವನವಾಸಸ್ಯ ವೇತ್ಸ್ಯತಿ ॥ ೯೭ ॥ ಪ್ರಣಷ್ಟ ಜನಸಂಬಾಧಂ ಕ್ಷೇತ್ರಾರಾಮ ವಿವರ್ಜಿತಂ ॥ ವಿಷಮಂಚ ಪ್ರಪಾತಂಚ ವನಮದ್ಯ ಪ್ರವೇಕ್ಷ್ಯತಿ ॥ ೯೮ ॥ ಶ್ರುತ್ವಾ ರಾಮಸ್ಯ ವಚನಂ ಪ್ರತಸ್ಥೇ ಲಕ್ಷ್ಮಣೋಗ್ರತಃ ॥ ಅನಂತರಂಚ ಸೀತಾಯಾ ರಾಘವೋ ರಘುನಂದನಃ ॥ ೯೯ ॥ ಗತಂತು ಗಂಗಾ ಪರಪಾರಮಾಶು ರಾಮಂ ಸುಮಂತ್ರಃ ಪ್ರತತಂ ನಿರೀಕ್ಷ್ಯ ॥ ಅಧ್ವಪ್ರಕರ್ಷಾ ದ್ವಿನಿವೃತ್ತ ದೃಷ್ಟಿ ರ್ಮುಮೋಚ ಬಾಷ್ಪಂ ವ್ಯಥಿತ ಸ್ತಪಸ್ವೀ ॥ ೧೦೦ ॥ ಸಲೋಕಪಾಲ ಪ್ರತಿಮ ಪ್ರಭಾವಾ ಸ್ತೀರ್ತ್ವಾ ಮಹಾತ್ಮಾ ವರದೋ ಮಹಾನದೀಂ ॥ ತತ ಸ್ಸಮೃದ್ಧಾ ಶ್ಶುಭ ಸಸ್ಯಮಾಲಿನಃ ಕ್ರಮೇಣ ವತ್ಸಾ ನ್ಮುದಿತಾ ನುಪಾಗಮತ್ ॥ ೧೦೧ ॥

ಜನಸಂಬಾಧಂ, ಪ್ರಣಷ್ಟ - ನಷ್ಟವಾದ, ಜನ - ಜನಗಳ, ಸಂಬಾಧಂ - ಸಮ್ಮರ್ದವುಳ್ಳ, ಕ್ಷೇತ್ರಾರಾಮವಿವರ್ಜಿತಂ, ಕ್ಷೇತ್ರ - ನೆಲ್ಲುಬೆಳೆಯುವ ಸ್ಥಳದಿಂದಲೂ, ಆರಾಮ - ಉಪವನದಿಂದಲೂ, ವಿವರ್ಜಿತಂ - ಬಿಡಲ್ಪಟ್ಟ, ವಿಷಮಂಚ - ನಿಮ್ನೋನ್ನತವಾದ, ಪ್ರಪಾತಂಚ - ಗುಣಿಗಳನ್ನೂ, ವನಂ - ಅರಣ್ಯವನ್ನೂ, ಅದ್ಯ - ಈಗ, ಪ್ರವೇಕ್ಷ್ಯತಿ - ಪ್ರವೇಶಿಸುತ್ತಾಳೆಯೋ, ತಸ್ಮಾತ್ - ಆ ಕಾರಣ, (ದುಃಖಂವೇತ್ಸ್ಯತಿ - ವನವಾಸ ದುಃಖವನ್ನು ತಿಳಿಯುತ್ತಾಳೆ,) ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೯೭-೯೮ ॥ ರಾಮಸ್ಯ - ಶ್ರೀರಾಮನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಲಕ್ಷ್ಮಣಃ - ಲಕ್ಷ್ಮಣನು, ಅಗ್ರತಃ - ಮುಂದುಗಡೆ, ಪ್ರತಸ್ಥೇ - ಹೊರಟನು, ಸೀತಾಯಾಃ - ಸೀತಾದೇವಿಗೆ, ಅನಂತರಂ - ಹಿಂದುಗಡೆ, ರಘುನಂದನಃ - ರಘುಕುಲಾನಂದಕರನಾದ, ರಾಘವಃ - ಶ್ರೀರಾಮನು, ಪ್ರತಸ್ಥೇ - ತೆರಳಿದನು. ॥ ೯೯ ॥ ಸುಮಂತ್ರಃ - ಸುಮಂತ್ರನು, ಗಂಗಾಪರಪಾರಂ, ಗಂಗಾ - ಗಂಗಾನದಿಯ, ಅಪರಪಾರಂ - ಆಚೆನಡಡವನ್ನು, ಆಶು - ಜಾಗ್ರತೆಯಾಗಿ, ಗತಂ - ಹೊಂದಿದ, ರಾಮಂ - ಶ್ರೀರಾಮನನ್ನು, ಪ್ರತತಂ - ಅವಿಚ್ಛಿನ್ನವಾಗಿ, ನಿರೀಕ್ಷ್ಯ - ಕಂಡು, ಅಧ್ವಪ್ರಕರ್ಷಾತ್ - ಮಾರ್ಗದ ದೂರತ್ವದಿಂದ, ವಿನಿವೃತ್ತದೃಷ್ಟಿಃ, ವಿನಿವೃತ್ತ - ಹಿಂತಿರುಗಿದ, ದೃಷ್ಟಿಃ - ನೋಟವುಳ್ಳವನಾಗಿ, ವ್ಯಥಿತಃ - ದುಃಖಗೊಂಡು, ತಪಸ್ವೀ - ದೀನನಾಗಿ, ಬಾಷ್ಪಂ - ಕಂಬನಿಯನ್ನು, ಮುಮೋಚ - ಬಿಟ್ಟನು. ॥ ೧೦೦ ॥ ಲೋಕಪಾಲಪ್ರತಿಮಪ್ರಭಾವರ್ವಾ, ಲೋಕಪಾಲ - ದಿಕ್ಪಾಲಕರಿಗೆ, ಪ್ರತಿಮ - ಸಮಾನವಾದ, ಪ್ರಭಾವರ್ವಾ - ಪ್ರಭಾವವುಳ್ಳ, ಮಹಾತ್ಮಾ - ಮಹಾತ್ಮನಾದ, ವರದಃ - ವರಪ್ರದಾಯಕನಾದ, ಸಃ - ಆ ಶ್ರೀರಾಮನು, ಮಹಾನದೀಂ - ಗಂಗಾ

ನುಡಿದನು. ಈ ಪ್ರಕಾರವಾಗಿ ಆ ಶ್ರೀರಾಮಚಂದ್ರನು ನುಡಿದ ಮಾತುಗಳನ್ನು ಕೇಳಿದ ಲಕ್ಷ್ಮಣನು ಮುಂದೆ ಹೊರಟನು ; ಆತನ ಹಿಂದೆ ಸೀತಾದೇವಿಯು ನಡೆದಳು ; ಆ ದೇವಿಯ ಹಿಂದುಗಡೆ ಶ್ರೀರಾಮನು ಹೊರಟವನಾದನು. ಆ ಬಳಿಕ ಸುಮಂತ್ರನು ಬಹು ಬೇಗನೆ ಗಂಗಾನದಿಯ ದಕ್ಷಿಣ ತೀರವನ್ನು ಹೊಂದಿದ ಆ ಶ್ರೀರಾಮನನ್ನು ರೆಪ್ಪೆಹಾಕದೆ ನೋಡುತ್ತಿದ್ದು, ಮಾರ್ಗವು ದೂರವಾದುದರಿಂದ ದೃಷ್ಟಿಯನ್ನು ಹಿಂತಿರುಗಿಸಿಕೊಂಡು, ಬಹಳವಾದ ದುಃಖವನ್ನಾಂತು ಕಣ್ಣೀರಿಟ್ಟನು. ॥ ೯೭-೧೦೦ ॥ ದೇವೇಂದ್ರನ ಪ್ರಭಾವದಂತೆ ಪ್ರಭಾವವುಳ್ಳವನೂ, ಮಹಾನುಭಾವನೂ, ವರಪ್ರದಾತನೂಆದಶ್ರೀರಾಮನು ಮಹಾ

ತೌ ತತ್ರ ಹತ್ವಾ ಚತುರೋ ಮಹಾ ಮೃಗಾ‌ನ್
ವರಾಹ ಮೃಶ್ಯಂ ಪೃಷತಂ ಮಹಾರುರುಂ ||
ಆದಾಯ ಮೇಧ್ಯಾಂ ಸ್ತ್ವರಿತಂ ಬುಭುಕ್ಷಿತೌ
ವಾಸಾಯ ಕಾಲೇ ಯಯತು ರ್ವನಸ್ಪತಿಂ || ೧೦೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಪಂಚಾಶಸ್ಸರ್ಗಃ.

ನದಿಯನ್ನು, ತೀರ್ತ್ವಾ - ದಾಟಿ, ತತಃ - ಬಳಿಕ, ಸಮೃದ್ಧಾ‌ನ್ - ನಿಬಿಡಿತವಾದ, ಶುಭಸಸ್ಯಮಾಲಿನಃ-ಮಂಗಳಕರವಾದ ಪೈರುಗಳ ಸಾಲುಗಳುಳ್ಳ, ಮುದಿತಾ‌ನ್ - ಸೊಂಪಾಗಿರುವ, ವತ್ಸಾ‌ನ್ - ವತ್ಸದೇಶಗಳನ್ನು ಕುರಿತು, ಉಪಾಗಮತ್ - ಬಂದನು. || ೧೦೧ || ತೌ - ಆ ರಾಮ ಲಕ್ಷ್ಮಣರು, ತತ್ರ - ಆ ವತ್ಸದೇಶದಲ್ಲಿ, ವರಾಹ - ಹಂದಿಯನ್ನು, ಮೇಧ್ಯಾಂ - ಪ್ರಸಿದ್ಧವಾದ, ಋಶ್ಯಂ - ಚಿಗುರಿಯನ್ನು, ಪೃಷತಂ - ಜಿಂಕೆಯಭೇದವನ್ನು, ಮಹಾರುರುಂಚ - ದೊಡ್ಡ ಕೃಷ್ಣಸಾರವನ್ನು, ಚತುರಃ-ನಾಲ್ಕಾದ, ಮಹಾಮೃಗಾ‌ನ್ - ದೊಡ್ಡ ಮೃಗಗಳನ್ನು, ಹತ್ವಾ - ಹೊಡೆದು, ತ್ವರಿತಂ-ಜಾಗ್ರತೆಯಾಗಿ, ಆದಾಯ-ತೆಗದುಕೊಂಡು, ಬುಭುಕ್ಷಿತೌ - ಭಕ್ಷಣೇಚ್ಛೆಯುಳ್ಳವರಾಗಿ, ಕಾಲೇ - ಕಾಲದಲ್ಲಿ, ವಾಸಾಯ - ನಿವಾಸಕ್ಕೋಸುಗ, ವನಸ್ಪತಿಂ - ದೊಡ್ಡ ವೃಕ್ಷವನ್ನು ಕುರಿತು, ಯಯತುಃ - ತೆರಳಿದರು. || ೧೦೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಪಂಚಾಶಸ್ಸರ್ಗಃ.

ನದಿಯಾದ ಗಂಗಾನದಿಯನ್ನು ದಾಂಟಿ, ಆಮೇಲೆ ಕ್ರಮವಾಗಿ ಪಚ್ಚೆ ಪೈರುಗಳ ಪಂಙ್ತಿಗಳಿಂದಲೂ, ಸರ್ವ ಸಮೃದ್ಧಿಗಳಿಂದಲೂ ನಗುತ್ತಿರುವುದೋ ಎಂಬಂತಿರುವ ವತ್ಸ ದೇಶಗಳನ್ನು ಹೊಂದಿದವನಾದನು. ಅಷ್ಟರಲ್ಲಿ ರಾಮಲಕ್ಷ್ಮಣರಿಗೆ ಹಸಿವುಂಟಾಯಿತು. ಆಗ ಅವರು ಹಂದಿ, ಚಿಗುರೆ, ಜಿಂಕೆ, ದೊಡ್ಡ ಕೃಷ್ಣಸಾರಗಳೆಂಬ ನಾಲ್ಕು ಮೃಗಗಳನ್ನು ಹೊಡೆದು ಬೇಗನೆ ತೆಗೆದುಕೊಂಡು ಭುಜಿಸಲಿಚ್ಛೆಯುಳ್ಳವರಾಗಿ ರಾತ್ರಿಯಲ್ಲಿ ವಾಸಿಸುವುದಕ್ಕೆ ಮಹಾ ವೃಕ್ಷವೊಂದನ್ನು ಹೊಂದಿದವರಾದರು. || ೧೦೧-೧೦೨ ||

ಇಂತಿದು ಶ್ರೀರಾಮಕೃತ ಸುಮಂತ್ರೋಪದೇಶ, ಗಂಗಾತರಣಪೂರ್ವಕ ವನಗಮನ
ವೃತ್ತಾಂತ ವಿವರಣವೆಂಬ ಐವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಿಂಪಂಚಾಶಸ್ಸರ್ಗಃ.

ಸತಂ ವೃಕ್ಷಂ ಸಮಾಸಾದ್ಯ ಸಂಧ್ಯಾಮನ್ವಾಸ್ಯ ಪಶ್ಚಿಮಾಂ ॥ ರಾಮೋ ರಮಯತಾಂ ಶ್ರೇಷ್ಠ ಇತಿಹೋವಾಚ ಲಕ್ಷ್ಮಣಂ ॥೧॥ ಅದ್ಯೇಯಂ ಪ್ರಥಮಾ ರಾತ್ರಿ ರ್ಯಾತಾ ಜನಪದಾದ್ಬಹಿಃ ॥ ಯಾ ಸುಮಂತ್ರೇಣ ರಹಿತಾ ತಾಂ ನೋತ್ಕಂಠಿತು ಮರ್ಹಸಿ ॥ ೨ ॥ ಜಾಗರ್ತವ್ಯ ಮತಂದ್ರಿಭ್ಯಾ ಮದ್ಯಪ್ರಭೃತಿ ರಾತ್ರಿಷು ॥ ಯೋಗಕ್ಷೇಮಾ ಹಿ ಸೀತಾಯಾ ವರ್ತತೇ ಲಕ್ಷ್ಮಣಾವಯೋಃ॥೩॥ ರಾತ್ರಿಂ ಕಥಂಚಿದೇವೇಮಾಂ ಸೌಮಿತ್ರೇ ವರ್ತಯಾಮಹೇ ॥ ಉಪಾವರ್ತಾ

ರಮಯತಾಂ - ಆನಂದಗೊಳಿಸುವರಲ್ಲಿ, ಶ್ರೇಷ್ಠಃ - ಶ್ರೇಷ್ಠನಾದ, ಸರಾಮಃ - ಆ ಶ್ರೀರಾಮನು, ತಂವೃಕ್ಷಂ - ಆ ವೃಕ್ಷವನ್ನು, ಸಮಾಸಾದ್ಯ - ಹೊಂದಿ, ಪಶ್ಚಿಮಾಂಸಂಧ್ಯಾಂ - ಸಾಯಂಸಂಧ್ಯೆಯನ್ನು, ಅನ್ವಾಸ್ಯ - ಉಪಾಸನಮಾಡಿ, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಇತಿ - ಈರೀತಿ, ಉವಾಚಹ - ಹೇಳಿದನಷ್ಟೆ. ॥ ೧ ॥ ಅದ್ಯ - ಈಗ, ಇಯಂರಾತ್ರಿಃ - ಈ ರಾತ್ರಿಯು, ಪ್ರಥಮಂ - ಮೊದಲು, ಜನಪದಾತ್ - ದೇಶಕ್ಕಿಂತಲೂ, ಬಹಿಃ - ಹೊರಗೆ, ಜಾತಾ- ಪ್ರಾಪ್ತವಾಯಿತು, ಯಾ - ಯಾವ ರಾತ್ರಿಯು, ಸುಮಂತ್ರೇಣ - ಸುಮಂತ್ರನಿಂದ, ರಹಿತಾ - ವರ್ಜಿತವಾಗಿರುವುದೋ, ತಾಂ - ಅಂತಹ ರಾತ್ರಿಯನ್ನು, ಪ್ರಾಪ್ಯ - ಹೊಂದಿ, ಉತ್ಕಂಠಿತುಂ- ಸಂತಪಿಸಲು, ನಾರ್ಹಸಿ - ಯೋಗ್ಯನಾಗಬೇಡ. ॥ ೨ ॥ ಅದ್ಯಪ್ರಭೃತಿ - ಇದುಮೊದಲು, ರಾತ್ರಿಷು - ರಾತ್ರಿಯಕಾಲಗಳಲ್ಲಿ, ಅತಂದ್ರಿಭ್ಯಾಂ - ನಿದ್ದೆಯಿಲ್ಲದವರಿಂದ, ಜಾಗರ್ತವ್ಯಂ - ಎಚ್ಚರ ತಕ್ಕದು, ಹಿ - ಯಾವ ಕಾರಣ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಸೀತಾಯಾಃ - ಸೀತಾ ದೇವಿಯ, ಯೋಗಕ್ಷೇಮಂ - ಪರಿಪಾಲನವು, ಆವಯೋಃ - ನಮಗೆ, ವರ್ತತೇ - ಕಾರ್ಯವಾಗಿರುತ್ತದೆಯೋ ॥ ೩ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಇಮಾಂರಾತ್ರಿಂ - ಈ ರಾತ್ರಿಯಲ್ಲಿ, ಕಥಂಚಿತ್ - ಹೇಗಾದರೂ, ವರ್ತಯಾಮಹೇ - ವಾಸಮಾಡೋಣ, ಸ್ವಯಂ - ನಮ್ಮಿಂದಲೇ,

---

ಇತರರನ್ನು ಆನಂದಗೊಳಿಸುವವರಲ್ಲಿ ಶ್ರೇಷ್ಠನಾದ ಶ್ರೀರಾಮನು ಆ ವೃಕ್ಷವನ್ನು ಹೊಂದಿದ ಮೇಲೆ ಸಾಯಂಕಾಲದ ಸಂಧ್ಯಾವಂದನೆಯನ್ನುಪಾಸಿಸಿದನು. ಹೀಗೆ ಸಂಧ್ಯಾವಂದನೆಯನ್ನು ಮಾಡಿ ಆಮೇಲೆ ತಮ್ಮನಾದ ಲಕ್ಷ್ಮಣನನ್ನು ಕುರಿತು ಹೀಗೆಂದನು. "ವತ್ಸ ಲಕ್ಷ್ಮಣ! ನಾವು ಸುಮಂತ್ರನನ್ನು ಬೀಳ್ಕೊಟ್ಟು ಬಂದಮೇಲೆ ಅರಣ್ಯವಾಸದಲ್ಲಿ ಮೊದಲನೆಯ ರಾತ್ರಿಯು ಸಂಪ್ರಾಪ್ತವಾಗಿದೆ. "ಅಯ್ಯೋ! ನಾವೀರಾತ್ರಿಯನ್ನು ಹೇಗೆ ಕಳೆಯಬೇಕು" ಎಂದು ಯೋಚಿಸಬೇಡ! ಇದು ಮೊದಲು ನಾವು ರಾತ್ರಿಯ ಕಾಲಗಳಲ್ಲಿ ನೈಮರೆತು ನಿದ್ರಿಸದೆ ಎಚ್ಚರಿಕೆಯಿಂದಿರಬೇಕು. ಇಷ್ಟೆಯಲ್ಲದೆ, ಎಲೈ ಲಕ್ಷ್ಮಣನೆ! ಕೇಳು: ಸೀತಾದೇವಿಯನ್ನು ಸಂರಕ್ಷಿಸುವುದು ನಮ್ಮಿಬ್ಬರ ಕಾರ್ಯವೂ ಆಗಿರುವುದಲ್ಲವೆ? ಈ

ಮಹೇ ಭೂಮಾ ವಾಸ್ತೀರ್ಯ ಸ್ವಯಮಾರ್ಜಿತೈಃ ॥ ೪ ॥ ಸತು ಸಂವಿಶ್ಯ
ಮೇದಿನ್ಯಾಂ ಮಹಾರ್ಹ ಶಯನೋಚಿತಃ ॥ ಇಮಾ ಸೌಮಿತ್ರಯೇ ರಾಮೋ
ವ್ಯಾಜಹಾರ ಕಥಾ ಶ್ಶುಭಾಃ ॥ ೫ ॥ ಧ್ರುವಮದ್ಯ ಮಹಾರಾಜೋ ದುಃಖಂ
ಸ್ವಪಿತಿ ಲಕ್ಷ್ಮಣ॥(೧)ಕೃತಕಾಮಾತು ಕೈಕೇಯಿೀ ತುಷ್ಟಾ ಭವಿತು ಮರ್ಹತಿ॥೬॥
ಸಾಹಿ ದೇವೀ ಮಹಾರಾಜಂ ಕೈಕೇಯಿೀ ರಾಜ್ಯಕಾರಣಾತ್ ॥ ಅಪಿ ನಚ್ಯಾ

ಆರ್ಜಿತೈಃ - ಸಂಪಾದಿಸಲ್ಪಟ್ಟ ತೃಣಪರ್ಣಾದಿಗಳಿಂದ, ಆಸ್ತೀರ್ಯ - ಹಾಸಿಕೊಂಡು, ಭೂಮೌ - ನೆಲದಲ್ಲಿ, ಉಪಾವರ್ತಾಮಹೇ-ವಾಸಮಾಡೋಣ. ॥ ೪ ॥ ಮಹಾರ್ಹಶಯನೋಚಿತಃ, ಮಹಾರ್ಹ- ಅಮೂಲ್ಯವಾದ, ಶಯನ - ಹಾಸಿಗೆಗೆ, ಉಚಿತಃ - ಯೋಗ್ಯನಾದ, ಸರಾಮಸ್ತು - ಆ ಶ್ರೀರಾಮ ನಾದರೆ, ಮೇದಿನ್ಯಾಂ - ಭೂಮಿಯಲ್ಲಿ, ಸಂವಿಶ್ಯ - ಪವಳಿಸಿ, ಶುಭಾಃ - ಶುಭಕರವಾದ, ಇಮಾಃ - ಈ, ಕಥಾಃ - ಕಥೆಗಳನ್ನು, ಸೌಮಿತ್ರಯೇ - ಲಕ್ಷ್ಮಣನಿಗೆ, ವ್ಯಾಜಹಾರ - ಹೇಳಿದನು. ॥ ೫ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಮಹಾರಾಜಃ - ದಶರಥರಾಜನು, ಅದ್ಯ - ಈಗ, ದುಃಖಂ - ದುಃಖಗೊಂಡವನಾಗಿ, ಸ್ವಪಿತಿ-ಮಲಗುವುದು, ಧ್ರುವಂ-ನಿಶ್ಚಯವು, ಕೃತಕಾಮಾ-ಸಫಲವಾದ ಕೋರಿಕೆ ಯುಳ್ಳ, ಕೈಕೇಯಿೀತು - ಕೈಕೇಯಿಯಾದರೆ, ತುಷ್ಟಾ - ಸಂತುಷ್ಟಳು, ಭವಿತುಂ - ಆಗುವದಕ್ಕೆ ಅರ್ಹತಿ - ಯೋಗ್ಯಳಾಗಿರುತ್ತಾಳೆ. ॥ ೬ ॥ ಸಾಕೈಕೇಯಿೀದೇವೀ - ಆ ಕೈಕೆಯಿೀದೇವಿಯು, ಆಗತಂ - ಬಂದ, ಭರತಂ - ಭರತನನ್ನು, ದೃಷ್ಟ್ವಾ - ಕಂಡು, ರಾಜ್ಯಕಾರಣಾತ್ - ಪಟ್ಟಾಭಿಷೇಕ

ರಾತ್ರಿಯಲ್ಲಿ ನಾವೇ ತೃಣಪರ್ಣಾದಿಗಳನ್ನು ತಂದು ಹಾಸಿಗೆಯನ್ನು ಮಾಡಿ ವಾಸ ಮಾ ಡೋಣ" ಎಂದು ಹೇಳಿ, ಮತ್ತೆಯಾ ಲಕ್ಷ್ಮಣನನ್ನು ಕುರಿತು, ಈ ಮುಂದೆ ಹೇಳುವ ಪಾವನಗಳಾದ ಕಥೆಗಳನ್ನು ಹೇಳತೊಡಗಿದನು. ॥ ೧-೫ ॥ "ವತ್ಸ, ಲಕ್ಷ್ಮಣ! ದಶರಥ ಮಹಾರಾಜನು ಇಂದಿನ ರಾತ್ರಿಯಲ್ಲಿ ಬಹಳವಾಗಿ ದುಃಖಿಸುತ್ತ ಮಲಗುತ್ತಾನೆ. ಕೈಕೇ ಯಿೀದೇವಿಯು ಸಫಲ ಮನೋರಥಳಾಗುವುದರಿಂದ ಸಂತೋಷಿಸಲು ತಕ್ಕವಳಾಗಿದ್ದಾಳೆ ಯಷ್ಟೆ! ರಾಣಿಯಾಗುವ ಆ ಕೈಕೇಯಿಯು ಸೋದರಮಾವನ ಮನೆಯಿಂದ ಹಿಂತಿರುಗಿ ಬರುವ ಭರತನನ್ನು ನೋಡಿ, ಇನ್ನು ಭರತನಿಗೆ ರಾಜ್ಯಾಧಿಪತ್ಯವು ಬರುವುದೆಂಪರಿತು ನಮ್ಮ

---

(೧) ಟಿ. ಇಲ್ಲಿನ ಶ್ರೀರಾಮಮೂರ್ತಿಯ ವಾಕ್ಯದಲ್ಲಿ ರಹಸ್ಯವಾದ ಒಂದು ವಿಷಯವಿರುವುದು. ವನಗಮನಕ್ಕೆ ಮೊದಲು ಶ್ರೀರಾಮನು ತನ್ನ ತಂದೆಯಾದ ದಶರಥರಾಯನನ್ನು ಕುರಿತು, "ನ ತೇಂಬಾ ಮಧ್ಯಮಾ ತಾತ ಗರ್ಹಿತವ್ಯಾ ಕಥಂಚನ।ತಾ ಮೇವೇಕ್ಷ್ವಾಕು ನಾಥಸ್ಯ ಭರತಸ್ಯ ಕಥಾಂ ಕುರು" ಎಂದು ಹೇಳಿರುವನು. ಈ ರೀತಿ ಏನೊಂದೂ ಸ್ವಾರ್ಥ ವಿಲ್ಲದೆ ಕೇವಲ ಕೈಕೇಯಿಯ ಆನಂದವನ್ನೇ ಪೂರ್ಣಗೊಳಿಸಬೇಕೆಂಬ ದೃಢಸಂಕಲ್ಪವುಳ್ಳ ಶ್ರೀರಾಮನು, ಇದೀಗ ಸ್ವಪ್ರ ಯೋಜನಯುಕ್ತವಾಗಿಯೂ, ಕೈಕೇಯಿಯ ನಿಂದೆಯನ್ನೊಳಗೊಂಡುದಾಗಿಯೂ ಇರುವ ಈ ಮಾತುಗಳನ್ನು ಆಡಿರು ವುದು ಯೋಗ್ಯವಾಗಿರುವುದೇ" ಎಂಬ ಸಂಶಯವು ಪ್ರತಿಯೊಬ್ಬ ವಾಚಕನಿಗೂ ತಲೆದೋರುತ್ತದೆ. ಆದರೆ ಈ ಮಾತು ಗಳನ್ನಾಡಿರುವುದು ಕೈಕೇಯಿಯ ನಿಂದೆಗೋಸುಗವಾಗಲಿ, ಸ್ವಪ್ರಯೋಜನಕ್ಕಾಗಲಿ ಆಡಿದುದಲ್ಲ. ಮುಂದೆ "ಅಯೋಧ್ಯಾ ಮಿತಯೇವತ್ವಂ ಕಾಲ್ಯೇ ಪ್ರವಿಶ ಲಕ್ಷ್ಮಣ" ಎಂಬ ರಾಮ ವಾಕ್ಯವಿರುವುದರಿಂದ, ಈ ವಚನ ಸರಣಿಯು, ಲಕ್ಷ್ಮಣನನ್ನು ಹಿಂತಿರುಗಿಸಲೋಸುಗವೂ, ಆತನ ಚಿತ್ತಸ್ಥೈರ್ಯವನ್ನು ಪರೀಕ್ಷಿಸಲೋಸುಗವೂ ಹೇಳಲಾಗಿದೆ. ಆದುದರಿಂದ ಯಾವ ವಿಧವಾದ ಸಂಶಯಕ್ಕೂ ಆಸ್ಪದವಿಲ್ಲ.

ವಯೇ ತ್ಪ್ರಾಣಾನ್ ದೃಷ್ಟ್ವಾ ಭರತ ಮಾಗತಂ ॥ ೭ ॥ ಅನಾಥಶ್ಚ ಹಿ ವೃದ್ಧಶ್ಚ ಮಯಾಚೈವ ವಿನಾಕೃತಃ ॥ ಕಿಂ ಕರಿಷ್ಯತಿ ಕಾಮಾತ್ಮಾ ಕೈಕೇಯಿಾ ವಶಮಾಗತಃ ॥ ೮ ॥ ಇದಂ ವ್ಯಸನಮಾಲೋಕ್ಯ ರಾಜ್ಞಶ್ಚ ಮತಿವಿಭ್ರಮಂ ॥ ಕಾಮಏವಾರ್ಥಧರ್ಮಾಭ್ಯಾಂ ಗರೀಯಾನಿತಿ ಮೇ ಮತಿಃ ॥ ೯ ॥ ಕೋಹ್ಯವಿದ್ವಾನಪಿ ಪುಮಾನ್ ಪ್ರಮದಾಯಾಃ ಕೃತೇ ತ್ಯಜೇತ್ ॥ ಛಂದಾನುವರ್ತಿನಂ ಪುತ್ರಂ ತಾತೋ ಮಾಮಿವ ಲಕ್ಷ್ಮಣ ॥ ೧೦ ॥ ಸುಖೀ ಬತ ಸಭಾರ್ಯಶ್ಚ ಭರತಃ ಕೈಕಯಿಾಸುತಃ ॥ ಮುದಿತಾನ್ ಕೋಸಲಾನೇಕೋ ಯೋ ಭೋಕ್ಷ್ಯತ್ಯಧಿರಾಜವತ್ ॥ ೧೧ ॥ ಸಹಿ ಸರ್ವಸ್ಯ ರಾಜ್ಯಸ್ಯ ಮುಖಮೇಕಂ ಭವಿಷ್ಯತಿ ॥

ನಿಮಿತ್ತವಾಗಿ, ಪ್ರಾಣಾನ್ - ಪ್ರಾಣಗಳನ್ನು, ಸಚ್ಯಾವಯೇದಪಿ - ಚ್ಯುತಳಾಗದಿರುವಳೋ ಏನೋ. ॥ ೭ ॥ ಹಿ - ಯಾವ ಕಾರಣ, ವೃದ್ಧಶ್ಚ - ವೃದ್ಧನಾದ, ಅನಾಥಶ್ಚ - ನಾಥರಹಿತನಾದ ದಶರಥ ರಾಯನು, ಮಯಾಚೈವ - ನನ್ನಿಂದಲೂ, ವಿನಾಕೃತಃ - ಪ್ರತ್ಯೇಕವಾಡಲ್ಪಟ್ಟನೋ, ತಸ್ಮಾತ್ - ಆ ಕಾರಣ, ಕಾಮಾತ್ಮಾ - ಕಾಮಮೋಹಿತವಾದ ಮನಸ್ಸುಳ್ಳ, (ದಶರಥಃ - ದಶರಥರಾಯನು,) ಕೈಕೇಯಿಾವಶಂ - ಕೈಕೇಯಿಯ ಸ್ವಾಧೀನತೆಯನ್ನು, ಆಗತಃ - ಹೊಂದಿ, ಕಿಂಕರಿಷ್ಯತಿ - ಏನು ತಾನೆಮಾಡಿಯಾನು ? ॥ ೮ ॥ ಇದಂವ್ಯಸನಂ - ಈ ವ್ಯಸನವನ್ನು, ಆಲೋಕ್ಯ-ಕಂಡು, ರಾಜ್ಞಃ- ಅರಸನಿಗೆ, ಮತಿವಿಭ್ರಮಂಚ - ಬುದ್ಧಿಭ್ರಂಶವನ್ನು, ಆಲೋಕ್ಯ - ಕಂಡು, ಕಾಮಏವ - ಕಾಮ ಗುಣವೇ, ಅರ್ಥಧರ್ಮಾಭ್ಯಾಂ - ಅರ್ಥಧರ್ಮಗಳಿಗಿಂತಲೂ, ಗರೀಯಾನ್ - ದೊಡ್ಡದು, ಇತಿ - ಇಂತೆಂದು, ಮೇ - ನನ್ನ, ಮತಿಃ - ಬುದ್ಧಿಯು. ॥ ೯ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ! ಅವಿದ್ವಾನಪಿ - ವಿದ್ವಾಂಸನಲ್ಲದವನಾದರೂ, ಕಃಪುಮಾನ್ - ಯಾವ ಪುರುಷನು, ಪ್ರಮದಾಯಾಃ ಕೃತೇ - ಸ್ತ್ರೀನಿಮಿತ್ತವಾಗಿ, ಛಂದಾನುವರ್ತಿನಂ - ತನ್ನ ಇಚ್ಛಾನುಸಾರವಾಗಿರುವ, ಪುತ್ರಂ - ಕುವರನನ್ನು, ತಾತಃ - ತಂದೆಯು, ಮಾಮಿವ - ನನ್ನಂತೆ, ತ್ಯಜೇತ್ - ಬಿಟ್ಟಾನು? ॥ ೧೦ ॥ ಯಃ - ಯಾವ ಭರತನು, ಮುದಿತಾನ್ - ಸಂತೋಷಯುಕ್ತಗಳಾದ, ಕೋಸಲಾನ್ - ಕೋಸಲದೇಶಗಳನ್ನು, ಅಧಿರಾಜವತ್ - ಯುವರಾಜನಾಗಿ, ಏಕಃ - ಒಬ್ಬನೆ, ಭೋಕ್ಷ್ಯತಿ-ಅನುಭವಿಸುವನೋ, ಸಭಾರ್ಯಃ- ಭಾರ್ಯೆಯಿಂದೊಡಗೂಡಿದ, ಕೈಕೇಯಿಾಸುತಃ - ಕೈಕೇಯಿಾ ಪುತ್ರನಾದ, ಭರತಃ - ಭರತನು, ಸುಖೀ - ಸುಖವಂತನು, ಬತ - ಆಶ್ಚರ್ಯವು. ॥ ೧೧ ॥ ತಾತೇಚ - ತಂದೆಯೂ, ವಯಸಾ -

ತಂದೆಯಾದ ದಶರಥರಾಯನ ಪ್ರಾಣಗಳನ್ನು ತೆಗೆಯುವುದಿಲ್ಲವಲ್ಲವೆ? ದಿಕ್ಕಿಲ್ಲದವನೂ, ನನ್ನಿಂದ ವಿರಹಿತನಾದವನೂ, ಕಾಮಮೋಹಿತನೂ, ಕೈಕೇಯಿಯ ವಶನಾದವನೂ ಆದ ಆ ರಾಯನು ಏನುತಾನೆ ಮಾಡಿಯಾನು? ಈಗ ನನಗುಂಟಾದ ವ್ಯಸನವನ್ನೂ, ದಶರಥ ರಾಯನಿಗುಂಟಾಗಿರುವ ಮತಿ ವಿಭ್ರಮವನ್ನೂ ನೋಡಿದರೆ, ಅರ್ಥಧರ್ಮಗಳಿಗಿಂತಲೂ ಕಾಮವೇ ಬಲವತ್ತರವಾದುದೆಂದು ಎಣಿಸುತ್ತೇನೆ. ಲಕ್ಷ್ಮಣಾ! ಲೋಕದಲ್ಲಿ ಮೂರ್ಖನಾದ ತಂದೆಯಾದರೂ, ನಮ್ಮ ತಂದೆಯಾದ ದಶರಥ ರಾಜನಂತೆ ಭಾರ್ಯಾನಿಮಿತ್ತವಾಗಿ, ಆತನ ಇಷ್ಟಾನುಸಾರ ನಡೆದುಕೊಳ್ಳುವ ನನ್ನಂತಹ ಮಗನನ್ನು ತ್ಯಜಿಸುತ್ತಾನೆ?

ತಾತೇಚ ವಯಸಾತೀತೇ ಮಯಿಚಾರಣ್ಯ ಮಾಸ್ಥಿತೇ ‖ ೧೨ ‖ ಅರ್ಥಧರ್ಮೌ ಪರಿತ್ಯಜ್ಯ ಯಃ ಕಾಮ ಮನುವರ್ತತೇ ‖ ಏವಮಾಪದ್ಯತೇ ಕ್ಷಿಪ್ರಂ ರಾಜಾ ದಶರಥೋ ಯಥಾ ‖ ೧೩ ‖ ಮನ್ಯೇ ದಶರಥಾಂತಾಯ ಮಮ ಪ್ರವ್ರಾಜನಾಯಚ ‖ ಕೈಕೇಯೀ ಸೌಮ್ಯ ಸಂಪ್ರಾಪ್ತಾ ರಾಜ್ಯಾಯ ಭರತಸ್ಯಚ ‖೧೪‖ ಅಪೀದಾನೀಂ ನ ಕೈಕೇಯೀ ಸೌಭಾಗ್ಯ ಮದಮೋಹಿತಾ ‖ ಕೌಸಲ್ಯಾಂಚ ಸುಮಿತ್ರಾಂಚ ಸಂಪ್ರಬಾಧೇತ ಮತ್ಕೃತೇ ‖ ೧೫ ‖ ಮಾಸ್ಮ ಮತ್ಕಾರಣಾ ದ್ದೇವೀ

ವಯಸ್ಸಿನಿಂದ, ಅತೀತೇಸತಿ - ಅತಿಕ್ರಮಿಸಿದವನಾಗಲು, ಮಯಿಚ - ನಾನೂ, ಅರಣ್ಯಂ-ವನವನ್ನು, ಆಸ್ಥಿತೇ - ಹೊಂದಿದವನಾಗಲು, ಸಃ - ಆ ಭರತನು, ಸರ್ವಸ್ಯ - ಸಮಸ್ತವಾದ, ರಾಜ್ಯಸ್ಯ-ರಾಜ್ಯಕ್ಕೆ, ಏಕಂಮುಖಂ - ಮುಖ್ಯನಾದವನು, ಭವಿಷ್ಯತಿ - ಆಗುತ್ತಾನೆ. ‖ ೧೨ ‖ ಯಃ-ಯಾವ ಪುರುಷನು, ಅರ್ಥಧರ್ಮೌ - ಅರ್ಥಧರ್ಮಗಳನ್ನು, ಪರಿತ್ಯಜ್ಯ - ಅಗಲಿ, ಕಾಮಂ - ಕಾಮವನ್ನು, ಅನುವರ್ತತೇ- ಅನುಸರಿಸುತ್ತಾನೆಯೋ, ಸಃ - ಆ ಪುರುಷನು, ದಶರಥೋರಾಜಾಯಥಾ - ದಶರಥರಾಜನಂತೆ, ಏವಂ - ಈಪರಿಯಾಗಿ, ವ್ಯಸನಂ - ವ್ಯಸನವನ್ನು, ಆಪದ್ಯತೇ - ಹೊಂದುವನು. ‖ ೧೩ ‖ ಹೇ ಸೌಮ್ಯ - ಎಲೈ ಪ್ರಸನ್ನನೇ, ಕೈಕೇಯೀ - ಕೈಕೇಯೀದೇವಿಯು, ದಶರಥಾಂತಾಯ - ದಶರಥ ರಾಯನ ನಾಶಕ್ಕೋಸುಗವೂ, ಮಮ - ನನ್ನ, ಪ್ರವ್ರಾಜನಾಯಚ - ಅರಣ್ಯವಾಸಕ್ಕೋಸುಗವೂ, ಭರತಸ್ಯ - ಭರತನಿಗೆ, ರಾಜ್ಯಾಯಚ - ರಾಜ್ಯಕ್ಕೋಸುಗವೂ, ಸಂಪ್ರಾಪ್ತೇತಿ - ಬಂದುಸೇರಿದಳೆಂದು, ಮನ್ಯೇ - ಎಣಿಸುತ್ತೇನೆ. ‖ ೧೪ ‖ ಇದಾನೀಂ - ಈಗ, ಕೈಕೇಯೀ - ಕೈಕೇಯೀದೇವಿಯು, ಸೌಭಾಗ್ಯಮದಮೋಹಿತಾ - ಸೌಂದರ್ಯವೆಂಬ ಗರ್ವದಿಂದ ಮೋಹಿತಳಾಗಿ, ಮತ್ಕೃತೇ - ನನ್ನ ನಿಮಿತ್ತ, ಕೌಸಲ್ಯಾಂಚ - ಕೌಸಲ್ಯಾದೇವಿಯನ್ನೂ, ನಸಂಪ್ರಬಾಧೇತಾಪಿ - ಬಾಧೆಗೊಳಸದಿರುವಳೇನು ? ‖ ೧೫ ‖ ಸುಮಿತ್ರಾದೇವೀ - ಸುಮಿತ್ರಾದೇವಿಯು, ಮತ್ಕಾರಣಾತ್ - ನನ್ನ

ನೆಯೆ? ಇನ್ನುಮೇಲೆ ನಮ್ಮ ಚಿಕ್ಕ ತಾಯಿಯಾದ ಕೈಕೇಯಿಯು, ತನ್ನ ಮಗನಾದ ಭರತನು ಮಹಾರಾಜನಾಗಿ, ಸಕಲ ಸಂಪತ್ಸಂಪೂರ್ಣವಾದ ಕೋಸಲ ದೇಶವನ್ನೆಲ್ಲ ಪಾಲಿಸುತ್ತ ಹೆಂಡತಿಯೊಡಗೂಡಿ ಸುಖಿಸುತ್ತಾನೆಂತಲೂ, ನಾವು ಅರಣ್ಯಕ್ಕೆ ಬಂದಮೇಲೆ ತನ್ನಮಗನಾದ ಭರತನೊಬ್ಬನೇ ಯುವರಾಜನಾಗುವನೆಂತಲೂ, ಆತನೇ ಮುಖ್ಯ ಪ್ರಭುವೆಂತಲೂ ತಿಳಿದು ಸಂತೋಷದಿಂದ ಹಿಗ್ಗಿ ಹೋಗುತ್ತಾಳೆ. ಇಷ್ಟೆಯಲ್ಲ ! ಎಲೈ ಲಕ್ಷ್ಮಣನೆ ! ಅರ್ಥ, ಧರ್ಮಗಳನ್ನು ತೊರೆದು, ಕಾಮದಲ್ಲಿ ಮಾತ್ರ ಪ್ರವರ್ತಿಸಿದವನು, ದಶರಥರಾಯನಂತೆ ಬಹು ಬೇಗನೆ ನಾಶಹೊಂದುತ್ತಾನೆ! ವತ್ಸ! ಲಕ್ಷ್ಮಣ!! ಈ ಕೈಕೇಯಿಯು ದಶರಥರಾಯನ ನಾಶಕ್ಕೂ, ನಾವು ಅರಣ್ಯವಾಸ ಮಾಡುವುದಕ್ಕೂ, ಭರತನಿಗೆ ರಾಜ್ಯ ಬರುವುದಕ್ಕೂ ನಮ್ಮ ಮನೆಗೆ ಬಂದಳೆಂದು ತಿಳಿಯುತ್ತೇನೆ. ಈಗಲೀ ಕೈಕೇಯಿಯು ನಿಜಸೌಂದರ್ಯ - ಸೌಭಾಗ್ಯ ಮದದಿಂದ ಗರ್ವಿಸಿ, ಶರೀರವನ್ನೇ ಮರೆತು, ನನ್ನ ನಿಮಿತ್ತವಾಗಿ, ಕೌಸಲ್ಯಾ ಸುಮಿತ್ರೆಯರನ್ನು ಬಾಧಿಸದೆ ಇರುತ್ತಾಳೆಯೆ? ಬಾಧಿಸುತ್ತಾಳೆಂದೇ ತೋರುವುದು. ಲಕ್ಷ್ಮಣ ! ನನಗಾಗಿ ಸುಮಿತ್ರಾದೇವಿಯು ದುಃಖಪಡಬೇಕಾದ ಅವಶ್ಯಕತೆಯಿಲ್ಲವು. ಇದೊ ! ಬೆಳ

ಸುಮಿತ್ರಾ ದುಃಖಮಾವಸೇತ್ ॥ ಅಯೋಧ್ಯಾ ಮಿತಯೇವತ್ವಂ ಕಾಲ್ಯೇ ಪ್ರವಿಶ ಲಕ್ಷ್ಮಣ! ॥ ೧೬ ॥ ಅಹಮೇಕೋ ಗಮಿಷ್ಯಾಮಿ ಸೀತಯಾ ಸಹ ದಂಡಕಾ ॥ ಅನಾಥಾಯಾ ಹಿ ನಾಥಸ್ತ್ವಂ ಕೌಸಲ್ಯಾಯಾ ಭವಿಷ್ಯಸಿ ॥೧೭॥ ಕ್ಷುದ್ರಕರ್ಮಾಹಿ ಕೈಕೇಯಿಾ ದ್ವೇಷ್ಯಮನ್ಯಾಯ್ಯ ಮಾಚರೇತ್ ॥ ಪರಿದದ್ಯಾಹಿ ಧರ್ಮಜ್ಞೇ ಭರತೇ ಮಮ ಮಾತರಂ ॥ ೧೮ ॥ ನೂನಂ ಜಾತ್ಯಂತರೇ ಕಸ್ಮಿ ಸ್ತ್ರಿಯಃ ಪುತ್ರೈ ರ್ವಿಯೋಜಿತಾಃ ॥ ಜನನ್ಯಾ ಮಮ ಸೌಮಿತ್ರೇ! ತಸ್ಮಾದೇತ

ನಿಮಿತ್ತವಾಗಿ, ದಃಖಂ - ವ್ಯಸನವನ್ನು, ಮಾವಸೇತ್ಸ್ಮ - ಹೊಂದಬಾರದಷ್ಟೆ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೆ, ತ್ವಂ - ನೀನು, ಇತಯೇವ - (ಗೋ) ಈ ಸಮಿಾಪಪ್ರದೇಶದಿಂದಲೇ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವಿಶ - ಪ್ರವೇಶಿಸು. ॥ ೧೬ ॥ ಅಹಂ - ನಾನು, ಏಕಃ - ಒಬ್ಬನೇ, ಸೀತಯಾಸಹ - ಸೀತಾದೇವಿಯೊಡನೆ, ದಂಡಕಾ - ದಂಡಕಾರಣ್ಯವನ್ನು ಕುರಿತು, ಗಮಿಷ್ಯಾಮಿ-ಹೋಗುವೆನು, ತ್ವಂಹಿ-ನೀನಾದರೆ, ಅನಾಥಾಯಾಃ-ರಕ್ಷಕನಿಲ್ಲದಿರುವ, ಕೌಸಲ್ಯಾಯಾಃ-ಕೌಸಲ್ಯಾದೇವಿಗೆ, ನಾಥಃ - ರಕ್ಷಕನು, ಭವಿಷ್ಯಸಿ - ಆಗುವೆ. ॥ ೧೭ ॥ ಹಿ - ಯಾವ ಕಾರಣ, ಕ್ಷುದ್ರಕರ್ಮಾ - ನೀಚವ್ಯಾಪಾರವುಳ್ಳ, ಕೈಕೇಯಿಾ - ಕೈಕೇಯಿಾದೇವಿಯು, ದ್ವೇಷ್ಯಂ - ದ್ವೇಷಕ್ಕೆ ಉಚಿತವಾದ, ಅನ್ಯಾಯ್ಯಂ - ಅವಮಾನವನ್ನು, ಆಚರೇತ್ - ಮಾಡುವಳು, ಧರ್ಮಜ್ಞೇ- ಧರ್ಮಜ್ಞನಾದ, ಭರತೇ - ಭರತನಲ್ಲಿ, ಮಮ - ನನ್ನ, ಮಾತರಂ - ತಾಯಿಯನ್ನು, ಪರಿದದ್ಯಾಹಿ- ಒಪ್ಪಿಸಿಬಿಡು. ॥ ೧೮ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೆ, ಮಮ - ನನ್ನ, ಜನನ್ಯಾ - ತಾಯಿಯಿಂದ, ಕಸ್ಮಿಂಶ್ಚಿಜ್ಜಾತ್ಯಂತರೇ - ಯಾವುದೋ ಒಂದು ಜನ್ಮಾಂತರದಲ್ಲಿ, ಸ್ತ್ರಿಯಃ-ಹೆಂಗಳು, ಪುತ್ರೈಃ-ಮಕ್ಕಳಿಂದ, ವಿಯೋಜಿತಾಃ ವಿರಹವನ್ನು ಹೊಂದಿಸಲ್ಪಟ್ಟರು, ತಸ್ಮಾತ್-ಆ ದೋಷದಿಂದ, ಏತತ್ - ಈ ಪುತ್ರವಿಯೋಗ ಜನ್ಯದುಃಖವು, ಉಪಸ್ಥಿತಂ - ಪ್ರಾಪ್ತವಾಯಿತು. ॥ ೧೯ ॥

ಗಾಗುತ್ತಲೆ ಅಯೋಧ್ಯಾಪಟ್ಟಣಕ್ಕೆ ಹೊರಡು; ನಾನೊಬ್ಬನೇ ಸೀತಾದೇವಿಯೊಡಗೂಡಿ ದಂಡಕಾರಣ್ಯಕ್ಕೆ ಹೊರಡುತ್ತೇನೆ. ಕೌಸಲ್ಯಾದೇವಿಯು ಅಯೋಧ್ಯೆಯಲ್ಲಿ ದಿಕ್ಕಿಲ್ಲದವ ಳಾಗಿದ್ದಾಳೆ. ಆದುದರಿಂದ ನೀನು ಬೆಳಗಾಗುತ್ತಲೆ ಅಯೋಧ್ಯಾಪಟ್ಟಣಕ್ಕೆ ಹೊರಟು ಆ ಕೌಸಲ್ಯಾದೇವಿಗೂ ಸಹಾಯಕನಾಗಿರು. ಕೈಕೇಯಿಯು ನೀಚವಾದ ದುಷ್ಕರ್ಮಗಳನ್ನು ಮಾಡುವಸ್ವಭಾವದವಳು; ಆದುದರಿಂದ ದ್ವೇಷವನ್ನು ಸಾಧಿಸುವುದಕ್ಕಾಗಿ ಅನ್ಯಾಯವಾದ ಕಾರ್ಯಗಳನ್ನು ಮಾಡುತ್ತಾಳೆಯಲ್ಲವೆ? ಹೀಗೆ ನನಗೆ ತೋರುತ್ತದೆ. ಎಲೈ ಲಕ್ಷ್ಮಣನೆ! ನೀನು ಧರ್ಮಜ್ಞನಾದ ಭರತನಿಗೆ ನಮ್ಮ ತಾಯಿಯಾದ ಕೌಸಲ್ಯಾದೇವಿಯನ್ನು, ಸಂರಕ್ಷಣ ಕಾರ್ಯಕ್ಕಾಗಿ ಸಮರ್ಪಿಸುವವನಾಗು. ಆತನು ಧರ್ಮಜ್ಞನಾದುದರಿಂದ ಆಕೆಯನ್ನು ಚೆನ್ನಾಗಿ ಕಾಪಾಡುತ್ತಾನೆ; ಓ ಲಕ್ಷ್ಮಣ! ನನ್ನ ತಾಯಿಯಾದ ಕೌಸಲ್ಯಾದೇವಿಯು ಜನ್ಮಾಂತರದಲ್ಲಿ ಅನೇಕ ತಾಯಿಯರಿಗೂ ಅವರ ಮಕ್ಕಳಿಗೂ ಅಗಲಿಕೆಯನ್ನುಂಟುಮಾಡಿರ ಬೇಕು; ಇದು ನಿಜ. ಆದುದರಿಂದಲೇ ಇಂತಹ ಕಷ್ಟವು ಪ್ರಾಪ್ತವಾಯಿತು. ಕೌಸಲ್ಯಾ ದೇವಿಯು ಬಹುಕಾಲ ಕಷ್ಟಪಟ್ಟು ನನ್ನನ್ನು ಪಡೆದು, ಸಾಕಿ, ಸಲುಹಿ, ದೊಡ್ಡವನನ್ನಾಗಿ

ದುಪಸ್ಥಿತಂ ‖ ೧೯ ‖ ಮಯಾಹಿ ಚಿರಪುಷ್ಟೇನ ದುಃಖ ಸಂವರ್ಧಿತೇನ ಚ ‖ ವಿಪ್ರಾಯುಜ್ಯತ ಕೌಸಲ್ಯಾ ಫಲಕಾಲೇ ಧಿಗಸ್ತು ಮಾಂ ‖ ೨೦ ‖ ಮಾಸ್ಮ ಸೀಮಂತಿನೀ ಕಾಚಿ ಜ್ಜನಯೇತ್ಪುತ್ರ ಮೀದೃಶಂ? ‖ ಸೌಮಿತ್ರೇ! ಯೋಹ ಮಂಬಾಯಾ ದದ್ಮಿ ಶೋಕ ಮನಂತಕಂ ‖ ೨೧ ‖ ಮನ್ಯೇ ಪ್ರೀತಿವಿಶಿಷ್ಟಾ ಸಾ ಮತ್ತೋ ಲಕ್ಷ್ಮಣ! ಶಾರಿಕಾ ‖ ಯಸ್ಯಾ ಸ್ತಚ್ಛ್ರೂಯತೇ ವಾಕ್ಯಂ ಶುಕಪಾದ ಮರೇರ್ದಶ (೧) ‖ ೨೨ ‖ ಶೋಚಂತ್ಯಾ ಶ್ಚಾಲ್ಪಭಾಗ್ಯಾಯಾ ನಕಿಂಚಿ ದುಪ

ಹಿ - ಯಾವ ಕಾರಣ, ಚಿರಪುಷ್ಟೇನ-ಬಹಳ ಕಾಲದಿಂದ ಪರಿಪೋಷಿಸಲ್ಪಟ್ಟ, ದುಃಖಸಂವರ್ಧಿತೇನಚ, ದುಃಖ - ಕಷ್ಟದಿಂದ, ಸಂವರ್ಧಿತೇನಚ - ವೃದ್ಧಿಗೊಳಿಸಲ್ಪಟ್ಟ, ಮಯಾ - ನನ್ನಿಂದ, ಕೌಸಲ್ಯಾ - ಕೌಸಲ್ಯಾದೇವಿಯು, ಫಲಕಾಲೇ - ಸುಖಾನುಭವ ಕಾಲದಲ್ಲಿ, ವಿಪ್ರಾಯುಜ್ಯತ - ಬಿಡಿಸಲ್ಪಟ್ಟಳೋ, ತಸ್ಮಾತ್ - ಆ ಕಾರಣ, ಮಾಂ - ನನ್ನನ್ನು, ಧಿಕ್ - ನಿಂದಿಸುವದು, ಅಸ್ತು - ಆಗಲಿ. ‖ ೨೦ ‖ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಯೋಹಂ - ಯಾವ ನಾನು, ಅಂಬಾಯಾಃ - ತಾಯಿಗೆ, ಅನಂತಕಂ - ಪಾರವಿಲ್ಲದ, ಶೋಕಂ - ವ್ಯಸನವನ್ನು, ದದ್ಮಿ - ಕೊಟ್ಟಿರುವನೋ, ಈದೃಶಂ-ಇಂತಹ, ಪುತ್ರಂ - ಮಗನನ್ನು, ಕಾಚಿತ್‌ಸೀಮಂತಿನೀ - ಯಾವ ಹೆಂಗಸೂ, ಮಾಜನಯೇಸ್ಮ - ಹೆರಲಾರಳಷ್ಟೆ. ‖ ೨೧ ‖ ಹೇ ಶುಕ - ಎಲೈ ಗಿಣಿಯೇ, ಯಸ್ಯಾಃ - ತಾಯಿಯಂತೆ ಹಿತವನ್ನು ಮಾಡುತ್ತಿರುವ ಹೆಣ್ಣುಗಿಳಿಯಾದ ನನಗೆ, ಅರೇಃ - ಶತ್ರುಪ್ರಾಯವಾದ ಬೆಕ್ಕಿನ, ಪಾದಂ-ಕಾಲನ್ನು, ದಶ - ಕಚ್ಚು, (ಇತಿ - ಇಂತೆಂಬ,) ತದ್ವಾಕ್ಯಂ - ಆ ಮಾತು, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, (ಅಂಬಯಾ - ತಾಯಿಯಿಂದ, ಶ್ರೂಯತೇ - ಕೇಳಲ್ಪಡುತ್ತದೆಯೊ,) ಸಾಶಾರಿಕಾ - ಆ ಹೆಣ್ಣು ಗಿಳಿಯು, ಮತ್ತಃ - ನನಗಿಂತಲೂ, (ಅಂಬಾಯಾಃ - ತಾಯಿಗೆ,) ಪ್ರೀತಿವಿಶಿಷ್ಟಾ - ವಿಶ್ವಾಸದಿಂದ ಕೂಡಿದಂಥದು, ಇತಿ - ಇಂತೆಂದು, ಮನ್ಯೇ - ಎಣಿಸುತ್ತೇನೆ. ‖ ೨೨ ‖ ಹೇ ಅರಿಂದಮ -

ಮಾಡಿ, ಇನ್ನು ನನ್ನ ಪರಿಚರ್ಯಾದಿ ಸುಖಗಳನ್ನು ಅನುಭವಿಸಬೇಕೆಂದು ತಿಳಿದಿದ್ದಳು; ಇಂತಹ ತಾಯಿಯನ್ನಗಲಿ ನಾನು ಅರಣ್ಯಕ್ಕೆ ಬಂದು ಬಿಟ್ಟೆನು; ನನ್ನ ಜನ್ಮವು ವ್ಯರ್ಥವು. ನಾನು ತಾಯಿಗೆ ಕೊನೆಯೇ ಇಲ್ಲದ ದುಃಖವನ್ನುಂಟುಮಾಡುತಿದ್ದೇನೆ. ಹೀಗೆ ದುಃಖಪಡುವ ಮಗನನ್ನು, ಈ ಲೋಕದಲ್ಲಿ ಯಾವ ಹೆಂಗಸೂ ಪಡೆಯದಿರಲಿ! ಲಕ್ಷ್ಮಣ!! ನಾವು ಅರಣ್ಯಕ್ಕೆ ಹೊರಟುಬರುವಾಗ, ಕೌಸಲ್ಯಾದೇವಿಯಿಂದ ಪೋಷಿತವಾದ ಗೊರವಂಕ ಪಕ್ಷಿಯು ಗಿಳಿಯನ್ನು ಕುರಿತು, "ಓ ಗಿಳಿಯೆ! ನೀನು ದುರ್ಮಾರ್ಗಳಾದ ಕೈಕೇಯಿಯ ಕಾಲನ್ನು ಕಚ್ಚು" ಎಂದಿತು. ಅದನ್ನು ನಾನು ಕೇಳಿದೆನು. ಪಕ್ಷಿಜಾತಿಯಲ್ಲಿ ಹುಟ್ಟಿದ ಆ ಗೊರವಂಕವೂ ತನ್ನನ್ನು ಪೋಷಿಸುತ್ತಿರುವ ವಿಶ್ವಾಸದಿಂದ ಕೌಸಲ್ಯಾದೇವಿಗೆ ಮಾಡಲೆಳಸಿದ ಪ್ರಿಯವನ್ನೂ ಸಹ, ಆಕೆಯ ಗರ್ಭದಲ್ಲಿಯೇ ಬೆಳೆದು ಹುಟ್ಟಿ ಪ್ರವೃದ್ಧಮಾನನಾದ ನಾನು ಮಾಡಲಾರದೆ

(೧) ಟಿ. "ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾ ಮಯಾಃ । ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ‖" ಎಂಬ ವಚನಾಧಾರದಿಂದ ಈ ಶ್ಲೋಕದಲ್ಲಿ, "ಮುಕ್ತಿ ಮಾರ್ಗವನ್ನು ಸಂಪಾದಿಸಲಿಚ್ಛಿಸುವ ನರನು,

ಕುರ್ವತಾ ॥ ಪುತ್ರೇಣ ಕಿಮಪುತ್ರಾಯಾ ಮಯಾ ಕಾರ್ಯಮರಿಂದಮ!॥೨೩॥
ಅಲ್ಪಭಾಗ್ಯಾಹಿ ಮೇ ಮಾತಾ ಕೌಸಲ್ಯಾ ರಹಿತಾ ಮಯಾ ॥ ಶೇತೇ ಪರಮ
ದುಃಖಾರ್ತಾ ಪತಿತಾ ಶೋಕ ಸಾಗರೇ ॥ ೨೪ ॥ ಏಕೋಽಹ್ಯಹ ಮಯೋ

ಎಲೈ ಶತ್ರುಸಂಹಾರಕನೇ, ಅಲ್ಪಭಾಗ್ಯಾಯಾಃ - ಮಂದಭಾಗ್ಯಳಾದಕಾರಣ, ಶೋಚಂತ್ಯಾಃ - ದುಃಖಿಸುತ್ತಿರುವ, ಅಪುತ್ರಾಯಾಃ - ಪುತ್ರಪ್ರಯೋಜನದಿಂದ ಹೀನಳಾದ ತಾಯಿಗೆ, ಕಿಂಚಿದಪಿ - ಸ್ವಲ್ಪವಾದರೂ, ನೋಪಕುರ್ವತಾ - ಉಪಕಾರವನ್ನು ಮಾಡದಿರುವ, ಪುತ್ರೇಣ-ಮಗನಾದ, ಮಯಾ- ನನ್ನಿಂದ, ಕಿಂಕಾರ್ಯಂ - ಏನುಪ್ರಯೋಜನವು. ॥ ೨೩ ॥ ಅಲ್ಪಭಾಗ್ಯಾ - ಪುಣ್ಯಹೀನಳಾದ, ಮೇಮಾತಾ - ನನ್ನತಾಯಿಯಾದ, ಕೌಸಲ್ಯಾ - ಕೌಸಲ್ಯಾದೇವಿಯು, ಮಯಾ - ನನ್ನಿಂದ, ರಹಿತಾ- ಹೀನಳಾದ ಕಾರಣ, ಶೋಕಸಾಗರೇ - ದುಃಖಸಮುದ್ರದಲ್ಲಿ, ಪತಿತಾ - ಬಿದ್ದು, ಪರಮ ದುಃಖಾರ್ತಾ - ಬಹಳ ದುಃಖದಿಂದ ಪೀಡಿತಳಾಗಿ, ಶೇತೇಹಿ - ಮಲಗುವಳಷ್ಟೆ. ॥ ೨೪ ॥ ಹೇ

ಹೋದೆನು. ಆದುದರಿಂದ ನನ್ನ ಜನ್ಮವು ವ್ಯರ್ಥವಾದುದೆಂದೆಣಿಸುತ್ತೇನೆ. ಎಲೈ ಲಕ್ಷ್ಮಣನೆ! ಬಹಳವಾಗಿ ದುಃಖಿಸುತ್ತಿರುವವಳೂ, ಸ್ವಲ್ಪವಾದರೂ ಅದೃಷ್ಟವಿಲ್ಲದಿರುವವಳೂ, ಪುತ್ರವಿರಹಬಾಧಿತಳೂ ಆದ ಕೌಸಲ್ಯಾದೇವಿಗೆ, ಆಕೆಯ ಮಗನೇ ಆದ ನಾನು ಸ್ವಲ್ಪವಾದರೂ ಉಪಕಾರವನ್ನು ಮಾಡದೆಹೋದೆನು. ಇಂತಹ ಮಗನಿಂದ ತಾಯಿಯರಿಗೇನು ಪ್ರಯೋಜನ? ಅಲ್ಪಭಾಗ್ಯಳೂ, ನನಗೆ ತಾಯಿಯೂ ಆದ ಕೌಸಲ್ಯಾದೇವಿಯು, ನಾನಾಕೆಯನ್ನಗಲಿ ಅರಣ್ಯಕ್ಕೆ ಬಂದ ಮೇಲೆ, ಮಿತಿಯಿಲ್ಲದ ದುಃಖಸಮುದ್ರದಲ್ಲಿ ಮುಳುಗಿ ಅಧಿಕ

ಭಗವದ್ಭಜನೆ ಮಾಡುವುದಕ್ಕಿಂತಲೂ, ಸದ್ಗುರುವಿನ ಚರಣಕಮಲಾರಾಧನಾಸಕ್ತನಾದರೆ ಬಹು ಬೇಗನೆ ಸ್ವೋದ್ದಿಷ್ಟ ಮುಕ್ತಿಗೆ ಭಾಗಿಯಾಗುತ್ತಾನೆ" ಎಂಬಂಶವನ್ನು ವಿಶದೀಕರಿಸಬಹುದು. ವಿಶೇಷಾರ್ಥ ವಿವೇಚನ ರೀತಿಯಾದರೂ ಹೀಗೆ,—

"ಶಾರಿಕಾ" ಎಂಬ ಪದದಿಂದ, ಜ್ಞಾನ, ಕರ್ಮಗಳೆಂಬ ಎರಡು ರೆಕ್ಕೆಗಳಿರುವ ಆಚಾರ್ಯನು. ಎಂದಮೇಲೆ ಇಲ್ಲಿ !ಭಗವತ್ಪಾರತಂತ್ರ್ಯವು ಹೇಳಲಾಗುತ್ತದೆ. ಭಗವಂತನಿಗಿಂತಲೂ ಆಚಾರ್ಯನು, ಮೋಕ್ಷಾನಂದವನ್ನು ದೊರಕಿಸುವುದರಲ್ಲಿ ಸುಕರವಾದ ಉಪಾಯವುಳ್ಳವನು. "ಪಶುರ್ಮನುಷ್ಯಃ ಪಕ್ಷೀವಾ ಯೇಚ ವೈಷ್ಣವ ಸಂಶ್ರಯಾಃ। ತೇನೈವ ತೇ ಪ್ರಯಾಸ್ಯಂತಿ ತದ್ವಿಷ್ಣೋಃ ಪರಮಂ ಪದಂ" ಎಂಬ ವಚನಾಧಾರದಿಂದ ಈ ಅರ್ಥವು ಹೇಳಲ್ಪಟ್ಟದೆ. "ಈ ಆಚಾರ್ಯನಾರು?" ಎಂದರೆ, ಯಸ್ಯಾಃ-ಯಾವನಿಂದ ಈ ಗುರುಪರಂಪರಾಪ್ರಾಪ್ತನಾದ, ವಾಕ್ಯಂ-ಮಂತ್ರರೂಪವಾದ ವಾಕ್ಯವು, ಶ್ರೂಯತೇ - ಕೇಳಲ್ಪಡುತ್ತದೆಯೋ, "ಎಂತಹ ವಾಕ್ಯವದು?" ಎಂದರೆ, ಶುಕ - ಎಲೈ ಶುಕ ಸಮಾನವಾದ ವರ್ಣವುಳ್ಳ ಭಗವಂತನೆ! ಅರೇಃ - ವಿರೋಧಿ ಭೂತವಾದ ಸಂಸಾರದ, ಪಾದಂ - ಸಂಸಾರಕ್ಕೆ ಬೀಜ ಭೂತವಾದ ಅಹಂಕಾರ, ಮಮಕಾರಗಳನ್ನು (ಅಥವ) ತನ್ನದಲ್ಲವೆಂಬುದೆ ತನ್ನದೆಂಬ ಭ್ರಮಬುದ್ಧಿಯನ್ನು (ಅವಿದ್ಯಾ ತರುಸಂಭೂತಿ ಬೀಜಮೇತದ್ದ್ವಿಧಾಸ್ಥಿತಂ) ಎಂಬುದು ಇದಕ್ಕೆ ಆಧಾರ. ದಶ - ದೂರ ಮಾಡುವವನಾಗು. (ಈ ವಿಧವಾದ ವಾಕ್ಯಸರಣಿಯು ಯಾವನ ಮುಖಾರವಿಂದದಿಂದ ಹೊರಸೂಸುತ್ತದೆಯೋ ಅಂತಹನು ನನಗಿಂತ ಶ್ರೇಷ್ಠನು - ಎಂಬುದೇ ಇಲ್ಲಿನ ಅಭಿಪ್ರಾಯ.)

ಪ್ರಕರಣ ಬಲದಿಂದಲೂ ಈ ಅರ್ಥವು ಪ್ರತಿಭಾಸವಾಗುತ್ತದೆ:—ಅಯೋಧ್ಯಾಪರ್ಯಾಯವಾದ ವೈಕುಂಠದಿಂದ ಹೊರಹೊರಟು, ವಿರಜಾನದಿಯನ್ನು ದಾಟಿ, ಸಂಸಾರಾರಣ್ಯವನ್ನು ಪ್ರವೇಶಿಸಿ, "ದ್ವಾಸುಪರ್ಣಾಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ। ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ" ಎಂದು ಹೇಳಿದ ವೇದಾಂತ ವಚನದಂತೆ ಪ್ರಕ್ರಿಯಾ ಶರೀರವೆಂಬ ವೃಕ್ಷವೊಂದನ್ನು ಜೀವನೊಡನೆ ಹೊಂದಿ, "ಋತಂ ಪಿಬಂತೌ ಸುಕೃತಸ್ಯ

ಧ್ಯಾಂಚ ಪೃಥಿವೀಂಚಾಪಿ ಲಕ್ಷ್ಮಣ ! ॥ ತರೇಯ ಮಿಷುಭಿಃ ಕ್ರುದ್ಧೋ ನಸು
ವೀರ್ಯಮಕಾರಣಂ ॥ ೨೫ ॥ ಅಧರ್ಮ ಭಯಭೀತಶ್ಚ ಪರಲೋಕಸ್ಯ
ಚಾನಘ ! ॥ ತೇನ ಲಕ್ಷ್ಮಣ ! ನಾದ್ಯಾಹ ಮಾತ್ಮಾನ ಮಭಿಷೇಚಯೇ ॥೨೬॥
ಏತದನ್ಯಚ್ಚ ಕರುಣಂ ವಿಲಪ್ಯ ವಿಜನೇ ವನೇ ॥ ಅಶ್ರು ಪೂರ್ಣ ಮುಖೋ
ರಾಮೋ ನಿಶಿ ತೂಷ್ಣೀ ಮುಪಾವಿಶತ್ ॥ ೨೭ ॥ ವಿಲಪ್ಯೋಪರತಂ ರಾಮಂ

ಲಕ್ಷ್ಮಣ - ಎಲೈ ಲಕ್ಷ್ಮಣನೇ, ಅಹಂ - ನಾನು, ಏಕೋಹಿ - ಒಬ್ಬನೇ, ಕೃದ್ಧಃ - ಕುಪಿತನಾಗಿ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪೃಥಿವೀಂಚಾಪಿ - ಭೂಮಿಯನ್ನೂ ಕೂಡ, ಇಸುಭಿಃ - ಬಾಣಗಳಿಂದ, ತರೇಯಂ-ದಾಟುವುದಕ್ಕೆ ಸಮರ್ಥನಿದ್ದೇನೆ, ಅಕಾರಣಂ - ಹೇತುವಿಲ್ಲದೆ, ವೀರ್ಯಂ- ಪರಾಕ್ರಮವಾದರೆ, ನ- ಅವಲಂಬಿಸಬಾರದು. ॥ ೨೫ ॥ ಹೇ ಅನಘ - ಎಲೈ ಪೂಜ್ಯನೆ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ! ಅಹಂ - ನಾನು, ಅಧರ್ಮಭಯಭೀತಶ್ಚ - ಅಧರ್ಮದಿಂದುಂಟಾದ ಭೀತಿಯಿಂದ, ಪರಲೋಕಸ್ಯ - ಪರಲೋಕಕ್ಕಾಗಿ ಹೆದರಿ, ಅದ್ಯ - ಈಗ, ತೇನ - ಆ ಕಾರಣ ದಿಂದ, ಆತ್ಮಾನಂ - ನನ್ನನ್ನು, ನಾಭಿಷೇಚಯೇ-ಅಭಿಷೇಕಮಾಡಿಕೊಳ್ಳಲಿಲ್ಲ. ॥ ೨೬ ॥ ಏತತ್ - ಇದನ್ನು, ಅನ್ಯಚ್ಚ - ಮತ್ತೊಂದನ್ನು ಕುರಿತು, ಕರುಣಂ - ದೀನವಾಗಿ, ವಿಲಪ್ಯ - ವಿಲಪಿಸಿ, ಅಶ್ರುಪೂರ್ಣಮುಖಃ, ಅಶ್ರು - ಕಂಬನಿಯಿಂದ, ಪೂರ್ಣ-ತುಂಬಿದ, ಮುಖಃ-ಮುಖವುಳ್ಳ ಶ್ರೀರಾಮನು, ವಿಜನೇ - ಜನರಹಿತವಾದ, ವನೇ - ಅರಣ್ಯದಲ್ಲಿ, ನಿಶಿ - ರಾತ್ರಿಯಲ್ಲಿ, ತೂಷ್ಣೀಂ - ಮೌನವಾಗಿ, ಉಪಾವಿಶತ್ - ಕುಳಿತುಕೊಂಡನು. ॥ ೨೭ ॥ ವಿಲಪ್ಯ - ದುಃಖಿಸಿ, ಉಪರತಂ - ವಿರಾಮವನ್ನು

ವಾದ ದುಃಖವೊಂದುತ್ತಾಳೆ ! ಲಕ್ಷ್ಮಣ !! ನಾನು ಕೋಪಿಸಿದ್ದೇ ಆದರೆ, ನಾನೊಬ್ಬನೇ ಇಡೀ ಅಯೋಧ್ಯಾಪಟ್ಟಣವೊಂದನ್ನು ಮಾತ್ರವಲ್ಲದೆ ಇಡೀ ಭೂಮಂಡಲವನ್ನೇ ಬಾಣ ಜಾಲ ಗಳಿಂದ ತುಂಬಿಸಬಲ್ಲೆನು ! ಆದರೆ ಪೌರುಷ ಪ್ರದರ್ಶನಕ್ಕಿಂತು ಸಮಯವಲ್ಲ ! ನಿಷ್ಕಲ್ಮಷ ನಾದ ಓ ಲಕ್ಷ್ಮಣಸ್ವಾಮಿಯೆ ! ನಾನು, ಅಧರ್ಮವು ಬರುತ್ತದೆಯೇನೋ ಎಂತಲೂ, ಪರಲೋಕಕ್ಕೆ ಹಾನಿಯೊದಗುತ್ತದೆಯೇನೋ ಎಂತಲೂ ಭಯಗೊಂಡವನಾದೆ. ಆದುದ ರಿಂದಲೇ ನಾನೀಗ ರಾಜ್ಯಾಭಿಷಿಕ್ತನಾಗಲು ಸಮ್ಮತಿ ಪಡದವನಾದೆನು. ॥ ೬-೨೬ ॥ ಈರೀತಿಯಾರಾತ್ರಿಯಲ್ಲಿ ಜನರಹಿತವಾದ ಆ ಅರಣ್ಯದಲ್ಲಿ, ಶ್ರೀರಾಮಮೂರ್ತಿಯು ಅನೇಕ ವಿಧವಾಗಿ ದುಃಖಿಸಿ ಕಂಬನಿದುಂಬಿದ ಮುಖವುಳ್ಳವನಾಗಿ ಮುಂದೇನೂ ಹೇಳಲಾರದೆ ಸುಮ್ಮನಾದನು. ಹೀಗೆ ಉರಿಯಿಲ್ಲದ ಅಗ್ನಿಹೋತ್ರದಂತೆಯೂ, ವೇಗವಿಲ್ಲದ ಕಡಲಿ

ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧ್ಯೇ" ಎಂದು ಹೇಳಿದಂತೆ ಕರ್ಮ ಫಲವನ್ನು ಅನುಭವಿಸುತ್ತ, ಸ್ವಾನುಭವ ವನ್ನು ಹೊಂದದಿರುವುದರಿಂದ ಹುಟ್ಟಿದ ಶ್ರಮದಿಂದ ಜ್ಞಾನಿಗಳನ್ನಪೇಕ್ಷಿಸುತ್ತ, ಸಂಸಾರಿಗಳಲ್ಲಿ ಸ್ವಾಗಮನ ಪ್ರಯೋ ಜನವನ್ನು ಹೊಂದದಿರುವುದರಿಂದ ಚರಮೋಪಾಯ ನಿಷ್ಠೆಯೇ (ಎಂದರೆ ಗುರ್ವಾಶ್ರಯಣೋಪಾಯ ನಿಷ್ಠೆಯೆ) ಪರಮೋ ಪಾಯವೆಂದು ನಿಶ್ಚಯಿಸಿದನು.

ಇದು ತನಿ ಶ್ಲೋಕೀಕಾರರ ಪರಮಾರ್ಥ ವಿವರಣವು.

ಗತಾರ್ಚಿಷ ಮಿವಾನಲಂ ॥ ಸಮುದ್ರಮಿವ ನಿರ್ವೇಗ ಮಾಶ್ವಾಸಯತ ಲಕ್ಷ್ಮಣಃ ॥೨೮॥ ಧ್ರುವಮದ್ಯ ಪುರೀ ರಾಜ ನ್ನಯೋಧ್ಯಾ ಯುಧಿನಾಂ ವರ ! ॥ ನಿಷ್ಪ್ರಭಾ ತ್ವಯಿ ನಿಷ್ಕ್ರಾಂತೇ ಗತಚಂದ್ರೇವ ಶರ್ವರೀ ॥ ೨೯ ॥ ನೈತದೌಪಯಿಕಂ ರಾಮ! ಯದಿದಂ ಪರಿತಪ್ಯಸೇ ॥ ವಿಷಾದಯಸಿ ಸೀತಾಂಚ ಮಾಂಚೈವ ಪುರುಷ ರ್ಷಭ ॥ ೩೦ ॥ ನಚ ಸೀತಾ ತ್ವಯಾ ಹೀನಾ ನಚಾಹಮಪಿ ರಾಘವ ! ॥ ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿ ವೋದ್ಧೃತೌ ॥ ೩೧ ॥

ಹೊಂದಿದ, ಗತಾರ್ಚಿಷಂ, ಗತ - ಕಳೆದುಹೋದ, ಅರ್ಚಿಷಂ - ತೇಜಸ್ಸುಳ್ಳ, ಅನಲಮಿವಸ್ಥಿತಂ - ಅಗ್ನಿಯಂತಿರುವ, ನಿರ್ವೇಗಂ - ವೇಗರಹಿತವಾದ, ಸಮುದ್ರಮಿವಸ್ಥಿತಂ-ಕಡಲಿನಂತಿರುವ, ರಾಮಂ- ಶ್ರೀರಾಮುನನ್ನು, ಲಕ್ಷ್ಮಣಃ - ಲಕ್ಷ್ಮಣನು, ಆಶ್ವಾಸಯತ - ಸಮಾಧಾನಗೊಳಿಸಿದನು. ॥ ೨೮ ॥ ಹೇ ರಾಜ್ಞ - ಎಲೈ ರಾಜನೇ, ಹೇ ಆಯುಧೀನಾಂವರ - ಎಲೈ ಆಯುಧಪಾಣಿಗಳಲ್ಲಿ ಶ್ರೇಷ್ಠ ನಾದವನೇ, ತ್ವಯಿ - ನೀನು, ನಿಷ್ಕ್ರಾಂತೇ - ಹೊರಟುಬರಲು, ಅದ್ಯ - ಈಗ, ಅಯೋಧ್ಯಾ ಪುರೀ - ಅಯೋಧ್ಯಾಪಟ್ಟಣವು, ಗತಚಂದ್ರಾ, ಗತ - ಕಾಣಿಸದಿರುವ, ಚಂದ್ರಾ - ಚಂದ್ರನುಳ್ಳ, ಶರ್ವರೀವ - ರಾತ್ರಿಯಂತೆ, ನಿಷ್ಪ್ರಭಾ - ಕಾಂತಿಹೀನವಾಗುವುದು. ॥ ೨೯ ॥ ಹೇ ರಾಮ- ಎಲೈ ಶ್ರೀರಾಮನೇ, ಪರಿತಪ್ಯಸೇಇತಿಯದಿದಮಸ್ತಿ - ಸಂಕಟಬೀಳುವೆ ಎಂಬುದು ಯಾವದುಂಟೋ, ಏತತ್ - ಇದು, ನೌಪಯಿಕಂ - ಯುಕ್ತವಲ್ಲವು, ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೇ, ಸೀತಾಂಚ - ಸೀತಾದೇವಿಯನ್ನೂ, ಮಾಂಚೈವ - ನನ್ನನ್ನೂ, ವಿಷಾದಯಸಿ-ವಿಷಾದಗೊಳಿಸುತ್ತಿಯೇ. ॥ ೩೦ ॥ ಹೇ ರಾಘವ - ಎಲೈ ಶ್ರೀರಾಮನೇ, ತ್ವಯಾ - ನಿನ್ನಿಂದ, ಹೀನಾ - ವರ್ಜಿತಳಾದ, ಸೀತಾ - ಸೀತಾದೇವಿಯು, ನಜೀವತಿ - ಜೀವಿಸಲಾರಳು, ಅಹಮಪಿ - ನಾನೂ, ತ್ವಯಾಹೀನಃ - ನಿನ್ನೊಡನೆಯಲ್ಲದೆ, ನಜೀವಾಮಿ - ಬದುಕಲಾರೆನು, ಉಭಾವಪಿ - ಇಬ್ಬರೂ, ಜಲಾತ್ - ನೀರಿನಿಂದ, ಉದ್ಧೃತೌ - ತೆಗೆದುಹಾಕಲ್ಪಟ್ಟ, ಮತ್ಸ್ಯಾವಿವ - ಎರಡು ಮತ್ಸ್ಯಗಳಂತೆ, ಮುಹೂರ್ತಮಪಿ- ಎರಡು ಘಳಿಗೆಯಾದರೂ, ನಜೀವಾವಃ - ಬದುಕಲಾರೆವು. ॥ ೩೧ ॥ ಅಹಂ-ನಾನು, ತ್ವಯಾವಿನಾ-

---

ನಂತೆಯೂ, ಅತ್ತಿತ್ತ ಸುಮ್ಮನಾದ ಶ್ರೀರಾಮನನ್ನು ನೋಡಿ ಲಕ್ಷ್ಮಣಸ್ವಾಮಿಯು ಇಂತೆಂದನು. “ ಎಲೈ ಧನುರ್ಧಾರಿಗಳಲ್ಲಿ ಉತ್ತಮನಾದ ಶ್ರೀರಾಮನೆ ! ನೀನು ಅರಣ್ಯಕ್ಕೆ ಆಗಮಿಸಿದ ಮೇಲೆ ಅಯೋಧ್ಯಾಪಟ್ಟಣವು ಚಂದ್ರನಿಲ್ಲದ ಆಕಾಶದಂತೆ ಕಾಂತಿ ಹೀನವಾಗಿ ಬೆಳಗುವುದು. ಹೀಗಾಗಲು ಸ್ವಲ್ಪಮಾತ್ರವೂ ಸಂದೇಹವಿಲ್ಲವು. ರಾಮ ! ನೀನು ಸಂತಪಿಸುವುದುಚಿತವಲ್ಲವೆಂದು ಯೋಚಿಸುತ್ತೇನೆ. ನೀನೀರೀತಿ ಚಿಂತಿಸುತ್ತಲಿದ್ದರೆ, ನನಗೂ ಈ ಸೀತಾದೇವಿಗೂ ಅಧಿಕವಾದ ದುಃಖವುಂಟಾಗುವುದು. ನೀರನ್ನುಳಿದು ಮತ್ಸ್ಯವು ಜೀವಿಸದಂತೆ, ಸೀತಾ ರಮಣಿಯೂ, ನಾನಾ ನಿನ್ನನ್ನುಳಿದು ಜೀವಿಸಲಾರೆವು. ಹೆಚ್ಚಾಗಿ ಹೇಳುವುದೇಕೆ? ನಾನು ನಿನ್ನನ್ನು ಬಿಟ್ಟು ಒಂದು ಕ್ಷಣವಾದರೂ ಜೀವಿಸಲಾರೆನು. ಎಲೈ ಶ್ರೀರಾಮನೆ! ನನಗೀಗ ತಂದೆಯಾದ ದಶರಥನಾಗಲಿ, ಶತ್ರುಘ್ನನಾಗಲಿ, ತಾಯಿಯಾದ ಸುಮಿತ್ರೆಯಾಗಲಿ, ಕೊನೆಗೆ ಸ್ವರ್ಗವೇ ಆಗಲಿ ನೀನಿಲ್ಲದೆ ರುಚಿಸುವುದಿಲ್ಲವು ; ಇವು ನನಗೆ

ನಹಿ ತಾತಂ ನ ಶತ್ರುಘ್ನಂ ನ ಸುಮಿತ್ರಾಂ ಪರಂತಪ! ॥ ದ್ರಷ್ಟುಮಿಚ್ಛೇಯ ಮದ್ಯಾಹಂ ಸ್ವರ್ಗಂ ವಾಪಿ ತ್ವಯಾ ವಿನಾ ॥ ೩೨ ॥ ತತಸ್ತತ್ರ ಸುಖಾಸೀನೌ ನಾತಿದೂರೇ ನಿರೀಕ್ಷ್ಯ ತಾಂ ॥ ನ್ಯಗ್ರೋಧೇ ಸುಕೃತಾಂ ಶಯ್ಯಾಂ ಭೇಜಾತೇ ಧರ್ಮವತ್ಸಲೌ ॥ ೩೩ ॥ ಸ ಲಕ್ಷ್ಮಣಸ್ಯೋತ್ತಮ ಪುಷ್ಕಲಂ ವಚೋ ನಿಶಮ್ಯ ಚೈವಂ ವನವಾಸ ಮಾದರಾತ್ ॥ ಸಮಾ ಸ್ಸಮಸ್ತಾ ವಿದಧೇ ಪರಂತಪಃ ಪ್ರಪದ್ಯ ಧರ್ಮಂ ಸುಚಿರಾಯ ರಾಘವಃ ॥ ೩೪ ॥

ತತಸ್ತು ತಸ್ಮಿ ವಿಜನೇ ವನೇ ತದಾ
ಮಹಬಲೌ ರಾಘವ ವಂಶವರ್ಧನೌ ॥

ನಿನ್ನೊಡನೆಯಲ್ಲದೆ, ತಾತಂ - ತಂದೆಯನ್ನು, ದ್ರಷ್ಟುಂ - ನೋಡಲು, ನೇಚ್ಛೇಯಂ - ಇಚ್ಛಿಸಲಾರೆನು, ಶತ್ರುಘ್ನಂ - ಶತ್ರುಘ್ನನನ್ನು, ದ್ರಷ್ಟುಂ - ನೋಡುವದಕ್ಕೋಸುಗ, ನೇಚ್ಛೇಯಂ - ಇಚ್ಛಿಸಲಾರೆನು, ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಸುಮಿತ್ರಾಂಚ - ಸುಮಿತ್ರಾದೇವಿಯನ್ನು, ನೇಚ್ಛೇಯಂ - ಇಚ್ಛಿಸಲಾರೆನು, ಸ್ವರ್ಗಂವಾಪಿ - ಸ್ವರ್ಗವನ್ನೇ ಆಗಲಿ, ಅದ್ಯ - ಈಗ, ನೇಚ್ಛೇಯಂ-ಇಚ್ಛಿಸಲಾರೆನು. ॥ ೩೨ ॥ ತತಃ - ಬಳಿಕ, ತತ್ರ-ಆ ವೃಕ್ಷಮೂಲದಲ್ಲಿ, ಸುಖಾಸೀನೌ-ಸುಖವಾಗಿ ಕುಳಿತುಕೊಂಡಿರುವ, ಧರ್ಮವತ್ಸಲೌ - ಧರ್ಮದಲ್ಲಿಯೇ ವಾತ್ಸಲ್ಯವುಳ್ಳಸೀತಾರಾಮರಿಬ್ಬರೂ, ನಾತಿದೂರೇ - ಸಮೀಪಪ್ರದೇಶದಲ್ಲಿ, ನ್ಯಗ್ರೋಧೇ - ವಟವೃಕ್ಷದ ಮೂಲಪ್ರದೇಶದಲ್ಲಿ, ಸುಕೃತಾಂ - ಲಕ್ಷ್ಮಣನಿಂದ ಚೆನ್ನಾಗಿಮಾಡಲ್ಪಟ್ಟ, ತಾಂಶಯ್ಯಾಂ-ಆ ಹಾಸಿಗೆಯನ್ನು,ನಿರೀಕ್ಷ್ಯ-ಕಂಡು,ಭೇಜಾತೇ-ಹೊಂದಿದರು. ॥ ೩೩ ॥ ಪರಂತಪಃ - ಶತ್ರುಸಂಹಾರಕನಾದ, ಸರಾಘವಃ - ಆ ಶ್ರೀರಾಮನು, ಲಕ್ಷ್ಮಣಸ್ಯ - ಲಕ್ಷ್ಮಣನ, ಉತ್ತಮಪುಷ್ಕಲಂ, ಉತ್ತಮ - ಉತ್ತಮವಾದ, ಪುಷ್ಕಲಂ - ಸಂಪೂರ್ಣಾರ್ಥವುಳ್ಳ, ವಚಃ - ಮಾತನ್ನು, ನಿಶಮ್ಯ - ಕೇಳಿ, ಆದರಾತ್ - ಪ್ರೀತಿಯಿಂದ, ಏವಂ-ಈರೀತಿ, ಧರ್ಮಂ - ಧರ್ಮವನ್ನು, ಪ್ರಪದ್ಯ - ಹೊಂದಿ, ಸಮಸ್ತಾಸ್ಸಮಾಃ - ಸಮಸ್ತಗಳಾದ ಹದಿನಾಲ್ಕು ಸಂವತ್ಸರಗಳೂ, ಸುಚಿರಾಯ - ಬಹಳಕಾಲವು, ವನವಾಸಂ-ವನವಾಸವನ್ನು, ವಿದಧೇ - ಮಾಡಿದನು. ॥ ೩೪ ॥ ತತಃ - ಬಳಿಕ, ವಿಜನೇ - ಜನರಹಿತವಾದ, ತಸ್ಮಿ - ಆ ವನದಲ್ಲಿ, ತದಾ ಆ ಕಾಲದಲ್ಲಿ, ಮಹಾಬಲೌ - ಮಹಾ ಬಲವಂತರಾದ, ರಾಘವವಂಶವರ್ಧನೌ - ರಘುಕುಲೋದ್ಧಾರಕರಾದ, ತೌ -

---

ಇಷ್ಟವಾದುದೂ ಅಲ್ಲ!” ಈ ಪ್ರಕಾರ ವಾಕ್ಚತುರನಾದ ಲಕ್ಷ್ಮಣಸ್ವಾಮಿಯು ಅಣ್ಣನಾದ ಶ್ರೀರಾಮನನ್ನು ಸಂತವಿಟ್ಟಮೇಲೆ ಧರ್ಮವತ್ಸಲರಾದಾ ರಾಮಲಕ್ಷ್ಮಣರೀರ್ವರೂ ಸುಖವಾಗಿ ಕುಳಿತುಕೊಂಡವರಾಗಿ, ಸಮೀಪದಲ್ಲಿಯೇ ಇರುವ ಆಲದ ಮರದ ಕೆಳಗೆ ಲಕ್ಷ್ಮಣನಿಂದೇರ್ಪಡಿಸಲ್ಪಟ್ಟದ್ದ ತಳಿರು ಹಾಸಿಗೆಯ ಮೇಲೆ ಹತ್ತಿರ ಹತ್ತಿರವಾಗಿಯೆ ಮಲಗಿದವರಾದರು. ಹೀಗೆ ಶತ್ರುಗಳನ್ನು ಧ್ವಂಸಗೊಳಿಸುವ ಸಾಮರ್ಥ್ಯವುಳ್ಳ ಶ್ರೀರಾಮನು ಲಕ್ಷ್ಮಣನಿಂದ ಹೇಳಲ್ಪಟ್ಟುದೂ, ಶ್ರೇಷ್ಠವಾದುದೂ ಆದ ಮಾತುಗಳನ್ನು ಪರಮಾದರದಿಂದಾಲಿಸಿ ಬಹಳಕಾಲ ವಾನಪ್ರಸ್ಥ ಧರ್ಮವನ್ನವಲಂಬಿಸಿ ಹದಿನಾಲ್ಕು ಸಂವತ್ಸರಗಳ ಕಾಲ ವನವಾಸ ಮಾಡಲು ಮನದೆಂದನು. ಆ ಬಳಿಕ ಮಹಾ ಬಲಶಾಲಿಗಳಾದಾ ರಾಮಲಕ್ಷ್ಮಣರೀರ್ವರೂ,

ನತೌ ಭಯಂ ಸಂಭ್ರಮ ಮಭ್ಯುಪೇಯಿತು
ರ್ಯಥೈವ ಸಿಂಹೌ ಗಿರಿಸಾನು ಗೋಚರೌ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಂಪಂಚಾಶಸ್ಸರ್ಗಃ.

ಆ ರಾಮಲಕ್ಷ್ಮಣರು, ಗಿರಿಸಾನುಗೋಚರೌ - ಬೆಟ್ಟದ ಜರಿಗಳೆ ವಾಸಸ್ಥಾನವುಳ್ಳ, ಸಿಂಹೌಯಥೈವ- ಸಿಂಹಗಳಂತೆ, ಭಯಂ - ಭೀತಿಯನ್ನು, ಸಂಭ್ರಮಂ-ಬುದ್ಧಿಚಾಂಚಲ್ಯವನ್ನು, ನಾಭ್ಯುಪೇಯಿತುಃ - ಹೊಂದದೆಹೋದರು. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಂಡೇ ತ್ರಿಪಂಚಾಶಸ್ಸರ್ಗಃ.

ರಘುವಂಶವನ್ನು, ವೃದ್ಧಿಗೊಳಿಸುವವರಾಗಿ, ಗಿರಿಗಹ್ವರದಲ್ಲಿರುವ ಸಿಂಹಗಳಂತೆ ಭಯ ಸಂಭ್ರಮಗಳಾವುದೂ ಇಲ್ಲದವರಾಗಿ ಆ ವನದಲ್ಲಿದ್ದವರಾದರು. ॥ ೨೭-೩೪ ॥

ಇಂತಿದು ಶ್ರೀರಾಮಕೃತ ಕೌಸಲ್ಯಾ ಸ್ಮರಣ ಪೂರ್ವಕ ಸಂತಾಪ ಪ್ರದರ್ಶನ ಕಥಾಕಥನವೆಂಬ ಐವತ್ತಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುಃಪಂಚಾಶಸ್ಸರ್ಗಃ.

ತೇತು ತಸ್ಮಿನ್ ಮಹಾವೃಕ್ಷೇ ಹ್ಯುಷಿತ್ವಾ ರಜನೀಂ ಶಿವಾಂ || ವಿಮಲೇ ಭ್ಯುದಿತೇ ಸೂರ್ಯೇ ತಸ್ಮಾದ್ದೇಶಾತ್ ಪ್ರತಸ್ಥಿರೇ || ೧ || ಯತ್ರ ಭಾಗೀರಥೀಂ ಗಂಗಾಂ ಯಮುನಾಭಿ ಪ್ರವರ್ತತೇ || ಜಗ್ಮುಸ್ತಂ ದೇಶಮುದ್ದಿಶ್ಯ ವಿಗಾಹ್ಯ ಸುಮಹದ್ವನಂ ||೨|| ತೇ ಭೂಮಿಭಾಗಾನ್ ವಿವಿಧಾನ್ ದೇಶಾಂಶ್ಚಾಪಿ ಮನೋರಮಾನ್ || ಅದೃಷ್ಟ ಪೂರ್ವಾನ್ ಪಶ್ಯಂತ ಸ್ತತ್ರತತ್ರ ಯಶಸ್ವಿನಂ || ೩ ||

ತೇತು - ಆ ಸೀತಾ ರಾಮ ಲಕ್ಷ್ಮಣರು, ತಸ್ಮಿನ್ಮಹಾವೃಕ್ಷೇ - ಆ ವೃಕ್ಷಮೂಲದಲ್ಲಿ, ಶಿವಾಂ- ಮಂಗಳಕರವಾದ, ರಜನೀಂ - ರಾತ್ರಿಯಲ್ಲಿ, ಉಷಿತ್ವಾ - ಇದ್ದು, ವಿಮಲೇ - ನಿರ್ಮಲವಾದ, ಸೂರ್ಯೇ - ಸೂರ್ಯನು, ಅಭ್ಯುದಿತೇಸತಿ - ಉದಯವನ್ನು ಹೊಂದಲು, ತಸ್ಮಾದ್ದೇಶಾತ್ - ಆ ಪ್ರದೇಶದಿಂದ, ಪ್ರತಸ್ಥೇ - ತೆರಳಿದರು. || ೧ || ಯತ್ರ - ಯಾವ ಸ್ಥಳದಲ್ಲಿ, ಯಮುನಾ - ಯಮುನಾನದಿಯು, ಭಾಗೀರಥೀಂ - ಭಾಗೀರಥಿಯೆಂಬ ಹೆಸರುಳ್ಳ, ಗಂಗಾಂ - ಗಂಗಾ ನದಿಯು, ಅಭಿಪ್ರವರ್ತತೇ - ಇದಿರಾಗಿ ಪ್ರವಹಿಸುತ್ತದೆಯೋ, ತಂದೇಶಂ - ಅಂತಹ ದೇಶವನ್ನು, ಉದ್ದಿಶ್ಯ - ಉದ್ದೇಶಿಸಿ, ಸುಮಹದ್ವನಂ - ಮಹತ್ತರವಾದ ವನವನ್ನು, ವಿಗಾಹ್ಯ - ಪ್ರವೇಶಿಸಿ, ಯಶಸ್ವಿನಃ - (೧) ಯಶೋವಂತರಾದ, ತೇ - ಆ ಸೀತಾರಾಮಲಕ್ಷ್ಮಣರು, ತತ್ರತತ್ರ - ಆಯಾಯ ಸ್ಥಳಗಳಲ್ಲಿ, ಅದೃಷ್ಟಪೂರ್ವಾನ್ - ಹಿಂದೆ ನೋಡದಿರುವ, ವಿವಿಧಾನ್ - ನಾನಾಬಗೆಗಳಾದ, ಭೂಮಿ ಭಾಗಾನ್ ಭೂಪ್ರದೇಶಗಳನ್ನು, ಮನೋರಮಾನ್-ಮನಸ್ಸಿಗಿಂಪಾಗಿರುವ, ದೇಶಾಂಶ್ಚಾಪಿ-ದೇಶಗಳನ್ನೂ, ಪಶ್ಯಂತಃ - ನೋಡುತ್ತಾ, ಜಗ್ಮುಃ - ತೆರಳಿದರು. || ೩ || ಯಥಾಕ್ಷೇಮೇಣ - ಸೌಖ್ಯವಾಗಿ,

---

ಈ ಪ್ರಕಾರವಾಗಿ ಸೀತಾ ರಾಮ ಲಕ್ಷ್ಮಣರು ಮೂವರೂ ಆ ಆಲದ ಗಿಡದ ಕೆಳಗೆ ಮಂಗಳಕರವಾಗಿಯಾರಾತ್ರಿಯೆಲ್ಲವನ್ನೂ ಕಳೆದವರಾದರು. ಆ ಬಳಿಕ ಸೂರ್ಯೋದಯ ವಾದುದು. ಹೀಗೆ ಸೂರ್ಯೋದಯವಾದೊಡನೆಯೆ ಆ ಸ್ಥಾನವೆಲ್ಲವೂ ಕಾಣಿಸತೊಡಗಿತು. ಅಧಿಕವಾದಕೀರ್ತಿಯೊಂದಿದ ಶ್ರೀರಾಮ ಲಕ್ಷ್ಮಣ ಸೀತೆಯರು, ಮಹಾ ಭಯಂಕರವಾದ ಅರಣ್ಯವನ್ನು ಪ್ರವೇಶಿಸಿ, ಆ ಅರಣ್ಯದಲ್ಲಿ ನಾನಾ ವಿಧಗಳಾದ, ಭೂಭಾಗಗಳನ್ನೂ, ಮನೋಹರಂಗಳಾದ ದೇಶಗಳನ್ನೂ ನೋಡುತ್ತ ಯಮುನಾ ಗಂಗಾ ನದಿಗಳು ಪ್ರವೇಶಿಸುವ ಸ್ಥಳಕ್ಕೆ ಹೋದರು. ಹಾಗೆ ಶ್ರೀರಾಮನು ಕ್ಷೇಮವಾಗಿ ಮಾರ್ಗದಲ್ಲಿ ಹೋಗುತ್ತ ಅನೇಕ ವಿಧಗಳಾದ ವೃಕ್ಷಗಳನ್ನು ನೋಡುತ್ತಲಿದ್ದನು. ಅಷ್ಟರಲ್ಲಿಯೇ ಸೂರ್ಯ ಭಗವಂತನು

---

(೧) ಟಿ. "ಯಶಸ್ವಿನಂ" ಎಂದು ಹೇಳಿರುವುದರಿಂದ, ಆಯಾಯ ದೇಶವಾಸಿಗಳಾದ ಜನರಿಂದ ಪೂಜಿಸಲ್ಪಟ್ಟವರು, ಎಂಬ ಅರ್ಥವು ತೋರುತ್ತದೆ.

ಯಥಾ ಕ್ಷೇಮೇಣ ಗಚ್ಛನ್ ಸ ಪಶ್ಯಂಶ್ಚ ವಿವಿಧಾನ್ ದ್ರುಮಾನ್॥ನಿವೃತ್ತಮಾತ್ರೇ ದಿವಸೇ ರಾಮ ಸ್ಸೌಮಿತ್ರಿ ಮಬ್ರವೀತ್ ॥ ೪ ॥ ಪ್ರಯಾಗಮಭಿತಃ ಪಶ್ಯ ಸೌಮಿತ್ರೇ ! ಧೂಮ ಮುನ್ನತಂ ॥ ಅಗ್ನೇ ರ್ಭಗವತಃ ಕೇತುಂ ಮನ್ಯೇ ಸನ್ನಿಹಿತೋ ಮುನಿಃ ॥೫॥ ನೂನಂ ಪ್ರಾಪ್ತಾಸ್ಮ ಸಂಭೇದಂ ಗಂಗಾಯಮುನಯೋ ರ್ವಯಂ ॥ ತಥಾಹಿ ಶ್ರೂಯತೇ ಶಬ್ದೋ ವಾರಿಣೋ ವಾರಿಘಟ್ಟಿತಃ ॥ ೬ ॥ ದಾರೂಣಿ ಪರಿಭಿನ್ನಾನಿ ವನಜೈ ರುಪಜೀವಿಭಿಃ ॥ ಭರದ್ವಾಜಾಶ್ರಮೇ ಚೈತ ದ್ದೃಶ್ಯಂತೇ ವಿವಿಧಾ ದ್ರುಮಾಃ ॥ ೭ ॥ ಧನ್ವಿನೌ ತೌ ಸುಖಂ ಗತ್ವಾ

ಗಚ್ಛನ್ - ಹೋಗುತ್ತಿರುವ, ಸರಾಮಃ - ಆ ಶ್ರೀರಾಮನು, ವಿವಿಧಾನ್ - ನಾನಾಬಗೆಗಳಾದ, ದ್ರುಮಾನ್- ವೃಕ್ಷಗಳನ್ನು, ಪಶ್ಯನ್ - ನೋಡುತ್ತ, ದಿವಸೇ-ಹಗಲು, ನಿವೃತ್ತಮಾತ್ರೇ-ಸ್ವಲ್ಪಕಾಲ ಕಳೆಯುತ್ತಿರಲು, ಸೌಮಿತ್ರಿಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೪ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೆ, ಪ್ರಯಾಗಂ - ಪ್ರಯಾಗಕ್ಷೇತ್ರದ, ಅಭಿತಃ - ಎಲ್ಲೆಡೆಗಳಲ್ಲಿಯೂ, ಉನ್ನತಂ - ಎತ್ತರವಾದ, ಭಗವತಃ - ಪೂಜ್ಯನಾದ, ಅಗ್ನೇಃ-ಯಜ್ಞೇಶ್ವರನಿಗೆ, ಕೇತುಮಿವಸ್ಥಿತಂ - ಧ್ವಜದಂತಿರುವ, ಧೂಮಂ - ಹೊಗೆಯನ್ನು, ಪಶ್ಯ - ನೋಡು, ಮುನಿಃ - ಭರದ್ವಾಜಋುಷಿಯು, ಸನ್ನಿಹಿತಃ - ಸಮಾಪವರ್ತಿಯಾದನೆಂದು, ಮನ್ಯೇ - ತಿಳಿಯುತ್ತೇನೆ. ॥ ೫ ॥ ವಯಂ - ನಾವು, ಗಂಗಾಯಮುನಯೋಃ - ಗಂಗಾಯಮುನಾನದಿಗಳ, ಸಂಭೇದಂ - ಸಂಗಮಸ್ಥಲವನ್ನು, ಪ್ರಾಪ್ತಾಸ್ಮ-ಹೊಂದಿದವರಾಗಿರುವೆವು, ನೂನಂ - ನಿಶ್ಚಯವು, ತಥಾ - ಹಾಗೆಯೇ, ವಾರಿಘಟ್ಟಿತಃ- ಪರಸ್ಪರ ಉದಕಗಳಿಂದ ಹೊಡೆಯಲ್ಪಟ್ಟ, ವಾರಿಣಃ - ಉದಕದ, ಶಬ್ದಃ-ಧ್ವನಿಯು, ಶ್ರೂಯತೇಹಿ- ಕೇಳಲ್ಪಡುತ್ತದೆಯಷ್ಟೆ. ॥ ೬ ॥ ಉಪಜೀವಿಭಿಃ - ವನದಲ್ಲಿ ಜೀವನಮಾಡುತ್ತಿರುವ, ವನಜೈಃ - ಕಾಡುಮನುಷ್ಯರಿಂದ, ಪರಿಭಿನ್ನಾನಿ - ಮುರಿಯಲ್ಪಟ್ಟ, ದಾರೂಣಿ - ಮರಗಳು, ದೃಶ್ಯಂತೇ - ಕಾಣಲ್ಪಡುತ್ತವೆ, ಭರದ್ವಾಜಾಶ್ರಮೇ, ಭರದ್ವಾಜ - ಭರದ್ವಾಜಋುಷಿಯ, ಆಶ್ರಮೇ - ಆಶ್ರಮದಲ್ಲಿ, ವಿವಿಧಾಃ - ನಾನಾಬಗೆಗಳಾದ, ದ್ರುಮಾಶ್ಚ - ಗಿಡಗಳು, ದೃಶ್ಯಂತೇ - ಕಾಣಲ್ಪಡುತ್ತವೆ. ॥ ೭ ॥

ಪಶ್ಚಿಮ ದಿಕ್ಕನ್ನು ಸೇರಿದನು ಆಗ ಶ್ರೀರಾಮನು ತಮ್ಮನಾದ ಲಕ್ಷ್ಮಣನನ್ನು ಕುರಿತು ಹೀಗೆಂದನು. "ಎಲೈ ಅನುಜನಾದ ಲಕ್ಷ್ಮಣಸ್ವಾಮಿಯೆ; ಪ್ರಯಾಗ ಕ್ಷೇತ್ರದ ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸಿ, ಭಗವಂತನಾದ ಯಜ್ಞೇಶ್ವರನ ಧ್ವಜಪತಾಕೆಯೋ ಎಂಬಂತಿರುವ ಹೊಗೆಯನ್ನು ನೋಡು! ಆದುದರಿಂದ ನಾವು ಭರದ್ವಾಜ ಮುನಿ ಶ್ರೇಷ್ಠನ ಆಶ್ರಮದ ಹತ್ತಿರಕ್ಕೆ ಬಂದೆವೆಂದು ತೋರುತ್ತದೆ. ಇಷ್ಟೆಯಲ್ಲದೆ ನಾವು ನಿಜವಾಗಿಯೂ ಗಂಗಾ ಯಮುನಾ ನದಿಗಳ ಮಧ್ಯ ಪ್ರದೇಶಕ್ಕೆ ಬಂದಿರುವೆವೆಂದು ತಿಳಿಯುತ್ತೇನೆ. ಒಂದು ಪ್ರವಾಹವು ಮತ್ತೊಂದು ಪ್ರವಾಹದೊಡನೆ ಸೇರುವಾಗ ಆಗುವ ಧ್ವನಿಯು ಕೇಳಿಬರುತ್ತಲಿರುವುದು. ವನದಲ್ಲಿರುವ ಪದಾರ್ಥಗಳಿಂದ ಜೀವಿಸುತ್ತಿರುವವರಿಂದ ಮುರಿಯಲ್ಪಟ್ಟ ಮರಗಳು ಈ ಠಾವಿನಲ್ಲಿ ದೃಗ್ಗೋಚರವಾಗುತ್ತಿರುವುವು, ಚೆನ್ನಾಗಿ ನೋಡು. ಇದಲ್ಲದೆ ಭರದ್ವಾಜಾಶ್ರಮದಲ್ಲಿಯೂ ಸಹ ವಿವಿಧಗಳಾದ ವೃಕ್ಷಗಳು ಕಾಣುತ್ತಿವೆ" ಶ್ರೀರಾಮ

ಲಂಬಮಾನೇ ದಿವಾಕರೇ ॥ ಗಂಗಾ ಯಮುನಯೋಃ ಸ್ಸಂಧೌ ಪ್ರಾಪತು ರ್ನಿಲಯಂ ಮುನೇಃ ॥ ೮ ॥ ರಾಮ ಸ್ತ್ವಾಶ್ರಮ ಮಾಸಾದ್ಯ ತ್ರಾಸಯ ನ್ಮೃಗಪಕ್ಷಿಣಃ ॥ ಗತ್ವಾ ಮುಹೂರ್ತ ಮಧ್ವಾನಂ ಭರದ್ವಾಜ ಮುಪಾಗಮತ್ ॥ ೯ ॥ ತತಸ್ತ್ವಾಶ್ರಮ ಮಾಸಾದ್ಯ ಮುನೇ ರ್ದರ್ಶನ ಕಾಂಕ್ಷಿಣೌ ॥ ಸೀತ ಯಾನುಗತೌ ವೀರೌ ದೂರಾದೇವಾವತಸ್ಥತುಃ ॥ ೧೦ ॥ ಸಪ್ರವಿಶ್ಯ ಮಹಾ ತ್ಮಾನ ಮೃಷಿಂ ಶಿಷ್ಯಗಣೈ ರ್ವೃತಂ ॥ ಸಂಶಿತ ವ್ರತಮೇಕಾಗ್ರಂ ತಪಸಾ ಲಬ್ಧ ಚಕ್ಷುಷಂ ॥ ೧೧ ॥ ಹುತಾಗ್ನಿ ಹೋತ್ರಂ ದೃಷ್ಟ್ವೈವ ಮಹಾಭಾಗಂ ಕೃತಾಂ

ಧನ್ವಿನೌ - ಧನುರ್ಧಾರಿಗಳಾದ, ತೌ - ಆ ರಾಮ ಲಕ್ಷ್ಮಣರು, ಸುಖಂ - ಸುಖವಾಗಿ, ಗತ್ವಾ - ಹೋಗಿ, ದಿವಾಕರೇ - ಸೂರ್ಯನು, ಲಂಬಮಾನೇಸತಿ - ಅಸ್ತೋನ್ಮುಖನಾಗುತ್ತಿರಲು, ಗಂಗಾ ಯಮುನಯೋಃ - ಗಂಗಾ ಯಮುನಾದಿಗಳ, ಸಂಧೌ - ಸಂಗಮಸ್ಥಳದಲ್ಲಿ, ಮುನೇಃ - ಭರದ್ವಾಜ ಋಷಿಯ, ನಿಲಯಂ - ಆಶ್ರಮವನ್ನು, ಪ್ರಾಪತುಃ - ಹೊಂದಿದರು. ॥ ೮ ॥ ರಾಮಸ್ತು-ಶ್ರೀರಾಮ ನಾದರೆ, ಆಶ್ರಮಂ - ಆಶ್ರಮವನ್ನು, ಆಸಾದ್ಯ - ಹೊಂದಿ, ಮುಹೂರ್ತಂ - ಎರಡುಘಳಿಗೆಕಾಲ, ಅಧ್ವಾನಂ - ಮಾರ್ಗದಲ್ಲಿ, ಗತ್ವಾ - ಹೋಗಿ, ಮೃಗಪಕ್ಷಿಣಃ - ಮೃಗಗಳನ್ನೂ ಪಕ್ಷಿಗಳನ್ನೂ, ತ್ರಾಸಯನ್ - ಹೆದರಿಸುತ್ತ, ಭರದ್ವಾಜಂ - ಭರದ್ವಾಜಋಷಿಯನ್ನು ಕುರಿತು, ಉಪಾಗಮತ್ - ಬಂದನು. ॥ ೯ ॥ ತತಃ - ಬಳಿಕ, ಮುನೇಃ - ಭರದ್ವಾಜನ, ಆಶ್ರಮಂ - ಆಶ್ರಮವನ್ನು, ಆಸಾದ್ಯ - ಹೊಂದಿ, ವೀರೌ - ಶೂರರಾದ ರಾಮ ಲಕ್ಷ್ಮಣರು, ಸೀತಯಾ - ಸೀತಾದೇವಿಯೊಡನೆ, ಅನುಗತೌ - ಅನುಸರಿಸಲ್ಪಟ್ಟವರಾಗಿ, ದರ್ಶನಕಾಂಕ್ಷಿಣೌ - ಭರದ್ವಾಜಋಷಿಯ ದರ್ಶನವನ್ನು ಅಪೇಕ್ಷಿಸುತ್ತ, ದೂರಾದೇವ - ದೂರಪ್ರದೇಶದಲ್ಲಿಯೇ, ಅವತಸ್ಥತುಃ-ನಿಂತರು. ॥೧೦॥ ಸರಾಮಃ- ಆ ಶ್ರೀರಾಮನು, ಸೌಮಿತ್ರಿಣಾ - ಲಕ್ಷ್ಮಣನೊಡನೆ, ಸೀತಯಾಸಾರ್ಧಂ - ಸೀತಾದೇವಿಯೊಡಗೂಡಿ, ಪ್ರವಿಶ್ಯ - ಪರ್ಣಶಾಲೆಯನ್ನು ಪ್ರವೇಶಿಸಿ, ಮಹಾತ್ಮಾನಂ - ಮಹಾತ್ಮನಾದ, ಶಿಷ್ಯಗಣೈಃ - ಶಿಷ್ಯರ ಗುಂಪುಗಳಿಂದ, ವೃತಂ - ಸುತ್ತುವರಿಯಲ್ಪಟ್ಟ, ಸಂಶಿತವ್ರತಂ - ತೀಕ್ಷ್ಣವಾದವ್ರತವುಳ್ಳ, ಏಕಾಗ್ರಂ - ಧ್ಯಾನಾಸಕ್ತನಾದ, ತಪಸಾ - ತಪಸ್ಸಿನಿಂದ, ಲಬ್ಧಚಕ್ಷುಷಂ, ಲಬ್ಧ - ಹೊಂದ

ಮೂರ್ತಿಯಿರಿರೀತಿ ಹೇಳಿ, ತಾನೂ ತನ್ನ ತಮ್ಮನಾದ ಲಕ್ಷ್ಮಣನೂ, ಸೀತಾದೇವಿಯೂ, ಸುಖವಾಗಿ ದಾರಿ ನಡೆದು ಸೂರ್ಯಾಸ್ತಮಯವಾಗಲು ಭರದ್ವಾಜಾಶ್ರಮವನ್ನು ಸೇರಿದರು. ಶ್ರೀರಾಮನಾದರೊ, ಆಶ್ರಮವನ್ನು ಸೇರಿ ಎರಡು ಘಳಿಗೆಗಳ ಕಾಲ ದಾರಿ ನಡೆದು ಮೃಗ ಪಕ್ಷಿಗಳನ್ನು ಹೆದರಿಸುತ್ತ ಭರದ್ವಾಜ ಋಷಿಯನ್ನು ಕುರಿತು ಬಂದವನಾದನು. ॥ ೧-೯ ॥ ಆ ಬಳಿಕ ಪರಾಕ್ರಮಶಾಲಿಗಳಾದ ರಾಮಲಕ್ಷ್ಮಣರಿಬ್ಬರೂ ಸೀತಾಸಮೇತರಾಗಿ ಭರದ್ವಾಜ ಋಷಿಯ ದರ್ಶನವನ್ನು ಮಾಡಲೋಸುಗ ಸ್ವಲ್ಪ ಹೊತ್ತು ದೂರದಲ್ಲಿಯೇ ನಿಂತು ನಿರೀ ಕ್ಷಿಸುತ್ತಿದ್ದರು. ಸ್ವಲ್ಪ ಹೊತ್ತಾದ ಬಳಿಕ ಶ್ರೀರಾಮನು ಆಶ್ರಮದೊಳಕ್ಕೆ ಹೋಗಿ, ಮಹಾನುಭಾವನೂ, ಶಿಷ್ಯಸಮೂಹದಿಂದ ಸುತ್ತುವರೆಯಲ್ಪಟ್ಟವನೂ, ಮಹಾ ತೀಕ್ಷ್ಣ ವಾದ ವ್ರತನಿಯಮವುಳ್ಳವನೂ, ಧ್ಯಾನಪರನೂ, ತಪಸ್ಸಿನಿಂದ ಲಬ್ಧವಾದ ಜ್ಞಾನದೃಷ್ಟಿ

ಜಲಿಃ ॥ ರಾಮಸ್ಸೌಮಿತ್ರಿಣಾ ಸಾರ್ಧಂ ಸೀತಯಾ ಚಾಭ್ಯವಾದಯತ್ ॥೧೨॥ ನ್ಯವೇದಯತ ಚಾತ್ಮಾನಂ ತಸ್ಮೈ ಲಕ್ಷ್ಮಣಪೂರ್ವಜಃ ॥ ಪುತ್ರೌ ದಶರಥಸ್ಯಾವಾಂ ಭಗವನ್ ರಾಮಲಕ್ಷ್ಮಣೌ ॥೧೩॥ ಭಾರ್ಯಾ ಮಮೇಯಂ ವೈದೇಹೀ ಕಲ್ಯಾಣೀ ಜನಕಾತ್ಮಜಾ ॥ ಮಾಂಚಾನುಯಾತಾ ವಿಜನಂ ತಪೋವನ ಮನಿಂದಿತಾ ॥೧೪॥ ಪಿತ್ರಾ ಪ್ರವ್ರಾಜ್ಯಮಾನಂ ಮಾಂ ಸೌಮಿತ್ರಿರನುಜಪ್ರಿಯಃ ॥ ಅಯಮನ್ವಗಮದ್ಭ್ರಾತಾ ವನಮೇವ ದೃಢವ್ರತಃ ॥೧೫॥

ಲ್ಪಟ್ಟ, ಚಕ್ಷುಷಂ - ಕಣ್ಣುಗಳುಳ್ಳ, ಹುತಾಗ್ನಿಹೋತ್ರಂ, ಹುತ - ಹೋಮಮಾಡಲ್ಪಟ್ಟ ಅಗ್ನಿಹೋತ್ರವುಳ್ಳ, ಮಹಾಭಾಗಂ - ಮಹಾ ಪುಣ್ಯಶಾಲಿಯಾದ ಭರದ್ವಾಜಋಷಿಯನ್ನು, ದೃಷ್ಟ್ವೈವ-ಕಾಣುತ್ತಲೇ, ಅಭ್ಯವಾದಯತ್ - ವಂದನಮಾಡಿದನು. ॥೧೨॥ ಲಕ್ಷ್ಮಣಪೂರ್ವಜಃ - ಲಕ್ಷ್ಮಣಾಗ್ರಜನಾದ ಶ್ರೀರಾಮನು, ತಸ್ಮೈ - ಆ ಭರದ್ವಾಜಋಷಿಗೆ, ಆತ್ಮಾನಂ - ತನ್ನನ್ನು, ನ್ಯವೇದಯತಚ - ತಿಳಿಸಿದನು, ಹೇ ಭಗವನ್ - ಎಲೈ ಪೂಜ್ಯನೇ, ಆವಾಂ - ನಾವು, ದಶರಥಸ್ಯ - ದಶರಥರಾಯನಿಗೆ, ಪುತ್ರೌ - ಮಕ್ಕಳಾದ, ರಾಮಲಕ್ಷ್ಮಣೌ - ರಾಮ ಲಕ್ಷ್ಮಣರೆಂಬ ಹೆಸರುಳ್ಳವರು, ಇಯಂ - ಈಕೆಯು, ಮಮ - ನನ್ನ, ಭಾರ್ಯಾ - ಹೆಂಡತಿಯು, ವೈದೇಹೀ - ವಿದೇಹರಾಜವಂಶೋತ್ಪನ್ನಳಾದ, ಜನಕಾತ್ಮಜಾ - ಜನಕರಾಯನಮಗಳು, ಕಲ್ಯಾಣೀ - ಶುಭಕರಳು, ಅನಿಂದಿತಾ - ನಿರ್ದೋಷಳು, ಮಾಂಚ - ನನ್ನನ್ನು ಕುರಿತು, ವಿಜನಂ - ಜನರಹಿತವಾದ, ತಪೋವನಂ - ತಪೋವನದಲ್ಲಿ, ಅನುಯಾತಾ - ಅನುಸರಿಸಿ ಬಂದಳು. ॥೧೪॥ ಪಿತ್ರಾ - ತಂದೆಯಿಂದ, ಪ್ರವ್ರಾಜ್ಯಮಾನಂ - ವನವನ್ನು ಕುರಿತು ಕಳುಹಿಸಲ್ಪಟ್ಟ, ಮಾಂ - ನನ್ನನ್ನು ಕುರಿತು, ಸೌಮಿತ್ರಿಃ-ಸುಮಿತ್ರಾ ಪುತ್ರನಾದ, ಪ್ರಿಯಃ - ಇಷ್ಟನಾದ, ದೃಢವ್ರತಃ - ನಿಶ್ಚಯವಾದ ನಿಯಮವುಳ್ಳ, ಅನುಜಃ ಭ್ರಾತಾ - ತಮ್ಮನಾದ, ಅಯಂ - ಈ ಲಕ್ಷ್ಮಣನು, ವನಮೇವ - ವನವನ್ನು ಕುರಿತು, ಅಭ್ಯಗಮತ್-ಅನುಸರಿಸಿ ಬಂದನು. ॥೧೫॥ ಹೇ ಭಗವನ್ - ಎಲೈ ಪೂಜ್ಯನೇ, ಪಿತ್ರಾ - ತಂದೆಯಿಂದ,

---

ಯುಳ್ಳವನೂ, ಪೂಜ್ಯವಾದ ಅದೃಷ್ಟವನ್ನು ಹೊಂದಿದವನೂ ಆದ ಭರದ್ವಾಜ ಋಷಿಯನ್ನು ನೋಡಿ, ಕೈ ಜೋಡಿಸಿಕೊಂಡು, ಸೀತಾ ಲಕ್ಷ್ಮಣರೊಡನೆ ಆತನನ್ನು ನಮಸ್ಕರಿಸಿದವನಾದನು. ಆಮೇಲೆ ಲಕ್ಷ್ಮಣಾಗ್ರಜನಾದ ಶ್ರೀರಾಮನು ತನ್ನ ಸಂಗತಿಯನ್ನೆಲ್ಲ ಆ ಮುನಿಶ್ರೇಷ್ಠನಿಗೆ ಬಿನ್ನವಿಸಲುಜ್ಜುಗಿಸಿ ಆತನನ್ನು ಕುರಿತು, "ಮಹಾ ಮನನಶೀಲನಾದ ಭರದ್ವಾಜ ಋಷಿಯೆ! ನಾವೀರ್ವರೂ ದಶರಥರಾಜ ಕುಮಾರರು; ರಾಮಲಕ್ಷ್ಮಣರೆಂದು ನಮ್ಮ ನಾಮಧೇಯವು. ಈಕೆಯು ರಾಮನಾದ ನನ್ನ ಭಾರ್ಯೆಯು; ಈಕೆಯ ಹೆಸರು ಸೀತಾದೇವಿಯೆಂದು. ಈಕೆಯು ಜನಕ ಚಕ್ರವರ್ತಿಯ ಮಗಳು. ನಾನು ನಿರ್ಜನವಾದೀ ತಪೋವನಕ್ಕೆ ಹೊರಡಲು ಈಕೆಯು ನನ್ನನ್ನು ಹಿಂಬಾಲಿಸಿ ಬಂದಳು. ನಾನು ತಂದೆಯಾಣತಿಯಂತೆ ಅರಣ್ಯವಾಸ ಮಾಡಲು ಕಾಡಿಗೆ ಬರಲು ನನ್ನ ತಮ್ಮನಾದ ಈ ಲಕ್ಷ್ಮಣಸ್ವಾಮಿಯು ಬೆನ್ನತ್ತಿ ಬಂದಿದ್ದಾನೆ; ಈತನು ನನ್ನೊಡನೆಯೇ ಅರಣ್ಯವಾಸ ಮಾಡಬೇಕೆಂದು ದೃಢಸಂಕಲ್ಪವುಳ್ಳವನಾಗಿದ್ದಾನೆ. ಷಡ್ಗುಣೈಶ್ವರ್ಯ ಸಂಪನ್ನನಾದ ಎಲೈ ಭರದ್ವಾಜ ಮುನಿಯೆ! ನಾವು

ಪಿತ್ರಾ ನಿಯುಕ್ತಾ ಭಗರ್ವ! ಪ್ರವೇಕ್ಷ್ಯಾಮ ಸ್ತಪೋವನಂ ‖ ಧರ್ಮಮೇವ ಚರಿಷ್ಯಾಮ ಸ್ತತ್ರ ಮೂಲ ಫಲಾಶನಾಃ ‖ ೧೬ ‖ ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ ‖ ಉಪಾನಯತ ಧರ್ಮಾತ್ಮಾ (೧) ಗಾಮರ್ಘ್ಯ ಮುದಕಂ ತತಃ ‖ ೧೭ ‖ ನಾನಾವಿಧಾನ್ನರಸಾ್ ವನ್ಯ ಮೂಲ ಫಲಾಶ್ರಯಾ್ ‖ ತೇಭ್ಯೋ ದದೌ ತಪ್ತತಪಾ ವಾಸಂಚೈವಾಽಭ್ಯಕಲ್ಪಯತ್ ‖ ೧೮ ‖ (೨) ಮೃಗ ಪಕ್ಷಿಭಿ ರಾಸೀನೋ ಮುನಿಭಿಶ್ಚ ಸಮಂತತಃ ‖ ರಾಮಮಾಗತ ಮಭ್ಯರ್ಚ್ಯ

ನಿಯುಕ್ತಾಃ - ಆಜ್ಞಾಪಿಸಲ್ಪಟ್ಟವರಾಗಿ, ತಪೋವನಂ - ತಪೋವನವನ್ನು, ಪ್ರವೇಕ್ಷ್ಯಾಮಃ-ಪ್ರವೇಶ ಮಾಡಿದೆವು, ತತ್ರ - ಆ ವನದಲ್ಲಿ, ಮೂಲಫಲಾಶನಾಃ - ಕಂದಮೂಲಗಳೂ ಫಲಗಳೇ ಆಹಾರವುಳ್ಳವರಾಗಿ, ಧರ್ಮಮೇವ - ಧರ್ಮವನ್ನೇ, ಚರಿಷ್ಯಾಮಃ - ನಡಿಸುತ್ತೇವೆ. ‖ ೧೬ ‖ ಧರ್ಮಾತ್ಮಾ - ಧರ್ಮಿಷ್ಠನಾದ ಭರದ್ವಾಜಋಷಿಯು, ರಾಜಪುತ್ರಸ್ಯ - ದಶರಥರಾಜನ ಮಗನಾದ, ಧೀಮತಃ - ಬುದ್ಧಿಶಾಲಿಯಾದ, ತಸ್ಯ - ಆ ಶ್ರೀರಾಮನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಗಾಂ-ಮಧುಪರ್ಕಾರ್ಥವಾಗಿರುವ ಗೋವನ್ನೂ, ಅರ್ಘ್ಯಂ - ಪೂಜಾದ್ರವ್ಯವನ್ನೂ, ತತಃ - ಬಳಿಕ, ಉದಕಂ-ಉದಕವನ್ನೂ, ಉಪಾನಯತ - ತೆಗದುಕೊಂಡು ಬಂದನು. ‖ ೧೭ ‖ ತಪ್ತತಪಾಃ - ತಪಿಸಲ್ಪಟ್ಟ ತಪವುಳ್ಳ ಭರದ್ವಾಜಋಷಿಯು, ವನ್ಯಮೂಲಫಲಾಶ್ರಯಾ್ - ವನದಲ್ಲಿ ಹುಟ್ಟಿದ ಕಂದಮೂಲಗಳೂ ಫಲಗಳೂ ಆಶ್ರಯವಾಗುಳ್ಳ, ನಾನಾವಿಧಾ್ - ಅನೇಕ ಬಗೆಗಳಾದ, ಅನ್ನರಸಾ್ - ಭೋಜನ ರಸ ವಿಶೇಷಗಳನ್ನು, (ಗೋ) - ರಸಪ್ರಧಾನವಾದ ಅನ್ನಗಳನ್ನು, ತೇಭ್ಯಃ - ಆ ರಾಮಲಕ್ಷ್ಮಣಸೀತಾ ದೇವಿಯರಿಗೆ, ದದೌ - ಕೊಟ್ಟನು, ವಾಸಂಚೈವ-ನಿವಾಸಸ್ಥಾನವನ್ನು, ಅಭ್ಯಕಲ್ಪಯತ್-ಕಲ್ಪಿಸಿದನು. ‖ ೧೮ ‖ ಮುನಿಃ - ಭರದ್ವಾಜಋಷಿಯು, ಮೃಗಪಕ್ಷಿಭಿಃ - ಚಿಗುರಿಯ ಮೃಗಗಳಿಂದಲೂ ಹಕ್ಕಿಗ

ತಂದೆಯಾಣತಿಯಂತೆ ತಪಮಂಗೈಯ್ಯಲು ಅರಣ್ಯವನ್ನು ಪ್ರವೇಶಿಸಿದೆವು; ಇಂತು ಪ್ರವೇಶಿಸಿದ ನಾವು ಕಂದಮೂಲಗಳನ್ನೇ ಭುಜಿಸುತ್ತೇವೆ" ಎಂದು ಹೇಳಿದನು. ‖ ೧೦-೧೬ ‖ ಶ್ರೀರಾಮಮೂರ್ತಿಯು ಈ ರೀತಿಯಾಗಿ ವಿಜ್ಞಾಪಿಸಲು, ಮಹಾ ಧರ್ಮಬುದ್ಧಿಯುಳ್ಳ ಭರದ್ವಾಜ ಮುನಿಯು, ಬುದ್ಧಿಶಾಲಿಯಾಗಿಯೂ, ರಾಜಪುತ್ರನಾಗಿಯೂ ಇರುವ ಆತನನ್ನು ಸನ್ಮಾನಿಸಲು ಗೋವನ್ನೂ, ಅರ್ಘ್ಯೋದಕವನ್ನೂ ತೆಗೆದುಕೊಂಡು ಬಂದನು. ಮತ್ತು ತಪೋವಂತರಲ್ಲಿ ಶ್ರೇಷ್ಠನಾದ ಆ ಭರದ್ವಾಜ ಮುನಿಯು ಸೀತಾ ರಾಮ ಲಕ್ಷ್ಮಣರಿಗೆ ಕಂದಮೂಲ ಫಲಗಳನ್ನೂ, ನಾನಾ ವಿಧವಾದ ಅನ್ನಪಾನಾದಿಗಳನ್ನೂ ಸಮರ್ಪಿಸಿದವನಾ

---

(೧) ಟಿ. "ಗೋಮಧುಪರ್ಕಾರ್ಹೋ ವೇದಾಧ್ಯಾಯೀ ಋತ್ವಿಕ್ ಸ್ನಾತಕೋ ರಾಜಾವಾ ಧರ್ಮಯುಕ್ತಃ" ಎಂದು ಸ್ಮೃತಿವಚನವುಂಟು. ವೇದಾಧ್ಯಯನ ಸಂಪನ್ನನೂ, ಋತ್ವಿಜನೂ, ಸ್ನಾತಕ ವ್ರತ ಮಾಡಿದವನೂ, ಧರ್ಮಯುಕ್ತನಾದ ರಾಜನೂ ಗೋ ಮಧುಪರ್ಕಾರ್ಹರು. (ಗೋ-ಮಧುಪರ್ಕಾಂಗ ಭೂತವಾದ ವೃಷಭ) ಈ ವಚನಾಧಾರದಿಂದ ಇಲ್ಲಿನ ಭರದ್ವಾಜ ಕೃತ ರಾಮ ಸತ್ಕರಣವು ಉಚಿತವೆಂದು ತಿಳಿಯತಕ್ಕುದು.

(೨) ಟಿ. ಇಲ್ಲಿ ಭರದ್ವಾಜ ಮುನಿಯ ಮಹಿಮೆಯಿಂದ ತಿರ್ಯಗ್ಜಂತುಗಳಾದ ಮೃಗಪಕ್ಷಿಗಳು ಸಹ ಶ್ರೀರಾಮ ಮೂರ್ತಿಯನ್ನು **ಪರೇಶ**ನೆಂದರಿತವು, ಎಂಬುದೇ ಗಮ್ಯಾರ್ಥವು. (ಮ + ಗೋ).

ಸ್ವಾಗತೇನಾಹ ತಂ ಮುನಿಃ ॥ ೧೯ ॥ ಪ್ರತಿಗೃಹ್ಯಚ ತಾಮರ್ಚಾ ಮುಪ ವಿಷ್ಟಂ ಸ ರಾಘವಂ ॥ ಭರದ್ವಾಜೋ ಬ್ರವೀದ್ವಾಕ್ಯಂ ಧರ್ಮಯುಕ್ತ ಮಿದಂ ತದಾ ॥ ೨೦ ॥ ಚಿರಸ್ಯ ಖಲು ಕಾಕುತ್‌ಸ್ಥ! ಪಶ್ಯಾಮಿ ತ್ವಾಮಿಹಾಗತಂ ॥ ಶ್ರುತಂ ತವ ಮಯಾಚೇದಂ ವಿವಾಸನಮಕಾರಣಂ ॥ ೨೧ ॥ ಅವಕಾಶೋ ವಿವಿಕ್ತೋಽಯಂ ಮಹಾನದ್ಯೋಃ ಸ್ಸಮಾಗಮೇ ॥ ಪುಣ್ಯಶ್ಚ ರಮಣೀಯಶ್ಚ ವಸತ್ವಿಹ ಭರ್ವಾ ಸುಖಂ ॥ ೨೨ ॥ ಏವಮುಕ್ತಸ್ತು ವಚನಂ ಭರದ್ವಾಜೇನ

ಳಿಂದಲೂ, ಸಮಂತತಃ - ಎಲ್ಲಡೆಗಳಲ್ಲಿಯೂ, ಮುನಿಭಿಶ್ಚ - ಋಷಿಗಳೊಡನೆಯೂ, ಆಗತಂ - ಬಂದಿರುವ, ತಂರಾಮಂ - ಆ ಶ್ರೀರಾಮನನ್ನು ಕುರಿತು, ಅಭ್ಯರ್ಚ್ಯ - ಪೂಜೆಮಾಡಿ, ಸ್ವಾಗತೇನ - ಸುಖಾಗಮನ ಪೂರ್ವಕವಾಗಿ, ಆಹ - ಹೇಳಿದನು. ॥ ೧೯ ॥ ಸಭರದ್ವಾಜಃ - ಆ ಭರದ್ವಾಜ ಋಷಿಯು, ತಾಮರ್ಚಾಂ - ಆ ಪೂಜೆಯನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಉಪವಿಷ್ಟಂ - ಕುಳಿತು ಕೊಂಡಿರುವ, ರಾಘವಂ - ಶ್ರೀರಾಮನನ್ನು ಕುರಿತು, ಧರ್ಮಯುಕ್ತಂ - ಧರ್ಮಯುಕ್ತವಾದ, ಇದಂವಾಕ್ಯಂ - ಈ ಮಾತನ್ನು, ತದಾ - ಆ ಕಾಲದಲ್ಲಿ, ಅಬ್ರವೀತ್ - ನುಡಿದನು. ॥ ೨೦ ॥ ಹೇ ಕಾಕುತ್‌ಸ್ಥ - ಎಲೈ ಶ್ರೀರಾಮನೆ, ಚಿರಸ್ಯ - ಬಹುಕಾಲಕ್ಕೆ, ಇಹ - ಇಲ್ಲಿ, ತ್ವಾಂ - ನಿನ್ನನ್ನು, ಆಗತಂ - ಬಂದವನನ್ನಾಗಿ, ಪಶ್ಯಾಮಿ - ಕಂಡೆನಷ್ಟೆ, ತವ - ನಿನಗೆ, ಅಕಾರಣಂ - ನಿಷ್ಕಾರಣವಾಗಿ, ಇದಂವಿವಾಸನಂ - ಈ ಅರಣ್ಯವಾಸವು, ಮಯಾ - ನನ್ನಿಂದ, ಶ್ರುತಂ - ಕೇಳಲ್ಪಟ್ಟಿತು, ಮಹಾನದ್ಯೋಃ - ಮಹಾ ನದಿಗಳ, ಸಮಾಗಮೇ - ಸಂಗಮಕ್ಷೇತ್ರದಲ್ಲಿ, ಅಯಮವಕಾಶಃ - ಸ್ಥಳವು, ವಿವಿಕ್ತಃ - ವಿಜನವಾಗಿರುವುದು, ಪುಣ್ಯಶ್ಚ - ಪುಣ್ಯಕರವಾಗಿಯೂ, ರಮಣೀಯಶ್ಚ - ಮನಸ್ಸಿಗಿಂಪಾಗಿಯೂ ಇರುವುದು, ಇಹ - ಇಲ್ಲಿ, ಭರ್ವಾ - ನೀನು, ಸುಖಂ - ಸುಖವಾಗಿ, ವಸ - ಇರು. ॥ ೨೨ ॥ ಭರದ್ವಾಜೇನ - ಭರದ್ವಾಜಋಷಿಯಿಂದ, ಏವಂ - ಈಪರಿಯಾಗಿ, ವಚನಂ - ಮಾತನ್ನು,

ದನು. ಇಷ್ಟೆಯಲ್ಲದೆ ಆ ಸೀತಾ ರಾಮ ಲಕ್ಷ್ಮಣರು ವಾಸ ಮಾಡಲು ಯೋಗ್ಯವಾದ ಸ್ಥಾನವನ್ನೂ ಕಲ್ಪಿಸಿಕೊಟ್ಟನು. ಆ ಬಳಿಕ ಮೃಗಗಳಿಂದಲೂ, ಪಕ್ಷಿಗಳಿಂದಲೂ, ಮುನಿಗಳಿಂದಲೂ ಸುತ್ತುವರೆಯಲ್ಪಟ್ಟ ಆ ಭರದ್ವಾಜ ಮುನಿಯು ಶ್ರೀರಾಮನನ್ನು ನೋಡಿ, “ಎಲೈ ರಾಮನೆ! ನಿನಗೆ ಸುಖಾಗಮನವೆ?” ಎಂದು ಕೇಳಿದುದಲ್ಲದೆ ತಾಸಿತ್ತ ಅರ್ಘ್ಯವನ್ನು ಕೈಕೊಂಡು ಸುಖವಾಗಿ ಕುಳಿತಿದ್ದ ಆತನನ್ನು ನೋಡಿ ಧರ್ಮಯುಕ್ತವಾದ ಈ ಮಾತುಗಳನ್ನಾಡಿದನು. “ಎಲೈ ಕಕುತ್ಸ್ಥಕುಲಸಂಭವನೆ! ಶ್ರೀರಾಮನೆ!! ಬಹುಕಾಲಕ್ಕೀ ಆಶ್ರಮ ಪ್ರದೇಶಕ್ಕೆ ಬಂದ ನಿನ್ನನ್ನು ನೋಡಿದೆನು. ನಾನಿಷ್ಟುಕಾಲವಿಲ್ಲಿಲ್ಲದಿದ್ದರೆ ನಿನ್ನನ್ನು ನೋಡಲಾಗುತ್ತಿರಲಿಲ್ಲವಷ್ಟೆ? ಎಲೈ ರಘುರಾಮನೆ! ನಿಮ್ಮ ತಂದೆಯಾದ ದಶರಥರಾಯನು ನಿನ್ನನ್ನು ನಿಷ್ಕಾರಣವಾಗಿ ಅರಣ್ಯಕ್ಕೆ ಹೋಗೆಂದು ಹೇಳಿದನೆಂಬ ವಾರ್ತೆಯನ್ನೂ ಕೇಳಿದನು. ಮಹಾ ನದಿಗಳಾದ ಗಂಗಾ ಯಮುನಾ ನದಿಗಳ ಮಧ್ಯದಲ್ಲಿರುವ ಈ ಪ್ರದೇಶವು, ಜನರಹಿತವಾದುದೂ, ಪವಿತ್ರವಾದುದೂ, ಅಲ್ಲದೆ ಈ ಪ್ರದೇಶವು ಪುಣ್ಯತರವಾದುದೂ, ರಮಣೀಯವಾದುದೂ ಆಗಿರುವುದು. ಆದುದರಿಂದ ನೀನೀ ಪ್ರದೇಶದಲ್ಲಿಯೇ

ರಾಘವಃ ॥ ಪ್ರತ್ಯುವಾಚ ಶುಭಂ ವಾಕ್ಯಂ ರಾಮ ಸ್ಸರ್ವಹಿತೇ ರತಃ ॥ ೨೩ ॥
(೧) ಭಗವನ್ನಿತ ಆಸನ್ನಃ ಪೌರಜಾನಪದೋ ಜನಃ ॥ ಸುದರ್ಶನಂತು ಮಾಂ
ಪ್ರೇಕ್ಷ್ಯ ಮನ್ಯೇಹ ಮಿಮ ಮಾಶ್ರಮಂ ॥ ೨೪ ॥ ಆಗಮಿಷ್ಯತಿ ವೈದೇಹೀಂ
ಮಾಂಚಾಪಿ ಪ್ರೇಕ್ಷಕೋ ಜನಃ ॥ ಅನೇನ ಕಾರಣೇನಾಹ ಮಿಹವಾಸಂ ನ

ಉಕ್ತಃ - ಹೇಳಲ್ಪಟ್ಟ, ರಾಘವಃ - ರಘುಕುಲೋದ್ಭವನಾದ, ಸರ್ವಹಿತೇ - ಎಲ್ಲರ ಹಿತದಲ್ಲಿಯೂ, ರತಃ - ಆಸಕ್ತನಾದ, ರಾಮಃ - ಶ್ರೀರಾಮನು, ಶುಭಂ - ಮಂಗಳಕರವಾದ, ವಾಕ್ಯಂ - ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥ ೨೩ ॥ ಹೇ ಭಗವನ್ - ಎಲೈ ಷಡ್ಗುಣೈಶ್ವರ್ಯ ಸಂಪನ್ನನೇ, ಇತಃ - ಇಲ್ಲಿಗೆ, ಆಸನ್ನಃ - ಸಮೀಪವರ್ತಿಯಾದ, ಪೌರಜಾನಪದಃ - ಪಟ್ಟಣಸ್ಥರೂ ದೇಶವಾಸಿಗಳೂ ಆದ, ಜನಃ-ಜನವು, ಸುದರ್ಶನಂ - ಸುಖವಾಗಿ ನೋಡತಕ್ಕವನನ್ನಾಗಿ, ಪ್ರೇಕ್ಷ್ಯ - ಕಂಡು, ಇಮಂ ಆಶ್ರಮಂ - ಈ ಆಶ್ರಮವನ್ನು ಕುರಿತು, ವೈದೇಹೀಂ - ಸೀತಾದೇವಿಯನ್ನೂ, ಮಾಂ- ನನ್ನನ್ನೂ, ಪ್ರೇಕ್ಷ್ಯಕಃ - ನೋಡುವ, ಜನಃ - ಜನವು, ಆಗಮಿಷ್ಯತಿ - ಬರುವದು, ಇತಿ-ಇಂತೆಂದು, ಅಹಂ - ನಾನು, ಮನ್ಯೇ - ತಿಳಿದಿದೇನೆ. ॥ ೨೪ ॥ ಹೇ ಭಗವನ್ - ಎಲೈ ಪೂಜ್ಯನೇ, ಅನೇನ ಕಾರಣೇನ - ಈ ಕಾರಣದಿಂದ, ಅಹಂ - ನಾನು, ಇಹ-ಇಲ್ಲಿ, ವಾಸಂ-ನಿವಾಸವನ್ನು, ನರೋಚಯೇ-

---

ಸುಖವಾಗಿರುವವನಾಗು." ॥ ೧೭-೨೨ ॥ ಇಂತು ಆ ಭರದ್ವಾಜ ಮುನೀಶ್ವರನು ಹೇಳಿದ ನುಡಿಗಳನ್ನಾಲಿಸಿದ, ಸಕಲ ಜೀವಜಂತುಗಳಿಗೂ ಹಿತವನ್ನುಂಟುಮಾಡಲಿಚ್ಛಿಸಿದ ಆ ರಘುರಾಮನು ಮಂಗಳಕರವಾದ ಮಾತುಗಳನ್ನಾಡಲಪೇಕ್ಷಿಸಿ ಆ ಮುನಿ ಪುಂಗವನನ್ನು ಕುರಿತಿಂತೆಂದನು. "ಮಹಾತ್ಮನಾದ ಭರದ್ವಾಜ ಮುನಿಯೆ! ಈ ಪ್ರದೇಶವು ಪಟ್ಟಣದಲ್ಲಿರುವವರಿಗೂ, ಗ್ರಾಮನಿವಾಸಿಗಳಾದ ಜನರಿಗೂ ಸಮೀಪವಾಗಿರುವುದು. ನಮ್ಮನ್ನು ನೋಡಬೇಕೆಂಬ ಕೋರಿಕೆಯಿಂದ ಅವರು ನಾವಿಲ್ಲಿರುವುದನ್ನು ತಿಳಿದು ಬಹು ಸುಲಭವಾಗಿ ನಿನ್ನೀ ಆಶ್ರಮಕ್ಕೆ ಬರುತ್ತಾರೆ. ಆದುದರಿಂದ ನಾವಿಲ್ಲಿರುವುದಕ್ಕೆ ಸಮ್ಮತಪಡುವುದಿಲ್ಲವು.

---

(೧) ಟಿ. ಇಲ್ಲಿನ ಶ್ರೀರಾಮ ವಾಕ್ಯಕ್ಕೆ **ಮಹೇಶ್ವರ ತೀರ್ಥರು** ಪರಮಾರ್ಥವನ್ನೀರೀತಿ ಒಕ್ಕಣಿಸಿರುತ್ತಾರೆ,

ಎಲೈ ಸರ್ವಜ್ಞನೇ! ರಾವಣ ವಧೆಗೋಸುಗ ಗೂಢವಾಗಿಯೇ ಅವತರಿಸಿರುವ ನನ್ನನ್ನು ಈ ರೀತಿ ಪ್ರಕಟಗೊಳಿಸುವೆಯಾದರೆ ಜ್ಞಾನೈಕ ದೃಷ್ಟಿಯಿಂದಲೇ ನೋಡಲು ಶಕ್ಯನೂ ("ವಿಷ್ಣುಂಚ ದೃಶ್ಯತೇಗ್ರ್ಯಯಾ" ಎಂದು ಶ್ರುತಿವಾಕ್ಯ) ವಿಷ್ಣುವೂ ಆದ ನನ್ನನ್ನೂ, ಆದಿಲಕ್ಷ್ಮಿಯಾದ ಈ ಸೀತಾದೇವಿಯನ್ನೂ ಏನೊಂದೂ ಶ್ರಮವಿಲ್ಲದೆ ತಿಳಿದು ದರ್ಶನಾಪೇಕ್ಷೆಗಳಿಂದ ಪ್ರೇಕ್ಷಕರೆಲ್ಲರೂ ಇಲ್ಲಿಗೆ ಬಂದುಬಿಡುತ್ತಾರೆ. ಆದುದರಿಂದ ಈ ಬಹಿರಂಗ ವಾಸಕ್ಕೆ ನಾನು ಸಮ್ಮತಿಸುವುದಿಲ್ಲವು. ಯಾವ ಪರಮಾಸಂದೈಕ ಸ್ಥಳದಲ್ಲಿ ವೈದೇಹಿಯು ರಮಿಸುವಳೋ (ಯೋಮೃಗ್ಯತೇ ಹಸ್ತಗೃಹೀತ ಪದ್ಮಯಾ । ಶ್ರಿಯೇತರೈರಂಗ ವಿಮೃಗ್ಯಮಾಣಯಾ) ಎಂಬಂತೆ, ಲಕ್ಷ್ಮಿಯು ಎಲ್ಲರಿಂದಲೂ ಆಶ್ರಯಿಸಲು ತಕ್ಕವಳಾದರೂ ನಿರಂತರವೂ ಅನುಭವಿಸಲ್ಪಡುತ್ತಲಿದ್ದರೂ ಇಲ್ಲಿಂದಾರಂಭಿಸಲ್ಪಟ್ಟ ಅನುಭವದಂತೆ ನಿತ್ಯಾನುರಕ್ತಳಾಗುವಳು, (ತಂ ಆಶ್ರೀಯತ ಇತಿ ಆಶ್ರಮಂ - ಅವನನ್ನು ಆಶ್ರಯಿಸುವದು ಯಾವುದೋ ಅದು, ಎಂದರೆ, ಪ್ರಪಂಚ), ಅದಕ್ಕೆ ಆಧಾರಭೂತನಾಗಿಯೂ, ಸ್ವರೂಪದಿಂದಲೂ, ಗುಣದಿಂದಲೂ, ಮಹಿಮೆಯಿಂದಲೂ, ಬ್ರಹ್ಮರುದ್ರಾದಿಗಳಿಗಿಂತಲೂ ಉತ್ತಮೋತ್ತಮನಾದ ನನ್ನನ್ನು ನನಗೆ ಬಹು ಪ್ರೀತಿಪಾತ್ರನಾದ ನೀನು ಏಕಾಂತದಲ್ಲಿ ನೋಡುವವನಾಗು. ಗೂಢವಾದುದಕ್ಕಿಂತಲೂ ಅತಿ ಗೂಢವಾದ ನನ್ನ ಸ್ವರೂಪವನ್ನು ಪ್ರಕಟಗೊಳಿಸಬೇಡ.

ರೋಚಯೋ ॥ ೨೫ ॥ ಏಕಾಂತೇ ಪಶ್ಯ ಭಗವ ನ್ನಾಶ್ರಮ ಸ್ಥಾನ ಮುತ್ತಮಂ ॥ ರಮೇತ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ ॥ ೨೬ ॥ ಏತಚ್ಛ್ರುತ್ವಾ ಶುಭಂ ವಾಕ್ಯಂ ಭರದ್ವಾಜೋ ಮಹಾಮುನಿಃ ॥ ರಾಘವಸ್ಯ ತತೋ ವಾಕ್ಯ ಮರ್ಥಗ್ರಾಹಕ ಮಬ್ರವೀತ್ ॥ ೨೭ ॥ ದಶಕ್ರೋಶ ಇತಸ್ತಾತ! ಗಿರಿರ್ಯತ್ರ ನಿವತ್ಸ್ಯಸಿ ॥ ಮಹರ್ಷಿ ಸೇವಿತಃ ಪುಣ್ಯ ಸ್ಸರ್ವತ ಸ್ಸುಖದರ್ಶನಃ ॥ ೨೮ ॥ (೧) ಗೋಲಾಂಗೂಲಾನುಚರಿತೋ ವಾನರರ್ಕ್ಷ ನಿಷೇವಿತಃ ॥ ಚಿತ್ರ

ಸಮ್ಮತಿಸಲಾರೆನು, ಏಕಾಂತೇ - ವಿಜನಸ್ಥಳದಲ್ಲಿ, ಉತ್ತಮಂ - ಉತ್ಕೃಷ್ಟವಾದ, ಆಶ್ರಮಸ್ಥಾನಂ - ಆಶ್ರಮಸ್ಥಳವನ್ನು, ಪಶ್ಯ - ನೋಡು, ಸುಖಾರ್ಹಾ - ಸುಖಕ್ಕೆ ಅರ್ಹಳಾದ, ಜನಕಾತ್ಮಜಾ - ಜನಕರಾಯನ ಕುವರಿಯಾದ, ವೈದೇಹೀ - ಸೀತಾದೇವಿಯು, ಯತ್ರ - ಯಾವ ಸ್ಥಳದಲ್ಲಿ, ರಮೇತಾ - ವಿಹರಿಸುವಳೋ. ॥ ೨೫ ॥ ಮಹಾಮುನಿಃ - ಮಹರ್ಷಿಯಾದ, ಭರದ್ವಾಜಃ-ಭರದ್ವಾಜಋಷಿಯು, ರಾಘವಸ್ಯ - ಶ್ರೀರಾಮನ, ಶುಭಂ - ಶುಭಕರವಾದ, ಏತದ್ವಾಕ್ಯಂ - ಈ ವಾಕ್ಯವನ್ನು, ಶ್ರುತ್ವಾ - ಕೇಳಿ, ತತಃ - ಬಳಿಕ, ಅರ್ಥಗ್ರಾಹಕಂ - ಪರಮಾರ್ಥವನ್ನು ಬೋಧಿಸುತ್ತಿರುವ, ವಾಕ್ಯಂ ಮಾತನ್ನು, ಅಬ್ರವೀತ್ - ನುಡಿದನು. ॥ ೨೬ ॥ ಹೇ ತಾತ - ಎಲೈ ತಂದೆಯೇ, ಇತಃ-ಇಲ್ಲಿಗೆ, ದಶಕ್ರೋಶಃ ಹತ್ತು ಹರಿದಾರಿಯುಳ್ಳ, ಗಿರಿಃ - ಬೆಟ್ಟವು, ಅಸ್ತಿ - ಇರುವುದು, ಯತ್ರ - ಯಾವ ಬೆಟ್ಟದಲ್ಲಿ, ತ್ವಂ ನೀನು, ನಿವತ್ಸ್ಯಸಿ - ಇರುವೆಯೋ, ಮಹರ್ಷಿಸೇವಿತಃ - ಮಹರ್ಷಿಗಳಿಂದ ಸೇವಿಸಲ್ಪಟ್ಟ, ಪುಣ್ಯಃ - ಪುಣ್ಯಕರವಾದ, ಸರ್ವತಃ - ಎಲ್ಲಾ ಪ್ರದೇಶಗಳಲ್ಲಿಯೂ, ಸುಖದರ್ಶನಃ - ಸುಖಕರವಾದ ನೋಟವುಳ್ಳ, ಗೋಲಾಂಗೂಲಾನುಚರಿತಃ-ಶಿಂಗಳೀಕಗಳಿಂದ ಸಂಚಾರಮಾಡಲ್ಪಟ್ಟ, ವಾನರರ್ಕ್ಷನಿಷೇವಿತಃ -

ಆದುದರಿಂದೆಲೈ ಮುನಿಶ್ರೇಷ್ಠನೆ! ಜನಕ ಚಕ್ರೇಶ್ವರನ ಮಗಳೂ, ಸರ್ವ ಕಾಲದಲ್ಲಿಯೂ ಸುಖವನ್ನನುಭವಿಸಲು ತಕ್ಕವಳೂ ಆದ ಈ ಸೀತಾದೇವಿಗೆ ಯಾವ ಪ್ರದೇಶವು ಸುಖಾರ್ಹವಾದುದೋ ಆ ಪ್ರದೇಶವಾವುದೆಂದು ಯೋಚಿಸಿ ಆಜ್ಞಾಪಿಸುವವನಾಗು. ಅಂತಹ ಸ್ಥಳವು ಏಕಾಂತವಾಗಿರಬೇಕೆಂಬುದನ್ನು ಯೋಚಿಸಿ ಹೇಳುವವನಾಗು" ಶ್ರೀರಾಮನೀರೀತಿ ನುಡಿಯಲು ಆ ಭರದ್ವಾಜ ಮುನಿಯು ಆತನನ್ನು ಕುರಿತು, "ಓ ತಂದೆಯೆ! ರಘುರಾಮ; ಪೂಜ್ಯರಾದ ಋಷಿಗಳಿಂದ ಸೇವಿತವಾದುದೂ, ಪವಿತ್ರತರವಾದುದೂ, ಮಂಗಳಕರವಾಗಿ ನೋಡಲರ್ಹವಾದುದೂ ಗುಡ್ಡಬೆಟ್ಟಗಳಿಂದಲೂ, ವಾನರಗಳಿಂದಲೂ, ಶಿಂಗಳೀಕಗಳಿಂದಲೂ, ಕರಡಿಗಳಿಂದಲೂ ಸೇವಿಸಲ್ಪಡುತ್ತಿರುವುದೂ, ಗಂಧಮಾದನ ಪರ್ವತಕ್ಕೆ ಸಮಾನವಾದುದೂ ಆದ ಚಿತ್ರಕೂಟವೆಂಬ ಪರ್ವತವೊಂದುಂಟು. ಈ ಪರ್ವತವು ಇಲ್ಲಿಗೆ ಹತ್ತು ಕ್ರೋಶಗಳ ಮಾತ್ರದಲ್ಲಿಯೇ ಇರುತ್ತದೆ. ಮಾನವನು ಈ ಚಿತ್ರಕೂಟ ಪರ್ವತದ ಶಿಖರವನ್ನಾವಾಗ ನೋಡಿದನೋ, ಅದು ಮೊದಲು ನೋಡಿದ ಆ ಮಾನವನು ಪಾಪಬುದ್ಧಿಯಿಲ್ಲದವನೂ,

(೫) ಟಿ. "ಗೋಲಾಂಗೂಲ......ನಿಷೇವಿತಃ" ಎಂದು ಕೇವಲ ತ್ರಿವರ್ಗಾಭಿದಾನ ಮಾಡಿರುವುದರಿಂದ ಅರಣ್ಯವಾಸದಲ್ಲಿ ಇವರೇ ಶ್ರೀರಾಮನಿಗೆ ಸಹಾಯಕರಾಗುತ್ತಾರೆಂಬ ಅಭಿಪ್ರಾಯವು ತೋರುತ್ತದೆ. (ಗೋ).

ಕೂಟಇತಿ ಖ್ಯಾತೋ ಗಂಧಮಾದನ ಸನ್ನಿಭಃ ॥ ೨೯ ॥ ಯಾವತಾ ಚಿತ್ರ
ಕೂಟಸ್ಯ ನರಶೃಂಗಾಣ್ಯವೇಕ್ಷತೇ ॥ ಕಲ್ಯಾಣಾನಿ ಸಮಾಧತ್ತೇ ನ ಪಾಪೇ
ಕುರುತೇ ಮನಃ ॥ ೩೦ ॥ ಋಷಯಸ್ತತ್ರ ಬಹವೋ ವಿಹೃತ್ಯ ಶರದಾಂ
ಶತಂ ॥ ತಪಸಾ ದಿವ ಮಾರೂಢಾಃ (೧) ಕಪಾಲಶಿರಸಾ ಸಹ ॥ ೩೧ ॥ ಪ್ರವಿ
ವಿಕ್ತಮಹಂ ಮನ್ಯೇ ತಂ ವಾಸಂ ಭವತ ಸ್ಸುಖಂ ॥ ಇಹವಾ ವನವಾಸಾಯ
ವಸ ರಾಮ ಮಯಾ ಸಹ ॥೩೨॥ ಸ ರಾಮಂ ! ಸರ್ವಕಾಮೈಸ್ತಂ ಭರದ್ವಾಜಃ

ಕೋತಿಗಳೂ ಕರಡಿಗಳೂ ಇವುಗಳಿಂದಲೂ ಸೇವಿಸಲ್ಪಟ್ಟ, ಚಿತ್ರಕೂಟಇತಿ - ಚಿತ್ರಕೂಟವೆಂದು ಪ್ರಸಿದ್ಧವಾದ, ಸಃ - ಆ ಬೆಟ್ಟವು, ಗಂಧಮಾದನಸನ್ನಿಭಃ - ಗಂಧಮಾದನ ಪರ್ವತಕ್ಕೆ ಸಮಾನವಾದುದು. ॥ ೨೯ ॥ ನರಃ - ಮನುಜನು, ಯಾವತಾ - ಎಷ್ಟುದೂರದಿಂದ, ಚಿತ್ರಕೂಟಸ್ಯ - ಚಿತ್ರಕೂಟಪರ್ವತದ, ಶೃಂಗಾಣಿ - ಶಿಖರಗಳನ್ನು, ಅವೇಕ್ಷತೇ - ನೋಡುತ್ತಾನೆಯೋ, ತಸ್ಯ - ಆ ಮನುಷ್ಯನ, ಮನಃ - ಮನಸ್ಸು, ಕಲ್ಯಾಣಾನಿ-ಶುಭಗಳನ್ನು, ಸಮಾಧತ್ತೇ-ಹೊಂದುತ್ತದೆ, ಪಾಪೇ-ಪಾಪದಲ್ಲಿ, ಪುನಃ-ಪುನಃ ವನ್ನು, ನಕುರುತೇ - ಮಾಡುವದಿಲ್ಲ. ॥೩೦॥ ತತ್ರ-ಆ ಚಿತ್ರಕೂಟಪರ್ವತದಲ್ಲಿ, ಬಹವಃ-ಅನೇಕರಾದ, ಋಷಯಃ-ಋಷಿಗಳು, ಶರದಾಂಶತಂ-ಅನೇಕ ಸಂವತ್ಸರಗಳು, ವಿಹೃತ್ಯ-ವಿಹಾರ ಮಾಡಿ, ತಪಸಾ - ತಪಸ್ಸಿನಿಂದ, ಕಪಾಲ - ಕಪಾಲವೇ ಅವಶಿಷ್ಟವಾಗುಳ್ಳ, ಶಿರಸಾಸಹ - ಶಿರಸ್ಸಿನೊಡನೆ, (ಗೋ) ಕಪಾಲಯುಕ್ತ ಶರೀರದಿಂದ ಯುಕ್ತವಾದ, ಶಿರಸಾಸಹ - ಶಿರಸ್ಸಿನೊಡಗೂಡಿ, (ಅಂದರೆ ಶರೀರಸಹಿತವಾಗಿ) ದಿವಂ - ಸ್ವರ್ಲೋಕವನ್ನು, ಆರೂಢಾಃ - ಏರಿದರು. ॥ ೩೧ ॥ ಪ್ರವಿವಿಕ್ತಂ - ವಿಜನವಾದ, ತಂವಾಸಂ - ಆ ವಾಸಸ್ಥಾನವು, ಭವತಃ - ನಿನಗೆ, ಸುಖಂ - ಸುಖಕರವೆನ್ನಾಗಿ, ಅಹಂ - ನಾನು, ಮನ್ಯೇ - ತಿಳಿದಿಧೇನೆ, ಹೇ ರಾಮ - ಎಲೈ ಶ್ರೀರಾಮನೆ, ಮಯಾ ಸಹ - ನನ್ನೊಡಗೂಡಿ, ಇಹವಾ - ಇಲ್ಲಿಯಾದರೂ, ವನವಾಸಾಯ - ಅರಣ್ಯವಾಸಕ್ಕೋಸುಗ, ವಸ-

ಮಂಗಳಕರವಾದ ಕಾರ್ಯಗಳಲ್ಲಿ ಆಸಕ್ತನೂ ಆಗುತ್ತಾನೆ. ಅಲ್ಲಿ ಅನೇಕ ಋಷಿಗಳು ನೂರಾರು ಸಂವತ್ಸರಗಳು ತಪವಂಗೈದು ಕಪಾಲಮಾತ್ರಾವಶಿಷ್ಟರಾಗಿ ಸ್ವರ್ಗವನ್ನೈದಿದರು. ಎಲೈ ಶ್ರೀರಾಮನೆ! ನಾನು ಆ ಪ್ರದೇಶವು ನಿನಗೆ ಏಕಾಂತಸ್ಥಾನವಾದುದನ್ನಾಗಿಯೂ, ಸುಖಪ್ರದವಾದುದನ್ನಾಗಿಯೂ ತಿಳಿಯುತ್ತೇನೆ. ಹಾಗೊಂದುವೇಳೆ ಅಲ್ಲಿರಲು ನಿಮಗಾಗದಿದ್ದರೆ ನನ್ನೊಡನೆ ಅರಣ್ಯವಾಸವನ್ನು ಮಾಡಬಹುದು " ಎಂದು ಹೇಳಿದನು. ॥ ೨೩-೩೦ ॥ ಇಂತು ನುಡಿದ ಭರದ್ವಾಜ ಮುನಿ ಪುಂಗವನು ಸೀತಾ ರಾಮ ಲಕ್ಷ್ಮಣರು ಮೂವರೂ ಕೇಳಿದ ಉಪಚಾರಗಳನ್ನು ಮಾಡಿ ಪರಮಾನಂದವನ್ನು ಹೊಂದಿಸಿದವನಾದನು. ಈ ರೀತಿ ಶ್ರೀರಾಮನು ಆ ಪ್ರಯಾಗ ಕ್ಷೇತ್ರದಲ್ಲಿ ಭರದ್ವಾಜ ಮುನಿಯನ್ನು ಸೇವಿಸುತ್ತ ಮಾತನಾಡುತ್ತಿರುವಲ್ಲಿಯೇ ರಾತ್ರಿಯು ಸಂಪ್ರಾಪ್ತವಾಯಿತು. ಅಲ್ಲದೆ ಸುಖಾರ್ಹನೂ,

(೪) ಟಿ. ಕಪಾಲಶಿರಾಃ - ಇದು ಒಬ್ಬ ಋಷಿಯ ಹೆಸರೆಂದು **ಮಹೇಶ್ವರ ತೀರ್ಥರ** ಅಭಿಪ್ರಾಯ. **ಗೋವಿಂದರಾಜರ** ಅಭಿಪ್ರಾಯವು ಪ್ರತಿಪದಾರ್ಥದಲ್ಲಿಯೇ ಕೊಡಲ್ಪಟ್ಟದೆ.

ಪ್ರಿಯಾತಿಥಿಂ ॥ ಸಭಾರ್ಯಂ ಸಹಚ ಭ್ರಾತ್ರಾ ಪ್ರತಿಜಗ್ರಾಹ ಧರ್ಮವಿತ್ ॥ ೩೩ ॥ ತಸ್ಯ ಪ್ರಯಾಗೇ ರಾಮಸ್ಯ ತಂ ಮಹರ್ಷಿ ಮುಪೇಯುಷಃ ॥ ಪ್ರಪನ್ನಾ ರಜನೀ ಪುಣ್ಯಾ ಚಿತ್ರಾಃ ಕಥಯತಃ ಕಥಾಃ ॥೩೪॥ ಸೀತಾ ತೃತೀಯಃ ಕಾಕುತ್‌ಸ್ಥಃ ಪರಿಶ್ರಾಂತ ಸ್ಸುಖೋಚಿತಃ ॥ ಭರದ್ವಾಜಾಶ್ರಮೇ ರಮ್ಯೇ ತಾಂ ರಾತ್ರಿಮವಸತ್ಸುಖಂ ॥ ೩೫ ॥ ಪ್ರಭಾತಾಯಾಂ ರಜನ್ಯಾಂತು ಭರದ್ವಾಜ ಮುಪಾಗಮತ್ ॥ ಉವಾಚ ನರಶಾರ್ದೂಲೋ ಮುನಿಂ ಜ್ವಲಿತ ತೇಜಸಂ॥೩೬॥

ಇರು, ಧರ್ಮವಿತ್-ಧರ್ಮಜ್ಞನಾದ, ಪ್ರಿಯಃ-ಅತಿಥಿಸತ್ಕಾರದಲ್ಲಿ ಬಹಳ ಪ್ರಿಯನಾದ, ಸಭರದ್ವಾಜಃ-ಆ ಭರದ್ವಾಜಋಷಿಯು, ಸಭಾರ್ಯಂ - ಹೆಂಡತಿಯಿಂದೊಡಗೂಡಿದ, ಅತಿಥಿಂ - ಅಭ್ಯಾಗತನಾದ, ತಂರಾಮಂ - ಆ ಶ್ರೀರಾಮನನ್ನು, ಭ್ರಾತ್ರಾಚಸಹ - ತಮ್ಮನಾದ ಲಕ್ಷ್ಮಣನೊಡನೆ, ಸರ್ವಕಾಮೈಃ-ಸಮಸ್ತಕೋರಿಕೆಗಳಿಂದ, ಪ್ರತಿಜಗ್ರಾಹ - ಉಪಚಾರವಮಾಡಿದನು. ॥ ೩೩ ॥ ಪ್ರಯಾಗೇ - ಪ್ರಯಾಗಕ್ಷೇತ್ರದಲ್ಲಿ, ತಂಮಹರ್ಷಿಂ - ಆ ಭರದ್ವಾಜಋಷಿಯನ್ನು, ಉಪೇಯುಷಃ - ಹೊಂದಿರುವ, ತಸ್ಯರಾಮಸ್ಯ - ಆ ಶ್ರೀರಾಮನು, ಚಿತ್ರಾಃ - ಆಶ್ಚರ್ಯಕರಗಳಾದ, ಕಥಾಃ - ಕಥೆಗಳನ್ನು, ಕಥಯತಸ್ಸತಃ - ಹೇಳುತ್ತಿರಲು, ಪುಣ್ಯಾ - ಪುಣ್ಯಕರವಾದ, ರಜನೀ - ರಾತ್ರಿಯೂ, ಪ್ರಪನ್ನಾ - ಪ್ರಾಪ್ತವಾಯಿತು. ॥ ೩೪ ॥ ಸುಖೋಚಿತಾ - ಸುಖಕ್ಕೆ ಯೋಗ್ಯನಾದ, ಸೀತಾತೃತೀಯಃ - ಸೀತಾದೇವಿಯೆ ಮೂರನೆಯವಳಾಗುಳ್ಳ, ಕಾಕುತ್‌ಸ್ಥಃ - ಕಕುತ್‌ಸ್ಥವಂಶೋತ್ಪನ್ನನಾದ ಶ್ರೀರಾಮನು, ಪರಿಶ್ರಾಂತಃ - ಬಳಲಿಕೆಯುಳ್ಳವನಾದಕಾರಣ, ರಮ್ಯೆ - ಮನಸ್ಸಿಗಿಂಪಾಗಿರುವ, ಭರದ್ವಾಜಾಶ್ರಮೇ-ಭರದ್ವಾಜಋಷಿಯ ಆಶ್ರಮದಲ್ಲಿ, ತಾಂರಾತ್ರಿಂ - ಆ ರಾತ್ರಿಯಲ್ಲಿ, ಸುಖಂ - ಸುಖವಾಗಿ, ಅವಸತ್-ಇದ್ದನು. ॥ ೩೫ ॥ ರಜನ್ಯಾಂತು - ರಾತ್ರಿಯಾದರೆ, ಪ್ರಭಾತಾಯಾಂಸತ್ಯಾಂ - ಬೆಳಗುತ್ತಿರಲು, ನರಶಾರ್ದೂಲಃ - ಪುರುಷಶ್ರೇಷ್ಠನಾದ ಶ್ರೀರಾಮನು, ಜ್ವಲಿತತೇಜಸಂ - ಪ್ರಜ್ವಲಿತವಾದ ಬ್ರಹ್ಮತೇಜಸ್ಸುಳ್ಳ, ಭರದ್ವಾಜಂಮುನಿಂ - ಭರದ್ವಾಜಋಷಿಯನ್ನು ಕುರಿತು, ಉಪಾಗಮತ್ - ಬಂದನು, ಉವಾಚಚ - ಹೇಳಲೂ ಹೇಳಿದನು. ॥ ೩೬ ॥ ಹೇ ಭಗವನ್ - ಎಲೈ ಪೂಜ್ಯನೆ, ಹೇ ಸತ್ಯಶೀಲ -

---

ಸೀತಾ ಲಕ್ಷ್ಮಣರೊಡಗೂಡಿದವನೂ, ಕಕುತ್ಸ್ಥಕುಲಸಂಭವನೂ ಆದ ಆ ರಾಮನು ಮನೋಹರವಾದ ಆ ಭರದ್ವಾಜಾಶ್ರಮದಲ್ಲಿ ಆ ರಾತ್ರಿಯನ್ನೆಲ್ಲ ಸುಖವಾಗಿ ಕಳೆದವನಾದನು. ಈ ರೀತಿ ಆ ರಾತ್ರಿಯನ್ನು ಕಳೆದ ಮೇಲೆ ಎಚ್ಚೆತ್ತವನಾಗಿ ಭರದ್ವಾಜ ಮುನಿಯ ಬಳಿಗೈದಿ, ಮಹಾ ಪ್ರಕಾಶಮಾನ ಕಾಂತಿಯುಳ್ಳ ಆತನನ್ನು ಕುರಿತು, "ಸತ್ಯಶೀಲನೂ, ಮಹಾತ್ಮನೂ ಆದ ಭರದ್ವಾಜ ಮುನಿವರ್ಯನೆ! ನಿನ್ನಾಶ್ರಮದಲ್ಲಿ ಈ ರಾತ್ರಿಯೆಲ್ಲವನ್ನೂ ಸುಖವಾಗಿ ಕಳೆದೆವು, ಇನ್ನುಮೇಲೆ ನಾವು ವಾಸ ಮಾಡಲು ಯೋಗ್ಯವಾದ ಸ್ಥಳಕ್ಕೆ ತೆರಳಲು ಆಜ್ಞೆಯನ್ನೀಯುವವನಾಗು" ಎಂದನು. ಶ್ರೀರಾಮನಿಂತೆನಲು ಆ ಮುನಿಯು ಮಧುವು, ಕಂದಮೂಲಗಳೂ ಹೇರಳವಾಗಿರುವ ಚಿತ್ರಕೂಟ ಪರ್ವತಕ್ಕೆ ಹೋಗೆಂದಾಣತಿಯಿತ್ತು ಮರಳಿ ಹೀಗೆಂದನು. "ಎಲೈ ಪರಾಕ್ರಮಶಾಲಿಯಾದ ಶ್ರೀರಾಮನೆ! ಚಿತ್ರಕೂಟ ಪರ್ವತವು ನಿನ್ನ ವಾಸಕ್ಕೆ ತಕ್ಕುದಾದುದೆಂದು ನಾನು ತಿಳಿಯುತ್ತೇನೆ. ರಾಮ! ಆ ಚಿತ್ರಕೂಟ ಪರ್ವತವು ನಾನಾ

ಶರ್ವರೀಂ ಭಗವನ್ನದ್ಯ ಸತ್ಯಶೀಲ ತವಾಶ್ರಮೇ ॥ ಉಷಿತಾಃ ಸ್ಮ ಸುಖಂ ಗಂತು
ಮನುಜಾನಾತು ನೋ ಭವಾ್ನ್ ॥ ೩೭ ॥ ರಾತ್ರ್ಯಾಂತು ತಸ್ಯಾಂ ವ್ಯುಷ್ಟಾಯಾಂ
ಭರದ್ವಾಜೋ ಬ್ರವೀದಿದಂ ॥ ಮಧುಮೂಲ ಫಲೋಪೇತಂ ಚಿತ್ರಕೂಟಂ
ವ್ರಜೇತಿ ಹ ॥೩೮॥ ವಾಸಮೌಪಯಿಕಂ ಮನ್ಯೇ ತವ ರಾಮ ! ಮಹಾಬಲ!! ॥
ನಾನಾ ನಗಗಣೋಪೇತಃ ಕಿನ್ನರೋರಗ ಸೇವಿತಃ ॥೩೯॥ ಮಯೂರ ನಾದಾಭಿ
ರುತೋ ಗಜರಾಜ ನಿಷೇವಿತಃ ॥ ಗಮ್ಯತಾಂ ಭವತಾ ಶೈಲ ಶ್ಚಿತ್ರಕೂಟ ಸ್ಸವಿ
ಶ್ರುತಃ ॥ ೪೦ ॥ ಪುಣ್ಯಶ್ಚ ರಮಣೀಯಶ್ಚ ಬಹುಮೂಲ ಫಲಾಯುತಃ ॥

ಎಲೈ ಸತ್ಯಸ್ವಭಾವವುಳ್ಳವನೆ, ತವ - ನಿನ್ನ, ಆಶ್ರಮೇ - ಆಶ್ರಮದಲ್ಲಿ, ಶರ್ವರೀಂ - ರಾತ್ರಿಯಲ್ಲಿ, ಇಹ - ಇಲ್ಲಿ, ಉಷಿತಾಃ - ಇದ್ದವರು, ಸ್ಮ - ಆದೆವು, ಭವಾನ್ - ನೀನು, ನಃ - ನಮಗೆ, ವಸತಿಂ - ನಿನ್ನಿಂದ ಉಪದಿಷ್ಟವಾದ ಸ್ಥಾನವನ್ನು ಕುರಿತು, ಅನುಜಾನಾತು - ಅಪ್ಪಣೆಕೊಡು. ॥ ೩೭ ॥ ತಸ್ಯಾಂರಾತ್ರ್ಯಾಂ - ಆ ರಾತ್ರಿಯು, ವ್ಯುಷ್ಟಾಯಾಂ - ಬೆಳಗಾಗುತ್ತಿರಲು, ಭರದ್ವಾಜಃ - ಭರದ್ವಾಜ ಋಷಿಯು, ಮಧುಮೂಲಫಲೋಪೇತಂ, ಮಧು - ಜೇನುಗಳಿಂದಲೂ, ಮೂಲ - ಕಂದಮೂಲಗ ಳಿಂದಲೂ, ಫಲ - ಫಲಗಳಿಂದಲೂ, ಉಪೇತಂ-ಕೂಡಿರುವ, ಚಿತ್ರಕೂಟಂ - ಚಿತ್ರಕೂಟಪರ್ವತವನ್ನು ಕುರಿತು, ವ್ರಜ - ತೆರಳು, ಇತಿ - ಇಂತೆಂದು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ಹ - ಸಂತೋಷವು. ॥ ೩೮ ॥ ಹೇ ರಾಮ - ಎಲೈ ಶ್ರೀರಾಮನೆ, ಹೇ ಮಹಾಬಲ - ಎಲೈ ಮಹಾ ಬಲಶಾಲಿಯೆ, ತವ - ನಿನಗೆ, ವಾಸಂ - ನಿವಾಸವನ್ನು, ಔಪಯಿಕಂ - ಉಪಯುಕ್ತವನ್ನಾಗಿ, ಮನ್ಯೇ - ತಿಳಿದಿರುವೆನು, ನಾನಾನಗಗಣೋಪೇತಃ, ನಾನಾ-ಅನೇಕ ಬಗೆಗಳಾದ, ನಗಗಣ-ವೃಕ್ಷಗಳ ಗುಂಪುಗಳಿಂದ, ಉಪೇತಃ - ಕೂಡಿರುವ, ಕಿನ್ನರೋರಗಸೇವಿತಃ, ಕಿನ್ನರ - ಕಿನ್ನರರಿಂದಲೂ, ಉರಗ - ಸರ್ಪಗಳಿಂದಲೂ, ಸೇವಿತಃ - ಸೇವಿಸಲ್ಪಟ್ಟ, ಮಯೂರನಾದಾಭಿರುತಃ, ಮಯೂರ - ನವಿಲುಗಳ, ನಾದ - ಧ್ವನಿಗಳಿಂದ, ಅಭಿರುತಃ - ಧ್ವನಿಗೊಳಿಸಲ್ಪಟ್ಟ, ಗಜರಾಜನಿಷೇವಿತಃ - ಶ್ರೇಷ್ಠವಾದ ಆನೆಗಳಿಂದ ಸೇವಿಸಲ್ಪಟ್ಟ, ಚಿತ್ರಕೂಟಇತಿ - ಚಿತ್ರಕೂಟವೆಂದು, ವಿಶ್ರುತಃ - ಪ್ರಸಿದ್ಧ ವಾದ, ಸಶ್ಶೈಲಃ - ಆ ಪರ್ವತವೂ, ಭವತಾ - ನಿನ್ನಿಂದ, ಗಮ್ಯತಾಂ - ಹೋಗಲ್ಪಡಲಿ. ॥ ೩೯ ॥ ಸಃ - ಆ ಪರ್ವತವು, ಪುಣ್ಯಶ್ಚ - ಪುಣ್ಯಕರವಾದುದು, ರಮಣೀಯಶ್ಚ - ಇಂಪಾಗಿರುವದು, ಬಹು ಮೂಲಫಲಾಯುತಃ - ಬಹಳವಾದ ಕಂದಮೂಲಗಳಿಂದಲೂ ಫಲಗಳಿಂದಲೂ ಕೂಡಿಕೊಂಡಿರುವುದು. ॥ ೪೦ ॥ ತತ್ರ - ಆ ಬೆಟ್ಟದಲ್ಲಿ, ಕುಂಜರಯೂಥಾನಿ - ಆನೆಗಳ ತಂಡಗಳು, ಮೃಗಯೂಥಾನಿ -

ವಿಧಗಳಾದ ವೃಕ್ಷನಿವಹಗಳಿಂದೊಡಗೂಡಿ, ಕಿನ್ನರರಿಂದ ಸೇವಿಸಲ್ಪಟ್ಟುದೂ, ಮಯೂರಗಳ ಕೇಕಾರವದಿಂದ ಪ್ರತಿಧ್ವನಿತವಾದುದೂ, ಗಜಶ್ರೇಷ್ಠಗಳಿಂದುಪಶೋಭಿತವಾದುದೂ, ಪುಣ್ಯ ಕರವಾದುದೂ, ಮನೋಹರವಾದುದೂ ಆಗಿ, ನಾನಾ ವಿಧ ಕಂದಮೂಲಗಳಿಂದ ತುಂಬಿ ತುಳುಕಾಡುತ್ತಿರುವುದು. ಆದುದರಿಂದ ನೀನಾ ಚಿತ್ರಕೂಟ ಪರ್ವತಕ್ಕೆ ತೆರಳುವವನಾಗು. ಇಷ್ಟೆಯಲ್ಲದೆ ಮನೋರಮ್ಯವಾದಾ ಚಿತ್ರಕೂಟ ಪರ್ವತವು ಬಹು ಪ್ರಸಿದ್ಧವಾದುದು. ಎಲೈ ಶ್ರೀರಾಮನೆ! ಆ ಚಿತ್ರಕೂಟ ಪರ್ವತದಲ್ಲಿ ಅನೇಕ ಆನೆಗಳೂ, ಮೃಗಸಮೂಹಗಳೂ

ತತ್ರ ಕುಂಜರಯೂಥಾನಿ ಮೃಗಯೂಥಾನಿ ಚಾಭಿತಃ ॥ ೪೧ ॥ ವಿಚರಂತಿ ವನಾಂತೇಸ್ಮಿನ್ ತಾನಿ ದ್ರಕ್ಷ್ಯಸಿ ರಾಘವ ॥ ಸರಿತ್ ಪ್ರಸ್ರವಣಪ್ರಸ್ಥಾನ್ ದರೀ ಕಂದರ ನಿರ್ದರಾನ್॥ಚರತ ಸ್ಸೀತಯಾ ಸಾರ್ಧಂ ನಂದಿಷ್ಯತಿ ಮನಸ್ತವ ॥೪೨॥

ಪ್ರಹೃಷ್ಟಕೋಯಷ್ಟಿಕ ಕೋಕಿಲಸ್ವನೈ

ರ್ವಿನಾದಿತಂ ತಂ ವಸುಧಾಧರಂ ಶಿವಂ ॥

ಮೃಗೈಶ್ಚ ಮತ್ತೈರ್ಬಹುಭಿಶ್ಚ ಕುಂಜರೈ

ಸ್ಸುರಮ್ಯ ಮಾಸಾದ್ಯ ಸಮಾವಸಾಶ್ರಮಂ ॥ ೪೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಃಪಂಚಾಶಸ್ಸರ್ಗಃ.

ಮೃಗಗಳ ಗುಂಪುಗಳು, ಅಸ್ಮಿನ್ವನಾಂತೇ - ಈ ವನಮಧ್ಯದಲ್ಲಿ, ಅಭಿತಃ - ಎಲ್ಲೆಡೆಗಳಲ್ಲಿಯೂ, ವಿಚರಂತಿ - ಸಂಚರಿಸುತ್ತವೆ, ಹೇ ರಾಘವ - ಎಲೈ ಶ್ರೀರಾಮನೆ, ತಾನಿ - ಅವುಗಳನ್ನು, ದ್ರಕ್ಷ್ಯಸಿ-ನೋಡುವೆ. ॥ ೪೧ ॥ ಸರಿತ್ಪ್ರಸ್ರವಣಪ್ರಸ್ಥಾನ್, ಸರಿತ್ - ನದಿಗಳನ್ನೂ, ಪ್ರಸ್ರವಣ - ಸ್ವಲ್ಪ ಜಲಪ್ರವಾಹಗಳನ್ನೂ, ಪ್ರಸ್ಥಾನ್ - ಜರಿಗಳನ್ನೂ, ದರೀಕಂದರನಿರ್ದರಾನ್, ದರೀ - ದೊಡ್ಡಕಲ್ಲುಗಳು ಕೂಡಿರುವ ಸ್ಥಳಗಳನ್ನೂ, ಕಂದರ - ಗುಹೆಗಳನ್ನೂ, ನಿರ್ದರಾನ್-ಒಡದಕಲ್ಲುಗಳು ಕೂಡಿಕೊಂಡಿರುವ ಸ್ಥಾನವಿಶೇಷಗಳನ್ನೂ, ದ್ರಕ್ಷ್ಯಸಿ - ಕಾಣುವೆ, ಸೀತಯಾಸಾರ್ಧಂ - ಸೀತಾದೇವಿಯೊಡನೆ, ಚರತಃ - ಸಂಚರಿಸುತ್ತಿರುವ, ತವ - ನಿನ್ನ, ಮನಃ - ಮನವು, ನಂದಿಷ್ಯತಿ - ಸಂತೋಷಿಸುವದು. ॥ ೪೨ ॥ ಪ್ರಹೃಷ್ಟಕೋಯಷ್ಟಿಕಕೋಕಿಲಸ್ವನೈಃ, ಪ್ರಹೃಷ್ಟ - ಸಂತೋಷಗೊಂಡ, ಕೋಯಷ್ಟಿಕ - ಗುಂಡು ಪಕ್ಷಿಗಳ, ಕೋಕಿಲ - ಕೋಗಿಲೆಗಳ, ಸ್ವನೈಃ - ಧ್ವನಿಗಳಿಂದ, ವಿನಾದಿತಂ - ಧ್ವನಿಗೊಳಿಸಲ್ಪಟ್ಟ, ಮತ್ತೈಃ - ಮದವೇರಿದ, ಮೃಗೈಶ್ಚ - ಮೃಗಗಳಿಂದಲೂ, ಬಹುಭಿಃ - ಅನೇಕಗಳಾದ, ಕುಂಜರೈಶ್ಚ-ಆನೆಗಳಿಂದಲೂ, ಸುರಮ್ಯಂ - ಮನೋಹರವಾದ, ಶಿವಂ - ಶುಭಕರವಾದ, ತಂವಸುಧಾಧರಂ - ಆ ಚಿತ್ರಕೂಟಪರ್ವತವನ್ನು, ಆಸಾದ್ಯ - ಹೊಂದಿ, ಆಶ್ರಮಂ - ಆಶ್ರಮದಲ್ಲಿ, ಸಮಾವಸ - ಇರುವನಾಗು. ॥ ೪೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಃಪಂಚಾಶಸ್ಸರ್ಗಃ.

ತಿರುಗುತ್ತಿರುವುವು. ಇವುಗಳೆಲ್ಲವನ್ನು ನೀನು ನೋಡುವೆ. ಮತ್ತು ನೀನು ಸೀತೆಯೊಡಗೂಡಿ ನದಿಗಳಲ್ಲಿಯೂ, ಗುಡ್ಡ ಬೆಟ್ಟ ಬಯಲುಗಳಲ್ಲಿಯೂ, ಪರ್ವತ ಶಿಖರ ಪ್ರದೇಶಗಳಲ್ಲಿಯೂ ಅವುಗಳಲ್ಲಿರುವ ಚಿಕ್ಕ ಚಿಕ್ಕ ಗುಹೆಗಳಲ್ಲಿಯೂ ಸಂಚರಿಸುತ್ತ ಮನಸ್ಸಿಗೆ ಆತ್ಯಾನಂದವನ್ನು ಹೊಂದುವೆ. ಸಂತಸವಾಂತ ಗುಂಡು ಹಕ್ಕಿಗಳ ಮತ್ತು ಕೋಗಿಲೆಗಳ ಧ್ವನಿಗಳಿಂದ ಶಬ್ದಗೊಳಿಸಲ್ಪಟ್ಟುದೂ, ಮದವೇರಿದ ಮೃಗಗಳಿಂದಲೂ, ಅನೇಕ ಗಜಗಳಿಂದಲೂ ಕೂಡಿ ಮನೋಹರವಾದುದೂ, ಮಂಗಳಕರವಾದುದೂ ಆದ ಚಿತ್ರಕೂಟ ಪರ್ವತಕ್ಕೆ ತೆರಳಿ ಅಲ್ಲಿ ಒಂದು ಆಶ್ರಮವನ್ನು ನಿರ್ಮಿಸಿಕೊಂಡು ವಾಸಿಸುವವನಾಗು." ॥ ೩೧-೪೩ ॥

ಇಂತಿದು ಭರದ್ವಾಜ ಕೃತ, ಶ್ರೀರಾಮ ಸ್ವೀಕೃತ ಅತಿಥಿ ಸತ್ಕಾರ ಕಥಾ ವಿವರಣವೆಂಬ ಐವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚಪಂಚಾಶಸ್ಸರ್ಗಃ.

ಉಷಿತ್ವಾ ರಜನೀಂ ತತ್ರ ರಾಜಪುತ್ರಾ ವರಿಂದಮೌ ‖ ಮಹರ್ಷಿ ಮಭಿವಾದ್ಯಾಥ ಜಗ್ಮತು ಸ್ತಂ ಗಿರಿಂ ಪ್ರತಿ ‖ ೧ ‖ ತೇಷಾಂಚೈವ ಸ್ವಸ್ತ್ಯಯನಂ ಮಹರ್ಷಿ ಸ್ಸಚಕಾರಹ ‖ ಪ್ರಸ್ಥಿತಾಂಶ್ಚೈವ ತಾನ್ ಪ್ರೇಕ್ಷ್ಯ ಪಿತಾ ಪುತ್ರಾನಿವಾನ್ವಗಾತ್ ‖೨‖ ತತಃ ಪ್ರಚಕ್ರಮೇ ವಕ್ತುಂ ವಚನಂ ಸ ಮಹಾಮುನಿಃ ‖ ಭರದ್ವಾಜೋ ಮಹಾತೇಜಾ ರಾಮಂ ಸತ್ಯಪರಾಕ್ರಮಂ ‖ ೩ ‖ ಗಂಗಾ ಯಮುನಯೋ ಸ್ಸಂಧಿ ಮಾಸಾದ್ಯ ಮನುಜರ್ಷಭೌ ‖ ಕಾಳಿಂದೀ ಮನು

ಅರಿಂದಮೌ - ಶತ್ರುಸಂಹಾರಕರಾದ, ರಾಜಪುತ್ರೌ-ರಾಜಕುವರರು, ತತ್ರ-ಆ ಭರದ್ವಾಜಾಶ್ರಮದಲ್ಲಿ, ರಜನೀಂ - ರಾತ್ರಿಯನ್ನು, ಉಷಿತ್ವಾ - ಕಳೆದು, ಮಹರ್ಷಿಂ - ಮಹಾ ಮುನಿಯನ್ನು, ಅಭಿವಾದ್ಯ - ವಂದಿಸಿ, ಅಥ - ಬಳಿಕ, ತಂಗಿರಿಂಪ್ರತಿ - ಆ ಪರ್ವತವನ್ನು ಕುರಿತು, ಜಗ್ಮತುಃ - ತೆರಳಿದರು. ‖ ೧ ‖ ಸಮಹರ್ಷಿಶ್ಚ - ಆ ಭರದ್ವಾಜಋಷಿಯೂ ಕೂಡ, ತೇಷಾಂ - ಹೊರಡಲುದ್ಯುಕ್ತರಾದ ಆ ಮೂವರಿಗೂ, ಸ್ವಸ್ತ್ಯಯನಂ - ಆಶೀರ್ವಾದವನ್ನು, ಚಕಾರಹ - ಮಾಡಿದನಷ್ಟೆ, ತಾನ್ - ಆ ರಾಮಲಕ್ಷ್ಮಣಸೀತೆಯರನ್ನು, ಪ್ರಸ್ಥಿತಾಂಶ್ಚೈವ - ಹೊರಟವರನ್ನಾಗಿ, ಪ್ರೇಕ್ಷ್ಯ-ಕಂಡು, ಪಿತಾ - ತಂದೆಯು, ಪುತ್ರಾನಿವ - ಮಕ್ಕಳನ್ನಂತೆ, ಅನ್ವಗಾತ್ - ಅನುಸರಿಸಿಹೋದನು. ‖ ೨ ‖ ತತಃ - ಬಳಿಕ, ಮಹಾಮುನಿಃ - ಬಹು ಮನನಶೀಲನಾದ, ಮಹಾತೇಜಾಃ - ಅತಿ ತೇಜಸ್ವಿಯಾದ, ಸಭರದ್ವಾಜಃ - ಆ ಭರದ್ವಾಜನು, ಸತ್ಯಪರಾಕ್ರಮಂ - ಸತ್ಯವಾದ ಪರಾಕ್ರಮವುಳ್ಳ, ರಾಮಂ - ಶ್ರೀರಾಮನನ್ನು ಕುರಿತು, ವಚನಂ - ಮಾತನ್ನು, ವಕ್ತುಂ-ಹೇಳಲು, ಪ್ರಚಕ್ರಮೇ-ಪ್ರಾರಂಭಿಸಿದನು. ‖ ೩ ‖ ಮನುಜರ್ಷಭೌ - ಮನುಜ ಶ್ರೇಷ್ಠರಾದ ರಾಮಲಕ್ಷ್ಮಣರಿಬ್ಬರೂ, ಗಂಗಾಯಮುನಯೋಃ-ಗಂಗಾ ಯಮುನಾನದಿಗಳ, ಸಂಧಿಂ - ಸಂಗಮಸ್ಥಾನವನ್ನು, ಆಸಾದ್ಯ - ಹೊಂದಿ, ಪಶ್ಚಾನ್ಮುಖಾಶ್ರಿತಾಂ - ಪ್ರವಹಿಸುತ್ತಿರುವ, ಕಾಳಿಂದೀನದೀಂ - ಯಮುನಾನದಿಯನ್ನು, ಅನುಗಚ್ಛತಾಂ - ಅನು

ಶತ್ರುಸಂಹಾರಕರೂ, ರಾಜಪುತ್ರರೂ ಆದ ಆ ರಾಮ ಲಕ್ಷ್ಮಣ ಸೀತೆಯರು ಆ ರೀತಿಯಾರಾತ್ರಿಯಲ್ಲಿ ಆ ಭರದ್ವಾಜ ಮುನಿಯ ಆಶ್ರಮದಲ್ಲಿ ಸುಖವಾಗಿದ್ದು, ಪ್ರಾತಃ ಕಾಲವಾಗುತ್ತಲೆ, ಆ ಮುನಿವರೇಣ್ಯನನ್ನು ನಮಸ್ಕರಿಸಿ, ಆತನ ಅಣತಿಯನ್ನು ಪಡೆದು ಚಿತ್ರಕೂಟ ಪರ್ವತಕ್ಕೆ ಪಯಣ ಬೆಳಿಸಿದರು. ಆಗಲಾ ಭರದ್ವಾಜ ಮುನಿಯು ಆ ಸೀತಾರಾಮ ಲಕ್ಷ್ಮಣರಿಗೆ ಮಂಗಳಾಶೀರ್ವಚನಗಳನ್ನು ಹೇಳಿ ತಂದೆಯು ಮಕ್ಕಳನ್ನನುಸರಿಸುವಂತೆ ಅವರನ್ನನುಸರಿಸಿ ಹೊರಟವನಾದನು. ಆ ಬಳಿಕ ಮಹಾ ಮನನಶೀಲನಾದಾ ಭರದ್ವಾಜ ಋಷಿಯು ಅವರನ್ನು ಕುರಿತು, “ ಎಲೈ ಪುರುಷೋತ್ತಮರಾದ ರಾಮ ಲಕ್ಷ್ಮಣರಿರಾ ! ನೀವು ಮೊದಲು ಗಂಗಾ ಯಮುನಾ ನದಿಗಳ ಸಂಗಮಸ್ಥಾನಕ್ಕೆ ಹೋಗಿರಿ. ಆ ಮೇಲೆ ಗಂಗಾ

ಗಚ್ಛೇತಾಂ ನದೀಂ ಪಶ್ಚಾನ್ಮುಖಾಶ್ರಿತಾಂ ॥ ೪ ॥ ಅಥಾಸಾದ್ಯತು ಕಾಳಿಂದೀಂ ಶೀಘ್ರಸ್ರೋತಸ ಮಾಪಗಾಂ ॥ ತಸ್ಯಾಸ್ತೀರ್ಥಂ ಪ್ರಚಲಿತಂ ಪುರಾಣಂ ಪ್ರೇಕ್ಷ್ಯ ರಾಘವೌ ! ॥ ೫ ॥ ತತ್ರ ಯೂಯಂ ಪ್ಲವಂ ಕೃತ್ವಾ ತರತಾಂಶುಮತೀಂ ನದೀಂ ॥ ತತೋ ನ್ಯಗ್ರೋಧಮಾಸಾದ್ಯ ಮಹಾಂತಂ ಹರಿತಚ್ಛದಂ ॥ ೬ ॥ ವಿವೃದ್ಧಂ ಬಹುಭಿ ರ್ವೃಕ್ಷೈ ಶ್ಯಾಮಂ ಸಿದ್ಧೋಪಸೇವಿತಂ ॥ ತಸ್ಮೈ ಸೀತಾಂಜಲಿಂ ಕೃತ್ವಾ ಪ್ರಯುಂಜೀತಾಶಿಷಶ್ಶಿವಾಃ ॥ ೭ ॥ ಸಮಾಸಾದ್ಯತು ತಂ

ಸರಿಸಿದರು, ಹೇ ರಾಘವೌ - ಎಲೈ ಶ್ರೀರಾಮಲಕ್ಷ್ಮಣರಿರಾ ! ಅಥ - ಬಳಿಕ, ಶೀಘ್ರಸ್ರೋತಸಂ - ವೇಗದಿಂದ ಹೋಗುತ್ತಿರುವ ಪ್ರವಾಹವುಳ್ಳ, ಕಾಳಿಂದೀಮಾಪಗಾಂ - ಯಮುನಾನದಿಯನ್ನು, ಆಸಾದ್ಯ - ಹೊಂದಿ, ತಸ್ಯಾಃ - ಆ ಯಮುನಾನದಿಯ, ಪ್ರಚಲಿತಂ - ಹೋಗುತ್ತಿರುವ, ಪುರಾಣಂ- ಪುರಾತನವಾದ, ತೀರ್ಥಂ - ತೀರ್ಥವನ್ನು, ಪ್ರೇಕ್ಷ್ಯ - ಕಂಡು, ತತ್ರ - ಆ ತೀರ್ಥದಲ್ಲಿ, ಯೂಯಂ- ನೀವು, ಪ್ಲವಂ - ನಾವೆಯನ್ನು, ಕೃತ್ವಾ - ಮಾಡಿಕೊಂಡು, ಅಂಶುಮತೀಂ - ಸೂರ್ಯನಮಗಳಾದ, ಯಮುನಾಂ - ಯಮುನಾನದಿಯನ್ನು, ತರತಾಂ - ದಾಟಿ, ತತಃ - ಬಳಿಕ, ತತ್ರ - ಆ ತೀರ್ಥದ ಸಮೀಪದಲ್ಲಿ, ಮಹಾಂತಂ - ದೊಡ್ಡದಾದ, ಹರಿತಚ್ಛದಂ, ಹರಿತ - ಶ್ಯಾಮಲವಾದ, ಚ್ಛದಂ - ವರ್ಣವುಳ್ಳ, ವಿವೃದ್ಧಂ - ಬಹುಕಾಲದಿಂದ ವೃದ್ಧಿಗೊಂಡಿರುವ, ಬಹುಭಿಃ - ಅನೇಕಗಳಾದ, ವೃಕ್ಷೈಃ- ಗಿಡಗಳಿಂದ, ಶ್ಯಾಮಂ - ಕಪ್ಪಾಗಿರುವ, ಸಿದ್ಧೋಪಸೇವಿತಂ - ಸಿದ್ಧರಿಂದ ಸೇವಿಸಲ್ಪಡುತ್ತಿರುವ, ನ್ಯಗ್ರೋಧಂ - ವಟವೃಕ್ಷವನ್ನು, ಆಸಾದ್ಯ - ಹೊಂದಿ, ತಸ್ಮೈ - ಆ ವಟವೃಕ್ಷಕ್ಕೋಸುಗ, ಸೀತಾ- ಸೀತಾದೇವಿಯು, ಅಂಜಲಿಂಕೃತ್ವಾ - ಕೈಮುಗಿದು, ಶುಭಾಃ - ಮಂಗಳಕರವಾದ, ಆಶಿಷಃ - ಆಶೀರ್ವಾದಗಳನ್ನು, ಪ್ರಯುಂಜೀತ - ಪ್ರಯೋಗಮಾಡಲಿ, ತಂವೃಕ್ಷಂ - ಆ ವೃಕ್ಷವನ್ನು, ಸಮಾ ಸಾದ್ಯ - ಹೊಂದಿ, ವಸೇದ್ವಾ - ಇದ್ದರೂ ಇರಬಹುದು, ಅತಿಕ್ರಮೇತವಾ - ಹೊರಟರೂ ಹೊರಡ ಬಹುದು, ತತಃ - ಬಳಿಕ, ಕ್ರೋಶಮಾತ್ರಂಗತ್ವಾ - ಹರದಾರಿಯಷ್ಟುದೂರ ಹೋಗಿ, ನೀಲಂ -

ನದಿಯ ಜಲ ವೇಗದಿಂದ ತಿರುತಿರುಗಿ ಬೀಳುತ್ತಾ ಪ್ರವಹಿಸುತ್ತಿರುವ ಯಮುನಾ ನದಿಯನ್ನನುಸರಿಸಿ ತೆರಳಿರಿ. ಆ ಬಳಿಕ ಮಹಾ ವೇಗ ಸಮನ್ವಿತವೂ, ಸೂರ್ಯ ತನೂಜೆಯೂ ಆದ ಯಮುನಾ ನದಿಯ ಸಮೀಪಕ್ಕೆ ಹೋಗಿ, ಸಕಲ ಜನ ನಿಷೇವಿತವಾದ ಆ ನದಿಯನ್ನು ತೆಪ್ಪದ ಸಹಾಯದಿಂದ ದಾಟುವವರಾಗಿರಿ. ಇಂತು ಆ ನದಿಯನ್ನು ದಾಟಿ ಬಹು ದೊಡ್ಡದಾಗಿಯೂ, ಶ್ಯಾಮಲ ವರ್ಣದ ಪತ್ರಗಳುಳ್ಳದಾಗಿಯೂ, ಕೃಷ್ಣವರ್ಣವುಳ್ಳದಾಗಿಯೂ, ಅನೇಕ ಸಿದ್ಧರಿಂದ ಸೇವಿತವಾದುದಾಗಿಯೂ ಇರುವ ವಟವೃಕ್ಷವನ್ನು ಹೊಂದಿರಿ. ಆಗಲೀ ಸೀತಾದೇವಿಯು ಆ ವಟವೃಕ್ಷವನ್ನು ನಮಸ್ಕರಿಸುವವಳಾಗಲಿ. ಆ ವಟವೃಕ್ಷದ ಸಮೀಪವನ್ನು ಸೇರಿದ ಬಳಿಕ ಸೀತಾದೇವಿಯು ಕಾಲ್ನಡಿಗೆಯಿಂದ ಆಯಾಸಪಟ್ಟಿರುತ್ತಾಳೆಯಾದುದರಿಂದ ಅಲ್ಲಿಯೇ ತಂಗಿದರೂ ತಂಗಬಹುದು ; ಇಲ್ಲವಾದರೆ ಮುಂದಕ್ಕೆ ತೆರಳಿದರೂ ತೆರಳಬಹುದು. ಅಲ್ಲಿಂದ ಒಂದು ಕ್ರೋಶ ಮಾತ್ರದಿಂದಾಚೆಗೆ, ಮುತ್ತುಗ, ಎಳಚೆ ಮೊದಲಾದ ಗಿಡಗಳಿಂದ ತುಂಬಿ ತುಳುಕಾಡುತ್ತಿರುವ ಸಾಂದ್ರವಾದ ಅರಣ್ಯವನ್ನು ನೋಡುವಿರಿ.

ವೃಕ್ಷಂ ವಸೇ ದ್ವಾತಿಕ್ರಮೇತವಾ ॥ ಕ್ರೋಶಮಾತ್ರಂ ತತೋ ಗತ್ವಾ ನೀಲಂ ದ್ರಕ್ಷ್ಯಥ ಕಾನನಂ ॥ ೮ ॥ ಪಲಾಶ ಬದರೀಮಿಶ್ರಂ ರಮ್ಯಂ ವಂಶೈಶ್ಚ ಯಾಮುನೈಃ ॥ ಸಪಂಥಾ ಶ್ಚಿತ್ರಕೂಟಸ್ಯ ಗತ ಸ್ಸುಬಹುಶೋ ಮಯಾ ॥ ೯ ॥ ರಮ್ಯೋ ಮಾರ್ದವಯುಕ್ತಶ್ಚ ವನದಾವೈ ರ್ವಿವರ್ಜಿತಃ ॥ ಇತಿ ಪಂಥಾನ ಮಾವೇದ್ಯ ಮಹರ್ಷಿ ಸ್ಸನ್ಯವರ್ತತ ॥ ೧೦ ॥ ಅಭಿವಾದ್ಯ ತಥೇತ್ಯುಕ್ತ್ವಾ ರಾಮೇಣ ವಿನಿವರ್ತಿತಃ ॥ ಉಪಾವೃತ್ತೇ ಮುನೌ ತಸ್ಮಿ ರಾಮೋ ಲಕ್ಷ್ಮಣ

ಕಪ್ಪಾಗಿರುವ, ಕಾನನಂ - ಅರಣ್ಯವನ್ನು, ದ್ರಕ್ಷ್ಯಥ - ಕಾಣಿರಿ, ತತ್ - ಆ ವನವು, ಪಲಾಶಬದರೀ ಮಿಶ್ರಂ - ಮುತ್ತುಗದ ಗಿಡಗಳಿಂದಲೂ, ಎಳಚೀ ಗಿಡಗಳಿಂದಲೂ ಕೂಡಿರುವದು, ಯಾಮುನೈಃ - ಯಮುನಾನದಿಯ ಸಂಬಂಧಗಳಾದ, ವಂಶೈಶ್ಚ - ಬಿದುರುಗಳಿಂದ, ರಮ್ಯಂ - ಮನೋಹರವಾದುದು, ಚಿತ್ರಕೂಟಸ್ಯ - ಚಿತ್ರಕೂಟವೆಂಬ ಬೆಟ್ಟಕ್ಕೆ, ಸಪಂಥಾಃ - ಅದೇಮಾರ್ಗವು, ಮಯಾ - ನನ್ನಿಂದ, ಬಹುಶಃ - ಅನೇಕಾವರ್ತಿ, ಗತಃ - ಹೋಗಲಾಗಿದೆ, ರಮ್ಯಾಃ - ಮನೋಹರವಾದುದು, ಮಾರ್ದವ ಯುಕ್ತಶ್ಚ - ಮೆತ್ತಗಿರುವ ಮಣ್ಣಿನಿಂದಕೂಡಿಕೊಂಡಿರುವುದೂ ಆಗಿದೆ, ವನದಾವೈಃ, ವನ - ಅರಣ್ಯದಲ್ಲಿ, ದಾವೈಃ - ಕಾಡುಕಿಚ್ಚುಗಳಿಂದ, ವಿವರ್ಜಿತಃ - ಬಿಡಲ್ಪಟ್ಟುದು, ಇತಿ - ಎಂದು, ಪಂಥಾನಂ - ಮಾರ್ಗವನ್ನು, ಆವೇದ್ಯ - ತೋರಿಸಿ, ಸಮಹರ್ಷಿಃ-ಆ ಮಹಾಋಷಿಯಾದ ಭರದ್ವಾಜ ಋಷಿಯು, ನ್ಯವರ್ತತ - ಹಿಂತಿರುಗಿದನು, ರಾಮೇಣ - ಶ್ರೀರಾಮನಿಂದ, ತಥೇತಿ - ಹಾಗೆ ಆಗ ಲೆಂದು, ಉಕ್ತ್ವಾ - ಹೇಳಲ್ಪಟ್ಟು, ಅಭಿವಾದ್ಯ - ನಮಸ್ಕರಿಸಿ, ವಿನಿವರ್ತಿತಃ - ಹಿಂತಿರುಗಿಸಲ್ಪಟ್ಟನು. ॥ ೮-೧೦ ॥ ತಸ್ಮಿನ್ಮುನೌ - ಆ ಭರದ್ವಾಜಋಷಿಯು, ಉಪಾವೃತ್ತೇಸತಿ - ಹಿಂತಿರುಗಿದವನಾಗಲು, ರಾಮಃ - ಶ್ರೀರಾಮನು, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಮುನಿಃ - ಭರದ್ವಾಜಋಷಿಯು, ನಃ - ನಮಗೆ, ಅನುಕಂಪತಇತಿಯತ್ - ದಯಮಾಡಿ ದನೆಂಬುದು ಯಾವದುಂಟೋ, ತತಃ - ಆಕಾರಣದಿಂದ, ಕೃತಪುಣ್ಯಾಃ, ಕೃತ - ಮಾಡಲ್ಪಟ್ಟ,

ಯಮುನಾ ನದಿಯ ಸಂಬಂಧವಾದ ಬಿದುರುಗಳಿಂದ ಆ ವನವು ಮನೋಹರವಾಗಿರುತ್ತದೆ; ಅದೇ ಚಿತ್ರಕೂಟ ಪರ್ವತಕ್ಕೆ ದಾರಿಯೆಂದು ತಿಳಿಯಿರಿ. ನಾನು ಆ ಮಾರ್ಗವಾಗಿ ಚಿತ್ರ ಕೂಟ ಪರ್ವತಕ್ಕೆ ಅನೇಕ ಸಲ ಹೋಗಿದ್ದೇನೆ. ಆ ಮಾರ್ಗವು ಮನೋಹರವಾಗಿಯೂ, ನಡೆಯಲು ಮೃದುವಾಗಿಯೂ ಇರುತ್ತದೆ. ಇಷ್ಟೆಯಲ್ಲದೆ ಆ ಮಾರ್ಗವು ಕಾಡ್ಗಿಚ್ಚು ಗಳಿಂದ ಬಿಡಲ್ಪಟ್ಟುದಾಗಿಯೂ ಇರುವುದು" ಎಂದು ಹೇಳಿದನು. ಈ ರೀತಿ ಆ ಭರ ದ್ವಾಜ ಮುನಿಯು ಚಿತ್ರಕೂಟ ಪರ್ವತದ ಮಾರ್ಗವನ್ನು ಶ್ರೀರಾಮನಿಗೆ ತಿಳಿಸಿದವನಾಗಿ ನಿಜಾಶ್ರಮಕ್ಕೆ ಹಿಂತಿರುಗಿದವನಾದನು. ಆಗ ಶ್ರೀರಾಮನು ಆ ಮುನಿಯನ್ನು ಕುರಿತು ನಮಸ್ಕಾರ ಮಾಡಿ ಹೋಗಿ ಬರಬಹುದೆಂದು ಹೇಳಿ ಲಕ್ಷ್ಮಣಸ್ವಾಮಿಯನ್ನು ಕುರಿತು ಹೀಗೆ ಹೇಳಿದನು. ॥ ೧ - ೧೦ ॥ "ಎಲೈ ಲಕ್ಷ್ಮಣನೆ! ಭರದ್ವಾಜ ಮುನಿಯು ನಮ್ಮಲ್ಲಿ ಅಧಿಕವಾದ ಕರುಣೆಯುಳ್ಳವನಾದುದರಿಂದ ಇದೀಗ ನಾವು ಕೃತಕೃತ್ಯ ರಾದೆವು." ಆ ಮೇಲೆ ಪುರುಷಶ್ರೇಷ್ಠರೂ, ಧೈರ್ಯಶಾಲಿಗಳೂ ಆದ ರಾಮ

ಮಬ್ರವೀತ್ ॥ ೧೧ ॥ ಕೃತಪುಣ್ಯಾ ಸ್ಸ್ಮ ಸೌಮಿತ್ರೇ! ಮುನಿರ್ಯನ್ನೋಽನುಕಂಪತೇ ॥ ೧೨ ॥ ಇತಿ ತೌ ಪುರುಷವ್ಯಾಘ್ರೌ ಮಂತ್ರಯಿತ್ವಾ ಮನಸ್ವಿನೌ ॥ ಸೀತಾಮೇವಾಗ್ರತಃ ಕೃತ್ವಾ ಕಾಳಿಂದೀಂ ಜಗ್ಮತುರ್ನದೀಂ ॥೧೩॥ ಅಥಾಸಾದ್ಯತು ಕಾಳಿಂದೀಂ ಶೀಘ್ರ ಸ್ರೋತೋವಹಾಂ ನದೀಂ ॥ ಚಿಂತಾಮಾಪೇದಿರೇ ಸರ್ವೇ ನದೀಜಲ ತಿತೀರ್ಷವಃ ॥ ೧೪ ॥ ತೌ ಕಾಷ್ಠಸಂಘಾತ ಮಥೋ ಚಕ್ರತು ಸ್ಸುಮಹಾಪ್ಲವಂ ॥ ಶುಷ್ಕೈ ರ್ವಂಶೈ ಸ್ಸಮಾಸ್ತೀರ್ಣ ಮುಶೀರೈಶ್ಚ ಸಮಾವೃತಂ॥೧೫॥ತತೋ ವೇತಸಶಾಖಾಶ್ಚ ಜಂಬೂಶಾಖಾಶ್ಚ ವೀರ್ಯವಾನ್॥

ಪುಣ್ಯಾಃ - ಪುಣ್ಯವುಳ್ಳವರು, ಸ್ಮ - ಆಗಿದೇವೆ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೧೧ ॥ ಇತಿ - ಈಪರಿಯಾಗಿ, ತೌಪುರುಷೌವ್ಯಾಘ್ರೌ-ಪುರುಷಶ್ರೇಷ್ಠರಾದ ಆ ರಾಮಲಕ್ಷ್ಮಣರು, ಮಂತ್ರಯಿತ್ವಾ - ಆಲೋಚಿಸಿ, ಮನಸ್ವಿನೌ - ಒಳ್ಳೆಯಮನಸವುಳ್ಳವರಾಗಿ, ಸೀತಾಮೇವ - ಸೀತಾದೇವಿಯನ್ನೇ, ಅಗ್ರತಃ - ಮುಂದುಗಡೆ, ಕೃತ್ವಾ - ಮಾಡಿ, ಕಾಳಿಂದೀಂ - ಯಮುನೆಯೆಂಬ, ನದೀಂ - ಹೊಳೆಯನ್ನು ಕುರಿತು, ಜಗ್ಮತುಃ - ತೆರಳಿದರು. ॥ ೧೨ ॥ ಅಥ - ಬಳಿಕ, ಶೀಘ್ರಸ್ರೋತೋವಹಾಂ - ವೇಗದಿಂದ ಹೋಗುತ್ತಿರುವ ಪ್ರವಾಹವನ್ನು ವಹಿಸುತ್ತಿರುವ, ಕಾಳಿಂದೀಂ - ಕಾಳಿಂದೀ ಎಂಬ, ನದೀಂ - ಯಮುನಾನದಿಯನ್ನು, ಆಸಾದ್ಯ - ಹೊಂದಿ, ಸರ್ವೇ - ಸೀತಾರಾಮಲಕ್ಷ್ಮಣರು, ನದೀಜಲತಿತೀರ್ಷವಃ - ನದ್ಯುದಕವನ್ನು ದಾಟಲಿಚ್ಛೆಯುಳ್ಳವರಾಗಿ, ಚಿಂತಾಂ - ಆಲೋಚನೆಯನ್ನು, ಆಪೇದಿರೇ - ಹೊಂದಿದರು. ॥ ೧೩ ॥ ತೌ - ರಾಮಲಕ್ಷ್ಮಣರಿಬ್ಬರೂ, ಕಾಷ್ಠಸಂಘಾತಂ - ಕಟ್ಟಿಗೆಯಹೊರೆಯನ್ನೂ, ಅಥ - ಬಳಿಕ, ಲಕ್ಷ್ಮಣಃ - ಲಕ್ಷ್ಮಣನು, ಶುಷ್ಕೈಃ - ಒಣಗಿರುವ, ವಂಶೈಃ - ಬಿದುರುಗಳಿಂದ, ಸಮಾಸ್ತೀರ್ಣಂ - ಚನ್ನಾಗಿ ಹಾಸಲ್ಪಟ್ಟ, ಉಶೀರೈಶ್ಚ - ಲಾವಂಚದಿಂದ, ಸಮಾವೃತ್ತಂ - ಸುತ್ತಲ್ಪಟ್ಟ, ಮಹಾಪ್ಲವಂ - ದೊಡ್ಡನಾವೆಯನ್ನು, ಚಕ್ರುತುಃ - ಮಾಡಿದರು. ॥ ೧೪ ॥ ತತಃ - ಬಳಿಕ, ವೀರ್ಯವಾನ್ - ಬಹುಪರಾಕ್ರಮಿಯಾದ, ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ವೇತಸಶಾಖಾಶ್ಚ - ನೀರುಹಬ್ಬೇಗಿಡದ ಕೊನೆಗಳನ್ನು, ಜಂಬೂಶಾಖಾಶ್ಚ - ನೇರಳೇಗಿಡದ ಕೊಂಬೆಗಳನ್ನು, ಛಿತ್ವಾ - ಕತ್ತರಿಸಿ, ಸೀತಾಯಾಃ - ಸೀತಾದೇವಿಗೆ, ಸುಖಂ - ಸುಖಕರವಾದ, ಆಸನಂ - ಆಸನವನ್ನು, ಚಕಾರ - ಮಾಡಿದನು. ॥ ೧೫ ॥ ತತ್ರ-ಆ ಆಸನದಲ್ಲಿ,

ಲಕ್ಷ್ಮಣರು ಈ ರೀತಿ ಮಾತನಾಡಿಕೊಂಡು ಸೀತಾದೇವಿಯನ್ನು ಮುಂದುಮಾಡಿಕೊಂಡು ಯಮುನಾನದಿಯ ಬಳಿಗೈದಿದರು. ಆ ಬಳಿಕ ಮಹಾ ವೇಗದಿಂದ ಪ್ರವಹಿಸುತ್ತಿರುವ ಯಮುನಾನದಿಯನ್ನು ದಾಟಲಿಚ್ಛಿಸಿದ ಆ ಸೀತಾರಾಮಲಕ್ಷ್ಮಣರು ಉಪಾಯವನ್ನು ಚಿಂತಿಸಿದವರಾದರು. ಇಂತು ಆಲೋಚಿಸಿದ ಬಳಿಕ ರಾಮಲಕ್ಷ್ಮಣರಿಬ್ಬರೂ ಕಟ್ಟಿಗೆಗಳಿಂದಲೂ, ಒಣಗಿದ ಬಿದಿರುಗಳಿಂದಲೂ ಒಂದು ತೆಪ್ಪವನ್ನುಮಾಡಿ ಅದನ್ನು ಲಾವಂಚದಿಂದ ಸುತ್ತಿದರು. ಆಗ ಮಹಾಪರಾಕ್ರಮಶಾಲಿಯಾದ ಲಕ್ಷ್ಮಣನು ನೀರುಹಜ್ಜೇಗಿಡ, ನೇರಿಳೇಗಿಡ, ಇವುಗಳ ಕೊಂಬೆಗಳನ್ನು ಕತ್ತರಿಸಿ ಸೀತಾದೇವಿಯು ಕುಳಿತುಕೊಳ್ಳಲು ಆ ತೆಪ್ಪದಮೇಲೆ ಹಾಸಿ ಮೆತ್ತನೆಯ ಆಸನವೊಂದನ್ನೇರ್ಪಡಿಸಿದನು. ॥ ೧೧-೧೫ ॥ ಆ ಬಳಿಕ ದಶರಥರಾಜ

ಚಕಾರ ಲಕ್ಷ್ಮಣಶ್ಛಿತ್ವಾ ಸೀತಾಯಾಃ ಸುಖಮಾಸನಂ ॥೧೬॥ ತತ್ರ ಶ್ರಿಯಮಿವಾಚಿಂತ್ಯಾಂ ರಾಮೋ ದಾಶರಥಿಃ ಪ್ರಿಯಾಂ ॥ ಈಷತ್ಸಂಲಜ್ಜಮಾನಾಂತಾ ಮಧ್ಯಾರೋಪಯತ ಪ್ಲವಂ ॥೧೭॥ ಪಾರ್ಶ್ವೇಚ ತತ್ರ ವೈದೇಹ್ಯಾ ವಸನೇ ಭೂಷಣಾನಿಚ ॥ ಪ್ಲವೇ ಕಠಿನಕಾಜಂಚ ರಾಮಶ್ಚಕ್ರೇ ಸಹಾಯುಧೈಃ ॥೧೮॥ ಆರೋಪ್ಯ ಪ್ರಥಮಂ ಸೀತಾಂ ಸಂಘಾಟಂ ಪ್ರತಿಗೃಹ್ಯ ತೌ ॥ ತತಃ ಪ್ರತೇರತುರ್ಯತ್ತೌ ವೀರೌ ದಶರಥಾತ್ಮಜೌ ॥೧೯॥ ಕಾಳಿಂದೀ ಮಧ್ಯ

ದಾಶರಥಿಃ - ದಶರಥಪುತ್ರನಾದ, ರಾಮಃ - ಶ್ರೀರಾಮನು, ಅಚಿಂತ್ಯಾಂ - ಆಲೋಚಿಸಲಸಾಧ್ಯಳಾದ, ಶ್ರಿಯಮಿವ - ಲಕ್ಷ್ಮೀದೇವಿಯಂತೆ ಇರುವ, ಈಷತ್ - ಕೊಂಚವಾಗಿ, ಸಂಲಜ್ಜಮಾನಾಂ - ನಾಚಿಕೆಗೊಂಡಿರುವ, ಪ್ರಿಯಾಂ - ಹೆಂಡತಿಯಾದ, ತಾಂ - ಆ ಸೀತಾದೇವಿಯನ್ನು, ಪ್ಲವಂ - ತೆಪ್ಪವನ್ನು, ಅಧ್ಯಾರೋಪಯತ - ಏರಿಸಿದನು. ॥ ೧೭ ॥ ತತ್ರಪ್ಲವೇ - ಆ ತೆಪ್ಪದಲ್ಲಿ, ವೈದೇಹ್ಯಾಃ - ಸೀತಾದೇವಿಯ, ವಸನೇ - ವಸ್ತ್ರಗಳನ್ನೂ, ಭೂಷಣಾನಿಚ - ಒಡಿವೆಗಳನ್ನೂ, ಪಾರ್ಶ್ವೇ - ಪಾರ್ಶ್ವಭಾಗದಲ್ಲಿ, ಕಠಿನಕಾಜಂಚ, ಕಠಿನಕ ಗುದ್ದಲಿಯನ್ನೂ, ಅಜಂಚ-ಮೇಕೆಯ ಚರ್ಮದಿಂದಕೂಡಿಕೊಂಡಿರುವ ಮಂಕರಿಯನ್ನೂ, ಆಯುಧೈಸ್ಸಹ - ಆಯುಧಗಳೊಡನೆ, ರಾಮಃ - ಶ್ರೀರಾಮನು, ಚಕ್ರೇ - ಇರಿಸಿದನು. ॥ ೧೭ ॥ ವೀರೌ - ಶೂರರಾದ, ದಶರಥಾತ್ಮಜೌ - ದಶರಥನ ಕುವರರಾದ, ತೌ - ಆ ರಾಮಲಕ್ಷ್ಮಣರು, ಪ್ರಥಮಂ - ಮೊದಲು, ಸೀತಾಂ - ಸೀತಾದೇವಿಯನ್ನು, ಸಂಘಾಟಂ - ತೆಪ್ಪವನ್ನು, ಆರೋಪ್ಯ - ಹತ್ತಿಸಿ, ಪ್ರತಿಗೃಹ್ಯ - ಹಿಡಿದುಕೊಂಡು, ತತಃ - ಬಳಿಕ, ಯತ್ತೌ - ಜಾಗರೂಕರಾಗಿ, ಪ್ರತೇರತುಃ - ಏರಿದರು. ॥ ೧೮ ॥ ಸೀತಾತು - ಸೀತಾದೇವಿಯಾದರೆ, ಕಾಳಿಂದೀಮಧ್ಯಂ - ಯಮುನಾನದಿಯ ಮಧ್ಯದಲ್ಲಿ, ಆಯಾತಾ - ಬಂದು, ಏನಾಂ - ಈ ಯಮುನಾನದಿಯನ್ನು ಕುರಿತು, ಅವಂದತ - ನಮಸ್ಕರಿಸಿದಳು, ಹೇ ದೇವಿ - ಎಲೌ ಯಮುನಾದೇವಿಯೇ, ಮೇ - ನನ್ನ, ಪತಿಃ - ಗಂಡನು, ವ್ರತಂ - ವನವಾಸವನ್ನು, ಸ್ವಸ್ತಿ - ಕ್ಷೇಮವಾಗಿ, ಪಾರಯೇತ್ - ದಾಟಿದವನಾದರೆ, ರಾಮೋ - ಶ್ರೀರಾಮನು, ಇಕ್ಷ್ವಾಕುಂ - ಇಕ್ಷ್ವಾಕುವಂಶಸ್ಥರಿಂದ, ಪಾಲಿತಾಂ - ಸಂರಕ್ಷಿಸಲ್ಪಟ್ಟ,

---

ಕುಮಾರನಾದ ಶ್ರೀರಾಮನು, ಈರೀತಿ ಲಕ್ಷ್ಮಣನಿಂದ ಮಾಡಲ್ಪಟ್ಟ ಆಸನದ ಮೇಲೆ ಯೋಚಿಸಲಸದಳವಾದ ಲಕ್ಷ್ಮೀದೇವಿಯಾಗಿಯೂ, ಪತಿಯೇ ತನ್ನನ್ನು ಆ ಆಸನದಮೇಲೆ, ಕೂಡಿಸುವನಲ್ಲವೆಂದು ಸ್ವಲ್ಪವಾಗಿ ನಾಚಿದವಳೂ ಆದ ಸೀತಾದೇವಿಯನ್ನು ಕುಳ್ಳಿರಿಸಿದನು. ಆ ಮೇಲೆ ಶ್ರೀರಾಮನು ಆ ಸೀತಾದೇವಿಯ ಪಕ್ಕದಲ್ಲಿ ಆಕೆಯ ವಸ್ತ್ರಗಳನ್ನೂ, ಒಡಿವೆಗಳನ್ನೂ, ಅರಣ್ಯವಾಸಕ್ಕೆ ಯೋಗ್ಯವಾದ ಗುದ್ದಲಿ, ಮಂಕರಿಗಳನ್ನೂ ದಿವ್ಯಾಯುಧಗಳನ್ನೂ ಇರಿಸಿದವನಾದನು. ಇದಾದ ಮೇಲೆ ಶೂರರೂ, ದಶರಥ ಪುತ್ರರೂ ಆದ ರಾಮಲಕ್ಷ್ಮಣರು, ಮೊದಲು ಸೀತಾದೇವಿಯನ್ನು ಹತ್ತಿಸಿ, ಆ ಮೇಲೆ ಜಾಗರೂಕರಾಗಿ ಆ ಯಮುನಾನದಿಯನ್ನು ದಾಟಿದವರಾದರು. ಆಗಲಾ ಸೀತಾದೇವಿಯು ಯಮುನಾನದಿಯ ಮಧ್ಯಭಾಗಕ್ಕೆ ಬಂದವಳಾಗಿ ಆ ನದಿಯನ್ನು ನಮಸ್ಕರಿಸಿ, “ ಓ ಯಮುನಾನದಿಯೆ ! ನಾನು ನಿನ್ನನ್ನು ಈಗ ದಾಟುತ್ತಿರುವೆನು. ನನಗೆ ಮಂಗಳವುಂಟಾಗಲಿ ! ನನ್ನ ಪತಿಯಾದ ಶ್ರೀರಾಮನು

ಮಾಯಾತಾ ಸೀತಾತ್ವೇನಾ ಮುವಂದತ ॥ ಸ್ವಸ್ತಿ ದೇವಿ! ತರಾಮಿ ತ್ವಾಂ ಪಾರ ಯೇನ್ಮೇ ಪತಿರ್ವ್ರತಂ ॥ ೨೦ ॥ ಯಕ್ಷ್ಯೇ ತ್ವಾಂ ಗೋಸಹಸ್ರೇಣ ಸುರಾಘಟ ಶತೇ ನಚ ॥ ಸ್ವಸ್ತಿ ಪ್ರತ್ಯಾಗತೇ ರಾಮೇ ಪುರೀ ಮಿಕ್ಷ್ವಾಕು ಪಾಲಿತಾಂ ॥೨೧॥ ಕಾಳಿಂದೀಮಥ ಸೀತಾತು ಯಾಚಮಾನಾ ಕೃತಾಂಜಲಿಃ ॥ ತೀರಮೇವಾಭಿ ಸಂಪ್ರಾಪ್ತಾ ದಕ್ಷಿಣಂ ವರವರ್ಣಿನೀ ॥ ೨೨ ॥ ತತಃ ಪ್ಲವೇನಾಂಶುಮತೀಂ ಶೀಘ್ರಗಾ ಮೂರ್ಮಿಮಾಲಿನೀಂ ॥ ತೀರಜೈ ರ್ಬಹುಭಿ ರ್ವೃಕ್ಷೈ ಸ್ಸಂತೇರು ರ್ಯಮುನಾಂ ನದೀಂ ॥೨೩॥ ತೇ ತೀರ್ಣಾಃ ಪ್ಲವಮುತ್ಸೃಜ್ಯ ಪ್ರಸ್ಥಾಯ ಯಮುನಾ ವನಾತ್ ॥ ಶ್ಯಾಮಂ ನ್ಯಗ್ರೋಧ ಮಾಸೇದು ಶ್ಶೀತಳಂ ಹರಿತ

ಪುರೀಂ - ಅಯೋಧ್ಯಾಪಟ್ಟಣವನ್ನು ಕುರಿತು, ಸ್ವಸ್ತಿ - ಕ್ಷೇಮವಾಗಿ, ಪ್ರತ್ಯಾಗತೇ - ಬಂದವ ನಾಗಲು, ತ್ವಾಂ - ನಿನ್ನನ್ನು, ಗೋಸಹಸ್ರೇಣ - ಗೋವುಗಳ ಸಹಸ್ರದಿಂದಲೂ, ಸುರಾಘಟ ಶತೇನಚ - ಮದ್ಯದ ಹರಿವಾಣಗಳ ನೂರರಿಂದಲೂ, ಯಕ್ಷ್ಯೇ - ಪೂಜೆಮಾಡುವೆನು, ಅಥ - ಬಳಿಕ, ಸೀತಾತು - ಸೀತಾದೇವಿಯಾದರೆ, ಕಾಳಿಂದೀಂ - ಯಮುನಾನದಿಯನ್ನು, ಯಾಚಮಾನಾ - ಪ್ರಾರ್ಥಿ ಸುತ್ತ, ಕೃತಾಂಜಲಿಃ-ಅಂಜಲಿಬದ್ಧಳಾದಳು, ವರವರ್ಣಿನೀ - ಸೀತಾದೇವಿಯು, ದಕ್ಷಿಣಂತೀರಮೇವ- ದಕ್ಷಿಣತೀರವನ್ನು, ಅಭಿಸಂಪ್ರಾಪ್ತಾ - ಹೊಂದಿದಳು. ॥೧೯-೨೨॥ ತತಃ - ಬಳಿಕ, ಪ್ಲವೇನ - ತೆಪ್ಪದಿಂದ, ಬಹುಭಿಃ - ಅನೇಕಗಳಾದ, ತೀರಜೈಃ - ದಡದಲ್ಲಿ ಹುಟ್ಟಿರುವ, ವೃಕ್ಷೈಃ - ಗಿಡಗಳಿಂದ, ಉಪಲಕ್ಷಿತಾಂ - ಕೂಡಿಕೊಂಡಿರುವ, ಊರ್ಮಿಮಾಲಿನೀಂ - ತೆರೆಗಳ ಪರಂಪರೆಗಳುಳ್ಳ, ಶೀಘ್ರಗಾಂ- ತ್ವರೆಯಿಂದ ಹೋಗುತ್ತಿರುವ, ಅಂಶುಮತೀಂ - ಸೂರ್ಯನಕುವರಿಯಾದ, ಯಮುನಾನದೀಂ - ಯಮುನಾನದಿಯನ್ನು, ಸಂತೇರುಃ - ದಾಟಿದರು. ॥ ೨೩ ॥ ತೇ - ಆ ಸೀತಾರಾಮಲಕ್ಷ್ಮಣರು, ತೀರ್ಣಾಃ - ದಾಟಿದವರಾಗಿ, ಪ್ಲವ - ತೆಪ್ಪವನ್ನು, ಉತ್ಸೃಜ್ಯ - ಬಿಟ್ಟು, ಯಮುನಾವನಾತ್ - ಯಮುನಾವನದಿಂದ, ಪ್ರಸ್ಥಾಯ - ಹೊರಟು, ಹರಿತಚ್ಛದಂ, ಹರಿತ - ಕಪ್ಪಾದ, ಛದಂ - ಪರ್ಣಗ ಳುಳ್ಳ, ಶೀತಲಂ - ತಣ್ಣಗಿರುವ, ಶ್ಯಾಮಂ - ಶ್ಯಾಮವೆಂಬ ಹೆಸರುಳ್ಳ, ನ್ಯಗ್ರೋಧಂ-ವಟವೃಕ್ಷವನ್ನು, ಆಸೇದುಃ - ಹೊಂದಿದರು. ॥ ೨೪ ॥ ತಂನ್ಯಗ್ರೋಧಂ - ಆ ವಟವೃಕ್ಷವನ್ನು, ಉಪಾಗಮ್ಯ - ಹೊಂದಿ, ವೈದೇಹಿ - ಸೀತಾದೇವಿಯು, ವಾಕ್ಯಂ - ಒಂದು ಮಾತನ್ನು, ಅಬ್ರವೀತ್ - ನುಡಿದಳು, ಹೇ

ಕ್ಷೇಮದಿಂದೀ ವನವಾಸವನ್ನು ಕಳೆದು, ಇಕ್ಷ್ವಾಕುರಾಯರಿಂದ ಪರಿಪಾಲಿತವಾದ ಅಯೋಧ್ಯಾ ಪಟ್ಟಣವನ್ನು ಸುಖವಾಗಿ ಸೇರಲಿ. ಆಗ ನಾನು ನಿನ್ನನ್ನು ಸಹಸ್ರ ಗೋವುಗಳಿಂದಲೂ, ನೂರು ಮದ್ಯದ ಹರಿವಾಣಗಳಿಂದಲೂ ಪೂಜಿಸುತ್ತೇನೆ" ಎಂದು ಪ್ರಾರ್ಥಿಸುತ್ತಿರುವಾಗಲೆ ದಕ್ಷಿಣತೀರವನ್ನೈದಿದಳು. ॥೧೯-೨೧॥ ಈರೀತಿಯಾಗಿ ಸೀತಾರಾಮಲಕ್ಷ್ಮಣರು ಅಲೆಗಳ ಪಂಙ್ತಿಗಳುಳ್ಳ ಆ ತೀರದಲ್ಲಿ ಹುಟ್ಟಿದ ನಾನಾವಿಧಗಳಾದ ವೃಕ್ಷಗಳಿಂದ ತೆಪ್ಪವನ್ನು ನಿರ್ಮಿ ಸಿಕೊಂಡು ಸೂರ್ಯನ ಕುಮಾರಿಯೆನಿಸಿದ ಆ ಯಮುನಾನದಿಯನ್ನು ದಾಟಿದವರಾಗಿ ತೆಪ್ಪ ವನ್ನು ಬಿಟ್ಟು, ಆ ಕಾಡಿನಿಂದ ಹೊರಟು ಹಸುರೊಗೆದ ಎಲೆಗಳುಳ್ಳುದಾಗಿಯೂ, ಶ್ಯಾಮ ವರ್ಣವಾಗಿಯೂ ಇರುವ ಆ ವಟವೃಕ್ಷವನ್ನು ಹೊಂದಿದರು. ಆಗ ಸೀತಾದೇವಿಯು

ಚ್ಛದಂ ‖ ೨೪ ‖ ನ್ಯಗ್ರೋಧಂ ತಮುಪಾಗಮ್ಯ ವೈದೇಹೀ ವಾಕ್ಯ ಮಬ್ರವೀತ್‖ ನಮಸ್ತೇಸ್ತು ಮಹಾವೃಕ್ಷ ! ಪಾರಯೇನ್ಮೇ ಪತಿರ್ವ್ರತಂ ‖೨೫‖ ಕೌಸಲ್ಯಾಂ ಚೈವ ಪಶ್ಯೇಯಂ ಸುಮಿತ್ರಾಂಚ ಯಶಸ್ವಿನೀಂ ‖ ಇತಿ ಸೀತಾಂಜಲಿಂ ಕೃತ್ವಾ ಪರ್ಯಗಚ್ಛದ್ವನಸ್ಪತಿಂ ‖ ೨೬ ‖ ಅವಲೋಕ್ಯ ತತಸ್ಸೀತಾ ಮಾಯಾಚಂತೀ ಮನಿಂದಿತಾಂ ‖ ದಯಿತಾಂಚ ವಿಧೇಯಾಂಚ ರಾಮೋ ಲಕ್ಷ್ಮಣ ಮಬ್ರವೀತ್ ‖೨೭‖ ಸೀತಾಮಾದಾಯ ಗಚ್ಛ ತ್ವ ಮಗ್ರತೋ ಭರತಾಗ್ರಜ ! ‖ ಪೃಷ್ಠತೋಹಂ

ಮಹಾವೃಕ್ಷ - ಎಲೈ ದೊಡ್ಡವೃಕ್ಷವೇ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಅಗಲಿ, ಮೇ - ನನ್ನ, ಪತಿಃ - ಗಂಡನು, ವ್ರತಂ - ವನವಾಸವನ್ನು, ಪಾರಯೇತ್ - ಪೂರ್ತಿಗೊಳಿಸಲಿ, ಕೌಸಲ್ಯಾಂಚೈವ - ಕೌಸಲ್ಯಾದೇವಿಯನ್ನೂ, ಯಶಸ್ವಿನೀಂ - ಕೀರ್ತಿವಂತಳಾದ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ ಕುರಿತು, ಅಂಜಲಿಂ - ನಮಸ್ಕಾರವನ್ನು, ಕೃತ್ವಾ - ಮಾಡಿ, ವನಸ್ಪತಿಂ - ವಟವೃಕ್ಷವನ್ನು, ಪರ್ಯಗಚ್ಛತ್ - ಪ್ರದಕ್ಷಿಣವಮಾಡಿದಳು. ‖೨೫-೨೬‖ ರಾಮಃ - ಶ್ರೀರಾಮನು, ತತಃ - ಬಳಿಕ, ಆಯಾಚಂತೀಂ - ಪ್ರಾರ್ಥಿಸುತ್ತಿರುವ, ಅನಿಂದಿತಾಂ - ದೋಷರಹಿತಳಾದ, ದಯಿತಾಂಚ - ಪ್ರೀತಿಪಾತ್ರಳಾದ, ವಿಧೇಯಾಂಚ - ನಮ್ರಳಾದ, ಸೀತಾಂ - ಸೀತಾದೇವಿಯನ್ನು, ಅವಲೋಕ್ಯ - ಕಂಡು, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಅಬ್ರವೀತ್ - ನುಡಿದನು. ‖ ೨೭ ‖ ಹೇ ಭರತಾಗ್ರಜ - ಭರತನ ತಮ್ಮನೇ, ತ್ವಂ - ನೀನು, ಸೀತಾಂ - ಸೀತಾದೇವಿಯನ್ನು, ಆದಾಯ - ಕರೆದುಕೊಂಡು, ಅಗ್ರತಃ - ಮುಂದುಗಡೆ, ಗಚ್ಛ - ಹೋಗು, ಹೇ ದ್ವಿಪದಾಂವರ - ಎಲೈ ಮನುಜಶ್ರೇಷ್ಠನೇ, ಅಹಂ - ನಾನು, ಪೃಷ್ಠತಃ - ಹಿಂದುಗಡೆ, ಸಾಯುಧಃ - ಆಯುಧಗಳಿಂದೊಡಗೂಡಿ, ಗಮಿಷ್ಯಾಮಿ - ಬರುವೆನು. ‖ ೨೮ ‖ ಜನಕಾತ್ಮಜಾ - ಸೀತಾದೇವಿಯು, ಯದ್ಯತ್ - ಯಾವ ಯಾವ, ಫಲಂ - ಫಲವನ್ನು, ಯದ್ಯತ್ಪುಷ್ಪಂವಾ - ಯಾವ ಯಾವ ಪುಷ್ಪಗಳಲ್ಲಿ, ಅಸ್ಯಾಃ - ಈ ಸೀತಾದೇವಿಯ, ಮನಃ - ಮನಸ್ಸು, ರಮತೇ - ಅನುರಾಗವುಳ್ಳುದಾಗು

ವೃಕ್ಷವನ್ನು ನೋಡಿ, “ ಎಲೈ ಮಹಾ ವೃಕ್ಷವೆ ! ನಿನಗೆ ನಮಸ್ಕಾರ ಮಾಡುತ್ತೇನೆ ! ನನ್ನ ಪತಿಯಾದ ಶ್ರೀರಾಮನು ಹದಿನಾಲ್ಕು ಸಂವತ್ಸರಗಳವರೆಗೆ ಮಾಡಬೇಕಾದ ವನವಾಸ ವ್ರತವನ್ನು ಪೂರ್ಣಗೊಳಿಸಿ ಮಹಾ ಕೀರ್ತಿವಂತರಾದ ಕೌಸಲ್ಯಾ ಸುಮಿತ್ರೆಯರನ್ನು ಮರಳಿ ನೋಡುವಂತೆ ಅನುಗ್ರಹವನ್ನು ಮಾಡು” ಎಂದು ಪ್ರಾರ್ಥಿಸಿದಳು. ಇಂತು ಪ್ರಾರ್ಥಿಸಿದ ಬಳಿಕಲಾಜಾನಕಿಯು ಕೈಗಳನ್ನು ಜೋಡಿಸಿಕೊಂಡು ಆ ವೃಕ್ಷಕ್ಕೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದವಳಾದಳು. ಆಗ ಶ್ರೀರಾಮನು ಈ ರೀತಿಯಾಗಿ ಆ ಮಹಾ ವೃಕ್ಷವನ್ನು ಬೇಡುತ್ತಲಿರುವವಳೂ, ನಿರ್ದೋಷಿಯಾದವಳೂ, ಪ್ರಿಯೆಯಾದವಳೂ, ವಿಧೇಯಳಾದವಳೂ ಆದ ಸೀತಾದೇವಿಯನ್ನು ನೋಡಿ ಲಕ್ಷ್ಮಣನನ್ನು ಕುರಿತು ಹೀಗೆಂದನು. “ಎಲೈ ಭರತಾಗ್ರಜನೆ; ಪುರುಷಶ್ರೇಷ್ಠನೆ; ಲಕ್ಷ್ಮಣನೆ! ನೀನು ಸೀತೆಯನ್ನು ಕರೆದುಕೊಂಡು ಮುಂದೆ ಹೊರಡು. ನಾನು ಆಯುಧಸಮೇತನಾಗಿ ನಿಮ್ಮ ಹಿಂದೆ ಬರುತ್ತೇನೆ. ಇಷ್ಟೆಯಲ್ಲದೆ, ಈ ಸೀತಾದೇವಿಯು ಯಾವ ವಸ್ತುಗಳನ್ನು ಪ್ರೀತಿಸುತ್ತಾಳೆಯೋ,ಯಾವ ಯಾವ

ಗಮಿಷ್ಯಾಮಿ ಸಾಯುಧೋ ದ್ವಿಪದಾಂ ವರ ! ॥೨೮॥ ಯದ್ಯತ್ಫಲಂ ಪ್ರಾರ್ಥಯತೇ ಪುಷ್ಪಂವಾ ಜನಕಾತ್ಮಜಾ ॥ ತತ್ತತ್ಪ್ರದದ್ಯಾ ವೈದೇಹ್ಯಾ ಯತ್ರಾಸ್ಯಾ ರಮತೇ ಮನಃ ॥ ೨೯ ॥ ಗಚ್ಛತೋಸ್ತು ತಯೋರ್ಮಧ್ಯೇ ಬಭೂವ ಜನಕಾತ್ಮಜಾ ॥ ಮಾತಂಗಯೋರ್ಮಧ್ಯಗತಾ ಶುಭಾ ನಾಗವಧೂರಿವ ॥ ೩೦ ॥ ಏಕೈಕಂ ಪಾದಪಂ ಗುಲ್ಮಂ ಲತಾಂವಾ ಪುಷ್ಪಶಾಲಿನೀಂ ॥ ಅದೃಷ್ಟಪೂರ್ವಾಂ ಪಶ್ಯಂತೀ ರಾಮಂ ಪಪ್ರಚ್ಛ ಸಾಽಬಲಾ ॥ ೩೧ ॥ ರಮಣೀಯರ್ಾ ಬಹುವಿಧರ್ಾ ಪಾದಪರ್ಾ ಕುಸುಮೋತ್ಕಟರ್ಾ ॥ ಸೀತಾವಚನ ಸಂರಬ್ಧ ಆನಯಾಮಾಸ

ತ್ರದೆಯೋ, ವೈದೇಹ್ಯಾಃ - ಸೀತಾದೇವಿಗೆ, ತತ್ತತ್ - ಆಯಾಯ ಪದಾರ್ಥಗಳನ್ನು, ಪ್ರದದ್ಯಾಃ - ಕೊಡು. ॥ ೨೯ ॥ ಜನಕಾತ್ಮಜಾ - ಸೀತಾದೇವಿಯು, ಗಚ್ಛತೋಃ - ಹೋಗುತ್ತಿರುವ, ತಯೋಃ - ಆ ರಾಮಲಕ್ಷ್ಮಣರ, ಮಧ್ಯೇ - ಮಧ್ಯದಲ್ಲಿ, ಮಾತಂಗಯೋಃ - ದೊಡ್ಡ ಆನೆಗಳ, ಮಧ್ಯಗತಾ - ಮಧ್ಯಭಾಗವನ್ನುಹೊಂದಿರುವ, ಶುಭಾ - ಶುಭಕರವಾದ, ನಾಗವಧೂರಿವ - ಹೆಣ್ಣಾನೆಯಂತೆ, ಬಭೂವ - ಆದಳು. ॥ ೩೦ ॥ ಸಾಅಬಲಾ - ಹೆಂಗಸಾದ ಆ ಸೀತಾದೇವಿಯು, ಅದೃಷ್ಟಪೂರ್ವಾಂ - ಎಂದಿಗೂ ನೋಡದಿರುವ, ಪುಷ್ಪಶಾಲಿನೀಂ - ಪುಷ್ಪಗಳಿಂದ ಒಪ್ಪಿರುವ, ಲತಾಂವಾಂ - ಬಳ್ಳಿಯನ್ನೇ ಆಗಲಿ, ಏಕೈಕಂ - ಒಂದೊಂದೇ ಆದ, ಪಾದಪಂ - ವೃಕ್ಷವನ್ನೇ ಆಗಲಿ, ಗುಲ್ಮಂವಾ - ಪೊದೆಯನ್ನೇ ಆಗಲಿ, ಪಶ್ಯಂತೀ - ನೋಡುತ್ತ, ರಾಮಂ - ಶ್ರೀರಾಮನನ್ನು ಕುರಿತು, ಪಪ್ರಚ್ಛ - ಕೇಳಿದಳು. ॥ ೩೧ ॥ ಲಕ್ಷ್ಮಣಃ - ಲಕ್ಷ್ಮಣನು, ಸೀತಾವಚನಸಂರಬ್ಧಃ - ಸೀತಾದೇವಿಯ ವಚನದಿಂದ ತ್ವರೆಯುಳ್ಳವನಾಗಿ, ರಮಣೀಯರ್ಾ - ಮನೋಹರಗಳಾದ, ಬಹುವಿಧರ್ಾ - ನಾನಾಬಗೆಗಳಾದ, ಕುಸುಮೋತ್ಕಟರ್ಾ - ಪುಷ್ಪಗಳಿಂದ ತುಂಬಿರುವ, ಪಾದಪರ್ಾ - ಗಿಡಗಳನ್ನು, ಆನಯಾಮಾಸ - ತಂದುಕೊಟ್ಟನು. ॥ ೩೨ ॥ ತದಾ - ಆ ಕಾಲದಲ್ಲಿ, ಜನಕರಾಜಸ್ಯ - ಜನಕರಾಯನ, ಸುತಾ - ಮಗಳಾದ ಸೀತಾದೇವಿಯು, ವಿಚಿತ್ರವಾಲುಕಜಲಾಂ, ವಿಚಿತ್ರ - ಆಶ್ಚರ್ಯಕರವಾದ, ವಾಲುಕ - ಮರಗಳುಳ್ಳ, ಜಲಾಂ - ನೀರುಳ್ಳ, ಹಂಸಸಾರಸನಾದಿತಾಂ - ಹಂಸಪಕ್ಷಿಗಳಿಂದಲೂ, ಸಾರಸ

ಪತ್ರ, ಫಲ, ಪುಷ್ಪ ಇವೇ ಮೊದಲಾದುವುಗಳನ್ನು ಕೋರುವಳೋ ಅವುಗಳೆಲ್ಲವನ್ನೂ ತಂದು ಕೊಡುತ್ತಿರುವವನಾಗು." ಶ್ರೀರಾಮನೀರೀತಿ ನುಡಿಯುತ್ತಿರುವಷ್ಟರಲ್ಲಿಯೇ ಸೀತಾದೇವಿಯು ರಾಮ ಲಕ್ಷ್ಮಣರ ಮಧ್ಯದಲ್ಲಿ ಹೋಗುತ್ತಿದ್ದಳು. ಆ ದೇವಿಯೀರೀತಿ ನಡೆಯುತ್ತಿರಲು, ಹೆಣ್ಣಾನೆಯು ಗಂಡಾನೆಗಳ ಮಧ್ಯದಲ್ಲಿ ಹೋಗುತ್ತಿರುವಂತೆ ಪ್ರಕಾಶಿಸುತ್ತಿದ್ದಳು. ಅಬಲೆಯಾದಾಸೀತಾದೇವಿಯು ಇದುವರೆಗೆಂದಿಗೂನೋಡದವೃಕ್ಷಗಳನ್ನೂ, ಪೊದೆಯೊಗೆದ ಗಿಡಗಳನ್ನೂ, ಹಿಂದಾವಾಗಲೂ ನೋಡದ ಹೂ ಮೊಳೆತ ಲತೆಗಳನ್ನೂ, ಇನ್ನೂ ಅನೇಕ ಪದಾರ್ಥಗಳನ್ನೂ ನೋಡುತ್ತ, ವಲ್ಲಭನಾದ ಶ್ರೀರಾಮನನ್ನು ಅವುಗಳ ವಿಷಯವನ್ನು ಕೇಳಿ ತಿಳಿದುಕೊಳ್ಳುತ್ತಿದ್ದುದಲ್ಲದೆ ಅವುಗಳನ್ನು ಬಯಸುತ್ತಲೂ ಇದ್ದಳು. ಆಗ ಲಕ್ಷ್ಮಣನು ಆಕೆಯು ಕೇಳಿದ, ರಮಣೀಯವಾದುವುಗಳೂ, ನಾನಾ ವಿಧಗಳಾದುವುಗಳೂ, ಹೂಗಳಿಂದ ತುಂಬಿರುವುಗಳೂ ಆದ ರೆಂಬೆಗಳನ್ನೂ, ಗಿಡಗಳನ್ನೂ, ತಕ್ಷಣವೇ ತಂದುಕೊಡು

ಲಕ್ಷ್ಮಣಃ ॥ ೩೨ ॥ ವಿಚಿತ್ರ ವಾಲುಕ ಜಲಾಂ ಹಂಸ ಸಾರಸ ನಾದಿತಾಂ ॥
ರೇಮೇ ಜನಕರಾಜಸ್ಯ ತಥಾ ಪ್ರೇಕ್ಷ್ಯ ಸುತಾ ನದೀಂ ॥೩೩॥ ಕ್ರೋಶಮಾತ್ರಂ
ತತೋ ಗತ್ವಾ ಭ್ರಾತರೌ ರಾಮಲಕ್ಷ್ಮಣೌ ॥ ಬಹೂನ್ ಮೇಧ್ಯಾನ್ ಮೃಗಾನ್
ಹತ್ವಾ ಚೇರತು ರ್ಯಮುನಾ ವನೇ ॥ ೩೪ ॥

ವಿಹೃತ್ಯ ತೇ ಬರ್ಹಿಣ ಪೂಗನಾದಿತೇ
ಶುಭೇ ವನೇ ವಾನರ ವಾರಣಾಯುತೇ ॥
ಸಮಂ ನದೀವಪ್ರ ಮುಪೇತ್ಯ ಸಮ್ಮತಂ
ನಿವಾಸ ಮಾಜಗ್ಮು ರದೀನದರ್ಶನಾಃ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಪಂಚಾಶಸ್ಸರ್ಗಃ.

ಪಕ್ಷಿಗಳಿಂದಲೂ ಧ್ವನಿಗೊಳಿಸುತ್ತಿರುವ, ನದೀಂ - ನದಿಯನ್ನು, ಪ್ರೇಕ್ಷ್ಯ - ಕಂಡು, ರೇಮೇ - ಸಂತೋಷಗೊಂಡಳು. ॥ ೩೩ ॥ ತತಃ - ಬಳಿಕ, ಭ್ರಾತರೌ - ಅಣ್ಣತಮ್ಮಂದಿರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರು, ಕ್ರೋಶಮಾತ್ರಂ - ಒಂದು ಹರಿದಾರಿಮಾತ್ರ, ಗತ್ವಾ - ಹೋಗಿ, ಮೇಧ್ಯಾನ್ - ಪರಿಶುದ್ಧಗಳಾದ, ಬಹೂನ್ - ಅನೇಕಗಳಾದ, ಮೃಗಾನ್ - ಮೃಗಗಳನ್ನು, ಹತ್ವಾ - ಕೊಂದು, ಯಮುನಾವನೇ - ಯಮುನಾನದಿಯ ಸಂಬಂಧವಾದ ವನದಲ್ಲಿ, ಚೇರತುಃ - ಭುಜಿಸಿದರು. ॥ ೩೪ ॥ ಅದೀನದರ್ಶನಾಃ - ಮನಗುಂದದ ನೋಟವುಳ್ಳ, ತೇ - ಆ ಸೀತಾರಾಮಲಕ್ಷ್ಮಣರು ಮೂವರೂ, ಬರ್ಹಿಣಪೂಗನಾದಿತೇ, ಬರ್ಹಿಣ - ನವಿಲುಗಳ, ಪೂಗ - ಗುಂಪಿನಿಂದ, ನಾದಿತೇ - ಧ್ವನಿಗೊಳಿಸುತ್ತಿರುವ, ಶುಭೇ - ಮಂಗಳಕರವಾದ, ವಾನರವಾರಣಾಯುತೇ - ಕಪಿಗಳಿಂದಲೂ, ಆನೆಗಳಿಂದಲೂ, ಕೂಡಿರುವ, ಸಮಂ - ಸಮಭೂಮಿಯಾದ, ನದೀವಪ್ರಂ - ನದೀತೀರವನ್ನು, ಉಪೇತ್ಯ - ಹೊಂದಿ, ಸಮ್ಮತಂ - ಇಷ್ಟವಾದ, ನಿವಾಸಂ - ವಾಸಸ್ಥಾನವನ್ನು, ಆಜಗ್ಮತುಃ - ಹೊಂದಿದರು. ॥೩೫॥ ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಪಂಚಾಶಸ್ಸರ್ಗಃ.

ತ್ತಿದ್ದನು. ಆಗ ಜನಕ ರಾಜನಂದಿನಿಯೂ, ಶ್ರೀರಾಮಮೂರ್ತಿಯೂ ಪ್ರಿಯಸತಿಯೂ ಆದ ಸೀತಾದೇವಿಯು ವಿಧವಿಧವಾದ ಮರಳುಗಳನ್ನೂ, ನೀರಿನಲ್ಲಿ ಕೂಗುತ್ತಿರುವ ಹಂಸಸಾರಸ ಪಕ್ಷಿಗಳನ್ನೂ, ಇವುಗಳನ್ನುಳ್ಳ ಯಮುನಾ ನದಿಯನ್ನು ನೋಡಿ ಬಹಳವಾಗಿ ಸಂತೋಷಪಟ್ಟಳು. ಬಳಿಕ ಅಣ್ಣತಮ್ಮಂದಿರಾದ ಆ ರಾಮ ಲಕ್ಷ್ಮಣರು ಯಮುನಾ ನದಿಯ ಅರಣ್ಯದಲ್ಲಿ ಒಂದು ಕ್ರೋಶ ಮಾತ್ರ ಹೋಗಿ ಭಕ್ಷಿಸಲು ಯೋಗ್ಯವಾದ ಅನೇಕ ಮೃಗಗಳನ್ನು ಕೊಂದು ಭುಜಿಸಿದವರಾದರು. ದೈನ್ಯವೊಂದದ ಆ ರಾಮ ಲಕ್ಷ್ಮಣ ಸೀತೆಯರು ಗುಂಪುಗೊಂಡ ನವಿಲುಗಳಿಂದ ಧ್ವನಿಗೊಳಿಸುತ್ತಿರುವ ಆ ನದಿಯನ್ನೂ, ವಾನರಗಳಿಂದಲೂ, ಆನೆಗಳಿಂದಲೂ ಕೂಡಿದುದಾಗಿಯೂ, ಸುಂದರವಾದುದಾಗಿಯೂ ಇರುವ ಆ ಅರಣ್ಯದಲ್ಲಿ ಕ್ರೀಡಿಸುತ್ತ, ಹಳ್ಳತಿಟ್ಟೆಗಳಿಲ್ಲದ ವಾಸಕ್ಕನುಕೂಲವಾದ ಸ್ಥಳವನ್ನು ಸೇರಿದರು. ॥ ೨೨-೩೫ ॥

ಇಂತಿದು ಶ್ರೀಸೀತಾರಾಮಲಕ್ಷ್ಮಣಕೃತ ಚಿತ್ರಕೂಟ ಪ್ರದೇಶಾಗಮನ
ವೃತ್ತಾಂತ ಕಥಾಕಥನವೆಂಬ ಐವತ್ತೈದನೆಯ ಸರ್ಗವು ಮುಗಿದುದು.

ಅಯೋಧ್ಯಾಕಾಂಡೇ ಷಟ್ಪಂಚಾಶಸ್ಸರ್ಗಃ.

ಅಥರಾತ್ರ್ಯಾಂ ವ್ಯತೀತಾಯಾ ಮವಸುಪ್ತ ಮನಂತರಂ ‖ ಪ್ರಬೋಧ ಯಾಮಾಸ ಶನೈ ರ್ಲಕ್ಷ್ಮಣಂ ರಘುನಂದನಃ ‖ ೧ ‖ ಸೌಮಿತ್ರೇ ! ಶೃಣು ವನ್ಯಾನಾಂ ವಲ್ಗು ವ್ಯಾಹರತಾಂ ಸ್ವನಂ ‖ ಸಂಪ್ರತಿಷ್ಠಾಮಹೇ ಕಾಲಃ ಪ್ರಸ್ಥಾನಸ್ಯ ಪರಂತಪ ‖ ೨ ‖ ಸಸುಪ್ತ ಸ್ಸಮಯೇ ಭ್ರಾತ್ರಾ ಲಕ್ಷ್ಮಣಃ ಪ್ರತಿಬೋಧಿತಃ ‖ ಜಹೌ ನಿದ್ರಾಂಚ ತಂದ್ರೀಂಚ ಪ್ರಸಕ್ತಂ ಚ ಪಥಿಶ್ರಮಂ ‖ ೩ ‖ ತತ ಉತ್ಥಾಯ ತೇ ಸರ್ವೇ ಸ್ಪೃಷ್ಟ್ವಾ ನದ್ಯಾ ಶ್ಶಿವಂ ಜಲಂ ‖ ಪಂಥಾನ

ಅಥ - ಬಳಿಕ- ರಾತ್ರ್ಯಾಂ - ರಾತ್ರಿಯು ವ್ಯತೀತಾಯಾಂ - ಕಳೆಯಲು, ರಘುನಂದನಃ - ಶ್ರೀರಾಮನು, ಅನಂತರಂ - ಸ್ವಪ್ರಬೋಧಾನಂತರದಲ್ಲಿ, ಅವಸುಪ್ತಂ - ಸ್ವಲ್ಪಮಲಗಿದ, ಲಕ್ಷ್ಮಣಂ- ಲಕ್ಷ್ಮಣಸ್ವಾಮಿಯನ್ನು, ಶನೈಃ - ಮೆಲ್ಲಗೆ, ಪ್ರಬೋಧಯಾಮಾಸ - ಎಚ್ಚರಗೊಳಿಸಿದನು. ‖ ೧ ‖ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ವಲ್ಗು - ಮನೋಹರವಾಗಿ, ವ್ಯಾಹರತಾಂ - ನುಡಿಯುತ್ತಿರುವ, ವನ್ಯಾನಾಂ - ವನದಲ್ಲಿರುವ ಹಕ್ಕಿಗಳ, ಸ್ವನಂ - ಧ್ವನಿಯನ್ನು, ಶೃಣು - ಕೇಳು, ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಪ್ರಸ್ಥಾನಸ್ಯ - ಪಯಣಕ್ಕೆ, ಕಾಲಃ - ಉಚಿತಕಾಲವು, ಸಂಪ್ರತಿಷ್ಠಾಮಹೇ - ಎದ್ದುಹೋಗೋಣ. ‖ ೨ ‖ ಸಃಲಕ್ಷ್ಮಣಃ - ಆ ಲಕ್ಷ್ಮಣನು, ಸುಪ್ತಃ - ನಿದ್ದೆ ಹೋಗುತ್ತ, ಸಮಯೇ - ಪ್ರಯಾಣಸಮಯದಲ್ಲಿ, ಭ್ರಾತ್ರಾ - ಅಣ್ಣನಿಂದ, ಪ್ರತಿಬೋಧಿತಃ - ಎಚ್ಚರಗೊಳಿಸಲ್ಪಟ್ಟವರಾಗಿ, ನಿದ್ರಾಂಚ - ನಿದ್ರೆಯನ್ನು, ತಂದ್ರೀಚ - ಕಣ್ಣುಮುಚ್ಚುವಿಕೆಯನ್ನೂ, ಪ್ರಸಕ್ತಂಚ - ದೇಹದಲ್ಲಿ ಹುಟ್ಟಿದ, ಪ್ರಥಿಶ್ರಮಂ - ಮಾರ್ಗಾಯಾಸವನ್ನೂ, ಜಹೌ - ಬಿಟ್ಟನು. ‖ ೩ ‖ ತತಃ - ಬಳಿಕ, ತೇಸರ್ವೇ - ಅವರೆಲ್ಲರೂ, ಉತ್ಥಾಯ - ಎದ್ದು, ನದ್ಯಾಃ - ನದಿಯ, ಶುಭಂ - ಮಂಗಳಕರವಾದ, ಜಲಂ - ಉದಕವನ್ನು, ಸ್ಪೃಷ್ಟ್ವಾ - ಸ್ಪರ್ಶಿಸಿ, (ಅಂದರೆ ಸ್ನಾನಮಾಡಿ)

ಆ ಬಳಿಕ ರಾತ್ರಿಯು ಕಳೆಯಲು ಶ್ರೀರಾಮನು ತಾನು ಮೊದಲು ಎಚ್ಚರಗೊಂಡವನಾಗಿ, ಸ್ವಲ್ಪವಾಗಿ ನಿದ್ರಿಸುತ್ತಿದ್ದ ಲಕ್ಷ್ಮಣಸ್ವಾಮಿಯನ್ನು ಮೆಲ್ಲನೆ ಎಚ್ಚರಿಸಿ, "ಲಕ್ಷ್ಮಣ ! ಈ ವನದಲ್ಲಿ ಮೃದುಮಧುರವಾಗಿ ನುಡಿಯುತ್ತಿರುವ ಶುಕಶಾರಿಕಾದಿಪಕ್ಷಿಗಳ ಕೂಜಿತಗಳನ್ನು ಕೇಳಿದೆಯಾ ! ನಮ್ಮ ಪ್ರಯಾಣಕ್ಕೆ ಇದೇ ಉಚಿತವಾದ ಸಮಯವಾಗಿದೆ; ಏಳು ; ಮುಂಬರಿಯುವ" ಎಂದು ಹೇಳಿದನು. ಶ್ರೀರಾಮನೀರೀತಿ ನುಡಿಯಲು, ಲಕ್ಷ್ಮಣನು ತನ್ನಣ್ಣನಿಂದೆಚ್ಚರಗೊಳಿಸಲ್ಪಟ್ಟು ನಿದ್ರೆಯನ್ನು ತೊರೆದು,ಕಣ್ತೆರದು, ಸ್ವದೇಹಜನ್ಯವಾದ ಮಾರ್ಗಾಯಾಸವನ್ನು ಸಹ ತೊರೆದವನಾದನು. ಆಮೇಲೆ ಶ್ರೀರಾಮಲಕ್ಷ್ಮಣಸೀತೆಯರೆಲ್ಲರೂ ಎದ್ದವರಾಗಿ ಮಂಗಳಕರವಾದ ಆ ಯಮುನಾ ನದಿಯಲ್ಲಿ ಮಿಂದು, ಭರದ್ವಾಜ ಮುನಿಯಿಂದ ಆಜ್ಞಾಪಿತವಾದ ಚಿತ್ರಕೂಟ ಪರ್ವತದ ಮಾರ್ಗದಲ್ಲಿ ಹೊರಟವರಾದರು. ಆ ಬಳಿಕಲಾ

ನ್ಯೃಷಿಣಾದಿಷ್ಟಂ ಚಿತ್ರಕೂಟಸ್ಯ ತಂ ಯಯುಃ ॥ ೪ ॥ ತತ ಸ್ಸಂಪ್ರಸ್ಥಿತಃ ಕಾಲೇ ರಾಮ ಸ್ಸೌಮಿತ್ರಿಣಾ ಸಹ ॥ ಸೀತಾಂ ಕಮಲಪತ್ರಾಕ್ಷೀ ಮಿದಂ ವಚನ ಮಬ್ರವೀತ್ ॥ ೫ ॥ ಆದೀಪ್ತಾನಿವ ವೈದೇಹಿ ! ಸರ್ವತಃ ಪುಷ್ಪಿತಾ ನ್ನಗಾರ್ ॥ ಸ್ವೈಃ ಪುಷ್ಪೈಃ ಕಿಂಶುಕಾರ್ ಪಶ್ಯ ಮಾಲಿನ ಶ್ಶಿಶಿರಾತ್ಯಯೇ ॥ ೬ ॥ ಪಶ್ಯ ಭಲ್ಲಾತಕಾರ್ ಫುಲ್ಲಾ ನ್ನರೈ ರನುಪಸೇವಿತಾರ್ ॥ ಫಲಪತ್ರೈ ರವನತಾ ನ್ನೂನಂ ಶಕ್ಷ್ಯಾಮಿ ಜೀವಿತುಂ ॥ ೭ ॥ ಪಶ್ಯ ದ್ರೋಣಪ್ರಮಾಣಾನಿ ಲಂಬಮಾನಾನಿ ಲಕ್ಷ್ಮಣ ! ॥ ಮಧೂನಿ ಮಧುಕಾರೀಭಿ ಸ್ಸಂಭೃತಾನಿ ನಗೇನಗೇ ॥೮॥ ಏಷ

ಋಷಿಣಾ - ಭರದ್ವಾಜಋಷಿಯಿಂದ, ಆದಿಷ್ಟಂ - ಆಜ್ಞಾಪಿಸಲ್ಪಟ್ಟ, ಚಿತ್ರಕೂಟಸ್ಯ - ಚಿತ್ರಕೂಟ ಪರ್ವತದ, ತಂಪಂಥಾನಂ - ಆ ಮಾರ್ಗದಲ್ಲಿ, ಯಯುಃ - ಹೊರಟರು. ॥ ೪ ॥ ತತಃ - ಬಳಿಕ, ಕಾಲೇ - ಪ್ರಾತಃಕಾಲದಲ್ಲಿ, ರಾಮಃ - ಶ್ರೀರಾಮನು, ಸೌಮಿತ್ರಿಣಾಸಹ - ಲಕ್ಷ್ಮಣನೊಡನೆ, ಸಂಪ್ರಸ್ಥಿತಃ - ಹೊರಟವನಾಗಿ, ಕಮಲಪತ್ರಾಕ್ಷೀಂ - ಕಮಲಪತ್ರಗಳಿಗೆ ಸಮಾನವಾದ ನೇತ್ರಗಳುಳ್ಳ, ಸೀತಾಂ - ಸೀತಾದೇವಿಯನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೫ ॥ ಹೇ ವೈದೇಹಿ - ಎಲೌ ಸೀತಾದೇವಿಯೇ, ಶಿಶಿರಾತ್ಯಯೇ - ಶಿಶಿರಋತುವು ಕಳೆದಬಳಿಕ, ಮಾಲಿನಃ - ಪುಷ್ಪಮಾಲಿಕೆಗಳುಳ್ಳ, ಸರ್ವತಃ - ಯಲ್ಲೆಡೆಯಲ್ಲಿಯೂ, ಪುಷ್ಪಿತಾರ್ - ಹೂಮೊಳೆತಿರುವ, ಸ್ವೈಃಪುಷ್ಪೈಃ - ಸ್ವಕೀಯಪುಷ್ಪಗಳಿಂದ, ಆದೀಪ್ತಾನಿವ - ಪ್ರಜ್ವಲಿಸಿದವೋ ಎಂಬಂತಿರುವ, ಕಿಂಶುಕಾನ್ನಗಾರ್ - ಪಲಾಶವೃಕ್ಷಗಳನ್ನು, ಪಶ್ಯ - ನೋಡು. ॥ ೬ ॥ ಫುಲ್ಲಾರ್ - ವಿಕಸಿತಗಳಾದ, ನರೈಃ - ಮನುಷ್ಯರಿಂದ, ಅನುಪಸೇವಿತಾರ್ - ಸೇವಿಸಲ್ಪಡದಿರುವ, ಫಲಪತ್ರೈಃ - ಫಲಗಳಿಂದಲೂ ಎಲೆಗಳಿಂದಲೂ, ಅವನತಾರ್ - ಬೊಗ್ಗಿರುವ, ಭಲ್ಲಾತಕಾರ್ - ಗೇರುಗಿಡಗಳನ್ನು, ಪಶ್ಯ - ನೋಡು, ಜೀವಿತುಂ - ಬದುಕಲು,, ಶಕ್ಷ್ಯಾಮಿ - ಶಕ್ತನಾದೆನು, ನೂನಂ - ನಿಶ್ಚಯವು. ॥ ೭ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ದ್ರೋಣಪ್ರಮಾಣಾನಿ, ದ್ರೋಣ-ಎರಡು ಕೊಳಗದ, ಪ್ರಮಾಣಾನಿ- ಅಳತೆಯುಳ್ಳ, ಮಧುಕಾರೀಭಿಃ - ಜೇನುಹುಳುಗಳಿಂದ, ಸಂಭೃತಾನಿ - ಇರಿಸಲ್ಪಟ್ಟ, ನಗೇನಗೇ -

ಪ್ರಾತಃಕಾಲದಲ್ಲಿ ಶ್ರೀರಾಮನು ಲಕ್ಷ್ಮಣನೊಡನೆ ಹೊರಟು ಕಮಲಪತ್ರ ಸಮಾನವಾದ ನಯನಗಳುಳ್ಳ ಸೀತಾದೇವಿಯನ್ನು ಕುರಿತು "ಎಲೌ ಸೀತಾದೇವಿಯೆ! ಶಿಶಿರಋತುವು ಕಳೆದ ಬಳಿಕ ಮನೋಹರವಾದ ಪೂಮಾಲಿಕೆಗಳುಳ್ಳವುಗಳಾಗಿ, ಎಲ್ಲೆಡೆಗಳಲ್ಲಿಯೂ, ಹೂ ಮೊಳೆತ ಪುಷ್ಪಗಳಿಂದ ಬೆಳಗುತ್ತಿರುವುವೋ ಎಂಬಂತಿರುವ ಪಲಾಶವೃಕ್ಷಗಳನ್ನುನೋಡು! ಚಿಗುರೊಡೆದುದಾಗಿಯೂ, ಮಾನವರಿಂದುಪಸೇವಿತವಾಗದಿರುವುವಾಗಿಯೂ, ಫಲಗಳಿಂದ ಬಾಗಿರುವುವೂ ಆದ ಗೇರು ಗಿಡಗಳನ್ನು ನೋಡಿದೆಯಾ ! ಎಷ್ಟು ರಮ್ಯವಾಗಿವೆ ? ಓ ಲಕ್ಷ್ಮಣನೆ ! ಎರಡು ಕೊಳಗದಳತೆಯುಳ್ಳುವಾಗಿಯೂ, ಜೇನು ದುಂಬಿಗಳಿಂದ ಶೇಖರಿಸಲ್ಪಟ್ಟುವಾಗಿಯೂ, ಪ್ರತಿ ಗಿಡದಲ್ಲಿಯೂ ಜೋಲಾಡುತ್ತಿರುವುವಾಗಿಯೂ ಇರುವ ಮನೋಹರವಾದೀ ಜೇನು ಗೂಡುಗಳನ್ನು ನೋಡು ; ಹೂಗಳ ಹಾಸುವಿಕೆಯಿಂದ ನಿಬಿಡಿತವಾಗಿಯೂ, ಮನೋಹರವಾಗಿಯೂ ಇರುವ ವೃಕ್ಷಾಲವಾಲಗಳಲ್ಲಿ ಮಳೆಗುಟಕನ ಹಕ್ಕಿಗಳು ಧ್ವನಿ ಮಾಡು

ಕ್ರೋಶತಿ ನತ್ಯೂಹ ಸ್ತಂಶಿಖೀ ಪ್ರತಿಕೂಜತಿ ॥ ರಮಣೀಯೇ ವನೋದ್ದೇಶೇ ಪುಷ್ಪಸಂಸ್ತರ ಸಂಕಟೇ ॥ ೯ ॥ ಮಾತಂಗ ಯೂಥಾನುಸೃತಂ ಪಕ್ಷಿಸಂಘಾನುನಾದಿತಂ ॥ ಚಿತ್ರಕೂಟಮಿಮಂ ಪಶ್ಯ ಪ್ರವೃದ್ಧ ಶಿಖರಂ ಗಿರಿಂ ॥ ೧೦ ॥ ಸಮಂ ಭೂಮಿತಲೇ ರಮ್ಯೇ ದ್ರುಮೈರ್ಬಹುಭಿ ರಾವೃತೇ ॥ ಪುಣ್ಯೇ ರಂಸ್ಯಾಮಹೇ ತಾತ! ಚಿತ್ರಕೂಟಸ್ಯ ಕಾನನೇ ॥ ೧೧ ॥ ತತಸ್ತೌ ಪಾದಚಾರೇಣ ಗಚ್ಛಂತೌ ಸಹಸೀತಯಾ ॥ ರಮ್ಯಮಾಸೇದತುಶ್ಶೈಲಂ ಚಿತ್ರಕೂಟಂ ಮನೋ

ಪ್ರತಿಗಿಡಗಳಲ್ಲಿಯೂ, ಲಂಬಮಾನಾನಿ - ಜೋಲಾಡುತ್ತಿರುವ, ಮಧೂನಿ - ಜೇನುಗೂಡುಗಳನ್ನು, ಪಶ್ಯ - ನೋಡು. ॥ ೮ ॥ ಪುಷ್ಪಸಂಸ್ತರಸಂಕಟೇ, ಪುಷ್ಪ - ಹೂಗಳ, ಸಂಸ್ತರ - ಹಾಸುವಿಕೆಯಿಂದ, ಸಂಕಟೇ - ನಿಬಿಡಿತವಾದ, ರಮಣೀಯೇ - ಮನಸ್ಸಿಗಿಂಪಾದ, ವನೋದ್ದೇಶೇ-ವನಪ್ರದೇಶದಲ್ಲಿ, ಏಷಃ - ಈ, ನತ್ಯೂಹಃ - ಮಳೆಗುಟುಕನಹಕ್ಕಿಯು, ಕ್ರೋಶತಿ - ಕೂಗುತ್ತದೆ, ತಂ - ಆ ಹಕ್ಕಿಯನ್ನು, ಶಿಖೀ - ನವಿಲು, ಪ್ರತಿಕೂಜತಿ - ಪ್ರತಿಯಾಗಿ ಕೂಗುತ್ತಾಳೆ. ॥ ೯ ॥ ಮಾತಂಗಯೂಥಾನುಸೃತಂ - ಆನೆಗಳ ಗುಂಪುಗಳಿಂದ ಅನುಸರಿಸಲ್ಪಟ್ಟ, ಪಕ್ಷಿಸಂಘಾನುನಾದಿತಂ, ಪಕ್ಷಿಸಂಘ-ಹಕ್ಕಿಗಳ ಸಮೂಹದಿಂದ, ಅನುನಾದಿತಂ - ಧ್ವನಿಗೊಳಿಸಲ್ಪಟ್ಟ, ಪ್ರವೃದ್ಧಶಿಖರಂ, ಪ್ರವೃದ್ಧ - ಅತ್ಯುನ್ನತವಾದ, ಶಿಖರಂ - ತುದಿಯುಳ್ಳ, ಚಿತ್ರಕೂಟಂ - ಚಿತ್ರಕೂಟವೆಂಬ, ಇಮಂಗಿರಿಂ - ಈ ಬೆಟ್ಟವನ್ನು, ಪಶ್ಯ - ನೋಡು. ॥ ೧೦ ॥ ಬಹುಭಿಃ - ಅನೇಕಗಳಾದ, ದ್ರುಮೈಃ - ಗಿಡಗಳಿಂದ, ಆವೃತೇ - ಸುತ್ತಿಕೊಳ್ಳಲ್ಪಟ್ಟ, ರಮ್ಯೇ - ಇಂಪಾಗಿರುವ, ಪುಣ್ಯೇ - ಪುಣ್ಯಕರವಾದ, ಸಮಭೂಮಿತಲೇ - ಸಮವಾದ ಭೂಪ್ರದೇಶವುಳ್ಳ, ಚಿತ್ರಕೂಟಸ್ಯ - ಚಿತ್ರಕೂಟಪರ್ವತದ, ಕಾನನೇ - ಅರಣ್ಯದಲ್ಲಿ; ಹೇ ತಾತ - ಎಲೈ ವತ್ಸನೆ! ರಂಸ್ಯಾಮಹೇ - ವಿಹರಿಸೋಣ. ॥ ೧೧ ॥ ತತಃ - ಬಳಿಕ, ತೌ - ಆ ಶ್ರೀರಾಮಲಕ್ಷ್ಮಣರು, ಪಾದಚಾರೇಣ - ಪಾದಗಳ ಸಂಚಾರದಿಂದ, ಸೀತಯಾಸಹ - ಸೀತಾದೇವಿಯೊಡನೆ, ಗಚ್ಛಂತೌ - ಹೋಗುತ್ತ, ರಮ್ಯಂ - ಪ್ರಶಸ್ತವಾದ, ಮನೋರಮಂ - ಮನಸ್ಸಿ

ತ್ತಿರುವವು: ಈ ಹಕ್ಕಿಗಳ ಧ್ವನಿಯನ್ನನುಕರಿಸಿ ಮಯೂರಗಳು ಪ್ರತಿಧ್ವನಿ ಮಾಡುತ್ತಿರುವವು. ಆನೆಗಳ ಹಿಂಡುಗಳಿಂದನುಸೃತವಾಗಿಯೂ, ಹಕ್ಕಿಗಳ ಗುಂಪುಗಳಿಂದ ಧ್ವನಿಗೊಳಿಸಲ್ಪಟ್ಟುದಾಗಿಯೂ, ಅತ್ಯುನ್ನತ ಶಿಖರದಿಂದ ವಿರಾಜಮಾನವಾಗಿಯೂ ಇರುವ ಈ ಸುಪ್ರಸಿದ್ಧ ಚಿತ್ರಕೂಟ ಪರ್ವತವನ್ನು ನೋಡು. ವತ್ಸ ಲಕ್ಷ್ಮಣ! ಅನೇಕ ವೃಕ್ಷಗಳಿಂದ ಸುತ್ತುವರೆಯಲ್ಪಟ್ಟುದಾಗಿಯೂ, ರಮ್ಯವಾಗಿಯೂ, ಪುಣ್ಯಕರವಾಗಿಯೂ, ಹಳ್ಳತಿಟ್ಟೆಗಳಿಲ್ಲದೆ ಸಮವಾದ ಭೂಭಾಗವುಳ್ಳುದಾಗಿಯೂ ಇರುವ ಈ ಚಿತ್ರಕೂಟ ಪರ್ವತ ಸಂಬಂಧವಾದ ಅರಣ್ಯಗಳಲ್ಲಿ ವಿಹರಿಸೋಣ" ಎಂದು ನುಡಿದವನಾದೆನು. ॥೮-೧೦॥ ಶ್ರೀರಾಮಮೂರ್ತಿಯಿರೀತಿ ನುಡಿದ ಮೇಲೆ ಅತನು ಸೀತಾ ಲಕ್ಷ್ಮಣರೊಡನೆ ಆ ವನದಲ್ಲಿ ಸಂಚರಿಸುತ್ತ, ಶ್ರೇಷ್ಠವೂ, ಮನಕಿಂಪೂ ಆಗಿರುವ ಚಿತ್ರಕೂಟ ಪರ್ವತವನ್ನು ಸೇರಿದರು. ವಿವಿಧ ಪಕ್ಷಿ ಸಮೂಹ ಸಮನ್ವಿತವೂ, ಬಹುವಿಧ ಕಂದಮೂಲ ಫಲಭರಿತವೂ, ಮನೋಹರವೂ, ಅನೇಕ ಪುಷ್ಪ ಸಮನ್ವಿತ ವೃಕ್ಷ ಶೋಭಿತವೂ, ರುಚಿರೋದಕವಿರಾಜಿತವೂ ಆಗಿರುವ ಆ ಚಿತ್ರಕೂಟಾದ್ರಿಯನ್ನು ಸೇರಿದ ಶ್ರೀರಾಮ

ರಮಂ ॥ ೧೨ ॥ ತಂತು ಪರ್ವತಮಾಸಾದ್ಯ ನಾನಾ ಪಕ್ಷಿಗಣಾಯುತಂ ॥
ಬಹುಮೂಲಫಲಂ ರಮ್ಯಂ ಸಂಪನ್ನಂ ಸರಸೋದಕಂ ॥ ೧೩ ॥ ಮನೋ
ಜ್ಞೋಯಂ ಗಿರಿ ಸ್ಸೌಮ್ಯ! ನಾನಾದ್ರುಮ ಲತಾಯುತಃ ॥ ಬಹುಮೂಲಫಲೋ
ರಮ್ಯ ಸ್ಸ್ವಾಜೀವಃ ಪ್ರತಿಭಾತಿ ಮೇ ॥೧೪॥ ಮುನಯಶ್ಚ ಮಹಾತ್ಮಾನೋ
ವಸಂತ್ಯಸ್ಮಿನ್ ಶಿಲೋಚ್ಚಯೇ ॥ ಅಯಂ ವಾಸೋ ಭವೇ ತ್ತಾವದತ್ರಸೌಮ್ಯ!
ರಮೇಮಹಿ ॥ ೧೫ ॥ ಇತಿ ಸೀತಾಚ ರಾಮಶ್ಚ ಲಕ್ಷ್ಮಣಶ್ಚ ಕೃತಾಂಜಲಿಃ ॥
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿ ಮಭಿವಾದಯನ್ ॥ ೧೬ ॥ ತಾನ್ಮ

ಗಿಂಪಾಗಿರುವ, ಚಿತ್ರಕೂಟಂಶೈಲಂ - ಚಿತ್ರಕೂಟಪರ್ವತವನ್ನು, ಆಸೇದತುಃ - ಹೊಂದಿದರು. ॥ ೧೨ ॥ ನಾನಾಪಕ್ಷಿಗಣಾಯುತಂ, ನಾನಾ - ಅನೇಕಬಗೆಗಳಾದ, ಪಕ್ಷಿ - ಹಕ್ಕಿಗಳ, ಗಣ - ಸಮೂಹದಿಂದ, ಆಯುತಂ - ಕೂಡಿರುವ, ಬಹುಮೂಲಫಲಂ - ಅನೇಕ ಕಂದಮೂಲಗಳೂ, ಫಲಗಳೂವುಳ್ಳ, ರಮ್ಯಂ - ಮನೋಹರವಾದ, ಸಂಪನ್ನಂ - ಅನೇಕ ಪುಷ್ಪಗಳಿಂದ ತುಂಬಿರುವ, ಸರಸೋದಕಂ - ತಿಳಿನೀರುಳ್ಳ, ತಂಪರ್ವತಂ - ಆ ಬೆಟ್ಟವನ್ನು, ಆಸಾದ್ಯ - ಹೊಂದಿ, ಲಕ್ಷ್ಮಣಂ- ಲಕ್ಷ್ಮಣಸ್ವಾಮಿಯನ್ನು ಕುರಿತು, ಹೇ ಸೌಮ್ಯ - ಎಲೈ ಸೌಮ್ಯನೆ, ನಾನಾದ್ರುಮಲತಾಯುತಃ - ಅನೇಕಬಗೆಗಳಾದ ವೃಕ್ಷಗಳಿಂದಲೂ ಬಳ್ಳಿಗಳಿಂದಲೂ ಕೂಡಿರುವ, ಬಹುಮೂಲಫಲಃ - ಅನೇಕವಾದ ಕಂದಮೂಲಗಳೂ ಫಲಗಳೂವುಳ್ಳ, ರಮ್ಯಃ - ಪ್ರಶಸ್ತವಾದ, ಸ್ವಾಜೀವಃ - ಸುಖದಲ್ಲಿ ಜೀವನವುಳ್ಳ, ಅಯಂಗಿರಿಃ - ಈ ಬೆಟ್ಟವು, ಮೇ - ನನಗೆ, ಮನೋಜ್ಞಃ - ಮನೋಹರವಾಗಿ, ಪ್ರತಿಭಾತಿ - ತೋರುತ್ತದೆ. ॥ ೧೪ ॥ ಅಸ್ಮಿನ್ಶಿಲೋಚ್ಚಯೇ - ಈ ಪರ್ವತದಲ್ಲಿ, ಮಹಾತ್ಮಾನಃ - ಮಹಾ ಮನಸ್ವಿಗಳಾದ, ಮುನಯಶ್ಚ - ಋಷಿಗಳೂ, ವಸಂತಿ - ವಾಸಮಾಡುತ್ತಾರೆ, ಹೇ ಸೌಮ್ಯ - ಎಲೈ ಸೌಮ್ಯನೇ, ಅಯಂ - ಈ ಬೆಟ್ಟವು, ವಾಸಃ - ಇರುವದಕ್ಕೆ ಯೋಗ್ಯವಾಗಿ, ಭವೇತ್ ಆಗಬಹುದು, ಅತ್ರತಾವತ್ - ಈ ಬೆಟ್ಟದಲ್ಲಿಯಾದರೆ, ರಮೇಮಹಿ - ವಿಹರಿಸೋಣ, ಇತಿ - ಇಂತೆಂದು, ರಾಮಃ - ಶ್ರೀರಾಮನು, ಅಬ್ರವೀತ್ - ನುಡಿದನು. ॥ ೧೫ ॥ ಸೀತಾಚ - ಸೀತಾದೇವಿಯು, ರಾಮಶ್ಚ - ಶ್ರೀರಾಮನೂ, ಕೃತಾಂಜಲಿಃ - ಅಂಜಲಿಬದ್ಧನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಸರ್ವೇ - ಸಮಸ್ತರೂ, ಆಶ್ರಮಂ - ವಾಲ್ಮೀಕ್ಯಾಶ್ರಮವನ್ನು ಕುರಿತು, ಅಭಿಗಮ್ಯ - ಬಂದು, ವಾಲ್ಮೀಕಿಂ -

---

ಮೂರ್ತಿಯು ತಮ್ಮನಾದ ಲಕ್ಷ್ಮಣಸ್ವಾಮಿಯನ್ನು ಕುರಿತು, "ಎಲೈ ಸೌಮ್ಯನೆ! ಬಗೆಬಗೆಯ ಗಿಡಮರಗಳಿಂದಕೂಡಿದುದಾಗಿಯೂ, ತರತರಹೆಯಬಳ್ಳಿಗಳಿಂದ ಶೋಭಿಸುತ್ತಿರುವುದಾಗಿಯೂ, ಅನೇಕ ವಿಧಗಳಾದ ಕಂದಮೂಲಫಲಗಳುಳ್ಳುದಾಗಿಯೂ, ಶ್ರೇಷ್ಠವಾದುದಾಗಿಯೂ, ಸುಖಜೀವನವುಳ್ಳುದಾಗಿಯೂ ಇರುವ ಈ ಚಿತ್ರಕೂಟವು ನನಗೆ ಬಹು ರಮಣೀಯವಾಗಿ ಕಾಣುತ್ತಿರುವುದು ; ಅಲ್ಲದೆ ಈ ಪರ್ವತದಲ್ಲಿ ಋಷಿಪುಂಗವರು ವಾಸಿಸುತ್ತಿರುವರು. ಆದುದರಿಂದೀಪ್ರದೇಶವು ವಾಸಯೋಗ್ಯವಾಗಿರಬಹುದು. ನಾವಿಲ್ಲಿಯೇ ವಾಸ ಮಾಡೋಣ" ಎಂದು ಹೇಳಿದನು. ಆ ಬಳಿಕ ಸೀತಾದೇವಿಯೂ, ಶ್ರೀರಾಮನೂ, ಅಂಜಲಿಬದ್ಧನಾದ ಲಕ್ಷ್ಮಣಸ್ವಾಮಿಯೂಸಹ ವಾಲ್ಮೀಕ್ಯಾಶ್ರಮಕ್ಕೈತಂದು ಆ ಮುನಿ

ಹರ್ಷಿಃ ಪ್ರಮುದಿತಃ ಪೂಜಯಾಮಾಸ ಧರ್ಮವಿತ್ ॥ ಆಸ್ಯತಾಮಿತಿ ಚೋವಾಚ ಸ್ವಾಗತಂತು ನಿವೇದ್ಯಚ ॥೧೭॥ ತತೋಽಬ್ರವೀ ನ್ಮಹಾಬಾಹು ರ್ಲಕ್ಷ್ಮಣಂ ಲಕ್ಷ್ಮಣಾಗ್ರಜಃ ॥ ಸನ್ನಿವೇಶ್ಯ ಯಥಾನ್ಯಾಯ ಮಾತ್ಮಾನ ಮೃಷಯೇ ಪ್ರಭುಃ ॥ ೧೮ ॥ ಲಕ್ಷ್ಮಣಾನಯ! ದಾರೂಣಿ ದೃಢಾನಿಚ ವರಾಣಿಚ ॥ ಕುರುಷ್ವಾವಸಥಂ ಸೌಮ್ಯ! ವಾಸೇ ಮೇಽಭಿರತಂ ಮನಃ ॥೧೯॥ ತಸ್ಯ ತದ್ವಚನಂ ಶ್ರುತ್ವಾ ಸೌಮಿತ್ರಿ ರ್ವಿವಿಧಾ ದ್ರುಮಾ ॥ ಆಜಹಾರ ತತಶ್ಚಕ್ರೇ ಪರ್ಣಶಾಲಾ ಮರಿಂ

ವಾಲ್ಮೀಕಿಋಷಿಯನ್ನು ಕುರಿತು, ಅಭಿವಾದಯ - ನಮಸ್ಕಾರಮಾಡಿದರು. ॥ ೧೬ ॥ ಧರ್ಮವಿತ್ - ಧರ್ಮವೇತ್ತನೂ, ಮಹರ್ಷಿಃ - ಮಹರ್ಷಿಯೂ ಆದ ವಾಲ್ಮೀಕಿಋಷಿಯು, ಪ್ರಮುದಿತಃ - ಸಂತೋಷಗೊಂಡವನಾಗಿ, ತೌ - ಆ ಸೀತಾರಾಮಲಕ್ಷ್ಮಣರನ್ನು, ಪೂಜಯಾಮಾಸ - ಅರ್ಚಿಸಿದನು, ಸ್ವಾಗತಂತು - ಸುಖಾಗಮನವನ್ನು, ನಿವೇದ್ಯಚ - ತಿಳಿದುಕೊಂಡು, ಆಸ್ಯತಾಂ ಇತಿ - ಕೂಡಲ್ಪಡಲೆಂದು, ಉವಾಚ - ಹೇಳಿದನು. ॥ ೧೭ ॥ ತತಃ - ಅನಂತರದಲ್ಲಿ, ಮಹಾಬಾಹುಃ - ಮಹಾಭುಜಪರಾಕ್ರಮಶಾಲಿಯಾದ, ಪ್ರಭುಃ - ಸಮರ್ಥನಾದ, ಲಕ್ಷ್ಮಣಾಗ್ರಜಃ - ಶ್ರೀರಾಮನು, ಯಥಾನ್ಯಾಯಂ - ಶಾಸ್ತ್ರೋಕ್ತವಾಗಿ, ಋಷಯೇ - ವಾಲ್ಮೀಕಿಋಷಿಗೆ, ಆತ್ಮಾನಂ - ತನ್ನನ್ನು, ಸನ್ನಿವೇದ್ಯ - ತಿಳುಹಿ, ಲಕ್ಷ್ಮಣಂ - ಲಕ್ಷ್ಮಣಸ್ವಾಮಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೮ ॥ ಹೇ ಸೌಮ್ಯ - ಎಲೈ ಸೌಮ್ಯನೇ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ದೃಢಾನಿ - ಗಟ್ಟಿಯಾಗಿರುವ, ವರಾಣಿಚ - ಶ್ರೇಷ್ಠಗಳಾದ, ದಾರೂಣಿ - ಮರಗಳನ್ನು, ಆನಯ - ತೆಗೆದುಕೊಂಡುಬಾ, ಆವಸಥಂ - ಮನೆಯನ್ನು, ಕುರುಷ್ವ - ಮಾಡು, ಮೇ - ನನ್ನ, ಮನಃ - ಮನವು, ವಾಸೇ - ಇರುವಿಕೆಯಲ್ಲಿ, ಅಭಿರತಂ - ಆಸಕ್ತವಾಗಿರುವುದು. ॥ ೧೯ ॥ ತಸ್ಯ-ಆ ಶ್ರೀರಾಮನ, ತದ್ವಚನಂ - ಆ ಮಾತನ್ನು, ಶೃತ್ವಾ - ಕೇಳಿ, ಅರಿಂದಮಃ - ಶತ್ರುಸಂಹಾರಕನಾದ, ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ವಿವಿಧಾ - ನಾನಾಬಗೆಗಳಾದ, ದ್ರುಮಾ - ಗಿಡಗಳನ್ನು, ಆಜಹಾರ - ತಂದನು, ತತಃ - ಆ ಮರಗಳಿಂದ, ಪರ್ಣಶಾಲಾಂ - ಪರ್ಣಶಾಲೆಯನ್ನು, ಚಕಾರ - ಮಾಡಿದನು.

ಪುಂಗವನಿಗೆ ವಂದನೆಯಂಗೈದರು. ॥ ೧೧-೧೬ ॥ ಸಕಲ ಧರ್ಮರಹಸ್ಯಗಳನ್ನು ತಿಳಿದವನೂ, ಮಹರ್ಷಿಯೂ ಆಗಿರುವ ಆ ವಾಲ್ಮೀಕಿಋಷಿಯು ಮಹಾಸಂತಸವಾಂತು ಆ ಸೀತಾ ರಾಮ ಲಕ್ಷ್ಮಣರನ್ನು ಸತ್ಕರಿಸಿಪವನಾಗಿ, ಅವರ ಸುಖಾಗಮನವನ್ನು ತಿಳಿದುಕೊಂಡು ಕುಳಿತುಕೊಳ್ಳುವಂತೆ ಹೇಳಿದನು. ಆಗ ಮಹಾಭುಜಬಲಪರಾಕ್ರಮಶಾಲಿಯಾಗಿಯೂ, ಬಹು ಸಮರ್ಥನಾಗಿಯೂ, ಲಕ್ಷ್ಮಣಾಗ್ರಜನಾಗಿಯೂ ಇರುವ ಶ್ರೀರಾಮಮೂರ್ತಿಯು ಶಾಸ್ತ್ರ ವಿಧಿಯಿಂದ ಆ ಮುನಿಯನ್ನು ಪೂಜಿಸಿ, ತನ್ನ ವಿಚಾರವನ್ನಾತನಿಗೆ ತಿಳುಹಿ ಲಕ್ಷ್ಮಣನನ್ನು ಕುರಿತಿಂತೆಂದನು. ॥ ೧೭-೧೮ ॥ “ಎಲೈ ಸೌಮ್ಯನಾದ ಲಕ್ಷ್ಮಣನೆ! ಶ್ರೇಷ್ಠವಾಗಿಯೂ, ಗಟ್ಟಿಯಾಗಿಯೂ ಇರುವ ಗಿಡಗಳ ರೆಂಬೆಗಳನ್ನು ತೆಗೆದುಕೊಂಡು ಬಾ; ಅವುಗಳಿಂದ ಗೃಹವೊಂದನ್ನು ನಿರ್ಮಿಸುವವನಾಗು. ನನಗೆ ಈ ಪ್ರದೇಶದಲ್ಲಿಯೇ ಇರಬೇಕೆಂಬ ಅಪೇಕ್ಷೆಯಿರುವುದು” ಶ್ರೀರಾಮನೀರೀತಿ ನುಡಿಯಲು ಲಕ್ಷ್ಮಣನು ವಿಧವಿಧವಾದ ವೃಕ್ಷ

ದನುಃ ॥ ೨೦ ॥ ತಾಂ ನಿಷ್ಠಿತಾಂ ಬದ್ಧಕಟಾಂ ದೃಷ್ಟ್ವಾ ರಾಮ ಸ್ಸುದರ್ಶನಾಂ ॥ ಶುಶ್ರೂಷಮಾಣ ಮೇಕಾಗ್ರಮಿದಂ ವಚನ ಮಬ್ರವೀತ್ ॥ ೨೧ ॥ ಐಣೇಯಂ ಮಾಂಸಮಾಹೃತ್ಯ ಶಾಲಾಂ ಯಕ್ಷ್ಯಾಮಹೇ ವಯಂ ॥ ಕರ್ತವ್ಯಂ ವಾಸ್ತು ಶಮನಂ ಸೌಮಿತ್ರೇ! ಚಿರಜೀವಿಭಿಃ ॥ ೨೨ ॥ ಮೃಗಂ ಹತ್ವಾನಯ ಕ್ಷಿಪ್ರಂ ಲಕ್ಷ್ಮಣೇಹ ಶುಭೇಕ್ಷಣ! ॥ ಕರ್ತವ್ಯ ಶ್ಶಾಸ್ತ್ರದೃಷ್ಟೋಹಿ ವಿಧಿ ರ್ಧರ್ಮ ಮನು ಸ್ಮರ ॥ ೨೩ ॥ ಭ್ರಾತುರ್ವಚನ ಮಾಜ್ಞಾಯ ಲಕ್ಷ್ಮಣಃ ಪರವೀರಹಾ ॥ ಚಕಾರಸ ಯಥೋಕ್ತಂ ಚತಂ ರಾಮಃ ಪುನರಬ್ರವೀತ್ ॥ ೨೪ ॥ ಐಣೇಯಂ

॥ ೨೦ ॥ ರಾಮಃ - ಶ್ರೀರಾಮನು, ನಿಷ್ಠಿತಾಂ - ನಿಶ್ಚಲವಾದ, ಬದ್ಧಕಟಾಂ - ಕಟ್ಟಲ್ಪಟ್ಟ ಚಾಪೆಗಳುಳ್ಳ, ಸುದರ್ಶನಾಂ - ನೋಡುವದಕ್ಕೆ ರಮ್ಯವಾದ, ತಾಂ - ಆ ಪರ್ಣಶಾಲೆಯನ್ನು, ದೃಷ್ಟ್ವಾ - ಕಂಡು, ಶುಶ್ರೂಷಮಾಣಂ - ಸೇವೆಮಾಡುತ್ತಿರುವ, ಏಕಾಗ್ರಂ - ನಿಶ್ಚಲಚಿತ್ತನಾದ ಲಕ್ಷ್ಮಣನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೧ ॥ ಹೇ ಸೌಮಿತ್ರೇ- ಎಲೈ ಲಕ್ಷ್ಮಣನೇ, ಚಿರಜೀವಿಭಿಃ - ಚಿರಜೀವಿಗಳಿಂದ, ವಾಸ್ತುಶಮನಂ - ವಾಸ್ತುಶಾಂತಿಯು, ಕರ್ತವ್ಯಂ - ಮಾಡತಕ್ಕುದು, ವಯಂ - ನಾವು, ಐಣೇಯಂ - ಚಿಗುರಿಯಸಂಬಂಧವಾದ, ಮಾಂಸಂ- ಮಾಂಸವನ್ನು, ಆಹೃತ್ಯ - ತೆಗದುಕೊಂಡುಬಂದು, ಶಾಲಾಂ - ಪರ್ಣಶಾಲೆಯನ್ನುದ್ದೇಶಿಸಿ, ಯಕ್ಷ್ಯಾಮಹೇ - ಯಾಗಮಾಡೋಣ. ॥ ೨೨ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೆ, ಹೇ ಶುಭೇಕ್ಷಣ - ಎಲೈ ಮಂಗಳಕರವಾದ ನೋಟವುಳ್ಳವನೇ, ಇಹ - ಈ ಅರಣ್ಯದಲ್ಲಿ, ಮೃಗಂ ಮೃಗವನ್ನು, ಹತ್ವಾ - ಹೊಡೆದು, ಕ್ಷಿಪ್ರಂ - ಜಾಗ್ರತೆಯಾಗಿ, ಆನಯ - ತೆಗದುಕೊಂಡುಬಾ, ಶಾಸ್ತ್ರದೃಷ್ಟಃ - ಶಾಸ್ತ್ರದಲ್ಲಿ ಹೇಳಿರುವ, ವಿಧಿಃ - ಕರ್ಮಾನುಷ್ಠಾನವು, ಕರ್ತವ್ಯಃ - ಮಾಡತಕ್ಕುದು, ಧರ್ಮಂ - ಧರ್ಮವನ್ನು, ಅನುಸ್ಮರ - ತಿಳಿದುಕೋ. ॥ ೨೩ ॥ ಭ್ರಾತುಃ - ಅಣ್ಣನ, ವಚನಂ - ಮಾತನ್ನು, ಆಜ್ಞಾಯ - ತಿಳಿದ, ಪರವೀರಹಾ - ಶತ್ರುಸಂಹಾರಕನಾದ, ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ಯಥೋಕ್ತಂ - ಅಣ್ಣನುಹೇಳಿದಂತೆ, ಚಕಾರ - ಮಾಡಿದನು, ಸರಾಮಃ - ಆ ಶ್ರೀರಾಮನು, ತಂ - ಆ ಲಕ್ಷ್ಮಣ ಸ್ವಾಮಿಯನ್ನು ಕುರಿತು, ಪುನಃ - ಮತ್ತು, ಅಬ್ರವೀತ್ - ನುಡಿದನು. ॥ ೨೪ ॥ ಏತತ್

ಗಳನ್ನು ತೆಗೆದುಕೊಂಡು ಬಂದು, ಪರ್ಣಗೃಹವನ್ನು ನಿರ್ಮಿಸಿದವನಾದನು. ಆಗ ಶ್ರೀರಾಮನು ಕದಲದಿರುವಂತೆನಿರ್ಮಿಸಲ್ಪಟ್ಟ ಆವರಣವುಳ್ಳುದಾಗಿಯೂ, ನೋಡಲು ಮನೋಹರವಾಗಿಯೂ ಇರುವ ಪರ್ಣಶಾಲೆಯನ್ನು ನೋಡಿ, ತನ್ನ ಸೇವೆಯನ್ನು ಮಾಡುವವನಾಗಿಯೂ, ಮಹಾ ಜಾಗರೂಕನಾಗಿಯೂ ಇರುವ ಲಕ್ಷ್ಮಣನನ್ನು ಕುರಿತು, "ವತ್ಸ; ಲಕ್ಷ್ಮಣ! ನಾವು ಕೃಷ್ಣಮೃಗದ ಮಾಂಸವನ್ನು ತೆಗೆದುಕೊಂಡು ಬಂದು, ಈ ಪರ್ಣಶಾಲೆಯನ್ನೂ, ಈ ಪರ್ಣಶಾಲಾಧಿಷ್ಠಾನ ದೇವ[illegible]ಳನ್ನೂ ಪೂಜಿಸೋಣ; ಬಹಳ ಕಾಲವಿರಲಪೇಕ್ಷಿಸುವವರು ವಾಸ್ತು ಪೂಜೆಯನ್ನು ಮಾ[illegible]ನೆಯನ್ನು ಪ್ರವೇಶಿಸಬೇಕೆಂದು ಹಿರಿಯರು ಹೇಳುತ್ತಾರೆ. ಎಲೈ ಸುಂದರೇಕ್ಷಣನಾದ ಲಕ್ಷ್ಮಣನೆ! ನೀನು ಬೇಗನೆ ಒಂದು ಕೃಷ್ಣಮೃಗವನ್ನು ಬೇಟೆಯಾಡಿ ತೆಗೆದುಕೊಂಡು ಬರುವವನಾಗು. ಶಾಸ್ತ್ರದಲ್ಲಿ ವಿಧಿಸಿದ

ಶ್ರಪಯಸ್ವೈತ ಚ್ಛಾಲಾಂ ಯಕ್ಷ್ಯಾಮಹೇ ವಯಂ ॥ ತ್ವರ ಸೌಮ್ಯ! ಮುಹೂ
ರ್ತೋಽಯಂ ಶುಭಶ್ಚ ದಿವಸೋ ಹ್ಯಯಂ ॥ ೨೫ ॥ ಸಲಕ್ಷ್ಮಣಃ ಕೃಷ್ಣಮೃಗಂ
ಹತ್ವಾ ಮೇಧ್ಯಂ ಪ್ರತಾಪವಾನ್ ॥ ಅಥಚಿಕ್ಷೇಪ ಸೌಮಿತ್ರಿ ಸ್ಸಮಿದ್ಧೇ ಜಾತ
ವೇದಸಿ ॥ ೨೬ ॥ ತಂತು ಪಕ್ವಂ ಸಮಾಜ್ಞಾಯ ನಿಷ್ಟಪ್ತಂ ಛಿನ್ನ ಶೋಣಿತಂ॥
ಲಕ್ಷ್ಮಣಃ ಪುರುಷವ್ಯಾಘ್ರಮಥ ರಾಘವ ಮಬ್ರವೀತ್ ॥ ೨೭ ॥ ಅಯಂ

ಏಣೇಯಂ - ಈ ಕೃಷ್ಣಸಾರದಮಾಂಸವನ್ನು, ಶ್ರಪಯಸ್ವ - ಕಾಯಿಸು, ವಯಂ - ನಾವು, ಶಾಲಾಂ - ಈ ಶಾಲೆಯನ್ನು ಕುರಿತು, ಯಕ್ಷ್ಯಾಮಹೇ - ಯಾಗಮಾಡೋಣ, ಹೇ ಸೌಮ್ಯ - ಎಲೈ ಸೌಮ್ಯನೆ, ಅಯಂದಿವಸಃ - ಈ ದಿವಸವು, ಅಯಂಮುಹೂರ್ತಃ - ಈ ಮುಹೂರ್ತವು, ಶುಭಶ್ಚ - ಶುಭಕರವಾದುದು (ಎಂದು ನುಡಿದನು.) ॥೨೫॥ ಪ್ರತಾಪವಾನ್-ಮಹಾಪರಾಕ್ರಮಶಾಲಿಯಾದ, ಸಲಕ್ಷ್ಮಣಃ- ಆ ಲಕ್ಷ್ಮಣನು, ಮೇಧ್ಯಂ - ಪರಿಶುದ್ಧವಾದ, ಕೃಷ್ಣಮೃಗಂ - ಚಿಗುರಿಯನ್ನು, ಹತ್ವಾ-ಹೊಡೆದು, ಅಥ - ಬಳಿಕ, ಸಮಿದ್ಧೇ - ಪ್ರಜ್ವಲಿತವಾದ, ಜಾತವೇದಸಿ - ಅಗ್ನಿಯಲ್ಲಿ, ಚಿಕ್ಷೇಪ - ಹಾಕಿದನು. ॥ ೨೬ ॥ ಲಕ್ಷ್ಮಣಃ - ಲಕ್ಷ್ಮಣನು, ನಿಷ್ಟಪ್ತಂ - ಚೆನ್ನಾಗಿಕಾಯಿಸಲ್ಪಟ್ಟ, ಛಿನ್ನಶೋಣಿತಂ - ಹೋಗಲಾಡಿಸಲ್ಪಟ್ಟ ರಕ್ತವುಳ್ಳ, ತಂ - ಆ ಮೃಗವನ್ನು, ಪಕ್ವಂ - ಪಕ್ವವನ್ನಾಗಿ, ಸಮಾಜ್ಞಾಯ - ತಿಳಿದು, ಅಥ - ಬಳಿಕ, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ರಾಘವಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೭ ॥ ಅಯಂಕೃಷ್ಣಮೃಗಃ - ಈ ಕಪ್ಪು ಬಣ್ಣವುಳ್ಳ ಚಿಗುರಿಯು, ಸಮಾಪ್ತಾಂಗಃ - ಪೂರ್ಣಗೊಳಿಸಲ್ಪಟ್ಟ ಶರೀರವುಳ್ಳದಾಗಿ, ಯಥಾ - ಶಾಸ್ತ್ರೋಕ್ತವಾಗಿ, ಶ್ರಿತಃ - ಕಾಯಿಸಲ್ಪಟ್ಟಿತು, ಹೇ ದೇವಸಂಕಾಶ - ಎಲೈ ದೇವತೆಗಳಿಗೆ ಸಮಾನನಾದವನೆ, ಹಿ - ಯಾವ ಕಾರಣ, ಕುಶಲಃ - ಪಂಡಿತನಾದವನು, ಅಸಿ - ಆಗಿರುವೆಯೊ, ತಸ್ಮಾತ್-

ಕರ್ಮವನ್ನು ಮಾಡದಿರಕೂಡದು. ನೀನು ಧರ್ಮವನ್ನು ತಿಳಿದುಕೊಳ್ಳತಕ್ಕುದು. ನಿನಗೂ ಈ ಧರ್ಮವು ತಿಳಿದೇ ಇರುವುದಷ್ಟೆ?" ಎಂದು ಹೇಳಿದನು. ಶತ್ರುವೀರರನ್ನು ಮರ್ದನಗೈವುದರಲ್ಲಿ ಅಮಿತ ಪರಾಕ್ರಮಿಯಾದ ಲಕ್ಷ್ಮಣನು, ಅಣ್ಣನ ಮಾತನ್ನರಿತವನಾಗಿ ಶಾಸ್ತ್ರದಲ್ಲಿ ಹೇಳಿರುವಂತೆಯೇ ಮಾಡಿದವನಾದನು. ಅಷ್ಟರಲ್ಲಿ ಶ್ರೀರಾಮನು ಪರಮಾನಂದವನ್ನು ಹೊಂದಿ ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ಈ ಕೃಷ್ಣಮೃಗಮಾಂಸವನ್ನು ಪಕ್ವಗೊಳಿಸು. ಇದರಿಂದ ಗೃಹದೇವತೆಗಳನ್ನು ಪೂಜಿಸೋಣ; ಈ ಕರ್ಮವನ್ನು ನೆರವೇರಿಸಲು ಇದೇ ಸುಮುಹೂರ್ತವಾಗಿರುವುದು. ಈ ದಿನವು ಯಜಮಾನನಿಗೆ ಸ್ಥೈರ್ಯವನ್ನುಂಟುಮಾಡುವ ದಿನವಾಗಿರುವುದು. ಆದುದರಿಂದ ಸಾವಕಾಶ ಮಾಡಬೇಡ" ಎಂದನು. ಹೀಗೆಂದ ಅಣ್ಣನ ನುಡಿಗಳನ್ನು ಕೇಳಿ ಲಕ್ಷ್ಮಣನು, ಪರಿಶುದ್ಧವಾದ ಆ ಕೃಷ್ಣಮೃಗ ಮಾಂಸವನ್ನು ಉರಿಯುತ್ತಿರುವ ಅಗ್ನಿಯಲ್ಲಿ ಚೆನ್ನಾಗಿ ಪಕ್ವಗೊಳಿಸಿದನು. ಆ ಬಳಿಕ ಸುಪಕ್ವವಾದಾ ಮಾಂಸವನ್ನು ಸಿದ್ಧವಾದುದನ್ನಾಗಿ ತಿಳಿದು ಶ್ರೀರಾಮಮೂರ್ತಿಯನ್ನು ಕುರಿತು, "ಅಣ್ಣ; ರಾಮಚಂದ್ರಾ! ಈ ಕೃಷ್ಣಮೃಗ ಮಾಂಸವನ್ನು, ಕೃಷ್ಣಮೃಗವನ್ನು ಪಕ್ವಗೊಳಿಸುವಂತೆಯೇ ಬೇಯಿಸಿರುವೆನು. ಆದುದರಿಂದೆಲೈದೇವಸಮಾನನಾದ ಶ್ರೀರಾಮನೆ! ನೀನಿನ್ನು ಈ ಮಾಂಸ

ಕೃಷ್ಣ ಸ್ಸಮಾಪ್ತಾಂಗ ಶ್ರಿತಃ ಕೃಷ್ಣಮೃಗೋ ಯಥಾ ॥ ದೇವತಾಂ ದೇವ ಸಂಕಾಶ! ಯಜಸ್ವ ಕುಶಲೋಹ್ಯಸಿ ॥ ೨೮ ॥ ರಾಘುಸ್ನಾತ್ವಾತು ನಿಯತೋ ಗುಣವಾ೯ ಜಪ್ಯಕೋವಿದಃ ॥ ಸಂಗ್ರಹೇಣಾಕರೋ ತ್ಸರ್ವಾ೯ ಮಂತ್ರಾ ನ್ಸತ್ರಾವಸಾನಿಕಾ೯ ॥ ೨೯ ॥ ಇಷ್ಟ್ವಾ ದೇವಗಣಾ ನ್ಸರ್ವಾ ನ್ವಿವೇಶಾವಸಥಂ ಶುಚಿಃ॥ ಬಭೂವಚ ಮನೋಹ್ಲಾದೋ ರಾಮಸ್ಯಾ ಮಿತತೇಜಸಃ ॥ ೩೦ ॥ ವೈಶ್ವದೇವಬಲಿಂ ಕೃತ್ವಾ ರೌದ್ರಂ ವೈಷ್ಣವ ಮೇವಚ ॥ ವಾಸ್ತು ಸಂಶಮನೀಯಾನಿ ಮಂಗಳಾನಿ ಪ್ರವರ್ತಯ೯ ॥ ೩೧ ॥ ಜಪಂಚ ನ್ಯಾಯತಃ ಕೃತ್ವಾ ಸ್ನಾತ್ವಾ

ಆ ಕಾರಣ, ದೇವತಾಂ - ಪರ್ಣಶಾಲಾಭಿಮಾನಿ ದೇವತೆಯನ್ನು, ಯಜಸ್ವ - ಪೂಜಿಸು. ॥ ೨೮ ॥ ಗುಣವಾ೯ - (ಗೋ) ಪ್ರಾಯಶ್ಚಿತ್ತಕರಣಸಾಮರ್ಥ್ಯಾದಿಗುಣವುಳ್ಳ, (ಮ) ಸದ್ಗುಣಸಂಪನ್ನನಾದ, ಜಪ್ಯಕೋವಿದಃ - ಜಪಿಸಬೇಕಾದ ಮಂತ್ರಗಳನ್ನು ಬಹುಚನ್ನಾಗಿ ತಿಳಿದಿರುವ, ರಾಮಃ-ಶ್ರೀರಾಮನು, ಸ್ನಾತ್ವಾ-ಸ್ನಾನಮಾಡಿ,ನಿಯತಃ-ನಿಯಮನಿಷ್ಠನಾಗಿ, ಸತ್ರಾವಸಾನಿಕಾ೯ ವಾಸ್ತುಶಾಂತಿಯ ಸಮಾಪ್ತಿಕರವಾದ, ಸರ್ವಾ೯ಮಂತ್ರಾ೯-ಎಲ್ಲಾ ಮಂತ್ರಗಳನ್ನೂ, ಸಂಗ್ರಹೇಣ-ಸಂಕ್ಷೇಪದಿಂದ, ಜಜಾಪ-ಜಪಮಾಡಿದನು, ಅಕರೋತ್ - ಶಾಂತಿಕರ್ಮವನ್ನೂಮಾಡಿದನು. ॥ ೨೯ ॥ ಶುಚಿಃ - ಶುಚಿರ್ಭೂತನಾಗಿ, ಸರ್ವಾ೯ - ಸಮಸ್ತವಾದ, ದೇವಗಣಾ೯ - ವಾಸ್ತುದೇವತಾಪ್ರಧಾನವಾದ ದೇವತಾಗಣಗಳನ್ನು, ಇಷ್ಟ್ವಾ - ತೃಪ್ತಿಗೊಳಿಸಿ, ಆವಸಥಂ - ಮನೆಯನ್ನು, ವಿವೇಶ - ಹೊಕ್ಕನು, ಅಮಿತತೇಜಸಃ - ಅಪಾರವಾದ ತೇಜಸ್ಸುಳ್ಳ, ರಾಮಸ್ಯ - ಶ್ರೀರಾಮನಿಗೆ, ಮನೋಹ್ಲಾದಶ್ಚ - ಮನಸ್ಸಂತೋಷವೂ, ಬಭೂವ - ಆಯಿತು. ॥ ೩೦ ॥ ವೈಶ್ವದೇವಬಲಿಂ - ವೈಶ್ವದೇವಾಖ್ಯಕವಾದ ಆಯಾಯ ದೇವತಾಉದ್ದೇಶ್ಯಕವಾದ ಬಲಿಯನ್ನು, ರೌದ್ರಂ - ರುದ್ರದೇವತಾಕವಾದ ಬಲಿಯನ್ನು, ವಿಷ್ಣುಂ - ವಿಷ್ಣುದೇವತಾಕವಾದ ಬಲಿಯನ್ನು, ಕೃತ್ವಾ - ಮಾಡಿ, ವಾಸ್ತುಸಂಶಮನೀಯಾನಿ - ವಾಸ್ತುಶಾಂತಿಸಂಬಂಧಗಳಾದ, ಮಂಗಳಾನಿ - ಶುಭಕರಕರ್ಮಗಳನ್ನು, ಪ್ರವರ್ತಯತ್ - ನಡಿಸಿದವನಾದನು. ॥ ೩೧ ॥ ರಾಮಃ - ಶ್ರೀರಾಮನು, ಜಪಂಚ - ಮಂತ್ರಜಪವನ್ನು, ನ್ಯಾಯತಃ - ಶಾಸ್ತ್ರದಂತೆ, ಕೃತ್ವಾ - ಮಾಡಿ, ನದ್ಯಾಂ - ಹೊಳೆಯಲ್ಲಿ, ಯಥಾವಿಧಿ-ಯಥಾ ಶಾಸ್ತ್ರವಾಗಿ, ಸ್ನಾತ್ವಾ-

ದಿಂದ ವಾಸ್ತುದೇವತೆಯನ್ನು ಪೂಜಿಸುವವನಾಗು" ಎಂದು ನುಡಿದವನಾದನು. ಆಗ ಯಜಮಾನನಿಗಿರಬೇಕಾದ ಸಕಲ ಗುಣಗಳಿಂದಲೂ ಒಡಗೂಡಿರುವ ಸಕಲ ಮಂತ್ರವೇತ್ತನಾದ ಶ್ರೀರಾಮನು ಸ್ನಾನವನ್ನು ಮಾಡಿ, ನಿಯಮವಂತನಾಗಿ, ವಾಸ್ತುಯಾಗವನ್ನು ಪೂರ್ಣಗೊಳಿಸಿ, ಅದಕ್ಕೆ ತಕ್ಕ ಮಂತ್ರಗಳೆಲ್ಲವನ್ನೂ ಸಂಕ್ಷೇಪವಾಗಿ ನುಡಿದು, ವಾಸ್ತುಕರ್ಮವನ್ನು ಸಮಾಪ್ತಿಗೊಳಿಸಿದನು. ಇಷ್ಟೆಯಲ್ಲದೆ ಆ ಶ್ರೀರಾಮನು ಸಕಲ ದೇವ ಸಮೂಹಗಳನ್ನೂ ಚೆನ್ನಾಗಿ ಪೂಜಿಸಿ ಪರಿಶುದ್ಧನಾಗಿ ಆ ಪರ್ಣಗೃಹವನ್ನು ಪ್ರವೇಶಿಸಿದನು. ಆಗಲಾ ಶ್ರೀರಾಮನ ಮನಸ್ಸು ಮಹಾ ಸಂತೋಷವನ್ನು ಹೊಂದಿದುದಾಯಿತು. ॥ ೨೯-೩೦ ॥ ಮತ್ತೆಯಾರಾಮಮೂರ್ತಿಯು, ವೈಶ್ವದೇವ ಬಲಿಯನ್ನೂ, ರುದ್ರದೇವತಾ ಸಂಬಂಧವಾದ ಬಲಿಯನ್ನೂ, ವಿಷ್ಣುದೇವತಾಕವಾದ ಬಲಿಯನ್ನೂ, ವಾಸ್ತುದೇವತೆಗಳ ಶಾಂತಿಯನ್ನುಂಟು

ನದ್ಯಾಂ ಯಥಾ ವಿಧಿ||ಪಾಪಸಂಶಮನಂ ರಾಮಶ್ಚಕಾರ ಬಲಿಮುತ್ತಮಂ ||೩೨|| ವೇದಿಸ್ಥಲ ವಿಧಾನಾನಿ ಚೈತ್ಯಾನ್ಯಾಯತನಾನಿಚ || ಆಶ್ರಮಸ್ಯಾ ನುರೂಪಾಣಿ ಸ್ಥಾಪಯಾಮಾಸ ರಾಘವಃ || ೩೩ || ವನ್ಯೈ ರ್ಮಾಲ್ಯೈಃ ಫಲೈ ರ್ಮೂಲೈಃ ಪಕ್ವೈ ರ್ಮಾಂಸೈ ರ್ಯಥಾವಿಧಿ || ಅದ್ಭಿ ರ್ಜಪೈಶ್ಚ ವೇದೋಕ್ತೈ ರ್ದರ್ಭೈಶ್ಚ ಸಸಮಿತ್ಕುಶೈಃ ||೩೪|| ತೌ ತರ್ಪಯಿತ್ವಾ ಭೂತಾನಿ ರಾಘವೌ ಸಹಸೀತಯಾ || ತದಾ ವಿವಿಶತು ಶ್ಶಾಲಾಂ ಸುಶುಭಾಂ ಶುಭಲಕ್ಷಣೌ || ೩೫ || ತಾಂ ವೃಕ್ಷ

ಸ್ನಾನಮಾಡಿ, ಪಾಪಸಂಶಮನಂ - ಪಂಚಸೂನಾಪನೋದಕವಾದ, ಉತ್ತಮಂಬಲಿಂ - ವೈಹಾಯಸಬಲಿಯನ್ನು, ಚಕಾರ - ಮಾಡಿದನು. ||೩೨|| ರಾಘವಃ - ಶ್ರೀರಾಮನು, ವೇದಿಸ್ಥಳ ವಿಧಾನಾನಿ-(ಮ) ಬಲಿಹರಣಸ್ಥಳಗಳ ನಿರ್ಮಾಣಗಳನ್ನು, (ಗೋ) ಮನೆಗೆ ಅಷ್ಟದಿಕ್ಕುಗಳಲ್ಲಿ ಹಾಕತಕ್ಕ ಬಲಿಗೆ ಸ್ಥಾನಗಳ ನಿರ್ಮಾಣಗಳನ್ನು, ಚೈತ್ಯಾನಿ-ದೇವತಾಯತನಗಳನ್ನು, ಆಯತನಾನಿಚ - ಅಗ್ನ್ಯಾಯತನಗಳನ್ನು, ಆಶ್ರಮಸ್ಯ - ಆಶ್ರಮಕ್ಕೆ, ಅನುರೂಪಾಣಿ - ವಾನಪ್ರಸ್ಥಾಶ್ರಮಕ್ಕೆ ಯೋಗ್ಯಗಳಾದ ಗಂಧರ್ವಾದ್ಯಾವಾಸಸ್ಥಾನಗಳನ್ನು, ಸ್ಥಾಪಯಾಮಾಸ - ಪ್ರತಿಷ್ಠೆಮಾಡಿದನು. ||೩೩|| ವನ್ಯೈಃ - ವನದಲ್ಲಿ ಹುಟ್ಟಿದ, ಮಾಲ್ಯೈಃ - ಪುಷ್ಪಗಳಿಂದಲೂ, ಫಲೈಃ - ಫಲಗಳಿಂದಲೂ, ಮೂಲೈಃ - ಕಂದಮೂಲಗಳಿಂದಲೂ, ಯಥಾವಿಧಿ - ವಿಧ್ಯುಕ್ತವಾಗಿ, ಪಕ್ವೈಃ - ಪಕ್ವಗಳಾದ, ಮಾಂಸೈಃ - ಮಾಂಸಗಳಿಂದಲೂ, ಅದ್ಭಿಃ - ಉದಕಗಳಿಂದಲೂ, ವೇದೋಕ್ತೈಃ - ಶೃತ್ಯುಕ್ತಗಳಾದ, ಜಪೈಶ್ಚ - ಜಪಗಳಿಂದಲೂ, ಸಸಮಿತ್ಕುಶೈಃ - ಸಮಿತ್ತುಗಳಿಂದಲೂ ಕುಶಗಳೆಂಬ ದರ್ಭೆಯವಿಶೇಷಗಳಿಂದಲೂ ಕೂಡಿರುವ, ದರ್ಭೈಶ್ಚ - ದರ್ಭೆಗಳಿಂದಲೂ, ಭೂತಾನಿ - ಗೃಹಾಭಿಮಾನಿಗಳಾದ ದೇವತೆಗಳನ್ನು, ತರ್ಪಯಿತ್ವಾ - ತೃಪ್ತಿಗೊಳಿಸಿ, ತದಾ - ಆ ಕಾಲದಲ್ಲಿ, ಶುಭಲಕ್ಷಣೌ - ಶುಭಕರವಾದ ಲಕ್ಷಣಗಳುಳ್ಳ, ತೌರಾಘವೌ - ಆ ರಾಮಲಕ್ಷ್ಮಣರಿಬ್ಬರೂ, ಸೀತಯಾಸಹ - ಸೀತಾದೇವಿಯೊಡನೆ, ಸುಶುಭಾಂ - ಶುಭಕರವಾದ, ಶಾಲಾಂ - ಪರ್ಣಶಾಲೆಯನ್ನು, ವಿವಿಶತುಃ - ಹೊಕ್ಕರು. ||೩೫|| ಸರ್ವೇ - ಆ

ಮಾಡುವ ಮಂಗಳಗಳನ್ನೂ ನಡೆಯಿಸುತ್ತ, ನ್ಯಾಯಪೂರ್ವಕವಾಗಿ ಜಪವಂಗೈದು, ಆಮೇಲೆ ನದೀಸ್ನಾನವನ್ನು ಮಾಡಿ, ಪಾಪವನ್ನು ದೂರಗೊಳಿಸುವ ಉತ್ತಮವಾದ ಬಲಿಯನ್ನು ಮಾಡಿದನು. ಆ ಬಳಿಕಲಾತನು, ಆಶ್ರಮೋಚಿತಗಳಾದ ವೇದಿಕೆಗಳನ್ನೂ, ದೇವಾಲಯಗಳನ್ನೂ, ಅಗ್ನಿಹೋತ್ರ ಗೃಹಗಳನ್ನೂ, ಆ ಆಶ್ರಮದಲ್ಲಿಯೇ ನಿರ್ಮಿಸಿದವನಾದನು. ಆಗ ಶುಭಲಕ್ಷಣ ಲಕ್ಷಿತರಾದಆ ರಾಮ ಲಕ್ಷ್ಮಣ ಸೀತೆಯರು ಮೂವರೂ, ವನದಲ್ಲಿ ದೊರಕುವ ಪೂಮಾಲೆಗಳಿಂದಲೂಫಲಗಳಿಂದಲೂ, ಕಂದಮೂಲಗಳಿಂದಲೂ, ಪಕ್ವಗೊಳಿಸಿದ ಕೃಷ್ಣಮೃಗ ಮಾಂಸಗಳಿಂದಲೂ ಸಂಪ್ರೋಕ್ಷಿಸಿರುವ ಮಂತ್ರೋದಕಗಳಿಂದಲೂ, ದರ್ಭೆಗಳಿಂದಲೂ, ಕುಶಗಳಿಂದಲೂ, ಶಾಸ್ತ್ರೋಕ್ತರೀತಿಯಾಗಿ ಸಕಲಭೂತಗಳನ್ನೂತೃಪ್ತಿಗೊಳಿಸಿ ಮಹಾ ಸುಂದರವಾದಾ ಪರ್ಣಶಾಲೆಯನ್ನು ಪ್ರವೇಶಿಸಿದವರಾದರು. ಹೀಗೆ ಸೀತಾ ರಾಮ ಲಕ್ಷ್ಮಣರು ಮೂವರೂ, ಎಲೆಗಳೇ ಆಚ್ಛಾದನವಾಗುಳ್ಳುದಾಗಿಯೂ, ಮನೋಹರವಾಗಿಯೂ, ಶಾಸ್ತ್ರೋಕ್ತವಿಧಿಯಿಂದ ಲಕ್ಷ್ಮಣಸ್ವಾಮಿಯು ಕಟ್ಟಿರುವುದಾಗಿಯೂ, ಗಾಳಿಯಿಲ್ಲದುದಾಗಿಯೂ ಇರುವ

ಪರ್ಣಚ್ಛದನಾಂ ಮನೋಜ್ಞಾಂ ಯಥಾ ಪ್ರದೇಶಂ ಸುಕೃತಾಂ ನಿವಾತಾಂ ||
ವಾಸಾಯ ಸರ್ವೇ ವಿವಿಶು ಸ್ಸಮೇತಾ ಸ್ಸಭಾಂ ಯಥಾ ದೇವಗಣಾ ಸ್ಸುಧ
ರ್ಮಾಂ || ೩೬ || ಅನೇಕ ನಾನಾಮೃಗ ಪಕ್ಷಿಸಂಕುಲೇ ವಿಚಿತ್ರಪುಷ್ಪ ಸ್ತಬಕೈ
ರ್ದ್ರುಮೈ ರ್ಯುತೇ || ವನೋತ್ತಮೇ ವ್ಯಾಳಮೃಗಾನುನಾದಿತೇ ತದಾ
ವಿಜಹ್ರು ಸ್ಸುಸುಖಂ ಜಿತೇಂದ್ರಿಯಾಃ || ೩೭ ||

ಸುರಮ್ಯ ಮಾಸಾದ್ಯತು ಚಿತ್ರಕೂಟಂ
ನದೀಂಚ ತಾಂ ಮಾಲ್ಯವತೀಂ ಸುತೀರ್ಥಾಂ ||

ಮೂವರು, ಸಮೇತಾಃ - ಕೂಡಿದವರಾಗಿ, ವೃಕ್ಷಪರ್ಣಚ್ಛದನಾಂ - ಗಿಡಗಳ ಎಲೆಗಳೇ ಆಚ್ಛಾದನವಾ ಗುಳ್ಳ, ಮನೋಜ್ಞಾಂ - ಮನೋಹರವಾದ, ಯಥಾಪ್ರದೇಶಂ - ಶಾಸ್ತ್ರೋಕ್ತಸ್ಥಾನವನ್ನು ಅನುಸರಿಸಿ, ಸುಕೃತಾಂ - ನಿರ್ಮಿಸಲ್ಪಟ್ಟ, ನಿವಾತಾಂ, ನಿವಾ - ಘಾಳಿಯಿಲ್ಲದಿರುವ, ತಾಂ ಆ ಪರ್ಣಶಾಲೆಯನ್ನು, ದೇವಗಣಾಃ - ದೇವತಾತಂಡಗಳು, ಸುಧರ್ಮಾಂ-ಸುಧರ್ಮವೆಂದು ಪ್ರಖ್ಯಾತವಾದ, ಸಭಾಂಯಥಾ - ಸಭೆಯನ್ನಂತೆ, ವಾಸಾಯ - ನಿವಾಸಕ್ಕೋಸ್ಕರ, ವಿವಿಶುಃ - ಪ್ರವೇಶಮಾಡಿದರು. || ೩೬ || ಜಿತೇಂದ್ರಿಯಾಃ - ಜಯಿಸಲ್ಪಟ್ಟ ಇಂದ್ರಿಯಗಳುಳ್ಳ ಆ ಸೀತಾರಾಮಲಕ್ಷ್ಮಣರು, ಅನೇಕನಾನಾಮೃಗ ಪಕ್ಷಿಸಂಕುಲೇ - ಅನೇಕ ಬಗೆಗಳಾದ ನಾನಾಜಾತಿಭೇದಗಳುಳ್ಳ ಮೃಗಗಳಿಂದಲೂ ಹಕ್ಕಿಗಳಿಂದಲೂ ವ್ಯಾಪ್ತವಾದ, ವಿಚಿತ್ರಪುಷ್ಪಸ್ತಬಕೈಃ - ನಾನಾ ಬಣ್ಣಗಳಾದ ಹುವ್ವುಗಳ ಗೊಂಚಲುಗಳುಳ್ಳ, ಗಿಡಗ ಳಿಂದ, ಯುತೈಃ - ಕೂಡಿರುವ, ವ್ಯಾಳಮೃಗಾನುನಾದಿತೇ ಸರ್ಪಗಳಿಂದಲೂ ಮೃಗಗಳಿಂದಲೂ ಧ್ವನಿ ಗೊಳಿಸುತ್ತಿರುವ, ವನೋತ್ತಮೇ-ಉತ್ತಮವಾದವನದಲ್ಲಿ, ಸುಸುಖಂ-ಬಹಳಸುಖವಾಗಿ, ತದಾ - ಆಗ, ವಿಜಹ್ರುಃ - ವಿಹರಿಸಿದರು. || ೩೭ || ಸುರಮ್ಯಂ - ಬಹಳ ರಮಣೀಯವಾದ, ಚಿತ್ರಕೂಟಂ - ಚಿತ್ರಕೂಟವನ್ನು, ಆಸಾದ್ಯ-ಹೊಂದಿ, ಮಾಲ್ಯವತೀಂ-ಮಾಲ್ಯವತಿಯೆಂಬ ಹೆಸರುಳ್ಳ, ಸುತೀರ್ಥಾಂ - ಒಳ್ಳೆನೀರುಳ್ಳ, ಮೃಗಪಕ್ಷಿಜುಷ್ಟಾಂ - ಮೃಗಗಳಿಂದಲೂ ಪಕ್ಷಿಗಳಿಂದಲೂ ವ್ಯಾಪ್ತವಾದ, ತಾಂನದೀಂ- ಆ ನದಿಯನ್ನು, ಆಸಾದ್ಯ - ಹೊಂದಿ, ನನಂದ - ಸಂತೋಷಗೊಂಡನು, ಪುರವಿಪ್ರವಾಸಾತ್,

ಪರ್ಣಶಾಲೆಯನ್ನು, ದೇವತೆಗಳು ಸುಧರ್ಮವೆಂಬಇಂದ್ರನರಾಜಸಭೆಯನ್ನುಪ್ರವೇಶಿಸುವಂತೆ ಪ್ರವೇಶಿಸಿದವರಾದರು. ಜಿತೇಂದ್ರಿಯರಾದ ಆ ರಾಮ ಲಕ್ಷ್ಮಣರು, ವಿಧವಿಧಗಳಾ ಗಿಯೂ; ನಾನಾ ಜಾತಿಭೇದಗಳುಳ್ಳವಾಗಿಯೂಇರುವಮೃಗಗಳಿಂದಲೂ, ಪಕ್ಷಿಗಳಿಂ ದಲೂ, ವ್ಯಾಪ್ತವಾಗಿ, ರಂಗುರಂಗಿನಹೂಗೊಂಚಲುಗಳಿಂದ ರಂಜಿಸುವ ಗಿಡಗಳಿಂದೊಡ ಗೂಡಿರುವುದಾಗಿಯೂ, ಸರ್ಪಗಳಿಂದಲೂ, ಮೃಗಗಳಿಂದಲೂ ಧ್ವನಿಗೊಳಿಸುತ್ತಿರುವುದಾ ಗಿಯೂ ಇರುವ ಶ್ರೇಷ್ಠವಾದ ಆ ಕಾಡಿನಲ್ಲಿ ಸುಖವಾಗಿ ವಿಹರಿಸಿದರು. || ೩೧-೩೭ || ಇಷ್ಟೆಯಲ್ಲದೆ ಆ ಶ್ರೀರಾಮನು ಅತಿಶಯವಾದ ಸೌಂದರ್ಯವುಳ್ಳ ಚಿತ್ರಕೂಟ ಪರ್ವತವನ್ನು ಹೊಂದಿ, ಮೃಗಗಳಿಂದಲೂ, ಪಕ್ಷಿಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ರಮಣೀಯವಾಗಿ ರುವ ಆ ಮಾಲ್ಯವತೀ ನದಿಯನ್ನು ನೋಡುತ್ತ ಪರಮಾನಂದವನ್ನು ಹೊಂದಿದನು. ಈ

ನನಂದ ಹೃಷ್ಟೋ ಮೃಗಪಕ್ಷಿಜುಷ್ಟಾಂ
ಜಹೌಚ ದುಃಖಂ ಪುರವಿಪ್ರವಾಸಾತ್ ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಪಂಚಾಶಸ್ಸರ್ಗಃ.

ಪುರ ಪಟ್ಟಣದಿಂದ, ವಿಪ್ರವಾಸಾತ್ - ಹೊರಡಿಸುವಿಕೆಯಿಂದ, ಜನಿತಂ - ಹುಟ್ಟಿ
ದುಃಖವನ್ನು, ಜಹೌ - ಬಿಟ್ಟನು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಪಂಚಾಶಸ್ಸಗ

ಸಂತೋಷದಿಂದ "ಪಟ್ಟಣವನ್ನು ಬಿಟ್ಟು, ಅರಣ್ಯದಲ್ಲಿರಬೇಕಲ್ಲ!" ಎಂಬ
ಕೂಡ ತೊರೆದವನಾದನು. ॥ ೩೮ ॥

ಇಂತಿದು ಶ್ರೀ ಸೀತಾ ರಾಮ ಲಕ್ಷ್ಮಣ ಕೃತ ಪರ್ಣಶಾಲಾ ಪ್ರವೇಶ
ನಿರೂಪಣವೆಂಬ ಐವತ್ತಾರನೆಯ ಸರ್ಗವು ಸಮಾಪ್ತವಾದುದು.

